MICROFILMED BY
NEHRU MEMORIAL MUSEU
AND LIBRARY
TEEN MURTI HOUSE
NEW DELHI

REEL-18

# SWADESHA BHIMANI

CONTD FROM:

12 JANUARY 1940

D.V
2.4.80

# ಸ್ವದೇಶಾಭಿಮಾನಿ

# SWADESHABHIMANI

KANNADA ILLUSTRATED WEEKLY

# ಗಳಿಗಿಂರಲ್ಲಿಯೋ ಭಾರತಕ್ಕೆ ಸ್ವಾತಂತ್ರ್ಯ!

## ದೀನಬಂಧು ಅಂಡ್ರೂಸರ ಆಸೆ

## ಬ್ರಿಟನಿನಲ್ಲಿ ಭಾರತೀಯರ ಮೆರವಣಿಗೆ

### ಗಳಿಗಿಂರಲ್ಲಿಯೋ ಭಾರತಕ್ಕೆ ಸ್ವಾತಂತ್ರ್ಯ?

### ದೀನಬಂಧುಗಳ ಆಸೆ!

ದೀನಬಂಧು ಸಿ. ಎಫ್, ಅಂಡ್ರೂಸರು ತಮ್ಮ ಹೊಸವರ್ಷದ ಸಂದೇಶದಲ್ಲಿ ಇದೇ ವರ್ಷದ ಅಂತ್ಯದೊಳಗೆ ಭಾರತವು ಸ್ವತಂತ್ರವಾಗುವುದೆಂಬ ಆಶೆಯು ತನಗಿದೆ ಯೆಂದು ಈ ರೀತಿಯಿಂದ ತಿಳಿಸುತ್ತಾರೆ

'ಗಳಿಗಂನೇ ಇಸವಿಯಲ್ಲಿ ಭಾರತವು ಸ್ವರಾಜ್ಯವನ್ನು ಪಡೆಯುವುದೆಂದು ನನ್ನ ನಿರೀಕ್ಷೆಯಾಗಿದೆ ಇದು ಬಹಳ ಕಾಲದ ಮೊದಲೇ ಆಗಬೇಕಾಗಿತ್ತು ಇಂದು, ಜಗತ್ತಿನ ಎಲ್ಲಾ ಪ್ರಚಲಿತ ವಿಷಯಗಳೂ ಭಾರತದ ಸ್ವಾತಂತ್ರ್ಯದ ಕಡೆಗೇ ಗುರಿಯಿಟ್ಟಿವೆ ಗಳಿಗಿರಂದು ಇಂಗ್ಲೆಂಡಿನಲ್ಲಿ ಪ್ರಗತಿಯ ಮಾರ್ಗದಲ್ಲಿ ಅಡ್ಡನಿಂತ, ಬ್ರಿಟನಿನ ಜನರ ಸ್ವಕೀಯ ಆಶೋತ್ತರಗಳೇ ಇಂದು ಒಂದಾಗಿರುವುದರಿಂದ ಈ ರೀತಿಯ ಆಶೆಗೆ ಸಾಕಷ್ಟು ಬೆಂಬಲವಿದೆ

'ಆಂಗ್ಲೇಯರು ವಿಚಾರವು, ತರ್ಕಶುದ್ಧ ಸರಣಿಯಲ್ಲಿ ವಿಚಾರಮಾಡಲು, ಸ್ವಲ್ಪ ಮಂದವಾಗಿದ್ದರೂ, ಸಹಜ ಛಳಿತಾಂಶವು ಬಂದು ಎದುರು ನಿಂತಾಗ ಅದನ್ನು ಅಂಗೀಕರಿಸುವಲ್ಲಿ, ಅದು ಬಹಳ ಸೂಕ್ಷ್ಮವಾಗಿದೆ ಭಾರತೀಯರ ಸ್ವಾತಂತ್ರ್ಯದಾನದಿಂದ ಇಂದು, ಜಗತ್ತಿನೆದುರು ಬ್ರಿಟನಿನ ಧ್ಯೇಯವು ಉಜ್ವಲವಾಗಿ ಬೆಳಗುವುದು'

### ಹಿಂದಿನ ಕ್ರಾಂತಿಕಾರರ ಐಕ್ಯಸಾಧನೆಯ ಯತ್ನ!

### ...ಸ ಪಕ್ಷದ ಸ್ಥಾಪನೆ

ಉಜ್ವಲ ಕ್ರಾಂತಿಕಾರಿಯಾಗಿ, ಅನೇಕ ಸಲ ಸೆರೆಮನೆಯ ಸಂಕಷ್ಟಗಳಿಗೆ ತುತ್ತಾದ ರಾಜಾ ಮಹೇಂದ್ರಪ್ರತಾಪರ ಕುರಿತು ಜವಾಹಿರಲಾಲರು ಒಮ್ಮೆ 'ಅವರನ್ನು ಕುರಿತು ಏನನ್ನುವುದೂ ವಿಚಿತ್ರವೆನಿಸುತ್ತದೆ. ಆದರೂ ಅವರು ಖಂಡ ಖಂಡ ಮನುಷ್ಯರು' ಎಂದಿದ್ದರು. ಈ ಮಾತು ಇನ್ನೊಬ್ಬ ಕ್ರಾಂತಿಕಾರಿಯಾದ ಮೌಲ್ವಿ ಒಬೈದುಲ್ಲಾರವರ ವಿಷಯದಲ್ಲಿಯೂ ಸರಿಯಾಗಿ ಅನ್ವಯಿಸುತ್ತದೆ. ಮಹೇಂದ್ರಪ್ರತಾಪರು 'ಜನತೆಯ ಸೇವಕ'ರೆಂದು ತನ್ನನ್ನು ಕರೆದುಕೊಂಡರೆ, ಮೌಲ್ವಿಯವರು 'ಜೀವರಾಶಿಯ ಸೇವಕನು' ಎಂದೇ ತನ್ನನ್ನು ಕರೆದುಕೊಳ್ಳುತ್ತಾರೆ.

ಮೌಲ್ವಿಯವರು, ಇಂದು ರಾಷ್ಟ್ರದ ಸಮಸ್ಯೆಯ ಪರಿಹಾರಕ್ಕೆ ಹೊಸತೊಂದು ಯೋಜನೆಯನ್ನು ಕಂಡು ಹುಡುಕಿರುವರು. ಕಾಂಗ್ರೆಸಿನೊಳಗೆ ಅವರು 'ಜಮುನಾ—ನರ್ಮದಾ ಸಿಂಧ್ ಸಾಗರ ಪಕ್ಷ'ವೆಂಬ ಹೆಸರಿನ ಒಂದು ಹೊಸ ಪಕ್ಷವನ್ನು ಸ್ಥಾಪಿಸಲು ಯತ್ನಮಾಡುತ್ತಿದ್ದಾರೆ. ಇದರ ಅರ್ಥವನ್ನು ಅವರೇ ಈ ರೀತಿಯಿಂದ ವಿವರಿಸುತ್ತಾರೆ.

'ಹಿಂದೂ-ಮುಸಲ್ಮಾನರ ಸಂಸ್ಕೃತಿಯ ಐಕ್ಯ ದೃಷ್ಟಿಯಿಂದ ಈ ಹೊಸ ಪಕ್ಷವನ್ನು ಸ್ಥಾಪಿಸುವುದಾಗಿದೆ ಗಂಗಾ ಯಮುನಾ ದಡಗಳು ಹೇಗೆ ಹಿಂದೂ ಸಂಸ್ಕೃತಿಯ ಮೂಲಗಳೋ, ಹಾಗೆಯೇ ಸಿಂಧ್ ಸಾಗರ ದಡಗಳು ಮುಸ್ಲಿಂ ಸಂಸ್ಕೃತಿಗಳ ಮೂಲಗಳು. ಇದೇ ದೃಷ್ಟಿಯಿಂದ ಈ ಪಕ್ಷವು ಕಾರ್ಯರಂಗಕ್ಕಿಳಿಯುವುದು' ಎಂದು ಅವರು ಹೇಳುತ್ತಾರೆ.

### ಗಾಂಧಿ ಸೇವಾಸಂಘ

ಗಾಂಧೀ ಸೇವಾಸಂಘದ ಆರನೇ ಅಧಿವೇಶನವನ್ನು ಈ ವರ್ಷ ಬಂಗಾಳದ ಡಾಕಾ ಜಿಲ್ಲೆಯ ಮಾಲಿಕಾಂಡದಲ್ಲಿ ಜರಗಿಸುವ ಕಾರ್ಯವು ಭರದಿಂದ ನಡೆಯುತ್ತದೆ ಡಾ। ಪ್ರಫುಲ್ಲ ಚಂದ್ರ ಘೋಷ, ಮತ್ತು ಶ್ರೀ ಆರ್ ಎಸ್ ಧೋತ್ರೆ ಇವರು ಅಲ್ಲಿ ಏರ್ಪಾಡುಗಳಲ್ಲಿ ಆಸಕ್ತರಾಗಿದ್ದಾರೆ

ಇದಕ್ಕೆ ಬಂಗಾಳದಿಂದ ಸುಮಾರು ೨೦೦ ಮಂದಿ ಅತಿಥಿಗಳೂ, ಹೊರಗಡೆಯಿಂದ ಸುಮಾರು ೨೦೦ ಮಂದಿ ಅತಿಥಿಗಳೂ ಬರಬಹುದಾಗಿ ಅಂದಾಜು ಮಾಡಲಾಗಿದೆ ಇಂದು ಸಂಘದ ಒಟ್ಟು ಸದಸ್ಯರ ಸಂಖ್ಯೆಯು ೧೬೪ ಆಗಿದೆ

ಈ ಅಧಿವೇಶನದೊಡನೆ ಖಾದೀ ಮತ್ತು ಸ್ವದೇಶೀ ಪ್ರದರ್ಶನವೊಂದು ನಡೆಯುವುದು ಇದನ್ನು ಫೆಬ್ರವರಿ ೨೦ರಂದು ಗಾಂಧಿಜಿಯವರೇ ಉದ್ಘಾಟನ ಮಾಡಲು ಒಪ್ಪಿರುವರು. ಅಧಿವೇಶನವು ಫೆಬ್ರವರಿ ೨೦ರಿಂದ ೨೬ರ ... ... ನಡೆಯುವುದು

... ದಿನ ನಿತ್ಯವೂ ಸಾರ್ವಜನಿಕ ಸಭೆ ನಡೆದು ಅಖಿಲ ಭಾರತ ಮುಖಂಡರ ಭಾಷಣ ಕೊಡುವರೆಂದು ತಿಳಿದಿದೆ

### ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟನಿನಲ್ಲಿ ಮೆರವಣಿಗೆ

ಇಂಗ್ಲಂಡಿನಲ್ಲಿರುವ ಭಾರತೀಯ ವಿದ್ಯಾರ್ಥಿಗಳು ಭಾರತವು ಕೇಳಿದ ರಾಷ್ಟ್ರೀಯ ಕೇಳಿಕೆಗೆ ಬೆಂಬಲ ಕೊಡುವುದರ ಸಲುವಾಗಿ, ಕೇಂಬ್ರಿಜಿನ ಪ್ರಧಾನ ರಾಜಮಾರ್ಗದಲ್ಲಿ ಪ್ರಚಂಡ ರೀತಿಯಿಂದ ಮೆರವಣಿಗೆ ಮಾಡಿದರೆಂಬ ವಾರ್ತೆಯು ಬ್ರಿಟನಿನಿಂದ ಬಂದಿದೆ.

ಮೆರವಣಿಗೆಯು, ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿರುವ ಸೋಶಿಯಲಿಸ್ಟ್ ಪಕ್ಷದ ಆಶ್ರಯದಲ್ಲಿ ನಡೆಯಿತು. ಅವರು ...ದು ತಾಸುಗಳ ತನಕ ಕೇಂಬ್ರಿಜಿನ ಪ್ರಧಾನ ಮಾರ್ಗದಲ್ಲಿ ಬಹು ದೂರಗಳವರೆಗೆ ಏಕಪಙ್ಕ್ತಿಯಲ್ಲಿ ಮೆರವಣಿಗೆ ಮಾಡಿ ನಡೆದರು ಕೈಯಲ್ಲಿ ಸ್ವಾತಂತ್ರ್ಯ ಕೇಳಿಕೆಯ ದೊಡ್ಡ ಬರಹಗಳ, ಅಂಟಿಸಿದ ಪತ್ರಿಕೆಗಳನ್ನು ಎತ್ತಿ ಹಿಡಿದಿದ್ದರು. ...ಲವರು, ಹಸ್ತಪ್ರತಿಗಳನ್ನು ಹಂಚುತ್ತಿದ್ದರು. ಆ ದಿನ ಪ್ರೊಫೆಸರ್ ಲಾಸ್ಕಿಯವರು, ಆ ವಿದ್ಯಾರ್ಥಿಗಳಿಗೆ, ಭಾರತದ ಸ್ವಾತಂತ್ರ್ಯ ಕೇಳಿಕೆಯನ್ನು ಸಮರ್ಥನೆ ಮಾಡಿ ...ಲ ಭಾಷಣವೊಂದನ್ನು ಕೊಟ್ಟರು

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್ ಟಿನ್' ಕುಡಿದರೆ ರಾತ್ರೆ ಸುಖನಿದ್ರೆ ... ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿ, ಉಂಟಾಗಿ ... ಖಂಡಿತ ಹೇಳಬಹುದು

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ... ಬಾರ್ಲಿ, ದನದ ಹಾಲು ಮತ್ತು ಇತರ ... ವಾದ ವಿಟಮಿನು ... ಗಳಿಂದ ತಯಾರಿಸಲ್ಪಟ 'ಓವಲ್ ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ದೆಯನ್ನೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ ಇತರ ನಕಲಿ ಪಾನೀಯಗಳನ್ನು ಬಿಡಿರಿ

'ಓವಲ್ ಟಿನ್'

OVALTINE ಎಂದರೆ ಪುಷ್ಟಿಕರವಾದ ಆಹಾರಪಾನೀಯವು

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆ

149 ಬ್ರೋಡ್ ವೇ, ಮ

ಕಲ್ಕತ್ತಾ, ಬೊಂಬಾಯಿ ಮತ್ತು

'ಓವಲ್ ಟಿನ್' ಬಿಸ್ಕುಟುಗಳು:—

ಎಲ್ಲ ಸಮಯಗಳಲ್ಲಿ ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು 'ಓವಲ್ ಟಿನ್' ಸೇರಿದ್ದು ಇವುಗಳಲ್ಲಿ ವೈಶಿಷ್ಟ ಬೆಲೆಯ ... ಮತ್ತು ಬಿಸ್ಕುಟುಗಳು ... ಗಳ ಪಕೆಟುಗಳಲ್ಲಿ ಮತ್ತು ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪ...

“ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ”

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

12 – 1 – 1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೨—೧—೧೯೪೦

## ಬಿಕ್ಕಟ್ಟಿನಲ್ಲಿರುವ ವೈರಿಯ ಕಷ್ಟವೇ ಸುಸಂಧಿಯೆಂದು ತಿಳಿಯಬಾರದು!

### —ಮಹಾತ್ಮಾಜಿಯವರ ಹಿತವಚನ—

## ರಾಮದುರ್ಗದ ದುರಂತದಲ್ಲಿ ೧೨ ಮಂದಿಗೆ ಫಾಶಿ!

## ಮಲಬಾರಿನಲ್ಲಿ ಉಪಾಧ್ಯಾಯರ ಗೋಳು!

ಸತ್ಯಾಗ್ರಹ ಮತ್ತು ಕಾನೂನುಭಂಗಗಳಲ್ಲಿರುವ ವ್ಯತ್ಯಾಸವೇನು ಅವುಗಳ ಮಹತ್ವವೇನು, ನೀತಿಯ ದೃಷ್ಟಿಯಿಂದ ಸರಿಯಾದದ್ದನ್ನು ಯಾವಾಗ ಮತ್ತು ಹೇಗೆ ಮಾಡಬೇಕು. ಇವೇ ಮೊದಲಾದ ವಿಷಯಗಳನ್ನು ಮಹಾತ್ಮಾಜಿಯವರು ವಾರ್ಧಾದಲ್ಲಿ ನಾಗಪುರ ಕಾಂಗ್ರೆಸ್ಸಿನವರಿಗೆ ವಿವರಿಸಿದರು. ಆಗ ಗಾಂಧಿಜಿಯವರು ಹೇಳಿದ್ದು 'ಹರಿಜನ' ಪತ್ರಿಕೆಯಲ್ಲಿ ಈ ಕೆಳಗೆ ಕಂಡಂತೆ ವರದಿಯಾಗಿದೆ —

'ಸತ್ಯಾಗ್ರಹ ಎಂಬುದು ವಿಶ್ವವ್ಯಾಪಕ ತತ್ವವು ಆ ತತ್ವದ ಅನೇಕ ಪ್ರಯೋಗಗಳಲ್ಲಿ ಕಾಯಿದೆಭಂಗ ಚಳವಳವು ಒಂದು. ವಿರೋಧಿಯು ಕಷ್ಟದಲ್ಲಿರಲಿ ಅಥವಾ ಇಲ್ಲದಿರಲಿ ಸತ್ಯಾಗ್ರಹವು ತಡವಿಲ್ಲದೆ ಸಾಗುವುದು, ಯಾಕೆಂದರೆ ಯೋಗ್ಯ ರೀತಿಯಿಂದ ನಡಿಸಿದ ಸತ್ಯಾಗ್ರಹವು ವಿರೋಧಿಗ ಸೇವೆಯೇ ಆಗುವದ. ಆದರೆ ಕಷ್ಟದಲ್ಲಿರುವ ನಮ್ಮ ವೈರಿಯ ಕಷ್ಟವೇ ನಮ್ಮ ಸುಸಂಧಿಯೆಂದು ತಿಳಿಯಬಾರದು.

ಚಳವಳಿಯನ್ನು ಪ್ರಾರಂಭಿಸುವುದಕ್ಕೆ ಯೋಗ್ಯ ಪರಿಸ್ಥಿತಿ ಬೇಕು. ಇಲ್ಲದಿದ್ದರೆ ಅದನ್ನು ಪ್ರಾರಂಭಿಸಲಾಗದು. ಕಾಯಿದೆಭಂಗವು ಜೀವನದ ನಿಯಮವಲ್ಲ. ಆದರೆ ಸತ್ಯಾಗ್ರಹವು ಜೀವನದ ನಿಯಮವಾಗಿದೆ. ಆದುದರಿಂದ ಸತ್ಯಾಗ್ರಹವು ಎಂದಿಗೂ ಕೊನೆಗಾಣಸರದು. ಪ್ರಸಂಗವಿಲ್ಲದಾಗ ಕಾಯಿದೆಭಂಗ ಮಾತ್ರ ಕೊನೆಗಾಣುವದು ಮತ್ತು ಅದು ಹಾಗಾಗಲಿಕ್ಕೇ ಬೇಕು.

ಕಾಯಿದೆಭಂಗದಲ್ಲಿಯೂ ಎರಡು ಬಗೆಗಳಿವೆ. ಒಂದು ಆಕ್ರಮಣಶೀಲ ಕಾಯಿದೆಭಂಗ, ಮತ್ತೊಂದು ಸಂರಕ್ಷಕ ಕಾಯಿದೆಭಂಗ. ವೈರಿಯು ನಮ್ಮನ್ನು ಅವಮಾನಗೊಳಿಸಿದರೆ ನಾವು ಸಂರಕ್ಷಕ ಕಾಯಿದೆಭಂಗವನ್ನು ಮಾಡಲೇ ಬೇಕು. ಹಾಗೆ ಮಾಡುವುದು ನಮ್ಮ ಕರ್ತವ್ಯ. ವಿರೋಧಿಯು ಕಷ್ಟದಲ್ಲಿರಲಿ ಅಥವಾ ಇಲ್ಲದಿರಲಿ ಈ ಕರ್ತವ್ಯವನ್ನು ನಾವು ಮಾಡಲೇ ಬೇಕು. ಅನ್ಯಾಯವಾದ ಅಥವಾ ಅಪಮಾನಕರವಾದ ಕಾಯಿದೆಗಳನ್ನು ಅಥವಾ ಹುಕುಮುಗಳನ್ನು ಜನರು ಸುಮ್ಮನೆ ಸಹಿಸಿಕೊಳ್ಳಬೇಕೆಂದು ಕಷ್ಟದಲ್ಲಿರುವ ವೈರಿಯಾದರೂ ಅಪೇಕ್ಷಿಸುವದು ಸರಿಯಲ್ಲ. ನೀತಿಯ ದೃಷ್ಟಿಯಿಂದ ಸರಿಯಾದದ್ದನ್ನು ಮತ್ತು ಕಲ್ಯಾಣಕಾರಿಯಾದದ್ದನ್ನು ಮಾಡುವದು ನಮ್ಮ ಕರ್ತವ್ಯ. ಆದರೆ ಕೇವಲ ವೈರಿಗೆ ತೊಂದರೆ ಕೊಡಬೇಕೆಂಬ ಬುದ್ಧಿಯಿಂದ ವರ್ತಿಸುವದು ಎಂದಿಗೂ ಸರಿಯಲ್ಲ.

### ರಾಮದುರ್ಗದ ದುರಂತದಲ್ಲಿ ೧೨ ಜನರಿಗೆ ಗಲ್ಲಿನ ಶಿಕ್ಷೆ!

#### ಇಬ್ಬರಿಗೆ ಜೀವಾವಧಿ ಶಿಕ್ಷೆ!

೧೯೩೮ನೇ ಎಪ್ರಿಲ್ ೭ನೇ ದಿನ, ರಾಮದುರ್ಗದಲ್ಲಿ ದಂಗೆಯು ಸಂಭವಿಸಿತಷ್ಟೆ? ಈ ಸಂಬಂಧ ಈಗ ವಿಚಾರಣೆಯಾಗಿ ೧೨ ಜನರಿಗೆ ಗಲ್ಲಿನ ಶಿಕ್ಷೆ ಇಬ್ಬರಿಗೆ ಜೀವಾವಧಿ ಶಿಕ್ಷೆಯು ವಿಧಿಸಲಾಗಿದೆಯೆಂದು ತಿಳಿದುಬಂದಿದೆ.

ರಾಮದುರ್ಗದ ಸಂಸ್ಥಾನದ ಸರಕಾರವು ಪ್ರಜೆಗಳಿಗೆ ಬಹಳ ಹೆಚ್ಚಿನ ಕರ ಮೊದಲಾದ ಭಾರವನ್ನು ಹೇರಿದೆಯೆಂದು ಮೊದಲಿನಿಂದಲೂ ಪ್ರಜೆಗಳ ದೂರಾಗಿತ್ತು. ಅದಕ್ಕೆ ಯಾವ ರೀತಿಯ ರಿಯಾಯಿತಿಯನ್ನೂ ಸರಕಾರವು ಕೊಡದಿರಲು, ಅಲ್ಲಿ ಪ್ರಜಾ ಸಂಘವು ಸ್ಥಾಪಿತವಾಗಿ, ಅಹಿಂಸಾ ಸತ್ಯಾಗ್ರಹವನ್ನು ಆರಂಭಿಸಲು, ಅಲ್ಲಿನ ಪ್ರಜಾ ಸಂಘದ ಮುಖಂಡರನ್ನು ಹಿಡಿದು ಸರಕಾರವು ಸೆರೆಯಲ್ಲಿಟ್ಟಿತು. ಆ ಸುದ್ದಿ ಕೇಳಿ ಜನರು ಉದ್ವೇಗಗೊಂಡು ಸೆರೆಮನೆಯ ಹತ್ತಿರ ಹೋಗಿ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು. ಸರಕಾರದ ಅಧಿಕಾರಿಗಳಿಗೂ ಜನರಿಗೂ ಆಗ ತಿಕ್ಕಾಟವಾಗಿ ಗೋಳಿಬಾರು, ಲಾಠಿಪ್ರಹಾರಗಳು ನಡೆಯಲು ಜನರು ಸೆರೆಮನೆಗೆ ಬೆಂಕಿ ಕೊಟ್ಟು ಕೆಲವು ಸರಕಾರೀ ಅಧಿಕಾರಿಗಳನ್ನೂ ಕೊಂದುಬಿಟ್ಟಿದ್ದರು. ಈ ಸಂಬಂಧವಾಗಿ ೬೨ ಜನರನ್ನು ಆರೋಪಿಗಳನ್ನಾಗಿ ಖಟ್ಲೆಯ ವಿಚಾರಣೆ ನಡೆಯಿತು. ಆ ಸಂಬಂಧದಲ್ಲಿ ಕಾಂಗ್ರೆಸು ಮುಖಂಡರೂ ಹಲವರು ಪ್ರಜೆಗಳು ಮಾಡಿದುದು ತಪ್ಪೆಂದು ಸಾಕ್ಷಿ ಹೇಳಿದ್ದರು. ಇವೆಲ್ಲದರ ಪರಿಣಾಮವಾಗಿ ಈಗ ಅವರಲ್ಲಿ ೧೨ ಮಂದಿಗೆ ಫಾಶಿ ಶಿಕ್ಷೆಯೂ ಇಬ್ಬರಿಗೆ ಜೀವಾವಧಿ ಶಿಕ್ಷೆಯೂ ವಿಧಿಸಲಾಗಿದೆ.

ಈ ವಿಚಾರವಾಗಿ ಕರ್ನಾಟಕ ಕಾಂಗ್ರೆಸ್ ಕೆಲಸಗಾರರಲ್ಲಿ ಭಿನ್ನಾಭಿಪ್ರಾಯವುಂಟಾಗಿ ಹಲವು ಗೊಂದಲಗಳು ಎದ್ದಿವೆ. ಪ್ರಜಾಸಂಘವಾದರೂ, ನ್ಯಾಯವಾದ ಉದ್ದೇಶಕ್ಕಾಗಿ ಸ್ಥಾಪಿತವಾಗಿ, ಪ್ರಜೆಗಳ ಸಂಕಷ್ಟವನ್ನು ಪರಿಹರಿಸಲು ತೊಡಗಿತ್ತು. ಆದರೆ ಪರಿಸ್ಥಿತಿಯು ಕೆಟ್ಟುಹೋದಾಗ ಯಾರೂ ತಡೆಯಲಾಗುವದಿಲ್ಲ. ಆದರೆ ಇಂದು ಹಲವರು ಗಲ್ಲಿಗೇರಿಸಲ್ಪಡುವದೆಂಬ ವಿಚಾರವು ತೀರಾ ವಿಷಾದಜನಕವಾದುದು.

ಈ ಕುರಿತು ಕೊನೆಯ ತೀರ್ಮಾನದ ಅಧಿಕಾರವು ರಾಮದುರ್ಗದ ರಾಜಾಸಾಹೇಬರಿಗೆ ಇದೆಯೆಂದು ತಿಳಿದುಬರುತ್ತದೆ. ಜನರು ಮತಿಗೆಟ್ಟು ಉದ್ದೇಶವಿಲ್ಲದೆ ಅನ್ಯಾಯಕ್ಕೆ ಇಳಿದಿರಬಹುದು. ಆದರೆ ಪ್ರತೀಕಾರಾಕಾಂಕ್ಷೆಯಿಡುವುದರಿಂದ ಉಭಯತರಿಗೂ ಕ್ಷೇಮವಿಲ್ಲ. ಕಾಂಗ್ರೆಸು ಕೆಲಸಗಾರರೂ ರಾಮದುರ್ಗದ ದೊರೆಗಳೂ ಈ ಮಂದಿಯ ಜೀವವನ್ನುಳಿಸಲು ಯತ್ನಿಸಿ ಪುಣ್ಯ ಪಡೆಯಬೇಕು.

ಶ್ರೀಯುತ ಗಂಗಾಧರರಾವ್ ದೇಶಪಾಂಡೆ, ಅರ್ಕೆ ಮೊದಲಾದವರನ್ನೂ ರಾಜಾ ಸಾಹೇಬರು ಆಮಂತ್ರಿಸಿರುವರೆಂದು ತಿಳಿದಿದೆ. ಅವರ ಮಾತುಕತೆಗಳಿಂದ ಇಂತಹ ಪುಣ್ಯಕರವಾದ ಕಾರ್ಯವು ನೆರವೇರಲೆಂದು ಹಾರೈಸಬೇಕಾಗಿದೆ.

### ಮಲಬಾರು ಶಾಲೆಗಳ ಉಪಾಧ್ಯಾಯರ ಗೋಳು

ಈಚೆಗೆ ಕೆಲವು ತಿಂಗಳುಗಳಿಂದ ಮಲಬಾರಿನ ಖಾಸಗಿ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು ಸರಕಾರವು ತಮ್ಮ ಕಡೆಗೆ ಕೊಡುತ್ತಿರುವ ಅಲಕ್ಷ್ಯದ ವಿಷಯ ಸತ್ಯಾಗ್ರಹವನ್ನು ಆರಂಭಿಸಿರುವರು. ಈ ಸಂಬಂಧ ವಿದ್ಯಾಖಾತೆಯ ಡೈರೆಕ್ಟರರು ಹಲವು ಉಪಾಧ್ಯಾಯರ ಸರ್ಟಿಫಿಕೇಟು ಮತ್ತು ಸನ್ನದ ರದ್ದು ಮಾಡಿರುವದು ಮಾತ್ರವಲ್ಲದೆ, ಹಲವರು ಜೈಲು ಶಿಕ್ಷೆಗೂ ಜುಲ್ಮಾನೆಗೂ ಗುರಿಯಾಗಿದ್ದಾರೆ.

ಅಲ್ಲಿಯ ಉಪಾಧ್ಯಾಯರ ಸಂಕಷ್ಟಗಳೇನಿದ್ದವು, ಮತ್ತು ಯಾವ ಕಾರಣದಿಂದ ಅವರು ಹೀಗೆ ಕಷ್ಟಪಡುವರು ಎಂಬುದನ್ನು ಪರೀಕ್ಷಿಸಿದರೆ, ಏಡೆಡ್ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಅಲ್ಲಿನ ಬಡ ಉಪಾಧ್ಯಾಯರಿಗೆ ಸ್ಥಾನಮಾನ, ಸಂಬಳಗಳ ಭದ್ರತೆಯಿದ್ದಿತ್ತೆಂದೂ ಶಿಕ್ಷಣ ಕಾರ್ಯವನ್ನು ಅವರು ಎಷ್ಟು ಚೆನ್ನಾಗಿ ಮಾಡುತ್ತಿದ್ದರೂ, ಶಾಲಾ ಮೇನೇಜರರ ಮನೋನುಕೂಲರೂ, ಅವರು 'ಹೌದು ಬಸವಣ್ಣ'ರವರೂ ಆಗದಿದ್ದರೆ ಅವರಿಗೆ ಯಾವ ಕ್ಷಣಕ್ಕಾದರೂ ಕೆಲಸದಿಂದ ಹೊರಗಾಗುವ ಭಯವಿತ್ತೆಂದೂ ಸಂಬಳ ವೇತನಗಳು ಜೀವನಾಂಶಕ್ಕೂ ಸಾಲದಷ್ಟು ಕಡಿಮೆಯಾಗಿದ್ದುದು ಮಾತ್ರವಲ್ಲದೆ, ಅವು ಸಕಾಲದಲ್ಲಿ ಕೂಡ ದೊರೆಯುತ್ತಿದ್ದಿಲ್ಲವೆಂದೂ ಮೇನೇಜರರು ಈ ಬಡ ಉಪಾಧ್ಯಾಯರನ್ನು ಕ್ರಯಕ್ಕೆ ತೆಗೆದುಕೊಂಡ ಗುಲಾಮರಿಗಿಂತಲೂ ಹೆಚ್ಚು ಕೀಳಾಗಿ ಪರಿಗಣಿಸುತ್ತಿದ್ದರೆಂದೂ ಗೊತ್ತಾಗಿದೆ.

ಇವೇ ಮೊದಲಾದ ಕಾರಣಗಳಿಂದ ಉದ್ವಿಗ್ನರಾದ ಮಲಬಾರಿನ ಉಪಾಧ್ಯಾಯರು, ಈಗ ಸತ್ಯಾಗ್ರಹಾಸ್ತ್ರವನ್ನು ಕೈಗೆತೆಗೆದುಕೊಂಡಿದ್ದಾರೆ. ಪ್ರತಿ ತಿಂಗಳು ಕೂಡಬೇಕಾದ ಕೇಂದ್ರ ಸಭೆಗಳಿಗೆ ಉಪಾಧ್ಯಾಯರು ಹೋಗದಂತೆ ಅವುಗಳಲ್ಲಿ ಪಿಕೆಟ ಮಾಡುವದು, ಶಾಲೆಗಳಿಗೆ ಹೋಗದೆ ಅವನ್ನು ಮುಚ್ಚುವದು, ಸಭೆ ಮೆರವಣಿಗೆ ಭಾಷಣಾದಿಗಳ ಮೂಲಕ ಪ್ರಚಾರ ಕಾರ್ಯ ಮಾಡುವದು ಈಗ ಅವರ ಮುಖ್ಯ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮವನ್ನು ಮುಂದೊತ್ತುತ್ತಲಿರುವಾಗ ಅನೇಕ ಮಕ್ಕಳ ವಿದ್ಯಾಭ್ಯಾಸಕ್ಕೆ ತಡೆಯಾಗಿರುವದರಿಂದ, ಆ ಮಕ್ಕಳ ಹೆತ್ತವರೂ ಈ ಪರಿಸ್ಥಿತಿಯು ಸುಧಾರಣೆಯಾಗಬೇಕೆಂದು ಆಶಿಸಿರುವರು.

HALFTONE & LINE
BLOCK MAKING
UNDERTAKEN
Sharada Press,
MANGALORE

ಸ್ವದೇಶಾಭಿಮಾನಿ

ತಾರೀಕು 12—1—1940

# ಹಳ್ಳಿಗಳ ಉದ್ಧಾರ

ಇಂದು ಭಾರತವು ತನ್ನ ಸಂಪೂರ್ಣ ಸತ್ವವನ್ನು ಕೇವಲ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯುವುದರ ಸಲುವಾಗಿಯೇ ಉಪಯೋಗಿಸುತ್ತಿರುವುದರ ಫಲವಾಗಿ, ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಪಕ್ಷದಲ್ಲಿಯೂ, ನಾಳೆ ಆ ಸ್ವಾತಂತ್ರ್ಯವು ಭದ್ರವಾಗಿ ನೆಲೆ ನಿಲ್ಲಬೇಕಾದರೆ, ರಾಷ್ಟ್ರದ ಆರ್ಥಿಕ ವ್ಯವಸ್ಥೆಯು ಸರಿಯಾಗಬೇಕೆಂಬ ವಿಷಯವನ್ನು ಯಾರೂ ಅಲಗಳೆಯಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ, ಈಗಾಗಲೇ ದೇಶದ ಮುಖಂಡರೂ, ದೇಶದುನ್ನತಿಗಾಗಿ ಯತ್ನಮಾಡುವ ದೇಶ ಸೇವಕರೂ, ಆರ್ಥಿಕ ಸಮಸ್ಯೆಯನ್ನು ಪರಿಹರಿಸುವ ಮಾರ್ಗವನ್ನು ವಿಚಾರಿಸಿ ತಕ್ಕ ಕಾರ್ಯಗಳನ್ನು ಕೈಗೊಳ್ಳಬೇಕಾದುದು ಅವಶ್ಯವಿದೆ.

## ರಾಷ್ಟ್ರದ ಉದ್ಧಾರವೆಲ್ಲಿದೆ?

ಹಿಂದೂದೇಶದ ಉತ್ಪತ್ತಿ, ವ್ಯಯ, ಉತ್ಪನ್ನದಿಂದ ಉಂಟಾಗುವ ಲಾಭ ಇವೇ ಮೊದಲಾದ ವಿಷಯಗಳ ಕುರಿತು ಯಾವ ಸಮಸ್ಯೆಯೂ ಇದುವರೆಗೆ ಪರಿಹಾರವಾಗಲಿಲ್ಲ. ದೇಶದಲ್ಲಿ ಹಲವು ವಿಧದ ಸಾಮಗ್ರಿಗಳು ದೊಡ್ಡ ದೊಡ್ಡ ಪ್ರಮಾಣದಲ್ಲಿ ಅಲ್ಲಲ್ಲಿ ನಡೆಯುತ್ತಾ ಇವೆ. ಅಂತಹ ಕೈಗಾರಿಕೆಗಳು ಸಾಕಷ್ಟು ಉತ್ಸಾಹಜನಕವೆಂದು ಕಂಡುಬರುವುದಿಲ್ಲ. ಆದುದರಿಂದ ನಿಜವಾಗಿ, ಹಿಂದೂದೇಶದ ಆರ್ಥಿಕ ಸುಧಾರಣೆಯಲ್ಲಿ ಯಾವ ಸಮಸ್ಯೆಯು ನಮ್ಮ ಮುಂದಿದೆಯೆಂಬುದನ್ನು ಮುಖ್ಯವಾಗಿ ಈಗ ಅರಿತಿರಬೇಕು.

ಹಳ್ಳಿಗಳ ಉದ್ಧಾರವೇ ನಮ್ಮ ದೇಶದ ಉದ್ಧಾರ. ಅಲ್ಲಿನ ಆರ್ಥಿಕ ವ್ಯವಸ್ಥೆಗಾಗಿ ಮಾಡುವ ಸುಧಾರಣೆಯೇ ಸಂಪೂರ್ಣ ರಾಷ್ಟ್ರದ ಆರ್ಥಿಕ ಸುಧಾರಣೆ! ಆದ ಕಾರಣ, ಅಲ್ಲಿನ ಕೈಗಾರಿಕೆಗಳ ಸರ್ವತೋಮುಖವಾದ ಅಭಿವೃದ್ಧಿಯೂ, ಹಾಗೆ ಅಭಿವೃದ್ಧಿ ಮಾಡಲು ಸಾಕಷ್ಟು ಪ್ರೋತ್ಸಾಹವೂ, ಹಾಗೆ ಅಭಿವೃದ್ಧಿಯಾಗಿ ಉತ್ಪನ್ನವಾದ ಸಾಮಾಗ್ರಿಗಳ ಸರಿಯಾದ ಹಂಚುವಿಕೆಯೂ ಈ ತರದ ಆರ್ಥಿಕ ವ್ಯವಸ್ಥೆಯು ನಮ್ಮ ರಾಷ್ಟ್ರದಲ್ಲಿ ಈಗ ಮೊದಲಾಗಿ ಆಗಬೇಕಾಗಿದೆ. ಪಾಶ್ಚಾತ್ಯ ರಾಷ್ಟ್ರಗಳ ಔದ್ಯೋಗಿಕ ಪ್ರಗತಿಯ ಫಲಿತಾಂಶವನ್ನು ಕಂಡ ಇಂದಿನ ಜನರಿಗೆ ಈ ಮಾತಿನ ತತ್ವವು ಚೆನ್ನಾಗಿ ತಿಳಿಯಬಹುದು.

## ಪಾಶ್ಚಾತ್ಯ ಆರ್ಥಿಕ ವ್ಯವಸ್ಥೆ!

ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ ಭಂಡವಾಳ ಶಾಹೀ ಪದ್ಧತಿಯ ಆರ್ಥಿಕ ವ್ಯವಸ್ಥೆಯೂ ಔದ್ಯೋಗಿಕ ರಣವೂ ಜಗತ್ತಿಗೆ ಉಪಕಾರವನ್ನು ಮಾಡುವುದರ ಬದಲಾಗಿ ಉಪದ್ರವವನ್ನೇ ಹೆಚ್ಚಿಸಿವೆ. ಇಂದು ಯುರೋಪಿನಲ್ಲಿ ಉಂಟಾದ ರಾಜಕೀಯ ವಿಪ್ಲವದ ಮೂಲವೆಲ್ಲಿದೆಯೆಂಬುದನ್ನು ವಿಚಾರಿಸಿದರೆ, ಯೂರೋಪಿನ ಎಲ್ಲಾ ಜನಾಂಗಗಳ ಅಧಿಕಾರೀ ಮಂಡಳಿಗಳ ಮೇಲೆ ಪ್ರಭುತ್ವವನ್ನು ಮಾಡುತ್ತಿರುವ ಭಂಡವಾಳ ಶಾಹೀ ಪದ್ಧತಿಯು, ಅಧಿಕಾರ ಮತ್ತು ದ್ರವ್ಯ ಲಾಲಸೆಗಳಲ್ಲಿದೆಯೆಂದು ತಿಳಿಯದಿರದು. ಇಂದಿನ ಯುದ್ಧಗಳು ಅಂತಹ ಭಂಡವಾಳಗಾರರು ಮಾಡುತ್ತಿರುವ, ಆರ್ಥಿಕ ಸ್ಪರ್ಧೆ ಕೋಲಾಹಲಗಳ ಅಪ್ರತ್ಯಕ್ಷ ಪರಿಣಾಮಗಳೇ ಆಗಿವೆ. ಆದುದರಿಂದ, ಅಂತಹ ಭಯಾನಕವಾದ ಆರ್ಥಿಕ ಪದ್ಧತಿಯಂತೆ ಭಾರತವು ಮುಂದುವರಿಯುವುದು ಸಾಧ್ಯವೂ ಇಲ್ಲ, ಹಾಗೆ ಮುಂದುವರಿಯಲು ಭಾರತದ ನೈಸರ್ಗಿಕತೆಯೂ ಅನುಕೂಲವಾಗಿಲ್ಲ.

ಭಾರತದ ಆರ್ಥಿಕ ವ್ಯವಸ್ಥೆಯನ್ನು ಅಭ್ಯಾಸಮಾಡಿದ ಪಾಶ್ಚಾತ್ಯ ರಾಜಕಾರಣ ಕುಶಲರಾದರೂ, ಭಾರತದ ಪ್ರಗತಿಗೆ ಇಲ್ಲಿನ ಗ್ರಾಮಕೈಗಾರಿಕೆಗಳ ಅಭಿವೃದ್ಧಿ ಮೂಲಕವಾದ ಔದ್ಯೋಗಿಕ ವ್ಯವಸ್ಥೆಯೇ ಉತ್ತಮ ವ್ಯವಸ್ಥೆಯೆಂದು ಸಾರಿರುವರು. ಪಂಡಿತ ನೆಹರೂಗಳು ಇತ್ತೀಚೆಗೆ ಕೊಟ್ಟ ಒಂದು ಭಾಷಣದಲ್ಲಿ, ರಷ್ಯದಲ್ಲಿರುವಂತೆ, ಇಲ್ಲಿಯೂ ಕೃಷಿಯನ್ನು ಯಾಂತ್ರಿಕವಾಗಿ ನಡೆಸುವುದು ಉಚಿತವಲ್ಲವೆಂದು ಸ್ಪಷ್ಟವಾಗಿ ಹೇಳಿದ್ದು ಮಾತ್ರವಲ್ಲದೆ, ಭಾರತದ ಗ್ರಾಮ ಕೈಗಾರಿಕೆಗಳೆಲ್ಲವೂ, ಪೂರ್ಣ ಭಾರತೀಯ ಪದ್ಧತಿಯಿಂದಲೇ ಆಗಬೇಕಾಗಿದೆಯೆಂದೂ ಅಭಿಪ್ರಾಯಪಟ್ಟಿರುವರು.

## ಗಾಂಧೀಜಿಯವರ ಪ್ರಯೋಗ

ಈ ರೀತಿಯ ವ್ಯವಸ್ಥೆಯ ಸಲುವಾಗಿಯೇ, ಇಂದು ಶೇಗಾಂವ್ ಎಂಬ ಹಳ್ಳಿ ಮೂಲೆಯೊಂದಕ್ಕೆ ಹೋಗಿ, ಮಹಾತ್ಮಾ ಗಾಂಧಿಜಿಯವರು, ಅಲ್ಲಿ ಪ್ರಯೋಗಗಳನ್ನು ಮಾಡಿ ನೋಡುತ್ತಿದ್ದಾರೆ. ಅವರೂ ಇದುವರೆಗೆ ಭಾರತದ ಸರ್ವತೋಮುಖ ಆರ್ಥಿಕ ಸುಧಾರಣೆ ವ್ಯವಸ್ಥೆಗಳ ಒಂದು ಕಾರ್ಯಕ್ರಮವನ್ನು ಕಂಡುಹುಡುಕಲಿಲ್ಲ. ಆದರೆ ಅವರ ಎಲ್ಲಾ ಆರ್ಥಿಕ ಯೋಜನಾ ಗ್ರಹಗಳ ಸುತ್ತು ಸೂರ್ಯಗ್ರಹದಂತೆ ಚರಕವೇ ವಿರಾಜಮಾನವಾಗಿದೆ! ಚರಕಕ್ಕೆ ಅವರು ಕೊಡುತ್ತಿರುವ ಮಹತ್ವದಲ್ಲಿ ನಿಜವಾಗಿ, ಭಾರತದ ಗ್ರಾಮದುನ್ನತಿ, ಹೊಸ ಆರ್ಥಿಕ ಯೋಜನೆಗಳ ಮೂಲತತ್ವವು ಅಡಗಿದೆ.

## ಇದು ರಾಜಕೀಯವಲ್ಲ

ಇಂದು ಕಾಂಗ್ರೆಸ್ ಕೆಲಸಗಾರರೆಂಬವರೇ ರಾಷ್ಟ್ರದ ವ್ಯವಸ್ಥೆಗಾಗಿ ದುಡಿವವರು ಎಂಬ ಸಿದ್ಧಾಂತ ಆಗಿ ಹೋಗಿದೆ. ಏಕೆಂದರೆ ಕಾಂಗ್ರೆಸು ರಾಜಕೀಯ ಪಕ್ಷವಿದ್ದು ರಾಜಕೀಯದಲ್ಲಿ ಭಿನ್ನಾಭಿಪ್ರಾಯವುಳ್ಳವರು ಕಾಂಗ್ರೆಸಿಗೆ ಮಾಡುತ್ತಿರುವ ವಿರುದ್ಧ ಕಾರ್ಯಗಳಿಂದ ಕಾಂಗ್ರೆಸಿನ ಕಾರ್ಯಕ್ರಮವನ್ನು ಅವರು ಎಂದೂ ಖಂಡಿಸುವಂತಾಗಿದೆ. ಆದರೆ ಶಾಂತ ಮನಸ್ಸಿನಿಂದ ವಿಚಾರಮಾಡಿದಲ್ಲಿ, ರಾಷ್ಟ್ರದ ಭವಿಷ್ಯದ ಭಾಗ್ಯನಿರ್ಮಾಣ ಮಾಡುವ ಸಲುವಾಗಿ, ರಾಜಕೀಯ ಆಂದೋಲನದ ವಿಚಾರವನ್ನು ಬಿಟ್ಟು ವರ್ತಿಸುವವರಿಗೂ, ಭಾರತದ ಆರ್ಥಿಕ ವ್ಯವಸ್ಥೆಯ ಹಾದಿಯಲ್ಲಿ ದುಡಿಯುವುದು ಅವಶ್ಯವೂ ಅನುಕೂಲವೂ ಆಗಿದೆ.

## ಮೊದಲನೆಯ ಮೆಟ್ಟಿಲು

ಗ್ರಾಮಕೈಗಾರಿಕೆಯ ಮೊದಲನೆಯ ಮೆಟ್ಟಿಲಾಗಿ ಖಾದೀ ಕಾರ್ಯಕ್ರಮವೇ ಆಗಬೇಕಾಗಿದೆ. ಮನುಷ್ಯನಿಗೆ ಮೊದಲನೆಯ ಸಮಸ್ಯೆ ಅನ್ನ ಮತ್ತು ಬಟ್ಟೆಗಳದು. ಹೊಟ್ಟೆ ಹಸಿದಾದರೂ ಕೆಲಕಾಲವನ್ನು ದೂಡಬಹುದು, ಮಾನ ಮುಚ್ಚದೆ ಇರಲಾಗುವುದಿಲ್ಲ. ಆದುದರಿಂದ ಪ್ರತಿಯೊಂದು ಗ್ರಾಮದಲ್ಲಿಯೂ, ಆಯಾಯ ಗ್ರಾಮಗಳಿಗೆ ಬೇಕಾದಷ್ಟು ಖಾದಿಯ ಉತ್ಪನ್ನದ ಪ್ರಚಾರ ವ್ಯವಸ್ಥೆಗಳು ತೀವ್ರ ಆಗಬೇಕಾಗಿದೆ. ಇದನ್ನು ಅನುಸರಿಸಿ, ಇತರ ಗ್ರಾಮೋದ್ಯೋಗಗಳನ್ನು ಮುಂದು ಬರುವಂತೆ ಮಾಡಬಹುದು. ಹೀಗೆ ಜನರು ತಮ್ಮ ತಮ್ಮ ಹಿಂದಿನ ಪರಂಪರೆಯ ಕೈಗಾರಿಕೆಗಳಲ್ಲಿ ಪ್ರವರ್ತಿಸಿದಲ್ಲಿ ಕೆಲ ಕಾಲದಲಿಯೇ ಅದರಲ್ಲಿ ನಿಷ್ಣಾತರಾಗಿ, ಯಂತ್ರಗಳಲ್ಲಿ ಆಗುವ ಸಾಧನಗಳನ್ನು ಸ್ಪರ್ಧಿಸುವ ಕೌಶಲ್ಯವನ್ನು ಹೊಂದುವರೆಂಬುದರಲ್ಲಿ ಏನೇನೂ ಸಂಶಯವಿಲ್ಲ. ಭಾರತವು ಈ ರೀತಿಯ ಆರ್ಥಿಕ ಸುಧಾರಣೆಯಿಂದ ಮಾತ್ರ ಸಂಪೂರ್ಣ ಸ್ವತಂತ್ರವಾಗಿರಬಹುದು ಮಾತ್ರವಲ್ಲದೆ, ಇಂದಿನ ಜಗತ್ತಿನ ಕೋಲಾಹಲದಂತಹ ಅನರ್ಥಗಳಿಂದ ಪರಿಹಾರವಾಗಲು ಇದೇ ತಕ್ಕ ಮಾರ್ಗವೂ ಆಗಿದೆ.

## ಜಿನ್ನ--ನೆಹರೂ ಮಾತುಕತೆ

ಮಿ ಜಿನ್ನರು ನೆಹರೂಗಳೊಡನೆ ಮಾಡಿದ ಪತ್ರವ್ಯವಹಾರವನ್ನು ಪ್ರಕಟಿಸುತ್ತಾ ಅದರಲ್ಲಿ ತನ್ನ ನಿಜವೇಷವೇನೆಂದು ಜಗತ್ತಿಗೆ ಈಗ ಪ್ರದರ್ಶಿಸಿದರು. ನೆಹರೂಗಳು ತಮ್ಮ ಪತ್ರದಲ್ಲಿ 'ಭಾರತದಲ್ಲಿ ಬ್ರಿಟಿಷ್ ರಾಜ್ಯಭಾರವೇ ಸ್ಥಿರವಾಗಿ ಉಳಿಯಬೇಕೆಂದು ಪ್ರಯತ್ನ ಪಡುವವರೆಂ'ದು ಜಿನ್ನರ ಮೇಲೆ ಹೊರಿಸಿದ ಆರೋಪಗಳ ವಿಷಯವಾಗಿ, ಜಿನ್ನರು ಖತಿ ತಾಳಿದ್ದಾರೆ. ಇತ್ತೀಚೆಯ ಭಾರತದ ರಾಜಕೀಯ ಆಂದೋಲನದಲ್ಲಿ ಜಿನ್ನರು ಹಾಗೂ ಮುಸ್ಲಿಂ ಲೀಗು ವಹಿಸಿದ ಧೋರಣೆಯನ್ನು ವಿಚಾರಮಾಡಿದರೆ, ರಾಷ್ಟ್ರದ ಪ್ರಗತಿಯ ದೃಷ್ಟಿಯು ಜಿನ್ನರಿಗೂ ಅವರ ಲೀಗಿಗೂ ಇದೆಯೇ ಎಂಬ ಕುರಿತು ಅತ್ಯಂತ ಸಂಶಯ ಪಡುವಂತೆ ಮಾತ್ರ ಆಗಿದೆ.

## ಜಿನ್ನರು ಸ್ವರಾಜ್ಯದ ಶತ್ರುವಲ್ಲ

ಮಿ ಜಿನ್ನರು ತಾನು ಭಾರತದ ಸ್ವರಾಜ್ಯ ವಿದ್ವೇಷಿಯಲ್ಲವೆಂದೂ, ವೈಸರಾಯರ ಪ್ರಕಟಣೆಯಲ್ಲಿ ತನಗೂ ತೃಪ್ತಿಯಿಲ್ಲವೆಂದೂ ಆದರೆ ಕಾಂಗ್ರೆಸಿನ ಯುದ್ಧ ಕೇಳಿಕೆಗೆ ತಾನು ಸಮ್ಮತಿ ಕೊಡಲಾರೆನೆಂದೂ ಹೇಳುತ್ತಾರೆ. ಸ್ವಾತಂತ್ರ್ಯದ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಕಾಂಗ್ರೆಸಿಗೆ ಅವರು ಕೊಡುತ್ತಿರುವ ಪ್ರತಿಭಟನೆಗಳನ್ನು ಆಲೋಚಿಸಿದಲ್ಲಿ, ಸ್ವರಾಜ್ಯ ಸಾಧನೆಗೆ ಅವರದು ಬಹಳ ದೊಡ್ಡ ಆತಂಕವೆಂಬುದು ಯಾರಾದರೂ ಹೇಳಬಹುದಾಗಿದೆ. ಮುಸ್ಲಿಂ ಲೀಗನ್ನು ಮುಸ್ಲಿಮರ ಏಕಮೇವ ಪ್ರಾತಿನಿಧಿಕ ಸಂಸ್ಥೆಯೆಂದು ಕಾಂಗ್ರೆಸು ಒಪ್ಪಬೇಕೆಂದು ಜಿನ್ನರು ಹೇಳುವ ಮಾತಿಗೆ ನಿಜವಾಗಿ ಬೆಲೆ ಬರಬೇಕಾದರೆ, ಅದು ಬರಿಯ ಬಣಮಾತಿನಿಂದಾಗಲಿ, ರಾಜಕೀಯ ವಿರೋಧ ಅಭಿಪ್ರಾಯ ಸೂಚನೆಯಿಂದಾಗಲಿ, ಸರಕಾರದ ಆಶ್ರಯವನ್ನು ವಹಿಸುವ ಧೋರಣೆಯಿಂದಾಗಲಿ ಅಲ್ಲ. ಮುಸ್ಲಿಂ ಸಂಘಗಳು ಹಲವು ಕಡೆಗಳಲ್ಲಿ ಮುಸ್ಲಿಂಲೀಗಿನ ಪ್ರಾತಿನಿಧ್ಯದ ಕುರಿತು ತಮ್ಮ ತೀವ್ರ ವಿರೋಧವನ್ನು ತೋರಿಸಿವೆ. ಕಾಂಗ್ರೆಸಿನಲ್ಲಿಯಾದರೂ ಹಲವು ಮಂದಿ ರಾಷ್ಟ್ರೀಯವಾದಿಗಳಾದ ಮುಸ್ಲಿಮರು ಇದ್ದಾರೆ. ಕಾಂಗ್ರೆಸಿನ ಧ್ವಜದಡಿಯಲ್ಲಿ ಇಂದು ಮುಸ್ಲಿಮರು ಹೆಚ್ಚುಹೆಚ್ಚಾಗಿ ಬಂದು ಕೂಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಿರಂತರ ಸಾಹಸ ಸೇವೆಗಳನ್ನು ಮುಂದಿಟ್ಟು ಅದರಿಂದಲೇ ಮುಸ್ಲಿಂ ಜನತೆಯ ಹೃದಯದ ಮೇಲೆ ಲೀಗ ತನ್ನ ಪ್ರತಿಷ್ಠೆಯನ್ನು ಮಾಡಿದ್ದರೆ ಅದರ ಏಕಮೇವ ಪ್ರಾತಿನಿಧ್ಯತೆಯು ಪ್ರಯುಕ್ತಿದ್ದಿತು. ಅದಿಲ್ಲದೆ, ಸರಕಾರದ ಕೃಪಾಶ್ರಯದಲ್ಲಿ ಕಾಂಗ್ರೆಸಿಗೆ ವಿರೋಧ ಕೊಡುವ ಇಂದಿನ ಧೋರಣೆಯು ಸ್ವರಾಜ್ಯವಿದ್ರೋಹಕವಲ್ಲವೆಂದು ಯಾರು ಹೇಳಿದರೆ ನಂಬಬೇಕು?

## ಅಜಗಜಾಂತರ

ಪಂಡಿತ ನೆಹರೂಗಳು ತಮ್ಮ ಪತ್ರದಲ್ಲಿ ಈ ರೀತಿಯಿಂದ ಜಿನ್ನರ ಲೀಗಿನ ಮತ್ತು ಕಾಂಗ್ರೆಸಿನ ಧ್ಯೇಯಗಳನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ಉದ್ದೇಶ, ಧ್ಯೇಯ ರಾಜಕೀಯ ತತ್ವಗಳು ಅಜಗಜಾಂತರ ವ್ಯತ್ಯಾಸವುಳ್ಳವುಗಳೆಂದು ಈಗ ನನಗೆ ತಿಳಿದು ಬಂತು. ನಾವು ಭೇಟಿಯಾದ ಸಮಯದಲ್ಲಿ ಹಿಂದೂ ಮುಸ್ಲಿಂ ಐಕ್ಯವನ್ನು ನಾವು ಮಾತನಾಡಿ ಮುಗಿಸುವುದು ದೊಡ್ಡ ಮಾತಲ್ಲವೆಂದು ಬಗೆದಿದ್ದೆ. ಆದರೆ, ಇಂದು ಇರುವ ಈ ಅಜಗಜಾಂತರವನ್ನು ಕಂಡು ನಾನು ಬೆರಗಾಗಿದ್ದೇನೆ. ನಾವು ಯಾವುದಾದರೂ ಮಾತುಕತೆ ನಡೆಸಿ ಒಪ್ಪಂದ ಮಾಡಿಕೊಳ್ಳಬೇಕಾದರೆ ಇಕ್ಕಡೆಯವರಲ್ಲಿಯೂ ಒಂದು ಸಮಾನ ಉದ್ದೇಶವು ಇರಬೇಕಾಗಿದೆ.

## ರಾಜಕೀಯದಿಂದ ವಿಮೋಚನೆ

ಜಿನ್ನರ ವಿಮೋಚನಾ ದಿನದ ಮೇಲೆ ಕಾಂಗ್ರೆಸು ಮುಖಂಡರು, ಜಿನ್ನರ ಹಾಗೂ ಮುಸ್ಲಿಂ ಲೀಗಿನೊಡನೆ ತಮ್ಮ ಸಂಬಂಧವನ್ನು ಕಡಿದು ಹಾಕಿದ್ದಾರೆ. ಕೇವಲ ಜಾತೀಯ ಉದ್ದೇಶವನ್ನು ಮುಂದಿಟ್ಟದ್ದು ರಾಷ್ಟ್ರದ ಪ್ರಗತಿಗೆ ವಿರುದ್ಧ ಬರುವ ಲೀಗಿಗೂ ಅದರ ಪ್ರಮುಖರಾದ ಜಿನ್ನರಿಗೂ, ಯಾವ ಸ್ಥಾನವು ಸಲ್ಲಬೇಕೋ ಅದನ್ನು ಭಾರತದ ಮುಖಂಡರು ಹಾಗೂ ಜನತೆಯು ಇಂದು ತಿಳಿದುಕೊಂಡಂತಿದೆ. ಆದುದರಿಂದಲೇ ಮುಂದಕ್ಕೆ ಮಿ ಜಿನ್ನಾರೊಡನೆ ಮಾತುಕತೆ ನಡೆಸಲಾರೆನೆಂದು ಪಂಡಿತ ನೆಹರೂಗಳು ಸ್ಪಷ್ಟಪಡಿಸಿದ್ದಾರೆ.

# ನನ್ನ ತತ್ವಕ್ಕೆ ಅಪಜಯವಾದರೆ ಸಂತೋಷದಿಂದ ನಗೆಗೀಡಾಗುವೆನು

## ಮಹಾತ್ಮಾ ಗಾಂಧಿಯವರ ಹೇಳಿಕೆ

★ ಶಿಸ್ತಿಲ್ಲದ ಸೇನೆಯನ್ನು ನಡೆಸಲಾರೆ
★ ಮನಸ್ಸೊಂದಿದ್ದರೆ ಮಾರ್ಗವುಂಟು
★ ಕಾಂಗ್ರೆಸು ಸಂಸ್ಥೆಯು ಶಿಥಿಲವಾಗಿದೆ
★ ಯುವಕರು ಬೇಕಾದರೆ ಮುಂದೆ ಬರಲಿ

ದೇವರಲ್ಲಿ ನನಗೆ ವಿಶ್ವಾಸವಿದೆ; ಆದುದರಿಂದ ಜನರಲ್ಲಿ ನನಗೆ ವಿಶ್ವಾಸವಿದೆ ಮತ್ತೊಮ್ಮೆ ನಾನು ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಆತನ ಮನಸ್ಸಿದ್ದರೆ, ಜನರ ಮನಸ್ಸನ್ನೂ ಆತನು ಬದಲಾಯಿಸುವನು ಇಂದು ಕಾಂಗ್ರೆಸು ಸಂಸ್ಥೆಯು ಶಿಥಿಲವಾಗುತ್ತಿರುವ ಲಕ್ಷಣಗಳು ಕಂಡು ಬರುತ್ತಿವೆ. ಈ ಪರಿಸ್ಥಿತಿಯನ್ನು ಸುಧಾರಿಸಲೇ ಬೇಕು ಶಿಸ್ತಿಲ್ಲದ ಸೇನೆಯನ್ನು ನಾನು ನಡೆಸಲಾರೆ ಹೀಗೆಂದು ಮಹಾತ್ಮಾಜಿಯವರು ಹರಿಜನದಲ್ಲಿ ಒಂದು ಲೇಖನವನ್ನು ಬರೆದಿರುವರು ಅದರ ಸಾರಾಂಶವು ಹೀಗಿದೆ.—

ಬಡೋದೆಯ ಹೈಸ್ಕೂಲ್ ಕಾಲೇಜುಗಳ ವಿದ್ಯಾರ್ಥಿಗಳ ಖಾದಿಯನ್ನು ಹೆಚ್ಚಾಗಿ ಉಪಯೋಗಿಸ ವುದಿಲ್ಲವೆಂದೂ ಅಲ್ಲಿನ ವಿದ್ಯಾರ್ಥಿಯೊಬ್ಬನು ಬರೆಯುತ್ತಾನೆ ಪಂಜಾಬದಲ್ಲಿ ಕಾಂಗ್ರೆಸ್ ಕೆಲಸಗಾರನು, ಯಾರೂ ಕೈನೂಲು ತೆಗೆಯುವುದಿಲ್ಲವೆಂದೂ, ಆದುದರಿಂದ ಅಷ್ಟು ಬಿಗಿಯಾದ ಶರತವನ್ನು ಹಾಕಿದರೆ ಸ್ವರಾಜ್ಯ ಸಿಗುವುದು ಕಷ್ಟವಾಗುವುದೆಂದೂ, ಜಾತಿಯ ಸೌಹಾರ್ದದ ಬಗ್ಗೆ ಹಾಕಿದ ಎರಡನೆಯ ಶರತವೂ ಕಾರ್ಯರೂಪದಲ್ಲಿರಲು ಅಸಾಧ್ಯವಾದದೆಂದೂ ಕಾಂಗ್ರೆಸಿನ ಕೆಲಸಗಾರರೊಬ್ಬರು ಬರೆಯುತ್ತಾರೆ

### ಬೇರೆ ಉಪಾಯವಿಲ್ಲ

'ಇವರಿಗೆ ನಾನು ಒಂದೇ ಉತ್ತರವನ್ನು ಕೊಡುತ್ತೇನೆ ಅವರು ಹೇಳುವುದು ನನಗೆ ಗೊತ್ತಿಲ್ಲವೆಂದಲ್ಲ. ಈ ಶರತಗಳಂತೆ ನಡೆಯುವುದು ಬಹಳ ಕಷ್ಟವೆಂದೂ ನನಗೆ ಗೊತ್ತಿದೆ ಆದರೆ ಬೇರೆ ಉಪಾಯವಿಲ್ಲ. ನಾನೇನೂ ಹಟಮಾರಿಯಲ್ಲ ಬೇರೆ ಸುಲಭ ದಾರಿಯಿದ್ದರೆ, ನನ್ನ ಕೀರ್ತಿಯ ಸಲುವಾಗಿಯಾದರೂ ನಾನದನ್ನು ಸೂಚಿಸುತ್ತಿದ್ದೆ. ನೀರನ್ನು ಉತ್ಪತ್ತಿ ಮಾಡಲು ಎರಡು ಪಾಲು ಜಲಜನಕ ಒಂದು ಪಾಲು ಆಮ್ಲಜನಕ ಇವುಗಳು ಬೇಕೇ ಬೇಕು ಹಾಗೆಯೇ ಅಹಿಂಸೆಗೆ ಚರಕ ಮತ್ತು ಬಂಧುಪ್ರೇಮಗಳು ಬೇಕೇ ಬೇಕು ಇದು ನನ್ನ ಸಿಶ್ಚಿತಾಭಿಪ್ರಾಯ ಸತ್ಯಾಗ್ರಹದ ನಾನು ಆಂದೋಲನವನ್ನು ಹೂಡಬೇಕಾಗಿದ್ದರೆ ಈ ಶರತಗಳಂತೆ ನಡೆಯಬೇಕೆಂದು ಒತ್ತಾಯಪಡಿಸಲೇ ಬೇಕು

### ಮನಸ್ಸೊಂದಿರಬೇಕು

ದೇವರಲ್ಲಿ ನನಗೆ ವಿಶ್ವಾಸವಿದೆ ಅದುದರಿಂದ ಜನತೆಯಲ್ಲಿಯೂ ನನಗೆ ವಿಶ್ವಾಸವಿದೆ ನಾನು ಮತ್ತೊಮ್ಮೆ ಹೋರಾಟ ಹೂಡಬೇಕೆಂದು ಆತನ ಇಚ್ಛೆಯಿದ್ದರೆ, ನಿಜವಾಗಿಯೂ ಜನತೆಯ ಮನಸ್ಸನ್ನು ಆತನ ಬದಲಾಯಿಸುವನು ನನ್ನ ಶರತಗಳ ಅಸಾಧ್ಯವಾದವಲ್ಲ ಮನಸ್ಸು ಯತ್ನಕ್ಕೆ ಮೀರಿದವಲ್ಲ ಜನರಿಗೆ ಮನಸ್ಸೊಂದಿದ್ದರೆ, ಇದೆ ಅವರು ಇಂದೇ ಕೈನೂಲುತೆಗೆಯಲು ಪ್ರಾರಂಭಿಸಬಹುದು. ಮನಸ್ಸೊಂದಿದ್ದರೆ ಅವರು ಇತರ ಮಾನವ ಜನಾಂಗವನ್ನು ಪ್ರೀತಿಸಬಹುದು.

### ನನ್ನ ತತ್ವಕ್ಕೆ ಅಪಜಯವಾದರೆ?

'ನನ್ನ ಶರತಗಳಂತೆ ನಡೆಯಲು ಸಾಧ್ಯವಿಲ್ಲವಾದರೆ ಆಗ ನಾನು ಇಡೀ ದೇಶದ, ಬಳಿಕ ಇಡೀ ಜಗತ್ತಿನ ಅಪಹಾಸ್ಯಕ್ಕೆ ಈಡಾಗುವೆನು ಸಂತೋಷದಿಂದ ನಾನು ಅಪಹಾಸ್ಯಕ್ಕೆ ಈಡಾಗುವೆನು. ಸೇನಾಪತಿಯ ಗದ್ದುಗೆಯಿಂದ ಇಳಿಯುವೆನು ಆಗ ನನಗೆ ಸಂಪೂರ್ಣ ಸಮಾಧಾನವಿರುವುದು ನನ್ನ ಮಟ್ಟಿಗಾದರೂ, ನಾನು ಕಡೆಯ ವರೆಗೆ ನನ್ನ ತತ್ವಗಳಂತೆ ನಡೆದುಕೊಂಡೆನೆಂಬ ಸಮಾಧಾನವಾದರೂ ನನಗಿರುವುದು ಆ ನನ್ನ ಸೋಲಿನಿಂದ ನನಗೆ ಒಂದ ಗೊತ್ತಾಗಬಹುದು ಅನರ್ಥಕಾರೀ ಮಾರ್ಗದಿಂದ ರಾಷ್ಟ್ರವನ್ನು ಉಳಿಸಲು ದೇವರು ಈ ಬಗೆಯ ಒಂದು ಭ್ರಮೆಯನ್ನು ನನಗೆ ಉಂಟು ಮಾಡಿದನೆಂದು.

### ಕಾಂಗ್ರೆಸ್ಸಿನಲ್ಲಿ ದೌರ್ಬಲ್ಯ

ಕಾಂಗ್ರೆಸ್ಸು ಸಂಸ್ಥೆಯು ಶಿಥಿಲವಾಗುತ್ತಿರುವ ಲಕ್ಷಣಗಳು ಕಂಡುಬರುತ್ತಿವೆ ಬಂಗಾಳ ಕಾಂಗ್ರೆಸ ಕಮಿಟಿಯು ಇತ್ತೀಚೆಗೆ ಅವಿಧೇಯ ತನದಿಂದ ನಡೆಯುತ್ತದೆ ಒರಿಸಾದಲ್ಲಿ ಎರಡು ತಂಡಗಳಾಗಿವೆ ಕರ್ನಾಟಕದ ಪರಿಸ್ಥಿತಿಯು ಕೆಟ್ಟಿದೆ ಕೇರಳ ಕಾಂಗ್ರೆಸು ಕಮಿಟಿಗೆ ವರ್ಕಿಂಗ್ ಕಮಿಟಿಯಲ್ಲಿ ವಿಶ್ವಾಸವಿಲ್ಲವೆಂದ ತಿಳಿದಿದೆ ಪಂಜಾಬಿನ ಪರಿಸ್ಥಿತಿಯು ನೆಟ್ಟಗಿಲ್ಲ

### ಶಿಸ್ತಿಲ್ಲದ ಸೈನ್ಯವನ್ನು ನಡೆಸಲಾರೆ

ಆದರೂ ಈ ಪರಿಸ್ಥಿತಿಯನ್ನು ಸುಧಾರಿಸುವುದು ಅಸಾಧ್ಯವೆಂದು ನನಗನಿಸುವುದಿಲ್ಲ ಅದು ಸುಧಾರಿಸುವುದೆಂಬ ವಿಶ್ವಾಸವು ನನಗಿದೆ ಶಿಸ್ತಿಲ್ಲದ ಸೇನೆಯನ್ನು ನಾನು ಎಂದಿಗೂ ನಡೆಸಲಾರೆ ಆಂದೋಲನವನ್ನು ಮೊದಲು ಆರಂಭಿಸಿ ಮುಂದೆ ಎಲ್ಲವೂ ಸರಿಯಾಗುವುದು ಎಂದು ಹಲವರು ಹೇಳುವುದಕ್ಕೆ ನಾನು ಒಪ್ಪಲಾರೆ

### ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಇಂತಹ ಪರಿಸ್ಥಿತಿಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಜವಾಬ್ದಾರರೆಂದು ಹಲವರು ಹೇಳಬಹುದು. ಆದರೆ ಅವರೇನು ಮಾಡಬೇಕು? ಅವರಿಗೆ ಯೋಗ್ಯವೆಂದು ಕಂಡದ್ದನ್ನು ಅವರು ಮಾಡುತ್ತಾರೆ ಜನರಿಗೆ ಅವರ ಮೇಲೆ ವಿಶ್ವಾಸವಿಲ್ಲದಿದ್ದರೆ ಅವರೂ ಕೂಡಲೇ ಅಧಿಕಾರ ತ್ಯಾಗಮಾಡಿ ಸಂತೋಷದಿಂದ ಒಪ್ಪುವರು. ಆದರೆ ಕಾಂಗ್ರೆಸು ವರ್ಕಿಂಗ್ ಕಮಿಟಿಯವರು ಆಜ್ಞೆಮಾಡುವವರಲ್ಲ ಕಾಂಗ್ರೆಸಿನ ಹೇಳಿಕೆಯು ಆಜ್ಞೆಯಲ್ಲ ಅದು ಒಂದು ಸೇವಾ ಕಾರ್ಯ ಕಾಂಗ್ರೆಸು ಅಧ್ಯಕ್ಷರು ರಾಷ್ಟ್ರದ ಪ್ರಥಮ ಸೇವಕರು.

### ಈಗ ಯುವಕರಿಗೆ ಸುಸಂಧಿ

'ಹೊಸ ಚಳವಳಿಗಳು ಸಮೀಪಿಸಿವೆ ಇದು ಯುವಕರಿಗೆ ಸುಸಂಧಿ' ನಿಮ್ಮ ಮನಸ್ಸಿಗೆ ಬಂದಂತೆ ಮಾಡಬಹುದು ಅಧಿಕಾರವನ್ನು ವಹಿಸಲು ಯುವಕರು ಬೇಕಾದರೆ ಮುಂದೆ ಬರಲಿ ಆದರೆ ಹಾಗೆ ಮಾಡದೆ ಹಳಿಯುವರನ್ನು ಪ್ರಾನ. ಅರಿಸಿದರೆ ಪುರುಮಾದನಾಡದೆ ಅವರ ಹೇಳಿದಂತ ವಿಧೇಯರಾಗಿ ನಡೆಯಬೇಕು ರಾಷ್ಟ್ರದಲ್ಲಿ ಇಂದು ವಿಷಮ ಪರಿಸ್ಥಿತಿಯಿದೆ ನಾವು ಧೈರ್ಯದಿಂದ ದೃಢಮನಸ್ಸಿನಿಂದ ಈಗ ಕೆಲಸಮಾಡಬೇಕು.'

## ಪ್ರಕಟಣೆ

**ಮಂಜೇಶ್ವರ ಶ್ರೀ ಮದನಂತೇಶ್ವರ ದೇವರ ಭಂಡಾರದ ಬಾಬ್ತು:—**

ಕಾಮಗಾರಿಕೆಗಳನ್ನು ಮಾಡಿಕೊಡುವರ ಕೆಲವು ಪ್ರವೀಣ ಪ್ಲ್ಯಾನುಗಳನ್ನು ಪಡೆದಿರುವ ಕಂಟ್ರಾಕ್ಟರರ ಹೆಸರನ್ನು ರಿಜಿಸ್ಟ್ರು ಮಾಡುವರೆ ನಿರ್ಣಯಿಸಿದ್ದರಿಂದ ಇದೆ ತಾರೀಖು ಒಳಗೆ ಅಪೇಕ್ಷೆ ಪಡುವವರು ಅರ್ಜಿ ಸಮೇತ ರೂಪಾಯಿ ಡಿಪಾಜಿಟು ಹದಿನೈದನ್ನು ಭಂಡಾರದಲ್ಲಿ ರೇಮಾಕ್ತು ಮಾಡತಕ್ಕದ್ದು ಸದ್ರಿ ಅರ್ಜಿದಾರರ ಹೆಸರುಗಳನ್ನು ಚುನಾಯಿಸುವ ಅಧಿಕಾರವು ಶ್ರೀ ಭಂಡಾರದ ಎಕ್ಸಿಕ್ಯೂಟಿವ್ ಆಫೀಸರರದ್ದಾಗಿರುತ್ತದೆ.

ಚುನಾಯಿಸಲ್ಪಡದ ಅರ್ಜಿದಾರರು ರೇಮಾಕ್ತು ಮಾಡಿದ ಹಣವನ್ನು ಮರಳಿ ಕೊಡಲಾಗುವುದು

| | |
|---|---|
| ಶ್ರೀ ಧರ್ಮ ಅಗ್ರಹಾರ ಆಫೀಸು ಮಂಜೇಶ್ವರ ತಾ 4 1 1940 | ಬಿ ಎನ್ ಬಾಳಿಗಾ ಮೆನೆಜರ್ |



# ರಶ್ಯದಲ್ಲಿ ಕ್ರಾಂತಿಯ ಸೂಚನೆಗಳು?

## ರಶ್ಯನರಲ್ಲಿ ತೀವ್ರ ಅತೃಪ್ತಿ!

ಮೊಸ್ಕೋದ ಜನರ ಮನೋಭಾವದ ಸೂಕ್ಷ್ಮ ನಿರೀಕ್ಷಣ ಮಾಡಿದವರು ಹೇಳುತ್ತಿರುವ ಪ್ರಕಾರ ಸೋವಿಯಟ ಸರಕಾರವು ಫಿನ್ಲೆಂಡಿನ ಮೇಲೆ ಯುದ್ಧಕ್ಕೆ ಹೋಗಿ ಸೋಲುತ್ತಿರುವುದರ ಕುರಿತು ರಶ್ಯನರು ಬಹಳ ಅತೃಪ್ತಿಯನ್ನು ತೋರಿಸುತ್ತಿರುವರೆಂದು ತಿಳಿದಿದೆ. ಫಿನ್ಲೆಂಡಿನಲ್ಲಿ ರಶ್ಯದ ಪ್ರಚಂಡ ಸೇನೆಯ ಕಷ್ಟನಷ್ಟಗಳು ವಿಪರೀತ ಬೆಳೆಯುತ್ತಲಿವೆ. ಫಿನ್ಲೆಂಡಿನಲ್ಲಿ ತಮ್ಮ ಕೈಯೇ ಮೇಲಾಗಿರುವುದೆಂದು ಆತ್ಮಸ್ತುತಿ ಮಾಡಿಕೊಳ್ಳುತ್ತಿದ್ದ ರಶ್ಯದ ಅಧಿಕಾರಿಗಳು ಈಗ ಮೋರೆ ಸಣ್ಣಗೆ ಮಾಡಿ ಮೌನರಾಗಿದ್ದಾರೆ. ರಶ್ಯವು ಒಂದು ಪ್ರಬಲಶಕ್ತಿಯಾಗಿರುವುದೆಂದು ಪ್ರಪಂಚದಲ್ಲಿ ಹರಡಿದ ಭಾವನೆಯು ಸುಳ್ಳೆಂದು ಈಗ ಪ್ರತೀತವಾಗ ತೊಡಗಿದೆ.

ಯುದ್ಧ ಮಾಡದೇನೇ ಪೋಲೆಂಡ, ಫಿನ್ಲಾಂಡ ಇತ್ಯಾದಿ ತನ್ನ ಗಡಿಯಲ್ಲಿರುವ ಸಣ್ಣ ಸಣ್ಣ ರಾಷ್ಟ್ರಗಳನ್ನು ನುಂಗಬೇಕೆಂಬ ಒಂದೇ ಉದ್ದೇಶದಿಂದ ಜರ್ಮನಿಯ ಹಿಟ್ಲರನೊಂದಿಗೆ ಸಂಧಿಮಾಡಿಕೊಂಡ ರಶ್ಯವು ಈಗ ಸ್ವತಃ ಯುದ್ಧದಲ್ಲಿ ಸೇರಿಕೊಂಡಿದೆ. ಅದರಿಂದ ಹೊರಬರುವ ಉಪಾಯವೇ ಕಾಣದಾಗಿದೆ. ಯುದ್ಧವು ಸುಲಭದಲ್ಲಿಯೇ ಮುಗಿಯಬಹುದು. ಮತ್ತು ಫಿನ್ಲೆಂಡು ತನ್ನ ಅಧೀನವಾದ ಬಳಿಕ ಬೇರೆ ಬಾಲ್ಟಿಕ ಹಾಗೂ ಬಾಲ್ಕನ ರಾಷ್ಟ್ರಗಳ ಮೇಲೆ ಕೈ ಮಾಡಬಹುದೆಂದು ಯೋಚಿಸಿದ್ದ ರಶ್ಯದ ಆಸೆ ಪ್ರತ್ಯಾಶೆಗಳ ಕೆಚ್ಚೆದೆಯ ವೀರ ಫಿನ್ನ ದಂಡಾಳುಗಳ ಎದುರಾಟದಿಂದ ಭಗ್ನವಾಗಿವೆ. ಈ ಯುದ್ಧದ ಪರಿಣಾಮವು ರಶ್ಯದಲ್ಲಿ ಹೇಗಾದೀತೆಂದೂ ಊಹಿಸುವುದು ಅಸಾಧ್ಯವಾಗಿದೆ.

### ಟ್ಯಾಂಕುಗಳ ಯುದ್ಧ

ರಶ್ಯವು ಫಿನ್ಲೆಂಡಿನ ಮೇಲೆ ತನ್ನ ಪ್ರಚಂಡ ಸೇನೆಯನ್ನೇ ಕಳುಹಿಸಿ ಕೊಟ್ಟಿದ್ದಾರೂ, ಫಿನ್ಲೆಂಡು ಆ ಎಲ್ಲಾ ಸೇನೆಯನ್ನು ತಡೆದಿರುವುದು ಮಾತ್ರವಲ್ಲ, ಅನೇಕ ಕಡೆಗಳಲ್ಲಿ ಅದನ್ನು ಹಿಮ್ಮೆಟ್ಟಿಸಿದೆ. ಟ್ಯಾಂಕುಗಳೊಡನೆ ಫಿನ್ನರು ಮಾಡುತ್ತಿರುವ ಯುದ್ಧಕ್ರಮವು ರೋಮಾಂಚನಕಾರಿಯಾಗಿರುವುದು. ರಶ್ಯನರ ಟ್ಯಾಂಕುಗಳನ್ನು ಒಡೆದು ಹಾಕುವ ಎಲ್ಲಾ ಉಪಾಯುಗಳು ನಿಷ್ಫಲವಾದಾಗ ಫಿನ್ನರು ಟ್ಯಾಂಕುಗಳು ಮುಂದೊತ್ತಿ ಬರುವ ದಾರಿಯಲ್ಲಿ ಆಳುದ್ದ ಹೊಂಡಗಳನ್ನು ತೋಡಿ ಅವುಗಳಲ್ಲಿ ಒಬ್ಬೊಬ್ಬರಾಗಿ ಅವಿತುಕೊಳ್ಳುವರು ಮತ್ತು ಆ ಟ್ಯಾಂಕುಗಳು ಆ ಮಾರ್ಗದ ಮೇಲಿಂದ ಹೋಗುವಾಗ ಹಿಂದಿನಿಂದ ಅವುಗಳ ಮೇಲೆ ಬೋಂಬುಗಳನ್ನು ಚೆಲ್ಲಿ ನಾಶಮಾಡುವರು. ಹೀಗೆ ಫಿನ್ನರು ನಾಶಮಾಡಿದ ರಶ್ಯನರ ಟ್ಯಾಂಕುಗಳು ಹೇರಳವಾಗಿವೆ.

### ರಶ್ಯದ ಬಲ ಕುಂದುತ್ತಲಿದೆ

ಇಷ್ಟರೊಳಗಾಗಿಯೇ ರಶ್ಯದ ಕೆಂಪು ಸೇನೆಯ ೨೫೦೦೦ದಿಂದ ೩೦೦೦೦ ವರೆಗಿನ ಸೈನಿಕರು ರಣರಂಗದಲ್ಲಿ ಫಿನ್ನರಿಂದ ಕೊಲ್ಲಲ್ಪಟ್ಟಿರುತ್ತಾರೆ. ೪೦೦೦೦ ವರೆಗೆ ಸೈನಿಕರು ಗಾಯಗೊಂಡು, ಅಥವಾ ಹಿಮಮಂಜು ಮೊದಲಾದುವುಗಳನ್ನು ಸಹಿಸಲಾರದೆ ಕೆಲಸಕ್ಕೆ ಬಾರದವರಾಗಿರುತ್ತಾರೆ. ರಶ್ಯದ ಸೇನೆಗೆ ಚಳಿಗಾಲದ ಉಡಿಗೆತೊಡಿಗೆಗಳು ಕೂಡ ಸಾಕಷ್ಟು ದೊರೆಯುವುದಿಲ್ಲ. ಹೀಗಾಗಿ ರಶ್ಯನರ ಬಲವು ದಿನೇದಿನೇ ಕುಂದುತ್ತ ಬರುತ್ತಲಿದೆ. ಹೀಗೆ ಫಿನ್ಲೆಂಡಿನಲ್ಲಿ ರಶ್ಯವು ಸೋಲುತ್ತಿರುವುದರಿಂದ, ಈಗ ಹಿಟ್ಲರನಿಗೆ ಬುದ್ಧಿ ಕಲಿಸುತ್ತಿರುವ ರಶ್ಯಕೆ ಮುಂದೆ ಹಿಟ್ಲರನೇ ಬುದ್ಧಿ ಕಲಿಸುವ ದಿನಗಳು ಬರಬಹುದೋ ಎಂಬ ಸಂದೇಹವಾಗುತ್ತದೆ.

### ಕ್ರಾಂತಿಯ ಸಂಭವ

ಯಾವದೇ ಕಾರಣದಿಂದ ಈ ಪರಿಸ್ಥಿತಿಯಲ್ಲಿ ಬದಲಾವಣೆಗಳಾಗಿ, ಫಿನ್ಲೆಂಡಿನಿಂದ ರಶ್ಯದ ಸೇನೆಯು ಗೌರವಪೂರ್ವಕ ಹಿಂದಿರುಗದಿದ್ದರೆ ಸ್ಟಾಲೀನನ ಕಾರುಭಾರಿನಿಂದ ಅತೃಪ್ತರಾದ ರಶ್ಯನರು ಅವನ ವಿರುದ್ಧ ಕ್ರಾಂತಿಯನ್ನೆಬ್ಬಿಸಲೂ ಬಹುದು. ಸ್ಟಾಲೀನನ ಅವಕೃಪೆಗೆ ಪಾತ್ರನಾಗಿ ಈಗ ದೇಶಭ್ರಷ್ಟನಾಗಿ ಮೆಕ್ಸಿಕೋದಲ್ಲಿ ಕಾಲಯಾಪನೆ ಮಾಡುತ್ತಿರುವ ಒಬ್ಬ ದೊಡ್ಡ ಮುಖಂಡನು ಸ್ಟಾಲೀನನ ಯುದ್ಧಾತುರವನ್ನು ಕಟೂಕ್ತಿಗಳಿಂದ ಟೀಕಿಸಿರುವನು. ಇದು ಜನರು ಕ್ರಾಂತಿಯ ಸಿದ್ಧತೆಯನ್ನು ಮಾಡಲಿಕ್ಕೆ ಪೂರ್ವಸೂಚನೆಯಾಗಬಹುದು.

### ಫಿನ್ಲೆಂಡಿನ ಪುನರುದ್ಧಾರ

ಪೋಲಾಂಡ, ಫಿನ್ಲಾಂಡಗಳನ್ನು ಆಕ್ರಮಿಸಿದ ರಶ್ಯವು ಅನ್ಯಾಯ ಗಾರನೆಂದು ಜನಾಂಗ ಸಂಘವು ಠರಾವು ಮಾಡಿದೆ. ರಶ್ಯದೊಡನೆ ಸ್ನೇಹಾಚಾರದ ಒಡಂಬಡಿಕೆ ಮಾಡಿಕೊಳ್ಳುವ ಪ್ರಯತ್ನಗಳಲ್ಲಿ ಅಸಫಲವಾದ ಬ್ರಿಟನು ಫ್ರಾನ್ಸುಗಳು ತಮ್ಮ ರಾಯಭಾರಿಗಳನ್ನು ರಶ್ಯದಿಂದ ಈಗ ಹಿಂದಕ್ಕೆ ಕರೆಸಿಕೊಂಡಿವೆ. ರಶ್ಯದ ಸ್ನೇಹಿತವಾಗಿರುವ ಜರ್ಮನಿಯು ಅದಕ್ಕೆ ಯಾವ ಸಹಾಯವನ್ನೂ ಮಾಡುವ ಸ್ಥಿತಿಯಲ್ಲಿಲ್ಲವೆಂಬುದು ಸ್ಪಷ್ಟವು. ಇಟೆಲಿಯೂ ರಶ್ಯದಿಂದ ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿದೆ. ಮಿತ್ರರಾಷ್ಟ್ರಗಳು ಫಿನ್ಲೆಂಡಿಗೆ ಒತ್ತಾಸೆಮಾಡುವ ಸಂದರ್ಭದಲ್ಲಿ ಇಟೆಲಿಯು ಹಿಟ್ಲರನ ಪಕ್ಷವನ್ನು ಬಿಟ್ಟು ಮಿತ್ರಮಂಡಲಿಯನ್ನು ಸೇರಿಕೊಳ್ಳಲೂಬಹುದು. ಯಾಕಂದರೆ ಫಿನ್ಲೆಂಡು ರಶ್ಯದ ಅಧೀನರಾಗಿರುವುದು ಅದಕ್ಕೂ ಸಮ್ಮತವಾಗಿರುವುದಿಲ್ಲ. ಆ ಸಂದರ್ಭದಲ್ಲಿ ಯೂರೋಪಿನ ಮಹಾಯುದ್ಧವು ಸರ್ವತ್ರ ಯೂರೋಪದಲ್ಲಿ ಹರಡಿಕೊಂಡು, ರಶ್ಯದಲ್ಲಿ ಸ್ಟಾಲೀನನ ಅಧಿಕಾರವು ಕೊನೆಗಾಣಲಿಕ್ಕಿದೆ ಮತ್ತು ಫಿನ್ಲೆಂಡ, ಪೋಲಾಂಡ, ಜೆಕೊಸ್ಲೊವೇಕಿಯ, ಆಸ್ಟ್ರಿಯ ಮೊದಲಾದವುಗಳು ಪುನರುದ್ಧಾರವಾಗಬಹುದು.


ಬಹುಕಾಲದ ಕೆಮ್ಮು ಕೂಡಲೇ ಗುಣವಾಗುವುದು

ಕೆದರಿಸುವ ಕೆಮ್ಮು ಯ ಕಾಸವು ನಿಮ್ಮ ಗಂಟಲಿಗೆ ಭಯಂಕರ ಹಾನಿಯನ್ನುಂಟುಮಾಡುವದಲ್ಲದೆ ನೋವನ್ನುಂಟುಮಾಡುವುದು. ಸ್ವಲ್ಪ ಸಮಯದಲ್ಲಿಯೇ ಅದು ಕೋಮಲವಾದ ವಾಯು ನಾಳಗಳನ್ನು ಉದ್ರೇಕಿಸಿ ಇದರಿಂದ ಭಯಂಕರವಾದ ಪರಿಣಾಮವಾಗಬಹುದು. ಆದುದರಿಂದ ಈ ಬಾಧೆಯ ಪ್ರಾರಂಭಿಕ ಲಕ್ಷಣಗಳು ಕಂಡುಬಂದೊಡನೆ ಕ್ರಿಮಿನಾಶಕ ಶ್ವಾಸನೀಯ ಪೆಪ್ಸು ಮಾತ್ರೆಗಳನ್ನು ಸೇವಿಸಿರಿ.

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಆಳವಾಗಿ ಹೊಕ್ಕುತ್ತದೆ. ಈ ರೀತಿಯಿಂದ ಪೆಪ್ಸು ನಿಮ್ಮ ಗಂಟಲು ನಾಳ ಮತ್ತು ವಾಯು ನಾಳಗಳಲ್ಲಿರಬಹುದಾದ ಸೋಂಕು ರೋಗದ ಕ್ರಿಮಿಗಳನ್ನು ನಾಶಮಾಡುತ್ತದೆ. ಉತ್ತಾದ ನಿಮ್ಮ ಎದೆಯನ್ನು ... ಎಲ್ಲಾ ಭಯಂಕರವಾದ ಕೆಮ್ಮು ಶೀತವನ್ನು ಗುಣಪಡಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ 1ಂತೆ ಮಾರುತ್ತಾರೆ.

ಏಜಂಟ್ಸ್ ಮೆಸರ್ಸ್ ದಾಧಾ ಮತ್ತು ಕಂಪನಿ,
ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಪೆಪ್ಸನ್ನುಪಯೋಗಿಸಿರಿ

**PEPS**

ಕ್ರಿಮಿನಾಶಕ ಶ್ವಾಸನೀಯ ಗುಳಿಗೆಗಳು



**U. K. BHUJANGA NAYAK**
**CLOTH COMMISSION AGENT**
**SHEVAPET, SALEM**

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರ್ಹದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ



ಭವಿಷ್ಯ ಮತ್ತು "ಶ್ರೀ ಭೃಗು ಸಂಗೀತ"

ನಿಮಗೆ ಪೂರ್ವಜನ್ಮದ ಸಹಿತ ಈ ಜನ್ಮದ ಸಂಪೂರ್ಣ ಭವಿಷ್ಯತ್ತು ತಿಳಿಯಬೇಕೆಂದಿದ್ದರೆ ತಮ್ಮ ಜಾತಕದ ಒಂದು ಪ್ರತಿಯನ್ನು ಕಳುಹಿಸಿರಿ. ಜಾತಕವು ಇಲ್ಲದಿದ್ದರೆ ತಾವು ಪತ್ರ ಬರೆದ ಸಮಯ ಮತ್ತು ಸ್ಥಳವನ್ನು ತಿಳಿಸಿ ಕಳುಹಿಸಿರಿ. ನಾವು ಹಿಮಾಲಯದ ಸುಪ್ರಸಿದ್ಧ ಜ್ಯೋತಿಷ್ಯರಿಂದ ಭೃಗು ಸಂಗೀತದ ಪ್ರಕಾರವಾಗಿ ಸಂಪೂರ್ಣ ಪೂರ್ವ ಜನ್ಮದ ಮತ್ತು ಭವಿಷ್ಯತ್ತಿನ ವಿವರವನ್ನು ಬರೆದು ಕಳುಹಿಸುವೆವು. ಯಾವತ್ತೂ ಪ್ರಶ್ನೆಗಳನ್ನು ಉತ್ತರಿಸಲಾಗುವುದು. ಪತ್ರವ್ಯವಹಾರವು ಗುಟ್ಟಿನಲ್ಲಿರಿಸಲಾಗುವುದು. ಚಾರ್ಜು ರೂ 5, ಎರಡು ಜಾತಕ ರೂ 8 ಮತ್ತು 4 ಜಾತಕ ರೂ 15 ಅಂಚೆವೆಚ್ಚ ಪ್ರತ್ಯೇಕ. ಅರ್ಧಚಾರ್ಜು ಮುಂಗಡ. ಜಾತಕದ ವಿಷಯ ಯಾವತ್ತೂ ಕೆಲಸಗಳು ತಕ್ಕದಾದ ಚಾರ್ಜಿಗೆ ಮಾಡಿಕೊಡಲಾಗುವುದು

卐 ಸ್ವಸ್ತಿಕಾ ಜ್ಯೋತಿಷ್ಯ ಕಾರ್ಯಾಲಯ, (D X) ಬೊಂಬಾಯಿ 7 卐



**THE PIE-MONEY BANK LTD,**
Maidan Road, MANGALORE

Undertakes all kinds of Banking Business Current account at 2½% per annum. Savings Bank Deposits at 4½% per annum

**FIXED DEPOSITS**

For 2 Years 5% 1 Year 4½% For 6 months 4% 3 months 3½%

Auction . d. ranging from Rs. 100/ to Rs. 5000/ run regularly on systematic lines Unique Banking facilities to Businessmen and interested Public

*Apply for particulars—*

**K. R. GURU,** *Managing Director*

ಈ ವಾರದ ಕತೆ:

# ಮಮ್ಮದಸನ್

[ಕತೆಗಾರರು: ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ]

ಅದು ಆಗಿ ಅಷ್ಟು ವರ್ಷಗಳು ಕಳೆದು ಹೋದುವು. ನಾನು ಅವನನ್ನು ಪೂರಾ ಮರೆತು ಹೋಗಿದ್ದೆ. ಫಕ್ಕನೆ ಬಂದು—'ನಾನೇ ಅವನು" ಎಂದು ಹೇಳಿದ್ದರೆ, ನನಗೆ ಅವನ ಗುರುತು ಹತ್ತುತ್ತಿದ್ದಿಲ್ಲ. ಆದುದರಿಂದ ಮೊನ್ನೆ ಅವನು ನಮ್ಮ ಮನೆಬಾಗಲಿಂದ ಹಾದುತ್ತಾ ಹೋಗುವಾಗ—'ಅವನು ಯಾರು?' ಎಂದು ಕೇಳಿದೆ.

ಅವನು ಮುದುಕನಾಗಿದ್ದ. ಮೈ ನೆರಿ ಕಟ್ಟಿತ್ತು. ಗಡ್ಡ ಮೀಸೆ ಉದ್ದುದ್ದ ಬೆಳೆದಿತ್ತು, ತಲೆಕೂದಲು ಬೆಳ್ಳಗೆ ಹಣ್ಣಾಗಿತ್ತು. ಸಣ್ಣ ಒಂದು ಲುಂಗಿಯನ್ನು ಉಟ್ಟುಕೊಂಡಿದ್ದ. ಬಹಳ ದೂರದಿಂದ ನಡೆದು ಬಂದವನ ಹಾಗೆ ಕೈಕಾಲು ಧೂಳಿಯಿಂದ ತುಂಬಿ ಕೆಂಪುಕೆಂಪಾಗಿದ್ದುವು. ಮುಸಲ್ಮಾನನ ಹಾಗೆ ಇದ್ದನಾದರೂ—'ಮನುಜ ಶರೀರವಿದೇನು ಸುಖಾ ಇದೇನು ಸುಖಾ .. ಇದೇನು ಸುಖಾ ' ಎಂದು ಪುರಂದರದಾಸರ ಪದವನ್ನು ಹಾಡಿಕೊಂಡು ಹೋಗುತ್ತಿದ್ದ. ಆದುದರಿಂದ ಅವನು ಯಾರೆಂದು ತಿಳಿಯುವ ಕುತೂಹಲವು ನನಗೆ ವಿಶೇಷವಾಯಿತು.

'ಯಾರು ಅವನು? ಹುಚ್ಚನ ಹಾಗ ಹಾಡು ಹೋಗುತ್ತಾನೆ" ಎಂದು ನಾನು ಪ್ರಶ್ನಿಸಿದೆ.

'ಅವನು—ಗೊತ್ತಾಗಲಿಲ್ಲವೆ? ಮಮ್ಮದಸನ್ ಅವನೇ ಇವನು' ಎಂದು ಅತ್ತೆ ಮನೆಯ ನ ಗಪ್ಪಯ್ಯ ಹೇಳಿದ.

ಆಗಲೇ ಇಪ್ಪತ್ತು ವರ್ಷಗಳ ಹಿಂದೆ ನಡೆದ ಘಟನಾಚಕ್ರದ ಛಾಯೆಯು ಪುನಃ ನನ್ನ ಮನೋಪಟಲದಲ್ಲಿ ಸುತ್ತಿಹೋಯಿತು. ಕೆಟ್ಟದೆಯ ದಂಡಾಳುಗಳು ಕೂಡ ಹೆದರಿ ತೆಗೆಯುವ ಮಮ್ಮದಸನ್! ಅಳುವ ಮಕ್ಕಳನ್ನು ಸುಮ್ಮಗಿರಿಸುವ ಮಮ್ಮದಸನ್! ಹಳ್ಳಿಹಳ್ಳಿಗಳಿಂದ ಅಕ್ಕಿ ಮೆಣಸು ಹೊತ್ತು ತರುವ ಹೆಂಗಸು ಗಂಡಸರನ್ನು ಹೆದರಿಸಿ ಬೆದರಿಸಿ ಅವರನ್ನು ಸುಲಿದು ಹೊಟ್ಟೆ ಹೊರೆಕೊಳ್ಳುವ ವೃತ್ತಿಯನ್ನು ಮಮ್ಮದಸನನು ಅವಲಂಬಿಸಿದ್ದ. ಮಮ್ಮದಸನ್ ಆ ದಾರಿಯಲ್ಲಿ ಇದ್ದಾನೆಂದರೆ ಹಳ್ಳಿ ಜನರು ಹತ್ತು ಹನ್ನೆರಡು ಮೈಲು ಸುತ್ತು ಹಾಕಿ ಬೇರೆ ದಾರಿಯಿಂದ ಪೇಟೆಗೆ ಬರುತ್ತಿದ್ದರು. ಹಳ್ಳಿ ಜನರ ಧನ ಮಾನ ಪ್ರಾಣ ಅವನ ದಯೆಯಿಂದ ಸುರಕ್ಷಿತವಾಗಿರಲಿಲ್ಲ. ಪೀಡಿಸುವದರಲ್ಲಿ ಅವನಿಗೆ, ದರ್ಪಿಯು ಧಾರೆಯಂತ ಹರಿತವಾದ ನಾಲಗೆ ಅವನದು. ಬೈಗಳನ್ನು ಬೈಯುವುದರಲ್ಲಿ ಅವನನ್ನು ಮಿಗಿಸಿದವರಿರಲಿಲ್ಲ. ಬೈಯಲಿಕ್ಕೆ ಆರಂಭ ಮಾಡಿದನೆಂದರೆ, ಗ್ರಾಮೊಫೋನಿನ ಪ್ಲೇಟುಗಳಂತೆ ಅವನ ನಾಲಗೆ ತಿರುಗುತ್ತಾ ಇರುತಿತ್ತು. ಆದುದರಿಂದ ಹಳ್ಳಿಹಳ್ಳಿಗಳ ಜನರಿಗೆ ಮಾತ್ರವಲ್ಲ, ಪೇಟೆ ಪಟ್ಟಣದವರಿಗೂ ಅವನ ಹೆದರಿಕೆ ಇತ್ತು. ಯಾರೂ ಅವನೊಡನೆ ಜಗಳವನ್ನೆಬ್ಬಿಸುವ ಸಾಹಸ ಮಾಡುತ್ತಿರಲಿಲ್ಲ.

ಆದರೆ ಒಂದು ದಿನ ಮಾತ್ರ ಒಂದು ಸಣ್ಣ ಜಗಳವಾಗಿಬಿಟ್ಟಿತು. ಹಳ್ಳಿಯಿಂದ ಬರುತಿದ್ದ ಒಬ್ಬಾಕೆಯ ಮೇಲೆ ಕೈಮಾಡಿದ ಫಲವಾಗಿ ಆ ಸಾಹಸಗಾತಿ ಅವನ ಕೆನ್ನೆಗೆ ಒಂದೇಟು ಹರಿಸಿ ಬಿಟ್ಟಳು. ಒಬ್ಬ ಹೆಂಗಸಿನ ಕೈಯ್ಯಲ್ಲಿ ತನ್ನ ಪರಾಭವವಾದುದನ್ನು ಮಮ್ಮದಸನ್‌ನಿಂದ ಸಹಿಸಲಾಗಲಿಲ್ಲ. ಅವನು ಸೊಂಟಕ್ಕಿದ್ದ ಚೂರಿಯಿಂದ ಆವಳ ಹೊಟ್ಟೆಯನ್ನು ಇರಿದುಬಿಟ್ಟ. ರಕ್ತಸ್ರಾವವಾಗಿ ಆವಳ ಪ್ರಾಣಲೀಲೆ ಮುಗಿಯಿತು. ಮಮ್ಮದಸನನ ವಿಚಾರಣೆಯಾಗಿ ಅವನಿಗೆ ಆಜನ್ಮ ಜೈಲುವಾಸವು ಪ್ರಾಪ್ತವಾಯಿತು. ಹದಿನೆಂಟು ವರ್ಷಗಳು ಮುಗಿದ ಮೇಲೆ ಸರಕಾರವು ಅವನನ್ನು ಬಿಡುಗಡೆ ಮಾಡಿತು. ಆದರೆ ಜೈಲಿನ ಈ ಅನುಭವಿಯನ್ನು ಬೇರೆ ಬಿಡುವುದು ಸರಕಾರಕ್ಕೆ ಸಮ್ಮತವಾಗದೆ ಅದು ಅವನನ್ನು ಮೊದಲು ಜೈಲಿನ ವಾರ್ಡರನನ್ನಾಗಿ ನೇಮಿಸಿತು. ಆ ಮೇಲೆ ಅವನು ಅದೇ ಜೈಲಿನ ಜೈಲರನೂ ಆದ.

ಆದರೆ ಮಮ್ಮದಸನನಿಗೆ ತಿಳಿಯದೆಯೇ ಕಾಲಚಕ್ರವು ಉರುಳುತ್ತಾ ಇತ್ತು. ಅವನ ನಾಲಗೆಯ ಧಾರೆ ಮತ್ತು ಕೈಯ ಗುಣ—ಬೇರೆ ಬದಲಾಗದಿದ್ದರೂ ಜೈಲಿನಲ್ಲಿ ಬರುವ ಕೈದಿಗಳ ಜಾತಿಯಲಿ ಪರಿವರ್ತನೆಯಾಗುತಾ ಇತ್ತು.

ಈಗ ಬರುವ ಕೈದಿಗಳು ಮೊದಲಿನವರ ಹಾಗೆ, ಅವನ ನಾಲಗೆ ಅಥವಾ ಕೈಗೆ ಹೆದರಲಿಲ್ಲ, ಪರಂತು ತಮ್ಮ ಕರ್ತವ್ಯವೆಂದರಿತು ಒಪ್ಪಿಸಿದ ಕಾರ್ಯಗಳನ್ನು ತಪ್ಪು ತಡೆಗಳಿಲ್ಲದೆ ಮಾಡುತ್ತಿದ್ದರು. ಅವರು ಮಮ್ಮದಸನನನ್ನು ಪೂರಾ ಪೂರಾ ಅಲಕ್ಷಿಸಿ ಇರುತಿದ್ದರು. ಬಿಳಿ ಟೋಪಿ, ಬಿಳಿ ಅಂಗಿ, ಬಿಳಿ ಚಡ್ಡಿಯ ಆ ಕೈದಿಗಳು, ಜೇನು ಹುಳುಗಳು ಹೂಗೊಂಚಲನ್ನು ಮುತ್ತುವ ಹಾಗೆ ಜೈಲನ್ನು ಮುತ್ತುವದನ್ನು ನೋಡಿ ಅವನಿಗೆ ಆಶ್ಚರ್ಯದೊಂದಿಗೆ ಸ್ವಲ್ಪ ಸ್ವಲ್ಪ ಅಂಜಿಕೆಯೂ ಆಗತೊಡಗಿತು. ಮೊದಲು ಬಹು ಸುಲಭ ಮತ್ತು ಹಗುರವಾಗಿದ್ದ ಜೈಲರ್ ಕೆಲಸವು ಈಗ ಮಮ್ಮದಸನನಿಗೆ ಭಾರವೂ ಕಠಿನವೂ ಆಗಿ ತೋರ ತೊಡಗಿತು.

ಒಂದು ದಿನ ರಾತ್ರಿ ಜೈಲಿನ ಸೂಪರಿಂಟೆಂಡೆಂಟರು ಒಂದು — ಮಮ್ಮದ್! ಸಂಕ್ರಾಂತಿಗೆ ಈ ಕೈದಿಗಳನ್ನು ಅವರ ಮನೆಯವರ ಮೊದಲೇ ಬಿಡಬೇಕೆಂದಿದೆ' ಎಂದರು.

ತಲೆಯ ಮೇಲಿನ ಭಾರವು ಹಗುರ ಆದಂತೆ ತೋರಿ ಅವನು ಸಂತೋಷಪಟ್ಟು—ಜೀ' ಎಂದ.

'ಹೇಗಾದರೂ ಮಾಡಿ ಇವರನ್ನು ಒಬ್ಬೊಬ್ಬರನ್ನಾಗಿ ಹೊರಗೆ ಹಾಕಬೇಕಾಗಿದೆ

'ಜೀ ನಾಳೆಯಿಂದಲೇ'

ಆದರೆ ಒಂದು ಕೆಲಸ ಇದೆ ಮಮ್ಮದ್!'

'ಜೀ'

ಹೊರಗೆ ಬಿಡುವ ಮೊದಲು, ಮಾಫಿನಾಮೆಗಳ ಮೇಲೆ ಅವರ ಹೆಬ್ಬೆಟ್ಟಿನ ಗುರುತು ತೆಗೆದುಕೊಳ್ಳಬೇಕು. ಹಾಗೆ ಮಾಡಿದರೆ ಮಾತ್ರ ಬಿಡಬಹುದು; ಇಲ್ಲವಾದರೆ ಬಿಡತಕ್ಕದ್ದಲ್ಲ. ಇದರ ಕೆಲಸ ನಿನಗೆ ಕೊಡುತ್ತೇನೆ

'ಜೀ'

ಮಮ್ಮದಸನ್ ಆ ಕೆಲಸವನ್ನು ಸಂತೋಷದಿಂದ ಒಪ್ಪಿಕೊಂಡ. ಜೈಲುವಾಸವನ್ನು ಇಷ್ಟು ವರ್ಷಗಳ ಅನುಭವಿಸಿದ್ದ ಅವನಿಗೆ ಹಾಗೆ ಕೈದಿಗಳನ್ನು ಬಿಡುವುದು ಕಷ್ಟದ ಕಾರ್ಯವಾಗಿ ರಲಿಲ್ಲ. ಪರಂತು ಆಗ ಬರುತ್ತಿದ್ದ ಕೈದಿಗಳು ಮಾತ್ರ ಹಿಂದಿನವರ ಹಾಗೆ ಇರಲಿಲ್ಲ. ಮಾಫಿನಾಮೆಯ ಹೆಸರು ಕೇಳಿದ ಕೂಡಲೇ ಅವರ ಮುಖದಲ್ಲಿ ಕಣ್ಣು ಕೆಂಪಗೆ ಕೆಂಪಾಯಿತು. ತುಟಿಗಳು ಅದುರತೊಡಗಿದುವು. ಅವನು ಹೇಳಿದ 'ಪ್ರಸ್ತಾಪ ಎಷ್ಟು ಮಾತ್ರಕ್ಕೂ ಹಿಡಿಸಲಿಲ್ಲ. ಬೇಡ

ಒಗ್ಗಿಸಿದರೂ ಬಗ್ಗದ ಆವರ ಹಸ್ತಗಳನ್ನು ಮಾಫಿನಾಮೆಗಳ ಮೇಲೆ ಪಡೆಯುವುದು ಮಮ್ಮದಸನಿಗೆ ಒಂದು ದೊಡ್ಡ ಸಮಸ್ಯೆಯಾಯಿತು.

ಅವನು ಅವರಿಗೆ—ಮುಖ್ಯವಾಗಿ ಅವರ ಮುಖಂಡನಾದ ಆಲಿಗೆ ಹೊಸ ಹೊಸ ದಂಡನೆಗಳನ್ನು ಕೊಡತೊಡಗಿದ. ಪ್ರಾಣಗಳನ್ನಾದರೂ ಕೊಡಲಿಕ್ಕೆ ಅವರು ಸಿದ್ಧರಾಗಿದ್ದರೇ ಹೊರತು ಮಾನವನ್ನು ಕೊಟ್ಟು ಹೊರಗೆ ಬರಲಿಕ್ಕೆ ಅವರು ಸಿದ್ಧರಿರಲಿಲ್ಲ. ದಿನ ಹೋಗುತ್ತಾ ಹೋಗುತ್ತಾ ಜೈಲು ಅಂಥ ಕೈದಿಗಳಿಂದ ತುಂಬುತ್ತ ಬರುತಿತ್ತು. ಮಮ್ಮದ ಎಷ್ಟು ಕಠೋರ ದುಷ್ಟ ನಿಷ್ಠುರನಾಗುತಿದ್ದನೋ, ಅವನು ತನ್ನ ಕೈ ಮತ್ತು ನಾಲಗೆಗಳನ್ನು ಎಷ್ಟು ಚೆನ್ನಾಗಿ ಹದ ಮಾಡಿ ಉಪಯೋಗಿಸುತಿದ್ದನೋ ಅಷ್ಟಕ್ಕೆ ಆ 'ಕೈದಿಗಳು ಒಂದಾಗಿ, ಸಂಘಟಿತರಾಗಿ ಜೈಲಿನಲ್ಲಿ ತಮ್ಮ ಸತ್ಯಧರ್ಮದ ಆಗ್ರಹವನ್ನು ಹಿಡಿಯುತ್ತಿದ್ದರು. ಪರಿತಾಪಪಾತನೆಗಳನ್ನು ಸಹಿಸಲಾರದೆ ಎಚ್ಚರತಪ್ಪಿ ಬಿದ್ದಾಗ, ಮಾಫಿನಾಮೆಗಳ ಮೇಲೆ ಅವರ ಹೆಬ್ಬೆಟ್ಟಿನ ಗುರುತು ತೆಗೆದುಕೊಳ್ಳುವ್ವಾಗ ಕೂಡ, ಅವರ ಕೈಗಳು ಒಟ್ಟಿ ... ಎಂದು ಹಿಂದಕ್ಕೆ ಎಳೆದುಕೊಳ್ಳುತದ್ದುವು.

ಜೈಲು ಮಮ್ಮದನ ನರಕ ರಾಜ್ಯವಾಗಿ ಪರಿಣಮಿಸಿತು. ಆಲಿಯು ಮಮ್ಮದನ ಕೈಯಲ್ಲಿ ಯಮಯಾತನೆಗಳನ್ನು ಅನುಭವಿಸಬೇಕಾಯಿತು. ದಿನಸ್ಥಿತಿ ಭಯಂಕರ, ಬಹು ಭಯಂಕರ ವೇದನೆಗಳ ... ಅನುಭವಿಸುತ್ತ ಕ್ಷೀಣಕಾಯನಾದ ಆಲಿಯ ಶರೀರವು ಹುಲ್ಲುಕಡ್ಡಿಯಂತೆ ಕೃಶವಾಯಿತು. ಅವನು ಹಾಗೆ ಹಿಡಿದ ... ನ ಪರಿಸ್ಥಿತಿ ಚಿಕಿತ್ಸೆಗಳ ಕೇವಲ ಹೆಸರು ಮಾತ್ರಕ್ಕೆ ... ಮಮ್ಮದ ಒಂದು— 'ಆಲಿ ಈಗಲಾದರೂ ಮಾಫಿ ಬೇಡುತ್ತೀಯೆಂದು ಕೇಳಿದ. ಒಕ್ಕಿ ತಿಕಿತ್ಸೆಯ ... ಕೊಟ್ಟು ಮತ್ತೆ ಪ್ರತಿ ನಿನಗೆ ಹೋಗಿ ... ಎಂದ. ಹೇಳಿದ. ಆದರೆ ಧೀರನೂ ವೀರನೂ ಆದ ಆಲಿಯು ಅವನ ಮಾತಿಗೆ ಉತ್ತರಕೊಡದೆ, ತನ್ನ ಅಸಮ್ಮತಿಯನ್ನು ಸೂಚಿಸುವುದಕ್ಕೋಸ್ಕರ ಮೋರೆ ತಿರುವಿದ. ಆಗ ಮಮ್ಮದನ ಹತ್ತಿರ ಮಾತನಾಡಲಿಕ್ಕೂ ಅವನಿಗೆ ಬಹಳ ನೋವಾಗುತ್ತಿತ್ತು.

ಆಲಿಯ ಪ್ರಾಣದ ಸ್ಥಿತಿಯು ಇಂದು ನಾಳೆ ಎನ್ನುವ ಹಾಗಿತ್ತು. ಮಮ್ಮದ ಒಂದು ... ಇನ್ನು ಇಷ್ಟು ವರ್ಷಗಳ ... ಗಿದ್ದಿ ... ಮಾಡಿದ ... ಇಲ್ಲಿಂದ ಬಿಡುಗಡೆ ಹೊಂದಿ ನೀನು ಮನೆ ಸೇರಬಹುದು. ನಿನ್ನ ತಾಯಿ ತಂದೆ ಇಷ್ಟಮಿತ್ರರು ನಿನಗಾಗಿ ಎಷ್ಟು ಮರುಗುತ್ತಿರುವರೋ? ನಿನ್ನ ಮೂರ್ಖತನಕ್ಕಾಗಿ ಎಷ್ಟು ದುಃಖಿಸುತ್ತಿರುವರೋ" ಎಂದ. ಆಲಿಯು ಬಹಳ ದುರ್ಬಲನಾಗಿದ್ದ. ಮಾತನಾಡುವುದೂ ಅವನಿಗೆ ಕಷ್ಟವಾಗುತಿತ್ತು. ಆದರೂ ಆವನು ಪ್ರಯಾಸದಿಂದ ಹೇಳಿದ—'ಮಮ್ಮದ! ಸಾಯಲಿಕ್ಕೆ ನನಗೆ ದುಃಖವಾಗುವುದಿಲ್ಲ. ಸುಮ್ಮನೆ ನನಗೆ ತಾಯಿ ತಂದೆ ಇಷ್ಟಮಿತ್ರರ ಮೋಹದ ಹುಚ್ಚನ್ನು ಹಾಗಿಸಬೇಡ. ನಾನು ಯಾಕೆ ಮಾಫಿ ಬೇಡಬೇಕು? ಏನು ಅಪರಾಧ ಮಾಡಿದ್ದೇನೆ? ನಿನ್ನ ... ದೃಷ್ಟಿಯಿಂದ ನಾನು ಅಪರಾಧಿಯಾದರೂ ದೇವರ ಮುಂದೆ ನಿರಪರಾಧಿಯಾಗಿದ್ದೇನೆ. ದೇಶಕ್ಕಾಗಿ ಧರ್ಮಕ್ಕಾಗಿ ಪ್ರಾಣವನ್ನು ಕೊಡುತ್ತೇನೆ.'

ಕೊನೆಯ ಮಾತುಗಳು ಆಲಿಯ ಮುಖದಿಂದ ಬಹು ಕಷ್ಟದಿಂದ ಒಂದೊಂದೇಯಾಗಿ ಹೊರಟವು. ಮಮ್ಮದ ಆ ಕೊನೆಯ ಮಾತುಗಳನ್ನು ಕಿವಿಗೊಟ್ಟು ಕೇಳಿದ. 'ಆಲಿ' ಎಂದು ಅವನು ಆಲಿಯನ್ನು ಕರೆದ. ಆದರೆ ಆಲಿ ಮಾತನಾಡಲಿಲ್ಲ. ಅವನು ಎದ್ದು ನಿಂತು ಆಲಿಯ ಮುಖವನ್ನು ನೋಡಿದ. ಕಣ್ಣುಗಳು ಮುಚ್ಚಿದ್ದುವು. ನಸುನಗುವ ಹಾಗೆ ತುಟಿಗಳು ಅರ್ಧ ತೆರೆದಿದ್ದುವು. ಮುಖದ ಮೇಲೆ ಶಾಂತಿಯು ವಿರಾಜಿಸುತ್ತಿತ್ತು. 'ಆಲಿ' ಎಂದು ಅವನು ಪುನಃ ಅವನನ್ನು ಕರೆದ. ಆಲಿಯು ಅಗಲೂ ಮೌನ' ಅವನು ಆಲಿಯನ್ನು ಮುಟ್ಟಿನೋಡಿದ. ಶರೀರವು ತಣ್ಣಗಾಗಿತ್ತು. ಆಲಿಯ ಪ್ರಾಣಪಕ್ಷಿಯು ದೇವರ ರಾಜ್ಯಕ್ಕೆ ಹಾರಿಹೋಗಿತ್ತು.

ಆಲಿ' ಮಗೂ' ಎಂಬ ಮಾತು ಮಮ್ಮದನ ಬಾಯಿಯಿಂದ ಹೊರಟಿತು. ಅವನು ಅಲ್ಲಿ ಮೇಲೆ ಎಚ್ಚರತಪ್ಪಿ ಬಿದ್ದುಬಿಟ್ಟ. ಅವನು ಕೂಡಿ ಹಾಕಿದ್ದ ಜೈಲಿನ ಸ್ಮಶಾನದಲ್ಲಿ ಇತರ ಕೈದಿಗಳು ಆಲಿಯ ಅಂತ್ಯಕ್ರಿಯೆಯನ್ನು ನಡೆಸಿದರು. ಸಾಯುತ್ತಿರುವ ಸಮಯ—ಮಮ್ಮದನು ಆಲಿಯ ಗೋರಿಯ ಸಮೀಪ ಕೂತುಕೊಂಡು ದೇವರನ್ನು ಪ್ರಾರ್ಥಿಸಿದ.

ಆ ಬಳಿಕ ನಾವು ಯಾರೂ ಮಮ್ಮದಸನನನ್ನು ನೋಡಲಿಲ್ಲ. ಅವನು ತನ್ನ ಜೈಲರಿಗೆ ರಾಜಿನಾಮೆ ಕೊಟ್ಟು ಎಲ್ಲಿಗೋ ಹೊರಟುಹೋದನೆಂದೂ, ಸರಕಾರವು ಅವನನ್ನು ಆ ಕೆಲಸದಿಂದ ತಳ್ಳಿಹಾಕಿ ಹೊರಡಿಸಿತೆಂದೂ ಕೇಳಿದ್ದೆವು. ಅದರ ಅವನು ಹಾಗೆ ಹುಚ್ಚನಾಗಿ 'ಮನುಜ ಶರೀರವಿದೇನು ಸುಖಾ' ಎಂದು ಹಾಡುತ್ತ ತಿರುಗುತ್ತಿದ್ದನೆಂದು ಮೊನ್ನೆಯೇ ಗೊತ್ತಾಯಿತು.


DIAMONDS! DIAMONDS

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,



ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ದುಬ್ಬಿ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ತಿಳಿಸಿರುವುದು, ಠಾಣೆ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪–೦–೦

ವಿ. ಪಿ. ಅಂಚೆ

ವಿಳಾಸ: ಸಂಜೀವಿನೀ ಔಷಧಾಲಯ ನಂ, ಪೋ. ಮಿರಜ, S. M. C.

ಈ ವಾರದ ಕತೆ:

# ಮಮ್ಮದಸನ್

[ಕತೆಗಾರರು: ಕಟಪಾಡಿ ಶ್ರೀನಿವಾಸ ಶೆಟ್ಟಿ, ಅಧ್ಯಾಪಕ, ಉಡುಪಿ]

ಅದು ಆಗಿ ಅಷ್ಟು ವರ್ಷಗಳು ಕಳೆದು ಹೋದುವು. ನಾನು ಅವನನ್ನು ಪೂರಾ ಮರೆತು ಹೋಗಿದ್ದೆ. ಫಕ್ಕನೆ ಬಂದು—'ನಾನೇ ಅವನು' ಎಂದು ಹೇಳಿದ್ದರೆ ನನಗೆ ಅವನ ಗುರುತು ಹತ್ತುತ್ತಿದ್ದಿಲ್ಲ. ಆದುದರಿಂದ ಮೊನ್ನೆ ಅವನು ನಮ್ಮ ಮನೆಬಾಗಿಲಿಂದ ಹಾದುಹೋಗುವಾಗ—'ಅವನು ಯಾರು?' ಎಂದು ಕೇಳಿದೆ.

ಅವನು ಮುದುಕನಾಗಿದ್ದ. ಮೈ ನೆರಿ ಕಟ್ಟಿತ್ತು. ಗಡ್ಡ ಮೀಸೆ ಉದ್ದುದ್ದ ಬೆಳೆದಿತ್ತು. ತಲೆಕೂದಲು ಬೆಳ್ಳಗೆ ಹಣ್ಣಾಗಿತ್ತು. ಸಣ್ಣ ಒಂದು ಲುಂಗಿಯನ್ನು ಉಟ್ಟುಕೊಂಡಿದ್ದ. ಬಹಳ ದೂರದಿಂದ ನಡೆದು ಬಂದವನ ಹಾಗೆ ಕೈಕಾಲು ಧೂಳಿಯಿಂದ ತುಂಬಿ ಕೆಂಪುಕೆಂಪಾಗಿದ್ದುವು. ಮುಸಲ್ಮಾನನ ಹಾಗೆ ಇದ್ದನಾದರೂ—'ಮನುಜ ಶರೀರವಿದೇನು ಸುಖ ಇದೇನು ಸುಖ ಇದೇನು ಸುಖ' ಎಂದು ಪುರಂದರದಾಸರ ಪದವನ್ನು ಹಾಡಿಕೊಂಡು ಹೋಗುತ್ತಿದ್ದ. ಆದುದರಿಂದ ಅವನು ಯಾರೆಂದು ತಿಳಿಯುವ ಕುತೂಹಲವು ನನಗೆ ವಿಶೇಷವಾಯಿತು.

'ಯಾರು ಅವನು? ಹುಚ್ಚನ ಹಾಗೆ ಹಾಡುತ್ತ ಹೋಗುತ್ತಾನೆ?' ಎಂದು ನಾನು ಪ್ರಶ್ನಿಸಿದೆ.

'ಅವನು—ಗೊತ್ತಾಗಲಿಲ್ಲವೆ? ಮಮ್ಮದಸನ್ ಅವನೇ ಇವನು!' ಎಂದು ಅಡಿಗೆ ಮನೆಯ ನಾಗಪ್ಪಯ್ಯ ಹೇಳಿದ.

ಆಗಲೇ ಇಪ್ಪತ್ತು ವರ್ಷಗಳ ಹಿಂದೆ ನಡೆದ ಘಟನಾಚಕ್ರದ ಛಾಯೆಯು ಪುನಃ ನನ್ನ ಮನೋಪಟಲದಲ್ಲಿ ಸುತ್ತಿಹೋಯಿತು. ಕಿಚ್ಚಿನಂಥ ದಂಡಾಳುಗಳು ಕೂಡ ಮೈ ಕೆಡಯುವ ಮಮ್ಮದಸನ್! ಅಳುವ ಮಕ್ಕಳನ್ನು ಸುಮ್ಮಗಿರಿಸುವ ಮಮ್ಮದಸನ್! ಹಳ್ಳಿಹಳ್ಳಿಗಳಿಂದ ಅಕ್ಕಿ ಮೆಣಸು ಹೊತ್ತು ತರುವ ಹೆಂಗಸು ಗಂಡಸರನ್ನು ಹೆದರಿಸಿ ಬೆದರಿಸಿ ಅವರನ್ನು ಸುಲಿದು ಹೊಟ್ಟೆ ಹೊರೆದುಕೊಳ್ಳುವ ವ್ಯಕ್ತಿಯನ್ನು ಮಮ್ಮದಸನು ಅವಲಂಬಿಸಿದ್ದ. ಮಮ್ಮದಸನ್ ಆ ದಾರಿಯಲ್ಲಿ ಇದ್ದಾನೆಂದರೆ ಹಳ್ಳಿಜನರು ಹತ್ತು ಮೈಲು ಸುತ್ತು ಹಾಕಿ ಬೇರೆ ದಾರಿಯಿಂದ ಪೇಟೆಗೆ ಬರುತ್ತಿದ್ದರು. ಹಳ್ಳಿ ಜನರ ಧನ ಮಾನ ಪ್ರಾಣವೂ ಅವನ ಕೈಯಿಂದ ಸುರಕ್ಷಿತವಾಗಿರಲಿಲ್ಲ. ಭೀಮನ ಗದೆಯಂಥ ಕೈ ಅವನದು. ದರ್ಜಿಯ ಕತ್ತರಿಯಂತೆ ಹರಿತವಾದ ನಾಲಗೆ ಅವನದು. ಬೈಗಳನ್ನು ಬೈಯುವುದರಲ್ಲಿ ಅವನನ್ನು ಮಿಗಿಸಿದವರಿರಲಿಲ್ಲ. ಬೈಯಲಿಕ್ಕೆ ಆರಂಭ ಮಾಡಿದನೆಂದರೆ, ಗ್ರಾಮೊಫೋನಿನ ಪ್ಲೇಟುಗಳಂತೆ ಅವನ ನಾಲಗೆ ತಿರುಗುತ್ತಾ ಇರುತ್ತಿತ್ತು. ಆದುದರಿಂದ ಹಳ್ಳಿಹಳ್ಳಿಗಳ ಜನರಿಗೆ ಮಾತ್ರವಲ್ಲ, ಪೇಟೆ ಪಟ್ಟಣದವರಿಗೂ ಅವನ ಹೆದರಿಕೆ ಇತ್ತು. ಯಾರೂ ಅವನೊಡನೆ ಜಗಳವನ್ನೆಬ್ಬಿಸುವ ಸಾಹಸ ಮಾಡುತ್ತಿರಲಿಲ್ಲ.

ಆದರೆ ಒಂದು ದಿನ ಮಾತ್ರ ಒಂದು ಸಣ್ಣ ಜಗಳವಾಗಿಬಿಟ್ಟಿತ್ತು. ಹಳ್ಳಿಯಿಂದ ಬರುತ್ತಿದ್ದ ಬಚ್ಚಾಕೆಯ ಮೇಲೆ ಕೈಮಾಡಿದ ಫಲವಾಗಿ ಆ ಸಾಹಸಗಾರ್ತಿ ಅವನ ಕೆನ್ನೆಗೆ ಒಂದೇಟು ಹರಿಸಿಬಿಟ್ಟಳು. ಒಬ್ಬ ಹೆಂಗಸಿನ ಕೈಯಲ್ಲಿ ತನ್ನ ಪರಾಭವವಾದುದನ್ನು ಮಮ್ಮದಸನ್‌ನಿಂದ ಸಹಿಸಲಾಗಲಿಲ್ಲ. ಅವನು ಸೊಂಟಕ್ಕಿದ್ದ ಚೂರಿಯಿಂದ ಅವಳ ಹೊಟ್ಟೆಯನ್ನು ಇರಿದುಬಿಟ್ಟ. ರಕ್ತಸ್ರಾವವಾಗಿ ಅವಳ ಪ್ರಾಣಲೀಲೆ ಮುಗಿಯಿತು. ಮಮ್ಮದಸನನ ವಿಚಾರಣೆಯಾಗಿ ಅವನಿಗೆ ಆಜನ್ಮ ಜೈಲುವಾಸವು ಪ್ರಾಪ್ತವಾಯಿತು. ಹದಿನೆಂಟು ವರ್ಷಗಳು ಮುಗಿದ ಮೇಲೆ ಸರಕಾರವು ಅವನನ್ನು ಬಿಡುಗಡೆ ಮಾಡಿತು. ಆದರೆ ಜೈಲಿನ ಈ ಅನುಭವಿಯನ್ನು ಬೇರೆ ಬಿಡುವುದು ಸರಕಾರಕ್ಕೆ ಸಮ್ಮತವಾಗದೆ ಅದು ಅವನನ್ನು ಮೊದಲು ಜೈಲಿನ ವಾರ್ಡರನನ್ನಾಗಿ ನೇಮಿಸಿತು. ಆ ಮೇಲೆ ಅವನು ಅದೇ ಜೈಲಿನ ಜೈಲರನೂ ಆದ.

ಆದರೆ ಮಮ್ಮದಸನನಿಗೆ ತಿಳಿಯದೆಯೇ ಕಾಲಚಕ್ರವು ಉರುಳುತ್ತಾ ಇತ್ತು. ಅವನ ನಾಲಗೆಯ ಧಾರೆ ಮತ್ತು ಕೈಯ ಗುಣ—ಬೇರೆ ಬದಲಾಗದಿದ್ದರೂ ಜೈಲಿನಲ್ಲಿ ಬರುವ ಕೈದಿಗಳ ಜಾತಿಯಲ್ಲಿ ಪರಿವರ್ತನೆಯಾಗುತ್ತಾ ಇತ್ತು. ಈಗ ಬರುವ ಕೈದಿಗಳು ಮೊದಲಿನವರ ಹಾಗೆ, ಅವನ ನಾಲಗೆ ಅಥವಾ ಕೈಗೆ ಹೆದರಲಿಲ್ಲ. ಪರಂತು ತಮ್ಮ ಕರ್ತವ್ಯವೆಂದರಿತು ಒಪ್ಪಿಸಿದ ಕಾರ್ಯಗಳನ್ನು ತಪ್ಪು ತಡೆಗಳಿಲ್ಲದೆ ಮಾಡುತ್ತಿದ್ದರು. ಅವರು ಮಮ್ಮದಸನನನ್ನು ಪೂರಾ ಪೂರಾ ಅಲಕ್ಷಿಸಿ ಇರುತ್ತಿದ್ದರು. ಬಿಳಿ ಟೋಪಿ, ಬಿಳಿ ಅಂಗಿ, ಬಿಳಿ ಚಡ್ಡಿಯ ಆ ಕೈದಿಗಳು, ಜೇನು ಹುಳುಗಳು ಹೂಗೊಂಚಲನ್ನು ಮುತ್ತುವ ಹಾಗೆ ಜೈಲನ್ನು ಮುತ್ತುವದನ್ನು ನೋಡಿ ಅವನಿಗೆ ಆಶ್ಚರ್ಯದೊಂದಿಗೆ ಸ್ವಲ್ಪ ಸ್ವಲ್ಪ ಅಂಜಿಕೆಯೂ ಆಗತೊಡಗಿತು. ಮೊದಲು ಬಹು ಸುಲಭ ಮತ್ತು ಹಗುರವಾಗಿದ್ದ ಜೈಲರ್ ಕೆಲಸವು ಈಗ ಮಮ್ಮದಸನನಿಗೆ ಭಾರವೂ ಕಠಿನವೂ ಆಗಿ ತೋರತೊಡಗಿತು.

ಒಂದು ದಿನ ರಾತ್ರಿ ಜೈಲಿನ ಸುಪರಿಂಟೆಂಡೆಂಟ ಬಂದು—'ಮಮ್ಮದ! ಸರಕಾರವು ಈ ಕೈದಿಗಳನ್ನು ಅವಧಿ ಮುಗಿಯುವ ಮೊದಲೇ ಬಿಡಬೇಕೆಂದಿದೆ' ಎಂದರು.

ತಲೆಯ ಮೇಲಿನ ಭಾರವು ಹೋಗಿತೆಂದು ಅವನು ಸಂತೋಷಪಟ್ಟು—'ಜೀ' ಎಂದ.

'ಹೇಗಾದರೂ ಮಾಡಿ ಇವರನ್ನು ಒಬ್ಬೊಬ್ಬರನ್ನಾಗಿ ಹೊರಗೆ ಹಾಕಬೇಕಾಗಿದೆ.'

'ಜೀ, ನಾಳೆಯಿಂದಲೇ.'

'ಆದರೆ ಒಂದು ಕೆಲಸ ಇದೆ, ಮಮ್ಮದ!'

'ಜೀ'

'ಹೊರಗೆ ಬಿಡುವ ಮೊದಲು, ಮಾಫಿನಾಮೆಗಳ ಮೇಲೆ ಅವರ ಪ್ರತಿಯೊಬ್ಬರ ದಸ್ಕತು ತೆಗೆದುಕೊಳ್ಳಬೇಕು. ಹಾಗೆ ಮಾಡಿದರೆ ಸರಕಾರವು ಹಾಗೆ ಬಿಟ್ಟುಕೊಡುತ್ತದೆ. ಇನಾಮು ಕೊಡುತ್ತದೆ.'

'ಜೀ'

ಮಮ್ಮದಸನನು ಕೆಲಸವನ್ನು ಸಂತೋಷದಿಂದ ಒಪ್ಪಿಕೊಂಡ. ಜೈಲುಜೀವನದ ಇಪ್ಪತ್ತು ವರ್ಷಗಳ ಅನುಭವಿಯಾಗಿದ್ದ ಅವನಿಗೆ ಹೀಗೆ ಕೈದಿಗಳನ್ನು ಬಿಡುವುದು ಕಷ್ಟದ ಕಾರ್ಯವಾಗಿರಲಿಲ್ಲ. ಪರಂತು ಈಗ ಬಿಡಬೇಕಾಗಿದ್ದ ಕೈದಿಗಳು ಮಾತ್ರ ಸಾಮಾನ್ಯ ತರದವರಾಗಿರಲಿಲ್ಲ. ಮಾಫಿನಾಮೆಯ ಹೆಸರು ತೆಗೆದ ಕೂಡಲೆಯೇ ಅವರ ಮುಖದ ಕಣ್ಣು ಕೆಂಪುಕೆಂಪಾಯಿತು. ತುಟಿಗಳು ಅದುರತೊಡಗಿದುವು. ಅವನು ಹೇಳಿದ—'ಪ್ರಸ್ತಾಪ ಎಷ್ಟು ಮಾತ್ರಕ್ಕೂ ತೆಗೆಯಬೇಡಿ.'

ಒಗ್ಗಿಸಿದರೂ ಬಗ್ಗದ ಅವರ ದಸ್ಕತುಗಳನ್ನು ಮಾಫಿನಾಮೆಗಳ ಮೇಲೆ ಪಡೆಯುವುದು ಮಮ್ಮದನಿಗೆ ಒಂದು ದೊಡ್ಡ ಸಮಸ್ಯೆಯಾಯಿತು. ಅವನು ಅವರಿಗೆ—ಮುಖ್ಯವಾಗಿ ಅವರ ಮುಖಂಡನಾದ ಅಲಿಗೆ, ಹೊಸ ಹೊಸ ದಂಡನೆಗಳನ್ನು ಕೊಡತೊಡಗಿದ. ಪ್ರಾಣಗಳನ್ನಾದರೂ ಕೊಡಲಿಕ್ಕೆ ಅವರು ಸಿದ್ಧರಾಗಿದ್ದರೇ ಹೊರತು ಮಾನವನ್ನು ಕೊಟ್ಟು ಹೊರಗೆ ಬರಲಿಕ್ಕೆ ಅವರು ಸಿದ್ಧರಿರಲಿಲ್ಲ. ದಿನ ಹೋಗುತ್ತಾ ಹೋಗುತ್ತಾ ಜೈಲು ಅಂಥ ಕೈದಿಗಳಿಂದ ತುಂಬುತ್ತ ಬರುತಿತ್ತು. ಮಮ್ಮದ ಎಷ್ಟು ಕಠೋರ ಮತ್ತು ನಿಷ್ಠುರನಾಗುತ್ತಿದ್ದನೋ, ಅವನು ತನ್ನ ಕೈ ಮತ್ತು ನಾಲಗೆಗಳನ್ನು ಎಷ್ಟು ಚೆನ್ನಾಗಿ ಹದಮಾಡಿ ಉಪಯೋಗಿಸುತ್ತಿದ್ದನೋ ಅಷ್ಟಕ್ಕೆ ಆ ಕೈದಿಗಳು ಒಂದಾಗಿ, ಸಂಘಟಿತರಾಗಿ ಜೈಲಿನಲ್ಲಿ ತಮ್ಮ ಸತ್ಯಧರ್ಮದ ಆಗ್ರಹವನ್ನು ಹಿಡಿಯುತ್ತಿದ್ದರು. ನರಕಯಾತನೆಗಳನ್ನು ಸಹಿಸಲಾರದೆ ಎಚ್ಚರತಪ್ಪಿ ಬಿದ್ದಾಗ, ಮಾಫಿನಾಮೆಗಳ ಮೇಲೆ ಅವರ ಹೆಬ್ಬೆಟ್ಟಿನ ನೋಟು ತೆಗೆದುಕೊಳ್ಳುತ್ತಿದ್ದಾಗ ಕೂಡ, ಅವರ ಕೈಗಳು ಒಲ್ಲೆ, ಒಲ್ಲೆ ಎಂದು ಹಿಂದಕ್ಕೆ ಎಳೆದುಕೊಳ್ಳುತ್ತಿದ್ದುವು.

ಜೈಲು ಮಮ್ಮದನ ನರಕ ರಾಜ್ಯವಾಗಿ ಪರಿಣಮಿಸಿತು. ಅಲಿಯು ಮಮ್ಮದನ ಕೈಯಲ್ಲಿ ಯಮಯಾತನೆಗಳನ್ನು ಅನುಭವಿಸಬೇಕಾಯಿತು. ದಿನನಿತ್ಯವೂ ಭಯಂಕರ, ಬಹು ಭಯಂಕರ ವೇದನೆಗಳನ್ನು ಅನುಭವಿಸುತ್ತ ಭೀಮಕಾಯನಾದ ಅಲಿಯ ಶರೀರವು ಹುಲ್ಲುಕಡ್ಡಿಯಂತೆ ಕೃಶವಾಯಿತು. ಅವನು ಹಾಸಿಗೆ ಹಿಡಿದ. ಜೈಲಿನ ಔಷಧಿ ಚಿಕಿತ್ಸೆಗಳು ಕೇವಲ ಹೆಸರು ಮಾತ್ರಕ್ಕೆ ನಡೆಯುತ್ತಿದ್ದುವು. ಮಮ್ಮದ ಒಂದು—'ಅಲಿ' ಈಗಲಾದರೂ ಮಾಫಿ ಬೇಡುತ್ತೇನೆಂದು ಹೇಳು. ಒಳ್ಳೆ ಚಿಕಿತ್ಸೆಯ ಏರ್ಪಾಡು ಮಾಡುತ್ತೇನೆ. ಮನೆಗೆ ಹೋಗಿ ಸುಖದಿಂದಿರಬಹುದು' ಎಂದು ಹೇಳಿದ. ಆದರೆ ಏನನ್ನೂ ಹೇಳದೆ ಅಲಿಯು ಅವನ ಮಾತಿಗೆ ಉತ್ತರಕೊಡದೆ, ತನ್ನ ಅಸಮ್ಮತಿಯನ್ನು ಸೂಚಿಸುವುದಕ್ಕೋಸ್ಕರ ಮೋರೆ ತಿರುವಿದ. ಪಾಪ ಮಮ್ಮದನ ಹತ್ತಿರ ಮಾತನಾಡಲಿಕ್ಕೂ ಅವನಿಗೆ ಬಹಳ ನೋವಾಗುತಿತ್ತು.

ಅಲಿಯ ಜೀವಸ್ರೋತಸ್ಸು ಇಂದು ನಾಳೆ ಎನ್ನುವ ಹಾಗಿತ್ತು. ಮಮ್ಮದ ಒಂದು—'ಅಲಿ ನೀನು ಇನ್ನು ಎಂಟು ವರ್ಷಗಳ ತರುಣನಾಗಿದ್ದಿ. ಮನಸ್ಸು ಮಾಡಿದರೆ ಈಗಲಾದರೂ ಇಲ್ಲಿಂದ ಬಿಡುಗಡೆ ಹೊಂದಿ ನೀನು ಹೆಚ್ಚು ಕಾಲ ಬದುಕಬಹುದು. ನಿನ್ನ ತಾಯಿ ತಂದೆ ಇಷ್ಟಮಿತ್ರರು ನಿನಗಾಗಿ ಎಷ್ಟು ಮರಗುತ್ತಿರುವರೋ? ನಿನ್ನ ಮೂರ್ಖತನಕ್ಕಾಗಿ ಎಷ್ಟು ದುಃಖಿಸುತ್ತಿರುವರೋ!' ಎಂದ. ಅಲಿಯು ಬಹಳ ದುರ್ಬಲನಾಗಿದ್ದ. ಮಾತನಾಡುವುದೂ ಅವನಿಗೆ ಕಷ್ಟವಾಗುತಿತ್ತು. ಆದರೂ ಅವನು ಪ್ರಯಾಸದಿಂದ ಹೇಳಿದ—'ಮಮ್ಮದ! ಸಾಯಲಿಕ್ಕೆ ನನಗೆ ದುಃಖವಾಗುವುದಿಲ್ಲ. ಸುಮ್ಮನೆ ನನಗೆ ತಾಯಿ ತಂದೆ ಇಷ್ಟಮಿತ್ರರ ಮೋಹದ ಹುಚ್ಚನ್ನು ಹಾಗಿಸಬೇಡ. ನಾನು ಯಾಕೆ ಮಾಫಿ ಬೇಡಬೇಕು? ಏನು ಅಪರಾಧ ಮಾಡಿದ್ದೇನೆ? ನಿನ್ನ ಶಾಸಕರ ದೃಷ್ಟಿಯಿಂದ ನಾನು ಅಪರಾಧಿಯಾದರೂ ದೇವರ ಮುಂದೆ ನಿರಪರಾಧಿಯಾಗಿದ್ದೇನೆ. ದೇಶಕ್ಕಾಗಿ ಧರ್ಮಕ್ಕಾಗಿ ಪ್ರಾಣವನ್ನು ಕೊಡುತ್ತೇನೆ.'

ಕೊನೆಯ ಮಾತುಗಳು ಅಲಿಯ ಮುಖದಿಂದ ಬಹು ಮೆಲ್ಲಗೆ ಒಂದೊಂದೇಯಾಗಿ ಹೊರಟುವು. ಮಮ್ಮದ ಆ ಕೊನೆಯ ಮಾತುಗಳನ್ನು ಕಿವಿಗೊಟ್ಟು ಕೇಳಿದ. 'ಅಲಿ' ಎಂದು ಅವನು ಅಲಿಯನ್ನು ಕರೆದ. ಆದರೆ ಅಲಿ ಮಾತನಾಡಲಿಲ್ಲ. ಅವನು ಎದ್ದು ನಿಂತು ಅಲಿಯ ಮುಖವನ್ನು ನೋಡಿದ. ಕಣ್ಣುಗಳು ಮುಚ್ಚಿದ್ದುವು. ನಸುನಗುವ ತುಟಿಗಳು ಅರ್ಧ ತೆರೆದಿದ್ದುವು. ಮುಖದ ಮೇಲೆ ಶಾಂತಿಯು ವಿರಾಜಿಸುತಿತ್ತು. 'ಅಲಿ' ಎಂದು ಅವನು ಪುನಃ ಅವನನ್ನು ಕರೆದ. ಅಲಿಯು ಅಗಲೂ ಮೌನ! ಅವನು ಅಲಿಯನ್ನು ಮುಟ್ಟಿನೋಡಿದ. ಶರೀರವು ತಣ್ಣಗಾಗಿತ್ತು. ಅಲಿಯ ಪ್ರಾಣಪಕ್ಷಿಯು ದೇವರ ರಾಜ್ಯಕ್ಕೆ ಹಾರಿಹೋಗಿತ್ತು.

'ಅಲಿ! ಮಗನೇ!' ಎಂಬ ಮಾತು ಮಮ್ಮದನ ಬಾಯಿಯಿಂದ ಹೊರಟಿತು. ಅವನು ಅಲ್ಲಿಯೇ ಎಚ್ಚರತಪ್ಪಿ ಬಿದ್ದುಬಿಟ್ಟ. ಅವನು ಕೊನೆಗೆ ಜೈಲಿನ ಸ್ಮಶಾನದಲ್ಲಿ ಇತರ ಕೈದಿಗಳು ಅಲಿಯ ಅಂತ್ಯಕ್ರಿಯೆಯನ್ನು ನಡೆಸಿದರು. ಸಾಯಂಕಾಲದ ಸಮಯ—ಮಮ್ಮದನು ಅಲಿಯ ಗೋರಿಯ ಸಮೀಪ ಮೊಣಕಾಲೂರಿ ದೇವರನ್ನು ಪ್ರಾರ್ಥಿಸಿದ.

ತರುವಾಯ ಯಾರೂ ಮಮ್ಮದಸನನನ್ನು ನೋಡಲಿಲ್ಲ. ಅವನು ತನ್ನ ಜೈಲರಿಗೆ ರಾಜೀನಾಮೆ ಕೊಟ್ಟು ಎಲ್ಲಿಗೋ ಹೊರಟುಹೋದನಂದೂ, ಸರಕಾರವೇ ಅವನನ್ನು ಆ ಕೆಲಸದಿಂದ ಬಿಡಿಸಿ ಹೊರಡಿಸಿತೆಂದೂ ಕೇಳಿದ್ದೆವು. ಆದರೆ ಅವನು ಹಾಗೆ ಹುಚ್ಚನಾಗಿ 'ಮನುಜ ಶರೀರವಿದೇನು ಸುಖ' ಎಂದು ಹಾಡುತ್ತ ತಿರುಗುತ್ತಿದ್ದನೆಂಬುದು ಮೊನ್ನೆಯೇ ಗೊತ್ತಾಯಿತು.


## ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)**

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಕಪನೆಂಜರ ಏನು ಮಾಡಿದರೂ ಸುರುವಾಗುವುದಿಲ್ಲ. ಹೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಬೆಳಗಾಮದವರು, ಬರೆದ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ ೪-೦-೦

ವಿ. ಪಿ. ಖರ್ಚು ಬೇರೆ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜಿ, S. M. C



DIAMONDS! DIAMONDS

BEST BRILLIANCY!

## K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ.

## ವಜ್ರಗಳು!

ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

**ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.**

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

**ಕೆ. ಆರ್. ಕೆ. ಶೆಟ್, ಜುವೆಲ್ಲರ್,**

# ಜೆಕೊಸ್ಲೊವೇಕಿಯದಲ್ಲಿ ಕ್ರಾಂತಿ ಮಸಗಲಿದೆ!

## — ಜೆಕ್ಕರು ಸ್ವಾತಂತ್ರ್ಯ ವೀರರು —

ಡಾ. ಬೆನೆಸರು

**ನಾಜೀ ಸರಕಾರದ ದುರಂತ ಪ್ರಭುತ್ವದ ಪದಹತಿಯಲ್ಲಿ ಇಂದು, ಹಲವು ಸ್ವತಂತ್ರ ರಾಷ್ಟ್ರಗಳು ಸಂಕಷ್ಟ ಪಡುತ್ತಿವೆ. ಆದರೆ ಆ ರಾಷ್ಟ್ರಗಳ ಸ್ವಾತಂತ್ರ್ಯಧನರಾದ ವೀರಪ್ರಜೆಗಳ ಹೃದಯಗಳನ್ನು ಯಾರಿಗೂ ಎಂದೆಂದೂ ಗೆಲ್ಲಲು ಸಾಧ್ಯವಾಗಲಾರದು**

ಪ್ರಪಂಚದ ಭೂಪಟವನ್ನು ತೆರೆದು ನೋಡಿದವನಿಗೆ ಜೆಕೊಸ್ಲೊವೇಕಿಯವು, ಹೇಗೆ ಯುರೋಪಿನ ಹೃದಯಸ್ಥಾನದಲ್ಲಿ ಇದೆಯೆಂಬ ವಿಷಯವು ಚೆನ್ನಾಗಿ ಮನವರಿಕೆಯಾಗುವುದು ಹೀಗಿರುವುದರಿಂದ, ಚರಿತ್ರೆಯಲ್ಲಿ ಘಟನೆಗಳು ಆರಂಭವಾದ ಮೇಲೆ, ಯುರೋಪಿನಲ್ಲಿ ಉಂಟಾದ, ಎಲ್ಲಾ ಬಗೆಯ ಆಂದೋಲನ, ಕೋಲಾಹಲಗಳ ಕ್ಲಿಷ್ಟಕಾಲದಲ್ಲಿ, ಈ ರಾಷ್ಟ್ರವು ಸಂಸ್ಕೃತಿಯಲ್ಲಿ, ಆರ್ಥಿಕ ಸ್ಥಿತಿಯಲ್ಲಿ ಅನೇಕ ವಿಧಗಳ ಹೋರಾಟಗಳಲ್ಲಿ ಸಿಲುಕಿ, ತನ್ನ ನೆಲ್ಲರ ಆ ಸಂದರ್ಭಗಳಲ್ಲಿ ಚೆಲ್ಲಿ, ಪ್ರತಿಷ್ಠೆಯನ್ನು ಕಾಪಾಡಿಕೊಂಡಿದೆ, ಸ್ವಾತಂತ್ರ್ಯವನ್ನು ಉಳಿಸಿಕೊಂಡಿದೆ ಕಳೆದ ಹತ್ತಿಪ್ಪತ್ತು ಶತಮಾನಗಳಿಂದ ಇಲ್ಲಿ ಅನವರತ ಹೋರಾಟಗಳು ನಡೆದೇ ಇದ್ದುವು

### ಹೊಸ ರಾಷ್ಟ್ರವಲ್ಲ

ಇದರ ಸ್ವಾತಂತ್ರ್ಯವು ಏನೂ ಹೊಸದಲ್ಲ ೧೯೩೮ರಲ್ಲಿ ಜೆಕ್ಕರು ಇಪ್ಪತ್ತು ವರ್ಷಗಳ ತಮ್ಮ ಸ್ವಾತಂತ್ರ್ಯದ ಉತ್ಸವವನ್ನು ಆಚರಿಸಿದ್ದರು ಈ ರಾಷ್ಟ್ರ ಮತ್ತು ಜನಾಂಗಗಳು, ರೋಮಿಗಿಂತ ಹಿಂದಿನದು. ವಿಲಿಯಮ್ಮನ ರಾಷ್ಟ್ರಕ್ಕಿಂತ ಹಳೆಯದು ೬೦೦ ವರ್ಷಗಳ ಹಿಂದೆಯೇ ಇಲ್ಲಿ ವಿಶ್ವವಿದ್ಯಾನಿಲಯವೊಂದು ವ್ಯವಸ್ಥಿತವಾಗಿತ್ತು.

ರಶ್ಯದ ಕ್ರಾಂತಿಯು ಜೆಕ್ಕರಲ್ಲಿ ಪ್ರಬಲ ಪರಿಣಾಮವನ್ನು ಹುಟ್ಟಿಸಿತು. ಬಹಳ ಸಾಹಿತ್ಯ ಗ್ರಂಥಗಳು ಹುಟ್ಟಿದುವು ಬೇಸಾಯಗಾರರೂ, ಕೂಲಿಗಾರರೂ, ಸರ್ವಸಾಮಾನ್ಯರಾದ ಜನರೂ ಕೂಡಾ, ಆ ಕ್ರಾಂತಿಯ ಕಾಲದಲ್ಲಿ ಎಚ್ಚರಗೊಂಡು ಹೋರಾಡಿದರು. ಇತ್ತೀಚೆಗೆ ಅಲ್ಲಿ ಬಹಳ ಸುಧಾರಣೆಗಳು ಆಗಿವೆ ೬೦೦ ವರ್ಷಗಳ ಹಿಂದೆಯೇ ಸ್ಥಾಪಿತವಾದ ಪ್ರೇಗ್ ವಿಶ್ವವಿದ್ಯಾನಿಲಯವು ತಿರುಗಿ ಪುನರುದ್ಧಾರವಾಗಿದೆ. ಪ್ರಪಂಚದ ಚರಿತ್ರೆಯಲ್ಲಿ, ಇಷ್ಟು ಸಣ್ಣ ರಾಷ್ಟ್ರವು ಇನ್ನೊಂದು ಸಾಹಸ ಪರಾಕ್ರಮಗಳನ್ನು ಮಾಡಿದ ವಿಷಯವು ಬೇರೆ ಎಲ್ಲಿಯೂ ನಾವು ಕಾಣುವಂತಿಲ್ಲ.

### ನಾಜಿಗಳ ಪದಹತಿಯಲ್ಲಿ

ಕಳೆದ ಮಹಾಯುದ್ಧದ ಸಮಯದಲ್ಲಿ, ಜೆಕ್ಕರ ಮತ್ತು ಸ್ಲೊವೇಕಿಯರು ಹೇಗೆ ತಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಅಮಿತ ಹೋರಾಟ ಮಾಡಿದರು, ಮತ್ತು ಹೇಗೆ ಅವರು, ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ ಇಂತಹ ಅಪ್ರತಿಮ ಪರಾಕ್ರಮಿಗಳು, ಈಗ ಜರ್ಮನಿಯ ನಾಜೀ ಸರಕಾರದ ಪದಹತಿಯಲ್ಲಿ ತುಳಿಯಲ್ಪಟ್ಟವರಾಗಿ ತಿರಿಗಿ ಈಗ ಹೇಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ, ಹೇಗೆ ಅದನ್ನು ಸಾಧಿಸಲು ಕ್ರಾಂತಿಯು ಅಲ್ಲಿ ಮಸಗುವಂತಿದೆಯೆಂಬುದು ತಿಳಿಯಬೇಕಾದ ವಿಷಯವಾಗಿದೆ

ಪ್ರೇಗಿನಲ್ಲಿ ಯಾವುದೇ ವಿಧದಲ್ಲಿ, ಜರ್ಮನ್ ಸರಕಾರಕ್ಕೆ ವಿರುದ್ಧ ಚಟುವಟಿಕೆಗಳಾಗುತ್ತಿವೆಯೆಂದು ಸಂಶಯ ಬಂದರೆ ಸಾಕು, ಕೂಡಲೇ ಅಂತಹ ಕ್ರಾಂತಿಗೆ ಕಾರಣರಾದವರೆಂದು ಹಲವರನ್ನು ಬಂಧನದಲ್ಲಿ ಇಡಲಾಗುತ್ತದೆ ಜಕೊಸ್ಲವೇಕಿಯದ ರಾಷ್ಟ್ರೀಯ ಆಟಗಾರರ ಸಂಸ್ಥೆ, ಹಲವು ಪ್ರೊಫೆಸರರು, ಲೇಖಕರು ಮತ್ತು ಕಲಾವಿದರು ಇಂದು ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ ಅನೇಕ ರಾಷ್ಟ್ರೀಯ ಸಂಸ್ಥೆಗಳ ಹಣ, ಆಸ್ತಿಗಳನ್ನು ಜರ್ಮನ್ ಸರಕಾರವು ಸ್ವಾಧೀನಮಾಡಿಕೊಂಡಿದೆ. ಸಾವಿರಾರು ಮಂದಿ ರಾಷ್ಟ್ರಾಭಿಮಾನೀ ಯುವಕರನ್ನು ಕತ್ತಲು ಕೋಣೆಗೆ ತಳ್ಳಿರುವರು.

### ಹೋರಾಟ

ಇಂತು ದರ್ಪದ ಪ್ರಾಬಲ್ಯವು ಮಿತಿಮೀರಿ ನಡೆಯುತ್ತಿದ್ದರೂ, ಅಲ್ಲಿನ ಜನರು ತಮ್ಮನ್ನು ಹತ್ತಿಕ್ಕುತ್ತಿರುವ ನಾಜೀ ಸರಕಾರಕ್ಕೆ ವಿರುದ್ಧ ಬಂಡಾಯವನ್ನು ಬಿಡದೆ ಎಬ್ಬಿಸುತ್ತಿದ್ದಾರೆ ಹಲವು ಕಡೆಗಳಲ್ಲಿ ಪ್ರಬಲ ಮುಷ್ಕರಗಳು ಆರಂಭವಾಗಿವ

ನಾಜೀ ಸರಕಾರವು ವಿದ್ಯಾಶಾಲೆಗಳಲ್ಲಿರುವ ಸ್ವಾತಂತ್ರ್ಯ ಪ್ರೇಮಿಗಳಾದ ಉಪಾಧ್ಯಾಯರನ್ನು ತೆಗೆದು, ಅವರು ಹೇಳಿದಂತೆ ಪ್ರಚಾರಮಾಡುವವರನ್ನೇ ನೇಮಿಸಿದೆ ೩೦,೦೦೦ ಪುಸ್ತಕಗಳಿದ್ದ, ಜೆಕೊಸ್ಲೊವಾಸಾರ್ವಜನಿಕ ವಾಚನಾಲಯದಲ್ಲಿ ಇಂದು ಕೇವಲ ೨೬೮ ಪುಸ್ತಕಗಳು ಮಾತ್ರ ಇವೆ' ಅನೇಕ ಸಿನೆಮಾ ಮಂದಿರಗಳನ್ನು ಮುಚ್ಚಲಾಗಿದ ಹೀಗಿದ್ದರೂ ಅಲ್ಲಿ ಸ್ವಾತಂತ್ರ್ಯದ ಅಭಿಮಾನವನ್ನು ಹುಟ್ಟಿಸುವ ಗ್ರಂಥಗಳನ್ನು ಪುಸ್ತಕ ಪ್ರಕಾಶಕರು ಪ್ರಕಟಿಸುತ್ತಲೇ ಇದ್ದಾರೆ ಕಳೆದ ಆರೇಳು ವರ್ಷಗಳಲ್ಲಿ ಜೆಕ್ಕರ ಅತ್ಯುತ್ತಮ ರಾಷ್ಟ್ರೀಯ ಸಾಹಿತ್ಯ ಗ್ರಂಥಗಳು ಹೊಸ ಹೊಸ ಮುದ್ರಣಗಳನ್ನು ಕಾಣುತ್ತಿವೆ ಕವಿಗಳ, ಜನತೆಯ ಹೃದಯವನ್ನು ಹೊಡೆದೆಬ್ಬಿಸ ಹೃತದ ಹಾಡುಗಳನ್ನು ಹಾಡುತ್ತಾರೆ ಗದ್ಯ ಲೇಖಕರು ಆವೇಶಪೂರ್ಣ ಶೈಲಿಯಲ್ಲಿ ನಾಜಿಗಳ ದುಷ್ಪ್ರಭುತ್ವವನ್ನು ಖಂಡಿಸಿ ಬರೆಯುತ್ತಿದ್ದಾರೆ ಆದರೆ ಅವರ ಹಲವು ಇಂದಿನ ಅದ್ಭುತ ಪ್ರಚಂಡ ಸಾಹಿತ್ಯ ಕೃತಿಗಳು ಇಂದು ಪ್ರಕಾಶವಾಗಲು ಅವಕಾಶವಿಲ್ಲದೆ, ಶುಭದಿನಗಳನ್ನು ಎದುರುನೋಡುತ್ತಾ, ಅವರ ಕವಾಟುಗಳೊಳಗೆ ಭದ್ರವಾಗಿವೆ.

### ಒಂದು ಸ್ವಾತಂತ್ರ್ಯ ಸಂದೇಶ

ಸಪ್ಟೆಂಬರ ೧೯ರಂದು, ಜೆಕೊಸ್ಲೊವೇಕಿಯದ ಮಾಜಿ ಪ್ರೆಸಿಡೆಂಟರಾದ ಡಾ ಬೆನೆಸರವರು ಒಂದು ಮಹತ್ವವಾದ ಸ್ವಾತಂತ್ರ್ಯ ಸಂದೇಶವನ್ನು ಕೊಟ್ಟಿರುವರು 'ನಮ್ಮ ಕಾರ್ಯಗಳೇ ಮುಂದಕ್ಕೆ ಭವ್ಯ ಅದೃಷ್ಟದ ಸೌಭಾಗ್ಯವನ್ನು ನಿರ್ಮಿಸುವವು ಜೆಕೊಸ್ಲವೇಕಿಯ, ಪೋಲೆಂಡುಗಳಲ್ಲಿ ಜರ್ಮನಿಯು ಮಾಡುತ್ತಿರುವ ದುಷ್ಪ್ರಭುತ್ವವೇ ಅದರ ವಿನಾಶ ಮಾರ್ಗವನ್ನು ರಚಿಸುತ್ತಿದೆ ಮಾನವ ಜನತೆಗೆ ಮತ್ತು ಜಗತಿನ ಸಂಸ್ಕೃತಿಗೆ ಶತ್ರುವಾದ ನಾಜಿ ಶತ್ರು ಪ್ರಭುತ್ವವನ್ನು ನಾವು ಬೇಗನೆ ಕೊನೆಗಾಣಿಸುವೆವು ಸಾವಿರಾರು ವರ್ಷಗಳಿಂದ ಕಾಪಾಡಿದ ಸ್ವಾತಂತ್ರ್ಯವನ್ನು ಜೆಕೊಸ್ಲವೇಕಿಯವು ಖಂಡಿತ ಮುಂದೆ ಪಡೆಯದಿರಲಾರದ ರಾಷ್ಟ್ರದ ಪ್ರತಿಯೊಂದು ಮೂಲೆಮೂಲೆಗೂ ಈ ಸ್ವಾತಂತ್ರ್ಯದ ಸಂದೇಶವನ್ನು ಸಾರಿರಿ' ಎಂದ ಅವರ ವೀರ ಸಂದೇಶವಾಗಿತ್ತು

ಹೋದ ಸ್ವಾತಂತ್ರ್ಯವನ್ನು ಪಡೆಯಲು ಜಕೊಸ್ಲವೇಕಿಯದಲ್ಲಿ ಮರಳಿ ಕ್ರಾಂತಿಯು ಖಂಡಿತ ಮಸಗುವುದು

---


ಸಾಹುಕಾರ ಶ್ರೀನಿವಾಸರಂಗಪ್ಪ

[ ಸ್ಥಾಪನೆ: ಕ್ರಿ ಶ 1858 ]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವುಕಾರ ಮಹಾಲ್, ಮಂಗಳೂರು.



The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು. ಕೆನರಾ ಹೈಸ್ಕೂಲ್ ರೋಡು    ಬ್ರೇಂಚ್. ಸೆಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000.    ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½%  -  ನಿರಖು ಠೇವಣಾತಿ 12 ತಿಂಗಳಿಗೆ 4½%

,, 6 ತಿಂಗಳಿಗೆ 4%  ,, 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್

ಹುಷಾರ್.

ಮೋಟಾರನ್ನು ನಡೆಸುವುದಕ್ಕೆ ಎಷ್ಟೋ ಹುಷಾರಿರಬೇಕು ಸಮಯಕ್ಕೆ ಅನುಗುಣವಾಗಿ ಕಾರನ್ನು ಕ್ಷಣ ಮಾತ್ರದಲ್ಲಿ ಪಕ್ಕಕ್ಕೆ ತಿರುಗಿಸಿ ನಡೆಸುವಂಥ ನರಗಳ ಪಟುತ್ವವೂ, ಚಿಗಿಯಾದ ಎಂದರೆ ಸ್ಪಷ್ಟಿಯೂ ತೀಕ್ಷ್ಣವಾದ ದೃಷ್ಟಿಪಾಟವವೂ, ಒಂದು ಕ್ಷಣ ಮಾತ್ರದಲ್ಲಿ ಯೋಚನೆ ಮಾಡಿ ನಿರ್ಧರಿಸುವಂಥ ಚುರುಕಾದ ಮೆದುಳು ಅವಶ್ಯಕವಾಗಿ ಬೇಕು ಇವೆಲ್ಲವೂ ಒಂದು ಮೋಟಾರನ್ನು ನಡೆಸುವುದಕ್ಕೆ ಮಾತ್ರವೇ ಅಲ್ಲದೆ ಆನಂದಮಯವಾದ ಜೀವಯಾತ್ರೆಯನ್ನು ನಡಸುವುದಕ್ಕೂ ಅವಶ್ಯಕವೆ. ಭಾರತದಲ್ಲೆಲ್ಲಾ ಅತ್ಯುತ್ತಮವಾದ ಟಾನಿಕ್ಕೆಂದು ಪ್ರಸಿದ್ಧಿ ಹೊಂದಿರುವ

ಜೀವಾಮೃತ

ಸ್ತ್ರೀಪುರುಷರೆಲ್ಲರಿಗೂ ಈ ಮಹತ್ತರವಾದ ಶಕ್ತಿಯನ್ನೂ, ದೇಹಾರೋಗ್ಯವನ್ನೂ ಉಂಟುಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ದೊರೆಯುವುದು

ತಯಾರಿಸುವವರು

ಆಯುರ್ವೇದಾಶ್ರಮಂ ಮದ್ರಾಸು

ಸ್ಥಳೀಯ ಏಜಂಟರು

ಪೊಪ್ಯುಲರ್ ಸ್ಟೋರ್ಸ್

ರಥಬೀದಿ — ಮಂಗಳೂರು



# ಜಿಲ್ಲಾ ಸಮಾಚಾರ

## ಮಂಗಳೂರು

**ಬೋಳೂರು ದ್ರಾವಿಡ ಬ್ರಾಹ್ಮರ ಸಂಘ ಮತ್ತು ಕನ್ನಡ ನಾಟಕ ಸಭಾ:**—ಇವುಗಳ ವಾರ್ಷಿಕೋತ್ಸವಗಳು ಬೋಳೂರಲ್ಲಿ ಕಳೆದ ತಾ ೩ನೇ ಸಾಯಂಕಾಲ ವಿಜೃಂಭಣೆಯಿಂದ ನೆರವೇರಿದುವು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ನಿವೃತ್ತ ಕನ್ನಡ ಪಂಡಿತರಾದ ಒ। ಶ್ರೀ ಬಾಜ ಶ್ರೀನಿವಾಸಾಚಾರ್ಯರು ಅಗ್ರಾಸನ ವಹಿಸಿದ್ದರು

**ದ. ಕ. ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ವಾರ್ಷಿಕೋತ್ಸವ:**—ದ. ಕ. ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ಮಹಾಸಭೆಯು ದಶಂಬರ ತಾ ೩೦ ರಲ್ಲಿ ಆರಂಭಗೊಂಡಿತು ತಾ ೩೧ನೇ ಬೆಳಗ್ಗೆ ಶ್ರೀ ಕಲ್ಯಾಣಿ ದೇವದಾಸಿಯವರ ಅಧ್ಯಕ್ಷತೆಯಲ್ಲಿ ಸ್ತ್ರೀ ಸಮ್ಮೇಳನವು ನಡೆಯಿತು

**ಮುನ್ಸಿಪಾಲ್ ಮಹಮ್ಮಡನ್ ಹೈಯರ್ ಎಲಿಮೆಂಟರಿ ಸ್ಕೂಲ್ ಮಂಗಳೂರು:**—ಈ ಶಾಲೆಯ ವಾರ್ಷಿಕೋತ್ಸವವು ಇದೇ ಜನವರಿ ತಿಂಗಳ ಕಡೇ ವಾರದಲ್ಲಿ ಜರಗುವುದು ಸ್ಕೂಲ್ ಡೇ ಕಮಿಟಿಯ ಸೇವಕರೂ ಹಳೆ ವಿದ್ಯಾರ್ಥಿ ಸಂಘ ಸ್ಥಾಪಕರೂ ಇದ್ದಲ್ಲಿ ಅದ ವಿಷಯವು ಬಹಳ ಪ್ರೋತ್ಸಾಹಕರ 'ಸ್ಕೂಲ್ ಡೇ' ಕಮಿಟಿಯ ಮುನ್ಸಿಪಾಲ್ ಕೌನ್ಸಿಲರ್ ಜನಾಬ್ ಮೂಸಬ್ಬಾ ಸಾಹೇಬ್ B A I L ರವರು ಅಧ್ಯಕ್ಷರಾಗಿರುವರು.

ಈ ಶಾಲೆಯ ಮುಖ್ಯೋಪಾಧ್ಯಾಯರೂ, ಸಹಾಯಕ ಉಪಾಧ್ಯಾಯರೂ ಪರಸ್ಪರ ಮಮತೆಯಿಂದಲೂ ಒಕ್ಕಟ್ಟಿನಿಂದಲೂ ಬಹಳ ಶ್ರಮವಹಿಸಿ ಕೆಲಸನಡಿಸುತ್ತಿರುವ ಸಂಗತಿಯು ಬಹಳ ಸಂತೋಷದಾಯಕವಿರುತ್ತದೆ

ಹಳೆ ವಿದ್ಯಾರ್ಥಿ ಸಂಘದವರು ಮುಸ್ಲಿಮರಿಯೊಳಗಿರುವ ಸರ್ವ ಮುಸ್ಲಿಂ ವಿದ್ಯಾರ್ಥಿಗಳನ್ನು ಶಾಲೆಗೆ ಹಾಜರಾಗುವಂತೆ, ಸರ್ವ ಪ್ರಯತ್ನಗಳನ್ನು ಮಾಡುವರೆಂಬುದು ನಿಜವಾದ ವಿಷಯವೇ ಆಗಿದೆ ಸ್ಕೂಲ್ ಡೇ ಕಮಿಟಿಯವರೇ ಬಡ ವಿದ್ಯಾರ್ಥಿಗಳಿಗೆ ಬೇಕಾದ ಸ್ಲೇಟು, ಪುಸ್ತಕ ವಗೈರೆ ಸಹಾಯಗಳನ್ನು ಕೊಡುವ ಯೋಚನೆ ಮಾಡುತ್ತಿರುವರೆಂದು ತಿಳಿಯಿತು

**ಜನ್ಮಟೂಪು:**—ಬಪ್ಪನಾಡು ಗ್ರಾಮದ ಕಪ್ಪು ಪೂಜಾರಿ ಎಂಬವನು ತನ್ನ ಮೊದಲನೇ ಪತ್ನಿ ರಾಧು ಎಂಬವಳನ್ನು ಕತ್ತಿಯಿಂದ ಕಡಿದು ಕೊಲೆಮಾಡಿ ಅವಳ ಶವವನ್ನು ಆದೇ ಗ್ರಾಮದ ಕಟ್ಟೆದಂಗಡಿ ಸಮೀಪ ಹೊಳೆಗೆ ತಾ ...ನೇ ಬೆಳಿಗ್ಗೆ ಸುಮಾರು ೮ ಘಂಟೆಗೆ ಬಿಸಾಡಿದ್ದನಾಗಿ ಆತನ ಮೇಲೆ ಇ. ಪಿ. ಕೋಡಿನ ೩೦೨ ಕಲಂ ಪ್ರಕಾರ ಮೊಕದ್ದಮೆಯಾಗಿತ್ತು. ರಾಧುವನ್ನು ಆಲೆಯು ಮದುವೆಯಾಗಿ ಮೂರು ... ವರ್ಷ ನಂತರ ಆಕೆಯನ್ನು ಬಿಟ್ಟು ಬಿಡಲು ಆಕೆಯು ಪುನಃ ಪರಮೇಶ್ವರ ಎಂಬವನನ್ನು ಮದುವೆಯಾಗಿ ಅವನೊಟ್ಟಿಗೆ ಇರುತ್ತಿದ್ದಳು. ಆಲೆಯು ಆಪೇಕ್ಷೆಗೆ ವಿರೋಧವಾಗಿ ಆಕೆಯು ಯಾವಾಗಲೂ ಆತನ ಮನೆ ಸಮೀಪವಾಗಿ ತನ್ನ ಎರಡನೇ ಗಂಡನ ಮನೆಯಿರಿದ ತಾಯಿಯ ಮನೆಗೆ ಹೋಗುತ್ತಾ ಇದ್ದ ಕಾರಣ ಆಲೆಯು ಸಿಟ್ಟುಗೊಂಡು ಆಕೆಯನ್ನು ಕಡಿದು ಕೊಂದನಾಗಿ ಅವನ ಮೇಲಿನ ಮೊಕದ್ದಮೆಯಾಗಿತ್ತು

ಆಲೆಯು ತಾನು ಆ ದಿವಸ ಅಲ್ಲಿ ಇರಲಿಲ್ಲವಾಗಿಯೂ ತಾನು ತಕ್ಸೀರುಮಾಡಿದ್ದಿಲ್ಲವಾಗಿಯೂ ಹೇಳಿಕೆ ಕೊಟ್ಟಿದ್ದನು ೩ ಜನ ಎಸೆಸರರು ಆಲೆಯು ತಪ್ಪಿತಸ್ಥನೆಂತ ಅಭಿಪ್ರಾಯ ಕೊಟ್ಟಿದ್ದರು, ಅವರ ಅಭಿಪ್ರಾಯವನ್ನು ಅಂಗೀಕರಿಸಿ ಮಂಗಳೂರು ಸೆಶನ್ ಜಡ್ಜರಾದ ಶ್ರೀ ಪಿ ರಾಜಗೋಪಾಲಾಚಾರ್ಯರು ತಾ ೩೦-೧೨-೩೯ರಲ್ಲಿ ಆಲೆಯನ್ನು ಜನ್ಮಟೂಪಿನ ಶಿಕ್ಷೆಗೆ ಗುರಿಪಡಿಸಿದರು

ಆಲೆಯ ಕಡೆಯಿಂದ ಕೋರ್ಟಿನಿಂದ ನೇಮಿಸಲ್ಪಟ್ಟ ಶ್ರೀ ಬಿ ನರಸಿಂಗರಾಯರು ವ್ಯವಹರಿಸಿದ್ದರು

**ಎಯಿಡೆಡ್ ಎಲಿಮೆಂಟರಿ ಶಾಲಾ:** ಮಂಗಳೂರು ತಾಲೂಕು ಎಯಿಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆ ಒಂದು ಕಳೆದ ಆದಿತ್ಯವಾರ ಕೋಡಿಕಲ್ ಹಿ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಯು ಗೋವಿಂದ ರಾಯರ ಅಧ್ಯಕ್ಷತೆಯಲ್ಲಿ ಜರುಗಿತು ಎಲಿಮೆಂಟರಿ ವಿದ್ಯಾಭ್ಯಾಸದ ವಿಷಯದಲ್ಲಿ ತಯಾರಿಸಲಾದ ತಿದ್ದುಪಾಟುಗಳ ಕರಿತು ಚರ್ಚಿಸಿ ಶಾಲೆ ... ಹಾಗೂ ಶಾಲೆ ನಡೆಸುವ ಸಮಯಗಳನ್ನು ೨೦೦ ದಿವಸ ... ಅದರಿಂದ ೨೨೦ ... ಕ್ಕೆ ಕ್ರಮವಾಗಿ ... ವಿಸುವುದರಿಂದ, ಮಕ್ಕಳ ಆರೋಗ್ಯ ಕೆಡಬಹುದೆಂದೂ ... ಬದಲಾವಣೆ ಮಾಡಲಾಗದೆಂದೂ ಸರಕಾರವನ್ನು ಕೇಳಲು ನಿಶ್ಚಯಿಸಿತು ಎಲಿಮೆಂಟರಿ ಶಾಲೆಗಳಲ್ಲಿ ಆನೇ ದರ್ಜೆ ಪಾಸ ದ ವಿದ್ಯಾರ್ಥಿಗಳನ್ನು ಹೈಸ್ಕೂಲಿಗೆ ಸೇರಿಸಿಕೊಳ್ಳುವ ... ತಡೆಯು ವಿಚಾರ ... ಅದನ್ನೂ ಕೂಡ ವಿದ್ಯಾಭ್ಯಾಸದ ಪ್ರನರ್ಘಟನೆಯಾಗುವ ತನಕ ಮಾಡಲಾಗದೆಂದು ಸರಕಾರವನ್ನು ವಿನಂತಿಸಲು ಯೋಚಿಸಿತು

**ಕನ್ನಡ ಸೇವಾ ಸಂಘ, ಅಮ್ಮೆಂಬಳ** —ಈ ಸಂಘದ ದ್ವಿತೀಯ ವರ್ಷದ ವರ್ಧಂತ್ಯುತ್ಸವವು ತಾ ೧೦-೧-೪೦ನೇ ಶನಿವಾರ ಸಾಯಂಕಾಲ ... ಗಂಟೆಗೆ ಅಮ್ಮೆಂಬಳ ಸೋಮನಾಥ ಸಂಸ್ಕೃತ ಪಾಠಶಾಲೆಯ ಸಮೀಪ ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನ ಕನ್ನಡದ ಪ್ರಧಾನಾಧ್ಯಾಪಕರಾದ ಶ್ರೀ ಮಾನ್ ಮುಳಿಯದ ತಿಮ್ಮಪ್ಪಯ್ಯನವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ನೆರವೇರಲಿದೆ ಅಧ್ಯಕ್ಷರು ಯಕ್ಷಗಾನ ವಾಲ್ಮೀಕಿ ಪಾರ್ತಿ ಸುಬ್ಬನ ವಿಷಯ ವಿದ್ವತ್ಪೂರ್ಣ ಭಾಷಣವೆಸಗಲಿರುವರು ಅಂದೇ ರಾತ್ರಿ ಶ್ರೀಯುತರುಗಳಾದ ಪೊಳಲಿ ಶಂಕರನಾರಾಯಣಶಾಸ್ತ್ರಿ, ದೇ ಘ. ನಾರಾಯಣ ಕಿಲ್ಲೆ, ಎಡಕೇಟ್ ಕೆ ಬಾಲಕೃಷ್ಣರಾವ್, ಒಳ್ಳಮುಜಲು ರಂಗಪ್ಪಯ್ಯ, ಕುರ್ಯ ಶಂಕರ ಭಟ್ಟರು, ಡಾ। ಎಫ್. ಯಚ್. ಒಡೆಯರ್, ಎಂ ಆರ್. ಶಾಸ್ತ್ರಿ, ಸಿ ಯಚ್, ತಿರುಮಲೇಶ್ವರ ಭಟ್ಟ ಮೊದಲಾದವರ ಕೂಡುವಿಕೆಯಿಂದ 'ಸುಭದ್ರಾ ಕಲ್ಯಾಣ' ಪ್ರಸಂಗದ ಯಕ್ಷಗಾನ ತಾಳಮದ್ದಳೆಯು ಜರಗುವುದು ಸರ್ವರಿಗೂ ಸುಸ್ವಾಗತವಿದೆ' ಎಂದು ಅದರ ವ್ಯವಸ್ಥಾಪಕರು ತಿಳಿಸುತ್ತಾರೆ.

## ಉಡುಪಿ

**ಶ್ರೀ ಅದಮಾರುಸ್ವಾಮಿಗಳವರ ಪುರ ಪ್ರವೇಶ:**—ಶ್ರೀ ಕೃಷ್ಣ ಸನ್ನಿಧಾನದ ಪರ್ಯಾಯ ಪೀಠವನ್ನು ಸದ್ಯವೇ ಅಲಂಕರಿಸಲಿರುವ ಶ್ರೀ ಅದಮಾರು ಮಠದ ಶ್ರೀ ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರು ಕಳೆದ ತಾ. ೩ರಲ್ಲಿ ಕಾಸರಗೋಡು ತಾಲೂಕಿನ ಎಡನೀರು ಮಠದ ಶ್ರೀ ಈಶ್ವರಾನಂದ ಭಾರತಿ ಸ್ವಾಮಿಗಳ ಆಮಂತ್ರಣವನ್ನು ಸ್ವೀಕರಿಸಿ ಅಲ್ಲಿಗೆ ಚಿತ್ತೈಸಿದ್ದರು ತಾ ೪ ಮತ್ತು ೫ರಲ್ಲಿ ಶ್ರೀ ಈಶ್ವರಾನಂದ ಭಾರತಿ ಸ್ವಾಮಿಗಳವರಿಂದ ಸತ್ಕೃತರಾಗಿ ಅಲ್ಲಿಂದ ಶ್ರೀಗಳವರು ಪರಿವಾರ ಸಮೇತ ತಾ ೧೦ರಲ್ಲಿ ತಮ್ಮ ಪುರ ಪ್ರವೇಶಮಾಡಿದರು.

**ಸಪ್ತೋತ್ಸವ-ಪರ್ಯಾಯದ ದರ್ಬಾರು:**—ಶ್ರೀ ಕೃಷ್ಣ ಮಠದ ಸಪ್ತೋತ್ಸವವು ಇದೇ ತಾ ೯ರಲ್ಲಿ ಆರಂಭವಾಗುವುದು ಮಹಾರಥೋತ್ಸವ ಚೂರ್ಣೋತ್ಸವ ಅವಭೃತಸ್ನಾನಾದಿಗಳು ೧೫ ೧೬ ಮತ್ತು ೧೭ರಲ್ಲಿಯೂ ಪರ್ಯಾಯ ... ಶ್ರೀ ಫಲಿಮಾರು ಸ್ವಾಮಿಗಳವರ ಮಹಾ ಸಂತರ್ಪಣೆಯು ತಾ ೧೯ನೇ ಬೇಗ ... ಶ್ರೀಮಧ್ವನವಮಿ ಮಹೋತ್ಸವವು ತಾ ೧೯ರಲ್ಲಿ ನಡೆಯುವುದು

ಉಡುಪಿ ಪರ್ಯಾಯ ವಸ್ತುಪ್ರದರ್ಶನದ ಉದ್ಘಾಟನಾ ಸಮಾರಂಭವು ... ಸೋಮವಾರ ಸಾಯಂಕಾಲ ... ಗಂಟೆಗೆ ಗವರ್ನಮೆಂಟ್ ಆಸ್ಪತ್ರೆಯ ಹಿಂದುಗಡೆಯ ಕಂಪೌಂಡಿನಲ್ಲಿ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗಡೆ, ಎಮ್ ಎಲ್ ಸಿ ಇವರ ಹಸ್ತದಿಂದ ನೆರವೇರಿತು

**ಶಿರ್ವ:** ತಾ ... ನೇ ಸೋಮವಾರ ಶಿರ್ವ ಪಂಚಾಯತ್ ಬೋರ್ಡ್ ಮೀಟಿಂಗು ಪ್ರೆಸಿಡೆಂಟರಾದ ಶ್ರೀ ಎಸ್ ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ಜರಗಿತು ಪಂಚಾಯತ್ ಜನರಲ್ ವಗೈರೆ ಸರ್ಕ್ಯುಲರು ಪುಕಂಗಳನ್ನು ರಿಕಾರ್ಡ್ ಮಾಡಿದ ನಂತರ ... ಇದಾಗಲೇ ತಪಸ್ಸು ... ಪ್ರಚಾರದ ಮಂಜೂರು ಮಾಡಲ್ಪಟ್ಟಿತು ಇತ್ತೀಚೆಗೆ ... ತಿಂಗಳಲ್ಲಾಗುತ್ತ ಖಾಲಿ ಇದ್ದ ಸೇವೆ ಕೆಲಸಕ್ಕೆ ಒಬ್ಬ ... ಮುಕರ್ರರು ಮಾಡಲಾಯಿತು ಪಂಚಾಯತ್ ಬೋರ್ಡ್ ... ಒಕ್ಕೆ ಮತ್ತು ಶಿರ್ವದಿಂದ ಬೆಳ್ಳೆ ಬೈಲೂರು ಉತ್ತರಕಡೆ ಹೋಗುವ ರಸ್ತೆ ರಿಪೇರಿ ಬಗ್ಗೆ ಕೂಡ ಎಸ್ಟಿಮೇಟು ತಯಾರಿಸಿ ಕೊಡುವರೆ ಸಮ್ಮಂಧ ಪಟ್ಟವರಿಗೆ ಬರೆಕೊಳ್ಳಲಾಯಿತು ... ತೋಡಿಗೆ ಸಂಕ ಕಟ್ಟಿಸುವರೆ ಹಣ ಮಂಜೂರು ಮಾಡಲಾಯಿತು ಗ್ರಾಮದಲ್ಲಿರುವ ಪ್ರತೀ ತೋಡುಗಳಿಗೆ ಸಂಕ ಕಟ್ಟಿಸಿ ನಮ್ಮ ಪಂಚಾಯತ್ ಬೋರ್ಡ್ ಅಭ್ಯುದಯ ಉದ್ಧಾರಕ್ಕೆ ದುಡಿಯುತ್ತಿರುವುದು ಬಹಳಾ ಸಂತೋಷದ ಸಂಗತಿ

## ಕುಂದಾಪುರ

**ಹುಂಬಡು ಕೋಣೆ:**—ಇಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಪಂಚಾಯತ್ ಬೋರ್ಡಿನ ಅಧ್ಯಕ್ಷ ವ ಉಪಾಧ್ಯಕ್ಷರ ಚುನಾವಣೆಯು ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ದಶಂಬರ ತಾ. ೧೬ರಲ್ಲಿ ನಡೆದು ಶ್ರೀ ಕೃಷ್ಣ ಕಾರಂತರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆದು ಶೆಡ್ಯೂಲ್ಡ್ ಕ್ಲಾಸ್ ಮೆಂಬರರಾದ ಶ್ರೀ ಹಳಗೇರಿ ಮುದೂರನವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು ನಮ್ಮ ಜಿಲ್ಲೆಯ ಪಂಚಾಯತ್ ಬೋರ್ಡುಗಳಲ್ಲಿ ಇಂಥಾ ಗೌರವ ಸ್ಥಾನವನ್ನು ಹರಿಜನರು ಪಡೆದುದು ಇದೇ ಪ್ರಥಮ ಸಾರಿ.

೩೦ ದಿನ ಶ್ರೀ ಟರಿ ಶಾ ಕಾಮತರ ಸಭೆ ಕೂ ಹಿಂದುಗ ಕತೆಯು ಶ್ರೀ ಕೆ ಮಹಾಸ ಸಿರವಾಯ

ವಿದ ಶ್ರೀ ವೆ ೨ ಲೆಯ ಕೊಂಗ ವಾಸಿಕರ ಡಿ ಇನ್ಸ್ ರವರ ದ ಉಪಾ ದ್ರದ ಪ್ರಾ ಂಗಳ ಈ ರೇಂಜ ಂಲ ಯಿತು ಬಳಿಕ ಶ್ರೀ ತರ ಕ್ರ ಕಾ ಕುರಿತ ಂಗಳಲ್ಲಿ ಒಂದು ಅಧ್ಯಕ್ಷ

ವಸಿ ಸಂಘದ ಜನವರಿ ಸ್ಥಾಪನ

ಗೋ ಇತ್ತೀಚೆಗೆ ಗಳನ್ನು

೩೦

ಶಿ

ಸೇ

ಈಗ

ದೊರೆ

ಶಾ

# ಜೆಕೊಸ್ಲೊವೇಕಿಯದಲ್ಲಿ ಕ್ರಾಂ

## ಜೆಕ್ಕರು ಸ್ವಾತಂತ್ರ್ಯ

ಮಾಡಿದ ವಿಷಯವು ಬೇರೆ ಎಲ್ಲಿಯೂ ನಾವು ಕಾಣುವಂತಿಲ್ಲ.

### ನಾಜಿಗಳ ಪದಹತಿಯಲ್ಲಿ

ಕಳೆದ ಮಹಾಯುದ್ಧದ ಸಮಯದಲ್ಲಿ, ಜೆಕ್ಕರು ಮತ್ತು ಸ್ಲೊವೇಕಿಯರು ಹೇಗೆ ತಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಅಮಿತ ಹೋರಾಟ ಮಾಡಿದರು, ಮತ್ತು ಹೇಗೆ ಅವರು, ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ. ಇಂತಹ ಅಪ್ರತಿಮ ಪರಾಕ್ರಮಿಗಳು, ಈಗ ಜರ್ಮನಿಯ ನಾಜೀ ಸರಕಾರದ ಪದಹತಿಯಲ್ಲಿ ತುಳಿಯಲ್ಪಟ್ಟವರಾಗಿ ತಿರಿಗಿ ಈಗ ಹೇಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ, ಹೇಗೆ ಅದನ್ನು ಸಾಧಿಸಲು ಕ್ರಾಂತಿಯು ಅಲ್ಲಿ ಮಸಗುವಂತಿದೆಯೆಂಬುದು ತಿಳಿಯಬೇಕಾದ ವಿಷಯವಾಗಿದೆ.

ಪ್ರೇಗಿನಲ್ಲಿ ಯಾವುದೇ ವಿಧದಲ್ಲಿ, ಜರ್ಮನ್ ಸರಕಾರಕ್ಕೆ ವಿರುದ್ಧ ಚಟುವಟಿಕೆಗಳಾಗುತ್ತಿವೆಯೆಂದು ಸಂಶಯ ಕಂಡರೆ ಸಾಕು, ಕೂಡಲೇ ಅಂತಹ ಕ್ರಾಂತಿಗೆ ಕಾರಣರಾದವರೆಂದು ಹಲವರನ್ನು ಬಂಧನದಲ್ಲಿ ಇಡಲಾಗುತ್ತದೆ. ಜೆಕೊಸ್ಲವೇಕಿಯದ ರಾಷ್ಟ್ರೀಯ ಆಟಗಾರರ ಸಂಸ್ಥೆ, ಹಲವು ಪ್ರೊಫೆಸರರು, ಲೇಖಕರು ಮತ್ತು ಕಲಾವಿದರು ಇಂದು ಸೆರೆಮನೆಯಲ್ಲಿ ಕೊಳೆಯುತಿದ್ದಾರೆ. ಅನೇಕ ರಾಷ್ಟ್ರೀಯ ಸಂಸ್ಥೆಗಳ ಹಣ, ಆಸ್ತಿಗಳನ್ನು ಜರ್ಮನ್ ಸರಕಾರವು

ಸ್ವಾಧೀನ ... ಮುಂದಿ ... ಕತ್ತಲು ...

ಇಂತ... ಮಿೂರಿ ನ... ತಮ್ಮನ್ನು ... ರಕ್ಕೆ ವಿರ... ಬ್ಬಿಸುತ್ತಿದ... ಬಲ ಮ... ನಾಜೀ... ಲ್ಲಿರುವ ... ಪಾಧ್ಯಾಂ... ದಂತೆ ಮ... ೩೦,೦೦೦ ... ಸಾರ್ವಜ... ಇಂದು ... ಮಾತ್ರ ... ದಿಶಗಳನ... ದ್ದರೂ ಅ... ವನ್ನು ಹು... ಪ್ರಕಾಶಕ... ಕಳೆದ ಆರ... ತ್ರವು ರಾ... ಹೊಸ ಹೆ... ತ್ತಿವೆ. ... ನ್ನುಹೊಡೆ... ಹಾಡುತಾ... ಪೂರ್ಣ...


ಸಾಹುಕಾರ ಶ್ರೀನಿವಾ...

[ ಸ್ಥಾಪನೆ: ಕ್ರಿ ಶ 185...

ಉಜ್ವಲ ಕಾಂತಿ...

ವಜ್ರಗ...

ನೂಲು ಮತ್ತು ಕೈಮಗ್ಗ...

ಖಾತ್ರಿ ವ್ಯಾಪಾರ...

ಸಾಹುಕಾರ ಮುಹಾಲ್ಕ್, ಮ...



The Auttur & Jawahar B...

ದಿ ಅತ್ತೂರು & ಜವಾಹರ ಬೇಂಕ್, ಲಿಮಿ...

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು

ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ...

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯ...

ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯ...

ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇ...

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರ...

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು...

,, 6 ತಿಂಗಳಿಗೆ 4%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದ...

ಅತ್ತೂರು ವೈಕುಂಠಪ್ರಭು,

# ಗ್ರಾಮ ಸಮಾಚಾರ

ಮಠದ ಶ್ರೀ ಈಶ್ವರಾನಂದ ಭಾರತಿ ಸ್ವಾಮಿಗಳ ಆಮಂತ್ರಣವನ್ನು ಸ್ವೀಕರಿಸಿ ಅಲ್ಲಿಗೆ ಚಿತ್ತೈಸಿದ್ದರು. ತಾ ೨೬ ಮತ್ತು ೨೭ರಲ್ಲಿ ಶ್ರೀ ಈಶ್ವರಾನಂದ ಭಾರತಿ ಸ್ವಾಮಿಗಳವರಿಂದ ಸತ್ಕೃತರಾಗಿ ಅಲ್ಲಿಂದ ಶ್ರೀಗಳವರು ಪರಿವಾರ ಸಮೇತ ತಾ ೧ರಲ್ಲಿ ತಮ್ಮ ಮಠ ಪ್ರವೇಶಮಾಡಿದರು.

**ಸಪ್ತೋತ್ಸವ ಪರ್ಯಾಯದ ಬಾರ್ ರು:**—ಶ್ರೀ ಕೃಷ್ಣ ಮಠದ ಸಪ್ತೋತ್ಸವವು ಇದೇ ತಾ ೯ರಲ್ಲಿ ಆರಂಭವಾಗುವುದು. ಮಹಾ ರಥೋತ್ಸವ [illegible] ಅವಭೃತಸ್ನಾನಾದಿಗಳು ೩೦ ೧೪ ಮತ್ತು ೧೫ರಲ್ಲಿಯೂ [illegible] ಶ್ರೀ ಫಲಿಮಾರು ಸ್ವಾಮಿಗಳವರ ಮಹಾ ಸಂಚರಣೆ [illegible] ಶ್ರೀಮಧ್ವನವಮಿ ಮಹೋತ್ಸವವು ತಾ [illegible]ರಲ್ಲಿ ನಡೆಯುವುದು.

[illegible] ವಸ್ತುಪ್ರದರ್ಶನದ [illegible] ಸೋಮವಾರ [illegible] ಗಂಟೆ [illegible] ಹಸ್ತದಿಂದ ನೆರವೇರಿತು.

**ಶಿವಾರ್:** [illegible] ಸಂಘಟ್ಟ [illegible] ವಗ್ಗೆರೆ [illegible] ವರು ಮತಪತ್ತು [illegible] ಆಗಿ [illegible] ಮೋಟರ್ ಬಸ್ಸು ಕಟ್ಟೋಣದ ಬಗ್ಗೆ ಮತ್ತು ಶಿವಾರ್‌ದಿಂದ ಬೆಳ್ಮ ಬೈಲೂರು ಅತ್ತಕಡೆ ಸಾಗುವ ರಸ್ತೆ [illegible] ಬಗ್ಗೆ [illegible] ತಯಾರಿಸಿ ಕೊಡುವರೆ ಸಮ್ಮತಿ [illegible] ಬರಕೊಳ್ಳಲಾಯಿತು. [illegible] ತೋಡಿಗೆ ಸಂಕ ಕಟ್ಟಿಸುವರೆ ಹಣ ಮಂಜೂರು ಮಾಡಲಾಯಿತು. ಗ್ರಾಮದಲ್ಲಿರುವ ಪ್ರತೀ ತೋಡುಗಳಿಗೆ ಸಂಕ ಕಟ್ಟಿ [illegible] ಬೋರ್ಡ್‌ನವರು ಉತ್ಸಾಹಕ್ಕೆ [illegible] ವುದು [illegible] ಸಂತೋಷದ ಸಂಗತಿ.

## ಕುಂದಾಪುರ

**ಕಂಬದ ಕೋಣೆ:**—ಇಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಪಂಚಾಯಿತ್ ಬೋರ್ಡಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಡಿಸೆಂಬರ ತಾ ೧೭ರಲ್ಲಿ ನಡೆದು ಶ್ರೀ ಕೃಷ್ಣ [illegible] ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆದು [illegible] ಕ್ಲಾಸ್ ಸೇರಿದ ಶ್ರೀ [illegible] ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ನಮ್ಮ ಜಿಲ್ಲೆಯ ಪಂಚಾಯಿತ್ ಬೋರ್ಡುಗಳಲ್ಲಿ ಇಂಥಾ [illegible] ಸ್ಥಾನವನ್ನು ಹರಿಜನರು ಪಡೆದುದು ಇದೇ ಪ್ರಥಮ ಸಾರಿ.

## ಕಾರ್ಕಳ

**ಹಿಂದೂ ಸಂಘಟನೆ:**—೩೧-೧೨-೧೯೩೯ನೇ ದಿನ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಮ್. ಸರ್ವೋತ್ತಮ [illegible] ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಕೂಡಿ ಶ್ರೀ ಟಿ. ವಾಸುದೇವ [illegible]ಯವರು ಹಿಂದುಗಳು ಸಂಘಟಿತರಾಗಬೇಕಾದ ಆವಶ್ಯಕತೆಯ ಕುರಿತು ಭಾಷಣವನ್ನಿತ್ತರು. ಆ ಮೇಲೆ ಶ್ರೀ [illegible] ಅಧ್ಯಕ್ಷರಾಗಿ ಹಿಂದು ಮಹಾಸಭೆಯ ಒಂದು ಶಾಖೆಯು ಇಲ್ಲಿ ಸ್ಥಾಪಿತವಾಯಿತು.

**ವಿದ್ಯಾರ್ಥಿಗಳ ಹಸ್ತ ಪತ್ರಿಕೆ:**—ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ [illegible] ಮಕ್ಕಳು ನಡೆಸಿಕೊಂಡು ಬರುವ [illegible] ಎಂಬ [illegible] ಹಸ್ತ ಪತ್ರಿಕೆಯನ್ನು ನೋಡಿ ಈ ರೇಂಜಿನ [illegible] ಇನ್ಸ್‌ಪೆಕ್ಟರ್ ಶ್ರೀ ಬಿ. [illegible] ವೆಂಕಟರಮಣ [illegible] ಪ್ರಶಂಸಿಸಿರುವರು.

**ಉಪಾಧ್ಯಾಯರ ಸಂಘ:** ಕಾರ್ಕಳ [illegible] ಉಪಾಧ್ಯಾಯರ [illegible] ದಿನ [illegible] ಇನ್ಸ್‌ಪೆಕ್ಟರ್ ಶ್ರೀ ಬಿ. [illegible] ಅಧ್ಯಕ್ಷತೆಯಲ್ಲಿ ನಡೆಯಿತು. [illegible] ವರದಿವಾಚನಗಳಾದ [illegible] ಶ್ರೀ [illegible] ಭಾಷೆಯಲ್ಲಿ [illegible] ಕೊಟ್ಟರು. [illegible] ವಿದ್ಯಾರ್ಥಿಗಳ [illegible] ಸಭೆ ಮುಗಿಯಿತು.

## ಕಾಸರಗೋಡು

**ವಸಿಷ್ಠಾಶ್ರಮ:**—ಶ್ರೀ ವಸಿಷ್ಠಾಶ್ರಮ [illegible] ಮಹಾಸಭೆಯು ಇದೇ ಜನವರಿ [illegible] ವಸಿಷ್ಠಾಶ್ರಮ [illegible] ಶಾಲೆಯಲ್ಲಿ ಜರುಗುವುದು.

## ಪುತ್ತೂರು

**ಗೋಳಿ ತಟ್ಟು:** ಹುಲಿಗಳ ಹಾವಳಿ—ಇತ್ತೀಚೆಗೆ ಒಂದು [illegible]ದಿಂದ ಹುಲಿಗಳ ಹಾವಳಿಯು ವಿಪರೀತವಾಗಿದೆ. ಅನೇಕ ಜಾನುವಾರುಗಳನ್ನು ಹುಲಿಗಳು ಕೊಂದಿವೆ.


ತಯಾರಾಗಿವೆ!

1940ನೇ

ಇಸವಿಯ

ಶಾರದಾ ಡೈರಿಗಳು

ಸಣ್ಣ ಮತ್ತು ದೊಡ್ಡ ಸೈಜುಗಳಲ್ಲಿ

ಈಗಾಗಲೇ ಮಾರಾಟಕ್ಕೆ ಸಿದ್ಧವಾಗಿವೆ!

ದೊರೆಯುವ ಸ್ಥಳ:—

ಶಾರದಾ ಛಾಪಖಾನೆ,

ಮಂಗಳೂರು.

# ಜೆಕೊಸ್ಲೊವೇಕಿಯದಲ್ಲಿ ಕ್ರಾಂತಿ ಮುಸಗಲಿದೆ!

## — ಜೆಕ್ಕರು ಸ್ವಾತಂತ್ರ್ಯ ವೀರರು —

ಡಾ ಬೆನೆಸರು

**ನಾಜೀ ಸರಕಾರದ ದುರಂತ ಪ್ರಭುತ್ವದ ಪದಹತಿಯಲ್ಲಿ ಇಂದು, ಹಲವು ಸ್ವತಂತ್ರ ರಾಷ್ಟ್ರಗಳು ಸಂಕಷ್ಟ ಪಡುತ್ತಿವೆ. ಆದರೆ ಆ ರಾಷ್ಟ್ರಗಳ ಸ್ವಾತಂತ್ರ್ಯಧನರಾದ ವೀರಪ್ರಜೆಗಳ ಹೃದಯಗಳನ್ನು ಯಾರಿಗೂ ಎಂದೆಂದೂ ಗೆಲ್ಲಲು ಸಾಧ್ಯವಾಗಲಾರದು**

ಪ್ರಪಂಚದ ಭೂಪಟವನ್ನು ತೆರೆದು ನೋಡಿದವನಿಗೆ ಜೆಕೊಸ್ಲೊವೇಕಿಯವು, ಹೇಗೆ ಯುರೋಪಿನ ಹೃದಯಸ್ಥಾನದಲ್ಲಿ ಇದೆಯೆಂಬ ವಿಷಯವು ಚೆನ್ನಾಗಿ ಮನವರಿಕೆಯಾಗುವುದು ಹೀಗಿರುವುದರಿಂದ, ಚರಿತ್ರೆಯಲ್ಲಿ ಘಟನೆಗಳ ಆರಂಭವಾದ ಮೇಲೆ, ಯುರೋಪಿನಲ್ಲಿ ಉಂಟಾದ, ಎಲ್ಲಾ ಬಗೆಯ ಆಂದೋಲನ, ಕೋಲಾಹಲಗಳ ತಿಕ್ಕಾಟದಲಿ, ಈ ರಾಷ್ಟ್ರವು ಸಂಸ್ಕೃತಿಯಲ್ಲಿ, ಆರ್ಥಿಕ ಸ್ಥಿತಿಯಲ್ಲಿ ಅನೇಕ ವಿಧಗಳ ಹೋರಾಟಗಳಲ್ಲಿ ಸಿಲುಕಿ, ತನ್ನ ನೆತ್ತರನ್ನು ರಣರಂಗಗಳಲ್ಲಿ ಚೆಲ್ಲಿ, ಪ್ರತಿಷ್ಠೆಯನ್ನು ಕಾಪಾಡಿಕೊಂಡಿದೆ, ಸ್ವಾತಂತ್ರ್ಯವನ್ನು ಉಳಿಸಿಕೊಂಡಿದೆ ಕಳೆದ ಹತ್ತಿಪ್ಪತ್ತು ಶತಮಾನಗಳಿಂದ ಇಲ್ಲಿ ಅನವರತ ಹೋರಾಟಗಳು ನಡೆದೇ ಇದ್ದವು

### ಹೊಸ ರಾಷ್ಟ್ರವಲ್ಲ

ಇದರ ಸ್ವಾತಂತ್ರ್ಯವು ಏನೂ ಹೊಸದಲ್ಲ ೧೯೩೮ರಲ್ಲಿ ಜೆಕ್ಕರು ಇಪ್ಪತ್ತು ವರ್ಷಗಳ ತಮ್ಮ ಸ್ವಾತಂತ್ರ್ಯದ ಉತ್ಸವವನ್ನು ಆಚರಿಸಿದ್ದರು ಈ ರಾಷ್ಟ್ರ ಮತ್ತು ಜನಾಂಗಗಳು, ರೋಮಿನಿಂದ ಹಿಂದಿನದು ವಿಲಿಯಮ್ಮನ ರಾಷ್ಟ್ರಕ್ಕಿಂತ ಹಳೆಯದು ೬೦೦ ವರ್ಷಗಳ ಹಿಂದೆಯೇ ಇಲ್ಲಿ ವಿಶ್ವವಿದ್ಯಾನಿಲಯವೊಂದು ವ್ಯವಸ್ಥಿತವಾಗಿತ್ತು

ರಶ್ಯದ ಕ್ರಾಂತಿಯು ಜೆಕ್ಕರಲ್ಲಿ ಪ್ರಬಲ ಪರಿಣಾಮವನ್ನು ಹುಟ್ಟಿಸಿತು ಬಹಳ ಸಾಹಿತ್ಯ ಗ್ರಂಥಗಳು ಹುಟ್ಟಿದುವು ಬೇಸಾಯಗಾರರೂ, ಕೂಲಿಗಾರರೂ, ಸರ್ವಸಾಮಾನ್ಯರಾದ ಜನರೂ ಕೂಡಾ, ಆ ಕ್ರಾಂತಿಯ ಕಾಲದಲ್ಲಿ ಎಚ್ಚರಗೊಂಡು ಹೋರಾಡಿದರು. ಇತ್ತೀಚೆಗೆ ಅಲ್ಲಿ ಬಹಳ ಸುಧಾರಣೆಗಳು ಆಗಿವೆ. ೬೦೦ ವರ್ಷಗಳ ಹಿಂದೆಯೇ ಸ್ಥಾಪಿತವಾದ ಪ್ರೇಗ್ ವಿಶ್ವವಿದ್ಯಾನಿಲಯವು ತಿರಿಗಿ ಪುನರುದ್ಧಾರವಾಗಿದೆ. ಪ್ರಪಂಚದ ಚರಿತ್ರೆಯಲ್ಲಿ, ಇಷ್ಟು ಸಣ್ಣ ರಾಷ್ಟ್ರವು ಇನ್ನೊಂದು ಸಾಹಸ ಪರಾಕ್ರಮಗಳನ್ನು ಮಾಡಿದ ವಿಷಯವು ಬೇರೆ ಎಲ್ಲಿಯೂ ನಾವು ಕಾಣುವಂತಿಲ್ಲ.

### ನಾಜಿಗಳ ಪದಹತಿಯಲ್ಲಿ

ಕಳೆದ ಮಹಾಯುದ್ಧದ ಸಮಯದಲ್ಲಿ, ಜೆಕ್ಕರ ಮತ್ತು ಸ್ಲೊವೇಕಿಯರು ಹೇಗೆ ತಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಅಮಿತ ಹೋರಾಟ ಮಾಡಿದರು, ಮತ್ತು ಹೇಗೆ ಅವರು, ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ ಇಂತಹ ಅಪ್ರತಿಮ ಪರಾಕ್ರಮಿಗಳು, ಈಗ ಜರ್ಮನಿಯ ನಾಜೀ ಸರಕಾರದ ಪದಹತಿಯಲ್ಲಿ ತುಳಿಯಲ್ಪಟ್ಟವರಾಗಿ ತಿರಿಗಿ ಈಗ ಹೇಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ, ಹೇಗೆ ಅದನ್ನು ಸ್ಥಾಪಿಸಲು ಕ್ರಾಂತಿಯು ಅಲ್ಲಿ ಮುಸುಗುವಂತಿದೆಯೆಂದು ತಿಳಿಯಬೇಕಾದ ವಿಷಯವಾಗಿದೆ

ಪ್ರೇಗಿನಲ್ಲಿ ಯಾವುದೇ ವಿಧದಲ್ಲಿ, ಜರ್ಮನ್ ಸರಕಾರಕ್ಕೆ ವಿರುದ್ಧ ಚಟುವಟಿಕೆಗಳಾಗುತ್ತಿವೆಯೆಂದು ಸಂಶಯ ಬಂದರೆ ಸಾಕು, ಕೂಡಲೇ ಅಂತಹ ಕ್ರಾಂತಿಗೆ ಕಾರಣರಾದವರೆಂದು ಹಲವರನ್ನು ಬಂಧನದಲ್ಲಿ ಇಡಲಾಗುತ್ತದೆ ಜೆಕೊಸ್ಲವೇಕಿಯದ ರಾಷ್ಟ್ರೀಯ ಆಟಗಾರರ ಸಂಸ್ಥೆ, ಹಲವು ಪ್ರೊಫೆಸರರು, ಲೇಖಕರ ಮತ್ತು ಕಲಾವಿದರು ಇಂದು ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ ಅನೇಕ ರಾಷ್ಟ್ರೀಯ ಸಂಸ್ಥೆಗಳ ಹಣ ಆಸ್ತಿಗಳನ್ನು ಜರ್ಮನ್ ಸರಕಾರವು ಸ್ವಾಧೀನಮಾಡಿಕೊಂಡಿದೆ ಸಾವಿರಾರು ಮಂದಿ ರಾಷ್ಟ್ರಾಭಿಮಾನೀ ಯುವಕರನ್ನು ಕತ್ತಲು ಕೋಣೆಗೆ ತಳ್ಳಿರುವರು

### ಹೋರಾಟ

ಇಂತು ದರ್ಪದ ಪ್ರಾಬಲ್ಯವು ಮಿತಿಮೀರಿ ನಡೆಯುತ್ತಿದ್ದರೂ, ಅಲ್ಲಿನ ಜನರು ತಮ್ಮನ್ನು ಹತ್ತಿಕ್ಕುತ್ತಿರುವ ನಾಜೀ ಸರಕಾರಕ್ಕೆ ವಿರುದ್ಧ ಬಂಡಾಯವನ್ನು ಒಡದ ಎಬ್ಬಿಸುತ್ತಿದ್ದಾರೆ ಹಲವು ಕಡೆಗಳಲ್ಲಿ ಪ್ರಬಲ ಮುಷ್ಕರಗಳು ಆರಂಭವಾಗಿವೆ

ನಾಜೀ ಸರಕಾರವು ವಿದ್ಯಾಶಾಲೆಗಳಲ್ಲಿರುವ ಸ್ವಾತಂತ್ರ್ಯ ಪ್ರೇಮಿಗಳೆಂದ ಉಪಾಧ್ಯಾಯರನ್ನು ತೆಗೆದು, ಅವರ ಹೇಳಿದಂತೆ ಪಾಠಮಾಡುವವರನ್ನೇ ನೇಮಿಸಿದೆ ೩೦,೦೦೦ ಪುಸ್ತಕಗಳಿದ್ದ, ಜೆಕೊಸ್ಲೊವಾ ಸಾರ್ವಜನಿಕ ವಾಚನಾಲಯದಲ್ಲಿ ಇಂದು ಕೇವಲ ೨೭೬ ಪುಸ್ತಕಗಳು ಮಾತ್ರ ಇವೆ ಅನೇಕ ಸಿನೆಮಾ ಮಂದಿರಗಳನ್ನು ಮುಚ್ಚಲಾಗಿದೆ ಹೀಗಿದ್ದರೂ ಅಲ್ಲಿ ಸ್ವಾತಂತ್ರ್ಯದ ಅಭಿಮಾನವನ್ನು ಹುಟ್ಟಿಸುವ ಗ್ರಂಥಗಳನ್ನು ಪುಸ್ತಕ ಪ್ರಕಾಶಕರು ಪ್ರಕಟಿಸುತ್ತಲೇ ಇದ್ದಾರೆ ಕಳೆದ ಆರೇಳು ವರ್ಷಗಳಲ್ಲಿ ಜೆಕ್ಕರ ಉತ್ತಮ ರಾಷ್ಟ್ರೀಯ ಸಾಹಿತ್ಯ ಗ್ರಂಥಗಳು ಹೊಸ ಹೊಸ ಮುದ್ರಣಗಳನ್ನು ಕಾಣುತ್ತಿವೆ ಕವಿಗಳ ಜನತೆಯ ಹೃದಯವನ್ನು ಹೊಡೆದೆಬ್ಬಿಸುವ ಗೀತಗಳನ್ನು ಹಾಡುತ್ತಾರೆ ಗದ್ಯ ಲೇಖಕರು ಅನೇಕ ಪ್ರಾಚೀನ ಶೈಲಿಯಲ್ಲಿ ನಾಜಿಗಳ ದಪ್ರಭುತ್ವವನ್ನು ಖಂಡಿಸಿ ಬರೆಯುತ್ತಿದ್ದಾರೆ. ಆದರೆ ಅವರ ಹಲವು ಇಂದಿನ ಅದ್ಭುತ ಶುಭದಿನಗಳನ್ನು ಎದುರುನೋಡುತ್ತಾ, ಅವರ ಕಪಾಟುಗಳೊಳಗ ಭದ್ರವಾಗಿವೆ

### ಒಂದು ಸ್ವಾತಂತ್ರ್ಯ ಸಂದೇಶ

ನವೆಂಬರ ೧೯ರಂದು, ಜೆಕೊಸ್ಲೊವೇಕಿಯದ ಮಾಜಿ ಪ್ರೆಸಿಡೆಂಟರಾದ ಡಾ ಬೆನೆಸರವರು ಒಂದು ಮಹತ್ವವಾದ ಸ್ವಾತಂತ್ರ್ಯ ಸಂದೇಶವನ್ನು ಕೊಟ್ಟಿರುವರು 'ನಮ್ಮ ಕಾರ್ಯಗಳೇ ಮುಂದಕ್ಕೆ ಭವ್ಯ ಭವಿಷ್ಯದ ಸೌಭಾಗ್ಯವನ್ನು ನಿರ್ಮಿಸುವವು ಜೆಕೊಸ್ಲವೇಕಿಯ, ಪೋಲೆಂಡುಗಳಲ್ಲಿ ಜರ್ಮನಿಯು ಮಾಡುತ್ತಿರುವ ದುಷ್ಪ್ರಭುತ್ವವೇ ಅದರ ವಿನಾಶ ಮಾರ್ಗವನ್ನು ರಚಿಸುತ್ತಿದೆ ಮಾನವ ಜನತೆಗೆ ಮತ್ತು ಜಗತ್ತಿನ ಸಂಸ್ಕೃತಿಗೆ ಶತ್ರುವಾದ ನಾಜೀ ಶತ್ರುಪ್ರಭುತ್ವವನ್ನು ನಾವು ಬೇಗನೆ ಕೊನೆಗಾಣಿಸುವವು ಸಾವಿರಾರು ವರ್ಷಗಳಿಂದ ಕಾಪಾಡಿದ ಸ್ವಾತಂತ್ರ್ಯವನ್ನು ಜೆಕೊಸ್ಲವೇಕಿಯವು ಖಂಡಿತ ಮರಳಿ ಪಡೆಯದಿರಲಾರದ ರಾಷ್ಟ್ರದ ಪ್ರತಿಯೊಂದು ಮೂಲೆಯ ಜನರಿಗೂ ಈ ಸ್ವಾತಂತ್ರ್ಯದ ಸಂದೇಶವನ್ನು ಸಾರಿರಿ' ಎಂದು ಅವರ ಹೇಳಿಕೆಯ ಸಂದೇಶವಾಗಿತ್ತು

ಹೋದ ಸ್ವಾತಂತ್ರ್ಯವನ್ನು ಪಡೆಯಲು ಜೆಕೊಸ್ಲವೇಕಿಯದಲ್ಲಿ ಮರಳಿ ಕ್ರಾಂತಿಯು ಖಂಡಿತ ಮುಸುಗುವುದು

---


ಸಾಹುಕಾರ ಶ್ರೀನಿವಾಸರಂಗಪ್ಪೈ

[ ಸ್ಥಾಪನೆ: ಕ್ರಿ ಶ 1858 ]

**ಉಜ್ವಲ ಕಾಂತಿಯ**

# ವಜ್ರಗಳಿಗೆ

**ನೂಲು ಮತ್ತು ಕೈಮಗ್ಗದ ವಸ್ತುಗಳ**

**ಖಾತ್ರಿ ವ್ಯಾಪಾರಕ್ಕೆ**

**ಸಾಹುಕಾರ ಮಹಾಲ್, ಮಂಗಳೂರು.**



**The Auttur & Jawahar Bank, Limited.**

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು — ಬ್ರೇಂಚ್ ಸೆಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000 — ತೆರಲ್ಪಟ್ಟ ಮೂಲಧನ ರೂ 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು

ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% — ನಿರಖು ಠೇವಣಾತಿ 12 ತಿಂಗಳಿಗೆ 4½%

" 6 ತಿಂಗಳಿಗೆ 4% — " 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅತ್ತೂರು ವೈಕುಂಠ ಪ್ರಭು, ಮೆನೇಜಿಂಗ್ ಡೈರೆಕ್ಟರ್

**ಹುಷಾರ್**

ಮೋಟಾರನ್ನು ನಡೆಸುವುದಕ್ಕೆ ಎಷ್ಟೋ ಹುಷಾರಿರಬೇಕು ಸಮಯಕ್ಕೆ ಅನುಗುಣವಾಗಿ ಕಾರನ್ನು ಕ್ಷಣ ಮಾತ್ರದಲ್ಲಿ ಹತೋಟಿಗೆ ತರುವ ನಡೆಸುವಂಥ ನರಗಳ ಪಟುತ್ವವೂ, ಬಿಗಿಯಾದ ಜ್ಞಾಪಕಶಕ್ತಿಯೂ ತೀಕ್ಷ್ಣವಾದ ದೃಷ್ಟಿ ಪಾಟವವೂ ಒಂದು ಕ್ಷಣ ಮಾತ್ರದಲ್ಲಿ ಯೋಚನೆ ಮಾಡಿ ನಿರ್ಧರಿಸುವಂಥ ಚುರುಕಾದ ಮೆದುಳೂ ಅವಶ್ಯಕವಾಗಿ ಬೇಕು ಇವೆಲ್ಲವೂ ಒಂದು ಮೋಟಾರನ್ನು ನಡೆಸುವುದಕ್ಕೆ ಮಾತ್ರವೇ ಅಲ್ಲದೆ ಆನಂದಮಯವಾದ ಜೀವಯಾತ್ರೆಯನ್ನು ನಡೆಸುವುದಕ್ಕೂ ಅವಶ್ಯಕವೆ ಭಾರತದಲ್ಲೆಲ್ಲಾ ಅತ್ಯುತ್ತಮವಾದ ಟಾನಿಕ್ಕೆಂದು ಪ್ರಸಿದ್ಧಿ ಹೊಂದಿರುವ

**ಜೀವಾಮೃತ**

ಸ್ತ್ರೀಪುರುಷರೆಲ್ಲರಿಗೂ ಈ ಮಹತ್ತರವಾದ ಶಕ್ತಿಯನ್ನೂ, ದೇಹಾರೋಗ್ಯವನ್ನೂ ಉಂಟುಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ದೊರೆಯುವುದು

ತಯಾರಿಸುವವರು

**ಆಯುರ್ವೇದಾಶ್ರಮಂ ಮದ್ರಾಸು**

ಸ್ಥಳೀಯ ಏಜಂಟರು

**ಪೊಪ್ಯುಲರ್ ಸ್ಟೋರ್ಸ್**

ರಥಬೀದಿ — ಮಂಗಳೂರು



# ಜಿಲ್ಲಾ ಸಮಾಚಾರ

## ಮಂಗಳೂರು

**ಬೋಳೂರು ದ್ರಾವಿಡ ಬ್ರಾಹ್ಮಣರ ಸಂಘ ಮತ್ತು ಕನ್ನಾಟಕ ಸಭಾ:**—ಇವುಗಳ ವಾರ್ಷಿಕೋತ್ಸವಗಳು ಬೋಳೂರಲ್ಲಿ ಕಳೆದ ತಾ ೩ನೇ ಸಾಯಂ ೫ ಗಂಟೆಗೆ ನೆರವೇರಿದುವು. ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ನಿವೃತ್ತ ಕನ್ನಡ ಪಂಡಿತರಾದ ಬಿ. ಶ್ರೀ ಸಾಬಾಜಿ ಶ್ರೀನಿವಾಸಾಚಾರ್ಯರು ಅಗ್ರಾಸನ [illegible]ಸಿದ್ದರು.

**ದ. ಕ. ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ವಾರ್ಷಿಕೋತ್ಸವ:**—ದ ಕ ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ಮಹಾಸಭೆಯು ದಶಂಬರ ತಾ ೩೦, ೩೧ರಲ್ಲಿ ಜರಗಿತು. ತಾ ೩೧ನೇ ಬೆಳಿಗೆ ಶ್ರೀ ಕಲ್ಯಾಣಿ ಬ್ಯಾ ಶೇಷಪ್ಪಾಲರ ಅಧ್ಯಕ್ಷತೆಯಲ್ಲಿ ಸ್ತ್ರೀ ಸಮ್ಮೇಳನವು ನಡೆಯಿತು.

**ಮುನ್ಸಿಪಾಲ್ ಮಹಮ್ಮಡನ್ ಹಾಯರ್ ಎಲಿಮೆಂಟರಿ ಸ್ಕೂಲ್ ಮಂಗಳೂರು:**—ಈ ಶಾಲೆಯ ವಾರ್ಷಿಕೋತ್ಸವವು ಇದೇ ಜನವರಿ [illegible] ಕದೇ [illegible] ಜರಗುವುದು. ಸ್ಕೂಲ್ ಡೇ ಕಮಿಟಿಯು [illegible] ಹಳೆ ವಿದ್ಯಾರ್ಥಿ ಸಂಘ ಸ್ಥಾಪನೆಯೂ ಇನ್ನುಳ್ಳ [illegible] ವಿಷಯವು ಬಹು ಶ್ಲಾಘ್ಯನೀಯವೇ ಸರಿ. 'ಸ್ಕೂಲ್ ಡೇ' ಕಮಿಟಿಗೆ ಸ್ಥಳೀಯ ಮುನ್ಸಿಪಾಲ್ ಕೌನ್ಸಿಲರ್ ಜನಾಬ್ ಎ ಮೂಸಬ್ಬಾ ಸಾಹೇಬ್ [illegible] ಅಧ್ಯಕ್ಷರಾಗಿರುವರು.

ಈ ಶಾಲಾ ಮುಖ್ಯೋಪಾಧ್ಯಾಯರೂ, ಸಹಾಯಕ ಉಪಾಧ್ಯಾಯರೂ ಪರಸ್ಪರ ಮಮತೆಯಿಂದಲೂ ಐಕ್ಯದಿಂದಲೂ ಬಹಳ ಶ್ರಮವಹಿಸಿ ಕೆಲಸ ನಡಿಸುತ್ತಿರುವ ಸಂಗತಿಯು ಬಹಳ ಸಂತೋಷದಾಯಕವಿರುತ್ತದೆ.

ಹಳೆ ವಿದ್ಯಾರ್ಥಿ ಸಂಘದವರು ಮುಸ್ಲಿಂ ಲೋಕೋಪಯೋಗಿಯಾಗಿರುವ ಸರ್ವ ಮುಸ್ಲಿಂ ವಿದ್ಯಾರ್ಥಿಗಳನ್ನು ಶಾಲೆಗೆ ಹಾಜರಾಗುವಂತೆ, ಸರ್ವ ಪ್ರಯತ್ನಗಳನ್ನು ಮಾಡ ಪರೆಂಬುದು [illegible] ವಿಷಯವೇ ಆಗಿದೆ. ಸ್ಕೂಲ್ ಡೇ ಕಮಿಟಿಯವರೇ ಬಡ ವಿದ್ಯಾರ್ಥಿಗಳಿಗೆ ಬೇಕಾದ ಸ್ಲೇಟು, ಪುಸ್ತಕ, ವಗೈರೆ ಸಹಾಯಗಳನ್ನು ಕೊಡುವ ಆಲೋಚನೆ ಮಾಡುತ್ತಿರುವರೆಂದು ತಿಳಿಯಿತು.

**ಜನ್ಮಟಾಪು:**—ಬಪ್ಪನಾಡು ಗ್ರಾಮದ ಐತಪ್ಪ ಪೂಜಾರಿ ಎಂಬವನು ತನ್ನ ಮೊದಲನೇ ಹೆಂಡತಿ ರಾಮು ಎಂಬವಳನ್ನು ಕತ್ತಿಯಿಂದ ಕಡಿದು ಖೂನಿಮಾಡಿ ಅವಳ ಶವವನ್ನು ಅದೇ ಗ್ರಾಮದ ಕಟ್ಟೆಸಂಗಡಿ ಸಮೀಪ ಹೊಳೆಗೆ ತಾ ೯೪-೧೦-'೩೯ನೇ ಬೆಳಿಗ್ಗೆ ಸುಮಾರು ೮ ಘಂಟೆಗೆ ಬಿಸಾಡಿದ್ದನಾಗಿ ಆತನ ಮೇಲೆ ಇ. ಪಿ. ಕೋಡಿನ ೩೦೨ ಕಲಂ ಪ್ರಕಾರ ಮೊಕದ್ದಮೆಯಾಗಿತ್ತು. ರಾಮುವನ್ನು ಆಲೆಯು ಮದುವೆಯಾಗಿ ಸುಮಾರು ೫ ವರ್ಷ ನಂತರ ಆಕೆಯನ್ನು ಬಿಟ್ಟು ಬಿಡಲು ಆಕೆಯು ಪುನಃ ಪರಮೇಶ್ವರ ಎಂಬವನನ್ನು ಮದುವೆಯಾಗಿ ಅವನೊಟ್ಟಿಗೆ ಇರುತ್ತಿದ್ದಳು. ಆಲೆಯ ಅಪೇಕ್ಷೆಗೆ ವಿರೋಧವಾಗಿ ಆಕೆಯು ಯಾವಾಗಲೂ ಆತನ ಮನೆ ಸಮೀಪವಾಗಿ ಅವಳು ತನ್ನ ಗಂಡನ ಮನೆಯಿಂದ ತಾಯಿಯ ಮನೆಗೆ ಹೋಗುತ್ತಾ ಇದ್ದ ಕಾರಣ ಆಲೆಯು ಸಿಟ್ಟುಗೊಂಡು ಆಕೆಯನ್ನು ಕಡಿದು ಕೊಂದದ್ದಾಗಿ ಆವನ ಮೇಲಿನ ಮೊಕದ್ದಮೆಯಾಗಿತ್ತು. ಆಲೆಯು ತಾನು ಆ ದಿವಸ ಅಲ್ಲಿ ಇರಲಿಲ್ಲವಾಗಿಯೂ ತಾನು ತಪ್ಪಿತಸ್ಥನಲ್ಲವಾಗಿಯೂ ಹೇಳಿಕೆ ಕೊಟ್ಟಿದ್ದನು. ೪ ಜನ ಎಸೆಸರರು ಆಲೆಯು ತಪ್ಪಿತಸ್ಥನೆಂತ ಅಭಿಪ್ರಾಯ ಪಟ್ಟಿದ್ದರು. ಅವರ ಅಭಿಪ್ರಾಯವನ್ನು ಅಂಗೀಕರಿಸಿ ಮಂಗಳೂರು ಸೆಶ್ಶನ್ ಜಡ್ಜರಾದ ಶ್ರೀ ಪಿ ರಾಜಗೋಪಾಲಾಚಾರ್ಯರು ತಾ [illegible]ರಲ್ಲಿ ಆಲೆಯನ್ನು ಜನ್ಮಟಾಪಿನ ಶಿಕ್ಷೆಗೆ ಗುರಿಪಡಿಸಿದರು.

ಆಲೆಯ ಕಡೆಯಿಂದ ಕೋರ್ಟಿನಿಂದ ನೇಮಿಸಲ್ಪಟ್ಟ ಶ್ರೀ ಬಿ ನರಸಿಂಗರಾಯರು ವ್ಯವಹರಿಸಿದ್ದರು.

**ಎಯಿಡೆಡ್ ಎಲಿಮೆಂಟರಿ ಶಾಲಾ:** ಮಂಗಳೂರು ತಾಲೂಕು ಏಯಿಡೆಡ್ ಎಲಿಮೆಂಟರಿ ಶಾಲಾ [illegible] ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯೊಂದು ಕಳೆದ ಆದಿತ್ಯವಾರ ಕೋರ್ಡೆಲ್ [illegible] ಎಲಿಮೆಂಟರಿ ಶಾಲೆಯಲ್ಲಿ ಶ್ರೀ [illegible] ಗೋವಿಂದ [illegible] ಅಧ್ಯಕ್ಷತೆಯಲ್ಲಿ ಜರುಗಿತು. ಎಲಿಮೆಂಟರಿ ವಿದ್ಯಾಭ್ಯಾಸದ ವಿಷಯದಲ್ಲಿ ತಯಾರಿಸಲಾದ [illegible] ಚರ್ಚಿಸಿ [illegible] ಹಾಗೂ [illegible] ಕ್ರಮವಾಗಿ [illegible] ಮಕ್ಕಳ ಆರೋಗ್ಯ ಕೆಡಬಹುದೆಂದೂ [illegible] ಸರಕಾರವನ್ನು ಕೇಳಲು [illegible] ಶಾಲೆಗಳಲ್ಲಿ [illegible] ವಿದ್ಯಾರ್ಥಿಗಳ [illegible] ಅದನ್ನು ಕೂಡ ವಿದ್ಯಾಭ್ಯಾಸದ [illegible] ಮಾಡಲಾಗಬೇಕೆಂದು ಸರಕಾರವನ್ನು ವಿನಂತಿಸಲು ನಿರ್ಣಯಿಸಿತು.

**ಕನ್ನಡ ಸೇವಾ ಸಂಘ, ಅಮ್ಮೆಂಬಳ**—ಈ ಸಂಘದ ದ್ವಿತೀಯ ವರ್ಷದ ವಾರ್ಷಿಕೋತ್ಸವವು ತಾ [illegible]ನೇ ಶನಿವಾರ ಸಾಯಂಕಾಲ [illegible] ಗಂಟೆಗೆ [illegible] ಅಮ್ಮೆಂಬಳ ಸೋಮನಾಥ ಸಂಸ್ಕೃತ ಪಾಠಶಾಲೆಯ ಸಮೀಪ ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನ ಕನ್ನಡದ ಪ್ರಧಾನ ವ್ಯಾಸಕರಾದ ಶ್ರೀ ಮಾಸ್ ಮುಳಿಯದ ತಿಮ್ಮಪ್ಪಯ್ಯನವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ನೆರವೇರಲಿದೆ. ಅಧ್ಯಕ್ಷರು ಯಕ್ಷಗಾನ ವಾಲ್ಮೀಕಿ ಪಾರ್ತಿ ಸುಬ್ಬನ ವಿಷಯ ವಿದ್ವತ್ಪೂರ್ಣ ಭಾಷಣ ನೆಸಗಲಿರುವರು. ಅಂದೇ ರಾತ್ರಿ ಶ್ರೀಯುತರುಗಳಾದ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ದೇ. ಭ. ನಾರಾಯಣ ಕಿಲ್ಲೆ, ಎಡ್ವಕೇಟ್ ಕೆ ಬಾಲಕೃಷ್ಣರಾವ್, ಬಳ್ಳಮಜಲು ರಂಗಪ್ಪಯ್ಯ, ಕುರ್ಯ ಶಂಕರ ಭಟ್ಟರು, ಡಾ। ಎಫ್ ಯಚ್. ಒಡೆಯರ್, ಎಂ. ಆರ್. ಶಾಸ್ತ್ರಿ, ಪಿ ಯಚ್. [illegible]ಮಹೇಶ್ವರ ಭಟ್ಟ ಮೊದಲಾದವರ ಕೂಡುವಿಕೆಯಿಂದ "ಸುಭದ್ರಾ ಕಲ್ಯಾಣ" ಪ್ರಸಂಗದ ಯಕ್ಷಗಾನ ತಾಳಮದ್ದಳೆಯು ಜರಗುವುದು. ಸರ್ವರಿಗೂ ಸುಸ್ವಾಗತವಿದೆ! ಎಂದು ಆದರ ವ್ಯವಸ್ಥಾಪಕರು ತಿಳಿಸುತ್ತಾರೆ.

## ಉಡುಪಿ

**ಶ್ರೀ [illegible]ಅದ್ಮಾರುಸ್ವಾಮಿಗಳವರ ಮಠ ಪ್ರವೇಶ:**—ಶ್ರೀ ಕೃಷ್ಣ ಸನ್ನಿಧಾನದ ಪರ್ಯಾಯ ಪೀಠವನ್ನು ಸದ್ಯಕ್ಕೆ ಅಲಂಕರಿಸಲಿರುವ ಶ್ರೀ ಅದ್ಮಾರು ಮಠದ ಶ್ರೀ ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರು ಕಳೆದ ತಾ [illegible]ರಲ್ಲಿ ಕಾಸರಗೋಡು ತಾಲೂಕಿನ ಎಡನೀರು ಮಠದ ಶ್ರೀ ಈಶ್ವರಾನಂದ ಭಾರತೀ ಸ್ವಾಮಿಗಳ ಆಮಂತ್ರಣವನ್ನು ಸ್ವೀಕರಿಸಿ ಅಲ್ಲಿಗೆ ಚಿತ್ತೈಸಿದ್ದರು. ತಾ [illegible]ರಲ್ಲಿ ಶ್ರೀ ಈಶ್ವರಾನಂದ ಭಾರತಿ ಸ್ವಾಮಿಗಳವರಿಂದ ಸತ್ಕೃತರಾಗಿ ಅಲ್ಲಿಂದ ಶ್ರೀಗಳವರು ಪರಿವಾರ ಸಮೇತ ತಾ [illegible]ರಲ್ಲಿ ತಮ್ಮ ಮಠ ಪ್ರವೇಶಮಾಡಿದರು.

**ಸಪ್ತೋತ್ಸವ ಪರ್ಯಾಯದ ಭಾರ:**—ಶ್ರೀ ಕೃಷ್ಣ ಮಠದ ಸಪ್ತೋತ್ಸವವು ಇದೇ ತಾ [illegible]ರಲ್ಲಿ ಆರಂಭವಾಗುವುದು. ಮಹಾರಥೋತ್ಸವ [illegible] ಚೂರ್ಣೋತ್ಸವ—ಅವಭೃತಸ್ನಾನಾದಿಗಳು ತಾ [illegible] ಮತ್ತು [illegible]ರಲ್ಲಿಯೂ ಪರ್ಯಾಯ ಪೀಠದಿಂದಿಳಿಯುವ ಶ್ರೀ ಫಲಿಮಾರು ಸ್ವಾಮಿಗಳವರ ಮಹಾ ಸಂತರ್ಪಣೆಯು ತಾ [illegible]ನೇ ಬೆಳಿಗೆ [illegible] ನಡೆಯುವುವು. ಶ್ರೀ ಮಧ್ವನವಮಿ ಮಹೋತ್ಸವವು [illegible]ರಲ್ಲಿ ನಡೆಯುವುದು.

ಉಡುಪಿ ಪರ್ಯಾಯ ವಸ್ತು ಪ್ರದರ್ಶನದ ಉದ್ಘಾಟನಾ ಸಮಾರಂಭವು [illegible] ತಾ [illegible] ನೇ ಸೋಮವಾರ ಸಾಯಂಕಾಲ [illegible] ಗಂಟೆಗೆ [illegible] ವರ್ನಮೆಂಟ್ ಆಸ್ಪತ್ರೆಯ ಹಿಂದುಗಡೆಯ ಕಂಪೌಂಡಿನಲ್ಲಿ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗಡೆ ಎಮ್ ಎಲ್ ಸಿ ಇವರ ಹಸ್ತದಿಂದ ನೆರವೇರಿತು.

**ಶಿರ್ವಾ:** ತಾ [illegible]ನೇ ಸೋಮವಾರ [illegible] ಪಂಚಾಯ್ತಿ ಬೋರ್ಡ ಮೀಟಿಂಗು ಪ್ರಸಿಡೆಂಟರಾದ ಶ್ರೀ ಎಸ್ ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಪಂಚಾಯ್ತಿ ಬೋರ್ಡ ಆಫೀಸಿನಲ್ಲಿ ಜರಗಿತು. ಪಂಚಾಯ್ತ್ ಜನರಲ್ ವಗೈರೆ ಸರ್ಕ್ಯುಲರು [illegible]ಗಳನ್ನು ರಿಕಾರ್ಡ ಮಾಡಿದ ನಂತರ [illegible] ವಿರುದ್ಧ ಮೃತಪಟ್ಟವರನ್ನು [illegible] ದಂಡ [illegible] ಮಾಡಲಾಯಿತು. ಇದ್ದ [illegible] ತಿಂಗಳ [illegible] ಸರ್ವೆ ಇದ್ದ [illegible] ಸರ್ವೆ ಕೆಲಸಕ್ಕೆ ಸಿಬ್ಬಂದಿ [illegible] ಮುಕ್ತಾಯ ಮಾಡಲಾಯಿತು. ಪಂಚಾಯ್ತಿ ಬೋರ್ಡ ಆಫೀಸ್ ಕಟ್ಟೋಣದ ಬಗ್ಗೆ ಮತ್ತು ಶಿರ್ವಾದಿಂದ ಬೆಳ್ಳೆ, ಬೈಲೂರು ಅತ್ತಕಡೆ ಹೋಗುವ ರಸ್ತೆ ರಿಪೇರಿ ಬಗ್ಗೆ ಕೂಡ ಎಸ್ಟಿಮೇಟು ತಯಾರಿಸಿ ಕೊಡುವರೆ ಸಮ್ಮಂಧ ಪಟ್ಟವರಿಗೆ ಬರಕೊಳ್ಳಲಾಯಿತು. [illegible] ತೋಡಿಗೆ ಸಂಕ ಕಟ್ಟಿಸುವರೆ [illegible] ಮಂಜೂರ ಮಾಡಲಾಯಿತು. ಗ್ರಾಮದಲ್ಲಿರುವ ಪ್ರತಿ ತೋಡುಗಳಿಗೆ ಸಂಕ ಕಟ್ಟಿಸಿ [illegible] ಬೋರ್ಡಿನವರು ಉದ್ಯೋಗಿಸುತ್ತಿರುವುದು ತುಂಬಾ ಸಂತೋಷದ ಸಂಗತಿ.

## ಕುಂದಾಪುರ

**ಖಿಲಖಿದ ಕೆಲ್ಲೋಣ:**—ಇಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಪಂಚಾಯಿತ್ ಬೋರ್ಡಿನ ಅಧ್ಯಕ್ಷ ವ ಉಪಾಧ್ಯಕ್ಷರ ಚುನಾವಣೆಯು ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ದಶಂಬರ ತಾ [illegible]ರಲ್ಲಿ ನಡೆದು ಶ್ರೀ ಕೃಷ್ಣಕಾಮತರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆದು ಶೆಡ್ಯೂಲ್ಡ್ ಕ್ಲಾಸ್ ಪಂಗಡದವರಾದ ಶ್ರೀ ಹಳಗೇರಿ ಮುದೂರನವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ನಮ್ಮ ಜಿಲ್ಲೆಯ ಪಂಚಾಯಿತ್ ಬೋರ್ಡುಗಳಲ್ಲಿ ಇಂಥಾ ಗೌರವ ಸ್ಥಾನವನ್ನು ಹರಿಜನರು ಪಡೆದುದು ಇದೇ ಪ್ರಥಮ ಸಾರಿ.

## ಕಾರ್ಕಳ

**ಹಿಂದೂ ಸಂಘಟನೆ:**—ತಾ [illegible] ದಿನ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಮ್. ಸರ್ವೋತ್ತಮ ಕಾಮತರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಕೂಡಿ ಶ್ರೀ ಟಿ ವಾಸುದೇವ ಶೆಣೈಯವರು ಹಿಂದುಗಳು ಸಂಘಟಿತರಾಗಬೇಕಾದ ಆವಶ್ಯಕತೆಯ ಕುರಿತು ಭಾಷಣವನ್ನಿತ್ತರು. ಆ ಮೇಲೆ ಶ್ರೀ ಕೆ ಸುಬ್ಬರಾಯರು ಅಧ್ಯಕ್ಷರಾಗಿ ಹಿಂದೂ ಮಹಾಸಭೆಯ ಒಂದು ಶಾಖೆಯು ಇಲ್ಲಿ ಸ್ಥಾಪಿತವಾಯಿತು.

**ವಿದ್ಯಾರ್ಥಿಗಳ ಹಸ್ತ ಪತ್ರಿಕೆ:**—ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯ [illegible] ತರಗತಿಯ ಮಕ್ಕಳು ನಡೆಸಿಕೊಂಡು ಬರುವ [illegible] ಎಂಬ ದ್ವೈಮಾಸಿಕ ಹಸ್ತ ಪತ್ರಿಕೆಯನ್ನು ನೋಡಿ ಈ ರೇಂಜಿನ ಇನ್ಸ್‌ಪೆಕ್ಟರ ಶ್ರೀ ಜಿ. ವಿ. ವೆಂಕಟರಮಣರವರು ತುಂಬಾ ಪ್ರಶಂಸಿಸಿರುವರು.

**ಉಪಾಧ್ಯಾಯರ ಸಂಘ:** ಕಾರ್ಕಳ ರೇಂಜಿನ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಈ ತಿಂಗಳ ಸಭೆಯು [illegible] ದಿನ ಈ ರೇಂಜಿ ಡೆಪ್ಯುಟಿ ಇನ್ಸ್‌ಪೆಕ್ಟರ ಶ್ರೀ ಜಿ ವಿ [illegible] ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ, ವರದಿವಾಚನಗಳಾದ ಬಳಿಕ ಶ್ರೀ ಲೋರೆನ್ಸ್ ಲೋಬೋರವರು [illegible] ಮನಶಾಸ್ತ್ರವನ್ನೂ ಶ್ರೀ ಕೆ ಟಿ [illegible] ನಂತೃಭಾಷೆಯಲ್ಲಿ ಶಿಕ್ಷಣ ಕ್ರಮದ ಕುರಿತು ಭಾಷಣವನ್ನೂ ಕೊಟ್ಟರು. ವಾರ್ಷಿಕೋತ್ಸವ [illegible] ದಿನವನ್ನಾಚರಿಸುವ ಕುರಿತು ಒಂದು ಸಮಿತಿಯನ್ನು ನಿರ್ಮಿಸಿದ ಬಳಿಕ ಅಧ್ಯಕ್ಷ ಭಾಷಣದಿಂದ ಸಭೆ ಮುಗಿಯಿತು.

## ಕಾಸರಗೋಡು

**ವಸಿಷ್ಠಾಶ್ರಮ:**—ಶ್ರೀ ವಸಿಷ್ಠಾಶ್ರಮ ಸಂಘದ ವಾರ್ಷಿಕ ಮಹಾಸಭೆಯು ಇದೇ ಜನವರಿ [illegible]ನೇ ಶ್ಯಾಮ [illegible] ಗಂಟೆ ತಕ್ಕೆ ವಸಿಷ್ಠಾಶ್ರಮ ಸಂಸ್ಕೃತ ಶಾಲೆಯಲ್ಲಿ ಜರಗುವುದು.

## ಪುತ್ತೂರು

**ಗೋಳಿ ತಟ್ಟು: ಹುಲಿಗಳ ಹಾವಳಿ**— ಇತ್ತೀಚೆಗೆ ಒಂದು ವಾರದಿಂದ ಹುಲಿಗಳ ಹಾವಳಿಯು ವಿಪರೀತವಾಗಿದೆ. ಅನೇಕ ಜಾನುವಾರುಗಳನ್ನು ಹುಲಿಗಳು ಕೊಂದಿವೆ.


# ತಯಾರಾಗಿವೆ!

## 1940ನೇ ಇಸವಿಯ

## ಶಾರದಾ ಡೈರಿಗಳು

ಸಣ್ಣ ಮತ್ತು ದೊಡ್ಡ ಸೈಜುಗಳಲ್ಲಿ

ಈಗಾಗಲೇ ಮಾರಾಟಕ್ಕೆ ಸಿದ್ಧವಾಗಿವೆ!

ದೊರೆಯುವ ಸ್ಥಳ:—

ಶಾರದಾ ಛಾಪಖಾನೆ,

ಮಂಗಳೂರು.

# ಚೆಕೊಸ್ಲವೇಕಿಯದಲ್ಲಿ ಕ್ರಾಂತಿ ಮಸಗಲಿದೆ!

## — ಚೆಕ್ಕರು ಸ್ವಾತಂತ್ರ್ಯ ವೀರರು —

ಡಾ. ಬೆನೆಸರು

ನಾಜೀ ಸರಕಾರದ ದುರಂತ ಪ್ರಭುತ್ವದ ಪದಹತಿಯಲ್ಲಿ ಇಂದು, ಹಲವು ಸ್ವತಂತ್ರ ರಾಷ್ಟ್ರಗಳು ಸಂಕಷ್ಟಪಡುತ್ತಿವೆ. ಆದರೆ ಆ ರಾಷ್ಟ್ರಗಳ ಸ್ವಾತಂತ್ರ್ಯಧನರಾದ ವೀರಪ್ರಜೆಗಳ ಹೃದಯಗಳನ್ನು ಯಾರಿಗೂ ಎಂದೆಂದಿಗೂ ಗೆಲ್ಲಲು ಸಾಧ್ಯವಾಗಲಾರದು. ಪ್ರಪಂಚದ ಭೂಪಟವನ್ನು ತೆರೆದು ನೋಡಿದವನಿಗೆ ಚೆಕೊಸ್ಲೊವೇಕಿಯವು ಯೂರೋಪಿನ ಹೃದಯಸ್ಥಾನದಲ್ಲಿ ಇದೆಯೆಂಬ ವಿಷಯವು ಚೆನ್ನಾಗಿ ನಿವೇದಿತವಾಗುವುದು. ಹೀಗಿರುವುದರಿಂದ, ಚರಿತ್ರೆಯಲ್ಲಿ ಘಟನೆಗಳು ಆರಂಭವಾದ ಮೇಲೆ, ಯೂರೋಪಿನಲ್ಲಿ ಉಂಟಾದ, ಎಲ್ಲಾ ಬಗೆಯ ಆಂದೋಲನ, ಕೋಲಾಹಲಗಳ ಕೇಂದ್ರದಲ್ಲಿ, ಈ ರಾಷ್ಟ್ರವು ಸಂಸ್ಕೃತಿಯಲ್ಲಿ, ಆರ್ಥಿಕ ಸ್ಥಿತಿಯಲ್ಲಿ ಅನೇಕ ವಿಧಗಳ ಹೋರಾಟಗಳಲ್ಲಿ ಸಿಲುಕಿ, ತನ್ನ ನೇತಾರರನ್ನು ಆ ಸಂದರ್ಭಗಳಲ್ಲಿ ಚೆಲ್ಲಿ, ಪ್ರತಿಷ್ಠೆಯನ್ನು ಕಾಪಾಡಿಕೊಂಡಿದೆ; ಸ್ವಾತಂತ್ರ್ಯವನ್ನು ಉಳಿಸಿಕೊಂಡಿದೆ. ಕಳೆದ ಸತ್ತಿಪ್ಪತ್ತು ಶತಮಾನಗಳಿಂದ ಇಲ್ಲಿ ಅನವರತ ಹೋರಾಟ ನಡೆದೇ ಇದ್ದುವು.

### ಹೊಸ ರಾಷ್ಟ್ರವಲ್ಲ

ಆದರೆ ಸ್ವಾತಂತ್ರ್ಯವು ಏನೂ ಹೊಸದಲ್ಲ. ... ಚೆಕ್ಕರು ಇಪ್ಪತ್ತು ವರ್ಷಗಳ ತಮ್ಮ ಸ್ವಾತಂತ್ರ್ಯದ ಉತ್ಸವವನ್ನು ಆಚರಿಸಿದ್ದರು. ಈ ರಾಷ್ಟ್ರ ಮತ್ತು ಜನಾಂಗಗಳು, ರೋಮಿಗಿಂತ ಹಿಂದಿನದು. ವಿಲಿಯಮ್ಮನ ರಾಷ್ಟ್ರಕ್ಕಿಂತ ಹಳೆಯದು. ೬೦೦ ವರ್ಷಗಳ ಹಿಂದೆಯೇ ಇಲ್ಲಿ ವಿಶ್ವವಿದ್ಯಾನಿಲಯವೊಂದು ಸ್ಥಾಪಿತವಾಗಿತ್ತು.

ರಷ್ಯದ ಕ್ರಾಂತಿಯು ಚೆಕ್ಕರಲ್ಲಿ ಪ್ರಬಲ ಪರಿಣಾಮವನ್ನು ಹುಟ್ಟಿಸಿತು. ಬಹಳ ಸಾಹಿತ್ಯ ಗ್ರಂಥಗಳು ಹುಟ್ಟಿದುವು. ಬೇಸಾಯಗಾರರೂ, ಕೂಲಿಗಾರರೂ, ಸರ್ವಸಾಮಾನ್ಯರಾದ ಜನರೂ ಕೂಡಾ, ಆ ಕ್ರಾಂತಿಯ ಕಾಲದಲ್ಲಿ ಎಚ್ಚರಗೊಂಡು ಹೋರಾಡಿದರು. ಇತ್ತೀಚೆಗೆ ಅಲ್ಲಿ ಬಹಳ ಸುಧಾರಣೆಗಳು ಆಗಿವೆ. ೬೦೦ ವರ್ಷಗಳ ಹಿಂದೆಯೇ ಸ್ಥಾಪಿತವಾದ ಪ್ರೇಗ್ ವಿಶ್ವವಿದ್ಯಾನಿಲಯವು ತಿರುಗಿ ಪುನರುದ್ಧಾರವಾಗಿದೆ. ಪ್ರಪಂಚದ ಚರಿತ್ರೆಯಲ್ಲಿ, ಇಷ್ಟು ಸಣ್ಣ ರಾಷ್ಟ್ರವು ಇಷ್ಟೊಂದು ಸಾಹಸ ಪರಾಕ್ರಮಗಳನ್ನು ಮಾಡಿದ ನಿದರ್ಶನವು ಬೇರೆ ಎಲ್ಲಿಯೂ ನಾವು ಕಾಣುವಂತಿಲ್ಲ.

### ನಾಜಿಗಳ ಪದಹತಿಯಲ್ಲಿ

ಕಳೆದ ಮಹಾಯುದ್ಧದ ಸಮಯದಲ್ಲಿ, ಚೆಕ್ಕರು ಮತ್ತು ಸ್ಲೊವೇಕಿಯರು ಹೇಗೆ ತಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಅವಿರತ ಹೋರಾಟ ಮಾಡಿದರು, ಮತ್ತು ಹೇಗೆ ಅವರು, ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ. ಇಂತಹ ಅಪ್ರತಿಮ ಪರಾಕ್ರಮಿಗಳು, ಈಗ ಜರ್ಮನಿಯ ನಾಜೀ ಸರಕಾರದ ಪದಹತಿಯಲ್ಲಿ ತುಳಿಯಲ್ಪಟ್ಟವರಾಗಿ ತಿರಿಗಿ ಈಗ ಹೇಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ, ಹೇಗೆ ಅದನ್ನು ಸಾಧಿಸಲು ಕ್ರಾಂತಿಯು ಅಲ್ಲಿ ಮಸಗುವಂತಿದೆಯೆಂಬುದು ತಿಳಿಯಬೇಕಾದ ವಿಷಯವಾಗಿದೆ.

ಪ್ರೇಗಿನಲ್ಲಿ ಯಾವುದೇ ವಿಧದಲ್ಲಿ, ಜೆರ್ಮನ್ ಸರಕಾರಕ್ಕೆ ವಿರುದ್ಧ ಚಟುವಟಿಕೆಗಳಾಗುತ್ತಿವೆಯೆಂದು ಸಂಶಯ ಕಂಡರೆ ಸಾಕು, ಕೂಡಲೇ ಅಂತಹ ಕ್ರಾಂತಿಗೆ ಕಾರಣರಾದವರೆಂದು ಹಲವರನ್ನು ಬಂಧನದಲ್ಲಿ ಇಡಲಾಗುತ್ತದೆ. ಚೆಕೊಸ್ಲವೇಕಿಯದ ರಾಷ್ಟ್ರೀಯ ಆಟಗಾರರ ಸಂಸ್ಥೆ, ಹಲವು ಪ್ರೊಫೆಸರರು, ಲೇಖಕರು ಮತ್ತು ಕಲಾವಿದರು ಇಂದು ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ. ಅನೇಕ ರಾಷ್ಟ್ರೀಯ ಸಂಸ್ಥೆಗಳ ಹಣ, ಆಸ್ತಿಗಳನ್ನು ಜರ್ಮನ್ ಸರಕಾರವು ಸ್ವಾಧೀನಮಾಡಿಕೊಂಡಿದೆ. ಸಾವಿರಾರು ಮಂದಿ ರಾಷ್ಟ್ರಾಭಿಮಾನೀ ಯುವಕರನ್ನು ಕತ್ತಲು ಕೋಣೆಗೆ ತಳ್ಳಿರುವರು.

### ಹೋರಾಟ

ಇಂತು ದರ್ಪದ ಪ್ರಾಬಲ್ಯವು ಮಿತಿ ಮೀರಿ ನಡೆಯುತ್ತಿದ್ದರೂ, ಅಲ್ಲಿನ ಜನರು ತಮ್ಮನ್ನು ಹತ್ತಿಕ್ಕುತ್ತಿರುವ ನಾಜೀ ಸರಕಾರಕ್ಕೆ ವಿರುದ್ಧ ಬಂಡಾಯವನ್ನು ಬಿಡದೆ ಎಬ್ಬಿಸುತ್ತಿದ್ದಾರೆ. ಹಲವು ಕಡೆಗಳಲ್ಲಿ ಪ್ರಬಲ ಮುಷ್ಕರಗಳು ಆರಂಭವಾಗಿವೆ.

ನಾಜೀ ಸರಕಾರವು ವಿದ್ಯಾಶಾಲೆಗಳಲ್ಲಿರುವ ಸ್ವಾತಂತ್ರ್ಯ ಪ್ರೇಮಿಗಳಾದ ಉಪಾಧ್ಯಾಯರನ್ನು ತೆಗೆದು, ಅವರು ಹೇಳಿದಂತೆ ನಾಟಕವಾಡುವವರನ್ನೇ ನೇಮಿಸಿದೆ. ೩೦,೦೦೦ ಪುಸ್ತಕಗಳಿದ್ದ, ಜೆಕೊಸ್ಲವಾಕ ಸಾರ್ವಜನಿಕ ವಾಚನಾಲಯದಲ್ಲಿ ಇಂದು ಕೇವಲ ೩೦೦ ಪುಸ್ತಕಗಳು ಮಾತ್ರ ಇವೆ! ಅನೇಕ ಸಿನಿಮಾ ಮಂದಿರಗಳನ್ನು ಮುಚ್ಚಲಾಗಿದೆ. ಹೀಗಿದ್ದರೂ ಅಲ್ಲಿ ಸ್ವಾತಂತ್ರ್ಯದ ಅಭಿಮಾನವನ್ನು ಹುಟ್ಟಿಸುವ ಗ್ರಂಥಗಳನ್ನು ಪುಸ್ತಕ ಪ್ರಕಾಶಕರು ಪ್ರಕಟಿಸುತ್ತಲೇ ಇದ್ದಾರೆ. ಕಳೆದ ಆರೇಳು ವರ್ಷಗಳಲ್ಲಿ ಚೆಕ್ಕರ ಅತ್ಯುತ್ತಮ ರಾಷ್ಟ್ರೀಯ ಸಾಹಿತ್ಯ ಗ್ರಂಥಗಳು ಹೊಸ ಹೊಸ ಮುದ್ರಣಗಳನ್ನು ಕಾಣುತ್ತಿವೆ. ಕವಿಗಳು, ಜನತೆಯ ಹೃದಯವನ್ನು ಹೊಡೆದೆಬ್ಬಿಸುವಂತಹ ಹಾಡುಗಳನ್ನು ಹಾಡುತ್ತಾರೆ. ಗದ್ಯ ಲೇಖಕರು ಆವೇಶಪೂರ್ಣ ಶೈಲಿಯಲ್ಲಿ ನಾಜಿಗಳ ದುಷ್ಪ್ರಭುತ್ವವನ್ನು ಖಂಡಿಸಿ ಬರೆಯುತ್ತಿದ್ದಾರೆ. ಆದರೆ ಅವರ ಹಲವು ಇಂದಿನ ಅದ್ಭುತ ಪ್ರಚಂಡ ಸಾಹಿತ್ಯ ಕೃತಿಗಳು ಇಂದು ಪ್ರಕಾಶವಾಗಲು ಅವಕಾಶವಿಲ್ಲದೆ ಶುಭದಿನಗಳನ್ನು ಎದುರುನೋಡುತ್ತಾ ಅವರ ಕವಾಟುಗಳೊಳಗೆ ಭದ್ರವಾಗಿವೆ.

### ಒಂದು ಸ್ವಾತಂತ್ರ್ಯ ಸಂದೇಶ

ಸಪ್ಟೆಂಬರ ೧೯ರಂದು, ಚೆಕೊಸ್ಲೊವೇಕಿಯದ ಮಾಜಿ ಪ್ರೆಸಿಡೆಂಟರಾದ ಡಾ. ಬೆನೆಸರವರು ಒಂದು ಮಹತ್ವವಾದ ಸ್ವಾತಂತ್ರ್ಯ ಸಂದೇಶವನ್ನು ಕೊಟ್ಟಿರುವರು: 'ನಮ್ಮ ಕಾರ್ಯಗಳೇ ಮುಂದಕ್ಕೆ ಭವ್ಯ ಭವಿಷ್ಯದ ಸೌಭಾಗ್ಯವನ್ನು ನಿರ್ಮಿಸುವವು. ಚೆಕೊಸ್ಲವೇಕಿಯ, ಪೋಲೆಂಡುಗಳಲ್ಲಿ ಜರ್ಮನಿಯು ಮಾಡುತ್ತಿರುವ ದುಷ್ಪ್ರಭುತ್ವವೇ ಅದರ ವಿನಾಶ ಮಾರ್ಗವನ್ನು ರಚಿಸುತ್ತಿದೆ. ಮಾನವ ಜನತೆಗೆ ಮತ್ತು ಜಗತ್ತಿನ ಸಂಸ್ಕೃತಿಗೆ ಶತ್ರುವಾದ ನಮ್ಮ ಶತ್ರು ಪ್ರಭುತ್ವವನ್ನು ನಾವು ಬೇಗನೇ ಕೊನೆಗಾಣಿಸುವೆವು. ಸಾವಿರಾರು ವರ್ಷಗಳಿಂದ ಕಾಪಾಡಿದ ಸ್ವಾತಂತ್ರ್ಯವನ್ನು ಚೆಕೊಸ್ಲವೇಕಿಯವು ಖಂಡಿತ ಮುಂದೆ ಪಡೆಯದಿರಲಾರದು. ರಾಷ್ಟ್ರದ ಪ್ರತಿಯೊಂದು ಮೂಲೆಮೂಲೆಗೂ ಈ ಸ್ವಾತಂತ್ರ್ಯದ ಸಂದೇಶವನ್ನು ಸಾರಿರಿ' ಎಂದು ಅವರ ವೀರ ಸಂದೇಶವಾಗಿತ್ತು.

ಹೋದ ಸ್ವಾತಂತ್ರ್ಯವನ್ನು ಪಡೆಯಲು ಚೆಕೊಸ್ಲವೇಕಿಯದಲ್ಲಿ ಮರಳಿ ಕ್ರಾಂತಿಯು ಖಂಡಿತ ಮಸಗುವುದು.


ಸಾಹುಕಾರ ಶ್ರೀನಿವಾಸ ರಂಗಪ್ಪೈ
[ ಸ್ಥಾಪನೆ: ಕ್ರಿ. ಶ. 1858 ]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾಹುಕಾರ ಮಹಾಲ್, ಮಂಗಳೂರು.

The Attur & Jawahar Bank, Limited.
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.
ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು ಬ್ರೆಂಚ್: ಸೆಂಟ್ರಲ್ ಮಾರ್ಕೆಟ್
ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚುರುಕುತನದಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½%
6 ತಿಂಗಳಿಗೆ 4% 24 ತಿಂಗಳಿಗೆ 5%
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು:
ಅತ್ತೂರು ವೈಕುಂಠ ಪ್ರಭು, ಮೆನೇಜಿಂಗ್ ಡೈರೆಕ್ಟರ್.

ಹುಷಾರ್
ಮೋಟಾರನ್ನು ನಡೆಸುವುದಕ್ಕೆ ಎಷ್ಟೋ ಹುಷಾರಿರಬೇಕು. ಸಮಯಕ್ಕೆ ಅನುಗುಣವಾಗಿ ಕಾರನ್ನು ಕ್ಷಣ ಮಾತ್ರದಲ್ಲಿ ಪಕ್ಕಕ್ಕೆ ತಿರುಗಿಸಿ ನಡೆಸುವಂಥ ನರಗಳ ಪಟುತ್ವವೂ, ಬಿಗಿಯಾದ ಖಂಡಪುಷ್ಟಿಯೂ, ತೀಕ್ಷ್ಣವಾದ ದೃಷ್ಟಿಪಾಟವವೂ, ಒಂದು ಕ್ಷಣ ಮಾತ್ರದಲ್ಲಿ ಯೋಚನೆ ಮಾಡಿ ನಿರ್ಧರಿಸುವಂಥ ಚುರುಕಾದ ಮೆದುಳು ಆವಶ್ಯಕವಾಗಿ ಬೇಕು. ಇವೆಲ್ಲವೂ ಒಂದು ಮೋಟಾರನ್ನು ನಡೆಸುವುದಕ್ಕೆ ಮಾತ್ರವೇ ಅಲ್ಲದೆ ಆನಂದಮಯವಾದ ಜೀವಯಾತ್ರೆಯನ್ನು ನಡೆಸುವುದಕ್ಕೂ ಆವಶ್ಯಕವು. ಭಾರತದಲ್ಲೆಲ್ಲಾ ಅತ್ಯುತ್ತಮವಾದ ಟಾನಿಕ್ಕೆಂದು ಪ್ರಸಿದ್ಧಿ ಹೊಂದಿರುವ

ಜೀವಾಮೃತ
ಸ್ತ್ರೀಪುರುಷರೆಲ್ಲರಿಗೂ ಈ ಮಹತ್ತರವಾದ ಶಕ್ತಿಯನ್ನೂ, ದೇಹಾರೋಗ್ಯವನ್ನೂ ಉಂಟುಮಾಡುವುದು.
ಎಲ್ಲಾ ಔಷಧ ಅಂಗಡಿಗಳಲ್ಲಿಯೂ ದೊರೆಯುವುದು.
ತಯಾರಿಸುವವರು:
ಆಯುರ್ವೇದಾಶ್ರಮಂ ಮದ್ರಾಸು
ಸ್ಥಳೀಯ ಏಜಂಟರು:
ಪೋಪ್ಯುಲರ್ ಸ್ಟೋರ್ಸ್
ರಥಬೀದಿ – ಮಂಗಳೂರು.



# ಜಿಲ್ಲಾ ಸಮಾಚಾರ

## ಮಂಗಳೂರು

**ಬೋಳೂರು ದ್ರಾವಿಡ ಬ್ರಾಹ್ಮಣರ ಸಂಘ ಮತ್ತು ಕ. ನಾಟಕ ಸಭಾ:**—ಇವುಗಳ ವಾರ್ಷಿಕೋತ್ಸವಗಳು ಬೋಳೂರಲ್ಲಿ ಕಳೆದ ತಾ ೩ನೇ ಸಾಯಂ ೫ ಗಂಟೆಗೆ ನೆರವೇರಿದುವು. ಮದ್ರಾಸ್ ಪ್ರಸಿಡೆನ್ಸಿ ಕಾಲೇಜಿನ ನಿವೃತ್ತ ಕನ್ನಡ ಪಂಡಿತರಾದ ಬ್ರ ಶ್ರೀ ಸಾಚಾಜಿ ಶ್ರೀನಿವಾಸಾಚಾರ್ಯರು ಅಗ್ರಾಸನದಲ್ಲಿದ್ದರು.

**ದ. ಕ. ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ವಾರ್ಷಿಕೋತ್ಸವ:**—ದ ಕ ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ಮಹಾಸಭೆಯು ಡಿಸೆಂಬರ ತಾ ೩೦, ೩೧ರಲ್ಲಿ ಜರಗಿತು. ತಾ ೩೧ನೇ ಬೆಳಿಗ್ಗೆ ಶ್ರೀ ಕಲ್ಯಾಣಿ ಬ್ರ ಶೇಷಪಾಲರ ಅಧ್ಯಕ್ಷತೆಯಲ್ಲಿ ಸ್ತ್ರೀ ಸಮ್ಮೇಳನವು ನಡೆಯಿತು.

**ಮುನ್ಸಿಪಾಲ್ ಮಹಮ್ಮಡನ್ ಹಾಯರ್ ಎಲಿಮೆಂಟರಿ ಸ್ಕೂಲ್ ಮಂಗಳೂರು:**—ಈ ಶಾಲೆಯ ವಾರ್ಷಿಕೋತ್ಸವವು ಇದೇ ಜನವರಿ ೩೦ನೇ ಶನಿವಾರದಲ್ಲಿ ಜರಗುವುದು. ಸ್ಕೂಲ್ ಡೇ ಕಮಿಟಿಯ ನೇಮಕದ ಮೇಲೆ ವಿದ್ಯಾರ್ಥಿ ಸಂಘ ಸ್ಥಾಪನೆಯೂ ಇತ್ತಲಾಗ ಆದ ವಿಷಯವು ಬಹಳ ಶ್ಲಾಘನೀಯವೇ ಸರಿ. 'ಸ್ಕೂಲ್ ಡೇ' ಕಮಿಟಿಗೆ [illegible] ಮುನ್ಸಿಪಾಲ್ ಕೌನ್ಸಿಲರ್ ಜನಾಬ್ ಎ ಮೂಸಬ್ಬಾ ಸಾಹೇಬ್ B A ... ಅಧ್ಯಕ್ಷರಾಗಿರುವರು.

ಈ ಶಾಲೆ ಮುಖ್ಯೋಪಾಧ್ಯಾಯರೂ, ಸಹಾಯಕ ಉಪಾಧ್ಯಾಯರೂ ಪರಸ್ಪರ ಮಮತೆಯಿಂದಲೂ ಏಕತೆಯಿಂದಲೂ ಒಳಳೆ ಪ್ರಮಾಣದಲ್ಲಿ ಕೆಲಸ ನಡೆಸುತ್ತಿರುವ ಸಂಗತಿಯು ಬಹಳ ಆನಂದದಾಯಕವಾಗಿರುತ್ತದೆ.

ಈ ವಿದ್ಯಾರ್ಥಿ ಸಂಘದವರು, ಮುನ್ಸಿಪಾಲಿಟಿಯೊಳಗಿರುವ ಸರ್ವ ಮುಸ್ಲಿಂ ವಿದ್ಯಾರ್ಥಿಗಳನ್ನು ಶಾಲೆಗೆ ಹಾಜರಾಗುವಂತೆ, ಸರ್ವ ಪ್ರಯತ್ನಗಳನ್ನು ಮಾಡುವರೆಂಬುದು ನಿಜವಾದ ವಿಷಯವೇ ಆಗಿದೆ. 'ಸ್ಕೂಲ್ ಡೇ' ಕಮಿಟಿಯವರೇ ಬಡ ವಿದ್ಯಾರ್ಥಿಗಳಿಗೆ ಬೇಕಾದ ಸ್ಲೇಟು ಪುಸ್ತಕ ಇವಲ್ಲದೆ ಸಹಾಯಗಳನ್ನು ಕೊಡುವ ಆಲೋಚನೆ ಮಾಡುತ್ತಿರುವರೆಂದು ತಿಳಿಯುತ್ತದೆ.

**ಜನ್ಮಟಾಪು:**—ಬಜ್ಪೆ ಗ್ರಾಮದ ಎಡಪ್ಪ ಪೂಜಾರಿ ಎಂಬವನು ತನ್ನ ಸೋದರಿ ಹೆಂಡತಿ ರಾಧು ಎಂಬವಳನ್ನು ಕತ್ತಿಯಿಂದ ಕಡಿದು ಕೊಲೆಮಾಡಿ ಅವಳ ಶವವನ್ನು ಅದೇ ಗ್ರಾಮದ ಒಬ್ಬರ ಜಮೀನಿನ ಹೊಳೆಗೆ ತಾ. ೧೯-೧೨-೩೯ನೇ ಬೆಳಿಗ್ಗೆ ಸುಮಾರು ೬ ಘಂಟೆಗೆ ಬಿಸಾಡಿದ್ದನು. ಆತನ ಮೇಲೆ ... ಕೋರ್ಟಿನ ೩೦೨ ಕಲಂ ಪ್ರಕಾರ ಮೊಕದ್ದಮೆಯಾಗಿತ್ತು. ಆಪಾದಿತನು ಮದುವೆಯಾಗಿ ಸುಮಾರು ೫ ವರ್ಷ ನಂತರ ಆಕೆಯನ್ನು ಬಿಟ್ಟುಬಿಡಲು ಆಕೆಯ ಪ್ರಸ ಪರಮೇಶ್ವರ ಎಂಬವನನ್ನು ಮದುವೆಯಾಗಿ ಅವನೊಟ್ಟಿಗೆ ಇರುತ್ತಿದ್ದಳು. ಆಕೆಯ ಅಪೇಕ್ಷೆಗೆ ವಿರೋಧವಾಗಿ ಆಕೆಯು ಯಾವಾಗಲೂ ಆತನ ಮನೆ ಸಮೀಪವಾಗಿ ಅವಳು ೨ನೇ ಗಂಡನ ಮನೆಯಿಂದ ತಾಯಿಯ ಮನೆಗೆ ಹೋಗುತ್ತಿದ್ದ ಕಾರಣ ಆಕೆಯು ಸಿಟ್ಟುಗೊಂಡು ಆಕೆಯನ್ನು ಕಡಿದು ಕೊಂದದ್ದಾಗಿ ಅವನ ಮೇಲಿನ ಮೊಕದ್ದಮೆಯಾಗಿತ್ತು.

ಆದರೂ ತಾನು ಆ ದಿವಸ ಅಲ್ಲಿ ಇರಲಿಲ್ಲವಾಗಿಯೂ ತಾನು ತಪ್ಪಿತಸ್ಥನಾಗಿದ್ದಿಲ್ಲವಾಗಿಯೂ ಹೇಳಿಕೆ ಕೊಟ್ಟಿದ್ದನು. ೩ ಜನ ಅಸೆಸರರು ಆಪಾದಿತನು ತಪ್ಪಿತಸ್ಥನೆಂತ ಅಭಿಪ್ರಾಯಪಟ್ಟಿದ್ದರು. ಅವರ ಅಭಿಪ್ರಾಯವನ್ನು ಅಂಗೀಕರಿಸಿ ಮಂಗಳೂರು ಸೆಶ್ಯನ್ ಜಡ್ಜರಾದ ಶ್ರೀ ಪಿ ರಾಜಗೋಪಾಲಾಚಾರ್ಯರು ತಾ ೬-೧-೪೦ರಲ್ಲಿ ಇವನನ್ನು ಜನ್ಮಟಾಪಿನ ಶಿಕ್ಷೆಗೆ ಗುರಿಪಡಿಸಿದರು.

ಆರೋಪಿಯ ಕಡೆಯಿಂದ ಕೋರ್ಟಿನಿಂದ ನೇಮಿಸಲ್ಪಟ್ಟ ಶ್ರೀ ಬಿ ನರಸಿಂಗರಾಯರು ವ್ಯವಹರಿಸಿದ್ದರು.

**ಎಯಿಡೆಡ್ ಎಲಿಮೆಂಟರಿ ಶಾಲೆ:**—ಮಂಗಳೂರು ತಾಲೂಕು ಎಯಿಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಆರ್ಯರ ವಾರ್ಷಿಕ ಸಮಾವೇಶವು ಕಳೆದ ಆದಿತ್ಯವಾರ ಕೋರ್ಟ್ ... ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಮ ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಎಲಿಮೆಂಟರಿ ವಿದ್ಯಾಭ್ಯಾಸದ ವಿಷಯದಲ್ಲಿ ತಯಾರಾದ ತಿದ್ದುಪಾಟುಗಳ ... [illegible] ... ಸಂಘದವರು ಕೆಲವು ಸೂಚನೆಗಳನ್ನು ಕೇಳಲು ನಿಶ್ಚಯಿಸಿತು. ಎಲಿಮೆಂಟರಿ ಶಾಲೆಗಳಲ್ಲಿ ... ವಿದ್ಯಾರ್ಥಿ ... [illegible] ... ವಿದ್ಯಾಭ್ಯಾಸದ ಪುನರ್ಘಟನೆ ... ಸರಕಾರವನ್ನು ... [illegible]

**ಕನ್ನಡ ಸೇವಾ ಸಂಘ, ಅಮ್ಮೆಂಬಳ:**—ಈ ಸಂಘದ ದ್ವಿತೀಯ ವರ್ಷದ ವರ್ಧಂತ್ಯುತ್ಸವವು ತಾ ೨೭-೧೨-೩೯ನೇ ... ಸಾಯಂಕಾಲ ... [illegible] ... ಮಂಗಳೂರು ... ಕನ್ನಡದ ಪ್ರಥಮ ... ಶ್ರೀ ... ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರು ... ಪತ್ರಿಕೆ ... ವಿಷಯ ... ಭಾಷಣ ಮಾಡಿದರು ... ಶ್ರೀ ... ಸಾಲಿಯಾನ್, ... ಕೆ. ಬಾಲಕೃಷ್ಣರಾವ್ ... ರಂಗಪ್ಪಯ್ಯ, ... ಶಂಕರ ಭಟ್ಟರು, ... ಎಂ. ಆರ್. ... ಭಟ್ಟ ಮೊದಲಾದವರ ... "ಸುಧನ್ವ ಕಲ್ಯಾಣ" ಪ್ರಸಂಗದ ಯಕ್ಷಗಾನ ತಾಳಮದ್ದಲೆಯು ... ಎಲ್ಲರಿಗೂ ಸಂತೋಷವಿತ್ತಿತು ಎಂದು ಆದರ ವ್ಯವಸ್ಥಾಪಕರು ತಿಳಿಸುತ್ತಾರೆ.

## ಉಡುಪಿ

**ಶ್ರೀ ಅದಮಾರುಸ್ವಾಮಿಗಳವರ ಪುರಪ್ರವೇಶ:**—ಶ್ರೀ ಕೃಷ್ಣ ಸನ್ನಿಧಾನದ ಪರ್ಯಾಯ ಪೀಠವನ್ನು ಸದ್ಯವೇ ಅಲಂಕರಿಸಲಿರುವ ಶ್ರೀ ಅದಮಾರು ಮಠದ ಶ್ರೀ ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರು ಕಳೆದ ತಾ. ... ರಲ್ಲಿ ಕಾರ್ಕಳದಿಂದ ... ಮಠದ ಶ್ರೀ ... ಆನಂದ ಭಾರತಿ ಸ್ವಾಮಿಗಳ ಆಮಂತ್ರಣವನ್ನು ಸ್ವೀಕರಿಸಿ ಅಲ್ಲಿಗೆ ಚಿತ್ತೈಸಿದ್ದರು. ತಾ ೨೭ ಮತ್ತು ... ರಲ್ಲಿ ಶ್ರೀ ... ಆನಂದ ಭಾರತಿ ಸ್ವಾಮಿಗಳವರಿಂದ ಸತ್ಕೃತರಾಗಿ ಅಲ್ಲಿಂದ ಶ್ರೀಗಳವರು ... ತಾ ... ರಲ್ಲಿ ತಮ್ಮ ಮಠ ಪ್ರವೇಶಮಾಡಿದರು.

**ಸಪ್ತೋತ್ಸವ-ಪರ್ಯಾಯದ ಬಾರ್ಕೂರು:**—ಶ್ರೀ ಕೃಷ್ಣ ಮಠದ ಸಪ್ತೋತ್ಸವವು ಇದೇ ತಾ ... ರಲ್ಲಿ ಆರಂಭವಾಗುವುದು. ಮಹಾರಥೋತ್ಸವ ... ಚೂರ್ಣೋತ್ಸವ ... ಅವಭೃಥಸ್ನಾನಾದಿಗಳು ತಾ ೧೭ ಮತ್ತು ೧೮ರಲ್ಲಿಯೂ ಪರ್ಯಾಯವು ... ರಂದು ಶ್ರೀ ... ಸ್ವಾಮಿಗಳವರ ಮಹಾ ಸಂತರ್ಪಣೆ ... ಶ್ರೀ ... ಮಹೋತ್ಸವವು ... ನಡೆಯುವುದು.

... ವಸ್ತು ಪ್ರದರ್ಶನದ ಉದ್ಘಾಟನಾ ಸಮಾರಂಭವು ... ಸಾಯಂಕಾಲ ... ಗಂಟೆಗೆ ... ಹಿಂದೂ ... [illegible] ... ನಡೆಯುವುದು.

**ವಿವಾಹ:**—ತಾ ... ನೇ ಸೋಮವಾರದ ... [illegible] ... ಯವರ ಅಧ್ಯಕ್ಷತೆಯಲ್ಲಿ ... [illegible] ... ಮಾಡಿದ ನಂತರ ... [illegible] ... ವಿವಾಹದಿಂದ ... [illegible] ... ಸಂಬಂಧ ... [illegible] ... ಪ್ರಥಮ ... ಸಂತೋಷದ ... [illegible]

## ಕುಂದಾಪುರ

**ಶಿಕ್ಷಕರ ಕೂಟ:**—... ಸ್ವಾಮಿಪತ್ನಿ ... ಅಧ್ಯಕ್ಷತೆ ... ಉಪಾಧ್ಯಕ್ಷ ... ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ... ತಾ ... ರಲ್ಲಿ ನಡೆದು ಶ್ರೀ ಕೃಷ್ಣ ಕಾರಂತರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಉಪಾಧ್ಯಕ್ಷರ ಸ್ಥಾನಕ್ಕೆ ... ನಡೆದು ... ಕ್ಲಾಸ್ ... ಶ್ರೀ ... ಮುಂದೆ ... ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ... ಬೋರ್ಡುಗಳಲ್ಲಿ ... ಗೌರವ ಸ್ಥಾನವನ್ನು ... ಪಡೆದ ಪ್ರಥಮ ... [illegible]

## ಕಾರ್ಕಳ

**ಹಿಂದೂ ಸಂಘಟನೆ:**—ತಾ ... ೧೯೪೦ ದಿನ ಶ್ರೀ ವೆಂಕಟ್ರಮಣ ... ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಮ್. ... ಅವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿ ಶ್ರೀ ಟಿ ವಾಸುದೇವ ಶೆಟ್ಟಿಯವರು ಹಿಂದುಗಳು ಸಂಘಟಿತರಾಗಬೇಕಾದ ಆವಶ್ಯಕತೆಯ ... ಭಾಷಣ ಮಾಡಿದರು. ... ಶ್ರೀ ... ರಾಯರು ಅಧ್ಯಕ್ಷರಾಗಿ ಹಿಂದು ಮಹಾಸಭೆಯ ಒಂದು ಶಾಖೆಯು ಇಲ್ಲಿ ಸ್ಥಾಪಿತವಾಯಿತು.

**ವಿದ್ಯಾರ್ಥಿಗಳ ಹಸ್ತ ಪತ್ರಿಕೆ:**—ಶ್ರೀ ವೆಂಕಟ್ರಮಣ ... ಎಲಿಮೆಂಟರಿ ಶಾಲೆಯ ... ಮಕ್ಕಳು ... ಒಂದು ... ಹಸ್ತಪತ್ರಿಕೆಯನ್ನು ... ಶ್ರೀ ... ವೆಂಕಟರಮಣ ... ಪ್ರಕಟಿಸಿರುವರು.

**ಉಪಾಧ್ಯಾಯರ ಸಂಘ:**—ಕಾರ್ಕಳ ... ಉಪಾಧ್ಯಾಯರ ಸಂಘದ ... ದಿನ ... ಶ್ರೀ. ಪಿ ... ಅಧ್ಯಕ್ಷತೆಯಲ್ಲಿ ... ಪ್ರಾರ್ಥನೆ, ವರದಿ ... ಬಳಿಕ ... [illegible] ... ಅಧ್ಯಕ್ಷರ ಭಾಷಣದಿಂದ ಸಭೆ ಮುಗಿಯಿತು.

## ಕಾಸರಗೋಡು

**ವಸಿಷ್ಠಾಶ್ರಮ:**—... ಸಂಘದ ವಾರ್ಷಿಕ ಮಹಾಸಭೆಯು ಇದೇ ... ಶಾಲೆಯಲ್ಲಿ ಜರಗುವುದು.

## ಪುತ್ತೂರು

**ಗೋಳಿತಟ್ಟು-ಮಾಲಿಗಳ ಹಾವಳಿ:**—ಇತ್ತೀಚಿಗೆ ... ಮಾಲಿಗಳ ಹಾವಳಿಯು ... ವಾಗಿದೆ. ಅನೇಕ ... ನಷ್ಟ ... ಹೊಂದಿದೆ.

ತಯಾರಾಗಿವೆ!
1940ನೇ
ಇಸವಿಯ
ಶಾರದಾ ಡೈರಿಗಳು
ಸಣ್ಣ ಮತ್ತು ದೊಡ್ಡ
ಸೈಜುಗಳಲ್ಲಿ
ಈಗಾಗಲೇ ಮಾರಾಟಕ್ಕೆ
ಸಿದ್ಧವಾಗಿವೆ!
ದೊರೆಯುವ ಸ್ಥಳ.—
ಶಾರದಾ ಛಾಪಖಾನೆ,
ಮಂಗಳೂರು.

# ಫಿನ್ಲೆಂಡಿನ ಸಹಾಯಕ್ಕೆ ಯುದ್ಧವಾರ್ತೆ!

# ಇಟಲಿಯಿಂದ ವಿಮಾನಗಳು



## ಜರ್ಮನಿ ತಡೆದು ನಿಲ್ಲಿಸಿದೆ ಬ್ರಿಟಿಷ್ ಯುದ್ಧ ಮಂತ್ರಿಯ ರಾಜಿನಾಮೆ

## ಫಿನ್‌ಲೆಂಡಿಗೆ ವಿಜಯವಾಗಿದೆ!

### ಬ್ರಿಟಿಷ್ ಯುದ್ಧಮಂತ್ರಿಯ ರಾಜಿನಾಮೆ

ಬ್ರಿಟಿಷ್ ಸರಕಾರದ ಯುದ್ಧಮಂತ್ರಿ ಮಿ। ಹೊರ್ ಬೆಲಿಶಾರವರು ತಾ ೫ ರಂದು ತಮ್ಮ ಸ್ಥಾನಕ್ಕೆ ರಾಜಿನಾಮೆಯಿತ್ತಿರುವರು ಅವರ ಸ್ಥಾನದಲ್ಲಿ ಮಿ। ಆಲಿವರ್ ಸ್ಟಾನ್ಲಿಯವರನ್ನು ನಿಯಮಿಸಲಾಗಿದೆ.

ಪ್ರಚಾರಖಾತೆಯ ಮಂತ್ರಿಯಾಗಿದ್ದ ಲಾರ್ಡ್ ಮ್ಯಾಕ್ಮಿಲನರೂ ರಾಜಿನಾಮೆ ಕೊಟ್ಟಿರುವದಾಗಿ ತಿಳಿದುಬಂದಿದೆ ಈ ಎರಡು ರಾಜಿನಾಮೆಗಳನ್ನೂ ಸ್ವೀಕರಿಸಲಾಗಿದೆಯಂತೆ. ಪ್ರಚಾರ ಖಾತೆಯ ಮಂತ್ರಿಗಳ ಸ್ಥಾನದಲ್ಲಿ ಸರ್ ಜಾನ್ ರೀತರು ನಿಯಮಿತರಾಗಿರುವರು

ರಾಜಿನಾಮೆ ಕೊಡುವುದಕ್ಕಿಂತ ಮೊದಲು ಬೆಲಿಶಾರವರು ಮುಖ್ಯ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು, ಪುನರ್ರಚಿತ ಸರಕಾರದಲ್ಲಿ ತಮ್ಮ ಹುದ್ದೆಯನ್ನು ಒಪ್ಪಿಕೊಳ್ಳುವುದು ತಮ್ಮಿಂದ ಸಾಧ್ಯವಿಲ್ಲವೆಂದು ತಿಳಿಸಿರುವರು ಆದರೆ ಯುದ್ಧವು ಮುಗಿವ ವರೆಗೆ ತಮ್ಮಿಂದಾಗುವ ಸಹಾಯಗಳನ್ನು ಮಾಡುವುದಾಗಿಯೂ ತಿಳಿಸಿರುವರು

ಪಾರ್ಲಿಮೆಂಟ್ ಸಭೆಯಲ್ಲಿ ಆ ಕುರಿತು ದೀರ್ಘ ಚರ್ಚೆಗಳು ನಡೆಯಲಿವೆಯೆಂದು ತಿಳಿಯುತ್ತದೆ

### ವ್ಯಾಟಿಕನ್ನಿನಲ್ಲಿ ಬೆಂಕಿ

ವ್ಯಾಟಿಕನ್ನಿನಲ್ಲಿ ಪಲಾಸ್ಸೋ ಚಾನ್ಸೆಲೇರಿಯಾವಿನಲ್ಲಿ ಬಹಳ ದೊಡ್ಡ ಬೆಂಕಿ ಅನಾಹುತವುಂಟಾಯಿತು ಸೆಯಿಂಟ್ ಲಾರೆನ್ ಸೋಚಾನ್ ಸಲರಿಯು ನಾಶವಾಗಿದೆಯೆಂದೂ ಅರಮನೆಯ ಸಭಾಂಗಣವು ನಷ್ಟಹೊಂದಿದೆಯೆಂದೂ ತಿಳಿದಿದೆ

ಬೆಂಕಿಯನ್ನು ಬಹು ಜನರು ನೋಡುತ್ತಿದ್ದರು

ಪೋಪ್‌ರವರ ಕಾರ್ಯದರ್ಶಿ ಕಾರ್ಡಿನಲ್ ಮೆಗ್ಗಿಯೋನ್‌ರವರು ವ್ಯಾಟಿಕನ್ನಿನ ಗವರ್ನರರ ಮತ್ತು ಇಟಲಿ ಅಧಿಕಾರಿಗಳ ಜೊತೆಯಲ್ಲಿ ಸ್ಥಳಕ್ಕೆ ಹೋದರು ಆ ಮೇಲೆ ಕಾರ್ಡಿನಲರು ಈ ಬೆಂಕಿಯ ವಿಷಯವನ್ನು ಪೋಪರಿಗೆ ತಿಳಿಸಿದಾಗ ಅವರು ಬಹಳ ಮರುಗಿದರು.

"ಬೆಂಕಿಯು ಪ್ರಾರಂಭವಾದಾಗ ಕಾರಾಬಿನಿಯರರು ಉರಿಯ ಮಧ್ಯದಲ್ಲಿ ಸೆಯಿಂಟ್ ಲಾರೆನ್ ಸೋ ಚರ್ಚಿಗೆ ನುಗ್ಗಿ ಪವಿತ್ರ ವಸ್ತುವನ್ನು ರಕ್ಷಿಸಿ ತಂದರು ಬೆಂಕಿಯ ಕಾರಣವೇನೆಂಬುದು ಗೊತ್ತಾಗಿಲ್ಲ.

### ಟಕೋಮಾ ಹಡಗಿನ ಬಂಧನ

ಜರ್ಮನ್ ಹಡಗಾದ ಟಕೋಮಾ ಎಂಬುದನ್ನೂ, ಅದರ ಕೆಲಸಗಾರರನ್ನೂ ಮತ್ತು ಗ್ರಾಫ್‌ಸ್ಪಿ ಹಡಗಿನ ಕೆಲಸಗಾರರನ್ನೂ ಬಂಧಿಸಿಡಲಾಗಿದೆ.

ಟಕೋಮಾ ಹಡಗು ಬಂಧನಕ್ಕೊಳಗಾಗುವುದೇ ಉತ್ತಮವೆಂದು ಪರಿಗಣಿಸಿತು ಉರಗ್ವೇ ಸರಕಾರವು ಕೊಟ್ಟಿದ್ದ ಎಚ್ಚರಿಕೆಯ ಅವಧಿಯು ಮುಗಿಯುವ ಹೊತ್ತಿಗೆ ೨೫ ಜನ ಶಸ್ತ್ರ ಸಜ್ಜಿತ ಪೋಲೀಸರು ಆ ಜರ್ಮನ್ ಹಡಗಿಗೆ ಬಂದರು ಒಂದು ಘಂಟೆಯ ತರುವಾಯ ಉರಗ್ವೇ ಅಧಿಕಾರಿಗಳು ಆ ಹಡಗನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಅದೇನಾದರೂ ಪ್ರಯಾಣ ಮಾಡಲು ಯತ್ನಿಸಿದ್ದರೆ ಅದರ ಮೇಲೆ ಕ್ರಮ ಜರುಗಿಸುತ್ತಿದ್ದರು

### ಚೀಣಾಕ್ಕೆ ಜಯದ ಭರವಸೆ
### ಕಳೆದ ವರ್ಷ ೪ ಲಕ್ಷ ಜಪಾನರ ನಾಶ

ಯುದ್ಧಾಚರಣೆಯ ಸಲಹೆಕಾರರಾದ ಜನರಲ್ ಸುಫೀಕೆನೋರವರು ಕಳೆದ ವರ್ಷದ ಯುದ್ಧ ಕಾರ್ಯಕ್ರಮದ ವಿಮರ್ಶೆಯನ್ನೀಯುತ್ತಾ ೧೯೩೯ರಲ್ಲಿ ಜಪಾನರ ಕಡೆ ೪೦೦೦೦೦ ಜನರು ಸಾವುನೋವುಗಳಿಗೆ ಗುರಿಯಾಗಿದ್ದಾರೆಂದೂ ೬೦೦೦ ಕದನಗಳು ನಡೆದವು ಎಂದೂ ತಿಳಿಸಿದ್ದಾರೆ

ಚೀಣೀಯರಿಗೆ ಕೊನೆಗೂ ಜಯವು ಲಭಿಸುವುದರಲ್ಲಿ ಸಂದೇಹವಿಲ್ಲವೆಂಬ ಭರವಸೆಯನ್ನು ಅವರು ವ್ಯಕ್ತಪಡಿಸಿದರು.

### ಫಿನ್‌ಲೆಂಡಿನ ಪ್ರಧಾನರ ಬೇಡಿಕೆ

ಹೊಸವರ್ಷದ ಸಂದೇಶವನ್ನು ಕೊಡುತ್ತಾ ಫಿನ್‌ಲೆಂಡಿನ ಪ್ರಧಾನರಾದ ಎಂ ಕಾಲಿಯೋರವರು, 'ರಶ್ಯದ ಆಕ್ರಮಣವು ಇಡೀ ಸ್ಕೆಂಡಿನೇವಿಯದ ಸ್ವಾತಂತ್ರ್ಯ ಮತ್ತು ಸಂಸ್ಕೃತಿಗಳನ್ನು ನಾಶಗೊಳಿಸುವುದಾಗಿದೆ ಆದಕಾರಣ, ಕಲಹಕಂಟಕದ ಈ ಯುದ್ಧ ಖಂಡನೆಯನ್ನು ಮಾಡಲು ಇಂದು ಫಿನ್‌ಲೆಂಡಿನ ಎಲ್ಲಾ ಕಡೆಗಳ ಬೆಂಬಲವು ಸಿಗಬೇಕಾಗಿದೆ' ಎಂದು ಹೇಳಿರುವರು

ರಶ್ಯದಿಂದ ೩೦೦,೦೦೦ ಮಂದಿಯ ದಳವೊಂದು ಫಿನ್‌ಲೆಂಡಿಗೆ ಬಂದಿದೆಯೆಂದೂ, ಬೇಗನೇ ೫೦,೦೦೦ದ ದಳವೊಂದು ಬರಲಿರುವುದೆಂದೂ ಗೊತ್ತಾಗಿದೆ

ಎಲ್ಲಾ ಕಡೆಯ ಸುದ್ದಿಗಳಿಂದಲೂ ಇಂದು ಫಿನ್ನರು ಯುದ್ಧದಲ್ಲಿ ಯಾವ ರೀತಿಯಿಂದಲೂ ಹಿಮ್ಮೆಟ್ಟಲಿಲ್ಲವೆಂದು ಕೇಳಿ ಬಂದಿದೆ.

### ಇಟಲಿ ಹಂಗೇರಿ ಮಾತುಕತೆ

ಸಿಯಾನ್ ಸಾಕೀ ಮಾತುಕತೆಗಳು ನಡೆಯುತ್ತವೆ. ಪೂರ್ವ ಯೂರೋಪಿನ ಶಾಂತಿ ಸಾಧನೆಯಲ್ಲಿ ಹಂಗೇರಿಯು ಒಪ್ಪಂದಕ್ಕೆ ಒಡಂಬಡುವುದಾಗಿ ತಿಳಿದಿದೆ

ಇಟಲಿಯು ರಶ್ಯದ ವಿಷಯದಲ್ಲಿ ರಾಜಿಯಿಂದ ಇರುವುದಾಗಿಯೂ, ಆದರೆ ರಶ್ಯದ ತತ್ವ ಪ್ರಚಾರಣೆಯನ್ನು ಮಾತ್ರ ಇಟಲಿಯಲ್ಲಿ ಮಾಡಬಾರದಾಗಿಯೂ ಸೀನರ್ ಗಯಾಡನರ ಹೇಳಿಕೆಯಾಗಿರುತ್ತದೆ

### ಡಚ ಸರಕಾರ

ಡಚ್, ಸರಕಾರವು, ಯಾವ ರಾಷ್ಟ್ರದಿಂದಲೇ ಆಗಲಿ, ಯಾವ ವಿಧದಿಂದಲೇ ಆಗಲಿ, ಡಚ್ ರಾಷ್ಟ್ರಕ್ಕೆ ಧಾಳಿ ನಡೆದಲ್ಲಿ ಅದನ್ನು ತಡೆಯುವುದಾಗಿ ಹೇಳಿಕೆ ಹೊರಡಿಸಿದೆ ಇದು ಜರ್ಮನಿಯ ಚಟುವಟಿಕೆಗಳಿಗೆ ಉತ್ತರವಾಗಿ ಪ್ರಕಟಣೆಯಾಗಿದೆಯೆಂದು ತಿಳಿಯುತ್ತದೆ

### ಫ್ರಾನ್ಸ್ ಗ್ರೀಕ್ ಒಪ್ಪಂದ

ಫ್ರಾನ್ಸ್ ಗ್ರೀಕ್ ರಾಷ್ಟ್ರಗಳೊಳಗೆ ವ್ಯಾಪಾರೀ ಒಪ್ಪಂದವೊಂದು ಆಗವುದೆಂದು ತಿಳಿಯುತ್ತದೆ

### ಟರ್ಕಿಯ ಭೂಕಂಪ
### ಭಾರತದ ಸಹಾನುಭೂತಿಗೆ ಕೃತಜ್ಞತೆ

ಟರ್ಕಿಯಲ್ಲಿ ಉಂಟಾದ ಭೂಕಂಪದ ವಿಷಯದಲ್ಲಿ ಸಹಾನುಭೂತಿ ಸಹಾಯಗಳನ್ನು ಕೊಟ್ಟ ಭಾರತ ದೇಶಕ್ಕೆ ಟರ್ಕಿ ಜನರ ಕೃತಜ್ಞತೆಯ ಸೂಚನೆಯು ಅಲ್ಲಿಂದ ಕಳುಹಿಸಲಾಗಿದೆ!

### ಫಿನ್ಲೆಂಡಿಗೆ ಮಿತ್ರ ರಾಷ್ಟ್ರಗಳ ಸಹಾಯ

ಫಿನ್‌ಲೆಂಡಿಗೆ ಬ್ರಿಟಿಷ್ ಫ್ರಾನ್ಸ್ ರಾಷ್ಟ್ರಗಳು ಸ್ವೀಡನ್ ನಾರ್ವೆಗಳ ಮೂಲಕ ಸಹಾಯ ಕೊಡುವುದಾದರೆ, ಜರ್ಮನಿಗೆ ರಶ್ಯವು ಸಹಾಯ ಕೊಡುವುದಾಗಿ ಪ್ರಕಟವಾಗಿದೆ.

### ಪಶ್ಚಿಮ ರಣರಂಗ

ಬ್ರಿಟಿಷರಿಂದ ಕಳುಹಿಸಲಾದ ಹಿಂದೀ ಸೈನಿಕರು ಪಶ್ಚಿಮ ರಣರಂಗದ ಮುಂಗಡೆ ನಿಂತು ಕಾದಾಡುತ್ತಿದ್ದಾರೆ ಈ ಸೈನಿಕರಲ್ಲಿ ಹಲವರು ಕೈಬರ್ ಪಾಸಿನ ಗಡಿಯಲ್ಲಿದ್ದವರು. ಫ್ರೆಂಚ್ ಸೈನಿಕರು ಹಿಂದೀಯ ಸೈನಿಕರನ್ನು ಸ್ವಾಗತಿಸಿದರು

### ಐಯರ್ಲೆಂಡಿನಲ್ಲಿ ಅತೃಪ್ತಿ

ಐಯರ್ಲೆಂಡಿನಲ್ಲಿ ಇತ್ತೀಚೆಗೆ ಹಲವು ಕ್ರಾಂತಿಗಳಾದ ವಾರ್ತೆಗಳು ಬಂದಿವೆ. ಡಿ ವೆಲರನ ವಿದೇಶೀಯ ರಾಜನೀತಿಯ ವಿಚಾರವಾಗಿ ಅಲ್ಲಿನ ಪ್ರಜೆಗಳು ಅತೃಪ್ತಿಗೊಂಡು ಅಶಾಂತರಾಗಿರುವರೆಂದು ತಿಳಿದು ಬರುತ್ತದೆ

ಜರ್ಮನಿಯಲ್ಲಿ ಹಣದ ದುಸ್ಥಿತಿಯುಂಟಾಗಿ, ಹಣ ಸಾಲವೆತ್ತುವ ಪರಿಸ್ಥಿತಿ ಬಂದಿರುವುದಾಗಿ ತಿಳಿಯುತ್ತದೆ

### ಫಿನ್‌ಲೆಂಡಿಗೆ ಇಟಲಿಯು ಸಹಾಯ ಮಾಡುತ್ತಿದೆ?

ಫಿನ್‌ಲೆಂಡಿಗೆ ಇಟಲಿಯು ವಿಮಾನಗಳನ್ನು ಕಳುಹಿಸುತ್ತಿದೆ ಜರ್ಮನಿಯು ವಿಮಾನಗಳನ್ನು ಕಳುಹಿಸುತ್ತಿದೆ ಜರ್ಮನಿಯು ಇಂತಹ ವಿಮಾನಗಳನ್ನು ಮಧ್ಯ ಮಾರ್ಗದಲ್ಲಿ ತಡೆದು ನಿಲ್ಲಿಸಿದೆ ಇಟಲಿ ಜರ್ಮನಿಗಳೊಳಗೆ ಆದ ಒಪ್ಪಂದಕ್ಕೆ ಇದು ಅನ್ಯಾಯವೆಂದ ಜರ್ಮನಿಯು ಪ್ರಕಟಿಸಿದ

### ಡಲಾಡಿಯರರಿಗೆ ಅಪಘಾತ

ಫ್ರಾನ್ಸಿನ ಪ್ರಧಾನ ಮಂತ್ರಿ ಡಲಾಡಿಯರರಿಗೆ ಏನೋ ಅಪಘಾತವಾಗಿ ಕಾಲಿಗೆ ಪೆಟ್ಟಾಗಿದೆಯೆಂದೂ ಆದರೆ ಅಪಾಯ ಪರಿಸ್ಥಿತಿಯಿಲ್ಲವೆಂದೂ ಸುದ್ದಿ

### ಬ್ರಿಟಿಷ್ ಹಡಗುಗಳ ನಾಶ

ಬ್ರಿಟಿಷ್ ಹಡಗುಗಳು ಕಳೆದವಾರ ಹಲವು ಮುಳುಗಿಸಲ್ಪಟ್ಟವು ಹಿಟ್ಲರನು ಸಮುದ್ರ ಯುದ್ಧವನ್ನು ಅತ್ಯಂತ ಭೀಕರವಾಗಿ ಮಾಡುತ್ತಿದ್ದಾನೆ ಸಮುದ್ರಕ್ಕೆ ಇಳಿದ ಯಾವ ಹಡಗವಾದರೂ ಸುರಕ್ಷಿತವಾಗಿ ಉಳಿದ ಹಾಗಿಲ್ಲ

### ಪುನಃ ಮಂತ್ರಿಮಂಡಳಕ್ಕೆ

ಬ್ರಿಟಿಷ್ ಯುದ್ಧ ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟ ಹೊರ್ ಬೆಲಿಷರವರು ಪುನಃ ಮಂತ್ರಿ ಪದವಿಯನ್ನು ಅಂಗೀಕರಿಸುವರೆಂದು ತಿಳಿದಿದೆ

### ಫಿನ್ನರಿಗೆ ಜಯ

ಫಿನ್ನರಿಗೆ ಸಾಲ್ಲಾ ಸೆಕ್ಟರಿನಲ್ಲಿ ಜಯವಾಗಿದೆ ಆದರೆ ರಶ್ಯವು ಭಯಂಕರ ಧಾಳಿಯೊಂದನ್ನು ನಡೆಸಲು ಎಲ್ಲಾ ವಿಧದ ಪ್ರಯತ್ನಗಳನ್ನು ಮಾಡುತ್ತಿದೆ ರಶ್ಯದ ಸೈನ್ಯಕ್ಕೆ ೨೦ ಮಂದಿ ಜರ್ಮನ್ ಸೇನಾಪತಿಗಳು ಬಂದು ಸೇರಿರುವರೆಂದು ತಿಳಿದಿದೆ

### ಆಂಧ್ರ ಪ್ರಾಂತಿಕ ರಾಜಕೀಯ ಪರಿಷತ್ತು

ಆಂಧ್ರ ಪ್ರಾಂತಿಕ ರಾಜಕೀಯ ಪರಿಷತ್ತು ಶ್ರೀ। ಟಿ ಪ್ರಕಾಶಂರವರ ಅಧ್ಯಕ್ಷತೆಯಲ್ಲಿ ಕಳೆದ ವಾರ ಜರಗಿತು

### ಸರ್ ಸ್ಯಾಮ್ಯುಯೆಲ್ ಹೋರರು ಮುಂದಿನ ವೈಸರಾಯರೇ?

ಭಾರತದ ವೈಸರಾಯರಾದ ಲಾರ್ಡ್ ಲಿನ್ ಲಿತ್ ಗೋದವರು ನಿವೃತ್ತರಾದ ಮೇಲೆ, ಅವರ ಸ್ಥಾನಕ್ಕೆ ಸರ್ ಸ್ಯಾಮ್ಯುಯಲ್ ಹೋರ್‌ರವರು ಬರುವರೆಂದು ಪ್ರಚಲಿತ ಸ. ಗಳಿಂದ ಗೊತ್ತಾಗಿದೆ ಲಾರ್ಡ್ ಲಿನ್‌ಲಿತ್‌ಗೋರವರ್ ಮುಂದಿನ ವರ್ಷದ ಎಪ್ರಿಲ್‌ನಲ್ಲಿ ಅಧಿಕಾರದಿಂದ ನಿವೃತ್ತಿಹೊಂದುವರು. ಈ ಬಗ್ಗೆ ನಿಶ್ಚಯವಾದ ಹೇಳಿಕೆಯು ಮುಂದಿನ ಚಳಿಗಾಲದ ಹೊತ್ತಿಗೆ ಹೊರಬೀಳುವುದೆಂದು ಗೊತ್ತಾಗಿದೆ

### ಕಾನೂನುಭಂಗಕ್ಕೆ ಸಿದ್ಧತೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಳೆದ ಮೀಟಿಂಗಿನಲ್ಲಿ ಅಂಗೀಕರಿಸಿದ ಎರಡು ನಿರ್ಣಯಗಳನ್ನು ಕಾಂಗ್ರೆಸ್ ಜನರಲ್ ಸಕ್ರೆಟರಿಯವರು ಕಾಂಗ್ರೆಸ್ ಶಾಸನ ಸಭೆಗಳ ಪಂಗಡದ ಎಲ್ಲಾ ಮುಖಂಡರಿಗೂ ಕಳುಹಿಸಿಕೊಟ್ಟಿರುತ್ತಾರೆ ಕಾನೂನು ಭಂಗ ಚಳವಳಿಯನ್ನು ಕಾಂಗ್ರೆಸು ಆರಂಭಿಸುವುದಕ್ಕೆ ಪೂರ್ವವಾಗಿ ಯಾವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂಬುದನ್ನು ಅದರಲ್ಲಿ ವಿವರಿಸಲಾಗಿದೆ ಮತ್ತು ಕಾಂಗ್ರೆಸ್‌ನ ಮಂತ್ರಿಗಳು ಮಂತ್ರಿಮಂಡಲಗಳ ಅಧಿಕಾರ ಸ್ಥಾನಗಳಿಗೂ ಶಾಸನಸಭೆಗಳ ಅಧಿಕಾರ ಸ್ಥಾನಗಳಿಗೂ ರಾಜೀನಾಮೆಗಳನ್ನು ಕೊಟ್ಟುದು ಅಸಹಕಾರ ಚಳುವಳಿಯ ಮೊದಲನೆಯ ಮೆಟ್ಟಿಲೆಂದು ಹೇಳಲಾಗಿದೆ

### ಜಾತೀ ಸೌಹಾರ್ದ

ಪ್ರಾಂತ ಕಾಂಗ್ರೆಸ್ ಕಮಿಟಿಗಳು ವಿವಿಧ ಪಂಗಡಗಳಲ್ಲಿ ಐಕ್ಯಮತ್ಯ, ಸೌಹಾರ್ದತೆಯನ್ನುಂಟುಮಾಡಬೇಕು. ಚಿಕ್ಕ ಪುಟ್ಟ ವ್ಯಾಜ್ಯಗಳಿಗೆ ಕಾಂಗ್ರೆಸು ಅವಕಾಶ ಕೊಡಕೂಡದು ಸ್ವಾತಂತ್ರ್ಯ ಧ್ಯೇಯಕ್ಕಾಗಿ ಎಲ್ಲರ ಬೆಂಬಲ ಪಡೆಯಬೇಕು ಎಂಬುದಾಗಿ ಕಾಂಗ್ರೆಸ್ ಜನರಲ್ ಸೆಕ್ರೆಟರಿಯವರು ಪ್ರಾಂತ ಕಾಂಗ್ರೆಸ್ ಕಮಿಟಿಗಳಿಗೆ ತಿಳಿಸಿದ್ದಾರೆ

### ಪಂಡಿತ ಮಾಳವೀಯರ ೭೯ನೆಯ ಜನ್ಮದಿನೋತ್ಸವ

ಪಂಡಿತ ಮದನಮೋಹನ ಮಾಳವೀಯಜಿಯವರ ೭೯ನೆ ವರ್ಷದ ಜನ್ಮದಿನೋತ್ಸವವನ್ನು ಕಾಶಿ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಜನವರಿ ೩ರಲ್ಲಿ ಬಹಳ ವೈಭವದಿಂದ ಆಚರಿಸಲಾಯಿತು ಪಂಡಿತರೂ ಶಾಸ್ತ್ರಿಗಳೂ ಮಾಳವೀಯರ

ಮ... ಳನ ... ವಿದ ಮಾ... ತಾ... ಸಭೆ ಹನ ಳವ ಪ್ರಶ ಜಗ ಕೊ ಕಾಶಿ ಆಟ ಉಪ ಹೊ ರಕ್ಕೆ ಪಿಸಿ ...ಲಿ ...ರ ಯೆ ನುಿ 'ಶ ಕಾ ಕಾ ... ಸತ ತ್ರ್ಯ ವೆ ತಗೆ ಪಕ್ಷ ಶ್ರೀ ಈ ತಿಳಿ ವರಿ ತಿಳ ... ಪ್ರೇ ಬಿದ ಗೂ ಸ್ಥಾ



# ಬ್ರಿಟಿಷ್ ಸಾಮ್ರಾಜ್ಯಾಧಿಕಾರಕ್ಕೆ ಜಿನ್ನರು ಬೆಂಬಲಕೊಡುವರು

## ಪಂಡಿತ ನೆಹರುಗಳ ಸ್ಪಷ್ಟವಾಣಿ    ರಾಮಗಡದ ಕಾಂಗ್ರೆಸು ಸಿದ್ಧತೆ

## ಮದ್ರಾಸಿನಲ್ಲಿ ಸುಭಾಸರು!    ಮದ್ರಾಸಿನಲ್ಲಿ ಅಗ್ನಿ ಪ್ರಳಯ!!

ಮನೆಗೆ ಹೋಗಿ ಪೂಜೆ ಹೋಮಾದಿಗಳನ್ನು ನಡೆಸಿದರು

ಕಾಶೀ ಹಿಂದೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಾಯಂಕಾಲ ಮಹಾಮಹೋಪಾಧ್ಯಾಯ ಪ್ರಮಥನಾಥ ತಾರಕಭೂಷಣರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದರು ಪಂಡಿತ ಮದನಮೋಹನ ಮಾಳವೀಯರು ಭಾರತಕ್ಕೆ ಅಸದಳವಾದ ಸೇವೆಯನ್ನು ಸಲ್ಲಿಸಿದ್ದಾರೆಂದು ಪ್ರಶಂಸೆ ಮಾಡಲಾಯಿತು ಅವರಿಗೆ ಜಗದೀಶನು ಆಯುರಾರೋಗ್ಯಗಳನ್ನು ಕೊಡಲೆಂದು ಪ್ರಾರ್ಥಿಸಲಾಯಿತು ಕಾಶೀ ಹಿಂದೂ ವಿಶ್ವವಿದ್ಯಾಲಯದ ಆರ್ಟ್ಸ್ ಕಾಲೇಜಿನ ವಿದ್ಯಾರ್ಥಿಗಳೂ ಉಪಾಧ್ಯಾಯರುಗಳೂ ಮೆರವಣಿಗೆ ಹೊರಟು ಪಂಡಿತ ಮಾಳವೀಯರ ಭವನಕ್ಕೆ ಹೋಗಿ ಅವರಿಗೆ ನಮಸ್ಕರಿಸಿ ಗೌರವಿಸಿದರು ಕಾಶೀ ಹಿಂದೂ ವಿಶ್ವವಿದ್ಯಾನಿಲಯದ ಅಭಿವೃದ್ಧಿಯಲ್ಲಿ ತಮಗೆ ನಿರಂತರವಾದ ಆಸಕ್ತಿ ಅಭಿಮಾನಗಳಿವೆಯೆಂದು ಪಂಡಿತ ಮಾಳವೀಯರು ನುಡಿದರು

### 'ಚರಕ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ನಂಬಿಕೆಯಿಲ್ಲ' ಕಾಂಗ್ರೆಸ್ ಸಮತಾವಾದಿ ಪಕ್ಷದ ಹೇಳಿಕೆ

ಅಖಿಲಭಾರತ ಕಾಂಗ್ರೆಸ್ ಸಮಾಜಸತ್ತಾತ್ಮಕವಾದಿ ಪಕ್ಷವು ಹೊಸ ಸ್ವಾತಂತ್ರ್ಯ ಪ್ರಮಾಣವನ್ನು ಸ್ವೀಕರಿಸುವುದಿಲ್ಲವೆಂದೂ ಮತ್ತು ಹಳೆಯ ಪ್ರತಿಜ್ಞೆಯನ್ನೇ ತೆಗೆದುಕೊಳ್ಳುವುದಾಗಿಯೂ ನಿರ್ಧರಿಸಿದೆ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಯಪ್ರಕಾಶ ನಾರಾಯಣರವರು ಈ ಬಗ್ಗೆ ತಮ್ಮ ಪಕ್ಷದ ಸದಸ್ಯರುಗಳಿಗೆ ತಿಳಿಸುವರು ಅಲ್ಲದೆ, ಗಾಂಧೀಜಿಯವರಿಗೂ ತಮ್ಮ ಪಕ್ಷದ ನಿರ್ಧಾರವನ್ನು ತಿಳಿಸುವರು.

### ಮದ್ರಾಸ್ ಪ್ರದರ್ಶನದಲ್ಲಿ ಬೆಂಕಿ

### ಸ್ಟಾಲುಗಳೆಲ್ಲಾ ಸಂಪೂರ್ಣ ಭಸ್ಮವಾದುವು

### ರಾಷ್ಟ್ರೀಯ ಧ್ವಜವು ಮಾತ್ರ ಅಚ್ಚಳಿಯದೆ ನಿಂತಿತ್ತು!

ಅಖಿಲಭಾರತ ಖಾದಿ ಮತ್ತು ಸ್ವದೇಶಿ ಪ್ರದರ್ಶನದಲ್ಲಿ ಜನವರಿ ೨ರಲ್ಲಿ ಬೆಂಕಿ ಬಿದ್ದಿತಷ್ಟೆ. ಅದು ಮಧ್ಯ ರಾತ್ರಿಯವರೆಗೂ ಉರಿಯುತ್ತಲೇ ಇದ್ದಿತು. ಎಲ್ಲಾ ಸ್ಟಾಲುಗಳೂ ಸಂಪೂರ್ಣವಾಗಿ ಸುಟ್ಟು ಹೋದವು ಪ್ರಾಣಹಾನಿಯೇನೂ ಆಗಿಲ್ಲ

ಬೆಂಕಿ ಆರಿಸುವ ಯಂತ್ರದವರು ಸ್ವಯಂಸೇವಕರ ಮತ್ತು ಪೋಲೀಸರ ಸಹಾಯದೊಡನೆ ಬೆಂಕಿಯು ಹತ್ತಿರದ ಸಿನೆಮಾಕ್ಕೆ ಆವರಿಸದಂತೆ ತಡೆದರು.

ಮೇಲ್ಭಾಗದಲ್ಲಿ ಹಾರಾಡುತ್ತಿದ್ದ ರಾಷ್ಟ್ರೀಯ ಧ್ವಜವು ಮಾತ್ರ ಏನೂ ತೊಂದರೆಯಿಲ್ಲದೆ ಇದ್ದಿತು. ಬೆಂಕಿಯುರಿಯುತ್ತಿದ್ದರೆ ಮಧ್ಯದಲ್ಲಿ ಈ ಬಾವುಟವು ದೃಗ್ಗೋಚರವಾಗುತ್ತಿದ್ದಿತು. ರಾತ್ರಿ ೮ ಘಂಟೆಯ ಸಮಯದಲ್ಲಿ ಕಾಂಗ್ರೆಸ್ ಭವನದ ಮುಖ್ಯ ಕಟ್ಟಡದ ಹಿಂಭಾಗದ ಮೇಲ್ಛಾವಣಿಯು ಕುಸಿದು ಬಿದ್ದಿತು ಅನೇಕ ಪ್ರದೇಶಗಳಲ್ಲಿ ಕೇವಲ ಗೋಡೆಗಳು ಮಾತ್ರ ಕಾಣಬರುತ್ತಿದ್ದವು ಕಾಂಗ್ರೆಸ್ ಭವನದ ಮುಂಭಾಗವೂ ಕೂಡ ಸ್ವಲ್ಪ ನಷ್ಟ ಹೊಂದಿದೆ

ಈ ಕಟ್ಟಡಕ್ಕೆ ೫೦,೦೦೦ ರೂಪಾಯಿಗಳ ವೆಚ್ಚವಾಗಿತ್ತು ೨೫,೦೦೦ಕ್ಕೆ ಇದನ್ನು ವಿಮೆ ಮಾಡಲಾಗಿದೆಯಂತೆ!

ಕಾಂಗ್ರೆಸ್ಸಿನ ಕೆಲವು ಕಾಗದ ಪತ್ರಗಳೂ ಮತ್ತು ಕಾಂಗ್ರೆಸ್ಸಿನ ಹಣವೂ ರಕ್ಷಿಸಲ್ಪಟ್ಟವು. ಪ್ರಾಂತ ಕಾಂಗ್ರೆಸ್ ಕಮಿಟಿಯ ಅನೇಕ ಕಾಗದ ಪತ್ರಗಳು ಸುಟ್ಟು ಹೋದವು

### ನೆಹರು—ಜಿನ್ನಾ ಮಾತುಕತೆ

ಮುಸ್ಲಿಂ ಲೀಗ್ ವಿಚಾರವಾಗಿ ಪಂಡಿತ ನೆಹರೂರವರನ್ನು ಪ್ರಶ್ನಿಸಲಾಗಿ ಮಿ॥ ಜಿನ್ನಾರವರು ಭಾರತದ ಮೇಲೆ ಬ್ರಿಟಿಷಿನ ಸಾಮ್ರಾಜ್ಯಾಧಿಕಾರವನ್ನು ಸ್ಥಿರಪಡಿಸಬೇಕೆಂದಿದ್ದಾರೆ ಮಿ॥ ಜಿನ್ನಾರೊಡನೆ ಸಂಧಾನ ನಡೆಸಲು ಸಾಧ್ಯವಿಲ್ಲ ಎಂದರು.

### ರಾಜಕೀಯ ಸುಧಾರಣೆ

ಸಂಯುಕ್ತ ಪ್ರಾಂತಗಳಿಗೆ ಸೇರಿದ ರಾಮಪುರದ ನವಾಬರು ಹೊಸ ರಾಜಕೀಯ ಸುಧಾರಣೆಗಳ ಪ್ರಕಟಣೆ ಮಾಡಿದ್ದಾರೆ ಹಿಂದು ಗೃಹಸ್ಥರೊಬ್ಬರು ಇದೇ ಮೊದಲಾಗಿ ಸಭೆಯ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ.

ಹೊಸಡೆಲ್ಲಿಯಲ್ಲಿ ಜನವರಿ ೨೨ರಲ್ಲಿ ಲೇಬರ್ ಸಮ್ಮೇಳನ ನಡೆಯುವುದು. ಈ ಸಮ್ಮೇಳನದಲ್ಲಿ ಕೂಲಿಗಾರರಿಗೆ ಸಂಬಂಧಪಟ್ಟ ಅನೇಕ ವಿಷಯಗಳು ಚರ್ಚಿಸಲ್ಪಡುವುವು.

ಲಾಹೋರಿನಲ್ಲಿ ಹಿಂದು ಮುಖಂಡರಾದ ರಾಯ್ ಬಹದ್ದೂರ್ ಬೇಲಿರಾಮರನ್ನು ಒಬ್ಬ ಪಠಾಣನು ಉನ್ಮತ್ತಾವಸ್ಥೆಯಲ್ಲಿ ಕೊಲೆ ಮಾಡಿದನು. ಅವರ ಶವಸಂಸ್ಕಾರ ಮೆರವಣಿಗೆಯು ಹೋಗುತ್ತಿದ್ದಾಗ ಜಯರ್ ಸಮಾಜದ ಗುಂಪಿಗೂ ಮುಸ್ಲಿಂ ವಿದ್ಯಾರ್ಥಿಗಳಿಗೂ ಹೊಡೆದಾಟವಾಯಿತು ಪೋಲೀಸರು ಬಂದು ಶಾಂತಿ ಸ್ಥಾಪಿಸಿದರು.

ಬೊಂಬಾಯಿ ಸರ್ಕಾರದವರು ಬೊಂಬಾಯಿ ನಗರದಲ್ಲಿ ೧೯ ಮಾದರಿ ಆಹಾರ ಪದಾರ್ಥಗಳ ಅಂಗಡಿಗಳನ್ನು ತೆರೆದು ಈ ಮೂಲಕ ಆಹಾರ ಪದಾರ್ಥಗಳ ಧಾರಣೆವಾಸಿಯನ್ನು ಹತೋಟಿಯಲ್ಲಿಟ್ಟಿರುವರು.

### ಬೇಂಕು ಮೊಕದ್ದಮೆ

ತಿರುವಾಂಕೂರು ಮತ್ತು ಕ್ವಿಲನ್ ಬೇಂಕುಗಳ ನಂಬಿಗೆ ದ್ರೋಹ ಮೊಕದ್ದಮೆಯ ತೀರ್ಮಾನ ಕೊಡಲಾಯಿತು. ಅದರಲ್ಲಿ ಹಲವರಿಗೆ ಶಿಕ್ಷೆ ವಿಧಿಸಲಾಗಿದೆ

### ಮುಖ್ಯ ಮಂತ್ರಿ ಪದವಿ

ಸರ್ ಟಿ. ವಿಜಯ ರಾಘವಾಚಾರ್ಯರಿಗೆ ಮೇವಾಡದ ಮುಖ್ಯ ಮಂತ್ರಿಯ ಅಧಿಕಾರವು ದೊರಕಿತು.

### ಬಂಗಾಳ ಕಾಂಗ್ರೆಸು

ಬಂಗಾಳದ ಕಾಂಗ್ರೆಸು ಕಮಿಟಿಯ ವಿಚಾರ ಬಹಳ ಗೊಂದಲವಾಗಿದೆ ವರ್ಕಿಂಗ್ ಕಮಿಟಿಯ ನಿರ್ಣಯಕ್ಕೆ ಅಲ್ಲಿನವರು ವಿಧೇಯರಾಗಿ ನಡೆಯುವುದಿಲ್ಲ

ಹಳೆಯ ಮತ್ತು ಹೊಸ ಬಂಗಾಳ ಕಾಂಗ್ರೆಸ್ ಸಮಿತಿಗಳೊಳಗೆ ತೀರ್ಮಾನ ಮಾಡಲು ಡಾ॥ ರವೀಂದ್ರನಾಥ ಠಾಗೋರರಿಗೆ ಒಪ್ಪಿಸಿಕೊಡಬೇಕೆಂಬ ವಿಚಾರವು ಆಗುತ್ತಿದೆ

### ಹಿಂದೂ ಸೈನ್ಯ

ಕಲ್ಕತ್ತದಲ್ಲಿ ಹಿಂದೂ ಮಹಾಸಭೆಯು ನೆರೆದಾಗ, ಹಿಂದೂ ಸೈನ್ಯವೊಂದನ್ನು ಏರ್ಪಡಿಸಬೇಕೆಂದೂ ಡಾ॥ ಮುಂಜೆಯವರು ಇದರ ಸೇನಾಧಿಪತಿಗಳಾಗಬೇಕೆಂದೂ ನಿರ್ಣಯವಾಯಿತು. ೧ ಲಕ್ಷ ರೂಪಾಯಿಗಳ ದಾನವು ಅದಕ್ಕಾಗಿ ಬಂದಿದೆ.

### ಸುಭಾಸರು ಮತ್ತು ಪ್ರಸಾದರ ಹೇಳಿಕೆಗಳು

### ಯಾರು ಸುಳ್ಳು ಹೇಳುವುದು

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನಲ್ಲಿ ಅಧ್ಯಕ್ಷ ಭಾಷಣ ಕೊಡುತ್ತಾ ಬಾಬು ಸುಭಾಸಚಂದ್ರ ಬೋಸರು ಇಂದಿನ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಮಂದಗತಿಯನ್ನು ಖಂಡಿಸಿ, ಬಂಗಾಳದವರು ಹೋರಾಟ ಹೂಡದೆ ಅಶಾಂತರಾಗಿರುವರೆಂದೂ, ಬಂಗಾಳ ಪ್ರಾಂತ್ಯದಲ್ಲಿ ಮಾತ್ರವಾದರೂ, ಸತ್ಯಾಗ್ರಹವನ್ನು ಆರಂಭಿಸಲು ಸಮ್ಮತಿ ಕೊಡಬೇಕೆಂದು ತಾವು ವರ್ಕಿಂಗ್ ಕಮಿಟಿಯೊಡನೆ ಕೇಳಿರುವುದಾಗಿಯೂ, ಆದಕ್ಕೆ ಅವರು ಸಮ್ಮತಿ ಕೊಡಲಿಲ್ಲವೆಂದೂ ಹೇಳಿದ್ದರು.

ಇದಕ್ಕೆ ಉತ್ತರ ಕೊಡುತ್ತಾ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು, ಹಾಗೆ ಸಮ್ಮತಿಯನ್ನು ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಕೇಳಿದ್ದೇ ಇಲ್ಲವೆಂದು ಪ್ರಕಟಿಸಿರುತ್ತಾರೆ. ಇವರಲ್ಲಿ ಯಾರು ಸುಳ್ಳು ಹೇಳುವುದೋ ತಿಳಿಯದು.

### ಶ್ರೀ ಭಾಷ್ಯಂರ ಬಿಡುಗಡೆ

ಮೊನ್ನೆ ತಾನೇ ಮೈಸೂರಲ್ಲಿ ಬಂಧನಕ್ಕೊಳಗಾದ ಶ್ರೀ ಭಾಷ್ಯಂ ಮೊದಲಾದವರನ್ನು ಅನಿರೀಕ್ಷಿತವಾಗಿ ಬಿಡುಗಡೆ ಮಾಡಿರುವರೆಂದು ತಿಳಿದಿದೆ.

### ರಾಮಗಡ ಕಾಂಗ್ರೆಸು

ರಾಮಗಡ ಕಾಂಗ್ರೆಸಿನ ಸಿದ್ಧತೆಗಳನ್ನು ಭರದಿಂದ ಜರಗಿಸಲು ಪಾಟ್ನಾದಲ್ಲಿ ಸ್ವಾಗತ ಸಮಿತಿಯು ಸಭೆ ಸೇರಿತು.

ಅಖಿಲಭಾರತ ಕಾಂಗ್ರೆಸ್ [illegible] ಯುದ್ಧಪರಿಸ್ಥಿತಿಯ ಕ [illegible] ಪ್ರಕಟಣೆಯನ್ನು ಪಕ್ಷ [illegible] ದರೊಳ ಪ್ರಕಟಿಸುವುದು

### ಬೋಸರು ಮದ್ರಾಸಿಗೆ

ಸುಭಾಸಬೋಸರು [illegible] ರಂದು ಮದ್ರಾಸಿಗೆ ಬಂದಿರುವರು.

ಬೋಸರು ಎಲ್ಲೂರಿನಲ್ಲಿ ರಾಜಕೀಯ ಸಂತಪ್ತರ ಸಮ್ಮೇಳನದ ಅಧ್ಯಕ್ಷತೆ ವಹಿಸಲು ತಾ ೯ರಂದು ಬಂದಿದ್ದರು. ಅವರಿಗ ಅಲ್ಲಿ ಬಹಳ ಸ್ವಾಗತಗಳಾದುವು.

### ಜಾತೀಯ ಸೌಹಾರ್ದಕ್ಕೆ ಸಹಾಯ

### ವೈಸರಾಯರ ಭರವಸೆ

ನಾಗಪುರದಲ್ಲಿ ವೈಸರಾಯರು [illegible] ಮಾತನಾಡುತ್ತಾ ಇಂದಿನ ಪರಿಸ್ಥಿತಿಯನ್ನು ಸುಧಾರಿಸಲು, ಹಾಗೂ ಜಾತೀಯ ಸೌಹಾರ್ದವನ್ನು ಬೆಳೆಸಲು, ತಾನು ಅತ್ಯಂತ ಸಹಾಯಿಯಾಗುವೆನೆಂದು ಹೇಳಿದರು.

### ಜಿನ್ನಾ ಜವಾಹಿರ ಪತ್ರಗಳು

ಜಿನ್ನರೊಡನೆ ಇನ್ನು ಮುಂದಕ್ಕೆ ನಾನು ಮಾತುಕತೆ ಮಾಡಲಾರೆ, ಅವರ ಉದ್ದೇಶ ಮತ್ತು ನಮ್ಮ ಉದ್ದೇಶಗಳಿಗೆ ಅಜಗಜಾಂತರ ವ್ಯತ್ಯಾಸವಿದೆ. ಎಂದು ಜವಾಹಿರಲಾಲರು ಹೇಳಿರುವರಷ್ಟೆ! ಆ ಕುರಿತು ಕೆನ್ನನ್ನು ಹೇಳಿದ್ದು ನ್ಯಾಯವಾಗಲಿಲ್ಲವೆಂದು ಜಿನ್ನರು—ನೆಹರುಗಳೊಡನೆ ತನಗಾದ ಪತ್ರ ವ್ಯವಹಾರವನ್ನು ಪ್ರಕಟಿಸಿರುವರು.

# ಜಿನ್ನರ ದೇಶದ್ರೋಹಕ್ಕೆ ಇನ್ನೆಷ್ಟು ಪ್ರೋತ್ಸಾಹ ಕೊಡುವುದೇ?

## ಬ್ರಿಟಿಷ್ ನೀತಿಯನ್ನು ಕಾರ್ಲ ಹೀತರು ಖಂಡಿಸುತ್ತಾರೆ!

ಭಾರತದ ವಿಷಯವನ್ನು ಆಲೋಚಿಸಲಿಕ್ಕೆ ಮಿ. ಚೆಂಬರಲೇನರಿಗೆ ಈಗ ಸಮಯವೇ ದೊರಕುವುದಿಲ್ಲ. ಯುದ್ಧ ವ್ಯವಸಾಯವನ್ನು ಮುಂದೊತ್ತುವುದರಲ್ಲಿ ಅವರು ತಲ್ಲೀನರಾಗಿದ್ದಾರೆ. ಮತ್ತೆ ಭಾರತದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟನ್ನು ಪರಿಹಾರ ಮಾಡಲಿಕ್ಕೆ ಮಹಾತ್ಮಾಗಾಂಧಿಯವರಂಥ ಸಮರ್ಥ ಉದಾರ, ಮತ್ತು ದೂರದೃಷ್ಟಿಯ ಮಹಾಪುರುಷರು ಒಬ್ಬರೂ ಇರುವುದಿಲ್ಲ. ಸರಕಾರವು ಮಾತ್ರ ಅವರೊಡನೆ ಆಗ ಸೆಣಗಾಡಿ ಅವರನ್ನು ದೂರವಿರಿಸಿದೆ. ಬಿಕ್ಕಟ್ಟನ್ನು ಪರಿಹರಿಸುವ ಸರ್ವಭಾರವೂ ಈ ಕಾರಣದಿಂದ ಸರಕಾರದ ಮೇಲೆಯೇ ಇರುವುದು. ಸರಕಾರದ ಈ ಕರ್ತವ್ಯದಲ್ಲಿ ಲೋಪ ಉಂಟಾದರೆ ಭವಿಷ್ಯವು ಅಂಧಕಾರಮಯವಾಗುವುದು ಎಂದು ಇಂಡಿಯಾ ಕನ್ಸಿಲಿಯೇಶನ್ ಗ್ರೂಪ ಎಂಬ ಭಾರತ ಹಿತಚಿಂತಕ ಮಂಡಲಿಯ ಅಧ್ಯಕ್ಷ ಮಿ. ಕಾರ್ಲ ಹೀತರವರು ಪೀಸ್ ನ್ಯೂಸ ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು ಬ್ರಿಟಿಷ ಸರಕಾರಕ್ಕೆ ಅದರ ಕರ್ತವ್ಯಗಳ ಕುರಿತು ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

### ಸಮಯದ ಸದುಪಯೋಗ ಮಾಡಿದ್ದರೆ?

'ಯೂರೋಪದ ಮಹಾಯುದ್ಧದಲ್ಲಿ ತೊಡಗಿದ ಬ್ರಿಟನಿನ ಯುದ್ಧ ನೀತಿ ಮತ್ತು ಅದರ ಉದ್ದೇಶಗಳು ಭಾರತಕ್ಕೆ ಸಂಬಂಧಪಟ್ಟು ಎಂಥವಿರುತ್ತವೆ ಎಂದು ಕಾಂಗ್ರೆಸು ಬ್ರಿಟಿಷಸರಕಾರವನ್ನು ಪ್ರಶ್ನಿಸಿದಾಗ, ಅದಕ್ಕೆ ತೃಪ್ತಿಕರವಾದ ಉತ್ತರವನ್ನು ಕೊಟ್ಟು, ಸರಕಾರವು ಸಮಯದ ಸದುಪಯೋಗ ಮಾಡಿದ್ದರೆ ಬ್ರಿಟನ್ ಮತ್ತು ಭಾರತದೊಳಗಿನ ಸ್ನೇಹ ಸಂಬಂಧವು ಚಿರಸ್ಥಾಯಿಯಾಗುತ್ತಿತ್ತು. ಆದರೆ ಸರಕಾರವು ಆ ಪ್ರಶ್ನೆಗೆ ಸರಿಯಾದ ಉತ್ತರವನ್ನುಕೊಡದೆ ಭಾರತದಲ್ಲಿ ಕ್ರಾಂತಿಕಾರಿಗಳು ಪುನಃ ತಲೆ ಎತ್ತುವಂತೆ ಮಾಡಿದೆ.

### ಸರಕಾರದ ಕರ್ತವ್ಯ

ಹಿಂದಿನ ಯುದ್ಧ ಸಂದರ್ಭದಲ್ಲಿ ಕೆನಡ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕದಂಥ ಸಾಮಂತರಾಜ್ಯಗಳ ಪ್ರತಿನಿಧಿಗಳನ್ನು ಕರೆಸಿ, ಅವರಿಗೆ ಸಂಪೂರ್ಣ ಸ್ವರಾಜ್ಯದ ಭರವಸೆಯನ್ನಿತ್ತು ಯುದ್ಧದಲ್ಲಿ ಅವರ ಸಹಾಯ ಸಹಾನುಭೂತಿಗಳನ್ನು ಪಡೆದಂತೆ, ಈ ಯುದ್ಧ ಸಂದರ್ಭದಲ್ಲಿಯಾದರೂ ಭಾರತದ ಜನ ಪ್ರತಿನಿಧಿಗಳಿಗೆ ಅಂತಹದೇ ಭರವಸೆಯನ್ನು ಕೊಟ್ಟು, ಭಾರತದ ಸಹಾಯ ಸಹಕಾರಗಳನ್ನು ಬ್ರಿಟನ್ನು ಪಡೆಯಬಹುದಾಗಿತ್ತು. ಆದರೆ ಈ ಸಂದರ್ಭದಲ್ಲಿ ಬ್ರಿಟಿಷ ಸರಕಾರವು ಮಾಡಿದ ಕಾರ್ಯಗಳು ಮಾತ್ರ ಇದಕ್ಕೆ ವಿಪರೀತವಾಗಿರುವವು. ವಿಭಾಗಿಸಿ ಆಳುವುದು ತನ್ನ ಧ್ಯೇಯವಲ್ಲವೆಂದು ಬ್ರಿಟಿಷ ಸರಕಾರವು ಆಗಾಗ ಹೇಳುತ್ತ ಬಂದಿರುವುದಾದರೂ, ಕಾಂಗ್ರೆಸ ಮತ್ತು ಮುಸ್ಲಿಂ ಲೀಗಿನೊಂದಿಗೆ ಒಡಂಬಡಿಕೆಯಾದ ಹೊರತು ಭಾರತ ರಾಜಕೀಯ ಸುಧಾರಣೆಯಾಗದು ಎಂದು ಬ್ರಿಟಿಷ ಸರಕಾರವು ಹೇಳಿದ ಕಾರಣದಿಂದ ಮಿ. ಜಿನ್ನರ ಮೂರು ಕಾಲಿನ ಹುಂಜಕ್ಕೇ ಸರಕಾರವು ಗಾಳಿ ಹಾಕಿ ಅದನ್ನು ಕಾದಾಟಕ್ಕೆ ಪ್ರೋತ್ಸಾಹಿಸದಂತಾಗಿದೆ. ಮತ್ತು ಈ ಸಂದರ್ಭದಲ್ಲಿಯಾದರೂ ಬ್ರಿಟಿಷ ಸರಕಾರದ ವಿಭಾಗಿಸಿ ಆಳುವ ನೀತಿಯೇ ಸ್ಪಷ್ಟ ಕೆಲಸಮಾಡುತ್ತಿರುವುದು ಕಂಡುಬರುತ್ತದೆ. ಮಿ. ಜಿನ್ನರ ಮುಸ್ಲಿಂ ಲೀಗು ತನ್ನ ಛಲವನ್ನು ಬಿಡದೆ, ಭಾರತದ ರಾಜಕೀಯ ಪ್ರಗತಿಯನ್ನು ತಡೆಯುವುದನ್ನು ನೋಡಿ, ಬ್ರಿಟಿಷ ಸರಕಾರವು ಈಗ ತನ್ನೊಳಗೇ ಸಂತೋಷಿಸಬಹುದಾದರೂ ಈ ರೀತಿಯ ಪರಿಣಾಮವು ಮಾತ್ರ ಭಾರತಕ್ಕೆ ಎಷ್ಟು ಅನಿಷ್ಟಕಾರಿಯಾಗುವುದೋ, ಅದಕ್ಕೂ ಹೆಚ್ಚಾಗಿ ಬ್ರಿಟನಿಗೆ ಅನಿಷ್ಟಕಾರಿ ಆಗದಿರಲಾರದು.

### ಕಾಂಗ್ರೆಸಿಗೆ ವಿರೋಧ

ಮುಂಬಾಯಿಯ ಒಬ್ಬಾನೊಬ್ಬ ಗಿರಣಿ ಮಾಲಿಕನಂತೆ ಇತರ ಕೆಲವು ಜನರೂ ಕಾಂಗ್ರೆಸನ್ನು ವಿರೋಧಿಸುತ್ತಿರುವುದರಿಂದ, ಕಾಂಗ್ರೆಸಿನ ಬೇಳಿಕೆಯನ್ನು ಪೂರೈಸುವುದು ಕಠಿಣವಾಗಿದೆ ಎಂದು ಹೇಳುತ್ತಿರುವ ಬ್ರಿಟಿಷರ ಆಕ್ಷೇಪಗಳಿಗೆ ಉತ್ತರವನ್ನು ಕೊಡುತ್ತ ... ರೆಜಿನಾಲ್ಡ ರೆನೋಲ್ಡ್ಸ ಎಂಬ ಇಂಗ್ಲೀಷರು ಮಂಚೆಸ್ಟರ ಗಾರ್ಡಿಯನ ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ: ಬೊಂಬಾಯಿಯ ಗಿರಣಿಮಾಲಕ ಮಾತುಗಳನ್ನು ಭಾರತದ ೩೫ಂ ಮಿಲಿಯ ಪ್ರಜೆಗಳು ಪುರಸ್ಕರಿಸುವುದಿಲ್ಲ; ಮಾತ್ರವಲ್ಲ, ಅವರು ಆ ಮಾತುಗಳನ್ನು ವಿರೋಧಿಸುತ್ತ ಕಾಂಗ್ರೆಸಿಗೇ ಬೆಂಬಲ ಕೊಡುತ್ತಿರುವುದು ಕಂಡು ಬರುತ್ತದೆ. ಪ್ರಜಾತಂತ್ರದ ರಕ್ಷಣೆಗೆ ಬ್ರಿಟನು ಹೋರಾಡುತ್ತಿರುವುದಾದರೆ, ಭಾರತದಲ್ಲಿ ಬ್ರಿಟನು ಭಾರತೀಯರ ಅಭಿಪ್ರಾಯವನ್ನು ಸಂಗ್ರಹಿಸಿ ಅದರಂತೆ ನಡೆಕೊಳ್ಳಬೇಕಲ್ಲದೆ, ಯಾರೋ ಒಬ್ಬ ಗಿರಣಿ ಮಾಲಿಕನ ಮಾತಿನಂತೆ ಅಲ್ಲ. ಭಾರತೀಯರ ಅಭಿಪ್ರಾಯವೇ ಕಾಂಗ್ರೆಸಿನ ಅಭಿಪ್ರಾಯವಾಗಿದೆ. ಭಾರತದಲ್ಲಿ ಬ್ರಿಟಿಷರ ರಾಜ್ಯಾಡಳಿತವು ಅಲ್ಪಸಂಖ್ಯಾಕರಿಗೆ ವರದಾನವಾಗಿರುವುದೆಂಬ ಸೊಲ್ಲು, ಮುಸ್ಲಿಂ ಲೀಗಿನಂಥ ಕೆಲಕೆಲವು ಕಡೆಗಳಿಂದ ಕೇಳಿ ಬರುತ್ತದೆ. ಆದರೆ ಈ ಸೊಲ್ಲನ್ನು ಅಲ್ಪಸಂಖ್ಯಾಕ ಮುಖಂಡರೇ ಖಂಡಿಸಿರುವರು. ಮುಸ್ಲಿಂ ಲೀಗೇ ಭಾರತೀಯ ಮುಸಲ್ಮಾನರ ಏಕಮಾತ್ರ ಪ್ರಾತಿನಿಧಿಕ ಸಂಸ್ಥೆಯಾಗಿರುವುದೆಂದು ಅದು ಹೇಳುತ್ತಿರುವುದನ್ನು ಶಿಯರು, ಅಹ್ರಾರ ಮುಸಲ್ಮಾನರು, ಜಮಾಯತ್ ಉಲೇಮ ಮುಸಲ್ಮಾನರು, ರಾಷ್ಟ್ರೀಯ ಮುಸಲ್ಮಾನರು, ಗಡಿನಾಡಿನ ಕೆಂಪಂಗಿ ಮುಸಲ್ಮಾನರ —ಇವರೆಲ್ಲರೂ ಖಂಡಿಸಿದ್ದಾರೆ. ದೇಶೀ ಕ್ರೈಸ್ತರು ಒಮ್ಮುಖದಿಂದ ಕಾಂಗ್ರೆಸಿಗೆ ಬೆಂಬಲ ಕೊಡುತ್ತಿದ್ದಾರೆ. ಹೀಗೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಆದುದರಿಂದ ಕಾಂಗ್ರೆಸನ್ನು ಸಮಾಧಾನಪಡಿಸುವ ಒಂದೇ ಒಂದು ಉಪಾಯದಿಂದ ಮಾತ್ರ ಸರಕಾರವು ಭಾರತದ ಬಿಕ್ಕಟ್ಟನ್ನು ದೂರಮಾಡಿ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಬಹುದು ಮತ್ತು ಯುದ್ಧದಲ್ಲಿ ಈ ದೇಶದ ಹಾರ್ದಿಕ ಸಹಾಯವನ್ನು ಪಡೆಯಬಹುದು.

---

**ಸ್ವದೇಶಾಭಿಮಾನಿಗೆ**
**ಚಂದಾದಾರರಾಗಿರಿ**

---


# CANARA BANK LIMITED.

**The only Bank to have a Share holders Association to Safeguard the interests of Depositors, Constituents and Share holders.**

**RESOURCES OF A CRORE.**



## 92 ವರ್ಷ ಪ್ರಾಯದವನು ಬಹು ದೃಢಕಾಯನಾಗಿ ಇದ್ದಾನೆ!

### ಉಪ್ಪರಿಗೆಯನ್ನು ಸುಲಭವಾಗಿ ಹತ್ತಿ ಇಳಿಯಬಲ್ಲನು!

ಕ್ರುಶನ್ ಲವಣವನ್ನು ಪ್ರತಿನಿತ್ಯವೂ ಬೆಳಿಗ್ಗೆ ಸೇವಿಸುವನು

ಮಿಸೆಸ್ ಎ ಜೆ. ಡಬ್ಲ್ಯು ಎಂಬಾಕೆಯು ಹೀಗೆಂದು ಬರೆಯುತ್ತಾಳೆ: ನನ್ನ ತಂದೆಗೆ ಕ್ರುಶನ್ ಲವಣದಿಂದ ದೊರೆತ ಅತ್ಯಾಶ್ಚರ್ಯಕರವಾದ ಗುಣಾಂಶದ ಕುರಿತು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಇಂತಾ ಫಲಿತಾಂಶಗಳು ವಿಚಿತ್ರ ಘಟನಗಳೆಂದು ಹೇಳಬಹುದು. ಆತನು 92 ವರ್ಷ ಪ್ರಾಯದವನಾದರೂ ಪೂರ್ಣ ಗಟ್ಟಿಗನಾಗಿದ್ದಾನೆ. ಅವನು ಚುರುಕಾಗಿ ಚಲಿಸಬಲ್ಲನು, ಮಾತ್ರವಲ್ಲದೆ, ಉಪ್ಪರಿಗೆಯನ್ನು ಸುಲಭವಾಗಿ ಏರಿ ಇಳಿಯುತ್ತಾನೆ. ಅವನ ಸ್ನೇಹಿತರು ಅವನ ಚುರುಕುತನವನ್ನು ನೋಡಿ ಬಹಳ ದಿಗಿಲುಪಡುತ್ತಾರೆ. ಅನ್ನ ಬಹುಕಾಲದ ಕ್ರುಶನ್ ಲವಣ ಮಿಶ್ರಿತ ಚಹಾ ಸೇವನೆಯೇ ಇದಕ್ಕೆ ಕಾರಣವೆಂದು ತಿಳಿಸುತ್ತಾನೆ. ನನ್ನ ಮಿತ್ರಮಂಡಳಿಗೆಲ್ಲಾ ನಾವು ಕ್ರುಶನ್ ಲವಣವನ್ನು ಶಿಫಾರಸುಮಾಡುತ್ತೇವೆ. ಪ್ರತಿಯೊಂದು ಕುಟುಂಬದಲ್ಲಿ ಕ್ರುಶನ್ ಲವಣವು ಅಗತ್ಯವಿರತಕ್ಕದ್ದು ಎಂಬುದಾಗಿ ನನಗೆ ತೋರುತ್ತದೆ.

ಆರೋಗ್ಯಕ್ಕೆ ಮುಖ್ಯ ಸಾಧನವಾದ ಒಳಗಿನ ಅಂಗಗಳನ್ನು ಕಶ್ಮಲರಹಿತವಾಗಿರಿಸದೆ ಇರುವುದರಿಂದಲೇ ಹೆಚ್ಚಿನವರ ಅವರ ಪ್ರಾಯ ಬರುವ ಮುಂಚಿತವಾಗಿಯೇ ಮುದುಕರಾಗುತ್ತಾರೆ.

ಕಾರಣವಾಗಿ ಅವರ ಕ್ರುಶನ್ ಲವಣವನ್ನು ಸೇವನೆಯನ್ನು ಆರಂಭಿಸುವರು. ಆ ಕಲ್ಲು ... ಜೀವಮಾನದಲ್ಲಿ ಮೊದಲನೆ ಬಾರಿಯಾಗಿ ಅವರ ಶರೀರದೊಳಗಿರುವ ಕಶ್ಮಲ ಪದಾರ್ಥವನ್ನು ಹೊರಗೆ ಹಾಕುತ್ತದೆ. ಹೀಗಾಗಿ ಕರುಳೊಳಗೆ ಹಲವು ದಿನಗಳಿಂದ ಕೊಳೆತು ಹೋದಂಥ ಪದಾರ್ಥವು ಪೂರ್ತಿಯಾಗಿ ಹೊರಗೆ ಹೋಗಿ ಸಿವರ್ಚವಾಗುವುದು. ಲಿವರ್ ಪಿತ್ತ ಮೂತ್ರಕೋಶವು ಇದರಿಂದಾಗಿ ಕ್ರಮವಾಗಿ ಅವುಗಳ ಕೆಲಸಗಳನ್ನು ಚುರುಕಿನಿಂದ ಮಾಡಲು ತೊಡಗುವವು. ಇದರ ಪರಿಣಾಮವಾಗಿ ನಮ್ಮ ದೇಹದ ಎಲ್ಲಾ ನರನಾಡಿಗಳಲ್ಲಿ ಶುದ್ಧ ರಕ್ತ ಚಲಾವಣೆಯು ಸರಾಗವಾಗಿ ನಡೆದು ನಮ್ಮ ಪ್ರತಿಯೊಂದು ಅವಯವಗಳಿಗೆ ಆರೋಗ್ಯ ಬಲ ಮತ್ತು ಹೊಸ ಹುರುಪನ್ನುಂಟು ಮಾಡುತ್ತದೆ.

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

No. 26.

# ಐಕ್ಯವಿಲ್ಲದೆ ಸ್ವರಾಜ್ಯವಿಲ್ಲವೇ?

## ಐಕ್ಯಭಂಗವನ್ನು ಮಾಡಿದವರು ಯಾರು?

ಭಾರತ ಸ್ವಾತಂತ್ರ್ಯದ ಪ್ರಶ್ನೆಯು ಎದುರು ಬಂದಾಗಲೆಲ್ಲ—'ಭಾರತೀಯರಲ್ಲಿ ಐಕ್ಯವಿಲ್ಲ, ಆದುದರಿಂದ ಭಾರತವು ಸ್ವತಂತ್ರವಾಗಲಿಕ್ಕೆ ಅಯೋಗ್ಯ ನೀವು ಅನ್ಯೋನ್ಯವಾಗಿ ಇರಿ, ಆಗಲೇ ನಾವು ಸ್ವರಾಜ್ಯ ಕೊಟ್ಟುಬಿಡುವೆವು' ಎಂದು ಬ್ರಿಟಿಷ ಸರಕಾರವು ಹೇಳುತ್ತ ಬಂದಿದೆ ಎಷ್ಟರ ತನಕ ಹಿಂದುಸ್ಥಾನದೊಳಗಿನ ಜಾತಿಜಾತಿಗಳು ಪರಸ್ಪರ ಮೈತ್ರಿಯಿಂದ ಇರುವುದಿಲ್ಲವೋ, ಅಷ್ಟರ ತನಕ ಭಾರತದಲ್ಲಿ ವಿದೇಶೀ ಸರಕಾರವು, ದೇಶದ ಭದ್ರತೆಗೆ ಅಗತ್ಯವಾಗಿರುವುದು ಎಂದು ಬ್ರಿಟಿಷರು ಹೇಳುತ್ತ ಬಂದಿದ್ದಾರೆ ಭಾರತದ ವಿಷಯವಾಗಿ ಬ್ರಿಟಿಷರ ಯುದ್ಧ ನೀತಿಯು ಯಾವುದಾಗಿರುವದೆಂದು ಕಾಂಗ್ರೆಸು ಕೇಳಿದ ಪ್ರಶ್ನೆಗೆ–ಈಗಲಾದರೂ ಬ್ರಿಟಿಷ ಸರಕಾರವು ಜಾತೀಯ ಬೂತವನ್ನು ಎದುರು ಮಾಡಿ ಭಾರತೀಯ ಸ್ವರಾಜ್ಯಪ್ರಶ್ನೆಯನ್ನು ಹಿಂದಕ್ಕೆ ಹಾಕುವ ಪ್ರಯತ್ನಮಾಡಿದೆ

### ವಿದೇಶೀ ಸರಕಾರ ಧ್ಯೇಯ

ಪರತಂತ್ರ ಭಾರತದ ಮೇಲೆ ಶಾಸನವನ್ನು ಮಾಡುತ್ತಿರುವ ವಿದೇಶೀ ಬ್ರಿಟಿಷ ಸರಕಾರದ ನೀತಿ ಆದರ್ಶಗಳು ಯಾವು ವಿರುವುವು? ಜಾತಿ ಉಪಜಾತಿಗಳಾಗಿ ಒಡೆದುಹೋದ ಭಾರತೀಯ ಜನಾಂಗವನ್ನು ಒಂದು ಮಾಡುವ ಸತ್ಯ ಪ್ರಯತ್ನವನ್ನು ಬ್ರಿಟಿಷ್ ಸರಕಾರವು ಮಾಡುತ್ತಿರುವುದೆ? ಬ್ರಿಟಿಷರ ಆಳಿಕೆಯ ಅವಧಿಯ ಬೆಳೆದಂತೆ ಇಲ್ಲಿ ಜಾತಿ ಉಪಜಾತಿಗಳ ಸಂಖ್ಯೆಯು ಕಡಿಮೆಯಾಗುತ್ತ ಒರುತ್ತದೆಯೆ? ಅಥವಾ ಆ ಜಾತಿ ಉಪಜಾತಿಗಳು ಇನ್ನೂ ಭಿನ್ನಭಿನ್ನವಾಗಿ ಒಡೆದು ಹೋಗುತ್ತಿರುವುದ ಸಿಲ್ಲುತ್ತಲಿದೆಯೆ? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡಲಿಕ್ಕೆ ನಾವು ಇತಿಹಾಸದ ಹಾಳೆಗಳನ್ನು ಮಗುಚಿದರೆ—'ಇಲ್ಲ'ವೆಂಬ ಉತ್ತರವನ್ನು ಬಹಳ ಖೇದದಿಂದ ಕೊಡಬೇಕಾಗುತ್ತದೆ.

ಹಿಂದುಸ್ಥಾನದ ಬೇರೆ ಬೇರೆ ಜಾತಿ ಮತಗಳ ಹಿತಾಸಕ್ತಿಗಳು ಬೇರೆ ಬೇರೆಯಾಗಿರುತ್ತವೆ ಎಂಬ ಮಾತನ್ನು ಮೊತ್ತ ಮೊದಲು ಲಾರ್ಡ್ ಮಿಂಟೋರವರು ಒಪ್ಪಿದರು ಆಗಲೇ ಹಿಂದುಗಳು ಬೇರೆ, ಮುಸಲ್ಮಾನರು ಬೇರೆ ಎಂಬ ಭೇದಭಾವನೆಗೆ ಸರಕಾರದ ಕಡೆಯಿಂದ ಪುರಸ್ಕಾರವು ದೊರೆಯಿತು ಅಂದಿನಿಂದ ಹಿಂದು ಮುಸಲ್ಮಾನ ಮೊದಲಾದ ಭಾರತೀಯ ಜಾತಿಗಳ ಸಂಖ್ಯೆಯು ಒಂದೇ ಸಮನೆ ಬೆಳೆಯುತ್ತ ಬಂದಿದೆ. ಗವರ್ನ್‌ಮೆಂಟ್ ಇಂಡಿಯ ಸುಧಾರಣೆಯ ಕಾಯದೆಯಲ್ಲಿ ಬ್ರಿಟಿಷ್ ಸರಕಾರವು ಹಿಂದುಸ್ಥಾನದ ಒಂದಲ್ಲ, ಎರಡಲ್ಲ, ಡಜನಿಗೆ ಮಿಗಿಲಾದ ಜಾತಿಗಳಿಗೆ ಪ್ರತ್ಯೇಕ ಸ್ಥಾನಗಳನ್ನು ಕಲ್ಪಿಸಿ ಕೊಟ್ಟಿದೆ. ಲಾರ್ಡ್ ಮಿಂಟೋರವರ ಕಾಲದಲ್ಲಿ ಹಿಂದುಸ್ಥಾನದಲ್ಲಿ ಹಿಂದುಗಳು ಮತ್ತು ಮುಸಲ್ಮಾನರು ಎಂಬ ಎರಡು ಜಾತಿಗಳು ಮಾತ್ರ ಇದ್ದುವಾದರೆ ಈಗ ಜನರಲ್, ಶೆಡ್ಯೂಲು ಜಾತಿ, ಸ್ತ್ರೀಯರು, ಕಿರಿಸ್ತಾನರು ಎಂದು ಹತ್ತು ಹಲವು ಜಾತಿಗಳನ್ನು ಸರಕಾರವು ಗುರುತಿಸಿ ಮನ್ನಿಸಿದೆ.

### ವಿಭಾಗಿಸಿ ಆಳುವ ತಂತ್ರ

ಇನ್ನು ಹತ್ತಿಪ್ಪತ್ತು ವರ್ಷಗಳ ತನಕ ಬ್ರಿಟಿಷ್ ಸರಕಾರವೇ ಭಾಗ್ಯವನ್ನು ನಿರ್ಮಿಸುವಂಥದ್ದಾಗಿ ಉಳಿಯುವುದಾದರೆ ಆಗ ಮತ್ತೊಂದು ಸುಧಾರಣೆಯ ಮಸೂದೆಯನ್ನು ತಯಾರಿಸುವ ಸಂದರ್ಭದಲ್ಲಿ ಈಗಿರುವ ಹತ್ತಿಪ್ಪತ್ತು ಜಾತಿಗಳ ಸೃಷ್ಟಿ ಅಲ್ಲ ಇನ್ನೂ ಹತ್ತಿಪ್ಪತ್ತು ಜಾತಿಗಳನ್ನು ಸರಕಾರವು ಹುಟ್ಟಿಸಿ ಅವಕ್ಕೆ ಹೊಸ ಹೊಸ ಹೆಸರಗಳನ್ನು ಕೊಡಲೂ ಬಹುದು! ಆ ಸಮಯಕ್ಕೆ ನಮ್ಮ ದೇಶದಲ್ಲಿ ಮುಸಲ್ಮಾನರು ಎಂದಿರುವ ಈಗಿನ ಒಂದೇ ಜಾತಿಯಲ್ಲಿ ಶಿಯರು, ಸುನ್ನಿಗಳು, ಮೋಮಿನರು ಎಂದು ಎಷ್ಟೋ ಜಾತಿಗಳಾಗಲೂ ಬಹುದು. ಕ್ರೈಸ್ತರಲ್ಲಿ ಪ್ರೊಟೆಸ್ಟಾಂಟರ, ರೋಮನ್ ಕೆಥೋಲಿಕರು ಎಂದು ಹಲವು ಜಾತಿಗಳಾಗಲೂ ಬಹುದು. ಮೂಲ ನಿವಾಸಿಗಳಲ್ಲಿ ಜಾತಿ ಕೆಟ್ಟವರು ಮತ್ತು ಜಾತಿ ಕೆಡದವರು ಎಂದಾಗಲೂ ಬಹುದು! ವಿಭಾಗಿಸಿ ಆಳುವ ತಂತ್ರವು ಸಫಲವಾಗಲಿಕ್ಕೆ ಹೀಗಾಗುವುದು ಬಹಳ ಅಗತ್ಯವಾಗಿರುವುದು ಜಾತಿ ಉಪಜಾತಿಗಳು ಒಂದನ್ನೊಂದು ಕೂಡಿ ಒಂದಾಗಿ ಒಂದು ಜನಾಂಗವಾಗಿ ಇರುವುವಾದರೆ ವಿದೇಶೀ ಸರಕಾರದ ಅಗತ್ಯವಾದರೂ ಏನು ಇರುತ್ತದೆ! ಆದುದರಿಂದಲೇ ಬ್ರಿಟಿಷ್ ಸರಕಾರವು 'ಐಕ್ಯವಿಲ್ಲದೆ ಸ್ವರಾಜ್ಯವಿಲ್ಲ' ಎಂದು ಹೇಳುತ್ತಿದ್ದಾದರೂ ಐಕ್ಯವು ಉಂಟಾಗದಂತೆ ನಾನಾ ಪ್ರಯತ್ನ ನಡೆಸಿ ತಾನ ಇಲ್ಲಿ ಸದಾ ಕಾಲ ಇರಲಿಕ್ಕೆ ವ್ಯವಸ್ಥೆ ಮಾಡುತ್ತದೆ!

ಕಾಂಗ್ರೆಸಿನಂಥ ರಾಷ್ಟ್ರೀಯ ಸಂಸ್ಥೆಗಳು ಜಾತಿ ಭೇದವನ್ನು ತೆಗೆದುಹಾಕಿ ಏಕರಾಷ್ಟ್ರೀಯ ಭಾವನೆಯು ದೇಶದಲ್ಲೆಲ್ಲ ಉಂಟಾಗುವಂತೆ ಮಹಾಪ್ರಯತ್ನಗಳನ್ನು ಮಾಡುತ್ತಿರುವಾಗ, ಸರಕಾರವು ಇದ್ದ ಜಾತಿಗಳು ಸಾಲದೆಂಬಂತೆ ಹೊಸ ಹೊಸ ಜಾತಿ ಉಪಜಾತಿಗಳನ್ನು ಸೃಷ್ಟಿಸಿ ಕಲ್ಪಿಸಿ ಅವುಗಳಿಗೆ ಮನ್ನಣೆಯನ್ನು ಕೊಡುತ್ತಾ ಬರುತ್ತಿದೆ. ಬ್ರಿಟಿಷ ಸರಕಾರವು ಮಾಡಿದ ಜಾತೀಯ ನಿರ್ಧಾರ ಮತ್ತು ಬೇರೆ ಬೇರೆ ಜಾತಿ ಉಪಜಾತಿಗಳಿಗೆ ಸರಕಾರಿ ನೌಕರಿ ಚಾಕರಿಗಳನ್ನು ಹಂಚಿ ಕೊಟ್ಟ ಕ್ರಮದಿಂದ ಈ ಮಾತು ಸ್ಪಷ್ಟವಾಗುತ್ತದೆ

ಐಕ್ಯವಿಲ್ಲದೆ ಸ್ವಾತಂತ್ರ್ಯವಿಲ್ಲವೆಂದು ಹೇಳಿ ಐಕ್ಯವಾಗದಂತೆ ಸರಕಾರವೇ ಭಂಗವನ್ನು ತರುವುದಾದರೆ, ಸರಕಾರದ ಈ ಧೋರಣೆಯನ್ನು ಯಾವ ಮಾತುಗಳಿಂದ ಶ್ಲಾಘಿಸಬಹುದು?

ಎಳೆ ಮಕ್ಕಳ
ಕೋಮಲ ಚರ್ಮಕ್ಕೆ
ಉತ್ತಮವಾದ
ಪೌಡರು

ನಿಮ್ಮ ಮಗುವಿನ ಮೈ ಚರ್ಮವು ಬಹಳ ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೀತಲಕಾರಕವಾದದ್ದು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಇರಿಸುತ್ತದೆ ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಯ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ

ಇಡೀ ಜಗತ್ತಿನಲ್ಲಿ ಡಾಕ್ಟರುಗಳು, ನರ್ಸುಗಳೂ ಕುಟಿಕೂರಾ ಪೌಡರು (Cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಾರೆ ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಾಕಿ ಸಂತೋಷಪಡುತ್ತಾರೆ ಇದು ಬೆವರನ್ನು ಹೀರಿಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇರಿಸುವುದು ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ

ಮಕ್ಕಳಿಗೆ ಉಪಯುಕ್ತವಾದುದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

THE

BANK OF MANGALORE LTD.,

MANGALORE

ESTD 1931

Branches

Mudabidri & Padubidri.

Fixed Deposits will be received at following rates of interest

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly

*Savings Bank deposit 3½% on daily balances.*

All kinds of banking business transacted

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್ (ರಿಜಿ)**

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

# ಜಿನ್ನರ ದೇಶದ್ರೋಹಕ್ಕೆ ಇನ್ನಷ್ಟು ಪುಷ್ಟಿಕೊಡುವುದೇ?

## ಬ್ರಿಟಿಷ್ ನೀತಿಯನ್ನು ಕಾರ್ಲ್ ಹೀತರು ಖಂಡಿಸುತ್ತಾರೆ!

ಭಾರತದ ವಿಷಯವನ್ನು ಆಲೋಚಿಸಲಿಕ್ಕೆ ಮಿ ಚೆಂಬರಲೇನರಿಗೆ ಈಗ ಸಮಯವೇ ದೊರಕುವುದಿಲ್ಲ. ಯುದ್ಧ ವ್ಯವಸಾಯವನ್ನು ಮುಂದೊತ್ತುವುದರಲ್ಲಿ ಅವರು ತಲ್ಲೀನರಾಗಿದ್ದಾರೆ ಮತ್ತೆ ಭಾರತದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟನ್ನು ಪರಿಹಾರ ಮಾಡಲಿಕ್ಕೆ ಮಹಾತ್ಮಾಗಾಂಧಿಯವರಂಥ ಸಮರ್ಥ ಉದಾರ, ಮತ್ತು ದೂರದೃಷ್ಟಿಯ ಮಹಾಪುರುಷರು ಒಬ್ಬರೂ ಇರುವುದಿಲ್ಲ ಸರಕಾರವು ಮಾತ್ರ ಅವರೊಡನೆ ಆಗ ಸೆಣಗಾಡಿ ಅವರನ್ನು ದೂರವಿರಿಸಿದೆ ಬಿಕ್ಕಟ್ಟನ್ನು ಪರಿಹರಿಸುವ ಸರ್ವಭಾರವೂ ಈ ಕಾರಣದಿಂದ ಸರಕಾರದ ಮೇಲೆಯೇ ಇರುವುದು. ಸರಕಾರದ ಈ ಕರ್ತವ್ಯದಲ್ಲಿ ಲೋಪ ಉಂಟಾದರೆ ಭವಿಷ್ಯವು ಅಂಧಕಾರಮಯವಾಗುವುದು ಎಂದು ಇಂಡಿಯಾ ಕನ್ಸಿಲಿಯೇಶನ್ ಗ್ರೂಪ ಎಂಬ ಭಾರತ ಹಿತಚಿಂತಕ ಮಂಡಳಿಯ ಅಧ್ಯಕ್ಷ ಮಿ ಕಾರ್ಲ್ ಹೀತರವರು ಪೀಸ್ ನ್ಯೂಸ ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು ಬ್ರಿಟಿಷ ಸರಕಾರಕ್ಕೆ ಅದರ ಕರ್ತವ್ಯಗಳ ಕುರಿತು ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

### ಸಮಯದ ಸದುಪಯೋಗ ಮಾಡಿದ್ದರೆ?

ಯೂರೋಪದ ಮಹಾಯುದ್ಧದಲ್ಲಿ ತೊಡಗಿದ ಬ್ರಿಟನಿನ ಯುದ್ಧ ನೀತಿ ಮತ್ತು ಅದರ ಉದ್ದೇಶಗಳು ಭಾರತಕ್ಕೆ ಸ್ವ ಬಂಧಪಟ್ಟು ಎಂಥವಿರುತ್ತವೆ ಎಂದು ಕಾಂಗ್ರೆಸು ಬ್ರಿಟಿಷಸರಕಾರವನ್ನು ಪ್ರಶ್ನಿಸಿದಾಗ್ಯೂ, ಅದಕ್ಕೆ ತೃಪ್ತಿಕರವಾದ ಉತ್ತರವನ್ನು ಕೊಟ್ಟು, ಸರಕಾರವು ಸಮಯದ ಸದುಪಯೋಗ ಮಾಡಿದ್ದರೆ ಬ್ರಿಟನ್ ಮತ್ತು ಭಾರತದೊಳಗಿನ ಸ್ನೇಹ ಸಂಬಂಧವು ಚಿರಸ್ಥಾಯಿಯಾಗುತ್ತಿತ್ತು ಆದರೆ ಸರಕಾರವು ಆ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡದೆ ಭಾರತದಲ್ಲಿ ಕ್ರಾಂತಿಕಾರಿಗಳು ಪುನಃ ತಲೆ ಎತ್ತುವಂತೆ ಮಾಡಿದೆ.

### ಸರಕಾರದ ಕರ್ತವ್ಯ

ಹಿಂದಿನ ಯುದ್ಧ ಸಂದರ್ಭದಲ್ಲಿ ಕೆನಡ ಆಸ್ಟ್ರೇಲಿಯ ದಕ್ಷಿಣ ಆಫ್ರಿಕದಂಥ ಸಾಮಂತರಾಜ್ಯಗಳ ಪ್ರತಿನಿಧಿಗಳನ್ನು ಕರೆಸಿ, ಅವರಿಗೆ ಸಂಪೂರ್ಣ ಸ್ವರಾಜ್ಯದ ಭರವಸೆಯನ್ನಿತ್ತು ಯುದ್ಧದಲ್ಲಿ ಅವರ ಸಹಾಯ ಸಹಾನುಭೂತಿಗಳನ್ನು ಪಡೆದಂತೆ, ಈ ಯುದ್ಧ ಸಂದರ್ಭದಲ್ಲಿಯಾದರೂ ಭಾರತದ ಜನ ಪ್ರತಿನಿಧಿಗಳಿಗೆ ಅಂತಹದೇ ಭರವಸೆಯನ್ನು ಕೊಟ್ಟು, ಭಾರತದ ಸಹಾಯ ಸಹಕಾರಗಳನ್ನು ಬ್ರಿಟನ್ನು ಪಡೆಯಬಹುದಾಗಿತ್ತು. ಆದರೆ ಈ ಸಂದರ್ಭದಲ್ಲಿ ಬ್ರಿಟಿಷ ಸರಕಾರವು ಮಾಡಿದ ಕಾರ್ಯಗಳು ಮಾತ್ರ ಇದಕ್ಕೆ ವಿಪರೀತವಾಗಿರುವವು. ವಿಭಾಗಿಸಿ ಆಳುವುದು ತನ್ನ ಧ್ಯೇಯವಲ್ಲವೆಂದು ಬ್ರಿಟಿಷ ಸರಕಾರವು ಆಗಾಗ ಹೇಳುತ್ತ ಬಂದಿರುವುದಾದರೂ, ಕಾಂಗ್ರೆಸ ಮತ್ತು ಮುಸ್ಲಿಂ ಲೀಗಿನೊಂದಿಗೆ ಒಡಂಬಡಿಕೆಯಾದ ಹೊರತು ಭಾರತ ರಾಜಕೀಯ ಸುಧಾರಣೆಯಾಗದು ಎಂದು ಬ್ರಿಟಿಷ ಸರಕಾರವು ಹೇಳಿದ ಕಾರಣದಿಂದ ಮಿ ಜಿನ್ನರ ಮೂರು ಕಾಲಿನ ಹುಂಜಕ್ಕೇ ಸರಕಾರವು ಗಾಳಿ ಹಾಕಿ ಅದನ್ನು ಕಾದಾಟಕ್ಕೆ ಪ್ರೋತ್ಸಾಹಿಸದಂತಾಗಿದೆ. ಮತ್ತು ಈ ಸಂದರ್ಭದಲ್ಲಿಯಾದರೂ ಬ್ರಿಟಿಷ ಸರಕಾರದ ವಿಭಾಗಿಸಿ ಆಳುವ ನೀತಿಯೇ ಸ್ಪಷ್ಟ ಕೆಲಸಮಾಡುತ್ತಿರುವುದು ಕಂಡು ಬರುತ್ತದೆ. ಮಿ ಜಿನ್ನರ ಮುಸ್ಲಿಂ ಲೀಗು ತನ್ನ ಛಲವನ್ನು ಬಿಡದೆ, ಭಾರತದ ರಾಜಕೀಯ ಪ್ರಗತಿಯನ್ನು ತಡೆಯುವುದನ್ನು ನೋಡಿ, ಬ್ರಿಟಿಷ ಸರಕಾರವು ಈಗ ತನ್ನೊಳಗೇ ಸಂತೋಷಿಸಬಹುದಾದರೂ ಈ ರೀತಿಯ ಪರಿಣಾಮವು ಮಾತ್ರ ಭಾರತಕ್ಕೆ ಎಷ್ಟು ಅಸಿಷ್ಟಕಾರಿಯಾಗುವುದೋ, ಅದಕ್ಕೂ ಹೆಚ್ಚಿಗೆ ಬ್ರಿಟನಿಗೆ ಅನಿಷ್ಟಕಾರಿ ಆಗದಿರಲಾರದು

### ಕಾಂಗ್ರೆಸಿಗೆ ವಿರೋಧ

ಬೊಂಬಾಯಿಯ ಒಬ್ಬ ಗಿರಣಿ ಮಾಲಿಕನಂತೆ ಇತರ ಕೆಲವು ಜನರೂ ಕಾಂಗ್ರೆಸನ್ನು ವಿರೋಧಿಸುತ್ತಿರುವುದರಿಂದ, ಕಾಂಗ್ರೆಸಿನ ಕೇಳಿಕೆಯನ್ನು ಪೂರೈಸುವುದು ಕಠಿಣವಾಗಿದೆ ಎಂದು ಹೇಳುತ್ತಿರುವ ಬ್ರಿಟಿಷರ ಆಕ್ಷೇಪಗಳಿಗೆ ಉತ್ತರವನ್ನು ಕೊಡುತ್ತ ಪಿ ರೆಜಿನಾಲ್ಡ ರೆನೋಲ್ಡ್ಸ ಎಂಬ ಇನ್ನೊಬ್ಬ ಆಂಗ್ಲೇಯರು ಮಂಚೆಸ್ಟರ ಗಾರ್ಡಿಯನ ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ ಬೊಂಬಾಯಿಯ ಗಿರಣಿಮಾಲಕ ಮಾತುಗಳನ್ನು ಭಾರತದ ಇಂಥ ಮಿಲಿಯ ಪ್ರಜೆಗಳು ಪುರಸ್ಕರಿಸುವುದಿಲ್ಲ, ಮಾತ್ರವಲ್ಲ, ಅವರು ಆ ಮಾತುಗಳನ್ನು ವಿರೋಧಿಸುತ್ತ ಕಾಂಗ್ರೆಸಿಗೇ ಬೆಂಬಲ ಕೊಡುತ್ತಿರುವುದು ಕಂಡು ಬರುತ್ತದೆ ಪ್ರಜಾತಂತ್ರದ ರಕ್ಷಣೆಗೆ ಬ್ರಿಟನು ಹೋರಾಡುತ್ತಿರುವುದಾದರೆ, ಭಾರತದಲ್ಲಿ ಬ್ರಿಟನು ಭಾರತೀಯರ ಅಭಿಪ್ರಾಯವನ್ನು ಸಂಗ್ರಹಿಸಿ ಅದರಂತೆ ನಡಕೊಳ್ಳಬೇಕಲ್ಲದೆ, ಯಾರೋ ಒಬ್ಬ ಗಿರಣಿ ಮಾಲಿಕನ ಮಾತಿನಂತೆ ಅಲ್ಲ ಭಾರತೀಯರ ಅಭಿಪ್ರಾಯವೇ ಕಾಂಗ್ರೆಸಿನ ಅಭಿಪ್ರಾಯವಾಗಿದೆ ಭಾರತದಲ್ಲಿ ಬ್ರಿಟಿಷರ ರಾಜ್ಯಾಡಳಿತವು ಅಲ್ಪಸಂಖ್ಯಾಕರಿಗೆ ವರದಾನವಾಗಿರುವುದೆಂಬ ಸೊಲ್ಲು, ಮುಸ್ಲಿಂ ಲೀಗಿನಂಥ ಕೆಲಕೆಲವು ಕಡೆಗಳಿಂದ ಕೇಳಿ ಬರುತ್ತದೆ ಆದರೆ ಈ ಸೊಲ್ಲನ್ನು ಅಲ್ಪ ಸಂಖ್ಯಾಕ ಮುಖಂಡರೇ ಖಂಡಿಸಿರುವರು ಮುಸ್ಲಿಂ ಲೀಗೇ ಭಾರತೀಯ ಮುಸಲ್ಮಾನರ ಏಕ ಮಾತ್ರ ಪ್ರಾತಿನಿಧಿಕ ಸಂಸ್ಥೆಯಾಗಿರವುದೆಂದು ಅದು ಹೇಳುತ್ತಿರುವುದನ್ನು, ಶೀಯರು, ಅಹ್ರಾರ್ ಮುಸಲ್ಮಾನರು, ಜಮಾಯತ್ ಉಲೇಮದ ಮುಸಲ್ಮಾನರು, ರಾಷ್ಟ್ರೀಯ ಮಸಲ್ಮಾನರು, ಗಡಿನಾಡಿನ ಕೆಂಪಂಗಿ ಮುಸಲ್ಮಾನರ —ಇವರೆಲ್ಲರು ಖಂಡಿಸಿದ್ದಾರೆ ದೇಶೀ ಕ್ರೈಸ್ತರು ಒಮ್ಮುಖದಿಂದ ಕಾಂಗ್ರೆಸಿಗೆ ಬೆಂಬಲ ಕೊಡುತ್ತಿದ್ದಾರೆ ಹೀಗೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು ಆದುದರಿಂದ ಕಾಂಗ್ರೆಸನ್ನು ಸಮಾಧಾನಪಡಿಸುವ ಒಂದೇ ಒಂದು ಉಪಾಯದಿಂದ ಮಾತ್ರ ಸರಕಾರವು ಭಾರತದ ಬಿಕ್ಕಟ್ಟನ್ನು ದೂರ ಮಾಡಿ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಬಹುದು. ಈ ಯುದ್ಧದಲ್ಲಿ ಈ ದೇಶದ ಹಾರ್ದಿಕ ಸಹಾಯವನ್ನು ಪಡೆಯಬಹುದ


## ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ



# CANARA BANK LIMITED.

**The only Bank to have a Share holders Association to Safeguard the interests of Depositors, Constituents and Share holders.**

**RESOURCES OF A CRORE.**



## 92 ವರ್ಷ ಪ್ರಾಯದವನು ಬಹು ದೃಢಕಾಯನಾಗಿ ಇದ್ದಾನೆ!

### ಉಪ್ಪರಿಗೆಯನ್ನು ಸುಲಭವಾಗಿ ಹತ್ತಿ ಇಳಿಯಬಲ್ಲನು!

ಕ್ರುಶನ್ ಲವಣವನ್ನು ಪ್ರತಿನಿತ್ಯವೂ ಬೆಳಿಗ್ಗೆ ಸೇವಿಸುವನು

ಮಿಸೆಸ್ ಎ ಜೆ. ಡಬ್ಲ್ಯು ಎಂಬಾಕೆಯು ಹೀಗೆಂದು ಬರೆಯುತ್ತಾಳೆ ನನ್ನ ತಂದೆಗೆ ಕ್ರುಶನ್ ಲವಣದಿಂದ ದೊರೆತ ಆತ್ಯಾಶ್ಚರ್ಯಕರವಾದ ಗುಣಾಂಶದ ಕುರಿತು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ ಇಂತಾ ಫಲಿತಾಂಶಗಳು ವಿಚಿತ್ರ ಘಟನೆಗಳೆಂದು ಹೇಳಬಹುದು ಆತನು 92 ವರ್ಷ ಪ್ರಾಯ ದವನಾದರೂ ಪೂರ್ಣ ಗಟ್ಟಿಗನಾಗಿದ್ದಾನೆ ಅವನು ಚುರುಕಾಗಿ ಚಲಿಸಬಲ್ಲನು, ಮಾತ್ರವಲ್ಲದೆ, ಉಪ್ಪರಿಗೆಯನ್ನು ಸುಲಭವಾಗಿ ಏರಿ ಇಳಿಯುತ್ತಾನೆ ಅವನ ಸ್ನೇಹಿತರು ಅವನ ಚುರುಕುತನವನ್ನು ನೋಡಿ ಬಹಳ ದಿಗಿಲು ಪಡುತ್ತಾರೆ ತನ್ನ ಪ್ರಾತಃಕಾಲದ ಕ್ರುಶನ್ ಲವಣ ಮಿಶ್ರಿತ ಚಾ ಸೇವನೆಯೇ ಇದಕ್ಕೆ ಕಾರಣವೆಂದು ತಿಳಿಸುತ್ತಾನೆ ನಮ್ಮ ಮಿತ್ರಮಂಡಳಿಗೆಲ್ಲಾ ನಾವು ಕ್ರುಶನ್ ಲವಣವನ್ನು ಶಿಫಾರಸು ಮಾಡತ್ತೇವೆ ಪ್ರತಿಯೊಂದು ಕುಟುಂಬದಲ್ಲಿ ಕ್ರುಶನ್ ಲವಣವು ಅಗತ್ಯವಿರತಕ್ಕದ್ದು ಎಂಬದಾಗಿ ನನಗೆ ತೋರುತ್ತದ

ಆರೋಗ್ಯಕ್ಕೆ ಮುಖ್ಯ ಸಾಧನವಾದ ಒಳಗಿನ ಅಂಗಗಳನ್ನು ಕಶ್ಮಲರಹಿತವಾಗಿ ಇರಿಸದೆ ಇರುವುದರಿಂದಲೇ ಹೆಚ್ಚಿನವರು ಅವರ ಪ್ರಾಯ ಬರುವ ಮುಂಚಿತವಾಗಿಯೇ ಮುದುಕರಾಗಿ ಕಾಣುತ್ತಾರೆ

ಕ್ರಮೇಣವಾಗಿ ಅವರ ಕ್ರುಶನ್ ಲವಣವನ್ನು ಸೇವನೆಯ ನ್ನು ಅಭ್ಯಾಸ ಮಾಡಿದರು ಅನಂತರ ಅವರ ಜೀವಮಾನದಲ್ಲಿ ಮೊದಲನೆ ಬಾರಿಯಾಗಿ ಅವರ ಶರೀರದೊಳಗಿರುವ ಕಶ್ಮಲ ಪದಾರ್ಥವನ್ನು ಹೊರಗೆ ಹಾಕಿದಂತಾಗಿ ವುದ ಹೀಗಾಗಿ ಕರುಳೊಳಗೆ ದಾರಿತಪ್ಪಿ ಕೊಳೆತು ಹೋದಂತಿರುವ ಪದಾರ್ಥವು ಪೂರ್ತಿಯಾಗಿ ಹೊರಗೆ ಹೋಗಿ ನಿರ್ಮಲವಾಗುವುದು ಲಿವರ್ ಮತ್ತು ಮೂತ್ರಕೋಶವು ಇದರಿಂದಾಗಿ ಕ್ರಮವಾಗಿ ಅವುಗಳ ಕೆಲಸಗಳನ್ನು ಚುರುಕಿನಿಂದ ಮಾಡಲು ತೊಡಗುವುವು ಇದರ ಪರಿಣಾಮವಾಗಿ ನಮ್ಮ ದೇಹದ ಎಲ್ಲಾ ನರನಾಡಿ ಗಳಲ್ಲಿ ಶುದ್ಧ ರಕ್ತ ಚಲಾವಣೆಯು ಸರಾಗವಾಗಿ ನಡೆದು ನಮ್ಮ ಪ್ರತಿಯೊಂದು ಅವಯವಗಳಿಗೆ ಆರೋಗ್ಯ ಬಲ ಮತ್ತು ಹೊಸ ಹುರುಪನ್ನುಂಟು ಮಾಡುತ್ತದೆ




ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

No. 26.

# ಐಕ್ಯವಿಲ್ಲದೆ ಸ್ವರಾಜ್ಯವಿಲ್ಲವೇ?

## ಐಕ್ಯಭಂಗವನ್ನು ಮಾಡಿದವರು ಯಾರು?

ಭಾರತ ಸ್ವಾತಂತ್ರ್ಯದ ಪ್ರಶ್ನೆಯು ಎದುರು ಬಂದಾಗಲೆಲ್ಲ—'ಭಾರತೀಯರಲ್ಲಿ ಐಕ್ಯವಿಲ್ಲ; ಆದುದರಿಂದ ಭಾರತವು ಸ್ವತಂತ್ರವಾಗಲಿಕ್ಕೆ ಅಯೋಗ್ಯ. ನೀವು ಅನ್ಯೋನ್ಯವಾಗಿ ಇರಿ, ಆಗಲೇ ನಾವು ಸ್ವರಾಜ್ಯ ಕೊಟ್ಟುಬಿಡುವೆವು' ಎಂದು ಬ್ರಿಟಿಷ ಸರಕಾರವು ಹೇಳುತ್ತ ಬಂದಿದೆ. ಎಷ್ಟರ ತನಕ ಹಿಂದುಸ್ಥಾನದೊಳಗಿನ ಜಾತಿಜಾತಿಗಳು ಪರಸ್ಪರ ಮೈತ್ರಿಯಿಂದ ಇರುವುದಿಲ್ಲವೋ, ಅಷ್ಟರ ತನಕ ಭಾರತದಲ್ಲಿ ವಿದೇಶೀ ಸರಕಾರವು ದೇಶದ ಭದ್ರತೆಗೆ ಅಗತ್ಯವಾಗಿರುವುದು ಎಂದು ಬ್ರಿಟಿಷರು ಹೇಳುತ್ತ ಬಂದಿದ್ದಾರೆ. ಭಾರತದ ವಿಷಯವಾಗಿ ಬ್ರಿಟಿಷರ ಯುದ್ಧ ನೀತಿಯು ಯಾವುದಾಗಿರುವುದೆಂದು ಕಾಂಗ್ರೆಸು ಕೇಳಿದ ಪ್ರಶ್ನೆಗೆ—ಈಗಲಾದರೂ ಬ್ರಿಟಿಷ ಸರಕಾರವು ಜಾತೀಯ ಭೂತವನ್ನು ಎದುರು ಮಾಡಿ ಭಾರತೀಯ ಸ್ವರಾಜ್ಯದ ಪ್ರಶ್ನೆಯನ್ನು ಹಿಂದಕ್ಕೆ ಹಾಕುವ ಪ್ರಯತ್ನ ಮಾಡಿದೆ.

### ವಿದೇಶೀ ಸರಕಾರದ ಧ್ಯೇಯ

ಪರತಂತ್ರ ಭಾರತದ ಮೇಲೆ ಶಾಸನವನ್ನು ಮಾಡುತ್ತಿರುವ ವಿದೇಶೀ ಬ್ರಿಟಿಷ ಸರಕಾರದ ನೀತಿ ಆದರ್ಶಗಳು ಯಾವು ಇರುವುವು? ಜಾತಿ ಉಪಜಾತಿಗಳಾಗಿ ಒಡೆದುಹೋದ ಭಾರತೀಯ ಜನಾಂಗವನ್ನು ಒಂದು ಮಾಡುವ ಸತ್ಯ ಪ್ರಯತ್ನವನ್ನು ಬ್ರಿಟಿಷ್ ಸರಕಾರವು ಮಾಡುತ್ತಿರುವುದೆ? ಬ್ರಿಟಿಷರ ಆಳಿಕೆಯ ಅವಧಿಯ ಬೆಳೆದಂತೆ ಇಲ್ಲಿ ಜಾತಿ ಉಪಜಾತಿಗಳ ಸಂಖ್ಯೆಯು ಕಡಿಮೆಯಾಗುತ್ತ ಬರುತ್ತದೆಯೆ? ಅಥವಾ ಆ ಜಾತಿ ಉಪಜಾತಿಗಳು ಇನ್ನೂ ಭಿನ್ನಭಿನ್ನವಾಗಿ ಒಡೆದು ಹೋಗುತ್ತಿರುವುದು. ನಿಲ್ಲುತ್ತಲಿದೆಯೆ? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡಲಿಕ್ಕೆ ನಾವು ಇತಿಹಾಸದ ಹಾಳೆಗಳನ್ನು ಮಗುಚಿದರೆ—'ಇಲ್ಲ'ವೆಂಬ ಉತ್ತರವನ್ನು ಬಹಳ ಖೇದದಿಂದ ಕೊಡಬೇಕಾಗುತ್ತದೆ.

ಹಿಂದುಸ್ಥಾನದ ಬೇರೆ ಬೇರೆ ಜಾತಿ ಮತಗಳ ಹಿತಾಸಕ್ತಿಗಳು ಬೇರೆ ಬೇರೆಯಾಗಿರುತ್ತವೆ ಎಂಬ ಮಾತನ್ನು ಮೊತ್ತ ಮೊದಲು ಲಾರ್ಡ್ ಮಿಂಟೋರವರು ಒಪ್ಪಿದರು. ಆಗಲೇ ಹಿಂದುಗಳು ಬೇರೆ, ಮುಸಲ್ಮಾನರು ಬೇರೆ ಎಂಬ ಭೇದಭಾವನೆಗೆ ಸರಕಾರದ ಕಡೆಯಿಂದ ಪುರಸ್ಕಾರವು ದೊರೆಯಿತು. ಅಂದಿನಿಂದ ಹಿಂದು ಮುಸಲ್ಮಾನ ಮೊದಲಾದ ಭಾರತೀಯ ಜಾತಿಗಳ ಸಂಖ್ಯೆಯು ಒಂದೇ ಸಮನೆ ಬೆಳೆಯುತ್ತ ಬಂದಿದೆ. ಗಣತಿಯ ಸುಧಾರಣೆಯ ಕಾಯಿದೆಯಲ್ಲಿ ಬ್ರಿಟಿಷ್ ಸರಕಾರವು ಹಿಂದುಸ್ಥಾನದ ಒಂದಲ್ಲ, ಎರಡಲ್ಲ, ಡಜನಿಗೆ ಮೀರಿದ ಜಾತಿಗಳಿಗೆ ಪ್ರತ್ಯೇಕ ಸ್ಥಾನಗಳನ್ನು ಕಲ್ಪಿಸಿಕೊಟ್ಟಿದೆ. ಲಾರ್ಡ್ ಮಿಂಟೋರವರ ಕಾಲದಲ್ಲಿ ಹಿಂದುಸ್ಥಾನದಲ್ಲಿ ಹಿಂದುಗಳು ಮತ್ತು ಮುಸಲ್ಮಾನರು ಎಂಬ ಎರಡು ಜಾತಿಗಳು ಮಾತ್ರ ಇದ್ದುವಾದರೆ ಈಗ ಜನರಲ್, ಶೆಡ್ಯೂಲ್ಡು-ಜಾತಿ, ಸ್ತ್ರೀಯರು, ಕಿರಿಸ್ತಾನರು ಎಂದು ಹಕ್ಕು ಹಲವು ಜಾತಿಗಳನ್ನು ಸರಕಾರವು ಗುರುತಿಸಿ ಮನ್ನಿಸಿದೆ.

### ವಿಭಾಗಿಸಿ ಆಳುವ ತಂತ್ರ

ಇನ್ನು ಹತ್ತಿಪ್ಪತ್ತು ವರ್ಷಗಳ ತನಕ ಬ್ರಿಟಿಷ್ ಸರಕಾರವೇ ಭಾಗ್ಯವನ್ನು ನಿರ್ಮಿಸುವಂಥದ್ದಾಗಿ ಉಳಿಯುವುದಾದರೆ ಆಗ ಮತ್ತೊಂದು ಸುಧಾರಣೆಯ ಮಸೂದೆಯನ್ನು ತಯಾರಿಸುವ ಸಂದರ್ಭದಲ್ಲಿ ಈಗಿರುವ ಹತ್ತಿಪ್ಪತ್ತು ಜಾತಿಗಳನ್ನಷ್ಟೇ ಅಲ್ಲ, ಇನ್ನೂ ಹತ್ತಿಪ್ಪತ್ತು ಜಾತಿಗಳನ್ನು ಸರಕಾರವು ಹುಟ್ಟಿಸಿ ಅವಕ್ಕೆ ಹೊಸ ಹೊಸ ಹೆಸರುಗಳನ್ನು ಕೊಡಲೂ ಬಹುದು! ಆ ಸಮಯಕ್ಕೆ ನಮ್ಮ ದೇಶದಲ್ಲಿ ಮುಸಲ್ಮಾನರು ಎಂದಿರುವ ಈಗಿನ ಒಂದು ಜಾತಿಯಲ್ಲಿ ಶೀಯರು, ಸುನ್ನಿಗಳು, ಮೋಮಿನರು ಎಂದು ಎಷ್ಟೋ ಜಾತಿಗಳಾಗಲೂ ಬಹುದು. ಕ್ರೈಸ್ತರಲ್ಲಿ ಪ್ರೊಟೆಸ್ಟಾಂಟರು, ರೋಮನ್ ಕೆಥೋಲಿಕರು ಎಂದು ಹಲವು ಜಾತಿಗಳಾಗಲೂ ಬಹುದು. ಹಿಂದೂ ಸಮಾಜಿಗಳಲ್ಲಿ ಜಾತಿ ಕೆಟ್ಟವರು ಮತ್ತು ಜಾತಿ ಕೆಡದವರು ಎಂದಾಗಲೂ ಬಹುದು! ವಿಭಾಗಿಸಿ ಆಳುವ ತಂತ್ರವು ಸಫಲವಾಗಲಿಕ್ಕೆ ಹೀಗಾಗುವುದು ಬಹಳ ಅಗತ್ಯವಾಗಿರುವುದು. ಜಾತಿ ಉಪಜಾತಿಗಳು ಒಂದನ್ನೊಂದು ಕೂಡಿ ಒಂದಾಗಿ, ಒಂದು ಜನಾಂಗವಾಗಿ ಇರುವುವಾದರೆ ವಿದೇಶೀ ಸರಕಾರದ ಅಗತ್ಯವಾದರೂ ಏನು ಇರುತ್ತದೆ! ಆದುದರಿಂದಲೇ ಬ್ರಿಟಿಷ್ ಸರಕಾರವು 'ಐಕ್ಯವಿಲ್ಲದೆ ಸ್ವರಾಜ್ಯವಿಲ್ಲ' ಎಂದು ಹೇಳುತ್ತಿದ್ದಾದರೂ ಆ ಐಕ್ಯವು ಉಂಟಾಗದಂತೆಯೆ ಪ್ರಯತ್ನ ನಡೆಸುತ್ತಾನೆ. ಇಲ್ಲಿ ಸದಾಕಾಲ ಇರಲಿಕ್ಕೆ ವ್ಯವಸ್ಥೆ ಮಾಡುತ್ತದೆ!

ಕಾಂಗ್ರೆಸಿನಂಥ ರಾಷ್ಟ್ರೀಯ ಸಂಸ್ಥೆಗಳು ಜಾತಿ ಭೇದವನ್ನು ತಗೆದುಹಾಕಿ ಏಕರಾಷ್ಟ್ರೀಯ ಭಾವನೆಯು ದೇಶದಲ್ಲೆಲ್ಲ ಉಂಟಾಗುವಂತೆ ಮಹಾಪ್ರಯತ್ನಗಳನ್ನು ಮಾಡುತ್ತಿರುವಾಗ, ಸರಕಾರವು ಇದ್ದ ಜಾತಿಗಳು ಸಾಲದೆಂಬಂತೆ ಹೊಸ ಹೊಸ ಜಾತಿ ಉಪಜಾತಿಗಳನ್ನು ಸೃಷ್ಟಿಸಿ ಕಲ್ಪಿಸಿ ಅವುಗಳಿಗೆ ಮನ್ನಣೆಯನ್ನು ಕೊಡುತ್ತಾ ಬರುತ್ತಿದೆ. ಬ್ರಿಟಿಷ ಸರಕಾರವು ಮಾಡಿದ ಜಾತೀಯ ನಿರ್ಧಾರ ಮತ್ತು ಬೇರೆ ಬೇರೆ ಜಾತಿ ಉಪಜಾತಿಗಳಿಗೆ ಸರಕಾರಿ ನೌಕರಿ ಚಾಕರಿಗಳನ್ನು ಹಂಚಿಕೊಟ್ಟ ಕ್ರಮದಿಂದ ಈ ಮಾತು ಸ್ಪಷ್ಟವಾಗುತ್ತದೆ.

ಐಕ್ಯವಿಲ್ಲದೆ ಸ್ವಾತಂತ್ರ್ಯವಿಲ್ಲವೆಂದು ಹೇಳಿ ಐಕ್ಯವಾಗದಂತೆ ಸರಕಾರವೇ ಭಂಗವನ್ನು ತರುವುದಾದರೆ, ಸರಕಾರದ ಈ ಧೋರಣೆಯನ್ನು ಯಾವ ಮಾತುಗಳಿಂದ ಶ್ಲಾಘಿಸಬಹುದು?

ಎಳೆ ಮಕ್ಕಳ
ಕೋಮಲ ಚರ್ಮಕ್ಕೆ
ಉತ್ತಮವಾದ
ಪೌಡರು

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ನಯವಾಗಿ ದದ್ದು ಮಾತ್ರವಲ್ಲದೆ ಕೇಸರದಷ್ಟು ಶುದ್ಧವಾದದ್ದು ಮತ್ತು ಸೌಮ್ಯ ಕರದಲ್ಲಿ ಔಷಧೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಇರಿಸುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರು, ನರ್ಸುಗಳೂ ಕುಟಿಕೂರಾ ಪೌಡರು (Cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಾರೆ. ದೊಡ್ಡವರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಾಕಿ ಸಂತೋಷಪಡುತ್ತಾರೆ. ಇದು ಬೆವರನ್ನು ನಿವಾರಿಸುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಕಾಂತಿಯುಕ್ತವಾಗಿಯೂ ಇಡುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದುದು
ಕುಟಿಕೂರಾ ಟಾಲ್ಕಂ ಪೌಡರು
CUTICURA TALCUM



THE
**BANK OF MANGALORE LTD.,**
MANGALORE
ESTD 1931

Branches
Mudabidri & Padubidri.

Fixed Deposits will be received at following rates of interest.

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly

***Savings Bank deposit 3½% on daily balances.***

All kinds of bankingbusiness transacted



ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
**ನಂಜನಗೂಡು ಟೂತ್ ಪೌಡರ್** (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

# ಜಿನ್ನರ ದೇಶದ್ರೋಹಕ್ಕೆ ಇನ್ನಷ್ಟು ಪುಷ್ಟಿಕೊಡುವುದೇ?

## ಬ್ರಿಟಿಷ್ ನೀತಿಯನ್ನು ಕಾರ್ಲಹೀತರು ಖಂಡಿಸುತ್ತಾರೆ!

ಭಾರತದ ವಿಷಯವನ್ನು ಆಲೋಚಿಸಲಿಕ್ಕೆ ಮಿ. ಚೇಂಬರಲೇನರಿಗೆ ಈಗ ಸಮಯವೇ ದೊರಕುವುದಿಲ್ಲ. ಯುದ್ಧ ವ್ಯವಸಾಯವನ್ನು ಮುಂದೊತ್ತುವುದರಲ್ಲಿ ಅವರು ತಲ್ಲೀನರಾಗಿದ್ದಾರೆ. ಮತ್ತೆ ಭಾರತದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟನ್ನು ಪರಿಹಾರ ಮಾಡಲಿಕ್ಕೆ ಮಹಾತ್ಮಾಗಾಂಧಿಯವರಂಥ ಸಮರ್ಥ ಉದಾರ, ಮತ್ತು ದೂರದೃಷ್ಟಿಯ ಮಹಾ ಪುರುಷರು ಒಬ್ಬರೂ ಇರುವುದಿಲ್ಲ. ಸರಕಾರವು ಮಾತ್ರ ಅವರೊಡನೆ ಆಗ ಸೆಣಗಾಡಿ ಅವರನ್ನು ದೂರವಿರಿಸಿದೆ. ಬಿಕ್ಕಟ್ಟನ್ನು ಪರಿಹರಿಸುವ ಸರ್ವಭಾರವೂ ಈ ಕಾರಣದಿಂದ ಸರಕಾರದ ಮೇಲೆಯೇ ಇರುವುದು. ಸರಕಾರದ ಈ ಕರ್ತವ್ಯದಲ್ಲಿ ಲೋಪ ಉಂಟಾದರೆ ಭವಿಷ್ಯವು ಅಂಧಕಾರಮಯವಾಗುವುದು ಎಂದು ಇಂಡಿಯಾ ಕನ್ಸಿಲಿಯೇಶನ್ ಗ್ರೂಪ ಎಂಬ ಭಾರತ ಹಿತಚಿಂತಕ ಮಂಡಲಿಯ ಅಧ್ಯಕ್ಷ ಮಿ. ಕಾರ್ಲ ಹೀತರವರು ಪೀಸ್ ನ್ಯೂಸ ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು ಬ್ರಿಟಿಷ ಸರಕಾರಕ್ಕೆ ಅದರ ಕರ್ತವ್ಯಗಳ ಕುರಿತು ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

### ಸಮಯದ ಸದುಪಯೋಗ ಮಾಡಿದ್ದರೆ?

ಯೂರೋಪದ ಮಹಾಯುದ್ಧದಲ್ಲಿ ತೊಡಗಿದ ಬ್ರಿಟನಿನ ಯುದ್ಧ ನೀತಿ ಮತ್ತು ಅದರ ಉದ್ದೇಶಗಳು ಭಾರತಕ್ಕೆ ಸಂಬಂಧಪಟ್ಟು ಎಂಥವಿರುತ್ತವೆ ಎಂದು ಕಾಂಗ್ರೆಸ್ಸು ಬ್ರಿಟಿಷಸರಕಾರವನ್ನು ಪ್ರಶ್ನಿಸಿದಾಗ, ಅದಕ್ಕೆ ತೃಪ್ತಿಕರವಾದ ಉತ್ತರವನ್ನು ಕೊಟ್ಟು, ಸರಕಾರವು ಸಮಯದ ಸದುಪಯೋಗ [illegible]ದ್ದರೆ, ಬ್ರಿಟನ್ ಮತ್ತು ಭಾರತದೊಳಗಿನ ಸ್ನೇಹ ಸಂಬಂಧವು ಚಿರಸ್ಥಾಯಿಯಾಗುತ್ತಿತ್ತು. ಆದರೆ ಸರಕಾರವು ಆ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡದೆ ಭಾರತದಲ್ಲಿ ಕ್ರಾಂತಿಕಾರಿಗಳು ಪುನಃ ತಲೆ ಎತ್ತುವಂತೆ ಮಾಡಿದೆ.

### ಸರಕಾರದ ಕರ್ತವ್ಯ

ಹಿಂದಿನ ಯುದ್ಧ ಸಂದರ್ಭದಲ್ಲಿ ಕೆನಡ ಆಸ್ಟ್ರೇಲಿಯ ದಕ್ಷಿಣ ಆಫ್ರಿಕದಂಥ ಸಾಮಂತರಾಜ್ಯಗಳ ಪ್ರತಿನಿಧಿಗಳನ್ನು ಕರೆಸಿ, ಅವರಿಗೆ ಸಂಪೂರ್ಣ ಸ್ವರಾಜ್ಯದ ಭರವಸೆಯನ್ನಿತ್ತು ಯುದ್ಧದಲ್ಲಿ ಅವರ ಸಹಾಯ ಸಹಾನುಭೂತಿಗಳನ್ನು ಪಡೆದಂತೆ, ಈ ಯುದ್ಧ ಸಂದರ್ಭದಲ್ಲಿಯಾದರೂ ಭಾರತದ ಜನಪ್ರತಿನಿಧಿಗಳಿಗೆ ಅಂತಹದೇ ಭರವಸೆಯನ್ನು ಕೊಟ್ಟು, ಭಾರತದ ಸಹಾಯ ಸಹಕಾರಗಳನ್ನು ಬ್ರಿಟನ್ನು ಪಡೆಯಬಹುದಾಗಿತ್ತು. ಆದರೆ ಈ ಸಂದರ್ಭದಲ್ಲಿ ಬ್ರಿಟಿಷ ಸರಕಾರವು ಮಾಡಿದ ಕಾರ್ಯಗಳು ಮಾತ್ರ ಇದಕ್ಕೆ ವಿಪರೀತವಾಗಿರುವವು. ವಿಭಾಗಿಸಿ ಆಳುವುದು ತನ್ನ ಧ್ಯೇಯವಲ್ಲವೆಂದು ಬ್ರಿಟಿಷ ಸರಕಾರವು ಆಗಾಗ ಹೇಳುತ್ತ ಬಂದಿರುವುದಾದರೂ, ಕಾಂಗ್ರೆಸ ಮತ್ತು ಮುಸ್ಲಿಂ ಲೀಗಿನೊಂದಿಗೆ ಒಡಂಬಡಿಕೆಯಾದ ಹೊರತು ಭಾರತ ರಾಜಕೀಯ ಸುಧಾರಣೆಯಾಗದು ಎಂದು ಬ್ರಿಟಿಷ ಸರಕಾರವು ಹೇಳಿದ ಕಾರಣದಿಂದ ಮಿ. ಜಿನ್ನರ ಮೂರು ಕಾಲಿನ ಹುಂಜಕ್ಕೇ ಸರಕಾರವು ಗಾಳಿ ಹಾಕಿ ಅದನ್ನು ಕಾದಾಟಕ್ಕೆ ಪ್ರೋತ್ಸಾಹಿಸದಂತಾಗಿದೆ, ಮತ್ತು ಈ ಸಂದರ್ಭದಲ್ಲಿಯಾದರೂ ಬ್ರಿಟಿಷ ಸರಕಾರದ ವಿಭಾಗಿಸಿ ಆಳುವ ನೀತಿಯೇ ಸ್ಪಷ್ಟ ಕೆಲಸಮಾಡುತ್ತಿರುವುದು ಕಂಡು ಬರುತ್ತದೆ. ಮಿ. ಜಿನ್ನರ ಮುಸ್ಲಿಂ ಲೀಗು ತನ್ನ ಛಲವನ್ನು ಬಿಡದೆ, ಭಾರತದ ರಾಜಕೀಯ ಪ್ರಗತಿಯನ್ನು ತಡೆಯುವುದನ್ನು ನೋಡಿ, ಬ್ರಿಟಿಷ ಸರಕಾರವು ಈಗ ತನ್ನೊಳಗೇ ಸಂತೋಷಿಸಬಹುದಾದರೂ ಈ ರೀತಿಯ ಪರಿಣಾಮವು ಮಾತ್ರ ಭಾರತಕ್ಕೆ ಎಷ್ಟು ಅನಿಷ್ಟಕಾರಿಯಾಗುವುದೋ, ಅದಕ್ಕೂ ಹೆಚ್ಚಿಗೆ ಬ್ರಿಟನಿಗೆ ಅನಿಷ್ಟಕಾರಿ ಆಗದಿರಲಾರದು.

### ಕಾಂಗ್ರೆಸಿಗೆ ವಿರೋಧ

ಬೊಂಬಾಯಿಯ ಒಬ್ಬಾನೊಬ್ಬ ಗಿರಣಿ ಮಾಲಿಕನಂತೆ ಇತರ ಕೆಲವು ಜನರೂ ಕಾಂಗ್ರೆಸನ್ನು ವಿರೋಧಿಸುತ್ತಿರುವುದರಿಂದ, ಕಾಂಗ್ರೆಸಿನ ಕೇಳಿಕೆಯನ್ನು ಪೂರೈಸುವುದು ಕಠಿಣವಾಗಿದೆ ಎಂದು ಹೇಳುತ್ತಿರುವ ಬ್ರಿಟಿಷರ ಆಕ್ಷೇಪಗಳಿಗೆ ಉತ್ತರವನ್ನು ಕೊಡುತ್ತಾ ಮಿ. ರೆಜಿನಾಲ್ಡ ರೆನೋಲ್ಡ್ಸ ಎಂಬ ಇನ್ನೊಬ್ಬ ಆಂಗ್ಲೇಯರು ಮೆಂಚೆಸ್ಟರ ಗಾರ್ಡಿಯನ ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ. ಬೊಂಬಾಯಿಯ ಗಿರಣಿಮಾಲಕ ಮಾತುಗಳನ್ನು ಭಾರತದ ೩೫೦ ಮಿಲಿಯ ಪ್ರಜೆಗಳು ಪುರಸ್ಕರಿಸುವುದಿಲ್ಲ; ಮಾತ್ರವಲ್ಲ, ಅವರು ಆ ಮಾತುಗಳನ್ನು ವಿರೋಧಿಸುತ್ತ ಕಾಂಗ್ರೆಸಿಗೇ ಬೆಂಬಲ ಕೊಡುತ್ತಿರುವುದು ಕಂಡು ಬರುತ್ತದೆ. ಪ್ರಜಾತಂತ್ರದ ರಕ್ಷಣೆಗೆ ಬ್ರಿಟನು ಹೋರಾಡುತ್ತಿರುವುದಾದರೆ, ಭಾರತದಲ್ಲಿ ಬ್ರಿಟನು ಭಾರತೀಯರ ಅಭಿಪ್ರಾಯವನ್ನು ಸಂಗ್ರಹಿಸಿ ಅದರಂತೆ ನಡಕೊಳ್ಳಬೇಕಲ್ಲದೆ, ಯಾರೋ ಒಬ್ಬ ಗಿರಣಿ ಮಾಲಕನ ಮಾತಿನಂತೆ ಅಲ್ಲ; ಭಾರತೀಯರ ಅಭಿಪ್ರಾಯವೇ ಕಾಂಗ್ರೆಸಿನ ಅಭಿಪ್ರಾಯವಾಗಿದೆ. ಭಾರತದಲ್ಲಿ ಬ್ರಿಟಿಷರ ರಾಜ್ಯಾಡಳಿತವು ಅಲ್ಪಸಂಖ್ಯಾಕರಿಗೆ ವರದಾನವಾಗಿರುವುದೆಂಬ ಸೊಲ್ಲು, ಮುಸ್ಲಿಂ ಲೀಗಿನಂಥ ಕೆಲಕೆಲವು ಕಡೆಗಳಿಂದ ಕೇಳಿ ಬರುತ್ತದೆ. ಆದರೆ ಈ ಸೊಲ್ಲನ್ನು ಅಲ್ಪ ಸಂಖ್ಯಾಕ ಮುಖಂಡರೇ ಖಂಡಿಸಿರುವರು. ಮುಸ್ಲಿಂ ಲೀಗೇ ಭಾರತೀಯ ಮುಸಲ್ಮಾನರ ಏಕಮಾತ್ರ ಪ್ರಾತಿನಿಧಿಕ ಸಂಸ್ಥೆಯಾಗಿರುವುದೆಂದು ಅದು ಹೇಳುತ್ತಿರುವುದನ್ನು, ಶೀಯರು, ಅಹ್ರಾರ್ ಮುಸಲ್ಮಾನರು, ಜಮಾಯತ್ ಉಲೇಮಾದ ಮುಸಲ್ಮಾನರು, ರಾಷ್ಟ್ರೀಯ ಮುಸಲ್ಮಾನರು, ಗಡಿನಾಡಿನ ಕೆಂಪಂಗಿ ಮುಸಲ್ಮಾನರು—ಇವರೆಲ್ಲರು ಖಂಡಿಸಿದ್ದಾರೆ. ದೇಶೀ ಕ್ರೈಸ್ತರು ಒಮ್ಮುಖದಿಂದ ಕಾಂಗ್ರೆಸಿಗೆ ಬೆಂಬಲ ಕೊಡುತ್ತಿದ್ದಾರೆ. ಹೀಗೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಆದುದರಿಂದ ಕಾಂಗ್ರೆಸನ್ನು ಸಮಾಧಾನಿಸುವ ಒಂದೇ ಒಂದು ಉಪಾಯದಿಂದ ಮಾತ್ರ ಸರಕಾರವು ಭಾರತದ ಬಿಕ್ಕಟ್ಟನ್ನು ದೂರ ಮಾಡಿ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಬಹುದು ಮತ್ತು ಯುದ್ಧದಲ್ಲಿ ಈ ದೇಶದ ಹಾರ್ದಿಕ ಸಹಾಯವನ್ನು ಪಡೆಯಬಹುದು.


ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ



CANARA BANK LIMITED.

The only Bank to have a Share holders Association to Safeguard the interests of Depositors, Constituents and Share holders.

RESOURCES OF A CRORE.



## 92 ವರ್ಷ ಪ್ರಾಯದವನು ಬಹು ದೃಢಕಾಯನಾಗಿ ಇದ್ದಾನೆ!

### ಉಪ್ಪರಿಗೆಯನ್ನು ಸುಲಭವಾಗಿ ಹತ್ತಿ ಇಳಿಯಬಲ್ಲನು!

ಕ್ರುಶನ್ ಲವಣವನ್ನು ಪ್ರತಿನಿತ್ಯವೂ ಬೆಳಿಗ್ಗೆ ಸೇವಿಸುವನು.

ಮಿಸೆಸ್ ಎ. ಜೆ. ಡಬ್ಲ್ಯು ಎಂಬಾಕೆಯು ಹೀಗೆಂದು ಬರೆಯುತ್ತಾಳೆ: ನನ್ನ ತಂದೆಗೆ ಕ್ರುಶನ್ ಲವಣದಿಂದ ದೊರೆತ ಅತ್ಯಾಶ್ಚರ್ಯಕರವಾದ ಗುಣಾಂಶದ ಕುರಿತು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಇಂತಾ ಫಲಿತಾಂಶಗಳು ವಿಚಿತ್ರ ಘಟನೆಗಳೆಂದು ಹೇಳಬಹುದು. ಆತನು 92 ವರ್ಷ ಪ್ರಾಯದವನಾದರೂ ಪೂರ್ಣ ಗಟ್ಟಿಗನಾಗಿದ್ದಾನೆ. ಅವನು ಚುರುಕಾಗಿ ಚಲಿಸಬಲ್ಲನು; ಮಾತ್ರವಲ್ಲದೆ, ಉಪ್ಪರಿಗೆಯನ್ನು ಸುಲಭವಾಗಿ ಏರಿ ಇಳಿಯುತ್ತಾನೆ. ಅವನ ಸ್ನೇಹಿತರು ಅವನ ಚುರುಕುತನವನ್ನು ನೋಡಿ ಬಹಳ ದಿಗಿಲುಪಡುತ್ತಾರೆ. ತನ್ನ ಪ್ರಾತಃಕಾಲದ ಕ್ರುಶನ್ ಲವಣ ಮಿಶ್ರಿತ ಚಾ ಸೇವನೆಯೇ ಇದಕ್ಕೆ ಕಾರಣವೆಂದು ತಿಳಿಸುತ್ತಾನೆ. ನಮ್ಮ ಮಿತ್ರಮಂಡಳಿಗೆಲ್ಲಾ ನಾವು ಕ್ರುಶನ್ ಲವಣವನ್ನು ಶಿಫಾರಸುಮಾಡುತ್ತೇವೆ. ಪ್ರತಿಯೊಂದು ಕುಟುಂಬದಲ್ಲಿ ಕ್ರುಶನ್ ಲವಣವು ಅಗತ್ಯವಿರತಕ್ಕದ್ದು ಎಂಬದಾಗಿ ನನಗೆ ತೋರುತ್ತದೆ.

ಆರೋಗ್ಯಕ್ಕೆ ಮುಖ್ಯ ಸಾಧನವಾದ ಒಳಗಿನ ಅಂಗಗಳನ್ನು ಕಲ್ಮಲರಹಿತವಾಗಿ ಇರಿಸದೆ ಇರುವುದರಿಂದಲೇ ಹೆಚ್ಚಿನವರು ಅವರ ಪ್ರಾಯ ಬರುವ ಮುಂಚಿತವಾಗಿಯೇ ಮುದುಕರಾಗಿ ಕಾಣುವರು.

ಕ್ರಮೇಣವಾಗಿ ಅವರು ಕ್ರುಶನ್ ಲವಣವನ್ನು ಸೇವನೆಯನ್ನು ಅಭ್ಯಸಿಸುವರು. ಅನಂತರ ಅವರ ಜೀವಮಾನದಲ್ಲಿ ಮೊದಲನೆ ಬಾರಿಯಾಗಿ ಅವರ ಶರೀರದೊಳಗಿರುವ ಕಶ್ಮಲ ಪದಾರ್ಥವನ್ನು ಹೊರಗೆಡಿಸಿದಂತಾಗುವುದು. ಹೀಗಾಗಿ ಕರುಳೊಳಗೆ ದಾಸ್ತಾನಾಗಿ ಕೊಳೆತು ಹೋದಂತಿರುವ ಪದಾರ್ಥವು ಪೂರ್ತಿಯಾಗಿ ಹೊರಗೆ ಹೋಗಿ ನಿರ್ಮಲವಾಗುವುದು. ಲಿವರ್ ಮತ್ತು ಮೂತ್ರಕೋಶವು ಇದರಿಂದಾಗಿ ಕ್ರಮವಾಗಿ ಅವುಗಳ ಕೆಲಸಗಳನ್ನು ಚುರುಕಿನಿಂದ ಮಾಡಲು ತೊಡಗುವುವು. ಇದರ ಪರಿಣಾಮವಾಗಿ ನಮ್ಮ ದೇಹದ ಎಲ್ಲಾ ನರನಾಡಿಗಳಲ್ಲಿ ಶುದ್ಧ ರಕ್ತ ಚಲಾವಣೆಯು ಸರಾಗವಾಗಿ ನಡೆದು ನಮ್ಮ ಪ್ರತಿಯೊಂದು ಅವಯವಗಳಿಗೆ ಆರೋಗ್ಯ ಬಲ ಮತ್ತು ಹೊಸ ಹುರುಪನ್ನುಂಟು ಮಾಡುತ್ತದೆ.

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

No. 26.

# ಐಕ್ಯವಿಲ್ಲದೆ ಸ್ವರಾಜ್ಯವಿಲ್ಲವೇ?

## ಐಕ್ಯಭಂಗವನ್ನು ಮಾಡಿದವರು ಯಾರು?

ಭಾರತದ ಸ್ವಾತಂತ್ರ್ಯದ ಪ್ರಶ್ನೆಯು ಎದುರು ಬಂದಾಗಲೆಲ್ಲ—'ಭಾರತೀಯರಲ್ಲಿ ಐಕ್ಯವಿಲ್ಲ; ಆದುದರಿಂದ ಭಾರತವು ಸ್ವತಂತ್ರವಾಗಲಿಕ್ಕೆ ಅಯೋಗ್ಯ. ನೀವು ಅನ್ಯೋನ್ಯವಾಗಿ ಇರಿ, ಆಗಲೇ ನಾವು ಸ್ವರಾಜ್ಯ ಕೊಟ್ಟುಬಿಡುವೆವು' ಎಂದು ಬ್ರಿಟಿಷ ಸರಕಾರವು ಹೇಳುತ್ತ ಬಂದಿದೆ. ಎಷ್ಟರ ತನಕ ಹಿಂದುಸ್ಥಾನದೊಳಗಿನ ಜಾತಿಜಾತಿಗಳು ಪರಸ್ಪರ ಮೈತ್ರಿಯಿಂದ ಇರುವುದಿಲ್ಲವೋ, ಅಷ್ಟರ ತನಕ ಭಾರತದಲ್ಲಿ ವಿದೇಶೀ ಸರಕಾರವು ದೇಶದ ಭದ್ರತೆಗೆ ಅಗತ್ಯವಾಗಿರುವುದು ಎಂದು ಬ್ರಿಟಿಷರು ಹೇಳುತ್ತ ಬಂದಿದ್ದಾರೆ. ಭಾರತದ ವಿಷಯವಾಗಿ ಬ್ರಿಟಿಷರ ಯುದ್ಧ ನೀತಿಯು ಯಾವುದಾಗಿರುವುದೆಂದು ಕಾಂಗ್ರೆಸು ಕೇಳಿದ ಪ್ರಶ್ನೆಗೆ- ಈಗಲಾದರೂ ಬ್ರಿಟಿಷ ಸರಕಾರವು ಜಾತೀಯ ಗೂತವನ್ನು ಎದುರು ಮಾಡಿ ಭಾರತೀಯ ಸ್ವರಾಜ್ಯಪ್ರಶ್ನೆಯನ್ನು ಹಿಂದಕ್ಕೆ ಹಾಕುವ ಪ್ರಯತ್ನಮಾಡಿದೆ

### ವಿದೇಶೀ ಸರಕಾರದ ಧ್ಯೇಯ

ಪರತಂತ್ರ ಭಾರತದ ಮೇಲೆ ಶಾಸನವನ್ನು ಮಾಡುತ್ತಿರುವ ವಿದೇಶೀ ಬ್ರಿಟಿಷ ಸರಕಾರದ ನೀತಿ ಆದರ್ಶಗಳು ಯಾವು ವಿರುವುವು? ಜಾತಿ ಉಪಜಾತಿಗಳಾಗಿ ಒಡೆದ ಹೋದ ಭಾರತೀಯ ಜನಾಂಗವನ್ನು ಒಂದು ಮಾಡುವ ಸುತ್ಯ ಪ್ರಯತ್ನವನ್ನು ಬ್ರಿಟಿಷ್ ಸರಕಾರವು ಮಾಡುತ್ತಿರುವುದೆ? ಬ್ರಿಟಿಷರ ಆಳಿಕೆಯ ಅವಧಿಯು ಬೆಳೆದಂತೆ ಇಲ್ಲಿ ಜಾತಿ ಉಪಜಾತಿಗಳ ಸಂಖ್ಯೆಯು ಕಡಿಮೆಯಾಗುತ್ತ ಬರುತ್ತದೆಯೆ? ಅಥವಾ ಆ ಜಾತಿ ಉಪಜಾತಿಗಳು ಇನ್ನೂ ಭಿನ್ನಭಿನ್ನವಾಗಿ ಒಡೆದು ಹೋಗುತ್ತಿರುವುದು ನಿಲ್ಲುತ್ತಲಿದೆಯೆ? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡಲಿಕ್ಕೆ ನಾವು ಇತಿಹಾಸದ ಹಾಳೆಗಳನ್ನು ಮಗುಚಿದರೆ—'ಇಲ್ಲ'ವೆಂಬ ಉತ್ತರವನ್ನು ಬಹಳ ಖೇದದಿಂದ ಕೊಡಬೇಕಾಗುತ್ತದೆ.

ಹಿಂದುಸ್ಥಾನದ ಬೇರೆ ಬೇರೆ ಜಾತಿ ಮತಗಳ ಹಿತಾಸಕ್ತಿಗಳು ಬೇರೆ ಬೇರೆಯಾಗಿರುತ್ತವೆ ಎಂಬ ಮಾತನ್ನು ಮೊತ್ತ ಮೊದಲು ಲಾರ್ಡ್ ಮಿಂಟೋರವರು ಒಪ್ಪಿದರು. ಆಗಲೇ ಹಿಂದುಗಳು ಬೇರೆ, ಮುಸಲ್ಮಾನರು ಬೇರೆ ಎಂಬ ಭೇದಭಾವನೆಗೆ ಸರಕಾರದ ಕಡೆಯಿಂದ ಪುರಸ್ಕಾರವು ದೊರೆಯಿತು. ಅಂದಿನಿಂದ ಹಿಂದು ಮುಸಲ್ಮಾನ ಮೊದಲಾದ ಭಾರತೀಯ ಜಾತಿಗಳ ಸಂಖ್ಯೆಯು ಒಂದೇ ಸವನೆ ಬೆಳೆಯುತ್ತ ಬಂದಿದೆ ಇತ್ತೀಚಿನ ಇಸವಿಯ ಸುಧಾರಣೆಯ ಕಾಯದೆಯಲ್ಲಿ ಬ್ರಿಟಿಷ್ ಸರಕಾರವು ಹಿಂದುಸ್ಥಾನದ ಒಂದಲ್ಲ, ಎರಡಲ್ಲ, ಡಜನಿಗೆ ಮೀರಿದ ಜಾತಿಗಳಿಗೆ ಪ್ರತ್ಯೇಕ ಸ್ಥಾನಗಳನ್ನು ಕಲ್ಪಿಸಿ ಕೊಟ್ಟಿದೆ. ಲಾರ್ಡ್ ಮಿಂಟೋರವರ ಕಾಲದಲ್ಲಿ ಹಿಂದುಸ್ಥಾನದಲ್ಲಿ ಹಿಂದುಗಳು ಮತ್ತು ಮುಸಲ್ಮಾನರು ಎಂಬ ಎರಡು ಜಾತಿಗಳು ಮಾತ್ರ ಇದ್ದುವಾದರೆ ಈಗ ಜನರಲ್, ಶೆಡ್ಯೂಲ್ಡ್ ಜಾತಿ, ಸ್ತ್ರೀಯರು, ಕಿರಿಸ್ತಾನರು ಎಂದು ಹತ್ತು ಹಲವು ಜಾತಿಗಳನ್ನು ಸರಕಾರವು ಗುರುತಿಸಿ ಮನ್ನಿಸಿದೆ.

### ವಿಭಾಗಿಸಿ ಆಳುವ ತಂತ್ರ

ಇನ್ನು ಹತ್ತಿಪ್ಪತ್ತು ವರ್ಷಗಳ ತನಕ ಬ್ರಿಟಿಷ್ ಸರಕಾರವೇ ಭಾಗ್ಯವನ್ನು ನಿರ್ಮಿಸುವಂಥದ್ದಾಗಿ ಉಳಿಯುವುದಾದರೆ ಆಗ ಮತ್ತೊಂದು ಸುಧಾರಣೆಯ ಮಸೂದೆಯನ್ನು ತಯಾರಿಸುವ ಸಂದರ್ಭದಲ್ಲಿ ಈಗಿರುವ ಹತ್ತಿಪ್ಪತ್ತು ಜಾತಿಗಳನ್ನಷ್ಟೇ ಅಲ್ಲ. ಇನ್ನೂ ಹತ್ತಿಪ್ಪತ್ತು ಜಾತಿಗಳನ್ನು ಸರಕಾರವು ಹುಟ್ಟಿಸಿ ಅವಕ್ಕೆ ಹೊಸ ಹೊಸ ಹೆಸರುಗಳನ್ನು ಕೊಡಲೂ ಬಹುದು! ಆ ಸಮಯಕ್ಕೆ ನಮ್ಮ ದೇಶದಲ್ಲಿ ಮುಸಲ್ಮಾನರು ಎಂದಿರುವ ಈಗಿನ ಒಂದು ಜಾತಿಯಲ್ಲಿ ಶೀಯರು, ಸುನ್ನಿಗಳು, ಮೋಮಿನರು ಎಂದು ಎಷ್ಟೋ ಜಾತಿಗಳಾಗಲೂ ಬಹುದು. ಕ್ರೈಸ್ತರಲ್ಲಿ ಪ್ರಾಟೆಸ್ಟಾಂಟರ, ರೋಮನ್ ಕೆಥೋಲಿಕರು ಎಂದು ಹಲವು ಜಾತಿಗಳಾಗಲೂ ಬಹುದು. ಮೂಲ ನಿವಾಸಿಗಳಲ್ಲಿ ಜಾತಿ ಕೆಟ್ಟವರು ಮತ್ತು ಜಾತಿ ಕೆಡದವರು ಎಂದಾಗಲೂ ಬಹುದು! ವಿಭಾಗಿಸಿ ಆಳುವ ತಂತ್ರವು ಸಫಲವಾಗಲಿಕ್ಕೆ ಹೀಗಾಗುವುದು ಬಹಳ ಅಗತ್ಯವಾಗಿರುವುದು. ಜಾತಿ ಉಪಜಾತಿಗಳು ಒಂದನ್ನೊಂದು ಕೂಡಿ ಒಂದಾಗಿ, ಒಂದು ಜನಾಂಗವಾಗಿ ಇರುವುವಾದರೆ ವಿದೇಶೀ ಸರಕಾರದ ಅಗತ್ಯವಾದರೂ ಏನು ಇರುತ್ತದೆ! ಆದುದರಿಂದಲೇ ಬ್ರಿಟಿಷ್ ಸರಕಾರವು 'ಐಕ್ಯವಿಲ್ಲದೆ ಸ್ವರಾಜ್ಯವಿಲ್ಲ' ಎಂದು ಹೇಳುತ್ತಿದ್ದಾದರೂ ಆ ಐಕ್ಯವು ಉಂಟಾಗದಂತೆಯೂ ಪ್ರಯತ್ನ ನಡೆಸಿ ತಾನು ಇಲ್ಲಿ ಸದಾ ಕಾಲ ಇರಲಿಕ್ಕೆ ವ್ಯವಸ್ಥೆ ಮಾಡುತ್ತದೆ!

ಕಾಂಗ್ರೆಸಿನಂಥ ರಾಷ್ಟ್ರೀಯ ಸಂಸ್ಥೆಗಳು ಜಾತಿ ಭೇದವನ್ನು ತೆಗೆದುಹಾಕಿ ಏಕರಾಷ್ಟ್ರೀಯ ಭಾವನೆಯು ದೇಶದಲ್ಲೆಲ್ಲ ಉಂಟಾಗುವಂತೆ ಮಹಾಪ್ರಯತ್ನಗಳನ್ನು ಮಾಡುತ್ತಿರುವಾಗ, ಸರಕಾರವು ಇದ್ದ ಜಾತಿಗಳು ಸಾಲದೆಂಬಂತೆ ಹೊಸ ಹೊಸ ಜಾತಿ ಉಪಜಾತಿಗಳನ್ನು ಸೃಷ್ಟಿಸಿ ಕಲ್ಪಿಸಿ ಅವುಗಳಿಗೆ ಮನ್ನಣೆಯನ್ನು ಕೊಡುತ್ತಾ ಬರುತ್ತಿದೆ. ಬ್ರಿಟಿಷ ಸರಕಾರವು ಮಾಡಿದ ಜಾತೀಯ ನಿರ್ಧಾರದಿಂದ ಮತ್ತು ಬೇರೆ ಬೇರೆ ಜಾತಿ ಉಪಜಾತಿಗಳಿಗೆ ಸರಕಾರಿ ನೌಕರಿ ಚಾಕರಿಗಳನ್ನು ಹಂಚಿ ಕೊಟ್ಟ ಕ್ರಮದಿಂದ ಈ ಮಾತು ಸ್ಪಷ್ಟವಾಗುತ್ತದೆ.

ಐಕ್ಯವಿಲ್ಲದೆ ಸ್ವಾತಂತ್ರ್ಯವಿಲ್ಲವೆಂದು ಹೇಳಿ ಐಕ್ಯವಾಗದಂತೆ ಸರಕಾರವೇ ಭಂಗವನ್ನು ತರುವುದಾದರೆ, ಸರಕಾರದ ಈ ಧೋರಣೆಯನ್ನು ಯಾವ ಮಾತುಗಳಿಂದ ಶ್ಲಾಘಿಸಬಹುದು?

ಎಳೆ ಮಕ್ಕಳ
ಕೋಮಲ ಚರ್ಮಕ್ಕೆ
ಉತ್ತಮವಾದ
ಪೌಡರು

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾಗಿರುವುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೇಕಡಾ ನೂರರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನಯವಾಗಿಯೂ ಇರಿಸುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇತರ ಜಗತ್ತಿನಲ್ಲಿ ದಾಕ್ತರರೂ ನರ್ಸರೂ ಕುಟಿಕೂರಾ ಪೌಡರು (Cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ. ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಿ ಸಂತೋಷಪಡುತ್ತಾರೆ. ಇದು ಬೆವರನ್ನು ಹೀರಿಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು. ನಿಮಗೆ ಬೇಕಾದಷ್ಟು ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದುದು
ಕುಟಿಕೂರಾ ಟಾಲ್ಕಂ ಪೌಡರು
CUTICURA TALCUM

THE
BANK OF MANGALORE LTD.,
MANGALORE
ESTD 1931
Branches-
Mudabidri & Padubidri.

Fixed Deposits will be received at following rates of interest.

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly

***Savings Bank deposit 3½% on daily balances.***

**All kinds of bankingbusiness transacted.**

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
**ನಂಜನಗೂಡು ಟೂತ್ ಪೌಡರ್ (ರಿಜಿ)**
**ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.**

## ಅಮೇರಿಕನ್ ಮಿಶನರಿಗೆ ಮಹಾತ್ಮರ ಉತ್ತರ

ಅಮೇರಿಕನ್ ಮಿಶನರಿಯೊಬ್ಬನು ಮಹಾತ್ಮಾ ಗಾಂಧಿಯವರಿಗೆ ಒಂದು ಪತ್ರ ಬರೆದು 'ನಿಮ್ಮ ಸತ್ಯ ಮತ್ತು ಅಹಿಂಸೆಯ ತತ್ವಗಳು ನನಗೆ ಮಾನ್ಯ ಇವೆ, ಕ್ರಿಸ್ತ ಮಹಾನುಭಾವನು ಸಹ ಅದರಂತೆ ಉಪದೇಶಿಸುತಿದ್ದನು, ಅಂದಮೇಲೆ ನೀವು ಮತ್ತು ನಿಮ್ಮ ತತ್ವಗಳನ್ನ ಅನುಸರಿಸುತ್ತಿರುವ ಕಾಂಗ್ರೆಸು ಎಲ್ಲ ಜಾತಿಯವರ ವಿಷಯವಾಗಿ ನಿಷ್ಪಕ್ಷ ಉಳಿಯಬೇಕಲ್ಲವೇ? ಆದರೆ ಪರಿಸ್ಥಿತಿ ಹಾಗಿಲ್ಲೆಂದು ಹೇಳಬೇಕಾಗುತ್ತದೆ. ಯಾಕೆಂದರೆ ನಿಮ್ಮ ಮಿತ್ರರಾದ ಶ್ರೀ ರಾಜಗೋಪಾಲಾಚಾರ್ಯರು ಮೊನ್ನೆಮೊನ್ನೆ ಕ್ರಿಸ್ತಧರ್ಮವನ್ನು ಬಿಟ್ಟು ಹಿಂದೂಧರ್ಮವನ್ನು ಸ್ವೀಕರಿಸಿದವರನ್ನು ಅಭಿನಂದಿಸಿ ತಂತಿ ಕಳಿಸಿರುವರು. ರಾಣಾದ ಕಾಂಗ್ರೆಸ ಕಾರ್ಯಕರ್ತರು ಇಂತಹ ಕಾರ್ಯದಲ್ಲಿ ತೊಡಗಿರುವರು. ಇದನ್ನು ನೋಡಿದರೆ ಕಾಂಗ್ರೆಸು ಹಿಂದೂ ಧರ್ಮವನ್ನು ಪೋಷಿಸುತ್ತದೆಂದು ನಿರ್ಧಾರವಾಗುತ್ತದೆ. ಕಾಂಗ್ರೆಸ್ ರಾಜ್ಯದಲ್ಲಿ ನಿಷ್ಪಕ್ಷಪಾತತನದ ಬದಲು ಇದೇ ಕಾರ್ಯ ನಡೆದರೆ, ಅದೊಂದು ಕಷ್ಟಮಯವೆನುವೆಂದು ನಾವು ಭಾವಿಸಲಾರೆವು' ಎಂದು ಅದರಲ್ಲಿ ಕಾಣಿಸಿರುವರು.

ಮಹಾತ್ಮಾ ಗಾಂಧಿಯವರ ಈ ಪತ್ರವನ್ನು ಉದ್ದೇಶಿಸಿ, ಅದಕ್ಕೆ ಕಳೆದ ವಾರದ ಹರಿಜನದಲ್ಲಿ ಈ ಕೆಳಗಿನಂತೆ ಉತ್ತರ ಬರೆದಿರುವರು.

'ಶ್ರೀ ರಾಜಗೋಪಾಲಾಚಾರ್ಯರು ಏನು ಹೇಳಿದರೆಂಬದು ನನಗೆ ಗೊತ್ತಿಲ್ಲ. ಅದಕ್ಕೆ ಉತ್ತರ ಕೊಡಲು ಸಮರ್ಥರಿರುವರು. ಆದರೆ ನಿಷ್ಪಕ್ಷಪಾತದೃಷ್ಟಿಯಿಂದ ರೀತಿ ಏನೆಂದು ನಾನು ನನಗೆ ತಿಳಿದ ಪ್ರಕಾರ ಹೇಳುವೆನು. ಸ್ವತಂತ್ರಹಿಂದುಸ್ಥಾನದಲ್ಲಿ ಎಲ್ಲ ಧರ್ಮಗಳೂ ಸಮಾನತೆಯಿಂದ ವೃದ್ಧಿಗೊಳ್ಳಬೇಕು. ಈಗಿನಂತೆ ಅಸಾಮ್ಯದಿಂದ ಸಾಗಬಾರದು. ಬ್ರಿಟಿಷ ರಾಜರ ಧರ್ಮವು ಕ್ರಿಸ್ತಮತವಾದುದರಿಂದ ಹಿಂದುಸ್ಥಾನದಲ್ಲಿ ಅದಕ್ಕೆ ಹೆಚ್ಚು ಪುರಸ್ಕಾರಗಳು ದೊರೆತಿವೆ. ಪ್ರಜೆಗಳಿಗೆ ಹೊಣೆಗಾರವಾದ ರಾಜ್ಯದಲ್ಲಿ ಯಾವದೇ ಒಂದು ವಿಶಿಷ್ಟಧರ್ಮಕ್ಕೆ ಹೆಚ್ಚು ಪುರಸ್ಕಾರಗಳು ದೊರೆಯತಕ್ಕದ್ದಲ್ಲ. ಆದರೆ ತಮ್ಮನ್ನು ಅಗಲಿ ಪರಧರ್ಮವನ್ನು ಸ್ವೀಕರಿಸಿದ ಬಂಧುಗಳು ಪುನಃ ಹಿಂದೂ ಧರ್ಮವನ್ನ ಅಂಗೀಕರಿಸಿದಾಗ ಹಿಂದುಗಳು ಅವರನ್ನು ಅಭಿನಂದಿಸುವುದರಲ್ಲಿ ತಪ್ಪು ಏನೂ ಇಲ್ಲ. ಅಜ್ಞ ಜನರು ಕ್ರಿಸ್ತಧರ್ಮವನ್ನು ಸ್ವೀಕರಿಸುವಂತೆ ಮಿಶನರಿಗಳು ಕೈಕೊಳ್ಳುವ ಉಪಾಯಗಳ ಬಗ್ಗೆ ನಾನು ಅನೇಕ ಸಲ ಆತಂಕ ಮಾಡಿದ್ದೇನೆ. ತಮ್ಮ ಧರ್ಮವನ್ನು ಪರರಿಗೆ ಬೋಧಿಸುವುದು ಒಂದು ಮಾರ್ಗ. ಆದರೆ ತಮ್ಮ ಧರ್ಮವನ್ನು ಪರರು ಸ್ವೀಕರಿಸುವಂತೆ ಮರುಳುಗೊಳಿಸುವುದು ಬೇರೆ ಮಾರ್ಗ. ಇಂಥವರು ಮರಳಿ ತಮ್ಮ ಧರ್ಮಕ್ಕೆ ಬಂದರೆ ಆ ಧರ್ಮದವರು ಆನಂದಪಡುವುದು ಸ್ವಾಭಾವಿಕವಾಗಿದೆ. ಕಾಂಗ್ರೆಸು ಹಿಂದುಗಳ ಸಂಸ್ಥೆಯೆಂದ ನಮ್ಮ ಮಿತ್ರ ಮಿಶನರಿಯು ತಪ್ಪು ತಿಳಿದುಕೊಂಡಿದ್ದಾನೆ. ಗಂಡಸರು ಮತ್ತು ಹೆಂಗಸರು ಕೂಡಿ ಸುಮಾರು ೩೦ ಲಕ್ಷ ಜನರು ಅದರ ಸದಸ್ಯರಿರುವರು. ಅದರಲ್ಲಿ ಎಲ್ಲರಿಗೂ ಮುಕ್ತದ್ವಾರ ಇದೆ. ಎಲ್ಲ ಧರ್ಮೀಯರು ಅದರಲ್ಲಿರುವರು. ಕ್ರಿಸ್ತರು ಇಲ್ಲವೆ ಮುಸಲ್ಮಾನರು ಅದನ್ನೇಕೆ ವಶಪಡಿಸಿಕೊಳ್ಳಬಾರದೋ ನನಗೆ ತಿಳಿಯದಾಗಿದೆ. ಹಿಂದುಸ್ತಾನದಲ್ಲಿ ಹಿಂದುಗಳ ಬಹುಮತವಿರುವುದು ನಿಜ. ಆದರೆ ಜನರ ವಿಷಮ ಹಂಚುವಿಕೆಯಿಂದ ಸಿಂಧ, ಬಂಗಾಲ, ಗಡಿನಾಡ ಪ್ರಾಂತ, ಪಂಜಾಬುಗಳಲ್ಲಿ ಮುಸಲ್ಮಾನರು ಅಧಿಕರಾಗಿರುವರು.

'ಮಿಶನರಿಗಳು ಈ ವಿಷಯವನ್ನ ಧರ್ಮದ ಸಂಕುಚಿತ ದೃಷ್ಟಿಯಿಂದ ಗಮನಿಸುವುದು ತಪ್ಪು ಎಂದು ಹೇಳುವೆನು. ರಾಷ್ಟ್ರೀಯತ್ವದ ಕಡೆಗೆ ನಾವು ಗಮನ ಕೊಡಬೇಕು. ಕಾಂಗ್ರೆಸು ನಿಷ್ಪಕ್ಷಪಾತವಿಲ್ಲೆಂದೂ, ಅದು ಹಿಂದುಗಳ ಸಂಸ್ಥೆಯೆಂದೂ, ಹಿಂದುಸ್ತಾನದ ಜಾತಿಜಾತಿಗಳಲ್ಲಿ ಪಕ್ಷಾಂತರವಿದೆಯೆಂದೂ ಹೀಗೆ ನಮ್ಮ ಮಿಶನರಿಗಳ ಕ್ರಿಪವಾಪರಿಗಿ ತಪ್ಪು ತಿಳಿದುಕೊಂಡಿರುವರು, ಆದರೆ ಹಿಂದೀಯರಲ್ಲಿರ ಆರ್ಥಿಕ ಮತ್ತು ರಾಜಕೀಯ ಧ್ಯೇಯಗಳು ಒಂದೇ ಇರುವವು. ವಿಶೇಷ ಪುರಸ್ಕಾರಗಳು ಸ್ವತಂತ್ರ್ಯದಲ್ಲಿ ಸಮನಾಗಿರುವವು. ಆದ ದರಿಂದ ರಾಜಕೀಯ ಚರ್ಚೆಯಲ್ಲಿ ಜಾತಿಭೇದವನ್ನ ತರಬಾರದು. ಒಳಿತಲ್ಲ. ಆದರೆ ಅನ್ಯಾಯವಾಗುತ್ತಿದ್ದರೆ ಸಾಮಾನ್ಯ ನಿಯಮವು (ಕಾಯದೆ) ಅದನ್ನು ನಿಲ್ಲಿಸಬಹುದು.'

# ಧಾರ್ಮಿಕ ವಿಚಾರ

# ಹಿಂದೂಧರ್ಮದಿಂದ ಹೋದವರು ತಿರುಗಿ ಹಿಂದೂಧರ್ಮಕ್ಕೆ ಬಂದಾಗ?

## ಅವರನ್ನು ಅಭಿನಂದಿಸುವುದು ತಪ್ಪೆ?

### ಮಿಶನರಿಗೆ ಗಾಂಧಿಜಿಯವರ ಉತ್ತರ

### ಪ್ರೇಮದ ಬಲವೇ ಅಜೇಯ ಬಲ! ರಾಗೋರರ ಅಮೃತ ವಾಣಿ!

## ಮಹಾಕವಿ ರಾಗೋರರ ಅಮೃತವಾಣಿ

### ಪ್ರೇಮದ ಅಜೇಯ ಶಕ್ತಿ

'ಮಹಾತ್ಮಾಜಿಯವರು ಪ್ರೇಮರಾಜ್ಯ ಸ್ಥಾಪನಗಾಗಿ ದುಡಿಯುತ್ತಿರುವ ವಿಷಯ ತಮ್ಮ ವಿಚಾರಗಳನ್ನ ಪ್ರಕಟಮಾಡುತ್ತ ಮಹಾಕವಿ ರವೀಂದ್ರನಾಥ ರಾಗೋರರು ಅವರ ಪ್ರಯತ್ನಗಳು ಶೀಘ್ರ ಫಲಕಾರಿಯಾಗಲೆಂದು ಆಶಿಸಿರುವರು. ಶ್ರೀ ರಾಗೋರರ ಅನ್ನರ ಬಾಗೆ ಅಧಿಕಾರಬಲಕ್ಕೆ ಪರಿಮಿತಿಯು ಇರುತ್ತದೆ. ಅದನ್ನು ಅಳೆಯಲಿಕ್ಕೆ ಬರುತ್ತದೆ. ಆದುದರಿಂದ ಒಬ್ಬರಿಂದೊಬ್ಬರು ಹೆಚ್ಚು ಅಧಿಕಾರ ಸಂಪನ್ನರಾಗಿರಬೇಕೆಂಬ ಸ್ಪರ್ಧೆ ಕಂಡ ಬರುತ್ತದೆ. ಈ ಸ್ಪರ್ಧೆಯೇ ಪರಸ್ಪರ ದ್ವೇಷ ಅಸೂಯೆಗಳ ಮೂಲ ಕಾರಣವಾಗಿರುವುದು. ಸ್ಪರ್ಧೆಯು ಪರಸ್ಪರ ಸಂಘರ್ಷಕ್ಕೆ ಕಾರಣವು. ಇತರರ ವಿನಾಶದಿಂದ ಸ್ಪರ್ಧಿಗಳು ಜೀವನ ಸಾಗಬೇಕು. ಜೀವಿಸುವುದಕ್ಕೋಸ್ಕರ ಅವರ ರಂದ ಕಾಲುವೆಯನ್ನು ಹರಿಸಬೇಕು. ಆದ ದರಿಂದ ಎಲ್ಲಿ ಅಧಿಕಾರಬಲದ ಸ್ಪರ್ಧೆಯು ನಡೆಯುತ್ತದೋ, ಅಲ್ಲಿಂದ ಶಾಂತಿಯು ದೂರ ದೂರ ಪಲಾಯನ ಮಾಡುತದೆ. ಲೋಕದ ಪ್ರಳಯಕ್ಕೆ ಅಧಿಕಾರಬಲವೇ ಕಾರಣವು.

### ಪ್ರೇಮಬಲದ ಮಹತ್ವ

ಆದರೆ ಪ್ರೇಮಬಲವು ಹಾಗಲ್ಲ. ಅದರ ಮಹತ್ವವು ಅತಿಶಯವಾಗಿರುವುದು. ಯಾಜ್ಞವಲ್ಕ್ಯ ಮಹರ್ಷಿಗಳು ತಮ್ಮ ಪತ್ನಿ ಮೈತ್ರೇಯಿಯಿಂದ ವಿದಾಯವನ್ನು ಹೊಂದುವಾಗ ಮೈತ್ರೇಯಿಯು ಹೇಳಿದ ಮಾತುಗಳು ಸುವರ್ಣಾಕ್ಷರಗಳಿಂದ ಬರೆದಿಡಲ್ಪಟ್ಟಿರುವುವು. ಹೋಗುವಾಗ ಋಷಿಗಳು ಅವಳಿಗೆ ಕೆಲವು ವಸ್ತು ಒಡವೆಗಳನ್ನು ಕೊಟ್ಟು ಹೋಗುವವರಿದ್ದರು. ಆಗ ಮೈತ್ರೇಯಿ ಹೇಳಿದಳು— ನಾನೇಕೆ ಈ ವಸ್ತುಗಳ ಅಧಿಕಾರಿಣಿಯಾಗಬೇಕು? ಇವಕ್ಕೂ ಅವಿನಾಶಿಯಿಂದ ನನ್ನ ಆತ್ಮಕ್ಕೂ ಯಾವ ಸಂಬಂಧವಿದೆ? ಹೆಚ್ಚೆಚ್ಚು ವಸ್ತು ಒಡವೆಗಳನ್ನು ಸಂಗ್ರಹಿಸಿ ಅವುಗಳ ಅಧಿಕಾರಿಣಿಯಾಗುವುದರಿಂದ ನನಗೇನು ಪ್ರಯೋಜನ? ಸ್ವರವನ್ನ ಬೆಳಸುವುದರಿಂದ ಅಲ್ಲ, ಪರಂತು ಅದನ್ನು ಹದ-ಮಿತಗೊಳಿಸುವುದರಿಂದ ಮಧುರ ಸಂಗೀತದ ಆಲಾಪವು ಹೊರಡುತ್ತದೆ. ಅವಳು ಆ ವಸ್ತು ಒಡವೆಗಳ ಅಧಿಕಾರಿಣಿಯಾಗಲೊಪ್ಪದೆ ಅಜರಾಮರಳಾದಳು. ಅವಳಿಗೆ ಪ್ರೇಮವೇ ಮುಖ್ಯವಾಗಿತ್ತು. ಅಧಿಕಾರವು ಬೇಕಾಗಿರಲಿಲ್ಲ. ಪ್ರೇಮವನ್ನು ಕೊಟ್ಟು ತಕ್ಕೊಂಡ ಮೈತ್ರೇಯಿ ಅಜರಾಮರಳಾದಳು.

### ಮಾನವನ ಮಾನವತೆಯ ರಕ್ಷಣೆ

'ಅಧಿಕಾರ ಬಲವನ್ನು ಒಳಿಸುವುದರಿಂದ ಮನುಷ್ಯನ ಸಂಹಾರಶಕ್ತಿ ಮೊದಲಾದ ಹಿಂಸಕ ಮೃಗಗಳಿಗಿಂತಲೂ ಹೆಚ್ಚು ಭಯಂಕರನಾಗಬಹುದು. ಆದರೆ ಅವನ ಜೀವನದಲ್ಲಿ ನಿಜ ಸುಖವನ್ನು ಅನುಭವಿಸಲಾರನು. ಮಾನವನಾಗಿ ಮಾನವತೆಯ ರಕ್ಷಣ ಮಾಡಿಕೊಳ್ಳಲಾರನು. ಸತ್ಯ ಮತ್ತು ಪ್ರೇಮ, ತ್ಯಾಗ ಮತ್ತು ಸೇವೆಯಿಂದ ರಾಜ್ಯ ಶಾಂತಿಯು ನೆಲೆಸುವುದು [illegible] ಅದು [illegible] ವಿನಾಶವಮಾನವನ್ನು ತರುತ್ತದೆ. ಶಾಂತಿಯನ್ನು [illegible] ಕೇವಲ ಪರದುಃಖವ ಹೇಳುತ್ತಾರೆ. ಶಾಂತಿಯು [illegible] ಜನರು ತಮ್ಮ ಹೇಡಿತನವನ್ನು [illegible] ಲಕ್ಷಿಸುವುದು ನಿಜ. ಆದರೆ ಅದರಲ್ಲಿ ಶಾಂತಿಯ ದೋಷವಿರುವುದಿಲ್ಲ. ಸತ್ಯ ಪ್ರೇಮ ತ್ಯಾಗ ಕ್ಷಮೆಗಳ ಬಲವು ಅಪರಿಮಿತವಾಗಿದೆ. ಅದು ಸದಾ ಕಾಲ ಅಜೇಯವಾಗಿದೆ. ಪ್ರೇಮಸೂತ್ರದಿಂದ ಬಂಧಿತರಾಗಿರುವವರು ಬಂಧಿಗಳಾಗಿರುವುದಿಲ್ಲ. ಅವರು ಸ್ವತಂತ್ರರಾಜ್ಯದಲ್ಲಿ ವಿಹರಿಸುತ್ತಿರುತ್ತಾರೆ. ಪ್ರೇಮಸೂತ್ರದ ಬಂಧನವು ಯಥಾರ್ಥ ಸ್ವಾತಂತ್ರ್ಯವಾಗಿರುವುದು. ಪ್ರೇಮಿಗಳು ಯಾರ ದಾಸರೂ ಗುಲಾಮರೂ ಅಲ್ಲ, ಆದರೆ ದೀನ ದರಿದ್ರರ ಸೇವಕರಾಗಿ ಅವರಿರುತ್ತಾರೆ. ಆದುದರಿಂದ ಪ್ರೇಮಿಯಾಗುವುದು ಪ್ರತಿಯೊಬ್ಬನ ಧ್ಯೇಯವಾಗಿರಬೇಕು. ಪ್ರೇಮವು ಮನುಷ್ಯನಿಗೆ ಮನುಷ್ಯತ್ವವನ್ನು ಕೊಟ್ಟು ಅವನನ್ನು ಮನುಷ್ಯನನ್ನಾಗಿ ಮಾಡುತ್ತದೆ, ಸುಖ ಶಾಂತಿಯನ್ನು ಕೊಟ್ಟು ಅದು ಭೂಮಿಯನ್ನು ಸ್ವರ್ಗವಾಗಿ ಪರಿವರ್ತಿಸುತ್ತದೆ.'

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.
ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ನಿಮ್ಮ ಜಾಹಿರಾತುಗಳನ್ನು
ಸ್ವದೇಶಾಭಿಮಾನಿಗೆನೇ ಕೊಡಿರಿ!

# ತಮ್ಮ ಮುಂದಿನ ನೆಲೆಯೇನೆಂದು ಸರ್ವಾಧಿಕಾರಿಗಳ ಚಿಂತೆ!

## ಭೋಗ ಜೀವನದ ಭ್ರಮೆ ಅವರಿಗೂ ಇದೆ

ಹಿಟ್ಲರ್ ಮುಸಲೋನಿ, ಸ್ಟಾಲೀನ–ಯಾರೇ ಇದ್ದರೂ, ಈ ಸರ್ವಾಧಿಕಾರಿಗಳಿಗೆ ತಮ್ಮ ಸ್ಥಾನಭದ್ರತೆಯ ವಿಶ್ವಾಸವು ಅವರಿಗೇ ಇರುವದಿಲ್ಲ. ಅವರು ಯಾವ ಕ್ಷಣಕ್ಕಾದರೂ ಅಧಿಕಾರಚ್ಯುತರಾಗಿ ದೇಶ ದೇಶಾಂತರಗಳಲ್ಲಿ ಅಂಡಲೆಯಬೇಕಾಗಬಹುದೆಂಬುದು ಅವರಿಗೆ ಚೆನ್ನಾಗಿ ತಿಳಿದಿದೆ. ತಾವು ಪ್ರಜೆಗಳ ಅಭಿಮತವನ್ನು ಪಡೆದು, ಆ ಅಭಿಮತದಂತೆ ಪ್ರಜೆಗಳ ಹಿತಕ್ಕಾಗಿ ಆಳುತ್ತಿರುವುದಿಲ್ಲ. ಕೇವಲ ತಮ್ಮ ಮತ್ತು ತಮ್ಮನ್ನು ಅಧಿಕಾರ ಪಟ್ಟಕ್ಕೇರಿಸಿದ ತಮ್ಮವರ ಹಿತವೇ ಅವರಿಗೆ ಮುಖ್ಯವಾಗಿದೆ ಆದುದರಿಂದ ಅವರ ಶಾಸನಾ ಕಾರ್ಯದಿಂದ ಅತೃಪ್ತವಾದ ಪ್ರಜಾವರ್ಗವು ಯಾವ ಸಮಯದಲ್ಲಾದರೂ ದಂಗೆ ಎದ್ದು ಅವರನ್ನು ದೇಶದಿಂದ ಹೊರ ಒಡಬಹುದು ಎಂಬುದು ಅವರಿಗೆ ಗೊತ್ತಾಗಿದೆ ತಾವು ಪ್ರೇಮ ಮತ್ತು ಒಲವಿನಿಂದ ಆಳುವದಿಲ್ಲ; ಪಾಶವಿಕ ಬಲದಿಂದ ಪ್ರಜೆಗಳನ್ನು ಹಿಡಿತದಲ್ಲಿಟ್ಟಿದ್ದೇವೆ, ಅವರು ಯಾವಾಗಬೇಕಾದರೂ ಕೈ ತಪ್ಪಿಸಿಕೊಂಡು ಸ್ವತಂತ್ರರಾಗಬಹುದು ಎಂಬುದೂ ಅವರಿಗೆ ಸ್ಪಷ್ಟವಾಗಿದೆ ಆದ್ದರಿಂದ ಈ ಸರ್ವಾಧಿಕಾರಿಗಳ ಲಕ್ಷ್ಯ ತಾವು ಸ್ಥಾನ ಭ್ರಷ್ಟರಾದ ಸಂದರ್ಭದಲ್ಲಿ ಹೇಗೆ ಸುಖ ಜೀವನ ಸಾಗಿಸಬಹುದೆಂಬುದರ ಕಡೆಗೂ ಇರುತ್ತದೆ

### ಸರ್ವಾಧಿಕಾರಿಗಳು ಪರಮಾರ್ಥಿಗಳಲ್ಲ

ಪಾಶವಿಕ ಒಲದ ಬಾಹುಳ್ಯವೊಂದು ಅವರಲ್ಲಿ ಇರುವದಿಲ್ಲವಾದರೆ ಸರ್ವಾಧಿಕಾರಿಗಳೆಂಬವರು ಸಾಮಾನ್ಯ ಜನರಂತೆಯೆ ಇರುತ್ತಾರೆ ಸಾಮಾನ್ಯರಂತೆ ಅವರಲ್ಲಿಯೂ ಪರಮಾರ್ಥಕ್ಕಿಂತ ಸ್ವಾರ್ಥವೇ ಹೆಚ್ಚು, ಆದ್ದರಿಂದ ತಾವು ಸ್ಥಾನಭ್ರಷ್ಟರಾದ ಸಂದರ್ಭದಲ್ಲಿ ತಮ್ಮ ಸುಖಜೀವನಕ್ಕೆ ಯಾವ ಲೋಪವೂ ಬರಬಾರದೆಂಬುದಕ್ಕೋಸ್ಕರ ಅವರು ಹೇರಳ ಹಣವನ್ನು ಪರದೇಶೀಯ ಬೇಂಕುಗಳಲ್ಲಿ ರೇವಣಾತಿ ಇಟ್ಟಿರುತ್ತಾರೆ. ಸ್ವದೇಶ ಪ್ರಜಾವರ್ಗವು ಅನ್ನ ಬಟ್ಟೆಗಿಲ್ಲದೆ ನಾರಕೀಯ ಜೀವನವನ್ನು ಸಾಗಿಸುತ್ತಿರುವಾಗ, ಈ ಸರ್ವಾಧಿಕಾರಿಗಳು ಬಹಳ ಹಣವನ್ನು ವಿದೇಶಗಳಲ್ಲಿ, ವಿನಿಯೋಗಿಸಿರುತ್ತಾರೆನ್ನುವಾಗ ಅವರಲ್ಲಿ ಸ್ವಾರ್ಥವು ಎಷ್ಟು ಹೆಚ್ಚಾಗಿ ತುಂಬಿದೆ ಎಂಬುದು ತಿಳಿಯುತ್ತದೆ

### ಹಿಟ್ಲರನ ಸಂಪತ್ತು

ಇದು ಇಷ್ಟೆಯೇ ಇದೆಯೆಂದು ಯಾರೂ ನಿರ್ಧಾರವಾಗಿ ಹೇಳಬರುವಂತಿಲ್ಲ ಅವರ ಸ್ವಂತದ ಲೇವಾದೇವಿಯು ಯಾವಾಗಲೂ ಬಹಳ ರಹಸ್ಯವಾಗಿರುತ್ತದೆ, ಅವನು ಬರೆದ ಮೈನ ಕಾಂಫ ಎಂಬ ಗ್ರಂಥದಿಂದಲೇ ಅವನಿಗೆ ಒಂದು ಮಿಲಿಯ ಪವನುಗಳ ವರಮಾನವಾಗಿದೆ. ಅವನ ಜೀವನದ ಖರ್ಚು ಸರಕಾರದ ಬೊಕ್ಕಸದಿಂದಲೇ ನಡೆಯುವುದಾದ್ದರಿಂದ, ಅವನು ತನ್ನ ಖಾಸಗಿ ವರಮಾನದಿಂದ ಜೀವನಕ್ಕಾಗಿ ಒಂದು ಚಿಕ್ಕಾಣೆಯನ್ನಾದರೂ ಖರ್ಚು ಮಾಡಬೇಕಾಗಿರುವದಿಲ್ಲ. ಆದರೂ ಅವನ ಗ್ರಂಥದಿಂದ ಆಗುವ ವರಮಾನವು ದಿನದಿನಕ್ಕೂ ಬೆಳೆಯುತ್ತಲಿರುವದು. ಹಿಟ್ಲರನು ರಾಜಕಾರಣಿ ಆಗಿರುವಂತೆ ವ್ಯಾಪಾರಿಯೂ ಆಗಿದ್ದಾನೆ. ಇವೆರಡರ ಸಮ್ಮಿಶ್ರಣ ಮಾಡಿ ಅವನು ತನ್ನ ಖಾಸಗಿ ಸಂಪತ್ತನ್ನು ಬೆಳೆಯಿಸುತ್ತಲಿರುವನು ಜರ್ಮನಿಯಲ್ಲಿ ಮೈನ ಕಾಂಫಿನ ಹಳೆ ಪ್ರತಿಗಳನ್ನು ಯಾರಾದರೂ ಕೊಂಡುಕೊಳ್ಳಬಾರದೆಂಬ ನಿಷೇಧವಿರುವದಿಲ್ಲವಾದರೂ, ಅವುಗಳನ್ನು ಮಾರಾಟಕ್ಕಿಟ್ಟವರನ್ನು ಯಹೋದಿಯರೆಂಬ ಸಂದೇಹದಿಂದ ಸರಕಾರದಧಿಕಾರಿಗಳು ದಂಡಿಸುವ ಕ್ರಮವಿದೆ. ಆದ್ದರಿಂದ ಪ್ರತಿಯೊಬ್ಬ ಪುಸ್ತಕ ವ್ಯಾಪಾರಿಯು ಅದರ ಹೊಸ ಪ್ರತಿಯನ್ನೇ ಮಾರುತ್ತಿರಬೇಕಾಗುವದು! ಮತ್ತು ಆ ಗ್ರಂಥದ ಪ್ರಚಾರವು ಕೂಡ ವಿಲಕ್ಷಣ ರೀತಿಯಿಂದ ಆಗುತ್ತಿರುತ್ತದೆ ಜರ್ಮನಿಯಲ್ಲಿ ವಿವಾಹವು ಅನಿವಾರ್ಯವಾಗಿದೆ ವಿವಾಹವಾಗುವಾಗ ಪ್ರತಿಯೊಬ್ಬ ವಧೂವರರಿಗೆ ಮೈನಕಾಂಫಿನ ಒಂದೊಂದು ಪ್ರತಿಯನ್ನು ಸರಕಾರವೇ ಕೊಂಡುಕೊಂಡು ಕಾಣಿಕೆಯಾಗಿ ಕೊಡುವದು! ಹೀಗೆ ಪ್ರತ್ಯಕ್ಷವಾಗಿ ಜನರೇನಾದರೂ ಅವನ ಪುಸ್ತಕಗಳನ್ನು ಪಡೆದು ಹಿಟ್ಲರನಿಗೆ ಲಾಭಮಾಡಿ ಕೊಡುವದಿಲ್ಲವಾದರೂ, ಸರಕಾರವು ಜನರ ತೆರಿಗೆ ಕಂದಾಯಗಳ ದುಡ್ಡಿನಿಂದಲೇ ಮಿಲಿಯಾಂತರ ಪ್ರತಿಗಳನ್ನು ಪ್ರತಿವರ್ಷ ಕೊಂಡುಕೊಂಡು ಹಿಟ್ಲರನಿಗೆ ಲಾಭಮಾಡಿಕೊಡುತ್ತದೆ ಹೀಗೆ ಅವನಿಗೆ ಈ ಒಂದೇ ಒಂದು ಪುಸ್ತಕದಿಂದ ೧೫೦೦೦೦ದಿಂದ ೨೦೦೦೦೦ ಪವನುಗಳ ತನಕ ವಾರ್ಷಿಕ ಲಾಭವಾಗುತ್ತದೆ. ಈ ರೀತಿ ಪುಸ್ತಕ ವ್ಯಾಪಾರ ಮಾಡಿ ಹೇರಳ ಹಣ ಗಳಿಸಿದ ಬೇರೆ ಯಾವ ಸರ್ವಾಧಿಕಾರಿಯೂ ಇರುವದಿಲ್ಲ. ಆದರೆ ಇಷ್ಟು ಹಣವನ್ನು ಹಿಟ್ಲರನು ಮಾಡುತ್ತಾನೆಂಬುದು ಯಾರಿಗೂ ಗೊತ್ತಾಗುವದಿಲ್ಲ. ವಿದೇಶಗಳಲ್ಲಿ ಅದನ್ನು ಸಂಚಯಿಸಿಡುವದಲ್ಲದೆ ಮತ್ತೇನನ್ನು ಮಾಡಬಹುದು?

### ಮುಸಲೋನಿಯ ವರಮಾನ

ಮುಸಲೋನಿಗೆ ಅವನ ಕೆಲಸ ಕಾರ್ಯಗಳಿಗೆ ರಾಜ ಬೊಕ್ಕಸದಿಂದ ೧೫೦೦ ಪವನುಗಳ ತಲಬು ಸಲ್ಲುತ್ತದೆ. ಹಿಟ್ಲರನಂತೆ ಅವನ ಜೀವನದ ಖರ್ಚನ್ನು ಸರಕಾರವೇ ತಾಳಿಕೊಳ್ಳುವದು. ಇಷ್ಟು ಅಲ್ಲದೆ ಅವನಿಗೆ ತನ್ನ ಪತ್ರಿಕಾ ಸಂಚಾಲನದಿಂದಲೂ ಬಹಳ ಉತ್ಪತ್ತಿ ಇರುತ್ತದೆ. ಪೊಪೊಲೊಡಿ ಇಟಾಲಿಯಾ ಎಂಬುದು ಮುಸಲೋನಿಯ ಪತ್ರಿಕೆ ಎಂದು ಪ್ರಸಿದ್ಧವಾಗಿರುವದರಿಂದ, ಆ ಪತ್ರಿಕೆಗೆ ಇಟಲಿಯಲ್ಲಿ ಮಾತ್ರವಲ್ಲ, ಸರ್ವತ್ರ ಬಹಳ ಪ್ರಚಾರವಿರುತ್ತದೆ ಆದುದರಿಂದ ಅವನಿಗೆ ಒಂದೆರಡು ಲಕ್ಷ ಪವನುಗಳ ವಾರ್ಷಿಕ ಲಾಭವಾಗುತ್ತದೆ ಸರ್ವಾಧಿಕಾರ ಪಟ್ಟದಿಂದ ತಳ್ಳಲ್ಪಟ್ಟಾಗ, ಮೊದಲಿನಂತೆ ಕೇವಲ ಒಂದೂವರೆ ಪವನಿನ ತಿಂಗಳ ಸಂಬಳದ ಒಬ್ಬ ಕೂಲಿಗಾರನಾಗಿ ಜೀವಿಸಲಿಕ್ಕೆ ಮುಸಲೋನಿ ಅಪೇಕ್ಷಿಸುವದಿಲ್ಲ. ಆದ್ದರಿಂದ ಅವನು ವಿದೇಶೀ ಬೇಂಕುಗಳಲ್ಲಿ ಯಾರಿಗೂ ತಿಳಿಯದಂಥ ರೀತಿಯಲ್ಲಿ ಹಣವನ್ನು ರೇವಣಾತಿ ಇಟ್ಟಿರುತ್ತಾನೆ.

### ಬಡ ಸ್ಟಾಲೀನನ ಸಂಚಯ

ಎಲ್ಲ ಸರ್ವಾಧಿಕಾರಿಗಳಿಗಿಂತ ಸ್ಟಾಲೀನನಿಗೆ ದೊರೆಯುವ ಸಂಬಳವು ಬಹಳ ಕಡಿಮೆ, ಅಂದರೆ ವರ್ಷಕ್ಕೆ ೮೦ ಪವನು ಮಾತ್ರ ಆಗಿರುವದು! ಆದರೆ ರಶ್ಯದ ವಿನಿಮಯ ಧರದ ಹೆಚ್ಚಳದಿಂದ ಆತನ ಆ ಸಂಬಳವು ೫೦೦ ಪವನುಗಳಷ್ಟಾಗಬಹುದು. ಹೇಗಿದ್ದರೂ ಅವನು ತನ್ನ ಖಾಸಗಿ ಜೀವನಕ್ಕಾಗಿ ತನ್ನ ಸಂಬಳದ ಹಣವನ್ನು ಖರ್ಚುಮಾಡಬೇಕಾಗಿಲ್ಲ. ಎಲ್ಲಾ ಖರ್ಚು ಸರಕಾರದ ಬೊಕ್ಕಸದಿಂದ ನಡೆಯುತ್ತದೆ. ಸ್ಟಾಲೀನನ ಜೀವನವು ಬಹಳ ಸರಳವಾಗಿದೆ. ಅವನಿಗೆ ಹಿಟ್ಲರ ಮುಸಲೋನಿಯರಂತೆ ಪುಸ್ತಕ ಅಥವಾ ಪತ್ರಿಕಾ ಸಂಚಾಲನದಿಂದ ಲಾಭವಿಲ್ಲ ಆದರೂ ಸ್ವಿಸ್ಟಿದಷ್ಟು ಹಣವು ಏನಾಗುತ್ತದೆ? ಅದನ್ನು ಬಲ್ಲವರೇ ಬಲ್ಲರು!

### ಇತರ ಸರ್ವಾಧಿಕಾರಿಗಳ ವಿನಿಯೋಗ ಕ್ರಮ

ಪೋರ್ಚುಗಲಿನಲ್ಲಿ ಅರಸನು ಹೆಸರು ಮಾತ್ರಕ್ಕೆ ಇದ್ದಾನೆ ನಿಜವಾದ ಅಧಿಕಾರವು ಡಾಕ್ಟರ ಸಾಲ್ಝಾಜಾರ ಎಂಬ ಮುಖ್ಯ ಮಂತ್ರಿಯ ಕೈಯ್ಯಲ್ಲಿದೆ. ಅವನಿಗೆ ವಾರ್ಷಿಕ ೫೦೦ ಪವನುಗಳ ತಲಬು ದೊರೆಯುತ್ತದೆ. ಚೀನದ ಸರ್ವಾಧಿಕಾರಿ ಚ್ಯಾಂಗ ಕೇಶೇಕನಿಗೆ ತಿಂಗಳಿಗೆ ೫೦ ಪವನುಗಳ ತಲಬು ಇದೆ. ಆದರೂ ಅವನಿಗೆ ಹೆಂಡತಿಯ ಆಸ್ತಿಪಾಸ್ತಿಗಳಿಂದ ಲಕ್ಷಾಂತರ ರೂಪಾಯಿಗಳ ಆದಾಯವಿದೆ. ಆದರೆ ಸರ್ವಾಧಿಕಾರಿಗಳಲ್ಲಿ ಇವನೊಬ್ಬನು ತಾನೇ—ತನ್ನವರ ಮಾನದ ಅಂಶವನ್ನು ದೇಶಕ್ಕಾಗಿ ಮತ್ತು ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ವಿನಿಯೋಗಿಸುತ್ತಿರುವನೆಂದು ತಿಳಿದುಬರುತ್ತದೆ! ಧನ್ಯ, ಚೀನ! ಚ್ಯಾಂಗ ಕೇಶೇಕನಂಥ ಸುಪುತ್ರನನ್ನು ಪಡೆದ ನೀನು ನಿಜವಾಗಿಯೂ ಧನ್ಯಳು!



## ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರಕಟಣೆಗಳು

### ಮತದಾರ ಸಂಘಗಳು ಮತ್ತು ಅವುಗಳಿಗಿರುವ ಸ್ಥಳಗಳು

ಕಾಂಗ್ರೆಸಿನ ಹೊಸ ಘಟನೆಯ ಪ್ರಕಾರ ಈ ವರ್ಷದಿಂದ ಕಾಂಗ್ರೆಸ ಪ್ರತಿನಿಧಿ ಚುನಾವಣೆಗೋಸುಗ ಕಾಯಂ ಮತದಾರ ಸಂಘಗಳು ಏರ್ಪಟ್ಟಿರುವವು. ಈ ವರ್ಷ ಹೈದರಾಬಾದ ಸಂಸ್ಥಾನದಲ್ಲಿ ಬಹುಕಡಿಮೆ ಸದಸ್ಯರಾಗಿರುವುದರಿಂದ ಮತ್ತು ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ಮೂಲಕ ಸಂಸ್ಥಾನ ಪ್ರದೇಶಗಳಲ್ಲಿ ಬಹು ಸ್ಥಳಗಳು ಖಾಲಿ ಬಿದ್ದು ಅವುಗಳನ್ನು ಕಾಂಗ್ರೆಸ ಘಟನೆ ಹಾಗು ಪ್ರಾಂತೀಯ ಕಾರ್ಯಕಾರಿಮಂಡಲದ ನಿರ್ಣಯಗಳ ಪ್ರಕಾರ ಪ್ರಾಂತದ ಬೇರೆ ಮತದಾರ ಸಂಘಗಳಲ್ಲಿ ಹಂಚಲಾಗಿದೆ. ಒಟ್ಟಿನಲ್ಲಿ ಈ ವರ್ಷ ರಾಮಗಢ ಕಾಂಗ್ರೆಸ ಪ್ರತಿನಿಧಿಗಳ ಚುನಾವಣೆಗೆ ಕೆಳಗೆ ಕಾಣಿಸಿದ ಮತದಾರ ಸಂಘಗಳು ಮತ್ತು ಅವುಗಳ ಎದುರಿಗೆ ತೋರಿಸಲ್ಪಟ್ಟ ಸಂಖ್ಯೆಯಷ್ಟು ಸ್ಥಳಗಳೂ ಇರುವವು. ಪ್ರತಿ ಮತದಾರ ಸಂಘವು ಅದರ ಎದುರಿಗೆ ಕಾಣಿಸಲ್ಪಟ್ಟ ಸಂಖ್ಯೆಯ ಪ್ರತಿನಿಧಿಗಳನ್ನು ಕಳಿಸಬೇಕಾಗುವುದು. ಒಟ್ಟು ಈ ಪ್ರಾಂತದಿಂದ ೧೨೬ ಪ್ರತಿನಿಧಿಗಳನ್ನು ಮಾತ್ರ ಈ ವರ್ಷ ಕಾಂಗ್ರೆಸ ಅಧಿವೇಶನಕ್ಕೆ ಕಳಿಸಲು ಅವಕಾಶವಿರುವುದು

ಹೀಗೆ ಮತದಾರ ಸಂಘಕ್ಕೆ ಒಂದಕ್ಕಿಂತ ಹೆಚ್ಚು ಸ್ಥಳಗಳಿರುವ ಸಮಯದಲ್ಲಿ ತಮ್ಮ ಮತಗಳನ್ನು ಹೇಗೆ ಕೊಡಬೇಕೆಂಬುದನ್ನು ಹಿಂದಿನಿಂದ ತಿಳಿಸಲಾಗುವುದು.

### ಮಂಗಳೂರು ಜಿಲ್ಲಾ ೧೩ ಸ್ಥಳಗಳು

| | | | |
|---|---|---|---|
| ೧ | ಕುಂದಾಪುರ | ಮತದಾರರ ಸಂಘ | ೧ |
| ೨. | ಬಾರಕೂರು | ,, | ೧ |
| ೩. | ಉಡುಪಿ | ,, | ೧ |
| ೪ | ಕಟಪಾಡಿ | ,, | ೧ |
| ೫. | ಕಾರ್ಕಳ | ,, | ೧ |
| ೬. | ಮುಲ್ಕಿ | ,, | ೧ |
| ೭. | ಬಂಟವಾಳ | ,, | ೧ |
| ೮ | ಪಾಣೆಮಂಗಳೂರು | ,, | ೧ |
| ೯. | ಮಂಗಳೂರ | | ೨ |
| ೧೦. | ಪುತ್ತೂರು | ,, | ೧ |
| ೧೧ | ಉಪ್ಪಿನಂಗಡಿ | ,, | ೧ |
| ೧೨. | ಮಂಜೇಶ್ವರ | ,, | ೧ |

ಮೇಲಿನ ಯಾದಿಯಲ್ಲಿ ಮತದಾರ ಸಂಘಗಳ ಹೆಸರನ್ನು ಮಾತ್ರ ಸೂಚಿಸಲಾಗಿದೆ, ಪ್ರತಿ ಮತದಾರ ಸಂಘದಲ್ಲಿ ಯಾವ ಯಾವ ತಾಲೂಕುಗಳು ಹಳ್ಳಿ ಪೇಟೆಗಳು ಸಮಾವೇಶವಾಗಿವೆ ಎಂಬುದನ್ನು ಅಧೀನ ಕಾಂಗ್ರೆಸ ಸಮಿತಿಗಳಿಂದ ಆಯಾ ಜಿಲ್ಲೆಗೆ ಸಂಬಂಧಿಸಿದ ವಿವರಗಳನ್ನು ತಿಳಿದುಕೊಳ್ಳಬಹುದು.

ಮೊದಲು ನಿರ್ಧರಿಸಿದ್ದ ಸ್ಥಳಗಳಿಗಿಂತ ಹೆಚ್ಚಿಗೆ ಸ್ಥಳಗಳು ಈಗ ದೊರೆತಿರುವುದು ಹೈದರಾಬಾದ ಮೈಸೂರು ಸಂಸ್ಥಾನಗಳಲ್ಲಿ ಈ ವರ್ಷ ಆಕಸ್ಮಿತವಾಗಿ ಸ್ಥಳಗಳು ಖಾಲಿ ಬಿದ್ದುದೇ ಕಾರಣವೆಂದು ಮೇಲೆ ಹೇಳಿದೆ. ಹೀಗೆ ಹೆಚ್ಚಿಗೆ ಬಂದ ಸ್ಥಳಗಳನ್ನು ನೋಡಿ ಹೀಗಿರುವ ಮತದಾರ ಸಂಘಗಳು ದೊಡ್ಡವಿರುವುವೆಂದು ಅವುಗಳನ್ನು ಸಣ್ಣದಾಗಿ ವಿಭಜಿಸಲು ಯಾರಿಗೂ ಬರುವುದಿಲ್ಲ. ಮತದಾರ ಸಂಘವು ಮೊದಲಿದ್ದಷ್ಟು ಇರುವುದು. ಸಾಧಾರಣವಾಗಿ ಸಲ್ಲಬೇಕಾಗಿದ್ದ ಒಂದು ಸ್ಥಳಕ್ಕಿಂತ ಈ ಸಲ ಹೆಚ್ಚು ಜಾಗೆಗಳು ಬಂದಿರುವುದರಿಂದ ಪ್ರತಿಯೊಬ್ಬ ಮತದಾರನು ತನ್ನ ಮತದಾರ ಸಂಘಕ್ಕೆ ಬಂದಿರುವಷ್ಟು ಸಂಖ್ಯೆಯ ಮತಗಳನ್ನು ಕೊಡಲು ಬರುವುದು ಮತದಾರರ ಸೌಕರ್ಯಗೋಸ್ಕರ ರಿಟರ್ನಿಂಗ್ ಆಫೀಸರರು ಅವಶ್ಯ ಕಂಡಲ್ಲಿ ತಮಗೆ ಸರಿತೋರುವಷ್ಟು ಪೋಲಿಂಗ್ ಸ್ಟೇಷನ್ನುಗಳನ್ನು ಇಡಲು ಅಡ್ಡಿಯಿಲ್ಲವೆಂದು ಕ. ಪ್ರಾಂ. ಕಾ. ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

### ಸ್ವಾತಂತ್ರ್ಯ ದಿನಾಚರಣೆ

(೨೬-೧-೧೯೪೦)

ಹಿಂದೂಸ್ಥಾನದ ಇತಿಹಾಸದಲ್ಲಿ ಜನೇವರಿ ೨೬ನೇ ತಾರೀಕು ಅತಿ ಮಹತ್ವದ ದಿನಗಳಲ್ಲೊಂದಾಗಿದೆ. ಹತ್ತು ವರ್ಷಗಳ ಹಿಂದೆ ಇದೇ ದಿನ ಹಿಂದುಸ್ಥಾನವು 'ಸ್ವಾತಂತ್ರ್ಯ'ಗಳಿಸಲು ತನಗಿರುವ ಇಚ್ಛೆಯನ್ನು ಘೋಷಣೆ ಮಾಡಿತು. ಇದುವರೆಗೆ ಆ ಪ್ರತಿಜ್ಞೆಯನ್ನು ಪೂರೈಸಲು ಶಕ್ಯವಾಗಿಲ್ಲ. ಅಂದಿನಿಂದ ನಮ್ಮ ದೇಶವು ತನ್ನ ನೆಚ್ಚಿನ ಧ್ಯೇಯವನ್ನು ಸಾಧಿಸಲು ಎಷ್ಟೋ ಕಠಿಣ ದಿನಗಳನ್ನು ದಾಟಿದೆ. ಸ್ವಾತಂತ್ರ್ಯ ಧ್ವಜವನ್ನು ಹಾರಾಡಿಸುತ್ತಿರಲು ಭಾರತಮಾತೆಯ ಅನೇಕ ಪುತ್ರ ಪುತ್ರಿಯರು ತಮ್ಮ ಸರ್ವಸ್ವವನ್ನು ತ್ಯಾಗಮಾಡಿರುವರು. ಸ್ವಾತಂತ್ರ್ಯಕ್ಕೋಸುಗ ಇನ್ನೊಂದು ಸಲ ಉಗ್ರರೂಪದಲ್ಲಿ ಹೋರಾಟ ಹೂಡಬೇಕಾಗಬಹುದಾದ ವಿಷಮ ಪರಿಸ್ಥಿತಿಯಲ್ಲಿ ಈ ಸಲದ ಈ ಚಾರಿತ್ರಿಕ ದಿನಾಚರಣೆಗೆ ಹೆಚ್ಚು ಮಹತ್ವ ಬಂದಿರುವುದು ಕಾರಣ ಈ ದಿನಾಚರಣೆಯನ್ನು ಯುಕ್ತ ರೀತಿಯಲ್ಲಿ ಗಾಂಭೀರ್ಯದಿಂದ ಎಲ್ಲ ಕಾಂಗ್ರೆಸಿಗರು ಆಚರಿಸುವುದು ಅವಶ್ಯಕ.

ನಮ್ಮ ಪ್ರಾಂತದಲ್ಲಿಯ ಎಲ್ಲ ಕಾಂಗ್ರೆಸ ಜನರೂ, ಬರುವ ೨೬—೧—೪೦ನೇ ದಿನ ವರ್ಕಿಂಗ ಕಮಿಟಿಯವರು ಹಾಕಿಕೊಟ್ಟ ಪ್ರತಿಜ್ಞೆಯನ್ನು ತೆಗೆದುಕೊಂಡು ಅದರಂತೆ ನಡೆಯುವರೆಂದು ಆಶಿಸಲಾಗಿದೆ

ಅಂದು ಪ್ರತಿಜ್ಞೆ ತೆಗೆದುಕೊಳ್ಳಲಿಚ್ಛಿಸುವವರಿಗೆ ಜಿಲ್ಲಾ ಕಾಂಗ್ರೆಸ ಸಮಿತಿಗಳು ಪ್ರತಿಜ್ಞೆಯ ಪ್ರತಿಗಳನ್ನು ಒದಗಿಸಿ ಕೊಡಬೇಕಲ್ಲದೆ ಪ್ರಾಂತೀಯ ಸಮಿತಿಯಿಂದ ಹಾಕಿಕೊಡಲಾಗುವ ಕಾರ್ಯಕ್ರಮವನ್ನು ಅಂದು ಅನುಸರಿಸಲು ತಮ್ಮಲ್ಲಿನ ಎಲ್ಲಾ ಅಧೀನ ಕಾಂಗ್ರೆಸ ಸಮಿತಿಗಳಿಗೂ ಸೂಚನೆ ಕೊಡಬೇಕಾಗಿ ವಿನಂತಿ ಎಂದು ಕ ಪ್ರಾಂ. ಕಾಂ ಸಮಿತಿಯ ಗೌ ಕಾರ್ಯದರ್ಶಿಗಳು ತಿಳಿಸುತ್ತಾರೆ

### ಸಾಧಾರಣ ಸಭೆ

ಸಾಕಷ್ಟು ಸದಸ್ಯರ ಅಂಕಿತದಿಂದ ವಿನಂತಿ (ರಿಕ್ವಿಜಿಷನ್) ಬಂದುದರಿಂದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ ಸಧಾರಣ ಸಭೆಯು ೨೧—೧—೧೯೪೦ನೇ ರವಿವಾರ ಮಧ್ಯಾಹ್ನ ೨ ಗಂಟೆಗೆ ಧಾರವಾಡ ಕಾಂಗ್ರೆಸ ಭವನದಲ್ಲಿ ಸೇರಿ ಹೋದ ಸಭೆಯ ಕಾರ್ಯಕಲಾಪಗಳನ್ನೂ, ದೇಶದಲ್ಲಿ ಉತ್ಪನ್ನವಾದ ಸದ್ಯದ ಪರಿಸ್ಥಿಯ ಬಗ್ಗೆ ಕೆ ಪಿ. ಸಿ ಸಿ.ಯ ವಿಚಾರ ಮಾಡಿ ಆದರ ಬಗ್ಗೆ ವಿಚಾರಮಾಡಿ ಅದನ್ನು ಗೊತ್ತುಪಡಿಸುವ ವಿಚಾರವಾಗಿ ಆಲೋಚಿಸಲಾಗುವುದೆಂದು ಕ ಪ್ರಾಂ. ಕಾಂ ಕಮಿಟಿಯ ಗೌ. ಕಾರ್ಯದರ್ಶಿಗಳು ತಿಳಿಸುತ್ತಾರೆ.

### ಎಲ್ಲ ಜಾತೀಯ ಜನರ ಕಲ್ಯಾಣವೇ ಖಾದಿಯ ಉದ್ದೇಶ

ರಾಜಕೀಯ ಬಿಕ್ಕಟ್ಟಿನ ಈ ಕಾಲದಲ್ಲಿ ಕಾಂಗ್ರೆಸು ರಚನಾತ್ಮಕ ಕಾರ್ಯಕ್ರಮದ ಕಡೆಗೆ ವಿಶೇಷವಾಗಿ ಲಕ್ಷ್ಯ ಕೊಡತಕ್ಕದ್ದೆಂದು ವರ್ಕಿಂಗ ಕಮಿಟಿಯವರು ಮೇಲಿಂದ ಮೇಲೆ ಹೇಳುತ್ತ ಬಂದಿದ್ದಾರೆ. ಖಾದೀ ಪ್ರಸಾರವು ರಚನಾತ್ಮಕ ಕಾರ್ಯಗಳಲ್ಲಿ ಶ್ರೇಷ್ಠವಾದದ್ದೆಂದು ನಮ್ಮ ಮಾರ್ಗದರ್ಶಕರಾದ ಮಹಾತ್ಮಾಗಾಂಧಿಯವರು ಒತ್ತಿ ಹೇಳಿದ್ದಾರೆ ರಚನಾತ್ಮಕ ಕಾರ್ಯದಿಂದ ಸಾರ್ವಜನಿಕ ಕಲ್ಯಾಣವು ಸಮಾನವಾಗಿ ಸಾಧಿಸಲ್ಪಡುವುದರಿಂದ ಅಲ್ಲಿ ಜಾತೀಯತೆಗೆ ಎಡೆ ಇಲ್ಲ ದೇಶದ ಸರ್ವತೋಮುಖ ಉನ್ನತಿಯ ದೃಷ್ಟಿಯಿಂದಲೇ ರಚನಾತ್ಮಕ ಕಾರ್ಯಗಳನ್ನು ಕೈಕೊಳ್ಳುವುದರಿಂದ ವ್ಯಕ್ತಿಗಳ ಶ್ರೇಷ್ಠತೆಗೆ ಅಲ್ಲಿ ಸ್ಥಾನಮಾನಗಳಿಲ್ಲ, ಕಾರ್ಯದ ಮಹತ್ವವು ಅದರಿಂದ ಜನರಿಗೆ ಆದ ಕಲ್ಯಾಣದ ಮೇಲಿಂದಲೇ ಅಳೆಯಲ್ಪಡುವುದು. ಕರ್ನಾಟಕದಲ್ಲಿ ಕಳೆದ ವರ್ಷ ಖಾದಿಯ ಕೆಲಸದಿಂದ ಕೆಳಗಿನಂತೆ ಹೊಟ್ಟೆ ತುಂಬಿಕೊಳ್ಳುತ್ತಿರುವರು.

| | ನೂಲುವವರು | ನೇಯುವವರು | ಹಿಂಜುವವರು |
|---|---|---|---|
| ಹರಿಜನರು | ೪೫೭ | ೩೮ | ೧೭೮ |
| ಹಿಂದುಗಳು | ೯೦೯೦ | ೪೦೨ | |
| ಮುಸಲ್ಮಾನರು | ೮೯೫ | ೧೫೦ | |
| | ೧೦೪೪೨ | ೫೯೦ | |

ಇದಲ್ಲದೆ ಹತ್ತಿ ಅರೆಯುವವರು, ಕದರು ಮಾಡುವ ಕಮ್ಮಾರರು, ಬಡಿಗರು, ಪಟಗಾರರು, ಬೆಸಕಟ್ಟುವವರು, ಲಾಳಿಮಾಡುವವರು, ಅಗಸರು, ಅಚ್ಚುಮಾಡುವವರು, ಬಣ್ಣಗಾರರು, ಬಣ್ಣದ ಚಕ್ಕೆಗಳನ್ನು ತರುವ ಲಮಾಣಿಯರು ಮುಂತಾದ ಎಷ್ಟೋ ಜನರಿಗೂ ಖಾದಿಯ ಉದ್ಯೋಗವನ್ನು ಕಲ್ಪಿಸಿಕೊಟ್ಟಿರುವದು. ಖಾದಿಯ ಪ್ರಸಾರವು ಹೆಚ್ಚಿದಂತೆ, ಮೇಲೆ ಹೇಳಿದ ಕೈಕೆಲಸಗಾರರ ಸಂಖ್ಯೆಯೂ ಬೆಳೆಯುತ್ತ ಹೋಗುವುದು. ಇಷ್ಟೊಂದು ಜನತೆಯ ಜೀವನಾಧಾರವಾದ ಖಾದಿಯು ಎಲ್ಲ ಜಾತೀಯ ಜನರ ಕಲ್ಯಾಣ ಮಾಡುವ ಕಾರ್ಯವೆಂಬುದರಲ್ಲಿ ಸಂದೇಹವೇನು? ಇಂತಹ ವಿಧಾಯಕ ಕಾರ್ಯದಲ್ಲಿಯೇ ರಾಷ್ಟ್ರದ ಉತ್ಕರ್ಷವು ಅಡಕವಾಗಿರುವುದು ಆದುದರಿಂದ ಕರ್ನಾಟಕ ಬಾಂಧವರೆ ಬರುವ ೧೫ನೇ ಮಾರ್ಚದೊಳಗಾಗಿ ೫೦,೦೦೦ ರೂಪಾಯಿ ಬೆಲೆಯ ಖಾದಿಯನ್ನು ಕೊಂಡು, ಮುಂದಿನ ವರ್ಷದ ಖಾದಿಯ ಉತ್ಪತ್ತಿಗೆ ಆಸ್ಪದ ಮಾಡಿಕೊಡಿರಿ ಎಂದು ಕ ಪ್ರಾ. ಕಾಂ. ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ



# ನೋಟಗಳು

ಮಿ. ಜಿನ್ನರೊಡನೆ ಮುಂದೆ ಮಾತುಕತೆ ನಡೆಸಲಾರೆನೆಂದು ಪಂಡಿತ ನೆಹರುಗಳು ಸ್ಪಷ್ಟವಾಗಿ ಹೇಳಿಬಿಟ್ಟರು!

◈

ಜಿನ್ನರ ವಿಮೋಚನಾ ದಿನಾಚರಣೆಯ ಪ್ರಕಟಣೆಯನ್ನು ನೋಡಿ ಪಂಡಿತ ನೆಹರುಗಳು ಸಹಜವಾಗಿ, ಯಾವನಾದರೂ ಸ್ವಾತಂತ್ರ್ಯ ಪ್ರೇಮಿಯು ರೋಚ್ಚಿಗೇಳಬಹುದಾದಂತೆ, ಕಿಡಿಗೊಂಡರು!

◈

ಭಾರತದಲ್ಲಿ ಬ್ರಿಟಿಷ್ ರಾಜ್ಯಭಾರವು, ನಿತ್ಯ ನಿರಂತರ ಇರಬೇಕೆಂದು ಮಿ ಜಿನ್ನರು ಅಪೇಕ್ಷಿಸುವರು, ಅವರ ಮತ್ತು ನನ್ನ ಧ್ಯೇಯ ಆದರ್ಶಗಳಿಗೆ ಅಜಗಜಾಂತರ ವ್ಯತ್ಯಾಸವುಂಟು ಅಂತಹವರೊಡನೆ ಮಾತುಕತೆಯಾ ಸಲ್ಲದೆಂದರು ನೆಹರುಗಳು.

◈

ಇದರಿಂದ ಮಿ ಜಿನ್ನರಿಗೆ ಬಹಳ ಅಪಮಾನವಾಯಿತಂತೆ! ತನ್ನನ್ನು, ಅಂತಹವನು, ಇಂತಹವನು, ಕಡೆಗೆ ಜವಾಬ್ದಾರಿಯಿಲ್ಲದನೆಂದು ಹೇಳುವುದು ಜವಾಬ್ದಾರಿಯುಳ್ಳ ನೆಹರುಗಳಿಗೆ ಹೇಳಿದ ಮಾತಲ್ಲವೆಂದು ಅವರು ಉತ್ತರಕೊಟ್ಟಿರುವರು.

◈

ಮುಸ್ಲಿಂ ಲೀಗನ್ನು ಅಖಿಲ ಮುಸ್ಲಿಮರ ಏಕಮೇವ ಪ್ರತಿನಿಧಿ ಸಂಸ್ಥೆಯೆಂದು ಕಾಂಗ್ರೆಸ್ ಒಪ್ಪದ ಹೊರತು, ಅದು ಕಾಂಗ್ರೆಸಿನೊಡನೆ ರಾಜಿಗೆ ಬರಲಾರದೆಂದೂ ಕಾಂಗ್ರೆಸು ಯುದ್ಧದ ಕುರಿತು ಮಾಡಿದ ಠರಾವು, ಕಾರ್ಯಕಾರಿಯಲ್ಲದ ಕಾರಣ ಅದನ್ನು ಮುಸ್ಲಿಂ ಲೀಗು ಒಪ್ಪಲಾರದೆಂದೂ ಜಿನ್ನರ ಎರಡು ವಿಚಾರಗಳು ಇವೆರಡರನ್ನು ಸಂತೃಪ್ತಿಗೊಳಿಸದ ವಿನಹ ತಾನು ಸುಮ್ಮಗಿರುವ ಹಾಗಿಲ್ಲವೆಂದು ಮಿ। ಜಿನ್ನರು ಹಠ!

◈

ಮಿ। ಜಿನ್ನರನ್ನು ತೃಪ್ತಿಪಡಿಸುವ ಸಲುವಾಗಿ, ಕಾಂಗ್ರೆಸು ತನ್ನ ತತ್ವವನ್ನು ಮಾರಿಕೊಳ್ಳಲು ಸಿದ್ಧವಿಲ್ಲವೆಂಬುದು ನೆಹರುಗಳ ಧೋರಣೆ!

◈

'ಹಲವು ಮುಸ್ಲಿಂ ಸಂಸ್ಥೆಗಳು, ಹಾಗೂ ಕಾಂಗ್ರೆಸಿನಲ್ಲಿರುವ ಹಲವರು ರಾಷ್ಟ್ರೀಯ ಮುಸ್ಲಿಮರು ಮುಸ್ಲಿಂ ಲೀಗಿನ ಪ್ರಾತಿನಿಧಿಕತ್ವವನ್ನು ಸಂಪೂರ್ಣ ಅಲ್ಲಗಳೆಯುತ್ತಿರಲು, ಅದರ ಪ್ರಾತಿನಿಧಿಕತ್ವಕ್ಕೆ ಕಾಂಗ್ರೆಸು ಒಪ್ಪಲಾರದೆಂದೂ, ಮಿ। ಜಿನ್ನರಿಗೂ, ಲೀಗಿಗೂ ಯಾವ ಸ್ಥಾನವು ಸಿಗಬೇಕಾಗಿದೆಯೋ ಆ ಸ್ಥಾನಕ್ಕೆ ತಕ್ಕ ಪುರಸ್ಕಾರಗಳು ಕೊಡಲಾಗುವುದೆಂದೂ ನೆಹರುಗಳು ಸ್ಪಷ್ಟ ಹೇಳಿದರು

◈

ಮಿ ಜಿನ್ನರ ವಿಚಾರ ಮತ್ತು ತತ್ವಗಳು ರಾಷ್ಟ್ರೀಯವಲ್ಲವೆಂದು ಅವರ ಪತ್ರಗಳೇ ಸಾಕ್ಷಿಯಾಗಿವೆ

◈

ಸಮಸ್ತ ಭಾರತದ ದೃಷ್ಟಿಯನ್ನು ಸೆಳೆದ ಬ್ರಿಟಿಷರ ಯುದ್ಧ ನೀತಿಯು ಸ್ಪಷ್ಟೀಕರಣದ ವಿಷಯವಾಗಿ ಮಿ ಜಿನ್ನರ ಏನೇನೂ ವಿಚಾರ ಕೆಳೊಂಡಿಲ್ಲ

◈

ಸ್ವಾತಂತ್ರ್ಯವೇ ಲೀಗಿನ ಧ್ಯೇಯವೆಂದು ಮಿ. ಜಿನ್ನರ ಹೇಳಿಕೆ!

◈

ಆದರೆ ಯಾರ ಸ್ವಾತಂತ್ರ್ಯವು ಅವರ ಧ್ಯೇಯವೆಂದು ಮಾತ್ರ ಇನ್ನೂ ಸ್ಪಷ್ಟವಾಗಬೇಕಾಗಿದೆ.

◈

ರಾಷ್ಟ್ರದ ಸ್ವಾತಂತ್ರ್ಯವೇ? ಮುಸ್ಲಿಂ ಸ್ವಾತಂತ್ರ್ಯವೇ? ಅಥವಾ ಜಿನ್ನರ ಸ್ವಾತಂತ್ರ್ಯವೇ?

◈

ಮಾತುಕತೆಯನ್ನು ಆರಂಭಿಸಲು ಮನಸ್ಸು ಮಾಡಿದ ಪಂಡಿತ ನೆಹರುಗಳಿಗೂ ಇದೇ ಸಂಶಯವು ಹುಟ್ಟಿ ಬೇಸರ ಬಂದಿರಬೇಕು

◈

ಭಾರತದ ಸ್ವಾತಂತ್ರ್ಯ ವೀರರನ್ನು, ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯು ತಲೆಕೆಳಗೂ ಮಾಡಿಬಿಟ್ಟಿದೆ!

◈

ಕಾಂಗ್ರೆಸಿನ ಇಂದಿನ ಈ ಧೋರಣೆಗೆ ನಮ್ಮ ಸಮ್ಮತಿಯಿಲ್ಲವೆಂದು, ಸುಭಾಷರ ಮುನ್ನಡೆ ಪಕ್ಷದವರು, ನಿರ್ಧಾರ ಮಾಡಿಕೊಂಡಿರಲು, ಈ ಸಲದ ತಿದ್ದುಪಡಿಯಾದ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಅವರು ತೆಗೆದುಕೊಳ್ಳುವುದು ಸಾಧ್ಯವಿಲ್ಲ.

◈

ಮುನ್ನಡೆಯಬೇಕಾದಲ್ಲಿ ರಚನಾತ್ಮಕ ಕಾರ್ಯಗಳನ್ನು ಮಾಡುತ್ತಾ ಇದ್ದರೆ, ವಿಳಂಬವಾದೀತು ಎಂದು ಸುಭಾಷರು ತಿಳಿದುಕೊಂಡಿರಬೇಕು

◈

'ತಾಳ್ಮೆಗೆಟ್ಟಿರುವ ಬಂಗಾಳಿಗಳ, ಧುರೀಣರಿಗೆ ಸಮಯ ವಿಳಂಬವನ್ನು ಸಹಿಸುವುದಂತೂ ಸಾಧ್ಯವೇ ಇಲ್ಲ!

◈

ಇಂದಿನ ಈ ಪ್ರತಿಜ್ಞೆ ಬೇಡ, ಹಿಂದಿನ ಆ ಪ್ರತಿಜ್ಞೆಯೇ ನಮಗೆ ಸಾಕು ಎಂದು ಹೇಳಿರುವರು ಕಾಂಗ್ರೆಸು ಸೋಶಿಯಲಿಸ್ಟರು

◈

ಗಾಂಧಿವಾದಿಗಳನ್ನು ಅಪ್ರಗತಿಕರೆನ್ನುವ ಸೋಶಿಯಲಿಸ್ಟರೇ, ಇಂದು ಪ್ರಗತಿಗೆ ಅನುಕೂಲರಾಗಿಲ್ಲವೆನ್ನಬೇಕೆ?

◈

ಖಾದಿಯಿಂದ ಸ್ವಾತಂತ್ರ್ಯ ಪಡೆಯುವುದು ಸಾಧ್ಯವಿಲ್ಲವೆನ್ನುತ್ತಾರೆ ರಾಯಿಸ್ಟರ

◈

ಖಾದಿಯನ್ನು ನೂಡುವುದಕ್ಕೆ ಚರಕಾ ತಿರುಗಿಸುವ ಪ್ರಯಾಸಪಡಬೇಕಷ್ಟೆ?

◈

ಸ್ವಾತಂತ್ರ್ಯ ಸಂಪಾದನೆಗೆ ಅಷ್ಟು ಪ್ರಯಾಸಪಡುವುದು ಬೇಡವೆಂದು ಅವರ ನಿರ್ಧಾರವಿರಬೇಕು!

◈

ಪ್ರಯಾಸವಿಲ್ಲದೇ ಸ್ವರಾಜ್ಯ ಸಿಕ್ಕಿದರೆ ಎಲ್ಲರಿಗೂ ಸಂತೋಷವೇ!

◈

ಆದರೆ, ಸ್ವರಾಜ್ಯಕ್ಕಾಗಿ ಪ್ರಯಾಸಪಟ್ಟದ್ದು ಸಾಕಾಗಲಿಲ್ಲವೆನ್ನುತ್ತಾರೆ ಮಹಾತ್ಮಾಜಿಯವರು


**OUR GREETINGS & GOOD WISHES**

to

**ALL OUR CONSTITUENTS, DEPOSITORS, SHAREHOLDERS & WELL WISHERS**

for

**A HAPPY & PROSPEROUS NEW YEAR**

**THE**

**Canara Banking Corporation Ltd.,**

(INCORPORATED IN BRITISH INDIA)

Estd. 1906



## ಉದರವೇದನೆಯಿಂದ ಬಳಲುತಿದ್ದವನು ಒಪರೇಷನಿನಿಂದ ತಪ್ಪಿಸಿಕೊಂಡನು!

ಉದರವೇದನೆ ಮತ್ತು ಉದರ ವ್ರಣಗಳಿಂದ ಬಳಲುತಿದ್ದವರಿಗೆ ಅದರಿಂ ಪಾರಾದರೆ ಎಷ್ಟು ಸುಖಸಂತೋಷವಿಯೆಂದು ಅವರು ಮಾತ್ರ ತಿಳಿಯಬಲ್ಲರು ಉದರವೇದನೆಯನ್ನುಂಟುಮಾಡುವ ವ್ರಣಗಳನ್ನು ಅನೇಕ ವೇಳೆ ಒಪರೇಷನ ಮಾಡಬೇಕಾಗುವುದು ಆದರೆ ಮಿಸ್ಟರ್ ಜೆ ಡಿ ಯವರು ಒಪರೇಷನ್ ಮಾಡದೆನೇ ಗುಣಹೊಂದಿರುವರು ಇದು ಅವರ ಸಂತೋಷವನ್ನು ವ್ಯಕ್ತಗೊಳಿಸುತ್ತದೆ ಅವರನ್ನು ಆ ಭಯಂಕರ ವ್ಯಾಧಿಯಿಂದ ಪಾರುಗೊಳಿಸಿದ ಔಷಧಿಯು ಒಂದು ಸಾಧಾರಣ ತರದ್ದಾಗಿರುತ್ತೆಂದು ಅವರ ಪತ್ರವನ್ನೋದಿದರೆ ತಿಳಿಯುವುದು.

ಅವರು ಬರೆಯುತ್ತಾರೆ 'ನಾನು ಉದರ ವ್ರಣಗಳ ವ್ಯಾಧಿಯಿಂದ ಬಹಳವಾಗಿ ಬಳಲುತಿದ್ದೆನು ನನ್ನನ್ನು ಎಕ್ಸ್‌ರೇ ಪರಿಕ್ಷೆ ಮಾಡಿ ಒಪರೇಷನ್ ಮಾಡಬೇಕೆಂದ ಡಾಕ್ಟರರು ಅಭಿಪ್ರಾಯ ಪಟ್ಟರು ಮತ್ತೆ ನನಗ ಮೆಕ್ಲಿನ್ ಸ್ಟೋಮಕ್ ಪೌಡರನ ಸೇವಿಸುವಂತೆ ಹೇಳಿದರು ಸೇವಿಸಿದೊಡನೆ ನನಗೆ ಗುಣವಾಗುತ್ತಾ ಬಂದಿತು ಇದು ಎರಡು ವರ್ಷಗಳ ಹಿಂದಣ ಮಾತು ಈಗ ನನಗ ಅದರ ಬಾಧೆಯೇ ಇಲ್ಲ ಈ ಪೌಡರು ನನ್ನನ್ನು ಒಪರೇಷನಿನಿಂದ ರಕ್ಷಿಸಿತು ಈಗ ನಾನು ಯಾವ ಆಹಾರವನ್ನಾದರೂ ಸೇವಿಸುತಿರುವೆನು.

ಮಿಸ್ಟರ್ ಜೆ ಡಿ ಯವರಿಗೆ ಗುಣಕಾರಿ ವನ್ನು ತಂದ ಈ ಔಷಧಿಯು ನಿಮ್ಮನ್ನ ಕೂಡಾ ಉದರ ವ್ಯಾಧಿಯಿಂದ ಖಂಡಿತವಾಗಿ ರಕ್ಷಿಸುವುದು ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರ ಹೊಟ್ಟೆಯೊಳಗೆ ಹೆಚ್ಚಾಗಿರಬಹುದಾದ ಎಸಿಡನ್ನು ಕಡಿಮೆ ಮಾಡಿ ನೋವಿಕೆಯನ್ನು ಗುಣಮಾಡಿ ಇಡೀ ಜೀರ್ಣೇಂದ್ರಿಯವನ್ನೇ ಸರಿಯಾಗಿರಿಸುವುದು.

ಇಂದೇ ಒಂದು ಬಾಟ್ಲಿ ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರನು ಕೊಂಡುಕೊಳ್ಳಿರಿ

ಎಂಬ ದಸ್ಕತು ಬಾಟ್ಲಿಯ ಮೇಲೂ ದಸ್ತು ಮತ್ತು ಕೆಂಪುಸೀಲು ಪಟ್ಟಿಗೆಯ ಮೇಲೂ ಇದ್ದರೆ ಮಾತ್ರ ಅದು ಖಾತ್ರಿಯಾದದು ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ ಪೆಟ್ಟಿಗೆಯಲ್ಲಿರುವ ಬಾಟ್ಲಿಗಳಲ್ಲಿ (ಪೌಡರು ಮತ್ತು ಮಾತ್ರೆಯ ರೂಪದಲ್ಲಿ) ಮಾರಲ್ಪಡುತ್ತದೆ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

708




## ವೈದ್ಯ ಸಂಶೋಧನೆಗೆ ನೋಬೆಲ್ ಬಹುಮಾನ

ಜರ್ಮನಿಯ ಪ್ರೊ. ಡೊಮಾಗರು, ಇವರಿಗೆ ವೈದ್ಯಕೀಯ ಸಂಶೋಧನೆಗೆ ೧೯೩೯ರಲ್ಲಿ ನೋಬೆಲ್ ಬಹುಮಾನ ದೊರಕಿತು. ಆದರೆ ಅದನ್ನು ಸ್ವೀಕರಿಸಬಾರದಾಗಿ ಹಿಟ್ಲರನ ಆಜ್ಞೆಯಾಯಿತು.

## ವೈದ್ಯಕೀಯ ಸಂಶೋಧನೆಯಲ್ಲಿ ಅದ್ಭುತ ಸಾಹಸ!

### ಪ್ರೊ॥ ಡೋಮಾಗರ ಸಂಶೋಧನೆ

ನೋಬೆಲ್ ಬಹುಮಾನವೆಂದರೆ ಅಂತಿಂತಹವರಿಗೆ ದೊರಕುವ ಬಹುಮಾನವಲ್ಲ. ಇಡೀ ಪ್ರಪಂಚದಲ್ಲಿ ಯಾರು ಅದ್ಭುತ ಶೋಧನೆ ನಡೆಸಿರುವರೋ ಯಾರ ಬುದ್ಧಿ ಶಕ್ತಿಯು ಸಾಮಾನ್ಯ ಜನತೆಯ ಮಟ್ಟಕ್ಕೆ ಸಿಲುಕತಕ್ಕುದಾಗಿಲ್ಲವೋ ಅಂತಹ ಮಹಾ ಮಹಾ ಧೀಮಂತರಿಗೆ ಮಾತ್ರ ಅದು ಮೀಸಲಾಗಿದೆ. ಭಾರತದಲ್ಲಿ ಕವೀಂದ್ರ ರವೀಂದ್ರರಿಗೆ, ಅವರ ಅಸಾಮಾನ್ಯ ಸಾಹಿತ್ಯ ಸೇವೆಗಾಗಿ, ಮತ್ತೂ ಸರ್. ಸಿ. ವಿ. ರಾಮನರಿಗೆ, ಅವರ ವಿಜ್ಞಾನ ಸಂಶೋಧನೆಗಾಗಿ ಹೀಗೆ ಇಬ್ಬರಿಗೆ ಮಾತ್ರ ಈ ಬಹುಮಾನವು ದೊರೆತಿದೆ! ವೈದ್ಯಕೀಯ ಸಂಶೋಧನೆಯಲ್ಲಿ ಪ್ರಪಂಚವನ್ನೇ ಬೆರಗುಗೊಳಿಸಿದ ಕೀರ್ತಿಶಾಲಿಯಾದ ಜರ್ಮನಿಯ ಪ್ರೊಫೆಸರ್ ಡೊಮಾಗರಿಗೆ ಆ ಬಹುಮಾನವು ಅರ್ಪಿತವಾಯಿತು. ಅದರ ಸಂಶೋಧನೆಯ ಸೂಕ್ಷ್ಮ ಪರಿಚಯ ಮಾಡುವುದು ಅಗತ್ಯವಿದೆ.

### ಪ್ರೋಂಟೊಸಿಲ್ (Prontosil)

ಪ್ರೊ॥ ಡೋಮಾಗರ ಅದ್ಭುತ ಸಂಶೋಧನೆಯು ಪ್ರೊಂಟೊಸಿಲ್ ಎಂಬ ಕೆಂಪು ಬಣ್ಣದ ರಾಸಾಯನಿಕ ದ್ರವವು. ಅದರಿಂದ ಮಿಲಿಯಾಂತರ ಮಂದಿಯು ಮೃತ್ಯು ಮುಖದಿಂದ ಇಂದು ಪಾರಾದರು. ಹೀಗಿದ್ದರೂ, ಜರ್ಮನಿಯು ಒಂದು ವಿಶೇಷ ಮತ್ತು ವಿಚಿತ್ರ ರಾಷ್ಟ್ರವೆನ್ನಬೇಕು. ಅಲ್ಲಿನ ರಾಜಕೀಯ ಕ್ಷೇತ್ರದಲ್ಲಿ ಇರುವ ಒಬ್ಬ ಪ್ರಧಾನ ವ್ಯಕ್ತಿಯು, ಲೋಕಕಂಟಕನಾಗಿ, ದಿನನಿತ್ಯ ಸಹಸ್ರ ಸಂಖ್ಯಾಕ ಜನತೆಯ ಮರಣಕ್ಕೆ ಇಂದು ಕಾರಣನಾಗಿದ್ದರೆ, ಅಲ್ಲಿನ ಸಂಶೋಧನಾ ಚತುರ ವೈದ್ಯನೊಬ್ಬನು ದಿನನಿತ್ಯ ತನ್ನ ಅಮೃತಪ್ರಾಯವಾದ, ಔಷಧದಿಂದ ಮಿಲಿಯಾಂತರ ಮಂದಿಯ ಜೀವವನ್ನು ಉಳಿಸುತ್ತಿದ್ದಾನೆ. ಇವರಿಬ್ಬರೆಂದರೆ ಒಂದು ಹಿಟ್ಲರನು. ಇನ್ನೊಂದು ಪ್ರೊ॥ ಡೊಮಾಗ್ ಅಂತೂ ಜರ್ಮನಿಯು ಅದ್ಭುತ ಸಾಹಸಿಗಳಾದ ವ್ಯಕ್ತಿಗಳ ರಾಷ್ಟ್ರವೆನ್ನಲು ಏನೇನೂ ಅಡ್ಡಿಯಿಲ್ಲ.

ಮೊಟ್ಟ ಮೊದಲು ರೋಗಾಣುಗಳ ನಾಶಕ್ಕೆ ಉತ್ತಮ ರಾಸಾಯನಿಕ ವಸ್ತುವು ಯಾವುದೂ ಇರಲಿಲ್ಲ. ಹಾಗಾಗಿ ಹಲವು ರೋಗಾಣುಗಳನ್ನು ಪರಿಣಾಮಕಾರಿಯಾಗಿ ಗುಣಪಡಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ಪ್ರೊಂಟೊಸಿಲ್ ಎಂಬೀ ಕೆಂಪು ಬಣ್ಣದ ರಾಸಾಯನಿಕ ವಸ್ತುವು ವಿಷ ಅಣುಗಳನ್ನು ಖಂಡಿತ ಗುಣಪಡಿಸುವ ಅಪೂರ್ವ ಸಂಶೋಧನೆಯಾಗಿದೆ. ಈ ಸಂಶೋಧನೆಯ ಮೂಲಕ ಮಿಲಿಯಾಂತರ ಮಂದಿಯು ರೋಗ ಮತ್ತು ಮರಣಗಳಿಂದ ಇಂದು ಗುಣ ಹೊಂದಿರುವರು.

ನಿಮೋನಿಯಾ ಬಾಣಂತಿರೋಗ ಮೊದಲಾದ ರೋಗಗಳಿಗೆ ಇದು ದಿವ್ಯೌಷಧವಾಗಿದೆ. ಮೊಟ್ಟ ಮೊದಲು ನಿಮೋನಿಯಾ ರೋಗಿಗಳ ಕುರಿತು ವೈದ್ಯರು ನಿಶ್ಚಯ ಹೇಳುವುದು ಕಷ್ಟವಿತ್ತು. ಆದರೆ ಇಂದು ಆ ಭಯವೇ ಹೋಗಿದೆ. ಈ ಪ್ರೊಂಟೋಸಿಲನ್ನು ಫ್ರಾನ್ಸು, ಇಂಗ್ಲೆಂಡು ಮೊದಲಾದೆಡೆಗಳಲ್ಲಿ ಪ್ರಯೋಗ ಮೂಲಕ ಪರೀಕ್ಷಿಸಿ ಅದರ ದಿವ್ಯ ಗುಣಗಳನ್ನು ಎಲ್ಲರೂ ಕೊಂಡಾಡಿರುವರು.

## ಸತ್ತ ಹೆಣಕ್ಕೆ ಜೀವದಾನ

### ಕಲ್ಕತ್ತದಲ್ಲಿ ಪುರಾತನ ಮೃತ ಶರೀರದ ಪ್ರದರ್ಶನ

ಕಲ್ಕತ್ತದ ವಸ್ತು ಪ್ರದರ್ಶನಾಲಯದಲ್ಲಿ ಕಳೆದ ಐದು ಸಾವಿರ ವರ್ಷಗಳ ಒಂದು ಮೃತ ಶರೀರವು, ಈಚೆಗೆ ಅನೇಕ ವರ್ಷಗಳಿಂದ ಪ್ರದರ್ಶನಕ್ಕೆ ಇರುತ್ತದೆ. ಈ ಮೃತ ಶರೀರವನ್ನು ನೋಡಲಿಕ್ಕಾಗಿಯೇ ಪ್ರತಿವರ್ಷ ಸಾವಿರಾರು ಜನರು ಕಲ್ಕತ್ತಕ್ಕೆ ಹೋಗುತ್ತಿರುತ್ತಾರೆ. ಈ ಮೃತ ಶರೀರದಿಂದಾಗಿ ಕಲ್ಕತ್ತದ ಆ ಪ್ರದರ್ಶನಾಲಯಕ್ಕೆ ಭಾರತದ ಇತರ ಪ್ರದರ್ಶನಾಲಯಗಳಿಗಿಂತ ಹೆಚ್ಚು ಪ್ರಾಮುಖ್ಯತೆಯೂ, ಒಂದು ತರಹದ ವೈಶಿಷ್ಟ್ಯವೂ ಪ್ರಾಪ್ತವಾಗಿರುತ್ತದೆ.

### ಈಜಿಪ್ತದಿಂದ ಬಂದ ಶವ

ಈ ಮೃತ ಶರೀರವು ಐದು ಸಾವಿರ ವರ್ಷಗಳ ಹಿಂದಿನ ಒಬ್ಬ ಈಜಿಪ್ತದ ಸದ್ಗೃಹಸ್ಥನದಾಗಿತ್ತೆಂದು ಹೇಳಲಾಗುತ್ತದೆ. ೧೮೭೫ರಲ್ಲಿ ಕಲ್ಕತ್ತದಲ್ಲಿ ಭಾರತೀಯ ವಸ್ತು ಪ್ರದರ್ಶನಾಲಯವು ಏರ್ಪಟ್ಟಾಗ, ಅದಕ್ಕೆ ಮೊದಲು ಬಂಗಾಳದ ರೋಯಲ್ ಏಸಿಯಾಟಿಕ ಸೊಸೈಟಿಯೊಡನೆ ಇದ್ದ ಈ ಶವವನ್ನು ಪ್ರದರ್ಶನಾಲಯದ ಅಧಿಕಾರಿಗಳು ಆ ಸೊಸೈಟಿಯಿಂದ ಕೊಂಡುಕೊಂಡರು. ಆದರೆ ಅದು ಕೊಳೆಯದಂತೆ ಪುರಾತನ ಈಜಿಪ್ತನರು ಅದಕ್ಕೆ ಲೇಪಿಸಿದ್ದ ಲೇಪದಲ್ಲಿ ಕೊರತೆ ಉಂಟಾದ್ದರಿಂದ, ಈಗ್ಗೆ ಒಂದೆರಡು ವರ್ಷಗಳಿಂದ ಆ ಶವವು ಕೊಳೆತು ಅಂಗಾಂಗಗಳು ಬಿಡಿ ಬಿಡಿಯಾಗತೊಡಗಿದ್ದುವು. ಅದು ಹಾಗಾಗಿಬಿಟ್ಟರೆ, ಪ್ರತಿವರ್ಷ ಸಾವಿರಾರು ಪ್ರೇಕ್ಷಕರನ್ನು ಸಂಗ್ರಹಾಲಯದ ಕಡೆಗೆ ಸೆಳೆಯುತ್ತಿದ್ದ ಒಂದು ಪ್ರದರ್ಶನ ಸಾಮಗ್ರಿಯ ಲೋಪವೇ ಆಗಿಬಿಟ್ಟಂತಾಗಿ, ಕಲ್ಕತ್ತದ ಸಂಗ್ರಹಾಲಯದ ಪ್ರಾಮುಖ್ಯತೆಯೇ ಹೋಗಿ ಬಿಡುತ್ತಿತ್ತು. ಆದುದರಿಂದ ಆ ಮೃತಶರೀರವು ಕೊಳೆತುಹೋದರೆ ಅದರ ಎಲುಬುಗಳನ್ನು ಮಾತ್ರ ಸಂಗ್ರಹಿಸಿಡುವುದೆಂದೂ, ಸಂಗ್ರಹಾಲಯದ ಅಧಿಕಾರಿಗಳು ಆಲೋಚಿಸಿದರು. ಆದರೆ ಈಗ ಅಂಥ ಪುರಾತನ ಶವಗಳನ್ನು ಅಗೆದು ತೆಗೆಯಲಿಕ್ಕೆ ಈಜಿಪ್ತಿನಲ್ಲಿ ಬಿಡುವದಿಲ್ಲವಾದ್ದರಿಂದ, ಅದನ್ನು ಪಡೆಯುವದು ಬಹಳ ಕಠಿನವೆಂದು ತೋರಿತು. ಅದಕ್ಕೋಸ್ಕರ ಇದ್ದ ಶವಕ್ಕೇ ಜೀವದಾನ ಕೊಡಬೇಕೆಂದು ಅವರು ನಿರ್ಧರಿಸಿದರು.

### ಮೃತ ಶರೀರಕ್ಕೆ ಜೀವದಾನ

ಆದ್ದರಿಂದ ಈಗ ಒಂದು ವರ್ಷದ ಮೊದಲು ಜುವೊಲೊಜಿಕಲ್ ಸರ್ವೆ ಅಫ ಇಂಡಿಯದ ಡೈರೆಕ್ಟರ ಮತ್ತು ಎಂಥ್ರೊಪೊಲೊಜಿಸ್ಟರ ಪ್ರತ್ಯಕ್ಷ ಪರೀಕ್ಷಣದಲ್ಲಿ ಆ ಮೃತ ಶರೀರಕ್ಕೆ ಜೀವದಾನ ಮಾಡುವ ಸಫಲ ಪ್ರಯತ್ನವು ನಡೆದು ಅದೀಗ ಪೂರ್ಣವಾಗಿದೆ. ಕೊಳೆತು ಹೋದ ಮತ್ತು ಬಿಡಿ ಬಿಡಿಯಾದ ಮೃತ ಶರೀರದ ಅಂಗೋಪಾಂಗಗಳನ್ನು ಅವರು ಪುನಃ ಸರಿಪಡಿಸಿದ್ದಾರೆ. ಈ ಮೃತ ಶರೀರವು ಈಗ ಮೊದಲಿಗಿಂತಲೂ ಸುದೃಢ ಮತ್ತು ಆರೋಗ್ಯವಾಗಿ ಇರುವದು!

### ಜನರ ಅಂಧ ವಿಶ್ವಾಸ

ಭೂತ ಪ್ರೇತಗಳ ಕುರಿತು ಎಲ್ಲ ದೇಶಗಳಲ್ಲಿ ಜನರಿಗೆ ಅಂಧ ವಿಶ್ವಾಸವು ಇದ್ದೇ ಇರುತ್ತದೆ. ಕಲ್ಕತ್ತದ ಆ ಮೃತ ಶರೀರದ ಕುರಿತಾಗಿಯೂ ಜನರು ನಾನಾ ಪ್ರಕಾರದ ಮನೋರಂಜಕ ಕತೆಗಳನ್ನು ಹೇಳಿಕೊಳ್ಳುತ್ತಿದ್ದರು. ಆ ಮೃತ ಶರೀರದ ರಿಪೇರಿ ಕೆಲಸದಲ್ಲಿ ತೊಡಗಿದವರಿಗೆ ಅದರ ಪ್ರೇತವು ಏನಾದರೊಂದು ಅನಿಷ್ಟವನ್ನು ಉಂಟುಮಾಡದೆ ಇರಲಾರದೆಂದು ಜನರು ಎಣಿಸಿದ್ದರು. ಆದರೆ ಅದರಿಂದ ಯಾವ ನೌಕರನಿಗೆ ಯಾವ ಹಾನಿಯೂ ಆಗಲಿಲ್ಲ; ಯಾರೂ ಅಸ್ವಸ್ಥರಾದುದೂ ಇಲ್ಲ. ಮೃತ ಶರೀರಕ್ಕೆ ಜೀವದಾನ ಕೊಡುವ ಕಾರ್ಯದಲ್ಲಿ ತೊಡಗಿದವರಿಗೆ ಯಥೇಷ್ಟ ಸಂಭಾವನೆಯು ದೊರಕಿರುತ್ತದೆ!

ಬೆಲ್ಜಿಯಮಿನ ಪ್ರೊ॥ ಹೆಮಾನ್ಸರಿಗೆ ವೈದ್ಯಕೀಯ ಸಂಶೋಧನೆಗೆ ೧೯೩೮ರಲ್ಲಿ ನೋಬೆಲ್ ಬಹುಮಾನ ದೊರಕಿತು.

### ಕಾಲನಿರ್ಣಯ

ಈ ಪುರುಷ ಶವವು ಯೇಸುಕ್ರಿಸ್ತನ ಜನ್ಮದ ಮೊದಲು ಎರಡು ಮೂರು ಸಾವಿರ ವರ್ಷಗಳ ಹಿಂದಿನದ್ದಾಗಿರಬೇಕೆಂದು ಶಾಸ್ತ್ರಜ್ಞರು ಅಂದಾಜು ಮಾಡಿದ್ದಾರೆ. ಅಷ್ಟು ವರ್ಷಗಳು ಕಳೆದರೂ ಮೃತಶರೀರಗಳು ಕೊಳೆಯದಂತೆ ಅದಕ್ಕೆ ಲೇಪವನ್ನು ಹಚ್ಚಲಿಕ್ಕೆ ಉಪಾಯವನ್ನು ಕಂಡುಕೊಂಡಿದ್ದ ಆ ಪುರಾತನ ಈಜಿಪ್ತನರ ಬುದ್ಧಿ ಸಾಮರ್ಥ್ಯಕ್ಕೆ ಎಲ್ಲರೂ ತಲೆದೂಗಬೇಕಾಗಿದೆ. ಆದರೆ ಈಗಿನ ವೈಜ್ಞಾನಿಕರಾದರೂ ಅವರಿಗೆ ಈ ವಿಷಯದಲ್ಲಿ ಬಹಳ ಕಡಮೆಯಾಗಿರುವದಿಲ್ಲ. ಏಕೆಂದರೆ ಈ ಮೃತ ಶರೀರವು ಕಳೆದ ವರ್ಷ 'ರಿಪೇರಿ' ಆದ ತರುವಾಯ, ಅದು ಇನ್ನು ಕೆಲವು ಶತಮಾನಗಳ ತನಕವಾದರೂ ಈಗಿರುವಂತೆ ಕೊಳೆಯದೆ, ಚೆನ್ನಾಗಿಯೇ ಇರುವದಾಗಿ ವೈಜ್ಞಾನಿಕರು ಪರೀಕ್ಷಿಸಿ ಹೇಳಿರುವರು. ಕಲ್ಕತ್ತಕ್ಕೆ ಹೋಗುವವರು ಈಜಿಪ್ತಿನ ಈ ಬಹು ಪುರಾತನ ಅವಶೇಷವನ್ನು ನೋಡಿ, ಆಶ್ಚರ್ಯದಿಂದ ತಲೆದೂಗದೆ ಇರಲಾರರು; ಮತ್ತು ವೈಜ್ಞಾನಿಕರ ಶಕ್ತಿ ಸಾಮರ್ಥ್ಯಗಳನ್ನು ಮೆಚ್ಚಿ ಅವರಿಗೆ ಧನ್ಯವಾದಗಳನ್ನು ಕೊಡದೆ ಇರಲಾರರು.

## ಮನೆಗಳು ಬಾಡಿಗೆಗೆ ಇವೆ.

ಇಲೆಕ್ಟ್ರಿಕ್ ಫಿಟ್ಟಿಂಗ್ ಮಾಡಿದ ಎಲ್ಲಾ ಸೌಕರ್ಯಗಳುಳ್ಳ ಶುಚಿಯಾದ ಮನೆಗಳು ದಿ ಅತ್ತೂರು ಎಂಡ್ ಜವಾಹಿರ ಬೇಂಕ್ ಲಿಮಿಟೆಡ್ ಕಂಪೌಂಡಿನಲ್ಲಿ ಬಾಡಿಗೆಗೆ ಸಿಕ್ಕುತ್ತವೆ.

ಬೇಕಾದವರು ಬೇಂಕಿನಲ್ಲಿ ಬಂದು ವಿಚಾರಿಸಿ

## HOUSES TO LET.

Decent and spacious houses with electric fittings and al[l] facilities are to let in the Attur and Jawahar Bank Ltd. Compound, Canara High School road, Mangalore.

## ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

# ಉಡುಪಿ ಪರ್ಯಾಯ ಮಹೋತ್ಸವ

ಉತ್ಸವಾರಂಭ ತಾ. 9–1–1940 ಚೂರ್ಣೋತ್ಸವ ತಾ. 15–1–1940

ಮಕರ ಸಂಕ್ರಮಣ ಉತ್ಸವ ತಾ. 14–1–1940 ಮಧ್ವನವಮಿ ಉತ್ಸವ ತಾ. 19–1–1940

ಪರ್ಯಾಯ ಪಟ್ಟದಿಂದ ಇಳಿಯುವ ಶ್ರೀ ಸ್ವಾಮಿಗಳವರ ಉತ್ಸವ 17–1–1940

ಪರ್ಯಾಯ ಪಟ್ಟವೇರುವ ಶ್ರೀ ಅದಮಾರು ಸ್ವಾಮಿಗಳ ಪರ್ಯಾಯ ಉತ್ಸವ 18–1–1940

ತಾ. 17–1–1940

ಪರ್ಯಾಯ ಪಟ್ಟದಿಂದ
ಇಳಿಯುವವರು
ಶ್ರೀ ಫಲಿಮಾರು ಮಠದ
ಶ್ರೀ ರಘುಮಾನ್ಯತೀರ್ಥ
ಶ್ರೀಪಾದಂಗಳವರು

## ಶ್ರೀ ಕೃಷ್ಣನ ಸನ್ನಿಧಿಯಲ್ಲಿ

ನಿಮ್ಮ ಭಕ್ತಿಯನ್ನು ಅರ್ಪಿಸಲಿಕ್ಕೆ ಅತ್ಯುತ್ತಮ ಸಂದರ್ಭ

ಶ್ರೀ

ಸಮಗ್ರ ಕರ್ನಾಟಕದ ಭಕ್ತ ಶಿರೋಮಣಿಗಳು ನೆರೆದು ಬಂದು ಶ್ರೀ ಕೃಷ್ಣ ಪರಮಾತ್ಮನ ದಿವ್ಯ ದರ್ಶನವನ್ನು ಮಾಡಿ ಕೃತಾರ್ಥರಾಗುವರು. ಯಾತ್ರಾರ್ಥಿಗಳ ಸರ್ವಾನುಕೂಲತೆಯ ವ್ಯವಸ್ಥೆಗೊಳಿಸಿಯದೆ

ಉಡುಪಿಯಲ್ಲಿ ಉಳಕೊಳ್ಳಲಿಕ್ಕೆ ನಮ್ಮ ವಿಶ್ರಾಂತಿಗೃಹವಲ್ಲದೆ ಮಠಗಳಲ್ಲಿಯೂ, ಉಪಾಸಕರಲ್ಲಿಯೂ ಉಳಕೊಳ್ಳುವ ವ್ಯವಸ್ಥೆ ಮಾಡಲಾಗುವದು.

ತಾ. 18–1–1940

ಪರ್ಯಾಯ ಪಟ್ಟ
ವೇರುವವರು
ಶ್ರೀ ಅದಮಾರು ಮಠದ
ಶ್ರೀ ವಿಬುಧಮಾನ್ಯ ತೀರ್ಥ
ಶ್ರೀಪಾದಂಗಳವರು

ಇದೇ ದಿವ್ಯ ಸಂದರ್ಭದಲ್ಲಿ ಧರ್ಮಸ್ಥಳ, ಸುಬ್ರಹ್ಮಣ್ಯ, ಕೊಲ್ಲೂರು ಮತ್ತು ಗೋಕರ್ಣಕ್ಕೂ ಒಂದೇ ಬಾರಿ ಅತ್ಯಲ್ಪ ಖರ್ಚಿನಲ್ಲಿ ಯಾತ್ರೆಯನ್ನು ಪೂರೈಸಲಿಕ್ಕೆ ಅನುಕೂಲವಿದೆ. ಪ್ರಯಾಣಿಕರ ಸೌಕರ್ಯದ ಕಡೆಗೆ ವಿಶೇಷ ಗಮನಕೊಡಲಾಗುವದು

ಈ ಸಮಯದಲ್ಲಿ ಏರ್ಪಡಿಸಿದ ಪರ್ಯಾಯ ವಸ್ತು ಪ್ರದರ್ಶನ ನೋಡಲೂ ಅತೀ ಅನುಕೂಲವಿದೆ.

***JOINT MANAGERS.***

**The Combined Booking Agency,**
MANGALORE.

**The Joint Booking Office,**
KODIALBAIL.

(Regd)

# ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.



# HOUNSA

# ಹಂಸಾ ಸ್ನೋ

## ಮತ್ತು

# ಬ್ರಿಲ್ಲಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು, ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದೀಯ ಸಮಾಜ, ಪೆರಿಡೇಪಿ,
P. O. Peridepi (ನೆಲ್ಲೂರು ಜಿ.)


## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ | 1—12—0 | 1—14—0 |
| ,, ದುಯಂ ,, ,, | | |
| ,, ಅವ್ವಲ್ ಸುಗ್ಗಿ ,, | | — |
| ,, ದುಯಂ ,, ,, | | — |
| ಅಕ್ಕಿ ಅವ್ವಲ್ ಗುಡ್ಡು ,, ಕಳಸಿ | 4—14—0 | |
| ,, ದುಯಂ ,, ,, | 4—8—0 | |
| ,, ಅವ್ವಲ್ ಸುಗ್ಗಿ ,, | 4—8—0 | 4—8— |
| ,, ದುಯಂ ,, ,, | 4—4—0 | 4—6—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 57—8—0 |
| ,, ಸಿಪ್ಪೆ ಇದ್ದದ್ದು ,, | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 85—0— |
| ,, ದಿಲ್‌ಪಸಂದ ,, | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಯುದ್ದ ಅಡಿಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 8—0—0 | 8—12—0 |
| ಕಬ್ಬಿನ ಬೆಲ್ಲ ಖಂಡಿಗೆ | 37—8—0 | 50—0—0 |
| ಒಳ್ಳೇಮೆಣಸು ಹಂಡ್ರೆಡ್‌ವೇಟಿಗೆ | 19—0—0 | 20—8—0 |

# ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 12—1—1940 [ಸಂಚಿಕೆ 2

## The Bombay Life Assurance Company, Ltd.

(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live—today—a few years more—when you are old?

If you die—to your family and dependants?

**REMEMBER THAT**

If you live Life Insurance takes the place of your professional income during your old age

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE

**1938 RECORD**

| | |
|---|---|
| Completed Business | Rs 1,44,91,000 |
| Life Assurance Fund | Rs 1,17,69,748 |
| Total Assets | Rs 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

Bombay Life Building,

*Sri Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES

Puthiyara, Calicut

Car Street, Mangalore

Visvesvarapuram Circle, Bangalore City

Post Box No. 337, Mount Road, Madras

Gowri Niwas, Charni Road, Girgaum, Bombay No. 4

Central Station Road, Trivandrum

## PHYSICAL FITNESS

**is the first essential in games and in every social activity.**

You need not worty hereafter for your impaired vitality premature old age and nervous break-down if you try

**"BHUVANENDRA**

**AMRITHPRASH"**

**which will tone the nervous system, build healtny tissues and enrich the blood.**

**Thus keeps you fresh and sprightly.**

**Bhuvanendra Products, Ltd.,**

**Katapady, S. Kanara.**

(BRANCH—KUMTA, N. KANARA)

Stockist: **U. Panduranga Nayk**, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಆಗತ್ಯವಿಲ್ಲ

## ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**

ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ESTD. 1906

# ಸ್ವದೇಶಾಭಿಮಾನಿ

# SWADESHABHIMANI

KANNADA ILLUSTRATED WEEKLY

## ಸತ್ಯಾಗ್ರಹಿಯ ಅದ್ಭುತ ಅಸ್ತ್ರ

### ರಾಟೆಯ ಕುರಿತು ಮಹಾತ್ಮರ ವಿವರಣೆ

'ಅರ್ಧ ಮನಸ್ಸಿನಿಂದ ಈಗ ಕಾರ್ಯವಾಗದು. ಮನಸ್ಸು ಚಂಚಲವಾಗಿದ್ದರೆ ಅದರಿಂದ ರಾಷ್ಟ್ರವು ಸಂಕಟದಲ್ಲಿ ಬೀಳುವುದು. ಸಮಂತವಾದ ಹಾಗೂ ರಾಯ್ ವಾದಿಗಳು ನೂಲುವ ವಿಷಯದಲ್ಲಿ ಅಷ್ಟು ಸ್ಪಷ್ಟ ಅಭಿಪ್ರಾಯವನ್ನು ಕೊಟ್ಟದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಮ್ಮ ರಾಷ್ಟ್ರಕ್ಕೆ ಈಗ ಅತ್ಯಂತ ಕಠಿಣ ಪರಿಸ್ಥಿತಿಯೊದಗಿದೆ. ಈಗಲೇ ಶಾಸನ ಭಂಗ ಚಳವಳವನ್ನು ಆರಂಭಿಸಿದರೆ, ಯೋಗ್ಯ ಒಪ್ಪಂದವಾಗುವ ವರೆಗೆ ಅದನ್ನು ನಿಲ್ಲಿಸಕೂಡದು. ಆದ ಕಾರಣ, ನಮ್ಮ ಅಹಿಂಸಾಮಯ ಹೋರಾಟವು ಯಶಸ್ವಿಯಾಗಬೇಕಿದ್ದರೆ, ನಮ್ಮ ಅಹಿಂಸೆಯೂ ನಿರ್ಮಲವಿರಬೇಕು. ಅದಕ್ಕೆ ಆವಶ್ಯವಿರುವ ವಿಷಯಗಳನ್ನು ತಿಳಿಸಲು ನಾವು ಹಿಂದೆ ಬೀಳಬಾರದು. ಹಿಂದುಮುಂದೆ ನೋಡಿದರೆ ರಾಷ್ಟ್ರಘಾತವಾಗುವುದು' ಹೀಗೆಂದು ಮಹಾತ್ಮಾಜಿಯವರು ಈ ವಾರದ 'ಹರಿಜನ'ದಲ್ಲಿ ಲೇಖನ ಬರೆದಿರುವರು. ಅದರಲ್ಲಿ ಅವರು ರಾಟೆಯ ಮಹತ್ವವನ್ನು ಬಹಳ ಸ್ಪಷ್ಟವಾಗಿ ವಿವರಿಸಿರುವರು. ಅವರು ಹೇಳುವುದೇನೆಂದರೆ:–

'ನಾನು ಒಬ್ಬನೇ ಒಬ್ಬ ಸೇನಾಪತಿಯಲ್ಲ. ನನ್ನನ್ನು ಹಾಗೆ ಯಾರೂ ನೇಮಿಸಲೂ ಇಲ್ಲ. ನನ್ನದು ಜನರೊಡನೆ ಸ್ನೇಹ ಹಾಗೂ ವಿಶ್ವಾಸದ ಸಂಬಂಧವಿರುತ್ತದೆ. ಪ್ರತಿಯೊಬ್ಬ ಸತ್ಯಾಗ್ರಹಿಯೂ, ನನ್ನಲ್ಲಿ ಅಹಿಂಸೆಯ ಗುಣಗಳನ್ನು ಕಾಣಬೇಕು. ನಾನು ಇಂಗ್ಲಿಷರನ್ನು ದ್ವೇಷಿಸುವುದಿಲ್ಲವೆಂಬುದನ್ನು ನನ್ನ ಸಹೋದ್ಯೋಗಿಗಳೇ ಮೊದಲು ಅರಿಯಬೇಕು. ನನಗೆ ಇಂಗ್ಲಿಷರನ್ನು ಹೊರಗೆ ಹಾಕಬೇಕೆನ್ನುವ ಇಚ್ಛೆಯೂ ಇಲ್ಲ. ಪ್ರತಿಯೊಬ್ಬ ಇಂಗ್ಲಿಷನೂ ತಾನು ಆಳುವ ಮನುಷ್ಯನೆಂದು ತಿಳಿದುಕೊಳ್ಳದೆ, ಹಿಂದೂಸ್ಥಾನದ ಓರ್ವ ಸೇವಕನೆಂದು ತಿಳಿಯುವಂತೆ ಮಾರ್ಪಡಿಸಲು ನಾನು ಯತ್ನಿಸುತ್ತೇನೆ. ಹಿಂದೀಯನನ್ನು ಅವನು ಪ್ರೀತಿಸುವಂತೆ ನಾನು ಅವನನ್ನೂ ಪ್ರೀತಿಸುತ್ತೇನೆ.

'ನನ್ನ ಕಾರ್ಯವು ಪ್ರೀತಿಯಿಂದೊಡಗೂಡಿದೆ. ಅದರಲ್ಲಿ ಚರಕವು ಸಮರಸವಾಗಿದೆ. ಅಹಿಂಸೆಯಿಂದ ಆತ್ಮ ಸಂರಕ್ಷಣೆಯಾಗಬೇಕಾದರೆ, ಸಮಾಜವನ್ನು ಪುನರ್ನಿರ್ಮಾಣ ಮಾಡಬೇಕು. ಜನರು ಹೊರಗಿನ ದಾಳಿ ಮತ್ತು ಅಂತರೀಕ ತೊಂದರೆಗಳಿಂದ ತಪ್ಪಿಸಿಕೊಳ್ಳಲು ಶಕ್ತರಾಗಬೇಕು. ಅಹಿಂಸೆಯ ತಳಹದಿಯಿಂದ ಕಟ್ಟಲ್ಪಟ್ಟ ಸಮಾಜವು ಕೇವಲ ಹಳ್ಳಿಗಳಲ್ಲಿ ನೆಲೆವಿಡಾಗ ತಕ್ಕದ್ದು. ಅಲ್ಲಿ ಶಾಂತ ರೀತಿಯಿಂದ ಬಾಳಲು ಸಹಕಾರವು ಅಗತ್ಯ. ನಮ್ಮ ಹಳ್ಳಿಗಳ ಪಂಚಾಯಿತಿಗಳಲ್ಲಿ ಎಷ್ಟೇ ಕುಂದುಕೊರತೆಗಳಿದ್ದರೂ, ಅವುಗಳಲ್ಲಿ ನನಗೆ ಅಹಿಂಸಾತ್ಮಕ ಸಮಾಜದ ಸುಸ್ಥಿತಿಯು ಕಂಡುಬರುತ್ತದೆ. ರಾಟೆಯಲ್ಲಿ ನಾನು

ಮಾಡಿದ ಅರ್ಥವು ಸರಿಯೆನಿಸಿದರೆ, ಸ ನಾಗುವುದು. ರಾಟೆಯಿಂದ ಹೊರಡು ಭಾರತೀಯರಿಗೆ ಅಭೇದ್ಯ ಸ್ನೇಹ ಪಾಶ

ತ್ಯಾಗ್ರಹಿಗೆ ಅದು ಒಂದು ಅದ್ಭುತ ಅಸ್ತ್ರ. ವ ಎಳೆಯು ಇಂದು ಲಕ್ಷಾಂತರ ಮಂದಿ ವಾಗಿದೆ.

ಯಾವಾಗಲೂ ನೈಸರ್ಗಿಕವಾದ ಆಹಾರವೇ ಉತ್ತಮ. ತಾಯಂದಿರು ತಮ್ಮ ಮಕ್ಕಳಿಗೆ ಅಂಥಾ ನೈಸರ್ಗಿಕ ಆಹಾರವಾದ ಮೊಲೆಹಾಲನ್ನುಣ್ಣಿಸಿ ಅವನ್ನು ಏನೊಂದು ಪ್ರಯಾಸ ಪಡದೆ ಸಂಗೋಪನೆ ಮಾಡುವ ಶಕ್ತಿಯು ಬರಬೇಕಾದರೆ ಬಾಣಂತಿತನದ ಮೊದಲೂ ನಂತರವೂ 'ಓವಲ್‌ಟಿನ್'ನ್ನು ಸೇವಿಸಬೇಕು. ಇದರಿಂದ ತಾಯಂದಿರಿಗೆ ಹಾಲು ಸಮೃದ್ಧವಾಗುವುದೆಂಬುದು ಖಾತ್ರಿ.

ಪ್ರಕೃತಿಯ ಸಂಪನ್ನವಾದ ಶಕ್ತಿವರ್ಧಕ ಆಹಾರ—ನೆನೆಹಾಕಿ ಹುರಿದ ಬಾರ್ಲಿ, ದನದ ಹಸಿ ಹಾಲು ಮತ್ತು ನೈಸರ್ಗಿಕ ಆಹಾರ ಸತ್ವ (Vitamins)ಗಳಿಂದ ತಯಾರಿಸಲ್ಪಟ್ಟ ಈ 'ಓವಲ್ಟಿನ್' ಪರಿಪೂರ್ಣವಾಗಿ ರುಚಿಕರವಾದ ಆಹಾರವಾಗಿದ್ದು ತಾಯಂದರಿಗೆ ಆರೋಗ್ಯ, ತ್ರಾಣ ಮತ್ತು ಚೇತನವನ್ನುಂಟುಮಾಡಿ ಪೋಷಿಸುತ್ತದೆ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು: ಜೇಮ್ಸ್ ರೈಟ್ ಲಿಮಿಟೆಡ್,
ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ.

# 'ಓವಲ್‌ಟಿನ್'

'OVALTINE' ಪುಷ್ಟಿಕರವಾದ ಆಹಾರ

'ಓವಲ್‌ಟಿನ್ ಬಿಸ್ಕತ್ತುಗಳು' ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕತ್ತುಗಳು. ಇವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ. 4 ಔನ್ಸು ಮತ್ತು 8 ಔನ್ಸು ಪಕೆಟುಗಳಲ್ಲಿಯೂ ಒಂದು ರಾತ್ತಲಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/18/39

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

19—1—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೯—೧—೧೯೪೦

### ಅಹಿಂಸಾ ಸಮರದ ಸೇನಾನಿಗೆ

'ಹಿಂಸಾತ್ಮಕ ಸೈನ್ಯದ ದಳಪತಿಗೆ ತನ್ನ ಸೈನಿಕರ ಗುಣನಡತೆಗಳ ವಿಷಯದಲ್ಲಿ ಕೆಲವು ತರದ ತೃಪ್ತಿಬೇಕಾಗಿದ್ದರೆ, ಈ ಅಹಿಂಸಾತ್ಮಕ ಸೈನ್ಯದ ದಳಪತಿ ಎನಿಸಿದ ನನಗೆ ನನ್ನ ಸೈನ್ಯದ ಕುರಿತು ತೃಪ್ತಿ ಬರಬೇಡವೇ?' ಈ ಪ್ರಶ್ನೆಯನ್ನು ಸುತ್ತಮುತ್ತಲಿನಿಂದ ಗಾಂಧಿಜಿಯವರನ್ನು ವಾರ್ಧಾದಲ್ಲಿ ಕಾಣಲು ಬಂದು ದೇಶ ಸೇವಕರೊಡನೆ ಅವರು ಕೇಳಿದರು.

### ಜಾತಿಯ ಐಕ್ಯದ ವಿಷಯವಾಗಿ ಹೀಗೆಂದರು

ಈಗ ನಾನು ನನ್ನ ಅತ್ಯಂತ ಪ್ರಿಯವಾದ ವಿಷಯಗಳ ಕುರಿತ ಹೇಳುತ್ತೇನೆ ಈ ಜಾತೀಯ ಐಕ್ಯದ ಮೂಲವೆಂದರೆ ಪ್ರತಿಯೊಂದು ಜಾತಿಗೂ ಅದಕ್ಕೆ ಸಲ್ಲಬೇಕಾದ ಹಕ್ಕನ್ನು ಅದು ಕೇಳದೆ ಕೊಡುವಾಗ ಇದರಲ್ಲಿದೆ ಸತ್ಯಾಗ್ರಹವು ಜೀವನ ಧರ್ಮವಾಗಿದೆ ತನ್ನ ಹಕ್ಕುಗಳನ್ನು ಕಾಪಾಡಲು ಯತ್ನಮಾಡುವುದಕ್ಕಿಂತ ಮೊದಲು, ತನ್ನ ನೆರೆಕರೆಯವರ ಹಕ್ಕನ್ನು ಉಳಿಸಲು ಯತ್ನಮಾಡುವುದರೊಡನೆ ಸತ್ಯಾಗ್ರಹವು ಆರಂಭವಾಗುತ್ತದೆ ಇಂತಹ ಭಾವನೆಯಿಂದ ಜಾತೀಯ ಐಕ್ಯವು ಬಹಳ ಸುಲಭವಾಗಿ ಸಾಧ್ಯವಾಗುತ್ತದೆ

'ಹರಿಜನರ ವಿಷಯವಾಗಿ ಹೇಳುವುದಾದರೆ ಇಂದು ಅವರ ವಾದದ ತುಳಿತವನ್ನು ಪಡೆಯಲೂ ನಾನು ಸಿದ್ಧನಿದ್ದೇನೆ ಆದರೆ ನಮ್ಮ ಶತ ಶತಮಾನಗಳ ಆ ರೀತಿಯ ಹಿಂಸ್ರ ಶಿಕ್ಷೆಯ ಪರಿಣಾಮದಿಂದ, ಇಂದು ಅವರನ್ನು ನಾವು ರಕ್ತಸಂಬಂಧಿಗಳೆಂಬ ಪ್ರೀತಿಯಿಂದ ನೋಡುವೆವೆಂದು ಒಪ್ಪಿಸಲು ಕಷ್ಟವಾಗುತ್ತದೆ'

'ನನ್ನ ಪ್ರೀತಿಯ ವಿಷಯವು ಚರಕ. ನೀವೆಲ್ಲರೂ ಅದರಂತೆ ಕೆಲಸ ಮಾಡದವರೆಗೆ ನನಗೆ ತೃಪ್ತಿಯಿಲ್ಲ. ಕೆಲವರು ಅಷ್ಟಿಷ್ಟು ನೂಲು ತೆಗೆಯುವುದರಿಂದ ಪ್ರಯೋಜನವಿಲ್ಲ. ಪ್ರತಿಯೊಂದು ಮನೆಯಲ್ಲಿಯೂ ಚರಕದ ಸುಂದರ ಧ್ವನಿಯು ಕೇಳಿ ಬರಬೇಕು. ಚರಕವು ವಿಶ್ವಮಾನ್ಯವಾಗಬೇಕು. ಚರಕವು ವಿಶ್ವಮಾನ್ಯವಾಗಿದೆಯೆಂಬುದರ ದೃಢೀಕರಣ

# ಸ್ವರಾಜ್ಯಸಮರದಲ್ಲಿ ಬಿಡುವ ಗುಂಡುಗಳು?

## ಕೈರಾಟೆಯ ನೂಲಿನೆಳೆಗಳೇ!

## ಮಹಾತ್ಮರ ಅಚಲವಿಶ್ವಾಸ ಭಾರತದ ಸತ್ವಾಪಹರಣ ಯಾರಿಂದ

## ಅಹಿಂಸೆಯೇ ನಿಜವಾದ ಕ್ರಾಂತಿ!

ವಂದರ ಸರ್ವತ್ರ ಖಾದೀ ಉಪಯೋಗವಾಗಿದೆ ಇಂದು ರಾಷ್ಟ್ರವು ನನ್ನ ಅನುಜ್ಞೆಯಿಲ್ಲದೆ ಶಾಸನಭಂಗವನ್ನು ಆರಂಭಿಸಲು ವಿಚಾರಿಸುವುದಿಲ್ಲವೆಂಬುದಕ್ಕೆ ನಾನು ಅತ್ಯಂತ ಹರ್ಷಿತನಾಗಿದ್ದೇನೆ ಏಕೆಂದರೆ, ನಾನು, ನನ್ನ ವಿಚಾರಗಳನ್ನು ಪೂರ್ಣಗೊಳಿಸದ ವಿನಹ ಶಾಸನಭಂಗ ಆಂದೋಲನಕ್ಕೆ ಅನುಜ್ಞೆ ಕೊಡಲಾರೆ.

"ನಮಗೆ ಇಂದು ೨೦೦ ಕೋಟಿ ರೂಪಾಯಿಗಳ ಅರಿವೆ ಬೇಕಾಗಿದೆ ಇಂದು ನಾವು ನಮ್ಮ ಚರಕಾಗಳಿಂದ ಒಂದ ಕೋಟಿ ರೂಪಾಯಿಗಿಂತ ಹೆಚ್ಚಿನ ಖಾದಿಯನ್ನು ಒದಗಿಸುವುದಿಲ್ಲ ಹಾಗಾದರೆ ಹೇಗೆ ನಾನು ನಿಮ್ಮಲ್ಲಿ ವಿಶ್ವಾಸವಿಡಲಿ? ನಾವು ಬದುಕಿರುವುದ ಸತ್ಯವೆಂದಾದರೆ, ಖಾದಿಯೂ ಜಗನ್ಮಾನ್ಯವಾಗಲೇಬೇಕು ಆದರೆ ಇಂದಿನ ಅಡಚಣೆಯೇನೆಂದರೆ ಖಾದಿಯ ವಿಷಯವಾಗಿ ಮಾತನಾಡುವವರೇ ಅದನ್ನು ಮಾಡಿ ತೋರಿಸುವುದಿಲ್ಲ ಹಿಂದೆ ಮಹಮ್ಮದಾಲಿಗಳು ಹೇಳಿದ್ದರು ನಾವು ನೂಲುವ ನೂಲಿನ ಪ್ರತಿಯೊಂದು ಎಳೆಯೂ ಸ್ವರಾಜ್ಯವನ್ನು ಪಡೆಯುವ ಒಂದೊಂದು ಗುಂಡು ಎಂದು ಈ ಮಾತಿನಲ್ಲಿ ಖಾದಿಯ ಶಕ್ತಿ ಸ್ವರಾಜ್ಯ ಸಾಧನೆಯ ಮಹಾ ಸತ್ಯವೇ ಅಡಕವಾಗಿದೆ"

### ಅಹಿಂಸೆಯಿಂದಲೇ ಸ್ವರಾಜ್ಯ ಸಿದ್ಧಿ!

### ಕ್ರಾಂತಿಕಾರಿಯ ಹೃದಯ ನಿವೇದನೆ!

ಶಾಂತಿ ನಿಕೇತನದ ವಿದ್ಯಾರ್ಥಿಗಳು, ಈಗ ತಾನೇ ಮಹಾತ್ಮಾಜಿಯವರ ಭರವಸೆಯ ಮೇಲೆ ಸೆರೆಮನೆಯಿಂದ ಬಿಡುಗಡೆಹೊಂದಿ ಬಂದ, ಶ್ರೀ ಪೃಥ್ವಿ ಸಿಂಗರಿಗೆ ಒಂದು ಸತ್ಕಾರ ಸಭೆಯನ್ನು ಏರ್ಪಡಿಸಿದರು ಆ ಸಭೆಗೆ ದೀನಬಂಧು ಆಂಡ್ರೂಸರು ಅಧ್ಯಕ್ಷರಾಗಿದ್ದರು.

ವಿದ್ಯಾರ್ಥಿಗಳು ಕೇಳಿದ ಹಲವು ಪ್ರಶ್ನೆಗಳಿಗೆ ಉತ್ತರವೀಯುತ್ತಾ ಶ್ರೀ ಪೃಥ್ವೀ ಸಿಂಗರು, ತಮ್ಮ ಹೃದ್ಗತವನ್ನು ಈ ರೀತಿಯಾಗಿ ಬಿಚ್ಚಿ ಹೇಳಿದರು

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ಯ ವಕರ ಇಳಿದ ಕಾರ್ಯಗಳನ್ನು ಮಾಡಬೇಕು ಓ ಪೂರ್ಣ ಸ್ವರಾಜ್ಯಕ್ಕೆ ಹಾದಿಯನ್ನು ಕಡಿಯಬೇಕು ಕ್ರಾಂತಿಯೆಂಬುದರಿಂದ ನಾ ತ್ರಿಜೂವ ಮ ಎಳಿಗೆಯ ಕಾರ್ಯವೆಂಬುದು ಅರ್ಥವಾಗುವುದಿದ್ದರೆ ನಾನು ಇಂದೂ ಕ್ರಾಂತಿಕಾರಿಯೇ ಇದ್ದೇನೆ ನನಗೆ ಗಲ್ಲಿನ ಮೇಲೆ, ಭಾರತದ ಸ್ವಾತಂತ್ರ್ಯ ಸ್ವರಾಜ್ಯ ಸ್ಥಾಪನೆಗೆ ಅಹಿಂಸೆಯೊಂದೇ ಮಾರ್ಗವೆಂದ ಅಭಿಪ್ರಾಯ ವ್ಯತ್ಯಾಸವುಂಟಾಗಿತ್ತು ಏಕೆಂದರೆ ಹಿಂಸಾ ಶಕ್ತಿಯು ಪ್ರಯೋಜನವಿಲ್ಲವೆಂದು ಚರಿತ್ರೆಯೇ ಸ್ವಪ್ರಮಾಣ ಪೂರ್ವಕ ಸಿದ್ಧಾಂತಗೊಳಿಸಿದೆ. ಹಿಂಸೆಯಿಂದ ನ್ಯಾಯ ಮತ್ತು ಸತ್ಯಗಳನ್ನು ಸ್ಥಾಪಿಸುವುದು ಸಾಧ್ಯವಿಲ್ಲ. ಆದ ಕಾರಣ ನಾನು, ಮನಸ್ಸಿನಿಂದ ಮಾತಿನಿಂದ ಕಾರ್ಯದಿಂದ ಅಹಿಂಸೆಯನ್ನು ಆಚರಿಸುವುದೇ ಯೋಗ್ಯ ಕ್ರಾಂತಿಯೆಂದು ಅದಕ್ಕೆ ಇಂದು ಶರಣಾಗಿದ್ದೇನೆ' ಹೀಗಿದೆ ಹಿಂದೊಮ್ಮೆ ಉಜ್ವಲ ಹಿಂಸಾ ಕ್ರಾಂತಿವಾದಿಯಾಗಿದ್ದ ಶ್ರೀ ಸಿಂಗರ ಇಂದಿನ ಅಭಿಮತ!

### ಭಾರತದ ಸತ್ವವನ್ನು ಸುಲಿಗೆ ಮಾಡಿದವರು ಯಾರು?

ಜನವರಿ ೨೬ರಂದು ಮಾಡುವ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ, ಬ್ರಿಟಿಷ ಆಳ್ವಿಕೆಯು ಭಾರತವನ್ನು, ರಾಜಕೀಯ ದೃಷ್ಟಿಯಿಂದ ಆರ್ಥಿಕ ದೃಷ್ಟಿಯಿಂದ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಹಾಳು ಮಾಡಿತು ಎಂದು ಇರುವುದಕ್ಕೆ ಆಕ್ಷೇಪವೆತ್ತಿ, ಕಲ್ಕತ್ತದ ಸ್ಟೇಟ್ಸ್‌ಮನ್ ಪತ್ರಿಕೆಯು ವ್ಯರ್ಥ ಸುಳ್ಳು ಆರೋಪಗಳೆಂದು ಬರೆದಿದೆ ಇದಕ್ಕೆ ಉತ್ತರರೂಪವಾಗಿ ಪ್ರಸಿದ್ಧ ಆಂಗ್ಲ ಗ್ರಂಥಕರ್ತರಾದ ಹೊರೇಸ್ ಹೇಮನ್ ವಿಲ್ಸನರು ಬರೆದ ಕೆಲವು ಮಾತುಗಳನ್ನೇ ಹರಿಜನದಲ್ಲಿ ಕೊಟ್ಟಿರುವರು. ಅದು ಹೀಗಿದೆ

'ಭಾರತವು ಯಾವ ದೇಶಕ್ಕೆ ಅಧೀನವಾಯಿತೋ, ಆ ದೇಶವೇ ಭಾರತಕ್ಕೆ ಮಾಡಿದ ಪರಮ ದ್ರೋಹವೆಂದರೆ ಭಾರತ ದೇಶದೊಡನೆ ತನ್ನಲ್ಲಿನ ವಸ್ತ್ರದ ವ್ಯಾಪಾರವನ್ನು ಆರಂಭಿಸಿದುದು ಬ್ರಿಟಿಷ್ ವಸ್ತುಗಳಿಗೆ ಯಾವ ತೆರದ ಸುಂಕಗಳೂ ಇಲ್ಲದೆ ಭಾರತದ ಮೇಲೆ ಹೇರಿಸಲಾಯಿತು ವಿದೇಶೀಯ ವ್ಯಾಪಾರಿಗಳು, ತಮ್ಮ ರಾಜಕೀಯ ಪ್ರಭುತ್ವದ ದುರುಪಯೋಗ ಮಾಡಿ ಭಾರತದ ಕೈಗಾರಿಕೆಗಳಿಗೆ ಸ್ಪರ್ಧಾ ಮೂಲಕವಾದ ಮಹದನ್ಯಾಯ ಮಾಡಿದರು.

ಹೀಗೆ ಆಂಗ್ಲೇಯರೊಬ್ಬರು ಹೇಳಿದ ಮಾತಿನಲ್ಲಿ ಯಾವ ರೀತಿಯ ಸತ್ಯವಿದೆಯೆಂಬುದನ್ನು ಪ್ರತಿಯೊಬ್ಬನೂ ಅರ್ಥಮಾಡಿಕೊಳ್ಳಬಹುದು ನಿಜವಾಗಿಯೂ, ಅಂದಿನಿಂದ ಆರಂಭಿಸಿ, ಭಾರತದ ಕೈಗಾರಿಕೆಗಳೆಲ್ಲವೂ ಹಾಳಾಗಿ, ಇಲ್ಲಿನ ಜನರು ಹಸಿದ ಹೊಟ್ಟೆಯಿಂದ ಹಗಲೂ ರಾತ್ರಿ ನರಳುವಂತಾಯಿತು.

'ಭಾರತೀಯರ ಸಂಪೂರ್ಣ ಸತ್ವವೂ ಹೀಗೆ ಪರಕೀಯರ ಆಳ್ವಿಕೆಯಿಂದ, ನಷ್ಟವಾಗಿ ಹೋಯಿತು. ಹೋಮರನು ಹೇಳಿದಂತೆ 'ಒಬ್ಬನು ತನ್ನ ಸ್ವಾತಂತ್ರ್ಯವನ್ನು ಕಳೆದು ಕೊಂಡಾಗಲೇ ತನ್ನ ಅರ್ಧಾಂಶ ಸತ್ವವನ್ನು ಕಳೆದುಕೊಳ್ಳುವನು' ಎಂಬುದು ಸಂಪೂರ್ಣ ನಿಜವಾಗಿದೆ!

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಸ್ವದೇಶಾಭಿಮಾನಿ

ತಾರೀಖು 19—1—1940

## ಸ್ವಾತಂತ್ರ್ಯ ಪ್ರತಿಜ್ಞೆ.

ಜನವರಿ ೨೬ರಂದು ಅಖಿಲ ಭಾರತದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಕಳೆದ ಕೆಲವು ವರ್ಷಗಳಿಂದ ನಡೆಯುತ್ತಿದೆ. ಆದರೆ ಈ ವರ್ಷದ ಸ್ವಾತಂತ್ರ್ಯ ಪ್ರತಿಜ್ಞೆಗೆ ಒಂದು ವೈಶಿಷ್ಟ್ಯವೊದಗಿದೆ. ಗಾಂಧಿಜಿಯವರ ಮುಂದಾಳುತನದಲ್ಲಿ ಜನತೆಗೆ ವಿಶ್ವಾಸವಿದೆಯೆ? ಗಾಂಧಿಜಿಯವರ ಕಾರ್ಯಕ್ರಮಕ್ಕೆ ಜನತೆಯ ಬೆಂಬಲವುಂಟೆ? ಸತ್ಯಾಗ್ರಹ ಆಂದೋಲನವನ್ನು ನಡೆಸಲು ಗಾಂಧಿಜಿಯವರು ಮುಂದೆ ಬರುವರೇ? ಸ್ವಾತಂತ್ರ್ಯದ ಹೋರಾಟದಲ್ಲಿ ಸತ್ಯಾಗ್ರಹಿಗಳು ಸಂಪೂರ್ಣ ಶಿಸ್ತಿನಿಂದ ಕಾರ್ಯ ಮಾಡಲು ಸಿದ್ಧರಿರುವರೇ? ಈ ಎಲ್ಲಾ ಪ್ರಶ್ನೆಗಳ ಸ್ಪಷ್ಟ ಉತ್ತರವನ್ನು ಕಾಂಗ್ರೆಸು ಕೆಲಸಗಾರರ ಸತ್ವ ಪರೀಕ್ಷೆಯನ್ನೂ ಈ ಸಲದ ಸ್ವಾತಂತ್ರ್ಯ ದಿನಾಚರಣೆಯು ವ್ಯಕ್ತಪಡಿಸುವುದು

ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಸ್ವಲ್ಪ ಬದಲಾವಣೆಯಿದೆ ಸ್ವತಃ ನೂಲು ತೆಗೆದು ದಿನನಿತ್ಯ ತಾನು ಖಾದೀ ಪ್ರಚಾರದಲ್ಲಿ ಸಹಕಾರಿಯಾಗುವೆನೆಂಬ ಸೇರಿಸಿದ ಪ್ರತಿಜ್ಞಾ ವಾಕ್ಯದ ವಿಷಯದಲ್ಲಿ ಭಾರತದ ಪ್ರಮುಖರೆನಿಸಿದವರೇ ಹಲವರು ಆಕ್ಷೇಪನೆತ್ತಿದ್ದಾರೆ ಸಮತಾವಾದಿಗಳು ತಾವು ಹಿಂದಿನ ಸ್ವಾತಂತ್ರ್ಯ ಪ್ರತಿಜ್ಞೆಯನ್ನೇ ತೆಗೆದುಕೊಳ್ಳುವುದಾಗಿ ಸಾರಿದ್ದಾರೆ ಸುಭಾಸರು ತನ್ನ ಪಕ್ಷದವರಿಗೆ ಆ ದಿನ ಪ್ರತ್ಯೇಕ ಸಭೆಗೂಡಿಸಿ, ಅದರಲ್ಲಿ ಸಾರ್ವಜನಿಕ ಭಾಷಣಗಳ ಮೂಲಕ, ಬ್ರಿಟಿಷರ ನೀತಿಯನ್ನು ಖಂಡಿಸಬೇಕೆಂದೂ, ಸೆರೆಮನೆಗೆ ಹೋಗಲು ಸಿದ್ಧರಾಗಿರಬೇಕೆಂದೂ ಆಹ್ವಾನಕೊಟ್ಟಿರುತ್ತಾರೆ ಇನ್ನು ಕೆಲವು ಕಾಂಗ್ರೆಸು ಮುಖಂಡರು, ಕಾಂಗ್ರೆಸಿನ ಶಿಸ್ತಿಗಾಗಿ ಮಾತ್ರ ತಾವು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದಾಗಿ ಹೇಳುತ್ತಿದ್ದಾರೆ. ಆದರೆ ಇಷ್ಟೆಲ್ಲಾ ರೀತಿಗಳಿಂದ ಭಾರತದ ದೇಶಸೇವಕರೆನಿಸಿದವರು, ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯ ಕುರಿತು ತಳಮಳಗೊಂಡಿದ್ದರೂ, ಮಹಾತ್ಮಾಜಿಯವರು ಖಾದಿ ಕೈನೂಲುಗಳನ್ನು ಬಿಟ್ಟು ಸ್ವರಾಜ್ಯವಿಲ್ಲವೆಂಬ ಏಕನಾದದಿಂದಲೇ ನುಡಿಯುತ್ತಿದ್ದಾರೆ.

ದೇಶದ ಸ್ವಾತಂತ್ರ್ಯಕ್ಕಾಗಿ ನಾವಿಂದು ಮಹಾತ್ಯಾಗಗಳನ್ನು ಅದ್ಭುತ ಬಲಿದಾನಗಳನ್ನು ಮಾಡಲು ಸಿದ್ಧರಿದ್ದೇವೆ, ಆದರೆ ಗಾಂಧಿಜಿಯವರಂತಹ ನಿಷ್ಣಾತ ರಾಜಕೀಯ ಮುಖಂಡರು, ತನ್ನ ಬಹಳ ಕಾಲದ ಅನುಭವಗಳಿಂದ ನೂಲುವುದನ್ನು ಪ್ರತಿಯೊಬ್ಬ ದೇಶ ಸೇವಕನ ಕರ್ತವ್ಯವಾಗಿ ವಿಧಿಸಿದ್ದಾರೆ; ಅದನ್ನು ವಿಧೇಯತೆಯಿಂದ ಒಪ್ಪುವ ತಾಳ್ಮೆ ನಮಗಿಲ್ಲದಿರುವುದು ನಿಜವಾಗಿ ಶೋಚನೀಯವಾಗಿದೆ. 'ದಿನನಿತ್ಯ ತಾಸು ಅರ್ಧ ತಾಸುಗಳ ತನಕ ನೂಲು ತೆಗೆಯುವ ಕಾರ್ಯಕ್ರಮವನ್ನಿಟ್ಟುಕೊಳ್ಳುವುದರಿಂದ ಆರ್ಥಿಕ ದೃಷ್ಟಿಯಿಂದಲೂ ನಿಜವಾಗಿ ಭಾರತದ ಉನ್ನತಿಯೇ ಆಗುವುದು! ಹಳ್ಳಿ ಹಳ್ಳಿಗಳಲ್ಲಿ ಅದೊಂದು ಸ್ವತಂತ್ರ ಜೀವನೋಪಾಯವಾಗುವುದು. ಮಾತ್ರವಲ್ಲದೆ ಖಾದಿಯು ರಾಜಕೀಯ ಅಸ್ತ್ರವಾಗಿದೆಯೆಂಬುದರಿಂದ ಅದನ್ನು ಮನಃ ಪೂರ್ವಕ ನಡೆಸುವುದು ಭಾರತದ ರಾಜಕೀಯದಲ್ಲಿ ಉತ್ಸಾಹ ಅಭಿಮಾನಗಳುಳ್ಳ ಪ್ರತಿಯೊಬ್ಬನ ಕರ್ತವ್ಯವೇ ಆಗಿದೆ

ಹೀಗೆ, ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯ ಸತ್ವ ಪರೀಕ್ಷೆಯಲ್ಲಿ ದೇಶ ಸೇವಕರು ವಿಜಯಿಗಳಾಗಬೇಕು ಆ ಮೂಲಕ ದೇಶ ಸೇವೆಯಲ್ಲಿ ತಮ್ಮ ಅಚಲ ನಿರ್ಧಾರನ್ನು, ಶಿಸ್ತಿನ ಪಂಥವನ್ನು ಜಗತ್ತಿಗೆ ಸಾರಬೇಕು. ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಮಾಡಲ, ಮನಃಪೂರ್ವಕ ಮಾಡಲು, ಹಿಂದೆ ಬೀಳುವುದರಿಂದ, ನಮ್ಮ ದೌರ್ಬಲ್ಯವನ್ನೇ ನಾವು ಪ್ರದರ್ಶಿಸಿದಂತಾಗುವುದೆಂಬುದನ್ನು ಭಾರತದ ಸೇವಕರೆಲ್ಲರೂ ಅರಿತಿರಬೇಕು

## ಸ್ಪಷ್ಟವಾಣಿ

'ಭಾರತದ ಅದೃಷ್ಟವನ್ನು ನಿರ್ಮಿಸುವವರು ವೈಸರಾಯರಲ್ಲ, ಭಾರತೀಯರೇ ಆಗಿದ್ದಾರೆ' ಹೀಗೆಂದು ಪಂಡಿತ ನೆಹರುಗಳು ಗಾಜಿಯಾಬಾದಿನಲ್ಲಿ ಮೊನ್ನೆ ಭಾಷಣ ಕೊಡುವಂದು ಧೀರ ಸ್ಪಷ್ಟ ವಾಕ್ಯದಿಂದ ಸಾರಿದರು. ಇದರಂತೆ, ರಾಷ್ಟ್ರಪತಿ ಪ್ರಸಾದರೂ ಕೂಡಾ, ವೈಸರಾಯರ ಮೊನ್ನೆಯ ಮುಂಬಾಯಿಯ ಭಾಷಣದ ಕುರಿತು ಮಾತನಾಡುತ್ತಾ, ಭಾರತೀಯರ ಧ್ಯೇಯವು ವೈಸರಾಯರು ಭರವಸೆ ಕೊಡುವಂತಹ ಸಾಮಂತ ಸ್ವರಾಜ್ಯ ಸಾಧನೆಯಲ್ಲ, ಸಂಪೂರ್ಣ ಸ್ವರಾಜ್ಯವೆಂದು ರಾಷ್ಟ್ರದ ಹೇಳಿಕೆಯೇನೆಂದು ವಿವರಿಸಿ ಹೇಳಿದರು

ಭರವಸೆ ಆಶ್ವಾಸನೆಗಳ ಕಾಲವು ಇಂದಲ್ಲ, ಅವುಗಳಿಂದ ಜನತೆಯನ್ನು ಸ್ವಾಧೀನಗೊಳಿಸುವ ರಾಜಕೀಯ ವಿದ್ಯೆಯು ಇಂದು ನಡೆಯುವಂತಿಲ್ಲ ಕಾಂಗ್ರೆಸು ತನ್ನ ಧ್ಯೇಯವೇನೆಂದು ಇಷ್ಟು ಕಾಲಗಳಿಂದ ಸಾರಿ ಬರುತ್ತಿದ್ದರೂ ಅದನ್ನು ಬರಿಯ ಆಶ್ವಾಸನೆ ಮಾತ್ರಗಳಿಂದ ದೀರ್ಘ ಎಳೆದು ಸಮಯ ದೂಡಿರುವುದು ಇನ್ನು ಮುಂದೆ ನಡೆಯುವಂತೆ ಕಂಡು ಬರುವುದಿಲ್ಲ. 'ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆ ನಮ್ಮ ಗುರಿಯಲ್ಲ'ವೆಂದೂ 'ನಮ್ಮ ಅದೃಷ್ಟವನ್ನು ನಿರ್ಮಿಸುವವರು ನಾವೇ' ಎಂದೂ ಭಾರತದ ಧುರೀಣರು ಸಾರಿದ ಈ ಮಾತುಗಳಲ್ಲಿ ರಾಷ್ಟ್ರದ ಮುಂದಿನ ಧೋರಣೆಯು ಸ್ಪಷ್ಟ ಧ್ವನಿಯು ಅಡಕವಾಗಿದೆ.

ಜಾತೀಯ ವೈಮನಸ್ಸನ್ನು ಕೆದಕಿ, ಅಲ್ಪ ಸಂಖ್ಯಾಕ, ಬಹುಸಂಖ್ಯಾಕ ವೈಷಮ್ಯವನ್ನು ಹುಟ್ಟಿಸಿ, ಆ ಮಧ್ಯೇ ಸಂಧಾನ ಕೌಶಲ್ಯವನ್ನು ತೋರಿಸುತ್ತಾ ಇದ್ದ ಹಿಂದಿನ ಆಟಗಳು ಮುಂದೆ ಕೊನೆಗಾಣಲೇಬೇಕು. ರಾಷ್ಟ್ರ ಘಟನಾ ಸಮಿತಿಯು ನಿರ್ಮಾಣವಾಗುವ ವರೆಗೆ, ಮುಸ್ಲಿಂ ಲೀಗಿನೊಡನೆ ಮಾತುಕತೆಯಿಲ್ಲವೆಂದು ಸರ್ದಾರ ಪಟೇಲರು ಸಾರಿ ಹೇಳಿರುವರು. ರಾಷ್ಟ್ರ ಘಟನಾ ಸಮಿತಿಯೊಂದೇ ಅಲ್ಪ ಸಂಖ್ಯಾಕ ಸಮಸ್ಯೆ ಮೊದಲಾದವುಗಳ ಪರಿಹಾರೋಪಾಯವೊಂದು ರಾಜಾಜಿಯವರು ಬಿಡಿಸಿ ಹೇಳಿದ್ದಾರೆ, ಕಳೆದ ಐವತ್ತೆರಡು ವರ್ಷಗಳಿಂದ ಬುದ್ಧಿ ಕಲಿತ, ಕಾಂಗ್ರೆಸು ಸಂಸ್ಥೆಯು ತನ್ನ ಮುಂದಿನ ಮಾರ್ಗವನ್ನು ಹೀಗೆ ನಿರ್ಧರಿಸಿಕೊಂಡಿರುತ್ತದೆ

ಬ್ರಿಟಿಷ್ ಸರಕಾರವು ತನ್ನ ಧೋರಣೆಯನ್ನು ಅವ್ಯಕ್ತವಾಗಿ ಮುಂದುವರಿಸುವುದರಲ್ಲಿ ಏನೂ ಚತುರತೆಯಿಲ್ಲ ಭಾರತದ ಮುಂದಿನ ಸ್ವತಂತ್ರ ರಾಜ್ಯಭಾರದ ಸ್ವತಂತ್ರ ಘಟನೆಯನ್ನು ನಿರ್ಮಿಸುವರೆ, ಜನತೆಯ ಪ್ರಾತಿನಿಧ್ಯದ ಸದಸ್ಯರಿಗೆ ಒಪ್ಪಿಗೆ ಕೊಟ್ಟು ಸಹಕರಿಸುವ ಮೂಲಕ ಸರಕಾರವು ನ್ಯಾಯಕ್ಕೆ ಬೆಂಬಲವನ್ನು ಕೊಡಬೇಕು ಪರಿಸ್ಥಿತಿಯು ಕೈಮೀರಿ ಹೋದಲ್ಲಿ, ಯಾರ ನೆರವನ್ನೂ ಅಪೇಕ್ಷಿಸದೆ, ಭಾರತೀಯರು 'ತಮ್ಮ ಭವಿಷ್ಯವನ್ನು ತಾವೇ ನಿರ್ಮಿಸುವರು'

## ಫಿನ್ಲೆಂಡಿನ ಪರಿಸ್ಥಿತಿ

ಫಿನ್ಲೆಂಡಿನ ಪರಿಸ್ಥಿತಿಯು ಉಗ್ರವಾಗುವ ಲಕ್ಷಣಗಳು ಕಂಡು ಬರುತ್ತಿದೆ ಇಷ್ಟು ಸಮಯದ ವರೆಗೆ ರಶ್ಯನರ ಆಕ್ರಮಣವನ್ನು ಧೀರ ಫಿನ್ನರು, ಅತ್ಯಂತ ಸಾಹಸಗಳಿಂದ ತಡೆಯುತ್ತಿರುವರೆಂದು ವಾರ್ತೆ ಬರುತ್ತಿತ್ತು ಆದರೆ ಇಂದಿನ ವಾರ್ತೆಯು ಭೀಕರವಾಗಿದೆ. ಅಸಂಖ್ಯ ವಿಮಾನಗಳು, ಅಗಣಿತವಾದ ಬಾಂಬುಗಳನ್ನು ಸುರಿಸಿ, ಲೆಕ್ಕವಿಲ್ಲದಷ್ಟು ಫಿನ್ನರ ನಗರ ಗ್ರಾಮಗಳನ್ನು ಧ್ವಂಸಗೊಳಿಸಿವೆ! ಒಂದು ದಿನದ ದಾಳಿಯಿಂದಲೇ ಫಿನ್ಲೆಂಡಿಗೆ ಎಷ್ಟೊಂದು ನಷ್ಟವಾಗಿರಬಹುದೆಂದು ಊಹಿಸುವುದು ನಿಜವಾಗಿ ಕಷ್ಟವಾಗಿದೆ'

ರಶ್ಯದ ಈ ಧೋರಣೆಯು ತೀವ್ರ ಖಂಡನೀಯವಾದುದು ನಿರಪರಾಧಿಗಳಾದ ಜನರ ಜನರ ಮೇಲೆ ನಗರ ಗ್ರಾಮಗಳ ಮೇಲೆ ಬಾಂಬಿನ ಮಳೆ ಸುರಿಸಿ ಧ್ವಂಸಗೊಳಿಸುತ್ತಿರುವ ಕಾರ್ಯವು ಅನ್ಯಾಯ ಮತ್ತು ಅಧರ್ಮವಾದುದು ಆದರೆ ಇಂದು ನ್ಯಾಯ ಸತ್ಯ ಧರ್ಮಗಳನ್ನು ಕೇಳದೆ ಮುಂದುವರಿಯುತ್ತಿರುವ ಮದಾಂಧರಾದ ಸರ್ವಾಧಿಕಾರಿಗಳು ತಮ್ಮ ಪಶುಬಲದಿಂದ ದುರ್ಬಲ ರಾಷ್ಟ್ರಗಳ ವಿನಾಶಕ್ಕೆ ತೊಡಗಿರುವರು. ಆದರೆ ಇಂದಿನ ಅವರ ಈ ಧೋರಣೆಯನ್ನು ಮುಂದೊತ್ತಬಿಡುವುದು ಮಹಾ ಪ್ರಮಾದವಾಗಿದೆ ಯುರೋಪಿನ ಬೇರೆ ಪ್ರಬಲ ರಾಷ್ಟ್ರಗಳಾದ ಅಮೇರಿಕಾ ಬ್ರಿಟನು ಮೊದಲಾದವುಗಳು ಫಿನ್ಲೆಂಡಿನ ಬೆಂಬಲಕ್ಕೆ ನಿಂತು, ಅದರ ಸ್ವಾತಂತ್ರ್ಯವನ್ನುಳಿಸಲು, ಸಹಾಯವನ್ನು ಕೊಡದಿದ್ದಲ್ಲಿ ಜಗತ್ತಿನ ಶಾಂತಿಯೇ ಕೆಡಕ ಹೋಗಬಹುದು.

ಫಿನ್ಲೆಂಡು ಸಹಾಯಕ್ಕಾಗಿ ಅನ್ಯ ರಾಷ್ಟ್ರಗಳೊಡನೆ ಬಿನ್ನವಿಸಿಕೊಳ್ಳುತ್ತಿದೆ! ಅನ್ಯ ರಾಷ್ಟ್ರಗಳಾದರೂ ಇಂದು ಫಿನ್ಲೆಂಡಿಗೆ ಅಂತಹ ಬೆಂಬಲವನ್ನು ಕೊಡುವುದರಿಂದ ಪ್ರಪಂಚದ ಶಾಂತಿಗೆ ಸಹಾಯ ಮಾಡಿದಂತಾಗುವುದು. ಯೂರೋಪಿನ, ಇಂದಿನ ದುರಂತ ರಾಜಕೀಯದಿಂದ ಜಗತ್ತು ತಲ್ಲಣಿಸುವಂತಾಗಿದೆ

## ಕುದುರೆ ನಮ್ಮದು; ಕರೆದಾಗ ಬರುವದು

### ರಾಜಾಜಿಯವರ ಭಾಷಣ

ಮದ್ರಾಸಿನಲ್ಲಿ ಸೇರಿದ ರಾಜಕೀಯ ಪರಿಷತ್ತಿನ ಉದ್ಘಾಟನ ನೆರವೇರಿಸುತ್ತ ಶ್ರೀ. ಸಿ ರಾಜಗೋಪಾಲಾಚಾರ್ಯರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದರು

ಕಾಂಗ್ರೆಸ ಮಂತ್ರಿಮಂಡಲಗಳು ಅತ್ಯಂತ ಸಂತೋಷದಿಂದ ರಾಜೀನಾಮೆ ಕೊಟ್ಟಿವೆ

ಕುದುರೆಯ ಮೇಲೆ ಕುಳಿತು ಪ್ರವಾಸ ಮಾಡುವವನಿಗೆ ನೀರಡಿಕೆಯಾದಾಗ ಕೆಳಗಿಳಿದು ನೀರು ಕುಡಿಯಬೇಕಾಗುತ್ತದೆ ಹಸಿವಾದಾಗ ಇಳಿದು ಅಡಿಗೆ ಮಾಡಿಕೊಂಡು ಊಟಮಾಡಬೇಕಾಗುತ್ತದೆ ಅದರಂತೆ ಪ್ರಾಂತಿಕ ರಾಜ್ಯಭಾರದ ಕುದುರೆಯನ್ನೇರಿದ ಕಾಂಗ್ರೆಸ ಮಂತ್ರಿಗಳಾದರೂ ಕೆಳಗಿಳಿದು ಅದನ್ನು ಸಜ್ಜುಗೊಳಿಸಲು ಪರರ ವಶಕ್ಕೆ ಕೊಟ್ಟು ತಾವೂ ತಮ್ಮ ಸಿದ್ಧತೆಯಲ್ಲಿರುವರು

ಆ ಕುದುರೆ ನಮ್ಮದು. ನಾವು ಕರೆದಾಗ ಬರುವದು ಎಂದಿಲ್ಲದವರು ಒಮ್ಮೆ ಕುದುರೆ ಹತ್ತಿದರೆ ಇಳಿಯುವದು ಕಠಿಣ ಆದರೆ ನಿರಾಯಾಸವಾಗಿ ಇಳಿಯಲು ಗೊತ್ತಾದವರು ತಮ್ಮ ಮನಸಿಗೆ ಬಂದಾಗ ಸುಲಭವಾಗಿ ಹತ್ತಬಲ್ಲರು. ಈ ರೀತಿಯಾಗಿ ಈಗ ಕಾಂಗ್ರೆಸ್ಸು ಕೆಳಗಿಳಿದಿದೆ ಅವಶ್ಯವೆನಿಸಿದಾಗ ಪುನ ಹತ್ತುವದು

ಹಿಂದೂ ಮುಸಲ್ಮಾನ ಪ್ರಶ್ನೆ ಮಹತ್ವವಾದುದು. ಅವರಲ್ಲಿರುವ ಭಿನ್ನಾಭಿಪ್ರಾಯಗಳು ಕ್ಷಣಿಕವಾದವುಗಳು ಬೇಗನೆ ಕರಗುವವೆಂದು ನನಗೆ ಆಶೆ ಇದೆ ಈ ಜಾತಿಭೇದವು ಹಿಂದಿನ ಸರಕಾರಗಳು ಬಿಟ್ಟುಕೊಟ್ಟ ಆಸ್ತಿ ಕಾಂಗ್ರೆಸ್ಸು ಈ ಭೇದಗಳನ್ನು ಅಳಿಸಲು ಯತ್ನಿಸುತ್ತಲಿದೆ ಈ ಕಾರ್ಯವು ಅದರಿಂದ ಮಾತ್ರ ಸಾಧ್ಯವಿದೆ

### ಕರ್ನಾಟಕ ಪ್ರಾಂತಿಯ ಕಾಂ ಸಮಿತಿ ಮತದಾನ ಪದ್ಧತಿ

ಇದೇ ೨೮—೧—೪೦ನೇ ದಿನ ನಡೆಯಲಿರುವ ರಾಮಗಡ ಕಾಂಗ್ರೆಸ ಪ್ರತಿನಿಧಿಗಳ ಚುನಾವಣೆಗಳಲ್ಲಿ, ಒಂದಕ್ಕಿಂತ ಹೆಚ್ಚು ಪ್ರತಿನಿಧಿಗಳು ಆರಿಸಬೇಕಾದ ಮತದಾರ ಸಂಘಗಳಲ್ಲಿಯ ಪ್ರತಿಯೊಬ್ಬ ಮತದಾರನಿಗೆ ಆ ಮತದಾರ ಸಂಘಕ್ಕೆ ಕೊಡಲ್ಪಟ್ಟ ಸ್ಥಳಗಳ ಸಂಖೆಯಷ್ಟು ಮತಗಳಿರುವವು ಅತನು ಅವೆಲ್ಲ ಮತಗಳನ್ನು ಒಬ್ಬ ಹುರಿಯಾಳುವಿಗೇ ಕೊಡಬಹುದು ಅಥವಾ ತನ್ನ ಮನಸ್ಸಿಗೆ ಬಂದಂತೆ ಅಂತ ಹುರಿಯಾಳುಗಳಲ್ಲಿ ಹಂಚಿ ಕೊಡಬಹುದು ಆದರೆ ಕೊಟ್ಟ ಒಟ್ಟು ಮತಗಳು ಆ ಮತದಾರ ಸಂಘಕ್ಕೆ ಇರುವ ಸ್ಥಳಗಳ ಸಂಖ್ಯೆಯನ್ನು ಮೀರಲಾಗದು ನಮೂದು ಮಾಡಬೇಕಾದ್ದಕಿಂತ ಹೆಚ್ಚು ಮತಗಳನ್ನು ನಮೂದು ಮಾಡಿದ ಮತ ಪತ್ರಿಕೆಯು ರದ್ದಾಗುವದು, ಎಂದು ಕೆ ಪಿ. ಸಿ ಸಿ. ಕಾರ್ಯದರ್ಶಿಗಳು ತಿಳಿಸುತ್ತಾರೆ

## ಹಿಂದೂಸ್ಥಾನಕ್ಕೆ ಸಾಮಂತ ಸ್ವರಾಜ್ಯ?

### ವೈಸರಾಯರ ಭಾಷಣ

ವೆಸ್ಟ್ ಮಿನಿಸ್ಟರ್ ಕಾನೂನಿನಲ್ಲಿರುವಂತಹ ಸಾಮಂತಸ್ವರಾಜ್ಯವನ್ನು ಹಿಂದೂ ದೇಶಕ್ಕೆ ಕೊಡುವ, ಇಂದಿನ ಬಿಕ್ಕಟ್ಟನ್ನು ಪರಿಹರಿಸಲು ಯತ್ನಿಸಲು ಮುಖಂಡರಿಗೆ ಸಹಾಯಮಾಡುವ ತನ್ನ ಅಭಿಪ್ರಾಯವನ್ನು ವೈಸರಾಯರು ಮುಂಬಯಿಯ ಓರಿಯಂಟಲ್ ಕ್ಲಬ್ಬಿನಲ್ಲಿ ಕೊಟ್ಟ ಭಾಷಣದಲ್ಲಿ ವ್ಯಕ್ತಪಡಿಸಿದರು.

ಅದರ ಸಾರಾಂಶ ಹೀಗಿತ್ತು:—

'ಪ್ರಾಂತಿಕ ಸ್ವರಾಜ್ಯವು ಕೂಡಲೇ ನಿಂತುಹೋದದ್ದು ವಿಷಾದಕರ, ಅದು ಬೇಗನೇ ಪ್ರಾರಂಭವಾಗಬೇಕು -ಅಲ್ಪಸಂಖ್ಯಾಕರಿಂದ ಪ್ರತಿಭಟನೆ ಬಂದುದರಿಂದ ಸರಕಾರದ ಪರಿಸ್ಥಿತಿ ಕಠಿಣವಾಗಿದೆ ಅವರಿಗೆ ನ್ಯಾಯ ಸಿಗುವಂತೆ ಮಾಡಲು ನಾವು ವಿಚಾರಿಸಬೇಕಾಗಿದೆ ಬೇರೆ ಬೇರೆ ಪಂಗಡಗಳ ಮುಖಂಡರು ಒಂದಾಗಿ ಒಂದು ಮಾರ್ಗವನ್ನು ಹುಡುಕಿ ನಿಮ್ಮ ವಿಚಾರವನ್ನು ವಿಮರ್ಶಿಸಿ ಸಂಪೂರ್ಣ ಸಹಾಯ ಮಾಡಲು ನಾನು ಸಿದ್ಧನಿರುವೆನು'

## ಭಾರತದ ಭವಿಷ್ಯತ್ತನು ನಿರ್ಮಿಸುವವರು ಭಾರತೀಯರು! ವೈಸರಾಯರಲ್ಲ!

### ವೈಸರಾಯರಿಗೆ ನೆಹರುಗಳ ಸ್ಪಷ್ಟ ಉತ್ತರ

"ಭಾರತದ ಸ್ವಾತಂತ್ರ್ಯ ವಿಚಾರವು ಸಂಪೂರ್ಣ ನಿರ್ಣಯವಾಗುವ ವರೆಗೆ ಬ್ರಿಟಿಷ್ ಸರಕಾರದೊಡನೆ ಒಪ್ಪಂದ ಮಾಡಲು ಸಾಧ್ಯವಿಲ್ಲ ಮಾತ್ರವಲ್ಲದೆ, ಕಾಂಗ್ರೆಸು ಮಂತ್ರಿಪದವಿಯನ್ನು ಸ್ವೀಕರಿಸಲು ಸಾಧ್ಯವಿಲ್ಲ' ಹೀಗೆಂದು ಪಂಡಿತ ನೆಹರುಗಳು ವೈಸರಾಯರ ಮೊನ್ನೆಯ ಭಾಷಣಕ್ಕೆ ಉತ್ತರವಾಗಿ ಗಾಜಿಯಾಬಾದಿನಲ್ಲಿ ಸೇರಿದ ಪ್ರಚಂಡ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಹೇಳಿದರು.

"ಭಾರತದ ಭವಿಷ್ಯವನ್ನು ವೈಸರಾಯರಾಗಲಿ, ಇಲ್ಲವೇ ಅವರು ಕಳುಹಿಸಿದ ಸಲಹೆಗಾರರ ಮಂಡಳಿಯಾಗಲಿ ನಿರ್ಮಿಸಲು ಸಾಧ್ಯವಿಲ್ಲ ಅಖಿಲ ಭಾರತೀಯರೇ ಅದನ್ನು ನಿರ್ಣಯಿಸಬೇಕು ಜಾತೀಯ ಸಂಸ್ಥೆಗಳು ಕಾಂಗ್ರೆಸಿನ ಕೀರ್ತಿಗೆ ಕಂಟಕ ತರಲು ಯತ್ನಿಸಿವೆ ಸ್ವರಾಜ್ಯವು ಬಹಳ ಸಮೀಪವಿದೆ ಆದರೆ ನಮ್ಮ ಮಿತ್ರರೇ ಅದನ್ನು ಹಿಂದಕ್ಕೆ ಎಳೆಯುತ್ತಿದ್ದಾರೆ ಫಜ್ಲುಲ್ ಹಕ್ಕರು ಕಾಂಗ್ರೆಸನ್ನು ಬೈಯಲು ಸುರುಮಾಡಿದ್ದಾರೆ ಸ್ವಾತಂತ್ರ್ಯ ಸಂಪಾದನೆಗೋಸ್ಕರವಾಗಿ, ಅಂಥ ಗಾಲಿಕ್ಕಲೂ ನಾನು ತಯಾರಿದ್ದೇನೆ. ಆದರೆ ಫಜುಲ್‌ಹಕ್ಕರ ಮುಂದೆ ಮೊಣಕಾಲೂರಲಾರೆ ಅವರು ಕಾಂಗ್ರೆಸನ್ನು ತುಂಬಾ ದೂರಿದರು. ಆದರೆ ಅದನ್ನು ರುಜುಮಾಡಿಕೊಡಿರೆಂದರೆ ಅವರು ಹಿಂಜರಿವರು.

"ಕಾಂಗ್ರೆಸು ತಪ್ಪುಮಾಡಿರಬಹುದು. ಆದರೆ ಕಾಂಗ್ರೆಸಿಗೆ ಬೆಲೆಕಟ್ಟಲು ಜನರನ್ನು ಕೇಳಿರಿ. ಅಲ್ಪಸಂಖ್ಯಾಕರ ಹೆದರಿಕೆಯನ್ನು ದೂರಮಾಡಲು ಪಕ್ಷೀಕ ಮತದಾರ ಸಂಘವನ್ನು ಏರ್ಪಡಿಸಬಹುದೆಂದು ಹೇಳಿದರೂ, ಜಾತೀಯ ನಿರ್ಣಯ ಮಾಡುವಾಗ ಬಹುಸಮ್ಮತಿಗೆ ಒಪ್ಪಲಾಗುವುದೆಂದು ಹೇಳಿದರೂ ಕೆಲವರು ಇನ್ನೂ ರಾಷ್ಟ್ರ ಘಟನಾ ಸಮಿತಿಗೆ ವಿರೋಧವಿದ್ದಾರೆ."

ಹೀಗೆಂದು ಹೇಳುತ್ತಾ ಪಂಡಿತ ನೆಹರುಗಳು, ಸ್ವಾತಂತ್ರ್ಯ ಪ್ರತಿಜ್ಞೆಯ ವಿಷಯವೆತ್ತಿ, ಖಾದಿಬಟ್ಟೆಯನ್ನು ಉಪಯೋಗಿಸದಿದ್ದವನು ಇಲ್ಲವೇ ಚರಕಾದ ಮೇಲೆ ನೂಲದಿದ್ದವನು ಸ್ವಾತಂತ್ರ್ಯದ ಹೋರಾಟಕ್ಕೆ ಉಪಯೋಗವಿಲ್ಲದವನೆಂದರು

# ಭಾರತದ ಸ್ವಾತಂತ್ರ್ಯವನ್ನು ಭಾರತೀಯರೇ ನಿರ್ಣಯಿಸುವರು

## ವೈಸರಾಯರಿಗೆ ನೆಹರುಗಳ ಧೀರ ಉತ್ತರ

## ಸರ್ದಾರ ಪಟೇಲರ ಸಿಂಹಗರ್ಜನೆ!

### ರಾಷ್ಟ್ರಪತಿಗಳ ಸ್ಪಷ್ಟವಾಣಿ

## ಕಾಂಗ್ರೆಸಿನ ಕೇಳಿಕೆಯನ್ನು ಮನ್ನಿಸುವ ವರೆಗೆ ಅಧಿಕಾರ ಸ್ವೀಕರಿಸುವದಿಲ್ಲ!

### ಸರ್ದಾರ ಪಟೇಲರ ಸಿಂಹಗರ್ಜನೆ

"ಬ್ರಿಟಿಷ್ ಸರಕಾರದವರು ಕಾಂಗ್ರೆಸಿನ ಬೇಡಿಕೆಯನ್ನು ಮನ್ನಿಸುವ ವರೆಗೆ, ಹಾಗೂ ಹೆಚ್ಚಿನ ಅಧಿಕಾರ ಸ್ವಾತಂತ್ರ್ಯವು ಭಾರತೀಯರಿಗೆ ಸಿಗುವ ವರೆಗೆ ಅವರು ಮಂತ್ರಿ ಪದವಿಯನ್ನು ಸ್ವೀಕರಿಸುವುದಿಲ್ಲ, ಮಾತ್ರವಲ್ಲ ಮುಸ್ಲಿಂ ಲೀಗಿನೊಡನೆ ಮಾತುಕತೆ ನಡೆಸುವುದಿಲ್ಲ" ಎಂದು ಅಹಮದಾಬಾದಿನಲ್ಲಿ ಸೇರಿದ ಪ್ರಚಂಡ ಸಭೆಯಲ್ಲಿ ಸರ್ದಾರ ಪಟೇಲರು ಹೇಳಿದರು

'ಕಾಂಗ್ರೆಸಿನೊಡನೆ ಸಂಧಿಮಾಡಿಕೊಳ್ಳುವುದು ಮುಸ್ಲಿಂ ಲೀಗಿಗೆ ಬೇಡವಾದುದರಿಂದ, ಅದರೊಡನೆ ಇನ್ನು ಮುಂದೆ ಕಾಂಗ್ರೆಸು ಮಾತುಕತೆ ನಡೆಸಲಾರದು ಇದರಿಂದ ಮುಸಲ್ಮಾನರೊಡನೆ ಒಪ್ಪಂದ ಮಾಡಿಕೊಳ್ಳುವುದು ಬೇಡವೆಂದು ಯಾರೂ ಅರ್ಥಮಾಡಬಾರದು. ಮುಸ್ಲಿಂ ಲೀಗನ್ನು ಭಾರತದ ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆಯೆಂದು ಕಾಂಗ್ರೆಸು ಗಣಿಸಿದ್ದರೆ ಆತ್ಮಹತ್ಯೆ ಮಾಡಿಕೊಂಡಂತಾಗುವುದು ಹೇಗಿದ್ದರೂ ಹಿಂದೂ ಮುಸಲ್ಮಾನ ಪ್ರಶ್ನೆಯು ನಮ್ಮ ನಮ್ಮೊಳಗಿನದು ಅದನ್ನು ನಾವೇ ಬಗೆಹರಿಸಿಕೊಳ್ಳುವೆವಲ್ಲದೆ, ಮೂರನೆಯವರ ಅಗತ್ಯವಿಲ್ಲ ಅವರಿಂದ ಅದು ಶಕ್ಯವೂ ಇಲ್ಲ. ಪ್ರಜಾಪ್ರಭುತ್ವಕ್ಕೆ ಭಾರತವು ಯೋಗ್ಯವಿಲ್ಲವೆಂದು ಮುಸ್ಲಿಂ ಲೀಗು ಹೇಳಿದರೆ, ದಾಸ್ಯಕ್ಕೆ ಅದು ತಯಾರಿದೆಯೆಂದು ಹೇಳಿದಂತಾಗುವುದು. ಮುಸ್ಲಿಮರಿಗಾದರೂ ಸ್ವಾತಂತ್ರ್ಯ ಸಿಕ್ಕಿದರೆ ಅದರಿಂದ ಭಾರತಕ್ಕೇ ಸ್ವಾತಂತ್ರ್ಯ ಸಿಕ್ಕಿದಂತಾಗುವುದರಿಂದ ಅದನ್ನು ನಾವು ಸ್ವಾಗತಿಸುತ್ತೇವೆ

"ಸ್ವಾತಂತ್ರ್ಯ ಪ್ರತಿಜ್ಞೆಯು ಹೊಸದಲ್ಲ ಲಾಹೋರ್ ಕಾಂಗ್ರೆಸ್ಸು ಆದಮೇಲೆ ಅದನ್ನು ನಾವು ಮಾಡುತ್ತಾ ಬಂದಿದ್ದೇವೆ ಈಗ ಅಂತಹ ನವ ಯುಗ ಬಂದ [illegible] ಅದಕ್ಕೆ ಹೊಸ ರೂಪ ಕೊಟ್ಟಿದೆ ಮಹಾತ್ಮರಲ್ಲಿ ವಿಶ್ವಾಸವಿಲ್ಲದವರು, ಮುಂದೆ ಒಂದು ಕಾರ್ಯಸೂತ್ರಗಳನ್ನು ತೆಕ್ಕೊಳ್ಳಬೇಕು, ಇಲ್ಲವೇ ಅವರಿಗಿಂತ ಯೋಗ್ಯ ಉಪಾಯಗಳನ್ನು ಸೂಚಿಸಬೇಕು ಹೇಗಿದ್ದರೂ, ಇಂದಿನ ಹೋರಾಟವು [illegible]ಗದ ಮೇಲೆ ಅಭಿಪ್ರಾಯ ವ್ಯತ್ಯಾಸಗಳು ಮಾಯವಾಗಿ, ಮಹಾತ್ಮರ ಉಪದೇಶಗಳು ಜಗತ್ತನ್ನೇ ರಕ್ಷಿಸುವವು ಆದುದರಿಂದ ಒಳ್ಳೇ ಉತ್ಸಾಹದಿಂದ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಆಚರಿಸಿರಿ'

## ಕಾಂಗ್ರೆಸಿನ ಗುರಿಯು ಸಂಪೂರ್ಣ ಸ್ವಾತಂತ್ರ್ಯ! ಸಾಮಂತ ಸ್ವರಾಜ್ಯವಲ್ಲ!

### ವೈಸರಾಯರಿಗೆ ರಾಷ್ಟ್ರಪತಿಗಳ ಉತ್ತರ!

"ವೈಸರಾಯರ ಈ ಸಲದ ಪ್ರಕಟಣೆಯು ಹಿಂದಿನ ಸ್ಪಷ್ಟೀಕರಣಕ್ಕಿಂತ ಸ್ವಲ್ಪ ಹೆಚ್ಚಿನ ಸ್ಪಷ್ಟೀಕರಣವಾಗಿದೆ. ಅವರು ವೆಸ್ಟ್ ಮಿನಿಸ್ಟರ್ ಕಾಯದೆಯ ಸಾಮಂತಸ್ವರಾಜ್ಯದ ವಿಷಯ ಹೇಳಿದ್ದಾರೆ. ಆದರೆ ಕಾಂಗ್ರೆಸಿನ ಗುರಿಯು ಸಂಪೂರ್ಣ ಸ್ವರಾಜ್ಯವೇ ಆಗಿದೆಯೆಂಬುದನ್ನು ನೆನಪಿನಲ್ಲಿಡಬೇಕು" ಹೀಗೆಂದು ರಾಷ್ಟ್ರಪತಿಗಳಾದ ರಾಜೇಂದ್ರ ಪ್ರಸಾದರು ವೈಸರಾಯರ ಪ್ರಕಟಣೆಗೆ ಉತ್ತರ ಕೊಟ್ಟಿರುವರು ಅದರಲ್ಲಿ ಹೀಗಿದೆ

"ವೈಸರಾಯರು ಹೇಳುವ ಪಕ್ಷಗಳ ಮುಖಂಡರು ತಮ್ಮ ಸಮಾಜಗಳ ನಿಜವಾದ ಪ್ರತಿನಿಧಿಗಳಲ್ಲ ಯಾಕೆಂದರೆ ಕಾಂಗ್ರೆಸ್ ಇಡೀ ಭಾರತದ ಸಮಸ್ತರ ಪ್ರತಿನಿಧಿಯಾಗಬೇಕೆಂದು ಅಪೇಕ್ಷಿಸುವುದಿದ್ದರೂ ನಾನು ಮಾತ್ರ ಕಾಂಗ್ರೆಸಿನ ಪ್ರತಿನಿಧಿಯಾಗಿದ್ದೇನೆ ಹಾಗೆಯೇ ಜಿನ್ನರೂ ಒಂದು ಮಹತ್ವವಾದ ಸಂಸ್ಥೆಯ ಅಧ್ಯಕ್ಷರಾದರೂ, ಅಖಿಲ ಭಾರತ ಮುಸ್ಲಿಮರ ಪ್ರತಿನಿಧಿಯಾಗಲಾರರು ಹಾಗೆಯೇ ಅಂಬೇಡ್ಕರರಾದರೂ ಅಖಿಲ ಭಾರತ ಹರಿಜನರ ಮುಖಂಡರಲ್ಲ. ಆದುದರಿಂದ ವೈಸರಾಯರು ಪಕ್ಷಗಳ ಮಾತೆತ್ತುವಾಗ ಇದನ್ನು ಗಮನಿಸಬೇಕು

ಈ ವಿಷಯ ಬ್ರಿಟಿಷ ಸರಕಾರದ ಮನೋವೃತ್ತಿಯ ಬದಲಾಗಬೇಕು ಅದು ಆಗದೆ ಆಶ್ವಾಸನೆಯಿಂದ ಪ್ರಯೋಜನವಿಲ್ಲ ಭಾರತದ ಪ್ರಶ್ನೆಯನ್ನು ನಿವಾರಿಸಲು ರಾಷ್ಟ್ರಘಟನಾ ಸಮಿತಿಯೇ ಯೋಗ್ಯಮಾರ್ಗ ಬೇರೆ ಹಾದಿಯು ಸರಿಯಲ್ಲವೆಂದು ಕಾಂಗ್ರೆಸು ಪೂರ್ಣ ವಿಚಾರ ಮಾಡಿಯೇ ಹೇಳಿದೆ"

**SAVING & SPENDING**

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

**The Canara Industrial & Banking Syndicate Ltd.**

*(Incorporated in British India)*

ESTD) (1925

**Head Office: UDIPI (S. India)**

# ಸ್ವಾತಂತ್ರ್ಯ ಧ್ವಜವನ್ನು ಎತ್ತಿಹಿಡಿದ ಫಿನ್‌ಲೆಂಡಿನ ವೀರಸೇನಾನಿಗಳು!



ಫಿನ್‌ಲೆಂಡಿನ ರಾಜಧಾನಿ ಹೆಲ್ಸಿಂಕಿಯಲ್ಲಿರುವ ಫಿನ್ನರ ಪಾರ್ಲಿಮೆಂಟ್ ಭವನ

ಇಂದಿನ ರಶ್ಯ ಫಿನ್‌ಲೆಂಡ್ ಯುದ್ಧವು ಒಂದು ರೀತಿಯಲ್ಲಿ ರಶ್ಯದ ಶಕ್ತಿಯನ್ನು ಒರೆಗಲ್ಲಿಗಿಟ್ಟು ಪರೀಕ್ಷಿಸಿದಂತೆ ಆಯಿತು! ಪ್ರಪಂಚದ ಪ್ರಬಲ ಸೈನ್ಯ ಶಕ್ತಿಯುಳ್ಳದ್ದೆಂದು ಪ್ರಸಿದ್ಧವಾದ ರಶ್ಯವನ್ನು ಒಂದು ಇಂಚು ಮುಂದುವರಿಯಲು ಫಿನ್ ವೀರರು ಎಡೆಗೊಡುವುದಿಲ್ಲ. ನುರಿತ ಫಿನ್ ಸೇನಾನಿಗಳ ಸಾಮರ್ಥ್ಯದಿಂದ, ಅಶಿಕ್ಷಿತರಾದ ರಶ್ಯನ್ ಸೈನಿಕರು ಕಂಗೆಡುತ್ತಿದ್ದಾರೆ! ಇಡೀ ಯೂರೋಪಿನಲ್ಲಿ ಫಿನ್ನರು ಬಹಳ ಸಮಯಗಳಿಗಿಂತ ಹಿಂದೆಯೇ ಯುದ್ಧ ಕಲಾಕುಶಲರೆಂದು ಪ್ರಸಿದ್ಧವಾಗಿರುವುದು ಮಾತ್ರವಲ್ಲದೆ, ಅನೇಕ ಸಂಗರ ರಂಗಗಳಲ್ಲಿ ಕಾದಾಡಿ ನೆತ್ತರು ಚೆಲ್ಲಿದ ಕದನಕಲಿಗಳೂ ಆಗಿರುತ್ತಾರೆ.

೧೯೧೮ರಲ್ಲಿ ಫಿನ್ನರು ತಮ್ಮ ಸೇನಾನಿಯಾದ ಫೀಲ್ಡ್ ಮಾರ್ಶಲ್ ಮೇನರಿಮ್ಮನ ಧೀರ ನಿಶ್ಚಯ, ನಿರ್ಭಯ ಸಂಗ್ರಾಮ ಸಾಹಸಗಳನ್ನು ತೋರಿಸಿ, ಬೋಲ್ಶೆವಿಸ್ಟರನ್ನು ಫಿನ್‌ಲೆಂಡಿನಿಂದ ಹೊರಗಟ್ಟಿದರು! ಇಂದು ತಿರಿಗಿ ಅದೇ ದೃಢ ನಿಶ್ಚಯ ಅದೇ ನಿರ್ಭಯ ಸಂಗ್ರಾಮ ಸಾಹಸಗಳನ್ನು ಪ್ರದರ್ಶಿಸುತ್ತಾರೆ! ಓಸ್ಟರ್ ಮೇನ್, ಓಸ್ಟೋ ಮತ್ತು ಓಕ್ಷಿನೆಸ್ಟ್ ಎಂಬ ಈ 'ಓ' ಅಕ್ಷರಾದಿಯ ಹೆಸರುಳ್ಳ ತ್ರಿಮೂರ್ತಿಗಳು, ಫಿನ್‌ಲೆಂಡಿನ ಸೇನಾನಾಯಕರು, ಇಂದಿನ ಯುದ್ಧದಲ್ಲಿ ಪ್ರಚಂಡ ಸಾಹಸಗಳನ್ನು ತೋರಿಸಿ, ಮುಂದಿನ ದಿನಗಳಲ್ಲಿ ತಮ್ಮ ವೀರ ಕೀರ್ತಿಯನ್ನು ಜಗತ್ತಿಗೆ ಸಾರಲಿರುವರು. ಅವರಲ್ಲಿ ಓಸ್ಟರ್ ಮೇನನು ಫಿನ್ ಸೈನಿಕರ ದಳಪತಿಯಾಗಿಯೂ, ಓಸ್ಟನು ಚೀಫ್ ಸ್ಟಾಫ್ ಆಗಿಯೂ, ಓಕ್ಷಿಸ್ಟನು ಕೆರೇಲಿಯನ್ ಇಸ್ತ್ಮಸ್ ಲಾಡೋಗಾ ಕರಾವಳಿಯಲ್ಲಿ ಕಾದಾಡುವ ಸೇನಾನಿಯೂ ಆಗಿ ನೇಮಕ ಹೊಂದಿದ್ದಾರೆ.

## ವಿದ್ಯಾಭ್ಯಾಸವೋ? ರಾಷ್ಟ್ರಸೇವೆಯೊ?

ಕಳೆದ ಮಹಾಯುದ್ಧದ ಸಮಯದಲ್ಲಿ ಈ ತ್ರಿಮೂರ್ತಿಗಳು ವಿದ್ಯಾರ್ಥಿಗಳಾಗಿದ್ದರು. ಫಿನ್‌ಲೆಂಡಿನಲ್ಲಿ ಜನರು ರಶ್ಯನರ ದಬ್ಬಾಳಿಕೆಯಿಂದ ಬೆಂದು ಬೇಗುದಿಗೊಂಡಿದ್ದರು. ಅಲ್ಲಿನ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯದಾಹವು ಎಲ್ಲೆ ಮೀರಿತ್ತು. ೨,೫೦೦ ಮಂದಿ ವಿದ್ಯಾರ್ಥಿಗಳೊಡನೆ ಈ ಮೂವರೂ ಕೈಯ ಪುಸ್ತಕಗಳನ್ನು ಬಿಸುಟು, ಖಡ್ಗಧಾರಿಗಳಾಗಿ ಹೊರಟರು. ಅಲ್ಲಿಂದ ಕೈಸರನ ಸೈನ್ಯದಲ್ಲಿ ಸೇರಿ, ಪೂರ್ವ ರಣರಂಗದಲ್ಲಿ ರಶ್ಯದೊಡನೆ ಕಾದಾಡಿದರು. ಮೂರು ವರ್ಷಗಳ ತನಕ ವಿಶ್ರಾಂತಿಯಿಲ್ಲದೆ ಕಾದಾಡಿದ ಮೇಲೆ ಅವರು ಸೈನ್ಯದಲ್ಲಿ ಬಹಳ ಕೀರ್ತಿಗಳನ್ನು ಪಡೆದರು.

## ಮೇನರಿಮ್ಮನ ಧುರೀಣತೆ

ಕಮ್ಯುನಿಸ್ಟ್ ಕ್ರಾಂತಿಯು ಉಂಟಾದಾಗ ಅವರೆಲ್ಲರೂ ಪ್ರಸಿದ್ಧ ವೀರನಾದ ಮೇನರಿಮ್ಮನ ಕೈಕೆಳಗೆ ಹೋಗಿ ನಿಂತರು! ಮೇನರಿಮ್ಮನು ಹುಟ್ಟು ಫಿನ್ನ ಸೇನಾನಿಯಾಗಿದ್ದರೂ, ರಶ್ಯನರ ಸೈನ್ಯದಲ್ಲಿಯೂ ಅಂತಹ ದಳಪತಿಯು ಇರಲಿಲ್ಲವೆಂಬ ಖ್ಯಾತಿಯನ್ನು ಆತ ಪಡೆದಿದ್ದ. ರಶ್ಯದಲ್ಲಿ ಬೋಲ್ಶೆವಿಸ್ಟರು ಸೇನಾನಿಗಳನ್ನು ಎಡಬಲ ಬದಿಗಳಿಂದ ಕೊಲ್ಲುತ್ತಿದ್ದ ಕಾಲದಲ್ಲಿಯೇ ಮೇನರಿಮ್ಮನು ರಶ್ಯದಲ್ಲಿ ಏಕಾಂಗಿಯಾಗಿ ತನ್ನ ಪೂರ್ಣ ವೇಷದಿಂದಲೇ ನಿರ್ಭಯನಾಗಿ ಸಾಗಿದರೂ, ಆತನ ಮೇಲೆ ಕೈಯೆತ್ತಲು ಯಾವಾತನೂ ಧೈರ್ಯಗೊಳ್ಳಲಿಲ್ಲ. ಹಾಗಿತ್ತು ಆತನ ಪ್ರಭಾವ! ಅಂತಹ ಧೀರನನ್ನು ಈ ತ್ರಿಮೂರ್ತಿಗಳೂ ಇತರ ಹಲವರೂ ಮುಖಂಡನಾಗಿ ಅಂಗೀಕರಿಸಿದರು. ಇವರೆಲ್ಲರ ಸಾಹಸದಿಂದ, ಆ ಮೇಲೆ ಕೇವಲ ಎಂಟೇ ತಿಂಗಳಲ್ಲಿ ಫಿನ್‌ಲೆಂಡು ಸ್ವಾತಂತ್ರ್ಯದ ಬೆಳಕನ್ನು ಕಂಡಿತು!



ಇಂದು ಮೇನರಿಮ್ಮನಿಗೆ ಎಪ್ಪತ್ತು ವರ್ಷಗಳ ಪ್ರಾಯ! ಆದರೂ ತನ್ನ ಉಳಿದ ಶಕ್ತಿಯೆಲ್ಲವನ್ನೂ ಆತನು ರಶ್ಯನರನ್ನು ಗೆಲ್ಲುವಂತೆ ಮಾಡುವ ಯತ್ನಗಳಲ್ಲಿ ಉಪಯೋಗಿಸುತ್ತಾನೆ! ಈ ತ್ರಿಮೂರ್ತಿಗಳ ಪರಾಕ್ರಮಗಳಲ್ಲಿ ಆತನಿಗೆ ಒಳ್ಳೆಯ ವಿ

ಫೀಲ್ಡ್ ಮಾರ್ಶಲ್ ಕೆ ಜಿ ಮೇನರಿಮ್ ಶ್ವಾಸವಿದೆ. ಇವರೆಲ್ಲರೂ ೪೦ ವರ್ಷ ಪ್ರಾಯದ ನರೆತ ವೀರರು! ರಕ್ತದ ಸಾಮರ್ಥ್ಯವುಳ್ಳ ಅಧಟರೂ ಆಗಿರುವರು.

## ಆ ಮೂರು 'ಓ'ಗಳು

ಓಸ್ಟರ್ ಮೇನನಿಗೆ ೪೭ ವರ್ಷ ಪ್ರಾಯ. ಆತನ ದಳದ ಸೈನಿಕರೆಂದರೆ ಇಡೀ ಫಿನ್‌ಲೆಂಡಿನಲ್ಲಿ ಹೆಸರು ಹೊಂದಿದವರು. ಶಿಸ್ತು ಪಾಲನೆ ಮತ್ತು ಸುಸಂಘಟನೆಯಲ್ಲಿ ಆತನು ಬಹಳ ಹೆಸರು ಪಡೆದವನು.

ಓಸ್ಟನಿಗೆ ೪೭ ವರ್ಷ ಪ್ರಾಯ. ಆತನು ಯಾವಾಗಲೂ ಕೀರ್ತಿಗೆ ಬಹಳ ನಾಚುವವನು! ಆದರೆ ಮೇನರಿಮ್ಮನ ಉಪಾಯ ಸಾಹಸಗಳ ಪ್ರತಿಬಿಂಬವೆಂದು ಆತನಿಗೆ ಅಂತರ್‌ರಾಷ್ಟ್ರೀಯ ಖ್ಯಾತಿಯಿದೆ.

ಓಕಿಸ್ಟನಿಗೆ ೪೫ ವರ್ಷ ಪ್ರಾಯ. ಆದರೆ, ಇಂದು ಫಿನ್‌ಲೆಂಡಿನ ಬಹಳ ಪ್ರಾಮುಖ್ಯ ಸ್ಥಳದಲ್ಲಿ ಕಾದಾಡುವ ಹೊಣೆಗಾರಿಕೆ ಹೊತ್ತು ನಿಂತಿರುವವನು. ಫಿನ್ನರ ಸ್ವಾತಂತ್ರ್ಯದ ರಕ್ಷಣೆಗಾಗಿ ಓಕಿಸನು ಕಳೆದ ಆರು ವರ್ಷಗಳಿಂದ ಅಲ್ಲಿ ಮುಂಬರುವ ರಶ್ಯನರೊಡನೆ ಕಾದಾಡುತ್ತಾ ಇರುವನು. ಅವನ ಕೈಕೆಳಗಿನ ಜನರಲ್ಲಿ ಆತನು ಬಹಳ ಜನಪ್ರಿಯನೂ ಗೌರವಾರ್ಹನೂ ಆಗಿದ್ದಾನೆ.

ಇಂತಹ ಸೇನಾನಿಗಳಿಂದ ಶಿಕ್ಷಣ ಪಡೆದ ಸೈನಿಕರೇ ಇಂದು ರಶ್ಯನರನ್ನು ಗುದ್ದಿ ಹದಮಾಡುತ್ತಿದ್ದಾರೆ! ಇಂದ ಅಂತರ್‌ರಾಷ್ಟ್ರೀಯ ಕೀರ್ತಿಯನ್ನು ಪಡೆದಿದ್ದಾರೆ. ಎಂತಹ ಪ್ರಬಲ ಸೈನ್ಯವೆ ಇರಲಿ, ಇವರ ಸಾಹಸದಿಂದ ಯುದ್ಧವು ಹಲವು ಸಮಯಗಳ ವರೆಗೆ ಸಾಗುವುದು ಖಂಡಿತವೆಂದೂ, ರಶ್ಯವು ಚೆನ್ನಾಗಿ ಬುದ್ಧಿ ಕಲಿಯುವುದೆಂದೂ ಇಂದು ಸರ್ವರೂ ಹೇಳುತ್ತಿದ್ದಾರೆ.

THE
Canara Banking Corporation Ltd.,
(INCORPORATED IN BRITISH INDIA)
Estd: 1906
THREE YEAR'S CASH CERTIFICATES
bearing interest at 4% p. a.
in denominations of
RS.50/-,100/-,500/-,1,000/-&5,000/-
are now issued at all our Branches
*For particulars call at or write to*
Any of our nearest Branches

## ಪ್ರಕಟಣೆ

**ಮಂಜೇಶ್ವರ ಶ್ರೀ ಮದನಂತೇಶ್ವರ ದೇವರ ಭಂಡಾರದ ಬಾಬ್ತು:—**

ಕಾಮಗಾರಿಕೆಗಳನ್ನು ಮಾಡಿಕೊಡುವರೆ ಕೆಲವು ಪ್ರವೀಣ ಸನ್ನದುಗಳನ್ನು ಪಡೆದಿರುವ ಕಂಟ್ರಾಕ್ಟರರ ಹೆಸರನ್ನು ರಿಜಿಸ್ಟ್ರು ಮಾಡುವರೆ ನಿರ್ಣಯಿಸಿದ್ದದರಿಂದ ಇದೆ ೩೧-೧-೧೯೪೦ರೊಳಗೆ ಅಪೇಕ್ಷೆ ಪಡುವವರು ಅರ್ಜಿ ಸಹಿತ ರೂಪಾಯಿ ಹದಿನೈದನ್ನು ಭಂಡಾರದಲ್ಲಿ ಠೇವಣಾತಿ ಮಾಡತಕ್ಕದ್ದು. ಸದ್ರಿ ಅರ್ಜಿದಾರರ ಹೆಸರುಗಳನ್ನು ಚುನಾಯಿಸುವ ಅಧಿಕಾರವು ಶ್ರೀ ಭಂಡಾರದ ಎಕ್ಸಿಕ್ಯೂಟಿವ್ ಆಫೀಸರರದ್ದಾಗಿರುತ್ತದೆ.

ಚುನಾಯಿಸಲ್ಪಡದ ಅರ್ಜಿದಾರರು ಠೇವಣಿ ಮಾಡಿದ ಹಣವನ್ನು ಮರಳಿ ಕೊಡಲಾಗುವುದು.

ಶ್ರೀ ಧರ್ಮ ಅಗ್ರಹಾರ ಆಫೀಸು ಮಂಜೇಶ್ವರ ತಾ 4-1 1940 } ಬಿ ಎನ್ ಬಾಳಿಗಾ ಮೆನೆಜರ್

# ಆಶಾಭಂಗ!

[ಲೇಖಕ—ಕಟಪಾಡಿ ಶ್ರೀನಿವಾಸ ಶೆಟ್ಟಿ, ಅಧ್ಯಾಪಕ, ಕಾರ್ಕಳ]

ಸ್ತ್ರೀಯು ಹೇಗೆ ಹೇಗೆ ಹೆಚ್ಚೆಚ್ಚು ವಿದ್ಯಾವತಿ ಎನ್ನಿಸುತ್ತಾಳೋ ಹಾಗೆ ಹಾಗೆ ಅವಳ ಪ್ರೇಮಪಿಪಾಸೆಯು ಬೆಳೆಯುತ್ತ ಬರುತ್ತದೆ. ಹಳ್ಳಿಯ ಒಬ್ಬ ಅಶಿಕ್ಷಿತ ಹುಡುಗಿಯು ಪ್ರೇಮ ವಿಚಾರಗಳಲ್ಲಿಯೂ ಮೂರ್ಖಳಾಗಿ ಇರುವವಳಾದ್ದರಿಂದ ಅವಳ ಜೀವನದಲ್ಲಿ ಎಷ್ಟು ಆಶಾಭಂಗಗಳಾದರೂ ದಾಂಪತ್ಯವು ಸರಾಗವಾಗಿ ನಡೆಯುವ ಸಂಭವವಿದೆ. ಅವಳ ಆಶೆ ಪ್ರತ್ಯಾಶೆಗಳಿಗೆ ತಡೆ ಇದೆ, ಮಿತಿ ಇದೆ. ಆದುದರಿಂದ ಅವುಗಳನ್ನು ಸುಲಭದಲ್ಲಿ ಪೂರೈಸಬಹುದು, ಸುಲಭದಲ್ಲಿ ಅವಳು ಸಂತುಷ್ಟಳಾಗುತ್ತಾಳೆ. ಆದರೆ, ಕಾಲೇಜಿನಲ್ಲಿ ಕಲಿತ ಹುಡುಗಿ ಎಂದಿಟ್ಟುಕೊಳ್ಳಿ. ಅವಳ ಹೃದಯಾಂತರಾಳದಿಂದ ಪ್ರೇಮಪ್ರವಾಹವು ಉಕ್ಕೇರಿ ಬರುತ್ತದೆ. ಆದರೆ ಅವಳ ಪ್ರೇಮಪಿಪಾಸೆಯು ಆರುವುದರ ಬದಲಿಗೆ ದಿನದಿನಕ್ಕೂ ಅಧಿಕವಾಗುತ್ತದೆ. ಸಮರ್ಥ ಪ್ರೇಮಿಯೊಬ್ಬನು ಅವಳಿಗೆ ಕೈಕೊಡದೆ ಇರುವುದಾದರೆ, ದಾಂಪತ್ಯ ಜೀವನದಲ್ಲಿ ಭಯಂಕರ ಅನರ್ಥಗಳು ಆಗಿ ಭಯಂಕರ ಪರಿಣಾಮವು ಕಾಣಿಸಿಕೊಳ್ಳುವುದು.

ರಾಮರಾಯನು ಒಂದು ಪ್ರಸಿದ್ಧ ಸಂಶೋಧನಾಲಯದ ಒಬ್ಬ ಪ್ರಸಿದ್ಧ ಅಧಿಕಾರಿ ಪುರುಷನಾಗಿದ್ದನು. ಜಗತ್ತಿನ ಸ್ಥಿತಿಗತಿಗಳ ಸೂಕ್ಷ್ಮ ಪರಿಚಯ ಮಾಡಿಕೊಳ್ಳಲಿಕ್ಕೆ ಅವನು ದೊಡ್ಡ ದೊಡ್ಡ ದೃಷ್ಟಿಚಕ್ರಗಳನ್ನು ಕಣ್ಣಿಗೆ ಇಟ್ಟುಕೊಂಡಿದ್ದ. ಮಹಾ ಮಹಾ ಶೋಧನೆಗಳನ್ನು ಮಾಡಿ ದಿಗಂತವ್ಯಾಪ್ತ ಕೀರ್ತಿಯನ್ನು ಸಂಪಾದಿಸಿದ್ದ. ಆದರೆ ತನ್ನ ಸಹಧರ್ಮಿಣಿ ಸೀತಾದೇವಿಯ ಹೃದಯತಂತುಗಳಿಂದ ಹೊರಟ ರಾಗಾಲಾಪನೆಯನ್ನು ಕೇಳುವುದಾಗಲೀ, ಅವಳಲ್ಲಾದ ವಿಚಿತ್ರ ಪರಿವರ್ತನೆಯನ್ನು ನೋಡುವುದಾಗಲೀ ಅವನಿಂದ ಅಸಾಧ್ಯವಾಯಿತು. ಯಾಕೆಂದರೆ ದಾಂಪತ್ಯ ವಿಚಾರಗಳಲ್ಲಿ ಅವನ ಯಾವ ಪರಿಶೋಧನೆಯೂ ನಡೆದಿರಲಿಲ್ಲ. 35 40 ವರ್ಷದವನಾಗಿದ್ದರೂ ಆ ಕ್ಷೇತ್ರಕ್ಕೆ ಅವನು ಈಗಲೂ ಹೊಸಬನಾಗಿದ್ದ. ಪರಿಶೋಧನೆಯು ಇತರ ಕ್ಷೇತ್ರಗಳಲ್ಲಿಯಂತೆ ದಾಂಪತ್ಯದಲ್ಲಿಯೂ ನಡೆಯದಿದ್ದರೆ ಪರಿಣಾಮವು ದಂಪತಿಗಳಿಬ್ಬರಿಗೂ ಬಹಳ ಕೆಟ್ಟದಾಗುತ್ತದೆ ಎಂಬ ಅನುಭವವನ್ನು ಪಡೆಯಲಿಕ್ಕೆ ಅವನು ಬಹಳ ಬೆಲೆಯನ್ನು ಕೊಡಬೇಕಾಯಿತು.

ಅನ್ನ ಬಟ್ಟೆಗಳ ಪುಷ್ಟಿಗೆ ಯಾವ ಕೊರತೆಯೂ ಬಾರದಂತೆ ನೋಡಿಕೊಳ್ಳುವುದರಿಂದ ದಾಂಪತ್ಯ ಜೀವನವು ಸುಖವಾಗಿ, ಸರಾಗವಾಗಿ ನಡೆಯುವುದಿಲ್ಲ. ಆದರೆ ಸ್ವಾದಿಷ್ಟ ಭೋಜನ ಮತ್ತು ಮಿರಮಿರನೆ ಹೊಳೆಯುವ ಶೋಕಿನ ಬಟ್ಟೆಗಳನ್ನು ಹೆಂಡತಿಗೆ ತಂದುಕೊಟ್ಟು ರಾಮರಾಯನು ತನ್ನನ್ನು ಕೃತಕೃತ್ಯನೆಂದು ತಿಳಕೊಂಡಿದ್ದನು. ದಿನವಾಗದ ಹೆಚ್ಚಿನ ಸಮಯವು ಶೋಧನಾಗಾರದಲ್ಲಿಯೇ ಕಳೆಯುತ್ತಿದ್ದಿತು. ಒಮ್ಮೊಮ್ಮೆ ಮನೆಗೆ ಬಾರದೆ ಒಂದೆರಡು ದಿನಗಳು ಅಥವಾ ಒಂದೆರಡು ವಾರಗಳು ಕೂಡ ಕಳೆದು ಹೋಗುತ್ತಿದ್ದುವು. ಇತ್ತ ಸೀತಾದೇವಿಯು ಒಬ್ಬೊಂಟಿಗಳಂತೆ ದಿನಗಳನ್ನು ಕಳೆಯುತ್ತಿದ್ದಳು. ಕಾಲೇಜು ಶಿಕ್ಷಣವನ್ನು ಪಡೆದು ಪ್ರೌಢಳಾದ ಅವಳಿಗೆ ಈ ತರಹದ ದಾಂಪತ್ಯ ಜೀವನವು ಶುಷ್ಕವಾಗಿ, ನೀರಸವಾಗಿ ಕಂಡು ಬರುತ್ತಿದ್ದುದರಲ್ಲಿ ಆಶ್ಚರ್ಯವಿರಲಿಲ್ಲ. ಮನೆಯಲ್ಲಿ ಅವಳಿಗೆ ಉಣ್ಣಲಿಕ್ಕೆ, ತಿನ್ನಲಿಕ್ಕೆ ಕಡಿಮೆಯಿರಲಿಲ್ಲ. ಆದರೆ ಪತಿಯೊಡನೆ ಸಹವಾಸ ಸುಖವು ಮಾತ್ರ ಬಹಳ ಕಡಿಮೆಯಾಗಿದ್ದಿತು. ರಾಮರಾಯನಿಗೆ ಸೀತಾದೇವಿಯ ಮೇಲೆ ಪ್ರೇಮವಿದ್ದಿಲ್ಲವೆಂದಲ್ಲ. ಅವನಿಗೆ ಅವಳ ಮೇಲೆ ಅತಿಶಯ ಪ್ರೀತಿ ಇದ್ದಿತು. ಅವಳನ್ನು ಸುಖದಿಂದಿರಿಸಲಿಕ್ಕೆ ಅವನು ಬಹಳ ಸಲಕರಣೆಗಳನ್ನು ಒದಗಿಸಿಕೊಂಡಿದ್ದನು. ಆದರೆ ಸೃಷ್ಟಿ ಕ್ರಮದ ಗೂಢ ರಹಸ್ಯಗಳನ್ನು ತಿಳಿದು ದಿಗಂತ ವ್ಯಾಪ್ತವಾದ ಕೀರ್ತಿಯನ್ನು ಪಡೆಯಬೇಕೆಂಬ ಲಾಲಸೆಯು ಅವನ ಪ್ರೇಮವನ್ನು ಮರೆಸಿದ್ದಿತು. ಸೀತಾದೇವಿಗೆ ಪತಿಯು ಅಂಥ ಕೀರ್ತಿಯನ್ನು ಪಡೆಯಲಿ, ಪಡೆಯದಿರಲಿ, ಅವನ ಪ್ರೇಮಪೂರ್ಣ ವ್ಯವಹಾರದ ಅಗತ್ಯವಿತ್ತು. ಅದರ ಅಭಾವದಿಂದ ಅವಳ ಹೃದಯವು ಪ್ರೇಮಪೀಡೆಯಿಂದ, ಆಶಾಭಂಗದ ನೋವಿನಿಂದ—ನೊಂದು ಬೆಂದು ಹೋಗುತ್ತಿತ್ತು. ಚಂಚಲವಾದ ಅವಳ ಮನಸ್ಸು ಕಲ್ಲುಮುಳ್ಳಿನ ಹಾದಿಗಳನ್ನು ತುಳಿಯುತ್ತ ಸಿಕ್ಕಾಬಟ್ಟೆ ಓಡುತ್ತಿತ್ತು.

ಇಲ್ಲಿಂದಲೇ ಮನುಷ್ಯನ ಪತನಕ್ಕಾರಂಭವಾಗುತ್ತದೆ. ಪ್ರೇಮ ಪಿಪಾಸೆಯನ್ನು ಆರಿಸುವುದಕ್ಕೋಸ್ಕರ ಸೀತಾದೇವಿ ನಾಚು, ನಟನ, ಮದ್ಯಪಾನಾದಿಗಳ ಶರಣಾಗತಳಾದಳು. ಅವುಗಳಿಂದ ಅವಳಿಗೆ ಜೀವನದಲ್ಲಿ ಸುಖದ ಅನುಭವವಾಯಿತಾದರೂ, ಅದು ನಿಜಸುಖವಾಗಿರಲಿಲ್ಲ. ಅದು ಕೇವಲ ಸುಖದ ಆಭಾಸಮಾತ್ರವಾಗಿದ್ದಿತು. ಉಪ್ಪುನೀರು ಕುಡಿದವನ ತೃಷೆಯು ಇನ್ನಷ್ಟು ಹೆಚ್ಚುವ ಹಾಗೆ ನಾಚು, ನಟನೆ, ಮದ್ಯಪಾನಾದಿಗಳಿಂದ ಅವಳ ಪ್ರೇಮಪಿಪಾಸೆಯು ಹೆಚ್ಚುತ್ತಾ ಬಂದಿತು. ಮತ್ತೆ ಸಮಾಜದೊಳಗಿನ ಧೂರ್ತರು ಜನರನ್ನು ರಕ್ಷಿಸುವ ಮಾರ್ಗಕ್ಕೆ ಮಾತ್ರ ಪ್ರೇರೇಪಿಸುತ್ತಿರುವುದಿಲ್ಲ. ಅವರು ಜೀವನದಲ್ಲಿ ಆಶಾಹತರಾದ ಸೀತಾದೇವಿಯಂಥವರನ್ನು ತಪ್ಪು ಹಾದಿ ಹಿಡಿಯಲಿಕ್ಕೂ ಪ್ರೇರೇಪಿಸುತ್ತಾರೆ. ಈ ಧೂರ್ತರ ಪ್ರಭಾವದಲ್ಲಿ ಬಿದ್ದು ಸೀತಾದೇವಿ ತನ್ನ ಜಾತಿ, ಕುಲ, ಗೋತ್ರ, ಮರ್ಯಾದೆಯನ್ನು ಸಂಪೂರ್ಣ ಮರೆತು, ಅವರು ತೋರಿಸಿದ ಹಾದಿಯನ್ನು ಮೆಟ್ಟಲಾರಂಭಿಸಿದಳು. ಚಲನಚಿತ್ರಗಳಲ್ಲಿ ಅಭಿನಯಿಸುವುದು ಅವಳ ಜೀವನದ ನವೀನ ವ್ಯಾಪಾರವಾಯಿತು. ತನ್ನ ಮನಸ್ಸಿನ ಆಶೆ ಪ್ರತ್ಯಾಶೆಗಳನ್ನು ಪೂರೈಸಿಕೊಳ್ಳಲಿಕ್ಕೆ ಅವಳು ಚಲನಚಿತ್ರಗಳಲ್ಲಿ ತನ್ನ ಅಭಿನಯವನ್ನು ಸಾಧನವನ್ನಾಗಿ ಮಾಡಿಕೊಂಡಳು.

ಕಲ್ಕತ್ತೆಯ ಒಂದು ಪ್ರಸಿದ್ಧ ಸಿನೇಮಾ ಕಂಪೆನಿಯಲ್ಲಿ ಸೀತಾದೇವಿ ಮುಖ್ಯ ನಾಯಿಕೆಯ ಪಾತ್ರವನ್ನು ತೆಗೆದುಕೊಂಡು ಚೆನ್ನಾಗಿಯೇ ಅಭಿನಯಿಸಿದಳು. ಅದೊಂದು ಪ್ರೇಮಕತೆಯಾಗಿದ್ದಿತು. ಆ ಪ್ರೇಮ ಕತೆಯಲ್ಲಿ ಸೀತಾದೇವಿಯ ಅಭಿನಯ, ಭಾವಭಂಗಿ, ಸುಮಧುರ ಸಂಗೀತ ಆಲಾಪನ, ಲೀಲೆಕೇಳಿಗಳನ್ನು ಹೊಗಳಿ ಬರೆದ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಲಾರಂಭವಾದುವು. ಪತ್ರಿಕೆಗಳಿಗೆ ಸಮಾಜದ ಉನ್ನತಿಯಂತೆ ಅವನತಿಯೂ ಸಾಧ್ಯವಿದೆ. ಸೀತಾದೇವಿಗೆ ಅವಳ ದೇಹ ಸೌಷ್ಠವ, ಭಾವಭಂಗಿ ಇವುಗಳನ್ನು ಸಚಿತ್ರವಾಗಿ ವರ್ಣಿಸಿ ಬರೆಯುವ ಪತ್ರಿಕೆಗಳೇ ಪತನದ ಕಾರಣಗಳಾದುವು. ಅವಳು ತನ್ನ ಪರವಾದ ಆ ಲೇಖನಗಳನ್ನು ಓದಿ ತನ್ನನ್ನು ತಾನು ಮರೆಯಲಾರಂಭಿಸಿದಳು. ತಾನು ಯಾವ ರೀತಿಯಿಂದ ಪತನದ ಗವಿಯೊಳಗೆ ಬೀಳುತ್ತಿದ್ದೇನೆಂಬುದರ ಬೋಧವು ಅವಳಿಗಾಗಲಿಲ್ಲ. ಜೀವನದ ರೀತಿ ನೀತಿಗಳೇ ಹಾಗೆ!

ರಾಮರಾಯನು ಮನೆಗೆ ಬಾರದೆ ಕೆಲವು ದಿನಗಳು ಕಳೆದುಹೋಗಿದ್ದುವು. ಸ್ನೇಹಿತರ ಒತ್ತಾಯದಿಂದ ಅವನು ಒಂದು ದಿನ ಸಾಯಂಕಾಲ ಒಂದು ಚಲನಚಿತ್ರವನ್ನು ನೋಡಲಿಕ್ಕೆ ಹೋಗಿದ್ದ. ಅವನಿಗೆ ಚಲಚಿತ್ರವು ಬೇಕಾಗಿರಲಿಲ್ಲ. ಆದರೆ ಪ್ರಾರಬ್ಧವು ಅವನನ್ನು ಅಲ್ಲಿಗೆ ಕರಕೊಂಡು ಹೋಯಿತು. 'ಆಶಾಭಂಗ'ವು ಅಂದು ಪ್ರದರ್ಶನಕ್ಕಿದ್ದ ಚಲಚಿತ್ರವಾಗಿದ್ದಿತು. ಅದರಲ್ಲಿ ಸೀತಾದೇವಿ ಪ್ರಧಾನ ನಟಿಯಾಗಿದ್ದಳು. ದಾಂಪತ್ಯ ಜೀವನದಲ್ಲಿ ತೃಪ್ತಿಯನ್ನು ಕಾಣದ ಒಬ್ಬ ಸುಶಿಕ್ಷಿತ ತರುಣಿಯ ಜೀವನದ ಆಗುಹೋಗುಗಳನ್ನು ಚಿತ್ರಿಸುವುದು ಕಥಾವಸ್ತುವಾಗಿದ್ದಿತು. ಪ್ರಾರಂಭ ಜೀವನದಲ್ಲಿ ಆ ಸುಶಿಕ್ಷಿತ ತರುಣಿಯ ಪ್ರೇಮ ವ್ಯವಹಾರವನ್ನು ಕಂಡು ಮುಗ್ಧವಾದ ದರ್ಶಕ ಮಂಡಲಿಯು, ಮುಂದೆ ಅವಳು ಉನ್ಮತ್ತಳಂತೆ ಅರ್ಧ ನಗ್ನಳಾಗಿ ಕುಣಿಯುವುದನ್ನು ಕಂಡು ಪರವಶವಾಗಿದ್ದಿತು. ತೆರೆಗೆ ಸಮೀಪದಲ್ಲಿ ಕೂತ ಆ ನಾಲ್ಕನೆ ತರಗತಿಯ ಪೋಲೀ ಹುಡುಗರು ನಾಯಿಕೆಯ ಅರ್ಧ ನಗ್ನ ನೃತ್ಯವನ್ನು ಕಂಡು ಕೇ, ಕೇ, ಹೂ, ಹೂ, ಹಾಕಿ ಕೈ ಚಪ್ಪಾಳೆ ಹೊಡೆಯುತ್ತಿರುವುದಕ್ಕೆ ಮಿತಿಯೇ ಇರಲಿಲ್ಲ. ಹಿಂದೆ ಸೋಫಾದ ಮೇಲೆ ಕೂತು ರಾಮರಾಯನು ಇದೆಲ್ಲವನ್ನು ತದೇಕಚಿತ್ತದಿಂದ ನೋಡುತ್ತಿದ್ದನು. ಕೇಳುತ್ತಿದ್ದನು. ನೋಡಿ ಕೇಳಿ ಅವನು ಒಮ್ಮೆಗೆ ಬೆಚ್ಚಿಬಿದ್ದನು. ಅವನ ರಕ್ತವು ಬಿಸಿಯೇರಿತು. ಮುಖವು ಕ್ರೋಧದಿಂದ ಕೆಂಪೇರಿತು. ಅದು ಅವನ—ಸೀತಾದೇವಿಯ ಜೀವನ ಚಿತ್ರವಾಗಿದ್ದಿತು. ಸೀತಾದೇವಿಯು ದಾಂಪತ್ಯ ಜೀವನದಲ್ಲಿ ಉನ್ಮತ್ತಳಂತೆ ಅರ್ಧ ನಗ್ನಳಾಗಿ ಕುಣಿಯುತ್ತಿದ್ದಳು. ಪ್ರೇಕ್ಷಕವೃಂದವು 'ನೋಡಬಾರದೆ, ಅವಳ ಅಭಿನಯ!' ಸೃಷ್ಟಿಶಿಲ್ಪಿಯು ತನ್ನ ಕೈಚಮತ್ಕಾರವನ್ನೆಲ್ಲ ಅಲ್ಲಿಯೇ ತೋರಿಸಿರುವನು ಎಂದು ಉದ್ಗಾರವನ್ನೆತ್ತಿದ್ದಿತು. ಅದನ್ನು ಕೇಳಿ ರಾಮರಾಯನ ರಕ್ತವು ಸಂತಪ್ತವಾಗಿ ಕುದಿಯತೊಡಗಿತು. ಪಾಪಾಚರಣೆಗೆ ಪ್ರೇರಿಸುವ ಒಬ್ಬ ಕುಲವಂತೆಯ ಈ ವರ್ತನೆಯನ್ನು ನೋಡಿ ಅವನು ಕರ್ತವ್ಯ ಮೂಢನಾದನು. ಅವನು ಆ ಕ್ಷಣವೇ ಅಲ್ಲಿಂದೆದ್ದು ಮನೆಗೆ ಹೊರಟು ಹೋದನು. ಸೀತಾದೇವಿಯಲ್ಲಿ ಅಷ್ಟು ಪರಿವರ್ತನೆಗಳಾಗಿರುವವೆಂದು ಅವನು ಕನಸಿನಲ್ಲಿ ಕೂಡ ಎಣಿಸಿರಲಿಲ್ಲ.

ಸೀತಾದೇವಿಯು ರಾಮರಾಯನಿಗೆ ಅಲ್ಲಿ ಎದುರಾಗಿದ್ದಳಾದರೆ, ಅವನು ಏನು ಮಾಡುತ್ತಿದ್ದನೆಂದು ಹೇಳುವುದು ಕಷ್ಟ. ಆದರೆ ಆಗ್ಗೆ ಅವಳು ಮನೆಯಲ್ಲಿದ್ದಿರಲಿಲ್ಲ. ನೌಕರರನ್ನು ಕೇಳಿದಾಗ ಯಾವಾಗಿನಂತೆ ಆವಾಗಲೂ ಅವಳು ಎಲ್ಲಿಯೋ ಪೇಟೆಗೆ ಹೋಗಿದ್ದಾಳೆಂದು ತಿಳಿಯಿತು. ರಾಮರಾಯನು ಮತ್ತಷ್ಟು ಉದ್ವಿಗ್ನನಾಗಿದ್ದನು. ನೆಟ್ಟಗೆ ತನ್ನ ಶಯನಾಗಾರವನ್ನು ಪ್ರವೇಶಿಸಿದ. ಸೀತಾದೇವಿ ರಾಮರಾಯರ ಹೆಗಲ ಮೇಲೆ ಕೈಕೈ ಹಾಕಿ ನಿಂತಿದ್ದ ಒಂದು ಭಾವಚಿತ್ರವು ಎದುರಿಗೆ ಗೋಡೆಯ ಮೇಲೆ ತೂಗುತ್ತಿದ್ದಿತು. ಅವನು ಆ ಕ್ರೋಧದಿಂದ ಆ ಚಿತ್ರವನ್ನು ನೆಲಕ್ಕೆ ಅಪ್ಪಳಿಸಿದ. ಪೆಟ್ಟಿಗೆ ಅದರ ಕನ್ನಡಿ, ಅವನ ಮನಸ್ಸು ಒಡೆದಂತೆ ಒಡೆದು ಚೂರುಚೂರಾಯಿತು. ಖಾಲಿ ಬಿದ್ದಿದ್ದ ಕುರ್ಚಿಯ ಮೇಲೆ ಕೂತು ಅವನು ಆ ಭಾವಚಿತ್ರವನ್ನೇ ದಿಟ್ಟಿಸಿ ನೋಡತೊಡಗಿದ. ತನ್ನಂಥ ಕರ್ಮಯೋಗಿಗಳು ಭೋಗಪ್ರಿಯ ಹೆಣ್ಣುಗಳನ್ನು ಮದುವೆಯಾಗುವುದೇ ತಪ್ಪೆಂದು ಆಗ್ಗೆ ಅವನ ಮನಸ್ಸಿಗೆ ಭಾಸವಾಯಿತು. ಆದರೆ ಬಾಣವು ಕೈಬಿಟ್ಟು ಹೋದ ಮೇಲೆ ಪಶ್ಚಾತ್ತಾಪಪಟ್ಟು ಪ್ರಯೋಜನವಿರಲಿಲ್ಲ.

ನಡುರಾತ್ರಿಯ ಹೊತ್ತಿಗೆ ಸೀತಾದೇವಿ ಮನೆಗೆ ಬಂದಳು. ಆಗ ಅವನಿಗೆ ಅವಳ ಮೇಲೆ ಸಿಟ್ಟುಬರಲಿಲ್ಲ. ಆದರೂ ಅವಳ ಪತನಕ್ಕೆ ತಾನೇ ಕಾರಣನಾಗಿದ್ದೇನೆಂಬುದು ಅವನಿಗೆ ಸ್ಪಷ್ಟವಾಗಿತ್ತು. ಆದರೂ—"ಸೀತಾ! ಮರ್ಯಾದಸ್ಥ ಕುಲಗಳ ಕೀರ್ತಿಗೆ ಕಲಂಕ ತಟ್ಟುವಂತೆ ನೀನು ಇದೇನು ಮಾಡಿದೆ?" ಎಂದು ಕೇಳಿದ. ಅವಳು ನತಮಸ್ತಕಳಾಗಿ ಹೇಳಿದಳು—'ನಾನೇನು ಮಾಡಲಿ, ಎಲ್ಲವನ್ನೂ ನಿರೀಕ್ಷಿಸಿ, ಪರೀಕ್ಷಿಸಿ ಸತ್ಯವನ್ನು ಶೋಧಿಸುವ ನೀವು ತಾರುಣ್ಯಲಾವಣ್ಯಗಳನ್ನು ಪರೀಕ್ಷಿಸದೆ ಹೋದಿರಿ!"

ರಾಮರಾಯ ಇದನ್ನು ಕೇಳಿ ಮೌನನಾದನು. ಮುಂದಿನ ಅನರ್ಥ ಪರಂಪರೆಗಳಿಂದ ಅವರಿಬ್ಬರನ್ನು ಕಾಪಾಡಲಿಕ್ಕೆ ದಾಂಪತ್ಯ ವಿಚ್ಛೇದವೊಂದೇ ಉಪಾಯವಾಗಿ ಇದ್ದಿತು. ಅದನ್ನಷ್ಟನ್ನು ಮಾಡಿ ರಾಮರಾಯ ಎಲ್ಲಿಗೋ ಹೊರಟುಹೋದನು. ಆ ಮೇಲೆ ಯಾರೂ ಅವನ ಹೆಸರನ್ನು ಕೇಳಲಿಲ್ಲ. ರಾಮರಾಯ-ಸೀತಾದೇವಿಯರ ಈ ವಿಷಾದಾಂತ ಕತೆಯು ಮಾತ್ರ ಭಾವೀ ದಂಪತಿಗಳಿಗೆ ಬೋಧಪ್ರದವಾಗಿ ಈಗಲೂ ಉಳಿದು ಬಂದಿದೆ. (ಆಧಾರದಿಂದ)

THE

**BANK OF MANGALORE LTD.**

**MANGALORE**

ESTD 1931

*Branches*-

**Mudabidri & Padubidri**

Fixed Deposits will be received at following rates of interest.

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly.

***Savings Bank deposit 3½% on daily balances.***

**All kinds of bankingbusiness transacted**

## ಕನ್ನಡ ಸಣ್ಣ ಕತೆಗಳ ಬರಹಗಾರರ ಎರಡನೆಯ ಸಮ್ಮೇಳನ

ಅಧ್ಯಕ್ಷರು: ಶ್ರೀ. ಎಂ ಎಸ್. ಕಾಮತರು

ಈಗ ನಾಲ್ಕು ವರ್ಷಗಳ ಹಿಂದೆ ಸಣ್ಣ ಕತೆಗಳ ಬರಹಗಾರರ ಮೊದಲನೆಯ ಸಮ್ಮೇಳನವು ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆದದ್ದು ಸರಿಯಷ್ಟೆ. ಅನೇಕ ಮಂದಿ ಸಾಹಿತ್ಯಾಭಿಮಾನಿಗಳು ಎರಡನೆಯ ಸಮ್ಮೇಳನವನ್ನು ನಡೆಸಬೇಕೆಂದು ಸೂಚಿಸಿದ ಮೇರೆಗೆ, ಅದನ್ನು ಕನ್ನಡ ಸಾಹಿತಿಗಳ ಸಂಘದ ಆಶ್ರಯದಲ್ಲಿ, ಇದೇ ಜನವರಿ ೨೦, ೨೧ನೆಯ ತಾರೀಖುಗಳಲ್ಲಿ ಬೆಂಗಳೂರಿನ ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ನಡೆಸಬೇಕೆಂದು ನಿಶ್ಚಯವಾಗಿದೆ.

ಈ ಸಮ್ಮೇಳನವನ್ನು ನಡೆಸಲು ಸ್ವಾಗತಸಮಿತಿಯೊಂದು ಏರ್ಪಾಡಾಗಿದೆ, ಸಮಿತಿಗಳ ಸಂಘದ ಅಧ್ಯಕ್ಷರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಹಿರಿಯ ಸಾಹಿತಿಗಳಾದ ಮಂಗಳೂರಿನ ಶ್ರೀ ಎಂ ಎಸ್ ಕಾಮತರವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ದಯವಿಟ್ಟು ಒಪ್ಪಿರುತ್ತಾರೆ.

ಸಮ್ಮೇಳನದ ಸಂದರ್ಭದಲ್ಲಿ ಕನ್ನಡನಾಡಿನ ಸುಪ್ರಸಿದ್ಧ ಕತೆಗಾರರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರ ಭಾವಚಿತ್ರದ ಅನಾವರಣೋತ್ಸವವೂ ನಡೆಯುವುದಾಗಿದೆ.

ಸಮ್ಮೇಳನದಲ್ಲಿ ಕನ್ನಡ ಸಣ್ಣಕತೆಗಳ ಮತ್ತು ಕಥಾ ಸಾಹಿತ್ಯವನ್ನು ಕುರಿತು ಪ್ರಬಂಧಗಳ ವಾಚನ ನಡೆಯುವಂತೆ ಏರ್ಪಾಡಾಗಿದೆ.

ಅಲ್ಲದೆ, ಉಪನ್ಯಾಸ, ಸಂಗೀತ, ನಾಟಕ ಪ್ರದರ್ಶನ, ಕತೆಪುಸ್ತಕಗಳ ಪ್ರದರ್ಶನ ಇವೇ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲು ಉದ್ದೇಶಿಸಿದೆ.

ಕತೆ ಪ್ರಬಂಧಗಳನ್ನು ಸಮ್ಮೇಳನದಲ್ಲಿ ಓದಬಯಸುವವರು ಅವನ್ನು ಜನವರಿ ೧೫ನೇ ತಾರೀಖಿನೊಳಗಾಗಿ ಕೆಳಗಿನ ವಿಳಾಸಕ್ಕೆ ಕಳಿಸಬೇಕಾಗಿ ವಿಜ್ಞಾಪನೆ (ಒಪ್ಪಿತವಾದ ಕತೆ ಪ್ರಬಂಧಗಳನ್ನು ಮಾತ್ರ ಓದಲು ಅವಕಾಶವುಂಟು. ಕತೆ ಓದಲು ೫ ನಿಮಿಷ ಮಾತ್ರ ಕಾಲಾವಕಾಶ ಕೊಡಲಾಗುವುದು.)

ಕನ್ನಡ ನಾಡಿನ ಎಲ್ಲ ಸಣ್ಣ ಕತೆಗಳ ಬರಹಗಾರರ ಪಟ್ಟಿಯೊಂದನ್ನು ಈ ಸಂದರ್ಭದಲ್ಲಿ ಸಿದ್ಧಮಾಡಬೇಕೆಂಬ ಉದ್ದೇಶವಿರುವುದರಿಂದ ಎಲ್ಲ ಸಣ್ಣ ಕತೆಗಳ ಬರಹಗಾರರು ದಯವಿಟ್ಟು ತಮ್ಮ ಹೆಸರು, ವಿಳಾಸ, ಕಥೆಗಳ ಪುಸ್ತಕ ಪ್ರಕಟವಾಗಿದ್ದರೆ ಅದರ ಹೆಸರು, ಕತೆಗಾರರು ಗುಪ್ತನಾಮವನ್ನು ಇಟ್ಟುಕೊಂಡಿದ್ದರೆ ಅದು, ಇಷ್ಟು ವಿಷಯಗಳನ್ನು ಬರೆದು ತಿಳಿಸುವ ಉಪಕಾರ ಮಾಡಬೇಕೆಂದು ಬಿನ್ನಹ.

ಕನ್ನಡ ನಾಡಿನ ಎಲ್ಲ ಕತೆಗಾರರೂ, ಸಾಹಿತ್ಯಾಭಿಮಾನಿಗಳೂ ದಯಮಾಡಿ ಬಂದು ಸಮ್ಮೇಳನದಲ್ಲಿ ಭಾಗವಹಿಸಿ ಉತ್ಸವವನ್ನು ಯಶಸ್ವಿಯಾಗಿ ನೆರವೇರಿಸಿಕೊಡಬೇಕೆಂದು ಪ್ರಾರ್ಥನೆ.

ಈ ಉತ್ಸವಕ್ಕೆ ಸುಮಾರು ಮುನ್ನೂರು ರೂಪಾಯಿಗಳಿಗೆ ಮೇಲ್ಪಟ್ಟು ಹಣ ವೆಚ್ಚವಾಗುವುದರಿಂದ ಸಾಹಿತ್ಯಾಭಿಮಾನಿಗಳೆಲ್ಲರೂ ಉದಾರವಾಗಿ ದ್ರವ್ಯ ಸಹಾಯಮಾಡಬೇಕೆಂದು ಸಮ್ಮೇಳನದ ವ್ಯವಸ್ಥಾಪಕರಾದ ಕೆ. ಗೋಪಾಲಕೃಷ್ಣರಾಯ, ವ್ಯವಸ್ಥಾಪಕ, ಕತೆಗಾರರ ಸಮ್ಮೇಳನ, ಶ್ರೀ ಕೃಷ್ಣರಾಜೇಂದ್ರ ಸಾಹಿತ್ಯ ಪರಿಷನ್ಮಂದಿರ, ಚಾಮರಾಜಪೇಟೆ, ಬೆಂಗಳೂರು ಇವರು ತಿಳಿಸುತ್ತಾರೆ.

ಉತ್ತಮ ಆರೋಗ್ಯವೇ ದಾಂಪತ್ಯ ಸುಖದ ಅಸ್ತಿವಾರ!




ದಾಂಪತ್ಯ ಸುಖದ ತಳಹದಿಯೇ ಗಂಡ ಹೆಂಡಿರು ಉತ್ತಮ ಆರೋಗ್ಯದಿಂದಿರುವುದು. ಆರೋಗ್ಯವಾದ ಗಂಡನಿಗೆ ಆರೋಗ್ಯಳಾದ ಹೆಂಡತಿಯೇ ಯೋಗ್ಯ ಒಡನಾಡಿ. ಅಂಥಾ ಗಂಡ ಹೆಂಡಿರು ದಷ್ಟಪುಷ್ಟ ಆರೋಗ್ಯಕರವಾದ ಮಕ್ಕಳನ್ನು ಹೊಂದುವರು.

ಒಳ್ಳೆ ಆರೋಗ್ಯದ ಪ್ರಕೃತಿಯ ಸೂತ್ರಗಳು ಬಹಳ ಕಡಿಮೆ ಮತ್ತು ಸುಲಭವಾದವು. ಬಹಳ ಮುಖ್ಯವಾದ ಸೂತ್ರವು ದೇಹದ ಒಳಭಾಗವನ್ನು ಸ್ವಚ್ಛವಾಗಿರಿಸುವುದು. ಪ್ರತೀ ಸಿತ್ಯವೂ ಒಂದು ಗ್ಲಾಸು ಉಕ್ಕಿಬರುವ ಗುಣವುಳ್ಳ ಎಂಡ್ರೂಸ್ ಲವಣವನ್ನು ಸೇವಿಸಿದರೆ ಅದು ದೇಹದ ಒಳಭಾಗವನ್ನೆಲ್ಲ ಸಂಪೂರ್ಣವಾಗಿ ನಿರ್ಮಲಗೊಳಿಸುವುದು. ಇದು ನಾಲಗೆ ಮತ್ತು ಬಾಯಿಯನ್ನು ಸ್ವಚ್ಛವಾಗಿರಿಸಿ ಉದರ ವೇದನೆ ಪ್ಲೀಹಬಾಧೆಯನ್ನು ನಿವಾರಿಸಿ ಎಲ್ಲದಕ್ಕಿಂತಲೂ ಮುಖ್ಯವಾಗಿ ಆರೋಗ್ಯಕ್ಕೆ ಹಾನಿಕರವಾದ ದೇಹದ ಒಳಭಾಗದಲ್ಲಿರುವ ಮಲಿನ ಪದಾರ್ಥಗಳನ್ನು ಹೊರಗೆಡಹುವುದು.

ನಿರ್ಮಲವಾದ ಹೊಟ್ಟೆಯೇ ಆರೋಗ್ಯದ ಪ್ರಥಮ ಸೋಪಾನ ★ ಎಂಡ್ರೂಸ್ ಲವಣವು ದೇಹದ ಒಳಭಾಗವನ್ನು ನಿರ್ಮಲವಾಗಿರಿಸುವುದು ★ ರಕ್ತವನ್ನು ಶಾಂತವಾಗಿರಿಸಿ ಶುದ್ಧವಾಗಿರಿಸುವುದು ★ ಉದರ ಪ್ಲೀಹ ಮಲಬದ್ಧತೆ ಮೊದಲಾದ ಬಾಧೆಗಳನ್ನು ನಿವಾರಿಸುವುದು ★ ಇದರ ಅಭ್ಯಾಸವಾಗುವಂತಿಲ್ಲ. ಮಕ್ಕಳಿಂದ ಹಿಡಿದು ಇಡೀ ಕುಟುಂಬಕ್ಕೆ ತಕ್ಕುದಾಗಿದೆ.




ಎಂಡ್ರೂಸ್ ಲಿವರ್ ಸೋಲ್ಟ್

ANDREWS Liver Salt

ದೇಹದ ಒಳಭಾಗವನ್ನು ಸ್ವಚ್ಛವಾಗಿಡುವುದು

ಒಬ್ಬ ಗಿರಾಕಿಯು ಈ ರೀತಿಯಾಗಿ ಬರೆಯುತ್ತಾನೆ: ಹಲವು ವರ್ಷ ಕಾಲ ನಾನು ಅಜೀರ್ಣದಿಂದ ನರಳುತಿದ್ದೆನು. ಅನೇಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡಿದುದಾಯಿತು. ಮೂರು ವರ್ಷಗಳ ಹಿಂದೆ ನಾನು ಎಂಡ್ರೂಸ್ ಲಿವರ್ ಲವಣವನ್ನು ಉಪಯೋಗಿಸಿದೆ. ಅದು ನನ್ನನ್ನು ಗುಣಪಡಿಸಿತೆಂದು ಹೇಳಲು ನನಗೆ ಬಹಳ ಸಂತೋಷವಾಗುತ್ತದೆ. ಈಗ ನಾನು ಏನನ್ನಾದರೂ ತಿನ್ನುತ್ತೇನೆ. ಸುಖವಾಗಿ ನಿದ್ರೆಯೂ ಕೆಲಸದಲ್ಲಿ ಆಸಕ್ತಿಯೂ ಇರುವುದು.



## ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

### 'ಕಾಂಗ್ರೆಸ್ಸಿಗರು ಹಾಗು ನೂಲುವದು'

ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ರಚನಾತ್ಮಕ ಕಾರ್ಯವು ಎಷ್ಟು ಮಹತ್ವದ ಭಾಗವನ್ನು ಪಡೆದಿದೆಯೆಂಬುದು ಇತ್ತೀಚಿನ ವರ್ಕಿಂಗ್ ಕಮಿಟಿಯ ನಿರ್ಣಯಗಳು ಮತ್ತು ಹರಿಜನದಲ್ಲಿ ಮಹಾತ್ಮಾಜಿಯವರು ಲೇಖನಗಳಿಂದ ಜನತೆಗೆ ಕಾಂಗ್ರೆಸಿಗರಿಗೆ ಸ್ಪಷ್ಟವಾಗಿರಲಿಕ್ಕೆ ಸಾಕು. ರಚನಾತ್ಮಕ ಕಾರ್ಯಗಳು ಅದರಲ್ಲೂ ಮುಖ್ಯತಃ ಖಾದಿಯ ಕಾರ್ಯಕ್ರಮವು ದೇಶದ ಆರ್ಥಿಕ ದರಿದ್ರತೆಯನ್ನು ದೂರಮಾಡುವ ಸಾಧನಗಳಲ್ಲದೆ ಅಹಿಂಸೆ ಸೌಹಾರ್ದಗಳ ದ್ಯೋತಕವಾಗಿದೆ. ಅಂತೆಯೇ ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ವರ್ಕಿಂಗ ಕಮಿಟಿಯವರು ರಚನಾತ್ಮಕ ಕಾರ್ಯಗಳ ವಿಶೇಷತಃ ಖಾದಿಯು ಹಾಗು ಸ್ವತಃ ನೂಲುವದರ ಉಲ್ಲೇಖ ಮಾಡಿರುವರು.

ವರ್ಕಿಂಗ ಕಮಿಟಿಯ ಸೂಚನೆಯಂತೆ ಕಾಂಗ್ರೆಸಿಗರು ನೂಲಲು ಅನುಕೂಲ ಮಾಡಿಕೊಡುವದಕ್ಕಾಗಿ ಅಖಿಲಭಾರತ ಚರಖ ಸಂಘದ ಸಹಾಯದಿಂದ ಚರಖ, ತಕಲಿ, ಹಂಜಿ ಮುಂತಾದ ನೂಲುವ ಸಾಧನಗಳು ಪ್ರಾಂತದಲ್ಲಿ ಎಲ್ಲೆಡೆಗಳಲ್ಲಿಯೂ ಸಾಕಷ್ಟು ಸಿಗುವ ವ್ಯವಸ್ಥೆ ಮಾಡಲಾಗಿದೆ. ಧಾರವಾಡದಲ್ಲಿಯ ಪ್ರಾಂತೀಯ ಕಾಂಗ್ರೆಸ ಸಮಿತಿ, ಪ್ರಾಂತದ ಎಲ್ಲ ಜಿಲ್ಲಾ ಕಾಂಗ್ರೆಸ ಸಮಿತಿಗಳು ಮತ್ತು ಚರಖ ಸಂಘದ ಎಲ್ಲ ಖಾದಿ ಭಂಡಾರಗಳಲ್ಲಿ ಕೆಳಗಿನ ದರಗಳ ಪ್ರಕಾರ ಚರಖ, ತಕಲಿ ಮುಂತಾದವುಗಳು ಮಾರಲ್ಪಡುತ್ತವೆ.

| | | ರೂ ಆ ಪೈ |
|---|---|---|
| ೧ | ಚರಖ | |
| | (ಅ) ಚರಖ | ೩—೦—೦ |
| | (ಆ) ಗರಖ (ಮರವಡಾ ಮಾದರಿ) | ೩—೧೦—೦ |
| ೨ | ತಕಲಿ | ೦—೨—೦ |
| ೩ | ಹಂಜಿಗಳು (೧ ಪೌಂಡು) | ೦—೮—೦ |

ಜಿಲ್ಲಾ ಕಾಂಗ್ರೆಸ ಸಮಿತಿಗಳು ತಮ್ಮ ಕಡೆಗೆ ಬರುವ ಈ ಸಂಬಂಧದ ಬೇಡಿಕೆಗಳನ್ನು ಮತ್ತು ಬೇಡುವ ಮಾಲಿನ ಅರ್ಧ ಹಣವನ್ನು ಮುಂಗಡ ಒಟ್ಟುಗೂಡಿಸಿ ಸಮೀಪದಲ್ಲಿರುವ ಖಾದಿ ಭಂಡಾರದಲ್ಲಿ ಅವುಗಳಿಗೊಸುಗ 'ಆರ್ಡರ್' ಕೊಡಬೇಕು. ಅಂದರೆ ಖಾದಿ ಭಂಡಾರಗಳು ತಡಮಾಡದೆ ಬೇಡಿಕೆಗಳನ್ನು ಪೂರೈಸಿ ಕೊಡುವದು ಸಾಧ್ಯವಾಗುತ್ತದೆ.

ನೂಲುವ ವ್ರತ ಹಿಡಿದಿರುವ ಪ್ರಾಂತದಲ್ಲಿಯ ಎಲ್ಲ ಕಾಂಗ್ರೆಸಿಗರೂ, ಮಾಡಿರುವ ಈ ಅನುಕೂಲತೆಗಳ ಪೂರ್ಣ ಉಪಯೋಗ ತೆಗೆದುಕೊಳ್ಳುವರೆಂದು ಆಶಿಸಲಾಗಿದೆ ಎಂದು ಕ. ಪ್ರಾ. ಕಾ. ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.



# ಜಿಲ್ಲಾ ಸಮಾಚಾರ

## ಮಂಗಳೂರು

**ನಗರ ಸಭೆ:** ಕಳೆದ (ತಾ. ೧೫) ಸಾಯಂಕಾಲ ೫-೩೦ಕ್ಕೆ ಮಂಗಳೂರು ನಗರ ಸಭೆಯ ಮೀಟಿಂಗು ಜರಗಿತು.

**ಕೋ ಆಪರೇಟಿವ್ ಸ್ಟೋರ್ಸ್:—** ಈ ಸಂಸ್ಥೆಯ ಡೈರೆಕ್ಟರರ ಸಭೆಯು ತಾ ೯ರಲ್ಲಿ ಶ್ರೀ. ಎಮ್. ಅಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಕಾರ್ಯನಿರ್ವಾಹಕ ಮಂಡಲಿಗೆ ಸದಸ್ಯರನ್ನು ಆರಿಸಲಾಯಿತು.

**ದ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಪರಿಷತ್ತು:—** ಕಳೆದ ತಾ ೧೦ನೇ ಸಾಯಂಕಾಲ ಜಿಲ್ಲಾ ವಿದ್ಯಾರ್ಥಿಗಳ ಸಂಘದ ಸಭೆಯು ಸೇರಿತು. ಬರುವ ಫೆಬ್ರುವರಿ ತಾ. ೩ ಮತ್ತು ೪ರಲ್ಲಿ ಜಿಲ್ಲಾ ವಿದ್ಯಾರ್ಥಿಗಳ ಪರಿಷತ್ತನ್ನು ಜರಗಿಸಬೇಕೆಂದು ನಿರ್ಧರಿಸಿದರು ಅಖಿಲಭಾರತ ಫಾರ್ವರ್ಡ್ ಬ್ಲಾಕ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಚ್ ವಿ ಕಾಮತರನ್ನು ಅಧ್ಯಕ್ಷಸ್ಥಾನ ವಹಿಸಲು ಆಮಂತ್ರಿಸಬೇಕೆಂದು ತೀರ್ಮಾನವಾಯಿತು. ಶ್ರೀ ಬಿ ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯು ಏರ್ಪಟ್ಟಿತು ಬೇರೆ ಕೆಲಸಗಳನ್ನು ನಿರ್ವಹಿಸಲು ಉಪಸಮಿತಿಗಳ ನೇಮಕವೂ ಆಯಿತು.

**ಅಸ್ಪೃಶ್ಯತಾ ನಿವಾರಣೆ ಮತ್ತು ಕ್ಷೇತ್ರ ಪ್ರವೇಶ:—** ಈ ವಿಷಯಗಳ ಕುರಿತು ದೆಟ್ಟಿನ ಅನುಭವವನ್ನು ಸಂಪಾದಿಸಲು 'ಬಾಂಬೆ ಕ್ರಾನಿಕಲ್' ಪತ್ರಿಕೆಯ ಉಪ ಸಂಪಾದಕರಾದ ಶ್ರೀ ಆರ್ ಎಸ್ ಪಡುಬಿದ್ರಿಯವರು ದಕ್ಷಿಣ ಹಿಂದುಸ್ಥಾನದ ಪ್ರವಾಸವನ್ನು ಕೈಕೊಂಡಿರುವರು ಕಳೆದ ತಾ ೧೧ರಲ್ಲಿ ಅವರು ಸ್ಥಳೀಯ ಥಿಯಸಾಫಿಕಲ್ ಲಾಜಿನಲ್ಲಿ ತಾವು ಸಂಪಾದಿಸಿದ ಅನುಭವಗಳನ್ನು ತಿಳಿಸಿದರು ತಿರುವಾಂಕೂರಿನಲ್ಲಿಯೂ ಮಧುರೆಯಲ್ಲಿಯೂ ಹರಿಜನರಿಗೆ ಯಾವ ತಡೆಯೂ ಇಲ್ಲದೆ ದೇವಸ್ಥಾನಗಳಿಗೆ ಪ್ರವೇಶಿಸುವ ಅಧಿಕಾರ ಒಂದಿದೆಯೆಂದೂ, ಸನಾತನಿಗಳ ವಿರೋಧವು ಸಹ ಬಹಳ ಮಟ್ಟಿಗೆ ಕಡಿಮೆಯಾಗಿದೆಯೆಂದೂ ಹೇಳಿದರು. ಅಸ್ಪೃಶ್ಯತೆಯನ್ನು ತೊಲಗಲಾಡಿಸುವ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾ, ಮಿಶ್ರ ಭೋಜನದ ಏರ್ಪಾಡಾದರೂ ಆಗದೆ ಹೋದರೆ ಅಸ್ಪೃಶ್ಯತೆಯು ಹೋಗಲಾರದೆಂದರು

**ಉಪನ್ಯಾಸ:—** ಶ್ರೀ ಸ್ವಾಮಿ ಶ್ರೀ ವಾಸಾನಂದಜೀಯವರು ಕಳೆದ ತಾ ೧೧ನೇ ಗುರುವಾರ ಸಾಯಂ. ೬-೩೦ಕ್ಕೆ ಸರಿಯಾಗಿ ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳ ಮುಂದೆ 'ಶ್ರೀ ರಾಮ ಕೃಷ್ಣ ಪರಮಹಂಸರ ಜೀವನ ಚರಿತ್ರೆ ಮತ್ತು ಬೋಧನೆ'ಯ ಕುರಿತಾಗಿಯೂ, 'ಶ್ರೀ ರಾಮಕೃಷ್ಣ ಮಿಶನಿನ ಧ್ಯೇಯ'ದ ಕುರಿತಾಗಿಯೂ ಅರ್ಥ ಗರ್ಭಿತವಾದ ಉಪನ್ಯಾಸವನ್ನಿತ್ತರು.

**ಕರ್ಮಯೋಗ:—** ತಾ. ೧೫ನೇ ಸಾಯಂಕಾಲ ಕೆನರಾ ಹೈಸ್ಕೂಲ್ ಹಾಲಿನಲ್ಲಿ ಶ್ರೀ ರಾಮಕೃಷ್ಣ ಮಿಶನಿನ ಸ್ವಾಮಿ ಶ್ರೀವಾಸಾನಂದ ಜೀಯವರು 'ಕರ್ಮಯೋಗ'ದ ವಿಷಯವಾಗಿ ಉಪನ್ಯಾಸ ಮಾಡಿದರು.

**ತಲಪಾಡಿ:—** ಇಲ್ಲಿಯ ಶ್ರೀ ದುರ್ಗಾ ಪ್ರಸಾದಿಕ ಎಲಿಮೆಂಟರಿ ಶಾಲೆಯ ೭ನೇ ವಾರ್ಷಿಕೋತ್ಸವವು ಕಳೆದ ತಾ. ೭ನೇ ಅಪರಾಹ್ನ ಘಂಟೆ ೪ಕ್ಕೆ ಮಂಗಳೂರು ಗಣಪತಿ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ. ಉಭಯ ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

## ಉಡುಪಿ

**ಉಡುಪಿ ಪರ್ಯಾಯ ಮಹೋತ್ಸವ:—** ಇದೇ ಪ್ರಮಾದಿ ಸಂವತ್ಸರದ ಪುಷ್ಯ ಶುದ್ಧ ೮ (ತಾ. ೧೮-೧-೪೦ನೇ) ಗುರುವಾರ ಶ್ರೀ ಮದುಡುಪಿ ಶ್ರೀಕೃಷ್ಣ ದೇವರ ಸನ್ನಿಧಿಯಲ್ಲಿ ಶ್ರೀ ಅದಮಾರು ಮಠದ ಶ್ರೀ ಶುದ್ಧಬೋಧ ಮಾನ್ಯ ತೀರ್ಥ ಶ್ರೀಪಾದಂಗಳವರು ಪರ್ಯಾಯ ಪೀಠವನ್ನಲಂಕರಿಸಿದರು

**ಕವಿ ಮುದ್ದಣನ ಜನ್ಮೋತ್ಸವ:—** ಈ ದಿನ (ತಾ. ೧೪ನೇ ಭಾನುವಾರ) ಅಪರಾಹ್ನ ಘಂಟೆ ೩ರಿಂದ ೪ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮುದ್ದಿನ ಕವಿ ಮುದ್ದಣನ ಜನ್ಮೋತ್ಸವವು ಶ್ರೀ. ಕಡೆಕಾರು ಎನ್ ರಾಜಗೋಪಾಲ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಉಡುಪಿ ಬೋರ್ಡ್ ಹೈಸ್ಕೂಲಿನ ಹಾಲಿನಲ್ಲಿ ಜರಗಿತು

### ಉಡುಪಿ ಪರ್ಯಾಯ ವಸ್ತುಪ್ರದರ್ಶನ ೧೯೪೦

ಇದರ ಉದ್ಘಾಟನಾ ಸಮಾರಂಭವನ್ನು ಶ್ರೀ ಡಿ ಮಂಜಯ್ಯ ಹೆಗ್ಗಡೆ ಇವರು ನೆರವೇರಿಸಿದರು.

ಉಡುಪಿ ಕ್ಷೇತ್ರದಲ್ಲಿ ಮೊದಲ ಬಾರಿ ಕೈಗಾರಿಕೆ ಮತ್ತು ಕೃಷಿ ವಸ್ತುಗಳ ಪ್ರದರ್ಶನವು ಇದೇ ತಾ ೮-೧-೪೦ ಸೋಮವಾರ ಸಾಯಂಕಾಲ ೭ ಗಂಟೆಗೆ ಗವರ್ನಮೆಂಟ್ ಆಸ್ಪತ್ರೆಯ ಹಿಂದೆ ಏರ್ಪಡಿಸಿದ ವಿಶಾಲವಾದ, ವಿದ್ಯುದ್ದೀಪಗಳಿಂದ ಅಲಂಕೃತವಾದ ಪ್ರದರ್ಶನಾಲಯದಲ್ಲಿ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಎಮ್ ಎಲ್ ಸಿ ಇವರಿಂದ ತೆರೆಯಲ್ಪಟ್ಟಿತು.

ಪ್ರದರ್ಶನ ಸಮಿತಿಯ ಅಧ್ಯಕ್ಷರೂ ಮುನಿಸಿಪಾಲಿಟಿಯ ಚೆಯರ್‌ಮೆನರೂ ಆದ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಅಧ್ಯಕ್ಷರಿಗೂ ಸಭಿಕರಿಗೂ ಸ್ವಾಗತವನ್ನು ಬಯಸುತ್ತ ಈ ಮೊದಲನೆಯ ಪ್ರದರ್ಶನೋದ್ಯಮದ ಸಂಕ್ಷಿಪ್ತ ವಿವರವನ್ನು ಕೊಟ್ಟ ಮೇಲೆ, ಪ್ರದರ್ಶನದ ಪೋಷಕರಾದ ಪರ್ಯಾಯ ಶ್ರೀ ವಿಷ್ಣುಮಾನ್ಯ ತೀರ್ಥ ಶ್ರೀಗಳವರ ಶುಭಾಶೀರ್ವಚನವನ್ನೂ, ಡಾ. ಸರ್ ಎಂ ವಿಶ್ವೇಶ್ವರಯ್ಯ, ಶ್ರೀ. ಕೆ. ಸ. ಅನಂತರಾಮನ್, ನಿವೃತ್ತ ಜಜ್ ಶ್ರೀ. ಶಂಕರ ನಾರಾಯಣರಾಯರೇ ಮೊದಲಾದ ಪ್ರಮುಖರ ಶುಭಸಂದೇಶವನ್ನೂ ಓದಿ ಹೇಳಲಾಯಿತು.

ಅಧ್ಯಕ್ಷರು ಪರಿಷತ್ತನ್ನು ತೆರೆಯುತ್ತ, ಸಾವಿರಾರು ಜನರು ನೆರೆಯುವ ಪರ್ಯಾಯದಂತಹ ಸುಸಂಧಿಯು ಇಂತಹ ವಸ್ತು ಪ್ರದರ್ಶನಗಳಿಗೆ ಅತ್ಯಂತ ಉಪಯುಕ್ತವಾದುದೆಂದೂ ಹಳ್ಳಿಗಳ ಉದ್ಧಾರ, ಸ್ವದೇಶೀ ಕೈಗಾರಿಕೆಗಳಿಗೆ ಪ್ರೋತ್ಸಾಹನ ಉದ್ಯೋಗ ಮತ್ತು ವ್ಯವಸಾಯದಲ್ಲಿ ವೈಜ್ಞಾನಿಕ ಸಾಧನಗಳ ಉಪಯೋಗ ಮುಂತಾದವುಗಳಿಂದ ದೇಶದ ಸಂಪತ್ತಿಯನ್ನು ಅಭಿವೃದ್ಧಿಗೊಳಿಸುವುದು ಅಗತ್ಯವೆಂದೂ, ಸರಕಾರವೂ ಸ್ಥಳೀಯ ಬೋರ್ಡುಗಳೂ ಕೈಗಾರಿಕೆಗಳ ಉತ್ಕರ್ಷಕ್ಕಾಗಿ ಯೋಗ್ಯ ಸಹಾಯವಿತ್ತು ಸಹಕರಿಸುವಂತೆ ಪ್ರಯತ್ನಿಸಬೇಕೆಂದೂ ಮುಂತಾಗಿ ವಿಸ್ತೃತ ಭಾಷಣಕೊಟ್ಟು ಪ್ರದರ್ಶನವು ಪ್ರತಿವರ್ಷವೂ ಇನ್ನೂ ವಿಜೃಂಭಣೆಯಿಂದ ನಡೆಯುವಂತಾಗಲೆಂದು ಹರಸಿದರು

ಪ್ರದರ್ಶನಕ್ಕೆ ಮೈಸೂರಿನ ಭದ್ರಾವತಿ ಕಬ್ಬಿಣದ ಕಾರಖಾನೆ, ಬದನವಾಳ ಖಾದಿ, ಚೆನ್ನಪಟ್ಣದ ಬಣ್ಣದ ಸಾಮಾನುಗಳು ಮುಂತಾದ ವಸ್ತುಗಳೂ ಮದರಾಸಿನಿಂದಲೂ ಇನ್ನಿತರ ಪ್ರದೇಶಗಳಿಂದಲೂ ಕೈಗಾರಿಕೆಯ ವಸ್ತುಗಳೂ ಬಂದಿದ್ದುವು.

ಅಧ್ಯಕ್ಷರಿಗೆ ಧನ್ಯವಾದಾರ್ಪಣೆಯೊಡನೆ ಅಂದಿನ ಸಮಾರಂಭವು ಸಮಾಪ್ತಿಯಾಯಿತು. ಅನಂತರ ಅಧ್ಯಕ್ಷರೂ ಸಭಿಕರೂ ವಸ್ತುಗಳನ್ನು ನೋಡುವುದಕ್ಕಾಗಿ ಪ್ರದರ್ಶನಾಲಯದ ಸುತ್ತಲೂ ತಿರುಗಿದರು.

## ಪುತ್ತೂರು

**ಹರಿಜನರಿಗೆ ಅನ್ನದಾನ:—** ಕಳೆದ ತಾ ೭ನೇ ಶನಿವಾರ ಇಲ್ಲಿಯ ವಕೀಲ್ ಶ್ರೀ ಬೈಂದೂರು ಪ್ರಭಾಕರ ರಾಯರು ತಮ್ಮ ಮಗಳ ವಿವಾಹದ ಸಂತೋಷ ಸಮಾರಂಭದ ಕಾಲದಲ್ಲಿ ೫೦೦ಕ್ಕೂ ಮಿಕ್ಕಿದ ಹರಿಜನರಿಗೆ ಅನ್ನದಾನ ಮಾಡಿದರು.

**ಪುತ್ತೂರು ರೇಂಜ್ ಶಾಲಾ ಉಪಾಧ್ಯಾಯರ ಸಭೆಯು:—** ಕಳೆದ ತಾ ೬ರಲ್ಲಿ, ಇಲ್ಲಿಯ ಹಾ. ಎ. ಶಾಲೆಯಲ್ಲಿ ಶ್ರೀ ಕೆ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸೇರಿ ಬೋರ್ಡಿನಿಂದ ಶಾಲೆಗಳಿಗೆ ಬರುವ ಸರ್ಕ್ಯುಲರುಗಳ ಪ್ರತಿಗಳನ್ನು ಸೆಂಟರಿಗೂ ಕಳುಹಿಸಿ ಕೊಡುವಂತೆ ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು

**ಯಕ್ಷಗಾನ:—** ಇಲ್ಲಿಯ ವಕೀಲರಾದ ಶ್ರೀ. ಎಚ್. ಸಿ. ಭಟ್ಟರಲ್ಲಿ ತಾ. ೩ರಲ್ಲಿ, ಬಾಲಾಜಿ ಯಕ್ಷಗಾನ ಬಾಲ ಕಲಾ ಮಂಡಳದವರಿಂದ 'ಸುಭದ್ರಾಪರಿಣಯ'ವೆಂಬ ಪ್ರಬಂಧವನ್ನು ತಾಳಮದ್ದಳೆಯಾಗಿ ವಾಚಿಸಿದರು; ಈ ಕೂಟದವರೆಲ್ಲರೂ ಚಿಕ್ಕ ಬಾಲಕರೇ ಇರುವರು. ಇವರೆಲ್ಲರೂ ಶ್ರೀ. ಕವಿ ಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರಿಂದ ಶಿಕ್ಷಣ ಹೊಂದಿದವರು.

## ಕುಂದಾಪುರ

**ಕೀರ್ತನ ಶಿರೋಮಣಿಗಳ ಹರಿಕಥಾ ಕಾಲಕ್ಷೇಪ:—** ಕರ್ನಾಟಕ ಸುಪ್ರಸಿದ್ಧ ಕೀರ್ತನಕಾರರೂ ಚತುರ್ಭಾಷಾ ಪ್ರವೀಣರೂ ಆಗಿರುವ ಶ್ರೀ. ಮುಳುಬಾಗಿಲು ರಾಮ ಶಾಸ್ತ್ರಿಗಳವರು ಕುಂದಾಪುರದಲ್ಲಿ ಚಿಕ್ಕಮ್ಮ ಸ್ಥಳೀಯ ವೆಂಕಟರಮಣ ದೇವಸ್ಥಾನದಲ್ಲಿ ದಶಂಬರ ತಾ. ೩೦ರಿಂದ ಜನವರಿ ತಾ. ೫ರ ವರೆಗೆ ಹರಿಕಥಾ ಸಪ್ತಾಹವನ್ನು ಜರಗಿಸಿದರು.

## ಕರ್ನಾಟಕ

### ಬೊಂಬಾಯಿ

**ಶುದ್ಧಾ ಜರ್ನಲಾ ಸಂಘ:—** ಈ ಸಂಘದ ವಾರ್ಷಿಕೋತ್ಸವವು ತಾ. ೭-೧-೪೦ರಲ್ಲಿ ಶ್ರೀಮಾನ್ ಕೆ. ವ್ಹಿ ಸಾಲಿಯನರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರು ಗತವರ್ಷದ ವರದಿಯನ್ನು ಓದಿದ ಬಳಿಕ ೧೯೪೦ನೇ ಇಸವಿಯ ಆಡಳಿತ ಸಮಿತಿಗೆ ಹತ್ತು ಮಂದಿ ಮೆಂಬರರನ್ನು ಚುನಾಯಿಸಲಾಯಿತು. ತದನಂತರ ಶ್ರೀಯುತರುಗಳಾದ ಎಲ್. ಕೆ. ಕುಂದರ್, ಬಿಮ್. ಬಿ. ದಾಸ್, ಎಸ್. ಎಸ್. ಕುಂದರ್, ಎಮ್ ದಿ ಈಶ್ವರ್, ಕೆ ಬಿ. ಕುಂದರ್ ಮುಂತಾದವರು ಸಂಘದ ಏಳಿಗೆಯನ್ನು ಬಯಸಿ ಮಾತಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘದ ಧ್ಯೇಯಗಳನ್ನು ಸೂಚಿಸುತ್ತಾ ಇನ್ನು ಮುಂದಿನ ನಮ್ಮ ಜಾತಿಬಾಂಧವರನ್ನು ವಿದ್ಯಾವಿಷಯದಲ್ಲಿ ತಯಾರುಮಾಡುವುದು ಪ್ರಥಮ ಕರ್ತವ್ಯವೆಂದೂ ಅದರಂತೆಯೇ ಪ್ರತಿಒಬ್ಬ ಬಾಂಧವನೂ ಪ್ರಯತ್ನಿಸಬೇಕೆಂದೂ ತಮ್ಮ ಸುರಸಭಾಷಣವನ್ನು ಕೊಟ್ಟರು ತದನಂತರ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

**ಲಠ್ಠೆಯವರ ಭಾಷಣ:—** ಹೊಸೂರ ಬೆಳಗಾವಿ, ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಶ್ರೀಮಾನ್ ಲಠ್ಠೆಯವರು ಕೆಲ ಜನರು ತಾವೇ ರಾಮದುರ್ಗ ಪ್ರಜೆಗಳ ಹಿತಚಿಂತಕರೆಂದು ತಿಳಿದು ಜಾತೀಯ ಭಾವನೆಗಳನ್ನು ಉದ್ರೇಕಿಸಿ ಪ್ರಾಂತದ ಸಾರ್ವಜನಿಕ ಜೀವನವನ್ನೇ ಹದಗೆಡಿಸಿದರು. ಶ್ರೀ ಗಂಗಾಧರರಾವ ಮೊದಲಾದ ಪೂಜ್ಯ ಮುಂದಾಳುಗಳ ಮೇಲೆ ಮಾಡುತ್ತಿರುವ ಆರೋಪಗಳನ್ನು ನಂಬುವುದು ಸಾಧ್ಯವಿಲ್ಲೆಂದು ಹೇಳಿ ಎಲ್ಲ ಜಾತಿಗಳೂ ಪರಸ್ಪರ ಸ್ನೇಹದಿಂದ ನಡೆದುಕೊಳ್ಳಬೇಕೆಂದು ವಿನ್ನವಿಸಿದರು.

**ಮೈಸೂರು ಸುಧಾರಣೆಯಲ್ಲಿ ಹುರುಳಿಲ್ಲ:—** ಮೈಸೂರ ಕಾಂಗ್ರೆಸ ಮುಖಂಡರಾದ ಶ್ರೀ. ಭಾಷ್ಯಂ ಮತ್ತು ಪಟ್ಟಾಭಿರಾಮನ್ನರು ೧೧ನೇ ತಾರೀಕಿನ ದಿವಸ ಭಾಷಣ ಮಾಡಿ ಮೈಸೂರ ಸರಕಾರದವರು ಕೊಟ್ಟ ಹೊಸ ಸುಧಾರಣೆಗಳು ಹುರುಳಿಲ್ಲವೆಂದು ಹೇಳಿದರು.

**ರಾಮದುರ್ಗ ವಿಚಾರ:—** ಮುಂಬಯಿ ಸರಕಾರದ ಮಾಜಿ ಅರ್ಥ ಮಂತ್ರಿಗಳೂ, ರಾಮದುರ್ಗ ಪ್ರಕರಣದಲ್ಲಿ ಸಂಧಾನ ದೂತರೂ ಆದ ಶ್ರೀ. ಅಣ್ಣಾ ಸಾಹೇಬ ಲಠ್ಠೆಯವರಿಗೆ ರಾಮದುರ್ಗ ರಾಜಾ ಸಾಹೇಬರಿಂದ ಕರೆಬಂದಿದಂತೆ ಅಲ್ಲಿಗೆ ತೆರಳಿದವರು, ಅವರೊಡನೆ ಮಾತುಕತೆ ನಡೆಸಿ ಹಿಂತೆರಳಿ ಬಂದಿರುವರು.

**ಅಖಿಲ ಕರ್ನಾಟಕ ಮುನ್ನಡೆ ಪಕ್ಷದ ಪರಿಷತ್ತು:—** ಅಖಿಲ ಕರ್ನಾಟಕ ಮುನ್ನಡೆ ಪಕ್ಷದ ಪರಿಷತ್ತನ್ನು ಇದೇ ತಿಂಗಳ ೧೪ನೇ ತಾರೀಖಿಗೆ ಶ್ರೀ. ಸುಭಾಷ ಬೋಸರ ಅಧ್ಯಕ್ಷತೆಯಲ್ಲಿ ಕರೆಯಬೇಕೆಂದು ನಿರ್ಧರಿಸಲಾಗಿತ್ತಷ್ಟೆ. ಆದರೆ ಶ್ರೀ. ಬೋಸರಿಗೆ ಸಮಯವಿಲ್ಲದ ಕಾರಣ ಪರಿಷತ್ತನ್ನು ಮುಂದುವರಿಸಲಾಗಿದೆ.

# ಫಿನ್‌ಲೆಂಡಿನ ನಗರದ ಮೇಲೆ ಬಾಂಬುಗಳ ಸುರಿಮಳೆ!

# ಯುದ್ಧವಾರ್ತೆ!



## ಫಿನ್‌ಲೆಂಡಿಗೆ ಸಹಾಯ ಕೊಡಬೇಕು!

## ಬೆಲ್ಜಿಯಂ ಹಾಲೆಂಡುಗಳ ಮೇಲೆ ಹಿಟ್ಲರನ ದೃಷ್ಟಿ

## ಸ್ವಿಡನ್ ನಾರ್ವೆಗಳಿಗೆ ಸ್ಟಾಲಿನನ ಎಚ್ಚರಿಕೆ

**ಪಶ್ಚಿಮ ರಣರಂಗ**

ಪಶ್ಚಿಮ ರಣರಂಗದಲ್ಲಿ ಛಳಿಯು ಬಲವಂತವಾಗಿದ್ದುದರಿಂದ ಹಲವು ದಿನಗಳಿಂದ ಯಾವ ತರದ ಯುದ್ಧ ಚಟುವಟಿಕೆಗಳೂ ಇರಲಿಲ್ಲ. ಆದರೂ ಆಚೀಚೆಗೆ ವಿಮಾನಗಳು ಧಾಳಿ ನಡೆಸುತ್ತಿವೆ.

**ಹಡಗುಗಳು ಮುಳುಗಿದುವು**

೧೬೦೦ ಟನ್ ತೂಕದ ಬ್ರಿಟಿಷ್ ಹಡಗಾದ ಕ್ವಿನ್‌ಸ್ ಎಂಬುದ್ದು ಉತ್ತರ ಸಮುದ್ರದಲ್ಲಿ ಜರ್ಮನ್ ವಿಮಾನಧಾಳಿಯಿಂದ ಮುಳುಗಿತು. ಆ ವಿಮಾನಕ್ಕೆ ಐದು ಗುಂಡಿನೇಟುಗಳೂ ಬಿದ್ದವೆ ಕಿಂಗ್‌ಸ್ಟನ್ ಕಾರ್ನಿಯಲ್, ಟೌನ್‌ಲಿ ಪ್ರೆಂಕೆನ್ ವಾಲ್ಸ, ಸಿಟಿ ಓಫ್ ಮಾರ್ಸೆಲ್ಸ್; ಎಂಬೀ ಹಡಗುಗಳೂ ಮುಳುಗಿವೆ

ಬ್ರಿಟಿಷ್ ಇನ್ನೊಂದು ಹಡಗು ಗ್ರಾಂಟೊ ಎಂಬುದು (೩೭೧೯ ಟನ್ ತೂಕದ್ದು) ಪೂರ್ವ ಸಮುದ್ರ ತೀರದಲ್ಲಿ ಜರ್ಮನ ಟ್ಟಿ ಕೋಟೆಯ ತಗಲಿ ಮುಳುಗಿ ಹೋಯಿತು ಕಾಕ್ಸಟನ್ ಎಂಬ ಇನ್ನೊಂದು ಹಡಗವೂ ಮುಳುಗಿದೆ.

**ಪುನಃ ವಿಮಾನಧಾಳಿ**

ಇಂಗ್ಲೆಂಡಿನ ತೀರದಲ್ಲಿ ಜರ್ಮನ್ ವಿಮಾನಗಳು ಈಗ ಪುನಃ ಹಾರಾಡಲು ಆರಂಭಿಸಿವೆಯೆಂದು ತಿಳಿದುಬರುತ್ತದೆ. ಬ್ರಿಟಿಷ್ ವಿಮಾನಗಳು ಅವುಗಳನ್ನು ಓಡಿಸಲು ಬಹಳ ಸಾಹಸಗಳಿಂದ ಯತ್ನ ಮಾಡಿದವು!

**ಚೆಂಬರ್ಲೇನರ ಉಪನ್ಯಾಸ ಮಾಲೆ**

ಬ್ರಿಟನಿನವರು ಮಾಡುತ್ತಿರುವ ಯುದ್ಧದ ವಿಷಯ ಪ್ರಚಾರಮಾಡಲು ಅಲ್ಲಲ್ಲಿ ಉಪನ್ಯಾಸ ಮಾಲೆಗಳನ್ನೇರ್ಪಡಿಸಿ ಜನರಿಗೆ ವಿಷಯಗಳನ್ನು ವಿವರಿಸುವ ಏರ್ಪಾಡುಗಳು ಆಗುತ್ತದೆ. ಚೆಂಬರ್ಲೇನರು ಈ ಉಪನ್ಯಾಸ ಮಾಲೆಯ ಆರಂಭ ಭಾಷಣ ಮಾಡಿದರು.

ಸಾರ್ ಮತ್ತು ವೋಸ್ಗ್‌ಗಳಿಗೆ ಪಶ್ಚಿಮದಲ್ಲಿ ಜರ್ಮನ್ ಫ್ರೆಂಚ್ ಸೈನಿಕರಿಗೆ ಬಿರುಸಿನ ಕಾದಾಟವಾಯಿತು

**ಜರ್ಮನ್ ದ್ವೀಪದ ಮೇಲೆ ಬ್ರಿಟಿಷ್ ಧಾಳಿ**

ಜರ್ಮನ್ ದ್ವೀಪವಾದ ಸಿಲ್ಟ್ ಎಂಬುದರ ಮೇಲೆ ಬ್ರಿಟಿಷ್ ವಿಮಾನಗಳು ಧಾಳಿ ನಡೆಸಿವೆ ಅಲ್ಲಿ ಜರ್ಮನ್ ವಿಮಾನಗಳಿಗೂ ಬ್ರಿಟಿಷ್ ವಿಮಾನಗಳಿಗೂ ಕಾದಾಟವಾಯಿತು ಅದರಲ್ಲಿ ಎರಡು ಜರ್ಮನ್ ವಿಮಾನಗಳು ನಾಶವಾದುವು.

**ಫಿನ್‌ಲೆಂಡ್ ಯುದ್ಧ**

ಫಿನ್‌ಲೆಂಡಿನಲ್ಲಿ ಬಿಡದೆ ಯುದ್ಧವು ನಡೆಯುತ್ತಾ ಇದೆ. ಎಷ್ಟೊಂದು ಪ್ರಬಲ ಸೈನ್ಯವಿದ್ದರೂ ರಶ್ಯನರನ್ನು ಫಿನ್ನ ವೀರ ಸೈನಿಕರು ಮುಂದುವರಿಯಲು ಬಿಡುವುದಿಲ್ಲವಾಗಿ ವಾರ್ತೆ ಬಂದಿದೆ. ಮದೋನ್ಮತ್ತ ಸ್ಟಾಲಿನನು ಇದರಲ್ಲಿ ಹತವಾಗಿದ್ದಾನೆ!

**ಕೊನೆಗಾಣಲಿ ಎಂಬ ಆಸಕ್ತಿ ಹಿಟ್ಲರನಿಗೆ**

ಫಿನ್‌ಲೆಂಡ್ ಯುದ್ಧವು ಆದಷ್ಟು ಬೇಗನೆ ಕೊನೆಗಾಣಲಿ ಎಂಬ ಆಸಕ್ತಿ ಹಿಟ್ಲರನಿಗೆ ಇರುವುದಾಗಿ ತಿಳಿದುಬರುತ್ತದೆ. ಅವನ ಹೆದರಿಕೆ ಎಂದರೆ, ಫಿನ್‌ಲೆಂಡ್ ಯುದ್ಧವು ಹೀಗೆಯೇ ಮುಂದುವರಿದಲ್ಲಿ ಅದು ಪಶ್ಚಿಮ ಯೂರೋಪಿಗೂ ಆವರಿಸಿಬಿಡಬಹುದೆಂದೂ, ಫಿನ್‌ಲೆಂಡಿನ ಮೇಲೆ ರಶ್ಯವು ನಡೆಸುವ ಧಾಳಿಯಿಂದ ಜರ್ಮನ್ ರಶ್ಯಾ ವ್ಯಾಪಾರೀ ಒಪ್ಪಂದಕ್ಕೆ ಬಹಳ ಅಡಚಣೆಯಾಗುವುದೆಂದೂ ಆಗಿದೆಯಂತೆ!

**ಫಿನ್‌ಲೆಂಡಿಗೆ ಅಮೇರಿಕದ ಸಹಾಯ**

ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ಫಿನ್‌ಲೆಂಡಿಗೆ ಸಹಾಯ ಕೊಡುವುದರ ವಿಷಯದಲ್ಲಿ ಅಮೇರಿಕದ ಕಾಂಗ್ರೆಸ್ಸಿನ ಉಭಯ ಪಕ್ಷದವರೊಡನೆಯೂ ವಿಚಾರ ಕೇಳಿರುವರು ಫಿನ್‌ಲೆಂಡಿನ ಸ್ವಾತಂತ್ರ್ಯವನ್ನುಳಿಸಿ ಸಹಾಯಮಾಡುವ ವಿಷಯ ಯಾವ ಪಕ್ಷದವರೂ ಭಿನ್ನಾಭಿಪ್ರಾಯ ಪಡಬಾರದೆಂದು ರೂಸ್‌ವೆಲ್ಟರು ಭಿನ್ನಯಿಸಿಕೊಂಡಿದ್ದಾರೆ

**ಇಟೆಲಿಯಿಂದ ಫಿನ್ಲೆಂಡಿಗೆ ಸಹಾಯ**

ಇಟಲಿಯಿಂದ ಫಿನ್ಲೆಂಡಿಗೆ ಸ್ವಯಂಸೇವಕರ ತಂಡವು ಬರುವುದಾಗಿ ತಿಳಿದಿದೆ ಅಂತೂ ಇಟಲಿಯು ಫಿನ್ಲೆಂಡಿಗೆ ಸಹಾಯ ಕೊಡುತ್ತಲಿದೆ

ಈ ತನಕ ಸ್ವೀಡನ್ ಡೆನ್ಮಾರ್ಕ್‌ಗಳಿಂದ ಫಿನ್ಲೆಂಡಿಗೆ ಸ್ವಯಂಸೇವಕ ದಳಗಳು ಬಂದವೆ

ಫಿನ್ಲೆಂಡಿಗೆ ಪರರಾಷ್ಟ್ರಗಳ ಬೆಂಬಲವು ಬಹಳ ಬೇಕಾಗಿದೆಯೆಂದು ಅಲ್ಲಿನ ಪ್ರಧಾನ ಮಂತ್ರಿಯು ಒಂದು ಭಿನ್ನಹ ಹೊರಡಿಸಿರುವನು

ಇದು ವರೆಗೆ, ಕೆನಡಾ, ಅಮೇರಿಕ, ಆಸ್ಟ್ರೇಲಿಯಾ ಇಂಗ್ಲೆಂಡುಗಳಿಂದ ದ್ರವ್ಯ ಸಹಾಯವು ಅಲ್ಲಿಗೆ ಒದಗಿದೆ.

**ಅಯರ್ಲೆಂಡಿನ ಪರಿಸ್ಥಿತಿ**

ಅಯರ್ಲೆಂಡಿನಲ್ಲಿ ಶಾಂತಿಭಂಗವಾಗಿದೆಯಷ್ಟೆ? ಆದುದರಿಂದ ಅಲ್ಲಿನ ವಿರೋಧ ಪಕ್ಷಕ್ಕೆ ಸೇರಿದ ೬ ಜನ ಸದಸ್ಯರನ್ನು ಕೌನ್ಸಿಲ್ ಓಫ್ ಸ್ಟೇಟ್ಸ್‌ಗೆ ಸದಸ್ಯರಾಗಿ ತೆಗೆದುಕೊಂಡಿರುವರು. ವಿರೋಧ ಪಕ್ಷದವರ ಸಹಕಾರ ಸಿಗಲು ಹೀಗೆ ಮಾಡಲಾಗಿದೆಯೆಂದೂ, ಮುಂದಕ್ಕೆ ಎಲ್ಲಾ ಪಕ್ಷಗಳ ಸಮ್ಮಿಳಿತ ಪ್ರಾತಿನಿಧ್ಯದ ಸರಕಾರವೊಂದನ್ನು ಏರ್ಪಡಿಸುವ ಯೋಚನೆ ನಡೆಯುತ್ತದೆಂದೂ ತಿಳಿದುಬಂದಿದೆ.

**ನಿಸ್ಸಹಾಯಕ ಹಡಗುಗಳ ಮೇಲೆ ಬಾಂಬು!**

ಉತ್ತರ ಸಮುದ್ರದಲ್ಲಿ ಒಂದು ಲಂಡನ್ ಸ್ಟೀಮರಿನ ಮೇಲೆ ನಾಜೀ ವಿಮಾನವೊಂದು ಬಾಂಬ್ ಎಸೆದು ೩ ಮಂದಿ ಸತ್ತರು, ಹಾಗೇ ಬ್ರಿಟಿಷ್ ಹಡಗು 'ಓಕ್ ಗ್ರೋವ್'ನ ಮೇಲೂ ಅದೇ ವಿಮಾನಗಳ ದಾಳಿ ನಡೆಯಿತು ಇನ್ನೊಂದು ದಕ್ಷಿಣ ಆಫ್ರಿಕದ ಹಡಗು ೭ ಸಾವಿರ ಟನ್ನಿನ 'ರೊತ್ಸೆ ಕೆಸಲ್'' ಸ್ಕಾಟ್‌ಲೆಂಡಿನ ಕರಾವಳಿಯ ಬಂಡೆಗಳ ಸಾಲಿಗೆ ಬಡಿದು ಮುಳುಗಿತು.

**ಅಮೇರಿಕದ ರಕ್ಷಣೆಯ ವೆಚ್ಚ**

ಇಲ್ಲಿ ಪ್ರಜಾಪ್ರತಿನಿಧಿ ಸಭೆಯ ಒಂದು ಸಮಿತಿಯು, ಪ್ರೆಸಿಡೆಂಟ್ ರೂಸ್‌ವೆಲ್ಟರ ಕೇಳಿಕೆಯ ಮೇರೆಗೆ, ಭೂಪಾಲಿಯ ಸೈನ್ಯ ಮತ್ತು ನೌಕಾಬಲದ ವೆಚ್ಚಕ್ಕಾಗಿ ೨೬೭, ೦೦೦,೦೦೦ ಡಾಲರುಗಳನ್ನು ಮಂಜೂರು ಮಾಡಲೊಪ್ಪಿದೆ ಇದರಲ್ಲಿ ಒದಗಿಸಲಾಗುವ ಹಗಲ ವಿಮಾನಗಳ ಬೆಲೆ ಮಾತ್ರ ೨೮,೦೦೪,೦೦೦ ಡಾಲರು

**ರೋಮನ್ ಕಥೋಲಿಕರ ವಿರುದ್ಧ**

ಗೆಸ್ಟೆಪೋ ದಳದವರು ರೋಮನ್ ಕೆಥೊಲಿಕ್ ಮಹಿಳೆಯರ ಸಂಸ್ಥೆಯೊಂದರ ನಿಧಿಯನ್ನು ಸೆಳೆದುಕೊಂಡಿದ್ದಾರೆ ಇತ್ತ ರಷ್ಯಾ ಸರಕಾರವು ತಮ್ಮಲ್ಲಿನ ನಾಸ್ತಿಕ ಸಂಘಕ್ಕೆ ಬೇಕಾದಂತೆ ಆಯುಧಗಳನ್ನು ಧರಿಸುವುದೇ ಮೊದಲಾದ ಹಲವು ರಿಯಾಯತಿಗಳನ್ನು ಕೊಟ್ಟು ಮನ್ನಿಸಿದೆ

**ನೆಪೋಲಿಯನಿನ ನಾವೆಲ್**

ಪೋಲೆಂಡಿನ ವಾರ್ಸಾದಲ್ಲಿನ ರಾಷ್ಟ್ರೀಯ ಮ್ಯೂಜಿಯಮ್ಮಿನಲ್ಲಿ, ನೆಪೋಲಿಯನ್ ಚಕ್ರವರ್ತಿಯ ಕೈಬರಹದಲ್ಲಿಯೇ ಇದ್ದ ಒಂದು ಪ್ರೇಮಕಥೆಯ ಹಸ್ತಪ್ರತಿಯು, ಅಲ್ಲಿ ೧೩೦ ವರ್ಷಗಳಿಂದಲೂ ಗುಪ್ತವಾಗಿದ್ದುದು ಇದೀಗ ಜರ್ಮನರ ಬಾಂಬಿನಿಂದ ನಾಶವಾಗಿದೆ ಎಂದು ಪ್ರಕಟವಾಗಿದೆ. ಇದೇ ಪುಸ್ತಕದ ಪತ್ತೆಗಾಗಿ ರಷ್ಯದ ಝಾರನು ಬಹುಮಾನ ಕೊಡುವೆನೆಂದಿದ್ದರೂ ಅದು ಹೊರಬಾರದೆ, ಕೆಲವು ವರ್ಷಗಳ ಬಳಿಕ ಅಚ್ಚಾಗಿ ಪುಸ್ತಕವಾಯಿತು. ಅದರ ಪ್ರತಿಯನ್ನು ಜಗತ್ತಿನ ಎಲ್ಲ ಅರಸರಿಗೂ ಹಂಚಲಾಯಿತು. ಅವರೊಂದಿಗೆ ನಮ್ಮ ಚಕ್ರವರ್ತಿ ೫ನೇ ಜಾರ್ಜರಿಗೂ ಒಂದು ಪ್ರತಿ ಒಪ್ಪಿಸಲ್ಪಟ್ಟಿತು. ಈ ಕಥೆಯನ್ನು ನೆಪೋಲಿಯನ್ ೨೩ ವರ್ಷದವನಾಗಿದ್ದಾಗ ಬರೆದ ಅದು ಅವನ ಜೀವನ ಕಥೆಯೇ. ಅದರಲ್ಲಿ ಮುಂದೆ ಸ್ವೀಡನಿನ ರಾಣಿಯಾದ ಇಗ್ಜಿನ್ ಕ್ಲೆರಿಯಲ್ಲಿ ನೆಪೋಲಿಯನನಿಗಿದ್ದ ಪ್ರೇಮದ ವಿಚಾರವಿದೆ

**ಜರ್ಮನಿಯ ಉಭಯ ಸಂಕಟ**

ಜರ್ಮನಿ ಈಗ ಫಿನ್‌ಲ್ಯಾಂಡಿಗೆ ಹೋಗುವ ಇಟಲಿ ಸಾಮಾನುಗಳನ್ನು ತಡೆದು ಹಾಕಿದೆ ಇಟಲಿ ಇದೇಕೆಂದು ಜರ್ಮನಿಯನ್ನು ಕೇಳಿದೆ ಜರ್ಮನಿಗೆ ಈಗ ಬಹಳ ಸಂದಿಗ್ಧ—ಯಾರನ್ನು ಒಲಿಸಿಕೊಳ್ಳಬೇಕೆಂಬುದು ಜರ್ಮನಿಗೆ ಇಟಲಿಯೂ ಮಿತ್ರರಾಷ್ಟ್ರ, ರಷ್ಯವೂ ಮಿತ್ರರಾಷ್ಟ್ರವಾಗಿರುವಾಗ, ಜರ್ಮನಿಯ ಉಭಯ ಸಂಕಟವಿದು ಸಹಜವೇ ತಾನೇ?

**ಜರ್ಮನಿಯೂ ಇಟೆಲಿಯೂ**

ಫಿನ್‌ಲ್ಯಾಂಡಿಗೆಂದು ಇಟಲಿ ಕಳುಹಿಸಿದ್ದು ಜರ್ಮನಿ ತಡೆದಿಟ್ಟ ಆ ವಿಮಾನಗಳನ್ನು, ಇಟಲಿಯ ಕೇಳಿಕೆಯ ಪ್ರಕಾರ ಜರ್ಮನಿ ಇಟಲಿಗೆ ಹಿಂದಿರುಗಿಸಲಿದೆ

**ಜರ್ಮನಿಯಲ್ಲಿ ಪ್ರಜಾಪ್ರಭುತ್ವ**

ಜರ್ಮನಿಯ ಇಂದಿನ ಏಕಾಧಿಪತ್ಯಕ್ಕೆ ಬೇಸತ್ತ ಜನರು, ಅಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆನ್ನುವ ಉದ್ದೇಶದಿಂದ, ಜರ್ಮನ್ ನೇಶನಲ್ ಕೌನ್ಸಿಲ್ ಎಂಬ ಒಂದು ಭದ್ರವಾದ ಸಂಸ್ಥೆಯೊಂದನ್ನು ರಚಿಸಿರುವರು ಡಾನ್ಸಿಗಿನ ಮಾಜಿ ಪ್ರೆಸಿಡೆಂಟರಾದ ಡಾ| ರುಶ್ನಿಂಗರು ಆ ಸಂಘದ ಕಾರ್ಯಕ್ರಮಗಳನ್ನು ಈ ರೀತಿಯಿಂದ ಉಲ್ಲೇಖಿಸಿರುವರು

ಕೌನ್ಸಿಲಿನ ಗುರಿಯು ಜರ್ಮನಿಯನ್ನು ಹಿಟ್ಲರನ ಪತನವಾದ ಮೇಲೆ ಸುವ್ಯವಸ್ಥೆಗೆ ತರುವುದ ಮತ್ತು ಕಮ್ಯುನಿಸಮಿನ ಆಘಾತದಿಂದ ತಪ್ಪಿಸುವುದು ಆಗಿದೆ.

ಅದಕ್ಕಾಗಿ ಪ್ರಥಮತಃ ಜರ್ಮನರು ಹಿಟ್ಲರನನ್ನು ಅಧಿಕಾರಚ್ಯುತನಾಗಿ ಮಾಡಬೇಕು

ಹಿಟ್ಲರನ ಪತನವಾದ ಕೂಡಲೇ, ಅತನ ಆಡಳಿತದಲ್ಲಿ ಸಂಕಟಕ್ಕೆ ಗುರಿಯಾದವರಿಗೆ ತಿರಿಗಿ ಸುವ್ಯವಸ್ಥೆಯನ್ನು ಒದಗಿಸಿಕೊಡಬೇಕು

ಜನಾಂಗಸಂಘದ ಹೇಳಿಕೆಯ ರಾಷ್ಟ್ರಗಳನ್ನು ಮಾತ್ರ ಅಂಗೀಕರಿಸಿ, ಆಕ್ರಮಣ ಮಾಡಿದ ಉಳಿದ ರಾಷ್ಟ್ರಗಳಿಗೆ ಅಭಯ ಕೊಡುವುದು.

ಅಂತರ್ ರಾಷ್ಟ್ರೀಯ ಕಲಹವನ್ನು ತೀರ್ಮಾನಗೊಳಿಸಿ ಪರರಾಷ್ಟ್ರಗಳೊಡನೆ ಸ್ನೇಹಸಂಬಂಧವನ್ನು ಹೆಚ್ಚಿಸುವುದು.

ಇಂದಿನ ಸೈನಿಕಶಿಕ್ಷಣ ಪದ್ಧತಿಯನ್ನೇ ಸಂಪೂರ್ಣ ವ್ಯತ್ಯಾಸಗೊಳಿಸುವುದು

ವಸಾಹತ್ತುಗಳ ವಿಚಾರವಾಗಿ, 'ಅಖಿಲ ಯುರೋಪಿನ ವಸಾಹತ್ತು ಸಂಘ'ವೊಂದನ್ನು ಸ್ಥಾಪಿಸಿ, ಅದರಲ್ಲಿ ಎಲ್ಲಾ ವಸಾಹತ್ತುಗಳೂ ಭಾಗವಹಿಸುವಂತೆ ಮಾಡುವುದು.

ಈ ಕಾರ್ಯಕ್ರಮವನ್ನು ಬ್ರಿಟಿಷ್ ಸರಕಾರದ ಮುಂದಿಡಲು ಡಾ| ಸ್ವಾಸರರು ಬೇಗನೇ ಇಂಗ್ಲೆಂಡಿಗೆ ಬರುವರಾಗಿ ತಿಳಿದುಬಂದಿದೆ

**ಬಾಲ್ಕನ್ ರಾಷ್ಟ್ರಗಳ ಬೆದರಿಕೆ**

ರಷ್ಯವು ಯುರೋಪಿನ ಪೂರ್ವದಕ್ಷಿಣ ಪ್ರಾಂತದಲ್ಲಿ ಮುಂದುವರಿದು ಬರುತ್ತಿರುವ ವಿಚಾರದಿಂದ, ಇಂದು ಬೆದರಿದ ಬಾಲ್ಕನ್ ರಾಷ್ಟ್ರಗಳು ತಮ್ಮೊಳಗಿನ ಭೇಧಗಳನ್ನು ಮರೆತುಕೊಂಡಿವೆ ಇಟಲಿಯ ಮುಂದಾಳುತನದಿಂದ ಬಾಲ್ಕನ್ ರಾಷ್ಟ್ರಗಳು ಇಂದು ಹೆಚ್ಚು ಸೌಹಾರ್ದದಿಂದ ಇರುವದಾಗಿಯೂ ತಿಳಿದಿದೆ

**ಫಿನ್ಲೆಂಡಿನ ಮೇಲೆ ವಿಮಾನದಾಳಿ**

ರಷ್ಯನರು ಅಸಂಖ್ಯಾತ ವಿಮಾನಗಳಿಂದ ಫಿನ್‌ಲೆಂಡಿಗೆ ದಾಳಿಯಿಡುತ್ತಿರುವರಾಗಿ ತಿಳಿದುಬಂದಿದ

**ರಷ್ಯವು ನಾರ್ವೆ ಸ್ವೀಡನುಗಳನ್ನು ಎಚ್ಚರಿಸಿದೆ!**

ನಾರ್ವೆ ಸ್ವೀಡನುಗಳು ರಷ್ಯಕ್ಕೆ ವಿರುದ್ಧ ಫಿನ್‌ಲೆಂಡಿಗೆ ಸಹಾಯ ಮಾಡುತ್ತಿವೆ ಇದನ್ನು ಪ್ರತಿಭಟಿಸಿ ರಷ್ಯವು ಅವುಗಳಿಗ ಎಚ್ಚರ ಕೊಟ್ಟಿರುತ್ತದೆ

ಆ ಎಚ್ಚರದಲ್ಲಿ ಹೀಗಿದೆ.—

'ಸರಕಾರದ ಧೋರಣೆಗೆ ಸಂಬಂಧಿಸಿರುವ ಸ್ವೀಡನಿನ ಒಂದು ಪತ್ರಿಕೆಯು, ರಷ್ಯಕ್ಕೆ ವಿರುದ್ಧವಾಗಿ ಅನೇಕ ದುಷ್ಟ ಪ್ರಚಾರಗಳನ್ನು ಮಾಡುತ್ತಿದೆ. ಸ್ವೀಡನ್ ಸರಕಾರವು ಈ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ತಿಳಿಸಬೇಕು ಈ ಪತ್ರಿಕೆಯ ಪ್ರಚಾರಕ್ಕೆ ಸ್ವೀಡನ್ ಸರಕಾರವು ಅನುಗುಣವಾಗಿದ್ದರೆ ರಷ್ಯದ ವಿರುದ್ಧ ಯುದ್ಧ ಹೂಡಲು ಸ್ವೀಡನ್ ಸರಕಾರವು ತಯಾರಿದೆಯೇ ಎಂದು ವಿವರಿಸಬೇಕು.

ಆದರೆ ನೋರ್ವೆ ಸರಕಾರವು ಇದಕ್ಕೆ ಉತ್ತರವಾಗಿ ಫಿನ್‌ಲೆಂಡಿಗೆ ತಾನು ಸಹಾಯ ಕೊಡುವ ವಿಚಾರದಲ್ಲಿ ರಶ್ಯವು ತಿಳಿದುಕೊಂಡಿರುವುದು ತಪ್ಪೆಂದೂ ತಾನು ಸಹಾಯ ಕೊಡುವುದಿಲ್ಲವೆಂದೂ ಹೇಳಿದೆ

**ಹೆಲ್ಸೆಂಕಿಯ ಮೇಲೆ ೬೦೦ ಬಾಂಬುಗಳು**

ಫಿನ್‌ಲೆಂಡಿನ ಪ್ರಧಾನ ನಗರವಾದ

# ರಾಷ್ಟ್ರದ ಧುರೀಣರೊಡನೆ ಪುನಃ ವೈಸರಾಯರ ಮಾತುಕತೆ!

## ಮಹಾತ್ಮಾಜಿಯವರನ್ನು ಆಮಂತ್ರಿಸಿರುವರೆ?

### ವರ್ಧಾದಲ್ಲಿ ರಾಜಕೀಯ ಮುಖಂಡರು

### ಭಾರತಕ್ಕೆ ಪಾರ್ಲಿಮೆಂಟಿನ ಸದಸ್ಯರು!

ಹೆಲ್ಸಿಂಕಿಯ ಮೇಲೆ ರಷ್ಯವು ೬೦೦ ಬಾಂಬುಗಳನ್ನು ಎಸೆದಿರುವುದಾಗಿ ತಿಳಿದಿದೆ. ಇದುವರೆಗೆ ಆದ ದಾಳಿಗಳಲ್ಲಿ ಇದು ಅತ್ಯಂತ ಭೀಕರವೆಂದು ತಿಳಿದು ಬರುತ್ತದೆ ಅನೇಕ ನಾಗರಿಕರು ಸತ್ತು ಹೋದರು ಮಾತ್ರವಲ್ಲದೆ ಕಟ್ಟಡ ಮೊದಲಾದವುಗಳಿಗೆ ಬಹಳ ಆಘಾತವಾಯಿತು

**ಅಮೇರಿಕದಲ್ಲಿ ಕ್ರಾಂತಿ**

ನ್ಯೂಯಾರ್ಕಿನಲ್ಲಿ 'ಕ್ರಿಶ್ಚಿಯನ್ ಫ್ರಂಟ್' ಎಂಬ ದಳವು, ಸ್ಥಾಪಿತವಾಗಿ ಇಂದಿನ ಸರಕಾರವನ್ನು ತೆಗೆದುಹಾಕುವ ಪ್ರಯತ್ನ ಮಾಡುತ್ತಿರುವ ನಿಮಿತ್ತ, ಆ ಪಕ್ಷದ ೧೭ ಮಂದಿಯನ್ನು ಸೆರೆ ಹಿಡಿಯಲಾಗಿದೆಯೆಂದು ತಿಳಿದು ಬಂದಿದೆ.

**ಫಿನ್‌ಲೆಂಡಿನ ಮೇಲೆ ಬಾಂಬು**

ಫಿನ್ಲೆಂಡಿನ ಮೇಲೆ ೪೦೦ ವಿಮಾನಗಳಿಂದ ಎರಡು ಸಾವಿರ ಬಾಂಬುಗಳನ್ನು ರಷ್ಯನರು ಬಿಸಾಡಿರುವರೆಂದೂ, ಅದರಿಂದ ಅಸಂಖ್ಯ ಫಿನ್ಲೆಂಡಿಗೆ ನಷ್ಟವಾಗಿದೆಯೆಂದೂ ತಿಳಿದಿದೆ ೨೭ ಗ್ರಾಮಗಳು ನಾಶವಾಗಿವೆಯಂತೆ.

ಇಂತಹ ಸಂದರ್ಭದಲ್ಲಿ ಫಿನ್ಲೆಂಡಿಗೆ ಪರರಾಷ್ಟ್ರಗಳ ಸಹಾಯವು ಇನ್ನೂ ಹೆಚ್ಚಿಗೆ ಬೇಕಾಗಿದೆಯೆಂದು ಫಿನ್ನರು ವಿನಂತಿ ಮಾಡುತ್ತಾರೆ

**ಹಾಲೆಂಡ್ ಬೆಲ್ಜಿಯಂಗಳ ಮೇಲೆ ಹಿಟ್ಲರನ ವಕ್ರದೃಷ್ಟಿ!**

ಹಿಟ್ಲರನು ಇಂದು ಬೆಲ್ಜಿಯಂ ಹಾಲೆಂಡುಗಳ ಮೇಲೆ ತನ್ನ ವಕ್ರದೃಷ್ಟಿಯನ್ನು ಬೀರಿರುವುದಾಗಿ ವಾರ್ತೆ ಬಂದಿದೆ. ಆ ರಾಷ್ಟ್ರಗಳು ಯುದ್ಧಕ್ಕೆ ಸಂಪೂರ್ಣ ಸಿದ್ಧವಾಗಿರುವುದಾಗಿಯೂ ವಾರ್ತೆ.

**೪೦೦೦ ಟನ್ನು ಭಾರದ ಡಚ್ ಹಡಗು**

ಡಚ್ಚು ಹಡಗಾದ ಅರೆಂಡ್ ಸ್ಕೆರ್ಕ್ ಎಂಬ (೪೦೦೦ ಟನ್ನು ಭಾರದ್ದು) ಬಿಸ್ಕೇ ಕೊಲ್ಲಿಯಲ್ಲಿ ಜರ್ಮನ್ ಜಲಾಂತರ್ಗಾಮಿನಾವೆಯಿಂದ ಮುಳುಗಿಸಲ್ಪಟ್ಟಿರುವುದಾಗಿ ತಿಳಿದಿದೆ

**ಜಪಾನಿನಲ್ಲಿ ಹೊಸ ಮಂತ್ರಿ ಮಂಡಳ**

ಜಪಾನಿನಲ್ಲಿ ಹೊಸ ಮಂತ್ರಿಮಂಡಳವು ಸ್ಥಾಪಿತವಾಗಿದೆ, ಮಿ॥ ಅರಿಟಾರು ತಿರಿಗಿ ವಿದೇಶ ಮಂತ್ರಿಗಳಾಗಿದ್ದಾರೆ. ಎಡ್ಮಿರಲ್ ಯೋನೆಯವರು ಪ್ರಧಾನ ಮಂತ್ರಿಗಳಾಗಿರುವರು.

---

**ವಾರ್ಧಾದಲ್ಲಿ ಮುಖಂಡರು**

ರಾಷ್ಟ್ರಪತಿ, ರಾಜಾಜಿ, ಸರ್ದಾರ್, ಭೂಲಾಭಾಯಿ ಖೇರ್ ಇವರು ಮಹಾತ್ಮಾಜಿಯವರನ್ನು ತಾ. ೧೪ರಂದು ಸಂದರ್ಶಿಸಿ ಮಾತುಕತೆ ನಡಸಿದರು. ಇಂದಿನ ರಾಜಕೀಯ ಪರಿಸ್ಥಿತಿಯ ವಿಚಾರವಾಗಿ ಇವರು ಮಾತುಕತೆ ನಡೆಸಿದರಾಗಿ ತಿಳಿಯುತ್ತದೆ.

ಖೇರ್ ಮತ್ತು ದೇಸಾಯಿಯವರು ವೈಸರಾಯರೊಡನೆ ನಡೆಸಿದ ಮಾತುಕತೆಯ ಕುರಿತು ಗಾಂಧಿಜಿಯವರೊಡನೆ ಹೇಳಿದರೆಂದು ತಿಳಿದುಬರುತ್ತದೆ

**ವೈಸರಾಯರ ಮಾತುಕತೆಗಳು**

ಬೊಂಬಯಿಗೆ ಬಂದ ವೈಸರಾಯರು ರಾಷ್ಟ್ರದ ಅನೇಕ ಮುಖಂಡರೊಡನೆ ಮಾತುಕತೆ ನಡೆಸಿದರು. ವೈಸರಾಯರು ಮಹಾತ್ಮಾಜಿಯವರನ್ನು ಬೇಗನೆ ಆಮಂತ್ರಿಸುವರೆಂದೂ ಗೊತ್ತಾಗಿದೆ

**ಭಾರತಕ್ಕೆ ಪಾರ್ಲಿಮೆಂಟ್ ಸದಸ್ಯರು**

ಪಾರ್ಲಿಮೆಂಟಿನ ಎಲ್ಲಾ ಪಕ್ಷಗಳ ಸದಸ್ಯರೂ, ಒಂದು ಪ್ರತಿನಿಧಿ ಮಂಡಳವು ಭಾರತಕ್ಕೆ ಬರುವ ವಾರಗಳಲ್ಲಿ ಬರುವುದಾಗಿ ವಾರ್ತೆಯಿದೆ

**ವೈಸರಾಯರ ಭಾಷಣ**

ವೈಸರಾಯರು ಒಂದು ಭಾಷಣ ಮಾಡುತ್ತಾ ಅದರಲ್ಲಿ ಭಾರತೀಯರಿಗೆ ವೆಸ್ಟ್ ಮಿನಿಸ್ಟರ್ ಕಾಯಿದೆಯ ನ್ಯಾಯದಂತೆ ಸಾಮಂತ ಸ್ವರಾಜ್ಯವನ್ನು ಕೊಡಬಹುದೆಂದೂ ಆದರೆ ಅಲ್ಪ ಸಂಖ್ಯಾಕರ ಹಿತರಕ್ಷಣೆಯು ಸರಕಾರದ ಕರ್ತವ್ಯವಾದುದರಿಂದ, ಅಲ್ಪ ಸಂಖ್ಯಾಕ ಬಹು ಸಂಖ್ಯಾಕರು ತಮ್ಮ ತಮ್ಮೊಳಗೆ ಇತ್ಯರ್ಥಕ್ಕೆ ಬರಬೇಕೆಂದೂ ಅಭಿಮತವಿತ್ತರು

**ಮುಂದಾಳುಗಳ ಧೋರಣೆ**

ಈ ಪ್ರಕಟಣೆಗೆ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು, ನೆಹರುಗಳು, ಸರ್ದಾರ ಪಟೇಲ ಪ್ರಭೃತಿ ರಾಷ್ಟ್ರದ ಪ್ರಮುಖ ಮುಖಂಡರು ಉತ್ತರ ಕೊಡುತ್ತಾ ನಾವು ಕೇಳುವುದು ಸಂಪೂರ್ಣ ಸ್ವಾತಂತ್ರ್ಯವೆಂದೂ ಅದಕ್ಕಿಂತ ಕಡಿಮೆಯದು ನಮಗೆ ಅಗತ್ಯವಿಲ್ಲವೆಂದೂ, ಅಲ್ಪ ಸಂಖ್ಯಾಕರ ವಿಷಯವನ್ನು ಇತ್ಯರ್ಥಿಸುವಲ್ಲಿ ನಾವು ನಾವೇ ವಿಚಾರ ಮಾಡುವೆವೆಂದೂ ವೈಸರಾಯರು ಆ ಕುರಿತು ತೀರ್ಮಾನಿಸುವ ಅಗತ್ಯವಿಲ್ಲವೆಂದೂ ಸ್ಪಷ್ಟ ನುಡಿದಿರುವರು.

**ಮುಸ್ಲಿಂ ಲೀಗಿನೊಡನೆ ಮಾತುಕತೆಯಿಲ್ಲ**

ಕಾಂಗ್ರೆಸು ರಾಷ್ಟ್ರ ಘಟನಾ ಸಮಿತಿಯನ್ನು ಏರ್ಪಡಿಸಿ ತನ್ನ ರಾಜ್ಯಕೀಯ ಧ್ಯೇಯವನ್ನು ಸ್ಪಷ್ಟಪಡಿಸುವ ವರೆಗೆ ಮುಸ್ಲಿಂ ಲೀಗಿನೊಡನೆ ಮಾತುಕತೆ ನಡೆಸಲಾರೆವೆಂದೂ, ಬಹು ಸಂಖ್ಯಾತರಾದ ಹಿಂದುಗಳನ್ನು ಅಲ್ಪ ಸಂಖ್ಯಾಕರನ್ನಾಗಿ ಮಾಡಲು ಸಾಧ್ಯವಿಲ್ಲವೆಂದೂ ಸರ್ದಾರ ಪಟೇಲರು ಹೇಳಿದರು

**ಗಡಿನಾಡಿನಲ್ಲಿ ಗಲಭೆ**

ಗಡಿನಾಡಿನಲ್ಲಿ ಬನ್ನೂ ರಸ್ತೆಯಲ್ಲಿ ಕೆಲವರು ಡಕಾಯಿತರು, ಅಲ್ಲಿನ ಸೈನಿಕರ ಮೇಲೆ ಗುಂಡು ಹಾರಿಸಿದರು ೬ ಜನ ಸೈನಿಕರು ಸತ್ತರು, ೧೫ ಮಂದಿಗೆ ಗಾಯವಾಗಿದೆ. ಡಕಾಯಿತರು ಅಲ್ಲಿ ಒಂದು ಆಸ್ಪತ್ರೆಗೆ ನುಗ್ಗಿ ೧೪ ವರ್ಷದ ಹುಡುಗನೊಬ್ಬನನ್ನು ಅಪಹರಿಸಿ ಕೊಂಡೊಯ್ದರು ಇಫಿಪಕೀರನ ಪಕ್ಷದವರು ಎರಡು ಲಾರಿಗಳನ್ನು ಲೂಟಿ ಮಾಡಿದರು ಅದರಲ್ಲಿದ್ದ ಕೆಲವರನ್ನು ಅಪಹರಿಸಿದರು. ಟಪಾಲು ಗಾಡಿಗಳನ್ನು ತಡೆದು ಟಪ್ಪಾಲು ಚೀಲಗಳನ್ನು ಅಪಹರಿಸಿದರು.

**ಮೈಸೂರಲ್ಲಿ ಸತ್ಯಾಗ್ರಹಿಗಳಿಗೆ ಪೀಡೆ!**

ಮೈಸೂರಲ್ಲಿ ಸತ್ಯಾಗ್ರಹ ನಡೆಸಿ, ಸೆರೆಮನೆಗೆ ತೆರಳಿದ ದೇಶಸೇವಕರಿಗೆ ಪೋಲೀಸರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಚಿತ್ರಹಿಂಸೆ ಕೊಡುತ್ತಿರುವರೆಂದು ಸುದ್ದಿಯಿದೆಯಷ್ಟೆ? ಈಗ ಆ ಕುರಿತು ವಿಚಾರಣೆ ಮಾಡಲು ಜಸ್ಟಿಸ್ ಎ. ಆರ್. ನಾಗೇಶ್ವರಯ್ಯನವರನ್ನು ವಿಚಾರಣಾಧಿಕಾರಿಗಳನ್ನಾಗಿ ಸರ್ಕಾರದವರೇ ನೇಮಿಸಿದ್ದಾರಂತೆ!

**ಕ್ವೆಟ್ಟದಲ್ಲಿ ಭೂಕಂಪದ ಅನುಭವ**

ಜನವರಿ ೭ರಂದು ಕ್ವೆಟ್ಟರಲ್ಲಿ ಭೂಕಂಪದ ಅನುಭವವಾಯಿತು, ಆದರೆ ಯಾವ ಹಾನಿಯೂ ಸಂಭವಿಸಲಿಲ್ಲವೆಂದು ತಿಳಿದಿದೆ

**ರಾಣಿ ಮೊಹರು ರೂಪಾಯಿ**

ವಿಕ್ಟೋರಿಯ ರಾಣಿ ರೂಪಾಯಿಗಳು ಚಲಾವಣೆಯಲ್ಲಿವೆಯೆಂದು ಇಂಡಿಯಾ ಸರಕಾರದ ಪ್ರಕಟಣೆಯು ತಿಳಿಸುತ್ತದೆ.

**ಅಖಿಲಭಾರತ ಮಹಿಳಾ ಸಮ್ಮೇಳನ**

ಅಖಿಲಭಾರತ ಮಹಿಳಾ ಸಮ್ಮೇಳನವು ತಾ ೨೭ರಿಂದ ೩೧ರ ವರೆಗೆ ಅಲಹಾಬಾದಿನಲ್ಲಿ ಸೇರುವುದು ಅನೇಕ ಗಣನೀಯ ವ್ಯಕ್ತಿಗಳು ಬರುವರೆಂದು ತಿಳಿದಿದೆ. ಮೇಡಂ ಮೊಂಟೆಸೋರಿ, ಶಾಂತಿನಿಕೇತನದ ಮಿಸ್ ಮಾರ್ಜೊರಿಸ್ಕೈಸ್, ಹಾಲೆಂಡಿನ ಮೇಡಂ ಫ್ರೀಡೀ ಸರೋಜಿನಿ ನಾಯ್ಡು ಮೊದಲಾದವರು ಬರುವರು. ಪಂಡಿತ ನೆಹರುಗಳು ಪ್ರಾರಂಭ ದಿನದ ಸಮ್ಮೇಳನದಲ್ಲಿ ಭಾಷಣ ಮಾಡುವರು, ಮಿಸೆಸ್ ಹಮೀದಾಲಿಯವರು ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

**ಪುನಃ ವೈಸರಾಯರು–ಮುಖಂಡರ ಭೇಟಿ**

ವೈಸರಾಯರು ಬೊಂಬಯಿಯಲ್ಲಿ ಭುಲಾಭಾಯಿ ದೇಸಾಯಿಯವರನ್ನು ಕಂಡು ಮಾತನಾಡಿದರು. ಮಿ॥ ಜಿನ್ನರನ್ನು ಭೇಟಿಯಾದರು. ಬೇಗನೇ ಮಹಾತ್ಮಾಗಾಂಧಿಜಿಯವರನ್ನೂ ಭೇಟಿಯಾಗಬಹುದೆಂದು ನಂಬಲಾಗಿದೆ

**ಹೈದರಾಬಾದ್ ಕಾಂಗ್ರೆಸಿನ ಮೇಲೆ ಮುಸ್ಲಿಮರ ದೂರು!**

ಹೈದರಾಬಾದ್ ಕಾಂಗ್ರೆಸು ರಾಷ್ಟ್ರೀಯ ಸಂಘವೊಂದು ಹೆಸರಿಟ್ಟುಕೊಂಡಿರುವುದಾದರೂ, ಅದರಲ್ಲಿ ಕ್ರಾಂತಿಕಾರಕ ವರ್ತನೆಗಳಿರುವುದರಿಂದ ಅದನ್ನು ತಡೆದು ಹಾಕಲು ಎಲ್ಲರೂ ಯತ್ನಿಸಬೇಕೆಂದು ಅಲ್ಲಿನ ಮುಸ್ಲಿಂ ಸಂಘವನ್ನು ಪ್ರಕಟಣೆ ಕೊಟ್ಟಿದೆ

**ಟರ್ಕಿಗೆ ನೈಜಾಮರ ಸಹಾಯ**

ಟರ್ಕಿಯ ಭೂಕಂಪದಿಂದ ನೊಂದವರಿಗೆ ಸಹಾಯವಾಗಿ ಹೈದರಾಬಾದಿನ ನಿಜಾಮರು ೧೩ ಲಕ್ಷ ಫ್ರಾಂಕುಗಳನ್ನು (ಸುಮಾರು ಒಂದು ಲಕ್ಷ ರೂಪಾಯಿ) ಕೊಟ್ಟಿರುವುದಾಗಿ ತಿಳಿದಿದೆ.

**ಶ್ರೀ ಎಂ ಎಸ್ ರ್‍ಯೊ**

ವೈಸರಾಯರ ಭಾಷಣದ ವಿಷಯವಾಗಿ ಉತ್ತರ ಕೊಡುತ್ತಾ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಭಾರತವು ಸಂಪೂರ್ಣ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತದೆ ಸಾಮಂತ ಸ್ವರಾಜ್ಯವನ್ನಲ್ಲ ಎಂದು ಹೇಳಿದುದು ಯೋಗ್ಯವಾಗಿದೆಯೆಂದು ಎಂ. ಎಸ್. ರಾಯರುಗಳು ಹೇಳಿದರು.

**ಪಂಡಿತ ನೆಹರು**

ಸಂಯುಕ್ತ ಪ್ರಾಂತದಲ್ಲಿ ಪ್ರಯಾಣ ಮಾಡುತ್ತಾ ಪಂಡಿತ ನೆಹರುಗಳು ಅನೇಕ ಸಾರ್ವಜನಿಕ ಭಾಷಣಗಳನ್ನು ಕೊಟ್ಟು, ಅವುಗಳಲ್ಲಿ ಇಂದಿನ ಕಾಂಗ್ರೆಸಿನ ಕೆಲಸ ವಿಷಯವಾಗಿ ಜನರಿಗೆ ವಿವರಿಸಿ ಹೇಳಿದರು

**ಶ್ರೀ ಬಿ. ಜಿ ಖೇರ್**

ಬೀರಾರ್ ಪ್ರಾಂತಿಕ ರಾಜಕೀಯ ಪರಿಷತ್ತಿನ ಅಧ್ಯಕ್ಷ ಭಾಷಣದಲ್ಲಿ ಶ್ರೀ. ಬಿ. ಜಿ. ಖೇರರು ಭಾರತದ ಸ್ವಾತಂತ್ರ್ಯ ಸಾಧನೆಗೆ ಗಾಂಧಿಜಿಯವರು ಹಾಕಿದ ಹಾದಿಯು ಯೋಗ್ಯವಾಗಿದೆಯೆಂದೂ, ಅವರ ಮುಂದಾಳುತನದಿಂದ ನಮಗೆ ಶ್ರೇಯಸ್ಸಿದೆಯೆಂದೂ ಹೇಳಿದರು.

**ಸುಭಾಸ್ ಬೋಸ್**

ಇಂದಿನ ಪರಿಸ್ಥಿತಿಯಲ್ಲಿ ಎಡಪಕ್ಷದ ಮುಖಂಡನನ್ನು ಕಾಂಗ್ರೆಸಿನ ಅಧ್ಯಕ್ಷಪೀಠಕ್ಕೆ ನಿಲ್ಲಿಸುವುದು ಯುಕ್ತವಾಗಿಲ್ಲವೆಂದು ಶ್ರೀ. ಸುಭಾಸಬೋಸರು ಹೇಳಿದರು.

## ಕಾಂಗ್ರೆಸಿನಲ್ಲಿ ಎರಡು ವಾದ ಸರಣಿಗಳು!

ಇಂದು ಕಾಂಗ್ರೆಸಿನಲ್ಲಿ ಪ್ರಧಾನವಾಗಿ ತಲೆಯೆತ್ತಿ ಕಾಣುತ್ತಿರುವ ಎರಡು ಪಕ್ಷಗಳಿವೆ. ಒಂದು, ಮಹಾತ್ಮಾಜಿಯವರ ಮುಂದಾಳುತನದಿಂದ ಇಂದು ಅಧಿಕಾರದಲ್ಲಿರುವ ಬಲಪಕ್ಷ. ಇನ್ನೊಂದು ಕಾಂಗ್ರೆಸಿನಲ್ಲಿ ಬಹುಮತವಿಲ್ಲದೆ ಇದ್ದು, ಗಾಂಧೀಜಿಯ ವಾದದಲ್ಲಿ ಅತೃಪ್ತರಾಗಿರುವ ಸೋಶಿಯಲಿಸ್ಟ್, ರಾಯಿಸ್ಟ್, ಫಾರ್ವಾರ್ಡ್ ಬ್ಲಾಕ್ ಇವುಗಳಿಂದ ಕೂಡಿದ ಎಡ ಪಕ್ಷ. ಇವುಗಳಲ್ಲಿ ಕಾಣುವ ಈ ವಿಧದ ಭೇದಕ್ಕೆ ಎರಡು ವಾದ ಸರಣಿಗಳು ಕಾರಣವಾಗಿವೆ.

### ವಾದದ ಮೂಲ

ಕಾಂಗ್ರೆಸು ಹೋರಾಟಮಾಡುವ ಸಂಸ್ಥೆಯಾಗಿರಬೇಕು. ತನ್ನ ಹಿಂದಿನ ಆ ಸತ್ವವನ್ನು ಇಂದು ಅದು ಕಳೆದುಕೊಂಡಿದೆ. ಇದರಿಂದ ಪ್ರಯೋಜನವಿಲ್ಲವೆನ್ನುತ್ತಾರೆ ಎಡಪಕ್ಷದವರು.

ಆದರೆ, ಇಂದಿನ ರಾಷ್ಟ್ರದ ಪರಿಸ್ಥಿತಿಯಲ್ಲಿ ಆಂದೋಲನವು ಯಶಸ್ವಿಯಾಗಲಾರದು; ಜಾತೀಯ ಜಗಳಗಳೇ ಮೊದಲಾದ ಅನರ್ಥಗಳನ್ನು ನಾವು ಎದುರಿಸಬೇಕಾಗಬಹುದು. ಎಡಪಕ್ಷದವರು ಹೇಳುವಂತೆ, ಇಂದು ಆಂದೋಲನವನ್ನು ಆರಂಭಿಸುವುದೆಂದರೆ, ಕೋವಿಮದ್ದಿಗೆ ಬೆಂಕಿಕೊಡುವಂತೆ ಅನರ್ಥವಾದೀತು. ಆದುದರಿಂದ ಅಂತಹ ಅನರ್ಥಗಳು ಒದಗದಂತೆ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿ, ಕೊನೆತನಕ ಹೋರಾಡಲು ಸಿದ್ಧರಾಗುವ ಎನ್ನುತ್ತಾರೆ ಬಲಪಕ್ಷದವರು.

ಹೀಗೆ ಬಲ ಪಕ್ಷದವರು ಹೇಳುವುದರಿಂದ ಎಡಪಕ್ಷದವರ ಧೋರಣೆಯು ಇನ್ನಷ್ಟು ಉಗ್ರವಾಗಿದೆ. ಗಾಂಧಿಜಿಯವರ ಮುಂದಾಳುತನದಿಂದ ಇರುವ ಬಲಪಕ್ಷದವರು, ಕಾಂಗ್ರೆಸು ಸಂಸ್ಥೆಯನ್ನು ಬ್ರಿಟಿಷರ ಸಾಮ್ರಾಜ್ಯಶಾಹಿಯ ಕೈಗೊಂಬೆಯಾಗಿ ಮಾಡುವರೆಂದೂ, ಅವರಿಗೆ ಸಂಪೂರ್ಣ ಸ್ವಾತಂತ್ರ್ಯವು ಬೇಕಾಗಿಲ್ಲವೆಂದೂ ಅಧಿಕಾರ ಲಾಲಸೆ ಮಾತ್ರ ಇದ್ದೆಯೆಂದೂ ಎಡಪಕ್ಷದ ನಾಯಕರು ದೂರ ತೊಡಗಿದರು.

### ರಾಜಿನಾಮೆಯ ಮೇಲೆ?

ಆದರೆ ಈಗ ತಾನೇ ಮಂತ್ರಿಪದವಿಯ ಅಧಿಕಾರಗಳಿಗೆ ರಾಜಿನಾಮೆ ಕೊಟ್ಟು ಹೊರಬಂದಿರುವ ಕಾಂಗ್ರೆಸು ಬಲಪಕ್ಷದ ಮುಖಂಡರ ಮನೋಗತವೇನಿರಬಹುದೆಂಬವಿಷಯವಾಗಿ ವಿಚಾರ ಮಾಡತಕ್ಕ ಸಮಯವು ಒದಗಿದೆ. ಅಧಿಕಾರಲಾಲಸೆಯುಳ್ಳವರಲ್ಲವೆಂಬುದಂತೂ ಇದರಿಂದ ಸುಸ್ಪಷ್ಟವಾಗಿದೆ. ಆದರೆ ಮುಂದಕ್ಕಾದರೂ, ಬ್ರಿಟಿಷ್ ಸರಕಾರದೊಡನೆ ಶಾಂತರೀತಿಯಿಂದಲೇ ವ್ಯವಹಾರವನ್ನು ನಡೆಸುವರೇ, ಇಲ್ಲವೇ ಹೊರಬಂದು ನಿಂತು, ಅಸಹಕಾರ ಸತ್ಯಾಗ್ರಹ ಸಮರಕ್ಕೆ ತಯಾರಿ ಮಾಡಲಿರುವರೋ ಎಂಬುದು ಇಂದು ಎಲ್ಲರಲ್ಲಿಯೂ ಇರತಕ್ಕ ಮುಖ್ಯ ಪ್ರಶ್ನೆ!

### ಗಾಂಧಿ ನೆಹರುಗಳು

ಇಂದಿನ ಸಂದರ್ಭದಲ್ಲಿ ಕಾಂಗ್ರೆಸು ಹೋರಾಟಕ್ಕೆ ಇಳಿಯುವ ಕಾರ್ಯವನ್ನು ಮಾಡುವುದು ಸರಿಯಲ್ಲವೆಂದು ಮಹಾತ್ಮಾಜಿ ಮತ್ತು ಜವಾಹಿರಲಾಲ ನೆಹರುಗಳು ಅಭಿಪ್ರಾಯಪಡುತ್ತಾರೆ. ಮಹಾತ್ಮಾಜಿಯವರು ಇಂದು ಸತ್ಯಾಗ್ರಹವು ಬೇಡವೆನ್ನುವುದರ ಮೂಲಕಾರಣವೆಂದರೆ, ಜಾತಿಯ ದಂಗೆಯುಂಟಾಗಬಹುದೆಂಬುದು. ಈ ಅವರ ಊಹನೆಗೆ ಅವರ ಬಹಳ ಕಾಲದ ರಾಜಕೀಯ ಅನುಭವ, ಸತ್ಯಾಗ್ರಹ ಪ್ರಯೋಗ ಪರೀಕ್ಷೆಗಳೆಲ್ಲವೂ ಆಧಾರವಾಗಿವೆಯೆಂಬುದನ್ನು ಯಾರೂ ಮರೆಯಲಾರರು.

### ಹರಿತವಾದ ಕತ್ತಿ

ರಾಜಕೀಯರಂಗದಲ್ಲಿ ಆಂದೋಲನವನ್ನು ಆರಂಭಿಸುವುದೆಂದರೆ ಎರಡು ಕಡೆಗಳಲ್ಲಿಯೂ ಹರಿತವಿರುವ ಕತ್ತಿಯನ್ನು ತಿರುಗಿಸಿದಂತೆ. ವಿರೋಧಿಯನ್ನು ಕೆಳಗುರುಳಿಸುವುದರೊಡನೆ ಅದು ಆತ್ಮನಾಶಕ್ಕೂ ಕಾರಣವಾಗಬಹುದು. ಇಂತಹ ಸಂಕಷ್ಟದ ಪ್ರಯೋಗವನ್ನು ನಾವೀಗ ಮಾಡುವುದು ಸರಿಯೆ? ನಮ್ಮ ರಾಜಕೀಯ ಧೋರಣೆಯಲ್ಲಿ ಬಹಳ ವಿಶ್ವವಿಶಾಲ ತತ್ವಗಳಿರುವಾಗ ಅವುಗಳನ್ನೆ ಸರಿಗೊಳಿಸಿ, ಭಾರತದ ಸ್ವಾತಂತ್ರ್ಯವನ್ನು ಭವ್ಯವಾದ ತಳಹದಿಯಲ್ಲಿ ಕಟ್ಟಬೇಡವೇ ಎನ್ನುತ್ತಾರೆ ಬಲಪಕ್ಷದ ಮುಖಂಡರಾದ ಗಾಂಧಿಜಿಯವರು.

ಹೀಗೆ ಕಾಂಗ್ರೆಸಿನಲ್ಲಿ ವಾದ ಸರಣಿಗಳಿವೆ. ಈ ಎರಡು ಸರಣಿಗಳಲ್ಲಿಯೂ ಪ್ರಾಮುಖ್ಯ ವಿಚಾರಗಳೇ ಅಡಕವಾಗಿವೆ.

### ಮುಂದಿನ ಕಾರ್ಯಗಳು

ಜನತೆಯನ್ನು ಪರೀಕ್ಷಿಸಬೇಕೆಂಬ ಉದ್ದೇಶದಿಂದ ಇಂದಿನ ಸ್ವಾತಂತ್ರ್ಯ ಪ್ರತಿಜ್ಞೆಯು ಗಾಂಧಿಜಿಯವರ ಇಚ್ಛೆಯಂತೆ ಜನರ ಮುಂದಿಡಲಾಗಿದೆ 'ಬ್ರಿಟಿಷರ' ಧೋರಣೆಯನ್ನು ಖಂಡಿಸಿ ಅಧಿಕಾರದಿಂದ ಹೊರ ಬಂದ ಕಾಂಗ್ರೆಸ್ ಪ್ರಧಾನರು, ಮುಂದಕ್ಕೆ ಅಸಹಕಾರ ಆಂದೋಲನವನ್ನು ಆರಂಭಿಸಬಹುದೆಂದು ಸೂಚನೆಯೂ ಕೇಳಿ ಬರುತ್ತಿದೆ.

ರಾಮಗಡ ಕಾಂಗ್ರೆಸಿನಲ್ಲಿ ಅಂತಹ ಕಾರ್ಯಕ್ರಮವೊಂದು ಮುಂದೆ ಬರಲಿದೆಯೆಂದು ಹಲವರು ಹೇಳುತ್ತಿದ್ದಾರೆ! ಹಾಗಾದರೆ ಇಂದಿನ ಈ ಎರಡು ವಾದಗಳೂ ಒಂದಾಗಿ, ಕಾಂಗ್ರೆಸಿನಲ್ಲಿ ಮುಂದೆ ಭೇದಗಳಿಲ್ಲದಂತೆ ಆಗುವ ಸಂದರ್ಭವು ಬೇಗನೇ ಒದಗಲಿದೆಯೆಂದು ಹಾರೈಸಬಹುದೆ?





ಸಂಕಟಪ್ರದವಾದ ಮೂಲವ್ಯಾಧಿಗೆ ತೀವ್ರ ವಿಮೋಚನೆ

ಈ ಹೆಸರುವಾಸಿಯಾದ ಮುಲಾಮು ಕಜ್ಜಿ ಮತ್ತು ಬೇನೆಗಳನ್ನು ಗುಣಪಡಿಸುವುದು

ನೀವು ಮೂಲವ್ಯಾಧಿಯಿಂದ ನರಳುವಿರಾದರೆ ಜ್ಯಾಂಬಕನ್ನು ಕೂಡಲೇ ಉಪಯೋಗಿಸಿರಿ. ಈ ಆಶ್ಚರ್ಯಕರವಾದ ಗಿಡಮೂಲಿಕೆಗಳ ಮುಲಾಮು ಇಂಥಾ ಸಾವಿರಾರು ಸಂಗತಿಗಳಲ್ಲಿ ಉತ್ತಮವಾದದೆಂದು ಹೆಸರುಪಡೆದಿದೆ, ಇದು ಮೂಲವ್ಯಾಧಿಯಿಂದ ರಕ್ತಬರುವ ಸಣ್ಣ ಸಣ್ಣ ರಕ್ತನಾಳಗಳನ್ನು ಮುದುಡಿಕೊಳ್ಳುವಂತೆ ಮಾಡಿ ರಕ್ತವು ಬಾರದಂತೆ ಮಾಡುವುದಲ್ಲದೆ ಮೂಲವ್ಯಾಧಿಯೇ ಮಾಯವಾಗುವಂತೆ ಮಾಡುವುದು. ಆದುದರಿಂದ ಒಂದು ಡಬ್ಬಿ ಜ್ಯಾಂಬಕನ್ನು ತೆಗೆದುಕೊಂಡು ದಿನಾಲೂ ಎರಡು ಯಾ ಮೂರು ಬಾರಿ ಹಚ್ಚಿರಿ. ಎಲ್ಲಾ ಔಷಧಿ ವ್ಯಾಪಾರಿಗಳಿಂದಲೂ ರೂ. 1 ಮತ್ತು 2-4-0 ರಂತೆ ಮಾರಲ್ಪಡುತ್ತದೆ.

ಏಜಂಟ್ಸ್:

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

CANARA BANK LIMITED.

The only Bank to have a Share holders Association to safeguard the interests of Depositors, Constituents and Share holders.

RESOURCES OF A CRORE.

ಮಕ್ಕಳಿಗೆ ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

# ಕ್ರಾಂತಿಪುರುಷನಾಗಿದ್ದ ತರುಣ ಹಿಟ್ಲರ್

## ೧೯೨೩ನೇ ನವಂಬರ ೯ರ ಒಂದು ಘಟನೆ

[ಹಿಟ್ಲರನು ಅಧಿಕಾರಕ್ಕೇರಿದ ಚರಿತ್ರೆಯು ನಿಜವಾಗಿಯೂ ರೋಮಾಂಚಕವಾದುದು! ಹದಿನಾರನೆಯ ವರ್ಷದ ಪ್ರಾಯದಲ್ಲಿ ಆತನು ಶಾಲೆ ಬಿಟ್ಟಿದ್ದನು! ಜನ್ಮದಿಂದ ಆಸ್ಟ್ರಿಯನನಾಗಿ, ಆ ಮೇಲೆ ಬವೇರಿಯನ್ ಸೈನ್ಯದಲ್ಲಿ ಸ್ವಯಂಸೇವಕನಾಗಿ ಸೇರಿ, ಆಸ್ಟ್ರಿಯನರ ವಿರುದ್ಧ ಯುದ್ಧಮಾಡಿದನು ಆ ಯುದ್ಧದ ಮೇಲೆ ತಾನೇ ಹಲವು ಮಂದಿಯನ್ನು ಒಟ್ಟುಸೇರಿಸಿ, 'ಸಾಮಾಜಿಕ ಕ್ರಾಂತಿಕಾರಕ ಪಕ್ಷ'ವೊಂದನ್ನು ಸ್ಥಾಪಿಸಿ ಅವರನ್ನು ಶಿಕ್ಷಣ ಮಾಡಿದನು ೧೯೨೩ರಲ್ಲಿ ಅವನು ಜರ್ಮನಿಯಲ್ಲಿ ಪ್ರಬಲ ಮುಖಂಡನಾದನು. ಸರಕಾರವನ್ನೇ ತಾನು ಅಡಿಮೇಲು ಮಾಡುವೆನೆಂದು ಆತನು ಆಗ ಬಗೆದನು ಆದರೆ ೧೯೨೩ನೇ ನವಂಬರ ೯ರಂದು ಆತನ 'ಪುಶ್' ದಳಕ್ಕೆ ಆದ ಒಂದು ಚಾರಿತ್ರಿಕ ಅಪಜಯವು ಈ ಲೇಖನದಲ್ಲಿ ಕೊಡಲಾಗಿದೆ]

ಮ್ಯುನಿಕ್ ಸ್ವರ್ಗಕರ್ ಬ್ರೈವೆರಿನ ಬೀರ್ ಸೆಲ್ಲರ್‌ನಲ್ಲಿ ಮೊನ್ನೆ ತಾನೇ ಬಾಂಬು ಆಸ್ಫೋಟನವಾಯಿತಷ್ಟೆ! ಈ ಸ್ಥಳವು ನಾಜೀ ಆಂದೋಲನದಲ್ಲಿ ಐತಿಹಾಸಿಕ ಮಹತ್ವದ್ದಾಗಿದೆ! ಅದೇ ಕೋಣೆಯಲ್ಲಿ, ೧೯೨೩ರಂದು ಹಿಟ್ಲರನು 'ಪುಶ್' ಎಂಬ ಹೆಸರಿನ ಕ್ರಾಂತಿಕಾರೀ ಪಕ್ಷವೊಂದನ್ನು ಸಿದ್ಧಮಾಡಿ, ಜರ್ಮನ್ ಸರಕಾರದ ವಿರುದ್ಧ ಬಂಡಾಯವೆಬ್ಬಿಸಲು ಯತ್ನ ಮಾಡಿ ಸೋತು ಹೋದನು ಆ 'ಪುಶ್' ಪಕ್ಷದ ನೆನಹಿಗಾಗಿ ಪ್ರತಿವರ್ಷವೂ ನವಂಬರ ಒಂಬತ್ತರಂದು, ಹಿಟ್ಲರನೂ ನಾಜೀ ಪಕ್ಷದ ಪ್ರಮುಖ ಮುಂದಾಳುಗಳೂ ಅದೇ ಕೋಣೆಯಲ್ಲಿ ಹೋಗಿ ಸಭೆಗೂಡುವುದು ಸಂಪ್ರದಾಯವಾಗಿದೆ

### ಬಂಡಾಯದ ಭಾಷಣ!

### ಹಿಟ್ಲರನ ಕ್ರಾಂತಿಯ ನಿಶ್ಚಯ!

೧೯೨೩ನೆಯ ಇಸವಿ ನವಂಬರ ೮ನೇಯ ದಿನ ಹಿಟ್ಲರನೂ ಲುಡೆನ್‌ಡೋರ್ಫ್‌ನೂ ಮತ್ತು ಗೋರಿಂಗನೂ ತಮ್ಮ ಪಕ್ಷದ ಜನರ ಬೆಂಬಲದಿಂದ ಬಂಡಾಯವನ್ನೆಬ್ಬಿಸಿ, ಜರ್ಮನ್ ಸರಕಾರದ ಅಧಿಕಾರವನ್ನು ಬಲಾತ್ಕಾರದಿಂದ ತೆಗೆದುಕೊಳ್ಳಲು ಹಂಚಿಕೆಮಾಡಿದನು

ಈ ಹಂಚಿಕೆಯನ್ನು ಮಾಡುವ ಕೆಲ ದಿನಗಳ ಮೊದಲು ಹಿಟ್ಲರನು ಒಂದು ಕಡೆ ಮಹಾಸಭೆಯೊಂದನ್ನು ಕರೆದು, ಜರ್ಮನಿಯ ಸ್ವಾತಂತ್ರ್ಯಕಾಂಕ್ಷಿಗಳೊಡನೆ ಅರಿಕೆ ಮಾಡುವುದಾಗಿ ಪ್ರಸಿದ್ಧಿಸಿದನು ತುಂಬಾ ಜನರು ಕಿಕ್ಕಿರಿದು ನೆರೆದಿದ್ದರು. ಉಗ್ರ ಕ್ರಾಂತಿಕಾರಕನಾದ ಹಿಟ್ಲರನು, ಸಭಾರಂಗಕ್ಕೆ ಬಂದವನೇ ಎದುರುಗಡೆಯ ಗೋಡೆಗೆ ತನ್ನ ಕೈಯ ಪಿಸ್ತೂಲಿನಿಂದ ಒಮ್ಮೆ ಗುಂಡು ಹಾರಿಸಿ, ಎಲ್ಲರ ಮನಸ್ಸನ್ನೂ ತನ್ನ ಕಡೆಗೆ ಎಳೆದು, ತಾನು ಜರ್ಮನಿಯನ್ನು ನವನಿರ್ಮಾಣ ಮಾಡಲು ಸಿದ್ಧರಾಗಿರುವ ಯೋಧರನ್ನು ಮುನ್ನಡೆಸಲಿರುವೆನೆಂದೂ, ಈ ಬಗ್ಗೆ ತನಗೆ ಸ್ವಾತಂತ್ರ್ಯಾಭಿಮಾನಿಗಳೆಲ್ಲರೂ ನೆರವಾಗಬೇಕೆಂದೂ ಸಾರಿದನು

ಇಂತಹ ಅಕಸ್ಮಿಕವಾದ ಆವೇಶಪೂರ್ಣ ಭಾಷಣದಿಂದ ಜನಸಂದಣಿಯು ಬೆರಗಾಯಿತು ಹಲವು ಮಂದಿ ಸರಕಾರೀ ಅಧಿಕಾರಿಗಳು ಅಲ್ಲಿ ನೆರೆದಿದ್ದರು ನಾವು ಆತನಿಗೆ ಸರ್ವ ವಿಧದಿಂದಲೂ ನೆರವಾಗುವುದಾಗಿ ಆತನ ಆವೇಶವನ್ನು ಕಂಡು ಮರುಳಾಗಿ ಪ್ರತಿಜ್ಞೆ ಕೊಟ್ಟರು ಹೀಗೆ ಅಭಿವಚನವಿತ್ತ ಸರಕಾರೀ ಅಧಿಕಾರಿಗಳಲ್ಲಿ ಬವೇರಿಯಾ ವಾನ್‌ಕಹ್ರ್, ಲೋಸೋ ಮತ್ತು ಸೇಸರ್ ಎಂಬ ಸರಕಾರದ, ಪೋಲೀಸರ ಸೈನ್ಯದ ಮುಖ್ಯ ಅಧಿಕಾರಿಗಳು ಮೂವರು ಇದ್ದರು. ಈ ಎಲ್ಲಾ ಕಾರ್ಯಸಾಧನೆಗಳಿಂದ ಹಿಟ್ಲರನು ಮರುದಿನ ಮುಂಜಾನೆ ದಿನ ಬರ್ಲಿನಿಗೆ ಪ್ರಯಾಣ ಮಾಡಲು ಹಂಚಿಕೆಮಾಡಿ ಅಲ್ಲಿಂದ ತೆರಳಿದನು

### ೧೯೨೩ನೇ ನವಂಬರ ೯!

ಹಿಟ್ಲರ್, ಲುಡೆನ್‌ಡೋರ್ಫ್ ಮತ್ತು ಗೋರಿಂಗ್ ಈ ತ್ರಿಮೂರ್ತಿಗಳು ಸಾವಿರ ಮಂದಿ ತಮ್ಮ ಅನುಯಾಯಿಗಳೊಡನೆ ಜರ್ಮನ್ ಸರಕಾರವನ್ನು ಸ್ವಾಧೀನಪಡಿಸಲು ತೆರಳಿದರು ಮ್ಯುನಿಕಿನ ಬಳಿಯ ಪೆಲ್ಡ್‌ಹೆರೆಲ ಎಂಬ ಸ್ಥಳಕ್ಕೆ ಆ ಸೈನಿಕರ ಮೆರವಣಿಗೆಯು ಮುಟ್ಟಿತು ಎಂಬಷ್ಟರಲ್ಲಿ ಅವರನ್ನು ಸಶಸ್ತ್ರ ಪೋಲೀಸು ದಳವೊಂದು ಎದುರಿಸಿತು ಆದರೆ ಹಿಟ್ಲರ್ ಮತ್ತು ಲುಡೆನ್‌ಡೋರ್ಫ್ ಇವರಿಬ್ಬರು, ಹಿಂದಿನ ದಿನದ ಸಭೆಯಲ್ಲಿ ಪೋಲೀಸು ದಳದ ಮುಖ್ಯಸ್ಥನು ಹಿಂದಿನ ದಿನದ ಸಭೆಯಲ್ಲಿ ಕೊಟ್ಟ ಭರವಸೆಯನ್ನು ನಂಬಿ, ತಾವು ಸೈನ್ಯದ ಮುಂದುಗಡೆ ನಿಂತಾಕ್ಷಣ ಸಶಸ್ತ್ರ ಪೋಲೀಸರು ಸುಮ್ಮಗಾಗಬಹುದೆಂದು ಮುಂದೆ ಬಂದು ನಿಂತರು ಆದರೆ, ಆ ಪೋಲೀಸರಿಗೆ, ಅವರನ್ನು ತಡೆಯದೆ ಮುಂದುವರಿಯಲು ಬಿಡಬೇಕೆಂಬ ಆಣತಿಯಿರಲಿಲ್ಲವಾಗಿ, ಅವರನ್ನು ಮತ್ತೂ ತಡೆದು ನಿಲ್ಲಿಸಿದರು!

ಹಸ್ತಾ ಹಸ್ತ ಮಾರಾಮಾರಿಗಳು ನಡೆದುವು ನಾಜಿಗಳ ಪಾಳೆಯದಲ್ಲಿ ಹದಿನೆಂಟು ಮಂದಿ ಮಡಿದು ಬೀದಿಗುರುಳಿದರು! ಹಲವರಿಗೆ ಗಾಯಗಳಾದುವು ಅವರನ್ನು ಅಲ್ಲಿಯೇ ಬಿಟ್ಟು ಉಳಿದವರು ಕಕ್ಕಾಬಿಕ್ಕಿ ಚದರಿ ಓಡಿದರು ಗೋರಿಂಗನಿಗೆ ಎರಡು ಗುಂಡುಗಳ ಪೆಟ್ಟು ತಗ್ಗಲಿತು! ಲುಡೆನ್‌ಡೋರ್ಫನು ಮೂರ್ಛೆಗೊಂಡಿದ್ದನು. ಹಿಟ್ಲರನು ಹಿಮ್ಮೆಟ್ಟಿದನು, ಪ್ರಾಣವನ್ನು ಉಳಿಸಿಕೊಳ್ಳಲು, ಕಾರನ್ನು ಹತ್ತಿ ಕಣ್ಮರೆಯಾಗಿ ಓಡಿಹೋದನು!

ಹೀಗೆ ೧೯೨೩ರಲ್ಲಿ ಹಿಟ್ಲರನ ಚಾರಿತ್ರಿಕ ಮಹತ್ವದ 'ಬೀರ್ ಸೆಲ್ಲರ್ ಪುಶ್' ದಂಡೆಯಾತ್ರೆಯು ಕೊನೆಗೊಂಡಿತು!

'ದುಬಾರಿ ಗುಣವುಳ್ಳ ಕುಟಿ ಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವ ಇದು ಮೈಯ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೇ ಅಂದವಾಗಿರಿಸುವುದು ಪರಿಮಳಿತನ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಸಂತವಿಸಿ ವಾಸಿಮಾಡಿ ವಿಷಹಾರಕ ಗುಣವಿರುವುದು ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ಮೈಯ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕುರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು—ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು

**ಕುಟಿಕೂರಾ ಸೋಪ್**

**Cuticura Soap**

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ (ಮಿತವ್ಯಯಕ್ಕೆ) ಮತ್ತು ಸಣ್ಣ ಬಿಲ್ಲೆಯ (ಪರಿಚಯದ ಸೈಜು) ಆಕಾರದಲ್ಲಿಯೂ ದೊರಕುವುದು.

**ಸಾಹುಕಾರ ಶ್ರೀನಿವಾಸ ರಂಗಪ್ಪೈ**

[ಸ್ಥಾಪನೆ: ಕ್ರಿ ಶ 1858]

**ಉಜ್ವಲ ಕಾಂತಿಯ**

**ವಜ್ರಗಳಿಗೆ**

**ನೂಲು ಮತ್ತು ಕೈಮಗ್ಗದ ವಸ್ತುಗಳ**

**ಖಾತ್ರಿ ವ್ಯಾಪಾರಕ್ಕೆ**

**ಸಾಹುಕಾರ ಮಹಾಲ್, ಮಂಗಳೂರು.**

**The Auttur & Jawahar Bank, Limited.**

**ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು**

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು ಬ್ರೆಂಚ್ ಸೆಂಟ್‌ಲೆಂಡ್‌ಪೇಟೆ

ರಿಜಿಸ್ಟರ್ಡ್ ಮೂಲಧನ ರೂ 1,00,000. ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು, ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½%

,, 6 ತಿಂಗಳಿಗೆ 4% ,, 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು :

ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್

ಧಾರ್ಮಿಕ ವಿಚಾರ:

# ಸನಾತನಿ ಯಾರು?

## ಗಾಂಧಿಜಿಯವರ ಸ್ಪಷ್ಟೀಕರಣ

ಮಹಾಭಾರತದಲ್ಲಿ ಹೇಳಿದ ಸ್ತ್ರೀ ಕಾರವೆಂದರೆ, ಅಹಿಂಸೆ ಸತ್ಯ, ಅಸ್ತೇಯ, ಶುಚಿ, ಮತ್ತು ಧರ್ಮಗಳನ್ನು ಚೆನ್ನಾಗಿ ಪಾಲಿಸುವುದೇ ಸನಾತನ ಧರ್ಮವಾಗಿದೆ. ನನ್ನ ಶಕ್ತ್ಯಾನುಸಾರ ಈ ಎಲ್ಲವುಗಳನ್ನು ಅನುಸರಿಸುತ್ತ ಬರಲು ಪ್ರಯತ್ನ ಮಾಡಿದ್ದೇನೆ. ಆದುದರಿಂದ ನಾನೊಬ್ಬ ಸನಾತನಿಯೆಂದು ಕರೆಯಿಸಿಕೊಳ್ಳಲು ಹೆದರುವುದಿಲ್ಲ. ಆದರೆ ಅಸ್ಪೃಶ್ಯತಾ ನಿವಾರಣೆ ಕಾರ್ಯವನ್ನು ಸಾಗಿಸುತ್ತಿದ್ದಾಗ, ನಾನು ಸನಾತನಿಯೆಂದು ಹೇಳಿಕೊಳ್ಳುವುದನ್ನು ಕೆಲ ವಿರೋಧಿಗಳು ಅಲ್ಲಗಳೆದರು. ಅವರು ತಾವು ಸನಾತನಿಗಳೆಂದು ತೋರಿಸಿಕೊಂಡರು. ನಾನು ಮಾತ್ರ ಹೆಸರಿಗಾಗಿ ಗೊಂದಲವನ್ನೆಬ್ಬಿಸಲಿಲ್ಲ. ಆದುದರಿಂದ ವಿರೋಧಿಗಳನ್ನು ಅವರಿಗೆ ಸಮ್ಮತಿಸುವ ಹೆಸರಿನಿಂದಲೇ ಅವರನ್ನು ಬಣ್ಣಿಸಿದೆ. 'ಸನಾತನ ಧರ್ಮಸಭಾ, ಪಂಜಾಬ'ದ ಕಡೆಯಿಂದ ಬರೆದ ಲೇಖಕರೊಬ್ಬರ ಲೇಖ ನನ್ನ ಕೈಸೇರಿದೆ. ಅದರಲ್ಲಿ 'ನಾನು ವಿರೋಧಿಗಳಿಗೆ 'ಸನಾತನಿ'ಗಳೆಂದು ಸಂಬೋಧಿಸಿದಕ್ಕೆ ವಿರೋಧಾಭಿಪ್ರಾಯವನ್ನು ಸೂಚಿಸಿದೆ. ಆ ವಿರೋಧಿಗಳ ಆಶಯವಿಷ್ಟೇ. ಎಲ್ಲ ಸನಾತನಿಗಳು ಅಸ್ಪೃಶ್ಯತೆಯಲ್ಲಿ ವಿಶ್ವಾಸವಿಡುವರು ಮತ್ತು ನನ್ನನ್ನು ದೂಷಿಸುವುದರಲ್ಲಿ ಹೆಚ್ಚು ಆನಂದಿತರಾಗುವರು ಎಂದು ವಿದಿತವಾಗುತ್ತದೆ. ಆ ಪತ್ರವು ಈ ರೀತಿಯಾಗಿದೆ.

ಮಹಾತ್ಮಾಜಿಯವರೇ, ದಕ್ಷಿಣ ಪ್ರಾಂತಕ್ಕೆ ನೀವು ಸಮೀಪದವರಾದ್ದರಿಂದ ಅಲ್ಲಿಯ ಸನಾತನಿಗಳ ಪರಿಚಯವು ನಮ್ಮ ಉತ್ತರದ ಕಡೆಗಿನ ಸನಾತನಿಗಳಕ್ಕಿಂತಲೂ ಹೆಚ್ಚಾಗಿರಬಹುದು. ಪಂಜಾಬದಲ್ಲಿ ನಾವು ಹರಿಜನರಿಗಾಗಿ ಮಂದಿರ ಪ್ರವೇಶ ಮೊದಲಾದ ರಿಯಾಯತಿಗಳನ್ನು ತೋರಿಸುತ್ತಿದ್ದೇವೆ. ಅಖಿಲಭಾರತ ಸನಾತನ ಧರ್ಮ ಪ್ರತಿನಿಧಿ ಸಭಾಪರಿಷತ್ತಿನವರಿಂದ ಈ ವಿಷಯವಾಗಿ 'ವ್ಯವಸ್ಥೆ'ಗಳನ್ನು ದೊರಕಿಸಿಕೊಂಡಿದ್ದೇವೆ. ಈ ಪ್ರಾಂತದಲ್ಲಿ ದೇಗುಲಗಳಾದರೂ ಸ್ವಲ್ಪವೇ ಇರುವವು. ಅವುಗಳ ಮಹಾಂತರು ಅಥವಾ ಪೂಜಾರಿಗಳು ಹರಿಜನ ದೇವದರ್ಶನದ ಹಕ್ಕನ್ನು ಅಲ್ಲಗಳೆಯುತ್ತಾರೆ. ನಮ್ಮ ಕಾರ್ಯಕ್ಕಾಗಿ ನಿಮ್ಮ ಲೇಖವು ಎಷ್ಟು ಮಹತ್ವದ್ದೆಂಬುದನ್ನು ನೀವೇ ತಿಳಿದು ನೋಡಿರಿ. ನಮ್ಮ ಪ್ರಕಟನೆಗಳೂ ಸ್ಪಷ್ಟೀಕರಣಗಳೂ ಯಾವ ಪರಿಣಾಮವನ್ನೂ ಮಾಡಲಾರವು. ನಮ್ಮ ನೂರಾರು ಭಾಷಣಗಳಿಗಿಂತಲೂ ನಿಮ್ಮದೊಂದು ಶಬ್ದ ಮಾತ್ರ ಈ ಕಾರ್ಯ ಮಾಡಬಲ್ಲದು. ಪಂ. ಮದನಮೋಹನ ಮಾಲವಿಯಾ ಮತ್ತು ಗೋಸ್ವಾಮಿ ಗಣೇಶ ದತ್ತಜೀ ಇವರ ನೇತೃತ್ವದಲ್ಲಿ ಹರಿಜನ ಉದ್ಧಾರದ ಕೆಲಸ ಮಾಡುತ್ತಿದ್ದೇವೆ. ಹರಿಜನ ಚಳವಳಿ ವಿರೋಧಕರಿಗೆ ಬೇರೆ ಮತ್ತಾವುದಾದರೂ ಹೆಸರನ್ನು ಸೂಚಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ. 'ಸನಾತನಿ' ಶಬ್ದವು ಅವರಿಗೆ ಅಷ್ಟೊಂದು ಮಾತ್ರಕ್ಕೂ ಸಮಂಜಸವೆನಿಸಲಿಕ್ಕಿಲ್ಲ.

'ನನ್ನ ಮಿತ್ರರು ನಾನು ಉತ್ತರ ಕಡೆಯ ಸನಾತನಿಗಳ ಪರಿಚಯವಿಲ್ಲದವನೆಂಬ ವಿಷಯ ತಪ್ಪು ತಿಳಿದುಕೊಂಡಿದ್ದಾರೆ. ಕಾಶಿ ಪಟ್ಟಣ ಉತ್ತರದಲ್ಲಿ ಇದೆಯೆಂದರೂ ಅಲ್ಲಿಯೂ ಸುಧಾರಣೆಗೆ ಎಷ್ಟೋ ವಿರೋಧವಾಯಿತು. ಪಂಜಾಬದ ಸನಾತನಿಗಳ ವಿಷಯವಾಗಿ ಅಷ್ಟೇ ಅವರ ವಿಚಾರವಿದ್ದರೆ ಅದು ಕ್ಷೇಮಕರ ನಾನು ಆ ಶಬ್ದವನ್ನು ಸಂದಿಗ್ಧಾರ್ಥದಲ್ಲಿ ಉಪಯೋಗಿಸಿರುವೆನೆಂದು ಅವರು ತಿಳಿದುಕೊಳ್ಳುವರು. ಹೀಗೇನು ನನಗೆ ಅನಿಸಿದ್ದಿಲ್ಲ.

'ದಕ್ಷಿಣದಲ್ಲಿ ಸುಧಾರಣೆಯ ವಿಷಯವಾಗಿಯಾಗಲಿ ಅಥವಾ ನನ್ನ ವಿಷಯವಾಗಿಯಾಗಲೀ ಯಾರೂ ವಿರೋಧ ಮಾಡಲಿಲ್ಲ. ಹರಿಜನ ಕಾರ್ಯದ ಸಂಚಾರದ ಕಾಲಕ್ಕೆ ವಿರೋಧ ಪಕ್ಷವು ಅಷ್ಟೊಂದು ವಿಶೇಷವಾದದ್ದೆಂದು ನನಗೇನೂ ಕಂಡುಬರಲಿಲ್ಲ. ಅದರ ಹಾಗೆ ವಿರೋಧಿಗಳು ಹೆಚ್ಚಾಗಿದ್ದಿದ್ದಾಗಿದ್ದರೆ ರಾಜಗೋಪಾಲಾಚಾರ್ಯರು ಮಂದಿರ ಪ್ರವೇಶ ಕಾಯದೆಯನ್ನು ಮಂಜೂರು ಮಾಡಿಕೊಳ್ಳಲು ಶಕ್ಯವಿದ್ದಿಲ್ಲ. ಮತ್ತು ಅನೇಕ ದೇವಾಲಗಳು ಹರಿಜನರಿಗಾಗಿ ಮುಕ್ತದ್ವಾರ ಮಾಡಲು ಶಕ್ಯವಿದ್ದಿಲ್ಲ. ಆದ್ದರಿಂದ ಸನಾತನಿಗಳೆಂದು ಕರೆದುಕೊಂಡವರೆಲ್ಲ ವಿರೋಧಿಗಳೆಂದು ನಾನು ಸಂಬೋಧಿಸಿದ್ದ. ಅಸ್ಪೃಶ್ಯತಾ ನಿವಾರಣೆಯ ಸುಧಾರಣೆಗೆ ವಿರೋಧಮಾಡುವುದೂ ಮತ್ತು ನನ್ನ ಹೆಸರಿಗೆ ಕಲಂಕತರುವುದೂ ಆ ಸನಾತನಿಗಳ ಕೆಲಸವಾಗಿದೆ. ಇಂದಿಲ್ಲ ನಾಳೆಯಾದರೂ ಅವರ ದೃಷ್ಟಿಕೋನದಲ್ಲಿ ಬದಲಾವಣೆಯಾದೀತೆಂದೂ ಸುಧಾರಣೆಗೆ ಅವರಾದರೂ ಮನಸ್ಸು ಹಾಕುವರೆಂದೂ ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ' ಹೀಗೆಂದು ಮಹಾತ್ಮಾಜಿಯವರು 'ಸನಾತನಿ ಯಾರು' ಎಂಬ ಲೇಖನವೊಂದರಲ್ಲಿ ಬರೆಯುತ್ತಾರೆ.

## ಮಹಾತ್ಮಾ ಗಾಂಧಿ ಮತ್ತು ಮಹಾತ್ಮಾ ಯೇಸುಕ್ರಿಸ್ತ

### ಮಹಾತ್ಮಾಜಿಯವರು ಮತ್ತು ಕ್ರೈಸ್ತ ಧರ್ಮ

'ಹಿಂದೂಸ್ಥಾನದಲ್ಲಿರುವ ಕ್ರೈಸ್ತರು ಗಾಂಧಿತತ್ವಗಳನ್ನು ಅನುಸರಿಸಿದರೆ ತಮ್ಮ ಧರ್ಮದ ನಿಜವಾದ ಸೇವೆ ಮಾಡಿದಂತಾಗುವುದು; ಅವರು ಆಗ ನಿಜವಾಗಿ ಕ್ರಿಸ್ತನ ಅನುಯಾಯಿಗಳೆನಿಸುವರು. ಯುರೋಪಿನ ಕ್ರಿಶ್ಚಿಯನ್ ರಾಷ್ಟ್ರಗಳು ಕ್ರಿಶ್ಚಿಯನ್ ಧರ್ಮದ ಕೊಲೆ ನಡೆಸಿರುವವು. 'ರಕ್ತಪಾತ' ಬಲತ್ಕಾರಗಳಿಂದಲೇ ಅವುಗಳ ಇತಿಹಾಸವು ತುಂಬಿಕೊಂಡಿದೆ''

ಹೀಗೆಂದು ರಾಷ್ಟ್ರೀಯ ಕ್ರಿಶ್ಚಿಯನ್ ಪರಿಷತ್ತಿನ ಅಧ್ಯಕ್ಷರಾದ ಡಾ. ಮುಖರ್ಜಿಯವರು ಬೊಂಬಾಯಿಯಲ್ಲಿ 'ಸತ್ಯಾಗ್ರಹ ಹಾಗೂ ಕ್ರಿಶ್ಚಿಯನ್ ತತ್ವಾನುಸಾರ ಯುದ್ಧ' ಎಂಬ ಕುರಿತು ಒಂದು ವಿಚಾರಪೂರ್ಣ ಭಾಷಣವಿತ್ತರು. ಅದರ ಅಭಿಪ್ರಾಯ ಹೀಗಿದೆ.

"ಯುರೋಪಿನಲ್ಲಿ ಕ್ರಿಸ್ತಧರ್ಮಕ್ಕೆ ಈಗ ಹಾನಿ ಸಾಗುತ್ತಿದೆ. ನಿಜವಾದ ಅರ್ಥದಲ್ಲಿ ಈಗ ಯಾರನ್ನೂ ಕ್ರಿಶ್ಚಿಯನ್ ಎನ್ನಲು ಆಗುವದಿಲ್ಲ. ಭಂಡವಾಳಶಾಹಿಯ ಮೂಲಕ ಕ್ರಿಸ್ತ ಧರ್ಮಕ್ಕೆ ಭಯಂಕರ ವಿಪತ್ತು ಬಂದಿದೆ. ಇಂತಹ ಸಂದರ್ಭದಲ್ಲಿ ಮಹಾತ್ಮಾಜಿಯವರು ಭಾರತದೇಶದಲ್ಲಿ ನಿಜವಾದ ಕ್ರಿಸ್ತ ಧರ್ಮವನ್ನು ಪ್ರಖ್ಯಾತಕ್ಕೆ ತರುತಿದ್ದಾರೆ ತನ್ನ ಶರೀರದ ಸುಖವನ್ನು ಗಣಿಸದೆ ಖಾದೀ ಪ್ರಚಾರ, ಹರಿಜನಸೇವೆ ವಾರ್ಧಾಶಿಕ್ಷಣ ಮಧ್ಯಪಾನ ನಿಷೇಧ, ಈ ನಾಲ್ಕು ಕಾರ್ಯ ಕ್ರಮಗಳಿಗಾಗಿ ದುಡಿದು ಅವುಗಳನ್ನು ಪವಿತ್ರ ಪ್ರಶಂಸ ಕಾರ್ಯಗಳನ್ನಾಗಿ ಮಾಡಿರುವರು. ಮಹಾತ್ಮಾಜಿಯವರ ಕಾರ್ಯಕ್ರಮಗಳಿಂದ ಭಾರತದ ಹಿತವು ಬಹಳ ಆಗಿದೆ, ಮುಂದೆಯು ಆಗಲಿದೆ.

ಮಹಾತ್ಮಾಜಿಯವರ ತತ್ವವನ್ನು ಜಗತ್ತಿನ ಮಟ್ಟಿಗೂ ಅನ್ವಯಿಸಲು ಬರುತ್ತದೆ. ಸರಲ ಜೀವನದ ಅವಶ್ಯಕ ವಿಷಯಗಳು ಅವರ ಉಪದೇಶಗಳಲ್ಲಿ ಅಧಿಕವಾಗಿವೆ. ಸರಲತೆ, ಪ್ರಾಮಾಣಿಕತೆ, ಸತ್ಯಪ್ರೀತಿಗಳಿಂದಲೇ ಇಂದು ಅವರಿಗೆ ಅಲೌಕಿಕ ಕೀರ್ತಿಯು ದೊರಕಿದೆ. ಅವರಿಗೆ ಶ್ರೀಮಂತರಿಗಿಂತ ಬಡವರ ಮೇಲೆ ಹೆಚ್ಚು ಪ್ರೇಮವಿದೆ. ಈ ವಿಷಯದಲ್ಲಿ ಯೇಸು ಕ್ರಿಸ್ತ ಹಾಗೂ ಗಾಂಧಿಜಿಯವರ ಉಪದೇಶಗಳು ಒಂದೇ ಇರುವವು. ಸರಕಾರವೆಂದರೆ ಜನತೆಯ ವಿಶ್ವಾಸದ ಸಂಸ್ಥೆಯೆಂದು ಯೇಸುಕ್ರಿಸ್ತರ ಅಭಿಪ್ರಾಯವಿತ್ತು, ಮಹಾತ್ಮಾಜಿಯವರೂ ಅದನ್ನೇ ಸಾರುತ್ತಾರೆ. ಅವರು ಹೇಳುವ ಸಾಮ್ರಾಜ್ಯವಾದಕ್ಕೆ ನೈತಿಕ ಶಕ್ತಿಯ ಆಧಾರವಿದೆ.

'ಸತ್ಯಾಗ್ರಹವು ಅಹಿಂಸೆ ಮತ್ತು ಸತ್ಯಗಳನ್ನೇ ಅವಲಂಬಿಸಿರುವುದರಿಂದ ಅದು ಕ್ರಿಶ್ಚಿಯನ್ ತತ್ವಾನುಸಾರ ನಡೆದ ಯುದ್ಧವೇ ಆಗಿರುವುದು. ಯೇಸು ಕ್ರಿಸ್ತನು ಅಹಿಂಸೆ ಹಾಗೂ ಸತ್ಯಗಳನ್ನು ಪುರಸ್ಕರಿಸಿದನು. ಯೆಹೂದ್ಯರ ಉದ್ಧಾರಕ್ಕಾಗಿ ಯೇಸು ಕ್ರಿಸ್ತನು ಅನುಸರಿಸಿದ ಮಾರ್ಗವನ್ನೇ ಮಹಾತ್ಮರು ಸತ್ಯಾಗ್ರಹ ರೂಪದಿಂದ ಸಾಧಿಸುತ್ತಿರುವರು. ಬ್ರಿಟಿಷ್ ಸರಕಾರದೊಡನೆ ಅವರು ನಡೆಸಿದ ಸತ್ಯಾಗ್ರಹ ಯುದ್ಧವು ಧರ್ಮಯುದ್ಧವಾಗಿರುವುದು. ರಾಜನೀತಿ, ಅರ್ಥಿಕ್ ನೀತಿಗಳೆಂಬ ಮಾನವನ ದುರ್ಗುಣಗಳು ಜನತೆಯ ಮೇಲೆ ಹಾವಳಿ ನಡೆಸಿದರೆ, ಸತ್ಯಾಗ್ರಹವು ಅವುಗಳ ವಿರುದ್ಧ ಧಾರ್ಮಿಕ ಶಸ್ತ್ರವಾಗಿರುತ್ತದೆ.

ಅಹಿಂಸೆಯು ಅಶಕ್ತರ ಅಸ್ತ್ರವಲ್ಲ. ಅದನ್ನು ಆಚರಿಸುವುದರಲ್ಲಿ ಮಾನಸಿಕ ಧೈರ್ಯಬೇಕು. ಅಹಿಂಸಾಶಸ್ತ್ರದಿಂದ ಎಂಥವನನ್ನಾದರೂ ಗೆಲ್ಲಬಹುದು.' ಹೀಗೆಂದು ರಾಷ್ಟ್ರೀಯ ಕ್ರೈಸ್ತ ಸಮ್ಮೇಳನದ ಅಧ್ಯಕ್ಷರಾದ ಡಾ। ಮುಖರ್ಜಿಯವರು ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದರು.


DIAMONDS! DIAMONDS
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ.

ವಜ್ರಗಳು!

ಎವರ್ ಸ್ಟ್ರೀಡಮ್ಸಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚಿಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್.



THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS.

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

*Apply for particulars*—

K. R. GURU, *Managing Director.*

ಶಿಕ್ಷಣ ವಿಚಾರ:

# ಭಾರತದ ವಿದ್ಯಾಪದ್ಧತಿಯಲ್ಲಿ ಪ್ರಚಂಡ ಪರಿವರ್ತನೆಯಾಗಬೇಕು.

## — ರಾಷ್ಟ್ರೀಯ ವಿದ್ಯಾಭ್ಯಾಸದ ಯೋಜನೆ —

[ಲೇಖಕ ವಿದ್ಯಾರ್ಥಿ]

ಮೊನ್ನೆ ತಾನೇ ಲಕ್ನೋದಲ್ಲಿ ಸೇರಿದ ಅಖಿಲಭಾರತ ಶಿಕ್ಷಣ ಪರಿಷತ್ತಿನಲ್ಲಿ, ಪ್ರಾಮುಖ್ಯವಾಗಿ ಚರ್ಚಿಸಲ್ಪಟ್ಟ ವಿಚಾರವೆಂದರೆ, ರಾಷ್ಟ್ರೀಯ ವಿದ್ಯಾಭ್ಯಾಸದ ಯೋಜನೆಯಾಗಿದೆ ನಮ್ಮ ವಿದ್ಯಾರ್ಥಿಗಳನ್ನು ಮುಂದಿನ ಯೋಗ್ಯ ನಾಗರಿಕರಾಗುವಂತೆ ಮಾಡಲು ಇಂದಿನ ಇಂಗ್ಲೀಷು ಶಿಕ್ಷಣ ಪದ್ಧತಿಯು ನಿಷ್ಪ್ರಯೋಜಕವಾಗಿರುವುದರಿಂದ, ರಾಷ್ಟ್ರದ ಸಂಸ್ಕೃತಿ ಸತ್ವಗಳನ್ನು ತಿಳಿಸುವಂತಹ ನೂತನ ವಿದ್ಯಾಪದ್ಧತಿಯು ಪ್ರಯೋಗಕ್ಕೆ ಬರುವುದು ಅವಶ್ಯವೆಂಬ ವಿಚಾರವು ಆಧುನಿಕ ಭಾರತೀಯ ಶಿಕ್ಷಣ ವಿಚಾರಜ್ಞರ ಮನಸ್ಸನ್ನು ಇಂದು ಆಕರ್ಷಿಸಿದೆ

### ಇಂದಿನ ವಿದ್ಯಾವಂತರು

ಇದುವರೆಗಿನ ವಿದ್ಯೆಯೆಂದರೆ ಅದೊಂದು ರೋಗದಂತೆ ಹರಡಿದೆ ಮೊದಮೊದಲು ಈ ವಿದ್ಯೆಯಿಂದ ಕೆಲವು ಜನರು ಬಹಳ ಲಾಭ ಪಡೆದರು, ಹಣಗಳಿಸಿದರು, ಆದರೆ ವಿದ್ಯಾವಂತರೆಂಬವರು ಹೆಚ್ಚುತ್ತಾ ಬರಲು, ಹಣದ ಆಸೆಯು ಕಡಿಮೆಯಾಯಿತು ಕಲಿತವರಿಗೆ ಉದ್ಯೋಗವಿಲ್ಲದಾಯಿತು ಹೊಟ್ಟೆಗಿಂದ ಕಲಿತವರೆಂಬವರ ಜೀವನವು ರುದ ಬಯಂಕರವಾಯಿತು ಕಲಿತವರ ಮನೋವೃತ್ತಿಯಲ್ಲಿ ದಾಸ್ಯತ್ವವು ಚಿರಂತನವಾಗಿ ನೆಲಸಿತು ಕಲಿತ ಮಂದಿಯಾದರೂ ದಾಸ್ಯದಿಂದ ಬಿಡುಗಡೆ ಹೊಂದಲು ಶಕ್ತಿಯಿಲ್ಲದ ಅಬಲರಾದರು ಈ ಪರಿಸ್ಥಿತಿಯಲ್ಲಿ ರಾಷ್ಟ್ರದ ಏಳಿಗೆಯೆಂದು ಉಂಟೆ? ಇಂತಹ ವಿದ್ಯೆಯು ರಾಷ್ಟ್ರಘಾತಕವಲ್ಲವೇ?

### ಜನತೆಯ ಸಂಪರ್ಕವಿಲ್ಲ

ಇಂದಿನ ವಿದ್ಯೆಯಲ್ಲಿ ಜನತೆಯ ಸಂಪರ್ಕವಿಲ್ಲ ವಿದ್ಯೆಯೆಂಬುದು ಜ್ಞಾನದ ಅಂಗೀಕಾರ ಅದಕ್ಕೆ ಕೆಲವರೇ ಪಾತ್ರರಲ್ಲ ಜ್ಞಾನಪ್ರಸಾರಣೆಯು ಎಷ್ಟು ಪ್ರಬಲವಾಗಿ ಆಯಿತೋ ಅಷ್ಟು ಲೋಕಕ್ಕೆ ಉಪಕಾರವಿದೆ ಆದರೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅದು ಸಂಪೂರ್ಣ ನಷ್ಟವಾಗಿದೆ ನಿಜವಾದ ಭಾರತೀಯ ಜೀವನಕ್ಕೂ, ಇಂದಿನ ವಿದ್ಯೆಗೂ ಅಜಗಜಾಂತರ ವ್ಯತ್ಯಾಸವುಂಟು, ಜೀವನವನ್ನು ಬಿಟ್ಟಿರುವ ಇಂದಿನ ವಿದ್ಯೆಯಿಂದಲೇ ಇಂತಹ ದುರಂತವು ಒದಗಿದೆ. ವಿದ್ಯಾವಂತರೆಂಬವರು ನಿಸ್ಸಹಾಯಕರಾಗಿದ್ದಾರೆ ಜನತೆಗೆ ವಿದ್ಯೆಯ ಸಂಪರ್ಕವೇ ಇಲ್ಲ ವಿದ್ಯೆಯ ಗೌರವವು ಉಳಿದಿಲ್ಲ, ಈ ಮೂಲಕ ರಾಷ್ಟ್ರವು ಸತ್ವಹೀನವಾಗುವ ಪರಿಸ್ಥಿತಿಯೊದಗಿದೆ

### ನವ ಸಮಾಜದ ನಿರ್ಮಾಣ

ಇಂದಿನ ಈ ಪರಿಸ್ಥಿತಿಯನ್ನು ಸಂಪೂರ್ಣ ಕೊಡೆದು ಹಾಕುವುದರೊಡನೆ, ನವ ಸಮಾಜವನ್ನು ನಿರ್ಮಾಣ ಮಾಡುವಂತಹ ವಿದ್ಯಾದಾನವು ಆಗಬೇಕಾಗಿದೆ, ಅಂತಹ ವಿದ್ಯೆಗೆ ರಾಷ್ಟ್ರೀಯ ಸ್ವರೂಪವೇ ಇರಬೇಕಾಗಿದೆ ರಾಷ್ಟ್ರದ ಜೀವಧರ್ಮಗಳನ್ನು ವಿದ್ಯೆಯಲ್ಲಿ ತುಂಬಿಸಬೇಕಾಗಿದೆ ವಿದ್ಯಾವಂತರಾದವರು ರಾಷ್ಟ್ರದ ಸೊತ್ತುಗಳಾಗಬೇಕಾಗಿದೆ ಹೀಗೆ ಆಗುವುದರಿಂದ ಜನತೆಯ ವಿಚಾರದಲ್ಲಿಯೇ ಕ್ರಾಂತಿಯುಂಟಾಗಬಹುದು ಸಮಾಜದ ಇಂದಿನ ಆಚಾರವಿಚಾರ ದೋಷಗಳು ಮಾಯವಾಗುವವು ಮನುಷ್ಯನು ಮನುಷ್ಯನ ಮಹಿಮೆಯನ್ನು ಪಡೆಯುವನ ಉಚ್ಚನೀಚನೆಂಬ ... ಅಧಮ ಮನೋವೃತ್ತಿಯ ದುರಹಂಕಾರವು ಮಾಯವಾಗುವುದು, ... ಅನ್ಯರ ಪಾದಪೀಠಕ್ಕೆ ಹಣೆ ... ವಸ್ಥೆಯು ನಿರ್ಮೂಲಗೊಳ್ಳುವುದು ಹೀಗೆ ನವ ಸಮಾಜದ ನಿರ್ಮಾಣವನ್ನು ಮಾಡಲು ರಾಷ್ಟ್ರೀಯ ವಿದ್ಯಾಪದ್ಧತಿಯ ಯೋಜನೆಯೊಂದನ್ನು ಮಾಡುವುದು ಆದ್ಯ ಕರ್ತವ್ಯವಾಗಿದೆ

### ಕೈಗಾರಿಕೆಗಳನ್ನು ಕಲಿಸಬೇಕು

ಇಂದು ವಿದ್ಯೆಯೆಂದರೆ ಬರಿ ಪುಸ್ತಕ ವಿದ್ಯೆ ಪ್ರತಿಯೊಂದು ವಾಕ್ಯದಲ್ಲಿ ಓದಿ, ಬಾಯಿ ಪಾಠಮಾಡಿದುದು ಹೇಳುವ ಉಪಾಧ್ಯಾಯರಾದರೂ, ಯಾವುದನ್ನು ವಿದ್ಯಾರ್ಥಿಗಳಿಗೆ ಬೋಧಿಸುತ್ತಾರೋ ಅದನ್ನು ಕ್ಲಾಸಿನಲ್ಲಿ ಸಂತು ಗಿಳಿಪಾಠ ಹೇಳಲು ಅಭ್ಯಾಸ ಮಾಡಿರುತ್ತಾರೆ ಮಾಡಿ ತೋರಿಸುವುದು ಅವರಿಗೆ ಗೊತ್ತಿಲ್ಲ ಇದು ಪರಿಹಾರವಾಗಬೇಕು ಯಾವುದನ್ನು ನಾವು ಹೇಳುತ್ತೇವೆಯೋ ಅದನ್ನು ಮಾಡಲೂ ತಿಳಿದಿರಬೇಕು ವಿಚಾರದೊಡನೆ ಪ್ರಯೋಗವೂ ಜತೆಯಾಗಿರಬೇಕು ವಿದ್ಯೆಯನ್ನು ಕಲಿಸಿಬಿಡುವುದರೊಡನೆ, ಮುಂದಿನ ಗತಿಯೂ ಅವರಿಗೆ ಚೆನ್ನಾಗಿ ತಿಳಿದಿರಬೇಕು ವಿದ್ಯೆಯು ಜೀವನದ ದಾರಿಯನ್ನು ಹಚ್ಚುವಂತಿರಬೇಕು. ಆ ರೀತಿಯಿಂದ ವಿದ್ಯೆ ದಾನವಾಗುವುದೆಂದರೆ ಊರಿನ ಕೈಗಾರಿಕೆಗಳನ್ನು ಕಲಿಯಲು ವಿದ್ಯಾ ಸಂಸ್ಥೆಗಳಲ್ಲಿ ಅಸ್ಪದವಾಗುವುದು

ನಮ್ಮ ನಾಡಿನಲ್ಲಿ ಒಬ್ಬೊಬ್ಬರು ಒಂದೊಂದು ವಿಧದಿಂದ ಪರಂಪರಾಗತ ಕೆಲಸಗಳನ್ನು ತಿಳಿದಿರುವವರೇ, ಆದರೆ ಅವರು ಈಗ ವಿದ್ಯೆ ಕಲಿತರೆಂದರೆ ತಮ್ಮ ಹಿರಿಯರ ವಿದ್ಯೆಯು ಅವರಿಗೆ ಏನೇನೂ ತಿಳಿದ ಹಾಗಿಲ್ಲ. ಹಿಂದಿನ ಸಂಬಂಧವನ್ನು ಇಂದಿನ ವಿದ್ಯೆಯು ಕಡಿದು ಬಿಡುತ್ತಿದೆ.

ಈ ರೀತಿಯ ಹಲವು ವಿಚಾರಗಳು ಶಿಕ್ಷಣ ನಿಪುಣರ ಗಮನಕ್ಕೆ ಬಂದು, ಶಿಕ್ಷಣ ಕ್ಷೇತ್ರದಲ್ಲಿ ಹೊಸತೊಂದು ಕ್ರಾಂತಿಯೇ ಆಗಬೇಕಾಗಿದೆ.


ಎದೆಬೇನೆ ಮತ್ತು ಬ್ರೊಂಕ್ಯಾಟಿಸನ್ನು ಓಡಿಸಿಬಿಡಿರಿ.

ಬ್ರೊಂಕ್ಯಾಟಿಸ್ ಅಥವಾ ಅದೇ ತರದ ಬೇರೆ ಯಾವುದಾದರೂ ವ್ಯಾಧಿಯಿಂದ ನೀವು ನರಳುತ್ತಿರುವಿರಾದರೆ ಪೆಪ್ಸು ಮಾತ್ರೆಗಳು ನಿಮಗೆ ಸುಖವನ್ನುಂಟುಮಾಡುವುದು ಈ ವಿಷಹಾರಿ ಶ್ವಾಸನೀಯ ಮಾತ್ರೆಗಳಲ್ಲಿ ಎಲ್ಲಾ ತರದ ಹೃದಯವೇದನೆಯನ್ನು ಗುಣಪಡಿಸುವ ಹೊಸದುಮಾಡಿಯಾದ 'ಪೈನ್ ಪೋರೆಸ್ಟಿನ' ಗಾಳಿಯ ಗುಣವು ಕೂಡಿಕೊಂಡಿರುತ್ತದೆ

ಪೆಪ್ಸು ಸೇವಿಸುವಾಗ ಅದು ಕರಗಲ್ಪಟ್ಟು ಅದರಿಂದ ಹೊರಟ ಔಷಧಿಯ ಧೂಮವು ನೀವು ಸೇವಿಸುವ ಶ್ವಾಸದೊಡನೆ ಸೇರುತ್ತದೆ ಇದರಿಂದ ಪೆಪ್ಸು ಹಾನಿಪ್ರದವಾದ ಕಫವನ್ನು ಕತ್ತರಿಸಿ ಹೃದಯವೇದನೆಯನ್ನು ನಿವಾರಿಸುತ್ತದೆ ಮತ್ತು ಉಸಿರಾಟವು ಸರಿಯಾಗಿ ನಡೆಯುತ್ತದೆ ಪೆಪ್ಸು ನಿಮ್ಮ ಗಂಟಲನ್ನು ಗುಣಪಡಿಸಿ ಇತರ ವ್ಯಾಧಿಯು ಬಾರದಂತೆ ತಡೆಗಟ್ಟುವುದು ಎಲ್ಲಾ ಔಷಧ ವ್ಯಾಪಾರಿಗಳು ಪೆಪ್ಸನ್ನು ... ಮಾರುತ್ತಾರೆ

ಏಜಂಟ್ಸ್

ಮೆಸರ್ಸ್ ದಾದಾ ಮತ್ತು ಕಂಪೆನಿ ಪೋರ್ಟ್ ... ಮದ್ರಾಸು

ಯಾವಾಗಲೂ ಪೆಪ್ಸನ್ನುಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

NACET

De Luxe

SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳ ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸಾಧಿತವಾದ ಉತ್ತಮ ... ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ ಆದರೆ ... ಕೆಲವು ಸುಧಾರಣೆ ... ಈ ಹೊಸ ಬ್ಲೇಡುಗಳ ... ಸಿಗುತ್ತಿವೆ ಇದನ್ನು ಒಂದು ಬಾರಿ ನೀವೆ ಪರೀಕ್ಷಿಸಿರಿ ಆಗ ಇದರ ಕೊಂಚ ಏರಿಸಲ್ಪಟ್ಟ ಬೆಲೆಯ ಯೋಗ್ಯತೆಯು ನಿಮಗೆ ತಿಳಿಯುವುದು ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ

★ ★ ★

ಧರ್ಮಾರ್ಥ ಇಸ್ಪೀಟು ಪೆಟ್ಟಿಗೆಯನ್ನು ಪಡೆಯಿರಿ

ಈ ಧರ್ಮಾರ್ಥದ ಇಸ್ಪೀಟು ಪೆಟ್ಟಿಗೆಯನ್ನು ಪಡೆಯಲು NACET BLADES ಎಂದು ಬರುವಂತೆ ಉಪಯೋಗಿಸಿದ 10 ಬ್ಲೇಡ್ ಗಳನ್ನು ಕೂಡಿಸಿ ಇವರಿಗೆ ಕಳುಹಿಸಿರಿ

ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯಾ) ಲಿಮಿಟೆಡ್,

1", ಸಂಕುರಾಮ ಚೆಟ್ಟಿ ಸ್ಟ್ರೀಟ್

ಮದ್ರಾಸು ಇವರಿಗೆ ಕಳುಹಿಸಿರಿ






ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

# ಸಾಧನ ಸಾಮಗ್ರಿಗಳ ಅಭಾವದಿಂದ ಜರ್ಮನಿಯು ಚಡಪಡಿಸುತ್ತಿದೆ!

## — ಇಂದಿನ ಯುದ್ಧದ ಸಿಂಹಾವಲೋಕನ —

ಕಳೆದ ಯುದ್ಧದ ಕಾಲಕ್ಕಿಂತ ಇಂದು ಜರ್ಮನಿಯು ಶಸ್ತ್ರದಲ್ಲಿ ಸೈನ್ಯದಲ್ಲಿ ಹಲವು ಪಾಲಿಗೆ ಪ್ರಬಲವಾಗಿದೆಯೆಂಬುದರಲ್ಲಿ ಏನೇನೂ ಸಂಶಯವಿಲ್ಲ! ಸೀಜ್‌ಫ್ರೆಡ್ ದುರ್ಗದ ಮುಂದೆ ಮಿತ್ರ ರಾಷ್ಟ್ರಗಳಾದರೂ, ಇದುವರೆಗೆ ಭಯಂಕರ ಯುದ್ಧವನ್ನು ಮಾಡದೆ ದಿನ ಕಳೆಯುವುದರ ಅರ್ಥವಾದರೂ ಏನು? ಶಸ್ತ್ರ ಸೈನ್ಯಗಳ ಯುದ್ಧದಲ್ಲಿ ನಾಜೀ ಜರ್ಮನಿಯು ಇಂದು ಯಾರಿಗೂ ಅಂಜುವುದಿಲ್ಲ. ಇದನ್ನು ತಿಳಿದೇ ಮಿತ್ರ ರಾಷ್ಟ್ರಗಳು ಯುದ್ಧವನ್ನು ದೀರ್ಘ ಎಳೆದು ಆರ್ಥಿಕ ಯುದ್ಧವನ್ನು ನಡೆಸುತ್ತಿವೆ!

### ಸಾಧನ ಸಾಮಗ್ರಿಗಳಿಲ್ಲ

ಎಷ್ಟೇ ಸೈನ್ಯವಿರಲಿ ಎಷ್ಟೇ ಯುದ್ಧ ಸಾಧನಗಳಿರಲಿ ಅವುಗಳು ಕೆಲಸಮಾಡಬೇಕಾದರೆ ಅವುಗಳಿಗೆ ಬೇಕಾದ ಸಾಮಗ್ರಿಗಳು ದೊರಕಬೇಕಾಗಿದೆ. ಆಹಾರವಿಲ್ಲದೆ ಸೈನಿಕರು ಕಾದಾಡಲಾರರು. ಎಣ್ಣೆ ಪೆಟ್ರೋಲುಗಳಿಲ್ಲದೆ ವಿಮಾನಗಳು, ಟ್ಯಾಂಕುಗಳು ಚಲಿಸಲಾರವು. ಕಬ್ಬಿಣ, ಉಕ್ಕು, ಎಲ್ಯುಮಿನಿಯಂಗಳು ದೊರಕದೆ ಹೊಸ ಯುದ್ಧ ಸಾಧನಗಳನ್ನು ಮಾಡಿ ಯುದ್ಧವನ್ನು ಮುಂದುವರಿಸಲು ಆಗುವಂತಿಲ್ಲ. ಇಂದಿನ ಯುದ್ಧ ರೀತಿಯಲ್ಲಂತೂ ಹೊಸ ಹೊಸ ಸಾಮಗ್ರಿಗಳು ಹಿಂದಿನ ಯಾವ ಯುದ್ಧ ಕಾಲಕ್ಕಿಂತಲೂ ಅಧಿಕವಾಗಿಯೇ ಬೇಕಾಗಿವೆ. ಜರ್ಮನಿಗೆ ಅವುಗಳ ಅಭಾವದಿಂದ ಕಷ್ಟಕಾಲವೊದಗಿದೆ. ಸಮುದ್ರದ ಗಡಿಗಳಲ್ಲಿ, ಬೇರೆ ಬೇರೆ ಪ್ರಾಮುಖ್ಯ ಮಾರ್ಗಗಳಲ್ಲಿ ಜರ್ಮನಿಗೆ ಸಾಮಗ್ರಿಗಳು ಹೋಗದಂತೆ ಮಿತ್ರ ರಾಷ್ಟ್ರಗಳು ಮಾಡಿದ ಬಂಧನದಿಂದ, ಜರ್ಮನ್ ಭೂತದ ಹೊಟ್ಟೆಯು ಇಂದು ಹಸಿವಿನದಾಹದಿಂದ ಸುಡುತ್ತಿದೆ.

### ಜರ್ಮನಿಯಂತೆ ಬ್ರಿಟನಿಲ್ಲ!

ಬ್ರಿಟನಾದರೂ, ಕಲ್ಲಿದ್ದಲು ಒಂದನ್ನು ಬಿಟ್ಟು ಮಿಕ್ಕುವೆಲ್ಲದನ್ನೂ ಹೊರಗಿನ ರಾಷ್ಟ್ರಗಳಿಂದ ಪಡೆಯಬೇಕು. ಜರ್ಮನಿಯು ಸುರಂಗಗಳಿಂದ ಬ್ರಿಟನಿನ ಸಮುದ್ರ ಸಂಚಾರವನ್ನು ದುಸ್ಸಾಧ್ಯಮಾಡಲು ಶತ ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ ಎಷ್ಟೆಂದರೂ ಜರ್ಮನಿಯು ಎಷ್ಟೇ ತಡೆಮಾಡಿದರೂ ಬ್ರಿಟನು ತನಗೆ ಬೇಕಾದ ಸಾಮಗ್ರಿಗಳನ್ನು ಶಾಂತಿ ಕಾಲದಲ್ಲಿ ಪಡೆಯುತ್ತಿದ್ದಂತೆ ಇಂದು ಯುದ್ಧ ಕಾಲದಲ್ಲಿಯೂ ಅವ್ಯಾಹತವಾಗಿ ಪಡೆಯುತ್ತಿದೆ. ಆದರೆ ಇಂದು ಯಾವುದೇ ಸಮುದ್ರದಲ್ಲಾದರೂ ಜರ್ಮನಿಯ ಹಡಗುಗಳು ಅತ್ತಿತ್ತ ಓಡಾಡದಂತೆ ಮಿತ್ರ ರಾಷ್ಟ್ರಗಳು ಮಾಡಿಬಿಟ್ಟಿವೆ.

### ಜರ್ಮನಿಯು ಕಂಗೆಟ್ಟಿದೆ!

ಇಂದು ಎಲ್ಲದಕ್ಕಿಂತಲೂ ಪ್ರಧಾನವಾಗ ಬೇಕಾದದು ಕಬ್ಬಿಣ. ಜರ್ಮನಿಗೆ ಇದಂತೂ ಜರ್ಮನಿಯಲ್ಲಿ ಸಿಗುವುದು ಬಹಳ ಕಡಿಮೆ. ಹೊರಗಿಂದ ಬರುವುದು ಸಾಧ್ಯವೇ ಇಲ್ಲ. ಕಳೆದ ಯುದ್ಧದಲಿ ಫ್ರಾನ್ಸ್ ಮತ್ತು ಅಲ್ಜೀರಿಯ ಗಳಿಂದ ಅದಕ್ಕೆ ಕಬ್ಬಿಣವು ಒದಗುತ್ತಿತ್ತು! ಆದರೆ ಇಂದು ಸಿಗುವುದು ಸಾಧ್ಯವೇ ಇಲ್ಲ. ಇಂತಹ ಅವಸ್ಥೆಯನ್ನು ಮೊದಲೇ ತಿಳಿದಿದ್ದ ಜರ್ಮನಿಯು ಕಬ್ಬಿಣ ಕಾರ್ಖಾನೆಗಳನ್ನು ಮಾಡಿತ್ತು. ಆದರೆ ಅಲ್ಲಿ ಆಗುವ ಕಬ್ಬಿಣವು ಇತರ ಕಬ್ಬಿಣಗಳಿಗೆ ಏನೇನೂ ಸಾಟಿಯಿಲ್ಲ, ಮಾತ್ರವಲ್ಲದೆ ಬಹಳ ಕಡಿಮೆ ಪರಿಣಾಮದಲ್ಲಿ ಆಗುತ್ತಿದೆ. ಈ ಕಡಿಮೆ ತರದ ಕಬ್ಬಿಣದಿಂದ ಕೆಲಸಮಯ ಜರ್ಮನಿಯು ಕಾದಾಡಿದರೂ ಅಲ್ಲಿನ ಇನ್ನೊಂದು ಸಮಸ್ಯೆಯೆಂದರೆ ಎಣ್ಣೆಯದು.

### ರಶ್ಯದ ಬೆಂಬಲವುಂಟೆ?

ರಶ್ಯವು ಈ ಬಗೆಯಲ್ಲಿ ತನಗೆ ಬೆಂಬಲ ಕೊಡುವುದೆಂದು ಜರ್ಮನಿಯು ನಂಬಿತ್ತು! ಆದರೆ ರಶ್ಯದ ಬೆಂಬಲವಂತೂ ಸಂದೇಹವಾಗಿದೆ. ಇದುವರೆಗೆ ಯಾವ ಸಹಾಯವೂ ಅಲ್ಲಿಗೆ ಹೋಗಿಲ್ಲ. ಪೋಲೆಂಡಿನ ವಿಷಯದಲ್ಲಂತೂ ರಶ್ಯವು ಜರ್ಮನಿಯ ಆಕ್ರಮಣವನ್ನು ತಡೆದಂತೆ ತನಗೂ ಪಾಲು ಬೇಕೆಂದು ಕೇಳಿಕೊಂಡಿದೆ. ಬಾಲ್ಟಿಕಿನಲಿ ರಶ್ಯವು ಪ್ರಬಲವಾಗುವುದೆಂದರೆ, ಜರ್ಮನಿಯು ಪ್ರಭಾವಕ್ಕೆ ಆತಂಕವನ್ನುಂಟುಮಾಡಿದಂತೆಯೇ ಆಗಿದೆ.

### ಎಣ್ಣೆಯ ಅಭಾವ

ಜರ್ಮನಿಯಲ್ಲಿ ಎಣ್ಣೆಯ ಅಭಾವವು ಬಹಳವಿದೆ. ಹೀಗೆಯೇ ಯುದ್ಧ ನಡೆದ ಪಕ್ಷದಲ್ಲಿ ಒಂದು ದಿನ ಅಲ್ಲಿ ಎಣ್ಣೆಯು ಒದಗದೆ ಜರ್ಮನಿಯ ವಿಮಾನಗಳು, ಟ್ಯಾಂಕುಗಳೂ ಚಲಿಸದೆ ನಿಂತ ಹೋಗುವ ಪ್ರಸಂಗವು ಬರಬಹುದು. ಪೋಲೆಂಡು ಮತ್ತು ರುಮೇನಿಯಾ ಈ ಎರಡು ರಾಷ್ಟ್ರಗಳು ನಿರಂತರ ಅಲ್ಲಿಗೆ ಎಣ್ಣೆಯನ್ನು ಕಳುಹಿಸಿಕೊಟ್ಟರೂ ಅದು ಜರ್ಮನಿಗೆ ಸಾಕಾಗುವುದೆಂದು ನಂಬಲು ಬರುವುದಿಲ್ಲ.

### ಪರಿಹಾರ ಯೋಜನೆ

ಜರ್ಮನಿಯಲ್ಲಿ ನಾಜೀ ಸರಕಾರವು ಅಧಿಕಾರಕ್ಕೆ ಬಂದ ಮೇಲೆ ಅದಕ್ಕೆ ಇಂತಹ ಒಂದು ಸಂಭವವು ಒದಗಬಹುದೆಂದು ಮೊದಲೇ ತಿಳಿದಿತ್ತು. ಆದುದರಿಂದ ಅದು ರಾಷ್ಟ್ರದ ಇತರ ಏಳಿಗೆಯ ಕಾರ್ಯಗಳ ಕಡೆಗೂ ಲಕ್ಷ್ಯಕೊಡದೆ ತನಗೆ ಬೇಕಾದ ವಸ್ತುಗಳನ್ನು ತನ್ನಲ್ಲಿಯೇ ಒದಗಿಸಲು ಎಲ್ಲಾ ವಿಧದಿಂದಲೂ ಯತ್ನಿಸಿದೆ. ಆದರೆ ಆಯಾಯ ಸಾಮಾಗ್ರಿಗಳನ್ನು ಉಂಟುಮಾಡುವ ಸತ್ವವು ಅಲ್ಲಿನ ಮಣ್ಣಿಗೇ ಇರದಿದ್ದರೆ ಸಾಹಸವು ಏನು ಫಲಕಾರಿಯಾದೀತು?

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜರ್ಮನಿಯು ಇಂದು ಚಡಪಡಿಸುತ್ತಿದೆ. ಎಷ್ಟೇ ತಯಾರಿಯಿಂದ ಜರ್ಮನಿಯು ಇಂದು ರಣರಂಗಕ್ಕಿಳಿದಿದ್ದರೂ ಬಹುಕಾಲ ಅದು ಯುದ್ಧಮಾಡಲು ಸಾಧ್ಯವಿಲ್ಲ. ಇದೇ ಇಂದಿನ ಯುದ್ಧವನ್ನು ಮಿತ್ರರಾಷ್ಟ್ರಗಳು ಹೀಗೆ ದೀರ್ಘ ಎಳೆಯುವುದರ ಗುಟ್ಟಿರಬೇಕೆಂದು ಗೊತ್ತಾಗಿದೆ.


ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ ಪಿ ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲಭಾಯ್ ಪಟೇಲ್ ರೋಡ್, ಮುಂಬಾಯಿ 4

*Sole Manufacturer* **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು ಮೆಸರ್ಸ್ ಇಲೆಕ್ಟ್ರೊಹೋಮ್ಯೊಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್, ಮತ್ತು ಡ್ರಗ್ಗಿಸ್ಟ್ಸ್,

ಹಂಪನಕಟ್ಟಾ, ಮಂಗಳೂರು

ಅರುಣ

ಗರ್ಭಾಶಯ ರೋಗನಿವಾರಿಣಿ

ಋತುಶೂಲೆ

ಅಕಾಲ ಬಹಿಷ್ಟೆ

ಹೆಚ್ಚು ಸ್ರಾವ

ಬಂಜೆತನ

ಬಿಳಿಸೆರಗು

ಕುಸುಮವ್ಯಾಧಿ

ಗರ್ಭಸ್ರಾವ

ಗರ್ಭಪತನ

ಮುಂತಾದ ಸಕಲ ವ್ಯಾಧಿಗಳನ್ನೂ ಗುಣಪಡಿಸಿ, ಸ್ತ್ರೀಯರಿಗೆ ಕೊರತೆಯಿಲ್ಲದ ಆರೋಗ್ಯವನ್ನೂ ಅವಯವ ಸೌಷ್ಠವವನ್ನೂ ಸತ್ಸಂತಾನವನ್ನೂ ಉಂಟುಮಾಡುವುದು

ಎಲ್ಲಾ ಕೆಮಿಸ್ಟರಲ್ಲೂ ಸಿಗುವುದು

ತಯಾರಿಸುವವರು

ಆಯುರ್ವೇದಾಶ್ರಮಂ, ಮದರಾಸು

ಸ್ಥಳೀಯ ಏಜಂಟರು

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ-ಮಂಗಳೂರು




ಫಿನ್‌ಲೆಂಡಿನ ರಣಭೂಮಿಯಲ್ಲಿ ರಶ್ಯನ್ ಸೈನಿಕರನ್ನು, ಸ್ವತಃ ಸ್ಟ್ಯಾಲಿನನೇ, ಟೆಲಿಫೋನಿನ ಮೂಲಕ ಆಜ್ಞೆ ಕೊಟ್ಟು ಮುನ್ನಡೆಸುತ್ತಿರುವನಂತೆ!

◈

ಸಾವಿರಾರು ರಶ್ಯನ್ ವಿಮಾನಗಳು, ಅಸಂಖ್ಯ ಬಾಂಬುಗಳನ್ನು ಫಿನ್ಲೆಂಡಿನ ಮೇಲೆ ಚೆಲ್ಲುತ್ತಿವೆ

◈

ಅಸಂಖ್ಯ ಸೈನಿಕರನ್ನು ಫಿನ್ಲೆಂಡ್ ರಣಭೂಮಿಗೆ ರಶ್ಯದಿಂದ ಕಳುಹಿಸಲಾಗಿದೆ! ಇಂದು ರಶ್ಯವು ತನ್ನ ಸಂಪೂರ್ಣ ಸಾಧನ ಸಾಮಗ್ರಿಗಳನ್ನೂ ಫಿನ್ಲೆಂಡಿನ ಯುದ್ಧ ಕ್ಷೇತ್ರದಲ್ಲಿಯೇ ಒಟ್ಟುಗೂಡಿಸಿದೆ

◈

ಹಾಗಾಗಿ, ಇಂದು ರಶ್ಯಾ ಮತ್ತು ಜರ್ಮನಿಗಳೊಳಗ ವ್ಯಾಪಾರ ಸಂಬಂಧವು ಪೂರ್ಣ ನಿಂತುಹೋದಂತೆಯೇ ಆಗಿದೆ!

◈

ಜರ್ಮನಿಗೆ ಇಂದು ಯುದ್ಧ ಸಾಮಗ್ರಿಗಳು ಅವಶ್ಯವಿತ್ತು ಅದು ರಶ್ಯದ ಬೆಂಬಲವನ್ನು ಕಾಯುತ್ತಿತ್ತು ಆದರೆ ರಶ್ಯವು ಜರ್ಮನಿಗೆ ಆ ಸಹಾಯವನ್ನು ಕೊಡಲು ಈಗ ಅಸಮರ್ಥವಾಗಿದೆ

◈

ಸ್ವತ ಹಿಟ್ಲರನೇ ರಶ್ಯಾ ಫಿನ್‌ಲಂಡ ಗಳೊಳಗೆ ಶಾಂತಿಯನ್ನು ಮಾಡಲು ಯತ್ನ ಮಾಡುತ್ತಿರುವನೆಂದ ತಿಳಿದು ಬಂದಿದೆ!

◈

ಶಾಂತಿ ಸಾಧಕನಾದ ಹಿಟ್ಲರನು, ಇಟಲಿಯಿಂದ ಜರ್ಮನಿಯ ದಾರಿಯಾಗಿ ಫಿನ್ಲೆಂಡಿಗೆ ಕಳುಹಿಸಲಾದ ಯುದ್ಧ ಸಾಧನಗಳನ್ನ ಕಡೆಗೆ ತಡೆಮಾಡದೆ ಬಿಡಲೇ ಬೇಕಾಯಿತು!

◈

ಆದರೆ ಬಾಂಬು ನಿರ್ಮಾಣಕನಾದ ಹಿಟ್ಲರನು, ಇಟಲಿಯ ಸಾಮಗ್ರಿಗಳನ್ನು ತಡೆದು ನಿಲ್ಲಿಸಲು ಮೊದಲು ನಿಶ್ಚಯ ಮಾಡಿದ್ದನಂತೆ!

◈

ರಶ್ಯವು ಫಿನ್ಲೆಂಡಿನೊಡನೆ—ಯುದ್ಧವನ್ನು ಮಾಡಲೇ ಇಲ್ಲನೆಂದೂ, ಆದಕಾರಣ, ಜರ್ಮನಿಯಲ್ಲಿ ತಾನು ಕಳುಹಿಸಿದ ಯುದ್ಧಸಾಧನಗಳನ್ನುತಡೆಹಾಕಬಾರದೆಂದೂ ಹೇಳಿ ಪ್ರಬಲನಾದ ರೋಮನ್ ಸರ್ವಾಧಿಕಾರಿಯು, ಹಿಟ್ಲರನನ್ನು ಸಮಾಧಾನ ಪಡಿಸಿದನು

◈

ಹಿಟ್ಲರನಿಗೆ ಈ ಮಾತು ಸರಿಯೆಂದು ತೋರಿತು ಇಲ್ಲವಾದರೆ ಜರ್ಮನಿಗೆ ಇಟಲಿಯಿಂದ ಯಾವ ಸಾಮಗ್ರಿಯೂ ಮುಂದಕ್ಕೆ ಒದಗಲಾರದೆಂದು ಹಿಟ್ಲರನು ಅಂಜಿರಬೇಕು

◈

ಇಟಲಿಯ ಧೋರಣೆಯು ವಿಷಯವಾಗಿ ಹಿಟ್ಲರನು ಈ ರೀತಿಯಿಂದ ಇರುವುದನ್ನು ಕಂಡು ಆತನ ಹೊಸ ಗೆಳೆಯನಾದ ಸ್ಟಾಲಿನನು ಮುಂದೆ ಹಿಟ್ಲರನ ಹಿತೋಕ್ತಿಗಳನ್ನುಕೇಳಲು ಇಚ್ಛೆಪಡುವುದೇಇಲ್ಲವಂತೆ

◈

ಹಿಟ್ಲರನ ಇಚ್ಛೆಗೆ ವಿರುದ್ಧವಾಗಿ, ಇಂದು ಸ್ಟಾಲಿನನು, ತನ್ನ ಯುದ್ಧವನ್ನು ಫಿನ್ಲೆಂಡಿನಿಂದ ಸ್ವೀಡನ್ ನೋರ್ವೆ ರಾಷ್ಟ್ರಗಳ ವರೆಗೆ ವಿಸ್ತರಿಸುವಂತೆ ಕಂಡುಬರುತ್ತದ

◈

ಹೀಗಾದರೆ ಗೋರಿಂಗನ ವಿಮಾನ ದಳಕ್ಕೆ ಪೆಟ್ರೋಲಿನ ಅಭಾವದಿಂದ ಹಾರಾಡುವುದೇ ಅಸಾಧ್ಯವಾಗಬಹುದು

◈

ಪೆಟ್ರೋಲನ್ನು ಒದಗಿಸಿಕೊಳ್ಳುವುದರ ಸಲುವಾಗಿ ರುಮೇನಿಯಾದ ಮೇಲ ದಾಳಿ ನಡೆಸಬೇಕೆಂದು ಇದನ್ನು ಮೊದಲೇ ಅರಿತಿದ್ದ ರಿಬನ್‌ಟ್ರೋಪನು ಈಗ ಒಂದು ಸೂಚನೆ ಕೊಟ್ಟಿರುವನಂತೆ

◈

ಬಹುಶಃ ಗೋರಿಂಗನು ತನ್ನ ವಿಮಾನಗಳನ್ನು ಸ್ವರ್ಗಕ್ಕೆ ಇರಿಸಲು ಇಚ್ಛೆಪಟ್ಟಂತಿದೆ! ಆತನೂ ಜರ್ಮನಿಯನ್ನು ಬಿಟ್ಟು ಹೋಗಲು ಅಪೇಕ್ಷೆ ಪಡುವಂತೆ ಕಂಡು ಬರುವುದಿಲ್ಲ

◈

ರಿಬನ್‌ಟ್ರೋಪನ ಸೂಚನೆಗಳಿಗೆ ವಿರುದ್ಧವಾಗಿ ಗೋರಿಂಗನು ಬೆಲ್ಜಿಯಂ ಮತ್ತು ಹೋಲೆಂಡುಗಳಿಗೆ ಧಾಳಿ ನಡೆಸಬೇಕೆಂಬ ಸೂಚನೆಯೊಂದನ್ನು ಕೊಟ್ಟಿರವನು

◈

ಹೀಗೆ ಜರ್ಮನ್ ಸೇನಾನಿಗಳು ಗೊಂದಲದಲ್ಲಿರುವಾಗ, ಚೆಂಬರ್ಲೆನರು ತನ್ನ ಉದ್ದೇಶಪ್ರಿಯುದ್ಧವನ್ನುಜಯಪ್ರದವಾಗಿ ಕೊನೆಗಾಣಿಸುವುದಾಗಿದೆಯೆಂದು ಸ್ಪಷ್ಟವಾಗಿ ಹೇಳಿದ್ದಾರೆ

◈

ಬರುವ ವಸಂತ ಕಾಲದೊಳಗೆ ಜಗತ್ತಿನಲ್ಲಿ ಶಾಂತಿ ನೆಲೆಸುವುದೆಂದು ಪ್ರಸಿಡೆಂಟ್ ರೂಸ್‌ವೆಲ್ಟರ ನಿರೀಕ್ಷೆ!

◈

ಪಶ್ಚಿಮ ರಣರಂಗದಲ್ಲಿ ನಿಜವಾಗಿ ಇಂದು ಶಾಂತಿಯೇ ನೆಲೆಸಿದೆಯಷ್ಟೆ!

◈

ಗ್ರಾಫ್‌ಸ್ಪೀಯನ್ನು ಮುಳುಗಿಸಿದ ಮೇಲೆ ಜರ್ಮನ್ ನೌಕಾ ದಳವು ಬಹಳ ನಷ್ಟಕ್ಕೊಳಗಾಗಿದೆ!

◈

ಯಾವ ಸಮುದ್ರದಲ್ಲಿಯಾದರೂ ಜರ್ಮನ್ ಹಡಗಗಳ ಸಂಚಾರವೇ ಇಂದ ಆಗುವಂತೆ ಇಲ್ಲ

◈

ಆದರೂ ಚೆಂಬರ್ಲೆನರು ತೀವ್ರವಾದ ಕಾಲವು ಮುಂದಕ್ಕೆ ಬರಲಿದೆಯೆಂದು ಹೇಳುತ್ತಿದ್ದಾರೆ!

◈

ಯೋಚಿಸಿದರೆ ಅಂತಹ ತೀವ್ರಕಾಲವು ಕಾಂಗ್ರೆಸು ಮುಖಂಡರಿಗೆ ಮುಂದೆ ಒದಗಲಿದೆಯೆನ್ನಬೇಕ

◈

ಮುಸ್ಲಿಂ ಲೀಗಿನ ಮುಖಂಡರೆನ್ನುವ ಮಿ। ಜಿನ್ನರು ಕಾಂಗ್ರೆಸನ್ನು ಖಂಡಿಸುವುದರಲ್ಲಿ ಬಹಳ ತೀವ್ರರೇ ಆಗುತ್ತಾ ಹೋಗತ್ತಾರೆ!

◈

ಮಿ। ಜಿನ್ನರ ಆರೋಪಗಳನ್ನು ಪಂಡಿತ ನೆಹರುಗಳನ್ನು ಇನ್ನಷ್ಟು ತೀವ್ರವಾಗಿ ವಿರೋಧಿಸುತ್ತಾರೆ

◈

ರಾಷ್ಟ್ರಪತಿ ಪ್ರಸಾದರು, ಕಾಂಗ್ರೆಸಿನ ಕೇಳಿಕೆಯಾದ ರಾಷ್ಟ್ರಘಟನಾ ಸಮಿತಿಯ ವಿಚಾರವನ್ನ ತೀವ್ರರೀತಿಯಿಂದ ಸರಕಾರದ ಮುಂದಿಡುತ್ತಿದ್ದಾರೆ!

◈

ಇನ್ನೂರು ಕೋಟಿ ರೂಪಾಯಿ ಬೆಲೆಯ ಖಾದಿಯು ಭಾರತದಲ್ಲಿಯೇ ಉತ್ಪನ್ನವಾಗಬೇಕೆಂದು ಗಾಂಧಿಜಿಯವರು ತೀವ್ರವಾದ—ಎಚ್ಚರಿಕೆ ಕೊಟ್ಟಿರುತ್ತಾರೆ!

◈

ಕಾಂಗ್ರೆಸಿನ ಮೇಲೆ ಸುಭಾಸರ ವಿರೋಧವು ಇನ್ನಷ್ಟು ತೀವ್ರವಾಗುತ್ತಾ ಬರುತ್ತಿದೆ!

◈

ಜಾತೀಯ ವೈಷಮ್ಯವನ್ನು ನಿವಾರಿಸಿರೆಂಬ ವೈಸರಾಯರ ಭೇದ ಹುಟ್ಟಿಸುವ ಮಾತನ್ನುಕಾಂಗ್ರೆಸು ಮುಖಂಡರು ಬಹಳ ತೀವ್ರವಾಗಿ ಖಂಡಿಸಿದ್ದಾರೆ

◈

ಹೀಗೆ ಪರಿಸ್ಥಿತಿಗಳು ತೀವ್ರವಾಗುತ್ತಾ ಬರುವುದರಿಂದಲೇ, ಯಾವ ರಾಷ್ಟ್ರದಲ್ಲಿಯಾದರೂ ಇಂದು ಶಾಂತಿಯು ನೆಲೆಸಿಲ್ಲ

◈

ಈ ತೀವ್ರ ಧೋರಣೆಯು ಎಂದು ಹೇಗೆ ನಿವೃತ್ತಿಹೊಂದುವುದೆಂಬ ವಿಚಾರವು ಮಾತ್ರ ಮುಂದೆ ನೋಡತಕ್ಕದ್ದಿದೆ.

## ಸ್ವೀಕಾರ-ವಿಮರ್ಶೆ

### ಭೇರುಂಡೇಶ್ವರ

ಮೈಸೂರಿನ ಹಲವು ವಿಧದ ಪ್ರಗತಿಯ ಸಾಹಸಗಳಲ್ಲಿ 'ಮೈಸೂರು ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್' ಇದೂ ಒಂದಾಗಿದೆ ರಾಷ್ಟ್ರದ ಆರ್ಥಿಕ ಅಭ್ಯುದಯದ ದೃಷ್ಟಿಯಿಂದ ವಿಚಾರಿಸಿದರೆ, ಕನ್ನಡಿಗರಿಗೆ ಇದು ಒಂದು ಅಭಯ ಸಂಸ್ಥೆ ಮೈಸೂರಿನ ಧ್ವಜವಾದ 'ಭೇರುಂಡೇಶ್ವರ'ವನ್ನು ತನ್ನ ಲಾಂಛನವಾಗಿಟ್ಟುಕೊಂಡು, ಮೈಸೂರಿನ ಕೀರ್ತಿಯನ್ನು ಬಹಳ ಮೆರೆಸಬೇಕೆನ್ನುವ ಈ ಸಂಸ್ಥೆಯ ಉಜ್ವಲ ಅಭಿಮಾನವನ್ನು ಎಲ್ಲರೂ ಕೊಂಡಾಡಬೇಕಾಗಿದೆ! ಈ ಅಭಿಮಾನ ಪ್ರೇರಿತರಾಗಿ 'ಮೈಸೂರು ಇನ್ಶೂರೆನ್ಸ್ ಕಂಪನಿ ಲಿಮಿಟೆಡ್' ಇದರ ನಿರ್ವಾಹಕ ಮಂಡಳಿಯವರು, ಕನ್ನಡನಾಡಿನ ಹೆಸರಾಂತ ಸಾಹಿತ್ಯ ಸೇವಕರಾದ ಶ್ರೀ। ದೇವುಡು ನರಸಿಂಹ ಶಾಸ್ತ್ರೀ ಎಂ ಎ, ಇವರಿಂದ 'ಭೇರುಂಡೇಶ್ವರ' ಎಂಬ ಈ ಸಚಿತ್ರವಾದ, ಕ್ರೌನ್ 1/8 ಆಕಾರದ 68 ಪುಟಗಳುಳ್ಳ ಚಿಕ್ಕ ಹೊತ್ತಿಗೆಯೊಂದನ್ನು ಬರೆಸಿ ಪ್ರಕಟಿಸಿದ್ದಾರೆ ಆ ಮೂಲಕ ಮೈಸೂರಿನ ಧ್ವಜವಾದ 'ಭೇರುಂಡೇಶ್ವ'ರದ ಇತಿಹಾಸ ವರ್ಣನಗಳನ್ನು, ವೈದಿಕ ಕಾಲದಿಂದ ಆರಂಭಿಸಿ, ಸಿಗುವ ಆಧಾರಗಳಿಂದಲೂ ಆ ಮೇಲೆ ಹೊರಗಿನ ರಾಷ್ಟ್ರಗಳಲ್ಲಿ ಈಜಿಪ್ಟ್, ಬ್ಯಾಬಿಲೋನ್ ಗ್ರೀಸ್, ಜಪಾನ್, ಮೊದಲಾದ ಕಡೆಗಳಲ್ಲಿ ಸಿಗುವ ಆಧಾರಗಳಿಂದಲೂ ಕೊಟ್ಟು, ಪ್ರಪಂಚದಲ್ಲಿ ರಾಜಕುಲವು ಹೇಗೆ ಈ ಚಿಹ್ನವನ್ನು ಧ್ವಜವನ್ನಾಗಿ ಅಂಗೀಕರಿಸಿದೆಯೆಂದೂ ವಿವರಿಸಿ ತಿಳಿಸಿ ಇತಿಹಾಸ ರಸಿಕರಿಗೆ ಬಹಳ ಉಪಕಾರ ಮಾಡಿದ್ದಾರೆ. ಸಮರ್ಥ ಲೇಖಕರಾದ ಶ್ರೀ ದೇವುಡು ಇವರು ಈ ಕಾರ್ಯವನ್ನು ಒಳ್ಳೆಯ ಚತುರತೆಯಿಂದ ನಿರ್ವಹಿಸಿದ್ದಾರೆ.


**ಗುಣಬಾರದಿದ್ದರೆ ಹಣ ವಾಪಾಸು**

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)**

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತಿದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು, ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್ ಕೆಳವಾಮೂಹಿವ್ದು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ ೪-೦-೦

ವಿ. ಪಿ. ಅಗಲ.

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

# ವಿಜ್ಞಾನಯುಗ

### ಎತ್ತರ ಅಥವಾ ಎದೆಯ ವಿಶಾಲತೆ ಇವುಗಳು ಆಯುಸ್ಸನ್ನು ಹೆಚ್ಚಿಸಲಾರವು

ಕಳೆದ ವರ್ಷ, ಹೊಗೆ ಸೇದುವುದು, ಆಯುಷ್ಯವನ್ನು ಕಡಿಮೆಮಾಡುತ್ತದೆಯೆಂದು ಪ್ರಯೋಗಮೂಲಕ ಸಾರಿ ಹೇಳಿದ ಡಾ| ರೈಮಂಡ್ ಪರ್ಲ್ ಎಂಬವರು ಮನುಷ್ಯನು ದೀರ್ಘಕಾಯನಾಗಿ, ವಿಶಾಲವಾದ ಎದೆಯುಳ್ಳವನಾಗಿರುವುದಕ್ಕಿಂತ ಸಾಮಾನ್ಯ ಹದ ದೇಹದಿಂದ ಇದ್ದರೆ ಆತನು ಹೆಚ್ಚುಕಾಲ ಬದುಕುವನು ಎಂದು ಸಾರಿರುವರು.

ಅವರು ಹಲವು ಮಂದಿ ಅಲ್ಪಕಾಯರನ್ನು ಪರೀಕ್ಷೆ ಮಾಡಲು, ಅವರಲ್ಲಿ ಹೆಚ್ಚಿನ ಮಂದಿಗೆ ಯಾವ ರೋಗವೂ ಇರಲಿಲ್ಲವಂತೆ. ಅವರ ಅಭಿಪ್ರಾಯದಂತೆ, ಹೆಚ್ಚು ದೀರ್ಘವಾಗಿ ಮತ್ತು ಹೆಚ್ಚು ವಿಶಾಲವಾಗಿರುವುದರಿಂದ ಯಾವಾಗಲೂ ಅಪಾಯವೇ ಹೆಚ್ಚಾಗಿರುತ್ತದೆಯೆಂದೂ ಹೃದಯರೋಗದಿಂದ ಮತ್ತು ಮೂತ್ರ ಪಿಂಡದ ರೋಗದಿಂದ ದೀರ್ಘಕಾಯರಾದ ಮನುಷ್ಯರೇ ಹೆಚ್ಚಾಗಿ ಸಾಯುತ್ತಿರುವರೆಂದೂ ಕೇನ್ಸರ್ ರೋಗವೂ ಅಂತಹವರಿಗೆ ಬೇಗನೆ ತಗಲುವುದೆಂದೂ ತಿಳಿದಿದೆ. ಆದುದರಿಂದ ಡಾ| ಪರ್ಲರ ಸಂಶೋಧನೆಯಂತೆ ಬಹುಕಾಲ ಬದುಕಬೇಕಾದಲ್ಲಿ ವಿಶಾಲತೆಯು ಏನೇನೂ ಪ್ರಯೋಜನಕ್ಕೆ ಬೀಳುವುದಿಲ್ಲವೆಂದು ತಿಳಿದಿದೆ. ಮನುಷ್ಯನು ಯಾವಾಗಲೂ ಸಾಮಾನ್ಯ ದೇಹದವನಾಗಿದ್ದರೆ ಒಳ್ಳೆಯದಂತೆ.

### ಗಂಟೆಗೆ ೪೫ ಮೈಲುಗಳು ಓಡುವ ಬೈಸ್‌ಕಲ್

ಗಂಟೆಯೊಂದಕ್ಕೆ ೪೫ ಮೈಲುಗಳಷ್ಟು ಸವಾರಿ ಮಾಡಬಹುದಾದ ಬೈಸ್‌ಕಲ್ಲಿನ ವೇಗವೇನಿರಬಹುದೆಂಬ ವಿಷಯವಾಗಿ ನೀವು ಊಹಿಸಿ ನೋಡಿರಿ'

ಈ ವಿಷಯವನ್ನು ಹೇಳಿದರೆ, ಯಾರೂ ಪಕ್ಸನೇ ನಂಬಲಾರರು, ಆದರೆ ಇಂತಹ ಬೈಸ್‌ಕಲ್ಲನು ಈಗ ರಚಿಸಿರುತ್ತಾರೆ. ಮುಂದಕ್ಕೆ ಇಂತಹ ಅನೇಕ ಹೊಸ ಮಾದರಿಗಳನ್ನು ರಚಿಸಲಿರುವರು. ಅಮೇರಿಕದ ಡೆಟ್ರೋಯಿಟಿನಲ್ಲಿರುವ ಮಿ| ಡೊಮ್ನಿಂಕ್ ಡೆವಿನ್ ಸೆಂಜಿ ಎಂಬವರು ಈ ಬಗೆಯ ಸಾಧನವನ್ನು ಮೊದಲಾಗಿ ನಿರ್ಮಾಣ ಮಾಡಿದವರು.

### ನಿಮೋನಿಯಕ್ಕೆ ಹೊಸ ಔಷಧ

ಈಗ ನಿಮೋನಿಯಾ ರೋಗಕ್ಕೆ ಸಲ್ಫಾನಿಲಾಮೈಡ್ ಮತ್ತು ಸಲ್ಫಾಪಿರಿಡೈನ್ ಎಂಬ ಈ ಎರಡು ಔಷಧಿಗಳನ್ನು ಸರ್ವಸಾಧಾರಣವಾಗಿ ಕೊಡುತ್ತಾರೆ. ಪಿಟ್ಸ್‌ಬರ್ಗ್ ಮಿಂಟ್ ಇನ್‌ಸ್ಟಿಟ್ಯೂಟಿನ ಡಾ| ಮಾರ್ಕ್ ಡೊನೊಬ್ರೇಕನ್ ಎಂಬವರು, ಆ ಔಷಧಿಗಳಿಗಿಂತ ಕಡಿಮೆ ಕ್ರಯಷ್ಟು, ಹೆಚ್ಚು ಪ್ರಯೋಜನವುಳ್ಳದ್ದಾಗಿರುವ ಇನ್ನೊಂದು ಔಷಧವನ್ನು ಕಂಡು ಹುಡುಕಿರುವರು.

ಈ ಔಷಧವು ಕ್ವಿನಿನಿನಿಂದ ರಚಿಸಲಾಗಿದೆ. ಇದರ ಹೆಸರು ಹೈಡ್ರೋಕ್ಸಿ ಥಿಲಾಪೊಕ್ಸ್ಸಿನ್ ಎಂದು ಪ್ರಿಟ್ಸ್ ಬರ್ಗನಲ್ಲಿ ಈ ಔಷಧದಿಂದ ೫೦೦ ಮಂದಿ ನಿಮೋನಿಯಾ ರೋಗಿಗಳನ್ನು ಉಪಚರಿಸಲು ಅವರಲ್ಲಿ ಕೇವಲ ೨೩% ಮಂದಿ ಮಾತ್ರ ತೀರಿಹೋಗಿರುವುದಾಗಿ ತಿಳಿದುಬಂತು. ಆದರೆ ಹಿಂದಕ್ಕೆ ಆ ಔಷಧಿಗಳನ್ನು ಕೊಡುತಿದ್ದಾಗ ಅಲ್ಲಿನ ನಿಮೋನಿಯ ಮರಣವು ೪೫ ೭% ರಷ್ಟಿತ್ತು

### ಆಧುನಿಕ ಕೆಮರಾ

ಇತ್ತೀಚೆಗೆ ತಯಾರಿಸಿದ ಒಂದು ಕೆಮಾರದಿಂದ, ಒಬ್ಬ ವಿಮಾನಿಕನು ೩೦,೦೦೦ ಫೀಟು ಎತ್ತರದಿಂದ ೪೦ ಚದುರಳತೆ ಮೈಲುಗಳ ಪ್ರದೇಶದ ಚಿತ್ರವನ್ನು ತೆಗೆದಿರುವನು

### ಮರಗಳನ್ನು ಕೀಳುವ ಯಂತ್ರ

ಕೆಲಿಪೋರ್ನಿಯದಲ್ಲಿ ಕಿತಳೆಯ ಗಿಡ ಮೊದಲಾದ ಮರಗಳನ್ನು ಬೇರುಸಹಿತವಾಗಿ ಕಿತ್ತು ಬೇರೊಂದು ಕಡೆ ನಡಲು ಸಹಕಾರಿಯಾಗುವಂತೆ, ಒಂದು ಯಂತ್ರವು ರಚಿಸಲ್ಪಟ್ಟಿದೆ

### ಜಗತ್ತಿನ ಸುದೀರ್ಘ ಟೆಲಿಫೋನ್

ಸಾಧಾರಣ ೫,೬೨೫ ಮೈಲುಗಳ ದೀರ್ಘವುಳ ಸೈಬೇರಿಯದಿಂದ, ರಶ್ಯದ ಸಂಪೂರ್ಣ ಅಗಲದ ವರೆಗೆ ವಿಸ್ತರಿಸುವ ಒಂದು ಟೆಲಿಫೋನು, ಬ್ರಿಟಿಷ್ ಸರ್ಕಾರನಿಂದ ರಶ್ಯಕ್ಕೆ ಕಳುಹಿಸಲ್ಪಟ್ಟಿದೆ

ಈ ಟೆಲಿಫೋನಿನ ಮೂಲಕ ಮಾಸ್ಕೋ ಪಟ್ಟಣದಿಂದ, ಮೋಂಚುಕೋ ಗಡಿಯಲ್ಲಿರುವ ಕಬರೋವಸ್ಕಿನ ವರೆಗೆ ವ್ಯವಹಾರ ನಡೆಸಬಹುದು

### ನಾವು ನಿದ್ದೆ ಮಾಡುವುದು ಯಾತಕ್ಕೆ?

ಚಿಕಾಗೋ ವಿಶ್ವವಿದ್ಯಾನಿಲಯದ ಡಾ| ನಥೀನಿಯಲ್ ಕ್ಲೀತ್ ಮೇನ್ ಎಂಬ ಪ್ರೊಫೆಸರರು ಕಳೆದ ೧೫ ವರ್ಷಗಳಿಂದ ನಿದ್ರಾ ವಿಜ್ಞಾನದ ಕುರಿತು ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಆದರೆ, ಇದುವರೆಗೆ ನಿದ್ದೆಯ ಕುರಿತು ಸರಿಯಾದ ಪ್ರಯೋಗ ಪ್ರಮಾಣವೊಂದನ್ನು ಅವರು ತಿಳಿಸಲು ಸಮರ್ಥರಾಗಲಿಲ್ಲ. ಏಕೆಂದರೆ ಜಗತ್ತಿನ ಯಾವುದೇ ಕಡೆಯಲ್ಲಾದರೂ ಸುಖವಾಗಿ ನಿದ್ರೆಮಾಡುವ ಯಾವನೇ ಒಬ್ಬ ವ್ಯಕ್ತಿಯು ಅವರಿಗೆ ದೊರಕಲಿಲ್ಲವಂತೆ!

ಅವರು ಸ್ವತಃ ಒಂದು ಕತ್ತಲೆಯ ಕೋಣೆಯನ್ನು ಮಾಡಿ, ಅಲ್ಲಿಗೆ ಸೂರ್ಯನ ಬೆಳಕು, ಶಬ್ದಗಳು ಯಾವುವೂ ಇಲ್ಲದಲ್ಲಿ ಹೋಗಿ ಮಲಗಿದರು. ದಿನದ ೨೪ ಗಂಟೆಗಳ ದೀರ್ಘ ನಿದ್ರೆಯು ಬಿದ್ದಿರುವುದಾಗಿ ಅವರು ಕಂಡುಹುಡುಕಿದರು

ಈ ಕಾರಣದಿಂದ ಅವರು ನಿದ್ರೆಯೆಂಬುದು ಬರಿಯ ಅಬ್ಯಾಸವೆಂದೂ ಇಷ್ಟೇ ಸಮಯದತನಕ ನಿದ್ದೆ ಮಾಡಬೇಕೆಂಬುದು ಅಭ್ಯಾಸದ ಬಲದಿಂದ ಮನುಷ್ಯನಿಗೆ ಅವಶ್ಯವಾಗುವುದೆಂದೂ, ಹಾಗಲ್ಲದೆ ಹುಟ್ಟುವಾಗಲೇ ಆತನಿಗೆ ಪ್ರಕೃತಿ ಸಹಜವಾಗಿ ನಿದ್ರೆಯ ವಿತಿಯು ಏರ್ಪಟ್ಟಿಲ್ಲವೆಂದೂ ಅಭಿಪ್ರಾಯ ಪಡುತ್ತಾರೆ


ಭಾರತ ಸ್ತ್ರೀಯರಿಗೆ ಉತ್ತಮೋತ್ತಮವಾದ ಟಾನಿಕ್

ಲೋಧ್ರ

ಲೋಧ್ರ

ಬಲವರ್ಧಕ ಔಷಧಗಳ ರಾಣಿ
ಸ್ತ್ರೀಯರ ಸಕಲ ಗರ್ಭಾಶಯರೋಗಗಳನ್ನು ಹೋಗಲಾಡಿಸಿ
ಸಂಪೂರ್ಣಾರೋಗ್ಯವನ್ನೂ, ಸುಖವನ್ನೂ ನೀಡುವ ಟಾನಿಕ್
ಕೇಸರಿ ಕುಟೀರಂ, ರಾಯಪೇಟೆ, ಮದರಾಸು.

# ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

# ಉಡುಪಿ ಪರ್ಯಾಯ ಮಹೋತ್ಸವ

ಉತ್ಸವಾರಂಭ ತಾ. 9—1—1940 ಚೂರ್ಣೋತ್ಸವ ತಾ. 15—1—1940
ಮಕರ ಸಂಕ್ರಮಣ ಉತ್ಸವ ತಾ. 14-1-1940 ಮಧ್ವನವಮಿ ಉತ್ಸವ ತಾ. 19—1—1940
ಪರ್ಯಾಯಪಟ್ಟದಿಂದ ಏಳುವ ಶ್ರೀ ಸ್ವಾಮಿಗಳವರ ಉತ್ಸವ 17-1—1940
ಪರ್ಯಾಯ ಪಟ್ಟವೇರುವ ಶ್ರೀ ಅದಮಾರು ಸ್ವಾಮಿಗಳ ಪರ್ಯಾಯ ಉತ್ಸವ 18-1-1940

ತಾ. 17—1—1940

ಪರ್ಯಾಯ ಪಟ್ಟದಿಂದ
ಏಳುವವರು
ಶ್ರೀ ಫಲಿಮಾರು ಮಠದ
ಶ್ರೀ ರಘುಮಾನ್ಯತೀರ್ಥ
ಶ್ರೀಪಾದಂಗಳವರು

## ಶ್ರೀ ಕೃಷ್ಣನ ಸನ್ನಿಧಿಯಲ್ಲಿ

ನಿಮ್ಮ ಭಕ್ತಿಯನ್ನು ಅರ್ಪಿಸಲಿಕ್ಕೆ ಅತ್ಯುತ್ತಮ ಸಂದರ್ಭ

ಶ್ರೀ

ಸಮಗ್ರ ಕರ್ನಾಟಕದ ಚಕ್ರ ಶಿರೋಮಣಿಗಳು ನೆರೆದು
ಬಂದು ಶ್ರೀ ಕೃಷ್ಣ ಪರಮಾತ್ಮನ ದಿವ್ಯ ದರ್ಶನವನ್ನು
ಮಾಡಿ ಕೃತಾರ್ಥರಾಗುವರು ಯಾತ್ರಾರ್ಥಿಗಳ ಸರ್ವಾನು
ಕೂಲತೆಯ ವ್ಯವಸ್ಥೆಗೊಳಿಸಿಯದ

ಉಡುಪಿಯಲ್ಲಿ ಉಳಕೊಳ್ಳಲಿಕ್ಕ ನಮ್ಮ ವಿಶ್ರಾಂತಿ ಹವಲ್ಲದೆ
ಮಠಗಳಲ್ಲಿಯೂ, ಉಪಾಸಕರಲ್ಲಿಯೂ ಉಳಕೊಳ್ಳುವ
ವ್ಯವಸ್ಥೆ ಮಾಡಲಾಗುವದು.

ತಾ. 18 1—1940

ಪರ್ಯಾಯ ಪಟ್ಟ
ವೇರುವವರು
ಶ್ರೀ ಅದಮಾರು ಮಠದ
ಶ್ರೀ ವಿಬುಧಮಾನ್ಯ ತೀರ್ಥ
ಶ್ರೀಪಾದಂಗಳವರು

ಇದೇ ದಿವ್ಯ ಸಂದರ್ಭದಲ್ಲಿ ಧರ್ಮಸ್ಥಳ, ಸುಬ್ರಹ್ಮಣ್ಯ, ಕೊಲ್ಲೂರು ಮತ್ತು ಗೋಕರ್ಣಕ್ಕೂ ಒಂದೇ ಬಾರಿ ಅತ್ಯಲ್ಪ ಖರ್ಚಿನಲ್ಲಿ ಯಾತ್ರೆಯನ್ನು ಪೂರೈಸಲಿಕ್ಕೆ ಅನುಕೂಲವಿದೆ ಪ್ರಯಾಣಿಕರ ಸೌಕರ್ಯದ ಕಡೆಗೆ ವಿಶೇಷ ಗಮನಕೊಡಲಾಗುವದು

ಈ ಸಮಯದಲ್ಲಿ ಏರ್ಪಡಿಸಿದ ಪರ್ಯಾಯ ವಸ್ತು ಪ್ರದರ್ಶನ ನೋಡಲೂ ಅತೀ ಅನುಕೂಲವಿದೆ.

***JOINT MANAGERS,***

**The Combined Booking Agency,** MANGALORE

**The Joint Booking Office,** KODIALBAIL.

(Regd)

# ಅಮೃತಾಂಜನ

ಕಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯ ಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಶ್ರೀ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

# HOUNSA

## ಹಂಸಾ ಸ್ನೋ
## ಮತ್ತು
## ಬ್ರಿಲ್ಲೆಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ.
P. O. Peridepi (ನೆಲ್ಲೂರು ಡಿ.)


## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮುಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ | 1—13—0 | 1—14—0 |
| „ ದುಯಂ „ „ | | |
| „ ಅವ್ವಲ್ ಸುಗ್ಗಿ „ | | — |
| „ ದುಯಂ „ „ | | — |
| ಅಕ್ಕಿ ಅವ್ವಲ್ ಗುಡ್ಡು „ ಹಳ್ಳ | 4—14—0 | |
| „ ದುಯಂ „ „ | 4—8—0 | |
| „ ಅವ್ವಲ್ ಸುಗ್ಗಿ „ | 4—8—0 | 4—8— |
| „ ದುಯಂ „ „ | 4—4—0 | 4—6—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 57—8—0 |
| „ ಸಿಪ್ಪೆ ಇದ್ದದು „ | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 85—0— |
| „ ದಿಲ್‌ಪಸಂದ „ | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಯುಡ್ಡ ಅಡಿಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 8—0—0 | 8—12—0 |
| ಕಬ್ಬಿನ ಬೆಲ್ಲ ಖಂಡಿಗೆ | 37—8—0 | 50—0—0 |
| ಒಳ್ಳೆಮೆಣಸು ಹಂಡ್ರವೈಟಿಗೆ | 19—0—0 | 20—8—0 |

# ಸ್ವದೇಶಾಭಿಮಾನಿ

ಸಂಪುಟ ೩೪ ]        ತಾರೀಖು 19—1—1940        [ ಸಂಚಿಕೆ ೩



## The Bombay Life Assurance Company, Ltd.

(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live-today-a few years more-when you are old?

If you die-to your family and dependants?

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | | |
|---|---|---|
| Completed Business | Rs. | 1,44,91,000 |
| Life Assurance Fund | Rs | 1,17,69,748. |
| Total Assets | Rs. | 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

**Bombay Life Building,**

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road Trivandrum.

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

which will tone the nervous system build healthy tissues and enrich the blood.

**Thus keeps you fresh and sprightly.**

**Bhuvanendra Products, Ltd.,**

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

## ಭುವನೇಂದ್ರ "ಅಮೃತಪ್ರಾಶವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**

ಕಟಪಾಡಿ,—ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.



Edited Printed & Published by A. S. Kamath at the Sharada Press, Car Street, Mangalore

Estd. 1906

# ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

# ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 19—1—1940 [ಸಂಚಿಕೆ ೩



## The Bombay Life Assurance Company, Ltd.

(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live-today-a few years more-when you are old?

If you die-to your family and dependants?

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | |
|---|---|
| Completed Business | Rs. 1,44,91,000 |
| Life Assurance Fund | Rs 1,17,69,748 |
| Total Assets | Rs. 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

Bombay Life Building,

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut. — Car Street, Mangalore. — Visweswarapuram Circle, Bangalore City. — Post Box No. 337 Mount Road, Madras.

Gautam Nivas, Charni Road, Girgaum, Bombay No. 4. — Central Station Road. Trivandrum.

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

**which will tone the nervous system. build healthy tissues and enrich the blood.**

**Thus keeps you fresh and sprightly.**

**Bhuvanendra Products, Ltd.,**

**Katapady, S. Kanara.**

(BRANCH—KUMTA, N. KANARA.)

Stockist: U. Panduranga Nayk, Car-Street Mangalore.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣತ್ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

## ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**

ಕಟಪಾಡಿ,—ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.



Edited Printed & Published by A. S. Kamath at the Sharada Press, Car Street, Mangalore

ESTD. 1906

# ಸ್ವದೇಶಾಭಿಮಾನಿ

# SWADESHABHIMANI

KANNADA ILLUSTRATED WEEKLY

# ಭಾರತೀಯರಂತೆ ಅರಬರೂ ಸ್ವಾತಂತ್ರ್ಯವನ್ನು ಬಯಸುತ್ತಾರೆ

## ಜಿನ್ನರ ಧೋರಣೆಯ ಖಂಡನೆ!

## ನಾಜೀ ತತ್ವಕ್ಕೆ ಅವರದೂ ಬೆಂಬಲವಿಲ್ಲ

## ಆದರೆ ಬ್ರಿಟನಿನ ಯುದ್ಧಧ್ಯೇಯವೇನು?

## ಅರಬೀ ಮುಖಂಡರ ಹೇಳಿಕೆ

ಭಾರತೀಯ ಸ್ವಾತಂತ್ರ್ಯ ಆಂದೋಲನದಲ್ಲಿ ಪೆಲೆಸ್ತೀನಿನ ಅರಬರು ತಮ್ಮ ಹಾರ್ದಿಕ ಸಹಾನುಭೂತಿಯನ್ನು ವ್ಯಕ್ತ ಮಾಡಿರುವರು. ಭಾರತವು ಸ್ವತಂತ್ರ ವಾಗುವುದೆಂದರೆ, ಈಗ ಪ್ರಾಂತದಲ್ಲಿರುವ ಸಿರಿಯ, ಪೆಲೆಸ್ತೀನ, ಟ್ರಾನ್ಸ ಜೋರ್ಡನ ಮೊದಲಾದ ಎಲ್ಲಾ ಅರಬ ರಾಷ್ಟ್ರಗಳು ಸ್ವತಂತ್ರವಾದಂತೆಯೆ! ಯಾಕೆಂದರೆ ಭಾರತಸ್ವಾತಂತ್ರ್ಯದ ಮೇಲೆಯೇ ಇವುಗಳ ಸ್ವಾತಂತ್ರ್ಯವು ಹೊಂದಿಕೊಂಡಿದೆ ಎಂದು ಅರೆಬಿಯದ ಗ್ರ್ಯಾಂಡ ಮುಫ್ತಿಯ ಅಳಿಯಂದಿರೂ, ಅರಬ್ ಹಾಯರ್ ಕಮಿಟಿಯ ಒಬ್ಬ ಸದಸ್ಯರಾದ ಜಮಾಲ್ ಹುಸ್ಸೇನಿಯವರ ಸಂಬಂಧಿಕರೂ ಆದ ಮೂಸಾಹುಸ್ಸೇನಿಯವರು ಲಂಡನಿನಲ್ಲಿ ಹೇಳಿರುವರು,

ಕಾಂಗ್ರೆಸ ಮಂತ್ರಿಗಳು ತಮ್ಮ ಪದವಿಗೆ ರಾಜಿನಾಮೆಯನ್ನಿತ್ತಾಗ, ಅರಬಿ ಹಾಗೂ ಇಡೀ ಪೌರ್ವಾತ್ಯ ಮುಸಲ್ಮಾನ ಲೋಕವು ಹಿಂದುಸ್ಥಾನದಲ್ಲಿ ನಡೆಯುವ ಘಟನೆಗಳನ್ನು ಕುತೂಹಲದಿಂದಲೂ ಆತುರದಿಂದಲೂ ನೋಡ ತೊಡಗಿತು. ಯುದ್ಧ ಸಂದರ್ಭದಲ್ಲಿ ಕಾಂಗ್ರೆಸು ಇಟ್ಟುಕೊಂಡ ಕಾರ್ಯಧೋರಣೆಯು ನ್ಯಾಯಯುಕ್ತವಾಗಿರುವುದು ಮಾತ್ರವಲ್ಲದೆ ಅದು ತಮ್ಮ ಧೋರಣೆಯನ್ನೇ ಹೋಲುತ್ತದೆ ಎಂದು ಮೂಸಾಹುಸ್ಸೇನಿಯವರು ಸ್ಪಷ್ಟಮಾಡಿದ್ದಾರೆ.

### ನಾಝೀತತ್ವವು ಅರಬರಿಗೂ ಬೇಡ

ಭಾರತೀಯರಂತೆ ಅರಬರಿಗೂ ಹಿಟ್ಲರವಾದದಲ್ಲಿ ತಾತ್ಸಾರವಿದೆ. ಅರಬರ ಸ್ವಾತಂತ್ರ್ಯ ಆಂದೋಲನದ ಸಫಲತೆಗೆ ಯಾವ ಕಡೆಯಿಂದ ಬರುವ ಸಹಾಯವನ್ನಾದರೂ ಸ್ವೀಕರಿಸಲಿಕ್ಕೆ ಅರಬರು ಸಿದ್ಧರಿದ್ದಾರಾದರೂ ಅವರಿಗೆ ನಾಝಿ ಸಹಾಯವು ಬೇಡವಾಗಿದೆ. ಆದರೆ ಮಿತ್ರಮಂಡಲಿಗೆ ಅರಬರು ಮಾಡುವ ಯುದ್ಧ ಸಹಾಯವು ಅವರ ಸ್ವೇಚ್ಛೆಯಿಂದಾಗಿರಬೇಕು. ಆದ್ದರಿಂದ ಕಾಂಗ್ರೆಸು ಹೇಳಿದಂತೆ ಅರಬರು ಕೂಡ, ತಮ್ಮ ಸಹಾಯವು ಮಿತ್ರಮಂಡಲಿಗೆ ದೊರೆಯುವ ಮೊದಲು, ಅರಬರ ಸ್ವಾತಂತ್ರ್ಯದ ಕುರಿತು ಭರವಸೆ ಕೊಡಬೇಕೆಂದು ಅವರೂ ಬ್ರಿಟಿಷರನ್ನೂ ಕೇಳಿದ್ದಾರೆ!

ಅರಬರೂ ಭಾರತೀಯರೂ ಒಂದೇ ರಂಗ ಮಂಚದ ಮೇಲೆ ಇದ್ದಾರೆ. ಅವರ ಮತ್ತು ಧೋರಣೆ ಉದ್ದೇಶಗಳು ಒಂದೇಯಾಗಿವೆ. ಕೆಲವು ಮುಸಲ್ಮಾನರು ಕನಸು ಕಾಣುವಂತೆ ಎಲ್ಲಿಯಾದರೂ ಮುಸಲ್ಮಾನ ಸರ್ವಾಧಿಕಾರದ ಸ್ಥಾಪನೆಯಾಗಬೇಕೆಂದು ಅರಬರು ಸರ್ವಥಾ ಆಲೋಚಿಸಿರುವುದಿಲ್ಲ. ಮಿತ್ರಮಂಡಲಿಗೆ ಯುದ್ಧ ಸಹಾಯವನ್ನು ಕೊಡುವುದರಿಂದ ತಮ್ಮ ಸ್ವಾತಂತ್ರ್ಯ ಆಂದೋಲನಕ್ಕೆ ಧಕ್ಕೆ ತಗಲಬಾರದೆಂಬ ವಿಚಾರವು ಭಾರತೀಯರಂತೆ ಅರಬರಿಗೂ ಇದೆ.

### ಜಿನ್ನರ ಧೋರಣೆಯು ಖಂಡನೀಯ

ಈ ಕೆಲವು ವರ್ಷಗಳಿಂದ ಜಿನ್ನ ಸಾಹೇಬರು ಇಟ್ಟುಕೊಂಡ ಧೋರಣೆಯು ಖೇದಾಸ್ಪದವಾಗಿರುವುದೆಂದು ಅರಬರು ಹೇಳುತ್ತಾರೆ. ಜಿನ್ನರು ಕಾಂಗ್ರೆಸಿನ ಮೇಲೆ ಹೊರಿಸಿದ ಆರೋಪಗಳು ಅನ್ಯಾಯವಾಗಿರುವುದು ಮಾತ್ರವಲ್ಲದೆ ಅಪ್ರಾಸಂಗಿಕವಾಗಿಯೂ ಇವೆ. ಜಿನ್ನರು ವಿಷಯ ಮಹತ್ವವನ್ನು ತಿಳಿಯದವರಂತೆ ಮೂಢತನವನ್ನು ತೋರಿಸುತಿದ್ದಾರೆ. ಹೇಗೂ ಇರಲಿ, ಭಾರತೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸನ್ನು ವಿರೋಧಿಸಿ ಜಿನ್ನರು ಭಾರತದ ಮಾತ್ರವಲ್ಲ, ಪೆಲೆಸ್ತೀನ, ಸಿರಿಯ ಮೊದಲಾದ ಮುಸಲ್ಮಾನ ರಾಷ್ಟ್ರಗಳ ಸ್ವಾತಂತ್ರ್ಯದ ಸಂಪಾದನೆಯ ದಾರಿಯಲ್ಲಿ ಕಲ್ಲುಮುಳ್ಳುಗಳನ್ನು ತಂದು ಹಾಕಿ, ಭಾರತೀಯರ ಮಾತ್ರವಲ್ಲ, ಇಡೀ ಪ್ರಪಂಚದ ಮುಸಲ್ಮಾನರಿಗೆ ಅಪಕಾರಮಾಡಿದ್ದಾರೆ.

### ಕಾಂಗ್ರೆಸಿಗೆ ಆಮಂತ್ರಣ

ಹೀಗೆ ಹೇಳುತ್ತ ಮೂಸಾಹುಸ್ಸೇನಿಯವರು ಯಾರಾದರೂ ಕಾಂಗ್ರೆಸಿನ ಅಖಂಡ ಮುಖಂಡರು ಅರೇಬಿಯಕ್ಕೆ ಬಂದು ಅಲ್ಲಿ ಭಾರತೀಯ ಸ್ವಾತಂತ್ರ್ಯದ ಪ್ರಚಾರ ಕಾರ್ಯವನ್ನು ಮಾಡಬೇಕೆಂದು ಕಾಂಗ್ರೆಸಿಗೆ ಆಮಂತ್ರಣವನ್ನ ಕೊಟ್ಟಿದ್ದಾರೆ. ಮಹಾತ್ಮಾಗಾಂಧಿ ಅಥವಾ ಪಂಡಿತ ನೇಹರು ಅವರೇ ಬಂದು ಅರಬಿ ಹಾಯರ ಕಮಿಟಿಯೊಡನೆ ಆಪ್ತಾಲೋಚನೆ ಮಾಡುವುದರಿಂದ ಪರತಂತ್ರವಾಗಿರುವ ಈ ಎರಡೂ ದೇಶಗಳಿಗೆ ಮಹದುಪಕಾರವಾಗುವುದು. ಅರಬರೂ ಭಾರತೀಯರೂ ಒಂದೇ ರಂಗ ಮಂಚದಲ್ಲಿ ನಿಂತು, ನಾಝಿತತ್ವಗಳನ್ನು ವಿರೋಧಿಸುತಿದ್ದಂತೆ ಬ್ರಿಟಿಷರ ಸಾಮ್ರಾಜ್ಯವಾದವನ್ನೂ ವಿರೋಧಿಸಿ ತಾವು ಸ್ವತಂತ್ರರಾಗುವ ಸಮಯವು ಈಗ ಪ್ರಾಪ್ತವಾಗಿರುತ್ತದೆ. ಭಾರತೀಯ ಸ್ವಾತಂತ್ರ್ಯ ಆಂದೋಲನಕ್ಕೆ ಅರಬ ಹಾಯರ ಕಮಿಟಿಯ ಮುಖಂಡರು ಕೊಡುವ ನೈತಿಕ ಬೆಂಬಲವು ಕಾಂಗ್ರೆಸಿಗೆ ಮಹತ್ವದ್ದೂ ಅಮೂಲ್ಯವೂ ಆಗಿದೆ.



'ಓವಲ್‌ಟಿನ್'
ನಿಮ್ಮ ತ್ರಾಣವನ್ನೂ
ಕಸುವನ್ನೂ ರಚಿಸಲಿ!

ಉತ್ತಮ ಕಸುವುಳ್ಳ ಆರೋಗ್ಯವನ್ನು ಹೊಂದಬೇಕಾದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು. ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ "ಓವಲ್ಟಿನ್" ಉಂಟುಮಾಡುವುದು.

ಬಹಳ ರುಚಿಕರವಾದುದಲ್ಲದೆ, 'ಓವಲ್ಟಿನ್'ನಲ್ಲಿ ದೇಹದ ಆರೋಗ್ಯವನ್ನು ಕಾಪಾಡಿ ಕಸುವನ್ನು ವರ್ಧಿಸಲು ಬೇಕಾದ ಧಾತುಗಳೆಲ್ಲವೂ ಇರುವುವು. ಯಾವಾಗಲೂ ಒಂದು ಕಪ್ 'ಓವಲ್ಟಿನ್' ಕುಡಿಯಿರಿ. ಇದು ಸಂತುಷ್ಟವಾದ ಮತ್ತು ಸಂಪೂರ್ಣವಾದ ಆಹಾರವಾಗಿರುತ್ತದೆ. ಇದು ಪ್ರಕೃತಿಯ ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟಿದೆ—ಮಾಗಿ ನೆನೆಹಾಕಿದ ಬಾರ್ಲಿ, ದನದ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ವಿಟಾಮಿನ್ ಮತ್ತು ಫೊಸ್ಫೆಟೈಡ್ಸ್. ಇತರ ಬದಲು ಪಾನೀಯಗಳನ್ನು ದೂರಮಾಡಿರಿ.

**'ಓವಲ್‌ಟಿನ್'**

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ.
ವಿತರಣಕಾರರು:
ಜೇಮ್ಸ್ ರೈಟ್ ಲಿಮಿಟೆಡ್,
148 ಬ್ರೋಡವೇ ಮದ್ರಾಸು, ಕಲ್ಕತ್ತಾ, ಬೊಂಬಾಯಿ, ಕರಾಚಿ.

'ಓವಲ್ಟಿನ್' ಬಿಸ್ಕತುಗಳು:
ರುಚಿಕರ, ಜೀರ್ಣಕರ ಹಾಗು ಪೋಷಣಯುಕ್ತ. ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕತುಗಳು. ಇವುಗಳಲ್ಲಿ ಅಮೂಲ್ಯ ಗುಣದ 'ಓವಲ್ಟಿನ್' ಸೇರಿರುವುದು. 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/70/39

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

26—1—1940]  ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ  [೨೬—೧—೧೯೪೦

# ಜಗತ್ತಿನ ರಾಷ್ಟ್ರಗಳೆಲ್ಲವನ್ನೂ ನಾವು ಎದುರಿಸಬಲ್ಲೆವು!

## ಬ್ರಿಟನಿಗೆ ಸಹಾನುಭೂತಿಯು ಸ್ವಾರ್ಥದ ಆಶೆಯಿಂದಲ್ಲ

### ಸಾಮ್ರಾಜ್ಯಶಾಹಿಯ ರಣಭೇರಿ?

### ನೆಹರುಗಳ ಸಿಂಹನಾದ

'ರಾಷ್ಟ್ರಘಟನಾ ಸಮಿತಿಯನ್ನು ಸರಕಾರದ ಆಶ್ರಯದಲ್ಲಿಯೇ ನಾವು ಸೇರಿಸಿದ ಪಕ್ಷದಲ್ಲಿಯೂ ಅದು ಸಾಮ್ರಾಜ್ಯಶಾಹಿಯ ಮೃತ್ಯು ಭೇರಿಯೇ ಆಗುವುದೆಂದು ಗಾಜಿಯಾಬಾದಿನ ಭಾಷಣವೊಂದರಲ್ಲಿ ಪಂಡಿತ ನೆಹರುಗಳು ಹೇಳಿದರು.

ಮೀರತ್ ಜಿಲ್ಲೆಯಲ್ಲಿ ಪಂಡಿತರು ಸಂಚಾರ ಮಾಡಿ ಕಾಂಗ್ರೆಸಿನ ಸಂದೇಶವನ್ನು ಜನರಿಗೆ ಸಾರಿದರು. ಗ್ರಾಮ ಹಳ್ಳಿಗಳಲ್ಲಿ ಜನರು ಉತ್ಸಾಹಭರಿತರಾಗಿದ್ದರು, ಅಸಂಖ್ಯಾತ ಸ್ಥಳಗಳಲ್ಲಿ ಅವರಿಗೆ ಅಭಿನಂದನಾ ಭಾಷಣಗಳ ನಿಧಿಗಳು ಸಮರ್ಪಿತವಾದವು. ೨೨೦೦೦ ರೂ. ನಿಧಿಯು ಅವರಿಗೆ ದೊರಕಿದೆ. ಅದರಲ್ಲಿ ಶೇಕಡಾ ೫೦ ರಷ್ಟು ಅವರು ಖಾದೀ ಪ್ರೋತ್ಸಾಹ ಮತ್ತು ಸ್ವಯಂ ಸೇವಕ ದಳದ ನಿರ್ಮಾಣಕ್ಕಾಗಿ ಉಪಯೋಗಿಸುವರೆಂದು ತಿಳಿದಿದೆ.

'ಕಾಂಗ್ರೆಸ್ಸು, ಅನೇಕ ದುರಂತಗಳನ್ನೆದುರಿಸಿ ಇಂದು ಭಾರತದ ಏಕಮಾತ್ರ ಸಂಸ್ಥೆಯಾಗಿ ಮುಂದೆ ಬಂದಿದೆ. ಆ ಮಹಾ ಸಂಸ್ಥೆಯ ಮುಂದೆ ಮುಸ್ಲಿಂ ಲೀಗು ಹಿಂದೂ ಮಹಾಸಭೆಗಳಂತಹವುಗಳು ವಿರುದ್ಧ ನಿಲ್ಲಲಾರವು. ಕಾಂಗ್ರೆಸಿಗೆ ಮಾತ್ರ ಸ್ವಾತಂತ್ರ್ಯದ ಪೂರ್ಣ ಧ್ಯೇಯವಿರುವುದು. ಅದು ಮಾತ್ರ ಅದನ್ನು ಪಡೆಯಲು ಬೇಕಾದ ಸಾಧನಗಳನ್ನು ಇಂದು ಸಿದ್ಧತೆ ಮಾಡಿಕೊಂಡಿದೆ' ಎಂದರು ಅವರು ಒಂದು ಭಾಷಣದಲ್ಲಿ.

#### ನಿಜವಾದ ಐಕ್ಯ

ಸ್ವಾತಂತ್ರ್ಯ ಪ್ರತಿಜ್ಞೆಯ ಕುರಿತು ಅವರು ಹೀಗೆಂದರು.

'ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು ಪ್ರತಿಯೊಬ್ಬ ಕಾಂಗ್ರೆಸು ಸೇವಕನ ಕರ್ತವ್ಯವಾಗಿದೆ. ಆದರೆ ಯಾರಿಗೆ ಆ ಪ್ರತಿಜ್ಞೆಯಲ್ಲಿ ವಿಶ್ವಾಸವಿಲ್ಲವೋ ಯಾರು ಪ್ರತಿಜ್ಞೆ ಮಾಡಿದಂತೆ ಆಚರಿಸುವುದಿಲ್ಲವೋ ಅವರು ಹಾಗೆ ಪ್ರತಿಜ್ಞೆ ಮಾಡುವುದರಿಂದ ವಂಚನೆ ಮಾಡುತ್ತಿದ್ದಾರೆ

'ಚರಕವು ಪ್ರತಿಯೊಂದು ಮನೆಯಲ್ಲಿಯೂ ನಡೆಯಬೇಕು. ಆರ್ಥಿಕ ಮುಕ್ತಿ ಮಾತ್ರವಲ್ಲದೆ ಚರಕವು ನಮ್ಮಲ್ಲಿ ಐಕ್ಯವನ್ನುಂಟು ಮಾಡುವುದು. ಇದರಿಂದ ಮುಂದಿನ ಆಂದೋಲನದಲ್ಲಿ ನಾವು ಬಲಗೊಳ್ಳುವೆವು.

'ಜಗತ್ತು ಇಂದು ಅತ್ಯಂತ ಭೀಕರ ವ್ಯತ್ಯಾಸಗಳನ್ನು ಹೊಂದುತ್ತಿದೆ. ಈಗ ಜಗತ್ತು ಇರುವ ಅಗ್ನಿ ಮಧ್ಯದಲ್ಲಿ ಸಿದ್ಧರಿಲ್ಲದಿರುವ ನಾವು ಆ ಅಗ್ನಿಯಲ್ಲಿ ಉರಿದು ಹೋಗಬಹುದು' ಹೀಗೆ ನೆಹರುಗಳು ಮುಜಾಫರನಗರದಲ್ಲಿ.

'ನಾವು ಆಂದೋಲನವನ್ನು ಅವಸರದಿಂದ ಪ್ರಾರಂಭಿಸಲಾರೆವು. ಅದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು. ಇದೇ ಕೊನೆಯ ಹೋರಾಟವಾಗಬೇಕು. ಸಂಯುಕ್ತ ಪ್ರಾಂತದ ನಮ್ಮ ಸಭೆಗಳು ಬಲಶಾಲಿಗಳಾಗಿವೆಯೆಂಬುದು ಸಂತೋಷ. ನಾವು ನೆನಸಿದರೆ ಕ್ರಾಂತಿಯನ್ನೇ ಮಾಡಿಬಿಡಬಹುದು. ಆದರೆ ನಾವು ಮಾಡುವ ಪ್ರತಿಯೊಂದು ಕೆಲಸವೂ, ಸಂಪೂರ್ಣ ಸಿದ್ಧತೆಯಾದ ಮೇಲೆ ಮಾತ್ರ ಆಗತಕ್ಕದ್ದಿದೆ' ಎಂದರು.

#### ಸ್ವತಂತ್ರವಾದ ಭಾರತದಲ್ಲಿ ನರೇಂದ್ರರಿಗಿರುವ ಸ್ಥಾನ?

ಮುಂದೆ 'ಪ್ರಜಾಪ್ರಭುತ್ವ ರಾಜ್ಯಪದ್ಧತಿಯಿಂದ ಸ್ವತಂತ್ರವಾದ ಭಾರತದಲ್ಲಿ, ಇಂದು ಬೇರೆ ಬೇರೆ ಆಶ್ರಿತರಾಜ್ಯಗಳಲ್ಲಿ ಅಧಿಕಾರದಲ್ಲಿರುವ ನರೇಂದ್ರರಿಗೆ ನೀವು ಯಾವ ಸ್ಥಾನವನ್ನು ಕೊಡಲಿಚ್ಛಿಸುತ್ತೀರಿ?' ಎಂದು ಕೇಳಿದ ಪ್ರಶ್ನೆಗೆ ಮಹಾತ್ಮಾಜಿಯವರು ಹೀಗೆಂದಿರುವರು.

'ತುಂಬ ಸಂಬಳ ಕೊಟ್ಟು ಜನರ ಆಡಳಿತದಾರರಾಗಿ ಅವರನ್ನು ನೇಮಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ಪ್ರಜೆಗಳ ಯೋಗಕ್ಷೇಮದ ವಿಚಾರವು ಅವರಿಗೆ ಇರಬೇಕು. ಬ್ರಿಟಿಷ್ ರಾಜನಿಗೆ ಇಂದು ಯಾವ ಅಧಿಕಾರವಿದೆಯೊ, ಅಂತಹ ಅಧಿಕಾರವು ಅವರಿಗೂ ಇರಬಹುದು. ನರೇಂದ್ರರು ಬ್ರಿಟಿಷ್ ರಾಜನ ಸಾಮಂತರೇ ಆಗಿದ್ದಾರಷ್ಟೆ. ಆದುದರಿಂದ ಬ್ರಿಟಿಷ್ ರಾಜನಿಗಿಂತ ಹೆಚ್ಚಿನ ಅಧಿಕಾರ ಅವರಿಗ್ಯಾದರೂ ಏನು ಬೇಕಾಗಬಹುದು?

ಇಂಗ್ಲೆಂಡಿನ ಅರಸನು, ಯಾರನ್ನೂ ಕೂಡ ಗಲ್ಲಿಗೆ ಕೊಡಲಾರನು. ಅವನು ಅಂತಹ ಯೋಗ್ಯ ದಾರಿಯಿಂದ ಮಾತ್ರ ಕಾರ್ಯವನ್ನು ಸಾಧಿಸಬಹುದು. ಅವನು ಪ್ರೈವೇಟ್ ನಾಗರಿಕನೆ ಆಗಿದ್ದಾನೆ. ಆದುದರಿಂದ ಈ ವಿಷಯದಲ್ಲಿ ಇಂಗ್ಲೆಂಡಿನ ರಾಜಪ್ರಭುತ್ವವನ್ನು ಅನುಸರಿಸಲು ನಾನು ಅಪೇಕ್ಷಿಸುತ್ತೇನೆ. ಏಕೆಂದರೆ, ಆಶ್ರಿತ ರಾಜ್ಯಗಳಲ್ಲಿರುವ ಪ್ರಜೆಗಳು, ತಮಗೆ ಏನು ಬೇಕಾಗಿದೆಯೆಂದು ತಾವಾಗಿಯೇ ಏಕೆ ವಿಚಾರಿಸಬಾರದು?

#### ಒಳ್ಳೆಯ ಉಪಾಯ

'ಜನರ ವಿಷಯವಾಗಿ ಹೇಳುವುದಿದ್ದರೆ, ಆಶ್ರಿತರಾಜ್ಯಗಳ ಸುಪ್ರೀಮ್ ಕೋರ್ಟು ಭಾರತದ ಹೈಕೋರ್ಟಿಗೆ ಸಂಬಂಧಿಸಿ ಇರಬೇಕು.

'ಹಾಗಾದರೆ, ಇಂಗ್ಲಿಷು ರೀತಿಯ ಪ್ರಜಾಪ್ರಭುತ್ವವು ಭಾರತಕ್ಕೆ ಅಸಮರ್ಪಕವಾಗಲಾರದೇ?' ಎಂದು ಗಾಂಧಿಜಿಯವರೊಡನೆ ಪ್ರಶ್ನಿಸಿದಕ್ಕೆ ಅವರು ಹೀಗೆಂದರು

'ಯಾವ ರೀತಿಯ ಪ್ರಜಾಪ್ರಭುತ್ವವಾಗಬೇಕೆಂಬುದನ್ನು ರಾಷ್ಟ್ರಘಟನಾ ಸಮಿತಿಯೇ ನಿರ್ಣಯಿಸುವುದು. ಭಾರತಕ್ಕೆ ಯಾವ ರೀತಿಯ ಸರಕಾರವಾಗಬೇಕೆಂಬುದನ್ನು ಕೆಲರೇ ಕೂಡಿ ನಿರ್ಣಯಿಸುವ ಕಾಲವು ಕಳೆದುಹೋಯಿತು' ಎಂದರು

#### ಬ್ರಿಟನು ಸೋತರೂ ಭಾರತವು ಅಸಹಾಯಯಾಗಲಾರದು

ಆಂಗ್ಲ ಪತ್ರಿಕೋದ್ಯಮಿಯೊಬ್ಬನು, ಮಹಾತ್ಮಾಜಿಯವರನ್ನು ಕಂಡು, ಅವರೊಡನೆ ರಾಜಕೀಯದ ಕುರಿತು ಹಲವು ಚರ್ಚೆಗಳನ್ನು ಮಾಡಿದನು.

'ಬ್ರಿಟನು ಯುದ್ಧದಲ್ಲಿ ಸೋತು ಹೋದರೆ, ಮುಂದೆ ಏನೆಂಬುದು ನಿಮ್ಮ ವಿಚಾರ?' ಅವನು ಕೇಳಿದನು.

'ಬ್ರಿಟನು ಯುದ್ಧದಲ್ಲಿ ಸೋತರೆ ನಿಜವಾಗಿ ನನಗೆ ಮರುಕವಾಗುವುದು.' 

### ಸ್ವರಾಜ್ಯದಲ್ಲಿ ನರೇಂದ್ರರ ಸ್ಥಾನ

ಆದರೆ, ನಾನೂ ಎಂದೂ ಅಸಹಾಯಯಾಗಲಾರೆನು.' ಹೀಗೆಂದು, ಗಾಂಧಿಜಿಯವರು ಹೇಳಿದರು. ಅವರು ಮಾತನ್ನು ಮುಂದುವರಿಸುತ್ತಾ ಹೀಗೆಂದರು

#### ಯಾರಿಗೂ ಭಯಪಡಲಾರೆವು

ಮುಂದಕ್ಕೆ ರಶ್ಯಾ, ಜಪಾನು, ಜರ್ಮನಿ ಇಟಲಿಗಳು ಒಂದಾಗಿ ಬಂದು ಭಾರತಕ್ಕೆ ಧಾಳಿಯಿಟ್ಟರೂ ಕೂಡಾ, ಭಾರತವು ಅಹಿಂಸೆಯನ್ನು ತನ್ನ ತೀವ್ರ ಧೋರಣೆಯಾಗಿ ಅಂಗೀಕರಿಸಿದ ಪಕ್ಷದಲ್ಲಿ ಎಂದೆಂದೂ ಯಾರಿಗೂ ಹೆದರಬೇಕಾದ ಅವಶ್ಯವಿಲ್ಲ. ಆದಕಾರಣ, ಬ್ರಿಟನ ಮೇಲೆ ನನಗೆ ಇರುವ ಈ ಸಹಾನುಭೂತಿಯು ಸಂಪೂರ್ಣ ಸ್ವಾರ್ಥವಿಲ್ಲದುದಾಗಿದೆ. ಬ್ರಿಟನು ನಿಜವಾಗಿಯೂ ನ್ಯಾಯವನ್ನು ಪಾಲಿಸುವುದಿದ್ದರೆ ಭಾರತಕ್ಕೆ ನ್ಯಾಯವನ್ನು ಕೊಡಲಿ. ಅದು ಎಂದೆಂದೂ ಅಳಕಲಾರದು'

---

**Notice**

**In the Court of the District Judge of South Kanara.**

Appeal Suit No 410/39
(Against Udipi O S No. 120/38)
Between
Chandappa Shanbhogue— Appellant
and
Narasimha Kuduva & others— Respondent

To
Respondent 5 Govind Kuduva
,, 6 Gopala Kuduva— sons of Cherdappa Kuduva C/o P. G L Kuduva, Tea Shop, Agripad, No. 11 Bombay.

Take notice that the appeal from the decree and Judgment in O.S. No. 120/38 dated 4-9-39 presented by the appellant above named stands posted to the 16th day of February 1940 for final disposal.

You are hereby requested to appear before this Court either in person or by a pleader to contest the above matter failing which the same shall be heard and determined exparte.

Mangalore 17-1-1940 | **G. Somashekar Rao,** Vakil for appellant.

# ಭಾರತೀಯರಂತೆ ಅರಬರೂ ಸ್ವಾತಂತ್ರ್ಯವನ್ನು ಬಯಸುತ್ತಾರೆ

## ಜಿನ್ನರ ಧೋರಣೆಯ ಖಂಡನೆ!

## ನಾಜೀ ತತ್ತ್ವಕ್ಕೆ ಅವರದೂ ಬೆಂಬಲವಿಲ್ಲ

### ಆದರೆ ಬ್ರಿಟನ್ನಿನ ಯುದ್ಧೋದ್ದೇಶವೇನು?

### ಅರಬೀ ಮುಖಂಡರ ಹೇಳಿಕೆ

ಭಾರತೀಯ ಸ್ವಾತಂತ್ರ್ಯ ಆಂದೋಲನದಲ್ಲಿ ಪೆಲೆಸ್ತೀನಿನ ಅರಬರು ತಮ್ಮ ಹಾರ್ದಿಕ ಸಹಾನುಭೂತಿಯನ್ನು ವ್ಯಕ್ತ ಮಾಡಿರುವರು. ಭಾರತವು ಸ್ವತಂತ್ರವಾಗುವುದೆಂದರೆ, ಈಗ ಪ್ರಾಂತದಲ್ಲಿರುವ ಸಿರಿಯ, ಪೆಲೆಸ್ತೀನ, ಟ್ರಾನ್ಸ್ ಜೋರ್ಡನ ಮೊದಲಾದ ಎಲ್ಲಾ ಅರಬ ರಾಷ್ಟ್ರಗಳು ಸ್ವತಂತ್ರವಾದಂತೆಯೆ! ಯಾಕೆಂದರೆ ಭಾರತ ಸ್ವಾತಂತ್ರ್ಯದ ಮೇಲೆಯೇ ಇವುಗಳ ಸ್ವಾತಂತ್ರ್ಯವು ಹೊಂದಿಕೊಂಡಿದೆ ಎಂದು ಅರಬಿಯದ ಗ್ರಾಂಡ ಮುಫ್ತಿಯ ಅಳಿಯಂದಿರೂ, ಅರಬ್ ಹಾಯರ್ ಕಮಿಟಿಯ ಒಬ್ಬ ಸದಸ್ಯರಾದ ಜಮಾಲ್ ಹುಸ್ಸೇನಿಯವರ ಸಂಬಂಧಿಕರೂ ಆದ ಮೂಸಾಹುಸ್ಸೇನಿಯವರು ಲಂಡನಿನಲ್ಲಿ ಹೇಳಿರುವರು.

ಕಾಂಗ್ರೆಸ್ ಮಂತ್ರಿಗಳು ತಮ್ಮ ಪದವಿಗೆ ರಾಜೀನಾಮೆಯನ್ನಿತ್ತಾಗ, ಅರಬಿ ಹಾಗೂ ಇತರ ಪೌರ್ವಾತ್ಯ ಮುಸಲ್ಮಾನ ಲೋಕವು ಹಿಂದುಸ್ಥಾನದಲ್ಲಿ ನಡೆಯುವ ಘಟನೆಗಳನ್ನು ಕುತೂಹಲದಿಂದಲೂ ಆತುರದಿಂದಲೂ ನೋಡ ತೊಡಗಿತು. ಯುದ್ಧ ಸಂದರ್ಭದಲ್ಲಿ ಕಾಂಗ್ರೆಸು ತಳೆದುಕೊಂಡ ಕಾರ್ಯಧೋರಣೆಯು ನ್ಯಾಯಯುಕ್ತವಾಗಿರುವುದು ಮಾತ್ರವಲ್ಲದೆ ಅದು ತಮ್ಮ ಧೋರಣೆಯನ್ನೇ ಹೋಲುತ್ತದೆ ಎಂದು ಮೂಸಾಹುಸ್ಸೇನಿಯವರು ಸ್ಪಷ್ಟಮಾಡಿದ್ದಾರೆ.

### ಸಾಮ್ರಾಜ್ಯತತ್ತ್ವವು ಅರಬರಿಗೂ ಬೇಡ

ಭಾರತೀಯರಂತೆ ಅರಬರಿಗೂ ಹಿಟ್ಲರವಾದದಲ್ಲಿ ತಾತ್ಸಾರವಿದೆ. ಅರಬರ ಸ್ವಾತಂತ್ರ್ಯ ಆಂದೋಲನದ ಸಫಲತೆಗೆ ಯಾವ ಕಡೆಯಿಂದ ಬರುವ ಸಹಾಯವನ್ನಾದರೂ ಸ್ವೀಕರಿಸಲಿಕ್ಕೆ ಅರಬರು ಸಿದ್ಧರಿದ್ದಾಗ್ಯೂ ಅವರಿಗೆ ನಾಝಿ ಸಹಾಯವು ಬೇಡವಾಗಿದೆ. ಆದರೆ ಮಿತ್ರಮಂಡಲಿಗೆ ಅರಬರು ಮಾಡುವ ಯುದ್ಧ ಸಹಾಯವು ಅವರ ಸ್ವೇಚ್ಛೆಯಿಂದಾಗಬೇಕು. ಇದ್ದುದರಿಂದ ಕಾಂಗ್ರೆಸು ಹೇಳಿದಂತೆ ಅರಬರು ಕೂಡ, ತಮ್ಮ ಸಹಾಯವು ಮಿತ್ರಮಂಡಲಿಗೆ ದೊರೆಯುವ ಮೊದಲು, ಅರಬರ ಸ್ವಾತಂತ್ರ್ಯದ ಕುರಿತು ಭರವಸೆ ಕೊಡಬೇಕೆಂದು ಅವರು ಬ್ರಿಟಿಷರನ್ನು ಕೇಳಿದ್ದಾರೆ!

ಅರಬರೂ ಭಾರತೀಯರೂ ಒಂದೇ [illegible] ಅವರ [illegible] ಒಂದೇ [illegible] ಮುಸಲ್ಮಾನರು [illegible]

ಮುಸಲ್ಮಾನ ಸರ್ವಾಧಿಕಾರದ ಸ್ಥಾಪನೆಯಾಗಬೇಕೆಂದು ಅರಬರು ಸರ್ವಥಾ ಆಲೋಚಿಸಿರುವುದಿಲ್ಲ. ಮಿತ್ರಮಂಡಲಿಗೆ ಯುದ್ಧ ಸಹಾಯವನ್ನು ಕೊಡುವುದರಿಂದ ತಮ್ಮ ಸ್ವಾತಂತ್ರ್ಯ ಆಂದೋಲನಕ್ಕೆ ಧಕ್ಕೆ ತಗಲಬಾರದೆಂಬ ವಿಚಾರವು ಭಾರತೀಯರಂತೆ ಅರಬರಿಗೂ ಇದೆ.

### ಜಿನ್ನರ ಧೋರಣೆಯು ಖಂಡನೀಯ

ಈ ಕೆಲವು ವರ್ಷಗಳಿಂದ ಜಿನ್ನ ಸಾಹೇಬರು ಇಟ್ಟುಕೊಂಡ ಧೋರಣೆಯು ಖೇದಾಸ್ಪದವಾಗಿರುವುದೆಂದು ಅರಬರು ಹೇಳುತ್ತಾರೆ. ಜಿನ್ನರು ಕಾಂಗ್ರೆಸಿನ ಮೇಲೆ ಹೊರಿಸಿದ ಆರೋಪಗಳು ಅನ್ಯಾಯವಾಗಿರುವುದು ಮಾತ್ರವಲ್ಲದೆ ಅಪ್ರಾಸಂಗಿಕವಾಗಿಯೂ ಇವೆ. ಜಿನ್ನರು ವಿಷಯ ಮಹತ್ವವನ್ನು ತಿಳಿಯದವರಂತೆ ಮೂರ್ಖತನವನ್ನು ತೋರಿಸುತ್ತಿದ್ದಾರೆ. ಹೇಗೂ ಇರಲಿ, ಭಾರತೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸನ್ನು ವಿರೋಧಿಸಿ ಜಿನ್ನರು ಭಾರತದ ಮಾತ್ರವಲ್ಲ, ಪೆಲೆಸ್ತೀನ, ಸಿರಿಯ ಮೊದಲಾದ ಮುಸಲ್ಮಾನ ರಾಷ್ಟ್ರಗಳ ಸ್ವಾತಂತ್ರ್ಯದ ಸಂಪಾದನೆಯ ದಾರಿಯಲ್ಲಿ ಕಲ್ಲು ಮುಳ್ಳುಗಳನ್ನು ತಂದು ಹಾಕಿ, ಭಾರತೀಯರ ಮಾತ್ರವಲ್ಲ, ಇಡೀ ಪ್ರಪಂಚದ ಮುಸಲ್ಮಾನರಿಗೆ ಅಪಕಾರಮಾಡಿದ್ದಾರೆ.

### ಕಾಂಗ್ರೆಸಿಗೆ ಆಮಂತ್ರಣ

ಹೀಗೆ ಹೇಳುತ್ತ ಮೂಸಾಹುಸ್ಸೇನಿಯವರು ಯಾರಾದರೂ ಕಾಂಗ್ರೆಸಿನ ಅಖಂಡ ಮುಖಂಡರು, ಅರೇಬಿಯಾಕ್ಕೆ ಬಂದು ಅಲ್ಲಿ ಭಾರತೀಯ ಸ್ವಾತಂತ್ರ್ಯದ ಪ್ರಚಾರ ಕಾರ್ಯವನ್ನು ಮಾಡಬೇಕೆಂದು ಕಾಂಗ್ರೆಸಿಗೆ ಆಮಂತ್ರಣವನ್ನು ಕೊಟ್ಟಿದ್ದಾರೆ. ಮಹಾತ್ಮಾಗಾಂಧಿ ಅಥವಾ ಪಂಡಿತ ನೆಹರು ಅವರೇ ಬಂದು ಅರಬಿ ಹಾಯರ ಕಮಿಟಿಯೊಡನೆ ಆಲೋಚನೆ ಮಾಡುವುದರಿಂದ ಪರತಂತ್ರವಾಗಿರುವ ಈ ಎರಡೂ ದೇಶಗಳಿಗೆ ಮಹದುಪಕಾರವಾಗುವುದು. ಅರಬರೂ ಭಾರತೀಯರೂ ಒಂದೇ ರಂಗ ಮಂಚದಲ್ಲಿ ನಿಂತು, ಸಾಮ್ರಾಜ್ಯತತ್ವಗಳನ್ನು ವಿರೋಧಿಸುತ್ತಿರುವ ಬ್ರಿಟಿಷರ ಸಾಮ್ರಾಜ್ಯವಾದವನ್ನು ವಿರೋಧಿಸಿ ತಾವು ಸ್ವತಂತ್ರರಾಗುವ ಸಮಯವು ಈಗ ಪ್ರಾಪ್ತವಾಗಿರುತ್ತದೆ. ಭಾರತೀಯ ಸ್ವಾತಂತ್ರ್ಯ ಆಂದೋಲನಕ್ಕೆ ಅರಬ ಹಾಯರ ಕಮಿಟಿಯ ಮುಖಂಡರು ಕೊಡುವ ನೈತಿಕ ಬೆಂಬಲವು ಕಾಂಗ್ರೆಸಿಗೆ ಮಹತ್ವದ್ದೂ ಆಕರ್ಷಕವೂ ಆಗಿದೆ.



'ಓವಲ್ಟಿನ್'
ನಿಮ್ಮ ತಾರುಣ್ಯವನ್ನೂ
ಕಸುವನ್ನೂ ರಚಿಸಲಿ!

ಉತ್ತಮ ಕಸುವುಳ್ಳ ಆರೋಗ್ಯವನ್ನು ಹೊಂದಬೇಕಾದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು. ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ "ಓವಲ್ಟಿನ್" ಉಂಟುಮಾಡುವುದು.

ಬಹಳ ರುಚಿಕರವಾದುದಲ್ಲದೆ, 'ಓವಲ್ಟಿನ್'ನಲ್ಲಿ ದೇಹದ ಆರೋಗ್ಯವನ್ನು ಕಾಪಾಡಿ ಕಸುವನ್ನು ವರ್ಧಿಸಲು ಬೇಕಾದ ಧಾತುಗಳೆಲ್ಲವೂ ಇರುವುವು. ಯಾವಾಗಲೂ ಒಂದು ಕಪ್ 'ಓವಲ್ಟಿನ್' ಕುಡಿಯಿರಿ. ಇದು ಸಂತುಷ್ಟವಾದ ಮತ್ತು ಸಂಪೂರ್ಣವಾದ ಆಹಾರವಾಗಿರುತ್ತದೆ. ಇದು ಪ್ರಕೃತಿಯ ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟಿದೆ—ಮಾಗಿ ನೆನೆಹಾಕಿದ ಬಾರ್ಲಿ, ದನದ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ವಿಟಾಮಿನ್ ಮತ್ತು ಫೊಸ್ಫೇಟ್ಸ್. ಇತರ ಬದಲು ಪಾನೀಯಗಳನ್ನು ದೂರಮಾಡಿರಿ.

'ಓವಲ್‌ಟಿನ್'

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ.
ವಿತರಣಕಾರರು:
ಜೇಮ್ಸ್ ರೈಟ್ ಲಿಮಿಟೆಡ್,
141 ಬ್ರೋಡವೇ ಮದ್ರಾಸು, ಕಲ್ಕತ್ತಾ, ಬೊಂಬಾಯಿ, ಕರಾಚಿ.

'ಓವಲ್ಟಿನ್' ಬಿಸ್ಕುಟುಗಳು:
ರುಚಿಕರ, ಪುಷ್ಟಿಕರ ಹಾಗು ಪೋಷಣಯುಕ್ತ. ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ಅಮೂಲ್ಯ ಗುಣದ 'ಓವಲ್ಟಿನ್' ಸೇರಿರುವುದು. 4 ಔನ್ಸು, 8 ಔನ್ಸುಗಳ ಡಬ್ಬಿಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ದೊರೆಯುತ್ತದೆ.
OV/70/39

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

26—1—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೬—೧—೧೯೪೦

# ಜಗತ್ತಿನ ರಾಷ್ಟ್ರಗಳೆಲ್ಲವನ್ನೂ ನಾವು ಎದುರಿಸಬಲ್ಲೆವು!

## ಬ್ರಿಟನಿಗೆ ಸಹಾನುಭೂತಿಯು ಸ್ವಾರ್ಥದ ಆಶೆಯಿಂದಲ್ಲ.

### ಸಾಮ್ರಾಜ್ಯಶಾಹಿಯ ರಣಭೇರಿ? ನೆಹರುಗಳ ಸಿಂಹನಾದ ಸ್ವರಾಜ್ಯದಲ್ಲಿ ನರೇಂದ್ರರ ಸ್ಥಾನ

'ರಾಷ್ಟ್ರಘಟನಾ ಸಮಿತಿಯನ್ನು, ಸರಕಾರದ ಆಶ್ರಯದಲ್ಲಿಯೇ ನಾವು ಸೇರಿಸಿದ ಪಕ್ಷದಲ್ಲಿಯೂ, ಅದು ಸಾಮ್ರಾಜ್ಯಶಾಹಿಯ ಮೃತ್ಯು ಭೇರಿಯೇ ಆಗುವುದೆಂದು ಗಾಜಿಯಾಬಾದಿನ ಭಾಷಣವೊಂದರಲ್ಲಿ ಪಂಡಿತ ನೆಹರುಗಳು ಹೇಳಿದರು.

ಮೀರತ್ ಜಿಲ್ಲೆಯಲ್ಲಿ ಪಂಡಿತರು ಸಂಚಾರ ಮಾಡಿ ಕಾಂಗ್ರೆಸಿನ ಸಂದೇಶವನ್ನು ಜನರಿಗೆ ಸಾರಿದರು. ಗ್ರಾಮ ಹಳ್ಳಿಗಳಲ್ಲಿ ಜನರು ಉತ್ಸಾಹಭರಿತರಾಗಿದ್ದರು. ಅಸಂಖ್ಯಾತ ಸ್ಥಳಗಳಲ್ಲಿ ಅವರಿಗೆ ಅಭಿನಂದನಾ ಭಾಷಣಗಳು ನಿಧಿಗಳು ಸಮರ್ಪಿತವಾದುವು. ೫೦೦೦ ರೂ ನಿಧಿಯು ಅವರಿಗೆ ದೊರಕಿದೆ. ಅದರಲ್ಲಿ ನೇಕಾರರಷ್ಟು ಅವರು ಖಾದೀ ಪ್ರೋತ್ಸಾಹ ಮತ್ತು ಸ್ವಯಂ ಸೇವಕ ದಳದ ನಿರ್ಮಾಣಕ್ಕಾಗಿ ಉಪಯೋಗಿಸುವರೆಂದು ತಿಳಿದಿದೆ.

'ಕಾಂಗ್ರೆಸ್ಸು, ಅನೇಕ ದುರಂತಗಳನ್ನೆದುರಿಸಿ ಇಂದು ಭಾರತದ ಏಕಮಾತ್ರ ಸಂಸ್ಥೆಯಾಗಿ ಮುಂದೆ ಬಂದಿದೆ. ಆ ಮಹಾ ಸಂಸ್ಥೆಯ ಮುಂದೆ ಮುಸ್ಲಿಂ ಲೀಗು ಹಿಂದೂ ಮಹಾಸಭೆಗಳಂತಹವುಗಳು ವಿರುದ್ಧ ನಿಲ್ಲಲಾರವು. ಕಾಂಗ್ರೆಸಿಗೆ ಮಾತ್ರ ಸ್ವಾತಂತ್ರ್ಯದ ಪೂರ್ಣ ಧ್ಯೇಯವಿರುವುದು. ಅದು ಮಾತ್ರ ಅದನ್ನು ಪಡೆಯಲು ಬೇಕಾದ ಸಾಧನಗಳನ್ನು ಇಂದು ಸಿದ್ಧತೆ ಮಾಡಿಕೊಂಡಿದೆ' ಎಂದರು ಅವರು ಒಂದು ಭಾಷಣದಲ್ಲಿ.

#### ನಿಜವಾದ ಐಕ್ಯ

ಸ್ವಾತಂತ್ರ್ಯ ಪ್ರತಿಜ್ಞೆಯ ಕುರಿತು ಅವರು ಹೀಗೆಂದರು.

'ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು ಪ್ರತಿಯೊಬ್ಬ ಕಾಂಗ್ರೆಸು ಸೇವಕನ ಕರ್ತವ್ಯವಾಗಿದೆ. ಆದರೆ ಯಾರಿಗೆ ಆ ಪ್ರತಿಜ್ಞೆಯಲ್ಲಿ ವಿಶ್ವಾಸವಿಲ್ಲವೋ ಯಾರು ಪ್ರತಿಜ್ಞೆ ಮಾಡಿದಂತೆ ಆಚರಿಸುವುದಿಲ್ಲವೋ ಅವರು ಹಾಗೆ ಪ್ರತಿಜ್ಞೆ ಮಾಡುವುದರಿಂದ ವಂಚನೆ ಮಾಡುತ್ತಿದ್ದಾರೆ.

'ಚರಕವು ಪ್ರತಿಯೊಂದು ಮನೆಯಲ್ಲಿಯೂ ನಡೆಯಬೇಕು. ಆರ್ಥಿಕ ಮಹತ್ವ ಮಾತ್ರವಲ್ಲದೆ ಚರಕವು ನಮ್ಮಲ್ಲಿ ಐಕ್ಯವನ್ನುಂಟುಮಾಡುವುದು. ಇದರಿಂದ ಮುಂದಿನ ಆಂದೋಲನದಲ್ಲಿ ನಾವು ಬಲಗೊಳ್ಳುವೆವು.

'ಜಗತ್ತು ಇಂದು ಅತ್ಯಂತ ಜೋರಾದ ವ್ಯತ್ಯಾಸಗಳನ್ನು ಹೊಂದುತ್ತಿದೆ. [illegible] ಜಗತ್ತು ಇಂದು ಅಗ್ನಿ ಮಧ್ಯದಲ್ಲಿದೆ. ಸಿದ್ಧರಿಲ್ಲದಿರುವ ನಾವು ಆ ಅಗ್ನಿಯಿಂದ ಉರಿದು ಹೋಗಬಹುದು.' ಹೀಗೆಂದರು ನೆಹರುಗಳು ಮುಜಾಫರನಗರದಲ್ಲಿ.

'ನಾವು ಆಂದೋಲನವನ್ನು ಅವಸರದಿಂದ ಆರಂಭಿಸಬಾರದು. ಅದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು. ಇದೇ ಕೊನೆಯ ಹೋರಾಟವಾಗಬೇಕು. ಸಂಯುಕ್ತ ಪ್ರಾಂತದ ನಮ್ಮ ಸಂಘಗಳು ಒಟ್ಟಾಳಿಗಳಾಗಿವೆಯೆಂಬುದು ಸಂತೋಷ. ನಾವು ನೆನಸಿದರೆ ಕ್ರಾಂತಿಯನ್ನೇ ಮಾಡಿಬಿಡಬಹುದು. ಆದರೆ ನಾವು ಮಾಡುವ ಪ್ರತಿಯೊಂದು ಕೆಲಸವೂ, ಸಂಪೂರ್ಣ ಸಿದ್ಧತೆಯಾದ ಮೇಲೆ ಮಾತ್ರ ಆಗತಕ್ಕದ್ದಿದೆ' ಎಂದರು.

#### ಸ್ವತಂತ್ರವಾದ ಭಾರತದಲ್ಲಿ ನರೇಂದ್ರರಿಗಿರುವ ಸ್ಥಾನ?

ಮುಂದೆ 'ಪ್ರಜಾಪ್ರಭುತ್ವ ರಾಜ್ಯಪದ್ಧತಿಯಿಂದ ಸ್ವತಂತ್ರವಾದ ಭಾರತದಲ್ಲಿ, ಇಂದು ಬೇರೆ ಬೇರೆ ಅಸ್ತಿತ್ವಗಳಲ್ಲಿ ಅಧಿಕಾರದಲ್ಲಿರುವ ನರೇಂದ್ರರಿಗೆ ನೀವು ಯಾವ ಸ್ಥಾನವನ್ನು ಕೊಡಲಿಚ್ಛಿಸುತ್ತೀರಿ?' ಎಂದು ಕೇಳಿದ ಪ್ರಶ್ನೆಗೆ ಪಂಡಿತ ಜವಾಹರರು ಹೀಗೆಂದಿರುವರು.

'ತುಂಬ ಸ್ವಲ್ಪ ಕೊಟ್ಟು ಇನ್ನೂ ಅತಿ [illegible] ಅವರನ್ನು ನೇಮಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ಪ್ರಜೆಗಳ ಯೋಗಕ್ಷೇಮದ ವಿಚಾರವು ಅವರಿಗೆ ಇರಬೇಕು. ಬ್ರಿಟಿಷ್ ರಾಜನಿಗೆ ಇಂದು ಯಾವ ಅಧಿಕಾರವಿದೆಯೊ, ಅಂತಹ ಅಧಿಕಾರವು ಅವರಿಗೂ ಇರಬಹುದು. ನರೇಂದ್ರರು ಬ್ರಿಟಿಷ್ ರಾಜನ ಸಾಮ್ಯತೆಯೇ ಆಗಬೇಕಷ್ಟೆ. ಆದುದರಿಂದ ಬ್ರಿಟಿಷ್ ರಾಜರಿಗಿಂತ ಹೆಚ್ಚಿನ ಅಧಿಕಾರ ಅವರಿಗ್ಯಾರಿಗೂ [illegible] ಬೇಕಾಗಬಾರದು.'

[illegible]

#### ಒಳ್ಳೆಯ ಉಪಾಯ

[illegible]

'[illegible]' ಎಂದು [illegible] ಹೀಗೆಂದರು.

[illegible] ಎಂದರು.

#### ಬ್ರಿಟಿಷರ ಕೋರಿಕೆ ... ಭಾರತವು ಅಪೇಕ್ಷೆ ... ಯಾಗಬಾರದು

[illegible] ಚರ್ಚೆಗಳನ್ನು ಮಾಡಿದನು.

'ಬ್ರಿಟನು ಯುದ್ಧದಲ್ಲಿ ಸೋತು ಹೋದರೆ, ಮುಂದೆ ಏನೆಂಬುದು ನಿಮ್ಮ ವಿಚಾರ?' ಅವನು ಕೇಳಿದನು.

'ಬ್ರಿಟನು ಯುದ್ಧದಲ್ಲಿ ಸೋತರೆ [illegible] ಹಾಗೆ [illegible] ಮಾಡುತ್ತಾನೆ.'

[illegible]

#### ಯಾರಿಗೂ ಬಯಸಬಾರದು

[illegible]

## Notice

**In the Court of the District Judge of South Kanara.**

Appeal Suit No. 410 39
(Against [illegible] O.S.No. 120 38)
Between

Chandappa Shanbhogue— Appellant
and
[illegible] Kuduva & [illegible]— Respondent

To
Respondents [illegible] Govind Kuduva, [illegible] Gopala Kuduva—sons of Chendappa Kuduva, c/o P. G. L. Kuduva, [illegible] Shop, [illegible] No 11, Bombay.

Take notice that the appeal from the decree and judgment in O.S.No. 120/38 dated 1-9-39 presented by the appellant above named stands posted to the 15th day of February 1940 for final disposal.

You are hereby requested to appear before this Court either in person or by a pleader to contest the above matter failing which the same shall be heard and determined, exparte.

Mangalore | G. Somashekar Rao,
17-1-1940 | Vakil for appellant.

# ಭಾರತೀಯರಂತೆ ಅರಬರೂ ಸ್ವಾತಂತ್ರ್ಯವನ್ನು ಬಯಸುತ್ತಾರೆ

## ಜಿನ್ನರ ಧೋರಣೆಯ ಖಂಡನೆ!

## ನಾಜೀ ತತ್ವಕ್ಕೆ ಅವರದೂ ಬೆಂಬಲವಿಲ್ಲ

### ಆದರೆ ಬ್ರಿಟನ್ನಿನ ಯುದ್ಧೋದ್ದೇಶವೇನು?

### ಅರಬೀ ಮುಖಂಡರ ಹೇಳಿಕೆ

ಭಾರತೀಯ ಸ್ವಾತಂತ್ರ್ಯ ಆಂದೋಲನದಲ್ಲಿ ಪೆಲೆಸ್ತೀನಿನ ಅರಬರು ತಮ್ಮ ಹಾರ್ದಿಕ ಸಹಾನುಭೂತಿಯನ್ನು ವ್ಯಕ್ತ ಮಾಡಿರುವರು. ಭಾರತವು ಸ್ವತಂತ್ರವಾಗುವುದೆಂದರೆ, ಈಗ ಪ್ರಾಂತದಲ್ಲಿರುವ ಸಿರಿಯ, ಪೆಲೆಸ್ತೀನ, ಟ್ರಾನ್ಸ್ ಜೋರ್ಡನ ಮೊದಲಾದ ಎಲ್ಲ ಅರಬ ರಾಷ್ಟ್ರಗಳು ಸ್ವತಂತ್ರವಾದಂತೆಯೆ! ಯಾಕೆಂದರೆ ಭಾರತಸ್ವಾತಂತ್ರ್ಯದ ಮೇಲೆಯೇ ಇವುಗಳ ಸ್ವಾತಂತ್ರ್ಯವು ಹೊಂದಿಕೊಂಡಿದೆ ಎಂದು ಅರೆಬಿಯದ ಗ್ರೆಂಡ ಮುಫ್ತಿಯ ಅಳಿಯಂದಿರೂ, ಅರಬ್ ಹಾಯರ್ ಕಮಿಟಿಯ ಒಬ್ಬ ಸದಸ್ಯರಾದ ಜಮಾಲ್ ಹುಸ್ಸೇನಿಯವರ ಸಂಬಂಧಿಕರೂ ಆದ ಮೂಸಾಹುಸ್ಸೇನಿಯವರು ಲಂಡನಿನಲ್ಲಿ ಹೇಳಿರುವರು.

ಕಾಂಗ್ರೆಸ ಮಂತ್ರಿಗಳು ತಮ್ಮ ಪದವಿಗೆ ರಾಜಿನಾಮೆಯನ್ನಿತ್ತಾಗ, ಅರಬಿ ಹಾಗೂ ಇಡೀ ಪೌರ್ವಾತ್ಯ ಮುಸಲ್ಮಾನ ಲೋಕವು ಹಿಂದುಸ್ಥಾನದಲ್ಲಿ ನಡೆಯುವ ಘಟನೆಗಳನ್ನು ಕುತೂಹಲದಿಂದಲೂ ಆತುರದಿಂದಲೂ ನೋಡ ತೊಡಗಿತು. ಯುದ್ಧ ಸಂದರ್ಭದಲ್ಲಿ ಕಾಂಗ್ರೆಸು ಇಟ್ಟುಕೊಂಡ ಕಾರ್ಯಧೋರಣೆಯು ನ್ಯಾಯಯುಕ್ತವಾಗಿರುವುದು ಮಾತ್ರವಲ್ಲದೆ ಅದು ತಮ್ಮ ಧೋರಣೆಯನ್ನೇ ಹೋಲುತ್ತದೆ ಎಂದು ಮೂಸಾಹುಸ್ಸೇನಿಯವರು ಸ್ಪಷ್ಟಮಾಡಿದ್ದಾರೆ.

### ನಾಝೀತತ್ವವು ಅರಬರಿಗೂ ಬೇಡ

ಭಾರತೀಯರಂತೆ ಅರಬರಿಗೂ ಹಿಟ್ಲರವಾದದಲ್ಲಿ ತಾತ್ಸಾರವಿದೆ. ಅರಬರ ಸ್ವಾತಂತ್ರ್ಯ ಆಂದೋಲನದ ಸಫಲತೆಗೆ ಯಾವ ಕಡೆಯಿಂದ ಬರುವ ಸಹಾಯವನ್ನಾದರೂ ಸ್ವೀಕರಿಸಲಿಕ್ಕೆ ಅರಬರು ಸಿದ್ಧರಿದ್ದಾರಾದರೂ ಅವರಿಗೆ ನಾಝಿ ಸಹಾಯವು ಬೇಡವಾಗಿದೆ. ಆದರೆ ಮಿತ್ರಮಂಡಲಿಗೆ ಅರಬರು ಮಾಡುವ ಯುದ್ಧ ಸಹಾಯವು ಅವರ ಸ್ವೇಚ್ಛೆಯಿಂದಾಗಿರಬೇಕು. ಆದ್ದರಿಂದ ಕಾಂಗ್ರೆಸು ಹೇಳಿದಂತೆ ಅರಬರು ಕೂಡ, ತಮ್ಮ ಸಹಾಯವು ಮಿತ್ರಮಂಡಲಿಗೆ ದೊರೆಯುವ ಮೊದಲು, ಅರಬರ ಸ್ವಾತಂತ್ರ್ಯದ ಕುರಿತು ಭರವಸೆ ಕೊಡಬೇಕೆಂದು ಅವರೂ ಬ್ರಿಟಿಷರನ್ನು ಕೇಳಿದ್ದಾರೆ!

ಅರಬರೂ ಭಾರತೀಯರೂ ಒಂದೇ ರಂಗ ಮಂಚದ ಮೇಲೆ ಇದ್ದಾರೆ. ಅವರ ಮತ್ತು ಧೋರಣೆ ಉದ್ದೇಶಗಳು ಒಂದೇಯಾಗಿವೆ. ಕೆಲವು ಮುಸಲ್ಮಾನರು ಕನಸು ಕಾಣುವಂತೆ ಎಲ್ಲಿಯಾದರೂ ಮುಸಲ್ಮಾನ ಸರ್ವಾಧಿಕಾರದ ಸ್ಥಾಪನೆಯಾಗಬೇಕೆಂದು ಅರಬರು ಸರ್ವಥಾ ಆಲೋಚಿಸಿರುವುದಿಲ್ಲ. ಮಿತ್ರಮಂಡಲಿಗೆ ಯುದ್ಧ ಸಹಾಯವನ್ನು ಕೊಡುವುದರಿಂದ ತಮ್ಮ ಸ್ವಾತಂತ್ರ್ಯ ಆಂದೋಲನಕ್ಕೆ ಧಕ್ಕೆ ತಗಲಬಾರದೆಂಬ ವಿಚಾರವು ಭಾರತೀಯರಂತೆ ಅರಬರಿಗೂ ಇದೆ.

### ಜಿನ್ನರ ಧೋರಣೆಯು ಖಂಡನೀಯ

ಈ ಕೆಲವು ವರ್ಷಗಳಿಂದ ಜಿನ್ನಸಾಹೇಬರು ಇಟ್ಟುಕೊಂಡ ಧೋರಣೆಯು ಖೇದಾಸ್ಪದವಾಗಿರುವುದೆಂದು ಅರಬರು ಹೇಳುತ್ತಾರೆ. ಜಿನ್ನರು ಕಾಂಗ್ರೆಸಿನ ಮೇಲೆ ಹೊರಿಸಿದ ಆರೋಪಗಳು ಅನ್ಯಾಯವಾಗಿರುವುದು ಮಾತ್ರವಲ್ಲದೆ ಅಪ್ರಾಸಂಗಿಕವಾಗಿಯೂ ಇವೆ. ಜಿನ್ನರು ವಿಷಯ ಮಹತ್ವವನ್ನು ತಿಳಿಯದವರಂತೆ ಮೂಢತನವನ್ನು ತೋರಿಸುತಿದ್ದಾರೆ. ಹೇಗೂ ಇರಲಿ, ಭಾರತೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸನ್ನು ವಿರೋಧಿಸಿ ಜಿನ್ನರು ಭಾರತದ ಮಾತ್ರವಲ್ಲ, ಪೆಲೆಸ್ತೀನ, ಸಿರಿಯ ಮೊದಲಾದ ಮುಸಲ್ಮಾನ ರಾಷ್ಟ್ರಗಳ ಸ್ವಾತಂತ್ರ್ಯದ ಸಂಪಾದನೆಯ ದಾರಿಯಲ್ಲಿ, ಕಲ್ಲು ಮುಳ್ಳುಗಳನ್ನು ತಂದು ಹಾಕಿ, ಭಾರತೀಯರ ಮಾತ್ರವಲ್ಲ, ಇಡೀ ಪ್ರಪಂಚದ ಮುಸಲ್ಮಾನರಿಗೆ ಅಪಚಾರಮಾಡಿದ್ದಾರೆ.

### ಕಾಂಗ್ರೆಸಿಗೆ ಆಮಂತ್ರಣ

ಹೀಗೆ ಹೇಳುತ್ತ ಮೂಸಾಹುಸ್ಸೇನಿಯವರು ಯಾರಾದರೂ ಕಾಂಗ್ರೆಸಿನ ಅಖಂಡ ಮುಖಂಡರು, ಅರೇಬಿಯಕ್ಕೆ ಬಂದು ಅಲ್ಲಿ ಭಾರತೀಯ ಸ್ವಾತಂತ್ರ್ಯದ ಪ್ರಚಾರ ಕಾರ್ಯವನ್ನು ಮಾಡಬೇಕೆಂದು ಕಾಂಗ್ರೆಸಿಗೆ ಆಮಂತ್ರಣವನ್ನು ಕೊಟ್ಟಿದ್ದಾರೆ. ಮಹಾತ್ಮಾಗಾಂಧಿ ಅಥವಾ ಪಂಡಿತ ನೇಹರು ಅವರೇ ಬಂದು ಅರಬಿ ಹಾಯರ ಕಮಿಟಿಯೊಡನೆ ಆಪ್ತಾಲೋಚನೆ ಮಾಡುವುದರಿಂದ ಪರತಂತ್ರವಾಗಿರುವ ಈ ಎರಡೂ ದೇಶಗಳಿಗೆ ಮಹದುಪಕಾರವಾಗುವುದು. ಅರಬರೂ ಭಾರತೀಯರೂ ಒಂದೇ ರಂಗ ಮಂಚದಲ್ಲಿ ನಿಂತು, ನಾಝಿತತ್ವಗಳನ್ನು ವಿರೋಧಿಸುತಿದ್ದಂತೆ ಬ್ರಿಟಿಷರ ಸಾಮ್ರಾಜ್ಯವಾದವನ್ನೂ ವಿರೋಧಿಸಿ ತಾವು ಸ್ವತಂತ್ರರಾಗುವ ಸಮಯವು ಈಗ ಪ್ರಾಪ್ತವಾಗಿರುತ್ತದೆ. ಭಾರತೀಯ ಸ್ವಾತಂತ್ರ್ಯ ಆಂದೋಲನಕ್ಕೆ ಅರಬ ಹಾಯರ ಕಮಿಟಿಯ ಮುಖಂಡರು ಕೊಡುವ ನೈತಿಕ ಬೆಂಬಲವು ಕಾಂಗ್ರೆಸಿಗೆ ಮಹತ್ವದ್ದೂ ಅಮೂಲ್ಯವೂ ಆಗಿದೆ.

‘ಓ ವ ಲ್ ಟಿ ನ್’

ನಿಮ್ಮ ತ್ರಾಣವನ್ನೂ ಕಸುವನ್ನೂ ರಚಿಸಲಿ!

ಉತ್ತಮ ಕಸುವುಳ್ಳ ಆರೋಗ್ಯವನ್ನು ಹೊಂದಬೇಕಾದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು. ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ “ಓವಲ್ಟಿನ್” ಉಂಟುಮಾಡುವುದು.

ಬಹಳ ರುಚಿಕರವಾದುದಲ್ಲದೆ, ‘ಓವಲ್ಟಿನ್’ನಲ್ಲಿ ದೇಹದ ಆರೋಗ್ಯವನ್ನು ಕಾಪಾಡಿ ಕಸುವನ್ನು ವರ್ಧಿಸಲು ಬೇಕಾದ ಧಾತುಗಳೆಲ್ಲವೂ ಇರುವುವು. ಯಾವಾಗಲೂ ಒಂದು ಕಪ್ ‘ಓವಲ್ಟಿನ್’ ಕುಡಿಯಿರಿ. ಇದು ಸಂತುಷ್ಟವಾದ ಮತ್ತು ಸಂಪೂರ್ಣವಾದ ಆಹಾರವಾಗಿರುತ್ತದೆ. ಇದು ಪ್ರಕೃತಿಯ ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟಿದೆ—ಮಾಗಿ ನೆನೆ ಹಾಕಿದ ಬಾರ್ಲಿ, ದನದ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ವಿಟಾಮಿನ್ ಮತ್ತು ಫೊಸ್ಫೆಟೈಡ್ಸ್. ಇತರ ಬದಲು ಪಾನೀಯಗಳನ್ನು ದೂರಮಾಡಿರಿ.

‘ಓವಲ್‌ಟಿನ್’

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ.
ವಿತರಣಕಾರರು:
ಜೇಮ್ಸ್ ರೈಟ್ ಲಿಮಿಟೆಡ್,
149 ಬ್ರೋಡವೇ ಮದ್ರಾಸು, ಕಲ್ಕತ್ತಾ, ಬೊಂಬ್ಯಾ, ಕರಾಚಿ.

‘ಓವಲ್ಟಿನ್’ ಬಿಸ್ಕುಟುಗಳು:
ರುಚಿಕರ, ಜೀರ್ಣಕರ ಹಾಗು ಪೋಷಣಯುಕ್ತ. ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ಅಮೂಲ್ಯ ಗುಣದ ‘ಓವಲ್ಟಿನ್’ ಸೇರಿರುವುದು. 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/70/39

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

26—1—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೬—೧—೧೯೪೦

# ಜಗತ್ತಿನ ರಾಷ್ಟ್ರಗಳೆಲ್ಲವನ್ನೂ ನಾವು ಎದುರಿಸಬಲ್ಲೆವು!

## ಬ್ರಿಟನಿಗೆ ಸಹಾನುಭೂತಿಯು ಸ್ವಾರ್ಥದ ಆಶೆಯಿಂದಲ್ಲ

### ಸಾಮ್ರಾಜ್ಯಶಾಹಿಯ ರಣಭೇರಿ?

'ರಾಷ್ಟ್ರಸಂಘಟನಾ ಸಮಿತಿಯನ್ನು, ಸರಕಾರದ ಆಶ್ರಯದಲ್ಲಿಯೇ ನಾವು ಸೇರಿಸಿದ ಪಕ್ಷದಲ್ಲಿಯೂ, ಅದು ಸಾಮ್ರಾಜ್ಯಶಾಹಿಯ ವ್ಯಕ್ತ್ಯ ಭೇರಿಯೇ ಆಗುವುದೆಂದು ಗಾಜಿಯಾಬಾದಿನ ಭಾಷಣವೊಂದರಲ್ಲಿ ಪಂಡಿತ ನೆಹರುಗಳು ಹೇಳಿದರು

ಮೀರತ್ ಜಿಲ್ಲೆಯಲ್ಲಿ ಪಂಡಿತರು ಸಂಚಾರ ಮಾಡಿ ಕಾಂಗ್ರೆಸಿನ ಸಂದೇಶವನ್ನು ಜನರಿಗೆ ಸಾರಿದರು ಗ್ರಾಮ ಹಳ್ಳಿಗಳಲ್ಲಿ ಜನರು ಉತ್ಸಾಹಭರಿತರಾಗಿದ್ದರು. ಅಸಂಖ್ಯಾತ ಸ್ಥಳಗಳಲ್ಲಿ ಅವರಿಗೆ ಅಭಿನಂದನಾ ಭಾಷಣಗಳು, ನಿಧಿಗಳು ಸಮರ್ಪಿತವಾದವು [illegible]೨೦೦೦ರೂ ನಿಧಿಯು ಅವರಿಗೆ ದೊರಕಿತು. ಅದರಲ್ಲಿ ಸೇಕಡಾ ೫೦ರಷ್ಟು ಅವರು ಖಾದೀ ಪ್ರೋತ್ಸಾಹ ಮತ್ತು ಸ್ವಯಂ ಸೇವಕ ದಳದ ನಿರ್ಮಾಣಕ್ಕಾಗಿ ಉಪಯೋಗಿಸುವರೆಂದು ತಿಳಿದಿದೆ

'ಕಾಂಗ್ರೆಸ್ಸು, ಅನೇಕ ದುರಂತಗಳನ್ನೆದುರಿಸಿ ಇಂದು ಭಾರತದ ಏಕಮಾತ್ರ ಸಂಸ್ಥೆಯಾಗಿ ಮುಂದೆ ಬಂದಿದೆ ಆ ಮಹಾ ಸಂಸ್ಥೆಯ ಮುಂದೆ ಮುಸ್ಲಿಂ ಲೀಗು ಹಿಂದೂ ಮಹಾಸಭೆಗಳಂತಹವುಗಳು ವಿರುದ್ಧ ನಿಲ್ಲಲಾರವು. ಕಾಂಗ್ರೆಸಿಗೆ ಮಾತ್ರ ಸ್ವಾತಂತ್ರ್ಯದ ಪೂರ್ಣ ಧ್ಯೇಯವಿರುವುದು. ಅದು ಮಾತ್ರ ಅದನ್ನು ಪಡೆಯಲು ಬೇಕಾದ ಸಾಧನಗಳನ್ನು ಇಂದು ಸಿದ್ಧತೆ ಮಾಡಿಕೊಂಡಿದೆ' ಎಂದರು ಅವರು ಒಂದು ಭಾಷಣದಲ್ಲಿ

#### ನಿಜವಾದ ಐಕ್ಯ

ಸ್ವಾತಂತ್ರ್ಯ ಪ್ರತಿಜ್ಞೆಯ ಕುರಿತು ಅವರು ಹೀಗೆಂದರು.

'ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು ಪ್ರತಿಯೊಬ್ಬ ಕಾಂಗ್ರೆಸು ಸೇವಕನ ಕರ್ತವ್ಯವಾಗಿದೆ. ಆದರೆ ಯಾರಿಗೆ ಆ ಪ್ರತಿಜ್ಞೆಯಲ್ಲಿ ವಿಶ್ವಾಸವಿಲ್ಲವೋ ಯಾರು ಪ್ರತಿಜ್ಞೆ ಮಾಡಿದಂತೆ ಆಚರಿಸುವುದಿಲ್ಲವೋ ಅವರು ಹಾಗೆ ಪ್ರತಿಜ್ಞೆ ಮಾಡುವುದರಿಂದ ವಂಚನೆ ಮಾಡುತ್ತಿದ್ದಾರೆ

'ಚರಕವು ಪ್ರತಿಯೊಂದು ಮನೆಯಲ್ಲಿಯೂ ನಡೆಯಬೇಕು. ಆರ್ಥಿಕ ಮಹತ್ವ ಮಾತ್ರವಲ್ಲದೆ ಚರಕವು ನಮ್ಮಲ್ಲಿ ಐಕ್ಯವನ್ನುಂಟುಮಾಡುವುದು ಇದರಿಂದ ಮುಂದಿನ ಆಂದೋಲನದಲ್ಲಿ ನಾವು ಬಲಗೊಳ್ಳುವೆವು

'ಜಗತ್ತು ಇಂದು ಅತ್ಯಂತ ಭೀಕರ ವ್ಯತ್ಯಾಸಗಳನ್ನು ಹೊಂದುತ್ತಿದೆ ಸಜ್ಜಾಗಿ ಜಗತ್ತು ಇಂಥಾ ಅಗ್ನಿ ಮಧ್ಯದಲ್ಲಿದೆ ಸಿದ್ಧರಿಲ್ಲದಿರುವ ನಾವು ಆ ಅಗ್ನಿಯಿಂದ ಉರಿದು ಹೋಗಬಹುದು.' ಹೀಗೆಂದರು ನೆಹರುಗಳು ಮುಜಾಫರನಗರದಲ್ಲಿ

'ನಾವು ಆಂದೋಲನವನ್ನು ಅವಸರದಿಂದ ಆರಂಭಿಸಬಾರದು. ಅದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು. ಇದೇ ಕೊನೆಯ ಹೋರಾಟವಾಗಬೇಕು. ಸಂಯುಕ್ತ ಪ್ರಾಂತದ ನಮ್ಮ ಸಂಘಗಳು ಬಲಶಾಲಿಗಳಾಗಿವೆಯೆಂಬುದು ಸಂತೋಷ ನಾವು ನೆನಸಿದರೆ ಕ್ರಾಂತಿಯನ್ನೇ ಮಾಡಿಬಿಡಬಹುದು. ಆದರೆ ನಾವು ಮಾಡುವ ಪ್ರತಿಯೊಂದು ಕೆಲಸವೂ, ಸಂಪೂರ್ಣ ಸಿದ್ಧತೆಯಾದ ಮೇಲೆ ಮಾತ್ರ ಆಗತಕ್ಕದ್ದಿದೆ' ಎಂದರು

#### ಸ್ವತಂತ್ರವಾದ ಭಾರತದಲ್ಲಿ ನರೇಂದ್ರರಿಗಿರುವ ಸ್ಥಾನ?

ಮುಂದೆ 'ಪ್ರಜಾಪ್ರಭುತ್ವ ರಾಜ್ಯಪದ್ಧತಿಯಿಂದ ಸ್ವತಂತ್ರವಾದ ಭಾರತದಲ್ಲಿ, ಇಂದು ಬೇರೆ ಬೇರೆ ಆಶ್ರಿತರಾಜ್ಯಗಳಲ್ಲಿ ಅಧಿಕಾರದಲ್ಲಿರುವ ನರೇಂದ್ರರಿಗೆ ನೀವು ಯಾವ ಸ್ಥಾನವನ್ನು ಕೊಡಲಿಚ್ಛಿಸುತ್ತೀರಿ?' ಎಂದು ಕೇಳಿದ ಪ್ರಶ್ನೆಗೆ ಮಹಾತ್ಮಾಜಿಯವರು ಹೀಗೆಂದಿರುವರು.

'ತುಂಬ ಸ್ವಲ್ಪ ಸಂಬಳ ಕೊಟ್ಟು ಜನರ ಆಡಳಿತದಾರರಾಗಿ ಅವರನ್ನು ನೇಮಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ಪ್ರಜೆಗಳ ಯೋಗಕ್ಷೇಮದ ವಿಚಾರವು ಅವರಿಗೆ ಇರಬೇಕು ಬ್ರಿಟಿಷ್ ರಾಜನಿಗೆ ಇಂದು ಯಾವ ಅಧಿಕಾರವಿದೆಯೊ, ಅಂತಹ ಅಧಿಕಾರವು ಅವರಿಗೂ ಇರಬಹುದು. ನರೇಂದ್ರರು ಬ್ರಿಟಿಷ್ ರಾಜನ ಸಾಮಂತರೇ ಆಗಿದ್ದಾರಷ್ಟೆ. ಆದುದರಿಂದ ಬ್ರಿಟಿಷ್ ರಾಜನಿಗಿಂತ ಹೆಚ್ಚಿನ ಅಧಿಕಾರ ಅವರಿಗಾದರೂ ಏನು ಬೇಕಾಗಬಹುದು?

'ಇಂಗ್ಲೆಂಡಿನ ಅರಸನು, ಯಾರನ್ನೂ ಕೊಡಗಲ್ಲಿಗೆ ಕೊಡಲಾರನು. ಅವನು ಅಂತಹ ಯೋಗ್ಯ ದಾರಿಯಿಂದ ಮಾತ್ರ ಕಾರ್ಯವನ್ನು ಸಾಧಿಸಬಹುದು. ಅವನು ಪ್ರೈವೇಟ್ ನಾಗರಿಕನೇ ಆಗಿದ್ದಾನೆ ಆದುದರಿಂದ ಈ ವಿಷಯದಲ್ಲಿ ಇಂಗ್ಲೆಂಡಿನ ರಾಜಪ್ರಭುತ್ವವನ್ನು ಅನುಸರಿಸಲು ನಾನು ಅಪೇಕ್ಷಿಸುತ್ತೇನೆ ಏಕೆಂದರೆ, ಆಶ್ರಿತ ರಾಜ್ಯಗಳಲ್ಲಿರುವ ಪ್ರಜೆಗಳು, ತಮಗೆ ಏನು ಬೇಕಾಗಿದೆಯೆಂದು ತಾವಾಗಿಯೇ ಏಕೆ ವಿಚಾರಿಸಬಾರದು?

#### ಒಳ್ಳೆಯ ಉಪಾಯ

'ಜನರ ವಿಷಯವಾಗಿ ಹೇಳುವುದಿದ್ದರೆ, ಆಶ್ರಿತರಾಜ್ಯಗಳ ಸುಪ್ರೀಮ್ ಕೋರ್ಟ ಭಾರತದ ಹೈಕೋರ್ಟಿಗೆ ಸಂಬಂಧಿಸಿ ಇರಬೇಕು

'ಹಾಗಾದರೆ, ಇಂಗ್ಲಿಷು ರೀತಿಯ ಪ್ರಜಾ ಪ್ರಭುತ್ವವು ಭಾರತಕ್ಕೆ ಅಸಮರ್ಪಕವಾಗಲಾರದೇ?' ಎಂದು ಗಾಂಧಿಜಿಯವರೊಡನೆ ಪ್ರಶ್ನಿಸಿದಕ್ಕೆ ಅವರು ಹೀಗೆಂದರು

'ಯಾವ ರೀತಿಯ ಪ್ರಜಾಪ್ರಭುತ್ವವಾಗಬೇಕೆಂಬುದನ್ನು ರಾಷ್ಟ್ರಸಂಘಟನಾ ಸಮಿತಿಯು ನಿರ್ಣಯಿಸುವುದು ಭಾರತಕ್ಕೆ ಯಾವ ರೀತಿಯ ಸರಕಾರವಾಗಬೇಕೆಂಬುದನ್ನು ಹೆಲವರೇ ಕೂಡಿ ನಿರ್ಣಯಿಸುವ ಕಾಲವು ಕಳೆದುಹೋಯಿತು' ಎಂದರು

#### ಬ್ರಿಟನು ಸೋತರೂ ಭಾರತವು ಅಸಹಾಯಕವಾಗಲಾರದು

ಆಂಗ್ಲ ಪತ್ರಿಕೋದ್ಯಮಿಯೊಬ್ಬನು, ಮಹಾತ್ಮಾಜಿಯವರನ್ನು ಕಂಡು, ಅವರೊಡನೆ ರಾಜಕೀಯದ ಕುರಿತು ಹಲವು ಚರ್ಚೆಗಳನ್ನು ಮಾಡಿದನು.

'ಬ್ರಿಟನು ಯುದ್ಧದಲ್ಲಿ ಸೋತು ಹೋದರೆ, ಮುಂದೆ ಏನೆಂಬುದು ನಿಮ್ಮ ವಿಚಾರ?' ಅವನು ಕೇಳಿದನು.

'ಬ್ರಿಟನು ಯುದ್ಧದಲ್ಲಿ ಸೋತರೆ ನಿಜವಾಗಿ ನನಗೆ ದುಃಖವಾಗುವುದು.

### ಸ್ವರಾಜ್ಯದಲ್ಲಿ ನರೇಂದ್ರರ ಸ್ಥಾನ

ಆದರೆ, ನಾನೂ ಎಂದೂ ಅಸಹಾಯಕನಾಗಲಾರೆನು.' ಹೀಗೆಂದು ಗಾಂಧಿಜಿಯವರು ಹೇಳಿದರು. ಅವರು ಮಾತನ್ನು ಮುಂದುವರಿಸುತ್ತಾ ಹೀಗೆಂದರು

#### ಯಾರಿಗೂ ಭಯಪಡಲಾರೆವು

ಮುಂದಕ್ಕೆ ರಶ್ಯಾ, ಜಪಾನು, ಜರ್ಮನಿ ಇಟೆಲಿಗಳು ಒಂದಾಗಿ ಬಂದು, ಭಾರತಕ್ಕೆ ಧಾಳಿಯಿಟ್ಟರೂ ಕೂಡಾ, ಭಾರತವು ಅಹಿಂಸೆಯನ್ನು ತನ್ನ ತೀವ್ರ ಧೋರಣೆಯಾಗಿ ಅಂಗೀಕರಿಸಿದ ಪಕ್ಷದಲ್ಲಿ ಎಂದೆಂದೂ ಯಾರಿಗೂ ಹೆದರಬೇಕಾದ ಆವಶ್ಯವಿಲ್ಲ. ಅದಕಾರಣ, ಬ್ರಿಟನಿನ ಮೇಲೆ ನನಗೆ ಇರುವ ಈ ಸಹಾನುಭೂತಿಯು ಸಂಪೂರ್ಣ ಸ್ವಾರ್ಥವಿಲ್ಲದುದಾಗಿದೆ. ಬ್ರಿಟನು ನಿಜವಾಗಿಯೂ ನ್ಯಾಯವನ್ನು ಪಾಲಿಸುವುದಿದ್ದರೆ, ಭಾರತಕ್ಕೆ ನ್ಯಾಯವನ್ನು ಕೊಡಲಿ ಅದು ಎಂದೆಂದೂ ಅಳಿಕಲಾರದು'

**Notice**

**In the Court of the District Judge of South Kanara.**

Appeal Suit No. 410/39
(Against Udipi O S No.120/38)
Between
Chardappa Shanbhogue— Appellant
and
Narasimha Kuduva & others— Respondent

To
Respondent 5 Govind Kuduva, 6. Gopala Kuduva— sons of Cherdappa Kuduva C/o P. G L. Kuduva, Tea Shop, Agrapad, No 11 Bombay.

Take notice that the appeal from the decree and Judgment in O S No 120/38 dated 4-9-39 presented by the appellant above named stands posted to the 16th day of February 1940 for final disposal

You are hereby requested to appear before this Court either in person or by a pleader to contest the above matter failing which the same shall be heard and determined exparte.

Mangalore 17-1-1940 | **G. Somasheker Rao,** Vakil for appellant.

ಸ್ವದೇಶಾಭಿಮಾನಿ

ತಾರೀಕು 26-1-1940

# ಸಮಸ್ಯೆಯ ಪರಿಹಾರವು ಹೇಗೆ ಆಗಬೇಕು?

ಭಾರತದ ರಾಜಕೀಯ ಸಮಸ್ಯೆಯನ್ನು ಪರಿಹರಿಸುವ ಇಚ್ಛೆಯು ಬ್ರಿಟಿಷ ಸರಕಾರಕ್ಕೆ ಇದೆಯೆಂಬ ಕುರಿತು ಇತ್ತೀಚಿಯ ವೈಸರಾಯರ ಪ್ರಕಟಣೆಯು ಸೂಚಿಸಿದೆ ಭಾರತದ ಮುಖಂಡರು ಅಂತಹ ಸೂಚನೆ ಮಾತ್ರದಿಂದ ಏನೇನೂ ತೃಪ್ತಿಪಡುವ ಹಾಗಿಲ್ಲ ಆದರೂ, ರಾಷ್ಟ್ರಪತಿ ರಾಜೇಂದ್ರ ಪ್ರಸಾದರಂತಹವರೇ, ಈ ಸಲದ ವೈಸರಾಯರ ಪ್ರಕಟಣೆಯು ಹಿಂದಿಗಿಂತ ಹೆಚ್ಚು ಸ್ಪಷ್ಟವಾಗಿದೆಯೆಂದು ಹೇಳಿರುವರು ಗಾಂಧಿಜಿಯವರಿಗೆ ಬೇರೆ ಬೇರೆ ಕಡೆಗಳಿಂದ, ವೈಸರಾಯರ ಸ್ಪಷ್ಟ ವಚನವನ್ನು ಆಲಿಸಬೇಕೆಂದೂ, ಇಂದಿನ ಭಾರತದ ರಾಜಕೀಯ ಸಮಸ್ಯೆಯನ್ನು ಪರಿಹರಿಸಲು ಗಾಂಧಿಜಿಯವರು ವೈಸರಾಯರೊಡನೆ ವಿಚಾರ ವಿನಿಮಯ ಮಾಡಿ ಸಹಕರಿಸಬೇಕೆಂದೂ ಅನೇಕರು ವಿನಂತಿಗಳನ್ನು ಕಳುಹಿಸಿದ್ದರು ಇಂತಹ ಸಂದರ್ಭದಲ್ಲಿಯೇ ಮಹಾತ್ಮಾಜಿಯವರೂ, ಮೊನ್ನೆ ತಾನೇ ವೈಸರಾಯರ ಮಾತಿನಲ್ಲಿ ಸಂಧಾನ ಯತ್ನದ ಬೀಜಾಂಕುರವನ್ನು ನಾನು ಕಾಣುತ್ತೇನೆ ಎಂದು ನುಡಿದಿರುವರು ಗಾಂಧಿಜಿಯವರ ಈ ಮಾತಿನಿಂದ ಉಗ್ರಗಾಮಿಗಳು ಸಿಡಿಮಿಡಿಗೊಂಡಿದ್ದಾರೆ ಏಕೆಂದರೆ, ಯಾವುದೇ ರೀತಿಯಲ್ಲಾದರೂ ಗಾಂಧಿಜಿಯವರು ಹೋರಾಟ ಹೂಡಲು ಮನಸ್ಸಿಲ್ಲದೆ ಇಂದು ಸಂಧಾನಕ್ಕೆಳಸುತ್ತಿರುವರೆಂದೇ ಅವರ ಟೀಕೆಯಾಗಿದೆ!

### ಗೌರವಯುತ ಒಪ್ಪಂದ

ಗಾಂಧಿಜಿಯವರ ತತ್ವವು ಅಗಾಧವಾದುದು ಅವರಿಗೆ ಪ್ರಪಂಚದಲ್ಲಿ ವೈರಿಗಳೆಂಬವರಿಲ್ಲ ಎದುರಾಳಿಯನ್ನಾದರೂ ತನ್ನ ಸತ್ಯ ತತ್ವದಿಂದ, ನಿರ್ಮಲ ನೀತಿಯಿಂದ ಬಗ್ಗಿಸಿ ಕಾರ್ಯವನ್ನು ನೆರವೇರಿಸುವುದು ಅವರ ಗುಣ. ಆದುದರಿಂದಲೇ ನಾವು, ಗಾಂಧಿಜಿಯವರು ರಾಷ್ಟ್ರದ ಇಂದಿನ ಇಚ್ಛೆಗೆ ಕೂದಲೆಳೆಯಷ್ಟು ಕೊರತೆ ಬರುವಂತಹ ಯಾವುದೇ ರೀತಿಯ ಒಪ್ಪಂದಕ್ಕೂ ಸಿದ್ಧರಾಗಲಾರರೆಂಬುದನ್ನು ಮರೆಯಬಾರದು 'ನಾನು ಹೋರಾಟ ಹೂಡಲು ಇಚ್ಛಿಸುವುದಿಲ್ಲ ಅದಕ್ಕೆ ಸಂದರ್ಭ ಸರಿಯಾಗಲಿಲ್ಲ ಆದರೆ ಸಂದರ್ಭವು ಸನ್ನಿಹಿತವಾಗಿ, ಹೋರಾಟವು ಅವಶ್ಯವಾಗಿ ಆಗಲೇ ಬೇಕಾದಲ್ಲಿ, ಅನುಯಾಯಿಗಳೊದಗದಿದ್ದರೂ, ನಾನು ಏಕಾಂಗಿಯಾಗಿಯಾದರೂ ಆಂದೋಲನವನ್ನು ಆರಂಭಿಸುವೆನು' ಎಂದು ಸಾರಿದ ಅವರ ಮಾತಿನಲ್ಲಿರುವ ಕಠೋರ ನಿರ್ಧಾರವು ಎಂತಹ ಉಗ್ರವಾದಿಯನ್ನಾದರೂ ಬೆರಗಾಗಿಸದಿರದು.

ಜನತೆಯ ಇಚ್ಛೆಗೆ ಕಾಂಗ್ರೆಸಿನ ನಿರ್ಧಾರಕ್ಕೆ, ಭಾರತದ ಗೌರವಕ್ಕೆ, ಕಡಿಮೆಯಾಗದ ರೀತಿಯಲ್ಲಿ, ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಹೆಚ್ಚೆ ಹಿಂದಾಗದ ಹಾಗೆ, ಬ್ರಿಟಿಷ್ ಸರಕಾರದೊಡನೆ ಮಹಾತ್ಮಾಜಿಯವರು ಸಂಧಾನಮಾಡಲು ಮನಸ್ಸು ಮಾಡಿದ್ದರೆ, ಆ ರೀತಿಯಿಂದ ಗೌರವಯುತವಾಗಿ ಭಾರತದ ಸಮಸ್ಯೆಯನ್ನು ಪರಿಹರಿಸಲು ಅಪೇಕ್ಷೆಪಡುವುದಿದ್ದರೆ ಅದನ್ನು ಯಾರೂ ಸರಿಯಲ್ಲವೆನ್ನಲು ಸಾಧ್ಯವಿಲ್ಲ ಪ್ರಚಂಡ ಹೋರಾಟದಲ್ಲಿ, ಸಾಮ್ರಾಜ್ಯ ಶಾಹಿಯ ಬದ್ಧ ವಿರೋಧದಲ್ಲಿ, ಜನತಾ ಸೇವೆಯಲ್ಲಿ ನುರಿತ ಮುಂದಾಳುವೊಬ್ಬನ ಬಹುಕಾಲದ ಅನುಭವದ ಕಾರ್ಯಧೋರಣೆಗೆ ಇಂದಿನ ಜನತೆಯಾದರೂ ಯೋಗ್ಯ ಮರ್ಯಾದೆಯನ್ನು ಸಲ್ಲಿಸುವುದು ಅವಶ್ಯ ಆದರೆ ಇಂದಿನ ಸಮಸ್ಯೆಯು ಪರಿಹಾರವಾಗುವ ಬಗೆಯು ಹೇಗೆಂಬ ವಿಷಯವು ಇನ್ನೂ ಬಾಕಿಯಿದೆ ಇಂದಿನ ವೈಸರಾಯರ ಪ್ರಕಟಣೆಯು ಇನ್ನೂ ಅಸ್ಪಷ್ಟವೇ ಆಗಿದೆ

### ಅಸ್ಪಷ್ಟತೆಯೆಲ್ಲಿದೆ?

ಕಾಂಗ್ರೆಸಿನ ರಾಜಕೀಯ ಧೋರಣೆಯ ದೃಷ್ಟಿಯಿಂದ ವೈಸರಾಯರ ಪ್ರಕಟಣೆಯಲ್ಲಿ ಅಸ್ಪಷ್ಟತೆಯು ಎಲ್ಲಿದೆಯೆಂಬುದನ್ನು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ವಿವರಿಸಿ ಹೇಳಿರುವರು. ಭಾರತಕ್ಕೆ ವೆಸ್ಟ್ ಮಿನ್‌ಸ್ಟರ್ ಕಾಯಿದೆಯ ಅನ್ವಯದಂತಹ ಸಾಮಂತ ಸ್ವರಾಜ್ಯವನ್ನು ಕೊಡುವುದು ಬ್ರಿಟಿಷ್ ಸರಕಾರದ ಉದ್ದೇಶವಾಗಿದೆಯೆಂದು ವೈಸರಾಯರು ಹೇಳಿರುವರು ಆದರೆ ಕಾಂಗ್ರೆಸಿನ ಕೇಳಿಕೆಯು, ಯಾವುದೇ ಒಂದು ನಾಡಿನ ಕಾಯಿದೆಗೆ ಅನ್ವಯವಾಗುವಂತಹ ಸ್ವರಾಜ್ಯ ಧರ್ಮವಾಗಿರದೆ, ಶುದ್ಧ ಮತ್ತು ಸರಲವಾದ ಸಂಪೂರ್ಣ ಸ್ವರಾಜ್ಯವೇ ಆಗಿದೆ

ಈ ಸಂದರ್ಭದಲ್ಲಿ ಸಂಪೂರ್ಣ ಸ್ವಾತಂತ್ರ್ಯವೆಂಬುದರ ವಿವರಣೆಯ ಕುರಿತು ಚರ್ಚಿಸುತ್ತಿರುವುದರಲ್ಲಿ ಅರ್ಥವಿಲ್ಲ ಏಕೆಂದರೆ ಸಂಪೂರ್ಣ ಸ್ವತಂತ್ರವಾದ ರಾಜ್ಯದ ಘಟನಾವಳಿಯನ್ನು ನಿರ್ಣಯಿಸುವ ಹಕ್ಕು ಆ ರಾಜ್ಯದ ಪ್ರಜೆಗಳದ್ದೇ ಆಗಿರುವಾಗ, ಸ್ವಾತಂತ್ರ್ಯವು ಯಾವ ಕಾಯಿದೆಗೆ ಅನ್ವಯಿಸುವಂತೆ ಆಗಿರಬೇಕೆಂಬ ವಿಷಯವನ್ನು ಪ್ರಜೆಗಳಲ್ಲದೆ ಇನ್ನು ಯಾರೂ ನಿರ್ಣಯಿಸುವ ಹಾಗಿಲ್ಲ ಆದರೆ ವೈಸರಾಯರ ಮಾತಿನ ಅಸ್ಪಷ್ಟತೆಯಿರುವುದು ಅದರಲ್ಲಿ ಅಲ್ಲ

ಅವರು ಹೇಳುವಂತಹ ಸಾಮಂತ ಸ್ವರಾಜ್ಯವನ್ನು ಯಾವಾಗ ಕೊಡುವರು ಎಂಬುದು ಭಾರತೀಯರ ಪ್ರಾಮುಖ್ಯ ಪ್ರಶ್ನೆ ಬರಿಯ ಮಾತಿನಿಂದ ಮಾತ್ರ ಅದು ನಮ್ಮ ಧ್ಯೇಯವೆಂದು ಹೇಳುವುದರಿಂದ ಯಾರಿಗೂ ತೃಪ್ತಿಯಿಲ್ಲ ಯುದ್ಧ ಮುಗಿದ ಕೂಡಲೇ ಸಾಮಂತ ಸ್ವರಾಜ್ಯವನ್ನು ಕೊಡುವ ಉದ್ದೇಶದ ಸ್ಪಷ್ಟವಾದ ಹೇಳಿಕೆಯು ವೈಸರಾಯರಿಂದ ಬರಬೇಕು. ಆ ಹೇಳಿಕೆಯಲ್ಲಿ ಜನತೆಗೆ ವಿಶ್ವಾಸ ಬರುವರೆಗೆ, ತಾತ್ಪೂರ್ತಿಕವಾಗಿ ಮಾಡತಕ್ಕ ಕಾರ್ಯಗಳನ್ನು ಭಿನ್ನ-ಭೇದಗಳಿಲ್ಲದೆ ಮಾಡಲು ಸರಕಾರವೇ ನೆರವಾಗಬೇಕು. ಇಂತಹ ಸ್ಪಷ್ಟತೆಯಿಲ್ಲದೆ ಜನರು ಬ್ರಿಟಿಷ್ ಸರಕಾರದ ಧ್ಯೇಯದ ಕುರಿತು ವಿಶ್ವಾಸಗೊಳ್ಳುವುದು ಸಾಧ್ಯವಿಲ್ಲ.

### ಸ್ವಯಂ ನಿರ್ಧಾರದ ಹಕ್ಕು

ಸರಕಾರವು, ಭಾರತಕ್ಕೆ ಯಾವಾಗ ಸ್ವಾತಂತ್ರ್ಯವನ್ನು ಕೊಡಲು ನಿಶ್ಚಯಿಸಿದೆಯೆಂಬುದನ್ನು ಸ್ಪಷ್ಟವಾಗಿ ತಿಳಿಸುವುದರೊಡನೆ, ಸ್ವತಂತ್ರಭಾರತದ ರಾಜ್ಯಘಟನೆಯನ್ನು ನಿರ್ಧಾರಮಾಡುವ ಪೂರ್ಣ ಹಕ್ಕು ಭಾರತೀಯರಿಗೇ ಇರಬೇಕಾಗಿದೆಯೆಂಬುದನ್ನೂ ಮರೆಯಬಾರದು ಇದೇ ಅಭಿಪ್ರಾಯದಿಂದಲೇ ಇಂದು ಗಾಂಧಿಜಿಯವರು ಮತ್ತು ಕಾಂಗ್ರೆಸಿನ ಅಧಿಕಾರೀ ಮಂಡಳಿಯವರು ರಾಷ್ಟ್ರಘಟನಾ ಸಮಿತಿಯ ವಿಚಾರವನ್ನು ಸರಕಾರದ ಮುಂದಿರಿಸಿರುವರು ರಾಷ್ಟ್ರಘಟನೆಯನ್ನು ಮಾಡುವ ಸಂಪೂರ್ಣ ಹಕ್ಕು ಜನರಿಂದ ಚುನಾಯಿತರಾಗಿ ಬಂದ ಪ್ರತಿನಿಧಿಗಳ ಮಂಡಳಕ್ಕೇ ಇರಬೇಕಲ್ಲದೆ ಬೇರೆಯವರಿಗಲ್ಲ ಪ್ರಜಾಪ್ರಭುತ್ವ ರಾಷ್ಟ್ರದ ಸ್ಪಷ್ಟವಾದ ಮಾರ್ಗದಲ್ಲಿ ಮುನ್ನಡೆಯಲು ಮನಸ್ಸು ಮಾಡಿರುವ ಕಾಂಗ್ರೆಸು ಇಂದು ಈ ಸೂಚನೆಯನ್ನೂ ಸರಕಾರದ ಮುಂದಿರಿಸಿದೆ

### ಅಲ್ಪಸಂಖ್ಯಾಕರ ಹಿತ

ಅಲ್ಪಸಂಖ್ಯಾಕರ ಹಿತರಕ್ಷಣೆಯ ಜವಾಬ್ದಾರಿಯು ನಮ್ಮದು ಆದುದರಿಂದ ಪಕ್ಷಗಳವರು ಅನ್ಯೋನ್ಯ ಒಪ್ಪಂದಕ್ಕೆ ಬರುವುದು ಅಗತ್ಯವಾಗಿದೆಯೆಂದು ಸರಕಾರವು ಆಗಾಗ ಹೇಳುತ್ತದೆ ಅಲ್ಪಸಂಖ್ಯಾಕರ ಹಿತವನ್ನು ರಕ್ಷಿಸುವಂತಹ ಸರಕಾರದ ಉದಾತ್ತ ಬುದ್ಧಿಗೆ ಯಾರೂ ಅಡ್ಡಬರಲಾರರು ಆದರೆ ಅಲ್ಪಸಂಖ್ಯಾಕರ ಕೇಳಿಕೆಯು ರಾಜಕೀಯ ವಿಷಯದಲ್ಲಿ ನ್ಯಾಯವನ್ನು ಬಹುಸಂಖ್ಯಾಕ ಜನತೆಯ ಅಪೇಕ್ಷೆಯನ್ನು ಮೀರಿಸುವುದೂ ಆಗಿರಬಾರದು ಪ್ರಜಾಪ್ರಭುತ್ವ ರಾಜ್ಯದಲ್ಲಿ ಅಂತಹ ದುರ್ಘಟನೆಯನ್ನು ತಂದೊಡ್ಡಲು ಯಾರೂ ಇಚ್ಛಿಸಬಾರದು

ಅದು ಮಾತ್ರವಲ್ಲದೆ ಇಂದು ಅಲ್ಪಸಂಖ್ಯಾಕರ ಪ್ರತಿನಿಧಿಗಳೆಂಬವರು ನಿಜವಾದ ಪ್ರತಿನಿಧಿಗಳಲ್ಲವೆಂದು ಎಲ್ಲೆಲ್ಲೂ ಆತಂಕವೆದ್ದಿದೆ ಜಿನ್ನರು ಮುಸ್ಲಿಮರ ಏಕಮಾತ್ರ ಪ್ರತಿನಿಧಿಗಳಲ್ಲವೆಂದೂ, ಹಿಂದೂ ಮಹಾಸಭೆಯು ಹಿಂದುಗಳ ಪ್ರತಿನಿಧಿ ಸಭೆಯಲ್ಲವೆಂದೂ ಆಯಾಯ ಜಾತಿಯವರೇ ಹೇಳುತ್ತಿದ್ದಾರೆ ಹಾಗಿರುವಾಗ, ಮುಸ್ಲಿಂ ಲೀಗಿನೊಡನಾಗಲಿ, ಮಹಾಸಭೆಯೊಡನಾಗಲಿ ಕಾಂಗ್ರೆಸು ಮಾಡುವ ಒಪ್ಪಂದಕ್ಕೆ ಯಾವ ರೀತಿಯ ನ್ಯಾಯವಿರಬಹುದೆಂಬುದನ್ನು ವಿಚಾರಿಸಬೇಕು.

### ಕೊನೆಯ ಸೂಚನೆ

ಕಾಂಗ್ರೆಸ್ಸು ಈ ವಿಚಾರಗಳನ್ನು ಮಾಡಿಯೇ ರಾಷ್ಟ್ರಘಟನಾ ಸಮಿತಿಯನ್ನು ಕರೆಯುವ ತನ್ನ ಕೊನೆಯ ಸೂಚನೆಯನ್ನು ಕೊಟ್ಟಿದೆ. ಅದರಲ್ಲಿ ಅಲ್ಪಸಂಖ್ಯಾಕರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನಾದರೂ ಕೊಡುವ ನಿರ್ಧಾರವನ್ನು ವ್ಯಕ್ತಪಡಿಸಿದೆ. ಆದ ಕಾರಣ, ಈ ಎಲ್ಲಾ ವಿಚಾರಾಂಗಗಳನ್ನು ಮುಂದಿಟ್ಟುಕೊಂಡು ಸರಕಾರವು ಕಾಂಗ್ರೆಸಿನೊಡನೆ ಭಾರತದ ಸಮಸ್ಯೆಯನ್ನು ಪರಿಹರಿಸಲು, ಗೌರವಪೂರ್ವಕ ಪರಿಹರಿಸಲು, ಸಾಧ್ಯವಾದ ಸಕಲ ಪ್ರಯತ್ನಗಳನ್ನೂ ಮಾಡಲು ಮುಂದೆ ಬರಬೇಕು ಇದರಿಂದ ಜಗತ್ತಿನ ಕಲ್ಯಾಣವೇ ಆಗುವುದು

---

## ಕುಸುಮದಂತೆ ಕೋಮಲ! ವಜ್ರದಂತೆ ಕಠೋರ!!

'ನನ್ನ ಪ್ರೇಮ ಭಾವನೆಯು ಕುಸುಮದಷ್ಟು ಕೋಮಲವಾಗಿದ್ದರೆ, ವಜ್ರದಷ್ಟೇ ಕಠೋರವಾಗಿದೆ'

ನನ್ನ ಪತ್ನಿಯು ಈ ವಿಷಯದಲ್ಲಿ ನನ್ನಿಂದ ಚೆನ್ನಾಗಿ ಅನುಭವ ಹೊಂದಿದಾಳೆ ನನ್ನ ಮೊದಲನೆಯ ಪುತ್ರನು ಈಗಲೂ ಕೂಡಾ ಅಂತಹ ಅನುಭವವನ್ನು ಪಡೆಯುತ್ತ ಇದ್ದಾನೆ ಸುಭಾಸಬಾಬುಗಳನ್ನು ನಾನು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಾಗಿಯೇ ಮಾಡಿಕೊಂಡೆನೆಂದು ಅಭಿಪ್ರಾಯ ಕಟ್ಟಿದ್ದೆ ಆದರೆ ನನ್ನ ಪ್ರಯತ್ನ ವಿಫಲವಾಯಿತು ಸುಭಾಸರ ಮೇಲೆ ಹಾಕಿದ ನಿಷೇಧದಲ್ಲಿ ನಾನೂ ಸಹಭಾಗಿಯಾಗಬೇಕಾದ ವಿಷಮದ ಕಾರ್ಯವೂ ನನ್ನಿಂದ ಆಗಬೇಕಾಯಿತು

'ಅದೊಂದು ಕಾಲವಿತ್ತು, ಡಾಕ್ಟರ್ ಖಾರೆ ಮತ್ತು ವೀರ ನರಿಮನರಿಗೆ ನನ್ನ ಮಾತೇ ವೇದವಾಕ್ಯವಾಗಿತ್ತು ಅದರಿಂದ ಗೌರವವನ್ನು ನಾನು ಮುಂದಕೆ ಅವರಿಂದ ಪಡೆಯಲಾ' ಅವರ ವಿರುದ್ಧವಾಗಿ ಮಾಡಿದ ಶಿಸ್ತು ಭಂಗ ನಿಷೇಧ ಆಜ್ಞೆಗಳಲ್ಲಿ ನಾನೂ ಸಹಭಾಗಿಯಾಗಿದ್ದೆನು. ನಾನು ನನ್ನ ಅತ್ಯಂತ ಪ್ರೀತಿಯವರೂ ಜೀವದ ಪ್ರತಿಬಿಂಬಗಳೂ ಆದವರ ವಿಷಯವಾಗಿ ಹೇಗೆ ನಡೆಯಬೇಕಿತ್ತೋ ಹಾಗೆಯೇ ಅವರ ವಿಷಯವಾಗಿಯೂ ನಡೆದಿರುವೆನೆಂದು ತಿಳಿಯುತ್ತೇನೆ

ಗಾಂಧಿಜಿ

---

## ಸಾದರ-ಸ್ವೀಕಾರ

**ಸಮಾಜ ಸೇವಕ:—** (ವಾರಪತ್ರಿಕೆ) ಸಂಪಾದಕರು ಪಿ. ರಾಮರಾವ್ ಸಂಪುಟ ೧ ಸಂಚಿಕೆ ೧ ವಾರ್ಷಿಕ ಚಂದಾ, ರೂ. ೧ (ಅಂಚೆ ಸಹಿತ) ಪ್ರಕಾಶಕರು, ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ ಬೆಂಗಳೂರು

ಶ್ರೀ ಯಂ ರಾಮರಾಯರು ಹೆಸರಾಂತ ಪತ್ರಿಕೋದ್ಯಮಿಗಳು ಧಾರ್ಮಿಕ ದೃಷ್ಟಿಯ ಉದಾತ್ತವಾದ ಧ್ಯೇಯದಿಂದ ಪತ್ರಿಕೋದ್ಯೋಗದಲ್ಲಿ ದುಡಿಯುವವರು. ಇಂದು ತಮ್ಮ ಆ ಧ್ಯೇಯಕ್ಕೆ ಅನುಗುಣವಾಗಿ ಸಮಾಜದ ಸೇವೆಯನ್ನು ಮಾಡುವ ಉದ್ದೇಶದಿಂದ ಈ ವಾರ ಪತ್ರಿಕೆಯನ್ನು ಹೊರಡಿಸಿದ್ದಾರೆ ಸಮಾಜದಲ್ಲಿರುವ ಕುಂದುಕೊರತೆಗಳನ್ನು ನೀಗಲಾಡಿಸಿಕೊಂಡು, ಜೀವನವನ್ನು ಉದಾತ್ತಗೊಳಿಸಬೇಕಾದುದು ಪ್ರತಿಯೊಬ್ಬನ ಆವಶ್ಯ ಕರ್ತವ್ಯವಾಗಿದೆ. ಸಮಾಜಸೇವಕನಿಂದ ಕನ್ನಡ ಸಮಾಜಕ್ಕೆ ಅಂತಹ ಸೇವೆಯು ಸಲ್ಲಲಿ ಎಂದು ಹಾರೈಸುತ್ತೇವೆ

# ಈ ಸಲದ ಕಾಂಗ್ರೆಸ್ ಅಧಿವೇಶನವೆಲ್ಲಿ?

## ರಾಮಗಡದ ಸಂಕ್ಷಿಪ್ತ ಪರಿಚಯ

### ಅಜಾದರು ರಾಷ್ಟ್ರಪತಿಗಳಾಗುವರೆ?

ಈ ವರ್ಷ ಅಖಿಲ ಭಾರತ ಕಾಂಗ್ರೆಸಿನ ಅಧಿವೇಶನವು ಬೀಹಾರ್ ಪ್ರಾಂತದ ರಾಮಗಡವೆಂಬ ಹಳ್ಳಿಯೊಂದರಲ್ಲಿ ನೆರವೇರಲಿರುವುದೆಂದು ಈಗಾಗಲೇ ಹಲವರಿಗೆ ತಿಳಿದಿರುವ ವಿಷಯವಾಗಿದೆ. ಇತ್ತೀಚೆಗೆ ಕಾಂಗ್ರೆಸ್ಸು ಅಧಿವೇಶನಗಳನ್ನು ಹಳ್ಳಿಗಳಲ್ಲಿ ಕೂಡಿಸಿ, ದೇಶದ ಸ್ವಾತಂತ್ರ್ಯ ಸಿದ್ಧತೆಯ ವಿಷಯವನ್ನು ಹಳ್ಳಿಗರ ಹೃದಯದಲ್ಲಿ ನೆಲೆಯೂರುವಂತೆ ಮಾಡುವ ಮುಖಂಡರ ಅಪೇಕ್ಷೆಯಿಂದಾಗಿ, ಇಂದು ಹಲವು ಹಳ್ಳಿಗಳು ಭಾರತದ ಇತಿಹಾಸದಲ್ಲಿ ಎಂದೆಂದೂ ಅಚ್ಚಳಿಯದ ಹೆಸರನ್ನು ಪಡೆದಿವೆ. ಪೈಜಪುರ, ತ್ರಿಪುರಿ, ರಾಮಗಡ ಇವುಗಳನ್ನು ಮರೆವ ಭಾರತೀಯನಾರು?— ಈ ವರ್ಷದ ಸ್ವಾತಂತ್ರ್ಯ ಹಬ್ಬವು ನೆರವೇರಲಿರುವ ರಾಮಗಡದ ಇತಿಹಾಸ, ವೈಶಿಷ್ಟ್ಯಗಳನ್ನು ಇಲ್ಲಿ ವಿವರಿಸಲಾಗಿದೆ

**ಉಜ್ವಲ ಇತಿಹಾಸ**

ರಾಮಗಡವೆಂಬ ಈ ಹಳ್ಳಿಯು ಬಿಹಾರ ಪ್ರಾಂತಕ್ಕೆ ಸೇರಿದ ಛೋಟಾ ನಾಗಪುರದಲ್ಲಿದೆ. ಹಜಾರಿಬಾಗ ಎಂಬುದು ಛೋಟಾ ನಾಗಪುರದಲ್ಲಿನ ಒಂದು ನಗರ ಈ ನಗರದಿಂದ ರಾಂಚಿಗೆ ಹೋಗುವ ಮಾರ್ಗದಲ್ಲಿ, ಹಜಾರಿಬಾಗಿನಿಂದ ಸುಮಾರು 30 ಮೈಲಿ ದೂರದಲ್ಲಿ ಈ ರಾಮಗಡ ಹಳ್ಳಿಯಿದೆ ದಾಮೋದರ ನದಿಯು ಈ ಹಳ್ಳಿಯಲ್ಲಿ ಹರಿಯುತ್ತದೆ ಅಲ್ಲಿ ಹಿಂದೆ ರಾಜವಂಶಗಳು ಆಳಿದ್ದುವು ಕೋಟೆಕೊತ್ತಳಗಳು ಇಂದೂ ಆ ವಿವರವನ್ನು ತಿಳಿಸುತ್ತವೆ ಅಲ್ಲಿನ ರಾಜರ ಮೇಲೆ 1ನೆಯಲ್ಲಿ ಮಹಮ್ಮದೀಯರು ಆಕ್ರಮಣ ನಡಿಸಿದರು ಆದರೆ ದಕ್ಷಿಣದಲ್ಲಿ ಮರಾಠರ ಪ್ರಾಬಲ್ಯವು ಹೆಚ್ಚಾಗಲು ಮಹಮ್ಮದೀಯ ರಾಜರು, ಅಲ್ಲಿನ ಆಕ್ರಮಣ ಬಿಟ್ಟು ಹಿಂತೆರಳಿದರು ಆ ಮೇಲೆ ಲಾರ್ಡ್ ಡಾಲ್‍ಹೌಸಿ ಆಧೀನದಲ್ಲಿ ಬ್ರಿಟಿಷರು ಅಲ್ಲಿನ ಅರಸರ ಮೇಲೆ ಆಕ್ರಮಿಸಿ ರಾಮಗಡವನ್ನು ಕಿತ್ತುಕೊಂಡರು ಅಲ್ಲಿನ ಅರಸನನ್ನು ಪಟ್ಟದಿಂದ ತಳ್ಳಿಹಾಕಿದರು ಆ ಮೇಲೆ ದಿನದಿಂದ ದಿನಕ್ಕೆ ರಾಮಗಡವು ಕ್ಷೀಣವಾಗುತ್ತಾ ಬಂದು, ಒಂದು ಹಳ್ಳಿಯಾಗಿ ಪರಿಣಮಿಸಿತು.

**ಜನರು ಮತ್ತು ಭಾಷೆ**

ಈ ಜಿಲ್ಲೆಯಲ್ಲಿ ಬಹುಮಂದಿ ಜನರು ಹಿಂದುಗಳಾಗಿದ್ದಾರೆ ಕ್ರೈಸ್ತರು, ಪಾದ್ರಿಗಳು, ಸಂತಾಳ, ಮುಂಡಾಲ ಮೊದಲಾದ ಲಕ್ಷಾವಧಿ ಮೂಲನಿವಾಸಿಗಳನ್ನು ಇತ್ತೀಚೆಗೆ ಕ್ರೈಸ್ತ ಮತಕ್ಕೆ ಪರಿವರ್ತಿಸಿದ್ದಾರೆ. ಇಲ್ಲಿನ ಹೆಚ್ಚಿನ ಜನರ ಭಾಷೆಯು ಮಗಹಿಯು. ದಕ್ಷಿಣ ಪೂರ್ವ ಭಾಗದಲ್ಲಿ ಕರ್ಮಾಲಿಯೆಂಬ ಭಾಷೆಯನ್ನೂ ಆಡುತ್ತಾರೆ ಕೆಲವರು ಮುಂಡಾರಿಯೆಂಬ ಭಾಷೆಯನ್ನೂ ಆಡುತ್ತಾರೆ ಇವೆಲ್ಲಾ ಬಂಗಾಳಿ ಮಿಶ್ರಿತ ಹಿಂದೀ ಭಾಷೆಗಳಾಗಿವೆ. ಕೆಲವರು ಇಲ್ಲಿ ದ್ರಾವಿಡ ಭಾಷೆಯನ್ನಾಡುವವರೂ ಇದ್ದಾರೆ!

**ದರ್ಶನೀಯ ಸ್ಥಳಗಳು**

ರಾಂಚಿಯು ಛೋಟಾ ನಾಗಪುರದ ಪ್ರಧಾನ ನಗರ. ಬೀಹಾರ ಸರಕಾರದ ಗ್ರೀಷ್ಮಕಾಲದ ವಾಸಸ್ಥಾನವಿದು. ಈ ನಗರವು ಎತ್ತರವಾದ ಬೆಟ್ಟದ ಮೇಲೆ ಕಟ್ಟಲ್ಪಟ್ಟಿದ್ದು, ಭವ್ಯವಾಗಿದೆ. ಕೆಲಕಾಲ ಹಿಂದೆ ಅರಣ್ಯಗಳ ನೆಲವೀಡಾಗಿದ್ದು ಇಂದು ಜನವಾಸ ರಮಣೀಯವಾಗಿದೆ. ಇಲ್ಲಿನ ಮುರಾಬಾದ್ ಹಿಲ್ ಎಂಬ ಬೆಟ್ಟವೊಂದರ ಮೇಲೆ ಕವೀಂದ್ರ ರವೀಂದ್ರರ ಒಂದು ಸುಂದರ ಬಂಗಲೆಯಿದೆ ರಾಂಚಿಯಲ್ಲಿ ಒಂದು ಪ್ರದರ್ಶನೀಯವಾದ ಸರೋವರವಿದೆ

ರಾಂಚಿಯ ಆರು ಮೈಲು ದೂರದಲ್ಲಿ ಜಗನ್ನಾಥಪುರವೆಂಬ ನಗರವೊಂದಿದೆ ಛೋಟಾ ನಾಗಪುರದಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ ಮತದವರಿದ್ದಾರೆ ಇಲ್ಲಿ ಓರಾಂವ ಎಂಬ ಮೂಲನಿವಾಸಿಗಳು ಛೋಟಾ ನಾಗಪುರವು ತಮ್ಮ ಮೂಲಸ್ಥಳವೆಂದೂ ಅಲ್ಲಿ ಇತರರಿಗೆ ಯಾವ ಅಧಿಕಾರವಿಲ್ಲವೆಂದೂ ಚಳವಳ ಹೂಡುತ್ತಿದ್ದಾರೆ, ಈ ಚಳವಳವು ಈಗೀಗ ಪ್ರಬಲವಾಗುತ್ತಿದ

1ನೆಯಲ್ಲಿ ಮೂಲನಿವಾಸಿಗಳು ಒಂದು ದಂಗೆಯೆಬ್ಬಿಸಿದ್ದರು ಅನೇಕ ಹಿಂದು ಮುಸ್ಲಿಂ ಕ್ರೈಸ್ತರನ್ನು ಸುಟ್ಟುಬಿಟ್ಟಿದ್ದರು!

**ಪ್ರಕೃತಿಯ ಪ್ರಸನ್ನತೆ**

ಇದು ಕಾಡು ಬೆಟ್ಟಗಳ ದೇಶ. ಇತ್ತೀಚೆಗೆ ಜನವಾಸ ಯೋಗ್ಯವಾಗಿ ಆಗಿದೆ. ಇಲ್ಲಿನ ಕಾಡುಗಳಲ್ಲಿ ಹುಲಿ, ಕರಡಿ, ಸಿಂಹಗಳೇ ಮೊದಲಾದ ಹಿಂಸ್ರ ಜಂತುಗಳಿವೆ.

ಖನಿಜಗಳು ಇಲ್ಲಿ ತುಂಬಾ ಸಿಗುತ್ತವೆ. ಅನೇಕ ಗಣಿಗಳಿವೆ. ಕಲ್ಲಿದ್ದಲು, ಅಭ್ರ, ತಾಮ್ರ, ಬಿಳಿಮಣ್ಣು, ರತ್ನಮಣಿಗಳು ಇಲ್ಲಿ ದೊರೆಯುತ್ತವೆ ಇಲ್ಲಿ ಒಂದು ಬಿಸಿನೀರಿನ ಪ್ರವಾಹವಿದೆ

ಅಂತೂ ಈ ಸಲದ ಅಧಿವೇಶನದ ಸ್ಥಳವು ಬಹಳ ಪ್ರೇಕ್ಷಣೀಯವಾಗಿದ್ದು, ಭಾರತದ ಹಳ್ಳಿಯೊಂದರ ರಮಣೀಯ ದರ್ಶನವನ್ನು ನೀಡಿಸುವಂತಿದೆ.

**ಮಹತ್ವದ ಅಧಿವೇಶನ**

ಈ ಸಲದ ಕಾಂಗ್ರೆಸು ಅಧಿವೇಶನವು ಹಲವು ವಿಧಗಳಿಂದ ಮಹತ್ವವಿದ ಅಖಿಲ ಪ್ರಪಂಚದ ರಾಜಕೀಯ ವಾತಾವರಣವು ಇಂದ ಕೆಟ್ಟಿದೆ ಪ್ರಪಂಚದ ಯುದ್ಧದಲ್ಲಿ ಬ್ರಿಟಿಷ್ ಸರಕಾರವು ಭಾಗಿಯಾಗಿದೆ ತನ್ನ ಆಧೀನದಲ್ಲಿದೆಯೆಂಬುದರಿಂದ, ಇಂದು ಭಾರತವನ್ನು ಪ್ರಪಂಚ ಯುದ್ಧದಲ್ಲಿ ಸೇರಿಸಿದೆ. ಈ ಬಗ್ಗೆ ಭಾರತದ ಮುಖಂಡರು ತೀವ್ರ ಅಸಮಾಧಾನವನ್ನು ಸೂಚಿಸಿದ್ದು ಮಾತ್ರವಲ್ಲದೆ, ತಮ್ಮ ಅಸಮಾಧಾನದ ಗುರುತಾಗಿ, ಇಂದು ಅಧಿಕಾರವನ್ನು ಬಿಟ್ಟುಕೊಟ್ಟು ಬಂದಿದ್ದಾರೆ. ಮುಂದಿನ ಹೆಜ್ಜೆಯು ಆಂದೋಲನವಾಗಬಹುದು. ಈ ಕುರಿತು ತೀವ್ರ ಚರ್ಚೆ ನಡೆದು ಅಲ್ಲಿ ನಿಷ್ಕರ್ಷೆಯಾಗಬಹುದು.

**ಹಿಂದೂ ಮುಸ್ಲಿಂ ಐಕ್ಯ**

ಹಿಂದೂ ಮುಸ್ಲಿಂ ಐಕ್ಯದ ವಿಷಯವಾಗಿ ಕಾಂಗ್ರೆಸು ಹೊಸ ಧೋರಣೆಯನ್ನು ನಿಶ್ಚಯಿಸಿದೆಯಾಗಿ ತಿಳಿಯುತ್ತದೆ. ಮುಸ್ಲಿಂಲೀಗಿನವರೊಡನೆ ಸಂಧಾನಕ್ಕೆ ಅವಕಾಶವಿಲ್ಲವೆಂದು ಸಾರಿದ ಕಾಂಗ್ರೆಸು ಮುಖಂಡರು ಹಿಂದೂ ಮುಸ್ಲಿಂ ಐಕ್ಯದ ಹೊಸ ಮಾರ್ಗವೊಂದನ್ನು ಕಂಡಿದ್ದಾರೆ. ಜನತಾ ಸಂಪರ್ಕ ಸಂಬಂಧಗಳನ್ನು ಕಾಂಗ್ರೆಸಿನಲ್ಲಿ ಹೆಚ್ಚಿಸಿ, ಅಖಿಲ ಭಾರತ ಮುಖಂಡರಾದ ಕಾಂಗ್ರೆಸಿನಲ್ಲಿರುವ ಮುಸ್ಲಿಂ ಮುಖಂಡರು ರಾಷ್ಟ್ರದಲ್ಲಿ ಸಂಚಾರ ಮಾಡುವಂತೆ ಏರ್ಪಡಿಸಿಕೊಳ್ಳುವುದು ಸಂಭವವಿದೆ ಇದೇ ದೃಷ್ಟಿಯಿಂದ ಈ ಸಲದ ಅಧ್ಯಕ್ಷ ಪೀಠವು ಮೌಲಾನಾ ಅಜಾದರಿಗೆ ಸಲಬಹುದೆಂದು ಕಲ್ಪನೆಯಾಗಿದೆ


ಭಾರತ ಸ್ತ್ರೀಯರಿಗೆ ಉತ್ತಮೋತ್ತಮವಾದ ಟಾನಿಕ್

ಲೋಧ್ರ

ಲೋಧ್ರ

ಬಲವರ್ಧಕ ಔಷಧಗಳ ರಾಣಿ

ಸ್ತ್ರೀಯರ ಸಕಲ ಗರ್ಭಾಶಯರೋಗಗಳನ್ನು ಹೋಗಲಾಡಿಸಿ

ಸಂಪೂರ್ಣಾರೋಗ್ಯವನ್ನೂ, ಸುಖವನ್ನೂ ನೀಡುವ ಟಾನಿಕ್

ಕೇಸರಿ ಕುಟೀರಂ, ರಾಯಪೇಟೆ, ಮದರಾಸು.

# ಹಿಟ್ಲರನ ಜರ್ಮನಿಯಲ್ಲಿ ಆರ್ಥಿಕ ವಿಪ್ಲವ!

## ಸಣ್ಣ ರಾಷ್ಟ್ರಗಳೂ ಯುದ್ಧಕ್ಕೆ ಸಿದ್ಧವಾಗಿವೆ

### ರಣಭೇರಿ ಹೊಡೆದ ಫಲ

ಒಂದು ಬಾರಿ ಹಿಟ್ಲರನ ಅವಕೃಪೆಗೆ ಪಾತ್ರನಾದ ಡಾಕ್ಟರ ಶಾಟನು ಈಗ ಪುನಃ ಹಿಟ್ಲರನ ಅಚ್ಚುಮೆಚ್ಚಿನವನಾಗಿದ್ದಾನೆ. ಹಿಟ್ಲರನು ಡಾಕ್ಟರ ಶಾಟನನ್ನು ಜರ್ಮನಿಯ ರೀಚ್ ಬೇಂಕಿನ ಅಧ್ಯಕ್ಷ ಪದವಿಯಿಂದ ತಳ್ಳಿಹಾಕಿ ಡಾಕ್ಟರ ಫಂಕನನ್ನು ನೇಮಿಸಿದ್ದನು. ಆದರೆ ಜರ್ಮನಿಯ ಆರ್ಥಿಕ ವ್ಯವಹಾರಗಳಲ್ಲಿ ಈಗ ಪುನಃ ಡಾಕ್ಟರ ಶಾಟನ ಅಭಿಪ್ರಾಯಗಳಿಗೇ ನಾಝಿಮಂಡಲದಲ್ಲಿ ಪುರಸ್ಕಾರ ದೊರೆಯುವುದನ್ನು ವಿದೇಶಿ ರಾಜಕಾರಣಪಟುಗಳಿಗೆ ಆಶ್ಚರ್ಯವುಂಟಾಗಿದೆ. ಡಾಕ್ಟರ ಫಂಕನೀಗ ಜವಾಬುದಾರ ಸ್ಥಾನಗಳಿಂದ ಉರುಳುತ್ತ ಅಜ್ಞಾತ ವಾಸಕ್ಕಾರಂಭಿಸಿರುವನು.

ಮಿತ್ರಮಂಡಲಿಯು ಜರ್ಮನ ವ್ಯಾಪಾರ ವಹಿವಾಟಿನ ಮೇಲೆ ಹಾಕಿದ ಪ್ರಬಲ ಬಹಿಷ್ಕಾರದ ಪರಿಣಾಮವೆಂಬಂತೆ ಜರ್ಮನಿಯು ಆರ್ಥಿಕ ಕ್ಷೇತ್ರದಲ್ಲಿ ಅರಾಜಕತೆಯೇ ಉಂಟಾಗಿದೆ. ಜರ್ಮನಿಯ ಹಣಕಾಸಿನ ಸ್ಥಿತಿಯು ವಿಶಿಷ್ಟ ರೀತಿ ಕೆಟ್ಟು ಹೋದ ಪರಿಣಾಮದಿಂದ ನಾಝಿ ಪ್ರಮುಖರು ಕರ್ತವ್ಯ ಮೂಢರಾಗಿರುವರು. ಅವರು ನಿರುಪಾಯರಾಗಿ ಡಾಕ್ಟರ ಶಾಟನೊಡನೆ ಮಂತ್ರಾಲೋಚನೆ ಮಾಡುತಿದ್ದಾರೆ. ನಾಝಿಗಳು ಡಾಕ್ಟರ ಶಾಟನನ್ನು ದ್ವೇಷಿಸುತ್ತಿರುವರಾದರೂ, ಜರ್ಮನಿಯ ಆರ್ಥಿಕಸ್ಥಿತಿಯನ್ನು ಸುಧಾರಿಸಬಲ್ಲ ಯಾರಾದರೂ ಒಬ್ಬ ಇರುವನಾದರೆ ಅವನು ಡಾಕ್ಟರ ಶಾಟನೇ ಆಗಿರುವನಾದ್ದರಿಂದ ಹಿಟ್ಲರ ತಾನು ಬೇಡವೆಂದು ದೂರ ಮಾಡಿದ ಆ ಡಾಕ್ಟರ ಶಾಟನಿಗೇ ಶರಣು ಹೋಗುವ ಸ್ಥಿತಿ ಬಂದಿದೆ.

### ಹಿಟ್ಲರನಿಗೆ ಪಶ್ಚಾತ್ತಾಪ

ಜರ್ಮನಿಯ ಜನತೆಯು ಬೆಂಬಲವು ಹಿಟ್ಲರನಿಗೆ ಕಡಿಮೆಯಾಗ ಹತ್ತಿರುವುದು ಮಾತ್ರವಲ್ಲದೆ ಅವನ ಅನುಯಾಯಿಗಳಾದ ನಾಝಿಗಳೇ ಅವನ ಮೇಲೆ ಈಗ ಶ್ರದ್ಧೆಯನ್ನು ಇಡಲಾರದವರಾಗಿದ್ದಾರೆ. ಹಿಟ್ಲರನು ಗೋರಿಂಗನನ್ನು ತನ್ನ ಉತ್ತರಾಧಿಕಾರಿ ಎಂದು ಪ್ರಕಟ ಮಾಡಿದಂದಿನಿಂದ ನಾಝಿಗಳ ಮೇಲೆ ಹಿಟ್ಲರನ ಪ್ರಭಾವವು ಕಡಿಮೆಯಾಗ ತೊಡಗಿದೆ. ಪ್ರತಿಯೊಂದು ಕೆಲಸದಲ್ಲಿ ನಾಝಿಗಳು ಗೋರಿಂಗನೊಡನೆ ಅನುಭವ ಕೇಳಿ, ಅವನ ಮನೋನುಕೂಲರಾಗಿ ನಡೆಯುತ್ತಿರುವರು. ಈಗ ಹಿಟ್ಲರನ ಅಧಿಕಾರಬಲವು ಕುಂದಲಾರಂಭಿಸಿದೆ. ಹಿಟ್ಲರನು ಜರ್ಮನಿಯ ಸರ್ವಾಧಿಕಾರಿ ಎಂಬುದು ಪ್ರಸಿದ್ಧವಾದರೂ ಎಲ್ಲಾ ಕಡೆಗಳಲ್ಲಿ ಗೋರಿಂಗನ ಅದೃಶ್ಯ ಕೈ ತನ್ನ ಕೆಲಸಗಳನ್ನು ಮಾಡತೊಡಗಿರುವುದು. ಆದ್ದರಿಂದ ಗೋರಿಂಗನನ್ನು ತನ್ನ ಉತ್ತರಾಧಿಕಾರಿಯೆಂದು ಪ್ರಕಟಿಸಿದ ತನ್ನ ಚಾತುರ್ಯಕ್ಕಾಗಿ ಹಿಟ್ಲರನೀಗ ಬಹಳ ಪಶ್ಚಾತ್ತಾಪ ಪಡುತ್ತಿರುವನು.

### ರಣಭೇರಿ ಹೊಡೆದ ಫಲ

ಯೂರೋಪಿನ ತಟಸ್ಥರಾಷ್ಟ್ರಗಳ ಮೇಲೆ ಯುದ್ಧ ವಿಮಾನಗಳನ್ನು ಹಾರಿಸಿದ ಫಲವಾಗಿಯೂ ಅವುಗಳ ಕೆಲವು ಹಡಗುಗಳನ್ನು ಮುಳುಗಿಸಿದ ಪರಿಣಾಮವಾಗಿಯೂ ಯೂರೋಪಿನ ತಟಸ್ಥರಾಷ್ಟ್ರಗಳು ಹಿಟ್ಲರನ ವಿರುದ್ಧ ಯುದ್ಧಕ್ಕೆ ಸಿದ್ಧತೆ ಮಾಡಿರುವವು. ಹಿಟ್ಲರನ ಮುಷ್ಟಿಬಲಕ್ಕೆ ಬೆಲ್ಜಿಯಂ, ಹೊಲೆಂಡಿನಂಥ ಸಣ್ಣ ರಾಷ್ಟ್ರಗಳು ಕೂಡ ತಲೆಬಗ್ಗಿಸಲಾರದಾಗಿವೆ. ಮಿತ್ರಮಂಡಲಿಯು ಹಾಕಿದ ವ್ಯಾಪಾರ ನಿರ್ಬಂಧವನ್ನು ಅಲಕ್ಷಿಸಿ ತಟಸ್ಥರಾಷ್ಟ್ರಗಳು ಜರ್ಮನಿಗೆ ವ್ಯಾಪಾರ ಸರಕುಗಳನ್ನು ಕಳುಹಿಸಲಾರವಾದರೆ, ತಾನು ತಕ್ಕ ಉಪಾಯಗಳನ್ನು ಅಂದರೆ, ಅವುಗಳ ಮೇಲೆ ಬಲಪ್ರಯೋಗವನ್ನು ಮಾಡಬೇಕಾದೀತೆಂದ ಹಿಟ್ಲರು ಆ ಸಣ್ಣ ರಾಷ್ಟ್ರಗಳಿಗೆ ಕೊಟ್ಟ ಎಚ್ಚರಿಕೆಗೆ ಆ ರಾಷ್ಟ್ರಗಳು ಯಾವ ಬೆಲೆಯನ್ನೂ ಕೊಟ್ಟಿರುವುದಿಲ್ಲ. ಅವು ಸೈನ್ಯ ಭರ್ತಿ ಮಾಡಿಯೂ ರಜೆ ಮೇಲಿರುವ ಸೈನಿಕರನ್ನು ಹಿಂದಕ್ಕೆ ಕರೆಸಿಯೂ ಯುದ್ಧಕ್ಕೆ ತಾವೂ ಸಿದ್ಧವೆಂದು ಹಿಟ್ಲರನಿಗೆ ಉತ್ತರ ಕೊಟ್ಟಿವೆ. ಅವುಗಳ ಅಪೂರ್ವ ಸಿದ್ಧತೆಯನ್ನು ನೋಡಿ ಹಿಟ್ಲರನಿಗೆ ಆಶ್ಚರ್ಯವಾಗಿದೆ. ಈ ಸಣ್ಣ ರಾಷ್ಟ್ರಗಳ ಮೇಲಿಂದ ಜರ್ಮನ ಸೈನ್ಯವನ್ನು ತೆಗೆದುಕೊಂಡು ಫ್ರಾನ್ಸನ್ನು ಆಕ್ರಮಿಸುವುದೆಂದು ಹಿಟ್ಲರನು ಎಣಿಸಿದ ಉಪಾಯವು ಈಗ ಅಸಂಭವವೆಂದು ತೋರಿದೆ. ಆ ಮಾರ್ಗವಾಗಿ ಫ್ರಾನ್ಸಿನ ವಿರುದ್ಧ ಸೈನ್ಯವನ್ನು ಕಳುಹಿಸುವುದರಿಂದ ಹಿಟ್ಲರನು ಇನ್ನೊಂದು ಯುದ್ಧವನ್ನು ಆರಂಭಿಸುವುದಾಗಿದೆ.

### ಹಿಟ್ಲರ್ ಅಂಜುವುದೇಕೆ?

ಹೊಲೆಂಡ್-ಬೆಲ್ಜಿಯಂ ಗಳ ಸತತ ಹೋರಾಟವನ್ನು ... ತಪ್ಪದೆ ಬದಲಿಗೆ ಹಿಟ್ಲರನಿಗೆ ... ಕೋಟೆಗಳ ಸಾಲನ್ನೇ ... ಫ್ರಾನ್ಸಿನ ಮೇಲೆ ದಂಡೆತ್ತಿ ಹೋಗಲು ಹಿಟ್ಲರನು ಯಾಕೆ ಮಾಡುವುದಿಲ್ಲ? ಮ್ಯಾಜಿನೋ ಲೈನನ್ನು ಮುರಿಯಲಿಕ್ಕೆ ದೊಡ್ಡ ಹೋರಾಟವನ್ನೇ ನಡೆಸಬೇಕಾಗುವುದು. ಅದಕ್ಕೆ ಬೇಕಾದ ಸೇನಾಸಂಪತ್ತಿ ಹಿಟ್ಲರನೊಡನೆ ಇರುವುದಿಲ್ಲ. ಯುದ್ಧಕ್ಕೆ ಹೋಗಲು ಸಮರ್ಥರಾದ ಜರ್ಮನಿಯ ... ಗಿನ ಪ್ರಾಯದ ಜರ್ಮನರಲ್ಲಿ ಎಂಟರಲ್ಲಿ ಒಬ್ಬನಂತೆ ನಾಝಿ ಕೂಟಕ್ಕೆ ಸೇರಿದ್ದಾರೆ. ಅರ್ಧ ಮಿಲಿಯ ಜನರು ಕನ್ಸೆಂಟ್ರೇಶನ್ ಕ್ಯಾಂಪುಗಳಲ್ಲಿ ಬಂಧಿತರಾಗಿದ್ದಾರೆ. ಅವರ ರಕ್ಷಣೆಗೆ ಅಷ್ಟೇ ಸೈನ್ಯವು ಆವಶ್ಯಕವಾಗಿದೆ. ಜೆಕೊಸ್ಲೋವೇಕಿಯದ ಬಂಡಾಯವನ್ನು ಅಣಗಿಸಲಿಕ್ಕೆ ನಾಲ್ವತ್ತು ದಂಡುಗಳು ಅಲ್ಲಿ ಬೇಕಾಗಿವೆ, ೫೦ ದಂಡುಗಳು ಪೋಲಾಂಡಿನಲ್ಲಿವೆ. ೨೫ ಬೇರೆ ದಂಡುಗಳು ರಶ್ಯದ ಗಡಿಯಲ್ಲಿ ಹೊಸ ಕೋಟೆ ಸಾಲನ್ನು ಕಟ್ಟುತ್ತಿವೆ. ಆಸ್ಟ್ರಿಯವನ್ನು ಹಿಡಿತದಲ್ಲಿಟ್ಟುಕೊಳ್ಳಲಿಕ್ಕೆ ೫ ಲಕ್ಷ ಯುದ್ಧೋಪಕರಣಗಳ ತಯ್ಯಾರಿಗೆ ೩ ಲಕ್ಷ ಜನರು ಬೇಕಾಗಿದ್ದಾರೆ. ಆದ್ದರಿಂದ ಫ್ರಾನ್ಸಿನೊಡನೆ ದೊಡ್ಡ ಯುದ್ಧವನ್ನಾರಂಭಿಸಲಿಕ್ಕೆ ಹಿಟ್ಲರನ ಹತ್ತಿರ ಬೇಕಾದಷ್ಟು ಮನುಷ್ಯಬಲವಿರುವುದಿಲ್ಲ. ಆದ್ದರಿಂದಲೇ ಅವನು ಹಿಂದೆ ಮುಂದೆ ನೋಡುತ್ತಿದ್ದಾನೆ.


ಕೆಮ್ಮು ಮತ್ತು ಶೀತಗಳಿಗೆ ನೀವು ಹಾತೊರೆಯುತ್ತಿರುವ ದಿವ್ಯೌಷಧಿ.

ಎದೆ, ಶ್ವಾಸಕೋಶ ಮತ್ತು ಗಂಟಲು ಬಾಧೆಗಳಿಗೆ ಪೆಪ್ಸು ತಕ್ಕುದಾದ ಮಾತ್ರೆಯ ರೂಪದಲ್ಲಿ ದೊರಕುವ ಶ್ವಾಸನೀಯ ಔಷಧಿ. ಇದರ ಆಶ್ಚರ್ಯಕರವಾಗಿದ ವಾಸಿಗೊಳಿಸುವ ಗುಣವು ಹೆಸರುವಾಸಿಯಾದ ಪೈನ್ ಅರಣ್ಯದ ವಾಯುವನ್ನು ಹೋಲುತ್ತದೆ.

ಪೆಪ್ಸು ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ಶ್ವಾಸಕೋಶಗಳಿಗೆ ಹೋಗುತ್ತವೆ. ಇದರಿಂದಾಗಿ ಪೆಪ್ಸು ಶ್ವಾಸಕೋಶದ ಎಲ್ಲಾ ಭಾಗಗಳನ್ನು ಸೇರುತ್ತದೆ. ಗಂಟಲನ್ನು ಸರಿಗೊಳಿಸುವುದು. ಶ್ವಾಸಕೋಶಗಳ ಬಾವಿಕೆಯನ್ನು ಗುಣಪಡಿಸುವುದು. ಎದೆಯನ್ನೂ ಶ್ವಾಸಕೋಶಗಳನ್ನೂ ಬಲಗೊಳಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ದಾಸ್ತಾನು ಮಾಡುತ್ತಾರೆ.

ಏಜಂಟ್ಸ್ ... ಮದ್ರಾಸು

ಯಾವಾಗಲೂ ಪೆಪ್ಸನ್ನೇ ಕೊಂಡುಕೊಳ್ಳಿರಿ

PEPS

ವಿಷಹಾರಕ ಶ್ವಸನೀಯ ಮಾತ್ರೆಗಳು



CANARA BANK LIMITED.

The only Bank to have a Share holders Association to safeguard the interests of Depositors, Constituents and Share holders.

RESOURCES OF A CRORE.



ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ... ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ... ಹಡೆಯುವುದರಿಂದ ಹೆಂಗಸರ ಆರೋಗ್ಯ ... ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ... ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ... ಶರೀರಕ್ಕೆ ಏನೂ ಅಪಾಯವಾಗದೆ ... ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ... ಸರ್ಟಿಫಿಕೇಟು ... ವೈದ್ಯ ಎಲ್. ... ಎಸ್. ... ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ...

ವಿಳಾಸ ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S M C

ಈ ವಾರದ ಕತೆ:

# ಬಲಿದಾನ!

★

[ಕನ್ನಡಿಸಿದವರು ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ]

ಈ ದಿನ ಲೂಸಿಯಾ ಮ್ಲಾನವದನೆಯಾಗಿದ್ದಾಳೆ. ಅವಳು ಕೋಣೆಯಲ್ಲಿ ತನ್ನ ತಂದೆಯ ಸಮೀಪ ಒಂದು ಕುರ್ಚಿಯ ಮೇಲೆ ಕೂತುಕೊಂಡಿದ್ದಾಳೆ. ಆ ಕೋಣೆಯಲ್ಲಿ ಅವರಿಬ್ಬರ ಹೊರತು ಬೇರೆ ಯಾರೂ ಇಲ್ಲ. ಚಳಿಗಾಲದ ದಿನ. ಹೊರಗೆ ಚಳಿಚಳಿಯಾದ ಗಾಳಿಯು ಬೀಸುತ್ತಿತ್ತು. ಕೋಣೆಯ ನಡುವೆ ಒಂದು ಅಗ್ಗಿಷ್ಟಿಕೆ ಇತ್ತು. ಅದರೊಳಗೆ ಕೆಂಡಗಳು ಉರಿಯುತ್ತಿದ್ದುವು. ನಾಲ್ಕೂ ಸುತ್ತ ಬಿಸ್ಸಬ್ಬವು ಹರಡಿತ್ತು. ಅಗ್ಗಿಷ್ಟಿಕೆಯ ಆ ಬೆಂಕಿಯ ಪ್ರಕಾಶವಲ್ಲದೆ, ಕೋಣೆಯಲ್ಲಿ ಬೇರೆ ದೀಪವಿರಲಿಲ್ಲ. ಆ ಮಂದಪ್ರಕಾಶದಲ್ಲಿ ತಂದೆ ಮಗಳ ಮುಖಗಳನ್ನು ಸ್ಪಷ್ಟ ಕಾಣುವುದು ಕಷ್ಟವಾಗಿತ್ತು. ಅಗ್ಗಿಷ್ಟಿಕೆಯ ಬೆಂಕಿಯು ಮೆಲ್ಲಮೆಲ್ಲಗೆ ಆರತೊಡಗಿತು. ಇಬ್ಬರೂ ಚಿಂತಾಗ್ರಸ್ತರಾಗಿದ್ದುದರಿಂದ ಅವರ ಲಕ್ಷ್ಯವು ಆ ಕಡೆಗೆ ಹೋಗಿರಲಿಲ್ಲ.

'ಹಾಗಾದರೆ, ಅಪ್ಪಯ್ಯಾ! ಬೇರೆ ಯಾವ ಉಪಾಯವೂ ಇರುವುದಿಲ್ಲವೆ?' ಲೂಸಿಯು ಗದ್ಗದಳಾಗಿ ಕೇಳಿದಳು. ಇದನ್ನು ಹೇಳುತ್ತ ಅವಳ ಕಣ್ಣುಗಳಿಂದ ಎರಡು ಹನಿ ನೀರು ತೊಟ್ಟಿಕ್ಕಿತು. ನಿರಾಶೆಯಿಂದ ಅವಳ ಹೃದಯವು ಆಗ ಕಂಪಿಸತೊಡಗಿತು. 'ಅಪ್ಪಯ್ಯ' ತಾವು ಹೀಗೆಂದೇ ನಿರ್ಧಾರ ಮಾಡಿದಿರೆ? ಹೇಳಿರಿ! ಇದು ನಿಮ್ಮ ಖಂಡಿತ ನಿರ್ಧಾರವೆ?' ಎಂದು ಅವಳು ಪುನಃ ತಂದೆಯನ್ನು ಪ್ರಶ್ನಿಸಿದಳು.

ಚಿಂತಾಗ್ರಸ್ತನಾದ ತಂದೆಯು ತನ್ನ ತಲೆಯನ್ನು ಸ್ವಲ್ಪ ಎತ್ತಿಕೊಂಡನು. ಆಗ ಅವನ ಎರಡೂ ಕಣ್ಣುಗಳು ತುಂಬಿಬಂದುವು. ಸೀದಾ ಸ್ವಭಾವದ, ಆ ವಂಚನಾವಿಹೀನ ಕನ್ನೆಯನ್ನು ಅವನು ಒಂದೇ ದೃಷ್ಟಿಯಿಂದ ನೋಡಿದ. ಒಂದು ನಿಟ್ಟುಸಿರನ್ನು ಬಿಟ್ಟ. ಅದುವೇ ಲೂಸಿಯ ಪ್ರಶ್ನೆಗಳ ಉತ್ತರವಾಗಿತ್ತು. ತನ್ನ ಪ್ರೀತಿಯ ಮಗಳ ಅನನ್ಯಾವಸ್ಥೆಯ ಕಲ್ಪನೆ ಮಾಡಿದ ಮಾತ್ರಕ್ಕೇ ಅವನ ಹೃದಯವು ಮತ್ತಷ್ಟು ಕಂಪಿಸಿತು. ಅವನ ಹೃದಯಾಕಾಶದಿಂದ ವಿಚಾರ ತರಂಗಗಳು ಏಳಲಾರಂಭಿಸಿದುವು. ತನ್ನ ಪೂರ್ವ ಜೀವನದ ಪ್ರತಿ ತಿರಸ್ಕಾರ, ತಾನು ಮಾಡಿದ ಪಾಪಗಳ ಪ್ರತಿ ಪಶ್ಚಾತ್ತಾಪ, ತನ್ನ ಪ್ರೀತಿಯ ಮಗಳ ಅಂಧಕಾರಮಯ ಭವಿಷ್ಯ ಜೀವನದ ಪ್ರತಿ ಭಯ ಇತ್ಯಾದಿ ವಿಚಾರಗಳು ಅವನನ್ನು ಆ ಸಮುದ್ರ ನಿರ್ಜನವನಂತೆ ಮಾಡಿದುವು. ಆ ಮಾತೃವಿಹೀನ ಪ್ರಕೃತಿಗಿಸೀ ಅವನು ತನ್ನ ಪಾಪಮಯ ಜೀವನವನ್ನು ಅಷ್ಟು ದೀರ್ಘಕಾಲದ ತನಕ ಬೆಳಸಿಕೊಂಡು ಬಂದಿದ್ದನು. ಅವನ ಸುಖಜೀವನದ ದಿನಗಳು ಯಾವಾಗಲೋ ಮಾಯವಾಗಿದ್ದುವು. ಅವನು ನೆಪೋಲಿಯನ ಬೋನಪಾರ್ಟನ ಸೇನೆಯಲ್ಲಿ ಒಬ್ಬ ನಾಯಕನಾಗಿದ್ದನು. ನೆಪೋಲಿಯನನು ಸೋತು ಸೆಂಟ ಹೆಲೇನಾ ದ್ವೀಪದಲ್ಲಿ ನಿರ್ವಾಸಿತನಾದ ಮೇಲೆ ಮೊಸ್ಯುಸಾಲ್ವನು—ಅದು ಅವನ ಹೆಸರಾಗಿದ್ದಿತು—ತನ್ನ ಮನೆಗೆ ಮರಳಿದನು. ಈಗ ಅವನು ತನ್ನ ಪೂರ್ವ ಕರ್ಮಗಳ ಘೋರ ಪ್ರಾಯಶ್ಚಿತ್ತವನ್ನು ಮಾಡುವ ಕಠೋರ ಪ್ರತಿಜ್ಞೆಯನ್ನು ತೆಗೆದುಕೊಂಡಿದ್ದನು. ಮಗಳು ಪ್ರಶ್ನೆಯನ್ನು ಕೇಳಿದ ಮಾತ್ರಕ್ಕೆ ಅವನ ಹೃದಯವು ತಳಮಳಗೊಂಡಿತು. ಅವನ ತಲೆಯು ಚಿಂತೆಯಿಂದ ಮುದುರಿತು. ಅವನ ಮುಖಮಂಡಲವು ಭಯಂಕರವಾಯಿತು.

'ಅಪ್ಪಯ್ಯ! ತಾವು ನನ್ನನ್ನು ಈ ಭಯಂಕರ ಪ್ರಪಂಚದಲ್ಲಿ ಒಬ್ಬಳನ್ನಾಗಿ ಮಾಡಿ ಬಿಟ್ಟು ಹೋಗುವಿರಾ? ತಮಗೆ ನನ್ನ ಕುರಿತು ಸ್ವಲ್ಪವಾದರೂ ದುಃಖವಾಗುವುದಿಲ್ಲವೆ? ತಮ್ಮದು ಅದು ಕೊನೆಯ ನಿರ್ಧಾರವೆಂದಾದರೆ . . ನಾನು ಏನೂ ಹೇಳುವುದಿಲ್ಲ. ತಮಗೆ ಸಂತೋಷ ಕಂಡಂತೆ . . . .' ಅವಳ ಕಂಠವು ಪುನಃ ಬಿಗಿದು ಬಂದಿತು. ಮುಂದೆ ಅವಳಿಂದ ಮಾತನಾಡಲಾಗಲಿಲ್ಲ. ಕಣ್ಣುಗಳಿಂದ ಗಂಗಾಪ್ರವಾಹವು ಹರಿದುಹೋಯಿತು. ಮೂಗಿನಿಂದ ಒಂದು ನಿಡುಸುಯ್ಲನ್ನು ಬಿಟ್ಟಳು.

ಮೊಸ್ಯುಸಾಲ್ವನು ಯಾವ ಉತ್ತರವನ್ನೂ ಕೊಡಲಿಲ್ಲ. ಅವನು ಕೂತಲ್ಲಿಂದ ಎದ್ದು ಮೆಲ್ಲ ಮೆಲ್ಲಗೆ ಬದಿಯಲ್ಲಿದ್ದ ಕೋಣೆಗೆ ಹೋದನು. ಅದರಲ್ಲಿ ಮಹಾತ್ಮಾ ಏಸುವಿನ ಸುಂದರ ಮೂರ್ತಿಯು ವಿರಾಜಮಾನವಾಗಿತ್ತು. ಅದರ ಎರಡೂ ಕಡೆಗಳಲ್ಲಿ ಎರಡು ಮೇಣದ ಬತ್ತಿಗಳು ಉರಿಯುತ್ತಲಿದ್ದುವು. ಮೊಸ್ಯುಸಾಲ್ವನು ಆ ಪ್ರತಿಮೆಯ ಎದುರಿನಲ್ಲಿ ಮೊಣಕಾಲೂರಿ ಅದನ್ನು ನಮಸ್ಕರಿಸಿದನು. ಲೂಸಿಯು ತಂದೆಯ ಹಿಂದುಗಡೆ ನಿಂತು ನೋಡುತ್ತಿದ್ದಳು. ಅವನು ಎದ್ದು ಮೂಲೆಯಲ್ಲಿದ್ದ ಮೇಜಿನ ಸಮೀಪವಾದನು. ಅದರ ಮೇಲೆ ಕೋವಿ ತುಂಬಿದ ಒಂದು ಪಿಸ್ತೂಲು ಇಟ್ಟಿತ್ತು. ಅವನು ಅದನ್ನು ಎತ್ತಿಕೊಂಡು ಹಿಂದಕ್ಕೆ ನೋಡಿದ. ಹಿಂದುಗಡೆ ಮಗಳು ಇದ್ದಳು. ಅವಳನ್ನು ನೋಡಿದ ಅವನು ಒಂದು ಬಾರಿ ಕರ್ತವ್ಯಮೂಢನಂತಾದನು. ಆದರೆ ಆಗಲೇ ಅವನಿಗೆ ತನ್ನ ಕಠೋರ ಪ್ರತಿಜ್ಞೆಯ ನೆನಪು ಬಂತು. ಅವನು ಪಿಸ್ತೂಲನ್ನು ಎದೆಗೆ ಒತ್ತಿಟ್ಟು ಅದನ್ನು ಢಂ ಎಂದು ಸುಟ್ಟುಬಿಟ್ಟನು. ಪಿಸ್ತೂಲಿನ ನಳಿಗೆಯು ಖಾಲಿಯಾಯಿತು. ಅದರೊಂದಿಗೆ ಮೊಸ್ಯುಸಾಲ್ವನ ದೇಹ ಪಂಜರವೂ ಖಾಲಿಯಾಯಿತು.

ಈ ದೃಶ್ಯವನ್ನು ನೋಡುತ್ತಲಿದ್ದ ಲೂಸಿಯ ತಲೆ ತಿರುಗತೊಡಗಿತು. ಅವಳು ಮೂರ್ಛಿತಳಾಗಿ ನೆಲದ ಮೇಲೆ ಬಿದ್ದುಬಿಟ್ಟಳು. ಎಚ್ಚರವಾದ ಮೇಲೆ ಪೂರ್ವ ದಿಗಂತದಲ್ಲಿ ಸೂರ್ಯದೇವನು ಶೋಭಾಯಮಾನನಾಗಿದ್ದ. ಸ್ವಲ್ಪ ಸಮಯದ ತನಕ ಎಲ್ಲಿದ್ದೇನೋ ಅಲ್ಲಿಯೇ ಕೂತು ಅವಳು ಆಲೋಚಿಸಿದಳು. ಅನಂತರ ಎದ್ದು ತಂದೆಯ ಶವದ ಸಮೀಪ ಹೋಗಿ ಅದನ್ನು ಅಪ್ಪಿಕೊಂಡು ಅಳಲಾರಂಭಿಸಿದಳು. ಅವಳು ಅಳುವ ಕೂಗು ಆ ಭಯಂಕರ ಶೂನ್ಯತೆಯಲ್ಲಿ ವಿಲೀನವಾಗುತ್ತಿತ್ತು.

ಸ್ವಲ್ಪ ಸಮಯದ ನಂತರ ಅವಳು ತನ್ನ ತಂದೆಯ ನಿರ್ಜೀವವಾದ ಕೈಯಲ್ಲಿ ಏನೋ ಒಂದು ಕಾಗದದ ತುಂಡನ್ನು ಕಂಡಳು. ಅವಳದನ್ನು ತೆಗೆದುಕೊಂಡು ಅದರಲ್ಲಿದ್ದ ಬರಹವನ್ನು ಓದಿದಳು. ಅದರಲ್ಲಿ—'ಮಗಳೆ, ನಾನು ದೊಡ್ಡ ಪಾಪಿ. ನಾನು ದೊಡ್ಡ ದೊಡ್ಡ ಪಾಪಗಳನ್ನು ಮಾಡಿದ್ದೇನೆ. ನಾನು ನನ್ನ ಸ್ವಾಮಿಯಾದ ನೆಪೋಲಿಯನ ಬೋನಪಾರ್ಟನಿಗೆ ವಿಶ್ವಾಸಘಾತ ಮಾಡಿದೆ. ನನ್ನ ಕಾರಣದಿಂದ ಅವನು ಸೋತನು. ಈಗ ನಾನು ಮಾಡಿದ ಪಾಪಗಳ ಕುರಿತು ಪಶ್ಚಾತ್ತಾಪವಾಗಿ, ಆತ್ಮಘಾತ ಮಾಡಿಕೊಳ್ಳುವುದರ ಮೂಲಕ ಪ್ರಾಯಶ್ಚಿತ್ತ ಮಾಡಿಕೊಂಡಿದ್ದೇನೆ. ನನ್ನ ಆತ್ಮಶಾಂತಿಗಾಗಿ ನೀನೂ ಪರಮಾತ್ಮನನ್ನು ಪ್ರಾರ್ಥಿಸು. ಎಂದಾದರೂ ನನ್ನ ಸ್ವಾಮಿ ನೆಪೋಲಿಯನನನ್ನು ಕಂಡಿಯಾದರೆ ಅವನೊಡನೆ ನನ್ನ ಬಗ್ಗೆ ಕ್ಷಮೆ ಬೇಡು. ದೇವರು ನಿನ್ನನ್ನು ಕಾಪಾಡಲಿ. ನಿನ್ನ ತಂದೆ—ಮೊಸ್ಯುಸಾಲ್ವ' ಎಂದು ಬರೆದಿತ್ತು.

ಲೂಸಿಗೆ ಅವಳ ತಂದೆಯು ಆತ್ಮಹತ್ಯೆ ಮಾಡಿಕೊಂಡ ಕಾರಣವು ಆಗ ಹೊಳೆಯಿತು. ತಂದೆಯ ಸಮೀಪ ಮೊಣಕಾಲೂರಿ ಅವಳು—'ಒಂದೇ ನಾನು ನೆಪೋಲಿಯನನನ್ನು ಬಂಧಮುಕ್ತನನ್ನಾಗಿ ಮಾಡುವೆನು, ಅಥವಾ ಆ ಪ್ರಯತ್ನದಲ್ಲಿ ಸಾಯುವೆನು' ಎಂದು ಪ್ರತಿಜ್ಞೆ ತಕ್ಕೊಂಡಳು.

೨

ಸೆಂಟ ಹೆಲೇನಾ ದ್ವೀಪದ ಬಂದರಿನ ಸ್ವಲ್ಪ ದೂರದಲ್ಲಿ, ಕೆಂಪು ಗೋಡೆಯ, ಒಂದು ಮನೆ ಇದೆ. ಅದರಲ್ಲಿಯೇ ನೆಪೋಲಿಯನನು ಬಂಧಿತನಾಗಿದ್ದನು. ಯಾರು ತನ್ನ ಅನುಪಮ ಸಾಹಸದಿಂದ ಇಡೀ ಜಗತ್ತನ್ನು ಚಕಿತಗೊಳಿಸಿದ್ದನೋ, ಈಗಲೂ ಯಾರ ಸಾಹಸವನ್ನು ಜನರು ಮುಕ್ತಕಂಠದಿಂದ ಹೊಗಳುತ್ತಿರುತ್ತಾರೋ ಆ ನೆಪೋಲಿಯನನು ಅಲ್ಲಿ ಕೈದಿಯಾಗಿದ್ದನು. ಇದನ್ನು ವಿಧಿವಿಧಾನವೆನ್ನಿರಿ, ಅಥವಾ ಕಾಲಚಕ್ರದ ಉರುಳಾಟವೆಂದೇ ಹೇಳಿರಿ!

ಆ ಕಾರಾಗೃಹದ ಒಂದು ಕೋಣೆಯಲ್ಲಿ ಒಬ್ಬ ಗಂಭೀರಪುರುಷನು ಒಂದು ಮುರಿದ ಹಳೆಯ ಕುರ್ಚಿಯ ಮೇಲೆ ಕೂತಿದ್ದನು. ಅವನ ಕಣ್ಣುಗಳು ಭಯಂಕರ ಶೂನ್ಯತೆಯ ಕಡೆಗೆ ಹೊರಳಿದ್ದುವು. ಹೊರಗೆ ಆಯುಧಪಾಣಿಗಳಾದ ಕಾವಲುಗಾರರು ಪಹರೆ ಕೊಡುತ್ತಿದ್ದರು. ರಾತ್ರಿ ಸಮಯವಾಗಿತ್ತು. ಆದರೂ ಆ ಕೈದಿಯ ಚಿಂತಾಭಂಗವಾಗಿರಲಿಲ್ಲ. ಆ ಸಮಯ ಒಬ್ಬ ಯುವಕನು ಅವನ ಮುಂದೆ ಅನ್ನದ ಬಟ್ಟಲನ್ನು ಇಟ್ಟು ಹೋದನು. ಕೈದಿಯ ದೃಷ್ಟಿಯು ಆ ಕಡೆಗೆ ಹೊರಳಲೇ ಇಲ್ಲ. ಮಧ್ಯರಾತ್ರಿಯ ಸಮಯ ಕೈದಿಯು ಎದ್ದು ಒಳಗೆ ಕೈಹಾಕಿದ. ಉಣ್ಣುತ್ತಿದ್ದಾಗ ಬಟ್ಟಲಲ್ಲಿ ಅವನಿಗೊಂದು ಚೀಟಿ ದೊರೆಯಿತು. ಅವನು ಉತ್ಸುಕತೆಯಿಂದ ಅದನ್ನು ಬಿಡಿಸಿ ಓದಿದನು. ಅದರಲ್ಲಿ 'ಸಮ್ರಾಟ! ತಮ್ಮನ್ನು ಬಿಡಿಸುವ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ತಮಗೆ ಈಗ ಅನ್ನದ ಬಟ್ಟಲನ್ನು ತರುತ್ತಿರುವ ಮನುಷ್ಯನು ನಮ್ಮವನಾಗಿದ್ದಾನೆ. ನಾಳೆ ರಾತ್ರಿ ತಾವು ಅವನೊಂದಿಗೆ ಹೊರಟು ಒಮ್ಮೆ ಸಮುದ್ರದ ದಂಡೆಯ ಮೇಲೆ ಹಡಗು ನಿಮ್ಮನ್ನು ಕಾಯುವುದು. ತಮ್ಮ ವಿಶ್ವಸ್ತ ಮೊಸ್ಯುಸಾಲ್ವನ ಸೇವಾನಿರತ ಮಗಳು' ಎಂದಿತ್ತು.

ಚೀಟಿ ಫ್ರೆಂಚ ಭಾಷೆಯಲ್ಲಿ ಬರೆದಿತ್ತು. ಊಟವಾದ ಕೈದಿಯು ಹಾಸಿಗೆ ಬಿಡಿಸಿ ಮಲಗಿಕೊಂಡನು. ಆದರೆ ಆಗಲೂ ಅವನಿಗೆ ನಿದ್ದೆ ಬರಲಿಲ್ಲ. ಅವನ ಮುಖಮಂಡಲದ ಮೇಲೆ ಈಗ ಬಹಳ ದಿನಗಳು ಕಳೆದ ನಂತರ ಮಂದಹಾಸದ ಸೂಕ್ಷ್ಮ ಕಿರಣವು ಮಿನುಗಿತು. ಮೆಲ್ಲ ಮೆಲ್ಲಗೆ ಕೋಣೆಯ ದೀಪವು ನಂದಿಹೋಯಿತು. ಹೊರಗೆ ಪಹರೇದಾರರೂ ನಿದ್ರೆಯಲ್ಲಿ ತಲ್ಲೀನರಾದರು. ಕೈದಿಗೆ ಮಾತ್ರ ಎಳ್ಳಷ್ಟಾದರೂ ನಿದ್ದೆ ಬರಲಿಲ್ಲ. ಅವನು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಹೊರಳುತ್ತ ರಾತ್ರಿಯನ್ನು ಕಳೆದ.

೩

ಈ ಹೊತ್ತು ಮೂರನೆಯ ದಿನ. ರಾತ್ರಿ ಸಮಯ ಕೈದಿಯು ವಿಶೇಷ ಆಲೋಚನಾಪರನಾಗಿದ್ದನು. ಯುವಕನು ಅನ್ನದ ಬಟ್ಟಲನ್ನಿಟ್ಟು ಹೊರಟು ಹೋಗಿದ್ದ. ಅವನು ತನ್ನನ್ನು ಸ್ಕಾಟ್ಲೆಂಡಿನವನೆಂದೂ, ಹೆಸರು ಡೊನಾಲ್ಡ ಎಂದೂ ಹೇಳಿದ್ದ. ಡೊನಾಲ್ಡನು ಆಗಾಗ ಪಹರೆ ಕೊಡುತ್ತಿರುವ ಸೈನಿಕರಿಗೆ ಮಧುರ ಸಂಗೀತವನ್ನು ಹಾಡುತ್ತಿದ್ದ. ಸೈನಿಕರು ಅವನ ಗಾಯನವನ್ನು ಕೇಳಲಿಕ್ಕೆ ಹಂಬಲಿಸುತ್ತಿದ್ದರು. ಅವನು ಎಲ್ಲ ಸೈನಿಕರ ಸ್ನೇಹಪಾತ್ರನಾಗಿದ್ದ. ಅವನ ಮನೋಹರ ಕಂಠಸ್ವರ, ಸುಂದರ ರೂಪ, ಇತ್ಯಾದಿ ವಿಶಿಷ್ಟ ಗುಣಗಳು ಸೈನಿಕರನ್ನು ಮೋಹಗೊಳಿಸಿದ್ದುವು.

ಈ ದಿನ ರಾತ್ರಿಯೂ ಸೈನಿಕರು ಒಂದು ಗೀತೆ ಹಾಡಬೇಕೆಂದು ಅವನನ್ನು ಬಹಳ ಒತ್ತಾಯಿಸಿದರು. 'ಡೊನಾಲ್ಡ, ಒಂದು ಹದ ಹಾಡು ಒಂದೇ ಸಾಕು!' ಎಂದು ಅವರು ಆರಚಿಕೊಂಡಿದ್ದರು. ಅವನು ಹೇಳಿದ—'ಛೀ, ಛೀ, ಹೀಗೆ ಗಟ್ಟಿಯಾಗಿ ಕೂಗಬೇಡಿ! ಕಪ್ತಾನನಿಗೆ ತಿಳಿದರೆ . . ಹಾಯ್ . . . ಇವತ್ತು ಎಂತಹ ಛಳಿ! ಹಾಡು, ಗಾನ ಒಂದೂ ಆಗದು. ನಿಮಗೆಲ್ಲ ಇಷ್ಟವಿದ್ದರೆ ಎಲ್ಲರಿಗೂ ಒಂದೊಂದು ಕಪ್ಪು . . . ಕುಡಿಯಲಿಕ್ಕೆ ಕೊಡುವೆನು. ಈ ಕಠಿನ ಚಳಿಯಿಂದ ಬದುಕಲಿಕ್ಕೆ ಅದೇ ಒಂದು ಔಷಧಿ!'

ಆ ಚಳಿ ರಾತ್ರಿಯಲ್ಲಿ ಸರಾಬಿನ ಮಾತು ಕೇಳಿ ಅವರು ಆನಂದಸಾಗರದಲ್ಲಿ ಮುಳುಗೇಳತೊಡಗಿದರು. ಯುವಕನು ಕೋಣೆಗೆ ಹೋಗಿ ಕೆಲವು ಬಾಟಲಿ ಸರಾಬು ಮತ್ತು ಒಂದು ಕಪ್ಪು ತಂದ. ಸರಾಬನ್ನು ಕಪ್ಪಿನಲ್ಲಿ ಹಾಕಿ ಒಬ್ಬೊಬ್ಬರಾಗಿ ಎಲ್ಲರಿಗೆ ಕುಡಿಸುತ್ತ ಬಂದ. ಅರೆಕ್ಷಣದೊಳಗಾಗಿ ಸರಾಬಿನ ಬಾಟಲಿಗಳು ಖಾಲಿಯಾದುವು. ಎಲ್ಲರೂ ಅಮಲೇರಿ ಬಿದ್ದು ಹೊರಳಾಡತೊಡಗಿದರು. ಸ್ವಲ್ಪ ಸಮಯದಲ್ಲಿ ಅವರೆಲ್ಲರು ನಿದ್ದೆಯಲ್ಲಿ ಗೊರಕೆಹೊಡೆಯತೊಡಗಿದರು. ಅವರು ಇನ್ನು ಎಚ್ಚರರಾಗಬೇಕಾದರೆ ಬಹಳ ಹೊತ್ತು ಕಳೆಯುವುದೆಂದು ಡೊನಾಲ್ಡನಿಗೆ ತಿಳಿದಿತ್ತು. ಅದ್ದರಿಂದ ಅವನು ಒಳಗೆ ಕೋಣೆಯನ್ನು ಸೇರಿ ಕೈದಿಗೆ ಸಂಕೇತಮಾಡಿದ. ಇಬ್ಬರೂ ಮೌನವಾಗಿ ಮನೆಯ ಹೊರಗೆ ಬಂದರು. ಆದರೆ ಆ ರಾತ್ರಿಯಲ್ಲಿ ಅವರಿಬ್ಬರು ಒಂದು ರಸ್ತೆಯ ಮೂಲೆಯನ್ನು ದಾಟುತ್ತ—'ಆರೇ ಡೊನಾಲ್ಡ, ಬರ್ ವಾಕ್!' ಎಂದು ಯಾರೋ ಒದರಿದ್ದು ಕೇಳಿತು. ಅವನು ಹಿಂದಕ್ಕೆ ಮುಖ ತಿರುಗಿಸಿ ನೋಡಿದ.

ಹಿಂದಿನಿಂದ ಕಪ್ತಾನ ನೋಡುತ್ತಿದ್ದನು. ಅವನು ಯುವಕನ ಬಹಳ ಸಮೀಪಕ್ಕೆ ಬಂದುಬಿಟ್ಟಿದ್ದ. ಯುವಕನು ಪಿಸ್ತೂಲನ್ನು ತೆಗೆದು ಕಪ್ತಾನನಿಗೆ ಗುಂಡುಹೊಡೆದ. ಗುಂಡು ತಗಲುತ್ತ ಕಪ್ತಾನನು ಹಿಂದಿನಿಂದ ಯುವಕನ ಎದೆಯೊಳಗೆ ಕಠಾರಿಯನ್ನು ಇರಿದು ನೆಲದ ಮೇಲೆ ಬಿದ್ದುಬಿಟ್ಟ. ಯುವಕನೂ ಬಿದ್ದುಬಿಟ್ಟನು. ಕೈದಿಯು ಯುವಕನ ಸಮೀಪ ಬಂದು ಅವನನ್ನು ತನ್ನ ತೊಡೆಯ ಮೇಲೆ ಎತ್ತಿಕೊಂಡನು. ಯುವಕನ ಪ್ರಾಣವು ಹಾರಿಹೋಗಲಿಕ್ಕೆ ಇನ್ನು ಬಹಳ ಸಮಯ ಇದ್ದಿರಲಿಲ್ಲ. ಕಠಾರಿಯು ಅವನ ಎದೆಗುಂಡಿಗೆಯನ್ನು ಕತ್ತರಿಸಿಬಿಟ್ಟಿತ್ತು. ಯುವಕನು ಸಂತೋಷದಿಂದ ಕೈದಿಯನ್ನೇ ದಿಟ್ಟಿಸಿ ನೋಡುತ್ತ 'ಸಮ್ರಾಟ! ನಾನು ಮೊಸ್ಯುಸಾಲ್ವನ ಮಗಳು, ಲೂಸಿ. ತಾವು ಅಪ್ಪಯ್ಯನನ್ನು ಕ್ಷಮಿ . . .' ಅವಳು ಅಷ್ಟು ಹೇಳಿ ನಸುನಕ್ಕಳು. ಮುಂದೆ ಅವಳು ಮಾತನಾಡಲಿಲ್ಲ. ಅವಳ ತುಟಿಗಳಲ್ಲಿ ಕೃತಾರ್ಥತೆಯ ರೇಖೆಯು ಸ್ಪಷ್ಟ ತೋರಿಬರುತ್ತಿತ್ತು. ಅವಳ ಹೃದಯಸ್ಪಂದನವು ಆಗ ನಿಂತುಬಿಟ್ಟಿತು.

ಕೈದಿಯ ನೇತ್ರಗಳು ತುಂಬಿಬಂದುವು. ಎರಡು ಮೂರು ನೀರ ಹನಿಗಳೂ ಕೆಳಗೆ ಉದುರಿಬಿದ್ದುವು. ಕೃತಜ್ಞತೆಯಿಂದ ಕೈದಿಯ ಹೃದಯವು ಉಕ್ಕಿತು. ಅವನು ಆ ಧೀರ ಯುವತಿಯ ಆತ್ಮಶಾಂತಿಗಾಗಿ, ಮೊಣಕಾಲೂರಿ ದೇವರನ್ನು ಬೇಡಿಕೊಂಡನು.

ಆ ಕೂಡಲೇ ಅವನು ಅಲ್ಲಿಂದ ಎದ್ದು ಸಮುದ್ರ ದಂಡೆಯ ಕಡೆಗೆ ನಡೆದನು. ಅಲ್ಲಿ ಒಬ್ಬನು ಕೈದಿಯ ದಾರಿ ಕಾದುಕೊಂಡು ಇದ್ದನು. ಕೈದಿಯನ್ನು ಕಂಡು ಅವನು ಹರ್ಷೋನ್ಮತ್ತನಾದನು. ದಂಡೆಗೆ ಒತ್ತಿಕೊಂಡು ಒಂದು ಹಡಗು ಹೊರಡಲಿಕ್ಕೆ ಸಿದ್ಧವಾಗಿತ್ತು. ಇಬ್ಬರೂ ಅದನ್ನು ಹತ್ತಿದರು. ಹಡಗು ಹೊರಟಿತು.

ಬೆಳಗಾಯಿತು. ಪಹರೆವಾರರ ಅಮಲು ಇಳಿಯಿತು. ಕಣ್ಣುಗಳನ್ನು ತಿಕ್ಕಿಕೊಳ್ಳುತ್ತ ಅವರೆಲ್ಲರು ಎದ್ದು ಕೂತರು. ಆ ಕಾವಲುಗಾರರ ಮೂರ್ಖತನಕ್ಕಾಗಿ ನಗಾಡುತ್ತಿರುವಂತೆ ಉಷಾದೇವಿಯು ಪೂರ್ವ ಆಕಾಶದಲ್ಲಿ ನಸುನಗುತ್ತಿದ್ದಳು. ಭಗವಾನ ಸೂರ್ಯದೇವನ ಆಗಮನವಾಗುವ ಮೊದಲೇ ಕೈದಿಯಿದ್ದ ಆ ಹಡಗು ಹೊಗೆ ಹಾರಿಸುತ್ತ ಸೆಂಟ ಹೆಲೇನಾ ದ್ವೀಪದಿಂದ ಅದೃಶ್ಯವಾಯಿತು.

ಇಂದು ಮಿಲಿಯಗಟ್ಟಲೆ ಜನರ, ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್, ರಥಬೀದಿ, ಮಂಗಳೂರು.

# ಗಾಂಧಿವಾದವು ವಿಜಯಿಯಾಗಿದೆ!

## ಭಾರತೋದ್ಧಾರವು ಗಾಂಧೀವಾದದ ಮೂಲಕ

### ಶ್ರೀ ಪಟ್ಟಾಭಿಯವರ ಭಾಷಣ

ಗಾಂಧಿವಾದವು ಒಂದು ಸಾಮಾನ್ಯ ಸಂಗತಿಯಾಗಿರುವುದಿಲ್ಲ. ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಇದ್ದ ಭಾರತದ ಪರಿಸ್ಥಿತಿ ಮತ್ತು ಸಭ್ಯತೆಯ ಐತಿಹಾಸಿಕ ಜ್ಞಾನವನ್ನು ಪ್ರಾಪ್ತಮಾಡಿಕೊಂಡ ಬಳಿಕವೇ ನಾವು ಗಾಂಧಿವಾದದ —ಮರ್ಮವನ್ನು— ತಿಳಕೊಳ್ಳಲಿಕ್ಕೂ ಅದನ್ನು ಜೀವನದಲ್ಲಿ ಅನುಸರಿಸಲಿಕ್ಕೂ ಸಮರ್ಥರಾಗುತ್ತೇವೆ. ಗಾಂಧಿವಾದವೆಂದರೆ ಆರಾಮಕುರ್ಚಿಯ ರಾಜನೀತಿ ಆಗಿರುವುದಿಲ್ಲ. ಜೀವನ ಸಂಬಂಧ ಕೆಲವು ಜಟಿಲ ಪ್ರಶ್ನೆಗಳಿಗೆ ಅದು ಉತ್ತರವನ್ನು ಕೊಡುತ್ತದೆ. ಬ್ರಿಟಿಷರು ಭಾರತವನ್ನು ಗೆದ್ದುಕೊಂಡ ಬಳಿಕ ಹಿಂದೂಗಳ ವಿಚಾರಸರಣಿಯಲಿ ಕೆಲವು ಪ್ರಾಮುಖ್ಯ ಪರಿವರ್ತನೆಗಳಾದವು. ಇದರ ಪರಿಣಾಮವಾಗಿ ಜೀವನದಲ್ಲಿ ಸ್ಪರ್ಧೆಯು ಕಂಡುಬಂದಿತು. ಜನಜೀವನದಲಿ ಹೊಸ ಹೊಸ ಸಾಮಾಜಿಕ ಶ್ರೇಣಿಗಳುಂಟಾದುವು ಮತ್ತು ಹಿಂದುಗಳ ಆ ಪುರಾತನ ಸರಳತೆ ಹಾಗೂ ಸಂಸ್ಕೃತಿಯು ಉಚ್ಚ ಆದರ್ಶವು ಹಿಂದೆ ಸರಿಯಿತು. ಕಾಲೇಜ ಕೋರ್ಟು ಮತ್ತು ಕೌನ್ಸಿಲುಗಳ ಭಾರತದಲ್ಲಿ ಬ್ರಿಟಿಷ ಸಾಮ್ರಾಜ್ಯವಾದದ ಸಮರ್ಥಕ ಸಂಸ್ಥೆಗಳಾದವು. ಈ ಮೂರು ಸಂಸ್ಥೆಗಳು ಸಮಾಜದಲ್ಲಿ ಮಾನಸಿಕ ಗುಲಾಮಗಿರಿಯ ಭಾವನೆಯನ್ನು ಉತ್ಪನ್ನಮಾಡಿದುವು. ಇದರಿಂದ ಇಡೀ ರಾಷ್ಟ್ರಕ್ಕೆ ಮಹಾ ನಷ್ಟ ಉಂಟಾಯಿತು. ಗಾಂಧಿವಾದವು ಹೀಗುಂಟಾದ ಅವನತಿಯನ್ನು ತಡೆದು ಭಾರತೀಯರನ್ನು [illegible] ಸ್ವಾವಲಂಬಿ ಮತ್ತು ಗಟ್ಟಿಮುಟ್ಟಾಗಿ ಮಾಡಲು ಪ್ರಯತ್ನಿಸುತ್ತದೆ.

### ಗಾಂಧಿವಾದದ ಧ್ಯೇಯ

'ಭಾರತೀಯರು ಹೇಗೆ ಪರತಂತ್ರರಾದರು ಮತ್ತೆ ಅವರು ಹೇಗೆ ಪುನಃ ಸ್ವತಂತ್ರರಾಗಬಹುದು ಎಂಬದನ್ನು ಭಾರತೀಯರಿಗೆ ಕಲಿಸುವುದು ಗಾಂಧಿವಾದದ ಮೊದಲನೇ ಧ್ಯೇಯವಾಗಿದೆ. ವಿದೇಶಿ ಬಟ್ಟೆಯು ನಮ್ಮ ಪಾರತಂತ್ರ್ಯದ ಶೃಂಖಲೆಯಾಗಿದೆ. ಬ್ರಿಟಿಷರು ಇಲ್ಲಿಗೆ ಬರುವ ಮೊದಲು ಭಾರತವು ತನ್ನ ಬಟ್ಟೆ ಕೈಗಾರಿಕೆಗೆ ಜಗತ್ಪ್ರಸಿದ್ಧಿಯನ್ನು ಪಡೆದಿತ್ತು. ಆದರೆ ಬ್ರಿಟಿಷರ ಆಗಮನವಾದ ಮೇಲೆ ಈ ಕೈಗಾರಿಕೆಯು ಇಲ್ಲಿ ಲುಪ್ತವಾಯಿತು ಮಾತ್ರವಲ್ಲದ, ಭಾರತವು ತನ್ನ ಬಟ್ಟೆಬರೆಗಳಿಗಾಗಿ ವಿದೇಶಗಳನ್ನು ಅವಲಂಬಿಸಿರಬೇಕಾಯಿತು. ಆದ್ದರಿಂದಲೇ ಮಾತೃಭೂಮಿಯ ಮೇಲೆ ಪ್ರೇಮವಿರುವ ಪ್ರತಿಯೊಬ್ಬ ಭಾರತೀಯನೂ ಖದ್ದರನ್ನು ಉಟ್ಟುಕೊಳ್ಳುವುದಲ್ಲದೆ ಅದರ ತಯ್ಯಾರಿಯಲ್ಲಿ ಸಾಧ್ಯವಿದ್ದಷ್ಟು ಸಹಾಯವನ್ನೂ ಕೊಡಬೇಕೆಂದು ಗಾಂಧಿಯವರು ಹೇಳುತ್ತಾರೆ. ಭಾರತವು ಅನ್ಯ ಕೈಗಾರಿಕೆಗಳನ್ನು ಅದರಲ್ಲೂ ಪ್ರಾಮುಖ್ಯವಾಗಿ ಬಟ್ಟೆ ಕೈಗಾರಿಕೆಯನ್ನು—ನಷ್ಟಮಾಡಿಕೊಂಡೇ ತನ್ನ ಸ್ವಾತಂತ್ರ್ಯವನ್ನು ಕಳಕೊಂಡಿತು. ಬಟ್ಟೆಬರೆಗಳ ಮಟ್ಟಿಗೆ ಭಾರತವು ಪುನಃ ಸ್ವಾವಲಂಬಿಯಾಗುವುದರಿಂದ ಭಾರತವು ಪುನಃ ಸ್ವತಂತ್ರವಾದ ಹಾಗೆಯೇ ಸರಿ! ತನಗೆ ಬೇಕಾದಷ್ಟು ಬಟ್ಟೆಗಳನ್ನು ತಾನೇ ತಯ್ಯಾರಿಸಿಕೊಳ್ಳುವುದು ಭಾರತಕ್ಕೆ ಕಠಿನವಾಗಿರುವುದಿಲ್ಲ. ಪ್ರತಿಯೊಂದು ಗ್ರಾಮವು ಈ ಮಟ್ಟಿಗೆ ಸ್ವಾವಲಂಬಿಯಾಗುವುದಲ್ಲದೆ ಶಕ್ಯವಿದ್ದಷ್ಟು [illegible] ಆವಶ್ಯಕತೆಯ ಸಾಮಗ್ರಿಗಳನ್ನು ತಾನೇ ಹುಟ್ಟಿಸಿಕೊಳ್ಳಬೇಕು. ಹಳ್ಳಿಗಳ ಜನರು ಪಟ್ಟಣಗಳಿಗೆ ಹೋಗಿ ನೆಲಸುವುದು ನಿಲ್ಲಬೇಕು. [illegible] ಮತ್ತು ಅವರ ವ್ಯಾಪಾರ [illegible] ಭಾರತದ ಆರ್ಥಿಕ ವ್ಯವಸ್ಥೆಯನ್ನು ಹೇಗೆ [illegible] ಸಂಗತಿಯನ್ನು ತಿಳಿದ ಯಾವ ಭಾರತೀಯನೂ ಖದ್ದರ ಪ್ರಚಾರವನ್ನು ವಿರೋಧಿಸಲಾರನು, ಮಾತ್ರವಲ್ಲ ಅದನ್ನು ಸಮರ್ಥಿಸುವನು. ಖದ್ದರಿನ ಅಪ್ರತಿಮ ಶಕ್ತಿಯಲ್ಲಿ ಅಚಲ ಶ್ರದ್ಧೆಯನ್ನೂ ವಿಶ್ವಾಸವನ್ನೂ ಇಟ್ಟುಕೊಳ್ಳುವುದು ಗಾಂಧಿವಾದದ ಮುಖ್ಯ ತತ್ವವಾಗಿದೆ. ಆದ್ದರಿಂದ ನೂಲುವುದು ಮತ್ತು ನೇಯುವುದರ ಮಟ್ಟಿಗೆ ಗಾಂಧಿವಾದವು ಗಿರಣಿಗಳ ಪ್ರಬಲ ಶತ್ರುವಾಗಿದೆ. ಖದ್ದರ ಪ್ರಚಾರವಾದಂತೆ ಈ ಗಿರಣಿಗಳು ಎಷ್ಟು ಮುಚ್ಚಿಕೊಳ್ಳುವುವೋ ಅಷ್ಟಕ್ಕೆ ಭಾರತದ ಹಿತವಾಗುವುದು. ಅದರಿಂದ ಖದ್ದರಿಗೆ ರಕ್ಷಣೆಯು ದೊರೆಯುವುದು. ಹಾಗೆಂದು ಗಾಂಧಿವಾದವು ಎಲ್ಲಾ ಯಂತ್ರಸಾಧನಗಳ ವಿರೋಧಿಯಾಗಿರುವುದಿಲ್ಲ. ಯಂತ್ರಸಾಧನಗಳು [illegible] ಬೇಕು, ಹೊರತು [illegible] ಗಳ ಚಾಕರರಾಗಿರುವುದಲ್ಲ ಎಂದು ಗಾಂಧೀವಾದವು ಹೇಳುತ್ತದೆ. ಗಾಂಧಿವಾದವು ಹಿಂದ ದೇಶದ ಪ್ರತಿಯೊಂದು [illegible] ಮತ ಕಲ್ಪ [illegible] ವನ್ನು ಇಟ್ಟು [illegible] ದರ ದೇಶದ [illegible] ಇವರ [illegible] ಮತ್ತು ಕೆಲಸ ಪಿಕಾಸಗಳ [illegible] ಗುವುದು [illegible] ಗಾಂಧಿವಾದವು ಕೇವಲ [illegible] ಸ್ವಾತಂತ್ರ್ಯಕ್ಕಾಗಿ [illegible] ಮತ ಸಾಂಸ್ಕೃತಿಕ [illegible] ಪುನರುದ್ಧಾರಕ್ಕಾಗಿ [illegible] ಯತ್ನಿಸುತ್ತದೆ.

### ಹಿಂದೂ ಸಂಸ್ಕೃತಿಯ ಜಾಗೃತಿ

[illegible] ತನ್ನ ಪರಿಣಾಮ [illegible] ದಕ್ಷಿಣೇ [illegible] ತಿಳಿಯ [illegible] ದವು [illegible] ಗಾಗಿ [illegible] ರ್ಥಿಕ ವ್ಯವಸ್ಥೆ [illegible] ಭಾರತವು [illegible] ಗಳೇ ಭಾರತದ [illegible] ತಂತ್ರ್ಯ [illegible] ಯತನ್ನೇ [illegible] ವಾದವು [illegible] ಬಟ್ಟೆಗಳ ಮಟ್ಟಿಗಾದರೂ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಿ ಅದನ್ನು ಸ್ವತಂತ್ರ ಮಾಡಲು ಇಚ್ಛಿಸುತ್ತದೆ. ಪ್ರಪಂಚದ ದೊಡ್ಡ ದೇಶಗಳಲ್ಲಿ ಭಾರತವು ಎರಡನೆಯದಾಗಿದೆ. ಅದರಲ್ಲಿ ಬಲ, ಸಾಮರ್ಥ್ಯ, ಯೋಗ್ಯತೆ ಮತ್ತು ಸ್ವಾವಲಂಬಿಯಾಗಲು ಬೇಕಾದಷ್ಟು ಸಂಪತ್ತು ಇದೆ. ಸಾಮಾಜಿಕ ಸ್ಥಿತಿ ಮತ್ತು ಸಂಪತ್ತಿಯ ವೈಷಮ್ಯವನ್ನು ನಿರ್ಮೂಲಮಾಡಲು ಗಾಂಧಿವಾದವು ನೋಡುತ್ತದೆ. ವಿದೇಶಿ ಶಾಸನದ ಪರಿಣಾಮದಿಂದ ದೇಶದ ಸಾಮಾಜಿಕ ವ್ಯವಸ್ಥೆಯು ಕೆಟ್ಟುಹೋಗಿದೆ. ತನ್ನ ಸ್ಥಿತಿಯನ್ನು ಅರಿತುಕೊಳ್ಳುವ ಶಿಕ್ಷಣವನ್ನು ಸಮಾಜಕ್ಕೆ ಕೊಡುವುದು ಈಗ ಅಗತ್ಯವಾಗಿದೆ. ಸ್ವರಾಜ್ಯವನ್ನು ಸಂಪಾದಿಸಿದ ಬಳಿಕ ಅದನ್ನು ಕಾಪಾಡಿ ಇಟ್ಟುಕೊಳ್ಳುವ [illegible] ನಮಗೆ ಗೊತ್ತಾಗಬೇಕು. ಗಾಂಧಿವಾದವು ಪ್ರಪಂಚದಲ್ಲಿ [illegible] ಅಭ್ಯಾಸದ ಮೂಲಕ [illegible] ಗಾಂಧಿವಾದದ [illegible] ಗಳೊಳಗೆ [illegible] ಮೂಲಕ [illegible] ದ ತಳಹದಿಯನ್ನು ಹಾಕಬಹುದು.

### ವಿಶ್ವವಿಜಯಿಯಾಗಿದೆ!

[illegible] ಗಾಂಧಿವಾದವು [illegible] ಅದ [illegible] ವದ ಸಂಘ [illegible] ಗಾಂಧಿವಾದದ [illegible] ಭಾರತವು [illegible] ಇತಿಹಾಸ [illegible] ಭಿಯ [illegible]

---


DIAMONDS! DIAMONDS
BEST BRILLIANCY!

# K. R. K. SHET,

MANGALORE

ಮ [illegible] ಪ್ರಸಿದ್ಧ ವಜ್ರವ್ಯಾಪಾರಿ

## ವಜ್ರಗಳು!

ಎಮ್ ಸ್ಟ್ಯಾಂಡರ್ಡ [illegible] ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆ ಸಿಗಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜವೆಲರ್,



ನಿಮ್ಮ ಜಾಹಿರಾತುಗಳನ್ನು ಸ್ವದೇಶಾಭಿಮಾನಿಗೆನೇ ಕೊಡಿರಿ!

ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟದ್ದು




7ಓ ಕ್ಲೋಕ್ ಬ್ಲೇಡುಗಳು ನಡುವಿನಲ್ಲಿ ಸಿಗಿಯಲ್ಪಟ್ಟಿವೆ ಮತ್ತು ಹಳೆ ಮಾದರಿಗಿಂತಲೂ ವಿಶೇಷ ತರದಲ್ಲಿ ಸುಧಾರಿಸಲ್ಪಟ್ಟಿದೆ. ಇದರ ಬೆಲೆಯು ಕೇವಲ ಕಡಿಮೆ ಮಾತ್ರವಲ್ಲದೆ ಇದರ ಎರಡೂ ಬದಿಗಳು ಅತ್ಯಂತ ಹರಿತವಾಗಿ ಮಸೆಯಲ್ಪಟ್ಟಿವೆ. ನಯವಾದ ಕ್ಷೌರವನ್ನುಂಟುಮಾಡುವುದು. ಒಂದು ಬ್ಲೇಡು ಬಹು ಸಮಯದ ವರೆಗೆ ಬರುವುದು.

7ಓ ಕ್ಲೋಕ್ ಬ್ಲೇಡುಗಳು ಹಳೆ ಮತ್ತು ಹೊಸ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ.

7Q



# ಜಿಲ್ಲಾ ಸಮಾಚಾರ

## ಮಂಗಳೂರು

**ವರ್ಧಂತಿ:**ಮಂಗಳೂರು ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿ ಉತ್ಸವವು ಇದೇ ಬರುವ ಫೆಬ್ರುವರಿ ತಾ ೧೦ನೇ ದಿನ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಯು ಕಣ್ಣಪ್ಪ ಇವರ ಅಧ್ಯಕ್ಷತೆಯಲ್ಲಿ ಜರಗುವುದು ಶಾಲೆಯ ಹಳೆ ವಿದ್ಯಾರ್ಥಿಗಳಿಗೂ, ಹಿತಚಿಂತಕರಿಗೂ ಇತರ ಮಹನಿಯರಿಗೂ ಸ್ವಾಗತವಿದೆ ಎಂದು ಶಾಲೆಯ ಮುಖ್ಯಾಧ್ಯಾಪಕರು ತಿಳಿಸುತ್ತಾರೆ

**ಆಗಮನ:**—ರಿಜಿಸ್ಟ್ರೇಶನ್ ಇಲಾಖಾ ಮುಖ್ಯಸ್ಥರಾದ ದಿ ಬ ಶ್ರೀ ಟಿ ವಿ ಶ್ರೀಹರಿ ರಾವ್ ನಾಯುಡುರವರು ತಾ ೧೪ನೇ ಸಾಯಂಕಾಲ ಮಂಗಳೂರಿಗೆ ಚಿತ್ತೈಸಿದರು

**ವೈ ಎಮ್ ಎಸ್ ಎ:**— ಕಳೆದ ತಾ ೧೮ರಲ್ಲಿ ಮೇಲಣ ಸಮಿತಿಯ ಸಭೆಯೊಂದು ಶ್ರೀ ಎನ್ ಎಸ್ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಸಮಿತಿಯ ಆಶ್ರಯದಲ್ಲಿ ಹಿಂದಿ ಪ್ರಾಥಮಿಕ, ಮಾಧ್ಯಮಿಕ ತರಗತಿಗಳನ್ನು ತೆರೆಯುವರೆ ನಿರ್ಧರಿಸಲಾಯಿತು ಶ್ರೀ ಎಸ್ ಎಸ್ ಪೈಯವರು ಹಿಂದೀ ಶಿಕ್ಷಣದ ಪ್ರಧಾನ ಅಧ್ಯಾಪಕರಾಗಲು ಒಪ್ಪಿದುದು ಸಂತೋಷದ ಸಂಗತಿ ಅನಂತರ ಅಧ್ಯಕ್ಷರು ಹಿಂದಿಯ ಪ್ರಾಮುಖ್ಯತೆಯ ಕುರಿತು ಮಾತಾಡಿದರು

**ಯಕ್ಷಗಾನ:**—ಕಳೆದ ತಾ ೧೩ನೇ ರಾತ್ರಿ ಕದಿರೆ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಂಘದ ಆಶ್ರಯದಲ್ಲಿ ಕದ್ರಿ ಜಾತ್ರೆಯ ಸಲುವಾಗಿ ಕುರುಕ್ಷೇತ್ರ ಎಂಬ ಪ್ರಸಂಗದ ಯಕ್ಷಗಾನ ಕಾಲಕ್ಷೇಪವು ಯಶಸ್ವಿ ಜರಗಿತು.

**ಹಿಂದೂ ಮಹಾಸಭೆ:**—ಇದೇ ಜನವರಿ ತಾ ೨೮ನೇ ಭಾನುವಾರ ಅಪರಾಹ್ನ ೪ ಗಂಟೆಗೆ ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಹಿಂದೂ ಮಹಾಜನರ ಸಭೆಯೊಂದು ಜರಗಲಿದೆ ಮಂಗಳೂರಲ್ಲಿ ಹಿಂದೂ ಮಹಾಸಭೆಯ ಶಾಖೆಯೊಂದನ್ನು ತೆರೆಯುವುದೇ ಉದ್ದೇಶ ಎಲ್ಲಾ ಹಿಂದೂಗಳೂ ಚಿತ್ತೈಸಿ ಸಹಕರಿಸಬೇಕಾಗಿ ಪ್ರಾರ್ಥಿಸಲಾಗಿದೆ

**ಸೈ ಆಗ್ನೆಸ್ ಕಾಲೇಜಿನ ವರ್ಧಂತಿ:** ಕಳೆದ ತಾ ೧೯ನೇ ಸಾಯಂಕಾಲ ಮೇರಿನ ಕಾಲೇಜಿನ ವರ್ಧಂತ್ಯುತ್ಸವವು ನೆರವೇರಿತು ದ ಕ ಜಿಲ್ಲಾ ಕಲೆಕ್ಟರರಾದ ಮಿ. ಎ ಸಿ ಉಡ್ ಹೌಸ್, ಐ ಸಿ ಎಸ್ ರವರು ಅಧ್ಯಕ್ಷತೆ ವಹಿಸಿದ್ದರು ಮಿಸೆಸ್ ಉಡ್ ಹೌಸ್ ರವರು ಇನಾಮುಗಳನ್ನು ಹಂಚಿದರು ವಿದ್ಯಾರ್ಥಿನಿಯರ ಸಂಗೀತ, ನಾಟಕ, ನರ್ತನ, ಮೂಕ ದೃಶ್ಯಗಳಿಂದ ಸಮಾರಂಭವು ಮನೋರಂಜಕವಾಗಿತ್ತು ಇದೇ ವೇಳೆಗೆ ಹೈಸ್ಕೂಲ್ ವಿದ್ಯಾರ್ಥಿನಿಯರ ವಿವಿಧ ಕಲಾಪ್ರದರ್ಶನವು ಜರಗಿತು ಪ್ರದರ್ಶಿತ ವಸ್ತುಗಳು ವಿವಿಧವಾಗಿಯೂ, ವಿದ್ಯಾರ್ಥಿನಿಯರ ಹಸ್ತ ಕೌಶಲ್ಯವನ್ನು ತೋರಿಸುವಂತೆಯೂ ಇದ್ದುವು.

**ಮಿಶ್ಯನ್ ಹೈಸ್ಕೂಲ್ ವರ್ಧಂತಿ:** ಸ್ಥಳೀಯ ಬಿ. ಎಂ. ಮಿಶ್ಯನ್ ಹೈಸ್ಕೂಲಿನ ವರ್ಧಂತ್ಯುತ್ಸವವು ಡಾ. ಕೆ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ತಾ. ೨೦ರಂದು ಯಶಸ್ವಿಯಾಗಿ ಜರಗಿತು.

ಮರುದಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಿಂದ ಜರಗಿತು.

## ಉಡುಪಿ

**ಜಿಲ್ಲಾ ಶಿಕ್ಷಣ ಪ್ರದರ್ಶನ: ವಾರ್ಧಾ ಯೋಜನೆಯು ಅಸಾಧ್ಯವಂತೆ:**— ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಯು ಕಣ್ಣಪ್ಪನವರು ಕಳೆದ ತಾ ೧೪ನೇ ಪೂರ್ವಾಹ್ನ ದ ಕ ಜಿಲ್ಲಾ ಪ್ರಥಮ ಶಿಕ್ಷಣ ಪ್ರದರ್ಶನವನ್ನು ತೆರೆದರು ಪ್ರದರ್ಶನವನ್ನು ತೆರೆಯುವ ಮುಂಚಿತವಾಗಿ ಅವರು ಹೀಗೆಂದು ಹೇಳಿದರು ಬಾಲಕರ ಹೆತ್ತವರಿಗೆ ಇಂತಹ ಪ್ರದರ್ಶನಗಳಿಂದ ಎಂತಹ ವಿದ್ಯೆಯು ಶಾಲೆಗಳಲ್ಲಿ ಕೊಡಲ್ಪಡುವುದೆಂಬುದು ಗೊತ್ತಾಗುವುದು ಬಡಜನರಿಗೆ ಜೀವನ ನಡಿಸುವುದೇ ಕಷ್ಟ ಅಂತಹ ಪರಿಸ್ಥಿತಿಯಲ್ಲಿ ಆಗಾಗ್ಯೆ ಶಾಲೆಗಳನ್ನು ಸಂದರ್ಶಿಸಿ ತಮ್ಮ ಮಕ್ಕಳಿಗೇನು ಕಲಿಸುವರು ಎಂದು ನೋಡಲು ಸಾಧ್ಯವಿದೆಯೇ? ನನ್ನ ಮಕ್ಕಳು ಕಲಿಯುವ ಶಾಲೆಯಲ್ಲಿ ಎಂತಹ ಶಿಕ್ಷಣ ದೊರೆಯುತ್ತಿದೆ ಎಂಬುದು ನನಗೆನೇ ಗೊತ್ತಿಲ್ಲ ಪ್ರಸ್ತುತ ಹೆಚ್ಚಿನವರು ವಾರ್ಧಾ ಶಿಕ್ಷಣ ಯೋಜನೆಯ ಕುರಿತು ಉದ್ಬುದ್ಧ ಮಂಕಸಾಡುತ್ತಿರುವರು ಆದರೆ ಹೆಚ್ಚಿನವರಿಗೆ ಅದರ ಗಂಧ ಗಾಳಿಯು ಸಹ ಇದುವುದಿಲ್ಲ ನನ್ನ ಅನುಭವದಿಂದ ಹೇಳುವುದಾದರೆ ವಾರ್ಧಾ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅಸಾಧ್ಯ ಅದು ಮಹಾತ್ಮಗಾಂಧಿಯವರಂತಹ ಮಹಾ ಪುರುಷರಿಗೆನೇ ಹೇಳಿದುದು. ಸರ್ವರೂ ತನ್ನಂತೆ ಇರಲಾರರು ಎಂಬ ಅರಿವು ಗಾಂಧಿಯವರಲ್ಲಿ ಇಲ್ಲದಿರುವುದೊಂದು ನ್ಯೂನತೆ ವಾರ್ಧಾ ಯೋಜನೆಯು ಸರ್ವ ವಿದ್ಯಾ ಕಲ್ಪವೃಕ್ಷವಾಗಿದ್ದು ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಸಹ ಜಾರಿಗೆ ತರಲು ಕಷ್ಟಸಾಧ್ಯ ಪುಸ್ತಕದ ಆಧಾರದ ಶಿಕ್ಷಣವು ಈಗ ಪ್ರಯೋಜನವಿಲ್ಲ ಇಂತಹ ಪ್ರದರ್ಶನಗಳಿಂದ ಸಿಕ್ಕುವ ಪ್ರತ್ಯಕ್ಷ ಅನುಭವದ ಶಿಕ್ಷಣವೇ ಅಗತ್ಯ ಆದುದರಿಂದ ಇಂತಹ ಶಿಕ್ಷಣ ಪ್ರದರ್ಶನಗಳನ್ನು ಪ್ರೋತ್ಸಾಹಿಸಿ ನೆರವಾಗಿರಿ ಅದೇ ನಿಜವಾದ ಶಿಕ್ಷಣ' ಎಂದು ಹೇಳಿ ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು

## ಪುತ್ತೂರು

**ಕನ್ನಡ 'ಜಾಣ' ಪರೀಕ್ಷೆಯ ತರಬೇತಿ ಕೇಂದ್ರ:**—ಸಾಹಿತ್ಯ ಪರಿಷತ್ತಿನ ಕನ್ನಡ ಜಾಣ ಪ್ರೌಢ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಬೇತು ಮಾಡುವರೆ ಒಂದು ಶಿಕ್ಷಣ ಕೇಂದ್ರವನ್ನು ಮಂಗಳೂರಲ್ಲಿ ತೆರೆಯುವರೆ ದ ಕರ್ನಾಟಕ ಪ್ರಾಂತ ಸಮಿತಿಯು ನಿರ್ಣಯಿಸಿದೆ ಶ್ರೀ ಮುಳಿಯ ತಿಮ್ಮಪ್ಪಯ್ಯ ಶ್ರೀ ಕೆ ಶಂಕರಭಟ್ಟರು, ಶ್ರೀ ಟಿ ನಾರಾಯಣ ಭಟ್ಟರು ಶ್ರೀ ಉ ಮಂಗೇಶರಾವ್ ಮೊದಲಾದ ಮಹನೀಯರು ಗೌರವ ಶಿಕ್ಷಕರಾಗಲು ಒಪ್ಪಿರುವರು ಸಾಕಷ್ಟು ವಿದ್ಯಾರ್ಥಿಗಳು ದೊರೆತಲ್ಲಿ ಮುಫತ್ತಾಗಿ ಸಾಹಿತ್ಯ ಶಿಕ್ಷಣದ ವ್ಯವಸ್ಥೆ ಮಾಡಲಾಗುವುದು ಆಸಕ್ತರಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು ಎಂದು ಶಿವರಾಮ ಕಾರಂತ ಪುತ್ತೂರು ಇವರು ತಿಳಿಸುತ್ತಾರೆ


ಸಚಿತ್ರ

**ಭೂವಿವರ** 4ನೇ ತರಗತಿಗೆ ಬೆಲೆ 0 2—6
5ನೇ ,, ,, 0 3—6

(ಅನುಭವಸ್ಥರಾದ ಉಪಾಧ್ಯಾಯರಿಂದ ಬರೆಯಲ್ಪಟ್ಟುದು)

ಎಲಿಮೆಂಟರಿ ಶಾಲೆಗಳ ಉಪಯೋಗಾರ್ಥವಾಗಿ

ಪುಸ್ತಕಗಳ ಕುರಿತು ವಿದ್ಯಾಕ್ಷೇತ್ರದಲ್ಲಿ ಹೆಸರು ಹೊಂದಿದ ಮಹನೀಯರೊಬ್ಬರ ಅಭಿಪ್ರಾಯ

ಇಷ್ಟು ಕಡಿಮೆ ಬೆಲೆಯಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಿ ಕೊಡುವ ಸಾಹಸವು ನಮ್ಮ ಜಿಲ್ಲೆಯ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲ!

ಪುತ್ತೂರು
10 1—40

ನಮ್ಮ ಜಿಲ್ಲೆಯ ಶಿಕ್ಷಣ ವ್ಯವಸಾಯದಲ್ಲಿ ನಿಮ್ಮದು ಅಮೂಲ್ಯ ಸೇವೆಯಾಗಿದೆ. ಭೂವಿವರದಂತಹ ಘನವಾದ ವಿಷಯವನ್ನು ಲಲಿತವಾದ ಭಾಷೆಯಲ್ಲಿ ಬೋಧಪ್ರದವಾಗುವಂತೆ ನುರಿತ ಶಿಕ್ಷಕರಿಂದಲೇ ಬರೆಸಿ ಸುಂದರವಾದ ಪಡಿಯಚ್ಚುಗಳಿಂದಲೂ, ಪುಸ್ತಕದ ಅಂತರಂಗ ಬಾಹ್ಯಸೌಂದರ್ಯಗಳನ್ನು ಅಚ್ಚುಕಟ್ಟಾಗುವಂತೆ ಹೆಚ್ಚಿಸಿ, ಇಷ್ಟೊಂದು ಕಡಿಮೆ ಬೆಲೆಗೆ ತಯಾರಿಸಿ ಕೊಟ್ಟ ನಿಮ್ಮ ಅಪಾರವಾದ ಉಪಕಾರದಿಂದ ನಮ್ಮ ಜಿಲ್ಲೆಯ ದೊಡ್ಡ ಸಮಸ್ಯೆಯೊಂದು ಪರಿಹಾರವಾಗಿದೆ ಜಿಲ್ಲೆಯ ಜನಗಳ್ಗೆ ಸಾವಿರಾರು ಮಂದಿ ಬಡ ವಿದ್ಯಾರ್ಥಿಗಳಿಗೆ ಇದು ಒಂದು ವರದಾನವೇ ಆಗಿದೆ

ಎಂ. ಎಸ್ ಕೆ

**ಶಿಕ್ಷಣಕ್ಷೇತ್ರದಲ್ಲಿಯೇ ಇದೊಂದು ಕ್ರಾಂತಿ!**

**ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯ!!**

ಇದೇ ತರದಲ್ಲಿ ಎಲಿಮೆಂಟರಿ ಶಾಲೆಗಳ ಎಲ್ಲಾ ತರಗತಿಗಳಿಗೆ ಬೇಕಾದ ಸಿವಿಕ್ಸ್, ಚರಿತ್ರೆ, ಪ್ರಕೃತಿಶಾಸ್ತ್ರ, ಗೃಹವಿಜ್ಞಾನ, ವ್ಯಾಕರಣ ಇವುಗಳೂ ಸಿದ್ಧವಾಗಿವೆ.

ಪುಸ್ತಕಗಳು ದೊರಕುವ ಸ್ಥಳ:

**ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.**


## ಕಾರ್ಕಳ

**ಭಾಷಣ:**—ಶ್ರೀ ರಾಮಕೃಷ್ಣಾ ಮಿಶನಿನ ಶ್ರೀ ಸ್ವಾಮಿ, ಶ್ರೀ ವಾಸಾನಂದರವರು ತಾ ೧೭—೧—೪೦ರ ದಿನ ಸ್ಥಳೀಯ ಸಂಸ್ಕೃತ ಕಾಲೇಜು, ಹೈಸ್ಕೂಲು ಮತ್ತು ಸೈನ ಎಲಿಮೆಂಟರಿ ಶಾಲೆಗಳಲ್ಲಿ ಕೂಡಿದ ಸಭೆಗಳಲ್ಲಿ ಭಾಷಣ ಕೊಟ್ಟರು

**ನೂಲುವ ಪ್ರದರ್ಶನ:**—ಮಂಜೇಶ್ವರ ಶ್ರೀ ಮದನಂತೇಶ್ವರ ಹಾಯರ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರ ನೇತೃತ್ವದಲ್ಲಿ ತಾ ೨೦—೧—೪೦ರ ದಿನ ಸ್ಥಳೀಯ ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿ ತಮ್ಮ ನೂಲುವ ಕಲೆಯ ಒಂದು ಪ್ರದರ್ಶನವನ್ನು ನಡೆಸಿದರು

**ಕೋಟೇಶ್ವರ:**—ಸ್ಥಳೀಯ ಗೌಡ ಸಾರಸ್ವತ ಬ್ರಾಹ್ಮಣ ವೃಂದವು ಶ್ರೀ ರಾಮ ಮಂದಿರದಲ್ಲಿ ಇದೇ ಬರುವ ಮಾರ್ಚು ತಾ ೧೪ ೨ ೪೦ನೇ ಬುಧವಾರ ದಿವಸ ಪಟ್ಟಾಭಿ ಶ್ರೀ ರಾಮದೇವರನ್ನು ಪ್ರತಿಷ್ಠಿಸಬೇಕೆಂತ ನಿಶ್ಚಯಿಸಿದಂತೆ ಶ್ರೀ ರಾಮದೇವರ ಪ್ರತಿಮೆಯನ್ನು ಕಾರ್ಕಳದಿಂದ ಇದೇ ಬರುವ ತಾ ೨೮—೧ ೪೦ನೇ ದಿವಸ ತರುವದೆಂತಲೂ ಪ್ರತಿಷ್ಠೆ ಖರ್ಚಿನ ಬಗ್ಗೆ ಹಣ ಶೇಖರಿಸುವರೆಯೂ ಶ್ರೀ ದೇವರ ಭಕ್ತವೃಂದಕ್ಕೆ ಆಮಂತ್ರಣ ಕೊಡುವರೆಯೂ ಸಧ್ಯದಲ್ಲಿಯೇ ಮಂಗಳೂರತ್ತ ಕಡೆ ಪ್ರಯಾಣವಾಗಬೇಕೆಂತಲೂ ಬಾಕಿ ಕೆಲವು ಕಾರ್ಯಕ್ರಮ ಕೂಡಾ ಕಳೆದ ತಾ ೧೯ನೇ ಶುಕ್ರವಾರ ಜರಗಿದ ಶ್ರೀ ರಾಮಮಂದಿರ ಕಮಿಟಿಯ ಮಹಾಸಭೆಯಲ್ಲಿ ನಿರ್ಣಯಿಸಲಾಯಿತು

---

## ನೋಟೀಸು

**ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

O S 274 38 R E P 805/1939

ವಂಡಿ ಸುಬ್ಬಣ್ಣ ಭಟ್ಟ, ನಾಗಪ್ಪ ಭಟ್ಟ ವಗೈರೆ ಬೆಳ್ಳಿಗ ಮ ಅರ್ಜಿದಾರರು

| ಪ್ರತಿವಾದಿರು | |
|---|---|
| 1 ಗೋಪಾಲ ಉಪಾಧ್ಯ | ತೆನೆಮನೆ ಲಕ್ಷ್ಮೀನಾರಾಯಣ ಉಪಾಧ್ಯರ ಮಕ್ಕಳು 4ನೇ ಯವರ ಗಾರ್ಡಿಯನ್ ತಾಯಿ ಗೌರಮ್ಮ |
| 2 ನಾಗೇಶ ಉಪಾಧ್ಯ | |
| 3 ಶಿವರಾಮ ಉಪಾಧ್ಯ | |
| 4 ಮೈನರ ಕೃಷ್ಣ | |
| 5 ಮೈನರ ರಾಮ | |

ಮೈಸೂರು ಸಿಟಿ ಮೊಹಲ್ಲಾ ಕಡಕಿ ರಾವ ರೋಡಿನಲ್ಲಿರುವವರು ಎದುರು

ಅರ್ಜಿದಾರರು ಎದುರಿನ ಮೇಲೆ ಪಡೆದ ಡಿಕ್ರಿಯಿಂದ ಕಾಣ ಪಟ್ಟಿ ರಾಸ್ತಿಯ ಏಲಮಿನ ಶರ್ತುಗಳನ್ನು ನಿಶ್ಚಯಿಸುವರೇ ಸದ್ರಿ ಅರ್ಜಿಯನು ತಾರೀಕು ೧೩ ೨ ೧೯೪೦ಕ್ಕೆ ಇಟ್ಟಿದೆ ಆ ಕುರಿತು ನಿಮ್ಮ ಆಕ್ಷೇಪಣೆಗಳಿದ್ದರೆ ಸದ್ರಿ ದಿನ ಕೋರ್ಟು ಮುಂದೆ ಹಾಜ್ರಾಗಿ ಬಾಹೀರು ಮಾಡತಕ್ಕದ್ದು ಮತ್ತು ಸದ್ರಿ ಅಮ್ಲ ಜ್ಯಾರಿಯ ದಾಖ್ಲ ಪಟ್ಟಿ ರಾಸ್ತಿ ಏಲಮಿನಲ್ಲಿ ಅರ್ಜಿದಾರನು ಎಲ್ಲ ಪರ್ಮಿಷನ್ ಕೊಡಬೇಕಾಗಿ ದಾಖ್ಲ ಮಾಡಿದ R.E.A 957/1939ನೇ ಅರ್ಜಿಯಲ್ಲಿ ಸಹಾ ನಿಮ್ಮ ಆಕ್ಷೇಪಣೆಗಳಿದ್ದರೆ ಬಾಹೀರು ಮಾಡತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿಯದೆ.

ಕುಂದಾಪುರ
23-1-40

M. M. [illegible]
ಅರ್ಜಿದಾರನ ಕಡೆ ಎಡ್ವೋಕೆಟು

# ಸಾಲಾ ರಣರಂಗದಲ್ಲಿ

# ಫಿನ್ನರ ಪ್ರಚಂಡ ಹೋರಾಟ!

## ಮಂತ್ರಿಯ ಮೇಲೆ ಗುಂಡು! — ಜಪಾನರೊಡನೆ ಸಂಧಿಯಿಲ್ಲ

## ಪಶ್ಚಿಮ ರಣರಂಗದಲ್ಲಿ ಹಿಮಬಾಧೆ!

# ಯುದ್ಧ ವಾರ್ತೆ!



### ರಶ್ಯನ್–ಫಿನ್ಲೆಂಡ್ ಯುದ್ಧ

ವೀರ ಫಿನ್ನರು ಎಷ್ಟೇ ಪರಾಕ್ರಮಿಗಳಾದ ರಶ್ಯನರನ್ನಾದರೂ ಎದುರಿಸಿ ಅಸಮ ಸಾಹಸದಿಂದ ಕಾದಾಡುತಿದ್ದಾರೆ ಲಾಡೋಗಾ ಸರೋವರದ ಬಳಿ ರಶ್ಯನರು ಓಡಿಹೋದರೆಂದು ತಿಳಿದಿದೆ.

ಇದುವರೆಗೂ ರಶ್ಯಕ್ಕೆ ಫಿನ್‌ಲೆಂಡಿನ ರಣಭೂಮಿಯಲ್ಲಿ ತನ್ನ ಸೈನ್ಯವನ್ನು ಒಟ್ಟುಗೂಡಿಸಲು ಸಾಧ್ಯವಾಗದೆ ಹೋದುದೇ, ಪ್ರಬಲರಾಗಿದ್ದರೂ ಅದರ ಈ ಅಪಜಯಕ್ಕೆ ಕಾರಣವೆಂದು ತಿಳಿದಿದೆ. ಹೆಚ್ಚಾದರೆ ೧೦ ಲಕ್ಷ ಸೈನಿಕರನ್ನು ಫಿನ್‌ಲೆಂಡ್ ಯುದ್ಧಭೂಮಿಯಲ್ಲಿ ರಶ್ಯವು ಒದಗಿಸಬಹುದಂತೆ. ಇದು ಫಿನ್ನರ ಸೈನ್ಯಕ್ಕಿಂತ ...ವುದು ಸಾಧ್ಯವೇ ಇಲ್ಲ. ಹೀಗೆ ...ರಾದಾಗ ಫಿನ್ನರು ರಶ್ಯನರನ್ನು ...ಮೂ ಹಿಂದಟ್ಟುವರು. ಏಕೆಂದರೆ ...ಗೆ ಫಿನ್‌ಲೆಂಡು ಪರದೇಶವಾಗಿದೆ. ...ಲಿನನು ಬೇಕೆಂದೇ ಹೀಗೆ ಮಾಡು...ನೆಂದು ಕೆಲವರ ಅಂಬೋಣ. ...ನು ತನ್ನೊಡನೆ ಯುದ್ಧ ಪ್ರಚಾರ ...ಡಿದ ಕೂಡಲೇ ಪ್ರಚಂಡ ಹೋರಾ...ಕ್ಕೆ ಆರಂಭಿಸಬೇಕೆಂದು ಆತನು ಬಗೆದಿರುವನೆಂದೂ, ಸ್ವೀಡನ್ ನಾರ್ವೆಗಳಿಂದ ರಶ್ಯಕ್ಕೆ ಬರುವ ಕಬ್ಬಿಣ ಮೊದಲಾದವುಗಳನ್ನು ಫಿನ್‌ಲೆಂಡಿನ ನೆವನದಿಂದ ಬ್ರಿಟನು ತಡೆದ ನಿಮಿತ್ತ ರಶ್ಯವು ಸಿಟ್ಟುಗೊಂಡಿದೆಯೆಂದೂ ಹಲವರು ಹೇಳುವರು.

ಸ್ಟಾಲಿನನ ಇಂದಿನ ಯುದ್ಧಗತಿಯು ವಿಚಿತ್ರವಾಗಿದೆ. ತನ್ನ ತಾಟಸ್ಥ್ಯಕ್ಕೆ ಆತಂಕ ತಂದಲ್ಲಿ, ತಾನು ಸುಮ್ಮಗಿರಲಾರೆನೆಂದು ಸ್ವೀಡನು ಸ್ಪಷ್ಟ ಹೇಳಿದೆ.

### ಹಿಟ್ಲರನ ಆರ್ಭಟೆ

ಹಿಟ್ಲರನು ಬೆಲ್ಜಿಯಂ ಹಾಲೆಂಡುಗಳ ಮೇಲೆ ವಕ್ರದೃಷ್ಟಿಯಿಟ್ಟಿರುವನು. ಆದರೆ ಅವುಗಳೂ ಯುದ್ಧಸನ್ನದ್ಧವಾಗಿರುವುದಾಗಿ ಉತ್ತರ ಕೊಟ್ಟಿವೆ. ಬೆಲ್ಜಿಯಮ್ಮಿನ ಗಡಿನಾಡಿನಲ್ಲಿ ಜರ್ಮನ್ ಸೈನಿಕರು ಒಂದಾಗುತ್ತಿರುವರೆಂದು ಸುದ್ದಿ.

ಆದರೆ ಹಿಟ್ಲರನ ಯುದ್ಧಾಕಾಂಕ್ಷೆಗೆ ಜರ್ಮನರು ತೀರಾ ಅಸಮಾಧಾನಗೊಂಡಿರುವುದರಿಂದ, ಅದನ್ನು ತಿಳಿದ ಆತನು ಹೀಗೆ ಯುದ್ಧವನ್ನು ತೀವ್ರ ಸಾಗಿಸದೆ ಇರುವನೇ ಎಂದು ಊಹಿಸಲಾಗಿದೆ.

### ಪಶ್ಚಿಮ ರಣರಂಗದಲ್ಲಿ

ತೋಪು ಯುದ್ಧವು ಸಾಗುತ್ತಿದೆ. ಸೈನಿಕ ಚಟುವಟಿಕೆಗಳು ಕಂಡುಬರುವುದಿಲ್ಲ. ಆದುದರಿಂದಲೇ ಬ್ರಿಟಿಷ್ ಸೈನಿಕರಿಗೆ ತಮ್ಮ ಮನೆಗೆ ಹೋಗಿ ಬರಲು ಅನುಮತಿ ದೊರೆತಿದೆ. ಛಳಿ ಹೆಚ್ಚಿದೆ ಹಿಮವು ಬೀಳುತ್ತಿದೆ.

### ವಿಮಾನ ಯುದ್ಧ

ಬ್ರಿಟಿಷರ ವಿಮಾನಗಳು ಜರ್ಮನಿಯ ಮೇಲೆ ಹಾರಾಡಿದವು. ಇದರಿಂದ ವಿಯನ್ನಾದಲ್ಲಿ ಮುಂಜಾಗ್ರತೆ ತೆಗೆದುಕೊಂಡಿದ್ದರು.

### ಹಡಗು ಯುದ್ಧ

ಬ್ರಿಟಿಷ್ ವಿಮಾನ ದಲದವರು ಉತ್ತರ ಸಮುದ್ರದಲ್ಲಿ ಸಿಕ್ಕಿದ ಒಂದು ಶತ್ರು ಜಲಾಂತರ್ಗಾಮಿ ನಾವೆಗೆ ಬಾಂಬು ಒಗೆದರು. ಅದು ನೀರಿನಲ್ಲಿಳಿದು ಮಾಯವಾಯಿತು. ಕೆಲ ಹೊತ್ತಿನ ಮೇಲೆ ನಲ್ವತ್ತು ಯಾರ್ಡು ದೂರದ ನೀರಿನಲ್ಲಿ ಗುಳ್ಳೆಗಳು ಕಂಡು ಬಂದವು.

ಮೂರು ಬ್ರಿಟಿಷ್ ಹಡಗಗಳು ಹೆಲಿಗೂಲಾಂಡಿನ ಬಳಿ ಮುಳುಗಿದುವು.

೨೩೬೪ ಟನ್ನಿನ ಕಾರ್ಯನ್ ಲ್ಯಾಯನ್ ಹಡಗವು ಇಂಗ್ಲೆಂಡಿನ ಪಶ್ಚಿಮ ಕರಾವಳಿಯಲ್ಲಿ ಮುಳುಗಿದೆ ಎಸಿಟ್ ಎಂಬ ನಾರ್ವೆ ಹಡಗವು ಸ್ಕಾಟಲೆಂಡಿನ ಈಶಾನ್ಯ ಕರಾವಳಿಯಲ್ಲಿ ಮುಳುಗಿದೆ.

### ಹಿಟ್ಲರನಿಗೆ ವಿರೋಧಿಗಳ ಸಂಖ್ಯೆ!

ಹಿಟ್ಲರನಿಗೆ ಶೇಕಡಾ ೭೫ರಷ್ಟು ಜರ್ಮನರೂ, ಶೇಕಡಾ ೫೫ರಷ್ಟು ಯುದ್ಧ ವಿರೋಧಿಗಳೂ ಇರುವರೆಂದು ಜರ್ಮನ್ ಪತ್ರಿಕಾ ಪ್ರತಿನಿಧಿಯು ಹೇಳ್ಳುವನೆಂದು ತಿಳಿದಿದೆ.

### ಬೆಲ್ಜಿಯಮ್ಮಿಗೆ ಬ್ರಿಟನು ಫ್ರಾನ್ಸುಗಳ ಸಹಾಯ

ಬೆಲ್ಜಿಯಮ್ಮಿನ ಮೇಲೆ ಹಿಟ್ಲರನ ವಕ್ರದೃಷ್ಟಿ ಬಿದ್ದಿರುವುದಾಗಿ ತಿಳಿದಿದೆಯಷ್ಟೆ? ಈ ವಿಷಯದಲ್ಲಿ ಬೆಲ್ಜಿಯಂ ಸರಕಾರವು ಕೆಲ ಸಮಯದಿಂದ ಬಹಳ ತಲ್ಲಣಗೊಂಡಿತ್ತು.

ಆದರೆ ಇತ್ತೀಚೆಗೆ ಬೆಲ್ಜಿಯಮಿನ ಕಳವಳವು ಶಾಂತವಾಗುತ್ತಾ ಬರುತ್ತಿರುವುದಾಗಿ ತಿಳಿದಿದೆ, ಕಾರಣವೇನೆಂದರೆ, ಜರ್ಮನಿಯು ಬೆಲ್ಜಿಯಮನು ಆಕ್ರಮಣ ಮಾಡಿದಲ್ಲಿ, ಬೆಲ್ಜಿಯಮಿಗೆ ಬ್ರಿಟನು ಫ್ರಾನ್ಸುಗಳು ಸಹಾಯಕೊಡುವುದಾಗಿ ಭರವಸೆ ಕೊಟ್ಟಿರುವವಂತೆ.

### ಡಾಕ್ಟರ್ ಗೋಬೆಲ್ಸರ ಅಪ ಪ್ರಚಾರ

ನಾಜಿಗಳ ಪ್ರಚಾರ ಮಂತ್ರಿಯಾದ ಗೊಬೆಲ್ಸನು ಕೆಲವು ಅಪ ಪ್ರಚಾರಗಳನ್ನು ಮಾಡುತ್ತಿರುವನು. ಅವುಗಳಿಗೆ ಈ ಕೆಳಗಿನ ಆಧಾರಗಳು ಸಿಕ್ಕಿವೆ.

ಜರ್ಮನಿಯ ಜಲಾಂತರ್ಗಾಮಿ ನಾವೆಯು ಮುಳುಗಿಸಿತೆಂದು ಪ್ರಸಿದ್ಧವಾದ 'ಅಗಾತಾ' ಎಂಬ ಬ್ರಿಟಿಷ್ ಹಡಗದ ವಿಷಯವು ತೀರಾ ಸುಳ್ಳಂತೆ. ಅಗಾತಾವೆಂಬ ಹೆಸರಿನ ಹಡಗವು ಬ್ರಿಟಿಷರಲ್ಲಿ ಇರಲಿಲ್ಲವೆಂದೂ, ತಿಳಿದಿದೆ.

ನೇಪಲ್ಸಿನಲ್ಲಿ, ಕಳೆದ ದಶಂಬರದಲ್ಲಿ ಟ್ರೈನ್ ಅಪಘಾತವಾಗಿ ೪೦ ಜನರು ಸತ್ತಿರುವರೆಂದೂ ೧೫೦ ಜನರು ಗಾಯಗೊಂಡಿರುವರೆಂದೂ ಹೇಳಲಾಗಿತ್ತು. ಇಂತಹ ಒಂದು ಸಂದರ್ಭವೇ ಆಗಿರಲಿಲ್ಲವಂತೆ.

ಅಥೆನಿಯಾ ಹಡಗವನ್ನು ಮುಳುಗಿಸಿದ ವಿಷಯದಲ್ಲಿ, ಜರ್ಮನರು ಬಹಳ ಅಪಪ್ರಚಾರ ಮಾಡಿದರೆಂದೂ, ಬ್ರಿಟಿಷರು ತಾವೇ ಮುಳುಗಿಸಿ ಜಗತ್ತಿನ ಸಹಾಯವನ್ನು ಪಡೆಯಲು ಅಪೇಕ್ಷಿಸಿದರೆಂದೂ ಜರ್ಮನರ ನಿರ್ದಯ ಕಾರ್ಯವೆಂದೂ ತಿಳಿದಿದೆ.

ಆರ್ಕ್ ರೋಯಲೆಂಬ ಹಡಗವು ಮುಳುಗಿದೆಯೆಂದೂ ಜರ್ಮನಿಯ ಪ್ರಚಾರ ಮಾಡಿದ್ದು ಸುಳ್ಳಂತೆ. ಆರ್ಕ್ ರೋಯಲನ್ನು ಸಾವಿರಾರು ಮಂದಿ ಕಣ್ಣಾರೆ ಕಂಡವರಿದ್ದಾರಂತೆ.

### ಭೂಕಂಪ

ಸಿಸಿಲೀ ದ್ವೀಪದಲ್ಲಿ ಭೂಕಂಪವಾಗಿ ಬಹಳ ಅನರ್ಥವುಂಟಾಗಿದೆ.

### ಚೈನದ ಕೈಗೊಂಬೆಗಳ ಕೂಗು

ಉತ್ತರ ಚೈನದ ಕೈಗೊಂಬೆ ಸರಕಾರದ ಪ್ರಮುಖನಾದ ವಾಂಗನು ಚೈನದ ದಳಪತಿ ಚಿಯಾಂಗನಿಗೆ ಬೇಗನೇ ಜಪಾನಿನೊಡನೆ ಸಂಧಿ ಮಾಡಿಕೊಳ್ಳುವುದು ಯೋಗ್ಯವೆಂದು ಸೂಚಿಸಿರುವನು.

### ಇಟಲಿಯು ಸಿದ್ಧವಾಗಿದೆ

ಇಟಲಿಯ ಫಾಸಿಸ್ಟ್ ಪಾರ್ಟಿ ಸೆಕ್ರೆಟರಿ ಸೀನರ್‌ಮುತಿಯು, ಇಟಲಿಯು ಯಾವ ಮುಹೂರ್ತದಲ್ಲಾದರೂ ರಣರಂಗಕ್ಕಿಳಿಯಲು ಸನ್ನದ್ಧವಾಗಿದೆಯೆಂದು ಹೇಳಿದನು. ಇಟಲಿಯ ಇಂದಿನ ಧೋರಣೆಯು ಬಹುಕಾಲ ನಿಲ್ಲಬಹುದೆಂದು ಯಾವನೂ ತಿಳಿಯದಿರಲಿ ಎಂದು ಹೇಳಿದನು. ವಿದೇಶೀಯ ಧೋರಣೆಯಲ್ಲಿ, ಇಟಲಿಯು ಸಂಪೂರ್ಣ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತದೆಯೆಂಬುದು ಇದರ ಅರ್ಥವಾಗಿದೆಯೆಂದು ಊಹಿಸಲಾಗಿದೆ.

### ಹೆಲಿಫಾಕ್ಸರ ಭಾಷಣ

ಬ್ರಿಟಿಷ್ ಸರಕಾರದ ವಿದೇಶಾಂಗ ಮಂತ್ರಿಗಳಾದ ಲಾರ್ಡ್ ಹೆಲಿಫಾಕ್ಸರು ಕಳೆದ ವಾರ ಲಂಡನಿನಲ್ಲಿ ಒಂದು ಭಾಷಣ ಮಾಡುತ್ತಾ ಅದರಲ್ಲಿ, ಜರ್ಮನಿಯ ಸಮರಧೋರಣೆ ಮತ್ತು ಮಿತ್ರರಾಷ್ಟ್ರಗಳ ಧೋರಣೆಗಳನ್ನು ಹೇಳಿ, ನಾಜಿಗಳ ಮಹಾತ್ವಾಕಾಂಕ್ಷೆಯನು ತಡೆಯುವುದೇ ಬ್ರಿಟನಿನ ಉದ್ದೇಶವೆಂದರು.

### ಫಿನ್ನರ ಬಂದರದ ಮೇಲೆ ಅಗ್ನಿ ಬಾಂಬುಗಳು

#### ೪೦೦ ಕಟ್ಟಡಗಳು ನಾಶ

ರಶ್ಯನರು ಫಿನ್ಲೆಂಡಿನ ದೊಡ್ಡ ಬಂದರವಾದ ಅಬೋದ ಮೇಲೆ ೨೫ ಬಾಂಬುಗಳನ್ನು ಎಸೆದರು. ಬಂದರವು ಬೆಂಕಿಯಿಂದ ಉರಿಯ ಹತ್ತಿತು. ೪೦೦ ಕಟ್ಟಡಗಳು ಧ್ವಂಸವಾದವು.

ಗತಿಯಿಲ್ಲದೆ, ಮನೆಯಿಲ್ಲದೆ ಅನಾಥರಾದವರು ಅತ್ತಿತ್ತ ಸಂಚರಿಸುತ್ತಿದ್ದಾರೆ.

### ಚರ್ಚಿಲ್ಲರ ಭಾಷಣ

ಜರ್ಮನಿಯ ಯುದ್ಧಕ್ಕಿಳಿದ ಜಲಾಂತರ್ಗಾಮಿನಾವೆಗಳಲ್ಲಿ ಅರ್ಧದಷ್ಟು ಮುಳುಗಿ ನಾಶವಾಗಿದೆಯೆಂದರು, ಮಾತ್ರವಲ್ಲದೆ ಕೆಲವು ಸೈನ್ಯದೊಡನೆ ವೀರಾವೇಶದಿಂದ ಕಾದಾಡುತ್ತಿರುವ ಫಿನ್ನರ ಪ್ರರಾಕ್ರಮವನ್ನು ಕೊಂಡಾಡಿದರು.

ಸಾಲಾ ರಣಭೂಮಿಯಲ್ಲಿ ಫಿನ್ನರು ಪ್ರಚಂಡವಾಗಿ ಕಾದಾಡಿದರು. ತಿತಿಲಾದಲ್ಲಿ ರಶ್ಯನರಿಗೆ ಬಹಳ ನಷ್ಟವಾಯಿತು.

### ಇಟಲಿಯನ್ ಹಡಗಕ್ಕೆ ಬೆಂಕಿ

ಇಟಲಿಯನ್ ಹಡಗಕ್ಕೆ ಬೆಂಕಿ ಬಿದ್ದು ಸುಟ್ಟುಹೋಯಿತು. ೫೩೯ ಮಂದಿಯನ್ನ ಜೀವಸಹಿತ ಉಳಿಸಲಾಗಿದೆ.

### ಜಪಾನಿನೊಡನೆ ಸಂಧಿಯಿಲ್ಲ

ಚೈನದ ಕೈಗೊಂಬೆ ಸರಕಾರದ ಪ್ರಧಾನನಾದ ವಾಂಗನು ಜಪಾನರೊಡನೆ ಸಂಧಿ ಮಾಡಿಕೊಳ್ಳುವ ಸೂಚನೆಯನ್ನು ಚಿಯಾಂಗ್ ಕೈಶೇಕರಿಗೆ ಕೊಟ್ಟಿದ್ದನಷ್ಟೆ? ಆದರೆ ಚೈನೀಯರು ಸಂಧಾನ ಮಾಡಲು ಇಷ್ಟಪಡುವುದಿಲ್ಲವೆಂದು ಚಿಯಾಂಗರ ಪ್ರಕಟಣೆಯಾಗಿದೆ.

### ಲಂಡನ್ ನಗರವಾಸಿಗಳ ಕಳವಳ ಪರಿಸ್ಥಿತಿ

#### ಶತ್ರುಗಳಿಂದ ಬಾಂಬು ಬೀಳುತಿದ್ದವೆಂದು ಹೆದರಿದರು

ಲಂಡನ್ ನಗರದ ಹೊರಗಡೆ ಉತ್ತರ ಭಾಗದಲ್ಲಿ ಎರಡು ಬಲವಾದ ಆಸ್ಫೋಟನೆಗಳಾದುವು. ಆಸ್ಫೋಟನೆಗಳಾದ ಮೇಲೆ ಬಹಳ ದಟ್ಟವಾದ ಹೊಗೆಯು ಹೊರಟು ಆ ಪ್ರದೇಶದಲ್ಲೆಲ್ಲಾ ಕೆಲವು ನಿಮಿಷಗಳ ಕಾಲ ಅದು ಆಚ್ಛಾದಿಸಿಕೊಂಡಿದ್ದಿತು.

ಹತ್ತಿರದ ಅಂಗಡಿಗಳ ಕಿಟಿಕಿಗಳು ಈ ಆಸ್ಫೋಟನೆಯಿಂದುಂಟಾದ ಕಂಪನದಿಂದಲೇ ಚೂರುಚೂರಾದವು. ಅರಮನೆಗಳ ಮೇಲ್ಛಾವಣಿಗಳು ಕುಸಿದುಬಿದ್ದವು. ಸುತ್ತಲೂ ಬಹಳ ದೂರದ ವರೆಗೆ ಈ ಆಸ್ಫೋಟನೆಯಿಂದ ಭೂಮಿಯೆಲಾ ನಡುಗಿತು.

ಈ ಆಸ್ಫೋಟನೆಗಳ ಬಗ್ಗೆ ವಿವರಗಳು ಈಚೆಗೆ ಬರುತ್ತಿವೆ. ಲಂಡನಿನ ಉತ್ತರ ಭಾಗದಲ್ಲಿಯ ಒಂದು ಕಾರ್ಖಾನೆಯಲ್ಲಿ ಆಸ್ಫೋಟನೆಗಳಾದುವು. ಇದರಿಂದ ಅನೇಕರು ಹತರಾಗಿದ್ದಾರೆ. ಅನೇಕರಿಗೆ ಗಾಯವಾಗಿದೆ.

ಆಸ್ಫೋಟನೆಯಿಂದ ಸಿಡಿದ ವಸ್ತುಗಳು ಸುತ್ತಲೂ ಬಹಳ ದೂರದ ವರೆಗೆ ಬಿದ್ದವು. ಸಿಡಿತದ ಭರವು ಸುತ್ತಲೂ ೩೦ ಮೈಲಿಗಳ ದೂರದ ವರೆಗೆ ಕೇಳಿತು. ಹತ್ತಿರದಲ್ಲಿ ಎರಡು ಭಾರಿ ಆಸ್ಫೋಟನೆಗಳು ಕೇಳಿದವು. ಆ ಮೇಲೆ ಮೂರನೆ ಸಾರಿ ಸಣ್ಣದೊಂದು ಆಸ್ಫೋಟನೆಯಾಯಿತು.

### ಜನರಿಗೆ ದಿಗಿಲು

ಗಾಬರಿಗೊಂಡ ಜನರು ಮನೆಗಳಿಂದ ರಸ್ತೆಗಳಿಗೆ ಓಡಿಬಂದರು. ಮನೆಗಳ ಮೇಲ್ಛಾವಣಿಗಳೂ, ಕಿಟಿಕಿಗಳೂ ಮುರಿದವು. ಜನರು ಕಳವಳ ದೃಷ್ಟಿಯಿಂದ ಆಗಸದ ಕಡೆಗೆ ನೋಡಿದರು. ಮೇಲಿನಿಂದೇನಾದರೂ ಬಾಂಬುಗಳು ಬೀಳುತ್ತಿರಬಹುದೆಂದು ಅವರು ಊಹಿಸಿದರು. ಆದರೆ ಪೋಲೀಸರು ಜನರನ್ನೆಲ್ಲಾ ಸಂತೈಸಿ ಶತ್ರುಗಳ ಧಾಳಿಯೇನೂ ನಡೆಯುತ್ತಿಲ್ಲವೆಂದು ಭರವಸೆಯಿತ್ತರು.

ಇದರಿಂದ ಬಹಳ ಹೆಚ್ಚಿನ ನಷ್ಟವನ್ನು ಪಡೆದ ಸ್ಥಳವೆಂದರೆ ಸೋಕ್ ರೋಗಿಗಳ ಆಸ್ಪತ್ರೆ. ಆದರೆ ಅದರಲ್ಲಿದ್ದ ರೋಗಿಗಳು ಶಾಂತರೀತಿಯಿಂದಲೆ ಇದ್ದರು.

### ಆಸ್ಫೋಟನೆಯಿಂದ ೫ ಜನರ ಮರಣ

ಆಸ್ಫೋಟನೆಯಿಂದ ೫ ಜನರು ಹತರಾಗಿದ್ದಾರೆ ಎಂದು ಅಧಿಕಾರಿ ಪ್ರಕಟಣೆ ತಿಳಿಸುತ್ತದೆ. ಅನೇಕರಿಗೆ ಗಾಯವಾಗಿದೆ. ಆದರೆ ಅವರಲ್ಲಿ ಅನೇಕರಿಗೆ ಸಾಮಾನ್ಯವಾದ ಗಾಯವಾಗಿದೆ. ಈ ಅನಾಹುತಕ್ಕೆ ಕಾರಣವೇನೆಂಬುದನ್ನು ವಿಚಾರಿಸಲಾಗುತ್ತಿದೆ.

### ಸಿಡಿಮದ್ದಿನ ಕಾರ್ಖಾನೆಯಲ್ಲಿ ಆಸ್ಫೋಟನೆ

ಆಸ್ಫೋಟನೆ ನಡೆದುದು ವಾಲ್ತಾಂ ಅಬೆಯಲ್ಲಿರುವ ರಾಯಲ್ ಗನ್ ಪೌಡರ್ ಕಾರ್ಖಾನೆಯಲ್ಲಿ ಎಂಬುದಾಗಿ ಅಧಿಕಾರಿ ಪ್ರಕಟಣೆ ತಿಳಿಸುತ್ತದೆ.

### ಮಂತ್ರಿಯ ಮೇಲೆ ಗುಂಡಿನೇಟು

ಇರಾಕಿನ ಹಣಕಾಸಿನ ಮಂತ್ರಿ ರುಸ್ತುಂ ಹೈದರ್‌ರವರು ಕಚೇರಿಯಲ್ಲಿ ಕುಳಿತಿದ್ದಾಗ ಅವರ ಮೇಲೆ ಮಾಜಿ ಪೋಲೀಸ್ ಇನ್ಸ್‌ಪೆಕ್ಟರನೊಬ್ಬನು ಗುಂಡನ್ನು ಹಾರಿಸಿದನು. ಗುಂಡು ಹೈದರ್‌ರವರ ಹೊಟ್ಟೆಗೆ ಎಡಭಾಗಕ್ಕೆ ಬಿದ್ದು ಉದ್ದಕ್ಕೂ ಒಳಕ್ಕೆ ಹೋಗಿದೆ.

ಗ!



# ವೈಸರಾಯರ ಹೇಳಿಕೆಯು ಇನ್ನೂ ಸ್ಪಷ್ಟವಾಗಬೇಕು

## ವರ್ಕಿಂಗ್ ಕಮಿಟಿಯ ನಿರ್ಧಾರ

### ರಾಮಗರ ಕಾಂಗ್ರೆಸು ಸಿದ್ಧತೆ — ಖಾದಿಯೇ ಸ್ವರಾಜ್ಯದ ಹಾದಿ

ಹೈದರ್‌ರವರು ಕೂಡಲೇ ಆಸ್ಪತ್ರೆಗೆ ಧಾವಿಸಿದರು. ಅವರಿಗೆ ಆಪರೇಷನ್ ನಡೆದಿದೆ. ಅವರ ಸ್ಥಿತಿಯ ಬಗ್ಗೆ ಪ್ರಕಟಣೆಯೇನೂ ಹೊರಟಿಲ್ಲ.

ಹಣಕಾಸಿನ ಮಂತ್ರಿ ರುಸ್ತುಂ ಹೈದರ್‌ರವರು ತಮ್ಮ ಕಚೇರಿಯಲ್ಲಿ ಕುಳಿತಿದ್ದಾಗ ಅವರೊಡನೆ ಮಾತನಾಡಬೇಕೆಂದು ಆತನು ಬಂದನು. ಅವನನ್ನು ಸರ್ಕಾರಿ ಹುದ್ದೆಯಿಂದ ವಜಾ ಮಾಡಲಾಗಿತ್ತು. ವಜಾದ ಆಜ್ಞೆಯನ್ನು ರದ್ದುಪಡಿಸಬೇಕೆಂಬುದಾಗಿ ಒಂದು ಅರ್ಜಿ ಪತ್ರವನ್ನು ಮಂತ್ರಿಗೆ ಕೊಡಲು ಆತನು ಬಂದಿದ್ದನು. ಮಂತ್ರಿಯು ಅರ್ಜಿಯನ್ನೆಲ್ಲಾ ಓದಿದ ಮೇಲೆ ಎದ್ದು ನಿಂತು ಹೊರಕ್ಕೆ ಹೋಗುವುದರಲ್ಲಿದ್ದರು. ಅಷ್ಟರಲ್ಲಿಯೇ ಅವರ ಮೇಲೆ ಆತನು ಗುಂಡನ್ನು ಹಾರಿಸಿದನು.

## ರಾಮಘರ ಕಾಂಗ್ರೆಸಿನ ದಿನ ನಿರ್ಣಯ

ಕಾಂಗ್ರೆಸು ವರ್ಕಿಂಗ್ ಕಮಿಟಿಯು ರಾಮಘರ ಕಾಂಗ್ರೆಸಿನ ದಿನವನ್ನು ನಿರ್ಣಯ ಮಾಡಿತು.

**ಮಾರ್ಚಿ ೧೪, ೧೫, ೧೬ ವರ್ಕಿಂಗ್ ಕಮಿಟಿ ಸಭೆ.**

**ಮಾರ್ಚಿ ೧೭, ೧೮, ೧೯ ಅಖಿಲ ಭಾರತ ಕಾಂಗ್ರೆಸು ಕಮಿಟಿ ಮತ್ತು ಸಬ್‌ಜೆಕ್ಟ್ ಕಮಿಟಿಗಳ ಸಭೆ.**

**ಮಾರ್ಚಿ ೧೯, ೨೦, ೨೧ರಲ್ಲಿ ಕಾಂಗ್ರೆಸಿನ ಬಹಿರಂಗ ಸಭೆ.**

### ಗಾಂಧಿ–ಜಿನ್ನಾ ಪತ್ರವ್ಯವಹಾರ

ಜಿನ್ನರ ವಿಮೋಚನಾ ದಿನಾಚರಣೆಯ ಕುರಿತು ಮಹಾತ್ಮಾಜಿಯವರು ಒಂದು ಲೇಖನ ಬರೆದು, ಅದು ಪ್ರಕಟವಾಗುವುದರ ಮೊದಲ ಪ್ರತಿಯೊಂದನ್ನು ಜಿನ್ನರಿಗೆ ಕಳುಹಿಸಿದ್ದರು. ಆ ಲೇಖನದೊಡನೆ ಮಿ. ಜಿನ್ನರ ಪ್ರಕೃತದ ಧೋರಣೆಯನ್ನು ವಿಮರ್ಶಿಸಿ ಬರೆದ ಲೇಖನಕ್ಕೆ ಜಿನ್ನರು ದೀರ್ಘ ಉತ್ತರವನ್ನು ಕೊಟ್ಟಿರುವರು. ಅದರಲ್ಲಿ ಅವರು ಕಾಂಗ್ರೆಸನ್ನು, ಗಾಂಧಿಜಿಯವರನ್ನೂ ದೂಷಿಸುತ್ತಾ, ಭಾರತವು ಒಂದು ಜನಾಂಗವೇ ಅಲ್ಲವೆಂದೂ ಅಸಂಬದ್ಧವಾಗಿ ಹೇಳಿರುವರು.

### ಕಾಂಗ್ರೆಸು ವರ್ಕಿಂಗ್ ಕಮಿಟಿಯ ಅಧಿವೇಶನ

ವಾರ್ಧಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರಿತು. ಬಾಬುರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಪಂಡಿತ ಜವಾಹರಲಾಲರು, ಭುಲ್ಲುಭಾಯ್ ದೇಸಾಯಿ, ಡಾ. ಪಟ್ಟಾಭಿ, ಕೃಪಲಾನಿ, ಶಂಕರ್‌ರಾವ್ ದೇವೋ, ಡಾ. ವಿಧನಚಂದ್ರರಾಯ್, ಪ್ರೋ. ಪ್ರಫುಲ್ಲಚಂದ್ರ ಘೋಷ್ ಇವರೆಲ್ಲ ಮೊದಲನೆಯ ದಿನವೇ ಹಾಜರಿದ್ದರು. ಶ್ರೀ. ರಾಜಾಜಿಯವರೂ ಬಂದಿದ್ದರು. ಶ್ರೀಮತಿ ಸರೋಜಿನಿ ನಾಯ್ಡು, ಖಾನ್ ಅಬ್ದುಲ್ ಗಫಾರ್ ಖಾನ್, ಸೇಟ್ ಜಮ್ನಾಲಾಲ್ ಬಜಾಜ್ ಇವರು ಈ ಸಭೆಗೆ ಬರಲಾಗಲಿಲ್ಲ. ಈ ಸಭೆಯಲ್ಲಿ ವೈಸರಾಯರ ಈಚಿನ ಪ್ರಕಟಣೆಯ ವಿಚಾರದಲ್ಲಿ ಚರ್ಚೆ ನಡೆಯಿತು.

ವರ್ಕಿಂಗ್ ಕಮಿಟಿ ಒರಿಸ್ಸಾ ಮತ್ತು ದಿಲ್ಲಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳ ವಿಚಾರವನ್ನು ಮಾಡಿದೆ. ಅವುಗಳ ಹೇಳಿಕೆಗಳನ್ನು ಕೇಳಿದೆ. ಬಂಗಾಳ— ಪಂಜಾಬು ಕಾಂಗ್ರೆಸ್ ಕಮಿಟಿಗಳ ವಿವಾದಗಳನ್ನೂ ಈ ಕಮಿಟಿ ವಿಚಾರಿಸಿದೆ. ಒರಿಸ್ಸಾ ಪ್ರಾಂತೀಕ ಕಾಂ. ಕಮಿಟಿಯ ಹೊಸ ಅಧಿಕಾರಿಗಳನ್ನು ಬದಲಾಯಿಸುವುದು ಅಗತ್ಯವಿಲ್ಲವೆಂದು ವರ್ಕಿಂಗ್ ಕಮಿಟಿ ನಿರ್ಧರಿಸಿದೆ.

ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ ಭಾರತದ ರಾಜಕೀಯ ಪರಿಸ್ಥಿತಿಯ ವಿಷಯವನ್ನು ನಮ್ಮ ವೈಸರಾಯರ ಬೊಂಬಾಯಿಯ ಭಾಷಣ ಹಾಗೂ ಅವರು ಕಾಂಗ್ರೆಸ್ ಮುಖಂಡರಾದ ಶ್ರೀಗಳಾದ ಬಿ. ಜಿ. ಖೇರ್, ಕೆ. ಎಂ. ಮುನಿಷಿ ಮೊದಲಾದವರೊಡನೆ ನಡೆಸಿದ ಸಂಭಾಷಣೆ ಇವುಗಳ ವಿಷಯಗಳನ್ನು ತಮ್ಮ ಮುಂದಿಟ್ಟುಕೊಂಡು—ಚರ್ಚಿಸಲಾಯಿತು. ಸದಸ್ಯರೆಲ್ಲರೂ ತಮ್ಮ ಅಭಿಪ್ರಾಯವನ್ನು ಸೂಚಿಸುವಂತೆ ಕೇಳಲಾದಂತೆ, ಅವರೂ ತಮ್ಮ ಅಭಿಪ್ರಾಯವನ್ನು ಕೊಟ್ಟರು.

ಕಾಂಗ್ರೆಸು ವರ್ಕಿಂಗ್ ಕಮಿಟಿಯು ದೀರ್ಘ ಚರ್ಚೆ ನಡೆಸಿದ ಮೇಲೆ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಮಹಾತ್ಮಾ ಗಾಂಧಿಯವರು ವೈಸರಾಯರ ಭಾಷಣದ ವಿಷಯದಲ್ಲಿ ಹೆಚ್ಚಿನ ಸ್ಪಷ್ಟೀಕರಣವನ್ನು ಕೇಳಬೇಕೆಂದು ಅಭಿಪ್ರಾಯವಾಯಿತು. ಈ ವಿಷಯದಲ್ಲಿ ಮಹಾತ್ಮಾಜಿಯವರು ಬೇಗನೇ ವೈಸರಾಯರ ಭೇಟಿಯಾಗಲಿರುವರೆಂದು ತಿಳಿದಿದೆ.

ಬಂಗಾಳ ಕಾಂಗ್ರೆಸು ಕಮಿಟಿಯ ವಿಷಯದಲ್ಲಿ ಶರತ್‌ಚಂದ್ರರ ಹೇಳಿಕೆಯನ್ನು ವರ್ಕಿಂಗ್ ಕಮಿಟಿಯವರು ಕೇಳಿದರು. ಆ ಕುರಿತು ವರ್ಕಿಂಗ್ ಕಮಿಟಿಯ ನಿರ್ಣಯವೇನೆಂದು ಬೇಗನೇ ರಾಷ್ಟ್ರಪತಿಗಳು ಒಂದು ಪ್ರಕಟಣೆ ಹೊರಡಿಸುವರೆಂದು ತಿಳಿದಿದೆ.

### ಜಿನ್ನರ ಬೊಬ್ಬೆ

ಕಾಂಗ್ರೆಸು, ಸರಕಾರದೊಡನೆ ಸಂಧಿ ಮಾಡಿಕೊಳ್ಳಲು ಬಯಸುತ್ತದೆಯೆಂದೂ ಆದರೆ ಸರಕಾರವು ಕಾಂಗ್ರೆಸಿನ ಕೇಳಿಕೆಗೆ ಕಿವಿಗೊಟ್ಟ ಅಲ್ಪ ಸಂಖ್ಯಾಕರ ಹಿತವನ್ನು ಮರೆತರೆ ಮುಸಲ್ಮಾನರು ಉಗ್ರರಾಗುವರೆಂದೂ ಪ್ರಕಟಿಸಿದ್ದಾರೆ.

### ಸ್ವಾತಂತ್ರ್ಯ ದಿನಾಚರಣೆಯು ಸತ್ಯಾಗ್ರಹವಲ್ಲ

ಗಾಂಧಿಜಿಯವರು ಸ್ವಾತಂತ್ರ್ಯ ದಿನಾಚರಣೆಯ ಕುರಿತು ಒಂದು ಪ್ರಕಟಣೆ ಹೊರಡಿಸುತ್ತಾ, ಆ ದಿನವನ್ನು ಸತ್ಯಾಗ್ರಹ ದಿನವಾಗಿ ಮಾಡಬಾರದೆಂದು ಹೇಳಿರುವರು. ಯಾವುದೇ ರೀತಿಯಲ್ಲಾದರೂ ಇಂದು ಹೋರಾಟ ಮಾಡುವುದು ಕೂಡದು ಎಂದು ಅವರ ಬುದ್ಧಿವಾದವಾಗಿದೆ.

### ನೂತು ಸ್ವರಾಜ್ಯ ಪಡೆಯಿರಿ

**ಗಡಿನಾಡಿನ ದೇಶಸೇವಕರಿಗೆ ಖಾನ್ ಅಬ್ದುಲ್ ಗಫರ್ ಖಾನರ ಉಪದೇಶ**

ಗಡಿನಾಡಿನ ಹಂಗು ಎಂಬಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಅಬ್ದುಲ್ ಗಫರ್ ಖಾನರು ಹೀಗೆಂದು ಭಾಷಣವಿತ್ತರು:

"ನನ್ನ ತತ್ವವು ಅಹಿಂಸೆ. ಸ್ವಾತಂತ್ರ್ಯವನ್ನು ಸಂಪಾದಿಸಲು ನನಗೆ ಬೇರೆ ಅಸ್ತ್ರ ಬೇಡ. ನಾನು ಆ ತತ್ವವನ್ನು ಕಳೆದ ಕೆಲವು ವರ್ಷಗಳಿಂದ ಅಂಗೀಕರಿಸಿದ್ದೇನೆ. ಅದನ್ನೇ ತಾಳ್ಮೆಯಿಂದ ಮುಂದುವರಿಸುವೆನು. ನಿಮ್ಮಲ್ಲಿರುವ ಸ್ವಾರ್ಥ, ಅವಿಧೇಯತಾ ಬುದ್ಧಿಗಳನ್ನು ಬಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಿಮ್ಮ ವ್ಯಕ್ತಿ ಸೌಖ್ಯಗಳನ್ನು ರಾಷ್ಟ್ರ ಹಿತಕ್ಕಾಗಿ ಬಲಿದಾನ ಮಾಡಿರಿ. ಮಾತೃಭೂಮಿಗಾಗಿ ಸಂಯುಕ್ತ ಜನತೆಯ ದೃಷ್ಟಿಯಿಂದ ನಿಮ್ಮನ್ನು ಪರೀಕ್ಷಿಸಿರಿ. ಒಂದೇ ಶಕ್ತಿಯಿಂದ ಮುಂದರಿಯಿರಿ. ಅಹಿಂಸೆಯ ತತ್ವವನ್ನು ಸಂಪೂರ್ಣ ನಿಷ್ಠೆಯಿಂದ ಪಾಲಿಸಿರಿ. ಬೇಗನೇ ಬರಲಿರುವ ಆಂದೋಲನವು ಶೇದಾನಿನ ಋಷಿಯ ಮುಂದಾಳುತನದಿಂದ ಪೂರ್ಣ ಅಹಿಂಸಾತ್ಮಕವಾಗಿ ಹೋರಾಡುವಂತಹುದಾಗಿದೆ. ಆದುದರಿಂದ ಇಂದೇ ಚರಕ ಹಿಡಿದು ನೂಲು ನೂತು ಸ್ವರಾಜ್ಯ ಪಡೆಯಲು ಸಿದ್ಧತೆ ಮಾಡಿರಿ".

### ಬಲಪಕ್ಷದವರು ಮುಂದೆ ಬರದಿದ್ದರೆ ನಾವು ಆಂದೋಲನವನ್ನು ಆರಂಭಿಸುವೆವು

ಪಾಟ್ನಾ ನಗರದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಕೊಡುತ್ತಾ, ಶ್ರೀ. ಸುಬಾಷ ಬೋಸರು ಹೀಗೆಂದರು:

"ನಾನು ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತೇನೆ. ಅದಕ್ಕಾಗಿ ಹೋರಾಡುವ ಸಲುವಾಗಿ ನಾನು ಕಾಳಗಕ್ಕಿಳಿದಿರುವೆನು. ಬಲಪಕ್ಷದವರು ಇಂದು ಮುಂದಾಳುತನವನ್ನು ವಹಿಸದಿದ್ದರೆ ನಾವಾಗಿ ಮುಂದಾಳುತನ ವಹಿಸಿ ಚಳವಳ ಹೂಡುವೆವು.

"ಸ್ವಾತಂತ್ರ್ಯದ ವಿಷಯದಲ್ಲಿ ಬ್ರಿಟಿಷ್ ಸರಕಾರದೊಡನೆ ಒಪ್ಪಂದವಾಗಲಾರದು. ದಾಸ್ಯಕ್ಕೂ ಸ್ವಾತಂತ್ರ್ಯಕ್ಕೂ ಯಾವಾಗಲೂ ಗಂಟುಬೀಳದು".

### ರಾಷ್ಟ್ರಪತಿಗಳಿಗೆ ೫೦೦೦ರೂ.ಗಳನಿಧಿ

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರಿಗೆ ೫೦೦೦ ರೂಪಾಯಿಗಳ ನಿಧಿಯೊಂದನ್ನು ಸಮರ್ಪಿಸಬೇಕಾಗಿ ಪಾಟ್ನಾದ ಕಾಂಗ್ರೆಸ್ ಕೆಲಸಗಾರರು ನಿಶ್ಚಯಿಸಿರುವರು.

### ಸನಾತನಿಗಳ ಮೊರೆಗೆ ನಕಾರ

ಕಾಂಗ್ರೆಸು ಮಂತ್ರಿ ಮಂಡಳವು ಮದ್ರಾಸಿನಲ್ಲಿ ಜಾರಿಗೆ ತಂದ ದೇವಸ್ಥಾನ ಪ್ರವೇಶ ಮಸೂದೆಯನ್ನು ತೊಡೆದುಹಾಕಬೇಕೆಂದು ಕೆಲವರು ಸನಾತನಿಗಳೆಂಬವರು ಸರಕಾರಕ್ಕೆ ಮನವಿಯನ್ನು ಕಳುಹಿಸಿದ್ದರು. ಸರಕಾರವು ಹಾಗೆ ಮಾಡಲು ಸಾಧ್ಯವಿಲ್ಲವೆಂದು ಹೇಳಿರುವುದೆಂದು ತಿಳಿದುಬರುತ್ತದೆ.

### ವಾರಕ್ಕೊಮ್ಮೆ ಆರೋಗ್ಯದಿನಾಚರಣೆ

ಮದ್ರಾಸಿನಲ್ಲಿ ವಾರಕ್ಕೊಮ್ಮೆ ಆರೋಗ್ಯ ದಿನಾಚರಣೆಯನ್ನು ಮಾಡಬೇಕೆಂದು ಮೇಯರರಾದ ಶ್ರೀ. ಸತ್ಯಮೂರ್ತಿಗಳು ಪ್ರಕಟಿಸಿದಂತೆ ಅದಕ್ಕೆ ಈಗ ೫೦೦ ಜನ ಸ್ತ್ರೀಪುರುಷ ಸ್ವಯಂಸೇವಕರು ನೆರವಾಗಲು ಮುಂದೆ ಬರದಿರುವರು.

### ಗಡಿನಾಡಿನಲ್ಲಿ ದರೋಡೆ

ಪೇಶಾವರ ಕೋಹತ್ ರಸ್ತೆಯಲ್ಲಿ ಒಂದು ಭೀಕರ ದರೋಡೆಯಾಯಿತು. ಮರಿಮಾಜಾಯ ಎಂಬ ಗ್ರಾಮದ ಮೂವರು ಹಳ್ಳಿಗರು ಎಲ್ಲಿಗೋ ಹೋಗಿದ್ದು ಸಂಜೆಗೆ ತಮ್ಮ ಊರಿಗೆ ಬರುತ್ತಿದ್ದಾಗ ಯಾರೋ ಕಳ್ಳರು ದಾರಿಯಲ್ಲಿ ಗುಂಡು ಹಾರಿಸಿ; ಟಾಂಗಾವನ್ನು ನಿಲ್ಲಿಸಿ ಅವರಲ್ಲಿದ್ದ ಸಾಮಾನುಗಳನ್ನೆಲ್ಲಾ ಲೂಟಿ ಮಾಡಿ ಹೋದರೆಂದು ತಿಳಿದಿದೆ. ಗಡಿನಾಡಿನಲ್ಲಿ ಇಂತಹ ದರೋಡೆಗಳು ಪ್ರಬಲಿಸುತ್ತಿವೆ.

### ಸರಕಾರೀ ಪ್ರೆಸ್ಸಿನಲ್ಲಿ ಕಳವು

ಸಂಯುಕ್ತ ಪ್ರಾಂತದ ಸರಕಾರೀ ಪ್ರೆಸ್ಸಿನಲ್ಲಿ ಕಳವಾಗಿ ಸುಮಾರು ಎಂಟು ಸಾವಿರ ರೂಪಾಯಿಗಳ ವರೆಗಿನ ನಗದು ಹಣವು ಕಾಣೆಯಾಗಿದೆಯೆಂದು ತಿಳಿದು ಬರುತ್ತದೆ. ಪೋಲೀಸು ತನಿಖೆ ನಡೆಯುತ್ತಿದೆ.

### ಪನ್ನೀರ ಸಲ್ವಂರಿಗೆ ಸರಕಾರೀ ಅಧಿಕಾರವಾಯಿತು

ಜಸ್ಟಿಸ್ ಪಾರ್ಟಿಯವರಾದ ಶ್ರೀ ಪನ್ನೀರ್ ಸೆಲ್ವಂ ಇವರಿಗೆ ಹಿಂದೂಸ್ಥಾನ ಸರಕಾರದ ಸಲಹೆಗಾರರಾಗಿ ಹೊಸ ಉದ್ಯೋಗವೊಂದು ದೊರೆತಿದೆ. ಕಾಂಗ್ರೆಸನ್ನು ದ್ವೇಷಿಸಿದ್ದಕ್ಕೆ ಇದು ಪ್ರತಿಫಲ!

## Coffee and Quinine

Tumbling down the mountains is a rushing stream. Along it is a crazy road upon which mules slosh their slippery way from coffee uplands to the barges. For miles this caravan of heavily laden animals stretches from healthful tropic heights to the malaria-stricken lowland.

The mules are more lucky than the men who will unload them, and ultimately have to stow the heavy bags on stout steel barges. For mules are free from malaria.

Just as endless seems the stream of Indian carriers who stagger with their coffee bags marked Hamburg, Amsterdam and New Orleans, piling them in neat heaps on the several barges. Scarcely one of these men is ever really free of malaria, for the barges are at the headwaters of a sluggish tropical stream and the malarial mosquito is there in droves.

Somehow the barges are loaded and in a day or two the barges reach the coast, and within a fortnight you and I may be drinking coffee from this very shipment. One could drink it more comfortably if only someone would tell these Indians, or better yet their bosses, what we all know about malaria, its prevention and cure. And if we have forgotten, there is the August pronouncement of the Malaria Commission of the League of Nations. But how is one to get the message of Geneva to those Indians carriers? Geneva and Panzos, or Geneva and any other tropical lowland, seem too far apart. The message of the Malaria Commisson is so simple one longs to transalate it into their Indian dialect; Fifteen grains to twenty grains of quinine per day for 5 to 7 days will cure even many obstinate cases of malaria. And for workers like these coffee carriers a daily dose of six grains of quinine, during the malaria season, is a preventive. On page 124 of its report, issued in 1938, this Malaria Commission stresses the fact that the harmlessness of quinine makes it a suitable drug for administration by subordinate personnel without constant medical supervision, whereas such supervision is essential in the case of synthetic products.

M. Eng. No. 203

## ಅಧಿಕೃತ ಖಾದಿಯನ್ನೇ ಉಪಯೋಗಿಸಿರಿ

### ಖಾದಿಯ ಹಣವು ನಮ್ಮ ಬಾಂಧವರಿಗೇ ಮುಟ್ಟುತ್ತದೆ

"ಒಂದು ಪೌಂಡು ತೂಕದ ಅರಳೆಯನ್ನು ಗಿರಣಿಯ ಮುಖಾಂತರ ಬಟ್ಟೆ ಮಾಡಿಸಲು ೮—೧—೬ ವೆಚ್ಚ ತಗಲುವುದು. ಆದರೆ ಅಷ್ಟೇ ಅರಳೆಯನ್ನು ಖಾದಿಯನ್ನಾಗಿ ಮಾಡಲು ೩೦ ಆಣೆ ವೆಚ್ಚ ಮಾಡಬೇಕಾಗುತ್ತದೆ. ಮೊದಲನೇ ರೀತಿಯಿಂದ ಅರಿವೆ ತಯಾರಿಸುವಾಗ ನೂಲುವವನಿಗೆ ಮತ್ತೂ ನೇಕಾರನಿಗೆ ಕೂಡಿ ರೂಪಾಯಿ ೦—೪—೬ ಮಾತ್ರ ಮುಟ್ಟುವುದು ಆದರೆ ೨ನೇ ರೀತಿಯಲ್ಲಿ ಅವರಿಬ್ಬರಿಗೂ ಕೂಡಿ ೨೪ ಆಣೆ ಕೂಲಿ ಸಿಗುವುದು ಹಾಗಾದರೆ ಯಾವದನ್ನು ಕೊಳ್ಳುವಿರಿ? ತುಟ್ಟಿಯಾಗಿ ಕಾಣುವ ಖಾದಿಯನ್ನೋ? ಅಗ್ಗವಾಗಿ ತೋರುವ ಗಿರಣಿಯ ಬಟ್ಟೆಯನ್ನೋ?" ಎಂದು ೨—೧೨—'೩೯ರ ಹರಿಜನದಲ್ಲಿ ಮಹಾತ್ಮಾಗಾಂಧಿಯವರು ಬರೆಯುತ್ತಾರೆ.

ಆದ್ದರಿಂದ ಬಾಂಧವರೇ ತುಟ್ಟಿಯಾಗಿ ಕಂಡರೂ ನಾವು ಪೈಸಹ ಹಳ್ಳಿಗಳಲ್ಲಿ ಹಂಚಲ್ಪಡುವ ಖಾದಿಯನ್ನು ಕೊಳ್ಳಿರಿ. ಸಿರಿ ಅರ್ಧ ಬೆಲೆಯು ಬಂಡವಲುಗಾರನಿಗೂ ಯಂತ್ರಕ್ಕೂ ಹೋಗುವ ಗಿರಣಿಯ ಬಟ್ಟೆಯನ್ನು ಕೊಳ್ಳಬೇಡಿರಿ ಎಂದು ಕ. ಪ್ರಾಂ. ಕಾಂ. ಕಾರ್ಯದರ್ಶಿಗಳು ತಿಳಿಸುತ್ತಾರೆ.

### ಅಧಿಕೃತ ಖಾದಿ

ಶುದ್ಧ ಮತ್ತೂ ಅಧಿಕೃತ ಖಾದಿಯನ್ನೇ ಉಪಯೋಗಿಸಬೇಕೆಂದು ಕಾಂಗ್ರೆಸ ವರ್ಕಿಂಗ್ ಕಮಿಟಿಯು ಕಾಂಗ್ರೆಸಿನ ಅಭಿಮಾನಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿರುವುದು. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಖಾದಿಗೆ ಇರುವ ಮಹತ್ವವನ್ನು ಅನೇಕ ಸಲ ಹೇಳುತ್ತ ಬಂದಿದ್ದರೂ ಇನ್ನೂ ಹಲವಡೆಗಳಲ್ಲಿ, ಸಂದೇಹ ಅವಿಶ್ವಾಸಗಳು ಉಳಿದಿರುವುವು. ಇಷ್ಟೇ ಅಲ್ಲ ಕೆಲವು ಕಾರ್ಯಕರ್ತರು ನೂಲುವವರಿಗೆ ಕಡಿಮೆ ಕೂಲಿ ಕೊಟ್ಟು ಅನಧಿಕೃತ ಖಾದಿಯನ್ನು ತಯಾರಿಸಿ ಅದನ್ನೇ 'ಶುದ್ಧ ಖಾದಿ' ಎಂದು ಜನತೆಯಲ್ಲಿ ಪ್ರಚಾರ ಮಾಡಲು ತಮ್ಮ ವರ್ಚಸ್ಸನ್ನು ಉಪಯೋಗಿಸುತ್ತಾರೆ. ಇದು ತೀರ ದುರ್ದೈವದ ಸಂಗತಿಯು. ಎಲ್ಲ ಖಾದಿಯು ಪ್ರಮಾಣಿತವಾಗಿಯೇ ಇದ್ದರೆ ಹೆಚ್ಚು ಹೆಚ್ಚು ನೂಲನ್ನು ಕೊಳ್ಳುವ ಶಕ್ತಿಯು ಚರಖಾ ಸಂಘಕ್ಕೆ ಬಾರದಿರುವುದರಿಂದ, ಅವರು ಎಷ್ಟೋ ಸಾರಿ ನೂಲುವವರ ಎಲ್ಲ ನೂಲನ್ನು ಕೊಳ್ಳಲಾರದಾಗುತ್ತಾರೆ. ಇಂಥ ನೂಲುವವರು ಎಷ್ಟೇ ದುಡ್ಡು ಬಂದರೂ ಸಾಕು ಎಂದು ತಮ್ಮ ನೂಲನ್ನು ಬೇಡಿದ ಧಾರಣೆಗೆ ಕೊಟ್ಟು ಬಿಡುವುದುಂಟು. ಪಾಪ! ಈ ಅನಧಿಕೃತ ಖಾದಿಯಲ್ಲಿ ಗಿರಣಿಯ ನೂಲನ್ನು ಯಾರಾದರೂ ಸೇರಿಸಿದರೆ ಅದನ್ನು ತಿಳಿಯುವ ಬಗೆಯಿಲ್ಲ. ಇನ್ನಾದರೂ ಕಾಂಗ್ರೆಸ್ಸಿಗರು ಕಣ್ಣು ತೆರೆದು, ತಮ್ಮೊಳಗಿನ ಅನಧಿಕೃತ ವ್ಯಾಪಾರಸ್ಥರಿಗೆ ತಮ್ಮ ವ್ಯಾಪಾರವನ್ನು ಸಲ್ಲಿಸಬೇಕೆಂದು ಕೇಳಿಕೊಂಡು ಅಂಥ ಆ ಶುದ್ಧ ಖಾದಿಯ ಬೆಳವಣಿಗೆಗೆ ಸಹಾಯವಾದ ಎಲ್ಲ ಅಂಶಗಳನ್ನು ಹೊಡೆದೋಡಿಸುವರೆಂದು ನಂಬಿದ್ದೇವೆ. ಅಶುದ್ಧ ಖಾದಿಯು ಶುದ್ಧ ಖಾದಿಯೆಂದು ಹೇಳಿ ಖಾದೀ ಪ್ರೇಮಿಯನ್ನು ವಂಚಿಸುವ ಕೆಲಸಗಾರರನ್ನು ತಡೆಯಲು ಕಾಂಗ್ರೆಸು ಒಂದೇ ಸಮರ್ಥವಿರುವುದೆಂದು ತಿಳಿದು ನಾವು ಎಲ್ಲ ಕಾಂಗ್ರೆಸ್ಸಿಗರಿಗೆ ಕಾರ್ಯಪ್ರವೃತ್ತರಾಗಲಿಕ್ಕೆ ಬಿನ್ನವಿಸುತ್ತೇವೆ ಎಂದು ಕ. ಪ್ರಾಂ. ಕಾಂ. ಕ. ಕಾರ್ಯದರ್ಶಿಗಳು ತಿಳಿಸುತ್ತಾರೆ.

## ನೋಟೀಸು

### ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 360/1939

ಶಾರದಾ ಬ್ಯಾಂಕ್, ಮ್ಯಾನೆಜರರು, ಕವರ ಶ್ರೀ ಗುಡ್ಡಪ್ಪ ರೈ, ಮಹಿಂತಳ ಐತಪ್ಪ ರೈ } ವಾದಿ

ಮತ್ತು

ವೆಂಕಟ್ರಮಣ ಮೂಡತ್ತಾಯ ಕೂಡ 18 ಜನರು —ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯಾಜ್ಯದ 18ನೇ ಪ್ರತಿವಾದಿಳು—ಕಾಮಮ್ಮ, ನಾರಾಯಣ ನಾವಡರ ವಿಧವೆ. ಕಾಸರಗೋಡು ತಾಲೂಕು ಕೈಯ್ಯಾರು ಗ್ರಾಮಸ್ಥಳು. ಹಾಲ್ ಮಂಗಳೂರು ತಾಲೂಕು ಕೊಡಿಯಾಲಬೈಲು ವೆಂಕಟ್ರಮಣ ಭಟ್ರ ಮಗ ಸುಬ್ರಾಯ ಭಟ್ರ ಮನೆಯಲ್ಲಿರುವವಳು ಇವರಿಗೆ

ಕಯ್ಯಾರು ಗ್ರಾಮದ ವೆಂಕಟ್ರಮಣ ಮೂಡತ್ತಾಯ, ಗುತ್ತು ಕೊರಗಬಂಟ, ಸಂಕಯ್ಯ ಗಾಂಭೀರಾ ಕೂಡ 3 ಜನರು ವಾದಿಯಾಗಿ 4ರಿಂದ 17ನೇ ವರೆಗಿನ ಪ್ರತಿವಾದಿರ ವ ನಿಮ್ಮ ಮೇಲೆ ಕೂಡ ಪಡೆದ ಕಾ. ಡಿ. ಮು. ಕೋರ್ಟ O. S. No. 405/1934ನೇ ವ್ಯಾಜ್ಯದ ಡಿಕ್ರಿಯು, ತಮ್ಮ ಮೇಲೂ, 4ರಿಂದ 17ರ ವರೆಗಿನ ಪ್ರತಿವಾದಿರ ಕುಟುಂಬಕ್ಕೂ ಬಾಧಿಸತಕ್ಕದ್ದಲ್ಲವೆಂತ ಸ್ಥಾಪಿಸಬೇಕಾಗಿ ವಗೈರೆ ಸದ್ರಿ ಶಾರದಾ ಬ್ಯಾಂಕ ಕೂಡ 2 ಜನರು ಕಾ. ಡಿ. ಮುನ್ಸಿಫ್ ಕೋರ್ಟನಲ್ಲಿ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 29-1-40ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆ ಕುರಿತು ನಿಮಗೆ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲು ಹಗಲು ಘಂಟೆ 11ಕ್ಕೆ ಸದ್ರಿ ಕೋರ್ಟ ಮುಂದೆ ಖುದ್ದಾಗಲೀ ವಕೀಲ ಮೂಲಕವಾಗಲೀ ಹಾಜರಾಗಿ ಉದಾಹರಿಸಬಹುದೆಂತ ತಿಳಿಸೋಣಾಗಿಯದೆ.

ಕಾಸರಗೋಡು 17-1-40 } **C. H. Kamath**, B.A.B.L ವಾದಿರಕಡೆ ವಕೀಲ

## ಹುಷಾರ್

ಮೋಟಾರನ್ನು ನಡೆಸುವುದಕ್ಕೆ ಎಷ್ಟೋ ಹುಷಾರಿರಬೇಕು. ಸಮಯಕ್ಕೆ ಅನುಗುಣವಾಗಿ ಕಾರನ್ನು ಕ್ಷಣ ಮಾತ್ರದಲ್ಲಿ ಪಕ್ಕಕೆ ತಿರುಗಿಸಿ ನಡೆಸುವಂಥ ನರಗಳ ಪಟುತ್ವವೂ, ಜಿಗಿಯಾದ ಖಂಡಪುಷ್ಟಿಯೂ, ತೀಕ್ಷ್ಣವಾದ ದೃಷ್ಟಿಪಾಟವವೂ, ಒಂದು ಕ್ಷಣ ಮಾತ್ರದಲ್ಲಿ ಯೋಚನೆ ಮಾಡಿ ನಿರ್ಧರಿಸುವಂಥ ಚುರುಕಾದ ಮೆದುಳು ಅವಶ್ಯಕವಾಗಿ ಬೇಕು. ಇವೆಲ್ಲವೂ ಒಂದು ಮೋಟಾರನ್ನು ನಡೆಸುವುದಕ್ಕೆ ಮಾತ್ರವೇ ಅಲ್ಲದೆ ಆನಂದಮಯವಾದ ಜೀವಯಾತ್ರೆಯನ್ನು ನಡೆಸುವುದಕ್ಕೂ ಅವಶ್ಯಕವೆ ಭಾರತದಲ್ಲೆಲ್ಲಾ ಅತ್ಯುತ್ತಮವಾದ ಟಾನಿಕ್ಕೆಂದು ಪ್ರಸಿದ್ಧಿ ಹೊಂದಿರುವ

## ಜೀವಾಮೃತ

ಸ್ತ್ರೀಪುರುಷರೆಲ್ಲರಿಗೂ ಈ ಮಹತ್ತರವಾದ ಶಕ್ತಿಯನ್ನೂ, ದೇಹಾರೋಗ್ಯವನ್ನೂ ಉಂಟುಮಾಡುವುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ದೊರೆಯುವುದು.

ತಯಾರಿಸುವವರು:

ಆಯುರ್ವೇದಾಶ್ರಮಂ ಮದ್ರಾಸು

ಸ್ಥಳೀಯ ಏಜಂಟರು:

ಪಾಪ್ಯುಲರ್ ಸ್ಟೋರ್ಸ್

ರಥಬೀದಿ – ಮಂಗಳೂರು.


## ನೋಟೀಸು

ಪುತ್ತೂರು ತಾಲೂಕು ೧೫೦ನೇ ಪೊಡಿಲನಾಳ ಗ್ರಾಮದ ಕೆರೂರಿಯಲ್ಲಿರುವ ದೇವಪ್ಪ ಮಲ್ಲೇ ಹೆಂಡ್ತಿ ಕುಸುಮಾಜಿ ಅಮ್ಮನು ತಿಳಿಯಪಡಿಸುವದೇನಂದ್ರೆ—

ಪುತ್ತೂರು ತಾಲೂಕು ೧೫೦ನೇ ಪೊಡಿಲನಾಳ ಗ್ರಾಮದ ನನ್ನ ಹೆಸರ ೧೦ನೇ ಪಟ್ಟೆಗೆ ಪಳಪಟ್ಟ ಸರ್ವಾಧಿ ಆಸ್ತಿಯು ವ್ಯವಸ್ಥಾಪತ್ರಮೂಲಕ ನನ್ನ ಹಕ್ಕಿಗೆ ಬಂದಿದ್ದಾಗಿದ್ದು ನನ್ನ ಸ್ವಾಧೀನತೆಯಿಂದ ತೀರ್ವೆ ಕೆತ್ತು ಅನುಭವಿಸಿ ಬರುವಂಥಾದ್ದಾಗಿರುತ್ತದೆ.

ನಾನು ಈ ವರೇಗೆ ಪಕ್ಷಗಳಿಗೆ ಕೊಡುತಿದ್ದ ಗೇಣಿ ಚಾಸ್ತಿ ರಶೀದಿಗಳಲ್ಲಿಯೂ ವ ಇತರ ಬರಹ ಮೂಲಕ ದಾಖಲೆಗಳಲ್ಲಿಯೂ 'ಕುಸುಮಾಜಿ ರುಜು' ಎಂತ ಕನ್ನಡ ಬರಹದ ಬರೇ ದಸ್ಕತು ಮಾಡುತ್ತಿದ್ದೆ.

ಈ ಲಾಗಾಯ್ತು ನಾನು ನನ್ನ ದಸ್ಕತಿನಿಂದ ಮಾಡುವ ಯಾವತ್ತು ರಿಕಾರ್ಡುಗಳಿಗೆ ಯಾ ರಶೀದಿಗಳು ವಗೈರೆ ದಾಖಲೆಗಳಿಗೆ ಮೇಲೆ ಕಾಣಿಸಿದಂತೆ ನಾನು ಮಾಡುವ ನನ್ನ ದಸ್ಕತಿನ ಅಡಿಯಲ್ಲಿ ನನ್ನ ಮಗ 'ಕುಮಾರಯ್ಯ ಅರಿಗ'ನ, ಕನ್ನಡ ಬರಹದ ಸಾಕ್ಷಿ ಹಾಕಿಸುವದಾಗಿ ನಿರ್ಣಯಿಸಿರುವದ್ರಿಂದ ಸದ್ರಿ ಕುಮಾರಯ್ಯ ಅರಿಗನ ಸಾಕ್ಷಿಯಿಲ್ಲದೆ ಇರುವ ಯಾವ ರಿಕಾರ್ಡುಗಳೂ ನನ್ನ ತಿಳುವಳಿಕೆ ವ ಒಪ್ಪಿಗೆಯಿಂದ ಆದವುಗಳು ಅಥವಾ ಆಗುವಂಥವುಗಳು ಅಲ್ಲವೆಂತಲೂ ಮತ್ತು ಅವುಗಳು ಯಾವ ಕಾರಣಗಳಿಂದಲೂ ಮಂಜೂರು ಯಾ ಸಿಂಧಾಗತಕ್ಕವುಗಳಲ್ಲವೆಂತಲೂ ಸಹಾ ಈ ಮೂಲಕ ತಿಳಿಸಿದುತ್ತೇನೆ.

ಮೊಕ್ಕಾಂ ಘರಾರಿ ತಾ. ೨೨-೧-೪೦ } ಕುಸುಮಾಜಿನ ರುಜು

## ನೋಟೀಸು

### ಕಾಸ್ರಗೋಡ ಡಿ. ಮು. ಕೋರ್ಟನಲ್ಲಿ

O. P. No 4/1940

1 ಸುಬ್ಬಮ್ಮ
2 ರಾಮ
3 ಜನಾರ್ಧನ } ಮ್ಯಾನರು, } ಗಾಣಿಗ ಗುಂಬ ಚ್ಚಿಯು ಮಕ್ಕಳು } ಅರ್ಜಿದಾರರು
4 ರಾಘವ

ಕಾಸರಗೋಡ ತಾಲೂಕು ಅಸ್ಕತ್ತಬೈಲು ಗ್ರಾಮದಲ್ಲಿರುವವರು

ಅರ್ಜಿದಾರ್ರ ತಾಯಿ ಮೃತಪಟ್ಟ ಕುಂಬಚ್ಚಿಗೆ ಹೊರಗಿನಿಂದ ಬರ ಸಾಲ ವಸೂಲಿಬಗ್ಗೆ ೧ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕೆಂತ ಅರ್ಜಿದಾರ್ರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. ೧೪ [illegible] ೨—೧೯೪೦ ಲ್ಲು ಮೇಲ್ಕಂಡ ಕೋರ್ಟನಲ್ಲಿ ತನ್ನಿ ಬಗ್ಗೆ ಇಡೋಣಾಗಿಯದೆ.

ತಾರೀಕು ಕಾಸ್ರಗೋಡ } **B. Amrith Rao** *Pleader for Petitioners*

## ನೋಟೀಸು

### ಪುತ್ತೂರು ಡಿ. ಮು. ಕೋರ್ಟನಲ್ಲಿ

P. E. P. 416/39

ಕೆ. ಈಶ್ವರ ಭಟ್ಟ . . . ಅರ್ಜಿದಾರ

ಸುಬ್ರಾಯ ಯಾನೆ ರಾಮನ್ನಾಕ— ಎದ್ರಿ

ಸದ್ರಿ ಎದ್ರಿ ಸುಬ್ರಾಯ ಯಾನೆ ರಾಮ ನ್ನಾಕಗೆ ಈ ಮೂಲಕ ತಿಳಿಸುವುದೇನಂದ್ರೆ

ಮೇಲ್ಕಂಡ ಅಮ್ಲಜ್ಯಾರಿಯಲ್ಲಿ ಕ್ರಯಚೀಟಿನ ಮಸೂದೆ ಹಾಜರುಪಡಿಸಿ ರಿಜಿಸ್ಟ್ರಿ ಮಾಡಿಸಿ ಕೊಡಿಸಬೇಕಾಗಿ ವಗೈರೆ ಅರ್ಜಿದಾರನು ಕೇಳಿಕೊಂಡ ಕುರಿತು ತನ್ನಿ ಬಗ್ಗೆ ತಾ. ೩-೨-೪೦ಕ್ಕೆ ಇಟ್ಟದೆ. ಆ ಕುರಿತು ಆಕ್ಷೇಪವಿರುವುದಿದ್ರೆ ಆ ದಿವ್ಸ ೧೦ ಘಂಟೆಗೆ ಸರಿಯಾಗಿ ಕೋರ್ಟಮುಂದೆ ಸ್ವತಹ ಅಥವಾ ವಕೀಲರ ಮುಖಾಂತರವಾಗಲಿ ಹಾಜ್ರಾಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಾರ್ಟ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು ತಿಳಿದಿರಲಿ.

ಪುತ್ತೂರು 17–1–40 } **C. S. Shastry** Vakil for Petitioner

# ವೈಸರಾಯರ ಪ್ರಕಟಣೆಯಲ್ಲಿ ಒಪ್ಪಂದದ ಸೂಚನೆಯಿದೆ!

## ಗಾಂಧಿಜಿಯವರ ಹೇಳಿಕೆ

### ಸಮತಾವಾದಿಗಳಿಗೆ ಒಂದು ಉತ್ತರ

ವೈಸರಾಯರ ಇತ್ತೀಚೆಯ ಪ್ರಕಟಣೆಯಲ್ಲಿ ಉಭಯ ರಾಷ್ಟ್ರಗಳಲ್ಲಿ ಯೋಗ್ಯ ಗೌರವಯುತ ಒಪ್ಪಂದವಾಗುವಂತಹ ಸೂಚನೆಯು ಇದೆಯೆಂದು ಬರೆಯುತ್ತಾರೆ ಮಹಾತ್ಮಾಜಿಯವರು ಈ ವಾರದ ಹರಿಜನದಲ್ಲಿ

"ನಾನು ಯುದ್ಧ ಕಾತುರನಾಗಿಲ್ಲ, ನಾನದನ್ನು ತಪ್ಪಿಸಲಿಕ್ಕೆ ಯತ್ನಮಾಡುತ್ತೇನೆ ಸುಭಾಸ ಬಾಬುಗಳು ಹೊರಿಸುವ ಆರೋಪವನ್ನು ನಾನು ನನ್ನ ಮಟ್ಟಿಗೆ ಒಪ್ಪಿಕೊಳ್ಳುತ್ತೇನೆ ನಾನು ಬ್ರಿಟನಿನೊಡನೆ ಗೌರವಯುತ ಒಪ್ಪಂದ ಮಾಡಲು ಇಚ್ಛೆಯುಳ್ಳವನಾಗಿದ್ದೇನೆ ಸತ್ಯಾಗ್ರಹವೇ ಆ ಇಚ್ಛೆಯನ್ನು ಒಲಪಡಿಸಿದೆ ಆದುದರಿಂದ ನಾನಿಂದ ಹೋರಾಟಕ್ಕೆ ಆತುರಗೊಂಡಿಲ್ಲ ಆದರೆ ಸಮಯ ಬಂದಾಗ, ನನಗೆ ಹಿಂಬಾಲಕರು ಇಲ್ಲದಿದ್ದರೂ, ನಾನು ಏಕಾಕಿಯಾಗಿಯೇ ಹೋರಾಡಬಲ್ಲೆ ಆದರೆ ಬ್ರಿಟನಿನ ಕುರಿತು ನಾನು ವಿಶ್ವಾಸವನ್ನು ಕಳಕೊಂಡಿಲ್ಲ" ಎನ್ನುತ್ತಾರೆ ಗಾಂಧಿಜಿಯವರು.

"ನಾನು ಲೋರ್ಡ್ ಲಿನ್‌ಲಿತ್‌ಗೋರವರ ಇತ್ತೀಚೆಯ ಪ್ರಕಟಣೆಯನ್ನು ಮೆಚ್ಚುತ್ತೇನೆ ಅವರು ಸತ್ಯ ಹೃದಯದವರೆಂದು ನಾನು ನಂಬುತ್ತೇನೆ ಅದರಲ್ಲಿ ಕೆಲವು ತೆಗೆದು ಹಾಕಬೇಕಾದ ವಿಷಯಗಳು ಇದ್ದುವು. ಆದರೂ ಎರಡು ರಾಷ್ಟ್ರಗಳಿಗೂ ಹಿತವಾಗುವಂತೆ ಗೌರವಯುತ ಒಪ್ಪಂದ ಮಾಡಲು ಬ್ರಿಟನು ಸಿದ್ಧವಿದೆಯೆಂಬ ಸೂಚನೆಯು ಅದರಲ್ಲಿದೆ. ಆದಕಾರಣ, ಯಾರು ನನ್ನನ್ನು ಅನುಸರಿಸುತ್ತಾರೋ ಅವರು ಈ ವಿಷಯದಲ್ಲಿ ನನ್ನ ಮಾತನ್ನು ನಂಬುವರೆಂದು ತಿಳಿಯುತ್ತೇನೆ ನಿಜವಾಗಿ ನನ್ನ ಈ ಒಪ್ಪಂದವನ್ನು ಮಾಡಿಕೊಳ್ಳುವಂತಹ ವಿಚಾರದ ಮಾತುಗಳು ರಾಜಕೀಯ ದೃಷ್ಟಿಯಿಂದ ನನಗೆ ಅಗೌರವಕರವಾಗಬಹುದು. ಆ ವಿಷಯವನ್ನು ರಾಷ್ಟ್ರವು ತಿಳಿಯುವುದು.

ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಖಾದಿಯ ವಾಕ್ಯವನ್ನು ಸೇರಿಸಿರುವ ವಿಷಯದಲ್ಲಿ ಸಮತಾವಾದಿಗಳಾದ ಶ್ರೀ. ಜಯಪ್ರಕಾಶ ನಾರಾಯಣ ಮತ್ತು ಸ್ವಾಮಿ ಸಂಪೂರ್ಣಾನಂದ ಇಂತಹವರು ಮಾಡಿದ ಟೀಕೆಗೆ ಉತ್ತರ ಕೊಡುತ್ತಾ ಗಾಂಧಿಜಿಯವರು ಹೀಗೆನ್ನುತ್ತಾರೆ

"ಈ ವರ್ಷ ಆ ವಾಕ್ಯವು ಅರ್ಥವತ್ತಾಗಬೇಕೆಂದು ನಾನು ನಂಬುತ್ತೇನೆ ರಾಷ್ಟ್ರೀಯ ಸ್ವಾತಂತ್ರ್ಯ ಸಂಪಾದನಗೆ ಚರಕಾ ಮತ್ತು ಖಾದಿಯೇ ಅತ್ಯಂತ ಅವಶ್ಯವಾದುದು ಎಂಬ ವಿಷಯವನ್ನು ಅದು ಸ್ಪಷ್ಟಪಡಿಸಿ, ಖಾದಿಯ ಕುರಿತು ಜನರು ಪವಿತ್ರತೆಯನ್ನು ಭಾವಿಸುವಂತೆ ಅದು ಮಾಡುತ್ತದೆ ಈ ವರ್ಷದ ಖಾದೀ ಪ್ರತಿಜ್ಞೆಯ ಮಹತ್ವವನ್ನು ನಾನು ಬರೆಯ ನೂಲುವಿಕೆಯ ಪ್ರತಿಜ್ಞೆಯ ಮೇಲಿಂದಲ್ಲದೆ ಇಡೀ ದೇಶದಲ್ಲಿ ಎಷ್ಟು ಹೆಚ್ಚು ಖಾದಿಯು ಉತ್ಪನ್ನವಾಯಿತು ಎಂಬ ದೃಷ್ಟಿಯಿಂದ ಅಳೆಯುವೆನು"

"ಸ್ವಾತಂತ್ರ್ಯ ಪ್ರತಿಜ್ಞೆಯ ದಿನ ಇತರ ಧುರೀಣರು ಕೆಲವರು ಪ್ರಕಟಿಸಿದಂತೆ ವಿದ್ಯಾರ್ಥಿಗಳ ಶಾಲೆಗಳಿಂದ ಹೊರಬರುವುದನ್ನೂ ಕೆಲಸಗಾರರು ಉದ್ಯೋಗ ಮಾಡದ ಇರುವುದನ್ನೂ ನಾನು ಬೋಧಿಸಬಾರದೆಂದು ಅವರಿಗೆ ಹೇಳುತ್ತೇನೆ ಏಕೆಂದರೆ, ಅದು ಶಿಸ್ತು ಇಲ್ಲದಂತೆ ದರ್ಶಿಸುವ ಒಂದು ಪಾರವೆಂದ ನನ್ನ ಅಭಿಮತವಾಗಿದೆ

"ಕ್ರಮಬದ್ಧವಲ್ಲದ ನುಷ್ಕರ ಮೊದಲಾದವುಗಳಿಂದ ಹಿಂಸೆಯುಂಟಾಗುವುದು. ಅಂತಹ ಹಿಂಸೆಗಳು ಅಹಿಂಸಾ ಸಮರವನ್ನೇ ದುರ್ಬಲಗೊಳಿಸುವವು ಆದುದರಿಂದ ಸಮತಾವಾದಿಗಳೇ ಮೊದಲಾದ ತೀವ್ರಗಾಮಿಗಳು ಅಂತಹ ವಿಷಯಗಳಲ್ಲಿ ನನ್ನ ಸಹಾನುಭೂತಿಯನ್ನು ಅಪೇಕ್ಷಿಸಬಾರದು. ಯಾಕೆಂದರೆ ಅಂತಹವುಗಳಿಂದ ಅಪಾರ ಹಾನಿಯಿದೆಯೆಂದು ನನಗೆ ಮೊದಲೇ ಅನುಭವವಿದೆ. ಆದುದರಿಂದ ಸೈನಿಕರು ದಳಪತಿಯೊಡನೆ ಒಂದೇ ಬುದ್ಧಿಯಿಂದ ನಡೆದುಕೊಳ್ಳಬೇಕಾಗಿ ನಾನು ಸೂಚಿಸುತ್ತೇನೆ" ಎಂದು ಬರೆದಿರುವರು.


**HALFTONE & LINE BLOCK MAKING UNDERTAKEN**

**Sharada Press, MANGALORE**



ಎಲ್ಲಾ ಸಮಾಜದ ಮತ್ತು ತರಗತಿಯ ಜನರ ಮೆಚ್ಚುಗೆಯನ್ನು ಪಡೆದು ಪ್ರಖ್ಯಾತವಾಗಿದೆ
ಧರ್ಮಾರ್ಥವಾಗಿಸಿಗುವ ಕೆಟಲಾಗಿನಿಂದ ಬೇಕಾದ 'ಸೆಕುಂಡಸ್' ವಾಚನ್ನು ಆರಿಸಿರಿ




**WEST END WATCH Co**
BOMBAY CALCUTTA



THE

**BANK OF MANGALORE LTD.,**

**MANGALORE**

ESTD 1931

*Branches*-

**Mudabidri & Padubidri.**

Fixed Deposits will be received at following rates of interest

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly.

***Savings Bank deposit 3½% on daily balances.***

**All kinds of banking business transacted**


**ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!**

ಧಾರ್ಮಿಕ ವಿಚಾರ:

# ವಿಶ್ವಾಸವೋ ತರ್ಕಬುದ್ಧಿಯೋ?

## ಸಂಶಯಾತ್ಮರಿಗೆ ಉಪದೇಶ

(ಗಾಂಧಿಜಿಯವರ ಲೇಖನ)

**[ಅಲವು ವಿಷಯಗಳಲ್ಲಿ ನಾವು ಒಂದಲಗೊಳ್ಳುತ್ತೇವೆ. ತರ್ಕ ಸರಣಿಯಲ್ಲಿ ವಾದ ಮಾಡುತ್ತಾ ಹೋಗುವುದರಲ್ಲಿ, ಯಥಾರ್ಥವನ್ನು ಮರೆಮಾಡಿ ಮರೆಸುವವರೂ ಇದ್ದಾರೆ—ನಾಸ್ತಿಕತ್ವವನ್ನು ಸಾರುವವರಿದ್ದಾರೆ; ಪಾಪಗಳಿಗೆ ಅಂಜಬೇಡಿ ಎಂಬವರಿದ್ದಾರೆ; ಅಧರ್ಮವಿಲ್ಲವೆಂಬವರಿದ್ದಾರೆ; ಆದರೆ ಇಂತಹ ತರ್ಕ ವಿಚಾರಗಳು ಬಂದಾಗ, ವಿಶ್ವಾಸವೊಂದೇ ನಮಗೆ ಆದರ್ಶವಾಗಿದೆಯೆಂದು ಮಹಾತ್ಮಾಜಿಯವರು ಒಬ್ಬ ತರುಣನಿಗೆ ಉಪದೇಶಾಮೃತವನ್ನು ಹೇಳಿದ್ದಾರೆ.]**

ಮಹಾತ್ಮಾಜಿಯವರಿಗೆ ತರುಣನು ಬರೆದ ಪತ್ರದ ಮೇಲೆ ಅವರ ವಿಮರ್ಶಾತ್ಮಕ ಲೇಖನವೊಂದು ಹರಿಜನದಲ್ಲಿ ಬಂದಿದೆ.

ತರುಣನು ಗಾಂಧಿಜಿಯವರಿಗೆ ಹೀಗೆ ಬರೆದಿದ್ದನು:

"ನಾನಿಲ್ಲಿ ಕೆಲವುಂದಿ ತರುಣ 'ನಾಗರಿಕರ' ಎಂದರೆ 'ಹೇತುವಾದಿ'ಗಳ ಮಧ್ಯದಲ್ಲಿರಬೇಕಾದ ಸಂದರ್ಭವು ಒದಗಿದೆ. ಅವರು ನನ್ನನ್ನು ಕಂಡರೆ ಅಣಕಿಸುತ್ತಾರೆ, ಅಪಹಾಸ್ಯಮಾಡುತ್ತಾರೆ ಕಾರಣವೇನೆಂದರೆ, ನಾನು ನೀತಿ–ಅನೀತಿ, ಒಳ್ಳೆಯದು–ಕೆಟ್ಟದ್ದು, ಇವು ಕೇವಲ ವ್ಯವಹಾರ ಆವಶ್ಯಕತೆಗಳೆಂದು ತಿಳಿದು ಅವರೊಂದಿಗೆ ಬೆರೆಯುವುದಿಲ್ಲವೆಂದು. ಆದರೆ ಅವರ ಭಾವನೆ ತಪ್ಪು, 'ನನ್ನ ಭಾವನೆ ಸರಿ ಎಂದು ಮನವರಿಕೆಯಾಗಿದೆ ಕಣ್ಣಿಗೆ ಕಾಣಿಸದಿದ್ದರೂ ಒಂದು ಸಂಪೂರ್ಣ ಸತ್ಯವಸ್ತು'ವನ್ನು ಆಧರಿಸಿಕೊಂಡೇ ಲೋಕದ ಧರ್ಮ–ನೀತಿ ಶಾಸ್ತ್ರಗಳ ರಚನೆಯಾಗಿದೆಯೆಂದು ನಾನು ಇನ್ನೂ ನಂಬಿದ್ದೇನೆ ಮದ್ಯಪಾನ ಮಾಡುವುದೂ ಸಹ ಕಾಫಿ ಮತ್ತು ಟೀ ಇವುಗಳನ್ನು ಕುಡಿವಷ್ಟೇ ಕೆಟ್ಟದ್ದಲ್ಲದೆ ಹೆಚ್ಚೇನೂ ಅಲ್ಲವೆಂದು ನನ್ನನ್ನು ಒಪ್ಪಿಸಲು ಅವರು ವಾದ ಮಾಡುತ್ತಾರೆ. 'ಮಾಂಸ ಪ್ಯಾನು ಕುಡಿಯವುದರ ಮೇಲಾಗಲೀ ತಿನ್ನುವುದರ ಮೇಲಾಗಲೀ ನೀತಿ ಧರ್ಮಗಳು ನಿಂತಿಲ್ಲವೆಂದು ಅವರು ಒತ್ತಿ ಹೇಳುತ್ತಿದ್ದಾರೆ.

"ಮಾತ್ರವಲ್ಲ—ನಾನು ಮುಖ್ಯವಾಗಿ ತಮ್ಮ ಬುದ್ಧಿವಾದಕ್ಕಾಗಿ ನಿರೀಕ್ಷಿಸಿಕೊಂಡಿರುವ ವಿಚಾರವು ಮತ್ತೊಂದಿದೆ ಅದು ಇದು. ಅವರು ಹೇಳುತ್ತಾರೆ—'ಪರಸ್ತ್ರೀ ನಿಷೇಧವು ಕೇವಲ ಸಾಮಾಜಿಕ ಕಟ್ಟುನಿಟ್ಟುಗಳನ್ನು ಕಾಪಾಡುವುದಕ್ಕಾಗಿ ಮಾತ್ರ ವಿಧಿಸಲ್ಪಟ್ಟಿದೆಯೆಂದು. ಯಾರಿಗೂ ತೊಂದರೆ ಕೊಡದ, ಮತ್ತಾವ ಗಡಿಬಿಡಿಗೂ ಈಡುಮಾಡದ ಇಂದ್ರಿಯ ಸುಖಾನುಭವವು ಕೇವಲ ನೈಸರ್ಗಿಕವಾದುದೆಂದೂ ಅದ ಕಾರಣವೇ ನೀತಿಯುತವಾದುದೆಂದೂ ಅವರ ಅಭಿಪ್ರಾಯವಾಗಿದೆ. ಅವರ ಎಣಿಕೆಯಲ್ಲಿ ಅತಿಶಯ ಇಂದ್ರಿಯ ಲೋಲುಪತೆಯು—ಮಿತಿಯಿಲ್ಲದೆ ತಿನ್ನುವಂತೆ ಬಾಧಕಕಾರಿಯೇ ಹೊರತು ಮತ್ತೇನೂ ಅಲ್ಲ (ಪಾಪಗೀಪವೆಂಬುದೇನಿಲ್ಲ) ಎಂದಿದೆ. ಒಬ್ಬ ಮನುಷ್ಯನಿಗೆ ತನ್ನ ಪತ್ನಿಯೊಡನೆ ನಡೆಸುವ ದಾಂಪತ್ಯಜೀವನವು ಹೇಗೆ ನೀತಿವಿರುದ್ಧವೆನ್ನಿಸಲಾರದೋ ಹಾಗೆಯೇ ಮತ್ತೊಬ್ಬ ಸ್ತ್ರೀಯೊಡನೆ ನಡೆಸುವ ದೇಹ ಸಂಬಂಧವೂ ನೀತಿ ಬಾಹಿರವೆನ್ನಿಸಲಾರದು ಈ ವಿಚಾರದಲ್ಲಿ ನೀತಿ ನಿಯಮಗಳ ಗೊಂದಲಗಳೇನಿಲ್ಲ ಎಂದಿದೆ ಅವರ ಅಭಿಪ್ರಾಯ

"ನನ್ನ ನಂಬಿಕೆಗೆ ಅವರ ಈ ವಾದ ಸರಣಿಯಿಂದ ಒಂದು ಬಲವಾದ ಪೆಟ್ಟು ತಗುಲಿದಂತಾದರೂ, ಅವರ ಈ ತರ್ಕದಲ್ಲಿ ಏನೋ ಒಂದು ಲೋಪವುಂಟೆಂದು ಮನಸ್ಸಿಗೆ ಬೋಧವಾಗುತ್ತಿದೆ ಆದರೆ ಪರಸ್ಪರ ವಾಗ್ಯುದ್ಧಕ್ಕೆ ನಿಂತಾಗ ಮಾತ್ರ ಅವರು ನನ್ನನ್ನು ಯಾವಾಗಲೂ ಮೂಲೆಗೆ ಕೂರಿಸುತ್ತಾರೆ. ಆಗ ನಾನು ಅವರು ಅಂಧಶ್ರದ್ಧ ಎಂದು ಕರೆವ ಶೋಚನೀಯ ಸ್ಥಿತಿಯಲ್ಲಿ ಮರೆಗೊಳ್ಳಬೇಕಾಗುತ್ತದೆ

"ಹೀಗಾಗಿ ಅವರ ಈ ವಿಷಯದಲ್ಲಿ ನನಗಿದ್ದ ಯುಕ್ತಾಯುಕ್ತ ವಿವೇಚನಾ ಶಕ್ತಿಯನ್ನೇ ಧ್ವಂಸಗೊಳಿಸಿದ್ದಾರೆ. ನನಗೆ ನನ್ನಲ್ಲೇ ನಂಬಿಕೆ ತಪ್ಪಿಹೋದ ಹಾಗಿದೆ ಆದರೂ ನಾನು ಅವರಿಗೆ—'ಅಯ್ಯಾ, ನಾನು ಮಹಾತ್ಮಾಜಿಯವರ ಸಂಗಡಿಗನಾಗಿದ್ದು ನರಕಕ್ಕೆ ಹೋಗಲಿಕ್ಕಾದರೂ ಸಿದ್ಧನಾಗಬಲ್ಲೆನಲ್ಲದೆ, ನಿಮ್ಮಂಥವರ ಸಂಗದ ಸ್ವರ್ಗರಾಜ್ಯಕ್ಕೆ ಹೋಗಲೂ ಬಯಸಲಾರೆ ಎಂದು ಹೇಳಿಬಿಟ್ಟೆ ಆದುದರಿಂದ ಮಹಾತ್ಮಾಜಿಯವರೇ, ತಮ್ಮ ಲವಲೇಶ ಬುದ್ಧಿಬಲದಿಂದ ನನಗೆ ಸಂಭವಿಸಿರುವ ಈ ಬೌದ್ಧಿಕ ವಿತ್ತ ತೊಳಲಾಟ [illegible] ಚಿತ್ರಹಿಂಸೆಯಿಂದ ನನ್ನನ್ನು ಪಾರುಮಾಡಿರೆಂದು ತಮ್ಮನ್ನು ಬೇಡುತ್ತೇನೆ ತಾವು ನನ್ನನ್ನು ನಿರಾಶನನ್ನಾಗಿ ಮಾಡಲಾರಿರೆಂದು ನಾನು ಖಂಡಿತ ನಂಬಿದ್ದೇನೆ.'

ಈ ಪತ್ರದ ಮೇಲೆ ಮಹಾತ್ಮಾಜಿಯವರು ಹೀಗೆ ಬರೆದಿದ್ದಾರೆ

"ಇದು ಈ ತರುಣನು ಬರೆದ ಹೆಚ್ಚು ಕಮ್ಮಿ—ಪೂರ್ತಿ ಕಾಗದ ಇದರ ವಿಚಾರವಾದರೂ ಇತರ ಅನೇಕರ ಪತ್ರಗಳ ಮಾದರಿಯಲ್ಲೇ ಇದೆ 'ಸತ್ಯಶೋಧನೆಯಲ್ಲಿ ನನ್ನ ಅನುಭವಗಳು' ಎಂಬ ನನ ಗ್ರಂಥವನ್ನು ಓದಿದವರು, ನಾನೂ ಸಹ ಇಂತಹ ಅನುಭವಗಳ ಪ್ರವಾಹದಲ್ಲೇ ಹಾದು ಹೋಗಬೇಕಾಯಿತೆಂದು ತಿಳಿದಿರುವರು ಈ ನಮ್ಮ ಪತ್ರ ಲೇಖಕರಂತೆ ಕಷ್ಟದಲ್ಲಿ ಸಿಕ್ಕು ತಪ್ಪಿಸುತ್ತಿರುವವರಿಗೆಲ್ಲಾ, ಮೇಲ್ಕಂಡ ಪುಸ್ತಕದಲ್ಲಿನ ಆಯಾ ಅಧ್ಯಾಯಗಳನ್ನು ಓದಬೇಕೆಂದು ನಾನು ಹೇಳಬಯಸುತ್ತೇನೆ.

**ವಿಷಯಾಕರ್ಷಣೆಗಳ ಮಧ್ಯೆ ಉಚಿತಾನುಚಿತ ಬುದ್ಧಿಯು ಶುದ್ಧವಾಗಿ ಬಲಹೀನವಾಗಿ ಬಿಡುವುದು. ವಿಶ್ವಾಸ–ಭಕ್ತಿ ಅಥವಾ ಶ್ರದ್ಧೆಯೊಂದು ಮಾತ್ರವೇ ನಮ್ಮನ್ನು ಅಂತಹ ಸಂದರ್ಭದಲ್ಲಿ ಕಾಪಾಡಬಲ್ಲುದು.** ತರ್ಕಬುದ್ಧಿಯಾದರೋ ಕುಡಿತ ಮತ್ತು ಕಾಮಿನಿಯರ ಪಕ್ಷದಲ್ಲೇ ನಿಲ್ಲಬಹುದೆಂದು ತೋರುತ್ತದೆ ಅಂಥಾ ಸಂದರ್ಭಗಳಲ್ಲಿ ಬುದ್ಧಿಯು ಮಸಣಿಸಿ ಹೋಗಿ ಮೋಸಪಡಿಸುವುದೆಂದು ಹೇಳದಿದ್ದರೆ ವಿಧಿಯಿಲ್ಲ ಪಕ್ಷ ಪ್ರತಿಪಕ್ಷಗಳಿದ್ದು ವಾದಿಸುವ ಲಾಯರುಗಳು ತಮ್ಮ ತಮ್ಮ ಪಕ್ಷವು ನ್ಯಾಯವಾಗಿದೆಯೆಂದ ವಾದದಿಂದ ಸಿದ್ಧಪಡಿಸುವುದಿಲ್ಲವೆ? ಆದರೆ ಅವರಲ್ಲಿ ಒಬ್ಬರು ತಪ್ಪಾಗಿರಬಹುದು, ಅಥವಾ ಇಬ್ಬರೂ ತಪ್ಪಾಗಿರಬಹುದು, ಅಲ್ಲವೆ? ಬುದ್ಧಿ [illegible] ಹೇತುವಾದಿಗಳೊಂದಿಗೆ ನೀತಿ ನ್ಯಾಯಗಳ ಪಕ್ಷದಲ್ಲಿ [illegible] ಈ ತರ್ಕ ವ್ಯವಹಾರದಲ್ಲಿ ನನಗೆ ನಂಬಿಕೆಯೊದಗೆ ಆಧಾರವಾಗಿರಬಲ್ಲುದು

ಈ ತರುಣನಂದಿಗ [illegible] ವಾದದವರ ವಾದ ಸರಣಿಯು [illegible] ವಾಗಿದೆ ಸರ್ವಕಾಲ ಸರ್ವದೇಶಗಳಲ್ಲಿ [illegible] ಧ ವೆನ್ನಿಸುವ ಸಿದ್ಧಾಂತವೆಂದ ಅಂತಹ ನೀತಿಶಾಸ್ತ್ರವೆಂಬುದಿಲ್ಲ ಆದರೆ, ನವ್ಯತೆ ಅಪೂರ್ಣರೂ ನಶ್ವರರೂ ಆದ ಮನುಷ್ಯವರ್ಗದ ನಡವಳಿಕೆಗಳ ನಿಯಂತ್ರಿಸುವಷ್ಟು ಒಂದು [illegible] ಶಾಸ್ತ್ರವೇನೋ ಉಂಟು ಹೇಗೆಂದರೆ, ಔಷಧರೂಪವಾಗಿ, ಔಷಧದ ಅಳತೆಯಂತೆ, ಡಾಕ್ಟರುಗಳು ಕೊಟ್ಟ ತಿಳುವಳಿಕೆಯನ್ನನುಸರಿಸಿ ಸೇವಿಸುವುದು ಹೊರತಾಗಿ, ಮತ್ತೇರಿಸುವ ಮದ್ಯ ಮೊದಲಾದುವುಗಳನ್ನು ತೆಗೆದುಕೊಳ್ಳುವುದು ನಿರ್ಧಾರವಾಗಿ ಅನೀತಿಯೆನ್ನಲು ಸಂಶಯವೇನಿಲ್ಲ ಅದರಂತೆಯೇ, ತನ್ನ ಪತ್ನಿಯಲ್ಲದೆ ಬೇರೊಬ್ಬ ಹೆಂಗಸನ್ನು ಕಾಮದೃಷ್ಟಿಯಿಂದ ನೋಡತಕ್ಕದು ತಪ್ಪೇ ಎನ್ನಲು ಶಂಕಿಸಬೇಕಾಗಿಲ್ಲ ಇವೆರಡು ಸಂದರ್ಭಗಳಲ್ಲೂ ತೀಕ್ಷ್ಣವಾಗಿ ತರ್ಕ ನಡೆದಿದೆ ವಾದ ವಿವಾದವು ಇನ್ನೂ ನಡೆಯುತ್ತಲೇ ಇದೆ. ಸರ್ವಕ್ಕೂ ಮೂಲ ಕಾರಣನಾದ–ಸರ್ವೇಶ್ವರನಾದ ದೇವರಿಗೆ ಅಸ್ತಿತ್ವವುಂಟೇ ಎಂಬ ವಿಷಯದಲ್ಲಿ ಸಹ ತರ್ಕವಾದವಿದೆ' ಇಂತಹ ಅಪಾಯ ಸಂದರ್ಭಗಳಲೆಲ್ಲ ವಿಶ್ವಾಸವೊಂದೇ ತಳಹದಿಯ ಕಲ್ಲಾಗಿ ನಮ್ಮನ್ನು ಉದ್ಧರಿಸಬಲ್ಲುದು ಈ ತರುಣ [illegible] ಸರನಂತೆಯೇ, ಯಾವ ಕೊಂದರೆಗೊಳ್ಳುತ್ತಿರ [illegible] ಈ [illegible] ಸತ್ಯ [illegible] ನ ಇಂತಹ ಅನೇಕಾನೇಕ ಸಂದರ್ಭಗಳಲ್ಲಿ ಪಾಪಕೂಪಕ್ಕೆ ಬೀಳದಂತೆ ವಿಶ್ವಾಸವೇ ನನ್ನನ್ನು ಕಾಪಾಡಿದೆ ಅದು ನನ್ನನ್ನು ಎಂದೂ ಕೈಬಿಟ್ಟಿಲ್ಲ ಮಾತ್ರವಲ್ಲ ಅದು ಎಂದೂ ಯಾರನ್ನೂ ಕೈಬಿಟ್ಟಿಲ್ಲವೆಂದು ತಿಳಿದಿದ್ದೇನೆ'

ಮಹಾತ್ಮಾಜಿಯವರ ಈ ಲೇಖನ ವಿಶ್ವಾಸ ಮ [illegible] ತರ್ಕಬುದ್ಧಿ ಇವುಗಳಲ್ಲಿ ಯಾವುದರ ಸ್ಥಾನ ಗಟ್ಟಿ ಎಂಬುದನ್ನು ಬಹು ಸರಳ [illegible] ಸೂಚಿಸತಕ್ಕದಾಗಿದೆ [illegible]

ಸಾಪಕಾರ ಶ್ರೀನಿವಾಸರಂಗಪ್ಪೈ
[ ಸ್ಥಾಪನೆ: ಕ್ರಿ ಶ 1858 ]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

THE PIE-MONEY BANK LTD,
Maidan Road, MANGALORE
Undertakes all kinds of Banking Business Current account at 2½% per annum Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs 100/ to Rs. 5000/ run regularly on systematic lines. Unique Banking facilities to Businessmen and interested Public
*Apply for particulars—*
K R. GURU, *Managing Director*

# ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಮುಸಲ್ಮಾನರಿಗೆ ಅನ್ಯಾಯವಾಗಿದೆಯೆ?

## ಅಲ್ಪಸಂಖ್ಯಾಕ ಧುರೀಣರ ಅಪಪ್ರಚಾರ

### ಮದ್ರಾಸು ಕಾಂಗ್ರೆಸು ಪಕ್ಷದವರ ವರದಿ

**[ಅಲ್ಪಸಂಖ್ಯಾಕರಿಗೆ ಕಾಂಗ್ರೆಸ್ ಮಂತ್ರಿಮಂಡಳಗಳ ರಾಜ್ಯಭಾರದಿಂದ ಅನ್ಯಾಯವಾಗಿದೆಯೆಂದು ಇತ್ತೀಚೆಗೆ ಕೆಲವರು ಕೂಗೆಬ್ಬಿಸುತ್ತಿದ್ದಾರೆ. ಅದು ಸರಿಯೋ ತಪ್ಪೋ ಎಂಬ ವಿಷಯದನ್ನು ಜನತೆಗೆ ಸ್ಪಷ್ಟಪಡಿಸುವ ಸಲುವಾಗಿ ಮದ್ರಾಸು ಕಾಂಗ್ರೆಸು ಪಕ್ಷದವರು ಒಂದು ವರದಿಯನ್ನೊಪ್ಪಿಸಿರುವರು, ಅದರ ಸಾರಾಂಶವಿಲ್ಲಿ ಕೊಡಲಾಗಿದೆ.]**

ಮದ್ರಾಸಿನ ಒಟ್ಟು ಜನಸಂಖ್ಯೆ ೪೬೯ ಲಕ್ಷ. ಅವರಲ್ಲಿ ೩೩ ಲಕ್ಷ ಮುಸಲ್ಮಾನರಿರುವರು. ಅಂದರೆ ನೂರಕ್ಕೆ ೭ರಷ್ಟು. ಇವರಲ್ಲಿ ೧ರಷ್ಟು ಜನರು ಹಿಂದೂಸ್ಥಾನಿ ಮಾತನಾಡುವವರಿದ್ದು ಉಳಿದವರು ಆಯಾಯ ಪ್ರಾಂತಗಳ ಭಾಷೆಗಳನ್ನಾಡುವವರು. ೧೯೩೬—೩೭ರಲ್ಲಿ ಎಲ್ಲಾ ಶಾಲೆಗಳಲ್ಲಿ ಕೂಡಿ ೩೬೬೨೨೦ ಮುಸಲ್ಮಾನ ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದರು. ಒಟ್ಟು ಪ್ರಾಂತದ ಎಲ್ಲಾ ಜಾತಿಗಳ ವಿದ್ಯಾರ್ಥಿಗಳ ಪ್ರಮಾಣವು ನೂರಕ್ಕೆ ೧೦ ೩ರಷ್ಟಿದ್ದು ಮುಸಲ್ಮಾನರದು ೧೫ ೬ ಇದೆ. ಬೇರೆ ವಿದ್ಯಾರ್ಥಿನಿಯರ ಪ್ರಮಾಣವು ೪ ೨ ಇದ್ದು ಮುಸಲ್ಮಾನ ವಿದ್ಯಾರ್ಥಿನಿಯರ ಪ್ರಮಾಣವು ೬ ೪ ಇರುತ್ತದೆ. ಇದಲ್ಲದೆ ಮುಸಲ್ಮಾನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿಶೇಷ ಹಣ ಸಹಾಯ, ವಿದ್ಯಾರ್ಥಿವೇತನ ಸಂಬಳ ಮಾಫಿ ಮೊದಲಾದುವು ಕೊಡಲಾಗಿದೆ. ಪ್ರಾಥಮಿಕ ಮಾಧ್ಯಮಿಕ ತರಗತಿಗಳಲ್ಲಿ ಅವರು ವಿಶೇಷ ಪ್ರಗತಿ ಹೊಂದಿರುವರು.

### ಮುಸಲ್ಮಾನರಿಗೆ ಅನೇಕ ಸೌಕರ್ಯಗಳು

ಮುಸಲ್ಮಾನ ವಿದ್ಯಾರ್ಥಿಗಳನ್ನು ಎಲ್ಲಾ ಶಾಲೆಗಳಿಗೆ ಸೇರಿಸುವುದಿದ್ದರೂ ಅವರಿಗೆ ಪ್ರತ್ಯೇಕ ಶಾಲೆಗಳನ್ನೇರ್ಪಡಿಸಿದೆ. ಅಂತಹ ಪ್ರತ್ಯೇಕ ಶಾಲೆಗಳಲ್ಲಿ ೨೪೪೪೭೦ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವರು. ಇದಲ್ಲದೆ ೧೫ ಮಾಧ್ಯಮಿಕ ಶಾಲೆಗಳೂ ಮದ್ರಾಸಿನಲ್ಲಿ ಒಂದು ಪ್ರಥಮ ಕಾಲೇಜೂ ಇದೆ. ಈ ಪ್ರತ್ಯೇಕ ಶಾಲೆ ಕಾಲೇಜುಗಳಿಗೆ ಕಳೆದ ವರ್ಷ ೩೦೪೪೦೦೦ ರೂಪಾಯಿಗಳಷ್ಟು ವೆಚ್ಚವಾಗಿದೆ. ಮುಸಲ್ಮಾನ ಶಾಲೆಗೆ ಮುಕ್ಕಾಲು ಪಾಲು ಹಣವನ್ನ ಸರಕಾರದಿಂದ ಕೊಡಲಾಗುತ್ತದೆ. ಉಳಿದ ಶಾಲೆಗಳಿಗೆ ಶೇಕಡಾ ೫೬ರಷ್ಟು ವೆಚ್ಚ ಮಾತ್ರ. ಶಾಲೆ ಕಾಲೇಜುಗಳಲ್ಲಿಯ ಎಲ್ಲಾ ಮುಸಲ್ಮಾನ ವಿದ್ಯಾರ್ಥಿಗಳಿಗೆ ಅರ್ಧ ಸಂಬಳ ಮಾಫಿಯಿದೆ. ಇದರ ಜತೆಗೆ ಸಾಮಾನ್ಯ ವಿದ್ಯಾರ್ಥಿವೇತನವಲ್ಲದೆ ವಿಶೇಷ ವಿದ್ಯಾರ್ಥಿವೇತನಗಳಿವೆ. ಅವರ ಧಾರ್ಮಿಕ ಶಿಕ್ಷಣದ ಕುರಿತು ವಿಶೇಷ ಆಸಕ್ತಿ ಕೊಡಲಾಗಿದೆ. ಮದ್ರಾಸಿನಲ್ಲಿ ಘೋಷಾಪದ್ಧತಿಯ ವಿದ್ಯಾರ್ಥಿನಿಯರನ್ನು ಶಾಲಾ ಕಾಲೇಜುಗಳಿಗೆ ಕರೆತರಲು ಧರ್ಮಾರ್ಥ ವಾಹನಾದಿಗಳ ಏರ್ಪಾಡು ಇದೆ.

### ಮುಸಲ್ಮಾನ ಸದಸ್ಯರ ಪ್ರಾತಿನಿಧ್ಯ

ಮದ್ರಾಸು ಶಾಸನ ಸಭೆಯಲ್ಲಿರುವ ೨೧೫ ಸದಸ್ಯರಲ್ಲಿ ೨೯ ಸ್ಥಳಗಳು ಮುಸಲ್ಮಾನರಿಗಾಗಿ ಕಾದಿಡಲ್ಪಟ್ಟಿವೆ. ಅವರು ಪ್ರತ್ಯೇಕ ಮತದಾರ ಸಂಘಗಳಿಂದ ಆರಿಸಲ್ಪಡುವರು. ಕೌನ್ಸಿಲಿನಲ್ಲಿ ಒಟ್ಟು ೪೬ ಸ್ಥಾನಗಳಿದ್ದು ೭ ಮುಸಲ್ಮಾನರಿಗೆ ಕಾದಿಡಲಾಗಿದೆ. ಅವರ ಜನಸಂಖ್ಯೆಯು ಪ್ರಮಾಣದಿಂದ ನೋಡಿದರೆ ಇಷ್ಟು ಪ್ರಾತಿನಿಧ್ಯವು ಅವರಿಗೆ ಸಲ್ಲತಕ್ಕದಲ್ಲ.

ಮದ್ರಾಸ ಸರಕಾರದ ಸ್ಥಾನಿಕ ಸಂಸ್ಥೆಗಳಲ್ಲಿ ನೂರಕ್ಕೆ ೨೫ರಷ್ಟು ಸ್ಥಾನಗಳೂ ಮುಸಲ್ಮಾನರೇ ಮೊದಲಾದವರಿಗೆ ಕಾದಿಡಲಾಗಿದೆ. ಇದಲ್ಲದೆ ಸಾಮಾನ್ಯ ಮತದಾರ ಸಂಘದಿಂದ ಮುಸಲ್ಮಾನರು ಆರಿಸಿ ಬರಲು ಅನುಕೂಲ ಮಾಡಲಾಗಿದೆ. ಪಂಚಾಯತ ಬೋರ್ಡುಗಳಲ್ಲಿಯೂ ಇದೇ ಪರಿಸ್ಥಿತಿಯಿದೆ. ೨೪ರಲ್ಲಿ ೩ ಜಿಲ್ಲಾ ಬೋರ್ಡುಗಳ, ೮೧ರಲ್ಲಿ ೨೪ ಮ್ಯುನ್ಸಿಪಾಲಿಟಿಗಳ ಅಧ್ಯಕ್ಷ ಇಲ್ಲವೇ ಉಪಾಧ್ಯಕ್ಷರಾಗಿ ಮುಸಲ್ಮಾನರಿರುವರು.

### ಸರಕಾರೀ ನೌಕರಿಯಲ್ಲಿ

ಸರಕಾರೀ ನೌಕರಿಗಳಲ್ಲಿ ೧೦೦ಕ್ಕೆ ೭ರಷ್ಟು ಸ್ಥಾನ ಮುಸಲ್ಮಾನರಿಗೆ ಕಾದಿಡಲಾಗಿದೆ. ಮದ್ರಾಸು ಸರಕಾರದಲ್ಲಿ ಅವರ ಜನಸಂಖ್ಯೆಯ ಎರಡು ಪರಿಮಾಣಗಳ ಪ್ರಾತಿನಿಧ್ಯ ಮುಸಲ್ಮಾನರಿಗಿರುವದು. ಸರಕಾರೀ ನೌಕರಿಗಳನ್ನು ಕೊಡುವಾಗ ಮುಸಲ್ಮಾನರಿಗೆ ಪ್ರಾಯ ನಿರ್ಬಂಧದ ವಿಷಯದಲ್ಲಿಯೂ ರಿಯಾಯತಿ ಕೊಡಲಾಗಿತ್ತು.

೧೮೫೯ರಲ್ಲಿ ಮೋಪಿಳ್ಳೆ ದಂಗೆಯ ನ್ನಡಗಿಸಲು ಜಾರಿಮಾಡಿದ ಕಾಯಿದೆಯನ್ನು ಕಾಂಗ್ರೆಸು ಮಂತ್ರಿಮಂಡಳದವರು ಅಧಿಕಾರ ವಹಿಸಿದ ಕೂಡಲೇ ತೆಗೆದುಹಾಕಿದ್ದಾರೆ!

ಇದೇ ರೀತಿಯಲ್ಲಿ ಹಿಂದುಳಿದ ಜಾತಿಯವರಿಗೆಲ್ಲರಿಗೂ ಕಾಂಗ್ರೆಸು ಸರಕಾರಗಳು ಬಹಳ ಉಪಕಾರ ಮಾಡಿವೆ. ಮಂದಿರ ಪ್ರವೇಶ ಮೊದಲಾದ ಕಾಯಿದೆಗಳನ್ನು ಜಾರಿ ಮಾಡಿ ಹರಿಜನರನ್ನು ಉದ್ಧರಿಸಲು ಯತ್ನಿಸಿದೆ. ಹಲವು ಪ್ರಸಿದ್ಧ ದೇವಾಲಯಗಳು ಹರಿಜನರಿಗಾಗಿ ತೆರೆಯಲ್ಪಟ್ಟಿವೆ!

ಇಷ್ಟಿದ್ದರೂ ಮುಸಲ್ಮಾನರಿಗೆ ಹಾಗೂ ಇತರ ಅಲ್ಪ ಸಂಖ್ಯಾಕರಿಗೆ ಕಾಂಗ್ರೆಸ್ ಸರಕಾರದಿಂದ "ಅನ್ಯಾಯವಾಗಿದೆಯೆಂದು ಕೆಲವು ದುರಾಶಾಪೀಡಿತರಾದ ಜನರು ದುಷ್ಪ್ರಚಾರಮಾಡುತ್ತಿರುವರು. ನಿಜವಾಗಿಯೂ ಅಂತಹವರು ದೇಶದ್ರೋಹಿಗಳು!"


# ಗಾಯಗಳಲ್ಲಿರುವ ಹೊಲಸು

## ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಒಂದು ಚುಚ್ಚುವಿಕೆಯೂ ಭಯಕರವಾದ ಗಾಯ—ಎರಡೂ ಒಂದೇ ಸಮಾನ! ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೇ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ದೊರೆಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ಹಾಗಿಸಿದ ಭಾಗದಲ್ಲಿ ಕ್ರಿಮಿಗಳು ವಾಸಿಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಶಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು ಚರ್ಮರೋಗ ಮದ್ದಣ ವಿಷಕಾರಿ ಗಾಯ ಬಿಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ಶಮನಿಸಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

UTICURA OINTMENT

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

RS. 50/-, 100 -, 500 -, 1,000/- & 5,000 -

are now issued at all our Branches

*For particulars call at or write to*

Any of our nearest Branches



**The Auttur & Jawahar Bank, Limited.**

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್ ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು      ಬ್ರೇಂಚ್ ಸೆಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ 1,00,000.      ತೆರಲ್ಪಟ್ಟ ಮೂಲಧನ ರೂ. ೫೧,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಬಿಸ್ನೆಸ್ಸಿನ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ.

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½%      ನಿರಖು ಠೇವಣಾತಿ 12 ತಿಂಗಳಿಗೆ 4½%

" 6 ತಿಂಗಳಿಗೆ 4%      " 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

# ಸ್ಟಾಲೀನನ ಗುಪ್ತ ಅಭಿಲಾಷೆಯೇನು?

## ಜರ್ಮನಿಯ ಸರ್ವನಾಶವೆ? 'ಕಮ್ಯುನಿಸಂ' ಪ್ರಚಾರವೇ? ಪ್ರಬಲ ರಾಷ್ಟ್ರಗಳ ಸ್ನೇಹಭಂಗವೆ?

ಅನೇಕ ಸಲ, ರಶ್ಯವು ತನಗ್ರೆ ರಾಷ್ಟ್ರಗಳನ್ನು ಆಕ್ರಮಿಸುವ ಅಭಿಲಾಷೆಯಿಲ್ಲವೆಂದು ಪ್ರಸಿದ್ಧಿ ಪಡಿಸಿದ್ದರೂ, ಇತ್ತೀಚೆಗೆ ಪೋಲೆಂಡು ಫಿನ್ಲೆಂಡುಗಳ ಮೇಲೆ ಮಾಡಿದ ಧಾಳಿಯು ರಾಷ್ಟ್ರ ಆಕ್ರಮಣ ಬುದ್ಧಿಯುದ್ದಲ್ಲವೆಂದು ಯಾರು ಹೇಳುವರು? ರಶ್ಯದ ಸಮಾಜ ಸತ್ತಾವಾದದ ತೀವ್ರ ಆರಾಧಕನಾದರೂ ಈ ಆಕ್ರಮಣ ನೀತಿಯನ್ನು ಖಂಡಿಸದಿರಲಾರನು. ಜಗತ್ತಿನ ಜನರು ಇಂದು, ನಿಜವಾಗಿ ರಶ್ಯದ ಧೋರಣೆಯೇನೆಂದು ಸಂಶಯ ಕುತೂಹಲಗಳಿಂದ ಇದಿರು ನೋಡುತ್ತಿರುವರು.

ಆಧುನಿಕ ರಶ್ಯವು ಸ್ಟಾಲಿನನ ನಿರ್ಮಾಣವೆಂಬುದರಲ್ಲಿ ಏನೊಂದೂ ವಿವಾದವಿಲ್ಲ. ರಶ್ಯದ ಉನ್ನತಾಧಿಕಾರದಲ್ಲಿ ಬೇರೆ ಯಾರಾದರೊಬ್ಬನು ಇದ್ದಿದ್ದರೆ, ಇಂದು ಅದರ ದೃಶ್ಯವೇ ಬೇರೆಯಾಗುತ್ತಿತ್ತು.

ಸ್ಟಾಲಿನನು ನಿಜವಾಗಿಯೂ ಒಬ್ಬ ಪ್ರಭಾವಶಾಲಿಯಾದ ವ್ಯಕ್ತಿ. ಸ್ಟಾಲಿನನ ತಲೆ ಸುತ್ತು ತಿರುಗುವ ಒಂದೇ ಒಂದು ವಿಚಾರವೆಂದರೆ ಕೇವಲ ತನ್ನ ನಾಡಿನ ಏಳಿಗೆಯು ಮಾತ್ರ. ರಶ್ಯವನ್ನು ಮುಂದೆ ತರುವ ಹಂಚಿಕೆಗಳ ಸಲುವಾಗಿ, ಆತನು ತನ್ನ ತತ್ವಗಳನ್ನೆಲ್ಲಾ ಬಲಿದಾನ ಮಾಡುತ್ತಿದ್ದಾನೆ. ಹೊರಗಡೆಯಲ್ಲಿ ಮತ್ತು ಒಳಗಡೆಯಲ್ಲಿ ಇಂದು ಆತನು ತೀವ್ರ ಕಠೋರ ಧೋರಣೆ ವಹಿಸಿರುವುದಿದ್ದರೆ, ಅವೆಲ್ಲವೂ ರಶ್ಯದ ಏಳಿಗೆಯ ದೃಷ್ಟಿಯಿಂದ. ಒಟ್ಟು ಅಖಿಲ ಪ್ರಪಂಚದಲ್ಲಿ ಕಮ್ಯುನಿಸಮನ್ನು ಹರಡಲು ಹಾತೊರೆಯುತ್ತಿರುವವನು ಸ್ಟಾಲಿನನು. ಅದೇ ಆತನ ಇಂದಿನ ಧೋರಣೆಯ ಗುಟ್ಟು.

### ಯೂರೋಪು ರಾಷ್ಟ್ರಗಳ ವಿದ್ವೇಷ

ಅದೊಂದು ಕಾಲವಿತ್ತು. ಕಮ್ಯುನಿಸಂ ವಿರೋಧಿ ರಾಷ್ಟ್ರಗಳು ಒಂದಾಗಿ ಒಪ್ಪಂದ ಮಾಡಿಕೊಂಡವು. ಜರ್ಮನಿ ಜಪಾನ್ ಇಟೆಲಿಗಳು ಕಮ್ಯುನಿಸಮ್ಮನ್ನು ವಿರೋಧಿಸ ಹತ್ತುವುದರೊಡನೆ ಪ್ರಬಲವಾಗುತ್ತ ಬಂದುವು. ರಶ್ಯಕ್ಕೆ ಜರ್ಮನಿಯ ಆಕ್ರಮಣ ಭಯವೂ ಆಯಿತು. ಅದರೊಡನೆ ಬೇರೆ ಯೂರೋಪ್ಯ ರಾಷ್ಟ್ರಗಳೂ ರಶ್ಯದ ಕಮ್ಯುನಿಸಂ ವಿರೋಧಿಗಳೇ ಆಗಿದ್ದವು.

ಇಂತಹ ಪರಿಸ್ಥಿತಿಯಲ್ಲಿಯೇ ರಶ್ಯವು ನವಜಾಗ್ರತಿ ಹೊಂದಿತು. ಪಂಚವಾರ್ಷಿಕ ಯೋಜನೆ ಮೊದಲಾದವುಗಳಿಂದ ರಶ್ಯದ ಪ್ರಬಲ ಸುಧಾರಣೆಗಳಾದುವು. ಸ್ಟಾಲಿನನು ಈ ಸಮಯದಲ್ಲಿ ತನ್ನ ರಾಷ್ಟ್ರದ ಶಕ್ತಿಯನ್ನು ಬೆಳೆಸುವುದರೊಡನೆ ಕಮ್ಯುನಿಸಂ ವಿರೋಧಿ ಒಪ್ಪಂದವು ಮುರಿಯುವಂತಹ ಧೋರಣೆಯನ್ನೂ ಹೂಡಿದ್ದನು. ಈ ಯೋಜನೆಗಳಲ್ಲಿ ಇದುವರೆಗೆ ಸ್ಟಾಲಿನನು ವಿಜಯಿಯಾಗುತ್ತಾ ಬಂದಿರುವನೆನ್ನಬೇಕು.

### ಸ್ಟಾಲಿನನ ವಿಜಯದ ಕಾರಣ

ಆತನ ರಾಜತಂತ್ರ ನಿಪುಣತೆಯು ಸೂಕ್ಷ್ಮವಾದುದು. ರಶ್ಯವು ಜರ್ಮನಿಗೆ ಬೆಂಬಲ ಕೊಡುವ ಪ್ರೋತ್ಸಾಹ ಕೊಡದಿದ್ದರೆ ಜರ್ಮನಿಯು ಇಂದು ಯುದ್ಧರಂಗಕ್ಕೆ ಇಳಿಯುತ್ತಲೇ ಇರಲಿಕ್ಕಿಲ್ಲವಾಗಿತ್ತೆಂದು ಹಲವು ರಾಜ್ಯನೀತಿಜ್ಞರ ವಾದವಾಗಿದೆ. ಬಹಳ ಕಾಲದವರೆಗೆ ಯುದ್ಧ ನಡೆದಲ್ಲಿ ಜರ್ಮನಿಯ ಆರ್ಥಿಕ ದುಸ್ಥಿತಿಯು ಭಯಂಕರವಾದರೂ, ಆಗ ರಶ್ಯವು ಬೆಂಬಲ ಕೊಡುವುದೆಂಬ ಭರವಸೆಯಿಂದ ಹಿಟ್ಲರನನ್ನು ತನ್ನ ಸೈನಿಕರಿಗೆ ಮುನ್ನಡೆಯಲು ಆದೇಶವಿತ್ತಿರುವನು.

ಆದರೆ ಜರ್ಮನಿಯನ್ನು ಉದ್ಧರಿಸಲು ರಶ್ಯವು ಬೆಂಬಲ ಕೊಡುವುದೆಂದು ಗ್ರಹಿಸುವುದು ತಪ್ಪಾಭಿಪ್ರಾಯ. ಈ ವಿಷಯವು ಪೋಲೆಂಡಿನಲ್ಲಿಯೇ ತಿಳಿದಿದೆ. ಜರ್ಮನರು ರಶ್ಯದ ಗಡಿಯನ್ನು ದಾಟಿ ಬರಬಾರದೆಂದು ರಶ್ಯವು ಪೋಲೆಂಡನ್ನು ಪಾಲು ಮಾಡಿಕೊಂಡಿತು.

ಬಾಲ್ಟಿಕ್ ರಾಷ್ಟ್ರಗಳ ಕಡೆಗೆ ಸ್ಟಾಲಿನನು ಮುಂದೊತ್ತುವುದು ಜರ್ಮನಿಗೆ ಪ್ರಬಲ ಆಘಾತವಾಗಿದೆ. ಬಾಲ್ಟಿಕ್ ರಾಷ್ಟ್ರಗಳಲ್ಲಿ ಜರ್ಮನಿಯ ಪ್ರತಾಪವು ಹೆಚ್ಚಿರುತ್ತದೆ.

### ಮುಂದಿನ ಯೋಚನೆ

ಸ್ಟಾಲಿನನು ಸರ್ವವನ್ನು ಮುಂದಾಲೋಚಿಸಿಕೊಂಡೇ ಅಡಿಯಿಟ್ಟಿರುವನು. ಯುರೋಪಿನಲ್ಲಿ ಅತ್ತ ಪ್ರಬಲ ಯುದ್ಧ ನಡೆಯುತ್ತಿರುವಾಗ, ತಾನು ತನ್ನ ಸಾಮ್ರಾಜ್ಯಾಧಿಕಾರವನ್ನು ಬೇಕಾದಷ್ಟು ವಿಸ್ತರಿಸಿಕೊಳ್ಳಬಹುದು. ಅದು ಮಾತ್ರವಲ್ಲದೆ ಹಿಟ್ಲರನ, ಹಾಗೂ ಜರ್ಮನಿಯು ಪ್ರಬಲವಾದರೆ ರಶ್ಯದ ಪ್ರಾಬಲ್ಯಕ್ಕೆ ಅದು ದೊಡ್ಡ ತಡೆಯಾದೀತೆಂದು ತಿಳಿದ, ಜರ್ಮನಿಯನ್ನು ಇಂದಿನ ಸಂಗರದಲ್ಲಿ ಬಲಿಯಾಗಲು ಆತನು ಪ್ರೋತ್ಸಾಹವಿತ್ತಿರಬೇಕು. ಹಾಗಾದರೆ ಮಾತ್ರ ಮುಂದಕ್ಕೆ ಕಮ್ಯುನಿಸಮ್ಮಿನ ಜಯಧ್ವಜವನ್ನು ಎಲ್ಲೆಲ್ಲೂ ಹಾರಾಡುವಂತೆ ಮಾಡಬಹುದು.

ಇದು ಮಾತ್ರವಲ್ಲದೆ, ಜಪಾನ್ ಜರ್ಮನ್ ಇಟೆಲಿಗಳು ಕಮ್ಯುನಿಸಂ ವಿರುದ್ಧ ಮಾಡಿದ ಒಪ್ಪಂದವನ್ನು ಸಂಪೂರ್ಣ ಭೇದಿಸಿ ಅವುಗಳನ್ನು ಪರಸ್ಪರ ಶಕ್ತಿ ಕೆಟ್ಟು ಹೊಡೆದಾಡುವಂತೆ ಮಾಡಿಸುವುದೂ ಅವನ ಅಪೇಕ್ಷೆಯಾಗಿರಬಹುದು. ಈ ಎಲ್ಲಾ ಯೋಚನೆಗಳಿಂದ ಸ್ಟಾಲಿನನು ಇಂದು ಮುಂದುವರಿಯುತ್ತಿರುವುದಾಗಿ ಊಹಿಸಬಹುದಾಗಿದೆ. ಇದೇ ಅವನ ಗುಪ್ತ ಅಭಿಲಾಷೆಯಾಗಿದೆ!

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

**U. K. BHUJANGA NAYAK**
**CLOTH COMMISSION AGENT**
**SHEVAPET, SALEM**
**ಯು. ಕೆ. ಭುಜಂಗ ನಾಯಕ್,**
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

**ಎಡೆಬಿಡದ ದಣುವಿನಿಂದ ಸ್ತ್ರೀಯು ಕೋಪಭಾವದವಳಾದಳು!**

**ಇತರರೊಡನೆ ಜೀವಿಸಲು ಅನರ್ಹಳಾದಳು ಕ್ರುಶನ್ ಲವಣದಿಂದ ಆಕೆಯು ತನ್ನ ಸಂಕಟ ನೀಗಿಸಿದಳು**

ಓರ್ವ ಸ್ತ್ರೀಯು ಹೀಗೆ ಬರೆಯುತ್ತಾಳೆ: 'ನನ್ನ ವಯಸ್ಸು ೩೯. ಆದರೆ ಕೆಲವು ದಿವಸಗಳಲ್ಲಿ ನೂರು ವರ್ಷ ವಯಸ್ಸಿನ ಭಾವವು ನನ್ನಲ್ಲಿ ಬರುವುದು. ನನ್ನಲ್ಲಿ ಕಾರಣವಿಲ್ಲದೆ ದಣುವುಂಟಾಗುವುದು. ಆಗ ನನ್ನ ನರಗಳ ಶಕ್ತಿ ... ನನ್ನಲ್ಲಿ ಕೋಪಾವೇಶವು ಉಂಟಾಗಿ ಇತರರೊಡನೆ ಜೀವಿಸಲು ನಾನು ಅಯೋಗ್ಯಳಾಗಿದ್ದೆ. ಕೆಲಸ ಮಾಡಲು ನನ್ನಲ್ಲಿ ಶಕ್ತಿಯೇ ಇರಲಿಲ್ಲ. ನನ್ನಲ್ಲಿ ಯಾವಾಗಲೂ ... ತರದ ನಿಸ್ತೇಜ ಭಾವವು ಉಂಟಾಗಿ ಜೀವಿಸ ... ಬೇಡವೆಂದೆನಿಸುತ್ತಿತ್ತು. ಇದಕ್ಕೆಲ್ಲಾ ನನ್ನ ನರಗಳು ಕಾರಣವೆಂದು ವೈದ್ಯರು ಸೂಚಿಸಿದರು. ನಾನು ಕ್ರುಶನ್ ಲವಣಗಳನ್ನು ಉಪಯೋಗಿಸಿದನು. ಅದನ್ನು ಉಪಯೋಗಿಸಲಾರಂಭಿಸಿದಂದಿನಿಂದ ನಾನು ಸಂಪೂರ್ಣ ಯೋಗ್ಯಳಾಗಿರುತ್ತೇನೆ. ಜೀವನದಲ್ಲಿ ಉಲ್ಲಾಸವೂ ನವಚೇತನವೂ ಉಂಟಾಗುತ್ತದೆ. ನನ್ನಲ್ಲಿ ಶಕ್ತಿಯು ಬಂದಿರುತ್ತದೆ. ಕೆಲಸ ಮಾಡಲು ಉತ್ಸಾಹವುಂಟಾಗುತ್ತದೆ.'

ಕೆಟ್ಟ ಆರೋಗ್ಯವೇ ಹೆಚ್ಚಿನವರಲ್ಲಿ ಕೋಪಾವಸ್ಥೆಗೆ ಕಾರಣವು. ದೇಹವು ಸ್ವಚ್ಛವಾಗಿರದಿದ್ದರೆ ಅನೇಕ ಸಂಕಟಗಳು ಪೀಡನೆಗಳುಂಟಾಗುತ್ತವೆ. ನಿಮ್ಮ ದೇಹದಿಂದ ವಿಷವನ್ನು ಹೊರಗಟ್ಟಿರಿ. ಆಗ ನಿಮ್ಮ ಮನಸ್ಸಿನ ನಿಸ್ತೇಜಭಾವವು ಮಾಯವಾಗುವುದು. ನೀವು ಉಲ್ಲಾಸವಂತರಾಗುವಿರಿ.




ಪ್ರತಿದಿವಸ ಒಂದಿಷ್ಟು ಕ್ರುಶನ್ ಲವಣವನ್ನು ಸೇವಿಸಿ. ಅದು ನಿಮ್ಮ ದೇಹದೊಳಗಿನ ಕಶ್ಮಲಗಳನ್ನೂ ವಿಷಗಳನ್ನೂ ಹೊರದೂಡುವುದು. ನಿಮ್ಮ ಅಂಗಾಂಗಗಳಿಗೆ ಶುದ್ಧರಕ್ತವನ್ನು ದೊರಕಿಸಿ ಅವುಗಳಲ್ಲಿ ಹುರುಪನ್ನೂ ಚೇತನವನ್ನೂ ಉಂಟುಮಾಡುವುದು. ಎಲ್ಲಾ ಬಜಾರುಗಳಲ್ಲೂ ಸ್ಟೋರುಗಳಲ್ಲೂ ಕ್ರುಶನ್ ಲವಣವು ಮಾರಲ್ಪಡುತ್ತದೆ.

No 12



# ನೋಟಗಳು

ಮಿ. ಜಿನ್ನರನ್ನು 'ಕ್ವಿದೇ ಆಜಾಮು' ಎಂದು ಸಂಬೋಧಿಸಿದರು ಮಹಾತ್ಮಾಜಿಯವರು!

◆

'ಮಿಸ್ಟರ್'ಎಂದು ಸಂಬೋಧಿಸುವುದು ಅಂಗಾಕ್ಷ್ಯವೂ, ಅಗೌರವವೂ ಆಗುವುದೆಂದು ಹೇಳುತ್ತಾರೆ ಗಾಂಧಿಜಿಯವರು!

◆

ಭಾರತವು ಒಂದು ರಾಷ್ಟ್ರವೇ ಅಲ್ಲವೆಂದು ಮಹಾತ್ಮಾಜಿಯವರಿಗೆ 'ಕ್ವಿದೇ ಅಜಾಮು'ರ ಖಂಡತುಂಡ ಉತ್ತರ!

◆

ಭಾರತವು ಪ್ರಜಾಪ್ರಭುತ್ವಕ್ಕೇ ಅನರ್ಹವೆಂದು 'ಕ್ವಿದೇ ಅಜಾಮು'ರ ಅಚಲ ನಿರ್ಧಾರ!

◆

ಕಾಂಗ್ರೆಸು, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪ್ರತಿನಿಧಿ ಸಂಸ್ಥೆಯೇ ಅಲ್ಲವೆಂದು 'ಕ್ವಿದೇ ಅಜಾಮು'ರ ವಿಚಿತ್ರವಾದ ವಿಚಾರ!

◆

ಮಹಾತ್ಮಾಜಿಯವರು ಕಾಂಗ್ರೆಸಿನ ಪರವಾಗಿ ಮಾತನಾಡಲು ಯೋಗ್ಯರೇ ಅಲ್ಲವೆಂದು 'ಕ್ವಿದೇ ಅಜಾಮು'ರ ತಡೆಯಿಲ್ಲದ ಪ್ರಚಾರ!

◆

ಮಿಸ್ಟರ್ ಜಿನ್ನರನ್ನು 'ಕ್ವಿದೇ ಆಜಾಮು'ರನ್ನಾಗಿ ಮಾಡ ಹೋದ ಗಾಂಧಿಜಿಯವರಿಗೆ ಈ ರೀತಿ ಉತ್ತರದೊರಕಿತು!

◆

'ನಳಿಕಾಗತಮಪಿ ಕುಟಿಲಂ ನಭವತಿ ಸರಲಂ'

◆

ಬಂಗಾಲ ಕಾಂಗ್ರೆಸಿನ ಪರಿಸ್ಥಿತಿಯು ಅಖಿಲಭಾರತ ರಾಜಕೀಯ ವಾತಾವರಣವನ್ನೇ ಕೆಡಿಸಿದೆ

◆

ಭೋಸ ಬಂಧುಗಳ ಮಾತಿಗೆ ಇಂದು ಹಿಡಿತವೇ ಇಲ್ಲದಾಗಿದೆ!

◆

ಕಾಂಗ್ರೆಸು ಅಧಿಕಾರೀ ಮಂಡಳವನ್ನು ದೂಷಿಸುವುದು ಅವರ ದಿನನಿತ್ಯದ ಪಾರಾಯಣವೆನಿಸಿದೆ

◆

ಸ್ವಾತಂತ್ರ್ಯಕ್ಕಾಗಿ ಆಂದೋಲನವನ್ನು ಆರಂಭಿಸಬೆ, ನಾನು ತಾಳ್ಮೆಗೆಟ್ಟಿರುವೆನೆನ್ನುತ್ತಾರೆ ಬೋಸರು!

◆

ತಾಳ್ಮೆಗೆಡಬಾರದು; ನಿಧಾನಿಸಬೇಕು ಎನ್ನುತ್ತಾರೆ ಗಾಂಧಿ–ನೆಹರುಗಳು!

◆

'ಮುಂದಿನ ಆಂದೋಲನವು ಕೊನೆಯ ಆಂದೋಲನವಾಗಬೇಕು, ಸಿದ್ಧತೆಯು ಸಂಪೂರ್ಣವಾಗಲಿ' ಎಂದು ಸಂತೈಸುವರು ಮಹಾತ್ಮಾಜಿಯವರು!

◆

ಸಮಯವು ಸನ್ನಿಹಿತವಾಗಿದೆ, ಸಿದ್ಧತೆಯೇನೂ ಉಳಿದಿಲ್ಲ. ಆಂದೋಲನವನ್ನು ಈಗಲೇ ಆರಂಭಿಸಿರೆನ್ನುತ್ತಾರೆ ಬೋಸರು!

◆

ಬಲಪಕ್ಷದವರು ಮುಂದೆ ಬರದಿದ್ದರೆ, ನಾವಾಗಿಯೇ ಚಳವಳ ಹೂಡುವೆವೆಂಬುದು ಅವರ ನಿರ್ಧಾರ

◆

ಸಮಯವು ಸನ್ನಿಹಿತವಾಗಿಯೆಂದು ತಿಳಿದಾಗ, ನನ್ನನ್ನು ಹಿಂಬಾಲಿಸುವವರೇ ಇಲ್ಲದಿದ್ದರೂ, ಏಕಾಂಗಿಯಾಗಿ ನಾನು ಸತ್ಯಾಗ್ರಹವನ್ನು ಹೂಡುವೆನು ಎಂದು ಬೋಸರಿಗೆ ಉತ್ತರ ಕೊಡುತ್ತಾರೆ ಗಾಂಧಿಜಿಯವರು!

◆

ಏಕಾಂಗಿಯಾದರೂ ಚಳವಳವನ್ನು ಮುನ್ನಡೆಸುವೆನೆಂಬುದು ಮುದುಕ ಗಾಂಧಿಜಿಯವರ ವೀರೋಕ್ತಿ!

◆

ಮಹಾತ್ಮರೇ ಇಂದು ಚಳವಳ ಆರಂಭಿಸಬೇಕೆಂದು ಕಾದು ಕುಳಿತಿರುವರು. ತಾಳ್ಮೆಗೆಟ್ಟಿರುವ ಬೋಸರು!

◆

ತಾಳ್ಮೆಗೆಟ್ಟ ಬುದ್ಧಿಗೆ, ಶಾಂತಿ ಪ್ರಸನ್ನತೆಗಳು ಸಿಗಬೇಕಾದರೆ ರಾಟೆ ತಿರಿಗಿಸಬೇಕೆನ್ನುತ್ತಾರೆ ಗಾಂಧಿಜಿಯವರು

◆

ತಾಳ್ಮೆಗೆಟ್ಟ ಜನರನ್ನೂ ಶಿಸ್ತಿಲ್ಲದ ಸೇನೆಯನ್ನೂ ನಡೆಸಲಾರೆನೆಂಬುದೇ ಇಂದು ಗಾಂಧಿಜಿಯವರ ನಿರ್ಧಾರ!

◆

ಬೋಸರ ಬಾಯ್ಬಡುಕತನಕ್ಕೂ, ಗಾಂಧಿಜಿಯವರ ಸ್ಪಷ್ಟೋಕ್ತಿಗೂ ಹೀಗಿದೆ ಅಜಗಜಾಂತರ!

◆

ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಖಾದೀ ವಾಕ್ಯವನ್ನು ಸೇರಿಸಿದ್ದು ಪ್ರಮಾದವಾಯಿತೆನ್ನುತ್ತಾರೆ, ಸೋಶಿಯಲಿಸ್ಟರು, ರಾಯಿಸ್ಟರು, ಮತ್ತು ಬೋಸಿಸ್ಟರು.

◆

ಖಾದೀ ವಾಕ್ಯವನ್ನು ಸೇರಿಸಿದುದರಿಂದ ರಾಷ್ಟ್ರವನ್ನು ಇನ್ನೂರು ವರ್ಷಗಳ ಹಿಂದಕ್ಕೆ ಸರಿಸಿದಂತಹ, ಅಪ್ರಾಗತಿಕ ಧೋರಣೆಯಾಯಿತು ಎಂಬುದು ಅವರ ಆರೋಪ!

◆

ಖಾದಿಯ ಆರ್ಥಿಕ ತತ್ವದಲ್ಲಿ ತಮಗಿರುವ ಅಜ್ಞಾನಪ್ರದರ್ಶನವನ್ನು ಅವರು ಈ ರೀತಿಯಲ್ಲಿ ಮಾಡಿಬಿಟ್ಟರು!

◆

ತೀವ್ರ ಸಮತಾವಾದಿಗಳಾದ, ಪಂಡಿತ ನೆಹರುಗಳು, ಯಾರಿಗೆ ಖಾದಿಯಲ್ಲಿ ವಿಶ್ವಾಸವಿಲ್ಲವೋ ಅಂತಹವರು, ಅಹಿಂಸಾ ಮೂಲಕ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಜಯವನ್ನು ಸಂಪಾದಿಸಲು ಸಮರ್ಥರಲ್ಲವೆಂದೇ ಸ್ಪಷ್ಟ ಹೇಳಿದ್ದಾರೆ

◆

ಒಬ್ಬ ನಿಷ್ಠಾವಂತ ಸೈನಿಕನ ಹಾಗೆ, ನೆಹರುಗಳು ಇಂದು ಕಾಂಗ್ರೆಸಿನ ಶಿಸ್ತಿಗೆ ವಿಧೇಯರಾಗಿ ನಡೆಯಲು ನಿಶ್ಚಯಿಸಿದ್ದಾರೆ!

◆

ಹಿಂಸೆಯ ಸೈನ್ಯದಳಕ್ಕೆ ಹೇಗೆ ದಿನನಿತ್ಯ ಶಿಕ್ಷಣವು ಅಗತ್ಯವೋ, ಅಹಿಂಸಾ ಸೈನ್ಯಕ್ಕೂ ಈ ರೀತಿಯಿಂದ ಆತ್ಮಶಿಕ್ಷಣವು ಅಗತ್ಯವೆಂದೇ ಅವರ ಅಭಿಪ್ರಾಯ!

◆

ಆತ್ಮ ಶಿಕ್ಷಣವನ್ನು ಪಡೆಯಲೂ ಸಿದ್ಧರಿಲ್ಲದ ಸೈನಿಕರಿಂದ, ಅಹಿಂಸಾ ಸಮರವು ಯಶಸ್ವಿಯಾಗುವುದೆಂದು ಅವರು ನಂಬುವುದಿಲ್ಲ.

◆

ವೈಸರಾಯರ ಈ ಸಲದ, ಹೇಳಿಕೆಯಲ್ಲಿ ಸಂಧಾನ ಸೂಚನೆಯು ಬೀಜವಿದೆಯೆನ್ನುತ್ತಾರೆ ಮಹಾತ್ಮರು.

◆

ವೈಸರಾಯರ ಹೇಳಿಕೆಯು ಇನ್ನೂ ಸ್ಪಷ್ಟವಾಗಬೇಕಾಗಿದೆಯೆಂದು ಮುಖಂಡರ ಅಪೇಕ್ಷೆ!

◆

ಗಾಂಧಿಜಿಯವರ ಮಾತಿನಿಂದ, ಬ್ರಿಟಿಷ್ ರಾಜನೀತಿಜ್ಞರು ಉಬ್ಬಿಹೋಗುವುದು ಸಾಧ್ಯವಿಲ್ಲ!

◆

ಗಾಂಧಿಜಿಯವರ ಈ ಪ್ರಶಾಂತ ಸಂಧಾನ ಬುದ್ಧಿಯು ನಾಳೆಯ ಉಗ್ರ ಹೋರಾಟದ ಪೂರ್ವ ಸೂಚನೆಯೇ ಎಂದು ಹಲವರ ತರ್ಕ!

◆

## ನೋಟೀಸು

### ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಕುಂದಾಪುರ

ಈ ಕೆಳಗೆ ಕಾಣಿಸಿದ ಆಸಾಮಿಗಳಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸುಗಳು ಸದರಿ ಆಸಾಮಿಗಳ ಪೈಕಿ ಕೆಲವರು ಸಿಕ್ಕದೆ ಮತ್ತು ಕೆಲವರು ಮೃತರಾಗಿದ್ದಾರಾಗಿ ವಾಪಸ್ಸು ನಮಗೆ ಬಂದಿರುವುದರಿಂದ ಸದರಿ ಆಸಾಮಿಗಳು ಈಡಿಟ್ಟ ನಗಗಳನ್ನು ತಾರೀಕು ೮—೨—೪೦ನೇ ಗುರುವಾರ ಶಿಪಾರಾಷ್ಟ ಘಂಟೆ ತಕ್ಕೆ ಅಥವಾ ಬೇಂಕಿಗೆ ಯುಕ್ತ ತೋರುವ ಈತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಏಲಂ ಮಾಡಲ್ಪಡುವುದು, ತಿಳಿದಿರಲಿ

| ಲೋನು ನಂಬ್ರ | ಸಾಲ ಪಡೆದವರ ಹೆಸರು ಮತ್ತು ವಿಳಾಸ | ಅಸ್ಲು ರೂಪಾಯಿ |
|---|---|---|
| ೩೯೦/೩೮ | ರಂಗಯ್ಯ ಶೆಟ್ಟಿ ಅಬ್ಬಕ್ಕ ಶೆಡ್ತೀರ ಮಗ ದೊಡ್ಡಮನೆ ಹಳನಾಡು ಕಂಸ್ಲೂರು | ೫೦—೦—೦ |
| ೯೩/೩೯ | ಎಚ್ ಗೋವಿಂದ ಭಂಡಾರಿ ಕೃಷ್ಣ ಭಂಡಾರರ ಮಗ, ಹುಣ್ಸೆಮಕ್ಕಿ ಶಂಕ್ರನಾರಾಯಣ | ೬೦೦—೦—೦ |
| ೩೯೫/೩೯ | ಡಿ ಡಿ ಡಿ | ೨೨೫—೦—೦ |
| ೨೬೦/೩೯ | ಕೆ ವಾಸುದೇವ ಕಿಣಿ ಪುತ್ತು ಕಿಣಿರ ಮಗ ಕುಂದಾಪುರ | ೧೫—೦—೦ |
| ೭೪೪/೩೯ | ಜಿ ದೇವಪ್ಪ ಶೇರುಗಾರ ಗೇಜಿ ನಾಗಪ್ಪ ಶೇರುಗಾರರ ಮಗ ಕುಂದಾಪುರ | ೫—೦—೦ |

ಕುಂದಾಪುರ
ತಾ. ೧೮—೧—೪೦

ಟಿ. ಜಿ. ಎಮ್. ಪೈ
ಏಜಂಟು


**LUCKY NUMBERS OF**

**Grand X'mas Cash Prize Sale of**

# JAYANTILAL BROTHERS

| | | | | | | |
|---|---|---|---|---|---|---|
| 1st Prize Rs. 3[illegible] | 19822 | 10 Prizes of Rs. 5 each. | | | | |
| 2nd ,, ,, 25 | 19297 | 20985 | 210401 | 8572 | | |
| 3rd ,, ,, 20 | 21149 | 21199 | 21260 | | | |
| 4th ,, ,, 15 | 21078 | 21259 | 21353 | | | |
| 5th ,, ,, 10 | 18901 | 21208 | 19727 | 18196 | | |

Any persons having these Cash memos can claim their sum at our Hampankatta Show Room.

Jayantilal Brothers,
Cloth Merchants,
Hampankatta Mangalore.

## ಜಗತ್ತಿನ ಅದ್ಭುತ ವೃಕ್ಷ ಎಲ್ವತ್ತು ಮನೆಗೆ ಸಾಕಾಗುವಷ್ಟು ಕಟ್ಟಿಗೆ

ಅತ್ಯಂತ ದೊಡ್ಡದಾದ ವೃಕ್ಷವೊಂದು ಯುನೈಟೆಡ್ ಸ್ಟೇಟ್ಸಿನ, ಸಿಕ್ವಿಯಾ ನ್ಯಾಶನಲ್ ಪಾರ್ಕ ಎಂಬ ಉದ್ಯಾನದಲ್ಲಿರುವುದು. ಅದು ಬಹಳ ಎತ್ತರವಿದದ್ದು. ಆದರೆ ಎತ್ತರವು ಸುಮಾರು ೭೨ ಫೂಟು ಇದೆ. ಭೂಮಿಯ ಮೇಲೆ ಇದರ ಪರಿಘವು ೮೮ ಫೂಟು ಇದೆ. ಐದು ಕೋಣೆಗಳ ನಾಲ್ವತ್ತು ಮನೆಗಳಿಗೆ ಸಾಕಾಗುವಷ್ಟು ಕಟ್ಟಿಗೆ ಸಾಮಾನುಗಳು ಈ ಗಿಡದಿಂದ ಸಿಗುವವು

ಈ ಗಿಡವನ್ನು ಎಳೆದೊಯ್ಯ ಬೇಕಾದರೆ ೩೦ ರೇಲ್ವೆ ಟ್ರಕ್ಕುಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ

### ಮುಖವಾಡವು ಹೊಸತಲ್ಲ

ವಿಷವಾಯುವಿನ ಪ್ರಯೋಗವನ್ನು ತಡೆಯುವ ಸಲುವಾಗಿ, ಇಂದು ಮುಖವಾಡ (Gasmask)ವನ್ನು ಉಪಯೋಗಿಸಲ್ಪಡುತ್ತಿದೆಯಷ್ಟೆ? ಆದರೆ ಇದು ಈಗಿನ ಶೋಧನೆಯಲ್ಲ, ಇದನ್ನು ಶತಮಾನಗಳ ಹಿಂದೆಯೇ ಉಂಟು ಮಾಡಿದ್ದರೆಂದು ತಿಳಿದು ಬರುತ್ತದೆ.

ಇದನ್ನು ಜೋಸರೋಬರ್ಟ್ ಎಂಬವನು ಮೊದಲಾಗಿ ಕಂಡು ಹುಡುಕಿದನು ಆತನಿಗೆ ಸೊಸೈಟಿ ಓಫ್ ಆರ್ಟ್ಸ್‌ನವರಿಂದ ೫೦ ಪವನುಗಳ ಇನಾಮು ಕೊಡಲಾಗಿತ್ತು.

ಅಂದು ಆ ಮುಖವಾಡವು ಹೊಗೆಯನ್ನು ತಡೆಯುವ ಸಲುವಾಗಿ ಮಾತ್ರ ಕಂಡು ಹುಡುಕಲಾಗಿತ್ತು. ಅದನ್ನು ತಯಾರಿಸಿದವನೇ, ಅದನ್ನು ಹೊಗೆ ತುಂಬಿಸಿದ ಕೋಣೆಯೊಂದರಲ್ಲಿ ನಲ್ವತ್ತು ನಿಮಿಷಗಳ ವರೆಗೆ ಧರಿಸಿದನು

### ಕೇನ್ಸರ್ ರೋಗಕ್ಕೆ ರೇಡಿಯಂ ಚಿಕಿತ್ಸೆ! ಪ್ರಯೋಜಕವಾಗಲಿಲ್ಲ

ರೇಡಿಯಮ್‌ನ್ನು ಕೇನ್ಸರ್ ರೋಗಕ್ಕೆ ಕೊಡುವುದರಿಂದ ಯಾವತರದ ಪ್ರಯೋಜನವಿಲ್ಲವೆಂದೂ, ಇಂದಿನ ಎಕ್ಸ್‌ರೇ ಪ್ರಯೋಗವೇ ಹಿಂದಿನ ಎಲ್ಲಾ ಪ್ರಯೋಗಗಳಿಗಿಂತಲೂ ಹೆಚ್ಚಿನ ಪರಿಣಾಮಕಾರಿಯಾಗಿದೆಯೆಂದೂ ಲಂಡನ ಇನ್‌ಸ್ಟಿಟ್ಯೂಟ್ ಓಫ್ ಫಿಸಿಕಲ್ ಮೆಡಿಸಿನಿನ ಡೈರೆಕ್ಟರರು ರೋಯಲ್ ಸೊಸೈಟಿ ಓಫ್ ಆರ್ಟ್ಸ್‌ನಲ್ಲಿ ಭಾಷಣ ಕೊಡುತ್ತಾ ಹೇಳಿದರು.

ರೇಡಿಯಂಗೆ ಗ್ರ್ಯಾಮ್ ಒಂದಕ್ಕೆ ಈಗ ೫೦೦೦ ಪವನು ಬೆಲೆ ಇದೆ.

### ಶೇಕ್‌ಹ್ಯಾಂಡು ಅನಾರೋಗ್ಯಕರ

ಪಾಶ್ಚಿಮಾತ್ಯ ಪದ್ಧತಿಯ ನಮಸ್ಕಾರವಾದ ಶೇಕ್‌ಹ್ಯಾಂಡ್ ಎಂಬ ಕೈಕುಲುಕುವ ಕ್ರಮವು ಆರೋಗ್ಯಕ್ಕೆ ಬಹಳ ಹಾನಿಕರವೆಂದು ತಿಳಿದಿದೆ. ನ್ಯೂಯಾರ್ಕಿನ ಪ್ರಸಿದ್ಧ ಡಾಕ್ಟರರೊಬ್ಬರು ಹಾಗೆಂದು ಹೇಳಿರುವರು.

ಅವರು ಈ ಪ್ರಯೋಗವನ್ನು ಮಾಡುವ ಮೊದಲು ಮನುಷ್ಯನೊಬ್ಬನ ಇಡೀ ಶರೀರದ ಎಲ್ಲಾ ಭಾಗಗಳ ಅಳತೆಯನ್ನೂ ತೆಗೆದು ನೋಡಿದರು. ಆದರೆ ಕೈಕುಲುಕಿದ ಮೇಲೆ ಆ ಮನುಷ್ಯನ ವಾಸ್ತವಿಕ ಅಂಗಕ್ರಿಯೆಯೇ ತಪ್ಪಿಹೋಗಿರುವುದಾಗಿ ತಿಳಿದು ಬಂತು.

ಇದು ಮಾತ್ರವಲ್ಲದೆ ಹೆಂಗುಸರು ಮತ್ತು ಗಂಡುಸರು ಕೈಕುಲುಕಿಸಿದರೆ, ಬಹಳ ಅನರ್ಥವಾಗುವುದಂತೆ ಇದರಂತೆ ಅವರ ಮಿದುಳೂ ಕೆಡುವುದಾಗಿ ತಿಳಿದಿದೆ

### ಬಹಳ ಬೆಲೆಯ ಹಾಸಿಗೆ ಜಗತ್ತಿನಲ್ಲಿಯೇ ಇಂತಹದಿಲ್ಲ

ಅಮೇರಿಕದ ಕಾರ್ಖಾನೆಯೊಂದರಲ್ಲಿ ಜಗತ್ತಿನಲ್ಲಿಯೇ ಅತ್ಯಂತ ಬೆಲಬಾಳುವ ಹಾಸಿಯೊಂದನ್ನು ನಿರ್ಮಿಸಿದ್ದಾರೆ

ಅದರಲ್ಲಿ ಒಂದು ಗಡಿಯಾರ, ಒಂದು ಪುಸ್ತಕವಿಡುವ ಕಪಾಟು, ಮತ್ತೆ ಒಂದು ಟೆಲಿಫೋನು, ಶರೀರದ ಶೀತೋಷ್ಣಗಳನ್ನು ಸರಿಪಡಿಸಲು ಬೇಕಾದ ಸಾಧನ, ರೇಡಿಯೋ ಸೆಟ್ಟು ಬಾಗಿಲು ತನ್ನಷ್ಟಕ್ಕೇ ತೆರೆದಿಡುವ ಸೌಕರ್ಯ, ಕೋಣೆಯ ಹೊರಗೆ ನಿಂತಿರುವ ಸಂದರ್ಶಕರೊಡನೆ ಮಾತನಾಡುವ ಮೈಕ್ರೋಫೋನು, ಆ ಮೇಲೆ ಮಲಗಿದವನು ಎಚ್ಚರವಾಗಬೇಕಾದರೆ ಆತನನ್ನು ಎಚ್ಚರಿಸುವ ಅಲಾರ್ಮು ಇಷ್ಟು ಇವೆ.

### ಬೆಳ್ಳುಳ್ಳಿಯಿಂದ ಕಫದ ನಿವೃತ್ತಿ!

ಬೆಳ್ಳುಳ್ಳಿಯನ್ನು ಭಾರತೀಯರು ಮನೆ ಮನೆಗಳಲ್ಲಿ ಉಪಯೋಗಿಸುತ್ತಾರೆ. ಅದರಲ್ಲಿ ಮಹತ್ವವಾದ ಔಷಧಿ ಸತ್ವವಿದೆಯೆಂದು ಪ್ರಾಚೀನ ಭಾರತೀಯ ವೈದ್ಯಶಾಸ್ತ್ರಜ್ಞರು ಹೇಳಿ, ಹೀಗೆ ಪ್ರಯೋಗದಲ್ಲಿ ಮಾಡಲು ಜನತೆಗೆ ಕಲಿಸಿರಬೇಕು. ಆದರೆ ಇತ್ತೀಚೆಗೆ ಪಾಶ್ಚಾತ್ಯ ವಿದ್ಯಾನುಭವಗಳಲ್ಲಿಯೇ ಮೋಹಿತರಾದ ಜನರು ತಮ್ಮ ಪ್ರಾಚೀನ ವೈಜ್ಞಾನಿಕ ಉಪಯೋಗಗಳನ್ನೂ ಮರೆತು ಬಿಟ್ಟಿರುವರು

ಲಾಹೋರಿನ ಪತ್ರಿಕೆಯಾದ ಸಿ ಎಂಡ್ ಎಂ ಗಜೆಟ್‌ನಲ್ಲಿ ಬಳ್ಳುಳ್ಳಿಯಲ್ಲಿ ಕಫವನ್ನು ಕಡಿಮೆ ಮಾಡುವ ಶಕ್ತಿಯಿದೆಯೆಂದ ಸಂಶೋಧನಾತ್ಮಕ ಲೇಖನವೊಂದು ಬಂದಿದೆ

ಸಾಮಾನ್ಯ ಜಾತಿಯ ಬೆಳ್ಳುಳ್ಳಿಗಳಿಂದಲೇ ಭಯಂಕರ ತಾಪಕಾರಿಯಾದ ಕಫ ರೋಗವು ಗುಣವಾಗಿರುವುದೆಂದು ತಿಳಿದು ಬಂದಿದೆ. ಲಾಹೋರಿನಲ್ಲಿ ಕಳೆದ ಕೆಲಸಮಯಗಳಿಂದ ಸಾಂಕ್ರಾಮಿಕ ಕಫರೋಗವು ಹರಡಿತ್ತು.

ಬೆಳಗ್ಗೆ ಬೆಳ್ಳುಳ್ಳಿಯ ಕಷಾಯವನ್ನಾಗಿ, ಕಫರೋಗಿಗೆ ಕೊಟ್ಟದ್ದರಿಂದ ಅದ್ಭುತ ಪರಿಣಾಮವು ಕಂಡಿದೆಯೆಂದು ತಿಳಿದಿದೆ.

ಗಜಕರ್ಣ ರೋಗಕ್ಕೆ ಎಕ್ಸ್‌ರೇ ಪ್ರಯೋಗವು ಅದ್ಭುತ ಗುಣಕಾರಿಯಾಗಿದೆಯೆಂದು ತಿಳಿದುಬಂದಿದೆ.

### ಅಕ್ಕಿಯೂ ರಾಗಿಯೂ

ಅಕ್ಕಿಯನ್ನು ಉತ್ತಮ ಬೆಳೆಯನ್ನುವುದರ ಬದಲು ಅಧಮಯೆನ್ನಬೇಕು ಎಂದು ಒಬ್ಬ ವೈಜ್ಞಾನಿಕರು ಬರೆಯುತ್ತಾರೆ. ಏಕೆಂದರೆ ಅಕ್ಕಿಯ ಭತ್ತವು ಆಗುವುದು ಪ್ರಕೃತಿಯಲ್ಲಿ ಮನುಷ್ಯನು ಮಾಡುವ ಬಲ ಪ್ರಯೋಗದಿಂದ ಆದರೆ ರಾಗಿ ಮೊದಲಾದುವನ್ನು ಮಾಡಲು ಆ ರೀತಿಯ ಬಲ ಪ್ರಯೋಗವು ಅಗತ್ಯವಿಲ್ಲ, ಮಾತ್ರವಲ್ಲದೆ ರಾಗಿ ಜೋಳ ಮೊದಲಾದುವು ಹಾಗೆ ಪ್ರಕೃತಿ ಸಹಜವಾಗಿಯೇ ದೊರಕುವ ಕಾರಣ ಅವುಗಳು ಹೆಚ್ಚು ಆರೋಗ್ಯಕರಗಳಾಗಿವೆ ರಾಗಿಯನ್ನು ಆಹಾರವಾಗಿ ಉಪಯೋಗಿಸಿದ ಮಕ್ಕಳು ಅಕ್ಕಿಯನ್ನು ಉಪಯೋಗಿಸಿದ ಮಕ್ಕಳಿಗಿಂತ ದೃಢ ಗಾತ್ರರಾಗಿರುತ್ತಾರೆ ಎಂದು ಅವರ ಅಭಿಪ್ರಾಯ.


ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ: 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

*Sole Manufacturer:* **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮಿಯೋಪತಿಕ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ, ಮತ್ತು ಡ್ರಗ್ಗಿಸ್ಟ್ಸ್,

ಹಂಪನಕಟ್ಟಾ, ಮಂಗಳೂರು.

# ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

## ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

1 ಮಂಗಳೂರಿನಿಂದ—ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ—ಬಂಟ್ವಾಳ, ಚಾರ್ಮಾಡಿ ಗಡಿಗಾಗಿ—ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ—ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ—ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ—ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶ್ರಿಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಮಂಗಳೂರಿನಿಂದ—ಹಾಲಾಡಿ, ಶಂಕ್ರನಾರಾಯಣ, ಬಾಳೆಬರಿಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

***JOINT MANAGERS.***

**The Combined Booking Agency,** MANGALORE.

**The Joint Booking Office,** KODIALBAIL.

(Regd)

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಳಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

---

# HOUNSA

## ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟಾ ಬಜಾರ್, ಮಂಗಳೂರು.

---

## ಮದನಕಾಮೇಶ್ವರಿ ಲೇಹ

A WONDER MADAN KAMESWAR LEHYAM P. C. A. & CO. PERIDEPI

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಪ್ಲಾಯ, ಪೆರಡೇಪಿ, P. O. Peridepi (ಕಲ್ಲೂರು ವಿ.)

---

## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ಕಳದ ಗುಡ್ಡು ಮುಡಿಗೆ | 1—13—0 | 1—14—0 |
| ,, ದುಯಂ ,, ,, | | |
| ,, ಅವ್ವಲ್ ಸುಗ್ಗಿ ,, | | — |
| ,, ದುಯಂ ,, ,, | | — |
| ಅಕ್ಕಿ ಅವ್ವಲ್ ಗುಡ್ಡು ,, ಹಳ್ತು | 4—14—0 | |
| ,, ದುಯಂ ,, ,, | 4—8—0 | |
| ,, ಅವ್ವಲ್ ಸುಗ್ಗಿ ,, | 4—8—0 | 4—8— |
| ,, ದುಯಂ ,, ,, | 4—4—0 | 4—6—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 57—8—0 |
| ,, ಸಿಪ್ಪೆ ಇದ್ದದು ,, | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 85—0— |
| ,, ದಿಲ್‌ಪಸಂದಿ ,, | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಯಿದ್ದ ಅಡಿಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 8—0—0 | 8—12—0 |
| ಕಬ್ಬಿನ ಬೆಲ್ಲ ಖಂಡಿಗೆ | 87—8—0 | 50—0—0 |
| ಒಳ್ಳೇಮೆಣಸು ಹಂಡ್ರಡ್ವೇಟಿಗೆ | 19—0—0 | 20—8—0 |

# ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 20-1-1940 [ಸಂಚಿಕೆ 4



## The Bombay Life Assurance Company, Ltd.,

(Estd. 1908)

**COMPARE**

***Your Life Assurance with any other property you possess***

***What is its Guaranteed Value***

*If you live–today–a few years more–when you are old?*

*If you die–to your family and dependants?*

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | | |
|---|---|---|
| Completed Business | Rs. | 1,44,91,000 |
| Life Assurance Fund | Rs. | 1,17,69,748 |
| Total Assets | Rs. | 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

**Bombay Life Building,**

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

**which will tone the nervous system, build healthy tissues and enrich the blood.**

**Thus keeps you fresh and sprightly.**

**Bhuvanendra Products, Ltd.,**

**Katapady, S. Kanara.**

(BRANCH–KUMTA, N. KANARA.)

Stockist: **U. Panduranga Nayk**, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

## ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್**

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟಾಕಿಸ್ಟರು: (ಬ್ರಾಂಚ್: ಕುಮಟ, ಉತ್ತರ ಕನ್ನಡ)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.



Edited Printed & Published by A. S. Kamath at the Sharada Press, Car Street, Mangalore

Estd. 1906

# ಸ್ವದೇಶಾಭಿಮಾನಿ

# SWADESHABHIMANI

KANNADA ILLUSTRATED WEEKLY

Date 26-1-1940. ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-13-0 Regd. No. M3406.

# ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 26-1-1940 [ಸಂಚಿಕೆ 4


## The Bombay Life Assurance Company, Ltd.,
(Estd. 1908)

**COMPARE**

***our Life Assurance with any other property you possess***

***What is its Guaranteed Value***

If you live-today-a few years more when you are old?
If you die-to your family and dependants?

**REMEMBER THAT**

If you live Life Insurance takes the place of your professional income during your old age

If you die it provides your family with enough income for their maintenance and the education of your children

BOMBAY LIFE' offers all that is best in LIFE ASSURANCE

**1938 RECORD**

| | |
|---|---|
| Completed Business | Rs 1 44,91,000 |
| Life Assurance Fund | Rs 1 17,69 748 |
| Total Assets | Rs 1,31,28 998 |

*To insure or to represent it pays you to consult*

**KOCHIKAR BROTHERS LTD.,**
*MADRAS BRANCH SECRETARIES,*
Bombay Life Building,
*Sir Lalubhai Samaldas Road*
**Gandhi Nagar, UDIPI**

OR ANY OF THEIR FOLLOWING OFFICES

Puthiya [illegible] Calicut — Car Street Mangalore — Visweswarapuram Circle Bangalore City — Post Box No. 537 Mount Road Madras

Gautam Nivas Charni Road, Girgaum, Bombay No. 4 — Central Station Road, Trivandrum

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

which will tone the nervous system, build healthy tissues and enrich the blood.

**This keeps you fresh and sprightly.**

**Bhuvanendra Products, Ltd.,**
Katapady, S. Kanara.
(BRANCH—KUMTA, N. KANARA)
Stockist; U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

**ಭುವನೇಂದ್ರ 'ಅಮೃತಪ್ರಾಶ'ವು**

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**
ಕಟಪಾಡಿ, ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.


Edited, Printed & Published by A. S. Kamath at the Sharada Press, Car Street, Mangalore

Estd. 1906

# ಸ್ವದೇಶಾಭಿಮಾನಿ

# SWADESHABHIMANI

KANNADA ILLUSTRATED WEEKLY

## How the enemy of the Chinese people is overcome by quinine

The Chinese people, who, long before the time when Western civilisation made its appearance in Europe, had known periods of great prosperity in the scientific and artistic domains, were not spared by any of the scourges of humanity. Famine, cholera, malaria, typhus, floods, revolutions and wars, have at different times, led this people to the verge of the tomb

News that reaches us from the province of Fon-Kien (South China) states that an epidemic of a malignant form of malaria has broken out, attacking thousands of people, of whom many have already succumbed From the districts where the Japanese are operating come alarming reports about malaria epidemics, which are being fought by the distribution of quinine carried out on a large scale

Ten years ago the first trial was made with anti malarial measures in Hunan, a province in the north of China But the civil war drove the peasants from their farms, and consequently the malaria mosquito has in a short time conquered the abandoned territories and attempts made to establish refugees there have failed

Dr R C Robertson, the British delegate sent to China by the Anti epidemic Ambulance of the League of Nations, pointed out recently that high officials as well as the humblest coolies, are full of gratitude for the salutary work of this Ambulance, but still more for the recommendation authorised, drawn up by the Malaria Commission that it has instituted and which prescribes the daily taking during the fever season, to prevent malaria, 6 grains of quinine, and for a cure itself, a dose of 15 grams to 20 grains of quinine per day during 5 to 7 days. On page 124 of its report, issued in 1938, this Malaria Commission stresses the fact that the harmlessness of quinine makes it a suitable drug for administration by subordinate personnel without constant medical supervision, whereas such supervision is essential in the case of synthetic products

The fight of the Chinese people against the malaria mosquito has been going on for centuries. But thanks to the help of modern medical science, China will also succeed one day in throwing off this enemy that is so dangerous for the health of its people.

## ನೋಟೀಸು

**ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ**

O. P. No. 1/1940

ಮೀನಾಕ್ಷಿ ಬ್ರಾ, ದುಗ್ಗಂಮ್ಮ ಹೆಂಗ್ಸಿನ ಮಗಳು. ಕಾಸರಗೋಡು ಕ್ಸಬಾ — ಅರ್ಜಿದಾರಳು

ಮತ್ತು

| | | |
|---|---|---|
| 1 ಶಿವಂಮ್ಮ, 2 ಗೋಪಾಲ ಕೃಷ್ಣ, 3 ಪದ್ಮಾವತಿ, 4 ಬಿಂದುಸಾರ, 5 ಬಾಬು | ಸದ್ರಿ ದುಗ್ಗಂಮ್ಮ ಹೆಂಗ್ಸಿನ ಮಕ್ಕಳು. 2ರಿಂದ 5 ವರೆಗಿನವರು ಗಾರ್ಡಿಯನ್ 1 ನೇ ರೆಸ್ಪಾಂಡೆಂಟಳು. | ರೆಸ್ಪಾಂಡೆಂಟರು |

ಕಾಸರಗೋಡು ಕ್ಸಬಾ

ಸದ್ರಿ ಅರ್ಜಿದಾರಳ ಕಡೆ ತಿಳಿಸುವುದೇನೆಂದರೆ—

ಅರ್ಜಿದಾರಳ ವ ರೆಸ್ಪಾಂಡೆಂಟರ ತಾಯಿ ಮೃತಪಟ್ಟ ದುಗ್ಗರಿಮ್ಮ ಹೆಂಗ್ಸಿಗೆ ನಂಬ್ರ 7258 ನೇ ಪೋಲಿಸಿ ಹೋಲ್ಡರಳ ನೆಲೆಯಲ್ಲಿ ಗಾರ್ಡಿಯನ್ ಓಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸ್ ಈ ಕಂಪೆನಿಯಿಂದ ಬರತಕ್ಕ ಐವಜು ರೂ 350ನ್ನು (ದುಗ್ಗರಿಮ್ಮ ಮೃತಪಟ್ಟ ಕಾರಣ ಒಂದೇ ತಾಯಿಯವರಾದ ಅರ್ಜಿದಾರಳು ವ ರೆಸ್ಪಾಂಡೆಂಟ್ರ ಬಗ್ಗೆ) ಯಜಮಾನ್ತಿ ವ ಆಡಳ್ತೆದಾರಳಾದ ಅರ್ಜಿದಾರಳಿಗೆ ವಸೂಲು ಪಡಿಯುವರೆ ಅವಳ ಹೆಸ್ರಲ್ಲು ಸಕ್ಸೆಶ್ಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲ್ಲು ಮಾಡಿದ ಅರ್ಜಿಯು ತಾ 6—2—'40ಕ್ಕೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರಿದ್ದರೆ ಸದ್ರಿ ತಾರೀಕಿಗೆ 11 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಅವರ ಆಕ್ಷೇಪಗಳು ಜ್ಯಾಹೀರು ಮಾಡಬಹುದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

Kasaragod 26—1 40 } (Sd) B S. Kakkillaya, Advocate for Petitioner

## ನೋಟೀಸು

**ಕಾರ್ಕಳ ಡಿ ಮು ಕೋರ್ಟಿನಲ್ಲಿ**

S C S No - 440/'39

ದಿ ಮುಲ್ಕಿ ಬೇಂಕ್ ಲಿಮಿಟೆಡ್ ಮುಲ್ಕಿ ಇದರ ಪ್ರಸಿಡೆಂಟ್ ವ ಮೆನೇಜರ್ ಎಂ ರಾಮಕೃಷ್ಣ ಪೂಂಜ } ವಾದಿ

ಮತ್ತು

ಶ್ರೀನಿವಾಸ ಭಟ್ಟ ಸಹ 3 ಜನರು— ಪ್ರತಿವಾದಿಗಳು ಇವರೊಳಗೆ

ಸದ್ರಿ ದಾವೆಯ 3ನೇ ಪ್ರತಿವಾದಿ ಜ ಭೋಜರಾವ್ ನಾರ್ಣಪ್ಪಯ್ಯನವರ ಮಗ ಪಾಲೆ ಮೈಸೂರು ಶಹರಿನಲ್ಲಿ ಉಡ್ಪಿ ಆನಂದಭವನ್ ದಲ್ಲಿರುವವ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ಕೂಡಾ, ಜನರು ಮೇಲ್ಕಂಡ ವಾದಿ ಬೇಂಕಿಗೆ ಬರಕೊಟ್ಟಿರುವ ಪ್ರೊ ನೋಟಿನ ಅಸಲು ಬಡ್ಡಿ ಬರವಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ವಾದಿ ಬೇಂಕಿನವರು ನೀವು ಕೂಡಾ 3 ಜನರ ಮೇಲೆ ಮೇಲ್ಕಂಡ ದಾವಾ ದಾಖಲ್ಲು ಮಾಡಿದ್ದಾಗಿರುತ್ತದೆ ಸದ್ರಿ ದಾವೆಯು ತನಿಖೆ ಬಗ್ಗೆ ತಾ 4—3—'40ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿ ತಾರೀಕಿನಲ್ಲಿ ನೀವು ಸ್ವತಹಾ ಯಾ ವಕೀಲರ ಮುಖಾಂತರ ಮೇಲ್ಕಂಡ ಕೋರ್ಟಿನ ಮುಂದೆ ಹಗಲು 10 ಘಂಟೆಗೆ ಹಾಜರಾಗಿ ಉದಹರಿಸಿಕೊಳ್ಳತಕ್ಕದು. ಹಾಗೆ ನೀವು ಉದಹರಿಸದಿದ್ದಲ್ಲಿ ನಿಮ್ಮನ್ನು ಗೈರ್ಹಾಜರಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸಿಯದೆ,

ಕಾರ್ಕಳ 26-1-194 } N M Adyanthaya, ವಾದಿ ಕಡೆ ಎಡ್ವೊಕೇಟ್

'ಓವಲ್ಟಿನ್' ಮಿದುಳನ್ನೂ ನರವನ್ನೂ ಪೋಷಿಸುವುದು

ಆರೋಗ್ಯವನ್ನೂ ಬಲವನ್ನೂ ವೃದ್ಧಿಸುವುದು!

ನೀವು ಆಯಾಸವಟ್ಟಾಗ ಉದಾಸೀನವಟ್ಟಾಗ ನಿಮ್ಮ ನರನಾಡಿಗಳು ಸೊರಗಿದ್ದಾಗ ಒಂದು ಕಪ್ 'ಓವಲ್ಟಿನ್' ಪಾನೀಯವು ದಣುವನ್ನು ನಿವಾರಿಸಿ ನರನಾಡಿಗಳನ್ನು ಉತ್ತೇಜಿಸುವಂತೆ ಇನ್ನಾವ ಪಾನೀಯ ಗಳ ಮಾಡವು.

ಓವಲ್ಟಿನ್ ದೇಹಕ್ಕೆ ಮಿದುಳಿಗೆ, ನರನಾಡಿಗಳಿಗೆ ಶೀಘ್ರದಲ್ಲಿಯೇ ಶಕ್ತಿಯನ್ನು ಉಂಟುಮಾಡುವುದು ಪ್ರಕೃತಿಯ ಉತ್ಕೃಷ್ಟ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟದ್ದು ನೆನೆಹಾಕಿ ಹುರಿದ ಮಾಗಿದ ಬಾರ್ಲಿ ದನದ ಹಸಿ ಹಾಲು ಅಮೂಲ್ಯವಾದ ನೈಸರ್ಗಿಕ ಶಕ್ತಿವರ್ಧಕ ಜೀವಂತ ವಸ್ತು ಪೊಸ್ಪಟೈಡ್ಸಿನಿಂದ ತಯಾರಿಸಿಟ್ಟ ಓವಲ್ಟಿನ್ ಸುದೃಢವಾದ ದೇಹವನ್ನು ಚುರುಕಾದ ಬುದ್ಧಿಯನ್ನುಂಟುಮಾಡುವಂತೆ ನಿಮ್ಮನ್ನು ಪೋಷಿಸುವುದು

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು

ಜೇಮ್ಸ್ ರೆಟ್ ಲಿಮಿಟೆಡ್

ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ

# 'ಓವಲ್ಟಿನ್'

'ಓವಲ್ಟಿನ್' ಬಿಸ್ಕುಟುಗಳು:

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು ಇವುಗಳಲ್ಲಿ ವೈಶಿಷ್ಟ ಬೆಲೆಯ 'ಓವಲ್ಟಿನ್' ಸೇರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತಿನ ಟಿನುಗಳಲ್ಲಿ ಮಾರಲ್ಪಡುತ್ತದೆ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

2—2—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨—೧—೧೯೪೦

## ಭಾರತದ ಸ್ವಾತಂತ್ರ್ಯ ಸೂರ್ಯೋದಯದಲ್ಲಿ!

### ರಾಷ್ಟ್ರದ ಉಜ್ವಲ ಜೀವನ

### ಗ್ರಾಮಗಳೇ ಸ್ವರಾಜ್ಯದ ಆಧಾರಸ್ತಂಭಗಳಾಗಬೇಕು

### ಡಾ| ಪಟ್ಟಾಭಿಯವರ ವ್ಯಾಖ್ಯಾನ

"ಭಾರತದ ಸ್ವಾತಂತ್ರ್ಯ! ಈ ಮಾತು ಇಂದು ರಾಷ್ಟ್ರದ ವಾತಾವರಣವನ್ನು ಪೂರ್ಣವಾಗಿ ಕವಿದಿದೆ. ಆದರೆ, ಸ್ವಾತಂತ್ರ್ಯವು ಹೇಗಿರಬೇಕು ಎಂದು ಇನ್ನೂ ನಿರ್ಣಯವಾಗಬೇಕಾದ ವಿಚಾರ. ರುಚಿಯಾದ ಹಣ್ಣೊಂದು ಆಕಾಶದಿಂದ ಬಿದ್ದಂತೆ, ಸ್ವರಾಜ್ಯವು ದೊರಕಲಾರದು" ಎಂದು ಡಾ. ಪಟ್ಟಾಭಿ ಸೀತಾರಾಮಯ್ಯನವರು ಇತ್ತೀಚೆಗೆ ಬರೆದ ಒಂದು ಲೇಖನದಲ್ಲಿ ಬರೆಯುತ್ತಾರೆ.

ಅವರು ಅದರಲ್ಲಿ ಹೀಗೆಂದು ಹೇಳುತ್ತಾರೆ:

#### ಮುಂದಿನ ಸಮಾಜ

"ನಮ್ಮ ಮುಂದಿರುವ ಪ್ರಶ್ನೆಯೆಂದರೆ ನಮ್ಮ ಗುರಿಯು ಎಂತಹುದೆಂಬ ನಿಷ್ಕರ್ಷೆ. ನಾವು ಅಹಿಂಸಾಮಯವಾದ ರಾಷ್ಟ್ರವನ್ನು ಕಟ್ಟಬೇಕೋ, ಇಲ್ಲವೇ ಇಂದು ಪ್ರಪಂಚದಲ್ಲಿ ದುರ್ದಾಂತ ಧೋರಣೆಗೆ ಸಹಾಯಿಯಾದ ರಶ್ಯಾ ಜರ್ಮನಿಗಳೇ ಮೊದಲಾದ ರಾಷ್ಟ್ರಗಳಂತಹ ಹಿಂಸಾ ಧೋರಣೆಯನ್ನು ವಹಿಸಬೇಕೋ? ನಾವು ನಮ್ಮ ಧೋರಣೆಯಾಗಿ ಅಹಿಂಸೆಯನ್ನು ಅಂಗೀಕರಿಸುವ ಪಕ್ಷದಲ್ಲಿ, ಇಡೀ ಸಮಾಜವನ್ನೇ ಪುನರ್ರಚನೆ ಮಾಡಬೇಕು. ಆರ್ಥಿಕ ಸ್ಥಿತಿಯಲ್ಲಿಯೂ, ಔದ್ಯೋಗೀಕರಣದಲ್ಲಿಯೂ, ಸಾಮಾಜಿಕ ವ್ಯವಸ್ಥೆಗಳಲ್ಲಿಯೂ ಎಲ್ಲಾ ವಿಧದಿಂದಲೂ, ರಾಷ್ಟ್ರವು ನವನಿರ್ಮಾಣವನ್ನು ಕಾಣಬೇಕು.

#### ಗ್ರಾಮವೇ ಕೇಂದ್ರ

"ನಾವು ವಿಚಾರ ಮಾಡುವ ರೀತಿಯಲ್ಲಿ ಭಾರತವು ತನಗೆ ಬೇಕಾದ ಸಾಧನಗಳಿಗಾಗಿ ಅನ್ಯರನ್ನು ಆಶ್ರಯಿಸುವುದು ಅಗತ್ಯವಿಲ್ಲ. ಅಂತಹ ಸ್ವತಂತ್ರ ವ್ಯವಸ್ಥೆಯುಳ್ಳ ಭಾರತವು ಸಹಜವಾಗಿ ತನ್ನ ಗಮನವನ್ನು ಹಳ್ಳಿಯ ಕಡೆಗೆ ಹರಿಸಲೇಬೇಕು. ರಾಷ್ಟ್ರದ ರಚನೆಗೆ ಶ್ರಮವೇ ತಳಹದಿಯಾಗಬೇಕು. ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ಮೂಲಕ ಹಳ್ಳಿಯ ಆರ್ಥಿಕ ಸಂಧಾರಣೆಯನ್ನು ಆಧರಿಸಿರಬೇಕು. ಅಹಿಂಸೆಯು ಅಧಿಕಾರವನ್ನು ವಹಿಸುವುದರ ಒಂದೇ ಒಂದು ಸಾಧನವೆಂದರೆ ಇದೇ ಆಗಿರುತ್ತದೆ. ಇಲ್ಲದಿದ್ದಲ್ಲಿ ಇಂದು ಪಾಶ್ಚಿಮಾತ್ಯ ರಾಷ್ಟ್ರಗಳಂತೆ ನಾವೂ ಕೂಡ ಅನ್ಯೋನ್ಯ ಸ್ಪರ್ಧೆ ಹೋರಾಟಗಳಿಗೆ ಇಳಿದಲ್ಲಿ ಶಸ್ತ್ರಮೂಲಕ ನಮ್ಮ ಅದೃಷ್ಟವನ್ನು ಅಂತ್ಯಗೊಳಿಸಬೇಕಾಗಬಹುದು. ಮೊಟ್ಟಮೊದಲು ಈ ಕುರಿತು ನಾವು ನಮ್ಮ ವಿಚಾರಗಳನ್ನು ನಿರ್ಮಲಗೊಳಿಸಿಕೊಳ್ಳಬೇಕು.

#### ಸ್ವರಾಜ್ಯದ ಲಕ್ಷಣವೇನು?

"ಹೀಗೆ ಮೊದಲು ನಾವು ಮುಖ್ಯ ವಿಷಯವನ್ನು ನಿಶ್ಚಯಿಸಿಕೊಂಡ ಮೇಲೆ, ಬಳಿಕ ಹೆಚ್ಚಿನ ವಿಷಯವು ನಿಷ್ಕರ್ಷಿಸಲು ಬಾಕಿ ಉಳಿಯುವುದಿಲ್ಲ. ನಿಜವಾದ ರಾಜಕೀಯದಲ್ಲಿ ಮೊದಲಿನ ಪ್ರಾಮುಖ್ಯ ವಿಚಾರವು ನಿರ್ಣಯವಾಗುವುದೇ ತಡ; ಅದಕ್ಕೆ ಸಂಬಂಧಿಸಿ ಸಕಲ ಕಾರ್ಯಗಳೂ ಆ ಮೇಲೆ ಆಗುವವು. ಹೀಗೆ ಅಹಿಂಸೆಯ ಮೂಲಾಧಾರದಿಂದ ಸ್ವರಾಜ್ಯವು ಸತ್ಯ ಪೂರ್ಣವಾಗಿರಬೇಕು, ಸಂಸ್ಕೃತಿಮಯವಾಗಿರಬೇಕು, ಗ್ರಾಮ ಕೈಗಾರಿಕೆ ಶ್ರಮಜೀವನ ವ್ಯವಸ್ಥೆಯದಾಗಿರಬೇಕು, ಸೇವೆಯು ಮೂಲವಾಗಿರಬೇಕು, ಅನ್ಯೋನ್ಯ ಸಹಕಾರದ್ದಾಗಿರಬೇಕು. ಅಲ್ಲದೆ ಪಶುಬಲದ್ದೂ, ಯಂತ್ರಮೂಲವಾದದ್ದೂ, ಧನ ಪ್ರಾಧಾನ್ಯವುಳ್ಳದ್ದೂ, ಸ್ಪರ್ಧಾ ಪರಾಯಣವಾಗಿರುವುದೂ ಖಂಡಿತವಾಗಿ ಆಗಿರಕೂಡದು.

"ಅಹಿಂಸಾ ತತ್ವಕ್ಕೆ ಒಪ್ಪದ ರಾಷ್ಟ್ರಗಳು ಪಾಶ್ಚಾತ್ಯ ರಾಷ್ಟ್ರಗಳು ಹೇಗೆ ಅನ್ಯೋನ್ಯ ಕತ್ತಿಕಟ್ಟಿ ನಿಂತಿವೆಯೆಂದು ನಾವಿಂದು ನೋಡುತ್ತಿದ್ದೇವೆ. ಇಂದು ಪೌರಸ್ತ್ಯ ರಾಷ್ಟ್ರಗಳ ಮೇಲೆ ಪಾಶ್ಚಿಮಾತ್ಯ ರಾಷ್ಟ್ರಗಳು ಬಹುಕಾಲ ಅಧಿಕಾರ ನಡೆಸಲಾರವಾಗಿವೆ. ಅದುಬರಿಂದ ನಮ್ಮ ಅಂಗೀಕೃತ ತತ್ವವಾದ ಹಿಂಸೆಯು ಪ್ರೇರಣೆಯಿಂದ, ಸುಮ್ಮಗಿರಲು ಅವುಗಳಿಗೆ ಸಾಧ್ಯವಿಲ್ಲದೆ, ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೇ ನೆರೆಯ ಸಣ್ಣ ಸಣ್ಣ ಸ್ವತಂತ್ರ ಪ್ರಭುತ್ವಗಳನ್ನು ನುಂಗಲು ಸುರುಮಾಡಿವೆ. ಪಾಶ್ಚಿಮಾತ್ಯ ರಾಜಕೀಯ ಯಂತ್ರದಲ್ಲಿ ಇಂದು ಸಹೋದರರ ಪ್ರಾಂತಗಳ ಸ್ವಾತಂತ್ರ್ಯವೇ ಪುಡಿಪುಡಿಯಾಗುತ್ತಿದೆ.

#### ಭವಿಷ್ಯದ ದಿವ್ಯ ದೃಷ್ಟಿ

"ನಾವು ನಾಗರಿಕತೆಯನ್ನು ಧ್ವಂಸ ಮಾಡಕೂಡದು, ಇತರರನ್ನು ಅಂಧವಾಗಿ ಅನುಸರಿಸಕೂಡದು. ನಮ್ಮ ಅದೃಷ್ಟವನ್ನು ನಮ್ಮ ನಾಗರಿಕತೆಯ ಬಲದಲ್ಲಿ ನಾವೇ ಕಟ್ಟಬೇಕು. ಭವಿಷ್ಯ ಭಾರತದಲ್ಲಿ ಇಂದಿನ ವ್ಯವಸ್ಥೆಯು ತೀವ್ರ ಬದಲಾವಣೆಯಾಗದಿರಲು ಸಾಧ್ಯವೇ ಇಲ್ಲ.

"ಇಂದಿನ ನ್ಯಾಯಸ್ಥಾನಗಳ ಸ್ಥಾನವನ್ನು ಪಂಚಾಯತುಗಳು ಆಕ್ರಮಿಸಬೇಕು. ನ್ಯಾಯವನ್ನು ಕೋಲೆಜಿಗಳಾದ ಸ್ಥಳಗಳಲ್ಲಿಯೇ ನಿಂತು ತೀರ್ಮಾನಿಸಬೇಕು. ವಿದ್ಯಾಕ್ಷೇತ್ರದಲ್ಲಿ ಸಂಪೂರ್ಣ ಬದಲಾವಣೆಯಾಗಬೇಕು. ರಾಷ್ಟ್ರದ ಸತ್ವವನ್ನು ತಿಳಿಸುವ ರೀತಿಯಲ್ಲಿ ಪಠ್ಯ ಪುಸ್ತಕಗಳನ್ನು ಬರೆಯಿಸಬೇಕು. ಅಸ್ಪೃಶ್ಯತೆಯು ಮಾನವನ ಜಾತಿಯಿಂದ ತೊಲಗಿಹೋಗುವ ಬೋಧನೆ ಕೊಡಬೇಕು. ಕುಡಿಯುವಿಕೆಯು ಕೆಲಸಗಾರರ ಅಭ್ಯಾಸದಿಂದ ಮಾಯವಾಗಿ, ಅವರ ಗುಡಿಸಲುಗಳಲ್ಲಿ ಶಾಂತಿಯು ನೆಲಸಬೇಕು. ಸಕಲ ಜೀವನವನ್ನು ನಡೆಸುವ ಭಾರತೀಯರು ಅಂದು ಆನಂದಗೊಳ್ಳುವರು.

#### ಸೇವಾತತ್ಪರತೆ

"ನಮ್ಮ ರಾಷ್ಟ್ರದ ಕೆಲಸಗಾರರ ಗುಡಿಸಲು ಗುಡಿಸಲುಗಳಲ್ಲಿ ಹೊಸ ಬೆಳಕು ಬರಬೇಕು; ಹೊಸ ವಾತಾವರಣವೇ ನಿರ್ಮಾಣವಾಗಬೇಕು; ಹೊಸ ವಿಚಾರವು ತುಂಬಬೇಕು; ಕುಟುಂಬ ಕುಟುಂಬಗಳು ಸೌಹಾರ್ದದಿಂದ ಇರಬೇಕು. ನಗರಗಳು ಸಂಪೂರ್ಣ ವ್ಯತ್ಯಾಸಹೊಂದಬೇಕು. ಜನತಾ ವಿದ್ಯಾಭ್ಯಾಸವು ಹರಡಬೇಕು. ಹಿರಿಯರೂ ಕಿರಿಯರೂ ರಾಷ್ಟ್ರದ ಏಳಿಗೆಯ ಕುರಿತು ತೀವ್ರ ವಿಚಾರಿಸುವಂತಾಗಬೇಕು. ಮಹಿಳೆಯರು ರಾಷ್ಟ್ರದ ಉಜ್ವಲ ಭವಿಷ್ಯವನ್ನು ನಿರ್ಮಿಸುವಲ್ಲಿ ಪ್ರಧಾನ ಕಾರ್ಯಗಳನ್ನು ಮಾಡಬೇಕಾಗಿದೆ. ಅವರ ಸಹಜವಾದ ಗುಣನಡತೆ ಗಾಂಭೀರ್ಯ ಕುಲೀನತೆಗಳಿಗೆ ಒಮ್ಮೆ ಇನ್ನಷ್ಟು ಉಜ್ವಲತೆಯು ತುಂಬಬೇಕು. ಸೇವಾಬುದ್ಧಿಯು ಜಗತ್ತಿಗೆ ನಮ್ಮಿಂದ ಹರಿಯಬೇಕು.

#### ಸ್ವತಂತ್ರವಾದ ಭಾರತದಲ್ಲಿ!

"ವಿದ್ಯೆಯ ಸ್ಥಾನವನ್ನು ಸಂಸ್ಕೃತಿಯು ಹೊಂದುವುದು. ವಿದ್ಯೆಯೆಂಬುದು ಹೊಟ್ಟೆಯ ದಾರಿಯೆನಿಸಬಾರದು. ವಿಜ್ಞಾನ ಮರಣಾತ್ಮಕವಾಗಿರದೆ, ಲೋಕಸೇವಾ ರೂಪವಾಗಿ ಉಪಯುಕ್ತವಾಗಬೇಕು. ಕಲೆ ಮತ್ತು ತತ್ವಗಳಿಗೆ ಸಲ್ಲತಕ್ಕ ಪ್ರಾಧಾನ್ಯತೆಯನ್ನು ಕೊಡಬೇಕು. ರಾಷ್ಟ್ರದ ಸಾಂಸ್ಕೃತಿಕ, ಧಾರ್ಮಿಕ ಅಭ್ಯುದಯಗಳು ಸರ್ವತೋಮುಖವಾಗಬೇಕು. ಭವಿಷ್ಯ ಸ್ವತಂತ್ರವಾದ ಭಾರತದಲ್ಲಿ ಪ್ರಜೆಯ ಜೀವನವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುವಂತೆ ಆಗಬೇಕು. ಜಗತ್ತಿನ ಯಾವುದೇ ರಾಷ್ಟ್ರವಾದರೂ ಯಾವ ವಿಧದಲ್ಲಾದರೂ ನಮ್ಮ ರಾಷ್ಟ್ರಕ್ಕಿಂತ ಪ್ರಗತಿಹೊಂದಿದೆಯೆಂದು ಹೇಳುವಂತಿರಬಾರದು."

## ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 751/39 O. S. 475/36

ಕೃಷ್ಣ ಬೈಪಾಡಿತ್ತಾಯ — ಅರ್ಜಿದಾರ

ಕೃಷ್ಣ ಹೆಬ್ಬಾರ . . . . . . . . . ಎದ್ರಿ

ಮೇಲ್ಕಂಡ ಅಮಲ್ಜಾರಿಯಲ್ಲಿ ಎದ್ರಿಯ ಬಾಬ್ತು ಸ್ಥಿರಆಸ್ತಿ ಜಪ್ತಿ ಮಾಡಿಸಬೇಕೆಂತ ಅರ್ಜಿದಾರನು ಅರ್ಜಿಮಾಡಿದುತ್ತಾನಾದ್ದರಿಂದ ಸದ್ರಿ ಸ್ಥಿರಆಸ್ತಿಯು ಕೋರ್ಟಿನವರಿಂದ ಜಪ್ತಿ ಮಾಡಲ್ಪಟ್ಟಿರುವುದರಿಂದ ಎದ್ರಿಯು ಸದ್ರಿ ಆಸ್ತಿಯನ್ನು ಬೇರೆ ಯಾರಿಗೂ ಸ್ವಾಧೀನ ಮಾಡಲು ಯಾ ಅನ್ಯರು ಆತನಿಂದ ಸ್ವಾಧೀನ ಹೊಂದಲು ಕೂಡಾ ನಿರ್ಬಂಧಿಸಲ್ಪಟ್ಟಿರುತ್ತಾರೆಂತಲೂ ಸದ್ರಿ ಅರ್ಜಿಯು ತಾರೀಕು 7—2—40ಕ್ಕೆ ತನ್ಖಿಗೆ ಇಟ್ಟಿರುತ್ತದೆಂತಲೂ ಈ ಮೂಲಕ ತಿಳಿಸಲಾಗಿಯದೆ.

ಪುತ್ತೂರು } B. Shivarama Holla
26—1—40 } Advocate for Petitioner

ಸ್ವದೇಶಾಭಿಮಾನಿ

ತಾರೀಕು 2-2-1940

# ಸ್ವರಾಜ್ಯದ ಹಾದಿ

ಸ್ವರಾಜ್ಯ ಸಂಪಾದನೆಗೆ ಖಾದಿಯುಲ್ಲದೆ ಬೇರೆ ಹಾದಿಯಿಲ್ಲವೆಂದು ಗಾಂಧಿಜಿಯವರು ಅಂದಿನಿಂದ ಇಂದಿನ ವರೆಗೆ ಎಡೆಬಿಡದೆ ಸಾರುತ್ತಿದ್ದಾರೆ. ಆದರೆ, ಕೆಲವು ಸ್ವಾರ್ಥಸಾಧಕರು ಮಹಾತ್ಮರ ಮಾತನ್ನು ಕೇವಲ ಅಪ್ರಬುದ್ಧವೆಂದು ಹೇಳುತ್ತಾ ಅವರ ಸ್ವರೂಪವೆತ್ತುತ್ತಿದ್ದಾರೆ. ರಾಷ್ಟ್ರದ ಸ್ವಾತಂತ್ರ್ಯ ಆಂದೋಲನವನ್ನು ಮುನ್ನಡೆಸಲು ಗಾಂಧಿಜಿಯವರೇ ಮುಂದೆ ಬರಬೇಕೆಂದು ಇವರೂ ಹಾರೈಸುತ್ತಿರುವರು; ಸಂಗ್ರಾಮವನ್ನು ಸಾಧಿಸಲು ಸೇನಾನಿಯಾಗಿ ಗಾಂಧಿಜಿಯವರೇ ಬರಬೇಕೆಂದು ವಿನಂತಿಸುವುದೂ, ಅದೇ ಕಾಲದಲ್ಲಿ ಆ ಸೇನಾನಿಯು ದೃಢವಾಗಿ ನಿಶ್ಚಯವಾಗಿ ನಂಬಿದ, ಆತನ ವಿಜಯ ಸಾಧನೋಪಾಯವೆನಿಸಿದ ಖಾದಿಯ ಕುರಿತು, ಮೆಚ್ಚದಿರುವುದೂ ಇವೆರಡು ವಿಷಯಗಳು ಖಂಡಿತವಾಗಿ ಜತೆಗೂಡಲಾರವು. ಮುಂದಾಳುವನ್ನು ಹೀಗೆ ಕುಂದೆಳೆಯುವ ಯತ್ನವು, ನಿಜವಾದ ವಿಧೇಯತೆಯಾಗಲಿ ಶಿಸ್ತಾಗಲಿ ನ್ಯಾಯವಾಗಲಿ ಆಗಲಾರದು.

## ಸ್ವಾರ್ಥಸಾಧಕರು

ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ, ಬ್ರಿಟಿಷ್ ಉದ್ಯೋಗಗಳ ಆಕ್ರಮಣದಿಂದ, ಭಾರತೀಯ ಉದ್ಯೋಗ ಕ್ಷೇತ್ರಕ್ಕೆ ನಷ್ಟವಾಯಿತೆಂದು ಸಾರಲಾದ ಖಂಡತುಂಡವಾದ ಮಾತಿಗೆ ಭಾರತೀಯ ಭಂಡವಾಳಗಾರರು ಬಹಳವಾಗಿ ಸಂತೋಷಗೊಂಡರು. ರಾಷ್ಟ್ರದಲ್ಲಿ ಆರ್ಥಿಕ ಪರಿಸ್ಥಿತಿಯು ತೀವ್ರವಾಗಿ ಪ್ರಗತಿ ಹೊಂದಬೇಕೆಂದು ಗಾಂಧಿಜಿ ಮತ್ತು ಇತರ ಮುಖಂಡರು ಹೇಳುತ್ತಿರುವಾಗ ಅದರಿಂದ ಅವರು ಸಹಜವಾಗಿ ಉಬ್ಬಿ ಹೋದರು. ಆದರೆ, ಬ್ರಿಟಿಷ್ ಉದ್ಯೋಗಿಕ ಸುಲಿಗೆಯ ಪರಿಹಾರವಾಗಿ, ರಾಷ್ಟ್ರದ ಆರ್ಥಿಕ ಪ್ರಗತಿಯ ಸಾಧನವಾಗಿ ಮೊದಲ ಹಜ್ಜೆಯೆನಿಸಿ, ಖಾದಿಯ ಕಾರ್ಯಕ್ರಮವನ್ನು ಕಾಂಗ್ರೆಸು ಕೈಕೊಳ್ಳಲು ನಿಶ್ಚಯಿಸಿದಾಗ ಮಾತ್ರ ಸ್ವಾರ್ಥಸಾಧಕರಾದ ಹಲವು ಭಾರತೀಯ ಮಿಲ್ಲುಗಾರರು ಸರ್ ಚಿಮನ್ ಲಾಲ್ ಸೆಟಲ್ ವಾಡರಂತಹವರು ಬಹಳವಾಗಿ ಸಿಡಿಮಿಡಿಗೊಳ್ಳುತ್ತಾರೆ.

## ಯಾವುದು ಮುಖ್ಯ?

ಕಾಂಗ್ರೆಸು ತನ್ನ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಬ್ರಿಟಿಷರ ಉದ್ಯೋಗಿಕ ಆಕ್ರಮಣವನ್ನು ಖಂಡಿಸಿದ್ದರೆ, ಅದು ಯಾವುದೇ ರೀತಿಯ ಸಂಕೋಚ ಮನೋವೃತ್ತಿಯಿಂದಲ್ಲ. ನಿಜವಾಗಿ ನೋಡಿದರೆ, ಭಾರತದ ಜನರು ವಿದೇಶೀಯ ಮಿಲ್ಲುಗಳಾದ ಮೆಂಚೆಸ್ಟರ್ ಮೊದಲಾದ ವಿದೇಶದ ಮಿಲ್ಲುಗಳಲ್ಲಿ ಆದ ವಸ್ತ್ರಗಳನ್ನು ಕೊಂಡುಕೊಳ್ಳುದಿರುವುದರಿಂದ, ಅಲ್ಲಿನ ಸಾವಿರಾರು ಮಂದಿ ಕೆಲಸಗಾರರು ನಿರುದ್ಯೋಗಿಗಳಾಗಿರುತ್ತಾರೆ. ಹೀಗಿರುವಾಗ ಮೆಂಚೆಸ್ಟರ್ ಮೊದಲಾದ ಕಡೆಗಳಲ್ಲಿ ಉಪವಾಸ ಬೀಳುವ ಹಲವು ಮಂದಿ ಬಡ ಕೆಲಸಗಾರರ ಅನ್ನ ತೆಗೆದು, ಭಾರತದಲ್ಲಿ ಮಿಲ್ಲುಗಳನ್ನಿಟ್ಟಿರುವ ಮಿಲ್ಲುಗಾರರಾದ ಹಲವು ಭಂಡವಾಳಗಾರರನ್ನು ಇನ್ನಷ್ಟು ಐಶ್ವರ್ಯವಂತರನ್ನಾಗಿ ಮಾಡುವ ಈ ರೀತಿಯ ಸಂಕೋಚವಾದ ಆರ್ಥಿಕ ದೃಷ್ಟಿಯು ಕಾಂಗ್ರೆಸಿನದಲ್ಲ. ಕಾಂಗ್ರೆಸು ಆಶಿಸುವುದು ಭಾರತೀಯರಾಗಿರುವ ನಿಜವಾದ ಅಸಂಖ್ಯಾತ ಬಡಜನರಿಗೆ ಅಶನ ವಸನಗಳನ್ನು ಕೊಡುವ ಸಲುವಾಗಿಯೇ. ಆದುದರಿಂದ ಸರ್ ಸೆಟಲ್ವಾಡರಂತಹವರು ಕಾಂಗ್ರೆಸಿನ ಗುಟ್ಟೇನೆಂದು ಸ್ಪಷ್ಟವಾಗಿ ತಿಳಿದುಕೊಂಡರೆ ಹೀಗೆ ವಿಷಾದಿಸಲು ಆಸ್ಪದವಿಲ್ಲ.

## ಮಿಲಿಯಾಂತರ ಬಡ ಮಂದಿ

ಬ್ರಿಟಿಷ್ ಭಂಡವಾಳಗಾರರು, ನಿರುದ್ಯೋಗದಲ್ಲಿರುವ ತಮ್ಮ ನಾಡಿನ ಕೆಲಸಗಾರರ ಕುರಿತು ಎಷ್ಟು ತೀವ್ರದಿಂದ ಆಲೋಚಿಸುತ್ತಿರುವರೊ ಅಷ್ಟೇ ತೀವ್ರವಾಗಿ ಭಾರತೀಯ ಮುಖಂಡರೂ ತಮ್ಮ ನಾಡಿನ ಬಡ ಕೆಲಸಗಾರರ ವಿಚಾರವಾಗಿ ಆಲೋಚನೆ ಮಾಡಿದರೆ, ಅದು ತಪ್ಪಾಗುವುದು ಸಾಧ್ಯವೇ ಇಲ್ಲ. ಕಾಂಗ್ರೆಸಿನ ಮುಖಂಡರ ಇಂದಿನ ಮುಖ್ಯ ವಿಚಾರವು ಹಳ್ಳಿ ಹಳ್ಳಿಗಳಲ್ಲಿ ಅಸಂಖ್ಯಕರಾಗಿರುವ ಬಡ ಜನರ ಕಡೆಗೆ ಹರಿದಿದೆ.

ಹಳ್ಳಿಗಳಲ್ಲಿರುವ ಹೆಚ್ಚು ಮಂದಿ ಇಂತಹ ಕೆಲಸಗಾರರಿಗೆ ವರ್ಷದ ಅರ್ಧ ಸಮಯದಲ್ಲಿ ಯಾವ ಉದ್ಯೋಗ ಇರುವುದಿಲ್ಲ. ಅವರು ವರ್ಷದ ಅರ್ಧ ಸಮಯ ಮಾಡಿದ ಕೆಲಸವೂ, ನಗರಗಳಲ್ಲಿ ಕಾರಖಾನೆಗಳಲ್ಲಿ ಆಗುತ್ತಿರುವ ವಸ್ತುಗಳ ಸ್ಪರ್ಧೆಗೆ ಎದುರಾಗಿ ಸಾಕೆಷ್ಟು ಉತ್ಪತ್ತಿಕರವೂ ಆಗಿಲ್ಲ. ಅವರೂ ಹಳ್ಳಿಯನ್ನು ಬಿಟ್ಟು ನಗರವನ್ನೇ ಸೇರಿದಲ್ಲಿ, ಅಲ್ಲಿಯೂ ಜೀವನ ನಿರ್ವಾಹಕ್ಕೆ ಯೋಗ್ಯವಾದ ಸೌಕರ್ಯಗಳಿರುವುದಿಲ್ಲ. ಆದುದರಿಂದ, ಇಂಥ ಹೊಟ್ಟೆಗೆ ದಿನ ನಿತ್ಯ ಕೂಳುಕೊಡುವ ಈ ಬಲು ದೊಡ್ಡ ಸಮಸ್ಯೆಯಲ್ಲಿ ತೊಳಲಾಡುವ ನಾಡಿನ ಜನರಿಗೆ ಜೀವನೋಪಾಯವನ್ನು ಕಂಡು ಹುಡುಕುವುದು ಅವಶ್ಯವಾಗಿದೆ! ಅದೇ ಗಾಂಧಿಜಿಯವರ ಮಹಾಮಂತ್ರವಾಗಿರುವ ಖಾದಿ ಪ್ರಚಾರವು!

## ಸ್ವರಾಜ್ಯದ ಅಡಿಗಲ್ಲು

ಸ್ವರಾಜ್ಯದ ಸುಂದರ ಮಂದಿರವನ್ನು ಕಟ್ಟಲು ಹಳ್ಳಿಯೇ ಅಡಿಗಲ್ಲು. ಅಲ್ಲಿನ ಜೀವನವು, ಉದ್ಯೋಗ, ವೃತ್ತಿಗಳು, ಮುಂದಕ್ಕೆ ಪ್ರಬಲ ಪರಿವರ್ತನೆಗಳನ್ನು ಹೊಂದಬೇಕು. ಹಳ್ಳಿ ಹಳ್ಳಿಗಳ ಜನರ ಮುಖಗಳಲ್ಲಿ ಉಲ್ಲಾಸದ ಕಳೆಯು ಕಾಣಬೇಕು. ಹೀಗಾಗಬೇಕಾದರೆ ಅವರಲ್ಲಿ ನೆಲೆಸಿರುವ ನಿರಂತರವಾದ ನಿರುದ್ಯೋಗವು ಪರಿಹಾರವಾಗಬೇಕು. ನಿರುದ್ಯೋಗವನ್ನು ಪರಿಹರಿಸಲು ಗ್ರಾಮ ಕೈಗಾರಿಕೆಗಳು ಹೆಚ್ಚಾಗಿ ಅವುಗಳಿಗೆ ಸಾಕಷ್ಟು ಪ್ರೋತ್ಸಾಹವು ಸಿಗಬೇಕು. ಎಲ್ಲಾ ಗ್ರಾಮ ಕೈಗಾರಿಕೆಗಳ ಕೇಂದ್ರವಾಗಿ ಖಾದಿಯೇ ಇಂದು ವಿರಾಜಿಸುತ್ತಿದೆ.

## ವಿರೋಧಿಗಳೂ ತಲೆದೂಗುವರು.

ಹೀಗೆ ಖಾದಿಯಲ್ಲಿರುವ ಉತ್ತಮ ಆರ್ಥಿಕ ದೃಷ್ಟಿಯನ್ನು ವಿಚಾರಿಸಿಯೇ ಮಹಾತ್ಮಾಜಿಯವರು ಅದೇ ಸ್ವರಾಜ್ಯದ ಹಾದಿಯೆಂದು ಒತ್ತಿ ಸಾರುತಿದ್ದಾರೆ! ಈ ಗೂಢವಾದ ತತ್ವವನ್ನು ನಿರ್ಮಲ ಬುದ್ಧಿಯಿಂದ ವಿಚಾರಿಸಿದರೆ, ವಿದೇಶೀಯ ರಾಜಕಾರಣ ಪಟುಗಳೂ, ನೀತಿಜ್ಞರೂ ಆದವರು ಗಾಂಧಿಜಿಯವರ ವಿಚಾರಕ್ಕೆ ತಲೆದೂಗದಿರಲಾರರು.

ಆದುದರಿಂದ ಭಾರತೀಯ ಮಿಲ್ಲು ಭಂಡವಳಗಾರರು ಈ ಕುರಿತು ಕಾಂಗ್ರೆಸ್ಸನ್ನೂ ಗಾಂಧಿಜಿಯವರನ್ನೂ ನಿಂದಿಸಬೇಕಾದುದಿಲ್ಲ. ಗಾಂಧಿಜಿಯವರು ಸ್ವದೇಶಿಗೆ ಆ ರೀತಿಯ ಪ್ರಾಶಸ್ತ್ಯವನ್ನು ಕೊಟ್ಟದ್ದು ವಿದೇಶೀಯ ಬಂಡವಾಳ ಶಾಹಿಯನ್ನು ಮುರಿದು, ಅದರ ಸ್ಥಾನದಲ್ಲಿ ಸ್ವದೇಶೀ ಭಂಡವಾಳ ಶಾಹಿಯನ್ನು ಸ್ಥಾಪಿಸಲಿಕ್ಕಲ್ಲ. ಈ ಭಂಡವಾಳ ಶಾಹಿಗಳ ಸ್ಪರ್ಧೆ ಕೋಲಾಹಲಗಳಿಂದಲೇ ಇಂದು ವಿದೇಶಗಳಲ್ಲಿ ಎಲ್ಲೆಲ್ಲಿಯೂ ಸಮರ ಸಂಭ್ರಮಗಳು ಕೇಳಿಬರುತ್ತಿವೆ. ಭಾರತೀಯ ಮಿಲ್ಲುಗಾರರನ್ನು ಕಾಂಗ್ರೆಸು ಪ್ರೋತ್ಸಾಹಿಸಿದರೆ, ಮುಂದಕ್ಕೆ ಖಂಡಿತವಾಗಿಯೂ ಅದರ ಫಲವಾಗಿ ಒದಗಲಿರುವ ಸ್ಪರ್ಧೆಯ ಶಸ್ತ್ರ ಹೋರಾಟದ ಸಲುವಾಗಿ, ಶಸ್ತ್ರನಿರ್ಮಾಣ ಕಾರ್ಖಾನೆಗಳನ್ನೂ ಈಗಾಗಲೆ ರಾಷ್ಟ್ರದಲ್ಲಿ ನಿರ್ಮಿಸಲು ಆರಂಭಿಸಬೇಕಾಗಬಹುದು. ಆದರೆ ಅಂತಹ ಪ್ರಮಾದಕ್ಕೆ ಕಾಂಗ್ರೆಸು ಎಂದಿಗೂ ಬಲಿಬೀಳಲಾರದು!

## ರಚನಾತ್ಮಕ ಕಾರ್ಯಗಳು

ಭಾರತವು ಮುಂದಕ್ಕೆ ಯಾವುದೇ ರೀತಿಯ ದುರಂತಕ್ಕೂ ಬಲಿಬೀಳಬಾರದೆಂದು ಬಗೆದೇ ಇಂದು ಮಹಾರಾಜನೀತಿ ನಿಪುಣರೂ, ಉದಾತ್ತ ಧರ್ಮಪರಾಯಣರೂ, ಆದ ಮಹಾತ್ಮಾಜಿಯವರು ಖಾದೀ ಮೊದಲಾದ ಕಾರ್ಯಗಳುಳ್ಳ ರಚನಾತ್ಮಕ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟಿರುವರು. ಸ್ವಾತಂತ್ರ್ಯ ಸಾಧನೆಗೆ, ಅದೇ ನಿಜವಾದ ಹಾದಿಯೆಂದು ಅವರು ಸಾರುತ್ತಲಿರುವರು.

ಆದಕಾರಣ, ಭಾರತದ ಮಾತ್ರವಲ್ಲ, ಇಡೀ ಮಾನವ ಜನಾಂಗದ ನಿಜವಾದ ಹಿತಚಿಂತಕನೆನಿಸಿದ ಪ್ರತಿಯೊಬ್ಬನೂ ಖಾದಿಯನ್ನು ಆದಷ್ಟು ತೀವ್ರವಾಗಿ, ಜನಪ್ರಿಯವೂ, ವಿಶ್ವಮಾನ್ಯವೂ ಆಗುವಂತೆ ಮಾಡಲು ಯತ್ನಿಸಬೇಕು. ಅದೇ ನಿಜವಾಗಿಯೂ ಸ್ವರಾಜ್ಯದ ಹಾದಿಯಾಗಿದೆ.

ಸಚಿತ್ರ

ಚರಿತ್ರೆ ಮತ್ತು ಕಥೆಗಳು.

| | ಆ. ಪೈ. |
| --- | --- |
| 3 ನೇ ತರಗತಿಗೆ ಬೆಲೆ: | 2—೯ |
| 4 ,, ,, ,, | 3—0 |
| 5 ,, ,, ,, | 3—6 |

(ಅನುಭವಸ್ಥರಾದ ಉಪಾಧ್ಯಾಯರಿಂದ ಬರೆಯಲ್ಪಟ್ಟಿದ್ದು)
ಎಲಿಮೆಂಟರಿ ಶಾಲೆಗಳ ಉಪಯೋಗಾರ್ಥವಾಗಿ.

ಪುಸ್ತಕಗಳ ಕುರಿತು ವಿದ್ಯಾಕ್ಷೇತ್ರದಲ್ಲಿ ಹೆಸರು ಹೊಂದಿದ ಮಹನೀಯರೊಬ್ಬರ ಅಭಿಪ್ರಾಯ.

ಇಷ್ಟು ಕಡಿಮೆ ಬೆಲೆಯಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಿ ಕೊಡುವ ಸಾಹಸವು ನಮ್ಮ ಜಿಲ್ಲೆಯ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲ!

ಉಡುಪಿ,
18—1—40

...... ನೀವು ಪ್ರಕಾಶಿಸಿದ 'ಚರಿತ್ರೆ ಮತ್ತು ಕಥೆಗಳು' ಎಂಬ ಪುಸ್ತಗಳನ್ನು ಓದಿನೋಡಿದೆ. ಬಹಳ ಕಾಲದ ನನ್ನ ಆತುರವು ಇಂದು ಪೂರ್ಣವಾಗಿದೆ. ಪುರಾಣ, ಚರಿತ್ರೆಗಳ ಹಾಗೂ ಸ್ಥಳೀಕ ಇತಿಹಾಸಗಳ ಲಲಿತ ಕಥೆಗಳನ್ನು ಮಕ್ಕಳಿಗೆ ಮುದ್ದನಿಸುವಂತಹ ಸುಂದರ ಶೈಲಿಯಲ್ಲಿ ಇಷ್ಟು ಮಿತವಾಗಿಯೂ ಹಿತವಾಗಿಯೂ ಹಿಂದೆ ಬರೆದ ಲೇಖಕರು ಬೇರಿಲ್ಲ. ಪಡಿಯಚ್ಚುಗಳು ಮತ್ತು ಮುದ್ರಣವು ಪುಸ್ತಕಗಳ ಸೌಂದರ್ಯವನ್ನು ಮೇರೆ ಮೀರಿಸಿವೆ. ಕಾಗದದ ಮತ್ತು ಪ್ರಿಂಟಿಂಗಿನ ಖರ್ಚು ಅಧಿಕವಾಗಿರುವ ಇಂದಿನ ಕಾಲದಲ್ಲಿ ಇಷ್ಟು ಕಡಿಮೆ ಬೆಲೆಗೆ, ಒದಗಿಸಿಕೊಟ್ಟ ನಿಮಗೆ ನಮ್ಮ ಜಿಲ್ಲೆಯ ಬಡ ವಿದ್ಯಾರ್ಥಿಗಳು ನಿಜವಾಗಿಯೂ ಕೃತಜ್ಞರಾಗದೆ ಇರಲಾರರು. ನಿಮ್ಮ ಸಾಹಸವು ಇತ್ಯೋಪ್ಯತಿಶಯವಾಗಿ ಜಯಪ್ರದವಾಗಲಿ. ......

ಪಿ. ಆರ್. ಎಚ್.

ಶಿಕ್ಷಣಕ್ಷೇತ್ರದಲ್ಲಿಯೇ ಪ್ರಚಂಡ ಕ್ರಾಂತಿ!
ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯ!!

ಇದೇ ತರದಲ್ಲಿ ಎಲಿಮೆಂಟರಿ ಶಾಲೆಗಳ ಎಲ್ಲಾ ತರಗತಿಗಳಿಗೂ ಬೇಕಾದ ಸಿವಿಕ್ಸ್, ಭೂಗೋಳ, ಪ್ರಕೃತಿಶಾಸ್ತ್ರ, ಗೃಹವಿಜ್ಞಾನ, ವ್ಯಾಕರಣ ಪುಸ್ತಕಗಳು ಸಿದ್ಧವಾಗಿವೆ.

ಪುಸ್ತಕಗಳು ದೊರಕುವ ಸ್ಥಳ:
ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

'ನಾನು ಅನೇಕ ಸಂಗ್ರಾಮಗಳಲ್ಲಿ ಹೋರಾಡಿದ್ದೇನೆ ಎಷ್ಟೆಂದರೂ ಹಿಂದೆ ನಾನು ಇಂದಿಗಿಂತ ದುರ್ಬಲನೇ ಇದ್ದೆ. ಅಂದು ರಾಷ್ಟ್ರದ ಉದ್ದಗಲವಿಡೀ ಸಂಚರಿಸಿ ಹೋರಾಡಬೇಕಿತ್ತು. ನಾನು ಸ್ವತಃ ಮಾತನಾಡಿ ಚರ್ಚಿಸಿ ಜನರನ್ನು ಒಪ್ಪಿಸಬೇಕಿತ್ತು ಇಂದು ನಾನು ಸಂಗ್ರಾಮವನ್ನು ಆರಂಭಿಸಿದರೆ, ನಾನದನ್ನು ಶೇಗಾಂನಿಂದಲೇ ಪ್ರಾರಂಭಿಸಬಲ್ಲೆನು '

ಹೀಗೆ ಕ್ರಾಂತಿಕಾರೀ ಮಿತರೊಬ್ಬರಿಗೆ ಮಹಾತ್ಮಾಜಿಯವರು ಹೇಳಿದರೆಂದು ಮಹಾದೇವ ದೇಸಾಯಿಗಳು ಕಳೆದ ವಾರದ ಹರಿಜನದಲ್ಲಿ ಬರೆದಿರುವರು.

ಕ್ರಾಂತಿಕಾರ ಮಿತರಿಗೆ ಅವರು ಹೇಳಿದರು—'ಭಾರತವು ಜಗತ್ತಿಗೆ ತೋರಿಸಿದ ಮಹತ್ವಗಳಲ್ಲಿ ಒಂದು ವಿಶಿಷ್ಟವಾದುದೆಂದರೆ ವರ್ಣಾಶ್ರಮ ಧರ್ಮದ ವಿಚಾರವು. ಎಂದರೆ ಅದರಲ್ಲಿ ಕ್ಷತ್ರಿಯನೊಬ್ಬನು ಮಾತ ಖಡ್ಗಧಾರಿಯಾಗಿರಬಲ್ಲನು ಆದದರಿಂದ ಇತರ ಮಿಕ್ಕುಳಿಯು ಜನರಿಗೂ ಶಾಂತಿಯನ್ನು ಬೋಧಿಸಿ, ಅವರನ್ನು ಹಿಂಸಾಯುದ್ಧಕ್ಕೆ ತಯಾರಿಸುವುದೆಂಬುದು ಸಹಜವಾದುದಲ್ಲ. ನಾನು ಹೇಳುವ ಅಹಿಂಸೆಯು ಭಾರತದ ಸಹಜ ಸತ್ವವಾಗಿದೆ. ಪರಸ್ಪರ ಸಹಾಯವೇ ಜೀವನ ಧರ್ಮವಲ್ಲದೆ, ಅನ್ಯೋನ್ಯ ಯುದ್ಧವಲ್ಲ ಪರಸ್ಪರ ಯುದ್ಧವು ಜಗದ ಧರ್ಮವಾಗಿದ್ದರೆ, ಜಗತ್ತು ಉಳಿಯುತ್ತಲೇ ಇರಲಿಲ್ಲ

### ಕೊನೆಯ ಸಂಗ್ರಾಮ

'ಮುಂದಿನದು ನನ್ನ ಕೊನೆಯ ಸಂಗ್ರಾಮವಾಗಬೇಕು ಆದ್ದರಿಂದಲೇ ನನ್ನ ಸೈನ್ಯವು ನನ್ನ ಅನುಜ್ಞೆಯನ್ನು ಅನುಸರಿಸಲು ಸಿದ್ಧವಾಗಿದೆಯೆಂದು ಭರವಸೆಯಾಗದ ವಿನಹ ನಾನು ಸೈನ್ಯವನ್ನು ಮುನ್ನಡೆಸಲು ಇಚ್ಛಿಸುವುದಿಲ್ಲ. ನನ್ನ ಸೈನಿಕರಾಗಿ ಮುಂಬರುವವರಿಗೆ ವಿಷಯವಂತೂ ಬಹಳ ಸುಲಭವಾದುದೇ ಆಗಿದೆ ನೂಲುವುದು ಮತ್ತು ಖಾದಿಯನ್ನು ಧರಿಸುವುದು ಇವೆರಡರಿಂದ ನನಗೆ ವಿಶ್ವಾಸಪಾತ್ರರಾಗಬಹುದು

'ನನಗೆ ಒಬ್ಬ ನಿಜವಾದ ಸತ್ಯಾಗ್ರಹಿಯು ಇದ್ದರೆ ಸಾಕು ನಾನು ಒಬ್ಬ ನಿಜವಾದ ಸತ್ಯಾಗ್ರಹಿಯಾಗಲು ಯತ್ನಿಸುತ್ತೇನೆ ನಾನೇ ಹಿಂಸೆಯಿಂದ ತುಂಬಿರುವುದು ನನ್ನ ತಪ್ಪಾಗಿದೆ. ನಾನು ಸಿಟ್ಟನ್ನು ತಡೆಯುವುದಿದ್ದರೂ, ನಾನು ಸಿಟ್ಟುಗೊಳ್ಳುತ್ತೇನೆ ಎಂಬುದು ನಿಜವಾಗಿದೆ ನಾನು ೧೯೦೬ರಿಂದ ಬ್ರಹ್ಮಚರ್ಯವನ್ನು ಪಾಲಿಸುವುದಿದ್ದರೂ ನಿಜವಾದ ಬ್ರಹ್ಮಚಾರಿಯಾಗಿಲ್ಲ ನನ್ನ ಅಭಿಪ್ರಾಯದಂತೆ ಬ್ರಹ್ಮಚರ್ಯವೆಂದರೆ ಸಂಭೋಗವಿಲ್ಲದ ಬರಿಯ ನಪುಂಸಕತ್ವವಲ್ಲ; ಸಂಭೋಗ ಶಕ್ತಿಯನ್ನು ಆಧ್ಯಾತ್ಮಿಕ ಶಕ್ತಿಗೆ ಸೇರಿಸುವ 'ಊರ್ಧ್ವ ವೃತ'ವಾಗಿದೆ. ಆದುದರಿಂದಲೇ ನಾನಿಂದು ನನ್ನನ್ನೆನ್ನವು ಇಂತಹ ಕಠಿಣ ಅಗ್ನಿಪರೀಕ್ಷೆಯಿಂದ ತೇರ್ಗಡೆಹೊಂದುವುದೆಂಬ ಭರವಸೆ ಸಿಗದೆ, ಸತ್ಯಾಗ್ರಹವನ್ನು ಆರಂಭಿಸಲಾರೆನು.

# ಇಂದು ಸಂಗ್ರಾಮವನ್ನು ಹೂಡಲು ಹಿಂದಿಗಿಂತ ಬಲಶಾಲಿಯಾಗಿದ್ದೇನೆ

## ಮಹಾತ್ಮಾಜಿಯವರ ದೃಢ ನಿರ್ಧಾರ

## ಸ್ವಾತಂತ್ರ್ಯವನ್ನು ಕೊಡಬೇಕೆಂದು ಬ್ರಿಟಿಷ ಮೇಧಾವಿಗಳ ಹೇಳಿಕೆ

### ಕಾಂಗ್ರೆಸ್ ಅಧಿವೇಶನದ ಸಿದ್ಧತೆ

### ಶೇಗಾಂನಿಂದ ಸತ್ಯಾಗ್ರಹ

'ನಾನು ಹಿಂದೆ ಬಹಳಸಲ ಆಂದೋಲನಗಳನ್ನು ನಡೆಸಿದ್ದೇನೆ ಅಂದು ಅದಕ್ಕಾಗಿ ದೇಶದ ಉದ್ದಗಲದಲ್ಲಿ ಸಂಚರಿಸಿ ಜನರಿಗೆ ಬೋಧಿಸಬೇಕಾಗಿತ್ತು ಆದರೆ ಇಂದು ಹಿಂದಿಗಿಂತ ಬಲಶಾಲಿಯಾಗಿದ್ದೇನೆ ಆದುದರಿಂದಲೇ ಮುಂದಿನ ಹೋರಾಟವನ್ನು ನಾನು ಶೇಗಾಂನಿಂದಲೇ ನಡೆಸಬಲ್ಲೆನು ಆದರೆ ನಾನು ನನ್ನ ಉದ್ದೇಶವನ್ನು ಇದುವರೆಗೆ ಸಿದ್ಧಿಸಿಕೊಳ್ಳಲಿಲ್ಲವೆಂಬುದು ಮಾತ್ರ ಶೋಚನೀಯವಾಗಿದೆ '

ಲಂಡನ್ನಿನ ಇಂಡಿಯಾ ಸ್ವರಾಜ್ಯ ಲೀಗ್ ಸಂಸ್ಥೆಯು ಜನವರಿ ೨೬ರಂದ ಸ್ವಾತಂತ್ರ್ಯ ದಿನಾಚರಣೆ ಮಾಡಲು ವ್ಯವಸ್ಥೆ ಮಾಡಿ, ಬ್ರಿಟನ ಬುದ್ಧಿಶಾಲಿಗಳಿಂದ ಮಹನೀಯರಿಗೂ ಮಹಿಳೆಯರಿಗೂ ಈ ಪ್ರಶ್ನೆಯುಳ್ಳ ಕರಪತ್ರಗಳನ್ನು ಉತ್ತರ ಕೊಡುವ ಸಲುವಾಗಿ ಕಳುಹಿಸಿತು

(೧) ಬ್ರಿಟನ ಸ್ವಾತಂತ್ರ್ಯ ಮತ ಪ್ರಜಾಪ್ರಭುತ್ವಗಳ ಸಲುವಾಗಿ ಹೋರಾಡುವುದಿದ್ದರೆ ಆ ತತ್ವವು ಭಾರತಕ್ಕೆ ಯಾವ ರೀತಿಯ ಅನ್ವಯಿಸಬೇಕೆಂದು ನಿಮ್ಮ ಅಭಿಪ್ರಾಯವಾಗಿದೆ?

(೨) ಭಾರತವು ರಾಷ್ಟ್ರದ ಪ್ರಬಲ ಬಹುಮತದಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ರಚಿತವಾದ ಮಂಡಳಿಯ ಭಾರತದ ಪದಿನ ರಾಜ್ಯಘಟನೆಯನ್ನು ತಯಾರಿಸಬೇಕೆಂದ ಹೇಳುವ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನ?

(೩) ಬ್ರಿಟನು ಭಾರತಕ್ಕೆ ಸ್ವಯಂನಿರ್ಣಯ ಅಧಿಕಾರವುಂಟೆಂದು ತಿಳಿಯುವುದಿಲ್ಲವಾದರೆ ಭಾರತವು ಬ್ರಿಟನಿನ ಇಂದಿನ ಯುದ್ಧನೀತಿಯು ಕೇವಲ ಸಾಮ್ರಾಜ್ಯಶಾಹೀ ತತ್ವಕ್ಕಾಗಿ ಎಂದು ಪರಿಗಣಿಸುವುದು ಈ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು?

ಈ ಮೂರು ಪ್ರಶ್ನೆಗಳನ್ನು ಎಲ್ಲರಿಗೂ ಕಳುಹಿಸಲಾಗಿತ್ತು ಇದಕ್ಕೆ ಜಾರ್ಜ ಬರ್ನಾರ್ಡ್‌ ಶಾರವರು ಭಾರತಕ್ಕೆ ಕೂಡಲೇ ಸ್ವರಾಜ್ಯವನ್ನು ಕೊಡುವುದು ನ್ಯಾಯವೆಂದೂ, ಭಾರತದ ರಾಜಕೀಯ ಪ್ರಗತಿಯು ಸ್ವಾತಂತ್ರ್ಯದಾನಕ್ಕೆ ಅನುಕೂಲವಾಗಿದೆಯೆಂದೂ ಅಭಿಪ್ರಾಯಪಟ್ಟಿರುವರು ಪ್ರೊ। ಹಾಲ್ಡೇನರವರೂ ಭಾರತಕ್ಕೆ ಸ್ವರಾಜ್ಯ ಕೊಡುವುದು ಸರಿಯೆಂದೂ ಭಾರತದ ಕೇಳಿಕೆಯ ನ್ಯಾಯವೆಂದೂ ಹೇಳಿರುವರು ಎಚ್ ಜಿ ವೆಲ್ಸರೂ ಭಾರತದ ಸ್ವಾತಂತ್ರ್ಯಕ್ಕೆ ತಾವು ಅನುಕೂಲ ಅಭಿಪ್ರಾಯದವರಾಗಿರುವುದಾಗಿ ಪ್ರಕಟಿಸಿರುವರು

ಕೆಂಟರ್‌ಬರಿಯ ಆರ್ಚ್ ಬಿಶೋಪರು, ಇಂತಹ ವಿಷಯಗಳಲ್ಲಿ ತಾನು ಹೆಚ್ಚಿನ ಆಸಕ್ತಿಯವನಾಗಿದ್ದರೂ ತನ್ನ ಸ್ಪಷ್ಟ ಅಭಿಪ್ರಾಯವನ್ನು ವಿವರಿಸಲಾಗುವುದಿಲ್ಲವೆಂದೂ ಹೇಗಿದ್ದರೂ ತಾನು ಭಾರತದ ಒಳಿತನ್ನೇ ಅಪೇಕ್ಷಿಸುವನೆಂದೂ ಹೇಳಿರುವರು

ಹೀಗೆಯೇ ವಿಕ್ಟರ್ ಗೋಲೆಂಜ್ ಪ್ರಾಳ್ಮೆದತ್ ಮೊದಲಾದವರೂ ಭಾರತಕ್ಕೆ ಸ್ವಾತಂತ್ರ್ಯದಾನವು ಅವಶ್ಯವೆಂದಿರುವರು

ಹೀಗೆ ಲಂಡನ ಪ್ರಸಿದ್ಧರಾದ ಮಹಾಮೇಧಾವಿಗಳೆಲ್ಲರೂ ಭಾರತೀಯರು ಸ್ವಾತಂತ್ರ್ಯಾರ್ಹರು ಎಂದು ಹೇಳುತ್ತಿರಲು, ಬ್ರಿಟಿಷ್ ಸರಕಾರವು ಕಿವಿಗೊಡದಿರುವುದು ಅಪ್ರಬುದ್ಧತನವಾಗಿದೆ

### ಸುಂದರ ಪರ್ವತ ಶ್ರೇಣಿಯ ದೃಶ್ಯ!

ದಾಮೋದರ ನದಿಯ ದಡಿಯಲ್ಲಿರುವ ಹಸುರುಗಾಸಿದ ಪ್ರದೇಶವು ಇಂದು ಸುಂದರ ಸಮತಟ್ಟಾಗಿದೆ ರಾಮಗಢದ ನಿರ್ಜನ ಹಳ್ಳಿಯು ಜನವಾಸ ಯೋಗ್ಯವಾಗಿದೆ

೨೫೦ ಎಕರೆ ಸ್ಥಳವನ್ನು ಮಾರ್ಚ ಮೂರನೆಯ ವಾರದಲ್ಲಿ ನಡೆಯುವ ಅಖಿಲ ಭಾರತದ ರಾಷ್ಟ್ರೀಯ ಅಧಿವೇಶನದ ಸಲುವಾಗಿ ಅಲ್ಲಿ ಸುಸಜ್ಜಿತವಾಗಿ ಮಾಡುತ್ತಿದ್ದಾರೆ

ಇಂದಿನ ಜಡತೆಯ ಕಾರ್ಯಕ್ರಮದಿಂದ ರಾಷ್ಟ್ರವನ್ನು ಪುನಃ ಜಾಗೃತಿಗೊಳಿಸುವ ಸಲುವಾಗಿ, ಬೀಹಾರಿಗೆ ಭಾರತದ ಮುಖಂಡರನ್ನು ಆಮಂತ್ರಿಸಲು ಇಂದು ಅಲ್ಲಿ ಎಲ್ಲಾ ವಿಧದ ಸಿದ್ಧತೆಗಳೂ ನಡೆಯುತ್ತಿವೆ. ಆ ಪ್ರಾಂತದಲ್ಲಿ ಕಾಂಗ್ರೆಸು ಮಂತ್ರಿಗಳು ರಾಜಿನಾಮೆ ಕೊಟ್ಟಿರುವುದರಿಂದ ಈ ವರ್ಷದ ರಾಷ್ಟ್ರಸಭೆಗೆ ಮಹತ್ವದ ಸೇವೆಯ ಸಂದಂತಾಯಿತು. ಏಕೆಂದರೆ ಅವರೆಲ್ಲರೂ ಸಂಪೂರ್ಣ ಉತ್ಸಾಹದಿಂದ ರಾಮಗಢ ಕಾಂಗ್ರೆಸ್ಸನ್ನು ಸಂಪೂರ್ಣ ಯಶಸ್ವಿಯಾಗಿ ಮಾಡಲು ಬಹಳ ಯತ್ನಿಸುತ್ತಿದ್ದಾರೆ

ಕಾಂಗ್ರೆಸ್ ನಗರದ ನಿರ್ಮಾಣ ಕಾರ್ಯದಲ್ಲಿ ಮಾಜಿ ಮಂತ್ರಿಗಳಾದ ಶ್ರೀ ಅನುಗ್ರಹ ನಾರಾಯಣ ಸಿಂಹರವರು ಸಂಪೂರ್ಣ ಕಾರ್ಯಗಳನ್ನು ಮಾಡುತ್ತಿದ್ದಾರೆ

ಮಾಜಿ ಪ್ರಧಾನ ಮಂತ್ರಿ ಶ್ರೀ ಸಿಂಹರು ಅಧಿವೇಶನಕ್ಕಾಗಿ ಹಣ ಸಂಗ್ರಹ ಮಾಡುತ್ತಿದ್ದಾರೆ

ಕುಮಾರಿ ಪ್ರೇಮಾಬೆನ್ ಕಾಂಟಕರು ಮಹಿಳಾ ಸೇನಾನಾಯಕಿಯಾಗಿ ಕೆಲಸ ಮಾಡುತ್ತಿದ್ದಾರೆ

### ಪ್ರಕೃತಿ ಸೌಂದರ್ಯ

ಕಾಂಗ್ರೆಸ್ ಅಧಿವೇಶನವು ನೆರವೇರುವ ಸ್ಥಳವು ಪ್ರಕೃತಿ ರಮಣೀಯವಾಗಿದೆ ಹಿಂಗಡೆಯಿಂದ ಎತ್ತರ ಪರ್ವತಮಾಲೆಗಳು ಸುತ್ತಿವೆ ಈ ವರ್ಷ ೩,೨೦೦ ಪ್ರತಿನಿಧಿಗಳು ಬರಬಹುದೆಂದು ಅಂದಾಜ ಮಾಡಲಾಗಿದೆ ಅವರಿಗೆಲ್ಲಾ ಉಳಕೊಳ್ಳಲು ವಸತಿಗಳು ಸಿದ್ಧವಾಗಿವೆ

ಕೃಷಿಪ್ರದರ್ಶನವೊಂದು ಏರ್ಪಡಿಸಲಾಗಿದೆ

ಕಾಂಗ್ರೆಸ್ ನಗರದ ನಿರ್ಮಾಣವು ಪೂರ್ಣವಾಗುತ್ತಾ ಬರುತ್ತದೆ

ಜನವಾಸ ಶೂನ್ಯವಾಗಿದ್ದ ಈ ಸ್ಥಳವು ಈ ಅಧಿವೇಶನದಿಂದಲಾಗಿ ಮುಂದಕ್ಕೆ ಒಳ್ಳೆಯ ವ್ಯಾಪಾರ ವಹಿವಾಟಿನ ಕೇಂದ್ರ ಸ್ಥಳವಾಗಬಹುದೆಂದು ಊಹಿಸಲಾಗಿದೆ

DIAMONDS! DIAMONDS
BEST BRILLIANCY!
K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ
ವಜ್ರಗಳು!

ಎವರ್ ಸ್ಟಡರ್ಮಿನಿಂದ ಬರುವ ವಜ್ರಗಳು. ಉಪಕಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು

ನಮ್ಮ ಬ್ರಾಂಚು ಒಂದು ಇತ್ತೀಚಿಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್.
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

# ರಶ್ಯದ ಭಾಗ್ಯವಿಧಾತನಾದ ಲೆನಿನನು ಫಿನ್ನರ ಸ್ವಾತಂತ್ರ್ಯವನ್ನು ಕಾಪಾಡಿದನು!

## 1889ರ ಇತಿಹಾಸದ ಒಂದು ನೆನಹು

### ಲೆನಿನನ ಉತ್ತರಾಧಿಕಾರಿಯಿಂದ ಸ್ವಾತಂತ್ರ್ಯವು ಧ್ವಂಸವಾಗುತ್ತಿದೆ!

ಝಾರ್ ಪ್ರಭುತ್ವವು-ನಿರಂಕುಶ ಆಡಳಿತವು-ರಶ್ಯದ ಕ್ರಾಂತಿಗೆ ಕಾರಣವಾಗಿತ್ತು! ನೆರೆಕರೆಯ ಪ್ರಾಂತಗಳೂ ಝಾರನ ದುರ್ದಾಂತ ಪ್ರಭುತ್ವದಿಂದ ಉಗ್ರಗೊಂಡಿದ್ದವು. ರಶ್ಯದಲ್ಲಿ ಕ್ರಾಂತಿಸೈನ್ಯವನ್ನು ಒಟ್ಟುಮಾಡುತಿದ್ದ ಲೆನಿನನು, ಝಾರನ ದುಷ್ಪ್ರಭುತ್ವದಿಂದ ಕ್ರಾಂತಿಯೆದ್ದ ಫಿನ್ನರಿಗೂ, ಅವರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೆರವಾಗಿದ್ದನು. ಲೆನಿನನ ಸಾಹಸದಿಂದ ಸ್ಥಾಪಿತವಾದ ಸೋವಿಯೆಟ್ ರಶ್ಯವೇ ಇಂದು, ಆತನ ಸಹಾಯವನ್ನು ಪಡೆದು ಸ್ಥಾಪಿತವಾದ ಫಿನ್‌ಲೆಂಡಿನ ಸ್ವಾತಂತ್ರ್ಯವನ್ನು ಅಪಹರಿಸುತ್ತಿರುವ ಕಾಲದಲ್ಲಿ, ಆ ಹಿಂದಿನ ಘಟನೆಗಳ ನೆನಹು ನಿಜವಾಗಿಯೂ ಚಿತ್ತವೇಧಕವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

**ಸ್ವಾತಂತ್ರ್ಯ ಪ್ರತಿಬಂಧಕ ಶಾಸನ**

೧೮೯೯ನೆಯ ಇಸವಿ! ಹೇಮಂತ ಸಮಯ. ಝಾರ್ ನಿಕಲಸನು ಫಿನ್ನರ ಸ್ವಾತಂತ್ರ್ಯವನ್ನು ಕಸಿಯುವ ಕಾನೂನೊಂದನ್ನು ಪ್ರಕಟಿಸಿದನು. ಫಿನ್ನರು ಅದರಿಂದ ಬೆರಗಾದರು. ಅಲೆಕ್ಸಾಂಡರ್ Iನ ದಿನದಿಂದ ಆರಂಭಿಸಿ, ಅವರು ಅನುಭವಿಸುತ್ತಿದ್ದ ಸ್ವಾತಂತ್ರ್ಯವು ಇದರಿಂದ ಕೊನೆಗೊಳ್ಳುವಂತಾಗಿತ್ತು. ರಶ್ಯನ್ ಭಾಷೆಯು ಫಿನ್ನರ ರಾಷ್ಟ್ರಭಾಷೆಯಾಗಿ ಪ್ರಚಾರಕ್ಕೆ ಬಂತು. ಇದರಿಂದ ಇಡೀ ಫಿನ್‌ಲೆಂಡಿನಲ್ಲಿ ಭಯಂಕರ ಆಂದೋಲನವೇ ಆರಂಭವಾಯಿತು. ರಶ್ಯನ್ ಕ್ರಾಂತಿಕಾರನೊಬ್ಬನ ನೆರವನ್ನು ಪಡೆದು ೫೦೦,೦೦೦ ಫಿನ್ನರು ಸಹಿ ಹಾಕಿದ ಒಂದು ಪತ್ರವು ಝಾರನಿಗೆ ಕಳುಹಿಸಲ್ಪಟ್ಟಿತು. ಅದರಲ್ಲಿ ಶಾಸನ ಮೂಲಕ ಪ್ರತಿಬಂಧಿಸಿದ ಸ್ವಾತಂತ್ರ್ಯ ಹಕ್ಕುಗಳನ್ನು ತಿರಿಗಿ ಕೊಡಬೇಕೆಂಬ ಮನವಿ ಮಾಡಲಾಗಿತ್ತು. ಆದರೆ ಝಾರನು ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ, ಮಾತ್ರವಲ್ಲ ಅವರಲ್ಲಿ ಹಲವು ಪ್ರತಿನಿಧಿಗಳನ್ನು ಸೆರೆಮನೆಯಲ್ಲಿಟ್ಟು ಬವಣೆಗೊಳಿಸಿದನು.

**ಸ್ವಾತಂತ್ರ್ಯಪ್ರಿಯನಾದ ಲೆನಿನ್**

ಆಗಲೇ ರಶ್ಯದ ರಾಜಕೀಯದಲ್ಲಿ ಲೆನಿನನು ಬಹಳ ಪ್ರಾಮುಖ್ಯ ಭಾಗವನ್ನು ವಹಿಸುತ್ತಿದ್ದನು. ಫಿನ್ನರು ಸ್ವಾತಂತ್ರ್ಯಕ್ಕಾಗಿ ಹೀಗೆ ಪಡಪಡಿಸುತ್ತಿರುವ ಕಾಲದಲ್ಲಿ, ಸ್ವಾತಂತ್ರ್ಯಪ್ರಿಯನಾದ ಲೆನಿನನು ಸಹಜವಾಗಿ ಅವರಿಗೆ ಸಂಪೂರ್ಣ ಬೆಂಬಲವನ್ನೇ ಕೊಟ್ಟನು. ಅವರ ಕೇಳಿಕೆಗಳು ನ್ಯಾಯವೆಂದು ವಾದಿಸಿದನು. ರಶ್ಯದ ಝಾರನ ದುಷ್ಪ್ರಭುತ್ವಕ್ಕೆ ವಿರುದ್ಧವಾಗಿ, ಫಿನ್ನರು ಹೂಡಿದ ಸ್ವಾತಂತ್ರ್ಯ ಸಮರದಲ್ಲಿ, ಫಿನ್ನರಿಗೆ ರಶ್ಯದ ಕೂಲಿಗಾರರು ನೆರವಾಗಬೇಕೆಂದು ಅವನು ಹಲವು ಲೇಖನಗಳನ್ನು ಪ್ರಕಟಿಸಿದ್ದನು. ಆಗ ರಶ್ಯದ ಕೆಲಸಗಾರರು ಅಷ್ಟು ಶಕ್ತಿವಂತರಾಗಿರಲಿಲ್ಲ. ಆದರೆ ತಿರಿಗಿ ೧೯೦೧ರಲ್ಲಿ ಫಿನ್ನರು ಮೊದಲಿನಂತೆಯೇ ಮನವಿ ಮಾಡಿಕೊಂಡು, ಅದನ್ನೂ ತಿರಸ್ಕರಿಸಿದ ಸಮಯದಲ್ಲಿ ಲೆನಿನನು ತನ್ನ ಕ್ರಾಂತಿಕಾರಕ ಸೈನ್ಯದೊಂದಿಗೆ ಫಿನ್ನರಿಗೆ ಪ್ರಚಂಡ ಸಹಾಯವನ್ನು ಒದಗಿಸಿದನು.

ತನ್ನ ಪಕ್ಷದ ಪತ್ರಿಕೆಯಾದ 'ಇಸ್ಕ್ರಾ'ದಲ್ಲಿ ಲೆನಿನನು ಫಿನ್ನರ ಮನವಿಯನ್ನು 'ಜನತೆಯ ಕರೆ'ಯೆಂದು ಹೇಳಿದನು. ಜನರು ಲೆನಿನನ ಮಾತಿನಿಂದ ತೀವ್ರ ಎಚ್ಚರಗೊಂಡರು. ಅದರ ಪರಿಣಾಮವಾಗಿ ಒಂದು ವರ್ಷದ ನಂತರ ಝಾರನು ಫಿನ್ನರ ಸ್ವಾತಂತ್ರ್ಯ ಹಕ್ಕುಗಳನ್ನು ಕಾಪಾಡುವ ಶಾಸನವನ್ನು ತಿರಿಗಿ ಸ್ಥಾಪಿಸಿದನು.

ಲೆನಿನನು ಬರೆಯುತ್ತಿದ್ದ ಹಲವು ಲೇಖನಗಳಲ್ಲಿ ಫಿನ್ನರ ಸ್ವಾತಂತ್ರ್ಯದ ನ್ಯಾಯನೀತಿಯು ಉಜ್ವಲ ಭಾಷೆಯಲ್ಲಿ ವರ್ಣಿತವಾಗಿತ್ತು! ನಿಜವಾಗಿಯೂ ಅವನು ಫಿನ್ನರ ಸ್ವಾತಂತ್ರ್ಯಸಂರಕ್ಷಕನೇ ಆಗಿದ್ದನು. ಅವನಿಂದ ಫಿನ್ನರಿಗೆ ಬಹಳ ನೆರವಾಗಿತ್ತು. ಅದೇ ಫಿನ್‌ಲೆಂಡು ಲೆನಿನನ ಉತ್ತರಾಧಿಕಾರಿಯಾದ ಸ್ಟಾಲಿನನಿಂದ ಈ ರೀತಿಯ ಸ್ವಾತಂತ್ರ್ಯಾಪಹರಣ ಕಾರ್ಯವು ನಡೆಯುತ್ತದೆಂದು ಎಂದೂ ಕನವರಿಸಲಾರದು.

ಫಿನ್ನರಿಗೆ ಕೊಟ್ಟ ಸಹಾಯದಿಂದ ಲೆನಿನನಿಗೂ ಬಹಳ ಉಪಕಾರವಾಗಿತ್ತು. ಆತನು ತನ್ನ ಕ್ರಾಂತಿಕಾರೀ ಕೆಲಸಗಳನ್ನು ಗುಪ್ತವಾಗಿ ಮಾಡುವಲ್ಲಿ ಫಿನ್ನರು ತುಂಬ ನೆರವಾಗಿದ್ದರು. ಆತನ ಪ್ರಿಂಟಿಂಗ್ ಮತ್ತು ಪ್ರಕಟಣೆಯ ಕಾರ್ಯಗಳು ಫಿನ್‌ಲೆಂಡಿನಲ್ಲಿಯೇ ಆಗುತ್ತಿದ್ದುವು. ಹೆಲ್‌ಸಿಂಕಿಯನ್ನು ಲೆನಿನನು ತನ್ನ ಪ್ರಧಾನ ಗುಪ್ತ ಕಾರಸ್ಥಾನವಾಗಿ ಮಾಡಿದ್ದನು.

ಒಮ್ಮೆ ರಶ್ಯನ್ ಸ್ವಾತಂತ್ರ್ಯವೀರನಿಗೆ ಸಹಾಯ ಮಾಡಿದ ಆ ನಗರವೇ ಇಂದು ರಶ್ಯನ್ ರಾಕ್ಷಸ ಸರ್ವಾಧಿಕಾರಿಯ ಅಗ್ನಿಮಯ ಬಾಂಬುಗಳಿಂದ ಧಗಧಗಿಸುತ್ತಿದೆ! ಎಂತಹ ಯುಗಪರಿವರ್ತನೆ!


**HALFTONE & LINE BLOCK MAKING UNDERTAKEN**

**Sharada Press, MANGALORE**

ಜಗತ್ತಿನ ಅತ್ಯಂತ ಗುಣಕಾರಿ ಮತ್ತು ಚರ್ಮವ್ಯಾಧಿಗಳನ್ನು ಗುಣಪಡಿಸಬಲ್ಲ ಔಷಧಿ.

ಜ್ಯಾಂಬಕು ಚರ್ಮವ್ಯಾಧಿಗಳಿಗೆ ಮತ್ತು ಗಾಯಗಳಿಗೆ ಉತ್ತಮ ಔಷಧಿ!

ಚರ್ಮವ್ಯಾಧಿಗಳನ್ನು ಮತ್ತು ಗಾಯಗಳನ್ನು ಸರಿಯಾಗಿ ಗುಣಪಡಿಸಲು ಜ್ಯಾಂಬಕು ಜಗತ್ತಿನಲ್ಲಿ ಅತ್ಯಂತ ಉತ್ತಮವಾದ ಔಷಧಿಯಾಗಿರುತ್ತದೆ. ಗಾಯವಾದ ಯಾ ಕಡಿತವಾದ ಭಾಗದ ಮೇಲೆ ಜ್ಯಾಂಬಕನ್ನು ಸವರಿಸಿದರೆ ಅದು ಕೂಡಲೇ ಗುಣಪಡಿಸುವುದು. ಜ್ಯಾಂಬಕಿನಲ್ಲಿರುವ ಶ್ರೇಷ್ಠವಾದ ವನಸ್ಪತೀ ತೈಲವು ನರನಾಡಿಗಳನ್ನು ಪ್ರವೇಶಿಸಿ ನೋವನ್ನು ಗುಣಪಡಿಸಿ ಉರಿತವನ್ನು ಕಡಿಮೆಮಾಡುತ್ತದೆ. ಜ್ಯಾಂಬಕು ಯಾವ ಕಲೆಯೂ ಉಳಿಯದಂತೆ ಚರ್ಮವನ್ನು ಆರೋಗ್ಯವಾದ ಸ್ಥಿತಿಗೆ ತರುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳ [illegible] ರಂತೆ ಮಾರುತ್ತಾರೆ.

ಏಜಂಟ್ಸ್

ನೆಸರ್ಸ್ ದಾಧಾ ಮತ್ತು ಕಂಪನಿ,

ಪೋಸ್ಟ್‌ಬಾಕ್ಸ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನು ಪ್ರಯೋಗಿಸಿರಿ

**ZAM-BUK**

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು



THE

**Canara Banking Corporation Ltd.,**

(INCORPORATED IN BRITISH INDIA)

Estd: 1906

**THREE YEAR'S CASH CERTIFICATES**

bearing interest at 4% p. a.

in denominations of

RS 50 - 100 -,500 -,1,000 -&5 000/-

are now issued at all our Branches

*For particulars call at or write to*

**Any of our nearest Branches**



**The Auttur & Jawahar Bank, Limited.**

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್ ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು — ಬ್ರೆಂಚ್ ಪೋರ್ಟ್‌ಲೆಂಡ್‌ಪೇಟೆ

ರಿಜಿಸ್ಟರ್ಡ್ ಮೂಲಧನ ರೂ 1 00 000 — ತೆರಲ್ಪಟ್ಟ ಮೂಲಧನ ರೂ [illegible] 100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನ ಒಡವೆಗಳ ಆಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% — ನಿರಖು ಠೇವಣಾತಿ 12 ತಿಂಗಳಿಗೆ 4½%

6 ತಿಂಗಳಿಗೆ 4% — 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್



ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್** (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಈ ವಾರದ ಕತೆ:

# ತಾಯಿ

[ಕನ್ನಡಿಸಿದವರು ಕಟಪಾಡಿ ಶ್ರೀನಿವಾಸ ಶೆಟ್ಟಿ, ಅಧ್ಯಾಪಕ, ಕಾರ್ಕಳ]

ಬೊಂಬಾಯಿಯ ದೊಡ್ಡದೊಂದು ಕಾಲೇಜಿನ ವಿದ್ಯಾರ್ಥಿ ಭವನದ ಒಂದು ಸಣ್ಣ ಕೋಣೆಯಲ್ಲಿ ಇಬ್ಬರು ತರುಣರು ಕೂತು ಪರಸ್ಪರ ಸಂಭಾಷಣೆಯಲ್ಲಿ ತಲ್ಲೀನರಾಗಿದ್ದರು. ಅವರ ಬಿ. ಎ. ಪರೀಕ್ಷೆಯು ಹಿಂದಿನ ದಿನವೇ ಮುಗಿದಿತ್ತಾದ್ದರಿಂದ ಮುಖಮಂಡಲದ ಮೇಲೆ ಮುಂಬರುವ ರಜಾ ದಿನಗಳನ್ನು ಆರಾಮದಿಂದ ಕಳೆಯುವ ಸೂಚಕ ನಸುನಗೆಯು ಮಿನುಗುತಿತ್ತು.

ಅವರಿಬ್ಬರಲ್ಲಿ ಒಬ್ಬನು—ನರೇಂದ್ರನೆಂಬುದು ಅವನ ಹೆಸರು—ಬಡ ಕುಟುಂಬದಿಂದ ಬಂದವನಾದುದರಿಂದ ಅಂದಿನ ಸಾಯಂಕಾಲದ ಉಗಿಬಂಡಿಯಲ್ಲೇ ತನ್ನ ಹಳ್ಳಿಗೆ ಮರಳುವ ಅವಸರದ ಸಿದ್ಧತೆಯಲ್ಲಿದ್ದ. ಆದರೆ, ಇನ್ನೊಬ್ಬ ವೀರೇಂದ್ರನ ಹತ್ತಿರ ಆ ತಿಂಗಳ ಖರ್ಚು ಕಳೆದು ಇನ್ನೂ ಸ್ವಲ್ಪ ಹಣ ಉಳಿದಿತ್ತಾದುದರಿಂದ ಅವನು ಒಂದೆರಡು ದಿನ ಬೊಂಬಾಯಿಯಲ್ಲಿ ಮತ್ತೂ ಉಳಕೊಂಡು ಅಲ್ಲಿಯ ಸುಖಭೋಗಗಳನ್ನು ಅನುಭವಿಸಬೇಕೆಂದು ನಿರ್ಧಾರ ಮಾಡಿಕೊಂಡಿದ್ದ.

'ನರೇಂದ್ರ, ಈ ಸಂದರ್ಭವನ್ನು ಕಳಕೊಂಡರೆ, ಮತ್ತೆ ಅದು ಶೀಘ್ರದಲ್ಲಿ ನಿನ್ನ ಕೈಗೆ ಎಟುಕಲಾರದು' ಎಂದು ಸಿಗರೇಟಿನ ಹೊಗೆ ಬಿಡುತ್ತ ವೀರೇಂದ್ರ ಹೇಳಿದ. 'ಅದು ರೋಮಾಂಚನಕಾರಿಯಾದ ಚಲಚಿತ್ರ! ಮನಷ್ಯ ಜನ್ಮವು ಸಾರ್ಥಕವಾಗಬೇಕೆಂದರೆ ಅದನ್ನು ನೋಡಲೇಬೇಕು.'

'ಆದರೆ ವೀರೇಂದ್ರ! ನನ್ನ ಹತ್ತಿರ ಊರಿಗೆ ಮರಳಲಿಕ್ಕೆ ಬೇಕಾದಷ್ಟೇ ಹಣವಿದೆ. ಹೆಚ್ಚಿಗೆ ಇಲ್ಲ.'

'ಹೌದ! ಯಾವಾಗ ಕೇಳಿದರೂ ನಿನ್ನದು ಅದೇ ಮಾತು. ನಿನ್ನ ಬಗ್ಗೆ ನಾನು ಖರ್ಚು ಮಾಡುತ್ತೇನೆ. ಇವತ್ತು ಇದ್ದು ನಾಳೆ ಹೋಗುವಿಯಂತೆ!'

'ಆದರೆ ನಾನು ಅಮ್ಮನಿಗೆ ಇವತ್ತೇ ಮರಳುವೆನೆಂದು ಕಾಗದ ಹಾಕಿದ್ದೇನೆ. ಹೊರಡುವ ಗಾಡಿಯ ಹೆಸರನ್ನೂ ಕೊಟ್ಟಿದ್ದೇನೆ. ಅವಳಿಗೆ ನನ್ನ ಕಾಗದವು ಇಷ್ಟರೊಳಗಾಗಿ ತಲುಪಿರಬಹುದು.'

'ಇನ್ನು ಅಮ್ಮನ ಗೋಳು! ಇಷ್ಟು ದೊಡ್ಡವನಾಗಿ ಲಜ್ಜೆ ಆಗುವುದಿಲ್ಲವೆ? ಮೀಸೆ ಹೊತ್ತರೂ ಅವನ ಅಮ್ಮನ ನೆನಪು ಮರೆಯಲ್ಲ. ಇರಲಿ, ಅಮ್ಮನನ್ನು ಬಿಟ್ಟು ನೀನು ಎಷ್ಟು ದಿನಗಳಾದುವು?' ಕೇಳಿ ನೋಡೋಣ.

'ನೋಡು, ನಾಲ್ಕು ವರ್ಷಗಳು ಕಳೆದು ಹೋದುವು. ಇತ್ತೀಚೆ ಒಂದು ಬಾರಿಯಾದರೂ ಅಮ್ಮನ ಮೋರೆ ನೋಡಲಿಲ್ಲ.'

'ಸರಿ! ನಾಲ್ಕು ವರ್ಷಗಳ ಮೇಲೆ ಒಂದು ದಿನ ಕಳೆದರೆ, ಆಕಾಶ ಪಾತಾಳ ಒಂದಾಗಲಿಕ್ಕಿಲ್ಲವಷ್ಟೆ! ಇವತ್ತು ಇದ್ದು ನಾಳೆ ಹೋಗು.'

ಅವರಿಬ್ಬರು ಜೀವದ ಗೆಳೆಯರಾಗಿದ್ದರು. ನರೇಂದ್ರನು ಹೊರಡುವುದನ್ನು ಒಂದು ದಿನಕ್ಕೆ ಮುಂದೆ ಹಾಕಿದ. ತಾಯಿಗೆ ಅದನ್ನು ಈಗಲೇ ತಿಳಿಸಬೇಕಾದಷ್ಟು ಅದು ಮುಖ್ಯವಾದ ಸಂಗತಿ ಎಂದು ಅವನು ತಿಳಿಯಲಿಲ್ಲ. ಆದುದರಿಂದ ಆ ಕುರಿತು ಅವನು ತಾಯಿಗೆ ಯಾವ ಪತ್ರವನ್ನೂ ಬರೆಯಲಿಲ್ಲ.

★

ಆಗ ಬೆಳಗಾಗಿತ್ತು ಮಾತ್ರ! ಹಳ್ಳಿಯ ಬಹುತೇಕ ಮಂದಿ ಇನ್ನೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ಆ ಸಮಯ, ಹಳ್ಳಿಯ ಒಂದು ಮುರಿದು ಜೀರ್ಣವಾದ ಹುಲ್ಲಿನ ಗುಡಿಸಲಿನೊಳಗಿಂದ ಒಂದು ಮಧುರವಾದ ಹಾಡು ಕೇಳಿ ಬರುತಿತ್ತು. ಕಾರ್ಯಾವಸರದಿಂದ ಅದೇ ಮಾರ್ಗವಾಗಿ ಹೋಗುತಿದ್ದ ಒಬ್ಬ ಹಳ್ಳಿಗನು ಆ ಮನೋಹರವಾದ ಹಾಡನ್ನು ಕೇಳಿ ಅಲ್ಲಿಯೇ ನಿಂತ. ಎದುರಿಗಿದ್ದ ಗುಡಿಸಲಿನ ಮುರಿದ ಬಾಗಿಲಿನ ಒಡೆದ ಬಿರುಕಿನಿಂದ ಇಣಿಕಿ ಯಾರು ಹಾಡುತ್ತಿರುವರೆಂದು ನೋಡಿದ. 'ಪ್ರಾಯಶಃ ಅವಳ ತಲೆಯ ಒಂದು ಸುತ್ತು ಸ್ವಲ್ಪ ಸಡಿಲಾಗಿರಬಹುದು. .. ಹೌದು, ಅದರಂತೆಯೇ ಆಗಿರಬೇಕು. ಪಾಪ, ಮುದುಕಿ!' ಎಂದು ಮನಸ್ಸಿನೊಳಗೆಯೇ ಅಂದುಕೊಳ್ಳುತ್ತ ಅವನು ಮೆಲ್ಲಗೆ ಆ ಬಾಗಿಲು ಎತ್ತಿ ಇಟ್ಟು ಗುಡಿಸಲಿನ ಒಳಗೆ ನಡೆದ. ಅಲ್ಲಿಯ ಆ ವಿಚಿತ್ರವೂ ಅದ್ಭುತವೂ ಆದ ದೃಶ್ಯವನ್ನು ನೋಡಿ ಅವನು ಸ್ತಂಭೀತನಾಗಿ ಬಿಟ್ಟನು. ಆಗ ತಾನೇ ಸಗಣಿ ಸಾರಿಸಿ ಶುದ್ಧ ಮಾಡಿದ ಬರಿಯ ನೆಲದ ಮೇಲೆ ಕೂತು ಅಜ್ಜಿ ಹಾಡುತಿದ್ದಳು. ಹಳ್ಳಿಗರು ಅವಳನ್ನು ಅಜ್ಜಿ ಎಂದೇ ಕರೆಯುವರು. ಅವಳ ತೊಟ್ಟಿಲ ಹೆಸರನ್ನು ಪ್ರಾಯಶಃ ಎಲ್ಲರೂ ಮರೆತಿದ್ದರು. ಅವನು ಅವಳ ಎದುರಿಗೆ ನಿಂತು ಐದು ಹತ್ತು ನಿಮಿಷ ಕಳೆದರೂ ಅವನು ಬಂದಿರುವುದು ಅವಳಿಗೆ ತಿಳಿಯಲಿಲ್ಲ. ಅವಳು ಹಾಡುವ ಸಂಗೀತದಲ್ಲಿ ತನ್ನನ್ನು ತಾನು ಮರೆತು ಹೋಗಿದ್ದಳು. ಅವನು 'ಅಜ್ಜಿ!' ಎಂದ.

ಕಲ್ಪನಾ ರಾಜ್ಯದಲ್ಲಿ ವಿಹರಿಸುತಿದ್ದ ಅಜ್ಜಿಯು ತನ್ನನ್ನು ಕರೆದ ಶಬ್ದವನ್ನು ಕೇಳಿ ಪುನಃ ಪ್ರಪಂಚಕ್ಕೆ ಬಂದಳು. ತನ್ನ ಎದುರಿಗೆ ಒಬ್ಬ ಪುರುಷ ವ್ಯಕ್ತಿಯು ಬಹಳ ಸಮಯದಿಂದ ನಿಂತಿರುವುದನ್ನು ತಿಳಿದು ಅವಳಿಗೆ ಲಜ್ಜೆಯಾಯಿತು. ಸಾರ್ವಜನಿಕರ ಘನತೆಯನ್ನು ಪಡೆಯಲಿಕ್ಕೆ ಅವಳು ಹಾಡುತ್ತಲಿಲ್ಲ. ಅವಳು ಎದ್ದು ನಿಂತು 'ಏನು ಕೆಲಸ? ಬಂದು ಬಹಳ ಸಮಯವಾಯಿತೆ?' ಎಂದಳು.

'ಅಷ್ಟು ಇಂದು ಏನು ವಿಶೇಷ? ಈಗಿನ ಆನಂದ ಸಂಗೀತದಲ್ಲಿ ಮುಳುಗಿ ಏಳುತ್ತಿದ್ದೀರಿ?'

'ಕಾಳಪ್ಪ, ನಾಳೆ ನನ್ನ ನರೇಂದ್ರ ಬರುತ್ತಾನೆ ನೋಡು, ಅವನ ಕಾಗದ!' ಈ ಮಾತುಗಳನ್ನು ಹೇಳುತ್ತ ಅವಳ ಕಣ್ಣುಗಳಿಂದ ಮುತ್ತಿನಂಥ ಆನಂದಾಶ್ರು ಉದುರುತ್ತಿದ್ದುವು. ಒಂದು ಕೈಯಿಂದ ಅವನ್ನು ಒರಸಿಕೊಳ್ಳುತ್ತ ಅವಳು ಇನ್ನೊಂದು ಕೈಯಿಂದ ಸೊಂಟಕ್ಕೆ ಸಿಕ್ಕಿಸಿದ್ದ ಕಾಗದವನ್ನು ತೆಗೆದು ಕಾಳಪ್ಪನ ಕೈಯಲ್ಲಿಟ್ಟಳು.

ಕಾಳಪ್ಪನಿಗೆ ಓದು ಬರಹ ಗೊತ್ತಿಲ್ಲ. ಅಜ್ಜಿ ಕೂಡಿ ಆ ಹಳ್ಳಿಯ ಬೇರೆ ಹಲವು ಜನರಿಗೆ ಮಾತ್ರ ಅಕ್ಷರಗಳನ್ನು ಜೋಡಿಸಿ ಓದಲಿಕ್ಕೆ ಬರುತ್ತಿತ್ತು. ಕಾಗದವನ್ನು ಬಿಡಿಸಿ ನೋಡಿ—'ಇದರಲ್ಲಿ ಏನು ಬರೆದಿದೆ, ಅಜ್ಜಿ!' ಎಂದು ಅವನು ಅವಳನ್ನು ಕೇಳಿದ. ಅವಳು ಕಾಗದವನ್ನು ಪುನಃ ತೆಗೆದುಕೊಂಡು ಅದನ್ನು ಓದಿದಳು. ಬರೇ ಐದಾರು ಪಂಕ್ತಿಗಳು ಮಾತ್ರ ಬರೆದಿದ್ದುವು. ನರೇಂದ್ರನು ಶುಕ್ರವಾರ ಸಾಯಂಕಾಲದ ಗಾಡಿಯಲ್ಲಿ ಕೂತು ಮಂಗಳವಾರ ಬೆಳಗ್ಗೆ ಅಲ್ಲಿಗೆ ಬರುವವನೆಂದು ಅದರಲ್ಲಿತ್ತು. ಅವಳು ಕಾಗದವನ್ನು ಜಾಗ್ರತೆಯಿಂದ ಮಡಚಿ ಲಕ್ಕೋಟೆಯೊಳಗೆ ಹಾಕಿ ಪುನಃ ಅದನ್ನು ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡಳು. ಆ ಪತ್ರವು ಅವಳಿಗೆ ದೈವೀ ವರಪ್ರದಾನಕ್ಕಿಂತಲೂ ಹೆಚ್ಚಿನದಾಗಿತ್ತು.

'ನಿನ್ನನ್ನೂ ನಿನ್ನ ಮಗನನ್ನೂ ದೇವರು ಹರಸಲಿ!' ಎಂದು ಹೇಳಿ ಕಾಳಪ್ಪ ಅಲ್ಲಿಂದ ತನ್ನ ಕಾರ್ಯದ ನಿಮಿತ್ತ ಹೊರಟು ಹೋದ.

ಅಷ್ಟು ಹೊತ್ತಿಗೆ ಸಮಾಚಾರವು ಇಡೀ ಹಳ್ಳಿಯನ್ನು ಹರಡಿತ್ತು. ಅಜ್ಜಿ ಮನೆಮನೆಗೆ ಹೋಗಿ ತಾನೇ ಈ ಸಮಾಚಾರವನ್ನು ಹರಡಿದಳು. ಗುಡಿಸಲನ್ನು ಮೊದಲಿನಂತೆಯೇ ಇಟ್ಟಿರುವುದು ಅವಳಿಗೆ ಹಿತ ಕಾಣಲಿಲ್ಲ. ಬೊಂಬಾಯಿಯಂಥ ದೊಡ್ಡ ನಗರದಲ್ಲಿ ವರ್ಷಗಟ್ಟಲೆ ಇದ್ದ ಮಗನ ಅಭಿರುಚಿ, ಯಾವ ವಿಷಯದಲ್ಲಿ ಹೇಗೆ ಇದ್ದಿರಬಹುದೋ ಅವಳಿಗೆ ತಿಳಿಯದು. ಆದರೂ ಕೂಡಿದಷ್ಟು ಮಟ್ಟಿಗೆ ಅವಳು ತನ್ನ ಗುಡಿಸಲನ್ನು ಗುಡಿಸಿ, ಸಾರಿಸಿ, ಚೊಕ್ಕಟ ಮಾಡಿ, ಅದು ನರೇಂದ್ರನಿಗೆ ಯೋಗ್ಯವಾಗುವಂತೆ ಮಾಡಿದಳು. ಜೇಡಿಯ ನೀರಿನಿಂದ ಸುಂದರ ಚಿತ್ರಗಳನ್ನೂ ಅಕ್ಕಿಯ ಹಿಟ್ಟಿನಿಂದ ರಂಗೋಲಿಯನ್ನೂ ಬಿಡಿಸಿ, ತನ್ನ ಗುಡಿಸಲಿನ ಅಲಂಕಾರ ಮಾಡಿದಳು. ಸುರುಳಿ ಸುತ್ತಿ ಒಳಗಿಟ್ಟ ಚಾಪೆಗಳನ್ನು ಬಿಡಿಸಿ, ಒದೆದು ಬಿಸಿಲಿಗೆ ಹಾಕಿದಳು. ರಾತ್ರಿ ಅಂತೂ ಸುಖಸ್ವಪ್ನದಲ್ಲಿಯೇ ಕಳೆಯಿತು. ಮರುದಿನ ಪ್ರಾತಃಕಾಲವೂ ಆಯಿತು.

ಬಂಡಿ ಹತ್ತೂವರೆ ಗಂಟೆಗೆ ಬರುವುದು. ಆದರೂ ಅಜ್ಜಿ ಒಂಭತ್ತು ಗಂಟೆಗೇ ತನ್ನ ಎಲ್ಲಾ ಕೆಲಸಗಳನ್ನು ಮುಗಿಸಿ ಮಗನ ಬರುವನ್ನು ಕಾದು ಬಾಗಿಲಲ್ಲಿ ಕೂತುಕೊಂಡಳು. ಆಗಾಗ ಸೊಂಟದಲ್ಲಿದ್ದ ಕಾಗದವನ್ನು ಬಿಡಿಸಿ ಪುನಃಪುನಃ ಓದುತಿದ್ದಳು. ಅದು ಅವಳ ಜೀವನದ ಸಫಲತೆಯ ಹೆಗ್ಗುರುತಾಗಿತ್ತು. ಮಗನನ್ನು ಸಾಕಿ ಸಲಹಿ ದೊಡ್ಡವನನ್ನಾಗಿ ಮಾಡುವುದಕ್ಕೋಸ್ಕರ, ಅವನಿಗೆ ವಿದ್ಯಾಬುದ್ಧಿಗಳನ್ನು ಕೊಟ್ಟು ಪ್ರಗಲ್ಭನನ್ನಾಗಿ ಮಾಡುವುದಕ್ಕೋಸ್ಕರ ಜೀವನದಲ್ಲಿ ಅವಳು ಎಂಥೆಂಥ ಕಷ್ಟಗಳನ್ನು ಅನುಭವಿಸಲಿಲ್ಲ! ನರೇಂದ್ರನು ಹುಟ್ಟಿ ಎರಡು ತಿಂಗಳಾಗಬೇಕಾದರಲ್ಲೇ ಅವಳು ವಿಧವೆಯಾಗಿದ್ದಳು. ಗಂಡನ ಮನೆಗೆ ಭಾರವಾದ ಅವಳು ತನ್ನ ಹಳ್ಳಿಗೆ ಬಂದು ಆಶ್ರಯ ಪಡೆಯಬೇಕಾಯಿತು. ಮಗನನ್ನು ದೊಡ್ಡವನನ್ನಾಗಿ ಮಾಡುವುದಕ್ಕೋಸ್ಕರ ಸ್ವಲ್ಪ ಹಣವನ್ನು ಒಟ್ಟುಗೂಡಿಸುವುದೇ ಆಗ ಅವಳ ಜೀವನದ ಧ್ಯೇಯವಾಯಿತು. ಅದಕ್ಕೋಸ್ಕರ ಅವಳು ಬೇರೆಯವರ ಮನೆಯ ಸೆಗಣಿ ತಟ್ಟಿದಳು, ಹಿಟ್ಟು ಬೀಸಿದಳು, ನೀರು ಹೊತ್ತಳು, ಅಡಿಗೆ ಮಾಡಿದಳು, ಮುಸರೆ ತೊಳೆದಳು, ಅಂಗಳ ಗುಡಿಸಿದಳು. ಹಾಗೆ ಅವಳು ಮಗನನ್ನು ಮೊದಲು ಹಳ್ಳಿಯ ಶಾಲೆಗೆ ಕಳುಹಿಸಿ ಅವನಿಗೆ ಸ್ವಲ್ಪ ಅಕ್ಷರ ಓದುವಂತೆ ಮಾಡಿದಳು. ಅಲ್ಲಿಂದ ಮಾದೂರಿನ ಹೈಸ್ಕೂಲಿಗೆ ಕಳುಹಿದಳು. ನರೇಂದ್ರ ಮೆಟ್ರಿಕ್ ಪಾಸ್ ಮಾಡಿದ ಮೇಲೆ ಬೊಂಬಾಯಿಯ ಕಾಲೇಜಿನಲ್ಲಿ ಓದಲಿಕ್ಕೆ ಅವನನ್ನು ಅಲ್ಲಿಗೆ ಕಳುಹಿಸಿದಳು. ಯಾರಿಗಾಗಿ ಅವಳು ಸಹಿಸಲಾರದ ಕಷ್ಟಗಳನ್ನೆಲ್ಲ ಸಹಿಸಿದ್ದಳೋ ಅವಳ ಏಕಮಾತ್ರ ಜೀವನಾಧಾರ ಮಗ ಪುನಃ ಹಳ್ಳಿಗೆ ಬರುವನು. ಅದನ್ನು ನೆನೆದು ಆ ತಾಯಿಗೆ ಸಂತೋಷ ಆನಂದಗಳು ಅನಲಾರವು. ಅವಳ ಮಗ ನಾಳೆ ಪದವೀಧರನಾಗಿ ಹೆಚ್ಚು ಸಂಬಳದ ಉದ್ಯೋಗಸ್ಥನಾಗುವನು. ಇದನ್ನೇ ಕಲ್ಪಿಸಿ ಅವಳು ಮಗನ ಬರವನ್ನು ಕಾದು ಕೂತಳು.

★

'ಅವಳಿಗೆ ಈಗಲೇ ಹೋಗಿ ವರ್ತಮಾನವನ್ನು ಕೊಡುವುದು ಒಳ್ಳೇದು. ಬೇರೆ ಉಪಾಯವಿಲ್ಲ' ಎಂದು ಸ್ಟೇಶನಿನ ಮಾಸ್ತರನು ಕಾಳಪ್ಪನಿಗೆ ಹೇಳಿದ.

'ಹಾಗೆಯೇ ಸರಿ' ಎಂದು ಒಣಗಿದ ಕಂಠದಿಂದ ಹೇಳಿ ಕಾಳಪ್ಪನು ಬಾಡಿದ ಮುಖ ಮಾಡಿಕೊಂಡು ಹೊರಟ. ಅವನು ದುಃಖಾಂತ ಸಮಾಚಾರವನ್ನು ತೆಗೆದುಕೊಂಡು ಹೊರಟ. ಶುಕ್ರವಾರ ಸಾಯಂಕಾಲ ಬೊಂಬಾಯಿಯಿಂದ ಹೊರಟ ಗಾಡಿಯು ಮಂಗಳವಾರ ಬೆಳಗಾಗಬೇಕಾದರೆ ಎದುರಿನಿಂದ ಬರುತಿದ್ದ ಇನ್ನೊಂದು ಗಾಡಿಗೆ ಢಿಕ್ಕಿ ಹೊಡೆದು, ರೈಲ್ವೆ ಇತಿಹಾಸದಲ್ಲಿ ಅದು ತನಕ ಯಾರೂ ಕಂಡ ಕೇಳದ ಭಯಂಕರ ಅಪಘಾತವೊಂದು ನಡೆದು ಹೋಯಿತು. ಗಾಡಿಯೊಳಗಿದ್ದ ೬ ಮಂದಿ ಬಿಟ್ಟು ಉಳಿದವರೆಲ್ಲರು ಆಕ್ಷಣ ಸತ್ತು ಹೋದರಲ್ಲದೆ, ೪೭ ಮಂದಿಯೂ ಮರಣೋನ್ಮುಖ ಸ್ಥಿತಿಯಲ್ಲಿ ಆಸ್ಪತ್ರೆಯನ್ನು ಸೇರಿದರು. ಸತ್ತವರಲ್ಲಿ ೫ ಮಂದಿ ಕಾಲೇಜು ವಿದ್ಯಾರ್ಥಿಗಳೂ ಇದ್ದರು. ಬಾಗಿಲಲ್ಲಿ ಕೂತಿದ್ದ ಅಜ್ಜಿಗೆ ಈ ಸಮಾಚಾರವನ್ನು ಹೇಳುತ್ತ ಕಾಳಪ್ಪನ ಕಣ್ಣಿನಿಂದ ಅಶ್ರುಧಾರೆಯು ಗಂಗಾಪ್ರವಾಹದಂತೆ ಹರಿದು ಹೋಯಿತು.

ಸಮಾಚಾರವನ್ನು ಕೇಳಿ ಅಜ್ಜಿಯ ಬಾಯಿಯಿಂದ ಒಂದೇ ಒಂದು ಮಾತಾದರೂ ಹೊರಡಲಿಲ್ಲ. ಒಂದಿಷ್ಟಾದರೂ ಅವಳು ಅಲುಗಾಡಲಿಲ್ಲ. ಅವಳು ಹೇಗೆ ಕೂತಿದ್ದಳೋ ಹಾಗೆಯೇ ಕೂತಿದ್ದಳು. ಕಾಳಪ್ಪನು ಅಜ್ಜಿಯನ್ನು ಮುಟ್ಟಿ ನೋಡಿದ. ಅವಳ ಪ್ರಾಣಪಕ್ಷಿಯು ಹಾರಿಹೋಗಿತ್ತು. ಮುದಿ ಶರೀರವು ಮರಗಟ್ಟಿ ಹೋಗಿತ್ತು.

★

ರವಿವಾರ ಮಧ್ಯಾಹ್ನ ಒಂದು ಗಂಟೆಯಾಗುವ ಸಲ್ಪ ಮೊದಲು ಒಬ್ಬ ಯುವಕನು ಅಜ್ಜಿಯ ಗುಡಿಸಲಿನ ಎದುರು ನಿಂತು ಅದಕ್ಕೆ ಬೀಗ ಹಾಕಿರುವುದನ್ನು ನೋಡಿದ. ಅವನಿಗದೊಂದು ಸಮಸ್ಯೆಯಾಗಿ ತೋರಿತು. ಅದು ಅವನದೇ ಗುಡಿಸಲಾಗಿತ್ತು. ಅದರಲ್ಲಿ ವಾಸವಾಗಿದ್ದ ಹಳ್ಳಿಯ ಅಜ್ಜಿ ಅವನ ತಾಯಿಯಾಗಿದ್ದಳು. ಅವನು ಬಂದಿದ್ದಾಗ ಆ ಗುಡಿಸಲೂ ತಾಯಿಯೂ ಅವನಿಗೆ ಸಂಭ್ರಮದ ಸ್ವಾಗತವನ್ನು ಕೊಡಬೇಕಾಗಿತ್ತು. ಆದರೆ ವಿಧಿಘಟನೆಯನ್ನು ಬಲ್ಲವರಾರು? ಬೀಗ ಹಾಕಿದ ಗುಡಿಸಲನ್ನು ನೋಡಿದಾಕ್ಷಣ ಸಿಡಿಲು ಬಡಿದಂತಾಗಿ ಅವನು ಅಲ್ಲಿಯೇ ಕೂತು ಬಿಟ್ಟನು.


# The Earliest Paper Currency

Paper currency was in vogue in China even as early as 2000 B C. Curiously enough it was similar in appearance to the bank notes of to-day. For instance the notes were dated, their values were indicated both in words and in figures and on each appeared the signature of a Government Officer.

There was however one difference. The Chinese government never let slip an opportunity of advising and educating the people. The following maxim was therefore inscribed on the border of the notes "However much you possess, strive to be thrifty."

True four thousand years ago, it is also very true to-day.

RESOURCES OF A CRORE.

Estd. 1906.

CANARA BANK LIMITED.

Historical Ad. Series No 1

# ಹಿಂದೂ ಮಹಾಸಭೆ ಮತ್ತು ಮುಸ್ಲಿಂ ಲೀಗು

## ಇವುಗಳ ರಾಷ್ಟ್ರದ್ರೋಹ ಧೋರಣೆಗಳು

## ಭಾರತವು ಭಾರತೀಯರದು

### ಹಿಂದುಗಳದೂ ಮುಸ್ಲಿಮರದೂ ಅಲ್ಲ!

[ಲೇಖಕ ಭಾರತೀಯ]

ಹಿಂದು ಮುಸಲ್ಮಾನರ ಮತವು ಬೇರೆ ಬೇರೆ ಆಗಿದ್ದರೂ ಅವರ ನಾಡು ಒಂದೇ ಆಗಿದೆ. ಆದ್ದರಿಂದ, ಅವರೆಲ್ಲರೂ ಭಾರತೀಯರಾಗಿದ್ದಾರೆ.

ಹಿಂದೂ-ಮುಸಲ್ಮಾನ ಎಂಬ ಭೇದವನ್ನು ಕಲ್ಪಿಸಿಕೊಂಡು ಕೆಲವರು ಹಿಂದುಸ್ಥಾನವನ್ನು ವಿಭಾಗಿಸಿ ಆಳುವ ಸ್ವಪ್ನಗಳನ್ನು ಕಾಣುತ್ತಿದ್ದಾರೆ ಹಿಂದು ಮಹಾಸಭೆಗೆ ಹಿಂದು ಸಾಮ್ರಾಜ್ಯವು ಬೇಕಾದರೆ ಮುಸ್ಲಿಂ ಲೀಗಿಗೆ ಮುಸಲ್ಮಾನ ಬಾದಶಹತನವು ಬೇಕಾಗಿದೆ ಈಗ ಕೆಲವು ಸಮಯದಿಂದ ಈ ಎರಡು ಭಾವನೆಗಳ ಪ್ರಬಲ ಹೋರಾಟವು ತೋರಿಬರುತ್ತದೆ. ಆದರೆ ಸ್ವಲ್ಪ ಮಾತ್ರ ಗಂಭೀರವಾಗಿ ಆಲೋಚಿಸಿದರೆ ಇವೆರಡು ಎಂಥ ಹುಚ್ಚು ಭಾವನೆಗಳಾಗಿರುವವೆಂಬುದು ತಿಳಿಯುತ್ತದೆ

ಹಿಂದುಸ್ಥಾನವು ಹಿಂದುಗಳದ್ದೆಂದಾಗಲೀ, ಮುಸಲ್ಮಾನರದ್ದೆಂದಾಗಲೀ ವಿಭಾಗಿಸುವುದು ಸಾಧ್ಯವೇ ಅಲ್ಲ ಅನೇಕ ಸಂಗತಿಗಳಿಗೆ ನಾವು ಯುರೋಪವನ್ನು ಮಾದರಿಯಾಗಿ ಇಟ್ಟುಕೊಳ್ಳುತ್ತೇವೆ ಆದರೆ ಯುರೋಪದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ನಡೆದ ಘಟನೆಗಳ ಕಾರಣವನ್ನು ತಿಳಿದುದಾದರೆ ಮುಸ್ಲಿಂ ಲೀಗು ಮತ್ತು ಹಿಂದೂ ಮಹಾಸಭೆಯು ಎಂತಹ ಸ್ವಪ್ನಗಳನ್ನು ನೋಡುತ್ತಿವೆಯೆಂಬುದು ತಿಳಿಯುತ್ತದೆ

### ಯುರೋಪದ ರಾಜ್ಯ ವ್ಯವಸ್ಥೆ

ಕಳೆದ ಮಹಾ ಯುದ್ಧವು ಮುಗಿದ ಬಳಿಕ ವಂಶ ಕ್ರಮವನ್ನು ಅನುಸರಿಸಿ ಯುರೋಪಿನಲ್ಲಿ ರಾಜ್ಯವ್ಯವಸ್ಥೆಯನ್ನು ಮಾಡುವ ಪ್ರಯತ್ನಗಳಾದುವು ಬೇರೆ ಬೇರೆ ವಂಶದವರಿಗೆ ಅವರವರ ಬೇರೆ ಬೇರೆ ರಾಜ್ಯಗಳನ್ನು ಕಟ್ಟಿಕೊಡಲಾಯಿತು. ಹೀಗಾಗಿ ಅಲ್ಲಿ ಜೆಕೊಸ್ಲೋವಿಯ, ಪೋಲಾಂಡ, ಫಿನ್ಲಾಂಡ ಮೊದಲಾದ ಹೊಸ ರಾಜ್ಯಗಳು ಉದಯಕ್ಕೆ ಬಂದುವು ಆದರೆ ಇಂದು ಅವುಗಳ ಭವಣೆ ಏನಾಗಿದೆ? ಅಂದಿನ ಪ್ರಯತ್ನಗಳೆಲ್ಲ ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವೆಂದು ಈಗ ಕಾಣತೊಡಗಿವೆ

ಯುರೋಪಿನಲ್ಲಿ ಅಸಾಧ್ಯವೆಂದು ತೋರಿದ ರೀತಿಯು ಹಿಂದುಸ್ಥಾನಕ್ಕೂ ಅಸಾಧ್ಯವೆಂದು ಆಗಲೇ ಬೇಕ ಯಾಕಂದರೆ ಪ್ರಾಕೃತಿಕ ನಿಯಮವು ಸರ್ವತ್ರ ಒಂದೇ ಆಗಿದೆ ಅಷ್ಟು ಮಾತ್ರವಲ್ಲ, ಹಿಂದುಸ್ಥಾನದಲ್ಲಿ ಹಿಂದೂ ಮುಸಲ್ಮಾನರು ಬೇರೆ ಬೇರೆ ವಂಶದವರಲ್ಲ ಅವರಿಬ್ಬರ ರಕ್ತವಾಹಿನಿಗಳಲ್ಲಿ ಒಂದೇ ಜಾತಿಯ ರಕ್ತವು ಹರಿಯುತ್ತದೆ ಹಿಂದುಸ್ಥಾನವನ್ನು ವಿಭಾಗಿಸುವುದಾದರೆ ಭಿನ್ನ ಭಿನ್ನ ಜಾತಿಮತ ದೃಷ್ಟಿಯಿಂದ ವಿಭಾಗಿಸಬಹುದು. ಆದರೆ ವಂಶ ಕ್ರಮದಿಂದ ವಿಭಾಗಿಸಲಿಕ್ಕಾಗದ್ದನ್ನು ಮತಭೇದದಿಂದ ಹೇಗೆ ವಿಭಾಗಿಸಬಹುದು ವಂಶಗುಣವು ಸ್ಥಾಯಿಯಾದುದು. ಮತವನ್ನು ಬದಲಾಯಿಸುವಂತೆ ವಂಶವನ್ನು ಬದಲಾಯಿಸಲಿಕ್ಕಾಗುವುದಿಲ್ಲ. ಮತವು ವ್ಯಕ್ತಿಗತವಾದುದು. ಇವತ್ತು ಹಿಂದುವಾಗಿದ್ದವನು ನಾಳೆ ಮುಸಲ್ಮಾನನಾಗಬಹುದು, ಹಾಗೆಯೇ ಮುಸಲ್ಮಾನನಾಗಿದ್ದವನು ಹಿಂದುವಾಗಬಹುದು ಆದುದರಿಂದ ರಾಷ್ಟ್ರವನ್ನು ಧಾರ್ಮಿಕ ದೃಷ್ಟಿಯಿಂದ ವಿಭಾಗಿಸುವುದು ಸಾಧ್ಯವೇ ಅಲ್ಲ

### ವಿಭಜನದ ಅಗತ್ಯವಿಲ್ಲ

ಹಿಂದುಸ್ಥಾನವನ್ನು ಹಿಂದುಗಳ ಹಿಂದುಸ್ಥಾನ ಅಥವಾ ಮುಸಲ್ಮಾನರ ಹಿಂದುಸ್ಥಾನ ಎಂದಾದರೂ ಯಾಕೆ ತಿಳಿಯ ಬೇಕು? ಹಿತಶತ್ರುಗಳ ಅಪಪ್ರಚಾರದ ಫಲವಾಗಿಯೇ ಇಂದು ಭಾರತೀಯ ಹಿಂದೂ ಮುಸಲ್ಮಾನರು ತಮ್ಮನ್ನು ಬೇರೆ ಬೇರೆ ಎಂದು ತಿಳಿಯುತಿದ್ದಾರೆ ಹಿಂದುಗಳ ದೃಷ್ಟಿಯು ತಮ್ಮ ಪುರಾತನ ಗೌರವ ಗರ್ವದಿಂದ ಕುರುಡಾಗಿದೆ ಮುಸಲ್ಮಾನರ ದೃಷ್ಟಿಯು [illegible] ಟರ್ಕಿ ಈಜಿಪ್ತಗಳ ಕಡೆಗೆ ಹೊರಟ ಸಮೀಪವನ್ನು ನೋಡುವುದಿಲ್ಲ ಆದುದರಿಂದ ಈಗ ಹಿಂದೂಗಳೂ ಮುಸಲ್ಮಾನರೂ ವಿಚಾರ ವಿವೇಕಹೀನರಾಗಿದ್ದಾರೆ ಮತ ಭೇದದ ಕಾರಣದಿಂದಾಗಿಯಾದರೂ ಹಿಂದುಸ್ಥಾನವನ್ನು ವಿಭಾಗಿಸುವ ಅಗತ್ಯವು ಇರುವುದಿಲ್ಲ

ಮುಸಲ್ಮಾನರಿಗೆ ಹಿಂದೂಧರ್ಮದ [illegible] ಹಿಂದೂಧರ್ಮವು ಉದಾರವಾಗಿದೆ ಅದು ತನ್ನ ವಿರೋಧಿ ಧರ್ಮಗಳಿಗೂ ಉದಾರ ಆಶ್ರಯವನ್ನು ಕೊಟ್ಟು ಬಂದಿದೆ ಅಲ್ಲವಾಗಿದ್ದರೆ ಮುಸಲ್ಮಾನ ಕ್ರೈಸ್ತ ಇತ್ಯಾದಿ ಮತಗಳಿಗೆ ಇಲ್ಲಿ ಕಾಲೂರಲಿಕ್ಕೆ ಸ್ಥಳವೇ ದೊರೆಯುತಿದ್ದಿಲ್ಲ ಹಿಂದೂ ಅರಸರು ಕೂಡ ಮುಸಲ್ಮಾನ ಪ್ರಜೆಗಳನ್ನು ಹೇಗೆ ನಿಷ್ಪಕ್ಷಪಾತ ದೃಷ್ಟಿಯಿಂದ ಆಳಿದ್ದರೆ ಎಂಬುದಕ್ಕೆ ಇತಿಹಾಸವು ಸಾಕ್ಷಿಯಾಗಿದೆ ಹಿಂದುಗಳಲ್ಲಿ [illegible] ಪರಮತ ಸಹಿಷ್ಣುತೆಯು [illegible]

[illegible]

### ಮುಸಲ್ಮಾನರಿಗೆ ಬೇಕಾದುದು ರಾಜ್ಯವಲ್ಲ

ಭಾರತೀಯ ಮುಸಲ್ಮಾನರಿಗೆ ರಾಜ್ಯವು ಬೇಕಾಗಿಲ್ಲ ಹಿಂದುಸ್ಥಾನವು ಹಿಂದುಗಳದಂತೆ ಮುಸಲ್ಮಾನರದ್ದೂ ಆಗಿದೆ ಮುಸಲ್ಮಾನರಿಗೆ ಧಾರ್ಮಿಕ ಸ್ವಾತಂತ್ರ್ಯವು ಬೇಕು, ಅವರು ಅಲ್ಪ ಸಂಖ್ಯಾಕರಾಗಿರುವದರಿಂದ ಅವರ ಧರ್ಮಕ್ಕೆ ರಕ್ಷಣೆಯು ಬೇಕು ಆ ಸ್ವಾತಂತ್ರ್ಯ ಮತ್ತು ರಕ್ಷಣೆಗಳನ್ನು ಹಿಂದುಗಳು ಕೊಡುವದಿಲ್ಲ ಎನ್ನುವದಿಲ್ಲ ಹಿಂದುಗಳು ಅದನ್ನು ಮುಸಲ್ಮಾನರಿಗೆ ಕೊಡಲಾರರೆಂದು ತಿಳಿಯಲಿಕ್ಕೆ ಕಾರಣವೂ ಇರುವುದಿಲ್ಲ ಇತಿಹಾಸವನ್ನು ಓದಿದವರು ಇದಕ್ಕೆ ಸಾಕ್ಷಿಯಾಗಿದ್ದಾರೆ

ಆದ್ದರಿಂದ ಹಿಂದೂ ಮಹಾಸಭೆಯೂ ಮುಸ್ಲಿಂ ಲೀಗೂ ವಿಚಾರ ದೃಷ್ಟಿಯನ್ನು ಪಡೆಯಬೇಕು ಹಠ ಛಲಗಳನ್ನು ಬಿಟ್ಟು ಬಿಡಬೇಕು ಸ್ವಾರ್ಥವನ್ನು ಬಿಟ್ಟು ಭಾರತದ ಹಿತವನ್ನು ಸಾಧಿಸಬೇಕು ಹಿಂದೂ ಮುಸಲ್ಮಾನರ [illegible]

[illegible]


ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

[illegible] ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು [illegible] ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ [illegible] ರೋಗಿಗಳು ಇದರ ಲಾಭವನ್ನು ಪಡೆದ ಮತ್ತು ಸಂಪೂರ್ಣ [illegible] ಇದನ್ನು ಹೊಗಳುತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ ಪರಮಾ ಮೂತ್ರದ್ವಾರದಿಂದ ಕೀವು ಹೋಗುವುದು [illegible] ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ [illegible] ವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ ಗೊನೊ-ಕೊಕಸ ಎಂಬ ವಿಷಹಾರಿ ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ [illegible] ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ 3-0 0 (ವಿ ಪಿ ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್ ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್ ಮುಂಬಯಿ 4

*Sole Manufacturer* Dr D N JASANI, Vithalbhai Patel Road, BOMABY

ಸ್ಟಾಕಿಸ್ಟರು ಮೆಸರ್ಸ್ ಇಲೆಕ್ಟ್ರೊ ಹೊಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್, ಹಂಪನಕಟ್ಟಾ, ಮಂಗಳೂರು



# ಜಿಲ್ಲಾ ಸಮಾಚಾರ

## ಮಂಗಳೂರು

**ಹಿಂದುಸ್ಥಾನ ಸ್ಕೌಟ್.** ದ. ಕ. ಜಿಲ್ಲಾ ಹಿಂದುಸ್ಥಾನ ಸ್ಕೌಟ್ ಅಸೋಸಿಯೇಶನಿನ ಮಹಾಸಭೆಯು, ಕಳೆದ ಆದಿತ್ಯವಾರ ಥಿಯಾಸಫಿಕಲ್ ಲಾಜಿನಲ್ಲಿ ಶ್ರೀ. ಕೆ. ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕಾರಿ ಕಮಿಟಿಯು, ಪ್ರಾಂತ್ಯದ ಎರಡು ಪ್ರಮುಖ ಸ್ಕೌಟ್ ಸಂಸ್ಥೆಗಳನ್ನು ಒಂದುಗೂಡಿಸುವ ವಿಚಾರದಲ್ಲಿ ಕೊಟ್ಟ ಅಭಿಪ್ರಾಯವನ್ನು ಅನುಮೋದಿಸಲಾಯಿತು.

**ಸೌತ್ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನ್.** ತಾ ೨೫-೧-'೪೦ನೆ ಗುರುವಾರ ಸಾಯಂಕಾಲ ಗಂಟೆ ೬ ೩೦ಕ್ಕೆ ಯೂನಿಯನ್ ಆಫೀಸಿನಲ್ಲಿ ಶ್ರೀ ಎನ್ ಅನಂತ ಇವರ ಅಧ್ಯಕ್ಷತೆಯಲ್ಲಿ ಆಡಳಿತೆ ಕಮಿಟಿ ಸಭೆಯು ನೆರವೇರಿತು. ಯೂನಿಯನಿನ ಹಣವನ್ನು ೧ ವರ್ಷಕ್ಕೆ ಕಾಯಂ ಠೇವಣಾತಿಯಾಗಿ, ಎಸ್ ಸಿ. ಸಿ ಸಿ ಬೇಂಕಿನಲ್ಲಿ ಇಡಬೇಕೆಂದಾಯಿತು. ಫೆಬ್ರವರಿ ತಾ ೧೧ಕ್ಕೆ ಮಹಾಸಭೆ ಕರೆಯಬೇಕೆಂದಾಯಿತು. ವರ್ಕಿಂಗ ಕಮಿಟಿ ಸದಸ್ಯರು ಹಣ ಬಾಕಿಮಾಡಿದ ಸದಸ್ಯರ ಹಣವನ್ನು ಮಹಾಸಭೆಯ ಮೊದಲು ವಸೂಲುಮಾಡಿ ಆಫೀಸಿಗೆ ತಲುಪಿಸಬೇಕೆಂದಾಯಿತು

**ಹಿಂದೂ ಮಹಾಸಭೆ** ಮಂಗಳೂರಿನಲ್ಲಿ ಹಿಂದೂ ಮಹಾಸಭೆಯನ್ನು ಸ್ಥಾಪಿಸುವ ಕಾರ್ಯವು, ಕಳೆದ ಆದಿತ್ಯವಾರ ದಿನ ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಶ್ರೀ ಎಸ್ ನಾಗರಾಜಯ್ಯ, ವಕೀಲ್, ಇವರ ಅಧ್ಯಕ್ಷತೆಯಲ್ಲಿ ಜರಗಿತು

**ಶ್ರೀಕೃಷ್ಣ ಮಂದಿರ.** ಕೆನರಾ ಹೈಸ್ಕೂಲು ಕೃಷ್ಣಮಂದಿರದಲ್ಲಿ ಈ ಕೆಳಗೆ ನಮೂದಿಸಿದಂತೆ ಪ್ರವಚನಗಳು ನಡೆಯುವುವು.

೪ನೇ ಫೆಬ್ರವರಿ ೧೯೪೦ ಆದಿತ್ಯವಾರ, ಧ್ಯಾನ—ಬಿ. ಪುಂಡರೀಕ ಬಾಳಿಗರಿಂದ. ೧೧ನೇ ಫೆಬ್ರವರಿ ಆದಿತ್ಯವಾರ, ಗೀತಾ—ಅಧ್ಯಾಯ ೧೮, ಶ್ಲೋಕ ೩, ಎಸ್ ರಾಮಕೃಷ್ಣ ಕಮ್ತಿಯವರಿಂದ ೧೮ನೇ ಫೆಬ್ರವರಿ ಆದಿತ್ಯವಾರ, ಗೀತಾ ಅಧ್ಯಾಯ ೪, ಶ್ಲೋಕ ೩೩—ಬಿ. ಅಚ್ಯುತ ಬಾಳಿಗರಿಂದ. ತಾ. ೨೫ನೇ ಫೆಬ್ರವರಿ ಆದಿತ್ಯವಾರ, ಗೀತಾ— ಅಧ್ಯಾಯ ೨, ಎಮ್. ಎನ್. ಕಾಮತರಿಂದ.

**ಪೆಂಟ್ಲೆಂಡ್ ಪೇಟ್ ಸೂಟರ್ ಹಾಸ್ಟೆಲ್ ಬೇಡ್ ಮಿಂಟನ್ ಎಸೋಸಿಯೇಶನ್.** ಇದರ ಟೂರ್ನಮೆಂಟ್ ಬೇಗನೇ ಜರಗಲಿರುವುದು. ಇದ್ದರಲ್ಲಿ ಎಲ್ಲಾ ಬಿಲ್ಲವರೂ ಸಹಭಾಗಿಗಳಾಗಬಹುದು. ಸೇರಲಿಚ್ಛಿಸುವವರು ಫೆಬ್ರವರಿ ೪ನೇ ತಾರೀಕಿನೊಳಗೆ ಎಂಟ್ರಾನ್ಸ್ ಫೀಸನ್ನು ಕೊಡಬೇಕಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

**ಶ್ರೀ. ಕೆ ಗೋಪಾಲರಾಯರ ಭಾವಚಿತ್ರ ಅನಾವರಣ** ಗ ಹಾ ಎ ಟ್ರೈ ಶಾಲೆಯ ಮುಖ್ಯ ಉಪಾಧ್ಯಾಯರಾಗಿದ್ದ ಶ್ರೀಮಾನ್ ಕೆ ಗೋಪಾಲರಾಯರ ಭಾವಚಿತ್ರ ಅನಾವರಣ ಸಮಾರಂಭವು ತಾ ೧೦-೨-೪೦ರಂದು ಜರಗುವುದು. ಅಂದು ಬೆಳಗ್ಗೆ ೧೦ ಘಂಟೆಗೆ ಟ್ರೈನಿಂಗ್ ಶಾಲಾ ಮಂದಿರದಲ್ಲಿ ಹಳೆ ವಿದ್ಯಾರ್ಥಿಗಳ ಸಭೆಯೂ ಜರಗುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ

**ಕೊಂಕಣಿ ಭಾಷೋದ್ಧಾರಕ ಸಂಘ** ಕುಂದಾಪುರ ಕೊಂಕಣೀ ಭಾಷೋದ್ಧಾರಕ ಸಂಘದ ವಾರ್ಷಿಕ ಸಭಾ ಹೇಚಿ ಪ್ರಮಾಧಿ ಸಂವತ್ಸರಾಚಾ ಪುಷ್ಯಮಾಸ ಶುಕ್ಲ ಪಕ್ಷ ಏಕಾದಶಿ ಆದಿತ್ಯವಾರಾ ರಾತ್ರಿ ೯ ಪಂಟ್ವಾರಿ ಹಾಂಗಾಚಾ ಶ್ರೀ ವೆಂಕಟರಮಣ ದೇವಳಾಂತು ಭರ್ಲಿ

**ಕನ್ನಡ ಸೇವಾಸಂಘ ಅಮ್ಮೆಂಬಳ** ಈ ಸಂಘದ ದ್ವಿತೀಯ ವರ್ಷದ ವರ್ಧಂತ್ಯುತ್ಸವವು ಕಳೆದ ತಾ ೨೭-೧-೧೯೪೦ನೇ ಶನಿವಾರ ಶ್ರೀ. ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು ಬಳಿಕ 'ಸುಭದ್ರಾ ಕಲ್ಯಾಣ'ವೆಂಬ ಪ್ರಸಂಗದ ತಾಳಮದ್ದಳೆಯು ಜರಗಿಸಲ್ಪಟ್ಟಿತು

### ಸ್ವಾತಂತ್ರ್ಯ ದಿನಾಚರಣೆ

ತಾ ೨೬-೧ '೪೦ರಂದು ಸ್ವಾತಂತ್ರ್ಯ ದಿನಾಚರಣೆಯು ಜಿಲ್ಲೆಯ ನಗರ ಗ್ರಾಮಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ಅತ್ಯಂತ ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಈ ಕೆಳಗಿನ ವಿವರಗಳು ಇದುವರೆಗೆ ನಮಗೆ ತಿಳಿದುಬಂದಿವೆ

### ಮಂಗಳೂರು

ಪ್ರಭಾತ ಫೇರಿ, ಧ್ವಜವಂದನೆಗಳೊಂದಿಗೆ ಸ್ವಾತಂತ್ರ್ಯ ದಿನಾಚರಣೆಯು, ಉತ್ಸಾಹದಿಂದ ವಿಜೃಂಭಣೆಯಿಂದ ಜರುಗಿತು ಸಂಜೆ ಸ್ಥಳೀಯ ಮೈದಾನಿನಲ್ಲಿ ಶ್ರೀ ಬಿ ವೆಂಕಟ್ರಾಯ ಬಾಳಿಗ, ಎಂ ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರುಗಿ, ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಾಯಿತು. ಸ್ವಾತಂತ್ರ್ಯ ದಿನಾಚರಣೆಯ ಮಹತ್ವದ ಕುರಿತಾಗಿ ಶ್ರೀ ಬಿ ವೈಕುಂಠ ಬಾಳಿಗರು ಡಾ॥ ಕೆ ವಿಠಲ ಶೆಟ್ಟರು ಮತ್ತು ಶ್ರೀ॥ ಕೇಶವ ಕಾಮತರು ಭಾಷಣವಿತ್ತರು. ಶ್ರೀ ಅಹಮ್ಮದ್ ಬಾವಾ ಇವರಿಂದ ಧ್ವಜಾರೋಹಣ ಕಾರ್ಯವು ನೆರವೇರಿತ್ತು.

### ಬಂಟ್ವಾಳ

ಖಾದಿ ಮಾರಾಟ ಪ್ರಭಾತಫೇರಿ, ಸಾರ್ವಜನಿಕ ಸಭೆಗಳಿಂದ ಬಹಳ ವಿಜೃಂಭಣೆಯಿಂದ ಜರಗಿತು ಶ್ರೀಗಳಾದ ಎಸ್ ಎನ್ ಹೊಳ್ಳ, ಸರ್ಪ್ಪ, ಕೇಶವ ಬಾಳಿಗಾ ಇವರು ಭಾಷಣವಿತ್ತರು ೩೦೦ ರೂಪಾಯಿಗಳ ವರೆಗಿನ ಖಾದಿಯ ಮಾರಾಟವಾಗಿದೆ

### ಮುದ್ರಾಡಿ

ಶ್ರೀ ಎಂ ವಾದಿರಾಜ ಕಲ್ಕೂರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ॥ಗಳಾದ ಎಂ. ಕೃಷ್ಣಯ್ಯ ಶೆಟ್ರು, ನಾರಾಯಣ ಶೆಟ್ರು, ಯಂ ಬಾಬು ಶೆಟ್ಟಿಗಾರರು, ಕೆ ಶೀನಪ್ಪ ಹೆಗ್ಡೆ ಉಪ್ಪಳ ನಾರಾಯಣ ಶೆಟ್ರು ಇವರು ಸಂಪೂರ್ಣ ಪ್ರತಿಜ್ಞೆ ತೆಕ್ಕೊಂಡರು,

### ಮಂಜೇಶ್ವರ

ಶ್ರೀ॥ ಬಿ. ಎಂ ಮಾಧವ ಕಂಪ್ತಿಯವರ ಅಧ್ಯಕ್ಷತೆಯಲ್ಲಿ ಉತ್ಸಾಹದಿಂದ ಜರಗಿತು ಪ್ರಚಂಡ ಜನಸಂದಣಿ ನೆರೆದಿತ್ತು.

### ಕುಂಬಳೆ

ಶ್ರೀ॥ ಬಿ ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ವೈಭವದಿಂದನೆರವೇರಿತು ಹಳ್ಳಿಪೇಟೆಗಳಿಂದ ಜನರು ಅನೇಕರುಬಂದಿದ್ದರು

### ಕಾಸರಗೋಡು

ಶ್ರೀ॥ ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು


ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

—ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ,-ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ'

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ವಜಾ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಸೋಲ್ ಏಜೆಂಟ್ಸ್:

**ಯು. ಪಾಂಡುರಂಗ ನಾಯಕ್,** ರಥಬೀದಿ ಮಂಗಳೂರು.

**ಪ್ರೇಮ ಮೆಡಿಕಲ್ ಹಾಲ್,** ಗುತ್ತಿಗಾರ್ ದ. ಕ.


### ಪೆರ್ಲ

ಹಳ್ಳಿ ಹಳ್ಳಿಗಳಿಂದ ತುಂಬಾ ಜನರು ಬಂದಿದ್ದರು. ಹಲವರು ಸ್ವಾತಂತ್ರ್ಯ ಪ್ರತಿಜ್ಞೆ ತೆಕ್ಕೊಂಡರು ದಿನಾಚರಣೆಯು ಪೂರ್ಣ ಯಶಸ್ವಿಯಾಗಿತ್ತು.

### ಕಾರ್ಕಳ

ಶ್ರೀ॥ ಕೆ. ಬಿ. ಜೋಶಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಸುಮಾರು ೧೦೦ ರೂಪಾಯಿಗಳ ಖಾದಿ ಮಾರಾಟವಾಗಿತ್ತು. ಶ್ರೀಗಳಾದ ಎಂ. ಡಿ. ಅಧಿಕಾರಿ, ಕೆ. ಪಾಂಡುರಂಗಯ್ಯ, ಪುದುವಾಳ್, ಕೆ. ವಾಮನಶರ್ಮಾ, ಡಿ ಶ್ರೀನಿವಾಸಶರ್ಮಾ ಕೆ ಕೃಷ್ಣಮೂರ್ತಿ ಇವರು ಸಂಪೂರ್ಣ ಸ್ವಾತಂತ್ರ್ಯ ಪ್ರತಿಜ್ಞೆ ತೆಕ್ಕೊಂಡರು.

### ವಾರಾಹಿ

ಶ್ರೀ॥ ಕೃಷ್ಣರಾಯ ಕೊಡ್ಗಿಯವರ ಅಧ್ಯಕ್ಷತೆಯಿಂದ ಯಶಸ್ವಿಯಾಗಿ ಜರಗಿತು. ಹಳ್ಳಿಯ ಜನರು ವಿಶೇಷ ಉತ್ಸಾಹಗೊಂಡಿದ್ದರು

### ಪುತ್ತೂರು

ಶ್ರೀ॥ ಚಿನ್ನಪ್ಪ ಗೌಡರ ಅಧ್ಯಕ್ಷತೆಯಿಂದ ವಿಶೇಷ ವಿಜೃಂಭಣೆಯಿಂದ ನೆರವೇರಿತು

### ಬಾರಕೂರು

ಶ್ರೀ॥ ಜೋನ್ ಪಿ ಸಿಕೇರಾಇವರ ಅಧ್ಯಕ್ಷತೆಯಿಂದ ಯಶಸ್ವಿಯಾಗಿ ನೆರವೇರಿತು

### ಉಡುಪಿ

ಉಡುಪಿ ನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನೆರವೇರಲಿಲ್ಲವೆಂದೂ, ಜಿಲ್ಲೆಯ ಎರಡನೆಯ ಪ್ರಧಾನ ನಗರವೂ ಮುನ್ಸಿಪಾಲಿಟಿ ಕಾಂಗ್ರೆಸ್ ಪಾರ್ಟಿ, ಜಿಲ್ಲಾ ಬೋರ್ಡು ಕಾಂಗ್ರೆಸು ಸದಸ್ಯರು, ಕೆ ಪಿ. ಸಿ ಸಿ ಮತ್ತು ಡಿ ಸಿ ಸಿ ಸದಸ್ಯರು ಎಲ್ಲಾ ಇದ್ದಲ್ಲಿ ಹೀಗೆ ಸ್ವಾತಂತ್ರ್ಯ ದಿನವು ಆಚರಣೆಯಾಗದಿರುವುದು ತೀರಾ ಶೋಚನೀಯವೂ ಲಜ್ಜಾಸ್ಪದವೂ ಎಂದು ಒಬ್ಬ ಮಹನೀಯರು ತಿಳಿಸುತ್ತಾರೆ

### ಕಾಸರಗೋಡು

ರಾಜಿನಾಮೆ: ಇಲ್ಲಿಯ ೧ನೇ ಕ್ಲಾಸು ಬೆಂಚು ಮೆಜಿಸ್ಟ್ರೇಟರ ಕೋರ್ಟಿನ ಪ್ರೆಸಿಡೆಂಟರ ಸ್ಥಾನವಹಿಸಿ ಸುಮಾರು ೨ ವರ್ಷಗಳ ತನಕ ಶ್ರದ್ಧೆಯಿಂದ ಕೆಲಸಮಾಡಿ ಮೊನ್ನೆ ತಾನೇ ಜಿಲ್ಲಾ ಕಲೆಕ್ಟರವರು ಕೋರ್ಟಿನ ಕೆಲಸವು ಅಸಮಾಧಾನಕರವೂ ನ್ಯಾಯವೂ ವಿಳಂಬವಾಗಿ ನಡಿಯುತ್ತದೆಂದೂ ಸದ್ರಿ ಕೋರ್ಟಿನ ಸಂಘಟನೆಗಳು ಇನ್ನೂ ಮುಂದಕ್ಕೆ ಯುಕ್ತವಾಗಿ ನಡಿಯದಿದ್ದರೆ ಸರಕಾರಕ್ಕೆ ತಿಳಿಸಲಾಗುವುದು ಎಂಬ ಕೆಲವು ಶೋಚನೀಯಕರ ವಾದಪ್ರೊಸಿಡಿಂಗ್ಸು ಮಾಡಿರುವುದರಿಂದ, ಶ್ರೀಯುತ ಅಮ್ಮೆಂಬಳ ಶ್ರೀನಿವಾಸಪೈಗಳು, ಬಿ. ದೇವಪ್ಪ ಆಳ್ವ, ಸಿ ಶ್ರೀನಿವಾಸ ಕಾಮತರು, ಎಂ. ನರಸಿಂಗರಾಯರು ತಮ್ಮ ಕಾರ್ಯಕಲಾಪಗಳನ್ನು ಅಂತ್ಯಗೊಳಿಸಿ ತಮ್ಮ ತಮ್ಮ ಬೆಂಚ್ ಮೆಜಿಸ್ಟ್ರೇಟ್ ಹುದ್ದೆಗಳಿಗೆ ರಾಜಿನಾಮೆ ಕೊಟ್ಟರಾಗಿ ತಿಳಿದುಬರುತ್ತದೆ.

# ಬ್ರಿಟನಿನ ಪೂರ್ವ ತೀರದ ಮೇಲೆ ಜರ್ಮನರ ವಿಮಾನ ದಾಳಿ!

# ಯುದ್ಧ ವಾರ್ತೆ!



## ಪೋಲೆಂಡಿನಲ್ಲಿ ಭಯಂಕರ ನರಹತ್ಯ

### ಫಿನ್ನರ ಪ್ರಚಂಡ ಸಾಹಸ!

### ಹಲವು ಹಡಗುಗಳ ಧ್ವಂಸ!

### ಜರ್ಮನರ ಅಕೃತ್ಯಕ್ಕೆ ಪೋಪರ ವಿಷಾದ

**ಮುಸಲೋನಿ ಸ್ಟಾಲಿನರ ಮಧ್ಯದಲ್ಲಿ**

ಇಂದು ಹಿಟ್ಲರನಿಗೆ ಡೋಲಾಯಮಾನ ಪರಿಸ್ಥಿತಿಯು ಒದಗಿದೆ. ಸ್ಟಾಲಿನನು ಯೂರೋಪಿನ ರಾಜಕಾರಣದಲ್ಲಿ ಬಹಳ ಉಗ್ರ ನೀತಿಯನ್ನು ವಹಿಸಿಕೊಂಡಿರುವನು. ಜರ್ಮನಿಯನ್ನು ಮತ್ತು ಉಳಿದ ಇತರ ಹಲವು ರಾಷ್ಟ್ರಗಳನ್ನು ಆತನು ನುಂಗಿ ನೀರು ಕುಡಿಯುವ ಯೋಚನೆಯಲ್ಲಿರುವನೇ ಎಂದು ಸಂದೇಹವಾಗಿದೆ.

ಇತ್ತ ಮುಸಲೋನಿಯು ಸ್ಟಾಲಿನನ ಮೇಲೆ ಕೈಯೆತ್ತಿರುವಂತೆ ಕಂಡುಬರುತ್ತದೆ. ಮುಸಲೋನಿ ಸ್ಟಾಲಿನರ ಇಕ್ಕಡೆಯವರ ಗೆಳೆಯನಾದ ಹಿಟ್ಲರನು ಈಗ ವಿಷಮ ಪರಿಸ್ಥಿತಿಯಲ್ಲಿರುವನು. ಇಂದಿನ ಪ್ರಪಂಚ ಯುದ್ಧದಲ್ಲಿ ಇಟಲಿಯೂ ಮುನ್ನುಗ್ಗುವುದೇ ಎಂಬುದು ಇಂದಿನ ಒಂದು ಊಹೆಯಾಗಿದೆ.

**ಫಿನ್ನರು ಹಿಂಜರಿಯುಲಿಲ್ಲ**

ಇತ್ತೀಚೆಗೆ ಬಹಳ ಉಗ್ರನಾಗಿ ರಶ್ಯನರು ಮುಂಬರಿದು ಬರುತ್ತಿರುವರಾದರೂ ಧೀರರಾದ ಫಿನ್ನರು ಅವರನ್ನು ತಡೆದೇ ನಿಲ್ಲಿಸಿರುವರು. ಹಲವು ಕಾಳಗಗಳಲ್ಲಿ ರಶ್ಯನರಿಗೆ ಭಯಂಕರ ನಷ್ಟವಾಗಿದೆ. ಫಿನ್‌ಲೆಂಡಿನ ಮೇಲೆ ವಿಮಾನಗಳು ನಿರಂತರ ಹಾರಾಡುತ್ತಿದ್ದುವು. ಬಾಂಬುಗಳು ಸುರಿಮಳೆಗರೆದವು. ಆದರೂ ಫಿನ್ನರನ್ನು ಗೆಲ್ಲುವುದು ಅಸಾಧ್ಯವಾಯಿತು. ರಶ್ಯನರು ಅಮಾನುಷ ಕಾರ್ಯಕ್ರಮವನ್ನು ತೋರಿಸುತ್ತಿದ್ದಾರೆ.

**ಜಲಸಮಾಧಿ ಹೊಂದಿದ ಹಡಗಗಳು**

ಗ್ರೆನ್‌ವಿಲ್ ಎಂಬ ಡಿಸ್ಟ್ರಾಯರ ಹಡಗು ಉತ್ತರ ಸಮುದ್ರದಲ್ಲಿ ತೋಟಿಗೆ ತಾಗಿ ಮುಳುಗಿತು. ಅದರಲ್ಲಿ ೮೧ ಜನರು ಕಾಣದಾಗಿದ್ದು, ೧೧೮ ಜನರನ್ನು ಪಾರುಮಾಡಲಾಗಿದೆ.

ಪ್ರೊಟಿಸಿಲಾಸ (೯೦೦೦) ಎಂಬ ಬ್ಲೂ ಫನೆಲ್ ಹಡಗು ಪಶ್ಚಿಮ ಕರಾವಳಿಯಲ್ಲಿ ಮುಳುಗಿಹೋಯಿತು. ಕೆಲ ನಾವಿಕರಿಗೆ ಗಾಯಗಳಾಗಿವೆ.

ಅಬರ್ಡೀನ ಕಂಪೆನಿಯ ಫೆಂಹಿಲ್ ಹಡಗು ನೈಋತ್ಯ ದಿಕ್ಕಿನ ದಂಡೆಯ ಹತ್ತರ ತೋಟಿಗೆ ಬಡೆಯಿತು. ಅದು ಮುಳುಗಿದಾಗ ೧೨ ಜನರು ಅದರೊಂದಿಗೆ ಸಮುದ್ರದ ತಳವನ್ನು ಕಂಡರು.

ದಕ್ಷಿಣ ಆಫ್ರಿಕೆಯ ಯುನಿಯನ್ ಕಾಸಲ್ ಕಂಪೆನಿಯ 'ಲಾಂಡಾವೆರಿ ಕಾಸಲ್' ಹಡಗವು ಬಂಡೆಗೆ ತಾಗಿ ಅಪಾಯಕ್ಕೀಡಾದುದರಿಂದ ಬ್ರಿಟಿಷ ಬಂದರೊಂದಕ್ಕೆ ತರಲಾಗಿದೆ. ಅದರಲ್ಲಿ ಪ್ರಯಾಣಿಕರಿಗೆ ಏನೂ ಗಾಯವಾಗಿಲ್ಲ.

ಕರೋನಿ ಎಂಬ (೭೮೦೭) ಟನ್ನಿನ ಎಣ್ಣೆ ತುಂಬುವ ಹಡಗು ಸ್ಫೋಟನದೊಂದಿಗೆ ಮುಳುಗಿತು. ಪರೀಕ್ಷೆಗಾಗಿ ಅದನ್ನು ಬಂದರದಿಂದ ಹೊರಗೆ ತರಲಾಗಿದ್ದಿತು.

ಈ ವಾರದಲ್ಲಿ ಮುಳುಗಿದ ಮುಖ್ಯ ಹಡಗವೆಂದರೆ ಬ್ರಿಟಿಷ್ ಹಡಗುಪಡೆಯ ಒಂದು ಭಾಗದ ಮಾರ್ಗದರ್ಶಿಯಾದ 'ಎಕ್ಸಮತ್' ಎಂಬುದು. ಇದರಲ್ಲಿ ಸುಮಾರು ೧೭೫ ಜನರಿದ್ದರು. ಇದು ಸಹ ಟಾರ್ಪೆಡೊ ಅಥವಾ ಸುರಂಗ ಕೊರೆಯಿಂದ ಮುಳುಗಿಸಲ್ಪಟ್ಟಿದೆಯೆಂದು ಹೇಳಲಾಗಿದೆ.

**ತಟಸ್ಥ ರಾಷ್ಟ್ರಗಳ ಹಡಗುಗಳು**

ಫೌಂಡ್ರಿಯಾ ಎಂಬ ಸ್ವಿಡಿಶ್ ಹಡಗು ಮುಯಿಡೆಸ್‌ದಿಂದ ೧೮೦ ಮೈಲುಗಳ ಅಂತರದ ಮೇಲೆ ಎರಡು ಸುರಂಗಗಳಿಗೆ ತಾಗಿ ಮುಳುಗಿತು. ೧೭ ಜನರು ಸತ್ತಿದ್ದು ಇಬ್ಬರು ಪಾರಾಗಿ ಬಂದಿರುವರು.

ಜರಾಡ್ಮಿಯೋ ಎಂಬ ಇಟಲಿಯ ಹಡಗವು ಭೂಮಧ್ಯ ಸಮುದ್ರದಲ್ಲಿ ಉರಿ ಹತ್ತಿ ಸುಟ್ಟುಹೋಯಿತು. ಮೊದಲು ಎಂಜಿನ ಕೋಣೆಯಲ್ಲಿ ಉರಿಹತ್ತಿತು. ಉತ್ತರ ದಿಕ್ಕಿನಿಂದ ಜೋರಾಗಿ ಗಾಳಿ ಬೀಸುತ್ತಿದ್ದುದರಿಂದ ಉರಿ ಹಬ್ಬಿತು. ಇಡೀ ಹಡಗವು ಸುಟ್ಟುಹೋಯಿತು. ಅದರಲ್ಲಿದ್ದ ೭೮೮ ಜನರಲ್ಲಿ ೫೩೯ ಜನರನ್ನು ಮೂರು ಹಡಗಗಳು ಕೂಡಿ ಪಾರು ಮಾಡಿವೆ.

ಏಡನ್‌ದಿಂದ ಮುಂಬಯಿಗೆ ಹೊರಟು ಓಸ್ಲೋದಲ್ಲಿ ರಜಸ್ಟರಾದ ಒಂದು ನಾರ್ವೆ ದೇಶದ ಹಡಗು ಸುಲ್ತಾನ ಮುಸ್ಕತನ ಆಡಳಿತಕ್ಕೊಳಗಾದ ಅರಬಿ ಸಮುದ್ರದ ದಂಡೆಯಲ್ಲಿದ್ದ ಮಾರ್ಬಟಸ್ಸದ ಪೂರ್ವಕ್ಕಿರುವ ರಾಸಕಬ್ಬುಯ್ಕಾಡ ಅಲ್ ಹನಾನಿ ಎಂಬಲ್ಲಿ ಮುರಿದುಹೋಗಿದೆಯೆಂದು ಸುದ್ದಿ ಬಂದಿದೆ. ನಾವಿಕರು ಸುರಕ್ಷಿತ ಇರುವರು.

**ಚರ್ಚಿಲ್ಲರ ಭಾಷಣ**

ಬ್ರಿಟಿಷ್ ನೌಕಾಪಡೆಯ ಎಡ್ಮಿರಲ್ ರಾದ ವಿನ್‌ಸ್ಟನ್ ಚರ್ಚಿಲ್ಲರು ಭಾಷಣ ಮಾಡುತ್ತಾ, ಆಂಗ್ಲೋ-ಫ್ರೆಂಚರು ನ್ಯಾಯಕ್ಕಾಗಿ ಹೋರಾಡುವುದರಿಂದ, ಈ ಪವಿತ್ರ ಕಾರ್ಯದಲ್ಲಿ ತಟಸ್ಥ ರಾಷ್ಟ್ರಗಳು ಅವರಿಗೆ ಸಂಪೂರ್ಣ ಬೆಂಬಲ ಕೊಡಬೇಕೆಂದು ನುಡಿದರು. ಚರ್ಚಿಲ್ಲರ ಈ ಭಾಷಣದಿಂದ ತಟಸ್ಥ ರಾಷ್ಟ್ರಗಳಲ್ಲಿ ತೀವ್ರ ಅಸಮಾಧಾನವುಂಟಾಗಿದೆ. ತಟಸ್ಥ ರಾಷ್ಟ್ರಗಳನ್ನು ರಣರಂಗಕ್ಕೆ ಎಳೆಯುವ ಪ್ರಯತ್ನವೆಂದು ಡಚ್ ಪತ್ರಿಕೆಗಳು ಟೀಕಿಸಿವೆ. ಇಡೀ ಯುರೋಪೇ ರಣರಂಗವಾಗಿ ಮಾರ್ಪಡುವಂತೆ ಬ್ರಿಟನ್ ಮತ್ತು ಫ್ರಾನ್ಸ್‌ಗಳು ಕಳೆದ ಹಲವು ತಿಂಗಳುಗಳಿಂದ ಪ್ರಯತ್ನಿಸುತ್ತವೆಯೆಂದು ಇಟಾಲಿಯನ್ ಪತ್ರಿಕೆಗಳು ಈ ಮೊದಲು ಬರೆದುದಕ್ಕೆ ಚರ್ಚಿಲ್ಲರ ಭಾಷಣವೊಂದು ಆಧಾರವೆಂದು ರೋಮ್ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

**ಪೋಲಿಷ್ ಸರಕಾರ**

ಫ್ರಾನ್ಸಿನಲ್ಲಿ ಪೋಲಿಷ್ ಸರಕಾರವು ಸ್ಥಾಪಿಸಲ್ಪಟ್ಟಿದೆಯಷ್ಟೆ. ಕಳೆದ ಮಹಾಯುದ್ಧದಲ್ಲಿ ಪ್ರಧಾನರಾಗಿದ್ದ ಪಾಡೆರೆವಿಸ್ಕಿಯವರು ಪುನಃ ಪ್ರಧಾನರಾಗಿ ಇನ್ನುಳಿದವರಿಂದ ಆರಿಸಲ್ಪಟ್ಟಿದ್ದಾರೆ. ವಯೋವೃದ್ಧರಾಗಿದ್ದರೂ ಕೂಡಾ ಪಾಡೆರೆವಿಸ್ಕಿಯವರು ಸಂಜೆ ಮಾತನಾಡುತ್ತಾ, ಪೋಲಿಷ್ ಸರಕಾರದ ಧೋರಣವೇ ಇಂದಿನ ಯುದ್ಧಕ್ಕೆ ಕಾರಣವಾಯಿತೆಂದು ಹೇಳಿ ಕರ್ನಲ್ ಬೆಕ್ಕರ ರೀತಿನೀತಿಗಳನ್ನು ಉಗ್ರವಾಗಿ ಟೀಕಿಸಿದರು. ಫ್ರಾನ್ಸಿನಲ್ಲಿ ಒಟ್ಟು ೧ ಮಿಲಿಯ ಪೋಲ ಸೈನಿಕರು ಸಂಘಟಿಸಲ್ಪಡುತ್ತಿರುವರು.

**ದ ಆಫ್ರಿಕದ ಧೋರಣೆ**

ದ. ಆಫ್ರಿಕದ ಸಾಮಂತ ಸಭೆಯಲ್ಲಿ ವಿರೋಧಿ ಪಕ್ಷದ ಮುಖಂಡರೂ ಮಾಜಿ ಪ್ರಧಾನರೂ ಆಗಿದ್ದ ಜನರಲ್ ಹೆರ್ಟ್ಜೋಗ್‌ರವರು ಒಂದು ಸೂಚನೆಯನ್ನು ಮಂಡಿಸುತ್ತಾ ಜರ್ಮನಿಯೊಡನೆ ಸಂಧಾನಮಾಡಿಕೊಳ್ಳಬೇಕೆಂದು ನುಡಿದು ಮತ್ತಿಂತೆಂದರು. 'ಶಾಂತಿ ಶರ್ತಗಳನ್ನು ಚರ್ಚಿಸುವ ಸಂದರ್ಭಗಳನ್ನು ಬೇಕೆಂದೇ ನಿರಾಕರಿಸಲಾಗಿದೆ. ಈ ಅಂತರ್ರಾಷ್ಟ್ರೀಯ ಹುಚ್ಚುತನವು ನಿಲ್ಲಬೇಕು. ಬ್ರಿಟನಿನ ಪರವಾಗಿ ದ. ಆಫ್ರಿಕವು ಯುದ್ಧದಲ್ಲಿ ಧುಮುಕಿದೆ. ಜಗತ್ತಿನ ಒಡೆತನವೇ ಜರ್ಮನಿಯ ಇಚ್ಛೆಯೆಂಬ ಆರೋಪವು ನ್ಯಾಯವಾಗಿಲ್ಲ. ದ. ಆಫ್ರಿಕವನ್ನೂ ರಣರಂಗಕ್ಕೆ ದೂಡಿದುದು ಈ ಮುಖಂಡರು ಮಾಡಿದ ಮಹಾಪರಾಧ. ಆಫ್ರಿಕವು ಯುರೋಪಿನ ಸೂತ್ರಗೊಂಬೆಯಾಯ್ತು.

**ಪೋಪರ ವಿಷಾದ**

ಪೋಲೆಂಡಿನಲ್ಲಿ ಜರ್ಮನರು ಮಾಡುತ್ತಿರುವ ಭಯಾನಕ ಅತ್ಯಾಚಾರಗಳಿಗಾಗಿ ಪೋಪರು ತೀವ್ರ ತಮ್ಮ ವಿಷಾದವನ್ನು ಸೂಚಿಸಿದ್ದಾರೆ. ಪೋಲೆಂಡಿನ ಸೇಕಡಾ ೭೦ರಷ್ಟು ನೌಕಾ ಸೈನಿಕರು ಇಂದು ಮಿತ್ರಮಂಡಲದ ಸೈನ್ಯವನ್ನು ಸೇರಿರುವರು.

**ತಿರಿಗಿ ಬ್ರಿಟಿಷ್ ಜಪಾನ್ ವಿವಾದ**

ಅಸಮಾಮಾರು ಹಡಗವನ್ನು ತಡೆದ ವಿಷಯದಲ್ಲಿ ಜಪಾನ್ ಸರಕಾರವು ಬ್ರಿಟಿಷ್ ಸರಕಾರದ ವರ್ತನೆಯನ್ನು ಖಂಡಿಸಿದೆ. ಜಪಾನ್ ವಿದೇಶಾಂಗ ಮಂತ್ರಿಯು ಬ್ರಿಟಿಷ್ ಸರಕಾರವನ್ನು ಜೋರಾಗಿ ದೂಷಿಸಿರುವನು.

**ಸ್ಟಾಲಿನನನ್ನು ತಳ್ಳಿಹಾಕುವ ಯತ್ನ**

ರಶ್ಯದಲ್ಲಿ ಸ್ಟಾಲಿನನನ್ನು ಅಧಿಕಾರದಿಂದ ತಳ್ಳಿಹಾಕುವ ಹಂಚಿಕೆಗಳು ನಡೆಯುತ್ತಿವೆಯೆಂದೂ, ಹಾಗೆ ಹಂಚಿಕೆ ಮಾಡುತ್ತಿರುವವರೆಂದು ಸಂಶಯಗೊಂಡಿರುವ ಹಲವರನ್ನು ರಶ್ಯಾ ಸರಕಾರವು ಬಂಧಿಸಿದೆಯೆಂದೂ ತಿಳಿದಿದೆ.

**ಬಾಲ್ಟಿಕ್ ಕಡೆಗೆ ಜರ್ಮನಿ?**

ಜರ್ಮನ್ ಸೈನ್ಯಗಳು ಬಾಲ್ಟಿಕ್ ರಾಷ್ಟ್ರಗಳ ಕಡೆಗೆ ಸಾಗುತ್ತಿವೆ. ರುಮೇನಿಯಾ ಮತ್ತು ಸ್ವೀಡನುಗಳಿಗೆ ಅಂಜಿಕೆ ಕೊಡಲಾಗಿದೆ.

**ಅಮೇರಿಕಾ ಮತ್ತು ಜಪಾನ್**

ಈ ಉಭಯ ರಾಷ್ಟ್ರಗಳೊಳಗೆ ಕಳೆದ ೨೯ ವರ್ಷಗಳ ಹಿಂದೆ ಮಾಡಿದ ೨೯ ವರ್ಷಗಳ ವ್ಯಾಪಾರ ಒಪ್ಪಂದವು ಜನವರಿ ತಿಂಗಳಿಗೆ ಅಂತ್ಯವಾಯಿತು. ಮುಂದಕ್ಕೆ ಅಮೇರಿಕವು ಜಪಾನಿನೊಡನೆ ಯಾವ ಒಪ್ಪಂದವನ್ನೂ ಮಾಡಿಕೊಳ್ಳುವುದಿಲ್ಲವೆಂದು ತಿಳಿದಿದೆ.

**ಚೈನದಲ್ಲಿ ಕೈಗೊಂಬೆ ಸರಕಾರ**

ಚೈನದಲ್ಲಿ ಜಪಾನು ಹೇಳಿದ ಹಾಗೆ ಕೇಳುವ ಕೈಗೊಂಬೆ ಸರಕಾರವೊಂದನ್ನು ಸ್ಥಾಪಿಸುವ ಕಾರ್ಯವನ್ನು ಜಪಾನು ಸರಕಾರವು ಬಹಳ ಯತ್ನ ಸಾಹಸಗಳಿಂದ ಮಾಡುತ್ತಿದೆ. ಈ ಪ್ರಯತ್ನವು ಜಯಶಾಲಿಯಾಗುವ ಸೂಚನೆಯೂ ಇದೆಯೆಂದು ತಿಳಿದುಬಂದಿದೆ.

**ಪಶ್ಚಿಮ ರಣರಂಗದಲ್ಲಿ ಹಿಮ ಮತ್ತು ಮಳೆ**

ಪಶ್ಚಿಮ ರಣರಂಗದಲ್ಲಿ ಹಿಮ ಮತ್ತು ಮಳೆಗಳ ಬಾಧೆಯು ಹೆಚ್ಚುತ್ತಿದೆ. ಆದರೂ ಅಲ್ಪ ಸ್ವಲ್ಪ ಕಾದಾಟಗಳು ದಿನಸಿತ್ಯ ಆಗುತ್ತಿವೆ.

**ಬ್ರಿಟನಿನ ಪೂರ್ವತೀರದಲ್ಲಿ ಜರ್ಮನರ ಧಾಳಿ**

ಜರ್ಮನ್ ವಿಮಾನಗಳು ಬ್ರಿಟನಿನ ಪೂರ್ವತೀರದಲ್ಲಿ ಧಾಳಿ ನಡಿಸಿವೆ.

**ಪೋಲೆಂಡಿನಲ್ಲಿ ೧೮,೦೦೦ ಜನರಿಗೆ ಮರಣದಂಡನೆ**

ಪೋಲೆಂಡಿನಲ್ಲಿ ಜರ್ಮನರಿಗೆ ವಿರುದ್ಧವಿರುವವರೆಂದು ಆರೋಪಿತರಾದ ಒಟ್ಟು ೧೮,೦೦೦ ಜನತೆಯ ಮುಖಂಡರಿಗೆಲ್ಲ ಮರಣದಂಡನೆ ವಿಧಿಸಲಾಗಿದೆಯೆಂಬ ವಿಷಾದಕರ ವಾರ್ತೆಯು ಬಂದಿದೆ. ಹಲವು ಹೆಂಗುಸರನ್ನೂ ಮಕ್ಕಳನ್ನೂ ಕೊಂದಿರುವರಂತೆ.

**ಶ್ರೀ ಖೇರರಿಗೆ ಬಹುಮತ**

ಶ್ರೀ ಬಿ. ಜಿ. ಖೇರರು ಪ್ರಬಲ ಬಹುಮತದಿಂದ ರಾಮಗಡ ಕಾಂಗ್ರೆಸಿಗೆ ಪ್ರತಿನಿಧಿಗಳಾಗಿ ಮುಂಬಯಿಯಲ್ಲಿ ಆರಿಸಿ ಬಂದಿರುವರು.

**ಮೋಟರು ಟಿಯರು ಕಾರ್ಖಾನೆ**

ಮುಂಬಯಿಯ ... ಮೋಟರು ಟಯರು ತಯಾರಿಸುವ ಕಾರ್ಖಾನೆಯೊಂದು ಸ್ಥಾಪಿತವಾಗಿದೆ.

**ಕಾಲ್ನಡೆಯಿಂದ ಕಾಂಗ್ರೆಸಿಗೆ ಯಾತ್ರೆ**

ಮಧ್ಯಪ್ರಾಂತದ ಭಂಡಾರಾ ಎಂಬ ಹಳ್ಳಿಯಿಂದ ಹೊರಟು ನಾಲ್ಕು ತಿಂಗಳ ತನಕ ಕಾಲ್ನಡೆಯಿಂದ ಪ್ರವಾಸಮಾಡಿ, ಇಬ್ಬರು ಸ್ವಯಂಸೇವಕರು ರಾಮಗಡಕ್ಕೆ ತಲಪಲು ನಿಶ್ಚಯಿಸಿರುವರು. ಅಲ್ಲಿಹೋಗಿ ತಮ್ಮ ಸೇವೆಯನ್ನು ಸಲ್ಲಿಸಬೇಕೆಂದು ಅವರ ಆಕಾಂಕ್ಷೆಯಾಗಿದೆ.

**ಕೇಂದ್ರ ಎಸೆಂಬ್ಲಿಯ ಬಜೆಟ್ ಅಧಿವೇಶನ**

ಕೇಂದ್ರ ಅಸೆಂಬ್ಲಿಗೆ ಕಾಂಗ್ರೆಸ್ ಸದಸ್ಯರು ಹೋಗುವುದಿಲ್ಲವಾದುದರಿಂದ, ಬಜೆಟ್ ಅಧಿವೇಶನವು ಮಾರ್ಚ ತಿಂಗಳ ಕೊನೆಯಲ್ಲಿ ಕೊನೆಗಾಣುವುದಾಗಿ ತಿಳಿದಿದೆ.

**ಫೆಬ್ರವರಿ ೫ ಮತ್ತು ೬ಕ್ಕೆ ಗಾಂಧಿ-ವೈಸರಾಯರ ಭೇಟಿ**

ಮಹಾತ್ಮಾ ಗಾಂಧಿ ಮತ್ತು ವೈಸರಾಯರ ಭೇಟಿಯು ಬರುವ ಫೆಬ್ರವರಿ ೫ ಮತ್ತು ೬ಕ್ಕೆ ನಡೆಯುವುದೆಂದು ತಿಳಿದು ಬಂದಿದೆ.

**ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಸ್ಲಿಮರು**

ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಸ್ಲಿಮರು ಸಹಕರಿಸಬೇಕೆಂದು, ಮುಂಬಾಯಿಯ ಮುಸ್ಲಿಮ ಮುಖಂಡರಾದ, ಶ್ರೀಗಳೆಂದ ಪೈಲ್ವ ಅಬಿದ್, ಅಲಿ, ನೂರಿ, ಅಲಿ ಬಹದೂರ್ ಖಾನ್, ಮಹಾಲಿ ಇವರು ಪ್ರಕಟಣೆ ಹೊರಡಿಸಿದಂತೆ ಸಾವಿರಾರು ಮುಸ್ಲಿಮರು ಆ ದಿನ ಭಾಗವಹಿಸಿದ್ದರು.

**ಬರ್ಮಾ ಮಂತ್ರಿಮಂಡಳದ ರಾಜೀನಾಮೆ**

ಬರ್ಮಾ ಮಂತ್ರಿಮಂಡಳದ ಮುಖಂಡರಲ್ಲಿ ಅಭಿಪ್ರಾಯ ವ್ಯತ್ಯಾಸವುಂಟಾಗಿ ಅವರು ರಾಜೀನಾಮೆ ಕೊಟ್ಟು ಪುನಃ ಬೇರೆ ಮಂತ್ರಿಮಂಡಳವೊಂದು ರಚಿತವಾಯಿತು.

**ಶ್ರೀ. ಸರ್ಕಾರರ ಸ್ವಾತಂತ್ರ್ಯ ಪ್ರತಿಜ್ಞೆ**

ಬಂಗಾಳ ಮಂತ್ರಿಮಂಡಳದಿಂದ ರಾಜಿನಾಮೆ ಕೊಟ್ಟು ಹೊರಬಂದ ಶ್ರೀ. ನಳಿನೀರಂಜನ ಸರ್ಕಾರರು ಕಳೆದ ಸ್ವಾತಂತ್ರ್ಯ ಪ್ರತಿಜ್ಞೆಯ ದಿನ ಹೇಳುವ ಪ್ರತಿ



# ವೈಸರಾಯರನ್ನು ಭೇಟಿಯಾಗಲು ಗಾಂಧಿಜಿಯವರು ತೆರಳುವರು!

## ಫೆಬ್ರವರಿ ೫, ೬,ರಂದು ಭೇಟಿ!

## ಸರ್ವತ್ರ ಸ್ವಾತಂತ್ರ್ಯ ದಿನೋತ್ಸವ! ಕಾಂಗ್ರೆಸಿನ ಗುರಿ ಪೂರ್ಣ ಸ್ವಾತಂತ್ರ್ಯ!

### ವಿದೇಶಗಳಲ್ಲಿ ಸ್ವಾತಂತ್ರ್ಯ ದಿನ

ಜ್ಞೆಯನ್ನು ತೆಕ್ಕೊಂಡಿರುವರಾಗಿ ತಿಳಿದಿದೆ. ಇದರಿಂದ ಜನತೆಯೊಡನೆ ಸಂಪರ್ಕವಾಗಲು ಹೆಚ್ಚಿನ ಸೌಕರ್ಯವು ಆಗುವುದೆಂದು ಅವರು ಹೇಳುತ್ತಾರೆ.

**ಮಹಾಕೋಸಲದಲ್ಲಿ ಬಲಪಕ್ಷದ ಪ್ರಾಬಲ್ಯ**

ಮಹಾಕೋಸಲದಿಂದ ರಾಮಗಢ ಕಾಂಗ್ರೆಸಿಗೆ ಪ್ರತಿನಿಧಿಗಳಾಗಿರುವ ಒಟ್ಟು ೧೪೫ ಪ್ರತಿನಿಧಿಗಳಲ್ಲಿ ೧೪೩ ಮಂದಿ ಬಲಪಕ್ಷದ ಕಾಂಗ್ರೆಸು ಧುರೀಣರು ಆರಿಸಿ ಬಂದಿರುವರು.

**ನೋಟುಗಳ ಹೂಮಾಲೆ ಹಾಕಿದರು**

**ಕಾಂಗ್ರೆಸು ಅಧಿವೇಶನಕ್ಕೆ ಸಹಾಯ**

ಮಾಜಿ ಮಂತ್ರಿಗಳಾದ ಶ್ರೀ. ಅನುಗ್ರಹ ನಾರಾಯಣ ಸಿಂಹರು ರಾಮಗಢ ಕಾಂಗ್ರೆಸು ಅಧಿವೇಶನದ ವೆಚ್ಚಕ್ಕೆ ನಿಧಿ ಸಂಗ್ರಹಿಸಲು ಹೊರಟವರಿಗೆ, ಪಾಟ್ನಾದ ಸರಣ ಜಿಲ್ಲೆಯ ಸಿವಾನ್ ಎಂಬ ಊರಿನವರು ಐದು ರೂಪಾಯಿಗಳಿಂದ ನೂರು ರೂಪಾಯಿಗಳ ವರೆಗೆ ಸೇರಿಸಿ ಮಾಡಿದ ನೋಟುಗಳ ಹೂಮಾಲೆಯೊಂದನ್ನು ಸಮರ್ಪಿಸಿದರು.

**ಬಂಗಾಳ ಕಾಂಗ್ರೆಸಿನ ವಿಚಾರ**

ಬಂಗಾಳ ಕಾಂಗ್ರೆಸಿನ ವಿಚಾರವಾಗಿ ಶ್ರೀ ಶರತ ಬೋಸರ ಹೇಳಿಕೆಯನ್ನು ಕೇಳಿದ ಮೇಲೆಯೂ ವರ್ಕಿಂಗ್ ಕಮಿಟಿಯು ಹಿಂದೆ ಮಾಡಿದ ನಿರ್ಣಯವನ್ನು ಬದಲಾಯಿಸುವ ಅಗತ್ಯವಿಲ್ಲವಾಗಿ ಪ್ರಕಟಿಸಿದೆ.

**ಗಡಿನಾಡಿನ ಗವರ್ನರರು ವೈಸರಾಯರ ಭೇಟಿಯಾಗುವರು**

ಗಡಿನಾಡಿನ ಗೊಂದಲದ ಕುರಿತು ಅಲ್ಲಿನ ಗವರ್ನರರು ವೈಸರಾಯರ ಭೇಟಿಯಾಗಲಿರುವರೆಂದು ತಿಳಿದಿದೆ.

**ಲಂಡನಿನಲ್ಲಿ ಸ್ವಾತಂತ್ರ್ಯ ದಿನ**

**ಹಲವರು ಪ್ರತಿಜ್ಞೆ ತೆಕ್ಕೊಂಡರು**

ಭಾರತ ಸ್ವಾತಂತ್ರ್ಯ ದಿನಾಚರಣೆಯು ಇಂಗ್ಲೆಂಡಿನಲ್ಲಿ ಹಲವು ಕಡೆಗಳಲ್ಲಿ ಬಹಳ ವೈಭವದಿಂದ ಜರಗಿತು.

ಮಿ. ಫ್ಲೇಮಿದತ್ತ, ಕ್ಲೆಮೆನ್ಸ್ ದತ್ತ, ಡಾ. ವಕೀಲ್, ಎಸ್. ಸಿ. ಮೆಥಿಳ್, ರೊನಾಲ್ಡ್ ಕಿಡ್ಡ್, ಪಿ. ಬಿ. ಸೀಲ್, ರೆಜಿನಾಲ್ಡ್ ಬ್ರಿಜ್‌ಮೇನ್, ಕೆ. ಟಿ. ಕುಮಾರಿಯಾ, ಇವರು ಲಂಡನಿನ ಸಭೆಯಲ್ಲಿ ಭಾಷಣಮಾಡಿದರು.

ಮಿ| ವಿರ್ನನ್ ಬಾರ್ಟಲೆಟ್, ಪ್ರೊ| ಲಾಸ್ಕಿ, ಮಿ| ಪ್ರಿಟ್, ಮಿಸ್ ಎಲೆನ್ ವಿಲ್ಕಿನ್‌ಸನ್, ಪ್ರೊ| ಹಾಲ್ಡೇನ್, ಡೀನ್ ಒಫ್ ಕೇಂಟ್ರಬರಿ, ಮಿ| ಲಾನ್ಸ್‌ಬರಿ ಇವರು ಸಂದೇಶಗಳನ್ನು ಕಳುಹಿಸಿದ್ದರು.

**ಕಾಂಗ್ರೆಸು ಅಧಿವೇಶನಕ್ಕೆ ಧನಸಹಾಯ ಬೇಕು**

ರಾಮಗಢದಲ್ಲಿ ಈ ವರ್ಷದ ಕಾಂಗ್ರೆಸು ಅಧಿವೇಶನವು ಜರಗುವ ಸಿದ್ಧತೆಗಳು ನಡೆಯುತ್ತಿವೆಯಷ್ಟೆ! ಈ ರಾಷ್ಟ್ರೀಯ ಉತ್ಸವವನ್ನು ಯಶಸ್ವಿಯಾಗಿ ಮಾಡುತ್ತಿರುವಲ್ಲಿ ಸ್ವಾಗತ ಕಮಿಟಿಯವರು ಹಣದ ದುಸ್ಥಿತಿಯನ್ನು ಎದುರಿಸಬೇಕಾಗಿರುವುದರಿಂದ ಹಣ ಸಹಾಯಕ್ಕಾಗಿ ವಿನಂತಿ ಹೊರಡಿಸಿರುವರು. ಕಾಂಗ್ರೆಸು ಅಧಿವೇಶನವನ್ನು ಅಭೂತಪೂರ್ವ ಯಶಸ್ವಿಯಾಗಿ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ

**ಸ್ವಾತಂತ್ರ್ಯ ದಿನಾಚರಣೆ**

ಸ್ವಾತಂತ್ರ್ಯ ದಿನಾಚರಣೆಯಂದು ಅಹಮ್ಮದಾಬಾದಿನಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರೂ, ಲಕ್ನೋದಲ್ಲಿ ನೆಹರೂರವರೂ, ಬೊಂಬಯಿಯಲ್ಲಿ ಶ್ರೀಗಳಾದ ಬಿ.ಜಿ.ಖೇರ್, ಭುಲಾಭಾಯಿ ದೇಸಾಯಿಯವರೂ, ಮದ್ರಾಸಿನಲ್ಲಿ ಶ್ರೀ.ಗಳಾದ ಸಿ. ರಾಜಗೋಪಾಲಾಚಾರ್, ಸತ್ಯಮೂರ್ತಿಗಳವರೂ ರಾಷ್ಟ್ರೀಯ ಧ್ವಜವನ್ನು ಆರೋಹಿಸುವ ವಂದಿಸುವ ಉತ್ಸವ ನಡೆಸಿ, ಭಾಷಣಕೊಟ್ಟರು

ಬೊಂಬಾಯಿಯಲ್ಲಿ ಮುಸ್ಲಿಮರೂ ಸ್ವತಂತ್ರ ದಿನಾಚರಣೆಯಲ್ಲಿ ಭಾಗವಹಿಸಿದರು. ಅಂದು ಬೊಂಬಾಯಿಯ ಕೆಲವು ವಿದ್ಯಾ ಸಂಸ್ಥೆಗಳೂ, ೬೨ ಬಟ್ಟೆ ಮಿಲ್ಲುಗಳಲ್ಲಿ ೫೧ ಕಾರ್ಖಾನೆಗಳೂ ಮುಚ್ಚಲ್ಪಟ್ಟಿದ್ದುವು.

ಕಲ್ಕತ್ತೆಯಲ್ಲಿ ೮ ದೊಡ್ಡ ಮೀಟಿಂಗುಗಳು ಸ್ವತಂತ್ರ ದಿನಾಚರಣೆಯಂದು ನಡೆದುವು. ಮೌಲಾನಾ ಅಬುಲ್ ಕಲಂ ಅಜಾದರು ಒಂದು ಕಡೆ ಭಾಗವಹಿಸಿದ್ದರು. ಕರಾಚಿಯಲ್ಲಿ, ಪ್ರಧಾನ ಖಾನ್ ಬಹದೂರ್ ಅಲ್ಲಾ ಬಕ್ಷರವರೂ ಧ್ವಜ ವಂದನೆಯ ಕಾಲದಲ್ಲಿ ಹಾಜರಿದ್ದರು.

**ಗಡಿನಾಡಿನಲ್ಲಿ ಪುಂಡರು**

ಬಾನು ಜಿಲ್ಲೆಯ ಹಳ್ಳಿಗಳ ಪ್ರದೇಶದಲ್ಲಿ "ಕರ್ಫ್ಯೂ ಆರ್ಡರು" ಜಾರಿಗೆ ಬಂದಿದೆ. ಅಲ್ಲಿ ನೌರಂಗಸರ್ರಾ ಬಜಾರಿನಲ್ಲಿ ಡಕಾಯಿತರಿಗೂ ನಿವಾಸಿಗಳಿಗೂ ಕಾದಾಟವಾಗಿ, ೫ ಮಂದಿ ಕೊಲ್ಲಲ್ಪಟ್ಟಿದ್ದಾರೆ ಒಬ್ಬನಿಗೆ ಗಾಯಗಳಾಗಿವೆ. ಅದಲ್ಲದೆ ಹಲವು ಡಕಾಯಿತರು ಕೆಲವು ಅಂಗಡಿಗಳನ್ನೂ ಲೂಟಿಮಾಡಿಕೊಂಡು ಹೋಗಿದ್ದಾರೆ. ಇನ್ನು ಈ ಪುಂಡರ ಹಾವಳಿಯಿಂದ ತಪ್ಪಿಸಿಕೊಳ್ಳಲು ಅಲ್ಲಲ್ಲಿ ಕಾವಲಿನ ಗೋಪುರಗಳನ್ನು ಸರಕಾರವು ಕಟ್ಟಿಸಬೇಕೆಂಬ ಸೂಚನೆಗಳು ಬಂದಿವೆ

**ಬಂಧನ**

ಕಟಕಿನಲ್ಲಿ ಶ್ರೀ ಪ್ರನ್ನಾಥ ಪಾಟ್ನೇಕ್ ಎಂ. ಎಲ್. ಎ, ಹಾಗೂ ಮತ್ತ ಮೂವರು ಇಂಡಿಯಾ ಡಿಫೆನ್ಸ್ ಆಕ್ಟಿಗೆ ವಿರುದ್ಧವಾಗಿ ಕೆಲವು ಭಾಷಣಗಳನ್ನು ಕೊಟ್ಟರೆಂದು ನಾನಾ ರೀತಿಯ ದಂಡನೆಗೆ ಗುರಿಯಾಗಿರುವರು. ಇವರಲ್ಲಿ ಪಾಟ್ನೇಕರಿಗೆ ಒಟ್ಟಿಗೆ ೧೮ ತಿಂಗಳ ಕಠಿಣ ದಂಡನೆ.

ಕಲ್ಕತ್ತೆಯಲ್ಲಿ ಹೌರಾ, ಗರುಲಿಯಾಗಳಲ್ಲಿ ಯುದ್ಧಕ್ಕೆ ವಿರುದ್ಧವಾದ ಕರಪತ್ರ, ಪುಸ್ತಕವಹಿ ಇತ್ಯಾದಿಗಳನ್ನು ಪ್ರಕಟಿಸಿ ಹಂಚಿದವರೆಂದು ಒಟ್ಟಿಗೆ ಇದುವರೆಗೆ ೨೫ ಮಂದಿಯು ಕೈದಾಗಿರುವುದಲ್ಲದೆ ಲಾಹೋರಿನ 'ನ್ಯೂ ಏಜ್' ಎಂಬ ಪತ್ರಿಕೆಯನ್ನು ಅಚ್ಚುಹಾಕಿ ಪ್ರಕಟಿಸಬಾರದೆಂದು ಸರಕಾರವು ಆಜ್ಞೆ ಮಾಡಿದೆ.

**ರಾಜಿನಾಮೆ**

ಸಿಂಧ ಮಂತ್ರಿಮಂಡಲದ ಹಿಂದೂ ಮಂತ್ರಿಗಳಾದ ಶ್ರೀ ನಿಕಲ್‌ದಾಸ್ ವಜೀರಾಣಿ ಮತ್ತು ಶ್ರೀ. ದಯಾಲ್ ಮಲ್ ದೌಲತ್‌ರಾಂರವರೂ, ಪಾರ್ಲಿಮೆಂಟರಿ ಸೆಕ್ರೆಟರಿ ರಾವ್‌ಸಾಹೇಬ್ ಗೋಕುಲದಾಸರವರೂ ತಮ್ಮ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಖಾಲಿಬಿದ್ದ ಈ ಸ್ಥಾನಗಳಿಗೆ ಯಾರನ್ನೂ ಸದ್ಯ ಆರಿಸುವುದಿಲ್ಲವೆಂದು ಅಲ್ಲಿನ ಪ್ರಧಾನ ಖಾನ್ ಬಹದೂರ್ ಅಲ್ಲಾ ಬಕ್ಷರವರು ತಿಳಿಸಿರುತ್ತಾರೆ. ಅವರು ಮುಂದಿನ ವಿದ್ಯಮಾನಗಳನ್ನು ನೋಡಿಕೊಳ್ಳುವರಂತೆ.

**ವೀರವಲ್ಲರ ನಿಧನ.**

ದರ್ಬಾರ್ ವೀರ್‌ವಲ್ಲಾ, ರಾಜಕೋಟೆಯ ದಿವಾನ್ ಇವರು ಕಾಥ್ಯಾವಾಡಿನ ಸ್ವಗ್ರಾಮದಲ್ಲಿ ಬಾಗಸರದಲ್ಲಿ ಮೃತರಾದರು.

**ಫಿನ್‌ಲೆಂಡಿಗೆ ಗೋಣಿ**

ಇಂಡಿಯದ ನಾರಿನ ಕಾರ್ಖಾನೆಗಳವರು ಫಿನ್‌ಲ್ಯಾಂಡಿನ ಸರಕಾರಕ್ಕೆ ಉಚಿತವಾಗಿ ಕೊಡಲೊಪ್ಪಿರುವರು.

## ಹೊಸ ವಾರ್ತೆ

ಬ್ರಿಟನಿನ ಪೂರ್ವಕರಾವಳಿಯಲ್ಲಿ ತಿರಿಗಿ ಜರ್ಮನರು ವಿಮಾನ ದಾಳಿ ನಡೆಸಿರುವರು. ಬ್ರಿಟಿಷ್ ವಿಮಾನಗಳು ಅವುಗಳನ್ನು ತಡೆದಿವೆ.

ರಶ್ಯಾ ಪಿನ್‌ಲೆಂಡ್ ಯುದ್ಧದಲ್ಲಿ ರಶ್ಯನರನ್ನು ಪಿನ್ನರು ಹಿಂದಕ್ಕಟ್ಟಿರುವರು.

ತಟಸ್ಥ ರಾಷ್ಟ್ರಗಳ ಹಲವು ಹಡಗುಗಳು ಜಲ ಸಮಾಧಿ ಹೊಂದಿವೆ.

ಗಾಂಧೀ ವೈಸರಾಯರ ಭೇಟಿಯು ಬರುವ ಸೋಮವಾರ ಆಗುವುದೆಂದು ತಿಳಿದಿದೆ.


ಗ್ಯಾರಂಟಿ ಬಹುಮಾನ | 40,000 | ನಂಬ್ರ 11

**ರೂಪಾಯಿಗಳ ಬಹುಮಾನ!**

**ಸರಿಯಾದ ಉತ್ತರ ಕಳುಹಿಸಿದ 20 ಮಂದಿಯೊಳಗೆ ಹಂಚಲಾಗುವುದು.**

ಉದ್ದದ ಮೊದಲಿನ ಸಾಲಿನ ಎರಡು ಸಂಖ್ಯೆಗಳು ನಮ್ಮ ಉತ್ತರದ ಸಂಖ್ಯೆಗಳಿಗೆ ಸರಿಹೋದರೆ 5 ರೂಪಾಯಿ ಬಹುಮಾನ ಕೊಡಲಾಗುವುದು



20 ರೂಪಾಯಿಗಳ ಕೊನ್ಸೊಲೇಶನ್ ಬಹುಮಾನಗಳನ್ನು ನಮ್ಮ ಸರಿಯಾದ ಉತ್ತರದ ಒಂದು ಸಾಲಿಗೆ ಸರಿಯಾಗಿ ಹೋಲುವ ಸಾಲಿನ ಉತ್ತರಗಳನ್ನು ಕಳಿಸಿದವರಿಗೆ ಕೊಡಲಾಗುವುದು. ನಮ್ಮ ಉತ್ತರದ ಎರಡು ನೀಟ ಉತ್ತರಗಳಿಗೆ ಹೋಲುವ ಸರಿಯಾದ ಉತ್ತರ ಕಳಿಸಿದವರಿಗೆ ರೂ. 100ರ ಬಹುಮಾನವು ಗ್ಯಾರಂಟಿಯಾಗಿ ಕೊಡಲಾಗುವುದು. ಹೆಚ್ಚಾಗಿ ಉತ್ತರಕಳಿಸಿದವರಿಗೆ ರೂ. 150 ರಿಸರ್ವಾಗಿಕೊಡಲಾಗುವದು. ಯಾವುದಾದರೂ ಒಂದು ಸಾಲನ್ನು ನೀಟವಾಗಿಯೂ, ಅಡ್ಡವಾಗಿಯೂ, ಮೂಲೆಯಿಂದ ಮೂಲೆಗೆ ಕೂಡಿಸಿದರೂ 46 ಬರುವಂತೆ 4ರಿಂದ 19ರ ತನಕ ಅಂಕೆಯನ್ನು ಬರೆಯಿರಿ. ಒಂದು ಬಾರಿ ಉಪಯೋಗಿಸಿದ ಅಂಕೆಗಳನ್ನು ಪುನರಪಿ ಉಪಯೋಗಿಸಬಾರದು. ಉತ್ತರಗಳನ್ನು ಕಳುಹಿಸುವ ಕಡೇ ತಾರೀಕು 12-2-'40. ಫಲಿತಾಂಶ 20-2-'40.

ಪ್ರವೇಶ ಹಾಸಲು ಒಂದು ಉತ್ತರಕ್ಕೆ ರೂ. 1, 2 ರೂಪಾಯಿಗಳಿಗೆ 3 ಉತ್ತರ, 5 ಉತ್ತರಗಳಿಗೆ ರೂಪಾಯಿ 8.

ರೂಲ್ಸ್:—ಖಾಲಿ ಕಾಗದದಲ್ಲಿ ಮೇಲೆ ಕಾಣಿಸಿದ ಪ್ರವೇಶ ಹಾಸಲಿನೊಂದಿಗೆ ಎಷ್ಟು ಉತ್ತರಗಳನ್ನು ಬೇಕಾದರೂ ಕಳುಹಿಸಬಹುದು. ಪ್ರವೇಶ ಹಾಸಲನ್ನು ಮನಿಆರ್ಡರು ಯಾ ಪೋಸ್ಟಲ್ ಆರ್ಡರಿನ ಮುಖಾಂತರ ಕಳುಹಿಸಬಹುದು ವಸೂಲಾದ ಹಣದಮೇರೆಗೆ ಬಹುಮಾನ ವಿತರಣವಾಗುವುದು. ಆದರೆ ಪ್ರಮುಖ ಬೇಂಕೊಂದರಲ್ಲಿ ತೇವಣಾತಿ ಇಟ್ಟ ಉತ್ತರಕ್ಕೆ ಸರಿ ಹೋಲುವ ಉತ್ತರವನ್ನು ಕಳುಹಿಸಿದವರಿಗೆ ರೂ. 2500 ಗ್ಯಾರಂಟಿಯಾಗಿ ಕೊಡಲಾಗುವುದು. ನಿಮ್ಮ ಎಡ್ರೆಸು ಬರೆದ ಅಂಚೆಕವರನ್ನು ಉತ್ತರಗಳಿಗೆ ಬರೆಯಿರಿ. ಎಲ್ಲಾ ವಿಷಯಗಳಲ್ಲಿಯೂ ಮನೇಜರರ ನಿರ್ಣಯವೇ ಅಂತ್ಯದ್ದೂ ಕಾನೂನುಬದ್ಧವೂ ಆಗಿರುತ್ತದೆ.

ಕಳೆದಬಾರಿಯ 50ರ ಉತ್ತರ:-

1ನೆ ಸಾಲು 17, 14, 8, 11,
2ನೆ ,, 12, 7, 13, 18,
3ನೆ ,, 5, 10, 20, 15,
4ನೆ ,, 16, 19, 9, 6,

ಹಣ ಮತ್ತು ಉತ್ತರ ಕಳುಹಿಸುವ ವಿಳಾಸ.

THE MANAGER,
PRESIDENCY COMMERCIAL SYNDICATE
Mumbadevi, BOMBAY, 2.

# ವಿಚಿತ್ರ ಪ್ರಪಂಚ!

ಹತ್ತು ವರ್ಷ ಪ್ರಾಯದ ಒಬ್ಬ ಬಾಲ ಸನ್ಯಾಸಿಯು, ವೇದಾಂತ, ಉಪನಿಷತ್ತು, ಮೊದಲಾದ ಅದ್ಭುತ ತತ್ವಗಳ ಕುರಿತು ಅಖಂಡವಾಗಿ ಮಾತನಾಡುತ್ತಿರುವ ವಿಷಯದಲ್ಲಿ ಸುತ್ತಮುತ್ತಲಿನ ಜನರು ಇಂದು ಬಹಳ ಆಶ್ಚರ್ಯಗೊಂಡಿದ್ದಾರೆ. ಸಾವಿರಾರು ಮಂದಿ ಸೇರಿದ ಸಭೆಯಲ್ಲಿ, ಆತನು ನಿರರ್ಗಳವಾಗಿ ದೇವರ ಕುರಿತು, ಅಧ್ಯಾತ್ಮ ವಿಚಾರಗಳನ್ನೆತ್ತಿ ಉಜ್ವಲ ಬೋಧನೆಗಳು ವೇದೋಪನಿಷತ್ತುಗಳ ಆಧಾರದಿಂದ ಕೊಡುತ್ತಿರುವನು. ಆತನು, ಸಂಸಾರಿಕ ಜೀವನವು ನಿಸ್ಸಾರವೆಂದು ತಿಳಿದು, ಈಗಾಗಲೇ ಸನ್ಯಾಸಿ ಜೀವನವನ್ನು ಆರಂಭಿಸಿರುವನು ತಮಿಳು ಸನ್ಯಾಸಿಗಳಾದ ಅರುಣ ಗಿರಿ, ನೀಲ ಕಂಠರ್, ರಾಮ ಲಿಂಗ ಸ್ವಾಮಿ ಮೊದಲಾದವರು ಸಾರಿದ ಉದಾತ್ತ ತತ್ವಗಳನ್ನು ಸ್ವಚ್ಛವಾದ ಲಲಿತವಾದ ಸಾಹಿತ್ಯ ಸುಂದರವಾದ ಶೈಲಿಯಲ್ಲಿ ಆತನು ಭಜಕ ವೃಂದಕ್ಕೆ ವಿವರಿಸುತ್ತಿರುವನು ಕೇಳಿದವರ ಕಣ್ಣುಗಳಲ್ಲಿ ಆನಂದಾಶ್ರುಗಳು ಉಕ್ಕಿಬರುವಂತೆ ಆತನು ವ್ಯಾಖ್ಯಾನಿಸುತ್ತಿದ್ದಾನೆ

## ದೇವರು ಕೊಟ್ಟ ಮಗು

ವಿಲ್ಲುಪುರಂ ಎಂಬಲ್ಲಿ ಒಂದು ರೈಲ್ವೇ ಕೆಲಸಗಾರ ದಂಪತಿಗಳಿರುವರು. ಒಂದು ದಿನ ರಾತ್ರಿ ಕನಸಿನಲ್ಲಿ ಅವರಿಗೆ ಆಂಜನೇಯನ ದರ್ಶನವಾಯಿತಂತೆ! ದರ್ಶನದಲ್ಲಿ ತಾನು ಅವರ ಹೊಟ್ಟೆಯಲ್ಲಿ ಅಂತಹ ದಿನದಲ್ಲಿಯೇ ಹುಟ್ಟಿ ಬರುವುದಾಗಿ ಹೇಳಿದನಂತೆ ಅದರ ಮೇಲೆ ಒಬ್ಬ ಮುಸ್ಲಿಂ ಫಕೀರನು ಆ ಮನೆಯನ್ನು ಬಿಟ್ಟು ಬೇರೆ ಮನೆಗೆ ಹೋಗಬೇಕು ಅವರಿಗೆ ಹೇಳಿದನಂತೆ. ಅದರೆ ಯಾವ ದಿನ ಕನಸಿನಲ್ಲಿ ಮಗುವಾಗಿ ಆಂಜನೇಯನು ಹುಟ್ಟಿ ಬರುವುದಾಗಿ ಹೇಳಿದ್ದನೋ ಅದೇ ದಿನ ಅವರಿಗೆ ಈ ಹುಡುಗನು ಹುಟ್ಟಿದನೆಂದು ತಿಳಿಯುತ್ತದೆ!

## ಅದ್ಭುತಗಳು!

ಎರಡನೆಯ ವರ್ಷ ಪ್ರಾಯದಲ್ಲಿಯೇ ವೇದಾಂತ ಕುರಿತು ಆ ಮಗುವು ಮಾತನಾಡಲು ಸುರುಮಾಡಿತಂತೆ ಓದಲು ಬರೆಯಲು ಆರಂಭಿಸಿದ ಮೇಲೆ ವೇದಾಂತ ವಿಷಯಕ ಗ್ರಂಥಗಳನ್ನೇ ಹಿಡಿದು ಓದಲು ಸುರುಮಾಡಿದ್ದನಂತೆ ನಾಲ್ಕನೇ ವರ್ಷ ಪ್ರಾಯದಲ್ಲಿಯೇ ಆತನು ಸಾರ್ವಜನಿಕರ ಮುಂದೆ ಬೋಧನೆಗಳನ್ನು ಹೇಳಲು ಆರಂಭಿಸಿದನಂತೆ ಐದನೆಯ ವರ್ಷ ಪ್ರಾಯದಲ್ಲಿ ಪ್ರಾರ್ಥನೆಮಾಡಲು ಆರಂಭಿಸಿದನಂತೆ. ಯಾವಾಗಲೂ ಆ ಹುಡುಗನು ಹನುಮಂತನ ಕುರಿತೇ ಭಜನೆ ಮಾಡುತ್ತಿರುವುದಾಗಿ ಇಂದು ತಿಳಿದಿದೆ

## ತಿರುವಣ್ಣಾಮಲೆಗೆ

ಏಳನೇ ವರ್ಷದಲ್ಲಿಯೇ, ತಿರುವಣ್ಣಾಮಲೆಗೆ ಹೋಗಿ, ಅಲ್ಲಿ ಶ್ರೀರಮಣ ಮಹರ್ಷಿಗಳ ಮುಂದೆ ನಿಂತನು. ಬಾಲ ಸನ್ಯಾಸಿಯ ಭೇಟಿಯು ಆಶ್ಚರ್ಯಕರವಾಗಿತ್ತು. ಆ ಇಬ್ಬರೂ ಅನ್ಯೋನ್ಯ ಎವೆಯಿಕ್ಕದೆ ಒಂದು ತಾಸಿನ ತನಕ ನೋಡಿದರು. ಇಬ್ಬರ ಕಣ್ಣಿನಿಂದಲೂ ಅಶ್ರು ಬಿಂದುಗಳು ಉದುರಿದುವು ಅಲ್ಲಿಂದ ಬಾಲಕನು ಮಾತನಾಡದೆ ಹಿಂದೆ ಬಂದನು ಕೇಳಿದಾಗ ತಾನಿನ್ನೂ ಆತ್ಮಸಾಕ್ಷಾತ್ಕಾರ ಮಾಡಿಲ್ಲವೆಂದೂ, ಬೇಗನೇ ಅದನ್ನು ತಾನು ಮಾಡುವುದಾಗಿಯೂ ಹೇಳಿದನು.

ಆತನ ಹೆಸರು ರಾಮದಾಸನೆಂದಾಗಿದೆ ಹೀಗೆ, ಇಂದು ಈ ಬಾಲಸನ್ಯಾಸಿಯ ಜೀವನದ ವಿಷಯವು ವಿಚಿತ್ರವಾಗಿದೆ

## ಪಿಶಾಚಿಯ ಮಾಟವೆ?

**ಎಲ್ಲೂರಿನಲ್ಲಿ ಇನ್ನೊಂದು ವಿಚಿತ್ರ**

ಎಲ್ಲೂರು ಮುನಿಸಿಪಾಲಿಟಿಯ ಮ್ಯಾನೇಜರ್ ಶ್ರೀ ಶೇಷಯ್ಯನ ಮನೆಯಲ್ಲಿ ಕೆಲವು ತಿಂಗಳಿಂದ ಅದ್ಭುತ ವ್ಯಾಪಾರಗಳು ನಡೆಯುತ್ತಿವೆ ಮೊದಲಿನ ಮನೆ ಬಿಟ್ಟು ಬೇರೆ ಮನೆಗೆ ಚಲಿಸಿದರೂ ಇದು ತಪ್ಪಿಲ್ಲ ಹಾಸಿಗೆ ಮತ್ತು ಬಟ್ಟೆಗಳಿಗೆ ತನ್ನಂತೆ ಬೆಂಕಿ ಹಿಡಿಯುವುದು, ಕಬಾಟಿನಲ್ಲಿ ಬೀಗ ಹಾಕಿಟ್ಟ ಪದಾರ್ಥಗಳನ್ನು ಅಲ್ಲಿಂದ ಹೇಗೋ ಎತ್ತಿ ಅವನ್ನು ಸಿಕ್ಕಲ್ಲಿ ಹರಡುವುದು, ಹಿತ್ತಾಳೆ ಪಾತ್ರಗಳು ಕಬ್ಬಿಣದ ಕುಟ್ಟುವ ಸಾಧನಗಳು ಯಾರಿಗೂ ಗೊತ್ತಿಲ್ಲದ ಹಾಗೆ ಅಕಸ್ಮಾತ್ತಾಗಿ [illegible] ಬಂದು ಬೀಳುವುದು ಇವೆಲ್ಲಾ ವಿಚಿತ್ರ ವ್ಯಾಪಾರಗಳು ನಡೆಯುತ್ತಿವೆ [illegible] ಪೊಲೀಸ್ ಆಫೀಸರರೂ ವಿಚಾರಿಸಿದರೆ [illegible] ಯಾರೆಂದು ಹೇಗೆಂದು ಪತ್ತೆ ಹಚ್ಚಲಾಗಲಿಲ್ಲ ಇವನ್ನು ನೋಡಿದ ಇತರ ಗೃಹಸ್ಥರೂ ಆಶ್ಚರ್ಯಭರಿತರಾಗಿದ್ದಾರೆ ಇದರಲ್ಲ ಶೇಷಯ್ಯನ ೬೦ ವರ್ಷದ ತಾಯಿಯ ಮೇಲೇ ಕಣ್ಣು ಬಹಳ ಆಕೆಗೇ ಹಿಂಸೆ ಹೆಚ್ಚು ಆಕೆಯನ್ನು ದೂಡುವುದು ಆಕೆಯ ಮೈಮೇಲೆ ಕಲ್ಲು ಪಾತ್ರಗಳನ್ನು ಬಿಸಾಡುವುದಾದರೂ, ಆಕೆಗಾಗಲೀ ಇತರರಿಗಾಗಲೀ ಯಾವ ಪೆಟ್ಟೂ ಇಲ್ಲ ಈಗ ಒಬ್ಬ ಮಾಂತ್ರಿಕನು ಈ ಪೀಡೆಯ ನಿವಾರಣೆಗಾಗಿ ಕೆಲಸ ಮಾಡುತ್ತಿದ್ದಾನೆ

## ನಿರುದ್ಯೋಗಕ್ಕೆ ಬಲಿ

ತಿರುಚಿನಾಪಳ್ಳಿಯಲ್ಲಿ ಕಚ್ಚೇರಿಯ ಶ್ರೀ ಜಿ ಶ್ರೀನಿವಾಸ ರಾವ್ ಎಂಬವರೂ ಅವರ ಹೆಂಡತಿಯೂ ೭ ಮತ್ತು ೪ ವರ್ಷದ ಎರಡು ಹೆಣ್ಣು ಮಕ್ಕಳೂ ಒಂದೇ ದಿನ ಮೃತರಾಗಿದ್ದುದು ತಿಳಿದು ಬಂದಾಗ, ವಿಚಾರಣೆ ನಡೆಸಿದಲ್ಲಿ ರಾಯರು ಇವರಿಗೆಲ್ಲ ವಿಷಕೊಟ್ಟು, ತಾವೂ ವಿಷ ಕುಡಿದು ಸತ್ತರೆಂದು ನಂಬಲಾಗಿದೆ. ಈ ಶೋಕಾವಹ ಘಟನೆಗೆ ಕಾರಣವು ರಾಯರಿಗೆ ಉದ್ಯೋಗವಿಲ್ಲದಿದ್ದುದೇ ಎಂದು ಅವರೇ ಬರೆದಿಟ್ಟ ಕಾಗದದಿಂದ ವ್ಯಕ್ತಪಟ್ಟಿದೆ

## ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
O. S. 88/'38 R E. P 723/'39
ಮತ್ತು
R E. A 1368/1939

ಐ. ಬಾಬು ಹೆಗ್ಡೆ—ವಾದಿ, ಅರ್ಜಿದಾರ
ಮತ್ತು
ಶಿವರಾಮ ಮೊಗೆರಾಯ ಕೂಡಾ—
ಪ್ರತಿವಾದಿರು, ಎದ್ರಿರು
ಇವರೊಳಗೆ

ಎದ್ರಿರು—
2 ರಾಘವ ಮೊಗೆರಾಯ ದಂಬೆಕೋಡಿ ನಾರಾಯಣ ಮೊಗೆರಾಯರ ಮಗ
3 ನಾರಾಯಣ ಮೊಗೆರಾಯ, ಸುಬ್ರಾಯ ಮೊಗೆರಾಯರ ಮಗ Residing in Udipi Ananda Bhavanam near Bus stand, Mysore City
4 ಕೃಷ್ಣಮೂರ್ತಿ ಮೈನರ ವೆಂಕಟಕೃಷ್ಣ ಮೊಗೆರಾಯರ ಮಗ ಗಾರ್ಡಿಯನ ತಾಯಿ ಪದ್ದಕ್ಕ ವೆಂಕಟಕೃಷ್ಣ ಮೊಗೆರಾಯರ ವಿಧವೆ ಕಾರ್ಕಳ ತಾಲೂಕು ಇರುವೈಲು ಗ್ರಾಮದ ದಂಬೆಕೋಡಿ ಎಂಬಲ್ಲಿರುವವರು,
ಇವರಿಗೆ

ಸದ್ರಿ ಅಮಲ್ದಾರಿಯಲ್ಲಿ ಜಪ್ತಾದ ಬಾಬ್ತು ಇರುವೈಲು ಗ್ರಾಮದ ಸ್ಥಿರಾಸ್ತಿಗಳನ್ನು ಏಲಮಿಗೆ ಅಪೇಕ್ಷಿಸಿ ಏಲಂ ಇಸ್ತಿಹಾರಿನ ಪ್ರಕಾರ ಏಲಂ ಸಮಯ ಬಿಡ್ ಮತ್ತು ಸೆಟ್ ಓಫ್ ಪರ್ಮಿಶನ ಕೇಳಿ ಬಿಡ್ ಅರ್ಜಿಯನ್ನೂ ಹಾಜರು ಪಡಿಸಿರುವುದರಿಂದ ಅವುಗಳ ಕುರಿತು ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ತಾರೀಕು 22—2—40ನೇ ದಿನ ಬೆಳಿಗೆ 10 ಘಂಟೆಗೆ ನೀವು ಸದ್ರಿ ಕೋರ್ಟ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಶಿಕಾಯಿ ಮಾಡಿ ಅಮಲ್ದಾರಿಯಲ್ಲಿ ಮುಂದರಿಸಲಾಗುವುದು ಎಂಬುದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ

ಕಾರ್ಕಳ [illegible] 1 40 } **P Ramachandra Rao**
Pleader for Petitioner

## ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ
[illegible] 21 1939

| | | |
|---|---|---|
| 1 ಕೆ ಕಮಲಾಕ್ಷ ಮಲ್ಯ ಎಡ್ವೊಕೇಟ್ 2 ಕೆ ವಾಸುದೇವ ಮಲ್ಯ 3 ಕೆ ರಾಮರಾಯ ಮಲ್ಯ 4 ಕೆ ವರದ ಮಲ್ಯ (ಮೈನರು) ಇವನ ಕ್ಷೇಮಚಿಂತಕ 1ನೇ ಅರ್ಜಿದಾರ | ಕಾಸರಗೋಡು ಕಸ್ಬೆಯಲ್ಲಿರುವ ಮೃತಪಟ್ಟ ಶ್ರೀನಿವಾಸ ಮಲ್ಯನ ಮಕ್ಕಳು | ಅರ್ಜಿದಾರರು |

ಮತ್ತು

| | | |
|---|---|---|
| ಚುಳ್ಳಿಕಾನ ಶಂಭಟ್ಟ, ಚುಳ್ಳಿಕಾನ ಪರಮೇಶ್ವರ ಭಟ್ಟನ ಮಗ | ಪೆರ್ಡಾಲ ಗ್ರಾಮದ ಕುಂಟಿಕಾನ ಎಂಬಲ್ಲಿರುವವ | ಪ್ರತಿವಾದಿ |

ಇವರೊಳಗೆ

ಅರ್ಜಿದಾರರ ತಂದೆ ಮೃತಪಟ್ಟ ಶ್ರೀನಿವಾಸ ಮಲ್ಯರು ರೆಸ್ಪಾಂಡಂಟನ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಕ್ರಮ ನಂಬ್ರ 9/36ನೇಗೆ ಪಡೆದ ಡಿಕ್ರಿ ಪ್ರಕಾರ ಬರಬೇಕಾದ ಐವಜನ್ನು ವಸೂಲ್ ಮಾಡುವರೆ ಪಕ್ಷಸನ್ ಸರ್ಟಿಫಿಕೇಟು ಅಪೇಕ್ಷಿಸಿ ದಾಖಲು ಮಾಡಿದ, ಮೇಲ್ಕಾಣಿಸಿದ ಅರ್ಜಿಯು ತಾ. 10—2—40ಕ್ಕೆ ಮೇಲ್ಕಂಡ ಕೋರ್ಟನಲ್ಲಿ ತನಿಖೆಗೆ ಇಟ್ಟಿರುತ್ತದೆ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ಹಗಲು 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಜಾಹೀರ ಮಾಡಿಕೊಳ್ಳತಕ್ಕದ್ದಾಗಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು 29-1-'40 } ಕೆ. ಆರ್ ಪುಂಡಿಲ್ಲಾಯ, ಎಮ್. ಎ ಬಿ. ಎಲ್. ಅರ್ಜಿದಾರರ ಕಡೆ ವಕೀಲ್,


## ಉದರ ವೇದನೆಗಾಗಿ ೧೪ ಸರ್ತಿ ಎಕ್ಸ್‌ರೇ ಚಿಕಿತ್ಸೆ ನಡೆಸಲಾಯಿತು

ಉದರ ವೇದನೆಯು ಸಂಕಟಕ್ಕಿಂತಲೂ ಅದು ಗುಣವಾಗುವ ಬಗೆ ಯಾವುದೆಂಬ ವ್ಯಥೆಯೇ ಮಿ ಜೆ ಇ ಎಲ್ ಫಾರರನ್ನು ಬಹಳವಾಗಿ ಬಾಧಿಸಿತ್ತು ಮಾತ್ರವಲ್ಲದೆ ಮುಂದೆ ಇದು ಯಾವ ರೀತಿಯಲ್ಲಿ ಪರಿಣಮಿಸಬಹುದೆಂದು ಚಿಂತಿಸಿದರು ಆದರೆ ಅದೃಷ್ಟವಶಾತ್ ಅವರು ಸುಲಭವಾದ ಚಿಕಿತ್ಸೆಯನ್ನು ನಡಿಸಿ ತನ್ನ ಸಂಕಟವನ್ನೇ ಹೊಡೆದೋಡಿಸಿದರು.

ಮಿಸ್ಟರ್ ಜೆ ಇ ಎಲ್ ಇವರು ಈ ರೀತಿಯಾಗಿ ಬರೆಯುತ್ತಾರೆ "ಹೊಟ್ಟೆಯ ನೋವಿನಿಂದಾಗಿ ನಾನು ಸುಮಾರು ಕಾಲದಿಂದ ಸಂಕಟಪಡುತ್ತಿದ್ದನು ಕಳೆದ ಸಪ್ಟಂಬರದಲ್ಲಿ ಅದು ಬಹಳ ಕಠಿಣಾವಸ್ಥೆಗೆ ಬಂದುದರಿಂದ ಎಕ್ಸ್‌ರೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆರಳಿದನು ಹತ್ತು ದಿವಸಗಳಲ್ಲಿ ೧೪ ಬಾರಿ ಎಕ್ಸ್‌ರೇ ತೆಗೆಯಲಾಯಿತು ಆದರೂ ಏನೂ ಫಲಕಾರಿಯಾಗಲಿಲ್ಲ" ನಂತರ ಆತನು ನಡೆಸಿದ ಚಿಕಿತ್ಸೆಯೇ ಆತನಿಗೆ ಸುಖವನ್ನು ತಂದಿತು ಅವರು ಮುಂದರಿಸುತ್ತಾ— "ನಾನು ಗುಣವಾಗುವ ಆಶೆಯನ್ನೇ ಬಿಟ್ಟಿದ್ದ ಕಡೆಗೆ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ಸೇವಿಸಲು ಆರಂಭಿಸಿದೆನು ಎರಡು ದಿನಗಳ ನಂತರ ಒಂದು ಡೋಸನ್ನು ತೆಗೆದ ಕೂಡಲೇ ನನ್ನ ಕೆಲಸಕ್ಕೆ ತೆರಳಿದೆ ಆ ದಿನದಿಂದ ಅದೇ ರೀತಿಯಲ್ಲಿ ಚಿಕಿತ್ಸೆ ನಡೆಸುತ್ತಿದ್ದೇನೆ ನನ್ನ ಮನೆಯಲ್ಲಾಗಲೀ ಜೇಬಿನಲ್ಲಾಗಲೀ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ತಪ್ಪಿಸುವುದಿಲ್ಲ"

ಈ ಉದಾಹರಣೆಯು [illegible] ಒಬ್ಬ ಉದರ ವೇದನೆಯಿಂದ ನರಳುವವನು ಅನುಸರಿಸಬೇಕಾದುದು ಆದರೆ ಮುಖ್ಯವಾದ ಸಂಗತಿ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ಮಾತ್ರ ಕೊಂಡುಕೊಳ್ಳಿರಿ

Alex. C. Maclean

ಈ ಔಷಧವು ದಸ್ಕತೂ ಬಾಟ್ಲಿಯ ಮೇಲೂ ದಸ್ಕತೂ ಕೆಂಪು ಸೀಲೂ ಪೆಟ್ಟಿಗೆಯ ಮೇಲೂ ಇದ್ದರೆ ಮಾತ್ರ ಅದ ಖಾತ್ರಿಯಾದುದು. ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ —ಪೆಟ್ಟಿಗೆಯಲ್ಲಿರುವ ಬಾಟ್ಲಿಗಳಲ್ಲಿ (ಮಾತ್ರೆಯಾ ಹುಡಿ) ಮಾರಲ್ಪಡುತ್ತದೆ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

K S 709



# ಹಿಟ್ಲರನ ಜರ್ಮನಿಯಲ್ಲಿಯೂ ಭಂಡವಾಳಗಾರರಿಗೆ ನೆಲೆಯಿಲ್ಲ!

## ಭವಿಷ್ಯವಾದಿಯ ಮೇಲೆ ಹಿಟ್ಲರನ ವಕ್ರದೃಷ್ಟಿ

### ಫಿನ್ಲೆಂಡ್ ಯುದ್ಧದಲ್ಲಿ ಜರ್ಮನಿಯು ತಾಟಸ್ಥ?

ಖರ್ಚಿಗೆ ಕಾಸಿಲ್ಲದೆ ಕಂಗೆಟ್ಟಿರುವ ಹಿಟ್ಲರನ ಕಣ್ಣು ತನ್ನನ್ನು ಅಧಿಕಾರ ಪದವಿಗೇರಿಸಿದವರ ಕಡೆಗೇ ತಿರುಗಲಾರಂಭಿಸಿದೆ. ಹೀಗಾದ್ದರಿಂದ ಮೊದಲು ಹಿಟ್ಲರನನ್ನು ಪ್ರೋತ್ಸಾಹಿಸುತಲಿದ್ದವರೇ ಈಗ ಅವನಿಂದ ಆದಷ್ಟು ದೂರ ದೂರ ಸರಿಯಲಾರಂಭಿಸಿದ್ದಾರೆ. ಜರ್ಮನಿಯಲ್ಲಿ ಬೊಲ್ಶೆವಿಜಮಿನ ತತ್ವ ಪ್ರಚಾರವನ್ನು ತಡೆಯುವ ಉದ್ದೇಶದಿಂದ ಹಿಟ್ಲರನಿಗೆ ಹೇರಳ ಹಣ ಸಹಾಯ ಮಾಡಿ ಅವನಿಗೆ ಸರ್ವಾಧಿಕಾರ ಪಟ್ಟವನ್ನು ಕಟ್ಟಿದ ಭಾಂಡವಾಳಿಗರು ಈಗ ಒಬ್ಬೊಬ್ಬರಾಗಿ ಜರ್ಮನಿಯಿಂದ ಪಲಾಯನ ಮಾಡಲಾರಂಭಿಸಿರುವರು. ಹರ್ ಥ್ಯಾಸೆನ ಎಂಬವನು ಪಲಾಯನ ಮಾಡಿ ಕೆಲವು ದಿನಗಳಾದವು. ಈಗ ಹರ್ ಹ್ಯೂಜೆನ್ ಬರ್ಗ ಎಂಬವನು ಅವನನ್ನು ಅನುಸರಿಸಿದ ವಾರ್ತೆ ಬಂದಿದೆ.

#### ಕ್ರುಪ್ಪನಿಗೆ ಭಯ

ಥ್ಯಾಸೆನ, ಕ್ರುಪ, ಮತ್ತು ಹ್ಯೂಜೆನಬರ್ಗ ಈ ಮೂವರು ಜರ್ಮನಿಯ ಬಹು ದೊಡ್ಡ ಕೈಗಾರಿಕೆಯವರಾಗಿರುವರು. ಮೊದಲನೆಯ ಮತ್ತು ಮೂರನೆಯವನು ಓಡಿ ಹೋಗಿರುವದರಿಂದ ಈಗ ಎರಡನೆಯವನಿಗೂ ಬಹಳ ಭಯವುಂಟಾಗಿದೆ. ಯುದ್ಧೋಪಕರಣಗಳನ್ನು ತಯಾರಿಸುವ ದೊಡ್ಡ ದೊಡ್ಡ ಕಾರ್ಖಾನೆಗಳ ಮೂಲಕ ಈ ಕ್ರುಪ್ಪನಾಗಿದ್ದಾನೆ. ಅವನ ಕೈಗಾರಿಕೆಯ ಉಜ್ವಲತೆಯು ಯುದ್ಧಗಳನ್ನು ಅವಲಂಬಿಸಿದೆ. ಇಂಥ ಯುದ್ಧಗಳು ಆಗಾಗ ನಡೆಯದಿದ್ದರೆ ಕ್ರುಪ್ಪನಿಗೆ ಲಾಭವಿಲ್ಲ. ಆದ್ದರಿಂದ ಈಗ ಉಂಟಾಗಿರುವ ಯೂರೋಪದ ಯುದ್ಧವು ಬಹುಕಾಲ ನಡೆಯಲಿ ಎಂದು ಅವನು ಹೇಳಬಹುದಾಗಿತ್ತು. ಅದರಿಂದ ಅವನ ಸ್ವಾರ್ಥವು ಸಿದ್ಧಿಸುತಿತ್ತು. ಆದರೆ ತನ್ನ ಕೆಲಸಗಾರರ ಒಂದು ಸಭೆಯಲ್ಲಿ ಭಾಷಣವನ್ನು ಕೊಡುತ್ತಾ ಕ್ರುಪ್ಪನು ಪ್ರಕೃತ ಯುದ್ಧದಲ್ಲಿ ಜರ್ಮನಿಯು ಯಶಸ್ವಿಯಾಗುವ ಕುರಿತು ತನ್ನ ಪ್ರಬಲ ಸಂದೇಹವನ್ನು ವ್ಯಕ್ತಮಾಡಿರುವನು. ಆದ್ದರಿಂದ ಅವನು ಕೂಡ ಜರ್ಮನಿಯಿಂದ ಪಲಾಯನ ಮಾಡಬೇಕಾದ ದಿನವು ಬಹಳ ದೂರವಿಲ್ಲವೆಂಬುವನ್ನು ತಿಳಿಯಬಹುದು.

#### ಭವಿಷ್ಯವಾದಿಯ ಬಂಧನ

ಹಿಟ್ಲರನ ಅಚ್ಚುಮೆಚ್ಚಿನ ಭವಿಷ್ಯವಾದಿಯಾಗಿದ್ದ ಡಾಕ್ಟರ ಹೂಬರ ಎಂಬವನು ಈಗ ಬಂಧನಕ್ಕೊಳಪಟ್ಟಿರುವನು. ಹಿಟ್ಲರನ ಇತ್ತೀಚಿನ ಕಾರ್ಯಗಳ ಪರಿಣಾಮದ ಕುರಿತು ಅವನಾಡಿದ ಭವಿಷ್ಯವು ಪೂರ್ಣ ಸುಳ್ಳಾಗಿ ಪರಿಣಮಿಸಿರುವದೇ ಅವನ ಬಂಧನದ ಕಾರಣವಾಗಿದೆ. ಬ್ರಿಟನು ಜರ್ಮನಿಯ ವಿರುದ್ಧ ಯುದ್ಧವನ್ನಾರಂಭಿಸುವದಿಲ್ಲವೆಂದು ಅವನಾಡಿದ್ದ. ಅದು ಸುಳ್ಳಾಯಿತು. ಬಾಲ್ಕನ ರಾಷ್ಟ್ರಗಳಲ್ಲಿ ಹಿಟ್ಲರನ ನೀತಿಯು ಸಫಲವಾಗುವುದೆಂದು ಅವನು ಹೇಳಿದ್ದ. ಅದೂ ಸುಳ್ಳಾಯಿತು. ಮತ್ತೆ ಈ ಭವಿಷ್ಯವಾದಿಯು ಹಿಂದೊಮ್ಮೆ ಮುವತ್ತು ವರ್ಷಗಳ ತನಕ ಯುದ್ಧಮಾಡಿದ ವಾಲನ್ ಸ್ಟೀನ ಎಂಬ ರಣಧೀರನೊಡನೆ ಹಿಟ್ಲರನನ್ನು ಹೋಲಿಸಿ ಅವನಂತೆಯೇ ಇವನಿರುವನೆಂದು ಹೇಳಿದ್ದಾನೆ. ವಾಲನ್ ಸ್ಟೀನನು ರಣಧೀರನೆಂಬುದು ನಿಜವಾದರೂ ಅವನು ತನ್ನ ಅನುಯಾಯಿಗಳಿಂದಲೇ ಕೊಲ್ಲಲ್ಪಟ್ಟನು. ಅವನಂತೆ ಹಿಟ್ಲರನಾದರೂ ತನ್ನ ಅನುಯಾಯಿಗಳಿಂದ ಕೊಲ್ಲಲ್ಪಟ್ಟರೆ . . .? ಭವಿಷ್ಯವಾದಿಯ ಮಾತಿನಲ್ಲಿ ಹುರುಳಿಲ್ಲವೆಂದು ಜನತೆಯನ್ನು ನಂಬಿಸುವದಕ್ಕೋಸ್ಕರವೇ ಹಿಟ್ಲರ ಅವನನ್ನು ಜರ್ಮನಿಯ ನರಕ ಕುಂಡವಾಗಿರುವ ಡಾಚೂ ಬಂಧನಾಗಾರಕ್ಕೆ ಕಳುಹಿಸಿದ್ದಾನೆ. ತಲೆಕೆಟ್ಟಿರುವದಕ್ಕೆ ಬೇರೆ ನಿದರ್ಶನ ಬೇಡ.

#### ಹಿಟ್ಲರನ ತಾಟಸ್ಥ್ಯ

ಕಂಗೆಟ್ಟ ಹಿಟ್ಲರನೀಗ ಕರ್ತವ್ಯ ಮೂಢನಾಗಿದ್ದಾನೆ. ಪೋಲೆಂಡಿನ ಮೇಲಿದ್ದಂತೆ ಫಿನ್ಲೆಂಡಿನ ಮೇಲೂ ಹಿಟ್ಲರನಿಗೆ ಕಣ್ಣಿದ್ದಿತು. ಅವನೂ ಫಿನ್ಲೆಂಡ ಪರತಂತ್ರವಾದರೆ ಚೆನ್ನಾಗುತ್ತಿತೆಂದು ಆಶಿಸಿದ್ದ. ಆದರೆ ರಸ್ಯವು ಫಿನ್ಲೆಂಡಿನ ಸ್ವಾತಂತ್ರ್ಯಾಪಹಾರಕ್ಕೆ ತೊಡಗಿರುವಾಗ ಅವನು ತನ್ನ ಉದ್ದೇಶ ಸಾಧನೆಗೆ ರಸ್ಯದ ಸಹಾಯಕ್ಕೆ ಹೋಗಲಾರದವನಾಗಿದ್ದಾನೆ. ಆದ್ದರಿಂದ ರಸ್ಯ ಫಿನ್ಲೆಂಡ ಯುದ್ಧದಲ್ಲಿ ತಾನು ತಟಸ್ಥನೆಂದು ಅವನು ಸಾರಿರುವನು. ಇದು ರಸ್ಯ ಜರ್ಮನಿ ಸ್ನೇಹವು ಯಾವ ರೀತಿ ಕೆಲಸ ಮಾಡುತ್ತಲಿದೆ ಎಂಬುದನ್ನು ಸ್ಪಷ್ಟಮಾಡುತ್ತದೆ. ಈ ಸರ್ವಾಧಿಕಾರಿಗಳಿಂಬವರು ತಮ್ಮ ತಮ್ಮ ಸ್ವಾರ್ಥ ಪೂರ್ತಿಗೆ ಒಬ್ಬರೊಬ್ಬರ ಸ್ನೇಹಿತರೇ ಹೊರತು ಬೇರೆನಿಲ್ಲ. ರಸ್ಯವು ಫಿನ್ಲೆಂಡನ್ನು ಗೆದ್ದರೆ ತನಗಿಂತ ಶ್ರೇಷ್ಠ ಸ್ಟಾಲೀನನಾಗುವನೆಂಬ ಒಂದು ಭಯ, ಮಿತ್ರಮಂಡಲಿಯೊಡನೆ ಯುದ್ಧದಲ್ಲಿ ತಾನು ತಟಸ್ಥನೆಂದು ಹೇಳಿರುವನು. ಇಲ್ಲಿಗೆ ಹಿಟ್ಲರ ಜರ್ಮನಿಯಲ್ಲಿ ಯಾವ ಸ್ಥಿತಿಯಲ್ಲಿದ್ದಾನೆಂಬುದು ತಿಳಿಯುತ್ತದೆ.

#### ರಷ್ಯಕ್ಕೆ ಜರ್ಮನಿಯ ಸಹಾಯವಿಲ್ಲವಂತೆ

ರಷ್ಯದವರು ಫಿನ್ನರನ್ನು 'ಜರ್ಮನರು ತಮ್ಮ ಸಹಾಯಕ್ಕೆ ಬರುವರೆಂದು ಪದೇ ಪದೇ ಬೆದರಿಸುತ್ತಿರುವುದಾದರೂ, ಜರ್ಮನಿ ರಷ್ಯಕ್ಕೆ ಯಾವ ರೀತಿಯ ಮಿಲಿಟರಿಯ ಸಹಾಯವನ್ನೂ ಕೊಡುವ ಹಾಗಿಲ್ಲವೆಂದು ಪ್ರಕಟವಾಗಿದೆ.


ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ. ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತಿದ್ದಾರೆ. ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತವಿಸುವುದು. ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ. ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು. ಉಷ್ಣದಿಂದ ಬೆಂದ್ದಂತ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ. ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು. ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಮೆಚ್ಚುತ್ತಿರುವರು.

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ. ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಎಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬೈ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಮಾಹಿಮ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪–೦–೦ ವಿ ಪಿ. –

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS.

For 2 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

*Apply for particulars—*

K. R. GURU, *Managing Director.*

ಜೀವನಜ್ಯೋತಿಗಳು:

## ಐಯರ್ಲೆಂಡಿನ ಸ್ವಾತಂತ್ರ್ಯವೀರ

# ಟೆರೆನ್ಸ್ ಮಾಕ್ಸ್ವಿನ್

**ಇಂದಿನ ಭಾರತದ ಉಜ್ವಲವಾದ ಸ್ವಾತಂತ್ರ್ಯದ ಹೋರಾಟದಂತೆ ಕಳೆದ ಶತಮಾನದಲ್ಲಿ ಐಯರ್ಲೆಂಡಿನಲ್ಲಿಯೂ ಪ್ರಚಂಡ ಆಂದೋಲನವೇ ನಡೆದಿತ್ತು. ಆಂಗ್ಲರ ದುಷ್ಪ್ರಭುತ್ವದಿಂದ, ಸಹಿಸಲಾರದ ಯಮಯಾತನೆಗೆ ಜನತೆಯು ಗುರಿಯಾಗಿರಲು, ಅಲ್ಲಿ ಸ್ವಾತಂತ್ರ್ಯದ ಕಹಳೆಯನ್ನೂದಿ ಜನಮತವನ್ನು ಕೆರಳಿಸಿ ಸ್ವಾತಂತ್ರ್ಯ ಧ್ವಜವನ್ನು ಮೆರೆಸುವ ಸಲುವಾಗಿ ಜೀವದಾನ ಮಾಡಿದ ವೀರ ವ್ಯಕ್ತಿಯೊಬ್ಬನ ಜೀವನ ಕತೆಯು ಇಂದು ಭಾರತೀಯರಿಗೂ ಆದರ್ಶಪ್ರಾಯವಾಗಿರುವುದು. ಆತನೇ ಐಯರ್ಲೆಂಡಿನ ಭಾಗ್ಯವಿಧಾತನಾದ ಸತ್ವಶಾಲಿ ಟೆರೆನ್ಸ್ ಮಾಕ್ಸ್ವಿನ್ ಎಂಬವನು.'**

### ತೊಟ್ಟಿಲಲ್ಲಿಯೇ ಬೆಳೆಯುವ ಗುಣ

ಮಾಕ್ಸ್ವಿನ್ ಮನೆತನವು ಐಯರ್ಲೆಂಡಿನ ಇತಿಹಾಸದಲ್ಲಿ ಪ್ರಸಿದ್ಧವಾದುದು. ಆ ಮನೆತನದವರೆಲ್ಲರೂ ವೀರಪುರುಷರು. ಒಮ್ಮೆ ಮ್ಯಾಕ್ಸ್ವಿನಿಯ ತಂದೆಯು ಮಕ್ಕಳೊಡನೆ ಮಾತನಾಡುತ್ತಾ, ಅಮೇರಿಕದ ಬಹುಧನಾಢ್ಯನಾದ ರಾಕ್‌ಪೆಲ್ಲರನ ವಿಷಯ ಬಂದಾಗ 'ಅವನಷ್ಟು ಹಣವಿದ್ದರೆ ನೀವು ಏನು ಮಾಡುವಿರಿ' ಯೆಂದು ಪ್ರಶ್ನಿಸಿದನು. ಅದಕ್ಕೆ ಮಿಕ್ಕ ಮೂವರು ಬೇರೆ ಬೇರೆ ರೀತಿಯ ಉತ್ತರ ಕೊಟ್ಟರು. ಆದರೆ ಮಾಕ್ಸ್ವಿನಿಯು 'ಅದನ್ನು ವೆಚ್ಚಮಾಡಿ ನನ್ನ ಮಾತೃಭೂಮಿಗೆ ಸ್ವಾತಂತ್ರ್ಯವನ್ನು ಸಂಪಾದಿಸುವೆನು' ಎಂದನು. ತಂದೆಗೆ ಮಗನ ಸ್ವಾತಂತ್ರ್ಯ ಪ್ರೇಮವನ್ನು ನೋಡಿ ಮಮತೆಯು ಉಕ್ಕಿಬಂತು. ಪ್ರೀತಿಯಿಂದ ಎತ್ತಿ ಆಲಂಗಿಸಿಕೊಂಡನು. ಆಗ ಮಾಕ್ಸ್ವಿನಿಗೆ ಕೇವಲ ಹದಿನಾಲ್ಕು ವರ್ಷ ಪ್ರಾಯವಾಗಿತ್ತು. ತಂದೆಯೂ ಒಳ್ಳೆಯ ದೇಶಾಭಿಮಾನಿಯಿದ್ದನು. ತಾಯಿಯೂ ಉತ್ತಮ ಧರ್ಮಶೀಲಳಾಗಿದ್ದಳು. ' ಇವರ ಬಸುರಲ್ಲಿ ಟೆರೆನ್ಸ್ ಮಾಕ್ಸ್ವಿನಿಯು ೧೮೭೯ನೇ ಇಸವಿ ಮಾರ್ಚಿ ೨೮ರಂದು ಜನ್ಮವೆತ್ತಿದ್ದನು.'

ಸಣ್ಣ ಪ್ರಾಯದಲ್ಲಿಯೇ ಟೆರೆನ್ಸನು ತಂದೆಯನ್ನು ಕಳಕೊಂಡನು. ಆದರೆ ತಂದೆಯಿಂದ ಪಡೆದ ಸ್ವಾತಂತ್ರ್ಯ ಗುಣವು ಅವನನ್ನು ಬಿಟ್ಟಿರಲಿಲ್ಲ. ಜೇಮ್ಸ್ ಮ್ಯಾಕ್ಸ್ವಿನಿಯು (ಟೆರೆನ್ಸನ ತಂದೆ) ಯಾವಾಗಲೂ ತನ್ನ ಮಕ್ಕಳಿಗೆ ಸ್ವಾತಂತ್ರ್ಯದ ಪದಗಳನ್ನು ಕಟ್ಟಲು ಪ್ರೇರೇಪಿಸುತಿದ್ದನು. ಆದುದರಿಂದ ಆತನ ಮನೆಯಿಂದ ಅಹರ್ನಿಶಿ ಸ್ವಾತಂತ್ರ್ಯ ಸಂಗೀತದ ನಿನಾದವೇ ಹೊರಡುತಿತ್ತು!

### ಸ್ವತಂತ್ರ ವಿದ್ಯಾಭ್ಯಾಸ

ಆಂಗ್ಲರ ವಿದ್ಯಾಭ್ಯಾಸದಲ್ಲಿ ನಿಜವಾಗಿ ಒಂದು ಮಾಟವಿದೆ! ರಾಷ್ಟ್ರದ ಜೀವಸತ್ವವನ್ನು ಹಿಂಡಿ ಆಂಗ್ಲರ ದಾಸ್ಯ ಧರ್ಮವನ್ನು ಕಲಿಸುವ ಮಾಯೆಯಿದೆ! ಐಯರ್ಲೆಂಡೂ ಆಂಗ್ಲರ ಸ್ವಾಧೀನದಲ್ಲಿತ್ತು. ಇಂದು ಭಾರತದಲ್ಲಿರುವಂತೆ, ಅಂದು ಐಯರ್ಲೆಂಡಿನಲ್ಲಿಯೂ ಅಲ್ಲಿನ ಜನರಿಗೆ ದಾಸ್ಯವನ್ನು ಕಲಿಸುವ ವಿದ್ಯಾಭ್ಯಾಸವು ಕೊಡಲ್ಪಡುತಿತ್ತು. ಪ್ರತಿಯೊಬ್ಬನೂ ಆಂಗ್ಲೇಯ ವಿಚಾರಕ್ಕೆ ಅಂದು ಮರುಳಾಗಿದ್ದನು. ಆಂಗ್ಲ ಭಾಷೆಗೆ ಅಂತಹ ಮೇಲ್ಮೆಯಿತ್ತು.

ಆದರೆ ಟೆರೆನ್ಸನು ಇಂತಹ ಶಿಕ್ಷಣಾಲಯಗಳಿಗೆ ಹೋಗಲಿಲ್ಲ. ಸರಕಾರದ ಸಹಾಯವಿಲ್ಲದೆ, ಕ್ರಿಸ್ತಬಂಧುಗಳು ಸ್ಥಾಪಿಸಿದ ಕೆಲವು ರಾಷ್ಟ್ರೀಯ ಶಿಕ್ಷಣಾಲಯಗಳೂ ಅಲ್ಲಿದ್ದುವು. ಅವುಗಳಲ್ಲಿ ಆತನ ಶಿಕ್ಷಣವಾಯಿತು. ಆತನು ಮಾತೃಭಾಷೆಯಲ್ಲಿ ಒಳ್ಳೆಯ ಪ್ರಾವೀಣ್ಯತೆಯನ್ನು ಸಂಪಾದಿಸಿದನು. ರಾಷ್ಟ್ರೀಯ ಕಾರ್ಯದಲ್ಲಿ ಇದು ಆತನಿಗೆ ಮುಂದಕ್ಕೆ ಬಹಳ ನೆರವಾಯಿತು. ಇದರಿಂದ ಆತನ ಸ್ವಾತಂತ್ರ್ಯಾಭಿಮಾನವು ರಾಷ್ಟ್ರದಲ್ಲಿ ಪಸರಿಸಿತು.

### ಜೀವನ ನಿರ್ವಾಹ

ತಂದೆಯು ತೀರಿಹೋದ ಮೇಲೆ, ಟೆರೆನ್ಸನಿಗೆ ವಿದ್ಯಾಭ್ಯಾಸವನ್ನು ಮುಂದರಿಸಲಾಗಲಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಪೂರೈಸಿಕೊಳಿಸಿ ಆತನು ಒಬ್ಬ ಕಾರಕೂನನಾದನು. ಅಲ್ಲಿನ ಸೇವೆಯು ಆತನಿಗೆ ಹಿಡಿಸುತ್ತಿರಲಿಲ್ಲ. ಹಿಡಿದುಕೊಂಡ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತಿದ್ದನು. ಆದರಿಂದ ಕೆಲಸದಲ್ಲಿಯೇ ಒಬ್ಬ ತನೆನಿಸಿದನು. ಔದ್ಯೋಗಿಕ ಶಿಕ್ಷಣಾಲಯದವರು ಇವನನ್ನು ವ್ಯಾಪಾರ ಶಿಕ್ಷಕನಾಗಿ ನೇಮಿಸಿದರು. ಹೀಗೆ ಕೆಲಸ ಮಾಡುತ್ತಿರುವಾಗಲೂ ತನ್ನ ಒಲ್ಮೆಯ ಸ್ವಾತಂತ್ರ್ಯ ಸಂಪಾದನೆಯ ಕಾರ್ಯವನ್ನು ಬಿಡದೆ ಮಾಡುತ್ತಲೇ ಇದ್ದನು. ಬಹಳ ಪುಸ್ತಕಗಳನ್ನು ಓದಿದನು. ಸ್ವತಃ ಅನೇಕ ಸ್ವಾತಂತ್ರ್ಯಗೀತಗಳನ್ನು ಕಟ್ಟಿ ಹಾಡಿದನು. ನಾಟಕಗಳನ್ನು ಬರೆದನು. ಆಗ ಪಡೆದ ಶಿಕ್ಷಣದಿಂದ, ಅಭ್ಯಾಸವನ್ನು ಮುಂದುವರಿಸಿ ಬಿ. ಎ., ಪದವಿಯನ್ನು ಪಡೆದನು. ಮಹತ್ವವಾದ ಕಾರ್ಯವನ್ನು ಮಾಡಿ ರಾಷ್ಟ್ರದ ಧ್ವಜವನ್ನು ಮೆರೆಸಬೇಕೆಂದೇ ಆತನ ನಿರಂತರ ಯತ್ನವಾಗಿತ್ತು.

### ರಾಜಕೀಯ ರಂಗದಲ್ಲಿ

ಐಯರ್ಲೆಂಡು ಸ್ವಾತಂತ್ರ್ಯ ದಾಹದಲ್ಲಿ ಹಾತೊರೆಯುತಿತ್ತು. ೧೯೦೫ರಲ್ಲಿ ಆರ್ಥರ್ ಗ್ರಿಫಿಥ್ಸನು 'ನಾವೇ ನಮ್ಮವರು' ಎಂಬ ಹೆಸರಿನ ಸಂಘವೊಂದನ್ನು ಸ್ಥಾಪಿಸಿ, ಸಂಘಶಕ್ತಿಯನ್ನು ಹೆಚ್ಚಿಸಿದನು. ರಾಷ್ಟ್ರೀಯ ಉದ್ಯೋಗ, ಸಹಕಾರ ಸಂಘಗಳ ಕಾರ್ಯಸಾಧನಮಾಡಿ ನಾಡಿನ ದಾಸ್ಯವನ್ನು ಕಿತ್ತೊಗೆಯುವುದೇ ಆ ಸಂಘದ ಧ್ಯೇಯವಾಗಿತ್ತು. ಇದಕ್ಕಿಂತ ಮೊದಲೇ 'ಸೆಲ್ಟಿಕ್ ಲಿಟರರಿ ಕ್ಲಬ್' ಎಂಬ ರಾಷ್ಟ್ರೀಯ ಸಾಹಿತ್ಯ ಪ್ರಚಾರ ಸಂಘವೊಂದು ಸ್ಥಾಪಿತವಾಗಿತ್ತು. 'ಯಂಗ್ ಐಯರ್ಲೆಂಡ್ ಸೊಸೈಟಿ'ಯು ಆ ಮೇಲೆ ಉತ್ಪನ್ನವಾಯಿತು.

ಇದರಲ್ಲಿ ಟೆರೆನ್ಸಿಯು ಹಲವು ಮಂದಿ ದೇಶಸೇವಾ ಕಾಂಕ್ಷೆಯ ಮಿತ್ರರೊಡನೆ ಸೇರಿದನು. ದೇಶೀಯ ಸೈನ್ಯವು ಆಂಗ್ಲ ಸೈನ್ಯಕ್ಕೆ ಹೋಗದಂತೆ ಈ ಸಂಘದವರು ಪ್ರಬಲ ಪ್ರಚಾರಮಾಡಿದರು. ಆ ಮೇಲೆ ಉಗ್ರಗಾಮಿಗಳು ಕೆಲವರು ಸೇರಿ 'ಕಾರ್ಕ ಸೆಲ್ಟಿಕ್ ಲಿಟರರಿ ಸೊಸಾಯಿಟಿ' ಯೆಂಬೊಂದು ಸಂಘವನ್ನು ಸ್ಥಾಪಿಸಿದರು. ಈ ಮಂಡಲದ ಮೂಲಕ ಲೇಖನ ಭಾಷಣಗಳಿಂದ ಟೆರೆನ್ಸಿಯು ದೇಶದಲ್ಲಿ ಸ್ವಾತಂತ್ರ್ಯ ಸಂದೇಶವನ್ನು ಸಾರತೊಡಗಿದನು.

ಇಂತಹ ಕಾರ್ಯದಲ್ಲಿ ಮಗ್ನನಾಗಿರುವಾಗ ಟೆರೆನ್ಸಿಯು ಜನತೆಯೊಡನೆ ಬೆರಕೆಯಾದನು. ಅವರು ಅವನನ್ನು ಬಹು ಮೆಚ್ಚಿದರು. ಆಗ ಆತನು ಸ್ವಯಂಸೇವಕದಳವೊಂದನ್ನು ಏರ್ಪಡಿಸುವ ಯತ್ನ ಮಾಡಿದನು. 'ಐರಿಷ್ ಸ್ವಾತಂತ್ರ್ಯ'ವೆಂಬ ವೃತ್ತಪತ್ರಿಕೆಯನ್ನು ಹೊರಡಿಸಿದನು. ಅದರಲ್ಲಿ ಉಜ್ವಲ ಲೇಖನಗಳು ಬರುತ್ತಿದ್ದುವು. ಸ್ವಯಂಸೇವಕರನ್ನು ಕೂಡಿಸಲು ಹಗಲಿರುಳು ಟೆರೆನ್ಸನು ಯತ್ನಿಸಿದನು. ಅವರ ಸಂಖ್ಯೆಯು ಬೆಳೆಯಿತು. ಒಮ್ಮೊಮ್ಮೆ ಸರಕಾರದ ಪೋಲೀಸರಿಗೂ ಇವರಿಗೂ ಹೋರಾಟವಾಗುತಿತ್ತು. ಆ ಸಮಯದಲ್ಲಿ ಸರಕಾರದ ಸೈನ್ಯವು ತೋರಿಸುತ್ತಿದ್ದ ನೆಪಕ್ಕೆ ದ ಜನತೆಯಲ್ಲಿ ಸ್ವಾತಂತ್ರ್ಯ ಲಾಲಸೆಯು ಹೆಚ್ಚು ಉಗ್ರವಾಯಿತು.

ಹಾಗೆ ಧ್ವಜವು ಹಾರಿ ಭಂಗಿತ್ತು. ಟೆರೆನ್ಸಿಯು ದೇಶದಲ್ಲಿ ಸ್ವತಂತ್ರ ಸೈನ್ಯವನ್ನು ಅಗಲೇ ಒಟ್ಟುಮಾಡಿದನು. ಇದನ್ನು ಕಂಡು ಇಂಗ್ಲಿಷ ಸರಕಾರದವರು ಆತನನ್ನು ಬಂಧಿಸಿದರು. ರಾಷ್ಟ್ರದ ಚಳವಳದ ಕೆಲವು ಕಾಲ ಪ್ರಚಂಡವಾಯಿತು. ಸರಕಾರದ ದಬ್ಬಾಳಿಕೆಯೂ ಹೆಚ್ಚಿತು.

ಟೆರೆನ್ಸಿಗೆ ಹಿಂದೆ ಸೆರೆಮನೆಯಲ್ಲಿಯೇ ವಿವಾಹವಾಗಿತು! ದಂಪತಿಗಳ ಅನ್ಯೋನ್ಯ ಬಹಳ ಸ್ನೇಹದಿಂದಿದ್ದರು. ಅವರಿಗೆ ಒಂದು ಮಗಳು ಹುಟ್ಟಿದ್ದಳು. ಮಗಳಿಗೆ ತಂದೆಯಲ್ಲಿ ಬಹು ಮಮತೆ! ಆದರೆ ಆಗಾಗ ಸರಕಾರವು ಆತನನ್ನು ಸೆರೆಮನೆಗೆ ಒಯ್ಯುವುದು ಬಿಡುಗಡೆಮಾಡುವುದರಿಂದ ಆತನು ಸಂಸಾರದ ಸವಿಯನ್ನು ಮಧುರವಾಗಿ ಅನುಭವಿಸಲಿಲ್ಲ.

ಐಯರ್ಲೆಂಡಿನಲ್ಲಿ 'ನಾವು ನಮ್ಮವರು' ಪಕ್ಷವೇ ಪ್ರಬಲವಾಯಿತು. ಸರಕಾರವು ಇದ್ದಂತೆಯೇ ಅವರು ಇನ್ನೊಂದು ಸರಕಾರವನ್ನು ರಚಿಸಿದರು. ಬ್ರಿಟಿಷ್ ಸರಕಾರವನ್ನು ಒಮ್ಮೆಲೇ ತಿರಸ್ಕರಿಸಿದರು. ಟೆರೆನ್ಸಿಯು ಪ್ರಜೆಗಳಿಂದ ನಗರಾಧ್ಯಕ್ಷನಾಗಿ ಆರಿಸಲ್ಪಟ್ಟನು. ಅಷ್ಟರಲ್ಲಿ, ಬ್ರಿಟಿಷರು ಟೆರೆನ್ಸನ್ನು ಬಂಧನದಲ್ಲಿಟ್ಟರು.

### ಉಪವಾಸ ವ್ರತದಿಂದ ಮರಣ

ಟೆರೆನ್ಸಿಯು ಸೆರೆಮನೆಯಲ್ಲಿ ಕಠಿಣ ಉಪವಾಸ ಮಾಡಿದನು. ಬಂಧವಿಮೋಚನೆ ಮಾಡದಿದ್ದಲ್ಲಿ ಉಪವಾಸದಿಂದ ಸಾಯುವುದಾಗಿ ನಿಶ್ಚಯಿಸಿದನು. ಇದರಿಂದ ಜನರಲ್ಲಿ ಸ್ವಾತಂತ್ರ್ಯ ಪ್ರೇಮವು ಅಧಿಕವಾಗುವುದೆಂದು ಆವನ ನಿಶ್ಚಯ ಮಾಡಿದನು.

ನಗರಾಧ್ಯಕ್ಷನೆಂದ ಟೆರೆನ್ಸಿಯು ವಿಚಾರಣೆಯಾಯಿತು. ತಾನು ನಿಜವಾದ ಪ್ರಜೆಗಳ ಅರಸನೆಂದೂ, ಬ್ರಿಟಿಷ್ ಸರಕಾರವೇ ತನ್ನನ್ನು ಬಂಧಿಸಿ ರಾಷ್ಟ್ರದ್ರೋಹ ಮಾಡಿರುವುದೆಂದೂ ಆದುದರಿಂದ ಹೆಚ್ಚಿನ ವಿಷಯವೇನೂ ತನಗೆ ಹೇಳತಕ್ಕದ್ದು ಇಲ್ಲವೆಂದೂ ಟೆರೆನ್ಸಿಯು ಉತ್ತರಕೊಟ್ಟನು. ಅವನನ್ನು ಬ್ರಿಕ್ಸ್ಟನ್ ಸೆರೆಮನೆಯಲ್ಲಿಟ್ಟರು.

ದಿನಸಿತ್ಯ ನೋಡಲು ಬರುತ್ತಿದ್ದ ಮಿತ್ರರ ಬಂಧುಗಳ, ಪತ್ನಿ ಪುತ್ರಿ ಇವರ ದರ್ಶನದಿಂದ ಅವನ ಅಂತರಾತ್ಮವು ನೋಯುತ್ತಿತ್ತು. ಆದರೂ ರಾಷ್ಟ್ರಕ್ಕಾಗಿ ೭೪ ದಿನ ಅನ್ನಗಹಣ ಮಾಡದೆ ನಿಶ್ಚಲ ವ್ರತದಿಂದಲೇ ಕೊನೆಯುಸಿರೆಳೆದನು! ಸ್ವಾತಂತ್ರ್ಯದ ಯಜ್ಞಕುಂಡದಲ್ಲಿ ಆತನ ಜೀವವು ಹೀಗೆ ಆಹುತಿಯಾಯಿತು! ಅಂದಿನಿಂದ ಐಯರ್ಲೆಂಡು ನವಜಾಗೃತಿಯನ್ನು ಹೊಂದಿತು! ಸ್ವರಾಜ್ಯವನ್ನು ಕಾದಾಡಿ ಗಳಿಸಿಕೊಂಡಿತು. ಟೆರೆನ್ಸಿಯ ಹೆಸರು ಪ್ರಪಂಚದ ಇತಿಹಾಸದಲ್ಲಿ ಅಜರಾಮರವಾಯಿತು.'

ಸಾಹುಕಾರ ಶ್ರೀನಿವಾಸರಂಗಪ್ಪೆ

[ ಸ್ಥಾಪನೆ: ಕ್ರಿ. ಶ. 1858 ]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಮಾತ್ರ ವ್ಯಾಪಾರಕ್ಕೆ

ಸಾಹುಕಾರ ಮಹಾಲ್, ಮಂಗಳೂರು.

ಶಿಕ್ಷಣ ವಿಚಾರ

# ರಾಷ್ಟ್ರದ ಜೀವಸತ್ವವನ್ನು ಹೀರಿಬಿಟ್ಟಿತು!

## ಆಂಗ್ಲ ವಿದ್ಯಾಭ್ಯಾಸದ ಉಪಕಾರವೇನು?

### ಪ್ರೊಫೆಸರ್ ದತ್ತರ ಉಜ್ವಲ ವ್ಯಾಖ್ಯಾನ

‘ಆಳಲ್ಪಡುವ ರಾಷ್ಟ್ರಕ್ಕೆ ಮೊದಲನೆಯ ಆಶೆಯಿರುವುದು, ಆಳುವ ರಾಷ್ಟ್ರದೊಡನೆ ಸಡೆ ಸಮಾನತೆಯಿರಬೇಕೆಂಬುದು, ಎರಡನೆಯ ಆಶೆಯು ಅವರಿಗೆ ಶರಣಾಗಿಯಾದರೂ ಅವರ ಉಪಕಾರವನ್ನು ಪಡೆಯಬೇಕೆಂಬುದು ಅಂತಹ ಸಮೀಪ ಸಂಬಂಧವನ್ನು ಬೆಳೆಸುವುದಕ್ಕೆ ಇರುವ ಒಂದೇ ಒಂದು ಹಾದಿಯೆಂದರೆ, ಆಳುವ ಜನರ ಭಾಷೆಯನ್ನು ಕಲಿಯುವುದು, ಮತ್ತು ಅವರ ಸಂಸ್ಕೃತಿ ಮತ್ತು ಜೀವನ ರೀತಿಗಳನ್ನೇ ಅನುಕರಿಸುವುದು, ಇಂಗ್ಲಿಷ್ ವಿದ್ಯಾಭ್ಯಾಸದಿಂದ ಒರೇ ಆಂಗ್ಲ ಭಾಷಾ ಜ್ಞಾನದ ಪರಿಣಾಮವು ಮಾತ್ರ ನಮಗೆ ಆಗುವುದಲ್ಲ, ಆದರಿಂದ ಆಂಗ್ಲೇಯ ಸಂಸ್ಕೃತಿಯು ನಮ್ಮಲ್ಲಿ ನೆಲೆಯೂರುವುದು ಇಂಗ್ಲಿಷರ ಜೀವನ ರೀತಿ ಆಚಾರ ನಡೆನುಡಿಗಳ ನಮ್ಮಲ್ಲಿ ನೇರಾಗಿ ಪರಿಣಾಮವಾಗುವವು ಹೀಗೆಂದು ಪ್ರೊ॥ ಕೆ ಟಿ ದತ್ತರು, ಆಂಗ್ಲ ವಿದ್ಯಾಭ್ಯಾಸವು ನಮ್ಮನ್ನು ಏನ ಮಾಡಿತ ? ಎಂಬ ಪುಸ್ತಕದಲ್ಲಿ ಒಂದು ಬರೆದಿರುವರು.

ಆಂಗ್ಲ ವಿದ್ಯೆಯನ್ನು ಪಡೆಯುವ ನಮ್ಮ ಅಭಿಲಾಷೆಯು ಹೆಚ್ಚಿದ ಕಾರಣವೇನೆಂಬ ಕುರಿತ ಬರೆಯುತ್ತಾ ಅವರ ಹೀಗೆಂದಿರುವರು

‘ನಮ್ಮ ಭಾರತೀಯರ ಸಾಮಾಜಿಕ ಜೀವನದಲ್ಲಿ ಹಲವು ದೋಷಗಳಿವೆ ಇವೆಲ್ಲವೂ ಬಂದುದು ಧರ್ಮವನ್ನು ತಪ್ಪಾಗಿ ವ್ಯಾಖ್ಯಾನಿಸಿದುದರಿಂದ ಎಲ್ಲದಕ್ಕಿಂತಲೂ ದೊಡ್ಡ ದೋಷವೆಂದರೆ ಜಾತಿ ಭೇದಗಳ ಅನಾಚಾರವಾಗಿದೆ ಭಾರತೀಯರ ಈ ಸಾಮಾಜಿಕ ದೌರ್ಬಲ್ಯವನ್ನು ಕಂಡು ಆಂಗ್ಲರು ತಮ್ಮ ಧಾರ್ಮಿಕ ತತ್ವಗಳನ್ನು ಹರಡಲು ಮನಸ್ಸು ಮಾಡಿದರು ಇದನ್ನೇ ಕ್ರಿಶ್ಚನ್ ಮಿಶನರಿಗಳು ರಭಸದಿಂದ ಆರಂಭಿಸಿದರು

### ಹೃದಯದ ಬಂಧನ

‘ಆಂಗ್ಲರು ಯಾವಾಗಲೂ ಜನತೆಯ ಹೃದಯವನ್ನೂ ವಿಚಾರವನ್ನೂ ಸೆಳೆಯುವಂತಹ ಕಾರ್ಯಗಳನ್ನು ಮಾಡಲು ಯತ್ನ ಮಾಡಿದರ ಜನತೆಯ ಹೃದಯ ಮತ್ತು ವಿಚಾರಗಳಿಂದಲೇ ರಾಷ್ಟ್ರದ ಏಳಿಗೆ ಅವನತಿಗಳು ಆಗುವವು ಈ ಕಾರ್ಯವನ್ನು ಅವರು ಕಳೆದ ೧೫೦ ವರ್ಷಗಳ ಆಡಳಿತದಲ್ಲಿ ಸಫಲರಾಗಿ ಕೊನೆಗಾಣಿಸಿದರು’

ಆಂಗ್ಲ ವಿದ್ಯಾಭ್ಯಾಸದಿಂದ ನಾವೇನೂ ಪ್ರಯೋಜನ ಹೊಂದಲಿಲ್ಲವೆಂದು ಅವರು ಹೀಗೆ ನಿರ್ಧಾರವಾಗಿ ಹೇಳುತ್ತಾರೆ.

‘ನಮ್ಮಲ್ಲಿ ಹಲವರು ಬೈಬಲಿನಿಂದಲೋ, ಮಿಲ್ಟನನ ಗ್ರಂಥಗಳಿಂದಲೋ, ಶೇಕ್ಸ್‌ಪೀಯರ ಕೃತಿಗಳಿಂದಲೋ ಮಾತುಗಳನ್ನು ನಿರ್ಭಾರವಾಗಿ ಉಚ್ಚರಿಸಲು ಕಲಿತಿರಬಹುದು ಆದರೆ ಎಷ್ಟು ಮಂದಿ ಉಪನಿಷತ್ತುಗಳಿಂದ ಇಲ್ಲವೇ ಉತ್ತಮ ಸಂಸ್ಕೃತ ಸಾಹಿತ್ಯಗಳಿಂದ ಅಮೂಲ್ಯ ವಚನಾಮೃತಗಳನ್ನು ಉದ್ಧರಿಸಿ ಹೇಳಬಲ್ಲರು? ಒಬ್ಬ ಭಾರತೀಯನು ಭಾರತದ ಸಂಸ್ಕೃತಿ ಧರ್ಮ, ಕಲೆ, ಸಾಹಿತ್ಯಗಳ ವಿಚಾರವಾಗಿ ಏನೇನೂ ತಿಳಿಯದೆ, ಆಂಗ್ಲರ ವಿಚಾರ, ರೋಮನರ ವಿಚಾರ, ಗ್ರೀಕರ ವಿಚಾರವಾಗಿ ಬಹಳ ತಿಳಕೊಂಡಿರುವುದೆಂದರೆ ಇದು ಎಂತಹ ಪ್ರಮಾದಕರವಾದ ವಿಷಯವಾಗಿದೆ? ಒಮ್ಮೆ ಕಲಿಜನಾಂಗದವರಿಗೆ ತಮ್ಮ ಸಂಸ್ಕೃತಿಯು ಬಿಡಗ [illegible] ಸಿಬಿಟ್ಟರ ಆ ವೇಳೆ ಅದರ ಮೋಹದಿಂದ ಅವರನ್ನು [illegible] ಗಡೆ ಮಾಡಲು [illegible] ಆಗಲಾರದೆಂದು [illegible] ತಿಳಿದಿದ್ದ

### ಸ್ತ್ರೀಯರ ಪೋಷಾ ಪದ್ಧತಿ

ನಮ್ಮ ಹೆಂಗಸರು ಆಂಗ್ಲ ವಿದ್ಯಾಭ್ಯಾಸದಿಂದ ಬಹಳ ಪರಿಣಾಮ ಹೊಂದಿದಿದ್ದಾರೆ ಏಕೆಂದರೆ ಅವರ ಅವಸ್ಥೆಯು ರಾಷ್ಟ್ರದಲ್ಲಿ ಬಹಳ ಹೀನವಾಗಿತ್ತು ಅವರ ಪೋಷಾಕುಪದ್ಧತಿಯನ್ನು ಬದಲಿಸಿ [illegible] ಸೌಂದರ್ಯಕ್ಕೆ ಕಾಲಿಡುವುದರೊಡನೆ ಹಲವು ವಿಧದ ರಾಷ್ಟ್ರೀಯ ಧ್ಯೇಯಗಳನ್ನು ತಿಳಕೊಂಡಿರುವರು. ಗಂಡಸರೊಡನೆ ಸಮಭಾಗ ಸ್ವತಂತ್ರತೆಗಳನ್ನು ಇಚ್ಛಿಸುವುದರೊಡನೆ ಅನೇಕ ಸಲ ಮೇರೆ ಮೀರಿ ನಡೆದಿರುವರು

ಆದ್ದರಿಂದ ಆಂಗ್ಲ ವಿದ್ಯಾಭ್ಯಾಸವು ನಮ್ಮನ್ನು ಸಂಪೂರ್ಣ ಅರಾಷ್ಟ್ರೀಯವಾಗಿ ಮಾಡಿಬಿಟ್ಟಿದೆ ಸ್ವಾತಂತ್ರ್ಯದ ಹೋರಾಟಕ್ಕೆ ಅಯೋಗ್ಯರನ್ನಾಗಿ ಮಾಡಿರುವುದು ಮಾತ್ರವಲ್ಲದೆ, ನಮ್ಮ ರಾಷ್ಟ್ರೀಯ ಜೀವ ಸತ್ವಗಳನ್ನೂ ನಾವು ಮರೆತುಬಿಡುವಂತೆ ಮಾಡಿದೆ

### ಪರಿಹಾರೋಪಾಯ?

‘ನಾವು ಇದರಿಂದೆಲ್ಲಾ ಬಿಡುಗಡೆ ಹೊಂದಿ ಜೀವಂತರೆನಿಸಿ ಸಂಸ್ಕೃತರೆನಿಸಿ ಬಾಳುವ ಉಪಾಯಗಳು ಇನ್ನೂ ಇವೆ ನಮ್ಮ ಹಳ್ಳಿ ಕೈಗಾರಿಕೆಗಳ ಉದ್ಧಾರವಾಗಬೇಕು. ಒಟ್ಟಿನ ಮೇಲೆ ಗ್ರಾಮ ಜೀವನವು ಸರ್ವತೋಮುಖವಾಗಿ ಏಳಿಗೆ ಹೊಂದಬೇಕು. ಪ್ರತಿಯೊಂದು ಪ್ರಾಂತಗಳಲ್ಲಿಯೂ ಆಯಾಯ ಪ್ರಾಂತಕ್ಕೆ ಅನುಗುಣವಾಗಿರುವ ಉತ್ಪತ್ತಿಗಳು ವ್ಯವಸಾಯಗಳು ತೀವ್ರ ಉತ್ಸಾಹದಿಂದ ಆಗುವಂತೆ ನೆರವೇರಬೇಕು. ಈ ಮೂಲಕ ರಾಷ್ಟ್ರದ ನಿರುದ್ಯೋಗವು ನೀಗಿ, ಭಾರತೀಯ ಸಂಸ್ಕೃತಿಯು ಪುನರುದ್ಧಾರವಾಗುವುದು; ಅದರೊಡನೆ ಜನತೆಯು ಕಳೆಗೊಂಡು ಜೀವಂತವಾಗಿಯೂ, ಸತ್ವಶಾಲಿಯಾಗಿಯೂ ಬಾಳುವುದು.’

THE
BANK OF MANGALORE LTD.,
MANGALORE
ESTD 1931
Branches - Mudabidri & Padubidri.

Fixed Deposits will be received at following rates of interest.

| | | | |
|---|---|---|---|
| For | 3 months | | 3½% |
| „ | 6 „ | | 4% |
| „ | 12 „ | | 5% |
| „ | 24 „ | & upwards | 5½% |

Interest Payable Quarterly

***Savings Bank deposit 3½% on daily balances.***

All kinds of banking business transacted

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.
ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಎಂಡ್ರೂಸ್ ಲಿವರ್ ಸೋಲ್ಟ್
ANDREWS LIVER SALT


ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮ ಸೂತ್ರ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮತ್ತು ಅಮೇರಿಕ ದೇಶದಲ್ಲಿರುವಂತೆ ಹುಂಡಿ ಪತ್ರವನ್ನು ಭಾರತದಲ್ಲಿಯೂ ಜನಪ್ರಿಯವಾಗಿ ಮಾಡುವುದರ ಸಲುವಾಗಿ, ಇಂಡಿಯಾ ಸರಕಾರವು ಹುಂಡಿ ಪತ್ರದ ಮೇಲೆ ಹಾಕಿರುವ ಸ್ಟಾಂಪ್ ಡ್ಯೂಟಿಯನ್ನು ಕಡಿಮೆಮಾಡಬೇಕೆಂದು ಮುಖ್ಯವಾಗಿ ಭಾರತದ ಅರ್ಥಶಾಸ್ತ್ರಜ್ಞರೂ, ವ್ಯಾಪಾರೀ ಸಂಘಗಳೂ ಮತ್ತು ಇತರ ಹಲವು ಮಹನೀಯರೂ ಬಹಿರಂಗವಾಗಿ ಅನೇಕ ಸಮಯಗಳಿಂದ ತೀವ್ರವಾಗಿ ವಾದಿಸುತ್ತಿದ್ದರು. ಈ ತರದ ಕೇಳಿಕೆಗಳ ಪರಿಣಾಮವಾಗಿಯೂ ಸರಕಾರಕ್ಕೆ ರಿಸರ್ವ್ ಬೇಂಕ್ ಓಫ್ ಇಂಡಿಯಾದ ಬಲವಂತವಾದ ಶಿಷ್ಟಮಂಡಳದ ಅರಿಕೆಯ ಪರಿಣಾಮವಾಗಿಯೂ ಈಗ ಹುಂಡಿ ಪತ್ರದ ಮೇಲೆ ಹಾಕಿರುವ ಸ್ಟಾಂಪ್ ಡ್ಯೂಟಿಯನ್ನು ಸರಕಾರವು ಕಡಿಮೆ ಮಾಡಿರುತ್ತದೆ. ಒಂದು ವರ್ಷ ವಾಯಿದೆಯ ಸಾವಿರ ರೂಪಾಯಿಯೊಳಗಿನ ಹುಂಡಿ ಪತ್ರಕ್ಕೆ ಎರಡಾಣೆ ಸ್ಟಾಂಪ್ ಡ್ಯೂಟಿಯು ಇರಿಸಲಾಗಿದೆ. ರಾಷ್ಟ್ರದ ವ್ಯಾಪಾರ ಮತ್ತು ಉದ್ಯೋಗಗಳ ಮೇಲೆ ಇದರಿಂದ ಬಹಳ ಉಪಕಾರವಾಗುದರಿಂದ, ನಿಜವಾಗಿಯೂ ಇದು ಅಭಿನಂದನೀಯವಾದ ಒಂದು ವ್ಯತ್ಯಾಸವಾಗಿದೆ.

### ಉಪಯೋಗಿಸುವ ವಿಧಾನ

ಈ ವಿಷಯವು ಪ್ರೊಮಿಸರಿ ನೋಟುಗಳಿಗೆ ಅನ್ವಯಿಸುವುದಿಲ್ಲ. ಅವುಗಳ ಮೇಲೆ ಹೊರಿಸಿರುವ ಡ್ಯೂಟಿಯು ಮೊದಲಿನಂತೆಯೇ ಇರುವುದು. ಈ ವಿಷಯವನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಏಕೆಂದರೆ ಹಲವು ಕಡೆಗಳಲ್ಲಿ, ಹೆಚ್ಚಾಗಿ ಹಳ್ಳಿಗಳಲ್ಲಿ ಹುಂಡಿಯ ಮತ್ತು ಪ್ರೊಮಿಸರಿ ನೋಟುಗಳ ಕುರಿತು ಜನರಿಗೆ ವ್ಯತ್ಯಾಸವೇನೆಂದು ಸ್ಪಷ್ಟವಾಗಿ ಗೊತ್ತಿರುವುದಿಲ್ಲ. ಪ್ರೋನೋಟು ಎಂದರೆ, ನಿಶ್ಚಿತವಾದ ಒಂದು ದಿನ ವಾಯಿದೆಯಲ್ಲಿ ಋಣವನ್ನು ತಿರುಗಿಸಲಾಯಿಸಲಾಗುವುದೆಂಬ ಕೇವಲ ಒಂದು ಭರವಸೆಯ ಪತ್ರವಾಗಿದೆ. ಹುಂಡಿ ಪತ್ರವೆಂದರೆ, ಹಾಗಿರದೆ, ಒಬ್ಬ ಮನುಷ್ಯನಿಂದ ಇನ್ನೊಬ್ಬ ಮನುಷ್ಯನಿಗೆ, ಮೊದಲನೆಯ ಮನುಷ್ಯನಿಗೆ ಇಲ್ಲವೇ ಅವನಿಂದ ಹಕ್ಕು ಪಡೆದವನಿಗೆ ನಿಶ್ಚಿತವಾದ ಧನವನ್ನು, ಗೊತ್ತುಮಾಡಿದ ಅವಧಿಯಲ್ಲಿ ಕೊಡುವಂತೆ ಬರೆದ ಒಂದು ಆಜ್ಞಾ ಪತ್ರವಾಗಿದೆ. ಹೆಚ್ಚಾಗಿ ಹುಂಡಿಪತ್ರದ ಬರವಣಿಗೆಯ ಕ್ರಮವು ಹೀಗಿದೆ: ಈ ಕೆಳಗೆ ಕಾಣಿಸಿದ ವಿವರದಲ್ಲಿ ಸ್ಥಳ, ಹೆಸರು, ಹಣ ಮತ್ತು ದಿನಗಳ ವಿವರವನ್ನು ಖಾಲಿ ಬಿಟ್ಟಿದೆ. ಹುಂಡಿಪತ್ರವು ಈ ಕೆಳಗೆ ಕೊಟ್ಟಂತೆ ಇಂಗ್ಲಿಷ್ ಭಾಷೆಯಲ್ಲಿ ಇರಬೇಕು.

Rs. Place............  
Date............

.........days after sight pay myself or order at the office... Bank' Ltd., the sum of Rs....... beeing the value of goods shipped / supplied / railed to you. Interest will be charged at—% P. A. after due date and notice of dishoner is waived.

A ______  
Drawer.

To

B______

ಈ ಹುಂಡಿ ಪತ್ರವನ್ನು Bಯು ಅಂಗೀಕರಿಸಿದನು: ಅವನು ಅದರಲ್ಲಿ ಹೀಗೆಂದು ಬರೆಯುತ್ತಾನೆ.

Accepted payable at the office A. B Bank Ltd.,—notice of dishoner is waived.

B______

### ನಗದಿ ಹಣವಾಗಿ ಸುಲಭದಿಂದ ಪರಿವರ್ತಿಸಬಹುದು.

ಹೀಗೆ ಹುಂಡಿಪತ್ರವನ್ನು ಅಂಗೀಕರಿಸಿದ ಮೇಲೆ, ಆ ಪತ್ರವು, ಹಣ ಸಂದಾಯ ಮಾಡ

ಔದ್ಯೋಗಿಕ ವಿಚಾರ.

# ವ್ಯಾಪಾರ ಕ್ಷೇತ್ರದಲ್ಲಿ ಹುಂಡೀ ಪತ್ರಗಳ ಪ್ರಯೋಗ

## ಹುಂಡಿ ಮೇಲೆ ಸ್ಟಾಂಪ್ ಡ್ಯೂಟಿ ಕಡಿಮೆಯಾಗಿದೆ.

ಲೇಖಕರು: ಶ್ರೀ। ಬಿ. ರಾಮ ಬಾಳಿಗಾ, ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

ತಕ್ಕ ದಿನದ ವಾಯಿದೆ ಹಾಕಿ ಇಡಲಾಗುವುದು. ಆದರೆ ವಾಯಿದೆಗಿಂತ ಮೊದಲು ಹಣವನ್ನು ಪಡೆಯಬೇಕಾದರೆ, ಅದನ್ನು ಬೇಂಕರರಲ್ಲಿ ಒಡಾಯಿಸಬೇಕು.

### ಸುಲಭದಿಂದ ನಗದಿ ಹಣವನು ಪಡೆಯಬಹುದು

ಇದು ಬರಿಯ ಪುಸ್ತಕದ ಲೆಕ್ಕಪತ್ರದ ಸಾಲಕ್ಕಿಂತ ಹೆಚ್ಚಿನ ಪ್ರಯೋಜನಕಾರಿಯಾಗಿದೆ. ಏಕೆಂದರೆ ಪುಸ್ತಕದ ಸಾಲದಲ್ಲಿ ಸಾಲಗಾರನು ಕೊಡುವ ವಾಯಿದೆಯನ್ನು ಮಾತ್ರ ನಾವು ಅಧರಿಸಿಕೊಂಡಿರಬೇಕಾಗುತ್ತದೆ. ಸಾಲದ ಲೆಕ್ಕಪತ್ರಗಳ ಮೇಲೆಯೇ ವ್ಯಾಪಾರವನ್ನು ಚಲಾಯಿಸುವ ಚಿಲ್ಲರೆ ವ್ಯಾಪಾರಿಗಳಿಗೂ ಮತ್ತು ರಖಂ ವ್ಯಾಪಾರಿಗಳಿಗೂ ಹುಂಡಿ ಪತ್ರವು ಪ್ರಯೋಜನವುಳ್ಳದ್ದಾಗಿದೆ. ಹುಂಡಿಪತ್ರವನ್ನು ಬೇಕಾದಾಗ ನಗದಿ ಹಣವಾಗಿ ಪರಿವರ್ತಿಸಲು ಸಾಧ್ಯವಿರುವುದರಿಂದ, ಒಬ್ಬ ರಖಂ ವ್ಯಾಪಾರಿಗೆ ಯೋಗ್ಯನಾದ ಚಿಲ್ಲರೆ ವ್ಯಾಪಾರಿಯ ಮೇಲೆ ಸಾಲದಲ್ಲಿ ಸಾಮಾನುಗಳನ್ನು ಕೊಡುವುದು ನಗದಿ ಹಣ ತೆಕ್ಕೊಂಡು ವ್ಯಾಪಾರದಷ್ಟೇ ಪ್ರಯೋಜನವುಳ್ಳದ್ದಾಗಿದೆ. ಚಿಲ್ಲರೆ ವ್ಯಾಪಾರಿಯು ಕೂಡಾ ತನ್ನ ಸಾಲದ ಸಂಪೂರ್ಣ ಪ್ರಯೋಜನವನ್ನು ಪಡೆಯುತ್ತಾನೆ. ಆಂಗ್ಲ ದೇಶದಲ್ಲಿ ಹತ್ತೊಂಭತ್ತನೆಯ ಶತಮಾನದಲ್ಲೇ ವ್ಯಾಪಾರ ಮತ್ತು ಉದ್ಯೋಗಗಳು ಅಭಿವೃದ್ಧಿಯಾದುದರ ಮುಖ್ಯ ಕಾರಣವೆಂದರೆ, ಈ ಹುಂಡೀ ಪತ್ರಗಳಿಂದ ಅವುಗಳನ್ನು ವಟಾಯಿಸುವ ಕಾರ್ಯವು ಎಷ್ಟರ ಮಟ್ಟಿಗೆ ಜನಪ್ರಿಯವಾಯಿತೆಂದರೆ, ಅಲ್ಲಿ ದೊಡ್ಡ ದೊಡ್ಡ ಬೇಂಕುಗಳಿದ್ದರೂ, ಈ ಹುಂಡಿ ಪತ್ರಗಳ ಸಲುವಾಗಿಯೇ ಬೇರೆಯೇ ಹಲವು ಸಂಸ್ಥೆಗಳು ತೆರೆಯಲ್ಪಟ್ಟವು.

### ಕೋರ್ಟಿನ ವ್ಯವಹಾರದಲ್ಲಿ ಸೌಲಭ್ಯ

ಇದರಿಂದ ಕೋರ್ಟಿನ ವ್ಯವಹಾರವೂ ಸುಲಭವಾಗುವುದು. ಹುಂಡಿ ಪತ್ರದ ಮೂಲಕ ಹಣವನ್ನು ಕೊಡುವ ಸಂದರ್ಭದಲ್ಲಿ, ಕೆಲವು ಸಲ, ವ್ಯಾಜ್ಯಕ್ಕೆ ಹೋಗಬೇಕಾದ ಸಂಭವವು ಬಂದರೂ, ಹುಂಡಿ ಪತ್ರವನ್ನು ಪಡೆದವನು 'ಸಮ್ಮರಿ ಸೂಟ'ನ್ನು ಮಾಡಬಹುದು. 'ಸಮ್ಮರಿಸೂಟೆಂದರೆ, ಪ್ರತಿವಾದಿಯು, ಕೋರ್ಟಿನ ಅಪ್ಪಣೆಯಿಲ್ಲದೆ, ಅಥವಾ ಕೋರ್ಟಿನಲ್ಲಿ ಪ್ರತಿವಾದಿಯು ಹಣ ಡಿಪೊಸಿಟ್ ಮಾಡದೆ, ಪ್ರತಿವಾದಿಸಲೂ ಅತನಿಗೆ ಆಸ್ಪದವಿಲ್ಲದಾಗಿ ಅವನ ಮೇಲೆ ಡಿಕ್ರಿಯೇ ಆಗುವುದು. ಹೀಗೆ ಮಾಡುವುದರಿಂದ, ಹಣ, ಸಮಯ, ಮತ್ತು ಲೆಕ್ಕ ಪುಸ್ತಕಗಳ ಹಾಜರಿ ಮಾಡುವ ತೊಂದರೆ ಮೊದಲಾದ ಹಲವು ತೊಂದರೆಗಳು ಇಲ್ಲದೆ ಆಗುವುದರಿಂದ, ತೀರ್ಮಾನವು ಬಹಳ ಸುಲಭವಾಗಿಯೇ ತೀರುವುದು.

### ವ್ಯಾಪಾರ ವಹಿವಾಟುಗಳಲ್ಲಿ ಇದರ ಪರಿಣಾಮ

ಮೇಲೆ ಹೇಳಿದ ಎರಡು ವಿಧದ ಪ್ರಯೋಜನಗಳಲ್ಲದೆ, ವ್ಯಾಪಾರ ಮತ್ತು ಉದ್ಯೋಗಗಳಲ್ಲಿ ಇನ್ನೂ ಹೆಚ್ಚಿನ ಪ್ರಯೋಜನವು ಈ ಹುಂಡೀ ಪತ್ರದಿಂದ ಇದೆ. ಚೆಕ್ಕಿನಂತೆ ಹುಂಡೀ ಪತ್ರವೂ ಹಣದಂತೆ ವಹಿವಾಟು ಮಾಡುವರೆ ಒಂದು ಚಲಾವಣೆಯ ಸಾಧನವಾಗಿದೆ. ಇಂಗ್ಲೆಂಡಿನಲ್ಲಿ ಈ ಹುಂಡೀ ಪತ್ರವು ಆ ಪ್ರಾಂತದ ಇತರ ಹಣದ ಚಲಾವಣೆಯ ಸಾಧನಗಳಂತ ಅತೀ ಹೆಚ್ಚಿನ ಉಪಯೋಗದಲ್ಲಿದೆ.

ಹುಂಡಿ ಪತ್ರವು, ಹಣದಂತೆ ಚಲಾವಣೆಯ ಸಾಧನವಾಗಿ ಈಗ ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆದಿದೆ. ಚಲಾವಣೆಯು ಹೆಚ್ಚುವುದರಿಂದ ಹಣದ ಬೆಲೆಯು ಇಳಿಯುತ್ತದೆ. ಇದರಿಂದ ಬಡ್ಡಿಯ ದರವೂ ಕಡಿಮೆಯಾಗುವುದು. ಇದು ವ್ಯಾಪಾರಸ್ಥರಿಗೆ ಬಹಳ ಉಪಯೋಗಕರವಾದುದು. ಚಲಾವಣೆಯ ಸಾಧನವಾಗಿ ಹುಂಡಿ ಪತ್ರವು ಇಂದು ಹೆಚ್ಚುತ್ತಾ ಹೋಗುವುದರಿಂದ ಆ ಮೂಲಕ ಸಾಮಾನುಗಳ ಕ್ರಯವು ಹೆಚ್ಚುವುದೆಂಬುದೂ ವಿಚಾರಣೀಯ ವಿಷಯವಾಗಿದೆ. ಇದರಿಂದಲೇ ದೇಶದ ನಿಜವಾದ ಅಭಿವೃದ್ಧಿಯಾಗುವುದೆಂಬ ವಿಷಯವನ್ನು ನಾವು ತಿಳಿಯಬೇಕಾಗಿದೆ.

### ಮೊದಲ ಪ್ರಯೋಗ

ಇಂದು ಇದು ನಮ್ಮಲ್ಲಿ ಪರೀಕ್ಷಾರ್ಥವಾಗಿ ಮಾತ್ರ ರೂಢಿಗೆ ತರಲಾಗಿದೆ. ಆದರೆ ಇದರಿಂದ ಬೇರೆ ಕಡೆಗಳಲ್ಲಿ ದೊರೆತಿರುವ ಪ್ರತ್ಯಕ್ಷ ಪ್ರಯೋಜನವನ್ನು ನೋಡಿದರೆ ನಿಜವಾಗಿಯೂ ಈ ಬದಲಾವಣೆಯಲ್ಲಿ ನಮಗೂ ಬಹಳ ಪ್ರಯೋಜನವು ದೊರಕಬಹುದೆಂಬುದು ನಿರ್ವಿವಾದವಾಗಿದೆ. ಇಂಡಿಯದ ಪ್ರಾಮುಖ್ಯ ನಗರಗಳಲ್ಲಿ ಈ ಹುಂಡಿ ಪತ್ರದ ಪ್ರಯೋಗದಿಂದ ಹೆಚ್ಚಿನ ಪ್ರಯೋಜನವಾಗಬಹುದಾದ ಕಾರಣ, ಬೇಗನೇ ಇಂಡಿಯಾ ಸರಕಾರವು ಹುಂಡಿ ಪತ್ರದ ಸುವ್ಯವಸ್ಥೆಯ ಬಗ್ಗೆ ಕಾನೂನುಗಳನ್ನು ಮಾಡಬಹುದಾಗಿ ನಾವು ನಂಬುತ್ತೇವೆ.



# ನೋಟಗಳು

ಪೋಲೇಂಡಿನ ವಾರ್ತೆಯು ರೋಮಾಂಚಕವಾಗಿದೆ!

◈

ನಾಜೀ ಭೈರವನು ಪೋಲೆಂಡಿನಲ್ಲಿ ಪ್ರಳಯತಾಂಡವನ್ನು ಮಾಡುತ್ತಿದ್ದಾನೆ!

◈

೧೮೦೦೦ ಮಂದಿ ಪೋಲೆಂಡಿನ ನಾಗರಿಕರನ್ನು ಯಾವುದೊಂದೂ ವಿಚಾರಣೆಯಿಲ್ಲದೆ, ಬಂಡಾಯವೆದ್ದರೆಂಬ ಆರೋಪಣೆಯಿಂದ ನಾಜೀ ಸರಕಾರವು ನಿರ್ದಯವಾಗಿ ಗಲ್ಲಿಗೇರಿಸಿತು!

◈

ಇಷ್ಟರಿಂದಲೂ ತೃಪ್ತಿಯಾಗದೆ, ಹಲವು ಮಂದಿ ನಿರಪರಾಧಿಗಳ ಹೆಂಗುಸರನ್ನೂ, ಮಕ್ಕಳನ್ನೂ ಜರ್ಮನ್ ಸರಕಾರವು ವಧಿಸಿರುವುದು.

◈

ನಾಜೀಭೈರವನ ದಾಹವು ಇನ್ನೂ ಅಡಗಿಲ್ಲವಂತೆ! ಪೋಲರ ಭಾಷೆ, ಸಂಸ್ಕೃತಿಗಳೆಲ್ಲವನ್ನೂ ನೆಲಸಮ ಮಾಡಲು ನಿರ್ಧಾರ ಪೂರ್ವಕವಾಗಿ ಜರ್ಮನರು ಅಲ್ಲಿ ಯತ್ನಮಾಡುತ್ತಿದ್ದಾರೆ' ಎಂಬ ವಾರ್ತೆಯು ಬಂದಿದೆ!

◈

ಕರುಣೆಯಿಲ್ಲದ ಕೊಲೆಗಳಿಂದ ಹೀಗೆ ಜನಾಂಗದ ಜೀವ ಸತ್ವವನ್ನು ಹಿಂಡುವುದು ಸಾಧ್ಯವೇ?

◈

ಪಶುಶಕ್ತಿಯು ತಾತ್ಕಾಲಿಕವಾಗಿ, ಸ್ವಾತಂತ್ರ್ಯ ಪ್ರೇಮಿಗಳ ಚಟುವಟಿಕೆಗಳನ್ನು ಅದುಮಿ ಹಿಡಿಯಬಹುದು!

◈

ಆದರೆ, ಕ್ರಾಂತಿಯ ಉಜ್ವಲ ಜ್ವಾಲಾಮುಖಿಯನ್ನು ತಡೆಯಲು ಯಾವ ರಾಕ್ಷಸನಿಂದಲೂ ಸಾಧ್ಯವಾಗಲಾರದು.

◈

ಭಾರತದಲ್ಲಿಯೂ ಇಂತಹ ಒಂದು ಕಾಲವಿತ್ತು!

◈

ನಾದಿರ್ ಶಹಾ, ತೇಮೂರ್ ಲೇನ್, ಚೆಂಗಿಸ್ ಖಾನ್- ಇವರ ಭೀಕರ ಕೃತ್ಯಗಳನ್ನು ಇತಿಹಾಸಕಾರರು ರಕ್ತಾಕ್ಷರಗಳಲ್ಲಿ ಉಲ್ಲೇಖಿಸಿರುವರು!

◈

ಅಕ್ರಮದಿಂದ ಜನತೆಯನ್ನು ಆಳಲು ಆರಂಭಿಸಿದ ಸಾಮ್ರಾಜ್ಯಗಳು ನೀರಗುಳ್ಳೆಗಳಂತೆ ಅಲ್ಪಾವಧಿಯಲ್ಲಿಯೇ ಒಡೆದು ನಿರ್ನಾಮ ಹೊಂದಿದವು!

◈

ಸೆಕ್ಕೂರಿನ ದೊಂಬಿಯ ವಾರ್ತೆಯು ಅಖಿಲ ಭಾರತೀಯರ ಹೃದಯವನ್ನೂ ಭೇದಿಸುವಂತಹುದಾಗಿದೆ!

◈

ಹಿಂದುಗಳ ಮೇಲೆ ಮುಸ್ಲಿಮರು ಮಾಡಿದ ಅನಾಚಾರವು ಅಲ್ಲಿ ಎಲ್ಲೆ ಮೀರಿದೆ!

◈

೧೬೦ಕ್ಕಿಂತ ಹೆಚ್ಚು ಹಿಂದುಗಳು ವಧೆಯಾಗಿರುವರೆಂದೂ, ೧೬೪ ಹಿಂದುಗಳ ಮನೆಗಳು ಸುಡಲ್ಪಟ್ಟವೆಯೆಂದೂ, ಒಟ್ಟು ೮ ಲಕ್ಷ ರೂಪಾಯಿಗಳಷ್ಟು ಹಿಂದುಗಳಿಗೆ ನಷ್ಟವಾಗಿದೆಯೆಂದೂ ಸರಕಾರದ ವರದಿಯಿಂದಲೇ ತಿಳಿದು ಬಂದಿದೆ!

◈

ಬಂಗಾಳದ ನೊಹಕ್ಕಾಳಿಯೆಂಬಲ್ಲಿ ಹಿಂದುಗಳ ಮೇಲೆ ಮುಸ್ಲಿಮರು ಮಾಡಿದ ಅನ್ಯಾಯಗಳ ಕುರಿತು, ಬಂಗಾಳ ಎಸೆಂಬ್ಲಿಯಲ್ಲಿ ತೀವ್ರ ಚರ್ಚೆಯುಂಟಾಯಿತು!

◈

ಕಾಂಗ್ರೆಸು ಮಂತ್ರಿಮಂಡಲಗಳಿಂದ ಮುಸ್ಲಿಮರಿಗೆ ಅನ್ಯಾಯವಾಯಿತೆಂದು ಕೂಗೆಬ್ಬಿಸಿದವರು ಬಂಗಾಳದ ಪ್ರಧಾನರಾದ ಹಕ್ಕಂ!

◈

'ಸುಮ್ಮನೆ ಹಾಗೆಂದು ಅರಚಬೇಡಿ, ಬನ್ನಿ, ಸಿದ್ಧಪಡಿಸಿರಿ' ಎಂದು ಅವರಿಗೆ ಆಹ್ವಾನ ಕೊಟ್ಟಿದ್ದರು, ನೆಹರುಗಳು!

◈

ಆಹ್ವಾನವನ್ನು ಅಂಗೀಕರಿಸದೆ ಹಕ್ಕರು ಆಗ ಕೇವಲ ಪುಕ್ಕಲತನವನ್ನೇ ಪ್ರಕಟಿಸಿದ್ದರು!

◈

ಅಂತಹ ಹಕ್ಕರ ಸಾಮ್ರಾಜ್ಯದಲ್ಲಿಯೇ ಹಿಂದುಗಳ ಮೇಲೆ ಬಹಳ ಅಕ್ರಮಗಳು ನಡೆಯುತ್ತಿವೆಯೆಂಬುದು ಶೋಚನೀಯವಾದ ವಾರ್ತೆ!

◈

ತನ್ನ ಮಡಿಲಲ್ಲಿ ಕೊಳೆತ ಕುಂಬಳಕಾಯಿಯನ್ನೇ ಕಟ್ಟಿಕೊಂಡ, ಅನ್ಯರು ಹೊತ್ತುಕೊಂಡಿರುವ ಕೇವಲ ಹೊರೆಯನ್ನು ನೋಡಿ ಅಣಕಿಸುವುದೂ ಕೆಲವರ ಹುಟ್ಟುಗುಣವಷ್ಟೆ?

◈

ಹಕ್ಕರು ಮದಿರಾಪುರವೆಂಬಲ್ಲಿ ಒಂದು ಪ್ರಚಂಡ ಭಾಷಣ ಮಾಡಿದರು!

◈

'ಲಕ್ಷಾಂತರ ಮಂದಿಯು ನನ್ನನ್ನು ವಿರೋಧಿಸಿದರೂ ನಾನು ನನ್ನ ಹಜ್ಜೆ ಹಿಂದಿಡಲಾರೆ; ನಾನು ಮುಸ್ಲಿಂ ಜನತೆಯ ಏಳಿಗೆಗಾಗಿ ನಿರಂತರ ಯತ್ನಿಸುವೆನು, ಹಲವರು ನನ್ನನ್ನು ಕೆರಳಿಸಿರುತ್ತಾರೆ, ನನ್ನನ್ನು ಕೆರಳಿಸದಿದ್ದರೆ ನಾನು 'ನಾನ್ಸೆನ್ಸ್' ಮಾತನಾಡುವುದಿಲ್ಲ. ಅವರು ನನ್ನನ್ನು ಟೀಕೆಮಾಡುತ್ತಾ ಹೋದರೆ, ಅವರ ಮಾತುಗಳ ಕಡೆಗೆ ನಾನು ಕಿವಿಗೊಡುವ ಹಾಗೂ ಇಲ್ಲ!' ಇವು ಅಲ್ಲಿ ಹಕ್ಕರು ಮಾಡಿದ ಉದ್ಗಾರಗಳು!

◈

ಲಕ್ಷಾಂತರ ಮಂದಿ ವಿರೋಧಿಸಿದರೂ, ಮುಸ್ಲಿಮರಿಗಾಗಿ ತಾನು ನಿರಂತರ ಯತ್ನ ಮಾಡುವವನೆಂಬುದೇ ಹಕ್ಕರ ದೃಢ ನಿಶ್ಚಯ!

ಹಕ್ಕರ ಸಾಮ್ರಾಜ್ಯದಲ್ಲಿ ಹಿಂದುಗಳಿಗೆ ಅಕ್ರಮವಾಗುತ್ತಿದೆಯೆಂದು ಬಂಗಾಳ ಎಸೆಂಬ್ಲಿಯಲ್ಲಿ ದೂರು ಬಂದಿದೆ!

◈

ನನ್ನನ್ನು ಕೆರಳಿಸಿದರೆ, ನಾನು 'ನಾನ್ಸೆನ್ಸ್' ಮಾಡಿಬಿಡುವೆನೆಂದು ಹಕ್ಕರು ಮೊದಲೇ ಹೆದರಿಕೆಯನ್ನು ಹುಟ್ಟಿಸಿರುವರು

◈

ನನ್ನನ್ನು ಟೀಕಿಸಿದರೆ ಅದಕ್ಕೆ ಕಿವಿಗೊಡಲಾರೆನೆಂಬುದೇ ಹಕ್ಕರು ತೊಟ್ಟಿರುವ ಹಠ!

◈

ತನ್ನ ಆಡಳಿತದಲ್ಲಿ ಆಗುವ ಅನ್ಯಾಯಗಳ ಕುರಿತು ತನ್ನನ್ನು ಪ್ರಶ್ನಿಸಬಾರದೆಂಬುದು ಅವರ ಮಾತಿನ ಇಂಗಿತವೆ?

◈

ಪ್ರಶ್ನಿಸಿದರೆ ಅನ್ಯಾಯಗಳು ಇನ್ನಷ್ಟು ಹೆಚ್ಚಾಗಬಹುದೆಂಬುದು ಅವರ ಬೆದರಿಕೆಯೋ?

◈

ಮುಸ್ಲಿಮರ ಉದ್ಧಾರಕ್ಕಾಗಿ ಯತ್ನ ಮಾಡುವ ಹಕ್ಕರನ್ನು ಹಿಂದುಗಳು ನಿಜವಾಗಿಯೂ ಕೆರಳಿಸಬಾರದು!

◈

ಪ್ರಜಾಪ್ರಭುತ್ವ ರಾಜ್ಯದಲ್ಲಿ ಅಧಿಕಾರಕ್ಕೇರುವವರಿಗೆ ಜಾತೀಯತೆಯ ಸಂಕೋಚವಾದ ಮನೋವೃತ್ತಿಯಿರುವುದಿಲ್ಲ

◈

ಭಾರತವು ಪ್ರಜಾಪ್ರಭುತ್ವ ರಾಜ್ಯಪದ್ಧತಿಗೆ ಯೋಗ್ಯವಲ್ಲವೆಂಬ ಜಿನ್ನರ ನಿರ್ಧಾರಕ್ಕೆ ಹಕ್ಕರು ಒಂದು ಯೋಗ್ಯ ನಿದರ್ಶನವಾಗಿದ್ದಾರೆ

◈

ಇಂದು ಎಲ್ಲರ ದೃಷ್ಟಿಯೂ ತಿರಿಗಿ ಡಿಲ್ಲಿಯ ಕಡೆಗೆ ಸರಿದಿದೆ!

◈

ಗಾಂಧಿಜಿಯವರು ವೈಸರಾಯರ ಭೇಟಿಗೆಂದು ಹೊರಟಿರುವರು

◈

ಪಟನಾ ಸಮಸ್ಯೆಯು ಇದರಿಂದ ಪರಿಹಾರವಾಗಬಹುದೇ ಎಂದು ಹಲವರ ಕುತೂಹಲ!

◈

ರಾಷ್ಟ್ರದ ಮುಖಂಡರಾರೂ ಈ ಭೇಟಿಯ ವಿಷಯದಲ್ಲಿ ಹೆಚ್ಚು ಆಶೆಗೊಂಡಿರುವುದಾಗಿ ಕಂಡುಬರುವುದಿಲ್ಲ.

◈

ಆದರೆ, ಗಾಂಧಿಜಿಯವರು ವೈಸರಾಯರ, ಇತ್ತೀಚಿಯ ಪ್ರಕಟಣೆಯಲ್ಲಿ ರಾಜಿಯ ಅಣುಗಳನ್ನು ಕಂಡವರು!

◈

ಗಾಂಧಿಜಿಯವರು ಭಾರತೀಯರ ಸ್ವಾತಂತ್ರ್ಯ ಸಂಗ್ರಾಮದ ಆವೇಶವನ್ನು ಈಗ ಕೆಡಿಸುತ್ತಿರುವರೆಂದು ಹಲವರು ಹೇಳುತ್ತಿದ್ದಾರೆ.

'ನಾನು ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಲು ಜನತೆಗೆ ಇರುವ ಆವೇಶವನ್ನು ಹಾಳುಮಾಡುವುದಿಲ್ಲ; ಆದರೆ, ಅಂತಹ ಕಾದಾಟದ ಸಂದರ್ಭವು ಬರದಂತೆ ತಪ್ಪಿಸಲು ನೋಡುತ್ತೇನೆ' ಎನ್ನುತ್ತಾರೆ ಗಾಂಧಿಜಿಯವರು!

◈

ಹಿಂದೆ ಬಹಳ ಸಲ ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕಿಳಿದವರು ಮಹಾತ್ಮರು!

◈

ಇಂದು ಹೋರಾಟವನ್ನು ತಪ್ಪಿಸಲು ಯತ್ನ ಅವರು ಮಾಡುತಿದ್ದಾರೆ

◈

ಇಷ್ಟು ಸುಲಭದಲ್ಲಿ ಹೋರಾಟವು ತಪ್ಪಬಹುದೇ ಎಂಬುದು ಹಲವರಿಗೆ ಒಂದು ಸಂಶಯ!

◈

ಖಂಡಿತ ತಪ್ಪಿಸುವನೆಂದು ಗಾಂಧಿಜಿಯವರೂ ಹೇಳಿಲ್ಲ

◈

ತಪ್ಪಿಸಬಹುದಾದ ಎಲ್ಲಾ ಯತ್ನಗಳನ್ನೂ ಅವರು ಮಾಡುತ್ತಿರುವರು ಮಾತ್ರ!

◈

ಕೊನೆಯ ಕಾಲಕ್ಕೆ, ಅವರೇ ತಯಾರಿಸಿದ ಬಾಣ, ಸತ್ಯಾಗ್ರಹವು ಇದ್ದೇ ಇದೆ!

◈

ಆದರೆ ಸಾರಿ ಕೊಂದರೆ ಪಾಪವಿಲ್ಲವೆಂದು ತಿಳಿದವರ ಹೇಳಿಕೆ

ಅರುಣ

ಗರ್ಭಾಶಯ ರೋಗನಿವಾರಿಣಿ

ಋತುಶೂಲೆ
ಅಕಾಲ ಬಹಿಷ್ಟೆ
ಹೆಚ್ಚು ಸ್ರಾವ
ಬಂಜೆತನ
ಬಿಳಿಸೆರಗು
ಕುಸುಮವ್ಯಾಧಿ
ಗರ್ಭಸ್ರಾವ
ಗರ್ಭಪತನ

ಮುಂತಾದ ಸಕಲ ವ್ಯಾಧಿಗಳನ್ನೂ ಗುಣಪಡಿಸಿ, ಸ್ತ್ರೀಯರಿಗೆ ಕೊರತೆಯಿಲ್ಲದ ಆರೋಗ್ಯವನ್ನೂ, ಅವಯವ ಸೌಷ್ಠವವನ್ನೂ ಸತ್ಸಂತಾನವನ್ನೂ ಉಂಟುಮಾಡುವುದು

ಎಲ್ಲಾ ಕೆಮಿಸ್ಟರಲ್ಲೂ ಸಿಗುವುದು

ತಯಾರಿಸುವವರು.

ಆಯುರ್ವೇದಾಶ್ರಮಂ,
ಮದರಾಸು

ಸ್ಥಳೀಯ ಏಜಂಟರು.

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ-ಮಂಗಳೂರು

# ವಿಜ್ಞಾನಯುಗ

## ಹೊಟ್ಟೆಯೊಳಗೆ ಹಾವು ಬದುಕಿ ಬೆಳೆಯಿತು

### ಯುಗೋಸ್ಲೋವಿಯದಲ್ಲಿ ಒಂದು ವಿಚಿತ್ರ ಘಟನೆ

ಯುಗೊಸ್ಲೇವಿಯದಲ್ಲಿ ಒಂದು ವಿಚಿತ್ರ ಕಥೆಯು ನಡೆದಿದೆ.

ಅಲ್ಲಿ ಇಸ್ಕ್ರೋವೇಕ್ ಎಂಬುದೊಂದು ಹಳ್ಳಿ! ನಿಕಾಸ್ಲಾಂಕೋವಿಕನೆಂಬ ಮುದುಕ ರೈತನೊಬ್ಬನು ಅಲ್ಲಿ ವಾಸವಾಗಿದ್ದ. ಒಂದು ದಿನ ಆತನು ನೀರು ಕುಡಿಯುತ್ತಿರಲು ಅದರೊಡನೆ ಒಂದು ಹಾವು ಆತನ ಹೊಟ್ಟೆಯನ್ನು ಸೇರಿತು ಅಲ್ಲಿ ಅದು ಒಂದು ವರ್ಷದ ವರೆಗೆ ಅದು ಬೆಳೆಯಿತು.

ನಿಕಾನಿಗೆ ತಾನು ಹಾವು ನುಂಗಿದ್ದ ವಿಷಯ ತಿಳಿದಿರಲಿಲ್ಲ. ಒಂದು ವರ್ಷದ ಸಮಯ ಕಳೆದ ಮೇಲೆ ಆತನಿಗೆ ಜೋರು ಹೊಟ್ಟೆನೋವು ಆಗಲು ಆರಂಭವಾಯಿತು ಹೊಟ್ಟೆಯೊಳಗಡೆ ಯಾವುದೋ ಜೀವಿಯು ಅತ್ತಿತ್ತ ಸಂಚರಿಸುತ್ತಿರುವಂತೆ ಆತನಿಗೆ ಭಾಸವಾಯಿತು. ನೋವು ದಿನದಿಂದ ದಿನಕ್ಕೆ ತಡೆಯಲಾರದಾಯಿತು. ಬಹಳ ಸಮಯದ ವರೆಗೆ ಆತನು ಡಾಕ್ಟರರಿಗೆ ತೋರಿಸಲೇ ಇಲ್ಲ ಸಾಮಾನ್ಯ ಹಳ್ಳಿಯ ರೈತರ ಅವಸ್ಥೆಯಂತೆ ಆತನೂ ಊರ ವೈದ್ಯರ ಮದ್ದುಗಳನ್ನೇ ಮಾಡುತ್ತಿದ್ದನು

ಹಳ್ಳಿಯ ವೈದ್ಯರ ಸೂಚನೆಯಂತೆ, ಆತನು ಹಲವು ಬಗೆಯ ಸಾಫೀಯುಗಳನ್ನೂ, ಔಷಧಿ ಸತ್ವಗಳನ್ನೂ ಕುಡಿಯಲು ಆರಂಭಿಸಿದನು ಅದರಿಂದೆಲ್ಲಾ ಯಾವ ಪ್ರಯೋಜನವೂ ಆಗಲಿಲ್ಲ. ಪೈಪಿನಲ್ಲಿ ಒಮ್ಮೆ ಹೊಗೆ ಸೇದಿದಾಗ, ಒಂದು ಸಲ ಬ್ರಾಂಡಿ ಕುಡಿದಾಗ ಅವನಿಗೆ ಸ್ವಲ್ಪ ಸಮಾಧಾನವಾಗುತ್ತಿತ್ತು ಇದೇ ಅವನ ಜೀವಾವಧಿ ಅಭ್ಯಾಸವಾಯಿತು

ಅಷ್ಟರಲ್ಲಿ ಒಬ್ಬ ಬುದ್ಧಿವಂತನಾದ ಕುರುಬನು ಆತನಿಗೆ ಉಪವಾಸಮಾಡಬೇಕೆಂದು ಸೂಚಿಸಿದನು ನಿಕಾನು ಹಾಗೆಯೇ ಮಾಡಿದನು. ಒಂದು ತೊಟ್ಟು ನೀರು ಸಹ ಕುಡಿಯದೆ ಉಪವಾಸ ಮಾಡಿದನು. ಉಪವಾಸದಿಂದ ಹೊಟ್ಟೆನೋವು ತಡೆಯಲಾರದವನಾದನು.

ಅಷ್ಟರಲ್ಲಿ ಆ ಕುರುಬನು ಸುಡುವ ಹಾಲನ್ನು ಕುಡಿಯಲು ಹೇಳಿದನು. ಜೀವನದಲ್ಲಿ ನಿರಾಶೆಗೊಂಡಿದ್ದ ನಿಕಾನು ಸುಡುತ್ತಿರುವ ಹಾಲನ್ನೇ ನುಂಗಿಬಿಟ್ಟನು.

ಅಷ್ಟರಲ್ಲಿಯೇ ಒಂದು ವಿಚಿತ್ರವು ನಡೆಯಿತು, ಹೊಟ್ಟೆಯಲ್ಲಿ ಬಾವು ಬಂತು. ಅದರಿಂದ ಒಂದು ಹಾವು ಹೊರಟಿತು. ಅದು ಒಂದು ಫೂಟು ದೀರ್ಘವಿತ್ತು. ಮಂತ್ರದಿಂದ ಗುಣಪಡಿಸಿದಂತೆ ನಿಕಾನ ನೋವು ಗುಣವಾಯಿತು. ಆ ಘಟನೆ ನಡೆದಾಗ ನೆರೆಕರೆಯವರೆಲ್ಲಾ ಬಂದು ಸೇರಿದ್ದರು.

ಅವರು ಕೂಡಲೇ ಆ ಸರ್ಪವನ್ನು ಕೊಂದುಹಾಕಿಬಿಟ್ಟರು. ಈಗ ಅದನ್ನು ಒಂದು ಬಟ್ಟಿ ಸೆರಾಯಿಯಲ್ಲಿ ಹಾಕಿಟ್ಟಿರುವರು. ಇಂದೂ ಅದನ್ನು ಅಲ್ಲಿ ಪ್ರದರ್ಶಿಸುತ್ತಾರೆ

## ಹೊಸ ಮೋಟರು

೧೯೬೦ನೆ ಇಸವಿಯ ಮೋಟರ ಕಾರು ಹೇಗಿರಬಹುದು? ಅದನ್ನು ತಿಳಕೊಳ್ಳುವ ಕುತೂಹಲವು ಪ್ರತಿಯೊಬ್ಬರಿಗೆ ಇರುತ್ತದೆ. ಅಮೇರಿಕದ ವಿಜ್ಞಾನಿಗಳಾದ ಡಾಕ್ಟರ ಸಿಬ್ನೇ ಎಂಬವರು ಈ ವಿಷಯವಾಗಿ ತಮ್ಮ ವಿಚಾರಗಳನ್ನು ಪ್ರಕಟ ಮಾಡುತ್ತ—ಆ ಸಮಯದ ಮೋಟರ ಗಾಡಿಯ ಭಾರವು ಈಗಿನದಕ್ಕಿಂತ ಕಾಲಂಶ ಮಾತ್ರ ಆಗಿರುವದೆಂದೂ, ಅದರ ವೇಗವು ಈಗಿನದಕ್ಕಿಂತ ಎರಡುಪಾಲು ಆಗುವುದೆಂದೂ, ಚಲಿಸುವಾಗ ಸ್ವಲ್ಪಾಗಿದ್ದಷ್ಟೆ ನಿಶ್ಶಬ್ದವಾಗಿರುವುದೆಂದೂ ಕ್ರಯವು ಐನೂರು ರೂಪಾಯಿಗಳಿಗಿಂತ ಕಡಿಮೆಯಾಗಬಹುದೆಂದೂ ಹೇಳಿದ್ದಾರೆ ಅಂದ ಮೋಟರನ್ನು ನಡೆಸಲಿಕ್ಕೆ ಪೆಟ್ರೋಲು ಅಥವಾ ಎಣ್ಣೆಯ ಅಗತ್ಯವು ಇರುವದಿಲ್ಲ ಅದು ದ್ರವೀಕರಿಸಿದ ಅನಿಲಗಳ ಮೂಲಕ ನಡೆಯುವುದನ್ನುವರು.

ಈ ಮೋಟರ ಗಾಡಿಗೆ ಮೂರೇ ಗಾಲಿಗಳು ಇರುತ್ತವೆ ಇದರಿಂದ ಮೋಟರಿನ ಚಲನೆಗೆ ಬಹಳ ಅನುಕೂಲವಾಗುತ್ತದೆ ಅದಕ್ಕೆ ಬ್ರೇಕುಗಳೂ ಗಿಯರುಗಳೂ ಇರುವುದಿಲ್ಲ ಯಂತ್ರದ ಚಲನೆಯಲ್ಲಿ ಸ್ವಲ್ಪ ಮಾತ್ರ ಬದಲಾವಣೆಯಾಗುವುದರಿಂದ ಕಾರು ತನ್ನಷ್ಟಕ್ಕೆ ನಿಲ್ಲುತ್ತದೆ. ಮೋಟರ ಚಲನೆಗೆ ಬೇಕಾದ ಅನಿಲಗಳು ಬಹಳ ಅಗ್ಗದಲ್ಲಿ ತಯಾರಾಗಬಲ್ಲವು ಆದ್ದರಿಂದ ಆ ಸಮಯ ಮೋಟರ ಚಲನೆಯ ಖರ್ಚೂ ಬಹಳ ಕಡಿಮೆಯಾಗಿ ಇರುತ್ತದೆ. ಈ ಕಾರಣದಿಂದ ಆಗ್ಗೆ ಬಡವರಾದವರಿಗೆ ಸಹ ಮೋಟರುಗಳನ್ನಿಟ್ಟುಕೊಳ್ಳುವ ಸೌಭಾಗ್ಯವು ಪ್ರಾಪ್ತವಾಗಬಹುದೆಂದು ಅವರ ಅಭಿಪ್ರಾಯ.

## ಉಬ್ಬಸಕ್ಕೆ ಜೇನು

ಜೇನಿನಲ್ಲಿರುವ ಔಷಧಿ ಗುಣವು ಸರ್ವಸಾಮಾನ್ಯ ಎಲ್ಲರಿಗೆ ತಿಳಿದಿರುತ್ತದೆ ಆದರೆ ಅದು ಉಬ್ಬಸ ನಿವಾರಣೆಗೂ ಉಪಯುಕ್ತವಾಗಿದೆ ಎಂಬುದು ಇತ್ತೀಚೆಗೆ ಗೊತ್ತಾಗಿದೆ ಕೋಶವ್ಯಾಧಿಗಳ ತಜ್ಞರಾದವರು ಬಹಳ ವರ್ಷಗಳಿಂದ ಶೋಧನೆಯನ್ನು ಮಾಡಿ, ಜೇನಿನ ಸಂಪರ್ಕವಾದ ಗಾಳಿಯನ್ನು ಸೇದಿಕೊಳ್ಳುತ್ತಿರುವುದರಿಂದ, ಶ್ವಾಸೋಚ್ಛ್ವಾಸವು ಸುಲಭವಾಗುತ್ತದೆಯೂ, ಅದರಿಂದ ದೀರ್ಘಶ್ವಾಸವನ್ನೂ ತೆಗೆದುಕೊಳ್ಳಬಹುದೆಂದೂ ಕಂಡುಕೊಂಡಿದ್ದಾರೆ ಉಬ್ಬಸದ ಆರಂಭಾವಸ್ಥೆಯಲ್ಲಿ ಒಂದು ಬಟ್ಟಲಿನಲ್ಲಿ ತುಂಬ ಜೇನನ್ನು ಇಟ್ಟುಕೊಂಡು, ಅದರ ಮೇಲಿನ ಗಾಳಿಯನ್ನು ಸೇದಿಕೊಳ್ಳುವುದರಿಂದ ಪ್ರಯೋಜನವು ಕಂಡುಬಂದಿದೆ

## ಸೋಯಾಬೀನುಗಳಲ್ಲಿ ಆಹಾರಾಂಶ

ಶಾಕಾಹಾರಿಗಳಿಗೆ ಸೋಯಾ ಕಾಳುಗಳು ಅತ್ಯುಪಯುಕ್ತವಾಗಿರುವುವು ಈ ಕಾಳುಗಳಲ್ಲಿ ಮನುಷ್ಯನ ಶರೀರ ಧಾರಣೆಗೆ ಅವಶ್ಯಕವಾದ ಬಲಕಾರಿ ಪದಾರ್ಥಗಳು, ಹಿಟ್ಟು ಸಕ್ಕರೆಗಳು, ಖನಿಜಗಳು, ಲವಣಗಳು ಮತ್ತು ಜೀವಾತುಗಳು ಯಥೇಷ್ಟ ಪರಿಮಾಣದಲ್ಲಿ ಇರುತ್ತವೆ. ಈ ಕಾಳುಗಳ ಹಾಲು ದನದ ಹಾಲಿಗಿಂತಲೂ ಉತ್ತಮವಾಗಿರುವುದು ಚೀನಿಯರು, ಜಪಾನಿಯರು ಶತಮಾನಗಳಿಂದ ಸೋಯಾ ಹಾಲನ್ನು ಉಪಯೋಗಿಸುತ್ತ ಬಂದಿದ್ದಾರೆ ಸೋಯಾದಲ್ಲಿರುವ ಬಲಕಾರಿ ಪದಾರ್ಥವು ಅಮೂಲ್ಯವಾಗಿರುವುದು ಅದರಲ್ಲಿ ಎ, ಬಿ, ಡಿ, ಜೀವಾತುಗಳೂ ಲವಣಗಳೂ ಇರುತ್ತವೆ ಪೊಟಾಶಿಯಂ, ಸೋಡಿಯಂ, ಕೆಲ್ಸಿಯಂ, ಮೆಗ್ನೇಶಿಯಂ, ರಂಜಕ ಮೊದಲಾದ ಧಾತುಗಳೆಲ್ಲ ಈ ಕಾಳುಗಳಲ್ಲಿ ಜೀರ್ಣವಾಗುವ ಸ್ಥಿತಿಯಲ್ಲಿ ತಕ್ಕ ಪರಿಮಾಣದಲ್ಲಿ ಇರುತ್ತವೆ ಸೋಯಾ ಕಾಳುಗಳಲ್ಲಿರುವಂಥ ಉತ್ಕೃಷ್ಟ ಆಹಾರಾಂಶವು ಇರುವ ಬೇರೆ ಕಾಳುಗಳು ಬಹಳ ಅಪರೂಪವಾಗಿರುವವು


**ಸ್ವದೇಶಾಭಿಮಾನಿಗೆ**

ಚಂದಾದಾರರಾಗಿರಿ



# A well-rounded programme of SAVING

## DO YOU WANT YOUR MONEY TO GROW?

If so, this should interest you

On the top of all possible ideas of lifting yourselves financially, stand the Syndicate's time-tested thrift schemes for guaranteed security

We have a few select plans which enable any man to fully enjoy the fruit of his labours. Study them, join any that suits you and see what great benefit you derive

The Syndicate keeps pace with the times by providing a service that fully meets any sort of need of the society This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

**The Canara Industrial & Banking Syndicate, Limited.**

***Head Office:-UDIPI, S. India.***

## ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾ. 11-2-'40ರಿಂದ ತಾ. 27-2-'40ರ ವರೆಗೆ

**ಶ್ರವಣ ಬೆಳುಗುಳದಲ್ಲಿ ಶ್ರೀ ನೇಮಿತೀರ್ಥಂಕರ ಪಂಚಕಲ್ಯಾಣ ಮಹೋತ್ಸವ**

ಮತ್ತು

## "ಶ್ರೀ ಗೋಮಟೇಶ್ವರ ಸ್ವಾಮಿ ಮಹಾಮಸ್ತಕಾಭಿಷೇಕ"

ತಾರೀಕು 11—2—40ರಿಂದ ತಾರೀಕು 27—2—40ರ ವರೆಗೆ ಶ್ರವಣ ಬೆಳುಗುಳದಲ್ಲಿ ಬಲು ವಿಜೃಂಭಣೆಯಿಂದ ನಡಿಯಲಿರುವ ಶ್ರೀ ಗೋಮಟೇಶ್ವರ ಸ್ವಾಮಿ ಮಹಾಮಸ್ತಕಾಭಿಷೇಕಕ್ಕೆ ಹೋಗುವ ಯಾತ್ರಿಕರ ಅನುಕೂಲತೆಗಾಗಿ ನಾವು ಸ್ಪೆಷಲು ಸರ್ವಿಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡು ಮಾಡಿರುತ್ತೇವೆ

| | ರೂ ಆ ಪೈ |
|---|---|
| ಮಂಗಳೂರಿನಿಂದ—ಉಪ್ಪಿನಂಗಡಿಗಾಗಿ-ಹಾಸನ ಶ್ರವಣ ಬೆಳುಗುಳಕ್ಕೆ ಚಾರ್ಜು | 4- 0-0 |
| ಮೂಡಬಿದ್ರೆಯಿಂದ—ಗುರುವಾಯನಕೆರೆ ಚಾರ್ಮಾಡಿ ಗಡಿಗಾಗಿ ಮೂಡುಗೆರೆ ಹಳೇಬೀಡು ಅರಸಿಕೆರೆಗಾಗಿ ಹಾಸನ ಶ್ರವಣ ಬೆಳುಗುಳಕ್ಕೆ | 4-12-0 |
| ಮೂಡಬಿದ್ರೆಯಿಂದ—ಚಾರ್ಮಾಡಿಗಡಿಗಾಗಿ-ಮೂಡುಗೆರೆ ಬೇಲೂರು ಹಾಸನಕ್ಕಾಗಿ ಶ್ರವಣ ಬೆಳುಗುಳಕ್ಕೆ | 4- 8-0 |
| ಮೂಡಬಿದ್ರೆಯಿಂದ—ಚಾರ್ಮಾಡಿಗಡಿಗಾಗಿ-ಮೂಡುಗೆರೆ ಚಿಕ್ಕಮಂಗಳೂರು ಹಾಸನಕ್ಕಾಗಿ ಶ್ರವಣ ಬೆಳುಗುಳಕ್ಕೆ | 4-12-0 |

ಯಾತ್ರಿಕರ ಅನುಕೂಲತೆಗಳ ಬಗ್ಗೆ ಯೋಗ್ಯ ಏರ್ಪಾಡು ಮಾಡಲಾಗುವುದು

ಹೆಚ್ಚಿನ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು:—

***JOINT MANAGERS,***

**The Combined Booking Agency,** MANGALORE. **The Joint Booking Office,** KODIALBAIL.

(Regd)

## ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಬುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ತಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ.
ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

## HOUNSA

## ಹಂಸಾ ಸ್ನೋ

**ಮತ್ತು**

## ಬ್ರಿಲ್ಲಿಂಟೈನ್

ಉಪಯೋಗಿಸಿರಿ

**ಕೆ. ವೆಂಕಟೇಶ ಬಾಳಿಗ,**
**ಗೋಳಿಕಟ್ಟಾ ಬಜಾರ್, ಮಂಗಳೂರು.**



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

**ಪಿ. ಸಿ. ಎ. ಅಂಡ್ ಕೋ,**
ಆಯುರ್ವೇದಿಕ್ ಸದನ, ಪೆರಿಡೇಪಿ,
P. O. Peridepi (ಸೆಳ್ಳೂರು ದ.)


## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ | 1—13—0 | 1—14—0 |
| ,, ದುಯಂ ,, ,, | | |
| ,, ಅವ್ವಲ್ ಸುಗ್ಗಿ ,, | | — |
| ,, ದುಯಂ ,, ,, | | — |
| ಅಕ್ಕಿ ಅವ್ವಲ್ ಗುಡ್ಡು ,, ಹಳ್ತು | 4—14—0 | |
| ,, ದುಯಂ ,, ,, | 4—8—0 | |
| ,, ಅವ್ವಲ್ ಸುಗ್ಗಿ ,, | 4—8—0 | 4—8— |
| ,, ದುಯಂ ,, ,, | 4—4—0 | 4—6—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 57—8—0 |
| ,, ಸಿಪ್ಪೆ ಇದ್ದದು ,, | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 86—0— |
| ,, ದಿಲ್ ಪಸಂದಿ ,, | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಯುದ್ದ ಅಡಿಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 8—0—0 | 8—12—0 |
| ಕಬ್ಬಿನ ಬೆಲ್ಲ ಖಂಡಿಗೆ | 37—8—0 | 50—0—0 |
| ಒಳ್ಳೇಮೆಣಸು ಹಂಡ್ರೆಡ್ವೇಟಿಗೆ | 19—0—0 | 20—8—0 |

Date 2-2-1940 ವಾರ್ಷಿಕ ಚಂದಾ ರೂ. 2-0-0 ಅಂಚೆವೆಚ್ಚ ಸಹ ರೂ. 2-13-0 Regd. No. M340

# ಸ್ವದೇಶಾಭಿಮಾನಿ

ಸಂಪುಟ 34] ಶುಕ್ರವಾರ 2-2-1940 [ಸಂಚಿಕೆ 5

## The Bombay Life Assurance Company, Ltd.

(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live-today-a few years more-when you are old?

If you die-to your family and dependants?

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | |
|---|---|
| Completed Business | Rs. 1,44,91,000 |
| Life Assurance Fund | Rs. 1,17,69,748 |
| Total Assets | Rs. 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

Bombay Life Building,

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

which will tone the nervous system, build healthy tissues and enrich the blood.

**Thus keeps you fresh and sprightly.**

**Bhuvanendra Products, Ltd.,**

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

## ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.

ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**

ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalore

Estd. 1906

# ಸ್ವದೇಶಾಭಿಮಾನಿ

# SWADESHABHIMANI

KANNADA ILLUSTRATED WEEKLY

## ಆತ್ಮಸಾಕ್ಷಾತ್ಕಾರದ ಉಪಾಯ

### ಶ್ರೀ ರಮಣಮಹರ್ಷಿಗಳ ಬೋಧನೆ

ತನಗೆ ಆತ್ಮಸಾಕ್ಷಾತ್ಕಾರವಾದೀತೇ? ತಾನು ಚಿರಶಾಂತಿಯನ್ನೂ ನಿಜ ಸುಖವನ್ನೂ ಅನುಭವಿಸುತ್ತಿರಬಹುದೇ?— ಎಂದು ಪ್ರತಿ ಒಬ್ಬರು ವಿಚಾರಿಸುತ್ತಿರುತ್ತಾರೆ. ತಾಪತ್ರಯಗಳಿಂದ ಪೀಡಿತನಾದ ಮನುಷ್ಯನು ಹೀಗೆ ಪ್ರಶ್ನಿಸುವದು ಸಹಜವಾಗಿದೆ. ಆದರೆ ಈ ಪ್ರಶ್ನೆಗಳಿಗೆ ಉತ್ತರವೇನು? ಅದನ್ನು ತಿರುವಣ್ಣಾಮಲೆಯ ಶ್ರೀ ರಮಣ ಮಹರ್ಷಿಗಳು ಎಲ್ಲರಿಗೂ ಮುಂದಟ್ಟಾಗುವಂತೆ ತಿಳಿಸಿದ್ದಾರೆ.

### ನೀನೇ ಆತ್ಮ

ಆತ್ಮ ಸಾಕ್ಷಾತ್ಕಾರವಾಗುವದೆಂಬ ಮಾತಿಗೆ ಅರ್ಥವೇ ಇಲ್ಲ. ಅದರ ಸಾಕ್ಷಾತ್ಕಾರವಾಗಲಿಕ್ಕೆ ಅದು ನನ್ನಿಂದ ಪ್ರತ್ಯೇಕವಾದ ವಸ್ತುವಲ್ಲ. ಅದೇ ನೀನು. ನೀನೇ ಅದು. ನೀನು ನಿನಗೆ ಸಾಕ್ಷಾತ್ಕಾರವಾಗುವದು ಹೇಗೆ? ನೀನು ಆತ್ಮ—ಆತ್ಮವು ನೀನು ಎಂಬ ಸತ್ಯಸಿದ್ಧಾಂತವನ್ನು ನೀನು ಯಾವಾಗ ಅನುಭವಕ್ಕೆ ತಂದುಕೊಂಡಿಯೋ ಆಗ ನಿನಗೆ ಆತ್ಮ ಸಾಕ್ಷಾತ್ಕಾರವಾದಂತಾಯಿತು. ನೀನು ಆತ್ಮ ಎಂಬ ತಿಳುವಳಿಕೆಯೇ—ಅದರ ಅನುಭವವೇ—ಆತ್ಮ ಸಾಕ್ಷಾತ್ಕಾರವು.

### ಸಾಕ್ಷಾತ್ಕಾರದ ತಡೆ

ನೀನೇ ಆತ್ಮ ಎಂಬ ಬೋಧನೆಯು—ಅಥವಾ ಆ ಸಿದ್ಧಾಂತದ ಅನುಭವವು ನಿನಗಾಗಲಿಕ್ಕೆ ಇರುವ ತಡೆ ಯಾವುದು? ಅದು ನಿನ್ನ ಮನಸ್ಸು—ಮತ್ತು ಆ ಮನಸ್ಸಿನ ಆಲೋಚನೆ. ಮನುಷ್ಯನು ತನ್ನನ್ನೇ ತಾನೆಂದು ತಿಳಕೊಳ್ಳುತ್ತಾನೆ. ನೀನು [illegible] ಪರದೆಯ ಮೇಲೆ ಚಲಿಸುವ ಚಿತ್ರಗಳನ್ನು ಆ ಪರದೆ ಎಂದು ತಿಳಕೊಂಡ [illegible] ಹಾಗೆ ಇದು ತಪ್ಪಾಗಿದೆ. [illegible] ಚಲಿಸದೆ ಇದ್ದಾಗ ಪರದೆಯನ್ನು ಸ್ಪಷ್ಟವಾಗಿ ನೋಡಬಹುದಾದಂತೆ [illegible] ನಿಗ್ರಹ ಮಾಡಿದಾಗ [illegible] ಆತ್ಮಬೋಧೆಯಾಗುವದು.

### ಮನೋನಿಗ್ರಹದ ಉಪಾಯ

ಮನೋನಿಗ್ರಹವನ್ನು ಹೇಗೆ ಮಾಡಬಹುದು? ಮನಸ್ಸು ಅತ್ಯಂತ ಚಂಚಲವಾಗಿದೆ. ಆದರೂ ಅದನ್ನು ಸಿಗಹಿಸಲಿಕ್ಕೆ ಎರಡು ಉಪಾಯಗಳಿವೆ. ಒಂದು ಗುರು ಕಟಾಕ್ಷ ಮತ್ತು ಎರಡನೆಯದು ಧ್ಯಾನ. ಆತ್ಮ ಸಾಕ್ಷಾತ್ಕಾರವಾದ ಗುರುವು ಶಿಷ್ಯನ ಮನಸ್ಸನ್ನು ಆತ್ಮದ ಕಡೆಗೆ ತಿರುಗಿಸುವನು. ಆತ್ಮದ ಸ್ಥಾನವು ಹೃದಯದಲ್ಲಿದೆ. ಅಂಧಕಾರದಲ್ಲಿರುವ ವಸ್ತು ಒಡವೆಗಳ ಮೇಲೆ ಬೆಳಕನ್ನು ಚೆಲ್ಲುವ ಚಂದ್ರನು ಸೂರ್ಯನಿಂದ ತನಗೆ ಬೇಕಾದ ಪ್ರಕಾಶವನ್ನು ಪಡೆಯುವಂತೆ, ಮನಸ್ಸು ಹೃದಯದಿಂದ ತನಗೆ ಬೇಕಾದ ಶಕ್ತಿ ಸಾಮರ್ಥ್ಯಗಳನ್ನು ಪಡೆದು ಇತರ ವಸ್ತುಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುತ್ತದೆ. ಮನಸ್ಸು ತನಗೆ ಶಕ್ತಿ ಕೊಡುವ ಹೃದಯದ ಕಡೆಗೇ ತಿರುಗಿದಾಗ, ಸೂರ್ಯನ ಮುಂದೆ ಚಂದ್ರನು ಕಾಣಿಸದಿರುವಂತೆ ಮನಸ್ಸು ಕೂಡ ಶಕ್ತಿಹೀನವಾಗುತ್ತದೆ.

### ಧ್ಯಾನದ ಮಹಿಮೆ

ಧ್ಯಾನದ ಮಹಿಮೆಯು ಅತಿಶಯವಾಗಿದೆ. ಅದು ಸಮಾಧಿಯನ್ನು ಪಡೆಯುವ ಸತ್ಕ್ರಿಯೆಯಾಗಿದೆ. ಧ್ಯಾನದಿಂದ ಮನುಷ್ಯನು ಮನಸ್ಸನ್ನು ಹೃದಯದ ಕಡೆಗೆ ತಿರುಗಿಸಿ ಅದನ್ನು ನಿಗ್ರಹಿಸಬಲ್ಲನು. ಆಗ ಮನುಷ್ಯನ ಅಂತರಂಗದ ಶಕ್ತಿಯೇ ಮನಸ್ಸನ್ನು ಆತ್ಮದ ಕಡೆಗೆ ಎಳೆಯುತ್ತದೆ. ಗುರುಕಟಾಕ್ಷವು ಮನಸ್ಸನ್ನು ಹೃದಯದ ಕಡೆಗೆ ದೂಡುತ್ತದೆ. ಧ್ಯಾನವು ಮನಸ್ಸನ್ನು ಹೃದಯದ ಕಡೆಗೆ ಎಳೆಯುತ್ತದೆ. ಈ ಎರಡು ಉಪಾಯಗಳಿಂದ ಮನಸ್ಸು ಆತ್ಮದಲ್ಲಿ ಲೀನವಾಗುತ್ತದೆ. ಆಗ ಆತ್ಮವೇ ಆತ್ಮನಾಗಿ ಮನುಷ್ಯನು ಶಾಂತಿಯನ್ನೂ ಸುಖವನ್ನೂ ಅನುಭವಿಸುತ್ತಾನೆ. ಎಲ್ಲೆಲ್ಲಿಯೂ ಆತ್ಮದ ಪ್ರಭಾವೇ ಕಾಣಿಸಿಕೊಳ್ಳುತ್ತದೆ.


ನಿಮ್ಮ ಇಡೀ ಕುಟುಂಬಕ್ಕೆ
ಆರೋಗ್ಯ ಮತ್ತು ಬಲವನ್ನೀಯುವುದು!

ನಿಮ್ಮ ಕುಟುಂಬದ ಸೌಖ್ಯ ಆರೋಗ್ಯ ಮತ್ತು ಬಲ ಹಾಗೂ ನವಚೇತನವು ನಿಮ್ಮ ತಕ್ಕುದಾದ ಪೋಷಣೆಯ ಮೇಲೆ ಹೊಂದಿಕೊಂಡಿದೆ. ಆದಕಾರಣ ನಿಮ್ಮ ಕುಟುಂಬದ ಶಕ್ತಿಯುತವಾದ ಆರೋಗ್ಯವನ್ನು ಭದ್ರಪಡಿಸಲು ಯೋಗ್ಯವೂ ಉಚಿತವೂ ಆದ ಪೋಷಣೆಯನ್ನೀಯಿರಿ.

"ಓವಲ್ಟಿನ್" ಎಂಬ ಶ್ರೇಷ್ಠವಾದ ಶಕ್ತಿವರ್ಧಕ ಆಹಾರ ಪಾನಕವು ದೇಹಕ್ಕೆ ಸಂಪೂರ್ಣವಾಗಿ ತಕ್ಕುದಾದ ಪೋಷಣೆಯನ್ನೀಯುವುದು. ಇದು ಪ್ರಕೃತಿಯ ಸಂಪನ್ನವಾದ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಿದ [illegible] "ಓವಲ್ಟಿನ್" [illegible] ಉತ್ತಮ ಆರೋಗ್ಯದಲ್ಲಿರಿ [illegible] ಓವಲ್ಟಿನ್ [illegible]

ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು:-
ಜೇಮ್ಸ್ ರೈಟ್ ಲಿಮಿಟೆಡ್ 149, ಬ್ರೋಡ್‌ವೇ, ಮದ್ರಾಸು.
ಬೊಂಬೈ, ಕಲ್ಕತ್ತಾ ಹಾಗೂ ಕರಾಚಿಯಲ್ಲಿದೆ

'ಓವಲ್‌ಟಿನ್'
'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

'ಓವಲ್‌ಟಿನ್' ಬಿಸ್ಕುಟುಗಳು:—
ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ ಬಲೆಯ 'ಓವಲ್‌ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಒಂದು ರಾತ್ತಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.
OV 26 30

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

9—2—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೯—೨—೧೯೪೦

# ಜಿನ್ನರ ಕುತಂತ್ರವು ಮುಂದೆ ನಡೆಯಲಾರದು

## ಕೈಗೊಂಬೆಗಳ ಕುಣಿತ! ಮುಸ್ಲಿಂ ಲೀಗಿನ ರಾಷ್ಟ್ರಘಾತ!

## ಸ್ವಾತಂತ್ರ್ಯಪ್ರೇಮಿ ಮುಸ್ಲಿಮರಿಗೊಂದು ಪಾಠ

ಜಿನ್ನರ ಅಪಲಾಪವು ಅಪ್ರಬುದ್ಧವಾಗಿದೆ

ಟ್ರಿಬ್ಯೂನ್ ಪತ್ರಿಕೆಯು ಒಂದು ಅಗ್ರಲೇಖನ ಬರೆಯುತ್ತಾ, ಜಿನ್ನರನ್ನು, ಅವರ ಅಪ್ರಬುದ್ಧವೂ ರಾಷ್ಟ್ರಘಾತುಕವೂ ಆದ ತರ್ಕಸರಣಿಗಾಗಿ ಜನರು ದೂರವಿಂಸಬೇಕೆಂದು ಸ್ಪಷ್ಟಗೊಳಿಸಿದೆ. ಏಕೆಂದರೆ, ಅವರು ಹೇಳುವ ಮಾತುಕತ್ವಲ್ಲಕವಾದುದೆಂದು ಸಾಮಾನ್ಯ ಯಾಕಶ್ಚಿತ ವಿದ್ಯಾರ್ಥಿಯಾದರೂ ಅರ್ಥಮಾಡಿಕೊಳ್ಳಲಾಪನು, ಅದರಲ್ಲಿ ನಿಜವಾಗಿಯೂ ರಾಷ್ಟ್ರದ ಅಹಿತವೇ ಬಹಳ ತುಂಬಿಕೊಂಡಿರುತ್ತದೆ. ರಾಷ್ಟ್ರದ ಚರಿತ್ರೆಯಲ್ಲಿ ಇಂದು ಅವರ ಸ್ಥಾನವು ಬಹಳ ಅಪಹಾಸ್ಯಕರವಾಗಿದೆ. ದಿನದಿನದ ಜೀವನದಲ್ಲಿ ಸಾಮಾನ್ಯ ಬಾಲಕನೊಬ್ಬನು ಜಾತಿಯ ವಿಜಾತಿಯ ಹುಡುಗರೊಡನೆ ಯಾವ ಪ್ರೇಮಸೌಹಾರ್ದಗಳಿಂದ ನಡೆದುಕೊಳ್ಳುತ್ತಾನೋ, ಅದಕ್ಕೆ ತೀರಾ ವಿರುದ್ಧವಾಗಿಯೇ ಇಂದು ಜಿನ್ನರು ವರ್ತಿಸುತ್ತಾರೆ. ಅವರಿಗೆ ಜಾತಿಜಾತಿ ದ್ವೇಷ ಹೆಚ್ಚುಮಾಡವುದೇ ಪ್ರಾಣವಾಗಿದೆ.

### ಜನತಾ ಹೃದಯದಲ್ಲಿ

ಭಾರತದಲ್ಲಿ ಎಷ್ಟೇ ಜಾತಿ ಪಂಗಡಗಳಿರಲಿ ಜನರು ಭಿನ್ನಭಿನ್ನ ಜಾತಿಯವರು, ವಿರುದ್ಧ ವಿರುದ್ಧ ಆಚಾರದವರೆಂದು ವಿಭಾಗಿಸತಕ್ಕ ಗುಣವು ಯಾರಲ್ಲಿಯೂ ಎದ್ದು ಕಾಣುವುದಿಲ್ಲ, ಏಕೆಂದರೆ, ಸರ್ವರೂ ಸಮಾನ ಸೌಹಾರ್ದಗಳಿಂದ ದಿನದ ಜೀವನವನ್ನು ಸುಧಾರಿಸಿಕೊಂಡು ನಡೆಸುತ್ತಾರೆ. ಮಿ. ಜಿನ್ನರಂತಹರ ವಕ್ರದೃಷ್ಟಿಗೆ ಮಾತ್ರ ಹಿಂದುಗಳು ಮತ್ತು ಮುಸ್ಲಿಮರಲ್ಲಿ ಪರಸ್ಪರ ಜಾತೀಯ ದ್ವೇಷವು ಕಾಣುತ್ತದೆ.

ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭೆಯು ತುಂಬಿದ ಐಶ್ವರ್ಯವಂತರ ಕುಟುಂಬಗಳಲ್ಲಿ ಮಾತ್ರ ಹಿಂದುಗಳು ಮುಸ್ಲಿಮರು ಎಂಬ ಕುರಿತು ತುಂಬಾ ವ್ಯತ್ಯಾಸವು ಎದ್ದು ಕಾಣುತ್ತದೆ. ಆದರೆ ಕೆಳದರ್ಜೆಯ ಸಾಮಾನ್ಯ ಜನತೆಯಲ್ಲಿ ಯಾವ ತರದ ಭೇದವೂ ಇರುವುದಿಲ್ಲ. ಪ್ರತಿಯೊಂದು ವಿಷಯವೂ ಸಹಜವಾಗಿಯೂ ಸುಂದರವಾಗಿಯೂ, ಮಧುರವಾಗಿಯೂ ನಡೆಯುತ್ತದೆ.

### ದೂರ ಮಾಡಿರಿ

ಪಲಿಸ್ತೈನಿನ ಮುಖಂಡರೊಬ್ಬರು ಹೇಳುವಂತೆ, ಮಿ. ಜಿನ್ನರನ್ನೂ ಅವರ ಅನುಯಾಯಿಗಳು ಕೆಲವರನ್ನೂ ದ್ರೋಹಿಗಳೆಂದೂ ಮುಸ್ಲಿಂ ಸಮಾಜವನ್ನು ಭಿನ್ನಗೊಳಿಸಿ ಹಾನಿಮಾಡುವ ಸಾಮ್ರಾಜ್ಯಶಾಹಿಯ ಸೂತ್ರದ ಬೊಂಬೆಗಳೆಂದೂ ತಿಳಿದು ಮುಸ್ಲಿಮರೇ ದೂರ—ದೂರವಿರಿಸಬೇಕು. ಭಾರತದ ರಾಜಕೀಯ ಕ್ಷೇತ್ರದಲ್ಲಿ ಅಂತಹವರಿಗೆ ಯಾವುದೇ ರೀತಿಯ ಪ್ರಭಾವವೂ ಇರಬಾರದು, ಕೊಡಬಾರದು, ಇಂತಹ ಸಾಮ್ರಾಜ್ಯಶಾಹಿಯ ಕೈಗೊಂಬೆಗಳಿಂದ ಕೇವಲ ಭಾರತದ ಹಾನಿ ಮಾತ್ರವಲ್ಲ; ಕ್ರಮಶಃ ಮುಸ್ಲಿಂ ಜನರಿರುವ ಅಖಿಲ ಪ್ರಪಂಚದಲ್ಲಿಯೂ ಅದರ ದುಷ್ಪರಿಣಾಮವು ಹರಡುವುದು.

ಆದುದರಿಂದ, ಇಂದೆ ಮುಸ್ಲಿಮರಿಗೆ ಜಿನ್ನರ ದುರೀಣತೆಯನ್ನು ತಿಳಿಯುವ ನಿಜವಾದ ಸಂದರ್ಭವು ಒದಗಿದೆ! ಜಿನ್ನರ ತನ್ನ ನಿಜ ಸ್ವರೂಪವನ್ನು—ತನ ಸಂಕೋಚ ಧೋರಣೆಯನ್ನು ಜಗತ್ತಿಗ ಸಾರಿ ಬಹಿರಂಗಮಾಡಿರುವರ! ಭಾರತಮಾತೆಯ ಸಂಕಷ್ಟ ನಿವಾರಣೆಯಾಗವೇಕೆಂದು ಬಯಸುವವರೆಲ್ಲರಿಗೂ ಇದೊಂದೇ ಮಾರ್ಗವಿದೆ.

### ಬರಿಯ ಬೊಬ್ಬೆ ಮಾತ್ರ

ನೇಶನಲ್ ಹೆರಾಲ್ಡ್' ಪತ್ರಿಕೆಯು ಜಿನ್ನರು ವೈಸರಾಯರಿಗೆ ಪಡಿಕೆಯನ್ನು ಹುಟ್ಟಿಸುವಂತೆ ಕೊಟ್ಟ ಲೇಖನದ ವಿಷಯವನ್ನೆತ್ತಿ ಬರೆಯುತ್ತಾ "ಮಿ. ಜಿನ್ನರು ರಾಜಕೀಯವು ಒಂದು ಆಟವೆಂದೂ, ಆ ಕುಶಲ ಆಟದಲ್ಲಿ ತಾನು ಬಹಳ ಪ್ರವೀಣನೆಂದೂ ಹೇಳಿಕೊಳ್ಳಲು ತುಂಬಾ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಮಿ. ಜಿನ್ನರಿಗಾದರೂ ಮುಂದಕ್ಕೆ ಅವರ ಆಟವೂ, ಆಟದಲ್ಲಿ ಅವರಿಗಿರುವ ಕುಶಲತೆಯೂ ಏನೇನೂ ಸಾಲದು. ಅವರ ಜಾತಿಯವರೇ ಅವರನ್ನು ಹೀನಗೈದು ಕರೆವ ಕಾಲವು ಬಹು ದೂರವಿರಲಾರದು." ಹೀಗೆಂದು ಹೇಳುತ್ತದೆ.

ಮಿ. ಜಿನ್ನರ, ಇದ ವರೆಗೆ ತನ್ನ ಲೀಗನ್ನು ಯಾವ ರೀತಿಯಲ್ಲಿ ಮಾಡಿದ್ದಾರೆಂದರೆ ಕೇವಲ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಒಂದು ಕೈಗೊಂಬೆಯಾಗಿ ಕಾಂಗ್ರೆಸಿನ, ಆ ಮೂಲಕ ರಾಷ್ಟ್ರದ ಪ್ರಗತಿಯನ್ನೂ ತಡೆಗಟ್ಟುತ್ತಿದೆ. ಆದರೆ ರಾಷ್ಟ್ರದ ಹಿತವು ನೆರವೇರಲೇ ಬೇಕಾದ ಸಂದರ್ಭದಲ್ಲಿ, ಹಿಂದಕ್ಕೆ ಯಾವುದೇ ಸರಕಾರವಾದರೂ, ಜನಮತವನ್ನು ಮೀರಿ ನಡೆಯುವುದ ಸಾಧ್ಯವೇ ಇಲ್ಲದೆ ಆಗುವ ಸಂದರ್ಭದಲ್ಲಿ ಲೀಗಿನ ದುರವಸ್ಥೆಯಲ್ಲಿಳಿಸಿ ಅದರ ನಿಜಸ್ವರೂಪವನ್ನು ಬಯಲುಪಡಿಸದಿರಲು ಸಾಧ್ಯವೇ ಇಲ್ಲ. ಅಂತಹ ಭೀತಿಯು. ಸ್ವರವು, ಅವರ ಇಂದಿನ ಬೊಬ್ಬೆಯಲ್ಲಿ ಎದ್ದು ತೋರುತ್ತದೆ. ಜಿನ್ನರ ಕುತಂತ್ರಕ್ಕೆ ಇನ್ನು ಬಹುಕಾಲ ಬಲೆ ಸಿಗುವುದು ಸಾಧ್ಯವಿಲ್ಲ.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿವೆ!
1940ನೇ
ಇಸವಿಯ
ಶಾರದಾ ಡೈರಿಗಳು
ಸಣ್ಣ ಮತ್ತು ದೊಡ್ಡ ಸೈಜುಗಳಲ್ಲಿ
ಈಗಾಗಲೇ ಮಾರಾಟಕ್ಕೆ ಸಿದ್ಧವಾಗಿವೆ!
ದೊರೆಯುವ ಸ್ಥಳ:—
ಶಾರದಾ ಛಾಪಖಾನೆ,
ಮಂಗಳೂರು.

# ಸ್ವದೇಶಾಭಿಮಾನಿ

## ಗಾಂಧಿ-ವೈಸರಾಯರ ಮಾತುಕತೆ

ಕಳೆದ ವಾರದಲ್ಲಿ, ಸಮಗ್ರ ಭಾರತೀಯರ ದೃಷ್ಟಿಯು ನವಡಿಲ್ಲಿಯಲ್ಲಿ, ಗಾಂಧಿ ವೈಸರಾಯರೊಳಗೆ ಆದ ಮಾತುಕತೆಗಳ ಕಡೆಗೆ ಹರಿದಿತ್ತು. ವೈಸರಾಯರ ಇತ್ತೀಚಿಯ ಭಾಷಣದಲ್ಲಿ 'ರಾಜಿಯ ಅಣುಗಳನ್ನು ಕಂಡ' ಮಹಾತ್ಮಾಜಿಯವರು, ವೈಸರಾಯರ ಆಮಂತ್ರಣದಂತೆ, "ಡಿಲ್ಲಿಗೆ" ಹೊರಟಿದ್ದರು. ಎಷ್ಟೋ ಸಂದರ್ಭಗಳಲ್ಲಿ ಮಾತುಕತೆ ನಡೆಸಿ, ಒಪ್ಪಂದವಾಗಲು ಯತ್ನಮಾಡಿ ಕೃತಕಾರ್ಯರಾಗದ ಇಬ್ಬರೂ ತಿರಿಗಿ ಭೇಟಿಯಾಗಿದ್ದರು! ಹಿಂದೂದೇಶದಲ್ಲಿ ಪ್ರಾಂತಿಕ ಸರಕಾರಗಳಿಗೆ ಕಾಂಗ್ರೆಸು ರಾಜಿನಾಮೆ ಕೊಟ್ಟು, ಶಕ್ತಪಾಲನೆಗಾಗಿ ದೂರ ಸರಿದು ನಿಂತ ಕಾಲದಲ್ಲಿ, ಈ ಮಾತುಕತೆಯಿಂದ ಏನಾದರೂ ಫಲಿತಾಂಶವು ಆಗಬಹುದೇ ಎಂದು ಹಲವರು ಹಾರೈಸಿಯೂ ಇದ್ದರು!

### ಹಾಡಿದ್ದೇ ಹಾಡಿದರು

ಕಳೆದ ತಾ. ೫ರಂದು ಗಾಂಧೀ ವೈಸರಾಯರೊಳಗೆ ಮಾತುಕತೆಗಳು ನಡೆದವು. ತಾನು ವೈಯುಕ್ತಿಕವಾಗಿ ಮಾತನಾಡುತ್ತಿರುವೆನೆಂದೂ, ಕಾಂಗ್ರೆಸಿನ ಪ್ರತಿನಿಧಿಯಾಗಿ ಬಂದಿಲ್ಲವೆಂದೂ ಗಾಂಧಿಜಿಯವರು ಸ್ಪಷ್ಟಪಡಿಸಿದ್ದರೂ, ಅಖಿಲ ಜಗತ್ತೇ ತಿಳಿದುಕೊಂಡಿರುವಂತೆ ಕಾಂಗ್ರೆಸಿನ ಮೂಲಶಕ್ತಿಯಾಗಿರುವ ಮಹಾತ್ಮರಲ್ಲಿ ರಾಜಕೀಯ ಸಮಸ್ಯೆಯ ವಿಷಯವಾಗಿಯೇ ವೈಸರಾಯರು ಸುದೀರ್ಘ ಮಾತುಕತೆ ನಡೆಸಿದರು. ಆ ಕುರಿತು ಹೆಚ್ಚಿನ ವಿವರ ಎಂದು ತಿಳಿದುಬರಲಿಲ್ಲ. ಆದರೂ ಸರಕಾರದ ಪ್ರಕಟಣೆಯಿಂದ ಹಾಗೂ ಈಗ ತಿಳಿದುಬರುವ ವಾರ್ತೆಗಳಿಂದ, ವೈಸರಾಯರು ಸಾಮಂತ ಸ್ವರಾಜ್ಯವನ್ನು ಕೊಡುವ ಭರವಸೆಯ, ಹಳೆಯ ಹಾಡನ್ನೇ ಹಾಡಿದರೆಂದೂ, ಪ್ರಕೃತಕ್ಕೆ ಸಂಯುಕ್ತ ರಾಜ್ಯಘಟನೆಯ ಉದ್ದೇಶವಾಗಿದೆಯೆಂದು ಹೇಳಿದರೆಂದೂ ತಿಳಿದಿದೆ.

ಬ್ರಿಟನಿನ ಅಂತರ್ಗತವೇನಿದೆಯೆಂದು ಕೇಳಿದರೆ, ಅನಿಶ್ಚಿತವಾದ ಯಾವುದೋ ಒಂದು ಕಾಲದಲ್ಲಿ ಭಾರತಕ್ಕೆ ಸಾಮಂತ ಸ್ವರಾಜ್ಯವನ್ನು ಕೊಡುವುದಾಗಿದೆಯೆಂದು ವೈಸರಾಯರ ಮಾತಾಗಿತ್ತು. ಆದರೆ ಇಂತಹ ನಿಸ್ಸಾರವಾದ, ನಿಶ್ಚಯವಿಲ್ಲದ ಮಾತಿನಿಂದ ಭಾರತೀಯರಿಗೆ ತೃಪ್ತಿಯಾಗುವುದು ಇಂದು ಸಾಧ್ಯವಿಲ್ಲವೆಂದು ಅವರು ತಿಳಿಯದಿರುವುದು ಆಶ್ಚರ್ಯಕರವಾಗಿದೆ.

### ಸಂಯುಕ್ತ ಘಟನೆಯ ನೆನಪು

ತಿರಿಗಿ ವೈಸರಾಯರು ತಮ್ಮ ಹಿಂದಿನ ಮಾತನ್ನೇ ಉಚ್ಚರಿಸಿದರು, ಸಾಮಂತ ಸ್ವರಾಜ್ಯವನ್ನು ಕೊಡುವ ಅವಧಿಯನ್ನು ಮುಂದುವರಿಸದೆ ಸಾಧ್ಯವಾದಷ್ಟು ಕಡಿಮೆ ಮಾಡಲು ಸರಕಾರವು ಮನಸ್ಸು ಮಾಡುವುದೆಂದೂ, ಆದರೆ ಸಾಮಂತ ಸ್ವರಾಜ್ಯವನ್ನು ಪಡೆಯಬೇಕಾದರೆ, ಮೊದಲಾಗಿ ಸಂಯುಕ್ತ ಘಟನೆಯನ್ನು ಅಂಗೀಕರಿಸುವುದೇ ಹಾದಿಯೆಂದೂ ಅವರು ಹೇಳಿದರು. ಇಂದಿನ ಸಂಯುಕ್ತ ಘಟನೆಯಲ್ಲಿ ಏನೇನೂ ಅರ್ಥವಿಲ್ಲವೆಂದು ಕಾಂಗ್ರೆಸು ಖಂಡಿತವಾಗಿ ಸಾರಿರುವಾಗ ಅದರ ಮೊದಲನೆಯ ಭಾಗವಾದ ಪ್ರಾಂತಿಕ ಭರಣವನ್ನು ಬಿಟ್ಟುಕೊಟ್ಟು ಇಂದು ದೂರಸರಿದು ನಿಂತಾಗ, ತಿರಿಗಿ ಸಂಯುಕ್ತ ರಾಜ್ಯಘಟನೆಯ ಕುರಿತೋ ಮಾತೆತ್ತುವುದು ಖಂಡಿತವಾಗಿಯೂ ಭಾರತೀಯರ ತಾಳ್ಮೆಯನ್ನು ವೈಸರಾಯರು ಪರೀಕ್ಷಿಸುವುದಾಗಿದೆ.

### ಮಾತುಕತೆಯನ್ನು ಮುಂದೆ ತಳ್ಳಿದರು!

ನಿಜವಾಗಿಯೂ ಗಾಂಧಿಜಿಯವರು ಪ್ರಚಂಡ ಸಹನಾಮೂರ್ತಿಗಳು! ಯಾವ ಮಾತುಗಳಿಗಾಗಿ ಹಿಂದಕ್ಕೆ ಅವರು ಕೇಳುತ್ತಿದ್ದರೂ ಇಂದು ಅವೇ ಮಾತುಗಳನ್ನು ಸಾವಿರ ಸಲ ಅವರ ಮುಖದ ಮುಂದೆ ಉಚ್ಚರಿಸಿದರೂ ಅವರು ಸಹಿಸುತ್ತಿದ್ದಾರೆ. ವೈಸರಾಯರ ಈ ಮಾತುಗಳನ್ನು ಕೇಳಿ, ಅದರಲ್ಲಿರುವ ಮಾತಿನ ಸದ್ಭಾವನೆಯನ್ನು ಗಾಂಧಿಜಿಯವರು ಒಪ್ಪಿದರಂತೆ! ಆದರೆ ವೈಸರಾಯರ ಇಂತಹ ಮಾತಿಗೆ ಕಾಂಗ್ರೆಸು ಒಪ್ಪಲಾರದೆಂದು ಸ್ಪಷ್ಟವಾಗಿ ತಿಳಿಸಿದ್ದು ಉಚಿತವೇ ಆಯಿತು. ಅದೇ ಕಾರಣವೇ ಈ ಕುರಿತು ಮಾತುಕತೆಯನ್ನು ಪ್ರಕೃತಕ್ಕೆ ಮುಂದುವರಿಸುವುದೇ ಯೋಗ್ಯವೆಂದು ಗಾಂಧಿಜಿಯವರ ಸೂಚಿಸಿರಬೇಕು. ವೈಸರಾಯರು ಮಾತುಕತೆಯನ್ನು ಅದರಂತೆ ಮುಂದಕ್ಕೆ ದೂಡಿರುವರೆಂದು ತಿಳಿದುಬಂದಿದೆ.

### ನಿರಾಶೆಯೆ?

ಈ ಸಲದ ಮಾತುಕತೆಯಲ್ಲಿ ಗಾಂಧಿಜಿಯವರು ಸಂಪೂರ್ಣ ನಿರಾಶರಾಗಿರುವರೆಂದೂ ವಾರ್ತೆಯಿದೆ. ಇಲ್ಲವಾದರೆ ಮಾತುಕತೆಯನ್ನು ಮುಂದೂಡುವ ಸೂಚನೆಯನ್ನು ಕೊಡುತ್ತಿರಲಿಲ್ಲ. ವೈಸರಾಯರ ಮಾತಿನಲ್ಲಿ ಯಾವರೂ ಭಾರತದ ಸಮಸ್ಯೆಯನ್ನು ತೀವ್ರ ಪರಿಹರಿಸಬೇಕೆಂಬ ವಿಷಯದಲ್ಲಿ ಯುಕ್ತಿಯುಕ್ತವಾದ ಸೂಚನೆಗಳಿದ್ದಂತೆ ಅವರಿಗೆ ಕಂಡುಬರಲಿಲ್ಲವೆಂಬುದರಿಂದ ನಿರಾಶೆಗೊಂಡಿರುವ ಗಾಂಧಿಜಿಯವರು ಮಾತುಕತೆಯನ್ನು ಮುಂದುವರಿಸಲು ಹೇಳಿರಬಹುದೇ ಎಂದು ಹಲವರು ಶಂಕಿಸುವಂತಾಗಿದೆ.

ಸರಕಾರದವರು ಭಾರತೀಯರ ತಾಳ್ಮೆಯನ್ನು ಬಹಳ ದೀರ್ಘಕಾಲ ಹೀಗೆ ಪರೀಕ್ಷಿಸಬಾರದು. ಯುವಕರು ಹೋರಾಟಕ್ಕಾಗಿ ಹಾತೊರೆಯುತಿದ್ದಾರೆ. ಗಾಂಧಿಜಿಯವರ ಸಮಾಧಾನವೇ ಅವರನ್ನು ತಡೆದು ನಿಲ್ಲಿಸಿದೆ. ಇಂತಹ ಸಂದರ್ಭದಲಿ ಇಷ್ಟು ಅನಿಶ್ಚಿತವೂ, ಕೇವಲ ಔಪಚಾರಿಕವೂ ಆದ ಮಾತುಕತೆಗಳನ್ನು ಮಾಡುವುದರಿಂದ ಉಭಯತರಿಗೂ ಶಾಂತಿ ಸಿಗಲಾರದು.


ಸಚಿತ್ರ

**ಸಿವಿಕ್ಸ್ ಮತ್ತು ಪ್ರಜಾಧರ್ಮ**

| | | |
|---|---|---|
| 3ನೇ ತರಗತಿಗೆ | ಬೆಲೆ: | 0—1—6 |
| 4ನೇ ,, | ,, | 0—2—0 |
| 5ನೇ ,, | ,, | 0—2—6 |

(ಎಂ. ಗಣಪತಿ ರಾವ್ ಐಗಳ್ ವಿರಚಿತ)

| | |
|---|---|
| 6ನೇ ತರಗತಿಗೆ | 0—3—0 |
| 7ನೇ ,, | 0—3—0 |
| 8ನೇ ,, | 0—3—0 |

(ಎಂ. ಜಿ. ರಾವ್ ಐಗಳ್ ಮತ್ತು ಕೆ. ಕೆ. ಕೈ ವಿದ್ವಾನ್ ಇವರಿಂದ ವಿರಚಿತ)

ಇಷ್ಟು ಸುಲಭ ಬೆಲೆಗೆ, ಪಠ್ಯಪುಸ್ತಕಗಳನ್ನು ಈ ರೀತಿ ಅಚ್ಚುಕಟ್ಟಾಗಿಯೂ, ಮನೋಹರವಾಗಿಯೂ ಒದಗಿಸಿ ಕೊಡುವುದು, ಇಡೀ ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲನೆಯ ಸಲ!

ಪುಸ್ತಕಗಳ ಮಹತ್ವಕ್ಕೆ ಅನುಭವಸ್ಥರೂ, ಸಮರ್ಥರೂ ಆದ ಲೇಖಕರ ಯೋಗ್ಯತೆಯೇ ಸಾಕ್ಷಿಯಾಗಿದೆ.

ವಿದ್ಯಾಕ್ಷೇತ್ರದಲ್ಲಿಯೇ ಪ್ರಚಂಡ ಕ್ರಾಂತಿ!
ವಿದ್ಯಾಭಿವೃದ್ಧಿಯಲ್ಲಿ ನಮ್ಮದಿದು ಕಿರುಕಾಣಿಕೆ!
ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯ!

ಇದೇ ರೀತಿಯಲ್ಲಿ ಪ್ರಾಥಮಿಕ ಶಾಲೆಗಳ ಉಪಯೋಗಾರ್ಥವಾಗಿ ಬರೆದ ಚರಿತ್ರೆ ಭೂಗೋಳ, ವ್ಯಾಕರಣ . . . . . ಗಳು ಸಿದ್ಧವಾಗಿವೇ

ಹಾಯರ್ ಎಲಿಮೆಂಟರಿ ಗ್ರೇಡ್ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿಗಳಿಗಾಗಿ ತಯಾರಿಸಲ್ಪಟ್ಟ ಸಮಾಜಶಾಸ್ತ್ರದ ತಿದ್ದಿದ ಆವೃತ್ತಿ ಬೆಲೆ ರೂ. ೧.

ಪುಸ್ತಕ ಸಿಗುವ ಸ್ಥಳ:

ಶಾರದಾ ಛಾಪಖಾನೆ, ಮಂಗಳೂರು.


## ಮಹಿಳಾ ಪರಿಷತ್ತು

ಅಖಿಲಭಾರತ ಮಹಿಳಾ ಸಮ್ಮೇಳನವು ಜನವರಿ ೩೦ರಲ್ಲಿ ನಡೆದು ಈ ಕೆಳಗಿನ ಮುಖ್ಯ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

'ಜಪಾನಿನ ಧಾಳಿ ದಬ್ಬಾಳಿಕೆಗಳನ್ನು ಚೀನವು ವಿರೋಧಿಸುತ್ತ ಧೈರ್ಯದಿಂದ ಹೋರಾಟ ನಡೆಸುತ್ತಿರುವುದನ್ನು ಈ ಸಮ್ಮೇಳನವು ಅಭಿನಂದಿಸುತ್ತದೆ. ಚೀನದ ಮಹಿಳೆಯರು ಭಾರತಕ್ಕೆ ಕಳುಹಿಸುವ ಶಿಷ್ಟಮಂಡಳವನ್ನು ಆದರದಿಂದ ಸುಸ್ವಾಗತಿಸುತ್ತದೆ. ಮತ್ತು ಸಾಧ್ಯವಾದ ಕೂಡಲೇ ಭಾರತದ ಮಹಿಳೆಯರ ನಿಯೋಗ ಮಂಡಳವೊಂದನ್ನು ಚೀನಕ್ಕೆ ಕಳುಹಿಸಬೇಕೆಂದೂ ಚೀನದ ಮಹಿಳೆಯರಿಗೂ ಭಾರತದ ಮಹಿಳೆಯರಿಗೂ ಪರಸ್ಪರ ಮೈತ್ರಿಯೂ ಸಾಂಸ್ಕೃತಿಯ ಸಂಬಂಧವೂ ಏರ್ಪಡಬೇಕೆಂದೂ ಅಪೇಕ್ಷಿಸುತ್ತದೆ.'

'ಯುದ್ಧ ನಡೆಯುತ್ತಿರುವ ದೇಶಗಳ ಮತ್ತು ಜನಾಂಗಗಳ ಮಹಿಳೆಯರೆಲ್ಲರೂ ಇಂದಿನ ಕ್ರೂರ ಯುದ್ಧವನ್ನು ನಿಲ್ಲಿಸಲು ತಮ್ಮ ದೇಶಗಳಲ್ಲಿ ಒತ್ತಾಯದ ಚಳವಳಿಯನ್ನು ಮಾಡಬೇಕೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

'ಇಂದಿನ ಯುದ್ಧವನ್ನು ನಿಲ್ಲಿಸಿ ಪ್ರಪಂಚದಲ್ಲಿ ಶಾಂತಿ ಸ್ಥಾಪನೆ ಮಾಡುವ ಬಗ್ಗೆ ಬ್ರಿಟನ್ನು ತನ್ನ ಧೋರಣೆಗಳನ್ನು ನಿರ್ದಿಷ್ಟವಾಗಿ ಘೋಷಣೆ ಮಾಡಬೇಕೆಂದೂ ಎಲ್ಲಾ ಜನಾಂಗಗಳೂ ಪರಸ್ಪರ ಬೇಧಭಾವವಿಲ್ಲದೆ ಸಂಸಮಾನತೆಯ ಹಕ್ಕು ಬಾಧ್ಯತೆಗಳನ್ನುಳ್ಳದ್ದೆಂದು ನಿರ್ಧಾರವಾಗಬೇಕೆಂದೂ ವ್ಯಕ್ತಿ ಸ್ವಾತಂತ್ರ್ಯವೂ, ವ್ಯಕ್ತಿಯ ಹಕ್ಕುಬಾಧ್ಯತೆಗಳೂ ಗಣಿಸಲ್ಪಡಬೇಕೆಂದೂ ಚಿಕ್ಕದು ದೊಡ್ಡದು ಎಂಬ ಬೇಧಭಾವವಿಲ್ಲದೆ ಎಲ್ಲಾ ಜನಾಂಗಗಳೂ ಸರಿಸಮಾನತೆಯ ಸ್ವಾತಂತ್ರ್ಯವುಳ್ಳದ್ದೆಂದು ಎಲ್ಲಾ ಜನಾಂಗಗಳೂ ಒಪ್ಪಿಕೊಳ್ಳಬೇಕೆಂದೂ ಅಪೇಕ್ಷಿಸುತ್ತದೆ.

ಬ್ರಿಟನು ಭಾರತದ ಸ್ವಾತಂತ್ರ್ಯವನ್ನು ಒಪ್ಪಬೇಕು ಎಂಬ ನಿರ್ಣಯವು ಅಂಗೀಕರವಾಯಿತು. ಈ ನಿರ್ಣಯದ ಪ್ರಕಾರ ಭಾರತವು ಅಹಿಂಸಾ ಮಾರ್ಗದಲ್ಲಿಯೇ ತನ್ನ ಸ್ವಾತಂತ್ರ್ಯವನ್ನು ಸಾಧಿಸಬೇಕೆಂದೂ ಅಹಿಂಸೆ ಮತ್ತು ಶಾಂತಿಯಿಂದಲೇ ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯಾಗುವುದೆಂದೂ ನಿರ್ಧಾರವಾಯಿತು.

ಭಾರತದಲ್ಲಿ ಐಕಮತ್ಯವಿಲ್ಲ; ಭಿನ್ನ ಪಂಗಡಗಳಿವೆ ಎಂದು ಬ್ರಿಟಿಷ್ ರಾಜನೀತಿಜ್ಞರು ನಮ್ಮ ಸ್ವಾತಂತ್ರ್ಯ ಕೇಳಿಕೆಯನ್ನು ಪ್ರತಿಭಟಿಸಿ ಕುಂಟು ನೆವವನ್ನು ಹೇಳುತ್ತಿರುವುದು ಸರಿಯಲ್ಲವೆಂದೂ ಸ್ತ್ರೀಯರು ಯುದ್ಧ ನಿಲ್ಲಿಸುವಂತಹ ಚಳುವಳಿ ಮಾಡಬೇಕೆಂದೂ ಸ್ತ್ರೀಯರು ತಮ್ಮ ಸಹೋದರರಿಗೂ ಪತಿಯರಿಗೂ, ಗಂಡು ಮಕ್ಕಳಿಗೂ ಶಾಂತಿಸ್ಥಾಪನೆಗಾಗಿ ಬೆಂಬಲ ಕೊಡಬೇಕೆಂದೂ ನಿರ್ಣಯವಾಯಿತು.

ಭಾರತದ ರಾಜಕೀಯ ಭವಿಷ್ಯವನ್ನು ನಿರ್ಧರಿಸಲಿಕ್ಕಾಗಿಯೂ ಅದನ್ನು ರೂಪಿಸಲಿಕ್ಕಾಗಿಯೂ ಒಂದು ಘಟನಾ ಸಮಿತಿಯು ರಚನೆಯಾಗಬೇಕು ಮತ್ತು ಅದು ಭಾರತದಲ್ಲಿದ್ದು ಭಾರತದ ರಾಜಕೀಯ ಘಟನೆಯನ್ನು ತಯಾರಿಸಬೇಕು ಎಂದು ಕಾಂಗ್ರೆಸು ಹೇಳುತ್ತಿರುವುದು ಸಮಂಜಸವೂ ನ್ಯಾಯವೂ ಆಗಿದೆ. ಭಾರತದ ಭವಿಷ್ಯ ನಿರ್ಧಾರವನ್ನು ಈಗಲೇ ಮಾಡಬೇಕೆಂದು ಯಾರೂ ಹಠ ತೊಟ್ಟಿರುವುದಿಲ್ಲ. ಮೊದಲನೆಯದಾಗಿ ಯುರೋಪದಲ್ಲಿ ಈಗ ಯುದ್ಧ ನಡೆಯುತ್ತಾ ಇದೆ. ಎರಡನೆಯದಾಗಿ ಘಟನಾ ಸಮಿತಿಯ ವಿವರಗಳನ್ನು ಈಗ ನಿಶ್ಚಯಿಸಿರುವುದಿಲ್ಲ. ಆದ್ದರಿಂದ ಯುದ್ಧಾನಂತರವೇ ಆಘವಾ ಪ್ರಾರಂಭದ ಎಲ್ಲಾ ಕೆಲಸಗಳು ಮುಗಿದ ತರುವಾಯ ಈ ಸಮಿತಿಯು ತನ್ನ ಕೆಲಸವನ್ನು ಆರಂಭಿಸಬಹುದು ಎಂದು [illegible] ತದ ಮಾಜಿ ಸೆಕ್ರೆಟರಿ ಆಫ್ ಸ್ಟೇಟರಾಗಿದ್ದ ಮಾನ್ಯ [illegible] ವೆಜ್‌ವುಡ್ ಬೆನ್ನರೇ ಕಂಟೆಂಪರರಿ ರಿವ್ಯೂವಿನಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. ಬ್ರಿಟಿಷ್ ಸರಕಾರವನ್ನು ಇದು ತೆರವಿ[illegible] ಕಣ್ಣು ತೆರೆಸಲಾರದೆ?

ಭಾರತದ ಸ್ವಾತಂತ್ರ್ಯ [illegible] ಬ್ರಿಟನಿನ ರಾಜಕಾರಣದಲ್ಲಿ ಯಾವಾಗಲೂ ಮುಖ್ಯ ಸ್ಥಾನವನ್ನು ಪಡೆದಿದೆ. ಆದರೆ [illegible] ಪ್ರಾರಂಭವಾಗಿರುವ ಈ [illegible] ಯದಲ್ಲಿ ಅದರ ಮಹತ್ವ [illegible] ಮತ್ತಷ್ಟು ಬೆಳೆದಿರುವುದು. ಬ್ರಿಟನಿನ ಯುದ್ಧ [illegible] ಸ್ವಾತಂತ್ರ್ಯ [illegible] ಯುಕ್ತವಾಗಿದೆ ಎಂಬುದನ್ನು ಭಾರತಕ್ಕೆ ಸ್ವಾತಂತ್ರ್ಯವನ್ನು [illegible] ನಾವು ಜಗತ್ತಿಗೆ ತೋರಿಸಿಕೊಡಬಹುದು. ಭಾರತದ ವಿಷಯದಲ್ಲಿ ಬ್ರಿಟಿಷರು [illegible] ಮಾಡದಿರುವ [illegible] ಆದರೆ ಬ್ರಿಟಿಷರು ಹೇಳುವುದು [illegible] ಗಾಳಿ ಎಂದು ಶತ್ರು ಪಕ್ಷದವರು ಅಪಪ್ರಚಾರ ಮಾಡಲಿಕ್ಕೆ ಸಂದರ್ಭ ಒದಗಿಸಿ ಕೊಟ್ಟಂತಾಗುತ್ತದೆ.

### ಶಾಂತಿ ಇದ್ದರೆ ಸಾಲದು

ಭಾರತದಲ್ಲಿ ಈಗ [illegible] ಸಮಾಧಾನವೂ ಇದೆ. [illegible] ಕಾರ್ಯಕ್ಕೆ ಯಾವ ಆತಂಕವೂ ಅಭ್ಯಂತರವೂ ಇರುವುದಿಲ್ಲ. ಅದ್ದರಿಂದ ಭಾರತೀಯರು ಬ್ರಿಟಿಷರ ಆಳಿಕೆಯಿಂದ ತೃಪ್ತರಾಗಿದ್ದಾರೆಂದು ತಿಳಿಯುವುದು ತಪ್ಪು. ಭಾರತದ ಹನ್ನೊಂದು ಪ್ರಾಂತ್ಯಗಳ ಪೈಕಿ ಎಂಟು ದೊಡ್ಡ ಪ್ರಾಂತ್ಯಗಳಲ್ಲಿ ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಿ ಆಳಬೇಕಾಗಿ ಬಂದಿದೆ ಎಂಬುದೇ ಜನರು ಬ್ರಿಟನಿನ ವ್ಯವಹಾರದಿಂದ ಅತೃಪ್ತರಾಗಿದ್ದಾರೆಂಬುದಕ್ಕೆ ಪ್ರಮಾಣವಾಗಿದೆ. ಸಂದಿಗ್ಧ ಕಾಲದಲ್ಲಿ ಭಾರತದ ಜನಪ್ರತಿನಿಧಿಗಳನ್ನು ಕೇಳಿ ಅಲ್ಲ, ಪರಂತು ವಿದೇಶೀ ಪಾರ್ಲಿಮೆಂಟು ಹೇಳಿದಂತೆ ಗವರ್ನರರು ತಮ್ಮ ಪ್ರಾಂತ್ಯಗಳನ್ನು ಆಳಬೇಕೆನ್ನುವುದು ಅಸ್ವಾಭಾವಿಕವಾಗಿರುವುದು.

# ಭಾರತದ ಸ್ವಾತಂತ್ರ್ಯವು

## ಬ್ರಿಟನಿಗೆ ಮುಖ್ಯವಲ್ಲವಾದರೆ?

## ಧರ್ಮಯುದ್ಧವು ಕೇವಲ ಸೋಗು

[ಲೇಖಕ: ಭಾರತೀಯ]

ಕಾಂಗ್ರೆಸಿನ ಧೋರಣೆಯು ವೈರಿಗಳಿಗೆ ಅಪಪ್ರಚಾರ ಮಾಡಲಿಕ್ಕೆ ಎಡೆ ಮಾಡಿ ಕೊಟ್ಟಿರಬಹುದು. ಆದರೆ ಅದಕ್ಕೆ ಕಾಂಗ್ರೆಸು ಜವಾಬುದಾರವಾಗುವುದಿಲ್ಲ. ಕಾಂಗ್ರೆಸಿನ ನ್ಯಾಯವಾದ ಬೇಡಿಕೆಗಳನ್ನು [illegible] ವೈರಿಗಳಿಗೆ ಅಪಪ್ರಚಾರಕ್ಕೆ ಎಡೆ ದೊರೆಯದ ಹಾಗೆ ಮಾಡುವ ಕರ್ತವ್ಯವು ಬ್ರಿಟಿಷರದ್ದಾಗಿದೆ. ಬ್ರಿಟಿಷರು ಹೇಳುವ ಹಾಗೆ [illegible] ಅವರ [illegible] ಎನ್ನುವ [illegible] ಸಂಧಿಗ್ಧ [illegible] ಇದನ್ನು ಬ್ರಿಟಿಷರೇ ತಮ್ಮ ಕೆಲಸಕಾರ್ಯಗಳ ಮೂಲಕ ಜಗತ್ತಿಗೆ ತೋರಿಸಿಕೊಡಬೇಕಾಗಿದೆ.

### ಮುಹೂರ್ತ ನೋಡುವ ಅಗತ್ಯವಿಲ್ಲ

ಭಾರತದ ಸ್ವಾತಂತ್ರ್ಯ [illegible] ಭಾರತೀಯರೇ [illegible] [illegible] ಬ್ರಿಟಿಷರು [illegible] ಅಷ್ಟು [illegible] ಈಗ [illegible] ಎನ್ನುವುದು [illegible] ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವುದು. ನಿಜವೆಂದಾದರೆ ಆ ಕುರಿತು ಭರವಸೆಯನ್ನೀಯುವುದಕ್ಕೆ ಮುಂದು ಮುಂದೆ ನೋಡಿ ಕಾಲಹರಣ ಮಾಡುವುದೇಕೆ? ಹಿಂದಿನ ಮಹಾಯುದ್ಧವು ನಡೆಯುತ್ತಿದ್ದಾಗಲೇ ಮಿ. ಮಾಂಟೆಗೋ ಸಾಹೇಬರು ಭಾರತೀಯ ಸ್ವಾತಂತ್ರ್ಯಕ್ಕೆ ಬುನಾದಿ ಹಾಕಿದರು. ಯುದ್ಧವು ಆಗ [illegible] ದೊರೆಗಳ ಕಾರ್ಯಕ್ಕೆ ಅಭ್ಯಂತರವನ್ನು ತರಲಿಲ್ಲವಾದರೆ ಈಗ [illegible] ಕಾರ್ಯಕ್ಕೆ ಅದು ಹೇಗೆ [illegible] ವಿಶ್ವಾಸವಿಟ್ಟು ಭಾರತಕ್ಕೆ [illegible] ಸುಲಭವಾಗುವುದು.

### ಹಿಂದೂ ಮುಸಲ್ಮಾನರ ಸಮಸ್ಯೆ

[illegible] ಕೇವಲ ಭಾರತೀಯರ ತಮ್ಮೊಳಗಿನ ಪ್ರತಿಭಟನೆಯಿಂದ ಬಿಡಿಸಬೇಕಾದ ವಿಷಯವಾಗಿದೆ. [illegible] ಭಾರತೀಯರು ಮಾಡಿಕೊಂಡ ಇತ್ಯರ್ಥಕ್ಕೆ ಒಪ್ಪಿಗೆಯನ್ನು ಕೊಡುವುದು ಬ್ರಿಟಿಷರಿಗೆ ಭೂಷಣವಾಗಿದೆ. [illegible] ಅವರ [illegible] ಬ್ರಿಟಿಷರು [illegible] ವಿಹಿತವಾಗಿದೆ. ಹೀಗೆ ಮಾಡಬೇಕಾದರೆ ಬ್ರಿಟಿಷರು ತುಂಬ ಉದಾರರೂ ತ್ಯಾಗಿಗಳೂ ಆಗಬೇಕಾಗುವುದು. ಅವರು ಭಾರತದಲ್ಲಿ ತಮ್ಮ ಕೆಲವು ಸ್ವಾರ್ಥಗಳನ್ನು ಬಲಿಕೊಡಬೇಕಾಗುವುದು. ಸ್ವತಂತ್ರ ಭಾರತವನ್ನು ಸುಲಿಯುವುದು ಅವರಿಗೆ ಸಾಧ್ಯವಾಗಲಿಕ್ಕಿಲ್ಲ. ಆದರೆ ಭಾರತೀಯರ ಸ್ನೇಹದ ಮೌಲ್ಯವು ಇವೆಲ್ಲವುಗಳಿಗಿಂತ ಹೆಚ್ಚಾಗಿದೆ. ಅದ್ದರಿಂದ ಅಮೂಲ್ಯವಾದ ಭಾರತೀಯರ ಸ್ನೇಹವನ್ನು ಸಂಪಾದಿಸುವ ಒಂದೇ ಒಂದು ದೊಡ್ಡ ಸ್ವಾರ್ಥವನ್ನಿಟ್ಟುಕೊಂಡ ಬ್ರಿಟಿಷರು ತಮ್ಮ ಇತರ ಚಿಕ್ಕ ಸ್ವಾರ್ಥಗಳನ್ನು ಬಲಿಕೊಡುವುದು ವಿಹಿತವಾಗಿದೆ.

### ಯುದ್ಧಕಾಲದಲ್ಲಾಗಬೇಕಾದ ಕಾರ್ಯ

ಭಾರತೀಯರಿಗೆ ಸ್ವಯಂ ನಿರ್ಧಾರದ ಅಧಿಕಾರವಿರುವುದನ್ನು ಬ್ರಿಟಿಷ ಸರಕಾರವು ಕೂಡಲೇ ಒಪ್ಪಿಕೊಂಡು ಕಾಂಗ್ರೆಸಿನ [illegible] ಪೂರ್ಣ ನಿಶ್ಚಯ [illegible] ಅದಕ್ಕೆ ಎಲ್ಲಾ ಕೆಲಸಗಳೂ [illegible] ಯುದ್ಧ ಮುಗಿದೊಡನೆ ಘಟನಾತ್ಮಕ ಸಮಿತಿ [illegible] [illegible] ಅದರ [illegible] ಅಧಿಕಾರ [illegible] ಸುವ ಹಕ್ಕಿನ [illegible] ಯುದ್ಧ ನಡೆಯುತ್ತಿರುವಾಗಲೂ ಮಾಡಬಹುದು. ಅದನ್ನು [illegible] ಹಿಂದುಸ್ಥಾನದ ಮುಖ್ಯ ರಾಜಕೀಯ ಸಂಗಡಗಳ [illegible] ನಿರ್ಧರಿಸಿ [illegible] ಕಾರ್ಯಗಳನ್ನು ಕೈಕೊಳ್ಳಲಿಕ್ಕೆ ಭಾರತದಲ್ಲಿ ಅನುಕೂಲ ಪರಿಸ್ಥಿತಿಯನ್ನುಂಟು ಮಾಡಬೇಕು.


## ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

## ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

[illegible] ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿ ಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಯಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಗರ್ಮಿ ಮೂತ್ರವ್ಯಾಧಿಯಿಂದ ಕೀವು ಹೋಗುವುದು, ಮೀಯ ಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪ್ಪ ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಹುಣ್ಣು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊರೊಹಿಯ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

*Sole Manufacturer.* Dr. D. N JASANI, Vithalbhai Patel Road, BOMABY

ಸ್ಟಾಕಿಸ್ಟರು ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,

ಹಂಪನಕಟ್ಟಾ, ಮಂಗಳೂರು.

# ಸರಕಾರವು ಕಾಂಗ್ರೆಸಿನೊಡನೆ ರಾಜಿಮಾಡುವದೆ?

## ಜಿನ್ನರ ಬೇಡಿಕೆಗೆ ಪಾರ್ಲಿಮೆಂಟಿನಲ್ಲಿ ನಿರಾಕರಣೆ

ಇಂದು ಬ್ರಿಟಿಷ ಸರಕಾರ ಮತ್ತು ಕಾಂಗ್ರೆಸಿಗೆ ರಾಜಿಯಾಗಲು ಪರಿಸ್ಥಿತಿಯು ಅನುಕೂಲವಾಗುತ್ತಾ ಬರುತ್ತಲಿದೆ ಎಂಬು ಹೇಳಬಹುದು. ಕಾಂಗ್ರೆಸನ್ನು ಒಲಿಸಿಕೊಳ್ಳಲಿಕ್ಕೆ ಮಾನ್ಯ ವಾಯ್ಸರಾಯರು ಒಂದು ಯೋಜನೆಯನ್ನು ತಯಾರಿಸಿ ಅದನ್ನು ಕಾಂಗ್ರೆಸ ಪ್ರಮುಖರ ಆಲೋಚನೆಗೆ ಕಳುಹಿಸಿದ್ದಾರಾಗಿ ವಾರ್ತೆ ಇದೆ ಪ್ರಮುಖರು ಅದನ್ನು ಆಲೋಚಿಸಿ ತಮ್ಮ ಅಭಿಪ್ರಾಯಗಳನ್ನು ಈ ತಿಂಗಳಲ್ಲಿ ವಾಯ್ಸರಾಯರನ್ನು ಕಾಣಲಿರುವ ಮಹಾತ್ಮಾ ಗಾಂಧಿಯವರ ಮೂಲಕ ವಾಯ್ಸರಾಯರಿಗೆ ತಿಳಿಸಬಹುದು.

ವಾಯ್ಸರಾಯರ ಆ ರಾಜಿ ಯೋಜನೆಗೆ ಕಾಂಗ್ರೆಸ ಮುಖಂಡರು ಅನುಕೂಲರಾಗಿದ್ದಾರೆಂದು ಊಹೆಯಿದೆ ಈ ಯೋಜನೆಯು ಕಾಂಗ್ರೆಸಿನಿಂದ ಮನ್ನಿಸಲ್ಪಟ್ಟರೆ, ಯುದ್ಧವು ಮುಗಿದೊಡನೆಯೇ ಭಾರತ ಸರಕಾರವು ಒಂದು ರಾಷ್ಟ್ರೀಯ ಘಟನಾ ಸಮಿತಿಯನ್ನು ಕರೆಯುವದು ಈಗ ಎಸೆಂಬ್ಲಿಗಳ ಮುಖಂಡರಾಗಿರುವವರು ಈ ಸಮಿತಿಯ ಸದಸ್ಯರನ್ನು ಆರಿಸುವರು. ಸಮಿತಿಯ ಕಾರ್ಯಕ್ರಮವನ್ನು ಆರಿಸಿ ಬಂದ ಆದರ ಸದಸ್ಯರೇ ರಚಿಸಿಕೊಳ್ಳುವರು

ರಕ್ಷಣೋಪಾಯಗಳು, ಬ್ರಿಟಿಷ ಹಿತಾಸಕ್ತಿಗಳು, ಮತ್ತು ದೇಶೀ ರಾಜರುಗಳ ಸಂಬಂಧ ವ್ಯವಹಾರ ಇವಿಷ್ಟರ ಕುರಿತು ಪ್ರಾಂತೀಯ ಸರಕಾರಗಳ ಮಂತ್ರಿಗಳು ಮತ್ತು ಬ್ರಿಟಿಷ ಸರಕಾರ ಹಾಗೂ ದೇಶೀ ರಾಜರುಗಳ ಪ್ರತಿನಿಧಿಗಳು ಕೂಡಿ ನಿರ್ಧರಿಸುವರು ಅವರ ನಿರ್ಧಾರದಂತೆ ಬ್ರಿಟಿಷ ಸರಕಾರಕ್ಕೂ ಭಾರತ ಸರಕಾರಕ್ಕೂ ಒಂದು ಒಪ್ಪಂದವಾಗುವದು ಆ ಒಪ್ಪಂದವನ್ನು ಘಟನಾ ಸಮಿತಿಯು ಒಪ್ಪಿಕೊಳ್ಳಬೇಕು

### ವಾಯ್ಸರಾಯರ ಕೌನ್ಸಿಲಿನಲ್ಲಿ ಸುಧಾರಣೆ

ಘಟನಾ ಸಮಿತಿಯ ಕಾಯದೆಗೆ ವಿರೋಧವಾಗದ ಹಾಗೆ ವಾಯ್ಸರಾಯರ ಕೌನ್ಸಿಲಿನಲ್ಲಿ ಬೇಕಾದಷ್ಟು ಸುಧಾರಣೆ ಮಾಡಲಿಕ್ಕೆ ಬ್ರಿಟಿಷ ಸರಕಾರವು ಈಗಾಗಲೇ ಒಪ್ಪುವದು ಆದ್ದರಿಂದ ಯುದ್ಧಾನಂತರ ಆಗಬೇಕಾದ ಕಾರ್ಯಗಳಿಗೆ ಕಾಂಗ್ರೆಸು ಸಮ್ಮತಿಯನ್ನಿತ್ತರೆ ವಾಯ್ಸರಾಯರ ಕೌನ್ಸಿಲಿಗೆ ಪ್ರಜಾ ಪ್ರಮುಖರನ್ನು ಆರಿಸಿ ಅದು ಈಗಾಗಲೇ ಕೇಂದ್ರ ಎಸೆಂಬ್ಲಿಗೆ ಜವಾಬುದಾರವಾಗುವಂತೆ ಪರಿವರ್ತಿಸಲಾಗುವದು. ಆದರೆ ಆ ಕೌನ್ಸಿಲಿನಲ್ಲಿ ಮೂವರು ಅಧಿಕಾರಿ ಸದಸ್ಯರು ಇನ್ನೂ ಕೆಲವು ಸಮಯದ ತನಕ ಇರಬಹುದು.

ಮುಸ್ಲಿಂ ಲೀಗಿನ ಈಗಿನ ಧೋರಣೆಯನ್ನು ನೋಡುವದಾದರೆ ಅದಕ್ಕೂ ಕಾಂಗ್ರೆಸಿಗೂ ಸಧ್ಯ ರಾಜಿಯಾಗುವ ಹಾಗೆ ಕಾಣುವದಿಲ್ಲ. ಆದರೆ ಅಲ್ಪ ಸಂಖ್ಯಾಕರ ಒಪ್ಪಿಗೆಯಿಂದಲೇ ಮುಂದಿನ ರಾಜ್ಯ ಘಟನೆಯನ್ನು ತಯಾರಿಸುವರೆಂದು ಕಾಂಗ್ರೆಸು ಹೇಳುತ್ತಿರುವದರಿಂದ, ಈಗ ಭಾರತಕ್ಕೆ ಸ್ವಯಂ ನಿರ್ಧಾರದ ಅಧಿಕಾರವನ್ನು ಕೊಡದಿರಲಾಗುವದಿಲ್ಲವೆಂದು ವಾಯ್ಸರಾಯರು ಮನಗಂಡ ಹಾಗೆ ಇದೆ.

### ಪರಿಸ್ಥಿತಿ ಕೆಡುವ ಭಯ

ನ್ಯಾಯವಾದ ಮತ್ತು ಸಮಂಜಸವಾದ ಉಪಾಯಗಳಿಂದ ಕಾಂಗ್ರೆಸನ್ನು ಒಲಿಸಿಕೊಂಡು ಅದರ ಮಾತುಗಳನ್ನು ಮನ್ನಿಸದಿದ್ದರೆ, ಕಾಂಗ್ರೆಸ ಮಂತ್ರಿಮಂಡಲಗಳ ರಾಜೀನಾಮೆಯಿಂದ ಕೆಟ್ಟು ಹೋದ ಪರಿಸ್ಥಿತಿಯು ಮತ್ತಷ್ಟು ಕೆಟ್ಟು, ಪರಿಣಾಮವು ಭಯಂಕರವಾಗಬಹುದೆಂದು ಬ್ರಿಟಿಷ ಸರಕಾರಕ್ಕೆ ಗೊತ್ತಾಗಿದೆ ಕಾಂಗ್ರೆಸ ಸರಕಾರಗಳ ಅನ್ಯಾಯದಾಡಳಿತವನ್ನು ವಿಚಾರಿಸಲಿಕ್ಕೆ ರಾಯಲ್ ಕಮಿಶನನನ್ನು ಕಳುಹಿಸಿಕೊಡಬೇಕೆಂದ ಮಿ ಜಿನ್ನರ ಪ್ರಲಾಪವನ್ನು ನಿರಾಕರಿಸಿರುವದರಿಂದಲೇ ಬ್ರಿಟಿಷ ಸರಕಾರದ ಧೋರಣೆಯಲ್ಲಿ ಈಗ ಬದಲಾವಣೆ ಆಗತೊಡಗಿದೆ ಎಂದು ಎಣಿಸಬಹುದು ಹೇಗಿದ್ದರೂ ಮುಸ್ಲಿಂಲೀಗಿನ ವಿರೋಧ ಒಂದಾಗಿ ಅಥವಾ ಬೇರೆ ಯಾವ ನೆವನವನ್ನಿಟ್ಟುಕೊಂಡಾದರೂ ಭಾರತೀಯ ಸ್ವರಾಜ್ಯ ಪ್ರಶ್ನೆಯನ್ನು ಅನಿಶ್ಚಿತ ಸಮಯದವರೆಗೆ ಮುಂದೆ ಹಾಕಲು ಯಾರಿಗೂ ಸಾಧ್ಯವಿಲ್ಲದಾಗಿದೆ ಹಾಗೆ ಮಾಡಿದರೆ, ಭಾರತದ ರಾಜಕೀಯವು ಹದಗೆಟ್ಟು ಪರಿಸ್ಥಿತಿಯು ಉಗ್ರವಾಗಬಹುದು

### ಹಿಂದುಗಳು ಗುಂಡುಹೊಡೆಯಲು ಕಲಿಯಬೇಕಂತೆ

ಸಕ್ಕೂರಿನಲ್ಲಿ ಇದಗ ಭೀಷಣ ಗಲಭೆಯಾಗಿ ಅನೇಕ ಜನ ಹಿಂದುಗಳ ಪ್ರಾಣ ಧನ ಕಷ್ಟಗಳನ್ನು ಅನುಭವಿಸಿದರಷ್ಟೆ? ಈ ಅಂತಹ ವಿಪತ್ತುಗಳು ಮುಂದಕ್ಕೆ ಬರಬಾರದೆಂದೂ ಬಾರದೆಂದೂ ಗಲಭೆಗಳುಂಟಾದಾಗ ಆತ್ಮರಕ್ಷಣೆಯನ್ನು ಮಾಡುವ ಶಕ್ತಿಯು ಹಿಂದುಗಳಲ್ಲಿ ಯೂ ಇರಬೇಕೆಂದೂ ಅಲ್ಲಲ್ಲಿ ಕೋವಿ ತೆಗೆದು ಗುಂಡು ಹೊಡೆಯುವ ಶಿಕ್ಷಣವನ್ನು ಸಿಂಧಪ್ರಾಂತದಲ್ಲಿ ಹಿಂದುಗಳಿಗೆ ಕೊಡಲ್ಪಡುತ್ತಿದೆಯೆಂದು ತಿಳಿದುಬರುತ್ತದೆ

ಪೆನ್ಶನುದಾರರಾದ ಹಲವು ಹಿಂದುಗಳು, ಹಳ್ಳಿಯಿಂದ ಹಳ್ಳಿಗೆ ಹೋಗಿ, ಹೇಗೆ ಜನರು ಕೋವಿಯನ್ನು ಉಪಯೋಗಿಸುವುದು ಎಂಬುದನ್ನು ಕಲಿಸುತ್ತಿರುವರಂತೆ

ಸಕ್ಕೂರಿನಲ್ಲಿಯೇ ಕೋವಿದಾರರಾದ ಹಿಂದುಗಳ ಒಂದು ಸಭೆಯು ಸ್ಥಾಪಿತವಾಗಿದೆ. ಈಗಾಗಲೇ ೨೦೦ ಮಂದಿ ಹೊಸಬರು ಲೈಸನ್ಸು ಪಡೆದುಕೊಂಡಿರುವರು. ಪಂಜಾಬಿನಿಂದ ಒಬ್ಬ ರಿಟಾಯರಾದ ಮಿಲಿಟರಿ ಆಫೀಸರರನ್ನು ಕರಸಿ, ಅವರಿಂದ ಶಿಕ್ಷಣ ನಡೆಯುತ್ತಿರುವರು ನಗರಗಳನ್ನು ಬೇರೆ ಬೇರೆ ಕೇಂದ್ರಸ್ಥಳಗಳಾಗಿ ವಿಂಗಡಿಸಿ, ಅಲ್ಲಲ್ಲಿ ಅಂತಹ ಶಿಕ್ಷಣ ಶಿಬಿರಗಳು ಏರ್ಪಟ್ಟಿವೆಯೆಂದು ತಿಳಿದುಬರುತ್ತವೆ.


ಫಕ್ಕನೇ ಬರುವ ಸೀನು ಶೀತವನ್ನು ಸೂಚಿಸುತ್ತದೆ.

ಇಂದು ಅದು ಕೇವಲ ಒಂದು ಸೀನು, ಆದರೆ ಕಡೆಗೆ ಅದು ತಲೆಸಿಡಿತ ಶೀತವಾಗಿ ಪರಿಣಮಿಸಿ ನಿಮೋನಿಯಕ್ಕೆ ತಿರುಗಬಹುದು. ಆದಕಾರಣ ಫಕ್ಕನೇ ಬರುವ ಸೀನೇ ಮುಂದೆ ಉಂಟಾಗುವ ಶೀತದ ಸೂಚನೆಯಾಗಿರಲಿ ಆಗ ಪೆಪ್ಸನ್ನು ಸೇವಿಸಿರಿ ಯಾಕೆಂದರೆ ಈ ವಿಷಹಾರಿ ಶ್ವಾಸನೀಯ ಮಾತ್ರೆಗಳು ಶೀತ ಕೆಮ್ಮು ಥಂಡಿಯನ್ನು ಕೂಡಲೇ ಗುಣಪಡಿಸುವುದು

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಆದರಿಂದ ಹೊರಟ ಔಷಧೀಯ ಹೊಗೆಯು ಶ್ವಾಸಕೋಶಗಳನ್ನು ಸೇರುತ್ತವೆ ಈ ಪ್ರಕಾರವಾಗಿ ಗಂಟಲು ಶ್ವಾಸಕೋಶ ಮೊದಲಾದ ಅಂಗಗಳು ಗುಣಮುಖವಾಗಿ ಉಸಿರುಕಟ್ಟುವಂತಾಗುವುದು ನಿಲ್ಲುತ್ತದೆ

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ 1ರಂತೆ ಮಾರುತ್ತಾರೆ

ಏಜಂಟ್ಸ್

ಸ್ಮಿತ್ ಸ್ಟಾನಿಸ್ಟ್ರೀಟ್ ಕಂಪನಿ ...

ಯಾವಾಗಲೂ ಪೆಪ್ಸನ್ನೇ ಕೊಂಡುಕೊಳ್ಳಿರಿ

# PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು



ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಜಿ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯು ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವ ... [illegible] ... ಗರ್ಭಧಾರಣ ಬಂದಾಗುವುದು ... [illegible] ... ಗರ್ಭಧಾರಣವೂ ಆಗುವುದಿಲ್ಲ ... [illegible]

ವಿಳಾಸ ಸಂಜೀವಿನೀ ಔಷಧಾಲಯ ಮು. ಪೋ ಮಿರಜಿ, S M C



ಪಂಡಿತ ತಾರಾನಾಥರ ಸುಲಭ ಚಿಕಿತ್ಸೆ!

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ ಉಪದಂಶ ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ

ಕೇವಲ ಕೆಲವೇ ಪ್ರತಿಗಳು ಉಳಿದಿವೆ ಬೆಲೆ ರೂ 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ ಪಿ ಚಾರ್ಜು ಮಾಫಿ ವ್ಯಾಪಾರಸ್ಥರಿಗೆ ಧಾರಾಳ ಕಮಿಶನು

ವಿ ಸೂ ಮಾರ್ಚ್ 15ರ ಒಳಗೆ ರೂ 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು

ಯು ಪಾಂಡುರಂಗ ನಾಯಕ್,

ರಥಬೀದಿ ಮಂಗಳೂರು

ಸೋಲ್ ಏಜೆಂಟ್ಸ್

ಪ್ರೇಮ ಮೆಡಿಕಲ್ ಹಾಲ್,

ಗುತ್ತಿಗಾರ್ ದ ಕ



THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs. 100/ to Rs 5000/ run regularly on systematic lines. Unique Banking facilities to Businessmen and interested Public

*Apply for particulars—*

K. R. GURU, *Managing Director.*

ಈ ವಾರದ ಕತೆ:

# ಮೃತ್ಯುಪಾಶ

ಕನ್ನಡಿಸಿದವರು: ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ

ಆ ಸಣ್ಣ ಪರಿವಾರದಲ್ಲಿ ಅವರೇ ಇಬ್ಬರು— ಮುದಿತಾಯಿ ಮತ್ತು ಅವಳ ಒಬ್ಬನೇ ಮಗ, ಶಿವಪ್ಪ ಬದುಕಿದ್ದರು. ಶಿವಪ್ಪ ಎರಡು ವರ್ಷದವನಾಗಿದ್ದಾಗ— ಅವನ ತಂದೆ ಈ ಲೋಕದ ಸಮಸ್ತ ವ್ಯಾಪಾರಗಳನ್ನು ಮುಗಿಸಿ ಬಿಟ್ಟಿದ್ದನಾದ್ದರಿಂದ, ಶಿವಪ್ಪುವನ್ನು ಸಾಕಿಸಲಹುವ ದೊಡ್ಡ ಭಾರವು ಅವನ ತಾಯಿ ಲಕ್ಷ್ಮಿಯ ಮೇಲೆ ಬಿದ್ದಿದ್ದಿತು. ಆದಾಗಿ ಈಗ ಹದಿನೆಂಟು ಇಪ್ಪತ್ತು ವರ್ಷಗಳು ಕಳೆದು ಹೋದವು. ಶಿವಪ್ಪ ಗದ್ದೆಯಲ್ಲಿ ಹೋಗಿ ದಿನಕ್ಕೆ ಎರಡುಮೂರಾಣೆ ಸಂಪಾದಿಸಿ ತರುತ್ತಿದ್ದ. ಲಕ್ಷ್ಮಿ ದೊಡ್ಡವರ ಮನೆಯ ಚಾಕರಿ ಮಾಡಿ ಎರಡು ಸೇರು ಅಕ್ಕಿಯನ್ನೋ ಹಿಟ್ಟನ್ನೋ ತರುತ್ತಿದ್ದಳು. ಆದ್ದರಿಂದ ಈಗ ಅವರಿಗೆ ಎರಡುಮೂರು ಅಕ್ಕಿಯ ರೊಟ್ಟಿ ಮತ್ತು ಮೆಣಸಿನಕಾಯಿ ಚಟ್ನಿಗೆ ತತ್ವಾರವಾಗುತ್ತಿದ್ದಿಲ್ಲ.

ಚಳಿಗಾಲದ ಒಂದು ದಿನ ಬೆಳಗ್ಗೆ ಐದು ಘಂಟೆಯ ಸಮಯ. ಪೃಥ್ವಿಯ ಮೇಲೆ ಅಂಧಕಾರವು ಇನ್ನೂ ತನ್ನ ಅಧಿಕಾರವನ್ನು ನಡಸಿಕೊಂಡು ಬರುತ್ತಿತ್ತು. ವೃದ್ಧರೈತರು ಹೆಗಲಮೇಲೆ ನೇಗಿಲುಗಳನ್ನು ತೆಗೆದುಕೊಂಡು ಗದ್ದೆಯ ಕೆಲಸಕ್ಕೆ ಹೊರಟಿದ್ದರು. ಶಿವಪ್ಪ ಕೂಡಾ ಅವರೊಂದಿಗೆ ಇದ್ದ. ಅವರು ಕೆಲವು ಗದ್ದೆಗಳನ್ನು ದಾಟಿ ಗುಡ್ಡದ ಕಟ್ಟದಿಗೆ ಬರುವಾಗ ಅಲ್ಲಿಂದ ಯಾರೋ ಒಬ್ಬರ ಆರ್ತನಾದವು ಕೇಳಿ ಬಂದಿತು. ಆ ಕೂಗು ರೈತರ ಧ್ಯಾನಭಂಗ ಮಾಡಿತು. ಸಿಜ, ಅದರ ಕೃತಃ ಅನೇಕ ಅತ್ಯಾಚಾರ ಅನಾಚಾರಗಳನ್ನು ಅನುಭವಿಸಿ ಕಲ್ಲಾಗಿದ್ದ ಅವರ ಹೃದಯವು— 'ಅಯ್ಯೋ, ಒಬ್ಬನಿ ಕಾಪಾಡಿರಿ' ಎಂಬ ರೋದನವನ್ನು ಕೇಳಿ ಕರಗಲಿಲ್ಲ. ಒಂದು ಕ್ಷಣ ನಿಂತಲ್ಲೇ ನಿಂತು, ಮತ್ತೆ ಅವರು ತಮ್ಮ ದಾರಿ ಹಿಡಿದು ಮುಂದಕ್ಕೆ ನಡೆದರು.

ಶಿವಪ್ಪ ಇನ್ನೂ ಈ ಪ್ರಪಂಚಕ್ಕೆ ಹೊಸಬ. ಸುಳ್ಳು ಮೋಸಗಳಿಂದ ತುಂಬಿ ಹೋಗಿರುವ ಈ ಪ್ರಪಂಚದಲ್ಲಿ ಅವನಂಥ ಒಬ್ಬ ಹೇಗಿರಬೇಕೆಂಬುದರ ಜ್ಞಾನವು ಅವನಿಗೆ ಬಂದಿರಲಿಲ್ಲ. ಆರ್ತನಾದವನ್ನು ಕೇಳಿ ಶಿವಪ್ಪನ ತರುಣ ರಕ್ತವು ಕುದಿಯತೊಡಗಿತು. ಅವನು ಶಬ್ದಬರುವ ದಿಕ್ಕಿಗೆ ಓಡಿಹೋದ. ಅಲ್ಲಿಯ ಆ ದೃಶ್ಯವು ಅವನನ್ನು ಸ್ತಂಭೀಭೂತನನ್ನಾಗಿ ಮಾಡಿತು. ಅವನ ಶರೀರವು ದುಃಖಸಂತಾಪಗಳಿಂದ ಕಂಪಿಸಿತು. ಜಮೀನುದಾರ ತೇಜಪ್ಪ ಶೆಟ್ಟಿ ಒಬ್ಬ ಹರಿಜನ ಬಾಲಿಕೆಯ ಮೇಲೆ ಅತ್ಯಾಚಾರಕ್ಕೆ ತೊಡಗಿದ್ದರು. ಶೆಟ್ಟರ ಬಾಹುಪಾಶದಿಂದ ಬಿಗಿಯಲ್ಪಟ್ಟ ಆ ಬಾಲಿಕೆ, ತನ್ನ ಸಂರಕ್ಷಣೆಯನ್ನು ಮಾಡಿಕೊಳ್ಳಲಾಗದೆ ಕೂಗಿಡುತ್ತಿದ್ದಳು. ಅವಳು ದೀನ ದೃಷ್ಟಿಯಿಂದ ತನ್ನನ್ನು ನೋಡುತ್ತ ಮೌನಮುದ್ರೆಯಿಂದ ಸಹಾಯಕ್ಕಾಗಿ ಬೇಡುತ್ತಿರುವದನ್ನು ನೋಡಿ ಶಿವಪ್ಪುವಿನಿಂದ ಸುಮ್ಮಗಿರಲಾಗಲಿಲ್ಲ. 'ಏನು ಶೆಟ್ಟರೆ! ಇದೇನು ಮಾಡುತ್ತೀರಿ?' ಎಂಬ ಶಬ್ದಗಳು ಅವನ ಬಾಯಿಯಿಂದ ಹೊರಟು ಬಂದವು.

ತೇಜಪ್ಪ ಶೆಟ್ಟರು ಹಳ್ಳಿಯ ಒಬ್ಬರೇ ಒಬ್ಬ ಸಾಹುಕಾರ ಪುರುಷರಾಗಿದ್ದರು. ಅವರು ಕಲೆಕ್ಟರ ಮೆಜಿಸ್ಟ್ರೇಟರಲ್ಲ. ಆದರೆ ಕಲೆಕ್ಟರ ಮೆಜಿಸ್ಟ್ರೇಟರು ಹಳ್ಳಿಗೆ ಬಂದಾಗ ಅವರ ಕೆಲಸಕಾರ್ಯಗಳು ಇವರಿಂದಲೇ ಕೊನೆಸಾಗ ಬೇಕಾಗಿದ್ದುವು. ಆದ್ದರಿಂದ ಅವರಿಗಿಂತಲೂ ಇವರು ಮೇಲೆನಿಸಿಕೊಂಡಿದ್ದರು. ಅತ್ಯಾಚಾರಿಗಳೂ ಕ್ರೂರಿಗಳೂ ಆಗಿದ್ದರು. ಹಣವಂತರು ಬೇಕಾದಷ್ಟು ಅತ್ಯಾಚಾರ ಅನಾಚಾರಗಳನ್ನು ಮಾಡಬಹುದು. ಆದರೆ ಪ್ರಾಪಂಚಿಕ ದೃಷ್ಟಿಯ ತಕ್ಕಡಿಯಲ್ಲಿ ತೂಗಿ ನೋಡುವಾಗ ಅವರಷ್ಟು ಸದಾಚಾರಿಗಳು ಮತ್ತು ಸತ್ಯವಂತರು ಬೇರೆ ಯಾರೂ ಆಗುವದಿಲ್ಲ. ಸತ್ಯವನ್ನು ಅಸತ್ಯವಾಗಿಯೂ, ಅಸತ್ಯವನ್ನು ಸತ್ಯವಾಗಿಯೂ, ನ್ಯಾಯವನ್ನು ಅನ್ಯಾಯವಾಗಿಯೂ, ಅನ್ಯಾಯವನ್ನು ನ್ಯಾಯವಾಗಿಯೂ ತೋರಿಸಿಕೊಡಲು ಹಣವಂತರು ಸಮರ್ಥರಾಗಿದ್ದಾರೆ. ಯಾಕೆಂದರೆ ಹಣದ ಮಹಿಮೆಯೂ ಪ್ರತಾಪವೂ ಅಷ್ಟು ಇದೆ. ಅಂಥ ಹಣವು ತೇಜಪ್ಪ ಶೆಟ್ಟರಲ್ಲಿ ಬೇಕಾದಷ್ಟು ಇದ್ದಿತು.

ಅಂಥ ಶೆಟ್ಟರ ಮುಂದೆ ನಿಂತು ಒಬ್ಬ ಸಾಮಾನ್ಯನಾದ ಶಿವಪ್ಪು ಆ ಮಾತುಗಳನ್ನು ಆಡಿದುದು ಸಮಯೋಚಿತವಾಗಲಿಲ್ಲ. ಶಿವಪ್ಪು ಅಷ್ಟಕ್ಕೇ ಸುಮ್ಮನಾಗಿ ಅಲ್ಲಿಂದ ಹೊರಟು ಹೋಗಿದ್ದರೆ, ಲೇಸಾದರೂ ಆಗುತ್ತಿತ್ತು. ಆದರೆ— 'ಸ್ವಾಮಿ! ನಿಮ್ಮ ಕಾಮಪಿಪಾಸೆಗೆ ಸ್ಪೃಶ್ಯಾಸ್ಪೃಶ್ಯತೆಯ ಭೇದವಿಲ್ಲವೆ?' ಎಂದು ಶಿವಪ್ಪು ಆಡಿದ ಮಾತು ಶೆಟ್ಟರ ಉದ್ವೇಗಕ್ಕೆ ಮಿತಿಯಿಲ್ಲದಂತೆ ಮಾಡಿತು. ಉರಿಯುವ ಕ್ರೋಧಾಗ್ನಿಯಲ್ಲಿ ಶಿವಪ್ಪುವಿನ ಆ ವ್ಯಾಕುಲ ತುಪ್ಪದ ಕೆಲಸವನ್ನು ಮಾಡಿತು. ಶೆಟ್ಟರು ಕಡುಸನಾತನಿಗಳು, ಬ್ರಾಹ್ಮಣ ಭಕ್ತರು, ಅವರು ಹರಿಜನ ಸೇವೆ ಅಸ್ಪೃಶ್ಯತಾನಿವಾರಣೆಯ ಭಯಂಕರ ವಿರೋಧಿಗಳಾಗಿದ್ದರು. ಪೂರ್ವಕರ್ಮದ ಫಲವಾಗಿ ಹೊಲೆಯ ಜನ್ಮವು ಬರುವದಾದ್ದರಿಂದ ಹೊಲೆಯರ ಉದ್ಧಾರಕ್ಕೆ ಹೋಗುವದು ದೇವರ ಇಚ್ಛೆಗೆ ವಿರೋಧವಾದ ಪಾಪಕಾರ್ಯವೆಂದು ಸನಾತನಿಗಳ ಸಭೆಯಲ್ಲಿ ಅವರು ಒಮ್ಮೆ ಸಾರಿ ಹೇಳಿದ್ದರು. ಅಂಥವರು ಒಬ್ಬ ಹೊಲೆಯ ಹುಡುಗಿಯನ್ನು ಬಲಾತ್ಕರಿಸಿದರೆಂದು ಜಗತ್ತಿಗೆ ಗೊತ್ತಾಗುವದಾದರೆ? ಈ ಯೋಚನೆಯೇ ಅವರನ್ನು ಶಿವಪ್ಪುವಿನ ಪ್ರಾಣದ ಶತ್ರುವನ್ನಾಗಿ ಮಾಡಿತು.

ಶೆಟ್ಟರ ತನ್ನ ಪ್ರಯತ್ನವು ವಿಫಲವಾಯಿತೆಂದು ತಿಳಿದು ಶಿವಪ್ಪುವನ್ನು ತೀಕ್ಷ್ಣ ದೃಷ್ಟಿಯಿಂದ ನೋಡುತ್ತ ಅಲ್ಲಿಂದ ಹೊರಟುಹೋದರು. ಹೊಲೆಯ ಹುಡುಗಿ ಕೃತಜ್ಞತೆಯನ್ನು ತುಂಬಿದ ಶಿವಪ್ಪುವನ್ನು ಕೃತಜ್ಞತೆಯಿಂದ ನೋಡುತ್ತ ಅಲ್ಲಿ ನಿಂತಿದ್ದಳು. ಶಿವಪ್ಪ 'ತಂಗಿ! ಈ ಅಧಮನ ಕೈಗೆ ನೀನು ಹೇಗೆ ಸಿಕ್ಕಿದೆಯಮ್ಮಾ?' ಎಂದು ಕೇಳಿದ. ಅವಳು 'ಒಡೆಯ! ನಾನು ತರಗೆಲೆಸೊಪ್ಪು ಹೆಕ್ಕಲಿಕ್ಕೆ ಹೋಗುತ್ತಿರುವಾಗ ಆ ರಾಕ್ಷಸ...' ಸ್ತ್ರೀಯೋಚಿತ ಮರ್ಯಾದಾ ಭಾವವು ಅವಳನ್ನು ಮುಂದೆ ಮಾತನಾಡಲು ಬಿಡಲಿಲ್ಲ. ಅವಳು ತಲೆ ತಗ್ಗಿಸಿ ಭೂಮಿಯನ್ನೇ ನೋಡುತ್ತ ನಿಂತುಕೊಂಡಳು. 'ತಂಗಿ, ತಿಳಿಯಿತು. ಇನ್ನು ನೀನು ನಿನ್ನ ಕೆಲಸಕ್ಕೆ ಹೋಗು. ಏನೂ ಭಯವಿಲ್ಲ' ಎಂದು ಹೇಳಿ ಅವನು ಅಲ್ಲಿಂದ ತನ್ನ ಗದ್ದೆಗೆ ಹೋದ.

ಆದಾಗಿ ಒಂದು ತಿಂಗಳು ಕಳೆಯಿತು. ಚಳಿಗಾಲವು ಕಳೆದು ವೈಶಾಖದ ದಿನಗಳು ಬಂದವು. ಆ ಹಳ್ಳಿಯಲ್ಲಿ ಅವು ಜಾತ್ರೆಯ ದಿನಗಳಾಗಿದ್ದವು. ಜನರು ಬೆಳಗ್ಗಿನಿಂದ ರಾತ್ರಿಯ ತನಕ ಗುಂಪು ಕಟ್ಟಿಕೊಂಡು ಬರುತ್ತಾ ಹೋಗುತ್ತ ಇರುತ್ತಿದ್ದರು. ಊರವರು ಮಾತ್ರವಲ್ಲದೆ ಪರಊರವರು ವರ್ಷಕ್ಕೊಮ್ಮೆ ನಡೆಯುವ ಆ ಜಾತ್ರೆಗೆ ಬರುತ್ತಿದ್ದರು. ಒಂದು ದಿನ ಒಂದು ಆಕಸ್ಮಿಕ ಘಟನೆಯು ನಡೆಯಿತು. ಆ ದಿನ ಬೆಳಗ್ಗೆ ರಸ್ತೆಯ ಬದಿಯಲ್ಲಿ ನಾಲ್ಕಾರು ಜನರು ಸುತ್ತು ಹಾಕಿ ನಿಂತಿದ್ದರು. ನಡುವೆ ಕೃಶಕಾಯನಾದ ಮಾರ್ಗಸ್ಥನೊಬ್ಬನು ಸತ್ತು ಬಿದ್ದಿದ್ದನು. ತೇಜಪ್ಪ ಶೆಟ್ಟರ ಮನೆ ಆಳು ದಾಕ್ತರರನ್ನು ಕರೆಯಲಿಕ್ಕೆ ಹೋಗಿದ್ದ. ಹಿಂದಿನ ಸಾಯಂಕಾಲವೇ ಶೆಟ್ಟರ ನೂರು ರೂಪಾಯಿಯ ಒಂದು ನೋಟು ಡಾಕ್ಟರರ ಜೇಬನ್ನು ಸೇರಿ ಕೊಂಡಿತ್ತು. ಡಾಕ್ಟರರು ಒಂದು ಶವದ ಪರೀಕ್ಷೆ ಮಾಡಿ ಏನನ್ನು ಹೇಳಬೇಕಾಗಿತ್ತೊ ಅದನ್ನೇ ಹೇಳಿದರು. ಶಿವಪ್ಪು ಒಬ್ಬ ಮಾರ್ಗಸ್ಥನನ್ನು ವಿಷಹಾಕಿ ಕೊಂದಿರುವನೆಂಬ ಸಮಾಚಾರವು ಮಿಂಚಿನಂತೆ ಇಡೀ ಹಳ್ಳಿಯನ್ನು ಹರಡಿತು. ಪೋಲೀಸರು ಬಂದು ಶಿವಪ್ಪನನ್ನು ಕೈದು ಮಾಡಿಕೊಂಡು ಹೋದರು.

ತನ್ನ ಹೊಟ್ಟೆಯ ಕರುಳಿಗೆ ಪ್ರಾಪ್ತವಾದ ಈ ದುರ್ಗತಿಯನ್ನು ನೋಡಿ ಲಕ್ಷ್ಮಿ ಅತ್ತಳು. ಅತ್ತು ಅತ್ತು ಅವಳು ಮೂರು ದಿನಗಳನ್ನು ಕಳೆದಳು. ಈ ಮೂರು ದಿನಗಳಲ್ಲಿ ಒಂದೇ ಒಂದು ಹನಿ ನೀರು ಅಥವಾ ಅನ್ನದ ಕಾಳು ಅವಳ ಹೊಟ್ಟೆಯನ್ನು ಸೇರಿರಲಿಲ್ಲ. ತನ್ನ ಜೀವನಾಧಾರನಾದ ಮಗನನ್ನು ಬಿಡುಗಡೆ ಕೊಡಬೇಕೆಂದು ಅವಳು ಶೆಟ್ಟರನ್ನು ಅಂಗಲಾಚಿ ಬೇಡಿಕೊಂಡಳು, ಊರ ಹಿರಿಯ ವಕೀಲರನ್ನು ಮಾತನಾಡಿಸಿದಳು. ಆದರೆ ಎಲ್ಲರೂ ಸ್ವಾರ್ಥಿಗಳೇ. ತಮ್ಮ ತಮ್ಮ ಕೆಲಸಗಳ ಗಡಿಬಿಡಿಯವರೇ. ಯಾರೂ ಅವಳ ಸಹಾಯಕ್ಕೆ ಬರಲಿಲ್ಲ. ಮೊಕದ್ದಮೆಯಲ್ಲಿ ಶಿವಪ್ಪ ಕೊಲೆಗಾರನೆಂದು ಹೇಳಲು ಅವರಲ್ಲಿ ಕೆಲವರು ಸಾಕ್ಷಿಗಳನ್ನು ಕೊಟ್ಟಿದ್ದರು. ವಿಚಾರಣೆಯು ಮುಗಿದು ನಿರಪರಾಧಿಯಾದ ಶಿವಪ್ಪನಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು. "ಶೆಟ್ಟರೊಡನೆ ಹಗೆ ಸಾಧಿಸಿ ಕೊಂಡವ ಯಾರೂ ಜೀವಂತ ಉಳಿದಿರಲಾರ" ಎಂದು ಊರವರು ಶೆಟ್ಟರ ಬಲ ಪರಾಕ್ರಮಗಳನ್ನು ಹೊಗಳಲಾರಂಭಿಸಿದರು. ಶೆಟ್ಟರ ಕೀರ್ತಿ ಎಲ್ಲೆಲ್ಲೂ ಹರಡಿತು.

ಫಾಸಿಯನ್ನು ಕೊಡಲಿಕ್ಕೆ ಕೆಲವೇ ದಿನಗಳು ಉಳಿದಿವೆ. ಮುದಿ ತಾಯಿ ಪ್ರತಿದಿನ ಜೈಲಿಗೆ ಹೋಗಿ ಮಗನಿಗೆ ಪ್ರಸಾದವೊಂದು ಕೊಟ್ಟು ಬರುತ್ತಿದ್ದಳು. ಹೊರಗಿನಿಂದ ವಸ್ತುಗಳನ್ನು ಸಂಪಾದಿಸಿ ಒಳಗಿನ ಕೈದಿಗಳಿಗೆ ಕೊಡುವದು ನಿಯಮಕ್ಕೆ ವಿರೋಧವೆಂದು ಹೇಳಲಿಕ್ಕೆ ಜೈಲರನಿಗೆ ಬಾಯಿಬರಲಿಲ್ಲ. ಅವನಿಗೂ ಒಬ್ಬ ಮಗನಿದ್ದ. ಆದ್ದರಿಂದ ಮಗನ ವಿರಹವು ಎಷ್ಟು ಕಷ್ಟದಾಯಕವಾಗುತ್ತದೆಂಬುದರ ಅನುಭವವು ಅವನಿಗಾಗಿತ್ತು. ಅಂತೂ ಕೊನೆಯ ದಿನ ಬಂದಿತ್ತು. ಇವತ್ತು ಶಿವಪ್ಪುವಿಗೆ ಫಾಶಿಯಾಗುತ್ತದೆಂದು ಜೈಲರನು ಗದ್ಗದನಾಗಿ ಆಕೆಗೆ ಹೇಳಿದ. ಅವಳು— 'ಅಪ್ಪಾ ನನ್ನ ಮಗನಿಗೆ ಕಷ್ಟವಾಗದ ಹಾಗೆ ಫಾಶಿ ಕೊಡಪ್ಪಾ' ಎಂದು ಬೇಡಿಕೊಂಡಳು. ಮಗನು ಫಾಸಿಗೆ ಹೋಗುವಾಗಲೂ ಅವನಿಗೆ ಕಷ್ಟವಾಗ ಬಾರದೆಂದು ಮಾತೃಹೃದಯವು ಆಶಿಸುವುದು! 'ನಾನು ನನ್ನ ಸರ್ವಸ್ವವನ್ನು ಕೊಟ್ಟು ಶಿವಪ್ಪುವನ್ನು ದೊಡ್ಡವನನಾಗಿ ಮಾಡಿದೆ. ಮುದುಕಿಯಾದ ನನಗೆ ಅವನು ಊರುಗೋಲಾಗಿದ್ದ. ನನ್ನ ಶಿವಪ್ಪು...' ಜೈಲರನೂ ಮಾತನಾಡಲಿಲ್ಲ. ಅವಳು ಮತ್ತೆ ಏನನ್ನೂ ಬಡಬಡಿಸುತ್ತ ಅಲ್ಲಿಂದ ಹೊರಟು ಹೋದಳು. ಜೈಲರ ಅದನ್ನು ನೋಡಿ ಒಂದು ಕಣ್ಣಿಗಿನ ನಿಡಿದುಸಿರನ್ನು ಬಿಟ್ಟು ಒಳಗೆ ನಡೆದ. ಹೋಗುವಾಗ ಎರಡೂ ಕಣ್ಣುಗಳನ್ನು ಒತ್ತಿಕೊಂಡ. ಅವನ ಕರವಸ್ತ್ರವು ನೀರಿನಿಂದ ತೋಯ್ದು ಹೋಗಿತ್ತು.

ಸಾಯಂಕಾಲ ನಾಲ್ಕು ಹೊಡೆಯುವ ಸಮಯಕ್ಕೆ ವಿಧಿಯಂತೆ ಶಿವಪ್ಪುವಿಗೆ ಫಾಶಿಯಾಯಿತು. ಗಲ್ಲಿಗೇರಿಸಲ್ಪಟ್ಟು ಶಿವಪ್ಪ ಎರಡು ಮಿನಿಟು ಅಂಗಾಂಗಗಳನ್ನು ತಡಪಡಿಸಿಕೊಂಡು ಮತ್ತೆ ನಿಶ್ಚಲನಾದ. ಅವನ ಪ್ರಾಣಪಕ್ಷಿಯು ಶರೀರ ಪಂಜರದಿಂದ ಹೊರಟು ಅನಂತ ಪಥದಲ್ಲಿ ಹಾರಿಹೋಯಿತು. ಶಿವಪ್ಪುವಿನ ಹರೆಯದ ಮುಖ, ನಸುನಗೆ ತೋರುವ ನೋಟ ಇನ್ನೂ ಗಂಭೀರತೆಯನ್ನು ಕಳೆದುಕೊಂಡಿಲ್ಲ. ಅವನ ವಿಶಾಲವಾದ ಎದೆ ಮತ್ತು ದೀರ್ಘವಾದ ಭುಜಗಳು ತನ್ನ ಕಡೆಗೆ ಆಕರ್ಷಿಸುತ್ತಿತ್ತು. ಆದರೆ ಹೂವು ಪೂರ್ಣ ಅರಳಿ ತನ್ನ ಸೌರಭವನ್ನು ನಾಲ್ಕು ಕಡೆ ಬೀರುವ ಮೊದಲೇ ಮುರುಟಿ ಬಿದ್ದಿತು. ಮದ್ಯವ ಉಪಭೋಗಿಸಿ ಸೊಕ್ಕಿ ಬೆಳೆಯುತ್ತಿದ್ದ ಕಾಮಿಯು ವಿವಿಧ ಅಭಿಲಾಷೆಗಳ ಉದ್ಯಾನವು ಕಾಲ ಪುರುಷನ ಮಹಾಕರಾಳ ದವಡೆಯೊಳಗೆ ಸಿಕ್ಕಿಕೊಂಡು ಪೂರ್ಣ ನಷ್ಟವಾಯಿತು. ಫಾಶಿಯಾದ ಶಿವಪ್ಪುವನ್ನು ನೋಡಿ ಜನತೆಯು ಅನ್ಯಾಯ ಅತ್ಯಾಚಾರದ ರೀತಿಯ ಮೇಲೆ ಒಬ್ಬ ಪ್ರಾಮಾಣಿಕನ ಬಲಿಯಾಯಿತೆಂದು ಅವರು ಅತ್ತುಕೊಂಡರು. ಶಿವಪ್ಪುವಿನ ಬಿಡಿಸುತ್ತಿದ್ದ ಅವನ ಆ ಪ್ರಾಣಹೀನ ಶರೀರವನ್ನು ನೋಡಿ ಪಾಪಿಗಳ ರಕ್ತ ಹೀನಕಣ್ಣುಗಳಿಂದಲೂ ಎರಡು ಹನಿ ನೀರು ತೊಟ್ಟಿಕ್ಕಿತು!

ಮಧ್ಯರಾತ್ರಿಯ ಸಮಯ. ಗಾಢಾಂಧಕಾರವು ತುಂಬಿಕೊಂಡಿತ್ತು. ಸ್ಮಶಾನ ಭೂಮಿಯ ಸಮೀಪದಲ್ಲಿ ಪಕ್ಷಿಗಳ ಫಡಫಡಿಸುವಿಕೆ ಅಲ್ಲದೆ ಮತ್ತೇನೂ ಕೇಳಿ ಬರುತ್ತಿರಲಿಲ್ಲ. ಆ ಭಯಾನಕ ಸಮಯದಲ್ಲಿ ಸ್ಮಶಾನದ ಆ ಭಯಾನಕ ಸ್ಥಳದಲ್ಲಿ ಮುದುಕಿ ಲಕ್ಷ್ಮಿಯು ತನ್ನ ಪುತ್ರನ ಮೃತ ಶರೀರವನ್ನು ತೊಡೆಯ ಮೇಲೆ ತೆಗೆದುಕೊಂಡು ಒಬ್ಬಳೇ ಕೂತಿದ್ದಳು. ಅವಳ ರೋದನ ಕಲ್ಲುಗಳನ್ನೂ ಕರಗಿಸುವಂತಿತ್ತು. ಅವಳ ಆ ಕರುಣಾಕ್ರಂದನವು ಸ್ಮಶಾನದ ಘೋರ ನಿಸ್ತಬ್ಧತೆಯನ್ನು ತೀವ್ರವಾಗಿ ಸೀಳಿ ವಿಶ್ವದ ಪ್ರಶಾಂತ ವಾಯು ಮಂಡಳವನ್ನು ವ್ಯಾಕುಲಿಸುತ್ತ ಅನಂತದ ಕಡೆಗೆ ಮುಂದರಿಯುತ್ತಿತ್ತು. ಅದು ಒಂದು ದಿನ ಪ್ರಪಂಚದ ಮೇಲೆ ಆದ ಒಂದು ಕಠಿಣ ಅತ್ಯಾಚಾರದ ಸಮಾಚಾರವನ್ನು ದೇವಲೋಕಕ್ಕೆ ಮುಟ್ಟಿಸಲು ಹೊರಟಿರುವದೊ ಎಂಬ ಹಾಗೆ ಭಾಸವಾಗುತ್ತಿದ್ದಿತು.

ಆದಾದ ಮರುದಿನ ಬೆಳಗ್ಗೆ ಗೋಪಿಚಂದನದ ದೊಡ್ಡ ನಾಮವನ್ನು ಹಚ್ಚಿಕೊಂಡು ತೇಜಪ್ಪ ಶೆಟ್ಟರು ಹಣ್ಣುಕಾಯಿ ತೆಗೆದುಕೊಂಡು ದೇವಸ್ಥಾನಕ್ಕೆ ಹೊರಟಿದ್ದರು. ದಿಗ್ವಿಜಯ ಮಾಡಿ ಬಂದ ಮಹಾರಾಜನಂತೆ ಹೋಗುತ್ತಿರುವ ಅವರನ್ನು ನೋಡಿ ಜನರು ದೂರದಿಂದಲೇ ನಮಸ್ಕರಿಸುತ್ತಿದ್ದರು.

ಸಾವಕಾರ ಶ್ರೀನಿವಾಸ ರಂಗಪ್ಪೈ
[ ಸ್ಥಾಪನೆ: ಕ್ರಿ. ಶ 1858 ]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

# ಕಳ್ಳ ಕಳ್ಳರ ನಂಟು

# ಅವರ ಕೊರಳಿಗೊಂದು ಗಂಟು!

## 'ಹಿಟ್ಲರ್ ಸ್ಟಾಲಿನಿಸಂ'ಗಳ ಕೊನೆಗಾಲ

**[ಇಂಥ ಪ್ರಪಂಚವನ್ನು ನಡುಗಿಸುವೆವೆಂದು ನಿಂತಿರುವ ಧೂರ್ತರಿಬ್ಬರು ಸ್ಟಾಲೀನ್–ಹಿಟ್ಲರರು; ಅವರ ದರ್ಪವು ಬರಿಯ ಟೊಳ್ಳೆಂದು ಈಗ ಪ್ರಪಂಚವು ತಿಳಿದಿದೆ; ಅದು ಮಾತ್ರವಲ್ಲದೆ, ಅವರಿಬ್ಬರಲ್ಲಿಯೇ ಅನ್ಯೋನ್ಯ ಗೆಳೆತನ ಇದೆಯೆಂಬುದಾದರೂ ಸತ್ಯವೆ? ಅವನ ಮಾನೆಯ ಗಳು ವನ್ನು ಇವ ಎಣಿಸುತ್ತಾನೆ! ಯಾರು ಯಾವಾಗ ಯಾವನನ್ನು ಅಪ್ಪಳಿಸುತ್ತಾನೋ ನೋಡಲಿದೆ!]**

ಪ್ರಜಾಸ್ವಾತಂತ್ರ್ಯವು ಹೆಚ್ಚು ದಿನ ಬದುಕಲಾರದೆಂದೂ, ಈ ಯುದ್ಧದ ಪರಿಣಾಮವಾಗಿ ಹಿಟ್ಲರ್ ನೀತಿಯು ವಿಶ್ವವಿಜಯಿಯಾಗುವುದೆಂದೂ ಹರ್ ಹಿಟ್ಲರನು ಕಳೆದ ವಾರ ಒಂದು ಭಾಷಣವನ್ನು ಕೊಟ್ಟನು. ಇದು ಹಿಟ್ಲರನ ಮೇಲೆ ವಿಶ್ವಾಸವನ್ನಿಟ್ಟು ಈಗ ನಿರಾಶರಾಗುತ್ತಿರುವ ಜರ್ಮನ ಪ್ರಜೆಗಳ ಮನ ಸಂತೋಷಕ್ಕಾಗಿ ಆತನು ಆಡಿದ ಮಾತುಗಳಾಗಿವೆ ಎಂದು ತಿಳಿಯಬೇಕೇ ಹೊರತು ಬೇರೆ ರೀತಿಯಿಂದ ತಿಳಿಯಲು ಕಾರಣವಿಲ್ಲ. ಹಿಟ್ಲರನ ಮನಸ್ಸು ಈಗ ಹುಚ್ಚನ ಮನಸ್ಸಿನಂತೆ ಸರ್ವತ್ರ ಓಡಾಡುತ್ತಿದೆ. ಅದು ಕಂಗೆಟ್ಟಿದ್ದೆ, ದಿಕ್ಕೆಟ್ಟಿದೆ ಎಂಬುದಕ್ಕೆ ಆತನಾಡುತ್ತಿರುವ ಮಾತುಗಳ ಮತ್ತು ಕಾರ್ಯಗಳ ಪೂರ್ವಾಪರ ಸಂಬಂಧವಿಲ್ಲದಿರುವಿಕೆಯೇ ಸಾಕ್ಷಿಯಾಗಿದೆ. ಮೊದಲು ರಶ್ಯವನ್ನು ಗೆದ್ದು, ಆ ಮೇಲೆ ಯುರೋಪವನ್ನು ಪಾದಾಕ್ರಾಂತ ಮಾಡಿ ಆ ಮೇಲೆ ಇಡೀ ವಿಶ್ವವನ್ನು ಗೆಲ್ಲುವೆನೆಂದು ಮೈನ ಕೇಂಫ್ ಎಂಬ ತನ್ನ ವೇದದಲ್ಲಿ ಬರೆದ ಹಿಟ್ಲರನು ಈಗ ಅದೇ ರಶ್ಯದೊಡನೆ ಸ್ನೇಹಮಾಡಿಕೊಂಡು ಇಂಗ್ಲಿಷ್ ಫ್ರೆಂಚರೊಡನೆ ದ್ವೇಷ ಸಾಧಿಸಿದ್ದಾನೆ. ಮೈನಕೇಂಫದಲ್ಲಿ ಬರೆದ ಅವನ ಯಾವ ಕಾರ್ಯಕ್ರಮವೂ ಯಶಸ್ವಿಯಾಗಿರುವುದಿಲ್ಲ. ರಶ್ಯದೊಡನೆ ಸ್ನೇಹ ಮಾಡಿಕೊಂಡು ಇಂಗ್ಲಿಷ್ ಫ್ರೆಂಚರೊಡನೆ ಹಗೆ ಕಟ್ಟಿಕೊಂಡ ಹಿಟ್ಲರನು ಭ್ರಮಜಾಲದಲ್ಲಿ ಬಿದ್ದು ಅದರಿಂದ ತನ್ನನ್ನು ಕಾಪಾಡಿಕೊಳ್ಳುವ ಉಪಾಯ ಕಾಣದವನಾಗಿದ್ದಾನೆ.

### ರಶ್ಯದ ಸೇನೆಯ ರಹಸ್ಯ!

ರಶ್ಯದ ಸೇನೆಯೂ ಬಲವೂ ಅಜೇಯವಾಗಿರುವುದೆಂದು ಪ್ರಪಂಚವು ಎಷ್ಟೋ ವರ್ಷಗಳ ತನಕ ಭಾವಿಸಿತ್ತು. ಸ್ಟಾಲೀನನು ಪ್ರಚಾರ ಮಾಡಿ ಪ್ರಪಂಚದ ಜನರು ಇದನ್ನೇ ನಂಬಿ ಬರುವಂತೆ ಮಾಡಿದ್ದ. ಪ್ರಚಾರ ಕಾರ್ಯದಲ್ಲಿ ಒಳ್ಳೇ ಚಾತುರ್ಯವನ್ನು ತೋರ್ಪಿಸಿ, ರಶ್ಯದೊಡನೆ ಹಗೆ ಸಾಧಿಸಿಕೊಂಡವರು ಒಂದು ದಿನವಾದರೂ ಬದುಕಲಾರರು ಎಂಬ ವಿಶ್ವಾಸವು ಪ್ರಪಂಚದಲ್ಲಾಗುವಂತೆ ಮಾಡಿದ್ದ. ಅವನ ಈ ಮಾತುಗಳನ್ನೇ ನಂಬಿ ಅನೇಕ ಪರರಾಷ್ಟ್ರಗಳು ರಶ್ಯದೊಡನೆ ಸ್ನೇಹದಲ್ಲಿರಲಿಕ್ಕೆ ಹಂಬಲಿಸಿದುವು. ಇಂಗ್ಲಿಷ್ ಫ್ರೆಂಚ್ ಮುತ್ಸದ್ದಿಗಳು ಕೂಡ ಸ್ಟಾಲೀನನ ಮಾಯಾಪಾಶದಲ್ಲಿ ಬಿದ್ದು ಅವನೊಡನೆ ರಾಜಿಯಾಗಿರುವ ಆತುರವನ್ನು ತೋರಿಸಿದರು. ಆದರೆ ಇಷ್ಟರವರೆಗೆ ರಶ್ಯದ ಅಜೇಯತ್ವದ ಕುರಿತು ಸ್ಟಾಲೀನನು ಆಡಿದ ಮಾತುಗಳು ಉತ್ತರಕುಮಾರನ ಹೆಗ್ಗಳಿಕೆಯಾಗಿದ್ದುವೇ ಹೊರತು ಆ ಮಾತುಗಳಲ್ಲಿ ಸ್ವಲ್ಪವಾದರೂ ಸತ್ಯಾಂಶವಿರಲಿಲ್ಲವೆಂಬುದು ಇಂಗ್ಲಂಡಿನ ಫ್ರಾನ್ಸಿನ ಮುತ್ಸದ್ದಿಗಳಿಗೆ ಬಹಳ ಸಮಯ ಕಳೆದ ಮೇಲೆ ತಿಳಿಯಿತು. ಅದರಿಂದ ರಶ್ಯದ ಸ್ನೇಹಸಂಬಂಧದಿಂದುಂಟಾಗಬಹುದಾಗಿದ್ದ ಹಾನಿಯು ಬಹಳ ಮಟ್ಟಿಗೆ ಆ ರಾಷ್ಟ್ರಗಳಿಗೆ ತಟ್ಟಲಿಲ್ಲ. ಪ್ರಪಂಚದಲ್ಲಿ ತನ್ನಂಥ ಮೇಧಾವಿ ಬೇರೊಬ್ಬನಿಲ್ಲವೆಂದು ತಿಳಿದಿದ್ದ ಹಿಟ್ಲರನು ಕಡೆತನಕವೂ ಮೋಸಹೋದ. ಈಗ ಅವನು ಸ್ಟಾಲೀನನ ಸ್ನೇಹವು ಅವನ ಕುತ್ತಿಗೆಗೆ ಒಂದು ಉರುಳಾಗಿ ಪರಿಣಮಿಸಿದೆ.

### ನಿಜಸ್ಥಿತಿಯ ಪರಿಚಯ

ಆದರೆ ರಶ್ಯದ ಸ್ಥಿತಿಗತಿಗಳು ಎಂಥವಾಗಿವೆ ಎಂಬುದು ಫಿನ್ಲೆಂಡಿನ ಮೇಲೆ ಅದು ಹೂಡಿರುವ ಯುದ್ಧ ರೀತಿಯಿಂದ ಚೆನ್ನಾಗಿ ಗೊತ್ತಾಗುತ್ತದೆ. ಫಿನ್ಲೆಂಡಿನಲ್ಲಿ ಯುದ್ಧವಾರಂಭವಾಗಿ ತಿಂಗಳುಗಳು ಕಳೆದುವಾದರೂ ಎಲ್ಲಿಯೂ ರಶ್ಯವು ಫಿನ್ನರನ್ನು ಸೋಲಿಸಲಿಕ್ಕೆ ಸಮರ್ಥವಾದುದಿಲ್ಲ. ಮಾತ್ರವಲ್ಲ, ರಶ್ಯದ ಪ್ರಚಂಡ ಅಜೇಯ ಸೇನೆಯು ಫಿನ್ಲೆಂಡಿನ ಹಲವು ರಣರಂಗಗಳಲ್ಲಿ ತನ್ನ ಸಾವಿರಾರು ಸೈನಿಕರ ರಕ್ತದ ಪ್ರವಾಹವನ್ನು ಹರಿಸಿಯೂ ಸಂಪೂರ್ಣ ಸೋತು ಹೋಗಿವೆ.

### ಚಿಂತೆಯ ಫಲ

ಮೈನಕಾಂಫಿನಲ್ಲಿ ಬರೆದ ಹಾಗೆ ಹಿಟ್ಲರನು ಮೊದಲೇ ರಶ್ಯದ ಮೇಲೆ ಏರಿಹೋಗಿದ್ದರೆ, ಯುರೋಪಿನ ಮತ್ತಿನ ಘಟನೆಗಳೇ ಬೇರೆ ತರದವುಗಳಾಗುತ್ತಿದ್ದವು. ಹಿಟ್ಲರನು ರಶ್ಯವನ್ನು ಸೋಲಿಸಿ ವಿಶ್ವವಿಜಯಿಯಾಗುತ್ತಿದ್ದನೋ ಏನೋ? ಆದರೆ ಅವನು ಎಂಥ ವೀರ ಸಾಹಸಿಯಾಗಿದ್ದರೂ, ನೆಪೋಲಿಯನನಂತೆ ಮಹಾ ದುರ್ಭಾಗಿ. ವಿಶ್ವವಿಜಯಿಯೆಂಬ ಕೀರ್ತಿಯನ್ನು ಗಳಿಸುವ ಭಾಗ್ಯವು ಹಿಟ್ಲರನ ಹಣೆಯಲ್ಲಿ ಬರೆದಿಲ್ಲ. ಈಗ ಅವನು ಇಂಗ್ಲಿಷ್ ಫ್ರೆಂಚರೊಡನೆ ಯುದ್ಧಕ್ಕೆ ಹೋಗಿರುವುದರಿಂದ, ರಶ್ಯದ ಬಲವು ಎಷ್ಟು ಕುಂದಿ ಇದ್ದರೂ, ರಶ್ಯವನ್ನು ಸೋಲಿಸುವುದು ಮೊದಲಿನಂತೆ ಅವನಿಗೆ ಸುಲಭವಾಗಿರುವುದಿಲ್ಲ. ಸ್ಟಾಲೀನನ ದುರ್ಬಲತೆಯನ್ನು ಹಿಟ್ಲರ ಈಗ ಮನಗಂಡಂತೆ ಹಿಟ್ಲರನ ದೌರ್ಬಲತೆಗಳನ್ನು ಸ್ಟಾಲೀನ ತಿಳಕೊಂಡಿದ್ದಾನೆ. ಯಾಕಂದರೆ ಇಬ್ಬರೂ ಒಂದೇ ಜಾತಿಗೆ ಸೇರಿದವರು. ಇಬ್ಬರೂ ಮಹಾರಕ್ಕಸರು. ಆದುದರಿಂದ ಸಂದರ್ಭವು ಕಳೆದುಹೋಯಿತೆಂದು ಹಿಟ್ಲರನು ಈಗ ಎಷ್ಟು ಚಿಂತಿಸಿದರೂ ಫಲವಿಲ್ಲವಾಗಿದೆ. ಅವನು ತನ್ನ ವಿಧಿಲೀಲೆಗೆ ತಲೆ ಬಗ್ಗಿಸಲೇ ಬೇಕಾಗಿದೆ. ಸ್ಟಾಲೀನನೀಗ ಯಾವಾಗ ಹೇಗೆ ಹಿಟ್ಲರನ ಬೆನ್ನಿಗೆ ಬಲವಾದ ಗುದ್ದು ಹೊಡೆದು ಅವನನ್ನು ನೆಲಕ್ಕೆ ಅಪ್ಪಳಿಸಿ ಬಿಡೋಣ ಎಂಬ ಸಮಯವನ್ನು ಸಾಧಿಸುತ್ತಿದ್ದಾನೆ. ಆದರೆ ಹಿಟ್ಲರನು ಮಾತ್ರ ನಿರುಪಾಯನಾಗಿರುವನು.


THE

**BANK OF MANGALORE LTD.,**

MANGALORE

ESTD 1931

*Branches*-

**Mudabidri & Padubidri.**

Fixed Deposits will be received at following rates of interest.

| | | |
|---|---|---|
| For 3 months | | 3½% |
| " 6 " | | 4% |
| " 12 " | | 5% |
| " 24 " | & upwards | 5½% |

Interest Payable Quarterly.

***Savings Bank deposit 3½% on daily balances.***

All kinds of banking business transacted

DIAMONDS! DIAMONDS!

BEST BRILLIANCY!

**K. R. K. SHET,**

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ.

# ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

**ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.**

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

**ಕೆ. ಆರ್. ಕೆ. ಶೆಟ್, ಜ್ಯುವೆಲ್ಲರ್,**



# ಜಿಲ್ಲಾ ಸಮಾಚಾರ

## ಮಂಗಳೂರು

**ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ:**—ವೈ. ಎಂ. ಎಸ್. ಎ., ಮಂಗಳೂರು, ಈ ಸಮಿತಿಯ ಆಶ್ರಯದಲ್ಲಿ ಕಳೆದ ತಾ. ೩೧ನೇ ರಾತ್ರಿ ಸ್ವಾಮಿ ವಿವೇಕಾನಂದರ ೭೮ನೇ ಜನ್ಮ ದಿನೋತ್ಸವವು ಜರಗಿತು, ಶ್ರೀ. ಬಿ. ಶ್ರೀ. ಪ್ರಭುಗಳು ಅಧ್ಯಕ್ಷತೆ ವಹಿಸಿದ್ದರು.

**ಕಲೋಪಾಸಕ ಮಂಡಲ, ಮಂಗಳೂರು:**—ಮಂಗಳೂರಿನ ಕೆಲ ಜನ ಉತ್ಸಾಹಿಗಳಾದ ತರುಣರು, ಕಳೆದ ಆದಿತ್ಯವಾರ ಅನಂಥ ಪವರ್ ಪ್ರೆಸ್ಸಿನ ವಠಾರದಲ್ಲಿ, ಶ್ರೀ ವಿ ಗಣಪತಿ ಶಾಸ್ತ್ರಿಗಳ ಅಧ್ಯಕ್ಷತೆಯಿಂದ ಸಭೆಸೇರಿ, ಜಿಲ್ಲೆಯಲ್ಲಿ ಸಾಹಿತ್ಯ ಸಂಗೀತ ನಾಟ್ಯ ಮೊದಲಾದ ಕಲೆಗಳನ್ನು ಶಾಸ್ತ್ರೀಯ ಶುದ್ಧವಾಗಿ ಪ್ರೋತ್ಸಾಹಿಸಿ ಊರ್ಜಿತಗೊಳಿಸುವ ಬಗ್ಗೆ ಒಂದು ಕೇಂದ್ರ ಕಲಾಮಂಡಳವನ್ನು ಮಂಗಳೂರಲ್ಲಿ 'ಕಲೋಪಾಸಕ ಮಂಡಳ' ಎಂಬ ಹೆಸರಿನಿಂದ ಸ್ಥಾಪಿಸಬೇಕೆಂದು ನಿಶ್ಚಯವಾಯಿತು. ಇದರ ಘಟನಾವಳಿಯ ತಯಾರಿಯ ಬಗ್ಗೆಯೂ ತಾ. ೩-೩-೧೯೪೦ರಂದು ಸಾಧ್ಯವಿದ್ದಷ್ಟು ಮಂದಿ ಕಲಾಭಿಮಾನಿಗಳಿಂದ ಸದಸ್ಯರನ್ನು ಸೇರಿಸಿ, ಇದರ ಮಹಾಸಭೆಯೊಂದನ್ನು ಕರೆದು ಅದರಲ್ಲಿ ಘಟನಾವಳಿಯ ನಿರ್ಣಯ ಮತ್ತು ಮುಂದಿನ ವರ್ಷದ ಅಧಿಕಾರೀ ಮಂಡಳದ ಚುನಾವಣೆಯ ವ್ಯವಸ್ಥೆ ಮಾಡುವ ಕಾರ್ಯಗಳನ್ನೂ ಕೈಗೂಡಿಸುವ ಸಲುವಾಗಿಯೂ ಐದು ಮಂದಿಯೊಡಗೂಡಿದ ಒಂದು ತಾತ್ಕಾಲಿಕ ಸಮಿತಿಯೊಂದು ಏರ್ಪಟ್ಟಿತು.

ಸದಸ್ಯತನವು ವರ್ಷಕ್ಕೆ ಬರಿಯ ನಾಲ್ಕಾಣೆಯಿದ್ದು ಸರ್ವರೂ ಕಲೋತ್ತೇಜನದಲ್ಲಿ ಸಹಾಯಕರಾಗಬೇಕೆಂದು ಆಶಿಸಲಾಗಿದೆ. ನಾಡಿನ ವಿವಿಧ ಕಲಾ ಭಂಗಗಳಲ್ಲಿ ಅಭಿರುಚಿಯಿರುವ ಎಲ್ಲಾ ಸ್ತ್ರೀ ಪುರುಷರೂ ಸದಸ್ಯರಾಗಿ ಪ್ರೋತ್ಸಾಹಿಸಬೇಕಾದುದು ಮಾತ್ರವಲ್ಲದೆ, ಬರುವ ತಾ. ೩-೩-'೪೦ರ ಮಹಾಸಭೆಗೆ ಬಂದು ನಮ್ಮ ನಾಡಿನ ಕಲಾಕಾರ್ಯವನ್ನು ಶಾಸ್ತ್ರೀಯ ಶುದ್ಧವಾಗಿ ಮುನ್ನಡೆಸುವಂತೆ ಯತ್ನಿಸಬೇಕೆಂದೂ, ಆ ಬಗ್ಗೆ ಜಿಲ್ಲೆಯ ಹೆಚ್ಚಾಗಿ ಮಂಗಳೂರಿನ ಸರ್ವ ಸಾಹಿತ್ಯ, ಸಂಗೀತ, ನಾಟ್ಯ ಮೊದಲಾದ ಕಲಾಕೋವಿದರೂ ತಾ. ೩-೩ '೪೦ರ ಮಹಾಸಭೆಗೆ ಬರಬೇಕಾಗಿಯೂ ತಾತ್ಕಾಲಿಕ ಸಮಿತಿಯ ಸದಸ್ಯರು ಬಿನ್ನೈಸಿಕೊಳ್ಳುತ್ತಾರೆ.

**ಜಿಲ್ಲಾ ಟೀಚರ್ಸ್ ಗಿಲ್ಡ್**—ಇದರ ಟೀಚರ್ಸ್ ಕೌನ್ಸಿಲ್ ಉಪಾಧ್ಯಕ್ಷರಾದ ಶ್ರೀ. ಯು ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಕಳೆದ ಆದಿತ್ಯವಾರ ಗಣಪತಿ ಹೈಸ್ಕೂಲಿನಲ್ಲಿ ಕೂಡಿತು. ಗಿಲ್ಡಿನ ಕಾರ್ಯದರ್ಶಿಗಳಾದ ಶ್ರೀ. ಯು ಶ್ರೀನಿವಾಸ ಕಿಣಿಯವರು ಮಲಬಾರಿಗೆ ತಾನು ತೆರಳಿ ಅಲ್ಲಿ ಕಂಡ ಉಪಾಧ್ಯಾಯರ ಸಂಕಟಗಳನ್ನು ವಿವರಿಸಿದರು. ಸುಮಾರು ೯೦೦೦ಕ್ಕೂ ಮಿಕ್ಕಿದ ಎಯಿಡೆಡ್ ಶಾಲಾ ಉಪಾಧ್ಯಾಯರ ಸದಸ್ಯತನವಿರುವ ಅಲ್ಲಿನ ಯೂನಿಯನ್ನಿನ ಬಲವನ್ನೂ, ನೂರಾರು ಉಪಾಧ್ಯಾಯರು ಡಿಸ್‌ಮಿಸ್ ಮಾಡಲ್ಪಟ್ಟ ಹಾಗೂ ೧೦೦೦ ಮಂದಿ ಸೆರೆಯಲ್ಲಿರುವ ವಿಚಾರವನ್ನೂ ನಿವೇದಿಸಿದರು.

**ಬ್ರಾಹ್ಮಿನ್ ಗರ್ಲ್ಸ್ ಸ್ಕೂಲ್:**—ಬಿ. ಇ. ಎಮ್. ಬ್ರಾಹ್ಮಿನ್ ಗರ್ಲ್ಸ್ ಸ್ಕೂಲ್‌ನ ಹೆತ್ತವರ ದಿನಾಚರಣೆಯು, ಕಳೆದ ಆದಿತ್ಯವಾರ ಶ್ರೀ. ಬಿ. ವ್ಯಾಸರಾಯಾಚಾರ್, ವಕೀಲ್, ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಿಶನರಿಗಳ ವಿದ್ಯಾದಾನವನ್ನು ಪ್ರಶಂಸಿಸಿದರು.

**ಜಿಲ್ಲಾ ಎಡ್ವಾನ್ಸ್‌ಮೆಂಟ್ ಸೊಸೈಟಿ:**—ಇದರ ಸಭೆಯೊಂದು ಸೆಂಟ್ರಲ್ ಬ್ಯಾಂಕಿನಲ್ಲಿ ಕಳೆದ ಆದಿತ್ಯವಾರ ಅಧ್ಯಕ್ಷರಾದ ಶ್ರೀ ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ ವಿಚಾರಗಳ 'ಡೈರೆಕ್ಟರಿ'ಯೊಂದನ್ನು ಪ್ರಕಟಿಸುವ ವಿಚಾರವನ್ನು ಯೋಚಿಸಿತು.

**ಸೇತುವೆ ಕೆಟ್ಟಿದೆ:**—ರಸ್ತೆ ನಂ A ೩೨ (ಮಂಗಳೂರು—ಮೈಸೂರು ರಸ್ತೆ)ನೇ ಮೈಲುಕಲ್ಲು ೪೨/೩ರಲ್ಲಿರುವ ಸಿಸ್ಗಲ್ ಸೇತುವೆಯ ಮೂರು ಸ್ಪೇನುಗಳ ಜೋಯ್ನಿಂಗ್ ಜಂತಿಗಳಲ್ಲಿ ಬಿರುಕು ಬಿಟ್ಟಿರುವುದರಿಂದ ಆ ಸೇತುವೆಯ ಮೇಲೆ ತಾ ೧೯—೧ ೪೦ರಿಂದ ಸಂಚಾರವನ್ನೂ ಇನ್ನು ಮುಂದೆ ಸೂಚನೆ ಕೊಡುವ ವರೆಗೆ ನಿಲ್ಲಿಸಲಾಗಿದೆ ಎಂದು ಜಿ ಬೋ ಅಧ್ಯಕ್ಷರು ತಿಳಿಸಿದ್ದಾರೆ.

ಕಟ್ಪಾಡಿ ಬೆಳ್ಮಣ್ಣು ರಸ್ತೆಯ ಮೈಲು ೬ ೮ರಲ್ಲಿ ನಂ ೩೨ H, ಸಂಕವನ್ನು ತಾ ೨೬ ೧ ೪೦ರಿಂದ, ಬೇರೆ ಸೂಚನೆ ಕೊಡುವ ವರೆಗೆ ಮುಚ್ಚಲಾಗಿದೆ.

**ಮಂಗಳೂರು ಮೈದಾನಿನಲ್ಲಿ ಸಾರ್ವಜನಿಕ ಆಕಾಶವಾಣಿ:**—ಪ್ರಸಿದ್ಧ ದಾನಶೂರರಾದ ಶ್ರೀ ವಿಟ್ಟಲ್ ಶಾಂತಾರಾಮ ಕುಲಕರ್ಣಿಯವರು ಮಂಗಳೂರು ಮೈದಾನಿನಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಏರ್ಪಡಿಸಿದ, ಆಕಾಶವಾಣಿಯ ಉದ್ಘಾಟನಾ ಸಮಾರಂಭವು ಜಿಪಪರ ಹಸ್ತದಿಂದ ನೆರವೇರಿತು. ಮುಂದಕ್ಕೆ ಪ್ರತಿದಿನ ಸಂಜೆ ೫ ಯಿಂದ ೮ ಗಂಟೆಯ ವರೆಗೆ ಆಕಾಶವಾಣಿಯ ಏರ್ಪಾಡು ಇದೆ. ಇಂತಹ ಸಾರ್ವಜನಿಕ ಕಾರ್ಯಗಳಿಗೆ ಉದಾರತೆಯಿಂದ ಸಹಾಯ ಮಾಡುವ ಶ್ರೀಯುತರಿಗೆ ಮಂಗಳೂರಿನ ಪ್ರಜನರು ಕೃತಜ್ಞರಾಗಿರುವರು.

**ಕಾವೂರು**—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾರೀಕು ೨೫-೧-೪೦ ಮತ್ತು ೨೬-೧-೪೦ನೇ ದಿವಸಗಳಲ್ಲಿ ಕುಂದಾಪುರದ ಶ್ರೀಯುತ ಮಹಾದೇವನವರಿಂದ ಹರಿಕೀರ್ತನೆಯು ನಡೆಯಿತು.

## ಉಡುಪಿ

**ಸತ್ಕಾರ ಕೂಟ**—ಈಗ ತಾನೆ ಓನರೆರಿ ಬೆಂಚ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟ ಶ್ರೀಮತಿ ಕೆ ಗಿರಿಜಾ ಬಾಯಿಯವರನ್ನು ಅಭಿನಂದಿಸುವುದಕ್ಕಾಗಿ ಶ್ರೀಮತಿ ಕೃಷ್ಣವೇಣಿಯಮ್ಮನವರು ತಮ್ಮ ಮನೆಯಲ್ಲಿ ಕಳೆದ ಆದಿತ್ಯವಾರ ಒಂದು ಸತ್ಕಾರಕೂಟವನ್ನೇರ್ಪಡಿಸಿದರು. ಅಂದಿನ ಸಭಾಧ್ಯಕ್ಷತೆಯನ್ನು ಶ್ರೀಮತಿ ಮಟ್ಪಾಡಿ ಕಮಲಾಕ್ಷಿ ಅಮ್ಮಾಳ್ ವಹಿಸಿದ್ದರು. ಶ್ರೀಮತಿ ಭಾರತಿ ಬಾಯಿ ಪನೆಯಾಡಿಯವರೇ ಮೊದಲಾದವರು ಹಾಜರಿದ್ದರು.

ಉಡುಪಿಯಲ್ಲೊಂದು ಮಹಿಳಾ ಸಭೆಯನ್ನು ಸ್ಥಾಪಿಸುವ ಯೋಜನೆ ನಡೆಯಿತು.

**ಎಡ್ಯುಕೇಶನಲ್ ಎಡ್ವೈಜರಿ ಕಮಿಟಿ ಸಭೆ:**—ಉಡುಪಿತಾಲೂಕು ಎಡ್ಯುಕೇಶನಲ್ ಎಡ್ವೈಜರಿ ಕಮಿಟಿಯ ಸಭೆಯೊಂದು ಕಳೆದ ತಾ. ೨೮ರಲ್ಲಿ ಶ್ರೀ. ಕೆ. ಟಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು.

## ಕಾರ್ಕಳ

**ಉಪಾಧ್ಯಾಯರ ಸಭೆ:**—ಈ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಫೆಬ್ರುವರಿ ತಿಂಗಳ ಸಭೆಯು ತಾ ೩-೨-೪೦ರ ದಿನ ಡಿಪ್ಟಿ ಇನ್ಸ್‌ಪೆಕ್ಟರ ಶ್ರೀ ಬಿ ವಿ ರಮಣರವರ ಅಧ್ಯಕ್ಷತೆಯಲ್ಲಿ ಕೂಡಿತು. ಬರುವ ಮಾರ್ಚಿ ತಿಂಗಳ ೮, ೯ನೆ ದಿನಗಳಲ್ಲಿ ಕೇಂದ್ರದಿನವನ್ನಾಚರಿಸುವ ಬಗ್ಗೆ ಯೋಗ್ಯ ಕಾರ್ಯಕ್ರಮಗಳನ್ನು ಕೈಕೊಳ್ಳಲು ಒಂದು ಸಮಿತಿಯು ರಚನೆಯಾಯಿತು.

**ಶ್ರೀ ವಿಷಕಂಠರಾಯರ ಲಾವಣಿ**—ಮೈಸೂರಿನ ಕಾಂಗ್ರೆಸ ಕೆಲಸಗಾರರಾದ ಶ್ರೀ ವಿಷಕಂಠರಾಯರ ಲಾವಣಿಗಳ ಹಾಡುವಿಕೆ ಮತ್ತು ಪ್ರೊ॥ ರಂಗರಾಯರ ವಿವಿಧ ವಿನೋದಾವಳಿಗಳ ಪ್ರದರ್ಶನವು ಕಳೆದ ವಾರ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆಯಿತು.

**ಕನ್ಯಾಪಹರಣ:**—ಸ್ಥಳೀಯ ಆರ್ಯಸಮಾಜದ ಪ್ರೇರಣೆಯಿಂದ ಕುಂದಾಪುರ ಕಲೆಕ್ಟರರ ಕೋರ್ಟಿನಲ್ಲಿ ಗೌರಮ್ಮ ಎಂಬ ಲಿಂಗಾಯತ ಅಪ್ರಾಯಸ್ಥ ಕನ್ಯೆಯನ್ನು ಅಪಹರಿಸಿಕೊಂಡು ಹೋದದೆಂಬದಾಗಿ ಶೇಕ್ ಮಹ್ಮದ್ ಮತ್ತು ಸಂಗಾತಿಗಳ ಮೇಲಾದ ಮೊಕದ್ದಮೆಯಲ್ಲಿ ಅಪರಾಧಿಗಳು ಇನ್ನೂ ಪೋಲೀಸ ಕೈಗೆ ದೊರೆತಿರುವುದಿಲ್ಲ. ಅವರ ಕೈದಿಗೆ ಸಾಧಕವಾಗುವ ಅನುಭವವನ್ನು ಬಲ್ಲಂಥವರು ಸ್ಥಳೀಯ ಆರ್ಯ ಸಮಾಜಕ್ಕೆ ತಿಳಿಸಿದರೆ ಬಹಳ ಉಪಕಾರವಾಗುವುದು.

## ಕುಂದಾಪುರ

ಅಂಪಾರು ಮೂಡಬಾಗೆ ಬೋರ್ಡ್ ಶಾಲೆಯಲ್ಲಿ ಕಳೆದ ತಾ ೨೮ ೧—೪೦ನೇ ದಿನ ಮಧ್ಯಾಹ್ನ ೨ ಗಂಟೆಗೆ ಹೊನ್ನಾವರದ ಶ್ರೀ ಹರಿದಾಸ ಕೃಷ್ಣನವರಿಂದ 'ಮಾತೃಭೂಮಿ' ಎಂಬ ಹರಿಕಥೆಯು ಶ್ರೀ ಉಮ್ಮರ ಸಾಹೇಬರ ಗಾಯನದೊಡನೆ ಹಾಡಲ್ಪಟ್ಟಿತು. ಈ ಸಂದರ್ಭದಲ್ಲಿ ಶಾಲಾ ಬಾಲಕರಿಗೆ ಶ್ರೀ ಫಕೀರಸಾಹೇಬರು, ಶ್ರೀ ... ಎಸ್. ಹೆಗ್ಗಡೆಯವರು ಫಲಾಹಾರ ಮತ್ತು ಉಪಹಾರಕೂಟಗಳನ್ನು ಏರ್ಪಡಿಸಿದ್ದರು.

**ಕರ್ಣಾಟಕ ಸಾಹಿತ್ಯ ಸಂಘದ ವರ್ಧಂತಿ ಮಹೋತ್ಸವವು:**—ಶ್ರೀ ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಮಾರ್ಚಿ ತಿಂಗಳಲ್ಲಿ ಜರಗಿಸಲ್ಪಡುವುದು.

## ಕುಂಬಳೆ

**ವರ್ಧಂತ್ಯುತ್ಸವ:**—ಕುಂಬಳೆ ಲೇಬರ್ ಶಾಲೆಯ ಪ್ರಥಮ ವರ್ಧಂತಿ ಉತ್ಸವವು ಕಳೆದ ತಾ. ೨ನೇ ಅಪರಾಹ್ನ ಘಂಟೆ ೫-೩೦ಕ್ಕೆ ಶ್ರೀ ಕೆ. ಪಿ. ಕಾಮತ್, ಎಂ ಎ, ಬಿ ಎಲ್ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

## ಕಾಸರಗೋಡು

**ಬೇಕಲ:**—ಇದೇ ತಿಂಗಳ ತಾ ೩ನೇ ಪೂರ್ವಾಹ್ನ ಹತ್ತು ಗಂಟೆಗೆ ಕುನ್ನಿಕೋಚ ಲೇಬರ್ ಶಾಲೆಯಲ್ಲಿ 'ಹರಿಜನೋದ್ಧಾರ'ದ ಕುರಿತು ಒಂದು ಸಭೆಯು ಬಾರೆ ಗ್ರಾಮದ ಪಟೇಲರಾದ ಜನಾಬ್ ಮಹಮ್ಮದ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಹಿಂದುಗಳೂ, ಮುಸಲ್ಮಾನರೂ ಮತ್ತು ಹಲವು ಮಂದಿ ಹರಿಜನರೂ ಸಹಕರಿಸಿದ್ದರು.

**ಮಂಜೇಶ್ವರ:**—ಮಂಜೇಶ್ವರ ದೇವಸ್ಥಾನಕ್ಕೆ 'ರೇಡಿಯೋ' ಒಂದನ್ನು ಒದಗಿಸುವ ವಿಚಾರದಲ್ಲಿ ನಾಟಕದ ಮೂಲಕ ಧನ ಸಂಗ್ರಹಿಸುವ ನಿರ್ಣಯವಾಗಿದೆ. ಫೆಬ್ರುವರಿ ಅಂತ್ಯದಲ್ಲಿ ಮಂಜೇಶ್ವರ ಶ್ರೀ ಮತ್ ಅನಂತೇಶ್ವರ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಒಂದು ನಾಟಕವನ್ನು ಆಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಸಾರ್ವಜನಿಕರು ಸಹಕರಿಸಿ ಶಕ್ಯವಿದ್ದ ಧನ ಸಹಾಯವನ್ನು ಮಾಡಬೇಕಾಗಿ ವಿನಂತಿ.

## ಪುತ್ತೂರು

**ಮರ್ಕಂಜದಲ್ಲಿ ಹೊಸ ರಸ್ತೆ ತೆರೆಯೋಣ:**—ತೀರಾ ಮಳೆನಾಡಾಗಿದ್ದು, ಜನವಾಹನ ಸಂಚಾರಕ್ಕೆಡೆಯಿಲ್ಲದ ಮರ್ಕಂಜ ಗ್ರಾಮದಲ್ಲಿ ಊರ ಮಹನೀಯರಿಂದ ಮಾಡಿಸಲ್ಪಟ್ಟ ಹೊಸ ರಸ್ತೆಯನ್ನು ತೆರೆಯುವ ಸಮಾರಂಭವು ದ ಕ ಜಿಲ್ಲಾ ಕೋಓಪರೇಟಿವ್ ಬೇಂಕಿನ ಇನ್ಸ್‌ಪೆಕ್ಟರ್ ಶ್ರೀ. ಕೆ ರಾಮರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ ೨೨ರಲ್ಲಿ ನೆರವೇರಿತು.

**ಕೋಟೇಶ್ವರ:**—ತಾ ೧೪-೨-೪೦ರಂದು ಇಲ್ಲಿನ ಶ್ರೀ ರಾಮಮಂದಿರದಲ್ಲಿ ಶ್ರೀ ಪಟ್ಟಾಭಿರಾಮಮೂರ್ತಿಯನ್ನು ಪ್ರತಿಷ್ಠೆ ಮಾಡುವುದಾಗಿ ನಿಶ್ಚಯಿಸಿದೆ. ಈ ನಿಮಿತ್ತ ತಾ ೧೧ರಿಂದ ೬ ದಿನಗಳು ನಡೆಯುವ ಶುಭಸಮಾರಂಭಕ್ಕೆ ಸರ್ವರಿಗೂ ಆಮಂತ್ರಣವಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

## ನೋಟೀಸು

**ಕಾರ್ಕಳ ಡಿ ಮು ಕೋರ್ಟಿನಲ್ಲಿ**

O S No 426/1936
R E F No 137/1939

ಬೋಳ ಪದ್ಮನಾಭ ಹೆಗಡೆ—

**ವಾದಿ ಅರ್ಜಿದಾರ**

ಮತ್ತು

ಅಬ್ದುಲ್ ಕರೀಂ ಸಾಹೇಬ ಕೂಡಾ—

**ಪ್ರತಿವಾದಿರು ಎದ್ರಿರು**

ಸದ್ರಿ ಅಮ್ಮನ್ಯಾರಿಯ 2ನೇ ಎದ್ರಿಳು ಭೀಮಾಯಿನಿ ಕುಲ್ಸುಮಬೇಗಂ, ವಿ ಹಸನ್ ಸಾಹೇಬರ ಮಗಳು ಕಾರ್ಕಳ ತಾಲೂಕು ಕಾರ್ಕಳ ಕಸಬೆಯಲ್ಲಿರುವವಳು—

ಸದ್ರಿ ಎದ್ರಿಳಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ— ಅರ್ಜಿದಾರನು ದಾಖಲು ಮಾಡಿದ ಸದ್ರಿ ಅಮ್ಮನ್ಯಾರಿಯಲ್ಲಿ ಹಾಜರುಪಡಿಸಿದ ಪ್ರೆಷ್ಯಷ್ಟರ ಶರ್ತುಗಳನ್ನು ನಿರ್ಣಯಿಸುವರೆಯೂ ಮತ್ತು ಸದ್ರಿ ಆಸ್ತಿ ಏಲಂ ಸಮಯ ತನಗೆ ಕೂಡಾ ಬಿಡ್ ಸೂಚಿಸುವರೆ ಪರವಾನಗಿ ಕೊಡ ಬೇಕಾಗಿ ದಾಖಲು ಮಾಡಿದ R. E. A. No. 1425/39 ನೇ ಅರ್ಜಿ ಕೂಡ ತನ್ನ ಬಗ್ಗೆ ತಾ. 1-3-40ಕ್ಕೆ ಇಟ್ಟಿರುತ್ತದೆ. ಆದುದರಿಂದ ಈ ಕುರಿತು ನಿಮ್ಮ ಕಡೆಯಿಂದ ಉದಹರಿಸುವುದಿದ್ದರೆ ಸದ್ರಿ ದಿವಸ ಹಗಲು 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಞಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಈ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸುತ್ತದೆ.

Karkala) K. Vasudeva Kamath,
31-1-'40) Advocate for Petitioner.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
**ನಂಜನಗೂಡು ಟೂತ್ ಪೌಡರ್** (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

# ರಶ್ಯಾ ಫಿನ್‌ಲೆಂಡ್ ಯುದ್ಧದಲ್ಲಿ

# ಯುದ್ಧ ವಾರ್ತೆ



## ಫಿನ್ನರ ಪ್ರಚಂಡ ವಿಜಯ!

### ೨೦,೦೦೦ ರಶ್ಯನರ ಮರಣ! ಪೋಲೆಂಡಿನಲ್ಲಿ ಚಿತ್ರಹಿಂಸೆ!!

### ಬಾಲ್ಕನ್ ರಾಷ್ಟ್ರಗಳಲ್ಲಿ ಶಾಂತಿ ಹಡಗುಗಳ ಜಲಸಮಾಧಿ

**೩೦೦ ರಶ್ಯಾ ವಿಮಾನಗಳು ಉರುಳಿದುವು**

ರಾಷ್ಟ್ರಿಯೆಂಬಲ್ಲಿ ರಶ್ಯಾನರಿಗೂ ಫಿನ್ನರಿಗೂ ಭಯಂಕರ ಕಾದಾಟವು ನಡೆಯಿತು. ರಶ್ಯನರ ೩೦೦ ವಿಮಾನಗಳನ್ನು ಫಿನ್ನರು ಕೆಳಗುರುಳಿಸಿರುವರೆಂದು ವಾರ್ತೆ.

**ಗುಪ್ತಚಾರರ ಬಂಧನ**

ಲಂಡನಿನಲ್ಲಿ ಜರ್ಮನಿಗೆ ಗುಪ್ತ ಸಮಾಚಾರ ಕೊಡುವವರೆಂಬ ಸಂಶಯದ ಮೇಲೆ ಇತ್ತೀಚೆಗೆ ಹಲವು ಜನರನ್ನು ಬಂಧಿಸಿ ಸೆರೆಯಲ್ಲಿಟ್ಟಿರುವರು.

**ಬಾಲ್ಕನ್ ಪರಿಷತ್ತು**

ಬಾಲ್ಕನ್ ರಾಷ್ಟ್ರಗಳು ಬೆಲ್ಗ್ರೇಡಿನಲ್ಲಿ ಒಟ್ಟುಗೂಡಿ ಪರಿಷತ್ತು ಕರೆದವೆ. ತಮ್ಮ ತಟಸ್ಥ ಧೋರಣೆಯನ್ನು ಅವುಗಳು ಸಂಪೂರ್ಣ ವ್ಯಕ್ತಗೊಳಿಸಿವೆ. ಈ ಪರಿಷತ್ತಿನಲ್ಲಿ ಜರ್ಮನಿ, ಇಟಲಿ, ರಶ್ಯ, ಬ್ರಿಟನು ಮತ್ತು ಫ್ರಾನ್ಸ್ ಗಳು ಬಹಳ ಉತ್ಸುಕತೆ ಯುಳ್ಳವುಗಳಾಗಿದ್ದುವೆಂದು ಲಂಡನ್ ವಾರ್ತಾವಾಹಕನೊಬ್ಬನು ತಿಳಿಸುತ್ತಾನೆ.

**ರಶ್ಯನರ ವಿಮಾನ ಧಾಳಿ**

ಫಿನ್ನರ ಕೆಲವು ನಗರಗಳ ಮೇಲೆ, ರಶ್ಯನರ ಬೊಂಬುಗಳನ್ನು ಎಸೆದಿರುವರು. ಇತ್ತೀಚೆಗೆ ರಶ್ಯನರು ಹಿಂದಿಗಿಂತ ಹೆಚ್ಚು ನಿರ್ಧಾರ ಪೂರ್ವಕವಾಗಿ ಮುಂದುವರಿದು ಬರುತ್ತಿರುವರೆಂದು ತಿಳಿದಿದೆ. ರಶ್ಯನರ ತಮ್ಮ ಗಡಿಯನ್ನು ಮುಂದೊತ್ತುತ್ತಿರುವರಂತೆ. ಫಿನ್‌ಲೆಂಡು ಗೌರವಯುತವಾದ ಒಪ್ಪಂದಕ್ಕೆ ಸಿದ್ಧವಾಗಿದೆಯೆಂದು ತಿಳಿದುಬಂದಿದೆ.

**ಪಶ್ಚಿಮ ರಣರಂಗದಲ್ಲಿ ತೋಫಿನ ಕಾಳಗ**

ಪಶ್ಚಿಮ ರಣಭೂಮಿಯಲ್ಲಿ ಎರಡೂ ಪಂಗಡದವರಲ್ಲಿ ತೋಫಿನ ಕಾಳಗವು ಜೋರಾಗಿ ನಡೆದಿದ್ದು ರಾಯಿನ ನದಿಯ ದಂಡೆಯಮೇಲೆ ಕಳೆದ ೨೪ ಗಂಟೆಗಳಿಂದ ಅದರದೇ ಸಪ್ಪಳ ಕೇಳಿಸ ಹತ್ತಿದೆ. ಆದಾಗ್ಯೂ ಈ ಹೊಡೆದಾಟಕ್ಕೆ ಅಷ್ಟೊಂದು ವಿಶಿಲಟರಿ ಮಹತ್ವವಿಲ್ಲೆಂದು ಹೇಳಲಾಗುತ್ತದೆ.

ವ್ಹೊಸೇಜ ಪರ್ವತಗಳ ಪಶ್ಚಿಮ ಇವುಗಳಲ್ಲಿದ್ದ ಫ್ರೆಂಚ ಸ್ಥಳಗಳ ಮೇಲೆ ಜರ್ಮನ್ ದಳಗಳು ಏರಿ ಬಂದವು. ಆದರೆ ಫ್ರೆಂಚರು ಗುಂಡಿನ ಮಳೆಗರೆಯ ಹತ್ತಿದ ಕೂಡಲೆ ಅವರು ಹಿಂದೆಸರಿದರು. ಇದಿಷ್ಟನ್ನು ಬಿಟ್ಟರೆ ಪಶ್ಚಿಮ ರಣಭೂಮಿಯಲ್ಲಿ ಶಾಂತತೆ ಇದೆ. ಹವಾಮಾನವು ಅನುಕೂಲವಿದ್ದುದರಿಂದ ವಿಮಾನ ಹಲ್ಲೆಗಳು ಏನೂ ಇದ್ದಿಲ್ಲ.

**೧೪ ಹಡಗಗಳ ಜಲಸಮಾಧಿ!**

ನಿನ್ನಿನ ವಿಮಾನ ಹಲ್ಲೆಗಳಲ್ಲಿ ೧೪ ಹಡಗಗಳು ಮುಗಿಸಲಾಯಿತೆಂದು ಜರ್ಮನ್ ಪ್ರಭೃತಿಗಳು ಪ್ರಕಟಣೆ ಹೊರಡಿಸಿರುವರು. ಈ ಹೇಳಿಕೆಯು ಅತ್ಯಂತ ಅಸಂಬದ್ಧ ಇರುವುದೆಂದು ಲಂಡನಿನಲ್ಲಿಯ ಅಧಿಕಾರಿಗಳು ಹೇಳುವರು. ಈ ಹಲ್ಲೆಯಲ್ಲಿ ೧೨ ವಿಮಾನಗಳು ಮಾತ್ರ ತೊಡಗಿದ್ದವೆಂದೂ ಅವುಗಳಲ್ಲಿ ಮೂರನ್ನಾದರೂ ಗುಂಡಿಕ್ಕಿ ಕೆಡವಲಾಗಿದ್ದರಿಂದ ಅವರು ಹೇಳುವಂತೆ ೧೪ ಹಡಗಗಳನ್ನು ಮುಗಿಸಲು ಶಕ್ಯವಿಲ್ಲೆಂದೂ ಹೇಳಲಾಗುತ್ತಿದೆ.

**ಬಾಲ್ಕನ್ ರಾಷ್ಟ್ರಗಳ ಸಮ್ಮೇಳನ**

ಬಾಲ್ಕನ್ ರಾಷ್ಟ್ರಗಳ ಸ್ನೇಹ ಸಮ್ಮೇಲನದ ಸಭೆಯಾದ ನಂತರ ಬೆಲ್‌ಗ್ರೇಡದಲ್ಲಿ ಕೆಳಗಿನಂತೆ ಪ್ರಕಟಣೆ ಹೊರಡಿಸಲ್ಪಟ್ಟಿದೆಯೆಂದು ಕೋಪನ್ ಹೇಗನದಿಂದ ವಾಯುರಲೆಸಿನ ಮೂಲಕ ಸುದ್ದಿ ಬಂದಿದೆ.

"ಸಭೆಯಲ್ಲಿ ಪರಸ್ಪರರಿಗೆ ಸಹಾಯ ಮಾಡಬೇಕೆನ್ನುವ ವಾತಾವರಣವಿತ್ತು. ಕೆಳಗಿನ ೬ ವಿಷಯಗಳಿಗೆ ಸದಸ್ಯರು ಒಮ್ಮತದಿಂದ ಒಪ್ಪಿದರಂತೆ. ಪರಸ್ಪರ ಹಿತಕ್ಕಾಗಿ ಶಾಂತತೆ ರಕ್ಷಿಸಬೇಕು; ಯುದ್ಧವು ತಮ್ಮ ಭಾಗದಲ್ಲಿ ಹಬ್ಬದಂತೆ ಧೋರಣೆಯನ್ನನುಸರಿಸ ತಕ್ಕದ್ದು; ಸಮ್ಮಿಲನದ ರಾಷ್ಟ್ರಗಳಲ್ಲಿ ಬಹಳ ಸಹಕಾರವನ್ನಿಟ್ಟುಕೊಳ್ಳತಕ್ಕದ್ದು; ನೆರೆಯ ರಾಷ್ಟ್ರಗಳೊಡನೆ ಸ್ನೇಹದಿಂದ ಇರತಕ್ಕದ್ದು; ನಮ್ಮ ನಮ್ಮಲ್ಲಿ ವ್ಯಾಪಾರ ವ್ಯವಹಾರಗಳನ್ನು ಬೆಳಿಸತಕ್ಕದ್ದು; ಬಾಲ್ಕನ್ ರಾಷ್ಟ್ರಗಳ ಒಪ್ಪಂದದ ಅವಧಿಯನ್ನು ಮತ್ತೆ ೭ ವರ್ಷ ಹೆಚ್ಚಿಸಬೇಕು; ೧೯೪೧ ಫೆಬ್ರವರಿ ತಿಂಗಳಲ್ಲಿ ಅಥೆನ್ಸದಲ್ಲಿ ಮುಂದಿನ ಪರಿಷತ್ತು ಕೂಡುವ ವರೆಗೆ ನಮ್ಮನಮ್ಮ ದೇಶಗಳ ಪರರಾಷ್ಟ್ರ ಮಂತ್ರಿಗಳು ಆಪ್ತ ಸಂಬಂಧವಿಟ್ಟುಕೊಳ್ಳಬೇಕು.

**ಮೊದಲು ಬಂದ ಸುದ್ದಿ**

ಒಬ್ಬರಿಗೊಬ್ಬರು ಸರಕುಗಳನ್ನು ಕಳಿಸಿ ಆರ್ಥಿಕ ಸಹಾಯ ಮಾಡಬೇಕೆಂದು ಹಾಗೂ ಈಗಾಗಲೇ ಈ ವಿಷಯಗಳ ಬಗ್ಗೆ ಇದ್ದ ಒಪ್ಪಂದದ ನಿಯಮಗಳಲ್ಲಿ ಹೆಚ್ಚು ಕಡಿಮೆ ಮಾಡಬಾರದೆಂದೂ ನಿನ್ನಿನ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿತೆಂದು ತಿಳಿಯುತ್ತದೆ.

**ರಶ್ಯಾ-ಜಪಾನು**

ರಶಿಯಾ-ಜಪಾನ ಒಪ್ಪಂದದ ಮಾತುಕತೆಗಳು ಮುರಿದು ಹೋದವು. ಪರಸ್ಪರರು ಪರಸ್ಪರರ ಕಾಗದಪತ್ರಗಳನ್ನು ಮನ್ನಿಸದಿರುವದೇ ಕಾರಣವಂತೆ.

**ಒಪ್ಪಂದಕ್ಕೆ ಫಿನ್ನರ ಒಪ್ಪಿಗೆ**

ಫಿನ್ನರ ಪಾರ್ಲಿಮೆಂಟಿನಲ್ಲಿ ಮಾತಾಡುತ್ತ ಅದರ ಅಧ್ಯಕ್ಷರಾದ ಕಲ್ಲಸ್ ಇವರು ಈ ಕೆಳಗಿನಂತೆ ಹೇಳಿದರು.

ಸೋವಿಯೆಟ್ ರಶಿಯದೊಡನೆ ನ್ಯಾಯಬದ್ಧವಾದ ಹಾಗು ಗೌರವಕ್ಕೆ ತಕ್ಕುದಾದ ಸಂಧಾನಕ್ಕೆ ಸಿದ್ಧರಿದ್ದೇವೆ. ಎಂದು ಈ ಮೂಲಕ ಜಾಹೀರು ಮಾಡುತ್ತೇನೆ. ಫಿನ್ನರು ತಮ್ಮ ಮಹತ್ವ ಹಾಗು ಅರ್ಹತೆ ಮತ್ತು ಕಾರ್ಯವನ್ನು ಸಮಗ್ರ ಜಗತ್ತಿಗೆ ತೋರಿಸಿದ್ದಾರೆ. ತಮ್ಮ ನೈತಿಕ ಶಕ್ತಿ ಹಾಗು ತ್ಯಾಗದಿಂದ ಜಗತ್ತಿನ ಲಕ್ಷವನ್ನು ತಮ್ಮ ಕಡೆಗೆ ಸೆಳೆದಿದ್ದಾರೆ. ತಮ್ಮ ಹಕ್ಕು ಬಾಧ್ಯತೆ ಹಾಗು; ಅಸ್ತಿತ್ವವನ್ನು ಉಳಿಸಿಕೊಳ್ಳುವ ಬಗ್ಗೆ ಹಾಗು ಪಶ್ಚಿಮಕ್ಕೆ ಮುಂದೊತ್ತುತ್ತವೆ. ಬೊಲ್ಶೆವಿಜಂನ್ನು ತಡೆಗಟ್ಟುವದಕ್ಕೆ ಅವರು ಯುದ್ಧ ಹೂಡಿದ್ದಾರೆ.

**ಹಡಗುಗಳ ಜಲಸಮಾಧಿ**

ಇಂಗ್ಲಂಡ ಮತ್ತು ಹೊಸಾಂಗದ ಎಂಟೆರಡು ಬ್ರಿಟಿಷ್ ಹಡಗಗಳು ಜರ್ಮನ್ ಸಬ್‌ಮೇರೀನುಗಳಿಂದ ಮುಳುಗಿಸಲ್ಪಟ್ಟವು.

ಫ್ರಿಡನ್ಸ್ ಬರ್ಗ ಎಂಬ ಡೆನ್ಮಾರ್ಕ ಉಗಿಹಡಗು ಸ್ಕಾಟಲಂಡದ ಪೂರ್ವತೀರದಲ್ಲಿ ಸುರಂಗಕ್ಕೆ ಬಡಿದು ಜಲಸಮಾಧಿ ಹೊಂದಿತು.

ಟೂರ್ನಿ ಎಂಬ ಫ್ರೆಂಚಹಡಗವು ಶತ್ರುಗಳ ಟಾರ್ಪೆಡೊ ಹೊಡತಕ್ಕೆ ಈಡಾಗಿ ಸ್ಪೇನ ತೀರದಲ್ಲಿ ಮುಳುಗಿತು.

ಗೇಥಿಯಾ ಎಂಬ ಸ್ವೀಡಿಶ ಹಡಗವು ಸ್ಕಾಟಿಶ ತೀರಪ್ರದೇಶದಲ್ಲಿ ಮುಳುಗಿಸಲ್ಪಟ್ಟಿತು.

ಗಡ್‌ವಿನ್ ಎಂಬ ನಾರ್ವೇ ಹಡಗವು ಜರ್ಮನ್ ಸಬ್‌ಮರೀನಿನಿಂದ ಜಲಸಮಾಧಿ ಹೊಂದಿತು.

ಆರ್ಕನಿಯಿಂದ ಸ್ವಲ್ಪ ದೂರದಲ್ಲಿ ಗಿರಾಲ್ಡ ಎಂಬ ಬ್ರಿಟಿಷ ಯುದ್ಧ ಹಡಗವು ಮುಳುಗಿಸಲ್ಪಟ್ಟಿತು.

ಕ್ಯಾನ್‌ಜಾಎಂಬ ಪೋರ್ತುಗೀಜ ಹಡಗದಲ್ಲಿ ಐವರು ಜರ್ಮನ್ ಪ್ರಯಾಣಿಕರನ್ನು ಬ್ರಿಟಿಷ ಯುದ್ಧ ಹಡಗವು ಕೈಸೆರೆ ಮಾಡಿತು.

ವಾಲ್ಸಿಟ್ ಎಂಬ ಬ್ರಿಟಿಶ ಯುದ್ಧ ಹಡಗವನ್ನು ಒಂದು ಜರ್ಮನ್ ಯುದ್ಧ ಹಡಗವು ಮುಳುಗಿಸಿತು. ಕೂಡಲೇ ಬ್ರಿಟಿಶ ನೌಕಾ ಹಾಗು ವಿಮಾನ ದಲದವರು ಧಾವಿಸಿ ಹೋಗಿ ಆ ಯು ಬೋಟನ್ನು ಮುಳುಗಿಸಿದರು. ಅದರಲ್ಲಿ ಜನನರನ್ನು ಬ್ರಿಟಿಶ ಹಡಗವೇ ಪಾರುಮಾಡಿದವು.

ತುರ್ಕಿ—ಜರ್ಮನ್ ಒಪ್ಪಂದ ಅಂಕಾರಾದಲ್ಲಿ ಸಹಿಯಾಯಿತೆಂದು ಸುದ್ದಿ.

ಫಿನಿಶ್ ಸೈನಿಕರು ಈಗ ೨೦,೦೦೦ ರಶಿಯನ್ನರು ಎದುರಿಸುತ್ತಿರುವರು. ತಮಗೆ ಸಕಾಲಕ್ಕೆ ಪರರಾಷ್ಟ್ರಗಳ ಸಹಾಯವು ಮುಟ್ಟದಿದ್ದಲ್ಲಿ ನಿರ್ನಾಮವಾಗಿ ಹೋಗುವರೆಂದು ಫಿನ್ನರ ಮುಂದಾಳುಗಳು ಸಾರಿರುವರು.

---

## ಸಾಮಂತ ಸ್ವರಾಜ್ಯ ಕೊಡಬೇಕೆಂದು ಬ್ರಿಟನಿನ ಮನಸ್ಸಿನಲ್ಲಿದೆಯಂತೆ!

### ಆದರೆ ಆದಕ್ಕೆ ಸಂಯುಕ್ತ ಘಟನೆಯೇ ಸರಿಯಾದ ಹಾದಿಯಂತೆ

**ಡಿಲ್ಲಿ ಸಂಧಾನವು ಮತ್ತೆ ಮುಂದೆ ಬಿತ್ತು**

ಗಾಂಧಿ ವೈಸರಾಯರ ಸಂಭಾಷಣೆಯ ಸಂಬಂಧವಾಗಿ ಸರಕಾರದ ಒಂದು ಪ್ರಕಟಣೆ ಹೊರಟಿದ್ದು ಅದರಲ್ಲಿ ವೈಸರಾಯರು ಗಾಂಧಿಜಿಯವರಿಗೆ ಏನು ಹೇಳಿದರೆಂಬದನ್ನು ತಿಳಿಸಲಾಗಿದೆ. ತಾವು ಕೇವಲ ತಮ್ಮ ಪರವಾಗಿ ಮಾತನಾಡುತ್ತಿರುವದಾಗಿಯೂ ಕಾಂಗ್ರೆಸ್ಸನ್ನು ಮಾತಿಗೆ ಕಟ್ಟಿ ಹಾಕಲು ತಮಗೆ ಅಧಿಕಾರವಿಲ್ಲವೆಂದೂ ಮೊದಲು ಗಾಂಧಿಯವರು ತಿಳಿಸಿದರಂತೆ.

ಬಳಿಕ ವೈಸರಾಯರು ಬ್ರಿಟಿಷ ಸರಕಾರದ ಸೂಚನೆಗಳನ್ನು ತಿಳಿಸಿದರು. ಹಿಂದುಸ್ತಾನಕ್ಕೆ ಸಾಮಂತ ಸ್ವರಾಜ್ಯ ಕೊಡಬೇಕೆಂಬುದೇ ಬ್ರಿಟಿಶ ಸರಕಾರದ ಇಚ್ಛೆಯೆಂದೂ ಅದನ್ನು ಕೊಡಲು ಅವರು ಶಕ್ಯವಿದ್ದಷ್ಟು ಬೇಗನೆ ಪ್ರಯತ್ನಿಸುತ್ತಿರುವರೆಂದೂ ಹೇಳಿದರು. ಆದರೆ ಅದಕ್ಕೂ ಮೊದಲು ಹಲವು ತೊಡಕುಗಳನ್ನು ಬಿಡಿಸಬೇಕಾಗಿದೆಯೆಂದು ಅವರು ನುಡಿದರು.

ಈ ಸೂಚನೆಗಳು ಸದ್ಭಾವನೆಯಿಂದ ಮಾಡಲ್ಪಟ್ಟಿದ್ದರೂ ಅವುಗಳಿಂದ ಕಾಂಗ್ರೆಸ ಪಕ್ಷದ ಬೇಡಿಕೆಗಳನ್ನು ಸಂಪೂರ್ಣವಾಗಿ ಪೂರೈಸಿದರತಾಗಲಿಲ್ಲವೆಂದು ಗಾಂಧಿಯವರು ಅಭಿಪ್ರಾಯ ಪಟ್ಟರಲ್ಲದೆ ಸದ್ಯಕ್ಕೆ ಈ ಮಾತುಕತೆಯನ್ನು ಮುಂದ ಹಾಕಬೇಕೆಂದೂ ಸೂಚಿಸಿದರು.

**ತಮಿಳು ನಾಡು ಪರಿಷತ್ತು**

ತಮಿಳುನಾಡು ಪರಿಷತ್ತು ಕಳೆದವಾರ ರಾಜಾಜಿ ನಗರದಲ್ಲಿ ಶ್ರೀ ಭೂಲಾಬಾಯಿ ದೇಸಾಯಿಯವರ ಅಧ್ಯಕ್ಷತೆಯಿಂದ ಜರಗಿತು. ಅಧ್ಯಕ್ಷರು ತಮ್ಮ ಪ್ರಚಂಡವಾದ ಭಾಷಣದಲ್ಲಿ ಭಾರತವು ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆ ಯಾವುದನ್ನೂ ಅಪೇಕ್ಷಿಸುವುದಿಲ್ಲವೆಂದು ಸಾರಿದರು.

## ರಾಮಗಡ ಕಾಂಗ್ರೆಸ್ ಅಧ್ಯಕ್ಷಪದ

### ಇಬ್ಬರೇ ಹುರಿಯಾಳುಗಳು ಆಜಾದ — ರಾಯರ ಹೆಸರು ಸೂಚಿಸಲ್ಪಟ್ಟಿವೆ

ರಾಮಗಡ ಕಾಂಗ್ರೆಸ ಅಧ್ಯಕ್ಷರ ಬಗ್ಗೆ ಮೌಲಾನಾ ಅಬುಲ್ ಕಲಂ ಅಝಾದ ಮತ್ತು ಶ್ರೀ ಎಂ. ಎನ್. ರಾಯರ ಹೆಸರು ಮಾತ್ರ ಬಂದಿವೆಂದು ಎ. ಐ. ಸಿ. ಸಿಯ ಜನರಲ್ ಸೆಕ್ರೆಟರಿಗಳಾದ ಆಚಾರ್ಯ ಕೃಪಲಾನಿಯವರು ಪ್ರಸಿದ್ಧಿಸುತ್ತಾರೆ. ಫೆಬ್ರವರಿ ೪ನೇ ತಾರೀಕು ಅಧ್ಯಕ್ಷರ ಹೆಸರನ್ನು ಸೂಚಿಸುವ ಕೊನೆಯ ತಾರೀಕು ಆಗಿತ್ತು. ಸೂಚಿಸಲ್ಪಟ್ಟ ಹೆಸರುಗಳಲ್ಲಿ ಯಾರಾದರೂ ತಮ್ಮ ಹೆಸರು ತಿರುಗಿ ತೆಗೆದುಕೊಳ್ಳಬಯಸುತ್ತಿದ್ದರೆ ಹತ್ತು ದಿನಗಳಲ್ಲಿ ಅವರು ಹಾಗೆ ಮಾಡಬಹುದೆಂದು ಕಾಂಗ್ರೆಸ ಘಟನೆಯು ಸಾರುತ್ತದೆ. ಅಧ್ಯಕ್ಷರನ್ನು ಆರಿಸುವದಕ್ಕಾಗಿ ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಸಭೆ ೧೫-೨-೪೦ಕ್ಕೆ ಕೂಡುವದು. ಅಧ್ಯಕ್ಷರ ಆಯ್ಕೆಯ ಪರಿಣಾಮ ಫೆಬ್ರವರಿ ೧೮ಕ್ಕೆ ಪ್ರಸಿದ್ಧವಾಗುವದು.

**ಹಕ್ — ಸಿಕಂದರರಿಗೆ ವಿಷಾದ ಹೀಗಾದದ್ದು ದುರ್ದೈವ ಎಂದು ಪಂಜಾಬ ಪ್ರಧಾನರ ನುಡಿದರು**

ಗಾಂಧಿ ವ್ಹೈಸರಾಯರ ಸಂಧಾನವು ಮತ್ತೆ ಮುಂದೆ ಹಾಕಲ್ಪಟ್ಟಿತೆಂಬದನ್ನು ಕೇಳಿ ನನಗೆ ತುಂಬಾ ವಿಷಾದವಾಗಿದೆ ಎಂದು ಬಂಗಾಳದ ಮುಖ್ಯಮಂತ್ರಿ ಮಿ. ಫಜಲುಲ್ ಹುಕ್ಕರು ಡಿಲ್ಲಿ ಸಂಭಾಷಣೆಯ ಪರಿಣಾಮವನ್ನು ಕೇಳಿದ ಮೇಲೆ ಹೇಳಿದರು.

'ಈ ಮಾತುಕತೆಯ ಪರಿಣಾಮವು ಏನೇ ಆಗಲಿ ಬಂಗಾಲದ ಪ್ರಶ್ನೆಯನ್ನು ಮಾತ್ರ ನಾನು ಶಾಂತತೆಯಿಂದ ಬಿಡಿಸಬೇಕೆಂದು ನಿಶ್ಚಯಿಸಿದ್ದೇನೆ ಮತ್ತು ಅದರಂತೆಯೇ ಮುಂದೆ ಕೆಲಸ ಮಾಡುವೆನು ಈ ನನ್ನ ದೃಢನಿರ್ಧಾರ ಪ್ರತಿಯೊಬ್ಬ ಬಂಗಾಲಿಗರು ಸಂತೋಷವನ್ನುಂಟು ಮಾಡುವುದೆಂದು ನಾನು ಆಶಿಸುತ್ತೇನೆ' ಎಂದು ಅವರು ಹೇಳಿದರು.

**ಮತ್ತೊಮ್ಮೆ ಅವಕಾಶ ಸಿಗುವದೆಂಬುದು ನನಗೆ ಆಶೆಯಿದೆ**

ಗಾಂಧಿ—ವ್ಹೈಸರಾಯರ ಸಂಭಾಷಣೆಯ ಸಂಬಂಧವಾಗಿ ಪತ್ರಿಕಾ ಪ್ರತಿನಿಧಿಯು ಸರ್ ಸಿಕಂದರ ಹಯಾತಖಾನರನ್ನು ಸಂದರ್ಶಿಸಲು ಅವರು ತಾವು ಏನನ್ನು ಹೇಳುವದಿಲ್ಲವೆಂದರು ಆದರೂ ಬಿಕ್ಕಟ್ಟನ್ನು ಬಗೆಹರಿಸಲು ಸೂಚಿಸಿದ

ರ್ಗ!



# ಭಾರತದ ಭವ್ಯಭವಿಷ್ಯತನ್ನು ಭಾರತೀಯರೇ ನಿರ್ಧರಿಸಬೇಕು!

## ಗಾಂಧಿ-ವೈಸರಾಯರ ಭೇಟಿಯು ನಿರಾಶೆ!

## ಕಾಂಗ್ರೆಸು ಅಧ್ಯಕ್ಷಪದವಿಗೆ ಅಜಾದ್-ರಾಯ್‌ಗಳು!!

## ಅವಿರೋಧ ಚುನಾವಣೆಯು ಪ್ರಜಾ ಸಮ್ಮತವಲ್ಲ!

ಮಾರ್ಗಕ್ಕೆ ಒಪ್ಪಲು ಕಾಂಗ್ರೆಸ್ಸಿಗೆ ಸಾಧ್ಯವಾಗದಿದ್ದುದು ದುರ್ದೈವ ದೇಶಹಿತದ ದೃಷ್ಟಿಯಿಂದ ಈ ಬಿಕ್ಕಟ್ಟನ್ನು ಬಿಡಿಸಲು ಎಲ್ಲ ಪಕ್ಷದವರಿಗೂ ಮತ್ತೊಮ್ಮೆ ಅವಕಾಶ ಸಿಗುವದೆಂದು ಅವರು ಹೇಳಿದರು

ಸರ್ ಸಿಕಂದರ ಹಯಾತಖಾನರು ಈ ದಿನ ರಾತ್ರಿ ಲಾಹೋರಕ್ಕೆ ಹೊರಟರು

### ಜಾತೀಯ ಸಮಸ್ಯೆಯು ಇತ್ಯರ್ಥಕ್ಕೆ ಜನಾಂಗಸಂಘದ ಠರಾವು

### ಡಾ॥ ಮೂಂಜೆಯವರ ಸಲಹೆ

ವೈಸರಾಯರು, ಭಾರತದ ಜಾತೀಯ ಸಮಸ್ಯೆಯ ಪರಿಹಾರಕ್ಕಾಗಿ, ಆ ವಿಷಯದಲ್ಲಿ ಇತ್ಯರ್ಥಮಾಡಲು ಜನಾಂಗಸಂಘಕ್ಕೆ ಒಪ್ಪಿಸಿಕೊಡಬೇಕೆಂದೂ, ಅಲ್ಲಿನ ಠರಾವನ್ನು ಎಲ್ಲರೂ ವಿಧೇಯರಾಗಿ ಒಪ್ಪಬೇಕೆಂದೂ ಆ ವಿಧದಿಂದ ಜಾತೀಯ ಸಮಸ್ಯೆಯನ್ನು ಪರಿಹಾರ ಮಾಡಬಹುದೆಂದೂ ಡಾ॥ ಮೂಂಜೆಯವರು ಒಂದು ಸಲಹೆ ಕೊಟ್ಟಿರುವರು.

### ಕಾಂಗ್ರೆಸು ಒಪ್ಪಂದಕ್ಕೆ ತಯಾರಿಕೆ ಆದರೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು

### ನೆಹರುಗಳ ಹೇಳಿಕೆ

ಕಾಶಿಯ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಪಂಡಿತ ನೆಹರುಗಳು ಕಾಂಗ್ರೆಸು ಬ್ರಿಟಿಷ್ ಸರಕಾರದೊಡನೆ ಒಪ್ಪಂದಕ್ಕೆ ಸಿದ್ಧವಾಗಿದೆಯೆಂದೂ, ಆದರೆ ಒಪ್ಪಂದದ ಶರ್ತವು ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆಯಾಗಕೂಡದೆಂದೂ ಹೇಳಿದರು

### ಸಾಮಂತ ಸ್ವರಾಜ್ಯವೆ? ಲೋರ್ಡ್ ಸಾಮ್ಯುವೆಲ್ಲರು ಕಾಂಗ್ರೆಸು ಮಂತ್ರಿಗಳನ್ನು ಪ್ರಶಂಸಿಸಿದರು

ಸ್ಕಾಟಿನ ವಿಶ್ವ ವಿದ್ಯಾಲಯದ ಮುಂದೆ ಮಾತನಾಡುತ್ತಾ ಲಾರ್ಡ್ ಸಾಮುವೇಲರು ಕಾಂಗ್ರೆಸು ಮಂತ್ರಿಮಂಡಳಗಳು ಮಾಡಿದ ಕಾರ್ಯಗಳನ್ನು ಪ್ರಶಂಸಿಸುತ್ತಾ ಭಾರತಕ್ಕೆ ಸಾಮಂತ ಸ್ವರಾಜ್ಯವನ್ನು ಕೊಡುವುದು ಬ್ರಿಟನಿನ ಧ್ಯೇಯವೆಂದು ಹೇಳಿದರು.

### ಬಂಗಾಳ ಕಾಂಗ್ರೆಸು

ಬಂಗಾಳ ಕಾಂಗ್ರೆಸಿನ ವಿಚಾರವು ಮತ್ತು ವಿಷಾದಕರವಾಗಿದೆ. ಅಲ್ಲಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ವರ್ಕಿಂಗ್ ಕಮಿಟಿಯ ವರ್ತನೆಯನ್ನು ಖಂಡಿಸಿ, ಅವರಿಂದ ನೇಮಕವಾದ ಮಂಡಳವನ್ನು ಬಹಿಷ್ಕರಿಸುವ ಠರಾವು ಮಾಡಿದೆ.

### ಬರ್ಕತ್ತುಲ್ಲಿಗಳ ಬೊಬ್ಬೆ

ಹಿಂದೂ ಮುಸ್ಲಿಂ ಐಕ್ಯಕ್ಕೆ ಮಹಾತ್ಮಾ ಗಾಂಧಿಗಳೇ ದೊಡ್ಡ ತಡೆಯೆಂದೂ, ಗಾಂಧಿಗಳ ನೀತಿಯು ಪ್ರಚಾರದಲ್ಲಿರುವ ವರೆಗೆ ಐಕ್ಯವು ಸಾಧ್ಯವಿಲ್ಲವೆಂದೂ ಬರ್ಕತ್ತುಲಿಯೆಂಬವರು ಬೊಬ್ಬಿಟ್ಟರು

### ರಾಷ್ಟ್ರಪತಿಗಳ ಅಸೌಖ್ಯ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಕಳೆದ ವಾರ ಇನ್‌ಫ್ಲುಯೆಂಜಾದ ನಿಮಿತ್ತ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಈಗ ವಾಸಿಯಾಗಿದೆ

### ಸರತ್ ಬೋಸರಿಗೆ ರಾಜೇಂದ್ರರ ಉತ್ತರ

ಬಂಗಾಳ ಪ್ರಾಂತಿಕ ಕಾಂಗ್ರೆಸು ಕಮಿಟಿಯು, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ವಿಷಯವಾಗಿ ಮಾಡಿದ ನಿಷೇಧ ಠರಾವಿನ ವಿಷಯವನ್ನು ರಾಷ್ಟ್ರಪತಿಗಳಿಗೆ ಸರತ್ ಬೋಸರು ತಿಳಿಸಿದ್ದಕ್ಕೆ, ಅವರು ಉತ್ತರ ಬರೆಯುತ್ತಾ ಅಂತಹ ಆಪಾದನೆಯು ತೀರಾ ಅಪ್ರಾಸಂಗಿಕವೆಂದು ಹೇಳಿರುವರು

### ಹೊಸ ಆದಾಯ ತೆರಿಗೆ

ಇತ್ತೀಚಿಗೆ ಹೆಚ್ಚು ಲಾಭಗಳಿಸಿದವರೆಲ್ಲಾ ತಮ್ಮ ಲಾಭದಲ್ಲಿ ರೂಪಾಯಿಗೆ ಎಂಟಾಣೆ ಸರಕಾರಕ್ಕೆ ಒಪ್ಪಿಸಬೇಕೆಂದು ಶಾಸನ ತಂದಿದ್ದಾರೆ

### ರಂಗೂನಿನಲ್ಲಿ ದಂಗೆ

ರಂಗೂನಿನಲ್ಲಿ ಹಿಂದೂ–ಮುಸ್ಲಿಂ ಗಲಭೆಗಳು ನಡೆದಿವೆ ಒಬ್ಬ ಸತ್ತಿದ್ದಾನೆ ೪೬ ಜನಕ್ಕೆ ಗಾಯವಾಗಿದೆ

### ಜಿನ್ನರಿಗೆ ಮಂಗಳಾರತಿ

ಅರಬ್ಬಿಸ್ಥಾನದ ಪ್ರಚಾರಮಂಡಳದ ಗ್ರಾಂಡ್ ಮುಫ್ತಿಗಳು ಪರ್ಶಿಯಾದ ಜನ ಮುಖಂಡರು ಎಲ್ಲರೂ "ಜಿನ್ನಾ ನೀತಿ ಅಯೋಗ್ಯ" ಎಂದಿದ್ದಾರೆ

### ಬರೋಡಾ ಸುಧಾರಣೆ

ಬರೋಡ ಶ್ರೀಮನ್ಮಹಾರಾಜ ಪ್ರತಾಪಸಿಂಹ ಗಾಯಕವಾಡರವರು ಸುಧಾರಣೆಗಳನ್ನು ತಮ್ಮ ಪ್ರಜೆಗಳಿಗೆ ಕೊಟ್ಟು ಒಂದು ರಾಜಶಾಸನಪತ್ರಿಕೆ ಹೊರಡಿಸಿದ್ದಾರೆ.

### ಗಡಿನಾಡು

ಗಡಿನಾಡಿನಲ್ಲಿ ಗೋಳು ತಪ್ಪಿಲ್ಲ, ಖೊಕ್ಷ(?)ಗಳು ಜನವರಿಯಲ್ಲಿ ಅಪಹರಿಸಿದವರಲ್ಲೆಲ್ಲಾ ಒಬ್ಬಳೇ ಒಬ್ಬ ಹಿಂದೂ ತರುಣಿಯನ್ನು ಬಾಕಿಗೆಡಿಸಿಕೊಂಡಿದ್ದಾರೆ

### ಮುಷ್ಕರಗಳು

ಬೊಂಬಾಯಿ ಗಿರಣಿಗಳಲ್ಲೂ ಕಲ್ಕತ್ತ ಮತ್ತು ಕಾನ್‌ಪುರ ಗಿರಣಿಗಳಲ್ಲೂ ಮುಷ್ಕರಗಳಾಗಿವೆ.

### ರಿಸರ್ವ್ ಬ್ಯಾಂಕ್

ಯಾರೂ ಕೂಡ ೨೦೦ಕ್ಕಿಂತ ಹೆಚ್ಚು ರಿಜರ್ವ್ ಬ್ಯಾಂಕು ಷೇರುಗಳನ್ನು ಹೊಂದಕೂಡದು ಎಂದು ರಿಜರ್ವ್ ಬ್ಯಾಂಕು ಕಾನೂನು ತಿದ್ದುಪಡಿ ಮಸೂದೆಯು ಕೇಂದ್ರ ಅಸೆಂಬ್ಲಿಯಲ್ಲಿ ಚರ್ಚೆಗೆ ಬರುವದು

### ಕೆಲಿಫೋರ್ನಿಯೋದಲ್ಲಿ ಸ್ವಾತಂತ್ರ್ಯ ದಿನ

ಅಮೇರಿಕದ ಭಾರತಾಭ್ಯುದಯ ಸಂಘದವರು ಕೆಲಿಫೋರ್ನಿಯೋದಲ್ಲಿ ಈ ವರ್ಷ ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡಿರುವರಾಗಿ, ಕಾಂಗ್ರೆಸು ಅಧ್ಯಕ್ಷರಿಗೆ ಅದರ ಕಾರ್ಯದರ್ಶಿಯು ಒಂದು ಪ್ರತಿಯನ್ನು ಕಳುಹಿಸಿರುವನು.

### ದೊಂಬಿ

ನವಾಬ್‌ಶಹ ಎಂಬ ಪಟ್ಟಣದಲ್ಲಿ ಗೋಹತ್ಯದ ಕಾರಣದಿಂದ ಹಿಂದೂ ಮುಸ್ಲಿಂ ದೊಂಬಿ ನಡೆಯಿತು ಪೋಲೀಸರು ಗುಂಡು ಹಾರಿಸಿದರು ದೊಂಬಿಕಾರರು ೯ ಮನೆಗಳನ್ನು ಸುಟ್ಟರು.

ಪೆಷಾವರಿಗೆ ಸಮೀಪದಲ್ಲಿ ಪ್ರಯಾಣಿಕರು ಹೋಗುತ್ತಿದ್ದ ಒಂದು ಬಸ್ಸಿನ ಮೇಲೆ ಡಕಾಯಿತರು ಗುಂಡು ಹಾರಿಸಿದರು ಯಾರಿಗೂ ಅಪಾಯವಾಗಲಿಲ್ಲ

### ಸ್ಮಾರಕ

ಅಖಿಲಭಾರತ ಮಹಿಳಾ ಸಮ್ಮೇಳನದಲ್ಲಿ ಅಧ್ಯಕ್ಷಣಿಯರು ಭಾರತದ ವೀರರಮಣಿಯಾದ ಮಹಾರಾಣಿ ಲಕ್ಷ್ಮೀಬಾಯಿಯವರ ಗೌರವಾರ್ಥವಾಗಿ ಸ್ಮಾರಕವೊಂದನ್ನು ನಿರ್ಮಿಸಬೇಕೆಂದ ಠರಾವು ತಂದರು ಅದ ಸರ್ವಾನುಮತದಿಂದ ಠರಾವಾಯಿತು.

ಜುಹಿ ಎಂಬ ಗ್ರಾಮದಲ್ಲಿ ಜಿ ಐ ಪಿ ರೈಲ್ವೆ ಪಾರ್ಸಲ್ ಆಫೀಸಿಗೆ ೬ ಜನ ಶಸ್ತ್ರಧಾರಿಗಳು ನುಗ್ಗಿ ೧೩೨೬ ರೂಪಾಯಿಗಳನ್ನು ಅಪಹರಿಸಿಕೊಂಡು ಹೋದರು.

ಈ ವಾರದಲ್ಲಿ ಗಾಂಧಿ ವೈಸರಾಯರ ಭೇಟಿಯು ಬಹಳ ವಿಶೇಷದ ವಿಷಯವಾಗಿದೆ ದಿಲ್ಲಿಯಲ್ಲಿ ಬಂದಿಳಿದಾಗ, ಈ ಮಾತುಕತೆಯಲ್ಲಿ ಒಪ್ಪಂದದ ಆಶೆಯುಂಟೇ ಎಂದು ಅವರೊಡನೆ ಕೇಳಿದಲ್ಲಿ 'ದೇವರು ಒಬ್ಬನಿಗೆ ಮಾತ್ರ ಗೊತ್ತು' ಎಂದು ಅವರು ಹೇಳಿದರು, ಅವರನ್ನು ಪಂಜಾಬಿನ ಪ್ರಧಾನಮಂತ್ರಿ ಸರ್ ಸಿಕಂದರರು ಕಂಡು ಮಾತನಾಡಿದರು ಬಂಗಾಳದ ಪ್ರಧಾನಮಂತ್ರಿ ಹಕ್ಕರು ಗಾಂಧಿಜಿಯವರ ಭೇಟಿಮಾಡಿದರು.

### ಹೊಸ ವಾರ್ತೆ

ವೈಸರಾಯರ ಭೇಟಿಯ ವಿಷಯದಲ್ಲಿ ಗಾಂಧಿಜಿಯವರು ಒಂದು ಸುದೀರ್ಘ ಪ್ರಕಟಣೆಯನ್ನು ಕೊಟ್ಟಿರುವರು. ಅದರಲ್ಲಿ ತಾವು ವೈಸರಾಯರೊಡನೆ ಹೇಳಿದ ವಿಷಯಗಳನ್ನೂ, ವೈಸರಾಯರು ತಿಳಿಸಿದ ಬ್ರಿಟಿಷ್ ಸರಕಾರದ ಅಭಿಪ್ರಾಯವನ್ನೂ ತಾನು ಕಾಂಗ್ರೆಸಿನ ಅಂತರ್ಯವನ್ನು ತಿಳಿಸಿದೆನೆಂದೂ, ನಾವಿಬ್ಬರೂ ಗೆಳೆತನದಿಂದಲೇ ವಿಚಾರವಿನಿಮಯ ಮಾಡಿಕೊಂಡೆವೆಂದೂ ಹೇಳಿರುವರು ಮಾತ್ರವಲ್ಲದೆ ಬ್ರಿಟಿಷ್ ಸರಕಾರವು, ಈ ದಿನ ಧೋರಣೆಯನ್ನು ಬಿಟ್ಟುಕೊಟ್ಟು, ಭಾರತೀಯರಿಗೆ, ಅವರ ಅದೃಷ್ಟವನ್ನು ಸ್ವತಃ ರಚಿಸಲು ಸಂದರ್ಭವನ್ನು ಒದಗಿಸಿಕೊಡುವುದರಿಂದ ಎಲ್ಲಾ ಸಮಸ್ಯೆಗಳೂ ಪರಿಹಾರವಾಗುವುದೆಂದೂ ಹೇಳಿರುವರು. ಕಡೆಗೆ ಇಂದಿನ ಈ ಸೋಲವಿಕೆಯು ಮುಂದಿನ ವಿಜಯದ ಮೂಲಸಾಧನವೆಂದು ಭವಿಷತ್ತಿನ ವಿಷಯವಾಗಿ ಆಶಾದಾಯಕವಾದ ಪ್ರಕಟಣೆಯನ್ನು ಹೇಳಿರುವರು

ವೈಸರಾಯರು ಕಾಂಗ್ರೆಸ್ಸಿನ ಬೇಡಿಕೆಗೆ ಏನೂ ಯೋಗ್ಯ ಉತ್ತರ ಕೊಡಲಿಲ್ಲವೆಂದೂ, ಆದಕಾರಣ ಗಾಂಧಿಜಿ ಮತ್ತು ಅವರೊಳಗೆ ಯೋಗ್ಯ ವಿಚಾರ ವಿನಿಮಯವಾಗಲಿಲ್ಲವೆಂದೂ ತಿಳಿದು ಬಂದಿದೆ

ಶ್ರೀ ಎಂ. ಎನ್ ರಾಯ್ ಗಳು ಕಾಂಗ್ರೆಸು ಅಧ್ಯಕ್ಷ ಪದವಿಗೆ ಉಮೇದ್ವಾರರಾಗಿ ನಿಲ್ಲುವರೆಂದು ತಿಳಿದಿದೆ ಬಲಪಕ್ಷದವರು ಅವಿರೋಧವಾದ ಆಯ್ಕೆಯಾಗಬೇಕೆಂದ ಹೇಳುವುದು ಪ್ರಜಾಪ್ರಭುತ್ವ ನೀತಿಗೆ ಸರಿಯಾಗಿಲ್ಲವೆಂದು ಕಾಮ್ರೇಡ್ ರಾಯ್ ಗಳ ಹೇಳಿಕೆ

ಮಿ ಜಿನ್ನರು ವೈಸರಾಯರನ್ನು ಕಂಡು ಒಂದು ತಾಸಿನ ತನಕ ಮಾತನಾಡಿದರು.

ಫಿನ್ನರು ಪ್ರಚಂಡ ವಿಜಯವೊಂದನ್ನು ಪಡೆದರು. ೨೦,೦೦೦ ರಶ್ಯನರನ್ನು ಕೊಂದಿರುವರೆಂದು ತಿಳಿದಿದೆ ರಶ್ಯನರು ದಾಳಿಯಿಡಲು ಯತ್ನಿಸಿ ಸೋತುಹೋಗಿರುವರೆಂದ ವಾರ್ತೆ – ೪ ಶತ್ರು ರಶ್ಯದ ವಿಮಾನಗಳನ್ನು ಕಳಗುರುಳಿಸಿದರು

ಪೋಲೆಂಡಿನಲ್ಲಿ ಜರ್ಮನರ ಅತ್ಯಾಚಾರವು ಮೇರೆಮೀರಿದೆ. ಮೂರು ಮಿಲಿಯ ಪೋಲರನ್ನು ಕೊಂದಿರುವರು.

೬೦ ಶತ್ರುಗಳ ಜಲಾಂತರ್ಗಾಮಿ ನಾವೆಗಳು ಮುಳುಗಿಸಲ್ಪಟ್ಟಿವೆಯೆಂದು ಫ್ರೆಂಚ್ ಸರಕಾರದ ವರದಿಯಾಗಿದೆ.

ಚೈನದಲ್ಲಿ ಜರ್ಮನಿಯರ ವಿಮಾನದಾಳಿಯಿಂದ ಒಂದು ಟ್ರೈನು ಭಗ್ನವಾಗಿ ೧೦೧ ಜನರು ನಾಶವಾಗಿದ್ದಾರೆ. ಅನೇಕ ಅನಾಹುತಗಳಾಗಿವೆ. ಫ್ರಾನ್ಸ್ ಮತ್ತು ಅಮೇರಿಕದ ಹಲವರು ಅದರಲ್ಲಿ ಮರಣ ಹೊಂದಿರುವುದರಿಂದ ಆ ಉಭಯ ರಾಷ್ಟ್ರಗಳೂ ಜಪಾನಿನ ವರ್ತನೆಯನ್ನು ನಿಷೇಧಿಸಿವೆ.

# ರಾಷ್ಟ್ರಸೇವೆಯನ್ನು ಮಾಡುವವರಿಗೆ ಹಳ್ಳಿಗಳೇ ಕಾರ್ಯಕ್ಷೇತ್ರಗಳಾಗಿವೆ

## ಹಳ್ಳಿಯ ಜನರ ನಿರಕ್ಷರತೆ! ಸಾಲದ ಶೂಲಕ್ಕೆ ಅವರ ಬಲಿ!

## ಗ್ರಾಮಪಂಚಾಯತುಗಳ ಮೂಲಕ ಗ್ರಾಮಸೇವೆ

'ಹಳ್ಳಿಗೆ ಹೋಗಿ' ಎಂಬುದು, ಇಂದಿನ ವಿದ್ಯಾವಂತ ಯುವಕರಿಗೆ, ರಾಷ್ಟ್ರೀಯ ಮುಖಂಡರ ಸಂದೇಶ. ಎಷ್ಟೇ ತತ್ವ ನೀತಿಗಳನ್ನು ಮಾತನಾಡಲಿ, ಎಷ್ಟೇ ರಾಜಕೀಯ ಸ್ವಾತಂತ್ರ್ಯಗಳ ಕುರಿತು ಬೊಬ್ಬಿಡಲಿ, ದೇಶದ ಭದ್ರ ನಿರ್ಮಾಣಕ್ಕೆ ಹಳ್ಳಿಯಲ್ಲದೆ ಬೇರೆ ಯೋಗ್ಯ ಕ್ಷೇತ್ರವಿಲ್ಲ. ಹಳ್ಳಿಯ ಜೀವನವು—ಇಂದಿನ ದುರ್ಭಾಗ್ಯ ಜೀವನವು ಸಾವಿರ ಪಾಲಿಗೆ ಸುಧಾರಣೆ ಹೊಂದಬೇಕು. ದುಡ್ಡು ಇಂದು ಹಳ್ಳಿಯ ಕಡೆಯಿಂದ ಪೇಟೆಗೆ ಹರಿದು ಹೋಗುವುದು ನಿಂತು ಹೋಗಿ, ಮುಂದಕ್ಕೆ ಪೇಟೆಯಿಂದ ಹಳ್ಳಿಗಳಿಗೆ ಹರಿದು ಬರಬೇಕು, ಆಗ ಮಾತ್ರ ಬಡ ಜನರು ಅರೆ ಹೊಟ್ಟೆಯುಂಡು ಬದುಕುವ ಹಳ್ಳಿಗರು ಸಚೇತನರಾಗುವರು. ಅಲ್ಲಿ ಚೈತನ್ಯವು ಹುಟ್ಟುವುದೆಂದರೆ ನಿಜವಾಗಿಯೂ ರಾಷ್ಟ್ರವೇ ಉದ್ಧಾರವಾದಂತೆ.

### ಹಳ್ಳಿಯ ಜನರ ದೌರ್ಭಾಗ್ಯ

ನಿಜವಾಗಿಯೂ ಇಂದು ನಮ್ಮ ನಾಡಿನ ಹಳ್ಳಿಗರು ಬಹಳ ದುರ್ಭಾಗಿಗಳಾಗಿದ್ದಾರೆ. ಪ್ರಪಂಚದ ಸುಖದಿಂದ ಬಾಹಿರರಾಗಿದ್ದಾರೆ. ಜ್ಞಾನದ ಬೆಳಕಿಲ್ಲದೆ ಕುರುಡರಾಗಿದ್ದಾರೆ. ಈ ಎಲ್ಲಾ ದೌರ್ಭಾಗ್ಯ ರಾಶಿಯಲ್ಲಿ ಮೊದಲನೆಯದಾಗಿ, ತಲೆಯೆತ್ತಿ ತೋರುವುದೆಂದರೆ, ಅಲ್ಲಿನ ನಿರಕ್ಷರತೆ! ಓದು ಬರಹದ ಗಂಧಗಾಳಿಯಿಲ್ಲದ ಜನರ ಅಜ್ಞಾನ! ಇದರಿಂದಲಾಗಿಯೇ ದುಡಿತ, ಕೂಲಿ, ಆರೋಗ್ಯ, ಉತ್ಪತ್ತಿ, ಸಂಘಟನೆ ಈ ಎಲ್ಲಾ ವಿಧಗಳಲ್ಲಿಯೂ ಅವರು ಬಹಳವಾಗಿ ಕಷ್ಟಗಳಿಗೆ ಗುರಿಯಾಗುತ್ತಾರೆ. ದಿನ ದಿನಕ್ಕೆ ಸಾವಿರಾರು ಮಂದಿ ಬಡವರು, ಹೊಟ್ಟೆಗಿಲ್ಲದ ರೋಗದಿಂದಲೂ, ಕೆಟ್ಟ ಆಹಾರಗಳನ್ನುಂಡು ಪಡೆಯುವ ರೋಗಗಳಿಂದಲೂ ಮರಣ ಹೊಂದುತ್ತಿದ್ದಾರೆ. ಅಂತಹ ಜನರಿಗೆ ಆರೋಗ್ಯ ನಿಯಮಗಳನ್ನು ಹೇಳುವವರಿಲ್ಲ. ಅವರಿಗೆ ಯೋಗ್ಯ ಔಷಧಿಗಳ ಸಲಕರಣೆಯನ್ನು ಸರಕಾರವು ಮಾಡಲು ಮನಸ್ಸು ಮಾಡಲೂ ಇಲ್ಲ. ಹಾಗೆ ಮಾಡುವ ರಾಷ್ಟ್ರೀಯ ಸರಕಾರವೂ ನಮಗೆ ನಮ್ಮ ಸ್ವಾಧೀನಕ್ಕೆ ದೊರೆತೂ ಇಲ್ಲ.

### ಸೇವಾ ಬುದ್ಧಿಯುಂಟೆ?

ರಾಷ್ಟ್ರದಲ್ಲಿ ಇತ್ತೀಚೆಗೆ ಜನರಲ್ಲಿ ಹೆಚ್ಚಾಗಿ ತರುಣರಲ್ಲಿ ಸೇವೆ ಮಾಡಬೇಕೆಂಬ ಬುದ್ಧಿಯುಂಟಾಗಿದೆ. ಇದು ನಿಜವಾಗಿಯೂ ಶುಭಲಕ್ಷಣವು. ಆದರೆ ಬರಿಯ ಮಾತಿನಿಂದ ಹೆಚ್ಚಿನ ಸೇವೆಯಿಲ್ಲ. ಹಳ್ಳಿಯ ಆ ಜನರು ವಿದ್ಯಾವಂತ ಯುವಕರ ಸೇವೆಗಾಗಿ ಹಾರೈಸುತ್ತಾರೆ. ಅವರೊಡನೆ ಕೂಡಿ, ಅವರ ಸುಖದುಃಖಗಳನ್ನು ಸಮೀಪಿಸಿ, ಯಾವುದು ಆಧುನಿಕ ಯುಗಕ್ಕೆ ಅಗತ್ಯವಿದೆಯೋ, ಅಂತಹುದನ್ನು ಒದಗಿಸಿ ಕೊಡುವ ಸರ್ವವಿಧದ ಸಹಾಯ ಮಾಡುವುದರಲ್ಲಿಯೇ ನಿಜವಾದ ಸೇವಾ ಕಾರ್ಯವಿದೆ. ಹಳ್ಳಿಹಳ್ಳಿಗಳಲ್ಲಿ ಸಾಕ್ಷರತಾ ಕೇಂದ್ರಗಳನ್ನು ಸ್ಥಾಪಿಸಿ, ಜನರನ್ನು ಬರಹ ಬಲ್ಲವರನ್ನಾಗಿ ಮಾಡಬೇಕು.

### ನವೀನ ಉದ್ಯೋಗ

ವರ್ಷದಲ್ಲಿ ಐದಾರು ತಿಂಗಳ ತನಕ ಔದಾಸೀನ್ಯದಿಂದಿರುವುದು ನಮ್ಮ ಹಳ್ಳಿಗಳ ಜನರ ಹಣೆಬರಹವಾಗಿದೆ. ಔದಾಸೀನ್ಯದಿಂದಿರುವುದೇಕೆಂದರೆ ಅವರಿಗೆ ಬೇರೆ ಕೆಲಸವು ಇಲ್ಲವಾದುದರಿಂದಲೇ. ಆದರೆ ಅಂತಹ ವಿರಾಮಸಮಯದಲ್ಲಿ ಮಾಡಲು ಯೋಗ್ಯ ಉಪಕಸುಬುಗಳನ್ನು ಕಲಿಸಿದರೆ, ನಿಜವಾಗಿಯೂ ಅಂತಹ ಜನರು ಬಹಳ ಸಂತೋಷ ಪಡುವರು. ಅವರ ಜೀವನದ ಮಟ್ಟವು ಬಹಳ ಮಟ್ಟಿಗೆ ಮೇಲ್ತರಗತಿಯನ್ನು ಕಾಣುವುದು. ಖಾದಿ, ಜೇನುನೊಣ ಸಾಕುವಿಕೆ, ಹಣ್ಣು ಹಂಪಲುಗಳ ತಯಾರಿ, ತರಕಾರಿ ಬೆಳವಣಿಗೆ, ದನಗಳ ಪೋಷಣೆ ಮೊದಲಾದವುಗಳ ವಿಷಯವಾಗಿ ಅವರಿಗೆ ಹೆಚ್ಚಿನ ಅನುಭವಗಳನ್ನು ಕೊಡುವುದು ಅವಶ್ಯವಿದೆ.

### ಹಳ್ಳಿಗರ ಸಾಲ

ಕಾಂಗ್ರೆಸು ಪ್ರಾಂತಿಕ ಅಧಿಕಾರವನ್ನು ಸ್ವೀಕರಿಸಿದ ಮೇಲೆ ಹಳ್ಳಿಯ ವ್ಯವಸಾಯಗಾರರ ಸಾಲದ ಹೊರೆಯನ್ನು ಕಡಿಮೆ ಮಾಡುವ ಬಗ್ಗೆ ಬಹಳ ಪ್ರಯತ್ನ ಮಾಡಿದೆ. ಆದರೂ ಅವರ ಹಿಂದಿನ ಹಲಕೆಲವು ಸಾಲಗಳು ಹೋಗಿ ಇದ್ದ ಆಸ್ತಿಯು ಕಾಪಾಡಿದಂತಾಗಿದೆಯಲ್ಲದೆ, ಅವರು ಮುಂದಕ್ಕೆ ಆಸ್ತಿಗಳಲ್ಲಿ ಸಾಲ ಮಾಡಬಾರದೆಂದಿಲ್ಲ. ಏಕೆಂದರೆ ಮದುವೆ ಮುಂಜಿ ಮೊದಲಾದವುಗಳಲ್ಲಿ ಹಳ್ಳಿಯವರು ಖರ್ಚು ಮಾಡುವುದಕ್ಕೆ ಮಿತಿಯೇ ಇಲ್ಲ. ಹೀಗಾಗಿ ಅವರು ಸಾಲಕ್ಕೆ ಸಹಜವಾಗಿ ಬಲಿಬೀಳುತ್ತಾರೆ. ಅದರಿಂದ ಅವರ ಜೀವನ ಸುಖವು ಕೆಡುವುದು.

ಹಳ್ಳಿಯವರಿಗೆ ಸಹಾಯ ಮಾಡಲು ಗ್ರಾಮ ಪಂಚಾಯತುಗಳು ಬಹಳ ಒಳ್ಳೆಯದು. ಹಳ್ಳಿಹಳ್ಳಿಗಳ ವಿದ್ಯಾವಂತ ಜನರೇ ಯೋಗ್ಯರಾದವರು, ಅಲ್ಲಿನ ಜನಾಬ್ದಾರಿ ಹೊತ್ತು ಪ್ರತಿಯೊಂದು ಗ್ರಾಮವನ್ನೂ ಒಳ್ಳೆಯ ರೀತಿಯಲ್ಲಿ ಪ್ರಗತಿಪಥದಲ್ಲಿ ನಡೆಸುವಂತೆ ಉತ್ಸಾಹದಿಂದ ಮುಂದೆ ಬರಬೇಕು.

ಹಳ್ಳಿಯ ವಿದ್ಯಾವಂತರಾದ ಯುವಕರು ಈ ಕಡೆಗೆ ಗಮನ ಕೊಡುವುದು ಇದು ತೀರಾ ಅವಶ್ಯವಿದೆ.

## ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

### ಸ್ವಾತಂತ್ರ್ಯ ದಿನಾಚರಣೆಯ ವರದಿ

ಇದೇ ೨೬—೧೪—೦ನೇ ದಿನ ನಮ್ಮ ಪ್ರಾಂತದ ಅನೇಕ ಭಾಗಗಳಲ್ಲಿ ಆದ ಸ್ವಾತಂತ್ರ್ಯ ದಿನಾಚರಣೆಯ ವರದಿಗಳು ನಮ್ಮ ಕಡೆಗೆ ಬರಹತ್ತಿವೆ. ಆದರೆ ಆ ವರದಿಗಳು ಅಪೂರ್ಣವಾಗಿರುವವು. ಅದರಲ್ಲಿ ಪೂರ್ಣ ಅಥವಾ ಅಪೂರ್ಣ ಪ್ರತಿಜ್ಞೆ ತೆಗೆದು ಕೊಂಡವರ ಹೆಸರುಗಳು ಇರುವದಿಲ್ಲ. ನಾವು ಅಖಿಲ ಭಾರತ ಕಾಂಗ್ರೆಸ ಸಮಿತಿಗೆ ಈ ಸಂಬಂಧ ಪೂರ್ಣ ವರದಿಯನ್ನು ತಾ. ೧೦—೨—೪೦ ರೊಳಗಾಗಿ ಕಳಿಸಿ ಕೊಡುವೆವು. ಅಷ್ಟರಲ್ಲಿಯೇ ನಮಗೆ ತಲುಪುವಂತೆ ಪ್ರಾಂತದಲ್ಲಿಯ ಎಲ್ಲ ಕಾಂಗ್ರೆಸ ಸಮಿತಿಗಳು ಈ ಕೆಳಗಿನಂತೆ ಮಾಹಿತಿಯನ್ನು ಕಳಿಸಿ ಕೊಡಬೇಕು. (೧) ಸಂಪೂರ್ಣ ಪ್ರತಿಜ್ಞೆ ತೆಗೆದು ಕೊಂಡವರ ಹೆಸರು, ವಿಳಾಸ, (೨) ಅಪೂರ್ಣವಾಗಿ ಪ್ರತಿಜ್ಞೆ ತೆಗೆದು ಕೊಂಡವರ ಪೂರ್ಣ ಹೆಸರು ಹಾಗೂ ವಿಳಾಸ, ಪ್ರತಿಜ್ಞೆಯಲ್ಲಿಯ ಯಾವ ಭಾಗವನ್ನು ಅವರು ಬಿಟ್ಟಿರುವರು ಹಾಗೂ ಅದರ ಕಾರಣ.

ಈ ಕೆಲಸವನ್ನು ಒಳ್ಳೆ ಶಿಸ್ತಿನಿಂದ ಹಾಗೂ ಸುವ್ಯವಸ್ಥೆಯಿಂದ ಮಾಡುವ ಸಲುವಾಗಿ ಪ್ರಾಂತದಲ್ಲಿಯ ಎಲ್ಲ ಅಧೀನ ಸಮಿತಿಗಳು ಸಂಪೂರ್ಣ ಪ್ರತಿಜ್ಞೆ ತೆಗೆದು ಕೊಂಡವರ ಸಹಿಗಳನ್ನು ಪ್ರತಿಜ್ಞೆಯ (ವರ್ಕಿಂಗ ಕಮಿಟಿಯು ಹಾಕಿಕೊಟ್ಟ) ಕೆಳಗೆ ತೆಗೆದು ಕೊಳ್ಳಬೇಕು. ಮತ್ತೂ ಆಯಾ ಜನರು ಪ್ರತಿಜ್ಞೆಯಂತೆ ನಡೆಯುವರೋ ಹೇಗೆಂಬುದನ್ನು ನೋಡಬೇಕು. ಈ ಪ್ರಕಾರ ಪ್ರತಿಜ್ಞೆಗೈದವರ ಸಭೆಗಳನ್ನು ಆಗಾಗ್ಗೆ ಸೇರಿಸಿ ಪ್ರತಿಜ್ಞೆ ಪೂರ್ಣ ರೀತಿಯಿಂದ ಪಾಲಿಸುವದರ ಸಲುವಾಗಿ ಅಡಚಣೆಗಳ ಬಗ್ಗೆ ವಿಚಾರ ವಿನಿಮಯ ಮಾಡಬೇಕು.

ಅಪೂರ್ಣ ಪ್ರತಿಜ್ಞೆ ತೆಗೆದು ಕೊಂಡವರ ಬಗ್ಗೆ ಒಳ್ಳೆ ಜಾಗರೂಕತೆಯಿಂದ ಮಾಹಿತಿ ಕೊಡಿಸಬೇಕು. ಪ್ರತಿಜ್ಞೆಯಲ್ಲಿ ಯಾವ ಭಾಗಕ್ಕೆ ಯಾವ ವ್ಯಕ್ತಿಗಳ ಅಸಮ್ಮತಿ ಇರುವದೋ ಆ ಭಾಗಕ್ಕೆ ಅಸಮ್ಮತಿ ಇದ್ದ ಬಗ್ಗೆ ಅವರ ಕಾರಣಗಳನ್ನಾದರೂ ಬರಹ ಮೂಲಕ ತೆಗೆದುಕೊಂಡು ನಮ್ಮ ಕಡೆಗೆ ಕಳಿಸಿ ಕೊಡಬೇಕು. ಈ ಪ್ರಕಾರ ವರದಿಯನ್ನು ಆ ವ್ಯಕ್ತಿಗಳು ನೇರವಾಗಿ ನಮ್ಮ ಕಡೆಗೆ ಕಳಿಸಿ ಕೊಡಬಹುದು.

ನಾ. ಸು. ಹರ್ಡೀಕರ
ಪ್ರ. ಕಾರ್ಯದರ್ಶಿ
ಕ. ಪ್ರಾ. ಕಾ. ಸಮಿತಿ


HALFTONE & LINE
BLOCK MAKING
UNDERTAKEN
Sharada Press,
MANGALORE



## ಊಟವಾದೊಡನೆ ಆತನಲ್ಲಿ ಸಂಕಟವಾಗುತಿತ್ತು!

**ಕಠಿಣ ತರದ ಅಜೀರ್ಣಾವಸ್ಥೆಯು ಕ್ರುಶನ್‌ನಿಂದ ನಿವಾರಿಸಲ್ಪಟ್ಟಿತು**
**ಈಗ ಆತನು ಹೊಸ ಮನುಷ್ಯನಾಗಿರುವನು!**

ಈತನನ್ನು ಅಜೀರ್ಣಾವಸ್ಥೆಯಿಂದ ಗುಣಪಡಿಸಿದ ಚಿಕಿತ್ಸೆಯು ಪ್ರತಿಯೊಬ್ಬರೂ ಉಪಯೋಗಿಸುವುದರಲ್ಲಿ ಉತ್ತಮವಿದೆ. ಆತನು ಹೀಗೆಂದು ಬರೆದಿರುವನು.

ಎರಡು ವರ್ಷಗಳ ಹಿಂದೆ ಅಜೀರ್ಣ ಪೀಡಿತನಾಗಿ ಹಸಿವಿಲ್ಲದವನಾಗಿ ನಾನು ಬೆನ್ನಿನಲ್ಲಿ ಒಂದು ಕಠಿಣ ತರದ ನೋವನ್ನು ಅನುಭವಿಸುತಿದ್ದೆ. ಊಟದ ನಂತರ ನನ್ನಲ್ಲಿ ಸಂಕಟಭಾವವು ಉಂಟಾಗುತ್ತಿತ್ತು. ಊಟಮಾಡಲು ನನ್ನಲ್ಲಿ ಆಸೆಯೂ ಹಸಿವೂ ಇರಲೇ ಇಲ್ಲ. ಒಬ್ಬ ಸ್ನೇಹಿತನು ಕ್ರುಶನ್ ಲವಣವನ್ನು ಪರೀಕ್ಷಾರ್ಥವಾಗಿ ಉಪಯೋಗಿಸಲು ನನ್ನನ್ನು ಬೋಧಿಸಿ ನಾನು ಆತನು ಹೇಳಿದ ಹಾಗೆ ವರ್ತಿಸಿದೆನು. ಅದರ ಫಲವಾಗಿ ನಾನೀಗ ಅತ್ಯಂತ ಸುಖವುಳ್ಳವನಾಗಿರುವೆನು. ಸ್ವಲ್ಪ ಸಮಯದಲ್ಲಿ ನನಗೆ ಬಹಳ ಉಪಶಮನವು ದೊರಕಿತು. ಸಂಪೂರ್ಣ ಗುಣಹೊಂದುವ ತನಕ ನಾನು ಕ್ರುಶನ್ ಲವಣಗಳನ್ನು ಸೇವಿಸಿದೆನು. ಈಗ ನಾನೊಬ್ಬ ಹೊಸ ಮನುಷ್ಯನೆಂಬ ಭಾವವು ನನ್ನಲ್ಲಿ ಉಂಟಾಗಿರುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ನಾನು ಯಾವ ಸ್ಥಿತಿಯಲ್ಲಿದ್ದೆನೋ ಅದೇ ಸ್ಥಿತಿಯನ್ನು ಪುನಃ ಹೊಂದಿರುವೆನು.

ಜೀರ್ಣರಸಗಳು ಸರಿಯಾಗಿ ಕಾರ್ಯಮಾಡದಿದ್ದರೆ ನೀವು ಸೇವಿಸಿದ ಆಹಾರದಿಂದ ಸತ್ವವು ನಿಮ್ಮ ದೇಹವನ್ನು ಸೇರದೆ ಆಹಾರವು ನಿಮ್ಮ ಹೊಟ್ಟೆಯೊಳಗೆ ಕೊಳೆತು ಹಾನಿಕರ ವಿಷದಾವಕಗಳನ್ನು ಹೊರಡಿಸುತ್ತದೆ. ಆಗ ನಿಮಗೆ ಬೇಕಾದುದು—ನಿಸರ್ಗದ ಟಾನಿಕ್ ಆದ ಆರು ಲವಣಗಳು.

ಈ 6 ಲವಣಗಳು ಪ್ರತಿದಿನದ ಕ್ರುಶನ್‌ನಲ್ಲಿ ದೊರಕುತ್ತದೆ. ಅವುಗಳಲ್ಲಿ ಪ್ರತಿಯೊಂದಕ್ಕೆ ಒಂದೊಂದು ತರದ ಉಪಯೋಗವಿದೆ. ಕ್ರುಶನ್ ಲವಣಗಳ ಸೇವನೆಯಿಂದ ಎಲ್ಲಕ್ಕೂ ಸರಿಯಾಗಿ ಉಂಟಾಗಿ ಅದರಿಂದ ಒಳ್ಳೇ ಹಸಿವೆಯು ಉಂಟಾಗುತ್ತದೆ. ನಂತರ ಹೊಟ್ಟೆಯ ಜೀರ್ಣರಸಗಳು ಸರಿಯಾಗಿ ಸರಿಯುವಂತೆ ಮಾಡಿ ತಿಂದ ಆಹಾರವು ಸಂಪೂರ್ಣ ಜೀರ್ಣಿಸುವ ಹಾಗೆ ಮಾಡುವ ಪ್ರಭಾವವು ಕ್ರುಶನ್ನಿಗೆ ಇದೆ. ನಂತರ ಈ ಲವಣಗಳಿಂದ ಕರುಳುಗಳಲ್ಲೂ ಒಂದು ತರದ ರಸವನ್ನು ಹೊರಡಿಸಿ ಹೊಟ್ಟೆಯಲ್ಲಿ ಜೀರ್ಣವಾಗದ ಆಹಾರವನ್ನು ಜೀರ್ಣಗೊಳಿಸುವ ಪ್ರಭಾವವು ಕ್ರುಶನ್ನಿಗೆ ಇದೆ. ಕ್ರುಶನ್ ಲವಣಗಳು




ಎಲ್ಲಾ ಬಜಾರುಗಳಲ್ಲೂ ದವಾಖಾನೆಗಳಲ್ಲೂ ದೊರಕುತ್ತದೆ

No 22

# ಜರ್ಮನಿಯೊಡನೆ ಹೋರಾಡಿ ಬ್ರಿಟನು ಸೋಲುವುದುಂಟೆ?

## ಹಿಟ್ಲರನ ದಿವ್ಯಾಸ್ತ್ರದ ಕತೆ!

ಯುದ್ಧವು ಇದೇ ಬೇಸಿಗೆಯಲ್ಲಿ ಮುಗಿಯಬಹುದಾಗಿ ಜರ್ಮನರು ಅಂದಾಜು ಮಾಡಿದ್ದಾರೆ. ಬೇರೆ ಎಲ್ಲಾ ಉಪಾಯಗಳಿಂದ ಬ್ರಿಟಿಷರನ್ನು ಸೋಲಿಸುವುದು ಅಸಾಧ್ಯವೆಂದು ಕಂಡು ಬಂದಾಗ ಹಿಟ್ಲರನು ತನ್ನ ದಿವ್ಯಾಸ್ತ್ರವನ್ನು ಪ್ರಯೋಗಿಸಿ ಬ್ರಿಟಿಷರನ್ನು ಸದೆಬಡಿಯುವವನಾಗಿ ಜರ್ಮನರು ನಂಬಿದ್ದಾರೆ. ಬ್ರಿಟನ್ನು ಜರ್ಮನರನ್ನು ಉಪವಾಸ ಹಾಕಿ ಬಳಲಿಸಿದಂತೆ ಬ್ರಿಟಿಷರನ್ನೂ ಉಪವಾಸ ಹಾಕಲಿಕ್ಕೆ ಜರ್ಮನ ಅಧಿಕಾರಿಗಳು ಸರ್ವಸಿದ್ಧತೆಗಳನ್ನು ಮಾಡಿದ್ದಾರಾಗಿಯೂ ಜರ್ಮನಿಯಲ್ಲಿ ದಟ್ಟವಾದ ಸುದ್ದಿ ಹರಡಿದೆ. ಹಿಟ್ಲರನ ಜಲವಾಯು ಸೇನೆಗಳಿಂದ ಬ್ರಿಟನಿಗೆ ಅಪರಿಮಿತ ಧನಹಾನಿ ಜನಹಾನಿ ಆಗಿರುವುದಾಗಿಯೂ ಹಿಟ್ಲರನ ಪ್ರಚಾರ ಖಾತೆಯು ಜರ್ಮನಿಯಲ್ಲೆಲ್ಲ ಪ್ರಚಾರಮಾಡಿರುವದಾಗಿ ಕೋಪನ ಹೇಗನಿನ ಒಂದು ಪತ್ರಿಕೆ ಬರೆದಿದೆ.

### ಹಿಟ್ಲರನ ದಿವ್ಯಾಸ್ತ್ರ?

ಬ್ರಿಟಿಷರು ಪುನಃ ಹೇಳಿದಂತೆ ಅವರನ್ನು ಕೆಡವಿಹಾಕುವ ಹಿಟ್ಲರನ ಆ ದಿವ್ಯಾಸ್ತ್ರವು ಯಾವುದಿರಬಹುದು ಎಂಬ ಕುರಿತು ವಿಚಿತ್ರ ಕತೆಗಳು ಜರ್ಮನಿಯಿಂದ ಕೇಳಿ ಬರುತ್ತವೆ. ಆ ಕತೆಗಳಿಂದಾಗಿ ಜನರು ಹಿಟ್ಲರನನ್ನು ದೇವಾಂಶ ಸಂಭೂತನೆಂದು ಶ್ರದ್ಧೆಯಿಂದ ನೋಡಿ ಪೂಜಿಸಬೇಕೆಂಬುದೇ ಅಧಿಕಾರಿಗಳ ಆಶಯವಾಗಿರುವುದು. ಜರ್ಮನ ವೈಜ್ಞಾನಿಕರು ಒಂದು ಹೊಸ ಜಾತಿಯ ಗೇಸನ್ನು ಕಂಡು ಹಿಡಿದಿದ್ದಾರೆ. ಆ ಗೇಸನ್ನು ವಿಮಾನದ ಮೂಲಕ ಬ್ರಿಟನಿನಲ್ಲಿ ಸರ್ವತ್ರ ಹರಡಿಸುವುದು ಸುಲಭ. ಆ ಗೇಸನ್ನು ಸೇದಿದ ಪ್ರತಿಯೊಂದು ಜೀವಿಯೂ ೧೫ ದಿನಗಳ ತನಕ ಕುಂಭಕರ್ಣ ನಿದ್ರೆಯಲ್ಲಿ ಇರುವುದು. ಹೀಗೆ ಇಡೀ ಬ್ರಿಟನು ಘೋರ ನಿದ್ರೆಯಲ್ಲಿರುವಾಗ ಜರ್ಮನಿಯು ಅದನ್ನು ಮುತ್ತಿ ತನ್ನ ಕೆಲಸವನ್ನು ಸಾಧಿಸಿಕೊಳ್ಳುವುದು.

### ಸರ್ವತ್ರ ಸೋಲು

ಇಂಥ ದಿವ್ಯಾಸ್ತ್ರವನ್ನು ಪಡೆದೂ ಹಿಟ್ಲರನು ಈ ಯುದ್ಧದಲ್ಲಿ ಪ್ರಾಣಸಂಕಟವನ್ನು ಯಾಕೆ ಅನುಭವಿಸುತ್ತಿದ್ದಾನೆಂಬುದು ಸೋಜಿಗದ ಸಂಗತಿಯಾಗಿದೆ. ರುಮೇನಿಯವು ಜರ್ಮನಿಗೆಂದು ಕಳುಹಿಸಿಕೊಟ್ಟ ಎಣ್ಣೆಯನ್ನು ರಶ್ಯದ ಅಧಿಕಾರಿಗಳು ಅಪಹರಿಸಿಕೊಂಡು ಉಪಯೋಗಿಸಿದರೂ ಹಿಟ್ಲರನು ಸುಮ್ಮಗಿದ್ದಾನೆ. ಹೀಗೆ ಜರ್ಮನಿಗೆ ಹೋಗಬೇಕಾದ ಎಣ್ಣೆಯನ್ನು ರಶ್ಯನರು ಎರಡೆರಡು ಬಾರಿ ನಡುದಾರಿಯಲ್ಲಿಯೇ ಅಪಹರಿಸಿದ್ದಾರೆ. ಹಿಟ್ಲರನು ಆ ಎಲ್ಲಾ ಅಪಮಾನವನ್ನು ಮರುಮಾತಿಲ್ಲದೆ ಸಹಿಸಿದ್ದಾನೆ. ಬ್ರಿಟನ ಸಮುದ್ರದಂಡೆಯ ಮೇಲೆಲ್ಲಾ ತನ್ನ ವಿಮಾನಗಳನ್ನು ಕಳುಹಿಸಿ ಹಿಟ್ಲರ ಬೊಂಬು ಹಾಕಿದ. ಆದರೆ ಅಲ್ಲಿ ಅವನಿಗೆ ಸಫಲತೆ ಏನೂ ದೊರೆಯಲಿಲ್ಲ. ಸಮುದ್ರದ ಮೇಲೂ ಆಕಾಶದಲ್ಲಿಯೂ ಹಿಟ್ಲರನ ಪರಾಭವವೇ ಆಗಿದೆ. ಆದರೂ ಅವನು ತನ್ನ ಆ ದಿವ್ಯಾಸ್ತ್ರವನ್ನು ಸ್ವಲ್ಪವಾದರೂ ಹೊರಗೆ ತೆಗೆದಿಲ್ಲ. ಹಿಟ್ಲರನಿಗೆ ಯುದ್ಧ ಕಾರ್ಯಕ್ಕೆ ಬೇಕಾದಷ್ಟು ಎಣ್ಣೆ ದೊರೆಯುವುದು ದುರ್ಲಭವಾಗಿದೆ.

## ಎಣ್ಣೆಗಾಗಿ ಭಗೀರಥ ಯತ್ನ!

ಎಣ್ಣೆಗಾಗಿ ಜರ್ಮನರು ಭಗೀರಥ ಪ್ರಯತ್ನಗಳನ್ನು ಮಾಡುತ್ತಲಿರುವರು. ಆದರೆ ಪ್ರಪಂಚದ ಸಾಧನಸಂಪತ್ತಿಯು ಮಿತ್ರರಾಷ್ಟ್ರಗಳ ಕಡೆಗಿರುವುದರಿಂದ ಅವರಿಗೆ ಹೆಚ್ಚು ಸಫಲತೆಯು ದೊರೆಯದಾಗಿದೆ. ಅದ್ದರಿಂದ ಜನರು ದಿವ್ಯಾಸ್ತ್ರವೆಂಬುದು ಮಿತ್ರರಾಷ್ಟ್ರದವರನ್ನು ಅಂಜಿಸಲಿಕ್ಕೆ ಮಾಡಿದ ಉಪಾಯವಲ್ಲದೆ ಬೇರೇನೂ ಅಲ್ಲವೆಂದು ತಿಳಿದಿರುವವರಿದ್ದಾರೆ.

### ಭವಿಷ್ಯ ವಚನ

ಲಂಡನಿನಲ್ಲಿ ಟೋಮ್ ಕೆಂಬೆಲ್ ಎಂಬೊಬ್ಬ ಭವಿಷ್ಯವಾದಿ ಇದ್ದಾನೆ. ಅವನಿಗೊಂದು ಅಂತರ್ದೃಷ್ಟಿ ಇದೆ. ಅದರ ಮೂಲಕ ಪ್ರಪಂಚದ ಭವಿಷ್ಯವನ್ನು ಹೇಳುವುದಕ್ಕೆ ಅವನು ಬಹಳ ಪ್ರಸಿದ್ಧಿಯನ್ನು ಪಡೆದಿದ್ದಾನೆ. ಇಟಲಿಯು ರಶ್ಯದ ಮೇಲೆ ಯುದ್ಧಕ್ಕೆ ಹೋಗುವುದೆಂದೂ ರಶ್ಯವು ಬಾಲ್ಟಿಕಿನಲ್ಲಿ ತನ್ನ ಬಹಳ ತಂತ್ರಗಳನ್ನು ನಡೆಸುವುದೆಂದೂ, ರಶ್ಯವು ಸ್ವೀಡನನ್ನು ಕೂಡ ಮುತ್ತುವುದೆಂದೂ, ಹಿಟ್ಲರನು ರಶ್ಯ ಜರ್ಮನ ಸ್ನೇಹ ಸಂಬಂಧದ ಕಾರಣ ಪುರುಷನಾದ ರಿಬ್ಬನ ಟ್ರಾಪನನ್ನು ಹಿಟ್ಲರನು ಗಲ್ಲಿಗೇರಿಸುವನೆಂದೂ ಹೇಳಿದ್ದಾನೆ. ಮಿತ್ರಮಂಡಲಿಯು ಮೂರನೆಯ ಬಾರಿ ಸೀಜಫ್ರಿಡ್ ಕೋಟೆಗಳ ಸಾಲನ್ನು ಮುರಿಯಲು ಪ್ರಯತ್ನಿಸಿ ಜಯಶೀಲರಾಗುವರು. ಪೆರೆಚ್ಯೂಟುಗಳ ಮೂಲಕ ಜರ್ಮನ ಸೈನ್ಯವನ್ನು ಇಂಗ್ಲಾಂಡಿನಲ್ಲಿ ಇಳಿಸಿ ಇಂಗ್ಲಾಂಡನ್ನು ಗೆಲ್ಲುವ ಗೋರಿಂಗನ ಯೋಜನೆಯು ಮೊದಲನೆ ಪ್ರಯತ್ನದಲ್ಲಿ ವಿಫಲವಾಗುವುದು. ಅಮೇರಿಕದಲ್ಲಿ ನಾಝಿ ಏಜಂಟರ ಉಪಟಳವು ಸಹನಾತೀತವಾಗುವುದು. ಅವರನ್ನು ದೇಶದಿಂದ ಹೊರಗಟ್ಟಲಿಕ್ಕೆ ಅಮೇರಿಕಾ ಸರಕಾರವು ದೊಡ್ಡ ಪ್ರಯತ್ನ ಮಾಡುವುದು. ಆ ಕಾರಣದಿಂದ ಅದು ಮಿತ್ರಮಂಡಳಿಯೊಂದಿಗೆ ಸೇರಿ ಹಿಟ್ಲರನ ವಿರುದ್ಧ ಶಸ್ತ್ರಾಸ್ತ್ರಗಳನ್ನು ಕೈಗೆ ತೆಗೆದುಕೊಳ್ಳುವ ಭವಿಷ್ಯ ದೃಶ್ಯವನ್ನೂ ಕೆಂಬೆಲ್ಲನು ನೋಡಿದ್ದಾನೆ.


ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ!

ಛಿದ್ರವಾದ ನನ್ನನ್ನು ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ತೈಲ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ Cuticura Soap ತೊಳೆಯಿರಿ.

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಕೋಮಲ ಸಾಬೂನಾಗಿರುತ್ತದೆ. ... ಸೌಂದರ್ಯವನ್ನು ಕೆಡಿಸದು. ... ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ದಾರಿ. ಕುಟಿಕೂರಾ ಮುಲಾಮು Cuticura Ointment ... ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು Cuticura Talcum Powder ...

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ದೊರಕುವುದು.

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನು ಈ ದೊಡ್ಡ ... ಸ್ನಾನಕ್ಕೆ, ... ದೊರಕುತ್ತದೆ.

ಮಕ್ಕಳಿಗೆ

ಪೋಂಗರೆ

ಬಾಲಾಮೃತವು

ಆದರ್ಶಕರವಾದ

ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ



The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು — ಬ್ರೇಂಚ್: ಪೆಂಟ್‌ಲೆಂಡ್ ಪೇಟೆ

ರೆಜಿಸ್ಟರ್ಡ್ ಮೂಲಧನ ರೂ. 1,00,000. — ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಿಗಳ ಮೇಲಿನ ದರ

ಚಾಲ್ತಿ ಠೇವಣಿ 2% ಸೇವಿಂಗ್ಸ್ ಬೇಂಕ್ ಠೇವಣಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಿ 3 ತಿಂಗಳಿಗೆ 3½% — ನಿರಖು ಠೇವಣಿ 12 ತಿಂಗಳಿಗೆ 4½%

„ 6 ತಿಂಗಳಿಗೆ 4% — „ 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅತ್ತೂರು ವೈಕುಂಠಶ್ರೇಷ್ಠಿ, ಮೆನೆಜಿಂಗ್ ಡೈರೆಕ್ಟರ್.



ಜೀವಜ್ಯೋತಿಗಳು:

# ರಾಷ್ಟ್ರಪತಿ ರಾಜೇಂದ್ರ ಪ್ರಸಾದರು

ಲೇಖಕ: ಕೆ. ಕೆ ರೈ, ವಿದ್ವಾನ್.

ಸುಖ, ಕೀರ್ತಿ, ಸಂಪತ್ತುಗಳನ್ನು ಪಡೆಯಲು ಬೇಕುಬೇಕಾದ ಸಂದರ್ಭ ಅನುಕೂಲತೆಗಳಿದ್ದರೂ, ಅವುಗಳೆಲ್ಲವನ್ನೂ ಧಿಕ್ಕರಿಸಿದು ಜನಸೇವೆಯೇ ಜೀವನದ ಗುರಿಯೆಂದು ರಾಷ್ಟ್ರದ ಕಲ್ಯಾಣಕ್ಕಾಗಿ, ಆ ಮೂಲಕ ಜಗತ್ತಿನ ಶಾಂತಿಗಾಗಿ, ಆ ರೀತಿಯಿಂದಲೇ ಜಗದೀಶ್ವರನ ಕೃಪಾಪ್ರಾಪ್ತಿಗಾಗಿ ದುಡಿಯುವ ರಾಜಕೀಯ ತಪಸ್ವಿಗಳು ನಮ್ಮ ನಾಡಿನ ಇತಿಹಾಸದಲ್ಲಿ ಹಲವರು ಕಾಣ ಸಿಗುವರು. ಅವರ ಘನತೆಯು ಕಾರ್ಯಗಳ ಮಹತ್ವವನ್ನು, ಅವರ ಉದಾತ್ತ ತತ್ವಗಳನ್ನು, ಅವರ ಕಲ್ಯಾಣಕರವಾದ ಆಶೆ ಆಕಾಂಕ್ಷೆಗಳನ್ನು ಅವರ ಸಮಕಾಲೀನ ಜನರು ಅರಿಯದಿರಬಹುದು ಆದರೆ ಅಂತಹವರಿಂದಲೇ ಅನೀತಿಯಿಂದ ಕಂಗೆಟ್ಟು ಅನ್ಯಾಯದ ದಾರಿಯನ್ನು ತುಳಿಯುವ ಜನತೆಯು ಆಗಾಗ ನೂತನ ಚೈತನ್ಯವನ್ನು ಹೊಂದಿ, ಜೀವ ಭಾವನೆಗಳನ್ನು, ಸಂಸ್ಕೃತಿ ಗೊಳಿಸುತ್ತದೆ ಬಹುಕಾಲದ, ನಿರಂತರದ ಆ ರೀತಿಯ ಜೀವ ಸಂಸ್ಕಾರಗಳ ಫಲವಾಗಿಯೇ ಜಗತ್ತಿನಲ್ಲಿ ಶಾಂತಿಯು ಸ್ಥಾಪಿತವಾಗುತ್ತದೆ ಇಂತಹ ಪರಮೋಚ್ಚ ಧ್ಯೇಯ ಸಾಧನೆಗಾಗಿಯೇ ಜೀವವನ್ನು ಧಾರೆಯೆರೆದು ನಿಂತ ವಿಭೂತಿಪುರುಷರಲ್ಲಿ ಇಂದಿನ ರಾಷ್ಟ್ರಪತಿಗಳಾದ ರಾಜೇಂದ್ರ ಪ್ರಸಾದರೂ ಒಬ್ಬರು!

### ಬಾಲ್ಯ

ಉತ್ತರಬಿಹಾರಿನ ಶರಣ ಜಿಲ್ಲೆಯಲ್ಲಿ ಅನೇಕ ಪ್ರಖ್ಯಾತ ಕಾಯಸ್ಥ ಬ್ರಾಹ್ಮಣ ಪಂಗಡದ ಜಮೀನ್ದಾರರಿರುವರು ಅಂತಹ ಒಂದು ಕುಲೀನ ಕುಟುಂಬದಲ್ಲಿ, ೧೮೮೪ನೇ ದಶಂಬರ ೩ರಂದು ಶ್ರೀ। ಪ್ರಸಾದರು, ಮುನ್ಶಿ ಮಹಾದೇವ ಸಹಾಯರೆಂಬ ಪ್ರಸಿದ್ಧ ಜಮೀನ್ದಾರರ ಪುತ್ರರಾಗಿ ಜನಿಸಿದರು. ಅವರು ನಾಲ್ವರು ಸೋದರರೂ ಒಂದು ಸೋದರಿಯೂ ಆಗಿ ಮಹಾದೇವ ಸಹಾಯ ಇವರಿಗೆ ಐವರು ಮಕ್ಕಳಿದ್ದರು. ತಂದೆಯ ಮರಣದ ನಂತರ ಅವರ ಅಣ್ಣಂದಿರಾದ ಮಹೇಂದ್ರ ಪ್ರಸಾದರು, ಪಿತೃ ಸಮಾನ ಪ್ರೇಮದಿಂದ ಪಾಲಿಸಿ, ರಾಜೇಂದ್ರರ ವಿದ್ಯಾಭ್ಯಾಸ ಮೊದಲಾದವುಗಳ ಕಡೆಗೆ ಹೆಚ್ಚಿನ ಗಮನಕೊಡುತ್ತಿದ್ದರು. ಅವರ ಅಣ್ಣಂದಿರು ಅಸಹಕಾರ ಚಳವಳಿ ಮೊದಲಾದ ಸಾರ್ವಜನಿಕ ಕಾರ್ಯಗಳಲ್ಲಿಯೂ ಬಹಳ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದರು ಬಾಬೂರಾಜೇಂದ್ರರನ್ನು ಒಳ್ಳೆಯ ರೀತಿಯಲ್ಲಿ ಮುಂದೆ ತಂದು, ಇಂದಿನ ಈ ಯಶಸ್ಸಿಗೆ, ಕಾರ್ಯ ಶಕ್ತಿಗೆ ಸಿದ್ಧರಾಗಿ ಮಾಡಿದ ಬಹು ಭಾಗದ ಶ್ರೇಯಸ್ಸು ಅವರ ಅಣ್ಣಂದಿರಿಗೇ ಸಲ್ಲತಕ್ಕಾಗಿದೆ

ಅಣ್ಣ ತಮ್ಮಂದಿರು ಬಹು ಮಮತೆಯಿಂದಿದ್ದರು ರಾಜೇಂದ್ರ ಪ್ರಸಾದರು, ವಿದ್ಯಾಭ್ಯಾಸದಲ್ಲಿ ಬಹು ಚುರುಕು ಬುದ್ಧಿಯವರಾಗಿ, ಬಿ ಎ ಪರೀಕ್ಷೆಗಳ ವರೆಗೆ ಮೊದಲನೆಯ ವರಾಗಿಯೇ ತೇರ್ಗಡೆ ಹೊಂದಿದ್ದರು. ಪ್ರವೇಶ ಪರೀಕ್ಷೆಯಲ್ಲಿ ಬಿಹಾರದಲ್ಲಿ ಅಂದು ಅವರೇ ಮೊದಲನೆಯವರಾಗಿ ಬಂದವರಾದುದರಿಂದ, ಅವರನ್ನು ಪ್ರಶಂಸಿಸಿ ಹಿಂದೂಸ್ಥಾನ ರಿವ್ಯೂ ಎಂಬ ಪತ್ರಿಕೆಯು ಅಗ್ರಲೇಖನವೊಂದನ್ನು ಬರೆದು ಮುಂದೆ ಸಿಗಲಿರುವ ಕೀರ್ತಿಯನ್ನು, ಒಳ್ಳೆಯ ಗುಣವನ್ನು ಮೊಳಕೆಯಲ್ಲಿಯೇ ಎತ್ತಿ ಸಾರಿತ್ತು ಬಿ ಎ ಮುಗಿಸಿದ ಮೇಲೆ ಅವರು ಇಂಗ್ಲಿಷ್ ಕೈಗೆದುಕೊಂಡು ಎಂ ಎ, ಕಲಿತು, ಬಿ ಎಲ್ ಪರೀಕ್ಷೆಯನ್ನು ತೀರಿಸಿದರು

### ಸಾರ್ವಜನಿಕ ಚಟುವಟಿಕೆಗಳು

ವಿದ್ಯಾಭ್ಯಾಸವು ಮುಗಿದ ಮೇಲೆ ಅವರು ಕಲ್ಕತ್ತೆಯ ಕಾಲೇಜ್ ಒಂದರ ಪ್ರೊಫೆಸರರಾಗಿದ್ದರು ಆಮೇಲೆ ಹಾಯ್ ಕೋರ್ಟ್ ವಕೀಲರಾಗಿ ಕೆಲಸ ಮಾಡಿದರು. ಅವರು ಕಾಲೇಜಿನಲ್ಲಿ ಕಲಿಯುತ್ತಿರುವಾಗಲೇ ಚರ್ಚಾಕೂಟಗಳಲ್ಲಿ ಪ್ರಾಮುಖ್ಯ ಭಾಗವಹಿಸುತ್ತಿದ್ದರು. ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಚಟುವಟಿಕೆಯಿಂದ ಕೆಲಸಮಾಡುತ್ತಿದ್ದರು ಬಂಗಾಳದ ವಿಭಜನೆ, ಸ್ವದೇಶಿಪ್ರಚಾರ ಈ ಚಟುವಟಿಕೆಗಳಲ್ಲಿ ಅಗ್ರಭಾಗ ವಹಿಸಿ ಮುಂಬಂದು ದುಡಿದಿದ್ದರು. ಆದುದರಿಂದಲೇ ಅವರು ಎಂ. ಎ, ಯಲ್ಲಿ ಮೊದಲನೆಯ ತರಗತಿಯನ್ನು ಪಡೆಯಲಿಲ್ಲವೆಂದು ತಿಳಿದುಬರುತ್ತದೆ

ವಂಗಭಂಗದಿಂದ, ಬಂಗಾಳದ ತರುಣರಲ್ಲಿ ಉಂಟಾದ ಚಟುವಟಿಕೆ, ಸಂಘಟನೆಗಳನ್ನು ಕಂಡ ರಾಜೇಂದ್ರರು ಬಿಹಾರಿನ ತರುಣರನ್ನೂ ಸಂಘಟಿತರನ್ನಾಗಿ ಮಾಡಲು ಯತ್ನಮಾಡಿದರು. ಅವರ ಧೀರತರ ಸಾಹಸದಿಂದ ೧೯೦೬ರಲ್ಲಿ ಪಾಟ್ನಾ ಕಾಲೇಜಿನಲ್ಲಿ ಬಿಹಾರ ವಿದ್ಯಾರ್ಥಿಗಳ ಮೊದಲನೇ ಪರಿಷತ್ತು ಜರಗಿತ

ಅವರಿಗೆ ಪರದೇಶಕ್ಕೆ ಹೋಗಿ ವಿದ್ಯಾಭ್ಯಾಸಮಾಡಬೇಕೆಂದಿತ್ತು ಆದರೆ ಅದು ಕೈಗೂಡಲಿಲ್ಲ. ಒಂದು ನ್ಯಾಯವಿಚಾರಣೆಯ ಪ್ರಕರಣದಲ್ಲಿ ಅವರು ಇಂಗ್ಲೆಂಡಿಗೆ ೧೯೨೮ರಲ್ಲಿ ಹೋಗಬೇಕಾಯಿತು ಆಗ ಯೂರೋಪಿನ ಹಲವು ಕಡೆಗಳನ್ನು ಸಂದರ್ಶಿಸಿದ್ದರು ಆಸ್ಟ್ರಿಯಾದಲ್ಲಿ ಅವರು ಆ ಸಮಯ ಸ್ವಾತಂತ್ರ್ಯದ ವಿಷಯ ಭಾಷಣ ಕೊಡುತ್ತಿದ್ದಾಗ ಫ್ಯಾಸಿಸ್ಟರು ಪ್ರಾಣಾಂತಿಕವಾದ ರೀತಿಯಲ್ಲಿ ಅವರಿಗೆ ಹೊಡೆದು ಗಾಯಮಾಡಿದರ ಆದರೆ ಭಾರತೀಯರ ಭಾಗ್ಯದಿಂದ ಅವರು ಬೇಗನೆ ಅದರಿಂದ ಗುಣಹೊಂದಿ ಸ್ವದೇಶಕ್ಕೆ ಮರಳಿದರು

ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿಯೆಂಬ ಸಂಘವು ಸ್ಥಾಪಿತವಾಗಿ ಆಗಲೇ ಅನೇಕ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿತ್ತು. ಗೋಖಲೆಯವರು ಅದರ ಮುಂದಾಳುಗಳಾಗಿದ್ದರು. ರಾಜೇಂದ್ರರಿಗೆ ಗೋಖಲೆಯವರಿಂದ ಅಲ್ಲಿ ಕೆಲಸಮಾಡಲು ಕರೆಬಂತು. ತನ್ನ ಉದ್ಯೋಗಗಳಿಗೆ ತಿಲಾಂಜಲಿಯಿತ್ತು, ಆ ಸಂಘದ ಮೂಲಕ ಜನತೆಯ ಸೇವೆಗಾಗಿ ರಾಜೇಂದ್ರರು ಸೊಂಟಕಟ್ಟಿ ನಿಂತರು'

### ಚಂಪಾರಣ್ಯದ ಸತ್ಯಾಗ್ರಹ

ಬಿಹಾರಿನ ಚಂಪಾರಣ್ಯವೆಂಬಲ್ಲಿ ರೈತರ ಸತ್ಯಾಗ್ರಹವು ಆರಂಭವಾಯಿತು ಅಲ್ಲಿನ ರೈತರ ಸಂಕಷ್ಟ ನಿವಾರಣೆಗೆ ಮಹಾತ್ಮಗಾಂಧಿಯವರೂ ಚಂಪಾರಣ್ಯಕ್ಕೆ ಬಂದಿದ್ದರು ಆಗ ಈ ಇಬ್ಬರೂ ಜತೆ ಸೇರಿದರು! ಅನ್ಯೋನ್ಯ ಗುಣಗಳು ಇಬ್ಬರನ್ನೂ ಅನ್ಯೋನ್ಯ ಆಕರ್ಷಿಸಿದವು ಆ ದಿನದ ಸತ್ಯಾಗ್ರಹದಲ್ಲಿ ಜತೆಗೂಡಿ ಜೀವದ ಗೆಳೆಯರಾಗಿ ದುಡಿದ ಅವರು, ಇಂದೂ ಅದೇ ಸೌಹಾರ್ದದಿಂದ ಅದೇ ಸಂಬಂಧದಿಂದ ಅದೇ ಉತ್ಸಾಹ ಧ್ಯೇಯಗಳಿಂದ ರಾಷ್ಟ್ರದ ಸಲುವಾಗಿ ಹೋರಾಡುತ್ತಿದ್ದಾರೆ.

೧೯೧೯ರಲ್ಲಿ ರೌಲೆಟ್ ಕಾಯಿದೆ ಜಾಲಿಯಾನವಾಲಾಬಾಗಿನ ದುರಂತ ಇವುಗಳಿಂದ ಭಾರತದ ರಾಜಕೀಯ ಪರಿಸ್ಥಿತಿಯು ಪ್ರಚಂಡವೆನಿಸಿ ಪ್ರಕ್ಷುಬ್ಧವಾಯಿತು! ರಾಜೇಂದ್ರರು, ಆ ಸಮಯದಲ್ಲಿ ಬಿಡುವಿಲ್ಲದೆ ವೀರ ಸತ್ಯಾಗ್ರಹಿಯಾಗಿ ಹೋರಾಡಿದರು ೧೯೩೦ರಲ್ಲಿ ಭಾರತೀಯ ಸತ್ಯಾಗ್ರಹಾಂದೋಲನವು ಮಹಾತ್ಮಾಜಿಯವರ ಮುಂದಾಳುತನದಿಂದ ಆರಂಭವಾಯಿತು ರಾಜೇಂದ್ರರೂ ಮಹಾತ್ಮರನ್ನು ಅನುಸರಿಸಿ ಅಂದು ಪ್ರಚಂಡರಾಗಿ ಹೋರಾಡಿದರು

ಅವರು ಕೆಲಕಾಲ ಅಖಿಲಭಾರತ ಕಾಂಗ್ರೆಸಿನಲ್ಲಿ ಜನರಲ್ ಸೆಕ್ರೆಟರಿಗಳೂ ಆಗಿದ್ದರು. ಅಧ್ಯಕ್ಷಪೀಠವನ್ನಲಂಕರಿಸುವ ಕೀರ್ತಿಯೂ ಅವರಿಗೆ ಹಲವುಸಲ ಸಂದಿತು

### ಬಿಹಾರದ ಭೂಕಂಪ!

ಬಿಹಾರದ ಭೂಕಂಪವು ಒಂದು ಮರೆಯಲಾರದ ದುರಂತವಾಗಿದೆ! ಅನ್ನ ಬಟ್ಟೆಗಳಿಲ್ಲದೆ ಬಿಹಾರದ ಜನರು ಬಳಲುವಂತಾಗಲು, ಅಂದು ರಾಜೇಂದ್ರರು ಸಲ್ಲಿಸಿದ ಸೇವೆಯು ಅಭೂತಪೂರ್ವವಾದುದು ಅಂದು ೨೮ ಲಕ್ಷಕ್ಕಿಂತ ಅಧಿಕವಾದ ಧನವನ್ನು ಒಬ್ಬರೇ ಸಂಗ್ರಹಿಸಲು ಸಮರ್ಥರಾಗಿದ್ದರೆ ಅವರು ಎಷ್ಟು ಜನಪ್ರಿಯರಾಗಿದ್ದರು, ಅವರ ವ್ಯಕ್ತಿತ್ವವೇನೆಂದು ಯಾರಾದರೂ ಸುಲಭದಿಂದ ತಿಳಿದುಕೊಳ್ಳಬಹುದಾಗಿದೆ

ರಾಜೇಂದ್ರರು ನಿಷ್ಕಾಮಂತ ಕಾರ್ಯಕರ್ತರು ಕೀರ್ತಿಕಾಮಿಗಳಲ್ಲ, ಪದವಿ ಅಧಿಕಾರಗಳ ಆಕಾಂಕ್ಷೆಯವರಲ್ಲ ಜನತೆಯ ಸೇವೆಯೇ ಜೀವನದ ಗುರಿಯಾಗಿರುವವರು ನಿಶ್ಚಲ ರಾಷ್ಟ್ರಭಕ್ತರು ಸತ್ಯ ಅಹಿಂಸಾಪರರಾದ ದೃಢ ಗಾಂಧೀವಾದಿಗಳು. ನಿಜವಾಗಿಯೂ ಭಾರತದ ರಾಜಕೀಯ ಸನ್ಯಾಸಿಗಳಲ್ಲಿ ಅವರೊಬ್ಬ ಮಹಾಯೋಗಿಗಳು!

THE
Canara Banking Corporation Ltd.,
(INCORPORATED IN BRITISH INDIA)
Estd: 1906

THREE YEAR'S CASH CERTIFICATES

bearing interest at 4% p. a.
in denominations of

RS. 50/-, 100/-, 500/-, 1,000/- & 5,000/-

are now issued at all our Branches

*For particulars call at or write to*

Any of our nearest Branches

ಇಂದು ರಾಷ್ಟ್ರದ ಸಮಸ್ಯೆಯಾಗಿ ಗಾಂಧಿಜಿಯವರ ಅಭಿಮತದಂತೆ, ಕಾಂಗ್ರೆಸು ರಾಷ್ಟ್ರಘಟನಾ ಸಮಿತಿಯ ವಿಷಯವನ್ನು ಜನತೆಯು ಮುಂದಿಟ್ಟಿರುವುದಷ್ಟೆ? ಈ ರಾಷ್ಟ್ರಘಟನಾ ಸಮಿತಿಯ ವಿಚಾರವು ಇಂದು ಮಾತ್ರ ಗಾಂಧಿಜಿಯವರು ವಿಚಾರಿಸಿದ ನವೀನ ವಿಷಯವಲ್ಲ; ಇದನ್ನು 1920-22ರಲ್ಲಿಯೇ ಅವರು ಅಭಿಪ್ರಾಯಪಟ್ಟಿದ್ದರು, ಆವರೆ ಅಂದಿನ ಅದೇ ಹೇಳಿಕೆಗೆ, ಇಂದು, ಈ ಸಮಯದ ವಾತಾವರಣವನ್ನು ಹೊಂದಿಕೊಂಡು, ಹೊಸ ಹೆಸರನ್ನು ಹೊಸ ರೂಪವನ್ನು ಕೊಟ್ಟಿದ್ದಾರೆ ಮಾತ್ರ ಎಂಬುದಾಗಿ, ಆ ವಿಷಯದ ರಹಸ್ಯಭೇದವನ್ನು ಗಾಂಧಿಜಿಯವರ ಆಪ್ತ ಸಚಿವರಾದ ಶ್ರೀ ಮಹಾದೇವ ದೇಸಾಯಿಗಳು ಹರಿಜನದಲ್ಲಿ ಒಂದು ಲೇಖನಮೂಲಕ ಬಹಿರಂಗ ಪಡಿಸಿರುವರು.

ಅದರ ವಿವರವು ಹೀಗಿದೆ.–

'ಗಾಂಧಿಜಿಯವರು, ಇಂದು ರಾಷ್ಟ್ರಘಟನಾ ಸಮಿತಿಯ ವಿಚಾರದ ಕಡೆಗೆ ಕಾಣುವ ತಾಂತರಗೊಂಡಿರವುದಾಗಿ ಹೇಳಿರುವರು ಆದರೆ, ಈ ಮತಾಂತರವು, ಹಿಂದೆ ಅವರು ಕಲ್ಪಿಸಿದ ಸ್ವರಾಜ್ಯದಿಂದ ೧೯೨೦ರಲ್ಲಿ ಕಾಂಗ್ರೆಸಿನಲ್ಲಿ ಅಂಗೀಕಾರವಾದ ಸ್ವಾತಂತ್ರ್ಯ ಅಥವಾ ಪೂರ್ಣ ಸ್ವರಾಜ್ಯ ಧ್ಯೇಯಕ್ಕೆಹೊಂದದ ಮತಾಂತರದಂತೆಯೇ ಆಗಿದೆ ಮೊದಲಿನದನ್ನೂ ಇಂದಿನದನ್ನೂ ವಿಚಾರಮಾಡಿದರೆ ಅವುಗಳಲ್ಲಿ ಅಡಕವಾದ ಮೂಲಭೂತ ವಿಚಾರಗಳಿಗೆ ಯಾವ ಬೇಧವೂ ಇರುವುದಿಲ್ಲ, ಹಿಂದಿನ ಅವರ ಅಭಿಪ್ರಾಯವೂ ಇಂದಿನ ಅಭಿಪ್ರಾಯವೂ ಒಂದೇ ತೆರನಾಗಿವೆ, ಆದರೆ ಇಂದು ಇಂದಿನ ವಾತಾವರಣಕ್ಕೆ ಅನ್ವಯಿಸಿ ಅದಕ್ಕೆ ಹೊಸ ರೂಪು ಮಾತ್ರ ಕೊಡಲಾಗಿದೆ

### ಧ್ಯೇಯದಲ್ಲಿ ವ್ಯತ್ಯಾಸವಿಲ್ಲ

'ಇಂದ ಅವರು, ಜನರ ಸಂಪೂರ್ಣ ಅಭಿಮತದಂತಿರುವ ರಾಷ್ಟ್ರಹಿತವಾದ ಘಟನೆಯಾಗಬೇಕಾಗಿದೆಯೆಂದು ಹೇಳುತ್ತಿದ್ದ, ೧೯೨೧-೨೨ರಲ್ಲಿಯೂ ಅವರು ಅದೇ ಅಭಿಪ್ರಾಯವನ್ನು ಹೇಳಿದ್ದರು ಚುನಾಯಿತ ಪ್ರತಿನಿಧಿಗಳ ಅಭಿಮತಕ್ಕೆ ಅನುಗುಣವಾಗಿ ತೀವ್ರವಾಗಿ ಸಂಪೂರ್ಣ ಸ್ವರಾಜ್ಯವನ್ನು ದೇಶಕ್ಕೆ ಬ್ರಿಟಿಷ್ ಸರಕಾರವು ಕೊಡುವ ಭರವಸೆಯಿಂದ ನಾನು ಬ್ರಿಟಿಷ್ ಸರಕಾರದೊಡನೆ ಗೌರವಯುತವಾದ ಒಪ್ಪಂದವು ಆಗುವುದನ್ನು ಮುನ್ನೋಡುತ್ತಿರುವೆನು' ಎಂದು ಅವರು ೧೯೨೦ರಲ್ಲಿಯೇ ಹೇಳಿರುವರು. ೧೯೨೨ರಲ್ಲಿ ಅವರು ಹೇಳಿದ ಮಾತುಗಳು ಹೀಗಿವೆ·

'ಬ್ರಿಟಿಷರ ಸಂಬಂಧವಿಟ್ಟುಕೊಂಡು ಸ್ವರಾಜ್ಯವೆಂದರೆ ಏನೆಂದು ವಿಚಾರಿಸುವ, ಭಾರತದೇಶವು ಇಚ್ಛೆ ಪಡುವುದಿದ್ದರೆ, ಅದರ ಸ್ವಾತಂತ್ರ್ಯವನ್ನು ಅದೇ ಪ್ರಕಟಿಸುವುದು ಸ್ವರಾಜ್ಯವಾಗಿದೆ ಎಂದರೆ ಸ್ವರಾಜ್ಯವೆಂಬುದು ಭಾರತಕ್ಕೆ ಬ್ರಿಟಿಷ್ ಪಾರ್ಲಿಮೆಂಟಿನ ಉದಾರ ಕಾಣಿಕೆಯಾಗಿರಬಾರದು. ಅದು ಭಾರತದ ಸ್ವಂತ ಪ್ರಕಟಣೆಯಾಗಿರಬೇಕು ಅದು ಪಾರ್ಲಿಮೆಂಟಿನ ಕಾಯಿದೆಯ ಮುಖಾಂತರ ಮಾಡಲ್ಪಡುವುದೆಂಬ ವಿಚಾರವು ನಿಜ ಆದರೆ, ಅದು ಭಾರತದ ಜನತೆಯ ಸಂಪೂರ್ಣ ಸಮ್ಮತವಾದ ವಿಷಯವೇ ಆಗಬೇಕು.

ಈ ರೀತಿಯ ಸ್ವಾತಂತ್ರ್ಯವನ್ನು ಪ್ರಕಟಿಸುವಾಗ, ಬ್ರಿಟಿಷ್ ಸರಕಾರವೂ ಅದಕ್ಕೆ ಸಂಬಂಧಿಸಿದ ಒಂದು ಪಕ್ಷವಾಗಿ ಒಪ್ಪಂದದಿಂದ ಇರಬಹುದು ಅಂತಹ ಸ್ವರಾಜ್ಯವು ಈ ವರ್ಷವಾಗಲಿ, ಈ ಪ್ರತಿಕಾಲದಲ್ಲಾಗಲಿ ಆಗದಿರಬಹುದು ಆದರೆ ಅದಕ್ಕಿಂತ ಕಡಿಮೆಯ ಸ್ವರಾಜ್ಯವನ್ನು ತನ್ನಿಚ್ಛೆ ಬಂದಂತೆ ಪ್ರಕಟಿಸುವ ವಿಚಾರ ಮಾಡದೆ, ಜನರ ಚುನಾಯಿತ ಪ್ರತಿನಿಧಿಗಳ ಇಚ್ಛೆಯಂತೆ ನಡೆಯುವುದೆಂದು ನಾನು ನಂಬಿದ್ದೇನೆ'

### ಸ್ವದೇಶೀ ನಾಮಕರಣ

ಇನ್ನೊಂದು ಲೇಖನದಲ್ಲಿ ಅವರು 'ಜನತೆಯ ಪ್ರತಿನಿಧಿಗಳಿಂದ ರಚಿತವಾದ ಯೋಜನೆಯೊಂದು' ಎಂಬ ವಿಷಯವಾಗಿ ಹೀಗೆಂದು ಬರೆದಿರುವರು ಅಂದು ಅವರು, ಸ್ವರಾಜ್ಯ ನಿರ್ಮಾಣದ ಸಾಧನವಾಗಿ ರಾಷ್ಟ್ರಘಟನಾ ಸಮಿತಿಯ ವಿಚಾರವನ್ನು ಮುಂದಿಡಲಿಲ್ಲವೆಂಬುದು ನಿಜ ಆದರೆ ಇಂದು ಅವರೊಡನೆ ಕೇಳಿದರೆ, ಅವರು ಯಾವ ರೀತಿಯಲ್ಲಿ ಸ್ವಾತಂತ್ರ್ಯವನ್ನು ಸ್ಥಾಪಿಸಲು ಪ್ರಯತ್ನ ಮಾಡುವರೋ, ಅಂತಾದರೂ ಅವರು ಅದೇ ರೀತಿಯಲ್ಲಿಯೇ ಸ್ವಾತಂತ್ರ್ಯವನ್ನು ಸ್ಥಾಪಿಸುತ್ತಿದ್ದರು ಅವರಿಗೆ ಭಾರತದ ಸ್ವಾತಂತ್ರ್ಯಕ್ಕೆ ವಿದೇಶೀಯ ಪಾದ ನಾಮಕರಣವು ಏನೇನೂ ಇಷ್ಟವಾಗಿ ಕಾಣಲಿಲ್ಲ ಆದುದರಿಂದಲೇ ಅವರು 'ಸ್ವರಾಜ್ಯ'ವೆಂಬ ನಾಮಕರಣಮಾಡಿದರು ಅವರು ಅಂದಿನಿಂದಲೇ ಹೇಳುತ್ತಿದ್ದ, 'ಜನರಿಂದ ಚುನಾಯಿತರಾದ ಪ್ರತಿನಿಧಿಗಳ ಸಭೆ'ಯೆಂಬ ಮಾತಿಗೆ ಇಂದು 'ರಾಷ್ಟ್ರಘಟನಾ ಸಮಿತಿ'ಯೆಂಬ ಬೇರೆ ಹೆಸರೊಂದ ಮಾತ್ರ ಬಂದಿದೆ

### ಸ್ವರಾಜ್ಯ ಘಟನಾವಳಿ

೧೯೨೭ರಲ್ಲಿ ಅವರು ಸ್ವರಾಜ್ಯ ಘಟನೆಯ ಸ್ವರೂಪವು ಹೀಗಿರಬೇಕೆಂಬ ವಿಚಾರವನ್ನು ವಿವರಿಸುವಾಗ ಅಂತಹ ಸ್ವರಾಜ್ಯದ ಯೋಜನೆಯು ಕಾಂಗ್ರೆಸು ಘಟನೆಗನುಗುಣವಾಗಿ ಚುನಾಯಿತವಾಗಬೇಕು. ಎಲ್ಲ ಕಾಂಗ್ರೆಸಿನ ಸಾಮಾನ್ಯ ಸದಸ್ಯರು ಚುನಾಯಿಸಲು ಅಧಿಕಾರವುಳ್ಳವರಾಗಿರಬೇಕು ಸಂಖ್ಯಾಕೆ ಕೊಟ್ಟು ಕಾಂಗ್ರೆಸ ತತ್ವಕ್ಕೆ ಪ್ರತಿಜ್ಞಾ ಬದ್ಧನಾಗಿರುವ ಪ್ರತಿಯೊಬ್ಬ ಗಂಡುಸೂ ಹೆಂಗುಸೂ ಮತದಾರನಾಗಿರಬೇಕು. ಈ ಮತದಾರರೇ ಸ್ವರಾಜ್ಯ ಘಟನೆಯನ್ನು ರಚಿಸುವವರನ್ನು ಚುನಾಯಿಸಲು ಅಧಿಕಾರಿಗಳಾಗಿರುವರು ಇದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಯಾವ ಬದಲಾವಣೆಯು ಆಗದೆ ಮಾಡಬಹುದಾಗಿದೆ' ಹೀಗೆಂದು ಇಷ್ಟು ಸ್ಪಷ್ಟವಾಗಿ ಅಂದು ಗಾಂಧಿಜಿಯವರು ವಿವರಿಸಿದ್ದಾರೆ

### ಅದೇ ಹೇಳಿಕೆಯಲ್ಲದೆ ಬೇರಿಲ್ಲ

ಅಂದು ಮತದಾರರಾಗಿ ಹೇಳಿದವರು ಕಾಂಗ್ರೆಸಿನ ಸದಸ್ಯರು ಮಾತ್ರ. ಎಂದರೆ ಕಾಂಗ್ರೆಸು ಎಂಬುದು ಎಲ್ಲಾ ಧರ್ಮದವರ ಒಂದೇ ಪ್ರಾತಿನಿಧಿಕ ಸಂಸ್ಥೆಯೆಂದು ವಿಚಾರವು ಅಂದಿತ್ತು. ಆದುದರಿಂದ ಗಾಂಧಿಜಿಯವರು ಕಾಂಗ್ರೆಸು ಸದಸ್ಯರೇ ಚುನಾವಣೆ ಮಾಡುವ ಮತದಾರರೆಂದು ಹೇಳಿದ್ದರು ಆದರೆ ಇಂದು ಮುಸ್ಲಿಂ ಲೀಗಿನಂತಹವುಗಳು ಅಸ್ತಿತ್ವದಲ್ಲಿರುವುದರಿಂದ ಮತದಾರ ಕ್ಷೇತ್ರವನ್ನು ಇನ್ನಷ್ಟು ವಿಶಾಲಗೊಳಿಸಿ, ಪ್ರಾಯಕ್ಕೆ ಬಂದ ಪ್ರತಿಯೊಂದು ಗಂಡುಸೂ ಹೆಂಗುಸೂ ಮತದಾನಾಧಿಕಾರವುಳ್ಳವರಾಗಿರಬೇಕೆಂದು ಹೇಳಲಾಗಿದೆ. ಸ್ವಾತಂತ್ರ್ಯ ಅಭಿಲಾಷಿಯಾದವನು ಯಾರೂ ಇದಕ್ಕೆ ಆತಂಕವನ್ನೊಡ್ಡಲಾರನು

ಆದ ದರಿಂದ ೨೦ ವರ್ಷಗಳ ಹಿಂದೆ, ಯಾವ ಧ್ಯೇಯದಿಂದ ಆಂದೋಲನದ ಹೋರಾಟಗಳು ಆರಂಭವಾದುವೋ ಅದೇ ಧ್ಯೇಯಕ್ಕಾಗಿಯೇ ಇಂದೂ ಹೋರಾಟವು ಆಗುತ್ತಿದೆ ಹೋರಾಟದ ಹೆಸರು ಮತ್ತು ಕಾರ್ಯರೀತಿಗಳು ಮಾತ್ರ ವಾತಾವರಣಕ್ಕೆ ಅನುಗುಣವಾಗಿ ಬೇರೆ ಸ್ವರೂಪದವುಗಳಾಗಿವೆ ಹಳೆಯ ಹೇಳಿಕೆಗೆ ಇಂದ ಹೊಸ ಬಣ್ಣವು ಕೊಡಲಾಗಿದ


ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ





## ಹಪ ಷಾರ್

ಮೋಟಾರನ್ನು ನಡೆಸುವುದಕ್ಕೆ ಎಷ್ಟೋ ಉಪಾಯಬೇಕು ಸಮಯಕ್ಕೆ ಅನುಗುಣವಾಗಿ ಕಾರನ್ನು ಕ್ಷಣ ಮಾತ್ರದಲ್ಲಿ ಪಕ್ಕಕ್ಕೆ ತಿರುಗಿಸಿ ನಡೆಸುವಂಥ ನರಗಳ ಪಟುತ್ವವೂ, ಬಿಗಿಯಾದ ಹಿಂಡಪ್ಪಿಯೂ, ತೀಕ್ಷ್ಣವಾದ ದೃಷ್ಟಿಪಾಟವವೂ, ಒಂದು ಕ್ಷಣ ಮಾತ್ರದಲ್ಲಿ ಯೋಚನೆ ಮಾಡಿ ನಿರ್ಧರಿಸುವಂಥ ಚುರುಕಾದ ಮೆದುಳು ಆವಶ್ಯಕವಾಗಿ ಬೇಕು. ಇವೆಲ್ಲವೂ ಎಂದು ಮೋಟಾರನ್ನು ನಡೆಸುವುದಕ್ಕೆ ಮಾತ್ರವೇ ಅಲ್ಲದೆ ಆನಂದಮಯವಾದ ಜೀವಯಾತ್ರೆಯನ್ನು ನಡೆಸುವುದಕ್ಕೂ ಆವಶ್ಯಕವೆ ಭಾರತದಲ್ಲೆಲ್ಲಾ ಅತ್ಯುತ್ತಮವಾದ ಟಾನಿಕ್ಕೆಂದು ಪ್ರಸಿದ್ಧಿ ಹೊಂದಿರುವ

## ಜೀವಾಮೃತ

ಸ್ತ್ರೀಪುರುಷರೆಲ್ಲರಿಗೂ ಈ ಮಹತ್ತರವಾದ ಶಕ್ತಿಯನ್ನೂ, ದೇಹಾರೋಗ್ಯವನ್ನೂ ಉಂಟುಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ದೊರೆಯುವುದು

ತಯಾರಿಸುವವರ್:

ಆಯುರ್ವೇದಾಶ್ರಮಂ ಮದ್ರಾಸು

ಸ್ಥಳೀಯ ಏಜಂಟರು

ಪೊಪ್ಯುಲರ್ ಸ್ಟೋರ್ಸ್

ರಥಬೀದಿ — ಮಂಗಳೂರು.



# THRIFT IN ANCIENT GREECE

The Greek philosopher, Socrates, was fond of teaching wisdom by asking questions This method of teaching is now called the 'Socratic Method'. In order to teach thrift he used to ask young men this question: 'If the OUTGO is more than the INCOME what will be the OUTCOME?' One day he got this smart reply; 'You will GO IN a beggar asylum and never COME OUT OF It.'

**RESOURCES OF A CRORE**

Estd. 1906.

**CANARA BANK LIMITED.**

Historical Ad.-Series No 2

# ಶಿಕ್ಷಣದಲ್ಲಿ ಕಲೆ ಕೈಗಾರಿಕೆಗಳ ಸ್ಥಾನ

[ಲೇಖಕ: ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ]

ಜ್ಞಾನ ಸಂಪಾದನೆ ಅಥವಾ ನಿರುದ್ಯೋಗ ನಿವಾರಣೆಗೆ ಮಕ್ಕಳನ್ನು ಶಾಲೆಗೆ ಕಳುಹಿಸುವದೆಂದು ಕೆಲವರು ಹೇಳುತ್ತಾರೆ. ಮಕ್ಕಳು ಮನೆಯಲ್ಲಿ ಕೊಡುವ ಕಂಟಿಯಿಂದ ಪಾರಾಗಲಿಕ್ಕಾಗಿಯೂ ಅವರನ್ನು ಶಾಲೆಗೆ ಕಳುಹಿಸುವದೆಂದು ಇನ್ನು ಕೆಲವರು ಹೇಳುವದಿದೆ. ಆದರೆ ಶಿಕ್ಷಣದ ಯಥಾರ್ಥ ಉದ್ದೇಶವು-ಇದು ಯಾವದೂ ಆಗಿರುವದಿಲ್ಲ. ಮನುಷ್ಯನು ತನ್ನ ಸ್ಥಿತಿಯನ್ನು ಸುಧಾರಿಸಿಕೊಂಡು ಜೀವನದಲ್ಲಿ ಸುಖವನ್ನೂ ಸಫಲತೆಯನ್ನೂ ಪಡೆಯುತ್ತ ಜೀವನ ಸಾರ್ಥಕ್ಯವನ್ನು ಹೊಂದಬೇಕೆಂಬುದು ಶಿಕ್ಷಣದ ಉದ್ದೇಶವಾಗಿರುತ್ತದೆ. ಮನುಷ್ಯನು ಜೀವನ ಸಫಲತೆಯನ್ನು ಪಡೆಯುವದಕ್ಕೋಸ್ಕರ ಆತ್ಮರಕ್ಷಣೆ, ಉದರ ನಿರ್ವಾಹ, ಶಿಶು ಸಂಗೋಪನ, ಸಾಮಾಜಿಕ ಹಾಗೂ ರಾಜಕೀಯ ಕರ್ತವ್ಯ ಪರಿಪಾಲನೆ ಮತ್ತು ವಿರಾಮ ಕಾಲದಲ್ಲಿ ಮನೋರಂಜನೆಗಾಗಿ ಅವನು ಮಾಡುವ ಕೆಲಸ ಕಾರ್ಯಗಳು ಅವನ ವ್ಯವಸಾಯಗಳೆನ್ನಿಸಿಕೊಳ್ಳುತ್ತವೆ, ಇವುಗಳ ಮೂಲಕವೇ ಅವನ ಜೀವನ ನಡೆಯಬೇಕು. ಈ ವ್ಯವಸಾಯಗಳು ಸುಲಭದಲ್ಲಿ ನಡೆಯುವ ಹಾಗೆ ತಕ್ಕ ಅನುಕೂಲತೆ ಮತ್ತು ಸಾಧನಗಳನ್ನು ಒದಗಿಸಿಕೊಡುವಂತೆ ಶಿಕ್ಷಣದ ಸ್ವರೂಪವು ಇರಬೇಕು. ಮನೋರಂಜನೆಯ ವ್ಯವಸಾಯಗಳಲ್ಲಿ ಕಲೆ ಕೈಕೆಲಸಗಳು ಸೇರಿರುತ್ತವೆ. ಅವು ಮನೋರಂಜನೆಗೆ ಮಾತ್ರವಲ್ಲ, ಇತರ ವ್ಯವಸಾಯಗಳಿಗೂ ಸಾಧಕವಾಗಿದೆ. ಆದ್ದರಿಂದ ಶಿಕ್ಷಣದಲ್ಲಿ ಕಲೆ ಕೈಕೆಲಸಗಳಿಗೆ ಮುಖ್ಯ ಸ್ಥಾನವಿದೆ.

### ಶಿಕ್ಷಣದ ತತ್ವಗಳು

ಈ ವಿಷಯವನ್ನು ಮನಗಂಡು ಶಿಕ್ಷಣಶಾಸ್ತ್ರಜ್ಞರು ಕೆಲವು ತತ್ವಗಳನ್ನು ಹೊರಗೆಡಹಿದ್ದಾರೆ. ಮಕ್ಕಳು ಯಾವಾಗಲೂ ತುಂಬ ಚಟುವಟಿಕೆಯನ್ನು ತೋರಿಸುವಂಥವುಗಳಾಗಿ ಇರುತ್ತವೆ. ಅವುಗಳಲ್ಲಿ ಅನುಸರಣ, ಅನುಕರಣ ಮತ್ತು ರಚನಾಶಕ್ತಿಗಳು ಹುಟ್ಟಿನಿಂದಲೂ ಇರುತ್ತವೆ. ಈ ಶಕ್ತಿಗಳ ವಿಕಾಸ ಮತ್ತು ಪರಸ್ಪರ ಹೊಂದಿಕೆಯಿಂದ ಮಕ್ಕಳ ಬೋಧನಾಶಕ್ತಿಯು ಬೆಳೆಯುತ್ತದೆ. ಆದ್ದರಿಂದ ಶಿಕ್ಷಣದ ಸ್ವರೂಪವು ಮೇಲೆ ಹೇಳಿದಂತೆ ಇರಬೇಕಾದಾಗಲೂ ಮಕ್ಕಳ ಬೋಧನಾಶಕ್ತಿಯನ್ನು ಬೆಳೆಸುವ ದೃಷ್ಟಿಯಿಂದ ಶಿಕ್ಷಣ ತತ್ವಗಳು ಇರಬೇಕು. ಶಿಕ್ಷಣವು ಮಕ್ಕಳಿಗೆ ತುಂಬ ಕೆಲಸ, ಅವುಗಳ ಶಕ್ತಿಗಳ ವಿಕಾಸ ಮತ್ತು ಹೊಂದಿಕೆಯಾಗುವಂತೆ ನಡೆಯಬೇಕು. ಇಲ್ಲವಾದರೆ ಶಿಕ್ಷಣವು ಮಕ್ಕಳಿಗೆ ಭಾರವಾಗುತ್ತದೆ, ಶಾಲೆಗಳು ಅವುಗಳಿಗೆ ಬಂಧನವಾಗುತ್ತವೆ. ಕಲೆಕೈ ಕೆಲಸಗಳ ಮೂಲಕ ಈ ತತ್ವಗಳನ್ನು ಪರಿಪಾಲಿಸಿ ಶಿಕ್ಷಣದ ಉದ್ದೇಶವನ್ನು ಸಾಧಿಸಬಹುದು.

### ಕಲೆ ಕೈಗಾರಿಕೆಗಳ ಸ್ಥಾನ

ಕಲೆ ಕೈಗಾರಿಕೆಗಳ ಅಭ್ಯಾಸವು ಮಕ್ಕಳಿಗೆ ತುಂಬಾ ಕೆಲಸಗಳನ್ನು ಕೊಡುತ್ತವೆ. ಅವುಗಳ ಮೂಲಕ ಮಕ್ಕಳ ಶಕ್ತಿ ಮತ್ತು ಮನೋವೃತ್ತಿಗಳ ವಿಕಾಸವಾಗುತ್ತದೆ. ಓದು ಬರಹ ಗಣಿತ ಅಥವಾ ಇತರ ಶಾಸ್ತ್ರ ವಿಷಯಗಳನ್ನು ತಿಳಕೊಳ್ಳಬೇಕೆಂಬ ಲವಲವಿಕೆಯು ಮಕ್ಕಳಲ್ಲಿ ಹುಟ್ಟುವ ಬಹುಕಾಲದ ಮೊದಲೇ ಮಕ್ಕಳಿಗೆ ಕಲೆ ಕೈಕೆಲಸಗಳ ಮೇಲೆ ತುಂಬಾ ಅಭಿರುಚಿ ಇದ್ದಿರುವದು ಕಂಡುಬರುತ್ತದೆ. ಚೆಂಡಿನ ಬಣ್ಣ, ಹೂವಿನ ಆಕಾರವನ್ನು ನೋಡಿ ಸಣ್ಣ ಮಕ್ಕಳು ಕೂಡ ಬಹಳ ಸಂತೋಷವನ್ನು ವ್ಯಕ್ತಪಡಿಸುತ್ತವೆ. ಅವುಗಳು ಗೋಡೆಗಳ ಮೇಲೆ ಇದ್ದಲಿಯಿಂದಲೋ ಚಾಕ್‌ದಲ್ಲೋ ಚಿತ್ರ ಬರೆಯುತ್ತವೆ. ತಮ್ಮ ಮನಸ್ಸಿಗೆ ಬಂದ ಹಾಗೆ ಹಾಡುತ್ತವೆ, ಕುಣಿಯುತ್ತವೆ. ಮಣ್ಣಿನಿಂದಲೋ ಕಾಗದದಿಂದಲೋ ವಿವಿಧ ರೂಪು ಆಕಾರಗಳನ್ನು ರೂಪಿಸಿಕೊಳ್ಳುತ್ತವೆ. ಮಕ್ಕಳ ಇದೇ ಅಭಿರುಚಿಯನ್ನು ಸರಿಯಾದ ಕ್ರಮದಲ್ಲಿ ತಿದ್ದಿಕೊಟ್ಟು ಇತರ ವಿಷಯಗಳೊಂದಿಗೆ ಕಲೆ ಕೈಕೆಲಸಗಳ ಸಮವಾಯ ಮಾಡುವದರಿಂದ ಶಿಕ್ಷಣವು ಪರಿಣಾಮಕಾರಿಯಾಗುವದು. ಕಲೆ ಕೈಕೆಲಸಗಳ ಮೂಲಕ ಮಕ್ಕಳಿಗೆ ವಸ್ತುಗಳ ಗುಣ, ಸಂಖ್ಯೆ, ಪರಿಮಾಣದ ಸ್ಪಷ್ಟ ಜ್ಞಾನವಾಗುವದು. ಮಕ್ಕಳ ನಿರೀಕ್ಷಣ ಪರೀಕ್ಷಣ, ಸಂಶೋಧನ ಮತ್ತು ರಚನಾಶಕ್ತಿಗಳು ಇವುಗಳ ಮೂಲಕ ಬೆಳೆಯುತ್ತವೆ. ಭಾಷೆಯು ಇನ್ನೂ ಚೆನ್ನಾಗಿ ಬಾರದೆ ಇದ್ದಾಗ ತಮ್ಮ ಅನುಭವವನ್ನು ಮಕ್ಕಳು ಕಲೆಕೈಕೆಲಸಗಳ ಮೂಲಕ ಚೆನ್ನಾಗಿ ಹೇಳಬಲ್ಲವು. ಮಕ್ಕಳಿಗೆ ವಿಷಯಜ್ಞಾನವು ಎಷ್ಟು ಚೆನ್ನಾಗಿ ಆಗಿದೆ ಎಂಬುದನ್ನು ತಿಳಿಯಲಿಕ್ಕೆ ಕಲೆ ಕೈ ಕೆಲಸಗಳು ದೊಡ್ಡ ಸಾಧನಗಳಾಗಿವೆ. ಆದ್ದರಿಂದ ಅವು ಸತ್ ಶಿಕ್ಷಣಕ್ಕೆ ದಾರಿಯಾಗಿವೆ.

### ವಾರ್ಧಾ ಶಿಕ್ಷಣ ಪದ್ಧತಿ

ಈ ಕಾರಣದಿಂದ ವಾರ್ಧಾ ಶಿಕ್ಷಣ ಪದ್ಧತಿಯಲ್ಲಿ ಕಲೆ ಕೈಕೆಲಸಗಳಿಗೆ ಪ್ರಾಮುಖ್ಯ ಸ್ಥಾನವನ್ನು ಕೊಟ್ಟಿರುತ್ತಾರೆ ಮತ್ತು ಪಾಶ್ಚಾತ್ಯ ಶಿಕ್ಷಣ ತತ್ವಜ್ಞರು ಹೇಳುವ ಪ್ರಕಾರ ಕಲೆ ಕೈ ಕೆಲಸಗಳೊಂದಿಗೆ ಸಮವಾಯ ಮಾಡಿ ಇತರ ವಿಷಯಗಳನ್ನು ಕಲಿಸಬೇಕೆಂದಾಗಿಯೂ ಈ ಪದ್ಧತಿಯ ಪ್ರವರ್ತಕರು ಹೇಳುತ್ತಾರೆ. ಆದರೆ ಉಳಿದ ಒಂದು ವಿಷಯದಲ್ಲಿ ಪಾಶ್ಚಾತ್ಯರಿಗೂ ಈ ಪ್ರವರ್ತಕರಿಗೂ ಅಭಿಪ್ರಾಯದಲ್ಲಿ ಸ್ವಲ್ಪ ಭೇದವಿದೆ. ವಾರ್ಧಾ ಶಿಕ್ಷಣ ಪದ್ಧತಿಯವರು ಶಿಕ್ಷಣವನ್ನು ಸ್ವಾವಲಂಬಿಯನ್ನಾಗಿ ಮಾಡುವ ಧ್ಯೇಯವನ್ನಿಟ್ಟಿದ್ದಾರೆ. ನಮ್ಮದು ಬಡದೇಶ. ಶಿಕ್ಷಣ ಪ್ರಚಾರವು ಬೇಕಾದಷ್ಟು ಪೂರ್ಣ ಆಗದಿದೆ. ಇಂಥ ಪರಿಸ್ಥಿತಿಯಲ್ಲಿ ಶಿಕ್ಷಣವನ್ನು ಸ್ವಾವಲಂಬಿ ಮಾಡುವ ಧ್ಯೇಯವು ದೇಶಕಾಲಾನುಕೂಲವಾಗಿದೆ. ಆದರೆ ವಾರ್ಧಾ ಶಿಕ್ಷಣ ಪದ್ಧತಿಯು ಮುಂದೆ ಜೀವನದಲ್ಲಿ ಉಪಯೋಗಕ್ಕೆ ಬಾರದ ಅಥವಾ ಕಡಿಮೆ ಉಪಯೋಗಕ್ಕೆ ಬರುವ ಕಲೆಕೈ ಕೆಲಸಗಳಿಗೆ ಮುಖ್ಯ ಸ್ಥಾನವನ್ನು ಕೊಡುವ ಬದಲಿಗೆ ಹಳ್ಳಿಗಳ ನಿತ್ಯ ಜೀವನದಲ್ಲಿ ಹೆಚ್ಚು ಉಪಯೋಗಕ್ಕೆ ಬರಬಹುದಾದ ನೂಲುವ, ಬಣ್ಣ ಕೊಡುವ, ನೇಯುವ, ಕಮ್ಮಾರ, ಬಡಗಿ, ಚಿತ್ರ, ಶಿಲ್ಪ, ಸಂಗೀತ ಇತ್ಯಾದಿ ಕಲೆ ಕಸಬುಗಳೊಂದಿಗೆ ಇತರ ವಿಷಯಗಳ ಸಮವಾಯ ಮಾಡಬೇಕೆನ್ನುತ್ತದೆ. ಈ ಪದ್ಧತಿಯಲ್ಲಿ ನೂಲುವದು ಮತ್ತು ನೇಯುವದು ಮೂಲ ಕಲೆ ಕೈಕೆಲಸ ಆಗಿದೆ. ಹಾಗೆ ಮಾಡಿದುದರ ಕಾರಣವನ್ನು ತಿಳಕೊಳ್ಳುವದು ಸುಲಭ.

ಬರೇ ಶಾಸ್ತ್ರಪರವು ಸಪ್ಪೆಯಾದ ಆಹಾರ. ಕಲೆ ಕೈ ಕೆಲಸಗಳು ಮಾರ್ಗಕ್ಕೆ ಒಗ್ಗರಣೆಯನ್ನು ಹಾಕಿದ್ದಕ್ಕಿಂತಲೂ ಹೆಚ್ಚಿನ ಕೆಲಸ ಮಾಡಿ ಆಹಾರವನ್ನು ಹೊಟ್ಟೆ ತುಂಬಿಸಲಿಕ್ಕೆ ಮಾತ್ರವಲ್ಲ, ಅದನ್ನು ರುಚಿಕರ ಮತ್ತು ಸುಖದಾಯಕವಾಗಿ ಮಾಡುತ್ತದೆ, ಸತ್ ಶಿಕ್ಷಣದ ಉದ್ದೇಶವನ್ನು ಪೂರ್ತಿ ಮಾಡುತ್ತದೆ. ಕಲೆ ಕೈಕೆಲಸಗಳಿಗೆ ಪ್ರಾಮುಖ್ಯತೆಯನ್ನು ಇತರ ವಿಷಯಗಳನ್ನು ಅವುಗಳೊಂದಿಗೆ ಸಮವಾಯ ಮಾಡುವದರಿಂದ ಶಿಕ್ಷಣವನ್ನು ಸ್ವಾವಲಂಬಿ ಮಾಡುವ ಧ್ಯೇಯವು ಪೂರ್ಣವಾಗದೆ ಉಳಿಯಬಹುದು. ಆದರೆ ಧ್ಯೇಯವು ಪೂರ್ಣವಾಗದಿರುವದರಲ್ಲಿಯೇ ಮಹತ್ವವಿದೆ. ಧ್ಯೇಯವು ಸುಲಭದಲ್ಲಿ ಪೂರ್ಣವಾಗುವದಾದರೆ ಧ್ಯೇಯಕ್ಕೂ ವ್ಯವಹಾರಕ್ಕೂ ಏನೂ ಅಂತರ ಉಳಿದಂತಾಗಲಿಲ್ಲ. ಆದ್ದರಿಂದಲೇ ಕಲೆ ಕೈಕೆಲಸಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಶಿಕ್ಷಣವನ್ನು ಸ್ವಾವಲಂಬಿಯನ್ನಾಗಿ ಮಾಡುವ ಧ್ಯೇಯವನ್ನಿಟ್ಟುಕೊಂಡ ವಾರ್ಧಾ ಶಿಕ್ಷಣ ಪದ್ಧತಿಯು ನಮ್ಮ ದೇಶಕಾಲಪರಿಸ್ಥಿತಿಗೆ ಒಪ್ಪುವಂತಹದ್ದಾಗಿರುವದರಿಂದ ಅದನ್ನು ಅನುಕರಿಸುವವಗೆ ಹೆಚ್ಚು ಸಫಲತೆಯು ಪ್ರಾಪ್ತವಾಗಬಹುದು.

[illegible]

### ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ ಧಾರವಾಡ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ವಾರ್ಷಿಕ ಸಾಧಾರಣ ಸಭೆಯು ಪ್ರಾಂತೀಯ ಕಚೇರಿ ಧಾರವಾಡದಲ್ಲಿ ೧೫—೨—೪೦ ನೇ ಗುರುವಾರ ಮಧ್ಯಾಹ್ನ ೨ ಗಂಟೆಗೆ ಸೇರುವುದು. ಕಾರಣ (ರಾಮಗಡ ಕಾಂಗ್ರೆಸಿಗೆ ಚುನಾಯಿತರಾದ) ಸದಸ್ಯರೆಲ್ಲರೂ ವೇಳೆಗೆ ಸರಿಯಾಗಿ ಬರಬೇಕಾಗಿ ಬಿನ್ನಹ.

(೧) ವಾರ್ಷಿಕ ವರದಿ ಮತ್ತು ಲೆಕ್ಕಪತ್ರ ಮಂಜೂರ ಮಾಡುವುದು. (೨) ಪ್ರಾಂತೀಯ ಸಮಿತಿಯ ಅಧಿಕಾರಿ ವರ್ಗದ ಚುನಾವಣೆ (೩) ಅಖಿಲ ಭಾರತ ಕಾಂಗ್ರೆಸ ಸಮಿತಿ ಸದಸ್ಯರ ಚುನಾವಣೆ, (೪) ಲೆಕ್ಕ ತಪಾಸಿಗಳನ್ನು ನಿಯಮಿಸುವುದು, (೫) ಕಾಂಗ್ರೆಸ ಅಧ್ಯಕ್ಷರ ಪದವಿಗೆ ಹೆಸರು ಸೂಚಿಸುವುದು (೬) ಅಧ್ಯಕ್ಷರ ಅಪ್ಪಣೆಯ ಮೇರೆಗೆ ತರಲ್ಪಡುವ ಇತರ ವಿಷಯಗಳು, ವಿಚಾರಿಸಲ್ಪಡುವವೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.



# ನೋಟಗಳು . . .!

ಬ್ರಿಟಿಷ್ ಪತ್ರಿಕೆಗಳು ಜರ್ಮನ್ ಮುಖಂಡರ ಹಲವು ರಹಸ್ಯಗಳನ್ನು ಬಹಿರಂಗಪಡಿಸಿವೆ!

◆

ಹಿಟ್ಲರನು ಬ್ರಹ್ಮಚಾರಿಯೆಂದು ಪ್ರಸಿದ್ಧಿಯಷ್ಟೆ? ಆದರೆ ಇದು ಬರಿಯ ಮೋಸವೆಂದೂ, ಆತನು ದೊಡ್ಡ ವಿಲಾಸಗಾರನೆಂದೂ, ವಿವಾಬ್ರ್ಯಾನು ಎಂಬ ತರುಣಿಯೊಡನೆ ಆತನು ಪ್ರೇಮ ಸಂಬಂಧವಿಟ್ಟಿರುವನೆಂದೂ, ಆಕೆಗಾಗಿ ಮುನಿಕಿನಲ್ಲಿ ಒಂದು ವಿಲಾಸದರಮನೆಯನ್ನು ಕಟ್ಟಿಸಿಕೊಟ್ಟಿರುವನೆಂದೂ ಒಂದು ಇಂಗ್ಲಿಷ್ ಪತ್ರಿಕೆಯು ಪ್ರಕಟಿಸಿದೆ।

◆

ಜರ್ಮನಿಯ ಪ್ರಚಾರಮಂತ್ರಿಯಾದ ಗೊಬೆಲ್ಸನು, ಮಗ್ದಾಳೆಂಬ ಐಶ್ವರ್ಯವಂತಳೊಬ್ಬಳನ್ನು, ಆಕೆಯ ಗಂಡನನ್ನು ಬಂಧನದಲ್ಲಿರಿಸಿ, ಮದುವೆಯಾಗಿರುವನೆಂದೂ, ಆದರೆ ಆತನ ವಿವಾಹ ಜೀವನವು ಎನಿತೂ ಶಾಂತಿಪ್ರದವಾಗಿರದೆ ನಿತ್ಯ ಕಲಹಗಳಿಂದ ಕಲುಷಿತವಾಗಿದೆಯೆಂದೂ ಇನ್ನೊಂದು ಆಂಗ್ಲ ಪತ್ರಿಕೆಯು ಸಾರುತ್ತಿದೆ।

◆

ರಿಬೆನ್‌ಟ್ರಾಪನ ಬಹಳ ಅಲ್ಪ ಮನುಷ್ಯನೆಂದೂ, ಆತನು ಕೇವಲ ಹಣದಾಶೆಯಿಂದ ಒಬ್ಬ ಐಶ್ವರ್ಯವಂತನ ಮಗಳನ್ನು ಮೋಸದಿಂದ ಮದುವೆ ಮಾಡಿಕೊಂಡಿರುವನೆಂದೂ ಮತ್ತೊಂದು ಪತ್ರಿಕೆಯು ಬರೆಯುತ್ತದೆ

◆

ಹಿಟ್ಲರನು ಈ ಸಲ ಯುದ್ಧಕ್ಕೆ ತೊಡಗಿದ್ದು ತನ್ನ ಬುದ್ಧಿ ಭ್ರಮೆಯ ಕಾರಣದಿಂದ ಎಂಬುದು ಇನ್ನೊಂದು ಪತ್ರಿಕೆಯ ಸುದ್ದಿ

◆

ಕೆಲಸಮಯಗಳ ಹಿಂದೆ, ಜೋತಿಷ್ಯನೊಬ್ಬನು ಹಿಟ್ಲರನ ತಾರಾಬಲವು ಒಳ್ಳೆಯದಿದೆಯೆಂದೂ ಈ ಸಮಯದಲ್ಲಿ ಆತನು ತೊಡಗಿದ ಪ್ರತಿಯೊಂದು ಕಾರ್ಯದಲ್ಲಿಯೂ ಜಯವಾಗುವುದೆಂದು ಹೇಳಿ, ಹಿಟ್ಲರನಿಂದ ಹಣಪಡೆದುಕೊಂಡು ಹೀಗೆ ಆತನ ಬುದ್ಧಿಯನ್ನು ಕೆಡಿಸಿರುವನೆಂದೂ ಅದರ ವಿವರವಾಗಿದೆ

◆

ಅಲ್ಲಿನ ಕೂಲಿಗಾರರ ಮುಖಂಡನಾದ ರೋಬರ್ಟ್‌ಲೀ ಎಂಬವನು ಬಹಳ ದುರಾಚಾರಿಯೆಂಬುದು ಬೇರೊಂದು ಪತ್ರಿಕೆಯ ಪ್ರಕಟಣೆ

◆

ಇಂಗ್ಲಿಷ್ ಪತ್ರಿಕೆಗಳ ಪ್ರಚಾರದಂತೆ ಜರ್ಮನರು, ನಿಜವಾಗಿಯೂ ಅನ್ಯಾಯಗಾರರೂ ನಿಂದನೀಯರೇ ಆಗಿದ್ದಾರೆ!

◆

ಇದಕ್ಕಿಂತ ಇಮ್ಮಡಿಯಲ್ಲಿ ಜರ್ಮನಿಯ ಪತ್ರಿಕೆಗಳೂ ಬ್ರಿಟಿಷರ ವಿರುದ್ಧ ಪ್ರಚಾರ ಮಾಡುತ್ತಿವೆಯೆಂದು ತಿಳಿದಿದೆ.

◆

ಅನ್ಯೋನ್ಯ ಇಬ್ಬರು ಕುಲಗೋತ್ರಗಳನ್ನೆತ್ತಿ ಬೈದುಕೊಳ್ಳುವುದರಿಂದ ಅವರ ಇಬ್ಬರ ಹಣೆಬರಹಗಳನ್ನೂ ಮೂರನೆಯವನು ಸರಿಯಾಗಿ ತಿಳಿದುಕೊಳ್ಳಬಹುದು

◆

ಕಳೆದ ವಾರ ನಾಜೀ ಕ್ರಾಂತಿಯ ದಿನಾಚರಣೆಯ ಅಂದು ಹಿಟ್ಲರನು ಒಂದು ಉಗ್ರಭಾಷಣ ಮಾಡಿದನು

◆

'ಜರ್ಮನಿಯು ತನ್ನ ಹಕ್ಕನ್ನು ಹೊಂದದ ವಿನಹ ಶಾಂತಿಯ [illegible] ಸಾಧ್ಯವಿಲ್ಲ' ಎಂದು ಅವನು ಗರ್ಜಿಸಿದನು

◆

ಹಕ್ಕನ್ನು ಹೊಂದುವುದೆಂದರೆ "ವಸಾಹತ್ತುಗಳನ್ನು ತಿರಿಗಿ ಪಡೆಯುವುದೆಂದೇ ಅರ್ಥ

◆

ಬ್ರಿಟನ ೪೪ ಮಿಲಿಯ ಜನರಿಗೆ ಜಗತ್ತಿನಲ್ಲಿ ೪೦ ಮಿಲಿಯ ಕಿಲೋಮೀಟರ್ ಸ್ಥಳವು ಇದೆಯಂತೆ ಫ್ರಾನ್ಸಿಗೆ ೯ ಮಿಲಿಯ ಕಿಲೋಮೀಟರ್ ಸ್ಥಳವಿದೆಯಂತೆ, ಆದರೆ ಜರ್ಮನಿಯ ೮೦ ಮಿಲಿಯ ಜನರಿಗೆ ಕೇವಲ ೬೦೦೦೦೦ ಚದರ ಕಿಲೋಮೀಟರ್ ಸ್ಥಳ ಮಾತ್ರ ಇರುವುದರಿಂದ ಹಿಟ್ಲರನು ಚಿಂತಾಕ್ರಾಂತನಾಗಿದ್ದಾನೆ

◆

ಈ ಸಮಸ್ಯೆಯನ್ನು ಜರ್ಮನರ ಪರಿಹರಿಸದಿರಬಾರದು ಎನ್ನುತ್ತಾ ಹಿಟ್ಲರನ ಖಂಡಿತವಾಗಿಯೂ ಅದು ಬೇಗನೇ ಪರಿಹಾರವಾಗಲೇ ಬೇಕೆಂದು ನಿರ್ಧಾರಪೂರ್ವಕವಾಗಿ ಹೇಳಿದನು

◆

ಇದನ್ನು ಅನ್ಯಾಯಗಾರನಾದ ಮನುಷ್ಯನ ಪಾಪಪೂರಿತ ಭಾಷಣವೆಂದು, ಬ್ರಿಟಿಷ್ ಪತ್ರಿಕೆಗಳು ಪ್ರಚಾರ ಮಾಡಿದವು

◆

ಆದರೆ ಹಿಟ್ಲರನು ಬೃಹತ್ ಜರ್ಮನಿಯ ಭವಿಷ್ಯ ನಿರ್ಮಾಪಕನೆಂದು ತಿಳಿದು ಜರ್ಮನಿಯ ಜನರು ಆತನ ಮಾತೇ ವೇದವಾಕ್ಯವೆಂದು ಇಂದು ನಂಬುತ್ತಿರುವರಂತೆ!

◆

ಹೇಗಿದ್ದರೂ, ಈ ತರದ ಆಶೆ, ಸಾಮ್ರಾಜ್ಯ ಲಾಲಸೆಗಳ ಪರಿಣಾಮವಾಗಿಯೇ ಪ್ರಚಂಡವಾದ ಪ್ರಪಂಚ ಯುದ್ಧವು ಬಂದೇ ತೀರುವುದೆಂಬುದಕ್ಕೆ ಏನೂ ಅಡ್ಡಿಯಿಲ್ಲ.

◆

ಯಾಂತ್ರಿಕ ಜೀವನದಿಂದಲೇ ಇಂದಿನ ಯುದ್ಧವು ಆರಂಭವಾಗಿದೆಯೆಂದು ಶ್ರೀ ಕುಮಾರಪ್ಪನವರು ಹೇಳಿದರು. ಜನರಿಗೆ ತೃಪ್ತಿಯಿಲ್ಲದೆಯೂ, ಅಧಿಕವಸಾಹತ್ತು, ಅಧಿಕ ಸಾಧನ ಸಾಮಗ್ರಿ, ಅವುಗಳ ಮಾರಾಟಕ್ಕಾಗಿ ಸಂತೆಗಳ ಆಕ್ಷೇಪಣೆಗಳುಂಟಾದುದೇ ಇಂದಿನ ಯುದ್ಧ ಕಾರಣವಾದುದರಿಂದ ಅವುಗಳು ಆಗದಂತೆ ಗ್ರಾಮ ಕೈಗಾರಿಕೆಗಳನ್ನು ರಾಷ್ಟ್ರವು ಆಧರಿಸಿದ ಮಾತ್ರ ಪ್ರಪಂಚದಲ್ಲಿ ಶಾಂತಿಯಾಗುವುದೆಂದು ಅವರು ಸಾರುತ್ತಿದ್ದಾರೆ

◆

ದಿನನಿತ್ಯದ ಜೀವನವು ಈ ರೀತಿಯಲ್ಲಿ ಸರಳವಾಗಿ ಶಾಂತಿಮಾರ್ಗವಾಗಿ ಸಾಗುವಂತೆ ಪ್ರತಿಯೊಬ್ಬನೂ ಯತ್ನಿಸುವುದೇ ಲೋಕಶಾಂತಿಯ ಮೂಲವೆಂದು ಗಾಂಧಿಜಿಯವರ ಮತವಾಗಿದೆ

◆

ಸತ್ಯಾಗ್ರಹದ ಈ ಸಂದೇಶಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಕಿವಿಗೊಡುವುದು ಸಂಭವವೆ?

◆

ಗಾಂಧಿಜಿಯವರ ಸಹನೆಯು ಊಹನಾತೀತವಾದುದು.

◆

ವೈಸರಾಯರನ್ನು ಕಂಡು ಮತ್ತೊಮ್ಮೆಯೂ ಅವರು ಮಾತನಾಡಿದರು.

◆

ಯುದ್ಧವಾರಂಭವಾದ ಮೇಲೆ ಇದ ಅವರಿಬ್ಬರ ಐದನೆಯ ಭೇಟಿ!

◆

ಈ ಸಲವೂ ಹಾಡಿದ್ದನ್ನೇ ಹಾಡಿದರು ವೈಸರಾಯರು!

◆

ಗಾಂಧಿಜಿಯವರು ಆದರೂ ಕ್ಷಮೆ ಬಿಡಲಿಲ್ಲ. 'ನೀವು ಹೇಳಿದೆಲ್ಲಾ ಸದ್ಭಾವನೆಯಿಂದಲೇ, ಆದರೆ ಕಾಂಗ್ರೆಸಿನವರು ಇದಕ್ಕೆ ಒಪ್ಪುವ ಹಾಗೆ ಕಾಣುವುದಿಲ್ಲ ಯಾವುದಕ್ಕೂ ಪ್ರಕೃತ ನಾವು ಮಾತನ್ನು ನಿಲ್ಲಿಸುವದು ಒಳ್ಳೆಯದು' ಎಂದರು ಗಾಂಧಿಜಿಯವರು

◆

ಗಾಂಧಿಜಿಯವರು ನಿರಾಶರಾಗಿ ಹೀಗೆ ಹೇಳಿರುವರೆಂದು ಒಂದು ವದಂತಿ!

◆

'ರಾಜಿಯ ಅಣುಗಳು' ಈಗ ಮಾಯವಾಗಿರುವವೆಂದು ಗಾಂಧಿಜಿಯವರ ಅಭಿಪ್ರಾಯ ಪಡುತ್ತಾರೋ ನೋಡಬೇಕಾಗಿದೆ.



# ವಿಜ್ಞಾನಯುಗ

### ಬ್ಯಾಸಿಕಲಿನ ಮೇಲೆ ದಿಕ್ಸೂಚಿ

ಬಹು ವಿಶಾಲವಾಧ ಸಾಗರಗಳಲ್ಲಿ ಸಂಚರಿಸುವ ಹಡಗುಗಳು ದಿಕ್ಕುಗಳನ್ನು ತಿಳಿಯುವುದಕ್ಕೋಸ್ಕರ ದಿಕ್ಸೂಚಿ ಅಥವಾ ಹೋಕಾಯಂತ್ರಗಳನ್ನು ಉಪಯೋಗಿಸುತ್ತಿರುವ ವಿಷಯುಗಳನ್ನು ನಾವು ಕೇಳಿದ್ದೂ ನೋಡಿದ್ದೂ ಇದೆ ಆದರೆ ಸ್ಯಾಕಲುಗಳ ಮೇಲೂಅಂಥ ದಿಕ್ಸೂಚಿಗಳನ್ನು ಉಪಯೋಗಿಸುತ್ತಲಿರುವರೆಂಬುದನ್ನು ಕೇಳಿದ್ದು ಇದೇ ಮೊದಲನ ಬಾರಿ. ಆದರೆ ಹೊಸ ಹೊಸ ಶೋಧನೆಗಳನ್ನು ಮಾಡಿ ಅದರ ಮೂಲಕವೇ ತಮ್ಮ ಮನೋರಂಜನೆ ಮಾಡಿಕೊಳ್ಳುತ್ತಿರುವ ಪಾಶ್ಚಾತ್ಯ ವಿಜ್ಞಾನಿಗಳು ಈಗ ಸ್ಯಾಕಲುಗಳಿಗೂ ದಿಕ್ಸೂಚಿಗಳನ್ನೇ ಜೋಡಿಸಿ ಮನೋರಂಜನದ ಹೊಸ ಸಾಮುಗ್ರಿಯೊಂದನ್ನು ಕಂಡುಕೊಂಡಿದ್ದಾರೆ. ಸ್ಯಾಕಲಿನ ಹೆಂಡ್ಲಬಾರಿಗೆ ಒಂದು ಸರಳನ್ನು ಬಿಗಿದು ಅದರ ಮೇಲೆ ಈ ದಿಕ್ಸೂಚಿಯನ್ನು ಜೋಡಿಸುವರು ಇದರಿಂದ ಮನೋರಂಜನದೊಂದಿಗೆ ಅಗತ್ಯಬಿದ್ದಾಗ ಸ್ಯಾಕಲಸವಾರನಿಗೆ ದಿಕ್ಕುಗಳ ಜ್ಞಾನವೂ ಆಗುತ್ತದೆ

### ಯೋಗದ ಮೂಲಕ ರೋಗದ ಚಿಕಿತ್ಸೆ

ಡಾಕ್ಟರ ಅಲೆಕ್ಸಾಂದರ ಎಂಬುವರ ಲಂಡನಿನ ಬಹು ಪ್ರಸಿದ್ಧ ಚಿಕಿತ್ಸಕರೂ ಹಲವು ರೋಗಗಳ ವಿಶೇಷಜ್ಞರೂ ಆಗಿದ್ದಾರೆ ಅವರು ಸ್ಲೀಪಿಂಗ ಫ್ರಾನ್ಸೇಸ್ ಎಂಬ ಒಂದು ಮೌಲಿಕ ಗ್ರಂಥವನ್ನು ಇಂಗ್ಲೀಷಿನಲ್ಲಿ ಬರೆದು ತಿಬೇತಿನ ಲಾಮಾಗಳು, ಭಾರತದ ಯೋಗಿಗಳು ಮತ್ತು ಈಜಿಪ್ತದ ಪಕೀರರು ಮಾಡುತ್ತಿರುವಂತೆ ಕೇವಲ ಶಾರೀರಿಕ ಮತ್ತು ಮಾನಸಿಕ ಸಾಧನದ ಮೂಲಕ ಅನೇಕ ಕಠಿನ ರೋಗಗಳ ಚಿಕಿತ್ಸೆ ಮಾಡುವದು ಸಾಧ್ಯವೆಂಬುದನ್ನು ಸ್ಪಷ್ಟಮಾಡಿದ್ದಾರೆ ಇಂದ್ರಜಾಲ ಅಥವಾ ಮಾಯಾವಿದ್ಯೆಯ ಮೂಲಕ ಒಬ್ಬನನ್ನು ವಶೀಕರಿಸಿ ಅವನಿಂದ ಒಂದು ರೋಗದ ಹಲವು ಸಂಗತಿಗಳನ್ನು ತಿಳಕೊಳ್ಳುವದು ಸಾಧ್ಯವಾಗಿದೆ. ಶರೀರದಲ್ಲಿ ಯಕ್ಸ-ರೇಯ ಮೂಲಕವೂ ತಿಳಿಯಲಿಕ್ಕಾಗದ ಕುಂದುಕೊರತೆ ಅಥವಾ ಲೋಪದೋಷಗಳನ್ನು ಈ ಯೋಗಶಕ್ತಿಯ ಮೂಲಕ ತಿಳಕೊಂಡು ಅವನ್ನು ಹೊರ ಮಾಡಬಹುದು.

### ಮೊಟ್ಟೆವ್ಯಾಪಾರಿಗಳಿಗೆ ಲಾಭದಮಾತು

ಈಗ ಮೊಟ್ಟೆಗಳನ್ನು ಮೂರು ತಿಂಗಳುಗಳ ತನಕವೂ ಕೊಳೆಯದಂತೆ ಇಟ್ಟುಕೊಳ್ಳುವದು ಸುಲಭವಾಗಿದೆ. ಅದಕ್ಕಾಗಿ ವಿಶೇಷ ಪರಿಶ್ರಮ ಪಡಬೇಕಾಗಿಲ್ಲ. ಸುಣ್ಣದಲ್ಲಿ ಮೊಟ್ಟೆಗಳನ್ನು ಇಟ್ಟರೆ ಅವು ಮೂರು ತಿಂಗಳಾದರೂ ಕೆಡುವದಿಲ್ಲ. ಸುಣ್ಣವನ್ನು ಒಂದು ಪಾತ್ರೆಯಲ್ಲಿ ತೆಗೆದುಕೊಂಡು ಅದನ್ನು ಐದಾರು ಗಂಟೆಗಳ ತನಕ ನೀರಲ್ಲಿ ನೆನೆಯಿಸುತ್ತಾರೆ. ಆ ಮೇಲೆ ಆ ಸುಣ್ಣದಲ್ಲಿ ಮೊಟ್ಟೆಗಳು ಮುಳುಗುವಂತೆ ಅದ್ದಿ ಇಡುತ್ತಾರೆ. ಸುಮಾರು ೨೫೦೦ ಮೊಟ್ಟೆಗಳಿಗೆ ೧೨ ೧ಳ ಸೇರು ಸುಣ್ಣವಿದ್ದರೆ ಸಾಕಾಗುತ್ತದೆ ಸುಣ್ಣಕ್ಕೆ ನೀರು ಬೆರಸಿ ಅದನ್ನು ಮಜ್ಜಿಗೆಯ ಹಾಗೆ ಚೆನ್ನಾಗಿ ಕಡೆಯುವದು ಅಗತ್ಯ. ಕೋಳಿಮೊಟ್ಟೆಗಳನ್ನು ಕೊಳೆಯದಂತೆ ಇಡುವದಕ್ಕೋಸ್ಕರ ನೆನೆದಸುಣ್ಣದೊಂದಿಗೆ ಸ್ವಲ್ಪ ಮಣ್ಣು ಮತ್ತು ಉಪ್ಪನ್ನು ಸೇರಿಸುವದೂ ಇದೆ ಹೀಗೆ ೨-೨॥ ಸಾವಿರ ಮೊಟ್ಟೆಗಳನ್ನು ಕೆಡದಂತಿಡಲಿಕ್ಕೆ ಒಂದು ರೂಪಾಯಿಯಷ್ಟು ಖರ್ಚಾಗುವದಿಲ್ಲ.

### ವೈಜ್ಞಾನಿಕರ ವಿಚಿತ್ರಪ್ರಯೋಗಗಳು

ಅಮೇರಿಕದ ವೈಜ್ಞಾನಿಕರು ಒಂದೊಂದು ಬಾರಿ ಬಹುವಿಚಿತ್ರ ಪ್ರಯೋಗಗಳನ್ನೇ ಮಾಡುವರು ಅವುಗಳನ್ನು ಕೇಳಿದ ಜನರು ಆ ವೈಜ್ಞಾನಿಕರನ್ನೇ ಹುಚ್ಚರೆಂದು ಕರೆಯಬಹುದು ಈಗ ಅಮೇರಿಕದ ಕೆಲವು ವೈಜ್ಞಾನಿಕರು ಒಂದೆರಡು ವಿಚಿತ್ರ ಶೋಧಗಳಲ್ಲಿ ತೊಡಗಿದ್ದಾರೆ-ಬಾಳೆಕಾಯಿಗಳೂ ಹಣ್ಣುಗಳೂ ನೆಟ್ಟಗಿರದೆ ಸ್ವಲ್ಪ ಬಗ್ಗಿರುವವಷ್ಟೆ? ಅವುಗಳನ್ನು ಡೊಣ್ಣೆಯಂತೆ ಹೇಗೆ ನೆಟ್ಟಗೆ ಮಾಡಬಹುದೆಂಬ ಹುಚ್ಚು ಅಲ್ಲಿಯ ಕೆಲವರಿಗೆ ಹತ್ತಿದೆ ಹೀಗೆ ಬಾಳೆಕಾಯಿ ಅಥವಾ ಹಣ್ಣುಗಳು ಡೊಂಕಾಗಿದೆ ನೆಟ್ಟಗಾದರೆ ಅವುಗಳನ್ನು ಪೆಟ್ಟಿಗೆಗಳಲ್ಲಿ ತುಂಬಿಸಿ ಒಂದು ಊರಿನಿಂದ ಇನ್ನೊಂದು ಊರಿಗೆ ಕಳುಹಿಸಲಿಕ್ಕೆ ಬಹಳ ಅನಕೂಲವಾಗುತ್ತದೆ ಹಾಗಾದರೆ ಸಣ್ಣ ಪೆಟ್ಟಿಗೆಯಲ್ಲಿ ಹೆಚ್ಚು ಹಣ್ಣುಗಳನ್ನು ತುಂಬಿಸಲಿಕ್ಕಾಗುತ್ತದೆ ಅದೇ ರೀತಿಯಲ್ಲಿ ಮೊಟ್ಟೆಗಳು ಗೋಲಾಕಾರವಾಗಿರುವದರ ಬದಲಿಗೆ ಆಯತ ಅಥವಾ ಚೌಕವಾಗಿದ್ದರೆ ಅವುಗಳನ್ನು ತುಂಬಿಸಿ ಕಳುಹಿಸಲಿಕ್ಕೆ ಸ್ವಲ್ಪವೇ ಸ್ಥಳವಿದ್ದರೆ ಸಾಕಾಗುವದು. ಅದಕ್ಕೋಸ್ಕರ ಮೊಟ್ಟೆಗಳ ಆಕಾರವನ್ನು ಆಯತ ಅಥವಾ ಚೌಕವಾಗಿರಲಿಕ್ಕೂ ವೈಜ್ಞಾನಿಕರು ಪ್ರಯತ್ನಿಸುತ್ತಲಿದ್ದಾರೆ. ಅವು ಹೊಸ ಆಕಾರಕ್ಕೆ ಬಂದರೆ ಆಗ ಬಿದ್ದಾಗ ಅವು ಒಡೆದು ಹೋಗುವ ಸಂಭವವೂ ಕಡಿಮೆಯಾಗುವದ ಬಾಳೆಹಣ್ಣುಕಾಯಿ ಮತ್ತು ಮೊಟ್ಟೆಗಳ ಆಕಾರವನ್ನು ತಮಗೆ ಬೇಕಾದಂತೆ ತಿದ್ದಬರುವ ಉಪಾಯವನ್ನು ಶೀಘ್ರದಲ್ಲಿಯೇ ಕಂಡುಹಿಡಿಯಬಹುದೆಂಬ ಒಂದು ದೊಡ್ಡ ಭರವಸೆಯನ್ನೇ ಈ ವಿಜ್ಞಾನಿಗಳು ಇಟ್ಟುಕೊಂಡಿರುವರು.

### ಇನ್ನು ಮೈನ್ ಭಯವಿಲ್ಲ

ಮೈನ್ ಸೂಚಕ ಯಂತ್ರವು ಮೈನೊಂದನ್ನು ಕಂಡೊಡನೆಯೇ ಎಚ್ಚರಿಕೆ ಗಂಟೆಯನ್ನು ಹೊಡೆದು ನಾವಿಕನಿಗೆ ಎಚ್ಚರಿಕೆಯನ್ನು ಕೊಡುತ್ತದೆ ಅಲ್ಲದೆ ಈ ಹೊಸ ಯಂತ್ರದ ಬೆಲೆಯು ಹೆಚ್ಚೇನೂ ಇಲ್ಲ ಆದಕಾರಣ ಇನ್ನು ಮುಂದೆ ಮೈನ ಭಯವಿಲ್ಲ.


ಭಾರತ ಸ್ತ್ರೀಯರಿಗೆ ಉತ್ತಮೋತ್ತಮವಾದ ಟಾನಿಕ್

ಲೋಧ್ರ

ಲೋಧ್ರ

ಬಲವರ್ಧಕ ಔಷಧಗಳ ರಾಣಿ

ಸ್ತ್ರೀಯರ ಸಕಲ ಗರ್ಭಾಶಯರೋಗಗಳನ್ನು ಹೋಗಲಾಡಿಸಿ ಸಂಪೂರ್ಣಾರೋಗ್ಯವನ್ನೂ, ಸುಖವನ್ನೂ ನೀಡುವ ಟಾನಿಕ್

ಕೇಸರಿ ಕುಟೀರಂ, ರಾಯಪೇಟೆ, ಮದರಾಸು

# ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾ. 11-2-'40ರಿಂದ ತಾ. 27-2-'40ರ ವರೆಗೆ

## ಶ್ರವಣ ಬೆಳುಗುಳದಲ್ಲಿ ಶ್ರೀ ನೇಮಿತೀರ್ಥಂಕರ ಪಂಚಕಲ್ಯಾಣ ಮಹೋತ್ಸವ

ಮತ್ತು

## "ಶ್ರೀ ಗೋಮಟೇಶ್ವರ ಸ್ವಾಮಿ ಮಹಾಮಸ್ತಕಾಭಿಷೇಕ"

ತಾರೀಕು 11—2—40ರಿಂದ ತಾರೀಕು 27—2—40ರ ವರೆಗೆ ಶ್ರವಣ ಬೆಳುಗುಳದಲ್ಲಿ ಬಲು ವಿಜೃಂಭಣೆಯಿಂದ ನಡಿಯಲಿರುವ ಶ್ರೀ ಗೋಮಟೇಶ್ವರ ಸ್ವಾಮಿ ಮಹಾಮಸ್ತಕಾಭಿಷೇಕಕ್ಕೆ ಹೋಗುವ ಯಾತ್ರಿಕರ ಅನುಕೂಲತೆಗಾಗಿ ನಾವು ಸ್ಪೆಶ್ಯಲ್ ಸರ್ವಿಸ್ಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡು ಮಾಡಿರುತ್ತೇವೆ

| | ರೂ ಆ ಪೈ |
|---|---|
| ಮಂಗಳೂರಿನಿಂದ—ಉಪ್ಪಿನಂಗಡಿಗಾಗಿ-ಹಾಸನ ಶ್ರವಣ ಬೆಳುಗುಳಕ್ಕೆ ಚಾರ್ಜು | 4 0-0 |
| ಮೂಡಬಿದ್ರೆಯಿಂದ—ಗುರುವಾಯನಕೆರೆ ಚಾರ್ಮಾಡಿ ಗಡಿಗಾಗಿ ಮೂಡುಗೆರೆ ಹಳೇಬೀಡು ಅರಸಿಕೆರೆಗಾಗಿ ಹಾಸನ ಶ್ರವಣ ಬೆಳುಗುಳಕ್ಕೆ | 4-12-0 |
| ಮೂಡಬಿದ್ರೆಯಿಂದ—ಚಾರ್ಮಾಡಿಗಡಿಗಾಗಿ-ಮೂಡುಗೆರೆ ಬೇಲೂರು ಹಾಸನಕ್ಕಾಗಿ ಶ್ರವಣ ಬೆಳುಗುಳಕ್ಕೆ | 4 8-0 |
| ಮೂಡಬಿದ್ರೆಯಿಂದ—ಚಾರ್ಮಾಡಿಗಡಿಗಾಗಿ-ಮೂಡುಗೆರೆ ಚಿಕ್ಕಮಂಗಳೂರು ಹಾಸನಕ್ಕಾಗಿ ಶ್ರವಣ ಬೆಳುಗುಳಕ್ಕೆ | 4-12 0 |

ಯಾತ್ರಿಕರ ಅನುಕೂಲತೆಗಳ ಬಗ್ಗೆ ಯೋಗ್ಯ ಏರ್ಪಾಡು ಮಾಡಲಾಗುವುದು.

ಹೆಚ್ಚಿನ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು:

***JOINT MANAGERS,***

**The Combined Booking Agency,** MANGALORE

**The Joint Booking Office,** KODIALBAIL.

(Regd)

# ಅಮೃತಾಂಜನ

ತಲೆವೇದನೆ, ಶಿರೋವೇದನೆ ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಏದುಸಿರು ಶ್ವಾಸ ಗಳು, ಬಾತ ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

**ಅಮೃತಾಂಜನ ಡಿಪ್ರೋ.** ಬೊಂಬ್ಯಾ, ಮದರಾಸು, ಕಲ್ಕತ್ತ.

(ಅ)ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು



# HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಂಟೈನ್.

ಉಪಯೋಗಿಸಿರಿ

**ಕೆ. ವೆಂಕಟೇಶ ಬಾಳಿಗ,**
ಗೋಳಿಕಟ್ಟಾ ಬಜಾರ್, ಮಂಗಳೂರು.



## ಮದನಕಾಮೇಶ್ವರಿ ಲೇಹ

**ಅತ್ಯಂತ ಬಲಕಾರಿ.** ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳೆನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

**ಪಿ. ಸಿ. ಎ. ಅಂಡ್ ಕೋ,**
ಆಯುರ್ವೇದಿಕ್ ಸಮಾಜ, ಪೆರಿಡೇಪಿ.
P. O. Peridepi (ನೆಲ್ಲೂರು ಜಿ.)


## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮುಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ ಅವ್ವಲ್ ಕಂದ ಗುಡ್ಡು ಮುಡಿಗೆ | 1 13 0 | 1—14—0 |
| ,, ದುಯಂ ,, ,, | | |
| ,, ಅವ್ವಲ್ ಸುಗ್ಗಿ ,, | | — |
| ,, ದುಯಂ ,, ,, | | — |
| ಅಕ್ಕಿ ಅವ್ವಲ್ ಗುಡ್ಡು ,, ಹಳ್ತು | 4—14 0 | |
| ,, ದುಯಂ ,, ,, | 4 8—0 | |
| ,, ಅವ್ವಲ್ ಸುಗ್ಗಿ ,, | 4—8—0 | 4—8— |
| ,, ದುಯಂ ,, ,, | 4—4—0 | 4 6—0 |
| ತೆಂಗಿನ್ ಕಾಯಿ ಸುಲಿದದ್ದು 1000ಕ್ಕೆ | 47—8—0 | 58—8—0 |
| ,, ಸಿಪ್ಪೆ ಇದ್ದದು ,, | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 75—0— |
| ,, ದಿಲ್‌ಪಸಂದ ,, | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಯುದ್ದ ಅಡಿಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 8—0—0 | 8—12—0 |
| ಕಬ್ಬಿನ ಬೆಲ್ಲ ಖಂಡಿಗೆ | 37—8—0 | 50—0—0 |
| ಒಳ್ಳೆಮೆಣಸು ಹಂಡ್ರೆಡ್ವೇಟಿಗೆ | 19—0—0 | 20—8—0 |

Date 2-2-1940 ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—13—0 Regd. No. M3406

# ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 2—2—1940 [ಸಂಚಿಕೆ 5


## The Bombay Life Assurance Company, Ltd.

(Estd. 1908)

**COMPARE**

***Your Life Assurance with any other property you possess***
***What is its Guaranteed Value***

If you live-today a few years more-when you are old?
If you die-to your family and dependants?

**REMEMBER THAT**

If you live Life Insurance takes the place of your professional income during your old age

If you die it provides your family with enough income for their maintenance and the education of your children.

BOMBAY LIFE" offers all that is best in LIFE ASSURANCE

**1938 RECORD**

| | |
|---|---|
| Completed Business | Rs 1 44,91,000 |
| Life Assurance Fund | Rs 1 17 69 748 |
| Total Assets | Rs 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

**Bombay Life Building,**

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES

Puthiyara, Calicut

Car Street, Mangalore

Visweswarapuram Circle Bangalore City

Post Box No. [illegible] Mount Road Madras

Gautam Nivas, Charni Road Girgaum Bombay No 4

Central Station Road Trivandrum



## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

which will tone the nervous system, build healthy tissues and enrich the blood.

**Thus keeps you fresh and sprightly.**

**Bhuvanendra Products, Ltd.,**

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore



ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆ ಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

## ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**

ಕಟಪಾಡಿ, — ದ. ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಸ್ಥಳೀಯ ಸ್ಟೋಕಿಸ್ಟರು: ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು


Edited Printed & Published by A. S. Kamath at the Sharada Press, Car Street, Mangalore

# ಸ್ವದೇಶಾಭಿಮಾನಿ

# SWADESHABHIMANI

KANNADA ILLUSTRATED WEEKLY

## ಕನ್ನಡ ಭಾಷೆಯ ಮೂಲಕ ರೇಡಿಯೋ ವಾರ್ತೆ

ರೇಡಿಯೋ ಮೂಲಕ ಪ್ರಪಂಚದ ಸುದ್ದಿಗಳನ್ನು ತಿಳಿಯಲು ಇಂದು ಜನರಿಗೆ ಸೌಕರ್ಯವಾಗಿರುವುದೂ, ಅ ಕುರಿತು ಹೆಚ್ಚು ಹೆಚ್ಚಾಗಿ ಜನರು ಉತ್ಸುಕರಾಗಿರುವುದೂ ಸರಿಯಷ್ಟೆ? ಅದರಲ್ಲಿಯೂ ಕ್ಷಣ ಕ್ಷಣಕ್ಕೂ ಉದ್ವೇಜನಕನಾದ ಇಂದಿನ ಯುದ್ಧ ವಾರ್ತೆಯನ್ನು ಕೇಳಲು ಎಲ್ಲಿ ಕಡೆಯಲ್ಲಿಯೂ ಜನರು ತೀರದ ಆಸೆಯನ್ನು ತೋರಿಸುತ್ತಿದ್ದಾರೆ.

ಆದರೆ ಇದುವರೆಗೆ ಅಖಿಲಭಾರತದ ಯಾವುದೇ ರೇಡಿಯೋ ಸ್ಟೇಶನಿನಿಂದಾಗಲಿ ಸುದ್ದಿಯನ್ನು ಕನ್ನಡ ಭಾಷೆಯಲ್ಲಿ ಕೊಡುವ ಏರ್ಪಾಡು ಆಗಿಲ್ಲ. ಇದು ಕನ್ನಡಿಗರ ದೌರ್ಭಾಗ್ಯವೆನ್ನಬೇಕು. ಮುಂಬಯಿಯ ರೇಡಿಯೋ ಸ್ಟೇಶನಿನಿಂದ ಪಕ್ಷಕ್ಕೊಮ್ಮೆ ಶೈಕ್ಷಣಿಕ ವಿಚಾರದಲ್ಲಿ ಉಪನ್ಯಾಸಗಳನ್ನು ಏರ್ಪಡಿಸುವ ವ್ಯವಸ್ಥೆ ಮಾತ್ರ ಇಂದು ನಡೆದಿದೆ. ಅದೂ ಕೂಡಾ ಹೆಚ್ಚಾಗಿ ಜನರಿಗೆ ವಿರಾಮವಿಲ್ಲದ ಸಮಯದಲ್ಲಿ ಎಂದರೆ ಅಪರಾಹ್ನ ೩ ಇಲ್ಲವೆ ೩ ೩೦ ಗಂಟೆಗೆ ನಡೆಯುವ ಏರ್ಪಾಡು ಇದೆ.

ಇಂದು ಭಾರತದಲ್ಲಿ ರೇಡಿಯೋ ಸುದ್ದಿಯು ಆಂಗ್ಲ ಭಾಷೆಯಲ್ಲಿಯೂ ಹೆಚ್ಚಾಗಿ ಕನ್ನಡವನ್ನು ಬಿಟ್ಟು ಇತರ ಎಲ್ಲಾ ದೇಶೀಯ ಭಾಷೆಗಳಲ್ಲಿಯೂ ಕೊಡುವ ಏರ್ಪಾಡು ಆಗಿರುತ್ತದೆ. ಕೆಲವೇ ಲಕ್ಷ ಮಂದಿಯು ಮಾತನಾಡುತ್ತಿರುವ ಸಾಮಾನ್ಯ ಪ್ರಚಾರವಿರುವ ಪುಸ್ತು ಮತ್ತು ಪರ್ಶಿಯನ್ ಭಾಷೆಗಳಲ್ಲಿಯೂ ಸುದ್ದಿಗಳನ್ನು ರೇಡಿಯೋ ಮೂಲಕ ಕೊಡುವ ಸಿದ್ಧತೆಗಳು ಆಗಿರಲು, ಇಷ್ಟೊಂದು ಪ್ರಧಾನವೂ ಅನೇಕ ಲಕ್ಷ ಮಂದಿಯ ಭಾಷೆಯೂ ಆಗಿರುವ ಕನ್ನಡ ಭಾಷೆಯಲ್ಲಿ ರೇಡಿಯೋ ಸುದ್ದಿಗಳನ್ನು ಕೇಳುವ ಏರ್ಪಾಡುಗಳಾಗಿಲ್ಲವೆಂಬುದು ತುಂಬಾ ವಿಷಾದಜನಕವಾಗಿದೆ.

ಇಂದು ಕನ್ನಡನಾಡಿನಲ್ಲಿ ೧೧೦ ಲಕ್ಷ ಕನ್ನಡ ಮಾತೃಭಾಷೆಯಾಗಿರುವವರೂ ೪೦ ಲಕ್ಷ ಕನ್ನಡ ಅರಿಯುವವರೂ ಇದ್ದಾರೆ. ಕ್ರಿಸ್ತ ಪೂರ್ವ ಕಾಲದಲ್ಲಿಯೇ ಅತ್ಯಂತ ವಿಭವೋನ್ನತವಾಗಿ ಮೆರೆದ ಭಾಷೆಯು ಕನ್ನಡವಾಗಿದೆ. ಇಂದು ಮುಂಬಯಿ, ಮದ್ರಾಸು, ಉಸ್ಮಾನಿಯಾ, ಮೈಸೂರು, ಕಲ್ಕತ್ತಾ, ವಿಶ್ವ ವಿದ್ಯಾನಿಲಯುಗಳಲ್ಲಿ ಕನ್ನಡವು ಡಿಗ್ರಿ ಪದವಿಯನ್ನು ಪಡೆಯಲು ಯೋಗ್ಯತೆ ಹೊಂದಿದೆ. ಮುಂಬಯಿ ಪ್ರಾಂತದಲ್ಲಿ ಸಾಧಾರಣ ೪೦ ಲಕ್ಷ ಜನರೂ, ಮದ್ರಾಸು ಪ್ರಾಂತದಲ್ಲಿ ಸಾಧಾರಣ ೩೦ ಲಕ್ಷ ಜನರೂ, ಇಡೀ ಮೈಸೂರು ಪ್ರಾಂತದವರೂ, ನೈಜಾಮ ಸರಕಾರದಲ್ಲಿ ಮೂರು ಜಿಲ್ಲೆಯವರೂ ಕನ್ನಡಿಗರಾಗಿದ್ದಾರೆ. ಹೀಗಿರುವಾಗ, ಅನೇಕ ದೇಶಿಯ ಸಹೋದರೀ ಭಾಷೆಗಳಲ್ಲಿ ರೇಡಿಯೋ ಸುದ್ದಿಯ ಏರ್ಪಾಡು ಈಗಾಗಲೇ ಆಗಿದ್ದರೂ, ಇಷ್ಟು ಪ್ರಧಾನವಾಗಿರುವ ಕನ್ನಡ ಭಾಷೆಯಲ್ಲಿ ಅದರ ವ್ಯವಸ್ಥೆ ಮಾಡಲು ರೇಡಿಯೋ ಅಧಿಕಾರಿಗಳು ಯಾತಕ್ಕೆ ಮನಸ್ಸು ಮಾಡಿಲ್ಲವೆಂಬುದು ವಿಚಾರಣೀಯವಾಗಿದೆ.

ನಮಗೆ ತಿಳಿದು ಬಂದಿರುವಂತೆ, ಕನ್ನಡಿಗರು ಈಗಾಗಲೇ ೩೦೦೦ ರೇಡಿಯೋ ಸೆಟ್ಟುಗಳನ್ನು ಪಡೆದುಕೊಂಡಿರುವರು. ಇಂದು ಕೇವಲ ಆಂಗ್ಲ ಭಾಷಾಭ್ಯಾಸಿಗಳು ಮಾತ್ರ ಪಡೆದುಕೊಂಡಿರಬಹುದಾಗಿದೆ. ಆದರೆ ಕನ್ನಡದಲ್ಲಿಯೂ ಸುದ್ದಿ ಬರುವ ವ್ಯವಸ್ಥೆಯಾದರೆ ಮನೆಯ ಹೆಂಗಸರು ಬಾಲರು, ವೃದ್ಧರು, ಮಾತ್ರವಲ್ಲದೆ ಇಂಗ್ಲಿಷ್ ಅರಿಯದ ಅನೇಕ ಗೃಹಸ್ಥರೂ ರೇಡಿಯೋ ಸುದ್ದಿಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುವುದು ಸಹಜವಾಗುದರಿಂದ ಹೆಚ್ಚು ಮನೆಗಳಲ್ಲಿ ರೇಡಿಯೋ ಸೆಟ್ಟುಗಳು ಆಗುವುವೆಂಬುದಕ್ಕೆ ಯಾವ ಸಂಶಯವೂ ಇಲ್ಲ.

ಅಖಿಲಭಾರತ ರೇಡಿಯೋ ಸಂಘವು ಅಖಿಲಭಾರತಕ್ಕೆ ಸಂಬಂಧಿಸಿದ ವಿಷಯವಾಗಿದೆ. ಆದ ದರಿಂದ ಕನ್ನಡಿಗರಿಗೆ ಸಲ್ಲತಕ್ಕ ಸೌಕರ್ಯಗಳು ಅದರಿಂದ ಒದಗಲೇಬೇಕಾಗಿದೆ. ಸಾರ್ವಜನಿಕರು ಕನ್ನಡಿಗರು ಈ ವಿಷಯದಲ್ಲಿ ಎಚ್ಚೆತ್ತು ತೀವ್ರ ಆಂದೋಲನ ಎಲ್ಲೆಲ್ಲೂ ಬೇಕಾಗಿದೆ. ಕನ್ನಡ ನಾಡಿನಲ್ಲಿ ಬಹಿರಂಗ ಸಭೆಗಳಲ್ಲಿ, ನಗರ ಸಭೆಗಳಲ್ಲಿ ಕಾಂಗ್ರೆಸು ಕಮಿಟಿಗಳಲ್ಲಿ, ಜಿಲ್ಲಾ ಬೋರ್ಡ ಸಭೆಗಳಲ್ಲಿ, ನಗರ ಸಭೆಗಳಲ್ಲಿ ಹೀಗೆ ಸರ್ವತ್ರ ಈ ಬೇಡಿಕೆಯು ಮುಂದೆ ಬಂದು ಕನ್ನಡ ಭಾಷೆಗೆ ಸಲ್ಲತಕ್ಕ ನ್ಯಾಯ ಕನ್ನಡಿಗರಿಗೆ ಸಿಗಬೇಕಾದ ಸೌಕರ್ಯವು ಹೆಚ್ಚಿನ ವಿಳಂಬವಿಲ್ಲದೆ ಆಗುವಂತೆ ಪ್ರಯತ್ನ ನಡೆಯಬೇಕೆಂದು ಅಪೇಕ್ಷಿಸುತ್ತೇವೆ. ಭಾರತ ಸರಕಾರವೂ ಪ್ರಾಂತ ಸರಕಾರವೂ ಈ ಕಡೆಗೆ ತೀವ್ರ ಗಮನಕೊಡುವಂತೆ ಮಾಡುವುದು ಅತ್ಯಂತ ಅವಶ್ಯವಿದೆ.

---

## ನೋಟೀಸು

ಪುತ್ತೂರು ಡಿ ಮು ಕೋರ್ಟಿನಲ್ಲಿ

O P 12 1940

ಎ ಮರಿಯಪ್ಪಯ್ಯ —Petitioner

1 ವ್ಯಾಸರ ನಾರಾಯಣ ಎ ರಾಮಕೃಷ್ಣರಾಯನ ಮಗ ಗಾರ್ಡಿಯಾನ ಅಜ್ಜ ತಿಮ್ಮಪ್ಪಯ್ಯ — ಪದ್ಮನಾಭಯ್ಯನ ಮಗ ಆರ್ಯಾಪು ಗ್ರಾಮ. 2 ಕೌಶಮ್ಮ— ಸದ್ರಿ ರಾಮಕೃಷ್ಣ ರಾಯನ ವಿಧವೆ— ಪುತ್ತೂರು ಕಸಬೆಯಲ್ಲಿ ಅರ್ಜಿದಾರನ ಮನೆಯಲ್ಲಿ — 3 ಎ ಸುಬ್ರಾಯ್ ಅರ್ಜಿದಾರನ ತಮ್ಮ ಪುತ್ತೂರು ಕಸಬ } Respondents

ಈ ಮೂಲಕ ತಿಳಿಯ ಪಡಿಸುವದೇನೆಂದ್ರೆ

ಅರ್ಜಿದಾರನ ಪ 3ನೆ ಎದ್ರಿಯ ಖಾಸ ತಮ್ಮ ೧ನೆ ಎದ್ರಿಯ ತಂದೆ ಪ ೨ನೆ ಎದ್ರಿಯ ಗಂಡನಾದ ಮೃತ ರಾಮಕೃಷ್ಣರಾಯನ ಬಾಬ್ತು ಆತ ಬರೆದಿಟ್ಟ ವೀಲುನಾಮೆ ಶರ್ತ ಪ್ರಕಾರ ಆತನು ದಿ ಕರ್ನಾಟಕ ಬೇಂಕ್ ಮತ್ತು ದಿ ಕೆನರಾ ಇಂಡಸ್ಟ್ರೀಯಲ್ ಮತ್ತು ಸಿಂಡಿಕೇಟ್ ಬೇಂಕುಗಳಲ್ಲಿಯೂ ಕೂಡಾ ಮೃತನು ಡಿಪೋಜಿಟಾಗಿ ಇಟ್ಟಿರುವ ಐವಜುಗಳನ್ನು ವಸೂಲು ಪಡಿಯಲು ಅರ್ಜಿದಾರನು ಹಕ್ಕುದಾರನಾದ್ದರಿಂದ ಆತನಿಗೆ ಸಕ್ಸೇಶನ್ ಸರ್ಟಿಫಿಕೇಟ್ ಕೊಡಿಸಬೇಕಾಗಿ ಬರಕೊಂಡ ಮೇಲಿನ ಅರ್ಜಿಯ ನೋಟೀಸಿನ ತನ್ಕಿಖ್ಯಾದೆಯು ತಾರೀಕು ೨೪—೨—೧೯೪೦ ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಆ ಕುರಿತು ಎದ್ರಿಗಳಿಗೆ ಯೇನಾದರೂ ಆಕ್ಷೇಪಗಳು ಹೇಳುವದಿದ್ದಲ್ಲಿ ಆ ಖ್ಯಾದೆಗೆ ತಪ್ಪದೆ ೧೧ ಘಂಟೆಗೆ ಕೋರ್ಟಿಗೆ ಹಾಜ್ರಾಗಿ ಹೇಳಿಕೊಳ್ಳ ತಕ್ಕದ್ದು. ತಪ್ಪಿದರೆ ಅವರನ್ನು ಶಿವಾಯಿ ಏಕತ ಮಾಡಿ ಸದ್ರಿ ಕ್ಷವ ಹರಜಿಯನ್ನು ತನ್ಕಿಖಿಯಿಂದ ತೀರ್ಮಾನಿಸಲಾಗುವದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

Puttur
6-2-1940 } B. Ramachandra Rao
M.A.B.L.
Pleader for Petitioner

ರಾತ್ರೆ ಸುಖವಾದ
ನಿದ್ದೆ ಬೀಳಬೇಕಾ
ದರೆ ಒಂದು ಕಪ್ಪು
'ಓವಲ್‌ಟಿನ್'
ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್‌ಟಿನ್' ಕುಡಿದರೆ ರಾತ್ರೆ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯು ಉಂಟಾಗುತ್ತದೆಂದು ಖಂಡಿತ ಹೇಳಬಹುದು.

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ಬಲಿತ ಮಾಗಿದ ಬಾರ್ಲಿ, ದನದ ಹಾಲು ಮತ್ತು ಇತರ ಅಮೋಘವಾದ ವಿಟಮಿನು ಮತ್ತು ಪೊಸ್ಫೇಟ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್‌ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರೆ ಸುಖವಾದ ನಿದ್ದೆಯನ್ನೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ. ಇತರ ನಕಲಿ ಪಾನೀಯಗಳನ್ನು ಬಿಡಿರಿ.

'ಓವಲ್‌ಟಿನ್'

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:—

ಜೇಮ್ಸ್ ರೈಟ್ ಲಿಮಿಟೆಡ್,
149 ಬ್ರೋಡ್‌ವೇ, ಮದ್ರಾಸು.
ಕಲ್ಕತ್ತಾ, ಬೊಂಬ್ಬಾ ಮತ್ತು ಕರಾಚಿ.

'ಓವಲ್‌ಟಿನ್' ಬಿಸ್ಕುಟುಗಳು:—

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ ಬೆಲೆಯ 'ಓವಲ್‌ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OL 66 49

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

16—2—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೬—೨—೧೯೪೦

# ಭಾರತಕ್ಕೆ ಬೇಗನೇ ಸ್ವಾತಂತ್ರ್ಯವನ್ನು ಕೊಡಬೇಕು

## ಪ್ಯಾರಿಸ್ ಪತ್ರಿಕೆಯ ಸೂಚನೆ

## ಅಲ್ಪಸಂಖ್ಯಾಕರ ಮಾತಿನಲ್ಲಿ ತಿರುಳಿಲ್ಲ

## ಗಾಂಧಿ ವೈಸರಾಯರ ಭೇಟಿಯ ಫಲ?

ಬ್ರಿಟಿಷ್ ಪ್ರಧಾನ ಮಂತ್ರಿ ಚೇಂಬರ್ಲೇನ್

ಹಿಂದ ಸ್ಥಾನದ ಸ್ವರಾಜ್ಯದ ಬೇಡಿಕೆ ಯನ್ನು ಬ್ರಿಟನು ಈಗಲೇ ಪೂರೈಸಿ ಕೊಡ ಬೇಕಾದರೆ ಯುರೋಪಿನ ಸಂಗ್ರಾಮದಲ್ಲಿ ಹಿಂದ ಸ್ಥಾನದ [illegible] ಪೂರ್ವಕವಾದ ಸಹಾಯ ಸಹಕಾರ ಗಳ ಬ್ರಿಟನ ಮಿತ್ರರಾಷ್ಟ್ರಗಳಿಗೆ ಪ್ರಾಪ್ತ ವಾಗುವವು. ಆದರಿಂದ ಮಿತ್ರರಾಷ್ಟ್ರ ಗಳು ಸಂಗ್ರಾಮದಲ್ಲಿ ವಿಜಯ ಮಾರ್ಗವು ನಿಷ್ಕಂಟಕವಾಗುವದೆಂದು ಮೆಡಾಮ್ ಮೋರಿನ ಎಂಬ ಮಹಿಳೆ ಯು ಒಂದು ಪ್ರಸಿದ್ಧ ಪೇರಿಸ ಪತ್ರಿಕೆ ಯಲ್ಲಿ ಪ್ರಮಾಣ ಸಹಿತವಾದ ಮಹತ್ವ ಪೂರ್ಣ ಲೇಖನವನ್ನು ಬರೆದಿದ್ದಾಳೆ

ಭಾರತ ಮಂಡಲಕ್ಕೆ ಮಿತ್ರರಾಷ್ಟ್ರ ಗಳು ಕೈಕೊಂಡ ಯುದ್ಧಕಾರ್ಯದಲ್ಲಿ ಪೂರ್ಣ ಸಹಾನುಭೂತಿಯು ಇರುತ್ತ ದೆಂಬುದನ್ನು ಅವರ ಭಾಷಣಗಳ ಅಂಶ ಗಳಿಂದ ಸ್ಪಷ್ಟಮಾಡಿ, ಭಾರತೀಯರ ಸ್ವಾತಂತ್ರ್ಯ ಅಪೇಕ್ಷೆಯನ್ನು ಬ್ರಿಟನು ಸಲ್ಲಿಸುವದರಲ್ಲಿ ತೋರಿಸುವ ಅಸಡ್ಡೆ ಮತ್ತು ಉದಾಸೀನತೆಗಳೇ ಭಾರತೀ ಯರು ಯುದ್ಧದಲ್ಲಿ ಮಿತ್ರರಾಷ್ಟ್ರಗಳಿಗೆ ಕ್ರಿಯಾತ್ಮಕ ಸಹಾನುಭೂತಿಯನ್ನು ತೋರಿಸದಿರುವ ಕಾರಣವಾಗಿರುವ ದೆಂದು ಶ್ರೀಮತಿ ಮೋರಿನರು ತೋರಿಸಿ ಕೊಟ್ಟಿದ್ದಾರೆ.

**ಅಲ್ಪಸಂಖ್ಯಾಕರ ಮಾತಿನ ಬೆಲೆ**

ಅಲ್ಪ ಸಂಖ್ಯಾಕರ ಧುರೀಣರೆನ್ನಿಸಿ ಕೊಳ್ಳುವ ಕೆಲವು ಜನ ಸ್ವಾರ್ಥಿಗಳು [illegible] ಭಾರತದ ಸ್ವಾತಂತ್ರ್ಯ [illegible] ಪ್ರದೇಶಗಳ [illegible] ಸಲಹೆಗಳ [illegible] ಕಾಲ [illegible] ಪತ್ರಿಕೆ [illegible]

**ಬ್ರಿಟನಿನ ಅಗತ್ಯ**

ಹಿಂದ ಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡ ಬೇಕಾದ ನ್ಯಾಯದ ಕಾರಣಕ್ಕಾಗಿ [illegible] ಕಾರಣದಿಂದ ಕೂಡಲೇ ಬ್ರಿಟನು ತನ್ನ ಸ್ವಾರ್ಥವನ್ನು ಪೂರೈಸಿ ಕೊಳ್ಳಲಿ ಕ್ಕಾಗಿಯಾದರೂ ಹಿಂದ ಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡ ಬೇಕಾದ ಅಗತ್ಯ ವಾಗಿದೆ ಎಂಬುದನ್ನು ಅವರು ತಿಳಿಸಿರು ವರು. ಹಿಂದುಸ್ಥಾನವನ್ನು ಈಗಲೇ ಸ್ವತಂತ್ರ ಮಾಡಿದುದಾದರೆ ಬ್ರಿಟನಿಗೆ ಕೃತಜ್ಞವಾದ ಹಿಂದುಸ್ಥಾನವು ತನ್ನ ತನು ಮನ ಧನ ಸಹಾಯವನ್ನು ಬ್ರಿಟ ನಿಗೆ ಕೊಡಲು ಮುಂದಾಗುವುದು. ಸ್ವ ತಂತ್ರ ಹಿಂದುಸ್ಥಾನವು ಕೊಡುವ ನೈತಿಕ ಬೆಂಬಲವಂತೂ ಅಮೂಲ್ಯವಾಗಿದೆ ಅದು ಸಿಕ್ಕಿತೆಂದಾದರೆ ಇಡೀ ಲೋಕದ ಸಹಾನುಭೂತಿಯು ಬ್ರಿಟನಿಗೆ ಪ್ರಾಪ್ತ ವಾದಂತಾಯಿತು.

**ಲೋಕಮತವು ಹಿಂದುಸ್ಥಾನದ ಕಡೆಗೆ**

ಹಿಂದುಸ್ಥಾನವು ಅಥವಾ ಕಾಂಗ್ರೆಸು ಬ್ರಿಟನಿನ ಮುಂದಿಟ್ಟ ಸ್ವಾತಂತ್ರ್ಯದ ಬೇಡಿಕೆಯಲ್ಲಿ ಲೋಕ ಮತವು ಹಿಂದುಸ್ಥಾನಕ್ಕೆ ಅನುಕೂಲ ವಾಗಿದೆ. ಕಾಂಗ್ರೆಸಿನ ಕಡೆಗೆ ಬ್ರಿಟನು ಉದಾಸೀನವಾಗಿರುವುದು ಪ್ರಪಂಚಕ್ಕೆ ಹಿತಕರವಾಗಿ ಕಾಣುವದಿಲ್ಲ. ಬ್ರಿಟನಿ ನಲ್ಲಿಯೇ ಆದರೂ ಜನ ಮತವು ಹಿಂದು ಸ್ಥಾನಕ್ಕೆ ಅನುಕೂಲವಾಗಿರುತ್ತ ಬಂದಿರುತ್ತಿರುವ ನಿದರ್ಶನಗಳು ಹಲವು ಇವೆ ಆದನ್ನು ಬ್ರಿಟಿಷ್ ಸರಕಾರವು ಮನಗಂಡು ಹಿಂದುಸ್ಥಾನಕ್ಕೆ [illegible] ಸ್ವರಾಜ್ಯವನ್ನು ಕೊಡಬೇಕೆಂದು [illegible]

**ಗಾಂಧಿ ವೈಸರಾಯರ ಸಂದರ್ಶನ**

ಪೊಸ್ತು ವೈಸರಾಯರು [illegible] ಗಾಂಧಿಯವರ ಭೇಟಿಯಾಗಿ ಹಿಂದು ಸ್ಥಾನದ ಸ್ವಾತಂತ್ರ್ಯ ಪ್ರಶ್ನೆಯು ಏನೆಂದು ಇತ್ಯರ್ಥವಾಗದೆ ಅವರ [illegible] ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ನ್ಯಾಯ ನೀತಿ ಮತ್ತು ಸ್ವಾತಂತ್ರ್ಯ ಹಿತವನ್ನು ಸಾಧಿಸಿರಿ ಎಂದು ಇತೀ ಪ್ರಪಂ ಚವೇ ಬ್ರಿಟಿಷ ಸರಕಾರಕ್ಕೆ ತಿಳಿಸುತ್ತಿ ರುವದರಿಂದ, ಬ್ರಿಟಿಷ ಸರಕಾರವು ಆ ಕಾರ್ಯವನ್ನು ಮಾಡಲಿಕ್ಕೆ ಈಗ ಸಿದ್ಧವಿ ಲ್ಲದಿದ್ದರೂ, ಗಾಂಧಿ ವೈಸರಾಯ ಸಂದರ್ಶನದಿಂದ ಏನು ಸತ್ಫಲ ದೊರೆಯ ಲಿಲ್ಲವೆಂಬುದರಿಂದ ಸ್ಪಷ್ಟವಾಗುತ್ತದೆ ಹಿಂದ ಸ್ಥಾನದಲ್ಲಿ ಸ್ವರಾಜ್ಯದ ಸಂಬಂಧ ಇನ್ನೊಂದು ಆಂದೋಲನವಾಗುವದು ಸರಕಾರಕ್ಕೆ ಬೇಡವಾಗಿದೆ ಮಹಾತ್ಮ ರೂ ವಿನಾಕಾರಣ ಆಂದೋಲನವನ್ನು ಆರಂಭಿಸಲಿಕ್ಕೆ ಆಸಕ್ತರಾಗಿಲ್ಲ. ಆದರೆ ಸಂಪೂರ್ಣ ಸ್ವಾತಂತ್ರ್ಯವು ಹಿಂದುಸ್ಥಾನ ಕ್ಕೆ ಪ್ರಾಪ್ತವಾದ ಹೊರತು ಗಾಂಧಿಯವ ರಾಗಲೀ ಕಾಂಗ್ರೆಸಾಗಲೀ ತೃಪ್ತನಾಗು ವಂತಿಲ್ಲ. ಅದ್ದರಿಂದ ಬ್ರಿಟನಿನ ಸಮಯ ಹರಣವು ಚಿಂತಾಸ್ಪದವಾಗಿದೆ. ದೀರ್ಘ ಕಾಲ ಹೀಗೆಯೇ ಕಳೆದು ಹೋದ್ದಾದ ರೂ ಇಲ್ಲಿ ಸ್ವರಾಜ್ಯ ಆಂದೋಲನವು ಆರಂಭವಾಗುವದಿಲ್ಲವೆಂದು ಬ್ರಿಟನು ಭಾವಿಸುವದು ತಪ್ಪು. ಅನೇಕ ಬಾರಿ ನಮ್ಮ ನಿರೀಕ್ಷೆ ಪತ್ರಿಕೆಗಳಿಗೆ ವಿರೋಧ ವಾಗಿಯೇ ಘಟನೆಗಳು ಆಗುತ್ತವೆ. ಅದ್ದರಿಂದ ಇತಿಹಾಸದಿಂದ ಪಾಠವನ್ನು ಕಲಿತಾದರೂ ಬ್ರಿಟಿಷ ಸರಕಾರವು ಶೀಘ್ರ ಗಾಮಿಯಾಗುವದು ಅಗತ್ಯ. ಅಲ್ಲವಾ ದರೆ ಸ್ವರಾಜ್ಯದಾಹದಿಂದ ಕಂಗೆಟ್ಟ ಭಾರ ತೀಯರು ತಮ್ಮ ದಾಹವನ್ನು ತೀರಿಸುವ

[illegible] ದಕ್ಷಿಣ [illegible] ಇರರು, [illegible] ನನ್ನು ಭಾರತವನ್ನು [illegible] ಆದರೆ [illegible] ಭಾರತ [illegible] ಸರಕಾರದ [illegible] ಬ್ರಿಟಿಷ್ ಸರಕಾರವು [illegible] ಭಾರತವನ್ನು [illegible] ನಡೆ [illegible]

DIAMONDS! DIAMONDS!
BEST BRILLIANCY!

**K. R. K. SHET,**

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ.

**ವಜ್ರಗಳು!**

ಎನ್ಟ್‌ವರ್ಪಿನಿಂದ ಬರುವ ವಜ್ರ ಗಳು ಬಜಾರ ಧಾರಣೆಗಿಂತ ಐದು ಪ ರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾ ನಾಗಿಯೇ ತಿಳಿದುಬರುವವು.

**ನಿಮಗೆ ಬೇಕಾದ್ದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.**

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆ ಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಸ್ವದೇಶಾಭಿಮಾನಿ

ತಾರೀಕು 16—2—1940

## ಇನ್ನಷ್ಟು ಸ್ಪಷ್ಟಮಾಡಿತು

ಮೊನ್ನೆಯ ಗಾಂಧಿ–ವೈಸರಾಯರ ಭೇಟಿಯ ಫಲಿತಾಂಶದಿಂದ ಭಾರತೀಯರು ಖಂಡಿತವಾಗಿಯೂ ಒಳ್ಳೆಯ ಪಾಠವನ್ನೇ ಕಲಿತಿದ್ದಾರೆ ಬ್ರಿಟಿಷ್ ಸರಕಾರವು ತನ್ನ ಗುಪ್ತ ರಾಜನೀತಿಯಿಂದ ಒಂದೆಡೆ ಮುಂದೊತ್ತುತ್ತಿದ್ದರೆ, ಕಾಂಗ್ರೆಸಿನ, ಅಖಂಡ ಧುರೀಣರಾದ ಗಾಂಧಿಜಿಯವರು ತನ್ನ ಸತ್ಯದ ನಿಷ್ಕಪಟದ ರಾಜನೀತಿ ಕುಶಲತೆಯಿಂದ ಇನ್ನೊಂದೆಡೆ ಮುಂದೊತ್ತುತ್ತಲೇ ಇರುವುದನ್ನು ಜಗತ್ತು ಇದರಿಂದ ತಿಳಿದುಕೊಂಡಿದೆ. ಭಾರತದ ಭವಿಷ್ಯವನ್ನು ನಿರ್ಮಿಸುವುದು ~~ಭಾರತೀಯರಿಗೆ ಸಲ್ಲತಕ್ಕದ್ದೆಂದೂ~~, ಇಲ್ಲಿನ ಎಲ್ಲಾ ಸಮಸ್ಯೆಗಳನ್ನೂ ಪರಿಹರಿಸಲು ಭಾರತೀಯರು ಸಂಪೂರ್ಣ ಸಮರ್ಥರೆಂದೂ ಗಾಂಧಿಜಿಯವರು ಅಭಿಪ್ರಾಯಪಟ್ಟು ರಾಷ್ಟ್ರಘಟನಾ ಸಮಿತಿಯ ರಚನಾ ವಿಷಯವನ್ನು ಸರಕಾರದ ಮುಂದಿರಿಸಿರುವರು. ಅದರೊಡನೆ ಕಾಂಗ್ರೆಸಿನ ಗುರಿಯು ಸಂಪೂರ್ಣ ಸ್ವಾತಂತ್ರ್ಯವೆಂಬುದು ಸ್ಪಷ್ಟವಾಗಿ ಸಾರಲಾಗಿದೆ

ಆದರೆ ಸರಕಾರವು ಇದಕ್ಕೆ ಒಪ್ಪಿದಂತೆ ಕಂಡುಬರಲಿಲ್ಲ ಈ ವಿಷಯವಾಗಿ ಸರಕಾರದ ಪ್ರತಿನಿಧಿಗಳಾದ ವೈಸರಾಯರು ಗಾಂಧಿಜಿಯವರೊಡನೆ, ಸರಕಾರದ ಉದ್ದೇಶವೇನೆಂಬುದನ್ನು ಸ್ಪಷ್ಟಮಾಡಿ ತಿಳಿಸಿದರು. ಜಗತ್ತಿನ ರಾಷ್ಟ್ರಗಳನ್ನು ಸ್ವತಂತ್ರಮಾಡಲು ಹೊರಟ ಬ್ರಿಟಿಷ್ ಸರಕಾರವು ಭಾರತದ ಬಂಧಮುಕ್ತಿಯ ವಿಷಯದಲ್ಲಿ ಎಂತಹ ಅನಿಶ್ಚಿತವಾದ ಅಭಿಪ್ರಾಯವನ್ನಿಟ್ಟುಕೊಂಡಿದೆಯೆಂಬುದನ್ನು ಗಾಂಧಿಜಿಯವರ ಈ ಸಲದ ಭೇಟಿಯು ಇನ್ನಷ್ಟು ಸ್ಪಷ್ಟಮಾಡಿತು. ಸತ್ಯವೂ ಅಹಿಂಸೆಯೂ ಸಾಧನವಾಗಿರುವ ಕಾಂಗ್ರೆಸಿನ ರಾಜನೀತಿಯಲ್ಲಿ ಇದೂ ಒಂದು ಮಹತ್ವದ ವಿಜಯ ಸೋಪಾನವಾಗಿದೆ.

**ಹೋರಾಟ ತಪ್ಪುವುದೇ?**

ಗಾಂಧಿಜಿಯವರು ಇನ್ನೂ ಆಶಾವಾದಿಗಳಾಗಿದ್ದಾರೆ. ನಿರಾಶೆಪಡಬೇಡಿರೆಂದು ಕಾಂಗ್ರೆಸಿನ ಕಾರ್ಯಕರ್ತರಿಗೆ ಅವರು ಉಪದೇಶಮಾಡುತ್ತಿದ್ದಾರೆ. ಹೋರಾಟ ಹೂಡುವುದೆಂದರೆ ನಿಜವಾಗಿಯೂ ಜನ, ಧನ, ಪ್ರಾಣಗಳ ನಷ್ಟವಾಗುವ ಸಂಭವವಿದೆ. ಹೋರಾಟವಾಗದೆ ಸ್ವರಾಜ್ಯವನ್ನು ಸಂಪಾದಿಸಲು ತಾನು ಸರ್ವಥಾ ಯತ್ನಿಸುವೆನೆಂದು ಗಾಂಧಿಜಿಯವರು ಪ್ರಕಟನೆ ಹೊರಡಿಸಿರುವರು. ಈ ಸಂದರ್ಭದಲ್ಲಿ ಹೋರಾಟ ಹೂಡದೆ ಸ್ವಾತಂತ್ರ್ಯವನ್ನು ಗಳಿಸುವುದು ಸಾಧ್ಯವೇ ಎಂಬುದು ಶ್ರೀಂಚಿತ್ ವಿಚಾರಣೀಯವಾದ ವಿಷಯವಾಗಿದೆ.

ಬ್ರಿಟನಿನ ಯುದ್ಧ ಉದ್ದೇಶದ ಸ್ಪಷ್ಟತೆಯ ಸಲುವಾಗಿ ಕಾಂಗ್ರೆಸು ಮಂತ್ರಿಮಂಡಲಗಳ ರಾಜಿನಾಮೆಯು ಬ್ರಿಟಿಷ್ ಸರಕಾರದ ಇಂದಿನ ಘನತೆಯ ಉದ್ದೇಶವನ್ನು ಪ್ರಶ್ನಿಸುವಂತಾಗಿದೆ. ಶಸ್ತ್ರಯುದ್ಧಕ್ಕಿಂತಲೂ ಈ ವಿಧದ ಸತ್ಯಯುದ್ಧದಿಂದ ಪ್ರಪಂಚದಲ್ಲಿ ಬ್ರಿಟಿಷ್ ಸರಕಾರದ ಧ್ಯೇಯದ ಮಟ್ಟವು ಬಹಳ ಕಡಿಮೆ ತರಗತಿಗೆ ಬರುವಂತಾಗಿದೆ. ರಾಜನೀತಿಜ್ಞತೆಯಲ್ಲಿ ಕುಶಲರಾದ ಬ್ರಿಟಿಷ್ ಅಧಿಕಾರಿಗಳು ಈ ಕುರಿತು ವಿಚಾರಿಸದೆ ಇಲ್ಲ. ಆದಕ್ಕಾಗಿಯೇ ಕಾಂಗ್ರೆಸು ಮಂತ್ರಿಮಂಡಳಗಳನ್ನು ಹೊಗಳಿ, ಅವುಗಳು ತಿರಿಗೆ ಅಧಿಕಾರವನ್ನು ಸ್ವೀಕರಿಸಬೇಕೆಂದು ತಮ್ಮ ತೀವ್ರವಾದ ಅಪೇಕ್ಷೆಯನ್ನು ತಿಳಿಸುತ್ತಿದ್ದಾರೆ ಆದರೆ ತತ್ವಕ್ಕೆ ಶರಣಾಗಿರುವ ಕಾಂಗ್ರೆಸು ಎಂದಿಗೂ ತಿರಿಗಿ ಪ್ರಾಂತಿಕ ಆಡಳಿತವನ್ನು ಅನಿಶ್ಚಿತ ಧ್ಯೇಯದಿಂದ ಅಂಗೀಕರಿಸುವುದಿಲ್ಲ ಇಷ್ಟು ಮಾತ್ರವಲ್ಲದೆ ಜನರು, ಇಂದು ಗಾಂಧಿಜಿಯವರ ಪ್ರಭಾವದಿಂದ ಮಾತ್ರ ಶಾಂತರಾಗಿದ್ದಾರಲ್ಲದೆ ನಿಜವಾಗಿಯೂ ಹೋರಾಟಕ್ಕಾಗಿ ಅಶಾಂತರಾಗಿಯೇ ಇದ್ದಾರೆ. ಈ ಸಂದರ್ಭದಲ್ಲಿ ಹೋರಾಟವನ್ನು ತಪ್ಪಿಸಿ ಶಾಂತಿಯನ್ನು ನೆಲೆಗೊಳಿಸುವ ಹೊಣೆಗಾರಿಕೆಯು ಬ್ರಿಟಿಷ್ ಸರಕಾರದ ಮೇಲೆಯೇ ಇದೆ ಗಾಂಧಿಜಿಯವರ ಹಾಗೂ ಕಾಂಗ್ರೆಸು ಬ್ರಿಟಿಷರ ಹೊಣೆಗಾರಿಕೆಯನ್ನು ಯಾವ ರೀತಿಯಿಂದ ಬಗೆಹರಿಸುವರೆಂದು ಇನ್ನೂ ಕಾಯುವರು. ಸರಕಾರದ ನೀತಿಯು ಬಹಿರಂಗವಾದಾಗ, ಇನ್ನೂ ಸ್ಪಷ್ಟವಾದಾಗ, ಎಂತಹ ಹೋರಾಟವಾದರೂ ಪ್ರಚಂಡ ವೇಗದಿಂದ, ಪ್ರಬಲ ಐಕ್ಯದಿಂದ ಮುಂದೊತ್ತಿ ಜಯಶೀಲವಾಗುವುದು. ಇದಕ್ಕಾಗಿ ಮಾತ್ರ ಗಾಂಧಿಜಿಯವರು ಈಗಲೂ ಆಶಾವಾದಿಗಳಾಗಿರುವರೆಂದು ತಿಳಿಯಬಹುದು.

**ಸಿದ್ಧರಿರಬೇಕು.**

ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯಾಭಿಮಾನಿಗಳಾದ ಭಾರತೀಯರು ಸಂಪೂರ್ಣ ಸಿದ್ಧರಿರಬೇಕು ಆಂತರಿಕ ಭೇದಭಾವನೆಗಳನ್ನು ಕಿತ್ತೊಗೆಯಬೇಕು. ಜಾತಿಮತಗಳನ್ನು ರಾಜಕೀಯದಲ್ಲಿ ಬೆರೆಸುವ ಅನ್ಯಾಯ ಮಾಡಬಾರದು ಇಂದು ಕಾಂಗ್ರೆಸಿನ ಶಕ್ತಿಯನ್ನು ಸರ್ವರೂ ಹೆಚ್ಚಿಸಬೇಕು ಕಾಂಗ್ರೆಸಿನ, ಹಾಗೂ ರಾಷ್ಟ್ರದ ಏಕಮಾತ್ರ ವಿಶ್ವಾಸೀ ಮುಖಂಡರಾದ ಮಹಾತ್ಮಾಜಿಯವರ ಮಾತಿನಲ್ಲಿ ಭರವಸೆಯಿಟ್ಟು, ಸ್ವಾತಂತ್ರ್ಯ ಸಮರಕ್ಕೆ ಸಿದ್ಧರಾಗಿರಬೇಕು ಹೋರಾಟವನ್ನು ತಪ್ಪಿಸಲು ಸಾಧ್ಯ ಸಾಹಸದಿಂದ ಗಾಂಧಿಜಿಯವರು ಇಂದು ಯತ್ನ ಮಾಡಬಹುದು ಆದರೆ ಎಷ್ಟೋ ಸಲ ರಾಷ್ಟ್ರದ ಆವೇಶವು ಮನುಷ್ಯನ ನಿಯಂತ್ರಣವನ್ನು ಮೀರಿ ಹೋಗುವುದಿದೆ ಆದ ಕಾರಣ ಕಾಂಗ್ರೆಸಿಗರು ಹೆಚ್ಚು ಆಶಾವಾದಿಗಳಾಗಿ ಸಮರಕ್ಕೆ ಸನ್ನದ್ಧರಾಗದೆ ಇರಬಾರದು

## ಚರಖ ಸಂಘದ ಖಾದಿಗೆ ~~ಬೆಲೆ ಹೆಚ್ಚಾಗಿರುವುದೇಕೆ?~~

ಸ್ವತಃ ನೂತ ನೂಲಿನಿಂದ ಸಿದ್ಧಗೊಳಿಸುವ ಬಟ್ಟೆಯು ಹಾಗೂ ಚರಖ ಸಂಘದವರು ಸಿದ್ಧಗೊಳಿಸುವ ಬಟ್ಟೆಯು ಮಾತ್ರ ಕಾಂಗ್ರೆಸಿನ ದೃಷ್ಟಿಯಿಂದ ಅಧಿಕೃತ ಖಾದಿಎನಿಸುವುದು. ಸ್ವತಃ ನೂತು ಬಟ್ಟೆಯನ್ನು ನೇಯಿಸಿಕೊಂಡರೆ ಅದರ ಬೆಲೆಹೆಚ್ಚಾಗುವುದಿಲ್ಲ ಆದರೆ ಎಲ್ಲರಿಗೆ ಇದು ಸಾಧ್ಯವಿರದಿದ್ದರೆ ಚರಖ ಸಂಘದಿಂದ ಹೊರಡುವ ಖಾದಿಯನ್ನು ಮಾತ್ರ ಕಾಂಗ್ರೆಸಿನ ಅಭಿಮಾನಿಗಳು ಕೊಳ್ಳಬೇಕು

ಚರಖ ಸಂಘವು ನೂಲುವವರ ಸಂಘವು ಕರ್ನಾಟಕದಲ್ಲಿ ನೂಲುವವರಿಗೆ ಬೇಕಾಗುವ ಆಹಾರ ಹಾಗೂ ಬೇರೆಬೇರೆ ಕಾರಣಗಳಿಗಾಗಿ ಬೇಕಾಗುವ ಬಿಡುವಿನ ದಿನಗಳ ಲೆಕ್ಕ ಹಾಕಿದರೆ ಪ್ರತಿಯೊಬ್ಬರಿಗೆ ದಿನಾಲು ೩ ಆಣೆ ಕೂಲಿ ದೊರೆಯುವುದು ಅವಶ್ಯವೆಂದು ಕಂಡು ಬಂತು ಅದರಂತೆ ತಾಸಿಗೆ ಸುಮಾರು ೬೦೦ ಗಜದಂತೆ (ಇದು ಹೆಚ್ಚಿನ ವೇಗವು) ದಿನಾಲು ೮ ತಾಸು ನೂಲುವವರಿಗೆ ಚರಖ ಸಂಘದವರು ೩ ಆಣೆ ಕೂಲಿಯನ್ನು ಕೊಡುವರು

ಇದರಂತೆ ಹತ್ತಿ ಆರಿಸುವವರು ಹಂಜಿ ಹಾಕುವವರು, ನೇಕಾರರು ನೇಯ್ಗೆಕೆಲಸಕ್ಕೆ ಅವಶ್ಯವಿರುವ ಇತರ ಕೆಲಸಗಾರರು, ಅಗಸರು ಬಣ್ಣಗಾರರು ಮುಂತಾದವರಿಗೆ ಸಹ ದಿನದ ೮ ತಾಸಿನಿಂದ ಹೊಟ್ಟೆ ತುಂಬುವಂತೆ ಚರಖ ಸಂಘದವರು ಕೂಲಿಯನ್ನುಕೊಡುವರು ಇದರಿಂದಲೇ ಖಾದಿಯು ಬೆಲೆ ಹೆಚ್ಚಾಗುವದು ಗಿರಣಿಗಳಲ್ಲಿ ಈ ಎಲ್ಲ ಕೆಲಸಗಳನ್ನು ತೀರ ಸ್ವಲ್ಪ ಜನರ ಸಹಾಯದಿಂದ ಯಂತ್ರಗಳೇ ಮಾಡುವವು ಜನಸಾಮಾನ್ಯದ ಹೊರೆಯನ್ನು ಕಸಿದುಕೊಂಡು ಯಂತ್ರಗಳಿಗೆ ಕೊಟ್ಟು ಪರದೇಶದ ಯಂತ್ರದ ಕಾರಖಾನೆಗಳಿಗೂ ಇಲ್ಲಿಯ ಕೇವಲ ಬಂಡವಲುಗಾರರಿಗೂ ಹೇರಳವಾದ ಲಾಭವನ್ನು ಕೊಡುವ ಉದ್ದೇಶದಿಂದ ಗಿರಣಿಯ ಬಟ್ಟೆಯನ್ನು ಕೊಳ್ಳುವದು ಹಿತವೊ ಅಥವಾ ನಮ್ಮ ಬಡ ದೇಶ ಭಾಂದವರಿಗೆ ದುಡಿಮೆಯನ್ನು ಕಲ್ಪಿಸಿ ಕೊಟ್ಟು ಅವರಿಗೆ ಹೊಟ್ಟೆ ತುಂಬುವಂತೆ ಕೂಲಿಯನ್ನು ದೊರಕಿಸಿ ಕೊಡುವ ಖಾದಿಯನ್ನು ಕೊಳ್ಳುವದು ಹಿತವೊ ಎಂಬದನ್ನು ಕರ್ನಾಟಕದ ಬಂಧು ಬಗಿನಿಯರು ವಿಚಾರ ಮಾಡಬೇಕು

ಖಾದಿಯ ಈ ಆರ್ಥಿಕ ಮಹತ್ವವನ್ನರಿತೇ ಅದರ ಮಾರಾಟವನ್ನು ಜೋರಿನಿಂದ ಮುಂದರಿಸಲು ಪ್ರಾಂತೀಯ ಕಾರ್ಯಕಾರೀ ಮಂಡಲದವರು ಇದೇ ೧೫ನೇ ಮಾರ್ಚಿಯೊಳಗಾಗಿ ೫೦,೦೦೦ ರೂ ಖಾದಿಯು ಮಾರಾಟವಾಗುವಂತೆ ಪ್ರಾಂತವನ್ನು ಕೇಳಿ ಕೊಂಡಿರುವರು. ಕಾರಣ ಎಲ್ಲರೂ ಖಾದಿಯ ಮಾರಾಟಕ್ಕಾಗಿ ಎಲ್ಲ ರೀತಿಯಿಂದ ಪ್ರಯತ್ನಿಸಬೇಕು.

ಸಚಿತ್ರ

# ಪ್ರಕೃತಿಶಾಸ್ತ್ರ ಮತ್ತು ತೋಟದಕೆಲಸ

| | | |
|---|---|---|
| 3ನೇ ತರಗತಿಗೆ | ಬೆಲೆ | 0—1—6 |
| 4ನೇ ,, | , | 0—2—0 |
| 5ನೇ ,, | | 0—2—6 |

ಪ್ರಾಥಮಿಕ ಶಾಲೆಗಳ ಉಪಯೋಗಾರ್ಥವಾಗಿ ಬರೆದುದು.

ಪ್ರಸಿದ್ಧ ಗ್ರಂಥಕರ್ತರೂ, ಶಿಕ್ಷಣ ವಿಚಾರಗಳಲ್ಲಿ ನುರಿತ ಅನುಭವಸ್ಥ ಉಪಾಧ್ಯಾಯರೂ ಆದ

ಎಂ ಗಣಪತಿ ರಾವ್ ಐಗಳ್ ವಿರಚಿತ

ಈ ಪುಸ್ತಕಗಳ ಕುರಿತು ಮಹನೀಯರೊಬ್ಬರ ಅಭಿಪ್ರಾಯ

ಕುಂದಾಪುರ
10-2-'40

ಲೇಖಕರು ಶಾಸ್ತ್ರೀಯವಾದ ವಿಚಾರವನ್ನು ವಿದ್ಯಾರ್ಥಿಗಳ ಮುಂದಿಡುವಲ್ಲಿ ತಮ್ಮ ಪ್ರತ್ಯಕ್ಷ ಅನುಭವಗಳನ್ನು ಬೆರಸಿ ವಿಷಯಗಳನ್ನು ಸುಲಭ ಗ್ರಾಹ್ಯವೂ ಮನೋರಂಜಕವೂ ಆಗಿ ಮಾಡಿದ್ದಾರೆ . ಒಟ್ಟಿನಲ್ಲಿ ಪುಸ್ತಕದ ಅಂತರಂಗ–ಬಹಿರಂಗ ಸೌಂದರ್ಯಗಳು ಪ್ರಶಂಸನೀಯವಾಗಿವೆ ಬೆಲೆಯೂ ಕಡಿಮೆಯಾಗಿದ್ದು, ಆದರಿಂದ ವಿದ್ಯಾರ್ಥಿ ವೃಂದಕ್ಕೆ ಬಹಳ ಉಪಕಾರವಾಗಿದೆ.

ಎಸ್. ಕೆ. ಆರ್

ಇಷ್ಟು ಸುಲಭ ಬೆಲೆಗೆ, ಪಠ್ಯ ಪುಸ್ತಕಗಳನ್ನು ಈ ರೀತಿ ಅಚ್ಚುಕಟ್ಟಾಗಿಯೂ, ಮನೋಹರವಾಗಿಯೂ ಒದಗಿಸಿ ಕೊಡುವುದು, ಇಡೀ ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲನೆಯ ಸಲ!

ವಿದ್ಯಾಕ್ಷೇತ್ರದಲ್ಲಿಯೇ ಪ್ರಚಂಡ ಕ್ರಾಂತಿ!
ವಿದ್ಯಾಭಿವೃದ್ಧಿಯಲ್ಲಿ ನಮ್ಮದಿದು ಕಿರುಕಾಣಿಕೆ!
ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯ!

ಇದೇ ರೀತಿಯಲ್ಲಿ ಪ್ರಾಥಮಿಕ ಶಾಲೆಗಳ ಉಪಯೋಗಾರ್ಥವಾಗಿ ಬರೆದ ಚರಿತ್ರೆ ಭೂಗೋಳ, ವ್ಯಾಕರಣ, ಸಿವಿಕ್ಸ್, ಗೃಹವಿಜ್ಞಾನಗಳು ಸಿದ್ಧವಾಗಿವೆ.

ಹಾಯರ್ ಎಲಿಮೆಂಟರಿ ಗ್ರೇಡ್ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿಗಳಿಗಾಗಿ ತಯಾರಿಸಲ್ಪಟ್ಟ 'ಸಮಾಜಶಾಸ್ತ್ರ'ದ ತಿದ್ದಿದ ಆವೃತ್ತಿ ಬೆಲೆ ರೂ ೧.

ಪುಸ್ತಕ ಸಿಗುವ ಸ್ಥಳ

ಶಾರದಾ ಛಾಪಖಾನೆ, ಮಂಗಳೂರು, ಮತ್ತು
ದಿ ಮೋಡರ್ನ್ ಏಜನ್ಸಿ, ಉಡುಪಿ.

ಭಾರತದಲ್ಲಿರುವ ನಾವು ಈ ಯುದ್ಧದಿಂದುಂಟಾಗಬಹುದಾದ ಸಂಕಷ್ಟಗಳನ್ನು ತಡೆಗಟ್ಟಬೇಕು. ನಮ್ಮ ಸಂಪೂರ್ಣ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೂ, ವಿಸ್ತರಿಸುವುದಕ್ಕೂ ನಾವು ಯತ್ನಿಸಬೇಕು ನಮಗೆ ಸ್ವಾತಂತ್ರ್ಯವು ನಾವು ಸೇವಿಸುವ ಗಾಳಿಯಷ್ಟೇ ಪ್ರಿಯವಾದುದು ಮಾನವನ ಆತ್ಮವು ಸ್ವಾತಂತ್ರ್ಯವೆಂಬ ಆಹಾರದಿಂದ ಹೂ ಅರಳಿದಂತೆ ಅರಳುವುದು ಅಷ್ಟೇ ಅಲ್ಲದೆ, ನಾವು ನಮ್ಮ ಜನರ ಸ್ಥಿತಿಯ ಮೇಲೆ ಆಗತಕ್ಕ ಆಘಾತವನ್ನು ತಡೆಯಬೇಕು ನಮ್ಮ ಜನರನ್ನು ಮುಂದಿನ ಹೋರಾಟಕ್ಕೆ ಸಿದ್ಧರಾಗುವಂತೆ ಮಾಡಬೇಕು ''

ಹೀಗೆಂದು ತಾ ೧೦-೧೧ರಂದು ಕೆನರಾ ಹೈಸ್ಕೂಲಿನಲ್ಲಿ ಸೇರಿದ ದಕ್ಷಿಣ ಕನ್ನಡ ಜಿಲ್ಲೆಯ ದ್ವಿತೀಯ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಮೋಹನ ಕುಮಾರ ಮಂಗಲಂ ಬಿ ಎ, ಬಾರ್ ಎಟ್ ಲಾ ಇವರು ತಮ್ಮ ಪ್ರಚಂಡವಾದ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಉಪದೇಶಿಸಿದರು

ಜಿಲ್ಲೆಯ ಪ್ರತಿಯೊಂದು ತಾಲೂಕಿನಿಂದಲೂ ಬಹು ಜನ ಪ್ರತಿನಿಧಿಗಳು ಪ್ರೇಕ್ಷಕರು ಮತ್ತು [illegible] ಬಂದು ನೆರೆದಿದ್ದರು.

ತಾ ೧೦ರಂದು ಬೆಳಗ್ಗೆ ವಿದ್ಯಾರ್ಥಿ ಸಂಪಾದಕಭೇರಿಯು ದಿವ್ಯಪ್ರಭಾತಪೇರಿಯು ಹೊರಟು ಕೆನರಾ ಹೈಸ್ಕೂಲಿನ ಮಂದಾರದಲ್ಲಿ ಸೇರಿ ಶ್ರೀ ಕೆ. ಕಿಷ್ಟಣ್ಣ ರೈಗಳಿಂದ ಧ್ವಜವಂದನೆಯು ನೆರವೇರಿಸಲ್ಪಟ್ಟಿತು ಅದೇ ದಿನ ಸಂಜೆ ೫-೩ಂಕ್ಕೆ ಸಂಘದ ಕಛೇರಿಯಿಂದ ಅಧ್ಯಕ್ಷರ ಮೆರವಣಿಗೆಯು ವಾದ್ಯ ಜಯಘೋಷಗಳಿಂದ ಹೊರಟು ಕೆನರಾ ಹೈಸ್ಕೂಲ್ ಸಭಾಮಂದಿರಕ್ಕೆ ಬಂದು ಸೇರಿತು. ಕೇಂದ್ರ ನ್ಯಾಯಸಭೆಯ ಸದಸ್ಯರಾದ ಶ್ರೀ ಕೆ ಬಿ. ಜಿನರಾಜ ಹೆಗ್ಡೆ ಇವರು ಉದ್ಘಾಟನಾ ಸಮಾರಂಭವನ್ನು ಮಾಡಿದರು. ಅವರು ತಮ್ಮ ಸ್ಫೂರ್ತಿದಾಯಕವಾದ ಭಾಷಣದಲ್ಲಿ ಇಂದಿನ ಪ್ರಪಂಚದ ಪರಿಸ್ಥಿತಿಯನ್ನೂ, ಅದರಲ್ಲಿ ಭಾರತದ ಭಾಗವನ್ನೂ, ನಮ್ಮ ನಾಡು ಸ್ವಾತಂತ್ರ್ಯಕ್ಕಾಗಿ ಮಾಡುತ್ತಿರುವ ಹೋರಾಟದ ಬಗೆಯನ್ನೂ ವಿವರಿಸುತ್ತಾ, ವಿದ್ಯಾರ್ಥಿಗಳು ಅಹಿಂಸೆಯೊಂದನ್ನೇ ಅನುಸರಿಸಿ ಉತ್ಸಾಹದಿಂದ ರಾಷ್ಟ್ರದ ಏಳಿಗೆಯನ್ನು ಪುಷ್ಟೀಕರಿಸಬೇಕೆಂದೂ, ಕಾಂಗ್ರೆಸಿನ ರಚನಾತ್ಮಕ ಕಾರ್ಯಗಳಿಗೆ ವಿಶೇಷ ಗಮನ ಕೊಡಬೇಕೆಂದೂ, ಕಾಂಗ್ರೆಸಿನ ಆ ಪಕ್ಷ ಈ ಪಕ್ಷಗಳಲ್ಲಿ ಸಿಲುಕಿ ಗೊಂದಲಗೊಳ್ಳದೆ, ಭಾರತದ ಪ್ರಭಾವಶಾಲೀ ಮುಂದಾಳುಗಳಾದ ಮಹಾತ್ಮಾ ಗಾಂಧಿಯವರನ್ನೆ ಹಿಂಬಾಲಿಸಬೇಕೆಂದೂ ಹೇಳಿದರು.

ಆ ಮೇಲೆ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಎಸ್ ಭಾಸ್ಕರ ರೈಗಳು ಸ್ವಾಗತ ಭಾಷಣ ಮಾಡುತ್ತಾ ದ. ಕ. ಜಿಲ್ಲಾ ವಿದ್ಯಾರ್ಥಿ ಫೆಡರೇಶನಿನ ಇತಿಹಾಸವನ್ನು ವಿವರಿಸಿ, ಸಂಘದ ಅಭಿ

# ಈ ಸಲದ ವಿದ್ಯಾರ್ಥಿ ಸಮ್ಮೇಳನ

## ಅಧ್ಯಕ್ಷರು:
## ಶ್ರೀ. ಮೋಹನ ಕುಮಾರ ಮಂಗಲಂ ಬಾರ್-ಎಟ್-ಲಾ



ವಿದ್ಯಾರ್ಥಿ ಸಮ್ಮೇಳನದ ಸ್ವಾಗತಸಮಿತಿಯ ಅಧ್ಯಕ್ಷ [illegible] ಶ್ರೀ ಬಿ ಎಸ್ ಭಾಸ್ಕರ ರೈಗಳು

[illegible] ಉತ್ತ[illegible] ವಿದ್ಯಾರ್ಥಿಗಳು [illegible] ಕಾಂಗ್ರೆಸಿನ ರಚನಾತ್ಮಕ ಕಾರ್ಯಗಳನ್ನು ವಿದ್ಯಾರ್ಥಿಗಳು ಉತ್ಸಾಹದಿಂದ ಕೈಕೊಳ್ಳಬೇಕೆಂದೂ ವಿವರಿಸಿದರು

### ಅಧ್ಯಕ್ಷರ ಭಾಷಣ

ಆ ಮೇಲೆ ಅಧ್ಯಕ್ಷರು ತಮ್ಮ ವಿಚಾರಪೂರ್ಣವಾದ ಸುದೀರ್ಘವಾದ ಭಾಷಣ ಮಾಡಿದರು ಅದರಲ್ಲಿ ಅವರು ಇಂದಿನ ಪ್ರಪಂಚ ಯುದ್ಧದ ವಿಷಯವನ್ನು ವಿವರಿಸುತ್ತಾ, ಈ ದಿನ ಯುರೋಪಿನ ಯುದ್ಧದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಕಾದಾಡುವ ಧೋರಣೆಯು ಯಾರಿಗೂ ಇಲ್ಲವೆಂದೂ, ಎಲ್ಲರೂ ಸಾಮ್ರಾಜ್ಯಶಾಹಿಯ ರಕ್ಷಣೆಗಾಗಿ ಕಾದಾಡುತ್ತಿರುವರೆಂದೂ, ಹಿಟ್ಲರನನ್ನು ಹಿಂದೆ ವಿಜೃಂಭಿಸಬಿಟ್ಟು ಇಂದು ಆತನು ತಮ್ಮ ಅಭ್ಯುದಯದಲ್ಲಿ ತಡೆಯಾಗಿರುವನೆಂದು ತಿಳಿದಾಗ ಮಾತ್ರ ಬ್ರಿಟಿಷ್ ಫ್ರಾನ್ಸುಗಳ ಒಡೆಯರು ಉರಿದು ಬಿದ್ದಿರುವರೆಂದೂ, ಬ್ರಿಟನು ಫ್ರಾನ್ಸುಗಳ ಇಂದಿನ ಪ್ರಧಾನರು ಕೇವಲ ವಂಚಕ ಬುದ್ಧಿಯವರೆಂದೂ ತಮ್ಮ ಪಾಶ್ಚಾತ್ಯ ದೇಶ ನಿವಾಸದ ಅನುಭವಗಳ ಮೂಲಕ ವಿಶದವಾಗಿ ವಿವರಿಸಿದರು.

ಭಾರತದ ಪರಿಸ್ಥಿತಿಯನ್ನು ವರ್ಣಿಸುತ್ತಾ, ಇಲ್ಲಿ ನಿರಕ್ಷರರಾಗಿರುವ ಬಹುಮಂದಿಯನ್ನು ಸಾಕ್ಷರರನ್ನಾಗಿ ಮಾಡಲು ಯತ್ನಿಸಬೇಕೆಂದೂ, ಜನತೆಯೊಡನೆ ಯುವಕರು ಸಂಪರ್ಕವನ್ನು ಹೆಚ್ಚಾಗಿ ಬೆಳೆಸಬೇಕೆಂದೂ, ಸ್ಪೈನು ಚೈನಗಳ ಆಂದೋಲನವು ಯುವಕ ವಿದ್ಯಾರ್ಥಿಗಳ ಶ್ರಮ ಉತ್ಸಾಹಗಳಿಂದಲೇ ಶ್ರೇಯಸ್ಕರವಾಗಿದೆಯೆಂದೂ ತಿಳಿಸಿದರು.

### ಸ್ವಯಂಸೇವಕ ದಲ

ವಿದ್ಯಾರ್ಥಿಗಳು ಜವಾಬ್ದಾರಿಯರಿಯದವರೆಂದು ಮಾಡುವ ಟೀಕೆಗೆ ಖಂಡಿತವಾಗಿಯೂ ಆಸ್ಪದ ಕೊಡದೆ, ಸುಶಿಕ್ಷಿತರೂ, ಶಿಸ್ತುಪಾಲಕರೂ ಆಗುವುದು ಮಾತ್ರವಲ್ಲದೆ ಕಾರ್ಯ ವಚನಗಳಲ್ಲಿ ಗಂಭೀರರಾಗಿರಬೇಕೆಂದೂ ಹೇಳಿದರು

"ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಬೇಕು, ನಮ್ಮ ರೈತರು ಉಪವಾಸಬೀಳಬಾರದು ಕೆಲಸಗಾರರಿಗೆ ಉತ್ತಮ ರೀತಿಯ ಸಂಬಳ ಸಿಗಬೇಕು ವಿದ್ಯಾರ್ಥಿಗಳಿಗೆ ಯೋಗ್ಯ ಶಿಕ್ಷಣವೂ ಸಿಗಬೇಕು ಬ್ರಿಟಿಷರ ದರ್ಪದಿಂದ ನಮ್ಮ ದೇಶವು ವಿಮುಕ್ತವಾಗಿ ರಾಷ್ಟ್ರದ ಕೈಗಾರಿಕೆ, ಉದ್ಯಮ, ವ್ಯಾಪಾರಗಳು ಅಭಿವೃದ್ಧಿಯಾಗುವಂತೆ ನಾವು ಸಾಧಿಸಬೇಕು, ನಾವು ಸ್ವಾತಂತ್ರ್ಯ ಪ್ರಗತಿಗೆ ಹೋರಾಡುವ ಅಖಿಲ ಪ್ರಪಂಚದ ದಳಕ್ಕೆ ಸೇರಿದವರೆಂಬುದನ್ನು ಮರೆತಿರಬಾರದು' ಎಂದರು

### ನಿರ್ಣಯಗಳು

ಮರುದಿನ ೧೧-೩ಂಕ್ಕೆ ಬಹಿರಂಗ ಸಭೆಸೇರಿ ಹಲವು ನಿರ್ಣಯಗಳು ಮುಖ್ಯವಾಗಿ, ಸಿಲೆಕ್ಷನ್ ಪರೀಕ್ಷೆಯು ಇರಬಾರದು, ಗಾಂಧಿಜಿಯವರ ಮುಂದಾಳುತನವು ಬೇಕಾಗಿದೆ, ಉದ್ಯೋಗೀಕರಣವಾಗಬೇಕು, ಯುವಕ ಯುವತಿಯರಿಗೆ ವಿವಾಹದ ವಿಷಯದಲ್ಲಿ ಹೆತ್ತವರ ನಿರ್ಬಂಧವಿಲ್ಲದೆ ಅವರ ಇಚ್ಛಾನುಸಾರವಾಗಿರಬೇಕು' ಮೊದಲಾದ ನಿರ್ಣಯಗಳು ಬಹುಳವಾಗಿ ಸ್ವೀಕರಿಸಲ್ಪಟ್ಟ ಉಪಸಂಹಾರದಲ್ಲಿ ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಅನೇಕ ಯೋಗ್ಯ ಉಪದೇಶವಿತ್ತರು

ಮಧ್ಯಾಹ್ನ ವಾಕ್ ಸ್ಪರ್ಧೆಯು ಏರ್ಪಟ್ಟು ಅದರಲ್ಲಿ ಪ್ರಥಮ ಬಹುಮಾನವು ಮಂಗಳೂರು ಮಿಶನ್ ಹೈಸ್ಕೂಲಿನ ಒಬ್ಬ ವಿದ್ಯಾರ್ಥಿಗೂ, ಎರಡನೆ ಬಹುಮಾನವು ಕುಂದಾಪುರಹೈಸ್ಕೂಲಿನ ವಿದ್ಯಾರ್ಥಿಗೂ ಸಿಕ್ಕಿತು

ರಾತ್ರೆ ೯-೩ಂಕ್ಕೆ ನಾಟಕ ವಿವಿಧ ವಿನೋದಾವಳಿಗಳಿದ್ದವು

ಹೆಚ್ಚಿನ ಅನುಕೂಲ, ಸಮಯ ಪ್ರಚಾರಗಳಿಲ್ಲದಿದ್ದರೂ, ಈ ಸಲದ ವಿದ್ಯಾರ್ಥಿ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿಯೇ ಜರಗಿತು ವಿದ್ಯಾರ್ಥಿಗಳಲ್ಲಿ ಸಂಘಶಕ್ತಿ, ನಿಯಮ, ಶಿಸ್ತುಪಾಲನೆ ವ್ಯಕ್ತಿಭಾವಗಳು ಬಹುಮೂಡಿದೆಯೆಂಬುದಕ್ಕೆ ಸಮ್ಮೇಳನದ ಯಶಸ್ವಿತೆಯೆ ಸಾಕ್ಷಿಯಾಗಿದೆ


ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಶುದ್ಧವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ, ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ ಪಿ. ಎಸ್ ತಿಳಿಸುವದೇನೆಂದರೆ ಖಾಸೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯು ಕ್ರಯ ರೂ. ೪-೦-೦

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

ಅರುಣ

ಗರ್ಭಾಶಯ ರೋಗನಿವಾರಿಣಿ

ಋತುಶೂಲೆ
ಅಕಾಲ ಬಹಿಷ್ಟೆ
ಹೆಚ್ಚು ಸ್ರಾವ
ಬಂಜೆತನ
ಬಿಳಿಸೆರಗು
ಕುಸುಮವ್ಯಾಧಿ
ಗರ್ಭಸ್ರಾವ
ಗರ್ಭಪತನ

ಮುಂತಾದ ಸಕಲ ವ್ಯಾಧಿಗಳನ್ನೂ ಗುಣಪಡಿಸಿ, ಸ್ತ್ರೀಯರಿಗೆ ಕೊರತೆಯಿಲ್ಲದ ಆರೋಗ್ಯವನ್ನೂ, ಅವಯವ ಸೌಷ್ಠವವನ್ನೂ, ಸತ್ಸಂತಾನವನ್ನೂ ಉಂಟುಮಾಡುವುದು.

ಎಲ್ಲಾ ಕೆಮಿಸ್ಟರಲ್ಲೂ ಸಿಗುವುದು

ತಯಾರಿಸುವವರು

ಆಯುರ್ವೇದಾಶ್ರಮಂ, ಮದರಾಸು

ಸ್ಥಳೀಯ ಏಜಂಟರು

ಪೊಪ್ಯುಲರ್ ಸ್ಟೋರ್ಸ್, ರಥಬೀದಿ-ಮಂಗಳೂರು

# ಇಬ್ಬರೂ ಸಂಶಯಾತ್ಮರು!

## ಹಿಟ್ಲರ್-ಸ್ಟಾಲಿನರ ಸಂಬಂಧ

[ಯುರೋಪಿನ ರಾಜಕಾರಣದಲ್ಲಿ ಇಂದು ವಿಜೃಂಭಿಸುತ್ತಿರುವ ಇಬ್ಬರು ಸರ್ವಾಧಿಕಾರಿಗಳು ಹಿಟ್ಲರ್ ಮತ್ತು ಸ್ಟಾಲೀನರು. ತಮ್ಮ ಏಳಿಗೆಯ ಸಲುವಾಗಿ ಅನ್ಯೋನ್ಯ ಗೆಳೆತನವುಂಟೆಂದು ಜಗತ್ತಿಗೆ ಪ್ರದರ್ಶಿಸುತ್ತಿದ್ದರೂ, ಅನ್ಯೋನ್ಯ ಇಬ್ಬರೂ ಸಂಶಯಗೊಂಡಿದ್ದಾರೆ. ಹಿಟ್ಲರನ ಮೇಲೆ ಸ್ಟಾಲಿನನು ಕ್ರೋಧಗೊಂಡಿದ್ದಾನೆ. ಸ್ಟಾಲಿನನ ಮೇಲೆ ಹಿಟ್ಲರನು ಸಂಶಯಪಡುತ್ತಿದ್ದಾನೆ.]

ಹಿಟ್ಲರನಿಗೂ ಸ್ಟಾಲಿನನಿಗೂ ಸ್ನೇಹ ಸಂಬಂಧವು ಕೂಡಿಬರುವ ಸಂದರ್ಭದಲ್ಲಿ ಆಧುನಿಕ ಯುದ್ಧೋಪಕರಣಗಳ ಹೊಸ ಆವಿಷ್ಕಾರಗಳನ್ನು ಒಬ್ಬರಿಗೊಬ್ಬರು ಹೇಳಿಕೊಟ್ಟು ತಮ್ಮ ತಮ್ಮ ಧ್ಯೇಯ ಸಾಧನೆಯಲ್ಲಿ ಒಬ್ಬರಿಗೊಬ್ಬರು ಸಹಾಯಕರಾಗಬೇಕೆಂದೂ ಅವರು ಗೊತ್ತು ಮಾಡಿ ಕೊಂಡಿದ್ದರು. ಆ ನಿರ್ಧಾರವನ್ನನುಸರಿಸಿ ರಶ್ಯದ ಒಂದು ತಜ್ಞ ಮಂಡಳವು ಜರ್ಮನಿಯ ಯುದ್ಧೋಪಕರಣಗಳ ಸಿದ್ಧತೆಯ ಕ್ರಮಗಳ ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ ಸ್ವಲ್ಪ ಸಮಯದ ಹಿಂದೆ ಜರ್ಮನಿಗೆ ಬಂದಿತ್ತು. ಆದರೆ ಅವರು ಬಂದಿದ್ದಾಗ ಹಿಟ್ಲರನು ತನ್ನ ಯುದ್ಧೋಪಕರಣಗಳ ತಯಾರಿಯ ಸಂಪೂರ್ಣ ಮಾಹಿತಿಯನ್ನು ರಶ್ಯದ ಆ ತಜ್ಞ ಮಂಡಳಕ್ಕೆ ಕೊಡಲಿಲ್ಲವೆಂದೂ, ಪ್ರಾಮುಖ್ಯವಾದ ಕೆಲವು ಸಂಗತಿಗಳನ್ನು ಅಡಗಿಸಿಟ್ಟಿದ್ದನೆಂದೂ ರಶ್ಯದಲ್ಲಿ ಹಿಟ್ಲರನ ವಿರುದ್ಧ ಪ್ರಚಾರ ಕಾರ್ಯಕ್ಕೆ ಆರಂಭವಾಗಿರುವಂತೆ ಸ್ಟಾಲೀನನು ಹಿಟ್ಲರನ ಮೇಲೆ ಅವನ ಮೋಸಕಾರ್ಯಕ್ಕೆ ತುಂಬಾ ಸಿಟ್ಟಾಗಿ ಹಲ್ಲು ಕಡಿಯುತ್ತಿರುವನೆಂದೂ ತಿಳಿದಿದೆ.

### ಪ್ರತೀಕಾರದ ಉಪಾಯ

ಅಫಘಾನಿಸ್ಥಾನಕ್ಕೆ ಯಂತ್ರ ಸಾಮಗ್ರಿಗಳನ್ನು ಕೊಟ್ಟು ಅಲ್ಲಿಂದ ತನಗೆ ಅವಶ್ಯಕವಾದ ಖನಿಜಗಳನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡುವದಕ್ಕೋಸ್ಕರ ಒಂದು ವ್ಯಾಪಾರಿ ಮಂಡಲವನ್ನು ಹಿಟ್ಲರನು ಅಫಘಾನಿಸ್ಥಾನಕ್ಕೆ ಕಳುಹಿಸಿ ಕೊಟ್ಟಿದ್ದ. ಅದು ತನ್ನ ಕಾರ್ಯವನ್ನು ಮಾಡಿಸುವದರೊಳಗೆ ಅಫಘಾನಿಸ್ಥಾನದೊಂದಿಗೆ ಜರ್ಮನಿಯ ವ್ಯಾಪಾರವು ಯಾವ ಮಾರ್ಗವಾಗಿ ಸಾಗಬೇಕೆಂಬುದು ಹಿಟ್ಲರನಿಗೆ ಕೋಚವಾಗಿದೆ. ರಶ್ಯದ ಮಾರ್ಗವಾಗಿ ವ್ಯಾಪಾರವನ್ನು ಸಾಗಿಸಲಿಕ್ಕೆ ಸ್ನೇಹಿತನಾದ ಸ್ಟಾಲೀನನು ಒಪ್ಪುವದಿಲ್ಲ. ಹಾಗೆ ಮಾಡಿದರೆ ಅವನ ದೇಶದ ವ್ಯಾಪಾರಕ್ಕೆ ಭಂಗ ಬರುವದಂತೆ. ಮತ್ತೆ ಪರ್ಶಿಯ ಏಸ್ಯಾ ಮೈನರ ಬಾಲ್ಕನ ರಾಷ್ಟ್ರಗಳ ಮೂಲಕವಾಗಿ ಜರ್ಮನಿಗೆ ವ್ಯಾಪಾರ ಹೋಗುವದೂ ಸಾಧ್ಯವಲ್ಲ. ಈಗ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ಆ ಮಾರ್ಗವು ತುಂಬ ಅಪಾಯಕಾರಕವಾಗಿದೆ. ಹೀಗಾಗಿ ಹಿಟ್ಲರನು ದಾರಿ ಕಾಣದೆ ಕಂಗೆಟ್ಟಿದ್ದಾನೆ. ಅಂತೂ ತಮ್ಮ ತಮ್ಮ ಸ್ವಾರ್ಥವನ್ನು ಸಾಧಿಸುವಲ್ಲಿ ಹಿಟ್ಲರ ಸ್ಟಾಲೀನರು ಸ್ನೇಹಿತರಾಗಿದ್ದು ಒಬ್ಬರೊಬ್ಬರಿಗೆ ಅಹಿತವನ್ನೇ ಲಕ್ಷಿಸುವಂಥವರಲ್ಲವೆಂಬುದು ಗೊತ್ತಾಗುತ್ತದೆ! ಆದ್ದರಿಂದಲೇ ಹಿಟ್ಲರನೀಗ ಸ್ಟಾಲೀನನ ಮೇಲೆ ಸಂಶಯಪಡತೊಡಗಿದ್ದಾನೆ. ಹಿಟ್ಲರ-ಸ್ಟಾಲೀನರ ಅಸ್ವಾಭಾವಿಕ

ಸಂಬಂಧವು ಇನ್ನು ಸ್ವಲ್ಪ ಸಮಯದಲ್ಲಿಯೇ ಕಡಿದು ಹೋಗುವದು ಖಂಡಿತ.

### ಬಾಲ್ಕನದಲ್ಲಿ ಹಿಟ್ಲರನ ತೇಜೋವಧೆ

ಬಾಲ್ಕನ ರಾಷ್ಟ್ರಗಳೆಲ್ಲವೂ ಒಂದಾಗಿ ಹಿಟ್ಲರನನ್ನು ವಿರೋಧಿಸತೊಡಗಿರುವವು. ಹಿಟ್ಲರನು ಆ ರಾಷ್ಟ್ರಗಳನ್ನು ಒಂದೊಂದಾಗಿ ಹೆದರಿಸಿ ಬೆದರಿಸಿ ಅವುಗಳನ್ನು ತನ್ನ ಬಲೆಯೊಳಗೆ ಕೆಡಹುವ ಭಗೀರಥ ಪ್ರಯತ್ನಗಳನ್ನು ಮಾಡಿದನಾದರೂ ಅವೆಲ್ಲ ಈಗ ವ್ಯರ್ಥವಾಗಿರುವವು. ಬೆಲ್‌ಗ್ರೇಡ್ ರಾಜಧಾನಿಯಲ್ಲಿ ಬಾಲ್ಕನ ರಾಷ್ಟ್ರಗಳ ಪ್ರತಿನಿಧಿಗಳದೊಂದು ಮಹಾಸಭೆಯು ಕೂಡಿ ಅವರು ತಮ್ಮ ರಾಷ್ಟ್ರಗಳನ್ನು ಹಿಟ್ಲರನ ದಾಳಿ ಆಕ್ರಮಣಗಳಿಂದ ಕಾಪಾಡಲಿಕ್ಕೆ ಮಾಡಬೇಕಾದ ಎಲ್ಲ ಕಾರ್ಯಗಳನ್ನು ಆಲೋಚಿಸಿ ಕೈಕೊಂಡಿರುವರು. ಆದ್ದರಿಂದ ಈ ರಾಷ್ಟ್ರಗಳ ವಿರುದ್ಧ ಜರ್ಮನ ಪತ್ರಿಕೆಗಳು ಸಂಶಯಕಾರಕತೆಯಿಂದ ಬರೆಯುವದು ಈಗ ಬಹಳ ಕಡಿಮೆಯಾಗಿದೆ. ಅವುಗಳು ಈಗ ಬಹು ಮೆತ್ತಗೆ ಮಾತನಾಡುತ್ತಲಿರುವವು. ಪೂರ್ವ ದೇಶಗಳಲ್ಲಿ ಜರ್ಮನ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂದು ಹಿಟ್ಲರನು ಕಾಣುತ್ತಿದ್ದ ಕನಸು ಇನ್ನು ಕನಸಾಗಿಯೇ ಉಳಿದುಕೊಳ್ಳುವದರಲ್ಲಿ ಸಂದೇಹವಿಲ್ಲ.

### ಫಿನ್ಲಂಡದಲ್ಲಿ ರಶ್ಯದ ಪರಾಭವ

ಫಿನ್ಲಂಡಿನಲ್ಲಿ ರಶ್ಯದ ಪರಾಭವವು ಆಗುತ್ತಲೇ ಇದೆ. ಕೆಲ ದಿನಗಳಲ್ಲಿ ರಶ್ಯದ ಒಂದು ಪಡೆಯು ಸಂಪೂರ್ಣ ನಾಶವಾಗಿರುವದು. ಕರೇಲಿಯನ ಇಸ್ತಮಸದಲ್ಲಿಯೂ ರಶ್ಯಕ್ಕೆ ಅದೇ ಗತಿಯು ಪ್ರಾಪ್ತವಾಗಿದೆ. ಆದರೆ ರಶ್ಯದ ಜನಬಲವೂ ಧನ ಮತ್ತು ಯುದ್ಧೋಪಕರಣಗಳ ಬಲವೂ ಫಿನ್ಲಂಡಿಗಿಂತ ಹೆಚ್ಚಾಗಿದೆ. ಅದರ ಒಂದು ಪಡೆಯು ವ್ಯಾಪುರಿಯ ಕಡೆಗೆ ಮುನ್ನಡೆದು ಇದೆ. ಆ ವ್ಯಾಪುರಿ ಬಂದರವನ್ನು ಗೆದ್ದುದಾದರೆ ರಶ್ಯಕ್ಕೆ ಬಹಳ ಲಾಭವಾದಂತೆಯೇ ಸರಿ. ಆದರೆ ಚಳಿಗಾಲವು ಆರಂಭವಾದಾಗಿನಿಂದ ಫಿನ್ನರು ರಶ್ಯನರ ಆಕ್ರಮಣಗಳನ್ನು ತಡೆಯಲಿಕ್ಕೆ ಮಾಡಬೇಕಾದ ಎಲ್ಲ ಉಪಾಯಗಳನ್ನೂ ಮಾಡಿದ್ದಾರೆ. ರಶ್ಯನರು ಫಿನ್ನರೊಡನೆ ಕಾದಾಡಿ ಬಹಳ ದಣಿಯುತ್ತಿದ್ದಾರೆ. ಲಕ್ಷಾಂತರ ಜನರ ಬಲಿಕೊಟ್ಟು, ಕೋಟ್ಯಾಂತರ ರೂಪಾಯಿಗಳನ್ನು ನಷ್ಟ ಮಾಡಿದ ಬಳಿಕವೇ ಅವರು ಎಲ್ಲಿಯಾದರೊಂದೆರಡು ಕಡೆಗಳಲ್ಲಿ ಹೆಸರಿಗಾಗಿಯ ವಿಜಯಗಳನ್ನು ಸಂಪಾದಿಸಿದ್ದಾರೆ. ಅವರು ದುರ್ಬಲರಾಗಿರುವದರಿಂದಲೇ ಸಾವಿರಾರು ರಶ್ಯನರು ಫಿನ್ನರ ಕೈ ಸೆರೆಯಾಗುತ್ತಿದ್ದಾರೆ. ಜರ್ಮನಿಯಂತೆ ರಶ್ಯವೂ ತಟಸ್ಥ ರಾಷ್ಟ್ರಗಳ ವ್ಯಾಪಾರಿ ಹಡಗುಗಳನ್ನು ಮುಳುಗಿಸುತ್ತಲಿರುವದರಿಂದಲೇ ಅದಕ್ಕೆ ಪ್ರಪಂಚದ ಸಹಾನುಭೂತಿಯಿಂದ ವಂಚಿತವನ್ನಾಗಿ ಮಾಡಿದೆಂದು ಮಾಡಿದೆ.

ಶೀತ ಮತ್ತು ನೆಗಡಿ...
ಗಳಿಂದ ದೂರವಾಗ...
ಜ್ಯಾಂಬಕನ್ನು ಎದೆಗೆ ಚೆನ್ನಾಗಿ ತಿಕ್ಕಿರಿ!

ಜ್ಯಾಂಬಕನ್ನು ಚೆನ್ನಾಗಿ ಎದೆಗೆ ...ವುದರಿಂದ ಶೀತ, ನೆಗಡಿ ಮತ್ತು ...ವನ್ನು ದೂರವಿರಿಸಿರಿ. ಈ ಅಮೂಲ್ಯವಾದ ಮುಲಾಮಿಗೆ ಎರಡು ತರದ ...ವಿದೆ. ಎದೆಯ ನೋವನ್ನು ಹೋಗಲಾಡಿಸಿ ಎದೆಯನ್ನು ಸಡಿಲಾಗಿರಿಸುತ್ತದೆ ... ಜ್ಯಾಂಬಕಿನಲ್ಲಿರುವ ಔಷಧಿಯು ...ಯು ನಿಮ್ಮ ಎದೆಯನ್ನು ಸೇರಿದೊಡನೆ ...ಸಿರಾಡಲು ಸುಲಭವಾಗುವುದು ಮತ್ತು ತಲೆಯು ಹಗುರವಾದಂತೆನಿಸುವುದು. ಗಾಯವಾಗುವುದು ...



ಔಷಧಿ ವ್ಯಾಪಾರಿಗಳು ಜ್ಯಾಂಬಕನ್ನು ರೂ 1 ಮತ್ತು 2... ಮಾರುತ್ತಾರೆ

ಏಜಂಟ್ಸ್

ಮೆಸರ್ಸ ದಾದಾ ಮತ್ತು ಕಂಪನಿ ಪಾರ್ಕ್ ಟೌನ್ ಮದ್ರಾಸ

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ



THE

**Canara Banking Corporation Ltd.,**

(INCORPORATED IN BRITISH INDIA)

Estd: 1906

**THREE YEAR'S CASH CERTIFICATES**

**bearing interest at 4% p. a.**

in denominations of

**RS. 50/-, 100/-, 500/-, 1,000/- & 5,000/-**

**are now issued at all our Branches**

***For particulars call at or write to***

**Any of our nearest Branches**

ಈ ವಾರದ ಕತೆ:

# ಸಂಗೀತದ ಸಂದೇಶ

[ಲೇಖಕ. ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ]

ಅಂದು ಕಿಟ್ಟಪ್ಪನವರ ಸಂಗೀತ ಕಛೇರಿ ಆಗಿದ್ದಿತು. ನಾನೂ ಅದಕ್ಕೆ ಹೋಗಿದ್ದೆ. ನನಗೆ ಸಂಗೀತದಲ್ಲಿ ಅಭಿರುಚಿ ಇದ್ದರೂ ಅಭ್ಯಾಸ ವಿಲ್ಲ, ಶಾಸ್ತ್ರೀಯ ಜ್ಞಾನ ತಿಳುವಳಿಕೆ ಇಲ್ಲ. ಆದ್ದರಿಂದ ಬೈಠಕು ಮುಗಿದು ಮನೆಗೆ ಬರುತ್ತಾ 'ಹೇಗಿತ್ತು ಇವತ್ತಿನ ಸಂಗೀತ?' ಎಂದು ಮಿತ್ರರನ್ನು ಕೇಳಿದೆ. ಅವರು ನನ್ನ ಎಡಬಲ ಪಾಡಿ ನನ್ನೊಂದಿಗೆ ಬರುತ್ತ ಇದ್ದರು. 'ಬಹಳ ಚೆನ್ನಾಗಿತ್ತಪ್ಪ!' ಎಂದು ಉತ್ತರ ಕೊಟ್ಟರು. ಮಿತ್ರರು ಮಾತಿನ ಮಲ್ಲರು. ಆದರೆ ಈ ಬಾರಿ ಅವರು ಎರಡೇ ಮಾತುಗಳಿಂದ ಉದಾಸೀನದ ಉತ್ತರ ಕೊಟ್ಟುದನ್ನು ನೋಡಿ ನನಗೆ ಪರಮಾಶ್ಚರ್ಯವಾಯಿತು. 'ಏನು, ಚೆನ್ನಾಗಿರಲಿಲ್ಲವೆ?' ಎಂದು ಪ್ರಶ್ನೆ ಒತ್ತಿ ಕೇಳಿದೆ. ಆಗ ಅವರು—'ಸಂಗೀತವು ದೇವರ ವರದಾನವಪ್ಪಾ! ಅದು ಕಛೇರಿ ಬೈಠಕುಗಳಲ್ಲಿ ಮಾರುವ ವಸ್ತುವಲ್ಲ'' ಎಂದು ಹೇಳಿದರು. ಆಗ ಅವರ ಮೂಗಿನಿಂದ ಒಂದು ನಿಟ್ಟುಸಿರು ಹೊರಟುಹೋಗಿದ್ದಿತು. 'ಅಂದರೆ?' ಎಂದು ನಾನು ಕೇಳಿ ಕತೆಯನ್ನು ಪೂರಾ ಕೇಳುವ ಕುತೂಹಲವನ್ನು ತೋರಿಸಿದೆ.

—'ಅಪ್ಪಾ! ನನಗೇನೂ ಸಂಗೀತ ಗಾಯನ ತಿಳಿಯದೆಂದು ಎಣಿಸಬೇಡ. ಈಗಿನ ಹಾಗೆ ಆಗ ನಾನು ಹಳ್ಳಿ ಶಾಲೆಯ ಮಾಸ್ತರನಾಗಿರಲಿಲ್ಲ. ಅದು ಆಗಿ ಮೂವತ್ತು ವರ್ಷಗಳಾದುವು. ದೊಡ್ಡ ಸಂಗೀತಗಾರನಾಗಿ ದೇಶವಿದೇಶಗಳಲ್ಲಿ ಮೆರೆಯಬೇಕು, ಪತ್ರ ಪತ್ರಿಕೆಗಳು ನನ್ನನ್ನು ಶ್ಲಾಘಿಸಿ ಬರೆಯಬೇಕು, ರಾಜಮಹಾರಾಜರು ಥೈಲಿ, ಉಡುಗೊರೆಗಳನ್ನು ಕೊಟ್ಟು ಉಪಚರಿಸಬೇಕು ಎಂಬ ಹಂಬಲು ನನಗೆ ತುಂಬಾ ಇದ್ದಿತು. ಆದಕ್ಕೋಸ್ಕರ ಗಾಯನ ವಾದನಗಳ ಅಭ್ಯಾಸ ಮಾಡಬೇಕೆಂದು ನಾನು ನಿರ್ಧಾರಮಾಡಿಕೊಂಡು ನಮ್ಮ ಊರಿನಲ್ಲೇ ಇದ್ದ ಒಬ್ಬ ಸಂಗೀತಾಚಾರ್ಯರ ಬಳಿಗೆ ಹೋದೆ. ಅವರು ಸಂಗೀತ ಕಲಾಕೋವಿದರು. ಆದರೆ ಹೆಚ್ಚಿನವರಿಗೆ ಅಜ್ಞಾತರು. ಕೀರ್ತಿಯ ಲಾಲಸೆ, ಶಾಸ್ತ್ರಜ್ಞಾನದ ಅಭಿಮಾನ ಅವರಿಗಿರಲಿಲ್ಲ. ಎಲ್ಲಿಯಾದರೂ ಜಾತ್ರೆ ಉತ್ಸವಗಳ ಸಮಯದಲ್ಲಿ ಅಲ್ಲಿ ಸ್ವಲ್ಪ ಹಾಡುತ್ತಿದ್ದರು. ಹಿರಿಯರ ಆಸ್ತಿಯಿಂದ ಸಿಕ್ಕಿದ್ದರಲ್ಲಿ ಅವರಿಗೆ ಸಂತುಷ್ಟಿ ಇತ್ತು. ನಾನು ಹೋಗಿ ಅವರ ಕಾಲು ತೊಳೆದೆ, ವಸ್ತ್ರ ಒಗೆದೆ, ಚಾಕರಿ ಮಾಡಿದೆ. ಅವರು ನನಗೆ ಸಂಗೀತವನ್ನು ಕಲಿಸಲಿಕ್ಕೆ ಒಪ್ಪಿಕೊಂಡರು. ದಿವಸದಲ್ಲಿ ಅರ್ಧ ಘಂಟೆಯಷ್ಟು ಪಾಠ ಹೇಳುತಿದ್ದರು. ಆದರೆ ಅವರ ಪಾಠ ಕೊಡುವ ಕ್ರಮವು ಎಷ್ಟು ಉತ್ತಮವಾಗಿತ್ತೆಂದರೆ, ನಾನು ಒಂದೇ ವರ್ಷದಲ್ಲಿ ಸಂಗೀತದಲ್ಲಿ ಪಾರಂಗತನೆನ್ನಿಸಿಕೊಂಡೆ.

ನಾನು ಒಂದೊಂದು ಬಾರಿ ರಾತ್ರಿ ೧೨ ಘಂಟೆಯಾಗುವ ತನಕವೂ ಸಂಗೀತದ ಅಭ್ಯಾಸಮಾಡಿಕೊಂಡಿರುತಿದ್ದೆ. ಆ ದಿನ ರಾತ್ರಿ ನಡೆದ ಘಟನೆ ಈಗ ಕೂಡ ನನ್ನ ಮನಸ್ಸಿನಲ್ಲಿ ಮಾಸದೆ ಇದೆ. ನನ್ನ ಅವಿಚಾರ ಮತ್ತು ಅವಿವೇಕಕ್ಕಾಗಿ ನನಗೆ ಪಶ್ಚಾತ್ತಾಪವಾಗುತ್ತದೆ. ನಾನು ಆಗ ಭೈರವಿಯಲ್ಲಿ ಒಂದು ಹಾಡು ಹಾಡುತ್ತಲಿದ್ದೆ. ಸಂಗೀತದಲ್ಲಿ ನಾನು ನನ್ನನ್ನು ಮರೆತುಹೋಗುತ್ತಿರುವಷ್ಟರಲ್ಲಿ ಯಾರೋ ಬಂದು ಬಾಗಿಲು ಕಟಕಟಿಸಿದ ಶಬ್ದವಾಯಿತು. ನನ್ನ ಅಭ್ಯಾಸಕ್ಕೆ ವಿಘ್ನವನ್ನು ತಂದ ಅವನ ಮೇಲೆ ನನಗೆ ಅಪರಿಮಿತ ಸಿಟ್ಟು ಬಂದಿತು. ಬಾಗಿಲು ತೆರೆದು 'ಯಾರು ನೀನು?' ಎಂದು ಕೇಳಿದೆ.

'ಸ್ವಾಮಿ, ನಾನು ಒಬ್ಬ ಸಾಧು, ಒಂದು ಮುಷ್ಟಿ ...' ಅವನು ದೀನನಾಗಿ ಹೇಳಿದ.

'ಈ ರಾತ್ರಿಕಾಲದಲ್ಲಿ ಭಿಕ್ಷೆ? ಹೋಗು, ಶನಿವಾರ ಬಾ' ಎಂದೆ.

'ಸ್ವಾಮೀ, ಹಸಿವಿನಿಂದ ಸಾಯುತ್ತೇನೆ, ಶನಿವಾರದ ತನಕ ಬದುಕಿದರೆ ....'

'ಹಾಂ, ಬಾಯ್ಮುಚ್ಚು, ನಿನ್ನಂಥವರ ಪುರಾಣ ಕತೆ .....'

'ಸ್ವಾಮೀ, ಒಂದು ಕಾಸು ಕೊಟ್ಟರೆ, ದೊಡ್ಡ ಉಪಕಾರ.....'

'ನಡೆ ಇಲ್ಲಿಂದ! ಕೊಡುವದಿಲ್ಲ.'

ಅವನು ಹೊರಟು ಹೋದ. ನಾನು ಬಾಗಿಲು ಮುಚ್ಚಿ ಪುನಃ ಹಾಡತೊಡಗಿದೆ. ೧೦-೧೫ ಮಿನಿಟು ಕಳೆಯುವಾಗ ಬಾಗಿಲು ಪುನಃ ಕಟಕಟಿಸಿತು.

'ಬುದ್ಧಿ ಇಲ್ಲವೆ, ನನಗೆ? ಯಾಕೆ ಉಪದ್ರವ ಕೊಡುತ್ತಿ?' ಎಂದು ನಾನು ಕೇಳಿದೆ.

'ಸ್ವಾಮೀ, ಬಹಳ ಚೆನ್ನಾಗಿ ಹಾಡುತಿದ್ದೀರಿ. ಕಾಸು ಕೊಡದಿದ್ದರೂ ಚಿಂತೆ ಇಲ್ಲ. ಹಾಡು ಕೇಳಲಿಕ್ಕಾದರೂ ಒಳಗೆ ಬಿಡಿ' ಎಂದು ಸಾಧು ಹೇಳಿದ.

'ಪುಕ್ಕಟೆ ಹಾಡು ಕೇಳಲಿಕ್ಕೆ ನಾನು ಬೀದಿಯ ಭಿಕಾರಿಯೆ? ಶ್ರಮಪಟ್ಟು ಕಲಿತಿದ್ದೇನೆ. ಹೋಗು ಇಲ್ಲಿಂದ! ಇಲ್ಲವಾದರೆ ಕುತ್ತಿಗೆಗೆ ಕೈ ಹಾಕಿ ದೂಡ್ತೆ.'

'ಹಾಂ, ಬೇಡ ಸ್ವಾಮಿ, ಅಷ್ಟು ಕಷ್ಟ ಬೇಡ. ನಾನೇ ಹೋಗುತ್ತೇನೆ. ಆದರೆ ಹೋಗುವಾಗ ಒಂದು ಮಾತು ಹೇಳಿ ಹೋಗುತ್ತೇನೆ. ಇದು ನಿಮ್ಮ ಹುಡುಗಾಟಿಕೆಯ ಕೊನೆಯ ದಿನ. ನಾಳೆಯಿಂದ ಸಂಗೀತ ಎಂದರೆ ಮೈ ತೆಗೆಯುವಿರಿ. ನಿಮ್ಮ ಕೊಳಲು ಪೆಟ್ಟಿಗೆ ಎರಡು ಕಾಸಿಗೆ ಮಾರಿ ಹೋಗುವದು' ಎಂದು ಹೇಳುತ್ತ ಸಾಧು ಕಟಕಟ ಹಾವುಗಳ ಶಬ್ದಮಾಡುತ್ತ ಮೆಟ್ಟಲು ಇಳಿದು ಹೋಗಿಬಿಟ್ಟ. ಆ ಕ್ಷಣ ನನಗೆ ಸ್ವಲ್ಪ ಸಮಾಧಾನವಾಯಿತು. ಬಾಗಿಲು ಹಾಕಿಕೊಂಡು ಪುನಃ ಅಭ್ಯಾಸಕ್ಕೆ ಸುರುಮಾಡಿದೆ. ಆದರೆ 'ನಾಳೆಯಿಂದ ಸಂಗೀತ ಎಂದರೆ ಮೈ ತೆಗೆಯುವಿರಿ. ನಿಮ್ಮ ಕೊಳಲು ಪೆಟ್ಟಿಗೆ ಎರಡು ಕಾಸಿಗೆ ಮಾರಿ ಹೋಗುವುದು' ಎಂಥ ಭಯಂಕರ ಶಬ್ದಗಳು! ಅದರ ಅರ್ಥ ...? ಅದನ್ನು ಆಲೋಚಿಸುತ್ತ ನನ್ನ ಕಣ್ಣು ಮುಂದೆ ಕತ್ತಲು ಕವಿಯಿತು, ನನ್ನ ಶರೀರವು ಕಂಪಿಸಿತು. ಹಣೆಯ ಬೆವರು ಕಾಲಿಗೆ ಇಳಿಯಿತು. ನಾನು ಗೋಡೆಗಿದ್ದ ಚಿಮಿಣಿಯನ್ನು ಹಿಡಿದು ಹೊರಗೆ ಬಂದೆ. ಆಚೆ ಈಚೆ ನೋಡಿದೆ. ಆದರೆ ಸಾಧು ಅಲ್ಲಿ ಎಲ್ಲಿಯೂ ಕಾಣ ಸಿಗಲಿಲ್ಲ. ಅವನಿಗೆ ಸಂಗೀತದ ಮೇಲೆ ಬಹಳ ಪ್ರೇಮವಿದ್ದಿರಬೇಕು. ಈಗಲೇ ಬಂದಾನು ಎಂದುಕೊಂಡು ಬಾಗಿಲು ಅರ್ಧ ತೆರೆದಿಟ್ಟು ಪುನಃ ಅಭ್ಯಾಸವನ್ನು ಆರಂಭಿಸಿದೆ.

ಒಂಭತ್ತು ಇದ್ದುದು ಹತ್ತಾಯಿತು, ಹನ್ನೊಂದಾಯಿತು, ಹನ್ನೆರಡಾಯಿತು. ಗಂಟೆಯ ಮೇಲೆ ಘಂಟೆ ಬಡಿಯಿತು. ಹಾಡು ಮುಗಿಸಿ ನಾನು ಕೊಳಲನ್ನು ಕೈಗೆ ತೆಗೆದುಕೊಂಡೆ. ಅದನ್ನು ಊದುತ್ತ ಸಮಯ ಹೋದುದೂ ನನಗೆ ತಿಳಿಯಲಿಲ್ಲ. ಪ್ರಾಯಶಃ ಎರಡು ಮೂರು ಗಂಟೆಗಳಾಗುವ ತನಕ ಊದಿಕೊಂಡಿರಬಹುದು. ಊದುತ್ತ ಊದುತ್ತ ಇರುವಾಗ ಯಾರೋ ಒಳಗೆ ಬರುವ ಹಾಗೆ ತೋರಿತು. ಸಾಧುವೇ ಆಗಿರಬಹುದೆಂದು ಕಣ್ಣು ತೆರೆದು ನೋಡಿದೆ. ಏನು ನೋಡುವದು! ಸಾಧು ಅಲ್ಲ! ಅರ್ಧ ತೆರೆದ ಬಾಗಿಲ ಸಂದಿನಿಂದ ಒಂದು ದೊಡ್ಡ—ಆರಡಿ ಉದ್ದದ—ಕೃಷ್ಣ ಸರ್ಪವು ಒಳಗೆ ಸುಸುಳಿ ಬರುತಲಿದ್ದಿತು. ನನ್ನ ಗಾಯನವಾದನಕ್ಕೆ ಅದು ಮರುಳಾಗಿ ಬಂದಿತ್ತು. ನಾನು ಕೊಳಲು ಊದುತಿದ್ದ ಹಾಗೆ ಅದು ಹೆಡೆಬಿಚ್ಚಿ ಸಂತೋಷದಿಂದ ತಲೆಯನ್ನು ಎಡಕ್ಕೂ ಬಲಕ್ಕೂ ಆಡಿಸತೊಡಗಿತು. ಅಂಥ ಸರ್ಪವನ್ನು ನಾನು ಜೀವನದಲ್ಲಿಯೇ ನೋಡಿರಲಿಲ್ಲ. 'ಹಾಡು, ಹಾಡು, ಊದು, ಊದು, ಇನ್ನೂ ಊದು!' ಎನ್ನುತ್ತಿರುವ ಹಾಗೆ ಅದು ನನಗೆ ತೋರಿತು. ಅದನ್ನು ಮನಸ್ಸಿಗೆ ತಂದಾಗ ಈಗಲೂ ನನಗೆ ಭಯವಾಗುತ್ತದೆ. ನಾನು ಕೊಳಲು ಊದುತಿದ್ದಾಗ ಅದು ಸಂತೋಷದಿಂದ ನಲಿಯುತಿತ್ತು. ಆದರೆ ಅದನ್ನು ನಿಲ್ಲಿಸಿದಾಗ ಸಿಟ್ಟಾಗಿ ಬುಸ್ಸೆಂದು ಕಡಿಯಲಿಕ್ಕೆ ಬರುತಿತ್ತು.

ನಾನು ಪುನಃ ಪುನಃ ಕೊಳಲನ್ನೇ ಊದಿದೆ. ಕೊಳಲು ಎಷ್ಟು ಇಂಪಾಗಿರಬಾರದೇಕೆ? ಸಂಗೀತವು ಎಷ್ಟು ಮಧುರವಾಗಿರಬಾರದೇಕೆ? ಪುನಃ ಪುನಃ ಅದನ್ನೇ ಹಾಡಿದಾಗ, ಊದಿದಾಗ ಬೇಸರವಾಗುವದು. ನಾನು ಊದಿ ಊದಿ ದಣಿದೆ, ಸೋತು ಸುಣ್ಣವಾದೆ. ನನ್ನ ಗಲ್ಲಗಳು ಬಾತುಕೊಂಡವು. ತುಟಿಗಳು ಕಪ್ಪಿಟ್ಟವು. ಆದರೆ ಸರ್ಪಕ್ಕೆ ಮಾತ್ರ ಬೇಸರವಾಗಲಿಲ್ಲ. ಅದು ಬೇಸರದಿಂದ ಹೊರಟು ಹೋಗುವ ಹಾಗೆ ಕಾಣಲಿಲ್ಲ. ನನ್ನ ತಲೆ ತಿರುಗಲಾರಂಭಿಸಿತು. ಕೊಳಲು ಹಿಡಿದ ಎರಡೂ ಕೈಗಳು ನಡುಗತೊಡಗಿದುವು. ನಾನು ಕಂಗಾಲಾದೆನು, ಕಣ್ಣು ಕಾಣದಾದೆನು. ಶ್ವಾಸವು ಕಟ್ಟಿ ಬರತೊಡಗಿತು. ಆದರೂ ಸರ್ಪಕ್ಕೆ ನನ್ನ ಮೇಲೆ ಕರುಣೆ ಹುಟ್ಟಲಿಲ್ಲ. ಅದು ಇನ್ನೂ ಇನ್ನೂ ಹಾಡಬೇಕೆನ್ನುತ್ತಿತ್ತು. ಕೊಳಲು ನಿಲ್ಲಿಸಿದಾಗ ಬುಸ್ಸೆಂದು ಭಯಂಕರ ಶಬ್ದಮಾಡಿ ಕೆಕ್ಕರಿಸಿ ಬರುತಿತ್ತು. ನನ್ನ ಜನ್ಮದ ವೈರವನ್ನು ಒಂದೇ ಸಲ ಸಾಧಿಸಲಿಕ್ಕೆ ಬಂದ ಹಾಗೆ ಅದು ನನಗೆ ಕಂಡಿತು.

ಮತ್ತೇನು? ನಾನು ಎಚ್ಚರತಪ್ಪಿ ಬೀಳುವಂತಾದೆ. 'ನಾಗರಾಜ! ಇನ್ನು ನಾನು ಬಾರಿಸಲಾರೆ, ಊದಲಾರೆ. ನನ್ನ ಎಲ್ಲಾ ಶಕ್ತಿಯನ್ನು ನೀನು ಹೀರಿಕೊಂಡಿ. ಬದುಕಿಸುವದಾದರೆ ಬದುಕಿಸು, ಸಾಯಿಸುವದಾದರೆ ಸಾಯಿಸು' ಎಂದು ಕೊಳಲನ್ನು ನೆಲಕ್ಕೆ ಬಿಸಾಡಿ ಸರ್ಪಕ್ಕೆ ಸಾಷ್ಟಾಂಗ ಮಾಡಿದೆ.

ಸರ್ಪವು ಏನು ಎಣಿಸಿತೋ—ನಾನು ಕಣ್ಣು ತೆರೆದು ನೋಡುವಾಗ ಅದು ಹೊರಟು ಹೋಗಿತ್ತು. ನನ್ನ ಕೊಳಲು ಒಂದು ಮೂಲೆಯಲ್ಲಿ ಬಿದ್ದುಕೊಂಡಿತ್ತು. ಗೋಡೆಯಲ್ಲಿದ್ದ ಚಿಮಿಣಿಯ ಪ್ರಕಾಶವು ಮಂದವಾಗಿತ್ತು. ಹೊರಗೆ ಒಕ್ಕಲಿಗನ ಕೋಳಿ ಮುಂಜಾನೆ ಕೂಗುತಿತ್ತು.

ಮರುದಿನ ಬೆಳಗ್ಗೆ ಎದ್ದು ನಾನು ನೆಟ್ಟಗೆ ನನ್ನ ಸಂಗೀತಾಚಾರ್ಯರ ಮನೆಗೆ ಹೋಗಿ ರಾತ್ರಿ ನಡೆದ ಸಂಗತಿಯನ್ನು ತಿಳಿಸಿದೆ. 'ರಾತ್ರಿ ಕೊಳಲು ಊದ ಬಾರದೆಂಬುದು ನಿನಗೆ ತಿಳಿದಿರಲಿಲ್ಲವೆ?' ಎಂದು ಅವರೆಂದರು. ನಾನು ದೀನನ ಹಾಗೆ ಅವರ ಮುಂದೆ ನಿಂತುಕೊಂಡಿದ್ದೆ. 'ಅಪ್ಪಾ! ನೀನು ಸಂಗೀತದ ಅಭ್ಯಾಸ ಮಾಡುವಾಗ ಇನ್ನು ಯಾವಾಗ ಸರ್ಪ ಬರುತ್ತದೆ, ಯಾವಾಗ ಬರುವದಿಲ್ಲ, ಎಂದು ಹೇಳುವದು ಕಷ್ಟ. ಸರ್ಪವು ಬಂದಾಗ ನೀನು ಕೊಳಲು ಅಲ್ಲದೆ ಮತ್ತೇನೂ ಊದಬಾರದು.' ಎಂದರವರು.

'ಇಲ್ಲ, ನಾನಿನ್ನು ಕೊಳಲು ಮುಟ್ಟುವದೇ ಇಲ್ಲ. ನನಗೆ ಭಯವಾಗುತ್ತದೆ' ಎಂದು ನಾನು ನಡುಗುತ್ತ ಹೇಳಿದೆ.

'ಹಾಗಿದ್ದರೆ ಇನ್ನು ನೀನು ಸಂಗೀತದ ಅಭ್ಯಾಸ ಮಾಡುವದು ವ್ಯರ್ಥ. ನಿನ್ನ ಕೊಳಲು ಪೆಟ್ಟಿಗೆ ಎರಡು ಕಾಸಿಗೆ ಮಾರಿ ಹೋಗುವದು ನಿಶ್ಚಿತ. ಅವುಗಳಿಂದ ನಿನಗೆ ಪ್ರಯೋಜನವಿಲ್ಲ. ಸಂಗೀತವು ದೇವರ ವರದಾನ. ಎಲ್ಲಾ ಕಲೆಗಳು ಹಾಗೆಯೇ! ಅವು ಸಂತೆಯಲ್ಲಿ ಮಾರಾಟಕ್ಕಿಡುವ ವಸ್ತುಗಳಲ್ಲ!' ಎಂದರು.

ನನ್ನ ಕಣ್ಣುಗಳಿಂದ ಗಂಗಾ ಪ್ರವಾಹವು ಹರಿಯ ತೊಡಗಿತು. ನಾನು ಅವರ ಚರಣ ಕಮಲದ ಮೇಲೆಬಿದ್ದು ಕಣ್ಣೀರಿನಿಂದ ಅದನ್ನು ತೊಳೆದೆ. ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡೆ. ಅವರು ಹೇಳಿದರು—'ಮಗೂ! ಸಂಗೀತ ಪ್ರೇಮಿಯಾದ ಆ ಸಾಧುವನ್ನು ನೀನು ವ್ಯರ್ಥ ಬೈದು ಭಂಗಿಸಿದೆ. ನಿನಗೆ ನಿನ್ನ ವಿದ್ಯೆಯ ಗರ್ವ ಬಂದಿತ್ತು!'

'ಹೌದು, ಗುರುವರ್ಯರೇ, ಏನು ಮಾಡಬೇಕು' ಎಂದೆ.

'ಆ ಸಾಧು ನಿನ್ನನ್ನು ಕ್ಷಮಿಸುವನಾದರೆ ನಿನ್ನ ಸಂಗೀತ ವಿದ್ಯೆಯ ಫಲವನ್ನು ಪಡೆಯಬಹುದು. ಬೇರೆ ಉಪಾಯವಿಲ್ಲ' ಎಂದು ಅವರೆಂದರು.

ಅಂದಿನಿಂದ ಆ ಸಾಧುವನ್ನು ಹುಡುಕುತ್ತಿದ್ದೇನೆ. ಈಗಲಾದರೂ ಅವನು ಎಲ್ಲಿಯಾದರೂ ದೊರೆತನಾದರೆ ಅವನ ಕಾಲುಗಳಿಗೆ ಬಿದ್ದು ನನ್ನ ಸ್ವರ್ಗಾಪರಾಧಗಳಿಗಾಗಿ ಕ್ಷಮೆ ಬೇಡಲಿಕ್ಕೆ ನಾನು ತಯಾರು. ನನ್ನ ಹೃದಯವು ಪಶ್ಚಾತ್ತಾಪದ ಅಗ್ನಿಯಲ್ಲಿ ಬೇಯುತ್ತಾ ಇದೆ.'

ನನ್ನ ಮಿತ್ರರು ಕತೆಯನ್ನು ಹೇಳಿ ಮುಗಿಸಿದರು. ಅದನ್ನು ಕೇಳಿ ನನಗೆ ರೋಮಾಂಚನವಾಯಿತು. ನನ್ನ ಮಿತ್ರರು ಅಸಾಧಾರಣ ಸಂಗೀತಗಾರರಾಗಿದ್ದರು. ಆದರೆ ಸಂಗೀತವು ಮಾರಾಟಕ್ಕಿಡುವ ವಸ್ತುವಲ್ಲ. ಅದು ದೇವರ ವರದಾನ. ಸಂಗೀತವು ಫಲಿತಕ್ಕೆ ಬರಬೇಕಾದರೆ ದೇವರ ಅನುಗ್ರಹ ಬೇಕು, ದೇವರು ಮೆಚ್ಚುವ ಕೆಲಸ ಮಾಡಬೇಕು—ಮಿತ್ರರ ಈ ಮಾತುಗಳು ನನ್ನ ಎದೆಯಲ್ಲಿ ಪ್ರತಿಧ್ವನಿಸತೊಡಗಿದುವು. ಕಿಟ್ಟಪ್ಪನವರ ಮುಟ್ಟಿದದಿನ ಸಂಗೀತವು ಸಂಗೀತವೇ ಅಲ್ಲವೆಂದು ಆಗ ನನಗೆ ಹೊಳೆಯಿತು.

(ಅಭಿಚಾರದಿಂದ)

THE

BANK OF MANGALORE LTD.,

MANGALORE

ESTD 1931

*Branches*- Mudabidri & Padubidri.

Fixed Deposits will be received at following rates of interest.

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly.

**Savings Bank deposit 3½% on daily balances.**

All kinds of banking business transacted

# ಮಹಾತ್ಮಾ ಗಾಂಧಿಯವರೊಡನೆ ನಡೆದ ಪ್ರಶ್ನೋತ್ತರಗಳು

[ಹರಿಜನದಿಂದ]



ಅಧ್ಯಾತ್ಮದಿಂದ, ಸಂಸಾರಿಕ ವಿಷಯಗಳ ವರೆಗೆ ಇಂದು ಹಲವು ಜನರು ತಮಗಿರುವ ಸಂದೇಹಗಳನ್ನು ಮಹಾತ್ಮ ಗಾಂಧಿಯವರ ಮುಂದಿಟ್ಟು ಅವರಿಂದ ಸಂಶಯ ನಿವೃತ್ತಿಯನ್ನು ಹೊಂದುತ್ತಾರೆ. ಇಂದಿನ ಭಾರತದ ರಾಜಕೀಯದಲ್ಲಂತೂ ಅವರದೇ ವೇದವಾಕ್ಯವಾಗಿದೆ. ಅದರಲ್ಲೂ ಸತ್ಯ, ಅಹಿಂಸೆ, ಚರಕಾ ಮೊದಲಾದ ಸಿದ್ಧಾಂತಗಳ ಜನಕರು ಅವರೇ ಆಗಿರುವುದರಿಂದ ಆ ಕುರಿತು ಸಹಜವಾಗಿ ಅವರ ಸ್ಪಷ್ಟ ಅಭಿಪ್ರಾಯಗಳನ್ನೇ ತಿಳಿಯಲು ಹಲವರು ಆಗಾಗ ಅವರಿಗೆ ಪತ್ರಗಳನ್ನು ಬರೆಯುತ್ತಾರೆ. ಗಾಂಧಿಜಿಯವರು ಅಂತಹ ಪತ್ರಗಳೆಲ್ಲವನ್ನು ಓದಿ ಉತ್ತರಿಸುತ್ತಾರೆ. ಅವುಗಳಲ್ಲಿ ಪ್ರಾಮುಖ್ಯ ವಿಷಯಗಳು ಕೆಲವನ್ನು ಅವರ ಆಪ್ತ ಸಚಿವರಾದ ಮಹಾದೇವದೇಸಾಯಿಯವರು ಆಗಾಗ ಹರಿಜನದಲ್ಲಿ ಪ್ರಕಟಿಸುತ್ತಿರುವರು. ಇತ್ತೀಚೆಗೆ ಅವರಿಗೆ ಕೇಳಿದ ಕೆಲವು ರಾಜಕೀಯ ಸಮಸ್ಯಾತ್ಮಕ ಪ್ರಶ್ನೆಗಳಿಗೆ ಗಾಂಧಿಜಿಯವರು ಕೊಟ್ಟ ಉತ್ತರವು ಇಲ್ಲಿ ಆಯ್ದು ಕೊಡಲಾಗಿದೆ.

### ರಾಷ್ಟ್ರಘಟನಾ ಸಮಿತಿ

ಪ್ರಶ್ನೆ:—ನಿಮ್ಮ ರಾಷ್ಟ್ರಘಟನಾ ಸಮಿತಿಯು ಅಜ್ಞ ಹಾಗೂ ನಿರಕ್ಷರಿಗಳಾದ ಬಹು ಸಂಖ್ಯ ಮತದಾರರಿಂದ ಆರಿಸಲ್ಪಡುವದು. ಈ ಮತದಾರರು ತಮಗೆ ಗುಚಿಸುವ ಜಯಘೋಷಗಳನ್ನು ಮಾಡುವರು. ಇಂತಹ ಪ್ರಸಂಗಗಳಲ್ಲಿ ಸಮಿತಿಯ ನಿರ್ಣಯವು ಕೇವಲ ಒಂದು ಪ್ರಹಸನವಾಗಿ ಸಂಖ್ಯಾಬಲದ ಬಲುಮೆಯಾಗುವದಿಲ್ಲವೆ? ಪತ್ರಿಕೆಗಳಲ್ಲಿ ಚರ್ಚಿಸಿ. ಅಥವಾ ವ್ಯಾಸ ಪೀಠದ ಮೇಲೆ ವಾದ ಮಾಡಿ ಅಥವಾ ಆಪ್ತ ಸಮ್ಮೇಲನವನ್ನು ನೆರಿಯಿಸಿ ಯಾಕೆ ನಿರ್ಣಯ ಮಾಡಬಾರದು?

ಉತ್ತರ:—ಪ್ರತಿಯೊಂದು ದೊಡ್ಡ ಪ್ರಯೋಗದಲ್ಲಿ ಯಾವಾಗಲೂ ಒಂದು ಗಂಡಾಂತರವಿದ್ದೇ ಇದೆ. ಆದರೆ ಸೂಚಿತವಾದ ರೀತಿಯಲ್ಲಿ ಅದು ಅತ್ಯಂತ ಕಡಿಮೆಯಾಗಿದೆಯೆಂದು ನನ್ನ ಮತ. ಈ ಸೂಚನೆಯು ಬುಡದಲ್ಲಿ ಉಮೇದುವಾರರಲ್ಲಿ ಬಹು ಜನರು ಸುಶಿಕ್ಷಿತ ಮತ್ತು ನಿಃಸ್ವಾರ್ಥ ಕೆಲಸಗಾರರೇ ಆರಿಸಲ್ಪಡುವರೆಂದು ನಂಬಿಕೆಯಿದೆ. ಹಾಗಾದರೆ ಚುನಾವಣೆಗಳು ದೊಡ್ಡ ಪ್ರಮಾಣದಲ್ಲಿಯ ರಾಜಕೀಯ ಶಿಕ್ಷಣದ ಸಂದರ್ಭವಾಗುವವೆಂದು ಹೇಳಬಹುದು. ಸಂಖ್ಯಾಬಲುಮೆಯ ಪ್ರಶ್ನೆಯೇ ಉಳಿಯುವದಿಲ್ಲ. ಅಜ್ಞ ಮತದಾರರನ್ನು ತಪ್ಪು ದಾರಿಗೆ ಹಚ್ಚಿ ಅವರ ದ್ರೋಹ ಮಾಡುವ ಗಂಡಾಂತರವಿರುವದೆಂಬುದು ನಿಸ್ಸಂದೇಹ. ಆದರೂ ಆ ನಿರ್ಣಯವು ಜನರ ನಿರ್ಣಯವಾಗುವದು. ಪತ್ರಿಕೆಗಳಲ್ಲಿಯ ಚರ್ಚೆಯು ಚುನಾವಣೆಯ ಕೆಲಸವನ್ನು ಮಾಡಲಾರದು ಮತ್ತು ಅದರ ಸ್ಥಳವನ್ನು ಆಕ್ರಮಿಸಲಾರದು. ವ್ಯಾಸಪೀಠದ ನಿರ್ಣಯ ಆ ಪರಿಷತ್ತಿನ ಸದಸ್ಯರ ನಿರ್ಣಯವಾಗುವದು. ನಮಗೆ ಬೇಕಾದುದು ಅವಶ್ಯಕವಾಗಿ ಜಾಣತನದ ನಿರ್ಣಯವಲ್ಲ; ಆದರೆ ಪ್ರಾತಿನಿಧಿಕ ನಿರ್ಣಯ. ಇಂದು ಅನೇಕ ಸಂಸ್ಥೆಗಳು ಜನರ ಪ್ರತಿನಿಧಿಗಳಾಗಿ ನಾವಿರುವೆವೆಂದು ಹೇಳುತ್ತವೆ. ಘಟನಾ ಸಮಿತಿಯು ಹುಟ್ಟಿದರೆ ಅದು ಈ ವಿಧಗಳನ್ನೆಲ್ಲ ತಡೆದು ರಾಷ್ಟ್ರದ ಅಭಿಪ್ರಾಯವನ್ನು ವ್ಯಕ್ತಗೊಳಿಸುವ ಒಂದೇ ಸಂಸ್ಥೆಯಾಗುವದು.

### ಸ್ವಾತಂತ್ರ್ಯ ಪ್ರತಿಜ್ಞೆ

ಪ್ರಶ್ನೆ:—ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಕುರಿತು ಸ್ವಾತಂತ್ರ್ಯ ಪ್ರತಿಜ್ಞೆಗೆ ವಿವಿಧಾರ್ಥಗಳನ್ನು ಮಾಡಲಾಗುತ್ತಿದೆ. ಹೀಗಿರುವಾಗ ನಾವೇನು ಮಾಡಬೇಕು? 'ನಿಯಮಿತ ನೂಲುವದು' ಖಾದಿಯ ನಿರಂತರ ಉಪಯೋಗ,' ಮತ್ತು 'ಗ್ರಾಮ ಕೈಗಾರಿಕೆಗಳು' ಇವುಗಳ ಅರ್ಥವೇನು? ನಾನೊಬ್ಬನು ಪ್ರತಿಜ್ಞೆಯನ್ನು ಪೂರೈಸಿದರಾಯಿತೊ? ಅಥವಾ ನನ್ನ ಕುಟುಂಬಕ್ಕೂ ಅದು ಅನ್ವಯಿಸುವದೊ? ಇಡೀ ಕುಟುಂಬಕ್ಕೆ ಖಾದಿಯನ್ನು ಕೊಳ್ಳುವದು ನನ್ನಿಂದಾಗದಿದ್ದರೆ ನಾನೇನು ಮಾಡಬೇಕು?

ಉತ್ತರ:—ಈ ಸಾರೆ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ವೈಕಲ್ಪಿಕವಾಗಿ ಮಾಡಿದೆ. ಆಕಾಂತರ ಜನರು ಅದನ್ನು ತೆಗೆದುಕೊಂಡಿರುವರೆಂದು ಪತ್ರಿಕೆಗಳು ಪ್ರಸಿದ್ಧಿಸಿವೆ. ಪತ್ರಿಕಾ ಸುದ್ದಿಗಳು ನಿಜವಾಗಿರುವವೆಂದು ನಾನು ಆಶಿಸುತ್ತೇನೆ. ಇದನ್ನು ನಾನು ದೃಢ ಮಾಡಿಕೊಳ್ಳುವುದು ಈಗಳಾಗುವ ಖಾದೀ ಹೋರಾಟದಿಂದ. ಪ್ರತಿಜ್ಞೆಯನ್ನು ಈಗ ಸಹ ತೆಗೆದುಕೊಳ್ಳಲಿಕ್ಕೆ ಬರುತದೆ. ಆ ಪ್ರತಿಜ್ಞೆಗೆ ಅನೇಕಾರ್ಥಗಳಾಗುವದು ಶಕ್ಯವಿದೆಯೆಂದು ನಾನು ಒಪ್ಪುತ್ತೇನೆ. ಆದರೆ ಅದರಂತೆಯೇ ಭೇದಗಳೂ ಇವೆ. ಅಧಿಕೃತ ಅರ್ಥವನ್ನು ರಾಷ್ಟ್ರಪತಿಗಳೇ ಕೊಡಬಲ್ಲರು. ನನ್ನ ಅರ್ಥವನ್ನು ಕೊಡುವ ಇಚ್ಛೆ ನನಗಿಲ್ಲ. ನೀವೇ ನಿಮ್ಮ ಭಾಷ್ಯಕಾರರಾಗಬೇಕು, ಮನಸ್ಸಿದ್ದಲ್ಲಿ ಮಾರ್ಗವುಂಟೆಂಬುದನ್ನು ನೆನಪಿನಲ್ಲಿಡಿರಿ. ನಿಮ್ಮ ಇಡೀ ಕುಟುಂಬವೇ ಪ್ರತಿಜ್ಞೆಗೈವುದು ನಿಜವಾಗಿಯೂ ಉತ್ತಮ. ಆದರೆ ನೀವು ನಿಮ್ಮ ಅಣ್ಣತಮ್ಮಂದಿರ ರಕ್ಷಕರಲ್ಲ. ನಿಮ್ಮ ರೊಕ್ಕದ ಚೀಲದ ಮಟ್ಟಿಗೆ ಹೇಳಬೇಕಾದರೆ ನಿಮ್ಮ ಉಡುಗೆ ತೊಡಗೆಗಳಲ್ಲಿ ಏನಾದರೂ ಕಡಿಮೆ ಮಾಡಲು ಶಕ್ಯವಿದೆಯೇನೆಂದು ನೋಡಿರಿ. ಯಾಕೆಂದರೆ ಅಸಂಖ್ಯ ಜನರು ಬತ್ತಲೆ ಅಲೆದಾಡುತ್ತಿರುವರು. ನನಗೆ ಪ್ರಶ್ನೆ ಕೇಳುವವರಲ್ಲನೇಕರು ತಮ್ಮ ಭೂಷಣಕ್ಕೋಸುಗ ಅವಶ್ಯವೆಂದು ತಿಳಿಯುವ ಅನೇಕ ಹೆಚ್ಚಿನ ವಸ್ತ್ರಗಳನ್ನು ಇಟ್ಟುಕೊಂಡಿರುತ್ತಾರೆ. ತಮ್ಮ ಹಾಗೂ ತಮ್ಮ ದೇಶದ ಸಲುವಾಗಿ ತ್ಯಾಗ ಮಾಡುವವರಿಗೆ ಆಡಂಬರ—ಅಲಂಕಾರಗಳು ಬೇಡ. ತಮ್ಮ ನೂಲನ್ನು ತಾವೇ ನೂತುಕೊಂಡರೆ ಗಿರಣಿ ಬಟ್ಟೆಯ ಬೆಲೆಗೆ ತಮ್ಮ ಖಾದಿಯನ್ನು ಸಿದ್ಧಗೊಳಿಸಿಕೊಳ್ಳಬಲ್ಲರೆಂದು ನಾನು ಸೂಚಿಸಿದ್ದೇನೆ. ಕೊನೆಗೆ ನೀವು ಈಗಲೇ ಪ್ರತಿಜ್ಞೆಗೈಯುವ ಅವಶ್ಯವಿಲ್ಲ. ನಿಮ್ಮ ಪೂರ್ಣ ಸಿದ್ಧತೆಯಾದ ಬಳಿಕ ತೆಗೆದುಕೊಳ್ಳಬಹುದು. ನಮಗೆ ಅತ್ಯಂತವಾಗಿ ಬೇಕಾದದ್ದು ಅತ್ಯಂತ ಶುದ್ಧ ಮನೋಭಾವ ಹಾಗೂ ಉತ್ಸಾಹ ನಿಮ್ಮಂತಹರ ಪತ್ರಗಳು ನನ್ನಲ್ಲಿ ಆಶೆಯನ್ನು ಹುಟ್ಟಿಸುತ್ತವೆ. ಸಂಕಷ್ಟಗಳನ್ನು ಎದುರಿಸಲು ಸಿದ್ಧರಿರುವ ಶುದ್ಧಾಂತಃಕರಣದ ಸ್ತ್ರೀ ಪುರುಷರನ್ನೊಳಗೊಂಡ ಒಂದು ನಿರ್ಭೀತವಾದ ಅಹಿಂಸಾ ಸೈನ್ಯವನ್ನೇ ನಾನು ನಿರ್ಮಿಸಬಲ್ಲೆ.

### ರಾಟೆ ಮತ್ತು ಸ್ವಾತಂತ್ರ್ಯ

ಪ್ರಶ್ನೆ:—ರಾಟೆಗೂ ಸ್ವರಾಜ್ಯಕ್ಕೂ ನೀವು ಹೇಗೆ ಗಂಟು ಹಾಕುವಿರಿ? ನಮ್ಮ ಸ್ವಾತಂತ್ರ್ಯವನ್ನು ಕಳಕೊಂಡಾಗ ನಾವು ಖಾದಿಯನ್ನು ಹುಟ್ಟಿಸುತ್ತಿದ್ದೆವೆ?

ಉತ್ತರ:—ರಾಟೆಯ ಅಮೂಲ್ಯತೆಯ ಅರಿವು ನಮಗೆ ಆಗ ಇರಲಿಲ್ಲ. ಈಗ ನಮಗೆ ಗೊತ್ತಾದ್ದರಿಂದ ಅದನ್ನು ಅದರ ಗೌರವಯುಕ್ತ ಸ್ಥಾನದಲ್ಲಿ ನಾವಿಡಬೇಕು. ಕೋವಿಗಳುಳ್ಳ ಜನರು ಕೋವಿಗಳನ್ನೂ ಸ್ವಾತಂತ್ರ್ಯವನ್ನೂ ಕಳೆದುಕೊಂಡರೆಂದು ತಿಳಿದರೆ ಅವರೊಳಗೆಯೆ ಹುಟ್ಟುವ ಒಬ್ಬ ಜಾಣ ಮನುಷ್ಯನು ಪುನಃ ಶಸ್ತ್ರವಾನರಾಗಲು ಹೇಳಿ ಸಹಜವಾಗಿ ಶಸ್ತ್ರಗಳನ್ನು ಕಳೆದುಕೊಂಡದ್ದು ತಪ್ಪೆಂಬ ಜ್ಞಾನವನ್ನು ಮಾಡಿಕೊಟ್ಟರೆ ಆ ಉಪದೇಶವನ್ನು ನಿರಾಕರಿಸುವದು ಯೋಗ್ಯವಾಗುವದೋ? ರಾಟೆ ಮತ್ತು ಅದರ ತಿರುಳುಗಳನ್ನೆಲ್ಲ ಅರಿತುಕೊಂಡು ಅದನ್ನು ಪುನರುಜ್ಜೀವಿಸುವ ಅವಶ್ಯಕತೆಯನ್ನು ನಾವು ಮನಗಂಡ ಹೊರತು ಅಹಿಂಸಾ ಮಾರ್ಗದಿಂದ ನಮ್ಮ ಸ್ವಾತಂತ್ರ್ಯವನ್ನು ಗಳಿಸುವದಾಗಲಿ ಉಳಿಸುವದಾಗಲಿ ಶಕ್ಯವಿಲ್ಲೆಂದು ನನ್ನ ನಿಶ್ಚಿತವಾದ ನಂಬಿಕೆಯಾಗಿದೆ.


# A well-rounded programme of SAVING

## DO YOU WANT YOUR MONEY TO GROW?

If so, this should interest you.

On the top of all possible ideas of lifting yourselves financially, stand the Syndicate's time-tested thrift schemes for guaranteed security.

We have a few select plans which enable any man to fully enjoy the fruit of his labours. Study them; join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

**The Canara Industrial & Banking Syndicate, Limited.**

***Head Office:—UDIPI, S. India.***



# ಜಿಲ್ಲಾ ಸಮಾಚಾರ

## ಮಂಗಳೂರು

**ನಗರ ಸಭೆ**—ಮಂಗಳೂರು ನಗರಸಭೆಯು ಕಳೆದ ತಾ ೫ರಲ್ಲಿ ಶ್ರೀ ಬಿ ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು.

**ವರ್ಧಂತ್ಯುತ್ಸವ:**—ಸ್ಥಳೀಯ ಗ್ವ ಹೈ ಟ್ರೈನಿಂಗ್ ಸ್ಕೂಲಿನ ವರ್ಧಂತ್ಯುತ್ಸವವು ಜಿಲ್ಲೆಯ ವಿದ್ಯಾಧಿಕಾರಿಗಳಾದ ಶ್ರೀ ಯು ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ತಾ. ೧೦ರಂದು ನೆರವೇರಿತು ಪ್ರಾರ್ಥನೆಯಾದ ಮೇಲೆ, ಅಧ್ಯಕ್ಷರ ಪ್ರಾರಂಭಿಕ ಭಾಷಣವಾದ ನಂತರ, ಶ್ರೀ ಬಿ ವೆಂಕಟ್ರಮಣಾಚಾರರು ಶಾಲೆಯ ಸ್ವಸ್ತಿವಾಚನ ಮಾಡಿದರು ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನೋದಿದರು ಬಹುಮಾನ ವಿತರಣೆಯ ಬಳಿಕ ನಿವೃತ್ತ ಹೆಡಮಾಸ್ತರರಾದ ಶ್ರೀ ಕೆ. ಗೋಪಾಲರಾಯರ ಭಾವಚಿತ್ರ ಅನಾವರಣೋತ್ಸವವು ನೆರವೇರಿತು ಅಧ್ಯಕ್ಷರ ಉಪಸಂಹಾರ ಭಾಷಣವು ಮುಗಿದ ಬಳಿಕ ನಾಟಕಗಳು ಸಂಗೀತವೇ ಮೊದಲಾದ ವಿವಿಧ ಮನೋವಿನೋದಾವಳಿಗಳಿದ್ದುವು

**ಕರ್ನಾಟಕ ಸಂಘ:**—ಗವರ್ನಮೆಂಟ ಕಾಲೇಜಿನ ಕರ್ನಾಟಕ ಸಂಘದ ವರ್ಧಂತ್ಯುತ್ಸವವು ತಾ ೧೧ನೇ ಆದಿತ್ಯವಾರ ಅಪರಾಹ್ನ ಘಂಟೆ ೫ಕ್ಕೆ ಕಾಲೇಜಿನ ಸಭಾ ಮಂದಿರದಲ್ಲಿ ಕನ್ನಡನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಕೋಟ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು

**ಸೌತ್ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನ್:**—ಇದರ ಆರು ತಿಂಗಳಿಗೊಮ್ಮೆ ಸೇರುವ ಮಹಾ ಸಭೆಯು ಇದೇ ಫೆಬ್ರವರಿ ತಿಂಗಳ ತಾ ೧೧ನೇ ಆದಿತ್ಯವಾರ ಕೊಂಗ್ರೆಸ್ ಹೌಸಿನಲ್ಲಿ ಜರಗಿತು

**ಪ್ರಗತಿ ನಾಟ್ಯಕಲಾ ನಾಟ್ಯ ವಿಲಾಸಿ ಸಂಘ:**—ಈ ಸಂಘದ ಪ್ರಸಿದ್ಧರಾದ ನಟರಿಂದ ಕದ್ರಿ ವಿದ್ಯಾಬೋಧಿನಿ ಹಾ ಪ್ರಾ ಶಾಲೆಯ ಸಹಾಯಾರ್ಥವಾಗಿ ಅಭಿನಯಿಸಲ್ಪಡುವ ಸೌಸಾರಿ ಸನ್ಯಾಸಿ ಅಥವಾ ಗೋಮುಖ ವ್ಯಾಘ್ರ ಎಂಬ ಅತ್ಯುತ್ತಮವಾದ ಸಂಗೀತ ಸಾಮಾಜಿಕ ನಾಟಕವು ತಾ. ೨೩-೩-೪೦ರಂದು ರಾತ್ರಿ ೯-೩೦ಕ್ಕೆ ವಿದ್ಯಾಬೋಧಿನಿ ಶಾಲೆಯ ಆವಾರದಲ್ಲಿ ಜರಗುವುದು ವಿದ್ಯಾ ಕೇಂದ್ರಕ್ಕೆ ಉದಾರ ಸಹಾಯವನ್ನೀಯುವ ಈ ಸಂಘದ ಚಟುವಟಿಕೆಗೆ ಮಹನೀಯರು ಬಂದು ಪ್ರೋತ್ಸಾಹಿಸಬೇಕಾಗಿ ಬೇಡಿಕೆ.

**ಹರಿಕಥೆ:**—ಬಿಜೈಯ ಶ್ರೀ ಕೊರಗ ಮೇಸ್ತ್ರಿಗಳ ಮನೆಯಲ್ಲಿ ೬ನೇ ರಾತ್ರಿ ಕೊಡಗಿನ ಶ್ರೀ ಗೋಪಾಲ ಹರಿದಾಸರು 'ಮೂರುವರೆ ವಜ್ರ' ಎಂಬ ಪುರಾಣಕಥೆಯನ್ನು ಬಹು ಸ್ವಾರಸ್ಯವಾಗಿ ಕಥನಮಾಡಿದರು. ಅಲ್ಲಿಯೇ ಬರುವ ತಾ. ೧೮ಕ್ಕೆ ಶ್ರೀಯುತರ ಮನೆಯಲ್ಲಿ ಇನ್ನೊಂದು ಹರಿಕಥೆಯು ಜರಗಲಿರುವುದಾಗಿ ತಿಳಿದಿದೆ.

ಬರುವ ಶನಿವಾರ ರಾತ್ರಿಗೆ ಬೀಕರ್ನಕಟ್ಟೆಯಲ್ಲಿ ಸುಹಾದೇವ ಹರಿದಾಸರಿಂದ ಹರಿಕಥೆಯೊಂದು ಜರಗಲಿರುವುದು, ಸರ್ವರಿಗೂ ಸುಸ್ವಾಗತವಿದೆ

**ವಾಹನ ಸಂಚಾರ ನಿಲ್ಲಿಸಲಾಗಿದೆ:**—ಸೋಮೇಶ್ವರ ಕೋಟೇಶ್ವರ (ನಂ. ೧೭) ರಸ್ತೆಯ ೦/೩ರಲ್ಲಿಯ ನಂ, ೧ನೇ ಕಮಾನಿನ ಮೋರಿ ಮತ್ತು, ಶಿರಾಡಿ ಘಾಟ (ನಂ, ೨) ರಸ್ತೆಯ ೩೬/೪ರಲ್ಲಿಯ ಮೋರಿಯು ಅಪಾಯ ಸ್ಥಿತಿಯಲ್ಲಿವೆ. ಪುನಃ ಸೂಚಿಸುವ ವರೆಗೆ ಇವುಗಳ ಮೇಲೆ ವಾಹನ ಸಂಚಾರವು ನಿಲ್ಲಿಸಲ್ಪಟ್ಟಿದೆ ಎಂದು ಜಿ. ಬೋ, ಅಧ್ಯಕ್ಷರು ಪ್ರಕಟಿಸಿದ್ದಾರೆ.

## ಉಡುಪಿ

**ಜಿಲ್ಲಾ ಕಲೆಕ್ಟರ್ ದೊರೆಗಳವರಲ್ಲಿ ವಿನಂತಿ:**—ಜಿಲ್ಲಾ ಕಲೆಕ್ಟರ್, ಮಿ ವುಡ್‌ಹೌಸ್ ದೊರೆಗಳವರು ಜಮಾಬಂದಿಯ ನಿಮಿತ್ತ ಉಡುಪಿಯಲ್ಲಿ ಮೊಕ್ಕಾಂ ಮಾಡಿದ್ದರು ಅವರೊಡನೆ ಕೃಷಿಕ ಮಜೂರ ಸಂಘ ಕೂಟದ ಕಾರ್ಯದರ್ಶಿಯವರಿಂದ ಈ ಕೆಳಗಣ ಹಾಲಹವಾಲೆಗಳ ಮನವಿಯೊಂದನ್ನು ಕಲೆಕ್ಟರರು ಸ್ವೀಕರಿಸಿ ತಮ್ಮಿಂದ ಸಾಧ್ಯವಾದ ಉಪಶಮನವನ್ನೀಯುವುದಾಗಿ ಭರವಸೆಯಿತ್ತರು ೧ ನೀರಿನ ಅಭಾವದಿಂದಾಗಿ ಎಷ್ಟೋ ಹಳ್ಳಿಗಳಲ್ಲಿ ವ್ಯವಸಾಯ ಕೈಗಾರಿಕೆಗೆ ಧಕ್ಕೆ ತಗಲಿರುತ್ತದೆ ಆದುದರಿಂದ ಸರಕಾರದವರು ಸರಂಬೋಕು ಸ್ಥಳಗಳಲ್ಲಿರುವ ಕೆರೆಗಳನ್ನು ದುರಸ್ತಿ ಮಾಡುವುದು ಮಾತ್ರವಲ್ಲದೆ ಕೆರೆಗಳಿಲ್ಲದ ಸ್ಥಳಗಳಲ್ಲಿ ಹೊಸ ಕೆರೆಗಳನ್ನು ಅಗೆಯುವ ಏರ್ಪಾಡು ಮಾಡುವುದು, ೨ ಗೋಮಾಳಗಳನ್ನು ಒದಗಿಸುವುದು ೩ ಉಡುಪಿ ತಾಲೂಕಿಗೆ ಪಶುವೈದ್ಯ ಶಾಲೆಯೊಂದನ್ನು ತೆರೆದು ವೆಟರ್ನರಿ ಸರ್ಜನರೊಬ್ಬರನ್ನು ನೇಮಿಸುವುದು ೪ ಕುಮುಕಿ ಸ್ಥಳಗಳಿಂದ ಸ್ವಂತ ಉಪಯೋಗದ ಬಗ್ಗೆ ಧರ್ಮಾರ್ಥ ಕಟ್ಟಿಗೆ ಮತ್ತು ತರಗೆಲೆಗಳನ್ನು ಹೆಕ್ಕುವ ಹಕ್ಕನ್ನೀಯುವುದು ೫ ಗೊಬ್ಬರದ ಅಭಾವವನ್ನು ಹೋಗಲಾಡಿಸುವರೆ ಅಲ್ಲಲ್ಲಿ ಕಾಡುಗಳನ್ನು ಬೆಳೆಸುವ ಏರ್ಪಾಡು ಮಾಡುವುದು ೬ ಅಜ್ಜರಕಾಡಿನ ಸ್ಥಳವನ್ನು ಮುನಿಸಿಪಾಲಿಟಿಗಾಗಲೀ ಇತರರಿಗಾಗಲೀ ಕೊಡದೆ ಅದರಲ್ಲಿಯೂ ಸೊಪ್ಪಿಸದೆ ಬಡ ರೈತರಿಗೆನೇ ಹಿಕ್ಕುವಂತೆ ಕಾದಿಡುವುದು ೭ ಗ್ರಾಮಗಳಲ್ಲಿ ಬಡ ರೈತರು ತಂತಮ್ಮ ಕಷ್ಟಸಂಕಷ್ಟಗಳನ್ನು ಚರ್ಚಿಸುವರೆ ಗ್ರಾಮಚಾವಡಿಯೋಪಾದಿಯ ಸಾರ್ವಜನಿಕ ಚಾವಡಿಯ ಬಗ್ಗೆ ಸ್ಥಳಗಳನ್ನು ನಿಗದಿಸುವುದು ೮ ಕೋಳಿ ಜೂಜು ನಿಲ್ಲಿಸುವುದು.

## ಕಾಸರಗೋಡು

**ಪೆರಡಾಲ—ನವಜೀವನ ಹಿಂದೀ ಪ್ರೇಮಿ ಮಂಡಲ**—ಈ ಮಂಡಲದ ಸದಸ್ಯರ ಸೇರುವಿಕೆಯಿಂದ ತಾ. ೧೦ರಲ್ಲಿ ಹಿಂದೀ ಪ್ರಾರಂಭಿಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣಪತ್ರಗಳು ಕೊಡಲ್ಪಟ್ಟುವು

## ಕುಂದಾಪುರ

**ಕೊಂಕಣಿ ಭಾಷೋದ್ಧಾರಕ ಸಂಘ**—ಕೊಂಕಣೀ ಭಾಷೋದ್ಧಾರಕ ಸಂಘಾಚೆ ವಾರ್ಷಿಕ ಮಹೋತ್ಸವ ತಾ ೪ ೩-೪೦ ಹಾಂಗಾಚಾ ಪಂಟಾಚಾ ಶ್ರೀ ವೆಂಕಟರಮಣ ದೇವಳಾ ವಠಾರಂತು ಶ್ರೀ ದೇವಣ್ಣ ಸುಬ್ರಾಯ ಪೈಂಲ್ಯಾ ಅಧ್ಯಕ್ಷತೇರಿ ಝಾಲ್ಲೆ.

## ಪುತ್ತೂರು

**ಬೋರ್ಡು ಹೈಸ್ಕೂಲು ದಿನಾಚರಣೆಯು**—ಇಲ್ಲಿಯ ಬೋ. ಹೈಸ್ಕೂಲಿನಲ್ಲಿ ಇದೇ ತಾ ೧೮ರಲ್ಲಿ ಎಡ್ವಕೇಟ್ ಶ್ರೀ ಅಮ್ಮೆಂಬಲ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಲಿರುವುದು

**ಶೋಚನೀಯ ನಿಧನ:**—ಇಲ್ಲಿಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮೊನ್ನೆ ತಾ ೬ನೇ ಆದಿತ್ಯವಾರ ರಾತ್ರಿ ಸ್ಥಳೀಯ ಬೋರ್ಡ್ ಹೈಸ್ಕೂಲಿನ ಸಯನ್ಸ್ ಉಪಾಧ್ಯಾಯರಾಗಿದ್ದ ಶ್ರೀ ರಾಮಣ್ಣ ಸೆಟ್ಟಿ ಬಿ ಎ ಯಲ್ ಟಿ ಇವರು ತಮ್ಮ ೩೫ನೇ ವರ್ಷ ಪ್ರಾಯದಲ್ಲಿ ವಿಷಮ ಜ್ವರದಿಂದ ಅಕಾಲಮೃತ್ಯುವಿಗೆ ತುತ್ತಾದರೆಂದು ತಿಳಿಸಲು ತುಂಬಾ ವ್ಯಸನ ಪಡುತ್ತೇವೆ ಇವರ ಮರಣದ ಸ್ಮರಣಾರ್ಥವಾಗಿ ಕಳೆದ ತಾ ೬ರಂದು ಶಾಲೆಗೆ ರಜೆ ಕೊಡಲ್ಪಟ್ಟಿತ್ತು

## ಕಾರ್ಕಳ

**ರಾಜಿನಾಮೆ:**—ಈ ತಾಲೂಕಿನ ಜಮೀನುದಾರರೂ ಕಾಂಗ್ರೆಸ ಕೆಲಸಗಾರರೂ ಆದ ಶ್ರೀ ಬಾರ್ಕೂರು ನಾಗಣ್ಣ ಹೆಗ್ಡೆಯವರು ಯುದ್ಧ ಸಹಾಯ ಸಮಿತಿಯ ತಮ್ಮ ಸದಸ್ಯತನಕ್ಕೆ ರಾಜಿನಾಮೆಯನ್ನು ಕಳುಹಿಸಿಕೊಟ್ಟಿರುವರಾಗಿ ತಿಳಿದು ಬರುತ್ತದೆ

**ವರ್ಧಂತ್ಯುತ್ಸವ**—ಬೋರ್ಡ ಹೈಸ್ಕೂಲಿನ ವರ್ಧಂತಿ ಉತ್ಸವವು ತಾ ೧೦-೩-೪೦ರ ದಿನ ಜಿಲ್ಲಾ ಬೋರ್ಡ ಅಧ್ಯಕ್ಷರಾದ ಡಾಕ್ಟರ್ ಕೆ ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಲೋರೆನ್ಸ ಪೀಟರ ನಜರತ್ ಬಿ ಎ ಬಿ ಟಿ ಯವರು ಶಾಲೆಯ ಸ್ವಸ್ತಿ ವಾಚನ ಮಾಡಿದರು. ಹಲವು ಸ್ಪರ್ಧೆಗಳಲ್ಲಿ ವಿಜಯಿಗಳಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣ ಮಾಡಿದ ಬಳಿಕ ಅಧ್ಯಕ್ಷರು ಜಿಲ್ಲಾಬೋರ್ಡಿನ ಆರ್ಥಿಕ ದುಸ್ಥಿತಿ ಮತ್ತು ಶ್ರೀಮಂತ ಜನರು ಶಾಲೆಯ ಆವಶ್ಯಕತೆಗಳನ್ನು ತಮ್ಮ ಧನಸಹಾಯದ ಮೂಲಕ ಪೂರೈಸಿಕೊಡಬೇಕಾದುದನ್ನು ಮನಗಾಣಿಸಿ ಶ್ರೀ ಕೆ. ಪಿ ಶೇಷಗಿರಿ ಪ್ರಭುಗಳವರು ಶಾಲೆಗೆ ಒಂದು ಭವ್ಯವಾದ ಸಭಾ ಭವನವನ್ನು ಕಟ್ಟಿಸಿಕೊಡುವ ವಾಗ್ದಾನ ಮಾಡಿರುವದನ್ನು ಘೋಷಿಸಿದರು

**ಹಿಂದೀ ಪ್ರಚಾರ:**—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ತಾ ೧೧-೨-೧೯೪೦ರ ಪ್ರಾರಂಭಿಕ ಪರೀಕ್ಷೆಗಳು ಬೋರ್ಡ ಹೈಸ್ಕೂಲಿನಲ್ಲಿ ನಡೆದುವು. ಒಟ್ಟು ೩೧ ಮಂದಿ ಪರೀಕ್ಷೆಗಳನ್ನು ಕೊಟ್ಟಿದ್ದರು ಅವರಲ್ಲಿ ೧೦ ಮಂದಿ ಮಹಿಳೆಯರಾಗಿದ್ದರೆಂದು ಹಿಂದೀ ಪ್ರಚಾರಕರಾದ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ

## ಮೈಸೂರು

**ಶಿಕ್ಷೆಯಾಯಿತು:**—ರಾಜದ್ರೋಹದ ಅಪಾದನೆಯ ಮೇಲೆ ಮೊಕದ್ದಮೆ ಹೂಡಲ್ಪಟ್ಟಿದ್ದ ಎನ್ ಡಿ. ಶಂಕರ್‌ರವರಿಗೆ ಮಂಡ್ಯಾದ ನ್ಯಾಯಾಧೀಶರು ೨ ವರ್ಷ ಕಠಿಣ ಶಿಕ್ಷೆಯನ್ನು ಮತ್ತು ೩೦೦ ರೂಪಾಯಿ ದಂಡನೆಯನ್ನೂ ವಿಧಿಸಿದರು ದಂಡನೆ ಕೊಡಲು ನಿರಾಕರಿಸಲು ಮತ್ತೆ ೩ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ಶಂಕರ್‌ರವರು ಕೆ ಪಿ ಸಿ ಸಿ ಸದಸ್ಯರಾಗಿದ್ದರು ಮತ್ತು ಜನಜಾಗೃತಿ ಸಂಘದ ಕಾರ್ಯದರ್ಶಿಗಳಾಗಿದ್ದರು

## ಧಾರವಾಡ

ಧಾರವಾಡ ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವ ಮೈಸೂರ ಮಹಾರಾಜಾ ಕಾಲೇಜಿನ ಪ್ರೊ ಜಿ ಪಿ ರಾಜರತ್ನಂ ಇವರ ಅಧ್ಯಕ್ಷತೆಯಲ್ಲಿ ಜರಗಿತು ಸಮಾರಂಭದ ನಂತರ ಏಕಾಂಕ ನಾಟಕ ಪ್ರಹಸನ ದಿಗಳು ಆದುವು

## ಸ್ವೀಕಾರ—ವಿಮರ್ಶೆ

**ಚಿಕ್ಕ ಲಿಂಗಣ್ಣ ಸ್ವಾಮಿಗಳ ಚರಿತ್ರೆ:** ಲೇಖಕ ಬಿ ಎಚ್ ಮುನಿಸ್ವಾಮಿರಾವ್ ಪ್ರಕಾಶಕರು, ಶ್ರೀ ಚಿಕ್ಕ ಲಿಂಗಣ್ಣ ಗುರುಸ್ವಾಮಿಗಳ ಸೇವಾಸದನ, ಕಾಳಮ್ಮನ ಗುಡಿ ಬೀದಿ ೯೩೩ ಮೈಸೂರು ಬೆಲೆ ರೂ ೧ ೦೦

ಕನ್ನಡ ನಾಡಿನಲ್ಲಿಯೂ ಅನೇಕ ಸಾಧು ಸಂತರು ಜನ್ಮವೆತ್ತಿ ಅಧ್ಯಾತ್ಮ ವಿಚಾರಗಳನ್ನು ಜನತೆಗ ಸಾರಿದ್ದಾರೆ ಅಂತಹವರಲ್ಲಿ ಮೈಸೂರಿನ ರಾಜಯೋಗಿ ಚಿಕ್ಕ ಲಿಂಗಣ ಸ್ವಾಮಿಗಳು ಒಬ್ಬರು ಅವರು ಸಂಸಾರಿಕರಾಗಿ ಗೃಹಸ್ಥಾಶ್ರಮವಾಸಿಗಳಾಗಿದ್ದು, ವ್ಯಾಪಾರವೇ ಮೊದಲಾದ ವೃತ್ತಿಗೆ ಕೈಹಚ್ಚಿದವರಾಗಿದ್ದರೂ ಕೊನೆಗೆ ಭಗವಂತನ ಸೇವೆಗೆ ಅವರ ಜೀವವು ಮೀಸಲಾಯಿತು ಅವರಿಂದ ಧರ್ಮೋಪದೇಶವಾಯಿತು. ಈ ವಿಷಯವನ್ನು ಸಾದ್ಯಂತವಾಗಿ ಈ ಬೃಹದ್ಗ್ರಂಥದಲ್ಲಿ ಅವರ ಶಿಷ್ಯರಲ್ಲೊಬ್ಬರಾದ ಮುನಿಸ್ವಾಮಿರಾಯರು ವಾದಿಸಿಕೊಟ್ಟು ಕನ್ನಡಿಗರಿಗೆ ನಿಜವಾಗಿಯೂ ಬಹಳ ಉಪಕಾರ ಮಾಡಿದ್ದಾರೆ ಪೂಜ್ಯರಾದ ಮಹಾಂತರ ಜೀವನ ಚರಿತ್ರೆಯನ್ನು ಓದುವುದರಿಂದ ನಮ್ಮ ಜೀವನವೂ ಪರಿಶುದ್ಧವಾಗುವುದರಲ್ಲಿ ಸಂಶಯವಿಲ್ಲ

**ನವಯುಗದ ಪರ್ಯಾಯ ಸಂಚಿಕೆ:**—(೧೯೪೦) ಕಳೆದ ೧೯ ವರ್ಷಗಳಿಂದ ನವಯುಗವು ಕನ್ನಡನಾಡಿನ ಸೇವೆಯನ್ನು ಅವಿರತವಾಗಿ ನಡೆಸುತ್ತಾ ಬಂದಿದೆ ಹಲವು ವರ್ಷಗಳು ಮಂಗಳೂರಲ್ಲಿದ್ದು ಆ ಮೇಲೆ ಅದು ಉಡುಪಿಗೆ ವರ್ಗಾಯಿಸಲ್ಪಟ್ಟಮೇಲೆಯೂ ನವಯುಗದ ವೈವಿಧ್ಯಮಾರ್ಗದ ಬೆಳವಣಿಗೆಗಳು ಸರ್ವತೋಮುಖವಾಗಿ ಹೆಚ್ಚಾಗಿವೆ. ಹಿಂದಿಗಿಂತ ವಿಶೇಷವಾಗಿ ಈ ವರ್ಷದ ಪರ್ಯಾಯ ಸಂಚಿಕೆಯು ಹೆಚ್ಚು ಆಕರ್ಷಣೀಯವಾದಲ್ಲದೆ, ಕವನ, ಕಥಾ ಸಾಹಿತ್ಯ ಪೂರ್ಣವಾಗಿ ವಾಚನೀಯವಾಗಿವೆ ಶ್ರೀಗಳಾದ ಗೋವಿಂದ ಪೈ, ಪುಟ್ಟಪ್ಪ, ಶಿವರಾಮ ಕಾರಂತ, ಗೋಕಾಕ, ಎ. ಬಿ. ಶೆಟ್ಟಿ, ಎಸ್. ಎಸ್. ಶೆಣೈ, ಮೊದಲಾದ ಪ್ರಸಿದ್ಧ ಲೇಖಕರ ವಿಚಾರ ಪೂರ್ಣ ಲೇಖನಗಳ ಸಂಗ್ರಹವು ಸಂಪಾದಕರ ಸಾಹಸವನ್ನು ವ್ಯಕ್ತಪಡಿಸುತ್ತದೆ. ಯುದ್ಧದಿಂದಾಗಿ ಸಾಮಾನ್ಯ ಸಂಚಿಕೆಗಳನ್ನೇ ಹೊರಡಿಸುವುದು ಕಷ್ಟವಾಗಿರುವ ಈ ಕಾಲದಲ್ಲಿ ನವಯುಗದ ಪ್ರಕಾಶಕರು ಮಾಡಿದ ಈ ಸಾಹಸಕ್ಕೆ ನಮ್ಮ ಅಭಿನಂದನೆಗಳು.


NACET BLADES

ಸಸಟು ಅಡಿಮೆ ಕಡಿಮೆ ಕ್ರಯದ ಉತ್ತಮ ಬ್ಲೇಡುಗಳೆಂದು ಹೆಸರುವಾಸಿಯಾಗಿವೆ. ಅವುಗಳ ಉತ್ತಮ ಗುಣವೇ ಇದಕ್ಕೆ ಅವು ಇಷ್ಟು ಖ್ಯಾತಿಯನ್ನು ಪಡೆಯಲು ಕಾರಣ. ಪ್ರತೀ ಬ್ಲೇಡು ಬೇಗನೇ ನಯವಾದ ಕ್ಷೌರವನ್ನು ಮಾಡುವುದು.




ಯಾವ ರೇಜರಿಗೆ

INU

# ಕರೇಲಿಯ ರಣಭೂಮಿಯಲ್ಲಿ ರಷ್ಯನರಿಗೆ ಅಪಾರ ಹಾನಿ!

# ಯುದ್ಧ ವಾರ್ತೆ!



## ಚೈನೀಯರು ಭರದಿಂದ ಮುಂದೊತ್ತುತ್ತಾರೆ!

## ರೂಸ್‌ವೆಲ್ಟರ ಶಾಂತಿಸಂಧಾನ! ಪಶ್ಚಿಮ ರಣರಂಗದಲ್ಲಿ ಹಿಮಬಾಧೆ!

### ಚೈನೀಯರು ಶಾನ್‌ಲಿಂಗನ್ನು ಮರಳಿ ಪಡೆದರು

**೨,೦೦೦೦ ಮಂದಿ ಜಪಾನರ ಮರಣ**

ದಕ್ಷಿಣ ಕಾಂಗ್ಸಿಯಲ್ಲಿ ಕೈಬಿಟ್ಟು ಹೋಗಿದ್ದ ಶಾನ್‌ಲಿಂಗನ್ನು ತಿರಿಗಿ ಪಡೆಯುವ ಸಲುವಾಗಿ, ಜಪಾನರೊಡನೆ ನೀರಚೈನಿಯರು ಭಯಂಕರ ಕಾದಾಡಿ, ಅವರಲ್ಲಿ ೨,೮೦೦ ಮಂದಿಯನ್ನು ಕೊಂದಿರುವುದಲ್ಲದೆ, ಕೈಬಿಟ್ಟು ಹೋದ ಪಟ್ಟಣವನ್ನು ಮರಳಿ ಪಡೆದಿರುವರೆಂದು ತಿಳಿದು ಬರುತ್ತದೆ

### ಜಪಾನ್ ಸಾಮ್ರಾಜ್ಯದ ೨೬ನೇ ಶತಮಾನೋತ್ಸವವು

ಜಪಾನ್ ಸಾಮ್ರಾಜ್ಯವು ಸ್ಥಾಪಿತವಾದ ೨೬ನೇ ಶತಮಾನೋತ್ಸವವು ಬಹಳ ವಿಜಯ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಹಲವು ಕೈದಿಗಳನ್ನು ಬಿಡಲಾಗಿದೆಯೆಂದೂ, ಹಲವು ಧಾರ್ಮಿಕ ಕಾರ್ಯಗಳು ನೆರವೇರಿವೆಯೆಂದೂ ತಿಳಿದಿದೆ. ನೂರು ಮಿಲಿಯ ಜಪಾನೀಯರು ಸಾಮ್ರಾಟರ ಅರಮನೆಗೆ ಮಣಿದು ತಮ್ಮ ವಿಧೇಯತೆಯನ್ನು ವ್ಯಕ್ತಪಡಿಸಿದರು.

### ಪಾರ್ಲಿಮೆಂಟಿನಲ್ಲಿ ಭಾರತದ ವಿಚಾರ -

ಫೆಬ್ರವರಿ ೧೫ಕ್ಕೆ ಜರಗಿದ ಹೌಸ್ ಓಪ್ ಕಾಮನ್ಸಿನಲ್ಲಿ ಸರ್ ಓಸಿಲ್ಲರು ಭಾರತದ ವಿಷಯವಾಗಿ ಒಂದು ರಂಪವನ್ನು ಮುಂಡಿಸಿದರು

### ಫಿನ್ಲೆಂಡಿನ ರಣ ಕ್ಷೇತ್ರದಲ್ಲಿ

ಫಿನ್‌ಲೆಂಡಿನ ರಣ ಕ್ಷೇತ್ರದಲ್ಲಿ ಯುದ್ಧವು ತೀವ್ರವಾಗಿ ನಡೆಯುತ್ತಾ ಇಧೆ ಸಮ್ಮ ಸೆಕ್ಟರಿನಲ್ಲಿ ರಷ್ಯನರು ಬಹಳ ನಷ್ಟ ಹೊಂದಿರುವರಾಗಿ ತಿಳಿದಿದೆ

ಫಿನ್‌ಲೆಂಡಿಗೆ ಉರುಗ್ವೇ ಸರಕಾರವು ಸಹಾಯ ಮಾಡುವುದಾಗಿ ತಿಳಿದಿದೆ

ಫಿನ್‌ಲೆಂಡ್ ರಷ್ಯಗಳೊಳಗೆ ಸಂಧಾನ ನಡೆಸಿ ಅವುಗಳೊಳಗೆ ರಾಜಿಮಾಡಬೇಕೆಂದು ಯೂರೋಪಿನ ಪ್ರಬಲರಾಷ್ಟ್ರವೊಂದು ಅಪೇಕ್ಷೆ ಪಡುತ್ತಿರುವವೆಂದು ಸುದ್ದಿ. ಆದರೆ ಫಿನ್‌ಲೆಂಡಿನ ಮಂತ್ರಿಯು ತನಗೆ ಇದುವರೆಗೆ ಆ ವಿಷಯವು ತಿಳಿದಿಲ್ಲವೆಂದೂ, ಆ ಕುರಿತು ತನ್ನ ಬಳಿಗೆ ಯಾರೂ ಬಂದಿಲ್ಲವೆಂದೂ ಹೇಳಿರುವನು. ಮಾತ್ರವಲ್ಲದೆ ಕಳೆದ ಹತ್ತು ವಾರಗಳಿಂದ ಪರರ ಸಹಾಯವಿಲ್ಲದೆ ಅನ್ಯಾಯದಿಂದ ಆಕ್ರಮಿಸಿದ ವೈರಿಗಳನ್ನು ಫಿನ್ಲೆಂಡು ತಡೆಗಟ್ಟಿದೆಯೆಂದೂ, ಫಿನ್‌ಲೆಂಡಿನಲ್ಲಿ ಮೇಲೆ ಶಾಂತಿಯ ಕರಾರನ್ನು ಯಾರೂ ಹೊರಿಸಲಾರರೆಂದೂ ಹೇಳಿರುವನು.

### ಗವರ್ನರ್ ಜನರಲರ ಮರಣ

ಕೆನಡಾ ಗವರ್ನರ್ ಜನರಲ್ ಆದ ಲಾರ್ಡ್ ಟ್ವೀಡ್ಸ್ ಮೂರಿಯವರು ತಾ ೧೨ರಂದು ಕಾಲಾಧೀನರಾದರು ಇವರು ಪ್ರಸಿದ್ಧ ಗ್ರಂಥಕರ್ತರೂ ಆಗಿದ್ದರು.

### ಫಿನ್‌ಲೆಂಡಿಗೆ ಬ್ರಿಟಿಷ್ ಸ್ವಯಂ ಸೇವಕರು

ಸ್ವಾತಂತ್ರ್ಯಕ್ಕಾಗಿ ಕಾದಾಡುವ ಫಿನ್ನರಿಗೆ ನೆರವಾಗಿರಲು ಬ್ರಿಟನಿನಿಂದ ಅನೇಕ ಸ್ವಯಂ ಸೇವಕರು ತೆರಳುತ್ತಿರುವರೆಂದ ವಾರ್ತೆ.

### ಐಯರ್ಲ್ಯಾಂಡಿನಲ್ಲಿ ಅತೃಪ್ತಿ

ಐಯರ್ಲ್ಯಾಂಡಿನ ಕ್ರಾಂತಿಕಾರರಾದ ಬಾರ್ನೇಸ್ ಮತ್ತು ರಿಚಾರ್ಡ್ಸ್‌ರವರನ್ನು ಇಂಗ್ಲೆಂಡಿನಲ್ಲಿ ವಧಿಸಿದ ನಿಮಿತ್ತ ಐರಿಶ್ ಮಂದಿಯಲ್ಲಿ ಅಧಿಕವಾದ ಉದ್ವೇಗವೂ, ಕೋಪವೂ ಉಂಟಾಗಿ ಹಲವು ನಿಷೇಧ ಸೂಚಕ ಸಭೆಗಳು ಅಲ್ಲಲ್ಲಿ ಜರಗಿ, ವಧಿಸಲ್ಪಟ್ಟವರು ನಿರಪರಾಧಿಗಳೆಂದು ಸಾರಲಾಯಿತು ಇಂಗ್ಲೆಂಡಿನ ಈ ಕೃತ್ಯದ ವಿಷಯದಲ್ಲಿ ಅತಿಶಯವಾದ ಅಸಮಾಧಾನ ಸೂಚಿಸಿ ಭಾಷಣಗಳು ನಡೆದುವು

### ರೂಸ್ ವೆಲ್ಟರ ಶಾಂತಿ ಯೋಚನೆ

ಯೂರೋಪಿನಲಿ ಶಾಂತಿಯನ್ನು ಸ್ಥಾಪಿಸಬೇಕೆಂದು ಪ್ರಸಿಡೆಂಟ್ ರೂಸ್‌ವೆಲ್ಟರು ಪ್ರಯತ್ನಮಾಡುತ್ತಿರುವರೆಂದೂ ತಮ್ಮ ಕಾರ್ಯದರ್ಶಿಯನ್ನು ಯೂರೋಪಿನ ಪ್ರಬಲ ರಾಷ್ಟ್ರಗಳ ಕಡೆಗೆ ಸಂಧಾನಕ್ಕಾಗಿ ಕಳುಹಿಸಿರುವರೆಂದೂ ತಿಳಿದು ಬಂದಿದೆ ಯೂರೋಪಿನ ರಾಷ್ಟ್ರಗಳು ಈ ವಿಷಯದಲ್ಲಿ ಉತ್ಸಾಹ ಮತ್ತು ಆಶಾಪೂರ್ಣವಾಗಿವೆಯೆಂದು ತಿಳಿದು ಬಂದಿದೆ

### ರಶ್ಯದಲ್ಲಿ ಸರ್ವಾಧಿಕಾರವಿದೆ!

### ರೂಸ್‌ವೆಲ್ಟರ ಹೇಳಿಕೆ

ಅಮೇರಿಕದ ಪ್ರೆಸಿಡೆಂಟರಾದ ರೂಸ್‌ವೆಲ್ಟರು ರಶ್ಯದ ಇಂಥಿನ ವರ್ತನೆಯನ್ನು ಖಂಡಿಸುತ್ತಾ, ಇಂದು ರಶ್ಯದಲ್ಲಿ ಸರ್ವಾಧಿಕಾರವು ನಿರಂಕುಶವಾಗಿ ನಡಿಯುತ್ತಿದೆಯೆಂದು ಹೇಳಿದರು

### ಪೋಲೆಂಡಿನಲ್ಲಿ ವಧಾ ಕಾರ್ಯ

ಇಬ್ಬರು ಜರ್ಮನ್ ಸೋಲ್ಜರರನ್ನು ವಾವೇರಿನಲ್ಲಿ ಗುಂಡು ಹಾರಿಸಿ ಕೊಂದರೆಂದು ವಾವೇರಿನಲ್ಲಿನ ಇಬ್ಬರು ಡಾಕ್ಟರ್ ೧೭ ಮಂದಿ ಹೆಂಗಸರು, ಮತ್ತೊಬ್ಬ ೧೪ ವರ್ಷದ ಬಾಲಕನು ಕೂಡ ಸುಮಾರು ೧೩೦ ಮಂದಿಯನ್ನು ನಾಝಿ ಸೈನಿಕರು ಗುಂಡು ಹೊಡೆದು ವಧಿಸಿದರಲ್ಲದೆ ಕ್ರಾಕೋವಿನಲ್ಲಿ ೨೭ ಮಂದಿ ಪೋಲರು ಇದೇ ಗುಂಡಿನ ಬಾಯಿಗೆ ಬಿದ್ದು ಮೃತರಾದರು.

### ಸಮುದ್ರರಾಜನಿಗೆ ಆಹುತಿ

ಯುದ್ಧವಾರಂಭವಾದಂದಿನಿಂದ ಇದೇ ಫೆಬ್ರವರಿ ತಾ. ೩ರ ವರೆಗೆ, ಜರ್ಮನಿಯ ನೌಕೆಗಳ ಹಾವಳಿಯಿಂದ ಸಮುದ್ರಗಳಲ್ಲಿ ಮುಳುಗಿಸಲ್ಪಟ್ಟ ಮಿತ್ರರಾಷ್ಟ್ರಗಳ ಹಾಗೂ ತಟಸ್ಥ ರಾಷ್ಟ್ರಗಳ ವ್ಯಾಪಾರೀ ಹಡಗುಗಳ ಒಟ್ಟು ಸಂಖ್ಯೆ ೨೭೪ ಇದರಲ್ಲಿ ಬ್ರಿಟಿಷರದು ೧೪೩, ಮಿತ್ರರದು ೧೪ ಹಾಗೂ ತಟಸ್ಥ ರಾಷ್ಟ್ರಗಳವರದು ೧೧೭ ಎಂದು ತಿಳಿದುಬರುವಲ್ಲಿ ಜರ್ಮನರು ಈ ಒಟ್ಟು ಸಂಖ್ಯೆ ೪೦೯ ಎನ್ನುತ್ತಾರೆ ಮತ್ತೆ ಜರ್ಮನಿ ಕಳೆದುಕೊಂಡ ಸಾಹುಕಾರಿ ಹಡಗುಗಳು, ಯುದ್ಧಾರಂಭದಿಂದ ಜನವರಿ ಅಂತ್ಯದ ವರೆಗೆ, ಕೇವಲ ೪೭ ಎಂದ ಅದರ ಹೇಳಿಕೆ

### ಫಿನ್‌ಲೇಂಡಿನ ಯುದ್ಧದಲ್ಲಿ ರಷ್ಯಕ್ಕಾದ ನಷ್ಟ

ಈ ಯುದ್ಧವು ತೊಡಗಿದಂದಿನಿಂದ ರಷ್ಯದವರ ೩೬೮ ವಿಮಾನಗಳ ೫೬೭ ಟ್ಯಾಂಕುಗಳು, ಅವರ ಕೈಬಿಟ್ಟು ಹೋಗಿವೆ. ೧,೫೦೦ ಕುದರೆಗಳೂ, ೨೦ ಟ್ರ್ಯಾಕ್ಟರ್‌ಗಳೂ, ೨೯೪ ಮೆಶಿನ್ ಗನ್ನಳೂ ೩೩೫ ಪಿಸ್ತೂಲುಗಳೂ ಜಾರಿವೆ

### ಪುನಃ ಜೆಟ್ಲೆಂಡರ ಉದ್ಗಾರ

ಒಬ್ಬ ಪತ್ರಿಕಾಪ್ರತಿನಿಧಿಗೆ ಭೇಟಿ ಕೊಟ್ಟು, ಇಂಡಿಯಾ ಸೆಕ್ರಟರಿಗಳಾದ ಲಾರ್ಡ್ ಜೆಟ್‌ಲ್ಯಾಂಡರವರು ಇಂಡಿಯದ ಕಗ್ಗಂಟು ಹಾಗೂ ಗಾಂಧಿಜಿಯವರ 'ಸ್ಟೇಟ್‌ಮೆಂಟಿ'ನ ಕುರಿತಾಗಿ ಮಾತಾಡಿದರು. ಕಾಂಗ್ರೆಸಿನ ನಿಲುಗಡೆ ಸರಿಯಲ್ಲವೆಂದು ಅದನ್ನು ದೂಷಿಸಿದರು "ಇಂಡಿಯದ ಮುಖಂಡರು ಪತ್ರಿಕೆಗಳಲ್ಲಿಯೂ, ಉಪನ್ಯಾಸ ವೇದಿಕೆಗಳಲ್ಲಿಯೂ ದೀರ್ಘವ್ಯಾಪಿಯಾದ ವಾಗ್ಧೋರಣೆಯ ದಾಳಿ ನಡೆಸಿ ಫಲವಿಲ್ಲ ಧ್ಯೇಯನಿರೂಪಣೆಯನ್ನು ಬಿಟ್ಟು ವಸ್ತುಸ್ಥಿತಿಯನ್ನು ಅರಿಯಬೇಕು. ಸದ್ಯಗಾಂಧಿ ವೈಸರಾಯರ ಮಾತುಕಥೆಗಳು ಅಂತ್ಯವಾಗಿಲ್ಲವೆಂಬುದೊಂದು ಸಂತೋಷ" ಎಂದರು. ಆದರೆ ಕಾಂಗ್ರೆಸ್ ಈ ರೀತಿಯ ಹಾವಭಾವವನ್ನು ತಳೆದಿರುವವರೆಗೆ, ಗೌರವಾರ್ಹವಾದ ಸಂಧಾನದ ಕಷ್ಟಗಳು ಹೆಚ್ಚುವವು. ಇಂಡಿಯಕ್ಕೆ ಇಂಗ್ಲಿಷ್ ಸಾಹಿತ್ಯ ಮೊದಲಾದುವುಗಳಿಂದ ಮಹೋಪಕಾರವಾಗಿದೆ. ಈ ದೃಷ್ಟಿಯಿಂದ ಇಂಡಿಯಾ—ಇಂಗ್ಲೆಂಡುಗಳ ಬಾಂಧವ್ಯವನ್ನು ವಿಮರ್ಶಿಸಬೇಕು" ಎಂದರು ಅಂತೂ ಕಾಂಗ್ರೆಸಿನ ಕೇಳಿಕೆಗಳು ಕೊಂಚವೂ ಕಡಿಮೆಯಾಗಿಲ್ಲವೆಂದು ಗೊಣಗುವವರು, ತಾವಾದರೂ ಇಂಡಿಯದ ಧೋರಣೆಯನ್ನು ಎಳ್ಳಷ್ಟಾದರೂ ಬದಲಾಯಿಸಿದುದು ತೋರದು

### ಭಾರತವು ಸ್ವಾತಂತ್ರ್ಯಕ್ಕಾಗಿ ಕಾದಾಡುವುದು.

### ಜೆಟ್ಲೆಂಡರರಿಗೆ ರಾಷ್ಟ್ರಪತಿಗಳ ಉತ್ತರ

ಲಾರ್ಡ್ ಜೆಟ್ಲೆಂಡರರಿಗೆ ಉತ್ತರ ಕೊಡುತ್ತಾ ರಾಷ್ಟ್ರಪತಿಗಳು ಕಾಂಗ್ರೆಸಿನ ಕೇಳಿಕೆಯನ್ನು ಎಣಿಸಿ, ಕಾಂಗ್ರೆಸಿನವರು ಹೇಳುವುದು ಹೆಚ್ಚಿನ ವಿಷಯವಲ್ಲವೆಂದೂ, ಅವರ ಇಂದಿನ ಹೋರಾಟವು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿದೆಯೆಂದೂ ಸ್ಪಷ್ಟಪಡಿಸಿರುವರು. ಸ್ವಾತಂತ್ರ್ಯವು ಭಯಂಕರ ವಿಷಯವಾಗಿದಯೆಂದು ಜೆಟ್ಲೆಂಡರು ತಿಳಿಯುವುದಿದ್ದರೆ, ಅದನ್ನು ಭಾರತೀಯರಿಗೆ ಕೊಟ್ಟು ಅವರಿಗೆ ಬುದ್ಧಿವಂತಿಕೆಯಿಲ್ಲವೆಂದು ಬ್ರಿಟಿಷರೇಕೆ ಯಾತಕ್ಕೆ ತಿಳಿಸಬಾರದು?

### ಅಡಿಯು ಹಿಂದಿಡಲಾರೆವು

### ಜೆಟ್ಲೆಂಡರಿಗೆ ನೆಹರೂಗಳ ಉತ್ತರ

ಯುದ್ಧವು ಪ್ರಕಟವಾದ ಮೇಲೆ ಕಾಂಗ್ರೆಸ ವರ್ಕಿಂಗ್ ಕಮಿಟಿಯು ಸಭೆಸೇರಿ, ಯುದ್ಧದ ವಿಷಯದಲ್ಲಿ ಭಾರತದ ಅಭಿಪ್ರಾಯವನ್ನು ಪ್ರಕಟಿಸುವ ಒಂದು ಠರಾವನ್ನು ಮಾಡಿತಷ್ಟೆ? ಕಾಂಗ್ರೆಸಿನ ಆ ಠರಾವಿನಲ್ಲಿ ಸೂಚಿತವಾದ ವಿಷಯಕ್ಕಿಂತ ಇಂದು ಒಂದಡಿಯನ್ನೂ ಹಿಂದಿಡಲಾರದೆಂದು ನಹರುಗಳು ಭಾರತ ಸಚಿವರಾದ ಲಾರ್ಡ್ ಜೆಟ್ಲೆಂಡರ ಹೇಳಿಕೆಗೆ ಉತ್ತರ ಕೊಡುತ್ತಾ ಹೇಳಿದರು ಗಾಂಧಿ ವೈಸರಾಯರ ಭೇಟಿಯಲ್ಲಿ ಕಾಂಗ್ರೆಸು ಮಂತ್ರಿಗಳ ರಾಜಿನಾಮೆಯ ವಿಷಯವು ಇತ್ಯರ್ಥವಾಗಬಹುದೆಂದು ಹಲವರು ಯೋಚಿಸಿದ್ದರೆಂದೂ, ಕಾಂಗ್ರೆಸಿನ ಕೇಳಿಕೆಯು, ಭಾರತದ ಮಿಲಿಯಾಂತರ ಮಂದಿಯ ಸ್ವಾತಂತ್ರ್ಯದ ವಿಷಯ ಕೇವಲ ಇಬ್ಬರು ವ್ಯಕ್ತಿಗಳಿಂದ ಇತ್ಯರ್ಥಸಲ್ಪಡತಕ್ಕುದಲ್ಲವೆಂದೂ, ಮಹಾತ್ಮಾ ಗಾಂಧಿಯವರಾದರೂ, ಕಾಂಗ್ರೆಸಿನ ನಿರ್ಣಯಕ್ಕಿಂತ ಸಂಕುಚಿತವಾದ ವಿಷಯಗಳಿಗೆ ಜನತೆಯನ್ನು ಬಗ್ಗಿಸಲಾರರೆಂದೂ ಹೇಳಿದರು. ಜೆಟ್ಲೆಂಡ್ ಪ್ರಭೃತಿ ಬ್ರಿಟಿಷ್ ರಾಜನೀತಿಜ್ಞರು ಕಾಂಗ್ರೆಸಿನ ಕೇಳಿಕೆಯ ಸಲುವಾಗಿ ಹೆದರಬೇಕಾಗಿಲ್ಲವೆಂದೂ, ಕಾಂಗ್ರೆಸು ಬಹುಶಃ ಬ್ರಿಟಿಷ್ ಸರಕಾರಕ್ಕೆ ವಿಧೇಯತೆಯಿಂದ ಶರಣಾಗುವ ರೀತಿಯ ಕೇಳಿಕೆ ಮಾಡಿದರೆ ಮಾತ್ರ ಅವರಿಗೆ ಸಂತೋಷವಾಗಬಹುದೆಂದೂ, ಆದರೆ ಕಾಂಗ್ರೆಸು ಹೇಗೆ ಮಾಡುವುದು ಸರ್ವಥಾ ಸಾಧ್ಯವಿಲ್ಲವೆಂದೂ ಹೇಳಿದರು.

### ಕಾಂಗ್ರೆಸು ಅಧ್ಯಕ್ಷ ಪದವಿ

ಈ ಸಲದ ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಮೌಲಾನಾ ಅಜಾದರೂ, ಕಾಂಮ್ರೇಡ್ ಎಂ. ಎನ್ ರಾಯರುಗಳೂ ಉಮೇದ್ವಾರರಾಗಿರುವರಷ್ಟೆ. ಕಾಂ. ರಾಯರುಗಳು ಚುನಾವಣೆಯ ಸಮಯವನ್ನು ಸ್ವಲ್ಪ ಮುಂದುವರಿಸಬೇಕೆಂದು ರಾಷ್ಟ್ರಪತಿಯೊಡನೆ ಕೇಳಿದ್ದಕ್ಕೆ ಅದು ಈಗಾಗಲೇ ಪ್ರಕಟವಾಗಿರುವುದರಿಂದ ಮುಂದುವರಿಸಲಾಗುವುದಿಲ್ಲವೆಂದ ಅವರು ಉತ್ತರವಿತ್ತಿರುವರು ರಾಯರುಗಳ ಉಮೇದ್ವಾರಿಕೆಗೆ ಸೋಶಿಯಲಿಸ್ಟರ ಇತರ ಹಲವು ಮಂದಿಯ ಬೆಂಬಲವಿರುವುದಿಲ್ಲವೆಂದು ತಿಳಿದಿದೆ ರಾಯರುಗಳು ಉಮೇದ್ವಾರಿಕೆಯನ್ನು ಹಿಂತೆಗೆಯಬಹುದಾಗಿಯೂ ತಿಳಿದುಬರುತ್ತದೆ

### ಸರತ್ ಬೋಸರು ಕಾಂಗ್ರೆಸನ್ನು ಮೀರುವರಂತೆ

ಬಂಗಾಳದ ಸಮಸ್ಯೆಯ ಬಹಳ ಕ್ಲಿಷ್ಟವಾಗುತ್ತಾ ಬರುತ್ತದೆ. ಸರತ್ ಬೋಸರು ತಾ ೧೧ರಂದು ಬಂಗಾಳ ದಿನಾಚರಣೆಯನ್ನು ಆಚರಿಸಬೇಕೆಂದ ಪ್ರಕಟಪಡಿಸಿದ್ದರಷ್ಟೆ? ಅದರಂತೆ ಕಲ್ಕತ್ತದಲ್ಲಿ ಆ ದಿನಾಚರಣೆಯಾಯಿತು ಶ್ರದ್ಧಾನಂದ ಪಾರ್ಕಿನಲ್ಲಿ ನೆರೆದ ಸಭೆಯೊಂದರಲ್ಲಿ ಮಾತನಾಡುತ್ತಾ ಸರತ್ ಬೋಸರು, ವರ್ಕಿಂಗ್ ಕಮಿಟಿಯ ಧೋರಣೆಯನ್ನು ಖಂಡಿಸುತ್ತಾ, ಅವರು ನಿಯಮಿಸಿದ ಪ್ರತ್ಯೇಕ ಕಮಿಟಿಗೆ ಬಂಗಾಳದ ಜನರ ಬೆಂಬಲ ಕೊಡಬಾರದು ಎಂದೂ, ತಾನು ಬಂಗಾಳದ ಕಾಂಗ್ರೆಸ್ ಪಕ್ಷಕ್ಕೆ ರಾಜಿನಾಮೆ ಕೊಡಲು ಸಿದ್ಧನಿರುವೆನೆಂದೂ ಹೇಳಿದರು

### ವಾರ್ಧದಲ್ಲಿ ವರ್ಕಿಂಗ್ ಕಮಿಟಿ ಸಭೆ

ವರ್ಕಿಂಗ್ ಕಮಿಟಿಯ ಬರುವ ಅಧಿವೇಶನವು ವಾರ್ಧದಲ್ಲಿ ಜರಗುವುದೆಂದೂ, ಗಾಂಧೀಸೇವಾಸಂಘದ ಅಧಿವೇಶನಕ್ಕೆ ತೆರಳಿದ ಮಹಾತ್ಮರು ಆ ಸಭೆಗೂ ಹಾಜರಾಗುವರೆಂದೂ ತಿಳಿದುಬಂದಿದೆ ಈ ಸಭೆಯಲ್ಲಿ ವೈಸರಾಯರ ಭೇಟಿಯ ಕುರಿತು ಗಾಂಧಿಜಿಯವರಿತ್ತ ಪ್ರಕಟಣೆಯ ಕುರಿತು ವಿಚಾರಿಸಲಾಗುವುದೆಂದೂ, ಜೆಟ್ಲೆಂಡರ ಪ್ರಕಟಣೆಯನ್ನೂ ಚರ್ಚಿಸಲಾಗುವುದೆಂದೂ, ರಾಮಗಡ ಕಾಂಗ್ರೆಸಿನ ವಿಷಯದಲ್ಲಿ ನಿರ್ಣಯ ಮಾಡುವುದೆಂದೂ ತಿಳಿದಿದೆ

### ಅಸೆಂಬ್ಲಿ ಸಭೆಸದ ಉದಾರತೆ

ಮದ್ರಾಸು ಎಸೆಂಬ್ಲಿ ಸದಸ್ಯರಾದ ಶ್ರೀ ಕೆ. ಚಂದ್ರಮೌಳಿಯವರು ತನ್ನ ತಿಂಗಳ ಸಂಬಳವನ್ನು ಗುಂಟೂರು ಜಿಲ್ಲಾ ಕಾಂಗ್ರೆಸು ಕಮಿಟಿಗಾಗಿ ಕೊಡಲು ನಿರ್ಣಯಿಸಿರುವರು.



# ಲಾರ್ಡ್ ಜೆಟ್ಲೆಂಡರ ಉದ್ಗಾರಕ್ಕೆ ರಾಷ್ಟ್ರಧುರೀಣರ ಧೀರ ಉತ್ತರ!

## ಸಿಂಧ ಮಂತ್ರಿಮಂಡಳದಲ್ಲಿ ಅವಿಶ್ವಾಸ!

## ಸರತ್‌ಬೋಸರ ಕಾಂಗ್ರೆಸ್ ಕ್ರಾಂತಿ! ಕಾಂಗ್ರೆಸ್ಸಿಗೆ ಸಿಕ್ಕರ ಪೂರ್ಣ ಬೆಂಬಲ!

### ಬಡೋದೆಯಲ್ಲಿ ಸುಧಾರಣೆ

ಬಡೋದೆ ಸರಕಾರದವರು ಮೆಹಸಾಣಾ ಜಿಲ್ಲೆಗೆ ಈ ವರ್ಷದ ಹಪ್ತೆಯಲ್ಲಿ ೩೨೫೮೬ ರೂಪಾಯಿ ಕಂದಾಯವನ್ನು ಬಿಟ್ಟಿರುವರು, ಮಾತ್ರವಲ್ಲದೆ ಹಿಂದಿನ ಬಾಕಿಯನ್ನು ಮಾಫಿ ಮಾಡಿರುವರು ಬಾವಿ ಮೊದಲಾದವುಗಳಿಗೆ ಮೊದಲು ಮಂಜೂರು ಮಾಡಿದ ೩ ಲಕ್ಷ ರೂಪಾಯಿಗಳಲ್ಲದೆ ಕಿರಿಗ ೧॥ ಲಕ್ಷ ರೂಪಾಯಿಗಳ ಹೆಚ್ಚಿನ ಹಣವನ್ನೂ ಮಂಜೂರು ಮಾಡಿರುವರು ಆಶ್ರಿತರಾಜರು ಈ ರೀತಿ ಮಾಡುವುದು ತುಂಬಾ ಅಭಿನಂದನೀಯ

### ಹೆಚ್ಚು ಲಾಭದ ಮೇಲೆ ತೆರಿಗೆ

ಹೆಚ್ಚು ಲಾಭದ ಮೇಲೆ ತರಿಗೆ ಹೊರಿಸುವ ಮಸೂದೆಯು ಡಿಲ್ಲಿಯ ಎಸೆಂಬ್ಲಿಯಲ್ಲಿ ಮಂಡಿಸಲ್ಪಟ್ಟು ಪರಿಶೀಲಕ ಸಮಿತಿಗ ಒಪ್ಪಿಸಲ್ಪಟ್ಟಿರುವುದಷ್ಟೆ? ಈ ಕುರಿತು ತೀವ್ರವಾಗಿ ಡಿಲ್ಲಿ, ಮುಂಬಯಿ, ಕಲ್ಕತ್ತ ಮೊದಲಾದ ಕಡೆಗಳಲ್ಲಿ ಖಂಡನಾಸಭೆಗಳಾಗಿವೆ

### ಗಡಿನಾಡಿನ ಗಲಭೆಯಲ್ಲಿ

ಗಡಿನಾಡಿನಲ್ಲಿ ಸಿಕ್ಕ ನಿರಂತರ ಪೂಡೆಂಬಿ ಮೊದಲಾದ ಗಲಭೆಗಲಾಗುತ್ತಿವೆಯಷ್ಟೆ? ಇದರ ಪರಿಣಾಮವಾಗಿ ಒಟ್ಟು ಈ ವರ್ಷದಲ್ಲಿ ೬೩೮ ಕೊಲೆಗಳೂ ೩೫೯ ದರೋಡೆಗಳೂ ಮತ್ತು ೨೧೫೬ ಕಳವುಗಳೂ ಆಗಿವೆಯೆಂದು ಸರಕಾರದ ವರದಿಯಾಗಿದೆ

### ಹೊಟ್ಟೆಗಿಲ್ಲದೆ ಹಿಂಸೆ

ರೋಹಿರಾ ತಹಶೀಲದಲ್ಲಿನ ೧೦ ಜನ ಬಿಲ್ಲರು ಹೊಟ್ಟೆಗಿಲ್ಲದ ಕಷ್ಟದಿಂದ ಹತ್ತು ದನಗಳನ್ನು ಕೊಂದು ತಿಂದಿರುವರಾಗಿ ತಿಳಿದು ಬರುತ್ತದೆ.

### ಬಂಗಾಳದ ಹಿಂದೂ ಮುಸ್ಲಿಂ ಐಕ್ಯಸಮ್ಮೇಳನ

ಬಂಗಾಳದ ಪ್ರಧಾನರಾದ ಪಜಲುಲ್ ಹಕ್ಕರ ನಾಯಕತ್ವದಿಂದಲೇ ಅಲ್ಲಿನ ಹಿಂದೂ ಮುಸ್ಲಿಂ ಐಕ್ಯದ ಬಗ್ಗೆ ಬೇಗನೇ ಪ್ರಮುಖ ಹಿಂದೂ ಮುಸ್ಲಿಂ ಮುಖಂಡರ ಸೇರುವಿಕೆಯಿಂದ ಒಂದು ಸಮ್ಮೇಳನವು ಜರಗಲಿರುವುದೆಂದು ತಿಳಿದು ಬಂದಿದೆ. ಡಾ| ಬಿ. ಸಿ. ರಾಯ್, ಸರತ್‌ಬೋಸ್ ಮೊದಲಾದವರು ಹಿಂದುಗಳ ಪರವಾಗಿ ಆಮಂತ್ರಿತರಾಗಿರುವರು.

### ರಾಮಗಡದ ಕಲಾವಿದ

ರಾಮಗಡದ ಕಾಂಗ್ರೆಸನ್ನು ಕಲಾಸುಂದರವಾಗಿ ಅಲಂಕರಿಸುವ ಸಲುವಾಗಿ ಕೃಷ್ಣನಗರದ ಪ್ರಸಿದ್ಧ ಕಲಾವಿದರಾದ ಕಾರ್ತಿಕ ಚಂದ್ರಪಾಲ ಇವರನ್ನು ಆಮಂತ್ರಿಸಲಾಗಿದೆ.

### ಸಂಸ್ಕೃತ ಪದವೀಧರರಾದ ಮುಸ್ಲಿಮರು

ಡಾಕ್ಟರ್ ಹುಸೇನರೆಂಬವರು ಸಂಸ್ಕೃತದಲ್ಲಿ ಪ್ಯಾರಿಸ್ ವಿಶ್ವವಿದ್ಯಾಲಯದ ಡಾಕ್ಟರರ ಪದವಿಯನ್ನು ಸಂಪಾದಿಸಿ ಮುಂಬಯಿಗೆ ಬಂದಿರುವರು ಈ ವಿಷಯದಲ್ಲಿ ಈ ಪದವಿಯನ್ನು ಸಂಪಾದಿಸಿದ ಮೊಸಲ್ಮಾನರೆಂದರೆ ಇವರೇ

### ಆಗಾಖಾನರ ಆಗಮನ

ಆಗಾಖಾನರು ಹಿಂದೂದೇಶಕ್ಕೆ ಬಂದಿದ್ದಾರೆ. ಯಾವುದೊಂದು ರಾಜಕೀಯ ಉದ್ದೇಶದಿಂದ ಬಂದಿರುವುದಿಲ್ಲವೆಂದೂ, ಮಾತೃಭೂಮಿಗೆ ಸೇವೆ ಸಲ್ಲಿಸಲು ಸಿದ್ಧನಿರುವೆನೆಂದೂ ಹೇಳಿದರು. ಕಾಂಗ್ರೆಸಿನ ರಾಷ್ಟ್ರಘಟನಾ ಸಮಿತಿಯ ವಿಷಯದಲ್ಲಿ ಎಲ್ಲಾ ಶಾಸನ ಸಭೆಗಳ ಸದಸ್ಯರನ್ನೂ ಇದಕ್ಕಾಗಿ ನೇಮಿಸಬಹುದೆಂದು ಸರದಾರ ಪಟೇಲರು ಸೂಚಿಸಿದ್ದಕ್ಕೆ ಆಗಾಖಾನರು ತಮ್ಮ ಸಮ್ಮತಿಯನ್ನು ಹೇಳಿರುವರು

### ರಿಸರ್ವ್ ಬೇಂಕಿನ ಲಾಭ

ರಿಸರ್ವ್ ಬ್ಯಾಂಕ್ ಓಪ್ ಇಂಡಿಯಾ ಸಂಸ್ಥೆಗೆ ೧೯೩೯ನೇ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದಲ್ಲಿ ೨೨,೫೦, ೩೫೫ ರೂಪಾಯಿಗಳಷ್ಟು ಲಾಭಬಂದಿದೆ ಬೇಂಕಿನ ಪಾಲುಗಾರರಿಗೆ ೨೧೯ಯಂತೆ ಡಿವಿಡೆಂಟ್ ಕೊಡಲಾಗಿದೆ.

### ಗಾಂಧಿಜಿಯವರಿಗೆ ಚೀನರ ಆಮಂತ್ರಣ

ಮಹಾತ್ಮಾ ಗಾಂಧಿಜಿಯವರು ಒಮ್ಮೆ ಚೀನಕ್ಕೆ ಆಗಮಿಸಬೇಕೆಂದು ಮಾರ್ಶಲ್ ಚಿಯಾಂಗ್ ಕೈಶೇಕರು ಒಂದು ಪತ್ರಬರೆದಿರುವರು. ಗಾಂಧಿಜಿಯವರು ಅದಕ್ಕೆ ಉತ್ತರ ಬರೆಯುತ್ತಾ ನನಗೆ ಚೀನಕ್ಕೆ ಹೋಗುವ ಆಶೆಯು ಬಹಳ ಕಾಲದಿಂದ ಇದೆಯೆಂದೂ, ಆದರೆ ಭಾರತದ ಪ್ರಕೃತ ಪರಿಸ್ಥಿತಿಯಿಂದ ಹಾಗೆಮಾಡಲು ಆಸ್ಪದವಿಲ್ಲ ವೆಂದೂ ಬರೆದಿರುವರು.

### ಜಿನ್ನಾ ವೈಸರಾಯರ ಪತ್ರ ವ್ಯವಹಾರ

ಜನಾಬ್ ಜಿನ್ನಾ ಈಗ ವೈಸರಾಯರ ಅನುಮತಿ ಪಡೆದು ಅವರವರ ಪತ್ರ ವ್ಯವಹಾರವನ್ನು ಪ್ರಕಟಿಸಿದ್ದಾರೆ

### ಮಹಾತ್ಮಾ ಗಾಂಧಿ

ಮಹಾತ್ಮಾ ಗಾಂಧಿಯವರು ಇದೇ ತಾ. ೧೫ರಲ್ಲಿ ಶಾಂತಿನಿಕೇತನಕ್ಕೆ ಹೊರಡುವರು. ಅಲ್ಲಿ ೨ ಡು ದಿನ ವಿದ್ದು, ಅಲ್ಲಿಂದ ಅವರು ಡಾಕ್ಕಾ ಜಿಲ್ಲೆಯ ಮಾಲ್ಕಿಕಂಡದ ಗಾಂಧಿ ಸೇವಾ ಸಂಘದ ಕಾನ್ಫರೆನ್ಸಿಗಾಗಿ ಅತ್ತ ತೆರಳುವರು.

### ರಾಮಗಡ ಕಾಂಗ್ರೆಸ್

ಇದೇ ಬರುವ ಮಾರ್ಚಿ ತಾ ೧೯ರಲ್ಲಿ ರಾಮಘರ ಕಾಂಗ್ರೆಸ್ ನಗರದಲ್ಲಿ ಮಹಾತ್ಮಾ ಗಾಂಧಿಯವರು ಸಮಗ್ರಭಾರತ ಹಿಂದೀ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನವನ್ನು ತೆರೆಯುವರು. ಇಲ್ಲಿ ಯಂತ್ರ ನಿರ್ಮಾಣದ ಯಾವ ಪದಾರ್ಥಕ್ಕೂ ಅವಕಾಶವಿರದು

ರಾಮಘರ್ ಕಾಂಗ್ರೆಸಿನ ಸ್ವಾಗತ ಕಮಿಟಿಯು ಇದುವರೆಗೆ ೧ ಲಕ್ಷ ರೂಪಾಗಳನ್ನು ಸಂಗ್ರಹಿಸಿದೆ

### ಸಿಂಧ ಮಂತ್ರಿಮಂಡಲ

ಸಿಂಧಿನ ಮಂತ್ರಿಮಂಡಲದ ಕುರಿತು, ಅದರ ಮೇಲೆ, ಬೇರೆ ಬೇರೆ ರೀತಿಯ ೬ ಪ್ರತ್ಯಪ್ರತ್ಯೇಕವಾದ ಅವಿಶ್ವಾಸದ ಠರಾವುಗಳು ಎಸೆಂಬ್ಲಿಯ ಮುಂದೆ ಬರಲಿವೆ ಹಿಂದೂ ಸ್ವತಂತ್ರ್ಯ ಪಂಗಡದ ಶ್ರೀ ದಾಲತ್ ರಾಮ್ ಮೋಹನ್‌ದಾಸ್‌ರವರು, ಈ ಠರಾವುಗಳನ್ನು ಮಂಡಿಸುವ ವಿಚಾರದಲ್ಲಿ 'ನೋಟೀಸು' ಕೊಟ್ಟಿರುತ್ತಾರೆ

### ಉಪಾಧ್ಯಾಯರ ಗೋಳು

ಮಲಬಾರಿನಲ್ಲಿ ಎಯಿಡೆಡ್ ಶಾಲೋಪಾಧ್ಯಾಯರ ಸಂಕಟಗಳು ಹೆಚ್ಚುತ್ತಿವೆ ಇವರಲ್ಲಿ ಹಲವರು ತಾಲೂಕು ಎಯಿಡೆಡ್ ಎಲಿಮೆಂಟರಿ ಶಾಲೋಪಾಧ್ಯಾಯರ ಯೂನಿಯನ್ನುಗಳ ಸದಸ್ಯತನವನ್ನು ಬಿಡಲಿಲ್ಲವೆಂಬ ಕಾರಣದಿಂದ, ೫೦ ಮಂದಿ ಉಪಾಧ್ಯಾಯರನ್ನು ೫ ದಿನಗಳಲ್ಲಿ, ಡಿಸ್‌ಮಿಸ್ ಮಾಡಲಾಗಿದೆ, ಮತ್ತೆ ಈ ಯೂನಿಯನ್ನಿನ ಸದಸ್ಯತನವನ್ನು ಕೂಡಲೇ ಬಿಡದಿದ್ದರೆ ಹೀಗೆ ಡಿಸ್‌ಮಿಸ್ ಮಾಡಲಾದೀತೆಂದು ೧೨೨ ಮಂದಿ ಎಯಿಡೆಡ್ ಶಾಲೋಪಾಧ್ಯಾಯರಿಗೆ ಎಚ್ಚರಿಕೆಯ ನೋಟೀಸುಗಳು ಹೋಗಿವೆ ಇವೆಲ್ಲಾ ಕಾರ್ಯಕ್ರಮಗಳು ಶಾಖೆಗೆ ಸಂಬಂಧಿಸಿದ ಸರ್ಕಲಾರುಗಳ ಆಧಾರದಂತೆ ನಡೆದಿದೆ ಎಂದು ಹೇಳಲಾಗಿದೆ

### ಪುನಃ ಮದ್ರಾಸಿನಲ್ಲಿ ಬೆಂಕಿ

ಮದ್ರಾಸಿನಲ್ಲಿ ಪುನಃ ಬೆಂಕಿಯ ಹಾವಳಿ. "ಇಂಡಿಯನ್ ಎಕ್ಸ್‌ಪ್ರೆಸ್ "ಆಂಧ್ರ ಪ್ರಭಾ" ಮತ್ತು "ದಿನಮಣಿ" ಪತ್ರಿಕೆಗಳಿದ್ದ ಆ ಕಾರ್ಯಾಲಯಗಳ ಪಕಾರವಿದ್ದ—ಜೋರ್ಜ್ ಟೌನಿನ ವಿಭಾಗದಲ್ಲಿ, ಅಲ್ಲಿ ದೊಡ್ಡದೊಂದು ಉಗ್ರಾಣದಲ್ಲಿ ಕೇಖಿಸಿಟ್ಟಿದ್ದ ನ್ಯೂಸ್ ಪ್ರಿಂಟ್" ಕಾಗದವೂ, ಇತರ ಕೆಲವು ಉಪಕರಣಗಳೂ ನಷ್ಟವಾದವು. ಪುಣ್ಯಕ್ಕೆ ಈ ಬೆಂಕಿ ಯಂತ್ರಭಾಗಗಳಿಗೆ ಹರಡುವಷ್ಟರಲ್ಲಿ ಅದನ್ನು ನಂದಿಸಲಾಯಿತು.

### ಪತ್ರಿಕೆಗಳಿಗೆ ಬಾಯಿಬೀಗ

'ನೇಶನಲ್ ಪ್ರಂಟ್' ಮತ್ತು 'ನ್ಯೂಏಜ್' ಎಂಬೀ ಎರಡು ರಾಷ್ಟ್ರೀಯ ಪತ್ರಿಕೆಗಳಿಗೆ ಸರಕಾರದವರು ನಿರ್ಬಂಧ ಹಾಕಿರುವರು.

### ವಿದ್ಯಾರ್ಥಿಗಳಲ್ಲಿ ಕಮ್ಯುನಿಸ್ಟ್ ಸಾಹಿತ್ಯ

ಡಿಲ್ಲಿಯ ವಿದ್ಯಾರ್ಥಿಸಂಘದ ಕಾರ್ಯದರ್ಶಿ ಶ್ರೀ ಬಾಹಲಸಿಂಗ ಮತ್ತು ಉಳಿದ ಮೂರು ಮಂದಿ ಕಾಂಗ್ರೆಸ್ ಕೆಲಸಗಾರರ ಮನೆಯನ್ನು ಜಡತಿಮಾಡಿದರು ಅವರಲ್ಲಿ ಕಮ್ಯುನಿಸ್ಟ್ ಸಾಹಿತ್ಯವಿದೆಯೆಂಬ ಬಗ್ಗೆ ಸಂಶಯದಿಂದ ಹೀಗೆ ಮಾಡಲಾಯಿತೆಂದು ತಿಳಿಯುತ್ತದೆ

### ಇಂಗ್ಲೆಂಡಿಗೆ ಮುಸ್ಲಿಂ ಲೀಗಿನ ಶಿಷ್ಟ ಮಂಡಲ

ಪಾರ್ಲಿಮೆಂಟಿನ ಹಾಗೂ ಬ್ರಿಟಿಷ್ ಜನತೆಯ ಮುಂದೆ, ಭಾರತದ ಮುಸ್ಲಿಂಮರ ಬೇಡಿಕೆಗಳನ್ನು ಮಂಡಿಸುವರೆ, ಬೇಗನೇ ಮುಸ್ಲಿಂ ಲೀಗಿನ ಶಿಷ್ಟಮಂಡಲವೊಂದು ಇಂಗ್ಲೆಂಡಿಗೆ ತೆರಳಲಿರುವುದೆಂದು ತಿಳಿದಿದೆ

### ಸಂಯುಕ್ತ ಪ್ರಾಂತದ ಕಾಂಗ್ರೆಸು ಸದಸ್ಯರು

ಸಂಯುಕ್ತ ಪ್ರಾಂತದಲ್ಲಿ ಪ್ರಚಂಡ ಕಾಂಗ್ರೆಸ್ ಸದಸ್ಯರಿರುವರು. ಒಟ್ಟು ೨, ೩೬೭೦೧೩ ಮಂದಿ ಅವರಲ್ಲಿ ಲಕ್ಷ ಮಂದಿ ಗ್ರಾಮಗಳವರು. ೨೫ ೦೦೦ ಮಂದಿ ಸ್ತ್ರೀಯರು ೨೫೦೦೦ ಮಂದಿ ಮುಸಲ್ಮಾನರೂ ಇರುವರು

## ಹೊಸವಾರ್ತೆ

ಸಿಂಧ ಮಂತ್ರಿಮಂಡಳದ ಮೇಲೆ ಅವಿಶ್ವಾಸ ಠರಾವು ತಂದ ವಿಷಯದಲ್ಲಿ ಪ್ರಧಾನ ಮಂತ್ರಿಗಳು ತಮ್ಮ ತೀವ್ರ ಸಂತಾಪವನ್ನು ಸೂಚಿಸಿದ್ದಾರೆ

ಸಿಕ್ಕರು ಕಾಂಗ್ರೆಸಿಗೆ ತಮ್ಮ ಪೂರ್ಣ ಬೆಂಬಲವನ್ನು ಸೂಚಿಸಿದ್ದಾರೆ

ಸರತ ಬೋಸರ 'ಕಾಂಗ್ರೆಸ್' ವಿರುದ್ಧ ಚಟುವಟಿಕೆ ಪ್ರಕಟಣೆಗೆ ಆಚಾರ್ಯ ಕೃಪಾಲನಿಯವರು ದೀರ್ಘವಾದೊಂದು ಉತ್ತರ ವಿತ್ತಿರುವರು

ಕರೇಲಿಯ ರಣಭೂಮಿಯಲ್ಲಿ ರಷ್ಯನರ ಅಪಾರ ಹಾನಿಯಾಗಿದೆ.

ಕ್ವಾಂಗ್ಸಿಯಲ್ಲಿ ಚೈನೀಯರು ಜಪಾನರನ್ನು ಸೋಲಿಸಿಮುಂದುವರಿಯುತ್ತಿದ್ದಾರೆ.

ಡಚ್ ಹಡಗವೊಂದು ಮುಳುಗಿಸಲ್ಪಟ್ಟಿತು.

ಪಶ್ಚಿಮ ರಣಭೂಮಿಯಲ್ಲಿ ಚಳಿಗಾಲದ ಬಾಧೆಯು ಹೆಚ್ಚಾಗಿದೆ.

# ಬೋಸ ಸಹೋದರರ ಕಾಂಗ್ರೆಸ್ ವಿರೋಧ

## ಬಂಗಾಳಕ್ಕೆ ಪ್ರತ್ಯೇಕ ಕಾಂಗ್ರೆಸ್ ನಿರ್ಮಾಣ

## ಅಧಿಕಾರ ತೃಷ್ಣೆಯ ದುಷ್ಪರಿಣಾಮ

ಮಾಜಿ ರಾಷ್ಟ್ರಪತಿ ಶ್ರೀ ಸುಭಾಸ ಚಂದ್ರಬೋಸ ಮತ್ತು ಅವರ ಅಣ್ಣಂದಿರಾದ ಸರತ್ ಭೋಸರು ಪಂಥ ಕಟ್ಟಿಕೊಂಡು ಕಾಂಗ್ರೆಸಿನ ವಿರುದ್ಧ ಬಂಡಾಯವನ್ನೆಬ್ಬಿಸಿದ್ದಾರೆ ಅವರೀಗ ತಮ್ಮ ಪ್ರತಿಷ್ಠೆ ಮತ್ತು ಸ್ಥಾನಮಾನಗಳನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಬಂಗಾಳದಲ್ಲಿ ತಮ್ಮದೇ ಆದ ಒಂದು ಪ್ರತ್ಯೇಕ ಸಂಸ್ಥೆಯನ್ನು ಕಾಂಗ್ರೆಸಿನ ವಿರುದ್ಧ— ಅದರ ಹಿತಕ್ಕೆ ಬಾಧೆ ಬರುವ ಹಾಗೆ ಸಂಸ್ಥಾಪಿಸುವ ಪ್ರಯತ್ನದಲ್ಲಿ ತೊಡಗಿರುವದು ಆಶ್ಚರ್ಯ ಮತ್ತು ಖೇದಜನಕವಾಗಿಯೂ ಇರುವದು

ಬೋಸ ಸಹೋದರರಿಗೆ ಬಂಗಾಳದಲ್ಲಿ ವಿಶೇಷ ಪ್ರತಿಷ್ಠೆ ಸ್ಥಾನಮಾನಗಳಿರುವದೆಂಬುದರಲ್ಲಿ ಸಂದೇಹವಿಲ್ಲ ಅವರು ಹಿಂದೆ ಕಾಂಗ್ರೆಸಿಗಾಗಿಯೂ ದೇಶಕ್ಕಾಗಿಯೂ ಪಟ್ಟ ಪರಿಶ್ರಮ, ಮಾಡಿದ ತ್ಯಾಗ-ಇವು ದೇಶದ ಹೃದಯವನ್ನು ಸೂರೆಗೊಂಡಿವೆ ಬಂಗಾಳದ ತರುಣ ಸಮುದಾಯವು ಬೋಸರಿಗಾಗಿ ಏನು ಬೇಕಾದರೂ ಮಾಡಲಿಕ್ಕೆ ಸಿದ್ಧವಿದೆ ಹೀಗಿರುತ್ತ ಕಾಂಗ್ರೆಸಿನಲ್ಲಿ ತಮ್ಮ ಮಾತಿಗೆ ಮನ್ನಣೆ ದೊರೆಯಲಿಲ್ಲ ಎಂಬ ಕ್ಷುಲ್ಲಕ ಕಾರಣದಿಂದ ಸಿಟ್ಟುಗೊಂಡು, ಅವರೀಗ ತಮ್ಮ ಹಠಸಾಧನೆಯಲ್ಲಿ ರಾಷ್ಟ್ರದ ಸಂಸ್ಥೆಯಾದ ಕಾಂಗ್ರೆಸಿಗೆ ದ್ರೋಹವನ್ನೆಣಿಸುತ್ತಿರುವದು ದುಃಖಾಸ್ಪದವಾಗಿದೆ

### ಬೋಸರ ಕರ್ತವ್ಯ

ಮಾತೃ ಸಂಸ್ಥೆಗೆ ದ್ರೋಹ ಮಾಡುವದು ಬೋಸರ ಕರ್ತವ್ಯವಾಗಿರಲಿಲ್ಲ. ಕಾಂಗ್ರೆಸಿನಲ್ಲಿ ಅವರ ಮಾತು ಅಭಿಪ್ರಾಯಗಳಿಗೆ ಮನ್ನಣೆ ದೊರೆಯುವುದಿಲ್ಲವಾದರೆ ಕಾಂಗ್ರೆಸಿನೊಳಗಿದ್ದೇ ಪ್ರಚಾರ ಮೊದಲಾದ ನ್ಯಾಯ ಮತ್ತು ಯೋಗ್ಯ ಉಪಾಯಗಳಿಂದ ಕಾಂಗ್ರೆಸ ಮತದಾರರ ಹೃದಯ ಪರಿವರ್ತನೆ ಮಾಡಿ ಈಗ ಯಾವ ಕಾಂಗ್ರೆಸ ಮೇಲಧಿಕಾರಿಗಳು ಅವರ ಅವಕೃಪೆಗೆ ಪಾತ್ರರಾಗಿದ್ದಾರೋ, ಅವರನ್ನು ಪದಚ್ಯುತರನ್ನಾಗಿ ಮಾಡಬಹುದಿತ್ತು. ಆದರೆ ಬೋಸರು ಆ ಶಿಷ್ಟಸಮ್ಮತ ಉಪಾಯಕ್ಕೆ ನಮಸ್ಕಾರ ಹಾಕಿ, ಕಾಂಗ್ರೆಸಿನ ಧ್ಯೇಯೋದ್ದೇಶಗಳಿಗೂ ಭಂಗಬರುವ ಹಾಗೆ ನಡೆದರು ಉಪಾಯಕಾಣದೆ ಕಾಂಗ್ರೆಸು ಅವರ ಮೇಲೆ ಶಿಸ್ತುಭಂಗದ ದೋಷಾರೋಪಣೆ ಮಾಡಿ, ಅವರನ್ನು ಕಾಂಗ್ರೆಸಿನ ಅಧಿಕಾರ ಸ್ಥಾನಗಳಿಂದ ಹೊರಗಿರಿಸಲೇ ಬೇಕಾಯಿತು

ಬೋಸರಂತೆ ಪಂಡಿತ ಜವಾಹರಲಾಲರೂ ಉಗ್ರಪಕ್ಷದವರು, ಕಡು ಸಮಾಜವಾದಿಗಳು. ಅವರಿಗೂ ಕಾಂಗ್ರೆಸ ವರ್ಕಿಂಗ ಕಮಿಟಿಯ ಸದಸ್ಯರಿಗೂ ಹಲವು ವಿಷಯಗಳಲ್ಲಿ ಅಜಗಜಾಂತರ ಅಭಿಪ್ರಾಯ ಭೇದವಿದೆ ಯಾಕೆ? ಮಹಾತ್ಮಾಗಾಂಧಿಯವರಂಥ ವಿಭೂತಿ ಪುರುಷರ ಪತಿಯೊಂದು ಮಾತಿಗೆ ಜವಾಹರಲಾಲರು ಸೈಗುಟ್ಟುತ್ತಿರುವದಿಲ್ಲ ಹೀಗಿದ್ದರೂ ಕೂಡ ದೇಶದ ಅವಶ್ಯಕತೆ ಕಾಲ, ಪರಿಸ್ಥಿತಿ ಮತ್ತು ಕಾಂಗ್ರೆಸಿನ ಬಲಾಬಲಗಳನ್ನು ಅಳೆದು, ಪರಿಸ್ಥಿತಿಗೆ ತಕ್ಕಂಥ ಕಾರ್ಯಕ್ರಮವನ್ನು ರಚಿಸಿಕೊಳ್ಳುವ ಸೂಕ್ಷ್ಮ ವಿಚಾರಬುದ್ಧಿಯು ಜವಾಹರಲಾಲರಲ್ಲಿರುವದರಿಂದ, ಅವರು ಈ ಹೊತ್ತಿಗೂ ತಮ್ಮ ಉಚ್ಚಪದವಿಗೆ ಯೋಗ್ಯವಾದ ರೀತಿಯಿಂದ ನಡಕೊಳ್ಳುತ್ತಿದ್ದಾರೆ

### ದೇಶದ ದುರ್ಭಾಗ್ಯ

ಆದರೆ ಬೋಸರು ಮಾತ್ರ ಜವಾಬುದಾರಿ ಸ್ಥಾನದಲ್ಲಿದ್ದು ಬೇಜವಾಬುದಾರ ರೀತಿಯಿಂದ ನಡಕೊಳ್ಳುತ್ತಿರುವದು ದೇಶದ ದುರ್ಭಾಗ್ಯವಾಗಿದೆ ಈಗ ಕಾಂಗ್ರೆಸು ಒಂದು ಉದ್ದೇಶ, ಒಂದು ಮಾರ್ಗ ಒಂದು ಮನಸ್ಸಿನಿಂದ ಕಾರ್ಯ ಮಾಡುವಂಥ ಕಾಲವು ಬಂದಿರುವಾಗ ಬೋಸರು ಕಾಂಗ್ರೆಸಿನ ಮೂಲಕ್ಕೆ ಕೊಡಲಿ ಪೆಟ್ಟು ಹಾಕುವ ಪ್ರಯತ್ನ ಮಾಡಿದ್ದಾರೆ ಲ್ಲಿಯಂತೆ ಬಂಗಾಳದಲ್ಲಿಯೂ ಕಾಂಗ್ರೆಸಿನ ಚುನಾವಣೆಗಳು ಜರಗಬೇಕಾಗಿರುವಾಗ, ತಮ್ಮ ಪಕ್ಷದವರು ಈ ಚುನಾವಣೆಗಳಲ್ಲಿ ಬಲಹೀನರಾಗಬಹುದೆಂಬ ಭಯದಿಂದ ಚುನಾವಣೆಗಳೇ ಬಂಗಾಳದಲ್ಲಿ ಜರಗದಂತೆ ಸೂತ್ರಚಾಲನೆ ಮಾಡಿದ್ದಾರೆ ಈಗ 20 ವರ್ಷಗಳಿಂದ ಕಾಂಗ್ರೆಸ ಕಾರ್ಯಕ್ರಮದ ಪ್ರಧಾನ ಅಂಗವಾದ ಪಾನನಿಷೇಧ ಮತ್ತು ಕಾಂಗ್ರೆಸ ಮಂತ್ರಿಗಳ ಕಂದಾಯ ಧೋರಣೆಯನ್ನು ಖಂಡಿಸಿ ಬೋಸರು ಮಹಾ ಅನ್ಯಾಯ ಮಾಡಿದ್ದಾರೆ

ಹಿಂದಿನ ಮುಂದಿನ ಗಾಮಿಗಳಂತೆ ಬೋಸರ ಈ ಕಾರ್ಯ—ಧೋರಣಗಳು ಅವರನ್ನು ಅಜ್ಞಾತವಾಸಕ್ಕೆ ಕಳುಹಿಸಿಕೊಡಬಹುದೋ ಎಂಬ ಸಂದೇಹವು ಅವರ ಹಿತಚಿಂತಕರಿಗೆ ಉಂಟಾಗಿದೆ ಸಮರ್ಥರಾದ ಬೋಸ ಸಹೋದರರು ಈಗಲಾದರೂ ಸಮಯಕ್ಕೆ ಸರಿಯಾಗಿ ತಮ್ಮನ್ನು ತಿದ್ದಿಕೊಂಡು ದೇಶಕ್ಕೆ ಉಪಕಾರ ಮಾಡಬಹುದು. ಸಮಯವು ಇನ್ನೂ ಅವರಿಗೆ ಪೂರ್ಣ ಪ್ರತಿಕೂಲವಾಗಿಲ್ಲ.


**SALT FOR SALARY:**

"IN the ancient Roman army every soldier was given a periodical allowance for purchasing salt with which to season his food so that he could carry it with him for a long period, if necessary. This was called a 'SALARIUM', which means 'SALT ALLOWANCE'. From this latin word derives the English word 'SALARY'. The very word 'SALARY' should therefore remind you that you should not spend it all immediately. A portion at least should be 'SALTED' i. e. preserved for future use. A BANK ACCOUNT will help you

***RESOURCES OF A CRORE***

Estd. 1906.

**CANARA BANK LIMITED.**

Historical Ad Series No 3

**THE PIE-MONEY BANK LTD.**

Maidan Road MANGALORE

Undertakes all kinds of Banking Business. Current account at 2½% per annum Savings Bank Deposits at 4½% per annum

**FIXED DEPOSITS**

For 2 Years 5% 1 Year 4½% For 6 months 4% 3 months 3½%

Auction [illegible] ranging from Rs 100/ to Rs 5000/ run regularly on systematic lines. Unique Banking facilities to Businessmen and interested Public

*Apply for particulars—*

K. R. GURU, *Managing Director*

**U. K. BHUJANGA NAYAK**

**CLOTH COMMISSION AGENT**

**SHEVAPET, SALEM**

**ಯು. ಕೆ. ಭುಜಂಗ ನಾಯಕ್,**

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್** (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ

ಕೇವಲ ಕೆಲವೇ ಪ್ರತಿಗಳು ಉಳಿದಿವೆ ಬೆಲೆ ರೂ. 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ ನ್ಯಾಚುರಸ್ಕರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚಿ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ. ಕ

# ಸಿನೆಮಾ ಪುಟ

## ರೂಪರಾಣೀ ನಾಸೀಮ್

ಭಾರತದ ಸಿನೆಮಾ ನಟಿಗಳಲ್ಲಿ ಅತ್ಯಂತ ಸುಂದರಿಯಾಗಿರುವಳು ಯಾರು ಎಂಬ ವಿಷಯವು ಈಗಾಗಲೇ ನಿರ್ಣಯವಾಗಿದೆ! ಸಿನೆಮದ ಕುರಿತು ಹೆಚ್ಚಿನ ಅನುಭವವಿಲ್ಲದ ಜನರಿಗಾದರೂ, ರೂಪರಾಣಿಯೆನಿಸಿದ ಅಸುರ ಸುಂದರಿ ನಾಸೀಮಳ ಪರಿಚಯವು ಇದ್ದೇ ಇದೆ.

### ಸಿನೆಮಾ ಲೋಕದಲ್ಲಿ

ಸಿನೆಮಾ ಲೋಕದಲ್ಲಿ ಅತ್ಯಂತ ಪ್ರಶಸ್ತಿಯನ್ನು ಹೊಂದಬೇಕಾದರೆ ಕೇವಲ ರೂಪವಮಾತ್ರದಿಂದ ಏನೂ ಪ್ರಯೋಜನವಿಲ್ಲ. ಅಲ್ಲಿ ಕಲಾಭಿಜ್ಞತೆಯೂ ಬೇಕು ಅಂತರಂಗ ಬಹಿರಂಗಗಳು ಸುಂದರಪೂರ್ಣವಾಗಿ ಭಾಸ್ವರವಾಗಿರಬೇಕು. ನಾಸೀಮಳು ಚಲಚ್ಚಿತ್ರಲೋಕದಲ್ಲಿ ಇಂದು ಪಡೆದ ಈ ಪ್ರಶಸ್ತಿಯೆಂದರೆ ಅದು ಆಕೆಯ ನಿಶ್ಚಲ ನಿಷ್ಠೆಯುದ ನಿರಂತರ ಶ್ರಮದ ಪರಿಣಾಮ ಮಾತ್ರವಾಗಿದೆ.

ಆಶ್ಚರ್ಯಗೊಳ್ಳಬೇಕು ಇಂದಿಗೂ ಆಕೆ ವಿದ್ಯಾರ್ಥಿನಿಯಾಗಿದ್ದ ಅಂದಿನ ದಿನಗಳ ಜೀವನ ದೃಷ್ಟಿಯನ್ನು ಬದಲಾಯಿಸಿಲ್ಲ. ಆಕೆ ಆಶಾವಾದಿನಿ ಸುಖದರ್ಶಿನಿ ಇದ್ದುದರಲ್ಲಿ ಪ್ರತಿಯೊಂದರಲ್ಲಿಯೂ ತೃಪ್ತಿಪಡುವವಳು. ಆಕೆ ಸ್ವಾರ್ಥಿಯಲ್ಲ. ಇತರ ಯಾವುದೇ ನಟಿಯ ಏಳಿಗೆಯ ವಿಷಯದಲ್ಲಿ ಒಂದಿಷ್ಟೂ ಮತ್ಸರಗೊಳ್ಳುವುದಿಲ್ಲ.

೧೯೧೯ನೇ ಇಸವಿ ಜನವರಿ ೨ನೇ ದಿನ ಆಕೆ ಡಿಲ್ಲಿಯಲ್ಲಿ ಜನ್ಮಿಸಿದಳು. ಡಿಲ್ಲಿಯ ಕ್ವೀನ್ ಮೇರಿಸ್ ಹೈಸ್ಕೂಲಲ್ಲಿ ವಿದ್ಯಾಭ್ಯಾಸವಾಯಿತು. ಉತ್ತಮ ಸಂಗೀತಗಾರಳೆನಿಸಿದ್ದ ಆಕೆಯ ತಾಯಿ ಶಾಮಶಾದ್ ಬಾಯಿಯಿಂದಲೇ ಅವಳಿಗೆ ಸಂಗೀತದ ಮೊದಲ ಪಾಠವಾಯಿತು. ಇಂಗ್ಲಿಷ್ ಹಿಂದಿ ಉರ್ದು ಮತ್ತು ಪರ್ಶಿಯನ್ ಭಾಷೆಗಳಲ್ಲಿ ಆಕೆಯು ಪಾರಂಗತಳಾಗಿರುವಳು.

### ವಿಜಯ ಮಾರ್ಗದಲ್ಲಿ

ಸಿನೆಮಾ ಜಗತ್ತಿನಲ್ಲಿ ಆಕೆಯ ವಿಜ



ಯಾವುದೇ ಸಿನೆಮಾ ನಟಿಯಾಗಲಿ ಆಕೆಯ ಜೀವನವು ನಾವು ಕಲ್ಪಿಸುವಂತೆ ಅಷ್ಟು ಸೌಭಾಗ್ಯಮಯವಾಗಿರುವುದಿಲ್ಲ. ಪ್ರತಿ ಮುಂಜಾನೆ ಆರುಗಂಟೆಗೆ ಹಾಸಿಗೆ ಬಿಟ್ಟು ಎದ್ದವಳು ಸೂರ್ಯನು ಮುಳುಗುವಷ್ಟರವರೆಗೆ ನಾಸಿಮಳಿಗೆ ನಿಮಿಷ ವಿಶ್ರಾಂತಿಯೆಂಬುದೇ ಇರುವುದಿಲ್ಲ. ಸ್ಟುಡಿಯೊಕ್ಕೆ ಅವಳು ಪ್ರಾತಃಕಾಲಕ್ಕೆ ಹೋದರೆ ರಾತ್ರಿಯ ಕಾಲದ ವರೆಗೆ ಆಕೆ ಅಲ್ಲಿಂದ ಬೇರೆ ಮರಳುವುದಿಲ್ಲ. ಹೆಚ್ಚಾಗಿ ನಟಪ್ರವೃತ್ತಿಯಲ್ಲಿರುವವನೆಂದರೆ 'ಸಮಯ ಸಂಹಾರಕ'ರೆಂದೇ ಪ್ರಸಿದ್ಧಿಯಿದೆ. ಆದರೆ ಆಕೆಗೆ ಅದು ಏನೆಂದು ಗೊತ್ತಿರುವುದಿಲ್ಲ.

### ಸರಳಜೀವನ

ಆಕೆಯದು ಸರಳಜೀವನ. ಸ್ವತಃ ಅಡಿಗೆಮಾಡಿಕೊಳ್ಳುತ್ತಾಳೆ. ಬಿಡುವಿದ್ದಾಗ ಓದನಲ್ಲಿ ಹೊತ್ತುಕಳೆಯುತ್ತಾಳೆ. ಆದರೆ ತನ್ನ ಕುರಿತು ಅಭಿಮಾನ ಗೊಳ್ಳುವುದಿಲ್ಲ. ಕುದುರೆ ಸವಾರಿಯಲ್ಲಿ ಆಕೆಗೆ ಬಲು ಇಷ್ಟ. ಆಕೆಯ ಪರಿಚಯವನ್ನು ಮಾಡಿದಾತನು ಯಾರಾದರೂ ಅವಳ ನಿರ್ಮಲ ಜೀವನ ಸರಳನಡತೆಗಳಿಂದ ಯವಂತಳೆನಿಸಿ ದಿನದಿಂದ ದಿನಕ್ಕೆ ಅಧಿಕಾಧಿಕ ಪ್ರಶಂಸಾಪಾತ್ರಳಾದಳು. ಆಕೆ ಮೊದಲ ಅಭಿನಯಿಸಿದ ಚಿತ್ರವು ಹೇಮ್ಲೆಟ ಅಥವಾ 'ಖೂನ್ ಕಾ ಖೂನ್' ಎಂಬ ಪೂನದಮ್ಯೇಜ್ ಪಿಲ್ಮ್ ಕಂಪೆನಿಯ ಚಿತ್ರ. ಆ ಮೊದಲ ಯತ್ನದಲ್ಲಿಯೇ ಕಲಾವಿದರು ಅವಳಲ್ಲಿ ಮುಂದಿನ ಯೋಗ್ಯತೆಯನ್ನು ಮನಗಂಡಿದ್ದರು. ಎರಡನೆಯ ಆಕೆಯ ಚಿತ್ರವು ಮಿನರ್ವಾ ಚಲಚ್ಚಿತ್ರ ಕಂಪನಿಯ 'ಖಾನ್ ಬಹದ್ದೂರ್' ಎಂಬುದು. ಅದರ ಪ್ರಸಿದ್ಧ ನಿರ್ದೇಶಕರಾದ ಸೋಹ್ರಾಬ್ ಮೋಡಿಯವರು ಆಕೆಯ ಅನುಪಮ ಶಕ್ತಿಯನ್ನು ಮನಗಂಡರು. ನಾಸೀಮಳ ಅತ್ಯಧಿಕ ಯಶಸ್ವಿತೆಯಲ್ಲಿ ಬಹುಪಾಲು ಕೃತಜ್ಞತೆಯು ಅವಳನ್ನು ಈ ರೀತಿಯಾಗಿ ತರಬೇತಿ ಮಾಡಿದ ನಿರ್ದೇಶಕ ಮೋಡಿಯವರಿಗೆಸಲಬೇಕಾಗಿದೆ. ಇಂದು ಮಿನರ್ವಾ ಚಿತ್ರಗಳು ಜನಪ್ರಿಯವಾಗಿದ್ದರೆ, ನಾಸೀಮಳ ಅಭಿನಯ ಮೋಡಿಯವರ ನಿರ್ದೇಶಕತನ ಇವುಗಳ ಉತ್ಕೃಷ್ಟ ಕಲಾ ನೈಪುಣ್ಯಗಳಿಂದ.

### ವಿವಿಧ ಜೀವನಾಭಿನಯ

ನಾಸೀಮಳು ಬೇರೆ ಬೇರೆ ತರದ ಜೀವನಾಭಿನಯದಲ್ಲಿ ಸಮರ್ಥಳಾದ ನಟಿಯಾಗಿದ್ದಾಳೆ. ಇಂತಹ ಶಕ್ತಿಯು ಎಲ್ಲಾ ನಟಿಯರಿಗೂ ಇರುವುದಿಲ್ಲ. 'ಖಾನ್ ಬಹದ್ದೂರ'ದಲ್ಲಿ ಒಬ್ಬ ಸಾಮಾನ್ಯ ಮುಸ್ಲಿಂ ತರುಣಿಯ ಜೀವನವನ್ನು ಮನಕರಗುವಂತೆ ಅಭಿನಯಿಸಿದ್ದಾಳೆ. 'ಮೀಠಾ ಜಹರ್'ನ ಒಬ್ಬ 'ಹಿಂದೂ ಯುವತಿ'ಯ ಕರುಣಾಜನಕ ಚಿತ್ರವನ್ನು ನಟಿಸಿ ತೋರಿಸಿದ್ದಾಳೆ. 'ವಾಸಂತಿ' ಮತ್ತು 'ವಿವಾಹ ಭಂಗ' ಚಿತ್ರಗಳಲ್ಲಿ ಆಕೆ ಜೀವನ ಸಂಗ್ರಾಮದ ಧೈರ್ಯವನ್ನು ತೋರಿಸಿದ್ದಾಳೆ. 'ಪುಕಾರ್'ನಲ್ಲಿ ಅವಳ ಸಂಪೂರ್ಣ ಕಲಾಶಕ್ತಿಯು ಎದ್ದು ಮೂಡಿದೆ. ಅದರಲ್ಲಿ ಜಹಾಂಗೀರನ ಪ್ರಣಯ. ಪಕ್ಷೀ ನೂರಜಹಾನಳ ಪಾತ್ರವನ್ನು ಅಭಿನಯಿಸಿದ ಆಕೆಯು ಅಖಿಲ ಭಾರತದಲ್ಲಿ ಉತ್ಕೃಷ್ಟ ನಟಿಯಾಗಿ ಪ್ರಸಿದ್ಧಳಾದಳು.

ಮುಂದಿನ ಅವಳ ಚಿತ್ರವು 'ಅಜಯ' ಎಂಬುದು ಅದರಲ್ಲಿ ಒಬ್ಬ ನರ್ತಕಿಯ ಪಾತ್ರವನ್ನು ಆಕೆ ಅಭಿನಯಿಸುವಳೆಂದು ತಿಳಿಯಲು ವಾಚಕರು ಸಂತೋಷಪಡಬಹುದು. ಆ ಸುರಸುಂದರಿ ನಾಸೀಮಳ ಅನುಪಮ ವೈಯಾರ ವೈಖರಿಯ ನಾಟ್ಯ ಭಂಗಿಯು ರಸಿಕರ ಮನವನ್ನು ಖಂಡಿತವಾಗಿಯೂ ಆನಂದ ಕಲ್ಲೋಲಗಳಿಂದ ನರ್ತಿಸುವಂತೆ ಮಾಡದಿರದು!


## ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ತಕ್ಕುದಾದ ಸುಲಭ ರೀತಿಯಲ್ಲಿ ನಾಶಪಡಿಸಿ. ಕುದು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮುದ್ದಣ ಕಾಲ ಕುಂಟು ಮುಂತಾದ ಭಯಂಕರ ವ್ರಣಗಳಿಗೂ ಸುಖಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯು ನೋವನ್ನೇ ಬೇಗ ಜೀವವಾಗಿ ನೋವನ್ನೂ ಬಾತುಕೆಯನ್ನೂ ಗುಣಮಾಡುತ್ತದೆ.

ಕುಟಿಕೂರಾ ಮುಲಾಮು (cuticura ointment) ಬೇರೆ ಯಾವ ಕ್ರೀಮುಗಳ ತದ್ವಿರುದ್ಧ. ಇದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿ. ಕುಟಿಕೂರಾ (cuticura ointment) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು. ಎಂಟು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು.

ಕುಟಿಕೂರಾ ಮುಲಾಮನ್ನು (cuticura ointment) ಗಜ್ಜಿ, ಕೆರೆ, ವ್ರಣ ಹುಣ್ಣು ಮುದ್ದು ವಿಷಕಾರಿಯಾಯ ಉರಿ ಮುಂತಾದ ಎಲ್ಲಾ ಚರ್ಮರೋಗಗಳನ್ನೂ ಗುಣಪಡಿಸುತ್ತದೆ.




ಎಲ್ಲಾ ಕೆಮಿಸ್ಟರಲ್ಲಿಯೂ
ಅಂಗಡಿಗಳಲ್ಲಿಯೂ
ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮ್
**Cuticura Ointment**



**The Auttur & Jawahar Bank, Limited.**

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು    ಬ್ರೇಂಚ್ ಸೆಂಟ್ರಲ್ ಮಾರ್ಕೆಟ್

ರಿಜಿಸ್ಟರ್ಡ್ ಮೂಲಧನ ರೂ 1,00 000    ಕೊಡಲ್ಪಟ್ಟ ಮೂಲಧನ ರೂ 50,100

ಎಲ್ಲಾ ವಿಧದ ಬೇಂಕ್ ವ್ಯವಹಾರಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವ್ಯವಹಾರಗಳು ನಡೆಯುವವು.    ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2. ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½%    ನಿರಖು ಠೇವಣಾತಿ 12 ತಿಂಗಳಿಗೆ 4½%

„ 6 ತಿಂಗಳಿಗೆ 4%    „ 24 ತಿಂಗಳಿಗೆ 5

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್

ಹಣದಲ್ಲಿ, ಗುಣದಲ್ಲಿ, ಕುಲದಲ್ಲಿ, ಛಲದಲ್ಲಿ, ಅಭಿಮಾನದಲ್ಲಿ, ಬುದ್ಧಿನೀತಿಗಳಲ್ಲಿ—ಹೀಗೆ ಜೀವನದ ಎಲ್ಲಾ ವಿಧದ ಉತ್ತಮ ಆದರ್ಶಗಳಲ್ಲಿಯೂ 'ಸಿರಿವಂತ'ರಾಗಿರುವವರು ಕೇವಲ ಕೆಲವೇ ಮಂದಿ ಮಾತ್ರ. ಹಾಗಿದ್ದರೂ ಕೂಡಾ, ಕುಲದ ಗೌರವವನ್ನೂ, ಛಲ ಅಭಿಮಾನಗಳನ್ನೂ, ಬುದ್ಧಿ ವೈಭವವನ್ನೂ, ಸಿರಿಯ ಸೌಭಾಗ್ಯವನ್ನೂ—ಇವುಗಳನ್ನೆಲ್ಲಾ ದೇಶಸೇವೆಯ ಸಲುವಾಗಿ, ಅಸಂಖ್ಯಾತ ದರಿದ್ರ ದೇಶಬಾಂಧವರ ಉದ್ಧಾರದ ಸಲುವಾಗಿ, ಧಾರೆಯೆರೆದ ಮಹಾನುಭಾವರು ಕಾಣಸಿಗುವುದು ಬಹಳ ಅಪರೂಪ. ಅಂತಹವರಲ್ಲಿಯೂ, ತನ್ನ ಜೀವನದ ವರೆಗೆ ತನು, ಮನ, ಧನಗಳಿಂದ ಜನತಾ ಸೇವೆಯನ್ನು ಮಾಡಿ, ದೇಹವಿಳಿಸಿದ ಬಳಿಕ, ದಿನಗಳು ದೂರಸರಿದಂತೆ, ಅಂತಹವರ ಸ್ಮರಣೆಯೂ ದೂರವಾಗುತ್ತ ಹೋಗುವುದಲ್ಲದೆ, ರಾಷ್ಟ್ರದ ಚಿತ್ತಭಿತ್ತಿಯಲ್ಲಿ ತನ್ನ ಸ್ಮರಣೆಯನ್ನು ಚಿರನವೀನವಾಗುವಂತೆ ಮಾಡಿದ ಮನುಷ್ಯರಂತೂ ಎಷ್ಟು ಮಂದಿಯಿದ್ದಾರೆ? ಪಂಡಿತ ಮೋತಿಲಾಲ ನೆಹರುಗಳೊಬ್ಬರು ಮಾತ್ರ. ಇದ್ದಾಗ ದೇಶಸೇವೆಗಾಗಿ ಹೋರಾಡಿ, ಸತ್ತ ಮೇಲಾದರೂ! ಅಂತರ್ರಾಷ್ಟ್ರೀಯ ಕೀರ್ತಿಯನ್ನು ಗಳಿಸಿದ ಮಗನೊಬ್ಬನನ್ನು ರಾಷ್ಟ್ರದ ಕಾಣಿಕೆಯಾಗಿ ಸಲ್ಲಿಸಿದ್ದು ಮಾತ್ರವಲ್ಲದೆ, ಇಂದ್ರನರಮನೆಯನ್ನಾದರೂ ವೈಭವದಲ್ಲಿ ಸೋಲಿಸುವಂತೆ ಇರುವ ತನ್ನ ಸ್ವಕೀಯ 'ಆನಂದಭವನ'ವನ್ನೇ, ರಾಷ್ಟ್ರಕ್ಕೆ ದಾನಮಾಡಿ ಕಾಂಗ್ರೆಸಿಗೆ 'ಸ್ವರಾಜ್ಯದ ಭವನ'ವೊಂದನ್ನು ಉಚಿತವಾಗಿತ್ತು ಉದಾರ ಕೀರ್ತಿಶಾಲಿಗಳಾದರು.

ಹೀಗೆ ತನ್ನ ಸಂಪತ್ತು ರಕ್ತಗಳನ್ನೇ ಪಂಡಿತ ಮೋತಿಲಾಲರು ಭಾರತಮಾತೆಗೆ ಕಾಣಿಕೆಯಿತ್ತು ಮಾಸಿಹೋಗದ ಕೀರ್ತಿಯನ್ನು ಗಳಿಸಿ ಚಿರಸ್ಮರಣೀಯರಾದರು.

### ಜನ್ಮವೀರರು

"ಸ್ವತಂತ್ರಳಾದ ಮಾತೆ ಭಾರತೀಯ ಮಡಿಲಲ್ಲಿ ನಾನು ಸಾಯಬೇಕು; ನಾನು ತನ್ನ ಕೊನೆಯ ನಿದ್ರೆಯನ್ನು ಬಂಧನ ಮುಕ್ತವಾದ ಸ್ವತಂತ್ರ ಭೂಮಿಯಲ್ಲಿಯೇ ಮಾಡುವಂತಾಗಬೇಕು" ಹೀಗೆಂದು ಒಮ್ಮೆ ಉಚ್ಚರಿಸಿದ್ದರು. ಪಂಡಿತಮೋತಿಲಾಲರು! ನಿಜವಾಗಿಯೂ ಅವರು ರಾಜವೈಭವದಿಂದ ಮೆರೆದು ಭರತ ಮಾತೆಯ ಕರೆ ಬಂದಾಗ, ತನ್ನ ರಾಜಗುಣದ ಧೈರ್ಯಪರಾಕ್ರಮಗಳನ್ನು ರಾಷ್ಟ್ರ ಸೇವೆಯಲ್ಲಿ ಉಪಯೋಗಿಸಿ ಕೃತಾರ್ಥರಾದರು. ಪಂಡಿತಮೋತಿಲಾಲರು ಮಾಡಿದ ರಾಷ್ಟ್ರಸೇವೆಯ ಪರಿಮಾಣವು ಇಷ್ಟಿಷ್ಟೆಂದು ಲೆಕ್ಕಿಸಿ ಹೇಳುವುದು ಸಾಹಸದ ಮಾತು.

ಮೋತಿಲಾಲರು ೧೮೬೧ನೇ ಇಸವಿಯ ಮೇ ತಿಂಗಳ ೬ರಂದು ಆಗ್ರಾದಲ್ಲಿ ಹುಟ್ಟಿದರು. ಅದೇ ದಿನ ಭಾರತದ ಇತಿಹಾಸದಲ್ಲಿ ಎರಡು ಅದ್ವಿತೀಯ ವಿಭೂತಿ ಪುರುಷರ ಜನ್ಮವಾಯಿತು. ಇವರೊಬ್ಬರು ಕವೀಂದ್ರರವೀಂದ್ರರು. ಆ ದಿನ ಹುಟ್ಟಿದ ಅವರೀರ್ವರೂ ಲೋಕಮಾನ್ಯ ವ್ಯಕ್ತಿಗಳಾಗಿ ಪ್ರಸಿದ್ಧಿ ಹೊಂದಿದರು!

ಜೀವಜ್ಯೋತಿಗಳು:

# ಪಂಡಿತ ಮೋತೀಲಾಲ ನೆಹರು

[ಲೇಖಕ: ಕಯ್ಯಾರ ಕಿಞ್ಞಣ್ಣ ರೈ, ವಿದ್ವಾನ್]

[ಭಾರತದ ಸತ್ಯಾಗ್ರಹ ಆಂದೋಲನದಲ್ಲಿ ಪ್ರಚಂಡವಾಗಿ ಕಾದಾಡಿ ಹೆಸರಾಂತ ಯೋಧನೆನಿಸಿ ಜನತೆಯ ಭಕ್ತಿ ವಿಶ್ವಾಸಗಳಿಗೆ ಪಾತ್ರನೆನಿಸಿದ, ದಿವಂಗತ ಪಂಡಿತ ಮೋತಿಲಾಲ ನೆಹರುಗಳ ವಾರ್ಷಿಕ ದಿನವು ಇದೇ ತಿಂಗಳ ಆರರಂದು ಆಚರಿಸಲ್ಪಟ್ಟಿತು. ಇಂದಿನ ಭಾರತದ ಪ್ರಸಿದ್ಧ ರಾಜಕೀಯ ಮುಂದಾಳುಗಳಾಗಿರುವ ಪಂಡಿತ ಜವಾಹಿರಲಾಲ ನೆಹರುಗಳ ಪೂಜ್ಯ ಪಿತೃಗಳಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮ ರಂಗದಲ್ಲಿ ತನ್ನ ಪ್ರಾಣವನ್ನು ಧನಸಂಪತ್ತು ಸರ್ವಸ್ವವನ್ನು ಬಲಿದಾನ ಮಾಡಿದ ವಿಭೂತಿ ಪುರುಷರ ಜೀವನ ಚರಿತ್ರೆಯು ನಮಗೆ ಚಿರಸ್ಮರಣೀಯವಾಗಿದೆ.]

### ವಿದ್ಯಾರ್ಥಿ ಜೀವನದಲ್ಲಿ

"ಅವರು ಬರಿಯಪುಸ್ತಕ ಪಟುವಾಗಿರದೆ, ಆಟಗಳಲ್ಲಿಯೂ ಸಾಹಸದ ಕಾರ್ಯಗಳಲ್ಲಿಯೂ ಹೆಚ್ಚು ಆನಂದರಾಗಿದ್ದರು. ಕಾಲೇಜಿನಲ್ಲಿದ್ದ ಪುಂಡ ಹುಡುಗರ ಮುಖಂಡರಾಗಿದ್ದರು. ಅವರು ಬಿ. ಎ; ಪರೀಕ್ಷೆಯಲ್ಲಿ ಒಂದು ಪ್ರಶ್ನಾ ಪತ್ರಿಕೆಗೆ ಸರಿಯಾಗಿ ಉತ್ತರ ಬರೆಯಲಿಲ್ಲವೆಂದು ಇತರ ಪರೀಕ್ಷಾ ಭಾಗಗಳಿಗೆ ಕುಳಿತುಕೊಳ್ಳಲೇ ಇಲ್ಲ. ಆ ಮೇಲೆ ಮುಂದೆ ಬಿ. ಎ;ಯನ್ನು ಸಂಪೂರ್ಣ ಮಾಡದೆ, ಕಾನೂನನ್ನು ಅಭ್ಯಾಸಮಾಡಿ, ನ್ಯಾಯವಿಶಾರದರಾಗಿ ಬಹಳ ಪ್ರಶಸ್ತಿಯನ್ನು ಪಡೆದರು. . . . ಅದರಲ್ಲಿ ಅವರು ದಿನದಿಂದ ದಿನಕ್ಕೆ ಜಯದಿಂದ ವಿಜಯದ ಮಾರ್ಗದಲ್ಲಿ ಮುಂದಡಿಯಿಟ್ಟರು; ಹಾಗೆ ಮಾಡಿ ಅತುಲ ಕೀರ್ತಿಯನ್ನೂ, ಅಸಂಖ್ಯ ಧನವನ್ನೂ, ತನ್ನ ವ್ಯಕ್ತಿತ್ವದಿಂದಲೇ ಗಳಿಸಿದರು" ಹೀಗೆಂದು ತನ್ನ ಪೂಜ್ಯ ಪಿತೃವಿನ ಕುರಿತು ಪಂಡಿತಜವಾಹರಲಾಲರು ತನ್ನ ಆತ್ಮ ಕಥೆಯಲ್ಲಿ ವರ್ಣಿಸಿರುವರು.

### ಮಂದಪಕ್ಷದಿಂದ ಉಗ್ರಪಕ್ಷಕ್ಕೆ

ಅವರು ಮೊದಲಿನಿಂದಲೇ ರಾಷ್ಟ್ರದ ಅಭಿಮಾನಿಗಳಾಗಿದ್ದರೂ, ಮಂದಪಕ್ಷದವರಾಗಿದ್ದರು. ಅಂದಿನ ಕಾಲದ ತಿಲಕರೇ ಮೊದಲಾದ ಉಗ್ರಗಾಮಿಗಳ ಧೋರಣೆಯು ಅವರಿಗೆ ಸೇರುತ್ತಲಿರಲಿಲ್ಲ. ಆದರೆ ದಿನಗಳು ಹೋದಂತೆ ಅವರ ರಾಜಕೀಯ ಪ್ರಲಯವು ತೀಕ್ಷ್ಣವೂ ವಿಶಾಲವೂ ಆಗುತ್ತ ಬಂತು. ನಮ್ಮ ತಲೆ ಮೇಲೆ ನಿಂತು, ನಮ್ಮನ್ನು ಹಿಡಿದೊತ್ತುತ್ತಿರುವ ಆಳರಸರ ಅಧಿಕಾರದ ಆಡಳಿತೆಗೆ ವಿರುದ್ಧ ಅವರ ವಿಚಾರವು ಕೆರಳನಿಂತಿತು. ೧೯೧೦ರಲ್ಲಿ ಲಕ್ನೋ ಕಾಂಗ್ರೆಸಿನಲ್ಲಿ, ಕಾಂಗ್ರೆಸು ಸಂಯುಕ್ತ ಕಾಂಗ್ರೆಸು—ಲೀಗುಯೋಜನೆಯನ್ನು ಮಾಡಿದಾಗ ಅವರು ಕಾಂಗ್ರೆಸು ಪಕ್ಷಕ್ಕೆ ಸೇರಿದ್ದರು. ಆ ಮೇಲೆ ಶ್ರೀಮತಿ ಬೆಸಂಟಮ್ಮನವರು ಹೋಂರೂಲು ಚಳವಳಿ ಮೊದಲಾದವುಗಳಿಂದ ಅವರು ಮಂದ ಪಕ್ಷದ ತನ್ನ ಅಭಿಪ್ರಾಯದಿಂದ ತೀವ್ರ ಬದಲಾವಣೆಗೊಂಡರು. ೧೯೧೯ರಲ್ಲಿ ಪಂಜಾಬಿನಲ್ಲಿ ಆದ ಅತ್ಯಾಚಾರವು ಅಖಿಲಭಾರತವನ್ನೇ ನಡುಗಿಸಿ ಬಿಟ್ಟಾಗ, ಪಾರತಂತ್ರ್ಯದ ಮರಂತ ಪ್ರಭುತ್ವವನ್ನು ಕಂಡ ಅವರು ತನ್ನ ಉದ್ಯೋಗಕ್ಕೆ ತಿಲಾಂಜಲಿಯೆರೆದು ರಾಷ್ಟ್ರೀಯ ರಂಗದಲ್ಲಿ ಪ್ರತ್ಯಕ್ಷ ಭಾಗವಹಿಸಲು ಕೆರಳಿದ ಸಿಂಹನಂತೆ ಮುಂದೆ ಬಂದರು. "ಸ್ವತಂತ್ರ"ವೆಂಬ ಆಂಗ್ಲ ದೈನಿಕ ಪತ್ರಿಕೆಯೊಂದನ್ನು ಅಲ್ಲಾಬಾದಿನಲ್ಲಿ ಸ್ಥಾಪಿಸಿ, ಸ್ವಾತಂತ್ರ್ಯ ಸಂದೇಶವನ್ನು ರಾಷ್ಟ್ರದ ಮೂಲೆಮೂಲೆಗೆ ಸಾರಿದರು. ೧೯೧೯ರಲ್ಲಿ ಕಾಂಗ್ರೆಸಿನ ಅಧ್ಯಕ್ಷಪೀಠವು ಮೋತಿಲಾಲರಿಗೆ ದೊರಕಿತು. ಆ ಮೇಲೆ ದೇಶಬಂಧು ದಾಸರ ಧುರೀಣತೆಯಿಂದ ಸ್ಥಾಪಿತವಾದ ಸ್ವರಾಜ್ಯ ಪಕ್ಷಕ್ಕೆ ಸೇರಿದ ಅವರು ಕಾಂಗ್ರೆಸು, ಕೌನ್ಸಿಲು ಪ್ರವೇಶಮಾಡಬೇಕೆಂದು ಪಾಲಿಸಿದರು.

### ನೆಹರೂ ವರದಿ

ಗಾಂಧಿಜಿ ಮತ್ತು ಮೋತಿಲಾಲ ನೆಹರುಗಳೊಳಗೆ ಒಮ್ಮೆ ದೀರ್ಘ ಸಂಭಾಷಣೆಯು ನಡೆಯಿತು. ಕೌನ್ಸಿಲು ಪ್ರವೇಶದ ಸೂಕ್ಷ್ಮ ಸೂಕ್ಷ್ಮಾಂಶಗಳ ಕುರಿತು ಅವರೊಬ್ಬರು ಬಹಳ ಕಾಲ ವಿವಾದಿಸಿದರು. ಗಾಂಧಿಜಿಯವರು ಕೌನ್ಸಿಲು ಪ್ರವೇಶದ ವಿರುದ್ಧವಾಗಿ ಮಾತನಾಡಿದರು. ಮೋತಿಲಾಲರು ತನ್ನ ಅಭಿಪ್ರಾಯವನ್ನು ಅಂದು ಸಾಮಂತ ಸ್ವರಾಜ್ಯವೇ ಭಾರತದ ಗುರಿಯಾಗಿ ವಿವರಿಸಿ ಹೊಸ ರಾಜ್ಯಘಟನೆಯೊಂದನ್ನು ತಯಾರಿಸಿದರು. ಅದನ್ನು ಕಾಂಗ್ರೆಸು ಅಂಗೀಕರಿಸಿತು. ೧೯೨೯ನೇ ದಶಂಬರ ೩೧ರಲ್ಲಿ ಬ್ರಿಟಿಷ್ ಸರಕಾರವು ಒಪ್ಪಬೇಕೆಂದು ಕಾಂಗ್ರೆಸು ಅದನ್ನು ಸರಕಾರದ ಮುಂದಿರಿಸಿತು.

ಅದಾದ ಮೇಲೆ ೧೯೩೦ರಲ್ಲಿ ಗಾಂಧಿಜಿಯವರು ಐತಿಹಾಸಿಕ ಪ್ರಸಿದ್ಧವಾದ ದಂಡಿಗೆ ಹೊರಟರು! ಮೋತಿಲಾಲರು ತಮ್ಮ ಆನಂದ ಭವನವನ್ನು ಆಗಲೇ ಕಾಂಗ್ರೆಸಿಗಾಗಿ ದಾನ ಮಾಡಿದರು! ಅದು 'ಸ್ವರಾಜ್ಯಭವನ'ವೆಂದು ಮುಂದೆ ಪ್ರಸಿದ್ಧವಾಯಿತು. ಆಗ ಜವಾಹಿರಲಾಲರು ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು! ತಂದೆಯು ದಾತೃವಾಗಿಯೂ, ಮಗನು ರಾಷ್ಟ್ರದ ಪ್ರತಿನಿಧಿಯಾಗಿ ಆ ದಾನವನ್ನು ಅಂಗೀಕರಿಸುವವನಾಗಿಯೂ, ಹೀಗೆ ಅಪೂರ್ವ ಸಂದರ್ಭದಲ್ಲಿ, ಅಪೂರ್ವ ರೀತಿಯಲ್ಲಿ ರಾಷ್ಟ್ರದ ಕಾಣಿಕೆಯನ್ನರ್ಪಿಸಿದ ಆ ಇಬ್ಬರೂ ತಂದೆ ಮಕ್ಕಳ ಉದಾರತೆಯು ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಲಿಖಿತವಾಗಿದೆ.

### ಗಾಯಗೊಂಡ ಸಿಂಹ

೧೯೩೦ ಜೂನ್ ೩೦ರಂದು ಮೋತಿಲಾಲ ನೆಹರುಗಳನ್ನು ಸರಕಾರವು ಬಂಧಿಸಿತು! ಅವರಿಗೆ ಆರು ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು. ಅರಮನೆಯ ಸುಖಜೀವನದಂತಹ ಸೌಭಾಗ್ಯದಿಂದವರು ಸೆರೆಮನೆಯ ಸಂಕಷ್ಟದಿಂದ ಅಸೌಖ್ಯಕ್ಕೀಡಾದರು. ಸೆರೆಮನೆಯಲ್ಲಿಯೇ 'ಅವರು ಹಾಸಿಗೆ ಹಿಡಿದರು! ಪರಿಸ್ಥಿತಿಯು ವಿಷಮವಾಗಲು, ೧೯೩೦ ಆಗಸ್ಟು ೧೬ರಂದು ಸರಕಾರವು ಅವರನ್ನು ಬಿಡುಗಡೆ ಮಾಡಿತು. ಆದರೆ ಪ್ರಕೃತಿಯು ದಿನದಿಂದ ದಿನಕ್ಕೆ ಕೆಡುತ್ತಾ ಹೋಗಿ ೧೯೩೧ನೇ ಇಸವಿ ಫೆಬ್ರವರಿ ೬ರಂದು ಅವರು ತಮ್ಮ ಪಾರ್ಥಿವ ಶರೀರವನ್ನು ತೊರೆದು ರಾಷ್ಟ್ರವನ್ನು ದುಃಖದ ಕಡಲಲ್ಲಿ ಅದ್ದಿ ಕೀರ್ತಿ ಶೇಷರಾದರು.

"ಗಾಯಗೊಂಡ ಮುದಿ ಸಿಂಹದಂತೆ ಅವರು; ಕೊನೆಯ ತನ್ನ ಅಸೌಖ್ಯದ ದಿನದಲ್ಲಿ ಕಾಣುತ್ತಿದ್ದರು" ಹೀಗೆಂದು, ತನ್ನ ಆತ್ಮಚರಿತೆಯಲ್ಲಿ ಜವಾಹರಲಾಲರವರು ಪೂಜ್ಯ ಪಿತೃವಿನವಿಷಯ ಉಲ್ಲೇಖಿಸಿರುವರು.

ಹೀಗೆ ಇಂದಿಗೆ ೯ ವರ್ಷಗಳ ಹಿಂದೆ ಮಹಾ ವಿಭೂತಿ ಪುರುಷರಾದ ಪಂಡಿತ ಮೋತಿಲಾಲ ನೆಹರುಗಳು ಕಣ್ಮರೆಯಾಗಿ ಹೋದರು. ಆದರೆ ಅವರ ನೆನಪು ಎಂದೆಂದೂ ಮಾಸುವ ಹಾಗಿಲ್ಲ. ಅವರ ಕೀರ್ತಿಯನ್ನೂ, ಕುಲದ ಗೌರವವನ್ನೂ ಎತ್ತಿಹಿಡಿದು ನಿತ್ಯನಿರಂತರವಾಗಿ ರಾಷ್ಟ್ರಸೇವೆಯನ್ನು ಸಲ್ಲಿಸುತ್ತಾ ಬರುವ ಅವರ ಏಕಮಾತ್ರ ಪುತ್ರರಾದ ವೀರ ಜವಾಹಿರಲಾಲರೂ, ಅವರ ಪುತ್ರಿ ವಿಜಯ ಲಕ್ಷ್ಮಿ ಪಂಡಿತರೇ ಮೊದಲಾದವರ ಮಕ್ಕಳೂ ಅವರು ದಾನವಾಗಿತ್ತಾ "ಸ್ವರಾಜ್ಯಭವನ" ಇವೆಲ್ಲವುಗಳಿಂದ ಪಂಡಿತ ಮೋತಿಲಾಲರು ತನ್ನ ಸಂಪತ್ತು ರಕ್ತ ಸರ್ವಸ್ವಗಳನ್ನೂ ಭಾರತಮಾತೆಯ ಪಾದಪದ್ಮಗಳಲ್ಲಿ ಭಕ್ತಿಪೂರ್ವಕ ಅರ್ಪಿಸಿ ಹೋಗಿದ್ದಾರೆ! ಅತುಲಸ್ವಾರ್ಥತ್ಯಾಗ ಮಾಡಿದ ರಾಷ್ಟ್ರೀಯ ಮುಖಂಡರಲ್ಲಿ ಭವ್ಯ ಜೀವ ಜ್ಯೋತಿಗಳಲ್ಲಿ, ಪಂಡಿತ ಮೋತಿಲಾಲರ ಹೆಸರು ಪ್ರಥಮ ಗಣನೀಯವೂ, ಪ್ರಾತಃ ಸ್ಮರಣೀಯವೂ ಆಗಿದೆ.


ಸಾವಕಾರ ಶ್ರೀನಿವಾಸರಂಗಪ್ಪೈ

[ ಸ್ಥಾಪನೆ: ಕ್ರಿ. ಶ. 1858 ]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

## The use of Quinine in the fight against Malaria in Algeria.

In 1841, a French general stated in a report about Algeria. 'The only colonies that develop in this country are the cemeteries' This mournful statement referred to the numerous epidemics of malaria, that, in North Africa, undermined the powers of resistance of the native population and the colonists. This general lived at a time prior to that when his compatriot Laveran discovered the presence of the malaria parasite in the blood of malarial sufferers, and the time when Sir Ronald Ross demonstrated that it was the malaria mosquito that ensured the transmission of this malady.

At that time, there was no idea in France of colonising North Africa south of a line drawn from Birkadem to Douera. The Mitidja was looked upon as a great marsh where sickness and death reigned.

The Algeria of to-day is a real monument raised in honour of the perseverance of its French, European and Algerian pioneers. The cleaning of marshes and quinine have almost entirely done away with the dreaded malaria in several parts of the country. The low hills, that were formerly the breeding ground for myriads of malaria mosquitoes, have now become veritable parks that are most prosperous.

Quinine has played a very important part in this struggle against marshes and mosquitoes. Formerly, colonists took very large doses of quinine, but since the publication of the latest recommendations of the Malaria Commission of the League of Nations, the short quinine treatment is applied. This prescription is as follows, to prevent malaria, take 6 grains of quinine per day during the fever season, and to deal with an attack, a dose of 15 grains to 20 grains of quinine daily during 5 to 7 days. On page 125 of its report, issued in 1938, this Malaria Commission stresses the fact that among the anti-malarial drugs, quinine still ranks first in current practice, by reason of its clinical effectiveness and almost complete absence of toxicity, coupled with the widespread knowledge of its use and dosage.

It may be rightly said that in Algeria, the arable lands have been conquered and the rich harvests now obtained are the fruit of prolonged efforts devoted to the fight against the malaria mosquito.

M. Eng No. 206.


ನಿಮ್ಮ ಜೀವನೋಪಾಯವು ಆರೋಗ್ಯವನ್ನವಲಂಬಿಸಿದೆ!




ಆರೋಗ್ಯದ ಪ್ರಥಮ ಸೂತ್ರ

ಪದೇ ಪದೇ ಅನಾರೋಗ್ಯದಿಂದಿರುವ ಮನುಷ್ಯನು ತನ್ನ ಕೆಲಸದಿಂದ ಗೈರುಹಾಜರಿಯಾಗುವನಲ್ಲದೆ ತನ್ನ ಅಮೂಲ್ಯವಾದ ಸಂಬಳವನ್ನು ಕೂಡ ಕಳೆದುಕೊಳ್ಳುವನು. ಇದರಿಂದ ಅವನಿಗೂ ಅವನ ಕುಟುಂಬಕ್ಕೂ ತುಂಬಾ ಕಷ್ಟವಾಗುವುದು. ಆದಕಾರಣ ಪ್ರತೀ ಒಬ್ಬರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಚೆನ್ನಾಗಿ ಕೆಲಸಮಾಡಿ ಉತ್ತಮವಾದ ಸಂಬಳವನ್ನು ಸಂಪಾದಿಸಲು ಎಚ್ಚರದಿಂದಿರಬೇಕು.

ಆರೋಗ್ಯವನ್ನು ಕಾಪಾಡಲು ನಿಮ್ಮ ದೇಹದ ಆಂತರೇಂದ್ರಿಯಗಳು ನಿರ್ಮಲವಾಗಿರಬೇಕು. ಯಾವಾಗಲೂ ಒಂದು ಗ್ಲಾಸು ಉಕ್ಕಿ ಬರುವ ಎಂಡ್ರೂಸ್ ಲವಣವನ್ನು ಸೇವಿಸಿದರೆ ಆಂತರೇಂದ್ರಿಯಗಳು ಸ್ವಚ್ಛವಾಗುವುವು. ಇದು ನಿಮ್ಮ ಹೊಟ್ಟೆಯನ್ನು ನಿರ್ಮಲವಾಗಿರಿಸಿ, ಆರೋಗ್ಯಕ್ಕೆ ಹಾನಿಪ್ರದವಾದ ಮಲಿನ ಪದಾರ್ಥಗಳನ್ನು ಹೊರಗೆಡವುವುದು. ಎಂಡ್ರೂಸ್ ಲವಣವು ನಾಲಗೆ ಮತ್ತು ಬಾಯಿಯನ್ನು ಸಹ ಸ್ವಚ್ಛವಾಗಿರಿಸಿ ಉದರ ರೋಗಗಳನ್ನು ನಿವಾರಿಸಿ ಪಿತ್ತರೋಗವನ್ನೂ ಅಜೀರ್ಣವನ್ನೂ ನಾಶಮಾಡುತ್ತದೆ.

ಎಂಡ್ರೂಸ್ ಲವಣವು ನಿಮ್ಮ ದೇಹದ ಆಂತರೇಂದ್ರಿಯಗಳನ್ನು ನಿರ್ಮಲವಾಗಿರಿಸುತ್ತದೆ ● ರಕ್ತವನ್ನು ತಂಪಾಗಿರಿಸಿ ಶುದ್ಧವಾಗಿರಿಸುತ್ತದೆ ● ಚರ್ಮವನ್ನು ನಿರ್ಮಲವಾಗಿರಿಸುತ್ತದೆ ● ಉದರ ಶ್ಲೇಷ್ಮ, ಮಲಬದ್ಧತೆ ಮೊದಲಾದ ಬಾಧೆಯನ್ನು ನಿಲ್ಲಿಸುತ್ತದೆ ● ಇದು ಅಭ್ಯಾಸವಾಗುವಂತಿಲ್ಲ. ಮಕ್ಕಳಿಂದ ಪ್ರಾರಂಭಿಸಿ ಇಡೀ ಕುಟುಂಬಕ್ಕೂ ಇದು ತಕ್ಕುದಾಗಿದೆ

ಎಂಡ್ರೂಸ್ ಲವಣವು ಈ ಮನುಷ್ಯನಿಗೆ ಮಾಡಿದ ಉಪಕಾರವನ್ನೋದಿರಿ

'ಹತ್ತು ವರ್ಷಕಾಲ ನಾನು ಉದರವೇದನೆ, ಎದೆಯುರಿತದಿಂದ ನರಳಿದೆ. ನಾನು ಪ್ರತಿಯೊಂದು ಮದ್ದನ್ನು ಪ್ರಯೋಗಿಸಿ ನಿರಾಶನಾದೆ. ಕಡೆಗೆ ಎಂಡ್ರೂಸ್ ಲವಣದಿಂದ ಗುಣಪಟ್ಟೆನು'

ಎಂಡ್ರೂಸ್ ಲಿವರ್ ಸೋಲ್ಟ್

ANDREWS LIVER SALT

ನಿಮ್ಮ ದೇಹದ ಒಳಭಾಗವನ್ನು ಸ್ವಚ್ಛಪಡಿಸುವುದು



1940ನೇ ಇಸವಿಯ
ಶಾರದಾ ಡೈರಿಗಳು
ಈಗಾಗಲೇ ಮಾರಾಟಕ್ಕೆ
ಸಿದ್ಧವಾಗಿವೆ!
ದೊರೆಯುವ ಸ್ಥಳ:—
ಶಾರದಾ ಛಾಪಖಾನೆ,
ಮಂಗಳೂರು.

# ಕಾಂಗ್ರೆಸಿನ ಮುಂದಿನ ಹೆಜ್ಜೆ ಯಾವುದು?

[ಲೇಖಕ:- ಭಾರತೀಯ]

ಕಾಂಗ್ರೆಸ್ಸು ಮಂತ್ರಿಗಳು ಪ್ರಾಂತಿಕ ಸರಕಾರಗಳನ್ನು ಬಿಟ್ಟು ಹೊರ ಬಂದಿದ್ದಾರೆ; ವೈಸರಾಯರ ಘೋಷಣೆಯು ನಿರಾಶಾಜನಕವಾಗಿದೆ. ಜನತೆಯು ಸತ್ಯಾಗ್ರಹಕ್ಕಾಗಿ ಅಶಾಂತವಾಗಿದೆ. ಹಲವು ಧುರೀಣರು ಸಮರಕ್ಕೆ ಸನ್ನಿಹಿತರಾಗಿರಬೇಕೆನ್ನುತ್ತಾರೆ. ಕಾಂಗ್ರೆಸು ಈಗ ಏನು ಮಾಡಲು ಇಚ್ಛಿಸುತ್ತದೆ? ಕಾಂಗ್ರೆಸಿನ ಮುಂದಾಳುಗಳು ಹಿಂದಿನಷ್ಟು ಯುದ್ಧೋತ್ಸಾಹಿಗಳಾಗಿಲ್ಲವೆ? ಕಾಂಗ್ರೆಸಿನ ಮುಂದಿನ ಹೆಜ್ಜೆಯೇನು? ಗಾಂಧಿಜಿಯವರು ರಾಜಕೀಯದ ವಿಷಯ ಹರಿಜನ ಪತ್ರಿಕೆಯಲ್ಲಿ ನಿರಂತರ ಲೇಖನಗಳ ಪ್ರವಾಹವನ್ನೇ ಹರಿಸುವುದಿದ್ದರೂ ಮೇಲಿನ ಪ್ರಶ್ನೆಗೆ ಸರಿಯಾದ ಉತ್ತರ ಕೊಡದೆ ಗೂಢವಾಗಿರಿಸಿದ್ದಾರೆ. ಜವಾಹಿರಲಾಲರಂತವರು ಸಮರ ಸನ್ನಿಹಿತವಾಗಿದೆಯೆಂಬುದರ ಅರ್ಥವೇನು? ಈ ಪ್ರಶ್ನೆಗಳು ಇಂದು ಪ್ರತಿಯೊಬ್ಬ ಭಾರತೀಯನ ಕಣ್ಣ ಮುಂದೆ ಕಟ್ಟಿದಂತೆ ಬಂದು ನಿಂತಿದೆ.

## ಭಿನ್ನ ಮತಗಳು

ಕಾಂಗ್ರೆಸು ಪ್ರಾಂತಿಕ ಅಧಿಕಾರವನ್ನು ಬಿಟ್ಟುಕೊಟ್ಟು ಹೊರ ಬಂದಿದ್ದರೂ, ಮುಂದಿನ ಧೋರಣೆಯೇನೆಂದು ಸ್ಪಷ್ಟಪಡಿಸದೆ ಇರುವುದರಿಂದ, ಕಾಂಗ್ರೆಸಿನ ಕಾರ್ಯಕರ್ತರು ಕೆಲವರು ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಬೋಸರು ಮತ್ತು ಅವರ ಅನುಯಾಯಿಗಳು ಸತ್ಯಾಗ್ರಹವು ಆರಂಭವಾಗಬೇಕೆಂದು ಹೇಳುತ್ತಿದ್ದಾರೆ. ಹಿಂದೂ ಮುಸ್ಲಿಂ ಭೇದವಡಗದ ವಿನಹ ಸತ್ಯಾಗ್ರಹವು ಸಾಧ್ಯವಿಲ್ಲವೆಂದು ಗಾಂಧಿಜಿಯವರು ಹೇಳಿರುವರು.

ಬ್ರಿಟಿಷ ಸರಕಾರವು ಭಾರತದ ಸ್ವಾತಂತ್ರ್ಯಕ್ಕೆ ಅನುಗುಣವಾಗಿ ತನ್ನ ಪ್ರಕಟಿಸಲಾದ ಯುದ್ಧ ಧ್ಯೇಯವನ್ನು ಸರಿಗೊಳಿಸಲಿಲ್ಲವೆಂಬ ವಿಷಯದಿಂದ ಕಾಂಗ್ರೆಸು ಅಧಿಕಾರ ಬಿಟ್ಟು ಹೊರಬಂದಿದೆ. 'ಹೊರಬಂದು ಏನು ಮಾಡುತ್ತೀರಿ' ಎಂದರೆ 'ಕಾಯಿರಿ ಕಡೆಯಿರಿ' ಎಂದಿಷ್ಟೆ ಉತ್ತರ. ಯಾವುದಕ್ಕಾಗಿ ಕಾಯಬೇಕು? ಎಷ್ಟು ಕಾಲ ಬೇಕು? ಎಂಬೀ ಪ್ರಶ್ನೆಗಳಿಗೆ ಇದುವರೆಗೆ ಸ್ಪಷ್ಟ ಉತ್ತರವನ್ನು ಯಾರೂ ಕೊಟ್ಟಿಲ್ಲ.

## ಮುಂದಾಳುತನವು ದುರ್ಬಲವೆ?

ಹಲವರು, ಕಾಂಗ್ರೆಸು ಹೀಗೆ ಚಟುವಟಿಕೆ ತೋರಿಸದೆ ಇರುವುದು, ಆದರ ಇಂದಿನ ಮುಂದಾಳುತನದ ದೌರ್ಬಲ್ಯವೆಂದು ಈಗೀಗ ಟೀಕಿಸುತ್ತಿದ್ದಾರೆ. ಕೆಲವರು ಕಾಂಗ್ರೆಸಿನಲ್ಲಿ ಪಕ್ಷಗಳು ಆದುದರಿಂದ ಹೀಗಾಯಿತೆಂದು ಹೇಳುತ್ತಿದ್ದಾರೆ. ಆದರೆ ಈ ವಿಚಾರಗಳೆಲ್ಲ ನಿಜವಾದ ಕಾಂಗ್ರೆಸಿನ ಅಂತರ್ಯವನ್ನು ತಿಳಿಯದ ಜನರು ಹೇಳುವ ಬಾಲಭಾಷಿತಗಳಲ್ಲದೆ ಅರ್ಥವತ್ತಾದುವಲ್ಲ.

ಇಂದಿನ ಈ ಕಾಲದಲ್ಲಿ—ಜನತೆಯು ಸತ್ಯಾಗ್ರಹಕ್ಕೆ ಸಿದ್ಧವಿದ್ದರೂ ಈ ಕಾಲದಲ್ಲಿ—ಮಹಾತ್ಮಾಜಿಯವರಂತಹ ಪ್ರಭಾವಶಾಲಿಯಾದ ಧುರೀಣರಿಗೆ ಆಂದೋಲನವನ್ನು ಆರಂಭ ಮಾಡುವುದು ಎಷ್ಟರ ಮಟ್ಟಿಗೆ ಸುಲಭದ ಕೆಲಸವೆಂದು ಯಾರಾದರೂ ಕೂಡಾ ತಿಳಿದುಕೊಳ್ಳಬಹುದಾಗಿದೆ. ಧುರೀಣರ ರಾಜಕೀಯ ತತ್ವವಿಚಾರಗಳಲ್ಲಿ ಏನೇ ಅಭಿಪ್ರಾಯ ವ್ಯತ್ಯಾಸವಿರಲಿ, ಗಾಂಧಿಜಿಯವರು ರಾಷ್ಟ್ರದ ಹೋರಾಟಕ್ಕೆ ಹೊರಟಾಗ ಅದಕ್ಕೆ ಪ್ರಚಂಡ ಸಮ್ಮತಿಯು ಸರ್ವತ್ರದಿಂದಲೂ ಸಿಗುವುದು ಸಾಧ್ಯವಿದೆ. ಹಾಗಾದರೆ ಗಾಂಧಿಜಿಯವರು ಸುಮ್ಮಗಿರುವುದು ಯಾತಕ್ಕೆ? ಬಹು ಪ್ರಚಂಡಮೇಧಾವಿಯನಿಸಿದವ ಪ್ರಯೋಗಚತುರ್ಯವುಳ್ಳ ರಾಜನೀತಿಜ್ಞನಾದ ಗಾಂಧಿಜಿಯವರು ಇಂದು ರಾಜಕೀಯದಲ್ಲಿ ನೂತನ ಅದ್ಭುತ ವಿಚಕ್ಷಣೆಯ ಮಾರ್ಗವೊಂದನ್ನು ಹಿಡಿದಿರುವರಲ್ಲದೆ ಬೇರಲ್ಲ.

## ಶುದ್ಧ ನೀತಿ

ಪೋಲೆಂಡಿನ ಸ್ವಾತಂತ್ರ್ಯ ಪಾಲನೆಯ ಸಲುವಾಗಿ, ಬ್ರಿಟನು ಜರ್ಮನಿಯೊಡನೆ ರಣರಂಗಕ್ಕಿಳಿಯಿತೆಂದು ಸಾರಿತಷ್ಟೆ? ಆಗ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಈ ಯುದ್ಧದಲ್ಲಿ ತನ್ನ ಏಕಮಾತ್ರ ಸಾಮ್ರಾಜ್ಯದಿಂದ ತಾನು ಬ್ರಿಟನಿನ ಬೆಂಬಲದಲ್ಲಿರುವುದಾಗಿ ಭಾರತವೂ ಸಾರಿತು. ಅದರೊಡನೆಯೇ ಬ್ರಿಟನಿನ ಯುದ್ಧ ಧ್ಯೇಯವು ಭಾರತದಲ್ಲಿ ಯಾವ ರೀತಿಯಿಂದ ಅನ್ವಯಿಸತಕ್ಕದ್ದೆಯೆಂದೂ ಕೇಳಿತು. ಇದಕ್ಕೆ ಉತ್ತರ ಕೊಡಲು ಸರಕಾರವು ಅಶಕ್ತವಾದಾಗ ಮಾತ್ರ ಕಾಂಗ್ರೆಸು ಅಧಿಕಾರವನ್ನು ಪರಿತ್ಯಜಿಸಿ ಇಂದು ಹೊರನಿಂತಿದೆ. ಇದು ಎಂತಹ ಶುದ್ಧ ರಾಜಕೀಯ ರೀತಿನೀತಿಯೆಂದು ಯಾರಾದರೂ ಅರ್ಥ ಮಾಡಿಕೊಳ್ಳಬಹುದು. ವಂಚಕ ನೀತಿಯನ್ನು ಎದೆಯಲ್ಲಿಟ್ಟುಕೊಂಡಿರುವುದೆಂದು ಸರಕಾರದ ಧೋರಣೆಯನ್ನು ಜಗತ್ತಿಗೆ ಸಾರಿಹೇಳಿದ ಕಾಂಗ್ರೆಸಿನ ಈ ನೀತಿಯು ಬ್ರಿಟನಿಗೆ ಪ್ರಪಂಚದ ಸಹಾನುಭೂತಿಯನ್ನು ಬಹಳ ತಗ್ಗಿಸಿ ಬಿಟ್ಟುದರಿಂದಲೇ ಅವರೂ ಪ್ರತ್ಯಕ್ಷ ಸತ್ಯಾಗ್ರಹ ಸಮರಕ್ಕಿಂತಲೂ, ಪ್ರಾಂತಿಕ ಸರಕಾರ ಪರಿತ್ಯಾಗದ ವಿಷಯದಲ್ಲಿ ಗೊಂದಲಗೊಂಡಿರುವರು.

## ಸತ್ಯಾಗ್ರಹವು ಆರಂಭಿಸಲಿಲ್ಲವೇಕೆ?

ಶತ್ರುವನ್ನು ಸಂಕಷ್ಟದ ಸಮಯದಲ್ಲಿ ಗೆಲ್ಲುವುದು ನೀತಿಯಲ್ಲ. ಬ್ರಿಟನು ಸಂಕಷ್ಟದಲ್ಲಿರುವಾಗ ಅದನ್ನು ಪೀಡಿಸುವುದು ಬೇಡವೆಂದು ಉದಾತ್ತ ತತ್ವಕ್ಕಾಗಿ ಮಾತ್ರ ಸತ್ಯಾಗ್ರಹವನ್ನು ಗಾಂಧಿಜಿಯವರು ಆರಂಭಿಸುವುದಿಲ್ಲವೆಂದೆ, ರಾಷ್ಟ್ರವು ಅದಕ್ಕೆ ಸನ್ನದ್ಧವಾಗಿಲ್ಲವೆಂಬುದು ಅವರ ಅರ್ಥವೆನ್ನುವುದು ತಪ್ಪು ತಿಳುವಳಿಕೆ. ಇಂದಿನ ಈ ಅಸಹಕಾರವು ಪ್ರತ್ಯಕ್ಷ ಚಳವಳಿಕ್ಕಿಂತಲೂ ಪ್ರಚಂಡ ಪರಿಣಾಮವನ್ನುಂಟು ಮಾಡುವ ನೈತಿಕ ಶಸ್ತ್ರವಾಗಿದೆ. ಸ್ವಾತಂತ್ರ್ಯ ಸಂಪಾದನೆಗೆ ಶಾಂತಿಯ ಮಾರ್ಗವನ್ನು ಅಂಗೀಕರಿಸಿದ ಕಾಂಗ್ರೆಸು ಈ ನೀತಿಯನ್ನು ಅನುಸರಿಸುವುದು ಎಷ್ಟು ಸಹಜವೆಂದು ಈಗ ತಿಳಿಯಬಹುದು. ಆದಕಾರಣ ಕಾಂಗ್ರೆಸು ಮಂತ್ರಿಮಂಡಳಗಳು ರಾಜಿನಾಮೆ ಕೊಟ್ಟದ್ದು ಬಹಳ ವಿಚಕ್ಷಣತೆಯ ಕಾರ್ಯವೇ ಆಗಿದೆ.

## ಸರಕಾರವು ಎಚ್ಚತ್ತಿದೆ

ಕಾಂಗ್ರೆಸು ಪ್ರಾಂತಿಕ ಅಧಿಕಾರವನ್ನು ತಿರುಗಿ ಅಂಗೀಕರಿಸಬೇಕೆಂದು ಬ್ರಿಟಿಷ್ ರಾಜನೀತಿಜ್ಞರೂ, ವೈಸರಾಯರೂ ಹೇಳುತ್ತಿರುವುದರ ಮರ್ಮವು ಇದೇ ಆಗಿದೆ. ಇತ್ತ ಹಲವರು ಸ್ವಾತಂತ್ರ್ಯ ಸಮರಕ್ಕೆ ಈಗಲೇ ಆತುರರಾಗಿದ್ದಾರೆ. ಗಾಂಧಿಜಿಯವರು ಈಗ ತಟಸ್ಥರಾಗಿದ್ದಾರೆ. ಬ್ರಿಟಿಷ್ ಸರಕಾರಕ್ಕೆ ವಿಚಾರ ಮಾಡಿನೋಡಲು ಸಾಕಾದಷ್ಟು ಅವಕಾಶವನ್ನು ಕೊಡಲು ಅವರು ನಿರ್ಧರಿಸಿದ್ದಾರೆ. ಪ್ರತ್ಯಕ್ಷ ಚಳವಳಿವು ಸುರು ಮಾಡಲೇ ಬೇಕಾದ ಸಂದರ್ಭದಲ್ಲಿ ಅದನ್ನು ಒಂದೇ ಸಿಡಿಲ ಹೊಡೆತದಂತೆ ಆರಂಭಿಸುವ ಶಕ್ತಿಯು ಗಾಂಧಿಯವರಲ್ಲಿದೆ. ಇಂದಿನ ಮೌನವು ಮುಂದಿನ ಭಯಂಕರ ಗರ್ಜನೆಗೆ ಪೂರ್ವಸಿದ್ಧತೆಯಾಗಿದೆ. ಆದರೆ ಇದನ್ನು ತಪ್ಪಿಸಿ ಶಾಂತಿಯನ್ನುಂಟು ಮಾಡುವ ಕಾರ್ಯವು ಬ್ರಿಟಿಷ್ ಸರಕಾರದ ಕೈಯಲ್ಲಿದೆಯೇ!


ಭಾರತ ಸ್ತ್ರೀಯರಿಗೆ ಉತ್ತಮೋತ್ತಮವಾದ ಟಾನಿಕ್

ಲೋಧ್ರ

ಲೋಧ್ರ

ಬಲವರ್ಧಕ ಔಷಧಗಳ ರಾಣಿ

ಸ್ತ್ರೀಯರ ಸಕಲ ಗರ್ಭಾಶಯರೋಗಗಳನ್ನು ಹೋಗಲಾಡಿಸಿ
ಸಂಪೂರ್ಣಾರೋಗ್ಯವನ್ನೂ, ಸುಖವನ್ನೂ ನೀಡುವ ಟಾನಿಕ್

ಕೇಸರಿ ಕುಟೀರಂ, ರಾಯಪೇಟೆ, ಮದರಾಸು



# ನೋಟಗಳು

ಭಾರತವನ್ನು ಅನೇಕಜನಾಂಗಗಳಾಗಿ ವಿಂಗಡಿಸಲು ಯತ್ನಿಸಿದರು ಕೈದೇ ಅಜಾಮ ಜಿನ್ನರು!

◈

ಆದರೆ ಹಾಗೆ ವಿಭಜಿಸಲು ಕೈದೇ ಅಜಾಮರಿಗೆ ಸಾಧ್ಯವಾಗಲಿಲ್ಲ, ಭಾರತ ಖಂಡವು ಅಖಂಡವಾಗಿ ಏಕರಾಷ್ಟ್ರವಾಗಿ ಕಾಂಗ್ರೆಸಿನ ಆಶ್ರಯದಲ್ಲಿ ಬೆಳೆಯುತ್ತಾ ಬರುತ್ತಿದೆ

◈

ಕಾಂಗ್ರೆಸು ಮತ್ತು ಜಿನ್ನರನ್ನು ಒಂದುಗೂಡಿಸುವುದು ಹೇಗೆ ಸಾಧ್ಯವೆಂಬುದು ಹಲವರ ಸಮಸ್ಯೆಯಾಗಿದೆ!

◈

ಗಾಂಧಿಜಿಯವರು ಇಂದು ಜಿನ್ನರನೂ ಕಾಂಗ್ರೆಸನ್ನೂ ಒಂದು ಗೂಡಿಸುವ ಅಭಿಪ್ರಾಯವನ್ನು ಬಿಟ್ಟು ಕೊಟ್ಟಿರುವುದಾಗಿ ತಿಳಿದು ಬರುತ್ತದೆ ಹಾಗೆಂದೇ ಮೊನ್ನೆ ದಿಲ್ಲಿಗೆ ಹೋದಾಗ ಜಿನ್ನರನ್ನು ಕಾಣಲು ಅವರು ಮನಸ್ಸು ಮಾಡಲಿಲ್ಲವಂತೆ!

◈

ಕೈದೇ ಅಜಾಮರೊಡನೆ ಮುಂದೆ ತನಗೆ ಏನೇನೂ ಮಾತುಕತೆ ನಡೆಯಲಾರದೆಂದು ಪಂಡಿತ ನೆಹರುಗಳು ಮೊದಲೇ ಸ್ಪಷ್ಟ ಪಡಿಸಿದ್ದರು

◈

ಮುಸ್ಲಿಂ ಲೀಗಿನ ಕೆಲವು ಮುಖಂಡರೂ ತಮ್ಮ ಕೈದೇ ಅಜಾಮರಲ್ಲಿ ವಿಶ್ವಾಸವನ್ನು ಕಳಕೊಂಡಿರುವರಾಗಿ ತಿಳಿದು ಬರುತ್ತದೆ

◈

ಗಾಂಧಿಜಿಯವರು ಮೊನ್ನೆ ದಿಲ್ಲಿಗೆ ಹೋಗಿದ್ದಾಗ ಸರ್ ಸಿಕಂದರರು ಅವರನ್ನು ಕಂಡು ಮಾತನಾಡಿದರು.

◈

ಬಹುಶಃ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಕೈದೇ ಅಜಾಮರಿಗೆ ಅದು ಸಮ್ಮತವೆನಿಸಿರಲಿಕ್ಕಿಲ್ಲ.

◈

ಆದರೆ ಸರ್ ಸಿಕಂದರರೂ ಒಬ್ಬ ಪ್ರಭಾವಶಾಲಿಯಾದ ಮುಸ್ಲಿಂ ಮುಖಂಡರು. ಪಂಜಾಬ್ ಪ್ರಾಂತದಲ್ಲಿ ಮಾತ್ರವಲ್ಲ, ಇತರ ಪ್ರಾಂತಗಳಲ್ಲಿಯೂ ಸಿಕಂದರರ ಅನುಯಾಯಿಗಳು ಹಲವು ಮಂದಿ ಇದ್ದಾರೆ,

◈

ಬಂಗಾಳದ ಪ್ರಧಾನರಾದ ಹಕ್ಕರೂ ಕೈದೇ ಅಜಾಮರ ಧೋರಣೆಯನ್ನು ಬಿಟ್ಟು ಕೊಟ್ಟಿರುವುದಾಗಿ ತಿಳಿದುಬರುತ್ತದೆ

◈

ಬಂಗಾಳದಲ್ಲಿ ಹಿಂದೂ ಮುಸ್ಲಿಂ ಐಕ್ಯ ಸ್ಥಾಪನೆಮಾಡಿ, ಪ್ರಾಂತದಲ್ಲಿ ಶಾಂತಿಯನ್ನುಂಟು ಮಾಡಬೇಕೆಂದು ಅವರು ಹಿಂದೂ ಮುಸ್ಲಿಂ ಮುಖಂಡರ ಪ್ರಾತಿನಿಧ್ಯದ ಒಂದು ದುಂಡುಮೇಜಿನ ಪರಿಷತ್ತನ್ನು ಕರೆಯಲಿರುವರೆಂದೂ ತಿಳಿದು ಬಂದಿದೆ

◈

ಕೈದೇ ಅಜಾಮ ಜಿನ್ನರ ಧೋರಣೆಗೆ ಮುಸ್ಲಿಮರು ಒಂಬಲವಿಲ್ಲವೆಂದು ಮೇಲಿನ ಆಧಾರಗಳು ತಿಳಿಸಲಾರವೆ? -

◈

ಕೈದೇ ಅಜಾಮರನ್ನು ಬಿಟ್ಟು, ಭಾರತದ ಸ್ವಾತಂತ್ರ್ಯದ ವಿಷಯ ನಿಷ್ಕರ್ಷಿಸಲು ಸಾಧ್ಯವುಂಟೆಂದು ವೈಸರಾಯರಿಗೆ ತಿಳಿದುಕೊಳ್ಳಲು ಈ ಆಧಾರಗಳು ಸಾಕಾಗಲಾರವೆ?

◈

ಒಂದು ಕಾಲದಲ್ಲಿ ಕೈದೇ ಅಜಾಮರು ನಿಜವಾಗಿಯೂ ಒಬ್ಬ ಮುಂದಾಳುವೆನಿಸಿದ್ದರು ಏಕೆಂದರೆ ರಾಷ್ಟ್ರದ ಏಳಿಗೆಯು ಅಂದು ಅವರ ದೃಷ್ಟಿಯ ಮುಂದಿತ್ತು.

◈

'ನಾನು ಮೊದಲನೆಯದಾಗಿ, ಎರಡನೆಯದಾಗಿ, ಕಡೆಯವನಾಗಿ ಸರ್ವಥಾ ಒಬ್ಬ ರಾಷ್ಟ್ರೀಯವಾದಿಯಾಗಿದ್ದೇನೆ ನೀವು ಮುಸ್ಲಿಮರಿರಿ, ಹಿಂದುವಾಗಿರಿ, ನಮ್ಮ ರಾಷ್ಟ್ರೀಯ ಸಭೆಯ ವಿಷಯದಲ್ಲಿ ನೀವು ನಿಮ್ಮ ಜಾತೀಯತೆಯನ್ನು ಮುಂದೆ ತರಬೇಡಿ, ನಾವು ಕೂಡಾ ಜನರು ಎಂದು ಹೊರಗಿನ ರಾಷ್ಟ್ರಗಳವರು ತಿಳಿಯುವಂತೆ ನಡೆಯಿರಿ' ಹೀಗೆಂದು ಗರ್ಜಿಸಿದ್ದರು ಜಿನ್ನರು ಆ ದಿನಗಳಲ್ಲಿ!

◈

ಇಂದಿನ ಅವರ ಮಾತೇ ಬೇರೆ ತೆರನಾಗಿದೆ! ಅದರ ಕಾರಣವೇ ಭಾರತದ ಜನಾಂಗದಲ್ಲಿಯೇ ಅವರಿಗೆ ವಿಶ್ವಾಸವಿಲ್ಲ! ಭಾರತ ಜನಾಂಗದವರಿಗೂ ಅವರಲ್ಲಿ ಅದಕ್ಕಿಂತ ಮೊದಲೇ ವಿಶ್ವಾಸವಿಲ್ಲ!!

◈

ಇಷ್ಟು ವಿಷಯಗಳು ಸ್ಪಷ್ಟವಾಗಿರುವಾಗ, ಅಲ್ಪ ಸಂಖ್ಯಾತರ ಸಮಸ್ಯೆಯ ಕುರಿತು, ಕೈದೇ ಅಜಾಮ ಜಿನ್ನರು ಹೇಳುವ ಆಕ್ಷೇಪದಲ್ಲಿ ಏನು ಮಹತ್ವವುಂಟೆಂದು ತಿಳಿಯುತ್ತಾರೋ ವೈಸರಾಯರು ಗೊತ್ತಾಗುವುದಿಲ್ಲ.

◈

ವಿಭಜಿಸಿ ಆಳುವುದು ಬ್ರಿಟಿಷರ ನೀತಿಯಾಗಿದೆಯೆಂದು ರಾಷ್ಟ್ರೀಯ ಮುಖಂಡರನೇಕರು ಸಾರುತ್ತಿದ್ದಾರೆ!

◈

ಆದರೆ 'ಭಾರತವನ್ನು ವಿಭಜಿಸಲು ಮುಂದಕ್ಕೆ ಸಾಧ್ಯವುಂಟೋ' ಎಂದು ಬ್ರಿಟಿಷ್ ರಾಜನೀತಿಜ್ಞರು ವಿಚಾರ ಮಾಡಬೇಕಾಗಿದೆ!

◈

ಭಾರತವು ಅಭಿನ್ನವಾದ ಒಂದೇ ಜನಾಂಗವೆಂದ ಸರಕಾರವು ಇನ್ನೂ ಅರಿಯದಿರುವುದು ದೊಡ್ಡ ಆಶ್ಚರ್ಯವಾಗಿದೆ

◈


## RS. 26000

**ಸರಿಯಾಗಿ ಉತ್ತರ ಕಳುಹಿಸಿದ 18 ಮಂದಿಗಳೊಳಗೆ ಹಂಚಲಾಗುವುದು**

ರೂ 2000ನ್ನು ಸಂಪಾದಿಸುವ ಸುಸಂಧಿಯು ನಿಮ್ಮನ್ನು ಕಾಯುತ್ತಿದೆ! ಈ ಮೌಲ್ಯವು ನಾವು ಸೀಲು ಹಾಕಿಟ್ಟ ಉತ್ತರಕ್ಕೆ ಹೋಲುವ ಉತ್ತರವನ್ನು ಕಳುಹಿಸಿದವರಿಗೆ ಕೊಡುವೆವೆಂದು ಭರವಸೆಯನ್ನೀಯುವೆವು ಉಳಿದವರಿಗೆ ಕೂಡ ಸಿಗುವ ಬಹುಮಾನ ಸಾಧಾರಣವೆಂದೆನಿಸದಿರಿ

ನಾವು ಸೀಲು ಹಾಕಿದ ಉತ್ತರದ ಯಾವುದಾದರೂ ಎರಡು ಸಾಲುಗಳನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ 75ರ ಬಹುಮಾನ ನಮ್ಮ ಉತ್ತರದ ಯಾವುದಾದರೂ ಒಂದು ಸಾಲನ್ನು ಹೋಲುವ ಉತ್ತರ ಕಳುಹಿಸಿದವರಿಗೆ ರೂ 20 ಉಳಿದ ಸಾಲಿನ ಎರಡು ಅಂಕೆಗಳನ್ನು ಹೋಲುವ ಅದೇ ಸಾಲಿನ ಉತ್ತರ ಕಳುಹಿಸಿದವರಿಗೆ ರೂಪದ ಕೊನ್ಸೊಲೇಷನ್ ಬಹುಮಾನ

| | | |
|---|---|---|
| | | |
| | | |

ಪ್ರತೀ ಸಾಲನ್ನೂ ಉದ್ದಕ್ಕೂ ಅಡ್ಡಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ 42 ಬರುವಂತೆ ಬಿಟ್ಟಿರುವ ಅಂಕಣಗಳಲ್ಲಿ 3 ರಿಂದ 18ರ ವರೆಗೆ ಅಂಕೆಗಳನ್ನು ಬರೆಯಿರಿ ಒಂದು ಬಾರಿ ಉಪಯೋಗಿಸಿದ ಅಂಕೆಯನ್ನು ಪುನರಪಿ ಬರೆಯಕೂಡದು ಉತ್ತರವನ್ನು ಕಳುಹಿಸುವ ಕಡೇ ದಿನ 21—2—1940. ಫಲಿತಾಂಶ 2—3—1940

ಒಂದು ಉತ್ತರಕ್ಕೆ ರೂ. 1 ಪ್ರವೇಶಧನ, 3 ಉತ್ತರಗಳಿಗೆ ರೂ. 2 ರೂ. 5ಕ್ಕೆ 8 ಉತ್ತರಗಳು

ನಿಯಮಗಳು — ಮೇಲೆ ನಮೂದಿಸಿದ ಪ್ರವೇಶಧನದೊಂದಿಗೆ ಖಾಲಿ ಕಾಗದದ ಮೇಲೆ ಎಷ್ಟೂ ಉತ್ತರಗಳನ್ನು ಕಳುಹಿಸಬಹುದು, ಹಣವನ್ನು ಮನಿಆರ್ಡರು ಮೂಲಕವಾಗಲಿ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಕಳುಹಿಸಬೇಕು ಬಹುಮಾನದ ಮೌಲ್ಯವು ಜಮೆಯಾದ ಹಣದ ಮೇಲೆ ಹೊಂದಿಕೊಂಡಿದೆ ಆದರೆ ಕಡಿಮೆ ಎಂದರೆ, ರೂ 2000ವನ್ನು ನಾವು ಬೊಂಬ್ಬಾಯ ಪ್ರಾಮುಖ್ಯ ಬೇಂಕೊಂದರಲ್ಲಿ ಭದ್ರತೆಯಾಗಿಟ್ಟು ಉತ್ತರವನ್ನು ಹೋಲುವ ಉತ್ತರ ಕಳುಹಿಸಿದವರಿಗೆ ಕೊಡುವೆವೆಂಬ ಭರವಸೆಯನ್ನೀಯುವೆವು ಎಲ್ಲಾ ಕಳುಹಿಸಿದ ಉತ್ತರಗಳು 1940ನೇ ಫೆಬ್ರುವರಿ 26ನೇ ತಾರೀಕಿನೊಳಗೆ ಬಂದು ಮುಟ್ಟತಕ್ಕದ್ದು ತದನಂತರ ಬಂದ ಉತ್ತರಗಳಿಗೆ ಗಮನಕೊಡಲಾಗಲಿಕ್ಕಿಲ್ಲ. ನಿಮ್ಮ ಹೆಸರು, ವಿಳಾಸು ಅಂಕೆಗಳನ್ನು ಇಂಗ್ಲಿಷಿನಲ್ಲಿಯೇ ಬರೆಯಿರಿ ಉತ್ತರ ಬೇಕೆಂದಾದರೂ ಅಂಚೆಚೀಟನ್ನು ತಮ್ಮ ವಿಳಾಸ ಬರೆದ ಕವರನ್ನು ಕಳುಹಿಸಿರಿ ಎಲ್ಲಾ ವಿಷಯಗಳಲ್ಲಿ ಮೆನೇಜರರ ತೀರ್ಮಾನವು ಅಪ್ಪೀಲೂ ನ್ಯಾಯಬದ್ಧವೂ ಆಗಿರುತ್ತದೆ

ಕಳೆದ ಬಾರಿಯ 3ನೆಯ ಉತ್ತರ.

| | | | | |
|---|---|---|---|---|
| 1ನೇ ಸಾಲು | 14 | 8 | 18 | 8 |
| 2ನೇ ,, | 5 | 11 | 6 | 16 |
| 3ನೇ ,, | 2 | 12 | 9 | 15 |
| 4ನೇ ,, | 17 | 7 | 10 | 4 |

ಎಲ್ಲಾ ಉತ್ತರವನ್ನು ಪ್ರವೇಶ ಹಾಸಲಿನೊಂದಿಗೆ ಈ ವಿಳಾಸಕ್ಕೆ ಕಳುಹಿಸಿರಿ.

ಮೆನೇಜರ್—
ದಿ.
ನೇಶನಲ್ ಡಿಸ್ಟ್ರಿಬ್ಯೂಟಿಂಗ್ ಕೊ.,
ಗಬದರ್ ಹೌಸ್, ದೊಂಬಿತಲಾವ್, ಬೊಂಬಾಯಿ.


## NOTICE

**In the Court of the Dt. Munsif of Mangalore.**

R E P 281/1939

Between

Krishnaveni alias Krishnamma } Petitioner

and

Ismali mukri Bearey and others } Respondents

To,

3 Abbu alias chayi Beary 4 Papamma, 5 Khadri janunna children of Palliamma residing with chayi's Hotel, c/o Amade Bangee Badwal, Masjid Kalyan, Bombay.

Please take that the above named petitioner has filed the above petition for sale of the mortgaged properties and that the said petition is posted to 23-2-1940 for the settlement of the terms of the sale proclamation you are hereby directed to appeare in person by pleader and contest the same on that date failing which it will beheard and decided in your absence.

your faithfuly

Mangalore } 13-2-40 } **U. C. S Bhatt.** Vakil for Pititoner


# ಸ್ವದೇಶಾಭಿಮಾನಿಗೆ
## ಚಂದಾದಾರರಾಗಿರಿ




### ದಂತವಿಜ್ಞಾನದ ಕೆಲವು ಅನುಭವಗಳು

ಕೃತಕ ಹಲ್ಲುಗಳನ್ನು ಹೋದ ಹಲ್ಲುಗಳ ಬದಲಾಗಿ ಇತ್ತೀಚೆಗೆ ಇಡುತ್ತಿರುವ ವಿಷಯವು ಎಲ್ಲರಿಗೂ ತಿಳಿದಿದೆಯಷ್ಟೆ? ಅಂತಹ ಹಲ್ಲುಗಳು ಸಹಜ ಹಲ್ಲುಗಳ ನೇಕಡಾ ೧೦ ಅಥವಾ ೧೫ರಷ್ಟು ಮಾತ್ರ ಶಕ್ತಿಯುಳ್ಳವುಗಳಾಗಿವೆ. ಮುಖ್ಯವಾದ ವಿಷಯವೆಂದರೆ ಎಷ್ಟಾದರೂ ಅವುಗಳನ್ನು ಬರಿಯ ಮಾಂಸಗಳ ಮೇಲೆ ಕೂತು ಕೊಳ್ಳಿಸುವುದರಿಂದ, ಎಲುಬಿಗೆ ತಾಗಿ ಬೆಳೆದ ಹಲ್ಲುಗಳಷ್ಟು ಅವು ಭದ್ರವಾಗಿ ಕಲುಸಾಧ್ಯವಿಲ್ಲ

### ಹಲ್ಲು ಸರಿಗೊಳಿಸುವುದು ಪ್ರಾಚೀನ ಕಲೆ

ಹಲ್ಲುಗಳನ್ನು ಸರಿಗೊಳಿಸುವಂತಹದು ಪ್ರಾಚೀನ ಕಲೆಯೇ ಆಗಿದೆ ಪ್ರಾಚೀನ ರೋಮನರಲ್ಲಿ ಮತ್ತು ಇಜಿಪ್ಟರಲ್ಲಿ ಕೃತಕ ಹಲ್ಲುಗಳನ್ನು ಬಂಗಾರದ ಇಲ್ಲವೇ ಬೆಳ್ಳಿಯ ಸರಿಗೆಗಳಿಂದ ಕಟ್ಟುವ ಪದ್ಧತಿಯು ಪ್ರಸಾರವಾಗಿತ್ತು. ಲೋಹಗಳಿಂದ ಬೆಲೆ ಹುಟ್ಟುವ ಬಂಗಾರದ ಮೊದಲಾದ ಲೋಹಗಳಿಂದ ನಾಜೂಕಾದ ಹಲ್ಲುಗಳನ್ನು ಹಣವಂತರು ಬಹು ಚಲೋದಾಗಿ ಮಾಡಿಸಿ ಇಟ್ಟುಕೊಳ್ಳುತಿದ್ದರು.

ಆಧುನಿಕ ಕಾಲದಲ್ಲಿ ಹಲವು ಬಗಯಲ್ಲಿ ಸುಧಾರಣೆಗಳಾದುವು. ಆದರೆ ದಂತ ವಿಜ್ಞಾನದಲ್ಲಿ ಸಮರ್ಪಕವಾದ ಸುಧಾರಣೆಗಳುಂಟಾಗಲಿಲ್ಲ ಹೊಸ ಹರೆಯದ ಚೆಲುವಿನ ಬಾಲಿಕೆಯರಾದರೂ, ತಮ್ಮ ಹಲ್ಲುಗಳನ್ನು ಕಳಕೊಂಡು ಕರವಸ್ತ್ರಗಳಿಂದ ಬಾಯಿಯನ್ನು ಮುಚ್ಚಿಕೊಳ್ಳುವ ದುರವಸ್ಥೆಗೆ ಒಳಗಾಗಿರುವರು.

### ದಂತವಿಜ್ಞಾನದ ಪ್ರಾರಂಭ

ದಂತ ವಿಜ್ಞಾನವನ್ನು ಪ್ರಾರಂಭಿಸಿದವನು ಪೆರೀಪೋಚುಡಾರ್ ಎಂಬ ಹದಿನೆಂಟನೆಯ ಶತಮಾನದಲ್ಲಿ ಬದುಕಿದ್ದ ಒಬ್ಬ ಫ್ರೆಂಚ್ ವಿಜ್ಞಾನಿಯು. ಆತನು ಪಾರ್ಸೆಲಿನ್ ಎಂಬ ಚೀನಿಯರು ಪಿಂಗಾಣಿ ತಯಾರಿಸುವುದರಿಂದ ಕೃತಕ ಹಲ್ಲುಗಳನ್ನು ಮಾಡಬಹುದೆಂಬ ಸೂಚನೆಯನ್ನು ಕೊಟ್ಟಿದ್ದನು. ಆದರೆ ಆತನು ಅದನ್ನು ಉಪಯೋಗಿಸಿರಲಿಲ್ಲ, ಆದರೆ ಮುಂದಕ್ಕೆ ಅದು ಪ್ರಯೋಗಕ್ಕೆ ಬಂತು.

ಇತ್ತೀಚೆಯ ದಂತ ಚಿಕಿತ್ಸಕರು ಅದನ್ನು ಅತಿಯಾಗಿ ಉಪಯೋಗಿಸುತ್ತಾರೆ. ರೋಗಿಯ ಬಾಯಿಗೆ ಸರಿಯಾಗುವಂತೆ ಆಕಾರ ಅಳತೆ ಮೊದಲಾದವುಗಳನ್ನು ಸರಿಯಾಗಿ ಮಾಡುತ್ತಾರೆ. ಆ ಮೇಲೆ ಲೋಹ, ದಂತ, ಮೊದಲಾದವುಗಳನ್ನು ಉಪಯೋಗಕ್ಕೆ ತಂದರು. ಹೆಚ್ಚಾಗಿ ಕೆಳಗಡೆಯ ಹಲ್ಲುಗಳನ್ನು ಮಾತ್ರ ಇಡುವುದು ಸಾಧ್ಯವಿದೆ. ಮೇಲಿನ ಹಲ್ಲುಗಳನ್ನು ಇಟ್ಟುಕೊಳ್ಳಲು ಬಹು ಕಷ್ಟವಾಗುವುದು. ಹಲವರು ಊಟಮಾಡುವ ಹೊತ್ತಿಗೆ ಮಾತ್ರ ಹಲ್ಲುಗಳನ್ನು ಇಟ್ಟುಕೊಂಡು ಉಳಿದ ಸಮಯಗಳಲ್ಲಿ ತೆಗೆದು ಬಿಡುತ್ತಾರೆ.

### ಗಟ್ಟಿ ರಬ್ಬರಿನ ಸಂಶೋಧನೆ

ಗುಡ್ ಈಯರನು ಗಟ್ಟಿ ರಬ್ಬರುಗಳನ್ನು ಸಂಶೋಧಿಸಿ ಉಪಯೋಗಿಸುವುದನ್ನು ಪ್ರಚಾರಕ್ಕೆ ತಂದನು ೧೮೭೦ರಲ್ಲಿ ಈ ಪ್ರಯೋಗವು ಆರಂಭವಾಗಿ ೧೮೭೪ಳ ಇಲ್ಲಿ ಪ್ರಸಿದ್ಧವಾಯಿತು. ಇದರಿಂದ ದಂತ ಚಿಕಿತ್ಸೆಯು ಬಹು ಪ್ರಚಾರಕ್ಕೆ ಬಂತು. ರಬ್ಬರಿನ ದಂತಗಳು ಜೀವಂತ ಹಲ್ಲುಗಳಂತೆಯೇ ಇದ್ದು ಹೆಚ್ಚಿನ ತೊಂದರೆ ಕೊಡುವಂತಹವುಗಳೂ ಆಗಿಲ್ಲ, ಮಾತ್ರವಲ್ಲದೆ, ಬಹುಕಾಲ ಬಾಳಿಕೆಯೂ ಬರುತ್ತದೆ ಆದರೆ ರಬ್ಬರಿನ ರುಚಿಯು ಬಾಯಿಯ ರುಚಿಗೆ ವಿರೋಧವಾಗಿ ಅದೂ ಹೆಚ್ಚಿನ ಅನಾನುಕೂಲತೆಯನ್ನುಂಟುಮಾಡಿತು

### ಸೆಲ್ಲುಲೋಯ್ಡಿನ ಉಪಯೋಗ

ಗಿಡಗಳ ಧಾತುವಿನಿಂದ ಯಂತ್ರದ ಮೂಲಕ ಮಾಡಿದ ಸೆಲುಲಾಯಿಡ್ ಎಂಬ ವಸ್ತುವನ್ನು ಉಪಯೋಗಿಸಬಹುದೆಂದು ದಂತಶಾಸ್ತ್ರಜ್ಞರು ೧೮೭೦ರಲ್ಲಿ ಕಂಡು ಹುಡುಕಿದರು ಆ ಮೇಲೆಯೂ ಹಲವು ಸಾಧನಗಳ ಮೂಲಕ ಪ್ರಯೋಗಗಳನ್ನು ಮಾಡಿದರು

ಇತ್ತೀಚೆಗೆ ಮೆತಿಲ್ ಮೆತಾಕ್ರಿಲೇಟಿನಿಂದ ತಯಾರಿಸಿದ ದಂತಗಳೇ ಹೆಚ್ಚು ರೂಢಿಗೆ ಬಂದಿವೆ. ಮಿಕ್ಕುಳಿದವು ಅಷ್ಟರ ಮಟ್ಟಿಗೆ ಪ್ರಯೋಜನಕ್ಕೆ ಬೀಳಲಿಲ್ಲ ರುಚಿಯಲ್ಲಾಗಲಿ, ಸೇರಿರುವುದರಲ್ಲಾಗಲಿ ಯಾವ ತೊಂದರೆಯೂ ಇಲ್ಲದಿರುವುದರಿಂದ ಇದೇ ಇಂದು ಹೆಚ್ಚು ಕಡೆ ಪ್ರಯೋಗದಲ್ಲಿದೆ

ಆದರೂ ಮನುಷ್ಯನು ಹಲ್ಲುಗಳ ಕುರಿತು ಜಾಗರೂಕತೆಯಿಂದಿರಬೇಕು!

### ಹೊಸ ಪೇಟೆಯಲ್ಲಿ ಹಣವನ್ನು ತಿನ್ನುವ ಮನುಷ್ಯ

ನಾಣ್ಯದಲ್ಲಿ ಹುಗಿದ ಮನುಷ್ಯರ ಹಣಗಳನ್ನು ಕಿತ್ತುಕೊಂಡು ತಿನ್ನುವ ಮನುಷ್ಯನೊಬ್ಬನನ್ನು ಪೋಲೀಸರು ಹಿಡಿದು ತಂದು ಬಳ್ಳಾರಿ ಜಿಲ್ಲಾ ಹೊಸಪೇಟೆಯ ಜನರಲ್ ಆಸ್ಪತ್ರೆಯಲ್ಲಿಟ್ಟಿದ್ದಾರೆ. ಜನರು ತಂಡ ತಂಡವಾಗಿ ಅಲ್ಲಿಗೆ ಹೋಗಿ ನೋಡಿ ಕೊಂಡು ಬರುತ್ತಿದ್ದಾರೆ ವಿಚಾರ ಮಾಡಿದ್ದರಿಂದ, ಈ ಮನುಷ್ಯನು ಹರಪನ ಹಳ್ಳಿಯವನೆಂದೂ, ಕೆಲವು ದಿವಸ ಹಾರಕಾನಹಾಳು ಗ್ರಾಮದಲ್ಲಿದ್ದನೆಂದೂ ಹುಚ್ಚನಂತೆ ತೋರುತ್ತಿರುವನೆಂದೂ ಗೊತ್ತಾಗಿದೆ.

### ಬಾರೀ ಗಡ್ಡ !

ಇದು ಒಂದು ವಿಚಿತ್ರವೂ ಸ್ವಾರಸ್ಯವೂ ಆದ ವಿಷಯ ಸಾಧಾರಣವಾಗಿ ಜಪಾನಿನವರಿಗೆ ಗಡ್ಡದ ವಿಚಾರದಲ್ಲಿ ಅಷ್ಟು ಮುತುವರ್ಜಿ ಇಲ್ಲ ಆದರೂ ಅಲ್ಲಿ ಒಂದು ಸಂಘವಿದೆ ಹೆಸರು 'ಗಡ್ಡ ಮೀಸೆ ಬೆಳೆಸುವ ಸಂಘ' ವರ್ಷಕ್ಕೆ ಎರಡು ಸಾರಿ ಸಂಘದ ಮೀಟಿಂಗು ಆಗ ಗಡ್ಡ ಮೀಸೆ ಬೆಳೆಸುವ ವಿಷಯದಲ್ಲಿ ದೊಡ್ಡ ದೊಡ್ಡ ಲೆಕ್ಚರ್ ಈ ಸಂಘದ ಒಬ್ಬ ಮೆಂಬರಾದ ನಿಯೊಸಾಬಿಸೂಕಾಟೋ ಎಂಬವನು ಬಾರೀ ಗಡ್ಡ ಬಿಟ್ಟಿದ್ದಾನೆ ಪೂರ್ವದೇಶದಲ್ಲೇ ಇವನದೇ ದೊಡ್ಡ ಗಡ್ಡವಾದ ದರಿಂದ ಇವನಿಗೆ ಬಹುಮಾನ ಬಂದಿದೆ. ಸಂಘಕ್ಕೆ ಅಭಿನಂದನ!

**HALFTONE & LINE BLOCK MAKING UNDERTAKEN**

**Sharada Press,**
**MANGALORE**

## ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ

**ಗೊನೊಕಿಲರ್** (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೋಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

*Sole Manufacturer:* **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ಸ್,
ಹಂಪನಕಟ್ಟಾ, ಮಂಗಳೂರು.

# ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾ. 11-2-'40ರಿಂದ ತಾ. 27-2-'40ರ ವರೆಗೆ

## ಶ್ರವಣ ಬೆಳುಗುಳದಲ್ಲಿ ಶ್ರೀ ನೇಮಿತೀರ್ಥಂಕರ ಪಂಚಕಲ್ಯಾಣ ಮಹೋತ್ಸವ

ಮತ್ತು

## "ಶ್ರೀ ಗೋಮಟೇಶ್ವರ ಸ್ವಾಮಿ ಮಹಾಮಸ್ತಕಾಭಿಷೇಕ"

ತಾರೀಕು 11–2–40ರಿಂದ ತಾರೀಕು 27–2–40ರ ವರೆಗೆ ಶ್ರವಣ ಬೆಳುಗುಳದಲ್ಲಿ ಬಲು ವಿಜೃಂಭಣೆಯಿಂದ ನಡೆಯಲಿರುವ ಶ್ರೀ ಗೋಮಟೇಶ್ವರ ಸ್ವಾಮಿ ಮಹಾಮಸ್ತಕಾಭಿಷೇಕಕ್ಕೆ ಹೋಗುವ ಯಾತ್ರಿಕರ ಅನುಕೂಲತೆಗಾಗಿ ನಾವು ಸ್ಪೆಶ್ಯಲ್ ಸರ್ವಿಸ್ಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡು ಮಾಡಿರುತ್ತೇವೆ

| | ರೂ ಆ ಪೈ |
|---|---|
| ಮಂಗಳೂರಿನಿಂದ—ಉಪ್ಪಿನಂಗಡಿಗಾಗಿ-ಹಾಸನ ಶ್ರವಣ ಬೆಳುಗುಳಕ್ಕೆ ಚಾರ್ಜು | 4- 0-0 |
| ಮೂಡಬಿದ್ರೆಯಿಂದ—ಗುರುವಾಯನಕೆರೆ ಚಾರ್ಮಾಡಿ ಗಡಿಗಾಗಿ ಮೂಡುಗೆರೆ ಹಳೇಬೀಡು ಅರಸಿಕೆರೆಗಾಗಿ ಹಾಸನ ಶ್ರವಣ ಬೆಳುಗುಳಕ್ಕೆ | 4 12-0 |
| ಮೂಡಬಿದ್ರೆಯಿಂದ—ಚಾರ್ಮಾಡಿಗಡಿಗಾಗಿ-ಮೂಡುಗೆರೆ ಬೇಲೂರು ಹಾಸನಕ್ಕಾಗಿ ಶ್ರವಣ ಬೆಳುಗುಳಕ್ಕೆ | 4 8-0 |
| ಮೂಡಬಿದ್ರೆಯಿಂದ—ಚಾರ್ಮಾಡಿಗಡಿಗಾಗಿ-ಮೂಡುಗೆರೆ ಚಿಕ್ಕಮಂಗಳೂರು ಹಾಸನಕ್ಕಾಗಿ ಶ್ರವಣ ಬೆಳುಗುಳಕ್ಕೆ | 4 12-0 |

ಯಾತ್ರಿಕರ ಅನುಕೂಲತೆಗಳ ಬಗ್ಗೆ ಯೋಗ್ಯ ಏರ್ಪಾಡು ಮಾಡಲಾಗುವುದು

ಹೆಚ್ಚಿನ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು:—

***JOINT MANAGERS.***

**The Combined Booking Agency,**
**MANGALORE**

**The Joint Booking Office,**
**KODIALBAIL.**

(Regd)

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

# HOUNSA

## ಹಂಸಾ ಸ್ನೋ

## ಮತ್ತು

## ಬ್ರಿಲ್ಲಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಫಾರ್ಮಸಿ, ಪೆರಿಡೆಪಿ.
P. O. Peridepi (ನೆಲ್ಲೂರು ಡಿ.)


## ಮಂಗಳೂರು ಪೇಟೆಯ ದವಸಧಾನ್ಯ ವಸ್ತುಗಳ ಧಾರಣೆ

| ಸಾಮುಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ತರದ ಗುಡ್ಡೆ ಮುಡಿಗೆ | 1—13—0 | 1—14—0 |
| „ ದುಯಂ „ „ | | |
| „ ಅವ್ವಲ್ ಸುಗ್ಗಿ „ | | — |
| „ ದುಯಂ „ „ | | — |
| ಅಕ್ಕಿ ಅವ್ವಲ್ ಗುಡ್ಡೆ „ ಹಳೆ | 4—14 0 | |
| „ ದುಯಂ „ „ | 4—8—0 | |
| „ ಅವ್ವಲ್ ಸುಗ್ಗಿ „ | 4—8—0 | 4—8— |
| „ ದುಯಂ „ „ | 4—4—0 | 4—6—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 58—8—0 |
| „ ಸಿಪ್ಪೆ ಇದ್ದದು „ | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 75—0— |
| „ ದಿಲ್‌ಪಸಂದ „ | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಯಿದ್ದ ಅಡಿಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 3—0—0 | 3—12—0 |
| ಕಬ್ಬಿನ ಬೆಲ್ಲ ಖಂಡಿಗೆ | 37—8—0 | 50—0—0 |
| ಒಳ್ಳೆಮೆಣಸು ಹಂಡ್ರೆಡ್ವೇಟಿಗೆ | 19—0—0 | 20—8 0 |

# ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 16—2—1940 [ಸಂಚಿಕೆ 7

## The Bombay Life Assurance Company, Ltd.,

(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live—today—a few years more—when you are old?

If you die—to your family and dependants?

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | |
|---|---|
| Completed Business | Rs. 1,44,91,000 |
| Life Assurance Fund | Rs. 1,17,69,748 |
| Total Assets | Rs. 1,31,28,998 |

*To insure or to represent it pays you to consult*

**KOCHHAR BROTHERS LTD.,**

*MADRAS BRANCH SECRETARIES,*

**Bombay Life Building,**

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut. — Car Street, Mangalore. — Visweswarapuram Circle, Bangalore City. — Post Box No. 387 Mount Road, Madras.

Gautam Nivas, Charni Road, Girgaum, Bombay No. 4. — Central Station Road, Trivandrum.

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

which will tone the nervous system, build healthy tissues and enrich the blood.

**Thus keeps you fresh and sprightly.**

**Bhuvanendra Products, Ltd.,**

**Katapady, S. Kanara.**

(BRANCH—KUMTA, N. KANARA.)

Stockist: U. Pandurange Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣತ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

## ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**

ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಯು. ಪಾಂಡುರಂಗ ನ್ಾಯ್ಕ್, ರಥಬೀದಿ, ಮಂಗಳೂರು.

Estd. 1906

# ಸ್ವದೇಶಾಭಿಮಾನಿ

# SWADESHABHIMANI



KANNADA ILLUSTRATED WEEKLY

# ಅಧಿಕ ಆದಾಯದ ಮೇಲೆ ತೆರಿಗೆ ಹೊರಿಸುವ ಶಾಸನ

## ದೇಶೀಯ ಕೈಗಾರಿಕೆಗಳ ಬುಡಕ್ಕೆ ಬೀಸಿದ ಕೊಡಲಿ

ವರ್ಷಾವಧಿ ಐವತ್ತು ಸಾವಿರಕ್ಕೂ ಮೀರಿ ಆದಾಯವಿರುವ ಕೈಗಾರಿಕೆ ವಾಣಿಜ್ಯಾದಿಗಳ ಮೇಲೆ ಸೇಕಡ ೫೦ರಷ್ಟು ತನಕ ಹೊಸ ತೆರಿಗೆಯನ್ನು ಹಾಕುವ ಒಂದು ಅವಸರದ ಮಸೂದೆಯನ್ನು ಭಾರತ ಸರಕಾರವು ಕೇಂದ್ರ ಎಸೆಂಬ್ಲಿಯಲ್ಲಿ ತಂದಿದೆ. ಈ ಮಸೂದೆಯು ಶಾಸನವಾಯಿತೆಂದರೆ ಭಾರತದ ಕೈಗಾರಿಕೆ ವಾಣಿಜ್ಯಗಳ ಬುಡಕ್ಕೆ ಕೊಡಲಿಯ ಏಟನ್ನು ಕೊಟ್ಟಂತೆ ಆಗುವುದರಲ್ಲಿ ಸಂದೇಹವಿರುವುದಿಲ್ಲ. ಆದುದರಿಂದ ಭಾರತದ ಎಲ್ಲ ಪಕ್ಷಗಳ ಜನರೂ ಈ ಮಸೂದೆಯನ್ನು ಕಟೋಕ್ತಿಗಳಿಂದ ಖಂಡಿಸಿದ್ದಾರೆ. ಬಾಲ್ಯಾವಸ್ಥೆಯಲ್ಲಿರುವ ದೇಶೀ ಕೈಗಾರಿಕೆಗಳಿಗೆ ಈ ಮಸೂದೆಯು ಬಾಲಗ್ರಹದಂತಾಗಿ ಅವುಗಳ ಕತ್ತು ಹಿಸುಕಲಾರದು. ಭಾರತೀಯರು ಕೈಗಾರಿಕೆ ವಾಣಿಜ್ಯಗಳಲ್ಲಿ ಭಂಡವಾಲವನ್ನು ವಿನಿಯೋಗಿಸಲಿಕ್ಕೆ ಬಹಳ ಅಂಜುತ್ತಿರುವ ಈ ಸಮಯದಲ್ಲಿ ಈ ಮಸೂದೆಯನ್ನು ಮುಂತಂದು ಭಾರತ ಸರಕಾರವು ತನ್ನ ಅದೂರದರ್ಶಿತೆಯನ್ನು ಪ್ರದರ್ಶಿಸಿದೆ.

ಯುರೋಪದಲ್ಲಿ ಯುದ್ಧ ನಡೆಯುತ್ತಿದ್ದುದರಿಂದ ದೇಶೀ ಕೈಗಾರಿಕೆಗಳಿಗೆ ಹೊಸ ಜೀವ ಬರಬಹುದೆಂದು ಎಣಿಸಲಾಗಿತ್ತು. ಯುದ್ಧ ಪ್ರಸಂಗದಿಂದ ಸಿದ್ಧ ಸಾಮಗ್ರಿಗಳಿಗೆ ಕಿಮ್ಮತ್ತೇರಿ ಹೆಚ್ಚು ಲಾಭ ದೊರೆಯುವುದರಿಂದ ಆ ಲಾಭದ ಹಣದಿಂದ ಹೊಸ ಹೊಸ ಕೈಗಾರಿಕೆಗಳನ್ನು ಆರಂಭಿಸಲಿಕ್ಕಾಗುತ್ತದೆ. ಆದರೆ ಲಾಭದ ಮೇಲೆ ಹೊಸ ತೆರಿಗೆಯನ್ನು ಹಾಕಿದ್ದರಿಂದ, ಹೊಸ ಕೈಗಾರಿಕೆಗಳ ಸ್ಥಾಪನೆಗೆ ಭಂಡವಾಲವೇ ದೊರೆಯದ ಹಾಗೆ ಸರಕಾರವು ಮಾಡಿದಂತಾಗುತ್ತದೆ. ಶಾಂತಿಯ ಕಾಲದ ಸರಕಾರದ ಆರ್ಥಿಕ ನೀತಿ ಮತ್ತು ದೇಶೀಯರ ಕೈಯಲ್ಲಿಲ್ಲದ ಬೇರೆ ಕಾರಣಗಳಿಂದ ಭಾರತೀಯ ಕೈಗಾರಿಕೆಗಳು ಬದುಕಿ ಉಳಿಯುವುದೇ ಕಷ್ಟವಾಗಿತ್ತು. ಯುದ್ಧ ಆರಂಭವಾದಾಗ, ಅದು ಭಾರತೀಯ ಕೈಗಾರಿಗಳಿಗೆ ವರದಾನವೆಂದು ತಿಳಿದು, ಅವುಗಳಿಗೆ ಮತ್ತಷ್ಟು ಪ್ರೋತ್ಸಾಹವನ್ನು ಕೊಡುವುದು ಸರಕಾರದ ಕರ್ತವ್ಯವಿತ್ತು. ಸರಕಾರವು ಈ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಟ್ಟು ಉಪಕಾರ ಮಾಡುವುದರ ಬದಲಿಗೆ ಈ ಮಸೂದೆಯನ್ನು ಮುಂತಂದು ಅಪಕಾರವನ್ನು ಮಾಡಲಿಕ್ಕೆ ಎಣಿಸಿದೆ.

### ಹಕ್ಕು ಅಧಿಕಾರಿಗಳ ಅಪಕಾರ

ಯುದ್ಧ ಕಾಲದ ಅನಿರೀಕ್ಷಿತ ಲಾಭದ ಮೇಲೆ ಈ ತೆರಿಗೆ ಇರುವುದೆಂದೂ, ಯುದ್ಧ ಕಾಲದಲ್ಲಿ ಸರಕಾರದ ಖರ್ಚು ಬೆಳೆದಿರುವುದರಿಂದ ಅದಕ್ಕೆ ಹಣದ ಆವಶ್ಯಕತೆ ಇರುತ್ತದೆಂದೂ ಸರಕಾರದ ಮೇಲಧಿಕಾರಿಗಳು ಹೇಳುತ್ತಾರೆ. ಯುದ್ಧ ಕಾಲದ ವಿಶೇಷ ಪರಿಸ್ಥಿತಿಯನ್ನು ತನ್ನ ಲಾಭಕ್ಕೆ ಉಪಯೋಗಿಸಿಕೊಳ್ಳುವ ಹಕ್ಕು ಅಧಿಕಾರಗಳನ್ನು ಸರಕಾರವು ಈ ಮಸೂದೆಯ ಮೂಲಕ ಕಿತ್ತುಕೊಂಡಿದೆ. ಸರಕಾರದ ಖರ್ಚು ಬೆಳೆದಿರುವುದಾದರೆ ಸರಕಾರದ ಅಗತ್ಯಗಳೇನೆಂಬುದರ ವಿವರಗಳನ್ನು ಸರಕಾರವು ಮೊದಲು ಕೊಡಬೇಕಿತ್ತು. ಆದರೆ ಮುಂದಿನ ವರ್ಷದ ಆಯವ್ಯಯದ ಅಂದಾಜು ಪಟ್ಟಿಯನ್ನು ಮಂಡಿಸುವ ಮೊದಲೇ ಅಂದರೆ ತನ್ನ ಆರ್ಥಿಕ ಸ್ಥಿತಿಗತಿಗಳ ಪರಿಚಯವನ್ನು ದೇಶಕ್ಕೆ ಮಾಡಿಕೊಡುವ ಮೊದಲೇ ಸರಕಾರವು ಅವಸರದಿಂದ ಈ ಮಸೂದೆಯನ್ನು ತಂದಿದೆ. ಸರಕಾರಕ್ಕೆ ಈ ರೀತಿ ಅವಸರಪಡುವ ಕಾರಣವೇ ಇದ್ದಿಲ್ಲ. ಅದರಲ್ಲೂ ಎಸೆಂಬ್ಲಿಯಲ್ಲಿ ಬಹುಸಂಖ್ಯಾಕರಾಗಿರುವ ಕಾಂಗ್ರೆಸು ಸದಸ್ಯರು ಗೈರುಹಾಜರಾಗಿರುವ ಈ ಸಂದರ್ಭದಲ್ಲಿ ಈ ಮಸೂದೆಯನ್ನು ಹೇಗೂ ಮಾಡಿ ಅದನ್ನು ಮಂಜೂರು ಮಾಡಿಸಿಕೊಳ್ಳುವ ಹಠದಲ್ಲಿ ಸರಕಾರವು ಇರುವುದನ್ನು ನೋಡುವಾಗ ಅದರ ಸದ್ವರ್ತನ ಮತ್ತು ಸದಿಚ್ಛೆಯ ಕುರಿತು ಸಂದೇಹವುಂಟಾಗುತ್ತದೆ.

ವಿಲಾಯತಿಯ ಕಾನೂನಿನ ಆಧಾರದಲ್ಲಿ ಈ ಮಸೂದೆಯು ಇರುವುದರಿಂದ ದೇಶಕ್ಕೆ ಅನ್ಯಾಯವಾಗುವ ಹಾಗಿಲ್ಲವೆಂದು ಸರಕಾರವು ಹೇಳುತ್ತದೆ. ಆದರೆ ವಿಲಾಯತಿಯ ಪರಿಸ್ಥಿತಿಯೇ ಬೇರೆ, ನಮ್ಮ ದೇಶದ ಪರಿಸ್ಥಿತಿಯೇ ಬೇರೆ. ವಿಲಾಯತಿಯ ಕೈಗಾರಿಕೆಗಳ ಅದರ ಅವಾಂತರಕ್ಕಾದರೂ ತಳಕೊಡುವ ಸುದೃಢವತ್ತು ಸುಭದ್ರ ಸ್ಥಿತಿಯಲ್ಲಿ ಇವೆ. ನಮ್ಮ ಕೈಗಾರಿಕೆಗಳ ಇನ್ನೂ ಶೈಶವಾವಸ್ಥೆಯನ್ನು ಕಳೆದಿಲ್ಲ. ವಿಲಾಯತಿಯ ಕೈಗಾರಿಕೆಗಳ ಮೇಲೆ ಅಷ್ಟು ದೊಡ್ಡ ತೆರಿಗೆಯ ಭಾರವನ್ನು ಹೇರಿದರೆ ಅವು ತಾಳಲಿಕ್ಕೆ ಶಕ್ತವಾಗಿವೆ. ಆದರೆ ನಮ್ಮ ಕೈಗಾರಿಕೆಗಳ ಬಹಳ ದುರ್ಬಲ ಸ್ಥಿತಿಯಲ್ಲಿರುವವು. ಈ ಮಸೂದೆಯನ್ನು ತಯಾರಿಸುವಾಗ ಸರಕಾರವು ಇದನ್ನು ಲಕ್ಷಿಸಬೇಕಾಗಿತ್ತು. ಲಾಭ ನೋಡಿಯೇ ಹಣವನ್ನು ವಿನಿಯೋಗಿಸುವ ಭಾರತೀಯರ ಮನೋವೃತ್ತಿಯು ಇರುವಾಗ ಲಾಭದ ಮೇಲೆ ತೆರಿಗೆ ಹಾಕಿದ್ದು, ಅವರು ಕೈಗಾರಿಕೆಗಳ ಮೇಲೆ ಹಣವನ್ನೇ ವಿನಿಯೋಗಿಸದ ಹಾಗೆ ಮಾಡಿದಂತಾಯಿತು.

### ಸರಕಾರದ ಮಾರ್ಗ

ಸರಕಾರಕ್ಕೆ ಹಣವನ್ನು ದೊರಕಿಸಿಕೊಳ್ಳುವ ಬೇರೆ ಉಪಾಯಗಳಿವೆ. ಭಾರತದ ಕೈಗಾರಿಕೆಗಳು ಉನ್ನತಾವಸ್ಥೆಗೆ ಬರುವುದಾದರೆ ದೇಶವು ಸಂಪನ್ನವಾಗುವುದಾದರೆ, ಸರಕಾರಕ್ಕೆ ಹಣವು ಸುಲಭದಲ್ಲಿ ಕೂಡಿಬರುವುದು. ಕೈಗಾರಿಕೆಗಳ ಉನ್ನತಿಯೇ ಸರಕಾರದ ಲಕ್ಷ್ಯವಾಗಿರಬೇಕು. ಅದರಿಂದ ಸರಕಾರದ ಸ್ವಾರ್ಥವು ಸಿದ್ಧವಾಗುತ್ತದೆ. ದೇಶದ ಉನ್ನತಿಯೂ ಆಗುತ್ತದೆ. ಈಗ ಭಾರತ ಸರಕಾರವು ಮಂಡಿಸಿದ ಮಸೂದೆಯನ್ನು ಸರಕಾರವು ಪೂರ್ಣರೂಪದಿಂದ ಹಿಂದಕ್ಕೆ ತೆಗೆದುಕೊಳ್ಳಬೇಕು. ಅಥವಾ ಅದರ ಸ್ವರೂಪದಲ್ಲಿ ಬಹಳ ಪರಿವರ್ತನೆಗಳಾದ ಹೊರತು ಈ ಮಸೂದೆಯು ಕಾನೂನಾಗುವುದರಿಂದ ಭಾರತೀಯ ಕೈಗಾರಿಕೆಗಳಿಗೆ ಮಾತ್ರವಲ್ಲ, ಪರಿಣಾಮದಲ್ಲಿ ಭಾರತ ಸರಕಾರಕ್ಕೇ ಬಹಳ ನಷ್ಟ ಉಂಟಾಗಬಹುದು. ಯಾಕೆಂದರೆ ಭಾರತೀಯ ಕೈಗಾರಿಕೆಗಳ ನಷ್ಟವೆಂದರೆ ಭಾರತ ಸರಕಾರದ ನಷ್ಟವೇ ಆಗಿರುವುದು. ಜನಮತವನ್ನು ತಿರಸ್ಕರಿಸಿ ಕೇಂದ್ರ ಎಸೆಂಬ್ಲಿಯಲ್ಲಿ ಈ ಶಾಸನ ಮಾಡುವುದಾಗಿ ಸರಕಾರದ ಉತ್ತರ ದಾಯಿತ್ವವು ಬಹಳ ಹೆಚ್ಚುತ್ತದೆ. ಅದನ್ನು ತಿಳಕೊಂಡೇ ಸರಕಾರವು ವರ್ತಿಸಿ ದೇಶದ ವಿಶ್ವಾಸ ಸಂಪಾದನೆಗೆ ಪಾತ್ರರಾಗುವುದು ಎಂದು ನಂಬುತ್ತೇವೆ.

---

# ಖಾದೀ ಪ್ರಚಾರವು ರಾಷ್ಟ್ರೀಯ ಧರ್ಮವು

### ಚರಕಾ ಸಂಘದ ಖಾದಿಯೇ ನಿಜವಾದ ಖಾದಿ

ರಾಷ್ಟ್ರೀಯ ಮಹಾಸಭೆಯೂ, ಮಹಾತ್ಮಾ ಗಾಂಧಿಯವರೂ ಖಾದಿಯೇ ಸ್ವರಾಜ್ಯದ ಹಾದಿ ಎಂದು ಹೇಳುವರು. ಅದೇಕೆ? ಬ್ರಿಟಿಷರ ಆಳಿಕೆಯಿಂದೀಚೆಗೆ ಹಡಗು ಪಡೆ ಹಾಗೂ ಕಲ್ಲಿದ್ದಲು-ಯಂತ್ರಗಳ ಭೂಮಿಯಾದ ಇಂಗ್ಲಂಡದ ಸರಕುಗಳು ಈ ದೇಶದಲ್ಲಿ ಅಗ್ಗವಾಗಿ ದೊರೆಯುತ್ತಿರುವವು. ಇಂಥ ವ್ಯಾಪಾರವನ್ನು ಮುಂದುವರಿಸುವದೇ ನಮ್ಮ ಪರಕೀಯ ಸರಕಾರದ ಉದ್ದಿಶ್ಯವಾಯಿತು. ಈ ಅನ್ಯಾಯದ ಮೇಲಾಟದಿಂದ ಕೃಷಿಯ ತರುವಾಯ ಅತ್ಯಂತ ದೊಡ್ಡದಾದ ಬಟ್ಟೆಯ ಅಂದರೆ ನೂಲುವ ನೇಯುವ ಉದ್ಯೋಗವು ಕಟ್ಟಾಯಿತು. ಇಂಗ್ಲಂಡ ಅಥವಾ ಪರದೇಶಗಳ ಬಟ್ಟೆಗಳ ಬರವು ಪೂರ್ವದಲ್ಲಿ ಹಿಂದೀಯರಿಗೆ ಬೇಕಾಗುವ ಎಲ್ಲ ವಸ್ತ್ರಗಳು ಇದೇ ದೇಶದಲ್ಲಿ ಸಿದ್ಧವಾಗುತ್ತಿದ್ದವಲ್ಲದೆ ಪರದೇಶಗಳಿಗೆ ಕೂಡಾ ಕೆಲವು ಮಟ್ಟಿಗೆ ಅವನ್ನು ಪೂರೈಸಲಾಗುತ್ತಿತ್ತು. ಈಗ ಪರಕೀಯರ ಆಂಗ್ಲರ ಧೋರಣೆಯಿಂದ ನಾಶಕವಾದ ಇಂಥ ದೊಡ್ಡ ವ್ಯವಸಾಯವು ಮೂಲೆಗೆ ಬಿದ್ದು ಜನರ ಹೊಟ್ಟೆಗಿಲ್ಲದೆ ಕಂಗಾಲಾಗತೊಡಗಿರುವರು. ಈ ಕಂಗಾಲ ಸ್ಥಿತಿಯನ್ನು ಮುಂದೆ ಮಾಡುವ ಹಂಚಿಕೆಗಳ ಯೋಜನೆಗಾಗಿಯೇ ೧೯೨೦ರಲ್ಲಿ ರಾಷ್ಟ್ರೀಯ ಮಹಾಸಭೆಯ ದನ್ನವತ್ತಿಗೆ ಖಾದಿಯ ಕಾರ್ಯಕ್ರಮವನ್ನು ಜಾರಿಯಲ್ಲಿ ತಂದಿತು. ಆಗಿಂದ ಈಗಿನವರೆಗೆ ಖಾದಿಯು ನಮ್ಮ ಸ್ವರಾಜ್ಯದ ಹೋರಾಟದ ಅಡಿಗಲ್ಲಾಗಿದೆ. ಹೀಗೆ ಪವಮಾನ ವ್ಯವಸಾಯದ ಸುತ್ತಲೂ ಇತರ ಉದ್ಯೋಗಗಳಿಗೆ ಆಸ್ಪದವುಂಟಾಗಿ ಹೊಟ್ಟೆಗಿಲ್ಲದೆ ಅಲೆದಾಡುತ್ತಿರುವ ನಮ್ಮ ಬಡ ಬಾಂಧವರಿಗೆ ಉಪಜೀವನದ ಮಾರ್ಗವಾಗುವದು.

ಅನ್ನ ಹಾಗೂ ವಸ್ತ್ರಗಳಿಲ್ಲದೆ ಮನುಷ್ಯನು ಜೀವಿಸಲಾರನು. ಇವೆರಡನ್ನೂ ಒದಗಿಸಿ ಕೊಡುವ ಖಾದೀ ಪ್ರಚಾರವು ನಮ್ಮ ರಾಷ್ಟ್ರೀಯ ಧರ್ಮವಲ್ಲದೆ ಮತ್ತೇನು? ಕೃಷಿಪ್ರಧಾನ ಹಿಂದುಸ್ಥಾನದಲ್ಲಿ ಒಕ್ಕಲತನವು ವರ್ಷದಲ್ಲಿ ೬ ತಿಂಗಳ ಅಥವಾ ೮ ತಿಂಗಳ ನಡೆಯುವ ಹೊಲಿಯ. ಇಂತಹ ದರಲ್ಲಿ ನೂಲುವ ಹಾಗೂ ನೇಯುವ ವ್ಯವಸಾಯದಂತ ಸಾರ್ವತ್ರಿಕವೂ ವ್ಯಾಪಕವೂ ಆದ ವ್ಯವಸಾಯವೇ ಜನರ ಜೀವನಾಧಾರವು. ಇಂಥ ಬಿಡುವೇಪವಾದ ಉದ್ಯೋಗವನ್ನು ಪ್ರೋತ್ಸಾಹಿಸುವದೇ ಪ್ರತಿಯೊಬ್ಬ ದೇಶಹಿತಚಿಂತಕರ ಪರಮ ಧರ್ಮವಿದ್ದು ಗಾಂಧೀ ಮಾರ್ಚನೊಳಗಾಗಿ ರೂಪಾಯಿ ೫೦,೦೦೦ ಬೆಲೆಬಾಳುವ ಹೆಚ್ಚಿನ ಖಾದಿಯನ್ನು ಮಾರಾಟ ಮಾಡಬೇಕೆಂದು ಮಾಡಿರುವ ಗೊತ್ತುವಳಿಯನ್ನು ಯಶಸ್ವಿಮಾಡಲು ಮನಮುಟ್ಟಿ ಪ್ರಯತ್ನಿಸಬೇಕೆಂದು ಕ. ಪ್ರಾಂ. ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

# ಅಧಿಕ ಆದಾಯದ ಮೇಲೆ ತೆರಿಗೆ ಹೊರಿಸುವ ಶಾಸನ

## ದೇಶೀಯ ಕೈಗಾರಿಕೆಗಳ ಬುಡಕ್ಕೆ ಬೀಸಿದ ಕೊಡಲಿ

ವರ್ಗದ ... ವಿಶೇಷ ಆದಾಯವಿರುವ ಕೈಗಾರಿಕೆ ವಾಣಿಜ್ಯಾದಿಗಳ ಮೇಲೆ ಸೇಕಡ ೫೦ರ ತನಕ ಹೊಸ ತೆರಿಗೆಯನ್ನು ಹಾಕುವ ಒಂದು ಅರಸರದ ಮಸೂದೆಯನ್ನು ಭಾರತ ಸರಕಾರವು ಕೇಂದ್ರ ಎಸೆಂಬ್ಲಿಯಲ್ಲಿ ತಂದಿದೆ. ಈ ಮಸೂದೆಯು ಕಾನೂನಾದರೆ ಭಾರತದ ಕೈಗಾರಿಕೆ ವಾಣಿಜ್ಯಗಳ ಬುಡಕ್ಕೆ ಕೊಡಲಿಯ ಏಟನ್ನು ಕೊಟ್ಟಂತೆ ಆಗುವುದರಲ್ಲಿ ಸಂದೇಹವಿರುವುದಿಲ್ಲ. ಆದುದರಿಂದ ಭಾರತದ ಎಲ್ಲ ಪಕ್ಷಗಳ ಜನರೂ ಈ ಮಸೂದೆಯನ್ನು ಕಠೋರ ಶಬ್ದಗಳಿಂದ ಖಂಡಿಸಿದ್ದಾರೆ. ಬಾಲ್ಯಾವಸ್ಥೆಯಲ್ಲಿರುವ ದೇಶೀ ಕೈಗಾರಿಕೆಗಳಿಗೆ ಈ ಮಸೂದೆಯು ಬಾಲಗ್ರಹದಂತಾಗಿ ಅವುಗಳ ಕತ್ತು ಹಿಸುಕಲಾರದು. ಭಾರತೀಯರು ಕೈಗಾರಿಕೆ ವಾಣಿಜ್ಯಗಳಲ್ಲಿ ಭಂಡವಾಳವನ್ನು ವಿನಿಯೋಗಿಸಲಿಕ್ಕೆ ಬಹಳ ಅಂಜುತ್ತಿರುವ ಈ ಸಮಯದಲ್ಲಿ ಈ ಮಸೂದೆಯನ್ನು ಮುಂತಂದು ಭಾರತ ಸರಕಾರವು ತನ್ನ ಅದೂರದರ್ಶಿತೆಯನ್ನು ಪ್ರದರ್ಶಿಸಿದೆ.

ಯುರೋಪಿನಲ್ಲಿ ಯುದ್ಧ ನಡೆಯುತ್ತಿದ್ದುದರಿಂದ ದೇಶೀ ಕೈಗಾರಿಕೆಗಳಿಗೆ ಹೊಸ ಜೀವ ಬರಬಹುದೆಂದು ಎಣಿಸಲಾಗಿತ್ತು. ಯುದ್ಧ ಪ್ರಸಂಗದಿಂದ ಸಿದ್ಧ ಸಾಮಗ್ರಿಗಳಿಗೆ ಕ್ರಯವೇರಿ ಹೆಚ್ಚು ಲಾಭ ದೊರೆಯುವುದರಿಂದ ಆ ಲಾಭದ ಹಣದಿಂದ ಹೊಸ ಹೊಸ ಕೈಗಾರಿಕೆಗಳನ್ನು ಆರಂಭಿಸಲಿಕ್ಕಾಗುತ್ತದೆ. ಆದರೆ ಲಾಭದ ಮೇಲೆ ಹೊಸ ತೆರಿಗೆಯನ್ನು ಹಾಕಿದ್ದರಿಂದ, ಹೊಸ ಕೈಗಾರಿಕೆಗಳ ಸ್ಥಾಪನೆಗೆ ಭಂಡವಾಳವೇ ದೊರೆಯದ ಹಾಗೆ ಸರಕಾರವು ಮಾಡಿದಂತಾಗುತ್ತದೆ. ಶಾಂತಿಯ ಕಾಲದ ಸರಕಾರದ ಆರ್ಥಿಕ ನೀತಿ ಮತ್ತು ದೇಶೀಯರ ಕೈಯಲ್ಲಿಲ್ಲದ ಬೇರೆ ಕಾರಣಗಳಿಂದ ಭಾರತೀಯ ಕೈಗಾರಿಕೆಗಳು ಬದುಕಿ ಉಳಿಯುವುದೇ ಕಷ್ಟವಾಗಿತ್ತು. ಯುದ್ಧ ಆರಂಭವಾದಾಗ, ಅದು ಭಾರತೀಯ ಕೈಗಾರಿಕೆಗಳಿಗೆ ವರದಾನವೆಂದು ತಿಳಿದು, ಅವುಗಳಿಗೆ ಮತ್ತಷ್ಟು ಪ್ರೋತ್ಸಾಹವನ್ನು ಕೊಡುವುದು ಸರಕಾರದ ಕರ್ತವ್ಯವಿತ್ತು. ಸರಕಾರವು ಈ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಟ್ಟು ಉಪಕಾರ ಮಾಡುವುದರ ಬದಲಿಗೆ ಈ ಮಸೂದೆಯನ್ನು ಮುಂತಂದು ಅಪಕಾರವನ್ನು ಮಾಡಲಿಕ್ಕೆ ಎಣಿಸಿದೆ.

### ಹಕ್ಕು ಅಧಿಕಾರಿಗಳ ಅಪಕಾರ

ಯುದ್ಧ ಕಾಲದ ಅನಿರೀಕ್ಷಿತ ಲಾಭದ ಮೇಲೆ ಈ ತೆರಿಗೆ ಇರುವುದೆಂದೂ, ಯುದ್ಧ ಕಾಲದಲ್ಲಿ ಸರಕಾರದ ಖರ್ಚು ಬೆಳೆದಿರುವುದರಿಂದ ಅದಕ್ಕೆ ಹಣದ ಆವಶ್ಯಕತೆ ಇರುತ್ತದೆಂದೂ ಸರಕಾರದ ಮೇಲಧಿಕಾರಿಗಳು ಹೇಳುತ್ತಾರೆ. ಯುದ್ಧ ಕಾಲದ ವಿಶೇಷ ಪರಿಸ್ಥಿತಿಯನ್ನು ತನ್ನ ಲಾಭಕ್ಕೆ ಉಪಯೋಗಿಸಿಕೊಳ್ಳುವ ಹಕ್ಕು ಅಧಿಕಾರಗಳನ್ನು ಸರಕಾರವು ಈ ಮಸೂದೆಯ ಮೂಲಕ ಕಿತ್ತುಕೊಂಡಿದೆ. ಸರಕಾರದ ಖರ್ಚು ಬೆಳೆದಿರುವುದಾದರೆ ಸರಕಾರದ ಅಗತ್ಯಗಳೇನೆಂಬುದರ ವಿವರಗಳನ್ನು ಸರಕಾರವು ಮೊದಲು ಕೊಡಬೇಕಿತ್ತು. ಆದರೆ ಮುಂದಿನ ವರ್ಷದ ಆಯವ್ಯಯದ ಅಂದಾಜು ಪಟ್ಟಿಯನ್ನು ನಮ್ಮೆದುರು ಇಡುವ ಮೊದಲೇ ಅಂದರೆ ತನ್ನ ಆರ್ಥಿಕ ಸ್ಥಿತಿಗತಿಗಳ ಪರಿಚಯವನ್ನು ದೇಶಕ್ಕೆ ಮಾಡಿಕೊಡುವ ಮೊದಲೇ ಸರಕಾರವು ಅವಸರದಿಂದ ಈ ಮಸೂದೆಯನ್ನು ತಂದಿದೆ. ಸರಕಾರಕ್ಕೆ ಈ ರೀತಿ ಅವಸರಪಡುವ ಕಾರಣವೇ ಇದ್ದಿಲ್ಲ. ಅದರಲ್ಲೂ ಎಸೆಂಬ್ಲಿಯಲ್ಲಿ ಬಹುಸಂಖ್ಯಾಕರಾಗಿರುವ ಕಾಂಗ್ರೆಸು ಸದಸ್ಯರು ಗೈರುಹಾಜರಾಗಿರುವ ಈ ಸಂದರ್ಭದಲ್ಲಿ ಈ ಮಸೂದೆಯನ್ನು ಹೇಗೂ ಮಾಡಿ ಅದನ್ನು ಮಂಜೂರು ಮಾಡಿಸಿಕೊಳ್ಳುವ ಹಠದಲ್ಲಿ ಸರಕಾರವು ಇರುವುದನ್ನು ನೋಡುವಾಗ ಅದರ ಸದ್ವರ್ತನೆ ಮತ್ತು ಸದಿಚ್ಛೆಯ ಕುರಿತು ಸಂದೇಹವುಂಟಾಗುತ್ತದೆ.

ವಿಲಾಯತಿಯ ಕಾನೂನಿನ ಮಾದರಿಯಲ್ಲಿ ಈ ಮಸೂದೆಯು ಇರುವುದರಿಂದ ದೇಶಕ್ಕೆ ಅನ್ಯಾಯವಾಗುವ ಹಾಗಿಲ್ಲವೆಂದು ಸರಕಾರವು ಹೇಳುತ್ತದೆ. ಆದರೆ ವಿಲಾಯತಿಯ ಪರಿಸ್ಥಿತಿಯೇ ಬೇರೆ; ನಮ್ಮ ದೇಶದ ಪರಿಸ್ಥಿತಿಯೇ ಬೇರೆ. ವಿಲಾಯತಿಯ ಕೈಗಾರಿಕೆಗಳು ಎಂಥ ಆಘಾತಗಳನ್ನಾದರೂ ತಲೆಕೊಡುವ ಸುದೃಢ ಮತ್ತು ಸುಭದ್ರ ಸ್ಥಿತಿಯಲ್ಲಿ ಇವೆ. ನಮ್ಮ ಕೈಗಾರಿಕೆಗಳು ಇನ್ನೂ ಶೈಶವಾವಸ್ಥೆಯನ್ನು ಕಳೆದಿಲ್ಲ. ವಿಲಾಯತಿಯ ಕೈಗಾರಿಕೆಗಳ ಮೇಲೆ ಅಷ್ಟು ದೊಡ್ಡ ತೆರಿಗೆಯ ಭಾರವನ್ನು ಹೊರಿಸಿದರೆ ಅವು ಹೊರಲಿಕ್ಕೆ ಶಕ್ತವಾಗಿವೆ. ಆದರೆ ನಮ್ಮ ಕೈಗಾರಿಕೆಗಳು ಬಹಳ ದುರ್ಬಲ ಸ್ಥಿತಿಯಲ್ಲಿರುವವು. ಮಸೂದೆಯನ್ನು ತಯಾರಿಸುವಾಗ ಸರಕಾರವು ಇದನ್ನು ಲಕ್ಷಿಸಬೇಕಾಗಿತ್ತು. ಲಾಭ ನೋಡಿಯೇ ಹಣವನ್ನು ವಿನಿಯೋಗಿಸುವ ಭಾರತೀಯರ ಮನೋವೃತ್ತಿಯು ಇರುವಾಗ ಲಾಭದ ಮೇಲೆ ತೆರಿಗೆ ಹಾಕಿದ್ದು, ಅವರು ಕೈಗಾರಿಕೆಗಳ ಮೇಲೆ ಹಣವನ್ನೇ ವಿನಿಯೋಗಿಸದ ಹಾಗೆ ಮಾಡಿದಂತಾಯಿತು.

### ಸರಕಾರದ ಮಾರ್ಗ

ಸರಕಾರಕ್ಕೆ ಹಣವನ್ನು ದೊರಕಿಸಿಕೊಳ್ಳುವ ಬೇರೆ ಉಪಾಯಗಳಿವೆ. ಭಾರತದ ಕೈಗಾರಿಕೆಗಳು ಉನ್ನತಾವಸ್ಥೆಗೆ ಬರುವುದಾದರೆ ದೇಶವು ಸಂಪನ್ನವಾಗುವುದಾದರೆ, ಸರಕಾರಕ್ಕೆ ಹಣವು ಸುಲಭದಲ್ಲಿ ಕೂಡಿಬರುವುದು. ಕೈಗಾರಿಕೆಗಳ ಉನ್ನತಿಯೇ ಸರಕಾರದ ಲಕ್ಷ್ಯವಾಗಿರಬೇಕು. ಅದರಿಂದ ಸರಕಾರದ ಸ್ವಾರ್ಥವು ಸಿದ್ಧವಾಗುತ್ತದೆ. ದೇಶದ ಉನ್ನತಿಯೂ ಆಗುತ್ತದೆ. ಈಗ ಭಾರತ ಸರಕಾರವು ಮುಂತಂದ ಮಸೂದೆಯನ್ನು ಸರಕಾರವು ಪೂರ್ಣರೂಪದಿಂದ ಹಿಂತೆಗೆದುಕೊಂಡ ಹೊರತು ಅಥವಾ ಅದರ ಸ್ವರೂಪದಲ್ಲಿ ಬಹಳ ಪರಿವರ್ತನೆಗಳಾದ ಹೊರತು, ಈ ಮಸೂದೆಯು ಕಾನೂನಾಗುವುದರಿಂದ ಭಾರತೀಯ ಕೈಗಾರಿಕೆಗಳಿಗೆ ಮಾತ್ರವಲ್ಲ, ಪರಿಣಾಮದಲ್ಲಿ ಭಾರತ ಸರಕಾರಕ್ಕೇ ಬಹಳ ನಷ್ಟ ಉಂಟಾಗಬಹುದು. ಯಾಕೆಂದರೆ ಭಾರತೀಯ ಕೈಗಾರಿಕೆಗಳ ನಷ್ಟವೆಂದರೆ ಭಾರತ ಸರಕಾರದ ನಷ್ಟವೇ ಆಗುವುದು. ಜನಮತವನ್ನು ಪ್ರಕಟಿಸಬಲ್ಲ ಸಭಾಸದರು ಕೇಂದ್ರ ಎಸೆಂಬ್ಲಿಯಲ್ಲಿ ಈಗ ಅಲ್ಪಸಂಖ್ಯಾಕರಾಗಿರುವಾಗ ಸರಕಾರದ ಉತ್ತರದಾಯಿತ್ವವು ಬಹಳ ಇರುತ್ತದೆ. ಅದನ್ನು ತಿಳಿಕೊಂಡೇ ಸರಕಾರವು ವರ್ತಿಸಿ ದೇಶದ ವಿಶ್ವಾಸ ನಂಬುಗೆಗೆ ಪಾತ್ರವಾಗುವುದು ಎಂದು ನಂಬುತ್ತೇವೆ.

ಮಕ್ಕಳಿಗೆ
ಡೊಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಬಿಳಜ್ವರ ಮತ್ತು ಕೆಮ್ಮು ಇಲ್ಲದಂ
ತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ


# ಖಾದೀ ಪ್ರಚಾರವು ರಾಷ್ಟ್ರೀಯ ಧರ್ಮವು

## ಚರಕಾ ಸಂಘದ ... ಕರೆ

### ನಿಜವಾದ ಖಾದಿ

ರಾಷ್ಟ್ರೀಯ ಮಹಾಸಭೆಯೂ ಮಹಾತ್ಮಾ ಗಾಂಧಿಯವರೂ ಖಾದಿಯೇ ಸ್ವರಾಜ್ಯದ ಹಾದಿ ಎಂದು ಹೇಳುವರು. ಅದೇಕೆ? ಬ್ರಿಟಿಷರ ಆಳಿಕೆಯಿಂದೀಚೆಗೆ ಹಡಗು ಪಡೆ ಹಾಗೂ ಕಲ್ಲಿದ್ದಲು ಯಂತ್ರಗಳ ಭೂಮಿಯಾದ ಇಂಗ್ಲಂಡದ ಸರಕುಗಳು ಈ ದೇಶದಲ್ಲಿ ಅಗ್ಗವಾಗಿ ದೊರೆಯಹತ್ತಿರುವವು. ಇಂಥ ವ್ಯಾಪಾರವನ್ನು ಮುಂದುವರಿಸುವದೇ ನಮ್ಮ ಪರಕೀಯ ಸರಕಾರದ ಉದ್ದಿಶ್ಯವಾಯಿತು. ಈ ಅನ್ಯಾಯದ ಮೇಲಾಟದಿಂದ ಕೃಷಿಯ ತರುವಾಯ ಅತ್ಯಂತ ದೊಡ್ಡದಾದ ಬಟ್ಟೆಯ ಅಂದರೆ ನೂಲುವ ನೇಯುವ ಉದ್ಯೋಗವು ಕಟ್ಟಾಯ್ತು. ಇಂಗ್ಲಂಡ ಅಥವಾ ಪರದೇಶಗಳ ... ಬಟ್ಟೆಗಳು ಬರುವ ಪೂರ್ವದಲ್ಲಿ ಹಿಂದೀಯರಿಗೆ ಬೇಕಾಗುವ ಎಲ್ಲ ವಸ್ತ್ರಗಳು ಇದೇ ದೇಶದಲ್ಲಿ ಸಿದ್ಧವಾಗುತ್ತಿದ್ದವಲ್ಲದೆ ಪರದೇಶಗಳಿಗೆ ಕೂಡಾ ಕೆಲವು ಮಟ್ಟಿಗೆ ಅವನ್ನು ಪೂರೈಸಲಾಗುತ್ತಿತ್ತು. ಈಗ ಪರಕೀಯರ ಅಂತಾರಾಷ್ಟ್ರೀಯ ಧೋರಣದಿಂದ ಸಾರ್ವತ್ರಿಕವಾದ ಇಂಥ ದೊಡ್ಡ ವ್ಯವಸಾಯವು ಮೂಲೆಗೆ ಬಿದ್ದು ಜನರು ಹೊಟ್ಟೆಗಿಲ್ಲದೆ ಕಂಗಾಲಾಗತೊಡಗಿರುವರು. ಈ ಕಂಗಾಲ ಸ್ಥಿತಿಯನ್ನು ದೂರ ಮಾಡುವ ಹಂಚಿಕೆಗಳ ಯೋಜನೆಗಾಗಿಯೇ ... ರಾಷ್ಟ್ರೀಯ ಮಹಾಸಭೆಯು ... ೧೯೨೦ರಲ್ಲಿ ಖಾದೀ ಕಾರ್ಯಕ್ರಮವನ್ನು ಜಾರಿಯಲ್ಲಿ ತಂದಿತು; ಆಗಿನಿಂದ ಈಗಿನ ವರೆಗೆ ಖಾದಿಯು ನಮ್ಮ ಸ್ವರಾಜ್ಯದ ಹೋರಾಟದ ಅಡಿಗಲ್ಲಾಗಿದೆ. ಹೀಗೆ ಪ್ರಮುಖ ವ್ಯವಸಾಯದ ಸುತ್ತಲೂ ಇತರ ಉದ್ಯೋಗಗಳಿಗೆ ಆಸ್ಪದವುಂಟಾಗಿ ಹೊಟ್ಟೆಗಿಲ್ಲದೆ ಅಲೆದಾಡುತ್ತಿರುವ ನಮ್ಮ ಬಡ ಬಾಂಧವರಿಗೆ ಉಪಜೀವನದ ಮಾರ್ಗವಾಗುವದು.

ಅನ್ನ ಹಾಗೂ ವಸ್ತ್ರಗಳಿಲ್ಲದೆ ಮನುಷ್ಯನು ಜೀವಿಸಲಾರನು. ಇವೆರಡನ್ನೂ ಒದಗಿಸಿ ಕೊಡುವ ಖಾದೀ ಪ್ರಸಾರವು ನಮ್ಮ ರಾಷ್ಟ್ರೀಯ ಧರ್ಮವಲ್ಲದೆ ಮತ್ತೇನು? ಕೃಷಿಪ್ರಧಾನ ಹಿಂದುಸ್ಥಾನದಲ್ಲಿ ಒಕ್ಕಲತನವು ವರ್ಷದಲ್ಲಿ ೬ ತಿಂಗಳು ಅಥವಾ ೮ ತಿಂಗಳು ನಡೆಯುವ ಹೋರಿಯು. ಇಂತಹದರಲ್ಲಿ ನೂಲುವ ಹಾಗೂ ನೇಯುವ ವ್ಯವಸಾಯದಂತ ಸಾರ್ವತ್ರಿಕವೂ ವ್ಯಾಪಕವೂ ಆದ ವ್ಯವಸಾಯವೇ ಜನರ ಜೀವನಾಧಾರವು. ಇಂಥ ಯೋಗ್ಯವಾದ ಉದ್ಯೋಗವನ್ನು ಪ್ರೋತ್ಸಾಹಿಸುವದೇ ವ್ಯಕ್ತಿಯೊಬ್ಬ ದೇಶ ಹಿತಚಿಂತಕರ ಪರಮ ಧರ್ಮವಿದ್ದು ಬರುವ ಮಾರ್ಚನೊಳಗಾಗಿ ರೂಪಾಯಿ ೫೦,೦೦೦ ಬೆಲೆಬಾಳುವ ಹೆಚ್ಚಿನ ಖಾದಿಯನ್ನು ಮಾರಾಟ ಮಾಡಬೇಕೆಂದು ಮಾಡಿರುವ ಗೊತ್ತುವಳಿಯನ್ನು ಯಶಸ್ವಿಮಾಡಲು ಮನಮುಟ್ಟಿ ಪ್ರಯತ್ನಿಸಬೇಕೆಂದು ಕ. ಪ್ರಾಂ. ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

23-2-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೩-೨-೧೯೪೦

# ಕಾಂಗ್ರೆಸಿನೊಳಗಿನ ಮತಭೇದಗಳಿಂದ ಬ್ರಿಟನು ಲಾಭ ಪಡೆಯಲಾರದು

## ಪಾಶ್ಚಾತ್ಯ ಧುರೀಣರೊಬ್ಬರ ಹೇಳಿಕೆ

ಬಾಬು ಸುಭಾಸ ಚಂದ್ರಬೋಸ ಮೊದಲಾದ ಕೆಲವು ಜನ ಮುಖಂಡರ ಕಾಂಗ್ರೆಸಿನ ಕಾರ್ಯಕ್ರಮಕ್ಕೆ ವಿರೋಧವಾಗಿ ನಡೆಯುತ್ತಲಿರುವರು, ಕಾಂಗ್ರೆಸಿನೊಳಗಿನ ಜನರ ಪರಸ್ಪರ ಜಗಳದಿಂದ ಮೂರನೆಯವರಾದ ನಮಗೆ ಲಾಭವಾಗುವದೆಂದು ಬ್ರಿಟಿಷರು ಎಣಿಸಿದ್ದರೆ ಅದು ಪ್ರಮಾದವಾಗಿದೆ. ಗಾಂಧಿ ಜವಾಹರಲಾಲರನ್ನು ಬೋಸರು ವಿರೋಧಿಸುತ್ತಿರುವದು ನಿಜ. ಆದರೆ ಈ ವಿರೋಧಕ್ಕೆ ಬೋಸರು ಭಾರತ ಸ್ವಾತಂತ್ರ್ಯಕ್ಕಾಗಿ ಕೋರಿಸುವ ಮಿತಿಮೀರಿದ ಉತ್ಸಾಹವೇ ಕಾರಣವಾಗಿದೆಯಲ್ಲದೆ ಬೇರೇನಿರುವದಿಲ್ಲವೆಂದು ಎಲ್ಲರೂ ತಿಳಿದಿರಬೇಕು.

ಯೂರೋಪಿನಲ್ಲಿ ಒಂದು ಮಹಾಯುದ್ಧವು ಸದ್ಯದಲ್ಲಿಯೇ ಆರಂಭವಾಗುವದೆಂದು ಬೋಸರು ಮೊದಲೇ ಭವಿಷ್ಯ ಹೇಳಿದ್ದರು. ಆದರೆ ಶಾಂತ ಪ್ರಕೃತಿಯವರಾದ ಗಾಂಧಿಯವರು ತಮ್ಮ ರಾಜಕೀಯ ವೈರಿಗಳಾದ ಬ್ರಿಟಿಷರ ಕಷ್ಟ ಕಾಲದ ಉಪಯೋಗ ಮಾಡಿಕೊಂಡು, ಸ್ವಾತಂತ್ರ್ಯ ಆಂದೋಲನವನ್ನು ಕೂಡಲೇ ಹೂಡಿ ಬ್ರಿಟಿಷರು ಭಾರತವನ್ನು ಸ್ವತಂತ್ರವನ್ನಾಗಿ ಮಾಡುವಂತೆ ಒತ್ತಾಯ ಪಡಿಸಬಾರದೆಂದು ಬೋಸರು ಹೇಳಿದರು. ಆದರೆ ಸಾರ್ವಜನಿಕ ಆಂದೋಲನವನ್ನು ಹೂಡಿದರೆ ಅಹಿಂಸಾತ್ಮಕ ವಾತಾವರಣವನ್ನಿಡುವದು ಅಸಾಧ್ಯವಾದೀತೆಂಬುದು ಗಾಂಧಿಯವರ ಸಂದೇಹವಾಗಿದೆ. ಆಂದೋಲನವನ್ನು ಯಾವಾಗ ಹೇಗೆ ಹೂಡಬೇಕು ಎಂಬ ಕುರಿತು ಮಾತ್ರ ಪರಸ್ಪರ ಊಹಾಪೋಹೆ ಮತ್ತು ಸಂದೇಹ ವಿಶ್ವಾಸಗಳ ದೆಸೆಯಿಂದ ಗಾಂಧಿ ಬೋಸರೊಳಗೆ ಮತಭೇದವಿರುವದು ಕಂಡುಬರುತ್ತದೆ. ಇವರೊಳಗೆ ಈ ಮತಭೇದವಿದ್ದು ಇವರು ಬೇರೆ ಬೇರೆ ಪಂಗಡಗಳನ್ನು ಕಟ್ಟಿಕೊಂಡಿರುವದರಿಂದ, ತಾವು ಭಾರತೀಯರ ಸ್ವಾತಂತ್ರ್ಯ ಪ್ರಶ್ನೆಯನ್ನು ಅನಿಶ್ಚಿತಕಾಲಕ್ಕೆ ಮುಂದರಿಸಿ ಹಾಕ ಬಹುದೆಂದು ಬ್ರಿಟಿಷ ಮುತ್ಸದ್ದಿಗಳು ತಿಳಿಯುವದಾದರೆ, ಅದು ಅವರ ಮೂರ್ಖತನದ ಪರಮಾವಧಿಯಾಗುವದು. ಭಾರತೀಯರ ಸ್ವಾತಂತ್ರ್ಯಕ್ಕಾಗಿ ಹಿಂದುಸ್ಥಾನದಲ್ಲಿ ಎಷ್ಟು ಬೇಗ ಆಂದೋಲನ ಪ್ರಾರಂಭವಾಗ ಬಹುದೋ ಅಷ್ಟು ಬೇಗ ಗಾಂಧಿ ಬೋಸರ ಒಂದಾಗುವರು. ಆದರೊಳಗಿನ ಜಗಳವು ಕೇವಲ ತೋರಿಕೆಯದಾಗಿದೆ ಎಂಬರ್ಥವುಳ್ಳ ಲೇಖನವನ್ನು ಪಿ. ಡಬ್ಲ್ಯು. ಡೂಗ್ಲಸ್ ಎಲಿನ್ ಎಂಬವರು ಕರೆಂಟ್ ಹಿಸ್ಟರಿ ಎಂಬ ಪತ್ರಿಕೆಯಲ್ಲಿ ಭಾರತದ ರಾಜಕೀಯ ಪರಿಸ್ಥಿತಿಯ ಕುರಿತು ಬರೆಯುತ್ತಾ ಬ್ರಿಟಿಷರಿಗೆ ಅವರ ಭವಿಷ್ಯದ ಘೋರ ದೆಸೆಯ [illegible] ಎಚ್ಚರಿಕೆ ಕೊಟ್ಟಿದ್ದಾರೆ. ಬ್ರಿಟಿಷರ ಕಾರ್ಯವಿಳಂಬವು ಗಾಂಧಿಯವರ ಇನ್ನೊಂದು ಅಹಿಂಸಾತ್ಮಕ ಆಂದೋಲನದ ದಿನಗಳನ್ನು ಸಮೀಪವಾಗಿ ತರುವದು ಖಂಡಿತವೆಂದೂ ಹೇಳಿರುವರು.

## ಅಮೇರಿಕದ ಧರ್ಮೋಪದೇಶಕರಿಗೆ ಶೇಗಾಂವಿನ ತಪಸ್ವಿಯ ಸಂದೇಶ

### ಗಾಂಧಿಯವರು ಪರಮಗುರುಗಳು

ಮಹಾತ್ಮಾ ಗಾಂಧಿಯವರ ಸತ್ಯ ಮತ್ತು ಅಹಿಂಸೆಯಿಂದಲೇ ಜಗತ್ತಿನಲ್ಲಿ ಶಾಶ್ವತ ಶಾಂತಿಯು ನೆಲೆಗೊಳ್ಳುವದೆಂಬ ವಿಚಾರವು ಈಗ ಬಲಗೊಳ್ಳುತ್ತಲಿದೆ. ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವದು ಮಹಾತ್ಮಾ ಯೇಸುಕ್ರಿಸ್ತನ ಬೋಧನೆಗೆ ಅನುಕೂಲವಾಗಿದೆ. ಆದುದರಿಂದ ಬ್ರಿಟಿಷರು ಭಾರತೀಯರನ್ನು ಶೀಘ್ರದಲ್ಲಿ ಸ್ವತಂತ್ರರನ್ನಾಗಿ ಮಾಡಬೇಕೆಂದು ಮಾನ್ಯ ವಾಯ್ಸರಾಯರಿಗೆ ಒಂದು ಬಹಿರಂಗ ಪತ್ರವನ್ನು ಬರೆದ ಕಾರಣದಿಂದ ಮಿಶನರಿ ಸಂಘದ ಮೇಲಧಿಕಾರಿಗಳ ಅವಕೃಪೆಗೆ ಪಾತ್ರರಾದ ಲಕ್ನೋದಲ್ಲಿಯ ಆಶ್ರಮದ ಆಚಾರ್ಯ ರೆ. ಹೋಲ್ಯಾಂಡ್ಸ್ ಮಿತ್ರರು ತಮ್ಮ ಸಂಗಾತಿಗಳೊಂದಿಗೆ ಅಮೇರಿಕಕ್ಕೆ ಹೊರಡುತ್ತ ಶೇಗಾಂವದಲ್ಲಿ ಮಹಾತ್ಮರ ದರ್ಶನ ತೆಗೆದುಕೊಂಡರು. ಸತ್ಯ ಮತ್ತು ಅಹಿಂಸಾ ಮಾರ್ಗದಿಂದ ಪ್ರಪಂಚದ ಉದ್ಧಾರವಾಗುವದೆಂದು ನಿಮಗೆ ವಿಶ್ವಾಸವಾಗಿದ್ದರೆ ಅಮೇರಿಕದಲ್ಲೂ ಅದರ ಪ್ರಚಾರ ಮಾಡಿರಿ' ಎಂದು ಗಾಂಧಿಯವರು ಆ ಪಾದರಿಗಳಿಗೆ ಸಂದೇಶವನ್ನು ಕೊಟ್ಟಾಗ ಪಾದರಿ ಮಿತ್ರರು ಹೀಗಂದರು.—'ಈ ವಿಷಯದಲ್ಲಿ ನೀವು ನಮ್ಮೆಲ್ಲರ ಪರಮ ಗುರುಗಳಾಗಿದ್ದೀರಿ. ನಿಮ್ಮ ಚರಣತಲದಲ್ಲಿ ಕುಳಿತು ಅನೇಕ ವರ್ಷಗಳ ತನಕ ನಾವು ಕಲಿತುಕೊಳ್ಳತಕ್ಕ ಬಹಳ ಸಂಗತಿಗಳಿವೆ. ಈಗಿನ ಪ್ರಪಂಚದ ಭಯಂಕರ ಸ್ಥಿತಿಗತಿಗಳಿಗೆ ಕಾರಣವಾಗಿ ನಮ್ಮ ಆಚಾರವಿಚಾರಗಳಲ್ಲಿ ಎಲ್ಲಿಯೋ ಏನೋ ದೊಡ್ಡ ದೋಷವಿರುವದು ನಮಗೆ ಗೊತ್ತಾಗಿದೆ. ಸತ್ಯಾಗ್ರಹದ ಮೂಲಕವೇ ಆ ದೋಷದ ನಿವಾರಣೆಯಾಗುವದೆಂದು ನಮಗೆ ವಿಶ್ವಾಸವಾಗಿದೆ. ಒಂದು ತುತ್ತು ಅನ್ನಕ್ಕಾಗಿ ಭಾರತವು ಸತ್ಯಾಗ್ರಹವೆಂಬ ದಿವ್ಯಾಸ್ತ್ರವನ್ನು ಕೈಬಿಡುವದಿಲ್ಲವೆಂದು ನಾವು ಆಶಿಸುತ್ತೇವೆ. ಪ್ರಪಂಚದ ಉದ್ಧಾರವು ಸತ್ಯಾಗ್ರಹದಿಂದ ಆಗಲಿದೆ. ಸತ್ಯಾಗ್ರಹದ ಮೂಲಕವೇ ಮಹಾತ್ಮಾ ಕ್ರಿಸ್ತನ ದಿವ್ಯ ಸಂದೇಶವು ಪ್ರಪಂಚದಲ್ಲಿ ಪ್ರತಿಧ್ವನಿತವಾಗುವದು. ಸತ್ಯಾಗ್ರಹದಲ್ಲಿಯೇ ನಿಜವಾದ ಕ್ರೈಸ್ತಧರ್ಮವು ಅರ್ಥವಾಗಿದೆ. ಸತ್ಯಾಗ್ರಹದ ಮೂಲಕ ಕ್ರೈಸ್ತಧರ್ಮದ ನಿಜಸ್ವರೂಪವು ಜಗತ್ತಿಗೆ ತಿಳಿಯಲಿದೆ. 'ಭಾರತಕ್ಕೆ ಹೋಗ ಬೇಡಾದರೆ ಸತ್ಯಾಗ್ರಹದ ಧರ್ಮಮರ್ಮಗಳನ್ನು ಕಲಿಯಲಿಕ್ಕೆ ಹೋಗಿ ಭಾರತಕ್ಕೆ ಕಳಿಸಲಿಕ್ಕೆ ಹೇಳುಗುವದಾದರೆ, ನೀವು ಹೋಗಬೇಡಿರೆಂದ ಅಮೇರಿಕಕ್ಕೆ ಹೋಗಿ ಅಮೇರಿಕದ ಜನರಿಗೆ ತಿಳಿಸುವೆವು' ಎಂದು ಪಾದರಿಯವರು ಮಾನನವರಾಗಿ [illegible] ಮಾತಾಗಳಿವು.

## ನೋಟೀಸು

ಕಾರ್ಕಳ ಡಿ ಮು ಕೋರ್ಟಿನಲ್ಲಿ

O S N 475 1939

ರಾಮಕೃಷ್ಣ ಭಟ್ಟ—ವಾದಿ

ಮತ್ತು

ಪದ್ಮನಾಭ ಭಟ್ಟ—ಅಲಿಯಾಸ ವೆಂಕಟ್ರಮಣ ಭಟ್ಟರ ಮಗ ಕಾರ್ಕಳ ತಾಲೂಕು ಬೆಳ್ಮಣ್ಣು ಗ್ರಾಮದಲ್ಲಿರುವವ—ಪ್ರತಿವಾದಿ

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ

ಹಾಲಿ ಮುತಸದ್ದಿ ಗುಂಡ [illegible] ರಾಯ ಭಟ್ಟರು ವಾದಿಗೆ ರಿಜಿಸ್ಟ್ರಿ ಸಹಿತ ರೂ. 1000 0 0ಕ್ಕೆ ತಾ. 27 6 19[illegible] ನೇಯಲ್ಲಿ ಬರೆದುಕೊಟ್ಟದ್ದು ತೋರಿಸುವ ದಸ್ತಾವೇಜಿನ ಮೇಲೆ ಹಾಕಿರುವ ಪ್ರತಿವಾದಿಯ ಮೇಲೆ ಸದ್ರಿ ಕೋರ್ಟಿನ O S No 18/1938ಕ್ಕೆ ಹಾಕಿದ ಡಿಕ್ರಿಯ ಮೇಲೆ ನಡಿಸಿದ R E P 31[illegible] 39ರಲ್ಲಿ ಅವರ 1ನೇ ಒಡ್ಡದ ಆಸ್ತಿಯನ್ನು [illegible] ಸಲ್ಲ ಪಡಿಸಿಕೊಂಡು ಕೋರ್ಟ ಮುಖಾಂತರ ಡೆಲಿವರಿ ಮಾಡಿಕೊಂಡು ಅವರ ಕುಟುಂಬದ ಇತರೆ ಆಸ್ತಿಯನ್ನು ಸರಸ ನಿವಸಸಮ ಭರಿಸಿ 3 ಪಾಲುಗಳಾಗಿ ಮಾಡಿ ಸ್ವತಿ ಒಂದು ಪಾಲನ್ನು ತನಗೆ ಕೊಡಿಸಬೇಕಾಗಿ ವಗೈರೆಗೆ ವಾದಿಯು ದಾಖಲು ಮಾಡಿದ ಈ ದಾವೆಯು ಪ್ರತಿವಾದಿಯ ಹಾಜರಿಯ ಬಗ್ಗೆ ತಾ 26-2-1940ಕ್ಕೆ ಇಟ್ಟಿರುತ್ತದೆ. ಆದುದರಿಂದ ಆ ದಿನ ಬೆಳಗ್ಗೆ 10 ಘಂಟೆಗೆ ಪ್ರತಿವಾದಿಯು ಕೋರ್ಟ ಮುಂದೆ ಹಾಜರಾಗಿ ಆತಗೆ ಸದ್ರಿ ದಾವೆಯ ಕುರಿತು ಇರುವ ಆಕ್ಷೇಪಣೆಗಳನ್ನು ತಿಳಿಸಿಕೊಳ್ಳತಕ್ಕದ್ದು. ತಪ್ಪಿದರೆ ಆತನ ಪರೋಕ್ಷದಲ್ಲಿ ಸದ್ರಿ ದಾವೆಯು ತೀರ್ಮಾನಿಸಲಾಗುತ್ತದೆಯೆಂಬಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

By order of the Court.

Karkal P. V. Upadhyaya

13-2-39 B A LL B

Vakil for Plaintiff.

HALFTONE & LINE BLOCK MAKING UNDERTAKEN

Sharada Press, MANGALORE

ಸ್ವದೇಶಾಭಿಮಾನಿ

ತಾರೀಖು 23—2—1940

## ನಮ್ಮ ಮುಂದಿನ ರಾಷ್ಟ್ರಪತಿ

ಮುಂದಿನ ರಾಷ್ಟ್ರಪತಿಗಳಾಗಿ, ಮೌಲಾನಾ ಅಬುಲ್ ಕಲಂ ಅಜಾದರನ್ನು ಪ್ರಚಂಡ ಬಹುಮತದಿಂದ ಆರಿಸಿದ ವಿಷಯವು ನಿಜವಾಗಿಯೂ ಅತ್ಯಂತ ಸಂತೋಷಜನಕವಾಗಿದೆ. ಶರೀರದ ಅಸ್ವಸ್ಥತೆಯಿಲ್ಲವಾಗಿದ್ದರೆ ರಾಷ್ಟ್ರಾಧ್ಯಕ್ಷಪೀಠವನ್ನು ಅವರು ಕಳೆದ ವರ್ಷವೇ ಏರಿ ವಿರಾಜಿಸುತ್ತಿದ್ದರು. ಆದರೆ ಹಾಗೆ ಅವರು ರಾಷ್ಟ್ರಪತಿ ಸ್ಥಾನಕ್ಕೆ ಕಳೆದ ವರುಷ ಮುಂದುವರಿದು ಬರದೆ ಇರುವುದು ಒಂದು ರೀತಿಯಿಂದ ಭಾರತದ ರಾಷ್ಟ್ರೀಯ ತತ್ವದ ನಿಜಸ್ವರೂಪದ ಆವಿಷ್ಕಾರಕ್ಕೆ ಯೋಗ್ಯ ಸಂದರ್ಭವನ್ನು ಕೊಟ್ಟಂತೆಯೇ ಆಯಿತು. ಮಹಾತ್ಮಾ ಗಾಂಧಿಜಿಯವರ ತತ್ವಕ್ಕೆ ಜನತೆಯು ಬೆಂಬಲವಿದೆಯೇ, ಇಲ್ಲವಾದರೆ, ಉಗ್ರವಾದಿಗಳೆನ್ನುವ ಎಡ ಪಕ್ಷೀಯರಿಗೆ ಇಂದು ಜನತೆಯ ಬೆಂಬಲವಿದೆಯೋ ಎಂಬುದು ಕಳೆದ ಒಂದು ವರ್ಷದ ರಾಷ್ಟ್ರೀಯ ಸ್ಥಿತಿಗತಿಗಳ ಪರಿಶೀಲನದಿಂದ ಚೆನ್ನಾಗಿ ವ್ಯಕ್ತವಾಯಿತು. ಅದೇ ಅರ್ಥವನ್ನು ಸೂಚಿಸುವಂತೆ, ಮೌಲಾನಾ ಆಜಾದರಾದರೂ, ಅಧ್ಯಕ್ಷತ್ವನಕ್ಕೆ ತಾನು ಆರಿಸಿ ಬಂದ ವಿಷಯವು ಗಾಂಧೀ ತತ್ವದಲ್ಲಿ ಜನರಿಗಿರುವ ವಿಶ್ವಾಸದ ಫಲವೆಂದೂ, ಅದು ಮಹಾತ್ಮಾಜಿಯವರಿಗೆ ಸಂದ ವಿಜಯವೆಂದೂ ಸವಿನಯ ಭಾವದಿಂದ ನುಡಿದಿರುತ್ತಾರೆ. ಗಾಂಧಿಜಿಯವರ ಧುರೀಣತೆಯಿಂದ ರಾಷ್ಟ್ರಕ್ಕೆ ಪ್ರಗತಿಯಿಲ್ಲವೆಂದೂ, ಅವರ ಧುರೀಣತೆಯನ್ನು ಕಿತ್ತೊಗೆದು ತೀವ್ರ ಗಾಮಿ ಧುರೀಣತೆಯನ್ನು ಸ್ಥಾಪಿಸಬೇಕೆಂದು ತತ್ವವಿಟ್ಟಿರುವ ಶ್ರೀ ಎಂ. ಎನ್. ರಾಯರುಗಳ ಪಕ್ಷವು ಎಷ್ಟು ಅಲ್ಪವಾಗಿದೆ, ಅಪ್ರಾಗತಿಕವಾಗಿದೆಯೆಂದು ಅವರ ಸ್ಪರ್ಧೆಯು ಚೆನ್ನಾಗಿ ಅಭಿವ್ಯಕ್ತ ಮಾಡಿತು. ಶ್ರೀ ರಾಯರುಗಳ ಪಕ್ಷದವರಲ್ಲದೆ ಇತರ, ಸೋಶಿಯಲಿಸ್ಟ್ ಪ್ರಭೃತಿಗಳು ಕೆಲವು ರಾಜಕೀಯ ವಿಚಾರಗಳಲ್ಲಿ ಇಂದಿನ ಕಾಂಗ್ರೆಸಿನ ಪ್ರಮುಖ ಮಂಡಳದ ಅಭಿಪ್ರಾಯದಿಂದ ಭಿನ್ನರಾಗಿರುವರಾದರೂ, ಈ ಬಿಕ್ಕಟ್ಟಿನ ಸಮಯದಲ್ಲಿ ನಮ್ಮೊಳಗಿನ ಜಗಳದಿಂದ ರಾಷ್ಟ್ರದ ಕಲ್ಯಾಣವನ್ನು ಕೆಡಿಸಬಾರದೆಂದೂ, ಗಾಂಧಿಜಿಯವರಿಗೆ ಸಹಾಯ ಹಸ್ತವನ್ನು ನೀಡಬೇಕೆಂದೂ ನಿರ್ಣಯಮಾಡಿ ಮೌಲಾನಾ ಅಜಾದರಿಗೇ ಬೆಂಬಲವಿತ್ತ ವಿಷಯವು ರಾಷ್ಟ್ರದಲ್ಲಿ ಹೆಚ್ಚುತ್ತಿರುವ ಐಕ್ಯ ಬುದ್ಧಿಯನ್ನು ಸ್ಪಷ್ಟಪಡಿಸುತ್ತದೆ.

### ಹಿಂದೂ-ಮುಸ್ಲಿಂ ಬಾಂಧವ್ಯ

ಇಂದಿನ ರಾಜಕೀಯ ಆಂದೋಲನದ ಯಶಸ್ವಿತೆಗೆ ಹಿಂದೂ-ಮುಸ್ಲಿಂ ಬಂಧುಗಳಲ್ಲಿ ಅನ್ಯೋನ್ಯ ಮಧುರ ಸ್ನೇಹವು ಹೆಚ್ಚುತ್ತದೆ ಎಷ್ಟರ ಮಟ್ಟಿಗೆ ಅವಶ್ಯವಿದೆಯೆಂದೂ, ಪ್ರತಿಯೊಬ್ಬ ಸ್ವಾತಂತ್ರ್ಯಾಭಿಲಾಷಿಯಾದ ಭಾರತೀಯನೂ ತಿಳಿಯದಿರಲಾರನು. ಕಾಂಗ್ರೆಸಿನ ರಚನಾತ್ಮಕ ಕಾರ್ಯಗಳಲ್ಲಿ ಹಿಂದೂ ಮುಸ್ಲಿಂ ಐಕ್ಯವೂ ಒಂದಾಗಿ ಅದಕ್ಕೆ ಕಾಂಗ್ರೆಸು ಬಹಳ ಪ್ರಾಮುಖ್ಯತೆಯನ್ನೇ ಕೊಟ್ಟಿರುತ್ತದೆ. ಏಕೆಂದರೆ ಭಾರತಕ್ಕೆ ನ್ಯಾಯವಾಗಿ ಸಲತಕ್ಕ ಸ್ವರಾಜ್ಯದ ವಿಷಯದಲ್ಲಿ ಇಂದು ಹಿಂದೂ ಮುಸ್ಲಿಂ ಅನೈಕ್ಯವನ್ನೇ ಒಂದು ಪ್ರಧಾನ ವಿಷಯವಾಗಿ ಮಾಡಿ ಬ್ರಿಟಿಷರು ತಮ್ಮ ಕುತಂತ್ರವನ್ನು ಬೆಳೆಸಿ ಕೃತಾರ್ಥರಾಗಿದ್ದಾರೆ. ಸ್ವರಾಜ್ಯ ಸಂಪಾದನೆಯ ಹಾದಿಯಲ್ಲಿ ಹಿಂದೂ ಮುಸ್ಲಿಂ ಬಾಂಧವ್ಯ ಸಾಧನೆಯು ಎಷ್ಟರ ಮಹತ್ವದ ವಿಷಯವೆಂದು ಮಹಾತ್ಮಾಜಿಯವರು ತಿಳಿದಷ್ಟು ಬೇರಾರೂ ತಿಳಿದಿಲ್ಲವೆನ್ನಬೇಕು. ಅಂತಹ ಸಂದರ್ಭದಲ್ಲಿ, ಇಂದು ಮುಸ್ಲಿಂ ಜಾತಿಯ ಸಂಕೋಚ ತತ್ವದಿಂದ ರಾಷ್ಟ್ರದ ಏಳಿಗೆಯ ವಿಷಯದಲ್ಲಿ ಅಡ್ಡ ಬರುತ್ತಿರುವ ಜಿನ್ನರ ಮುಂದಾಳುತನವು ಎಷ್ಟರಮಟ್ಟಿಗೆ ಜನತೆಯ ಅಹಿತಕಾರಿಣಿಯಾಗಿದೆಯೆಂಬುದನ್ನು, ಕಾಂಗ್ರೆಸಿನ ಅಧ್ಯಕ್ಷಪದವಿಯಲ್ಲಿ ಒಬ್ಬ ಮುಸ್ಲಿಮ ಮುಖಂಡರೇ ಮುಂದಿತರಾಗಿರುವ ಸಮಯದಲ್ಲಿ ಸ್ಪಷ್ಟವಾಗಿ ತಿಳಿಯಬಹುದು. ಜಾತೀಯ ಭಾವನೆಗಿಂತ ರಾಷ್ಟ್ರೀಯ ಭಾವನೆಯು ಹೆಚ್ಚಿನದೆಂಬ ನಿಶ್ಚಲ ಮನೋವೃತ್ತಿಯ ಅಜಾದರನ್ನು ಮುಸ್ಲಿಮರು ಹಿಂಬಾಲಿಸುವರೇ ಅಥವಾ ಜಾತೀಯ ಭಾವನೆಯು ರಾಷ್ಟ್ರಘಾತುಕವಾದರೂ ಚಿಂತೆಯಿಲ್ಲವೆಂಬ ಜಿನ್ನರನ್ನು ಹಿಂಬಾಲಿಸುವರೋ ನೋಡಬಹುದಾಗಿದೆ. ಹೇಗಿದ್ದರೂ ಹಿಂದೂ ಮುಸ್ಲಿಂ ಜನತೆಯ ಐಕ್ಯ ಪ್ರಚಾರ ಕಾರ್ಯವು, ಕಾಂಗ್ರೆಸಿನ ಅಧ್ಯಕ್ಷಪೀಠದಲ್ಲಿ ಮುಸ್ಲಿಮರೇ ಇದ್ದ ಸಮಯದಲ್ಲಿ ಸಾಧಿಸುವಷ್ಟು ಬೇರೆ ಯಾವ ಕಾಲದಲ್ಲಿಯೂ ಆಗಲಾರದು. ಕಾಂಗ್ರೆಸು ಹಿಂದುಗಳ ಸಂಸ್ಥೆಯಲ್ಲ, ಅದು ರಾಷ್ಟ್ರೀಯವಾದಿಗಳ ಸಂಸ್ಥೆಯೆಂಬುದನ್ನು ಶ್ರೀ ಎಂ. ಎನ್. ರಾಯರುಗಳಂತಹ ಹಿಂದುವು ವಿರೋಧಿಸಿ ನಿಂತಿದ್ದರೂ, ಪ್ರಚಂಡ ಬಹುಮತದಿಂದ ಅಜಾದರನ್ನೇ ಆರಿಸಿದ ಕಾಂಗ್ರೆಸಿನ ಪ್ರತಿನಿಧಿಗಳು ಸ್ಪಷ್ಟಪಡಿಸಿದ್ದಾರೆ. ಖಂಡಿತವಾಗಿಯೂ ಮೌಲಾನಾ ಅಜಾದರ ಅಧ್ಯಕ್ಷತೆಯ ಕಾಲದಲ್ಲಿ ಅಭೂತಪೂರ್ವವಾಗಿ ಹಿಂದೂ ಮುಸ್ಲಿಂ ಐಕ್ಯಪ್ರಚಾರ ಕಾರ್ಯವು ಆಗಬಹುದೆಂದು ನಾವೆಲ್ಲರೂ ಭರವಸೆ ಪಡಬಹುದಾಗಿದೆ.

### ರಾಷ್ಟ್ರದ ಅಖಂಡ ವಿಶ್ವಾಸ

ಮೌಲಾನಾ ಅಜಾದರ ಮೇಲೆ ರಾಷ್ಟ್ರದ ಸಮಸ್ತರಿಗೂ ಅಖಂಡ ವಿಶ್ವಾಸವಿದೆಯೆಂಬುದಕ್ಕೆ ಅವರ ಆಯ್ಕೆಯೇ ಪ್ರತ್ಯಕ್ಷನಿದರ್ಶನವಾಗಿದೆ. ಮಾತ್ರವಲ್ಲದೆ ಮುಸ್ಲಿಂ ತತ್ವವನ್ನು ಚೆನ್ನಾಗಿ ಅರಿತ ಉಚ್ಚ ಧರ್ಮಪರಾಯಣರೆನಿಸಿದ ಅವರ ಧಾರ್ಮಿಕ ನೀತಿಯನ್ನು ಪ್ರಶ್ನಿಸುವ ಮುಸ್ಲಿಮನಾದರೂ ಇರಲಾರನು. ಅಂತೆಯೇ ಮುಸ್ಲಿಂ ಲೀಗಿನ ಸ್ಥಾಪಕರಲ್ಲೊಬ್ಬರಾದ ಸರ್ ರಾಫಿ ಉದ್ದೀನರು ಅಜಾದರ ಆಯ್ಕೆಯ ಕುರಿತು ಪ್ರಶಂಸಿಸಿ, ನಿಜವಾಗಿಯೂ ಅವರಿಂದ ಮಹತ್ವದ ಸೇವೆಯು ರಾಷ್ಟ್ರಕ್ಕೆ ಹಾಗೂ ಮುಸ್ಲಿಂ ಜನತೆಗೆ ಸಿಗುವುದೆಂದು ವಿಶ್ವಾಸಪೂರ್ಣರಾಗಿ ನುಡಿದಿದ್ದಾರೆ.

ಮಾತ್ರವಲ್ಲದೆ, ಇಂದಿನ ಸಮಯದಲ್ಲಿ, ಗಾಂಧಿಜಿಯವರ ತತ್ವ ನೀತಿಗಳನ್ನು ಬಲ್ಲ, ಅವರ ವಿಶ್ವಾಸಕ್ಕೆ ಅರ್ಹನಾದ ರಾಷ್ಟ್ರಪತಿಯು ಆಗಬೇಕಾದ ಸಂದರ್ಭದಲ್ಲಿ ಬಹುಕಾಲದಿಂದ ನಿಷ್ಠಾವಂತ ಸತ್ಯಾಗ್ರಹಿಯಾಗಿ ದುಡಿದ ಮೌಲಾನರಂತಹವರು ರಾಷ್ಟ್ರಪತಿಯಾದುದೇ ಯೋಗ್ಯವಾಯಿತು. ಅವರ ಮೇಲೆ ಮಹಾತ್ಮಾಜಿಯವರು ಸಂಪೂರ್ಣ ನಂಬಿಕೆಯಿಟ್ಟಿರುವರು. ಮುಂದೆ ಭಾರತವು ಖಂಡಿತವಾಗಿಯೂ ಹೀಗೆ ಉದಾಸೀನವಾಗಿರುವುದು ಸಾಧ್ಯವಿಲ್ಲದಿರುವಾಗ, ಈಗಾಗಲೇ ಮೌಲಾನಾ ಅಜಾದರೇ ಹೇಳಿದಂತೆ, ಕಾಂಗ್ರೆಸು ಶಾಸನಭಂಗ ಆಂದೋಲನವನ್ನು ಆರಂಭಿಸಲು ನಿಶ್ಚಯ ಮಾಡಿರುವಾಗ, ಕಾಂಗ್ರೆಸಿನ ಅಧ್ಯಕ್ಷಪೀಠದಲ್ಲಿ ನಿಂತು ಜನತೆಯನ್ನು ಯೋಗ್ಯ ಮಾರ್ಗದಲ್ಲಿ ನಡೆಸುವ ಅನುಭವಶಾಲಿಯಾದ ಮುಖಂಡನ ಅತ್ಯಾವಶ್ಯವಿರುವುದು. ಅಂತಹ ಕಾರ್ಯಕ್ಕೆ ಅಜಾದರನ್ನು ಮಿಕ್ಕಿದ ಯೋಗ್ಯತೆಯವರು ಬೇರೆ ಸಿಗುವುದು ದುರ್ಲಭವಾಗಿದೆ.

ಮೌಲಾನಾ ಅಬುಲ್ ಕಲಾಮ್ ಅಜಾದರ ಕಾಲದಲ್ಲಿ ಹಿಂದೂ, ಮುಸ್ಲಿಂ ಐಕ್ಯವಾಗಿ, ಭಾರತೀಯರ ಸ್ವಾತಂತ್ರ್ಯ ಸಂಗ್ರಾಮಕ್ಕೆ ವೀರ ವಿಜಯವಾಗಿ, ಸಂಪೂರ್ಣ ಸ್ವಾತಂತ್ರ್ಯವು ದೊರಕುವಂತಾಗಲೆಂದು ನಾವು ಹೃತ್ಪೂರ್ವಕ ಅಪೇಕ್ಷಿಸುತ್ತೇವೆ.

## ಮೌಲಾನಾ ಅಜಾದರ ಸೂಕ್ಷ್ಮ ಪರಿಚಯ

ಮೌ॥ ಅಬುಲ್ ಕಲಂ ಅಜಾದರು ಕಾಂಗ್ರೆಸ್ ಅಧ್ಯಕ್ಷರಾಗುದುದು ಇದೇ ಮೊದಲಲ್ಲ. ೧೯೨೩ರಲ್ಲಿ ಡೆಲ್ಲಿಯಲ್ಲಿ ನಡೆದ ವಿಶೇಷ ಕಾಂಗ್ರೆಸ್ ಅಧಿವೇಶನಕ್ಕೆ ಮೌ॥ ಅಬುಲ್ ಕಲಾಂ ಅಜಾದರು ಅಧ್ಯಕ್ಷತೆ ವಹಿಸಿದ್ದರು. ಆ ಮೇಲೆ ೧೯೩೦ರಲ್ಲಿ ಶಾಸನಭಂಗ ಚಳುವಳಿಯ ಸಮಯದಲ್ಲಿ ಕಾಂಗ್ರೆಸಿನ ಹಂಗಾಮಿ ಅಧ್ಯಕ್ಷರಾಗಿದ್ದರು.

೧೮೮೮ರಲ್ಲಿ ಅಜಾದರು ಮೆಕ್ಕಾದಲ್ಲಿ ಜನ್ಮ ತಾಳಿದರು. ಅರೇಬಿಯದಲ್ಲಿ ಅವರು ತಮ್ಮ ಶಿಕ್ಷಣವನ್ನು ಪಡೆದರು. ಕೈರೋವಿನ ಅಲ್ ಅಸಾರ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರವನ್ನು ವ್ಯಾಸಂಗ ಮಾಡಿದರು.

ಟರ್ಕಿಯಲ್ಲಿಯೂ ಇತರ ಮುಸ್ಲಿಂ ಜಗತ್ತಿನಲ್ಲಿಯೂ ಮುಸ್ಲಿಮರ ಮುಂದಿದ್ದ ಸಮಸ್ಯೆಗಳನ್ನು ಕುರಿತು ಮುಸ್ಲಿಂ ಜನಾಂಗದ ಕಣ್ತೆರೆಸಿ ಜಾಗ್ರತಗೊಳಿಸುವ ಉದ್ದೇಶದಿಂದ ಕಲ್ಕತ್ತಾದಲ್ಲಿ ಇವರು ಅನೇಕ ಉರ್ದು ವೃತ್ತಪತ್ರಿಕೆಗಳನ್ನು ಪ್ರಕಟ ಮಾಡಹತ್ತಿದರು. ಇವರ ಈ ಪ್ರಚಾರದ ಫಲವಾಗಿ ಮಹಾಯುದ್ಧದ ಪ್ರಾರಂಭದಲ್ಲಿ ಮೌ॥ ಅಜಾದರನ್ನು ಬ್ರಿಟಿಷ್ ಸರಕಾರವು ಬಂಧಿಸಿತು.

ಖಿಲಾಫತ್ ಚಳುವಳಿಯಲ್ಲಿ ಮೌ॥ ಅಜಾದರು ಮುಖ್ಯ ಪಾತ್ರವಹಿಸಿದರು. ಮಹಾತ್ಮಾ ಗಾಂಧಿಯವರ ನಾಯಕತ್ವದಲ್ಲಿ ಆಗ ತಾನೇ ಸಜ್ಜುಗೊಳ್ಳುತ್ತಿದ್ದ ಕಾಂಗ್ರೆಸ್ ಸಂಸ್ಥೆಗೆ ಸೇರಿದರು. ಅಂದಿನಿಂದಲೂ ಮೌ॥ ಅಜಾದರು ಕಾಂಗ್ರೆಸಿನ ನಿಸ್ಸೀಮ ಭಕ್ತರಾಗಿ ದೇಶಸೇವೆ ಸಲ್ಲಿಸುತಿದ್ದಾರೆ. ಅನೇಕ ವರ್ಷಗಳಿಂದ ಅವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿದ್ದಾರೆ. ಪಾರ್ಲಿಮೆಂಟರಿ ಸಬ್ ಕಮಿಟಿಯ ಸದಸ್ಯರೂ ಆಗಿದ್ದರು.

ಹಿಂದೂ ಮುಸ್ಲಿಂ ಐಕ್ಯಮತದ ಪ್ರಯತ್ನದಲ್ಲಿ ಇವರ ಸಹಾಯವೂ ಬೆಂಬಲವೂ ಮಹಾತ್ಮಾ ಗಾಂಧಿಯವರಿಗೆ ಬಹಳವಿದ್ದು ಬಹು ಕಾಲದಿಂದಲೂ ಇದಕ್ಕಾಗಿಯೇ ಇವರು ಬಹಳ ಶ್ರಮವಹಿಸಿದುಡಿಯುತ್ತಿದ್ದಾರೆ.

---

## ಚುನಾವಣೆಯ ಫಲಿತಾಂಶ

ರಾಮಘರ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರ ಚುನಾವಣೆಗೆ ಮೌಲಾನಾ ಅಬುಲ್ ಕಲಂ ಅಜಾದರೂ, ಶ್ರೀ ಎಂ. ಎನ್. ರಾಯರ್‌ಗಳೂ ನಿಂತಿರುವರಷ್ಟೆ. ಇವರಿಗೆ ಬೇರೆ ಬೇರೆ ಕಾಂಗ್ರೆಸ್ ಪ್ರಾಂತಗಳಲ್ಲಿ ಬಂದ ವೋಟುಗಳು ಈ ರೀತಿ ಇದೆ.

### ಮೌಲಾನ ಅಬುಲ್ ಕಲಂ ಅಜಾದರಿಗೆ

ಆಂಧ್ರ ಪ್ರಾಂತ್ಯದಲ್ಲಿ ೧೭೨ ಉತ್ಕಲ ೧೪೯ ಸಿ. ಪಿ. ನಾಗಪುರ ೨೧ ವಿದರ್ಭ (ಬೀರಾರು) ೨೬ ಅಸ್ಸಾಮು ೬೫ ಮುಂಬಾಯಿ ೧೪೯ ತಮಿಳುನಾಡು ೧೭೨ ಸಂಯುಕ್ತ ಪ್ರಾಂತ್ಯ ೨೭೨ ಪಂಜಾಬ್ ೧೮೮ ಬಿಹಾರು ೨೩೯ ಗಡಿನಾಡು ಪ್ರಾಂತ್ಯ ೬೮ ಕೇರಳ ೮೬ ಮಹಾರಾಷ್ಟ್ರ ೧೨೭ ಗುಜರಾತ್ ೧೦೦ ಅಜ್ಮೀರ್-ಮೇರ್ವಾರ ೩ ಮಹಾಕೋಸಲ ೬೭ ಕರ್ನಾಟಕ ೯೨

### ಶ್ರೀ ಎಂ. ಎನ್. ರಾಯರಿಗೆ

ಆಂಧ್ರ ೧೫ ಉತ್ಕಲ ೪ ಸಿ. ಪಿ. (ನಾಗಪುರ) ೪ ವಿದರ್ಭ ೫ ಅಸ್ಸಾಮ್ ೩ ಮುಂಬಾಯಿ ೧ ತಮಿಳುನಾಡು ೯ ಸಂಯುಕ್ತ ಪ್ರಾಂತ ೪೯ ಪಂಜಾಬ್ ೨೩ ಬಿಹಾರ್ ೧೯ ಗಡಿನಾಡು ಪ್ರಾಂತ ೨ ಕೇರಳ ೧ ಮಹಾರಾಷ್ಟ್ರ ೧೭ ಗುಜರಾತ್ ೧ ಅಜ್ಮೀರ್-ಮೇರ್ವಾರ ೦ ಮಹಾಕೋಸಲ ೯ ಕರ್ನಾಟಕ ೯೨

ಸಿಂಧ್ ಪ್ರಾಂತ್ಯದಲ್ಲಿ ಮೌ॥ ಅಬುಲ್ ಕಲಾಂ ಅಜಾದರಿಗೆ ೨೦ ವೋಟುಗಳೂ ಬಂದವು.

ಒಟ್ಟು ವೋಟುಗಳಲ್ಲಿ ಮೌಲಾನಾ ಅಜಾದರಿಗೆ ೧೮೫೪ ವೋಟುಗಳೂ ಶ್ರೀ ಎಂ. ಎನ್. ರಾಯರಿಗೆ ೧೮೩ ವೋಟುಗಳೂ ಬಂದಿವೆ.

# ★ ಸಾಮಂತ ಸ್ವರಾಜ್ಯ ಮತ್ತು ಸಂಪೂರ್ಣ ಸ್ವರಾಜ್ಯ ★

## ಶ್ರೀ! ಎನ್. ಆರ್. ಸರ್ಕಾರರ ವ್ಯಾಖ್ಯಾನ

ಸಾಮಂತ ಸ್ವರಾಜ್ಯವನ್ನು ಕೊಡಲು ಅಭಿಮತ ಪಡುವ ಬ್ರಿಟಿಷ್ ಸರಕಾರದ ಪ್ರತಿನಿಧಿ
**ಲಾರ್ಡ್ ಲಿನ್‌ಲಿತ್ ಗೋರವರು**

"ಸಂಪೂರ್ಣ ಸ್ವರಾಜ್ಯವು ಬೇಕೇ ಸಾಮಂತ ಸ್ವರಾಜ್ಯವು ಸಾಕೇ ಎಂಬ ವಿಷಯದಲ್ಲಿ ಇಂದು ರಾಜಕೀಯ ರಂಗದಲ್ಲಿ ಬಹಳ ಚರ್ಚೆ ಆಗಿದೆ, ಆದರೆ ಇವುಗಳ ಸ್ಪಷ್ಟ ಭೇದವನ್ನು ತಿಳಿಯದೆ ನಾವು ವೈಸರಾಯರು ಹೇಳುವ ಸಾಮಂತ ಸ್ವರಾಜ್ಯವನ್ನು ತಿರಸ್ಕರಿಸಬಾರದು. 'ಸ್ವಾತಂತ್ರ್ಯ'ವೆಂಬ ಶಬ್ದದ ಬಗ್ಗೆ ಗೊಂದಲವೆಬ್ಬಿಸಬಾರದು ಕೇವಲ ಭಾವನಾವಶರಾಗದೆ ನಿರ್ದಿಷ್ಟ ತತ್ವಗಳ ಪ್ರಕಾರ ನಡೆಯಬೇಕು."

ಹೀಗೆಂದ ಬಂಗಾಳದ ಮಾಜಿ ಅರ್ಥಸಚಿವರಾದ ಶ್ರೀ! ಎನ್ ಆರ್ ಸರ್ಕಾರರವರು 'ಸಾಮಂತಸ್ವರಾಜ್ಯ ಮತ್ತು ಸಂಪೂರ್ಣಸ್ವರಾಜ್ಯ' ವೆಂಬ ಹೆಸರಿನ ಒಂದು ಲೇಖನದಲ್ಲಿ ವಿವರಿಸಿರುವರು.

### ವೆಸ್ಟ್ ಮಿನ್ ಸ್ಟರ ಕಾಯಿದೆಯು ಯಾವುದು?

೧೯೩೧ರಲ್ಲಿ ವಸಾಹತು ರಾಜ್ಯಗಳ ಕಾಯಿದೆಯು ಉಪಯೋಗದ ಸಿರ್ಣಯ ಕ್ಕಾಗಿ ಒಂದು ಕಮಿಟಿಯು ರಚಿತವಾಯಿತು ಅವರ ತಯಾರಿಸಿದ ಬಿಲ್ಲನ್ನು ಒಪ್ಪಿಸಲ್ಪಟ್ಟ ಒದಲಾವಣೆಯಿಂದ ಇಂಪೀರಿಯಲ್ ಕೌನ್ಸಿಲಿನವರು ಪಾಸು ಮಾಡಿದರು ಅದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ೧೯೩೧ರಲ್ಲಿ ಪಾಸಾಯಿತು ಅದೇ ವೆಸ್ಟ್ ಮಿನ್‌ಸ್ಟರ್ ಕಾಯಿದೆಯಾಯಿತು ಇದರಿಂದ ಬ್ರಿಟಿಷ್ ಸಾಮ್ರಾಜ್ಯದಲ್ಲಿದ್ದ ಎಲ್ಲಾ ವಸಾಹತುಗಳಿಗೂ ಪೂರ್ಣ ಸ್ವಾತಂತ್ರ್ಯವೇ ಸಿಕ್ಕುವಂತಾಯಿತು. ಇದರಿಂದ ವಸಾಹತುಗಳಿಗೆ ಪಾರ್ಲಿಮೆಂಟಿನ ಕಾಯಿದೆಗೆ ವಿರುದ್ಧವಾಗಿಯೂ ಕಾಯಿದೆ ಮಾಡುವ ಅಧಿಕಾರವು ಬಂತು. ಮಾತ್ರವಲ್ಲದೆ, ಬ್ರಿಟಿಷ್ ಸಾಮ್ರಾಜ್ಯದಿಂದ ಬೇರಾಗುವ ಅಧಿಕಾರವೂ ಅವುಗಳಿಗೆ ಇರುವುದಾಗಿ ತಿಳಿಯಲಾಯಿತು. ಪರರಾಷ್ಟ್ರಗಳೊಡನೆ ಕರಾರು ಮಾಡಲು ಅಧಿಕಾರವು ಬಂತು. ಇಂಗ್ಲೆಂಡಿನಲ್ಲಿ ಪಾಸಾದ ಕಾಯಿದೆಯು, ವಸಾಹತುಗಳ ಒಪ್ಪಿಗೆಯಿಲ್ಲದೆ ಅವುಗಳಿಗೆ ಅನ್ವಯಿಲಾರದು. ಈ ಎಲ್ಲಾ ವಿಷಯಗಳನ್ನು ಪರಿಶೀಲಿಸಿದರೆ, ವೆಸ್ಟ್‌ಮಿನ್‌ಸ್ಟರ್ ಕಾಯಿದೆಯಿಂದ, ವಸಾಹತುಗಳಿಗೆ ಇಂಗ್ಲೆಂಡಿನೊಡನೆ ಸಮಾನತೆಯೇ ಸಿಕ್ಕಿದೆಯೆಂದು ತಿಳಿದುಬರುವುದು ಮಾತ್ರವಲ್ಲದೆ ವಸಾಹತುಗಳ ಒಪ್ಪಿಗೆಪಡೆದೇ ಗವರ್ನರ್ ಜನರಲರನ್ನು ಬ್ರಿಟಿಷ್ ಸರಕಾರವು ನಿಯಮಿಸುತ್ತದೆ ಗವರ್ನರ್ ಜನರಲನಿಗೆ ಪ್ರತ್ಯೇಕ ಕಾಯ್ದಿಟ್ಟ ಅಧಿಕಾರಗಳೇನೂ ಇರುವುದಿಲ್ಲ ಬ್ರಿಟಿಷ್ ಸಾಮ್ರಾಜ್ಯದಿಂದ ಹೊರಬೀಳುವ ಅಧಿಕಾರವು ಅದಕ್ಕೆ ಬಂದಿದೆಯೆಂದೂ, ಪ್ರೋ! ಪ್ರೋಕರು ಅಭಿಪ್ರಾಯಪಡುತ್ತಾರಲ್ಲದೆ, ಇಂದು ಐರ್ಲೆಂಡಿನ ಉದಾಹರಣೆಯು ಅದನ್ನೇ ಸ್ಪಷ್ಟಪಡಿಸುತ್ತದೆ

### ಭೇದವೇನು?

ಆದ ಕಾರಣ ಸಾಮಂತ ಸ್ವರಾಜ್ಯ ಮತ್ತು ಸಂಪೂರ್ಣ ಸ್ವಾತಂತ್ರ್ಯಗಳಲ್ಲಿ ಅಂತರವೇನೆಂದು ಕೆಲವರು ಕೇಳಬಹುದು ರಾಷ್ಟ್ರದೊಳಗಿನ ವ್ಯವಹಾರದಲ್ಲಿ ಮಾತ್ರ ವಸಾಹತುಗಳಿಗೆ ಅಧಿಕಾರ ಬಂದಿರುವುದಲ್ಲದೆ ಯುದ್ಧ ಹೂಡಲು, ಒಪ್ಪಂದ ಮಾಡಿಕೊಳ್ಳಲು, ಪರದೇಶಗಳಲ್ಲಿ ಪ್ರತಿನಿಧಿಗಳನ್ನಿಡಲು ಅಧಿಕಾರವಿರುವುದಿಲ್ಲ. ಆದರೆ ಈ ವಿಷಯಗಳು ಬಹಳ ಮಟ್ಟಿಗೆ ಆಯಾ ವಸಾಹತುಗಳ ಇಚ್ಛೆಯಂತೆಯೇ ನಡೆಯುತ್ತವೆ ಇಂದಿನ ಯುದ್ಧದಲ್ಲಿ ಎಲ್ಲಾ ವಸಾಹತುಗಳನ್ನೂ ಬ್ರಿಟನು ಸೇರಿಸಲು ಯತ್ನ ಮಾಡಿದರೂ ಐರ್ಲೆಂಡು ತಟಸ್ಥ ನೀತಿಯನ್ನಿಡುವುದರಿಂದಲೇ ಯುದ್ಧನೀತಿಯ ಸ್ವಾತಂತ್ರ್ಯವೂ ವಸಾಹತುಗಳಿಗೆ ಇದೆಯೆಂದು ಸ್ಪಷ್ಟವಾಯಿತು

### ಸಾಮಂತ ಸ್ವರಾಜ್ಯವೇ ಮೊದಲ ಮೆಟ್ಟಲು

ವೆಸ್ಟ್‌ಮಿನ್‌ಸ್ಟರ್ ಕಾಯಿದೆಯಂತಹ ಸಾಮಂತ ಸ್ವರಾಜ್ಯವನ್ನು ನಾವೀಗ ಪಡೆದರೂ ಕ್ರಮೇಣ ಹಿಂದೂದೇಶವು ಸಂಪೂರ್ಣ ಬಂಧಮುಕ್ತವಾಗುವುದು. ತನ್ನ ಸರ್ವಾಂಗ ವಿಷಯಗಳನ್ನು ತಾನೇ ವಿಚಾರಿಸಿಕೊಂಡು ನಡೆಯುವುದು ನಮ್ಮ ಅಧಿಕಾರದ ಕೆಳಗೆ ಬರುವುದು. ಈಗ ಕಾಯಿದೆ ಮಂಡಳಿಗಳ ಮೇಲಿರುವ ಅಧಿಕಾರವು ಹೋಗಿ ಸಂಪೂರ್ಣ ಸ್ವಾತಂತ್ರ್ಯವೇ ಅದರಿಂದ ನಮಗೆ ದೊರಕುವುದು

ನಮಗೆ ಯೋಗ್ಯವಾಗಿ ಜೀವಿಸಲು,

ಸಂಪೂರ್ಣ ಸ್ವರಾಜ್ಯವಲ್ಲದೆ ಕಡಿಮೆ ತರದ ಸ್ವಾತಂತ್ರ್ಯ ಬೇಡವೆನ್ನುವ ಭಾರತದ ಪ್ರತಿನಿಧಿ
**ರಾಷ್ಟ್ರಪತಿ ರಾಜೇಂದ್ರ ಪ್ರಸಾದರು**

ಆತ್ಮಜ್ಞಾನ, ಆತ್ಮೋನ್ನತಿ, ಆತ್ಮ ಪರಿಪೂರ್ಣತೆಗಳನ್ನು ಪಡೆಯಲು ಸಾಕಷ್ಟು ಅನುಕೂಲತೆಗಳಿರಬೇಕು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅವುಗಳಿಗೆ ಅವಕಾಶವಾದರೆ, ಅದರ ಅಂಗವಾಗಿದ್ದರೂ ತಪ್ಪಿಲ್ಲ ಆದರೆ ಬ್ರಿಟಿಷ್ ಸಾಮ್ರಾಜ್ಯದ ಇಂದಿನ ಗಡಗತಿಯನ್ನು ತಡೆಯದೆ ಸಾಧ್ಯವಿಲ್ಲ ಮದ್ದಾನೆಯು ನಡೆದಾಗ ಕಾಲಿಲ್ಲಿ ಸಿಕ್ಕಿದ್ದನ್ನೆಲ್ಲಾ ತುಳಿದ ಜೀವನವನ್ನು ಹಾಳ ಮಾಡಿದರೆ ಮಾತ್ರ ನಾವು ಅದರ ತುಳಿತದಿಂದ ಹೊರಬೀಳಲೇಬೇಕು.

## ಶೇಗಾನಿನ ಯೋಗಿಯು ಜಗಜಟ್ಟಿಯೊಡನೆ ಕುಸ್ತಿ ಹಿಡಿವನೆ?

ಭಾರತೀಯ ಜಗಜಟ್ಟಿಗಳಲ್ಲಿ ಪ್ರಸಿದ್ಧರಾದ ಹರ್ಬಾನ್ ಸಿಂಗ್ ಇವರಿಗೆ, ಕಳೆದವಾರ ಹಲವಾರು ಆಶ್ಚರ್ಯ ವಿಶೇಷಗಳಿದ್ದರೂ ಮಹಾತ್ಮಾಜಿಯವರು ಶೇಗಾವಿನಲ್ಲಿ ದರ್ಶನ ಕೊಟ್ಟಿದ್ದರು.

ಅವರೊಡನೆ ಮಹಾತ್ಮಾಜಿಯವರು ಕೆಲಸಮಯದ ವರೆಗೆ ತಮಾಷೆಯ ಮಾತುಗಳನ್ನು ಆಡುತ್ತಾ ಹೊತ್ತುಗಳೆದರು.

'ನೀವು ಕುಸ್ತಿ ಹಿಡಿಯಲು ಬಂದಿರುವಿರಿ? ನಾನೊಬ್ಬ ಮುದುಕ, ನಾನು ಇಬ್ಬರು ಶತ್ರುಗಳೊಡನೆ ಹೇಗೆ ಹೋರಾಡಬಲ್ಲೆನು?' ಹೀಗೆಂದರು ಗಾಂಧಿಜಿಯವರು

### ಎರಡು ಜಗತ್ತೇ ಕಂಪಿಸುವುದು

ಏನು ನಿಮಗೆ ಇಬ್ಬರು ಶತ್ರುಗಳೇ? ಎರಡು ಜಗತ್ತುಗಳೂ ನಿಮ್ಮೊಡನೆ ಕುಸ್ತಿ ಹಿಡಿಯಲಾರವು' ಹೀಗೆಂದರು ಅವರಲ್ಲಿ ಒಬ್ಬರು ಗಾಂಧಿಜಿಯವರೊಡನೆ.

ಇದಕ್ಕೆ ಗಾಂಧಿಜಿಯವರು ಉತ್ತರ ಕೊಡಲಿಲ್ಲ. ತನ್ನ ನಿತ್ಯದ ಪ್ರಸನ್ನತೆಯಲ್ಲಿ ಮುಗುಳ್ನಗೆ ನಕ್ಕರು.


ಸಚಿತ್ರ

**ಗೃಹವ್ಯವಸ್ಥೆ—ಆರೋಗ್ಯಶಾಸ್ತ್ರ ಮತ್ತು ಸಿವಿಕ್**

4ನೇ ತರಗತಿಗೆ ಬೆಲೆ 0 2—6
5ನೇ „ „ 0 -3 -6

ಬಾಲಿಕಾ ಪಾಠಶಾಲೆಗಳ ಉಪಯೋಗಾರ್ಥವಾಗಿ ಅನುಭವಸ್ಥ ಉಪಾಧ್ಯಾಯರೂ, ಪ್ರಸಿದ್ಧ ಶಿಕ್ಷಣಜ್ಞರೂ ಆದ ಶ್ರೀ ಎಂ ಗಣಪತಿ ರಾವ್ ಐಗಳ್ ಮತ್ತು ನಿವೃತ್ತ ಅಧ್ಯಾಪಕಿಯರಾದ ಶ್ರೀಮತಿ ಎಂ ಯಮುನಾ ಬಾಯಿ ಇವರಿಂದ ವಿರಚಿತವಾದುದು

ಈ ಪುಸ್ತಕಗಳ ಕುರಿತು ಮಹನೀಯರೊಬ್ಬರ ಅಭಿಪ್ರಾಯ

ಕಾಸರಗೋಡು,
20—2—'40

ಶ್ರೀಗಳಾದ ಎಂ. ಜಿ. ರಾವ್ ಐಗಳ್ ಮತ್ತು ಶ್ರೀಮತಿ ಯಮುನಾ ಬಾಯಿ ಇವರಿಂದ ಬಾಲಿಕಾ ಪಾಠಶಾಲೆಗಳಿಗಾಗಿ ವಿರಚಿತವಾದ ಗೃಹವ್ಯವಸ್ಥೆ ಆರೋಗ್ಯ ಶಾಸ್ತ್ರ ಮತ್ತು ಸಿವಿಕ್ಸ್ ಈ ಪುಸ್ತಕವನ್ನು ನೋಡಿದೆ ಗೃಹವಿಜ್ಞಾನದಂತಹ ವಿಷಯವು ಹಚ್ಚಿನ ಅನುಭವ ಮೂಲವಾದುದು ಲೇಖಕರು ತಮ್ಮ ಅನುಭವದಿಂದ ತಿಳಿದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಮಂದಟ್ಟಾಗುವ ರೀತಿಯಲ್ಲಿ ಸುಂದರವಾಗಿ ಬರೆದಿದ್ದಾರೆ. ಪುಸ್ತಕಗಳ ಪ್ರಿಂಟಿಂಗ್ ಬಾಹ್ಯ ಸೌಂದರ್ಯಗಳೂ ಮೋಹಕವಾಗಿವೆ ಬೆಲೆಯು ಮಿತವಾಗಿದೆ. ಎಂ ಆರ್ ಆರ್.

ಇಷ್ಟು ಸುಲಭ ಬೆಲೆಗೆ, ಪಠ್ಯ ಪುಸ್ತಕಗಳನ್ನು ಈ ರೀತಿ ಅಚ್ಚುಕಟ್ಟಾಗಿಯೂ, ಮನೋಹರವಾಗಿಯೂ ಒದಗಿಸಿ ಕೊಡುವುದು, ಇಡೀ ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲನೆಯ ಸಾಹಸ'

**ವಿದ್ಯಾಕ್ಷೇತ್ರದಲ್ಲಿಯೇ ಪ್ರಚಂಡ ಕ್ರಾಂತಿ!**
**ವಿದ್ಯಾಭಿವೃದ್ಧಿಯಲ್ಲಿ ನಮ್ಮದಿದು ಕಿರುಕಾಣಿಕೆ!**
**ವಿದ್ಯಾರ್ಥಿಗಳ ಸೇವೆಯೇ ನಮ್ಮ ಧ್ಯೇಯ!**

ಇದೇ ರೀತಿಯಲ್ಲಿ ಪ್ರಾಥಮಿಕ ಶಾಲೆಗಳ ಉಪಯೋಗಾರ್ಥವಾಗಿ ಬರೆದ ಚರಿತ್ರೆ ಭೂಗೋಳ, ವ್ಯಾಕರಣ, ಸಿವಿಕ್ಸ್, ಗೃಹವಿಜ್ಞಾನಗಳು ಸಿದ್ಧವಾಗಿವೆ. ಹಾಯರ್ ಎಲಿಮೆಂಟರಿ ಗ್ರೇಡ್ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿಗಳಿಗಾಗಿ ತಯಾರಿಸಲ್ಪಟ್ಟ 'ಸಮಾಜಶಾಸ್ತ್ರ'ದ ತಿದ್ದಿದ ಆವೃತ್ತಿ ಬೆಲೆ ರೂ. ೧.

ಪುಸ್ತಕ ಸಿಗುವ ಸ್ಥಳ

**ಶಾರದಾ ಛಾಪಖಾನೆ, ಮಂಗಳೂರು, ಮತ್ತು**
**ದಿ. ಮೋಡರ್ನ್ ಏಜನ್ಸಿ, ಉಡುಪಿ.**

# ಕಾಂಗ್ರೆಸಿನ ಔದ್ಯೋಗಿಕ ತತ್ವಕ್ಕಾಗಿ ಭಂಡವಾಳಗಾರರು ತಳಮಳಗೊಂಡಿದ್ದಾರೆ

[ಲೇಖಕ: ಭಾರತೀಯ]

ಭಾರತೀಯ ಕೈಗಾರಿಕೆಗಳ ಸರ್ವ ತೋಮುಖವಾದ ಉನ್ನತಿಯನ್ನು ಸಾಧಿಸುವ ಉದ್ದೇಶದಿಂದ ಒಂದು ಯೋಜನೆಯನ್ನು ತಯಾರಿಸಲಿಕ್ಕೆ ರಚಿಸಲ್ಪಟ್ಟ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾಗಿ ಪಂಡಿತ ಜವಾಹರಲಾಲ ನೆಹರೂರವರು ಉಪಸಮಿತಿಗಳಿಗೆ ಕೊಟ್ಟ ಸೂಚನೆಗಳನ್ನು ಕುರಿತು ನಮ್ಮ ದೇಶದ ಭಂಡವಾಳಗಾರರು ಅವರಮೇಲೆ ರೇಗಬಿದ್ದಿರುವರು. ಪಂಡಿತ ನೆಹರುಗಳನ್ನು ಅವರ ದೀನ ದರಿದ್ರರ ಮೇಲಿನ ಕೃಪಾದೃಷ್ಟಿಗಾಗಿ ಟೀಕಿಸುತ್ತ ಈ ಭಂಡವಾಳಗಾರರು ತಮ್ಮ ಸ್ವಾರ್ಥದೃಷ್ಟಿಯನ್ನೇ ಬಹಿರಂಗಪಡಿಸಿರುವರು.

ಹಿಂದೊಮ್ಮೆ ಈ ಭಂಡವಾಳಗಾರರು ಗಾಂಧಿಯವರ ಚರಕ ಪ್ರೇಮವನ್ನು ಕಂಡು ಅವರನ್ನೂ ಟೀಕಿಸಲಿಕ್ಕೆ ಹಿಂದೆ ಸರಿದಿರಲಿಲ್ಲ. ಗಾಂಧಿಯವರನ್ನುವಂತೆ ಒಪ್ಪೊತ್ತು ಊಟಕ್ಕೆ ಕೂಡ ಇಲ್ಲದೆ ನಿರ್ಗತಿಕರಾದ ಕೋಟ್ಯಂತರ ಭಾರತೀಯರಿಗೆ ಚರಕ ಮತ್ತು ಖದ್ದರೇ ನಿಜವಾಗಿ ಕಲ್ಪವೃಕ್ಷವಾಗಿರುವದು. ಚರಕ ಮತ್ತು ಖದ್ದರಿನ ಪ್ರಚಾರದಿಂದ ನಮ್ಮ ದೇಶದ ಗಿರಣಿ ಮಾಲಕರಿಗೆ ಕೆಲವು ಮಟ್ಟಿಗೆ ಹಾನಿ ತಟ್ಟುವದು ನಿಜ. ಆದರೆ ಈ ಗಿರಣಿ ಮಾಲಕರಿಗೆ ಹಾನಿ ತಟ್ಟುವದೆಂದು ದೇಶದ ಸಾಮುದಾಯಿಕ ಹಿತವನ್ನು ಬಲಿಕೊಡಲಿಕ್ಕಾಗುವದೆ? ಇಲ್ಲ. ಆದಕಾರಣ ಬಟ್ಟೆ ಗಿರಣಿಗಳು ನಾಮಾವಶೇಷವಾಗುವ ಒಂದು ಸಮಯ ಬರಬಹುದಾಗಿದ್ದರೂ, ಅದನ್ನು ಲಕ್ಷಿಸದೆ ಖದ್ದರಿನ ಪ್ರಚಾರ ಮಾಡಿರೆಂದು ಗಾಂಧಿಯವರು ಅನ್ನುವರು. ಅದಕ್ಕೆ ಗಿರಣಿ ಮಾಲಕರು ಅವರ ಮೇಲೆ ಉರಿದು ಬಿದ್ದರು. ಆದರೆ ಶಾಂತಮೂರ್ತಿಯಾದ ಮಹಾತ್ಮರನ್ನು ಗಿರಣಿ ಮಾಲಕರ ಸ್ವಾರ್ಥದ ಉರಿ ಏನು ಮಾಡೀತು? ಗಾಂಧಿಯವರು ತಮ್ಮ ಉಚ್ಚ ತರ್ಕದಿಂದ ಗಿರಣಿ ಮಾಲಕರ ಬಾಯಿ ಮುಚ್ಚಿದರು. ಈಗ ಅದೇ ಕಾರಣದಿಂದ ಬಟ್ಟೆ ಕೈಗಾರಿಕೆಯವರು ಮಾತ್ರವಲ್ಲ, ಇತರ ಸಮಸ್ತ ದೊಡ್ಡ ಕೈಗಾರಿಕೆಗಳ ಮಾಲಕರೂ ಪಂಡಿತ ನೆಹರುಗಳ ಮೇಲೆ ಕಣ್ಣು ಕೆಂಪಗೆ ಮಾಡಿದ್ದಾರೆ. ಆದರೆ ಈ ಭಂಡವಾಳಗಾರರ ಉರಿಗಣ್ಣು ಪಂಡಿತರಂಥ ರುದ್ರಮೂರ್ತಿಯ ತೇಜೋಭಂಗ ಮಾಡಲಾಗದೆ ಮಂದವಾಗಿದೆ.

## ಜವಾಹರಲಾಲರ ಅಭಿಮತ

ಯಾವ ಕೈಗಾರಿಕೆಗಳು ದೇಶದ ಜೀವಾಳವಾಗಿರುವವೋ, ದೇಶದ ರಕ್ಷಣೆಗೆ ಅಗತ್ಯವೋ, ರಾಷ್ಟ್ರದ ಉಪಯೋಗಕ್ಕೆ ಬರುವಂಥವೋ ಅವುಗಳನ್ನು ರಾಷ್ಟ್ರೀಯ ಸರಕಾರವೇ ನಡೆಸಿಕೊಂಡು ಬರಬೇಕೆಂದೂ, ಅವುಗಳ ಸಂಚಲನವು ಭಂಡವಾಳಗಾರರ ಕೈಯಲ್ಲಿ ಇರಬಾರದೆಂದೂ ಪಂಡಿತರು ಹೇಳುತ್ತಾರೆ. ಆದಕಾರಣ ಗ್ರಾಮಕೈಗಾರಿಕೆಗಳಿಗೂ ದೊಡ್ಡ ಕೈಗಾರಿಕೆಗಳಿಗೂ ಅನ್ಯೋನ್ಯ ಸಂಘರ್ಷವಾಗುವಾಗ ರಾಷ್ಟ್ರೀಯ ಸರಕಾರವು ಗ್ರಾಮ ಕೈಗಾರಿಕೆಗಳಿಗೇ ಸಂರಕ್ಷಣೆಯನ್ನು ಕೊಡಬೇಕೆಂದು ಅವರನ್ನುವರು. ಹೀಗೆ ಅವರು ಅನ್ನುತ್ತಿರುವದು ಕಾಂಗ್ರೆಸಿನ ಧ್ಯೇಯ-ಉದ್ದೇಶಗಳಿಗೆ ಅನುಕೂಲವಾಗಿದೆ. ಅದರಿಂದ ದೇಶದ ದಾರಿದ್ರ್ಯವು ದೂರವಾಗುತ್ತದೆ. ಆದರೆ ಸರಕಾರವು ಗ್ರಾಮಕೈಗಾರಿಕೆಗಳಿಗೆ ಉತ್ತೇಜನ ಮತ್ತು ರಕ್ಷಣೆಯನ್ನು ಕೊಟ್ಟಿದಾದರೆ ದೊಡ್ಡ ಭಂಡವಾಳಗಾರರು ಇಷ್ಟರ ತನಕ ಪಡೆಯುತಿದ್ದ ದೊಡ್ಡ ಲಾಭಾಂಶಕ್ಕೆ ಕತ್ತರಿ ಪ್ರಯೋಗವಾಗುತ್ತದೆ. ಆದ್ದರಿಂದ ಪಂಡಿತರು ಹೇಳುವದು ಅರ್ಥವಿಲ್ಲದ ಮಾತುಗಳೆಂದು ಹೇಳಿ, ಈ ಭಂಡವಾಳಗಾರರು ಅರ್ಥವತ್ತಾದ ಮಾತುಗಳನ್ನು ಆಡುತ್ತಲಿರುವರು.

## ಕಾಂಗ್ರೆಸಿನ ಮೇಲೆ ಕೋಪ

ಗಾಂಧಿಯವರು ಹೇಳುತ್ತಿರುವದೂ ಪಂಡಿತರು ಆಡುತ್ತಿರುವದೂ ಒಂದೇ ಆಗಿದೆ. ಅವರ ಮಾತುಗಳಲ್ಲಿ ಸ್ವರಭೇದವಿದೆ. ಆದರೆ ಅರ್ಥಭೇದವಿಲ್ಲ. ಕಾಂಗ್ರೆಸು ಅವರ ಪ್ರೇರಣೆಯಿಂದ ತನ್ನ ಧೋರಣೆ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತದೆ. ರಾಷ್ಟ್ರೀಯ ಯೋಜನಾ ಸಮಿತಿಗೆ ಕಾಂಗ್ರೆಸೇ ಕಾರಣವು. ತಾವು ಧನಸಹಾಯ ಮಾಡಿ ಬದುಕಿರುವ ಕಾಂಗ್ರೆಸು ತಮ್ಮ ಹಿತರಕ್ಷಣೆಯನ್ನು ಮಾಡದೆ ದೇಶದ ದೀನ ದರಿದ್ರರ ಹಿತಕ್ಕೆ ಪ್ರಯತ್ನಿಸುತ್ತಿರುವದಲ್ಲ ಎಂದು ಈಗ ಭಂಡವಾಳಗಾರರು ಕೂಗುತ್ತಿರುವರು. ಪರಂತು ವಿಚಾರಿಗಳೂ-ವಿವೇಕಿಗಳೂ ಆದವರ ಸಮೂಹದಲ್ಲಿ ಇವರ ಕೂಗು ಅರಣ್ಯರೋದನವಾಗಿ ಪರಿಣಮಿಸಿದೆ. ಕಾಂಗ್ರೆಸು ಅವರ ಗದರಿಕೆಯಿಂದ ಬೆದರುವದಿಲ್ಲ. ದೇಶದ ಹಿತಕ್ಕಾಗಿ ಅದು ಭಂಡವಾಳಗಾರರ ಹಿತವನ್ನು ಲಕ್ಷಿಸದಿರುವದು ನ್ಯಾಯವಾಗಿದೆ. ಆದರೆ ಕಾಂಗ್ರೆಸು ಈಗಾಗಲೇ ಸಮಸ್ತ ದೊಡ್ಡ ಕೈಗಾರಿಕೆಗಳ ನಾಶವಾಗಬೇಕೆಂದು ಹೇಳುವದಿಲ್ಲ. ಗ್ರಾಮಕೈಗಾರಿಕೆಗಳಿಗೆ ಪೋಷಕವಾಗಿ, ಅವುಗಳ ಮತ್ತು ರಾಷ್ಟ್ರದ ಹಿತಕ್ಕೆ ಬಾಧೆ ಬಾರದ ಹಾಗೆ ದೊಡ್ಡ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲಿಕ್ಕೆ ಅದು ಯಾವಾಗಲೂ ಸಿದ್ಧವಿದ್ದಾರೆ. ಕಾಲಪರಿಸ್ಥಿತಿ ಮತ್ತು ದೇಶದ ಆವಶ್ಯಕತೆಗಳನ್ನು ಮನಗಂಡು ಭಂಡವಾಳಗಾರರು ನಡೆಯಲಿಕ್ಕೆ ಕಲಿತುಕೊಳ್ಳಬೇಕು. ಅವರು ಹಾಗೆ ಮಾಡದೆ ಕೇವಲ ಸ್ವಾರ್ಥಪರರಾಗಿಯೇ ಇರುವರಾದರೆ ಅವರು ಅವರೇ ತಮ್ಮ ಅಸ್ತಿತ್ವವನ್ನು ಕಳೆಕೊಂಡ ಮೂರ್ಖರಾಗುವರು. ಕಾಲವು ಯಾರನ್ನೂ ಯಾವದನ್ನೂ ಲಕ್ಷಿಸದಿರುವಂತೆ ಈ ಭಂಡವಾಳಗಾರರನ್ನಾದರೂ ಲಕ್ಷಿಸಲಾರದು. ಅವರ ನಾಶಕ್ಕೆ ಕಾಂಗ್ರೆಸು ಗಾಂಧಿ ನೆಹರು ಅವರು ಕಾರಣರಾಗುವದಿಲ್ಲ. ಅದಕ್ಕೆ ಅವರ ಸ್ವಾರ್ಥವೇ ಕಾರಣವಾಗುವದು. ಇದನ್ನು ತಿಳಕೊಂಡು ಕಾಲೋಚಿತವಾಗಿ ನಡಕೊಳ್ಳುವ ಬುದ್ಧಿಚಾತುರ್ಯಗಳನ್ನು ನಮ್ಮ ಭಂಡವಾಳಗಾರರು ತೋರಿಸಬೇಕು.


THE

**Canara Banking Corporation Ltd.,**

(INCORPORATED IN BRITISH INDIA)

Estd: 1906

**THREE YEAR'S CASH CERTIFICATES**

**bearing interest at 4% p. a.**

in denominations of

**Rs.50/-,100/-,500/-,1,000/-&5,000/-**

**are now issued at all our Branches**

***For particulars call at or write to***

**Any of our nearest Branches**



**ಆಕೆಯ ತಲೆಯು ಸೀಸದ ತಲೆಯಂತೆ ಭಾರವಾಗಿತ್ತು!**

**ಬಾಲ್ಯದಿಂದ ಶಿರೋವೇದನೆಯಿತ್ತು ದಿನನಿತ್ಯ ಕ್ರುಶನ್ ಸೇವನೆಯಿಂದ ಆಕೆಯ ಆರೋಗ್ಯ ನೆಟ್ಟಗಾಗಿರುವುದು!**

ಇಪ್ಪತ್ತು ವರ್ಷಗಳ ಸಮಯ ಕಠಿಣ ತರದ ಶಿರೋವೇದನೆಯನ್ನು ಭವಿಸಿ, ಕೊನೆಗೆ ಕ್ರುಶನ್ ಲವಣ ಸೇವನೆಯಿಂದ ಒಳ್ಳೇ ಗುಣಲಾಭವನ್ನು ಹೊಂದಿದ ಆ ಸ್ತ್ರೀ ಈಗ ಸ್ವರ್ಗ ಕಂಡಂತಾಗಿದೆ. ಈಗ ಅವಳು ನಿತ್ಯವೂ ಕ್ರುಶನ್ ಲವಣವನ್ನು ಸೇವಿಸಲು ಮರೆಯುವುದಿಲ್ಲ. ಆಕೆ ಹಿಂದಿನ ಸಂಕಷ್ಟ ಭವಗಳನ್ನು ವಿವರಿಸುವ ಆಕೆಯ ಪತ್ರವು ಇಲ್ಲಿ ಕೊಡಲಾಗಿದೆ.

ಅನೇಕ ವರ್ಷಗಳ ತನಕ ಶಿರೋವೇದನೆಯನ್ನು ಅನುಭವಿಸಿದವಳು ನಾನು. ನನ್ನ ೧೧ನೇ ವಯಸ್ಸಿನಲ್ಲಿ ಆರಂಭವಾದ ಅದು ಮೊನ್ನಿನ ತನಕ ನನ್ನನ್ನು ಪೀಡಿಸುತ್ತಿತ್ತು. ಈಗ ನನ್ನ ವಯಸ್ಸು ೩೦. ಎಲ್ಲೆಲ್ಲೂ ಕ್ರುಶನ್ ಲವಣಗಳ ಕುರಿತು ಜಾಹೀರು ಆಗುವುದನ್ನು ಕಂಡು ಅದನ್ನು ಸೇವಿಸಬೇಕಾಗಿ ಅಪೇಕ್ಷಿಸಿ ಒಂದು ಬಾಟ್ಲಿಯನ್ನು ಪಡಕೊಂಡೆ. ಬರೇ ಎರಡು ತಿಂಗಳ ಸೇವನೆಯಿಂದ ನನಗೆ ವಿಚಿತ್ರ ತರದ ಫಲವು ದೊರಕುತ್ತದೆ. ನನ್ನ ಶಿರೋವೇದನೆಯು ಮಾಯವಾಗಿದೆ. ಕ್ರುಶನ್ ಔಷಧಿಯು ನಿಜವಾಗಿಯೂ ವಿಚಿತ್ರ ತರದ್ದು. ಮಿ ಇ ಡಿ

ಹೊಟ್ಟೆಯ ಹಾಳು ಸ್ಥಿತಿಯು ತಲೆನೋವಿನ ಕಾರಣವೆಂದು ಅನೇಕ ಸಂದರ್ಭಗಳಲ್ಲಿ ಕಂಡುಹಿಡಿಯಲಾಗಿದೆ. ದೇಹದೊಳಗ ಉಂಟಾಗುವ ಕಲ್ಮಶಗಳನ್ನು ರಕ್ತವು ಹೀರಿಕೊಂಡಿರುವುದರಿಂದಲೇ ಶಿರೋವೇದನೆಯುಂಟಾಗುವುದು. ಈ ವಿಷ ಕಲ್ಮಶಗಳನ್ನು ತೆಗೆದುಬಿಡಿರಿ. ಅವುಗಳು ಇನ್ನೊಮ್ಮೆ ಉಂಟಾಗದಂತೆ ನೋಡಿಕೊಳ್ಳಿರಿ. ಆಗ್ಯೆ ನೀವು ಸಂಕಟದಿಂದ ಪಾರಾಗುವಿರಿ. ನಿಮ್ಮ ಅಂಗಾಂಗವನ್ನು ಪರಿಶುದ್ಧವಾಗಿಡಲು ಕ್ರುಶನ್ ಲವಣಗಳು ನಿಸರ್ಗದೊಡನೆ ಸಹಕರಿಸುತ್ತದೆ. ಅದು ನಿಮ್ಮ ದೇಹದೊಳಗಿರುವ ವಿಷಕಲ್ಮಶಗಳನ್ನು ಹೊರಡಿಸುತ್ತದೆ. ಅದರಿಂದಲೇ ಕ್ರುಶನ್ ಲವಣಗಳಿಂದ ಶಾಶ್ವತವಾದ ಗುಣವು ದೊರಕುತ್ತದೆ. ಎಲ್ಲಾ ಸ್ಟೋರುಗಳಲ್ಲೂ ಬಜಾರುಗಳಲ್ಲೂ ಕ್ರುಶನ್ ಲವಣವು ಮಾರಲ್ಪಡುತ್ತದೆ.




No 19

ಈ ವಾರದ ಕತೆ:

# ಓಡಿದು ಬಿಟ್ಟುಸಿರು!

★

[ದುರ್ಗಾದಾಸ]

ಸಂಜೆ ಕಾಲೇಜು ಬಿಟ್ಟು ಬಂದ ಮೇಲೆಯೇ ಶಾಂತಿಗೆ ಶರೀರದಲ್ಲಿ ಸ್ವಸ್ಥವಿರಲಿಲ್ಲ. ಹಾಸಿಗೆ ಹೋಗಬೇಕಾದರೆ ತಲೆಸಿಡಿತ ಜೋರಾಗಿತ್ತು ರಾತ್ರಿ ಚೆನ್ನಾಗಿ ಜ್ವರ ಬಂತು. ಮುಂಜಾವದಲ್ಲಿ ಹಾಗೆ ಮೈ ಬೆವರಿ ಕಣ್ಣಿಗೆ ಜಾಡ್ಯ ಹತ್ತಿತೋ ಎನ್ನುವಷ್ಟರಲ್ಲಿಯೇ ಆಶ್ರಮದ ಪ್ರಾರ್ಥನೆಯ ಗಂಟೆಯೂ ಹೊಡೆಯಿತು! ಮೈಯ್ಯ ಅಸ್ವಸ್ಥವನ್ನು ಗಣಿಸದೆ ಎಲ್ಲರೊಡನೆ ಆಕೆಯೂ ಹಾಸಿಗೆ ಬಿಟ್ಟು ಎದ್ದು ಹೋದಳು.

ಮೈ ಸ್ವಸ್ಥವಿರಲಿಲ್ಲವಾಗಿ, ಕಾಲೇಜಿಗೆ ರಜಾ ಹಾಕಿಬಿಡೋಣವೇ ಅನ್ನಿಸಿತು ಆಕೆಗೆ. ಒಂದು ಪಾಠವನ್ನು ಕಳಕೊಂಡರೆ ಎಷ್ಟೊಂದು ವಿಷಯಗಳು ತಪ್ಪಿಹೋಗುವವೋ ಎಂದು ಆಕೆಗೆ ಆತುರ. ಅದರಲ್ಲಿಯೂ ಶ್ರೀಮತಿ ದುರ್ಗಾವತಿಯವರ ಪಾಠವೆಂದರೆ ಶಾಂತಿಗೆ ಜೀವ! ತನ್ನ ಅಪಾರವಾದ ವಿದ್ಯೆ, ಅದ್ಭುತ ಪ್ರತಿಭೆ, ಇಡೀ ಜೀವನವನ್ನೇ ಸೇವೆಗಾಗಿ ಅರ್ಪಿಸಿದ್ದ ಆಕೆಯ ನಿರ್ಮಲ ಜೀವನವು ಶಾಂತಿಯ ಹೃದಯವನ್ನು ಸೂರೆಗೊಂಡಿತ್ತು. ಆಗಾಗ ಪಾಠ ಹೇಳಿಕೊಡುವ ಸಂದರ್ಭಗಳಲ್ಲಿ 'ಸೇವೆಗಾಗಿ ಜೀವ' ಎನ್ನುತ್ತಿದ್ದ ಅವರ ಮಾತಿನ ಪಲ್ಲವಿಯು, ಶಾಂತಿಯ ಜೀವದ ನಾಡಿಯನ್ನು ಮಿಡಿಯುತ್ತಿತ್ತು! ಹಾಗಾಗಿ ಕಾಲೇಜಿಗೆ ಹೋಗದಿದ್ದರೆ ಶಾಂತಿಯ ಮನಸ್ಸಿಗೆ ಶಾಂತಿಯಿರಲಿಲ್ಲ

ತಾನು ಸದಾ ಉಲ್ಲಾಸದಿಂದಿದ್ದು, ಸಹಪಾಠಿಣಿಯರಲ್ಲಿ ಉಲ್ಲಾಸವನ್ನು ತುಂಬಿಸುವುದು ಆಕೆಯ ನೈಸರ್ಗಿಕ ಶಕ್ತಿ. ಇಂದು ಸ್ವತಃ ಶಾಂತಿಯೇ ಹುರುಪಿಲ್ಲವಾಗಿ ಎಲ್ಲರ ಮುಖಗಳಲ್ಲಿಯೂ ಕಳೆಯು ಕುಂದಿಹೋದಂತಿತ್ತು. ತನ್ನ ಅಚ್ಚುಮೆಚ್ಚಿನ ಉಪಾಧ್ಯಾಯಿನಿ, ದುರ್ಗಾವತಿಯವರೇ, 'ಏನು ಶಾಂತೀ ಹುರುಪಿಲ್ಲವೇ?' ಎಂದಾಗ ಆಕೆಗೆ ಹೇಗೋ ಅನ್ನಿಸಿತು

ಸಂಜೆ ಕಾಲೇಜು ಬಿಟ್ಟು ಹಲವರು ಆಟದ ಬಯಲಿಗೆ, ಹಲವರು ಮಹಿಳಾಶ್ರಮಕ್ಕೆ ಹೀಗೆ ಗೆಳತಿಯರೆಲ್ಲಾ ಅತ್ತಿತ್ತ ಓಡಾಡುತ್ತಿದ್ದರು! ಎಲ್ಲರ ಕಣ್ಣು ತಪ್ಪಿಸಿ, ಶಾಂತಿಯು ಒಬ್ಬಳೇ ಕೋಣೆಗೆ ಬಂದು ತನ್ನ ಭಾರವಾದ ತಲೆಯನ್ನು ಕೈಗಳಿಂದ ಒತ್ತಿ ಹಿಡಕೊಂಡು, ಮೇಜಿಗೆ ಆಧರಿಸಿ ಮೌನವಾಗಿ ಕುಳಿತುಕೊಂಡಳು. ಹೊರಗಿನ ಪ್ರಕೃತಿಯೂ ಆಕೆಗೆ ಎಂದಿನಂತೆ ಆನಂದವನ್ನು ಉಂಟುಮಾಡುವ ಬದಲು, ಬೇಸರವನ್ನು ಹೆಚ್ಚಿಸುತ್ತಿತ್ತು

ತಂದೆತಾಯಿಗಳ ಮರಣಾನಂತರ ತನ್ನ ದೂರದ ಸಂಬಂಧಿಕರಾದ ಡಾ। ರಮಾನಾಥರು ತನ್ನನ್ನು ಅಕ್ಕರೆಯಿಂದ ಪೋಷಿಸಿದ್ದು ಹಳ್ಳಿಯಿಂದ ಕರತಂದು ಮಹಿಳಾಶ್ರಮದಲ್ಲಿ ಸೇರಿಸಿ ತನ್ನನ್ನು ವಿದ್ಯಾಭ್ಯಾಸಕ್ಕೆ ಹಚ್ಚಿದ್ದು ಅವರ ಪಿತೃಸಮಾನ ಪ್ರೇಮಲ ಹೃದಯ ಸಂಸಾರವನ್ನು ಕಳಕೊಂಡು ಏಕಾಂಗಿಯಾಗಿ ಹಳ್ಳಿಯ ತಮ್ಮ ಚಿಕಿತ್ಸಾ ಭವನದಲ್ಲಿ ಬಿಡುವಿಲ್ಲದೆ ದುಡಿಯುತ್ತಿರುವ ಅವರ ಜೀವನ... ಈ ವಿಚಾರಗಳು ಆಕೆಗೆ ಬಂದಾಗ ಹೃದಯವು ದುಃಖದಿಂದ ಭಾರವಾಯಿತು. ತನ್ನಷ್ಟಕ್ಕೇ ಚೆನ್ನಾಗಿ ಅತ್ತುಬಿಟ್ಟಳು! ವಿದ್ಯಾಭ್ಯಾಸ ಮುಗಿದ ಮೇಲೆ, ಅವರ ಬಳಿಯಲ್ಲಿಯೇ ಇದ್ದು, ನಿತ್ಯ ಶುಶ್ರೂಷೆಯಿಂದ ತನ್ನ ಋಣವನ್ನು ಸಲ್ಲಿಸಬೇಕೆಂದು ಮನಸ್ಸಿನಲ್ಲಿಯೇ ಧ್ಯಾನಿಸಿಕೊಂಡಳು

ಅಂಚೆಯ ಜವಾನನು ತಂತಿಯನ್ನು ಹಿಡಿದು ಹಿಡಿಬಂದ ಶಾಂತಿಯ ಹೆಸರಲ್ಲಿ ತಂತಿ! ಎದೆಯು ಬಹಳವಾಗಿ ಬಡಿದುಕೊಂಡಿತು! ಆಗ್ರಹದಿಂದ ಬಿಚ್ಚಿ ಓದಿನೋಡಿದಳು

'ಇಂದು ಮಧ್ಯಾಹ್ನಕ್ಕೆ ಡಾ। ರಮಾನಾಥರವರು ಅಕಸ್ಮಾತ್ತಾಗಿ ಹೃದಯಸ್ತಂಭನದಿಂದ ತೀರಿಹೋ...' ಸ್ಮೃತಿ ತಪ್ಪಿ ನೆಲದ ಮೇಲೆ ಬಿದ್ದ ಶಾಂತಿಗೆ ಬಹಳ ಸಮಯದ ಶುಶ್ರೂಷೆಯ ಮೇಲೆ ಎಚ್ಚರವಾಯಿತು! ತಾನೆಲ್ಲಿದ್ದೇನೆ, ಏನಾಗಿದೆ ಎಂಬ ಅರಿವೂ ಆಕೆಗೆ ತಪ್ಪಿಹೋಗಿತ್ತು! ಮತ್ತೆ ಕಳೆದ ಘಟನೆಗಳೆಲ್ಲಾ ಸ್ಮೃತಿಪಥಕ್ಕೆ ಬಂದುವು! ದುಃಖವು ತಡೆಯದಾಯಿತು! ಪಿತೃಸಮಾನರನ್ನು ಕಳಕೊಂಡು ಅನಾಥೆಯಾದೆನೆಂದು ಅತ್ಯಂತ ಮರುಗಿದಳು! ಗೆಳತಿಯರು—ಸ್ವತಃ ಆಶ್ರಮದ ಮೇಲ್ವಿಚಾರಕರಾದ ಶ್ರೀಮತಿ ಅನುಸೂಯಾ ದೇವಿಯವರೇ ಬಂದು ಸಂತೈಸಿದರು.

ವಿಧಿಘಟನೆಯನ್ನು ತಪ್ಪಿಸಲಾಗುವುದಿಲ್ಲವೆಂದೂ, ಜೀವನದಲ್ಲಿ ತಮ್ಮ ಪಾಲಿಗೆ ಅನುಭವಿಸಲು ಬಂದಿರುವ ಸುಖ-ದುಃಖಗಳೆರಡನ್ನೂ ಸಮಾನ ಧೈರ್ಯದಿಂದ ಎದುರಿಸಬೇಕಾದುದು ಜೀವಿತದ ಧರ್ಮವೆಂದೂ ಹೇಳಿ ಸಮಾಧಾನಪಡಿಸಿದರು

★

ಬಿ. ಎ. ಪರೀಕ್ಷೆಯಲ್ಲಿ ಶಾಂತಿಯು ಉತ್ತಮ ತರಗತಿಯಲ್ಲಿ ಉತ್ತೀರ್ಣಳಾದಳು. ತನ್ನ ಪರೀಕ್ಷೆಯ ಪ್ರಧಾನ ವಿಷಯವಾದ ಚರಿತ್ರೆಯಲ್ಲಿ ಸರ್ವ ಪ್ರಥಮಳಾಗಿ ತೇರ್ಗಡೆಯಾದ ಕುರಿತು ದುರ್ಗಾವತಿಯವರು ಆಕೆಯನ್ನು ಉಪಾಧ್ಯಾಯಿನಿಯರ ಗೆಳತಿಯರ ಎಲ್ಲರೆದುರಲ್ಲಿಯೂ ಬಹಳವಾಗಿ ಕೊಂಡಾಡಿದ್ದರು. ಶಾಂತಿಯೂ ಬಹಳ ಆದರದಿಂದ ಹಿಗ್ಗಿ ಹೋದಳು

ಡಾ। ರಮಾನಾಥರವರು ಶಾಂತಿಗೆ ತನ್ನ ಅಪಾರ ಸಂಪತ್ತನ್ನು 'ವಿಲ್' ಮಾಡಿಟ್ಟು ಹೋಗಿದ್ದರು! ಅವರೆ ಆಕೆಗೆ ತನ್ನ ಭವಿಷ್ಯತ್ತಿನ ವಿಷಯ ಚಿಂತಿಸಿದಷ್ಟು ನೆಲೆಯಾಗಲಿಲ್ಲ. ಮುಂದಿನ ವಿದ್ಯಾಭ್ಯಾಸಕ್ಕೆ ಯುರೋಪಿಗೇ ತೆರಳಬೇಕೆಂದು ಮಹಿಳೆಯರೂ ಪಾಶ್ಚಾತ್ಯ ದೇಶಕ್ಕೆ ಹೋಗಿ, ಅಲ್ಲಿನ ಸಂಸ್ಕೃತಿಯನ್ನು ಅಭ್ಯಾಸಿಸಿಬರಬೇಕೆಂದೂ, ಆದರಿಂದ ನಿಜವಾಗಿಯೂ ದೇಶಕ್ಕೆ ಮಹತ್ತರವಾದ ಹಿತವಾಗಲಿದೆಯೆಂದೂ ದುರ್ಗಾವತಿಯವರೇ ಶಾಂತಿಯನ್ನು ಒತ್ತಾಯಪಡಿಸಿ ಹೇಳಿದರು. ಎಲ್ಲವೂ ನಿರ್ಧಾರವಾದ ಮೇಲೆ ಇಂಗ್ಲೆಂಡಿನಲ್ಲಿ ತನ್ನ ಪರಿಚಯದವಳು ಸುಶೀಲಳೂ, ಆದ ಮಿಸ್. ಆಲೀಸರಲ್ಲಿ ಉಳಕೊಳ್ಳುವ ಬಗ್ಗೆಯೂ ಅವರೇ ಎಲ್ಲಾ ಏರ್ಪಾಡುಗಳನ್ನು ಮಾಡಿದರು

★

ಯೂರೋಪಿನ ವಿದ್ಯಾಭ್ಯಾಸವು ಶಾಂತಿಯ ಜೀವನದಲ್ಲಿ ಅದ್ಭುತವಾದ ಪರಿಣಾಮವನ್ನುಂಟುಮಾಡಿತು. ಅವರ ಸಾಹಸ ಜೀವನ—ರಾಜಕೀಯ ಸ್ವಾತಂತ್ರ್ಯ—ಸಾಮಾಜಿಕ ಸಮಾನತೆ—ಶೋಧನಾಶಕ್ತಿ ಇವುಗಳನ್ನು ಕಂಡು ಆಕೆ ಬಹಳ ಮೆಚ್ಚಿದಳು. ಯೂರೋಪಿನ ಬೇರೆ ಬೇರೆ ರಾಷ್ಟ್ರಗಳ ಕ್ರಾಂತಿ ಪೂರ್ಣ ಇತಿಹಾಸಗಳನ್ನು ಅಭ್ಯಾಸಮಾಡಿದಳು! ಆ ಸಮಯದಲ್ಲಿ ತನ್ನ ನಾಡಿನ ದುರ್ಗತಿಯು ಆಕೆಯ ಹೃದಯವನ್ನು ಕೊರೆಯ ಹತ್ತಿತು. ಯೂನಿವರ್ಸಿಟಿಯ ಚರ್ಚಾಕೂಟಗಳಲ್ಲಿ ಆಕೆಯು ತನ್ನ ಸುಶ್ರಾವ್ಯವಾದ ಕೋಮಲ ಕಂಠಧ್ವನಿಯಿಂದ—ಭಾರತದ ಹಿಂದಿನ ಭಾಗ್ಯೇತಿಹಾಸವನ್ನು ವರ್ಣಿಸುತ್ತಾ—ಇಂದಿನ ಸ್ವಾತಂತ್ರ್ಯ ಸಂಗ್ರಾಮ-ಗಾಂಧೀಜಿಯವರ ಆದರ್ಶಮರೀಚಿಕೆ-ಇವುಗಳ ಕುರಿತು ಅಸ್ಖಲಿತವಾಗಿ ಅಮೋಘವಾಗಿ ಭಾಷಣ ಮಾಡುವಳು! ಯೂರೋಪು-ಅಮೆರಿಕಗಳ ಮಧುರ ಬಾಂಧವ್ಯಕ್ಕಾಗಿ ಆಕೆ ವಾದಿಸುವಳು! ಯೂರೋಪಿನ ವಿಲಾಸ ಜೀವನದಲ್ಲಿ ಮರುಳಾಗಿರುವ ಹಲವು ಮಂದಿ ಭಾರತೀಯ ವಿದ್ಯಾರ್ಥಿಗಳಿಗೆ ಆ ಭಾಷಣಗಳೇ ಜಡನಿದ್ರೆಯಿಂದ ಹೊಡೆದೆಬ್ಬಿಸಲು ಸಾಕಾದುವು! ಪ್ರೊಫೆಸರರೂ, ವಿದ್ಯಾರ್ಥಿಗಳು ಸಮಸ್ತರೂ ಏಕಕಾಲದಲ್ಲಿಯೇ ಆಕೆಯ ಅದ್ಭುತ ಮಾತುಗಾರಿಕೆಗಾಗಿ, ದೇಶಸೇವಾಕಾಂಕ್ಷೆಗಾಗಿ, ಬೆರಗಾಗುವರು!

ಶಾಂತಿಯ ಗೆಳೆತನ ಮಾಡಲು ಹಾರೈಸಿ ಬಂದ ಹಲವು ಮಂದಿ ವಿದ್ಯಾರ್ಥಿಗಳನ್ನು ಆಕೆಯು—ಅವರಲ್ಲಿ ಅಂತಹ ಯೋಗ್ಯತೆಯನ್ನೇ ಕಾಣದೆ—ತಿರಸ್ಕರಿಸಿದ್ದಳು! ಚಂದ್ರಶೇಖರನು ಆಕೆಯ ಭಾರತೀಯ ಸಹಪಾಠಿಗಳಲ್ಲೊಬ್ಬ! ಹಲವು ವಿಚಾರಗಳಲ್ಲಿ ಇಬ್ಬರೂ ಏಕಾಭಿಪ್ರಾಯದವರಾಗಿದ್ದರು! ತಮ್ಮ ಜೀವನದಲ್ಲಿ ಒಂದು ನಿಶ್ಚಿತವಾದ ಉದ್ದೇಶವಿಟ್ಟುಕೊಂಡು ಅದಕ್ಕಾಗಿ ಇಬ್ಬರೂ ಶ್ರಮಪಡುತ್ತಿದ್ದರು! ರಾಜಕೀಯ ವಿಚಾರ—ಅದರಲ್ಲಿಯೂ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕುರಿತು ಮಾತು ಬೆಳೆಸಿದಲ್ಲಿ ಹೊತ್ತು ಹೋಗುವುದೇ ಅವರಿಗೆ ಭಾಸವಾಗುತ್ತಿರಲಿಲ್ಲ!

★

('ಸಂಸಾರ ನೌಕ್ಯ' ಚಿತ್ರದಲ್ಲಿ ಮಿಸ್ ಸರೋಜಿನಿ ಮತ್ತು ನಟ್ಟಿನಚಂದ್ರ)

ವಸಂತ ಪೂರ್ಣಿಮೆಯ ರಾತ್ರಿ! ಬೆಳ್ಳನೆ ಬೆಳದಿಂಗಳು ಹರಡಿದೆ! ಪ್ರಕೃತಿಯೇ ಸಂತಸಗೊಂಡು ಉನ್ಮತ್ತವಾಗಿ ನಲಿದಾಡುವಂತಿದೆ! ಶಾಂತಿ ಮತ್ತು ಚಂದ್ರಶೇಖರ್ ಇಬ್ಬರೂ ವಿಹಾರಕ್ಕಾಗಿ ಪಾರ್ಕಿನ ಬಳಿ ಬಂದರು. ಶಾಂತಿಯು ಮಾತನಾಡುತ್ತ ಬಂದವಳು, ಒಂದು ಆಸನದ ಮೇಲೆ ಕೂತುಕೊಂಡಳು. ಹತ್ತಿರದ ಲತೆಯೊಂದನ್ನು ಬಗ್ಗಿಸಿ ಅದರ ಚಿಗುರೊಂದನ್ನು ಮೃದುವಾಗಿ ಮುಟ್ಟಿ ನೋಡಿದಳು. ಮೇಲೆ ದಿಟ್ಟಿಸಿದಾಗ ಆಕಾಶದಲ್ಲಿ ಚಂದ್ರನು ಪೂರ್ಣ ಕಳೆಯುಳ್ಳವನಾಗಿ ಮನೋಹರವಾಗಿ ಬೆಳಗುತ್ತಿದ್ದನು!

ಚಂದ್ರಶೇಖರನೂ ಆಕೆ ಕುಳಿತಿದ್ದ ಆಸನಕ್ಕೆ ತಾಗಿ ಬಂದು ಕುಳಿತುಕೊಂಡನು. ಮಂದವಾಗಿ ಬೀಸುವ ಗಾಳಿಯು ಶಾಂತಿಯ ಮುಂಗುರುಳುಗಳನ್ನು ಆಕೆಯ ಮುಖದ ಮೇಲೆ ಕುಣಿದಾಡಿಸುತ್ತಿತ್ತು! ಅವಳ ಸಹಜವಾದ ಸ್ಫುರದ್ರೂಪ, ಗಂಭೀರವೂ ತೇಜೋಪೂರ್ಣವೂ ಆದ ಮುಖಶ್ರೀ, ಉಜ್ವಲ ಕಾಂತಿಯುಕ್ತವಾದ ದೃಷ್ಟಿ, ವಿದ್ವತ್ಪೂರ್ಣವಾದ ಜೀವನ, ತುಂಬಿದವಯೋಧರ್ಮ, ಸನ್ನಿಹಿತವಾದ ಪ್ರಕೃತಿಯ ಸನ್ನಿವೇಶ—ಇವುಗಳಿಂದ ಚಂದ್ರಶೇಖರನು ಸೌಂದರ್ಯದ ಸೆರೆಯಾಳಾದನು!

ತೆರೆದ ಕಣ್ಣಿನಿಂದ ಆಕೆಯನ್ನೇ ಬಹಳ ಹೊತ್ತು ನಿಟ್ಟಿಸಿ ನೋಡಿದನು! ಆಗಸದ ಚಂದ್ರನ ಸೌಂದರ್ಯ ದರ್ಶನದಲ್ಲಿ ಶಾಂತಿಯು ಬಾಹ್ಯ ಜಗತ್ತಿನ ಅರಿವಿಲ್ಲದವಳಾಗಿದ್ದಳು! ಚಂದ್ರಶೇಖರನ ಹೃದಯವು ಮಿತಿಮೀರಿ ಧೈರ್ಯವು ಕುಗ್ಗಿಹೋಯಿತು!

"ಶಾಂತೀ, ನೀನಿತ್ತ ಸಲುಗೆಯಿಂದ ನಿನ್ನೊಡನೆ ಮನಬಿಚ್ಚಿ, ಮನಬಿಚ್ಚಿ ಮಾತನಾಡುತ್ತೇನೆ, ನನ್ನ ಮುಂದಿನ ಬಾಳುವೆಯಲ್ಲಿ ... ನೀನು ... ನೀನು ... ನನ್ನ ಜೀವನದ ಸಂಗಾತಿ ... ಸಂಗಾತಿಯಾದರೆ ... ಏ ... ಏ ..."

'ಸರಿ ಶೇಖರ್!' ಹಾಗೆ ಮನಬಿಚ್ಚಿ ಮಾತನಾಡಬೇಕು. ನಿನ್ನೊಡನೆ ನಾನು ಶ್ರೀಮತಿ ದುರ್ಗಾವತಿಯವರ ಕುರಿತು ಅನೇಕ ಬಾರಿ ಹೇಳಿದ್ದೇನೆ. 'ಸೇವೆಗಾಗಿ ಜೀವ' ಈ ತತ್ವವನ್ನು ನನಗೆ ಸಹಸ್ರ ಬಳ್ಳಿಯ ಭರತ ಮಾತೆಯು ಆಕೆಯ ಮುಖದಿಂದ ಉಪದೇಶ ಮಾಡಿದ್ದಾಳೆ! ಪ್ರಪಂಚದ ಎಷ್ಟೋ ಇತಿಹಾಸಗಳನ್ನು—ಎಷ್ಟೋ ಮಹಾತ್ಮರ ಜೀವನ ಚರಿತ್ರೆಗಳನ್ನು—ಎಷ್ಟೋ ಕ್ರಾಂತಿಯ ಚರಿತ್ರೆಗಳನ್ನು ನಾನು ಓದಿದೆ. 'ಸೇವೆಗಾಗಿ ಜೀವ' ಈ ಮಾತಿನಲ್ಲಿ ಅಡಕವಾದ ತತ್ವಕ್ಕಿಂತ ಮಿಗಿಲಾದ ತತ್ವವನ್ನು ನಾನೆಲ್ಲಿಯೂ ಕಾಣಲಿಲ್ಲ. ನೀನೂ ಒಬ್ಬ ರಾಜಕಾರಣ ವಿಶಾರದನಿದ್ದೀ—ನಿನ್ನ ಬುದ್ಧಿವಂತಿಕೆಯನ್ನು—ಮುಂದಕ್ಕೆ ಭಾರತಕ್ಕೆ ತೆರಳಿ ಅಲ್ಲಿ ಉಚ್ಚಾಧಿಕಾರದಲ್ಲಿ ಮೆರೆದು ಬಡವರನ್ನು ಸುಲಿಯುವ ಸಲುವಾಗಿ ಉಪಯೋಗಿಸಬೇಡ! ತಪ್ಪೇನು? ನಾಡತಾಯಿಯ ಸೇವೆಗಾಗಿ ನಾವಿಬ್ಬರೂ ಜೊತೆಗಾರರಾಗುವ! ನಮ್ಮಿಬ್ಬರ ಜೀವನಗಳು ಅದಕ್ಕಾಗಿಯೇ ಮೀಸಲಾಗಿರಲಿ! ಆದರೆ ಶೇಖರ್ ನಾನು ನಿನ್ನ ಜೊತೆ ಹಿಡಿದು ಬಂದ ಸಹೋದರಿಯೆಂದು ನೀನು ವಿಚಾರಿಸಿಕೊ!'

ಆಕಾಶದಲ್ಲಿ ಚಂದ್ರನನ್ನು ಕವಿದು ಬಂದಿದ್ದ ಮೋಡವು ಮರೆಯಾಯಿತು. ಪುನ ಶುಭ್ರವಾದ ಬೆಳದಿಂಗಳೇ ಎಲ್ಲೆಲ್ಲಿ ಪಸರಿಸಿತು!

ಶಾಂತಿಯೂ ಚಂದ್ರಶೇಖರನೂ ದೀರ್ಘವಾಗಿ ಒಮ್ಮೆ ನಿಟ್ಟುಸಿರು ಬಿಟ್ಟರು!


ನಿಮ್ಮ ಜಾಹಿರಾತುಗಳನ್ನು
ಸ್ವದೇಶಾಭಿಮಾನಿಗೇ ಕೊಡಿರಿ!

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಘುನಾಥ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇರವಾಗಿ ಶುದ್ಧವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಕಡೆನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಸೊಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಳವಾವಲೀಹಿಂಸು, ಆದೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೧-೦-೦

ವಿ. ಪಿ. ...

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜೆ, S. M. C.

# ಬ್ರಿಟಿಷರಿಗೆ ಜಯವಾಗಲೆಂದು ನಾನು ಮುಂದೆ ಬಯಸಲಾರೆ

## ಮಹಾತ್ಮಾಜಿಯವರ ಮನಸ್ಸು ಮುರಿಯಿತೆ?

ನಾನು ಬ್ರಿಟಿಷರನ್ನು ಭಾರತದಿಂದ ಓಡಿಸುವ ಸಲುವಾಗಿ, ಇತರ ರಾಷ್ಟ್ರವನ್ನು ಆಮಂತ್ರಿಸಲಾರೆ, ಏಕೆಂದರೆ, ಅದು ನನ್ನ ಅಹಿಂಸಾ ತತ್ವಕ್ಕೆ ವಿರುದ್ಧವಾದುದು. ಹೀಗಿದ್ದರೂ, ಬ್ರಿಟಿಷ್ ರಾಜ್ಯಭಾರದ ಸ್ಥಾನದಲ್ಲಿ ಬೇರೆ ರಾಜ್ಯಭಾರವನ್ನು ಸ್ಥಾಪಿಸುವ ಯತ್ನವನ್ನು ನಾನು ಮಾಡಲಾರೆ; ನನಗೆ ಬೇಕಾದುದು ಸ್ವತಂತ್ರ ರಾಜ್ಯಭರಣವಾಗಿದೆ. ಅದು ಮಾತ್ರವಲ್ಲದೆ, ನಾನು ಯಾವಾಗಲೂ ಗುಪ್ತ ರೀತಿಯಲ್ಲಿ ಕೆಲಸ ಮಾಡಲು ಬಯಸುವುದಿಲ್ಲ.

ಹೀಗೆಂದು ಗಾಂಧಿಜಿಯವರು ಹರಿಜನ ಪತ್ರಿಕೆಯಲ್ಲಿ ಬರೆಯುತ್ತಾ, ಆಲೀ ಸಹೋದರರೊಡನೆ ಅಫಘಾನದ ಅಮೀರರನ್ನು ಇಲ್ಲಿಗೆ ಬರಮಾಡುವ ಗುಪ್ತ ತಂತ್ರದಲ್ಲಿ ಗಾಂಧಿಜಿಯವರು ಸೇರಿದ್ದರೆಂಬ ಒಂದು ಆರೋಪವನ್ನು ಅಲ್ಲಗಳೆದಿರುವರು. ಅದು ಮಾತ್ರವಲ್ಲದೆ, ಅಫಘಾನದ ಆಗಿನ ಅಮೀರರಿಗೆ, ಅವರು ಬ್ರಿಟಿಷರೊಡನೆ ಮೈತ್ರಿಯನ್ನು ಮಾಡಿಕೊಳ್ಳುವುದು ಬೇಡವೆಂದು ಮಹಮ್ಮದಾಲಿಯವರು ಕೊಟ್ಟ ತಂತಿಯ ನಕಲನ್ನು ಸ್ವಾಮಿ ಶ್ರದ್ಧಾನಂದಜೀಯವರು ನೋಡಿರುವುದಾಗಿಯೂ ಆರೋಪವಿದ್ದುದನ್ನು ಗಾಂಧಿಜಿಯವರು ನಿರಾಧಾರವೆನ್ನುವರು.

'ಆ ಆರೋಪದಲ್ಲಿ ಯಾವ ತರದ ಸತ್ಯಾಂಶವೂ ಇಲ್ಲ. ಈ ಕುರಿತು ಆರೋಪವುಂಟಾದಾಗ, ಆದರೆ ವಿಷಯವನ್ನು ಆಲೀ ಸಹೋದರರ ಲಕ್ಷ್ಯಕ್ಕೆ ತಂದಿರಲು, ಅವರು ಅದನ್ನು ತೀವ್ರವಾಗಿ ನಿಷೇಧಿಸಿದ್ದರು. ನನಗೆ ಅವರಲ್ಲಿ ಅಚಲ ವಿಶ್ವಾಸವಿತ್ತು. ಅಫಘಾನದ ಅಮೀರರಿಗೆ ತಂತಿ ಬಿಡಲೆಂದು ಮಹಮ್ಮದಾಲಿಯವರಿಗಾಗಿ ತಂತಿಯನ್ನು ನಾನು ನಕಲು ಮಾಡಿದ ವಿಷಯವು ನಿರಾಧಾರವಾದುದು. ಸ್ವಾಮಿ ಶ್ರದ್ಧಾನಂದರಾದರೂ ಆ ಕುರಿತು ನನಗೆ ತಿಳಿಸಿರಲಿಲ್ಲ.

### ನಮ್ಮ ದಿನಗಳು

ಎಲ್ಲಾ ಧರ್ಮಗಳಿಗೂ ಸಮಾನತೆಯನ್ನು ಬೋಧಿಸುವುದರಿಂದ ಗಾಂಧಿಜಿಯವರು ಇಸ್ಲಾಮನ್ನು ಹೀನ ಮಾಡುವರೆಂದೂ ಗಡಿನಾಡಿನ ಅಫಘಾನರ ಕೈಯಿಂದ ಕೋವಿಯನ್ನು ತೆಗೆಸಿದುದರಿಂದ ಅವರನ್ನು ಅಧರ್ಮಿಯರಾಗಿ ಮಾಡಿದರೆಂದೂ ಹಿಂದೂ ಮುಸ್ಲಿಮರು ಒಂದಾಗುವ ಸಂದರ್ಭವೇ ಸಾಧ್ಯವಿಲ್ಲವೆಂದೂ ಗಾಂಧಿಜಿಯವರಿಗೆ ಬರೆದ ಪತ್ರವೊಂದಕ್ಕೆ ಉತ್ತರ ಕೊಡುತ್ತಾ ಗಾಂಧಿಜಿಯವರು ಹೀಗೆನ್ನುತ್ತಾರೆ.

'ಖಲೀಫತ್ ದಿನಗಳ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನಿದೆಯೋ ನನಗೆ ತಿಳಿಯುವುದಿಲ್ಲ. ಖಲೀಫತ್ ಸಂಗ್ರಾಮದ ತಳಹದಿಯನ್ನು ಹಾಕಿದವನು ನಾನು. ಆಲೀ ಸಹೋದರರ ಬಿಡುಗಡೆಗಾಗಿ ನಾನು ಬಹಳ ಯತ್ನಿಸಬೇಕಾಯಿತು. ಬಿಡುಗಡೆಯಾದ ಮೇಲೆ ಅವರು ಹೊರಬಂದು, ಖ್ವಾಜಾ ಅಬ್ದುಲ್ ಮಜೀದ್, ಶಾಬ್ ಕುರೇಶಿ, ಮೊಹಾಮ್ಮ ಅಲಿ ಮೊದಲಾದವರು ತನ್ನ ಕಾರ್ಯ ಯೋಜನೆಗಳನ್ನು ಸಿದ್ಧಗೊಳಿಸಿದರು. ಆ ಯೋಜನೆಯ ಕುರಿತು ಜಗತ್ತೇ ಮುಂದೆ ತಿಳಿದುಕೊಂಡಿತು.

'ನಾನು ಅವರಿಗೆ ಅಹಿಂಸಾ ವಿಷಯವನ್ನು ತಿಳಿಸಿದೆ. ಅಹಿಂಸೆಯನ್ನು ಅವರು ಅಂಗೀಕರಿಸದಿದ್ದರೆ, ನಾನು ದೂರ ನಿಲ್ಲುವುದಾಗಿಯೂ ಹೇಳಿದ್ದೆ. ಅವರನ್ನು ನಾನು ಒಪ್ಪಿಸಿ ಜಯಶಾಲಿಯಾದೆ; ಈ ಘಟನೆಯು ೧೯೨೦ರಿಂದು ಕಾಂಗ್ರೆಸು ಅಹಿಂಸೆಯನ್ನು ತನ್ನ ತತ್ವವಾಗಿ ಅಂಗೀಕರಿಸುವ ಮೊದಲೇ ಆದ ವಿಷಯವೆಂದು ತಿಳಿಯುವುದು ಅವಶ್ಯವಾಗಿದೆ.

### ಒಂದೇ ಜನಾಂಗ

'ಧರ್ಮವು ಮನುಷ್ಯನ ಪಶುಬುದ್ಧಿಯನ್ನು ಉತ್ತಮಗೊಳಿಸುವ ಸಾಧನವಾಗಿದೆ. ದೇವರು ಅಗಣಿತ ಸ್ವರೂಪಿಯಾದರೂ ಒಬ್ಬನೇ ಆಗಿದ್ದಾನೆ. ನಾನು ನಿಮ್ಮ ಧರ್ಮವನ್ನು ಬಹುಮಾನಿಸಬೇಕಾದರೆ, ನೀವು ನನ್ನ ಧರ್ಮವನ್ನೂ ಬಹುಮಾನಿಸಬೇಕಲ್ಲವೆ? ಹಿಂದೂ ಮುಸ್ಲಿಮರು ಒಂದಾಗಲಾರರೆಂದು ನೀವು ಹೇಳುತ್ತೀರಿ; ಆದರೆ ನೀವು ಹೀಗೆ ಹೇಳುತ್ತಿದ್ದಂತೆಯೇ, ಅಖಿಲ ಜಗತ್ತು ಸೌಹಾರ್ದ್ಯದಿಂದ ಕೂಡಿ ನಡೆಯಲು ಆರಂಭಿಸಿದೆ. ಈ ವಿಶ್ವ ಪ್ರೇಮದ ಪ್ರವಾಹವನ್ನು ತಡೆಯಲು ಯಾರೂ ಸಮರ್ಥರಾಗಲಾರರು. ಫಠಾಣರ ವಿಷಯದಲ್ಲಿ ಗಫರ್ ಖಾನರು ಉತ್ತರ ಕೊಡುವರು. ನಾವು ಭೇಟಿಯಾಗುವುದಕ್ಕಿಂತ ಮೊದಲೇ ಅವರು ಅಹಿಂಸೆಯನ್ನು ಸ್ವೀಕರಿಸಿದ್ದರು. ಅಹಿಂಸೆಯನ್ನು ತತ್ವವಾಗಿ ಅಂಗೀಕರಿಸಿದ ಮೇಲೆಯೇ ಗಡಿನಾಡಿನವರು ಉದ್ಧಾರವಾಗಿದ್ದಾರೆಂದು ಅವರೇ ಈಗ ನಂಬಿರುತ್ತಾರೆ.'

### ಜೆಟ್ಲೆಂಡರಿಗೆ ಮಹಾತ್ಮರ ಉತ್ತರ

'ಲಾರ್ಡ್ ಜೆಟ್ಲೆಂಡರ ಅಭಿಪ್ರಾಯವೇ ಬ್ರಿಟಿಷ್ ಸರಕಾರದ ಅಭಿಪ್ರಾಯವಾಗಿದ್ದಲ್ಲಿ ಅದು ರಾಷ್ಟ್ರೀಯ ಭಾರತದ ಮೇಲೆ ಯುದ್ಧವನ್ನು ಘೋಷಿಸಿದಂತೆಯೇ ಇರುವದು' ಎಂಬುದಾಗಿ ಗಾಂಧೀಜಿಯವರು ಕಳೆದ ವಾರದ ಹರಿಜನ ಪತ್ರಿಕೆಯಲ್ಲಿ 'ಇದು ಯುದ್ಧವೇ?' ಎಂಬ ಶಿರೋನಾಮೆಯ ಲೇಖನದಲ್ಲಿ ಬರೆದಿದ್ದಾರೆ.

'ಬ್ರಿಟಿಷ್ ಭಾರತದ ಸಾಮ್ರಾಜ್ಯವನ್ನು ಯುರೋಪಿಯನರ ಹಿತ, ಸೈನ್ಯ ಸಂಸ್ಥಾನಾಧೀಶರು, ಮತ್ತು ಜಾತಿಭೇದ ಈ ನಾಲ್ಕು ಬಲವಾದ ಸ್ತಂಭಗಳ ಮೇಲೆಯೇ ಕಟ್ಟಿದೆ. ಕೊನೆಯ ಮೂರು, ಮೊದಲನೆಯದಕ್ಕೆ ಆಧಾರವಾಗಿರುವುವು. ಸಾಮ್ರಾಜ್ಯ ಭಾವನೆಯನ್ನು ತೊಲಗಿಸಬೇಕಾದರೆ ಈ ನಾಲ್ಕು ಸ್ತಂಭಗಳನ್ನು ನಿವಾರಿಸಬೇಕು'.

ಅನಂತರ ಗಾಂಧಿಜಿಯವರು ಸಾಮ್ರಾಜ್ಯತ್ವವನ್ನು ನಾಶಪಡಿಸುವ ಆಲೋಚನೆ ಹೊಂದಿರುವವರ ವಾದ ಸರಣಿಯನ್ನೂ ಅದಕ್ಕೆ ಲಾರ್ಡ್ ಜೆಟ್ಲೆಂಡರು ಕೊಡುವ ಉತ್ತರವನ್ನೂ ವಿವರಿಸಿ ಲಾರ್ಡ್ ಜೆಟ್ಲೆಂಡರ ವಾದ ಸರಣಿಯನ್ನು ನೋಡಿದರೆ ರಾಷ್ಟ್ರೀಯರಿಗೂ ಸಾಮ್ರಾಜ್ಯತ್ವವಾದಿಗಳಿಗೂ ಒಪ್ಪಂದವಾಗುವ ಸಂಭವವಿಲ್ಲವೆಂದೂ ತಿಳಿಸಿದ್ದಾರೆ.

'ಲಾರ್ಡ್ ಜೆಟ್ಲೆಂಡರ ವಾದವೇ ಬ್ರಿಟಿಷ್ ಸರಕಾರದ ಸ್ಪಷ್ಟ ಘೋಷಣೆಯಾಗಿದ್ದಲ್ಲಿ ರಾಷ್ಟ್ರೀಯ ಭಾರತದ ಮೇಲೆ ಯುದ್ಧ ಹೂಡಿದಂತೆಯೇ ಸರಿ. ಏಕೆಂದರೆ ಆ ನಾಲ್ಕು ಸ್ತಂಭಗಳೂ ಕೂಡ ಕಲ್ಲಿನಂತೆ ಬಿಗಿಯಾಗಿ ನಿಂತಿವೆ. ಈ ಸಮಸ್ಯೆಗಳೂ ರಾಷ್ಟ್ರೀಯರಿಗೆ ಸಂಬಂಧಿಸಿದವೆಂದು ಅವುಗಳನ್ನು ಮುಟ್ಟಲು ಹೋದಂತೆಲ್ಲಾ ಅವು ಇನ್ನೂ ಬಿಗಿಯಾಗತೊಡಗಿವೆ. ಭಾರತದ ಪಾರತಂತ್ರ್ಯವನ್ನು ಇನ್ನೂ ಮುಂದುವರಿಸುವದೇ ಬ್ರಿಟಿಷರ ಉದ್ದೇಶವಾದರೆ ಆಗ ನಾನು ಬ್ರಿಟಿಷರಿಗೆ ಯುದ್ಧದಲ್ಲಿ ಜಯವನ್ನು ಬಯಸಲಾರೆ. ಈ ಕೊನೆಯ ವಾಕ್ಯವನ್ನು ನಾನು ಬಹಳ ವ್ಯಸನದಿಂದ ಬರೆಯುತ್ತಿದ್ದೇನೆ' ಎಂದು ಬರೆದಿದ್ದಾರೆ.


# ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ
ಜಗತ್ಪ್ರಸಿದ್ಧ

## ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊಕೊಕಸ' ಎಂಬ ವಿಷಹಾರಿ, ಇದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಾಯಿ 4

*Sole Manufacturer:* **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,
ಹಂಪನಕಟ್ಟಾ, ಮಂಗಳೂರು.



# ಜಿಲ್ಲಾ ಸಮಾಚಾರ

## ಮಂಗಳೂರು

**ಹಿಂದುಸ್ಥಾನ್ ಸ್ಕೌಟ್ ಸಂಘ:—** ಬರುವ ಮೇ ತಿಂಗಳ ಉತ್ತರಾರ್ಧದಲ್ಲಿ ಕಬ್ ಮಾಸ್ತರರ ಮತ್ತು ಸ್ಕೌಟ್ ಮಾಸ್ತರರ ಶಿಕ್ಷಣ ಶಿಬಿರಗಳು ತೆರೆಯಲ್ಪಡುವುವು. ಸೇರ ಬಿಚ್ಛಿಸುವವರು ಡಿಸ್ಟ್ರಿಕ್ಟ್ ಸ್ಕೌಟ್ ಕಮಿಶನರ್, ಇವರಿಗೆ ಬರೆಯಬಹುದು. ಇದೇ ಸಮಯದಲ್ಲಿ ಹುಡುಗಿಯರಿಗೆ ಸ್ಕೌಟಿಂಗ್ ಕಲಿಸುವ ಮುಂದಾಳುಗಳ ತರಬೇತಿಯ ಬಗ್ಗೆ ಏರ್ಪಾಡು ಮಾಡಲ್ಪಡುವುದು. ಸೇರಬಿಚ್ಛಿಸುವವರು ಆಸಿಸ್ಟಂಟ್ ಡಿ. ಕಮಿಶನರಾದ (ಹುಡುಗಿಯರ ಶಾಖೆ) ಶ್ರೀಮತಿ ಯಂ. ಲೀಲಾಬಾಯಿ ರಾವ್ ಇವರಿಗೆ ಬರೆಯಬಹುದು.

**ಹರಿಜನ ಲೇಬರ್ ಲೀಗ್** — ಹರಿಜನ ಲೇಬರ್ ಲೀಗಿನ ಒಂದು ಮಹಾಸಭೆಯು ಈ ದಿನ (ತಾ [illegible])ನೇ ಮಧ್ಯಾಹ್ನ [illegible] ಘಂಟೆಗೆ ಸಂಘದ ಆಫೀಸಿನಲ್ಲಿ ಜರಗಿತು.

**ಡಿ. ಸಿ. ಯಂ. ವರ್ಧಂತಿ:—** ಸ್ಥಳೀಯ ಡಿ. ಸಿ. ಮಿಶನಿನ ವರ್ಧಂತ್ಯುತ್ಸವವು ಡಿ. ಸಿ. ಯಂ. ಹಾಲಿನಲ್ಲಿ ತಾ [illegible]ನೇ ಸಾಯಂ [illegible] ಘಂಟೆಗೆ ಶ್ರೀ ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ನಡೆಯಿತು.

**ಜಿ. ಬೊ. ನೌಕರರ ಸಂಘದ ಪರಿಷತ್ತು:**—ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಶನಿವಾರ ಸಂಜೆ ಶ್ರೀ ಯು. ಸುಂದರ ರಾವ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ವಿಠ್ಠಲ ಶೆಟ್ಟರು ಪರಿಷತ್ತಿನ ಉದ್ಘಾಟನೆ ಮಾಡಿದರು.

**ಟ್ರೈನಿಂಗ್ ಶಾಲಾ ವರ್ಧಂತಿಯ ನಾಟಕಗಳು:**—ಈ ವರ್ಷದ ವರ್ಧಂತಿಯ ದಿನ ಆಡಿದ ನಾಟಕಗಳೆರಡೂ ಸಂಮೋಜಕವಾಗಿದ್ದು ಎಳೆಯ ಸಾಮಾಜಿಕರಲ್ಲಿ ಕ್ರಾಂತಿಯ ಭಾವನೆಯನ್ನು ಹೊಡೆದೆಬ್ಬಿಸುವವುಗಳಿದ್ದುವು. ಮೊದಲನೆಯ ಕನ್ನಡ ನಾಟಕವನ್ನು ಬರೆದು ಅದರಲ್ಲಿ ನಾಯಕ ಪಾತ್ರವನ್ನು ಅಭಿನಯಿಸಿದ ಕೇರಳೀಯರಾದ ಶ್ರೀಮಾನ್ ಗೋವಿಂದ ನಂಬಿಯಾರರು ಕನ್ನಡಿಗರ ಸಂಭಾವನೆಗೆ ಪಾತ್ರರೆನ್ನಬೇಕು. ಎರಡನೆಯ ನಾಟಕವು ತುಳುಭಾಷೆಯಲ್ಲಿದ್ದು ಬಂಟಸಮಾಜದ ಕುಂದುಕೊರತೆಗಳನ್ನು ತೋರಿಸುವಂತಿತ್ತು. ಈ ವಿಚಾರದಲ್ಲಿ ಈ ಶಾಲೆಯ ಹೊಸ ಹೆಡ್ ಮಾಸ್ತರರಾಗಿರುವ ಶ್ರೀಮಾನ್ ಎನ್. ಸುಬ್ಬರಾಯರ ಈ ಪ್ರಥಮ ಪ್ರಯತ್ನದ ಯಶಸ್ವೀ ಫಲವನ್ನು ಯಾರಾದರೂ ಪ್ರಶಂಶಿಸಬೇಕಾಗಿದೆಯೆಂದು ಪ್ರೇಕ್ಷಕರೊಬ್ಬರು ಬರೆಯುತ್ತಾರೆ.

**ನಗರದ ಶುಚಿತ್ವ ರಕ್ಷಣೆ:**—ನಗರವನ್ನು ಶುಚಿಯಾಗಿರಿಸುವ ಭಾವನೆ ಜನರಲ್ಲಿ ಮೂಡುವಂತೆ ಮಾಡಲು, ಸಭೆಯೊಂದು ಕಳೆದ ಶನಿವಾರ ಸ್ಥಳೀಯ ಮೈದಾನಿನಲ್ಲಿ ಶ್ರೀ. ಬಿ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಈ ಕಾರ್ಯಕ್ಕೆ ಸ್ವಯಂಸೇವಕರು ಮುಂದಾಗಿ ಬಂದು, ತಮ್ಮ ವಾರ್ಡಿನ ಕೌನ್ಸಿಲರ ಮೂಲಕ ಸೇರಬೇಕೆಂದೂ, ಆ ಬಳಿಕ ಯುಕ್ತ ಯೋಜನೆ ಕೈಕೊಳ್ಳಲಾಗುವುದೆಂದೂ ಹೇಳಿದರು.

**ಜಿಲ್ಲಾ ಕಲೆಕ್ಟರರು:**—ನಮ್ಮ ಜಿಲ್ಲಾ ಕಲೆಕ್ಟರರಾದ ಮಿ. ಎ. ಸಿ. ವುಡ್‌ಹೌಸ್‌ರವರು ಈಸ್ಟ್ ಗೋದಾವರಿ ಜಿಲ್ಲೆಗೆ ವರ್ಗಾಯಿಸಲ್ಪಟ್ಟಿದ್ದು ಅವರ ಸ್ಥಾನಕ್ಕೆ ಶ್ರೀ. ಎಸ್. ವಿ. ಸುಬ್ರಹ್ಮಣ್ಯಮ್, ಐ. ಸಿ. ಎಸ್., ರವರು ನೇಮಿಸಲ್ಪಟ್ಟಿದ್ದಾರೆ.

**ಜಿಲ್ಲಾ ಜಡ್ಜರು** — ಇದೇ ತಿಂಗಳ [illegible]ರಿಂದ ಒಂದು ತಿಂಗಳ ರಜೆಯ ಮೇಲೆ ಹೋಗುವ ನಮ್ಮ ಜಿಲ್ಲಾ ಜಡ್ಜರಾದ ಶ್ರೀ ಸಿ. ರಾಜಗೋಪಾಲಾಚಾರಿಯವರ ಸ್ಥಾನಕ್ಕೆ ಶ್ರೀ ಆರ್. ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು ನೇಮಿಸಲ್ಪಟ್ಟಿದ್ದಾರೆ.

**ಸಂಸ್ಕೃತ ಸಂಘ:**— ಗವರ್ನಮೆಂಟ್ ಕಾಲೇಜಿನ ಸಂಸ್ಕೃತ ಸಂಘದ ವರ್ಧಂತ್ಯುತ್ಸವವು ಶ್ರೀ ಕೆ. ಎಸ್. ಯು. ನಾಯರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. 'ಕಾಳಿದಾಸ ಮತ್ತು ಅವನ ಕೃತಿಗಳು' ಎಂಬ ವಿಷಯ ಶ್ರೀ ಬಿ. ಅಚ್ಯುತ ಬಾಳಿಗರ ಸ್ಫೂರ್ತಿಯುತ ಭಾಷಣವಿತ್ತರು.

**ಮೂಲ್ಕಿ — ಹರಿಜನೋದ್ಧಾರ** — ಶ್ರೀ ಯಸ್. ಯು. ಕಿಲ್ಲೆಯವರು ಹರಿಜನೋದ್ಧಾರದ ಕುರಿತು ಪರಿಣಾಮಕಾರಿಯಾದ ಭಾಷಣ ಕೊಟ್ಟರು.

**ಉಳ್ಳಾಲದಲ್ಲಿ ಹರಿಕಥೆ** ಇದೇ ತಿಂಗಳ ಬರುವ ತಾ [illegible]ನೇ ಶನಿವಾರ ರಾತ್ರಿ [illegible] ಘಂಟೆಗೆ ಸರಿಯಾಗಿ ಇಲ್ಲಿಯ ಭಗವತಿಸ್ಥಾನದ ಕಟ್ಟೆಯ ಬಳಿ ಮಂಗಳೂರಿನ "ದೀನಬಂಧು ಅನಾಥಾಶ್ರಮ"ದ ಸಂಚಾಲಕರಾದ ಶ್ರೀ ಜಿ. ಲಕ್ಷ್ಮಣ ದೇವ ವಿದ್ಯಾರ್ಥಿಯವರು "ಕೈಕೆಯ ಸಾಮ್ರಾಜ್ಯ" ಎಂಬ ಹರಿಕಥೆ ಮಾಡಲಿರುವರು.

**ಬಂಟ್ವಾಳ:**—ಇಲ್ಲಿ ಬಂಟ್ವಾಳ ಸೋಲುವವರ ಮತ್ತು ನೇಕಾರರ ಸಂಘವೆಂಬುದೊಂದು ಸಂಘವು ಸ್ಥಾಪಿಸಲ್ಪಟ್ಟಿದೆ. ಶ್ರೀಗಳಾದ ಬಿ. ಮಂಜುನಾಥ ಪೈ, ಬಿ. ಆರ್. ಕಾಮತ್ ಮತ್ತು ಬಿ. ಗೋವಿಂದ ಪ್ರಭುಗಳು ಅನುಕ್ರಮವಾಗಿ ಆ ಸಂಘದ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟಿರುವರು.

## ಉಡುಪಿ

**ಕೊ ಒಪರೇಟಿವ್ ಯೂನಿಯನ್** ಉಡುಪಿ ಕೋ-ಒಪರೇಟಿವ್ ಯೂನಿಯನಿನ ಮಹಾಸಭೆಯು ಅದರ ಪ್ರೆಸಿಡೆಂಟರಾದ ಕೆ. ಜಿ. ಬಲ್ಲಾಳರವರ ಅಧ್ಯಕ್ಷತೆಯಲ್ಲಿ ಜರಗಿತು. ಗತ ವರ್ಷದ ಆಡಳಿತ ವರದಿ ಆಡಿಟ್ ರಿಪೋರ್ಟುಗಳನ್ನು ಸಭೆಯಲ್ಲಿ ಓದಲಾಯಿತು. ಬಳಿಕ ವರ್ಷದ ಬಗ್ಗೆ ತಯಾರಿಸಿದ ರಿವೈಸ್ಡ್ ಬಜೆಟನ್ನು ಮಂಜೂರು ಮಾಡಲಾಯಿತು. ನಂತರ ಡೈರೆಕ್ಟರರ ಮಂಡಳಿಯ ಚುನಾವಣೆಯಾಯಿತು.

**ಶಿರ್ವ: ಆಸ್ಪತ್ರೆಯ ಅಸ್ತಿವಾರದ ಶಿಲಾ ಸ್ಥಾಪನೆ**—ಶಿರ್ವದಲ್ಲಿ ಡಿ. ಬೋ. ಮೆಂಬರರಾದ ಮಿ. ಎಂ. ಸಿ. ಪೆರ್ನಾಂಡಿಸರ ಸಾಹಸದಿಂದ ಕಟ್ಟಲು ನಿಶ್ಚಯಿಸಲ್ಪಟ್ಟಿರುವ ಆಸ್ಪತ್ರೆಯ ಅಸ್ತಿವಾರ ಶಿಲಾ ಸ್ಥಾಪನೆಯು ತಾ [illegible]ರಂದು ಡಿ. ಬೋ. ಪ್ರೆಸಿಡೆಂಟರಾದ ಡಾ. ಕೆ. ವಿಟ್ಠಲ ಶೆಟ್ಟರಿಂದ ನಡೆಯಿತು. ಅಧ್ಯಕ್ಷರ ಮೆರವಣಿಗೆಯು ಆದಷ್ಟು ಮಠದವರಿಂದ ಕೊಡಲ್ಪಟ್ಟ ಆನೆಯ ಮೇಲೆ ಬಹು ವಿಜೃಂಭಣೆ ವಾದ್ಯಘೋಷ ಸಹಿತವಾಗಿ ಜರಗಿತು.

ಮಿ. ಎಂ. ಸಿ. ಪೆರ್ನಾಂಡಿಸರು ಅಧ್ಯಕ್ಷರನ್ನು ಶಿಲಾ ಸ್ಥಾಪನೆ ಮಾಡಲು ಕೇಳಿಕೊಳ್ಳುತ್ತ ನೂರು ರೂಪಾಯಿಗಳಿಗಿಂತ ಹೆಚ್ಚು ಕೊಟ್ಟವರ ಹೆಸರನ್ನು ಓದಿ ಹೇಳಿದರು. ರೆವರೆಂಡ್ ಫಾದರ್ ಎ. ಸ್. ಡಿ. ಸೋಜಾ (ಕಾರ್ಕಳ) ರೆವೆರೆಂಡ್ ಫಾದರ್ ವಲೇರಿಯೂನಾ (ಶಿರ್ವ) ಇವರು ಶುಭಾಶಂಸೆ ಮಾಡಿದರು.

ದಕ್ಷಿಣ ಕನ್ನಡದಲ್ಲಿ ಉದಾರ ಹಸ್ತದಿಂದ ಧಾರ್ಮಿಕ ಕಾರ್ಯಗಳನ್ನು ನಡಸಲು ಮುಂದೆ ಬರುವ ಶ್ರೀಮಂತದ ಉದಾರತೆಯನ್ನು ಡಿ. ಬೋ. ಅಧ್ಯಕ್ಷರು ಕೊಂಡಾಡಿದರು.

**ಹಿಂದೂ ಮಹಾಸಭೆಯ ಪ್ರಚಾರ ಕಾರ್ಯ:** — ದ. ಕ. ಹಿಂದೂ ಮಹಾಸಭೆಯ ಕಡೆಯಿಂದ ಕಳೆದ ಆದಿತ್ಯವಾರ ಮೊದಲ್ಗೊಂಡು ಬುಧವಾರ ಪರ್ಯಂತ ದಿನಾಲೂ ಸಂಜೆ ರಥಬೀದಿಯಲ್ಲಿ ಹಿಂದೂ ಮಹಾಸಭೆಯ ಕುರಿತು ಭಾಷಣಗಳಾದುವು.

**ಉಪನ್ಯಾಸ:**— ತಾ [illegible]ನೇ ದಿನ ಸಂಜೆ ಘಂಟೆ [illegible]ರಿಂದ [illegible] ವರೆಗೆ ಇಲ್ಲಿಯ ಹಾಸ್ಟೆಲಿನ ಕಟ್ಟಡದಲ್ಲಿ ಶ್ರೀ ವೆಂಕಟ್ರಾಮಾಚಾರ್ಯರು ಶ್ರೀಮನ್ಮಧ್ವಾಚಾರ್ಯರ ಸೂಕ್ಷ್ಮ ತತ್ವ ವಿಚಾರವನ್ನು ಬಾಲಕರಿಗೂ ತಿಳಿಯುವಂತೆ ಜನಮನ ರಂಜಕವಾಗಿ ಉಪನ್ಯಾಸ ಮಾಡಿದರು.

## ಕಾರ್ಕಳ

**ಹರಿಕೀರ್ತನೆ** —ಕರ್ನಾಟಕದ ಪ್ರಸಿದ್ಧ ಕೀರ್ತನಕಾರರಾದ ಶ್ರೀ ಕೀರ್ತನ ಶಿರೋಮಣಿ ರಾಮಶಾಸ್ತ್ರಿ ಮುಳಗುಂದಕರರು ಇಲ್ಲಿಗೆ ಬಂದಿದ್ದರು. ತಾ [illegible] ರಿಂದ ಊರ ಬೇರೆ ಬೇರೆ ಭಾಗಗಳಲ್ಲಿ ಅವರ ಸುಶ್ರಾವ್ಯ ಮತ್ತು ಬೋಧಪ್ರದ ಕೀರ್ತನೆಗಳಾಗುತ್ತಲಿವೆ.

**ಬಿಲ್ಲವರ ಸಭೆ.** ಸ್ಥಳೀಯ ಬಿಲ್ಲವರ ಒಂದು ಸಭೆಯು ಕಳೆದವಾರ ಇಲ್ಲಿ ಸಹಕಾರ ಸಂಘಗಳ ಇನ್ಸ್‌ಪೆಕ್ಟರರಾದ ಶ್ರೀ ಯಮ್. ಅಮ್ಮಣ್ಣನವರ ನೇತೃತ್ವದಲ್ಲಿ ಜರಗಿ ಸಮಾಜೋನ್ನತಿಪರವಾದ ಕೆಲವು ನಿರ್ಣಯಗಳ ಮಂಜೂರಾದುವು.

## ಕಾಸರಗೋಡು

ಹುಲಿ ಶಿಕಾರಿ

[illegible]ರಲ್ಲಿ ಕಾಸರಗೋಡು ತಾಲೂಕಿನ ಚರ್ಕಳ ಗ್ರಾಮದಲ್ಲಿ ತುಂಬಾ ಹಾನಿ ಮಾಡುತ್ತಿದ್ದ ಒಂದು ಹುಲಿಯನ್ನು ಮಿ. ಓ. ಎಚ್. ಮಹಮ್ಮದ್ ಕುಂಞ ಇವರು ಗುಂಡಿಕ್ಕಿ ಕೊಂದಿರುವರು. ಇವರು ಮೈಸೂರಿನಲ್ಲಿ ಹಿಂದೊಮ್ಮೆ ಒಂದು ಹುಲಿಯನ್ನು ಕೊಂದಿರುವರು.

**ಕುಂಬಳೆ:**—ಜಿಲ್ಲೆಯಲ್ಲಿ ಕೋಳಿಯ ಮತ್ತು ಹೊಗೆಸೊಪ್ಪಿನ ಸಸಿಯ ಮಾರಾಟ ನಡೆಯುವ ಸಂದರ್ಭದಲ್ಲಿ ಕೆಲವು ಗ್ರಾಮಗಳ ಉಗ್ರಾಣಿಗಳು ಮತ್ತು ಪಟೇಲರು ಕಾಂಗ್ರೆಸಿನವರು ಅವುಗಳ ಮೇಲೆ ತೆರಿಗೆ ಹಾಕುವರೆ ಹೀಗೆ ಮಾಡುತ್ತಿರುವರಾಗಿ ಹೇಳುವರೆಂದು ತಿಳಿದುಬಂದಿದೆ. ಆದಕಾರಣ ಮಹಾಜನರು ಇಂತಹ ಅಪಪ್ರಚಾರದಿಂದ ಮೋಸ ಹೋಗಬಾರದೆಂದೂ ಈ ರೀತಿ ಅಪಪ್ರಚಾರ ಮಾಡದಂತೆ ಮೇಲಾಧಿಕಾರಿಗಳು ಊರ ಪಟೇಲರುಗಳಿಗೆ ಎಚ್ಚರ ಕೊಡಬೇಕಾಗಿಯೂ ಈ ಮೂಲಕ, ಬಿನ್ನವಿಸಿ ಕೊಳ್ಳುತ್ತೇನೆ ಎಂದು ಬಿ. ದೇವಪ್ಪ ಆಳ್ವರು ತಿಳಿಸುತ್ತಾರೆ.

**ಕಾಸರಗೋಡು ಮಲಬಾರಿಗೆ ಸೇರಬಾರದು:**—ಶ್ರೀ ಬಿ. ದೇವಪ್ಪಾಳ್ವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿಸಿ ಕಾಸರಗೋಡು ತಾಲೂಕನ್ನು ಮಲಬಾರಿಗೆ ಎಷ್ಟಕ್ಕೂ ಸೇರಿಸಲೇ ಕೂಡದೆಂದು ಸರ್ವಾನುಮತದಿಂದ ನಿರ್ಣಯವಾಯಿತು.

**ಪೆರ್ಲ** — ತಾ [illegible]ರಲ್ಲಿ ಗ್ರಾಮಸ್ಥರು ಸಭೆಸೇರಿ ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸುವ ಯೋಜನೆ ಮಾಡಬಾರದೆಂದೂ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವಾಗಬೇಕೆಂದು ಗವರ್ನಮೆಂಟನ್ನು ಕೇಳಿಕೊಳ್ಳಬೇಕೆಂದೂ ಶ್ರೀ ಶಂಕರನಾರಾಯಣ ಭಟ್ರ ಅಧ್ಯಕ್ಷತೆಯಲ್ಲಿ ಸರ್ವಾನುಮತದಿಂದ ನಿರ್ಣಯವಾಯಿತು.

## ಪುತ್ತೂರು

**ಸುಳ್ಯ** —ಇಲ್ಲಿಯ ಲೇಬರ್ ಶಾಲೆಗೆ ಬರುವ ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಊಟ ಮತ್ತು ವಸ್ತ್ರದ ಪೂರೈಕೆಗಳನ್ನು ಒದಗಿಸುವರೆ ಸ್ಥಾಪಿತವಾದ ಲೇಬರ್ ಶಾಲಾ ಕಮಿಟಿಯ ಸಭೆಯು ಕಳೆದ ತಾ [illegible]ರಲ್ಲಿ ಸೇರಿ ಮಹಾಜನರಿಂದ ಧನಸಹಾಯ ಬೇಡಬೇಕಾಗಿ ನಿರ್ಣಯವಾಯಿತು.

## ಕುಂದಾಪುರ

**ಶ್ರೀರಾಮ ಮಂದಿರ ಪ್ರತಿಷ್ಠಾಪನಾ ಮಹೋತ್ಸವ:** — ಶ್ರೀ ಕೋಟೇಶ್ವರದ ಗೌಡ ಸಾರಸ್ವತ ಬ್ರಾಹ್ಮಣರು ಹೊಸದಾಗಿ ರಾಮಮಂದಿರವನ್ನು ಕಟ್ಟಿಸಿ ಕಳೆದ ತಾ [illegible]ರಲ್ಲಿ ಶ್ರೀ ರಾಮ ಮೂರ್ತಿಯನ್ನು ಅತ್ಯಂತ ವೈಭವದಿಂದ ಪ್ರತಿಷ್ಠಿಸಿದರು.

## ಮುಂಬಾಯಿ

**ಮೊಗವೀರ ಧರ್ಮೋದ್ಧಾರಕ ಮಂಡಳಿ-ಮುಂಬಾಯಿ** —[illegible] ಸಂಸ್ಥೆಯ ಮಹಾಸಭೆಯೊಂದು ಇದೇ ಫೆಬ್ರುವರಿ ತಿಂಗಳ ತಾ [illegible]ರಲ್ಲಿ ಅಪರಾಹ್ನ [illegible] ಘಂಟೆಗೆ ಮುಂಬಾಯಿ ಕೋಟೆಯೊಳಗಿನ ಮೋದಿ ರಸ್ತೆಯಲ್ಲಿರುವ ಮೊಗವೀರ ರಾತ್ರಿಶಾಲಾ ಕಟ್ಟಡದಲ್ಲಿ ಮಂಡಳಿಯ ಪ್ರಮುಖರಾದ ಶ್ರೀಯುತ ಕೋರಗಪ್ಪ ದೂಮನವರ ಅಧ್ಯಕ್ಷತೆಯಲ್ಲಿ ಜರಗುವುದು. ಈ ಸಭೆಯು ಇತರ ಕಾರ್ಯದೊಂದಿಗೆ ಮೊಗವೀರ ಧರ್ಮೋದ್ಧಾರಕ ಮತ್ತು ಸ್ಥಾಪಕ ಮಂಡಳಿಗಳ ಐಕ್ಯತೆಯ ಸೂಚನೆಯನ್ನು ಪರ್ಯಾಲೋಚಿಸತಕ್ಕ ಅಧಿಕಾರದಲ್ಲಿರುವುದು.

**ಧರ್ಮಾರ್ಥ ಯೋಗ ಮತ್ತು ನಿಸರ್ಗ ಉಪಚಾರ:** — ಪ್ರತಿ ಬುಧ, ಆದಿತ್ಯವಾರ ಬೆಳಿಗ್ಗೆ ಆರೂವರೆ ಘಂಟೆಯಿಂದ ಏಳು ಘಂಟೆಯ ವರೆಗೆ ಕಷ್ಟಸಾಧ್ಯ ರೋಗಗಳ ನಿವಾರಣೆ ಸಲುವಾಗಿ ಶ್ರೀ ಭಾನು ತೀರ್ಥ ಯೋಗಾಶ್ರಮ (ಪ್ರಾರ್ಥನಾ ಸಮಾಜ, ಸೆಂಡ್ ಹರ್ಸ್ಟ್ ರೋಡ್, ಆರ್ಯ ಪಥಿಕಾಶ್ರಮ ಬೋಜನ ಎದುರಿಗೆ ಸೆಕ್ರೆಟರಿಯ ಬಿಲ್ಡಿಂಗ್ ಮುಂಬಯಿ, ೪)ದಲ್ಲಿ ಯೋಗಿರಾಜ ಶ್ರೀ ಉಮೇಶಚಂದ್ರರು ನೇತಿ, ಧೋತಿ, ಬಸ್ತಿ, ನೌಲಿ, ತ್ರಾಟಕ, ಕಪಾಲಭಾತಿ, ಆಸನ, ಪ್ರಾಣಾಯಾಮ, ಜಲೋಪಚಾರ ಸೂರ್ಯಕಿರಣ ಚಿಕಿತ್ಸೆ, ಮಾಲೀಷ ಮತ್ತು ಮಾನಸಿಕ ಉಪಚಾರ ಮಾಡುತ್ತಾರೆ. ಸ್ತ್ರೀಯರಿಗೆ ಸ್ತ್ರೀಯರೇ ಉಪಚಾರ ಮಾಡುತ್ತಾರೆ.

# ★ ಲಾಡೋಗಾ ಸರೋವರದ ಬಳಿ ★

# ★ ಲೋಕವಾರ್ತೆ



## ★ ಫಿನ್ನ-ರಶ್ಯನರ ಪ್ರಚಂಡ ಕದನ! ★

### ಫಿನ್ಲೆಂಡಿಗೆ ಸ್ವೀಡನಿನ ಸೈನ್ಯ ಸಹಾಯವಿಲ್ಲ

### ಬ್ರಿಟಿಷ್ ಸೆರೆಯಾಳುಗಳ ಬಿಡುಗಡೆ

### ಹಲವು ಹಡಗಗಳ ವಿಧ್ವಂಸ!

**ಜಲಾಂತರ್ಯಾಮಿ ನಾವೆಗಳು ಮುಳುಗಿಸಲ್ಪಟ್ಟವು**

ಈ ವಾರದಲ್ಲಿ ಹಲವು ಬ್ರಿಟಿಷ್ ಮತ್ತು ತಟಸ್ಥ ಹಡಗುಗಳನ್ನು ಜರ್ಮನರ ಕೆಲವು ಜಲಾಂತರ್ಯಾಮಿ ನಾವೆಗಳು ಮುಳುಗಿಸಲ್ಪಟ್ಟಿರುವುದಾಗಿ ವಾರ್ತೆ ಬಂದಿದೆ.

**ಜರ್ಮನ್ ಹಡಗದಿಂದ ಬ್ರಿಟಿಷ್ ಕೈದಿಗಳ ಬಿಡುಗಡೆ**

ಜರ್ಮನ್ ಹಡಗವಾದ 'ಅಲ್ಟ್‌ಮಾರ್ಕ್' ಎಂಬುದರಲ್ಲಿದ್ದ ಸುಮಾರು ೩೦೦ ಮಂದಿ ಬ್ರಿಟಿಷ್ ಕೈದಿಗಳನ್ನು, ಬ್ರಿಟಿಷ್ ಹಡಗು ಕೋಸ್ಯಾಕ್ ಎಂಬುದು ಬಿಡುಗಡೆ ಮಾಡಿರುವುದಾಗಿ ತಿಳಿದು ಬಂದಿದೆ ಇದು ಅತ್ಯಂತ ಸಾಹಸದ ಕಾರ್ಯವಾಗಿದೆ

**ರಶ್ಯದ ಶಕ್ತಿಯು ಕುಗ್ಗುತ್ತಿದೆ**

ಲಾಡೋಗಾ ಸರೋವರದ ಬಳಿಯ ಯುದ್ಧದಲ್ಲಿ ೫೦೦ ಮಂದಿ ರಶ್ಯನರು ಸತ್ತಿರುವರೆಂದೂ, ರಶ್ಯನರ ಶಕ್ತಿಯು ಕುಗ್ಗುತ್ತಾ ಬರುತ್ತಿದೆಯೆಂದೂ ವಾರ್ತೆಯು ಬರುತ್ತಿದೆ

**ಸ್ವೀಡನಿನ ಸೈನ್ಯ ಸಹಾಯವಿಲ್ಲ**

ಫಿನ್‌ಲೆಂಡಿನ್ನ ಸೈನ್ಯಸಹಾಯ ಕೊಡುವರೆ ಸಾಧ್ಯವಿಲ್ಲವೆಂದು ಸ್ವೀಡನಿನ ರಾಜ ಗುಸ್ತವನು ಒಂದು ಪ್ರಕಟಣೆ ಹೊರಡಿಸಿರುವನು

**ಫಿನ್ನ-ರಶ್ಯನರ ಕಾದಾಟ**

ರಶ್ಯದ ಸೇನಾಬಲವು ದಿನೇ ದಿನೇ ಹೆಚ್ಚುತ್ತಿದೆ. ಫಿನ್‌ಲ್ಯಾಂಡಿಗೆ ರಶ್ಯದ ವಿವಿಧ ಭಾಗಗಳಿಂದ ತರಬೇತಿ ಹೊಂದಿದ ಸೇನೆಗಳು ಕಳುಹಿಸಲ್ಪಡುತ್ತಿವೆ ಫಿನ್‌ಲ್ಯಾಂಡಿನ ಕೆಲವು ಅಂಶ ನಾಶವಾದರೂ, ರಶ್ಯನರ ಭರವನ್ನು ಫಿನ್ನರು ಇದಿರಿಸುತ್ತಲೇ ಇದ್ದಾರೆ ಫಿನ್ನರ ಮರಣದ ಸಂಖ್ಯೆ ತಿಳಿದಿಲ್ಲ.

ರಷ್ಯದವರು ಮುಂದೆ, ನುಗ್ಗುತ್ತಿದ್ದಾರೆ. ಮನ್ನಾರಹೀಂ ಲೈನಿನಲ್ಲಿ ಫಿನ್ನರು ಹಿಂದೆ ಸರಿದಿದ್ದಾರೆ ಸುಮ್ಮಾ ಪ್ರಾಂತದಲ್ಲಿ ರಷ್ಯನರು ಕೆಲವು ಮುಖ್ಯ ಕೋಟೆ ಕೊತ್ತಲಗಳನ್ನು ಹಿಡಿದಿದ್ದಾರೆ. ಫಿನ್ನರ ಯುದ್ಧಸಾಮಗ್ರಿಗಳೂ ಕೆಲವು ರಷ್ಯದವರ ವಶವಾಗಿದೆ. ಇಸ್ತ್ಮಸ್ ಪ್ರಾಂತದಲ್ಲಿ ಘೋರ ಯುದ್ಧ ನಡೆಯುತ್ತಿದೆ. ರಷ್ಯದವರ ವಿಮಾನಗಳು ಮುಖಮೋರೆ ನೋಡದೆ ಬಾಂಬು ಬಿಸಾಡುತ್ತಿವೆ. ಇತ್ತ ಫಿನ್ನರ ವಿಮಾನಗಳೂ ರಷ್ಯದ ರೈಲ್ವೆಗಳ ಮೇಲೆ ಬಾಂಬಿನ ಮಳೆಗರೆಯುತ್ತಿವೆ. ಫಿನ್ನರು ರಷ್ಯದವರನ್ನು ತಡೆಯುತ್ತಿದ್ದಾರೆ.

ಫಿನ್ನರ ಸ್ಥಿತಿ ಸಂಕಷ್ಟಮಯವಾಗಿದ್ದು ಅವರಿಗೆ ಸಹಾಯ ಅಗತ್ಯವಿದೆ. ಈ ಸಂಬಂಧ ಫಿನ್ ಮುಖಂಡರು ಜನಸಹಾಯಕ್ಕಾಗಿ ಪ್ರಾರ್ಥಿಸಿದ್ದಾರೆ. ಫ್ರೆಂಚರು ಫಿನ್‌ಲ್ಯಾಂಡಿಗೆ ಧಾರಾಳ ಯುದ್ಧ ಸಾಮಗ್ರಿಗಳನ್ನು ಕಳುಹಿಸಿದ್ದಾರೆ ಜರ್ಮನಿ ಏನೋ ತಾನು ರಷ್ಯಕ್ಕೆ ಸಹಾಯ ಕೊಡದೆ, ತಟಸ್ಥವಾಗಿದ್ದೇನೆ ಎನ್ನುತ್ತಿದೆ.

ಇಂಗ್ಲೆಂಡಿನಲ್ಲಿ ಸುಮಾರು ೨ ಸಾವಿರ ಮಂದಿ ಸ್ವಯಂಸೇವಕರು, ಫಿನ್‌ಲ್ಯಾಂಡಿಗೆ ಸಹಾಯ ಮಾಡಲು ಮುಂದಾಗಿದ್ದಾರೆ ಹಂಗೇರಿಯಿಂದ ೩೫೦ ಮಂದಿಯ ದಳವೊಂದು ಫಿನ್‌ಲ್ಯಾಂಡಿಗೆ ಹೊರಟಿದೆ ಕೆನಡಾ ದೇಶವು ೨೦ ಮಂದಿ ವೈಮಾನಿಕರನ್ನು ಫಿನ್‌ಲ್ಯಾಂಡಿಗೆ ಕಳುಹಿಸಿದೆ ಸ್ವಿಜರ್‌ಲ್ಯಾಂಡ್ ಸರಕಾರವು ಮಾತ್ರ ಸ್ವಯಂಸೇವಕರನ್ನು ಕಳುಹಲು ನಿರಾಕರಿಸಿತು.

**ಜರ್ಮನ್ – ರಷ್ಯ**

ಜರ್ಮನಿ ಮತ್ತು ರಷ್ಯಗಳೊಳಗೆ ಮಿಲಿಟರಿ ಒಪ್ಪಂದ ಆಗಿಲ್ಲವೆಂದೂ, ಜರ್ಮನಿಗೆ ಹಾಗೆ ಒಪ್ಪಂದ ಮಾಡಿಕೊಳ್ಳುವ ಇಚ್ಛೆ ಇಲ್ಲವೆಂದೂ ತಿಳಿದುಬರುತ್ತದೆ

**ಸ್ವೀಡನ್ನಿಗೆ ವಿಮಾನಗಳು**

ತಾಸಿಗೆ ೪೦೦ ಮೈಲಿಗಳಿಗೆ ಕಡಿಮೆಯಿಲ್ಲದ ವೇಗದ ೧೪೪ ಅಮೇರಿಕನ್ ವಿಮಾನಗಳಿಗೆ ಸ್ವೀಡನ್ 'ಆರ್ಡರು' ಕೊಟ್ಟಿದೆ,

**ಯುರೋಪಿನಲ್ಲಿ ಹಿಮಬಾಧೆ!**

ಪೂರ್ವ ಯುರೋಪಿನಲ್ಲಿ, ಮುಖ್ಯವಾಗಿ ಬಾಲ್ಕನ್ ರಾಷ್ಟ್ರಗಳಲ್ಲಿ ಮಹತ್ತಾದ ಚಳಿ ಆರಂಭವಾಗಿದ್ದು ವಾಹನಗಳ ಚಲಾವಣೆಯೇ ನಿಂತು ಹೋಗಿದೆ. ಕೆಲವೆಡೆ ಏಳು ಅಡಿಗಳಷ್ಟು ಎತ್ತರಕ್ಕೂ ಹಿಮ ಬಿದ್ದಿದೆ ಜರ್ಮನಿಯಲ್ಲಿ ಮಂದಿಗೆ ತಮ್ಮನ್ನು ಬೆಚ್ಚಗೆ ಇರಿಸಿಕೊಳ್ಳುವುದೇ ಕಷ್ಟವಾಗಿದೆ. ಬ್ರಿಟನ್ನಿನಲ್ಲಿ ಅದಾಗಲೇ ನಾಲ್ಕು ಸಾವಿರಕ್ಕೂ ಮಿಕ್ಕಿದ ಮಂದಿ ಚಳಿ, ಹಿಮಗಳಿಂದ ಮಡಿದುಹೋಗಿದ್ದಾರೆ. ಹಂಗೇರಿಯಲ್ಲಿ ಬೀದಿಗಳಲ್ಲಿ ರಾತ್ರೆ ಬಿದ್ದ ಹಿಮದ ಗುಡ್ಡೆಗಳನ್ನು ಸರಿಸಿ ಚಲಾವಣೆಗೆ ಅವು ಯೋಗ್ಯವಾಗುವಂತೆ ಮಾಡಲು ೨೫ ಸಾವಿರ ಮಂದಿ ಕೆಲಸ ಮಾಡುವಂತಾಗಿದೆ.

**ಜರ್ಮನರ ಮೇಲೆ ವಿರೋಧ**

ಕೋಪನ್ ಹೇಗನಿನಲ್ಲಿ ಸ್ವೀಡನಿನ, ನಾರ್ವೆಯ ಮತ್ತು ಡೇನರ ಕಡೆಯ ಅಧಿಕಾರಿಗಳು ಸೇರಿ, ಜರ್ಮನರು ದೃಷ್ಟಿಗೆ ಬಿದ್ದಾಕ್ಷಣ ಹಡಗು ಮುಳುಗಿಸುವ ಈ ಕಾರ್ಯವನ್ನು ನಿಷೇಧಿಸುವ ಕುರಿತು ಯೋಚಿಸಿದರು ನಾರ್ವೆಯಗಳು ಈ ರೀತಿ ಇನ್ನೂ ಮಾಡಿದರೆ ಸ್ಕಾಂಡಿನೇವಿಯದಿಂದ ಸಾಮಗ್ರಿಗಳನ್ನು ಜರ್ಮನಿಗೆ ಕಳುಹಿಸಲಾಗುವುದಿಲ್ಲವೆಂದು ತೀರ್ಮಾನಿಸಿದರು ಈ ಸಂಬಂಧವಾಗಿ ಇನ್ನೂ ಆಲೋಚಿಸಲು ಸ್ಕಾಂಡಿನೇವಿಯದ ಮಂತ್ರಿಗಳು ಸದ್ಯದಲ್ಲಿಯೇ ಅಲ್ಲಿ ಸಭೆ ಸೇರಲಿರುವರು ಜರ್ಮನರಾದರೋ ಈ ಹಡಗು ಮುಳುಗಿಸುವ ಕಾರ್ಯವು ನ್ಯಾಯಸಮ್ಮತವೆಂದು ಸಾಧಿಸುತ್ತಿರುವರು

**ಸಮುದ್ರ ಯುದ್ಧ**

ಡೇನರ ಎರಡು ಹಡಗನ್ನು, ಎರಡು ನಾರ್ವೆಹಡಗಗಳನ್ನೂ ಮುಳುಗಿಸಲಾಗಿದೆ ಉತ್ತರ ಸಮುದ್ರದಲ್ಲಿ ಬ್ರಿಟಿಷ್ ವಿಮಾನಗಳು ಒಂದು ಜರ್ಮನ್ ಜಲಾಂತರ್ಗಾಮಿ ನಾವೆಯನ್ನು ನಾಶಪಡಿಸಿದುವು ಬ್ರಿಟಿಷರ ಒಂದು ಟ್ಯಾಂಕರ್ ಕಾಣೆ ಲ್ಯಾಂಗ್ಲಿಫೋರ್ಡ್ ಎಂಬ ೪೬೨೨ ಟನ್ನಿನ ಹಡಗು ಶತ್ರುಗಳಿಂದ ಧ್ವಂಸವಾಯಿತು

**ಚೀನಾ ಸಮರ**

ಅಮೇರಿಕೆಯು ಯುನ್ನನ್ ರೈಲ್ವೆಯನ್ನು ಹಾಳ್ಗೆಡಹಕೂಡದೆಂದು ಜಪಾನನ್ನು ಎಚ್ಚರಿಸಿದ್ದರೂ ಕೂಡ ೬೦ ಜಪಾನೀ ವಿಮಾನಗಳು ಪುನಃ ಆ ರೈಲುಮಾರ್ಗದ ಮೇಲೆ ಬಾಂಬಿನ ಮಳೆ ಸುರಿಸಿದುವು ಚೀನೀ ವಿಮಾನಗಳು ಇವುಗಳನ್ನು ಹೊಡೆದೋಡಿಸಿದುವು ಒಂದು ಜಪಾನಿ ವಿಮಾನವನ್ನು ನಾಶಪಡಿಸಿದುವು

ವಾಂಗ್ಸಿ ಪ್ರಾಂತದ ಕದನದಲ್ಲಿ ಚೀನೀಯರು ಜಪಾನರನ್ನು ಸೋಲಿಸಿ ವಿಜಯಿಗಳಾಗಿದ್ದಾರೆ. ಇದರಲ್ಲಿ ಜಪಾನೀಯರಲ್ಲಿ ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆ ೨೦,೦೦೦

**ಬಲ್ಗೇರಿಯದ ಮಂತ್ರಿಮಂಡಲ**

ಇಲ್ಲಿನ ಪ್ರಧಾನರೂ, ಮಂತ್ರಿಮಂಡಲವೂ ರಾಜಿನಾಮೆ ಕೊಟ್ಟಿವೆ ಭಿನ್ನಾಭಿಪ್ರಾಯಗಳೇ ಇದರ ಕಾರಣ

**ಲಾಡೋಗಾ ಸರೋವರದ ಬಳಿ ಕದನ**

ರಶ್ಯನರು ಪಿಪುರಿಯ ಬಳಿ ಮುಂದೊತ್ತಿರುವುದನ್ನು ಫಿನ್ನರು ಪ್ರಚಂಡ ಸಾಹಸದಿಂದ ತಡೆದಿರುವರು.

**ಹಡಗುಗಳ ಜಲ ಸಮಾಧಿ**

ಎಲ್ಲಿ ಎಂಬ (೧,೧೦೦ ಟನ್ನು ಭಾರದ) ಗ್ರೀಕ್ ಹಡಗ ಜಲಸಮಾಧಿಯಾಯಿತು ಬಂಡೇರಾಸ್ ಎಂಬ (೨,೦೦೦ ಟನ್ನು ಭಾರದ) ಸ್ಪೈನಿನ ಹಡಗು ಮುಳುಗಿತು ಬ್ರಿಟಿಷ್ ಹಡಗವೊಂದು ಮುಳುಗಿದೆ,

**ತಾಳ್ಮೆಯಿರಬೇಕು**

ಪಂಡಿತ ಜವಾಹರಲಾಲ್ ನೆಹರೂರವರು ಬೊಂಬಾಯಿಯಲ್ಲಿ ತಾ ೧೧ರಲ್ಲಿ ಅಖಿಲ-ಮಹಾರಾಷ್ಟ್ರ ಯುವಕಸಮ್ಮೇಳನವನ್ನು ಆರಂಭಗೊಳಿಸುತ್ತ ಮಾಡಿದ ಭಾಷಣದಲ್ಲಿ ಕಾಯಿದೆ ಭಂಗ ಚಳುವಳಿಯು ಒಳ್ಳೆಯದಾದರೂ ಈಗಿನ ಸನ್ನಿವೇಶಕ್ಕೆ ಸರಿಯಾಗಿಲ್ಲವೆಂದೂ, ಆದ್ದರಿಂದ ಜನರ ತಾಳ್ಮೆಯಿಂದ ಇರುವುದು ಇನ್ನೂ ಒಳೆಯದೆಂದೂ ಹೇಳಿದರು

**ಪ್ರಣಯ ಹತ್ಯೆ**

ಕಲ್ಲಿಕೋಟೆಗೆ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ತ್ರೆಯ್ಯನ್ ಎಂಬ ಯುವಕನೊಬ್ಬನು ಪ್ರಣಯ ಪ್ರಯತ್ನದಲ್ಲಿ ವಿಫಲಹೊಂದಿ ತಾ. ೧೦ರಲ್ಲಿ ಹುಡುಗಿಯನ್ನು ತಿವಿದು, ಆತ್ಮಹತ್ಯೆ ಮಾಡಿಕೊಂಡನು.

**ರಾಮಗಢ ಕಾಂಗ್ರೆಸಿಗೆ ಬ್ರಿಟಿಷ್ ಶಿಷ್ಟಮಂಡಳಿ**

ಪಾರ್ಲಿಮೆಂಟಿನ ಎಲ್ಲಾ ಪಂಗಡಗಳಿಂದ ಕೂಡಿದ ಶಿಷ್ಟಮಂಡಳಿಯೊಂದು ರಾಮಗಢದಲ್ಲಿ ಸೇರುವ ಕಾಂಗ್ರೆಸು ಅಧಿವೇಶನಕ್ಕೆ ಒಂದು, ಭಾರತೀಯರ ಅಭಿಮತವನ್ನು ತಿಳಿಯಬೇಕಾಗಿ ಮಾಡಿದ ಸೂಚನೆಯು ವಿಷಯ ಲಂಡನಿನಲ್ಲಿ ಆಲೋಚನೆ ನಡೆಯುತ್ತಿದೆಯೆಂದು ಗೊತ್ತಾಗಿದೆ.

**ಸರ್ ಸಿಕಂದರರು ಅಜಾದರ ಭೇಟಿಮಾಡಿದರು**

ಪಂಜಾಬಿನ ಪ್ರಧಾನರಾದ ಸರ್ ಸಿಕಂದರರು ಮುಂದಿನ ರಾಷ್ಟ್ರಪತಿ ಮೌಲಾನಾ ಅಬುಲ್ ಕಲಮ್ ಅಜಾದರನ್ನು ಭೇಟಿ ಮಾಡಿದರು ಅವರಲ್ಲಿ ಡಿನ್ನರ್ ಪಾರ್ಟಿಯಾಯಿತು. ಎರಡು ತಾಸುಗಳ ತನಕ ಅವರೊಳಗೆ ಮಾತುಕತೆಗಳಾದುವೆಂದು ತಿಳಿದಿದೆ

**ಕಾಂಗ್ರೆಸು ಸರ್ವರಿಗೂ ಮುಕ್ತ ದ್ವಾರವಾಗಿದೆ**

**ಮೌಲಾನಾ ಅಜಾದರ ಹೇಳಿಕೆ**

ಕಾಂಗ್ರೆಸಿನಲ್ಲಿ ಜಾತೀಯತೆಯಿಲ್ಲವೆಂದೂ, ಅದು ಸ್ವಾತಂತ್ರ್ಯಾಭಿಮಾನಿಗಳೆಲ್ಲರ ಸಂಸ್ಥೆಯೆಂದೂ, ಭಾರತದ ಸ್ವಾತಂತ್ರ್ಯಾಂದೋಲನದಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಿಂದ ಮುಂದೊತ್ತಿ ಬರಬೇಕೆಂದೂ, ಮೌಲಾನಾ ಅಜಾದರು ಒಂದು ಪ್ರಕಟಣೆ ಹೊರಡಿಸಿರುವರು. ಅವರು ಪತ್ರಿಕಾಪ್ರತಿನಿಧಿಯೊಡನೆ ಮಾತನಾಡಿದಾಗ ಕಾಂಗ್ರೆಸು ರಾಮಗಢ ಕಾಂಗ್ರೆಸಿನಲ್ಲಿ ಸತ್ಯಾಗ್ರಹವನ್ನು ಆರಂಭಿಸುವ ವಿಷಯ ನಿರ್ಧಾರ ಮಾಡುವುದೆಂದು ಸ್ಪಷ್ಟವಾಗಿ ಹೇಳಿದರು

**ಮುಸ್ಲಿಂ ಲೀಗಿಗೆ ರಾಜಿನಾಮೆ**

ಮುಂಬಯಿಯ ಪ್ರಸಿದ್ಧ ಮುಸ್ಲಿಂ ಮುಖಂಡರಾದ ... ಸರ್ ... ಲೀಗಿನ ಸದಸ್ಯತನಕ್ಕೆ ತನ್ನ ರಾಜಿನಾಮೆ ಕೊಟ್ಟಿರುವರು. ಜಿನ್ನರ ಧೋರಣೆಯು ತನಗೆ ಇಷ್ಟವಿಲ್ಲವೆಂದು ಅದರಲ್ಲಿ ತಿಳಿಸಿರುವರು

**ಗೋವಾಲೋಟರಿಯು ನಿಲ್ಲಿಸಲಾಗುವುದೇ?**

ಕೇಂದ್ರ ಎಸೆಂಬ್ಲಿಯಲ್ಲಿ ಖಾಜಿ ಮಹಮ್ಮದ ಅಹಮದರು ಗೋವಾಲೋಟರಿಯಿಂದ ಲಕ್ಷಾಂತರ ರೂಪಾಯಿಗಳ ಹಿಂದೂ ದೇಶದಿಂದ ಹೋಗುತ್ತಿರುವ ವಿಷಯ ಸರಕಾರಕ್ಕೆ ಅರಿತಿದೆಯೇ, ಅದನ್ನು ತಡೆಯಲು ಯಾವ ಯತ್ನಮಾಡುತ್ತಿದೆ ಎಂದು ಕೇಳಿದ ಪ್ರಶ್ನೆಗೆ, ಸರಕಾರವು ಆ ವಿಷಯವನ್ನು ತಿಳಿದಿದೆಯೆಂದೂ, ಲೋಟರಿ ವಿಧಾನವು ತಪ್ಪಾದುದೆಂದು ಬ್ರಿಟಿಷ ಭಾರತದ ಆಜ್ಞೆಯಿರುವುದಾದರೂ ಗೋವಾದಲ್ಲಿ ನಡೆಯುವುದನ್ನು ನಿಲಿಸಲು ಸರಕಾರಕ್ಕೆ ಅಧಿಕಾರವಿಲ್ಲವೆಂದೂ ಹೋಮ್ ಮೆಂಬರರು ಉತ್ತರವಿತ್ತರು

**ಪ್ರಜಾಪ್ರಭುತ್ವವು ಯೋಗ್ಯವಲ್ಲವೆ?**

**ಮಿ। ಜಿನ್ನರ ಉದ್ಗಾರ!**

ಮುಸ್ಲಿಂ ಲೀಗಿನ ಮಿ। ಜಿನ್ನರು 'ಟೈಮ್ ಎಂಡ್ ಟೈಡ್' ಪತ್ರಿಕೆಗೆ ಒಂದು ಲೇಖನ ಕೊಡುತ್ತ 'ಅದರಲ್ಲಿ ಪಾಶ್ಚಾತ್ಯ ದೇಶದ' ಪದ್ಧತಿಯ ಪ್ರಜಾಪ್ರಭುತ್ವವು ಹಿಂದೂ ದೇಶಕ್ಕೆ ಯೋಗ್ಯವಲ್ಲವೆಂದೂ, ಕಠಿಣ ಧರ್ಮಾಂಧರಾದ ಗಾಂಧಿಜಿಯವರ ಮುಂದಾಳುತನದಿಂದ ನಡೆಯುವ ಕಾಂಗ್ರೆಸು, ಮುಸ್ಲಿಮರಿಗೆ ಅನ್ಯಾಯ ಮಾಡುವುದೆಂದೂ ಉದ್ಗರಿಸಿಬಿಟ್ಟರು.

**ಭಾರತ ರಕ್ಷಾದಲ**

ಪಂಜಾಬಿನಲ್ಲಿ ಕಳೆದ ಎರಡು ವರ್ಷಗಳಿಂದಲೂ ಕಾಕ್ಸಾರ ಚಳವಳದ ನಿಮಿತ್ತ ಉಂಟಾದ ಅನೇಕ ಸಂಘಗಳು, ಈಗ ಭಾರತರಕ್ಷಾದಲವೆಂಬ ಹೆಸರಿನ ಹೊಸ ಸಂಸ್ಥೆಯಾಗಿ ಒಟ್ಟು ಸೇರಿವೆ ಇದರ ಉದ್ದೇಶಗಳು ಶಾಂತಿಯನ್ನು ನೆಲೆಗೊಳಿಸುವುದು, ಸ್ತ್ರೀಯರನ್ನು ಬಹುಮಾನಿಸುವುದು ಜಾತೀಯ ದ್ವೇಷವನ್ನುವನ್ನು ಕಡಿಮೆ ಮಾಡುವುದು ಇಗಿ ರಾಜಕೀಯವೂ, ಜಾತೀಯವೂ ಅಲ್ಲದ ಹೊಸ ರೂಪವಾಗಿದೆ.



# ★ ಸಂಗ್ರಾಮಕ್ಕೆ ಸಿದ್ಧರಾಗಿರೆಂದು ★
# ★ ಅಜಾದರ ಆಹ್ವಾನ! ★

## ರಾಷ್ಟ್ರಪತಿ ಸ್ಥಾನಕ್ಕೆ ಅಜಾದರ ಆಯ್ಕೆ
## ಬಂಗಾಳಕ್ಕೆ ಗಾಂಧಿಜಿಯವರ ಪ್ರವಾಸ
## ಸಕ್ಕೂರಿನಲ್ಲಿ ಬಾಂಬು ಸ್ಫೋಟನ

### ಮುಸ್ಲಿಂ ಲೀಗಿನ ಅಧಿವೇಶನ

ಲಾಹೋರಿನಲ್ಲಿ ಬರುವ ತಾ ೨೨, ೨೩, ೨೪ರಂದ ಅಖಿಲಭಾರತ ಮುಸ್ಲಿಂ ಲೀಗಿನ ಅಧಿವೇಶನವು ಜಿನ್ನರ ಅಧ್ಯಕ್ಷತೆಯಿಂದ ಜರಗುವುದು

### ಆಶ್ರಿತ ರಾಜ್ಯದ ಪ್ರಜಾಪರಿಷತ್ತು

ಅಖಿಲಭಾರತ ಆಶ್ರಿತರಾಜ್ಯಗಳ ಪ್ರಜಾ ಪರಿಷತ್ತಿನ ಸ್ಟೇಂಡಿಂಗ್ ಕಮಿಟಿಯ ಸಭೆ ಸೇರಿ ಅದರಲ್ಲಿ, ಆಶ್ರಿತರಾಜ್ಯಗಳ ಅಧೀಶರು, ಪರದೇಶದ ಪ್ರಜಾ ಸ್ವಾತಂತ್ರ್ಯಕ್ಕೆ ಬೆಂಬಲ ಕೊಡುವಾಗ ತಮ್ಮರಾಷ್ಟ್ರಗಳಲ್ಲಿ ಹೊಣೆಗಾರಿಕೆಯನ್ನು ಕೊಡುವುದು ನ್ಯಾಯವೆಂದೂ, ಆಶ್ರಿತ ರಾಜ್ಯಗಳ ಅರಸರು ಪ್ರಜೆಗಳ ಪರವಾಗಿ ಮಾತನಾಡುವುದು ನ್ಯಾಯವಲ್ಲವೆಂದೂ ನಿರ್ಣಯವಾಯಿತು

### ಅಲ್ಪ ಸಂಖ್ಯಾಕರ ಸಮಸ್ಯೆಗೆ ಸರ್ದಾರರ ಉತ್ತರ

ಬೋರ್ಸದಿನಲ್ಲಿ ನೆರೆದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಕೊಡುತ್ತಾ ಸರ್ದಾರರು, ಬ್ರಿಟಿಷರ ಯುದ್ಧ ಧ್ಯೇಯದ ವಿಷಯವಾಗಿ ಮಾತನಾಡಿ, ಕಾಂಗ್ರೆಸು ಸ್ವಯಂ ನಿರ್ಧಾರದ ಹಕ್ಕನ್ನು ಕೇಳುತ್ತಿದೆಯೆಂದೂ, ಅಲ್ಪಸಂಖ್ಯಾಕರ ಸಮಸ್ಯೆಯನ್ನು ಪರಿಹರಿಸಲು ರಾಷ್ಟ್ರ ಘಟನಾ ಸಮಿತಿಯೇ ಸಾಧ್ಯ ಉಪಾಯವೆಂದರು

### ಲಾರ್ಡ್ ಜಟ್ಲೆಂಡರ ಹೇಳಿಕೆ ಬಗ್ಗೆ ಶ್ರೀ ಎಂ ಎಸ್. ರಾಯರ ಟೀಕೆ

ಲಾರ್ಡ್ ಜಟ್ಲೆಂಡರ ಹೇಳಿಕೆ ಬಗ್ಗೆ ಶ್ರೀ ಎಂ ಎಸ್, ರಾಯರು 'ಸಾಮ್ರಾಜ್ಯದ ಮನಸ್ಸು ಬದಲಾವಣೆ ಹೊಂದಬಹುದೆಂಬುದಾಗಿ ಆಶಿಸುತ್ತಿರುವ ಕಾಂಗ್ರೆಸ್ ಮುಖಂಡರುಗಳಿಗೆ ಲಾರ್ಡ್ ಜಟ್ಲೆಂಡರ ಹೇಳಿಕೆಯು ಕಣ್ಣು ತೆರೆಸುವುದಾಗಿದೆ ಲಾರ್ಡ್ ಜಟ್ಲೆಂಡರ ಹೇಳಿಕೆಯನ್ನು ನೋಡಿದರೆ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಬಂದರೂ ಬ್ರಿಟನ್ನಿನ ಸಂಬಂಧವನ್ನು ಪರಿತ್ಯಜಿಸುವ ಹಕ್ಕು ಭಾರತಕ್ಕೆ ದೊರೆಯುವುದಿಲ್ಲವೆಂದು ಗೊತ್ತಾಗುವುದು' ಎಂದು ತಿಳಿಸಿದ್ದಾರೆ.

### ಮೂಂಜೆ-ವೈಸರಾಯ್ ಭೇಟಿ
#### ೪೫ ನಿಮಿಷಗಳ ಕಾಲ

ಹಿಂದೂ ಮಹಾಸಭೆಯ ಮುಖಂಡರಾದ ಡಾ. ಬಿ ಎಸ್. ಮೂಂಜೆಯವರು ತಾ. ೧೨ರಲ್ಲಿ ವೈಸರಾಯರೊಡನೆ ೪೫ ನಿಮಿಷಗಳ ಕಾಲ ಭೇಟಿ ಮಾಡಿ ಮಾತುಕತೆ ನಡೆಸಿದರು.

### ಗಾಂಧಿಜಿಯವರ ಪ್ರವಾಸ

ಮಹಾತ್ಮರು ಪತ್ನೀಸಹಿತರಾಗಿ, ಶಾಂತಿನಿಕೇತನಕ್ಕೆ ತೆರಳಿ ಅಲ್ಲಿ ೩ ದಿನಗಳನ್ನು ಕವಿ ರವೀಂದರೊಡನೆ ಕಳೆದರು ಇದೇ ತಾರೀಕು ೨೦ರಲ್ಲಿ ಡಾಕ್ಕಾ ಜಿಲ್ಲೆಯ ಮಾಲಿಕಂಡದಲ್ಲಾಗುವ ಗಾಂಧಿ ಸೇವಾಸಂಘದ ಗ್ರಾಮ ಕೈಗಾರಿಕೆಗಳ ಪ್ರದರ್ಶನವನ್ನು ತೆರೆಯುವುದರೊಡನೆ ಇದೇ ತಾರೀಕು ೨೦—೨೬ರ ವರೆಗೆ ಅದೇ ಸಂಘದ ಪರಿಷತ್ತಿನಲ್ಲಿಯೂ ಹಾಜರಾದರು

ಮಹಾತ್ಮಾ ಗಾಂಧಿಜಿಯವರ ಶಾಂತಿನಿಕೇತನಕ್ಕೆ ಹೊರಟವರ ಕಲ್ಕತ್ತೆಯಲ್ಲಿ ಇಳಿದು, ಅಲ್ಲಿ ಪ್ರೆಸಿಡೆನ್ಸಿ ಜನರಲ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೊಳಗಾಗಿದ್ದ ದೀನಬಂಧು ಸಿ ಎಫ್ ಎಂಡ್ರೂಸ್‌ರವರನ್ನು ಕಂಡು ಅವರ ಆರೋಗ್ಯಸ್ಥಿತಿಯನ್ನು ವಿಚಾರಿಸಿದರು ದರ್ಶನಾಭಿಲಾಷಿಗಳಾದ ಜನರಿಗೆ ದರ್ಶನಕೊಟ್ಟು ಶಾಂತಿನಿಕೇತನಕ್ಕೆ ತೆರಳಿದರು

ನಾಗ್ಪುರ ರೈಲ್ವೇ ಸ್ಟೇಶನಿನಲ್ಲಿ ಮಹಾತ್ಮರು ತಮ್ಮ ರೈಲ್ವೆ ಕಂಪಾರ್ಟ್‌ಮೆಂಟಿನಲ್ಲಿ ಕುಳಿತು ಸ್ನೇಹಿತರೊಡನೆ ಮಾತಾಡುತ್ತ, ಪ್ಲೇಟ್‌ಫಾರ್ಮಿನಲ್ಲಿ ನೆರೆದಿದ್ದ ಜನಗಳಿಂದ ಹರಿಜನ ಫಂಡಿಗೆ ವಂತಿಗೆ ಶೇಖರಿಸುತ್ತಿದ್ದ ಹಾಗೆ, ಅಕಸ್ಮಾತ್ತಾಗಿ ಆ ಗಾಡಿಯ ಕಿಟಿಕಿ ಬಾಗಿಲು ಜಾರಿಬಿದ್ದು, ಮಹಾತ್ಮರ ಅಂಗೈಗೆ ಕೊಂಚ ನೋವು ಆಯಿತೆಂದು ಪ್ರಕಟವಾಗಿದೆ

### ಪಂಜಾಬ್ ಕಾಂಗ್ರೆಸ್

ಮೌಲಾನಾ ಅಬುಲ್ ಕಲಂ ಅಜಾದರ ಪ್ರಯತ್ನಗಳಿಂದ, ಪಂಜಾಬಿನ ಕಾಂಗ್ರೆಸ್ ತಂಡಗಳಲ್ಲಿನ ಮನಸ್ತಾಪವು ನಿವಾರಣೆಯಾಗಿ, ಅದರ ಪರಿಣಾಮವಾಗಿ, ಪಂಜಾಬ್ ಶಾಸನ ಸಭೆಯ ಕಾಂಗ್ರೆಸ್ ಪಾರ್ಟಿಯ ಮುಖಂಡರಾದ ಡಾ। ಗೋಪಿಚಂದ ಭಾರ್ಗವರು, ತಮ್ಮ ಸ್ಥಾನಕ್ಕೆ ಈಚೆಗೆ ಕೊಟ್ಟ ರಾಜೀನಾಮೆಯನ್ನು ಹಿಂದೆಗೆದಿರುವರು

### ಸರಕಾರಿ ರೇಲ್ವೆಗಳ ಉತ್ಪನ್ನ

೩೧—೧—೪೦ಕ್ಕೆ ಮುಗಿಯುವ ೧೦ ತಿಂಗಳಲ್ಲಿ ಸರಕಾರಿ ರೇಲ್ವೆಗಳಿಂದ ಒಟ್ಟು ೩೦೭ ಲಕ್ಷರೂಪಾಯಿ ಉತ್ಪನ್ನ ಬಂದಿರುವದು. ಕಳೆದವರ್ಷ ಇದೇ ಅವಧಿಯಲ್ಲಿ ಈಗಿನಕ್ಕಿಂತ ೧೩ ಲಕ್ಷ ರೂಪಾಯಿ ಕಡಿಮೆ ಉತ್ಪನ್ನವಾಗಿತ್ತು ೧—೪—೩೯ರಿಂದ ೩೧—೧—೪೦ ವರೆಗೆ ಒಟ್ಟು ಉತ್ಪನ್ನವು ೭೯—೬೬ ಕೋಟಿ ರೂಪಾಯಿ ಯಾಗಿರುವದು ಕಳೆದ ವರ್ಷದ ಅವಧಿಯಲ್ಲಿ ಇದಕ್ಕೂ ೧೯೪ ಲಕ್ಷ ರೂಪಾಯಿ ಕಡಿಮೆ ಉತ್ಪನ್ನ ಬಂದಿತು

### ಸಕ್ಕೂರಿನಲ್ಲಿ ಬಾಂಬು

ಸಕ್ಕೂರಿನಲ್ಲಿ ಮೊಹರಮ್ ಮೆರವಣಿಗೆಯ ಸಮಯದಲ್ಲಿ ಒಂದು ಬಾಂಬನ್ನು ಯಾರೋ ಎಸದುದರಿಂದ ಒಂದು ಮರಣವೂ ೧೭ ಮಂದಿಗೆ ಗಾಯವೂ ಆಗಿದೆ

### ಮೊಹರಮ್

ಮೊಹರಮ್ ದಿನವು ಅಖಿಲ ಭಾರತದಲ್ಲಿ ಅತ್ಯಂತ ಯಶಸ್ವಿಯಾಗಿ ಆಚರಿಸಲ್ಪಟ್ಟಿತು.

### ಗಾಂಧಿ ಸೇವಾ ಸಂಘ

ಗಾಂಧಿ ಸೇವಾ ಸಂಘದ ೬ನೇ ಪರಿಷತ್ತು ಮಾಲಿಕಂಡದಲ್ಲಿ ಜರಗಿತು ಅಹಿಂಸೆಯನ್ನು ಕಾರ್ಯರೂಪತಃ ಮಾಡುವಂತೆ ಕೆಲಸ ಮಾಡುವುದೇ ಸಂಘದ ಉದ್ದೇಶವೆಂದು ಅಧ್ಯಕ್ಷರಾದ ಕಿಶೋರಲಾಲ ಮಶ್ರುವಾಲರು ಭಾಷಣವಿತ್ತರು

### ಹೊಸ ಜಗತ್ತಿನ ನಿರ್ಮಾಣ
#### ಪಂಡಿತ ಪಂತರ ಸಲಹೆ

ಗೋರಕಪುರದಲ್ಲಿ ಸಾರ್ವಜನಿಕ ಸಭೆಯೊಂದರಲಿ ಭಾಷಣ ಮಾಡುತ್ತಾ ಪಂಡಿತ ಗೋವಿಂದ ವಲ್ಲಭಪಂತರು ಇಂದಿನ ಈ ಯುಗದಲ್ಲಿ ಜನಾಂಗಗಳು ತಮ್ಮ ಸ್ವಾರ್ಥದ ಶೋಷಣೆಯಿಂದ ಕಾದಾಡಿಕೊಂಡು ಜನಹತ್ಯೆ ಮಾಡುತ್ತಿರುವುದು ಪ್ರಮಾದಕರವೆಂದು ಮುಂದಕ್ಕೆ ಜಗತ್ತಿನಲ್ಲಿ ಅನ್ಯೋನ್ಯ ಪ್ರೇಮ ಶಾಂತಿಗಳು ನೆಲಸುವುದು ಅವಶ್ಯವೆಂದೂ ಹೇಳಿದರು

### ಕಲ್ಕತ್ತಾದಲ್ಲಿ ಮಹಾತ್ಮರು

ಕಲ್ಕತ್ತಾದಲ್ಲಿ ಮಹಾತ್ಮಾ ಗಾಂಧಿಜಿಯವರಿಗೆ ಅಭೂತಪೂರ್ವ ಸ್ವಾಗತವಿತ್ತು. ಅವರು ಅಲ್ಲಿ ಅಸ್ವಸ್ಥದಿಂದ ಮಲಗಿದ್ದ ದೀನಬಂಧು ಅಂಡ್ರೂಸರನ್ನು ಹೋಗಿ ಕಂಡರು ದಾರಿಯಲ್ಲಿ ಬರುವಾಗ, ಒಬ್ಬ ಬಂಗಾಳೀ ವಿಧವೆಯು ತಾನು ನೂತ ಒಂದು ನೂಲಿನ ಗಂಟನ್ನೂ ಹತ್ತು ರೂಪಾಯಿಗಳ ನೋಟೊಂದನ್ನೂ ಗಾಂಧಿಜಿಯವರಿಗೆ ಕೊಟ್ಟಳು ರೂಪಾಯಿಯು ಹರಿಜನ ನಿಧಿಗೂ, ತಾನು ನೂತ ನೂಲಿನಿಂದ ಗಾಂಧಿಜಿಯವರೇ ವಸ್ತ್ರ ಮಾಡಿಸಿ ಉಡಬೇಕೆಂದೇ ಅದೇ ತನ್ನ ಜೀವಿತೋದ್ದೇಶವೆಂದೂ ಹೇಳಿದಳು

### ಪಂಜಾಬ್ ಕಾಂಗ್ರೆಸಿನಲ್ಲಿ ಐಕ್ಯ

ಪಂಜಾಬ್ ಕಾಂಗ್ರೆಸನಲ್ಲಿ ಐಕ್ಯವನ್ನು ಸಾಧಿಸುಗರಿ ತೆರಳಿದ ಮುಂದಿನ ರಾಷ್ಟ್ರಪತಿ ಅಜಾದರು ಅಲ್ಲಿಂದ ಹಿಂತೆರಳಿದರು. ತಮ್ಮ ಕಾರ್ಯದಲ್ಲಿ ತಾನು ಯಶಸ್ವಿಯಾಗಿರುವುದಾಗಿ ಅವರು ಹೇಳಿದರು.

### ಸಿಂಧ್ ಮಂತ್ರಿಮಂಡಳ ರಾಜೀನಾಮೆ ಕೊಟ್ಟಿತು.

ಸಿಂಧ್ ಮುಖ್ಯ ಮಂತ್ರಿ ಮಿ. ಅಲ್ಲಾಬಕ್ಸರು ಸಿಂಧ್ ಅಸೆಂಬ್ಲಿಯು ತನಗೆ ಬಹುಮತವಿಲ್ಲದ್ದರಿಂದ ತಮ್ಮ ಮಂತ್ರಿ ಮಂಡಳಕ್ಕೆ ರಾಜೀನಾಮೆ ಕೊಟ್ಟರು ಮುಸ್ಲಿಂ ಲೀಗಿನವರೂ, ಹಿಂದೂ ಇಂಡಿಪೆಂಡೆಂಟ್ ಪಾರ್ಟಿಯವರೂ ಪರಸ್ಪರ ರಾಜೀ ಸಂಧಾನ ಮಾಡಿಕೊಂಡು ಒಮ್ಮತಕ್ಕೆ ಬಂದ ಕೂಡಲೇ ತಾವು ಅವರೊಡನೆ ಸಹಕರಿಸುತ್ತೇವೆ ಎಂದು ಹೇಳಿರುವರು ಹಿಂದೂ ಇಂಡಿಪೆಂಡೆಂಟ್ ಪಂಗಡದವರು ಯಾವ ಕಡೆ ಸೇರುವರೋ ಆ ಪಂಗಡದವರು ಹೊಸ ಮಂತ್ರಿಮಂಡಲವನ್ನು ರಚಿಸಲು ಸಾಧ್ಯವಾಗುವುದು

ಮಿ ಅಲ್ಲಾಬಕ್ಸ್ ಮಂತ್ರಿಮಂಡಳದವರು ತಾ ೧೯ರ ಮಧ್ಯಾಹ್ನನಂತರ ಸಿಂಧ್ ಗವರ್ನರನ್ನು ಭೇಟಿ ಮಾಡಿ ಮಂತ್ರಿ ಮಂಡಳದ ರಾಜೀನಾಮೆಯನ್ನು ಸಲ್ಲಿಸಿದರು

### ಹೆಚ್ಚಿನ ಲಾಭದ ಮೇಲೆ ತೆರಿಗೆಯ ಮಸೂದೆ

ಹೆಚ್ಚಿನಲಾಭದ ಮೇಲೆ ಕರದ ಮಸೂದೆಯ ಪರಿಶೀಲಕ ಸಮಿತಿಯ ಮೊದಲನೇ ಸಭೆಯು ಕೂಡಿತು

ಆ ಸಭೆಯಲ್ಲಿ ಮಸೂದೆಯಲಿಯ ಮೊದಲನೇ ೫ ಕಲಮುಗಳ ಚರ್ಚೆ ನಡೆದು, ಅವು ಯಾವದೇ ವಿಶೇಷ ಹೆಚ್ಚು ಕಡಿಮೆ ಇಲ್ಲದೇ ಮಾನ್ಯಮಾಡಲ್ಪಟ್ಟವು ಹೆಚ್ಚಿನ ಲಾಭದ ಮೇಲೆ ೧೦೦ಕ್ಕೆ ೫೦ ರಷ್ಟು ಕರಹೇರಬೇಕೆಂಬದು ಮುಖ್ಯ ಕಲಮುಗಳಲ್ಲಿಯೇ ಇರುವದು

## NOTICE

In the Court of the District Munsiff of Mangalore

S C No 878/1939

Between N Ramanath Nayak -PLAINTIFF
and
B Srinivas Sarvotham Nayak--DEFENDANT

To

The Defendant--B Srinivas Sarvotham Nayak son of Sarvotham Nayak, Hoige Bazaar, Mangalore.

Please take notice that the plaintiff abovenamed has filed the above suit for recovery of Rs. 56—5—8 due in respect of dealings and that the same stands posted to 4-3-1940 for final disposal.

Mangalore
22-2-1940

M. A. Talwar,
Vakil for Plaintiff

## ಪ್ರಾಯಸ್ಥರ ವಿದ್ಯಾಭ್ಯಾಸ

ಲೇಖಕ:— ಶ್ರೀ ಎ. ಕೆ. ಶೆಟ್ಟಿ, ಯಂ. ಎಲ್. ಎ.

ಪ್ರಜಾ ಪಕ್ಷದ ಮಂತ್ರಿಮಂಡಲಗಳು ಪ್ರಾಂತಗಳಲ್ಲಿ ಸ್ಥಾಪಿಸಲ್ಪಟ್ಟ ಕೂಡಲೆ ನಮ್ಮ ದೇಶದ ಅನೇಕ ಪ್ರಾಂತಗಳು ಪ್ರಾಯಸ್ಥರಲ್ಲಿ ಅಕ್ಷರ ಜ್ಞಾನವನ್ನು ಹರಡಲು ತುಂಬ ಚಳವಳ ನಡೆಸಿದ್ದುವು. ಈ ವಿಷಯದಲ್ಲಿ ಮದ್ರಾಸ್ ಪ್ರಾಂತವು ಕಾರ್ಯರಂಗಕ್ಕಿಳಿಯುದು ಸ್ವಲ್ಪ ತಡವಾಗಿ ಆದರೂ, ಈಗ ಈ ಪ್ರಾಂತವು ಬಹಳ ಚಟುವಟಿಕೆಯನ್ನು ತೋರಿಸುತಿದ್ದು ಕಳೆದು ಹೋದ ಸಮಯಕ್ಕೆ ತಕ್ಕ ಪರಿಹಾರವನ್ನು ಮಾಡುತ್ತಿದೆ. ಶ್ರೀ ಸಿ ರಾಜಗೋಪಾಲಾಚಾರ್ಯರು ಪ್ರಾಯಸ್ಥರ ಬಗ್ಗೆ ಒಂದು ಸುಲಭವಾದ ಪಠ್ಯಪುಸ್ತಕವನ್ನು ತಮಿಳು ಭಾಷೆಯಲ್ಲಿ ಬರೆದಿದ್ದಾರೆ. ಮತ್ತು ತಮ್ಮ ಸಂಚಾರ ಕಾಲದಲ್ಲಿ ಅವರು ಇದೇ ವಿಷಯದ ಮೇಲೆ ಸಭೆಗಳಲ್ಲಿ ಮಾತಾಡುತ್ತಾರೆ. ಕಳೆದ ತಾ. ೪ರಲ್ಲಿ ಅಕಷ್ತೂರಿನಲ್ಲಿ ಜರಗಿದ ತಮಿಳು ನಾಡು ಪ್ರಾಂತಿಕ ಪರಿಷತ್ತಿನ ವೇಳೆಯಲ್ಲಿ ಪ್ರಾಯಸ್ಥರ ವಿದ್ಯಾಭ್ಯಾಸದ ವಿಷಯದಲ್ಲಿ ಪ್ರತ್ಯೇಕವಾದ ಪರಿಷತ್ತೊಂದನ್ನು ಜರಗಿಸಲಾಯಿತು. ಈ ವಾರದ ಅಂತ್ಯದಲ್ಲಿ ಮಥುರೆಯಲ್ಲಿ ಹಿಂದುಸ್ಥಾನದ ಪ್ರಾಯಸ್ಥರ ವಿದ್ಯಾ ಪರಿಷತ್ತು ಜರಗಲಿದೆ. ಮದ್ರಾಸಿನ ವಿದ್ಯಾರ್ಥಿ ಸಂಘಗಳವರು ಪ್ರಾಯಸ್ಥರ ವಿದ್ಯಾಭ್ಯಾಸದ ಚಳವಳವನ್ನು ಮುಂದಿನ ವಾರ ಮದ್ರಾಸಿನಲ್ಲಿ ಒಂದು ವಾರ ನಡೆಸಲಿರುವರು.

ಇದು ವರೆಗೆ ನಮ್ಮ ಜನರಲ್ಲಿ ಹತ್ತಕ್ಕೊಬ್ಬರಂತೆ ಅಕ್ಷರ ಜ್ಞಾನವುಳ್ಳವರಾಗಿದ್ದಾರೆ. ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸ ಕೊಡಿಸಿದರೆ ಮಾತ್ರ ಸಾಲದು ಪ್ರಾಯಸ್ಥರಿಗೂ ಅಕ್ಷರ ಜ್ಞಾನವುಂಟಾಗಬೇಕು. ಹಾಗಾದ್ದರಿಂದ ಅಧಿಕ ಜನರ ವಿದ್ಯಾಭ್ಯಾಸಕ್ಕಾಗಿ ದೊಡ್ಡ ಚಳವಳವನ್ನು ಆರಂಭಿಸುವುದು ಅತಿ ಅಗತ್ಯವೆಂಬುದಾಗಿ ಗಣಿಸಲ್ಪಟ್ಟಿದೆ. ಈಗ ಪ್ರಜಾಪಕ್ಷದ ಸರಕಾರವಿಲ್ಲದಿರುವುದರಿಂದ ಈ ಕೆಲಸವನ್ನು ಸ್ಥಳೀಯ ಸಂಸ್ಥೆಗಳೂ, ಕಾಂಗ್ರೆಸ್ ಸಮಿತಿಗಳೂ ಮಾಡಬೇಕಾಗಿದೆ ಹಳ್ಳಿಗಳಲ್ಲಿ ಉಪಾಧ್ಯಾಯರ, ವಿದ್ಯಾರ್ಥಿಗಳು ಮತ್ತು ಅಕ್ಷರಸ್ಥರಾದ ಇತರರ ಸಹಾಯವನ್ನು ಪಡೆದು ದೊಡ್ಡವರಿಗಾಗಿ ರಾತ್ರಿಶಾಲೆಗಳನ್ನೂ, ಸಾಯಂಕಾಲದ ಕ್ಲಾಸುಗಳನ್ನೂ ಪ್ರಾರಂಭಿಸಬೇಕು. ಸಾಧ್ಯವಿರುವ ಹಳ್ಳಿಗಳಲ್ಲಿ ವಾಚನ ಮಂದಿರಗಳನ್ನೂ ಪುಸ್ತಕ ಭಂಡಾರಗಳನ್ನೂ ಸ್ಥಾಪಿಸಬೇಕು.

ಕಾರ್ಕಳದ ವಕೀಲರಾದ ಶ್ರೀ ಪಿ ವಿ. ಉಪಾಧ್ಯಾಯರು ಎರಡು ವಾರಗಳಲ್ಲಿ ಅಕ್ಷರ ಜ್ಞಾನವೆಂಬ ಪುಸ್ತಕವನ್ನು ಬರೆದು ಸಾಕ್ಷರತೆಯ ಚಳವಳಕ್ಕೆ ಬಹು ಸಹಾಯವನ್ನು ಮಾಡಿದ್ದಾರೆ. ವಿದ್ಯಾ ವಿಷಯದಲ್ಲಿ ಮುಂದುವರಿದ ದಕ್ಷಿಣ ಕನ್ನಡವು ಈ ಕೆಲಸದಲ್ಲಿ ಹಿಂದುಳಿಯ ಬಾರದು. ಜಿಲ್ಲೆಯ ಒಂದು ಕೇಂದ್ರಸ್ಥಳದಲ್ಲಿ ಒಂದು ಪರಿಷತ್ತನ್ನು ಮಾಡಿ ಜಿಲ್ಲೆಯಲ್ಲಿ ಸಾಕ್ಷರತೆಯ ಚಳವಳವನ್ನು ಆರಂಭಿಸಬಹುದು.

## ಯುವಕರು ಸಿಪಾಯಿಗಳಾಗಬೇಕು

### ಯುವಕರಿಗೆ ನೆಹರುಗಳ ಎಚ್ಚರಿಕೆ

ಮಹಾರಾಷ್ಟ್ರ ಯುವಕ ಸಮ್ಮೇಳನದಲ್ಲಿ ಮಾತನಾಡುತ್ತಾ ಜವಾಹಿರಲಾಲರು ಯುವಕರಿಗೆ ಯೋಗ್ಯ ಆದರ್ಶವೊಂದನ್ನು ಬೋಧಿಸಿದರೆಂದು 'ಫ್ರೀಪ್ರೆಸ್ ಜರ್ನಲ್' ಒಂದು ಲೇಖನವನ್ನು ಪ್ರಕಟಿಸಿದೆ.

ಯುವಕರು ಸ್ವಾತಂತ್ರ್ಯ ಸಮರವನ್ನು ಹೂಡಲು ಯೋಗ್ಯ ಕಾರ್ಯಕ್ಷೇತ್ರವನ್ನು ಸಿದ್ಧಗೊಳಿಸಬೇಕೆಂದು ಅವರು ಯುವಕರಿಗೆ ಬೋಧಿಸಿದರು.

ಇಂದು ಕೆಲಸವೇ ಎಲ್ಲದಕ್ಕಿಂತಲೂ ಪ್ರಧಾನವಾಗಿ ಬೇಕಾದುದೆಂದು ಅವರು ಹೇಳಿದರು

ಕಾಂಗ್ರೆಸಿನ ವಿರುದ್ಧ ನಿಂತು ಬಂಡಾಯವೆಬ್ಬಿಸಿದ ಕೆಲ ಮಂದಿ ಧುರೀಣರು ಅನ್ಯಾಯಗಳನ್ನು ಮಾಡುತ್ತಿರುವರೆಂದು ಒತ್ತಿ ಉದಾಹರಿಸಿ ಹೇಳಿದರು.

'ಫಾರ್ವಾರ್ಡ್ ಬ್ಲಾಕ್, ರಾಡಿಕಲ್, ಲೆಪ್ಟಿಸ್ಟ್, ಎಂಟಿ ಇಂಪೀರಿಯಲಿಸ್ಟ್ ಇವರನ್ನು ನೋಡಿರಿ. ಅವರ ಕೆಲಸಗಳನ್ನು ಗಮನಿಸಿರಿ. ಅದರಿಂದ ರಾಷ್ಟ್ರವು ಏನು ಪ್ರಯೋಜನವಾಗಿದೆ. ರಾಷ್ಟ್ರದ ಪ್ರಗತಿಯು ಹಿಂದೆಬೀಳುವಂತೆ ಮಾತ್ರ ಆಗಿದೆ.

'ಫಾರ್ವಾರ್ಡ್ ಬ್ಲಾಕೆಂಬುದು ತಡೆಯನ್ನುಂಟುಮಾಡುವ ಸಂಘವಾಗಿದೆ ಎಂದು ಸಾರಿದರು.

'ಎಡ ಪಕ್ಷದವರು ಬರಿಯ ಬೊಬ್ಬೆಯೆಬ್ಬಿಸಲು ಮಾತ್ರ ಪ್ರವೀಣರು, ಅದಲ್ಲದೆ ಬೇರೇನೂ ಇಲ್ಲ, ರೇಡಿಕಲ್‌ಗಳು ಕನಸಿನ ಸಾಮ್ರಾಜ್ಯದಲ್ಲಿ ವಾಸಿಸುವರು. ಎಂಟೀ ಇಂಪೀರಿಯಲಿಸ್ಟ್ ಎಂಬವರು, ಮೊದಲನೆಯದಾಗಿ ಎಂಟಿ ನೇಶನಲಿಸ್ಟರು; ಇವರದು ತಪ್ಪು ಘೋರಣೆ. ತುದಿಯಲ್ಲಿ ಕುಳಿತುಕೊಂಡು ಮರವನ್ನು ಕಡಿದು ಹಾಕುವಂತ' ಎಂದು ತಿಳಿಸಿದರು.

ಒಬ್ಬ ಬುದ್ಧಿವಂತನಾದ ಸೇನಾಪತಿಯು ಯುದ್ಧ ಪ್ರಾರಂಭವಾದ ಮೇಲೆ ಸೈನ್ಯವನ್ನು ಸಂಗ್ರಹಿಸದೆ, ಮೊದಲೇ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿರುತ್ತಾನೆ ಎಂದರು.

### ಪಾಠ ಕಲಿಯಿರಿ

'ಯುದ್ಧವು ಆರಂಭವಾಯಿತೆಂದಾಗ ಮಾತ್ರ, ತಯಾರಿಗೆ ಇಳಿದ ಯೂರೋಪಿನ ಹಲವು ರಾಷ್ಟ್ರಗಳ ಪರಿಸ್ಥಿತಿಗಳನ್ನು ನೋಡಿರಿ ಧೈರ್ಯ, ನಾಯಕತ್ವ, ಕಷ್ಟಸಹಿಷ್ಣುತೆ, ಸ್ವಾರ್ಥತ್ಯಾಗ, ಇವುಗಳು ಒಂದೊಂದಾಗಿ ನಮ್ಮ ವಿಜಯ ಸಾಧನವಾಗಲಾರವು. ಇವುಗಳೆಲ್ಲವುಗಳ ಸಂಯೋಗ ಸಹಕಾರಗಳಿಂದಲೇ ಜಯವು ಒದಗುವುದು. ಪ್ರತಿಯೊಬ್ಬ ಸೈನಿಕನೂ ಸು ಧೀರನಾಗಿ ಮುಂದುವರಿಯಬೇಕು. ಯುವಕರು ಮೊಟ್ಟಮೊದಲನೆಯದಾಗಿ ಒಳ್ಳೆಯ ಸಿಪಾಯಿಗಳಾಗಲು ಕಲಿಯಬೇಕು.'


## ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ



## ನಿಮ್ಮ ಗಂಟಲು ಮತ್ತು ಶ್ವಾಸಕೋಶಗಳನ್ನು ರಕ್ಷಿಸಿರಿ

ಕೆಮ್ಮು, ಶೀತ, ಚಳಿ, ಗಂಟಲುಬಾಧೆ ಮತ್ತು ಬ್ರೊಂಕ್ಯಾಲಿಸಿನ ಆಕಸ್ಮತೆಯಿಂದ ನರಳುವಿರಾದರೆ ವಿಷಹಾರಿ ಶ್ವಾಸನೀಯ ಪೆಪ್ಸು ಮಾತ್ರೆಗಳು ಅದನ್ನು ಗುಣಪಡಿಸುವ ಔಷಧಿ.

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನೀವು ಸೇದುವ ಗಾಳಿಯೊಂದಿಗೆ ನೇರ ಶ್ವಾಸ ಕೋಶಗಳಿಗೆ ಹೋಗುವುದು. ಈ ಪ್ರಕಾರವಾಗಿ ಪೆಪ್ಸು ಒಳಹೊಕ್ಕು ಕ್ರಿಮಿಕೀಟಗಳನ್ನು ನಾಶಮಾಡುತ್ತವೆ. ಕಫವನ್ನು ಹೋಗಲಾಡಿಸಿ ಗಂಟಲು ಬೇನೆಯನ್ನು ಗುಣಪಡಿಸುವುದು. ಎದೆ ಮತ್ತು ಶ್ವಾಸಕೋಶಗಳನ್ನು ಎಲ್ಲಾ ಸಮಯಕ್ಕೂ ಬಲಪಡಿಸಿ ಎಲ್ಲಾ ವ್ಯಾಧಿಗಳಿಂದಲೂ ರಕ್ಷಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ಡಬ್ಬನ್ನು ರೂ 1ರಂತೆ ಮಾರುತ್ತಾರೆ

ಏಜಂಟ್ಸ್—

ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸ.

ಯಾವಾಗಲೂ! ಪೆಪ್ಸನ್ನೇ ಸೇವಿಸಿರಿ

# PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು



## SALT FOR SALARY:

IN the ancient Roman army every soldier was given a periodical allowance for purchasing salt with which to season his food so that he could carry it with him for a long period, if necessary This was called a 'SALARIUM', which means 'SALT ALLOWANCE'. From this latin word derives the English word 'SALARY' The very word 'SALARY' should therefore remind you that you should not spend it all immediately A portion at least should be 'SALTED' i e. preserved for future use A BANK ACCOUNT will help you

**RESOURCES OF A CRORE**

Estd. 1906.

CANARA BANK LIMITED.

Historical Ad Series No 3



ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ
ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚಿ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ. ಕ.

## ಸಿನೆಮಾ ಪುಟ

# ಕನನ್ ಬಾಲಾ-ಕಾಂಚನಮಾಲಾ

ಉತ್ತರ ಭಾರತದ ಪ್ರಸಿದ್ಧ ನಟಿಯಾದ ಕನನ್ ಬಾಲಾ, ದಕ್ಷಿಣ ದೇಶದ ಪ್ರಖ್ಯಾತ ನಟಿಯಾದ ಕಾಂಚನಮಾಲಾ, ಇವರಿಬ್ಬರ ಹೆಸರುಗಳಲ್ಲಿಯೂ ಶಬ್ದ ಸಾದೃಶ್ಯವಿದ್ದಂತೆ, ಇನ್ನೇನಾದರೂ ಹೆಚ್ಚಿನ ಸಾದೃಶ್ಯ ಗುಣಗಳಿವೆಯೇ ಎಂದು, ಅವರೀರ್ವರು ಪಡೆದ ಪ್ರಖ್ಯಾತಿಗಳನ್ನು ಕಂಡವರು ಶಂಕಿಸುವುದು ಸಹಜವಾಗಿದೆ

ಇಂದು ಹಲವು ಚಲಚ್ಚಿತ್ರ ಪ್ರೇಮಿಗಳು ಬಂಗಾಳದ ಆ ನಟಿಯನ್ನು ಕನನ್ ಎಂಬ ಹೆಸರಿನಿಂದ ಕರೆದಂತೆ, ತಮಿಳಿನ ಈ ನಟಿಯ ಹೆಸರನ್ನೂ ಕಾಂಚನ್ ಎಂದು ಕರೆಯಲು ಆರಂಭಿಸಿದ್ದಾರೆ ಆದರೆ ಇವರಲ್ಲಿ ಇಷ್ಟಂತಲೂ ಹೆಚ್ಚಿನ ಸಾದೃಶ್ಯಗುಣಗಳೇನಾದರೂ ಇವೆಯೇ ವಿಚಾರಿಸಬೇಕಾಗಿದೆ

ಇಬ್ಬರೂ ಅನುಪಮ ಸುಂದರಿಯರು ಅಸದೃಶ ಗಾಯಕಿಯರು ಆದರೆ ಬಾಲಿಕಾ ಸಹಜವಾದ ಕನನ್ ಬಾಲೆಯ ಕಂಠವನ್ನು ಆ ಮುಗ್ಧ ಮೋಹನ ಸ್ವರವನ್ನು, ಕಾಂಚನ ಮಾಲೆಯ ಗಂಭೀರ ಸ್ವರವುಳ್ಳಷ್ಟು ಹೋಲುವುದೇ ಇಲ್ಲ. ಅವರಿಬ್ಬರೂ ಬೇರೆಬೇರೆ ರುಚಿಯ ಸಾಮಾಜಿಕರನ್ನು ತೃಪ್ತಿಗೊಳಿಸಬೇಕಾದುದರಿಂದ, ಸಾದೃಶ್ಯವನ್ನು ಅಷ್ಟೊಂದು ಸಮಾನದಲ್ಲಿ ಚರ್ಚಿಸಲಾಗುವುದಿಲ್ಲ ಮಾತ್ರವಲ್ಲದೆ ಹೆಚ್ಚಾಗಿ ಅಭಿನಯ ಪ್ರಾವೀಣ್ಯತೆಯು ಬೆಳಗುವುದು ನಿರ್ದೇಶಕರ ಸಾಹಸದಿಂದ; ಕಥೆಯ ಚಮತ್ಕಾರದಿಂದ ಆದರೂ ಅವರ ನಟನಾ ಸಾಮರ್ಥ್ಯವು, ಕೆಲವು ಸಾದೃಶ್ಯವತ್ತಾಗಿ ಕಂಡುಬಂದಿದೆ 'ಮುಕ್ತಿ' ಮತ್ತು 'ಮಲ್ಲಿಪಳ್ಳಿ' ಎಂಬೆರಡು ಚಿತ್ರಗಳಲ್ಲಿ ಅತ್ಯಂತ ಸಾದೃಶ್ಯತೆಯ ಎರಡು ನಟಿಯರ ಅವರ ಸ್ವರೂಪಗಳನ್ನು ವ್ಯಕ್ತಪಡಿಸಿದ್ದಾರೆ.

ಮುಕ್ತಿಯಲ್ಲಿ ಕನನ್ ಬಾಲೆಯ ಪ್ರಿಯತಮನ ಅಗಲಿಕೆಯಿಂದ ರೋಧಿಸುವಂತೆ, ಮಲ್ಲಿಪಳ್ಳಿಯಲ್ಲಿ ಕಾಂಚನ ಮಾಲೆಯು ಸಂಕಟಕ್ಕೀಡಾಗುವಳು ಇಬ್ಬರೂ ಭಿನ್ನಸಮಾಜದಲ್ಲಿಯಾದರೂ ಸಾಮಾಜಿಕ ಕಾರ್ಯಕ್ಕೆ ಬಲಿಯಾಗುವರು. ಆದರೆ ಕಾಂಚನ ಮಾಲೆಯು ತನ್ನ ಹೃದಯ ವಿದ್ರಾವಕ ಪರಿಸ್ಥಿತಿಗಳನ್ನು ಈ ಸಮಾಜದೆದುರು ಹೇಳಿಕೊಳ್ಳಲಾರದ ಪರಿಸ್ಥಿತಿಯಲ್ಲಿರುವಳು ಏಕೆಂದರೆ, ಕಾನನ ಬಾಲೆಯಂತೆ ಆಕೆಗೆ ಸ್ವತಂತ್ರ ವಾತಾವರಣದಲ್ಲಿ ಜನ್ಮವಾಗಿಲ್ಲ; ಅಂತಹ ತಂದೆಯ ಸಾನ್ನಿಧ್ಯ ಸಿಗಲಿಲ್ಲ, ಆದುದರಿಂದ ಹೃದಯ ವಿದ್ರಾವಕವಾದ ಶೋಕವನ್ನು ತುಲನೆ ಮಾಡಿ ನಾವು ಯಾರ ಅಭಿನಯವು ಮೇಲೆನ್ನಲು ಬರುವಂತಿಲ್ಲ.

ಆದರೆ ಅಂತಹ ಶೋಕಾಕುಲ ಪರಿಸ್ಥಿತಿಯನ್ನೂ ಸಮಾಜದ ಸ್ವತಂತ್ರ ರೀತಿಯನ್ನೇ ಅಭಿನಯಿಸಿ ತೋರಿಸಲು ಸಂದರ್ಭವನ್ನು ಕಾಂಚನಮಾಲೆಗೂ ಒದಗಿಸಿ ಕೊಟ್ಟು ನೋಡಿದರೆ ಹೊಸ ಸಾಹಸವನ್ನೇ ಜಗತ್ತು ಕಾಣದಿರದು. ಡಿಲ್ಲಿಯ ಪತ್ರಿಕಾ ಸಂಪಾದಕನೊಬ್ಬನು ಕಾನನಳನ್ನು ದಕ್ಷಿಣಭಾರತವು ಹೊಂದಲಾರದು ಎಂದು ಬರೆದಿದ್ದರೆ ಕಾಂಚನಳನ್ನು ಉತ್ತರಭಾರತವೂ ಹೊಂದಲಾರದು ಎಂದು ಬರೆವ ಸಮಯವು ನಮಗೂ ದೂರವಿರದು

### ಚಿತ್ರ ಸಮಾಚಾರ

ಪ್ರಭಾತ ಕಂಪನಿಯವರ ಅದ್ಭುತ ಪೌರಾಣಿಕ ಚಿತ್ರ 'ಜ್ಞಾನೇಶ್ವರ' ಬಹುದ ಸಂಪೂರ್ಣವಾಗುತ್ತಿದೆ 'ಸಂನ್ಯಾಸೀಕಾ ಬೇಟಾ' ಎಂಬುದು ಅದರ ಹಿಂದೀ ಹೆಸರು.

'ಪಡೋಸಿ' ಎಂದು ಹಿಂದಿಯಲ್ಲಿಯೂ 'ಶೇಜಾರಿ' ಎಂದು ಮರಾಠಿಯಲ್ಲಿಯೂ ಹೆಸರುಳ್ಳ, ಸಾಮಾಜಿಕ ಚಿತ್ರವೊಂದು ಪ್ರಭಾತದವರ ಮುಂದಿನ ತಯಾರಿಯಾಗಿದೆ.

ನ್ಯೂ ಥಿಯೇಟರ್ಸ್ ಲಿಮಿಟೆಡ್ ಡೈರೆಕ್ಟರ್ ಪಿ. ಸಿ. ಬರುವಾರವರ ಜಿಂದಗಿ ಚಿತ್ರವು ಈಗಾಗಲೇ ಪ್ರದರ್ಶನಕ್ಕೆ ಸಿದ್ಧವಾಗಿದೆ

ಫಣಿ ಮುಜುಂದಾರ್‌ರವರು 'ಡಾಕ್ಟರ್' ಎಂಬ ಚಿತ್ರವನ್ನು ತಯಾರಿಸುತ್ತಿದ್ದಾರೆ ಇದರಲ್ಲಿ ಪಂಕಜಮಲ್ಲಿಕ್‌ರು ಡಾಕ್ಟರ್ ಪಾತ್ರ ವಹಿಸಿದ್ದಾರೆ. ಡಾಕ್ಟರ ಪತ್ನಿಯ ಪಾತ್ರವನ್ನು ಪನ್ನಳು ವಹಿಸಿದ್ದಾಳೆ.

### ಎಸೋಸಿಯೇಟೆಡ್ ಪ್ರೊಡೆಕ್ಷನ್

ಅಸೋಸಿಯೇಟೆಡ್ ಪ್ರೊಡಕ್ಷನ್ ಲಿಮಿಟೆಡ್‌ನ ಆಲೋ ಛಾಯ ಅಥವಾ ಅಂಧಿ ಎಂಬ ಚಿತ್ರವು ತಯಾರಾಗಿ ಈಗ ಸದ್ಯದಲ್ಲೇ ಅಖಿಲಭಾರತದಲ್ಲೂ ಕೂಡ ಪ್ರದರ್ಶಿಸಲ್ಪಡಲು ಸಿದ್ಧವಾಗಿದೆ

### ಡಿಸ್‌ರೈಲಿ

ವಾರನರ್ ಬ್ರದರ್ಸ್‌ನವರು 'ಡಿಸ್‌ರೈಲಿ' ಎಂಬ ಚಲನಚಿತ್ರವನ್ನು ತಯಾರಿಸುವರು ಜಾರ್ಜ್ ಆರ್ಲಿಸನು ಹಿಂದಿನ ಚಿತ್ರದಲ್ಲಿ ಡಿಸ್‌ರೈಲಿಯ ಪಾತ್ರ ವಹಿಸಿದ್ದನು. ಈಗ ಲಾರೆನ್ಸ್ ಆಲಿವರ್‌ನು ಡಿಸ್‌ರೈಲಿ ಪಾತ್ರ ವಹಿಸುವನು. ಸದ್ಯದಲ್ಲಿಯೇ ತಯಾರಿಕೆಯು ಆರಂಭವಾಗುವದು.

### ಎಡ್ಡಿ ಕ್ಯಾಂಟರ್

'ಆ ಪುಟ್ಟ ತಾಯಿಯವರು' (ಫಾರ್ಟಿ ಲಿಟ್‌ಲ್ ಮದರ್ಸ್) ಎಂಬ ಚಿತ್ರದಲಿ ಎಡ್ಡಿ ಕ್ಯಾಂಟರನು ಪಾತ್ರವಹಿಸುವನು. ಮೆಟ್ರೋಗೋಲ್ಡ್‌ವಿನ್ ಮೇಯರ್ ಕಂಪನಿಯು ತಯಾರಿಕೆಯದು

### ಮೈಸೂರಲ್ಲಿ ನಿಷೇಧ

'ಜಾರೆಜ್' ಎಂಬ ದೇಶಭಕ್ತನ ಜೀವನ ಚರಿತ್ರೆಯನ್ನು ವಿವರಿಸುವ ಚಿತ್ರವನ್ನು ಮೈಸೂರು ಸಂಸ್ಥಾನದಲ್ಲಿ ಪ್ರದರ್ಶಿಸಬಾರದೆಂದು ಆಜ್ಞೆಯಾಗಿದೆ


ಭಾರತ ಸ್ತ್ರೀಯರಿಗೆ ಉತ್ತಮೋತ್ತಮವಾದ ಟಾನಿಕ್




ಬಲವರ್ಧಕ ಔಷಧಗಳ ರಾಣಿ

ಸ್ತ್ರೀಯರ ಸಕಲ ಗರ್ಭಾಶಯರೋಗಗಳನ್ನು ಹೋಗಲಾಡಿಸಿ ಸಂಪೂರ್ಣಾರೋಗ್ಯವನ್ನೂ, ಸುಖವನ್ನೂ ನೀಡುವ ಟಾನಿಕ್

ಕೇಸರಿ ಕುಟೀರಂ, ರಾಯಪೇಟೆ, ಮದರಾಸು

'ಹಜರತ್ ಮಾವಿಯನವರ ಮರಣಾನಂತರ ಅವರ ಮಗ ಯಜೀದನು ಅದೇ ಭಯದ ದೊರೆಯಾದನು. ಈತನು ಕೆಲವು ಸಂಗತಿಗಳಲ್ಲಿ ಇಸ್ಲಾಂಮತಕ್ಕೆ ವಿರೋಧ ನಡೆಯುತ್ತಿದ್ದನು. ಸಾರಾಯಿ ಸಹ ಕುಡಿಯುತ್ತಿದ್ದನು. ಆದ್ದರಿಂದ ಆತನ ದೊರೆತನಕ್ಕೆ ಹಜರತ್ ಇಮಾಮ್ ಹುಸೇನರು ಒಪ್ಪಲಿಲ್ಲ. ಈ ಸಮಯದಲ್ಲಿ ಮೆಸಪೆಟೋಮಿಯದ ಕೂಫಾ ಪಟ್ಟಣದ ಜನರೆಲ್ಲಾ ಸೇರಿ ಹಜರತ್ ಇಮಾಮ್ ಹುಸ್ಸೈನ್‌ರವರು, ಅಲ್ಲಿಗೆ ಬಂದು ಬಿಟ್ಟರೆ ಅವರನ್ನು ತಾವು ದೊರೆಯಾಗಿ ಒಪ್ಪಿಕೊಳ್ಳುವೆವೆಂದು ಕಾಗದ ಬರೆದರು. ಕಾಗದದ ನಿಜಸ್ಥಿತಿ ತಿಳಿದುಕೊಂಡು ಬರಲಿಕ್ಕೆ ಹಜರತ್ ಮುಸ್ಲಿಂಯೆಂಬವರನ್ನು ಇಮಾಮ್‌ರು ಅಲ್ಲಿಗೆ ಕಳುಹಿಸಿದರು. 'ಅವರು ಅಲ್ಲಿಗೆ ತಲುಪಿದ ಕೂಡಲೆ ಅಲ್ಲಿಯ ಸಾವಿರಾರು ಜನರು ಬಂದು ಹಜರತ್ ಇಮಾಮ್ ಹುಸ್ಸೈನ್‌ರವರು ಬಂದು ಬಿಟ್ಟರೆ ದೊರೆಯಾಗಿ ಮಾಡಿಕೊಳ್ಳುವದು ಖಂಡಿತವೆಂದು ಪ್ರಮಾಣ ಮೂಲಕ ಒಪ್ಪಂದ ಮಾಡಿದರು. ಇದರಂತೆ ಹಜರತ್ ಮುಸ್ಲಿಂರವರು ಹುಸ್ಸೈನ್‌ರವರಿಗೆ ಅಲ್ಲಿಗೆ ಬರಲು ಕಾಗದ ಬರೆದು ಬಿಟ್ಟರು.

'ಈ ವರ್ತಮಾನವು ಅರಸನಾದ ಯಜೀದನ ಕಡೆಯ ಅಧಿಕಾರಿ ಆಗಿದ್ದ ಜೈಯೂದ್‌ಯೆಂಬವನಿಗೆ ತಿಳಿಯಿತು. ಆತನು ಆ ಕೂಡಲೇ ಹಜರತ್ ಮುಸ್ಲಿಂರನ್ನು ಹಿಡಿಸಿ ಅವರ ಇಬ್ಬರು ಮಕ್ಕಳೊಡನೆ ಕೊಲ್ಲಿಸಿ ಬಿಟ್ಟನು. ಇದಾದ ಕೂಡಲೇ ಜನರೂ ತಾವು ಮಾಡಿದ ಪ್ರಮಾಣವನ್ನು ಉಲ್ಲಂಘಿಸಿ ಬಿಟ್ಟರು. ಈ ವಿಷಯವನ್ನು ಹಜರತ್ ಇಮಾಮ್ ಹುಸ್ಸೈನ್‌ರವರಿಗೆ ಯಾರೂ ತಿಳಿಸಲಿಲ್ಲ. ಆದರು ಮೊದಲಿನ ಕಾಗದದ ಪ್ರಕಾರ ಕರ್‌ಬುಲಾಯೆಂಬ ಮೈದಾನಕ್ಕೆ ತಲುಪಿಬಿಟ್ಟರು. ಇದನ್ನು ತಿಳಿದ ಅಧಿಕಾರಿ ಆಗಿದ್ದ ಜೈಯೂದ್‌ನು ಕೂಡಲೇ ೫೦೦೦ ಸೈನ್ಯವನ್ನು ಕಳುಹಿಸಿ ಮುತ್ತಿಗೆ ಹಾಕಿಸಿ 'ಯಜೀದನನ್ನೇ ದೊರೆಯಾಗಿ ಒಪ್ಪಬೇಕು. ಇಲ್ಲವಾದರೆ ಯುದ್ಧಮಾಡಿ' ಎಂದು ಹಜರತ್ ಇಮಾಮ್ ಹುಸ್ಸೈನ್‌ರವರಿಗೆ ತಿಳಿಸಿದನು. ಇದಕ್ಕೆ ಇವರು 'ಯಜೀದ್‌ಯೆಂಬವನು ಇಸ್ಲಾಂಮತಕ್ಕೆ ವಿರೋಧ ನಡೆಯುತ್ತಾನೆ ಇದಕ್ಕಾಗಿ ನಾನು ಈತನನ್ನು ದೊರೆಯಾಗಿ ಒಪ್ಪಲಾರೆ' ನೆಂದರು.

ಯುದ್ಧ ಪ್ರಾರಂಭವಾಯಿತು. ಇಮಾಮ್ ಹುಸೇನರ ಪಕ್ಷಕ್ಕೆ ನೀರು ಆಹಾರವೇ ಸಿಕ್ಕದ ಹಾಗೆ ಮಾಡಿಬಿಟ್ಟರು. ಹೀಗೆ ಯುದ್ಧ ಪ್ರಾರಂಭವಾಗಿ ಹಜರತ್ ಇಮಾಮ್ ಹುಸ್ಸೈನ್ ಕಡೆಯವರು ಒಬ್ಬೊಬ್ಬರು ಕೊಲ್ಲಲ್ಪಡುತ್ತಾ ಕಡೆಗೆ ಹಿಜ್ರಿ ಮೋಹರಂ ೧೦ನೆ ಶುಕ್ರವಾರ ದಿನ ಹಜರತ್ ಇಮಾಮ್ ಹುಸ್ಸೈನ್‌ರವರೂ ಹತರಾದರು. ಅಧಿಕಾರಿಯಾದ ಜೈಯಾದ್‌ನು ಇವರ ಶತ್ರುವನ್ನ ಕೊಯ್ಯಿಸಿ ಆ ತಲೆಯನ್ನು ಕೂಫಾಯೆಂಬ ನಗರದಲ್ಲಿ ಮೆರವಣಿಗೆ ಮಾಡಿಸಿದನು.

ಧಾರ್ಮಿಕ ವಿಚಾರ:

# ಮೊಹರಮ್ಮಿನ ಅರ್ಥವೇನು?

[ಅಬ್ದುಲ್‌ಗಫೂರ್‌ಖಾನರ ಲೇಖನದಿಂದ]

(ಕಳೆದ ವಾರ ಮೊಹರಮ್ ಹಬ್ಬವು ನಡೆಯಿತಷ್ಟೆ? ಈ ಕುರಿತು ರಾಷ್ಟ್ರೀಯ ಮುಸ್ಲಿಮ ಮುಖಂಡರೂ, ಉಜ್ವಲ ಮುಸ್ಲಿಂ ಧರ್ಮಪರಾಯಣರೂ ಆದ ಅಬ್ದುಲ್ ಗಫೂರ್ ಖಾನರು ಯಾವ ಅಭಿಪ್ರಾಯಪಡುತ್ತಾರೆಂದು ಈ ಮಹತ್ವದ ಲೇಖನದ ಮೂಲಕ ತಿಳಿಯುವುದು. ಮುಸ್ಲಿಮರೂ ಇತರ ಧರ್ಮೀಯರೂ ಇದನ್ನು ಓದುವುದು ಅವಶ್ಯ.)

ಹೀಗೆ ತಮ್ಮ ಗುರುಗಳ ಮೊಮ್ಮಗನಾದ ಹಜರತ್ ಇಮಾಮ್ ಹುಸ್ಸೈನ್‌ರವರ ಸಂತತಿಯವರನ್ನು ಮೋಸದಿಂದ ಮತ್ತು ಅನ್ಯಾಯದಿಂದ ಕೊಂದದ್ದು ಮುಸಲ್ಮಾನರಿಗೆ ಅತ್ಯಂತ ದುಃಖಕರವಾದ ವಿಷಯವಾಗಿದೆ.

ಮುಸ್ಲಿಂ ಸಹೋದರರೇ, ಇಂಥಾ ಘೋರ ಭಯಂಕರದ ಅತ್ಯಂತ ದುಃಖ ಸಂಗತಿಗೆ ನಾವು ಹಬ್ಬವೆಂದು ಹೇಳಬಹುದೋ? ಕೈಯನ್ನು ಎದೆ ಬೆನ್ನುಗಳಲ್ಲಿ ಕತ್ತರಿಸಿಕೊಂಡು ಇದನ್ನು ಹಜರತ್ ಇಮಾಮ್ ಹುಸ್ಸೈನರ ಮತ್ತು ಅವರ ಕುಟುಂಬಸ್ಥರ ಕೈಗಳುಯೆಂದು ಇವುಗಳನ್ನು ಪೂಜಿಸಬಹುದೋ? ಶವವನ್ನು ಹೊತ್ತುಕೊಂಡು ಹೋಗುವ ಮಂಚವಾದ ತಾಬೂತ್‌ಗಳು ಹಾಗೆಯೋ ನಮ್ಮ ಶವಗಳನ್ನು ಹೊತ್ತುಕೊಂಡು ಹೋಗುವ ಜನಾಜಯಾನೆ ಮಂಚ ಇದೆಯೋ? ಈ ತಾಬೂತಗಳು ಮದಿವೆ ಹೆಣ್ಣು ಗಂಡುಗಳನ್ನು ಅಲಂಕರಿಸಿ ಕೂಡಿರಿಸುವಂಥ ಮಂಟಪದ ಎಾಗ್ರೆ ಇಲ್ಲವೋ? ಜೈಯಾದ್‌ನು ಇವರ ತಲೆಯನ್ನು ಕತ್ತರಿಸಿ ತನ್ನ ಜಯದ ಸಂತೋಷಕ್ಕಾಗಿ ಮೆರವಣಿಗೆ ಮಾಡಿಸಿದ ಹಾಗೆ ಒಂದು ಬಿದಿರಿಗೆ ಸಿಂಬೆ ಹಣ್ಣನ್ನು ಚುಚ್ಚಿಕೊಂಡು, ನೇಜಯೆಂದು ಮೆರವಣಿಗೆ ಮಾಡುವದು ನ್ಯಾಯವೋ? ಹಜರತ್ ಇಮಾಮ್ ಹುಸ್ಸೈನ್‌ರವರು ತಮ್ಮ ಭದ್ರತೆಗೆ ಸುತ್ತು ಬೆಂಕಿ ಹಾಕಿ ಕೊಂಡಿದ್ದರು. ಇದರ ಬದಲಿಗೆ ಆವಾವ ಮಾಡಿಕೊಂಡು ಅದರಲ್ಲಿ ಬೆಂಕಿ ಹಾಕಿ ಸುತ್ತ ತಿರುಗುತ್ತಾ ಕವಗಳ ಪೂಜಾರಿಗೆ ಪಡ ರೂಪದಲ್ಲಿ ಶ್ರೇಷ್ಠವಾದ ಬೈಗಳನ್ನು ಬೈಯುವದು ಇದು ಇಸ್ಲಾಂ ಮತದ ಧರ್ಮವೋ? ವೇಷಗಳನ್ನು ಹಾಕಿಕೊಂಡು ಅವಹೇಳನಗಳನ್ನು ಮಾಡುವದು ಮತಕ್ಕೆ, ನಾಗರೀಕತನಕ್ಕೆ ಸಹಜವೋ? ಇವು ಪಿಶಾಚಿ ಕಾರ್ಯಗಳಲ್ಲವೋ? ಮುಸ್ಲಿಂ ಸಹೋದರರೇ, ಸತ್ಯ, ನ್ಯಾಯ ಮತ್ತು ಮತಧರ್ಮಕ್ಕೆ ಸರಿಯಾಗಿ ಹೇಳಿ. ಇಸ್ಲಾಂಮತವು ಇಂಥಾ ಬೋಧನೆಯನ್ನು ನಮಗೆ ಕೊಡುತ್ತದೋ? ನೋಡಿ ೧೧ನೇ ಖುರಾನಿನ ಭಾಗದಲ್ಲಿ ಜೂಜಿನಲ್ಲಿ ದೇವರು ಅಪ್ಪಣೆ ಮಾಡುತ್ತಾನೆ!

'ಮುಸಲ್ಮಾನರೇ, ಖಂಡಿತವಾಗಿ ಸಾರಾಯಿ, ಮತ್ತು ಜೂಜು ಮತ್ತು ಕೈಯಿಂದ ಮಾಡಿದಂಥ ವಸ್ತುಗಳನ್ನು ಪೂಜಿಸುವಂಥಾದ್ದು ಯಾವ ಕೆಲಸಕ್ಕಾಗಲೀ ಯಾವಲ್ಲಿಯಾದರೂ ಹೋಗಬೇಕಾದರೆ ಒಳ್ಳೆ ಸಮಯ ಕೆಟ್ಟ ಸಮಯವೆಂದು ಕಣಿ ನೋಡುವಂಥಾದ್ದು ಇವುಗಳೆಲ್ಲಾ ಪೈಶಾಚಿಕ ಕಾರ್ಯಗಳಾಗಿವೆ. ನೀವು ಇಂಥಾ ಕಾರ್ಯಗಳನ್ನು ಮಾಡಬೇಡಿ; ಹೀಗಾದರೆ ನಾನು ನಿಮ್ಮನ್ನು ತೇರ್ಗಡೆ ಪಡಿಸುತ್ತೇನೆ' ಹೀಗೆಂದು ದೇವರ ಅಪ್ಪಣೆ ಇದೆ. ಹೀಗಿರುವಾಗ ಮುಸಲ್ಮಾನರು ಈ ಮೋಹರಂನಲ್ಲಿ ನಡೆಸುವಂಥ ಕಾರ್ಯವು ಶುದ್ಧ ಇಸ್ಲಾಂಮತಕ್ಕೆ ವಿರೋಧವಾದ ಶೈತಾನ್ ಚೇಷ್ಟೆಯಾಗಿದೆ. ಮತ್ತು ಮಸಿದಿಗಳಲ್ಲಿ ಮೋಹರಂ ೧೦ದಿನಗಳು ಸಹ ಈ ಎಲ್ಲಾ ವಿಷಯವಾಗಿ ಉಪನ್ಯಾಸ ಹೇಳಬೇಕು ಮತ್ತು ವಿಧವೆಯರಿಗೆ, ಅನಾಥ ಮಕ್ಕಳಿಗೆ ಮತ್ತು ವಿದ್ಯೆಗೆ ದಾನಧರ್ಮ ಮಾಡುವಂತೆ ಬೋಧಿಸಬೇಕು. ಮೋಹರಂ 'ಶೈತಾನಿಕ್' ಕಾರ್ಯಗಳನ್ನು ಮಾಡುವಂಥವರ ಸಂಗತ ಸೇರದಂತೆ ಮಾಡಬೇಕಾಗಿ ಮುಸ್ಲಿಂ ಸಹೋದರರಲ್ಲಿ ಬಹು ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

'ಹಿಂದೂ ಮತ್ತು ಕ್ರಿಶ್ಚಿಯಾನರ ಸ್ಥಾನಗಳಲ್ಲಿ ಸಹ ನನ್ನ ವಿನಯದ ಅರಿಕೆ ಏನೆಂದರೆ—ಈ ಮೋಹರಂ ಹಬ್ಬವು ನಮ್ಮ ಇಸ್ಲಾಂ ಮತಕ್ಕೆ ಸಂಪೂರ್ಣ ವಿರೋಧವಾಗಿದೆ. ಈ ಭೂಮಿಯ ಮೇಲೆ ಪುಣ್ಯವನ್ನು ಹರಡಿಸುವುದು ಮತ್ತು ಪ್ರತಿಯೊಂದು ಮತಸ್ಥರ ಶ್ರೇಷ್ಠವಾದ ಕಾರ್ಯವಾಗಿದೆ. ಆದ್ದರಿಂದ ತಮ್ಮ ತಮ್ಮ ಜನರನ್ನು ಇದರಲ್ಲಿ ಯಾವ ತರದ ಭಾಗವನ್ನು ವಹಿಸದಂತೆಯೂ ಮತ್ತು ಸಹಾಯ ಮಾಡದಂತೆಯೂ, ಹಣಕಾಸು ಕೊಡದಂತೆಯೂ ಬೋಧನೆ ಮಾಡಿ ಬಂದೋಬಸ್ತು ಮಾಡಬೇಕಾಗಿ ಅತ್ಯಂತ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಮುಸಲ್ಮಾನರಲ್ಲಿ ಕೆಲವು ಹಣವಂತರು ಮತ್ತು ವ್ಯಾಪಾರಸ್ಥರು ಮೊಹರಂ ಹಬ್ಬವೆಂದು ವೇಷ ನಟನೆಗಳನ್ನು ಹಾಕಿಕೊಂಡು ಬಂದವರಿಗೆ ಹಣ ಕೊಡುತ್ತಾರೆ. ಇದನ್ನು ಸಂಪೂರ್ಣ ನಿಲ್ಲಿಸಬೇಕು. ಇಂಥಾ ಹಣ ಸಹಾಯವು ಸೇಂದಿ ಅಂಗಡಿಗಳಿಗೆ ಹೋಗುತ್ತದೇ ವಿನಹ ಇದರಿಂದ ಸ್ವಲ್ಪವಾದರೂ ಪುಣ್ಯ ಉಂಟಾಗುವುದಿಲ್ಲ.

'ಭಗವಂತನು, ಹಜರತ್ ಇಮಾಮ್ ಹುಸ್ಸೈನ್‌ರವರಂತೆ ತಮ್ಮ ಮತಕ್ಕಾಗಿ ಮತ್ತು ದೇಶಕ್ಕಾಗಿ ಧೈರ್ಯದಿಂದ ತಮ್ಮ ಇಡೀ ಕುಟುಂಬದೊಡನೆ ಈ ಭೂಲೋಕದ ಬಾಳಿಕೆಯ ವಿಷಯ ಏನೂ ಯೋಚಿಸದೆ ದೇವರ ಹೆಸರಿನಲ್ಲಿ ಜೀವ ಕೊಟ್ಟಂತೆ ಪ್ರತಿ ಮುಸಲ್ಮಾನನಿಗೂ, ದೇಶೀಯರಿಗೂ ಬುದ್ಧಿಯನ್ನು ಮತ್ತು ಮನಸ್ಸನ್ನು ದಯಪಾಲಿಸಲೆಂದು ಭಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

DIAMONDS! DIAMONDS!
BEST BRILLIANCY!
K. R. K. SHET,
MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ
ವಜ್ರಗಳು!
ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.
ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.
ನಿಮಗೆ ಬೇಕಾದ್ದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ. ಆರ್. ಕೆ. ಶೆಟ್, ಜುವೆಲ್ಲರ್,

# ಸೋಲು ಗೆಲವುಗಳ ತಕ್ಕಡಿಯಲ್ಲಿ

## ತೂಗಿ ತೊನೆದಾಡುವ ಜರ್ಮನಿ

### ತಟಸ್ಥ ರಾಷ್ಟ್ರಗಳ ಮೇಲೆ ಏಕೆ ಈ ದಾಳಿ?

ಒಬ್ಬನ ಎದುರು ನಿಂತ ಇನ್ನೊಬ್ಬನು ಸೋಲುತ್ತಾನೆಯೋ, ಗೆಲ್ಲುತ್ತಾನೆಯೋ ಎಂಬುದನ್ನು ತಿಳಿಯಬೇಕಾದರೆ, ಮೊದಲು ಅವನ ಜನಬಲ, ಸೇನಾಬಲ, ಧನಬಲ ಮತ್ತು ಸಾಮಗ್ರಿಗಳ ಬಲ ಎಷ್ಟಿದೆ ಎಂದು ತಿಳಕೊಳ್ಳಬೇಕಾಗಿರುವದಲ್ಲದೆ, ನೆರೆಹೊರೆಯವರ ಸಹಾನುಭೂತಿಯ ವಿಷಯವನ್ನೂ ತಿಳಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಆಲೋಚಿಸುವದಾದರೆ ಯೂರೋಪಿನ ಯುದ್ಧದಲ್ಲಿ ಹಿಟ್ಲರನಿಗೆ ಜಯವುಂಟೇ ಎಂಬುದು ಸಂಶಯಾಸ್ಪದವಾಗಿದೆ.

**ಬ್ರಿಟನ್ ಜರ್ಮನಿಗಳ ಬಲಾಬಲ**

ಸುಮಾರು ೧೨೦ ಮಿಲಿಯ ಜನರು ಈಗ ಹಿಟ್ಲರನ ಅಧಿಕಾರ ಸೂತ್ರದಿಂದ ಬಂಧಿಸಲ್ಪಟ್ಟಿರುತ್ತಾರೆಂದು ತಿಳಿದಿದೆ. ದಬ್ಬಾಳಿಕೆಗೆ ಬಲಿಯಾದ ಇತರರೂ ಇವರೆಲ್ಲರೂ ಹಿಟ್ಲರನ ಪತನದ ದಿನಗಳನ್ನು ಲೆಕ್ಕಮಾಡುವವರೇ ಆಗಿರುವರು. ಇವರ ದೆಸೆಯಿಂದ ಹಿಟ್ಲರನ ಪಾಳಯದೊಳಗೆಯೇ ಯಾದವೀ ಕಲಹವು ಆರಂಭವಾಗುವ ಹಾಗಿದೆ.

ಬ್ರಿಟಿಷ ಸಾಮ್ರಾಜ್ಯದ ಜನಸಂಖ್ಯೆಯು ಸುಮಾರು ೪೫೦ ಮಿಲಿಯ; ಅಂದರೆ ಹಿಟ್ಲರನವಕ್ಕಿಂತ ನಾಲ್ಕು ಪಾಲಷ್ಟು ಹೆಚ್ಚಿಗೆ ಇರುತ್ತದೆ. ಅಷ್ಟು ಮಾತ್ರವಲ್ಲ; ಬ್ರಿಟನಿಗೆ ಫ್ರಾನ್ಸಿನ ಸಂಪೂರ್ಣ ಬೆಂಬಲವು ಇದೆ. ಅದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುವದಾದರೆ ಹಿಟ್ಲರನಿಗೆ ಒಬ್ಬನ ಸಹಾಯವು ಒದಗಿ ಬರುವಾಗ ಬ್ರಿಟನಿಗೆ ೬ ಮಂದಿಯ ಸಹಾಯವು ಒದಗಿ ಬಂದಂತಾಗುತ್ತದೆ.

ಬ್ರಿಟನ ಅಥವಾ ಹಿಟ್ಲರನ ಸೋಲು ಗೆಲವುಗಳು ಸಮುದ್ರ ಮತ್ತು ಆಕಾಶದ ಮೇಲೆ ಯುದ್ಧಮಾಡುವ ಅವರ ಸಾಮರ್ಥ್ಯವನ್ನು ಹೊಂದಿಕೊಂಡಿದೆ. ಬ್ರಿಟನಿನ ಮತ್ತು ಫ್ರಾನ್ಸಿನ ನೌಕಾ ಪಡೆಗಳು ಯೂರೋಪಿನ ಇತರ ಎಲ್ಲಾ ರಾಷ್ಟ್ರಗಳ ನೌಕಾ ಪಡೆಗಿಂತ ದೊಡ್ಡದೂ ಬಲವುಳ್ಳದ್ದೂ ಆಗಿರುವವು. ರಶ್ಯದಂಥ ಯೂರೋಪಿನ ಇತರ ದೊಡ್ಡ ರಾಷ್ಟ್ರಗಳು ಹಿಟ್ಲರನ ಕಡೆಗೆ ಸೇರಿದರೂ ಕೂಡ ಬ್ರಿಟನು ಹೆದರುವ ಕಾರಣ ಇರುವದಿಲ್ಲ.

ಶಾಂತಿಯ ಕಾಲದಲ್ಲಾದರೆ ಜರ್ಮನಿಗೆ ಬೇಕಾದ ಎಣ್ಣೆಯು ಅಮೇರಿಕದ ಸಂಯುಕ್ತ ಪ್ರಾಂತಗಳಿಂದ ಬರುತಿತ್ತು. ಈಗ ಅಲ್ಲಿಂದ ಹಿಟ್ಲರನಿಗೆ ಎಣ್ಣೆ ಬರುವಂತಿಲ್ಲ. ಈಗ ಹಿಟ್ಲರನು ಎಣ್ಣೆಯ ಮಟ್ಟಿಗೆ ರಶ್ಯದ ಕಡೆಗೆ ಮೋಹಕಾಲೂರಬಹುದು. ಆದರೆ ಯುದ್ಧಕ್ಕೆ ಬೇಕಾದಂಥ ಪೆಟ್ರೋಲಿನ ಆವಶ್ಯಕತೆಯು ರಶ್ಯಕ್ಕೂ ಇದೆ. ಆದ್ದರಿಂದ ಹಿಟ್ಲರನಿಗೆ ಬೇಕಾದ ಪೆಟ್ರೋಲು ರಶ್ಯದಿಂದ ಬರುವ ಸಂಭವವಿಲ್ಲ.

ಜರ್ಮನಿಗಿಂತಲೂ ಮಿತ್ರ ರಾಷ್ಟ್ರಗಳ ಧನಬಲವು ಉತ್ಕೃಷ್ಟವಾಗಿದೆ. ಜರ್ಮನಿಯ ಆರ್ಥಿಕ ಬಲದ ನಾಲ್ಕಂಶದಷ್ಟು ಖರ್ಚು ಮಾಡಿದ ಅನಂತರವೇ ಹಿಟ್ಲರನು ಮಿತ್ರಮಂಡಲಿಯನ್ನು ಯುದ್ಧಕ್ಕೆ ಕರೆಯಲು ಸಮರ್ಥನಾದನು. ಈಗ ಜರ್ಮನಿಯ ಆರ್ಥಿಕ ಬಲವು ಕುಗ್ಗುತ್ತ ಬಂದಿದೆ. ಕಾದಿಟ್ಟ ಸಂಪತ್ತು ಕರಗುತ್ತ ಬಂದಿದೆ.

ಹಿಟ್ಲರನು ಜರ್ಮನಿಯ ಕೆಲಸಗಾರರಿಗೆ ಮಿತಿಮೀರಿದ ಕೆಲಸಗಳನ್ನು ಕೊಟ್ಟಿರುವನು. ಕಾರ್ಖಾನೆಗಳಲ್ಲಿ ಜರ್ಮನ ಕೆಲಸಗಾರರು ಕ್ರಯಕ್ಕೆ ಮಾರಿ ಹೋದ ಗುಲಾಮರಂತೆ ಇದ್ದಾರೆ. ಆದ್ದರಿಂದ ಅವರಿಗೆ ತಮ್ಮ ಸ್ಥಿತಿಗತಿಗಳ ಕುರಿತು ಘೋರ ಅಸಂತುಷ್ಟಿ ಇರುತ್ತದೆ.

**ಗೆಲ್ಲುವ ಕಾಲ ಕಳೆಯಿತು**

ಹಿಟ್ಲರನು ಬ್ರಿಟನನ್ನು ಗೆಲ್ಲುವ ಕಾಲವು ಕಳೆದು ಹೋಯಿತು. ಅವನು ಯುದ್ಧಾರಂಭವಾದೊಡನೆಯೇ ಮಿಂಚಿನ ಯುದ್ಧ ಮಾಡಿ ಬ್ರಿಟನಿನ ಮೇಲೆ ಬಿದ್ದುದಾದರೆ ಒಂದುವೇಳೆ ಅವನು ಬ್ರಿಟನನ್ನು ಗೆಲ್ಲಬಹುದಾಗಿದ್ದಿತೋ ಏನೋ! ಆದರೆ ಈಗ ದಿನಗಳು ಕಳೆದಂತೆ ಹಿಟ್ಲರನ ಬಲವು ಯುದ್ಧ ಮಾಡಿ ಮಾಡಿ ಕುಗ್ಗುತ್ತ ಇರುವಾಗ, ಬ್ರಿಟನಿಗೆ ನಾಲ್ಕು ಕಡೆಗಳಿಂದ ಹೊಸಹೊಸದಾಗಿ ಬಲವು ಬಂದು ಕೂಡಿಕೊಳ್ಳುತ್ತಾ ಇದೆ. ಹಿಟ್ಲರನ ಈ ಅನ್ಯಾಯದ ಯುದ್ಧದಲ್ಲಿ ಇಡೀ ಪ್ರಪಂಚದ ಸಹಾನುಭೂತಿಯು ಬ್ರಿಟನಿಗೆ ಇರುವದು. ರಶ್ಯವು ಹಿಟ್ಲರನಿಗೆ ಅಲ್ಪಸ್ವಲ್ಪ ಸಹಾಯವನ್ನು ಕೊಟ್ಟು ತಾನು ಹಿಟ್ಲರನ ಸ್ನೇಹಿತನಂತೆ ವರ್ತಿಸುತ್ತಿದೆ. ಈ ಚಾಣಕ್ಯ ನೀತಿಯ ನಿಜ ಸ್ವರೂಪವು ಬೇಗನೇ ಪ್ರಕಟವಾಗಲಿದೆ.

**ಬ್ರಿಟನಿನ ಬುದ್ಧಿವಂತಿಕೆ**

ಬ್ರಿಟನು ಪಶ್ಚಿಮ ರಣರಂಗದಲ್ಲಿ ತಾನಾಗಿ ಹಿಟ್ಲರನ ಮೈಮೇಲೆ ಬೀಳದೆ ಇದೆ; ಅದು ಫ್ರಾನ್ಸನ್ನು ಕೂಡ ಮುಂದೆ ಕಳುಹಿಸಿ ಯುದ್ಧಕ್ಕೆ ಪ್ರೇರೇಪಿಸದಿರುವ ಕಾರಣವು ಕೂಡ ಇದೇ ಆಗಿದೆ. ಕಳೆದ ಮಹಾಯುದ್ಧದ ಮೊದಲಿನ ಎಳೆಂಟು ತಿಂಗಳುಗಳ ಅವಧಿಯಲ್ಲಿ ನೆಲಜಲ ಆಕಾಶದ ಮೇಲೆ ಆದ ನಷ್ಟಕ್ಕಿಂತ ಈ ಯುದ್ಧದಲ್ಲಿ ಈ ಅವಧಿಯಲ್ಲಾದ ನಷ್ಟವು ಹತ್ತರಲ್ಲಿ ಒಂದು ಪಾಲಷ್ಟು ಇರುವದಿಲ್ಲ. ಹಿಟ್ಲರನು ತನ್ನ ಪರಾಭವದ ಮೂಲಕ ಮಿತ್ರ ರಾಷ್ಟ್ರಗಳ ಮೇಲೆ ಬಂದ ಸಿಟ್ಟನ್ನು ಅವುಗಳ ಮೇಲೆ ತೋರಿಸಲಾಗದೆ, ಪಾಪದ ತಟಸ್ಥ ರಾಷ್ಟ್ರಗಳ ಮೇಲೆ ತೋರಿಸಿದ್ದಾನೆ. ಈ ಯುದ್ಧದಲ್ಲಿ ಇಷ್ಟರ ತನಕ ಹಿಟ್ಲರನು ತೋರಿಸಿದ ಅತಿಶಯ ಶೌರ್ಯವೆಂದರೆ—ಯುದ್ಧಕ್ಕೆ ಬಾರದ ತಟಸ್ಥ ರಾಷ್ಟ್ರಗಳ ಹಡಗುಗಳನ್ನು ಮುಳುಗಿಸಿ ಮೀಸೆ ಹುರಿ ಕಟ್ಟಿದ್ದೇ ಆಗಿದೆ!


ಮಾತೆಯೇ, ಮಕ್ಕಳು ರಾತ್ರಿಯಲ್ಲಿ ಎಚ್ಚತ್ತು ಅಳುತ್ತಿವೆಯೋ?

ಮಗುವನ್ನು ಮೀಯಿಸಿದ ನಂತರ ಇಡೀ ಮೈಗೆ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticur- Talcum Powder) ಸವರಿರಿ. ಆಗ ಮಗುವಿಗೆ ರಾತ್ರಿ ಎಚ್ಚರವಾಗದು—ಅಂದರೆ ನಿಮಗೆ ಕೂಡ ತೊಂದರೆಯಾಗದೆ ನಿದ್ರೆ ಬೀಳುವುದು. ಕುಟಿಕೂರಾ ಟಾಲ್ಕಮಿನ ಗುಣವು ಎಷ್ಟು ವಿಶಿಷ್ಟ ಮತ್ತು ಕ್ರಿಮಿನಾಶಕವೆಂದರೆ, ತುರಿಸುವಿಕೆ ಯ ತುರಿಗಜ್ಜಿಗಳಿಂದ ಮಗುವಿನ ನಿದ್ರೆಯು ಹಾಳಾಗದು. ಇದು ಬೆವರನ್ನು ಹೀರಿಕೊಂಡು ಚರ್ಮಕ್ಕೆ ಆಹ್ಲಾದಕರವಾದ ಸುವಾಸನೆಯನ್ನು ಕೊಡುವುದು. ಎಲಾ ಕಡೆಗಳಲ್ಲಿಯೂ ಡಾಕ್ಟರುಗಳು ಮಕ್ಕಳಿಗೆ ಕುಟಿಕೂರಾ ಟಾಲ್ಕಮನ್ನೇ (Cuticura Talcum) ಶಿಫಾರಸು ಮಾಡುತ್ತಾರೆ. ತುರಿಗಜ್ಜಿ ಮತ್ತು ತುರಿಸುವಿಕೆಯನ್ನು ತಡೆಗಟ್ಟಲು ಇದಕ್ಕೆ ಸಮಾನವಾದುದಿಲ್ಲ.

ಮಕ್ಕಳ ಸ್ನಾನಕ್ಕೆ ಕುಟಿಕೂರಾ ಸಾಬೂನನ್ನು (Cuticura Soap) ಉಪಯೋಗಿಸಿರಿ ಇದು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛವಾಗಿರಿಸುವುದು. ಕುಟಿಕೂರಾ ಮುಲಾಮು (Cuticura Ointment) ಗಾಯಗಳನ್ನೂ ವ್ರಣಗಳನ್ನೂ ಕೂಡಲೇ ಗುಣಪಡಿಸುವುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಮಕ್ಕಳಿಗೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER



ಸಾವಕಾರ ಶ್ರೀನಿವಾಸರಂಗಪ್ಪೈ

[ ಸ್ಥಾಪನೆ: ಕ್ರಿ. ಶ. 1858 ]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.



THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

*Apply for particulars*—

K. R. GURU, *Managing Director*

ಶಿಕ್ಷಣ ವಿಭಾಗ

# ವಾರ್ಧಾ ಶಿಕ್ಷಣ ಕ್ರಮವು ಯಾಕಾಗಬೇಕು?

ಲಂಡನಿನ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಿಂದ ಹೊರಡುತ್ತಿದ್ದ ವಾರ್ಷಿಕ ವರದಿಯು ವಿದ್ಯಾಕ್ಷೇತ್ರದಲ್ಲಿರುವವರೆಲ್ಲರಿಗೆ ಪರಿಚಿತವಾಗಿದೆ. ಇತ್ತೀಚೆಗೆ ಹೊರಟಿರುವ ಅದರ ಕಳೆದ ವರ್ಷದ ವರದಿಯಲ್ಲಿ ಶಿಕ್ಷಣವನ್ನು ಚರ್ಚಿಸಿ ಅದು ಹೆಚ್ಚು ಘಟಗಳನ್ನು ಆ ಶಿಕ್ಷಣಕ್ಕೆ ಕೊಟ್ಟಿರುವದು ಒಂದು ವಿಶೇಷತೆಯಾಗಿದೆ ಇಷ್ಟರ ತನಕ ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಕುಶಲ ಕಲೆಗಳಿಗೆ ಗೌಣ ಸ್ಥಾನವು ಪ್ರಾಪ್ತವಾಗಿತ್ತು. ಈಗ ವಿಶ್ವವಿದ್ಯಾಲಯದ ವರದಿಯಲ್ಲಿಯೂ ವೃತ್ತಿ ಶಿಕ್ಷಣವನ್ನು ಕುರಿತು ಚರ್ಚಿಸುತ್ತಿರುವರಾದರೆ ಶೈಕ್ಷಣಿಕ ಜಗತ್ತಿನಲ್ಲಿ ಎಂಥ ಕ್ರಾಂತಿಯು ಉಂಟಾಗುತ್ತಲಿದೆ ಎಂಬುದನ್ನು ನೋಡಬಹುದು.

ಈ ಕ್ರಾಂತಿಯು ಒಂದು ಕಾರಣವು ವರ್ತಮಾನ ಶಿಕ್ಷಣ ಪದ್ಧತಿಯೇ ಆಗಿದೆ ಎಲ್ಲೆಲ್ಲಿ ಕಡ್ಡಾಯ ಶಿಕ್ಷಣವು ಅನುಸರಣೆಯಲ್ಲಿದೆಯೋ ಅಲ್ಲೆಲ್ಲ ಕಲಿತವರಿಗೆ ಯಾವ ಉದ್ಯೋಗವನ್ನು ಕೊಡುವದೆಂಬ ಪ್ರಶ್ನೆಯು ಶಿಕ್ಷಣ ಶಾಸ್ತ್ರಜ್ಞರನ್ನು ಆಲೋಚನೆಗೆ ಗುರಿ ಮಾಡಿದೆ ಬರೀ ಸಾಹಿತ್ಯ ಶಿಕ್ಷಣವನ್ನು ಪಡೆದಂಥವರು ಕೈಕೆಲಸದ ಉದ್ಯೋಗಕ್ಕೆ ಯೋಗ್ಯರಾಗಿರುವದಿಲ್ಲ ಅದಕ್ಕೋಸ್ಕರ ಅವರಿಗೆ ವೃತ್ತಿ ಶಿಕ್ಷಣವನ್ನು ಕೊಡಲಿಕ್ಕೆ ಅಲ್ಲಲ್ಲಿ ಕೆಲಕೆಲವು ಔದ್ಯೋಗಿಕ ಶಾಲೆಗಳನ್ನು ತೆರೆದದ್ದಾಯಿತು. ಕೆಲವು ಕಡೆಗಳಲ್ಲಿ ಸಾಧಾರಣ ಶಾಲೆಗಳಿಗೆ ವರ್ಕ್ ಶಾಪುಗಳನ್ನು ಜೋಡಿಸಿದ್ದಾಯಿತು ವಿದ್ಯಾಲಯಗಳ ಕಾರ್ಯಕ್ರಮದಲ್ಲಿ ಕೈಕೆಲಸಕ್ಕೊಂದು ಅರ್ಧಘಂಟೆ ಸಮಯವನ್ನು ಮೀಸಲಾಗಿ ಇಟ್ಟದ್ದಾಯಿತು.

ಆದರೆ ಇದೇ ರೀತಿ ಈ ಪ್ರಯೋಗವು ನಡೆದುದಾಗಿದ್ದ ಪಕ್ಷದಲ್ಲಿ ನಿರುದ್ಯೋಗಿಗಳಿಗೆ ಯೋಗ್ಯತೆ ಕೊಟ್ಟು ಉದ್ಯೋಗವನ್ನು ಒದಗಿಸಲಿಕ್ಕೆ ಸಾವಿರಾರು ವರ್ಷಗಳು ಬೇಕಾಗುತಿದ್ದುವು! ಆದರೆ ಜಗತ್ತಿನ ವರ್ತಮಾನ ಪರಿಸ್ಥಿತಿಯು ಔದ್ಯೋಗಿಕ ಶಿಕ್ಷಣಕ್ಕೆ ಒಂದು ಹೊಸ ರೂಪು, ಹೊಸ ಸ್ಥಾನವನ್ನು ತಂದು ಕೊಟ್ಟಿತು ಯುದ್ಧದ ಸಂಭಾವನೆಯು ಯೂರೋಪಿನ ಜನರನ್ನು ಬಹುಕಾಲದಿಂದ ಪೀಡಿಸುತ್ತ ಇತ್ತು ಯುದ್ಧಕಾಲದಲ್ಲಿ ಆದಷ್ಟು ಹೆಚ್ಚು ಜನರು ಯುದ್ಧದಲ್ಲಿ ತೊಡಗಬೇಕಾಗುತ್ತದೆ ಆದರೆ ಅವರು ವೃತ್ತಿ ಶಿಕ್ಷಣವನ್ನು ಪಡೆದವರಾಗಿರುವದಿಲ್ಲವಾದರೆ, ಆ ಕೆಲಸಗಳಿಗೆ ಅಯೋಗ್ಯರಾಗುತ್ತಾರೆ. ಆದ್ದರಿಂದಲೇ ಯೂರೋಪದಲ್ಲಿ ಈ ಕೆಲವು ವರ್ಷಗಳಿಂದ 'ಮಕ್ಕಳಿಗೆ ವೃತ್ತಿ ಶಿಕ್ಷಣ ಕೊಡಿರಿ', ಎಂಬ ಕೂಗು ನಾಲ್ಕು ಕಡೆಗಳಿಂದಲೂ ಪ್ರತಿಧ್ವನಿಸತೊಡಗಿತು.

## ಶಿಕ್ಷಣದಲ್ಲಿ ಕೈಕೆಲಸದ ಪ್ರಾಮುಖ್ಯತೆ

ಇದೀಗ ಆವಶ್ಯಕತೆಯು ಮಾತಾಯಿತು. ಆದರೆ ಸಾಮಾನ್ಯ ಶಿಕ್ಷಣದಲ್ಲಿ ಕೂಡ ಕೈಕೆಲಸಕ್ಕೆ ಪ್ರಾಮುಖ್ಯ ಸ್ಥಾನವಿರುವದನ್ನು ಶಿಕ್ಷಣ ಶಾಸ್ತ್ರಜ್ಞರು ಕಂಡುಕೊಂಡಿದ್ದರು. ಶಿಕ್ಷಣವನ್ನು ಜೀವನದ ದೃಷ್ಟಿಯಿಂದ ನೋಡುವದಾದರೆ, ಈಗಿನ ಶಿಕ್ಷಣ ಪದ್ಧತಿಯಲ್ಲಿ ಮಹತ್ತರ ಪರಿವರ್ತನಗಳಾಗುವದು ಆವಶ್ಯಕವೆಂದೆನಿಸಿತು. ಸಾಮಾಜಿಕ ಮತ್ತು ರಾಷ್ಟ್ರೀಯ ಆವಶ್ಯಕತೆಗಳ ಕಾರಣದಿಂದ ಶಿಕ್ಷಣದಲ್ಲಿ ಕೈಕೆಲಸಗಳ ಪ್ರಾಮುಖ್ಯತೆ ಹೆಚ್ಚಿತು. ನವೀನ ಸಮಾಜದ ಸಂಘಟನೆಗೆ ನವೀನ ಶಿಕ್ಷಣ ಪದ್ಧತಿಯು ಅಗತ್ಯವೆನ್ನಿಸಿತು. ಆದ್ದರಿಂದಲೇ ಶಿಕ್ಷಣದಲ್ಲಿ ಕೈಕೆಲಸಗಳಿಗೆ ಪ್ರಾಮುಖ್ಯತೆ ಕೊಡುವ ಹೊಸ ಕ್ರಮವನ್ನು ಶಿಕ್ಷಣ ಶಾಸ್ತ್ರಿಗಳು ಆನಂದಪೂರ್ವಕ ಸ್ವೀಕರಿಸತೊಡಗಿದರು.

ಎಲ್ಲಾ ಕಾರಣಗಳಿಂದ ಈಗ ವೃತ್ತಿ ಶಿಕ್ಷಣದ ಧ್ಯೇಯದಲ್ಲಿ ಬಹಳ ಮಾರ್ಪಾಟು ಆಗಿದೆ ಯಾವದೊಂದು ವೃತ್ತಿ ಅಥವಾ ಉದ್ಯೋಗವನ್ನು ಕಲಿಸುವದೇ ಈಗ ವೃತ್ತಿ ಶಿಕ್ಷಣದ ಧ್ಯೇಯವಾಗಿರುವದಿಲ್ಲ ವೃತ್ತಿ ಅಥವಾ ಉದ್ಯೋಗವನ್ನು ಕಲಿಸುತ್ತ ಅದರ ಪ್ರತ್ಯಕ್ಷ ಪ್ರಯೋಗಗಳೊಂದಿಗೆ ಶಾಸ್ತ್ರೀಯ ಸಿದ್ಧಾಂತಗಳನ್ನೂ ಕಲಿಸಿ ಮಾನಸಿಕ ಶಿಕ್ಷಣವನ್ನೂ ಅದರ ಮೂಲಕ ಕೊಡುವದು ಈಗ ಅದರ ಧ್ಯೇಯವಾಗಿದೆ

ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಿನ ಜನರು ಕಾರ್ಖಾನೆಗಳಲ್ಲಿ ಕೆಲಸ ಮಾಡಿಕೊಂಡು ಬರುತ್ತಿರುವದಾದರೂ ಕಾರ್ಖಾನೆಗಳ ಕಾರ್ಯನಿರ್ವಾಹಕ್ಕೆ ಜನರನ್ನು ತಯಾರು ಮಾಡುವದು ವೃತ್ತಿ ಶಿಕ್ಷಣದ ಉದ್ದೇಶವಾಗಿರುವದಿಲ್ಲವೆಂಬ ಎಚ್ಚರಿಕೆಯನ್ನು ಅಲ್ಲಿ ಕೊಡಲಾಗಿದೆ ಮನುಷ್ಯನ ಜೀವನದ ನಾಲ್ಕು ಮುಖ್ಯ ವೃತ್ತಿಗಳಾದ ಉದ್ಯೋಗ, ಕುಶಲಕಲೆ, ಕೃಷಿ ಮತ್ತು ಗೃಹಕಾರ್ಯ—ಇವೆಲ್ಲವುಗಳ ಬಗ್ಗೆ ಮನುಷ್ಯನನ್ನು ಯೋಗ್ಯನನ್ನಾಗಿ ಮಾಡುವದೇ ವೃತ್ತಿ ಶಿಕ್ಷಣದ ಉದ್ದೇಶವಾಗಿದೆ

## ಸಮಾಜದ ಮೇಲೆ ಪ್ರಭಾವ

ಇಂತ ವೃತ್ತಿ ಶಿಕ್ಷಣವನ್ನು ಸಾಹಿತ್ಯ ಶಿಕ್ಷಣದ ಒಂದು ಅಂಗವನ್ನಾಗಿ ಕೊಡುವದರಿಂದ ಸಮಾಜದ ಮೇಲೆ ಯಾವ ಪ್ರಭಾವವು ಬೀಳುವದೆಂಬುದನ್ನು ನೋಡೋಣ. ಶಿಕ್ಷಣ ಶಾಸ್ತ್ರಜ್ಞರು ಮಾಡಿದ ಸಂಶೋಧನೆಗಳ ಫಲವನ್ನು ಹೇಳುವದಾದರೆ—ಮೊದಲನೆಯದಾಗಿ, ಕೈಕೆಲಸದ ಮೂಲಕ ಬುದ್ಧಿಯ ವಿಕಾಸವು ಬಹು ಚೆನ್ನಾಗಿ ನಡೆಯುತ್ತದೆ ಒಂದು ಹೊಸ ಸಂಸ್ಕೃತಿ, ಹೊಸ ಸಭ್ಯತೆಯ ಸೃಷ್ಟಿಯಾಗುತ್ತದೆ. ಈ ನವೀನ ಸಭ್ಯತೆಯ ಮೂಲಾಧಾರವು ಸಹಯೋಗದ ಮೇಲೆ ಇರುವದು ಕೈಕೆಲಸದ ಮೂಲಕ ಮಾನಸಿಕ ಶಿಕ್ಷಣವು ದೊರೆಯದ ಕಾರಣದಿಂದಲೇ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಜಗತ್ತಿನಲ್ಲಿ ದೊಡ್ಡ ದೊಡ್ಡ ಯುದ್ಧ ಸಂಘರ್ಷಗಳಾಗುವ ಕಾರಣವಾಯಿತೆಂದು ಶಿಕ್ಷಣ ಶಾಸ್ತ್ರಜ್ಞರು ಹೇಳುತ್ತಾರೆ. ಪ್ರಪಂಚದಲ್ಲಿ ಕೆಲಸಗಾರರಾಗಿರುವವರೆಲ್ಲರೂ ಯುದ್ಧ ವಿರೋಧಿಗಳಾಗಿದ್ದಾರೆ

ಕೈ ಮತ್ತು ಮನಸ್ಸಿಗೆ ಒಂದು ಸಂಬಂಧವನ್ನು ತರುವ ಈ ಶಿಕ್ಷಣಪದ್ಧತಿಯನ್ನು ಯಾವ ಹೆಸರಿನಿಂದ ಕರೆದರೂ ಅದನ್ನು ಪಾಶ್ಚಾತ್ಯ ಶಿಕ್ಷಣಶಾಸ್ತ್ರಜ್ಞರು—ನಿಜವಾದ ಶಿಕ್ಷಣಕ್ರಮವೆಂದು ಒಪ್ಪತೊಡಗಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ ಆದರೆ ೧೪ ವರ್ಷ ಮೀರಿದ ಮಕ್ಕಳಿಗೇ ಈ ಶಿಕ್ಷಣದ ಪ್ರಾಮುಖ್ಯತೆಯನ್ನು ಅವರು ಹೇಳಿರುವರು. ೧೪ ವರ್ಷದೊಳಗಿನ ಮಕ್ಕಳಿಗೆ ಎಂಥ ಶಿಕ್ಷಣ ಬೇಕೆಂಬುದನ್ನು ಪಾಶ್ಚಾತ್ಯರು ಇನ್ನೂ ಕಂಡುಕೊಂಡಿಲ್ಲ ಚಿಕ್ಕ ಮಕ್ಕಳಿಗೆ ಆಟದ ರೀತಿಯಲ್ಲಿ ಅವರು ಕೈಕೆಲಸವನ್ನು ಕಲಿಸುತ್ತಾರೆ ಆದರೆ ದೊಡ್ಡ ಮಕ್ಕಳಾದರೇನು, ಸಣ್ಣ ಮಕ್ಕಳಾದರೇನು ಎಲ್ಲರಿಗೆ ಕೈಕೆಲಸದ ಮೂಲಕವೇ ಶಿಕ್ಷಣ ದೊರೆಯಬೇಕೆನ್ನುವ ಮಾತು ಹಿಂದುಸ್ಥಾನದಲ್ಲಿ ಕೇಳಿಬರತೊಡಗಿದೆ ಚಿಕ್ಕ ಮಕ್ಕಳಿಗೂ ಕೈಕೆಲಸವೇ ಶಿಕ್ಷಣದ ನಿಜ ಸಾಧನವಾಗಬಲ್ಲದೆಂಬುದನ್ನು ವಾರ್ಧಾ ಪದ್ಧತಿಯು ಹೇಳುತ್ತದೆ ಈ ಪದ್ಧತಿಯ ಹೇಳುತ್ತದೆ ಈ ಪದ್ಧತಿಯು ಪ್ರಯೋಗಗಳೂ ಅಲ್ಲಲ್ಲಿ ಆಗಿವೆ ಸಫಲತೆಯೂ ದೊರೆತಿದೆ

ಹಿಂದುಸ್ಥಾನದಲ್ಲಿ ೭ರಿಂದ ೧೪ರೊಳಗಿನ ಮಕ್ಕಳಿಗೂ ಯೂರೋಪದಲ್ಲಿ ೧೪ರಿಂದ ಮೇಲ್ಪಟ್ಟ ಮಕ್ಕಳಿಗೂ ಕೈಕೆಲಸಗಳ ಮೂಲಕ ಶಿಕ್ಷಣವು ದೊರೆಯಲಾರಂಭವಾಗಿದೆ. ಜಗತ್ತಿನಲ್ಲಿ ಯುದ್ಧ ಸಂಘರ್ಷಗಳ ಆತಂಕವು ನಷ್ಟವಾಗಿ ಒಂದು ಹೊಸ ಸಮಾಜ ಒಂದು ಹೊಸ ಸಂಸ್ಕೃತಿಯ ರಚನೆಯಾಗುವ ಸಂದರ್ಭವು ಒದಗಿ ಬಂದಾಗ, ಈ ಎರಡು ಹೊಸ ಪ್ರಯೋಗಗಳ ಪರಿಣಾಮವು ಸ್ಪಷ್ಟವಾಗುವದು. ಆಗಲೀ ನಾವು ಭವಿಷ್ಯ ಜನಾಂಗಕ್ಕಾಗಿ ಕೈ, ಮನಸ್ಸು ಮತ್ತು ಹೃದಯದ ಶಿಕ್ಷಣವನ್ನು ಕೊಡುವ, ಶಿಕ್ಷಣದೊಂದಿಗೆ ಮನುಷ್ಯ ಜೀವನದ ಪ್ರಕೃತಿಗಳ ಸರಿಯಾದ ಸಹಯೋಗವಿರುವ, ಸ್ನೇಹ ಮತ್ತು ಪರಸ್ಪರ ಸಹಾನುಭೂತಿಯ ಅಡಿಕಟ್ಟಿನ ಮೇಲೆ ಒಂದು ಹೊಸ ಸಮಾಜವನ್ನು ರಚಿಸಲಿಕ್ಕಾಗುವ ಒಂದು ಹೊಸ ಮತ್ತು ಪೂರ್ಣ ಶಿಕ್ಷಣ ಪದ್ಧತಿಯ ಯೋಜನೆಯನ್ನು ತಯಾರಿಸಲು ಸಮರ್ಥರಾಗುವೆವು ಈ ಹೊಸ ಯೋಜನೆಯಂತೆ ಕೊಡಲಾದ ಶಿಕ್ಷಣದ ಪರಿಣಾಮವಾಗಿ ಸಮಾಜದಲ್ಲಿ ವಿರೋಧವಾಗಲೀ ಆರ್ಥಿಕ ದೂಷಣೆಯಾಗಲೀ ಇರಲಾರದ, ಭವಿಷ್ಯದಲ್ಲಿ ಯುದ್ಧದ ಸಂಭವವು ಇರಲಾರದು.

— [illegible]

## ಹುಷಾರ್

ಮೋಟಾರನ್ನು ನಡೆಸುವುದಕ್ಕೆ ಎಷ್ಟೋ ಹುಷಾರಿರಬೇಕು ಸಮಯಕ್ಕೆ ಅನುಗುಣವಾಗಿ ಕಾರನ್ನು ಕ್ಷಣ ಮಾತ್ರದಲ್ಲಿ ಪಕ್ಕಕ್ಕೆ ತಿರುಗಿಸಿ ನಡೆಸುವಂಥ ನರಗಳ ಪಟುತ್ವವೂ, ಬಿಗಿಯಾದ ಜಂಘಪುಷ್ಟಿಯೂ ತೀಕ್ಷ್ಣವಾದ ದೃಷ್ಟಿಪಾಟವವೂ ಒಂದು ಕ್ಷಣ ಮಾತ್ರದಲ್ಲಿ ಯೋಚನೆ ಮಾಡಿ ನಿರ್ಧರಿಸುವಂಥ ಚುರುಕಾದ ಮೆದುಳು ಆವಶ್ಯಕವಾಗಿ ಬೇಕು ಇವೆಲ್ಲವೂ ಒಂದು ಮೋಟಾರನ್ನು ನಡೆಸುವುದಕ್ಕೆ ಮಾತ್ರವೇ ಅಲ್ಲದೆ ಆನಂದಮಯವಾದ ಜೀವಯಾತ್ರೆಯನ್ನು ನಡೆಸುವುದಕ್ಕೂ ಅವಶ್ಯಕವೆ ಭಾರತದಲ್ಲೆಲ್ಲಾ ಅತ್ಯುತ್ತಮವಾದ ಟಾನಿಕ್ಕೆಂದು ಪ್ರಸಿದ್ಧಿ ಹೊಂದಿರುವ

## ಜೀವಾಮೃತ

ಸ್ತ್ರೀ ಪುರುಷರೆಲ್ಲರಿಗೂ ಈ ಮಹತ್ತರವಾದ ಶಕ್ತಿಯನ್ನೂ, ದೇಹಾರೋಗ್ಯವನ್ನೂ ಉಂಟು ಮಾಡುವುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ದೊರೆಯುವುದು.

ತಯಾರಿಸುವವರು

**ಆಯುರ್ವೇದಾಶ್ರಮಂ ಮದ್ರಾಸು**

ಸ್ಥಳೀಯ ಏಜಂಟರು:

**ಪೊಪ್ಯುಲರ್ ಸ್ಟೋರ್ಸ್**

ರಥಬೀದಿ – ಮಂಗಳೂರು.



**The Auttur & Jawahar Bank, Limited.**

**ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು**

ಹೆಡ್ ಆಫೀಸು, ಕೆನರಾ ಹೈಸ್ಕೂಲ್ ರೋಡು    ಬ್ರೆಂಚ್ ಸೆಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ 1,00,000.    ತೆರಲ್ಪಟ್ಟ ಮೂಲಧನ ರೂ ೨0,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು    ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½%    ನಿರಖು ಠೇವಣಾತಿ 12 ತಿಂಗಳಿಗೆ 4½%

„ 6 ತಿಂಗಳಿಗೆ 4%    „ 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್



ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ-ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್ (ರಿಜಿ).**

**ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.**



# ನೋಟಗಳು

"ನಾಲ್ಕೂರ ಐವತ್ತು ಮಿಲಿಯ ವೀರ ...ನೀಯರು ದೇಶದ ಸ್ವಾತಂತ್ರ್ಯಕ್ಕಾಗಿ ...ದಾಡುತಿದ್ದಾರೆ, 'ನಮ್ಮ ರಾಷ್ಟ್ರದ ಸ್ವಾ...ತ್ರ್ಯವನ್ನು ಅಪಹರಿಸುವುದು ಯಾ...ಗೂ ಸಾಧ್ಯವಿಲ್ಲ''ವೆಂದು ಚೈನಾದಳ...ತಿ ಮಾರ್ಶಲ್ ಚಿಯಾಂಗ್ ಕೈಶೇಕರು ...ದ್ಘೋಷಿಸಿದರು!

◆

...ಕ್ವಾಂಗ್ಸಿ, ನಾನ್ಕಿಂಗ್ ಮೊದಲಾದ ಕ...ಗಳಲ್ಲಿ ಜಪಾನೀಯರು 'ಬಂದ ದಾರಿಗೆ ...ಂಕವಿಲ್ಲದೆ' ಹಿಂದೆರಳುತ್ತಿರುವರೆಂದೂ ...ದು ಬಂದಿದೆ.

◆

ಜಪಾನ್ ಸರಕಾರದ ತಾಳಕ್ಕೆ ಸರಿ...ಗಿ ಕುಣಿಯುವ ವಿದ್ರೋಹೀ ವಾಂಗ್ ...ಂಗ್ ವೀಯನ್ನು ಇಂದು ಸ್ವಾತಂತ್ರ್ಯ...ಮಾನಿಗಳಾದ ಚೀನೀಯರೆಲ್ಲಾ ತೀವ್ರ...ಗಿ ಜರೆದಾಡುತ್ತಿದ್ದಾರೆ

◆

ಕೈದೇ ಅಜಾಮರಾದ ಜಿನ್ನರ ಘೋರ ...ಯನ್ನು ತಾನು ಅನುಸರಿಸಲಾರೆನೆಂದು ...ಮುಸ್ಲಿಂ ಲೀಗಿನ ತನ್ನ ಸದಸ್ಯತನಕ್ಕೆ ...ಜಿನಾಮೆಯಿತ್ತಿರುವರು!' ...ಮುಬಯಿಯ ಮುಸ್ಲಿಂ ಮುಖಂಡ...ರಾದ ಸರ್ ಸಲೆಮಾನ್ ಮಿತಾರುರವರು ...ರಾಜಿನಾಮೆಯಿತ್ತಿರುವರು!'

◆

ಮೌಲಾನಾ ಅಜಾದರನ್ನು ಕಾಂಗ್ರೆಸ್ ...ಧ್ಯಕ್ಷ ಪೀಠಕ್ಕೆ ಏರಿಸಿದುದರಿಂದ ಮು...ಂ ಜನತೆಗೆ ಬಹಳ ಉಪಕಾರವಾಗ...ದೆಎಂದು ಅಭಿಪ್ರಾಯಪಟ್ಟರು ಮುಸ್ಲಿಂ ...ಲೀಗಿನ ಸ್ಥಾಪಕರಲ್ಲೊಬ್ಬರಾದ ಸರ್ ...ಉದ್ದೀನರು!

◆

...ಮುಂದಿನ ರಾಷ್ಟ್ರಪತಿ ಮೌಲಾನಾ ಅಜಾ...ದರನ್ನು ಭೋಜನ ಕೂಟಕ್ಕೆ ಆಮಂತ್ರಿಸಿದ ...ಪಂಜಾಬಿನ ಪ್ರಧಾನ ಸರ್ ಸಿಕಂದರರು ...ಎರಡು ತಾಸುಗಳ ತನಕ ಅವರೊಡನೆ ದೀ...ರ್ಘ ಸಂಭಾಷಣೆ ನಡೆಸಿದರು!

◆

ಕಾಂಗ್ರೆಸು ಸ್ವಾತಂತ್ರ್ಯ ಪ್ರೇಮಿಗಳಿಗೆ ಮುಕ್ತದ್ವಾರವಾಗಿದೆ! ಮುಸ್ಲಿಮರು ...ಹು ಸಂಖ್ಯೆಯಿಂದ ಸೇರಿ ಆಂದೋಲನ...ವನ್ನು ತೀವ್ರಗೊಳಿಸಬೇಕೆಂದು ಪ್ರಕಟಿ...ಸುತ್ತಾರೆ, ಮುಂದಿನ ರಾಷ್ಟ್ರಪತಿ ಮೌ...ಲಾನಾ ಅಜಾದರು!

◆

ರಾಮಘಡದಲ್ಲಿ ಆಂದೋಲನವನ್ನು ಹೂಡುವ ನಿರ್ಣಯವಾಗುವುದು; ಸ...ರ್ವರೂ ಸಿದ್ಧರಾಗಿರಬೇಕೆಂಬುದು ಅ...ಜಾದರ ಇಂದಿನ ಸಂದೇಶ!

◆

ಹಿಂದೂ ಮುಸ್ಲಿಮರು ಭುಜಕ್ಕೆ ಭುಜ ಕೊಟ್ಟು ಒಂದಾಗಿ ಹೋರಾಡಿ ಈ ಸಲದ ಸ್ವಾತಂತ್ರ್ಯ ಆಂದೋಲನವನ್ನು ಸಂಪೂರ್ಣ ಯಶಸ್ವಿ ಮಾಡಬೇಕಾಗಿ ರಾಷ್ಟ್ರದ ಧುರೀಣರೆಲ್ಲರ ಹಾರೈಕೆ!

◆

ಸ್ವಾತಂತ್ರ್ಯ ಪ್ರಾಪ್ತಿಗಾಗಿ, ಹೀಗೆ ಕಾಂಗ್ರೆಸು, ಮೌಲಾನಾ ಅಜಾದರ ಮುಂದಾಳುತನದಿಂದ ಮುಂದುವರಿಯುವ ಯತ್ನಗಳನ್ನು ಮಾಡುತ್ತಿದೆ

◆

ಮುಸ್ಲಿಮರ ಒಬ್ಬನೇ ಒಬ್ಬ ಧುರೀಣ' ನೆಂದೆನ್ನುವ ಕೈದೇ ಅಜಾಮರಾದ ಜಿನ್ನರು ಈ ಸಿದ್ಧತೆಗಳನ್ನು ನೋಡಿ ಹಲ್ಲು ಕಚ್ಚುತ್ತಿರಬಹುದು!

◆

ಕಾಂಗ್ರೆಸು ಧ್ವಜದ ನೆರಳಲ್ಲಿ ಭಾರತೀಯರು ಜಾತೀಯತೆಯ ಸಂಕೋಚವನ್ನು ಮರೆತು ಸೌಹಾರ್ದದಿಂದ ನೆರೆಯುತ್ತಿರುವುದನ್ನು ನೋಡಿ ಕೈದೇ ಅಜಾಮರು ನಿಜವಾಗಿಯೂ ತಾಳ್ಮೆಗೆಟ್ಟಿರಬಹುದು!

◆

ಒಬ್ಬರೇ ಒಬ್ಬ ಧುರೀಣರಾದ ಕೈದೇ ಅಜಾಮರಿಗೆ 'ಒಬ್ಬನೇ ಒಬ್ಬ' ಅನುಯಾಯಿಯಾದರೂ ಸಿಕ್ಕಿದರೆ ಸಾಕೆಂದು ಅವರು ಇಷ್ಟರಲ್ಲಿಯೇ ಸಮಾಧಾನಮಾಡಿಕೊಂಡಿರಬಹುದು.

◆

ಅಲ್ಪ ಸಂಖ್ಯಾಕರಿಗೆ ಎಷ್ಟು ಅಲ್ಪತನ ಬಂದರೂ ಅದರಿಂದ ಅವರಿಗೆ ಖಂಡಿತ ಬೇಸರ ಹುಟ್ಟಲಿಕ್ಕಿಲ್ಲ!

◆

ಈ ಸಲದ ಅಧ್ಯಕ್ಷಪೀಠಕ್ಕೆ ಕಾಮ್ರೇಡ್ ಎಂ ಎನ್ ರಾಯಿಗಳೂ ಒಬ್ಬ ಉಮೇದ್ವಾರರಾಗಿದ್ದರು!

◆

ಗಾಂಧಿಜಿಯವರ ಮುಂದಾಳುತನವನ್ನು ಕಿತ್ತೊಗೆದು, ಬೇರೆ ಧುರೀಣತೆಯನ್ನು ಸ್ಥಾಪಿಸಬೇಕೆನ್ನುವ ತತ್ವದವರು ಕಾಮ್ರೇಡ್ ರಾಯಿಗಳು!

◆

ಎಡಪಕ್ಷದವರ ಅಖಂಡ ಬೆಂಬಲವು ತನಗಿದೆಯೆಂದು ಅವರ ದೃಢವಿಶ್ವಾಸವಾಗಿತ್ತು!

◆

ಆದರೆ, ಸೋಶಿಯಲಿಸ್ಟರು, ಅಜಾದರಿಗೆ ವೋಟು ಕೊಡುವುದಾಗಿ ನಿರ್ಣಯ ಮಾಡಬೇಕೆ?

◆

'ಫೋರ್ವರ್ಡ್ ಬ್ಲಾಕಿ'ನವರು ತಟಸ್ಥರಾಗಿರುವೆವಾಗಿ ಸಾರಬೇಕೆ?

◆

ಆಗ ಎಡಪಕ್ಷದ ಮುಖಂಡರಿಗೆ ಬೆನ್ನು ಹುರಿ ನೆಟ್ಟಗಿಲ್ಲವೆಂದು ಕಾಮ್ರೇಡ್ ರಾಯಿಗಳು ಸಿಡಿಮಿಡಿಗೊಂಡರು!

◆

ಆದರೂ, ಉಮೇದ್ವಾರಿಕೆಯನ್ನು ಹಿಂದೆಗೆಯದೆ 'ತತ್ವ'ಕ್ಕಾಗಿ ಸ್ಪರ್ಧಿಸಿದರು ಕಾಮ್ರೇಡರು.

◆

ತತ್ವಕ್ಕಾಗಿಯೇ ಅವರಿಗೆ ಶೋಚನೀಯವಾದ ರೀತಿಯಲ್ಲಿ ಅಪಜಯವೂ ಬಂದೊದಗಿತು.

◆

...ನಿಲ್ಲವಾದರೂ ಕಾಂಗ್ರೆಸು ಕೇವಲ ಹಿಂದೂ ಸಂಸ್ಥೆಯಲ್ಲವೆಂಬುದನ್ನು ಕಾಮ್ರೇಡ್ ರಾಯ್‌ಗಳ ಸ್ಪರ್ಧೆಯು ಸ್ಪಷ್ಟಪಡಿಸಿತು!

◆

ಹಿಂದೂ ಉಮೇದ್ವಾರನನ್ನು ಬಿಟ್ಟು, ಮೌಲಾನಾ ಅಜಾದರನ್ನು ಪ್ರಚಂಡ ಬಹುಮತದಿಂದ ಆರಿಸಿದ ವಿಷಯದಲ್ಲಿ ಕೈದೇಅಜಾಮರ ಅಭಿಪ್ರಾಯವೇನಂತೆ!

## ಪ್ರಕಟಣೆ

**ಕಾರ್ಕಳ ಡಿ ಮು ಕೋರ್ಟಿನಲ್ಲಿ**

ಕ್ರಮ ನಂಬ್ರ 374/37

R E P No 27/1940

ದೇವಾಜ ಸೆಟ್ಟಿ ವಾದಿ ನೊಕ್ಕಾಡು ಅಜಿ ದಾರ

ಮತ್ತು

ಶಾಂತಿರಾಜ ಸೆಟ್ಟಿ ಕೂಡ 2 ಜನರು—ಎದ್ರಿಯು

ಇವರೊಳಗೆ

ಕಾರ್ಕಳ ತಾಲೂಕು ಕಲ್ಲಬೆಟ್ಟು ಗ್ರಾಮದಲ್ಲಿರುವ ಗುಣಾವತಿ ಸೆಟ್ತಿ ಮಗ 1ನೇ ಎದ್ರಿ ಶಾಂತಿರಾಜ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ಸದ್ರಿ ವ್ಯವಹರಣೆಯಲ್ಲಿ 1ನೇ ಎದ್ರಿಯ ಹಕ್ಕಿನ ಸ್ಥಿರಾಸ್ತಿಯನ್ನು ಏಲಂಮಿನ ಬಗ್ಗೆ ಏಲಂ ಇಸ್ತಿಹಾರು ಹಾಜರುಮಾಡಿರುವದರಿಂದ ಮತ್ತು ಸದ್ರಿ ಆಸ್ತಿ ಏಲಂ ಸಮಯ Bid and Set off ಪರ್ಮಿಶನ್ ಕೇಳಿ ಅರ್ಜಿದಾಖಲು ಮಾಡಿರುವುದರಿಂದ ಸಹಾ ಇವುಗಳ ಉಚಿತ ಆಕ್ಷೇಪಗಳು ಇರುವುವಾದರೆ ತಾ. 6-3-40ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟ ಮುಂದೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ತ್ವಾಕೀದು ಮಾಡಿಕೊಳ್ಳದೆ ಇದ್ದಲ್ಲಿ ಸದ್ರಿ ವ್ಯವಹರಣೆಯು 1ನೇ ಎದ್ರಿಯಿಂದ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕೋರ್ಟು ಹುಕುಂ ಪ್ರಕಾರ

ಮೊಕ್ಕಾಂ, ಕಾರ್ಕಳ 18-2-1940 } ಎಂ. ಎಸ್ ಅಧಿಕಾರಿ ಅರ್ಜಿದಾರನಕಡೆ ವಕೀಲ


## ಹೊಟ್ಟೆಬೇನೆಯು ಕೂಡಲೇ ಮಾಯವಾಯಿತು!

**ವಾರಕಾಲ ಸೋಡಾ ಮತ್ತು ಹಾಲನ್ನು ಸೇವಿಸಿದೆನು.**

ಅಸೌಖ್ಯತೆ ಯಾ ಅರೆ ಉಪವಾಸ ಇವುಗಳಲ್ಲಿ ಯಾವುದನ್ನಾದರೂ ನೀವು ಇಷ್ಟರ ತನಕ ಅನುಭವಿಸಿದ್ದುದಿದೆಯೇ? ವಾರವಾರಗಳಿಂದ ಬೇಕಾದಷ್ಟು ಆಹಾರ ತಿನ್ನದೆ ಪಥ್ಯದಿಂದಿರುವುದೆಂದರೆ ಎಂತಹ ಬೇಜಾರ ಅಸೌಖ್ಯತೆಯು ಥಟ್ಟನೇ ಮಾಯವಾಗಿ ಸುಖಸಂತೋಷದಿಂದ ಉತ್ತಮ ಭೋಜನವನ್ನು ಉಣ್ಣುವುದೆಂದರೆ ಎಷ್ಟು ಆನಂದ

ಈ ಮೇಲೆ ಬರೆದ ಸಂಗತಿಯು ಮಿ. ಆರ್ ಜೆ.ಯವರ ಅನುಭವವಾಗಿರುತ್ತದೆ. ಅವರು ಬರೆಯುತ್ತಾ 'ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರು ಎಂತಹ ಆಶ್ಚರ್ಯಕರ ಔಷಧಿಯೆಂದು ತಿಳಿಸುವುದು ನನ್ನ ಮುಖ್ಯ ಕರ್ತವ್ಯ ನಾನು 12 ತಿಂಗಳುಗಳ ಹಿಂದೆ ಹೊಟ್ಟೆನೋವಿನಿಂದ ನರಳುತಿದ್ದೆನು. ಹಲವು ವಾರಗಳ ತನಕ ಸೋಡಾ ಮತ್ತು ಹಾಲನ್ನು ಸೇವಿಸುತ್ತಿದ್ದೆನು ಇದರಿಂದಾಗಿ ನಾನು ಬಹಳ ಕೃಶನಾಗಿ ಅಶಕ್ತನಾದೆನು ಕಳೆದ ಒಂದು ವಾರದಿಂದ ನಿಮ್ಮ ಪೌಡರನ್ನು ಸೇವಿಸುವ ವರೆಗ ನನಗೆ ಯಾವ ಸುಖವೂ ಮಾರ್ಪಾಟು ಆಗಲಿಲ್ಲ ಆದರೆ ಪೌಡರನ್ನು ಸೇವಿಸಿದಂದಿನಿಂದ ಅದು ನನ್ನನ್ನು ಗುಣಪಡಿಸಿರುವುದು '

ಉದರವೇದನೆಯು ಆಗಾಗ ನಿಮ್ಮನ್ನು ಬಾಧಿಸುತ್ತಿರುವುದೇ? ಆಗಾಗ ಅಸೌಖ್ಯತೆ, ಅಜೀರ್ಣಗಳಿಂದ ನೀವು ನರಳುತ್ತಿರುವಿರ? ಹಾಗಾದರೆ ಕೂಡಲೇ ಸಾವಿರಾರು ಜನರಿಗೆ ಗುಣವನ್ನುಂಟುಮಾಡಿದ ಈ ಪೌಡರಿನಿಂದ ನಿಮ್ಮ ಹೊಟ್ಟೆಯ ಚಿಕಿತ್ಸೆ ನಡೆಸಿರಿ ಒಂದು ಏಟ್ಲಿ ಮೆಕ್ಲೀನ ಬ್ರಾಂಡ್ ಸ್ಟೋಮಕ್ ಪೌಡರನ್ನು ಕೊಂಡು ಕೊಳ್ಳಿರಿ ಬಾಟ್ಲಿಯ ಮೇಲೆ

ಎಂಬ ದಸ್ಕತೂ, ಪೆಟ್ಟಿಗೆಯ ಮೇಲೆ ದಸ್ಕತೂ ಕೆಂಪು ಸೀಲೂ ಇದ್ದರೆ ಮಾತ್ರ ಅದು ಖಾತ್ರಿಯಾದುದು ಚಿಲ್ಲರೆ ಮಾರಲ್ಪಡುವುದಿಲ್ಲ ಪೆಟ್ಟಿಗೆಗಳಲ್ಲಿರುವ ಬಾಟ್ಲಿಗಳಲ್ಲಿ (ಹುಡಿ ಯಾ ಮಾತ್ರೆ) ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

K S. 710



ಶಿಕ್ಷಣ ವಿಭಾಗ:

# ಯಥಾರ್ಥ ಶಿಕ್ಷಣ ಕ್ರಮವು ಯಾಕಾಗಬೇಕು?

ಲಂಡನಿನ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಿಂದ ಹೊರಡುವ ವಾರ್ಷಿಕವರದಿಯು ವಿದ್ಯಾಕ್ಷೇತ್ರದಲ್ಲಿರುವವರೆಲ್ಲರಿಗೆ ಪರಿಚಿತವಾಗಿದೆ. ಇತ್ತೀಚೆಗೆ ಹೊರಟಿರುವ ಅದರ ಕಳೆದ ವರ್ಷದ ವರದಿಯಲ್ಲಿ ಶಿಕ್ಷಣವನ್ನು ಚರ್ಚಿಸಿ ಅದು ಹೆಚ್ಚು ಘಟಗಳನ್ನು ಆ ಶಿಕ್ಷಣಕ್ಕೆ ಕೊಟ್ಟಿರುವದು ಒಂದು ವಿಶೇಷತೆಯಾಗಿದೆ ಇಷ್ಟರ ತನಕ ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಕುಶಲ ಕಲೆಗಳಿಗೆ ಗೌಣ ಸ್ಥಾನವು ಪ್ರಾಪ್ತವಾಗಿತ್ತು. ಈಗ ವಿಶ್ವವಿದ್ಯಾಲಯದ ವರದಿಯಲ್ಲಿಯೂ ವೃತ್ತಿ ಶಿಕ್ಷಣವನ್ನು ಕುರಿತು ಚರ್ಚಿಸುತ್ತಿರುವರಾದರೆ ಶೈಕ್ಷಣಿಕ ಜಗತ್ತಿನಲ್ಲಿ ಎಂಥ ಕ್ರಾಂತಿಯು ಉಂಟಾಗುತ್ತಲಿದೆ ಎಂಬುದನ್ನು ನೋಡಬಹುದು.

ಈ ಕ್ರಾಂತಿಯ ಒಂದು ಕಾರಣವು ವರ್ತಮಾನ ಶಿಕ್ಷಣ ಪದ್ಧತಿಯೇ ಆಗಿದೆ ಎಲ್ಲೆಲ್ಲಿ ಕಡ್ಡಾಯ ಶಿಕ್ಷಣವು ಅನುಸರಣೆಯಲ್ಲಿದೆಯೋ ಅಲ್ಲೆಲ್ಲ ಕಲಿತವರಿಗೆ ಯಾವ ಉದ್ಯೋಗವನ್ನು ಕೊಡುವದೆಂಬ ಪ್ರಶ್ನೆಯು ಶಿಕ್ಷಣ ಶಾಸ್ತ್ರಜ್ಞರನ್ನು ಆಲೋಚನೆಗೆ ಗುರಿ ಮಾಡಿದೆ. ಬರೇ ಸಾಹಿತ್ಯ ಶಿಕ್ಷಣವನ್ನು ಪಡೆದಂಥವರು ಕೈಕೆಲಸದ ಉದ್ಯೋಗಕ್ಕೆ ಯೋಗ್ಯರಾಗಿರುವದಿಲ್ಲ ಅದಕ್ಕೋಸ್ಕರ ಅವರಿಗೆ ವೃತ್ತಿ ಶಿಕ್ಷಣವನ್ನು ಕೊಡಲಿಕ್ಕೆ ಅಲ್ಲಲ್ಲಿ ಕೆಲಕೆಲವು ಔದ್ಯೋಗಿಕ ಶಾಲೆಗಳನ್ನು ತೆರೆದದ್ದಾಯಿತು. ಕೆಲವು ಕಡೆಗಳಲ್ಲಿ ಸಾಧಾರಣ ಶಾಲೆಗಳಿಗೆ ವರ್ಕ್ ಶಾಪುಗಳನ್ನು ಜೋಡಿಸಿದ್ದಾಯಿತು ವಿದ್ಯಾಲಯಗಳ ಕಾರ್ಯಕ್ರಮದಲ್ಲಿ ಕೈಕೆಲಸಕ್ಕೊಂದು ಅರ್ಧಘಂಟೆ ಸಮಯವನ್ನು ಮೀಸಲಾಗಿ ಇಟ್ಟದ್ದಾಯಿತು.

ಆದರೆ ಇದೇ ರೀತಿ ಈ ಪ್ರಯೋಗವು ನಡೆದುದಾಗಿದ್ದ ಪಕ್ಷದಲ್ಲಿ ನಿರುದ್ಯೋಗಿಗಳಿಗೆ ಯೋಗ್ಯತೆ ಕೊಟ್ಟು ಉದ್ಯೋಗವನ್ನು ಒದಗಿಸಲಿಕ್ಕೆ ಸಾವಿರಾರು ವರ್ಷಗಳು ಬೇಕಾಗುತ್ತಿದ್ದುವು! ಆದರೆ ಜಗತ್ತಿನ ವರ್ತಮಾನ ಪರಿಸ್ಥಿತಿಯು ಔದ್ಯೋಗಿಕ ಶಿಕ್ಷಣಕ್ಕೆ ಒಂದು ಹೊಸ ರೂಪು, ಹೊಸ ಸ್ಥಾನವನ್ನು ತಂದು ಕೊಟ್ಟಿತು. ಯುದ್ಧದ ಸಂಭಾವನೆಯು ಯೂರೋಪಿನ ಜನರನ್ನು ಬಹುಕಾಲದಿಂದ ಪೀಡಿಸುತ್ತ ಇತ್ತು. ಯುದ್ಧಕಾಲದಲ್ಲಿ ಅದಷ್ಟು ಹೆಚ್ಚು ಜನರು ಯುದ್ಧದಲ್ಲಿ ತೊಡಗಿರಬೇಕಾಗುತ್ತದೆ ಆದರೆ ಅವರು ವೃತ್ತಿ ಶಿಕ್ಷಣವನ್ನು ಪಡೆದವರಾಗಿರುವದಿಲ್ಲವಾದರೆ, ಆ ಕೆಲಸಗಳಿಗೆ ಅಯೋಗ್ಯರಾಗುತ್ತಾರೆ. ಅದ್ದರಿಂದಲೇ ಯೂರೋಪದಲ್ಲಿ ಈ ಕೆಲವು ವರ್ಷಗಳಿಂದ 'ಮಕ್ಕಳಿಗೆ ವೃತ್ತಿ ಶಿಕ್ಷಣ ಕೊಡಿರಿ' ಎಂಬ ಕೂಗು ನಾಲ್ಕು ಕಡೆಗಳಿಂದಲೂ ಪ್ರತಿಧ್ವನಿಸತೊಡಗಿತು.

## ಶಿಕ್ಷಣದಲ್ಲಿ ಕೈಕೆಲಸದ ಪ್ರಾಮುಖ್ಯತೆ

ಇದೀಗ ಅವಶ್ಯಕತೆಯ ಮಾತಾಯಿತು. ಆದರೆ ಸಾಮಾನ್ಯ ಶಿಕ್ಷಣದಲ್ಲಿ ಕೂಡ ಕೈಕೆಲಸಕ್ಕೆ ಪ್ರಾಮುಖ್ಯ ಸ್ಥಾನವಿರುವದನ್ನು ಶಿಕ್ಷಣ ಶಾಸ್ತ್ರಜ್ಞರು ಕಂಡುಕೊಂಡಿದ್ದರು. ಶಿಕ್ಷಣವನ್ನು ಜೀವನದ ದೃಷ್ಟಿಯಿಂದ ನೋಡುವದಾದರೆ, ಈಗಿನ ಶಿಕ್ಷಣ ಪದ್ಧತಿಯಲ್ಲಿ ಮಹತ್ತರ ಪರಿವರ್ತನಗಳಾಗುವದು ಅವಶ್ಯಕವೆಂದೆನಿಸಿತು. ಸಾಮಾಜಿಕ ಮತ್ತು ರಾಷ್ಟ್ರೀಯ ಅವಶ್ಯಕತೆಗಳ ಕಾರಣದಿಂದ ಶಿಕ್ಷಣದಲ್ಲಿ ಕೈಕೆಲಸಗಳ ಪ್ರಾಮುಖ್ಯತೆ ಹೆಚ್ಚಿತು ನವೀನ ಸಮಾಜದ ಸಂಘಟನೆಗೆ ನವೀನ ಶಿಕ್ಷಣ ಪದ್ಧತಿಯ ಅಗತ್ಯವೆನ್ನಿಸಿತು. ಅದ್ದರಿಂದಲೇ ಶಿಕ್ಷಣದಲ್ಲಿ ಕೈಕೆಲಸಗಳಿಗೆ ಪ್ರಾಮುಖ್ಯತೆ ಕೊಡುವ ಹೊಸ ಕ್ರಮವನ್ನು ಶಿಕ್ಷಣ ಶಾಸ್ತ್ರಿಗಳು ಆನಂದಪೂರ್ವಕ ಸ್ವೀಕರಿಸತೊಡಗಿದರು

ಎಲ್ಲಾ ಕಾರಣಗಳಿಂದ ಈಗ ವೃತ್ತಿ ಶಿಕ್ಷಣದ ಧ್ಯೇಯದಲ್ಲಿ ಬಹಳ ಮಾರ್ಪಾಟು ಆಗಿದೆ ಯಾವದೊಂದು ವೃತ್ತಿ ಅಥವಾ ಉದ್ಯೋಗವನ್ನು ಕಲಿಸುವದೇ ಈಗ ವೃತ್ತಿ ಶಿಕ್ಷಣದ ಧ್ಯೇಯವಾಗಿರುವದಿಲ್ಲ. ವೃತ್ತಿ ಅಥವಾ ಉದ್ಯೋಗವನ್ನು ಕಲಿಸುತ್ತ ಅದರ ಪ್ರತ್ಯಕ್ಷ ಪ್ರಯೋಗಗಳೊಂದಿಗೆ ಶಾಸ್ತ್ರೀಯ ಸಿದ್ಧಾಂತಗಳನ್ನೂ ಕಲಿಸಿ ಮಾನಸಿಕ ಶಿಕ್ಷಣವನ್ನೂ ಅದರ ಮೂಲಕ ಕೊಡುವದು ಈಗ ಅದರ ಧ್ಯೇಯವಾಗಿದೆ

ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಿನ ಜನರು ಕಾರ್ಖಾನೆಗಳಲ್ಲಿ ಕೆಲಸ ಮಾಡಿಕೊಂಡು ಬರುತ್ತಿರುವದಾದರೂ, ಕಾರ್ಖಾನೆಗಳ ಕಾರ್ಯನಿರ್ವಾಹಕ್ಕೆ ಜನರನ್ನು ತಯಾರು ಮಾಡುವದು ವೃತ್ತಿ ಶಿಕ್ಷಣದ ಉದ್ದೇಶವಾಗಿರುವದಿಲ್ಲವೆಂಬ ಎಚ್ಚರಿಕೆಯನ್ನು ಅಲ್ಲಿ ಕೊಡಲಾಗಿದೆ ಮನುಷ್ಯನ ಜೀವನದ ನಾಲ್ಕು ಮುಖ್ಯ ವೃತ್ತಿಗಳಾದ ಉದ್ಯೋಗ, ಕುಶಲಕಲೆ, ಕೃಷಿ ಮತ್ತು ಗೃಹಕಾರ್ಯ—ಇವೆಲ್ಲವುಗಳ ಬಗ್ಗೆ ಮನುಷ್ಯನನ್ನು ಯೋಗ್ಯನನ್ನಾಗಿ ಮಾಡುವದೇ ವೃತ್ತಿ ಶಿಕ್ಷಣದ ಉದ್ದೇಶವಾಗಿದೆ

## ಸಮಾಜದ ಮೇಲೆ ಪ್ರಭಾವ

ಇಂತ ವೃತ್ತಿ ಶಿಕ್ಷಣವನ್ನು ಸಾಹಿತ್ಯ ಶಿಕ್ಷಣದ ಒಂದು ಅಂಗವನ್ನಾಗಿ ಕೊಡುವದರಿಂದ ಸಮಾಜದ ಮೇಲೆ ಯಾವ ಪ್ರಭಾವವು ಬೀಳುವದೆಂಬುದನ್ನು ನೋಡೋಣ. ಶಿಕ್ಷಣ ಶಾಸ್ತ್ರಜ್ಞರು ಮಾಡಿದ ಸಂಶೋಧನೆಗಳ ಫಲವನ್ನು ಹೇಳುವದಾದರೆ—ಮೊದಲನೆಯದಾಗಿ, ಕೈಕೆಲಸದ ಮೂಲಕ ಬುದ್ಧಿಯ ವಿಕಾಸವು ಬಹು ಚೆನ್ನಾಗಿ ನಡೆಯುತ್ತದೆ ಒಂದು ಹೊಸ ಸಂಸ್ಕೃತಿ, ಹೊಸ ಸಭ್ಯತೆಯ ಸೃಷ್ಟಿಯಾಗುತ್ತದೆ ಈ ನವೀನ ಸಭ್ಯತೆಯ ಮೂಲಾಧಾರವು ಸಹಯೋಗದ ಮೇಲೆ ಇರುವದು ಕೈಕೆಲಸದ ಮೂಲಕ ಮಾನಸಿಕ ಶಿಕ್ಷಣವು ದೊರೆಯದ ಕಾರಣದಿಂದಲೇ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಜಗತ್ತಿನಲ್ಲಿ ದೊಡ್ಡ ದೊಡ್ಡ ಯುದ್ಧ ಸಂಘರ್ಷಗಳಾಗುವ ಕಾರಣವಾಯಿತೆಂದು ಶಿಕ್ಷಣ ಶಾಸ್ತ್ರಜ್ಞರು ಹೇಳುತ್ತಾರೆ ಪ್ರಪಂಚದಲ್ಲಿ ಕೆಲಸಗಾರರಾಗಿರುವವರೆಲ್ಲರೂ ಯುದ್ಧ ವಿರೋಧಿಗಳಾಗಿದ್ದಾರೆ

ಕೈಮತ್ತು ಮನಸ್ಸಿಗೆ ಒಂದು ಸಂಬಂಧವನ್ನು ತರುವ ಈ ಶಿಕ್ಷಣಪದ್ಧತಿಯನ್ನು ಯಾವ ಹೆಸರಿನಿಂದ ಕರೆದರೂ ಅದನ್ನು ಪಾಶ್ಚಾತ್ಯ ಶಿಕ್ಷಣಶಾಸ್ತ್ರಜ್ಞರು—ನಿಜವಾದ ಶಿಕ್ಷಣಕ್ರಮವೆಂದು ಒಪ್ಪತೊಡಗಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ ಆದರೆ ೧೨ ವರ್ಷಮೀರಿದ ಮಕ್ಕಳಿಗೇ ಈ ಶಿಕ್ಷಣದ ಪ್ರಾಮುಖ್ಯತೆಯನ್ನು ಅವರು ಹೇಳಿರುವರು. ೧೨ ವರ್ಷದೊಳಗಿನ ಮಕ್ಕಳಿಗೆ ಎಂಥ ಶಿಕ್ಷಣ ಬೇಕೆಂಬುದನ್ನು ಪಾಶ್ಚಾತ್ಯರು ಇನ್ನೂ ಕಂಡುಕೊಂಡಿಲ್ಲ ಚಿಕ್ಕ ಮಕ್ಕಳಿಗೆ ಆಟದ ರೀತಿಯಲ್ಲಿ ಅವರ ಕೈಕೆಲಸವನ್ನು ಕಲಿಸುತ್ತಾರೆ ಆದರೆ ದೊಡ್ಡವರೇ ಆಗಲಿ, ಸಣ್ಣ ಮಕ್ಕಳಾದರೇನ ಎಲ್ಲರಿಗೆ ಕೈಕೆಲಸದ ಮೂಲಕವೇ ಶಿಕ್ಷಣ ದೊರೆಯಬೇಕೆನ್ನುವ ಮಾತು ಹಿಂದುಸ್ಥಾನದಲ್ಲಿ ಕೇಳಿಬರತೊಡಗಿದೆ ಚಿಕ್ಕ ಮಕ್ಕಳಿಗೂ ಕೈಕೆಲಸವೇ ಶಿಕ್ಷಣದ ನಿಜ ಸಾಧನವಾಗಬಲ್ಲದೆಂಬುದನ್ನು ವಾರ್ಧಾ ಪದ್ಧತಿಯು ಹೇಳುತ್ತದೆ ಈ ಪದ್ಧತಿಯ ಹೇಳುತ್ತದೆ ಈ ಪದ್ಧತಿಯ ಪ್ರಯೋಗಗಳೂ ಅಲ್ಲಲ್ಲಿ ಆಗಿವೆ ಸಫಲತೆಯೂ ದೊರೆತಿದೆ

ಹಿಂದುಸ್ಥಾನದಲ್ಲಿ ೭ರಿಂದ ೧೪ರೊಳಗಿನ ಮಕ್ಕಳಿಗೂ ಯೂರೋಪದಲ್ಲಿ ೧೪ರಿಂದ ಮೇಲ್ಪಟ್ಟ ಮಕ್ಕಳಿಗೂ ಕೈಕೆಲಸಗಳ ಮೂಲಕ ಶಿಕ್ಷಣವು ದೊರೆಯಲಾರಂಭವಾಗಿದೆ. ಜಗತ್ತಿನಲ್ಲಿ ಯುದ್ಧ ಸಂಘರ್ಷಗಳ ಆತಂಕವು ನಷ್ಟವಾಗಿ ಒಂದು ಹೊಸ ಸಮಾಜ ಒಂದು ಹೊಸ ಸಂಸ್ಕೃತಿಯ ರಚನೆಯಾಗುವ ಸಂದರ್ಭವು ಒದಗಿ ಬಂದಾಗ, ಈ ಎರಡು ಹೊಸ ಪ್ರಯೋಗಗಳ ಪರಿಣಾಮವು ಸ್ಪಷ್ಟವಾಗುವದು ಆಗಲೇ ನಾವು ಭವಿಷ್ಯ ಜನಾಂಗಕ್ಕಾಗಿ ಕೈ, ಮನಸ್ಸು ಮತ್ತು ಹೃದಯದ ಶಿಕ್ಷಣವನ್ನು ಕೊಡುವ, ಶಿಕ್ಷಣದೊಂದಿಗೆ ಮನುಷ್ಯ ಜೀವನದ ಪ್ರವೃತ್ತಿಗಳ ಸರಿಯಾದ ಸಹಯೋಗವಿರುವ, ಸ್ನೇಹ ಮತ್ತು ಪರಸ್ಪರ ಸಹಾನುಭೂತಿಯ ಅಡಿಗಟ್ಟಿನ ಮೇಲೆ ಒಂದು ಹೊಸ ಸಮಾಜವನ್ನು ರಚಿಸಲಿಕ್ಕಾಗುವ ಒಂದು ಹೊಸ ಮತ್ತು ಪೂರ್ಣ ಶಿಕ್ಷಣ ಪದ್ಧತಿಯ ಯೋಜನೆಯನ್ನು ತಯಾರಿಸಲು ಸಮರ್ಥರಾಗುವೆವು ಈ ಹೊಸ ಯೋಜನೆಯಂತೆ ಕೊಡಲಾದ ಶಿಕ್ಷಣದ ಪರಿಣಾಮವಾಗಿ ಸಮಾಜದಲ್ಲಿ ವಿರೋಧವಾಗಲೀ ಆರ್ಥಿಕ ದೂಷಣೆಯಾಗಲೀ ಇರಲಾರದ ಭವಿಷ್ಯದಲ್ಲಿ ಯುದ್ಧದ ಸಂಭವವೂ ಇರಲಾರದು.

ಎಸ್. ಕೆ. ಡಿ.

---

# ಹುಷಾರ್

ಮೋಟಾರನ್ನು ನಡಸುವುದಕ್ಕೆ ಎಷ್ಟೋ ಹುಷಾರಿರಬೇಕು ಸಮಯಕ್ಕೆ ಅನುಗುಣವಾಗಿ ಕಾರನ್ನು ಕ್ಷಣ ಮಾತ್ರದಲ್ಲಿ ಪಕ್ಕಕ್ಕೆ ತಿರುಗಿಸಿ ನಡೆಸುವಂಥ ನರಗಳ ಪಟುತ್ವವೂ, ಬಿಗಿಯಾದ ಜ್ಞಾಪಕಶಕ್ತಿಯೂ ತೀಕ್ಷ್ಣವಾದ ದೃಷ್ಟಿಪಾಟವವೂ, ಒಂದು ಕ್ಷಣ ಮಾತ್ರದಲ್ಲಿ ಯೋಚನೆ ಮಾಡಿ ನಿರ್ಧರಿಸುವಂಥ ಚುರುಕಾದ ಮೆದುಳು ಅವಶ್ಯಕವಾಗಿ ಬೇಕು ಇವೆಲ್ಲವೂ ಒಂದು ಮೋಟಾರನ್ನು ನಡೆಸುವುದಕ್ಕೆ ಮಾತ್ರವೇ ಅಲ್ಲದೆ ಆನಂದಮಯವಾದ ಜೀವಯಾತ್ರೆಯನ್ನು ನಡೆಸುವುದಕ್ಕೂ ಅವಶ್ಯಕವೆ ಭಾರತದಲ್ಲೆಲ್ಲಾ ಅತ್ಯುತ್ತಮವಾದ ಟಾನಿಕ್ಕೆಂದು ಪ್ರಸಿದ್ಧಿ ಹೊಂದಿರುವ

# ಜೀವಾಮೃತ

ಸ್ತ್ರೀ ಪುರುಷರೆಲ್ಲರಿಗೂ ಈ ಮಹತ್ತರವಾದ ಶಕ್ತಿಯನ್ನೂ, ದೇಹಾರೋಗ್ಯವನ್ನೂ ಉಂಟು ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ದೊರೆಯುವುದು

ತಯಾರಿಸುವವರು

**ಆಯುರ್ವೇದಾಶ್ರಮಂ ಮದ್ರಾಸು**

ಸ್ಥಳೀಯ ಏಜಂಟರು.

ಪೊಪ್ಯುಲರ್ ಸ್ಟೋರ್ಸ್

ರಥಬೀದಿ – ಮಂಗಳೂರು.



**The Auttur & Jawahar Bank, Limited.**

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು

ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು ಬ್ರೇಂಚ್ ಸೆಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½%

" 6 ತಿಂಗಳಿಗೆ 4% " 24 ತಿಂಗಳಿಗೆ 5%

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್



ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್ (ರಿ)**

**ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.**

# ನೋಟಗಳು

"ನಾಲ್ಕೂರ ಐವತ್ತು ಮಿಲಿಯ ವೀರ ಚೈನೀಯರು ದೇಶದ ಸ್ವಾತಂತ್ರ್ಯಕ್ಕಾಗಿ ಕಾದಾಡುತ್ತಿದ್ದಾರೆ, ನಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನು ಅಪಹರಿಸುವುದು ಯಾರಿಗೂ ಸಾಧ್ಯವಿಲ್ಲ"ವೆಂದು ಚೈನಾದಳಪತಿ ಮಾರ್ಶಲ್ ಚಿಯಾಂಗ್ ಕೈಶೇಕರು ಉದ್ಘೋಷಿಸಿದರು!

◈

ಕ್ಯಾಂಗ್ಸಿ, ನಾನ್ಕಿಂಗ್ ಮೊದಲಾದ ಕಡೆಗಳಲ್ಲಿ ಜಪಾನೀಯರು 'ಬಂದ ದಾರಿಗೆ ಸುಂಕವಿಲ್ಲದೆ' ಹಿಂದೆರಳುತ್ತಿರುವರೆಂದೂ ತಿಳಿದು ಬಂದಿದೆ

◈

ಜಪಾನ್ ಸರಕಾರದ ಕಾಲಕ್ಕೆ ಸರಿಯಾಗಿ ಕುಣಿಯುವ ವಿದ್ರೋಹೀ ವಾಂಗ್ ಚಿಂಗ್‌ವೀಯನ್ನು ಇಂದು ಸ್ವಾತಂತ್ರ್ಯಾಭಿಮಾನಿಗಳಾದ ಚೀನೀಯರೆಲ್ಲಾ ತೀವ್ರವಾಗಿ ಜರೆದಾಡುತ್ತಿದ್ದಾರೆ

◈

ಕೈದೇ ಆಜಾಮರಾದ ಜಿನ್ನರ ಘೋರನೆಯನ್ನು ತಾನು ಅನುಸರಿಸಲಾರೆನೆಂದು ಮುಸ್ಲಿಂ ಲೀಗಿನ ತನ್ನ ಸದಸ್ಯತನಕ್ಕೆ ಮುಂಬಯಿಯ ಮುಸ್ಲಿಂ ಮುಖಂಡರಾದ ಸರ್ ಸಲೆಮಾನ್ ಮಿತೆರುರವರು ರಾಜಿನಾಮೆಯಿತ್ತಿರುವರ '

◈

ಮೌಲಾನಾ ಅಜಾದರನ್ನು ಕಾಂಗ್ರೆಸ್ ಅಧ್ಯಕ್ಷ ಪೀಠಕ್ಕೆ ಏರಿಸಿದುದರಿಂದ ಮುಸ್ಲಿಂ ಜನತೆಗೆ ಬಹಳ ಉಪಕಾರವಾಗಲಿದೆಎಂದು ಅಭಿಪ್ರಾಯಪಟ್ಟರು ಮುಸ್ಲಿಂ ಲೀಗಿನ ಸ್ಥಾಪಕರಲ್ಲೊಬ್ಬರಾದ ಸರ್ ರಾಹಿಂ ಉದ್ದೀನರು!

◈

ಮುಂದಿನ ರಾಷ್ಟ್ರಪತಿ ಮೌಲಾನಾ ಅಜಾದರನ್ನು ಭೋಜನ ಕೂಟಕ್ಕೆ ಆಮಂತ್ರಿಸಿದ ಪಂಜಾಬಿನ ಪ್ರಧಾನ ಸರ್ ಸಿಕಂದರರು ಎರಡು ತಾಸುಗಳ ತನಕ ಅವರೊಡನೆ ದೀರ್ಘ ಸಂಭಾಷಣೆ ನಡೆಸಿದರು!

◈

ಕಾಂಗ್ರೆಸು ಸ್ವಾತಂತ್ರ್ಯ ಪ್ರೇಮಿಗಳಿಗೆ ಮುಕ್ತದ್ವಾರವಾಗಿದೆ! ' ಮುಸ್ಲಿಮರು ಬಹು ಸಂಖ್ಯೆಯಿಂದ ಸೇರಿ ಆಂದೋಲನವನ್ನು ತೀವ್ರಗೊಳಿಸಬೇಕೆಂದು ಪ್ರಕಟಿಸುತ್ತಾರೆ, ಮುಂದಿನ ರಾಷ್ಟ್ರಪತಿ ಮೌಲಾನಾ ಅಜಾದರು!

◈

ರಾಮಘರದಲ್ಲಿ ಆಂದೋಲನವನ್ನು ಹೂಡುವ ನಿರ್ಣಯವಾಗುವುದು, ಸರ್ವರೂ ಸಿದ್ಧರಾಗಿರಬೇಕೆಂಬುದು ಅಜಾದರ ಇಂದಿನ ಸಂದೇಶ!

◈

ಹಿಂದೂ ಮುಸ್ಲಿಮರು ಭುಜಕ್ಕೆ ಭುಜ ಕೊಟ್ಟು ಒಂದಾಗಿ ಹೋರಾಡಿ ಈ ಸಲದ ಸ್ವಾತಂತ್ರ್ಯ ಆಂದೋಲನವನ್ನು ಸಂಪೂರ್ಣ ಯಶಸ್ವಿ ಮಾಡಬೇಕಾಗಿ ರಾಷ್ಟ್ರದ ಧುರೀಣರೆಲ್ಲರ ಹಾರೈಕೆ!

◈

ಸ್ವಾತಂತ್ರ್ಯ ಪ್ರಾಪ್ತಿಗಾಗಿ, ಹೀಗೆ ಕಾಂಗ್ರೆಸು, ಮೌಲಾನಾ ಅಜಾದರ ಮುಂದಾಳುತನದಿಂದ ಮುಂದುವರಿಯುವ ಯತ್ನಗಳನ್ನು ಮಾಡುತ್ತಿದೆ

◈

ಮುಸ್ಲಿಮರ 'ಒಬ್ಬನೇ ಒಬ್ಬ ಧುರೀಣ' ನೆಂದೆನ್ನುವ ಕೈದೇ ಅಜಾಮರಾದ ಜಿನ್ನರು ಈ ಸಿದ್ಧತೆಗಳನ್ನು ನೋಡಿ ಹಲ್ಲು ಕಚ್ಚುತ್ತಿರಬಹುದು!

◈

ಕಾಂಗ್ರೆಸು ಧ್ವಜದ ನೆರಳಲ್ಲಿ ಭಾರತೀಯರು ಜಾತೀಯತೆಯ ಸಂಕೋಚವನ್ನು ಮರೆತು ಸೌಹಾರ್ದದಿಂದ ನೆರೆಯುತ್ತಿರುವುದನ್ನು ನೋಡಿ ಕೈದೇ ಅಜಾಮರು ನಿಜವಾಗಿಯೂ ತಾಳ್ಮೆಗೆಟ್ಟಿರಬಹುದು!

◈

ಒಬ್ಬರೇ ಒಬ್ಬ ಧುರೀಣರಾದ ಕೈದೇ ಅಜಾಮರಿಗೆ 'ಒಬ್ಬನೇ ಒಬ್ಬ' ಅನುಯಾಯಿಯಾದರೂ ಸಿಕ್ಕಿದರೆ ಸಾಕೆಂದು ಅವರು ಇಷ್ಟರಲ್ಲಿಯೇ ಸಮಾಧಾನಮಾಡಿಕೊಂಡಿರಬಹುದು

◈

ಅಲ್ಪ ಸಂಖ್ಯಾಕರಿಗೆ ಎಷ್ಟು ಅಲ್ಪತನ ಬಂದರೂ ಅದರಿಂದ ಅವರಿಗೆ ಖಂಡಿತ ಬೇಸರ ಹುಟ್ಟಲಿಕ್ಕಿಲ್ಲ!

◈

ಈ ಸಲದ ಅಧ್ಯಕ್ಷಪೀಠಕ್ಕೆ ಕಾಮ್ರೇಡ್ ಎಂ ಎನ್ ರಾಯಿಗಳೂ ಒಬ್ಬ ಉಮೇದ್ವಾರರಾಗಿದ್ದರು!

◈

ಗಾಂಧಿಜಿಯವರ ಮುಂದಾಳುತನವನ್ನು ಕಿತ್ತೊಗೆದು, ಬೇರೆ ಧುರೀಣತೆಯನ್ನು ಸ್ಥಾಪಿಸಬೇಕೆನ್ನುವ ತತ್ವದವರು ಕಾಮ್ರೇಡ್ ರಾಯಿಗಳು! —

◈

ಎಡಪಕ್ಷದವರ ಅಖಂಡ ಬೆಂಬಲವು ತನಗಿದೆಯೆಂದು ಅವರ ದೃಢವಿಶ್ವಾಸವಾಗಿತ್ತು!

◈

ಆದರೆ, ಸೋಶಿಯಲಿಸ್ಟರು, ಜಾಧಾದರಿಗೆ ವೋಟು ಕೊಡುವುದಾಗಿ ನಿರ್ಣಯ ಮಾಡಬೇಕೆ?

◈

'ಫೋರ್ವರ್ಡ್ ಬ್ಲಾಕಿ'ನವರು ತಟಸ್ಥರಾಗಿರುವೆನಾಗಿ ಸಾರಬೇಕೆ?

◈

ಆಗ ಎಡಪಕ್ಷದ ಮುಖಂಡರಿಗೆ ಬೆನ್ನು ಹುರಿ ನೆಟ್ಟಗಿಲ್ಲವೆಂದು ಕಾಮ್ರೇಡ್ ರಾಯಿಗಳು ಸಿಡಿಮಿಡಿಗೊಂಡರು!

◈

ಆದರೂ, ಉಮೇದ್ವಾರಿಕೆಯನ್ನು ಹಿಂದೆಗೆಯದೆ ತತ್ವಕ್ಕಾಗಿ ಸ್ಪರ್ಧಿಸಿದರು ಕಾಮ್ರೇಡರು

◈

ತತ್ವಕ್ಕಾಗಿಯೇ ಅವರಿಗೆ ಶೋಚನೀಯವಾದ ರೀತಿಯಲ್ಲಿ ಅಪಜಯವೂ ಬಂದೊದಗಿತು

◈

ಎಸ್ಲಿ ವಾದದರೂ ಕಾಂಗ್ರೆಸು ಕೇವಲ ಹಿಂದೂ ಸಂಸ್ಥೆಯಲ್ಲವೆಂಬುದನ್ನು ಕಾಮ್ರೇಡ್ ರಾಯರಿಗಳಸ್ಪರ್ಧೆಯು ಸ್ಪಷ್ಟಪಡಿಸಿತ !

◈

ಹಿಂದೂ ಉಮೇದ್ವಾರನನ್ನು ಬಿಟ್ಟು, ಮೌಲಾನಾ ಅಜಾದರನ್ನು ಪ್ರಚಂಡ ಬಹುಮತದಿಂದ ಆರಿಸಿದ ವಿಷಯದಲ್ಲಿ ಕೈದೇಅಜಾಮರ ಅಭಿಪ್ರಾಯವೇನಂತೆ!

## ಪ್ರಕಟಣೆ

**ಕಾರ್ಕಳ ಡಿ ಮುನ್ಸೀಫ್ ಕೋರ್ಟಿನಲ್ಲಿ**

ಕ್ರಮ ನಂಬ್ರ ?/4/37

R E P No 27/1940

ದೇವರಾಜ ಸೆಟ್ಟಿ ವಾದಿ ನಂಬ್ರ್ಯ ಅರ್ಜಿದಾರ

ಮತ್ತು

ಶಾಂತಿರಾಜ ಸೆಟ್ಟಿ ಕೂಡ 2 ಜನರು—ಎದ್ರಿಯ ಇವರೊಳಗೆ

ಕಾರ್ಕಳ ತಾಲೂಕು ಕಲ್ಲಬೆಟ್ಟು ಗ್ರಾಮದಲ್ಲಿರುವ ಗುಣಾವತಿ ಸೆಟ್ಟರ ಮಗ 1ನೇ ಎದ್ರಿ ಶಾಂತಿರಾಜ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ಸದ್ರಿ ವ್ಯವಹರಣೆಯಲ್ಲಿ 1ನೇ ಎದ್ರಿಯ ಹಕ್ಕಿನ ಸ್ಥಿರಾಸ್ತಿಯನ್ನು ನಿಲಾಮಿನ ಬಗ್ಗೆ ನಿಲಾಂ ಇಸ್ತಿಹಾರು ಹಾಜರುಮಾಡಿರುವದರಿಂದ ಮುಕ್ತಿ ಸದ್ರಿ ಆಸ್ತಿ ನಿಲಾಂ ಸಮಯ Bid and Set off ಪರ್ಮಿಶನ್ ಕೇಳಿ ಅರ್ಜಿದಾರರು ಹಾಜರುಪಡಿಸಿರುವುದರಿಂದ ಸದ್ರಿ ಇವುಗಳ ಕುರಿತು ಆಕ್ಷೇಪಗಳು ಇರುವುದಾದರೆ ತಾ. 6-3-40ನೇ ದಿನ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ತಕ್ರಾರಿ ಮಾಡಿಕೊಳ್ಳದೆ ಇದ್ದಲ್ಲಿ ಸದ್ರಿ ವ್ಯವಹರಣೆಯು 1ನೇ ಎದ್ರಿಯಿಂದ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ

ಮೊಕ್ಕಾಂ. ಕಾರ್ಕಳ } ಎಂ. ಎಸ್ ಅಧಿಕಾರಿ
13-2-1940 } ಅರ್ಜಿದಾರನಕಡೆ ವಕೀಲ


## ಹೊಟ್ಟೆಬೇನೆಯು ಕೂಡಲೇ ಮಾಯವಾಯಿತು!

**ವಾರಕಾಲ ಸೋಡಾ ಮತ್ತು ಹಾಲನ್ನು ಸೇವಿಸಿದೆನು.**

ಅಸೌಖ್ಯತೆ ಯಾ ಅರೆ ಉಪವಾಸ ಇವುಗಳಲ್ಲಿ ಯಾವುದನ್ನಾದರೂ ನೀವು ಇಷ್ಟರ ತನಕ ಅನುಭವಿಸಿರುವಿರೆಯೋ? ವಾರವಾರಗಳಿಂದ ಬೇಕಾದಷ್ಟು ಆಹಾರ ತಿನ್ನದೆ ಸಧ್ಯದಿಂದಿರುವುದೆಂದರೆ ಎಂತಹ ಬೇಜಾರ ಅಸೌಖ್ಯತೆಯು ಫಕ್ಕನೇ ಮಾಯವಾಗಿ ಸುಖಸಂತೋಷದಿಂದ ಉತ್ತಮ ಭೋಜನವನ್ನು ಉಣ್ಣುವುದೆಂದರೆ ಎಷ್ಟು ಆನಂದ

ಈ ಮೇಲೆ ಬರೆದ ಸಂಗತಿಯು ವಿ. ಆರ್ ಜೆ ಯವರ ಅನುಭವವಾಗಿರುತ್ತದೆ. ಅವರು ಬರೆಯುತ್ತಾ 'ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರು ಎಂತಹ ಆಶ್ಚರ್ಯಕರ ಔಷಧಿಯೆಂದು ತಿಳಿಸುವುದು ನನ್ನ ಮುಖ್ಯ ಕರ್ತವ್ಯ ನಾನು 12 ತಿಂಗಳುಗಳ ಹಿಂದೆ ಹೊಟ್ಟೆನೋವಿನಿಂದ ನರಳುತ್ತಿದ್ದೆನು ಹಲವು ವಾರಗಳ ತನಕ ಸೋಡಾ ಮತ್ತು ಹಾಲನ್ನು ಸೇವಿಸುತ್ತಿದ್ದೆನು ಇದರಿಂದಾಗಿ ನಾನು ಬಹಳ ಕೃಶನಾಗಿ ನಿತ್ರಾಣಿಯಾದೆನು. ಕಳೆದ ಒಂದು ವಾರದಿಂದ ನಿಮ್ಮ ಪೌಡರನ್ನು ಸೇವಿಸುವವರೆಗೆ ನನಗೆ ಯಾವ ಸುಖವೂ ಮಾರ್ಪಾಟು ಆಗಲಿಲ್ಲ ಆದರೆ ಪೌಡರನ್ನು ಸೇವಿಸಿದಂದಿನಿಂದ ಅದು ನನ್ನನ್ನು ಗುಣಪಡಿಸಿರುವುದು '

ಉದರವೇದನೆಯು ಆಗಾಗ ನಿಮ್ಮನ್ನು ಬಾಧಿಸುತ್ತಿರುವುದೇ? ಆಗಾಗ ಅಸೌಖ್ಯತೆ, ಅಜೀರ್ಣಗಳಿಂದ ನೀವು ನರಳುತ್ತಿರುವಿರ? ಹಾಗಾದರೆ ಕೂಡಲೇ ಸಾವಿರಾರು ಜನರಿಗೆ ಗುಣವನ್ನುಂಟುಮಾಡಿದ ಈ ಪೌಡರಿನಿಂದ ನಿಮ್ಮ ಹೊಟ್ಟೆಯ ಚಿಕಿತ್ಸೆ ನಡೆಸಿರಿ ಒಂದು ಬಾಟ್ಲಿ ಮೆಕ್ಲಿನ್ ಬ್ರಾಂಡ್ ಸ್ಟೋಮಕ್ ಪೌಡರನ್ನು ಕೊಂಡುಕೊಳ್ಳಿರಿ ಬಾಟ್ಲಿಯ ಮೇಲೆ

Alex. C. Maclean

ಎಂಬ ದಸ್ಕತೂ, ಪೆಟ್ಟಿಗೆಯ ಮೇಲೆ ದಸ್ಕತೂ ಕೆಂಪು ಸೀಲೂ ಇದ್ದರೆ ಮಾತ್ರ ಅದ ಖಾತ್ರಿಯಾದುದು ಚಿಲ್ಲರೆ ಮಾರಲ್ಪಡುವುದಿಲ್ಲ ಪೆಟ್ಟಿಗೆಗಳಲ್ಲಿರುವ ಬಾಟ್ಲಿಗಳಲ್ಲಿ (ಹುಡಿ ಯಾ ಮಾತ್ರೆ) ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

K S 219






### ಮನೆ ಮಾಡು ಮಾಡಲಿಕ್ಕೆ ಮೊಸರಿನ ಉಪಯೋಗ

ಗಾಜಿನ ನೂಲಿನಿಂದ ಬಟ್ಟೆನೇಯುವವರು, ಹತ್ತಿಯಿಂದ ರಸ್ತೆ ಮಾಡುವರು ಎಂಬಿತ್ಯಾದಿ ಅನೇಕ ಅದ್ಭುತ ವಿಷಯಗಳನ್ನು ನೀವು ಇದಕ್ಕೆ ಮೊದಲೇ ಕೇಳಿರಬಹುದು. ಆದರೆ ಈಗ ವಿಜ್ಞಾನಿಗಳು ಇನ್ನೊಂದು ಅದ್ಭುತ ಶೋಧವನ್ನು ಮಾಡಿದ್ದಾರೆ. ಮೊಸರಿನಿಂದ ಬೆಣ್ಣೆ ತುಪ್ಪ ಮಜ್ಜಿಗೆಯನ್ನಲ್ಲದೆ ಬೇರೆ ಯಾವ ಉಪಯೋಗವನ್ನು ಜನರು ತಿಳಿದಿರಲಿಲ್ಲ. ಈಗ ವಿಜ್ಞಾನಿಗಳು ಮೊಸರನ್ನು ಹೆಪ್ಪು ಹಾಕಿ ಅದರಿಂದ ಮನೆಗಳ ದೊಡ್ಡದೊಡ್ಡ ಮಾಡುಗಳನ್ನು ಮಾಡಲಿಕ್ಕೆ ಕಲಿತುಕೊಂಡಿದ್ದಾರೆ. ಹೆಪ್ಪು ಹಾಕಿದ ಮೊಸರನ್ನು ಹಂಚು ಇಟ್ಟಿಗೆಗಳಂತೆ ಕತ್ತರಿಸಿ, ಅವು ಬಹಳ ಗಟ್ಟಿಯಾದ ಬಳಿಕ ಮಾಡಿಗೆ ಹೊದಿಸುವರು! ಮೊಸರಿನ ಈ ಹಂಚು ಇಟ್ಟಿಗೆಗಳು ನೋಡಲಿಕ್ಕೆ ಬಹು ಸುಂದರವಾಗಿ ಕಾಣುವವು; ಸಂಗಮರವರಿ ಕಲ್ಲಿನಂತೆ ಥಳಥಳ ಹೊಳೆಯುವವು. ವಿಲಾಯತಿಯಲ್ಲಿ ಮೊಸರು ಮಜ್ಜಿಗೆ ಹೆಚ್ಚಾಗಿ ಜನರು ಅವುಗಳ ಈ ತರಹದ ಉಪಯೋಗಗಳನ್ನು ಪಡೆಯಲಾರಂಭಿಸಿದ್ದಾರೆ. ಆದರೆ ನಮಗೆ ಉಣ್ಣಲಿಕ್ಕೆ ಬೇಕಾದಷ್ಟು ಮೊಸರು ಮಜ್ಜಿಗೆ ದೊರೆಯುವದಿಲ್ಲ.

### ಸಂಚಾರದ ಮನೆಗಳ ಬಹಳ ಪ್ರಚಾರ

ಮನುಷ್ಯರಿಗೆ ಕಾಲುಗಳಿವೆ; ಮೃಗಗಳಿಗೆ ಕಾಲುಗಳಿವೆ. ಆದ್ದರಿಂದ ಮನುಷ್ಯರೂ ಮೃಗಗಳೂ ಸಂಚರಿಸುತ್ತವೆ; ನಡೆಯುತ್ತವೆ. ಮರಗಿಡಗಳಿಗೆ ಕಾಲುಗಳಿಲ್ಲ; ಆದ್ದರಿಂದ ಅವು ಸಂಚರಿಸುವದಿಲ್ಲ. ಹಾಗೆ ಮನೆಮಠಗಳೂ ನಡೆಯಲಾರವು. ಪರಂತು ವಿಜ್ಞಾನಿಗಳು ಸಂಚರಿಸುವ ಮನೆ ಮಠಗಳನ್ನೂ ಮಾಡಿಕೊಂಡು ಮನುಷ್ಯನ ಬುದ್ಧಿಗೆ ಎಣೆ ಇಲ್ಲ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ.

ಈ ಮನೆಗಳ ಕಾರಣದಿಂದ ಇನ್ನು ಪರಿಶಿ ಕಟ್ಟಿಕೊಂಡು ಪರವೂರುಗಳಿಗೆ ಹೋಗುವವರು ತಮ್ಮ ಸಂಗಡ ಡೇರೆಗಳನ್ನು ತೆಗೆದುಕೊಂಡು ಹೋಗಬೇಕಾಗಿಲ್ಲ. ಹೋಗಬೇಕಾದಾಗ ಮನೆಗಳನ್ನೇ ಮೋಟಾರುಗಳ ಮೇಲೆ ಹೊರಿಸಿಕೊಂಡು ಬೇಕಾದಲ್ಲಿಗೆ ಹೋಗಬಹುದು. ಈ ಮನೆಯ ಬೇರೆ ಬೇರೆ ಭಾಗಗಳನ್ನು ಕಳಚಿ ಒಂದರ ಮೇಲೊಂದರಂತೆ ಇಟ್ಟಾಗ ಅದು ೯ಅಡಿ ಉದ್ದ ೬ಅಡಿ ಅಗಲ ಮತ್ತು ೨ಅಡಿ ಎತ್ತರದ ಒಂದು ಪೆಟ್ಟಿಗೆಯಂಥಾಗುತ್ತದೆ. ಒಬ್ಬನು ಅದನ್ನು ಎತ್ತಿ ಇಳಿಸುವಷ್ಟು ಅದು ಹಗುರವಾಗಿ ಇರುತ್ತದೆ. ಇದರ ಬೇರೆ ಭಾಗಗಳನ್ನು ಹತ್ತೇ ಮಿನುಟುಗಳಲ್ಲಿ ಜೋಡಿಸಿ ಮನೆ ಮಾಡಬಹುದು. ಇದರ ಕಾಲುಗಳನ್ನು ಬೇಕಾದಂತೆ ಎಳೆದು ಉದ್ದ ಗಿಡ್ಡ ಮಾಡಲಿಕ್ಕಾಗುವದರಿಂದ ಸಮತಲದಲ್ಲಿ ಮಾತ್ರವಲ್ಲ, ಏರುತಗ್ಗಾದ ಭೂಮಿಯ ಮೇಲೂ ಈ ಮನೆಯನ್ನು ಕಟ್ಟಬಹುದು. ಈ ಮನೆಯ ಒಳಗೆ ಒಂದು ಕಡೆ ಒಂದು ಮೇಜು ಮತ್ತು ಅದರ ಸುತ್ತಲು ನಾಲ್ಕು ಮಂದಿಗೆ ಕೂತುಕೊಳ್ಳಲಾಗುವಂತೆ ಎರಡು ಬೆಂಚುಗಳು ಇರುತ್ತವೆ. ಗಾಳಿ ಬೆಳಕು ಬರಲಿಕ್ಕೆ ಕಿಟಕಿಗಳೂ ಇರುತ್ತವೆ. ಡೇರೆಗಳಿಗಿಂತ ಇದಕ್ಕೆ ಖರ್ಚು ಕಡಿಮೆ; ಆಗಾಗ ಕಳಚಿ ಜೋಡಿಸಲಿಕ್ಕೆ ಪರಿಶ್ರಮವೂ ಕಡಿಮೆ. ಇವು ಕಾಲಿರುವ ಸಂಚಾರದ ಮನೆಗಳಲ್ಲವಾದರೆ ಮತ್ತೇನಾಗಬಹುದು? ಈ ಮನೆಗಳ ಪ್ರಚಾರವು ವಿಲಾಯತಿಯಲ್ಲಿ ಬಹಳ ಆಗುತ್ತ ಇದೆ.

### ಕಲಿಯುಗದ ಭೀಮ

ಅಮೇರಿಕದ ಇಲಿನಾಯಿಸ್ ಎಂಬಲ್ಲಿ ಒಬ್ಬ ದೀರ್ಘಕಾಯದ ಮನುಷ್ಯನಿದ್ದಾನೆ. ರಾಬರ್ಟ ವಾಡಲೋ ಎಂಬುದು ಅವನ ಹೆಸರಾಗಿದೆ. ಅವನ ಎತ್ತರ ೮ ಅಡಿ ೬ ಇಂಚು. ಜಗತ್ತಿನಲ್ಲಿ ಅವನಷ್ಟು ಎತ್ತರ ಮನುಷ್ಯ ಬೇರೊಬ್ಬನಿರುವದಿಲ್ಲ. ಅವನ ಪ್ರಾಯ ೨೧ವರ್ಷ ಮಾತ್ರ! ಇನ್ನೂ ಇನ್ನೂ ಬೆಳೆಯುತ್ತಿದ್ದಾನೆ. ಅವನಿಗೆ ಬಟ್ಟೆ ಬರೆಗಳನ್ನು ಹೊಲಿದು ಕೊಡುವ ದರ್ಜಿಗಳಿಗೆ ಒಂದು ಸಮಸ್ಯೆಯಾಗಿದೆ. ಅವನ ಇಜಾರು, ಅಂಗಿಗಳ ಅಳತೆಯನ್ನು ತೆಗೆದುಕೊಳ್ಳುವಾಗ ದರ್ಜಿಗಳು ಒಂದು ಏಣಿಯನ್ನು ಇಟ್ಟಿರಬೇಕಾಗುತ್ತದೆ. ಸಾಧಾರಣ ಮನುಷ್ಯರಿಗಿಂತ ಇವನು ಯಾಕೆ ಅಷ್ಟು ಎತ್ತರ ಬೆಳೆಯುತಿದ್ದಾನೆ ಎಂಬುದನ್ನು ಶರೀರ ವಿಜ್ಞಾನಿಗಳು ಪರೀಕ್ಷಿಸುತಿದ್ದಾರೆ. ಮನುಷ್ಯನ ಸರಾಸರಿ ಎತ್ತರ ಸುಮಾರು ೫ಅಡಿ ೬ ಅಂಗುಲ ಇರುತ್ತದೆ. ಇವನು ಅದಕ್ಕಿಂತ ಮೂರಡಿ ಹೆಚ್ಚು ಎತ್ತರಕ್ಕೆ ಬೆಳೆದಿದ್ದಾನೆ.

### ಯುದ್ಧೋಪಯೋಗಿ ಪಾರಿವಾಳಗಳು

ವರ್ತಮಾನ ಕಾಲದ ಯುದ್ಧಗಳಲ್ಲಿ ಆಕಾಶಗಮನದ ಸಾಧನಗಳು ತಡೆಯಲ್ಪಟ್ಟಾಗ ತರಬೇತು ಮಾಡಿದ ಪಾರಿವಾಳಗಳು ಬಹಳ ಉಪಯೋಗಕ್ಕೆ ಬರುತ್ತವೆ. ಆ ಕಾಲದಲ್ಲಿ ಪಾರಿವಾಳಗಳೇ ಪತ್ರಪತ್ರಿಕೆಗಳನ್ನು ಸಂದೇಶಗಳನ್ನೂ ಒಂದು ಕಡೆಯಿಂದ ಒಂದು ಕಡೆಗೆ ಒಯ್ಯುತ್ತವೆ. ಒಂದೆರಡು ವರ್ಷಗಳ ಹಿಂದೆ ನಮ್ಮ ಹಿಂದುಸ್ಥಾನದಲ್ಲಿಯೇ ನಡೆದ ಘಟನೆ ಇದು: ಸೀಮಾ ಪ್ರಾಂತದ ಐದು ಸಾವಿರ ವಿದ್ರೋಹಿಗಳು ಇಪಿಫಕೀರನ ಅಧೀನ ಸರಕಾರದ ವಿರುದ್ಧ ದೊಂಬಿ ಮಾಡುತ್ತ ಐನೂರು ಇಂಗ್ಲಿಷ ಸಿಪಾಯಿಗಳ ದಂಡನ್ನು ಅದರ ಅಧಿಕಾರಿಯನ್ನೂ ಮುತ್ತಿ ಕಪ್ತಾನ ಮತ್ತು ಕಮಾಂಡರನನ್ನು ಕೊಂದು ಹಾಕಿದರು. ಇಂಗ್ಲೀಷ್ ಸೇನೆಯು ಹತ್ತಿರ ಬೇಕಾದಷ್ಟು ಕೋವಿ ತುಪಾಕಿಗಳು ಇರಲಿಲ್ಲ. ಒಬ್ಬ ಸೈನಿಕನು ಸಾಧು ಮಾಡಿದ ಪಾರಿವಾಳದ ಕಾಲಿಗೆ ಪತ್ರವನ್ನು ಕಟ್ಟಿ, ಅದನ್ನು ಹಾರಿಸಿದನು. ಆ ಪಾರಿವಾಳವು ಸರಕಾರಿ ಠಾಣೆಗೆ ಬಂದು ಸಂದೇಶವನ್ನು ಒಪ್ಪಿಸಿತು. ಕೂಡಲೇ ಸಹಾಯವು ಕಳುಹಿಸಲ್ಪಟ್ಟಿತು. ಸೇನೆಯು ವಿದ್ರೋಹಿಗಳ ಕೈಯಿಂದ ಬದುಕಿತು. ಕಳೆದ ಮಹಾ ಯುದ್ಧದಲ್ಲಿ ಇಂಥಾ ಸಾವಿರಾರು ಪಾರಿವಾಳಗಳು ಸೇನೆಗೆ ಸಹಾಯವನ್ನು ಒದಗಿ ಕೊಟ್ಟಿವೆ. ಈ ಪಾರಿವಾಳಗಳಿಗೆ ಯುದ್ಧಕಾಲದ ಶಿಕ್ಷಣವನ್ನು ಕೊಡಲಿಕ್ಕೆ ಬಹಳ ಸಮಯವೂ ಪರಿಶ್ರಮವೂ ಬೇಕು. ಆದರೆ ಇಂಥ ಶಿಕ್ಷಣವನ್ನು ಪಡೆದ ಬಳಿಕ ಈ ಪಾರಿವಾಳಗಳು ಕೆಲ ಕೆಲವು ಸಮಯದಲ್ಲಿ ಮನುಷ್ಯನು ಮಾಡುವದಕ್ಕಿಂತಲೂ ಹೆಚ್ಚು ಮಹತ್ವದ ಕೆಲಸವನ್ನು ಮಾಡುತ್ತವೆ.

### ಚಂದ್ರಲೋಕಕ್ಕೆ ಪ್ರಯಾಣ

ವಿಜ್ಞಾನಿಗಳು ಬಹು ಕಾಲದಿಂದ ಚಂದ್ರಲೋಕಕ್ಕೆ ಪ್ರಯಾಣ ಮಾಡುವ ಕನಸು ಕಂಡಿದ್ದಾರೆ. ಅಲ್ಲಿಗೆ ಹೋಗಲಿಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಬೇರೆ ಬೇರೆ ಸಾಧನಗಳನ್ನು ಮಾಡಿ ಪ್ರಯತ್ನಿಸಿದ್ದಾರೆ. ಆದರೆ ಈ ವರೇಗಿನ ಪ್ರಯತ್ನಗಳಲ್ಲಿ ಅವರೆಲ್ಲರೂ ವಿಫಲರಾಗಿರುವರು. ಯಾಕೆಂದರೆ ಊರ್ಧ್ವಾಕಾಶದಲ್ಲಿ ಬಹಳ ಉಷ್ಣವಾದ ಒಂದು ಜ್ವಾಲಾಸ್ತರವು ಭೂಮಿಯನ್ನು ಸುತ್ತಲೂ ಆವರಿಸಿಕೊಂಡಿರುವದಂತೆ. ಈ ಸ್ತರದ ಘನತ್ವವು ಒಂದು ಅತಿ ದಪ್ಪದ ಗಾಜಿನಷ್ಟಿರುವದು. ಅದರ ಸಮೀಪವಾದಾಗ ಎಂಥ ಕಠಿನ ವಸ್ತುವಾದರೂ ಕರಗಿ ಆವಿಯಾಗಬೇಕು! ಆದ್ದರಿಂದ ಜೀವವಿರುವ ಯಾವ ವಸ್ತುವೂ ಅದರ ಸಮೀಪವಾಗುವ ಹಾಗಿಲ್ಲ. ಮನುಷ್ಯನು ಅದನ್ನು ದಾಟಿ ಹೋಗುವದು ಸದ್ಯಕ್ಕೆ ಅಸಂಭವವೆಂದೇ ಕಾಣುತ್ತದೆ. ಆದ್ದರಿಂದ ಮನುಷ್ಯನು ಚಂದ್ರಲೋಕಕ್ಕೆ ಹೋಗುವ ಕನಸು ಕನಸಾಗಿಯೇ ಉಳಿಯಬಹುದು. ಅಥವಾ ಆ ಜ್ವಾಲಾಸ್ತರವನ್ನು ದಾಟಿ ಹೋಗುವ ಏನಾದರೊಂದು ಅದ್ಭುತ ಸಾಧನವನ್ನು ಮನುಷ್ಯನು ಕಂಡುಕೊಳ್ಳಬೇಕಾಗುತ್ತದೆ. ಆಗಲಾದರೂ ಜ್ವಾಲಾಸ್ತರದ ಮೇಲೆ ಮತ್ತೆ ಧಸ್ತರಗಳಿದ್ದು ಮನುಷ್ಯನ ಚಂದ್ರಲೋಕದ ಪ್ರಯಾಣಕ್ಕೆ ಅವು ಯಾವ ವಿಘ್ನ ವಿಡ್ಡೂರಗಳನ್ನೂ ತರುವವೋ, ಹೇಳಲಾಗುವದಿಲ್ಲ. ಅಂತೂ ಮನುಷ್ಯನ ಚಂದ್ರಲೋಕದ ಪ್ರಯಾಣವು ಶೀಘ್ರದಲ್ಲಿ ಸಾಧ್ಯವಾಗುವಂಥದ್ದಾಗಿ ಇರುವದಿಲ್ಲ.

THE

**BANK OF MANGALORE LTD.,**

MANGALORE.

ESTD. 1931.

*Branches:-*

**Mudabidri & Padubidri.**

Fixed Deposits will be received at following rates of interest.

| | | |
|---|---|---|
| For 3 months | | 3½% |
| „ 6 „ | | 4% |
| „ 12 „ | | 5% |
| „ 24 „ | & upwards | 5½% |

Interest Payable Quarterly.

***Savings Bank deposit 3½% on daily balances.***

**All kinds of banking business transacted**

# ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ತಾ. 11-2-'40ರಿಂದ ತಾ. 27-2-'40ರ ವರೆಗೆ

## ಶ್ರವಣ ಬೆಳುಗುಳದಲ್ಲಿ ಶ್ರೀ ನೇಮಿತೀರ್ಥಕರ ಪಂಚಕಲ್ಯಾಣ ಮಹೋತ್ಸವ

ಮತ್ತು

## "ಶ್ರೀ ಗೋಮಟೇಶ್ವರ ಸ್ವಾಮಿ ಮಹಾಮಸ್ತಕಾಭಿಷೇಕ"

ತಾರೀಕು 11-2-40ರಿಂದ ತಾರೀಕು 27-2 40ರ ವರೆಗೆ ಶ್ರವಣ ಬಳುಗುಳದಲ್ಲಿ ಬಲು ವಿಜೃಂಭಣೆಯಿಂದ ನಡಿಯಲಿಗುವ ಶ್ರೀ ಗೋಮಟೇಶ್ವರ ಸ್ವಾಮಿ ಮಹಾಮಸ್ತಕಾಭಿಷೇಕಕ್ಕೆ ಹೋಗುವ ಯಾತ್ರಿಕರ ಅನುಕೂಲತೆಗಾಗಿ ನಾವು ಸ್ಪೆಶ್ಯಲ್ ಸರ್ವಿಸ್ಸನ್ನು ಚಾಲುಮಾಡುವ ಯೋಗ್ಯ ಏರ್ಪಾಡು ಮಾಡಿರುತ್ತೇವ

| | ರೂ | ಆ | ಪೈ |
|---|---|---|---|
| ಮಂಗಳೂರಿನಿಂದ—ಉಪ್ಪಿನಂಗಡಿಗಾಗಿ-ಹಾಸನ ಶ್ರವಣ ಬೆಳುಗುಳಕ್ಕೆ ಚಾರ್ಜು | 4 | 0 | 0 |
| ಮೂಡಬಿದ್ರೆಯಿಂದ—ಗುರುವಾಯನಕೆರೆ ಚಾರ್ಮಾಡಿ ಗಡಿಗಾಗಿ ಮೂಡುಗೆರೆ ಹಳೇಬೀಡು ಅರಸಿಕೆರೆಗಾಗಿ ಹಾಸನ ಶ್ರವಣ ಬೆಳುಗುಳಕ್ಕೆ | 4 | 12 | 0 |
| ಮೂಡಬಿದ್ರೆಯಿಂದ—ಚಾರ್ಮಾಡಿಗಡಿಗಾಗಿ-ಮೂಡುಗೆರೆ ಬೇಲೂರು ಹಾಸನಕ್ಕಾಗಿ ಶ್ರವಣ ಬೆಳುಗುಳಕ್ಕೆ | 4 | 8 | 0 |
| ಮೂಡಬಿದ್ರೆಯಿಂದ—ಚಾರ್ಮಾಡಿಗಡಿಗಾಗಿ-ಮೂಡುಗೆರೆ ಚಿಕ್ಕಮಂಗಳೂರು ಹಾಸನಕ್ಕಾಗಿ ಶ್ರವಣ ಬೆಳುಗುಳಕ್ಕೆ | 4 | 12 | 0 |

ಯಾತ್ರಿಕರ ಅನುಕೂಲತೆಗಳ ಬಗ್ಗೆ ಯೋಗ್ಯ ಏರ್ಪಾಡು ಮಾಡಲಾಗುವುದು.

ಹೆಚ್ಚಿನ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

***JOINT MANAGERS.***

**The Combined Booking Agency,** MANGALORE

**The Joint Booking Office,** KODIALBAIL.

(Regd)

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಏಟಿನಿಂದಾದ ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ವಕ್ರವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY MADRAS CALCUTTA



# HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಿಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ,ನಿಸ್ಸತ್ವ,ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ,ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಆಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O. Peridepi (ಸೆಲ್ಲೂರು ತಾ.)


## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ತರದ ಗುಡ್ಡೆ ಮುಡಿಗೆ | 1—13—0 | 1—14—0 |
| „ ದುಯಂ „ | | |
| „ ಅವ್ವಲ್ ಸುಗ್ಗಿ „ | | — |
| „ ದುಯಂ „ „ | | — |
| ಅಕ್ಕಿ ಅವ್ವಲ್ ಗುಡ್ಡೆ „ ಹಳೆ | 1—14 0 | |
| „ ದುಯಂ „ „ | 4 8—0 | |
| „ ಅವ್ವಲ್ ಸುಗಿ „ | 4—8—0 | 4—8— |
| „ ದುಯಂ „ „ | 4—4—0 | 4—6—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 58—8—0 |
| „ ಸಿಪ್ಪೆ ಇದ್ದದು „ | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 75—0— |
| „ ದಿಲ್ಪಸಂದಿ „ | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಯುದ್ದ ಅಡಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 8—0—0 | 8—12—0 |
| ಕಬ್ಬಿನ ಬೆಲ್ಲ ಖಂಡಿಗೆ | 37—8—0 | 50—0—0 |
| ಒಳ್ಳೆಮೆಣಸು ಹಂಡ್ರೆಡ್ವೇಟಿಗೆ | 18—0—0 | 20—8—0 |

# ಸ್ವದೇಶಾಭಿಮಾನಿ

ಸಂಪುಟ 34] ಶನಿವಾರ 23—2—1940 [ಸಂಚಿಕೆ 8

## The Bombay Life Assurance Company, Ltd.,

(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live-today-a few years more-when you are old?

If you die-to your family and dependants?

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | |
|---|---|
| Completed Business .... .... | Rs. 1,44,91,000 |
| Life Assurance Fund .... .... | Rs. 1,17,69,748 |
| Total Assets .... .... | Rs. 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

**Bombay Life Building,**

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut. — Car Street, Mangalore. — Visweswarapuram Circle, Bangalore City. — Post Box No. 337 Mount Road, Madras. — Gautam Nivas, Charni Road, Girgaum, Bombay No. 4. — Central Station Road, Trivandrum.

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

which will tone the nervous system, build healthy tissues and enrich the blood.

**Thus keeps you fresh and sprightly.**

**Bhuvanendra Products, Ltd.,**

Katapady, S. Kanara.

(BRANCH—KUMTA, N. KANARA.)

Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆ
ಯಿಂದ ಇರಬೇಕಾದರೆ ಸಾಕಷ್ಟು
ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾ
ಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

**ಭುವನೇಂದ್ರ 'ಅಮೃತಪ್ರಾಶವು**

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**

ಕಟಪಾಡಿ, — ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalore

# ಸ್ವದೇಶಾಭಿಮಾನಿ

# Swadeshabhimani. Estd 1906

'ಕನ್ನಡನಾಡ ನೀಂ ಬೆಳಗೆ ನಿಂತೆಯ!
ಭವ್ಯ ದಿಗಂಬರಮೂರ್ತಿ ಗುಮ್ಮಟಾ

### A Journey in Tropical Countries without Quinine is Inconceivable

It is not surprising that we have a great longing to visit tropical countries, when we look over a collection of photographs brought back by a traveller. The graceful palm trees, the picturesque hill sides and the continual sunshine evoke the idea of a paradise that our imagination has transformed into a dream But photographs are deceiving, for it is not in tropical countries that we can easily find that happiness spoken of in fairy tales. The photograph only gives a restricted and superficial idea of the tropical world, the drawbacks that show that life there is by no means a happy one, do not come out on a sensitised plate A debilitating climate, malaria mosquitoes and millions of poisonous insects, form a part of the surroundings of the tropical paradise along with the beautiful palms, butterflies and orchids.

If, however, on the strength of photographs, we venture to visit tropical countries, where we imagine that we shall find happy folk, we are soon disillusioned. The first romantic ideas fly away with the first bout of fever.

In the bush, there is no time for dreaming Behind the most splendid trees and plants, the greatest dangers are spying on you most of the time The finest looking fruits conceal the most terrible poisons and the malaria mosquitoes are more dangerous than dreaded tigers snakes

A journey in tropical countries without quinine is inconceivable One can only live and move in these regions by faithfully carrying out the recommendation of the Malaria Commission of the League of Nations, prescribing the taking of 6 grains of quinine per day during the fever season to prevent malaria, and to cure that malady, a dose of 15 grains to 20 grains of quinine daily for 5 to 7 days On page 125 of its report, issued in 1938, this Malaria Commission stresses the fact that among the antimalarial drugs quinine still ranks first in current practice, by reason of its clinical effectiveness and almost complete absence of toxicity, coupled with the widespread knowledge of its use and dosage

It is truly a most happy coincidence that tropical nature herself supplies quinine, the natural remedy, which helps so much to minimise the sufferings of those who live in what has been called 'the Paradise of the Tropics'.

M. Eng. No 211.


## ನಿಮ್ಮ ದೇಹ, ಮಿದುಳು ಮತ್ತು ನರಗಳು ಬಳಲಿದಾಗ

ನಿಮ್ಮ ದೇಹವು ದಣಿದು ಬಳಲುವುದು, ನಿಮ್ಮ ಮಿದುಳು ಆಯಾಸಪಡುವುದು, ನರನಾಡಿಗಳು ಅಸ್ವಸ್ಥಪಡುವುದು ಇವೆಲ್ಲವು ನಿಮ್ಮ ದಿನನಿತ್ಯದ ಆಹಾರ ಮತ್ತು ಪೋಷಣೆಯು ಸರಿಯಿಲ್ಲವೆಂಬುದರ ಚಿಹ್ನೆಯಾಗಿರುತ್ತದೆ

ನಿಮ್ಮ ಈ ಆಸಡ್ಡೆ ಮತ್ತು ಬಳಲಿಕೆಯು ಮಾಯವಾಗಬೇಕಾದರೆ ನಿಮ್ಮ ದೇಹ, ಮಿದುಳು ಮತ್ತು ನರನಾಡಿಗಳಿಗೆ ತಕ್ಕದಾದ ಪೋಷಣೆಯನ್ನೀಯಬೇಕು ಈ ಪೋಷಣೆಯು ಉತ್ತಮ ಟೋನಿಕಿನ ಗುಣವುಳ್ಳ 'ಓವಲ್ಟಿನ್' ಪಾನೀಯದಲ್ಲಿ ದೊರಕುವುದು

ರುಚಿಕರವಾದ ಈ 'ಓವಲ್ಟಿನ್' ಪಾನೀಯವು ದೇಹಕ್ಕೆ ಹಿತವೂ ತಕ್ಕದೂ ಆದ ಆಹಾರವಾಗಿರುತ್ತದೆ ಉತ್ತಮ ನಿದ್ರೆ, ಆರೋಗ್ಯವನ್ನು ಸೂಚಿಸಲು ಬೆಳಿಗ್ಗೆ ಮತ್ತು ರಾತ್ರೆ ಬಿಸಿ ಕಪ್ಪು 'ಓವಲ್ಟಿನ್' ಕುಡಿಯಿರಿ ಇತರ ಪಾನೀಯಗಳನ್ನು ನಿಂತಿಸಿರಿ

ಎಲ್ಲಾ ಕಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರಲ್ಪಡುವುದು

ವಿತರಣಾಕಾರರು:—

ಜೇಮ್ಸ್‌ರೈಟ್ ಲಿಮಿಟೆಡ್,
149 ಬ್ರೋಡ್ವೆ-ಮದ್ರಾಸು,
ಬೊಂಬ್ಯಾ, ಕರಾಚಿ ಮತ್ತು ಕಲ್ಕತ್ತ

# 'ಓವಲ್‌ಟಿನ್'

OVALTINE ... ರುಚಿಕರವಾದ ಆಹಾರಪಾನೀಯವು

**ಓವಲ್‌ಟಿನ್ ಬಿಸ್ಕುಟುಗಳು:**
ರುಚಿಕರ, ಜೀರ್ಣಕರ ಮತ್ತು ಪೋಷಣಾಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ವೈಶಿಷ್ಟ ಬೆಲೆಯ 'ಓವಲ್ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

OV/34/39


**ನಿಮ್ಮ ಜಾಹೀರಾತುಗಳನ್ನು ಸ್ವದೇಶಾಭಿಮಾನಿಗೇನೇ ಕೊಡಿರಿ!**

“ನ ನಿಶ್ಚಿತಾರ್ಥಾ-ದ್ವಿರಮಂತಿ ಧೀರಾಃ”

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

1-8-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧-೮-೧೯೪೦

# ★ ಪ್ರಪಂಚವನ್ನು ನಡುಗಿಸಬಲ್ಲ ಪ್ರಚಂಡ ಪ್ರಭಾವಶಾಲಿ! ★

ಶ್ರೀ ಎಂ ಎನ್ ರ್ರಾಯ್

## ಗಾಂಧಿಜಿಯವರ ಪ್ರಭಾವ!

### ಅಮೇರಿಕನರೊಬ್ಬರ ಹೇಳಿಕೆ

'ಭಾರತಕ್ಕೆ ಜರ್ಮನ್, ರಶ್ಯನ್, ಜಪಾನೀ ರಾಷ್ಟ್ರಗಳ ಆಕ್ರಮಣ ಹೆದರಿಕೆಯು ಇಲ್ಲವೇ ಇಲ್ಲ. ಆ ಕುರಿತು ಬ್ರಿಟಿಷ್ ರಾಜನೀತಿಯೇ ಇಂದು ಸ್ಪಷ್ಟಪಡಿಸಿದೆ. ಆದರೆ ಬ್ರಿಟಿಷರ ಅಧಿಕಾರವನ್ನು ಕೆಳಗಿಳಿಸಿ ಗಾಂಧಿಜಿಯವರೊಡನೆ ಸಂಧಾನ ನಡೆಸಿಕೊಳ್ಳುವ ಸಂದರ್ಭವು ಬ್ರಿಟಿಷ್ ಸರಕಾರಕ್ಕೆ ಬೇಗನೇ ಬಂದೇ ಬರಬೇಕು' ಹೀಗೆಂದು ಅಮೇರಿಕದ ಲೇಖಕರೊಬ್ಬರು ಬರೆಯುತ್ತಾರೆ. ಅವರು ತಮ್ಮ ಲೇಖನದಲ್ಲಿ ಗಾಂಧಿಜಿಯವರು ಮುಸ್ಲಿಂ ಲೀಗಿನ ಮತ್ತು ಬ್ರಿಟನಿನ ಕುಟಿಲೋಪಾಯಗಳನ್ನು ತಲೆಕೆಳಗು ಮಾಡಬಲ್ಲ ಪ್ರಚಂಡ ಮೇಧಾಶಕ್ತಿಯುಳ್ಳವರೆಂದೂ ಬರೆದಿರುವರು.

ಅದರ ಸಾರಾಂಶವು ಹೀಗಿದೆ

'ಇಂದಿನ ಜಗತ್ತಿನ ಮತ್ತು ಭಾರತದ ಘಟನೆಗಳು, ಅಲ್ಲಿನ ಹಿಂದೂ ಮುಸ್ಲಿಮರನ್ನು ಸಹಜವಾಗಿ ಒಂದುಗೂಡಿಸಲು ಸಮರ್ಥವಾಗಲಾರವಾದರೆ, ಇದನ್ನು ಒಟ್ಟು ಮಾಡುವ ಪ್ರಚಂಡ ಶಕ್ತಿಯುತವಾದ ಆಯುಧವು ಗಾಂಧಿಜಿಯವರಲ್ಲಿದೆ. ಆ ಆಯುಧವೆಂದರೆ ಅಬ್ದುಲ್ ಗಫರ್ ಖಾನರು. ಅವರು ಮಹಮ್ಮದೀಯರಲ್ಲಿ ಉಜ್ವಲ ರಾಷ್ಟ್ರಾಭಿಮಾನಿಗಳು; ಗಾಂಧಿಜಿಯವರ ಅಚಲ ವಿಶ್ವಾಸಿಗಳು; ಉಜ್ವಲಮೂರ್ತಿಯ ಭಾಸ್ವಲ ಕೀರ್ತಿಯ ಆ ೬೮

## ಮಹಾತ್ಮರ ಕುರಿತು ಅಮೇರಿಕನರ ಪ್ರಶಂಸೆ

### ಗಡಿನಾಡಿನ ವೀರ ಸತ್ಯಾಗ್ರಹಿ-ಪ್ರಜಾರಕ್ಷಣೆಗಾಗಿ ವೀರ ದಲ

### ಲಂಡನ್ ಪತ್ರಿಕೆಗಳ ಅಪಪ್ರಚಾರ

ವರ್ಷ ಪ್ರಾಯದ ವೀರ ಪಠಾಣರ, ತನ್ನ ಒಂದಿಗರಾದ ಹಿಂಸಾತುರ ಪಠಾಣ ವಂಶವನ್ನು ಅಹಿಂಸೆಯ ದೃಢ ವ್ರತಕ್ಕೆ ತಿರಿಗಿಸಿದ್ದಾರೆ. ಆದರಿಂದಲೇ ಅವರಿಗೆ ಗಡಿನಾಡಿನ ಗಾಂಧಿಯವರೆಂಬ ಹೆಸರಾಗಿದೆ. ಅವರಿಗೆ ಅಹಿಂಸೆಯಲ್ಲಿರುವ ವಿಶ್ವಾಸವು ಹೇಡಿತನದ ಲಕ್ಷಣವಲ್ಲವೆಂಬದನ್ನು ಈಗಾಗಲೇ ಸತ್ಯಾಗ್ರಹ ಸಮರ ರಂಗದಲ್ಲಿ ಅವರು ತೋರಿಸಿದ ಅಗ್ನಿಪರೀಕ್ಷಾ ವಿಜಯಗಳಿಂದ ದೃಢಪಡಿಸಿರ್ರುವರು. ಆಶಾಂತ ಮೂರ್ತಿಯವರು, ಕಾಂಗ್ರೆಸಿನಲ್ಲಿ ಅಧಿಕಾರವನ್ನು ಬಯಸಲಿಲ್ಲ. ಕೊನೆಗೆ ಕಳೆದವರ್ಷ ವರ್ಕಿಂಗ್ ಕಮಿಟಿ ಸದಸ್ಯರಾಗಿ ಹೇಗೋ ಬಂದರು. ಭಾರತೀಯ ರಾಜಕೀಯ ಕ್ಷೇತ್ರದಲ್ಲಿ ಅಂತಹ ಉಜ್ವಲಮೂರ್ತಿಯೊಂದನ್ನು ಸಿದ್ಧಗೊಳಿಸಿದ ಗಾಂಧಿಜಿಯವರು, ಹಿಂದೂ ಮುಸ್ಲಿಂ ಐಕ್ಯಕ್ಕಾಗಿ ಶಕ್ತಿಯುತವಾದ ಆಯುಧವೊಂದನ್ನೇ ತಯಾರಿಸಿದ್ದಾರೆ.

“ಬ್ರಿಟಿಷರು ಭಾರತವನ್ನು ಅನ್ಯರಾಷ್ಟ್ರಗಳು ಆಕ್ರಮಿಸಲು ಸಾಧ್ಯವಿಲ್ಲವೆಂಬುದನ್ನು ಇಂದಿನ ಯುದ್ಧ ಸಮಯದಲ್ಲಿ ತೋರಿಸಿದ್ದಾರೆ. ಆದರೆ ಬ್ರಿಟನು ನಿರಂತರ ಭಾರತವನ್ನು ಹಿಡಿತದಲ್ಲಿಟ್ಟುಕೊಳ್ಳಲು ಬಗೆದಿರುವುದು. ಹೊರಗಿನವರು ಇಲ್ಲಿಗೆ ಆಕ್ರಮಿಸಿ ತಮ್ಮ ಅಧಿಕಾರವನ್ನು ಕಿತ್ತುಗೆವ ಹೆದರಿಕೆ ಬ್ರಿಟನಿಗೆ ಇದ್ದಂತೆ ತೋರುತ್ತದೆ, ಆದರೆ, ಬೇಗನೇ ಬ್ರಿಟನು ಗಾಂಧಿಜಿಯವರ ಹೇಳಿಕೆಗೆ ತಲೆಬಾಗಿ, ತನ್ನ “ಸಾಮ್ರಾಜ್ಯಶಾಹೀ ನೀತಿಯನ್ನು ಕೊನೆಗಾಣಿಸುವ” ದಿನವು ಗಾಂಧಿಜಿಯವರ ಪ್ರಭಾವದಿಂದ ಅಲ್ಪಕಾಲದಲ್ಲಿಯೇ ಆಗುವುದು.”

### ಪ್ರಜಾರಕ್ಷಣೆಗಾಗಿ ಮಹಾ ವೀರದಲ ಬೇಕು

ಅಲ್ಲಾಹಾಬಾದಿನಲ್ಲಿ ನೆರೆದ ಅಖಿಲಭಾರತ ಸನಾತನ ಧರ್ಮ ಮಹಾಸಭಾ ಪರಿಷತ್ತಿನಲ್ಲಿ ಭಾಷಣ ಮಾಡುತ್ತಾ ಪಂಡಿತ ಮಾಳವೀಯರು ಈ ಸಾರಾಂಶದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

'ನಿರಪರಾಧಿ ಪ್ರಾಣಿಗಳನ್ನು ಹಿಂಸೆ ಮಾಡುವುದು ಮಹಾಪಾಪವೆಂದು ನಾನು ತಿಳಿಯುತ್ತೇನೆ. ಮನುವೂ ಅದೇ ಅಭಿಪ್ರಾಯವಿತ್ತಿರುವನು. ಆದರೆ, ತನ್ನ ಜೀವ, ಆಸ್ತಿ, ಮನೆ, ಕುಟುಂಬ, ಮಕ್ಕಳು, ಹೆಂಗುಸರೇ ಮೊದಲಾದವರ ರಕ್ಷಣೆಗಾಗಿ, ಅನ್ಯಾಯದ ಆಕ್ರಮಣ ಮಾಡುತ್ತಿರುವಾಗ ಅದನ್ನು ಹಿಂದಟ್ಟುವ ಪ್ರಜಾಸ್ವಾತಂತ್ರ್ಯವು ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕು. ರೋಮನ್ ನ್ಯಾಯ ಶಾಸ್ತ್ರವಾಗಲಿ, ಮನುಧರ್ಮವಾಗಲಿ ಇದನ್ನು ಪುಷ್ಟೀಗೊಳಿಸುತ್ತದೆ. ಇಂಡಿಯನ್ ಪೆನಲ್ ಕೋಡಿನಲ್ಲಿಯೂ ಇದು ಉಲ್ಲೇಖಿತವಾಗಿದೆ.

'ಆದರೆ, ಬ್ರಿಟಿಷರು ಭಾರತವನ್ನು ಹಿಡಿದ ಮೇಲೆ ಶಸ್ತ್ರವನ್ನು ಹಿಡಿಯಲು ಭಾರತೀಯರಿಗೆ ಅಧಿಕಾರವನ್ನು ಕುಂಟಿಸಿದರು. ಆದರಿಂದ ನಮ್ಮ ಜನರ ಪರಿಸ್ಥಿತಿಯು ವಿಷಮವಾಯಿತು. ಹಿಂದಿನ ಕಾಲಕ್ಕೆ ಜನರಲ್ಲಿ ಆತ್ಮರಕ್ಷಣೆಯ ಶಕ್ತಿಯಿತ್ತು. ಇಂದು ಅದು ಕ್ಷೀಣವಾಗಿದೆ. ಆದರೆ ಹೀಗೆ ಮುಂದೆಯೂ ನಶಿಸಿ ಹೋಗಬಿಡಬಾರದು. ಪ್ರತಿಯೊಂದು ನಗರಕ್ಕೂ, ಎಲ್ಲಾ ಜಾತಿಯವರಿಂದ ಸೇರಿದ ಒಂದು ಪ್ರಜಾ ಸೈನ್ಯವಿರಬೇಕು. ಇದನ್ನು ನಾನು ಹಿಂದೆ ಸೂಚಿಸಿದ್ದ, ಅದಕ್ಕೆ ಸರಕಾರವು ಸಿದ್ಧವಿಲ್ಲವಾದರೆ, ಹಿಂದುಗಳಾದರೂ ತಮ್ಮ ಜಾತಿಯ ಮಟ್ಟಿಗೆ ಅಂತಹ ದಲವನ್ನು ಮಾಡುವುದು ಅವಶ್ಯವಿದೆ. ಇದರಿಂದ ಇತರರಿಗೆ ಒಂದು ಆದರ್ಶವನ್ನು ತೋರಿಸಿದಂತೆ ಆಗುತ್ತದೆ. ಇದಕ್ಕೆ ಮಹಾವೀರ ದಲವೆಂದಾಗಲಿ, ಅಥವಾ ಖುಚಿತಖಂಡ ಇನ್ನಾವುದೇ ಹೆಸರಾಗಲಿ ಇಡಬಹುದು.

### ಕಾಂಗ್ರೆಸಿನ ಕುರಿತು ಲಂಡನಿನಲ್ಲಿ ಅಪಪ್ರಚಾರ

ಮುಂದಿನ ರಾಷ್ಟ್ರಪತಿ ಪದವಿಗೆ ಮೌಲಾನಾ ಅಬುಲ್ ಕಲಂ ಅಜಾದರನ್ನು ಆರಿಸಿದ ವಿಷಯವಾಗಿ ಅಖಿಲಭಾರತದಲ್ಲಿ ಸಮಸ್ತರೂ ತಮ್ಮ ಸಂತೋಷ ಸ್ವಾಗತ

ಪಂಡಿತ ಮಾಳವೀಯವರು

ಗಳನ್ನು ವ್ಯಕ್ತಪಡಿಸಿದ್ದಾರಷ್ಟೆ. ಭಾರತದಲ್ಲಿ ಗಾಂಧಿಜಿಯವರ ಮುಂದಾಳುತನದ ಪೂರ್ಣ ಯಶಸ್ವಿತೆಯೆಂದು ಸರ್ವತ್ರ ಈ ವಿಷಯವು ಪರಿಗಣಿತವಾಗಿದೆ.

ಆದರೆ ಲಂಡನಿನಲ್ಲಿ ಇದೊಂದು ವಿಪರೀತಕ್ಕಿಟ್ಟಿರುವುದೆಂಬುದು ಆಶ್ಚರ್ಯಕರವಾಗಿದೆ. ಲಂಡನಿನವರು ಕಾಂಗ್ರೆಸಿನಲ್ಲಿ ಇಬ್ಬಣಗಳ ಪ್ರಬಲ ಹೋರಾಟಗಳು ನಡೆಯುತ್ತಿವೆಯೆಂದು ಕನಸು ಕಾಣುತ್ತಿದ್ದಾರೆ. ಬ್ರಿಟಿಷ್ ಪತ್ರಿಕೆಗಳು ಇಡೀ ಯೂರೋಪಿನ ಜನತೆಯೇ ಹಾಗೆ ಬಾವಿಸಬೇಕೆಂದು ಕಾಂಗ್ರೆಸ್ ವಾರ್ತೆಗೆ ಆರೀತಿಯ ಬಣ್ಣ ಹಚ್ಚಿಯೇ ವಿವರಿಸುತ್ತಾರೆ.

ನೇಶನಲ್ ಹೆರಾಲ್ಡ್ ಪತ್ರಿಕೆಯ ಲಂಡನ್ ವಾರ್ತಾದಾಯಿಯು ಮೌಲಾನರು ಗಾಂಧಿಜಿಯವರಂತೆ, ನಾಜಿ ತತ್ವದ ವಿರೋಧಿಯೆಂದೂ, ಬ್ರಿಟನಿಗೆ ಯುದ್ಧದಲ್ಲಿ ಸಹಾಯಕೊಡಲು ಮನಸ್ಸುಳ್ಳವರೆಂದೂ ಲಂಡನಿನಲ್ಲಿ ಪ್ರಸಿದ್ಧವಾಗಿದೆಯೆಂದು ಬರೆಯುತ್ತಾನೆ. ಶ್ರೀ ಎಂ. ಎನ್. ರಾಯರು ಕಮ್ಯುನಿಸ್ಟ್ ಧುರೀಣರಾಗಿ, ಯುದ್ಧ ವಿರೋಧಿಯೆಂದೂ, ಕಾಂಗ್ರೆಸಿನ ಯುದ್ಧ ಬೆಂಬಲ ಪ್ರತಿಜ್ಞೆಯಂತೆ, ಅವರ ತತ್ವಕ್ಕೆ ಜಯ ಸಿಗಲಿಲ್ಲವೆಂದೂ ಅಲ್ಲಿ ಪ್ರಚಾರವಾಗಿದೆಯಂತೆ!

ಯುದ್ಧದ ಕುರಿತು ಕಾಂಗ್ರೆಸು ಮಾಡಿದ ನಿರ್ಣಯವೇನೆಂಬುದನ್ನು ಈ ಜನರು 'ತಿಳಿದೇ ಇಲ್ಲ'ವೆಂದು ತೋರುತ್ತದೆ!

ಸ್ವದೇಶಾಭಿಮಾನಿ

ತಾರೀಕು 1—3—1940

## ಜಿನ್ನರ ಧೋರಣೆಯಲ್ಲಿ ಮುಸ್ಲಿಮರ ಅತೃಪ್ತಿ!

ವಿದ್ಯಾವಂತರಾದ ಮುಸ್ಲಿಂ ಯುವಕರ, ಹಾಗೂ ರಾಷ್ಟ್ರೀಯ ವಾದಿಗಳ ಹೇಳಿಕೆಯನ್ನೇ, ಮೊನ್ನೆ ನಡೆದ ಮುಸ್ಲಿಂ ಲೀಗಿನ ಸಭೆಯಲ್ಲಿ ಸರ್ ರಜಾ ಆಲಿಗಳು ಮುಂದಿಟ್ಟರೆನ್ನಬಹುದು. "ಲೀಗು ಕಾಂಗ್ರೆಸಿನೊಡನೆ ಒಪ್ಪಂದಕ್ಕೆ ಬರಬೇಕು; ಜಾತೀಯ ಸಮಸ್ಯೆಯ ಕುರಿತು ಕಾಂಗ್ರೆಸಿನೊಡನೆ ನ್ಯಾಯವಾದ ರೀತಿಯಲ್ಲಿ ಮಾತುಕತೆ ನಡೆಸಿ ಒಪ್ಪಂದವಾಗಬೇಕು" ಹೀಗೆಂದು ಹೇಳಿದ ಅವರ ಮಾತು, ಮುಸ್ಲಿಂ ಲೀಗಿನ ಇಂದಿನ ಸಂಕುಚಿತ ಧೋರಣೆಯಲ್ಲಿ ಅಸಂತೋಷಗೊಂಡ ಪಂಗಡದವರ ಸ್ಪಷ್ಟ ಧೋರಣೆಯನ್ನು ತಿಳಿಸುತ್ತದೆ! ಈ ಮಾತಿನಿಂದ ಮಿ| ಜಿನ್ನರೇ ಮೊದಲಾದ ಜಾತೀಯವಾದಿಗಳು ಕೆರಳಿಕೊಂಡರೂ, ಸರ್ ರಜಾ ಆಲಿಗಳು ತಮ್ಮ ಧೋರಣೆಯನ್ನು ಮುಂದೊತ್ತಲು ಅಸಮರ್ಥರಾದರೂ ಮುಂದಕ್ಕೆ ಅದೇ ಆಗ್ರಹದಿಂದ ಮುಸ್ಲಿಮರು ಮುಂದೊತ್ತಿ ರಾಷ್ಟ್ರದ ಪ್ರಗತಿಯಲ್ಲಿ ಸಹಾಯ ಮಾಡುವ ಶುಭಸೂಚನೆಯು ವ್ಯಕ್ತವಾಯಿತು.

ಮಿ. ಜಿನ್ನರ ಧೋರಣೆಯಿಂದ ಇಡೀ ರಾಷ್ಟ್ರವೇ ಬೇಸತ್ತು ಹೋಗಿರುವಾಗ, ಮುಸ್ಲಿಮರಾದರೂ ಬೇಸರಿಸದಿರಲು ಕಾರಣವೇ ಇಲ್ಲ. ಸ್ವಾತಂತ್ರ್ಯಕ್ಕೆ ಮುಸ್ಲಿಮರು ವಿರೋಧಿಗಳಲ್ಲ. ಆದರೆ ಮಿ. ಜಿನ್ನರು ಸ್ವಾತಂತ್ರ್ಯ ಮಾರ್ಗದಲ್ಲಿ ತರುವ ಆತಂಕವು ರಾಷ್ಟ್ರೀಯ ವಾದಿಗಳ ಮನಸ್ಸನ್ನು ಇಂದು ತೀವ್ರವಾಗಿ ನೋಯಿಸಿದೆ. ಭಾರತಕ್ಕೆ ಯಾವುದೇ ರೀತಿಯ ರಾಜ್ಯಘಟನೆಯನ್ನು ಕೊಡುವಾಗಲೂ ತಮ್ಮೊಡನೆ ವಿಚಾರಿಸಿಕೊಳ್ಳಬೇಕೆಂದು ಬರಿಯ ಆಗ್ರಹದ ಹೇಳಿಕೆ; ಪ್ರಜಾಪ್ರಭುತ್ವವು ಭಾರತಕ್ಕೆ ಬೇಡವೆನ್ನುವುದು ರಾಜಕೀಯ ನೀತಿಯ ಕೊಲೆ; ಪ್ರಜಾ ಸಮ್ಮತವಾದ ಸರಕಾರವನ್ನು, ದೂಷಿಸುತ್ತಿರುವುದು. ಕಾಂಗ್ರೆಸು ಸರಕಾರದ ಮೇಲೆ ಆರೋಪ ಹೊರಿಸುವುದು ಕೇವಲ ಮತ್ಸರ ಬುದ್ಧಿ; ಕಾಂಗ್ರೆಸನ್ನು ಹಿಂದುಗಳ ಜಾತೀಯ ಸಂಸ್ಥೆಯೆನ್ನುವುದು—ಅದರ ಅಧ್ಯಕ್ಷಪೀಠದಲ್ಲಿ ಮೌಲಾನಾ ಅಬುಲ್ ಕಲಾಂ ಅಜಾದರಂತಹವರೇ ವಿರಾಜಿಸುತ್ತಿರುವಲ್ಲಿ ಬರಿಯ ದೋಷಾರೋಪಭಾವ, ಗಾಂಧಿಜಿಯವರನ್ನು ಸರ್ವಾಧಿಕಾರಿಯೆನ್ನುವುದು, ಕುಟಿಲರೆನ್ನುವುದು ಅಲ್ಪತನ;—ಇಂತಹ ಅಸಂಖ್ಯವಾದ ದೂರಾಲೋಚನೆಯಿಲ್ಲದ, ಅರಾಷ್ಟ್ರೀಯತೆಯ ಮನೋಗತಿಯುಳ್ಳ ಮಿ| ಜಿನ್ನರನ್ನೂ ಅವರ ಲೀಗನ್ನೂ ಅವರವರ ಪಾಡಿಗೆ ಬಿಟ್ಟು, ಇಂದಿನ ರಾಷ್ಟ್ರೀಯವಾದಿಗಳಾದ ವಿದ್ಯಾವಂತ ಮುಸ್ಲಿಮರು, ಕಾಂಗ್ರೆಸ್ಸಿನೊಡನೆ "ಏಕಮತದಿಂದ ಒಂದಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಲವು ಈಗ ಬಂದಿದೆ.

ಮೌಲಾನಾ ಅಜಾದರ ಮುಂದಿನ ರಾಷ್ಟ್ರಪತಿತ್ವದಲ್ಲಿ ರಾಷ್ಟ್ರೀಯವಾದೀ ಮುಸ್ಲಿಮರು ಒಂದಾಗುವಂತಾಗಬೇಕು ಆ ಕಾಲವು ಬಹುದೂರವಿರಲಾರದೆಂದು ನಾವು ನಂಬುತ್ತೇವೆ.

### ಮುಂದಿನ ಹೆಜ್ಜೆ

ರಾಮಗರ ಕಾಂಗ್ರೆಸು ಅಧಿವೇಶನದಲ್ಲಿ ರಾಷ್ಟ್ರದ ಸಮಸ್ಯೆಯು ಯಾವ ನಿರ್ಣಯಕ್ಕೆ ಬರಬಹುದು? ಮುಂದಿನ ರಾಷ್ಟ್ರಪತಿ ಮೌಲನಾ ಅಜಾದರು, ಹೇಳಿದ ಮಾತಿನಿಂದ, ಕಾಂಗ್ರೆಸು ಪ್ರಗತಿಪಥದಲ್ಲಿ ಮುಂದುವರಿಯುವ ತೀವ್ರವಾದ ಹಜ್ಜೆಯನ್ನು ತೆಗೆದುಕೊಳ್ಳುವುದೆಂದು ಸ್ಪಷ್ಟವಾಗಿ ತಿಳಿದುಬಂದಿದೆ.

'ಇಂಡಿಯಾ ಆಕ್ಟಿ'ನ ಬದಲಾವಣೆಯಾಗದೆ, ಕಾಂಗ್ರೆಸು ಅಧಿಕಾರವನ್ನು ಪುನಃ ಸ್ವೀಕರಿಸಲಾರರೆಂದು ಅಜಾದರು ತಿಳಿಯಪಡಿಸಿದ ವಿಷಯವು ಇಂದಿನ ರಾಜಕೀಯ ಸಮಸ್ಯೆಯಲ್ಲಿ ದೃಢವಾದ ನೀತಿಯನ್ನು ತೋರಿಸಿದೆ. ಇಂದಿನ ಕಾಂಗ್ರೆಸಿನ ಪ್ರಧಾನರು, ಬ್ರಿಟಿಷ್ ಸರಕಾರದೊಡನೆ ರಾಜಿಮಾಡಿಕೊಳ್ಳಲು ಬಯಸುತ್ತಿರುವರೆಂಬ ಅಪವಾದವು ನಿರಾಧಾರವೆಂಬುದನ್ನು ಅದು ಸಾರಿದೆ,

ಮೌಲಾನಾ ಅಜಾದರನ್ನು ಕಾಂಗ್ರೆಸಿನ ಅಧಿರಾಜಪಟ್ಟಕ್ಕೇರಿಸಿದ್ದು, ಅದು ಒಂದು ರಾಜನೀತಿ ಕೌಶಲ್ಯವೆಂದು 'ಮಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯು ವಿಮರ್ಶೆ ಮಾಡಿತ್ತು. ಆದರೆ, ಅದು ಬರಿಯ ರಾಜಕೀಯ ಕೌಶಲ್ಯ ಮಾತ್ರವಲ್ಲ. ಕಾಂಗ್ರೆಸಿನ ನಿಶ್ಚಿತ ಧೋರಣೆಯ ಸೂಚನೆಯೆಂದೂ, ಪ್ರಗತಿ ಮಾರ್ಗದಲ್ಲಿ ಮುನ್ನಡೆಸುವ ಯೋಗ್ಯ ಮುಂದಾಳುಗಳ ಆಯ್ಕೆಯೆಂದೂ ಬ್ರಿಟಿಷ್ ರಾಜನೀತಿಜ್ಞರು ಬಹು ಬೇಗನೇ ತಿಳಿವ ಕಾಲವು ಬಂದಿದೆ

### ಗಾಂಧಿಸೇವಾ ಸಂಘ

ಗಾಂಧಿಸೇವಾ ಸಂಘದ ಈ ವರ್ಷದ ಅಧಿವೇಶನವು ಚರಿತ್ರಾರ್ಹವಾಗಿದೆ. ಗಾಂಧಿಸೇವಾ ಸಂಘದಲ್ಲಿ ಸದಸ್ಯರಾಗಿರತಕ್ಕವರು ರಾಜಕೀಯದಲ್ಲಿ ಭಾಗವಹಿಸಕೂಡದೆಂಬ ನಿರ್ಣಯದಿಂದ ಸರದಾರ ಪಟೇಲ, ರಾಜೇಂದ್ರಪ್ರಸಾದ ಪ್ರಭೃತಿಗಳು ಅದರ ಸದಸ್ಯತ್ವಕ್ಕೆ ರಾಜಿನಾಮೆ ಕೊಡಬೇಕಾಯಿತು.

ಖಾದೀ ಪ್ರಚಾರ, ಹಿಂದೂ ಮುಸ್ಲಿಂ ಐಕ್ಯ, ಅಸ್ಪೃಶ್ಯತಾ ನಿವಾರಣೆ ಮೊದಲಾದ ರಚನಾತ್ಮಕ ಕಾರ್ಯಗಳ ಬಗ್ಗೆ ಪಟೇಲ ಪ್ರಭೃತಿಗಳು ಗಾಂಧಿ ಸೇವಾ ಸಂಘದಿಂದ ಹೊರಗಿದ್ದರೂ ಒಳಗಿದ್ದರೂ ಯತ್ನಿಸತಕ್ಕವರೇ! ಆದರೆ ಅಂತಹ ನುರಿತ ರಾಜಕೀಯ ಧುರೀಣರನ್ನು ಇಂದಿನ ರಾಜಕೀಯ ಸಮಸ್ಯೆಯ ಕಾಲದಲ್ಲಿ ಸುಮ್ಮಗಿರಿಸಲು ಗಾಂಧಿಜಿಯವರಾದರೂ ಇಚ್ಛೆ ಪಡದ ಕಾರಣ ಮಾತ್ರ ಹಾಗೆ ಮಾಡಿರಬಹುದೆಂಬುದನ್ನು ನಾವು ತಿಳಿಯತಕ್ಕದು.

ಹೇಗಿದ್ದರೂ, ರಚನಾತ್ಮಕ ಕಾರ್ಯವನ್ನು ಮೌನದಿಂದಲಾದರೂ ಮಾಡುವುದೇ ಸ್ವರಾಜ್ಯವನ್ನು ಪಡೆವ ನಿಜವಾದ ಹಾದಿಯಾಗಿರಲು, ಆ ಕಾರ್ಯವನ್ನು ಮನಸ್ಸುಕೊಟ್ಟು ಮಾಡುವವರಿಗಿಂತ ಪ್ರತ್ಯಕ್ಷ ರಾಜಕೀಯ ವಾದಿಗಳು ಬೇರಿರಲಾರರು.

### ಮುನ್ಸಿಪಲ್ ವಿದ್ಯಾಭ್ಯಾಸ

ಕಳೆದ ಆದಿತ್ಯವಾರ ಮಂಗಳೂರು ಮುನ್ಸಿಪಲ್ ಮುಹಮ್ಮಡನ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿಯ ಕಾಲದಲ್ಲಿ, ಆ ಶಾಲೆಯ ಅಭಿವೃದ್ಧಿಯನ್ನು ಹೊಗಳುತ್ತಾ, ಮುನ್ಸಿಪಲ್ ಚ್ಯಾರಮನ್ನರಾದ ಶ್ರೀ ವೆಂಕಟ್ರಾಯ ಬಾಳಿಗಾ, ಎಂ. ಎಲ್. ಎ ಇವರು ಮುನ್ಸಿಪಲ್ ಶಾಲೆಗಳಿಂದ ನಗರದ ವಿದ್ಯಾಭ್ಯಾಸದಲ್ಲಿ ಆಗುವ ಮಹತ್ವದ ಉಪಕಾರದ ಕುರಿತು ಹೇಳಿದ ಮಾತುಗಳು ಗಮನೀಯವೂ ಪ್ರಶಂಸನೀಯವೂ ಆಗಿವೆ.

ಮುನ್ಸಿಪಾಲಿಟಿಯಲ್ಲಿ ಖಾಸಗಿ ಆಡಳಿತದ ಹಲವು ಶಾಲೆಗಳಿದ್ದು, ನಗರ ಸಭೆಯ ಶಾಲೆಗಳನ್ನು ಕಡಿಮೆ ಮಾಡುವ ಉದ್ದೇಶವು ಹಿಂದೆ ಇತ್ತೆಂದೂ ಇಂದಿನ ಕೌನ್ಸಿಲರವರು ಮುನ್ಸಿಪಲ್ ಶಾಲೆಗಳ ವಿಷಯವಾಗಿ ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡುತ್ತಿರುವರೆಂದೂ ಹೇಳಿದ ವಿಷಯವು ಅಕ್ಷರಶ ನ್ಯಾಯವಾಗಿದೆ. ಸರ್ವ ಜಾತಿಯವರ ಹಿತದ ದೃಷ್ಟಿಯಿಂದ ಬಡವರ ಮಕ್ಕಳಿಗೆ ಧರ್ಮಾರ್ಥ ವಿದ್ಯಾಭ್ಯಾಸವನ್ನು ಕೊಡುವ ಉಪಕಾರದಿಂದಲೂ ಮುನ್ಸಿಪಲ್ ಶಾಲೆಗಳಿಂದ ಸಿಗುವ ಪ್ರಯೋಜನವು ಅಪರಿಮಿತವಾಗಿದೆ. ಹಾಗಾಗಿಯೇ ಇಂದು ಎಲ್ಲಾ ಮುನ್ಸಿಪಲ್ ಶಾಲೆಗಳಲ್ಲಿಯೂ ಹುಡುಗರ ಸಂಖ್ಯೆಯು ಹೆಚ್ಚುತ್ತಿರುವುದೆಂದೂ, ಕಟ್ಟಡ, ಉಪಾಧ್ಯಾಯರ ಅಭಾವವೇ ಉಂಟಾಗಿದ್ದೆಯೆಂದೂ ನಾವು ತಿಳಿಯುತ್ತೇವೆ.

ಇಂದಿನ ನಿಷ್ಪಕ್ಷಪಾತಿಯಾದ ಚ್ಯಾರ್‌ಮಾನ್ ಶ್ರೀ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯ ಕಾಲದಲ್ಲಿ, ಕಾಂಗ್ರೆಸ್ ಕಡೆಯಿಂದ ಬಂದ ಯೋಗ್ಯರಾದ ಮುನ್ಸಿಪಲ್ ಕೌನ್ಸಿಲರ ಸಹಕಾರದಿಂದ ನಮ್ಮ ನಗರ ಸಭೆಯ ವಿದ್ಯಾಭ್ಯಾಸವು ಇನ್ನಷ್ಟು ಊರ್ಜಿತಾವಸ್ಥೆಗೆ ಬಂದು, ಒಂದು ಆದರ್ಶ ಹೈಸ್ಕೂಲನ್ನೂ ಮುನ್ಸಿಪಾಲಿಟಿಯವರು ತೆರೆದು ಹೆಚ್ಚಿನ ಲೋಕೋಪಕಾರವನ್ನು ಮಾಡುವಂತಾಗಲೆಂದು ನಾವು ಹೃತ್ಪೂರ್ವಕ ಬಯಸುತ್ತೇವೆ.

### ಶ್ರೀ ಬಾಲಮಾರುತಿ ವ್ಯಾಯಾಮ ಮಂಡಳ ಮಂಗಳೂರು

#### ವ್ಯಾಯಾಮ ಶಿಕ್ಷಣ ಶಿಬಿರ

ಜಿಲ್ಲೆಯ ಬೇರೆಬೇರೆ ಕಡೆಗಳಲ್ಲಿ, ಶರೀರ ವ್ಯಾಯಾಮ ಶಿಕ್ಷಣದ ವಿಷಯವಾಗಿ ಅನೇಕರು ಉತ್ಸಾಹಿತರಾಗಿ, ನಮ್ಮಲ್ಲಿ ತರಬೇತಿ ಹೊಂದಲು ತಮ್ಮ ಪ್ರತಿನಿಧಿಗಳನ್ನು ಕಳುಹಿಸುವರೆ ಅಪೇಕ್ಷೆಪಟ್ಟು ನಮ್ಮೊಡನೆ ಕೇಳಿಕೊಂಡಿದ್ದಾರೆ; ಆ ಬಗ್ಗೆ ಈ ವರ್ಷ ನಮ್ಮಲ್ಲಿ ವ್ಯಾಯಾಮ ಶಿಕ್ಷಕರನ್ನು ತಯಾರಿಮಾಡುವ ಶಿಬಿರವನ್ನು ತೆರೆಯುವರೆ ನಿಶ್ಚಯಿಸಿರುತ್ತೇವೆ. ಆ ಕುರಿತು ಅಪೇಕ್ಷೆ ಪಡುವವರು, ಕೆಳಗಿನ ನಿಬಂಧನೆಗಳಿಗನುಸಾರವಾಗಿ, ತಮ್ಮ ಅರ್ಜಿಗಳನ್ನು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ.

(೧) ಶಿಬಿರವು ಎಪ್ರಿಲ್ ೧೪ರಿಂದ ಮೇ ೧೪ರ ವರೆಗೆ ನಡೆಯುವುದು. (೨) ಆ ಬಗ್ಗೆ ಅರ್ಜಿಗಳು ಮಾರ್ಚ ೩೧ರ ಒಳಗೆ ತಲಪಬೇಕು (೩) ತರಬೇತಿಗೆ ಪ್ರತಿಯೊಬ್ಬನು ೧೦ ರೂಪಾಯಿಗಳಂತೆ ಪ್ರವೇಶ ಧನವು ತೆರಬೇಕಾಗುವುದು [೪] ೧೮ ವರ್ಷ ಪ್ರಾಯದಿಂದ ಮೇಲ್ಪಟ್ಟವರನ್ನು ಮಾತ್ರ ತೆಗೆದುಕೊಳ್ಳಲಾಗುವುದು.

ಸಂಘ ವ್ಯಾಯಾಮ, ಲಾಠಿ, ಲೇಜಿಮ್, ತಳವಾರು ಮೊದಲಾದ ಎಲ್ಲಾ ವ್ಯಾಯಾಮಗಳನ್ನೂ ಕಲಿಸಲ್ಪಡುವುದು. ಇದಲ್ಲದೆ, ವ್ಯಾಯಾಮದ ವಿಷಯದಲ್ಲಿ ಆರೋಗ್ಯ, ಆಹಾರ, ಬಾಲಂಟಿಯರಿಂಗ್, ಮಸಾಜಿಂಗ್, ಮೊದಲಾದ ವಿಷಯಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು. ಜುಮ್ಮ ದಾದಾಮಿತ್ತ ಅಮರಾವತಿ ವ್ಯಾಯಾಮ ಮಂಡಳಿಗಳಲ್ಲಿ ತರಬೇತಿಹೊಂದಿದ ಶ್ರೀ. ಯು. ವಾಸುದೇವ ಕಿಣಿಯವರಿಂದ ಶಿಕ್ಷಣವು ಕೊಡಲ್ಪಡುವುದು. ಜಿಲ್ಲೆಯ ಪ್ರಾಮುಖ್ಯ ವ್ಯಾಯಾಮ ಸಂಸ್ಥೆಯ ಸದುಪಯೋಗವನ್ನು ಜಿಲ್ಲೆಯ ಎಲ್ಲಾ ಕಡೆಯವರೂ ಪಡೆಯುವರೆಂದು ನಾವು ನಂಬುತ್ತೇವೆ.

**U. K. BHUJANGA NAYAK**
**CLOTH COMMISSION AGENT**
**SHEVAPET, SALEM**

ಯು. ಕೆ. ಭುಜಂಗ ನಾಯಕ್,
ಜವುಳಿ ದಲ್ಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

# ಗಾಂಧಿ-ವೈಸರಾಯರ ಭೇಟಿಯು ಯಶಸ್ವಿಯಾಗದ ಕಾರಣವೇನು

## ಎರಡು ವಿರುದ್ಧ ಧ್ಯೇಯ ನೀತಿಗಳು

### ಬ್ರಿಟನು ಕಾಂಗ್ರೆಸನ್ನು ಹೋರಾಟಕ್ಕೆ ಆಹ್ವಾನಿಸುತ್ತಿದೆ

**ಫೆಬ್ರವರಿ ಆರರಂದು ಗಾಂಧಿ–ವೈಸರಾಯರು ಭೇಟಿಯಾದ ಸಮಯ ಭಾರತ ಮತ್ತು ಬ್ರಿಟನಿನ ಜನರಲ್ಲಿ ಬಹಳ ಔತ್ಸುಕ್ಯವೆದ್ದಿತ್ತು. ಗಾಂಧಿಜಿಯವರು ಬ್ರಿಟಿಷರ ಹೇಳಿಕೆಗೆ ಸಮ್ಮತಿಸುವರೆಂದು ಬ್ರಿಟನಿನ ಜನರು ವಿಚಾರಿಸಿದ್ದರು ಲಿನ್‌ಲಿತ್‌ಗೋ ರವರು ಕಾಂಗ್ರೆಸಿನ ಕೇಳಿಕೆಗೆ ಒಪ್ಪಿಗೆ ಕೊಡುವರೆಂದು ಭಾರತದ ಜನರು ವಿಚಾರಿಸಿದ್ದರು. ಆದರೆ ಎಲ್ಲರ ಆಶೆಯೂ ನಿರಾಶೆಯಲ್ಲಿ ಪರಿಣಾಮ ಹೊಂದಿತು. ಹಾಗಾದರೆ ಇವರಿಬ್ಬರಲ್ಲಿ ಉಂಟಾಗಿರುವ ಅಭಿಪ್ರಾಯ ಭೇದವೇನಿರಬೇಕು?**

#### ಭಿನ್ನದೃಷ್ಟಿಗಳು

"ಭಾರತದ ಅದೃಷ್ಟವನ್ನು ಬ್ರಿಟಿಷರೇ ತೀರ್ಮಾನಿಸುವರೆಂದು ವೈಸರಾಯರ ಅಭಿಪ್ರಾಯವಾಗಿತ್ತು. ಆದರೆ ಭಾರತದ ಭವಿಷ್ಯತ್ತು ಭಾರತೀಯರಿಗೆ ನಿರ್ಣಯಿಸುವ ಅಧಿಕಾರವು ಸಿಗಬೇಕೆಂದು ಕಾಂಗ್ರೆಸಿನ ಹೇಳಿಕೆಯಾಗಿದೆ. ಈ ಸ್ಪಷ್ಟ ಭೇದಗಳಲ್ಲಿ ನಾವು ಬೇರಾಗಿರುವೆವು" ಎಂದು ಮಹಾತ್ಮಾಜಿಯವರೇ ತಮ್ಮ ಮಾತುಕತೆಯ ಪರಿಣಾಮದ ಕುರಿತು ಹೇಳಿಕೆ ಕೊಟ್ಟಿರುವರಲ್ಲವೆ?

ಈ ಹೇಳಿಕೆಯಂತೆಯೇ ಸ್ಪಷ್ಟವಾಗುವ ಮೊದಲನೆಯ ಭೇದವೆಂದರೆ ರಾಷ್ಟ್ರದ ಭವಿಷ್ಯನಿರ್ಮಾಣದಲ್ಲಿ ಬ್ರಿಟಿಷರಿಗಿರುವ ಹಕ್ಕಿನ ಕುರಿತಾಗಿದೆ. ಪ್ರಜಾಪ್ರಭುತ್ವಪದ್ಧತಿಯಂತೆ ಸಂಪೂರ್ಣ ರಾಜಕೀಯ ಸ್ವಾತಂತ್ರ್ಯವು ತಮಗೊದಗಬೇಕೆಂದು ಕಾಂಗ್ರೆಸು ಕೇಳುತ್ತದೆ. ಆದರೆ ಬ್ರಿಟಿಷರು ತಾವು ಕೇವಲ ಗೆದ್ದುಕೊಂಡರಾಷ್ಟ್ರವೆಂದು ಮಾತ್ರವಲ್ಲ, ತಾವು ಮಾಡಿಕೊಂಡ ಕೆಲವೊಂದು ಒಪ್ಪಿಗೆಗಳಂತೆ, ಇಲ್ಲಿನ ಜನರ ಭವಿಷ್ಯತ್ತನ್ನು ಭದ್ರವಾಗಿರಿಸುವ ಹಕ್ಕು ತಮಗಿರಬೇಕೆನ್ನುತ್ತಾರೆ. ಇದರಲ್ಲಿ ಸಾಮ್ರಾಜ್ಯಶಾಹಿಯಬುದ್ಧಿಯೇ ಅಡಕವಾಗಿದೆಯೆಂದೂ ಭಾರತದ ಹಿತಸಂರಕ್ಷಣೆಯ ಹಾಡು ಕೇವಲ ಮರೆಮಾಡುವ ಮಾಟವೆಂದೂ ಭಾರತದ ರಾಜನೀತಿಜ್ಞರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ.

ಭಾರತೀಯರಿಗೆ ತಮ್ಮ ಸ್ವಾತಂತ್ರ್ಯವನ್ನು ರಚಿಸುವ ಹಕ್ಕಿಲ್ಲವೆಂದು ಬ್ರಿಟಿಷರ ವಾದ. ಆದಕ್ಕೆ ಅವರು, ಅಲ್ಪಸಂಖ್ಯಾಕರೂ ಅತ್ರಿಕರಾಜರುಗಳೂ ಎತ್ತುವ ಆಕ್ಷೇಪಣೆಯನ್ನು ಮುಂದೊಡ್ಡಿ ಅವರ ಹಿತಸಂರಕ್ಷಣೆಯನ್ನು ಬ್ರಿಟಿಷ್ ಸರಕಾರವು ಮಾಡಬೇಕಾಗಿದೆಯೆನ್ನುತ್ತಾರೆ. ಅಂದಿನಿಂದ ಇಂದಿನ ವರೆಗೆ ಮೊನ್ನೆಯ ಜೆಟ್ಲೆಂಡರ ಭಾಷಣದಲ್ಲಿಯೂ ಅದೇ ಜಗಳದ ವಾದ ವಿವಾದ, ಮಾಟಗಾರಿಕೆಯ ಧ್ವನಿಯು ಕೇಳಿಬಂತು.

#### ಅಲ್ಪಸಂಖ್ಯಾಕರದು ಸಮಸ್ಯೆಯೇ?

ಹೀಗೆ ಆಕ್ಷೇಪವೆತ್ತುವ ಬ್ರಿಟಿಷರು ಸಹಜವಾಗಿ ಭಾರತದ ಹಿತಾಕಾಂಕ್ಷಿಗಳೇ ಎಂದು ಈಗ ಸಂದೇಹವುಂಟಾಗಿದೆ. ಏಕೆಂದರೆ ಕಾಂಗ್ರೆಸು ಕೇಳುವುದು ಸ್ವಾತಂತ್ರ್ಯವನ್ನು. ಸ್ವಾತಂತ್ರ್ಯದ ದಾರಿಯಲ್ಲಿ ಹಾಕುವ ಮುಳ್ಳುಗಳಿವು. ಒಮ್ಮೆ ಭಾರತವು ಸ್ವತಂತ್ರಗೊಂಡರೆ ಮುಂದಕ್ಕೆ ಬ್ರಿಟನಿಗೆ ಇದರ ಮೇಲೆ ಅಧಿಕಾರವು ಏನೇನೂ ಉಳಿಯಲಾರದೆಂದು ಹೀಗೆ ತಲೆಮರೆಸುವ ಬುದ್ಧಿ ನಡೆಯುತ್ತಿದೆ.

ಅಲ್ಪಸಂಖ್ಯಾಕರು ಭಾರತೀಯರೇ ಆಗಿದ್ದಾರೆ. ಕಾಂಗ್ರೆಸು ಕೇಳುವ ಸ್ವಾತಂತ್ರ್ಯವು ಸಮಸ್ತ ಭಾರತೀಯರಿಗೂ ಅನ್ವಯಿಸುವುದಾಗಿದೆ. ಹೀಗಿರುವಲ್ಲಿ ಅಲ್ಪಸಂಖ್ಯಾಕರೆಂಬವರು ಪ್ರತ್ಯೇಕ ಆಕ್ಷೇಪವೆತ್ತುವರೆಂಬುದಕ್ಕೆ ಅರ್ಥವೇ ಇಲ್ಲ. ಮುಂದಿನ ಸ್ವಾತಂತ್ರ್ಯವು ಹೇಗಿರಬೇಕೆಂದು ನಿರ್ಣಯಿಸುವುದು ಸಮಸ್ತ ಭಾರತೀಯರ ಹಕ್ಕಿನಲ್ಲಿದೆ. ಅಲ್ಪಸಂಖ್ಯಾಕರೆಂಬವರು ಬ್ರಿಟಿಷರ ಆಕ್ರಮಣದ ಮೇಲೆ ಭಾರತಕ್ಕೆ ಬಂದವರಲ್ಲ; ಅಂತಹ ಸಂದರ್ಭದಲ್ಲಿ ಮಾತ್ರ ಬ್ರಿಟಿಷರು ಅವರ ಹಿತರಕ್ಷಣೆಗಾಗಿ ತಾವು ಹೊಡೆದಾಡಬೇಕಲ್ಲದೆ, ಭಾರತೀಯರಿಗೆ ಕೊಡುವ ಸ್ವಾತಂತ್ರ್ಯಕ್ಕೆ ಅಲ್ಪಸಂಖ್ಯಾಕರೆನಿಸುವ ಭಾರತೀಯರೇ ಆಕ್ಷೇಪ ತರುವರೆಂಬುದು ಕೇವಲ ಕುಹಕತನವಾಗಿದೆ.

#### ಯಾವ ಬಗೆಯ ಸ್ವಾತಂತ್ರ್ಯ?

ಇದೆಲ್ಲದರ ಗುಟ್ಟು ಮುಖ್ಯವಾಗಿ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ಕೊಡುವ ವಿಚಾರದಲ್ಲಿದೆ. ಇಂದಿನ ಭಾರತೀಯರ ಆವೇಶವನ್ನು ತಗ್ಗಿಸಲು, ಯಾವುದಾದರೊಂದು ರೀತಿಯ ಒಣಚರ್ಮದ ತುಂಡಿನಂತಹ ಒಂದು ಸ್ವಾತಂತ್ರ್ಯವನ್ನು ಕೊಡಲು ಬ್ರಿಟಿಷರು ತಯಾರಿರಬಹುದು. ಆದರೆ ಅದನ್ನು ಅಂಗೀಕರಿಸಲು ಕಾಂಗ್ರೆಸು ಖಂಡಿತ ಸಿದ್ಧವಿಲ್ಲ. 'ಹೊರಗಡೆಯವರ ಯಾವ ಸಂಬಂಧವೂ ಇಲ್ಲದ ಸಂಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸಿನ ಧ್ಯೇಯವೆಂದು' ಗಾಂಧಿಜಿಯವರು ಸಾರಿ ಸಾರಿ ಹೇಳಿದ್ದಾರೆ.

ಈ ಮೇಲಿನ ವಿಷಯಗಳಿಂದ ಗಾಂಧಿಜಿ ಮತ್ತು ವೈಸರಾಯರ ಮಾತುಕತೆಯು ಯಶಸ್ವಿಯಾಗದಿರಲು ಕಾರಣವೇನೆಂಬುದು ಸ್ಪಷ್ಟವಾಗುವುದು. 'ಡೈಲಿ ಹೆರಾಲ್ಡಿ'ಗೆ ಗಾಂಧಿಜಿಯವರು ತಮ್ಮ ಭೇಟಿಯ ವಿಷಯದಲ್ಲಿ ಕೊಟ್ಟ ಸಂದೇಶದಲ್ಲಿಯೂ ಅದನ್ನೇ ಸ್ಪಷ್ಟಗೊಳಿಸುವರು. ಭಾರತವನ್ನು ಭಾರತೀಯರ ಹಸ್ತಬಿಟ್ಟುಕೊಡಬೇಕಾಗಿ ಗಾಂಧಿಜಿಯವರು ಕೇಳುತ್ತಿದ್ದಾರೆ, ಬ್ರಿಟನು ಇನ್ನೂ ತನ್ನ ವಜ್ರಬಂಧನವನ್ನು ಸಡಿಲಿಸಲು ಮನಸ್ಸು ಮಾಡುವುದೇ ಇಲ್ಲ.

#### ಗೌರವಪೂರ್ಣ ಒಪ್ಪಂದವು ಸಾಧ್ಯವೆ?

ಹೀಗೆ ಒಂದರ ಮುಖ ಒಂದೆಡೆ, ಇನ್ನೊಂದರ ಮುಖ ಇನ್ನೊಂದೆಡೆಯಾಗಿರುವಾಗ ಇವುಗಳೆರಡಕ್ಕೂ ಗೌರವಯುತವಾದ ಒಪ್ಪಂದವಾಗುವ ಸಂದರ್ಭಗಳು ಸಹಜವಾಗಿ ಸಾಧ್ಯವಿಲ್ಲ. ಒಪ್ಪಂದ ಮಾಡುವಲ್ಲಿ ಕಾಂಗ್ರೆಸು ಸ್ವಾತಂತ್ರ್ಯದ ಧ್ಯೇಯವನ್ನು ಕೆಳಮಟ್ಟಕ್ಕಿಳಿಸಬೇಕೆಂದು ಯಾರಾದರೂ ಹೇಳುವುದು ಮೂರ್ಖತನ. ಬ್ರಿಟನು ಮಾತ್ರ ಇಂದು ನ್ಯಾಯಮಾರ್ಗವನ್ನು ಹಿಡಿದಿಲ್ಲ, ಸಾಮ್ರಾಜ್ಯಶಾಹೀ ಬುದ್ಧಿಯನ್ನು ಏನೇನೂ ಸಡಿಲಿಸಿಲ್ಲ.

ಫೆಬ್ರವರಿ ಆರರಂದು ಸರಕಾರವು ಪ್ರಕಟಿಸಿದ ಪ್ರಕಟಣೆಯಲ್ಲಿ ಬ್ರಿಟನು ಭಾರತಕ್ಕೆ 'ಡೊಮಿನಿಯನ್ ಸ್ಟೇಟಸ್' ಎಂಬ ಪಾರ್ಲಿಮೆಂಟಿನಿಂದ ನಮೂದಿತವಾದ ರೀತಿಯ ಸಾಮಂತ ಸ್ವರಾಜ್ಯವನ್ನು ಕೊಡಲು ಇಚ್ಛೆ ಪಡುತ್ತದೆಯೆಂದು ತಿಳಿದುಬರುತ್ತದೆ. ಕಾಂಗ್ರೆಸು 'ಸಾಮಂತ ಸ್ವರಾಜ್ಯ'ವೆಂಬ ಶಬ್ದಕ್ಕಾಗಿ ಜಗಳಾಡುವುದಿಲ್ಲ. ಆದರೆ ಆ ಸ್ವರಾಜ್ಯದ ನಿಯಮ ಘಟನಾವಳಿಗಳನ್ನು ಭಾರತೀಯರೇ ನಿರ್ಣಯ ಮಾಡಬೇಕೆಂದು ಮಾತ್ರ ಹೇಳುತ್ತಿದೆ. ಇದಕ್ಕೆ ಒಪ್ಪದ ಕಾರ್ಯವು ನ್ಯಾಯಸಮ್ಮತವೆನ್ನಬಹುದೆ?

ಅಂತೂ ಇಂದಿನ ಇಂತಹ ಪರಿಸ್ಥಿತಿಯಲ್ಲಿ ಮುಂದಕ್ಕೆ ಕಾಂಗ್ರೆಸು ಉಗ್ರಹೋರಾಟಕ್ಕೆ ಇಳಿಯದೆ ನಿರ್ವಾಹವಿಲ್ಲವಾಗಿದೆ. ತನ್ನ ತಿರಸ್ಕಾರವಾದ ಧೋರಣೆಯನ್ನು ಸಡಿಲಿಸದೆ ಬ್ರಿಟನು ಕಾಂಗ್ರೆಸನ್ನು ಆಂದೋಲನಕ್ಕೆ ಆಹ್ವಾನಿಸುತ್ತಿದೆ. ಆದರೆ ಆಂದೋಲನದ ಅನಾಹುತವನ್ನು ತಪ್ಪಿಸುವ ಹೊಣೆಗಾರಿಕೆಯು ಎಲ್ಲರಿಗಿಂತಲೂ ಅಧಿಕವಾಗಿ ಬ್ರಿಟನಿನ ಮೇಲೆಯೇ ಇಂದು ಆಧರಿಸಿದೆ.


ಸಾವಕಾರ ಶ್ರೀನಿವಾಸರಂಗಪೈ
[ ಸ್ಥಾಪನೆ: ಕ್ರಿ. ಶ. 1858 ]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

# ನಾಜೀ ಪಾಳೆಯದೊಳಗೆ ಅಂತಃಕಲಹ!

## ಗೋರಿಂಗನ ಪ್ರಾಣಕ್ಕೆ ಸಂಚಿನ ಯತ್ನ!

## ಜರ್ಮನಿಯು ಬಹುಕಾಲ ಹೋರಾಡದು

### ಜನತೆಯಲ್ಲಿ ಅಸಂತೃಪ್ತಿ ಹಬ್ಬಿದೆ!

ಜನರಲ್ ಗೋರಿಂಗ್

ಹಿಟ್ಲರನ ಅನುಯಾಯಿಗಳ ಪರಸ್ಪರ ದ್ವೇಷಾಸೂಯೆಗಳ ಪರಿಣಾಮದಿಂದ ಹಿಟ್ಲರನ ಅಸ್ತಿತ್ವವು ಚಿಂತಾಸ್ಪದವಾಗಿ ಕಂಡು ಬಂದಿದೆ. ಹಿಟ್ಲರನ ಅಚ್ಚುಮೆಚ್ಚಿನವನಾದ ಫೀಲ್ಡಮಾರ್ಶಲ್ ಗೋರಿಂಗನ ಮೇಲೆಯೇ, ಅವನ ಇನ್ನೊಬ್ಬ ಅನುಯಾಯಿಯಾದ ಹಿಮ್ಲರ ಎಂಬವನ ಕಡೆಯವರು ಕೈ ಮಾಡಿದರು. ಕೆಲವು ದಿನಗಳ ಹಿಂದೆ ಗೋರಿಂಗನು ಪಟೋರ್ಟಿಲ್ ಕಾಡುಗಳಲ್ಲಿ ಮೃಗಬೇಟೆಗೆ ಹೋದಾಗ ಯಾರೋ ಕೆಲವರು ಅವನ ಮೇಲೆ ಗುಂಡು ಬಿಟ್ಟರು. ಗೋಲಿ ಬಂದು ಕಾಲಿಗೆ ನಾಟಿ ಗೋರಿಂಗನು ಇಷ್ಟುದಿನ ಚಿಕಿತ್ಸೆಯನ್ನು ಹೊಂದಬೇಕಾಯಿತು. ಆದರೆ ಪಾಳೆಯದೊಳಗಿನ ಕಚ್ಚಾಟದ ಈ ಸುದ್ದಿಯು ಇತರ ಜರ್ಮನರಿಗೂ ಹೊರಗಿನ ಪ್ರಪಂಚಕ್ಕೂ ತಿಳಿದರೆ ಪ್ರಮಾದವಾದೀತೆಂದು ಬೆದರಿ ಇಷ್ಟರ ತನಕ ಹಿಟ್ಲರನು ಆ ಸುದ್ದಿಯನ್ನು ಗುಪ್ತವಾಗಿಟ್ಟಿದ್ದನು! ಆದರೆ ಈಗಂತೂ ಆ ಸುದ್ದಿ ಹೇಗೋ ಹಾಗೆ ಹೊರಗೆ ಬಿದ್ದಿದೆ. ನಾಝಿ ಪೋಲೀಸರು ಈ ಅತ್ಯಾಚಾರದ ಸಂಬಂಧ ಮೂವರನ್ನು ಸೆರೆ ಹಿಡಿದಿದ್ದಾರೆ ಕೊಲೆಗೆ ಪ್ರೇರೇಪಿಸಿದವನನ್ನು ಹಿಡಿಯುವ ಶಕಪ್ರಯತ್ನಗಳಾಗಿವೆ. ಆದರೆ ಆ ಚತುರನು ಮಾತ್ರ ಇದುವರೆಗೆ ಸಿಕ್ಕಿಲ್ಲ!

### ಹಿಟ್ಲರನಿಗೆ ದೂರು

ಗೋರಿಂಗನ ಪ್ರಾಣಾಪಹಾರದ ಈ ಪ್ರಯತ್ನವು ನಡೆದುದರಿಂದ ಅವನಿಗೂ ಹಿಮ್ಲರನಿಗೂ ಇದ್ದ ಮನಸ್ತಾಪವು ಮತ್ತಷ್ಟು ಹೆಚ್ಚುವಂತಾಗಿದೆ. ತನ್ನ ಪ್ರಾಣರಕ್ಷಣೆಗೆ ಪೋಲೀಸ ಅಧಿಕಾರಿಯಾದ ಹಿಮ್ಲರನು ಮಾಡಿದ ವ್ಯವಸ್ಥೆಯು ತೃಪ್ತಿಕರವಾಗಿರಲಿಲ್ಲವೆಂದು ಅವನು ಹಿಟ್ಲರನಿಗೆ ದೂರು ಕೊಟ್ಟಿದ್ದಾನೆ. ಗೋರಿಂಗನು ಹಿಮ್ಲರನ ಮೇಲೆ ಮಾಡಿದ ದೋಷಾರೋಪಣೆಯನ್ನು ಹಿಟ್ಲರನು ಒಪ್ಪಿಲ್ಲವಾದರೂ, ಗೋರಿಂಗನ ಮೈಕಾವಲಿಗೆ ಯಾವಾಗಲೂ ಕೆಲವರು ಅಂಗರಕ್ಷಕರು ಇರಬೇಕಾಗಿದೆ ಎಂದು ಅವನು ವಿಧಿಸಿದ್ದಾನೆ.

### ಶಾಸನಕಾರ್ಯದಲ್ಲಿ ಗೋರಿಂಗನ ಕೈ.

ಜರ್ಮನಿಯ ಬೇರೆಬೇರೆ ಆಡಳಿತ ವಿಭಾಗಗಳಿಂದ ಹಿಟ್ಲರನೀಗ ವಿಶೇಷ ಆಸಕ್ತಿಯನ್ನು ತೋರಿಸುತ್ತಿಲ್ಲ. ಕಾರ್ಯೋದ್ದೇಶ ಮತ್ತು ಧೋರಣೆಯನ್ನು ಮಾತ್ರ ಅವನು ರೂಪಿಸುತ್ತಿರುವನು. ಮಿಕ್ಕಿದ ಎಲ್ಲಾ ವಿಚಾರಗಳನ್ನು ಗೋರಿಂಗನೇ ನೋಡಿಕೊಳ್ಳುತ್ತಿದ್ದಾನೆ. ಯುದ್ಧಕಾಲದ ಆರ್ಥಿಕ ಯೋಜನೆಗಳೆಲ್ಲ ಗೋರಿಂಗನ ಪ್ರೇರೇಪಣೆಯಿಂದಲೇ ತಯಾರಾಗುತ್ತಲಿರುವವು, ಹೀಗಾದ್ದರಿಂದ ಜರ್ಮನ ರಾಜಕೀಯಗಳಲ್ಲಿ ಗೋರಿಂಗನ ಸ್ಥಾನಮಹತ್ವವು ಬೆಳೆಯುತ್ತಾ ಇದೆ. ಆದರೆ ಗೋರಿಂಗನು ಈ ರೀತಿ ಹಿಟ್ಲರನ ಪ್ರಧಾನಿಯಾಗುವದು ಇತರ ಪ್ರಮುಖರಿಗೆ ಮೆಚ್ಚುಗೆಯಾದ್ದಾಗಿಲ್ಲ. ಅವರೆಲ್ಲ ಗೋರಿಂಗನು ಹಿಟ್ಲರನ ಅವಕೃಪೆಗೆ ಪಾತ್ರನಾಗುವಂತೆ ಗುಪ್ತ ಪ್ರಯತ್ನಗಳನ್ನು ಮಾಡುತ್ತಿರುತ್ತಾರೆ. ಜರ್ಮನಿಯ ಆರ್ಥಿಕ ಸ್ಥಿತಿಯು ಕೆಟ್ಟು ಅದನ್ನು ಸುಧಾರಣೆಗೆ ತರುವದು, ಕಠಿನವಾಗಿರುವದರಿಂದ ಒಬ್ಬರನ್ನೊಬ್ಬರು ಕೆಡವಿಹಾಕುವ ಪ್ರಯತ್ನವೂ ಅಲ್ಲಿನವರಿಗೆ ಬಹಳ ಸುಲಭವಾಗಿ ಪರಿಣಮಿಸಿದೆ.

### ಯುದ್ಧ ಎಷ್ಟುಕಾಲ ನಡೆದೀತು?

ಐದುವರ್ಷಕ್ಕೊ ಏಳುವರ್ಷಕ್ಕೊ ಯುದ್ಧದ ತಯಾರಿ ಆಗಿದೆ ಎಂದೂ ಜರ್ಮನಜನತೆಯು ಕಷ್ಟ ಅನುಭವದ ಪ್ರಾರಂಭದೆಶೆಯಲ್ಲಿ ಮಾತ್ರ ಇದ್ದಾರೆಂದೂ, ಆದರೆ ಜರ್ಮನರನ್ನು ಸೋಲಿಸುವ ಶಕ್ತಿಯು ಪ್ರಪಂಚದ ಯಾವರಾಷ್ಟ್ರಕ್ಕೂ ಇರುವದಿಲ್ಲವೆಂದೂ ಗೋರಿಂಗನು ಮಿತ್ರಮಂಡಳಿಯ ಕಲ್ಪನೆಯನ್ನು ಬಿರಿಯುವ ಮತ್ತು ಜರ್ಮನರಿಗೆ ತಮ್ಮ ವಿಜಯದ ಭ್ರಮೆಯನ್ನು ಹುಟ್ಟಿಸುವ ಎಂಥ ಮೋಹಕ ಮಾತುಗಳನ್ನಾಡಿದರೂ ಯುದ್ಧವು ಮೊದಲಿನಂತೆ ಹೆಚ್ಚುಕಾಲ ನಡೆಯದೆಂದೇ ತೋರುತ್ತದೆ. ಪ್ರಾಯಶಃ ಅದು ಇನ್ನು ಒಂದು ವರ್ಷದೊಳಗಾಗಿಯೇ ಮುಗಿಯಬಹುದು. ಬ್ರಿಟಿಷರ ಮತ್ತು ಮಿತ್ರಮಂಡಳಿಯ ಕಾಲಜ್ಞಾನ, ಸೂಕ್ಷ್ಮದರ್ಶಿತ್ವ, ದೂರದರ್ಶಿತ್ವ, ಮತ್ತು ಚಾತುರ್ಯಗಳ ಪರಿಣಾಮದಿಂದ ಕಳೆದ ಮಹಾಯುದ್ಧದ ಕೊನೆಕಾಲದಲ್ಲಿ ಜರ್ಮನಿಯಲ್ಲಿ ಎಂಥ ಪರಿಸ್ಥಿತಿ ಉಂಟಾಗಿದ್ದಿತೋ ಅದು ಈಗಾಗಲೇ ತೋರಿಕೊಂಡಿದೆ. ಮಿತ್ರಮಂಡಳಿಯ ತಡೆಯಿಂದದಾಗಿ ಜರ್ಮನಿಗೆ ಹೊರಗಿನಿಂದ ಆವಶ್ಯಕ ಸಾಮಗ್ರಿಗಳು ಸಿಕ್ಕುವದು ಕಷ್ಟವಾಗಿದೆ; ಜರ್ಮನಿಯೊಳಗೆ ಅವುಗಳನ್ನು ಉತ್ಪಾದನಗೊಳಿಸುವದು ಮತ್ತಷ್ಟು ಕಷ್ಟವಾಗಿದೆ. ಆದುದರಿಂದ ನಾಝಿ ಪ್ರಮುಖರು ಯುದ್ಧವು ಐದೇಳು ವರ್ಷ ನಡೆಯಲೆಂದು ಹೇಳಿದರೂ, ಜರ್ಮನಿ ಜನರಿಗೆ ಅದು ಶೀಘ್ರ ಮುಗಿಯಬೇಕೆಂದು ತೋರಿದೆ. ಹಾಗೆ ಅದು ಒಂದಲ್ಲ ಒಂದು ರೀತಿಯಿಂದ ಬೇಗ ಕೊನೆಗೊಳ್ಳುವದಿಲ್ಲವಾದರೆ ಜರ್ಮನಿಯ ನಾಮಾವಶೇಷವಾಗುವದು ಖಂಡಿತ.


## ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

### ೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ

| ಮೂಲಧನ | ರೂ. ಆ. ಪೈ. | | ರೂ. ಆ. ಪೈ. |
|---|---|---|---|
| ತೆತ್ತಲ್ಪಟ್ಟ | 6,00,000-0-0 | ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ | 95,489-4-3 |
| ಪೈಡ್ ಅಫ್ | 3,91,342-0-0 | **ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟಿದ್ದು** | |
| ರಿಸರ್ವ್ ಫಂಡು | 4,50,000-0-0 | ಬೆಲೆಬಾಳುವ ಸೆಕ್ಯೂರಿಟಿ | 40,97,741-5-6 |
| **ಡಿಪೊಸಿಟ್** | | ಹುಂಡೀ ಪತ್ರ ಮೊದಲಾದುವುಗಳು | 10,30,649-2-10 |
| ಫಿಕ್ಸೆಡ್, ಕರೆಂಟ್ ಇತ್ಯಾದಿ | 81,21,622-8-1 | ಲೇವಣಾತಿ | 20,64,586-2-0 |
| ಬೇಂಕುಗಳಿಗೆ ಸಲ್ಲತಕ್ಕದ್ದು | ಇಲ್ಲ | ವಿವಿಧ | 9,82,098-10-4 |
| ವಿವಿಧ | 10,51,799-1-7 | ನಗದಿ | 17,99,207-1-3 |
| ಈ ವರ್ಷದ ಲಾಭ | 55,003-0-6 | | |
| ಜುಮ್ಲಾ | 1,00,69,766-10-2 | ಜುಮ್ಲಾ | 1,00,69,766-10-2 |

## ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂನಾ ಕ್ಲಿನಿಕ ಮಾಡಿ ಔಷಧ ಭೇದಿರಿ. ಮುಂತಾದ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾವಾಹಿಮ, ಠಾಣೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಅಂದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ದಬ್ಬಿಯ ಕ್ರಯರೂ. ೪-೦-೦

ವಿ. ಪಿ. ೦-೬

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

## ಎಂಡ್ರೂಸ್ ಲಿವರ್ ಸೋಲ್ಟ್





ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮ ಸೂತ್ರ!

ಈ ವಾರದ ಕತೆ:

# ನನ್ನ ಲಲಿತೆ!

ಕನ್ನಡಿಸಿದವರು ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ

ಆಗ ನನಗೆ ಏಳು ವರ್ಷ.

ನೆರೆಮನೆಯಲ್ಲಿ ಒಬ್ಬ ಹುಡುಗಿ ಇದ್ದಳು ಲಲಿತೆ ಎಂಬುದು ಅವಳ ಹೆಸರಾಗಿದ್ದಿತು.

ನಮ್ಮ ಹಗಲು ರಾತ್ರಿಯ ಆಟ-ಓಟ, ಹೊಡೆದಾಟ ಎಲ್ಲಾ ಒಟ್ಟೊಟ್ಟಿಗೆ ಆಗುತ್ತಿದ್ದವು ನಾವು ಯಾವಾಗಲೂ ಒಟ್ಟೊಟ್ಟಿಗೆ ಇರುತ್ತಿದ್ದೆವು

ಲಲಿತೆ ಸುಂದರಿಯಾಗಿದ್ದಳು. ಹೇಗೆ ಎಂದು ಕೇಳಬೇಡಿ. ಬಾಲ್ಯದಿಂದಲೂ ನಾನು ಹಾಗೆ ತಿಳಿದಿದ್ದೆ. ಅವಳು ಸುಂದರಿ ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇದ್ದಿಲ್ಲ.

ನಾನು ಅವಳಿಗಿಂತ ಎರಡು ವರ್ಷ ದೊಡ್ಡವ. ಮೂರನೆ ಕ್ಲಾಸಿನಲ್ಲಿ ಓದುತಿದ್ದೆ. 'ಅಲ್ಪ ಸ್ವಲ್ಪ ಇಂಗ್ಲಿಷ ಮಾತನಾಡುತಿದ್ದೆ. ಲಲಿತೆ ಬೆಪ್ಪಾಗಿ ನನ್ನ ಮಾತುಗಳನ್ನು ಕೇಳುತಿದ್ದಳು. ಆಗ ಅವಳ ಆಶ್ಚರ್ಯ ನೋಡಿ ನನಗೆ ಆನಂದವಾಗುತಿತ್ತು

ಲಲಿತೆ ಮತ್ತು ನಾನು ಅಂಗಳದಲ್ಲಿ ಕುಳಿತು ಆಡುತಿದ್ದೆವು, ಕತೆಹೇಳುತಿದ್ದೆವು ಅವರ ಮಾತು, ಇವರ ಮಾತು ಹೇಳುತ್ತಿದ್ದೆವು.

ಅಂದು ಭೂಗೋಳದ ಒಂದು ಹೊಸ ಪುಸ್ತಕ ತಂದಿದ್ದೆ ಅದರಲ್ಲಿ ಬಣ್ಣ ಬಣ್ಣದ ಚಿತ್ರಗಳು, ನಕ್ಷೆಗಳು ಇದ್ದುವು ಲಲಿತೆಯನ್ನು ಕೆಣಕಿಸಬೇಕೆಂದೇ ಅದನ್ನು ಅವಳಿಗೆ ತೋರಿಸಿದೆ

ಅವಳು ದೂರದಿಂದ ನೋಡಿದಳು ನಿಂತು ಅಂಗಲಾಚಿ ಕೊಡು ಎಂದು ಬೇಡಿದಳು ನಾನು ಕೊಡಲಿಲ್ಲ ಮುಟ್ಟಲಿಕ್ಕೆ ಸಹ ಬಿಡಲಿಲ್ಲ

ಈಗಲೂ ನೆನೆಪಿದೆ-ಆ ಸಾಯಂಕಾಲ

'ಮಾಧವ, ಸ್ವಲ್ಪ ನೋಡುತ್ತೇನೆ ಕೊಡು' ಎಂದು ಅವಳು ಹೇಳಿದಳು.

ನಾನು-'ಊಂ ಹೂಂ' ಎಂದೆ

ಅವಳು ಪರಿಪರಿಯಿಂದ ಬೇಡಿದಳು.

ನಾನು-'ಇಲ್ಲ, ಹೊಸ ಪುಸ್ತಕ, ಕೊಳಕಾಗುತ್ತದೆ' ಎಂದೆ

ಲಲಿತೆಯ ಎರಡೂ ಕಣ್ಣುಗಳು ತುಂಬಿಬಂದವು. ವಿಜಯಗರ್ವದಿಂದ ನನ್ನ ಎದೆ ಬಾಡಿನಂತೆ ಉಬ್ಬಿತು.

ಸಾಯಂಕಾಲ ಸ್ವಲ್ಪವೇ ಆಡಿ ಮನೆಗೆ ಬಂದಿದ್ದೆ. ಹೋಗಿ ನೋಡಿದೆ. ಪುಸ್ತಕ ಇರಲಿಲ್ಲ ನನಗೆ ಎಲ್ಲಾ ತಿಳಿಯಿತು. ಲಲಿತೆಯ ಮನೆಗೆ ಹೋದೆ. ಅವಳು ತನ್ಮಯಳಾಗಿ ಚಿತ್ರಗಳನ್ನು ನೋಡುತಿದ್ದಳು.

ಕಾಲಿನ ಸಪ್ಪಳು ಕೇಳಿ ಲಲಿತೆ ಬೆಚ್ಚಿಬಿದ್ದಳು. ನಡುಗುತ್ತ ನಿಂತುಕೊಂಡಳು. ಅವಳ ಮೈಯೆಲ್ಲ ಬೆವರಿತ್ತು

ಆದರೆ ನಾನು ಸಿಟ್ಟಾಗಿದ್ದೆ. 'ಹೇಳದೆ ಪುಸ್ತಕ ತೆಗೆದಿಯಾ?' ಎಂದು ಬೆನ್ನಿಗೆ ಒಂದು ಗುದ್ದು ಇಟ್ಟೆ. ಅವಳು ಸುಮ್ಮಗಿದ್ದಳು. ಮಾತನಾಡಲಿಲ್ಲ.

ಅಥವಾಗಿ ವರ್ಷಗಳು ಕಳೆದುಹೋದವು. ಆ ಮೇಲೆ ಒಂದು ದಿನದಿಂದ ನನ್ನ-ಮತ್ತು ಲಲಿತೆಯ ಓಡಾಟ, ಸಹವಾಸ, ಎಲ್ಲ ಒಮ್ಮಿಂದೊಮ್ಮೆಗೆ ನಿಂತುಬಿಟ್ಟವು.

ಅವಳು ನನ್ನ ಬಳಿಗೆ ಬರುವದೇ ಬಹಳ ಕಡಿಮೆಯಾಯಿತು.

ಒಂದು ದಿನ ಸಾಯಂಕಾಲ ಚಾವಡಿಯಲ್ಲಿ ಕೂತು ಒಂದು ಪುಸ್ತಕ ನೋಡುತ್ತಾ ಇದ್ದೆ ಆಗ ಕತ್ತಲು ಕವಿಯುತ್ತ ಬಂದಿತ್ತು.

ಪುಸ್ತಕದಲ್ಲಿ ನನ್ನ ಮನಸ್ಸು ಹತ್ತಲಿಲ್ಲ. ಮೆಲ್ಲಗೆ ಅಡಿ ಇಟ್ಟು ಅಚೆಯ ಕೋಣೆಗೆ ಹೋದೆ

ಅಲ್ಲಿ ನೋಡಿದೆ-ಲಲಿತಾ ಕುಮಾರಿ ಕುಳಿತುಕೊಂಡಿದ್ದಳು

ಎದೆ ಜೋರಿನಿಂದ ಡಬಡಬಿಸಿತು

'ಸಂತ ತುಲಸೀದಾಸ' ಚಿತ್ರದಲ್ಲಿ ವಾಸಂತಿ

ಆಗ ನನಗೆ ೧೯ ೨೦ ವರ್ಷ ಆಗಿರಬಹುದು. ಲಲಿತೆಗೆ ೧೭ ೧೭ ಆಗಿದ್ದಳು

ಹಣೆಯ ಮೇಲೆ ಬೆವರು ಒಡೆದಿತ್ತು ಲಲಿತೆ ಎಷ್ಟು ಸುಂದರಿ! ಎಂಥ ಲಾವಣ್ಯವತಿ!

ನಾನು ಒಂದೊಡನೆ ಅವಳು ತಲೆತಗ್ಗಿಸಿ ನಿಂತುಕೊಂಡಳು 'ದೇಶಾಭಿಮಾನಿ ಇದೆಯೆ?' ಎಂದಳು ನನಗೆ ಕೋಗಿಲೆ ಮಾತನಾಡಿದ ಹಾಗೆ ಕೇಳಿಸಿತು.

ಗಂಟಲು ಇಳಿದ ಸ್ವರದಿಂದ 'ಹೌದು, ಇದೆ' ಎಂದು ಹೇಳಿದೆ.

ನಡುಗುವ ಕೈಗಳಿಂದ ಕಿಸೆಯಿಂದ ದೇಶಾಭಿಮಾನಿ ತೆಗೆದು ಅವಳಿಗೆ ಕೊಟ್ಟೆ.

ಅವಳು ತೆಗೆದುಕೊಂಡು ಹೋಗಿಬಿಟ್ಟಳು.

ರಾತ್ರಿ ನನ್ನಿಂದ ಏನೂ ಓದಲಿಕ್ಕಾಗಲಿಲ್ಲ; ನೋಟ್ಸು ಬರೆಯಲಿಕ್ಕೂ ಕೈ ಏಳಲಿಲ್ಲ

ನನ್ನ ವಿವಾಹದ ಪ್ರಸಂಗ ಎದ್ದಿತ್ತು; ಲಲಿತೆಯ ಮದುವೆ ಆಗಲಿರುವದಾಗಿಯೂ ಕೇಳಿದೆ

ಜೀವನದ ಮತ್ತೆ ಕೆಲವು ಜದ್ದುಬದ್ದ ವರ್ಷಗಳು ಕಳೆದು ಹೋದುವು.

ನಾನೀಗ ಒಬ್ಬ ವಿಖ್ಯಾತ ಲೇಖಕ-ಪ್ರಸಿದ್ಧ ಕತೆಗಾರ!

ಚಾವಡಿಯಲ್ಲಿ ಕೂತು ಆಲೋಚಿಸುತ್ತ ಇದ್ದೆ ಒಂದು ಕತೆ ಬರೆದು ಕಳುಹಿಸಬೇಕೆಂದು ಸಂಪಾದಕರು ಬರೆದಿದ್ದರು. ಬರೆಯದೆ ಇದ್ದರೆ ಅವರು ಸಿಟ್ಟಾಗುತ್ತಿದ್ದರು.

ನಾನು ಲೇಖನಿ ಕಚ್ಚಿದೆ, ಕೂದಲು ಕೆದಕಿದೆ, ಸಿಗರೇಟು ಸೇದಿದೆ. ಒಂದೆರಡು ಬಾರಿಗೆ ಸುಯ್ಯೆಂದು ನಸ್ಯವನ್ನೂ ಏರಿಸಿದೆ. ಆದರೆ ಏನು ಬರೆಯುವದೆಂದು ಗೊತ್ತಾಗಲಿಲ್ಲ ದೊಡ್ಡ ಸಮಸ್ಯೆ ಮುಂದೆ ಬಂದು ನಿಂತಿತು

ಒಮ್ಮಿಂದೊಮ್ಮೆಗೆ ಯಾರೋ ಎದುರು ನಿಂತಂತಾಯಿತು ರಾತ್ರಿ ಸಮಯ. ನಿದ್ದೆಗೆ ಹೋಗುವ ಕಾಲ. ಯಾರು ಬಂದಾರು?

ತಲೆಎತ್ತಿ ನೋಡಿದೆ ಹೌದು ನನ್ನ ಹೃದಯದ ರಾಣಿ—ಲಲಿತಾ ದೇವಿ ನಿಂತುಕೊಂಡಿದ್ದಳು

ಹೌದು, ಹೇಳಲಿಕ್ಕೆ ಮರೆತುಹೋದೆ ನನಗೂ ಲಲಿತೆಗೂ ಮದುವೆ ಆಗಿತ್ತು ಮದುವೆಯ ಸಡಗರದಲ್ಲಿ ಸಿಪ ಗೆಲ್ಲಿ ಹೇಳಲಿಕ್ಕೆ ಮರೆತೇ ಹೋಯಿತು ಕ್ಷಮಿಸಿ. ಲಲಿತೆ ನನ್ನ ಹೃದಯರಾಣಿ, ಪ್ರಾಣದ ಈಶ್ವರಿ, ಕಣ್ಣಿನ ಪುತ್ಥಳಿ ಆಗಿದ್ದಳು ಅವಳು ಮೆಲ್ಲಗೆ ಮರ್ಯಾದೆಯಿಂದ ಹೇಳಿದಳು-'ರಮಾ ಮಾಧವ ಸ್ವಲ್ಪ ಕೊಡಿ!'

'ಎಷ್ಟು ಉಪದ್ರವ ಕೊಡುತ್ತೀಯೆ? ಕಪಾಟಿನಲ್ಲಿದೆ, ತೆಗೆಯಬಾರದೆ?' ಎಂದೆ.

ಅವಳು ಮಾತನಾಡದೆ ಹೋಗಿ ಪುಸ್ತಕ ತೆಗೆದುಕೊಂಡು ಬಂದಳು. ನಾನು ನೋಡಿದೆ. ಅವಳು ಮಧುಮಧುರವಾಗಿ ನಗುತಿದ್ದಳು.

'ಏನಾಯಿತು, ಯಾಕೆ ನಗುತ್ತೀ?' ಎಂದು ಕುತೂಹಲದಿಂದ ಕೇಳಿದೆ

'ನೆನಪಿದೆಯೆ, ಅಂದಿನ ಭೂಗೋಲದ ಮಾತು?' ಎಂದು ಮೆಲ್ಲಗೆ ಕೇಳಿದಳವಳು

'ಹೌದು, ನೀನು ಗುದ್ದು ತಿಂದುದಲ್ಲವೆ?' ಎಂದು ನಸುನಗುತ್ತ ಹೇಳಿದೆ.

'ಮತ್ತೆ ಆ ದೇಶಾಭಿಮಾನಿಯ ಮಾತು?'

'ಹೌದು, ಅದೂ ನೆನಪಿದೆ' ಎಂದೆ.

'ಎಲ್ಲಿಗೆ ಹೋದವು, ಆ ದಿನಗಳು?'

ನನಗೆ ಉತ್ತರ ದೊರೆಯಲಿಲ್ಲ ನಾನು ಸುಮ್ಮಗಿದ್ದೆ

ಸ್ವಲ್ಪ ಹೊತ್ತು ಲಲಿತೆಯೂ ಸುಮ್ಮಗಿದ್ದಳು. ಆ ಮೇಲೆ ಅವಳು—'ಸಾಕು ಮಾಡಿ ನಿಮ್ಮ ಬರಹ, ಯಾವಾಗಲೂ ಇದೆ!' ಎನ್ನುತ್ತ ದರದರನೆ ಎಳೆಕೊಂಡು ಹೋದಳು ನಾನು—'ಬಿಡೇ ಬಿಡೇ' ಎನ್ನುತ್ತ ಒಳಗೆ ನಡೆದೆ.

ಸಂಪಾದಕರಿಗೆ ಇದೇ ಒಂದು ಕತೆಯಾಯಿತು

(ಹಿಂದಿಯಿಂದ)

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

*Apply for particulars—*

K. R. GURU, *Managing Director*

ಅರುಣ

ಗರ್ಭಾಶಯ ರೋಗನಿವಾರಿಣಿ

ಮುಟ್ಟುಶೂಲೆ

ಅಕಾಲ ಬಹಿಷ್ಟೆ

ಹೆಚ್ಚು ಸ್ರಾವ

ಬಂಜೆತನ

ಬಿಳಿಸೆರಗು

ಕುಸುಮವ್ಯಾಧಿ

ಗರ್ಭಸ್ರಾವ

ಗರ್ಭಪತನ

ಮುಂತಾದ ಸಕಲ ವ್ಯಾಧಿಗಳನ್ನು ಗುಣಪಡಿಸಿ, ಸ್ತ್ರೀಯರಿಗೆ ಕೊರತೆಯಿಲ್ಲದ ಆರೋಗ್ಯವನ್ನು, ಅವಯವ ಸೌಷ್ಠವವನ್ನು ಸತ್ಸಂತಾನವನ್ನೂ ಉಂಟುಮಾಡುವುದು

ಎಲ್ಲಾ ಕೆಮಿಸ್ಟರಲ್ಲೂ ಸಿಗುವುದು.

ತಯಾರಿಸುವವರು:

ಆಯುರ್ವೇದಾಶ್ರಮಂ,
ಮದರಾಸು

ಸ್ಥಳೀಯ ಏಜಂಟರು:

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ-ಮಂಗಳೂರು

# ಬಾಲ್ಟಿಕ್ ಸಮುದ್ರವಲಯದಲ್ಲಿ ಸ್ಟಾಲಿನ್-ಹಿಟ್ಲರರು ಬಡಿದಾಡಿಕೊಳ್ಳುವರೆ?

## ಸ್ಟಾಲಿನನ ಕುತಂತ್ರಕ್ಕೆ ಹಿಟ್ಲರನು ಸಿಲುಕಿರುವನು

### ಆದರೆ ಪ್ರತೀಕಾರಕ್ಕೆ ಹೆಚ್ಚು ತಡವಿಲ್ಲ

**ರಶ್ಯವು ಬಾಲ್ಟಿಕ್ ಸಮುದ್ರವನ್ನು ತನ್ನ ಹಿಡಿತದೊಳಗಿಟ್ಟುಕೊಳ್ಳಲು ಇಷ್ಟೊಂದು ಕಾತುರವಾಗಿರುವುದೇಕೆ? – ರಶ್ಯಕ್ಕೆ ತನ್ನ ನೌಕೆಗಳನ್ನು ಸಮುದ್ರದಲ್ಲಿ ತಡೆಯಿಲ್ಲದೆ ಬಿಡಲು ಜಲಮಾರ್ಗವೊಂದು ಸಿಕ್ಕಿದರೆ, ಅದರ ವ್ಯಾಪಾರವು ಬಹಳ ಅಭಿವೃದ್ಧಿ ಹೊಂದುವುದು. ರಶ್ಯಕ್ಕೆ ಕಪ್ಪು ಸಮುದ್ರ ಮತ್ತು ಆರ್ಕಟಿಕ್‌ಗಳಲ್ಲಿ ಜಲಮಾರ್ಗಗಳಿದ್ದರೂ, ಅವುಗಳು ಪ್ರಯೋಜನವಿಲ್ಲದಂತೆಯೇ ಆಗಿವೆ. ಆದರೆ ರಶ್ಯದಂತೆ ಜರ್ಮನಿಯೂ ಬಾಲ್ಟಿಕಿನ ವಿಷಯದಲ್ಲಿ ಬಹಳ ಕುತೂಹಲಗೊಂಡಿದೆ. ಹಾಗಾಗಿ ಈ ಉಭಯ ರಾಷ್ಟ್ರಗಳ ಕುತೂಹಲದಿಂದ ಜರ್ಮನ್-ರಶ್ಯನ್ ಯುದ್ಧವೊಂದು ಬೇಗನೇ ಒದಗುವ ಸಂಭವವೂ ಇದೆ. ಆದ ಕಾರಣ, ರಶ್ಯ ಜರ್ಮನ್ ಒಪ್ಪಂದದೊಳಗಿನ ನಿಜವಾದ ಸಂಬಂಧವು ಮೈತ್ರೀ ಪ್ರಯೋಗ ಪರೀಕ್ಷೆಗೆ ಒಳಗಾಗಲಿದೆ.**

ಬಾಲ್ಟಿಕ್ ಮತ್ತು ಮೆಡಿಟರೇನಿಯನ್ ಈ ಎರಡು ಯೂರೋಪಿನ ಸಮುದ್ರಗಳು ಹಲವು ಶತಮಾನಗಳಿಂದ ವ್ಯಾಪಾರ ಸ್ಪರ್ಧಾರಂಗಗಳಾಗಿಯೇ ಸಂಭವಿಸಿವೆ. ಇಂದು ರಶ್ಯ ಫಿನ್ಲೆಂಡುಗಳೊಳಗೆ ಉಂಟಾದ ಹೋರಾಟವೂ ಕೂಡಾ, ಕೆಲವು ಯೂರೋಪಿನ ಪ್ರಬಲ ರಾಷ್ಟ್ರಗಳೊಳಗೆ ಬಾಲ್ಟಿಕ್ ಸಮುದ್ರಗಳಲ್ಲಿ ಉಂಟಾಗಿದ್ದ ವ್ಯಾಪಾರ ಸ್ಪರ್ಧೆಯು ಕಾರಣ ಮೂಲವಾಗಿದೆ. ಫಿನ್‌ಲೆಂಡು ರಶ್ಯಗಳು ಮಾತ್ರವಲ್ಲ ಒಂದು ರೀತಿಯಿಂದ ಬಾಲ್ಟಿಕ್ ಸ್ವಾತಂತ್ರ್ಯದಲ್ಲಿ ಯೂರೋಪಿನ ಎಲ್ಲಾ ರಾಷ್ಟ್ರಗಳೂ ಕುತೂಹಲಗೊಂಡಿವೆ. ಇದರ ಫಲವಾಗಿಯೇ ಮುಂದೆ ಜರ್ಮನಿಯು ರಶ್ಯದ ಸಂಬಂಧವನ್ನು ಸಂಪೂರ್ಣ ಕಡಿದೊಗೆಯುವ ಸಂದರ್ಭವು ಬರುವುದೇ ಎಂಬ ಸಂಶಯವೂ ಉಂಟಾಗಿದೆ.

#### ಬಾಲ್ಟಿಕಿನ ಪ್ರಾಧಾನ್ಯತೆ

ಮೆಡಿಟರೇನಿಯನ್ ಸಮುದ್ರವು ಬ್ರಿಟನ್ ಫ್ರಾನ್ಸು ಮತ್ತು ಇಟಲಿಗಳಿಗೆ ಹೇಗೆ ಪ್ರಧಾನವಾಗಿದೆಯೋ ಹಾಗೆಯೇ ಜರ್ಮನ್ ಮತ್ತು ಬಾಲ್ಟಿಕ್ ರಾಷ್ಟ್ರಗಳಿಗೆ ಬಾಲ್ಟಿಕ್ ಸಮುದ್ರವೂ ಮುಖ್ಯವಾಗಿದೆ. ಯೂರೋಪಿನ ಚಿತ್ರಪಟವನ್ನು ಪರೀಕ್ಷಿಸಿದವನಿಗೆ ಬಾಲ್ಟಿಕಿನ ಪ್ರಾಧಾನ್ಯತೆಯು ತಿಳಿಯುವುದು. ಭದ್ರವಾದ ಜರನ್‌ಕೀಲ್ ಕಾಲುವೆಯ ದಾರಿಯನ್ನು ಬಿಟ್ಟರೆ, ಬಾಲ್ಟಿಕ್ ಸಮುದ್ರವನ್ನು ಪ್ರವೇಶಿಸುವ ಒಂದೇ ಒಂದು ದಾರಿಯೆಂದರೆ, ಕಟೆಗಾಟಿನ ಮೂಲಕ. ಅಲ್ಲಿಯೂ ಜರ್ಮನಿಯ ಭದ್ರ ಕಾವಲಿರುವುದರಿಂದ ಶತ್ರುರಾಷ್ಟ್ರಗಳ ನೌಕೆಗಳು ಸಮುದ್ರವನ್ನು ಪ್ರವೇಶಿಸಲಾರವು. ಇಂದಿನ ಮಿತ್ರರಾಷ್ಟ್ರಗಳ ಯುದ್ಧದಲ್ಲಿಯೂ ಕೂಡ, ಜರ್ಮನಿಗೆ ಬಾಲ್ಟಿಕ್ ಸಮುದ್ರವೊಂದಿಲ್ಲದಿದ್ದರೆ, ಯಾವಾಗಲೇ ಅಪಜಯವು ಮಡಿಲಿಗೆ ಬಂದು ಬೀಳುತ್ತಿತ್ತು. ಹೀಗಾಗಿ ರಶ್ಯವು ಸುತ್ತುವರಿದಿದ್ದರೂ ಜರ್ಮನಿಯೇ ಬಾಲ್ಟಿಕನ್ನು ಸ್ವಾಧೀನಪಡಿಸಿದೆ. ಹೊಟ್ಟೆಯೊಳಗೆ ಅನೇಕ ಕಾಲದಿಂದ, ಜರ್ಮನ್ ಮತ್ತು ರಶ್ಯಗಳೊಳಗೆ ಮಸಗುತ್ತಿರುವ ಉರಿಗೂ ಇದೇ ಒಂದು ಮುಖ್ಯ ಕಾರಣವಾಗಿದೆ.

ಹೇಗಿದ್ದರೂ ರಶ್ಯವು ತನ್ನ ವ್ಯಾಪಾರಕ್ಕೆ ಬಾಲ್ಟಿಕನಲ್ಲಿ ತಡೆಯಾಗಬಾರದೆಂದು ಬಯಸುತ್ತದೆ. ಜರ್ಮನಿಯು ತಡೆಹಾಕಿಬಿಟ್ಟರೆ ರಶ್ಯವು ಎಲ್ಲಾ ವಿಧದಿಂದಲೂ ಅಸಹಾಯಿಯಾಗಿ ಬಿಡುವುದು. ನೌಕಾಶಕ್ತಿಯಲ್ಲಿ ವಿಜೃಂಭಿಸಿ ಮೆರೆಯಬಯಸುವ ರಶ್ಯದ ಮಹೋದ್ದೇಶಕ್ಕೆ ಹೀಗೆ ಜರ್ಮನಿಯು ಆತಂಕವಾಗಿದೆ.

#### ರಶ್ಯದ ಔತ್ಸುಕ್ಯದ ಕಾರಣ

ಲೆನಿನ್‌ಗಾರ್ಡನ್ನು ಆರ್ಕಟಿಕ್ ಸಮುದ್ರದೊಡನೆ ಸೇರಿಸಿದ ಕಾಲುವೆಯಿಂದ ರಶ್ಯವು ಬಹುಮಟ್ಟಿಗೆ ಸ್ವತಂತ್ರ ನೌಕಾವಿಹಾರವನ್ನು ಹೊಂದಿದೆ. ಆದರೆ ಆ ಕಾಲುವೆಯು ಸಾಕಷ್ಟು ಆಳವಿಲ್ಲದಿರುವುದರಿಂದಲೂ, ಹೆಚ್ಚಾಗಿ ಅಲ್ಲಿ ಹಿಮಗಟ್ಟಿಯು ನಿಂತುಕೊಂಡಿರುವುದರಿಂದಲೂ ನೌಕಾವಿಹಾರಕ್ಕೆ ಭದ್ರತೆಯಿಲ್ಲ. ಹಾಗಾಗಿ ರಶ್ಯವು ತನ್ನ ಸ್ವತಂತ್ರ ಮತ್ತು ನಿರ್ಭಯ ಸಂಚಾರಕ್ಕೆ ಬಾಲ್ಟಿಕ್ ಸಮುದ್ರವನ್ನೇ ಅಪೇಕ್ಷಿಸುತ್ತಿದೆ. ಅದಕ್ಕೆ ಜರ್ಮನಿಯು ಬಲವಂತವಾದೊಂದು ತಡೆಯಾಗಿದೆ.

ಇದು ಮಾತ್ರವಲ್ಲದೆ ಜರ್ಮನ್ ಮತ್ತು ರಶ್ಯಗಳು ಆರ್ಥಿಕ ದೃಷ್ಟಿಯಿಂದಲೂ ಬಾಲ್ಟಿಕ್ ರಾಷ್ಟ್ರಗಳ ಸಂಬಂಧವನ್ನು ತಪ್ಪಿಸಲಾರವು. ಸ್ವೀಡನ್, ಫಿನ್‌ಲೆಂಡು ಮೊದಲಾದವುಗಳಿಂದ ಕಬ್ಬಿಣ ಕಾಗದ ಮೊದಲಾದವುಗಳು ಇವುಗಳಿಗೆ ಬರಬೇಕಾಗಿದೆ. ಆ ರಾಷ್ಟ್ರಗಳ ಹೆಚ್ಚಿನ ಜೀವನವು ಬಾಲ್ಟಿಕ್ ಸಮುದ್ರದ ವ್ಯಾಪಾರದಿಂದಾಗಿದೆ. ಇದನ್ನು ತಿಳಿದೇ ಜರ್ಮನಿಯು ಬಾಲ್ಟಿಕ್ ರಾಷ್ಟ್ರಗಳನ್ನು ಬಗ್ಗುಬಡಿಸುತ್ತಿದೆ; ಇಲ್ಲವಾದರೆ ಬೇರೆ ರಾಷ್ಟ್ರಗಳೊಡನೆ ಸಂಬಂಧವಿಲ್ಲದಂತೆ ಜರ್ಮನಿಯು ಜಲಮಾರ್ಗವನ್ನು ಬಂಧಿಸಿಬಿಡುವುದಾಗಿ ಅವುಗಳನ್ನು ಹೆದರಿಸುತ್ತದೆ.

ಇಂದು ತಟಸ್ಥ ರಾಷ್ಟ್ರಗಳು ಜರ್ಮನಿಯೊಡನಲ್ಲದೆ ಇತರ ಯಾವ ರಾಷ್ಟ್ರದೊಡನಾದರೂ ವ್ಯಾಪಾರ ಮಾಡಬಹುದಾಗಿ ಬ್ರಿಟನು ಫ್ರಾನ್ಸುಗಳು ಹೇಳುತ್ತವೆ. ಆದರೆ ಈ ನಿರ್ಭಂದವನ್ನು ಖಂಡಿಸುವ ಜರ್ಮನಿಯು ಬಾಲ್ಟಿಕ್ ರಾಷ್ಟ್ರಗಳು ತನ್ನೊಡನಲ್ಲದೆ ಬೇರೆ ಯಾವ ರಾಷ್ಟ್ರದೊಡನಾದರೂ ವ್ಯಾಪಾರ ಮಾಡಬಾರದಾಗಿ ಹೇಳಿರುವುದರಿಂದ, ಅವುಗಳ ವ್ಯಾಪಾರಾಭಿವೃದ್ಧಿಗೆ ಪ್ರಬಲ ಆತಂಕವುಂಟಾಗಿದೆ.

#### ರಶ್ಯಕ್ಕೆ ನಿಲ್ಲನೆಲೆಯಿಲ್ಲ!

ಇದರಿಂದಾಗಿಯೇ ರಶ್ಯವು ಸ್ಥಾನಭ್ರಷ್ಟ ಸ್ಥಿತಿಯಲ್ಲಿದೆ. ಬಾಲ್ಟಿಕ್‌ನಲ್ಲಿ ಜರ್ಮನಿಗಿರುವ ಪ್ರಾಬಲ್ಯದಿಂದ, ಆ ರಾಷ್ಟ್ರಗಳು ರಶ್ಯಕ್ಕಿಂತ ಜರ್ಮನಿಯ ಒಡೆತನಕ್ಕೇ ಹೆಚ್ಚು ತಲೆಬಾಗಿಸಿವೆ. ಇದರಿಂದ ರಶ್ಯಕ್ಕೆ ಅನೇಕ ವಿಧದ ಕೊರತೆಯಾಗಿರುವ ಕಾರಣವೇ ರಶ್ಯವು ಬಾಲ್ಟಿಕಿನಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಲು ಸಾಧಿಸುವಂತಿದೆ. ಇವರಿಂದಲೇ ರಶ್ಯವು ಇಂದು ಜರ್ಮನಿಯೊಡನೆ ಒಪ್ಪಂದವೊಂದನ್ನು ಮಾಡಿಕೊಂಡು, ಅದು ಮಿತ್ರರಾಷ್ಟ್ರಗಳೊಡನೆಯೇ ಯುದ್ಧಾಸಕ್ತವಾಗಿರುವಂತೆ ಮಾಡಿ ಬಾಲ್ಟಿಕಿನಲ್ಲಿ ಜರ್ಮನಿಯ ಶಕ್ತಿಯನ್ನು ಕಡಿಮೆಮಾಡಿ ಬಿಟ್ಟಿದೆ. ಇದರಿಂದಲೇ ಫಿನ್‌ಲೇಂಡಿಗೆ ರಶ್ಯವು ಆಕ್ರಮಣ ಮಾಡಿರುವುದು ಏನೇನೂ ಆಶ್ಚರ್ಯವಲ್ಲ.

ಬೇರೆ ಯಾವ ಸಮಯದಲ್ಲಾದರೂ ಜರ್ಮನಿಯು ರಶ್ಯದ-ಫಿನ್‌ಲೇಂಡ್ ಆಕ್ರಮಣಕ್ಕಾಗಿ ಅದರೊಡನೆ ಯುದ್ಧ ಹೂಡುತ್ತಿತ್ತು. ಆದರೆ ಸ್ಟಾಲೀನನು ಸಮಯಸಾಧಕನು. ಹಿಟ್ಲರನು ತನ್ನ ಗೆಳೆಯನ ತಂತ್ರಕ್ಕೆ ಸಿಲುಕಿ ಚಡಪಡಿಸುತ್ತಿದ್ದಾನೆ.

ಬಾಲ್ಟಿಕಿನಲ್ಲಿ ರಶ್ಯವನ್ನು ಜರ್ಮನಿಯು ಮುಂದುವರಿಯಲು ಖಂಡಿತ ಬಿಡಲಾರದು. ಮಿತ್ರರಾಷ್ಟ್ರಗಳೊಡನೆ ಯುದ್ಧವು ಯಾವ ವಿಧದಿಂದಲಾದರೂ ಕೊನೆಗಾಣುವ ಕಾಲವನ್ನು ಹಿಟ್ಲರನು ಯೋಚಿಸುತ್ತಿದ್ದಾನೆ. ಆ ದಿನದಿಂದ ಜರ್ಮನಿ–ರಶ್ಯಗಳು ಕತ್ತಿ ಕಟ್ಟಿ ನಿಲ್ಲಬೇಕಾಗುವುದು. ಇದು ಬಹು ಬೇಗನೇ ಆಗುವುದೆಂದು ರಾಜನೀತಿಜ್ಞರ ಊಹನೆಯಾಗಿದೆ.


DIAMONDS! DIAMONDS!
BEST BRILLIANCY!

**K. R. K. SHET,**

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

**ವಜ್ರಗಳು!**

ಎವರ್ ಸ್ಟಾಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

**ನಿಮಗೆ ಬೇಕಾದ್ದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.**

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,



ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್ (ರಿಜಿ)**

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

# ಜಿಲ್ಲಾ ಸಮಾಚಾರ

## ಮಂಗಳೂರು

**ಮಂಗಳೂರಿಗೊಂದು ಪಾರ್ಕು –** ಮಂಗಳೂರು ಮೈದಾನಿನಲ್ಲಿ 'ರೇಡಿಯೋ'ವನ್ನು ದಾನವಾಗಿತ್ತಿರುವ ಶ್ರೀ ವಿಠ್ಠಲ ಶಾಂತಾರಾಮ ಕುಲಕರ್ಣಿಯವರು, ಈ ರೇಡಿಯೋ ಮಂದಿರದ ಸುತ್ತಲೂ ಒಂದು ಪಾರ್ಕನ್ನು ಕಟ್ಟಿಸಿ, ಮುನಿಸಿಪಾಲಿಟಿಗೆ ಒಪ್ಪಿಸಲಿರುವರೆಂದು ತಿಳಿದು ಬಂದಿದೆ.

**ಬೀಡಿ ಕೆಲಸಗಾರರ ಪರಿಷತ್ತು:—** ಬೀಡಿ ಕೆಲಸಗಾರರ ಎರಡನೆ ಪರಿಷತ್ತು ಕಳೆದ ಆದಿತ್ಯವಾರ ಕೆನರಾ ಹೈಸ್ಕೂಲ್ ವಠಾರದಲ್ಲಿ ಮದ್ರಾಸಿನ ಪ್ರಮುಖ ಕಾಂಗ್ರೆಸ್ ಕೆಲಸಗಾರರಾದ ಶ್ರೀ ರಾಮಮೂರ್ತಿಯವರ ಅಧ್ಯಕ್ಷತೆಯಿಂದ ಜರಗಿತು. ಜನಾಬ್ ಡಾ। ಎಫ್ ಎಚ್ ಒಡೆಯರು ಉದ್ಘಾಟನಾ ಭಾಷಣ ಮಾಡಿದರು.

**ಭಾಷಣ —** ತಾ ೨೬-೩-೪೦ರಂದು ಶ್ರೀ ರಾಮಮೂರ್ತಿಯವರು ಟೌನ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಕಾಂಗ್ರೆಸಿನ ವಿಷಯ ಭಾಷಣವಿತ್ತರು.

ಇವರು ಬೀಡಿ ಪರಿಷತ್ತಿನ ಅಧ್ಯಕ್ಷತೆಗಾಗಿ ಮದ್ರಾಸಿನಿಂದ ಬರುವಾಗ ಪೋದನ್ನೂರಿನಲ್ಲಿ ಇವರನ್ನು ಜಿಡ್ತಿಮಾಡಿ ಇವರಲ್ಲಿದ್ದ 'ಕಮ್ಯುನಿಸಂ' ಎಂಬ ಪುಸ್ತಕವನ್ನು ಪೋಲೀಸರು ಕೊಂಡೊಯ್ದಿರುವರೆಂದು ತಿಳಿದುಬಂದಿದೆ.

**ಮುನ್ಸಿಪಲ್ ಮಹಮ್ಮದನ್ ಹೈ। ಎ। ಶಾಲಾ ವರ್ಧಂತಿ:—** ಈ ಉತ್ಸವವು ಕಳೆದ ಆದಿತ್ಯವಾರ ಬ್ಯಾರಿಸ್ಟರರಾದ ಶ್ರೀ। ಬಿ ವೆಂಕಟ್ರಾಯ ಬಾಳಿಗ ಎಂ ಎಲ್ ಎ ಇವರ ಅಧ್ಯಕ್ಷತೆಯಲ್ಲಿ ಜರಗಿತು ಅನೇಕ ಮಹನೀಯರು, ಮುನ್ಸಿಪಲ್ ಕೌನ್ಸಿಲರು, ಕಮಿಶನರರೆ ಮೊದಲಾದವರು ಬಂದಿದ್ದರು. ಶಾಲೆಯು ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿರುವುದಾಗಿ, ಕಟ್ಟಡವನ್ನು ಹೆಚ್ಚಿಸುವರೆ ಮುನ್ಸಿಪಾಲಿಟಿಯವರು ಸಹಾಯ ಮಾಡಿರುವರೆಂದು ತಿಳಿದುಬಂದಿದೆ. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುನ್ಸಿಪಲ್ ಶಾಲೆಗಳಿಂದ ಹೆಚ್ಚು ಲೋಕೋಪಕಾರವಾಗಿದೆಯೆಂದು ವ್ಯಕ್ತಪಡಿಸಿದರು.

**ಶ್ರೀ ಮಾಸ್ತಿ ಅಯ್ಯಂಗಾರರು —** ಕಳೆದ ಗುರುವಾರ ಸಂಜೆ ಪ್ರಸಿದ್ಧ ಸಾಹಿತಿಗಳಾದ ಶ್ರೀ। ಮಾಸ್ತಿ ವೆಂಕಟೇಶ ಅಯ್ಯಂಗಾರರು ಸ್ಥಳೀಯ ಥಿಯಾಸಾಫಿಕಲ್ ಲಾಜಿನಲ್ಲಿ ಮಿತ್ರಮಂಡಳಿಯವರ ಮತ್ತು ಕಲ್ಚರಲ್ ಎಸೋಸಿಯೇಶನಿನವರ ಆಶ್ರಯದಲ್ಲಿ ತಮಿಳು ಸೀಮೆಯ ವೈಷ್ಣವ ಪ್ರಬಂಧಗಳ ಕುರಿತು ತಾವು ಕನ್ನಡಕ್ಕೆ ತರ್ಜುಮೆಗೊಳಿಸಿದ ಅನೇಕಾನೇಕ ಪದ್ಯಗಳನ್ನು ಓದಿ ವಿವರಿಸಿದರು. ಶ್ರೀ। ಮುಕುಂದರಾಯರು ಭಾಷಣ ಕರ್ತರ ಪರಿಚಯ ಮಾಡಿದರು. ಶ್ರೀ। ಯಂ ಯನ್. ಕಾಮತರು ಧನ್ಯವಾದಗಳನ್ನರ್ಪಿಸಿದರು. ಭಾಷಣದ ಮೊದಲು ಅತಿಥಿಗಳಿಗೆ ಮಿತ್ರಮಂಡಲಿಯವರ ಕಡೆಯಿಂದ ಉಪಹಾರ ಸತ್ಕಾರವಿತ್ತು. ಪ್ರಸಿದ್ಧ ಕವಿಗಳಾದ ಶ್ರೀ। ದ. ರಾ. ಬೇಂದ್ರೆಯವರೂ ಅವರೊಡನೆ ಬಂದಿದ್ದರು.

**ಸಬ್ ಜಡ್ಜರು:—** ತಾ. ೪-೪-೪೦ರಿಂದ ೧೦ ತಿಂಗಳಿನ ರಜೆಪಡೆದಿರುವ ಮಂಗಳೂರಿನ ಪ್ರಿನ್ಸಿಪಾಲ್ ಸಬ್‌ಜಡ್ಜರಾದ ಶ್ರೀ. ಡಿ. ಎಸ್. ರಾಜಾರಾಯರ ಬದಲಿಗೆ ಮೊದಲು ಇಲ್ಲಿಯೇ ಸಬ್‌ಜಡ್ಜರಾಗಿದ್ದು ಈಗ ನೆಲ್ಲೂರು ಕೋರ್ಟಿನ ಎಡಿಶನಲ್ ಸಬ್‌ಜಡ್ಜರಾಗಿರುವ ಬಿ. ಡಿ. ಕೃಷ್ಣಮೂರ್ತಿ ಪಂತುಲುರವರು ನೇಮಕ ಹೊಂದಿರುತ್ತಾರೆ.

**ಎಡಿಶನಲ್ ಸಬ್ ಜಡ್ಜರು:—** ಮಾರ್ಚಿ ತಾ ೭ರಿಂದ ೩೬ ದಿವಸದ ವಿರಾಮ ಪಡೆದು ಎಪ್ರಿಲ್ ತಾ ೩ರಿಂದ ನಿವೃತ್ತರಾಗಲಿರುವ ಮಂಗಳೂರಿನ ಎಡಿಶನಲ್ ಸಬ್‌ಜಡ್ಜರಾದ ಶ್ರೀ। ಟಿ। ವಾಸುದೇವರಾಯರ ಸ್ಥಾನಕ್ಕೆ ಬೆಜ. ಕೋಲ್ ಕೋರ್ಟಿನ ಸಬ್ ಜಡ್ಜರಾದ ಶ್ರೀ ಟಿ ಡಿ ರಾಮಯ್ಯ ಪಂತುಲುರವರು ನೇಮಕ ಹೊಂದಿರುತ್ತಾರೆ.

**ವಾಹನ ಸಂಚಾರ ನಿಲ್ಲಿಸಲಾಗಿದೆ:—** ಮಂಗಳೂರು ಶಿರಾಡಿ ರಸ್ತೆಯ (ಮೈಲು ೪೩/೪ರಲ್ಲಿ) ನೆಲ್ಲಿಯಾಡಿ ಸಂಕವು ಗಟ್ಟಿಯಿಲ್ಲವಾದ ಕಾರಣ ಅದರ ಮೇಲೆ ತಾ ೩೧-೩-೪೦ರಿಂದ ೧-೬-೪೦ರ ವರೆಗೆ ವಾಹನಗಳು ಸಂಚರಿಸ ಕೂಡದು, ಒದಿಯ ಅಡ್ಡ ಮಾರ್ಗವನ್ನು ಉಪಯೋಗಿಸಬೇಕು— ಎಂದು ಜಿ ಬೋ. ಅಧ್ಯಕ್ಷರು ಸೂಚನೆ ಕೊಟ್ಟಿದ್ದಾರೆ.

**ಸಮಾಜ ಸೇವಾಸಮಿತಿ ಮಹಾನವಮಿ ಕಟ್ಟೆ —** ಇದರ ಮಹಾಸಭೆಯೊಂದು ತಾ ೧೭-೩-೪೦ನೇ ರವಿವಾರ ರಾತ್ರಿ ಘಂಟೆ ೯ಕ್ಕೆ ಸಮಾಜದ ಮಂದಿರದಲ್ಲಿ ಶ್ರೀ ಮಹಾನ್ ಕೆ ಎಲಣ್ಣ ಪೂಜಾರಿ ಬಿ ಎ ಬಿ ಎಲ್ ಅವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಮಾನ್ ಬಾಲಕೃಷ್ಣರಾವ್ ಇವರ ನಿಧನ ಕುರಿತು ಅವರ ಕುಟುಂಬ ಮತ್ತು ಬಂಧು ಬಾಂಧವರಿಗೆ ಈ ಸಮಿತಿಯು ತಮ್ಮ ಸಹಾನುಭೂತಿಯನ್ನು ತೋರಿಸುವ ಮತ್ತು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುವ ನಿರ್ಣಯವಾಯಿತು.

**ತುಳುವ ಮಹಾಸಭೆಯ ಕಾರ್ಯನಿರ್ವಾಹಕ ಪ್ರೊಸಿಡಿಂಗ್ಸ್: —** ಇದೇ ತಾ ೧೮-೩-೪೦ನೇ ರವಿವಾರ ಶ್ಯಾಮ ಗಂಟೆ ೩ಕ್ಕೆ ಬೋಳಾರ ತುಳುನಾಡ್ ಆಫೀಸಿನಲ್ಲಿ ಶ್ರೀ। ಲೋಕಯ್ಯ ಪೂಂಜರ ಅಧ್ಯಕ್ಷತೆಯಿಂದ ಆದ ನಿರ್ಣಯಗಳು

೧. ತುಳುವ ಮಹಾಸಭೆಯ ಮೆಂಬರರಿಗೆ ಬೋಳಾರ ಜಾತ್ರೆ ಸಮಯ ಊಟ ಉಪಹಾರಗಳಿಗೂ ರೀಡಿಂಗ್ ರೂಂ ವಗೈರೆ ವಿನೋದಗಳಿಗೂ ತುಳುವ ಮಹಾಸಭೆಯ ಉಪಶಾಖೆಯಾಗಿ 'ತುಳುನಾಡ್ ಕ್ಲಬ್' ನ್ನು ತೆರೆಯಬೇಕಾಗಿ ನಿರ್ಣಯಿಸಲಾಯಿತು ೨ ತುಳುನಾಡ್ ಕ್ಲಬ್ಬಿನ ಬಗ್ಗೆ ಮೆಂಬರರನ್ನು ಸೇರಿಸಿ ಚಂದಾ ವಸೂಲು ಮಾಡುವರೆ ರಶೀದಿ ಪುಸ್ತಕಗಳನ್ನು ತಯಾರಿಸಬೇಕಾಗಿ ನಿರ್ಣಯಿಸಲಾಯಿತು. ೩ ಇದೇ ಬರುವ ಎಪ್ರಿಲ್ ತಿಂಗಳ ಕಡೇ ವಾರದಲ್ಲಿ ತುಳುವ ಮಹಾಸಭೆಯ ಅಧ್ಯಕ್ಷರಾದ ಶ್ರೀ. ಬಿ ಆನಂದ ತಳವಾರ ಬಿ ಎ ಬಿ ಎಲ್ ವಕೀಲ್ ಇವರ ಅನುಮತಿಯಿಂದ ಒಂದು ತುಳುವ ಸಾಹಿತ್ಯ ಪರಿಷತ್ತು ತೆರೆಯಬೇಕಾಗಿ ನಿರ್ಣಯಿಸಲ್ಪಟ್ಟಿತು. ೪ ಈ ಪರಿಷತ್ತಿಗೆ ಈ ವರೇಗೆ ತುಳುಭಾಷೆಯಲ್ಲಿ ಪ್ರಕಟವಾದ ಎಲ್ಲಾ ಪುಸ್ತಕಗಳನ್ನು ಆಯಾ ಗ್ರಂಥಕರ್ತರು ದಯವಿಟ್ಟು ಕಳುಹಿಸಿ ಕೊಡುವಂತೆಯೂ, ಪ್ರಕಟವಾಗದೆ ಇರುವ ಕೃತಿಗಳು ತುಳು ಪದ್ಯಗಳು, ನಾಟಕಗಳು, ಕವಿತೆ ಪಾಡ್ದನ, ಕತೆ, ಗಾದೆ, ಕವನ ಇತ್ಯಾದಿಗಳನ್ನು ಅವುಗಳ ಸಂಗ್ರಾಹಕರು ವ ಲೇಖಕರು ಕಳುಹಿಸಿ ಕೊಡುವಂತೆ ಈಮೂಲಕ ವಿಜ್ಞಾಪಿಸಲಾಯಿತು. ೫ ಉತ್ತಮವಾದ ಲೇಖನಗಳಿಗೆ ಯೋಗ್ಯತಾ ಪತ್ರಗಳನ್ನು ಕಳುಹಿಸಿ ಕೊಡಲಾಗುವದು ಮತ್ತು ಅವುಗಳನ್ನು ತುಳುವ ಸಾಹಿತ್ಯ ಮಾಲೆಯಲ್ಲಿ ಪ್ರಕಟಿಸುವಂತೆ ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು. ೬ ವಿಮರ್ಶೆ ಬಗ್ಗೆ ಕಳುಹಿಸುವ ಲೇಖನಗಳನ್ನು ಇದೇ ಎಪ್ರಿಲ್ ೧೫ನೇ ತಾರೀಖಿನೊಳಗೆ ತುಳುವ ಮಹಾಸಭೆಯ ಕಾರ್ಯದರ್ಶಿ ಎಸ್ ಎ ಶೀನಪ್ಪ ಹೆಗ್ಡೆ ಬೋಳಾರ ಪಿ ಓ ಬೆಳ್ಳೂರು ಎಂಬ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿಜ್ಞಾಪಿಸಲಾಯಿತು.

## ಮಂಜೇಶ್ವರ

**ನೂಲುವ ಶಿಕ್ಷಣ:—** ಶ್ರೀ ಮದನಂತೇಶ್ವರ ದೇವಳ ಅಧಿಕಾರಿಗಳು, ಊರ ಪರವೂರ ವಿದ್ಯಾರ್ಥಿಗಳನ್ನೂ ಉಪಾಧ್ಯಾಯರನ್ನೂ ಶಾಸ್ತ್ರೀಯ ರೀತಿಯಲ್ಲಿ ನೂಲುವ ಕ್ರಮಗಳಲ್ಲಿ ಧರ್ಮಾರ್ಥವಾಗಿ ತರಬೇತುಗೊಳಿಸುವ ಏರ್ಪಾಡುಗಳನ್ನು ಮಾಡಿರುವರು. ಅಖಿಲಭಾರತ ನೂಲುವ ಸಂಘದ ಪಯ್ಯನೂರಿನ ಶಾಲೆಯಲ್ಲಿ ತರಬೇತಿ ಹೊಂದಿದ ಅಧ್ಯಾಪಕರನ್ನೇ ಈ ಕುರಿತು ನೇಮಕ ಮಾಡಿರುವರು. ಶಾಲಾ ಸಮಯದ ಹೊರತು ಇತರ ಸಮಯದಲ್ಲಿ ಅವರು ಉಮೇದ್ವಾರಿಗಳನ್ನು ಧರ್ಮಾರ್ಥ ತರಬೇತುಗೊಳಿಸಲು ಸಿದ್ಧರಿರುವರು. ಈ ರೀತಿಯ ಶಿಕ್ಷಣವನ್ನು ಪಡೆಯುವ ಇಚ್ಛೆಯುಳ್ಳ ಉಮೇದ್ವಾರಿಗಳು ಸದ್ರಿ ದೇವಳ ಶಾಲಾ ಹೆಡ್ ಮಾಸ್ತರರಿಗೆ ಬರೆಕೊಳ್ಳತಕ್ಕದ್ದು.

## ಉಡುಪಿ

**ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ದಿನಾಚರಣೆ:—** ಸ್ಥಳೀಯ ಒಂಟೆಯಾನೆ ಸಾಲು ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ದಿನಾಚರಣೆಯು ಕಳೆದ ತಾ ೧೮ರಲ್ಲಿ ಸಂಜೆ ಜಯಶೀಲವಾಗಿ ನಡೆಯಿತು.

**ಶ್ರೀ ಮನ್ಮಧ್ವಸಿದ್ಧಾಂತ ಬೋಧನ ಸಭೆ:—** ಶ್ರೀ ಸೋದೆ ವಾದಿರಾಜ ಮಠಾಧೀಶ ಶ್ರೀ ವಿಶ್ವೇಂದ್ರ ತೀರ್ಥಸ್ವಾಮಿಗಳು ತಮ್ಮ ಮೂಲಗುರು ಶ್ರೀ ಮಧ್ವಗುರುರಾಜರ ಸೀತಿಯೂ ಭಕ್ತರಿಗೆ ಮಾಧ್ವಮತತತ್ವವನ್ನು ಬೋಧಿಸಲಿಕ್ಕೂ ೧೯೨೫ನೇ ಇಸ್ವಿಯಿಂದಾರಂಭಿಸಿ ೧೦ ವರ್ಷಗಳಿಂದ ವರ್ಷಂಪ್ರತಿ ನಡೆಯಿಸುತ್ತಿರುವ ಶ್ರೀ ಮನ್ಮಧ್ವಸಿದ್ಧಾಂತ ಬೋಧಿನೀ ಎಂಬ ಸಭೆಯನ್ನು ಹನ್ನೊಂದನೆಯದಾದ (೧೯೩-೩-೪೦) ಪ್ರಮಾಧಿ ಸಂ।ದ ಮಾಘ ಶು ೯ಸಾಯಂ ೪-೩೦ ಘಂಟೆಗೆ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಆರಂಭಿಸಿ ೨೩-೩-೪೦ನೇ ದಿನ ಸಮಾಪ್ತಿಗೊಳಿಸಿದರು.

## ಕಾರ್ಕಳ

**ಹಿಂದೀ ಪ್ರಚಾರ: —** ದಕ್ಷಿಣಭಾರತ ಹಿಂದಿಪ್ರಚಾರಸಭೆಯು ಬರುವ ಆಗೋಸ್ತು ತಿಂಗಳ ಪ್ರಾಥಮಿಕ ಮಧ್ಯಮಾ ರಾಷ್ಟ್ರಭಾಷಾ ಮತ್ತಿತರ ಹಿಂದೀ ಪರೀಕ್ಷೆಗಳನ್ನು ಕೊಡಲಿಚ್ಛಿಸುವ ಹಿಂದೀಭಾಷಾಭ್ಯಾಸಿಗಳ ಅನುಕೂಲಕ್ಕಾಗಿ ಇದೇ ಬರುವ ಮಾರ್ಚಿ ತಿಂಗಳಿಂದ ಇಲ್ಲಿ ಹೊಸ ಹಿಂದೀ ಕ್ಲಾಸುಗಳ ವ್ಯವಸ್ಥೆಯಾಗುವದೆಂದೂ ಅದನ್ನು ಸೇರಲಿಚ್ಛಿಸುವವರು ನಿಯಮಾದಿಗಳನ್ನು ಸ್ಥಳೀಯ ಹಿಂದೀ ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರಿಂದ ಪಡೆಯಬಹುದೆಂದೂ ಅವರು ತಿಳಿಸುತ್ತಾರೆ.

**ಬಿಲ್ಲವರ ಸಭೆ:—** ಸ್ಥಳೀಯ ಬಿಲ್ಲವರ ಒಂದು ಸಭೆಯು ತಾ. ೨೩-೩-೪೦ರ ದಿನ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ಶ್ರೀ ಕೇಶವ ರಾಮಚಂದ್ರಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿ ಸಮಾಜೋದ್ಧಾರದ ಮಾರ್ಗವನ್ನು ತಿಳಿಸುವ ಅನೇಕ ಸಭಿಕರ ಭಾಷಣಗಳಾದವು.

## ಕುಂದಾಪುರ

**ದಿವಂಗತ ಶ್ರೀ। ಕೋಟಿ ಶೇಷಕಾರಂತರು:—** ಶ್ರೀ ಕೆ ಆರ್ ಕಾರಂತರ ತಂದೆಯವರಾದ ಶ್ರೀ। ಕೋಟಿ ಶೇಷಕಾರಂತರು ಕೋಟದಲ್ಲಿರುವ ತಮ್ಮ ಮನೆಯಲ್ಲಿ ತಾ. ೧೯ರಲ್ಲಿ ರಾತ್ರಿ ೯ಗಂಟೆಗೆ ದೈವಾಧೀನರಾದರೆಂದು ತಿಳಿಸುವರೆ ವಿಷಾದಿಸುತ್ತೇವೆ. ದಿವಂಗತರಿಗೆ ಸಾಯುವಾಗ ಪ್ರಾಯ ೭೩.

ಇವರ ಮಕ್ಕಳಲ್ಲಿ ಶ್ರೀ। ಕೆ ಆರ್ ಕಾರಂತರು ರಾಜಕೀಯ ಕ್ಷೇತ್ರದಲ್ಲಿಯೂ, ಶ್ರೀ। ಕೆ ಶಿವರಾಮಕಾರಂತರು ಕನ್ನಡ ಸಾಹಿತ್ಯಕ್ಷೇತ್ರದಲ್ಲಿಯೂ, ಶ್ರೀ। ಕೆ ಎಲ್ ಕಾರಂತರು ಉಪಾಧ್ಯಾಯರ ಕ್ಷೇತ್ರದಲ್ಲಿಯೂ, ಸುಪ್ರಸಿದ್ಧರಾಗಿದ್ದಾರೆ. ಇವರ ಮಕ್ಕಳಾದ ಶ್ರೀ ಕೆ ಎಸ್ ಕಾರಂತರು ವಕೀಲರಾಗಿಯೂ ಕೆ ವಿ ಕಾರಂತರು ಇಂಜಿನಿಯರರಾಗಿಯೂ ಇನ್ನೊಬ್ಬರು ವಿದ್ಯಾರ್ಥಿಯಾಗಿಯೂ ಇನ್ನೊಬ್ಬರು ಹಾಯರ್ ಎಲಿಮೆಂಟ್ರಿ ಶಾಲೆಯ ಉಪಾಧ್ಯಾಯರಾಗಿಯೂ ಇರುತ್ತಾರೆ. ಅವರ ಪತ್ನೀ ಪುತ್ರರ ದುಃಖದಲ್ಲಿ ನಮ್ಮ ಸಹ ಸಂತಾಪವನ್ನು ಸೂಚಿಸುತ್ತೇವೆ.

## ಕಾಸರಗೋಡು

**ಯಡನೀರು ಮಠ —** ಕಳೆದ ತಾ ೧೩ನೇ ಸಂಜೆ ಗಂಟೆ ೬ ೪೫ಕ್ಕೆ ಶ್ರೀ ಸೋದೆ ಶ್ರೀವಾದಿರಾಜ ಮಠದ ಶ್ರೀಗಳವರನ್ನೂ ಈಗ ತಾನೆ ಪರ್ಯಾಯವೆದ್ದಿರುವ ಶ್ರೀ ಫಲಿಮಾರು ಮಠದ ಶ್ರೀಗಳವರನ್ನೂ ಶ್ರೀ ಯಡನೀರು ಮಠದ ಶ್ರೀಗಳವರು ಮಹಾ ವೈಭವದ ಬಿರುದಾವಳಿ, ವಾದ್ಯ ಘೋಷಗಳಿಂದ ಸ್ವಾಗತೀಕರಿಸಿ ಅತಿ ವಿಜೃಂಭಣೆಯ ವೇತಷೋಪಚಾರಗಳಿಂದ ಶ್ರೀ ಮಠದಲ್ಲಿ ಉಭಯ ಶ್ರೀಗಳವರನ್ನೂ ಸತ್ಕರಿಸಿ ಬಹು ವಿಧ ಕಾಣಿಕೆಗಳಿಂದ ಗೌರವಿಸಿದರು.

## ಪುತ್ತೂರು

**ಪುತ್ತೂರು ಬೋರ್ಡು ಹೈಸ್ಕೂಲಿನ ವರ್ಧಂತ್ಯುತ್ಸವ —** ಕಳೆದ ತಾ ೧೮ರಲ್ಲಿ ಸ್ಥಳೀಯ ಹೈಸ್ಕೂಲಿನ ಶಾಲಾ ವಠಾರದಲ್ಲಿ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಜರುಗಿತು.

**ಭಾಷಣ:—** ಕಳೆದ ತಾ ೧೯ರಲ್ಲಿ ಇಲ್ಲಿಯ ಕೊಸ್ಸೆಟ ಸಿಲ್ವರ್ ಜುಬಿಲಿ ಹಾಲ್‌ನಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು 'ವಾಲ್ಮೀಕಿ' ಮತ್ತು 'ರಾಮಾಯಣ' ಇವುಗಳ ವಿಷಯವಾಗಿ ಭಾಷಣವನ್ನಿತ್ತರು.

## ಧಾರವಾಡ

**ದಿವಂಗತ ಸೌ ಗೌರಮ್ಮನವರ ನೆನಪಿಗಾಗಿ ಸಣ್ಣ ಕತೆಗಳ ಸ್ಪರ್ಧೆ:—** ಸೌ ಗೌರಮ್ಮನವರು (ಶ್ರೀಮತಿ ಬಿ ಟಿ ಜಿ ಕೃಷ್ಣ) ಕಾಲವಾಗಿ ಬರುವ ಎಪ್ರಿಲ್ ೧೩ನೆಯ ತಾರೀಖಿಗೆ ಒಂದು ವರ್ಷವಾಗುತ್ತದೆ. ಅವರ ಮೊದಲ ಸ್ಮೃತಿದಿನದ ಸಮಯದಲ್ಲಿ 'ನಮ್ಮ ನಾಡಿನ ಹೆಣ್ಣು ಮಕ್ಕಳ ಕೃತಿಗಳು ಸಜಿಸಾ ಹುರುಳು' ತಿರುಗಿಸಿ ಮೇಲ್ಮೈಪಡೆಯಬೇಕು ಎಂಬ ಅವರ ಹಿರಿಯಾಸೆ ಪೂರ್ಣವಾಗಲು ಕೇವಲ ಹೆಣ್ಣು ಮಕ್ಕಳಿಗಾಗಿ ಸಣ್ಣ ಕತೆಗಳ ಸ್ಪರ್ಧೆಯನ್ನು ಏರ್ಪಡಿಸಿದ್ದೇವೆ. ಇದರಲ್ಲಿ ಕನ್ನಡ ಕತೆಗಾರ್ತಿಯರು ಭಾಗವಹಿಸಬಹುದಾಗಿಯೂ, ಕತೆ ಸ್ವಂತವಾಗಿದ್ದು ಇದುವರೆಗೆ ಅಚ್ಚಾದದ್ದಾಗಿರಬಾರದಾಗಿಯೂ ೧೯೪೦ನೆ ಎಪ್ರಿಲ್ ೧೫ನೆಯ ತಾರೀಖಿನೊಳಗೆ ಮನೋಹರ ಗ್ರಂಥ ಭಾಂಡಾರ, ಧಾರವಾಡ ಇವರಿಗೆ ಕಳುಹಿಸಬೇಕಾಗಿಯೂ ಪ್ರಕಟಿಸಲಾಗಿದೆ.

# ಹಿಟ್ಲರನೊಡನೆ ಸಂಧಾನಮಾಡಲು ಸಮ್ನರ್‌ವೆಲ್ಸರ ಬರ್ಲಿನ್ ಯಾತ್ರೆ!

# ★ ಲೋಕವಾರ್ತೆ



## ಪಶ್ಚಿಮ ರಣರಂಗದಲ್ಲಿ ಉದ್ವೇಗವಿಲ್ಲ

## ಹಲವು ಹಡಗುಗಳ ವಿನಾಶ! ರಶ್ಯನರ ಪ್ರಚಂಡ ದಾಳಿ!!

### ರೂಸ್‌ವೆಲ್ಟರೆ ಪುನಃ ಅಧ್ಯಕ್ಷರೆ?

### ಹಡಗು ಯುದ್ಧ!

#### ಸಮುದ್ರ ರಾಜನಿಗೆ ಆಹುತಿ!

ಫೆಬ್ರವರಿ ೧೮ನೇ ತಾರೀಖಿಗೆ ಮುಗಿದ ವಾರದಲ್ಲಿ ಒಟ್ಟು ೩೦ ಹಡಗಗಳು ಜಲಸಮಾಧಿ ಹೊಂದಿದವೆಂದು ತಿಳಿದು ಬರುತ್ತದೆ. ಅವುಗಳಲ್ಲಿ ಐದು ಮಾತ್ರ ಬ್ರಿಟಿಷರವಂತೆ. ಉಳಿದವೆಲ್ಲ ತಟಸ್ಥ ದೇಶಗಳವಂತೆ.

ದಕ್ಷಿಣ ಅಟ್ಲಾಂಟಿಕ ಸಾಗರದಲ್ಲಿ ಜರ್ಮನರ ಒಂದು ಪಾಕೆಟ್ ಯುದ್ಧದ ಹಡಗ ಬಂದಿರುವದೆಂದು ಎಲ್ ಫುಬ್ಲೊ ಎಂಬ ಪತ್ರಿಕೆಯು ಬರೆಯುತ್ತದೆ. ಅದು 'ಡುಯಾಶ್ಚಲ್ಯಾಂಡ' ಅಥವಾ ಆಡ್ಮಿರಲ್ ಸ್ಕೀರ ಎಂಬ ಹಡಗಗಳಲ್ಲಿ ಬಂದಾಗಿರಬೇಕೆಂದು ಊಹಿಸಲಾಗಿದೆ. "ಗ್ರ್ಯಾಫ ಸ್ಪಿ ನಾಶದ ಬಗ್ಗೆ ಸೇಡು ತೀರಿಸಿಕೊಳ್ಳಲು ಬ್ರಿಟಿಶ ವ್ಯಾಪಾರಿ ಹಡಗಗಳ ಮೇಲೆ ದಾಳಿಮಾಡುವದಕ್ಕಾಗಿಯೇ ಇದು ಬಂದಿರಬೇಕೆಂದೂ ತರ್ಕಿಸಲಾಗಿದೆ.

"ಲ್ಹಾನ" ಎಂಬ ಜರ್ಮನ್ ಸಾಮಾನಿನ ಹಡಗು ಕಲ್ಲಿದ್ದಲನ್ನು ತುಂಬಿಕೊಂಡು ಬ್ಯೂನೋಆಯರಿಸದ ಕಡೆಗೆ ಹೊರಟಿರುವದೆಂದು ಸುದ್ದಿ ಬಂದಿದೆ. ಬಹುಶಃ ಇದು ದಕ್ಷಿಣ ಅಟ್ಲಾಂಟಿಕದಲ್ಲಿರುವ ಜರ್ಮನ್ ಯುದ್ಧದ ಹಡಗಿಗೆ ಸಾಮಾನುಗಳನ್ನು ಪೂರೈಸುವದಕ್ಕಾಗಿ ಹೊರಟಿರಬೇಕೆಂದು ಊಹಿಸಲಾಗಿದೆ.

"ಅಂಟೋನಿಯೊ ಡೆಲ್‌ಫಿನೋ" ಎಂಬ (ಸುಮಾರು ೧೬೦೦೦ ಟನ್‌ಗಳ) ಒಂದು ಭಾರಿ ಜರ್ಮನ್ ಫ್ರೈಟರ ಹಡಗು ಈಗ ಬಾಹಿಯಾದಲ್ಲಿ (ಬ್ರೆಝಿಲ ದೇಶದಲ್ಲಿ)ರುವದಂತೆ. ಅದು ಸುಮಾರು ೧೦ ಲಕ್ಷ ಡಾಲರ ಬೆಲೆಬಾಳುವಷ್ಟು ಸಾಮಾನುಗಳನ್ನು ತುಂಬಿಕೊಂಡು ಇಷ್ಟರಲ್ಲಿಯೇ ಅಲ್ಲಿಂದ ಹೊರಡಲಿದೆಯೆಂದು "ನ್ಯೂಯಾರ್ಕ ಟಾಯಿಮ್ಸ" ಪತ್ರಿಕೆಯ ರಿಯೋಡಿ ಜನ್ಯೆರೊ ಸುದ್ದಿಗಾರನು ತಿಳಿಸುತ್ತಾನೆ.

'ಅಲ್ತಮಾರ್ಕ'ವು ಆಸ್ಲೋಕ್ಕೆ ಬಂದಿದೆ. ಅದರ ಒಂದೆರಡು ಭಾಗಗಳು ಮುರಿದಿವೆ. ಸರಿಯಾದ ಮೇಲೆ ಹಡಗು ಮುಂದಕ್ಕೆ ಹೊರಡುವದಂತೆ.

ಬ್ರಿಟಿಶ ಸರಕಾರದ 'ಫಿಶರ' ಎಂಬ ಟ್ರಾಲರ ಹಡಗವು ವೈರಿಯ ವಿಮಾನಗಳ ದಾಳಿಗೆ ಗುರಿಯಾಗಿ ಜಲಸಮಾಧಿ ಹೊಂದಿತೆಂದು ನೌಕಾಖಾತೆಯ ಪ್ರಕಟನೆಯೊಂದು ತಿಳಿಸುತ್ತದೆ. ಆ ಹಡಗದಲ್ಲಿದ್ದವರಲ್ಲಿ ಒಬ್ಬನು ಮಾತ್ರ ಉಳಿದಿರುವನೆಂದು ಹೇಳಲಾಗುತ್ತದೆ.

'ಸೋಲನ' ಎಂಬ ಮತ್ತೊಂದು ಹಡಗದ ಮೇಲೆಯೂ ವೈರಿಯ ವಿಮಾನಗಳು ದಾಳಿ ಮಾಡಿದವು. ಆದರೆ ಆ ವಿಮಾನಗಳನ್ನು ಓಡಿಸಿ ಹಡಗ ಸುರಕ್ಷಿತವಾಗಿ ಬಂದರಕ್ಕೆ ಬಂದಿತು.

#### ನಾರ್ವೆಯ ಖಂಡನೆ

ಜರ್ಮನಿಯ ಹಡಗಾದ ಆಲ್ಟ್ಮಾರ್ಕನ್ನು ನಾರ್ವೆಯ ಸಮಿಪದಲ್ಲಿ ಬ್ರಿಟಿಷ ಯುದ್ಧ ಹಡಗುಗಳು ತಡೆಗಟ್ಟಿ ನಾರ್ವೆಯ ತಾಟಸ್ಥ್ಯ ನೀತಿಯನ್ನು ಭಂಗ ಮಾಡಿರುವುವೆಂಬುದನ್ನು, ನಾರ್ವೆಯ ವಿದೇಶಾಂಗ ಸಚಿವರು 'ಸ್ಟೋರ್ಟಿಂಗ'ನಲ್ಲಿ ಭಾಷಣಮಾಡುತ್ತ ಹೇಳಿದರು. ಈ ಹೇಳಿಕೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿತು.

ಆಲ್ಟ್ಮಾರ್ಕ ಕೈದಿಗಳನ್ನು ನಾರ್ವೆಗೆ ಹಿಂದಕ್ಕೆ ಕೊಡಬೇಕೆಂದು ಕೇಳಲಾಯಿತು. ಆದರೆ ಕೊಡುವುದಿಲ್ಲವೆಂದು ಬ್ರಿಟನ್ನು ತಿಳಿಸಿತು.

#### ಆಲ್ಟ್ಮಾರ್ಕ ಬಗ್ಗೆ ಖಂಡನೆ

ಬ್ರಿಟಿಷ್ ಹೌಸ್ ಆಫ್ ಕಾಮನ್ಸ್‌ನಲ್ಲಿ ಮುಖ್ಯಮಂತ್ರಿ ಮಿ|| ನೆವಿಲ್ ಚೇಂಬರ್‌ಲಿನ್ನರು ಭಾಷಣಮಾಡುತ್ತ ಆಲ್ಟ್ಮಾರ್ಕ ಬಗ್ಗೆ ನಾರ್ವೆಯು ಮಾಡಿರುವ ಟೀಕೆಗಳು ಸರಿಯಲ್ಲವೆಂದರು. ನಾರ್ವೆ ಸರ್ಕಾರವು ತಾಟಸ್ಥ್ಯ ನೀತಿಯನ್ನು ಕಾಪಾಡಲಿಲ್ಲವೆಂದು ಅವರು ಅಪಾದಿಸಿದರು.

### ಟರ್ಕಿಯಲ್ಲಿ ಪುನಃ ಭೂಕಂಪ

#### ೪೦ ಜನ ಸತ್ತರು

#### ಮೂರು ಗ್ರಾಮಗಳು ನಾಶವಾದುವು

ಟರ್ಕಿಯಲ್ಲಿ ಭಾರಿ ಭೂಕಂಪವುಂಟಾಗಿ ಸೋಯರ್‌ಸಲ್ಲಿ ಮತ್ತು ಇತರ ಮೂರು ಗ್ರಾಮಗಳು ಸಂಪೂರ್ಣವಾಗಿ ನಾಶವಾದವು. ಸೋಯರ್‌ಸಲ್ಲಿಯಲ್ಲಿ ೪೦ ಜನರು ಮಡಿದರು ಮತ್ತು ೩೪ ಜನರು ಗಾಯಗೊಂಡರು.

#### ಯುರೋಪಿನಲ್ಲಿ ಸಮ್ನರ್ ವೆಲ್ಸರು

ಅಮೇರಿಕದ ರಾಯಭಾರಿಗಳಾದ ಮಿ|| ಸುಮ್ನರ್ ವೆಲ್ಸರು, ಹಿಟ್ಲರರನ್ನು ಭೇಟಿ ಮಾಡಲಿಕ್ಕಾಗಿ ಯತ್ನಿಸುತ್ತಿದ್ದಾರೆ. ಈ ವಾರದಲ್ಲಿ ನಡೆಯುವಂತೆ ಏರ್ಪಾಡಾಗಿರುವಂತೆ ಪ್ರಕಟವಾಗಿದೆ. ಈಗ ಅವರು ರೋಮಿನಲ್ಲಿರುವರೆಂದು ತಿಳಿದಿದೆ! ಜಗತ್ತಿನ ಶಾಂತಿಸಾಧನೆಗಾಗಿ ಇವರು ಯತ್ನಿಸುತ್ತಿರುವರೆಂದು ತಿಳಿದಿದೆ.

#### ಟರ್ಕಿಗೂ ರಶ್ಯಕ್ಕೂ ತಿಕ್ಕಾಟ

ಟರ್ಕಿಯಲ್ಲಿ 'ಜರೂರು ಕಾನೂನು' ಜಾರಿಗೆ ಬರತಕ್ಕದೆಂದು ನಿರ್ಧಾರವಾಗಿದೆ. ಯುಗೋಸ್ಲಾವಿಯಾ ಟರ್ಕಿಗಳ ಪತ್ರವ್ಯವಹಾರವೆಲ್ಲವೂ ಈಗ ನಿಂತು ಹೋಗಿದೆ. ಅಲ್ಲದೆ ಗಡಿನಾಡಿನಲ್ಲಿ ರಷ್ಯಕ್ಕೂ, ಟರ್ಕಿಗೂ ಕೈ ಕೈ ಹತ್ತಿದ ಸಮಾಚಾರವೊಂದು ಬಂದಿದ್ದು, ಆ ವಾರ್ತೆಯ ಮೇರೆಗೆ, ರಷ್ಯದ ಒಂದು ತುಕ್ಕಡಿ ಗಡಿನಾಡನ್ನು ದಾಟಿದಾಗ ಟರ್ಕಿ ಆ ತುಕ್ಕಡಿಯ ಆಯುಧಗಳನ್ನು ಕಳಚಿದ ಹಾಗೆ ತಿಳಿದು ಬರುತ್ತಿದೆ. ಈ ಮಧ್ಯದಲ್ಲಿ ಟರ್ಕಿ ತನ್ನ ಗಡಿಯಲ್ಲಿ ೩,೫೦,೦೦೦ ಮಂದಿಯನ್ನುಸಂಗ್ರಹಿಸಲು ಸಿದ್ಧವಿರುವುದೆಂಬ ವಾರ್ತೆ ನಿರಾಧಾರವೆಂದು ಟರ್ಕಿ ಅನ್ನುತ್ತಿದೆ.

#### ಫಿನ್‌ಲ್ಯಾಂಡಿಗೆ ಅಮೇರಿಕದ ಸಹಾಯ

ವಿಮಾನಗಳನ್ನು ಕೊಳ್ಳಲು ಅಮೇರಿಕವು ಫಿನ್‌ಲ್ಯಾಂಡಿಗೆ ೨೦ ಮಿಲಿಯ ಡಾಲರುಗಳನ್ನು ಸಾಲದ ಸಹಾಯವನ್ನು ನೀಡಿದೆ.

#### ಸ್ಕ್ಯಾಂಡಿನೇವಿಯ ಪರಿಷತ್ತು

ಸ್ಕ್ಯಾಂಡಿನೇವಿಯ ರಾಷ್ಟ್ರಗಳ ಪರಿಷತ್ತು ಕೋಪನ್ ಹೇಗನ್ನು ಸೇರಿ, ಫಿನ್ನರ ಸ್ವಾತಂತ್ರ್ಯವನ್ನು ಹಾರೈಸುವ, ತಟಸ್ಥವಾಗಿರುವ, ಅನ್ಯೋನ್ಯ ಸಹಾಯ ಮಾಡುವ ನಿರ್ಣಯಗಳು ಆಗಿವೆ.

#### ಹೋಲೆಂಡಿನ ಮೇಲೆ ಜರ್ಮನ್ ವಿಮಾನ

ಡಚ್ ಗಡಿಯಲ್ಲಿ ಜರ್ಮನ್ ವಿಮಾನಗಳು ಹಾರಾಡುವ ಬಗ್ಗೆ ತೀವ್ರ ನಿಷೇಧವು ಸೂಚಿತವಾಗಿದೆ. ಒಂದು ಡಚ್ ವಿಮಾನವೂ ಜರ್ಮನ್ ವಿಮಾನವೂ ಕಾದಾಟ ಮಾಡಿ, ಡಚ್ ವಿಮಾನಕ್ಕೆ ಗುಂಡು ತಾಗಿದೆ.

#### ಸ್ವೀಡನ್ ಹಳ್ಳಿಗೆ ರಶ್ಯದ ಬಾಂಬು

ಫಿನ್‌ಲೆಂಡಿನ ಗಡಿಯ ಐದು ಮೈಲು ದೂರದ ಸ್ವೀಡನಿನ ಹಳ್ಳಿಗೆ ರಶ್ಯವು ಬಾಂಬೆಸೆದಿದೆ. ಈ ಬಗ್ಗೆ ಸ್ವೀಡನ್ ಸರಕಾರವು ನಿಷೇಧವನ್ನು ವ್ಯಕ್ತಪಡಿಸಿದೆ.

#### ಸಣ್ಣ ಜನಾಂಗಗಳ ರಕ್ಷಣೆಗಾಗಿ ಯುದ್ಧ?

#### ಚೆಂಬರ್ಲಿನರ ಭಾಷಣ

ಕಳೆದ ವಾರ ಚೆಂಬರ್ಲಿನರು ಭಾಷಣ ಮಾಡುತ್ತಾ ಮಿತ್ರರಾಷ್ಟ್ರಗಳ ಯುದ್ಧ ಉದ್ದೇಶವನ್ನು ಹೇಳುವಲ್ಲಿ, ಫಿನ್ನರ ಪರಾಕ್ರಮವನ್ನು ಕೊಂಡಾಡಿ ಫ್ರಾನ್ಸಿನೊಡನೆ ಬ್ರಿಟನಿನ ಮೈತ್ರಿಯನ್ನು ವಿವರಿಸಿ, ಜರ್ಮನಿಯು ಜಗತ್ತಿನ ಸಾಮ್ರಾಜ್ಯ ಶಾಹಿಗಾಗಿ ಕಾದಾಡುವುದೆಂದೂ, ಬ್ರಿಟನು ಸಣ್ಣ ರಾಷ್ಟ್ರಗಳ ಸ್ವತಂತ್ರ್ಯ ರಕ್ಷಣೆಗಾಗಿ ಕಾದಾಡುವುದೆಂದೂ ಹೇಳಿದರು. ಆದಕಾರಣ, ಶಕ್ತಿಯೇ ಜಯಶಾಲಿಯೆಂಬ ತನ್ನ ದೋರಣೆಯನ್ನು ಜರ್ಮನಿಯು ಬಿಟ್ಟುಕೊಡಬೇಕೆಂದೂ, ಸಾರಿದರು.

#### ಹಿಟ್ಲರನ ಭಾಷಣ

ನಾಜೀ ಪಕ್ಷದ ಇಪ್ಪತ್ತನೆಯ ವಾರ್ಷಿಕೋತ್ಸವದಂದು ಭಾಷಣ ಮಾಡುತ್ತಾ ಹಿಟ್ಲರನು ಇಂದಿನ ಪರಿಸ್ಥಿತಿಗಳನ್ನು ವಿವರಿಸಿ, ಇಟಲಿ, ರಶ್ಯ, ಜಪಾನುಗಳೊಡನೆ ಜರ್ಮನಿಯು ಸೌಹಾರ್ದದಿಂದಿರುವುದೆಂದೂ, ಕಳೆದ ಯುದ್ಧದಲ್ಲಿ ಬ್ರಿಟನು ಜಗತ್ತನ್ನೇ ವಂಚಿಸಿದೆಯೆಂದೂ, ಅರಬರನ್ನು ಯೆಹೂದ್ಯರನ್ನು, ಭಾರತೀಯರನ್ನು ಹೆಚ್ಚು ವಂಚಿಸಿದೆಯೆಂದೂ ಹೇಳಿ, ಇಡೀ ಭೂಲೋಕವೇ ಚೆಂಬರ್ಲಿನರ ದೋರಣೆಯು ಸಾಮ್ರಾಜ್ಯ ಶಾಹಿಯೆಂದು ಹೇಳುತ್ತಿರುವಾಗ, ಜರ್ಮನಿಯ ಸಾಮ್ರಾಜ್ಯಶಾಹೀ ಧೋರಣೆಯ ವಿರುದ್ಧ ಹೋರಾಡುವೆಂಬ ಚೆಂಬರ್ಲಿನರ ಮಾತು ಹುರುಳಿಲ್ಲದ ಮಾತೆಂದನು. ಬ್ರಿಟಿಷರೇ ಇಡೀ ಸಾಮ್ರಾಜ್ಯವನ್ನು ಆಳುವಂತಾಗುವುದು ಸರಿಯಲ್ಲವೆಂದೂ ಸಾರಿದನು.

#### ೪೯೬ ಹಡಗುಗಳು ಮುಳುಗಿದವು

ಜರ್ಮನಿಯವಾರ್ತೆಯಂತೆ ಫೆಬ್ರುವರಿ ೨೫ರ ವರೆಗೆ ೪೯೬ ಶತ್ರುಹಡಗ್ಗುಗಳು ಮುಳುಗಿರುವವೆಂದು ತಿಳಿದುಬಂದಿದೆ.

---

#### ಕೂಲಿಗಾರರ ಸಂಕಷ್ಟ

ಬೊಂಬಾಯಿ, ಅಹಮದಾಬಾದ್, ಕಾನ್ಪುರ್, ಝಾನ್ಸಿ ಮತ್ತು ಮುತ್ತು ಡೆಹರಾಡಾನ್‌ಗಳಲ್ಲಿ ಕೂಲಿಗಾರರ ಮುಷ್ಕರಗಳು ಜಾಸ್ತಿಯಾಗುತ್ತಲಿವೆ. ಯುದ್ಧ ಪರಿಸ್ಥಿತಿಯೊದಗಿ, ಆಹಾರ ಪದಾರ್ಥಗಳ ಬೆಲೆ ಏರಿಹೋಗಿರುವುದರಿಂದ ಅವರು ಹೆಚ್ಚಿಗೆ ವೇತನ ಕೊಡಬೇಕೆಂದು ಮಿಲ್‌ಗಳು ಮತ್ತು ಕಾರ್ಖಾನೆಗಳ ಮಾಲೀಕರನ್ನು ಒತ್ತಾಯಪಡಿಸುತ್ತಿದ್ದಾರೆ. ಆದರೆ ಮಾಲೀಕರು ಈ ಕೇಳಿಕೆಗಳಿಗೆ ಒಪ್ಪಿಗೆ ಕೊಡಲು ಇಷ್ಟಪಡುತ್ತಿಲ್ಲ. ತತ್ಪರಿಣಾಮವಾಗಿ ಎಲ್ಲೆಡೆಗಳಲ್ಲಿಯೂ ಮಹತ್ತರ ಬಿಕ್ಕಟ್ಟು ಒದಗುತ್ತಿದೆ.

#### ಬಂಧನ!

ಕಮ್ಯೂನಿಸ್ಟ್ ಮುಖಂಡರಾದ ಶ್ರೀ ಅಶೋಕ್‌ಕುಮಾರ್ ಬೋಸ್‌ರವರು ರಾಜದ್ರೋಹಕರವಾದ ಭಾಷಣ ಮಾಡಿದರೆಂದು ಕಾನ್ಪುರದ ಸಿಟಿ ಮ್ಯಾಜಿಸ್ಟ್ರೇಟರು ಅವರಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಿದರು.

#### ಅಗ್ರಲೇಖವೇ ಇಲ್ಲ

"ಅಗ್ರಲೇಖನ ಪ್ರಕಟಿಸುವ ಮುನ್ನ ಸರಕಾರಕ್ಕೆ [illegible]" ಎಂದು ಬಂಗಾಳಾ ಸರಕಾರವು ಕೇಳಿದ್ದರಿಂದ "ಹಿಂದೂಸ್ಥಾನ್ ಸ್ಟಾಂಡರ್ಡ್ ಪತ್ರಿಕೆ"ಯು ಅಗ್ರಲೇಖನವೇ ಇಲ್ಲದೆ ಪ್ರಕಟವಾಗುತ್ತಿದೆ.

#### ಅರವಿಂದದರ್ಶನ

ಪುದುಚೇರಿಯಲ್ಲಿ ಶ್ರೀ. ಅರವಿಂದರವರು ಸುಮಾರು ೫೦೦ ಮಂದಿಗೆ ದರ್ಶನ ಕೊಟ್ಟರು. ಇವರಲ್ಲಿ ಹೈದರಾಬಾದ್ ಹೈ ಕೋರ್ಟಿನ ಜಡ್ಜರೊಬ್ಬರೂ, ಸರ್ ಅಕ್ಬರ್ ಹೈದ್ರಿಯವರ ಪುತ್ರ ಮಿ|| ಅಲೀ ಹೈದ್ರಿ ಮೊದಲಾದ ಅಧ್ಯರೂ ಹಲವರಿದ್ದರು.

#### ಗಾಂಧಿ ಸೇವಾಸಂಘ

ಗಾಂಧಿ ಸೇವಾಸಂಘದ ಹೊಸ ಕಾರ್ಯಕಾರಿ ಸಮಿತಿಯ ರಚನೆ ಮಲಿಕಂಡದಲ್ಲಿ ನಡೆದು, ಶ್ರೀಗಳಾದ ಕೃಷ್ಣದಾಸ ಜಾಜೂಯವರು ಅಧ್ಯಕ್ಷ ಮತ್ತು ಟ್ರಸ್ಟಿಗಳಾಗಿ ಆರ್. ಎಸ್. ಧ್ರೋತ್ರಿಯವರು ಸೆಕ್ರೆಟರಿ ಮತ್ತು ಟ್ರಸ್ಟಿಗಳಾಗಿ ಕಿಶೋರ್‌ಲಾಲ್ ಮಶ್ರೂವಾಲರು ಇನ್ನೊಬ್ಬ ಟ್ರಸ್ಟಿಗಳಾಗಿ ಆರಿಸಲ್ಪಟ್ಟರು. ಕೆಲವು ಮಂದಿ ಸದಸ್ಯರ ಚುನಾವಣೆಯೂ ನಡೆದಿದೆ.

#### ಪಂಜಾಬಿನಲ್ಲಿ ಬಂಧನ

ಇಂಡಿಯಾ ಡಿಫೆನ್ಸ್ ಆಕ್ಟಿನ ಮೇರೆಗೆ, ಪಂಜಾಬ್ ಪ್ರಾಂತದಲ್ಲಿ ಕಳೆದ ನವೆಂಬರದ ಅಂತ್ಯದ [illegible] ಸಂಖ್ಯೆ ೩೧೪ ಎಂದು ಪ್ರಕಟವಾಗಿದೆ.

#### ಪತ್ರಿಕೆಯ ಮೇಲೆ ಗದೆ

ಮದ್ರಾಸಿನ ಆಂಗ್ಲ ಪತ್ರಿಕೆಯಾದ 'ಸಂಡೇ ಒಬ್ಸರ್ವರ್' ಈಚೆಗೆ ೩ ಆಕ್ಷೇಪಕರವಾದ ಲೇಖನಗಳನ್ನು ಪ್ರಕಟಿಸಿದ ಕಾರಣದಿಂದ 'ಮದ್ರಾಸ್' ಸರಕಾರವು ಆ ಪತ್ರಿಕೆಯಿಂದ ೧೫೦೦೦ ರೂಪಾಯಿಗಳ ಭದ್ರತೆ ಕೇಳಿದೆ.

#### ಹಿಂದೀ ಕಡ್ಡಾಯವಲ್ಲ

#### ಮದ್ರಾಸ್ ಸರಕಾರದ ಆಜ್ಞೆ

ಶಾಲೆಗಳಲ್ಲಿ ಕಡ್ಡಾಯ ಹಿಂದಿಯ ಬದಲು ಈ ವಿಷಯವನ್ನು 'ಐಚ್ಛಿಕ' ಆಗಿ ಇಡಬೇಕೆಂದು ಮದ್ರಾಸ್ ಸರಕಾರವು ಹುಕುಂ ಹೊರಡಿಸಿದೆ. ಶಾಲೆಗಳಲ್ಲಿ ಹಿಂದೀ ವಿದ್ಯಾಭ್ಯಾಸಕ್ಕಾಗಿ ಕೊಟ್ಟ ಗ್ರಾಂಟನ್ನು ಸರಕಾರವು ರದ್ದುಗೊಳಿಸುವುದಿಲ್ಲ.



# ಸಂಗ್ರಾಮಕ್ಕೆ ಸಿದ್ಧರಾಗಿರೆಂದು

# ಸರ್ದಾರ ಪಟೇಲರ ಸಿಂಹಗರ್ಜನೆ

## ಗಾಂಧಿಜಿಯವರ ಬಂಗಾಳ ಪ್ರವಾಸ

## ಪಾಟ್ನದಲ್ಲಿ ವರ್ಕಿಂಗ್ ಕಮಿಟಿ ದೀನಬಂಧು ಅಂಡ್ರೂಸರ ಅಸೌಖ್ಯ

## ಕೂಲಿಗಾರರ ದುರಂತ ಪರಿಸ್ಥಿತಿ!

### ಮುಂದಿನ ಹೆಜ್ಜೆ ಇಡಲೆ ಬೇಕು

### ಮೌಲನಾ ಅಜಾದರ ಹೇಳಿಕೆ

"ಇಂದಿನ ಪರಿಸ್ಥಿತಿಯು ಉಗ್ರವಾಗುತ್ತಿದೆ; ಆದಕಾರಣ ನಾವು ಮುಂದಿನ ಹೆಜ್ಜೆ ಇಡದೆ ನಿರ್ವಾಹವಿಲ್ಲ. ಗಾಂಧಿಜಿಯವರು ಹಿಂದೂ ಮುಸ್ಲಿಂ ಐಕ್ಯವನ್ನು ಹೇಳಿದ್ದು ನ್ಯಾಯವಾಗಿದ್ದರೂ ಸತ್ಯಾಗ್ರಹವನ್ನು ವರ್ಕಿಂಗ್ ಕಮಿಟಿಯು ಆರಂಭಿಸುವಲ್ಲಿ ಅದು ಆತಂಕವಾಗಲಾರದು. ಆದರೆ ಗಾಂಧಿಜಿಯವರು ಇದು ವರೆಗೆ ತೆಗೆದುಕೊಂಡ ಪ್ರತಿಯೊಂದು ಹೆಜ್ಜೆಯು ನ್ಯಾಯವಾದುದೇ" ಹೀಗೆಂದು ಮುಂದಿನ ರಾಷ್ಟ್ರಪತಿ ಮೌಲನಾಅಜಾದರು ಪತ್ರಿಕಾ ಪ್ರತಿನಿಧಿಯೊಡನೆ ಹೇಳಿದರು.

### ನಾವೆಲ್ಲರೊಂದೇ ಜನಾಂಗ

ಕಳೆದವಾರ ಶ್ರೀ ರಾಜಗೋಪಾಲಾಚಾರ್ಯರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು ಯೂನಿಯನಿನಲ್ಲಿ ಭಾಷಣವೊಂದನ್ನು ಮಾಡಿ, ಅದರಲ್ಲಿ ಜಿನ್ನರು ಹೇಳುವಂತೆ ಹಿಂದೂ ಮುಸ್ಲಿಮರು ಬೇರೆ ಬೇರೆ ಜನಾಂಗದವರಲ್ಲವೆಂದೂ, ಎಲ್ಲರೂ ಒಂದೇ ಜನಾಂಗದವರೆಂದೂ, ನಾವು ಒಂದೇ ಜನಾಂಗವೆಂಬುದನ್ನು ಮುಂದಿನ ವರ್ಷದ ರಾಷ್ಟ್ರಪತಿ ಅಜಾದರೇ ಸರಿಯಾಗಿ ಹೇಳುವರೆಂದೂ ಅಭಿಪ್ರಾಯಪಿಟ್ಟರು.

### ಜಾತೀಯ ತೀರ್ಮಾನ

### ಗಾಂಧಿಜಿಯವರ ಹೇಳಿಕೆ

ಜಾತಿಯ ತೀರ್ಮಾನದ ಕುರಿತು ಮಹಾತ್ಮಗಾಂಧಿಯವರು ಲೇಖನವೊಂದರಲ್ಲಿ ಬರೆಯುತ್ತಾ ಅದು ಭಾರತದ ಮೇಲೆ ಹೇರಿಸಲ್ಪಟ್ಟಿತೆಂದು, ಅದರಿಂದ ಭಾರತೆಯರಿಗೆ ಅನಿಷ್ಟವಾದರೂ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಲವರ್ಧನೆಗಾಗಿ ಅದು ಹೊರಿಸಲಾಗಿದೆಯೆಂದೂ ಹೇಳಿರುವರು.

### ಒಂದು ತಾಸು ನೂಲಲಾರದವರಿಗೆ ಸ್ವರಾಜ್ಯವೇಕೆ?

### ಗಾಂಧಿಜಿಯವರಿಗೆ ೧೮,೦೦೦ ನಿಧಿ!

ಮಾಲ್ಲಿಕಂಡದಿಂದ ಹೊರಡುವಾಗ, ಸಾರ್ವಜನಿಕ ಸಭೆಯೊಂದು ಸೇರಿ ೧೮,೦೦೦ ರೂಪಾಯಿಯ ನಿಧಿಯನ್ನು ಅರ್ಪಿಸಿ ಅದನ್ನು ಬಂಗಾಳದಲ್ಲಿ ರಚನಾತ್ಮಕ ಕಾರ್ಯಗಳ ಬಗ್ಗೆ ವ್ಯಯಿಸಬೇಕೆಂದು ಕೇಳಿಕೊಳ್ಳಲಾಯಿತು. ಗಾಂಧಿಜಿಯವರು, ಸ್ವರಾಜ್ಯ ಸಾಧನೆಯಲ್ಲಿ ಖಾದಿಯ ಪ್ರಧಾನ್ಯತೆಯನ್ನು ಹೇಳುತ್ತಾ ದಿನಕ್ಕೊಂದು ತಾಸು ನೂಲಲು ಸಾಧ್ಯವಾಗದಿದ್ದರೆ ಅಂತಹವರಿಗೆ ಸ್ವರಾಜ್ಯವಾದರೂ ಏಕೆಂದು ಪ್ರಶ್ನಿಸಿದರು. ಹೆಂಗುಸರೇ ಮುಂದೆಬಂದು ರಾಷ್ಟ್ರಹಿತದಲ್ಲಿ ಗಂಡಸರಿಗಿಂತ ಹೆಚ್ಚಿನ ಕಾರ್ಯವನ್ನು ಮಾಡಿ ತೋರಿಸಲು ನೂಲುವ ಪ್ರತಿಜ್ಞೆ ತೊಡಬೇಕೆಂದು ಸಾರಿದರು

### ಜಮ್ನಾಲಾಲಬಜಾಜರು

ಪೂನಾದಲ್ಲಿ ಅಸೌಖ್ಯದಿಂದಿರುವ ಬಜಾಜರು, ರಾಜಕೀಯ ವಿಷಯದ ನಿವೃತ್ತ ಜಯಪುರಕ್ಕೆ ತೆರಳಿರುವರು.

### ಘೋರಸಂಗ್ರಾಮಕ್ಕೆ ಸಿದ್ಧರಾಗಿರಿ

'ಬ್ರಿಟಿಶಸರಕಾರ'ದ ವಿರುದ್ಧ ಮತ್ತೊಮ್ಮೆ ಹೋರಾಟವು ಹೂಡಲ್ಪಟ್ಟರೆ ಅದು ಮೊದಲಿನಕಿಂತಲೂ ಅತಿಭೀಕರವಾಗಿರುವದು, ಅದೇ ಕೊನೆಯ ಹೋರಾಟವಾಗುವದು ಎಂದು ಸರದಾರ ವಲ್ಲಭಭಾಯಿ ಪಟೇಲರು ಗಾಂಧಿ ಸೇವಾಸಂಘದ ಪರಿಷತ್ತಿನಲ್ಲಿ ಭಾಷಣ ಮಾಡುತ್ತ ಹೇಳಿದರು.

ಗಾಂಧಿಯವರು ನಾಯಕತ್ವವನ್ನು ವಹಿಸಲು ಇದೀಗ ಒಪ್ಪಿದ್ದಾರೆ ಆದ್ದರಿಂದ ಜನರು ಅವರಲ್ಲಿ ಸಂಪೂರ್ಣ ವಿಶ್ವಾಸ ಇಡಬೇಕು. ಹೋರಾಟ ಯಾವಾಗ ಮತ್ತು ಹೇಗೆ ಪ್ರಾರಂಭವಾಗುವದೆಂಬುದನ್ನು ನಿರ್ಧರಿಸುವವರು ಜನರಲ್ಲ ನಾಯಕನೇ ಅದನ್ನು ನಿರ್ಧರಿಸುವನು. ಈ ಕೆಲಸವನ್ನು ಅವನಿಗೇ ಬಿಟ್ಟು ಬಿಡಬೇಕು ತಡವಾದರೆ ಅದು ನಾಯಕನ ತಪ್ಪಲ್ಲ. ಜನರ ತಪ್ಪು. ಅವರು ಸಂಗ್ರಾಮಕ್ಕೆ ಸಿದ್ಧರಾಗಿರಬೇಕು. ಕರೆಬಂದಾಗ ಹೊರಡಲು ಸಿದ್ಧರಾಗಿರಬೇಕು ಎಂದರು

### ಹೊಸ ವಾರ್ತೆ

ರಶ್ಯನ್ ಸೈನಿಕರು ಮುಂದೊತ್ತುತ್ತಿದ್ದಾರೆ. ಕೋವಿಸ್ಟೋವನ್ನು ಸ್ವಾಧೀನಪಡಿಸಿದ್ದಾರೆ.

ಸಮ್ನರ್ ವೆಲ್ಸರು ರೋಮಿಗೆ ಹೋಗಿ ಮುಸಲಿನಿಯನ್ನೂ ಕೌಂಟ್ ಸಿಯಾನೋವನ್ನೂ ಕಂಡು ಮಾತನಾಡಿದರು. ಮುಂದೆ ಹಿಟ್ಲರನನ್ನು ಕಂಡು ಮಾತನಾಡಲು ಬರ್ಲಿನಿಗೆ ತೆರಳಿರುವರು.

ಗಾಂಧಿಜಿಯವರು ಕಲ್ಕತ್ತಕ್ಕೆ ಬಂದು ಅಸ್ವಸ್ಥದಲ್ಲಿರುವ ದೀನಬಂಧು ಅಂಡ್ರೂಸರನ್ನು ಕಂಡರು. ಕಲ್ಕತ್ತದ ಬಿಶೋಪರೊಡನೆ ಮಾತುಕತೆ ನಡೆಸಿದರು. ಸರತ್ ಬೋಸರೂ ಗಾಂಧಿಜಿಯವರನ್ನು ಕಂಡು ಮಾತನಾಡಿದರು.

"ಎಸೆಂಬ್ಲಿಯು ತನ್ನ ಮೇಲೆ ವಿಶ್ವಾಸವನ್ನು ತೋರಿಸಿರುವುದರಿಂದ ತಾನು ರಾಜಿನಾಮೆಯನ್ನು ಹಿಂತೆಗೆಯುವುದಾಗಿ" ಸಿಂಧದ ಪ್ರಧಾನಮಂತ್ರಿ ಅಲ್ಲಭಕ್ಷರು ಹೇಳಿದರು.

ಸಿಲೋನಿನ ಕೃಷಿ ಇಲಾಖಾ ಮಂತ್ರಿಯವರು ಗವರ್ನರರ ಕಾರ್ಯದಲ್ಲಿ ಅತೃಪ್ತಿ ತೋರಿಸಿ ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟಿರುವರು.

### ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No. 125/1939

ಸುಬ್ರಹ್ಮಣ್ಯ ನಂಬೂದ್ರಿ ಸಹಾ— ವಾದಿರು

ಮತ್ತು

೧. ತೆಕ್ಕೆಕೋಲೋತ್ತ ಪಮ್ಮಂಮ್ಮ.
೨. ತೆಕ್ಕೆಕೋಲೋತ್ತ ಕುಂಞ ಪಾರುಮ್ಮ.
೩. ತೆಕ್ಕೆಕೋಲೋತ್ತ ಕುಂಞು ಮಾಣಿ.
೪. ತೆಕ್ಕೆಕೋಲೋತ್ತ ಅಮ್ಮುಮ್ಮ.
೫. ಕೊಪ್ಪಮ್ಮಲ್ ಕೃಷ್ಣನಾಯರ.
೬. ಉದಿನೂರತಾಯಲ್ ಪುರಯಿಲ ಸುಲೈಮಾನ್. } ಪ್ರತಿವಾದಿಗಳು

ಇವರೊಳಗೆ ತಾ. ೨೩—೨—೪೦ ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವದೇನೆಂದರೆ—

ಕ್ಲಾಯಿ ಕಂಡಂಗಿ ತರವಾಟ್ಟಿನಿಂದ ೧ರಿಂದ ೪ನೇ ವರೇಗಿನ ಪ್ರತಿವಾದಿರಿಗೆ ರೂ ೨೦೦೦ಕ್ಕೆ ಬರೆಕೊಟ್ಟ ಕ್ರಯಚೀಟಿನ ಶರ್ತ ಪ್ರಕಾರ ಬರಬೇಕಾದ ರೂ. ೧೬೬—೮—೦ದ ಹಕ್ಕು ೧ನೇ ವಾದಿಗೆ ೨ನೇ ವಾದಿಯ ಕುಟುಂಬದಿಂದ ಸಿದ್ಧಿಸಿರುವದರಿಂದ ಆ ಪ್ರಕಾರ ಬರಬೇಕಾದ ಐವೇಜಿನ ಬಗ್ಗೆ ನಿಮ್ಮ ಮೇಲೆ ದಾವಾದಾಕ್ಲಾಗಿ ಸದ್ರಿ ವ್ಯಾಜ್ಯದಲ್ಲಿ ನಿಮ್ಮ ಮೇಲೆ ಜಾರಿಯಾಗ ತಕ್ಕ ಸಮನ್ಸು ಅಮೈರ ಮಾಪಸ್ಸಾನಕ್ಕೆ ಅಂಟ್ಸಿ ಹ್ಯಾಜರ ಮಾಡಿಸಲಿಕ್ಕೆ ಹುಕುಂ ಆಗಿ ಸದ್ರಿ ವ್ಯಾಜ್ಯವು ತಾ. ೪—೩—೧೯೪೦ಕ್ಕೆ ವಿಚಾರಣೆಗೆ ಇಟ್ಟಿರುವ ಸಂಗತಿಯು ಮೂಲಕ ಪ್ರಕಟಿಸೋಣಾಗಿಯದೆ,

ಎ. ವಿ. ನಾರಾಯಣ ಮೇನೋನ್
ವಾದಿಯ ಕಡೆ ವಕೀಲ್

ಉತ್ತಮ ಪೋಷಾಕಿನವರಿಗೆ ನಾಜೂಕಾದ

'ಜಂಟೀಲ್' ವಾಚುಗಳು!

ಪ್ರತೀ ಒಬ್ಬರೂ ಈ ಚಪ್ಪಟೆಯಾದ ವಾಚುಗಳನ್ನು ಕೊಂಡುಕೊಳ್ಳಬಹುದು. ಹಿಂಬದಿಯು ಜಾಲಿ ಮತ್ತು ಫೆನ್ಸಿಯುಂದಿರುವ ಎರಡು ರೀತಿಯಲ್ಲಿದ್ದು ಈ 'ಜಂಟೀಲ್' ವಾಚುಗಳು ಬಹಳ ಕಡಿಮೆ ಕ್ರಯಕ್ಕೆ ವಿಕ್ರಯಿಸಲ್ಪಡುತ್ತವೆ. 15 ಕೆರೆಟ್ ಜ್ಯುವೆಲಿನ ಮುಳ್ಳಿದ್ದು, ಗ್ಯಾರಂಟಿಯಾಗಿ ನಡಿಯುತ್ತದೆ. ಇದರ ಕೇಸು ನಿಕ್ಕಲ್ ಸಿಲ್ವರ್ ಕ್ರೋಮಿಯ ಪ್ಲೇಟೆಡ್ ಅಥವಾ ಹತ್ತು ವರ್ಷ ಬಾಳುವ ರೋಲ್ಡ್ ಗೋಲ್ಡಿನದಿರುತ್ತದೆ.




ಎರಡು ಮಾದರಿಗೂ ಒಂದೇ ಕ್ರಯ!

| | |
|---|---|
| ನಿಕ್ಕಲ್ ಸಿಲ್ವರ್ | ರೂ. 20 |
| ರೋಲ್ಡ್ ಗೋಲ್ಡ್ | ರೂ. 40 |

ಕೆಟಲಾಗು ಧರ್ಮಾರ್ಥ!

ವೆಸ್ಟ್ ಎಂಡ್ ವಾಚ್ ಕೊ, ಬೊಂಬಾಯಿ ಮತ್ತು ಕಲ್ಕತ್ತಾ

WEST END WATCH Co
BOMBAY CALCUTTA

## ದ. ಕ. ಜಿಲ್ಲಾ ಹರಿಜನ ಪರಿಷತ್ತು, ಮೂಲ್ಕಿ

### ಮಾರ್ಚ ೨೭, ೨೮
### (ಶ್ರೀ ಮುನಿಸ್ವಾಮಿ ಪಿಳ್ಳೆಯವರ ಅಧ್ಯಕ್ಷತೆಯಿಂದ)

ದ. ಕ. ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಮೂಲ್ಕಿ ಬಪ್ಪನಾಡು ಉತ್ಸವದ ಸಮಯ 'ಜಿಲ್ಲಾ ಹರಿಜನ ಪರಿಷತ್ತು' ಜರಗಿಸುವ ಕುರಿತಾಗಿ ಶ್ರೀ. ಯಂ. ಆರ್. ಪೂಂಜರ ಅಧ್ಯಕ್ಷತೆಯಲ್ಲಿ ತಾ. ೪-೩-೪೦ರಲ್ಲಿ ಮೂಲ್ಕಿಯಲ್ಲಿ 'ಹರಿಜನ ಸಾರ್ವಜನಿಕ ಸಭೆ'ಯೊಂದು ಸೇರಿತು.

ಪರಿಷತ್ತಿನ ಸ್ವಾಗತ ಸಮಿತಿಯ ಮೆಂಬರರಲ್ಲಿ ಹರಿಜನ ಸದಸ್ಯರಿಗೆ ರೂಪಾಯಿ ಒಂದು ಮತ್ತು ಎಂಟಾಣೆಯಂತೆ ಯೂ ಇತರರಿಗೆ ರೂಪಾಯಿ ಮೂರು ಮತ್ತು ರೂಪಾಯಿ ಒಂದರಂತೆಯೂ ಚಂದಾ ನಿಷ್ಕರ್ಷಿಸಲಾಯಿತು. ರೂ. ೨೫/- ಮತ್ತು ರೂ. 10/- ಯಾ ಇದಕ್ಕೆ ಮೇಲ್ಪಟ್ಟು ಪರಿಷತ್ತಿಗೆ ಸಹಾಯ ಧನವೀಯುವವರು ಕ್ರಮವಾಗಿ ಪೋಷಕ ಮತ್ತು ಆಶ್ರಯದಾತರೆಂದು ಪರಿಗಣಿಸಲ್ಪಡುವರು.

ಪರಿಷತ್ತಿಗೆ ಪ್ರತಿಯೊಂದು ಗ್ರಾಮದಿಂದ ಕನಿಷ್ಠಪಕ್ಷ ಇಬ್ಬರು ಪ್ರತಿನಿಧಿಗಳಂತೆ ಆರಿಸಲ್ಪಡಬೇಕಾಗಿ ನಿರ್ಣಯವಾಗಿದೆ. ಪ್ರತಿನಿಧಿಗಳ ಹೆಸರುಗಳನ್ನು ಪರಿಷತ್ತಿನ ಕಾರ್ಯಕಾರಿ ಸಮಿತಿ ಅಧ್ಯಕ್ಷರಿಗೆ ಬರುವ ಮಾರ್ಚ ತಾ. ೧೦ರೊಳಗೆ ಕಳುಹಿಸಿಕೊಡತಕ್ಕದ್ದು. ಪ್ರತಿಯೊಬ್ಬ ಪ್ರತಿನಿಧಿಗಳಿಗೆ ನಾಲ್ಕಾಣೆಯಂತೆ ಪ್ರತಿನಿಧಿ ಫೀಸು ಇಡಲಾಗಿದೆ. ಪರಿಷತ್ತಿನ ಸಂಧರ್ಭದಲ್ಲಿಯೇ ತಾ. ೨೮-೩-೪೦ಕ್ಕೆ ಹರಿಜನ [illegible] ಸಭೆಯೊಂದನ್ನು ಏರ್ಪಡಿಸಬೇಕೆಂದೂ ಪರಿಷತ್ತಿಗೆ ಬರುವ ಸ್ವಾಗತ ಕಮಿಟಿ ಮೆಂಬರರು, ಪ್ರತಿನಿಧಿಗಳು, ವಿದ್ಯಾರ್ಥಿಗಳು ಮತ್ತು ಪ್ರೇಕ್ಷಕರ ಅನುಕೂಲತೆ ಬಗ್ಗೆ ಧರ್ಮಾರ್ಥ ಯಾ ಸ್ಪೆಶಲ್ ರಿಯಾಯತಿ ದರದಲ್ಲಿ ಟಿಕೇಟುಗಳನ್ನು ಒದಗಿಸುವಂತೆ ಜಿಲ್ಲೆಯ ಮೋಟರು ಕಂಪೆನಿಯವರನ್ನು ವ ರೈಲ್ವೆ ಅಧಿಕಾರಿಗಳನ್ನು [illegible] ಬೇಕೆಂದೂ ಪರಿಷತ್ತು ದಿವಸಗಳಲ್ಲಿ ಧರ್ಮಾರ್ಥ ಊಟ ಕೊಡುವ ಏರ್ಪಾಡು ಅನುಕೂಲವಾಗುವಂತೆ ವ್ಯಕ್ತಿಗಳು ಕೆಲವರು ಯಾ ಸಂಸ್ಥೆಗಳು, ಅವರ ಅಭಿಪ್ರಾಯ ಸೂಚಿಸಿ ಧನಸಹಾಯ ಕೊಡುವಲ್ಲಿ ಅವರವರ ಹೆಸರಲ್ಲಿ ಏರ್ಪಾಡು ಮಾಡುವುದೆಂದೂ ನಿರ್ಣಯವಾಗಿದೆ. ಜಿಲ್ಲೆಯಲ್ಲಿರುವ ಗ್ರಾಮ ಕೈಗಾರಿಕೆಗಳ ಮತ್ತು ಶಾಲಾ ಕೈಗಾರಿಕೆಗಳ ಪ್ರದರ್ಶನವನ್ನು ಪರಿಷತ್ತಿನ ಸಂಧರ್ಭದಲ್ಲಿ ಏರ್ಪಡಿಸಲಾಗುವುದು. ಅವುಗಳಿಗೆ ಬಹುಮಾನವಿನಿಯೋಗಕ್ಕಾಗಿ ಸಹಾಯ ಧನವನ್ನು ನಿರೀಕ್ಷಿಸಲಾಗಿದೆ. ಹರಿಜನೋದ್ಧಾರದ ಕುರಿತು ಆಸಕ್ತಿಯುಳ್ಳ ಮಹನೀಯರು ತಮ್ಮ ಸಲಹೆ ಯಾ ನಿರ್ಣಯಗಳನ್ನು ಪರಿಷತ್ತಿನ ಅಧಿವೇಶನದ ಮುಂದಿಡುವ ಬಗ್ಗೆ ತಾರೀಕು ೧೦-೩-೪೦ರೊಳಗಾಗಿ ಕಾರ್ಯಕಾರಿ ಸಮಿತಿ ಅಧ್ಯಕ್ಷರಿಗೆ ಕಳುಹಿಸಿಕೊಡುವಂತೆ ಕೋರಲಾಗಿದೆಯೆಂದು ಸ್ವಾಗತ ಕಮಿಟಿ ಅಧ್ಯಕ್ಷರಾದ ಮುಲ್ಕಿಯ ಶ್ರೀ. ಎಂ. ಆರ್. ಪೂಂಜರು ತಿಳಿಸುತ್ತಾರೆ.

## ಗಾಂಧಿ ಸೇವಾಸಂಘ

### ವಿಧಾಯಕ ಕಾರ್ಯಕ್ರಮ

ಗಾಂಧಿ ಸೇವಾಸಂಘದ ಪರಿಷತ್ತಿನಲ್ಲಿ ಮಹಾತ್ಮರು ಸಂಘದ ಸದಸ್ಯರು ರಾಜಕಾರಣವನ್ನು ಮರೆಯಬೇಕೆಂದರು.

ಈ ಸಂಬಂಧವಾಗಿ ಅನೇಕ ಬಗೆಯ ತರ್ಕವಿತರ್ಕಗಳಾಗುತ್ತಿವೆ. ಮಹಾತ್ಮರು ಹೀಗೆ ಹೇಳಿರುವುದರಿಂದ ಮುಂದೆ ಏನಾಗಬಹುದು? ಸರದಾರ ಪಟೇಲ ಮತ್ತು ಬಾಬು ರಾಜೇಂದ್ರಪ್ರಸಾದರು ಏನುಮಾಡುವರು? ಅವರು ಗಾಂಧಿಸೇವಾಸಂಘವನ್ನು ಬಿಡುವರೆ? ಇವೇ ಮುಂತಾದ ಪ್ರಶ್ನೆಗಳು ಕೇಳಬರುತ್ತಿವೆ.

ಸಂಘವು ಪುನರ್ ರಚಿಸಲ್ಪಡಬೇಕೆಂದೂ ಕೇವಲ ವಿಧಾಯಕ ಕಾರ್ಯಕ್ರಮ ಮಾಡುವ ಜನರು ಮಾತ್ರ ಅದರಲ್ಲಿರಬೇಕೆಂದೂ ಸರದಾರ ಪಟೇಲರೂ ಸೂಚಿಸಿದರು. "ಗಾಂಧಿ ಸೇವಾಸಂಘವು ಪುಟ್ಟ ಕಾಂಗ್ರೆಸ್ಸೆಂದು ಅನೇಕರು ತಿಳಿದಿದ್ದಾರೆ ಇದು ಸರಿಯಲ್ಲ. ವಿಧಾಯಕ ಕಾರ್ಯಕ್ರಮವೇ ಈ ಸಂಘದ ಮುಖ್ಯ ಧ್ಯೇಯವಾಗಿರಬೇಕು; ಧೋರಣವಾಗಿರಬೇಕು. ಈ ಕಾರ್ಯಕ್ರಮವನ್ನು ಮಾಡುವ ಜನರು ಮಾತ್ರ ಇದರಲ್ಲಿ ಇರಬೇಕು. ಸತ್ಯ ಮತ್ತು ಅಹಿಂಸಾವಾದಿಗಳಿಗಷ್ಟೇ ಇದರಲ್ಲಿ ಇರಲು ಅವಕಾಶವಿರಬೇಕು ಆದರೆ ನಮ್ಮ ರಾಜಕೀಯ ಕಾರ್ಯಗಳಲ್ಲಿ ಈ ನಿಯಮವನ್ನು ಅಕ್ಷರಶಃ ಪಾಲಿಸುವದು ಬಹಳ ಕಠಿಣವಿದೆ. ಆದ್ದರಿಂದ ಸಂಘದ ಸದಸ್ಯತ್ವಕ್ಕೆ ನಾನು ಸಂಪೂರ್ಣ ರಾಜೀನಾಮೆ ಕೊಡಬೇಕೆಂದು ನಿಶ್ಚಯಿಸಿದ್ದೇನೆ" ಎಂದು ಹೇಳಿದರು.

ಸರದಾರರ ಭಾಷಣವಾದ ಮೇಲೆ ಸಭೆಯಲ್ಲಿ ಒಂದು ಠರಾವು ಕಲ್ಪಿಸಿತು. ಮ. ಗಾಂಧಿಯವರು ವ್ಯಕ್ತಮಾಡಿದ ಅಭಿಪ್ರಾಯಗಳೇ ಇದರಲ್ಲಿಯೂ ಇದ್ದವು.

ಮಹಾತ್ಮಾ ಗಾಂಧಿಯವರು ತಮ್ಮ ಕುಟೀರದ ಮುಂಭಾಗದ ಒಂದು ಮೇಜಿನ ಮೇಲೆ ನಿಂತು, ದರ್ಶನಾಕಾಂಕ್ಷಿಗಳಾಗಿ ಬಂದಿದ್ದ ಸಾವಿರಾರು ಜನ್ನ ಹಳ್ಳಿಗರಿಗೆ ದರ್ಶನ ಕೊಟ್ಟರು. ಮುಲಿಕಾಂದದಲ್ಲಿ ತಾವಿರುವ ವರೆಗೆ ನಿರ್ದಿಷ್ಟವೇಳೆಗೆ ಪ್ರತಿನಿತ್ಯ ದರ್ಶನ ಕೊಡುವದಾಗಿ ಮ. ಗಾಂಧಿಯವರು ಆಶ್ವಾಸನ ಕೊಟ್ಟರು. ಒಳಿಕ ಹಳ್ಳಿಗರೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋದರು.

ಸೇವಾಸಂಘದ ಮೈದಾನಿನಲ್ಲಿ ಕಿಸಾನ ಮತ್ತು ಕೂಲಿಕಾರರ ಸಭೆ ಈ ದಿನ ಸಾಯಂಕಾಲ ಕೂಡಿತ್ತು. ಅನೇಕರು ಭಾಷಣ ಮಾಡಿದರು.

ಮ. ಗಾಂಧಿಯವರು ಸಾಯಂಕಾಲದ ಪ್ರಾರ್ಥನೆ ಮುಗಿಸಿದರು. ಮರುದಿನ ಸಂಘದ ಸಮ್ಮೇಳನವು ಮುಕ್ತಾಯವಾಯಿತು.

---

ಸಣ್ಣ ಸಣ್ಣ ಕಲೆ ಮತ್ತು ಗಾಯಗಳನ್ನು ನಿಮ್ಮ ಚರ್ಮದಿಂದ ಮಾಸಿಬಿಡಿರಿ

ಪ್ರತೀ ರಾತ್ರಿಯೂ ಜ್ಯಾಂಬಕನ್ನು ಚೆನ್ನಾಗಿ ಹಚ್ಚಿರಿ

ಸಣ್ಣ ಸಣ್ಣ ಕಲೆ, ಗಾಯ ಮುಂತಾದುವುಗಳಿಂದ ಸ್ವಲ್ಪವಾದರೂ ಮನಸ್ಸಿನಲ್ಲಿ ಬೇಜಾರ ಪಡಬೇಡಿರಿ ಗಾಯ ಮತ್ತು ಕಲೆಯಿದ್ದಂತಾ ಭಾಗದ ಮೇಲೆ ಪ್ರತೀ ರಾತ್ರಿಯೂ ಜ್ಯಾಂಬಕನ್ನು ಚೆನ್ನಾಗಿ ಸವರಿ ಚರ್ಮವನು ಆರೋಗ್ಯ ಸ್ಥಿತಿಯಲ್ಲಿರಿಸಿರಿ. ಜ್ಯಾಂಬಕಿನಲ್ಲಿರುವ ಔಷಧೀಯ ಗಿಡಮೂಲಿಕೆಗಳ ಎಣ್ಣೆಯು ಸರನಾಡಿಳಿಂದ ಎಳೆಯಲ್ಪಟ್ಟು ನೋವು ಮಾಯವಾಗಿ, ಬಾತುಕೆಯು ಕಡಿಮೆಯಾಗಿ ರಸಿಗೆಯು ಬರುವುದು ಕಡಿಮೆಯಾಗುವುದು. ಜ್ಯಾಂಬಕು ವಿಷಾಣುಗಳನ್ನು ನಾಶಮಾಡುತ್ತದೆ. ಚರ್ಮವನ್ನು ಆರೋಗ್ಯದಲ್ಲಿರಿಸಿ ಒಂದು ಕಲೆಯನ್ನುಂಟುಮಾಡದೆ ಗುಣಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ರೂ. 1 ಮತ್ತು 2-4-0ಕ್ಕೆ ಮಾರಲ್ಪಡುತ್ತದೆ.

ಏಜಂಟ್ಸ್: [illegible] ಮತ್ತು ಕಂಪೆನಿ, ಪ [illegible] ಮದ್ರಾಸು.

ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು



THE

**BANK OF MANGALORE LTD.,**

MANGALORE

ESTD 19[illegible]

*Branches:-*

Mudabidri & Padubidri.

Fixed Deposits will be received at following rates of interest

| | | |
|---|---|---|
| For 3 months | | 3½% |
| „ 6 „ | | 4% |
| „ 12 „ | | 5% |
| „ 24 „ | & upwards | 5½% |

Interest Payable Quarterly

***Savings Bank deposit 3½% on daily balances.***

**All kinds of banking business transacted**



ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ: ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು,

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ್ವಾರ.

# ದಿವಂಗತ ದೇಶಭಕ್ತ ಕೌಜಲಗಿ ಶ್ರೀನಿವಾಸರಾಯರು

ಕರ್ನಾಟಕದ ಪ್ರಸಿದ್ಧ ಮುಂದಾಳುಗಳಾದ ವಿಜಾಪುರದ ಕೌಜಲಗಿ ಶ್ರೀನಿವಾಸರಾಯರು ೨೨ನೇ ತಾರೀಖಿನ ದಿವಸ ವೈಕುಂಠವಾಸಿಗಳಾದರೆಂದು ತಿಳಿಸಲು ತುಂಬ ವಿಷಾದಿಸುತ್ತೇವೆ. ಮರಣ ಸಮಯಕ್ಕೆ ಅವರಿಗೆ ೬೭ ವರ್ಷಗಳಾಗಿದ್ದವು. ಕೌಜಲಗಿಯವರು ೧೯೦೫–೬ನೇ ಇಸವಿಯ ಸ್ವದೇಶಿ ಬಹಿಷ್ಕಾರ ಚಳವಳಿಯಲ್ಲಿ ಒಳ್ಳೇ ಉತ್ಸಾಹದಿಂದ ಭಾಗವಹಿಸಿದ್ದರು. ಲೋಕಮಾನ್ಯ ತಿಳಕರ ನೇತೃತ್ವದಲ್ಲಿ, ಹೋಮರೂಲ ಚಳವಳಿಯಲ್ಲಿ, ಅನಂತರ ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳ ಸಮಯಗಳಲ್ಲಿ ತಮ್ಮ ವಕೀಲಿಗೆ ಶರಣು ಹೊಡೆದೂ ಶ್ರೀನಿವಾಸರಾಯರು ಅಖಂಡ ಕರ್ನಾಟಕದಲ್ಲಿಯೂ ಸಂಚರಿಸಿ ಜಾಗ್ರತಿಯನ್ನುಂಟು ಮಾಡಿದ್ದರು. ಕಾಂಗ್ರೆಸ ರಾಜಕಾರಣದಲ್ಲಿ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವನ್ನು ಕಲ್ಪಿಸಿಕೊಟ್ಟ ಶ್ರೇಯಸ್ಸಿನಲ್ಲಿ ಇವರಿಗೂ ಹೆಚ್ಚಿನ ಪಾಲು ಸಿಕ್ಕುವುದು. ಅಸಹಕಾರ ಚಳವಳಿಯಲ್ಲಿ ಇವರು ಸೆರೆಮನೆವಾಸವನ್ನನುಭವಿಸಿದ್ದರು.

ಶ್ರೀನಿವಾಸರಾಯರು ಒಳ್ಳೇ ತ್ಯಾಗಿಗಳು ದಾನಶೂರರು, ಸಾಹಿತಿಗಳೂ ಸಂಗೀತ ಪ್ರಿಯರೂ ಕವಿಗಳೂ ಕುಶಾಗ್ರ ಬುದ್ಧಿಯವರೂ ಇವರಾಗಿದ್ದರು. ಇವರ ಆತ್ಮಕ್ಕೆ ಚಿರಶಾಂತಿಯನ್ನು ಪರಮಾತ್ಮನು ದಯಪಾಲಿಸಲಿ.

### ಕೌಜಲಗಿ ದಿನವನ್ನಾಚರಿಸಿರಿ

ಕನ್ನಡನಾಡಿನ ಉಜ್ವಲ ರಾಷ್ಟ್ರಭಕ್ತರೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಗೆ ಹಿಂದೆ ನಾಲ್ಕು ವರ್ಷ ಸತತವಾಗಿ ಅಧ್ಯಕ್ಷರಾಗಿದ್ದವರೂ ಆದ ದೇಶಭಕ್ತ ಕೌಜಲಗಿ ಶ್ರೀನಿವಾಸರಾಯರ ಅತ್ಯಂತ ಉದ್ವೇಗಜನಕ ಮರಣವಾರ್ತೆಯನ್ನು ಕೇಳಿ ಇಡೀ ಕನ್ನಡ ಜನತೆಗೆ ಅಪಾರ ದುಃಖವಾಗುವದು ಸ್ವಾಭಾವಿಕವಾಗಿರುವದು. ಈ ಸಂದರ್ಭದಲ್ಲಿ ಕರ್ನಾಟಕಸ್ಥರಿಗೆ ಆಗಿರುವ ಅತ್ಯಂತ ಶೋಕವನ್ನು ಅಭಿವ್ಯಕ್ತಮಾಡಿ ಮೃತಾತ್ಮರಿಗಾಗಿ ತಮ್ಮಲ್ಲಿರುವ ಆದರಭಾವವನ್ನು ಪ್ರಕಟಗೊಳಿಸಿ ಅವರ ದಿವಂಗತ ಆತ್ಮಕ್ಕೆ ಚಿರಶಾಂತಿಯನ್ನು ಕೋರುವದಕ್ಕಾಗಿ ಕನ್ನಡನಾಡಿನಲ್ಲಿ ಎಲ್ಲ ಕಡೆಗೆ ಅವರ ನಿಧನದ ಹತ್ತನೇ ದಿನವಾದ ಶನಿವಾರ ತಾ ೨ನೇ ಮಾರ್ಚ ೧೯೪೦ನೇ ದಿನವನ್ನು ಕೌಜಲಗಿ ಶ್ರೀನಿವಾಸರಾಯರ ಸ್ಮೃತಿ ದಿನವೆಂದು ಪಾಲಿಸಬೇಕೆಂದು ಈ ಮೂಲಕ ಪ್ರಾರ್ಥಿಸಲಾಗಿದೆ. ಅಂದು ಸಂಜೆ ಸಾರ್ವಜನಿಕ ಸಭೆಗಳನ್ನು ಕೂಡಿಸಿ ಅವರ ಬಗೆ ದುಃಖಸೂಚಕ ಗೊತ್ತುವಳಿಯನ್ನು ಮಾಡಿ ಅವರಿಗೆ ಚಿರಶಾಂತಿಯನ್ನು ಕೋರುವದಕ್ಕಾಗಿ ಪರಮಾತ್ಮನನ್ನು ಪ್ರಾರ್ಥಿಸಬೇಕೆಂದು ಅಖಿಲ ಕನ್ನಡ ನಾಡಿನ ಜನತೆಗೆ ಈ ಮೂಲಕ ಬಿನ್ನವಿಸಲಾಗಿದೆ ಎಂದು ಕ. ಪ್ರಾಂ. ಕಾಂ. ಸಮಿತಿಯ ಅಧ್ಯಕ್ಷರಾದ ಡಾ. ಸಂಗನಗೌಡನವರು ತಿಳಿಸುತ್ತಾರೆ.

## ದ. ಕ. ಜಿಲ್ಲೆಯ ರೆವಿನ್ಯೂ ಇಲಾಖೆಯ ವರ್ಗಾವರ್ಗಿಗಳು

ಉಡುಪಿ ಮತ್ತು ಕಾಸರಗೋಡು ತಹಶಿಲ್ದಾರರುಗಳಾಗಿರುವ ಶ್ರೀ ಬಿ ಗಣೇಶ ಮತ್ತು ಮಿ ಅಬ್ದುಲ್ ಗಫೂರ್ ಸಾಹೇಬ್ ರವರುಗಳಿಗೆ ರಜೆಯು ಮಂಜೂರಾಗಿರುವದರಿಂದ, ಮಿ ಜೆ ಎಲ್ ಡಿ'ಸೋಜಾರವರು ಮಂಗಳೂರು ಇನ್ಸ್ಪೆಕ್ಟಿಂಗ್ ತಹಶಿಲ್ದಾರರಾಗಿಯೂ, ಶ್ರೀ ಎಂ ಅಪ್ಪುರಾಯರು ಮಂಗಳೂರು ತಹಶಿಲ್ದಾರರಾಗಿಯೂ, ಶ್ರೀ ಎಂ ಭವಾನಿಶಂಕರರಾಯರ ಕಾಸರಗೋಡು ತಹಶಿಲ್ದಾರರಾಗಿಯೂ, ಶ್ರೀ ಯು ಜನಾರ್ದನನವರು ಪುತ್ತೂರು ತಹಶಿಲ್ದಾರರಾಗಿಯೂ ಮಿ ಪಳ್ಳಿಬ್ಯಾರಿಯವರು ಉಡುಪಿ ತಹಶಿಲ್ದಾರರಾಗಿಯೂ, ಸಬ್ ಮ್ಯಾಜಿಸ್ಟ್ರೇಟರುಗಳಾದ ಶ್ರೀ ಪಿ ಸೀತಾರಾಮ ಶೆಟ್ಟಿಯವರು ಕಾಸರಗೋಡಿಗೂ, ಶ್ರೀ ಯು ಬಿ ಗೋಪಾಲಕೃಷ್ಣರಾಯರು ಉಡುಪಿಗೂ, ಪಿ ಟಿ ಡಿ ವೆಲಿಯತ್ತರವರು ಕುಂದಾಪುರಕ್ಕೂ, ಮಿ ಪಿ ಜೆ ಪಿಂಟೊರವರು ಕಾರ್ಕಳಕ್ಕೂ, ಡಿಪ್ಯುಟಿ ತಹಶಿಲ್ದಾರರಾದ ಶ್ರೀ ಬಿ ಎಸ್ ಹೆಗಡೆಯವರು ಬಂಟ್ವಾಳಕ್ಕೂ, ಶ್ರೀ ಎಚ್ ನರಸಿಂಹನವರು ಹೊಸದುರ್ಗಕ್ಕೂ ವರ್ಗಾಯಿಸಲ್ಪಟ್ಟಿರುವರು. ಶ್ರೀ ಎ ಸದಾನಂದ ಪೈಯವರು ಡಿಸ್ಟ್ರಿಕ್ಟ್ ಲೇಬರ್ ಆಫೀಸರರಾಗಿ ಮಂಗಳೂರಿಗೆ ವರ್ಗಾಯಿಸಲ್ಪಟ್ಟಿರುವರು. ಶ್ರೀ ಎಂ ಗೋಪಾಲಕೃಷ್ಣರಾಯರ ಕುಂದಾಪುರ ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕರಾಗಿಯೂ, ಶ್ರೀ. ದಾಸಪ್ಪನವರು ಮಂಗಳೂರು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕರಾಗಿಯೂ, ಶ್ರೀ ಪಿ. ಎಸ್. ಅಳಗರ್ ರವರು ಪುತ್ತೂರು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕರಾಗಿಯೂ, ಮಿ ಪಿ ಎಫ್ ಅಂದ್ರಾದೆಯವರು ಜಿಲ್ಲಾ ಖಜಾನೆಯ ಅಕೌಂಟಾಂಟರಾಗಿಯೂ ಶ್ರೀ ಕೆ ಗೋವಿಂದರಾಯರು ಕಲೆಕ್ಟರ್ ಆಫೀಸು ಕ್ಲಾರ್ಕರಾಗಿಯೂ ಬದಿ ಮೇಲೆ ವರ್ಗಾಯಿಸಲ್ಪಟ್ಟಿರುವರು.

ಉಡುಪಿ ಮತ್ತು ಕುಂದಾಪುರ ತಾಲೂಕುಗಳ ಅಸಿಸ್ಟೆಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಾದ ಶ್ರೀ ಎಚ್ ಸುಂದರರಾಯರು ರಜೆ ಪಡಕೊಂಡಿರುವದರಿಂದ ಕಾರ್ಕಳ ತಾಲೂಕಿನ ಆಫೀಸರರು ಅವರ ಚಾರ್ಜಿನಲ್ಲಿರುವರು.

## ಪರಿಷತ್ತಿನ ಪ್ರೌಢಪರೀಕ್ಷೆ

ಕನ್ನಡಸಾಹಿತ್ಯ ಪರಿಷತ್ತು ಏರ್ಪಡಿಸಿದ ಪ್ರೌಢಪರೀಕ್ಷೆಯ ಶಿಕ್ಷಣ ತರಗತಿಯೊಂದನ್ನು ಮಂಗಳೂರಲ್ಲಿ ಸದ್ಯವೇ ತೆರೆಯಲಾಗುವುದು. ಸ್ಥಳ— ಗಣಪತಿ ಹೈಸ್ಕೂಲಿನ ಕನ್ನಡಕೋಣೆ. ಕಾಲ—ಪ್ರತಿ ಗುರುವಾರ ಮತ್ತು ಆದಿತ್ಯವಾರ ಸಾಯಂಕಾಲ ೫॥ ಘಂಟೆಗೆ. ಮಾರ್ಚ ೩ನೇ ತಾರೀಕು ಆದಿತ್ಯವಾರದಿಂದ ಪ್ರಾರಂಭ. ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಮೊದಲಿಗೆ ಕಾದಂಬರಿ ಸಂಗ್ರಹದ ವಿಷಯವಾದ ಉಪನ್ಯಾಸ ತೊಡಗುವರು. ಹೆಸರು ಕೊಟ್ಟಿರುವ ವಿದ್ಯಾರ್ಥಿಗಳು ಆ ಗ್ರಂಥದೊಡನೆ ಸಕಾಲಕ್ಕೆ ಸೇರುವರಾಗಿ ವಿನಂತಿ.

ಶಿವರಾಮ ಕಾರಂತ


## ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 548/39

ಜೋನ್ ತಾರ್ಡೊ — ವಾದಿ

ಮತ್ತು

ಸಾಲ್ವದೋರ್ ತಾರ್ಡೊ ಕೂಡ— ಪ್ರತಿವಾದಿ.

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿ ಸಾಲ್ವದೋರ್ ತಾರ್ಡೊರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ಮೇಲ್ಕಂಡ ವಾದಿಯು ನಿಮ್ಮ ಕೂಡ ಇದಿ ಮೂರು ಜನರ ಮೇಲೆ ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ರೂ 211 1 6ನ್ನು ಬರಮಾಡುವ ಬಗ್ಗೆ ದಾಖಲುಮಾಡಿದ ಮೇಲ್ಕಂಡ ದಾವೆಯು ತಾ 11 10ಕ್ಕೆ ಇಟ್ಟಿದು ತನ್ನ ಬಗ್ಗೆ ಇಟ್ಟಿರುವದರಿಂದ ಆ ಕುರಿತು ನಿಮಗೇನಾದರೂ ಹೇಳಲಿಕ್ಕಿದ್ದಲ್ಲಿ ಖುದ್ದಾಗಲೀ ವ, ವಕೀಲ ದ್ವಾರವಾಗಲೀ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳುವದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುವದೆಂಬ ಸಂಗತಿಯನ್ನು ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

ಮಂಗಳೂರು 22-2-40 J. M. Sequiera M.A.M.L ವಾದಿ ಕಡೆ ವಕೀಲ.



# ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ಖಲನ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ-ಪಟೇಲ್ ರೋಡ್, ಮುಂಬಾಯಿ 4

*Sole Manufacturer:* **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,

ಹಂಪನಕಟ್ಟಾ, ಮಂಗಳೂರು



# ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

[ಶ್ರವಣ ಬೆಳಗುಳದ ಶ್ರೀ ಗೋಮಟೇಶ್ವರ ಸ್ವಾಮಿಗೆ ಹದಿನೈದು ದಿನಗಳ ವರೆಗೆ ಮಹಾಮಸ್ತಕಾಭಿಷೇಕವು ನಡೆಯಿತು. ಈ ಉತ್ಸವಕ್ಕೆ ಸಮಸ್ತ ಭಾರತದ ಲಕ್ಷಾಂತರ ಮಂದಿ ಆಸ್ತಿಕ ಜೈನ ಕುಟುಂಬದವರು ಬಂದಿದ್ದರು. ನಮ್ಮ ಕನ್ನಡನಾಡು ಅವರಿಗೆ ಸ್ವಾಗತವಿತ್ತು, ಮನ್ನಣೆ ಮಾಡಿತು; ನಡು ನಾಡಿನಲ್ಲಿ ಬೆಳಗಿನಂತ ಸ್ವಾದ್ವಾದಭವ್ಯಮೂರ್ತಿ ಗೋಮಟೇಶ್ವರನನ್ನು ಕಂಡು ಜಗತ್ತೇ ಬೆರಗಾಗುತ್ತಿದೆ!]

# ಜೀವಜ್ಯೋತಿಗಳು:

# ಶ್ರೀ ಬಾಹುಬಲಿ ಗೋಮಟೇಶ್ವರ

ಲೇಖಕ: ಕಯ್ಯಾರ ಕಿಞ್ಞಣ್ಣ ರೈ

ನಿರಾಭರಣ ಸುಂದರವಾದ ಗಂಭೀರ ಪುರುಷಾಕೃತಿಯ ಭವ್ಯ ದಿಗಂಬರ ಶಿಲಾ ಮೂರ್ತಿ ಶ್ರೀ ಗೋಮಟೇಶ್ವರ ವಿಗ್ರಹವನ್ನು ಕಂಡು ಬೆರಗಾಗದವರಿಲ್ಲ; ಕವಿಗಳು ಅದರ ಮಹಿಮೆಯನ್ನೆತ್ತಿ ಹಾಡಿದರು; ಕಲಾವಿದರು ಅದರ ಸೌಂದರ್ಯಕ್ಕೆ ಮರುಳಾದರು; ಪಂಡಿತರು ಅದರ ಪ್ರಾಚೀನತೆಯನ್ನು ಉದ್ಘೋಷಿಸಿದರು; ಧಾರ್ಮಿಕರು ಅದರ ವೈರಾಗ್ಯ ಬೋಧನೆಯಿಂದ ಧನ್ಯರಾದರು; ಶತ-ಶತಮಾನಗಳಿಂದ ಗಾಳಿ, ಮಳೆ, ಚಳಿ, ಸಿಡಿಲುಗಳ ಯಾವ ಭೌತಿಕ ಬಾಧೆಗೂ ಬೆದರದೆ ಪ್ರಪಂಚದ ಜೀವ ಜಾಲಕ್ಕೆ ಸ್ಫೂರ್ತಿ ಶಕ್ತಿಗಳನ್ನು ದಯಪಾಲಿಸಲು ನಿಂತ ಕನ್ನಡನಾಡಿನಲ್ಲಿ ನಿಶ್ಚಲವಾಗಿ ನಿಂತ ಜೈನ ದಿಗಂಬರ ಮೂರ್ತಿ ಶ್ರೀ ಗೋಮಟೇಶ್ವರ ವಿಗ್ರಹದ ಇತಿಹಾಸವು ಉಜ್ವಲವೂ ರಮಣೀಯವೂ ಆಗಿದೆ!

ಅನೇಕ ಶತಮಾನಗಳ ಹಿಂದೆ ಇಕ್ಷ್ವಾಕು ಕುಲದಲ್ಲಿ ನಾಭಿರಾಜನೆಂಬ ಅರಸನು ಕೋಶಲದೇಶದ ಅಧಿಪತಿಯಾಗಿ, ಅಯೋಧ್ಯಾ ನಗರದಲ್ಲಿ ರಾಜ್ಯವಾಳುತ್ತಿದ್ದನು. ಅವನ ಪತ್ನಿ ಮರುದೇವಿಯ ಗರ್ಭದಲ್ಲಿ ಪ್ರಥಮ ತೀರ್ಥಂಕರನಾದ ಪುರುದೇವನು ವೃಷಭನಾಥನೆಂಬ ಹೆಸರಿನಿಂದ ತನ್ನ ಅಷ್ಟಮ ಜನ್ಮವನ್ನೆತ್ತಿದನು. ಆ ವೃಷಭನಾಥನು ನಂದಾದೇವಿ ಸುನಂದಾದೇವಿಯೆಂಬ ಇಬ್ಬರು ಮಾನಿನಿಯರನ್ನು ವಿವಾಹವಾದನು. ವೃಷಭನಾಥನಿಗೆ ನಂದಾದೇವಿಯಲ್ಲಿ ಭರತನೇ ಆದಿಯಾಗಿ ನೂರು ಮಂದಿ ಪುತ್ರರೂ, ಬ್ರಾಹ್ಮಿ ಎಂಬ ಸರ್ವಾಂಗಸುಂದರಿಯಾದ ಪುತ್ರಿಯೂ, ಸುನಂದಾದೇವಿಯಲ್ಲಿ, 'ಆ ಕಾಲದ ಕಾಮದೇವ'ನೆನಿಸಿದ ಬಾಹುಬಲಿಯೆಂಬ ಪುತ್ರನೂ, ಸೌಂದರಿ ಎಂಬ ಪುತ್ರಿಯೂ ಮಕ್ಕಳಾದರು. ತನ್ನ ಪುತ್ರಪುತ್ರಿಯರನ್ನು ವಿದ್ಯಾಪಾರಂಗತರನ್ನಾಗಿ ಮಾಡಿ, ವೃಷಭನಾಥನು ತನ್ನ ನಿರ್ವಾಣಕಾಲದಲ್ಲಿ ಜಂಬೂ ದ್ವೀಪದ ತನ್ನ ಸಾಮ್ರಾಜ್ಯವನ್ನು ತನ್ನ ಮಕ್ಕಳಿಗೆ ಹಂಚಿಕೊಟ್ಟು, ಭರತನಿಗೆ ರಾಜ್ಯಪದವಿಯನ್ನೂ ಬಾಹುಬಲಿಗೆ ಯುವರಾಜಪದವಿಯನ್ನೂ ನೇಮಿಸಿ ಭರತನನ್ನು ಅಯೋಧ್ಯೆಯಲ್ಲಿಯೂ, ಬಾಹುಬಲಿಯನ್ನು ಪೌದನಪುರದಲ್ಲಿಯೂ ನೆಲೆಗೊಳಿಸಿ, ತಾನು ತಪಸ್ಸಿಗಾಗಿ ಕೈಲಾಸಕ್ಕೆ ತೆರಳಿದನು. ಭರತನೂ ಬಾಹುಬಲಿಯೂ ವಿವಾಹಮಾಡಿಕೊಂಡು, ತಮ್ಮ ರಾಜ್ಯಗಳಲ್ಲಿ ಅರಸುತನ ನಡೆಸುತ್ತಿದ್ದರು. ಅನೇಕ ಕಾಲ ಒಬ್ಬರು ಇನ್ನೊಬ್ಬರನ್ನು ನೋಡಲಾರದೆ, ಬಹುಕಾಲದ ಅಗಲಿಕೆಯಿಂದ ಸಹೋದರರು ಅನ್ಯೋನ್ಯ ಮರೆತೇ ಬಿಟ್ಟಿದ್ದರು.

ಬಹುಕಾಲದ ಮೇಲೆ ಭರತನ ಪೂರ್ವಪುಣ್ಯದಿಂದ, ಆತನ ಆಯುಧ ಶಾಲೆಯಲ್ಲಿ 'ದ್ವಾದಶಾರ್ಕೋರ್ಜ್ವಲತೇಜಶ್ಚಕ್ರರೂಪ'ವಾದ ಚಕ್ರರತ್ನವೆಂಬೊಂದು ದೈವಿಕವಾದ ಆಯುಧವು ಆವಿರ್ಭವಿಸಿತು. ಆತನು ದಿಗ್ವಿಜಯೋದ್ಯುಕ್ತನಾಗಿ ಹೊರಟು ಅನೇಕ ರಾಜಾಧಿರಾಜರನ್ನು ಗೆದ್ದು ರಾಜಧಾನಿಗೆ ಮರಳಿ ಬಂದು, ಅಯೋಧ್ಯಾಪುರವನ್ನು ಒಳಹೋಗುವಂದು, ಆತನ ವಿಜಯಯಾತ್ರೆಯಲ್ಲಿ, ಮುನ್ನಡೆಸುತ್ತಿದ್ದ, ಆ ಸುದರ್ಶನವೆಂಬ ಚಕ್ರರತ್ನವು ಅಗಸೆಯ ಬಾಗಿಲನ್ನು ಪ್ರವೇಶಿಸದೆ ನಿಂತುಬಿಟ್ಟಿತು! ಈ ಅಶುಭಲಕ್ಷಣವೇಕೆಂದು ಪುರೋಹಿತನನ್ನು ವಿಚಾರಿಸಲು; ಆತನು, ಇಡೀ ಭೂಚಕ್ರದರಸರು ನಿನಗೆ ಶರಣಾದರೂ ನಿನ್ನನುಜರು ಶರಣಾಗದೆ ನಿನ್ನ ಪ್ರಭಾವಕ್ಕೆ ಮೆರುಗಿಲ್ಲವಾದುದರಿಂದ ಅವರನ್ನು 'ನಿನಗೆರಗಿಸುವಂತೆ' ಮಾಡೆಂದು ಹೇಳಿದನು. ಅಂತೆಯೇ ಭರತನು ತನ್ನನುಜರು ತನಗೆರಗಬೇಕೆಂದು ಪತ್ರ ಬರೆದು ಕಳುಹಿಸಲು ಅವರಲ್ಲಿ ಬಾಹುಬಲಿಯನ್ನುಳಿದೆಲ್ಲರೂ ತಮ್ಮ ತಂದೆಯ ಹಿತವಚನದಂತೆ ಅಣ್ಣನಿಗೆ ಎದುರಾಡಬೇಡಿ ಎಂದು ಬಂದು ಶರಣಾಗಿ ಸಂನ್ಯಾಸಿಯಾದರು. ಸಂನ್ಯಾಸಿಯಾಂತರು! ಆದರೆ ಮಾನಧನನಾದ ಬಾಹುಬಲಿಯು ಪತ್ರವನ್ನು ಕಂಡು ಕೋಪಾವಿಷ್ಟನಾಗಿ, ಅಣ್ಣನೊಡನೆ ಯುದ್ಧ ಹೂಡಿದನು.

ಸಂಗ್ರಾಮ ಭಯಂಕರರಾದ, ಈ ಈರ್ವರು ಸೋದರರು 'ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧ'ಗಳೆಂಬ ತ್ರಿವಿಧ ಯುದ್ಧಗಳನ್ನು ಮಾಡಿದರು. ಅಮಾನುಷ ಪರಾಕ್ರಮಿಯಾದ ಬಾಹುಬಲಿಯು ಭರತನನ್ನು ತ್ರಿವಿಧ ಯುದ್ಧದಲ್ಲಿಯೂ ಸೋಲಿಸಿ, ತನ್ನೊಡಹುಟ್ಟೆಂದು ಮಾತ್ರ ನೆಲಕ್ಕಪ್ಪಳಿಸಲೊಲ್ಲದೆ, ಕೈಯಿಂದ ಹಿಡಿದೆತ್ತುವಲ್ಲಿ ಭರತನು ಆ ಅಪಮಾನದಿಂದ ಸಿಗ್ಗಾಗಿ, ತನ್ನ ಚಕ್ರರತ್ನವನ್ನು ಆತನ ಮೇಲೆಸೆಯಲು, ಅದು ಬಾಹುಬಲಿಯ ನೆಳಲನ್ನಾದರೂ ಸೋಂಕಲಾರದೆ ನಿರ್ವೀರ್ಯವಾಯಿತು. ಭರತನು ಇನ್ನೂ ಕುಪಿತನಾಗಿರಲು, ಬಾಹುಬಲಿಯು ತನ್ನಣ್ಣನನ್ನು ಸಂಬೋಧಿಸಿ, 'ಎನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ' ಎಂದು ಮೂದಲಿಸಿ ಆತನ ಸಾಂಸಾರಿಕ ವಿಜಯದಾಸೆಯನ್ನು ಹೀಗಳೆದು ಅದು ಅಧರ್ಮವೆಂದೂ, ಆದಿ ಬ್ರಹ್ಮನ ಪುತ್ರನಿಗೆ ಸಲ್ಲದೆಂದೂ, ಅಪಜಯದಿಂದ ಕೊರಗದೆ, ತಿರಿಗಿ ಚಕ್ರಾಧಿಪತ್ಯವು ಆತನಿಗೇ ಇರಲೆಂದೂ ಹೇಳಿ, ತಾನು ಆತ್ಮಜಯ



ವೆಂಬ ಅಖಂಡ ಸಾಮ್ರಾಜ್ಯವನ್ನು ಸಮಾಧಿಯಿಂದ ಸಾಧಿಸುವೆನೆಂದು ವೈರಾಗ್ಯಪರನಾದನು! ಸಂಸಾರ ಸುಖದ ಕತ್ತಲೆಯೊಡೆದು, ವೈರಾಗ್ಯದ ಶುಭ ಕಿರಣವು ಆತನ ಆತ್ಮವನ್ನು ಬೆಳಗಿತು! ಆಹ! ಎಂತಹ ತ್ಯಾಗ! ವಿಜಯಿಯು ಪರಾಕ್ರಮಿಯೂ, ಉದಾತ್ತ ವೀರನು ಯೌವನ ಶಕ್ತಿ ಪೂರ್ಣನು ಕಾಮಸನ್ನಿಭನು ಆದ, ಬಾಹುಬಲಿಯ ಆತ್ಮತ್ಯಾಗವನ್ನು ಸುರಾಸುರನರೋರಗರು ಅಂದು ಕೊಂಡಾಡಿದರು! ಬಾಹುಬಲಿಯು ತನ್ನ ಮಗನಾದ ಮಹಾಬಲಿಯನ್ನು ರಾಜ್ಯಪಟ್ಟದಲ್ಲಿ ನಿಲ್ಲಿಸಿ, ತಂದೆಯ ಅನುಮತಿಯಿಂದ ಜಿನದೀಕ್ಷೆಯನ್ನು ಪಡೆದು, ಉತ್ಕಟ ಬ್ರಹ್ಮಚರ್ಯದಿಂದ ದಿಗಂಬರನಾಗಿ ಸಮಾಧಿಯಲ್ಲಿ ನಿಂತನು!

ಆ ಸಮಾಧಿಯ ಸಮಯ ಆತನ ಮೆಯ್ಮೇಲೆ ಬಳ್ಳಿ ಬೆಳೆದವು; ಸುತ್ತು ಹುತ್ತ ಮೂಡಿದವು, ಹಾವು ಹರಿದವು. ಆದರೂ ಆತನಿಗೆ ಜ್ಞಾನವು ಒದಗಲಿಲ್ಲ. ಇದನ್ನು ಕಂಡು ಅಣ್ಣನಾದ ಭರತನು ತಂದೆಯಲ್ಲಿಗೆ ಹೋಗಿ ಅವನಿಗೆ ಜ್ಞಾನ ಪ್ರಾಪ್ತಿಯಾಗದಿರಲು ಕಾರಣವೇನೆಂದು ಕೇಳಲು, ತಂದೆಯು, 'ಆತನು ಸಮಾಧಿಯಲ್ಲಿದ್ದರೂ ನಿನ್ನ ಎಂಜಲೆನಿಸುವ ಭೂಮಿಯಲ್ಲಿ ನಿಂತಿರುವೆನೆಂಬ ಆತನ ಮಾನಕಷಾಯವು ಅವನಿಂದ ಇನ್ನೂ ತೊಡೆದು ಹೋಗಿಲ್ಲವಾದ ಕಾರಣ ನೀನು ಹೋಗಿ ಆತನ ಕಾಲಿಗೆರಗಿದರೆ, ಅವನಿಗೆ ಕೇವಲ ಬೋಧೆಯಾಗುವು'ದೆಂದನು. ಭರತನು ಹಾಗೆ ಮಾಡಲು, 'ಶುಕ್ಲಧ್ಯಾನ'ದಲ್ಲಿದ್ದ ಆತನಿಗೆ ಅನಂತವಸ್ತು ಪ್ರಕಾಶಿಯಾದ ಕೇವಲ ಜ್ಞಾನವು ಉಂಟಾಯಿತು! ದೇವತೆಗಳು ಅಯೋಗೀಂದ್ರನನ್ನು ಬಂದು ಅರ್ಚಿಸಿದರು.

ಬಾಹುಬಲಿಯು ತನ್ನ ಘಾತಿ ಕರ್ಮಗಳನ್ನು ಇಲ್ಲದೆ ಮಾಡಲೆಂದು ಇಡಿಯ ಪೃಥ್ವಿಯನ್ನು ಸಂಚರಿಸಿ, ತಂದೆಯ ಸನ್ನಿಧಿಗೆ ಬಂದು ನಿಂತು, ತನ್ನ ಆಯುಸ್ಸು ಮುಗಿಯುತ್ತಲೇ ಆದಿನಾಥನಿನ್ನೂ ಬದುಕಿರುವಾಗಲೇ, ನಿರ್ವಿಕಲ್ಪಸಮಾಧಿಯನ್ನು ಸಾಧಿಸಿ ಅರ್ಹಂತ ಪದವಿಯನ್ನು ಪಡೆದನು!

ಬಾಹುಬಲಿಯ ಉದಾತ್ತ ತ್ಯಾಗಬುದ್ಧಿಯನ್ನು ವೈರಾಗ್ಯವನ್ನೂ ಕಂಡು ಬೆರಗಾದ, ಭರತನು, ಪೌದನಪುರದ ಬಾಗಿಲಲ್ಲಿ ಆತನ ದೇಹಾಕಾರದಷ್ಟು ನೀಳವಾದ (ಐನೂರು ಬಿಲ್ಲುಗಳ ಪ್ರಮಾಣ) ಒಂದು ಮಹಾಮೂರ್ತಿಯನ್ನು ಸ್ಥಾಪಿಸಿದನೆಂದು ಶಾಸನವೊಂದರಲ್ಲಿ ವರ್ಣಿತವಾಗಿದೆ. ಅಂದಿನಿಂದ ಗುಮ್ಮಟಮೂರ್ತಿಯ ಪೂಜೆಯು ಆರಂಭವಾಯಿತೆನಬಹುದು.

ಕನ್ನಡನಾಡಿನಲ್ಲಿ ಇತಿಹಾಸ ಪ್ರಸಿದ್ಧವಾದ ಗೋಮಟೇಶ್ವರನ ಮೂರು ಭವ್ಯ ಶಿಲಾವಿಗ್ರಹಗಳಿವೆ. ಶ್ರವಣ ಬೆಳಗುಳದ ಮೂರ್ತಿಯನ್ನು ಗಂಗ ಮಂತ್ರಿಯಾದ ಚಾವುಂಡರಾಯನೂ, ಕಾರ್ಕಳದಲ್ಲಿ ಬಯ್ಯರಸು ವೀರಪಾಂಡ್ಯನೂ, ವೇಣೂರಲ್ಲಿ ತಿಮ್ಮರಸಾಜಿಲನೂ ನಿರ್ಮಿಸಿ ಕೀರ್ತಿಶಾಲಿಗಳಾದರು! ಈ ಮೂರು ಪ್ರಸಿದ್ಧ ಮೂರ್ತಿಗಳಲ್ಲದೆ, ಮೈಸೂರಲ್ಲಿ, ಕನ್ನಂಬಾಡಿ ಕಟ್ಟೆಯ ಸಮೀಪದ ಬಸ್ತಿಹಳ್ಳಿಯಲ್ಲಿಯೂ, ಮೈಸೂರು ತಾಲೂಕು ಇಲ್ವಾಲದ ಶ್ರವಣಗುಟ್ಟ ಎಂಬಲ್ಲಿಯೂ ಎರಡು ವಿಗ್ರಹಗಳಿವೆ. ಅವನ್ನು ಕೆತ್ತಿಸಿದವರ ವಿಷಯವು ತಿಳಿದಿಲ್ಲ.

ಕಥಾದೃಷ್ಟಿಯಿಂದ, ಇತಿಹಾಸದ ದೃಷ್ಟಿಯಿಂದ, ಧರ್ಮದ ದೃಷ್ಟಿಯಿಂದ, ಜ್ಞಾನದ ದೃಷ್ಟಿಯಿಂದ, ಕಲಾದೃಷ್ಟಿಯಿಂದ, ಹೀಗೆ ಸರ್ವವಿಧದಲ್ಲಿಯೂ ಗೋಮಟೇಶ್ವರನ ವಿಗ್ರಹವು ಭವ್ಯವಾಗಿದೆ. ಆದಿಯಿಂದ ಅನಂತದ ವರೆಗೆ ಜೀವಜಾಲಗಳನ್ನು ಉದಾತ್ತತೆಯ ಕಡೆಗೆ ಸಾಗಿಸಬಲ್ಲ ಮೂರ್ತಿಯು ಶ್ರೀ ಬಾಹುಬಲಿ ಗೋಮಟೇಶ್ವರನ ವಿಗ್ರಹವಾಗಿದೆ!

ಅಂತಹ ತ್ರಿಭುವನ ಸುಂದರ ಮೂರ್ತಿಯನ್ನು ಪಡೆದ ಕನ್ನಡನಾಡು ಧನ್ಯ! ಕನ್ನಡಿಗರೂ ಪರಮಧನ್ಯರು!

# ಹಿಂದೂ ಸಮಾಜದಲ್ಲಿ ಸುಧಾರಣೆ

## ಶ್ರೀ ಭಾಯಿ ಪರಮಾನಂದರ ಅಭಿಪ್ರಾಯ

'ಹಿಂದೂ ಸಮಾಜವು ದಿನದಿಂದ ದಿನಕ್ಕೆ ಪತಿತವಾಗುತ್ತಲಿರುವದು. ಅದರ ಶಕ್ತಿಯು ದಿನದಿಂದ ದಿನಕ್ಕೆ ಹರಿದು ಹಂಚಿಹೋಗುತ್ತಲಿರುವದು. ರಾಷ್ಟ್ರೀಯ ಸಾಮಾಜಿಕ, ಧಾರ್ಮಿಕ ಪ್ರತಿ ಒಂದು ದೃಷ್ಟಿಯಿಂದ ಹಿಂದೂಸಮಾಜವು ನಿಕೃಷ್ಟವಾಗುತ್ತಲಿದೆ; ಅದು ಶಕ್ತಿಹೀನ, ವೀರ್ಯಹೀನವಾಗುತ್ತಲಿದೆ. ಹಿಂದೂದೇಶವು ಹಿಂದುಗಳದ್ದೇ ಆಗಿದ್ದ ಒಂದು ದಿನವಿತ್ತು. ಈಗ ಹಿಂದೂದೇಶದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿದ್ದಾದರೂ ಅವರು ಅಲ್ಪಸಂಖ್ಯಾತರಿಗಿಂತಲೂ ದೀನರೂ ಹೀನರೂ ಆಗಿದ್ದಾರೆ. ತಮ್ಮ ಸಮಾಜದ ಮೇಲಾಗುತ್ತಿರುವ ಅನ್ಯಾಯ ಅತ್ಯಾಚಾರ ಅನಾಚಾರಗಳನ್ನು ತಡೆಯುವ ಪುರುಷತ್ವವು ಈಗ ಹಿಂದುಗಳಲ್ಲಿರುವದಿಲ್ಲ. ದ್ರೋಹಿಗಳಿಗೂ ಶತ್ರುಗಳಿಗೂ ಬುದ್ಧಿ ಕಲಿಸುವ ಸಾಮರ್ಥ್ಯವು ಅವರಲ್ಲಿರುವದಿಲ್ಲ. ಹಿಂದುಗಳು ಅಭಿಮಾನ ಹೀನರಾಗಿದ್ದಾರೆ.

### ಧರ್ಮ ಪ್ರಚಾರ

'ಹಿಂದುಗಳ ಈ ದುಸ್ಥಿತಿಗೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಹಿಂದುಗಳಲ್ಲಿ ಸಂಘಟನೆ ಇಲ್ಲದಿರುವದಾಗಿದೆ. ಎಲ್ಲಾ ಹಿಂದುಗಳು ಪರಸ್ಪರ ಸಹೋದರರು ಎಂಬ ದಿವ್ಯ ಭಾವನೆಯು ಅವರಲ್ಲಿ ಬಂದು, ಅವರು ತಮ್ಮ ಉನ್ನತಿಗಾಗಿ ಒಂದು ಜಾತಿ, ಒಂದು ಸಂಘವಾಗಿ ಕೆಲಸ ಮಾಡುತ್ತಿರಬೇಕಾದರೆ, ಧರ್ಮಪ್ರಚಾರವು ಆಗುವುದು ಅಗತ್ಯ. ನಮಗೀಗ ದ್ವೈತಾದ್ವೈತ ಸಿದ್ಧಾಂತಗಳಲ್ಲಿ ಸತ್ಯವಾಕ್ಯ ಯಾವುದು ಎಂಬುದರ ಪರೀಕ್ಷೆಯಾಗಬೇಕಾಗಿಲ್ಲ. ಅದಕ್ಕೋಸ್ಕರ ನಾವು ಪರಸ್ಪರ ಚರ್ಚಿಸಿ, ತರ್ಕಿಸಿ, ನಮ್ಮ ಶಕ್ತಿಯ ಅಪವ್ಯಯ ಮಾಡಬೇಕಾಗಿಲ್ಲ. ಆದರೆ ಹಿಂದುತ್ವದ ಮೂಲ ತತ್ವಗಳನ್ನು ನಾವು ಪ್ರತಿಯೊಬ್ಬರು ತಿಳಕೊಂಡು ಅವುಗಳಿಗನುಸಾರವಾಗಿ ನಡೆಯುವದು ಅಗತ್ಯವಾಗಿದೆ. ನಮ್ಮ ದೇಶದ ಹಳ್ಳಿ ಹಳ್ಳಿಗಳಲ್ಲಿ ಹಿಂದೂ ಧರ್ಮದ ತತ್ವಪ್ರಚಾರವು ಆಗುವದು ಅತೀ ಅಗತ್ಯವಾಗಿದೆ. ಹಳ್ಳಿ ಜನರು ಕೇವಲ ಹೆಸರು ಮಾತ್ರಕ್ಕೆ ಹಿಂದುಗಳಾಗಿ ಇದ್ದಾರೆ. ಅವರು ವೇದ, ಗೀತೆ, ರಾಮಾಯಣ-ಯಾವ ಶಬ್ದವನ್ನು ಕೇಳಿದವರಲ್ಲ. ಆದ್ದರಿಂದ ಪ್ರತಿಯೊಂದು ಹಳ್ಳಿ ಹಳ್ಳಿಯಲ್ಲಿ ಹಿಂದೂ ತತ್ವದ ಪ್ರಚಾರವಾಗಬೇಕು. ಜನರಲ್ಲಿ ಹಿಂದುತ್ವದ ಪವಿತ್ರ ಭಾವನೆಯು ಮೂಡಿ ಬರಬೇಕು. ಅಲ್ಲವಾದರೆ ಹಿಂದೂಸಮಾಜವು ದುರ್ಬಲವಾಗಿ, ವಿಧರ್ಮಿಗಳ ಮತ್ತು ಹಿತಶತ್ರುಗಳ ಪ್ರಯತ್ನಗಳಿಂದ ಅದು ನಾಮಾವಶೇಷವಾಗುವದು ಖಂಡಿತ.

### ಅಂಧವಿಶ್ವಾಸದ ನಾಶ

'ಒಂದು ಕಡೆಯಿಂದ ಹಿಂದುಗಳು ಧರ್ಮ ಪ್ರಚಾರದ ಅಭಾವದಿಂದ ಹಿಂದೂ ತತ್ವಗಳಿಂದ ಅಪರಿಚಿತರಾಗಿರುವಾಗ, ಇನ್ನೊಂದು ಕಡೆಯಿಂದ ಅವರು ಅನೇಕಾನೇಕ ಅಂಧ ವಿಶ್ವಾಸ, ರೂಢಿ ಪರಂಪರೆಗಳಿಗೆ ಬಲಿಯಾಗಿಯೂ ನಷ್ಟವಾಗುತ್ತಿದ್ದಾರೆ. ಉದಾಹರಣೆಗಾಗಿ ಹಿಂದೂ ಹೆತ್ತವರಿಗೆ ತಮ್ಮ ಮಕ್ಕಳಿಗೆ ಮದುವೆ ಮಾಡುವ ಚಿಂತೆ ವಿಶೇಷ. ಆ ಮದುವೆಗಳಿಗಾಗಿ ಅವರು ಚೆನ್ನಾಗಿ ಉಣ್ಣದೆ ತಿನ್ನದೆ ಹಣ ಒಟ್ಟು ಮಾಡಿ ಇಡುತ್ತಾರೆ; ಸಾಲತೆಗೆಯುತ್ತಾರೆ. ಆದ್ದರಿಂದ ಅವರ ನಿತ್ಯ ಜೀವನವು ಬಹಳ ನಿಕೃಷ್ಟವಾಗಿದೆ. ಅವರಿಗೆ ಇಂದಿನ ಜೀವನದ ಸುಖಕ್ಕಿಂತಲೂ ಮುಂದಿನ ಜೀವನದ ವಿಚಾರವು ಬಹಳವಾಗಿದೆ. ಶುಭಶೋಭನಗಳ ಕಾಲದಲ್ಲಿ ಹಿಂದುಗಳು ಮಾಡುವ ಅಪವ್ಯಯ, ಅತಿವ್ಯಯಗಳು ನಿಲ್ಲುವವಾದರೆ ಅವರು ಶಾರೀರಿಕ ಮತ್ತು ಮಾನಸಿಕ ದೃಷ್ಟಿಯಿಂದ ಇಂದಿಗಿಂತ ಎಷ್ಟೋ ಪಾಲು ಉತ್ತಮರಾಗಬಹುದು. ಎಂ. ಎ. ಬಿ. ಎ. ಪದವಿಗಳನ್ನು ಪಡೆದ ಹಿಂದೂ ಶಿಕ್ಷಿತನಂತೂ ಆ ಪದವಿಗಳ ದೆಸೆಯಿಂದ ಕುರುಡನಾಗಿ ಬಿಡುತ್ತಾನೆ. ಅವನು ಕುಲೀನ ಮನೆತನದ ಸುಲಕ್ಷಣೆಯಾದ ಶುಚಿತ್ವದ ಕನ್ಯೆಯನ್ನು ವಿವಾಹವಾಗಲಿಕ್ಕೂ ಸಾವಿರಾರು ರೂಪಾಯಿಗಳ ವರದಕ್ಷಿಣೆಯನ್ನು ಕೇಳುತ್ತಾನೆ! ಇವೇ ಮೊದಲಾದ ರೂಢಿಗಳೆಂಬ ಗೆದ್ದಲಿಗಳು ಹಿಂದೂ ಸಮಾಜದ ಬೇರನ್ನೇ ತಿನ್ನುತ್ತಲಿವೆ.

### ಸುಧಾರಣೆಗಳು ಅಗತ್ಯ.

'ಹಿಂದೂ ಸಮಾಜದಲ್ಲಿ ಸುಧಾರಣೆಗಳಾಗುವದು ಅತಿ ಅಗತ್ಯವಾಗಿದೆ. ಹಿಂದೂ ಸಮಾಜದ ಪತನಕ್ಕೆ ಕಾರಣವಾದ ಸ್ವಾರ್ಥ, ಡಂಭ, ಸಂಕುಚಿತ ಭಾವ, ದುರಭಿಮಾನ ಮೊದಲಾದ ದೋಷಗಳು ದೂರವಾಗಿ ಹಿಂದುಗಳಲ್ಲಿ ಉದಾರಬುದ್ಧಿ ಮತ್ತು ವಿಶಾಲದೃಷ್ಟಿಯು ಬರಬೇಕಾಗಿದೆ. ಸಮಾಜವು ಕಾಲಪರಿಸ್ಥಿತಿಗಳಿಗೆ ತಕ್ಕಂತೆ ಹೊಂದಿಸಿ ಕೊಂಡು ಇರುವದೇ ಅದು ಸಜೀವ ಮತ್ತು ಚೇತನದಿಂದ ಕೂಡಿರುವ ಲಕ್ಷಣವಾಗಿದೆ. ನಿರ್ಜೀವ ಅಥವಾ ಅರೆಜೀವವಾಗಿರುವ ಸಮಾಜವು ತಾನೇ ಪುರಾತನ ರೂಢಿ ಸಾಂಪ್ರದಾಯಗಳಿಗೆ ಕಟ್ಟು ಬಿದ್ದು ಇರುತ್ತದೆ. ಯಾವ ರೂಢಿ ಪರಂಪರೆ ಮತ್ತು ಆಚಾರ ಸಂಗತಿಗಳು ಸಮಾಜದ ಸಂಘಟನೆ ಮತ್ತು ಜೀವನಕ್ಕೆ ವಿಘ್ನಕಾರಿಯಾಗಿರುವವೋ ಅವುಗಳಿಂದ ಹಿಂದೂ ಸಮಾಜವು ಬಾಹಿರವಾಗಿದೆ. ಈಗ ವಿಚಾರ ಪ್ರಧಾನವಾಗಿರಬೇಕಲ್ಲದೆ ಆಚಾರ ಪ್ರಧಾನವಲ್ಲ. ಹಿಂದೂ ಧರ್ಮಪ್ರೇಮಿಗಳೂ ಕೆಲಸಗಾರರೂ ಈ ವಿಷಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಹಿಂದೂ ಸಮಾಜವನ್ನು ಸುಧಾರಿಸಿಕೊಂಡು ಹೋಗಬೇಕಾಗಿದೆ.

ಆರೋಗ್ಯ ಮತ್ತು ಸೌಂದರ್ಯಕ್ಕೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟುಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನು (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ವಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ.

ಕುಟಿಕೂರಾ ಸಾಬೂನು (Cuticura Soap) ಬೆಣ್ಣೆಯಂತೆ ಗುಣವುಳ್ಳದ್ದಾಗಿದೆ. ದೊರಗಾದ ಚರ್ಮವನ್ನು ನುಣುಪಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದಕ್ಕೆ ಮದ್ದಣ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸಾಬೂನು

CUTICURA SOAP



ಮಕ್ಕಳಿಗೆ

ಡೋಂಗರೆ

ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.



The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು   ಬ್ರೇಂಚ್: ಸೆಂಟ್ರಲ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000.   ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ಸಿರಿಯಿ ಠೇವಣಾತಿ 3 ತಿಂಗಳಿಗೆ 3½%   ಸಿರಿಯಿ ಠೇವಣಾತಿ 12 ತಿಂಗಳಿಗೆ 4½%

6 ತಿಂಗಳಿಗೆ 4%   24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್.

# ಗಾಂಧಿಜಿಯವರಿಗೆ 'ಸಿನೆಮಾ' ಸಮಸ್ಯೆ!

## ವಿದ್ಯಾರ್ಥಿಗೆ ಉತ್ತರ

ಕಳೆದ ವಾರ ಹರಿಜನದಲ್ಲಿ ಗಾಂಧಿಜಿಯವರಿಗೆ ಒಬ್ಬ ವಿದ್ಯಾರ್ಥಿಯು ಬರೆದ ಒಂದು ಪತ್ರವು ಪ್ರಕಟವಾಗಿದೆ.

'ನಾನೊಬ್ಬ ಯುನಿವರ್ಸಿಟಿ ವಿದ್ಯಾರ್ಥಿ. ನಿನ್ನೆಯ ಸಂಜೆ ಸಿನೆಮಾ ಪ್ರದರ್ಶನಕ್ಕೆ ನಾವು ಕೆಲವರು ಹೋಗಿದ್ದೆವು. ವಿರಾಮಕಾಲದಲ್ಲಿ ನಮ್ಮಲ್ಲಿ ಇಬ್ಬರು, ಆಸನಗಳಲ್ಲಿ ನಮ್ಮ ಕರವಸ್ತ್ರಗಳನ್ನಿಟ್ಟು ಹೋಗಿದ್ದೆವು. ನಾವು ತಿರುಗಿ ಬರುವಷ್ಟರಲ್ಲಿ ಇಬ್ಬರು ಬ್ರಿಟಿಷ್ ಸಿಪಾಯಿಗಳು ಅದರಲ್ಲಿ ಭದ್ರವಾಗಿ ಕುಳಿತುಕೊಂಡಿದ್ದರು. ನಮ್ಮ ಮಿತ್ರರು ಅವರೊಡನೆ ನಾವು ಕುಳಿತವರೆಂದು ಎಷ್ಟು ಹೇಳಿದರೂ ಅದಕ್ಕೆ ಆ ಸಿಪಾಯಿಗಳು ಕಿವಿಗೊಡಲಿಲ್ಲ. ನಾವು ಹೋಗಿ, ಸ್ಥಳವನ್ನು ಬಿಟ್ಟುಕೊಡಲು ಕೇಳಿದಾಗ, ಅವರು ತಿರಸ್ಕರಿಸಿದ್ದು ಮಾತ್ರವಲ್ಲದೆ, ನಮ್ಮೊಡನೆ ಜಗಳವಾಡಲೂ ತಯಾರಾದರು. ಅಷ್ಟರಲ್ಲಿ ಸಿನೇಮಾ ಮೇನೇಜರನು ಬಂದನು. ಆತನ ಸಹಾಯದಿಂದ ಸಿಪಾಯಿಗಳು ಆ ಸ್ಥಾನವನ್ನು ಬಿಟ್ಟು ಎದ್ದು ಹೋದರು. ಆತನು ಬರದಿದ್ದರೆ, ನಮ್ಮ ಅಭಿಮಾನ ರಕ್ಷಣೆಗಾಗಿ ಆ ಸಿಪಾಯಿಗಳೊಡನೆ ನಾವು ಹಿಂಸಾತ್ಮಕವಾದ ಜಗಳವನ್ನು ಮಾಡಬೇಕಿತ್ತು, ಇಲ್ಲವೇ ಅಭಿಮಾನವಿಲ್ಲದೆ ಇನ್ನೆಲ್ಲಿಯಾದರೂ ಹೋಗಿ ಕುಳಿತುಕೊಳ್ಳಬೇಕಿತ್ತು. ಹಾಗಾದರೆ ಇಂತಹ ಸ್ಥಳಗಳಲ್ಲಿ ಹೇಗೆ ಅಹಿಂಸೆಯಲ್ಲಿ ಕಾಪಾಡಲಿ' ಎಂದು ವಿದ್ಯಾರ್ಥಿಯೊಬ್ಬನು ಪತ್ರ ಬರೆದಿರುವನು.

ಈ ಪತ್ರಕ್ಕೆ ಗಾಂಧಿಜಿಯವರು ಹೀಗೆಂದು ಬರೆಯುತ್ತಾರೆ.

'ಇಂತಹ ಸಮಯದಲ್ಲಿ ಸಹಜವಾಗಿಯೂ ಬಹಳ ಕಷ್ಟವಾಗುವುದೆಂದು ನಾನು ಬಲ್ಲೆ. ಈ ಕಾಲಗಳಲ್ಲಿ, ಒಂದನೆಯದಾಗಿ, ಅದೇ ಸ್ಥಳದಲ್ಲಿ ಆತನು ಸೀಟು ಬಿಟ್ಟುಕೊಡುವ ವರೆಗೆ ನಿಂತುಕೊಳ್ಳಬೇಕು, ಎರಡನೆಯದಾಗಿ, ಆತನಿಗೆ ನೋಡಲು ತಡೆಯಾಗುವಂತೆ ನಿಂತುಕೊಳ್ಳಬೇಕು. ಈ ಎರಡು ವಿಷಯಗಳಲ್ಲಿಯೂ ನಾವು ಹೊಡೆಯುವ ಸಂದರ್ಭವು ತಪ್ಪುತ್ತದೆ. ಈ ಉತ್ತರಗಳಿಂದಲೂ ನನಗೆ ತೃಪ್ತಿಯಿಲ್ಲ. ಆದರೆ ನಿಮಗೆ ಬಂದೊದಗಿದ ಸಂದರ್ಭದಲ್ಲಿ ಆ ಉತ್ತರಗಳು ಸರಿಯಾದವು. ಇಂತಹ ಕಾಲದಲ್ಲಿ ಆದರ್ಶ ರೀತಿಯ ಕಾರ್ಯವೆಂದರೆ ಅವರೊಡನೆ ಸಮಾಧಾನದಿಂದ ಹೇಳಿ ನೋಡುವುದು, ಕೇಳದಿದ್ದರೆ ಅಧಿಕಾರಿಗಳ ವರೆಗೆ ತಿಳಿಸುವುದೂ ಆಗಿದೆ. ಇದು ಕಾನೂನು ದಾರಿಯಾಗಿದೆ. ಆದರೆ ಆಂಗ್ಲರು ಮತ್ತು ಭಾರತೀಯರ ವಿವಾದಗಳಲ್ಲಿ ಭಾರತೀಯರಿಗೆ ನ್ಯಾಯವು ದೊರಕುವುದು ಬಹಳ ಕಡಿಮೆ. ಆದ್ದರಿಂದ ನಾನು ಮೊದಲು ಹೇಳಿದ ರೀತಿಯೇ ಒಳ್ಳೆಯದು. ಹೇಗಿದ್ದರೂ ಇಂತಹ ಸಂದರ್ಭಗಳಲ್ಲಿ ಅಹಿಂಸೆಯಲ್ಲಿ ವಿಶ್ವಾಸವುಳ್ಳವನಿಗೆ ಒಂದು ಯೋಗ್ಯ ದಾರಿಯು ತೋರಿಯೇ ತೋರುವುದು.'

# ಸಿನೆಮಾ ಪುಟ

## ಸಿನೆಮಾ ಸುದ್ದಿಗಳು

ಪ್ರಭಾತ ಚಿತ್ರದ ನಿರ್ದೇಶಕ ಶಾಂತಾರಾಮರು ಪಡೋಸಿ ಮತ್ತು ಶೇಜಾರಿ ಎಂಬೆರಡು ಚಿತ್ರಗಳ ತಯಾರಿ ಮಾಡುತ್ತಿದ್ದಾರೆ.

★

ಪ್ರಭಾತ ಕಂಪೆನಿಯವರು ತಯಾರಿಸಿದ 'ಆದ್ಮಿ' ಎಂಬ ಚಿತ್ರದ ಒಂದು ದೃಶ್ಯ

'ಜ್ಞಾನೇಶ್ವರ'ವು ಸಂಪೂರ್ಣವಾಗುತ್ತಾ ಬಂತು. 'ರಾಮಶಾಸ್ತ್ರಿಯ ಜೀವನ'ದ ಕೆಲಸವನ್ನು ಸಾತೀಲರು ಆರಂಭಿಸುವರು. ಅದಕ್ಕೆ ಬೇಕಾದ ಐತಿಹಾಸಿಕ ಸಲಕರಣೆಗಳನ್ನು ಶ್ರೀ [illegible] ಸಂಗ್ರಹಕಾರರು ಒದಗಿಸಿ ಕೊಡುವರು.

★

ಕುಬೇರದ ನಿರ್ದೇಶಕ ನಾರಾಯಣಮೂರ್ತಿಯವರು ಮಹಿರಾವಣ ಚಿತ್ರವನ್ನು ಮುಗಿಸಿ ಈಗ ಒಬ್ರ ವಾಹನವೆಂಬ ಎರಡನೆಯ ಪೌರಾಣಿಕ ಚಿತ್ರವನ್ನು ತಯಾರಿಸುತ್ತಾರೆ.

★

ಲೀಲಾ ಚಿಟ್ನೀಸರ ಕುಲಗೋತ್ರಗಳ ವಿಷಯವಾಗಿ ಒಂದು ವಿವಾದ ಉಂಟಾಗಿದೆ. ಫಿಲ್ಮ್ ಇಂಡಿಯಾದಲ್ಲಿ ಆಕೆ ಯಹೂದ್ಯಳೆಂದೂ, ಮಿರರಿನಲ್ಲಿ [illegible] ಸಾರಸ್ವತ ಬ್ರಾಹ್ಮಣಳೆಂದೂ ಇದೆ.

★

ಭವಾನೀ ಚಿತ್ರದ ನಿರ್ದೇಶಕ ಪ್ರಕಾಶಕರವರು ಚಂಡಿಕಾ ಚಿತ್ರವನ್ನು ತಯಾರಿಸಲು ಕೊಲ್ಹಾಪುರಕ್ಕೆ ತೆರಳಿದ್ದಾರೆ.

★

ನಿರ್ದೇಶಕರೂ ಅಭಿನಯಕಾರರೂ ಆದ ರಾಮಕುಮಾರರು ಬಾಲ್ಯ ವಿವಾಹ ಚಿತ್ರವನ್ನು ಎಂ ಪಿ ಪಿ. ಟಿ. ಸ್ಟುಡಿಯೋದಲ್ಲಿ ತಯಾರಿಸುತ್ತಿದ್ದಾರೆ.

★

ವಿಷ್ಣು ಸಿನೆಟೋನಿನ ಮುಂದಿನ ಚಿತ್ರವು 'ವಿಲಾಸ ಪತಿ-ಪತ್ನಿ'ಯೆಂಬ ಸಾಮಾಜಿಕ ಕಥೆಯಾಗಿದೆ.

★

ದೇವಿಕಾರಾಣಿಯ ಅಭಿನಯವುಳ್ಳ ಬೊಂಬಾಯಿ ಟಾಕೀಸಿನ ಚಿತ್ರವು ಒಂದು ಸಾಮಾಜಿಕ ಕಥೆಯಾಗಿದೆ.

★

ನಿರ್ದೇಶಕ ಜಾಗೀರ್ದಾರರು ನಾಸೀಮರ ಅಭಿನಯವುಳ್ಳ 'ಅಪಜಯ' ಚಿತ್ರವನ್ನು ತಯಾರಿಸುತ್ತಿದ್ದಾರೆ.

★

### ಈ ವರ್ಷದ ಉತ್ತಮ ಚಿತ್ರ

ಈ ವರ್ಷದ ಉತ್ತಮ ಚಿತ್ರಗಳಲ್ಲಿ ಪ್ರಭಾತ ಕಂಪೆನಿಯವರ ಆದ್ಮಿಯು ಅತ್ಯುತ್ತಮವೆಂದು ಬಂಗಾಳದ ಫಿಲ್ಮ್ ಪತ್ರಿಕೋದ್ಯಮಿಗಳ ಸಂಘದವರು ನಿರ್ಣಯಿಸಿದ್ದಾರೆ. ಶಾಂತಾ ಹುಬ್ಳಿಕರರ ಅಭಿನಯ, ಶಾಂತಾರಾಮರ ನಿರ್ದೇಶಕತ್ವವೂ ಪ್ರಶಂಸನೀಯವಾದ ರೀತಿ ಹೊಗಳಲ್ಪಟ್ಟಿದೆ.

★

ಪ್ರಭಾತದವರ 'ಆದ್ಮಿಯ' ಅನಂತರ ನ್ಯೂ ಥಿಯೇಟರ್ಸಿನ ಬಾಡೀ ದೀದಿ, 'ದ ಷ್ಟ್ಯಾಸ್' ಪತ್ರ ಮಿನರ್ವಾದ ಪುಕಾರ್‌ಗಳು ಅತ್ಯುತ್ತಮವೆಂದು ಬಂಗಾಳದ ಫಿಲ್ಮ್ ಪತ್ರಿಕೋದ್ಯಮಿಗಳ ಹೇಳಿಕೆಯಾಗಿದೆ.

HALFTONE & LINE
BLOCK MAKING
UNDERTAKEN
Sharada Press,
MANGALORE

A well-rounded programme of
SAVING

DO YOU WANT YOUR MONEY TO GROW?

If so, this should interest you

On the top of all possible ideas of lifting yourselves financially stand the Syndicate's time tested thrift schemes for guaranteed security.

We have a few select plans which enable any man to fully enjoy the fruit of his labours. Study them, join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.
Head Office:-UDIPI, S. India.

# ನೋಟಗಳು

'ಲೋಕಸಾಮ್ರಾಜ್ಯ ಶಾಹಿಯನ್ನು ಸ್ಥಾಪಿಸಬೇಕೆಂಬ ದುರುದ್ದೇಶವುಳ್ಳದ್ದೆಂದು ಜರ್ಮನಿಯನ್ನು ಮಿ| ಚೆಂಬರ್ಲೇನರು ತೆಗಳುವರು; ಆದರೆ, ಬ್ರಿಟನಿನ ಸಾಮ್ರಾಜ್ಯಶಾಹೀಧೋರಣೆಗಾಗಿ ದುಡಿಯುವ ಸಮಸ್ತ ಭಾರತೀಯರ ಮತ್ತು ಅರಬರ ಕೂಗು, ಅವರ ಕಿವಿಗೆ ಬೀಳುವುದಿಲ್ಲ—ಇದು ಯಾವ ನ್ಯಾಯ? ಎಂದು ನಾಜೀ ಪಕ್ಷದ ಇಪ್ಪತ್ತನೇ ವಾರ್ಷಿಕ ದಿನಾಚರಣೆಯ ದಿನ ಹಿಟ್ಲರನು ಗರ್ಜಿಸಿ ಹೇಳಿದನು.

ನ್ಯಾಯವನ್ನು ಕೊಡಲು ಹಿಂಜರಿಯುವವರೇ ಅನ್ಯರು ಅನ್ಯಾಯ ಮಾಡುತ್ತಿರುವರೆಂದರೆ ಆ ಮಾತಿಗೆ ನಿಜವಾಗಿಯೂ ಬೆಲೆ ಬರಲಾರದು.

ಬ್ರಿಟಿಷ್ ಸಾಮ್ರಾಜ್ಯಶಾಹಿಯು ವಸಾಹತುಗಳ ಸತ್ವವನ್ನು ಶೋಷಣೆ ಮಾಡುತ್ತಿದೆಯೆಂಬುದು ಸರ್ವತ್ರ ಕೂಗು ಎದ್ದಿರುವುದು!

ಭಾರತದಲ್ಲಿ, ಸಾಮ್ರಾಜ್ಯ ಶಾಹಿಯ ಧೋರಣೆಯು ಹೀಗೆಯೇ ಮುಂದುವರಿದಲ್ಲಿ ತಾನು, ಬ್ರಿಟನಿಗೆ ಇಂದಿನ ಯುದ್ಧದಲ್ಲಿ ಜಯವಾಗಲೆಂದು ಬಯಸಲಾರೆ' ಎಂದರು ಮೊನ್ನೆ ಗಾಂಧಿಜಿಯವರು!

ಶರತವಿಲ್ಲದೆ, ಬ್ರಿಟನಿಗೆ ಸಹಾಯ ಕೊಡಬೇಕೆಂದು ಹೇಳಿದ್ದರು, ಯುದ್ಧಾರಂಭದಲ್ಲಿ ಮಹಾತ್ಮರು!

ಅಲ್ಪ ಸಂಖ್ಯಾಕರ ಮತ್ತು ಅಸ್ಪೃಶ್ಯರ ಹಕ್ಕುಗಳ ಹಿತ ಸಂರಕ್ಷಣೆಯೆಂಬ ನೆವನದಿಂದ ಭಾರತದ ಸ್ವಾತಂತ್ರ್ಯದ ಕೇಳಿಕೆಯನ್ನು ಅನಿಶ್ಚಿತ ಕಾಲಕ್ಕೆ ಬ್ರಿಟಿಷ್ ಸರಕಾರವು ಮುಂದುವರಿಸುತ್ತಿದೆ.

ಅಲ್ಪಸಂಖ್ಯಾಕರ, ಮುಸ್ಲಿಮರ, ಕೇಳಿಕೆಯು, ಸ್ವಾತಂತ್ರ್ಯದ ಮಾರ್ಗದಲ್ಲಿ ಕಂಟಕವಾಗಿಲ್ಲ; ಅದು ಕೇವಲ ಬ್ರಿಟಿಷ್ ಸಾಮ್ರಾಜ್ಯ ಶಾಹಿಯಿಂದ ನಿರ್ಮಿತವಾದ ಕುಹಕ; ಗೃಹಕಲಹದಂತಿರುವ ಆ ವಿಷಯವನ್ನು ನಾವು ನಮ್ಮ ನಮ್ಮೊಳಗೆ ಪರಿಹರಿಸಬಲ್ಲೆವು ಎನ್ನುತ್ತಾರೆ' ಮುಂದಿನ ರಾಷ್ಟ್ರಪತಿ ಅಜಾದರು!

ಬ್ರಿಟಿಷರೇ ಭಾರತವನ್ನು ಆಳಬಯಸುವರು; ಆದರೆ ಅವರ ಆಳ್ವಿಕೆಯನ್ನು ಕಿತ್ತೊಗೆದು, ಗಾಂಧಿಜಿಯವರು ಭಾರತವನ್ನು ಆಳುವ ಇಚ್ಛೆ ಮಾಡಿದ್ದಾರೆ; ಆದರೆ ಮುಸ್ಲಿಮರು ಸ್ವತಂತ್ರ ಮುಸ್ಲಿಂ ಭಾರತವನ್ನು ಬಯಸುತ್ತಿದ್ದಾರೆ ಎಂದರು. ಲೀಗಿನ ಉದ್ದೇಶವನ್ನು ಸಾರುತ್ತಾ ಮಿ| ಜಿನ್ನರು!

ಬ್ರಿಟಿಷರಾಗಲಿ, ಗಾಂಧಿಜಿಯವರಾಗಲಿ ಭಾರತವನ್ನು ಆಳಲು ಯೋಗ್ಯರಲ್ಲ; ಅದಕ್ಕೆ ತಾನೇ ಯೋಗ್ಯನಿದ್ದೇನೆ ಎಂಬುದು ಈ ಮಾತಿನ ಧ್ವನಿಯೆ?

ರಾಮಘರ ಕಾಂಗ್ರೆಸ್ ಅಧಿವೇಶನ ಕಾಲದಲ್ಲಿ, ಆ ಸ್ಥಳದಲ್ಲಿಯೇ "ಎಡಪಕ್ಷ"ದ ಕಾಂಗ್ರೆಸ್ ಕೆಲಸಗಾರರ ಇನ್ನೊಂದು ಪರಿಷತ್ತನ್ನು ಕರೆಯಬೇಕೆಂದು ಬೋಸರು ಹೇಳುತ್ತಾರೆ. ಎರಡನೆಯ ಕಾಂಗ್ರೆಸೊಂದನ್ನು ಸ್ಥಾಪಿಸಬೇಕೆನ್ನುವ ಬೋಸರ ಕಾರ್ಯಕ್ಕೆ ಈ ಪರಿಷತ್ತು ಮೊದಲನೆ ಸಿದ್ಧತೆಯಾಗಿರಬಹುದು.

ಎರಡನೆಯ ಕಾಂಗ್ರೆಸೊಂದನ್ನು ಸ್ಥಾಪಿಸಬೇಕೆನ್ನುವ ಬೋಸರ ಹೇಳಿಕೆಯು ಬಹಳ ವಿಚಿತ್ರವಾದರೂ ವಿಶೇಷವಾದುದಲ್ಲ.

ಸಮಾಜದಿಂದ ಬಹಿಷ್ಕೃತರಾದ ಜನರು, ಮುಂದಕ್ಕೆ ತಮ್ಮದೇ ಆದ ಹೊಸತೊಂದು ಸಮಾಜವೊಂದನ್ನು ರಚಿಸದೆ ಸಾಧ್ಯವೇ ಇಲ್ಲವಷ್ಟೆ?

ಶರತ್ ಬೋಸರು ಕಾಂಗ್ರೆಸಿನ ವಿರುದ್ಧ "ಕ್ರಾಂತಿ"ಯೆಬ್ಬಿಸುವುದಾಗಿ ಸಾರುತ್ತಾರೆ.

ಹಿಂದೊಮ್ಮೆ ವೀರ ಸವರ್ಕಾರರೂ, ಕಾಂಗ್ರೆಸಿನ ವಿರುದ್ಧ "ಕ್ರಾಂತಿ"ಯೆಬ್ಬಿಸಿದ್ದರು!

ತಮ್ಮ ಕ್ರಾಂತಿಯ ಫಲವಾಗಿ, ತಾವೇ ಕಾಂಗ್ರೆಸಿನಿಂದ ಬಹಿಷ್ಕೃತರಾಗಿ ಹೋದರಲ್ಲದೆ ಕಾಂಗ್ರೆಸು ಮುಂದಕ್ಕೂ ಪ್ರಭಾವಶಾಲಿಯಾಗಿಯೇ ಬೆಳೆದು ಬಂದಿದೆ.

ರಾಷ್ಟ್ರದ ಪ್ರತಿಷ್ಠೆಯನ್ನು ಉಳಿಸುವ ಫಲಕ್ಕಿಂತ ಹಲವರಿಗೆ ತಮ್ಮ ವ್ಯಕ್ತಿ ಪ್ರತಿಷ್ಠೆಯನ್ನು ಮೆರೆಸುವ ಹಠವೇ ಹೆಚ್ಚಾಗಿರುತ್ತದೆ.

ಗಾಂಧಿ—ವೈಸರಾಯ್ ಭೇಟಿಯಾದ ಮೇಲೆ? ಶಾಂತಿದೇವತೆಯನ್ನು ಆವಳ ಪಾಡಿಗೇ ಬಿಟ್ಟು ಇಬ್ಬರೂ ಸಂತೋಷದಿಂದ ಹೊರಟುಹೋದರು.

ಜಾಲ್ಕನ್ ಪಾತ್ರದ ಸವಿನೋಡಲು ಸಿದ್ಧವಾದ ಈ ಎರಡು ಬೆಕ್ಕುಸನ್ಯಾಸಿಗಳು ಯಾರು?

## ಮಹಮ್ಮಡನ್ ಹೈ. ಎ. ಶಾಲೆ ಮಂಗಳೂರು

ಮಂಗಳೂರು ಮಹಮಡನ್ಸ್ ಹೈಸ್ಕೂಲ್‌ನಿಳರಂದು ಮಕ್ಕಳಹೆತ್ತವರ ದಿನಾಚರಣೆಯು ಜರಗಿಸಲ್ಪಟ್ಟಿತು. ಈ ಸಮಾರಂಭಕ್ಕೆ ಜನಾಬ್, ಎಂ. ಕುಂಞಂಬು ಸಾಹೇಬರವರು ಅಧ್ಯಕ್ಷರಾಗಿದ್ದರು. ಶಾಲಾಭಿವೃದ್ಧಿಗಾಗಿ, ಹೆತ್ತವರೂ ಉಪಾಧ್ಯಾಯರೂ ಕೈಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಚರ್ಚಿಸಿ ಇತ್ಯರ್ಥಿಸಲಾಯಿತು. ತರುವಾಯ, ಹೆತ್ತವರ ಸಂಘವನ್ನು ಸ್ಥಾಪಿಸಿ ಜನಾಬ್, ಯು. ಅಹಮ್ಮದ್ ಹುಸೇನ್ ಸಾಹೆಬ್, ಇವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು.

ತಾ ೨೪ರಂದು, ಹಳೆ ವಿದ್ಯಾರ್ಥಿಗಳ ಮಹಾಸಭೆಯು ಜನಾಬ್ ಅಬ್ದುಲ್ ಹುಸೇನ್ ಸಹೆಬ್, ಬಿ. ಎ. ಯವರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಸಭೆಗೆ ಮುನ್ಸಿಪಲ್ ಕೌನ್ಸಿಲರ್, ಮಾಧವರಾಯರು, ಜನಾಬ್ ಕುಂಞಿ ಸಾಹೆಬ್ ಜನಾಬ್ ಎ. ಮೂಸಾಬ್ ಸಾಹೇಬ್, ಬಿ. ಎ. ಬಿ. ಎಲ್. ಮೊದಲಾದವರು ಹಾಜರಿದ್ದರು. ಮಾತ್ರವಲ್ಲದೆ, ಹಳೇ ವಿದ್ಯಾರ್ಥಿಗಳು ಶಾಲೆಗೆ ಸಲ್ಲತಕ್ಕ ಸೇವೆಯ ವಿಷಯದಲ್ಲಿ ಬೋಧಪ್ರದ ಭಾಷಣವಿತ್ತರು. ಜನಾಬ್ ಬಾಳೆಪುಣಿ ಅಹಮ್ಮದ್ ಬ್ಯಾರಿಯವರೂ ಸಹ ಭಾಷಣವಿತ್ತರು.

ವಾರ್ಷಿಕೋತ್ಸವ ಸಮಾರಂಭದಲ್ಲಿ ಮಕ್ಕಳಿಗೆ ಬಹುಮಾನವಿತ್ತ ಸರ್ವ ಹಿಂದೂ–ಮುಸ್ಲಿಂ ಮಹನೀಯರಿಗೂ ಸ್ಕೂಲ್ ಡೇ ಕಮಿಟಿಯವರ ವಂದನೆಗಳು. ಮತ್ತು, ಈ ಶಾಲೆಯಲ್ಲಿ ಕಲಿಯುವ ಬಡ ಮುಸ್ಲಿಂ ಹೆಮ್ಮಕ್ಕಳಿಗಾಗಿ, ಉಡಿಗೆ ತೊಡಿಗೆಗಳನ್ನಿತ್ತ ಜನಾಬ್ ಎಂ. ಕುಂಞಂಬ್ ಸಾಹೇಬ್, ಜನಾಬ್, ಮುಹಮ್ಮದ್ ಹುಸೇನ್ ಸಾಹೇಬರಿಗೂ, ಅರೇಬಿಕ ಉರ್ದು ಪುಸ್ತಕಗಳನ್ನು ಬಡ ವಿದ್ಯಾರ್ಥಿಗಳಿಗೆ ದಾನವನ್ನಿತ್ತ ಜನಾಬ್ ಕುದ್ರೋಳಿ ಹುಸೇನಬ್ಬ ಸಾಹೇಬರಿಗೂ ಸ್ಕೂಲ್ ಡೇ ಕಮಿಟಿಯವರು ಉಪಾಧ್ಯಾಯರು ಕೃತಜ್ಞರಾಗಿದ್ದಾರೆ.

THE

Canara Banking Corporation Ltd.,

(INCORPORATED IN BRITISH INDIA)

Estd: 1906

THREE YEAR'S CASH CERTIFICATES

bearing interest at 4% p. a.

in denominations of

Rs. 50/-,100/-,500/-,1,000/-&5,000/-

are now issued at all our Branches.

For particulars call at or write to

Any of our nearest Branches

# ವಿಜ್ಞಾನಯುಗ

**ಈ ವರ್ಷವೇ ಯುದ್ಧವು ಕೊನೆಗಾಣುವುದೆಂದು ಸೂರ್ಯ ಚಲನೆಯು ತಿಳಿಸುವುದು**

ಫ್ರೆಂಚ್ ಜ್ಯೋತಿಷಿಯಾದ, ಅಬ್ಬೆ ತೀದೂರ್ ಮೊರೀಕ್ಸ್ ಎಂಬವರು, ಸೂರ್ಯಚಲನೆಯನ್ನು ಪರೀಕ್ಷಿಸಿ ಯುದ್ಧವು ಈ ವರ್ಷವೇ ಕೊನೆಗೊಳ್ಳುವುದಾಗಿ ಹೇಳುತ್ತಾರೆ.

ಅವರು ಹೇಳುವಂತೆ, ಯುದ್ಧವಾಗಲು, ಪ್ರಾಮುಖ್ಯವಾದೊಂದು ಕಾರಣವು ಸೂರ್ಯಚಲನೆಯಿಂದ! ಸೂರ್ಯ ಚಲನೆಯಿಂತೆ ಅದರ ಕೊನೆಯೂ ತಿಳಿದು ಬರುವುದೆಂದು ಗೊತ್ತಾಗಿದೆ ಮನುಷ್ಯರ ಭಾವನೆಗಳ ಮೇಲೆ ಸೂರ್ಯಚಲನೆಯು ಅದ್ಭುತ ಪರಿಣಾಮವನ್ನು ಹುಟ್ಟಿಸುವವಂತೆ! ೧೯೪೦ರ ಸೂರ್ಯಚಲನಾ ರೀತಿಯು ೧೯೧೮ರ ಚಲನೆಯಂತೆ ಇರುವುದರಿಂದ ಈ ವರ್ಷ ಯುದ್ಧವುಕೊನೆಗಾಣುವದಾಗಿ ಅವರು ಭವಿಷ್ಯ ಹೇಳುವರು

**ಒಬ್ಬನತಲೆಯ ಮೇಲ್ಗಡೆ ಇನ್ನೊಬ್ಬನ ಸವಾರಿ!**

**ಹೊಸತೊಂದು ಸೈಕಲ್ಲು**

ನ್ಯೂಯಾರ್ಕಿ ಟೆಲಿಗ್ರಾಫ್ ಮೆಸೆಂಜರ್ ಹುಡುಗನೊಬ್ಬನು ಇಬ್ಬರು ಕುಳಿತುಕೊಳ್ಳುವ ಹೊಸರೀತಿಯ ಸ್ಯಾಕಲೊಂದನ್ನು ತಯಾರಿಸಿರುವನು ಅದರಲ್ಲಿ ಮೊದಲು ಕುಳಿತುಕೊಂಡವನ ತಲೆ ಮೇಲೆ ಇನ್ನೊಬ್ಬನು ಕುಳಿತುಕೊಳ್ಳುವಂತೆ ಏರ್ಪಾಡು ಇದೆ.

**ಮೊದಲಿನದಕ್ಕಿಂತ ಇಮ್ಮಡಿ ದೊಡ್ಡ ವಿಮಾನ!**

**ಗಂಟೆಗೆ 600 ಮೈಲುಗಳ ವೇಗ!**

ಗಂಟೆಗೆ ೬೦೦ ಮೈಲುಗಳ ವೇಗ! ಏನು ವೇಗವಿರಬಹುದೆಂದು ಊಹಿಸಲು ಸಾಧ್ಯವೇ? ಇಂತಹ ಹೊಸ ವಿಮಾನದ ಯಂತ್ರವೊಂದನ್ನು ಅಮೇರಿಕದ ನೇಶನಲ್ ಎಡ್ವೈಸರಿ ಕಮಿಟಿಯ ಚೇರ್ಮಾನರಾದ ಡಾ| ಎಡ್ವರ್ಡ್ ಪಿ ವಾರ್ನರರು ಸಿದ್ಧಗೊಳಿಸಿರುವರು.

ಇಂದಿನ ಲೋಕದಲ್ಲಿರುವ ಎಲ್ಲಾ ವಿಮಾನಗಳಿಗಿಂತಲೂ ಮೂರು ಅಥವಾ ನಾಲ್ಕು ಪಾಲುಗಳಷ್ಟು ಇದು ದೊಡ್ಡದಿರುವುದು. ಇದುವರೆಗೆ ಕಟ್ಟಿದ ವಿಮಾನಗಳ ರಚನಾಕ್ರಮಕ್ಕಿಂತ ಅದ್ಭುತ ವಿಚಿತ್ರರೀತಿಯುದೂ ಇದಾಗಿದೆ. ಇದನ್ನು ಇದುವರೆಗೂ ರಚಿಸಲಿಲ್ಲ. ಆದರೆ ಅವರ ಯೋಜನೆಗಳೆಲ್ಲಾ ಪೂರ್ಣವಾಗಿವೆ.

ಇದು ಮೊದಲಿಗಿಂತ ಇಮ್ಮಡಿ ಭಾರವನ್ನು ಹೊತ್ತುಕೊಂಡು ಹಾರಾಡಬಲ್ಲುದು. ಆದರೂ ಹಿಂದಿನದಕ್ಕಿಂತ ಲಘುವಾಗಿರುವುದು. ಬೇಗನೇ ತಾಸಿಗೆ ೫೦೦ ಮೈಲು ವೇಗದ ಒಂದು ವಿಮಾನವನ್ನು ಪ್ರಯೋಗಕ್ಕೆ ಇಳಿಸುವರೆಂದು ತಿಳಿದು ಬಂದಿದೆ

**ದನಗಳ ಚಿಕಿತ್ಸೆಗೆ ವಿದ್ಯುತ್ ಪ್ರಯೋಗ**

ದನಗಳ ಹಲವು ತರದ ರೋಗಗಳನ್ನು ಗುಣಪಡಿಸಲು, ಒಂದು ಪ್ರತ್ಯೇಕ ರೀತಿಯ ವಿದ್ಯುತ್ ಪ್ರಯೋಗ ಯೋಜನೆಯನ್ನು ಇಂದು ಕೊಲಂಬಸಿನ ಚಿಯೋ ಸ್ಟೇಟ್ ಯುನಿವರ್ಸಿಟಿಯ ಪ್ರೊಫೆಸರರಾದ ಡಾ| ಇ ಡಿ ಹಿಲ್ಮೆತ್ ಎಂಬವರು ಕಂಡು ಹುಡುಕಿರುವರು

ಅದರಿಂದ ಬಿಡಲ್ಪಡುವ ವಿದ್ಯುತ್ ಸಂಚಾರವು ದನದ ನೋವಿರುವ ಸ್ಥಳಕ್ಕೆ ತಗಲುತ್ತದೆ ಇಬ್ಬದಿಗಳಲ್ಲಿಯೂ ಇಂತಹ ವಿದ್ಯುತ್ ಸಂಚಾರವಾಗಿ ಗುಣವಾಗುತ್ತಾ ಬರುವುದು

**ಗಿಳಿಯ ಜೀವವಿಮೆ**

ಚೆಸ್ಟರದ ಡ್ಯಾನ್ಲಿಸ್ ಎಂಬ ಸರ್ಜನದವನು ಆಟದಲ್ಲಿಯ ಒಂದು ಗಿಳಿಯನ್ನು ೧೦೦ ಪೌಂಡಿಗೆ ವಿಮಾ ಇಳಿಸಿದ್ದನು. ಅದು ಸಾಯಲು ವಿಮಾ ಕಂಪೆನಿಯವರು ವೆಟರ್ನರಿ ಸರ್ಜನರಿಂದ ಆ ಗಿಳಿಯ ಶವ ಪರೀಕ್ಷೆ ಮಾಡಿಸಿದರು ಪ್ಲೀಹದಿಂದ ಸತ್ತುದೆಂದು ಅವರು ಸರ್ಟಿಫಿಕೇಟು ಕೊಟ್ಟರು ಕಂಪೆನಿಯವರು ಆ ಮೇಲೆ ಅದಕ್ಕೆ ಸಲ್ಲತಕ್ಕ ಹಣ ಕೊಟ್ಟರು.

**ಸೂರ್ಯ ಮಂಡಲದ ಛಾಯಾ ಚಿತ್ರ**

ಸೂರ್ಯ ಮಂಡಲದ ಸುತ್ತಿರುವ ಜ್ಯೋತಿಯ ಚಕವನ್ನು ನೋಡಲು ಜ್ಯೋತಿಷ್ಯರು ವರ್ಷಗಳ ವರೆಗೆ ನೋಡುತ್ತಾ ಇರಬೇಕಾಗಿತ್ತು ಆದರೆ ಇಂದು ಒಂದು ಟೆಲ್ವಿಶಸಿನ ಕೆಮರದ ಮೂಲಕ ಛಾಯಾ ಚಿತ್ರ ತಗೆವ ಪ್ರಯೋಗವೊಂದನ್ನು ನ್ಯೂಯಾರ್ಕಿನ ಬೆಲ್ ಟೆಲಿಫೋನ್ ಲೆಬೊರೇಟರಿಯವರು ಕಂಡುಹುಡುಕಿದ್ದಾರೆ

ಇದರಿಂದ ವಿಜ್ಞಾನಲೋಕದಲ್ಲಿ ಹಲವು ರಹಸ್ಯಗಳು ಭೇದಿಸಲ್ಪಡುವವೆಂದು ವೈಜ್ಞಾನಿಕರು ಸಂತುಷ್ಟರಾಗಿದ್ದಾರೆ.

**೩೫ ವರ್ಷ ಪ್ರಾಯದಲ್ಲಿ ೧೫ ಮಕ್ಕಳ ತಾಯಿ!**

ದಕ್ಷಿಣ ಆಫ್ರಿಕದ ಓರೇಂಜ್ ಫ್ರೀಸ್ಟೇಟಿನಲ್ಲಿರುವ ಸ್ಮಾಚ್ ಎಂಬಾಕೆಯು ತನ್ನ ಮೂವತ್ತನೆಯ ವರ್ಷದ ಪ್ರಾಯದಲ್ಲಿ ಹದಿನೈದು ಮಕ್ಕಳ ತಾಯಿಯಾಗಿರುವಳು ಅದರೆಲ್ಲರೂ ಬದುಕಿರುವರು. ಅವಳಿಗೆ ೧೫ ವರ್ಷದಲ್ಲಿ ಮದುವೆಯಾಗಿತ್ತು ಮೊದಲನೆಯ ಸಲವೇ ಅವಳಿ ಮಕ್ಕಳನ್ನು ಹೆತ್ತಳು ಆ ಮೇಲೆ ಮೂರು ಸಲ ಒಂದೊಂದು ಮಕ್ಕಳನ್ನು ಹೆತ್ತಳು ಆ ಮೇಲೆ ಎರಡು ಸಲ ಅವಳಿಜವಳಿ ಮಕ್ಕಳನ್ನು ಹೆತ್ತಳು. ಆ ಮೇಲೆ ಆರು ಸಲ ಒಂದೊಂದು ಮಕ್ಕಳನ್ನು ಹೆತ್ತಳು ಮಕ್ಕಳನ್ನುಹೆರುವುದರಲ್ಲಿ ಅವಳು ಬಹಳ ಪರಾಕ್ರಮವನ್ನು ತೋರಿಸಿಬಿಟ್ಟಿದ್ದಾಳೆ

ಭಾರತ ಸ್ತ್ರೀಯರಿಗೆ ಉತ್ತಮೋತ್ತಮವಾದ ಟಾನಿಕ್

ಲೋಧ್ರ
ಲೋಧ್ರ
ಬಲವರ್ಧಕ ಔಷಧಗಳ ರಾಣಿ
ಸ್ತ್ರೀಯರ ಸಕಲ ಗರ್ಭಾಶಯರೋಗಗಳನ್ನು ಹೋಗಲಾಡಿಸಿ
ಸಂಪೂರ್ಣಾರೋಗ್ಯವನ್ನೂ, ಸುಖವನ್ನೂ ನೀಡುವ ಟಾನಿಕ್
ಕೇಸರಿ ಕುಟೀರಂ, ರಾಯಪೇಟೆ, ಮದರಾಸು

# ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

## ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಥ್ರೂಟಿಕೇಟುಗಳನ್ನು ಕೊಡುವ ವ್ಯವಸ್ಥೆಮಾಡಲಾಗಿದೆ

1 ಮಂಗಳೂರಿನಿಂದ— ಉಡ್ಪಿ, ಕುಂದಾಪುರ ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ (ಉಪ್ಪುಂದದಿಂದ ಮುಂದಕ್ಕೆ ಬೈಂದೂರು, ಕೊಲ್ಲೂರು ಭಟ್ಕಳ, ಹೊನ್ನಾವರ, ಕುಮುಟಾ, ಕಾರವಾರ ಮೊದಲಾದ ಸ್ಥಳಗಳಿಗೆ ಕನೆಕ್ಷನ್ ಸರ್ವಿಸುಗಳ ಏರ್ಪಾಡಿದೆ.)

2 ಮಂಗಳೂರಿನಿಂದ— ಬಂಟ್ವಾಳ, ಚಾರ್ಮಾಡಿ ಗಡಿಗಾಗಿ ಮುಡುಗೆರೆ, ಚಿಕ್ಕಮಗಳೂರು, ಕಡೂರು ವರೆಗೆ (ಬೊಂಬಾಯಿಗೆ ಹೋಗತಕ್ಕವರಿಗೆ ಕಡೂರಿನಲ್ಲಿ ಟ್ರೈನು ಕನೆಕ್ಷನು ಕೊಡುವ ವ್ಯವಸ್ಥೆ ಮಾಡಿರುತ್ತದೆ.)

3 ಮಂಗಳೂರಿನಿಂದ— ಪುತ್ತೂರು, ಸುಳ್ಯ, ಸಂಪಾಜೆ, ಮಡಿಕೇರಿ, ಮೈಸೂರು ಮತ್ತು ವೀರರಾಜೇಂದ್ರ ಪೇಟೆ ಇತ್ಯಾದಿ ಸ್ಥಳಗಳಿಗೆ (ಬೆಂಗಳೂರು, ತಿರುಪತಿ, ಮದ್ರಾಸು ವಗೈರೆ ಸ್ಥಳಗಳಿಗೆ ಹೋಗುವವರೆ ಮೈಸೂರಲ್ಲಿ ಟ್ರೈನು ಕನೆಕ್ಷನು ಸಿಗುತ್ತದೆ.)

4 ಮಂಗಳೂರಿನಿಂದ— ಉಪ್ಪಿನಂಗಡಿ, ಶಿರಾಡಿಗಡಿಯಾಗಿ ಸಕ್ಲೇಶಪುರ, ಹಾಸನ, ಬೇಲೂರು ಇತ್ಯಾದಿ ಸ್ಥಳಗಳಿಗೆ.

5 ಮಂಗಳೂರಿನಿಂದ— ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ತೀರ್ಥಹಳ್ಳಿ, ಶಿವಮೊಗ್ಗ ಹರಿಹರ ವರೆಗೆ.

6 ಕುಂದಾಪುರದಿಂದ— ಹಾಲಾಡಿ, ಶಂಕ್ರನಾರಾಯಣ, ಬಾಳೆಬರೆಗಾಗಿ ಕಳೂರು ಕಟ್ಟೆ, ಸಾಗರ, ಶಿವಮೊಗ್ಗಾ ವರೆಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ!

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:

***JOINT MANAGERS.***

**The Combined Booking Agency,**
**MANGALORE.**

**The Joint Booking Office,**
**KODIALBAIL.**

(Regd).

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನ್ಯೂಮೋನಿಯ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

(ಲ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

# HOUNSA

## ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್

ಉಪಯೋಗಿಸಿರಿ

**ಕೆ. ವೆಂಕಟೇಶ ಬಾಳಿಗ,**
**ಗೋಳಿಕಟ್ಟಾ ಬಜಾರ್, ಮಂಗಳೂರು.**

## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 30 ಕೋಲಿಗಳ ಡಬ್ಬಿ ರೂ. 1-4-0 (ಟಿ.ಪಿ.ಚಾರ್ಜು ಪ್ರತ್ಯೇಕ)

**ಟಿ. ಸಿ. ಎ. ಅಂಡ್ ಕೋ.,**
**ಆಯುರ್ವೇದಿಕ್ ಸದನ, ಪೆರಡೆ.**
**P. O. Peridepi (ತೊಕ್ಕೊಟ್ಟು.)**


## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ಕೆಂಪ ಗುಡ್ಡ ಮುಡಿಗೆ | 1—13—0 | 1—14—0 |
| ,, ದುಯಂ ,, ,, | | |
| ,, ಅವ್ವಲ್ ಸುಗ್ಗಿ ,, | | — |
| ,, ದುಯ್ಯಂ ,, ,, | | — |
| ಅಕ್ಕಿ ಅವ್ವಲ್ ಗುಡ್ಡ ,, ಹಳೆ | 4—14—0 | |
| ,, ದುಯಂ ,, ,, | 4—8—0 | |
| ,, ಅವ್ವಲ್ ಸುಗ್ಗಿ ,, | 4—8—0 | 4—8— |
| ,, ದುಯಂ ,, ,, | 4—4—0 | 4—6—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 58—8—0 |
| ,, ಸಿಪ್ಪೆ ಇದ್ದದು ,, | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 75—0— |
| ,, ಬಿಲ್ಲಾಪಸಂದಿ ,, | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಗುದ್ದ ಅಡಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 3—0—0 | 3—12—0 |
| ಸಕ್ಕರೆ ಬೆಲ್ಲ ಖಂಡಿಗೆ | 37—8—0 | 50—0—0 |
| ಕರಿಮೆಣಸು ಹಂಡ್ರೆಡ್ವೆಟ್ಟಿಗೆ | 19—0—0 | 20—8—0 |

# ಸ್ವದೇಶಾಭಿಮಾನಿ

ಸಂಪುಟ 34]    ತಾರೀಕು 3-3-1940    [ಸಂಚಿಕೆ

## The Bombay Life Assurance Company, Ltd.,

(Estd, 1908)

**COMPARE**

***Your Life Assurance with any other property you possess***

***What is its Guaranteed Value***

If you live—today—a few years more—when you are old?

If you die—to your family and dependants?

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | |
|---|---|
| Completed Business | Rs. 1,44,91,000 |
| Life Assurance Fund | Rs. 1,17,69,748 |
| Total Assets | Rs. 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

**Bombay Life Building,**

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES.

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

**which will tone the nervous system, build healthy tissues and enrich the blood.**

**Thus keeps you fresh and sprightly.**

**Bhuvanendra Products, Ltd.,**

**Katapady, S. Kanara.**

(BRANCH—KUMTA, N. KANARA.)

Stockist: **U. Panduranga Nayk, Car-Street Mangalore**

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಗೆ ಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಆವಶ್ಯವಿಲ್ಲ

**ಭುವನೇಂದ್ರ 'ಅಮೃತಪ್ರಾಶ'ವ**

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್**

**ಕಟಪಾಡಿ, ದ. ಕನ್ನಡ**

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟ, ಉತ್ತರ ಕನ್ನಡ.)

ಯು. ಪಾಂಡುರಂಗ ನಾಯ್ಕ್, ರಥಬೀದಿ, ಮಂಗಳೂರು.

Edited Printed & Published by A. S. Kamath at the Sharada Press, Car Street, Mangalore

ESTD. 1906

# ಸ್ವದೇಶಾಭಿಮಾನಿ

# SWADESHABHIMANI

ರಣಜಿತ್ ಕಂಪೆನಿಯವರು ತಯಾರಿಸಿದ
– ಸಂತ ತುಲಸೀದಾಸ್ ಎಂಬ ಚಿತ್ರ
ದಲ್ಲಿ ವಿಷ್ಣುಪಂತ ಪಗ್ನೀಸ್ ಇವರು

KANNADA ILLUSTRATED WEEKLY

ಧರ್ಮ ಮತ್ತು ಜೀವನ

# ಎಲ್ಲರು ಯಾಕೆ ಯೋಗಿಗಳಾಗುವದಿಲ್ಲ?

ಪರಮಾತ್ಮ ಸಾನ್ನಿಧ್ಯವನ್ನು ಪಡೆಯುಲಿಕ್ಕೆ ಯೋಗವು ಮುಖ್ಯ ಸಾಧನವಾಗಿರುವದು. ಬಹು ಮಂದಿ ವಿಜ್ಞಾನಿಗಳು ಜೀವನ್ಮುಕ್ತಿಯನ್ನು ಪಡೆಯುವದಕ್ಕೋಸ್ಕರವೂ ಶಾಶ್ವತ ಸುಖವನ್ನು ಅನುಭವಿಸುವದಕ್ಕಾಗಿಯೂ ಯೋಗದ ಅಭ್ಯಾಸವಮಾಡುತ್ತಾರೆ. ಆದರೆ ಸಾವಿರದಲ್ಲಿ ಎಲ್ಲಿಯಾದರೂ ಒಬ್ಬನು ಸಿದ್ಧಿಯನ್ನುಪಡೆಯುವನು. ಉಳಿದವರು ತಮ್ಮ ಪ್ರಯತ್ನಗಳಲ್ಲಿ ಅಸಫಲರಾಗಿ ಯೋಗವನ್ನೆ ಹಳಿಯುವರು ಎಲ್ಲರು ಯಾಕೆ ಯೋಗಿಗಳಾಗುವದಿಲ್ಲ?

ಯೋಗಿಗಳಾಗ ಬೇಕೆನ್ನುವವರೆಲ್ಲ ಯೋಗದ ಸ್ವರೂಪವನ್ನು ತಿಳಿದವರಾಗಿರುವದಿಲ್ಲ ಶಾಲೆ ಕೊಲೇಜುಗಳಲ್ಲಿ ಭೌತಿಕ ವಿಷಯಗಳನ್ನು ಕಲಿಯುವಂತೆ ಅದೂ ಆಶ್ರಮದಲ್ಲಿಯೋ ಮಂದಿರಗಳಲ್ಲಿಯೋ ಕಲಿಯ ತಕ್ಕ ವಿಷಯುವಾಗಿರುವದೆಂದು ಸಾಮಾನ್ಯ ಜನರು ಭಾವಿಸುತ್ತಾರೆ ಆದರೆ ಯೋಗವು ಕಲಿಯುವ ವಿಷಯುವಾಗಿರುವದಿಲ್ಲ ಅದು ಜೀವನದಲ್ಲಿ ಅನುಭವಕ್ಕೆ ಬರುವ ಸಂಗತಿಯಾಗಿದೆ

## ಶರೀರ ನಿಗ್ರಹವು ಯೋಗವಲ್ಲ

ಶರೀರವನ್ನು ನಿಗ್ರಹಿಸುವದರಿಂದ ಯೋಗ ಸಿದ್ಧಿಯಾಗುವದೆಂದು ಕೆಲವರು ತಿಳಿಯುತ್ತಾರೆ ಹಾಗೆ ಶರೀರದೊಂದಿಗೆ ಕುಸ್ತಿ ಆಡಲಿಕ್ಕೆ ಯೋಗವು ಕಸರತ್ತು ವಿದ್ಯೆ ಅಲ್ಲ ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ—'ಯಾರು ಕರ್ಮೇಂದ್ರಿಯಗಳಲ್ಲಿ ನಿಗ್ರಹಿಸಿ ಮನಸ್ಸಿನಲ್ಲಿಯೇ ವಿಷಯುಗಳನ್ನು ಚಿಂತಿಸುತ್ತಿರುತ್ತಾನೋ, ಅವನ ಯೋಗಿಯಲ್ಲ, ದೊಡ್ಡ ಡಾಂಬಿಕನು' ಎಂದಿದ್ದಾನೆ ಇಂಥ ಡಾಂಭಿಕರು ಲೋಕದಲ್ಲಿ ಬೆಳೆದಿರುವದರಿಂದಲೇ ಯೋಗಕ್ಕೆ ಕೆಟ್ಟ ಹೆಸರು ಬಂದಿದೆ ಯೋಗದ ಹೆಸರಿನಲ್ಲಿ ಅಯೋಗ್ಯ ಕೆಲಸಗಳು ಆಗುತ್ತವೆ ಕರ್ಮೇಂದ್ರಿಯಗಳ ನಿಗ್ರಹವನ್ನು ಶ್ರೀ ಕೃಷ್ಣನು ಮಾತ್ರವಲ್ಲ, ಭಗವಾನ್ ಬುದ್ಧ, ಗುರುನಾನಕ ಮೊದಲಾದವರೂ ನಿಷೇಧಿಸಿದ್ದಾರೆ

## ನಿಜಯೋಗವು ಯಾವುದು?

ಹಾಗಾದರೆ ಸತ್ಯ ಯೋಗಿಗಳು ಯಾರು? ನಿಜಯೋಗವು ಯಾವುದು? 'ಯಾರು ಇಂದ್ರಿಯಗಳನ್ನು ನಿಗ್ರಹಿಸಿ ಶಾಂತರೂ, ಶೀತೋಷ್ಣ ಸುಖದುಃಖ ಮಾನಾಪಮಾನಗಳನ್ನು ಸಮಾನವಾಗಿ ತಿಳಿಯುವವರೂ, ಆಗಿದ್ದಾರೋ ಅವರು ಯೋಗಿಗಳಾಗಿದ್ದಾರೆ. ಯೋಗಿಗಳು ಇಂದ್ರಿಯ ದಾಸರಾಗಿರುವದಿಲ್ಲ. ಪರಂತು ಇಂದ್ರಿಯಗಳು ಯೋಗಿಯ ಗುಲಾಮತನವನ್ನು ಕೈಕೊಂಡಿರುತ್ತವೆ. ಯೋಗಿಗೆ ಮಣ್ಣು ಮತ್ತು ಹೊನ್ನು ಒಂದೇ ಆಗಿರುತ್ತವೆ. ಅವನು ಯಾವಾಗಲೂ ಪ್ರಶಾಂತನು, ನಿಶ್ಚಲನು, ನಿರ್ಭಯನು, ಮತ್ತು ಬ್ರಹ್ಮಚಾರಿಯು ಆಗಿದ್ದಾನೆ. ಅವನ ಮನಸ್ಸು ದೃಢವೂ ಸ್ಥಿರವೂ ಆಗಿ ಅವನ ಅಧೀನವಾಗಿ ಇರುತ್ತದೆ ಈ ಪ್ರಕಾರವಾಗಿ ಇರುವದೇ ಯೋಗವು.

## ಅಸಫಲತೆಯ ಕಾರಣ

ಯೋಗಿಗಳಲ್ಲಿ ಬಹಳ ಮಂದಿ ಅಸಫಲರಾಗಿರುವದು ನಿಜ ಆದರೆ ಹೀಗೆ ಅಸಫಲರಾಗಿರುವವರೆಲ್ಲ ಯೋಗವನ್ನು ಕಲಿಯುವ ವಿಷಯವೆಂದು ತಿಳಿದವರಾಗಿ ಇರುತ್ತಾರೆ. ಶಾರೀರಿಕ ಮಾನಸಿಕ ಅಭ್ಯಾಸಗಳ ಬಲದಿಂದ ಯೋಗ ಸಿದ್ಧಿ ಆಗುವದಿಲ್ಲ ಪ್ರಾಣಾಯಾಮದಿಂದಲೂ ಯೋಗ ಸಿದ್ಧಿ ಆಗುವದಿಲ್ಲ ಆತ್ಮ ವಿಕಾಸವು ಮತ್ತು ಆತ್ಮ ಬಲವು ಹೇಗೆ ಅಭಿವೃದ್ಧಿ ಹೊಂದುತ್ತ ಇರುತ್ತದೋ ಹಾಗೆ ಯೋಗ ಸಿದ್ಧಿ ಆಗುತ್ತದೆ ಆತ್ಮವು ಎಲ್ಲ ಬಗೆಯ ಬಂಧನಗಳಿಂದ ಬಿಡುಗಡೆ ಹೊಂದಿ ಸ್ವತಂತ್ರವಾಗುವದೇ ಯೋಗದ ಫಲವಾಗಿದೆ ಆತ್ಮವು ಪರಮಾತ್ಮನೊಂದಿಗೆ ಕೂಡಿಕೊಳ್ಳುವದೇ ಯೋಗವು

ಒಬ್ಬನಿಗೆ ಯೋಗದ ಮಾರ್ಗವು ತಿಳಿಯದಿರುವದಾದರೆ, ಆದರಿಂದ ಅವನನ್ನು ಅಂಧನೆನ್ನ ಬಹುದೇ ಹೊರತು, ಮಾರ್ಗವೇ ಇರುವದಿಲ್ಲವೆನ್ನುವದು ಅವಿಚಾರದ ಹೆಗ್ಗುರುತಾಗಿದ ಸತತಪ್ರಯತ್ನ ಮತ್ತು ಶ್ರಮವಹಿಸಿ ಮಾಡುವದರಿಂದ ಪ್ರತಿಯೊಬ್ಬನಿಗೆ ಯೋಗ ಸಿದ್ಧಿ ಆಗಲೇ ಬೇಕು. ಅವಸರ ಪಟ್ಟರೆ ಯೋಗವು ಫಲಕೊಡುವದಿಲ್ಲ ಕ್ಷೀರವಿಷ ಎಷ್ಟಾದರೂ ನೀರು ಒಡಲಿಕ್ಕೆ ಸಮಯ ಬೇಕು ಯೋಗವಂತೂ ಲೌಕಿಕದಿಂದ ಭಿನ್ನವೇ ಆಗಿದೆ

## ಠಕ್ಕರನ್ನು ನೋಡಿ ಮೋಸಹೋಗಬಾರದು

ಭಾರತದಲ್ಲಿ ಯೋಗಿಗಳೆಂದು ಹೇಳಿಸಿಕೊಂಡು ಊರೂರುಗಳಲ್ಲಿ ತಿರುಗಾಡುತ್ತಿರುವ ಸಾವಿರಾರು ಮಂದಿ ಯೋಗಿಗಳೇ ಆಗಿರುವದಿಲ್ಲ ಅವರಲ್ಲಿ ಯಾರಿಗೂ ಪರಮಾತ್ಮ ಸಾಕ್ಷಾತ್ಕಾರವಾಗಿರುವದಿಲ್ಲ ಜೀವನಕ್ಕೆ ಭೌತಿಕ ವಿಷಯಗಳು ಅಗತ್ಯವಲ್ಲವೆನ್ನುವದೇ ಅವರ ಮಾತಿನ ಮುಖ್ಯಸಾರವಾಗಿರುತ್ತದೆ ಆದರೆ ಭೌತಿಕ ವಿಷಯಗಳನ್ನು ತ್ಯಜಿಸಿದ ಮಾತ್ರದಿಂದ ಯಾರೂ ಯೋಗಿಗಳಾಗುವದಿಲ್ಲ ಯೋಗವು ಶರೀರ ಅಥವಾ ಮನಸ್ಸಿಗೆ ಸಂಬಂಧಪಟ್ಟದಲ್ಲ ಅದು ಹೃದಯಕ್ಕೆ ಸಂಬಂಧಪಟ್ಟದಾಗಿದೆ ಆದುದರಿಂದ ಕಪಟ ಯೋಗಿಗಳನ್ನು ನೋಡಿ ನಿರಾಶರಾಗದೆ ಸಾಧಕರು ಶಾಂತಭಾವದಿಂದ ಯೋಗಾಭ್ಯಾಸ ಮಾಡುತ್ತ ಬಂದರಾದರೆ ಅವರು ಜೀವನವನ್ನು ಸಫಲಮಾಡಿಕೊಳ್ಳುವದರಲ್ಲಿ ಸಂದೇಹವಿರುವದಿಲ್ಲ.

'ಓವಲ್ ಟಿನ್'
ನಿಮ್ಮ ತ್ರಾಣವನ್ನೂ
ಕ್ಷಸುವನ್ನೂ ರಚಿಸಲಿ'

ಉತ್ತಮ ಕಸ ವುಳ್ಳ ಆರೋಗ್ಯವನ್ನು ಹೊಂದಬೇಕೆಂದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ ಓವಲ್ಟಿನ ಉಂಟುಮಾಡುವುದು

ಬಹಳ ರುಚಿಕರವಾದುದಲ್ಲದೆ ಓವಲ್ಟಿನ್ ದೇಹದ ಆರೋಗ್ಯವನ್ನು ಕಾಪಾಡಿ ಕಸವನ್ನು ವರ್ಧಿಸಲು ಬೇಕಾದ ... ಗಳೆಲ್ಲವೂ ಇರುವವು ... ಓವಲ್ಟಿನ್ ... ಇದು ... ವಾದ ... ಸಂಪೂರ್ಣವಾದ ಆಹಾರವಾಗಿರುತ್ತದೆ ಇದು ... ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟದೆ—ಮಾಗಿ ನೆನೆಹಾಕಿದ ಬಾರ್ಲಿ ದನದ ಹಸಿ ಹಾಲು ಮತ್ತು ಅವಾಗ್ಯದ ನೈಸರ್ಗಿಕ ಫಾಸ್ಫೇಟ್ ... ಇತರ ... ಯಗಳನ್ನು ದೂರಮಾಡಿರಿ

'ಓವಲ್‌ಟಿನ್'

OVALTINE ...

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ

ವಿತರಣಕಾರರು:

ಜೇಮ್ಸ್ ರೈಟ್ ಲಿಮಿಟೆಡ್,

149 ಬ್ರೋಡವೇ ಮದ್ರಾಸು, ಕಲ್ಕತ್ತಾ, ಬೊಂಬಾಯಿ, ಕರಾಚಿ

'ಓವಲ್ಟಿನ್' ಬಿಸ್ಕುಟುಗಳು:

ರುಚಿಕರ, ಜೀರ್ಣಕರ ಹಾಗು ಪೋಷಣಯುಕ್ತ ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕುಟುಗಳು ಇವುಗಳಲ್ಲಿ ಅಮೂಲ್ಯ ಗುಣದ 'ಓವಲ್ಟಿನ್' ಸೇರಿರುವುದು 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ

OV170/10

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

8—8—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೮—೮—೧೯೪೦

# ★ ಶಾಸನಭಂಗ ಆಂದೋಲನಕ್ಕೆ ಕಾಂಗ್ರೆಸು ಸಿದ್ಧವಾಗಿದೆ. ★

## ವರ್ಕಿಂಗ್ ಕಮಿಟಿಯ ಗಂಭೀರ ನಿರ್ಧಾರ

ವಾರ್ಧಾದಲ್ಲಿ ಕಳೆದ ತಾರೀಕು ೨೮ ರಂದು ಸೇರಿದ ಕಾಂಗ್ರೆಸ್ಸು ವರ್ಕಿಂಗ್ ಕಮಿಟಿಯು ಮೂರು ದಿನಗಳ ತನಕ ಚರ್ಚೆ ನಡೆಸಿ, ಹಿಂದೀಯ ರಾಜಕೀಯ ಪ್ರಶ್ನೆಯ ಕುರಿತು ಈ ಸಾರಾಂಶದ ನಿರ್ಣಯವೊಂದನ್ನು ಮಂಜೂರು ಮಾಡಿದೆ

'ಹಿಂದೀಯರ ಅಭಿಪ್ರಾಯವನ್ನು ಕೇಳದ ಬ್ರಿಟಿಷ ಸರಕಾರವು ಹಿಂದೂಸ್ಥಾನವು ಜರ್ಮನಿಯೊಡನೆ ಯುದ್ಧ ಸಾರಿದೆಯೆಂದು ಹೊರಡಿಸಿದ ಪ್ರಸಿದ್ಧ ಪತ್ರಿಕೆ ಮತ್ತು ಈ ಯುದ್ಧಕ್ಕಾಗಿ ಹಿಂದೀಯ ಜನರನ್ನೂ ಧನವನ್ನೂ ಬ್ರಿಟಿಷರು ದುರುಪಯೋಗಿಸುವ ಅವರ ಕಾರ್ಯಕ್ರಮಗಳು ಹಿಂದೀಯರಿಗೆ ಅವಮಾನವೆಂದೂ, ಆತ್ಮಗೌರವವಿರುವ ಮತ್ತು ಸ್ವಾತಂತ್ರ್ಯಪ್ರಿಯರಾದ ಯಾರೂ ಈ ಸ್ಥಿತಿಯನ್ನು ಒಪ್ಪಲಾರರು ಮತ್ತು ಸಹಿಸಲಾರರೆಂದೂ ಈ ಸಮಿತಿಯು ಅಭಿಪ್ರಾಯಪಡುತ್ತದೆ

ಬ್ರಿಟಿಷ ಸರಕಾರವು ಹಿಂದೂಸ್ಥಾನದ ಸಂಬಂಧ ಕಳೆದ ಕೆಲವು ದಿನಗಳಿಂದ ಹೊರಡಿಸುತ್ತಿರುವ ಹೇಳಿಕೆಗಳಿಂದ ಈಗಿನ ಯುದ್ಧವನ್ನು ಬ್ರಿಟಿಷರು ಪ್ರಾಮುಖ್ಯವಾಗಿ ಅವರ ಸಾಮ್ರಾಜ್ಯಶಾಹಿಯ ಉಪಯೋಗಕ್ಕಾಗಿ ಮುಂದುವರಿಸುತ್ತಿದ್ದಾರೆಂದು ಸ್ಪಷ್ಟ ಮಾಡುತ್ತದೆ

ಬ್ರಿಟಿಷ್ ಸಾಮ್ರಾಜ್ಯವು ಹಿಂದೀಯರನ್ನೂ, ಏಸಿಯಾಖಂಡದ ಮತ್ತು ಆಫ್ರಿಕದ ಇತರ ಜನರನ್ನೂ ದುರುಪಯೋಗ ಮಾಡಿ ವ್ಯವಸ್ಥಾಪಿಸಿಕೊಂಡಿದೆ ಪರಿಸ್ಥಿತಿಯು ಹೀಗಿರುವಾಗ ಕಾಂಗ್ರೆಸ್ಸು ಪ್ರತ್ಯಕ್ಷವಾಗಿ, ವ, ಅಪ್ರತ್ಯಕ್ಷವಾಗಿ ಈ ಯುದ್ಧದಲ್ಲಿ ಭಾಗವಹಿಸಕೂಡದೆಂದು ಸ್ಪಷ್ಟ ಮಾಡಿದೆ. ಹಿಂದೀಯರು ಈ ಯುದ್ಧದಲ್ಲಿ ಭಾಗವಹಿಸಿದರೆ ಅವರನ್ನು ದುರುಪಯೋಗಿಸುವ ಸಾಮ್ರಾಜ್ಯಶಾಹಿಯನ್ನು ಮುಂದರಿಸಿದಂತಾಗಿದೆ.

'ಆದ್ದರಿಂದ ಬ್ರಿಟಿಷರಿಗಾಗಿ ಹಿಂದೀಯ ಸೈನಿಕರನ್ನು ಯುದ್ಧಮಾಡಿಸುವ ಬ್ರಿಟಿಷ್ ಧೋರಣೆಯನ್ನು ಕಾಂಗ್ರೆಸ್ಸು ಬಲವಾಗಿ ವಿರೋಧಿಸುತ್ತದೆ. ಹಿಂದೀಯರ ತನು ಮತ್ತು ಧನವನ್ನು ಈ ಯುದ್ಧಕ್ಕಾಗಿ ಬ್ರಿಟಿಷರು ಉಪಯೋಗಿಸುವ ಪ್ರಯತ್ನವನ್ನು ಕಾಂಗ್ರೆಸ್ ಬಲವಾಗಿ ನಿಷೇಧಿಸುತ್ತದೆ.

ಕಾಂಗ್ರೆಸ್ಸು ಸಂಸ್ಥೆಯಲ್ಲಿರುವವರೂ, ಕಾಂಗ್ರೆಸ್ಸು ಧೋರಣೆಯಲ್ಲಿ ಭರವಸೆಯಿರುವವರೂ ಈ ಯುದ್ಧದಲ್ಲಿ ಬ್ರಿಟಿಷರಿಗೆ ಯಾವ ವಿಧದಲ್ಲಿಯೂ ಸಹಾಯ ಮಾಡಲಾರರೆಂದು ತಿಳಿಸುತ್ತದೆ

ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕಿದೆಯೆಂದೂ, ಬೇರೆ ಯಾವ ವಿಧದ ಸ್ವಾತಂತ್ರ್ಯ, ವ, ಸುಧಾರಣೆಗಳಿಂದಲೂ ಹಿಂದೀಯರು ತೃಪ್ತರಾಗಲಿಕ್ಕಿಲ್ಲವೆಂದೂ, ಕಾಂಗ್ರೆಸ್ಸು ಪುನಃ ಒತ್ತಿ ಹೇಳುತ್ತದೆ ಸಾಮ್ರಾಜ್ಯಶಾಹಿಯ ನೆರಳಲ್ಲಿ ಸ್ವಾತಂತ್ರ್ಯವನ್ನು ಅನುಭವಿಸುವುದು ಹಿಂದೀ ರಾಷ್ಟ್ರಕ್ಕೆ ಅಸಾಧ್ಯವಿದೆ ಇಂಥ ಸ್ಥಿತಿಯಿಂದ ಪುರಾತನ ವೈಭವದಿಂದ ಮೆರೆಯುತ್ತಿರುವ ಹಿಂದೂಸ್ಥಾನದಂಥ ದೊಡ್ಡ ರಾಷ್ಟ್ರದ ಗೌರವವನ್ನು ಕಾಪಾಡಿಕೊಳ್ಳುವುದು ಸಾಧ್ಯವಿಲ್ಲ ಹಿಂದೀಯರ ರಾಜಕೀಯ ಸ್ಥಿತಿಯನ್ನು ಹಿಂದೀಯರೇ ನಿರ್ಧಾರ ಮಾಡಿ ರಚಿಸಬೇಕಿದೆ ಲೋಕದ ಇತರ ರಾಷ್ಟ್ರಗಳೊಡನೆ ನಮ್ಮ ಸಂಬಂಧ ಹೇಗಿರಬೇಕೆಂದು ಹಿಂದೀಯರೇ ನಿರ್ಧಾರ ಮಾಡಬೇಕಿದೆ ಇದಕ್ಕಾಗಿ ಹಿಂದೀಯರಿಂದ ಪ್ರಾಯಸ್ಕರ ಮತದಾನದಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಒಂದು ರಾಷ್ಟ್ರಘಟನಾ ಸಮಿತಿಯು ರಚಿತವಾಗಬೇಕಾಗಿದೆ

'ಜಾತೀಯ ಪ್ರಶ್ನೆಯನ್ನು ಪ್ರತಿಯೊಂದು ಪಕ್ಷಕ್ಕೂ ನ್ಯಾಯವಾಗುವ ರೀತಿಯಲ್ಲಿ ಬಗೆಹರಿಸಲು ಕಾಂಗ್ರೆಸ್ಸು ಸಿದ್ಧವಿದ್ದಂತೆ ಮುಂದಕ್ಕೂ ಸಿದ್ಧವಿದೆ ಯೋಗ್ಯವಾದ ಒಂದು ಒಪ್ಪಂದ ಮಾಡಲು ರಾಷ್ಟ್ರಘಟನಾ ಸಮಿತಿಯಿಂದ ಮಾತ್ರ ಸಾಧ್ಯವೆಂದು ಕಾಂಗ್ರೆಸ್ಸಿನ ಅಭಿಪ್ರಾಯವಾಗಿದೆ ಹಿಂದೀಯ ರಾಜಕೀಯ ಯೋಜನೆಯು ಸ್ವಾತಂತ್ರ್ಯ, ಪ್ರಜಾಸತ್ತೆ ಮತ್ತು ರಾಷ್ಟ್ರೀಯ ಒಗ್ಗಟ್ಟು—ಈ ತತ್ವಗಳನ್ನು ಹೊಂದಿರತಕ್ಕದ್ದು ಹಿಂದೀಯ ರಾಷ್ಟ್ರವನ್ನು ವಿಂಗಡಿಸಿ, ಅದನ್ನು ವಿಭಾಗಮಾಡಲು ನಡೆಯುವ ಪ್ರಯತ್ನಗಳನ್ನು ಕಾಂಗ್ರೆಸ್ಸು ನಿರಾಕರಿಸುತ್ತದೆ

ಪ್ರತಿಯೊಂದು ಪಕ್ಷದ ವ್ಯಕ್ತಿಯ ಸಂಪೂರ್ಣ ಅಭಿವೃದ್ಧಿ ಬೆಳವಣಿಗೆಗಳಿಗೆ ಅವಕಾಶವಿರುವ ಒಂದು ಯೋಜನೆ ಬೇಕೆಂಬುದೇ ಕಾಂಗ್ರೆಸ್ಸಿನ ಗುರಿಯಾಗಿದೆ

ಹಿಂದೀಯ ಸ್ವಾತಂತ್ರ್ಯಕ್ಕೆ ಹಿಂದೀ ಆಶ್ರಿತ ಅರಸರೂ, ಪರಕೀಯ ಬಂಡವಾಳಗಾರರ ಹಕ್ಕು ಬಾಧ್ಯತೆಗಳೂ ಅಡ್ಡಗಾಲು ಹಾಕುವುದನ್ನು ಕಾಂಗ್ರೆಸ್ಸು ಸಹಿಸಲಾರದು ಹಿಂದೂಸ್ಥಾನದ ಸಾರ್ವಭೌಮ ಅಧಿಕಾರವು ಹಿಂದೀ ಮಹಾಜನರದ್ದಾಗಬೇಕು ಆಶ್ರಿತ ಅರಸರಿಂದ ಹಿಂದೀಯ ರಾಜಕೀಯ ಯೋಜನೆಯ ಕುರಿತು ಬಂದಿರುವ ತೊಂದರೆಗಳು ಬ್ರಿಟಿಷರ ಕಲ್ಪನೆಯೆಂದು ಕಾಂಗ್ರೆಸಿನ ಅಭಿಪ್ರಾಯವಾಗಿದೆ ಪರಕೀಯರ ರಾಜ್ಯಭಾರವು ತಪ್ಪಿ, ಹಿಂದೀಯ ರಾಷ್ಟ್ರವು ಸ್ವಾತಂತ್ರ್ಯವಾಗಿದ್ದೆ ಎಂದು ಸ್ಪಷ್ಟವಾಗುವ ತನಕ ಈ ಆತಂಕಗಳು ಕಂಡುಬರುವುದು.

'ಹಿಂದೀಯರು ಬ್ರಿಟಿಷರ ಯುದ್ಧದಲ್ಲಿ ಭಾಗವಹಿಸಲಾರರೆಂದು ಸ್ಪಷ್ಟಮಾಡಿ, ಹಿಂದೀಯರ ಸ್ವಾತಂತ್ರ್ಯಸಂಪಾದನೆಯೇ ಕಾಂಗ್ರೆಸ್ಸಿನ ಗುರಿ ಎಂದು ಲೋಕಕ್ಕೆ ಸಿದ್ಧಾಂತ ತೋರಿಸಲು ಕಾಂಗ್ರೆಸು ಬಹುಮತವಿದ್ದ ಪ್ರಾಂತ್ಯಗಳಿಂದ ಮಂತ್ರಿಗಳು ರಾಜಿನಾಮೆ ಕೊಟ್ಟದ್ದಾಗಿದೆ. ಇದರ ಮುಂದಿನ ಹೆಜ್ಜೆಯು 'ಕಾನೂನು ಭಂಗ ಚಳವಳ ಹೂಡುವುದಾಗಿದೆ. ರಾಷ್ಟ್ರವು ಅದಕ್ಕೆ ಸಿದ್ಧವಿದೆ ಎಂದು ತಿಳಿದ ಕೂಡಲೆ ಕಾಂಗ್ರೆಸ್ಸು ತಡಮಾಡದೆ ಧೈರ್ಯದಿಂದ ಕಾನೂನುಭಂಗ ಚಳವಳವನ್ನು ಹೂಡುವುದು, ಇಲ್ಲವೆ, ಕಾಂಗ್ರೆಸ್ಸು ಇಂಥಾ ಚಳವಳ ಹೂಡಲೇಬೇಕೆಂಬ ಪರಿಸ್ಥಿತಿ ಹುಟ್ಟಿದರೆ ಆ ಕೂಡಲೇ ಚಳವಳವನ್ನು ಹೂಡಲಾಗುವುದು.'

'ಜಾತಿ, ಮತ, ಪಂಗಡಗಳೆಂಬ ಭೇದಭಾವವಿಲ್ಲದ ಹಿಂದೀ ರಾಷ್ಟ್ರದ ಮನೋಭಾವವನ್ನು ಕಾಂಗ್ರೆಸ್ಸು ಪ್ರತಿಬಿಂಬಿಸುತ್ತದೆ ಹಿಂದೀ ರಾಷ್ಟ್ರದ ಸ್ವಾತಂತ್ರ್ಯ ಹೋರಾಟವೆಂದರೆ ಹಿಂದೀ ಜನಾಂಗದ ಸ್ವಾತಂತ್ರ್ಯಕ್ಕೆ ಹೋರಾಟವಾಗಿದೆ. ಆದ್ದರಿಂದ ಪ್ರತಿಯೊಬ್ಬ ಹಿಂದೀಯನೂ, ಜಾತಿ, ಮತ, ಪಕ್ಷಗಳೆಂಬ ಭಿನ್ನಭೇದವಿಲ್ಲದೆ ಈ ಹೋರಾಟದಲ್ಲಿ ಭಾಗವಹಿಸುವನೆಂದು ಕಾಂಗ್ರೆಸ್ಸು ನಂಬಿದೆ.

THE

Canara Banking Corporation Ltd.,

(INCORPORATED IN BRITISH INDIA)

Estd: 1906

**THREE YEAR'S CASH CERTIFICATES**

bearing interest at 4% p. a.

in denominations of

RS.50/-,100/-,500/-,1,000/-&5,000/-

are now issued at all our Branches.

*For particulars call at or write to*

**Any of our nearest Branches**

ಸ್ವದೇಶಾಭಿಮಾನಿ

ತಾರೀಕು 8—3—1940

# ಭಾರತ ಸರಕಾರದ ಆಯುವ್ಯಯ

ಭಾರತ ಕೇಂದ್ರ ಸರಕಾರದ ಆರ್ಥಿಕ ಸಚಿವರಾದ ಸರ್ ಜರೇಮಿ ರೈಸ್‌ಮೇನರು ಮೊನ್ನೆ ಡಿಲ್ಲಿಯಲ್ಲಿ ಜರಗಿದ ಶಾಸನ ಸಭೆಯ ಮುಂದೆ ಬರುವ ವರ್ಷದ ಆಯುವ್ಯಯದ ಅಂದಾಜು ಪಟ್ಟಿಯನ್ನು ಒಪ್ಪಿಸಿದರು. ೧೯೩೯-೪೦ರಲ್ಲಿ ೮೭ ಕೋಟಿ ರೂಪಾಯಿಗಳ ಆದಾಯವಾಗಿ, ಅದರಲ್ಲಿ ೮೬ ಕೋಟಿ ರೂಪಾಯಿ ವೆಚ್ಚವಾಗಲು ೯೧ ಲಕ್ಷ ರೂಪಾಯಿಯಷ್ಟು ಉಳಿತಾಯವಾಯಿತು. ಆದರೆ ಹೊಸ ವರ್ಷದಲ್ಲಿ ೮೫ ಕೋಟಿ ರೂಪಾಯಿಗಳ ಆದಾಯವಾಗುವುದೆಂದೂ, ೯೨ ಕೋಟಿ ರೂಪಾಯಿಗಳ ವೆಚ್ಚವಾಗುವುದೆಂದೂ ಏಳು ಕೋಟಿ ರೂಪಾಯಿಗಳಷ್ಟು ಹಣ ಸಾಲದೆ ಬರುವುದೆಂದೂ ಅಂದಾಜು ಮಾಡಿರುತ್ತಾರೆ. ಇಂದಿನ ಸುಂಕವೇ ನೊಡಲಾದವುಗಳ ಪರಿಸ್ಥಿತಿಯನ್ನು ಅವಲೋಕಿಸಿ ಲೆಕ್ಕಮಾಡಿ ನೋಡಿದರೂ ೭೧ ಲಕ್ಷ ರೂಪಾಯಿಗಳಷ್ಟು ಸಾಲದೆ ಬರುವುದೆಂದು ತಿಳಿದಿದೆ.

## ಸೈನ್ಯದ ಖರ್ಚು

ಇಂದು ೮೫ ಕೋಟಿ ರೂಪಾಯಿಯ ಈ ಆದಾಯದಲ್ಲಿ ೫೪ ಕೋಟಿಯಷ್ಟು ಕೇವಲ ಸೈನ್ಯಕ್ಕಾಗಿಯೇ ವೆಚ್ಚವಾಗುತ್ತಿರುವುದು ನ್ಯಾಯ ಸಮ್ಮತವಲ್ಲವೆಂದು ಹಲವು ವರ್ಷಗಳಿಂದ ಭಾರತೀಯರು ಚರ್ಚಿಸುತ್ತಿರಲು ಆ ವೆಚ್ಚವನ್ನು ಹಿಂದಿಗಿಂತಲೂ ಹೆಚ್ಚಿಸುವುದರಲ್ಲಿ ಯಾವ ಅರ್ಥವೂ ಇರಲಾರದು. ಹೋದ ವರ್ಷಕ್ಕಿಂತಲೂ ಎಂಟೂವರೆ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಈ ವರ್ಷ ತೆರುವುದರಿಂದ ಭಾರತೀಯರ ಹಿತಕ್ಕೆ ಹಾನಿಯಾಗಿದೆ. ಶೇಕಡಾ ೬೦ರಷ್ಟು ಆದಾಯವನ್ನೇ ಸೈನ್ಯಕ್ಕಾಗಿಯೇ ಖರ್ಚು ಮಾಡುವುದರಿಂದ ರಾಷ್ಟ್ರದ ಶಕ್ತಿಯನ್ನು ಕುಗ್ಗಿಸಿದಂತಾಗುತ್ತದೆ. ಅದು ಮಾತ್ರವಲ್ಲದೆ ವೆಚ್ಚಮಾಡುವ ಹಣದಲ್ಲಿ ಈ ೫೪ ಕೋಟಿ ರೂಪಾಯಿಯಲ್ಲಿ ಸೇಕಡಾ ೯೦ರಷ್ಟು ಪರಕೀಯರಿಗೇ ಸಲ್ಲುವುದು ರಾಷ್ಟ್ರಘಾತವಾಗಿದೆ. ನಮ್ಮ ರಾಷ್ಟ್ರವು ಪರಕೀಯ ರಾಜ್ಯಭಾರದಿಂದ ನರಳುತ್ತಿರುವಲ್ಲಿ ಆಗುವ ಅನ್ಯಾಯದ ಪರಮಾವಧಿ ಸಂಕಷ್ಟವು ಇದರಿಂದ ವ್ಯಕ್ತವಾಗುತ್ತದೆ. ಒಟ್ಟು ಆದಾಯದ ಸೇಕಡಾ ೬೦ರಷ್ಟು ಸೈನ್ಯಕ್ಕೂ, ಉಳಿದ ಅಧಿಕ ಹಣವು ಸರಕಾರೀ ನೌಕರರ ಸಂಬಳಕ್ಕೂ ಹೋದರೆ ದೇಶವು ಹೇಗೆ ಉದ್ಧಾರವಾಗಬೇಕೋ ತಿಳಿಯಲಾರದು.

## ಹೊಸ ತೆರಿಗೆಗಳ ಗದಾಪ್ರಹಾರ

ಮುಂದಿನ ವರ್ಷ ಒದಗುವ ಏಳು ಕೋಟಿ ರೂಪಾಯಿಗಳ ನಷ್ಟವನ್ನು ಹೊಸ ತೆರಿಗೆಗಳಿಂದ ವಸೂಲು ಮಾಡುವ ಸೂಚನೆಯನ್ನು ಆರ್ಥಿಕ ಸಚಿವರು ಸೂಚಿಸಿದ್ದಾರೆ. ಈಗ ಎರಡು ರೂಪಾಯಿಗಳಿರುವ ಸಕ್ಕರೆ ಮತ್ತು ಅಬಕಾರಿ ಸುಂಕವನ್ನು ಮೂರು ರೂಪಾಯಿಗಳಿಗೆ ಏರಿಸುವುದೆಂದೂ, ಒಂದು ಗೆಲನ್ ಪೆಟ್ರೋಲಿಗೆ ಇದುವರೆಗಿದ್ದ ಹತ್ತಾಣೆಯನ್ನು ಹದಿನೆರಡಾಣೆಗೆ ಏರಿಸುವುದೆಂದೂ ತೀರ್ಮಾನಿಸಿದ್ದಾರೆ. ಅಧಿಕ ಲಾಭದ ಮೇಲೆ ಹೋರಿಸುವ ಹೊಸ ಕಂದಾಯದಿಂದ ಮೂರು ಕೋಟಿ ರೂಪಾಯಿಗಳ ಆದಾಯವಿದೆಯೆಂದು ಊಹಿಸಲಾಗಿದೆ. ಸಕ್ಕರೆಯಿಂದ ಎರಡು ಕೋಟಿ ರೂಪಾಯಿಗಳೂ, ಪೆಟ್ರೋಲಿನಿಂದ ಒಂದುವರೆ ಕೋಟಿ ರೂಪಾಯಿಗಳೂ ಆದಾಯವಾಗಿ ಒಟ್ಟು ಆದಾಯವು ೯೨೪ ಕೋಟಿ ರೂಪಾಯಿಯೂ ವೆಚ್ಚವು ೯೨೩ ಕೋಟಿ ರೂಪಾಯಿಗಳಾಗಿಯೂ ಅಂದಾಜು ಮಾಡಲಾಗಿದೆ. ಆ ಲೆಕ್ಕದಿಂದ ಐದು ಲಕ್ಷ ರೂಪಾಯಿಗಳ ಉಳಿತಾಯವಾಗುವುದು. ಅಧಿಕ ಆದಾಯದ ಮೇಲೆ ತೆರಿಗೆ ಹೊರಿಸುವುದು ನ್ಯಾಯವಾದುದಾದರೂ, ರಾಷ್ಟ್ರದ ಉದ್ಯೋಗಗಳನ್ನು ಅಭಿವೃದ್ಧಿಗೊಳಿಸುವಲ್ಲಿ ಅದರಿಂದ ಆತಂಕವಾಗದಂತೆ ನೋಡಿಕೊಳ್ಳುವುದು ಆಗತ್ಯವಾಗಿದೆ. ಸಕ್ಕರೆಯ ಮೇಲಿನ ತೆರಿಗೆಯಿಂದ ಬಡಜನರ ಹೊಟ್ಟೆಗೇ ಅಪ್ರತ್ಯಕ್ಷವಾಗಿ ಸುಂಕವೇರಿಸಿದಂತಾಗುವುದು. ಪೆಟ್ರೋಲಿನ ಸುಂಕದಿಂದ ಇಂದು ಸಾಮಾನ್ಯ ಜೀವಂತ ಸ್ಥಿತಿಯಲ್ಲಿದ್ದ ಮೋಟರುಗಳ ವ್ಯವಹಾರಕ್ಕೆ ತೀವ್ರ ಗದಾಪ್ರಹಾರವಾಗುವುದು.

## ಭಾರತದ ಧುರೀಣರ ಸಮ್ಮತಿಯಿಲ್ಲ

ಹೀಗೆ ಕೇಂದ್ರ ಸರಕಾರದವರು ತಮ್ಮದೇ ಅಭಿಪ್ರಾಯವನ್ನು ಜನತೆಯ ಮೇಲೆ ಹೇರ ತೊಡಗುವುದು ಸರಿಯಲ್ಲ. ಪ್ರಜಾ ಸಮ್ಮತಿಯಿಂದ ಆರಿಸಿ ಬಂದ ಪ್ರಾಂತಿಕ ಸರಕಾರಗಳಲ್ಲಿರುವ ಕಾಂಗ್ರೆಸು ಮಂತ್ರಿಗಳು ರಾಜಿನಾಮೆ ಕೊಟ್ಟಿದ್ದಾರೆ. ಅವರ ಅನುಮತಿಯನ್ನು ಕೇಳುವ ಹಾಗಿಲ್ಲ. ಇಂದಿನ ಯುದ್ಧದಂತಹ ಕಾಲದಲ್ಲಿ ಪ್ರಾಂತಿಕ ಮಂತ್ರಿಗಳ ಹಾಗೂ ಜನತೆಯ ವಿಶ್ವಾಸವುಳ್ಳ ಗಾಂಧಿಜಿಯಂತಹ ಧುರೀಣರನ್ನು ತೃಪ್ತಿಪಡಿಸಿದ್ದರೆ, ಈಗಾಗಲೇ ಬಡತನ, ರಾಜಕೀಯ ಅತೃಪ್ತಿಗಳಿಂದ ನೊಂದಿರುವ ಸಾಮಾನ್ಯ ಜನರಿಂದ ತೆರಿಗೆ ವಸೂಲು ಮಾಡುವ ಕಾನೂನು ಮಾಡುವ ಬದಲಾಗಿ, ಭಾರತದ ಸಿರಿವಂತರೇ ಯುದ್ಧದ ಸಲುವಾಗಿ ಉದಾರದಾನ ಮಾಡುತ್ತಿದ್ದರು. ಅದರಿಂದ ಇಂದಿನ ತೆರಿಗೆಗಿಂತ ಬಹು ಪಾಲು ಹಣವು ಅನಾಯಾಸವಾಗಿ ಬರುತ್ತಿತ್ತಲ್ಲದೆ ಬಡಜನರನ್ನು ತೆರಿಗೆಯ ಮೂಲಕ ನೋಯಿಸುವ ಅಗತ್ಯವೇ ಬೀಳುತ್ತಿರಲಿಲ್ಲ. ಹಾಗೆ ಮಾಡದೆ ಇರುವುದು ಬ್ರಿಟಿಷ್ ಸರಕಾರದ ಅದೂರದರ್ಶಿತ್ವವಾಗಿದೆ. ಜನತೆಯ ವಿಶ್ವಾಸಯುಕ್ತ ಧುರೀಣರಾದ ಗಾಂಧಿಜಿಯಂತಹವರ ಮನವೊಲಿಸಿ, ಭಾರತಹಿತವನ್ನು ಬಗೆವ ನಿರ್ಧಾರವನ್ನು ಸರಕಾರವು ಪ್ರಕಟಿಸದಿದ್ದಲ್ಲಿ ಯಾವ ಬಗೆಯ ಹೊಸ ತೆರಿಗೆಯೂ ಜನತೆಯಿಂದ ಆದರಪೂರ್ವಕ ಸಂದಾಯವಾಗಲಾರದು. ಅದರೊಳಗೆ ಆಂದೋಲನವೂ ಆರಂಭವಾದರೆ ಪರಿಸ್ಥಿತಿಯು ತೀರಾ ವಿಷಮವಾಗಬಹುದು. ಇಷ್ಟೆಲ್ಲವನ್ನೂ ಗಮನಿಸದೆ ಕೇಂದ್ರ ಸರಕಾರದ ಆರ್ಥಿಕ ಸಚಿವರು ಹೇಗಾದರೂ ಹಣ ಭರ್ತಿ ಮಾಡುವ ಯೋಜನೆಯನ್ನು ತಯಾರಿಸಿದ್ದು ಅಷ್ಟು ಸಮರ್ಪಕವಾಗಲಿಲ್ಲವೆಂದು ಹೇಳಬಹುದಾಗಿದೆ.

---

# ಕಾಂಗ್ರೆಸಿನ ನಿರ್ಣಯ

ಪಾಟ್ನದಲ್ಲಿ ನೆರೆದ ಕಾಂಗ್ರೆಸು ವರ್ಕಿಂಗ್ ಕಮಿಟಿಯಲ್ಲಿ ಮಂಜೂರಾಗಿ, ಕಾಂಗ್ರೆಸ್ಸಿನ ಮಹಾಧಿವೇಶನದ ಮುಂದೆ ಮಂಡಿಸಲ್ಪಡಲು ಸಿದ್ಧವಾದ ನಿರ್ಣಯವು ಹಲವು ಸಮಯಗಳಿಂದ ಕಾಂಗ್ರೆಸ್ಸು ಬ್ರಿಟಿಷ್ ಸರಕಾರದೊಡನೆ ವ್ಯಕ್ತಮಾಡಿದ ತನ್ನ ನಿರ್ಧಾರದ ಪುನರ್ವಚನವಾಗಿದೆ. ಇತ್ತೀಚೆಗಿನ ಲಾರ್ಡ್ ಜೆಟ್ಲೆಂಡರ ಮಾತು, ಬ್ರಿಟನು ಭಾರತಗಳ ಸಂಬಂಧವನ್ನು ಕಡಿದು ಹಾಕುವುದಾಗಿದ್ದು, ಕಾಂಗ್ರೆಸ್ಸಿನವರು ಮಾತ್ರವಲ್ಲ, ಭಾರತದ ಎಲ್ಲಾ ಪಕ್ಷದ ಧುರೀಣರೂ ತಾಳ್ಮೆಗೆಡುವಂತೆ ಮಾಡುವುದಾಗಿದೆ. ಕಾಂಗ್ರೆಸ್ಸಾದರೂ, ಇಂದಿನ ಈ ಪರಿಸ್ಥಿತಿಯಲ್ಲಿ ಬ್ರಿಟನು ಅನ್ಯತ್ರ ಯುದ್ಧಾಸಕ್ತವಾಗಿರುವಾಗ ತನ್ನ ಕೇಳಿಕೆಯ ಕುರಿತು ಎಷ್ಟು ತಾಳ್ಮೆಯಿಂದ ನ್ಯಾಯದಿಂದ ಕಾರ್ಯಮಾಡಿಕೊಂಡಿದೆ ಎಂಬುದು ನಿಷ್ಪಕ್ಷಪಾತಿಯಾದ ರಾಜಕೀಯ ನಿರೀಕ್ಷಕರೆಲ್ಲರಿಗೆ ಅರ್ಥವಾಗದೆ ಇರದು. ಹೀಗಿದ್ದರೂ ಕಾಂಗ್ರೆಸ್ಸಿನ ಮಾತಿಗೆ ಬೆಲೆಯಿಲ್ಲದಂತೆ ವರ್ತಿಸುವ ಬ್ರಿಟನಿಗೆ ಈ ಸಲದ ಕಾಂಗ್ರೆಸ್ಸಿನ ನಿರ್ಣಯವು ಗಂಭೀರ ರೀತಿಯಿಂದ ಆಹ್ವಾನಿಸುತ್ತಿದೆ.

## ಬಲಾತ್ಕಾರವು ನ್ಯಾಯವಲ್ಲ

ಯುರೋಪಿನಲ್ಲಿ ಯುದ್ಧವು ಆರಂಭವಾಯಿತು. ಬ್ರಿಟನು ಫ್ರಾನ್ಸುಗಳು ಜರ್ಮನಿಯೊಡನೆ ರಣರಂಗಕ್ಕಿಳಿದುವು. ಈ ಸಂದರ್ಭದಲ್ಲಿ ಭಾರತೀಯರ ಇಚ್ಛೆ ಅಪೇಕ್ಷೆಗಳಿಗೆ ತಿಲ ಮಾತ್ರವೂ ಬೆಲೆ ಕೊಡದೆ, ಜನಮತವನ್ನು ದುರ್ಲಕ್ಷಿಸಿ ಭಾರತವನ್ನೂ ಜರ್ಮನಿಯ ವಿರುದ್ಧ ಕಾದಾಡುವ ರಾಷ್ಟ್ರವೆಂದು ಬ್ರಿಟನು ಸಾರಿದ್ದು ಅನ್ಯಾಯವೆಂದೂ ಅಪಮಾನಕರವೆಂದೂ ನಿರ್ಣಯವು ವ್ಯಕ್ತಪಡಿಸಿದೆ. ಈ ಸಂದರ್ಭದಲ್ಲಿ, ಬ್ರಿಟನಿನ ಯುದ್ಧ ಉದ್ದೇಶವೇನೆಂದೂ, ಪೋಲೆಂಡಿನ ಸ್ವಾತಂತ್ರ್ಯ ರಕ್ಷಣೆಯು ಬ್ರಿಟನಿನ ಯುದ್ಧ ಉದ್ದೇಶವಾಗಿದ್ದರೆ ಅದು ಭಾರತಕ್ಕೆ ಹೇಗೆ ಅನ್ವಯಿಸುವುದೆಂದೂ ಕಾಂಗ್ರೆಸ್ಸು ಸ್ಪಷ್ಟೋಕ್ತಿಯಿಂದ ಕೇಳಲು ಅದನ್ನು ಮರೆಮಾಚಿ ಭಾರತದ ಜನಧನಗಳನ್ನು ಯುದ್ಧದಲ್ಲಿ ಉಪಯೋಗಿಸುತ್ತಿರುವುದಕ್ಕೆ ಭಾರತೀಯರು ಒಪ್ಪಲಾರರೆಂದು ಕಾಂಗ್ರೆಸು ವ್ಯಕ್ತಪಡಿಸಿದೆ. ಮಾತ್ರವಲ್ಲದೆ ಅದೇ ಹೇಳಿಕೆಯ ನಿಮಿತ್ತವಾಗಿ ಪ್ರಾಂತಿಕ ಆಡಳಿತದಲ್ಲಿದ್ದ ಕಾಂಗ್ರೆಸು ಮಂತ್ರಿಮಂಡಳಗಳು ರಾಜಿನಾಮೆ ಕೊಟ್ಟವೆಯೆಂದು ನಿರ್ಣಯದಲ್ಲಿ ಸಾರಲಾಗಿದೆ.

## ಸತ್ಯಾಗ್ರಹವು ಮುಂದಿನ ಹೆಜ್ಜೆ

ಕಾಂಗ್ರೆಸಿನ ಮಂತ್ರಿಮಂಡಳಗಳು ರಾಜಿನಾಮೆ ಕೊಟ್ಟಿರಲು ಮುಂದಿನ ಹೆಜ್ಜೆಯೇನೆಂಬುದನ್ನು ಕಾಂಗ್ರೆಸು ಈಗಾಗಲೇ ನಿರ್ಧರಿಸಿದೆ. ಸಂದರ್ಭವು ಸನ್ನಿಹಿತವಾದಾಗ ಕೂಡಲೇ ಭಾರತವು ಆಂದೋಲನವನ್ನು ಆರಂಭಿಸಬಹುದೆಂದು ನಿರ್ಣಯವು ಗಂಭೀರವಾಗಿ ಸಾರಿದೆ. ಈ ಸಂದರ್ಭದಲ್ಲಿ ಕಾಂಗ್ರೆಸಿನ ನಿರ್ಣಯದ ಕುರಿತು ಗಾಂಧಿಜಿಯವರಿತ್ತ ಪ್ರಕಟಣೆಯೂ ಕಾಂಗ್ರೆಸಿನ ಸತ್ಯಾಗ್ರಹ ಸಿದ್ಧತೆಯನ್ನೇ ಸಾರಿ ಹೇಳುತ್ತದೆ. ಭಾರತದ ಯುವಕರನ್ನು ತನ್ನ ಸತ್ಯ ಅಹಿಂಸೆಗಳ ನೀತಿಗಳಿಂದ ಕಡೆದು ನಿಲ್ಲಿಸಿದ ಮಹಾತ್ಮರಾದರೂ ಬಹುಕಾಲ ತಾಳ್ಮೆಯಿಂದಿರಲಾರರೆಂಬುದು ವ್ಯಕ್ತವೇ ಇಂದು ಆಗಿದೆ.

## ರಾಮಗಡದ ಮೇಲೆ

ಈ ವಿಷಯಗಳನ್ನು ವಿಚಾರಿಸಿದರೆ ರಾಮಗಡದ ಅಧಿವೇಶನದಲ್ಲಿ ಮಂಜೂರಾಗತಕ್ಕ ಈ ನಿರ್ಣಯವನ್ನು ಇಷ್ಟು ಬೇಗನೇ ಬ್ರಿಟನಿನ ಮುಂದಿಡಲು ಇಚ್ಛಿಸಿದ ಕಾಂಗ್ರೆಸು ಈಗ ನಿರ್ಣಯವನ್ನು ಮಂಜೂರು ಮಾಡಿ, ಬ್ರಿಟನಿಗೆ ಯೋಚಿಸಲು ಸಮಯ ಕೊಟ್ಟಿದೆಯೆಂದು ತಿಳಿಯಬಹುದು. ರಾಜನೀತಿಯನ್ನೂ, ಭಾರತೀಯರ ಅಚಲ ಸ್ವಾತಂತ್ರ್ಯ ಪ್ರೇಮವನ್ನೂ ಚೆನ್ನಾಗಿ ಮನಗಂಡ ಬ್ರಿಟನಿನ ರಾಜನೀತಿಜ್ಞರು ಇನ್ನಾದರೂ ಸರಿ ದಾರಿ ಹಿಡಿದಾರೆಂದು ನಂಬಬಹುದೆ?

---

# ಕೆನರಾ ಬೇಂಕ್ ಲಿಮಿಟೆಡ್

೧೯೩೯ನೇ ವರ್ಷದ ಕೆನರಾ ಬೇಂಕಿನ ಆಯುವ್ಯಯ ಪಟ್ಟಿಯು ನಮ್ಮ ಪತ್ರಿಕೆಯ ಬೇರೊಂದು ಕಡೆ ಕೊಡಲಾಗಿದೆ. ಬೇಂಕು ಈ ವರ್ಷ ಒಳ್ಳೆಯ ಅಭಿವೃದ್ಧಿಯನ್ನು ತೋರಿಸಿದೆಯೆಂಬ ವಿಷಯವು ಅದರಿಂದ ಸ್ಪಷ್ಟವಾಗುವುದು. ಕೆನರಾ ಬೇಂಕಿನ ಆಫೀಸುಗಳು ಬೊಂಬಯಿ ನಗರದಲ್ಲಿಯೂ ತೆರೆಯಲ್ಪಟ್ಟು ಉತ್ತಮ ರೀತಿಯಿಂದ ಕಾರ್ಯನಿರ್ವಾಹ ಮಾಡುತ್ತಿರುವವೆಂದು ನಾವು ತಿಳಿಯುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಹೋದ ಅನೇಕ ಮಂದಿ ಉದ್ಯೋಗಸ್ಥರು ಬೊಂಬಯಿ ನಗರದಲ್ಲಿ ನೆಲಸಿರುವರು. ಅವರಿಗೆಲ್ಲರಿಗೂ ತಮ್ಮ ಹುಟ್ಟು ಜಿಲ್ಲೆಯಾದ ದಕ್ಷಿಣ ಕನ್ನಡದೊಡನೆ ಮಾಡಬೇಕಾಗಿರುವ ಎಲ್ಲಾ ಬಗೆಯ ವಹಿವಾಟುಗಳಿಗೆ ಅವಶ್ಯವಿರುವ ಬ್ಯಾಂಕಿಂಗ್ ಸೌಕರ್ಯವು ಈ ಮೂಲಕ ದೊರಕುವಂತಾದುದು ನಿಜವಾಗಿಯೂ ವಿಶೇಷ ಪ್ರಶಂಸನೀಯವಾದ ಕಾರ್ಯವಾಗಿದೆ. ಬೊಂಬಯಿಯ ಮಹಾ ಜನರೂ ಕೂಡಾ, ಕೆನರಾ ಬ್ಯಾಂಕಿನ ದಕ್ಷತೆಯ ವಿಷಯದಲ್ಲಿ ಬಹಳ ಅಭಿಮಾನ ಪ್ರಶಂಸೆಯುಳ್ಳವರೇ ಆಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

# ★ ಸಂಘಟಿತರಾಗಿರಿ! ಬಲಯುತರಾಗಿರಿ!! ★

## ಸ್ವಾತಂತ್ರ್ಯಯೋಧರಿಗೆ ಮಹಾತ್ಮರ ಹಿತವಚನ

ಕೆಲ ಸಮಯಗಳಿಂದ ಬ್ರಿಟನು ಮತ್ತು ಹಿಂದುಸ್ಥಾನಗಳಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡುವಾಗ ಬ್ರಿಟಿಷರ ಸಾಮ್ರಾಜ್ಯ ಶಾಹೀ ಧೋರಣೆಯಲ್ಲಿ ಏನೂ ಬದಲಾವಣೆಗಳಾಗಲಿಲ್ಲವೆಂದೂ ಅವರು ಎಷ್ಟು ಕಾಲ ಸಾಧ್ಯವಿದೆಯೋ, ಅಷ್ಟು ಕಾಲದ ತನಕ ಹಿಂದುಸ್ತಾನವನ್ನು ತಮ್ಮ ಆಧೀನದಲ್ಲಿಟ್ಟು ಕೊಳ್ಳುವ ದೀಕ್ಷಾಬದ್ಧರಾಗಿದ್ದಾರೆಂದೂ ತಿಳಿಯುತ್ತದೆ ಇಲ್ಲವಾದರೆ ಹೊಸ ಕ್ರಮದ ತೆರಿಗೆ ಹಾಕಲಿಕ್ಕೆ ಇದ್ದ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಅದನ್ನು ಕೇಂದ್ರ ಸರಕಾರಕ್ಕೆ ಕೊಡುವಂಥ ಕಾಯದೆಗಳು ಇಲ್ಲಿಯ ಜನಮತವನ್ನು ತೀರ ಅಲಕ್ಷಿಸಿ ಬ್ರಿಟಿಷಪಾರ್ಲಿಮೆಂಟಿನಲ್ಲಿ ಮಂಜೂರಾಗುತ್ತಿದ್ದಿಲ್ಲ. ವಾಯ್ಸರಾಯರು ಆಗಾಗ ಮಹಾತ್ಮರಂಥವರನ್ನು ಭೇಟಿಗೆ ಕರೆಯುವದು, ಕಾಲಹರಣ ಮಾಡಲಿಕ್ಕೆ ಪರಿಸ್ಥಿತಿಯನ್ನು ತಮಗೆ ಅನುಕೂಲವಾಗಿ ತಿದ್ದಿ ಕೊಳ್ಳಲಿಕ್ಕೂ ಮಾಡಿದ ಬ್ರಿಟಿಷ ರಾಜನೀತಿಜ್ಞರ ಒಂದು ಉಪಾಯವು ಮಾತ್ರವಾಗಿದೆಯಲ್ಲದೆ ಬೇರೇ[illegible]. ಭಾರತೀಯರು ಈಗ ಯಾ[illegible] ಸಂದರ್ಭದಲ್ಲಿಯಾದರೂ ಹೋ[illegible]ಕ್ಕೆ ಸಿದ್ಧರಾಗಿಲ್ಲ, ಬ್ರಿಟಿಷರ್‍ಯಾ[illegible]ಷ್ಟವನ್ನು ತೆಗೆದುಕೊಂಡು [illegible] ಕೃಷ್ಟರಾಗುವರು ಎಂದ್ಯ[illegible]ರು ತಿಳಕೊಳ್ಳುವಂತಾಗಿದೆ [illegible]ಟವೆಂತೂ ಆಗುವಸಂಭವ [illegible] ಬಧೈರ್ಯ ದಿಂದ, ಸ್ವಲ್ಪ [illegible] ಮೊದಲು ಕಾಂಗ್ರೆಸಿನ [illegible]ಯುಗಳಿಂದ ಹಿಂದೆ ಸರಿದಿ[illegible]ಗಳು ಈಗ ಪುನ. ಅದನ್ನು [illegible] ಪ್ರಯತ್ನ ಮಾಡಿದ್ದಾರೆ ಅವರು ಸವಿಯಾದ ಮಾತುಗಳನ್ನಾಡಿ ಲೋಕವನ್ನು ಮರುಳುಗೊಳಿಸುವ ಇಂದ್ರಜಾಲಿಕನ ವೇಷವನ್ನು ತಾಳಿದ್ದಾರೆ.

### ನಮ್ಮ ಮುಂದಿನ ಕರ್ತವ್ಯ

"ಗೌರವಾಸ್ಪದವಾದ ತೀರ್ಮಾನವಾಗಬೇಕಾದರೆ ಅದಕ್ಕೆ ಭಾರತೀಯರು ಪ್ರಯತ್ನಿಸಲೇ ಬೇಕು ಆದರೆ ಹೋರಾಟವು ಅನಿವಾರ್ಯವೆಂದಾದರೆ ಅದಕ್ಕೆ ಸು ಮಾತ್ರಕ್ಕೂ ತಾವು ಹಿಂಜರಿಯುವವರಲ್ಲವೆಂಬುದನ್ನು ಬ್ರಿಟನಿಗೂ ಜಗತ್ತಿಗೂ ತೋರಿಸಿ ಕೊಡುವದು ನಮ್ಮ ಕರ್ತವ್ಯವಾಗಿದೆ. ಬಾಯಿಯಿಂದ ಬ್ರಿಟಿಷ ರಾಜನೀತಿಜ್ಞರು ಯಾವ ಮಾತಗಳನ್ನೇ ಆಡುತ್ತಲಿರಬಹುದಾದರೂ, ಯರೋಪಿನ ಯುದ್ಧವನ್ನು ಬ್ರಿಟಿಷರು ತಮ್ಮ ಸಾಮ್ರಾಜ್ಯ ಸ್ವಾರ್ಥವನ್ನು ಭದ್ರಗೊಳಿಸಲಿಕ್ಕೆ ಆರಂಭಿಸಿದ್ದಾರೆಯೇ ವಿನಾ ಬೇರೆ ಕಾರಣದಿಂದಲ್ಲ ಎಂಬುದು ಅವರ ಈಚಿಗಿನ ಕಾರ್ಯಗಳಿಂದ ಸ್ಪಷ್ಟವಾಗಿದೆ ಇದರಿಂದ ಬ್ರಿಟಿಷರು ತಾವಾಗಿ ಹಿಂದುಸ್ತಾನದ ಮೇಲಿನ ತಮ್ಮ ಅಧಿಕಾರವನ್ನು ಬಿಟ್ಟುಕೊಡುವವರಲ್ಲ ಅಂಥವರ ಮುಂದೆ ಹೋಗಿ ನಮ್ಮ ಮುಖಂಡರು ಆಗಾಗ ಮಂಡಿಯೂರುವದು ರಾಷ್ಟ್ರದ ಮಾನ ಮರ್ಯಾದೆಗಳಿಗೆ ಕುಂದನ್ನು ತರುವಂಥದಾಗಿದೆ ಹೀಗೆ ಮಾಡುವದು ನೈತಿಕ ದೃಷ್ಟಿಯಿಂದಲೂ ಹಾನಿಕರವಾಗಿದೆ

ಇವೇ ವಿಚಾರಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ಸು ಮುಂದಿನ ಕಾರ್ಯಕ್ರಮವನ್ನು ರೂಪಿಸಿ ಕೊಳ್ಳಬೇಕು. ಹೋರಾಟವು ಅನಿವಾರ್ಯವೆಂದಾದರೆ ಅದಕ್ಕೆ ನಾವು ಸಿದ್ಧರೆಂಬುದನ್ನು ನಮ್ಮ ಕಾರ್ಯಕ್ರಮವು ತೋರಿಸಿ ಕೊಡಬೇಕು ಮಹಾತ್ಮರು ವಾಯ್ಸರಾಯರೊಡನೆ ಆಗಾಗ ರಾಜಿಪ್ರಸ್ತಾಪವನ್ನೆತ್ತಿ, ಅದಕ್ಕೋಸುಗ ಸಮಯವನ್ನು ಕಳೆಯುವದರಿಂದ ಬ್ರಿಟಿಷರಿಗೆ ಇಲ್ಲಿಂದ ಬೇಕಾದಷ್ಟು ಯುದ್ಧದ ಸಲಕರಣೆಗಳನ್ನು ಪಡೆಯಲಿಕ್ಕೆ ಅನುಕೂಲವಾಗಿದೆ ಮಾತ್ರವಲ್ಲದೆ, ಹಿಂದುಸ್ತಾನದ ಜನಮತವು ಬ್ರಿಟಿಷರಿಗೆ ಅನುಕೂಲವಾಗಿದೆ ಎಂಬ ತಪ್ಪು ಭಾವನೆಯು ಪ್ರಪಂಚದಲ್ಲೆಲ್ಲ ಹರಡಿ, ಹಿಂದುಸ್ತಾನದ ಹಿತಕ್ಕೆ ಬಾಧೆ ತಟ್ಟುವಂತೆಯೂ ಆಗಿದೆ"

### ಮಹಾತ್ಮರ ಹೇಳಿಕೆ

ಹೀಗೆ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ವಿವೇಚಿಸಿ ಒಬ್ಬ ಅನುಭವೀ ಕಾಂಗ್ರೆಸ ಕಾರ್ಯಕರ್ತರೊಬ್ಬರು ಮಹಾತ್ಮರಿಗೆ ಪತ್ರಬರೆದಿರುವದಕ್ಕೆ ಮಹಾತ್ಮರು ಅದರ ಕುರಿತು ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರು. "ಹೀಗೆ ಕಾರ್ಯಕರ್ತರು ಎಚ್ಚರಿಕೆಯನ್ನು ಕೊಡುತ್ತಿರುವದು ಕಾರ್ಯನಿರ್ವಾಹಕ್ಕೆ ಅನುಕೂಲವಾಗಿರುವದು ಮೇಲೆ ಬರೆದ ಮಾತುಗಳಲ್ಲಿ ಯಥಾರ್ಥತೆ ಇಲ್ಲದಿಲ್ಲ ಪತ್ರಲೇಖಕರ ತರ್ಕವು ಪ್ರಬಲವಾಗಿರುವದು ಗೌರವಾಸ್ಪದ ಒಡಂಬಡಿಕೆಯಾಗಲಿಕ್ಕೆ ಎಳ್ಳಷ್ಟು ಆಶೆಯಿರುವ ತನಕವೂ ಅದಕ್ಕೆ ಪ್ರಯತ್ನಿಸಬೇಕಾದ್ದು ಸತ್ಯಾಗ್ರಹಿಯ ಕರ್ತವ್ಯವು ವಾಯ್ಸರಾಯರು ಇಂದ ಒಡಂಬಡಿಕೆಯಾಗಲಿಕ್ಕೆ ನಿಜವಾಗಿಯೂ ಪ್ರಯತ್ನಿಸುತ್ತಿದ್ದಾರೆ ಎಂಬ ವಿಶ್ವಾಸವು ಸುಳ್ಳಾಗುವ ತನಕ, ಸತ್ಯಾಗ್ರಹಿಯು ವಾಯ್ಸರಾಯರ ಬಳಿಗೆ ಒಡಂಬಡಿಕೆ ಮಾಡಿಕೊಳ್ಳಲಿಕ್ಕೆ ಹೋಗಬೇಕಾಗುವದು. ಶತ್ರುವನ್ನು ಸೋಲಿಸುವ ಅಥವಾ ಅವನ ಮಾನಭಂಗಮಾಡುವದಕ್ಕೆ ಸತ್ಯಾಗ್ರಹ ಶಾಸ್ತ್ರವು ಹೇಳುವದಿಲ್ಲ ಅದರ ಬದಲಿಗೆ ಶತ್ರುವನ್ನು ಪ್ರೇಮದಿಂದ ಒಲಿಸಿ ಅವನ ಹೃದಯ ಪರಿವರ್ತನೆ ಮಾಡಲಿಕ್ಕೆ ಅದು ಹೇಳುತ್ತದೆ ಇದು ತಾನೇ ಸತ್ಯಾಗ್ರಹ ವಿಜಯದ ರಹಸ್ಯವಾಗಿರುವದು ಆದುದರಿಂದ ವಾಯ್ಸರಾಯರ ಕರೆ ಬಂದಾಗ ಅವರ ಬಳಿಗೆ ಹೋಗುದಿರುವದು ಸತ್ಯಾಗ್ರಹ ಧರ್ಮಕ್ಕೆ ವಿರೋಧವಾಗಿರುವದ.

"ಆದರೆ ಇದರಿಂದ ಯಾರೂ ಧೈರ್ಯಗೆಡಬಾರದು. ಜನರಲ್ಲಿ ಸ್ಫೂರ್ತಿ ಉತ್ಸಾಹಗಳು ಕಡಿಮೆಯಾಗದಂತೆ, ಅವರಿಗೆ ಆಗಾಗ ಸದ್ಬೋಧನೆಯನ್ನು ಕೊಟ್ಟು ಪರಿಸ್ಥಿತಿಯ ಪರಿಜ್ಞಾನವನ್ನು ಕೊಡುವದು ಕೆಲಸಗಾರರ ಕರ್ತವ್ಯವಾಗಿರುತ್ತದೆ ಜನರಲ್ಲಿ ಕಾರ್ಯೋತ್ಸಾಹವು ಕಂಡುಬಂದಾಗ ಅದಕ್ಕೆ ತಕ್ಕ ಅವಕಾಶ ಮಾಡಿಕೊಡದಿದ್ದರೆ ಆ ಉತ್ಸಾಹವು ಅಲ್ಲಿಯೇ ಕಂಡ ತೆರದಲ್ಲಿ ಹರಿಯುವ ಸಂಭವ. ಹೇಳುವ ಮಾತು ರಕ್ತರಂಜಿತ ಕ್ರಾಂತಿಗಳ ಕುರಿತು ನಿಜವಾಗಿ ಬಹುದು ಆದರೆ ಅಹಿಂಸಾತ್ಮಕ ಕ್ರಾಂತಿಯ ಕುರಿತು ಹಾಗೆ ಹೇಳುವದು ಸರಿಯಲ್ಲ ನಾವು ಅವಸರಪಟ್ಟು ಹೋರಾಟವನ್ನು ಆರಂಭಿಸಿದರೆ ಲಾಭಕ್ಕಿಂತ ಹಾನಿಯಾಗುವದೇ ಹೆಚ್ಚು ಹೋರಾಟವು ಅನಿವಾರ್ಯವೆಂದಾದಾಗ, ಅದು ಒಂದೇ ಒಡುವದು ಹೋರಾಟಕ್ಕಾಗಿಯೇ ಯಾರೂ ಅತಿ ಉತ್ಸಾಹವನ್ನು ತೋರಿಸಬಾರದು ನಮ್ಮ ಕಾರ್ಯ ಧೋರಣೆ ಮತ್ತು ಉದ್ದೇಶಗಳ ಕುರಿತ ಬ್ರಿಟನು ಮತ್ತು ಪ್ರಪಂಚದಲ್ಲಿ ತಪ್ಪು ತಿಳುವಳಿಕೆಯು ಹರಡಿ ಕೊಳ್ಳುತ್ತಿದೆಯಾದರೆ ಅದಕ್ಕೆ ನಾವು ಗಾಬರಿಯಾಗಲು ಕಾರಣವಿಲ್ಲ ಸತ್ಯದ ಮುಂದೆ ಅಸತ್ಯವು ಮಾಯವಾಗಲೇ ಬೇಕು ಒಡಂಬಡಿಕೆಯ ಮಾತು ತೆಗೆದು ಬ್ರಿಟಿಷರು ಇಲ್ಲಿ ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆಂದು ಹೆದರುವದಾದರು ಯಾಕೆ? ನಾವು ಸುಸಂಘಟಿತರೂ ಬಲಿಷ್ಠರೂ ಆಗಿರುವೆವಾದರೆ ಬ್ರಿಟಿಷರ ಈ ಬಗೆಯ ಧೋರಣೆಯಿಂದ ಅವರಿಗೆ ಎಳ್ಳಷ್ಟು ಪ್ರಯೋಜನ ದೊರೆಯುವದಿಲ್ಲ ನಾವು ದುರ್ಬಲರೂ ಅಸಂಘಟಿತರೂ ಆಗಿ, ಬ್ರಿಟಿಷರು ಅದರ ಪ್ರಯೋಜನ ತೆಗೆದು ಕೊಳ್ಳುತ್ತಿದ್ದಾರಾದರೆ, ಅದಕ್ಕಾಗಿ ನಾವು ಅವರನ್ನು ದೂರಿ ಏನು ಪ್ರಯೋಜನ? ಆದುದರಿಂದ ನಾವು ಸುಸಂಘಟಿತರೂ ಬಲಿಷ್ಠರೂ ಆಗಲಿಕ್ಕೆ ಮೊದಲು ಪ್ರಯತ್ನಿಸಬೇಕು ನಾವು ಹಾಗಾದಾಗ ತಾನೇ ನಮ್ಮ ಮಾತುಗಳಿಗೂ ಕಾರ್ಯಗಳಿಗೂ ಯಾರಿಂದಲೂ ಸೋಲಿಸಲಿಕ್ಕಾಗದ ಶಕ್ತಿ ಬರುವದು"

**U. K. BHUJANGA NAYAK**
**CLOTH COMMISSION AGENT**
**SHEVAPET, SALEM**
**ಯು. ಕೆ. ಭುಜಂಗ ನಾಯಕ್,**
**ಜವುಳಿ ದಲಾಲ, ಶಿವಪೇಟೆ, ಸೇಲಂ**
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ
ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ

**The Auttur & Jawahar Bank, Limited.**
**ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು**
ಹೆಡ್ ಆಫೀಸು ಕೆನರಾ ಹೈಸ್ಕೂಲ್ ರೋಡು — ಬ್ರಾಂಚ್. ಸೆಂಟ್ರಲ್ ಮಾರ್ಕೆಟ
ರಜಿಸ್ಟರ್ಡ ಮೂಲಧನ ರೂ 1,00,000. — ತೆರಲ್ಪಟ್ಟ ಮೂಲಧನ ರೂ. 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು — ಠೇವಣಾತಿಗಳ ಮೇಲಿನ ದರ
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% — ನಿರಖು ಠೇವಣಾತಿ 12 ತಿಂಗಳಿಗೆ 4½
" 6 ತಿಂಗಳಿಗೆ 4% — " 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು
ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

ಸ್ವದೇಶಾಭಿಮಾನಿ

ತಾರೀಕು 8—8—1940

# ಭಾರತ ಸರಕಾರದ ಆಯವ್ಯಯ

ಭಾರತ ಕೇಂದ್ರ ಸರಕಾರದ ಆರ್ಥಿಕ ಸಚಿವರಾದ ಸರ್ ಜರೇಮಿ ರೈಸ್‌ಮೇನರು ಮೊನ್ನೆ ಢಿಲ್ಲಿಯಲ್ಲಿ ಜರಗಿದ ಶಾಸನ ಸಭೆಯ ಮುಂದೆ ಬರುವ ವರ್ಷದ ಆಯವ್ಯಯದ ಅಂದಾಜು ಪಟ್ಟಿಯನ್ನು ಒಪ್ಪಿಸಿದರು. ೧೯೩೯—೪೦ರಲ್ಲಿ ೮೭ ಕೋಟಿ ರೂಪಾಯಿಗಳ ಆದಾಯವಾಗಿ, ಅದರಲ್ಲಿ ೮೭ ಕೋಟಿ ರೂಪಾಯಿ ವೆಚ್ಚವಾಗಲು ೯೧ ಲಕ್ಷ ರೂಪಾಯಿಯಷ್ಟು ಉಳಿತಾಯವಾಯಿತು. ಆದರೆ ಹೊಸ ವರ್ಷದಲ್ಲಿ ೮೫ ಕೋಟಿ ರೂಪಾಯಿಗಳ ಆದಾಯವಾಗುವುದೆಂದೂ, ೯೨ ಕೋಟಿ ರೂಪಾಯಿಗಳ ವೆಚ್ಚವಾಗುವುದೆಂದೂ ಏಳು ಕೋಟಿ ರೂಪಾಯಿಗಳಷ್ಟು ಹಣ ಸಾಲದೆ ಬರುವುದೆಂದೂ ಅಂದಾಜು ಮಾಡಿರುತ್ತಾರೆ. ಇಂದಿನ ಸುಂಕವೇ ಮೊದಲಾದವುಗಳ ಪರಿಸ್ಥಿತಿಯನ್ನು ಕಾಣಿಸಿ ಲೆಕ್ಕಮಾಡಿ ನೋಡಿದರೂ ೭೧ ಲಕ್ಷ ರೂಪಾಯಿಗಳಷ್ಟು ಸಾಲದೆ ಬರುವುದೆಂದು ತಿಳಿದಿದೆ.

## ಸೈನ್ಯದ ಖರ್ಚು

ಇಂದು ೮೫ ಕೋಟಿ ರೂಪಾಯಿಯ ಈ ಆದಾಯದಲ್ಲಿ ೫೪ ಕೋಟಿಯಷ್ಟು ಕೇವಲ ಸೈನ್ಯಕ್ಕಾಗಿಯೇ ವೆಚ್ಚವಾಗುತ್ತಿರುವುದು ನ್ಯಾಯ ಸಮ್ಮತವಲ್ಲವೆಂದು ಹಲವು ವರ್ಷಗಳಿಂದ ಭಾರತೀಯರು ಚರ್ಚಿಸುತ್ತಿರಲು ಆ ವೆಚ್ಚವನ್ನು ಹಿಂದಿಗಿಂತಲೂ ಹೆಚ್ಚಿಸುವುದರಲ್ಲಿ ಯಾವ ಅರ್ಥವೂ ಇರಲಾರದು. ಹೋದ ವರ್ಷಕ್ಕಿಂತಲೂ ಎಂಟೂವರೆ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಈ ವರ್ಷ ತೆರುವುದರಿಂದ ಭಾರತೀಯರ ಹಿತಕ್ಕೆ ಹಾನಿಯಾಗಿದೆ. ಶೇಕಡಾ ೬೦ರಷ್ಟು ಆದಾಯವನ್ನೇ ಸೈನ್ಯಕ್ಕಾಗಿಯೇ ಖರ್ಚು ಮಾಡುವುದರಿಂದ ರಾಷ್ಟ್ರದ ಶಕ್ತಿಯನ್ನು ಬತ್ತಿಸಿದಂತಾಗುತ್ತದೆ. ಅದು ಮಾತ್ರವಲ್ಲದೆ ವೆಚ್ಚಮಾಡುವ ಹಣದಲ್ಲಿ ಈ ೫೪ ಕೋಟಿ ರೂಪಾಯಿಯಲ್ಲಿ ಸೇಕಡಾ ೬೦ರಷ್ಟು ಪರಕೀಯರಿಗೇ ಸಲ್ಲುವುದು ರಾಷ್ಟ್ರಘಾತವಾಗಿದೆ. ನಮ್ಮ ರಾಷ್ಟ್ರವು ಪರಕೀಯ ರಾಜ್ಯಭಾರದಿಂದ ನರಳುತ್ತಿರುವಲ್ಲಿ ಆಗುವ ಅನ್ಯಾಯದ ಪರಮಾವಧಿ ಸಂಕಷ್ಟವು ಇದರಿಂದ ವ್ಯಕ್ತವಾಗುತ್ತದೆ. ಒಟ್ಟು ಆದಾಯದ ಸೇಕಡಾ ೬೦ರಷ್ಟು ಸೈನ್ಯಕ್ಕೂ ಮಿಕ್ಕುಳಿದ ಅಧಿಕ ಹಣವು ಸರಕಾರೀ ನೌಕರರ ಸಂಬಳಕ್ಕೂ ಹೋದರೆ ದೇಶವು ಹೇಗೆ ಉದ್ಧಾರವಾಗಬೇಕೋ ತಿಳಿಯಲಾರದು.

## ಹೊಸ ತೆರಿಗೆಗಳ ಗದಾ ಪ್ರಹಾರ

ಮುಂದಿನ ವರ್ಷ ಒದಗುವ ಏಳು ಕೋಟಿ ರೂಪಾಯಿಗಳ ನಷ್ಟವನ್ನು ಹೊಸ ತೆರಿಗೆಗಳಿಂದ ವಸೂಲು ಮಾಡುವ ಸೂಚನೆಯನ್ನು ಆರ್ಥಿಕ ಸಚಿವರು ಸೂಚಿಸಿದ್ದಾರೆ. ಈಗ ಎರಡು ರೂಪಾಯಿಗಳಿರುವ ಸಕ್ಕರೆ ಮತ್ತು ಅಬಕಾರಿ ಸುಂಕವನ್ನು ಮೂರು ರೂಪಾಯಿಗಳಿಗೆ ಏರಿಸುವುದೆಂದೂ, ಒಂದು ಗೆಲನ್ ಪೆಟ್ರೋಲಿಗೆ ಇದುವರೆಗಿದ್ದ ಹತ್ತಾಣೆಯನ್ನು ಹದಿನೆರಡಾಣೆಗೆ ಏರಿಸುವುದೆಂದೂ ತೀರ್ಮಾನಿಸಿದ್ದಾರೆ. ಅಧಿಕ ಲಾಭದ ಮೇಲೆ ಹೇರಿಸುವ ಹೊಸ ಕಂದಾಯದಿಂದ ಮೂರು ಕೋಟಿ ರೂಪಾಯಿಗಳ ಆದಾಯವಿದೆಯೆಂದು ಊಹಿಸಲಾಗಿದೆ. ಸಕ್ಕರೆಯಿಂದ ಎರಡು ಕೋಟಿ ರೂಪಾಯಿಗಳೂ, ಪೆಟ್ರೋಲಿನಿಂದ ಒಂದುವರೆ ಕೋಟಿ ರೂಪಾಯಿಗಳೂ ಆದಾಯವಾಗಿ ಒಟ್ಟು ಆದಾಯವು ೯೨೮೪ ಕೋಟಿ ರೂಪಾಯಿಯೂ ವೆಚ್ಚವು ೯೨೫೯ ಕೋಟಿ ರೂಪಾಯಿಗಳಾಗಿಯೂ ಅಂದಾಜು ಮಾಡಲಾಗಿದೆ. ಆ ಲೆಕ್ಕದಿಂದ ಐದು ಲಕ್ಷ ರೂಪಾಯಿಗಳ ಉಳಿತಾಯವಾಗುವುದು. ಅಧಿಕ ಆದಾಯದ ಮೇಲೆ ತೆರಿಗೆ ಹೇರಿಸುವುದು ನ್ಯಾಯವಾದುದಾದರೂ, ರಾಷ್ಟ್ರದ ಉದ್ಯೋಗಗಳನ್ನು ಅಭಿವೃದ್ಧಿಗೊಳಿಸುವಲ್ಲಿ ಅದರಿಂದ ಆತಂಕವಾಗದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ. ಸಕ್ಕರೆಯ ಮೇಲಿನ ತೆರಿಗೆಯಿಂದ ಬಡಜನರ ಹೊಟ್ಟೆಗೇ ಅಪ್ರತ್ಯಕ್ಷವಾಗಿ ಸುಂಕವೇರಿಸಿದಂತಾಗುವುದು. ಪೆಟ್ರೋಲಿನ ಸುಂಕದಿಂದ ಇಂದು ಸಾಮಾನ್ಯ ಜೀವಂತ ಸ್ಥಿತಿಯಲ್ಲಿದ್ದ ಮೋಟರುಗಳ ವ್ಯವಹಾರಕ್ಕೆ ತೀವ್ರ ಗದಾ ಪ್ರಹಾರವಾಗುವುದು.

## ಭಾರತದ ಧುರೀಣರ ಸಮ್ಮತಿಯಿಲ್ಲ

ಹೀಗೆ ಕೇಂದ್ರ ಸರಕಾರದವರು ತಮ್ಮದೇ ಅಭಿಪ್ರಾಯವನ್ನು ಜನತೆಯ ಮೇಲೆ ಹೇರ ತೊಡಗುವುದು ಸರಿಯಲ್ಲ. ಪ್ರಜಾ ಸಮ್ಮತಿಯಿಂದ ಆರಿಸಿ ಬಂದ ಪ್ರಾಂತಿಕ ಸರಕಾರಗಳಲ್ಲಿರುವ ಕಾಂಗ್ರೆಸು ಮಂತ್ರಿಗಳು ರಾಜಿನಾಮೆ ಕೊಟ್ಟಿದ್ದಾರೆ. ಅವರ ಅನುಮತಿಯನ್ನು ಕೇಳುವ ಹಾಗಿಲ್ಲ. ಇಂದಿನ ಯುದ್ಧದಂತಹ ಕಾಲದಲ್ಲಿ ಪ್ರಾಂತಿಕ ಮಂತ್ರಿಗಳ ಹಾಗೂ ಜನತೆಯ ವಿಶ್ವಾಸವುಳ್ಳ ಗಾಂಧಿಜಿಯಂತಹ ಧುರೀಣರನ್ನು ತೃಪ್ತಿಪಡಿಸಿದ್ದರೆ, ಈಗಾಗಲೇ ಬಡತನ, ರಾಜಕೀಯ ಅತೃಪ್ತಿಗಳಿಂದ ನೊಂದಿರುವ ಸಾಮಾನ್ಯ ಜನರಿಂದ ತೆರಿಗೆ ವಸೂಲು ಮಾಡುವ ಕಾನೂನು ಮಾಡುವ ಬದಲಾಗಿ, ಭಾರತದ ಸಿರಿವಂತರೇ ಯುದ್ಧದ ಸಲುವಾಗಿ ಉದಾರದಾನ ಮಾಡುತ್ತಿದ್ದರು. ಅದರಿಂದ ಇಂದಿನ ತೆರಿಗೆಗಿಂತ ಬಹುಪಾಲು ಹಣವು ಅನಾಯಾಸವಾಗಿ ಬರುತ್ತಿತ್ತಲ್ಲದೆ ಬಡಜನರನ್ನು ತೆರಿಗೆಯ ಮೂಲಕ ನೋಯಿಸುವ ಅಗತ್ಯವೇ ಬೀಳುತ್ತಿರಲಿಲ್ಲ. ಹಾಗೆ ಮಾಡದೆ ಇರುವುದು ಬ್ರಿಟಿಷ್ ಸರಕಾರದ ಅದೂರದರ್ಶಿತ್ವವಾಗಿದೆ. ಜನತೆಯ ವಿಶ್ವಾಸಯುಕ್ತ ಧುರೀಣರಾದ ಗಾಂಧಿಜಿಯಂತಹವರ ಮನವೊಲಿಸಿ, ಭಾರತಹಿತವನ್ನು ಬಗೆವ ನಿರ್ಧಾರವನ್ನು ಸರಕಾರವು ಪ್ರಕಟಿಸದಿದ್ದಲ್ಲಿ ಯಾವ ಬಗೆಯ ಹೊಸ ತೆರಿಗೆಯೂ ಜನತೆಯಿಂದ ಆದರಪೂರ್ವಕ ಸಂದಾಯವಾಗಲಾರದು. ಅದರೊಳಗೆ ಆಂದೋಲನವೂ ಆರಂಭವಾದರೆ ಪರಿಸ್ಥಿತಿಯು ತೀರಾ ವಿಷಮವಾಗಬಹುದು. ಇವೆಲ್ಲವನ್ನೂ ಗಮನಿಸದೆ ಕೇಂದ್ರ ಸರಕಾರದ ಆರ್ಥಿಕ ಸಚಿವರು ಹೇಗಾದರೂ ಹಣ ಭರ್ತಿ ಮಾಡುವ ಯೋಜನೆಯನ್ನು ತಯಾರಿಸಿದ್ದು ಅಷ್ಟು ಸಮರ್ಪಕವಾಗಲಿಲ್ಲವೆಂದು ಹೇಳಬಹುದಾಗಿದೆ.

# ಕಾಂಗ್ರೆಸಿನ ನಿರ್ಣಯ

ಪಾಟ್ನದಲ್ಲಿ ನೆರೆದ ಕಾಂಗ್ರೆಸು ವರ್ಕಿಂಗ್ ಕಮಿಟಿಯಲ್ಲಿ ಮಂಜೂರಾಗಿ, ಕಾಂಗ್ರೆಸ್ಸಿನ ಮಹಾಧಿವೇಶನದ ಮುಂದೆ ಮಂಡಿಸಲ್ಪಡಲು ಸಿದ್ಧವಾದ ನಿರ್ಣಯವು ಹಲವು ಸಮಯಗಳಿಂದ ಕಾಂಗ್ರೆಸ್ಸು ಬ್ರಿಟಿಷ್ ಸರಕಾರದೊಡನೆ ವ್ಯಕ್ತಮಾಡಿದ ತನ್ನ ನಿರ್ಧಾರದ ಪುನರ್ಘಟನವಾಗಿದೆ. ಇತ್ತೀಚೆಗಿನ ಲಾರ್ಡ್ ಜೆಟ್ಲೆಂಡರ ಮಾತು, ಬ್ರಿಟನು ಭಾರತಗಳ ಸಂಬಂಧವನ್ನು ಕಡಿದು ಹಾಕುವುದಾಗಿದ್ದು, ಕಾಂಗ್ರೆಸ್ಸಿನವರು ಮಾತ್ರವಲ್ಲ ಭಾರತದ ಎಲ್ಲಾ ಪಕ್ಷದ ಧುರೀಣರೂ ತಾಳ್ಮೆಗೆಡುವಂತೆ ಮಾಡುವುದಾಗಿದೆ. ಕಾಂಗ್ರೆಸ್ಸಾದರೂ, ಇಂದಿನ ಈ ಪರಿಸ್ಥಿತಿಯಲ್ಲಿ ಬ್ರಿಟನು ಅನ್ಯತ್ರಯುದ್ಧಾಸಕ್ತವಾಗಿರುವಾಗ ತನ್ನ ಕೇಳಿಕೆಯ ಕುರಿತು ಎಷ್ಟು ತಾಳ್ಮೆಯಿಂದ ನ್ಯಾಯದಿಂದ ಕಾರ್ಯ ಮಾಡಿತೋಂದಿದೆ ಎಂಬುದು ನಿಷ್ಪಕ್ಷಪಾತಿಯಾದ ರಾಜಕೀಯ ನಿರೀಕ್ಷಕರೆಲ್ಲರಿಗೆ ಅರ್ಥವಾಗದೆ ಇರದು. ಹೀಗಿದ್ದರೂ ಕಾಂಗ್ರೆಸ್ಸಿನ ಮಾತಿಗೆ ಬೆಲೆಯಿಲ್ಲದಂತೆ ವರ್ತಿಸುವ ಬ್ರಿಟನಿಗೆ ಈ ಸಲದ ಕಾಂಗ್ರೆಸ್ಸಿನ ನಿರ್ಣಯವು ಗಂಭೀರ ರೀತಿಯಿಂದ ಆಹ್ವಾನಿಸುತ್ತಿದೆ.

## ಬಲತ್ಕಾರವು ನ್ಯಾಯವಲ್ಲ

ಯುರೋಪಿನಲ್ಲಿ ಯುದ್ಧವು ಆರಂಭವಾಯಿತು. ಬ್ರಿಟನು ಫ್ರಾನ್ಸುಗಳು ಜರ್ಮನಿಯೊಡನೆ ರಣರಂಗಕ್ಕಿಳಿದುವು. ಈ ಸಂದರ್ಭದಲ್ಲಿ ಭಾರತೀಯರ ಇಚ್ಛೆ ಅಪೇಕ್ಷೆಗಳಿಗೆ ತಿಲ ಮಾತ್ರವೂ ಬೆಲೆ ಕೊಡದೆ, ಜನಮತವನ್ನು ದುರ್ಲಕ್ಷಿಸಿ ಭಾರತವನ್ನೂ ಜರ್ಮನಿಯ ವಿರುದ್ಧ ಕಾದಾಡುವ ರಾಷ್ಟ್ರವೆಂದು ಬ್ರಿಟನು ಸಾರಿದ್ದು ಅನ್ಯಾಯವೆಂದೂ ಅವಮಾನಕರವೆಂದೂ ನಿರ್ಣಯವು ವ್ಯಕ್ತಪಡಿಸಿದೆ. ಈ ಸಂದರ್ಭದಲ್ಲಿ, ಬ್ರಿಟನಿನ ಯುದ್ಧ ಉದ್ದೇಶವೇನೆಂದೂ, ಪೋಲೆಂಡಿನ ಸ್ವಾತಂತ್ರ್ಯ ರಕ್ಷಣೆಯು ಬ್ರಿಟನಿನ ಯುದ್ಧ ಉದ್ದೇಶವಾಗಿದ್ದರೆ ಅದು ಭಾರತಕ್ಕೆ ಹೇಗೆ ಅನ್ವಯಿಸುವುದೆಂದೂ ಕಾಂಗ್ರೆಸ್ಸು ಸ್ಪಷ್ಟೋಕ್ತಿಯಿಂದ ಕೇಳಲು ಅದನ್ನು ಮರೆಮಾಚಿ ಭಾರತದ ಜನಧನಗಳನ್ನು ಯುದ್ಧದಲ್ಲಿ ಉಪಯೋಗಿಸುತ್ತಿರುವುದಕ್ಕೆ ಭಾರತೀಯರು ಒಪ್ಪಲಾರರೆಂದು ಕಾಂಗ್ರೆಸು ವ್ಯಕ್ತಪಡಿಸಿದೆ. ಮಾತ್ರವಲ್ಲದೆ ಅದೇ ಹೇಳಿಕೆಯ ನಿಮಿತ್ತವಾಗಿ ಪ್ರಾಂತಿಕ ಅಧಿಕಾರದಲ್ಲಿದ್ದ ಕಾಂಗ್ರೆಸು ಮಂತ್ರಿಮಂಡಳಗಳು ರಾಜಿನಾಮೆ ಕೊಟ್ಟಿವೆಯೆಂದು ನಿರ್ಣಯದಲ್ಲಿ ಸಾರಲಾಗಿದೆ.

## ಸತ್ಯಾಗ್ರಹವು ಮುಂದಿನ ಹೆಜ್ಜೆ

ಕಾಂಗ್ರೆಸಿನ ಮಂತ್ರಿಮಂಡಳಗಳು ರಾಜಿನಾಮೆ ಕೊಟ್ಟಿರಲು ಮುಂದಿನ ಹೆಜ್ಜೆಯೇನೆಂಬುದನ್ನು ಕಾಂಗ್ರೆಸು ಈಗಾಗಲೇ ನಿರ್ಧರಿಸಿದೆ. ಸಂದರ್ಭವು ಸನ್ನಿಹಿತವಾದಾಗ ಕೂಡಲೇ ಭಾರತವು ಆಂದೋಲನವನ್ನು ಆರಂಭಿಸಬಹುದೆಂದು ನಿರ್ಣಯವು ಗಂಭೀರವಾಗಿ ಸಾರಿದೆ. ಈ ಸಂದರ್ಭದಲ್ಲಿ ಕಾಂಗ್ರೆಸಿನ ನಿರ್ಣಯದ ಕುರಿತು ಗಾಂಧಿಜಿಯವರಿತ್ತ ಪ್ರಕಟಣೆಯೂ ಕಾಂಗ್ರೆಸಿನ ಸತ್ಯಾಗ್ರಹ ಸಿದ್ಧತೆಯನ್ನೇ ಸಾರಿ ಹೇಳುತ್ತದೆ. ಭಾರತದ ಯುವಕರನ್ನು ತನ್ನ ಸತ್ಯ ಅಹಿಂಸೆಗಳ ನೀತಿಗಳಿಂದ ತಡೆದು ನಿಲ್ಲಿಸಿದ ಮಹಾತ್ಮರಾದರೂ ಬಹುಕಾಲ ತಾಳ್ಮೆಯಿಂದಿರಲಾರರೆಂಬುದು ವ್ಯಕ್ತವೇ ಇಂದು ಆಗಿದೆ.

## ರಾಮಗರದ ಮೇಲೆ

ಈ ವಿಷಯಗಳನ್ನು ವಿಚಾರಿಸಿದನ್ನು ರಾಮಗರದ ಅಧಿವೇಶನದಲ್ಲಿ ಮಂಜೂರಾಗ ತಕ್ಕ ಈ ನಿರ್ಣಯವನ್ನು ಇಷ್ಟು ಬೇಗನೇ ಬ್ರಿಟನಿನ ಮುಂದಿಡಲು ಇಚ್ಛಿಸಿದ ಕಾಂಗ್ರೆಸು ಈಗ ನಿರ್ಣಯವನ್ನು ಮಂಜೂರು ಮಾಡಿ, ಬ್ರಿಟನಿಗೆ ಯೋಚಿಸಲು ಸಮಯ ಕೊಟ್ಟಿದೆಯೆಂದು ತಿಳಿಯಬಹುದು. ರಾಜನೀತಿಯನ್ನೂ, ಭಾರತೀಯರ ಅಚಲ ಸ್ವಾತಂತ್ರ್ಯ ಪ್ರೇಮವನ್ನೂ ಚೆನ್ನಾಗಿ ಮನಗಂಡ ಬ್ರಿಟನಿನ ರಾಜನೀತಿಜ್ಞರು ಇನ್ನಾದರೂ ಸರಿ ದಾರಿ ಹಿಡಿದಾರೆಂದು ನಂಬಬಹುದೆ?

# ಕೆನರಾಬೇಂಕ್ ಲಿಮಿಟೆಡ್

೧೯೩೯ನೇ ವರ್ಷದ ಕೆನರಾಬೇಂಕಿನ ಆಯವ್ಯಯಪಟ್ಟಿಯು ನಮ್ಮ ಪತ್ರಿಕೆಯ ಬೇರೊಂದು ಕಡೆ ಕೊಡಲಾಗಿದೆ. ಬೇಂಕು ಈ ವರ್ಷ ಒಳ್ಳೆಯ ಅಭಿವೃದ್ಧಿಯನ್ನು ತೋರಿಸಿದೆಯೆಂಬ ವಿಷಯವು ಅದರಿಂದ ಸ್ಪಷ್ಟವಾಗುವುದು. ಕೆನರಾ ಬೇಂಕಿನ ಆಫೀಸುಗಳು ಬೊಂಬಾಯಿ ನಗರದಲ್ಲಿಯೂ ತೆರೆಯಲ್ಪಟ್ಟು ಉತ್ತಮ ರೀತಿಯಿಂದ ಕಾರ್ಯನಿರ್ವಾಹ ಮಾಡುತ್ತಿರುವವೆಂದು ನಾವು ತಿಳಿಯುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಹೋದ ಅನೇಕ ಮಂದಿ ಉದ್ಯೋಗಸ್ಥರು ಬೊಂಬಾಯಿ ನಗರದಲ್ಲಿ ನೆಲಸಿರುವರು. ಅವರಿಗೆಲ್ಲರಿಗೂ ತಮ್ಮ ಹುಟ್ಟುಜಿಲ್ಲೆಯಾದ ದಕ್ಷಿಣ ಕನ್ನಡದೊಡನೆ ಮಾಡಬೇಕಾಗಿರುವ ಎಲ್ಲಾ ಬಗೆಯ ವಹಿವಾಟುಗಳಿಗೆ ಅವಶ್ಯವಿರುವ ಬ್ಯಾಂಕಿಂಗ್ ಸೌಕರ್ಯವು ಈ ಮೂಲಕ ದೊರಕುವಂತಾದುದು ನಿಜವಾಗಿಯೂ ವಿಶೇಷ ಪ್ರಶಂಸನೀಯವಾದ ಕಾರ್ಯವಾಗಿದೆ. ಬೊಂಬಾಯಿಯ ಮಹಾಜನರೂ ಕೂಡಾ, ಕೆನರಾ ಬ್ಯಾಂಕಿನ ದಕ್ಷತೆಯ ವಿಷಯದಲ್ಲಿ ಬಹಳ ಅಭಿಮಾನ ಪ್ರಶಂಸೆಯುಳ್ಳವರೇ ಆಗಿರುವರೆಂದು ತಿಳಿಸಲು ಸಂತೋಷ ಪಡುತ್ತೇವೆ.

# ★ ಸಂಘಟಿತರಾಗಿರಿ! ಬಲಯುತರಾಗಿರಿ!! ★

## ಸ್ವಾತಂತ್ರ್ಯಯೋಧರಿಗೆ ಮಹಾತ್ಮರ ಹಿತವಚನ

ಕೆಲ ಸಮಯಗಳಿಂದ ಬ್ರಿಟನು ಮತ್ತು ಹಿಂದುಸ್ಥಾನಗಳಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡುವಾಗ ಬ್ರಿಟಿಷರ ಸಾಮ್ರಾಜ್ಯ ಶಾಹೀ ಧೋರಣೆಯಲ್ಲಿ ಏನೂ ಬದಲಾವಣೆಗಳಾಗಲಿಲ್ಲವೆಂದೂ ಅವರು ಎಷ್ಟು ಕಾಲ ಸಾಧ್ಯವಿದೆಯೋ, ಅಷ್ಟು ಕಾಲದ ತನಕ ಹಿಂದುಸ್ಥಾನವನ್ನು ತಮ್ಮ ಅಧೀನದಲ್ಲಿಟ್ಟು ಕೊಳ್ಳುವ ದೀಕ್ಷಾಬದ್ಧರಾಗಿದ್ದಾರೆಂದೂ ತಿಳಿಯುತ್ತದೆ. ಇಲ್ಲವಾದರೆ ಹೊಸ ಕ್ರಮದ ತೆರಿಗೆ ಹಾಕಲಿಕ್ಕೆ ಇದ್ದ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಅದನ್ನು ಕೇಂದ್ರ ಸರಕಾರಕ್ಕೆ ಕೊಡುವಂಥ ಕಾಯದೆಗಳು ಇಲ್ಲಿಯ ಜನಮತವನ್ನು ತೀರ ಅಲಕ್ಷಿಸಿ ಬ್ರಿಟಿಷಪಾರ್ಲಿಮೆಂಟಿನಲ್ಲಿ ಮಂಜೂರಾಗುತ್ತಿದ್ದಿಲ್ಲ. ವಾಯ್ಸರಾಯರು ಆಗಾಗ ಮಹಾತ್ಮರಂಥವರನ್ನು ಭೇಟಿಗೆ ಕರೆಯುವದು, ಕಾಲಹರಣ ಮಾಡಲಿಕ್ಕೆ ಪರಿಸ್ಥಿತಿಯನ್ನು ತಮಗೆ ಅನುಕೂಲವಾಗಿ ತಿದ್ದಿಕೊಳ್ಳಲಿಕ್ಕೂ ಮಾಡಿದ್ದ ಬ್ರಿಟಿಷ ರಾಜನೀತಿಜ್ಞರ ಒಂದು ಉಪಾಯ ಮಾತ್ರವಾಗಿದೆಯಲ್ಲದೆ ಬೇರೇನಿಲ್ಲ. ಭಾರತೀಯರು ಈಗ ಯಾವ ಸಂದರ್ಭದಲ್ಲಿಯಾದರೂ ಹೋರಾಟಕ್ಕೆ ಸಿದ್ಧರಾಗಿಲ್ಲ; ಬ್ರಿಟಿಷರು ಕೊಟ್ಟಷ್ಟನ್ನು ತೆಗೆದುಕೊಂಡು ಅವರು ತೃಪ್ತರಾಗುವರು ಎಂದು ಕೆಲವರು ತಿಳಕೊಳ್ಳುವಂತಾಗಿದೆ. ಹೋರಾಟವಂತೂ ಆಗುವಸಂಭವವಿಲ್ಲ ಎಂಬ ಧೈರ್ಯದಿಂದ, ಸ್ವಲ್ಪ ಸಮಯದ ಮೊದಲು ಕಾಂಗ್ರೆಸಿನ ರಾಜಕೀಯಗಳಿಂದ ಹಿಂದೆ ಸರಿದಿದ್ದ ಸ್ವಾರ್ಥಿಗಳು ಈಗ ಪುನಃ ಅದನ್ನು ಸೇರುವ ಪ್ರಯತ್ನ ಮಾಡಿದ್ದಾರೆ. ಅವರು ಸವಿಯಾದ ಮಾತುಗಳನ್ನಾಡಿ ಲೋಕವನ್ನು ಮರುಳುಗೊಳಿಸುವ ಇಂದ್ರಜಾಲಿಕನ ವೇಷವನ್ನು ತಾಳಿದ್ದಾರೆ.

### ನಮ್ಮ ಮುಂದಿನ ಕರ್ತವ್ಯ

"ಗೌರವಾಸ್ಪದವಾದ ಶಿವಸಾಗನವಾಗಬೇಕಾದರೆ ಅದಕ್ಕೆ ಭಾರತೀಯರು ಪ್ರಯತ್ನಿಸಲೇ ಬೇಕು. ಆದರೆ ಹೋರಾಟವು ಅನಿವಾರ್ಯವೆಂದಾದರೆ ಅದಕ್ಕೆಷ್ಟು ಮಾತ್ರಕ್ಕೂ ನಾವು ಹಿಂಜರಿಯುವವರಲ್ಲವೆಂಬುದನ್ನು ಬ್ರಿಟಿಸಿಗೂ ಜಗತ್ತಿಗೂ ತೋರಿಸಿ ಕೊಡುವದು ನಮ್ಮ ಕರ್ತವ್ಯವಾಗಿದೆ. ಬಾಯಿಯಿಂದ ಬ್ರಿಟಿಷ ರಾಜನೀತಿಜ್ಞರು ಯಾವ ಮಾತುಗಳನ್ನೇ ಆಡುತ್ತಲಿರಬಹುದಾದರೂ, ಯುರೋಪಿನ ಯುದ್ಧವನ್ನು ಬ್ರಿಟಿಷರು ತಮ್ಮ ಸಾಮ್ರಾಜ್ಯ ಸ್ವಾರ್ಥವನ್ನು ಭದ್ರಗೊಳಿಸಲಿಕ್ಕೆ ಆರಂಭಿಸಿದ್ದಾರೆಯೇ ವಿನಾ ಬೇರೆ ಕಾರಣದಿಂದಲ್ಲ ಎಂಬುದು ಅವರ ಈಚಿನ ಕಾರ್ಯಗಳಿಂದ ಸ್ಪಷ್ಟವಾಗಿದೆ. ಆದುದರಿಂದ ಬ್ರಿಟಿಷರು ತಾವಾಗಿ ಹಿಂದುಸ್ಥಾನದ ಮೇಲಿನ ತಮ್ಮ ಅಧಿಕಾರವನ್ನು ಬಿಟ್ಟುಕೊಡುವವರಲ್ಲ. ಅಂಥವರ ಮುಂದೆ ಹೋಗಿ ನಮ್ಮ ಮುಖಂಡರು ಆಗಾಗ ಮಂಡಿಯೂರುವದು ರಾಷ್ಟ್ರದ ಮಾನ ಮರ್ಯಾದೆಗಳಿಗೆ ಕುಂದನ್ನು ತರುವಂಥಹುದಾಗಿದೆ. ಹೀಗೆ ಮಾಡುವದು ನೈತಿಕ ದೃಷ್ಟಿಯಿಂದಲೂ ಹಾನಿಕರವಾಗಿದೆ.

'ಇವೇ ವಿಚಾರಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸು ಮುಂದಿನ ಕಾರ್ಯಕ್ರಮವನ್ನು ರೂಪಿಸಿ ಕೊಳ್ಳಬೇಕು. ಹೋರಾಟವು ಅನಿವಾರ್ಯವೆಂದಾದರೆ ಅದಕ್ಕೆ ನಾವು ಸಿದ್ಧರೆಂಬುದನ್ನು ನಮ್ಮ ಕಾರ್ಯಕ್ರಮವು ತೋರಿಸಿ ಕೊಡಬೇಕು. ಮಹಾತ್ಮರು ವಾಯ್ಸರಾಯರೊಡನೆ ಆಗಾಗ ರಾಜಿಪ್ರಸ್ತಾಪವನ್ನೆತ್ತಿ, ಅದಕ್ಕೋಸುಗ ಸಮಯವನ್ನು ಕಳೆಯಹತ್ತಿದ್ದರಿಂದ ಬ್ರಿಟಿಷರಿಗೆ ಇಲ್ಲಿಂದ ಬೇಕಾದಷ್ಟು ಯುದ್ಧದ ಸಲಕರಣೆಗಳನ್ನು ಪಡೆಯಲಿಕ್ಕೆ ಅನುಕೂಲವಾಗಿದೆ ಮಾತ್ರವಲ್ಲದೆ, ಹಿಂದುಸ್ಥಾನದ ಜನಮತವು ಬ್ರಿಟಿಷರಿಗೆ ಅನುಕೂಲವಾಗಿದೆ ಎಂಬ ತಪ್ಪು ಭಾವನೆಯು ಪ್ರಪಂಚದಲ್ಲೆಲ್ಲ ಹರಡಿ, ಹಿಂದುಸ್ಥಾನದ ಹಿತಕ್ಕೆ ಬಾಧೆ ತಟ್ಟುವಂತೆಯೂ ಆಗಿದೆ."

### ಮಹಾತ್ಮರ ಹೇಳಿಕೆ

ಹೀಗೆ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ವಿವೇಚಿಸಿ ಒಬ್ಬ ಅನುಭವೀ ಕಾಂಗ್ರೆಸ ಕಾರ್ಯಕರ್ತರೊಬ್ಬರು ಮಹಾತ್ಮರಿಗೆ ಪತ್ರ ಬರೆದಿರುವದಕ್ಕೆ ಮಹಾತ್ಮರು ಅದರ ಕುರಿತು ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರು. "ಹೀಗೆ ಕಾರ್ಯಕರ್ತರು ಎಚ್ಚರಿಕೆಯನ್ನು ಕೊಡುತ್ತಿರುವದು ಕಾರ್ಯ ನಿರ್ವಾಹಕ್ಕೆ ಅನುಕೂಲವಾಗಿರುವುದು. ಮೇಲೆ ಬರೆದ ಮಾತುಗಳಲ್ಲಿ ಯಥಾರ್ಥತೆ ಇಲ್ಲದಿಲ್ಲ. ಪತ್ರಲೇಖಕರ ತರ್ಕವು ಪ್ರಬಲವಾಗಿರುವದು. ಗೌರವಾಸ್ಪದ ಒಡಂಬಡಿಕೆಯಾಗಲಿಕ್ಕೆ ಎಳ್ಳಷ್ಟು ಆಶೆಯಿರುವ ತನಕವೂ ಅದಕ್ಕೆ ಪ್ರಯತ್ನಿಸಬೇಕಾದ್ದು ಸತ್ಯಾಗ್ರಹಿಯ ಕರ್ತವ್ಯವು. ವಾಯ್ಸರಾಯರು ಇಂಥ ಒಡಂಬಡಿಕೆಯಾಗಲಿಕ್ಕೆ ನಿಜವಾಗಿಯೂ ಪ್ರಯತ್ನಿಸುತ್ತಿದ್ದಾರೆ ಎಂಬ ವಿಶ್ವಾಸವು ಮುಳ್ಳಾಗುವ ತನಕ, ಸತ್ಯಾಗ್ರಹಿಯು ವಾಯ್ಸರಾಯರ ಬಳಿಗೆ ಒಡಂಬಡಿಕೆ ಮಾಡಿಕೊಳ್ಳಲಿಕ್ಕೆ ಹೋಗಬೇಕಾಗುವದು. ಶತ್ರುವನ್ನು ಸೋಲಿಸುವ ಅಥವಾ ಅವನ ಮಾನಭಂಗಮಾಡುವದಕ್ಕೆ ಸತ್ಯಾಗ್ರಹ ಶಾಸ್ತ್ರವು ಹೇಳುವದಿಲ್ಲ. ಆದರೆ ಬದಲಿಗೆ ಶತ್ರುವನ್ನು ಪ್ರೇಮದಿಂದ ಒಲಿಸಿ ಅವನ ಹೃದಯ ಪರಿವರ್ತನೆ ಮಾಡಲಿಕ್ಕೆ ಅದು ಹೇಳುತ್ತದೆ. ಇದು ತಾನೇ ಸತ್ಯಾಗ್ರಹ ವಿಜಯದ ರಹಸ್ಯವಾಗಿರುವದು. ಆದುದರಿಂದ ವಾಯ್ಸರಾಯರು ಕರೆ ಬಂದಾಗ ಅವರ ಬಳಿಗೆ ಹೋಗದಿರುವದು ಸತ್ಯಾಗ್ರಹ ಧರ್ಮಕ್ಕೆ ವಿರೋಧವಾಗಿರುವದು.

"ಆದರೆ ಇದರಿಂದ ಯಾರೂ ಧೈರ್ಯಗೆಡಬಾರದು. ಜನರಲ್ಲಿ ಸ್ಫೂರ್ತಿ ಉತ್ಸಾಹಗಳು ಕಡಿಮೆಯಾಗದಂತೆ, ಅವರಿಗೆ ಆಗಾಗ ಸದ್ಬೋಧನೆಯನ್ನು ಕೊಟ್ಟು ಪರಿಸ್ಥಿತಿಯ ಪರಿಜ್ಞಾನವನ್ನು ಕೊಡುವದು ಕೆಲಸಗಾರರ ಕರ್ತವ್ಯವಾಗಿರುತ್ತದೆ. ಜನರಲ್ಲಿ ಕಾರ್ಯೋತ್ಸಾಹವು ಕಂಡುಬಂದಾಗ ಅದಕ್ಕೆ ತಕ್ಕ ಅವಕಾಶ ಮಾಡಿಕೊಡದಿದ್ದರೆ ಆ ಉತ್ಸಾಹವು ಅಲ್ಲಿಯೆ ಕುಂದುತ್ತದೆಂದು ಹೇಳುವ ಮಾತು ರಕ್ತರಂಜಿತಕ್ರಾಂತಿಗಳ ಕುರಿತು ನಿಜವಾಗಬಹುದು. ಆದರೆ ಅಹಿಂಸಾತ್ಮಕ ಕ್ರಾಂತಿಯ ಕುರಿತು ಹಾಗೆ ಹೇಳುವದು ಸರಿಯಲ್ಲ. ನಾವು ಅವಸರಪಟ್ಟು ಹೋರಾಟವನ್ನು ಆರಂಭಿಸಿದರೆ ಲಾಭಕ್ಕಿಂತ ಹಾನಿಯಾಗುವದೇ ಹೆಚ್ಚು. ಹೋರಾಟವು ಅನಿವಾರ್ಯವೆಂದಾದಾಗ, ಅದು ಬಂದೇ ಬರುವದು. ಹೋರಾಟಕ್ಕಾಗಿಯೇ ಯಾರೂ ಅತಿ ಉತ್ಸಾಹವನ್ನು ತೋರಿಸಬಾರದು. ನಮ್ಮ ಕಾರ್ಯಧೋರಣೆ ಮತ್ತು ಉದ್ದೇಶಗಳ ಕುರಿತ ಬ್ರಿಟನು ಮತ್ತು ಪ್ರಪಂಚದಲ್ಲಿ ತಪ್ಪು ತಿಳುವಳಿಕೆಯು ಹರಡಿಕೊಳ್ಳುತ್ತಿದೆಯಾದರೆ ಅದಕ್ಕೆ ನಾವು ಗಾಬರಿಯಾಗುವ ಕಾರಣವಿಲ್ಲ. ಸತ್ಯದ ಮುಂದೆ ಅಸತ್ಯವು ಮಾಯವಾಗಲೇ ಬೇಕು. ಒಡಂಬಡಿಕೆಯ ಮಾತು ತೆಗೆದು ಬ್ರಿಟಿಷರು ಇಲ್ಲಿ ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆಂದು ಹೆದರುವದಾದರು ಯಾಕೆ? ನಾವು ಸುಸಂಘಟಿತರೂ ಬಲಿಷ್ಠರೂ ಆಗಿರುವೆವಾದರೆ ಬ್ರಿಟಿಷರ ಈ ಬಗೆಯ ಧೋರಣೆಯಿಂದ ಅವರಿಗೆ ಎಳ್ಳಷ್ಟು ಪ್ರಯೋಜನ ದೊರೆಯುವದಿಲ್ಲ. ನಾವು ದುರ್ಬಲರೂ ಅಸಂಘಟಿತರೂ ಆಗಿ, ಬ್ರಿಟಿಷರು ಅದರ ಪ್ರಯೋಜನ ತೆಗೆದು ಕೊಳ್ಳುತ್ತಿದ್ದಾರಾದರೆ, ಅದಕ್ಕಾಗಿ ನಾವು ಅವರನ್ನು ದೂರಿ ಏನು ಪ್ರಯೋಜನ? ಆದುದರಿಂದ ನಾವು ಸುಸಂಘಟಿತರೂ ಬಲಿಷ್ಠರೂ ಆಗಲಿಕ್ಕೆ ಮೊದಲು ಪ್ರಯತ್ನಿಸಬೇಕು. ನಾವು ಹಾಗಾದಾಗ ತಾನೇ ನಮ್ಮ ಮಾತುಗಳಿಗೂ ಕಾರ್ಯಗಳಿಗೂ ಯಾರಿಂದಲೂ ಸೋಲಿಸಲಿಕ್ಕಾಗದ ಶಕ್ತಿ ಬರುವದು."

**U. K. BHUJANGA NAYAK**
**CLOTH COMMISSION AGENT**
**SHEVAPET, SALEM**

**ಯು. ಕೆ. ಭುಜಂಗ ನಾಯಕ್,**
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

**The Auttur & Jawahar Bank, Limited.**
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.
ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು ಬ್ರೆಂಚ್: ಪೆಂಟ್‌ಲೆಂಡ್ ಪೇಟೆ
ರಜಿಸ್ಟರ್ಡ ಮೂಲಧನ ರೂ. 1,00,000. ಸಲ್ಲಿಸಲ್ಪಟ್ಟ ಮೂಲಧನ ರೂ. 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 45
" 6 ತಿಂಗಳಿಗೆ 4% " 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು
ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

# ಭಾರತೀಯರು ಸ್ವತಂತ್ರರಾಗಬೇಕೆಂದು ವಿದೇಶದ ಮುಸ್ಲಿಮರ ಹಂಬಲ!

## ಮೌಲಾನಾ ಸೋಬಾನಿಯವರ ಅನುಭವ— ಜಿನ್ನರ ದುರಾಗ್ರಹಕ್ಕೆ ಎಲ್ಲಿಯೂ ಮನ್ನಣೆಯಿಲ್ಲ

ಹಿಂದುಸ್ತಾನದ ಜನರು ಮೂವತ್ತೈದು ಕೋಟಿ ಇದ್ದು, ಅವರೇಕೆ ಇದುವರೆಗೆ ಭಾರತವನ್ನು ಸ್ವತಂತ್ರ ಮಾಡಲಿಕ್ಕೆ ಸಮರ್ಥರಾಗಲಿಲ್ಲ? ಹಿಂದುಸ್ತಾನದಲ್ಲಿ ಎಂಟು ಒಂಭತ್ತು ಕೋಟಿ ಜನ ಮುಸಲ್ಮಾನರಿದ್ದು ಅವರೇಕೆ ಭಾರತವನ್ನು ಸ್ವತಂತ್ರ ಮಾಡುವದಿಲ್ಲ? ಪರ್ಶಿಯ, ಪೆಲೆಸ್ತೈನ, ಇರಾಕ್, ಈಜಿಪ್ತ, ಸಿರಿಯ, ಅಫಘಾನಿಸ್ತಾನ, ಯಾವ ಮುಸಲ್ಮಾನ ರಾಷ್ಟ್ರಕ್ಕೆ ಹೋದರೂ, ಅಲ್ಲಿ ಜನರು ಕೇಳುತ್ತಿರುವ ಪ್ರಶ್ನೆಗಳು ಇವೇ ಎರಡು ಆಗಿವೆ' ಎಂದು ಆ ದೇಶಗಳನ್ನು ಸಂಚರಿಸಿ ಈಗ ತಾನೇ ಮರಳಿರುವ ಮೌಲಾನಾ ಅಜದ್ ಸೋಬಾನಿಯವರು ತಮ್ಮ ಅನುಭವವನ್ನು ಹೇಳಿರುವರು.

**ಜಿನ್ನರ ಮಾತಿಗೆ ಮರ್ಯಾದೆಯಿಲ್ಲ**

ಮೇಲೆ ಹೇಳಿದ ಎಲ್ಲ ದೇಶಗಳು ಮುಸ್ಲಿಂ ಲೀಗಿನ ಅಧ್ಯಕ್ಷ ಮಿ. ಜಿನ್ನರು ಹೇಳುವ ಮಾತಿಗೆ ಆ ದೇಶಗಳಲ್ಲಿ ಎಲ್ಲಿಲ್ಲಿಯೂ ಸಮರ್ಥನೆಕೊಡುವುದಿಲ್ಲ ಹಿಂದುಸ್ತಾನವನ್ನು ಮುಸಲ್ಮಾನರ ಹಿಂದುಸ್ತಾನ ಮತ್ತು ಹಿಂದುಗಳ ಹಿಂದುಸ್ತಾನವೆಂದು ವಿಭಾಗಿಸುವ ಜಿನ್ನರ ವಿಚಾರವನ್ನು ಈ ಮುಸಲ್ಮಾನ ರಾಷ್ಟ್ರಗಳು ಬಹಳ ನಿಂದಿಸುತ್ತವೆ.

**ಭಯಂಕರ ಪಾಪ**

ಒಂದು ದೇಶವು ಪರತಂತ್ರವಾಗುವದು, ಮತ್ತೆ ಆ ಪರತಂತ್ರ ದೇಶದ ಜನರು ಜಡರಾಗಿರುವದು, ಹಾಗೂ ಅವರು ತಮ್ಮ ದುಸ್ಥಿತಿಯಲ್ಲಿ ಸಂತೃಪ್ತರಾಗಿರುವದು ಭಯಂಕರ ಪಾಪವಾಗಿದೆ ಭಾರತೀಯ ಮುಸಲ್ಮಾನರು, ಹೀಗೆ ಭಯಂಕರ ಪಾಪ ಮಾಡಿದವರಾಗಿರುವದರಿಂದ ವಿದೇಶೀಯ ಮುಸಲ್ಮಾನರು ಯಾರೂ ಅವರನ್ನು ಗೌರವದಿಂದ ನೋಡುವದಿಲ್ಲ ಒಂದೊ ಭಾರತೀಯ ಮುಸಲ್ಮಾನರು ಬ್ರಿಟಿಷರ ಶಾಸನಸೂತ್ರವನ್ನು ಕಿತ್ತಿದು ಸ್ವತಂತ್ರರಾಗಬೇಕು, ಅಲ್ಲವಾದರೆ ಅವರು ತಮ್ಮೊಡನೆ ಯಾವ ಸ್ನೇಹ ಸಂಬಂಧದ ಆಶೆಯನ್ನು ಇಟ್ಟುಕೊಳ್ಳಲಾರರೆಂದು ಪರರಾಷ್ಟ್ರ ಮುಸಲ್ಮಾನರು ಆಶಿಸುತ್ತಾರೆ.

**ಧರ್ಮಾಂಧತೆಯ ದುಷ್ಪರಿಣಾಮ**

ಭಾರತೀಯ ಮುಸಲ್ಮಾನರು ದೇಶದ ಸ್ವಾತಂತ್ರ್ಯಕ್ಕಾಗಿ ಅಷ್ಟು ಹೆಚ್ಚಾಗಿ ಹೋರಾಡದಿರುವದಕ್ಕೆ ಅವರು ಬಹಳ ಮಾಡಿ ಧರ್ಮಾಂಧರಾಗಿರುವದೇ ಕಾರಣವಾಗಿದೆ, ಭಾರತೀಯ ಮುಸಲ್ಮಾನರು ಧರ್ಮಾಂಧರಾಗಿರುವಷ್ಟು ಬೇರೆ ಯಾವ ದೇಶದ ಮುಸಲ್ಮಾನರೂ ಇರುವದಿಲ್ಲ ಎಂದು ಮೌಲಾನಾ ಸೋಬಾನಿಯವರು ತಮ್ಮ ವಿದೇಶ ಸಂಚಾರದ ಅನುಭವದಿಂದ ಹೇಳಿದ್ದಾರೆ. ಅಂದರೆ ವಿದೇಶೀಯ ಮುಸಲ್ಮಾನರಲ್ಲಿ ಧರ್ಮಾಭಿಮಾನವು ಇರುವದಿಲ್ಲವೆಂದಲ್ಲ. ಆದರೆ ಅವರು ನಿಜವಾದ ಮುಸಲ್ಮಾನ ಧರ್ಮವು ಯಾವುದು, ಎಂಬುದನ್ನು ಚೆನ್ನಾಗಿ ತಿಳಿದಿದ್ದಾರೆ. ಆದ್ದರಿಂದ ಯಾವದು ಅವರ ರಾಜಕೀಯ, ಸಾಮಾಜಿಕ, ಮತ್ತು ನೈತಿಕ ಉನ್ನತಿಗೆ ಸಾಧಕವೋ ಅಂಥ ಸುಲಭ, ಸರಲ ಸತ್ಯ ಮುಸಲ್ಮಾನ ಧರ್ಮವನ್ನಷ್ಟೇ ಇಟ್ಟುಕೊಂಡು ಮಿಕ್ಕದ್ದನ್ನು ತ್ಯಜಿಸಿದ್ದಾರೆ ಆದ್ದರಿಂದ ಅಲ್ಲಿ ಧರ್ಮಾವಲಂಬನೆಗೂ ರಾಜಕೀಯಕ್ಕೂ ತಿಕ್ಕಾಟವು ಕಂಡುಬರುವದಿಲ್ಲ. ಸ್ವಾರ್ಥಿಗಳು ಹೇಳುವಂತೆ ವಿದೇಶೀಯ ಮುಸಲ್ಮಾನರಲ್ಲಿ ಸದ್ಧರ್ಮ ಪ್ರೇಮವು ಕಡಿಮೆಯಾಗಿರುವದಿಲ್ಲ ಆದರೂ ಅವರ ಧರ್ಮವು ಅವರ ರಾಜಕೀಯ ಮತ್ತು ಸಾಮಾಜಿಕ ಉನ್ನತಿಗೆ ಭಂಗ ತರ ವದಲ್ಲ ಈ ವಿಷಯದಲ್ಲಿ ಭಾರತೀಯ ಮುಸಲ್ಮಾನರು ಅವರನ್ನೆ ತಮ್ಮ ಮಾರ್ಗದರ್ಶಕರನ್ನಾಗಿಟ್ಟುಕೊಂಡರೆ ಚೆನ್ನಾಗುವುದು.

**ಲೀಗು ಮುಸಲ್ಮಾನರ ಹಿತಾರ್ಥವಾಗಿಲ್ಲ**

ಮಿ ಜಿನ್ನರ ಮುಸ್ಲಿಂ ಲೀಗು ಭಾರತೀಯ ಮುಸಲ್ಮಾನರ ಹಿತಕ್ಕಾಗಿ ಇದೆ ಎಂದು ಮುಸಲ್ಮಾನರು ತಿಳಿಯುವದು ಮೂಢತನವಾಗಿದೆ ಕಾಂಗ್ರೆಸು ಜಾತಿ ಮತಭೇದವನ್ನು ಇಟ್ಟುಕೊಳ್ಳದೆ ಎಲ್ಲರ ಆಶ್ರಯದಿಂದ ಬೆಳೆದು ಬರುತ್ತಿರುವಾಗ, ಮುಸ್ಲಿಂ ಲೀಗು ಕೇವಲ ಸರಕಾರದ ಆಶ್ರಯದಲ್ಲಿ ಮಾತ್ರ ಬೆಳೆಯಬಲ್ಲುದು ಅದು ಹೋಯಿತೆಂದರೆ, ಮತ್ತೆ ಲೀಗಿಗೆ ಜೀವನವೇ ಇಲ್ಲ ಎಂದು ಅಸ್ಸಾಮಿನ ಮಾಜಿ ಮಂತ್ರಿಗಳಾದ ಮಿ. ಯುಸ್ ಎ ಅಹ್ಮದರವರು ಹೇಳಿದ್ದಾರೆ ಕಾಂಗ್ರೆಸು ಹೇಳಿದಂತೆ ಭಾರತದ ಭಾಗ್ಯ ನಿರ್ಣಯ ಮಾಡಲಿಕ್ಕೆ ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿಯನ್ನು ಕರೆಯುವದಾದರೆ, ಅದು ಹಿಂದುಸ್ತಾನದ ಎಲ್ಲಾ ಜನರ ಪ್ರತಿನಿಧಿ ಮಂಡಲವಾಗುವದು ಆದ್ದರಿಂದ ಸಹಜವಾಗಿ ಸಂಪೂರ್ಣ ಸ್ವಾತಂತ್ರ್ಯವ ಮಸೂದೆಯನ್ನೇ ತಯಾರಿಸ್ಸೀತು. ಪರಂತು ದೇಶವು ನಿಜಕ್ಕೂ ಸ್ವತಂತ್ರವಾಗುವದು, ಮಿ. ಜಿನ್ನರಿಗೂ ಅವರ ಅನುಯಾಯಿಗಳಿಗೂ ಬೇಕಾಗಿಲ್ಲ. ದೇಶದ ಸ್ವಾತಂತ್ರ್ಯವು ಅವರಿಗೆ ಹಿತಕರವಾಗಿರುವದಿಲ್ಲ. ದೇಶವು ಸ್ವತಂತ್ರವಾದರೆ ಅವರ ಅನ್ಯಾಯ ಪೂರ್ಣ ಬೇಡಿಕೆಗಳಿಗೆ ಮನ್ನಣೆ ದೊರೆಯುವದಿಲ್ಲ. ಆದ್ದರಿಂದ ಭಾರತೀಯ ಮುಸಲ್ಮಾನರು ಕಾಂಗ್ರೆಸಿಗೆ ಸೇರಿ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯತಕ್ಕದ್ದೆಂದು ಮಿ. ಅಹ್ಮದರೂ ಮುಸಲ್ಮಾನರಿಗೆ ಎಚ್ಚರಿಕೆಯ ಸಂದೇಶವನ್ನು ಕೊಟ್ಟಿದ್ದಾರೆ.


**ಕೆಮ್ಮು, ಶೀತ ಮೊದಲಾದ ಬಾಧೆಗಳಿಂದ ಎದೆಯನ್ನು ರಕ್ಷಿಸಿರಿ!**

ಕೆಮ್ಮು ಶ್ವಾಸಕೋಶಗಳನ್ನು ಬಲಗುಂದಿಸುವ ಶೀತ ಚಳಿಜ್ವರ ಮೊದಲಾದುವುಗಳಿಂದ ನರಳುವಿರಾದರೆ ಕೂಡಲೇ ಪೆಪ್ಸನ್ನು ಸೇವಿಸುವಂತೆ ಜಾಗ್ರತೆಯಾಗಿರಿ. ಈ ವಿಷಹಾರಿ ಶ್ವಾಸನೀಯ ಗುಳಿಗೆಗಳು ಸೇವಿಸಲು ಬಹಳ ರುಚಿಕರ ಮತ್ತು ಯಾವತ್ತೂ ಬಾಧೆಗಳನ್ನು ಗುಣಪಡಿಸುವಷ್ಟು ಶಕ್ತಿಯುಳ್ಳದ್ದು

ಪೆಪ್ಸು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಆಳವಾಗಿ ಹೊಕ್ಕಿ ಅಲ್ಲಿರುವ ವಿಷಕಾರಿ ಕ್ರಿಮಿಗಳನ್ನು ನಾಶಮಾಡಿ ಗಂಟಲನ್ನೂ ಎದೆಯ ಬಾಧೆಯನ್ನೂ ಶಮನಗೊಳಿಸುತ್ತದೆ ಇವು ಶೀತ ಜ್ವರ ಮೊದಲಾದವುಗಳಿಗೆ ತಕ್ಕುದಾದ ಔಷಧಿ

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ 1ರಂತೆ ಮಾರುತ್ತಾರೆ

ಏಜಂಟ್ಸ್—

ಮೆಸರ್ಸ್ ದಾಥಾ ಮತ್ತು ಕಂಪೆನಿ, ಬ್ಲಾಕ್‌ಟೌನ್ ಮದ್ರಾಸು

ಯಾವಾಗಲೂ ಪೆಪ್ಸನ್ನು ಉಪಯೋಗಿಸಿರಿ

**PEPS**

ವಿಷಹಾರಿ ಶ್ವಾಸನೀಯ ಮಾತ್ರೆಗಳು



## ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದುದು.

**೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ**

| ಮೂಲಧನ | ರೂ ಆ ಪೈ | | ರೂ ಆ ಪೈ |
|---|---|---|---|
| ತೆತ್ತಲ್ಪಟ್ಟ | 6 00 000 0 0 | ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ | 95,489-4-3 |
| ಪೈಡ್ ಅಪ್ | 3,91,312-0-0 | ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು | |
| ರಿಸರ್ವ್ ಫಂಡು | 1,50,000 0-0 | ಬೆಲೆಬಾಳುವ ಸೆಕ್ಯೂರಿಟಿ | 40 97,741 5 6 |
| ಡಿಪೊಸಿಟ್ ಫಿಕ್ಸೆಡ್, ಕರೆಂಟ್ ಇತ್ಯಾದಿ | 81,21,622-8-1 | ಹುಂಡೀ ಪತ್ರ ಮೊದಲಾದುವುಗಳು | 10,30,649 2-10 |
| ಬೇಂಕುಗಳಿಗೆ ಸಲ್ಲತಕ್ಕದ್ದು | ಇಲ್ಲ | ಕೇವಣಾತಿ | 20,64 586-2-0 |
| ವಿವಿಧ | 10,51,709-1-7 | ವಿವಿಧ | 9 62,093-10-4 |
| ಈ ವರ್ಷದ ಲಾಭ | 55,003 0-6 | ನಗದಿ | 17,99,207-1-3 |
| ಜುಮ್ಲಾ | 1,00,69,766 10 2 | ಜುಮ್ಲಾ | 1,00,69,766-10-2 |



## ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

**ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)**

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ, ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು.- ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ದಯಮಾಡಿ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಳವಾಮಾಹಿಮ, ಶಾಹೀ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣಗುಣಕಾರಿ ಡಬ್ಬಿಯು ಕ್ರಯರೂ. ೪-೦-೦

ವಿ. ಪಿ →

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ವಿರಜಿ, (S. M. C.

ಈ ವಾರದ ಕತೆ:

# ಅಗ್ನಿಪರೀಕ್ಷೆ

ಕನ್ನಡಿಸಿದವರು ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ

ಅವರು ನನ್ನನ್ನು 'ಪ್ರೇಮಾ' ಅನ್ನುತ್ತಿದ್ದರು.

ನಾನು ಅವರನ್ನು 'ಮನೋಹರ' ಅನ್ನುತ್ತಿದ್ದೆ.

ಯಾವ ಸಮಯದ ಕತೆಯನ್ನು ನಾನೀಗ ಹೇಳುತ್ತಿದ್ದೇನೋ, ಅದು ನನ್ನ ಜೀವನದ ಉಷಾಕಾಲವಾಗಿದ್ದಿತು ಬಾಲ ಚಂದ್ರನ ಶೀತಲ ಪ್ರಕಾಶವು ಬಿದ್ದಿದ್ದಿತು ಯೌವನ ದಿವಾಕರನ ಪ್ರಬಲ ಆತಂಕಮಯ ರಶ್ಮಿಗಳು ನಲಿನಲಿದು ತಮ್ಮ ನೃತ್ಯವನ್ನಾರಂಭಿಸಿದ್ದುವು ಸೌಂದರ್ಯ ಸುಮನದ ಮುಕುಲಿತ ಕಲಶವು ತನ್ನ ಲಲಿತ ಹಾಸ್ಯವನ್ನು ಚತುರ್ದಿಶೆಗಳಲ್ಲಿ ಚೆಲ್ಲತೊಡಗಿತ್ತು ಆ ಸಮಯ ನನ್ನ ಹೃದಯಾಂತರಾಳದಲ್ಲಿ ಒಂದು ಅನಿರ್ವಚನೀಯವಾದ ಅಭಾವದ ಅನುಭವವಾಗಲು ಆರಂಭವಾಗಿತ್ತು ನನ್ನ ಹೃದಯವು ಒಂದು ಪ್ರತಿಮಾವಿಹೀನ ಸಿಂಹಾಸನದಂತೆ ಬಾಸವಾಗತೊಡಗಿತ್ತು ಹಗಲು-ರಾತ್ರಿ, ನಿದ್ರಿಸುತ್ತಿರುವಾಗಲೂ ಎಚ್ಚರಿರುವಾಗಲೂ ನನ್ನ ಕೋಮಲ ಹೃದಯದಲ್ಲಿ ಏನೋ ಒಂದು ಅಜ್ಞಾತ ವೇದನೆಯು ಪೀಡಿಸಲಾರಂಭಿಸಿತ್ತು ಜನರನ್ನುತ್ತಿದ್ದರು—ಅದು ನನ್ನ ಜೀವನ ವಸಂತದ ಪ್ರಭಾತಕಾಲವಾಗಿತ್ತೆಂದು ಹೌದು, ಅದು ನನ್ನ ಜೀವನದ ಪ್ರಭಾತವೇ ಆಗಿದ್ದಿತ

ಬಾಲ್ಯದಿಂದ ನಾನು ಮತ್ತು ಅವರು ಒಟ್ಟೊಟ್ಟಿಗೆ ಇರುತ್ತಿದ್ದೆವು ನನ್ನ ಅವರ ಸಂಬಂಧವು, ಒಂದೆರಡು ದಿನಗಳದ್ದಲ್ಲ, ಚಿರಕಾಲದ್ದಾಗಿತ್ತು ಎಷ್ಟೋ ಶ್ಯಾಮಾವರಣ ಪರಿವೇಷ್ಟಿತ ಸಂಧ್ಯಾಕಾಲಗಳನ್ನೂ, ಎಷ್ಟೋ ಸುವರ್ಣಮಯೀ ಪ್ರಭಾತಗಳನ್ನೂ ನಾವಿಬ್ಬರು ಒಂದೆಡ ಕೂಡಿಯೇ ಕಳೆದಿದ್ದೆವು! ಎಷ್ಟೋ ಪ್ರಕಾರದ ಆಟ ವಿನೋದಗಳನ್ನು ನಾವಿಬ್ಬರು ಪ್ರತಿದಿನ ಆಡುತ್ತಿದ್ದೆವು ನಿತ್ಯ ನಮ್ಮ ನಮ್ಮ ಗೊಂಬೆಗಳನ್ನು ಅಲಂಕರಿಸಿ ಅವುಗಳಿಗೆ ಮದುವೆ ಮಾಡುತ್ತಿದ್ದೆವು ಅವರ ಗೊಂಬೆ 'ವರ' ಮತ್ತು ನನ್ನ ಗೊಂಬೆ 'ವಧು' ಆಗುತ್ತಿತ್ತು. ಎಷ್ಟೊಂದು ಬೋಳೇತನದ ಜೀವನವಾಗಿತ್ತದು! ಬಾಲ್ಯಕಾಲದ ಈ ಸುಲಭ ಆಟವೇ ನಿಕಟ ಜೀವನದಲ್ಲಿ ಅಂಥ ಮಹತ್ವಪೂರ್ಣ ರೂಪವನ್ನು ಧಾರಣ ಮಾಡೀತೆಂದು ಆಗ ನಾನೇನು ಬಲ್ಲವಳಾಗಿದ್ದೆ!

—ಮೆಲ್ಲ ಮೆಲ್ಲಗೆ ನಾವು ಎಚ್ಚರಗೊಂಡಾಗ ನಮ್ಮಿಬ್ಬರ ವಿದ್ಯಾಬೋಧನೆಗಳೂ ಒಂದೆಡೆ ಒಟ್ಟೊಟ್ಟಿಗೆ ಆಗತೊಡಗಿದುವು. ಗ್ರಾಮಶಾಲೆಯ ಶಿಕ್ಷಣವನ್ನು ಪಡೆಯು ವದಕ್ಕೋಸ್ಕರ ಅವರು ನಗರಕ್ಕೆ ಹೊರಟುಹೋದರು. ನಾನು ಕೂಡ ಒಂದು ಆದರ್ಶ ಕನ್ಯಾ ಶಿಕ್ಷಣಾಲಯಕ್ಕೆ ಕಳುಹಿಸಲ್ಪಡುವವಳಾಗಿದ್ದೆ, ಆದರೆ ಒಂದು ಆಗ 'ಕ್ಷದ ಕಾರಣದಿಂದ ಅಲ್ಲಿಗೆ ಕಳುಹಿಸಲ್ಪಡಲಿಲ್ಲ.

೨

ಇತ್ತ ನನ್ನ ಜೀವನಾಂಗಣದಲ್ಲಿ ಯೌವನ ದಿವಾಕರನು ಇಣಿಕತೊಡಗಿದ; ಅತ್ತ ಪಿತಾಜಿಯವರಿಗೆ ನನ್ನ ವಿವಾಹದ ಚಿಂತೆಯು ಹತ್ತಿತು ಅವರು ಇತ್ತ ಅತ್ತ ವರನನ್ನು ಹುಡುಕಿ ಅಲೆಯಲಾರಂಭಿಸಿದರು ನನಗೆ ಆ ದಿನಗಳಲ್ಲಿ ನನ್ನ ಜೀವನವು ಶೂನ್ಯವೆಂಬ ಹಾಗೆ ತೋರತೊಡಗಿತ್ತು ನನ್ನ ಹೃದಯಭವನದ ಅಂಧಕಾರಪೂರ್ಣ ಕೋಠಡಿಗಳಲ್ಲಿ ಪ್ರಕಾಶದ ಯಾವದಾದರೂ ಕ್ಷೀಣ ಕಿರಣ ಎದ್ದುದಾದರೆ ಅದು ನನ್ನ 'ಮನೋಹರ'ನಾಗಿದ್ದನು!

ಬಹಳ ದಿನಗಳ ಹಿಂದಿನ ಮಾತು ನಾವಿಬ್ಬರು ಸುಕುಮಾರ ಸೈಕತದ ಮಡಿಲಲ್ಲಿ ಕೂತು ಹೊಸ ಹೊಸ ಆಟಗಳನ್ನು ಆಡುತ್ತಿದ್ದಾಗ ಒಂದು ದಿನ ನಾನು ಮನೋಹರನೊಡನೆ ಹೇಳಿದೆ—'ದೊಡ್ಡವರಾದ ಮೇಲೆ ನಮ್ಮದೂ ಸಹ ಇದೇ ಪ್ರಕಾರ ವಿವಾಹವಾಗುವದು ಆಗ ನಾನು ವಧು ಆಗುವೆ ನೀನು ವರನಾಗುವಿ ಆ ದಿನವು ಎಷ್ಟು ಆನಂದದ್ದಾಗುವದು, ಅಲ್ಲವೇ ಮನೋಹರ?' ಆಗಲೇನೋ ಅವರು ನನ್ನ ಈ ಪ್ರಶ್ನೆಯನ್ನು—'ಛೀ ಹುಡುಗಿ! ಆಚೆ ಹೋಗು' ಎಂದು ಹೇಳಿ ಅಡಗಿಸಿದ್ದರು ಅಂದಿನಿಂದ ಇಂದಿನ ತನಕ ಅವರೊಡನೆ ನನ್ನ ಪ್ರಕಟರೂಪದಿಂದ ಯಾವ ಮಾತೂ ನಡೆಯಲಿಲ್ಲ ಆದರೆ ಒಂದು ಮಾತಿದೆ ಯಾವ ದಿನಗಳಲ್ಲಿ ನಾವಿಬ್ಬರು ಶಾಲೆಯ ಜೊತೆಯ ತರಗತಿಗಳಲ್ಲಿ ಓದುತ್ತಿದ್ದೆವೋ, ನಮ್ಮಿಬ್ಬರ ಹೃದಯವು ಏನೋ ಒಂದು ಅಜ್ಞಾತ ಪ್ರೇರಣೆಯಿಂದ ಒಬ್ಬರೊಬ್ಬರ ಕಡೆಗೆ ಆಕರ್ಷಿತವಾಗತೊಡಗಿತ್ತು ಕಡಿಮೆ ಪಕ್ಷ, ನನಗಾದರೋ ಆ ಆಕರ್ಷಣದ ಅರ್ಥವು ಆಗ ಸ್ವಲ್ಪವಾದರೂ ಆಗಿದ್ದಿರಲಿಲ್ಲ ಕಿಂತು ನನ್ನ ಬರಿಯ ಹೃದಯ ಸಿಂಹಾಸನದ ಮೇಲೆ ಒಬ್ಬ ನನ್ನು ತಂದು ಕುಳ್ಳಿರಿಸಲಿಕ್ಕೆ ಅವನ ಆವಿರ್ಭಾವವು ಅವಶ್ಯ ನಡೆದಿತ್ತು. ಇದೇ ಕಾಲಕ್ಕೆ, ಅವರ ಹೃದಯದ ಮೇಲೆ ಈ ಘಟನೆಗಳ ಎಂಥ ಪ್ರಭಾವವು ಬಿದ್ದಿತ್ತೆಂಬುದನ್ನು ನಾನು ಹೇಳಲಾರೆ. ಆದರೂ, ಎಷ್ಟರ ತನಕ ನಾನವರ ಅಧ್ಯಯನ ಮಾಡತೊಡಗಿದ್ದೆನೋ ಅಷ್ಟರ ತನಕ ಅವರು ನನಗೆ ಬಹು ಸುಂದರರಾಗಿ ಕಾಣತೊಡಗಿದ್ದರು. ಸ್ವಲ್ಪ ದಿನಗಳ ತರುವಾಯ ಅವರು ನಗರಕ್ಕೆ ಹೊರಟುಹೋದರು ಇತ್ತ ನನ್ನ ಚಲನವಲನಗಳ ಸ್ವಾತಂತ್ರ್ಯವು ಸ್ತಿಮಿತವಾಗತೊಡಗಿತು ಒಂದೊಂದು ವೇಳೆ ನಗರದಿಂದ ಅವರ ಪತ್ರವು

ದೇವಿಕಾರಾಣಿ

ಬರುತ್ತಿತ್ತು. ಅವುಗಳನ್ನು ಹೊಂದಿ ನನಗೆ ಒಂದು ಅಭೂತಪೂರ್ವ ಆನಂದದ ಅನುಭವವಾಗುತ್ತಿತ್ತು ಈ ಪತ್ರಗಳಲ್ಲಿ ಸರ್ವಸಾಧಾರಣ ಕುಶಲ ಸಮಾಚಾರಗಳ ಮಾತ್ರವಲ್ಲದೆ, ಹೃದಯದ ಸುಪ್ತಿಗಳನ್ನು ಬಿಡಿಸುವ ಯಾವ ರಹಸ್ಯವೂ ಇದ್ದಿರಲಿಲ್ಲ ಅದರೂ ನಾನಾದರೋ, ನನ್ನನ್ನು ಅವರಿಗ ಮನಸ್ಸಿನೊಳಗೆಯೇ ಒಪ್ಪಿಸಿಬಿಟ್ಟಿದ್ದೆ ಪ್ರಾಯಶಃ ಅವರೂ ನನ್ನನು ಇಚ್ಛಿಸಲಾರಂಭಿಸಿದ್ದರು ಆದರೆ ಅವರು ತಮ್ಮ ಇಚ್ಛೆಯನ್ನು ಯಾರ ಮುಂದೆಯೂ ಪ್ರಕಟಿಸಿರಲಿಲ್ಲ, ಅದು ಅವರ ಹೃದಯಾಂತರಂಗದಲ್ಲಿ ಗುಪ್ತವಾಗಿತ್ತು.

ನನ್ನ ವಿವಾಹವು ಯಾರೋ ಒಬ್ಬ ಮಹಾಶಯನೊಡನೆ ಆಗಲಿದೆಯೆಂದು ಒಂದು ದಿನ ನಾನು ಕೇಳಿದೆ. ಶೀಘ್ರದಲ್ಲಿಯೇ ಲಗ್ನ ನಿಶ್ಚಯವಾಗುವದೆಂಬ ಮಾತೋ ನನ್ನ ಕಿವಿಗಳ ಮೇಲೆ ಬಿದ್ದವು. ವರಮಹಾಶಯರು ಎಲ್ಲಿಂದಲೋ ನನ್ನ ಫೋಟೋ ನೋಡಿ ನನ್ನನ್ನು ಮೆಚ್ಚಿದ್ದರಂತೆ. ಇನ್ನು ಕೆಲವೇ ದಿನಗಳಲ್ಲಿ ನಾನು ಸೌಭಾಗ್ಯವತಿ ಮದುಮಗಳಾಗುವೆನೆಂದು ಜನರು ಹೇಳತೊಡಗಿದರು.

ಈ ಎಲ್ಲಾ ಮಾತುಗಳನ್ನು ಕೇಳಿ ನಾನು ಬೆಚ್ಚಿಹೋದೆನು ನನ್ನ ತಾಯಿ ತಂದೆಗಳ ಮೂಲಕವೇ ನನ್ನ ಮೇಲೆ ಇಂಥ ಅತ್ಯಾಚಾರಗಳಾಗುವವೆಂದು ನಾನು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಆಗ ನನ್ನ ಮನಸ್ಸಿನಲ್ಲಿ ಅನೇಕ ಪ್ರಕಾರದ ಭಾವನೆಗಳು ಏಳತೊಡಗಿದುವು ನಾನು ಮನಸ್ಸಿನೊಳಗೆಯೇ ವಿಚಾರ ಮಾಡತೊಡಗಿದೆ—ಏನು, ನನ್ನ ಅಮೂಲ್ಯ ಜೀವನವನ್ನು ಈ ಪ್ರಕಾರ ನಷ್ಟಮಾಡುವರೆ? ಏನು, ಹೆಣ್ಣು ಮಕ್ಕಳಿಗೆ ಸಮಾಜದಲ್ಲಿ ಯಾವ ಸ್ಥಾನವೂ ಅಧಿಕಾರವೂ ಇರುವದಿಲ್ಲವೆ? ಯಾವ ಮಹಾಶಯನ ಪದತಲದಲ್ಲಿ ನಾನು ನನ್ನ ತನುಮನ ಧನ-ಸರ್ವಸ್ವವನ್ನು ಅರ್ಪಿಸಬೇಕಾಗಿದೆಯೋ, ಅವನೇ ನನ್ನ ಚಿತ್ರವನ್ನು ನೋಡಿ ನನ್ನನ್ನು ಮೆಚ್ಚುವದೆಂದರೇನು? ಆ ಅಧಿಕಾರವು ಅವನಿಗೆಲ್ಲಿಂದ ಬಂದಿತು? ಈ ವಿಷಯದಲ್ಲಿ ನನ್ನ ಸಮ್ಮತಿಯನ್ನು ಕೇಳುವ ಮತ್ತು ಕೊಡುವ ಅಗತ್ಯವನ್ನು ಜನರು ಯಾಕೆ ತಿಳಿಯುವದಿಲ್ಲ?'

ಈ ರೀತಿ ಎಷ್ಟೊಂದು ಮುಗ್ಧ ಕನ್ಯೆಯರ ಜೀವನವನ್ನು ಸಮಾಜವು ನಷ್ಟಭ್ರಷ್ಟ ಮಾಡಿದೆಯೋ, ಯಾರು ಬಲ್ಲರು? ಹಾಯ್! ಹಿಂದೂ ಸಮಾಜ!! ಇದೂ ಕೂಡ ಒಂದು ದಾಂಪತ್ಯ ಜೀವನವೆ? ಯಾರು ಒಂದು ಬಾರಿಯಾದರೂ ರೂಪುರೇಖೆಯನ್ನು ನೋಡಲಿಲ್ಲವೋ, ಅವನೊಡನೆ ನನ್ನ ಸಮಸ್ತ ಜೀವನದ ಸಂಬಂಧ? ಇಲ್ಲ, ಅದು ಅಸಂಭವ ವಿವಾಹ ನಾನು ಮಾಡಿಯೇ ಮಾಡಿಕೊಳ್ಳುವೆನು. ಆದರೆ ನಾನು ವಿವಾಹವಾಗಿ, ಒಬ್ಬ ಹಿಂದೂ ಕನ್ಯೆಯು ತನ್ನ ಸ್ವತಂತ್ರ ಅಸ್ತಿತ್ವವನ್ನೂ ಇಟ್ಟುಕೊಳ್ಳುತ್ತಾಳೆ, ಅವಳ ಜೀವನಕ್ಕೂ ಕೂಡ ಬೆಲೆ ಇದೆ ಎಂಬುದನ್ನು ಜಗತ್ತಿಗೆ ತೋರಿಸುವೆನು

೩

ಸಮಯವು ಕಳೆಯುತ್ತ ಬಂದಿತು. ಗೊತ್ತಾದ ದಿನ ಲಗ್ನ ಮುಹೂರ್ತವು ನಿಶ್ಚಯಿಸಲ್ಪಟ್ಟಿತು. ದಿಬ್ಬಣವೂ ಬಂದಿತು. ಆ ಮುದಿ ಗೂಬೆಯೊಂದಿಗೆ ಸರ್ವಥಾ ವಿವಾಹಮಾಡಿಕೊಳ್ಳುವದಿಲ್ಲವೆಂದು ನಾನು ಮೊದಲೇ ಪ್ರತಿಜ್ಞೆ ಮಾಡಿಕೊಂಡಿದ್ದೆ. ದಿಬ್ಬಣವು ಬಂದು, ವರಮಹಾಶಯನು ಮಂಟಪದಲ್ಲಿ ಇರಿಸಲ್ಪಟ್ಟನು. ವರನೇನು-

[ಇನ್ನುಳಿದ ಭಾಗ ಮುಂದಿನ ಪಟಕ್ಕೆ ಮುಂದುವರಿಯುವುದು]

ಪಂಡಿತ ತಾರಾನಾಥರ ಸುಲಭ ಚಿಕಿತ್ಸೆ!

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನೆಗಳು ಇದರಲ್ಲಿ ವಿವರಿಸಲಾಗಿದೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ, ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ. ಮಾರ್ಚಿ 15ರ ಒಳಗೆ ರೂ 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು — ಯು. ಪಾಂಡುರಂಗ ನಾಯಕ್, ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: ಪ್ರೇಮ ಮೆಡಿಕಲ್ ಹಾಲ್, ಗುತ್ತಿಗಾರ್ ದ. ಕ.

# ರಾಮಗರ ಕಾಂಗ್ರೆಸಿನ ★ ★ ಮುಂದಿರುವ ಮಹಾ ಪ್ರಶ್ನೆ

ಮೌಲಾನಾ ಅಬುಲ್ ಕಲಂ ಆಜಾದರನ್ನು ಕಾಂಗ್ರೆಸಿನ ಅಧ್ಯಕ್ಷಸ್ಥಾನಕ್ಕೆ ಆರಿಸಿದ ಕೂಡಲೇ ಅವರು "[illegible]ಂಧಾನದ ಶಕ್ಯತೆಯು ಹೀಗೆಯೇ ಮುಂದುವರಿಯುವುದು ಸಾಧ್ಯವಿಲ್ಲ. ರಾಮಗರ ಕಾಂಗ್ರೆಸ್ ಅಧಿವೇಶನದಲ್ಲಿ ನಮ್ಮ ಮುಂದಿನ ಹೆಜ್ಜೆಯು ನಿರ್ಣಯವಾಗಬೇಕು. ಖಂಡಿತವಾಗಿಯೂ ಪ್ರಚಂಡ ಹೋರಾಟವೇ ಮುಂಬರಲಿದೆ"ಯೆಂದು ಹೇಳಿದರು. ಮಹಾತ್ಮಾ ಗಾಂಧಿಜಿಯವರಾದರೂ ಇತ್ತೀಚೆಯ ತಮ್ಮ ಲೇಖನವೊಂದರಲ್ಲಿ "ನಾವು ನಮ್ಮೊಳಗಿನ ಅತೃಪ್ತಿ ಮೊದಲ್ಗಾದವುಗಳನ್ನು ಕಡಿಮೆ ಮಾಡುವ ಸಲುವಾಗಿ ಹೋರಾಟ ಹೂಡುವುದು ಸರಿಯಲ್ಲ. ನಾವಿಂದು ಸಿದ್ಧರಾಗಿಲ್ಲವೆಂದು ನಾನು ಹೇಳುತ್ತೇನೆ. ಆದರೆ ನಾವು ಸಿದ್ಧರಾಗುವ ದಿನವು ಮುಂದೆ ಯಾವಾಗ ಬಂದೀತೆಂದು ಹೇಳುವ ಹಾಗಿಲ್ಲ; ಯಾವುದೇ ಕ್ಷಣವಾದರೂ ಬರಬಹುದು. ಅದಕ್ಕೆ ಸಿದ್ಧರಾಗಿರಬೇಕು" ಎಂದು ಬರೆದಿರುವರು. ಈ ಎರಡು ಪ್ರಕಟಣೆಗಳ ಮಧ್ಯವರ್ತಿ ಅಭಿಪ್ರಾಯವು ಹೋರಾಟವು ತೀವ್ರ ಬರಲಿದೆಯೆಂದು ಸಾರುವದೇ ಆಗಿದೆಯೆಂದು ನಾವು ತಿಳಿಯಬಹುದು.

ಆದಕಾರಣ ಬರುವ ರಾಮಗರ ಕಾಂಗ್ರೆಸಿನಲ್ಲಿ ಮುಖ್ಯಾಂಶದ ನಿರ್ಣಯವಾಗತಕ್ಕದ್ದದೆಯೆಂದು ಸರ್ವರೂ ನಿರೀಕ್ಷಿಸುತ್ತಿದ್ದಾರೆ. ಇಂದಿನ ಸಂಶಯ ಅನಿಶ್ಚಿತ ವಾತಾವರಣವು ಕೊನೆಗಾಣುವುದು. ಕಾಂಗ್ರೆಸ್ಸಿನೊಳಗೆ ಎದ್ದ ವಿರುದ್ಧ ಮತಗಳು ಆಗ ಒಂದಾಗಬೇಕಾಗುವುದು. ತ್ರಿಪುರಿ ಅಧಿವೇಶನದ ನಂತರ ಕಾಂಗ್ರೆಸಿನಲ್ಲಿ ಇಬ್ಬಣಗಳೊಡೆದವು. ಹಲವು ವಾಗ್ಯುದ್ಧಗಳುಂಟಾದುದೂ ಉಂಟು. ಆದರೆ ಪ್ರಪಂಚವನ್ನೇ ಮುಸುಕಿ ಬಂದ ಯುದ್ಧದಲ್ಲಿ ಭಾರತದ ಭಾಗವೇನೆಂಬ ವಿಷಯ ಕಾಂಗ್ರೆಸಿಗೂ ಬ್ರಿಟಿಷ್ ಸರಕಾರಕ್ಕೂ ಜಗಳವುಂಟಾಗಲು ಅದರ ಕಾರಣವಾಗಿ ಕಾಂಗ್ರೆಸು ಪ್ರಾಂತಿಕ ಆಡಳಿತಕ್ಕೆ ರಾಜಿಕೊಟ್ಟಿತು. ಈ ಸಂದರ್ಭದಲ್ಲಿ ಇಬ್ಬಣಗಳ ಮತಭೇದಗಳೂ ಕಡಿಮೆಗಿಳಿದವೆ. ಸರ್ವರ ಮುಂದೆ ಸಾಮ್ರಾಜ್ಯ ಶಾಹೀ ಸರಕಾರ ಮತ್ತು ಸ್ವಾತಂತ್ರ್ಯದ ಹೋರಾಟ ಈ ಎರಡು ವಿಷಯಗಳೇ ಎದ್ದು ನಿಂತಿವೆ. ಭಾರತದಲ್ಲಿ ಸ್ವಾತಂತ್ರ್ಯ ಸರಕಾರವು ಎಂದು ಸ್ಥಾಪಿತವಾಗಬಹುದೆಂಬುದೇ ಸರ್ವರ ಪ್ರಶ್ನೆಯಾಗಿದೆ.

### ತೂಗಾಡುವ ತುತ್ತು

ಕಾಂಗ್ರೆಸಿನ ಎಡಪಕ್ಷೀಯರು ಕೂಡಲೇ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಕುತೂಹಲಗೊಂಡಿದ್ದಾರೆ. ಆದರೆ ಗಾಂಧಿಜಿಯವರು ತಾಳ್ಮೆಯಿರಬೇಕೆಂದು ಹೇಳುತ್ತಾ ಬಂದಿದ್ದಾರೆ. ವೈಸರಾಯರು ಆಮಂತ್ರಿಸಿದಾಗ ಹೋಗಿದ್ದಾರೆ. ಅವರು ವ್ಯರ್ಥವಾಗಿ, ಪ್ರಯೋಜನವಿಲ್ಲದೆ ಕರೆದು ಆಯಾಸಗೊಳಿಸುವುದಿದ್ದರೂ ಬೇಸರಗೊಂಡಿಲ್ಲ. ಸಂಧಾನಕ್ಕೆ ಸಿದ್ಧನಾಗಿರುವುದು ಸತ್ಯಾಗ್ರಹಿಯ ಧರ್ಮವೆಂದು ಸಹನೆಗೊಂಡಿದ್ದಾರೆ. ಆದರೆ ಜನತೆಯ ಹೊಣೆಗಾರಿಕೆಯನ್ನು ಹೊತ್ತ ಪ್ರಾಂತಿಕ ಮಂತ್ರಿಮಂಡಲವು ರಾಜಿಕೊಟ್ಟು ಹೊರಬಂದಿರಲು ಜನತೆಯ ಸಮ್ಮತಿಯಿಲ್ಲದ ಸರಕಾರವು, ಆಡಳಿತ ನಡೆಸುತ್ತಿದೆ. ಹೀಗೆ ಬಹು ಕಾಲ ನಡೆಸುವುದು ಪ್ರಜಾಹಿತ ಮತ್ತು ರಾಷ್ಟ್ರಹಿತದೃಷ್ಟಿಯಿಂದ ಘಾತುಕವಾಗಿದೆ.

ಆದಕಾರಣ ಮುಂದಿನ ನಿಜವಾದ ಹೆಜ್ಜೆಯು ಈ ಸಲದ ಕಾಂಗ್ರೆಸು ಅಧಿವೇಶನದಲ್ಲಿ ತೀರ್ಮಾನವಾಗಲೇ ಬೇಕು. ಗಾಂಧಿಜಿಯವರು ಜನತೆಯನ್ನು ತಾಳ್ಮೆಯಿಂದಿರಿ ಎಂದು ಎಷ್ಟು ತಣ್ಣೀರೆರಚಿದರೂ ಬಹು ಕಾಲ ಅವಧಿಯನ್ನು ಮುಂದೆ ದೂಡಲು ಸಾಧ್ಯವಿಲ್ಲ. ಮುಂದಿನ ಕಾಂಗ್ರೆಸಿನ ನಿಶ್ಚಿತ ಮಾರ್ಗವು ಬರುವ ಅಧಿವೇಶನದಲ್ಲಿ ಖಂಡಿತ ನಿರ್ಣಯವಾಗಲೇಬೇಕಾಗಿದ್ದೆ.

### ಎರಡು ಹಾದಿಗಳು

ಆದರೆ ಮುಂದಿನ ಕಾಂಗ್ರೆಸಿನ ಹೆಜ್ಜೆ ಯಾವುದು? ಒಂದು ಕಾಂಗ್ರೆಸು ಮಂತ್ರಿಮಂಡಳವನ್ನು ಅಂಗೀಕರಿಸುವುದು, ಇಲ್ಲವೇ ಪ್ರತ್ಯಕ್ಷ ಆಂದೋಲನವನ್ನು ಹೂಡುವುದು. ಆದರೆ ಇಂದಿನ ಪರಿಸ್ಥಿತಿಯಲ್ಲಿ ತಿರಿಗಿ ಅಧಿಕಾರವನ್ನು ಸ್ವೀಕರಿಸುವುದು ಅಸಾಧ್ಯವಾಗಿದೆ. ವೈಸರಾಯರ ಓರಿಯಂಟಲ್ ಕ್ಲಬ್ ಭಾಷಣವು ಆಶೆಯ ಕಿರಣದಿಂದ ಕೂಡಿದ್ದರೂ, ಜೆಟ್ಲೆಂಡರ ಉದ್ಗಾರವು ಸಂಪೂರ್ಣ ನಿರಾಶೆಯ ಕತ್ತಲು ಕವಿಸಿಬಿಟ್ಟಿದೆ.

ಧುರೀಣರು ಇಂದು ಪ್ರತ್ಯಕ್ಷ ಆಂದೋಲನಕ್ಕೆ ಸಿದ್ಧರಾಗಿರೆಂದು ರಾಷ್ಟ್ರವನ್ನು ಎಚ್ಚರಿಸುತ್ತಾರೆ. ಎಡಪಕ್ಷದವರೂ ಅಶಾಂತರಾಗಿದ್ದಾರೆ. ಯುವಕರು ತಾಳ್ಮೆಗೆಟ್ಟಿದ್ದಾರೆ. ಬಲಪಕ್ಷದವರ ಧ್ವನಿಯಲ್ಲಿಯೂ ಅದೇ ರಣನಾದದ ಗುಡುಗು ಮೊಳಗುತ್ತಿದೆ. ಈ ಮುಖ್ಯ ವಿಷಯವು



ರಾಮಗರ ಕಾಂಗ್ರೆಸಿನಲ್ಲಿ ನಿರ್ಣಯವಾಗಬಹುದು. ಎಲ್ಲಾ ಜನರು ಮಹಾತ್ಮಾಜಿಯವರ ಕಡೆಗೆ ಆಶಾಪೂರ್ಣರಾಗಿ ಅವರೇ ಮುಂದಾಳುತನವನ್ನು ಕೈಕೊಳ್ಳಬೇಕೆಂದು ಆತುರರಾಗಿದ್ದಾರೆ.

### ಕಾರ್ಯ ಧೋರಣೆಯಲ್ಲಿ ವಿವಾದ

ಕಾಂಗ್ರೆಸಿನ ಮುಂದಿನ ಕಾರ್ಯಧೋರಣೆಯು ಹೇಗಿರಬೇಕೆಂದು ಎಡಬಲ ಪಕ್ಷಗಳಲ್ಲಿ ವಿವಾದಗಳುಂಟಾಗುವವೆ? ಹೋರಾಟವನ್ನು ಕೂಡಲೇ ಹೂಡಬೇಕೆಂಬುದು ಎಡಪಕ್ಷದವರ ವಾದ. ತಡೆಯಬೇಕೆಂದು ಗಾಂಧಿಜಿಯವರು ಹೇಳುವರು. ಆದರೆ ಚುನಾಯಿತ ರಾಷ್ಟ್ರಪತಿ ಅಜಾದರೇ ಹೇಳುವಂತೆ ಬಹು ಕಾಲ ತಡೆವುದು ಸಾಧ್ಯವೇ ಇಲ್ಲದಿರುವಾಗ ಬರುವ ರಾಮಗರ ಕಾಂಗ್ರೆಸಿನಲ್ಲಿ ಅದರ ನಿರ್ಣಯವಾಗಲೇಬೇಕು. ಸ್ವಾತಂತ್ರ್ಯದ ಹೋರಾಟಕ್ಕಾಗಿ ನಿರ್ಣಯವಾಗಬೇಕು. ಹಾಗಾದರೆ ಮತಭೇದವಿಲ್ಲದೆ ವಿವಾದವಿಲ್ಲದೆ ಎಲ್ಲರೂ ಗಾಂಧಿಜಿಯವರ ಮುಂದಾಳುತನದಲ್ಲಿ ಒಂದಾಗಿ ಹೋರಾಡುವರು. ಹಾಗಾಗಿ ಬರುವ ಕಾಂಗ್ರೆಸು ಅಧಿವೇಶನದಲ್ಲಿ, ಹೋರಾಟವನ್ನು ಹೂಡಲು ಅದನ್ನು ಮುನ್ನಡೆಸಲು ಗಾಂಧಿಜಿಯವರಿಗೆ ಸರ್ವಾಧಿಕಾರವನ್ನು ಕೊಟ್ಟು, ಇಡೀ ರಾಷ್ಟ್ರವೇ ಅವರನ್ನು ಹಿಂಬಾಲಿಸುವ ನಿರ್ಣಯವೊಂದನ್ನು ಮಾಡಬಹುದು. ಇಂಥ ಈ ಸಮಸ್ಯಾತ್ಮಕ ಪರಿಸ್ಥಿತಿಯಲ್ಲಿ ಗಾಂಧಿಜಿಯವರ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು ಅನುಸರಿಸುವುದೇ ಭಾರತೀಯರೆಲ್ಲರಿಗೆ ಬಹಳ ಯೋಗ್ಯವಾದ ಕಾರ್ಯವಾಗಿದೆ.

THE

# BANK OF MANGALORE LTD.,

MANGALORE

ESTD 1931

Branches:-

**Mudabidri & Padubidri.**

Fixed Deposits will be received at following rates of interest.

| | | |
|---|---|---|
| For | 3 months | 3½% |
| „ | 6 „ | 4% |
| „ | 12 „ | 5% |
| „ | 24 „ & upwards | 5½% |

Interest Payable Quarterly

***Savings Bank deposit 3½% on daily balances.***

**All kinds of banking business transacted**

DIAMONDS? DIAMONDS!

BEST BRILLIANCY!

# K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

# ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

**ನಿಮಗೆ ಬೇಕಾದ್ದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.**

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

**ಕೆ. ಆರ್. ಕೆ. ಶೆಟ್, ಜುವೆಲ್ಲರ್,**

**HALFTONE & LINE BLOCK MAKING UNDERTAKEN**

**Sharada Press, MANGALORE**



# ಜಿಲ್ಲಾ ಸಮಾಚಾರ

## ಮಂಗಳೂರು

### ಕೊಂಚಾಡಿಯಲ್ಲಿ ವಿಮಾನ ನಿಲ್ದಾಣ!

ಮಂಗಳೂರಿಗೆ ನಾಲ್ಕು ಮೈಲು ದೂರವಿರುವ ಕೊಂಚಾಡಿಯಲ್ಲಿ (ಕೊಂಚಾಡಿ ಕಂಬ್ಳ ಎಂಬಲ್ಲಿ) ವಿಮಾನನಿಲ್ದಾಣವೊಂದನ್ನು ರಚಿಸುವ ಕುರಿತು ಆಲೋಚನೆ ನಡೆದಿದೆಯೆಂದೂ, ಆ ಸಂಬಂಧವಾಗಿ ಟಾಟಾ ಏರ್‌ವೇಸ್ ಕಂಪೆನಿಯ ಇಂಜಿನಿಯರರೊಬ್ಬರು ಬಂದು ಸ್ಥಳ ಪರೀಕ್ಷೆಮಾಡಿ ತೆರಳಿರುವರೆಂದು ಕೇಳಿಬರುತ್ತದೆ.

**ಕೆನರಾ ಹೈಸ್ಕೂಲ್ ಶ್ರೀ ಕೃಷ್ಣ ಮಂದಿರ** — ಈ ಮಂದಿರದಲ್ಲಿ ಇದೇ ಮಾರ್ಚಿ ತಿಂಗಳಲ್ಲಿ ಪ್ರತಿ ಆದಿತ್ಯವಾರ ಬೆಳಿಗ್ಗೆ [illegible]ಕ್ಕೆ ಪ್ರವಚನಗಳು ನಡೆಯುವವು. ಸರ್ವರಿಗೂ ಸುಸ್ವಾಗತವಿದೆ

**ನಗರ ಸಭೆ**—ಕಳೆದ ತಾರೀಕು [illegible]ರಲ್ಲಿ ಮಂಗಳೂರು ನಗರ ಸಭೆಯು ಶ್ರೀ. ಬಿ ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ನಡೆಯಿತು

**ವಿದ್ಯಾಬೋಧಿನಿ ಹಾ. ಎ ಶಾಲಾ ವರ್ಧಂತಿ**—ಕದ್ರಿ ವಿದ್ಯಾಬೋಧಿನಿ ಹಾ. ಎ. ಶಾಲೆಯ ವರ್ಧಂತ್ಯುತ್ಸವವು ತಾ [illegible]ನೇ ಸಂಜೆ [illegible] ಘಂಟೆಗೆ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಯು ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು

**ನಾಟಕಾಭಿನಯ:**—ಕದ್ರಿ ವಿದ್ಯಾಬೋಧಿನಿ ಹೈ! ಎ! ಶಾಲೆಯ ಸಹಾಯಾರ್ಥವಾಗಿ ಪ್ರಗತಿ ನಾಟ್ಯಕಲಾ ನಾಟ್ಯ ವಿಲಾಸಿಗಳು ತಾ [illegible]ರಂದು ಸಂಸಾರ ಸನ್ಯಾಸಿ ಎಂಬ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ಆಷಾಢಭೂತಿಯ ಪಾತ್ರವನ್ನು ವಹಿಸಿದ ಶ್ರೀ, ವೆಂಕಟ್ರಮಣಾಚಾರ್ಯರ ಅಭಿನಯವು ಪ್ರಶಂಸಾರ್ಹವಾಗಿತ್ತು ಮಿಕ್ಕ ನಟರಲ್ಲಿ ಹಲವರು ಮುಂದಕ್ಕೆ ರಂಗಭೂಮಿಯಲ್ಲಿ ಉತ್ತಮ ತರದ ಅಭಿನಯ ಚಾತುರ್ಯವನ್ನು ತೋರಿಸುವರೆಂಬ ರೀತಿಯಲ್ಲಿ ತಮ್ಮ ನಟನೆಗಳನ್ನು ಪ್ರದರ್ಶಿಸಿದ್ದರು ವಿದ್ಯಾಸಂಸ್ಥೆಯ ಪರವಾಗಿ ಹೀಗೆ ನಾಟ್ಯವಿಲಾಸಿಗಳು ಉತ್ತೇಜನ ವಹಿಸಿ ಕೆಲಸ ಮಾಡಿದ್ದು ತುಂಬಾ ಸ್ತುತ್ಯವಾಗಿದೆ.

**ಹರಿಕಥಾ ಸಮಾರಂಭ**— ಇದೇ ತಾ. [illegible]ನೇ ಬೃಹಸ್ಪತಿವಾರ, ಮಹಾಶಿವರಾತ್ರಿ ದಿವಸ ಗಂಟೆ [illegible]ಕ್ಕೆ ಕೊಡಗಿನ ಪ್ರಸಿದ್ಧ ಹರಿದಾಸರಾದ ಶ್ರೀ ಬಿ. ಕೆ. ಗೋಪಾಲದಾಸರು ಕದಿರೆ ಶ್ರೀ ಮಂಜುನಾಥೇಶ್ವರ ದೇವಳದ ಕಲ್ಯಾಣಭವನದಲ್ಲಿ ಹರಿಕಥೆ ನಡಿಸಿದರು.

**ಕಾವೂರು:**—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾರೀಕು [illegible]ನೇ ದಿನ ಜಮಖಂಡಿಯಿಂದ ಬಂದಿರುವ ಶ್ರೀಮತಿ ಸ್ವಾ! ಸೋನಾಬಾಯಿಯವರು ಮನೋರಂಜಕವಾಗಿ ಭಕ್ತ ಪ್ರಹ್ಲಾದನ ಕಥೆಯನ್ನು ಹರಿಕಥೆಯಾಗಿ ಮಾಡಿದರು.

**ಋಷಿ ಬೋಧೋತ್ಸವ**— ಇದೇ ತಾ. [illegible]ನೇ ಸಂಜೆ ಗಂಟೆ [illegible]ಕ್ಕೆ ಸ್ಥಳೀಯ ಆರ್ಯ ಸಮಾಜ ಮಂದಿರದಲ್ಲಿ ಋಷಿ ಬೋಧೋತ್ಸವವು ಬ್ರಹ್ಮಶ್ರೀ. ಪಂಡಿತ ಸಿದ್ಧೋಟಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು.

**ಜಿಲ್ಲೆಯ ಮೊದಲನೆ ಎಂ. ಓ. ಎಲ್.**— ಅಡ್ಯಾರ್ ಥಿಯೋಸೋಫಿಕಲ್ ಲೈಬ್ರರಿಯಲ್ಲಿರುವ ಶ್ರೀ. ಕೆ. ಮಾಧವ ಕೃಷ್ಣ ಶರ್ಮರು ಮದ್ರಾಸ್ ಯುನಿವರ್ಸಿಟಿಯ ಎಂ. ಓ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರೆಂಬುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಇವರು ಈ ಪರೀಕ್ಷೆಗೆ ಒಪ್ಪಿಸಿದ ಪ್ರಬಂಧವು 'Studies in Panini, Katyana and Patanjali' ಎಂಬುದಾಗಿರುತ್ತದೆ. ಇವರು ನಮ್ಮ ಜಿಲ್ಲೆಯವರು. ಕಾರ್ಕಳ ಭುವನೇಂದ್ರಸಂಸ್ಕೃತ ಕೋಲೇಜಿನಲ್ಲಿ ಎನ್‌ಟ್ರೆನ್ಸ್ ವರೆಗೆ ಕಲಿತು, ಅಲ್ಲಿಂದ ತಂಜಾವೂರ್ ಸಂಸ್ಕೃತ ಕೋಲೇಜಿಗೆ ಸೇರಿ ವ್ಯಾಕರಣ ಶಿರೋಮಣಿ ಮತ್ತು ಪಿ. ಓ ಎಲ್. ಪರೀಕ್ಷೆಗಳಲ್ಲಿ ಉಚ್ಚ ತರಗತಿಯಲ್ಲಿ ಉತ್ತೀರ್ಣರಾಗಿ, ಆ ವರ್ಷದ ಯುನಿವರ್ಸಿಟಿಯ ಪ್ರಥಮ ಬಹುಮಾನಕ್ಕೆ ಅರ್ಹರಾಗಿದ್ದರು ಎನ್‌ಟ್ರೆನ್ಸ್ ಪರೀಕ್ಷೆಯಲ್ಲಿಯೂ ಕೂಡ ಐಚ್ಛಿಕ ವಿಷಯವೊಂದನ್ನೂ ಬಿಡದೆ ಕಲಿತು ಇವರು ಪಾಸಾಗಿದ್ದರು. ಇವರು ಎರಡು ವರ್ಷಗಳ ವರೆಗೆ ಮದ್ರಾಸ್ ಯುನಿವರ್ಸಿಟಿಯಲ್ಲಿ ರಿಸರ್ಚ್ ಸ್ಕೋಲರಾಗಿ ಕೆಲಸ ಮಾಡಿದ್ದರು ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಶ್ರೀಯುತರು ನಮ್ಮ ಜಿಲ್ಲೆಗೆ ಗೌರವವನ್ನು ತಂದಿರುವರು

**ಸಹಕಾರ:**—ಕಳೆದ ಒಕ್ಟೋಬರ್ ತಿಂಗಳಿನಿಂದ, ಇದುವರೆಗೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆದ ಸಹಕಾರ ಪ್ರಚಾರದ ಕೊನೆಯ ಸಭೆಯು, ಕಳೆದ ಬುಧವಾರ ಸಂಜೆ [illegible] ತಾಸಿಗೆ ಸರಿಯಾಗಿ ಸ್ಥಳೀಯ ಥಿಯಾಸಫಿಕಲ್ ಲಾಜಿನಲ್ಲಿ ಜರುಗಿತು, ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕೆ ಎಸ್, ಯು ನಾಯರ್‌ರವರು ಅಧ್ಯಕ್ಷತೆ ವಹಿಸಿದ್ದರು ಸಹಕಾರಿ ಸಂಘಗಳ ಇತಿಹಾಸ, ಜಿಲ್ಲೆಯಲ್ಲಿನ ಸಹಕಾರಿ ಚಳವಳಿ ಮುಂತಾದ ವಿಚಾರಗಳ ಕುರಿತಾಗಿ ಶ್ರೀ ಹಿರಾ. ಮಲ್ಯರು ಭಾಷಣವಿತ್ತರು. ಆ ಬಳಿಕ ಸಹಕಾರಿ ಸಂಘಗಳ ಸಮಸ್ಯೆಗಳು, ಅವುಗಳನ್ನು ಬಗೆಹರಿಸುವ ಉಪಾಯ, ವಿವಿಧರೀತಿಯ ಸಂಘಗಳು ತೆಗೆದು ಕೊಳ್ಳಬೇಕಾದ ಎಚ್ಚರಿಕೆ ಹಣದ ವ್ಯವಹಾರದ ಸಂಘಗಳ ಅವನತಿಗೆ ಕಾರಣಗಳು ಜಿಲ್ಲೆಯ ಬಡತನದಿಂದಾಗಿ ಸಹಕಾರಕ್ಕೆ ಉಂಟಾದ ತಡೆ, ಆರ್ಥಿಕ ವ್ಯವಸ್ಥೆ ಮುಂತಾದ ಹಲವಾರು ವಿಚಾರಗಳನ್ನೆತ್ತಿ, ಶ್ರೀಗಳಾದ ಎಸ್ ರಾಮಚಂದ್ರ ಅಯ್ಯರ್, ಎಂ ಎಸ್, ಮಾಧವ ರಾವ್, ಎಸ್ ನರ್ಸಪಯ್ಯ, ಕೆ. ಪಿ. ಜಿ. ಪ್ರಭು, ಬಿ. ಅನಂತರಾವ್, ಉಳ್ಳಾಲ ಮಂಗೇಶ ರಾವ್ ಮುಂತಾದವರು ಭಾಷಣವಿತ್ತರು ಲಘು ಉಪಹಾರವೂ ಇದ್ದಿತು.

**ಟೌನ್ ಕಾಂಗ್ರೆಸ್ ಕಮಿಟಿ:**— ಈ ಸಲದ ರಾಮಘರ್ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾಸಭೆಯ ಮುಂದೆ, ದೇಶದ ನಿರ್ಧಾರದ ಬಗ್ಗೆ ಬರಲಿರುವ ಠರಾವನ್ನು ಮಹಾಜನರಿಗೆ ವಿವರಿಸುವ ಬಗ್ಗೆ ತಾ. [illegible]ನೇ ಗುರುವಾರ ಸಾಯಂ ಗಂಟೆ [illegible]ಕ್ಕೆ ಶ್ರೀ. ಬಿ. ವೆಂಕಟ್ರಾಯ ಬಾಳಿಗ, ಎಂ. ಎಲ್. ಸಿ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಲೈನ್ ಮೈದಾನಿನಲ್ಲಿ ಜರುಗಿತು.

**ಪೆಂಟ್ಲಾಂಡ್ ಸ್ಪೋರ್ಟ್ಸ್ ಅಸೋಸಿಯೇಶನ್:**—ಇದರ ವಾರ್ಷಿಕ ಕೂಟವು ಕಳೆದ ಆದಿತ್ಯವಾರ ಸಂಜೆ ಶ್ರೀ. ಬಿ. ವೆಂಕಟ್ರಾಯ ಬಾಳಿಗರವರ ಅಧ್ಯಕ್ಷತೆಯಲ್ಲಿ ಜರುಗಿತು.

**ಸ್ಕೌಟ್ ರೇಲಿ.**—ಜಿಲ್ಲಾ ಸ್ಕೌಟ್ ಕೌನ್ಸಿಲಿನ ಆಶ್ರಯದಲ್ಲಿ, ಮಂಗಳೂರು ನಗರದ ಸ್ಕೌಟ್ ರೇಲಿ ಮತ್ತು ಬಹುಮಾನವಿತರಣಾ ಸಮಾರಂಭವು, ಕಳೆದ ಶನಿವಾರ ಸಂಜೆ [illegible]ಕ್ಕೆ ಸರಿಯಾಗಿ ಶ್ರೀ. ಬಿ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಗವರ್ನಮೆಂಟ್ ಕಾಲೇಜ್ ಮೈದಾನದಲ್ಲಿ ಜರುಗಿತು.

## ಉಡುಪಿ

**ಸುಪ್ರಸಿದ್ಧ ಸಾಹಿತಿಗಳ ಆಗಮನ:**— ಶ್ರೀ! ಮಾಸ್ತಿ ವೆಂಕಟೇಶಯ್ಯಂಗಾರರೂ ಶ್ರೀ! ಬೇಂದ್ರೆಯವರೂ ಕಳೆದ ಶನಿವಾರ ಶ್ರೀ ಮದುಡುಪಿ ಕ್ಷೇತ್ರಕ್ಕೆ ಚಿತ್ತೈಸಿ ಶ್ರೀ ಕೃಷ್ಣನ ದರ್ಶನ ಲಾಭವನ್ನು ಪಡೆದು ಚರಿತ್ರಾರ್ಹವಾದ ಚಾತುರ್ಮಾಸ್ಯರನ್ನು ಸಂದರ್ಶಿಸಿದರು.

**ಪೆರ್ಡೂರು:**-ಇದೇ ಮಾರ್ಚಿ ತಾ [illegible]ರ ಮೊದಲ್ಗೊಂಡು ತಾ. [illegible]ರ ವರೆಗೆ ಶ್ರೀ ಅನಂತ ಪದ್ಮನಾಭಸ್ವಾಮಿಯ ಸನ್ನಿಧಿಯಲ್ಲಿ ಶ್ರೀಮನ್ಮಹಾರಥೋತ್ಸವದ ಕಾರ್ಯಗಳು ಜರಗಲಿರುವುವು.

**ಕೋಓಪರೇಶನ್ ಬೇಂಕಿನ ಮಹಾಸಭೆ:**— ದಿ ಕೆನರಾ ಬೇಂಕಿಂಗ್ ಕೋಓಪರೇಶನ್ ಲಿಮಿಟೆಡ್, ಉಡುಪಿ, ಈ ಬೇಂಕಿನ ವರ್ಷಾವಧಿ ಮಹಾಸಭೆಯು ಕಳೆದ ತಾ. [illegible]ರಲ್ಲಿ ಬೇಂಕಿನ ಮುಖ್ಯ ಕಾರ್ಯಾಲಯದಲ್ಲಿ ಚೆಯರ್‌ಮೇನ್ ಡಾಕ್ಟರ್ ಸುಂದರ ರಾಮಯ್ಯಗಳವರ ಅಧ್ಯಕ್ಷತೆಯಲ್ಲಿ ಜರಗಿತು.

**ಬಾರಕೂರು:**—ಕಳೆದ ತಾ. [illegible]ರಲ್ಲಿ ಮೈಸೂರು ಸರಕಾರದ ಕಂಟ್ರೋಲರೂ, ಕನ್ನಡ ಸಾಹಿತಿಗಳೂ ಆದ ಶ್ರೀ! ಮಾಸ್ತಿ ವೆಂಕಟೇಶ ಅಯ್ಯಂಗಾರರೂ ಶ್ರೀ! ದತ್ತಾತ್ರೇಯ ಬೇಂದ್ರೆಯವರೂ ಶ್ರೀ! ಕೋಟ ಶಿವರಾಮ ಕಾರಂತರೂ ಬಾರಕೂರಿಗೆ ಚಿತ್ತೈಸಿದರು. ವಾಲ್ಮೀಕಿ ರಾಮಾಯಣದ ತಿರುಳನ್ನು ತಿಳಿಸಿ ಶ್ರೀ! ಅಯ್ಯಂಗಾರರು ಭಾಷಣಮಾಡಿದರು. ಅದೇ ರಾತ್ರಿ ಏರ್ಪಡಿಸಿದ ಮಂದರ್ತಿ ಮೇಳದವರ ಯಕ್ಷಗಾನ ಆಟವನ್ನು ನೋಡಿ ಪಾತ್ರವರ್ಗದವರ ವಾಕ್ಚಾತುರ್ಯ ವೇಷ, ಅಭಿನಯಗಳ ಕುರಿತು ಸಂತೋಷ ಸೂಚಿಸಿದರು

## ಕುಂದಾಪುರ

ಹಾಂಗಾರಕಟ್ಟೆ ಕೊಂಕಣೀ ಭಾಷೋದ್ಧಾರ ಸಂಘಾಚೆ ಮಾಸಿಕ ಮಹಾಸಭಾ [illegible] ರಾತ್ರಿ [illegible] ಘಂಟ್ಯಾರಿ ಹಾಂಗಾಚ್ಯಾ ಪೆಂಟಾಚ್ಯಾ ಶ್ರೀ ವೆಂಕಟರಮಣ ದೇವಳಾ ವಠಾರಾಂತು ಜಮಲಿ.

## ಕಾರ್ಕಳ

**ಶಿಲಾಕಂಬ ಪ್ರತಿಷ್ಠೋತ್ಸವ:**— ಚಿತ್ರವಿಚಿತ್ರವಾದ ಹೂಬಳ್ಳಿ ಪಶುಪಕ್ಷಿಗಳ ಅಪೂರ್ವ ಕೆತ್ತನೆಯ ಅದ್ಭುತ ಕೃತಿಯಾಗಿರುವ ನಾಲ್ಕು ಶಿಲಾಕಂಬಗಳನ್ನು ಸ್ಥಳೀಯ ಶ್ರೀ ವೆಂಕಟ್ರಮಣ ದೇವಾಲಯದಲ್ಲಿ ಪ್ರತಿಷ್ಠಿಸುವ ಮಹೋತ್ಸವವು ತಾ. [illegible]ರಿಂದ ಬಹಳ ವಿಜೃಂಭಣೆಯಿಂದ ನಡೆಯಿತು. ಈ ಶಿಲ್ಪ ಕಾರ್ಯವನ್ನು ಪೂರ್ತಿಮಾಡಿದ ಸ್ಥಳೀಯ ಶಿಲ್ಪಿ ಶ್ರೀ ಆರ್. ಗೋಪಾಲ ಶೆಣೈಯವರ ಹಸ್ತ ಕೌಶಲವನ್ನು ದಿವಾನ ಮಿರ್ಜಾ, ಯಂ. ಇಸ್ಮಾಯಿಲರಂಥ ದೊಡ್ಡ ಮನುಷ್ಯರೂ ಕಂಡು ಮೆಚ್ಚಿರುವರು. ಅವರ ಈ ಕೃತಿಗಳು ಸಾವಿರ್ತಾರು ಶಿಲ್ಪ ಪ್ರೇಮಿಗಳನ್ನು ಪ್ರತಿ ವರ್ಷ ಕಾರ್ಕಳಕ್ಕೆ ಬರಮಾಡುವದರಲ್ಲಿ ಸಂದೇಹವಿಲ್ಲ.

**ಕೋಓಪರೇಟಿವ್ ಸ್ಟೋರು:**— ಶಿವರಿಂದ ಕಾವರ ಸೋಜರವರ ಅಧ್ಯಕ್ಷತೆಯಲ್ಲಿ ತಾ. [illegible]ರ ದಿನ ಒಂದು ಸಾರ್ವಜನಿಕ ಸಭೆಯು ಕೂಡಿ, ಇಲ್ಲೊಂದು ಕೋಓಪರೇಟಿವ್ ಸ್ಟೋರನ್ನು ತೆರೆಯಬೇಕೆಂದು ಸರ್ವಾನುಮತಿಯ ನಿರ್ಣಯವಾಗಿದೆ.

**ಮಹಿಲಾ ಸಭೆ:**—ಕಾರ್ಕಳದ ಮಹಿಳೆಯರ ಗ್ರಾಮೋದ್ಯೋಗಿ ಸಹಕಾರ ಸಂಘದ ಸದಸ್ಯೆಯರ ಒಂದು ಸಭೆಯು ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ಕೂಡಿ ನೂಲುವ ಕೈಗಾರಿಕೆಯನ್ನು ವ್ಯವಸ್ಥೆಗೊಳಿಸಬೇಕಾಗಿ ಠರಾವಾಯಿತು.

**ಭಯಂಕರ ಬಸ್ ಅಪಘಾತ:**— ತಾ. [illegible]ರ ದಿನ ಬೆಳಿಗ್ಗೆ ಮಂಗಳೂರಿನಿಂದ ಜೈನಯಾತ್ರಿಕರನ್ನು ತೆಗೆದುಕೊಂಡು ಕಾರ್ಕಳಕ್ಕೆ ಬರುತಿದ್ದ ಹನುಮಾನ್ ಟ್ರಾನ್ಸ್‌ಪೋರ್ಟು ಕಂಪೆನಿಯ ಬಸ್ ಒಂದಕ್ಕೆ ಕಾರ್ಕಳದಿಂದ ಮಂಗಳೂರಿಗೆ ಹೋಗುತ್ತಿದ್ದ ಶಂಕರ ವಿಟ್ಠಲ ಮೋಟರ್ ಸರ್ವಿಸಿನ ಒಂದು ಖಾಲಿ ಬಸ್ಸು ಬಳುವಾಯಿ ಮಠದ ಸಮೀಪ ಡಿಕ್ಕಿ ಹೊಡೆದು ಭಯಂಕರ ಅಪಘಾತವಾಗಿದೆ. ಹನುಮಾನ್ ಬಸ್ಸಿನಲ್ಲಿದ್ದ ಮೂವರು ಸ್ತ್ರೀಯರು ಮತ್ತು ಮಗುವಿಗೆ ಪ್ರಾಣಾಂತಕಾರಿ ಘಾಯಗಳಾಗಿ ಎಲ್ಲರೂ ಕಾರ್ಕಳ ಆಸ್ಪತ್ರೆಗೆ ತೆರಲ್ಪಟ್ಟಿದ್ದಾರೆ. ಗಾಯಗೊಂಡವರಲ್ಲಿ ಮೂವರು ಮೃತರಾಗಿರುವರು. ಚಿಕಿತ್ಸೆ ಪೋಲೀಸ ತನಿಖೆ ಇತ್ಯಾದಿ ನಡೆಯುತ್ತಾ ಇವೆ

## ಪುತ್ತೂರು

**ಸಿನೆಮ ಕಂಪೆನಿಯ ಸ್ಥಾಪನೆ:**— ಇದೇ ಮಾರ್ಚಿ ತಿಂಗಳ ಪ್ರಥಮ ಯಾ ಎರಡನೆ ವಾರದಲ್ಲಿ ಇಲ್ಲಿಯ ಕೆಲವು ಮಹನೀಯರು ಸೇರಿ ಒಂದು ಸಿನೆಮ ಕಂಪೆನಿಯನ್ನು ನಡೆಸಲಿರುವರೆಂದು ತಿಳಿದು ಬರುತ್ತಿದೆ.

**ಕಡಬ:**— ಈ ಸೆಂಟರಿನ ಉಪಾಧ್ಯಾಯರ ಎಸೋಸಿಯೇಶನಿನ ವರ್ಧಂತಿ ಸಮಾರಂಭವು ಕಡಬ ಬೋ. ಹಾ. ಎ. ಶಾಲೆಯಲ್ಲಿ ತಾ. [illegible]ರಲ್ಲಿ ಪುತ್ತೂರು ರೇಂಜ್ ಶಾಲೆಗಳ ಡಿ. ಇನ್‌ಸ್ಪೆಕ್ಟರ್ ಮಿ! ಎಂ. ಮಾರ್ಟಿನ್ಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು

## ಮುಂಬಾಯಿ

**ದುಃಖ ಸೂಚಕ ಸಭೆ:**—ಹಲವು ವರುಷಗಳಿಂದ ಪೂಲ್ಬಿ ಬೋರ್ಡು ಹಾಯರ್ ಎಲಿಮೆಂಟರೀ ಶಾಲಾ ಹೆಡ್‌ಮಾಸ್ತರರಾಗಿದ್ದು, ಜನಪ್ರೀತರಾಗಿದ್ದ ಶ್ರೀಮಾನ್ ಕಾನಾಡ ಸಂಜೀವ ರಾಯರು ಮೊನ್ನೆ ತಾ. [illegible]ರಲ್ಲಿ ಅಕಾಲದಲ್ಲಿ ಪರಂಧಾಮವನ್ನೈದಿದ ವಿಷಾದಮಯ ವಾರ್ತೆಯನ್ನು ತಿಳಿದು ಈಗ ಮುಂಬ್ಯಾಯಲ್ಲಿರುವ ಸದರಿ ಶಾಲಾ ಹಳೆಯ ವಿದ್ಯಾರ್ಥಿಗಳು ತಾ. [illegible]ರಂದಲ್ಲು ಒಂದು ದುಃಖ ಪ್ರದರ್ಶಕ ಸಭೆಯನ್ನು ಜರಗಿಸಿದರು. ಅವರ ನಿಧನದಿಂದಾಗಿ ಮೃತರ ಬಂಧುಬಳಗದವರಿಗೆ ಬಂದೊದಗಿದ ಅಸಹನೀಯ ಆಪತ್ತಿನಲ್ಲಿ ಹಳೆಯ ವಿದ್ಯಾರ್ಥಿಗಳೆಲ್ಲರೂ ತಮ್ಮ ಹೃತ್ಪೂರ್ವಕವಾದ ಸಹಾನುಭೂತಿಯನ್ನು ಪ್ರಕಟಿಸಿಕೊಳ್ಳುವುದರೊಡನೆ ಶೋಕಸಂತಾಪವನ್ನು ಸೂಚಿಸುವುದಲ್ಲದೆ, ದಿವಂಗತರ ಪವಿತ್ರ ಆತ್ಮಕ್ಕೆ ಭಗವಂತನು ಚಿರ ಶಾಂತಿಯನ್ನು ದಯಪಾಲಿಸಲೆಂದು ದೇವರೊಡನೆ ಪ್ರಾರ್ಥಿಸಿ, ಒಂದು ದುಃಖಸೂಚಕ ಠರಾವನ್ನು ಪಾಸುಮಾಡಿದರು.

---

**ತಿದ್ದುಪಡಿ:**—ಕಳೆದ ವಾರದ ಪತ್ರಿಕೆಯಲ್ಲಿ ಮಂಗಳೂರು ಮ! ಹೈ! ಎ! ಶಾಲೆಯ ಹಳೆ ವಿ! ಸಂಘದ ದಿನಾಚರಣೆಯಂದು ಅಧ್ಯಕ್ಷತೆ ವಹಿಸಿದವರು ಜನಾಬ್ ಅಬುಲ್‌ಖ್ಯಾಸಿಮ್ ಸಾಹೇಬರೆಂದು ತಿದ್ದುಕೊಳ್ಳಬೇಕು.

# ಫಿನ್‌ಲೆಂಡಿನ ರಣಭೂಮಿಯಲ್ಲಿ ರಶ್ಯನರು ಮುಂದೊತ್ತುವರು




## 'ಡೊಮಲಾ' ಹಡಗಿನ ವಿಧ್ವಂಸ!—ಪಶ್ಚಿಮ ರಣರಂಗದಲ್ಲಿ ಚೆಂಡಾಟ!

## ಹಿಟ್ಲರ್—ಸಮ್ನರ್‌ವೆಲ್ಸರ ಭೇಟಿ

### ಫಿನ್‌ಲೆಂಡಿನ ಭವಿಷ್ಯ

ಫಿನ್‌ಲ್ಯಾಂಡಿನ ವಿಧ್ಯಮಾನಗಳು ವಿಷಮ್ಯಕ್ಕಿಟ್ಟದ್ದರೂ, ನಿರಾಶಾಜನಕವಾಗಿಲ್ಲ ಮೂರು ತಿಂಗಳ ಘೋರ ಕಾದಾಟ ನಡೆದ ಮೇಲೂ ಕಾರೇಲಿಯನ್ ರಷ್ಯದವರು ಮುಂದೆ ನುಗ್ಗಿದುದು ಎಂಭತ್ತು ಮೈಲು ಗಳೇ. ವೈಬೋರ್ಗ್ ನಗರದಲ್ಲಿ ಮೊದಲು ೪೦ ಸಾವಿರ ಪ್ರಜೆಗಳಿದ್ದು ಈಗಲದು ಬರಿದಾಗಿದೆ, ಅಲ್ಲಿ ಇಂದು ಕಟ್ಟಡವೂ ಇಲ್ಲವೆಂದು ತಿಳಿದು ಬಂದದೆ.

### ವೀಪುರಿಯು ಹೋದ ಹಾಗೇ

ಈ ರಣರಂಗದಲ್ಲಿ ರಷ್ಯದವರ ಒತ್ತಾಟವು ವಿಪರೀತವಾಗಿ, ಫಿನ್ನರು ಹಿಂದೆ ಸರಿದು, ಹೊಸ ಸ್ಥಾನಗಳನ್ನು ಆಕ್ರಮಿಸಿ ನಿಂತಿದ್ದಾರೆ. ರಷ್ಯದವರಿಗೆ ಈ ದಾಳಿಯಲ್ಲಿ ಎಷ್ಟೋ ನಷ್ಟವಾಗಿದೆ ಎಂದು ವಾರ್ತೆ ಅವರ ಹಲವು ಟ್ಯಾಂಕುಗಳ ನಾಶವಾಗಿವೆ ಆದರೂ ಅಧಿಕ ಬಲವುಳ್ಳ ರಷ್ಯದವರ ಮುಂದೆ, ಫಿನ್ನರ ಪರಿಣಾಮ ನೆಟ್ಟಗಾಗದೆ, ವಿಪುರಿಯು ಇಷ್ಟರೊಳಗೇ ಫಿನ್ನರ ಕೈ ತಪ್ಪಿ ಹೋಗುವ ಸಂಭವವಿದೆ; ಅಲ್ಲಿ ಹೆಚ್ಚಿನ ಫಿನ್ ಸೈನ್ಯಗಳಿಲ್ಲ, ಜನವಸತಿ ಇಲ್ಲ ರಷ್ಯದ ಬಾಂಬುಗಳು ಅಲ್ಲಿ ಮಿನಿಟಿಗೆ ೨೦ರಂತೆ ಬೀಳುತ್ತಿದ್ದು ಅದಾಗಲೇ ರಷ್ಯದವರ ವಶಕ್ಕೆ ಹೋಗಿದ್ದರೂ ಆಶ್ಚರ್ಯವಲ್ಲ

### ಫಿನ್‌ಲೆಂಡಿಗೆ ಸಹಾಯ

ಫಿನ್‌ಲ್ಯಾಂಡಿನ ಯುದ್ಧಕ್ಕಾಗಿ ೩ ಸಾವಿರ ಮಂದಿ ಬ್ರಿಟಿಷ್ ಸ್ವಯಂಸೇವಕರುಗಳಾಗಲೇ ಹೊರಡಿದ್ದಾರೆ ಇನ್ನು ೬ ಸಾ. ವಿರ ಮಂದಿ ಹೊರಡಲಿದ್ದಾರೆ

ಬ್ರಿಟನಿನ ಗಣಿಗಳ ಕೆಲಸಗಾರರ ಫೆಡರೇಶನಿನವರು, ಫಿನ್‌ಲ್ಯಾಂಡಿಗೆ ೧ ಸಾವಿರ ಸ್ಟರ್ಲಿಂಗನ್ನೂ, ನ್ಯೂಝಿಲ್ಯಾಂಡಿನವರು ೫ ಸಾವಿರ ಪೌಂಡುಗಳನ್ನೂ ಸಹಾಯ ಮಾಡಿದ್ದಾರೆ

### ಕೆನಡಾ

ಕೆನಡದ ಪ್ರಧಾನರ ಪ್ರಕಟನೆಯ ಮೇರೆಗೆ ಕೆನಡದಿಂದಲೂ ಜನಗಳು, ಫಿನ್‌ಲ್ಯಾಂಡಿಗೆ ಯುದ್ಧಕ್ಕಾಗಿ ಹೋಗಬಹುದಾಗಿದೆ

## ಫಿನ್‌ಲೆಂಡಿನಲ್ಲಿ ಸ್ಟಾಲಿನನ ಯೋಜನೆ

### ಸಂಧಾನಕ್ಕೆ ಒಡಂಬಡಿಕೆಯೆ?

ಫಿನ್‌ಲೆಂಡನ್ನು ಸಂಪೂರ್ಣ ಗೆಲ್ಲುವುದು ಸ್ಟಾಲಿನನ ಇಚ್ಛೆಯಲ್ಲವೆಂದೂ, ರಾಜಿ ಮಾಡಲ್ಲು ಆತನು ಒಪ್ಪಬಹುದೆಂದೂ, ಈ ಸಂದರ್ಭದಲ್ಲಿ ಅಮೇರಿಕವು ಸಂಧಾನ ಪಾತ್ರವನ್ನು ವಹಿಸಬಹುದೆಂದೂ ವಾರ್ತೆ ಹರಡಿತ್ತು. ಆದರೆ ರಷ್ಯವು ಸಂಧಾನಕ್ಕೆ ಸಿದ್ಧವಿಲ್ಲವೆಂದು ಅಲ್ಲಿ ವಾರ್ತೆ ಬಂದಿದೆ.

### ಹೊಸ ವಾರ್ತೆ

ಪಶ್ಚಿಮ ರಣರಂಗದಲ್ಲಿ ಯುದ್ಧ ಚಟುವಟಿಕೆಗಳು ಕಡಿಮೆಯಾಗಿವೆ! ಫ್ರೆಂಚ್ ಸೈನಿಕರಿಗೆ ಆಡಲೆಂದು ಫ್ರಾನ್ಸಿನ ಮುಖ್ಯ ಮಂತ್ರಿ ಡಲಾಡಿಯರರು ೧೦ ಸಾವಿರ ಕಾಲ್ಚೆಂಡುಗಳನ್ನು ಕಳುಹಿಸುವರೆಂದು ತಿಳಿದದೆ

❖

ಜರ್ಮನಿಯಿಂದ ಇಟಲಿಗೆ ಕಲ್ಲಿದ್ದಲು ವ್ಯಾಪಾರವಾಗುವುದನ್ನು ಬ್ರಿಟನು ನಿಷೇಧಿಸಿ ಪ್ರತಿಬಂಧಿಸಿದೆ ಇಟಲಿಯು ಅದಕ್ಕಾಗಿ ಬ್ರಿಟನನ್ನು ಎಚ್ಚರಿಸಿದೆ

❖

ಬೊಂಬಯಿಯಲ್ಲಿ ಮುಷ್ಕರಗಾರರ ಪಿಕೆಟಿಂಗ್ ಕೆಲಸವು ತೀವ್ರವಾಗುತ್ತಿದೆ

❖

ರಶ್ಯನರು ವಿಪುರಿಯ ಬಹುಭಾಗವನ್ನು ಆಕ್ರಮಿಸಿದರು ಫಿನ್ನರು ಸಾಹಸದಿಂದ ಹೋರಾಡುತ್ತಿದ್ದಾರೆ ಸಂಪೂರ್ಣ ವೀಪುರಿಯು ಇನ್ನೂ ರಶ್ಯನರ ಸ್ವಾಧೀನವಾಗಿಲ್ಲ

❖

### ಜರ್ಮನಿಯಲ್ಲಿ ಬ್ರಿಟಿಷ್ ವಿಮಾನಗಳು

ಬ್ರಿಟಿಷ್ ರೋಯಲ್ ವಿಮಾನ ಸೈನಿಕರು ಜರ್ಮನಿಯಲ್ಲಿ ಸಂಚರಿಸಿದರ ಜರ್ಮನರು ಈ ವಿಮಾನಗಳಿಗೆ ಗುಂಡು ಹಾರಿಸಿರುವುದಿಲ್ಲವೆಂದೂ ತಿಳಿದಿದೆ

### ಅಮೇರಿಕ

ಅಮೇರಿಕದಲ್ಲಿ ೩೫ ಸಾವಿರ ಟನ್ನಿನ ಆರು ಹಡಗುಗಳಾಗಲೇ ಸಿದ್ಧವಾಗಿದೆ, ಇನ್ನು ೪,೫೦೦ ಟನ್ನುಗಳ ೪ ಹಡಗುಗಳು ಯುದ್ಧ ಕಾರ್ಯಕ್ಕಾಗಿ ತಯಾರಾಗುತ್ತಿವೆ

### ಸಮ್ನರ್ ವೆಲ್ಸರು

ಅಮೇರಿಕದ ರಾಯಭಾರಿಗಳಾದ ಮಿ। ಸಮ್ನರ್ ವೆಲ್ಸರು, ಜರ್ಮನಿಯ ಸಕಾರಣ ಉದ್ದೇಶವು ಪೂರ್ತಿಯಾಗುವವರೆಗೆ "ಯುದ್ಧ ನಿಲ್ಲದು, ರಾಜಿಯಾಗದು" ಎಂದು ತಮ್ಮ ಅನುಭವವನ್ನು ಸಾರಿರುವರು

### ಎಚ್। ಜಿ ವೆಲ್ಸರ ಸೂಚನೆ

ಎಚ್. ಜಿ ವೆಲ್ಸರವರು ಲಂಡನಿನಿಂದ ಕಳೆದವಾರ ಯುದ್ಧದ ಗುರಿಗಳ ಬಗ್ಗೆ ಸೌಮ್ಯವಾದಿ ಭಾವನೆಯನ್ನೂ ಮತ್ತು ಮಾನವ ವ್ಯಕ್ತಿಯ ಮೂಲಭೂತ ಹಕ್ಕುಗಳ ಘೋಷಣೆಯ ಅವಶ್ಯಕತೆಯನ್ನೂ ತಿಳಿಸಿ ಭಾಷಣ ಮಾಡಿದರು.

ಹೊಸ ಹೊಸ ಶೋಧನೆಗಳಿಂದ ಮನುಷ್ಯರು ಹತ್ತಿರ ಹತ್ತಿರಕ್ಕೆ ಬರುತ್ತಿರುವರೆಂದೂ ದೇಶಗಳು ಪ್ರತ್ಯೇಕ ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂದೂ ಮಿ॥ ವೆಲ್ಸರವರು ಹೇಳಿದರು ವಸ್ತುಗಳ ಉತ್ಪನ್ನ ಮತ್ತು ಹಂಚುವಿಕೆಯ ಸಾಧನವು ಕೆಲವರ ಕೈಯಲ್ಲಿ ಮಾತ್ರವೇ ಉಳಿಯುವುದು ಹಾನಿಕಾರಕವೆಂದೂ ಮತ್ತು ಸಾರ್ವತ್ರಿಕ ಅಭ್ಯುದಯಕ್ಕಾಗಿ ಆರ್ಥಿಕ ಜೀವನವನ್ನು ವ್ಯವಸ್ಥೆಗೊಳಿಸಬೇಕಾಗಿದೆಯೆಂದೂ ಹೇಳಿದರು ಆದರೆ, ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲದಂತೆ ಎಚ್ಚರಿಕೆಯಿಂದಿರಬೇಕೆಂದೂ ತಿಳಿಸಿದರು

ಮಿ। ವೆಲ್ಸರವರು ತಮ್ಮ ಭಾಷಣದ ಕೊನೆಯಲ್ಲಿ ಪ್ರಪಂಚದಲ್ಲಿ ಜೀವಿಸುತ್ತಿರುವ ಪ್ರತಿಯೊಂದು ಮಾನವ ವ್ಯಕ್ತಿಯ ಸ್ವಾತಂತ್ರ್ಯವನ್ನು ಭದ್ರಪಡಿಸಲು ಮೂಲಭೂತ ಹಕ್ಕುಗಳನ್ನು ಆಧುನಿಕ ದೃಷ್ಟಿಯಿಂದ ಘೋಷಿಸಬೇಕಾದುದು ಅತ್ಯಾವಶ್ಯಕವಾಗಿದೆಯೆಂದು ಹೇಳಿದರು

### ಜಪಾನಿನ ಪರಿಸ್ಥಿತಿ

ಚೀನದ ಯುದ್ಧಕ್ಕೆ ಆರಂಭಿಸಿದ ಮೇಲೆ ಜಪಾನಿನಲ್ಲಿ ನಾಲ್ಕು ಮಂತ್ರಿಮಂಡಲಗಳಾಗಿ ಹೋದುವು ಮತ್ತೀಗ ಇನ್ನೂ ಕೆಲ ಮಂತ್ರಿಗಳು ಸಮಯ ನೋಡಿ ತಮ್ಮ ಉದ್ಯೋಗ ಸ್ಥಾನಗಳಿಗೆ ರಾಜೀನಾಮೆ ಕೊಡಬಹುದೆಂದೂ ಅಲ್ಲಿನ ಪತ್ರಿಕೆಗಳ ಹೇಳಿಕೆ

### ಟರ್ಕಿಯ ಸಿದ್ಧತೆ

ಒಂದು ವರ್ಷದಿಂದಲೂ ಸಕಲ ಸನ್ನಾಹಗಳನ್ನೂ ಮಾಡುತ್ತಿದ್ದ ಟರ್ಕಿ, ಈಗೇನ ಬಂದರೂ ಎದುರಿಸಲು ಸಿದ್ಧವಾಗಿದೆ ಎಂದು ಅಲ್ಲಿನ ಪ್ರಧಾನರು ಅಂಕರದ ತಮ್ಮ ಬ್ರಾಡ್‌ಕಾಸ್ಟ್ ಭಾಷಣದಲ್ಲಿ ತಿಳಿಸಿರುವರು

### ಯುಗೋಸ್ಲಾವಿಯ

ಯುದ್ಧಾರಂಭವಾದಂದಿನಿಂದ ಯುಗೋಸ್ಲಾವಿಯದಲ್ಲಿ ಆರಂಭವಾದ ನಾಝಿಗಳ ಒಳಸಂಚಿನ ಒಂದು ಪಂಗಡವನ್ನು ಕಂಡುಹಿಡಿದು ಅದರಲ್ಲಿ ೨೮ ಮಂದಿಗಳ ಕೈದೂ ನಡೆದಿದೆ

### ಪ್ಯಾಲೆಸ್ತೈನ್

ಪ್ಯಾಲೆಸ್ತೈನಿನಲ್ಲಿ ಅರಬರು ತಮ್ಮ ಭೂಮಿಕಾಣಿಕೆಗಳನ್ನು ಇಷ್ಟ ಬಂದಂತೆ ಅರಬರಲ್ಲದವರಿಗೆ ಮಾರದ ಹಾಗೆ ಸರಕಾರದ ನಿರ್ಬಂಧಗಳೇರ್ಪಟ್ಟು ಇದು ಯೆಹೂದಿಗಳಿಂದ ಖಂಡಿಸಲ್ಪಡುತ್ತಿದೆ

### ರುಮೇನಿಯ

ರುಮೇನಿಯವು ಶೀಘ್ರ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ ಬ್ರಿಟನಿನಿಂದ, ಜರ್ಮನಿಯಿಂದ, ಫ್ರಾನ್ಸಿನಿಂದ ಯುದ್ಧ ಸಾಮಗ್ರಿಗಳನ್ನು ಧಾರಾಳವಾಗಿ ಅದೀಗ ತರಿಸಿಕೊಳ್ಳುತ್ತಿದೆ.

### ಸಮ್ನರ್‌ವೆಲ್ಸರ ಹಿಟ್ಲರ್ ಭೇಟಿ.

ಅಮೇರಿಕದ ರಾಯಭಾರಿಗಳಾದ ಸಮ್ನರ್ ವೆಲ್ಸರು ಮುಸಲಿನಿಯನ್ನು ಕಂಡು ಬರ್ಲಿನಿಗೆ ತೆರಳಿ ಅಲ್ಲಿ ಹಿಟ್ಲರನ ಭೇಟಿ ಮಾಡಿದರು ಸಮ್ನರ್ ವೆಲ್ಸರಿಗೆ ಬರ್ಲಿನಿನಲ್ಲಿ ಸ್ವಾಗತವಿತ್ತು ವಾನ್ ರಿಬನ್ ಟ್ರಾಪರು ಅವರನ್ನು ಕಂಡು ಮಾತನಾಡಿದರು ಆ ಮೇಲೆ ಹಿಟ್ಲರನೊಡನೆ ಭೇಟಿಯಾಗುವ ನಿರ್ಧಾರವಾಯಿತು ವಾನ್ ರಿಬನ್ ಟ್ರಾಪರ ಮಾತುಕತೆಯಿಂದ ಸಮ್ನರ್ ವೆಲ್ಸರು ಸಂತೋಷಗೊಂಡಿದ್ದಾರೆ

ಸಮ್ನರ್ ವೆಲ್ಸರು ತಾ ೨ ರಂದು ಹಿಟ್ಲರನೊಡನೆ ದೀರ್ಘ ಕಾಲದ ತನಕ ಸಂಭಾಷಣೆ ನಡೆಸಿದರ ಮಿತ್ರರಾಷ್ಟ್ರಗಳೊಡನೆ ಯುದ್ಧ ಮಾಡಲು ಜರ್ಮನಿಯ ಭರದಿಂದ ಮತ್ತಷ್ಟು ತೀವ್ರ ಸಿದ್ಧತೆ ಮಾಡುತ್ತಿದೆಯೆಂದ ಅಭಿಪ್ರಾಯವಾಗಿದೆ

ಸಮ್ನರ್ ವೆಲ್ಸರ ಹಿಟ್ಲರನನ್ನು ಇತರ ಜರ್ಮನ್ ಪ್ರಮುಖರನ್ನು ಭೇಟಿಯಾಗಿ ಅಮೇರಿಕಕ್ಕೆ ತೆರಳಿದರು ಇದರ ಫಲಿತಾಂಶವು ಪ್ರಕಟವಾಗಲಿಲ್ಲ ಆದರೆ ಸಂಧಾನವಾಗುವ ಯೋಚನೆಯಿಲ್ಲವೆಂದು ಇಟಲಿಯ ಪತ್ರಿಕೆಯು ಹೇಳುತ್ತದೆ.

### ಬ್ರಿಟಿಷ್ ವಿಮಾನ ಮುಳುಗಿತು

### ಹಿಂದೀಯರು ಹತರಾದರು

ಡೊಮಲಾ (೮೪೪೧ ಟನ್) ಎಂಬ ಬ್ರಿಟಿಷ್ ಹಡಗವು ಧ್ವಂಸವಾಗಿದೆ ಅದರಲ್ಲಿದ್ದ ೮೮ ಹಿಂದೀಯರ ಹತರಾಗಿದ್ದಾರೆ ಕೇಟೋ ಎಂಬ ಇನ್ನೊಂದ ಹಡಗೂ ಮುಳುಗಿದೆ

### ಬೆಲ್ಜಿಯಮ್ಮಿನ ಮೇಲ ವಿಮಾನ

ಬೆಲ್ಜಿಯಮಿನ ಮೇಲೆ ವಿದೇಶದ ವಿಮಾನಗಳು ಹಾರಾಡುತ್ತಿವೆ ಅದರ ಗಡಿಯಲ್ಲಿ ಜರ್ಮನಿಯು ಬ್ರಿಟಿಷ್ ವಿರುದ್ಧ ಪ್ರಚಾರ ಮಾಡುತ್ತಿದೆ

---

### ಕೇಂದ್ರ ಸರಕಾರದ ಆದಾಯವೆಚ್ಚ

ಕೇಂದ್ರ ಸರಕಾರದ ಆದಾಯವೆಚ್ಚ ಪಟ್ಟಿಯನ್ನು ಅರ್ಥ ಮಂತ್ರಿಗಳು ಈ ತಾರೀಕು ೨೯ರಲ್ಲಿ ಕೇಂದ್ರ ಲೆಜಿಸ್ಲೇಟಿವ್ ಅಸೆಂಬ್ಲಿ ಸಭೆಗೆ ಒಪ್ಪಿಸಿದರು ಈ ಪಟ್ಟಿಯ ಪ್ರಕಾರ ಚಾಲ್ತಿ ವರ್ಷದಲ್ಲಿ ಸರಕಾರದ ವೆಚ್ಚ ಕಳೆದು ೯೧ ಲಕ್ಷ ಉಳಿತಾಯ ಇರುವುದು, ಕಳೆದ ವರ್ಷ ಈ ಉಳಿತಾಯ ಬರೀ ೩ ಲಕ್ಷ ಮಾತ್ರ ಎಂದು ಅಂದಾಜು ಮಾಡಲಾಗಿತ್ತು

ಈಗಿನ ಆಚರಣೆಯಲ್ಲಿರುವ ಕಂದಾಯ ತೀರ್ವೆಗಳ ಆಧಾರದಿಂದ ೧೯೪೦—೪೧ನೇ ವರ್ಷದಲ್ಲಿ ೮೫ ೪೩ ಕೋಟಿ ರೂಪಾಯಿಗಳ ಉತ್ಪತ್ತಿಯಾಗುವುದೆಂದೂ, ೯೦.೫೬ ಕೋಟಿ ರೂಪಾಯಿ ಖರ್ಚಾಗಬೇಕಾಗಬಹುದೆಂದೂ ಅಂದಾಜು ಮಾಡಲಾಗಿದೆ. ಈ ಅಂಕೆ ಸಂಖ್ಯೆಗಳ ಆಧಾರದಿಂದ ೧೯೪೦—೪೧ನೇ ವರ್ಷದಲ್ಲಿ ೭.೧೩ ಕೋಟಿ ರೂಪಾಯಿಗಳ ಕೊರತೆಯಾಗುವುದು

ಈ ೭.೧೩ ಕೋಟಿ ರೂಪಾಯಿಗಳ ಕೊರತೆಯನ್ನು ಭರ್ತಿಮಾಡಲು ಈ ಕೆಳಗಿನ ಏರ್ಪಾಡು ಮಾಡಲಾಗುವುದೆಂದು ತಿಳಿದುಬಂದಿದೆ.

೧ ಕಳೆದ ವರ್ಷದ ಉಳಿತಾಯ ಮೊಬಲಗ ೯೧ ಲಕ್ಷ ರೂಪಾಯಿಗಳನ್ನು ರಿವೆನ್ಯು ರಿಜರ್ವ್ ಫಂಡಿನಿಂದ ಪ್ರತ್ಯೇಕಿಸಿ ಮುಂದಿನ ವರ್ಷಕ್ಕೆ ಉಪಯೋಗಿಸುವುದು

೨ ಅಧಿಕ ಲಾಭದ ಮೇಲೆ ಹೊರಿಸಲಾಗುವ ಕಂದಾಯದಿಂದ ೩ ಕೋಟಿ ರೂಪಾಯಿ ಸಂಗ್ರಹಿಸಬಹುದೆಂದು ಅಂದಾಜು ಮಾಡಲಾಗಿದೆ ಆದಾಯತೆರಿಗೆ ಮತ್ತು ಆದಾಯದ ಮೇಲಿನ ಕಂದಾಯ ಇವುಗಳ ಸಂಬಂಧ ಹೊರಡಿಸಲಾದ ಹೊಸ ಕಾನೂನುಗಳಿಂದ ನಷ್ಟವಾಗತಕ್ಕ ಮೊಬಲಗನ್ನು ಭರ್ತಿ ಮಾಡಲು ಈ ಮೂರು ಕೋಟಿ ರೂಪಾಯಿಗಳಿಂದ ಪ್ರತ್ಯೇಕಿಸಿ ಮಿಕ್ಕುಳಿದ ಮೊಬಲಗನ್ನು ಮುಂದಿನ ವರ್ಷದಲ್ಲಿ ಬರತಕ್ಕ ಕೊರತೆಯನ್ನು ಭರ್ತಿಮಾಡಲು ಉಪಯೋಗಿಸಲಾಗುವುದು.

೩ ಸಕ್ಕರೆಯ ಮೇಲಿರುವ ಅಬ್ಕಾರಿ ಸುಂಕವನ್ನು ಹಂಡ್ರೆಡ್‌ವೇಟಿಗೆ ೩ ರೂಪಾಯಿಯಿಂದ ೩ ರೂಪಾಯಿ ... ಏರಿಸಲಾಗುವುದು

೪ ಇದೇ ದರದಲ್ಲಿ ಸಕ್ಕರೆಯ ಮೇಲಿರುವ ಆಮದು ಸುಂಕವನ್ನು ಏರಿಸಲಾಗುವುದು ... ಸಂಸ್ಥಾನಗಳಲ್ಲಿ ಸಕ್ಕರೆ ತಯಾರಿಸುವ ಕಾರ್ಖಾನೆಗಳಿದ್ದರೆ ಅವರು ಸಹ ಸಕ್ಕರೆಯ ಮೇಲಿರುವ ಅಬ್ಕಾರಿ ಸುಂಕವನ್ನು ಬ್ರಿಟಿಷ್ ಇಂಡಿಯಾ ಸರಕಾರದ ದರದಂತೆ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳಲಾಗುವುದು. ಸಕ್ಕರೆಯ ಮೇಲೆ ಅಬ್ಕಾರಿ ಮತ್ತು ಆಮದು ಸುಂಕಗಳನ್ನು ಅಧಿಕ ಮಾಡಿದ್ದರಿಂದ ೧೫೦ ಲಕ್ಷ ರೂಪಾಯಿಗಳಷ್ಟು ಹೆಚ್ಚಿನ ಉತ್ಪತ್ತಿ ದೊರಕುವುದೆಂದು ಅಂದಾಜು ಮಾಡಲಾಗಿದೆ

೫ ಮೋಟಾರ್ ಪೆಟ್ರೋಲಿನ ಮೇಲೆ ಈಗ ಒಂದು ಗೆಲನಿಗೆ ಇರುವ ೧೦ ಆಣೆ ತೆರಿಗೆಯನ್ನು ೧೨ ಆಣೆಗೆ ಏರಿಸಲಾಗುವುದು ಹೀಗೆ ಒಂದು ಗೆಲನಿಗೆ ಎರಡಾಣೆಯಷ್ಟು ಹೆಚ್ಚಿನ ತೆರಿಗೆ ಹೊರಿಸುವುದರಿಂದ ೧೪೦ ಲಕ್ಷ ರೂಪಾಯಿ ಹೆಚ್ಚಿಗೆ ಸಿಕ್ಕುತ್ತದೆಂದು ಅಂದಾಜು ಮಾಡಲಾಗಿದೆ.

ಆಧಾ
ಉ
ಖ
ಉ
ಸದ
ಹೆಚ್ಚು
ವುದಿಲ್ಲ
ತೆರಿಗೆ
ವಸೂ
ಭರವ
ವಿಲ್ಲವೆ
ಮೆಂಬ
ಈ
ಯಿಂದ
ಹಣ
ವ
ಪರಿಸಿ
ವುದಕ್ಕೆ
ದ ಟ
ವಾಗಿ
ಎಂದ
ಗ್ಯರನ
ವಾಲ
ಯೋ
ದ ಹ
ಕಪ
ಫಡ್
ವ(ಡಾ
ಯೋ
ಅಕ
ರಿಗೂ
ಕೂಲಿ
ಲಾಲ್
ಮಾ
ದರು
ಸಂಡ
ಸಂದೂ
ಪ್ರಜೆಗ
ರೂಪಾ
ಅಜ್ಞೆಯ
ಸಂದಭ
ದಿಕಣ
ಶಿವನ
ಯುತು
ಅಧ್ಯಕ್ಷ
೮೦
ರಾಜ್ಯ



# ಆಂದೋಲನವನ್ನು ಆರಂಭಿಸುವ ಸಂದರ್ಭವು ಸನ್ನಿಹಿತವಾಗಿದೆ

## ವರ್ಕಿಂಗ್ ಕಮಿಟಿಯ ನಿರ್ಧಾರ  ಭಾರತ ಸರಕಾರದ ಆಯವ್ಯಯ

## ಮದ್ಯಪಾನ ನಿಷೇಧಕ್ಕೆ ಪ್ರಚಾರವಿಲ್ಲ

## ಬೊಂಬಾಯಿಯಲ್ಲಿ ಪ್ರಚಂಡ ಮುಷ್ಕರ

**ಆಧಾಯವೆಚ್ಚದ ಪಟ್ಟಿ (೧೯೪೦-೪೧)**

ಉತ್ಪತ್ತಿ ೯೨,೬೪ ಲಕ್ಷ ರೂ

ಖರ್ಚು . ೯೨,೫೯ '' ರೂ

ಉಳಿತಾಯ . ೫ '' ರೂ

ಸದ್ಯಕ್ಕೆ ಆದಾಯ ಕಂದಾಯವನ್ನು ಹೆಚ್ಚು ಮಾಡುವ ಆಲೋಚನೆ ಇರುವುದಿಲ್ಲ ಆದರೆ ಬರುವ ವರ್ಷದಲ್ಲಿ ಕೆರಿಗೆದಾರರಿಂದ ಹೆಚ್ಚಿನ ಕಂದಾಯ ವಸೂಲು ಮಾಡಲಾಗುವುದಿಲ್ಲ ಎಂಬ ಭರವಸೆಕೊಡಲು ಸರಕಾರಕ್ಕೆ ಸಾಧ್ಯವಿಲ್ಲವೆಂಬ ಎಚ್ಚರಿಕೆಯನ್ನು ಸರಕಾರಿ ಮೆಂಬರರು ಕೊಟ್ಟಿರುವರು

ಈಗಿನ ಅಂತರಾಷ್ಟ್ರೀಯ ಪರಿಸ್ಥಿತಿಯಿಂದ ರಕ್ಷಣಾ ಇಲಾಖೆಗೆ ಹೆಚ್ಚಿನ ಹಣ ಬೇಕಾಗಬಹುದು

### ನೆಹರುಗಳ ಉತ್ತರ

ಮೌಲಾನಾರವರನ್ನು ಅಧ್ಯಕ್ಷತೆಗೆ ಆರಿಸಿದ್ದು ಮುಸ್ಲಿಮರ ಬಾಯಿ ಮುಚ್ಚಿಸುವುದಕ್ಕೆ-ಎಂದು ಲಂಡನ್ ಪತ್ರಿಕೆಯೊಂದ ಟೀಕೆ ಮಾಡಿದೆ ಅದಕ್ಕೆ ಉತ್ತರವಾಗಿ ಶ್ರೀ ಜವಾಹರಲಾಲರು-ಕಾರಸ್ಥು ಎಂದಿಗೂ ಕಾರ್ಯಸಾಧನೆಗೆಂದ ಅಯೋಗ್ಯರನ್ನು ಅಧ್ಯಕ್ಷಗದ್ದುಗೆಗೇರಿಸುವುದಿಲ್ಲ ಮೌಲಾನಾರವರನ್ನು ಅವರ ಅಮೋಘ ಯೋಗ್ಯತೆಗಳಿಗಾಗಿ, ಆರಿಸಲಾಗಿದೆ-ಎಂದು ಹೇಳಿದ್ದಾರೆ

### ಠಾಗೂರರಿಗೆ ಸತ್ಕಾರ

ಕವಿ ರವೀಂದ್ರರಿಗೆ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿದ್ಯಾಸಲಯದ ಸಾಹಿತ್ಯ ಗೌರವ(ಡಾಕ್ಟರೇಟ್) ಪದವಿಯನ್ನೊಪ್ಪಿಸಲು ಯೋಚಿಸಿದ್ದಾರೆ

### ಕೂಲಿಗಾರರ ಬಿಕ್ಕಟ್ಟು

ಅಹಮ್ಮದಾಬಾದಿನ ಗಿರಣಿ ಕೂಲಿಗರಿಗೂ ಮಾಲೀಕರಿಗೂ ಬಂದ 'ಹೆಚ್ಚು ಕೂಲಿ' ವ್ಯಾಜ್ಯವನ್ನು ಶ್ರೀ - ಲ್ವಾರಿಲಾಲ್ ನಂದರವರು ಪಂಚಾಯಿತಿ ತೀರ್ಮಾನ ಮಾಡಿ ಬಿಕ್ಕಟ್ಟನ್ನು ಪರಿಹರಿಸಿದರು.

**ಸಂಡೂರಿನಲ್ಲಿ ತೆರಿಗೆ ರಿಯಾಯತಿ**

ಸಂಡೂರು ಸಂಸ್ಥಾನಾಧೀಶ್ವರರು ತಮ್ಮ ಪ್ರಜೆಗಳು ತೆರುವ ಭೂಕಂದಾಯದಲ್ಲಿ ಒಂದಾಣೆ ಕಡಿಮೆ ಮಾಡಿದ ಆಜ್ಞೆಯೊಂದನ್ನು ಹೊರಡಿಸಿದ್ದಾರೆ. ಈ ಸಂದರ್ಭದಲ್ಲಿ ಬಡ ಪ್ರಜೆಗಳಿಗೆ ಊಟ ವಿತರಣಮಾಡಿಸಿದರು. ಅದು ಅವರ ಹೊಸ 'ಶಿವನಿವಾಸ' ಅರಮನೆಯಲ್ಲೇ ನಡೆಯಿತು.

**ಅಧ್ಯಕ್ಷ ರೂಸ್‌ವೆಲ್ಟರಿಗೆ ಇಂಡಿಯಾ ಲೀಗಿನ ಪತ್ರ**

ಲಂಡನಿನಲ್ಲಿರುವ ಇಂಡಿಯಾ ಸ್ವರಾಜ್ಯ ಲೀಗಿನವರು ಅಧ್ಯಕ್ಷ ರೂಸ್‌ವೆಲ್ಟರಿಗೆ ಲಂಡನಿನ ಅಮೇರಿಕಾ ರಾಯಭಾರಿಯ ಮೂಲಕ ಒಂದು ಪತ್ರ ಬರೆದು ಮಿ॥ ಸಮ್ನರ್ ವೆಲ್ಸ್‌ರು ಲಂಡನಿಗೆ ಬಂದಾಗ್ಗೆ ಅವರು ಭಾರತೀಯ ಪ್ರತಿನಿಧಿಯೊಬ್ಬರೊಡನೆ ಸಮಾಲೋಚನೆ ನಡೆಸಬೇಕೆಂದೂ ಪತ್ರ, ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡದಿದ್ದರೆ, ಯಾವ ಶಾಂತಿಯ ಒಪ್ಪಂದವೂ ನೆಲೆಗೊಳ್ಳುವುದಿಲ್ಲವೆಂದೂ ಸ್ಪಷ್ಟವಾಗಿ ತಿಳಿಸಿದ್ದಾರೆ

### ಭಾರತದ ಸ್ವಾತಂತ್ರ್ಯ

### ಬ್ರೈಲ್ಸ್‌ಫೋರ್ಡರವರ ಸೂಚನೆ

ಭಾರತದ ಸ್ವಾತಂತ್ರ್ಯದ ವಿಷಯದಲ್ಲಿ ವಿ. ಎಸ್ ಎನ್ ಬ್ರೈಲ್ಸ್‌ಫೋರ್ಡರು ಒಂದು ಲೇಖನ ಬರೆಯುತ್ತಾ, ಅದರಲ್ಲಿ ಗಾಂಧಿ ವೈಸರಾಯ್ ಭೇಟಿಯ ಯಶಸ್ವಿಯಾಗದಿರುವ ವಿಷಯವಾಗಿ ವಿಷಾದವನ್ನು ಸೂಚಿಸಿ, ಭಾರತೀಯರು ಸ್ವತಂತ್ರರಾಗಲು ಅರ್ಹರೆಂದೂ ಅವರಿಗೆ ಸ್ವಾತಂತ್ರ್ಯವನ್ನು ಕೊಡುವುದು ನ್ಯಾಯವೆಂದೂ, ಐರ್ಲೆಂಡಿನ ಮಾದರಿಯಲ್ಲಿ ಅವರಿಗೆ ಸ್ವಾತಂತ್ರ್ಯ ಪ್ರಕಟಣೆ ಮಾಡುವುದು ಉಚಿತವೆಂದೂ ಅಭಿಮತ ವಿತ್ತಿರುವರು

### ರಾಮಗಢ್ ಪ್ರದರ್ಶನ

ಕಾಂಗ್ರೆಸ್ ಅಧಿವೇಶನ ಕಾಲದಲ್ಲಿ ಖಾದಿ ಪ್ರದರ್ಶನದ ನಡುವೆ ದಕ್ಷಿಣ ಭಾರತದ ಒಬ್ಬ ರೈತರ ತರುಣಿಯು ೩೫೦ ನೇ ನಂಬರಿನ ನೂಲನ್ನು ನೂತು ಪ್ರದರ್ಶಿಸುವಳು

ಆಯುರ್ವೇದ ಪ್ರದರ್ಶನವೊಂದು ಕಾಂಗ್ರೆಸ್ ಕೈಗಾರಿಕೆ ಪ್ರದರ್ಶನದ ಅಂಗವಾಗಿ ನಡೆಯುವುದು

### ಇಪಿ ಪಕೀರನಿಗೆ ಪತ್ರ -

ಖಾನ್ ಅಬ್ದುಲ್ ಗಫಾರ್ ಖಾನರು ಸ್ವತಃ ಇಪಿ ಪಕೀರನಲ್ಲಿಗೆ ಒಂದು ನಿಯೋಗ ಕಳುಹಿಸಲು ಯತ್ನಿಸುತ್ತಿದ್ದಾರೆ ಆಗಲಾದರೂ ಅವನ ಉಪಟಳ ತಪ್ಪಬಹುದೆಂದು ಅವರ ಆಸೆ, ಅಲ್ಲದೆ ಇಪಿ ಪಕೀರನಿಂದ ಈ ಅವಾಂತರವಾಗುತ್ತಿದೆಯೇ ಎಂದೂ ಅವರು ಸಂದೇಹಪಡುತ್ತಿರುವ ಹಾಗಿದೆ.

### ವಿಶ್ವಭಾರತಿಗೆ ಸಹಾಯ ಮಾಡಿರಿ

### ಗಾಂಧಿಜಿಯವರ ಹೇಳಿಕೆ

ಕವೀಂದ್ರ ರವೀಂದ್ರರ 'ಸಂಸ್ಥೆ'ಯಾಗಿರುವ ವಿಶ್ವಭಾರತಿ ವಿಶ್ವವಿದ್ಯಾಲಯವನ್ನು ಹೆಚ್ಚು ಪ್ರೋತ್ಸಾಹಿಸಬೇಕೆಂದೂ ಅದರ ಅಭಿವೃದ್ಧಿಯಿಂದ ಜಗತ್ತಿನ ಕಲ್ಯಾಣವು ಸಾಧಿಸಲು ಸಾಧನವಾಗುವುದೆಂದೂ ಮಹಾತ್ಮಾಜಿಯವರು ಒಂದು ಲೇಖನ ಬರೆದಿರುವರು,

### ಕಾಂಗ್ರೆಸಿನ ಕೇಳಿಕೆ ·

### ಮುಖಂಡರ ಅಭಿಮತ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಹೊರಡಿಸಿದ ನಿರ್ಣಯದ ವಿಷಯದಲ್ಲಿ ಮಹಾತ್ಮಾಜಿಯವರು ಒಂದು ಪ್ರಕಟಣೆ ಹೊರಡಿಸುತ್ತಾ ಅದರಲ್ಲಿ ಸರಕಾರದ ನೀತಿಯನ್ನು ಖಂಡಿಸಿ, ಭಾರತವು ಸಂಗ್ರಾಮ ಸಿದ್ಧವಿದೆಯೆಂದು ವ್ಯಕ್ತಗೊಳಿಸಿರುವರು.

ರಾಜೇಂದ್ರ ಬಾಬುಗಳ ಪ್ರಕಟಣೆಯಲ್ಲಿ ದೇಶದ ಸ್ವಾತಂತ್ರ್ಯವನ್ನು ನಡೆಯುವುದು ನಮ್ಮ ಧರ್ಮವೆಂದೂ ಅದಕ್ಕಾಗಿ ಹೋರಾಡಿಯೇ ಸಿದ್ಧವೆಂದು ಹೇಳಿರುವರು ರಾಜಾಜಿಯವರು ತಮ್ಮ ಅಭಿಪ್ರಾಯಕೊಡುತ್ತ ಬ್ರಿಟಿಷ್ ರಾಜನೀತಿಜ್ಞರನ್ನು ಎಚ್ಚರಿಸಿರುವರು ಎಂ ಎನ್ ರಾಯರುಗಳು ಹೇಳುವುದೇನೆಂದರೆ ವರ್ಕಿಂಗ್ ಕಮಿಟಿಯ ಠರಾವು ಸಾಕಷ್ಟು ತೀವ್ರವಾಗಿದೆಯೆಂದೂ, ಆದಕಾರಣ ತಾನು ಅಧ್ಯಕ್ಷತೆಗೆ ಸ್ಪರ್ಧಿಸಿದ ತಪ್ಪಕ್ಕೆ ಜಯವಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ

### ಮದ್ರಾಸಿನ ಗವರ್ನರರ ವರ್ಗ

ನಮ್ಮ ಮಾನ್ಯ ಗವರ್ನರರಾದ ಲಾರ್ಡ್ ಇರಸ್ಕೈನ್‌ನವರ, ಇದೇ ತಾರಿಖಿನಲ್ಲಿ ಪತ್ನೀ ಸಹಿತರಾಗಿ ಮದ್ರಾಸಿನಿಂದ ಸೀಮೆಗೆ ಹೊರಟರು ಅವರ ಬದಲಾಗಿ ನೇಮಕ ಹೊಂದಿದ ಕೇಪ್ಟನ್ ಸರ್ ಆರ್ಥರ್ ಹೋಪ್‌ರವರು ಇದೇ ತಾ ೧೨ಕ್ಕೆ ಮದ್ರಾಸಿಗೆ ದಯೆ ಮಾಡಿಸಿ, ತಮ್ಮ ಗವರ್ನರ ಪದವಿಯ ಕಾರ್ಯಭಾರಗಳನ್ನು ಅಂದೇ ವಹಿಸಿಕೊಳ್ಳುವರು

### ರಾಮಗಡ ಕಾಂಗ್ರೆಸ್ ಸಿದ್ಧತೆ

ರಾಮಗಡದಲ್ಲಿ ನಡೆಯುವ ಕಾಂಗ್ರೆಸ್ ಸಿದ್ಧತೆಗಳು ಭರದಿಂದ ನಡೆಯುತ್ತಿವೆ ಬೇರೆ ಬೇರೆ ಪ್ರಾಂತಗಳಿಂದ ಸಾವಿರಾರು ಮಂದಿ ಸ್ವಯಂಸೇವಕರು ಅಲ್ಲಿಗ ಬರುತ್ತಿದ್ದಾರೆ ರೈಲ್ವೇ ಸ್ಟೇಶನಿನಿಂದ ದಲಗಳಾಗಿ ಅವರು ರಾಷ್ಟ್ರಗೀತವನ್ನು ಹಾಡುತ್ತಾ ಹೋಗುವುದು ಅಪೂರ್ವ ಉತ್ಸಾಹವನ್ನು ಹುಟ್ಟಿಸುತ್ತದೆ

### ಬೊಂಬಯಿಯಲ್ಲಿ ಪ್ರಚಂಡ ಮುಷ್ಕರ!

**೧೩೦೦೦೦ಮಂದಿ ಮುಷ್ಕರಗಾರರು**

ಬೊಂಬಯಿ ವಸ್ತ್ರಗಿರಣಿಯ ಕೆಲಸಗಾರರು ಸುಮಾರು ೧೩೦,೦೦೦ ಮಂದಿ ಮುಷ್ಕರ ಹೂಡಿರುವರು. ಇದುವರೆಗೆ ವಾತಾವರಣವು ಶಾಂತವಾಗಿದೆ, ಪೋಲೀಸು ಬಂದೋಬಸ್ತು ನಡೆಯುತ್ತಿದೆ. ಹಲವು ಜನರನ್ನು ಸೆರೆ ಹಿಡಿದಿದೆ.

ಇಂದಿನ ಯುದ್ಧದ ನಿಮಿತ್ತ ವಸ್ತ್ರವ್ಯಾಪಾರದಲ್ಲಿ ಮಾಲಿಕರು ಹೆಚ್ಚಿನ ಲಾಭ ಪಡೆದಿರಲು, ಕೆಲಸಗಾರರಿಗೆ ಸಂಬಳವನ್ನು ಸ್ವಲ್ಪ ಹೆಚ್ಚಿಸಬೇಕೆಂದು ಕೇಳಿದ್ದಕ್ಕೆ ಮಾಲಿಕರು ಒಪ್ಪಲಿಲ್ಲ ಆಬಗ್ಗೆ ಮುಷ್ಕರ ಹೂಡಲಾಗಿದೆ

### ವಿಮಾನವು ಕಾಣೆಯಾಗಿದೆ

### ಸರ್. ಪನ್ನೀರಸಲ್ವಂರವರ ಪತ್ತೆಯಿಲ್ಲ

ಕರಾಚಿಯಿಂದ ಹೊರಟ ಹನಿಬಾಲ್ ಎಂಬ ವಿಮಾನವು ಕಾಣೆಯಾಗಿದೆಯೆಂದೂ ಅದರಲ್ಲಿ ಎಂಟು ಜನರಿದ್ದರೆಂದೂ ತಿಳಿದಿದೆ ಅದು ಟಪ್ಪಾಲು ವಿಮಾನವಾಗಿತ್ತು ಅದನ್ನು ಹುಡುಕಲು ಆರು ವಿಮಾನಗಳ ಹೊರಟವು ದಕ್ಷಿಣ ಕರಾವಳಿಯಲ್ಲಿ ಇರಾನಿಯನ್ ಕರಾವಳಿಯಲ್ಲಿ ಅದರ ಕುರುಹುಗಳ ಕಾಣಬಂದಿವೆ ಈಗ ಅದರೊಳಗಿದ್ದ ಪ್ರವಾಸಿಗಳನ್ನುಕಂಡುಹಿಡಿವ ಯತ್ನ ಮಾಡಲಾಗಿದೆ ಜಾಸ್ಕದಲ್ಲಿರುವ ಇರಾನಿಯನ್ ವಿಮಾನ ನಿಲ್ದಾಣವು ಈ ಹುಡುಕುವಿಕೆಗೆ ಸಾಧ್ಯವಾದ ಸಹಾಯವನ್ನೆಲ್ಲಾ ಕೊಡುತ್ತಿದೆ ಜಾಸ್ಕ್ ವಿಮಾನ ನಿಲ್ದಾಣದವರು ಹುಡುಕುವುದರ ಬಗ್ಗೆ ಒಂದು ಒಂಟಿ ಸವಾರರ ಪಂಗಡವನ್ನು ಕಳುಹಿಸಿರುವರು ವಿಮಾನದ ಗುರುತುಗಳು ಕಾಣಸಿಕ್ಕಿವೆ ವಿಮಾನಗಳು ಹುಡುಕಾಡುತ್ತಿವೆ ಈ ವಿಮಾನದಲ್ಲಿ ಇಂಗ್ಲೆಂಡಿಗೆ ಎಡ್ವೈಸರಿ ಬೋರ್ಡು ಸದಸ್ಯರಾಗಿ ನೇಮಕ ಹೊಂದಿ ಹೊರಟ ಸರ್ ಪನ್ನೀರಸಲ್ವರವರೂ ಇದ್ದರು

**ಮದ್ರಾಸ್ ಸರಕಾರದ ಆಯವ್ಯಯ**

ಮದ್ರಾಸು ಸರಕಾರದ ಮುಂದಿನ ವರ್ಷದ ಆಯವ್ಯಯದ ಪಟ್ಟಿಯು ಹೊರಬಿದ್ದಿದೆ ಅದರಲ್ಲಿ ಮುಂದಿನ ವರ್ಷ ಮದ್ಯಪಾನ ನಿಷೇಧವು ಬೇರೆ ಜಿಲ್ಲೆಗೆ ವಿಸ್ತರಿಸಲ್ಪಡಲಾರದೆಂದೂ ಅದು ಕೇವಲ ಒಂದುಪಕ್ಷದ ಮಂತ್ರಿಮಂಡಲದ ಧ್ಯೇಯವೆಂದೂ, ಈಗಿರುವ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಇಡಲಾಗುವುದೆಂದೂ ಇದೆ. ಇದನ್ನು ಮಾಜಿ ಪ್ರಧಾನ ಮಂತ್ರಿಗಳಾದ ರಾಜಾಜಿಯವರು ತೀವ್ರವಾಗಿ ಖಂಡಿಸಿ ಇಂದಿನ ಗವರ್ನರರ ಆಡಳಿತವು ಜನತೆಯ ಇಚ್ಛೆಯನ್ನು ಗಮನಿಸುವಂತಿಲ್ಲವೆಂದಿರುವರಲ್ಲದೆ, ಇಂತಹ ಆಡಳಿತೆಯಲ್ಲಿ ಕಾಂಗ್ರೆಸು ಸರಕಾರವು ಜಾರಿಗೆ ತಂದ ನಾಲ್ಕು ಜಿಲ್ಲೆಗಳ ಮದ್ಯಪಾನ ನಿಷೇಧವಾದರೂ ಕಿತ್ತುಹಾಕದೆ ಉಳಿದುದು ಮಹಾಪುಣ್ಯವೆಂದು ಹೇಳುವರು

# ★ ಬ್ರಿಟಿಷರ ಎದೆ ನಡುಗಿಸಬಲ್ಲ ಭಾರತದ ಧುರೀಣನಾರು? ★

## ಪಂಡಿತ ಜವಾಹಿರಲಾಲ ನೆಹರುಗಳ ಕುರಿತು ಜಾನ್ ಗಂಥರರ ಸ್ಪಷ್ಟಾಭಿಪ್ರಾಯ

### ಚೈನ-ಭಾರತಗಳ ಮಧುರ ಬಾಂಧವ್ಯ! —ವಿದೇಶದ ಸ್ವಾರ್ಥಕ್ಕೆ ನೆಲೆಯಿಲ್ಲ!—

ಜವಾಹರಲಾಲರಿಂದಾಗ ಬ್ರಿಟಿಷರ ಎದೆಯಲ್ಲಿಯೂ ನಡುಕಹುಟ್ಟುವುದು. ಅವರು ಜವಾಹರಲಾಲರ ಪ್ರತಿಯೊಂದು ಮಾತನ್ನು ಸೂಕ್ಷ್ಮದಿಂದ ಕೇಳುತ್ತಿರುವರು. ಅವರ ಪ್ರತಿಯೊಂದು ಕಾರ್ಯವನ್ನು ನಟ್ಟದೃಷ್ಟಿಯಿಂದ ನೋಡುತ್ತಿರುವರು.. ಗಾಂಧಿಗಿಂತಲೂ ಬ್ರಿಟಿಷರಿಗೆ ಜವಾಹರಲಾಲರ ಹೆದರಿಕೆ ಹೆಚ್ಚಾಗಿದೆ. ಅವರೂ ಗಾಂಧಿಯವರೂ ಒಂದೇ ರಥದಲ್ಲಿ ಕೂತಿರುವದು ಬ್ರಿಟಿಷರ ತಲೆಹಾಳು ಮಾಡಬಿಟ್ಟಿದೆ.

**ಜಗದ್ವಂದ್ಯ ಜವಾಹರಲಾಲರು.**

'ಜವಾಹರಲಾಲ ನೆಹರೂರವರು ಜಗದ್ವಂದ್ಯರಾಗಿರುವರು ಜಗತ್ತಿನಲ್ಲಿ ಅವರಿಗೆ ಉಚ್ಚಸ್ಥಾನವು ಪ್ರಾಪ್ತವಾಗಿದೆ ಅವರ ಒಂದೊಂದು ಮಾತು—ಒಂದೊಂದು ಕಾರ್ಯವು—ಜಗತ್ತಿನ ಇತಿಹಾಸದ ಗತಿಯನ್ನೇ ಬದಲಾಯಿಸುವಷ್ಟು ಸಮರ್ಥವಾಗಿವೆ. ಯೂರೋಪಿನಲ್ಲಿ ಯುದ್ಧವು ಆರಂಭವಾಗುವ ಸ್ವಲ್ಪ ಸಮಯದ ಮೊದಲು ಜವಾಹರಲಾಲರು ಚೀನಕ್ಕೆ ಹೋಗಿದ್ದರಷ್ಟೆ? ಚೀನದಲ್ಲಿ ಅವರಿಗೆ ಬೇರೆ ಯಾವ ವಿದೇಶೀಯನಿಗೂ ದೊರೆಯದ ಸನ್ಮಾನವು ದೊರೆಯಿತು. ಚೀನ ಸರಕಾರವು ಅವರನ್ನು ಭಾರತದ ಪಟ್ಟಾಭಿಷಿಕ್ತ ಮಹಾರಾಜರೆಂತೆ ಕಂಡು ಗೌರವಿಸಿತು ಚುಂಕಿಂಗದಲ್ಲಿ ಚೀನದ ರಾಷ್ಟ್ರೀಯ ಸರಕಾರದ ಅಧ್ಯಕ್ಷ ಚಾಂಗಕೇಶೇಕರೊಡನೆ ಸಂಭಾಷಿಸುತ್ತಿದ್ದ ಹಾಗೆ ಜಪಾನೀಯರ ಬಾಂಬುಗಳು ಆ ನಗರದ ಮೇಲೆ ಬೀಳತೊಡಗಿದವು. ಆದರೂ ಸಂಭಾಷಣೆ ನಿಲ್ಲಲಿಲ್ಲ ಅವರು ಆದೇ ನಗರದೊಳಗಿನ ಒಂದು ಸುರಕ್ಷಿತ ಸ್ಥಳಕ್ಕೆ ಮುಟ್ಟಿ ಅಲ್ಲಿಯೇ ತಮ್ಮ ಸಂಭಾಷಣೆಯನ್ನು ಮುಂದುವರಿಸಿದರು ಹೊರಗೆ ಬಾಂಬುಗಳು ಸಿಡಿಯುತ್ತಿದ್ದುವು. ಒಳಗೆ ಇವರ ಸಂಭಾಷಣೆ ನಡೆಯುತ್ತಿದ್ದಿತು. ಅಂತೂ ಅವರಿಬ್ಬರು ಒಬ್ಬರನ್ನೊಬ್ಬರು ಬಹಳವಾಗಿ ಮೆಚ್ಚಿದರು. ಭಾರತ-ಚೀನಗಳೊಳಗಿನ ಪ್ರೇಮ ಸಂಬಂಧವು ಮತ್ತಷ್ಟು ನಿಕಟವೂ ಭದ್ರವೂ ಆಯಿತು

**ಬ್ರಿಟಿಷರ ತಲೆಕೆಟ್ಟಿದೆ**

ಇದರಿಂದಾಗಿಯೇ ಬ್ರಿಟಿಷರ ತಲೆಕೆಟ್ಟಿದೆ ಎಂದು ಜ್ಹೋನ್ ಗಂಥರ ಎಂಬ ಪ್ರಸಿದ್ಧ ಲೇಖಕರು ಅಮೆರಿಕನ್ ಲ್ಯಾಫ್ ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿರುವರು ಭಾರತವು ಸ್ವಾತಂತ್ರ್ಯವಾದರೆ, ಮತ್ತು ಭಾರತ ಚೀನಗಳು ಒಂದಾಗಿ ಒಂದು ಆಲೋಚನೆಯಿಂದ ತಮ್ಮ ಧ್ಯೇಯೋದ್ದೇಶ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವವಾದರೆ, ಆಗ ಪ್ರಪಂಚದ ಜನಸಂಖ್ಯೆಯ ಒಂದು ಅರ್ಧಾಂಶದಷ್ಟು ಜನರು ಒಂದಾಗಿ ಕೆಲಸಮಾಡುತ್ತಿರುವಂತಾಗುತ್ತದೆ ಇದು ವಿದೇಶಿಯರ ಯಾವತ್ತು ಸ್ವಾರ್ಥ ಮತ್ತು ಮಹತ್ವಾಕಾಂಕ್ಷೆಗಳಿಗೆ ಭಂಗ ತರಬಲ್ಲದು ಅವರಿಗೆ ಮತ್ತು ಏಷ್ಯದಲ್ಲಿ ಎಲ್ಲಿಯೂ ಕೈಸೇದಿ ಕಾಲು ಚಾಚಲಿಕ್ಕೆ ಸ್ಥಳ ದೊರೆಯಲಾರದು ಆದುದರಿಂದ ಜವಾಹರಲಾಲರೆಂದಾಗ ಅವರು ಮೈಕೆಗೆದು—'ಏನನ್ನುವರಂತೆ!' ಎಂದು ಕಳವಳದಿಂದ ಕೇಳುವರು

**ಜವಾಹರಲಾಲರ ಭವಿಷ್ಯ ಕಾರ್ಯಕ್ರಮ**

ಜವಾಹರಲಾಲರು ಮುಂದೇನು ಮಾಡಬಹುದು ಎಂದು ಹೇಳುವದ ಕಷ್ಟವಾಗಿದೆ ಅವರ ಭವಿಷ್ಯ ಕಾರ್ಯಕ್ರಮವು ಪ್ರಾಯಶ ಯೂರೋಪಿನ ಯುದ್ಧ ಸ್ಥಿತಿಯನ್ನು ಹೊಂದಿ ಇರಬಹುದು ಬಾರಕದಲ್ಲಿ ಕಾಯದೆಭಂಗ ಚಳವಳವು ಪುನ ಆರಂಭವಾದ ಸಂದರ್ಭದಲ್ಲಿ ಬ್ರಿಟಿಷ ಸರಕಾರವು ಪ್ರತಿಯೊಬ್ಬ ಕಾಂಗ್ರೆಸ ಮುಖಂಡನನ್ನು ಸೆರೆಹಿಡಿಯುವದು ಆದರೆ ಈ ಕಾರ್ಯವು ಬ್ರಿಟಿಷರಿಗೆ ಸಂತೋಷದ್ದಾಗಿ ಇರುವದಿಲ್ಲ ಕಾಂಗ್ರೆಸೂ ಅಂಥ ಒಂದು ಚಳವಳವನ್ನು ಆರಂಭಿಸಲೇ ಬೇಕೆಂಬ ಹಠದಲ್ಲಿಯೂ ಇರುವದಿಲ್ಲ ಆದರೆ ಚಳವಳವು ಆರಂಭವಾಗದಿರಬೇಕಾದರೆ ಕಾಂಗ್ರೆಸಿಗೂ ಸರಕಾರಕ್ಕೂ ಸಂಧಾನವಾಗಬೇಕು ಈಗಿನ ಪರಿಸ್ಥಿತಿಯಲ್ಲಿ ಇದು ಆಗುವದು ಬಹಳ ಕಠಿನ ಎಂಬ ಹಾಗೆ ಕಾಣುತ್ತದೆ ಯೂರೋಪಿನ ಯುದ್ಧದಲ್ಲಿ ತಾವು ಸೇರಲೇ ಬೇಡವೇ ಎಂಬ ನಿರ್ಣಯವನ್ನು ತಾವು ಮಾಡಬೇಕಾದ್ದು ಎಂದು ಭಾರತೀಯರು ಹೇಳುತ್ತಾರೆ ತಾವೇ ಸ್ವತಂತ್ರರಾಗಿ ಇಲ್ಲದಿರುವಾಗ ಯುರೋಪಿನ ಬೇರೆ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ ತಾವು ಹೋರಾಡುವದು ಭಾರತೀಯರಿಗೆ ಸರಿಯಾಗಿ ಕಾಣುವದಿಲ್ಲ ಮಾತ್ರವಲ್ಲ, ಕೊಟ್ಟಷ್ಟು ಸ್ವಾತಂತ್ರ್ಯವನ್ನು ಕೂಡ, ಬ್ರಿಟಿಷ ಸರಕಾರವು ಪುನ ಸೆಳಕೊಂಡಿರುವದು ಭಾರತೀಯರಲ್ಲಿ ಬಹಳ ಅತೃಪ್ತಿಯನ್ನು ಉಂಟುಮಾಡಿದೆ

**ಗಾಂಧಿಯವರ ಮೇಲೆ ಶ್ರದ್ಧೆ**

'ಜವಾಹರಲಾಲರಿಗೆ ಗಾಂಧಿಯವರ ಮೇಲೆ ಅತಿಶಯ ವಾದ ಶ್ರದ್ಧೆಯಿದೆ ಈಗಿನ ಪರಿಸ್ಥಿತಿಯಲ್ಲಿ ದೇಶವನ್ನು ಮುನ್ನಡೆಯಿಸಲಿಕ್ಕೆ ಸಮರ್ಥರಾದವರು ಗಾಂಧಿಯವರೊಬ್ಬರೇ ಎಂದು ಜವಾಹರಲಾಲರು ಮನಗಂಡಿದ್ದಾರೆ ಇದು ಬ್ರಿಟಿಷರು ಚಿಂತಾಪರರಾಗಲಿಕ್ಕೆ ಮತ್ತಷ್ಟು ಎಡೆಮಾಡಿಕೊಟ್ಟಿದೆ ಗಾಂಧಿಯವರ ಅತೃಪ್ತಿಯೂ ನಿರಾಶೆಯೂ ಜವಾಹರರ ಅತೃಪ್ತಿ ನಿರಾಶೆಗಳಾಗುವವು ಅವರಿಬ್ಬರು ಒಂದಾಗಿಯೇ ಮುಂದಿನ ಕಾರ್ಯಗಳನ್ನು ಯೋಚಿಸುವರು ಅವರೇನು ಮಾಡುವರ ಅದರ ಪರಿಣಾಮವೇನಾಗುವದು ಎಂಬದನ್ನು ಹಿಂದಿನ ಘಟನೆಗಳಿಂದ ಹೇಳುವದಾದರೆ, ಎದೆನಡುಗುತ್ತದೆ ಆದ ಪರಿಂದ ಜವಾಹರರನ್ನು ಸುಮ್ಮಗಿರಿಸಲಿಕ್ಕಾದರೂ ಬ್ರಿಟಿಷ ಸರಕಾರವು ಮಹಾತ್ಮಾ ಗಾಂಧಿಯವರೊಡನೆ ಒಪ್ಪಂದಕ್ಕೆ ಬರುವದು ಅಗತ್ಯವಾಗಿದೆ

## ನೋಟಿಸು

**ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

(S ( No 384, 1939)
S, L P No ?2/1940

ಟಿ ರಾಮರಾವ್—ಅಮ್ಮಜ್ಜಾರಿ ಅರ್ಜಿದಾರ

ಮತ್ತು

೧ ಯಂ ಮಾಹಮ್ಮದಾಲಿ ೨ ಯಂ ರಂಗಪ್ಪ ಎ ಬನ್ನಪ್ಪ—ರೆಸ್ಪೊಂಡೆಂಟರು

೧ನೇ ರೆಸ್ಪೊಂಡೆಂಟ, ಮಂಗಳೂರ ಶಹರ ಪೈಕಿ ಕುದ್ರೋಳಿಯಲ್ಲಿರುವ ಅಬ್ದುಲ್ ರೈಮಾನ್ ಸಾಹೇಬರ ಮಗ ಮುನ್ಸಿಪಲ್ ಆಫೀಸಿನ ಕ್ಲಾರ್ಕ ಯಂ ಮಹಮ್ಮದಾಲಿರಿಗೆ ತಿಳಿಯಪಡಿಸುವದೇನಂದ್ರೆ —

ಮೆಲ್ಕಂಡ ಅರ್ಜಿದಾರನೆ ರೆಸ್ಪೊಂಡೆಂಟರಿಂದ ಬರತಕ್ಕ ಮೇಲ್ಕಂಡ ವ್ಯಾಜ್ಯದಲ್ಲಿ ಉಂಟಾದ ಡಿಕ್ರಿ ಪ್ರಕಾರ ಐವೇಜುಗಳನ್ನು ವಗೈರೆ ವಸೂಲು ಮಾಡುವ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ಅಮ್ಮಜ್ಜಾರಿ ಅರ್ಜಿ ದಾಕಲಾಗಿರುತ್ತದೆ ಸದ್ರಿ ಅಮ್ಮಜ್ಜಾರಿ ಅರ್ಜಿಯು ೧೯೪೦ನೆ ಇಸ್ವಿ ಮಾರ್ಚಿ ತಿಂಗಳ ತಾ ೨೦ನೆ ಬುಧವಾರ ದಿವ್ಸ ಹಗಲು ೧೧ ಗಂಟೆ ಮೇಲಿನ ಕೋರ್ಟಿನಲ್ಲಿ ನೋಟೀಸಿನ ಬಗ್ಗೆ ಇಡೋಣಾಗಿರುತ್ತದೆ. ಆ ದಿವ್ಸ ನೀವು ಕೋರ್ಟ ಮುಂದೆ ಹಾಜ್ರಾಗಿ ತಮ್ಮ ಆಕ್ಷೇಪಗಳು ಜ್ಯಾಹೀರು ಮಾಡಿಕೊಳ್ಳತಕ್ಕದ್ದು, ತಪ್ಪಿದರೆ ಏಕಪಕ್ಷವಾಗಿ ತೀರ್ಮಾನವಾಬಹುದೆಂಬ ಸಂಗ್ತಿ ಈ ಮುಖ್ಯ ತಿಳಿಸೋಣಾಗಿರುತ್ತದೆ.

Mangalore } R. R. Talcherkar
4 3-1940 } Counsel for Petitione




ಧಾರ್ಮಿಕ ವಿಚಾರ:

# ಮಹಾ ಶಿವರಾತ್ರಿ

**ದೇಗುಲಗಳೆಡೆಯಿಂದ ನಿರಂತರವಾಗಿ ಕೇಳುವ ಘಂಟಾನಿನಾದ ವೈದಿಕ ಮಂತ್ರಗಳ ಜಯಘೋಷ, ಎತ್ತಲೂ ಭಕ್ತಿಗಾಂಭೀರ್ಯಗಳೇ ತುಂಬಿರುವಂತಹ ವಾತಾವರಣಲೌಕಿಕದ ಭ್ರಮೆಯನ್ನು ಮರೆತು, ಅಲೌಕಿಕತೆಯಲ್ಲಿ ಪರವಶವಾಗುವ ಪ್ರಸನ್ನಮಂಗಳ ರಾತ್ರಿ,— ಆ ಮಹಾಶಿವರಾತ್ರಿಯು ಆಸ್ತಿಕರಾದ ಶಿವಭಕ್ತರಿಗೆ ವಿಶೇಷವಾದೊಂದು ಉತ್ಸವದ ದಿನವಾಗಿದೆ.**

ಪ್ರತಿ ತಿಂಗಳಲ್ಲಿಯೂ ಹುಣ್ಣಿಮೆ ಕಳೆದ ಹದಿನಾಲ್ಕನೇ ದಿನ ರಾತ್ರಿ (ಚತುರ್ದಶಿ ರಾತ್ರಿ)ಯನ್ನು ಶಿವಭಕ್ತರು ಶಿವರಾತ್ರಿಯೆಂದು ಆಚರಿಸುವರು. ಆ ರಾತ್ರಿ ಶಿವನನ್ನು ಆರಾಧಿಸುವುದರಿಂದ ಆತನು ಪ್ರಸನ್ನನಾಗುವನೆಂದು ಅವರ ತಿಳುವಳಿಕೆಯಾಗಿದೆ. ಅಂತಹ ಶಿವರಾತ್ರಿಯು ವರ್ಷಕ್ಕೊಮ್ಮೆ ಕುಂಭ ಮಾಸದಲ್ಲಿ ಬರುವುದನ್ನು ಮಹಾಶಿವರಾತ್ರಿಯೆಂದು ಭಕ್ತವೃಂದವು ಅತ್ಯಂತ ಉತ್ಸಾಹದಿಂದ ಆಚರಿಸುವುದು. ಇಂತಹ ಶಿವರಾತ್ರಿಯ ಉತ್ಸವವು ಈ ವರ್ಷ ತಾ. ೭ರಂದು ಜರಗಿತು. ಪ್ರತಿ ಶಿವರಾತ್ರಿಯ ದಿನಗಳಲ್ಲಿ ಹಗಲು ಉಪವಾಸ ರಾತ್ರಿ ಜಾಗರ ಮಾಡಿದವರು, ಶಿವಸಾಯುಜ್ಯವನ್ನು ಹೊಂದುವರೆಂದು ಪುರಾಣಗಳು ಸಾರುತ್ತವೆ. ಕಡಿಮೆ ಪಕ್ಷ ವರ್ಷಕ್ಕೆ ಒಮ್ಮೆ ಮಹಾಶಿವರಾತ್ರಿಯ ದಿನವಾದರೂ ವ್ರತವನ್ನು ಆಚರಿಸಬೇಕೆಂಬುದು ಶಿವಭಕ್ತರ ಸಿದ್ಧಾಂತವಾಗಿದೆ.

ನಿರಂತರ ಗಂಭೀರನಾಗಿ, ಪರಮಾವಧಿ ಸ್ವಾರ್ಥತ್ಯಾಗಿಯಾಗಿ ಕಷ್ಟಸಹಿಷ್ಣುವಾಗಿ, ತಪಸ್ಸಮಾಧಿಗಳಲ್ಲಿ ದೃಢಮನಸ್ಕನಾಗಿ, ಶಿವನು ಗಾಂಭೀರ್ಯದ, ಸ್ವಾರ್ಥತ್ಯಾಗದ, ದೃಢತೆಯ ಪ್ರತಿಮೂರ್ತಿಯಾಗಿದ್ದಾನೆ. ಕೆದರಿ ನಿಂತಿರುವ ಜಡೆ, ಉಟ್ಟ ಚರ್ಮಾಂಬರ ಮೈಗೆ ಮೆತ್ತಿರುವ ವಿಭೂತಿ ಜಗದ್ರಕ್ಷಣೆಗೆಂದು ವಿಷವನ್ನು ನುಂಗಿ ಕಪ್ಪಾಗಿರುವ ಕಂಠ ಇವುಗಳಿಂದೆಲ್ಲಾ ಶಿವನ ಮೂರ್ತಿಯು ಅದ್ಭುತ ಆಶ್ಚರ್ಯಕರವಾಗಿದೆ. ಭಾರತ ಭೂಮಿಯಲ್ಲಿ ಶಿವನ ತಾಂಡವ ಶಿವಲೀಲೆ, ಶಿವಲೀಲೆಗಳಿಗೆ ಪ್ರತ್ಯೇಕ ಸ್ಥಾನಮಾಹಾತ್ಮ್ಯಗಳಿವೆ. ಜೀವನದ ಹೋರಾಟಗಳಲ್ಲಿ ನಿರಂತರ ದುರಂತಗಳನ್ನು ಎದುರಿಸ ಬೇಕಾದವರಿಗೆ ದುರಂತದ ಹೋರಾಟದಿಂದ ಸ್ಫೂರ್ತಿಶಕ್ತಿಗಳನ್ನು ಪಡೆದು ಆನಂದಿಸುವವರಿಗೆ ಆ ರುದ್ರಮೂರ್ತಿಯು ಆದರ್ಶ ದೇವತೆಯಾಗಿರುವನು!

ಶಿವನ ಮಹಿಮೆಯ ಕಥೆಗಳು ಜನರ ಮನಸ್ಸನ್ನು ಬಹಳ ಆಕರ್ಷಿಸಿವೆ. ಲೌಕಿಕ ನಿಶ್ಚಲ ಭಕ್ತಿಯಿಂದ, ಹಗಲಿಡೀ ಉಪವಾಸ ಮಾಡಿಕೊಂಡಿದ್ದು, ರಾತ್ರಿ ಹರಹರ ಎಂದು ಜಾಗರವಿದ್ದು ಇಷ್ಟು ಕಠಿಣರೀತಿಯಲ್ಲಿ ವ್ರತವನ್ನು ಆಚರಿಸುವುದು ನಿಜವಾಗಿಯೂ ನಿತ್ಯ ಜೀವನದಲ್ಲಿ ಹೆಚ್ಚಿನ ಕಷ್ಟ ಕಾರ್ಯವಾಗಿದೆ. ಹಾಗೆ ಮಾಡುವುದರಿಂದಲೇ ಮಾನವನಿಗೆ ಪರಮ ಪದವಿಯು ಸಿಗುವುದು ಸಾಧ್ಯವಾಗಿದೆ.

ಶಿವರಾತ್ರಿಯ ಮಹಿಮೆಯ ಕುರಿತು ಅನೇಕ ರಮಣೀಯ ಕಥೆಗಳಿವೆ. ಬೇಡನೊಬ್ಬನು ಬೇಟೆಗೆಂದು ಕಾಡಿಗೆ ಹೊರಟನು. ಆತನು ಕಾಡು ಇಡೀ ಅಂಡಲೆದು ಮೃಗವೊಂದೂ ಸಿಕ್ಕದಿರಲು ಒಂದು ಬಿಲ್ವ ವೃಕ್ಷದ ಬಳಿ ಬಂದನು. ಅಲ್ಲಿ ವಿಶ್ರಾಂತಿ ಹೊಂದಿದನು. ಹಗಲಿಡೀ ಆತನು ಉಪವಾಸದಿಂದಿದ್ದನು. ಹಗಲು ಉಪವಾಸದಿಂದ ಬಳಲಿ ರಾತ್ರಿ ನಿದ್ದೆ ಬಂದುಬಿಟ್ಟರೆ ಮತ್ತೆ ರಾತ್ರಿ ಕಾಲದ ಮೃಗಬೇಟೆಯೂ ಸಾಧ್ಯವಾಗಲಾರದೆಂದು ಆತನು ಬಿಲ್ವಮರದ ಮೇಲೇರಿ ಅಲ್ಲಿಂದ ಒಂದೊಂದೇ ಬಿಲ್ವಪತ್ರಗಳನ್ನು ಕಿತ್ತು ಕೆಳಗೆಸೆಯುತ್ತಿದ್ದನು. ಹಾಗೆಯೇ ಬೆಳಗಾಯಿತು. ಕೆಳಗೆ ನೋಡುತ್ತಾನೆ. ತಾನು ಮರದ ಮೇಲಿಂದ ಎಸೆದ ಬಿಲ್ವ ಪತ್ರಗಳು ಒಂದು ಶಿವಲಿಂಗದ ಮೇಲೆ ಬಿದ್ದಿವೆ. ಆ ದಿನ ಶಿವರಾತ್ರಿಯ ದಿನವೂ ಆಗಿತ್ತು. ಅಂದಿನಿಂದ ಆತನು ಮಹಾ ಶಿವಭಕ್ತನಾದನು. ಮುಂದೆ ಶಿವೈಕ್ಯವನ್ನು ಪಡೆದನು.

ಇನ್ನೊಂದು ಉಜ್ವಲವಾದ ಕಥೆಯು ಹೀಗಿದೆ— ಶ್ರೀ ಶೈಲದಲ್ಲಿ ಮಹಾಶಿವರಾತ್ರಿಯ ದಿನ ಅನೇಕ ಭಕ್ತರು ನೆರೆದಿದ್ದರು. ನದಿಯಲ್ಲಿ ಸ್ನಾನ ಮಾಡುತ್ತಿರುವಾಗ, ತನ್ನ ಗಂಡನನ್ನು ಪ್ರವಾಹವು ಕೊಚ್ಚಿಕೊಂಡು ಹೋಗುತ್ತಿರುವುದೆಂದೂ, ಆತನನ್ನು ದಯವಾಡಿ ಉಳಿಸಿರೆಂದೂ ದಡದಲ್ಲಿ ನಿಂತಿರುವ ಹೆಂಗಸೊಬ್ಬಳು ಕೂಗುತ್ತಿದ್ದಳು—ಜನರು ಆ ಕಡೆ ಧಾವಿಸಿದರು. ಆದರೆ ತನ್ನ ಗಂಡನನ್ನು ಪಾಪ ಮಾಡದವನು ಮಾತ್ರ ಮುಟ್ಟಬಹುದೆಂದೂ, ಪಾಪಿಯು ಮುಟ್ಟಿದರೆ ಆತನೂ ಹಿಂದೆ ಬರಲಾರನೆಂದೂ ಆಕೆ ತಿಳಿಸಿದಳು. ಆಗ ಜನರೆಲ್ಲ ಹಿಂಜರಿದು ನಿಂತರು. ಆಕೆ ಮತ್ತೂ ಕೂಗುತ್ತಿದ್ದಳು. ಶಿವರಾತ್ರಿಯನ್ನು ನಿಶ್ಚಲ ಮನೋಭಾವದಿಂದ ಆಚರಿಸಿದ್ದ ಭಜಕನೊಬ್ಬ ತನ್ನ ಪಾಪಗಳೆಲ್ಲವೂ ವ್ರತಾಚರಣೆಯಿಂದ ತೊಳೆದು ಹೋಯಿತೆಂಬ ನಿಶ್ಚಯದಿಂದ ನೀರಿಗಿಳಿದನು. ನೋಡುತ್ತಾನೆ ಶಿವಪಾರ್ವತಿಯರು ತನ್ನ ಮುಂದೆ ಬಂದು ನಿಂತಿದ್ದಾರೆ! ಆತನೂ ಮುಂದಕ್ಕೆ ಮಹಾಶಿವಭಕ್ತನಾದನು.

ಆ ದುದರಿಂದ ಮಹಾಶಿವರಾತ್ರಿಯ ದಿನವು ಶಿವಾರ್ಚಕರಿಗೆ ಹೆಚ್ಚಿನ ಪವಿತ್ರವಾದ ದಿನ! ಆ ದಿನ ಭಕ್ತರು ಮಾಡತಕ್ಕ ಕಷ್ಟಸಹಿಷ್ಣುತೆಯ ಕಾರ್ಯಗಳು ನಿಜವಾಗಿ ಒಬ್ಬನ ಮನೋವ್ಯಾಧಿಗಳನ್ನು ನಿರ್ಮೂಲ ಮಾಡಲು ಸಮರ್ಥವಾದವುಗಳಾಗಿವೆ. ಮನುಷ್ಯನು ಪಾವನನಾಗುವುದು ಸ್ವಾರ್ಥತ್ಯಾಗ, ಕಷ್ಟಸಹಿಷ್ಣುತೆ ನಿರ್ಮಲಧ್ಯಾನ ಭಕ್ತಿಗಳಿಂದ ಮಾತ್ರ! ಅದೇ ಹರಿಯ ಪೂಜೆಯೂ ಹರನ ಪೂಜೆಯೂ ಸರ್ವರ ದೇವರ ಪೂಜೆಯೂ ಆಗಿದೆ!





2 ಭಾರತೀಯರ ಮೆಚ್ಚುಗೆಯ ಎರಡು ವಾಚುಗಳು!

ವೆಸ್ಟ್ ಎಂಡ್ ವಾಚುಗಳಲ್ಲಿ 'ಮೇ… ಮತ್ತು 'ಕೀಪ್ ಸೇಕ್' ಎಂಬ ಎರಡು… ಗಳು ಹೆಸರಾಂತವು, ಬೆಲೆಗೆ ತಕ್ಕುದಾ…

ಪ್ರಯೋಜನವು ಇವರ ಹೆಸರನ್ನು ಕೇಳಿದೊಡನೆ ಜನರು ತಲೆದೂಗುತ್ತಿರುವದೇ ಎತ್ತಿತೋರಿಸುತ್ತದೆ. ಜನತೆಯ ನವೀನ ಫ್ಯಾಶನಿಗೆ ತಕ್ಕುದಾದ ಆಕಾರಗಳಲ್ಲಿ ಚಿತ್ರದಲ್ಲಿ ತೋರಿಸಿದಂತೆ ತಯಾರಿಸಿರುವೆವು. ಈ ಉತ್ತಮವಾದ ಮೆಚ್ಚುಗೆಯ ವಾಚುಗಳನ್ನು ಯೋಗ್ಯಬೆಲೆಗೆ ಕೊಂಡುಕೊಳ್ಳಿರಿ.

ಕೆಟಲಾಗು ಕೇಳಿದಲ್ಲಿ ಉಚಿತ ಕಳುಹಿಸುವೆವು.




ವೆಸ್ಟ್ ಎಂಡ್ ವಾಚು ಕೊ.,
ಬೊಂಬಾಯಿ ಮತ್ತು ಕಲ್ಕತ್ತಾ.

WEST END WATCH C…
BOMBAY CALCUTTA



ಜೀವವಿಮೆಯೇ ಸುಲಭವಾದ ಕಂತುಗಳಲ್ಲಿ ಹಣವನ್ನು ಪಾವತಿಮಾಡಿ, ನಿಸ್ಸಂದೇಹವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯವನ್ನು ಖಚಿತಮಾಡಿಕೊಳ್ಳಲು ಹಣ ಕೂಡಿಸಲು ಸಾಧ್ಯವಾದ ಮಾರ್ಗವು.

ಪ್ರತಿ ವರ್ಷವೂ ವಿವೇಚನಾಶಕ್ತರಾದ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ, ಆರ್ಥಿಕ ಸ್ವಾತಂತ್ರ್ಯದ ಅಡಿಗಲ್ಲನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್' ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 1874 ಮುಖ್ಯ ಕಛೇರಿ: ಬೊಂಬಾಯಿ

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ: —

ಬ್ರಾಂಚ್ ಸೆಕ್ರೆಟೆರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್
ಸೌತ್ ಪೆರೇಡ್, ಬೆಂಗಳೂರು.

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳೂ, ಪ್ರತಿನಿಧಿಗಳಿದ್ದಾರೆ.

# ಸಿನೆಮಾ ಪುಟ

### ಶಾಂತಾರಾಮರನ್ನು ಪ್ರೀತಿಸ ತೊಡಗಿದರು!

### ಚಂದ್ರಮೋಹನರ ಅನುಭವ

"ಒಂದು ಲಾವಣ್ಯವತಿಯಾದ ಮಾನಿನಿಯಂತೆ, ಅವರಲ್ಲಿ ಅಪೂರ್ವ ಆಕರ್ಷಕ ಶಕ್ತಿಯಿದೆ; ಹಾಗಾಗಿ ನಾವು ಅವರನ್ನು ಪ್ರೀತಿಸತೊಡಗುತ್ತೇವೆ.

ಹೀಗೆಂದು ಪತ್ರಿಕಾ ಪ್ರತಿನಿಧಿಯೊಡನೆ ಶಾಂತಾಆಪ್ಟೆ, ಹುಬ್ಳೀಕರ್ ಮೊದಲಾದ ಪ್ರಚಂಡ ಅಭಿನಯ ಕುಶಲೆಯರನ್ನು ಸಿದ್ಧಗೊಳಿಸಿದ ಶಾಂತಾರಾಮರ ಸಾಮರ್ಥ್ಯದ ಕುರಿತು ಚಂದ್ರಮೋಹನರು ಹೇಳಿದರು.

"ನಾನು ನೋಡಿದ ಎಲ್ಲಾ ಲಾವಣ್ಯವತಿಯರಿಗಿಂತಲೂ ಶಾಂತಾರಾಮರಲ್ಲಿ ಹೆಚ್ಚು ಸ್ತ್ರೀ ಸೌಂದರ್ಯ ಶಕ್ತಿಗಳಿವೆ. ಅವರು ಒಂದು ಸೀರೆಯನ್ನುಟ್ಟು, ಹೆಂಗುಸಿನ ಅಭಿನಯ ಮಾಡಲು ಮನಸ್ಸು ಮಾಡಿದರೆ, ಇಂದು ಅಭಿನಯಗಾರ್ತಿಯರೆನಿಸಿ ಪ್ರಖ್ಯಾತಿ ಪಡೆದ ಸಮಸ್ತರನ್ನೂ ಅವರು ಸೋಲಿಸಿ ಬಿಡಬಲ್ಲರು" ಹೀಗೆಂದು ಚಂದ್ರಮೋಹನರು ಹೇಳಿದರು.

ಶಾಂತಾರಾಮರು ನಿರ್ದೇಶಕರಾಗುವುದಕ್ಕಿಂತ ಮೊದಲು ಮರಾಠಿ ಚಿತ್ರಗಳಲ್ಲಿ ಸ್ತ್ರೀಪಾತ್ರವನ್ನು ಒಳ್ಳೆಯ ಪ್ರಶಂಸಾಯುಕ್ತವಾಗಿ ಅಭಿನಯಿಸುತ್ತಿದ್ದರು.

### ಲೀಲಾ ಚಿಟ್ನೀಸರ ಮೋಟರು ಅಪಗಡ

ಬೊಂಬಾಯಿಯಿಂದ ಕೊಲ್ಲಾಪುರಕ್ಕೆ ಹೋಗುವ ದಾರಿಯಲ್ಲಿ ಲೀಲಾ ಚಿಟ್ನೀಸರು ಮೋಟರು ಅಪಗಡಕ್ಕೆ ತುತ್ತಾಗಿ ದೇವರ ದಯೆಯಿಂದ ಹೇಗೋ ಪಾರಾದರು!

ಪಾನ್ವೆಲ್ ಎಂಬ ಸ್ಥಳದಲ್ಲಿ (ಬೊಂಬಾಯಿ ಪೂನಾಮಾರ್ಗದಲ್ಲಿ) ಮೋಟರು ಮಾರ್ಗದಿಂದ ಜಾರಿ ಸಮೀಪದ ಮರಕ್ಕೆ ಡಿಕ್ಕಿಹೊಡೆಯಿತು. ಆ ಮೋಟರಿನಲ್ಲಿ ಲೀಲಾ ಚಿಟ್ನೀಸರೂ ಇದ್ದರು. ಆದರೆ ಯಾರಿಗೂ ಯಾವರೀತಿಯ ಜಖಂ ಆಗಲಿಲ್ಲವೆಂದು ತಿಳಿದಿದೆ

### ಅಛೂತ್‌ವನ್ನು ಮೆಜಿಸ್ಟ್ರೇಟರು ನೋಡಬೇಕಾಯಿತು

ಶ್ರೀ ಚಂದುಲಾಲ ಶಹಾರವರು ಬೊಂಬಯಿಯ ಪತ್ರಿಕೋದ್ಯಮಿಯ ಮೇಲೆ ಮಾಡಿದ ಮಾನನಷ್ಟದ ದಾವೆಯ ಇತ್ಯರ್ಥದ ಸಲುವಾಗಿ ಬೊಂಬಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು 'ಅಛ್ಯೂತ್' ಚಿತ್ರವನ್ನು ನೋಡಬೇಕಾಯಿತು. ಮೆಜಿಸ್ಟ್ರೇಟರು ಚಿತ್ರವನ್ನು ನೋಡಿದ ಮೇಲೆ ಹೆಚ್ಚಿನ ನಿರ್ಣಯಕ್ಕೆ 'ಪ್ರಾಯಶ್ಚಿತ್ತ' ಕಾದಂಬರಿಯನ್ನೂ ಓದಬೇಕೆಂದು ಹೇಳಿದರು.

## ಸಿನೆಮಾವು ಅವರನ್ನು ಸುಲಿಗೆ ಮಾಡಿತು

### ಹಳ್ಳಿಯವರ ನಿಷೇಧ

ಒರ್ರಾಪುರ ಹಳ್ಳಿಯ ಜನರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ, ಅವರ ಹಳ್ಳಿಯಲ್ಲಿ ನಡೆಯುತ್ತಿರುವ ಕೃಷಿ ಮತ್ತು ಕೈಗಾರಿಕೆ ಪ್ರದರ್ಶನದವರಿಂದ ನಡೆಸಲ್ಪಡುವ ಸಿನೆಮಾ ಮತ್ತು ಇತರ ಪ್ರದರ್ಶನಗಳ ಕುರಿತು ನಿಷೇಧ ಪ್ರದರ್ಶನ ಮಾಡಿ, ಅದರಿಂದ ಬಡವರಾದ ತಮ್ಮ ದುಡ್ಡು ಅನ್ಯಾಯದಿಂದ ಸುಲಿಗೆಯಾಗುತ್ತಿದೆಯೆಂದೂ ತಾವು ಬಡತನವನ್ನು ಹೊಂದುತ್ತಿರುವೆವೆಂದೂ ಬರೆದು ಕೊಂಡಿರುವರು.

ಈಗಾಗಲೇ ಬರಗಾಲ ಮತ್ತು ನೆರೆಹಾವಳಿ ಮೊದಲಾದವುಗಳಿಂದ ಹಳ್ಳಿಯ ಸಂಪತ್ತು ಕ್ಷೀಣಹೊಂದಿರಲು ಇಂತಹ ವಿಲಾಸೋಪಯೋಗದಿಂದ ಗ್ರಾಮ ಜೀವನವು ಬತ್ತಿ ಹೋಗುವುದೆಂದು ಅವರು ದೂರಿಟ್ಟಿರುವರು

ಸ್ವದೇಶೀ ಕಾಂಗ್ರೆಸು ಕೆಲಸಗಾರರೂ ಹಳ್ಳಿಹಳ್ಳಿಗೆ ತಿರಿಗಿ ಪ್ರಯಾಸ ಸಂಕಷ್ಟಗಳಿಂದ ಗಳಿಸಿದ ಅವರ ದುಡ್ಡು ಸುವಿಲಾಸಕ್ಕಾಗಿ ವೆಚ್ಚ ಮಾಡಬೇಡಿರೆಂದು ಪ್ರಚಾರ ಮಾಡುತ್ತಾರೆ

## ಸಿನೆಮಾ ಸುದ್ದಿಗಳು

ನಿರ್ದೇಶಕ ಪಿ ಪುಲ್ಲಯ್ಯನವರು ಧರ್ಮಪತ್ನಿ ಎಂಬ ಸಾಮಾಜಿಕ ಚಿತ್ರವನ್ನು ಕೊಲ್ಹಾಪುರದ ಶಾಲಿನಿಸ್ಟುಡಿಯೋದಲ್ಲಿ ತಯಾರಿಸುವುದರಲ್ಲಿ ನಿರತರಾಗಿದ್ದಾರೆ

ಅಧಿಕ ಆದಾಯ ತೆರಿಗೆಯಲ್ಲಿ ತಮ್ಮ ನಿಷೇಧವನ್ನು ಸೂಚಿಸಿ ಭಾರತೀಯ ಚಲಚ್ಚಿತ್ರ ತಯಾರಿಸುವವರ ಸಂಪಾದವರು ಒಂದು ವಿನಂತಿಯನ್ನು ಭಾರತ ಸರಕಾರದ ಆರ್ಥಿಕ ಸಚಿವರಿಗೆ ಕಳುಹಿಸಿರುವರು

ನಿರ್ದೇಶಕ ನಾರಾಯಣ ಕಾಲೆಯವರು ಲವ್ಸ್ ದೇವಚಿತ್ರವನ್ನು ತಯಾರಿಸುತ್ತಿದ್ದಾರೆ

ಬಹುರಾಣಿಯೆಂಬ ಸಾಮಾಜಿಕ ಚಿತ್ರವು ಸಿದ್ಧವಾಗಿದೆ ಬೇಗನೇ ಬೊಂಬಾಯಿನಗರದಲ್ಲಿ ಪ್ರದರ್ಶಿಸಲ್ಪಡುವುದಾಗಿ ತಿಳಿದಿದೆ

ಪರಮೌಂಟ್ ಚಿತ್ರದವರ ದುನಿಯಾ ಮಾನೇ ಚಿತ್ರವು ಸಿದ್ಧವಾಗಿದೆ. ಈ ಕಥೆಯು ದುನಿಯಾ ನಾ ಮಾನೇ ಕಥೆಯನ್ನು ಆಧರಿಸಿಕೊಂಡ ಬರೆದುದಾಗಿದೆ

**THE PIE-MONEY BANK LTD.,**
Maidan Road, MANGALORE.

Undertakes all kinds of Banking Business Current account at 2½% per annum. Savings Bank Deposits at 4½% per annum

**FIXED DEPOSITS**

For 2 Years 5% 1 Year 4½% For 6 months 4% 3 months 3½%
Auction J ranging from Rs. 100/ to Rs. 5000/ run regularly on systematic lines Unique Banking facilities to Businessmen and interested Public

*Apply for particulars—*

**K. R. GURU,** *Managing Director*

## ಅಗ್ನಿಪರೀಕ್ಷೆ

[ಕಿನೆಯ ಕ್ರುಟದಿಂದ ಮುಂದುವರಿದುದು]

ಬಹುರೂಪಿ ವೇಷವನ್ನು ತಾಳಿದ್ದನು. ಅವನು ಮಂಚದ ಮೇಲೆ ಹೋಗಿ ಕೋಭಾಯಮಾನನಾದನು. ನಾನೂ ಮಂಟಪದಲ್ಲಿ ಕಾಲಿಟ್ಟಾಗ ಜನರು ವಿಸ್ಮಿತ ನೇತ್ರಗಳಿಂದ ನನ್ನನ್ನು ನೋಡತೊಡಗಿದರು ನಾನು ಕೈಯೊಳಗಿನ ಗಂಟಿನಂತೆ ಮಂಟಪಕ್ಕೆ ಕರತರಲ್ಪಟ್ಟಿರಲಿಲ್ಲ ಅದಕ್ಕೆ ನನ್ನನ್ನು ಎಳೆದುಕೊಂಡು ಹೋಗುವವರು ಕೊಂಚ ಪ್ರಯಾಸಪಡಬೇಕಾಗಿತ್ತು.

ಮಂಟಪದೊಳಗೆ ಕಾಲಿಡುತ್ತಲೇ, ವರಮಹಾಶಯರನ್ನು ಉದ್ದೇಶಿಸಿ ನಾನು ಹೇಳಿದೆ—'ಇವರು—ಈ ಮಹಾಶಯರು ನನ್ನನ್ನು ವಿವಾಹವಾಗಲಿಕ್ಕೆ ಇಲ್ಲಿ ಬಂದು ಕೂತಿದ್ದಾರೆ ಇವರು ನನ್ನ ಚಿತ್ರವನ್ನು ನೋಡಿ ನನ್ನನ್ನು ಮೆಚ್ಚಿದ್ದಾರೆ ಆದರೆ ಈ ವಿಷಯದಲ್ಲಿ ನನ್ನ ಸಮ್ಮತಿಯೂ ಅಗತ್ಯವಾಗಿದೆ ಎಂಬುದನ್ನು ಇವರು ತಿಳಿಕೊಳ್ಳಲಿಲ್ಲ ವಿವಾಹವನ್ನು ಇವರೊಬ್ಬರೇ ಮಾಡಿಕೊಳ್ಳುವದಲ್ಲ, ನಾನೂ ಮಾಡಿಕೊಳ್ಳಬೇಕಾಗಿದೆ ಈ ವಿಷಯದಲ್ಲಿ ನನ್ನ ಸ್ವಂತದ ಅಭಿಪ್ರಾಯ ಒಂದೆ ಇದೆ ಈ ಮಹಾಶಯರು ನನಗೆ ಮೆಚ್ಚುಗೆಯಾಗಿಲ್ಲ ಆದ್ದರಿಂದ ನಾನು ಇವರನ್ನು ವಿವಾಹವಾಗ ಪದಿಲ್ಲ

ನನ್ನ ಮಾತುಗಳನ್ನು ಕೇಳಿ ಮಂಟಪದಲ್ಲಿ ನೆರೆದಿದ್ದವರೆಲ್ಲರ ಚಕಿತರಾಗಿಬಿಟ್ಟರು. ಯಾರೊಬ್ಬರ ಬಾಯಿಯಿಂದ ಒಂದ ಚಕಾರ ಶಬ್ದಕೂಡ ಹೊರಡಲಿಲ್ಲ ವರಮಹಾಶಯನಂತೂ ನನ್ನ ಮಾತು ಕೇಳಿ ಕಟ್ಟಿಗೆಯ ಗೊಂಬೆಯಂತಾದನು ಆ ಸಮಯ ದೊಡ್ಡ ಭೂಕಂಪವಾಗಿ ಅವರ ಪದತಲದ ಭೂಮಿಯ ಒಡೆದು ಹೋಗಿದ್ದರೆ ಅವನ ಸಂತೋಷದಿಂದ ಆ ಬಿರುಕಿನೊಳಗೆ ತಾನ ತಾನಾಗಿ ಹಾರಿಬಿಡುತಿದ್ದ ಸರಿ ಅದೇ ಸಮಯ ನೆರೆಕರೆಯ ಒಂದು ಹುಲ್ಲಿನ ಮಾಡಿಗೆ ಬೆಂಕಿ ತಾಗಿತು. ಕೋಲಾಹಲವನ್ನು ಕೇಳಿ ಎಲ್ಲ ಜನರು ಅತ್ತ ಧಾವಿಸಿದರು ಒಂದು ಅಚಿಂತ್ಯವಾದ ಆ ಶಂಕೆಯಿಂದ ಓಡಾಟವು ಆರಂಭವಾಯಿತು ಅದೇ ಸಮಯ ಕನಗೆ ಅನುಕೂಲವಾಗಿದೆ ಎಂದು ತಿಳಿದು ವರಮಹಾಶಯನೂ ಅಲ್ಲಿಂದ ಮಾಯವಾದನು

ಆದಾದ ಕೆಲವು ದಿನಗಳ ನಂತರ ನನ್ನ ವಿವಾಹವು ಮನೋಹರನೊಂದಿಗೆ ಆನಂದ ಪೂರ್ವಕ ನಡೆಯಿತು ಒಂದು ದಿನ ನಾನೂ ಮನೋಹರನೂ ಹಿಂದಿನ ಜೀವನದ ಮಾತುಗಳನ್ನಾಡುತ್ತಿದ್ದೆವು ಒಮ್ಮಿಂದೊಮ್ಮೆಗೆ ಮನೋಹರರು ಹೇಳಿದರು—'ಪ್ರೇಮಾ ಆ ದಿನ ನೀನು ವಿವಾಹ ಮಂಟಪದಲ್ಲಿ ಎಂಥ ಗೊಂದಲವನ್ನು ಎಬ್ಬಿಸಿಬಿಟ್ಟೆ?'

ನಾನು ಹೇಳಿದೆ—'ಮನೋಹರ! ಏನು ಮಾಡಲಿ? ಅದು ನನ್ನ ಜೀವನದ ಅಗ್ನಿಪರೀಕ್ಷೆಯ ಸಮಯವಾಗಿತ್ತು. ಬೇರೆ ಉಪಾಯವಿರಲಿಲ್ಲ'

'ಯುಗಾಂತರ'

# ಫಾಸಿಸಂ ಬೋಲ್ಶೆವಿಸಂಗಳ ನಿರ್ನಾಮಕ್ಕೆ

## ಬ್ರಿಟನಿಗೆ ಇದೇ ಸುವರ್ಣ ಸಂಧಿ

### ಮಿ। ಹೋರ್ ಬೆಲಿಶರ ಸ್ಪಷ್ಟವಾಣಿ

ಸ್ವಲ್ಪಕಾಲದ ಹಿಂದಿನ ತನಕ ಬ್ರಿಟಿಷ ಸರಕಾರದ ಯುದ್ಧ ಮಂತ್ರಿಗಳಾಗಿದ್ದ ಮಿ. ಹೋರ ಬೆಲಿಶಾರವರು ನ್ಯೂಸಆಫ್ ದಿವರ್ಲ್ಡ ಎಂಬ ಪತ್ರಿಕೆಯಲ್ಲಿ ಒಂದು ಅಮೋಘವಾದ ಲೇಖನವನ್ನು ಬರೆದು, ಜರ್ಮನಿಯ ಮತ್ತು ರಶ್ಯದ ಅನ್ಯಾಯ ದಾಕ್ರಮಣಗಳನ್ನು ತಡೆಯುವ ಉಚಿತ ಅಭಿಪ್ರಾಯವು ಮಿತ್ರರಾಷ್ಟ್ರಗಳಿಗೆ ಇರುವದಾದರೆ, ಅವರಿಗೆ ಆ ರಾಷ್ಟ್ರಗಳ ಮೇಲೆ ದಂಡೆತ್ತಿ ಹೋಗಲಿಕ್ಕೆ ಇದೇ ಸಮಯವು ಅನುಕೂಲವಾಗಿದೆ ಎಂದು ಅಭಿಪ್ರಾಯ ಪಟ್ಟಿರುವರು

ಜರ್ಮನಿಮತ್ತು ರಶ್ಯದೊಳಗಿನ ಸ್ನೇಹ ಸಂಬಂಧವು ಮಿತ್ರರಾಷ್ಟ್ರಗಳ ಪ್ರಯತ್ನವಿಲ್ಲದೆ ಕಡಿದು ಹೋಗಲಾರದು ಈಗ ಈ ಎರಡುರಾಷ್ಟ್ರಗಳು ಪಾಲುಗಾರಿಕೆಯ ವ್ಯಾಪಾರವನ್ನು ಆರಂಭಿಸಿವೆ ಯೂರೋಪಿನ ಸಣ್ಣ ರಾಷ್ಟ್ರಗಳನ್ನು ಚತುರೋಪಾಯಗಳಿಂದ ಗೆದ್ದು ತಾವು ಹಂಚಿಕೊಳ್ಳಬೇಕೆಂದು ಜರ್ಮನಿಯೂ ರಶ್ಯವೂ ನಿರ್ಧರಿಸಿರುವವು. ರಶ್ಯವು ಫಿನ್ಲೆಂಡನ್ನು ಗೆದ್ದ ಬಳಿಕ, ಈ ರಾಷ್ಟ್ರಗಳ ವಕ್ರದೃಷ್ಟಿಯು ಸ್ಕೆಂಡಿನೇವಿಯ ರಾಜ್ಯಗಳ ಮೇಲೆ ಅಗತ್ಯ ಬೀಳುವದು. ಆ ರಾಜ್ಯಗಳನ್ನು ಹೇಗೆ ತಮ್ಮೊಳಗೆ ಹಂಚಿಕೊಳ್ಳಬೇಕೆಂದು ಹಿಟ್ಲರನೂ ಸ್ಟಾಲೀನನೂ ಒಡಂಬಡಿಕೆ ಮಾಡಿದ್ದಾರೆ.

### ಯುದ್ಧವು ಬೇಗ ಮುಗಿಯುವ ಉಪಾಯ

ಯುದ್ಧವನ್ನು ಇಚ್ಛಿಸುವವರು ಯಾರೂ ಇಲ್ಲ ಆರಂಭವಾದ ಯುದ್ಧವು ಬೇಗ ಕೊನೆಗಾಣಲೆಂದ ಎಲ್ಲರೂ ಆಶಿಸುತ್ತಾರೆ ಆದರೆ ಯುದ್ಧವು ಬೇಗ ಕೊನೆಗಾಣಲಿಕ್ಕೆ ಸುಲಭ ಉಪಾಯವಿದೆ ರಶ್ಯವು ಫಿನ್ಲೇಂಡನ್ನು ಗೆದ್ದ ಬಳಿಕ ಸ್ಕೆಂಡಿನೇವಿಯದ ಕಬ್ಬಿಣದ ಗಣಿಗಳು ರಶ್ಯ-ಜರ್ಮನಿಗಳ ವಶವಾದುವೆಂದರೆ ಯುದ್ಧವು ಅನಿಶ್ಚಿತ ಕಾಲದ ತನಕ ಮುಂದುವರಿಯಬಹುದು. ಜರ್ಮನಿಗೆ ಯುದ್ಧೋಪಕರಣಗಳ ತಯಾರಿಗೆ ಕಬ್ಬಿಣವು ದೊರೆಯದಂತೆ ಮಾಡಬೇಕು ಆದಕ್ಕೆ ಸ್ಕೆಂಡಿನೇವಿಯದ ಮೇಲೆ ಅವುಗಳ ಅಧಿಕಾರ ಸ್ಥಾಪನೆಯಾಗದಂತೆ ನೋಡಿಕೊಳ್ಳಬೇಕು. ಆದುದರಿಂದ ಯಾವ ವಿಧದಲ್ಲಿಯೂ ಫಿನ್ಲೇಂಡು ರಶ್ಯದ ಅಧೀನವಾಗದಂತೆ ಫಿನ್ಲೇಂಡಿಗೆ ಮಿತ್ರರಾಷ್ಟ್ರಗಳು ಸಹಾಯ ಮಾಡಬೇಕು. ಅಂಥ ಸಹಾಯವನ್ನು ಫಿನ್ಲೇಂಡಿಗೆ ಒದಗಿಸುವದು ಎಣಿಸುವಷ್ಟು ಕಷ್ಟದ ಕೆಲಸವಲ್ಲ. ನೋರ್ವೆಯು ಜನಾಂಗಸಂಘದ ಸದಸ್ಯತನವನ್ನು ಪಡೆದ ರಾಷ್ಟ್ರವಾಗಿದೆ. ಜನಾಂಗ ಸಂಘದ ನಿಯಮದಂತೆ ಅದರಮುಖ್ಯ ಸದಸ್ಯ ರಾಷ್ಟ್ರವಾಗಿರುವ ಫಿನ್ಲೇಂಡಿಗೆ ತನ್ನಮೇಲಿಂದ ಸೈನ್ಯಸಹಾಯವನ್ನು ಕಳುಹಿಸಿಕೊಡಲಿಕ್ಕೆ ನೋರ್ವೆಯು ಆಕ್ಷೇಪಿಸಬಾರದು. ಫಿನ್ಲೇಂಡು ಗೆದ್ದರೆ ನೋರ್ವೆಯ ಸ್ವಾತಂತ್ರ್ಯವೂ ಸುಭದ್ರವಾಗುವದು

### ದಂಡೆತ್ತಿ ಹೋಗಲಿಕ್ಕೆ ಸಮಯ ಬಂದಿದೆ.

ಜರ್ಮನ ಯುದ್ಧವನ್ನು ಬೇಗ ಕೊನೆಗಾಣಿಸಲಿಕ್ಕೆ ಮೊದಲು ರಶ್ಯದ ತೇಜೋಭಂಗ ಮಾಡಬೇಕು ಫಿನ್ಲೆಂಡಿನ ಮೆನರ್ಹೀಮ್ ಕೋಟೆಯ ಸಾಲುಗಳಿಂದ ರಶ್ಯದ ರಾಜಧಾನಿ ಲೇನಿನಗಡವು ಬರೇ ೫೦ ಮೈಲುಗಳ ದೂರದಲ್ಲಿರುವುದು. ಆದುದರಿಂದ ನೋರ್ವೆ ಫಿನ್ಲೇಂಡಿನ ಮಾರ್ಗವಾಗಿ ಮಿತ್ರ ರಾಷ್ಟ್ರಗಳು ಲೇನಿನಗರಿನ ಮೇಲೆ ದಂಡೆತ್ತಿ ಹೋಗಬೇಕು ಸೋತ ರಶ್ಯದ ಗೋಜೇ ತನಗೆ ಬೇಡವೆಂದು ಆಗ ಜರ್ಮನಿಯು ಯುದ್ಧವನ್ನು ಬೇಗ ಮುಗಿಸುವದು ಈಗ ನಾವು ಫಿನ್ಲೇಂಡಿನ ಸ್ವಾತಂತ್ರ್ಯವನ್ನು ಕಾಪಾಡಲಾರೆವಾದರೆ ಮತ್ತೆ ರಶ್ಯ ಜರ್ಮನಿಗಳನ್ನು ಸೋಲಿಸುವದೂ ಅವುಗಳ ಆಕ್ರಮಣಗಳನ್ನು ತಡೆಯುವದೂ ಬಹಳ ಕಷ್ಟಕ್ಕಿಟ್ಟೀತು. ಬ್ರಿಟನು ಫ್ರಾನ್ಸುಗಳು ಯುದ್ಧದಲ್ಲಿ ಗೆಲ್ಲಬೇಕೆಂಬ ಅಭಿಪ್ರಾಯದಲ್ಲಿ ಇರುವವಾದರೆ, ಅದಕ್ಕೋಸ್ಕರ ರಶ್ಯದ ಮೇಲೆ ದಂಡೆತ್ತಿ ಹೋಗಲಿಕ್ಕೆ ಈಗ ಸಮಯವು ಅನುಕೂಲವಾಗಿದೆ. ಇಂದ ಸುವರ್ಣ ಸಂಧಿಯು ನಮಗೆ ಮತ್ತೆ ಪ್ರಾಪ್ತವಾಗಲಾರದು ಹೀಗೆಂದು ಅಭಿಪ್ರಾಯಪಟ್ಟರು

## ಬಂಗಾಳಾ ಕಾಂಗ್ರೆಸ್ ರದ್ದಾಯಿತು

### ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಬಂಗಾಲಾ ಪ್ರಾಂತ ಕಾಂಗ್ರೆಸ್ ಕಮಿಟಿಯನ್ನು ಹಂಗಾಮಿಯಾಗಿ ವಜಾ ಮಾಡಬೇಕೆಂದು (ಸಸ್ಪೆಂಡ್) ಠರಾವನ್ನು ಮಾಡಲಾಯಿತು. ಕಾಂಗ್ರೆಸಿನ ಶಿಸ್ತು ಶಾಸನ ನಿಯಮಗಳ ೧೩ನೇ ವಿಧಿಯಂತೆ ಬಂಗಾಳಾ ಪ್ರಾಂತ ಕಾಂಗ್ರೆಸ್ ಕಮಿಟಿಯನ್ನು ಕಾಂಗ್ರೆಸಿನಿಂದ ವಜಾ ಮಾಡಬಾರದೇಕೆ? ಈ ಬಗ್ಗೆ ಬಂಗಾಳಾ ಪ್ರಾಂತ ಕಾಂಗ್ರೆಸ್ ಕಮಿಟಿ ಏನು ಹೇಳುವುದು ಎಂಬುದಾಗಿ ನಿರ್ಣಯವಾಯಿತು. ಬಂಗಾಳಾ ಪ್ರಾಂತ ಕಾಂಗ್ರೆಸ್ ಕಮಿಟಿ ಕಾಂಗ್ರೆಸ್ ಪ್ರೆಸಿಡೆಂಟರಿಗೆ ಸರಿಯಾದ ಉತ್ತರವನ್ನು ಕೊಡಬೇಕೆಂದೂ ಉತ್ತರವು ಬರುವ ವರೆಗೆ ಬಿ. ಪಿ. ಸಿ. ಸಿ. ಕಾರ್ಯನಿರ್ವಾಹಕ ಮಂಡಳಿಯನ್ನು ವಜಾ ಮಾಡಬೇಕೆಂದೂ ಠರಾಯಿಸಲಾಯಿತು. ಈ ಮಧ್ಯೆ ಬಂಗಾಳಾ ಕಾಂಗ್ರೆಸ್ ಆಡಳಿತವನ್ನು ಅಖಿಲ ಭಾರತ ವರ್ಕಿಂಗ್ ಕಮಿಟಿಯು ನೇಮಿಸಿದ ಬಂಗಾಳಾ ಚುನಾವಣೆ ಸಮಿತಿಯವರು ನಡೆಸಬೇಕೆಂದು ನಿರ್ಧಾರವಾಗಿದೆ.


ಚರ್ಮರೋಗಗಳು ಇಂದ್ರಜಾಲದಂತೆ ಮಾಯವಾಗುವುದು



ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವ ಗುಣದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಾಡಿಸುವ ದೀರ್ಘಕಾಲದ ಕಾಲ್ಕುರುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura) ಕ್ರಿಮಿಗಳನ್ನು ನಾಶಮಾಡಿ ಕಾಲ್ಕುರುಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾಧಿತ ಹೊಸು ಭಾಗವನ್ನು ಗುಣಪಡಿಸಿ ವೇದನೆಗೊಳಗಾದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು.

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು.

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಪಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಮಕ್ಕಳಿಗೆ ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರ್ಯಾಂಚ್ ರಥಬೀದಿ ಮಂಗಳೂರು

# ಸಿನೆಮಾ ಪುಟ

## ಶಾಂತಾರಾಮರನ್ನು ಪ್ರೀತಿಸ ತೊಡಗಿದರು!

### ಚಂದ್ರಮೋಹನರ ಅನುಭವ

ಒಂದು ಲಾವಣ್ಯವತಿಯಾದ ಮಾನಿನಿಯುಂತೆ, ಅವರಲ್ಲಿ ಅಪೂರ್ವ ಆಕರ್ಷಕ ಶಕ್ತಿಯುದೆ; ಹಾಗಾಗಿ ನಾವು ಅವರನ್ನು ಪ್ರೀತಿಸತೊಡಗುತ್ತೇವೆ.

ಹೀಗೆಂದು ಪತ್ರಿಕಾ ಪ್ರತಿನಿಧಿಯೊಡನೆ ಶಾಂತಾ ಆಪ್ಟೆ, ಹುಬ್ಲಿಕರ್ ಮೊದಲಾದ ಪ್ರಚಂಡ ಅಭಿನಯ ಕುಶಲೆಯರನ್ನು ಸಿದ್ಧಗೊಳಿಸಿದ ಶಾಂತಾರಾಮರ ಸಾಮರ್ಥ್ಯದ ಕುರಿತು ಚಂದ್ರಮೋಹನರು ಹೇಳಿದರು.

"ನಾನು ನೋಡಿದ ಎಲ್ಲಾ ಲಾವಣ್ಯವತಿಯರಿಗಿಂತಲೂ ಶಾಂತಾರಾಮರಲ್ಲಿ ಹೆಚ್ಚು ಸ್ತ್ರೀ ಸೌಂದರ್ಯ ಶಕ್ತಿಗಳಿವೆ. ಅವರು ಒಂದು ಸೀರೆಯನ್ನುಟ್ಟು, ಹೆಂಗಸಿನ ಅಭಿನಯ ಮಾಡಲು ಮನಸ್ಸು ಮಾಡಿದರೆ, ಇಂದು ಅಭಿನಯಗಾರ್ತಿಯರೆನಿಸಿ ಪ್ರಖ್ಯಾತಿ ಪಡೆದ ಸಮಸ್ತರನ್ನೂ ಅವರು ಸೋಲಿಸಿ ಬಿಡಬಲ್ಲರು" ಹೀಗೆಂದು ಚಂದ್ರಮೋಹನರು ಹೇಳಿದರು.

ಶಾಂತಾರಾಮರು, ನಿರ್ದೇಶಕರಾಗುವುದಕ್ಕಿಂತ ಮೊದಲು ಮರಾಠಿ ಚಿತ್ರಗಳಲ್ಲಿ ಸ್ತ್ರೀಪಾತ್ರವನ್ನು ಒಳ್ಳೆಯ ಪ್ರಶಂಸಾಯುಕ್ತವಾಗಿ ಅಭಿನಯಿಸುತ್ತಿದ್ದರು.

### ಲೀಲಾ ಚಿಟ್ನೀಸರ ಮೋಟರು ಅಪಘಾತ

ಬೊಂಬಾಯಿಯಿಂದ ಕೊಲ್ಹಾಪುರಕ್ಕೆ ಹೋಗುವ ದಾರಿಯಲ್ಲಿ ಲೀಲಾ ಚಿಟ್ನೀಸರು ಮೋಟರು ಅಪಘಾತಕ್ಕೆ ತುತ್ತಾಗಿ ದೇವರ ದಯೆಯಿಂದ ಹೇಗೋ ಪಾರಾದರು!

ಖಾನ್ವಿಲ್ ಎಂಬ ಸ್ಥಳದಲ್ಲಿ (ಬೊಂಬಯಿ ಮಾನಾವಾರ್ಗದಲ್ಲಿ) ಮೋಟರು ಮಾರ್ಗದಿಂದ ಜಾರಿ ಸಮೀಪದ ಮರಕ್ಕೆ ಡಿಕ್ಕಿಹೊಡೆಯಿತು. ಆ ಮೋಟರಿನಲ್ಲಿ ಲೀಲಾ ಚಿಟ್ನೀಸರೂ ಇದ್ದರು. ಆದರೆ ಯಾರಿಗೂ ಯಾವರೀತಿಯ ಜಖಂ ಆಗಲಿಲ್ಲವೆಂದು ತಿಳಿದಿದೆ.

### ಅಚೂತ್‌ವನ್ನು ಮೆಜಿಸ್ಟ್ರೇಟರು ನೋಡಬೇಕಾಯಿತು

ಶ್ರೀ ಚಂದುಲಾಲ ಶಹಾರವರು ಬೊಂಬಯಿಯ ಪತ್ರಿಕೋದ್ಯಮಿಯ ಮೇಲೆ ಮಾಡಿದ ಮಾನನಷ್ಟದ ದಾವೆಯ ಇತ್ಯರ್ಥದ ಸಲುವಾಗಿ ಬೊಂಬಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು 'ಅಚ್ಯೂತ್' ಚಿತ್ರವನ್ನು ನೋಡಬೇಕಾಯಿತು. ಮೆಜಿಸ್ಟ್ರೇಟರು ಚಿತ್ರವನ್ನು ನೋಡಿದ ಮೇಲೆ ಹೆಚ್ಚಿನ ನಿರ್ಣಯಕ್ಕೆ 'ಪ್ರಾಯಶ್ಚಿತ್ತ' ಕಾದಂಬರಿಯನ್ನೂ ಓದಬೇಕೆಂದು ಹೇಳಿದರು.

### ಸಿನೆಮಾವು ಅವರನ್ನು ಸುಲಿಗೆ ಮಾಡಿತು

#### ಹಳ್ಳಿಯವರ ನಿಷೇಧ

ಬರ್ದ್ವಾನಪುರ ಹಳ್ಳಿಯ ಜನರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ, ಅವರ ಹಳ್ಳಿಯಲ್ಲಿ ನಡೆಯುತ್ತಿರುವ ಕೃಷಿ ಮತ್ತು ಕೈಗಾರಿಕೆ ಪ್ರದರ್ಶನದವರಿಂದ ನಡೆಸಲ್ಪಡುವ ಸಿನೆಮಾ ಮತ್ತು ಇತರ ಪ್ರದರ್ಶನಗಳ ಕುರಿತು ನಿಷೇಧ ಸ್ವರ್ಶನವಾಡಿ, ಅದರಿಂದ ಬಡವರಾದ ತಮ್ಮ ದುಡ್ಡು ಅನ್ಯಾಯದಿಂದ ಸುಲಿಗೆಯಾಗುತ್ತಿದೆಯೆಂದೂ ತಾವು ಬಡತನವನ್ನು ಹೊಂದುತ್ತಿರುವೆವೆಂದೂ ಬರೆದುಕೊಂಡಿರುವರು.

ಈಗಾಗಲೇ ಬರಗಾಲ ಮತ್ತು ನೆರೆಹಾವಳಿ ಮೊದಲಾದವುಗಳಿಂದ ಹಳ್ಳಿಯ ಸಂಪತ್ತು ಕ್ಷೀಣಹೊಂದಿರಲು ಇಂತಹ ವಿಲಾಸೋಪಯೋಗದಿಂದ ಗ್ರಾಮ ಜೀವನವು ಬತ್ತಿ ಹೋಗುವುದೆಂದು ಅವರು ದೂರಿಟ್ಟಿರುವರು.

ಸ್ಥಳೀಕ ಕಾಂಗ್ರೆಸು ಕೆಲಸಗಾರರೂ ಹಳ್ಳಿಹಳ್ಳಿಗೆ ತಿರಿಗಿ ಪ್ರಯಾಸ ಸಂಕಷ್ಟಗಳಿಂದ ಗಳಿಸಿದ ಅವರ ದುಡ್ಡು ಸುವಿಲಾಸಕ್ಕಾಗಿ ವೆಚ್ಚ ಮಾಡಬೇಡಿರೆಂದು ಪ್ರಚಾರ ಮಾಡುತ್ತಾರೆ.

### ಸಿನೆಮಾ ಸುದ್ದಿಗಳು

ನಿರ್ದೇಶಕ ಪಿ. ಪುಲ್ಲಯ್ಯನವರು ಧರ್ಮಪತ್ನಿ ಎಂಬ ಸಾಮಾಜಿಕ ಚಿತ್ರವನ್ನು ಕೊಲ್ಹಾಪುರದ ಶಾಲಿನಿಸ್ಟುಡಿಯೋದಲ್ಲಿ ತಯಾರಿಸುವುದರಲ್ಲಿ ನಿರತರಾಗಿದ್ದಾರೆ.

ಅಧಿಕ ಆದಾಯ ತೆರಿಗೆಯಲ್ಲಿ ತಮ್ಮ ನಿಷೇಧವನ್ನು ಸೂಚಿಸಿ ಭಾರತೀಯ ಚಲಚ್ಚಿತ್ರ ತಯಾರಿಸುವವರ ಸಂಘದವರು ಒಂದು ವಿನಂತಿಯನ್ನು ಭಾರತ ಸರಕಾರದ ಆರ್ಥಿಕ ಸಚಿವರಿಗೆ ಕಳುಹಿಸಿರುವರು.

ನಿರ್ದೇಶಕ ನಾರಾಯಣ ಕಾಲೆಯವರು ಲಪಕ್ ದೇವಚಿತ್ರವನ್ನು ತಯಾರಿಸುತ್ತಿದ್ದಾರೆ.

ಬಹುರಾಣಿಯೆಂಬ ಸಾಮಾಜಿಕ ಚಿತ್ರವು ಸಿದ್ಧವಾಗಿದೆ. ಬೇಗನೇ ಬೊಂಬಯಿನಗರದಲ್ಲಿ ಪ್ರದರ್ಶಿಸಲ್ಪಡುವುದಾಗಿ ತಿಳಿದಿದೆ.

ಪರಮೌಂಟ್ ಚಿತ್ರದವರ ದುನಿಯಾ ಮಾನೇ' ಚಿತ್ರವು ಸಿದ್ಧವಾಗಿದೆ. ಈ ಕಥೆಯು ದುನಿಯಾ ನಾ ಮಾನೇ ಕಥೆಯನ್ನು ಆಧರಿಸಿಕೊಂಡು ಬರೆದುದಾಗಿದೆ.

**THE PIE-MONEY BANK LTD.,**
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum.
**FIXED DEPOSITS**
For 2 Years 5% 1 Year 4½% For 6 months 4% 3 months 3½%
Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.
*Apply for particulars—*
**K. R. GURU,** *Managing Director*

## ಅಗ್ನಿಪರೀಕ್ಷೆ

[ಕಳೆದ ಪುಟದಿಂದ ಮುಂದುವರಿದುದು]

ಬಹುರೂಪಿ ವೇಷವನ್ನು ತಾಳಿದ್ದನು. ಅವನು ಮಂಚದ ಮೇಲೆ ಹೋಗಿ ಕೊಟ್ಟಾಯಮಾನನಾದನು. ನಾನೂ ಮಂಟಪದಲ್ಲಿ ಕಾಲಿಟ್ಟಾಗ ಜನರು ವಿಸ್ಮಿತ ನೇತ್ರಗಳಿಂದ ನನ್ನನ್ನು ನೋಡತೊಡಗಿದರು. ನಾನು ಕೈಯೊಳಗಿನ ಗಂಟೆನಂತೆ ಮಂಟಪಕ್ಕೆ ಕರೆತರಲ್ಪಟ್ಟಿರಲಿಲ್ಲ. ಅದಕ್ಕೆ ನನ್ನನ್ನು ಎಳೆದುಕೊಂಡು ಹೋಗುವವರಿಗೆ ಕೊಂಚ ಪ್ರಯಾಸಪಡಬೇಕಾಗಿತ್ತು.

ಮಂಟಪದೊಳಗೆ ಕಾಲಿಡುತ್ತಲೇ ವರಮಹಾಶಯರನ್ನು ಉದ್ದೇಶಿಸಿ ನಾನು ಹೇಳಿದೆ—'ಇವರು—ಈ ಮಹಾಶಯರು ನನ್ನನ್ನು ವಿವಾಹವಾಗಲಿಕ್ಕೆ ಇಲ್ಲಿ ಬಂದು ಕೂತಿದ್ದಾರೆ. ಇವರು ನನ್ನ ಚಿತ್ರವನ್ನು ನೋಡಿ ನನ್ನನ್ನು ಮೆಚ್ಚಿದ್ದಾರೆ. ಆದರೆ ಈ ವಿಷಯದಲ್ಲಿ ನನ್ನ ಸಮ್ಮತಿಯು ಅಗತ್ಯವಾಗಿದೆ ಎಂಬುದನ್ನು ಇವರು ತಿಳಿದುಕೊಳ್ಳಲಿಲ್ಲ. ವಿವಾಹವನ್ನು ಇವರೊಬ್ಬರೇ ಮಾಡಿಕೊಳ್ಳುವದಲ್ಲ, ನಾನೂ ಮಾಡಿಕೊಳ್ಳಬೇಕಾಗಿದೆ. ಈ ವಿಷಯದಲ್ಲಿ ನನ್ನ ಸ್ವಂತದ ಅಭಿಪ್ರಾಯ ಬೇರೆ ಇದೆ. ಈ ಮಹಾಶಯರು ನನಗೆ ಮೆಚ್ಚುಗೆಯಾಗಿಲ್ಲ. ಆದ್ದರಿಂದ ನಾನಿವರನ್ನು ವಿವಾಹವಾಗುವದಿಲ್ಲ.'

ನನ್ನ ಮಾತುಗಳನ್ನು ಕೇಳಿ ಮಂಟಪದಲ್ಲಿ ನೆರೆದಿದ್ದವರೆಲ್ಲರು ಚಕಿತರಾಗಿಬಿಟ್ಟರು. ಯಾರೊಬ್ಬರ ಬಾಯಿಯಿಂದ ಒಂದು ಚಕಾರ ಶಬ್ದಕೂಡ ಹೊರಡಲಿಲ್ಲ. ವರಮಹಾಶಯನಂತೂ ನನ್ನ ಮಾತನ್ನು ಕೇಳಿ ಕಟ್ಟಿಗೆಯ ಗೊಂಬೆಯಂತಾದನು. ಆ ಸಮಯ ದೊಡ್ಡ 'ಭೂಕಂಪವಾಗಿ' ಅವರ ಪದತಲದ ಭೂಮಿಯು ಒಡೆದು ಹೋಗಿದ್ದರೆ, ಅವನು ಸಂತೋಷದಿಂದ ಆ ಬಿರುಕಿನೊಳಗೆ ತಾನು ತಾನಾಗಿ ಹಾರಿಬಿಡುತಿದ್ದ. ಸರಿ ಅದೇ ಸಮಯ ನೆರೆಯ ಒಂದು ಹುಲ್ಲಿನ ಮಾಡಿಗೆ ಬೆಂಕಿ ತಾಗಿತು. ಕೋಲಾಹಲವನ್ನು ಕೇಳಿ ಎಲ್ಲ ಜನರು ಅತ್ತ ಧಾವಿಸಿದರು. ಒಂದು ಅಚಿಂತ್ಯವಾದ ಆ ಶಂಕೆಯಿಂದ ಓಡಾಟವು ಆರಂಭವಾಯಿತು. ಅದೇ ಸಮಯ ತನಗೆ ಅನುಕೂಲವಾಗಿದೆ ಎಂದು ತಿಳಿದು ವರಮಹಾಶಯನೂ ಅಲ್ಲಿಂದ ಮಾಯವಾದನು.

ಅದಾದ ಕೆಲವು ದಿನಗಳ ನಂತರ ನನ್ನ ವಿವಾಹವು ಮನೋಹರನೊಂದಿಗೆ ಆನಂದ ಪೂರ್ವಕ ನಡೆಯಿತು. ಒಂದು ದಿನ ನಾನೂ ಮನೋಹರನೂ ಹಿಂದಿನ ಜೀವನದ ಮಾತುಗಳನ್ನಾಡುತಿದ್ದೆವು. ಒಮ್ಮಿಂದೊಮ್ಮೆಗೆ ಮನೋಹರರು ಹೇಳಿದರು—'ಪ್ರೇಮಾ! ಆ ದಿನ ನೀನು ವಿವಾಹ ಮಂಟಪದಲ್ಲಿ ಎಂಥ ಗೊಂದಲವನ್ನು ಎಬ್ಬಿಸಿಬಿಟ್ಟಿ?'

ನಾನು ಹೇಳಿದೆ—'ಮನೋಹರ! ಏನು ಮಾಡಲಿ? ಅದು ನನ್ನ ಜೀವನದ ಅಗ್ನಿಪರೀಕ್ಷೆಯ ಸಮಯವಾಗಿತ್ತು. ಬೇರೆ ಉಪಾಯವಿರಲಿಲ್ಲ.'

'ಯುಗಾಂತರ'

# ಫಾರ್ಷಿಸಂ ಬೊಲ್ಶೆವಿಸಂಗಳ ನಿರ್ನಾಮಕ್ಕೆ

## ಬ್ರಿಟನಿಗೆ ಇದೇ ಸುವರ್ಣ ಸಂಧಿ

### ಮಿ। ಹೋರ್ ಬೆಲಿಶರ ಸ್ಪಷ್ಟವಾಣಿ

ಸ್ವಲ್ಪಕಾಲದ ಹಿಂದಿನ ತನಕ ಬ್ರಿಟಿಷ ಸರಕಾರದ ಯುದ್ಧ ಮಂತ್ರಿಗಳಾಗಿದ್ದ ಮಿ. ಹೋರ ಬೆಲಿಶಾರವರು ನ್ಯೂಸಜಿಪ್ ಆವರ್ಲ್ಡ್ ಎಂಬ ಪತ್ರಿಕೆಯಲ್ಲಿ ಒಂದು ಅಮೋಘವಾದ ಲೇಖನವನ್ನು ಬರೆದು, ಜರ್ಮನಿಯ ಮತ್ತು ರಶ್ಯದ ಅನ್ಯಾಯ ದಾಕ್ರಮಣಗಳನ್ನು ತಡೆಯುವ ಖಂಡಿತ ಅಭಿಪ್ರಾಯವು ಮಿತ್ರರಾಷ್ಟ್ರಗಳಿಗೆ ಇರುವದಾದರೆ, ಅವರಿಗೆ ಆ ರಾಷ್ಟ್ರಗಳ ಮೇಲೆ ದಂಡೆತ್ತಿ ಹೋಗಲಿಕ್ಕೆ ಇದೇ ಸಮಯವು ಅನುಕೂಲವಾಗಿದೆ ಎಂದು ಅಭಿಪ್ರಾಯ ಪಟ್ಟಿರುವರು

ಜರ್ಮನಿಮತ್ತು ರಶ್ಯದೊಳಗಿನ ಸ್ನೇಹ ಸಂಬಂಧವು ಮಿತ್ರರಾಷ್ಟ್ರಗಳ ಪ್ರಯತ್ನವಿಲ್ಲದೆ ಕಡಿದು ಹೋಗಲಾರದು ಈಗ ಈ ಎರಡುರಾಷ್ಟ್ರಗಳು ಪಾಲುಗಾರಿಕೆಯ ವ್ಯಾಪಾರವನ್ನು ಆರಂಭಿಸಿವೆ ಯುರೋಪಿನ ಸಣ್ಣ ರಾಷ್ಟ್ರಗಳನ್ನು ಚತುರೋಪಾಯಗಳಿಂದ ಗೆದ್ದು ತಾವು ಹಂಚಿಕೊಳ್ಳಬೇಕೆಂದು ಜರ್ಮನಿಯೂ ರಶ್ಯವೂ ನಿರ್ಧರಿಸಿರುವವು. ರಶ್ಯವು ಫಿನ್ಲೆಂಡನ್ನು ಗೆದ್ದ ಬಳಿಕ, ಈ ರಾಷ್ಟ್ರಗಳ ವಕ್ರದೃಷ್ಟಿಯು ಸ್ಕೆಂಡಿನೇವಿಯ ರಾಜ್ಯಗಳ ಮೇಲೆ ಅಗತ್ಯ ಬೀಳುವದು ಆ ರಾಜ್ಯಗಳನ್ನು ಹೇಗೆ ತಮ್ಮೊಳಗೆ ಹಂಚಿಕೊಳ್ಳಬೇಕೆಂದು ಹಿಟ್ಲರನೂ ಸ್ಟಾಲೀನನೂ ಒಡಂಬಡಿಕೆ ಮಾಡಿದ್ದಾರೆ.

### ಯುದ್ಧವು ಬೇಗ ಮುಗಿಯುವ ಉಪಾಯ

ಯುದ್ಧವನ್ನು ಇಚ್ಛಿಸುವವರು ಯಾರೂ ಇಲ್ಲ ಆರಂಭವಾದ ಯುದ್ಧವು ಬೇಗ ಕೊನೆಗಾಣಲೆಂದು ಎಲ್ಲರೂ ಆಶಿಸುತ್ತಾರೆ ಆದರೆ ಯುದ್ಧವು ಬೇಗ ಕೊನೆಗಾಣಲಿಕ್ಕೆ ಸುಲಭ ಉಪಾಯವಿದೆ ರಶ್ಯವು ಫಿನ್ಲೇಂಡನ್ನು ಗೆದ್ದ ಬಳಿಕ ಸ್ಕೆಂಡಿನೇವಿಯದ ಕಬ್ಬಿಣದ ಗಣಿಗಳು ರಶ್ಯ-ಜರ್ಮನಿಗಳ ವಶವಾದುವೆಂದರೆ ಯುದ್ಧವು ಅನಿಶ್ಚಿತ ಕಾಲದ ತನಕ ಮುಂದುವರಿಯಬಹುದು. ಜರ್ಮನಿಗೆ ಯುದ್ಧೋಪಕರಣಗಳ ತಯಾರಿಗೆ ಕಬ್ಬಿಣವು ದೊರೆಯದಂತೆ ಮಾಡಬೇಕು ಅದಕ್ಕೆ ಸ್ಕೆಂಡಿನೇವಿಯದ ಮೇಲೆ ಅವುಗಳ ಅಧಿಕಾರ ಸ್ಥಾಪನೆಯಾಗದಂತೆ ನೋಡಿಕೊಳ್ಳಬೇಕು. ಆದುದರಿಂದ ಯಾವ ವಿಧದಲ್ಲಿಯೂ ಫಿನ್ಲೇಂಡು ರಶ್ಯದ ಅಧೀನವಾಗದಂತೆ ಫಿನ್ಲೇಂಡಿಗೆ ಮಿತ್ರರಾಷ್ಟ್ರಗಳು ಸಹಾಯ ಮಾಡಬೇಕು. ಅಂಥ ಸಹಾಯವನ್ನು ಫಿನ್ಲೇಂಡಿಗೆ ಒದಗಿಸುವದು ಎಣಿಸುವಷ್ಟು ಕಷ್ಟದ ಕೆಲಸವಲ್ಲ. ನೋರ್ವೆಯು ಜನಾಂಗಸಂಘದ ಸದಸ್ಯತನವನ್ನು ಪಡೆದ ರಾಷ್ಟ್ರವಾಗಿದೆ. ಜನಾಂಗಸಂಘದ ನಿಯಮದಂತೆ ಅದರವಂತೆಯೇ ಸದಸ್ಯ ರಾಷ್ಟ್ರವಾಗಿರುವ ಫಿನ್ಲೇಂಡಿಗೆ ತನ್ನ ಮೇಲಿಂದ ಸೈನ್ಯಸಹಾಯವನ್ನು ಕಳುಹಿಸಿಕೊಡಲಿಕ್ಕೆ ನೋರ್ವೆಯು ಆಕ್ಷೇಪಿಸಬಾರದು. ಫಿನ್ಲೇಂಡು ಗೆದ್ದರೆ ನೋರ್ವೆಯ ಸ್ವಾತಂತ್ರ್ಯವೂ ಸುಭದ್ರವಾಗುವದು.

### ದಂಡೆತ್ತಿ ಹೋಗಲಿಕ್ಕೆ ಸಮಯ ಬಂದಿದೆ

ಜರ್ಮನ ಯುದ್ಧವನ್ನು ಬೇಗ ಕೊನೆಗಾಣಿಸಲಿಕ್ಕೆ ಮೊದಲು ರಶ್ಯದ ತೇಜೋಭಂಗ ಮಾಡಬೇಕು. ಫಿನ್ಲೆಂಡಿನ ಮೆನರ್ಹೀಮ್ ಕೋಟೆಯ ಸಾಲುಗಳಿಂದ ರಶ್ಯದ ರಾಜಧಾನಿ ಲೆನಿನಗಡವು ಬರೇ ೫೦ ಮೈಲುಗಳ ದೂರದಲ್ಲಿರುವುದು. ಆದುದರಿಂದ ನೋರ್ವೆ ಫಿನ್ಲೇಂಡಿನ ಮಾರ್ಗವಾಗಿ ಮಿತ್ರರಾಷ್ಟ್ರಗಳು ಲೆನಿನಗರಿನ ಮೇಲೆ ದಂಡೆತ್ತಿ ಹೋಗಬೇಕು, ಸೋತ ರಶ್ಯದ ಗೋಜೇ ತನಗೆ ಬೇಡವೆಂದು ಆಗ ಜರ್ಮನಿಯು ಯುದ್ಧವನ್ನು ಬೇಗ ಮುಗಿಸುವದು ಈಗ ನಾವು ಫಿನ್ಲೇಂಡಿನ ಸ್ವಾತಂತ್ರ್ಯವನ್ನು ಕಾಪಾಡಲಾರೆವಾದರೆ ಮತ್ತೆ ರಶ್ಯ ಜರ್ಮನಿಗಳನ್ನು ಸೋಲಿಸುವದೂ ಅವುಗಳ ಆಕ್ರಮಣಗಳನ್ನು ತಡೆಯುವದೂ ಬಹಳ ಕಷ್ಟಕ್ಕಿಟ್ಟೀತು. ಬ್ರಿಟನು ಫ್ರಾನ್ಸುಗಳು ಯುದ್ಧದಲ್ಲಿ ಗೆಲ್ಲಬೇಕೆಂಬ ಅಭಿಪ್ರಾಯದಲ್ಲಿ ಇರುವವಾದರೆ, ಅದಕ್ಕೋಸುಗ ರಶ್ಯದ ಮೇಲೆ ದಂಡೆತ್ತಿ ಹೋಗಲಿಕ್ಕೆ ಈಗ ಸಮಯವು ಅನುಕೂಲವಾಗಿದೆ. ಇಂಥ ಸುವರ್ಣ ಸಂಧಿಯು ನಮಗೆ ಮತ್ತೆ ಪ್ರಾಪ್ತವಾಗಲಾರದು ಹೀಗೆಂದು ಅಭಿಪ್ರಾಯಪಟ್ಟರು

## ಬಂಗಾಳಾ ಕಾಂಗ್ರೆಸ್ ರದ್ದಾಯಿತು

### ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಬಂಗಾಳಾ ಪ್ರಾಂತ ಕಾಂಗ್ರೆಸ್ ಕಮಿಟಿಯನ್ನು ಹಂಗಾಮಿಯಾಗಿ ವಜಾ ಮಾಡಬೇಕೆಂದು (ಸಸ್ಪೆಂಡ್) ಠರಾವನ್ನು ಮಾಡಲಾಯಿತು. ಕಾಂಗ್ರೆಸಿನ ಶಿಸ್ತು ಶಾಸನ ನಿಯಮಗಳ ೧೩ನೇ ವಿಧಿಯಂತೆ ಬಂಗಾಳಾ ಪ್ರಾಂತ ಕಾಂಗ್ರೆಸ್ ಕಮಿಟಿಯನ್ನು ಕಾಂಗ್ರೆಸಿನಿಂದ ವಜಾ ಮಾಡಬಾರದೇಕೆ? ಈ ಬಗ್ಗೆ ಬಂಗಾಳಾ ಪ್ರಾಂತ ಕಾಂಗ್ರೆಸ್ ಕಮಿಟಿ ಏನು ಹೇಳುವುದು ಎಂಬುದರ ಬಗ್ಗೆ ನಿರ್ಣಯವಾಯಿತು. ಬಂಗಾಳಾ ಪ್ರಾಂತ ಕಾಂಗ್ರೆಸ್ ಕಮಿಟಿ ಕಾಂಗ್ರೆಸ್ ಪ್ರೆಸಿಡೆಂಟರಿಗೆ ಸರಿಯಾದ ಉತ್ತರವನ್ನು ಕೊಡಬೇಕೆಂದೂ ಉತ್ತರವು ಬರುವವರೆಗೆ ಬಿ. ಪಿ. ಸಿ. ಸಿ. ಕಾರ್ಯನಿರ್ವಾಹಕ ಮಂಡಳಿಯನ್ನು ವಜಾ ಮಾಡಬೇಕೆಂದೂ ಠರಾವು ಮಾನಿಸಲಾಯಿತು. ಈ ಮಧ್ಯೆ ಬಂಗಾಳಾ ಕಾಂಗ್ರೆಸ್ ಆಡಳಿತವನ್ನು ಅಖಿಲ ಭಾರತ ವರ್ಕಿಂಗ್ ಕಮಿಟಿಯು ನೇಮಿಸಿದ ಬಂಗಾಳಾ ಚುನಾವಣೆ ಸಮಿತಿಯವರು ನಡೆಸಬೇಕೆಂದು ನಿರ್ಧಾರವಾಗಿದೆ.

## ಚರ್ಮರೋಗಗಳು ಇಂದ್ರಜಾಲದಂತೆ ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವ ಗುಣದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲ್ಪುರುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಪುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಗಾದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಪಟ್ಟು, ಸರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT



ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

# ಸಮುದ್ರ ಸಂಚಾರವನ್ನು ಹೆದರಿಸಿರುವ
# ತೋಟೆ ಕಾಳಗದ ಇತಿಹಾಸ

[ಇಂದು ಜರ್ಮನಿಯು ವಿಶಾಲ ಸಮುದ್ರದಲ್ಲಿ ಎಲ್ಲೆಡೆಯಲ್ಲಿಯೂ ಬಿತ್ತಿರುವ ವಿಷಮಯವಾದ ತೋಟೆಗಳ ಹಾವಳಿಯಿಂದ ಅನೇಕ ಬ್ರಿಟನು ಫ್ರಾನ್ಸುಗಳ ಹಡಗುಗಳೂ, ತಟಸ್ಥ ರಾಷ್ಟ್ರಗಳ ನೌಕೆಗಳೂ ಜಲಸಮಾಧಿಹೊಂದಿವೆಯಷ್ಟೆ? ಕಳೆದ ಯುದ್ಧದಂತೆ, ಈ ಯುದ್ಧದಲ್ಲಿಯೂ ಜರ್ಮನಿಯು ನಿರ್ದಯವಾಗಿ, ಅನ್ಯಾಯವಾಗಿ ತೋಟೆಯನ್ನಿಟ್ಟು ಅಕ್ರಮ ಮಾಡುತ್ತಿದೆ ಇಂದಿನ ಈ ಜರ್ಮನಿಯ ನಿಷ್ಕರುಣವಾದ ತೋಟೆಕಾಳಗದಿಂದ ಬ್ರಿಟನಾಗಲಿ ಫ್ರಾನ್ಸಾಗಲಿ ನಿರಪರಾಧಿಗಳಾದ ತಟಸ್ಥ ರಾಷ್ಟ್ರಗಳು ಪಟ್ಟಷ್ಟು ಸಂಕಷ್ಟ ನಷ್ಟಗಳಿಗೆ ಗುರಿಯಾಗಲಿಲ್ಲ ]

ಅಂತಹದಲ್ಲಿ ಅಂತರ್ರಾಷ್ಟ್ರೀಯ ಕಾನೂನಿನಾಗ ತೋಟೆಗಳನ್ನಿಡುವುದು ಅಕ್ರಮವೆಂದು ಒಂದು ಶಾಸನವು ಸಿದ್ಧವಾಗಿತ್ತು. ಅದಕ್ಕೆ ಜರ್ಮನಿಯೂ ತನ್ನ ಒಪ್ಪಿಗೆ ಕೊಟ್ಟಿತ್ತು. ಹೆಚ್ಚಾಗಿ ಈ ಕಾನೂನು ಆದದ್ದೇ ತಟಸ್ಥ ರಾಷ್ಟ್ರಗಳ ರಕ್ಷಣೆಯ ಸಲುವಾಗಿ, ಏಕೆಂದರೆ ಅವುಗಳ ನೌಕಾ ಸಂಚಾರಕ್ಕೆ ಇತರ ರಾಷ್ಟ್ರಗಳಿಂದ ಯಾವಾಗಲೂ ತೊಂದರೆಯುಂಟಾಗುವುದು ಲೋಕನೀತಿಯಲ್ಲಿ ತಪ್ಪಿಸುವುದು ಯೋಗ್ಯವಾಗಿದೆ ಆದರೆ ಜರ್ಮನಿಯು ಕಳೆದ ಮಹಾಯುದ್ಧದ ಆರಂಭದಲ್ಲೇ, ಆ ಕಾನೂನನ್ನು ಉಲ್ಲಂಘಿಸಿ ಸಮುದ್ರದ ಅಂತರಾಳದಲ್ಲಿ ತೋಟೆಗಳನ್ನು ಇಟ್ಟಿತ್ತು. ಆದರಿಂದಾಗಲಿ ೧೯೧೭ರಂದು ಹೆಚ್ಚಾಗಿ ಬ್ರಿಟನು ನಷ್ಟಗೊಂಡಿತ್ತು. ನಿರಪರಾಧೀ ತಟಸ್ಥ ರಾಷ್ಟ್ರಗಳು ನಿಷ್ಕಾರಣವಾಗಿ ನಷ್ಟಗೊಳ್ಳಬೇಕಾಯಿತು. ಕಳೆದ ಮಹಾಯುದ್ಧದಲ್ಲಿ ಜರ್ಮನಿಯು ಪ್ರಭಾವವನ್ನು ಮೆರೆಸಿದ್ದರೆ ಅದರ ಹೆಚ್ಚಿನ ಭಾಗದ ಕೀರ್ತಿಯು ಈ ತೋಟೆ ಕಾಳಗಕ್ಕೆ ಸಲಬೇಕಾಗಿದೆ

### ತೋಟೆಗಳು ಹೇಗೆ ಹಾವಳಿ ಮಾಡುವವು?

ತೋಟೆಗಳ ವಿಷಯವು ಒಂದು ಅದ್ಭುತವಾಗಿದೆ ಸಮುದ್ರದ ಆಳ ಅಂತರಗಳನ್ನು ತಿಳಿಯಲು ಸಮುದ್ರದಲ್ಲಿ ಅಲ್ಲಲ್ಲಿ 'ಬೋಯಿ'ಗಳೆಂಬ ತೇಲಾಡುವ ಚೆಂಡುಗಳನ್ನಿಡುವರಷ್ಟೆ? ಅಂತೆಯೇ ಸಿಡಿವ ಭ್ರಾಂಬಿನ ಉಂಡೆಗಳನ್ನು ಮಾಡಿ ಅಲ್ಲಲ್ಲಿ ಬಿಕ್ಕಿರುತ್ತಾರೆ ಅದಕ್ಕೆ ಒಂದು ಹಗ್ಗವಿರುತ್ತದೆ ಅದು ನೀರಿನ ಕೆಲವೇ ಫೀಟು ಆಳದಲ್ಲಿ ಹೋಗಿ ನಿಂತಿರುತ್ತದೆ ಸಮುದ್ರದ ನೀರಿನಡಿಯಲ್ಲಿ ತೆರೆಗಳಿಲ್ಲದೆ ಚಲನೆಯಿಲ್ಲದೆ ಇರುವುದರಿಂದ ಅವುಗಳು ಅಲ್ಲಿಯೇ ಬಹುಕಾಲ ಕಡೆದು ನಿಂತಿರುವವು. ಅದಕ್ಕೆ ಅಯಸ್ಕಾಂತವನ್ನು ತಗಲಿಸಿರುತ್ತಾರೆ ಎಂದಾದರೂ ದೂರದಲ್ಲಿ ಒಂದು ಹಡಗು ಹಾದು ಹೋಗುತ್ತಿದ್ದರೆ, ಅದರ ಕಬ್ಬಿಣದಿಂದ ತೋಟೆಯ ಅಯಸ್ಕಾಂತವು ಆಕರ್ಷಿಸಲ್ಪಟ್ಟು, ಅದು ಮಿಂಚಿನ ವೇಗದಿಂದ ಹೋಗಿ ಹಡಗಿಗೆ ಬಡಿಯುವುದು ಆಗ ಸಿಡಿಮದ್ದು ಸಿಡಿದು, ಹಡಗು ವಿಧ್ವಂಸವಾಗುವುದು. ಹಡಗುಗಳಲ್ಲಿ ಜಲಾಂತರ್ಯಾಮಿ ಹಡಗುಗಳಂತೂ ಇದಕ್ಕೆ ಬೇಗನೇ ಆಹುತಿಯಾಗುವವು.

ಆದರಿಂದಾಗಿ ಕಳೆದ ಯುದ್ಧದಲ್ಲಿ ಹೇಗಾದರೂ ಜರ್ಮನಿಯ ತೋಟೆಗಳ ಮತ್ತು ಜಲಾಂತರ್ಯಾಮಿ ನಾವೆಗಳ ಹಾವಳಿಯನ್ನು ಹದಕ್ಕೆ ತಂದ ಬ್ರಿಟನು ಆತ್ಮರಕ್ಷಣೆಗಾಗಿ ನೋರ್ತ್‌ಸೀ ಮೊದಲಾದೆಡೆಯಲ್ಲಿ ತೋಟೆಗಳನ್ನು ಇಟ್ಟಿತ್ತು. ಬ್ರಿಟನು ಅದನ್ನು ಜಗತ್ತಿಗೇ ಸಾರಿದ್ದರಿಂದ ಆ ಬದಿಗೆ ಬೇರೆ ಹಡಗಗಳು ಬರುತ್ತಿರಲಿಲ್ಲ. ಆದ್ದರಿಂದ ತಟಸ್ಥರಾಷ್ಟ್ರಗಳು ಬ್ರಿಟನಿನ ರಕ್ಷಣೆಯ ತೋಟೆಗಳಿಂದ ನಷ್ಟ ಹೊಂದಲೂ ಇಲ್ಲ. ತೋಟೆಗಳನ್ನು ಬ್ರಿಟನು ರಕ್ಷಣೆಗಾಗಿ ಉಪಯೋಗಿಸುವುದಿದ್ದರೆ, ಜರ್ಮನಿಯು ಅದನ್ನು ಶಿಕ್ಷೆಗಾಗಿ ಉಪಯೋಗಿಸುತ್ತಿದೆ.

### ತೋಟೆಗಳನ್ನು ತೆಗೆವುದು

ತೋಟೆಗಳನ್ನು ಸಮುದ್ರದಲ್ಲಿ ಇಲ್ಲದಂತೆ ಮಾಡುವ ವಿಧಾನವು ಮೊದಲು ಕಷ್ಟವಾಗಿತ್ತು ಅವುಗಳನ್ನು ತೆಗೆಯಲು ಟ್ರಾಲರುಗಳು ನೀರಿನಡಿಯಲ್ಲಿ ಹೋಗಿ, ಅಂತರದಲ್ಲಿದ್ದ ತೋಟೆಗಳನ್ನು ಮೇಲೆ ತರುತ್ತಿದ್ದವು ಒಂದಕ್ಕೆ ಎರಡು ತೋಟೆಗಳನ್ನು ತೆಗೆಯಲು ಒಂದ ಟ್ರಾಲರ



1) ಮೇಲಿಂದ ಹಾಕಿದ ತೋಟೆಯು ನೀರ ಮೇಲೆ ತೇಲುವುದು. 2) ಸ್ವಲ್ಪ ಒಳಗೆ ಮುಳುಗುವುದು 3) ಕೆಳಗೆ ತಾಗಿದ ಭಾರವಾದ ಲಂಗರಿನಂತಹ ಹಗ್ಗವು ನೀರಿನಡಿ ಇಳಿಯುವುದು 4) ಎಷ್ಟು ಆಡಿಗೆ ಹೋಗಬೇಕಾಗಿದೆಯೋ ಅಷ್ಟೇ ಉದ್ದ ಆ ಹಗ್ಗವಿರುವುದು 5) ಲಂಗರು ಮುಳುಗಿದಾಗ ತೋಟೆಯ ಕೆಳಗಿನ ಭಾರವು ಕೆಳಗಿಳಿಯುವುದು 6) ಸರಿಯಾದ ಸ್ಥಾನದಲ್ಲಿ ಚಲಿಸದೆ ನಿಂತುಕೊಳ್ಳುವುದು

ಪುಧಿಯಾಗುತ್ತಿತ್ತು. ಆದರೆ ಬರ್ನಿಯವರ ಸಂಶೋಧನೆಯಿಂದ ನೂರು ತೋಟೆಗಳನ್ನು ತೆಗೆಯುವಲ್ಲಿ ಸರಾಸರಿ ಒಂದು ಟ್ರಾಲರು ಹಾಳಾಗುತ್ತದೆ.

### ಹೆದರಿಕೆ ಹುಟ್ಟಿಸುತ್ತಿದೆ

ಜರ್ಮನಿಯು ಬ್ರಿಟನಿಗೆ ಹೊಸತರದ ತೋಟೆಗಳನ್ನು ಹಾಕಿ ಜಲ ಸಂಚಾರ ಅಸಾಧ್ಯವಾಗುವಂತೆ ತಾನು ಮಾಡುವೆನೆಂದು ಹೆದರಿಕೆ ಹುಟ್ಟಿಸಿದೆ ಅಂತೆಯೇ ಜರ್ಮನಿಯು ಅನೇಕ ಹಡಗುಗಳನ್ನು ತೋಟೆಗಳಿಂದ ಮುಳುಗಿಸಿದೆ ಆದೇ ಬ್ರಿಟನು ತೋಟೆಯಿಂದಾಗಲಿ, ಜಲಾಂತರ್ಗಾಮಿ ನೌಕೆಯಿಂದಾಗಲಿ ಅಕ್ರಮವಾಗಿ ಕಾದಾಡದೆ ನ್ಯಾಯ ರೀತಿಯ ನೌಕಾ ಯುದ್ಧದಿಂದ ಜರ್ಮನಿಯ ಬೆನ್ನು ಬಾಗಿಸಿದೆ

ಮುಂದಕ್ಕೆ ಜರ್ಮನಿಯು ತೋಟೆಗಳಿಂದ ಹೆಚ್ಚು ಲಾಭಪಡೆಯಲಾರರು ತೋಟೆಗಳನ್ನು ರಕ್ಷಣೆಗಾಗಿ ಬ್ರಿಟನೂ ಉಪಯೋಗಿಸಿದೆ. ಆದ ಕಾರಣ ಬಹಿರಂಗ ನೌಕಾಯುದ್ಧದಲ್ಲಿ ಜರ್ಮನಿಯು ಪರಾಕ್ರಮವನ್ನು ತೋರಿಸಬೇಕು ವಿಶಾಲಸಾಗರದಲ್ಲಿ ಜರ್ಮನಿಯು ಬ್ರಿಟನಿನೊಡನೆ ಬಹಿರಂಗಸೆಣಸಾಡಲು ಸಿದ್ಧವಿಲ್ಲ ಅಂತಹ ಶಕ್ತಿಪೂರ್ಣವಾದ ನ್ಯಾಯಬದ್ಧವಾದ ನೌಕಾ ಶಕ್ತಿಯು ಜರ್ಮನಿಗಿಲ್ಲ

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ


# ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು, ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಸ್ಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಾಯಿ 4

*Sole Manufacturer:* **Dr. D. N JASANI,** Vithalbhai Patel Road, BOMABY

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,
ಹಂಪನಕಟ್ಟಾ, ಮಂಗಳೂರು.



# ನೋಟಗಳು

ಕಲ್ಕತ್ತೆಯ ರಾಷ್ಟ್ರೀಯ ಪತ್ರಿಕೆಗಳು ತನ್ನ ಮತ್ತು ತನ್ನ ಅನುಯಾಯಿಗಳ ಕುರಿತು ಅಪಪ್ರಚಾರಮಾಡುತ್ತಿರುವವೆಂದು ಬೋಸರು, ಕೆಲವು ಪತ್ರಿಕೆಗಳನ್ನು ತಮ್ಮ ಒಂದು ಭಾಷಣದಲ್ಲಿ ಟೀಕಿಸಿ ಮಾತನಾಡಿದರು.

◈

ತಮ್ಮ ವಿಚಾರ ಸ್ವಾತಂತ್ರ್ಯವನ್ನೂ ವ್ಯಕ್ತಿ ಸ್ವಾತಂತ್ರ್ಯವನ್ನೂ ಟೀಕಿಸಿ ಮಾತನಾಡಿದ ಬೋಸರ ವರ್ತನೆಯು ತೀರಾ ಆಕ್ಷೇಪಣೀಯವಾದುದೆಂದು ಹಲವು ಪತ್ರಿಕಾ ಸಂಪಾದಕರ ಒಂದು ಗುಂಪು ಒಂದು ಪ್ರಕಟಣೆ ಹೊರಡಿಸಿರುವರು.

◈

"ಬಂಗಾಳದ ಪ್ರಧಾನ ಧುರೀಣರೊಬ್ಬರ ಮೇಲೆ ಹೀಗೆ ತಮ್ಮ ವಿಚಾರ ಸ್ವಾತಂತ್ರ್ಯದ ಹಕ್ಕು ಸ್ಥಾಪನೆಗಾಗಿ ನಿರ್ಭಯ ನಿಷ್ಪಕ್ಷಪಾತ ರೀತಿಯಿಂದ ವರ್ತಿಸಿದ ಪತ್ರಿಕಾ ಸಂಪಾದಕರ ಧೈರ್ಯವನ್ನು ನಾನು ಕೊಂಡಾಡುತ್ತೇನೆ" ಎಂದು ಹಿಂದೂ ಮಹಾ ಸಭಾ ಮುಖಂಡರಾದ ಶ್ರೀ ನಿರ್ಮಲ ಚಂದ್ರ ಚಟರ್ಜಿಯವರು ತಮ್ಮದೊಂದು ಭಾಷಣದಲ್ಲಿ ಹೇಳಿದರು.

◈

ಭಾರತೀಯ ರಾಷ್ಟ್ರೀಯ ಮಹಾಸಭೆಯ ವರ್ಕಿಂಗ ಕಮಿಟಿಯ ಸದಸ್ಯರನ್ನೇ ಸಿಕ್ಕಾಬಟ್ಟೆ ದೂರುವ ಬೋಸರು ತಮ್ಮನ್ನು ರಾಷ್ಟ್ರೀಯ ಪತ್ರಿಕೆಗಳು ಟೀಕಿಸಿದರೆ, ಅದಕ್ಕಾಗಿ ಬೇಸರಗೊಳ್ಳುವುದು ನ್ಯಾಯವೆ?

◈

ಕಲ್ಕತ್ತೆಯ ಸಭೆಯೊಂದರಲ್ಲಿ ಫಾರ್ವರ್ಡ ಬ್ಲಾಕಿನವರು ಜಗನ್ಮೋಹನ ಬೋಸರೆಂಬವರ ಮೇಲೆ ಅತ್ಯಾಚಾರ ಮಾಡಿದರೆಂದು ತಿಳಿಯುತ್ತದೆ.

◈

ದೇಶಬಂಧು ಪಾರ್ಕಿನಲ್ಲಿ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ ಸುಭಾಸ ಬೋಸರು ತಾವೊಂದರ ತನಕ ಕೆಲವು ರಾಷ್ಟ್ರೀಯ ಪತ್ರಿಕೆಗಳ ವಿಷಯವಾಗಿ ಜರೆದು ಮಾತನಾಡಿದರು.

◈

ಕಲ್ಕತ್ತಾ ಕೋರ್ಪರೇಶನ್ನಿನ ಮಾಜಿ ಸದಸ್ಯರೂ, ಕಾಂಗ್ರೆಸು ಕಮಿಟಿಯ ಸದಸ್ಯರೂ ಆದ ಜಗನ್ಮೋಹನ ಬೋಸರೆಂಬವರು ಅವರ ಹೇಳಿಕೆಯನ್ನು ಅಲ್ಲಿ ಖಂಡಿಸಿದರು!

◈

ಇದಕ್ಕಾಗಿ ಬೋಸಿಸ್ಟರು, ಜಗನ್ಮೋಹನರ ಮೇಲೆ ಬಿದ್ದು, ಅವರಿಗೆ ಗಾಯ ಮಾಡಿದರೆಂದೂ, ಅವರನ್ನು ಹೇಗೋ ಕಾಪಾಡಿದರೆಂದೂ ತಿಳಿಯುತ್ತದೆ!

◈

ಕೆಲವು ಕುಂಟರನ್ನು ಹಿಡಕೊಂಡು ಬೋಸರು ರಾಷ್ಟ್ರೀಯ ಪತ್ರಿಕೆಗಳನ್ನೇ ಬಯ್ಯುವ ಕಾರ್ಯ ಮಾಡುತ್ತಿದ್ದಾರೆ!

◈

ಬಂಗಾಳದ ಪತ್ರಿಕೆ ಹಿಂದೂಸ್ಥಾನ ಸ್ಟೇಂಡರ್ಡನಲ್ಲಿ ಅಗ್ರಲೇಖನವನ್ನು ಬರೆಯುವುದಕ್ಕಿಂತ ಮೊದಲು ಸರಕಾರಕ್ಕೆ ಒಪ್ಪಿಸಬೇಕೆಂದು ಅದಕ್ಕೆ ಆಜ್ಞೆಯಿತ್ತ ಕಾರಣ ಮುಂದಕ್ಕೆ ತಾನು ಅಗ್ರಲೇಖನವನ್ನೇ ಬರೆಯುವುದಿಲ್ಲವೆಂದು ಅದರ ಸಂಪಾದಕರು ಪ್ರಕಟಿಸಿದ್ದಾರೆ!

◈

ಈ ಕುರಿತು ಪ್ರಧಾನರಾದ ಹಕ್ಕರು ತಮ್ಮ ಪ್ರಕಟಣೆಯಲ್ಲಿ ಆ ಪತ್ರಿಕೆಯು ಮುಸ್ಲಿಮರ ಪತ್ರ, ಅವರ ಅಲ್ಲದ ವಿಷಯದಲ್ಲಿ ಸಲ್ಲದ ಆರೋಪಗಳನ್ನು ಹೊರಿಸಿ ಲೇಖನ ಬರೆಯುತ್ತಿದ್ದಿತೆಂದೂ ಕೋಮುವಾರು ದ್ವೇಷ ಹುಟ್ಟಿಸುವಂಥ ಲೇಖನ ಬರೆಯುತ್ತಿದ್ದುದರಿಂದ, ಅದಕ್ಕೆ ಪ್ರೋತ್ಸಾಹ ಕೊಡುವ ರೀತಿಯ ಲೇಖನ ಬರೆಯುತ್ತಿದ್ದಿತೆಂದೂ ತಿಳಿಸುತ್ತಾರೆ.

◈

ಇದನ್ನು ಪ್ರತಿಭಟಿಸಿ ಅದರ ಸಂಪಾದಕರಾದ ಡಾಕ್ಟರ್ ಧೀರೇಂದ್ರನಾಥ ಸೇನರೆ ತಾವು ಮುಸಲ್ಮಾನರನ್ನಾಗಲಿ ಅವರನ್ನಾಗಲಿ ದೂಷಿಸಿ ಬರೆದುದಿಲ್ಲವೆಂದೂ ತಮ್ಮನ್ನು ಅನೇಕ ಸಲ ಎಚ್ಚರಿಸಿದರೆಂದು ಪ್ರಕಟಿಸಿದುದು ಸತ್ಯವಲ್ಲವೆಂದೂ ಹೇಳುತ್ತಾರೆ.

◈

ಸುಳ್ಳು ಹೇಳುವುದನ್ನು ಅಲ್ಲನೂ ಮೆಚ್ಚಲಾರನೆಂದು ಕುರಾನಿನಲ್ಲಿ ಸ್ಪಷ್ಟ ಬರೆದಿದೆಯೆಂದು ಹಕ್ಕರು ಓದಿರಲಿಕ್ಕಿಲ್ಲವೆ?

## ಗಾಂಧೀ ಸೇವಾಸಂಘದ ಉದ್ದೇಶ

ಮಲೀಕಂಡದ ಸಮ್ಮೇಳನದಲ್ಲಿ ಒಂದು ಅಂಶ ವ್ಯಕ್ತಪಟ್ಟಿತು. ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮದ ದೃಷ್ಟಿಯಲ್ಲಿ ಗಾಂಧೀ ಸೇವಾಸಂಘವು ಕೇವಲ ಅನಾವಶ್ಯಕವಾಗಿರದೆ ಸಹಜವಾಗಿ ಕಂಡುಬಂದಿತು. ಸಂಘವು ಅಹಿಂಸೆಯನ್ನು ಅನುಸರಿಸುವಂತೆ ಒತ್ತಾಯಪಡಿಸಬೇಕಾಗಿಯೂ ಬಂದಿತು. ಗಾಂಧೀ ಸೇವಾಸಂಘದ ಉದ್ದೇಶದ ಬಗೆ ಪರಿಶೀಲನೆ ಮಾಡಿದಾಗ ಉದ್ದೇಶ ಸಾಧನೆಯಲ್ಲಿ ನಾವು ಸರಿಯಾಗಿ ನಡೆದುದರಿಂದ ಕಂಡುಬಂದಿತು. ಇನ್ನು ಮುಂದೆ ಗಾಂಧಿ ಸೇವಾಸಂಘಕ್ಕೆ ಸರಿಯಾದ ಒಂದು ದಾರಿಯೆಂದ [illegible] ಗಿದೆ. ಸಂಘದಲ್ಲಿ ಇನ್ನು ಪರಿಶುದ್ಧವಾದ ಮತ್ತು ಅಹಿಂಸಾತ್ಮಕವಾದ ಸಂಘಗಳು ಬೇರ್ಪಡಲು ಈಗ ತಾನೇ ಪಾರ್ಥನೆ [illegible] ಗೆ ಬರೆದಿದ್ದಾರೆ. [illegible]

ಅರುಣಾ

ಹೆಂಗಸರ ಯಾವತ್ತೂ ಬಾಧೆಗಳನ್ನು ಗುಣಪಡಿಸುವುದು

ಎಲ್ಲಾ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ

ಅಥವಾ

ಪೋಸ್ಟಬಾಕ್ಸ 287 ಮದರಾಸ

ಸ್ಥಳೀಯ ಏಜಂಟರು

ಪೊಪ್ಯುಲರ್ ಸ್ಟೋರ್ಸ್

ರಥಬೀದಿ ಮಂಗಳೂರು.

ಸಾವುಕಾರ ಶ್ರೀನಿವಾಸರಂಗಪ್ಪೈ

[ ಸ್ಥಾಪನೆ: ಕ್ರಿ ಶ 1858 ]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವುಕಾರ ಮಹಾಲ್, ಮಂಗಳೂರು.

ನಾಲ್ಕು ವರ್ಷಗಳ ಸಮಯ ನೋವನ್ನು ಅನುಭವಿಸಿದನು

ಯಾವಾಗಲೂ ಭಯಾನಕ ಕಲ್ಪನೆಗಳನ್ನೇ ಮಾಡುತಿದ್ದನು

ಕ್ರುಶನ್ ಅವನನ್ನು ರಕ್ಷಿಸಿತು!

ನಾಲ್ಕು ವರ್ಷಗಳ ಸಮಯ ಆತನ ಬೆನ್ನು ಬಿಡದೆ ನೋಯುತ್ತಿತ್ತು. ಆದುದರಿಂದಲೇ ಅವನು ಯಾವಾಗಲೂ ಕರ್ಕಶ ಚಿತ್ತನಾಗಿದ್ದನು. ಈಗ ಆತನ ಪ್ರಾಯವು 62 ವರ್ಷ ಆದರೂ ಅತ್ಯಂತ ಹರುಷಚಿತ್ತದಿಂದ ತನ್ನ ನಿತ್ಯದ ಜೀವಮಾನವನ್ನು ಪ್ರಾರಂಭಿಸಿರುವನು. ಆತನಲ್ಲೀಗ ಬೆನ್ನು ನೋವೆ ಇಲ್ಲ. ಆತನ ಕಥೆಯನ್ನು ಓದಿರಿ.

ನಾಲ್ಕು ವರ್ಷಗಳ ಸಮಯ ಬಿಡುವಿಲ್ಲದೆ ನಾನು ಬೆನ್ನು ನೋವನ್ನು ಅನುಭವಿಸಿ ಜೀವಿಸುವುದೇ ಬೇಡವೆಂದು ನನಗೆ ತೋರುತ್ತಿತ್ತು. ಈಗ ಕ್ರುಶನನ ಮಹೋಪಕಾರದಿಂದ ಆರೋಗ್ಯದಿಂದಿರುವೆನು. ಅದಕ್ಕಾಗಿ ನಾನು ಚಿರಋಣಿಯಾಗಿರುವೆನು. ಈಗ ನಾನು ಉತ್ಸಾಹದಿಂದ ನಿತ್ಯ ಕಾರ್ಯವನ್ನು ಪ್ರಾರಂಭಿಸುತ್ತೇನೆ. ಒಂದೇ ಕೆಲ ದಿವಸಗಳಲ್ಲಿ ಕ್ರುಶನ್ ಸೇವಿಸಿದ ನನಗೆ ಬೇಗನೆ ಗುಣ ಸಿಕ್ಕಿತು. [illegible] ಗಿನ ಜೀವ ನಾನು ಹರ್ಷಚಿತ್ತನೆ ಆಗಿರುವೆನು. ನನ್ನ ಪ್ರಾಯವು 62. ಕ್ರುಶನೇ ನನ್ನ ಮುಕ್ತಿ ಮಾರ್ಗವು. ಜೆ ಟಿ

ಮೂತ್ರಪಿಂಡಗಳು ಮನುಷ್ಯನ ದೇಹವನ್ನು ನಿರ್ಮಲಗೊಳಿಸುವವು. ದೇಹದೊಳಗಿರುವ ವಿಷಕರ ಕಶ್ಮಲಗಳನ್ನು ಹೊರದೂಡುವುದೆ ಅವುಗಳ ಕರ್ತವ್ಯವು. ಅವುಗಳು ಸರಿಯಾಗಿ ಕಾರ್ಯ ನಡೆಸದಿದ್ದರೆ ಆಗ ವಿಷ ಕಶ್ಮಲಗಳು ದೇಹದಲ್ಲಿ ಶೇಖರವಾಗಿ [illegible] ಅಜೀರ್ಣ, ಸಂಧಿವಾತ, ಬೆನ್ನುನೋವು ಇತ್ಯಾದಿ ರೋಗಗಳಿಗೆ ಇದೇ ಕಾರಣವು.

ಕ್ರುಶನಿನಲ್ಲಿರುವ ಆರು ಲವಣಗಳು ನಿಮ್ಮ ಮೂತ್ರಪಿಂಡವು ಸರಿಯಾಗಿ ಕಾರ್ಯ ನಡೆಸುವಂತೆ ಮಾಡುತ್ತವೆ. ಅದರ ಫಲವಾಗಿ ನಿಮ್ಮಲ್ಲಿರುವ ಎಲ್ಲಾ ರೋಗಗಳು ಮಾಯವಾಗುತ್ತವೆ. ನೀವು ಜೀವಂತರಿರುವಾಗ ಅವು ನಿಮ್ಮ ದೇಹದಿಂದ ಹೊರಟು ಹೋಗುತ್ತವೆ.




ಕ್ರುಶನ್ ಲವಣಗಳು ಎಲ್ಲಾ ದವಾಖಾನೆಗಳಲ್ಲಿ, ಸ್ಟೋರುಗಳಲ್ಲಿ, ಬಜಾರುಗಳಲ್ಲಿ ಮಾರಲ್ಪಡುತ್ತದೆ.

No. 23

# ವಿಜ್ಞಾನಯುಗ

### ಶಿಶುಗಳು ಸಾಯುವ ಮುಖ್ಯ ಕಾರಣ

ನಮ್ಮ ದೇಶದಲ್ಲಿ ಶಿಶು ಮರಣದ ಸಂಖ್ಯೆಯು ಬೆಳೆಯುತ್ತಾ ಇದೆ. ಇದಕ್ಕೆ ಹೆತ್ತವರ ಅನಾರೋಗ್ಯವೂ ದೇಶದ ಬಡತನವೂ ಕಾರಣವಾಗಿದೆ ಎಂದು ಹೇಳುತ್ತಾರೆ. ಅದು ಹಾಗೆ ಇರಬಹುದು. ಆದರೆ ಈ ಮರಣ ಸಂಖ್ಯೆಯು ಹೆಚ್ಚಲಿಕ್ಕೆ ಬಹು ಮುಖ್ಯವಾದ ಇನ್ನೊಂದು ಕಾರಣವು ಇದೆ. ಅಕಾಲದಲ್ಲಿ ಸಾಯುವ ಮಕ್ಕಳಲ್ಲಿ ೧೦೦ಕ್ಕೆ ೮೫ರಷ್ಟು ಬಾಟಲಿ ಹಾಲನ್ನು ಕುಡಿಯುವಂಥವುಗಳಾಗಿವೆ. ಹೀಗೆ ಸಾಯುವಂಥವುಗಳೆಲ್ಲ ಒಂದು ವರ್ಷ ಪ್ರಾಯದೊಳಗಿನವುಗಳಾಗಿ ಇರುತ್ತವೆ. ಮತ್ತು ಹೊಟ್ಟೆಯ ಬೇರೆ ಬೇರೆ ರೋಗಗಳಿಂದ ಸಾಯುವಂಥ ಚಿಕ್ಕ ಮಕ್ಕಳಲ್ಲಿ ಕೂಡ ೧೦೦ಕ್ಕೆ ೬೦ರಷ್ಟು ಬಾಟಲಿಹಾಲನ್ನು ಕುಡಿಯುವಂಥವುಗಳೇ ಆಗಿರುತ್ತವೆ. ತಾಯ ಮೊಲೆಹಾಲನ್ನು ಕುಡಿಯುವ ಮಕ್ಕಳಿಗೆ ಹೊಟ್ಟೆ ಪೀಡೆಯೂ ಆಗುವದು ಬಹಳ ಕಡಿಮೆ ಆಗಿರುತ್ತದೆ. ಆದ್ದುದರಿಂದ ಮಕ್ಕಳನ್ನು ಆರೋಗ್ಯದಲ್ಲಿಡುವ ಮುಖ್ಯ ಉಪಾಯವು ಅವುಗಳಿಗೆ ತಾಯ ಮೊಲೆಹಾಲನ್ನು ಕೊಡುವದೇ ಆಗಿರುತ್ತದೆ.

### ಮಕ್ಕಳಿಗೆ ಬಾಳೆಹಣ್ಣು ತಿನ್ನಿಸುವ ಅಗತ್ಯ

ಶ್ರೀಮಂತರ ಮಕ್ಕಳು ಮಿಠಾಯಿ ಮತ್ತು ಇತರ ಸಕ್ಕರೆ ಪದಾರ್ಥಗಳನ್ನು ತಿನ್ನುವದು ಹೆಚ್ಚು. ಅವುಗಳು ಅಷ್ಟು ಹೆಚ್ಚಿಗೆ ಸಕ್ಕರೆ ಪದಾರ್ಥಗಳನ್ನು ತಿನ್ನುತ್ತಿರುವವಾದರೂ, ಶರೀರ ಬೆಳವಣಿಗೆ ಮತ್ತು ಧಾರಣೆಗೆ ಬೇಕಾದಷ್ಟು ಸಕ್ಕರೆಯು ಆ ಮಕ್ಕಳಿಗೆ ಸಿಕ್ಕುತ್ತಿರುವದಿಲ್ಲ. ಆದುದರಿಂದ ವೈದ್ಯರು ಆ ಮಕ್ಕಳ ಚಿಕಿತ್ಸೆ ಮಾಡುತ್ತಿರುತ್ತಾರಾದರೂ ಅವು ಆರೋಗ್ಯವಾಗಿ ಇರುವದಿಲ್ಲ. ಯಾಕೆಂದರೆ ಅವು ತಿನ್ನುವ ಸಕ್ಕರೆಯು ಹೊಟ್ಟೆಯಲ್ಲಿ ಜೀರ್ಣವಾಗುವ ಸ್ಥಿತಿಯಲ್ಲಿ ಇರುವದಿಲ್ಲವಾದುದರಿಂದ ಅದೆಲ್ಲ ಅಜೀರ್ಣವಾಗುತ್ತದೆ. ಮತ್ತು ಅಜೀರ್ಣಸಂಬಂಧ ರೋಗಗಳಿಗೆ ಅವು ಬಲಿಯಾಗುತ್ತವೆ. ಜೀರ್ಣಕಾರಿ ಬೇರೆ ಸಕ್ಕರೆ ದೊರೆಯದೆ ಇದ್ದುದರಿಂದಲೂ ಆ ಮಕ್ಕಳು ರೋಗಪೀಡಿತವಾಗುತ್ತವೆ. ಅಮೇರಿಕದ ಡಾಕ್ಟರ ಸಿಡ್ನಿ ಹೂಸ್ ಎಂಬವರು ಈ ಸಂಬಂಧ ಮಾಡಿದ ಶೋಧನೆಗಳಿಂದ—ಸಕ್ಕರೆಯ ಕೊರತೆಯಾಗಿರುವ ಮಕ್ಕಳು ಬಾಳೆಹಣ್ಣುಗಳನ್ನು ಹೆಚ್ಚು ಪರಿಮಾಣದಲ್ಲಿ ತಿನ್ನುತ್ತಿರುವದರಿಂದ ಅವು ಆರೋಗ್ಯವಾಗಿ ಇರಲಾರವೆಂದು ತಿಳಿಯುತ್ತದೆ. ಅವುಗಳ ರೋಗರುಜೆಗಳೂ ಈ ಬಾಳೆಹಣ್ಣುಗಳಿಂದ ದೂರವಾಗಬಹುದು. ಬಾಳೆಹಣ್ಣುಗಳಲ್ಲಿರುವ ಸಕ್ಕರೆಯು ಮಕ್ಕಳ ಹೊಟ್ಟೆಯಲ್ಲಿ ಸುಲಭವಾಗಿ ಕರಗುವಂತೆ ಇರುತ್ತದೆ. ಆದುದರಿಂದ ಮಕ್ಕಳು ಬಾಳೆಹಣ್ಣುಗಳನ್ನು ಯಥೇಷ್ಟ ತಿನ್ನುತ್ತಿರುವದು ಒಳ್ಳೇದಾಗಿದೆ.

### ಸೇಬನ್ನು ಹೇಗೆ ತಿನ್ನಬೇಕು?

ಕೆಲವರು ಸೇಬುಹಣ್ಣುಗಳನ್ನು ಅವುಗಳ ಸಿಪ್ಪೆಸುಲಿದು ತಿನ್ನುತ್ತಾರೆ. ಆದರೆ ಸೇಬಿನ ಸಿಪ್ಪೆಯನ್ನು ಒಡೆದು ಬಿಟ್ಟುದರಿಂದ ಅದರ ಉತ್ಕೃಷ್ಟ ಭಾಗವನ್ನೆ ಬಿಸಾಡಿಬಿಟ್ಟಂತಾಗುವದು. ಬ್ರಿಟಿಷ ಖಾದ್ಯ ಪದಾರ್ಥ ಸಮಿತಿಯು ಅನೇಕ ಪರಿಶೋಧನೆಗಳನ್ನು ಮಾಡಿ ಸೇಬಿನ ಒಳಗಿನ ತಿರುಳಿನಲ್ಲಿರುವದಕ್ಕಿಂತಲೂ ಆರು ಪಾಲು ಹೆಚ್ಚಿಗೆ ಉತ್ಕೃಷ್ಟ ಆಹಾರಾಂಶವು ಅದರ ಸಿಪ್ಪೆಯಲ್ಲಿರುತ್ತದೆಂದು ತಿಳಿಕೊಂಡಿದೆ. ಆದುದರಿಂದ ಸೇಬಿನ ಎಲ್ಲಾ ಪ್ರಯೋಜನಗಳನ್ನು ಪಡೆಯಬೇಕೆನ್ನುವವರು ಸೇಬನ್ನು ಸಿಪ್ಪೆತೆಗೆಯದೆ ಹಾಗೆಯೇ ಜಗಿದು ತಿನ್ನಬೇಕು. ಮೊದಲ ಬಾರಿಗೆ ಹೀಗೆ ತಿನ್ನುವದು ಕೆಲವರಿಗೆ ರುಚಿಸಲಿಕ್ಕಿಲ್ಲ. ಆದರೆ ಅಭ್ಯಾಸವಾದ ನಂತರ ಎಲ್ಲಾ ಸರಿಹೊಂದಿಕೊಳ್ಳುತ್ತದೆ.

### ವಿಹಾರದಿಂದಾಗುವ ಲಾಭ.

ತಿರುಗಾಟದಿಂದ ಶರೀರಕ್ಕಾಗುವಷ್ಟು ಲಾಭವು ಬೇರೆ ಯಾವ ವ್ಯಾಯಾಮದಿಂದಲೂ ದೊರೆಯುವದಿಲ್ಲ. ತಿರುಗಾಟದಿಂದ ಶರೀರದ ಪ್ರತಿಯೊಂದು ವಿಭಾಗಕ್ಕೂ ವ್ಯಾಯಾಮವಾಗುತ್ತದೆ; ಮತ್ತು ಶರೀರವು ಸುದೃಢವೂ ಕಾಂತಿಮಯವೂ ಆಗುತ್ತದೆ. ತಿರುಗಾಟದಿಂದ ಮನುಷ್ಯನ ಪಚನ ಶಕ್ತಿಯು ಬೆಳೆಯುತ್ತದೆ; ರೋಗರುಜೆಗಳು ದೂರವಾಗುತ್ತವೆ. ಹೊಟ್ಟೆಯ ಸ್ಥಿತಿಯನ್ನು ಉತ್ತಮವಾಗಿಡಲಿಕ್ಕೂ ಶರೀರವನ್ನು ಸ್ವಸ್ಥಗೊಳಿಸಲಿಕ್ಕೂ ತಿರುಗಾಟದಂಥ ಬೇರೆ ಉತ್ತಮ ಉಪಾಯವು ಇರುವದಿಲ್ಲ. ಉದರರೋಗಗಳನ್ನು ದೂರ ಮಾಡಲಿಕ್ಕೂ ಅವುಗಳು ಬಾರದಂತೆ ನೋಡಲಿಕ್ಕೂ ತಿರುಗಾಟವೇ ಆಗಬೇಕು. ತಿರುಗಾಟದ ಮತ್ತೊಂದು ಪ್ರಯೋಜನವೇನೆಂದರೆ—ಮನುಷ್ಯನು ಕೊನೆಕಾಲದತನಕವೂ ಅವನು ಯಾವಾಗಲೂ ಸ್ಫೂರ್ತಿ ಉತ್ಸಾಹಗಳಿಂದ ತುಂಬಿಕೊಳ್ಳುತ್ತ ಇರುತ್ತಾನೆ, ವೃದ್ಧನಾದಾಗಲೂ ವೃದ್ಧಾವಸ್ಥೆಯ ಕಷ್ಟ—ನೋವು ನರಳಿಕೆಗಳು ಅವನಿಗೆ ಬರುವದಿಲ್ಲ. ಆದುದರಿಂದ ಆರೋಗ್ಯಸುಖವನ್ನು ಇಚ್ಛಿಸುವ ಪ್ರತಿಯೊಬ್ಬನು ಪ್ರತಿದಿನ ಬೆಳಗ್ಗೆ ಅಥವಾ ಸಾಯಂಕಾಲ ಸ್ವಲ್ಪ ಹೊತ್ತು ತಿರುಗಾಟಕ್ಕೆ ಹೋಗಿ ವಿಹರಿಸುವದು ಅಗತ್ಯವಾಗಿದೆ. ಹೆಚ್ಚಾಗಿ ಕುಳಿತುಕೊಂಡೇ ಕೆಲಸ ಮಾಡುವವರು ಈ ವಿಷಯವನ್ನು ಗಮನಿಸುವುದು ಅವಶ್ಯವಾಗಿದೆ.


ಭಾರತ ಸ್ತ್ರೀಯರಿಗೆ ಉತ್ತಮೋತ್ತಮವಾದ ಟಾನಿಕ್

ಲೋಧ್ರ

ಲೋಧ್ರ

ಬಲವರ್ಧಕ ಔಷಧಗಳ ರಾಣಿ

ಸ್ತ್ರೀಯರ ಸಕಲ ಗರ್ಭಾಶಯರೋಗಗಳನ್ನು ಹೋಗಲಾಡಿಸಿ

ಸಂಪೂರ್ಣಾರೋಗ್ಯವನ್ನೂ, ಸುಖವನ್ನೂ ನೀಡುವ ಟಾನಿಕ್

ಕೇಸರಿ ಕುಟೀರಂ, ರಾಯಪೇಟೆ, ಮದರಾಸು

# ದಿ ಕಂಬ್ಯ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

## ಉಳ್ಳಾಲ ಸಾವಿರ ಜಮಾತರಿಂದ
## ಸರ್ವ ಮುಸ್ಲಿಂ ಸಹೋದರರಲ್ಲಿ ನಮ್ರ ನಿವೇದನೆಗಳು:

ಮಹನೀಯರೇ,

"ಉಳ್ಳಾಲ ಸೈಯದ್ ಮಹಮ್ಮದ್ ಶರೀಫುಲ್ ಮದನೀಯವರ ಉರ್ಸು ಯಾನೆ ನೇರ್ಚ್ಚ ಉತ್ಸವವನ್ನು ಇದೇ ಬರುವ 1940ನೇ ಇಸವಿ ಮಾರ್ಚಿ ತಿಂಗಳ ತಾರೀಕು 24ನೇ ಆದಿತ್ಯವಾರಕ್ಕೆ ಸರಿಯಾದ ಹಿಜರಿ 1359ನೇ ಸಫರ್ ತಿಂಗಳ ಚಾಂದು 14ನೇ ದಿನ ಜರಗಿಸಬೇಕಾಗಿ ಉಳ್ಳಾಲದ ಸಾವಿರ ಜಮಾತರಾದ ನಾವು ನಿರ್ಣಯಿಸಿರುತ್ತೇವೆ. ಆದುದರಿಂದ ಸರ್ವ ಮುಸ್ಲಿಂ ಸಹೋದರರೂ ಇತರರೂ ಸದರೀ ಸಮಯಕ್ಕೆ ಎರಡು ದಿನಗಳ ಮುಂಚಿತವಾಗಿಯೇ ದಯಮಾಡಿ ಬಂದು ಸದ್ರಿ ಸಮಾರಂಭವನ್ನು ನೆರವೇರಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಮೇಲ್ಕಂಡ ಉತ್ಸವಕ್ಕೆ ಪರಸ್ಥಳಗಳಿಂದ ಹೋಗುವ ಯಾತ್ರಿಕ ವ ಪ್ರೇಕ್ಷಕರ ಅನುಕೂಲತೆಗಾಗಿ ನಮ್ಮ ಜಿಲ್ಲೆಯ ಯಾವತ್ತೂ ಸ್ಟೇಶನುಗಳಿಂದ ಮಂಗಳೂರಿಗೆ ಸ್ಪೆಶಲ್ ಸರ್ವಿಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡನ್ನು ಮಾಡಿರುತ್ತೇವೆ.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು:

***JOINT MANAGERS.***

**The Combined Booking Agency,** MANGALORE.

**The Joint Booking Office,** KODIALBAIL.

(Regd)

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಶ್ವಾಸ... ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪೋ.
ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS. BOMBAY MADRAS CALCUTTA



# HOUNSA
## ಹಂಸಾ ಸ್ನೋ
## ಮತ್ತು
## ಬ್ರಿಲ್ಲಿಂಟೈನ್
## ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ರೋಸಿಕಟ್ಟಾ ಬಜಾರ್, ಮಂಗಳೂರು.



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ಇಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಖರ್ಚು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೊ.,
ಆಯುರ್ವೇದೀಯ ಸದನ, ಪೆಂಡೇಪಿ.
P. O. Peridepi (ನೆಲ್ಲೂರು ಜಿ.)


## ಮಂಗಳೂರು ಪೇಟೆಯ ದವಸಧಾನ್ಯ ವಗ್ಯರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ | 1—13—0 | 1—14—0 |
| ,, ದುಯಂ ,, ,, | | |
| ,, ಅವ್ವಲ್ ಸುಗ್ಗಿ ,, | | — |
| ,, ದುಯಂ ,, ,, | | — |
| ಅಕ್ಕಿ ಅವ್ವಲ್ ಗುಡ್ಡು ,, ಹಳತ್ತು | 4—14—0 | |
| ,, ದುಯಂ ,, ,, | 4—8—0 | |
| ,, ಅವ್ವಲ್ ಸುಗ್ಗಿ ,, | 4—8—0 | 4—8— |
| ,, ದುಯಂ ,, ,, | 4—4—0 | 4—6—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 58—8—0 |
| ,, ಸಿಪ್ಪೆ ಇದ್ದದು ,, | 50—0—0 | 60—0—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 75—0— |
| ,, ದಿಲ್‌ಪಸಂದಿ ,, | — | — |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8—0 |
| ಸಿಪ್ಪೆಯುದ್ದ ಅಡಕೆ 1000ಕ್ಕೆ | 2—0—0 | 2—12—0 |
| ಗೇರುಬೀಜ ಮುಡಿಗೆ | 8—0—0 | 8—12—0 |
| ಕಬ್ಬಿನ ಬೆಲ್ಲ ಖಂಡಿಗೆ | 37—8—0 | 50—0—0 |
| ಒಳ್ಳೇಮೆಣಸು ಪಂಡ್ಯದ್ವೇಟಿಗೆ | 19—0—0 | 20—8—0 |

# ಸ್ವದೇಶಾಭಿಮಾನಿ

ಸಂಪುಟ ೩೪] ತಾರೀಖು 8—3—1940 [ಸಂಚಿಕೆ 1

## The Bombay Life Assurance Company, Ltd.,
(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live-today-a few years more-when you are old?
If you die-to your family and dependants?

**REMEMBER THAT**

If you live, Life Insurance takes the place of your professional income during your old age

If you die it provides your family with enough income for their maintenance and the education of your children.

BOMBAY LIFE" offers all that is best in LIFE ASSURANCE

**1938 RECORD**

| | | |
|---|---|---|
| Completed Business | Rs | 1,44,91,000 |
| Life Assurance Fund | Rs | 1,17,69,748 |
| Total Assets | Rs | 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

**Bombay Life Building,**

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut — Car Street, Mangalore — Visweswarapuram Circle, Bangalore City — Post Box No 337, Mount Road, Madras

Gautam Nivas, Charni Road, Girgaum, Bombay No 4 — Central Station Road, Trivandrum

## PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

**which will tone the nervous system, build healthy tissues and enrich the blood.**

**Thus keeps you fresh and sprightly.**

**Bhuvanendra Products, Ltd.,**

**Katapady, S. Kanara.**

(BRANCH—KUMTA, N. KANARA.)

**Stockist: U. Panduranga Nayk, Car-Street Mangalore**

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆ
ಯಿಂದ ಇರಬೇಕಾದರೆ ಸಾಕಷ್ಟು
ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾ
ಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಆಗತ್ಯವಿಲ್ಲ

## ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್**

ಕಟಪಾಡಿ, ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮುಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನಾಯ್ಕ್, ರಥಬೀದಿ, ಮಂಗಳೂರು

Edited Printed & Published by A. S. Kamath at the Sharada Press, Car Street, Mangalore

Estd. 1906

# ಸ್ವದೇಶಾಭಿಮಾನಿ

# SWADESHABHIMANI

ಮುಝಫ್ಫರ್ ಖಾನ್

KANNADA ILLUSTRATED WEEKLY

# ಅಲ್ಪಸಂಖ್ಯಾತರು ಯಾರು?

## ಹಿಂದುಗಳೋ? ಮುಸ್ಲಿಮರೋ?

### ಭಾಯಿ ಪರಮಾನಂದರ ಅಭಿಪ್ರಾಯ

ಸಿಂಧ, ಪಂಜಾಬು, ಬಂಗಾಳ, ಗಡಿ ಪ್ರಾಂತ ಮೊದಲಾದ ಮುಸಲ್ಮಾನರು ಬಹುಸಂಖ್ಯಾತರಾಗಿರುವ ಪ್ರಾಂತಗಳಲ್ಲಿ ಹಿಂದುಗಳಿಗೆ ಮುಸಲ್ಮಾನರು ಕೊಡುತ್ತಿರುವ ಶಾರೀರಿಕ ಮತ್ತು ಮಾನಸಿಕ ಪೀಡೆ, ಹಿಂದೂ ಮಹಿಳೆಯರ ಮೇಲೆ ಮಾಡುತ್ತಿರುವ ಬಲಾತ್ಕಾರ, ಹಿಂದೂ ಆಸ್ತಿಪಾಸ್ತಿ ಸೊತ್ತು ಸರಕುಗಳ ಲೂಟಿ, ಹಿಂದೂ ದೈವ ದೇವಸ್ಥಾನಗಳ ನಷ್ಟ ಕಷ್ಟಗಳನ್ನು ಕೇಳಿ ಹೃದಯವು ತಲ್ಲಣಗೊಳ್ಳುತ್ತದೆ. ಆದರೂ ಕೂಡ ಹಿಂದುಗಳು ಬಹುಸಂಖ್ಯಾಕರಾಗಿರುವ ಪ್ರಾಂತ್ಯಗಳಲ್ಲಿ ಅವರು ಮುಸಲ್ಮಾನರ ಮೇಲೆ ಅತ್ಯಾಚಾರ ಮಾಡುತ್ತಿರುವರೆಂಬ ಆ ಸುಳ್ಳು ಅಪವಾದಗಳನ್ನೇ ಮುಸಲ್ಮಾನರು ಬ್ರಹ್ಮಾಂಡದಷ್ಟು ದೊಡ್ಡದು ಮಾಡಿದ್ದಾರೆಯೇ ಹೊರತು, ಹಿಂದುಗಳಿಗಾಗುತ್ತಿರುವ ಅನ್ಯಾಯಗಳ ಕುರಿತು ಉಸಿರೆತ್ತುವದು ಕೂಡ ಇಲ್ಲ! ಎಲ್ಲಾ ಪ್ರಾಂತೀಯ ಸರಕಾರಗಳ ಮಂತ್ರಿಮಂಡಲಗಳಲ್ಲಿ ತಮ್ಮವರು ಅಗತ್ಯ ಇರಲೇಬೇಕು; ಹಿಂದುಸ್ಥಾನಿಯು ಬದಲಿಗೆ ಉರ್ದುವಿನ ಪ್ರಚಾರವಾಗಬೇಕು. ಮಸೀದಿಗಳ ಮುಂದೆ ವಾದ್ಯಘೋಷ ಮಾಡಬಾರದು; ಗೋಹತ್ಯೆಗೆ ಸ್ವಾತಂತ್ರ್ಯವಿರಬೇಕು!—ಇವೇ ಮುಸಲ್ಮಾನರ ಹಠದ ಬೇಡಿಕೆಗಳಾಗಿವೆ.

**ಹಿಂದುಗಳು ನಷ್ಟವಾಗುವ ಭಯ**

ಹಿಂದೂಗಳು ಅಲ್ಪಸಂಖ್ಯಾಕರಾಗಿರುವ ಪ್ರಾಂತಗಳಲ್ಲಿ ಅವರ ರಕ್ಷಣೆಯ ವಿಚಾರವು ಎಲ್ಲರ ಮನಸ್ಸಿಗೆ ಬರಬೇಕಾಗಿದೆ. ಅಲ್ಲಿ ಹಿಂದುಗಳು ದೀನರೂ ಹೀನರೂ ಆಗಿರುವರು. ಮುಸಲ್ಮಾನರ ಆಕ್ರಮಣದಿಂದ ಹಿಂದುಗಳನ್ನು ಸಕಾಲದಲ್ಲಿ ರಕ್ಷಿಸದೆಹೋದರೆ ಹಿಂದುಗಳು ತಮ್ಮ ಸ್ವದೇಶದಲ್ಲಿಯೇ ನಾಮಾವಶೇಷರಾಗುವ ಭಯವಿದೆ. ಹಿಂದುಗಳ ಸ್ಥಿತಿಯು ಸರ್ವತ್ರ ಕರುಣಾಜನಕವಾಗಿರುವುದು. ಅವರು ಬಹುಸಂಖ್ಯಾಕರಾಗಿದ್ದಲ್ಲಿ, ಹಿಂದುಗಳು ಬಹುಸಂಖ್ಯಾಕರಿಂದ; ಅವರು ಅಲ್ಪಸಂಖ್ಯಾಕರಾಗಿದ್ದಲ್ಲಿ ಅವರು ಅಲ್ಪಸಂಖ್ಯಾಕರಿಂದಲೂ ಹಿಂದುಗಳ ನ್ಯಾಯವಾದ ಹಕ್ಕು, ಅಧಿಕಾರ, ಸ್ವಾತಂತ್ರ್ಯಗಳನ್ನು ಕಿತ್ತುಕೊಳ್ಳುವ ಭಯಂಕರ ಪಿತೂರಿಯು ನಡೆಯುತ್ತ ಇದೆ.

**ತಪ್ಪಿನಿಂದ ಪಾರಾಗುವ ಬಗೆ.**

ಹಿಂದುಗಳು ದಿನೇ ದಿನೇ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಹೀನರೂ ದೀನರೂ ಆಗುತ್ತಿರುವರಾದರೂ ನಮ್ಮ ಮುಖಂಡರ ಲಕ್ಷವು ಆ ಕಡೆಗೆ ಹೋದುದಾಗಲೀ ಅವರನ್ನು ಸುಧಾರಿಸಲಿಕ್ಕೆ ಯೋಗ್ಯ ಉಪಾಯವನ್ನು ಕಂಡುಹಿಡಿದುದಾಗಲೀ ಇಲ್ಲ. ಮುಸಲ್ಮಾನರಿಂದ ಹಿಂದುಗಳಿಗೆ ಅನ್ಯಾಯವಾಗುವದರಿಂದ ಮುಸಲ್ಮಾನರ ಹೃದಯ ಪರಿವರ್ತನವಾಗುವ ತನಕ ಅನ್ಯಾಯಗಳನ್ನು ಹಿಂದುಗಳು ಸಹಿಸಿಕೊಂಡಿರಬೇಕು. ಅವು ಸಹನಾತೀತವಾಗಿರುವುದಾದರೆ ಅನ್ಯತ್ರ ಆಶ್ರಯ ಪಡೆಯಬೇಕೆಂದೂ ಹಿಂದುಗಳು ಮುಸಲ್ಮಾನರಿಗೆ ಅವರು ಕೇಳಿದಷ್ಟನ್ನು ಕೊಡುವ ಔದಾರ್ಯವನ್ನು ತೋರಿಸಿ ಈ ಹಿಂದೂ ಮುಸಲ್ಮಾನ ಸಮಸ್ಯೆಯನ್ನು ತೀರಿಸಬೇಕೆಂದು ಮಹಾತ್ಮರು ಹೇಳಿರುವರು. ಮುಸಲ್ಮಾನರ ರೊಟ್ಟಿ ಸುಡಲಿಕ್ಕೆ ಹಿಂದುಗಳು ತಮ್ಮ ಮನೆ ಸುಟ್ಟು ಬೆಂಕಿಕೊಡಲೆಂದು ಹೇಳಿದ ಹಾಗಾಗುತ್ತದೆ ಇದು!

**ಹಿಂದುಗಳ ರಕ್ಷಣೋಪಾಯ.**

ಹಿಂದುಗಳು ಬಹುಸಂಖ್ಯಾಕರೆನ್ನುವದು ಬರೇ ಕಲ್ಪನೆಯ ಮಾತಾಗಿದೆ. ವಸ್ತುತಃ ಅವರು ಅಲ್ಪಸಂಖ್ಯಾಕರೇ ಆಗಿದ್ದಾರೆ. ಸುಸಂಘಟಿತರಾದ ೯ ಕೋಟಿ ಮುಸಲ್ಮಾನರ ಒಂದು ಜಾತಿಯ ಮುಂದೆ ಸಾವಿರಾರು ಜಾತಿಮತ ಪಂಗಡಗಳಾಗಿ ಒಡೆದು ಹೋದ ೨೮ ಕೋಟಿ ಹಿಂದುಗಳು ಅಲ್ಪಸಂಖ್ಯಾಕರಾಗಿಯೇ ಆಗಿದ್ದಾರೆ. ಹಿಂದುಗಳು ಸಾವಿರಾರು ಜಾತಿಗಳಾಗಿ ಒಡೆದು ಹೋಗಿ ಪರಸ್ಪರ ಸ್ನೇಹ, ವಾತ್ಸಲ್ಯ, ಪ್ರೇಮ ಸಹಾನುಭೂತಿ ಇಲ್ಲದವರಾಗಿರುವದರಿಂದಲೇ ಮುಸಲ್ಮಾನರು ಅವರ ಮೇಲೆ ಬಹು ಭಯಂಕರ ಅತ್ಯಾಚಾರಗಳನ್ನು ಮಾಡಲಿಕ್ಕೆ ಹಿಂಜರಿಯುವದಿಲ್ಲ. ಪ್ರಪಂಚದ ಯಾವುದೇ ಒಂದು ಮೂಲೆಯಲ್ಲಿರುವ ಒಬ್ಬ ಬಡ ಮುಸಲ್ಮಾನನಿಗೆ ಬಂದ ಕಷ್ಟವನ್ನು ದೂರ ಮಾಡಲಿಕ್ಕೆ ಇಡೀ ಪ್ರಪಂಚದ ಮೂಲೆ ಮೂಲೆಯಲ್ಲಿರುವ ಮುಸಲ್ಮಾನರೂ ಒಂದಾಗುವರು. ಆದರೆ ಹಿಂದುಗಳಲ್ಲಿ ನೆರೆಮನೆಯವನ ಮೇಲೆ ಒಂದು ಅನ್ಯಾಯವಾದರೂ ಈಚೆ ಮನೆಯವರು ಅವನು ತಮ್ಮವನೇ ಎಂಬ ಭಾವನೆಯಿಂದ ಸಹಾಯಕ್ಕೆ ಹೋಗುವದಿಲ್ಲ. ಹಿಮಾಲಯದಿಂದ ಕನ್ಯಾಕುಮಾರಿಯ ತನಕ ಇರುವ ಎಲ್ಲಾ ಜಾತಿ ಮತ ಪಂಥಗಳ ಹಿಂದುಗಳು ಒಂದೇ ಎಂಬ ಜಾತಿಯ ಅಭಿಮಾನವು ಹಿಂದುಗಳಲ್ಲಿ ಸರ್ವತ್ರ ಜಾಗೃತವಾಗಿ ಮುಸಲ್ಮಾನರಂತೆ ಅವರೂ ಯಾವಾಗ ಸುಸಂಘಟಿತರಾಗುತ್ತಾರೋ ಯಾವಾಗ ಎಲ್ಲಾ ಜಾತಿಮತ ಸಂಪ್ರದಾಯಗಳ ಹಿಂದುಗಳು ಒಂದೇ ಒಂದಾದ ಹಿಂದೂ ಧ್ವಜಛಾಯೆಯಲ್ಲಿ ತಮ್ಮ ಸರ್ವಾಂಗೀಣ ಮತ್ತು ಸರ್ವತೋಮುಖವಾದ ಉನ್ನತಿ ಅಭಿವೃದ್ಧಿಗಳಿಗೆ ಪ್ರಯತ್ನಿಸುತ್ತಾರೋ, ಆಗ ಹಿಂದುಗಳು ಎಲ್ಲೇ ಇರಲೊಲ್ಲರೇಕೆ, ಅವರಿಗೆ ಮುಸಲ್ಮಾನರಿಂದ ಮಾತ್ರವಲ್ಲ ಇಡೀ ಜಗತ್ತಿನ ಅನ್ಯಾಯಗಳಿಂದ ರಕ್ಷಣೆಯು ದೊರಕುವುದು. ಹಿಂದುಗಳ ಸುಸಂಘಟಿತ ಪ್ರಬಲ ಶಕ್ತಿಯೇ ಅವರ ಉತ್ತಮ ರಕ್ಷಣೋಪಾಯವಾಗಿದೆ.




‘ಓವಲ್ಟಿನ್’ ಮಿದುಳನ್ನೂ ನರವನ್ನೂ ಪೋಷಿಸುವುದು

ಆರೋಗ್ಯವನ್ನೂ ಬಲವನ್ನೂ ವೃದ್ಧಿಸುವುದು!

ನೀವು ಆಯಾಸಪಟ್ಟಾಗ, ಉದಾಸೀನಪಟ್ಟಾಗ ನಿಮ್ಮ ನರನಾಡಿಗಳು ಸೊರಗಿದ್ದಾಗ ಒಂದು ಕಪ್ ‘ಓವಲ್ಟಿನ್’ ಪಾನೀಯವು ದಣುವನ್ನು ನಿವಾರಿಸಿ ನರನಾಡಿಗಳನ್ನು ಉತ್ತೇಜಿಸುವಂತೆ ಇನ್ನಾವ ಪಾನೀಯಗಳು ಮಾಡವು.

‘ಓವಲ್ಟಿನ್’ ದೇಹಕ್ಕೆ, ಮಿದುಳಿಗೆ, ನರನಾಡಿಗಳಿಗೆ ಶೀಘ್ರದಲ್ಲಿಯೇ ಶಕ್ತಿಯನ್ನು ಉಂಟುಮಾಡುವುದು. ಪ್ರಕೃತಿಯ ಅತ್ಯುತ್ಕೃಷ್ಟ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟದ್ದು—ನೆನೆಹಾಕಿ ಹುರಿದ ಮಾಗಿದ ಬಾರ್ಲಿ, ದನದ ಹಸಿ ಹಾಲು ಅಮೂಲ್ಯವಾದ ನೈಸರ್ಗಿಕ ಶಕ್ತಿವರ್ಧಕ ಜೀವಾತು ಮತ್ತು ಫಾಸ್ಫೇಟ್ಸ್‌ನಿಂದ ತಯಾರಿಸಿಟ್ಟ ‘ಓವಲ್ಟಿನ್’ ಸದೃಢವಾದ ದೇಹವನ್ನು ಚುರುಕಾದ ಬುದ್ಧಿಯನ್ನುಂಟುಮಾಡುವಂತೆ ನಿಮ್ಮನ್ನು ಪೋಷಿಸುವುದು.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು:

**ಜೇಮ್ಸ್‌ರೆಟ್ಟ್ ಲಿಮಿಟೆಡ್**

ಕಲ್ಕತ್ತಾ, ಬೊಂಬಾಯಿ, ಮದ್ರಾಸು ಮತ್ತು ಕರಾಚಿ

**‘ಓವಲ್‌ಟಿನ್’**

**‘ಓವಲ್ಟಿನ್’ ಬಿಸ್ಕತುಗಳು:**

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕತುಗಳು. ಇವುಗಳಲ್ಲಿ ವೈಶಿಷ್ಟ್ಯ ಬೆಲೆಯ ‘ಓವಲ್ಟಿನ್’ ಸೇರಿರುವುದು. 4 ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

15-3-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೫-೩-೧೯೪೦

## ಪ್ರಪಂಚದ ದಾಸ್ಯವಿಮೋಚನೆಗಾಗಿ ಕಾಂಗ್ರೆಸು ಹೋರಾಡುತ್ತಿದೆ!

### -ಫ್ರೆಂಚ್ ಸಮತಾವಾದಿಗಳ ಹೇಳಿಕೆ-

### ತೆಗೆದ ಹೆಜ್ಜೆಯನ್ನು ಮುಂದಿಡಬೇಕು

### ರಾಮಗರದಲ್ಲಿ ಬ್ರಿಟನಿಗೆ ಉತ್ತರ

'ಭಾರತವು ಗರ್ಜಿಸುತ್ತಿದೆ, ಮತ್ತೆ ಅದರ ಗರ್ಜನೆಯು ಸರ್ವತ್ರ ಕೇಳಿಬಾರದಂತೆ ವಾರ್ತೆಯನ್ನು ಕತ್ತರಿಸುವವರು ಶತ ಪ್ರಯತ್ನ ಮಾಡಿದರೂ, ಅದು ಹತ್ತೂ ದಿಕ್ಕುಗಳಿಂದ ಪ್ರತಿಧ್ವನಿಸುತ್ತಲಿದೆ! ಭಾರತವು ಗೌರವದಿಂದ ಮಾತನಾಡಿ ಗೌರವವನ್ನು ಕಾದುಕೊಂಡಿದೆ ತನ್ನ ಗೌರವವನ್ನು ಮಾತ್ರವಲ್ಲ; ನಮ್ಮೆಲ್ಲರ ಗೌರವವನ್ನು ಕಾಪಾಡಿದೆ' ಎಂದು ಫ್ರಾನ್ಸ ದೇಶದ ಸಮಾಜವಾದಿಗಳು ತಮ್ಮ ಒಂದು ಹೇಳಿಕೆಯನ್ನು ಕೊಟ್ಟಿರುವರು ಇವರು ಮುಂದೆ ಹೇಳುತ್ತಾ- 'ಕಾಂಗ್ರೆಸು ಭಾರತದ ಮುಖವಾಗಿರುವುದು ಈ ಸಂಸ್ಥೆಯು ಕಳೆದ ಸಪ್ಟಂಬರ ೧೫ನೇ ದಿನ ಮಾಡಿದ ನಿರ್ಧಾರವು ಅಮೂಲ್ಯವಾಗಿರುವುದು ಅಮೂಲ್ಯ ನಿರ್ಧಾರ ಮಾಡಿದ ದೆಸೆಯಿಂದ ಆ ಸಪ್ಟಂಬರ ೧೫ನೆ ತಾರೀಕು ಪ್ರಪಂಚದ ಇತಿಹಾಸದಲ್ಲಿ ಮಹತ್ವದ ದಿನವಾಗಿ ಪರಿಣಮಿಸುವದು' ಎಂದಿರುವರು.

#### ಜಗತ್ತಿನ ನ್ಯಾಯವಾದಿಗಳ ಪರವಾಗಿ

ಪ್ರಪಂಚದಲ್ಲಿ ನ್ಯಾಯ ಸ್ಥಾಪನೆಯಾಗಬೇಕು. ಭಾರತೀಯ ರಾಷ್ಟ್ರಸಭೆಯು ತನ್ನ ಅನುಯಾಯಿಗಳ ಅಥವಾ ಭಾರತದ ೩೫ ಕೋಟಿಯ ಪರಾಧೀನ ಪ್ರಜೆಗಳ ಪರವಾಗಿ ಮಾತ್ರವಲ್ಲ. ಬ್ರಿಟಿಷ್, ಫ್ರೆಂಚ್, ಡಚ್ ಮತ್ತು ಇನ್ನಿತರ ಸಾಮ್ರಾಜ್ಯಗಳ ಅಧೀನರಾಗಿರುವ ೬೦೦ ಚಿಲ್ಲರೆ ಇತರ ಪರತಂತ್ರ ಗುಲಾಮರ ಪರವಾಗಿಯೂ ಮಾತನಾಡಿ, ಪ್ರಪಂಚದಲ್ಲಿ ನ್ಯಾಯ ಸ್ಥಾಪನೆಯಾಗಬೇಕೆಂದು ಹೇಳಿದೆ. ಕಾಂಗ್ರೆಸು ಭಾರತದ ಹೆಸರಿನಲ್ಲಿ ಮಾತ್ರವಲ್ಲ, ಮಾನವಕೆಯ ಹೆಸರಿನಲ್ಲಿ ಮಾನವತೆಯ ಪರವಾಗಿಯೂ ಮಾತನಾಡಿದೆ. ಆದ್ದರಿಂದಲೇ ಯುದ್ಧ ಸಂಬಂಧವಾಗಿ ಕಾಂಗ್ರೆಸು ಮಾಡಿದ ನಿರ್ಧಾರವು ಅಮೋಘವೂ ಅಮೂಲ್ಯವೂ ಆಗಿರುವದು.

#### ಬ್ರಿಟಿಷರಿಗಿರುವ ಒಂದೇ ಉಪಾಯ

ಕಾಂಗ್ರೆಸು ಸ್ಪಷ್ಟವಾಗಿಯೂ, ಎಲ್ಲರಿಗೆ ಅರ್ಥವಾಗುವಂತೆ ಹೇಳಿದುದರಿಂದ, ಬ್ರಿಟಿಷರು ಈ ವಿಷಯವನ್ನು ಅಪ್ರಾಮುಖ್ಯಕವಾದ ಮಾತಲ್ಲವೆಂದು ಬದಿಗೊತ್ತುವಹಾಗಿಲ್ಲ. ಮಿತ್ರ ರಾಷ್ಟ್ರಗಳು ಪ್ರಪಂಚದಲ್ಲಿ ಪ್ರಜಾತಂತ್ರದ ಸ್ಥಾಪನೆ ಮತ್ತು ಅದರ ರಕ್ಷಣೆಗೆ ಹೋರಾಡುತ್ತಿರುವರೆಂಬುದು ನಿಜವಾದರೆ ಬ್ರಿಟಿಷರು ಭಾರತವನ್ನು ಸ್ವತಂತ್ರ ಮಾಡಿ ಪ್ರಪಂಚಕ್ಕೆ ತಮ್ಮ ಯಥಾರ್ಥ ಬುದ್ಧಿಯ ಪರಿಚಯ ಮಾಡಿಕೊಡಬೇಕು. ಅಲ್ಲವಾದ ಪಕ್ಷದಲ್ಲಿ ಬಾಯಿಯಿಂದ ಅವರು ಎಂತೆಂತಹ ಮಾತುಗಳನ್ನೇ ಆಡಿದರೂ ಮಿತ್ರ ರಾಷ್ಟ್ರಗಳು ಈ ಯುದ್ಧವನ್ನು ಆರಂಭಿಸಿರುವದು ಪ್ರಜಾತಂತ್ರದ ರಕ್ಷಣೆಗೆ ಅಲ್ಲ, ಕೇವಲ ತಮ್ಮ ಸಾಮ್ರಾಜ್ಯಸ್ವಾರ್ಥವನ್ನು ಕಾಪಾಡಲಿಕ್ಕಾಗಿಯೇ ಎಂದು ಪ್ರಪಂಚವು ತಿಳಿಯಬೇಕಾಗುತ್ತದೆ

#### ಮಾತಿಗಿಂತ ಕೃತಿಗೆ ಬೆಲೆ

'ಕಾಂಗ್ರೆಸು ಈಗ ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಿರುವುದಿಲ್ಲ ಅದರಿಂದ ಕಾಂಗ್ರೆಸು ತನ್ನ ಎಲ್ಲಾ ಉಪಾಯಗಳಿಂದ ನಿರಾಶವಾಗಿದೆ ಎಂದು ತಿಳಿಯಬಾರದು ಕಾರ್ಯವನ್ನು ಸಾಧಿಸಲಿಕ್ಕೆ ಸಂಗ್ರಾಮ ಮಾತ್ರವಲ್ಲದೆ ಇನ್ನೂ ಅನೇಕ ಮಾರ್ಗಗಳಿವೆ ಈಗ ಕಾಂಗ್ರೆಸು ಸಂಗ್ರಾಮವನ್ನು ಹೂಡದಿರುವದಾದರೆ, ಸಂಗ್ರಾಮಕ್ಕೆ ಸಮಯವು ಅನುಕೂಲವಾಗಿಲ್ಲ ಎಂಬುದೇ ಅದರ ಅರ್ಥವಾಗಿದೆ. ನಾವು ಪರಿಸ್ಥಿತಿಯ ಕಡೆಗೆ ಅಂಧರಾಗಿ, ಕೇವಲ ಭಾವವಶರಾಗಿ ಆಂದೋಲನವನ್ನು ಆರಂಭಿಸುವದಿಲ್ಲ ನಾವು ಗಣಿಯಲ್ಲಿ ಬಿದ್ದು ನಮ್ಮ ಕಾಲು ಮುರಿದುಕೊಳ್ಳಲಿಕ್ಕೆ ಇಚ್ಛಿಸುವದಿಲ್ಲ ಅದರ ಒದಲಿಗೆ ದೂರಕ್ಕೆ ಅಥವಾ ಎತ್ತರಕ್ಕೆ ಹಾರಿ ನಮ್ಮ ಎದುರಾಳಿಗಳನ್ನು ಸೋಲಿಸಿ ಸಫಲರಾಗಲಿಕ್ಕೆ ಇಚ್ಛಿಸುತ್ತೇವೆ ಎಂದು ಪಾಟ್ನಾದಲ್ಲಿ ಕೂಡಿದ ಒಂದು ಸಭೆಯಲ್ಲಿ ಮಾತನಾಡುತ್ತ ಪಂಡಿತ ಜವಾಹರಲಾಲರು ಹೇಳಿದರು ವಿಚಾರಹೀನರಾಗಿ-ಶಕ್ತಿ ಸಾಮರ್ಥ್ಯಗಳನ್ನು ತಿಳಿಯದೆ ದೊಡ್ಡ ದೊಡ್ಡ ಮಾತುಗಳನ್ನು ಆಡುವದರಿಂದ ಏನು ಪ್ರಯೋಜನ? ಬೊಬ್ಬೆಯೆಬ್ಬಿಸಿದಾಗ ಅದನ್ನು ಕೇಳಿ ಹೆದರಿ ಕಾಲಿಗೆ ಬೀಳುವವರು ಈಗ ಯಾರೂ ಇಲ್ಲ. ಅಂದ ಉಪಾಯಗಳಿಂದ ಕೆಲಸಗಳನ್ನು ಮಾಡಿಸಿಕೊಳ್ಳುವ ಸಮಯವು ಕಳೆದು ಹೋಯಿತು ಈಗ ನಾವು ಒಂದೊಂದು ಹೆಜ್ಜೆ ಮುಂದು ಮುಂದೆ ಇಟ್ಟು ಕೆಲಸವನ್ನು ಮಾಡಬೇಕಾದ ಸಮಯವು ಬಂದಿದೆ ಎಂದು ಪಂಡಿತರು ಅಂದರು ಅದಕ್ಕೆ ಯೋಗ್ಯತೆ ಬೇಕು ಸಿದ್ಧತೆ ಬೇಕು. ಆದ್ದರಿಂದಲೇ ಕಾಂಗ್ರೆಸು ಈಗಾಗಲೇ ಆಂದೋಲನವನ್ನು ಆರಂಭಿಸುವ ಅವಸರವನ್ನು ತೋರಿಸುವದಿಲ್ಲ ಎಂದರು.

### ಬ್ರಿಟಿಷರಿಗೆ ರಾಮಗರದಲ್ಲಿ ಉತ್ತರ ಕೊಡುವೆವು

ಶ್ರೀ ಜಯಪ್ರಕಾಶ ನಾರಾಯಣರ ದಸ್ತಗಿರಿಯ ಸಂಬಂಧ ಪಂಡಿತ ನೆಹರುಗಳು ಈ ಕೆಳಗಿನ ಹೇಳಿಕೆ ಹೊರಡಿಸಿದ್ದಾರೆ:—

"ಕಾಂಗ್ರೆಸ್ಸು ಮಂತ್ರಿಗಳು ರಾಜಿನಾಮೆ ಕೊಟ್ಟ ನಂತರ ಹಲವು ಪ್ರಾಂತ್ಯಗಳ ಸರಕಾರಗಳು ಕಾಂಗ್ರೆಸ್ಸು ಕೆಲಸಗಾರರನ್ನು ದಸ್ತಗಿರಿಮಾಡುತ್ತಾ ಬರುತ್ತಿದ್ದಾರೆ ಅವರ ಭಾಷಣ ಮತ್ತು ಇತರ ಚಟುವಟಿಕೆಗಳೇ ಇದಕ್ಕೆ ಕಾರಣವೆನ್ನುತ್ತಾರೆ ಸರಕಾರದ ಈ ಕೃತ್ಯಗಳಿಂದ ಹಲವು ಬಾರಿ ಕಾಂಗ್ರೆಸ್ಸಿನ ಯುದ್ಧ ಧೋರಣೆಯನ್ನು ಪ್ರಚಾರ ಮಾಡಿದಂತಾಗುತ್ತದೆ ಯುದ್ಧ ಪ್ರಾರಂಭವಾದ ನಂತರ ಬಂಗಾಳ ಮತ್ತು ಪಂಜಾಬಗಳಲ್ಲಿ ದಸ್ತಗಿರಿಗಳು ಹೆಚ್ಚಾಗಿವೆ ಸರಕಾರದ ಈ ಧೋರಣೆಯನ್ನು ನಾವು ಹೆಚ್ಚಾಗಿ ಖಂಡಿಸಿರುವುದಿಲ್ಲ, ಯಾಕೆಂದರೆ ಜೋರಾಗಿ ಕೂಗುವುದು ಕಾಂಗ್ರೆಸ್ಸಿನ ಅಭ್ಯಾಸವಲ್ಲ ನಮ್ಮ ಕರ್ತವ್ಯವನ್ನು ಮಾಡಬೇಕಾದ ಸಮಯದ ತನಕ ಸುಮ್ಮನಿರುವ ಎಂದು ನಾವು ಈ ತನಕವೂ ಮೌನರಾಗಿದ್ದೇವೆ.

"ಈಗ ಶ್ರೀ. ಜಯಪ್ರಕಾಶ ನಾರಾಯಣರವರ ದಸ್ತಗಿರಿಯ ವಿಷಯ ವರ್ತಮಾನ ಬಂದಿದೆ ಇದು ಮಹತ್ವದ ವರ್ತಮಾನವಾಗಿದೆ ಶ್ರೀ ನಾರಾಯಣರು ಕಾಂಗ್ರೆಸ್ಸಿನಲ್ಲಿ ಬಹು ಕೀರ್ತಿ ಹೊಂದಿದ ಕೆಲಸಗಾರರಿದ್ದಾರೆ. ಬ್ರಿಟಿಷ್ ಸರಕಾರವು ನಮ್ಮ ಮೇಲೆ ಯುದ್ಧ ಹೂಡಲು ನಿರ್ಧಾರಮಾಡಿದ್ದಾರೆಂದು ಇದರಿಂದ ಸ್ಪಷ್ಟವಾಗಿದೆ. ಈ ದಸ್ತಗಿರಿಯ ವಿಷಯದಲ್ಲಿ ನಾವು ನಿಷೇಧ ಸೂಚಿಸುವುದಿಲ್ಲ. ಆದರೆ ಅವುಗಳ ಮಹತ್ವವೇನೆಂದು ನಮಗೆ ಗೊತ್ತಿದೆ. ಕಾಂಗ್ರೆಸ್ಸು ಸಭೆಯು ನಡೆಯುವ ಬೀಹಾರ್ ಪ್ರಾಂತ್ಯದಲ್ಲಿಯೇ ಈ ದಸ್ತಗಿರಿ ಆದದ್ದು, ಅದೂ ಒಂದು ಮಹತ್ವದ ವಿಷಯವಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಯೋಗ್ಯ ಉತ್ತರ ಕೊಡುವುದು ಕಾಂಗ್ರೆಸ್ಸು ಸಭೆಯಲ್ಲದೆ ಬೇರೆಯಿಲ್ಲ"

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ ಬೆಲೆ ರೂ. 1 ಮಾತ್ರ

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ. ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು: **ಯು. ಪಾಂಡುರಂಗ ನಾಯಕ್,** ರಥಬೀದಿ ಮಂಗಳೂರು

ಸೋಲ್ ಏಜೆಂಟ್ಸ್, **ಪ್ರೇಮ ಮೆಡಿಕಲ್ ಹಾಲ್,** ಗುತ್ತಿಗಾರ್ ದ. ಕ.

ಸ್ವದೇಶಾಭಿಮಾನಿ

ತಾರೀಕು 15—3—1940

## ರಶ್ಯ-ಫಿನ್‌ಲೇಂಡುಗಳೊಳಗೆ ಶಾಂತಿ ಯತ್ನ!

ಸ್ವೀಡನ್ ಸರಕಾರದ ಮಧ್ಯವರ್ತಿತ್ವದಿಂದ ರಶ್ಯಾ ಮತ್ತು ಫಿನ್ಲೆಂಡು ಈ ಉಭಯ ರಾಷ್ಟ್ರಗಳು, ಅನ್ಯೋನ್ಯ ವಿಚಾರ ವಿನಿಮಯ ಮಾಡಿಕೊಂಡು ರಾಜಿಮಾಡಿಕೊಳ್ಳುವ ಯೋಚನೆಯಲ್ಲಿರುವವೆಂಬ ನಿರ್ಧಾರದ ವಾರ್ತೆಯೊಂದು ಬಂದಿದೆ. ಈ ಬಗ್ಗೆ, ಎರಡು ಕಡೆಯ ಪ್ರತಿನಿಧಿಗಳೂ ಮಾತುಕತೆ ನಡೆಸುತ್ತಿರುವರೆಂದೂ ತಿಳಿದಿದೆ. ಫಿನ್ಲೆಂಡು ಸರಕಾರದ ಪರವಾಗಿ, ಎಂ. ರಿಟಿ, ಎಂ. ಪಾಸಿಕಿವಿ. ಜನರಲ್ ವಾಲ್ಡೆನ್ ಮತ್ತು ಡಬ್ಲ್ಯುಟಿ ವಿವಿಪೋನ್ಸ್ಕಾ ಇವರು ಮೋಸ್ಕೋಗೆ ಆಮಂತ್ರಿತರಾಗಿ ಅಲ್ಲಿ ರಶ್ಯನ್ ಸರಕಾರದ ಪ್ರತಿನಿಧಿಯೊಡನೆ ಸಂಭಾಷಣೆ ನಡೆಸಿದರು. ಅದರ ಫಲಿತಾಂಶವೇನೆಂಬುದು ಇದುವರೆಗೆ ಪ್ರಕಟವಾಗಲಿಲ್ಲವಾದರೂ ಭೀಕರ ಯುದ್ಧವು ನಿಲ್ಲಿಸಿ ಶಾಂತಿಸಂಧಾನಗಳಿಗೆ ಯತ್ನ ಮಾಡುತ್ತಿರುವ ಎರಡು ರಾಷ್ಟ್ರಗಳ ವಿಚಾರ ಪೂರ್ಣ ನಿರ್ಧಾರವನ್ನು ಜಗತ್ತೇ ಇಂದು ಪ್ರಶಂಸಿಸದಿರದು.

ಇನ್ನು ಮುಂದಿನ ಪ್ರಶ್ನೆಯೆಂದರೆ ಯಾವ ರೀತಿಯ ಸಂಧಾನವು ನಡೆಯುವುದೆಂಬುದು. ರಶ್ಯವು ಪ್ರಬಲರಾಷ್ಟ್ರವು, ಫಿನ್ಲೆಂಡು ಸಹಜವಾಗಿ ಅಬಲವಾಗಿದೆ, ಆದರೂ ನಾಡಿನ ಸ್ವಾತಂತ್ರ್ಯದ ಸಲುವಾಗಿ, ಅಗಣಿತ ಸಂಕಷ್ಟಗಳನ್ನು ಸಹಿಸಿ ಬಹು ದೀರ್ಘಕಾಲ ಅದು ಹೋರಾಡಿದೆ. ಎನಿತು ಹೋರಾಡಿದರೂ ರಶ್ಯದ ಮುದ್ದಾನೆಯು ಕಾಲತುಳಿತದಿಂದ ಇಂದು ವಿಪುರಿಯಂತಹ ಫಿನ್ಲೆಂಡಿನ ಪ್ರಧಾನ ನಗರವೇ ರಶ್ಯದ ವಶವಾಗಿದೆ. ರಶ್ಯನರು ಮುಂದೊತ್ತುತ್ತಲೇ ಇದ್ದಾರೆ. ಹೀಗಿರುವ ಸಂದರ್ಭದಲ್ಲಿ ಫಿನ್ಲೆಂಡು ಇದು ವರೆಗೆ ಯಾವ ಸ್ವಾತಂತ್ರ್ಯದ ಸಲುವಾಗಿ ಕಾದಾಡಿತೋ, ಅದನ್ನು ಉಳಿಸುವ ರೀತಿಯ ಗೌರವಯುತ ಒಪ್ಪಂದಕ್ಕೆ ರಶ್ಯವು ಒಡಂಬಡುವುದು ಸಾಧ್ಯವೇ ಎಂದು ವಿಚಾರಿಸತಕ್ಕದ್ದು ಅವಶ್ಯವಾಗಿದೆ. ರಶ್ಯದ ಹಿಂದಿನ ಧೋರಣೆಗಳನ್ನು ವಿಚಾರಿಸಿದರೆ, ಫಿನ್‌ಲೆಂಡಿನ ಮೇಲೆ ಆಕ್ರಮಣಮಾಡಿ ನುಂಗಿ ನೀರು ಕುಡಿಯದೆ ಸ್ಟಾಲಿನನಿಗೆ ತೃಪ್ತಿಯಿಲ್ಲವೆಂದೇ ಕಂಡುಬರುತ್ತದೆ. ಫಿನ್‌ಲೆಂಡಿನ ಸ್ವಾತಂತ್ರ್ಯ ಗೌರವಕ್ಕೆ ಕುಂದು ತರುವಂತಹ ಶರತ್ತುಗಳಿಂದ ಫಿನ್‌ಲೆಂಡು ಕೂಡಾ ರಾಜಿಗೆ ಒಪ್ಪದೆ ಕಡೆತನಕ ಕಾದಾಡುವುದೆಂದೇ ತಿಳಿಸಿದೆ. ಯೂರೋಪಿನ ರಾಜನೀತಿಯು ಸಮಸ್ಯಾತ್ಮಕವಾಗುತ್ತಿದೆ! ಈಗ ತಿಳಿದುಬರುವ ವಾರ್ತೆಯಂತೆ ರಶ್ಯಾ ಫಿನ್ಲೆಂಡುಗಳೊಳಗೆ ರಾಜಿಯಾಗುವುದು ಸಂಪೂರ್ಣ ಸಾಧ್ಯವೆಂದು ಕೇಳುತ್ತೇವೆ.

## ಭಾರತದ ರಾಜಕೀಯ ಪರಿಸ್ಥಿತಿ

ಯೂರೋಪಿನಲ್ಲಿ ಯುದ್ಧಾಸಕ್ತವಾಗಿರುವ ಬ್ರಿಟನ್ನು, ತಾನು ನ್ಯಾಯಕ್ಕಾಗಿ ಹೋರಾಡುತ್ತಿರುವುದೆಂದು ಪ್ರಬಲವಾದ ಪ್ರಚಾರವನ್ನು ಮಾಡುತ್ತಿದೆ. ಆದರೆ ಅದು ಭಾರತದ ವಿಷಯವಾಗಿ ನ್ಯಾಯ ರೀತಿಯಿಂದ ವರ್ತಿಸಿದರೆ ಬ್ರಿಟನಿನ ನ್ಯಾಯ ಯುದ್ಧಕ್ಕೆ ಪ್ರಚಂಡ ಬೆಂಬಲ ಸಿಗುವುದು' ಹೀಗೆಂದು ಮದ್ರಾಸಿನ ಸಾರ್ವಜನಿಕ ಸಭೆಯೊಂದರಲ್ಲಿ ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣ ಮಾಡುತ್ತಾ ಚಕ್ರವರ್ತಿ ರಾಜಗೋಪಾಲಾಚಾರಿಯವರು ಹೇಳಿದರು. ಗಾಂಧಿಜಿಯವರು ಮತ್ತು ಬ್ರಿಟಿಷ್ ಸರಕಾರಗಳೊಳಗಿರುವ ಸಂಬಂಧಗಳನ್ನು ರಾಜಾಜಿಯವರು ಸ್ಪಷ್ಟವಾಗಿ ಅಲ್ಲಿ ವಿವರಿಸಿ ಹೇಳಿದರು.

'ಗಾಂಧಿಜಿಯವರು ಹಿಂದೆ ಬ್ರಿಟಿಷರ ಸಂಬಂಧವನ್ನು ಮೆಚ್ಚಿದವರು, ಮಾತ್ರವಲ್ಲದೆ ಅವರು ಬ್ರಿಟಿಷ ನ್ಯಾಯದ ಬಗ್ಗೆ ಅಭಿಮಾನವಿದ್ದವರಿದ್ದರು. ಆದುದರಿಂದಲೇ ಹಿಂದೆ ಅವರು 'ಸಾಮ್ರಾಜ್ಯಾಂತರ್ಗತ ಸ್ವರಾಜ್ಯ'ವನ್ನು ಅಪೇಕ್ಷಿಸಿ ಹೇಳಿಕೆ ಕೊಟ್ಟಿದ್ದರು. ಆದರೆ ಇತ್ತೀಚೆಗೆ ವೈಸರಾಯರೊಡನೆ ಮಾಡಿದ ಹಲವು ಭೇಟಿಗಳಿಂದ ಹಿಂದೂ ಮುಸ್ಲಿಂ ಜಗಳವನ್ನು ಕೆದಕಿ ನಮ್ಮನ್ನು ಹಾಳುಮಾಡುವ ಬ್ರಿಟಿಷ್ ರಾಜನೀತಿಜ್ಞರ ಮತಿಮೋಸತನದ ಹೇಳಿಕೆಗಳಿಂದ ಅವರ ಮನಸ್ಸು ಮುರಿದಿದೆ, ಹಾಗಾಗಿ ಸಂಪೂರ್ಣ ಸ್ವಾತಂತ್ರ್ಯಕ್ಕೆ ತಕ್ಕ ಚಳುವಳಿಯ ಸ್ವತಂತ್ರ ರಾಜ್ಯಭರಣವು ನಮಗೆ ಬೇಕಾಗಿಲ್ಲವೆಂದು ಗಾಂಧಿಜಿಯವರು ನಿರ್ಧಾರ ಮಾಡಿದ್ದಾರೆ' ಹೀಗೆಂದು ರಾಜಾಜಿಯವರು ಹೇಳಿ, ಹಿಂದೂ ಮುಸ್ಲಿಂ ಐಕ್ಯದ ಕುರಿತು ಕೆಲವು ಅಮೂಲ್ಯ ಸಲಹೆಗಳನ್ನಿತ್ತರು.

ಈ ಮೇಲಿನ ಹೇಳಿಕೆಯಿಂದ ಪ್ರಕೃತದ ಗಾಂಧೀಜಿಯವರ ಅಭಿಪ್ರಾಯವನ್ನು ತಿಳಿಯಲು ಸುಲಭವಾಗಿದೆ. ಗಾಂಧಿಜಿಯವರ ಮನ ಮುರಿಸಿದ ಬ್ರಿಟಿಷ್ ಸಾಮ್ರಾಜ್ಯ ಶಾಹೀ ನೀತಿಯು ಮುಂದಕ್ಕೆ ಭಾರತದ ವೀರ ಸತ್ಯಾಗ್ರಹಿಗಳಿಂದ, ಮಹಾತ್ಮರ ಮುಂದಾಳುತನದಲ್ಲಿ ಒಳ್ಳೆಯ ಪಾಠವನ್ನು ಕಲಿಯಲಿರುವುದೆಂದು ನಾವು ಸಾರಿ ತಿಳಿಸಬೇಕಾಗಿದೆ.

## ಬೊಂಬಾಯಿಯಲ್ಲಿ ಮುಷ್ಕರ

ಲಕ್ಷಾಂತರ ಮಂದಿ ಕೂಲಿಗಾರರು ಇಂದು ಬೊಂಬಾಯಿಯಲ್ಲಿ ಮುಷ್ಕರ ಹೂಡಿರುವರು. ವಸ್ತ್ರದ ವ್ಯಾಪಾರದ ಗಿರಣಿ ಮಾಲಕರು, ಯುದ್ಧದ ನಿಮಿತ್ತ ಅತ್ಯಂತ ಲಾಭವನ್ನು ಪಡೆದಿರಲು ಈ ಸಂದರ್ಭದಲ್ಲಿ ತಮಗೆ ನೇಕಡಾ ೧೫ರಷ್ಟು ಸಂಬಳ ಹೆಚ್ಚಿಸಬೇಕೆಂದು ಕೆಲಸಗಾರರ ಕೇಳಿಕೆಯಾಗಿತ್ತು. ಅದಕ್ಕೆ ಮಾಲಕರು ಒಪ್ಪಲಿಲ್ಲ., ಅವರು ತಮಗೆ ಬರಿ ನೇಕಡಾ ೫ರಂತೆ ಸಂಬಳ ಹೆಚ್ಚಿಸಲು ಸಾಧ್ಯವಿದೆಯೆಂದರು. ಮಧ್ಯವರ್ತಿಗಳು ನೇಕಡಾ ೧೦ರಂತೆ ಹೆಚ್ಚಿಸಬೇಕಾಗಿ ಮಾಲಿಕರನ್ನು ಒಪ್ಪಿಸಲು ಯತ್ನವಮಾಡಿದರು. ಆದರೆ ಅವುಗಳ ಇತ್ಯರ್ಥವಾಗದ ನಿಮಿತ್ತ ಈಗ ಪ್ರಚಂಡ ಮುಷ್ಕರವು ಕಳೆದ ವಾರದಿಂದ ತೀಕ್ಷ್ಣವಾಗಿ ಮುಂದುವರಿಯುತ್ತಿದೆ.

ಕೆಲಸಗಾರರು ಬಹಳ ಶಿಸ್ತಿನಿಂದ ಮುಷ್ಕರ ನಡೆಸುತ್ತಿದ್ದಾರೆ. ಕೆಲಸಗಾರರ ಹೆಂಗುಸರೂ ಮುಷ್ಕರದಲ್ಲಿ ಭಾಗವಹಿಸಿ ಪಿಕೆಟಿಂಗ್ ಮಾಡುತ್ತಿದ್ದಾರೆ. ಕೂಲಿಗಾರರ ಧುರೀಣರು ಯೋಗ್ಯರೀತಿಯಲ್ಲಿ ಮುಷ್ಕರವನ್ನು ಯಶಸ್ವಿಮಾಡುತ್ತಿದ್ದಾರೆ. ಸಹಾಯ ನಿಧಿಗಳು ಎತ್ತಲ್ಪಟ್ಟಿವೆ. ಕಳೆದ ಮುಷ್ಕರವು ಅನೇಕ ತಿಂಗಳುಗಳ ತನಕ ಸಾಗಿದ್ದು ಮಾಲಿಕರಿಗೂ ಕೆಲಸಗಾರರಿಗೂ ತುಂಬಾ ಕಷ್ಟನಷ್ಟಗಳು ಸಂಭವಿಸಿದ್ದುವು. ಈ ಸಲದ ಮುಷ್ಕರವೂ ಹಾಗೆಯೇ ಪರಿಣಮಿಸುವುದಾದರೆ ನಿಜವಾಗಿಯೂ ಅದು ದೌರ್ಭಾಗ್ಯವೆನಬೇಕು. ಈಗ ಗವರ್ನರರು ಇತ್ಯರ್ಥ ಮಾಡಲು ಮನಸ್ಸು ಮಾಡಿರುವರೆಂದು ತಿಳಿದುಬರುತ್ತದೆ. ಅವರ ಯತ್ನಗಳು ಜಯಶೀಲವಾಗಲೆಂದು ನಮ್ಮ ಹಾರೈಕೆ.

## ಕರ್ಣ್ಣಾರೆಯಾದ ಕಾಜಲಗಿ ಶ್ರೀನಿವಾಸರಾಯರು

ಕಳೆದ ಕಾಲ ಎರಡರ ದ ಅಖಿಲ ಕರ್ನಾಟಕದ ಮಾತ್ರವಲ್ಲದೆ ಕನ್ನಡಿಗರಿದ್ದ ಇತರ ಪ್ರಾಂತಗಳಲ್ಲಿಯ ಜನ ಕೂಡ ದಿವಂಗತ ದೇಶಭಕ್ತರಾಗಿದ್ದ ಕಾಜಲಗಿ ಶ್ರೀನಿವಾಸರಾಯರ ದಿನಾಚರಣೆಯನ್ನು ಕನ್ನಡಿಗರು ಆಚರಿಸಿ ತಮ್ಮ ಶ್ರದ್ಧಾಂಜಲಿಯನ್ನು ಸೂಚಿಸಿ ಅವರು ಕನ್ನಡನಾಡಿಗೆ ಭಾರತಭೂಮಿಗೆ ಸಲ್ಲಿಸಿದ ಅಪಾರ ಸೇವೆಗೆ ಮಹತ್ವವಾದ ಮನ್ನಣೆಯನ್ನು ತೋರಿಸಿದರು. ಹಿಂದಿನ ಹೋರಾಟದ ಕಾಲದಿಂದ ಆರಂಭಿಸಿ ತಿಲಕರ ಕಾಲದಲ್ಲಿಯೂ ಆ ಮೇಲೆ ಗಾಂಧಿಜಿಯವರ ಅಸಹಕಾರ ಸತ್ಯಾಗ್ರಹಗಳ ಆಂದೋಲನಗಳ ಸಂದರ್ಭಗಳಲ್ಲಿಯೂ ಮಾತೃಭೂಮಿಯ ಸಲುವಾಗಿ ಅಪಾರವಾದ ಸ್ವಾರ್ಥತ್ಯಾಗಕಷ್ಟ ವಿಪತ್ತುಗಳನ್ನು ಸಹಿಸಿದ ತನ್ನ ನಲ್ಮೆಯ ಕುವರನೊಬ್ಬನು ಕಣ್ಮರೆಯಾದ ದುಃಖದಿಂದ ಕನ್ನಡ ಮಾತೆಯೇ ಕಂಬನಿ ಸುರಿಸಿ ಮರುಗಿದಳು.

ಸರಳ ನಿರ್ಮಲ ಹೃದಯ ದಾನಶೂರತ್ವ, ಸಾರ್ವಜನಿಕ ಕಾರ್ಯ ಪರಾಯಣತೆ, ಮಾತೃಭೂಮಿಯ ಸೇವಾ ಬುದ್ಧಿ ಇಂತಹ ಹಲವು ಬಗೆಯ ಅವರ ಉತ್ತಮೋತ್ತಮ ಜೀವನ ಆದರ್ಶಗಳು ನಮ್ಮ ನಾಡಿನ ಯುವಕರಿಗೆ ಆದರ್ಶಕರವಾಗಿವೆ. ಅಂತಹವರನ್ನು ಕಳಕೊಂಡು ನಾವು ಮಹತ್ವವಾದ ನಷ್ಟಕ್ಕೆ ಗುರಿಯಾಗಿರುವೆವು. ಆದರೆ, ಅವರು ಹಿಡಿದ ಹಾದಿಯಿಂದ ಮುಂದೆ ಸಾಗಿ ರಾಷ್ಟ್ರದ ಬಂಧವಿಮೋಚನೆಗೆಂದು ಹೋರಾಡಲು ಕನ್ನಡಿಗರು ನಿಶ್ಚಯವಮಾಡುವುದರಿಂದ ಮಾತ್ರ, ನಮ್ಮ ಈ ಶ್ರದ್ಧಾಂಜಲಿಯಿಂದ ಅವರ ಆತ್ಮಕ್ಕೆ ನಿಜವಾದ ಶಾಂತಿ ದೊರಕುವಂತಾಗುವುದು. ಕನ್ನಡಿಗರು ಅಂತಹ ಪವಿತ್ರ ಕಾರ್ಯದಲ್ಲಿ ಹಿಂಜರಿಯಲಾರರೆಂದು ನಾವು ಭರವಸೆಗೊಂಡಿದ್ದೇವೆ.

## ಮಹಾತ್ಮರ ಉಪದೇಶ.

'ಹರಿಜನ'ದಲ್ಲಿ ಮಹಾತ್ಮರು ಒಂದು ಲೇಖನ ಬರೆಯುತ್ತ ಕಾಂಗ್ರೆಸ್ ಮಂದಿ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಆತುರಬುದ್ಧಿಯನ್ನು ತೋರದೆ ತಾಳ್ಮೆವಹಿಸಬೇಕೆಂದೂ, ತನ್ನನ್ನು ಕಾದಾಟಕ್ಕೆ ಕೆಯ್ಯುವ ದಾರಿಗೆ ನೂಕಬಾರದೆಂದೂ ಎಚ್ಚರಿಸಿರುವರು. ಆತ್ಮದಿಂದ ಪ್ರೇರಿಪಿಸಲ್ಪಟ್ಟಾಗ ಮಾತ್ರ ನಾನು ಕಾದಾಡಲು ಬದ್ಧನು, ಆ ಕರೆ ಎಂದು ಬರಬಹುದೆಂದು ನಾನು ತಿಳಿಯಲಾರೆ, ಇದು ಯಾವಕಾಲದಲ್ಲಿಯೂ ಬರಬಹುದು.'' ಎಂದಿರುವರು "ನನ್ನನ್ನು ಕಾಂಗ್ರೆಸ್ ಮರೆಯುವುದು ಒಳ್ಳೆಯದು, ನಾನು ಅದಕ್ಕೆ ತಕ್ಕವನಲ್ಲ, ನಾನು ಯಾವ ಯೋಗ್ಯತೆಗಳಿಂದ, ಪ್ರತ್ಯೇಕ ಗುಣಗಳಿಂದ ಕೂಡಿದ್ದರೂ, ಅವನ್ನು ನಾನು, ಕಾಂಗ್ರೆಸಿನಿಂದ ಬೇರಾದ ಸಂದರ್ಭದಲ್ಲಿ, ಇನ್ನಷ್ಟು ಉತ್ತಮವಾಗಿ ಉಪಯೋಗಿಸಕೊಳ್ಳಬಲ್ಲೆನು' ಎಂದೂ ಉಲ್ಲೇಖಿಸಿರುವರು.

## ಎ ಐ ಸಿ ಸಿ ಪ್ರಕಟಣೆ

ಕಾಂಗ್ರೆಸ ಮಂತ್ರಿಮಂಡಳವು ರಾಜೀನಾಮೆ ಕೊಟ್ಟ ಬಳಿಕ ರಾಜಕೀಯ ಕಾರಣಕ್ಕಾಗಿ ಮತ್ತು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಕ್ಕಾಗಿ ಬಗೆಬಗೆಯ ಕಷ್ಟ ನಷ್ಟಗಳಿಗೊಳಗಾದವರ ಪಟ್ಟಿಯನ್ನು ಸಿದ್ಧಪಡಿಸಬೇಕೆಂದು ಎ ಐ ಸಿ ಸಿ ಜನರಲ್ ಸೆಕ್ರೆಟರಿಗಳು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆ ಪತ್ರ ಕಳಿಸಿರುವರೆಂದು ತಿಳಿಯುತ್ತದೆ.

**NOTICE**
**In the Court of the District Munsif of Karkal**

[illegible] of 1940

Between
K Narayan R[illegible] **Plaintiff**
and
A N Hebbar **Defendant**

I the defendant A N Hebbar Head Master Board Higher Elementar School Padubidri (at present in Board Higher Elementary School Yermal) Udipi Taluk

Take notice that the above-named plaintiff has filed the above suit against you for recovery of the amounts due to him from you, as claimed in the plaint, and the said suit is posted to 9 4 40 for final hearing

You are hereby informed that you may appear either in person or by pleader on the said date at 11 A M in the aforesaid Court and contest the same, failing which the said suit will be heard and determined declaring you exparte.

Karkal, 12-3-'40 } **A. N. S Achar,** Pleader for Plaintiff.

# ಮೆಜಿನೋ ದುರ್ಗದ ಒಳನೋಟ

[ಅಭೇದ್ಯವೂ ದುರ್ಗಮವೂ ಆದ ಫ್ರಾನ್ಸಿನ ಮಹಾದುರ್ಗವಾದ ಮೆಜಿನೋಲೈನಿನ ರಚನೆಯ ವಿವರವು ರೋಮಾಂಚಕವಾದುದು. ಇಂದು ಧೀರ-ವಜ್ರಹೃದಯದ ಹಿಟ್ಲರನನ್ನು ಹಿಡಿದು ನಿಲ್ಲಿಸಿದ, ನಿರಾಶನನ್ನಾಗಿ ಮಾಡಿದ ಆ ದುರ್ಗದ ವಿಷಯ ವಿವರವನ್ನು ತಿಳಿಯಲು ಯಾರು ಕುತೂಹಲಗೊಳ್ಳಲಿಕ್ಕಿಲ್ಲ?

ತಿಂಗಳುಗಳಿಂದೀಚೆಗೆ ಪಶ್ಚಿಮ ರಣರಂಗದಲ್ಲಿ ಜರ್ಮನರ ವಿರುದ್ಧ ಫ್ರಾನ್ಸು ಬ್ರಿಟನುಗಳಿಗೆ ಯುದ್ಧವು ನಡೆಯುತ್ತಿದೆ. ಮೆಜಿನೋ ಎಂಬ ಫ್ರೆಂಚರ ದುರ್ಗದಲ್ಲಿ ಬ್ರಿಟಿಷ್ ಫ್ರಾನ್ಸು ದಂಡುಗಳಿವೆ. ಸಿಜ್‌ಫ್ರೆಡ್ ಎಂಬ ಜರ್ಮನರ ದುರ್ಗದಲ್ಲಿ ಅವರ ಸೈನ್ಯ ಸಂಗ್ರಹಗಳಿವೆ. ಜಗತ್ತಿನ ಅತ್ಯಂತ ಭದ್ರದುರ್ಗವೆಂದೂ, ಕಠಿಣ ಹೃದಯದ ದುರ್ದಾಂತ ಜರ್ಮನಿಗಾದರೂ ಅಗಮ್ಯವಾದ ಅಭೇದ್ಯವಾದ ದುರ್ಗವೆಂದೂ ಸಾರಲ್ಪಟ್ಟಿರುವ ಮೆಜಿನೋದುರ್ಗದ ಗುಟ್ಟು ಏನು? ಫ್ರಾನ್ಸು ತನ್ನ ಕೋಟೆಯ ಕುರಿತು ಹೇಳಿಕೊಳ್ಳುವ ಮಾತಿನಲ್ಲಿ ಸತ್ಯತೆಯುಂಟೆ? ಈ ವಿಷಯವನ್ನು ತಿಳಿಯಲು ಇಂದಿನ ಈ ಯುದ್ಧಯುಗದಲ್ಲಿ ಯಾರು ಸಾಶಂಕರಾಗಿರಲಿಕ್ಕಿಲ್ಲ?

ಈ ಮೆಜಿನೋದುರ್ಗವನ್ನು ಕಟ್ಟಿಸಲು ಫ್ರಾನ್ಸು ಸರಕಾರವು ೬೦,೦೦೦,೦೦೦ ಪವನುಗಳಷ್ಟು ಖರ್ಚುಮಾಡಿ ಹತ್ತು ವರ್ಷಗಳ ತನಕ ಕೆಲಸ ಮಾಡಿಸಬೇಕಾಯಿತು. ಜರ್ಮನಿಯು ದಾಳಿಯಿಡುವ ಬಾಧೆಯ ಭೀತಿಯು ಫ್ರಾನ್ಸಿಗೆ ಮೊದಲೇ ಇದ್ದುದರಿಂದ, ಈ ದುರ್ಗವನ್ನು ಕಟ್ಟಿಸಬೇಕಾಯಿತು. ಇಂದು ರಕ್ಷಣೆಗೆ ಮಾತ್ರವಲ್ಲ, ಕಾದಾಟದ ಆಕ್ರಮಣಕ್ಕೂ ಇದೆ ಉಪಯುಕ್ತವಾಗುವಂತೆ ರಚಿತವಾಗಿದೆ. ಮೇಲೆ ಸಾಂದ್ರವಾಗಿ ಹರಡಿರುವ ಉಕ್ಕಿನ ಬಲೆ; ನೆಲದ ೩೦೦ ಅಡಿ ಕೆಳಗೆ ಇಟ್ಟಿರುವ ಸುಡುವ ಭೀಕರ ಶಸ್ತ್ರಗಳು, ಬೇಕಾದಷ್ಟು ನಿರ್ಮಲ ಗಾಳಿ ಬೆಳಕುಗಳ ಸೌಕರ್ಯ, ವಿದ್ಯುಚ್ಛಕ್ತಿ ಅಸ್ತ್ರ, ಗಿಡ, ಸಸಿ, ಅಡಿಗೆ ಕೋಣೆ ಮೊದಲಾದ ಎಲ್ಲ ಸೌಕರ್ಯಗಳಿಂದ ಕೂಡಿದ್ದು ೩೦೦ ಮೈಲುಗಳ ದೂರದ ರೈಲ್ವೇ ಸಂಚಾರದಿಂದ ಸಂಘಟಿತವಾಗಿದ್ದು ಈ ದುರ್ಗವು ಅದ್ಭುತವಾಗಿ ಅಸದೃಶವಾಗಿ ರಚಿತವಾಗಿದೆ.

## ದಾಳಿಯಿಡಲು ದಾರಿಯಿಲ್ಲ

ಆಕಾಶ, ಜಲ, ನೆಲಮಾರ್ಗಗಳಲ್ಲಿ ಯಾವುದೇ ರೀತಿಯಿಂದಲಾದರೂ ಇದಕ್ಕೆ ದಾಳಿಯಿಡಲು ದಾರಿಯಿಲ್ಲವಾಗಿದೆ. ೧೯೧೪-೧೮ರ ಯುದ್ಧದಿಂದ ಬುದ್ಧಿ ಕಲಿತ ಯೂರೋಪಿನ ರಾಷ್ಟ್ರದವರು ಈ ದುರ್ಗದ ರಚನೆಗೆ ಕೈಹಾಕಿ, ಮುಂದಕ್ಕೆ ಯುದ್ಧದಲ್ಲಿ ಅಂತಹ ಅನಾಹುತವು ಬರದಂತೆ ಸರ್ವಥಾ ನೋಡಿಕೊಳ್ಳಲು ಈರೀತಿಯ ಅಪ್ರತಿಮ ದುರ್ಗವೊಂದನ್ನು ರಚಿಸಿರುವರೆನಬೇಕು.

ಇಲ್ಲಿರುವ ಆಶ್ಚರ್ಯವೆಂದರೆ, ಜಗತ್ತಿನ ಅಂತಹ ಪ್ರಬಲ ದುರ್ಗವಾಗಿರುವ ಇವನ್ನು ಸಾಮಾನ್ಯವಾಗಿಯೂ ದೃಷ್ಟಿಗೆ ಬೀಳದಂತೆ ಕಟ್ಟಿದ್ದಾರೆ. ಫ್ರಾನ್ಸು ಜರ್ಮನ್ನರಿಗೂ ಗಡಿಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಅಲೆದಾಡಿದವರಿಗಾದರೂ ಈ ದುರ್ಗವು ಅದೃಶ್ಯವಾಗಿಯೇ ಇರುವುದಿದೆ. ಯುದ್ಧವು ಆರಂಭವಾಗುವುದಕ್ಕಿಂತ ಮೊದಲು ಈ ದುರ್ಗದ ವಿಷಯವಾಗಿ ಜನರು ಏನೂ ಹೇಳುತ್ತಿರಲಿಲ್ಲ. ಏಕೆಂದರೆ ಅವರ ದೃಷ್ಟಿಗೆ ಅದು ಅಷ್ಟು ತನ್ನಾಗಿ ಬೀಳುತ್ತಿರಲಿಲ್ಲ. ಮೇಲೆ ಬೆಳೆ, ಮರ ಸಸಿಗಳು ಕಾಣುತ್ತಿದ್ದುವಾದರೂ ಅವುಗಳ ಅಡಿಯಲ್ಲಿ ಭೀಕರ ಯಂತ್ರ ಸಾಧನಗಳು ಸುಡುವ ಫಿರಂಗಿಗಳು ಅಡಗಿದ್ದುವೆಂದು ಯಾರೂ ಹಿಂದೆ ಕನಸಾಗಿರಲಿಲ್ಲ. ಅಷ್ಟು ಕುಶಲತೆಯಿಂದ ಅದರರಚನೆಯಾಗಿತ್ತು. ಇದನ್ನು ಕಟ್ಟಲು ೧೫,೦೦೦ ಕೂಲಿಗಾರರು ದಿನನಿತ್ಯ ದುಡಿದರು. ೧೦ ವರ್ಷಗಳ ಕೆಲಸ ಮಾಡಿದರು. ೬೦,೦೦೦ ೦೦೦ ಪವನಗಳು ವ್ಯಯವಾದುವು. ೧೨,೦೦೦ ೦೦೦ ಘನ ಮೀಟರ್ ಭೂಮಿಯು ಅಗೆಯಲ್ಪಟ್ಟಿತು. ೧,೫೦೦,೦೦೦ ಘನ ಮೀಟರ್ ಕೋಂಕ್ರೀಟ್ ಹಾಕಲ್ಪಟ್ಟಿತು. ೫೦,೦೦೦ ಟನ್ ಉಕ್ಕಿನ ತಗಡುಗಳು ಇಡಲ್ಪಟ್ಟವು. ಇಂತಹ ಅದ್ಭುತ ಕಾರ್ಯವು ಅದೃಶ್ಯವಾಗಿಯೇ ಆಯಿತು!

ಹೊರಗಿನ ಗುಂಡುಗಳು ಅದನ್ನು ಭೇದಿಸಲು ಅಸಾಧ್ಯವಷ್ಟೆ? ವಿಮಾನವೂ ಅದರೊಳಗೆ ಹೋಗಲು ಸಾಧ್ಯವಾಗದಂತೆ ಅಲ್ಲಿ ಏರ್ಪಾಡು ಆಗಿದೆ. ಅದರೊಳಗೆ ಒಂದು ದೊಡ್ಡ ಅಣೆಕಟ್ಟು ಇದೆ. ಅದರಲ್ಲಿ ತುಂಬಾ ಫಿರಂಗಿಗಳನ್ನು ನಟ್ಟಿದ್ದಾರೆ. ಫಿರಂಗಿಗಳನ್ನು ಬಿಡುವುದರೊಡನೆ ಅಣೆಕಟ್ಟು ಒಡೆದು, ಆ ನೀರಿನ ಪ್ರವಾಹದಲ್ಲಿ ಶತ್ರು ಸೈನ್ಯವು ಕೊಚ್ಚಿಕೊಂಡು ಹೋಗುವಂತೆ ಆಗುವುದು.

## ಗುಂಡು ಹಾರಿಸುವುದೆಂತು?

ಎಲ್ಲವೂ ಮುಖ್ಯ ದಳಪತಿಯ ಆಜ್ಞೆಯಂತೆ ನಡೆವುದು. ಒಬ್ಬನು ಹೊರಗಿನ ದೃಶ್ಯಗಳನ್ನು ನೋಡುತ್ತಿರುತ್ತಾನೆ. ಆತನು ಶತ್ರುಗಳ ಆಗಮನವನ್ನು ಸೂಚಿಸುವನು. ಸೂಚಿಸುವ ಟೆಲಿಫೋನು ನೆಲದೊಳಲ್ಲಿ ಹೋಗುತ್ತದೆ. ಅದರ ಸೂಚನೆಯಾದೊಡನೆ ಕೋವಿಗಳು ಫಿರಂಗಿಗಳು ಸಿಡಿವವು. ಅದಕ್ಕೆ ಬೇಕಾದ ಜನರ ಲಕ್ಷ್ಯದಂತೆ ಯಂತ್ರದಂತೆ ವರ್ತಿಸುವರು. ಹದಿನೈದು ದಿನಗಳ ಕೆಲಸ ಹದಿನೈದು ದಿನಗಳ ವಿಶ್ರಾಂತಿ ಇದು ಅವರ ದಿನಚರಿಯಾಗಿದೆ. ಅಲ್ಲಲ್ಲಿ ಗುಂಪು ಗುಂಪಾಗಿ ದಳಪತಿಗಳ ಕೈಕೆಳಗೆ ಅವರು ಇಡೀ ವರ್ಷ ಅಲ್ಲಿಯೇ ಇರುತ್ತಾರೆ. ಈಗಲೂ ಅಡರಡಿಯಲ್ಲಿ ದುರ್ಗದ ರಚನೆಯ ಕಾರ್ಯವು ಆಗುತ್ತಾ ಇದೆ.

ಇದರಲ್ಲಿ ಅಪಾಯದ ಭೀತಿ ಕಡಿಮೆ. ಸುಖಸಂತೋಷ ಸೌಕರ್ಯಗಳು ಎಂದೆಂದೂ ಅಧಿಕವಾಗಿದೆ.

## ಹಿಟ್ಲರ್ ಏಕೆ ಭಯಪಡುವನು?

ಹಿಟ್ಲರನು ಇಂದು ಇದಕ್ಕೆ ಭಯಪಡುವ ಕಾರಣವೇನು? ಎಷ್ಟು ಜನರನ್ನು ಮುಂದು ಕಳುಹಿಸಿದರೂ ಅದರ ಆಕ್ರಮಣವು ಅಸಾಧ್ಯವೆಂದೂ ದುರ್ಗವು ಅಭೇದ್ಯವೆಂದೂ ಹಿಟ್ಲರನಿಗೆ ತಿಳಿದಿದೆ. ಇಲ್ಲವಾದರೆ ಆ ಧೀರ ಹೃದಯದ ಹಿಟ್ಲರನು ಮುನ್ನುಗ್ಗದೆ ಬಿಡುತ್ತಿರಲಿಲ್ಲ. ಆದಾಗಿ ಆತನು ಕಾದ ಸಮಯ ನೋಡುತ್ತಿದ್ದಾನೆ? ಆದರೆ ಎಷ್ಟರ ತನಕ ಕಾಯುವುದು, ಯಾಕೆ ಕಾಯುವುದು ಎಂಬುದೇ ಮಹಾಪ್ರಶ್ನೆಯಾಗಿದೆ'

## ನೋಟೀಸು

ಪುತ್ತೂರು ಡಿ ಮು ಕೋರ್ಟಿನಲ್ಲಿ
O S 485/1939 R I A 1545/39&259/40

ಪಿ ಕೃಷ್ಣಭಟ್-ರಾಮಕೃಷ್ಣ ಭಟ್ರ ಮಗ, ಪುತ್ತೂರು ಕಸಬಾ ಗ್ರಾಮ, ಪುತ್ತೂರು ತಾಲೂಕು —ವಾದಿ

ಮತ್ತು

ವೆಂ. ಸ. ದೇವಶಾಸ್ತ್ರಿ ಕೂಡ-ಪ್ರತಿವಾದಿರು

1 ವಾಸುದೇವ ಶಾಸ್ತ್ರಿ-ಸುಬ್ರಾಯ ಶಾಸ್ತ್ರಿಗಳ ಮಗ 2 ವೈನರ ವೆಂಕಟ್ರಮಣ-ವಾಸುದೇವ ಶಾಸ್ತ್ರಿ ಮಗ ಗಾರ್ಡಿಯನ್ 1ನೇ ಪ್ರತಿವಾದಿ ವಾಸುದೇವಶಾಸ್ತ್ರಿ

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ

ತಾ 10-8-1933ರಲ್ಲಿ 1 ಮತ್ತು 2ನೇ ಪ್ರತಿವಾದಿ ತಂದೆ ಈಗ ಮೃತಪಟ್ಟಿರುವ ಸುಬ್ರಾಯ ಶಾಸ್ತ್ರಿ ಮತ್ತು ರಾಮಚಂದ್ರ ಶಾಸ್ತ್ರಿ ಇವರೊಳಗಾದ ಪಾಲುಪಟ್ಟಿ ಪ್ರಕಾರ 1 ಮತ್ತು 2ನೇ ಪ್ರತಿವಾದಿಯಿಂದ ರಾಮಚಂದ್ರ ಶಾಸ್ತ್ರಿಯವರಿಗೆ ವರ್ಷ 1ರ ವಸೂಲಾಗತಕ್ಕ ಅಕ್ಕಿ ಮುಡಿ 15ರ ವಸೂಲಿ ಹಕ್ಕನ್ನು ತಾ 9-12-39ರಲ್ಲಿ ರಿಜಿಸ್ಟ್ರಿ ಸಿಕೊಂಡದ ಮೇರೆಗೆ ಅದರ ವಸೂಲಿಗೆ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ಸದ್ರಿ ವ್ಯಾಜ್ಯವು ತನಿಖೆಗೆ ತಾ 21-3-40ಕ್ಕೆ ಇಟ್ಟಿರುತ್ತದೆ. ಆದುದರಿಂದ ಅದಕ್ಕೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿಗೆ ಬೆಳಿಗ್ಗೆ 10 ಘಂಟೆಗೆ ಸ್ವತಃ ವ ವಕೀಲರ ಮೂಲಕವಾಗಲೀ ದಾಖಲು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲಾಗುವುದು.

By order of the Court

ಪುತ್ತೂರು 6-3-40

C S. Shastri
and
N V Kolathaya
Vakils for Plff

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

A well-rounded programme of
SAVING
DO YOU WANT YOUR MONEY TO GROW?
If so, this should interest you

On the top of all possible ideas of lifting yourselves financially stand the Syndicate's time-tested thrift schemes for guaranteed security.

We have a few select plans which enable any man to fully enjoy the fruit of his labours Study them; join any that suits you and see what great benefit you derive

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.
Head Office:-UDIPI, S. India.

## ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಪ್ರಥಮ ಪರಿಷತ್ತು

ಇದೇ ತಿಂಗಳ ತಾ. ೨೭, ೨೮ಕ್ಕೆ ಮೂಲ್ಕಿಯಲ್ಲಿ ಮಾಜಿ ಮಂತ್ರಿಗಳಾದ ಶ್ರೀ ಮುನಿಸ್ವಾಮಿ ಪಿಳ್ಳೆಯವರ ಅಧ್ಯಕ್ಷತೆಯಿಂದ ಜರಗಲಿರುವ ಈ ಪರಿಷತ್ತಿನ ಯಶಸ್ವಿತೆಗಾಗಿ ಈ ತರದ ಪ್ರಯತ್ನಗಳು ನಡೆದಿವೆ.

ಜಿಲ್ಲಾ ಕಲೆಕ್ಟರರಿಂದ ಕೂಡಿರುವ ಜಿಲ್ಲಾ ಹರಿಜನ ಎಡ್ವೈಜರಿ ಕಮಿಟಿಯವರು ಮೂಲ್ಕಿಯ ಸುತ್ತು ೨೦ ಮೈಲು ದೂರದೊಳಗಿನ ಲೇಬರ್ ಶಾಲೆಗಳನ್ನು ತಾ. ೨೭, ೨೮ಕ್ಕೆ ಮುಲ್ಕಿ ಪರಿಷತ್ತಿಗೆ ಹೋಗಬೇಕಾಗಿ ನಿಶ್ಚಯಿಸಿರುತ್ತಾರೆ. ಶಾಲೆಗಳ ಕಸಬು ಕೈಗಾರಿಕೆಗಳನ್ನು ಪ್ರದರ್ಶನಕ್ಕೆ ಕೊಂಡು ಹೋಗುವಂತೆಯೂ ನಿಶ್ಚಯಿಸಿರುತ್ತಾರೆ

ಕಾಸರಗೋಡಿನಿಂದ ಜಿಲ್ಲಾ ಕಾಂಗ್ರೆಸ್ ಕಮಿಟಿ ಮೆಂಬರರಾದ ಶ್ರೀ. ಬಿ. ದೇವಪ್ಪ ಆಳ್ವ ಮತ್ತು ಜಿಲ್ಲಾ ಬೋರ್ಡು ಮೆಂಬರ ಶ್ರೀ. ಕೆ. ಸುಂದರರವರು ಪ್ರತಿನಿಧಿ ದಳವನ್ನು ಕಾಲುನಡೆಯಿಂದ ತರಲಿರುವರು. ಮಂಗ್ಳೂರು ಡಿ. ಸಿ ಮಿಶನಿನವರು ಮತ್ತು ಗೆಳೆಯರ ಕೂಟದವರು, ಬ್ರಹ್ಮಾವರ, ಉಡುಪಿ ಕಾಪು, ಪ್ರಾಂತದವರು ಅದೇ ರೀತಿ ಕಾಲುನಡೆಯಿಂದ ಬರಲಿರುವರು. ಇನ್ನನೇಕರು ಬರಬಹುದಾಗಿದೆ.

ಜಿಲ್ಲಾ ಹೆಲ್ತ್ ಆಫೀಸರರು ಆ ದಿವಸಗಳಲ್ಲಿ ಆರೋಗ್ಯ ವಿಷಯದ ದೇಖಾವೆಗೆ ಅನುಕೂಲಿಸುವುದಾಗಿ ಬರೆದಿರುತ್ತಾರೆ. ಮಂಗ್ಳೂರು ವಿದ್ಯಾರ್ಥಿ ಸಂಘದ ಸೆಕ್ರೆಟರಿ ಶ್ರೀ ಬಿ. ಯಸ್. ಭಾಸ್ಕರ ರೈಗಳು ಸೇವಕ ದಳ ಸ್ಥಾಪನೆಗಾಗಿ ಬಂದಿರುವರು. ಶ್ರೀ. ಕೆ. ಎಸ್. ಕಾರಂತರವರು ಆ ದಿನಗಳಲ್ಲಿ ವಿನೋದಾವಳಿಗಳಲ್ಲಿ ತಾನು ಒಬ್ಬನಾಗಿ ಸಹಕರಿಸಲು ಸಾಧ್ಯವಾಗುವಂತೆ ಯತ್ನಿಸುವುದಾಗಿ ತಿಳಿಸಿರುವರು. ಮೂಲ್ಕಿ ಸೀಮೆಯ ಸುಮಾರು ೨೦ಕ್ಕೆ ಮೇಲ್ಪಟ್ಟ ಗ್ರಾಮದ ಹರಿಜನರು ತಾ ೪—೩—೪೦ಕ್ಕೆ ಎರಡನೇ ಸಲ ಕೂಡಿ ಸೀಮೆಗೆ ಸೇರಿದ ೩೬ ಗ್ರಾಮಗಳಲ್ಲಿ ಸಾಗ್ವಳಿಗಾರರೊಂದಿಗೆ ಮುಡಿಗೆ ಒಂದು ಸೇರು ಅಕ್ಕಿ ಯಾ ಒಂದುವರೆ ಆಣೆಯಂತೆ ವಂತಿಗೆ ಎತ್ತುವ ಆಲೋಚನೆ ಮಾಡಿರುವರು ಕೆಲವರು ಎತ್ತಿ ವಸೂಲ್ ಮಾಡಿ ತಂದಿರುವರು.

ಪತ್ರಿಕೆಗಳೆಲ್ಲವೂ ನೆರವಾಗಿ ನಮ್ಮ ಪ್ರಕಟಣೆಯನ್ನು ಪ್ರಕಟಿಸಿರುವರು.

ಮೋಟಾರ್ ಕಂಬೈಂಡ್ ಏಜನ್ಸಿಯವರು ಪರಿಷತ್ತಿನ ಪ್ರತಿನಿಧಿ ಸಹಾಯಕರಿಗೆ ಪ್ರಯಾಣ ಕುರಿತಾಗಿ ಬರೆದಕ್ಕಾಗದವನ್ನು ಆಲೋಚಿಸುವುದಾಗಿ ತಿಳಿಸಿರುತ್ತಾರೆ.

ತಾ. ೪—೩—೪೦ರಲ್ಲು ಮೂಲ್ಕಿ ಸೀಮೆಯ ಹರಿಜನರು ಕೂಡಿ ಬಂದು ಈ ರೀತಿ ನಿರ್ಣಯ ಮಾಡಿರುವರು.

೧. ಮೂಲ್ಕಿ ಸೀಮೆಯ ೭, ೮, ದೇವಸ್ಥಾನದವರು ಪರಿಷತಿನ ಸಹಾಯಾರ್ಥವಾಗಿ ತಾ. ೨೬, ೨೭, ೨೮,ರ ಮೂರು ದಿವಸಗಳಲ್ಲಿ ದೇವಸ್ಥಾನದ ಅಸುಪಾಸಿನ ಹರಿಜನರ ೩ ವರ್ಷದೊಳಗಿನ ಮಕ್ಕಳನ್ನು ಸ್ನಾನ ಮಾಡಿಸಿ ಹಾಲು ಮತ್ತು ಗಂಜಿ ಕೊಡುವಂತೆ ಸ್ವಾಗತ ಸಮಿತಿ ಅಧ್ಯಕ್ಷರು ಕೇಳಿಕೊಳ್ಳಬೇಕಾಗಿಯೂ, ಜಿಲ್ಲೆಯ ಇತರ ದೇವಸ್ಥಾನಗಳೂ ಆ ರೀತಿ ಸಹಾಯವೀಯುವಂತೆ ಪತ್ರಿಕೆಯಲ್ಲಿ ಬರೆಕೊಳ್ಳಬೇಕಾಗಿಯೂ ನಿರ್ಣಯಿಸಿರುತ್ತಾರೆ.

೨. ಎಂಜಲೆಲೆ ಮದ್ಯಪಾನ ನಿಷೇಧ ಕಾರ್ಯದಲ್ಲಿ ಮಹಾಜನರು ಸಹಕರಿಸಿ ಹರಿಜನರನ್ನು ಬಿಡಿಸುವಂತೆ ಪತ್ರಿಕೆ ಮೂಲಕ ಮಹಾಜನರನ್ನು ಸ್ವಾಗತ ಸಮಿತಿ ಅಧ್ಯಕ್ಷರು ಕೇಳಿಕೊಳ್ಳಬೇಕಾಗಿ ನಿರ್ಣಯಿಸಿರುವರು.

ಈ ಎರಡು ನಿರ್ಣಯ ಪ್ರಕಾರ ಎಲ್ಲರಿಗೂ ವಿನಂತಿಸಿಕೊಳ್ಳುವೆನು ಸ್ಥಳೀಕ ಕೆಲಸಗಾರರು ಇದಕ್ಕೆ ಸಿಗಾ ಕೊಡಬಹುದಾಗಿದೆ

೩ ಜಿಲ್ಲಾ ಬೋರ್ಡ್ ಶಾಖೆಯವರು ಪರಿಷತ್ತು ಯಶಸ್ವಿಯಾಗಲು ಎಲ್ಲಾ ತರದ ಸಹಾಯವೀಯುವಂತೆ ಜಿಲ್ಲಾ ಬೋರ್ಡು ಪ್ರೆಸಿಡೆಂಟರನ್ನು ಕೇಳಿಕೊಳ್ಳಬೇಕೆಂದು ನಿರ್ಣಯಿಸಿರುವರು

### ಕಾರ್ಯಕ್ರಮ

ತಾ. ೨೭ನೇ ಬೆಳಗಾತ ೮ ಘಂಟೆಗೆ—ಧ್ವಜವಂದನೆ

೯—೧೦ ಊಟ

೧೦—೨ ವಸ್ತು ಶೋಧನೆ ಸ್ನಾನ ಮತ್ತು ಕಾರ್ಯನಿರ್ವಾಹಕ ಸಭೆ.

೩-೪-೩೦—ಅಧ್ಯಕ್ಷರೊಡನೆ ಮೆರವಣಿಗೆ

೪-೩೦ ೬-೩೦ —ಪರಿಷತ್ತು

೬-೩೦ ೮-೩೦ — ಊಟ

೮-೩೦ ೧೨-೩೦—ವಿನೋದ

ತಾ. ೨೮ನೇ ಬೆಳಗಾತ ೮-೯—ಮಕ್ಕಳ ಆಟ ಮತ್ತು ಚಿಕ್ಕ ಭಾಷಣ.

೯—೧೧—ಪರಿಷತ್ತಿನ ಇತರ ವಿಷಯ

೧೧-೧—ಊಟ ಮತ್ತು ಪರಿಷತ್ತಿನ ವಿಸರ್ಜನೆ,

ಮಧ್ಯಾನ ೩—೪— ಹರಿಜನ ಕೆಲಸಗಾರರ ಸಭೆ,

೪—೫ — ಸಾರ್ವಜನಿಕ ಭಾಷಣ,

ತಾ. ೨೬ರ ರಾತ್ರಿ ಊಟದ ವಿಲೆವಾರಿಗೆ ಬರುವವರು ಬರೆಯಬೇಕು. ಮತ್ತು ರಾತ್ರಿ ಆರೋಗ್ಯ ಪ್ರದರ್ಶನ ಮತ್ತು ಇದರ ವಿನೋದಗಳಿಗೆ ಅನುಕೂಲಗೊಳಿಸಬಹುದಾಗಿದೆ.

ವಿಶೇಷ ಸೂಚನೆ— ಸ್ವಾಗತ ಸಮಿತಿ ಮೆಂಬರರು ವ ಇತರರು ತಮ್ಮ ಮೆಂಬರರಿಗೆ ಫೀಸು ಯಾ ವಂತಿಗೆಯನ್ನು ಬೇಗನೆ ತಪ್ಪದೆ ಕಳುಹಿಸಿಕೊಡುವರೆಂದು ನಂಬುವೆವು. ಎಂದು ಸ್ವಾಗತ ಸಮಿತಿಯ ಅಧ್ಯಕ್ಷರಾದ ಮೂಲ್ಕಿಯ ಶ್ರೀ ಎಂ. ಆರ್. ಪೂಂಜರು ತಿಳಿಸುತ್ತಾರೆ.

HALFTONE & LINE
BLOCK MAKING
UNDERTAKEN
Sharada Press,
MANGALORE

ಎಲ್ಲಾ ಗಾಯಗಳಿಗೂ ಉತ್ತಮವಾದ ಚಿಕಿತ್ಸೆಯಾಗಿರುತ್ತದೆ
ಜ್ಯಾಂಬಕು ಗಾಯಗಳನ್ನೂ ಕಡಿತಗಳನ್ನೂ ಕೂಡಲೇ ಗುಣಪಡಿಸುತ್ತದೆ!



ದೇಹದ ಗಾಯವಾದ ಭಾಗಕ್ಕೆ ಜ್ಯಾಂಬಕನ್ನು ಗುಣಪಡಿಸಿದ ಕೂಡಲೇ, ಅದು ಗುಣವಾಗಲು ಪ್ರಾರಂಭಿಸುತ್ತದೆ. ಇದಕ್ಕೆ ಜ್ಯಾಂಬಕಿನಲ್ಲಿರುವ ಅಮೂಲ್ಯವಾದ ಗಿಡಮೂಲಿಕೆಗಳ ಎಣ್ಣೆಯೇ ಕಾರಣವಾಗಿರುತ್ತದೆ ನರನಾಡಿಗಳನ್ನು ಪ್ರವೇಶಿಸಿ ನೋವನ್ನೂ ಬಾತುವಿಕೆಯನ್ನು ಕಡಿಮೆ ಮಾಡುತ್ತದೆ. ಜ್ಯಾಂಬಕಿನ ವಿಷಹಾರಿ ಗುಣದಿಂದಾಗಿ ಎಲ್ಲಾ ವಿಷಕ್ರಿಮಿಗಳು ಸಾಯುತ್ತವೆ. ಆದುದರಿಂದ ಎಲ್ಲಾ ಕಡಿತಗಳಿಗೂ ಗಾಯಗಳಿಗೂ ಜ್ಯಾಂಬಕನ್ನೇ ಉಪಯೋಗಿಸಿರಿ. ಎಲ್ಲಾ ಔಷಧಿ ವ್ಯಾಪಾರಿಗಳು ರೂ. 1 ಮತ್ತು 2-4-0ರಂತೆ ಮಾರುತ್ತಾರೆ.

ಏಜಂಟ್ಸ್
ಮೆಸರ್ಸ್ ದಾಥಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು
ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ.
ZAM-BUK
ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ.
ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

ಸಾವಕಾರ ಶ್ರೀನಿವಾಸರಂಗಪ್ಪೈ
[ ಸ್ಥಾಪನೆ: ಕ್ರಿ ಶ. 1858 ]
ಉಜ್ವಲ ಕಾಂತಿಯ
ವಜ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

ಈ ವಾರದ ಕತೆ:

# ಹೊಲೆಯ ಹುಡುಗಿ!

ಕನ್ನಡಿಸಿದವರು ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ

ಅವಳ ಸುಂದರ ಸುಕುಮಾರ ಶರೀರದಿಂದ ಯೌವನವು ಉಕ್ಕಿ ಹರಿಯುತಿತ್ತು. ಕೈಯಲ್ಲಿ ಮಣ್ಣಿನ ಕೊಡವನ್ನು ತೆಗೆದುಕೊಂಡು ಅವಳು ನೀರು ತರಲಿಕ್ಕೆ ಹೊರಟಿದ್ದಳು. ಅವಳು ಇಡುತ್ತಿರುವ ಒಂದೊಂದು ಹೆಜ್ಜೆಯಿಂದ ಮದೋನ್ಮತ್ತ ಹೆಣ್ಣಾನೆಯು ಮಂದಗಮನೆಯಾಗಿ ಹೋಗುತ್ತಿರುವಂತ ಭಾಸವಾಗುತಿತ್ತು. ನಿರ್ಜನವಾದ ಆ ಕಾಡು ದಾರಿಯಲ್ಲಿ ಅವಳಲ್ಲದೆ ಮತ್ತಾರೂ ಇದ್ದಂತೆ ಕಾಣುತ್ತಿರಲಿಲ್ಲ. ರಮಣೀಯವಾದ ಆ ಸಾಯಂಕಾಲ ಸಮಯದಲ್ಲಿ ಮನೋಹರವಾದ ನಡಿಗೆಯಿಂದ ಬರುತ್ತಿರುವ ಆ ಕನ್ಯಾರತ್ನವನ್ನು ಸುಸ್ವಾಗತಿಸುತ್ತಿರುವವೋ ಎಂಬ ಹಾಗೆ, ಕೋಗಿಲೆಗಳು ಮಾತ್ರ ಮಧುರ ಕಂಠಸ್ವರದಿಂದ ಕುಹೂ ಕುಹೂ ಎಂದು ಹಾಡುತಿದ್ದವು.

ಸುಮಾರು ಒಂದು ಮೈಲು ದೂರ ನಡೆದಾದ ಬಳಿಕ ಅವಳು ಹರಿಯುವ ಪ್ರವಾಹದ ದಡೆಯನ್ನು ಮುಟ್ಟಿದಳು. ನಡೆದು ಬಂದ ದಣಿವನ್ನು ಆರಿಸುತ್ತಿರುವಂತೆ, ಕೈಯಲ್ಲಿದ್ದ ಗಡಿಗೆಯನ್ನು ಅಲ್ಲೇ ಕಾಲಬುಡದಲ್ಲಿಟ್ಟು ಅವಳೊಂದು ನಿಟ್ಟುಸಿರನ್ನು ಬಿಟ್ಟಳು. ವಸಂತಋತುವು ಆ ಸಮಯ ತನ್ನ ಪೂರ್ಣ ಕೈ[illegible]ವನ್ನು ತೋರಿಸಿದ್ದಿತು. ಅವಳ ಕೇಶವನ್ನು ಸೇರಿಸಿ [illegible] ತಲೆ [illegible] ಟ್ಟುಕೊಂಡು ಬರ [illegible] ಅಮೃತ ಕಲಶವನ್ನು [illegible] ವಳೋ ಎಂಬ ಹಾಗೆ ಕಂಡಿತು.

ಆ ಗಜಗಮನೆಯು ಪುನ ತನ್ನ ಗ[illegible] ಸಲ ಸಮೀಪವಳಾದಾಗ ತಿಲಕಧಾರಿ ಪುರಾಣಿಕರು ಅದೇ ಮಾರ್ಗವಾಗಿ ಅವಳ ಎದುರ್ಗಿನಿಂದ ಬರುತಿದ್ದರು. ಅವಳ ದೂರದಲ್ಲೇ ನಿಂತು ಆಗಂತುಕರಿಗೆ ನಮಸ್ಕಾರ ಮಾಡಿದಳು. ಪುರಾಣಿಕರು ಅಲ್ಲಿ ಎದುರಿಗೆ ನಿಂತ ಲಾವಣ್ಯಮೂರ್ತಿಯನ್ನು ನೋಡಿ ಸ್ತಂಭೀಭೂತರಾದರು. ಅವಳು ಸ್ವರ್ಗಲೋಕದಿಂದ ಬಂದ ಅಪ್ಸರ ಕನ್ನಿಯೋ ಎಂಬ ಸಂದೇಹವು ಅವರನ್ನು ಮೂಕರಾಗಿ ಮಾಡಿತು.

ಪುರಾಣಿಕರು ಆ ಹಳ್ಳಿಗೆ ಅದು ಮೊದಲನೆ ಬಾರಿಗೆ ಬಂದಂತೆ ಇದ್ದರು. ಸ್ವಲ್ಪ ಸಮಯದ ನಂತರ ಅವರು 'ದೇವಿ! ಇದು ಯಾವ ಊರು. ಇಲ್ಲಿ ಯಾರು ಇರುತ್ತಾರೆ?' ಎಂದು ಕೇಳಿದರು.

ಅವಳು ನತಮಸ್ತಕಳಾಗಿ ಭೂಮಿಯನ್ನೇ ನೋಡುತ್ತ—'ಸ್ವಾಮಿ, ಇದು ಹೊಲೆಯರ ಕೇರಿ, ಹೊಲೆಯರೇ ಇದರಲ್ಲಿ ಇರುತ್ತಾರೆ' ಎಂದಳು.

'ನೀನು ಯಾರು?' ಎಂದು ಪುರಾಣಿಕರು ಪುನಃ ಕುತೂಹಲದಿಂದ ಕೇಳಿದರು.

'ಸ್ವಾಮಿ, ನಾನು ಹೊಲೆಯ ಹುಡುಗಿ' ಎಂದು ಹೇಳಿ ಅವಳು ಒಮ್ಮೆಗೆ ಪುರಾಣಿಕರ ಮೋರೆಯನ್ನು ದಿಟ್ಟಿಸಿದಳು.

ತನ್ನ ಎದುರು ನಿಂತಿರುವವಳು ಯಾರೋ ಬ್ರಾಹ್ಮಣ ಹುಡುಗಿ ಆಗಿರಬಹುದೆಂದು ತರುಣ ಪುರಾಣಿಕರು ಎಣಿಸಿದ್ದರು. ಅವಳು ಹೊಲೆಯ ಹುಡುಗಿಯೊಂದಿಗೆ ಮಾತನಾಡದ ಹಾಗೆ ಪುರಾಣಿಕರ ನಾಲಗೆಯನ್ನು ಹಿಡಿದು ಎಳೆಯುತಿತ್ತು. ಆದರೂ ಅವರು ತಮ್ಮನ್ನು ತಾವು ತಡೆಯಲಾರದೆ—'ಇಲ್ಲಿ ಒಂದು ದಿನ ಉಳಕೊಳ್ಳುವ ವ್ಯವಸ್ಥೆ ಆಗಬಹುದೆ?' ಎಂದು ಕೇಳಿದರು.

'ತಾವು ಹಾಗೆ ಅಪೇಕ್ಷಿಸಿದರೆ ವ್ಯವಸ್ಥೆ ಆಗಬಹುದು' ಎಂದವಳು ಚಾತುರ್ಯದ ಉತ್ತರವನ್ನು ಕೊಟ್ಟಳು.

'ಎಲ್ಲಿ, ಎಂಥ ವ್ಯವಸ್ಥೆ ಮಾಡುವಿ?'

'ಎಲ್ಲಿ ಬೇಕಾದರೆ ಅಲ್ಲಿ ತಾವು ನೆಚ್ಚುವ ವ್ಯವಸ್ಥೆಯನ್ನು ಮಾಡುವೆನು'

ಪ್ರಸಿದ್ಧ ಸಿನೆಮಾ ನಟಿ ಜ್ಯೋತಿ

ಅವಳ [illegible] ಹೋಗುತ್ತಿದ್ದ ಹಾಗೆ ಪುರಾಣಿಕರು ಅವಳನ್ನೇ ದಿಟ್ಟಿಸಿ ನೋಡುತ್ತಿದ್ದರು. ಅವಳು ಹೊಲೆಯ ಹುಡುಗಿಯೆ? ಅಲ್ಲ, ಬ್ರಾಹ್ಮಣ ಕುಮಾರರ ಚಿತ್ತಾಪಹಾರ ಮಾಡಲಿಕ್ಕೆ ಸ್ವರ್ಗದಿಂದ ಇಳಿದು ಬಂದ ಅಪ್ಸರ ಕನ್ಯೆಯೆ' ಅವಳು ಎಂದು ಪುರಾಣಿಕರ ಮನಸ್ಸಿನಲ್ಲೇ ಅಂದುಕೊಂಡರು.

ಅಷ್ಟು ಹೊತ್ತಿಗೆ ಅವಳು ಬಂದಳು. ಕೈಜೋಡಿಸಿ ನಿಂತುಕೊಂಡು—'ಬನ್ನಿ ಸ್ವಾಮಿ' ಎಲ್ಲವೂ ಸಿದ್ಧವಾಗಿದೆ! ಎಂದಳು.

'ಎಲ್ಲಿ?'

'ಎಲ್ಲಿ ಬೇಕೋ ಅಲ್ಲಿ' ನಾನೂ ತಾವೂ ಸ್ವಲ್ಪ ಹೊತ್ತು ಏಕಾಂತವಾಗಿರಬಹುದಾದ ಆ ಬೆಟ್ಟದ ತಿಬ್ಬದಿಯ ಕುಂಜವನದಲ್ಲಿ'

'ಅಲ್ಲಿ ಯಾಕೆ?'—ಪುರಾಣಿಕರು ಅವಳನ್ನು ಪರೀಕ್ಷಿಸಲಿಕ್ಕೆ ಪುನಃ ಕೇಳಿದರು.

ಸ್ವಾಮಿ! ಏಕಾಂತದಲ್ಲಿ ಸ್ವಲ್ಪ ಶಾಸ್ತ್ರಾರ್ಥವಾಗಬೇಕು. ಪುರಾಣ ಶ್ರವಣವೂ ಆಗಬೇಕು.

ಮಾತು ಕೇಳಿ ಪುರಾಣಿಕರು ಆಶ್ಚರ್ಯಪಡುತ್ತಿದ್ದರು. ಅತ್ಯಂತ ರಮಣೀಯವಾದ ಆ ಕುಂಜವನದಲಿ ಪ್ರಕೃತಿದೇವಿ [illegible] ಹಸುರು ಹುಲ್ಲಿನ ಸುಂದರವಾದ ಹಾಸಿಗೆಯನ್ನು ಹಾಸಿ ಇಟ್ಟಿದ್ದಳು. ಇಬ್ಬರೂ ಅಲ್ಲಿಗೆ ಹೋದರು. ಪುರಾಣಿಕರು ತಮ್ಮ ಕೈಯಲ್ಲಿದ್ದ ಪಂಚಾಂಗ ಪುಸ್ತಕ ಮತ್ತು ಪುರಾಣ ಗ್ರಂಥವನ್ನು ಬಿಚ್ಚಿ ಒಗೆದ ಸುಖಾಸೀನರಾದರು.

'ಸ್ವಾಮೀ, ಏನಾದರೂ ಫಲಾಹಾರಕ್ಕೆ ತರಲೆ?' ಎಂದು ಅವಳು ಮುಗ್ಧಸ್ಮಿತೆಯಾಗಿ ಕೇಳಿದಳು.

'ಹೂಂ ಆಗಬಹುದು, ಆದರೆ ಹುಡುಗಿ! ಒಂದು ಮಾತಿದೆ. ನಾವು ಬ್ರಾಹ್ಮಣರು ಹೊಲತಿಯ ಕೈಯಿಂದ ಅನ್ನ ನೀರು ತೆಗೆದುಕೊಳ್ಳುವುದಲ್ಲ. ಆದುದರಿಂದ ..'

'ಹಾಲು ಹಣ್ಣು ತಂದರಾಗಬಹುದೆ?' ಎಂದವಳು ಪ್ರಶ್ನಿಸಿದಳು.

'ಆಗಬಹುದು'.

'ಸರಿ, ಅದನ್ನೇ ತರುತ್ತೇನೆ. ತಾವು ಅಲ್ಲಿ ಹೋಗಿ ಸ್ನಾನ ಸಂಧ್ಯೆ, ಜಪತಪ ಮುಗಿಸಿ ಬನ್ನಿರಿ' ಎಂದು ಹೇಳಿ ಅವಳು ಪುನಃ ಕಣ್ಮರೆಯಾದಳು.

ಪುರಾಣಿಕರು ಸ್ನಾನಕಾರ್ಯವನ್ನು ಮುಗಿಸಿ ಹಸುರು ಹುಲ್ಲಿನಮೇಲೆ ಕೂತು ಅವಳ ಆಗಮನವನ್ನು ನಿರೀಕ್ಷಿಸುತಿದ್ದರು. ಹೀಗೆ ನಿರೀಕ್ಷಿಸುತ್ತ ಬಹಳ ಸಮಯ ಕಳೆಯಲಿಲ್ಲ. ಅಷ್ಟು ಹೊತ್ತಿಗೆ ಅವಳು ಹಾಲು ಹಣ್ಣು ಎಲ್ಲಾ ತಂದಿಟ್ಟು ಅವರಿಗೆ ಸಮೀಪವಾಗಿ ಸ್ವಲ್ಪ ದೂರದಲ್ಲಿ ಕೂತುಕೊಂಡಳು. ತಟ್ಟೆಯಲ್ಲಿ ಹಾಲು ಹಣ್ಣುಗಳೊಂದಿಗೆ ಎಲೆ ಅಡಿಕೆ, ಕೇಸರ ಕರ್ಪೂರಗಳೂ ಇದ್ದುವು! ಹೊಲೆಯರಿಗೆ ಈ ಸುಗಂಧ ದ್ರವ್ಯಗಳು ಎಲ್ಲಿಂದ ದೊರೆಯಬೇಕು? ತಮ್ಮಂತ ಬೇರೆ ಬ್ರಾಹ್ಮಣರ ಪೂಜೆ ಸೇವೆಗೆ ಅವರು ತಂದದ್ದಿರಬಹುದು ಎಂದು ಪುರಾಣಿಕರ ಎಣಿಸಿದರು. ಅವರ ಹಣ್ಣು ತಿಂದು ಹಾಲು ಕುಡಿದು ತೃಪ್ತರಾದರು. ಹುಡುಗಿ ಎಲೆ ಅಡಿಕೆಯನ್ನು ಸಿದ್ಧಮಾಡಿ ಕೊಟ್ಟಳು. ಅದರ ಸುವಾಸನೆಯಿಂದ ಆ ಪ್ರದೇಶವು ಘಮಘಮಿಸಿತು.

ಹುಡುಗಿ! ಜೀವನದಲ್ಲಿ ಹೊಲೆಯಳ ಆತಿಥ್ಯವನ್ನು ಸ್ವೀಕರಿಸಿದ್ದು ಇದು ಮೊದಲನೆ ಬಾರಿಗೆ[illegible]

ಸ್ವಾಮಿ! ಕ್ಷಮಿಸಬೇಕು. ಹೀಗೆ ಮಾತನಾಡಿದೆನೆಂದು ಸಿಟ್ಟಾಗಬಾರದು. ತಮ್ಮ ಈ ಭ್ರಮೆಯೇ ತಮ್ಮಲ್ಲಿ ಬ್ರಾಹ್ಮಣತ್ವವನ್ನು ಉಳಿಸಲಿಲ್ಲ, ಮತ್ತು ನಮಗೆ ಹೊಲೆತನವನ್ನು ತಂದಿತು. ಇಷ್ಟರ್‍ವರದ

[೧೫ನೇ ಪುಟವನ್ನು ನೋಡಿರಿ]

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ. ಒಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಪ ಎಷ್ಟು ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್ ಕೆಳವಾಮಾಹಿಮ, ಆರ್ ಹೋ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ದಬ್ಬಿಯು ಕ್ರಯವೂ ೪-೦-೦

ವಿ. ಪಿ.

ವಿಳಾಸ ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಇದು ಪ. ಸೆಂಟಿಗೆ ಕಡಿಮೆಯಾಗಿ[illegible] ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ [illegible]ನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

'ಕೆ. ಆರ್. ಕೆ. ಶೆಟ್, ಜುವೆಲ್ಲರ್'.

## What Mauritius Owes to Quinine

The island of Mauritius, in the Indian Ocean, was discovered at the beginning of the sixteenth century by the Portuguese, and after belonging successively to the Dutch, the French, and the English was finally ceded to the British Crown by the Treaty of Paris in 1814.

British traders have set up a prosperous sugar industry in Mauritius which is known to-day as the Sugar Island. But lying far out from the sheltering coasts of Africa and India, the island is buffeted by ocean winds and terrible storms have repeatedly laid waste the sugar-cane plantations.

Until about the year 1860, malaria was unknown in Mauritius, but a serious epidemic broke out in 1866 and since then the island has never been free from the scourge. Formerly the inhabitants of the island which possesses a mild and temperate climate, lived in security in the towns and coastal regions, but the prevalence of malaria has brought about a great change. All those who can afford to do so make their home in the mountains and come down to Port Louis only for their daily business. Those who live in the lowlands frequently fall a prey to the malaria-carrying mosquitoes.

Fortunately, the healing properties of that natural remedy, quinine, are known in Mauritius and the recommendation of the Malaria Commission of the League of Nations has found its way even to these remote shores. This prescription serves as an indication for all regions subject to the fever, it reads as follows: as a preventive measure during the fever season take 6 grains of quinine daily and in cases of treatment a dose of 15 grains to 20 grains of quinine a day for 5 to 7 days. On page 124 of its report, issued in 1938, this Malaria Commission stresses the fact that the harmlessness of quinine makes it a suitable drug for administration by subordinate personnel without constant medical supervision, whereas such supervision is essential in the case of synthetic products.

In Mauritius everything depends on the sugar industry; the welfare of its 400,000 inhabitants is conditioned not only by the fluctuations in the price of sugar on the world market, but also by the violence and extent of the hurricanes which sweep over the island. But in no country can there be prosperity until the debilitating effects of malaria have been fought with the aid of quinine.

M. Eng No. 213.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.



# ಜಿಲ್ಲಾ ಸಮಾಚಾರ

## ಮಂಗಳೂರು

**ನಗರ ಸಭೆ.—** ಕಳೆದ ಸೋಮವಾರ ಸಾಯಂಕಾಲ ಮಂಗಳೂರು ನಗರ ಸಭೆಯ ಮೀಟಿಂಗು ಜರಗಿತು

**ರಾಜೀನಾಮೆ ವಿವರಣೆ —** ಪಾರ್ಲಿಮೆಂಟರಿ ಕಾರ್ಯಕಾರಿಗಳು ಮಂಜೂರು ಮಾಡಿದ ರಾಜೀನಾಮೆಯ ವಿಷಯವಾಗಿ ಮಹಾ ಜನರಿಗೆ ವಿವರಿಸಲು ಮಂಗಳೂರು ಟೌನ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಕಳೆದ ಗುರುವಾರ ಮೈದಾನದಲ್ಲಿ ಸಭೆ ಸೇರಿತು ಶ್ರೀ ಬಿ ವಿ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಹೊಳ್ಳರು ಈ ಕಾರಣವನ್ನು ವಿವರಿಸಿದರು.

**ಹರಿಜನ ಲೇಬರ್ ಲೀಗ್** ಕಳೆದ ತಾ ೩ನೇ ಮಧ್ಯಾಹ್ನ ಘಂಟೆ ೧ಕ್ಕೆ ಲೀಗಿನ ಕಾರ್ಯಕಾರಿ ಸಭೆಯು ಶ್ರೀ ಕೆ ಈಶ್ವರನವರ ಅಧ್ಯಕ್ಷತೆಯಲ್ಲಿ ಸೇರಿತು.

**ಸಭೆ:—** ತಾ ೧೧ರ ಸಾಯಂ ೫ ೩೦ ಘಂಟೆಗೆ ಉಳ್ಳಾಲ ರಘುನಾಥಯ್ಯ ವಾಚನಾಲಯದಲ್ಲಿ ಹರಿಜನರ ಸಭೆಯೊಂದು ಜರಗಿತು. ಮೂಲ್ಕಿಯಲ್ಲಿ ಸೇರಲಿರುವ ಹರಿಜನ ಜಿಲ್ಲಾ ಪರಿಷತ್ತಿನಲ್ಲಿ ಭಾಗವಹಿಸಲು ಬೇಕಾದ ವಿಷಯಗಳ ಆಲೋಚನೆ ಮಾಡಿತ್ತು

**ಲಾರಿ ಅನಾಹುತ** —ಕಳೆದ ಬುಧವಾರ ಅಪರಾಹ್ನ ಗವರ್ನಮೆಂಟ್ ಟ್ರೇನಿಂಗ್ ಶಾಲೆಯ ಇದಿರು ಅದೇ ಶಾಲೆಯ ಸುಮಾರು ೭ ೮ ವರ್ಷ ಪ್ರಾಯದ ಬಾಲಿಕೆಯು ಮೇಲೆ ಒಂದು ಲಾರಿಯು ಹಾದು ಹೋಗಿ ಬಾಲಿಕೆಯು ಮರಣ ಹೊಂದಿದಳೆ ಎಂದು ತಿಳಿಸುವರೆ ವಿಷಾದಪಡುತ್ತೇವೆ

**ಅಲಿಗೆ ಮರಣದಂಡನೆ:—** ಕಾಸರಗೋಡು ತಾಲೂಕು ದೇಲಂಪಾಡಿ ಗ್ರಾಮದ ತ್ಯಾಂಪದಾಸ ಎಂಬವನು ಕಳೆದ ೨೬ ೯ ೩೯ ನೆ ಸಾಯಂಕಾಲ ಅದೇ ಗ್ರಾಮದ ಮತ್ತು ಮಣಿಯಾಣಿ ಎಂಬವನನ್ನು ಬಂಡಿಸಿಂದ ಹೊಡೆದು ಖೂನಿ ಮಾಡಿದನೆಂಬ ತಕ್ಸೀರಿನ ಮೇಲೆ ಅವನನ್ನು ಮಂಗಳೂರು ಸೆಷನ್ ಕೋರ್ಟಿಗೆ ಕಮಿಟು ಮಾಡಿತ್ತು ಆಲಿಗೂ ಮೃತನಿಗೂ ಸೀರಿನ ವಿಷಯ ವಿವಾದವಿತ್ತೆಂತಲೂ ಅಲಿಯು ತಕ್ಸೀರಿನ ಸಮಯ ಅಮಲು ಜೋರನಾಗಿದ್ದನೆಂತಲೂ ಕೂಡ ಪ್ರೋಸಿಕ್ಯೂಶನ್ ಕಡೆಯಿಂದ ಹೇಳಲ್ಪಟ್ಟಿತು ತಾನು ಮುದ್ದೈ ಕಡೆಯ ಸಾಕ್ಷಿಗಾರರಿಂದ ತನಗೆ ಬರತಕ್ಕ ಹಣವನ್ನು ಕೇಳಿದಾಗ ಅವನೂ ಇತರರೂ ಕೂಡಿ ತನ್ನನ್ನು ಅತಿಕ್ರಮ ಮಾಡಿ ತನ್ನ ಕೈಯಲ್ಲಿದ್ದ ಕೋವಿಯನ್ನು ಎಳೆದು ತೆಗೆಯಲು ಯತ್ನಿಸುವ ಸಮಯ ಅದರಲ್ಲಿದ್ದ ಗುಂಡು ಹಾರಿ ಅಲ್ಲೇ ಇದ್ದ ಮುತ್ತು ಮಣಿಯಾಣಿಗೆ ತಾಗಿ ಆತ ಮೃತಪಟ್ಟಿದ್ದಾಗಿ ಅಲಿಯ ಸಾಧನೆಯಾಗಿತ್ತು

ಎಸೆಸರ ಪೈಕಿ ಇಬ್ಬರು, ಅಲಿಯು ತಪ್ಪುಗಾರನಲ್ಲವೆಂತಲೂ ಇಬ್ಬರು ಆತನು ತಪ್ಪುಗಾರನಾಗುತ್ತಾನೆಂತಲೂ ಅಭಿಪ್ರಾಯಪಟ್ಟರು, ಮಂಗಳೂರಿನ ಸೆಷನ್ಸ್ ಜಡ್ಜರಾದ ಶ್ರೀ. ಆರ್. ಯಸ್. ಸುಬ್ರಹ್ಮಣ್ಯಂ ಅಯ್ಯರವರು ಅಲಿಯು ತಪ್ಪಿತಸ್ಥನೆಂತ ನಿಶ್ಚೈಸಿ ತಾ. ೮-೩-೪೦ರಲ್ಲಿ ಅವನಿಗೆ ಮರಣ ದಂಡನೆಯನ್ನು ವಿಧಿಸಿದರು.

**ಜಿಲ್ಲಾ ಕಾಂಗ್ರೆಸ್ ಸಮಿತಿ—ಹೊಸ ಅಧಿಕಾರಿಗಳ ಚುನಾವಣೆ:—** ಕಳೆದ ತಾ. ೭ರಲ್ಲಿ ಶ್ರೀ ಯು. ಎಸ್. ಮಲ್ಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾ. ಸಮಿತಿಯ ವಾರ್ಷಿಕ ಸಭೆ ನಡೆಯಿತು. ದಿವಂಗತ ಶ್ರೀನಿವಾಸರಾವ್ ಕೌಜಲಗಿಯವರ ನಿಧನಕ್ಕೆ ಸಂತಾಪ ಸೂಚಿಸಿರುವ ಠರಾವು ಮಂಜೂರಾದ ಬಳಿಕ, ಗತವರ್ಷದ ವರದಿ ಲೆಖ್ಖ ಪರಿಶೋಧಕರ ವರದಿ ಇವು ಸರ್ವಾನುಮತದಿಂದ ಮಂಜೂರಾದ ಅನಂತರ ಹೊಸ ವರ್ಷದ ಕಾರ್ಯಕಾರಿ ಮಂಡಲಿಗೆ ಚುನಾವಣೆ ನಡೆದು ಶ್ರೀ ಯು ಎಸ್ ಮಲ್ಯರು ಅಧ್ಯಕ್ಷರಾಗಿಯೂ ಶ್ರೀಗಳಾದ ಎಲ್ ಎಸ್ ಸ್ವಾಮಿ ಧರ್ಮರಾಜ ಅಧಿಕಾರಿ ಇವರುಗಳು ಉಪಾಧ್ಯಕ್ಷರುಗಳಾಗಿಯೂ, ಕುದ್ಮಿ ವಾಸುದೇವ ಶೆಣೈಯವರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಬಿ ಸುಬ್ಬಣ್ಣ ಶೆಟ್ಟರು ಮತ್ತು ಕೆ ಪಿ ಜನಾರ್ಧನ ಪ್ರಭುಗಳು ಜತೆಕಾರ್ಯದರ್ಶಿಗಳಾಗಿಯೂ ಕೆ ವ ಧಮ ಕಮ್ತಿಯವರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟಿದ್ದಲ್ಲದೆ ಕಾರ್ಯಕಾರಿ ಮಂಡಲಿಗೆ ಶ್ರೀಗಳಾದ ಕೆ ಈಶ್ವರ ಎಂ ಎಲ್ ಎ ಕೆ ಎಸ್ ಅಡ್ಯಂತಾಯ ಯಮ್ ಬಿ ದೇವಡಿಗ ಜ್ಞಾನ ಶೆಟ್ಟಿ ಸುಬ್ಬಣ್ಣ ಭಟ್ಟ ಯಮ್ ರಾಮಹೆಗ್ಗಡೆ ಚಿನ್ನಪ್ಪ ಗೌಡ ಈ

ಶಾಂತಿನಿಕೇತನದ ಸಮುದ್ರ ಕುದುರೆ

ಎಂಟು ಮಂದಿ ಸದಸ್ಯರನ್ನು ಆರಿಸಲಾಯಿತು ಕಮಿಟಿಯೊಂದಿಗೆ ಗತ ವರ್ಷದಲ್ಲಿ ಸಹಕರಿಸಿದ್ದ ಸಕಲರಿಗೂ ಅಭಿವಂದನೆಗಳನ್ನರ್ಪಿಸಿ ಸಭಾಂತ್ಯವಾಯಿತು

**ಶ್ರೀ. ಎಸ್ ವಿ ಘಾಟೆಯವರ ಮನೆಯನ್ನು ಪೋಲೀಸರು ಜಪ್ತಿ ಮಾಡಿದರು:—** ಮದ್ರಾಸಿನ ... ಡಿಯವರು ಸ್ಥಳೀಕ ಪೋಲೀಸರು ಸಹಿತ ವಾರಂಟು ತೆಗೆದುಕೊಂಡು ಶ್ರೀ ಎಸ್ ವಿ ಘಾಟೆಯವರ ಮನೆಯನ್ನು (ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ನ್ವಯದಂತೆ) ಜಪ್ತಿ ಮಾಡಿದರೆಂದೂ ಅವರಲ್ಲಿದ್ದ ಒಂದು ಪತ್ರಿಕೆಯನ್ನು ಕೆಲವು ಮರಾಠೀ ಪುಸ್ತಕಗಳನ್ನೂ ಒಯ್ದುರುವರೆಂದೂ ತಿಳಿದಿದೆ

**ಟೌನ್ ಕಾಂಗ್ರೆಸು ಕಮಿಟಿ —** ತಾ ೯ ೩—೧೯೪೦ನೇ ಶನಿವಾರ ಮಂಗಳೂರು ಟೌನ್‌ಕಾಂಗ್ರೆಸ್ ಕಮಿಟಿಯ ವರ್ಕಿಂಗ್ ಕಮಿಟಿಯ ಸಭೆಯು ಶ್ರೀ ಸೆಬೆಸ್ತ್ಯಾನ್ ಲೋಬೋರವರ ಅಧ್ಯಕ್ಷತೆಯಲ್ಲಿ ಜರಗಿ ಹಿಂದಿನ ಸಭೆಯ ವರದಿ ಓದಿ ಮಂಜೂರು ಮಾಡಿ, ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ ಕಮಿಟಿಯವರು ಮಂಜೂರು ಮಾಡಿದ ಠರಾವಿಗೆ ಈ ಕಮಿಟಿಯು ಸಂಪೂರ್ಣ ಬೆಂಬಲ ಕೊಡುವ ಠರಾವು ಮಂಜೂರಾಯಿತು.

**ಮುಲ್ಕಿ —ಸಾಹಿತಿಗಳ ಆಗಮನ —** ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರೂ ಶ್ರೀ ಬೇಂದ್ರೆಯವರೂ ಶ್ರೀ ಕೆ ಶಿ ಕಾರಂತರ ಜತೆಯಲ್ಲಿ ಕಳೆದ ತಾ। ೨೩—೩—೪೦ರಲ್ಲು ಇಲ್ಲಿಗೆ ಬಂದಿರು ಸ್ಥಳೀಕ ಯೂನಿಯನ್ ಕ್ಲಬ್ಬಿನ ನೇತೃತ್ವದಲ್ಲಿ ರಾಜಕೀಯವೂ ಧರ್ಮವೂ' ಎಂಬ ವಿಷಯವನ್ನೆತ್ತಿಕೊಂಡು ಸ್ಫೂರ್ತಿಯುಕ್ತವಾದ ಭಾಷಣವನ್ನು ಕೊಟ್ಟರು ನಂತರ ಮಧ್ಯಾಹ್ನದ ಊಟ ತೀರಿಸಿ ಮೂಡಬಿದ್ರಿಗೆ ತೆರಳಿದರು.

**ಬಪ್ಪನಾಡು ಜಾತ್ರೆ:—** ಸ್ಥಳೀಕ ಬಪ್ಪನಾಡು ದೇವಸ್ಥಾನದಲ್ಲಿ ಜರಗತಕ್ಕ ಕಾಲಾವಧಿ ಜಾತ್ರೆಯು ಈ ವರ್ಷ ತಾ ೨೨ರಿಂದ ೨೫ರವರೆಗೆ ಜರಗಲಿರುವುದು


**U. K. BHUJANGA NAYAK**
**CLOTH COMMISSION AGENT**
**SHEVAPET, SALEM**

**ಯು. ಕೆ. ಭುಜಂಗ ನಾಯಕ್,**
**ಜವುಳಿ ದಲಾಲ, ಶಿವಪೇಟೆ, ಸೇಲಂ.**

**ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.**

**ಹೆಚ್ಚಿನ ಮಾಹಿತಿಗಳ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.**


## ಉಡುಪಿ

**ಸಹಕಾರಿ ಸ್ಟೋರ್ಸಿನ ಯೋಜನೆ:—** ನ್ಯಾಯವಾದ ಮಿತದರದಲ್ಲಿ ಸಾಮಾನುಗಳನ್ನು ಒದಗಿಸಿಕೊಡುವರೆ ಸಹಕಾರಿಸ್ಟೋರ್ಸನ್ನು ಸ್ಥಾಪಿಸುವ ಕುರಿತು ಆಲೋಚಿಸಲು ಕೆಲ ದಿನಗಳ ಹಿಂದೆ ಮಹಾಜನರ ಸಭೆಯೊಂದು ಡಾ। ಪಿ ಜಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿತು 'ಸಹಕಾರ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್' ಶ್ರೀ ಅಚ್ಯುತನ್ ನಾಯರರ್ ಕೋಪರೇಟಿವ್ ಸ್ಟೋರ್ಸ್‌ಗಳ ಕುರಿತು ಭಾಷಣಮಾಡಿದರು

**ಶಾಂತಿನಿಕೇತನ ಕುರಾಡಿ:—** ಶಾಂತಿನಿಕೇತನ ಕುರಾಡಿಯವರು ನೂತನ ಸಮುದ್ರ ಕುದುರೆಯ ಯಂತ್ರವನ್ನು ಅವರ ... ದಿಂದ ತರಿಸಿ ಮಂಗಳೂರಿನ ಪ್ರಸಿದ್ಧ ಓರಿಯಂಟಲ್ ಎಂಜಿನೀಯರಿಂಗ್ ವರ್ಕ್ಸ ಮೆನೇಜರ್ ಸುವರ್ಣರಿಂದ ಕಾರಿನೋಪಾದಿಯ ಬೋಡಿಯನ್ನು ಕಟ್ಟಿಸಿ ನಮ್ಮ ಜಿಲ್ಲೆಯ ಮೊದಲನೆಯ ಮೋಟಾರ್ ಬೋಟ್ ಅನುಕೂಲತೆಗಳನ್ನು ಶಾಂತಿನಿಕೇತನದ ಸಂದರ್ಶಕ ಮಹಾಶಯರಿಗಾಗಿ ಏರ್ಪಡಿಸಿರುವರು. ಈ ಸಮುದ್ರ ಕುದುರೆಯ ಉದ್ಘಾಟನಾ ಸಮಾರಂಭವನ್ನು ಇದೇ ತಾ ೭ನೇ ಬುಧವಾರ ನೆರೆದ ಮಹಾಶಯರೊಡನೆ ಜಿಲ್ಲಾ ರಿಜಿಸ್ಟ್ರಾರ್ ಶ್ರೀ ... ಸೋನ್ಸ್ ಮತ್ತು ಶ್ರೀ ಸಯ್ಯದ್ ಮಹಿಮುದ್ದೀನ್ ಬಿ ಇ ಅಸಿಸ್ಟೆಂಟ್ ಇಂಜನಿಯರ್ ... ಇವರು ನೆರವೇರಿಸಿದರು.

**ಸುಕ್ಕೂರ್ ದಿನಾಚರಣೆ:—** ಮದ್ರಾಸ್ ಸಂಸ್ಥಾನ ಹಿಂದೂ ಮಹಾಸಭೆಯ ಸೂಚನೆಯಂತೆ ... ಜಿಲ್ಲಾ ಹಿಂದೂ ಮಹಾ ಸಭೆಯವರು ಇದೇ ... ಶ್ರೀ ಆರ್ ಎಸ್ ಶೆಣೈಯವರ ಅಧ್ಯಕ್ಷತೆಯಲ್ಲಿ ಸುಕ್ಕೂರ್ ದಿನವನ್ನು ಆಚರಿಸಿದರು ... ಪ್ರಾಂತದ ಸುಕ್ಕೂರ್ ... ಸ್ಥಳಗಳಲ್ಲೂ ... ಹಿಂದುಗಳಿಗೆ ಮುಸ್ಲಿಂ ಗೂಂಡರಿಂದ ಆದ ಅತ್ಯಾಚಾರಗಳನ್ನು ಬಲವಾಗಿ ಪ್ರತಿಭಟಿಸಲಾಯಿತು.

## ಕಾರ್ಕಳ

**ಸಹಕಾರ ಸಂಘ —** ದಿ ಕಾರ್ಕಳ ಕೋಪರೇಟಿವ್ ಸ್ಟೋರ್ಸ ಲಿಮಿಟೆಡಿನ ಕಾರ್ಯಾರಂಭ ಉತ್ಸವವು ತಾ ೯ ೩ ೪೦ರ ದಿನ ಮ್ಯುನಿಸಿಪಲ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಸಹಕಾರ ಸಂಘಗಳ ಡಿಪ್ಟಿ ರಿಜಿಸ್ಟ್ರಾರರಾದ ಶ್ರೀ ಅಚ್ಯುತ ನಾಯರ ಮೊದಲಾದವರ ಸಂದರ್ಭೋಚಿತ ಭಾಷಣಗಳಿದ್ದುವು

**ಉಪಾಧ್ಯಾಯ ಸಂಘ:** ಸ್ಥಳೀಯ ಪ್ರಾಥಮಿಕ ಶಾಲಾ ಉಪಾಧ್ಯಾಯ ಸಂಘದ ವಾರ್ಷಿಕೋತ್ಸವವು ತಾ ೯ ೩-೪೦ರ ದಿನ ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಜನಾಬ್ ಯಸ್ ಖಾನ್ ಹುಸ್ಸೇನ ಬಿ ಎ ಬಿ ಯಲ್, ಯಮ್, ಯಲ್ ಎ ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು.

**ವಾರ್ಷಿಕೋತ್ಸವ:—** ಶ್ರೀ ವೆಂಕಟರಮಣ ಹಾಯರ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. ೨೩-೩-೪೦ರ ದಿನ ಡಿಪ್ಟಿ ಇನ್ಸ್‌ಪೆಕ್ಟರ ಶ್ರೀ ಬಿ. ವಿ. ರಮಣ ಬಿ. ಎ. ಯಲ್. ಟಿ ಯವರ ಅಧ್ಯಕ್ಷತೆಯಲ್ಲಿ ಜರಗುವದು.

**ಕಳವುಗಳು:—** ಇಲ್ಲಿ ಕೆಲವು ದಿನಗಳಿಂದ ಸಣ್ಣ ಸಣ್ಣ ಕಳವುಗಳು ಆಗುವದು ಮಿತಿ ಮೀರಿರುತ್ತದೆ. ಅಧಿಕಾರಿಗಳು ಈ ಕಡೆಗೆ ಗಮನ ಕೊಟ್ಟು ನಿವಾಸಿಗರ ಭಯ ನಿವಾರಣೆ ಮಾಡುವರಾಗಿ ನಂಬಿದ್ದೇವೆ.



# ರಾಮಗಡ ಅಧಿವೇಶನದ ಅಪೂರ್ವ ಸಿದ್ಧತೆ

## ಇಂಡಿಯಾ ಡಿಫೆನ್ಸ್ ಕಾನೂನಿನ ಪ್ರಭಾವ

## ಕಾಂಗ್ರೆಸು ಧುರೀಣರ ಬಂಧನ!

## ಮುಂಬಯಿಯ ಪ್ರಚಂಡ ಮುಷ್ಕರ!

## ಮದ್ರಾಸಿನ ಹೊಸ ಗವರ್ನರರು

### ಯುದ್ಧವು ಬೇಗನೆ ಮುಗಿಯುವುದೇ?

#### ಮದ್ರಾಸಿನ ಮಾಜಿ ಗವರ್ನರರ ಅಭಿಪ್ರಾಯ

"ಬ್ರಿಟನಿನ ನಿರ್ಧಾರದ ಮತ್ತು ಅದಕ್ಕೆ ಇಡೀ ಪ್ರಪಂಚದಲ್ಲಿರುವ ರಾಷ್ಟ್ರಗಳಿಂದ ದೊರೆಯುತ್ತಿರುವ ಅದ್ಭುತ ಸಹಾಯದ ವಿಷಯದಲ್ಲಿ ಏನೇನೂ ಸಂಶಯವಿಲ್ಲದಿದ್ದರೂ, ಇವುಗಳ ಫಲಿತಾಂಶದಲ್ಲಿ ಏನೇನೂ ಸಂಶಯವಿಲ್ಲದಿದ್ದರೂ, ರಾಜಕೀಯ ಪಟುಗಳು ಯುದ್ಧವು ಬೇಗನೇ ಮುಗಿಯುವುದೆಂದು ತೀರ ಆಶಾದಾಯಕರಾಗಿರಕೂಡದೆಂದು ನನ್ನನ್ನು ಎಚ್ಚರಿಸುವವರು" ಎಂದು ಮದ್ರಾಸ್ ಗವರ್ನರರಾದ ಲಾರ್ಡ್ ಎರ್ಸ್ಕೈನರು ತಮ್ಮ ಗೌರವಾರ್ಥವಾಗಿ ಮದ್ರಾಸ್ ಪ್ರಜೆಗಳು ಇತ್ತ ಸೇರ್‌ವೆಲ್ ಗಾರ್ಡನ್ ಪಾರ್ಟಿಯಲ್ಲಿ ಹೇಳಿದರು

ಲಾರ್ಡ್ ಎರ್ಸ್ಕೈನರು ಪ್ರಾಂತಿಕ ಸ್ವಾತಂತ್ರ್ಯದ ವಿಷಯವಾಗಿ ಪ್ರಸ್ತಾಪಿಸುತ್ತ ಈಗೊದಗಿರುವ ಪರಿಸ್ಥಿತಿಯು ಕೇವಲ ಕ್ಷಣಿಕವಾದುದು ಎಂದು ಹೇಳಿದರು

### ಕೇಂದ್ರ ಎಸೆಂಬ್ಲಿಗೆ ಬಹಿಷ್ಕಾರ

ಬ್ರಿಟಿಷ್ ಸರಕಾರದ ಅಸಮಾಧಾನಕರ ಧೋರಣದ ನಿಮಿತ್ತ ಕಾಂಗ್ರೆಸ ಪಕ್ಷದವರು ಕೇಂದ್ರ ಅಸೆಂಬ್ಲಿಯ ಈ ಸಲದ ಅಧಿವೇಶನಕ್ಕೆ ಬಹಿಷ್ಕಾರ ಹಾಕಿರುವಷ್ಟೆ, ಆದರೆ ಸದಸ್ಯತ್ವವನ್ನುಳಿಸಿಗೊಳ್ಳಲು ಒಂದು ದಿನದ ಮಟ್ಟಿಗೆ ಅವರು ಅಸೆಂಬ್ಲಿಗೆ ಹೋಗಬೇಕಾದ್ದರಿಂದ ೬ನೇ ತಾರೀಕಿಗೆ ಸಭೆಗೆ ಹೋಗಿದ್ದರು ಆದರೆ ಕಾರ್ಯಕಲಾಪಗಳಲ್ಲಿ ಯಾವದೇ ಒಗೆಯಿಂದ ಭಾಗ ಸಹಿಸಲಿಲ್ಲ.

### ಜಯ ಪ್ರಕಾಶರ ಬಂಧನ

ಕಾಂಗ್ರೆಸ ಸೋಶಾಲಿಷ್ಟ ಪಕ್ಷದ ಜನರಲ್ ಸೆಕ್ರೆಟರಿಗಳಾದ ಶ್ರೀ ಜಯಪ್ರಕಾಶನಾರಾಯಣರನ್ನು ಹಿಂದುಸ್ಥಾನದ ಸಂರಕ್ಷಕ ಕಾಯದೆಯನ್ವಯ ಸೆರೆ ಹಿಡಿದಿದ್ದಾರೆ.

ಕಾಮರೇಡ ಜಯಪ್ರಕಾಶರು ಸೆರೆ ಹಿಡಿಯಲ್ಪಡುವ ಮೊದಲು ಒಂದು ಪ್ರಕಟಣೆಯನ್ನು ಹೊರಡಿಸಿ ಕಾಂಗ್ರೆಸ್ಸಿನಲ್ಲಿ ಐಕ್ಯವನ್ನುಂಟುಮಾಡುವುದಕ್ಕಾಗಿ ಪ್ರಯತ್ನಿಸಬೇಕೆಂದು ಉಗ್ರವಾದಿಗಳಿಗೆ ಬಿನವಿಸಿಕೊಂಡಿದ್ದಾರೆ.

ಅಖಿಲಭಾರತದ ಕಾಂಗ್ರೆಸ ಸಮತಾವಾದಿ ಪಕ್ಷದ ಕಾರ್ಯಕಾರಿ ಮಂಡಲದ ಸಭೆ ಇದೇ ೧೧-೧೨-೧೩ ತಾರೀಖುಗಳಲ್ಲಿ ಪಾಟಣಾದಲ್ಲಿ ಕೂಡಿತು.

### ಗಾಂಧಿ ಸ್ಟೇಶನು "ಶಿವಗ್ರಾಮ"

ವಾರ್ಧಾಕ್ಕೆ ಸಮೀಪದಲ್ಲಿ ಒಂದು ಶೇವ್ ಗಾಂವ್ ಇದೆ. ವಾರ್ಧಾಕ್ಕೆ ೧೩೨ ಮೈಲುಗಳ ದೂರದಲ್ಲಿ ಶೇವ್ ಗಾಂವ್ ಎಂಬ ಒಂದು ಸ್ಟೇಶನೂ ಇದೆ ವಾರ್ಧಾದ ಬಳಿಯ ಶೇವ್‌ಗಾಂವಿಗೆ ಕಳುಹತಕ್ಕ ಹಲವು ಕಾಗದ ಪತ್ರ ಟೆಲಿಗ್ರಾಮುಗಳು ಶೇವ್‌ಗಾಂವ್ ಸ್ಟೇಶನಿಗ ಹೋಗಿ ತೊಂದರೆಯಾಗ ವುದರಿಂದ ಆ ತೊಂದರೆ ತಪ್ಪಲು 'ಶಿವಗ್ರಾಮ' ಎಂದು ಹೆಸರು ಬದಲಾಯಿಸಿದೆಯಾಗಿ ಗಾಂಧಿಜಿಯವರು ಪ್ರಕಟಿಸಿರುತ್ತಾರೆ

### ಮುಂಬಾಯಿಯ ಮುಷ್ಕರ

ಬೊಂಬಾಯಿ ನಗರದ ಮುಷ್ಕರವು ಆರಂಭಿಸಿ ಹಲವು ದಿನಗಳಾಯಿತು ಮೊದಲು ೨೦ ಸಾವಿರ ಮಂದಿಯಿಂದ ಆರಂಭವಾದ ಈ ಅರಳೆ ಗಿರಣಿಗಳ ಕೆಲಸಗಾರರ ಮುಷ್ಕರ, ಅನಂತರವು ಲಕ್ಷಾಂತರ ಮಂದಿ ಕೆಲಸಗಾರರನ್ನು ಒಳಗೊಂಡುದಲ್ಲದೆ, ಆ ನಗರದ ೧೪ ರೇಶ್ಮೆ ಕಾರ್ಖಾನೆಗಳೂ ಇವರೊಂದಿಗೆ ಸೇರಿ ಮುಷ್ಕರವು ಬೆಳೆಯುವಂತಾಗಿದೆ ಇಷ್ಟಾದರೂ ಮುಷ್ಕರ ಬೇಗನೆ ತೀರುವ ಲಕ್ಷಣವು ಕಾಣದುಪುದು ಅತ್ಯಂತ ವಿಷಾದಕರ ಮುಷ್ಕರಗಾರರು ಮಾತ್ರ ಶಿಸ್ತನ್ನು ಚೆನ್ನಾಗಿ ಪಾಲಿಸುತ್ತಿರುವರೆಂದು ಪತ್ರಿಕೆಗಳ ಪ್ರಶಂಸೆ

### ಬಂಗಾಳ ಅಸೆಂಬ್ಲಿಯಲ್ಲಿ ಗಲಭೆ

ಬಂಗಾಳದ ಎಸೆಂಬ್ಲಿಯಲ್ಲಿ, ಕಾಂಗ್ರೆಸ್ ಮೆಂಬರರ ಕೋಲಾಹಲ ಹೋಂ ಮಿನಿಸ್ಟರರ ನಿಷೇಧ ಇವೇ ಮೊದಲಾದ ಕೆಲವೊಂದು ಅಪೂರ್ವ ಸಂಗತಿಗಳು, ೨-೩ ದಿನಗಳು ನಡೆದು, ಮೊದಲ ದಿನ ಕಾಂಗ್ರೆಸ್ ಮೆಂಬರರಲ್ಲಿ ಕೆಲವರಿಗೂ ಹೋಂ ಮಿನಿಸ್ಟರರಿಗೂ ಮತಭೇದವು, ಬಜೆಟ್ ಚರ್ಚಾಕಾಲದಲ್ಲಿ ಉಂಟಾಗಿ, ಕಾಂಗ್ರೆಸ್ ಪಾರ್ಟಿಯವರೂ, ಕೃಷಿಕ ಪ್ರಜೋ ಪಾರ್ಟಿಯವರೂ ಸ್ಥಳ ಬಿಟ್ಟು ಎದ್ದು ನಡೆದರು. ಇದರ ಪರಿಣಾಮವಾಗಿ, ಮೂರನೆಯ ದಿನ, ಹೋಂ ಮಿನಿಸ್ಟರರನ್ನು ಮಾತಾಡಗೊಡದೆ ಗಲಭೆಯಾದ ಕಾರಣ, ಅವರು ಬಜೆಟ್ "ಕಟ್ ಮೋಶನ್"ನ ಕುರಿತು ಯಾವ ಭಾಷಣವನ್ನೂ ಮಾಡದಿರಬೇಕಾಯಿತಲ್ಲದೆ, ೭ ಮಂದಿ ಸದಸ್ಯರಿಗೆ ಎಸೆಂಬ್ಲಿ ಹಾಲ್‌ನ್ನು ಬಿಟ್ಟುಹೋಗಲೂ ಅಪ್ಪಣೆಯೂ ಆಯಿತು. ಘಟ್ಟಿವರದು ದಿನಗಳ ಈ ಬಿರುಗಾಳಿಯ ಫಲವಾಗಿ, ಆ ಮಂದಿರದಲ್ಲಿ ಕಾವಲು ಹೆಚ್ಚಿಸಲ್ಪಟ್ಟಿತು. ಆದರೆ ಅಂದು ಹೋಂ ಮೆಂಬರರಿಗೆ ಮಾತಾಡಲು ಅವಕಾಶ ದೊರಕಿ, ಅವರ ಭಾಷಣ ಮುಗಿಸಿದರು ಆಕ್ಷೇಪಗಳೂ, ಚರ್ಚೆಯೂ ಸಾಂಗವಾಗಿ ಶಾಂತವಾಗಿ ಸಾಗಿತು

### ರಾಮಗಡ

ರಾಮಗಡ ಕಾಂಗ್ರೆಸ್ಸಿನ ನಿಮಿತ್ತ ಏರ್ಪಡಿಸಲ್ಪಟ್ಟ ಖಾದಿ ಪ್ರದರ್ಶನದ ಉದ್ಘಾಟನ ಸಮಾರಂಭವನ್ನು ಜರುಗಿಸಲು ಮಹಾತ್ಮ ಗಾಂಧಿಯವರು ೧೭ನೇ ಕ್ಕೆ ಅಲ್ಲಿಗೆ ಹೋಗುವರು.

ಕಾಂಗ್ರೆಸ ಅಧಿವೇಶನದ ಕಾಲಕ್ಕೆ ನೂಲುವ ಸ್ಪರ್ಧೆ ಏರ್ಪಡಿಸಲಾಗುವದು ಉತ್ಕೃಷ್ಟ ನೂಲು ತೆಗೆಯುವವರಿಗೆ ಮಹಾತ್ಮರ ಹಸ್ತದಿಂದ ಬಂಗಾರದ ಬಟ್ಟಲ ಪಾರಿತೋಷಕವೊಂದು ಕೊಡಲ್ಪಡುವದು

### ಸುಭಾಷರಿಗೊಂದು ಮಾನಪತ್ರ

ಬಾಬು ಸುಭಾಷಚಂದ್ರರು ಚಿರಗಾಂವ ಎಂಬಲ್ಲಿಗೆ ಹೋದಾಗ ಅಲ್ಲಿನ ನಾಗರಿಕರು ಅವರಿಗೆ ಮಾನಪತ್ರ ಕೊಟ್ಟರು ಅದರಲ್ಲಿ 'ನಿಮ್ಮ ಪ್ರಾಂತದ ಯಾವನೋ ಒಬ್ಬನು ಮಹಾತ್ಮರ ಮೇಲೆ ಮೆಟ್ಟುಗಳನ್ನೊಗೆದು ಜಗದ್ವಿಭೂತಿಯನ್ನು ಅಪಮಾನಗೊಳಿಸಿರುವನು ಈ ಪಾಪದ ಪ್ರಾಯಶ್ಚಿತ್ತಕ್ಕಾಗಿ ನೀವು ಬರಿಗಾಲಿನಿಂದ ಶೇಗಾಂವಿಗೆ ಹೋಗಬೇಕು ನಾವು ನಿಮಗೆ ಮಾನಪತ್ರ ಕೊಟ್ಟದ್ದರಿಂದ ನಿಮ್ಮ ಧೋರಣೆಯು ನಮಗೆ ಒಪ್ಪಿಗೆಯಿಂದ ಮಾತ್ರ ತಿಳಿಯಕೂಡದು ವರ್ಕಿಂಗ ಕಮೀಟಿಗೇ ನಮ್ಮ ಬೆಂಬಲವಿದೆಯೆಂದು' ಸ್ಫುಟವಾಗಿ ಬರೆಯಲಾಗಿತ್ತು.

### ಗ್ರಾಮೋದ್ಧಾರ ಉಗ್ರಾಣ

#### ಕಮಲಕುಮಾರಿ ಎಂಬ ಬಾಲಿಕೆಯಿಂದ ಆರಂಭೋತ್ಸವ

ಅಲಹಾಬಾದ್ ಡಿವಿಜನಿನಲ್ಲಿ ಗ್ರಾಮೋದ್ಧಾರ ಕೇಂದ್ರದ ಉಗ್ರಾಣ ಸಂಸ್ಥೆಯ ಆರಂಭ ಮಹೋತ್ಸವದಲ್ಲಿ ಪಂ॥ ಜವಾಹಿರಲಾಲರು ತಾ ಉಲ್ಲಿ ಭಾಗವಹಿಸಿದ್ದರು. ಗ್ರಾಮ ಬಾಲಿಕೆ ಕಮಲಕುಮಾರಿ ಎಂಬೊಬ್ಬಳು ಆರಂಭ ಮಹೋತ್ಸವವನ್ನು ನಡೆಸಿದಳು. ಬಾಲಿಕೆ ಉಗ್ರಾಣ ಭವನಕ್ಕೆ ಹೋಗುವ ದಾರಿಯಲ್ಲಿ ಅಡ್ಡಲಾಗಿ ಕಟ್ಟಿದ್ದ ದ್ವಾರವನ್ನು ಕಡಿದು ಸಮಾರಂಭವನ್ನು ನಡೆಸಿದಳು. ಈ ಉಗ್ರಾಣದಲ್ಲಿ ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಗ್ರಾಮಕೈಗಾರಿಕೆ ವಸ್ತುಗಳು ಇಡಲ್ಪಟ್ಟಿವೆ. ಈ ಸಮಾರಂಭವು ನಡೆದ ಕುರಾವನ್ ಗ್ರಾಮವು ಅಲಹಾಬಾದಿಗೆ ೮ ಮೈಲು ದೂರದಲ್ಲಿದೆ

### ಬಿಕಾನೀರಿನಲ್ಲಿ ಕ್ಷಾಮ

#### ಪಂಡಿತ ನೆಹರೂರವರ ಹೇಳಿಕೆ

ಪಂಡಿತ ಜವಾಹಿರಲಾಲ್ ನೆಹರೂರವರು ಬಿಕಾನೀರ್ ಸಂಸ್ಥಾನದಲ್ಲಿ ತಲೆದೋರಿರುವ ಕ್ಷಾಮದ ವಿಚಾರವಾಗಿ ಒಂದು ಹೇಳಿಕೆ ಕೊಟ್ಟಿರುವರು. ಸಂಸ್ಥಾನದ ಅಧಿಕಾರಿಗಳು ಪ್ರಜೆಗಳಿಗೆ ಏನೇನು ಸಹಾಯ ಮಾಡಿಲ್ಲವೆಂದೂ, ಅಷ್ಟೇ ಅಲ್ಲದೆ ಸಹಾಯ ಮಾಡಲು ಬಂದ ಇತರರನ್ನು ತಡೆದಿರುವರೆಂದೂ, ಪ್ರಜೆಗಳು ದಿಕ್ಕು ತೋರದೆ ಹಿಸ್ಸಾರಿಗೆ (ಇದೂ ಕ್ಷಾಮಕ್ಕೆ ಈಡಾಗಿದೆ) ಬಂದಿರುವರೆಂದೂ ಅವರು ವಿವರಿಸಿ, ಜನರು ಹಿಸ್ಸಾರ್ ಕಾಂಗ್ರೆಸ್ ಕಮಿಟಿಗೆ ಸಹಾಯವನ್ನು ಕಳುಹಿಸಬೇಕೆಂದು ಕೋರಿದ್ದಾರೆ.

**Canara High School Old Boys' Association, Mangalore**

To meet

Sir C P Ramaswami Aiyar, K C I. E Dewan of Travancore the Association has arranged a tea—party on Saturday the 16th March 1940 at 6 p m in the Canara High Shcool, Mangalore

Members of the Association can purchase tickets of 0 4 0 each from the School office till 11 a m on 16-3 1940 Members are at liberty to purchase tickets for their guests After tea Sir C P Ramaswami Aiyar will deliver a short speech on Temple entry and Industrialisation in Travancore

All memoers are requested to co operate and make the function a success

Mangalore 14 3-1940 } G Upendra Prabhu, Hon Secretary

## Notice

In the Court of the District Munsiff of Mangalore

R. E P No 82/1940

Between

Shivappa—**Petitioner**

and

Jockie Noronha Bai and another—**Respondents**

To

The 2nd respondent-Alex Montorio, son of Jockie Noronha Bai, Kadri Mangalore

Please take notice that the abovenamed petitioner has filed the above petition for sale of the immoveable properties belonging to the respondents and the same stands posted to 19-3-1940 for notice of sale.

Mangalore 14-3-1940 } M A. Talwar, Vakil for Petitioner

# ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ

### ಅಧ್ಯಕ್ಷರು—ಡಾ. ಆರ್. ನಾಗನ ಗೌಡರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಭೆಯು ೧೫ನೇ ತಾರೀಕಿನ ದಿವಸ ಉಪಾಧ್ಯಕ್ಷ ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯದರ್ಶಿಗಳ ವರದಿಯು ಓದಲ್ಪಟ್ಟು ಮಂಜೂರಾಯಿತು. ಹಿಂದಿನ ವರುಷದ ಲೆಕ್ಕ ಮತ್ತು ಮುಂದಿನ ವರ್ಷದ ಅಂದಾಜು ಪತ್ರಿಕೆ ಸ್ವೀಕೃತವಾದವು. ಅನಂತರ ರಾಮಘಡ ಕಾಂಗ್ರೆಸ್ ಅಧ್ಯಕ್ಷಸ್ಥಾನದ ಮತಗಣನೆಯಾಯಿತು. ಆ ಮೇಲೆ ಎ. ಐ. ಸಿ. ಸಿ. ಅಧಿಕಾರಿಗಳ ಆಯ್ಕೆಯು ಆಯಿತು. ಎ. ಐ. ಸಿ. ಸಿ. ಯಲ್ಲಿ ೧. ಚನ್ನಬಸಪ್ಪ ಅಂಬಲಿ, ೨. ಅನಂತರಾವ್ ಪಡಗಿ, ೩. ಗಂಗಾಧರರಾವ ದೇಶಪಾಂಡೆ, ೪. ನಾರಾಯಣರಾವ ಜೋಶಿ, ೫. ಎ. ಬಿ. ಲಠ್ಠೆ, ೬. ಡಾ ಆರ್. ನಾಗನ ಗೌಡಾ, ೭. ಮರುಳಾರಾಧ್ಯ ಶಾಸ್ತ್ರಿ, ೮. ಶ್ರೀನಿವಾಸ ಮಲ್ಯ, ೯. ಜಿ. ಎ. ಭಟಕಳಕರ್, ೧೦. ಪರಮಣ್ಣ ಹೊಸಮನಿ, ೧೧. ಲಕ್ಷ್ಮಣ ಶ್ರೀನಿವಾಸ ನಾಯಕ, ೧೨. ಎಸ್. ಬಿ. ಹಿರೇಮಠ, ೧೩. ಎ. ವಿ. ಕೌದಿ, ೧೪. ಎಂ. ಪಿ. ಪಾಟೀಲ ಮತ್ತು ೧೫. ಪುಣಚ್ಚಾ ಇವರು ಆರಿಸಲ್ಪಟ್ಟರು.

### ಅಧಿಕಾರಿಗಳ ಆಯ್ಕೆ

ಅಧ್ಯಕ್ಷ—ಡಾ. ಆರ್. ನಾಗನ ಗೌಡರು, ಉಪಾಧ್ಯಕ್ಷ—ಶ್ರೀ ಕೃಷ್ಣಾಬಾಯಿ ಪಂಜೀಕರ, ಮತ್ತು ಸುಬ್ರಾಯ ಹಳದೀಪುರಕರ, ಕಾರ್ಯದರ್ಶಿ—ಚನ್ನಬಸಪ್ಪ ಅಂಬಲಿ ಮತ್ತು ವೀರನಗೌಡ ಪಾಟೀಲ, ಕೋಶಾಧ್ಯಕ್ಷ—ಶ್ರೀಯುತ ಕೊಯಿಲೋ.

ಕಾರ್ಯಕಾರಿ ಮಂಡಳಿ—೧. ಟಿ. ಎಸ್. ನಾಯಕ, ೨. ಸಿ. ಎಂ. ಪುಣಚ್ಚಾ, ೩. ಎಂ. ಪಿ. ಪಾಟೀಲ, ೪. ವೀರಪ್ಪಾ ರೇಸಿಪಿ, ೫. ಗುಡಿಹಾಳ ಹಣಮಂತರಾವ, ೬. ಪರಮಣ್ಣ ಹೊಸಮನಿ, ೭. ಕೆ. ಕೆ. ರಾಮಪುದುವಾಳ, ಎಸ್. ಆರ್. ಕಂಠಿ, ೯. ಕೆ. ವಾಸುದೇವ ಶೆಣೈ.

### ಕಾರ್ಯಕಾರೀ ಮಂಡಳಿಯ ಸಭೆ

ತಾ. ೧೩-೨-೧೯೪೦ನೇ ದಿವಸ ಕಾರ್ಯಕಾರಿ ಮಂಡಲದ ಕಾರ್ಯಕಲಾಪಗಳು ಓದಿ ಮಂಜೂರಾದ ಮೇಲೆ ಉಳಿದ ಗೊತ್ತುವಳಿಗಳೊಡನೆ ಈ ಕೆಳಗಿನವು ಪಾಸಾದವು.

(೧) **ದುಃಖ ಪ್ರದರ್ಶನ:**—ಕರ್ನಾಟಕ ಭೂಷಣರಾದ ದೇ. ಭ. ಕೌಜಲಗಿ ಶ್ರೀನಿವಾಸರಾಯರ ನಿಧನಕ್ಕಾಗಿ ಈ ಮೊನ್ನೆ ಅತ್ಯಂತ ದುಃಖವನ್ನು ವ್ಯಕ್ತಮಾಡುತ್ತದೆ. ಮತ್ತು ಅವರ ನಿಧನದಿಂದ ಇಡೀ ಕರ್ನಾಟಕ ಪ್ರಾಂತಕ್ಕೆ ಬಲವಾದ ಹಾನಿಯಾಯಿತೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ. ಹಾಗು ಅವರ ಮನೆತನದವರ ದುಃಖದಲ್ಲಿ ಸಹಭಾಗಿಯಾಗುತ್ತದೆ.

(೨) **ರಾಮದುರ್ಗ ಸಮಸ್ಯೆ:**—ರಾಮದುರ್ಗ ಸಂಸ್ಥಾನದ ರಾಜಪ್ರಜರಲ್ಲಿ ಶಾಂತಿ ಸಮಾಧಾನವನ್ನು ಬೆಳೆಸಲು ಪ್ರಯತ್ನಿಸುತ್ತಿರುವ ಶ್ರೀ ಅಣ್ಣಾಸಾಹೇಬ ಲಠ್ಠೆಯವರೊಡನೆ ರಾಮದುರ್ಗದ ಶ್ರೀಮಂತ ರಾಜಾಸಾಹೇಬರು ಸಂಪೂರ್ಣ ಸಹಕಾರವನ್ನು ನೀಡಿ, ಈ ಬಗ್ಗೆ ಆತುರರಾದ ಸಂಸ್ಥಾನದ ಹಾಗು ಕನ್ನಡ ನಾಡಿನ ಜನತೆಯ ಅಭಿನಂದನೆಗೆ ಪಾತ್ರರಾಗಬೇಕೆಂದು ಈ ಸಭೆಯು ಕೋರುತ್ತದೆ. ಮತ್ತು ಶ್ರೀ ಲಠ್ಠೆ ಇವರ ಈ ಶಾಂತಿ ಪ್ರಯತ್ನವು ಪೂರ್ಣ ಯಶಸ್ವಿಯಾಗುವ ರೀತಿಯಲ್ಲಿ ತಮ್ಮ ಆಶೀರ್ವಾದವನ್ನು ನೀಡಬೇಕೆಂದು ಮಹಾತ್ಮಾ ಗಾಂಧಿಯವರಿಗೆ ಈ ಸಭೆಯು ಕೇಳಿಕೊಳ್ಳುತ್ತದೆ.

(೩) **ಗಡಿನಾಡಿನ ಜನಗಣನೆ:**—ಹಿಂದೂ ದೇಶದ ಜನಗಣನೆಯು ಬೇಗನೇ ನಡೆಯಲಿದ್ದು ಕರ್ನಾಟಕದ ನೆರೆಹೊರೆಯ ಸೀಮೆಯ ಗಡಿನಾಡಿನಲ್ಲಿರುವ ಕನ್ನಡ ಮಾತೃಭಾಷೆಯುಳ್ಳವರು ತಮ್ಮ ಮಾತೃಭಾಷೆಯು ಕನ್ನಡವೆಂದೇ ಹೆಚ್ಚಿಸುವದು ಆಯಾ ಜಿಲ್ಲೆಯ ಕಾಂಗ್ರೆಸ್ ಸಮಿತಿಗಳ ಆದ್ಯ ಕರ್ತವ್ಯವಾಗಿದೆ. ಆದುದರಿಂದ ಗಡಿನಾಡಿನಲ್ಲಿರುವ ಕನ್ನಡಿಗರು ಕನ್ನಡಿಗರೆಂದು ತಮ್ಮ ಹೆಸರು ಬರಿಸುವ ಕುರಿತು ಜನಜಾಗ್ರತೆ ಮಾಡುವದಕ್ಕೆ ಆಯಾ ಜಿಲ್ಲಾ ಕಾಂಗ್ರೆಸ ಸಮಿತಿಗಳು ತೀವ್ರವಾಗಿ ಯೋಗ್ಯ ಉಪಾಯಗಳನ್ನು ಕೈಕೊಳ್ಳಬೇಕೆಂದು ಈ ಸಭೆಯು ತೀರ್ಮಾನಿಸುತ್ತದೆ.

(೪) **ಖಾದೀ ಪ್ರಚಾರ:**—ತಾ. ೧೫-೩-೪೦ರ ಒಳಗಾಗಿ ೫೦ ಸಾವಿರ ರೂಪಾಯಿಯ ಹೆಚ್ಚಿನ ಖಾದೀ ಮಾರಬೇಕೆಂಬ ಗೊತ್ತುವಳಿಯ ಅವಧಿಯನ್ನು ಎಪ್ರಿಲ್ ತಿಂಗಳ ಕೊನೆಯ ವರೆಗೆ ಮುಂದುವರಿಸುತ್ತದೆ. ಮತ್ತು ಈ ಮಿಕ್ಕ ಅವಧಿಯಲ್ಲಿ ಎಲ್ಲ ಕಾಂಗ್ರೆಸ್ ಕೆಲಸಗಾರರು ಮನಮುಟ್ಟಿ ಖಾದೀ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕೆಂದೂ ಅದರ ವರದಿಯನ್ನು ನಮ್ಮ ಕಡೆಗೆ ಕಳುಹಿಕೊಡಬೇಕೆಂದೂ ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ.

(೫) **ಕೂಲಿಕಾರರಿಗೆ ತುಟ್ಟಿಯ ಭತ್ತೆ:**—ಯುದ್ಧದ ಮೂಲಕ ದೇಶದಲ್ಲಿ ಆಹಾರ ಸಾಮಗ್ರಿಗಳ ಹಾಗು ಇತರ ಸರಕುಗಳ ಧಾರಣೆ ಹೆಚ್ಚಿ ಜೀವನವೆಚ್ಚವು ಹೆಚ್ಚಿರುವದರಿಂದ ಕರ್ನಾಟಕದೊಳಗಿನ ಎಲ್ಲ ಔದ್ಯೋಗಿಕ ಸಂಸ್ಥೆಗಳಲ್ಲಿಯ ಕಾಮಗಾರರಿಗೆ ತುಟ್ಟಿಯ ಧಾರಣೆಯ ಭತ್ತೆಯನ್ನು ನಗದೀ ರೊಕ್ಕದಿಂದ ಕೊಡಬೇಕೆಂದು ಈ ಸಭೆಯು ಕರ್ನಾಟಕದೊಳಗಿನ ಎಲ್ಲ ಔದ್ಯೋಗಿಕ ಸಂಸ್ಥೆಗಳಿಗೂ ಮುಖ್ಯವಾಗಿ ಗಿರಣಿಯ ಮಾಲಕರಿಗೂ ವಿನಂತಿಮಾಡಿಕೊಳ್ಳುತ್ತದೆ ಎಂದು ಕಾರ್ಯದರ್ಶಿಗಳಾದ ಚನ್ನಬಸಪ್ಪ ಅಂಬಲಿಯವರು ತಿಳಿಸುತ್ತಾರೆ.


## ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯುವ್ಯಯದ ಸಾರಾಂಶ ಪಟ್ಟಿ

| ಮೂಲಧನ | ರೂ. ಆ. ಪೈ. | | ರೂ. ಆ. ಪೈ. |
|---|---|---|---|
| ತೆತ್ತಲ್ಪಟ್ಟ | 6,00,000-0-0 | ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ | 95,469-4-3 |
| ಪೈಡ್ ಅಪ್ | 3,91,942-0-0 | ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು | |
| ರಿಸರ್ವ ಫಂಡು | 4,50,000-0-0 | ಬೆಲೆಬಾಳುವ ಸೆಕ್ಯೂರಿಟಿ | 40,97,741-5-0 |
| ಡಿಪೊಸಿಟ್ ಫಿಕ್ಸೆಡ್, ಕರೆಂಟ್ ಇತ್ಯಾದಿ | 81,21,622-8-1 | ಹುಂಡೀ ಪತ್ರ ಮೊದಲಾದುವುಗಳು | 10,30,649-2-10 |
| ಬೇಂಕುಗಳಿಗೆ ಸಲ್ಲತಕ್ಕದ್ದು | ಇಲ್ಲ | ಠೇವಣಾತಿ | 20,64,586-2-0 |
| ವಿವಿಧ | 10,51,799-1-7 | ವಿವಿಧ | 9,82,093-10-4 |
| ಈ ವರ್ಷದ ಲಾಭ | 55,003-0-6 | ನಗದಿ | 17,99,207-1-3 |
| ಜುಮ್ಲಾ | 1,00,69,766-10-2 | ಜುಮ್ಲಾ | 1,16900,766-10-2 |

THE

## Canara Banking Corporation Ltd.,

(INCORPORATED IN BRITISH INDIA)

Estd: 1906

### THREE YEAR'S CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/- & 5,000/-

are now issued at all our Branches.

*For particulars call at or write to*

**Any of our nearest Branches**

## THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

*Apply for particulars*

**K R. GURU**, *Managing Director*

## The Auttur & Jawahar Bank, Limited.

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು — ಬ್ರೆಂಚ್: ಸೆಂಟ್ರಲ್ ಮಾರ್ಕೆಟ್

ರಿಜಿಸ್ಟರ್ಡ್ ಮೂಲಧನ ರೂ. 1,00,000. ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುತವೆ. ಚಿನ್ನಾಭರಣಗಳ ಆಧಾರದ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% — ನಿರಖು ಠೇವಣಾತಿ 12 ತಿಂಗಳಿಗೆ 4½

" 6 ತಿಂಗಳಿಗೆ 4% — " 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೆಜಿಂಗ್ ಡೈರೆಕ್ಟರ್.

# ಕನ್ನಡ ಅಕ್ಷರ ಶಿಲ್ಪಿ
# ಶ್ರೀ. ಅತ್ತಾವರ ಅನಂತಾಚಾರಿಯವರು

[ಲೇಖಕ ಕಯ್ಯಾರ ಕಿಞ್ಞಣ್ಣ ರೈ]

ಕನ್ನಡನಾಡು, ನುಡಿ, ಸಂಸ್ಕೃತಿಗಳ ಇಂದಿನ ಈ ಸ್ವರೂಪಕ್ಕೆ ಈ ಏಳಿಗೆಗೆ ಕಾರಣರಾಗಿ, 'ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿದವರು ಹಲವು ಮಂದಿಯಿದ್ದಾರೆ ಅವರಲ್ಲಿ ಕೆಲವರ ಹೆಸರುಗಳು, ಕೆಲಸಗಳು ಜನತೆಯ ದೃಷ್ಟಿಯ ಮುಂದೆ ಬಿದ್ದಿವೆ ಕೆಲವರ ಕಾರ್ಯಗಳು, ಹೆಸರುಗಳ ಅಜ್ಞಾತವಾಗಿ ಉಳಿದಿವೆ ಇತಿಹಾಸದ ಇರುಳಲ್ಲಿ ಮರವಿನ ತೆರೆಯೊಳಗೆ ಸೇರಿಹೋದವರು ಬಹುಮಂದಿಯಿದ್ದಾರೆ ನಾಡಿನ ಸರ್ವಾಂಗೀನ ಉನ್ನತಿಗಾಗಿ, ನಾಡ ತಾಯಿಯು ಕರೆಬಂದಾಗ, ಮೂಲೆ ಮೂಲೆಯಲ್ಲಿರುವವರೂ ಮುಂಬಂದು, ತಮ್ಮ ಸೇವೆಯನ್ನು, ತಮ್ಮ ಭಾಗದ ಋಣವನ್ನು ಸಲ್ಲಿಸದೆ ಇರುವುದಿಲ್ಲ ಅಂತಹ ಸಂದರ್ಭದಲ್ಲಿ ಎಲ್ಲರು ಸಲ್ಲಿಸುವ ಸೇವೆಯೂ ಮಹತ್ವ ಹಾಗೂ ಪ್ರಧಾನವೇ ಆಗಿದ್ದರೂ, ಎಲ್ಲರಿಂದಲೂ, ವಿಶೇಷ ಹಾಗೂ ಅದ್ಭುತವೆನಿಸಿದ ಕಾರ್ಯಗಳನ್ನು ಮಾಡಿ ತೋರಿಸಲು ಆಗುವುದಿಲ್ಲ ಅಂತಹ ನೈಸರ್ಗಿಕ ಪ್ರತಿಭೆಯು ಕೆಲವರಿಗೆ ವರದಾನವೆನ್ನಬಹುದು ಈ ತರದ ಪ್ರತಿಭಾಶಾಲಿಗಳಾದ ಕನ್ನಡದ ಸೇವಕರಲ್ಲಿ, ಕನ್ನಡ ತಾಯಿಯ ಅಕ್ಕರೆಯ ಮಕ್ಕಳಲ್ಲಿ ನೂತನ ಕನ್ನಡ ಮುದ್ರಣಾಕ್ಷರ ನಿರ್ಮಾಪಕರಾದ ಶ್ರೀ। ಅತ್ತಾವರ ಅನಂತಾಚಾರಿಯವರಿಗೆ ಒಂದು ಪ್ರಾಮುಖ್ಯ ಸ್ಥಾನವು ಸಲ್ಲುತ್ತದೆ

ಮುದ್ರಣಾಲಯಗಳು ಪ್ರಾರಂಭವಾಗುವುದಕ್ಕಿಂತ ಮೊದಲು ಭಾಷಾಪ್ರಚಾರಕ್ಕೆ ಎಷ್ಟರ ಮಟ್ಟಿಗೆ ತಡೆಯುಂಟಾಗುತ್ತಿತ್ತೆಂಬುದನ್ನು ನಾವು ಇಂದು ಯೋಚಿಸಬೇಕಾಗಿದೆ ಗ್ರಂಥವೊಂದನ್ನು ಪ್ರತಿ ತೆಗೆಯಲು ಆಗುತ್ತಿದ್ದ ಪರಿಶ್ರಮ, ಅಷ್ಟು ದೀರ್ಘ ಪರಿಶ್ರಮದಿಂದ ಬರೆದ ಪುಸ್ತಕಗಳಪ್ರತಿಗಳನ್ನು ಪಡಕೊಳ್ಳಲು ತಗಲುತ್ತಿದ್ದ ವೆಚ್ಚ, ಇದರಿಂದಾಗಿ, ಗ್ರಂಥ ವಾಚನವು ಸಾಮಾನ್ಯರ ಕೈಗೆ ಸಿಲುಕದ ವಿಷಯವಾಗಿತ್ತು ಈ ಸಂದರ್ಭದಲ್ಲಿ ಸಾಧಾರಣ ಒಂದು ನೂರು ವರ್ಷಗಳ ಹಿಂದೆ, ಪಾಶ್ಚಾತ್ಯ ದೇಶದಿಂದ ಕ್ರಿಶ್ಚಿಯನ್ ಮತ ಪ್ರಚಾರಕರಾಗಿ, ಮಿಶನರಿಗಳು ಭಾರತಕ್ಕೆ ಬಂದರು ಹಾಗೆ ಬಂದವರಲ್ಲಿ, ಜರ್ಮನಿಯ ಬಾಸೆಲ್ ಮಿಶ್ಯನಿನವರು ಮಹಾ ಸಾಹಸಿಗರು. ತಮ್ಮ ಮತ ಪ್ರಚಾರಕ್ಕೆಂದು ಈ ಊರಿನ ಭಾಷೆಗಳನ್ನು ಅಭ್ಯಾಸ ಮಾಡಿಕೊಂಡರು ಆ ಮೇಲೆ ಮತ ಗ್ರಂಥಗಳನ್ನು ತಮ್ಮ ಮತಾನುಯಾಯಿಗಳಿಗೆ ಹೆಚ್ಚು ಹೆಚ್ಚಾಗಿ ಬೋಧಿಸುವ ಅವಶ್ಯ ಬಿದ್ದುದರಿಂದ, ಮುದ್ರಣಾಲಯಗಳನ್ನು ಸ್ಥಾಪಿಸಿ ಮತ ಗ್ರಂಥಗಳನ್ನು ದೇಶೀಯ ಭಾಷೆಗಳಲ್ಲಿ ಪ್ರಕಟಿಸುವ ಕಾರ್ಯಕ್ಕೆ ಉದ್ಯುಕ್ತರಾದರು ಹೀಗೆ ಆದಿಯಲ್ಲಿ ಕನ್ನಡ ಮುದ್ರಣ ಕಾರ್ಯಕ್ಕೆ ಇತಿಶ್ರೀ ಮಾಡಿದ ಕೀರ್ತಿಯು ಮತ ಪ್ರಚಾರಕರಾಗಿ ಬಂದ ಜರ್ಮನಿಯ ಮಿಶನರಿಗಳಿಗೇ ಸಲ್ಲತಕ್ಕದ್ದಾಗಿದೆ

ಮಂಗಳೂರಲ್ಲಿ ಜರ್ಮನ್ ಮಿಶನರಿಗಳು ಮುದ್ರಣಾಲಯವನ್ನು ಸ್ಥಾಪಿಸಿದಾಗ ಅವರ ಕನ್ನಡ ಅಕ್ಷರಗಳನ್ನು ಕೆತ್ತಿಕೊಡಲು ಇಲ್ಲಿನ [illegible] ಗಳ ಕೆತ್ತಿದವರು ಪಾಂಡುರಂಗಶೆಟ್ಟಿ [illegible] ಶ್ರೀ [illegible] ಗಳಲ್ಲಿ [illegible] ಅವರನ್ನು ಹೆಚ್ಚಾಗಿ ಅವರ ಕೆಲಸಗಳಲ್ಲಿ [illegible] ಸ್ಥಾಪಿಸಿದರು [illegible] ಶ್ರೀ ಅತ್ತಾವರ ಅನಂತಾಚಾರಿಯವರು ಊರಿನ [illegible] ಮುದ್ರಣಾಲಯದಲ್ಲಿ [illegible] ಸೇರಿಕೊಂಡರು [illegible]

ಅಲ್ಲಿ [illegible] ನನಗೂ [illegible] ಕೆಲಸ ಮಾಡುತ್ತಿದೆವು [illegible] ಕನ್ನಡ ಮುದ್ರಣಾಕ್ಷರಗಳ [illegible] ಅಕ್ಷರಗಳನ್ನು ಕೆತ್ತಿ ಕೊಟ್ಟ [illegible] ನಾವು [illegible] ನನ್ನಲ್ಲಿ [illegible] ಹೆಚ್ಚಾಯಿತು [illegible] ತರವಾದ ಹಂಬಲವೇ ನನ್ನನ್ನು ಈ ನೂತನ ಮುದ್ರಾಕ್ಷರಗಳನ್ನು ಕೆತ್ತುವಂತೆ ಮಾಡಿತು"— ಹೀಗೆಂದು ಶ್ರೀ ಅನಂತಾಚಾರಿಯವರೇ ತನ್ನ ಆರಂಭದ ದಿನಗಳ ಕುರಿತು ಪ್ರಶ್ನಿಸಿದಾಗ ಹೇಳಿದರು.

[illegible] ಮುದ್ರಣಲಿಪಿಯು ದುಂಡನೆಯಾಗಿಯೂ ಸಮಾನಾಕಾರವುಳ್ಳದ್ದಾಗಿಯೂ, ಮೋಹಕವಾಗಿಯೂ ಇರಲಿಲ್ಲ ಅಂತಹ ಅಕ್ಷರಗಳಿಂದ ಮುದ್ರಿಸಿದ ಕೆಲವು ಪುಸ್ತಕಗಳನ್ನು ನಾವು ಇಂದೂ ಕಾಣಬಹುದು. [illegible] ಪ್ರೆಸ್ಸಿನಲ್ಲಿ ಕೆಲವು ವರ್ಷಗಳ ತನಕ ಕೆಲಸ ಮಾಡಿದರು. ಅಲ್ಲಿ ಅನೇಕ ಅಕ್ಷರಗಳ 'ಪಂಚ'ನ್ನು ತಯಾರಿಸಿ ಕೊಟ್ಟರು. ಆ ಮೇಲೆ ಏನೋ ಕಾರಣದಿಂದ ಆ ಪ್ರೆಸ್ಸಿನಿಂದ ಅವರು ಬಿಟ್ಟುಹೋದರು.

ಮುಂಬಯಿಯಂತಹ ನಗರಕ್ಕೆ ಹೋದರೆ ಅಲ್ಲಿ ಅಕ್ಷರಗಳನ್ನು ಕೆತ್ತುವ ಕೆಲಸದಲ್ಲಿ ಹೆಚ್ಚಿನ ಅಭ್ಯಾಸಮಾಡಬಹುದೆಂಬ ಆತುರದಿಂದ ಅವರು ಮುಂಬಯಿಗೆ ತೆರಳಿದರು ಅಲ್ಲಿ ಆಗ ನಿರ್ಣಯಸಾಗರ ಪ್ರೆಸ್ಸಿನ ಮಾಲಕರಾದ ಜಾವಜಿ ತುಕಾರಾಂ [illegible] ಅವರನ್ನು ಕೆಲಸಕ್ಕೆ ತೆಗೆದುಕೊಂಡು ಬಹಳವಾಗಿ ಪ್ರೋತ್ಸಾಹಿಸಿದರು ಅಲ್ಲಿ ಎಂಟೊಂಭತ್ತು ವರ್ಷಗಳ ತನಕ ಕೆಲಸಮಾಡಿ ಎಲ್ಲ ರೀತಿಯ ಕನ್ನಡ ಮುದ್ರಣಾಕ್ಷರಗಳನ್ನು ಕೆತ್ತಿ ಕೊಟ್ಟರು ಕಡೆಗೆ [illegible] ಅಸ್ವಸ್ಥರಾದಾಗ ಆ ಪ್ರೆಸ್ಸನ್ನು ಬಿಟ್ಟು ಬೊಂಬಾಯಿಯಿಂದ [illegible]

ಇಂದು [illegible] ಕರ್ನಾಟಕದ ಎಲ್ಲ ಕಡೆಗಳಲ್ಲಿ [illegible] ಇರುವ ದುಂಡನೆಯ [illegible] ಅಕ್ಷರಗಳ [illegible] ಅನಂತಾಚಾರಿ [illegible] ಅವರು [illegible] ನಿರ್ಣಯಸಾಗರ ಪ್ರೆಸ್ಸಿನ [illegible] ಬೇರೆ ಬೇರೆ ಪ್ರೆಸ್ಸುಗಳಿಗೆ ಒದಗಿಸಿಕೊಟ್ಟರು ಇವರು ಮಾಡಿದ ಕನ್ನಡ ಮುದ್ರಣಾಕ್ಷರಗಳನ್ನು [illegible] ನಿರ್ಣಯಸಾಗರ ಪ್ರೆಸ್ಸಿನವರು ಬಹಳ ವ್ಯಾಪಾರ ಮಾಡಿದರು ನಿರ್ಣಯಸಾಗರದಲ್ಲಿ ಕನ್ನಡ ಅಕ್ಷರಗಳ [illegible] ಕೆಲವು [illegible] ಅಕ್ಷರಗಳನ್ನೂ [illegible] ಕೆತ್ತಿ ಕೊಟ್ಟಿರು [illegible]

[illegible] ಬೊಂಬಾಯಿ [illegible] ಮಾಲಕರಾದ ಶ್ರೀ [illegible] ಇವರಿಂದ [illegible] ಅಕ್ಷರಗಳನ್ನು ಕೆತ್ತಿಸಿ ಅದಕ್ಕೆ [illegible] ಹೆಸರನ್ನು ಕೊಟ್ಟಿರುವರು ಶ್ರೀ ಅನಂತಾಚಾರಿ [illegible] ಶ್ರೀ [illegible] ತನ್ನ [illegible] ಹೆಚ್ಚು ಆದರವುಳ್ಳವರಾಗಿದ್ದರೆಂದು ಅನಂತಾಚಾರಿಯವರು ಹೇಳುತ್ತಾರೆ [illegible] ಹೆಚ್ಚಾಗಿ [illegible] ತನ್ನ [illegible] ಅವರ ಮಂಗಳೂರಲ್ಲಿ [illegible] ತನ್ನ ಮನೆಗೆ [illegible]

ಆ ಮೇಲೆ ಮಂಗಳೂರಲ್ಲಿ ಒಂದು ಸ್ವತಂತ್ರವಾಗಿ ತನ್ನ ಕೆಲಸವನ್ನು ಪ್ರಾರಂಭಿಸಿದರು ಇಲ್ಲಿನ ಶಾರದಾಪ್ರೆಸ್ಸು, ಕೆನರಾ ಪ್ರೆಸ್ಸುಗಳಿಗೆ ಮುದ್ರಣಾಕ್ಷರಗಳನ್ನು ಒದಗಿಸಿಕೊಟ್ಟರು. ಬ್ಯಾಸಲ್ ಮಿಶನ್ ಪ್ರೆಸ್ಸಿಗೂ ಸಣ್ಣ ಆಕಾರದ ಅಕ್ಷರವನ್ನು ಕೆತ್ತಿ ಕೊಟ್ಟಿರುವರು. ಉಡುಪಿಯ ಪ್ರಭಾಕರ ಪ್ರೆಸ್ಸಿನವರೂ ಇವರಿಂದ ಮುದ್ರಣಾಕ್ಷರಗಳನ್ನು ಪಡಕೊಂಡರು. ಹೀಗಾಗಿ ಒಂದು ಕಾಲದಲ್ಲಿ ಮಂಗಳೂರಿನ ಮುದ್ರಣವು ಅಖಿಲ ಕರ್ನಾಟಕದಲ್ಲಿ ಆದರ್ಶ ಮುದ್ರಣವಾಗಿದ್ದರೆ, ಮಂಗಳೂರಿನ ಗ್ರಂಥಗಳು ಬಹಳ ಸುಂದರವಾಗಿ ಅಚ್ಚಾದ್ದರೆ ಅದರ ಬಹುಭಾಗದ ಕೀರ್ತಿ ಶ್ರೀ। ಅನಂತಾಚಾರಿಯವರಿಗೇ ಸಲ್ಲಬೇಕಾಗುತ್ತದೆ ಅವರು ಕೆತ್ತಿದ ಅಕ್ಷರಗಳಲ್ಲಿ ಹೆಚ್ಚಿನ ಎಲ್ಲಾ ತರದ ಅಕ್ಷರಗಳೂ ಇಂದು ಮುಂಬಯಿಯ ನಿರ್ಣಯಸಾಗರ ಪ್ರೆಸ್ಸನ್ನು ಬಿಟ್ಟರೆ, ಮಂಗಳೂರು ಶಾರದಾ ಪ್ರೆಸ್ಸಿನಲ್ಲಿ ಇವೆ ಇವರು ಬೆಂಗಳೂರಿನ ನೇಶನಲ್ ಟೈಪ್ ಫೌಂಡ್ರಿಗೆ ತೆಲುಗ ಲಿಪಿಯನ್ನೂ ಹೈದರಾಬಾದಿಗೆ ಉರ್ದು ಲಿಪಿಯನ್ನೂ ಕೆತ್ತಿ ಕೊಟ್ಟರು ಯಾವುದೇ ಭಾಷೆಯ ಲಿಪಿಯನ್ನೇ ಕೆತ್ತಲಿ ಅದರಲ್ಲಿ ಸೌಂದರ್ಯವು ಕಲಾಸ್ವರೂಪವು ಒಡೆದ ತೋರುವಂತೆ ಮಾಡುವುದು ಅವರ ಕಾರ್ಯದ ವೈಶಿಷ್ಟ್ಯವಾಗಿದೆ

ಅವಿದ್ದನ್ನು ಕಾಣ ಮಾಡಿಯೋ ಮಗಿಸಿದೇನ ಇದು ಅವರು ಸಂಭಾಷಣೆಯ [illegible] ಹೇಳಿದ ಮಾತ [illegible] ಯಾವುದೇ ಕೆಲಸವನ್ನು ಹಿಡಿದರೆ ಅದರಲ್ಲಿ ಪೂರ್ಣತೆ [illegible] ಅವರ ಅದ್ಭುತ [illegible] ವಿಜ್ಞಾನದ ಪ್ರಭಾವವು [illegible] ಅವರ [illegible] ಅಕ್ಷರಗಳನ್ನು ಕೆತ್ತಿ [illegible] ಅಕ್ಷರಗಳ [illegible] ಅವರೆ [illegible] ಅಖಿಲ ಕರ್ನಾಟಕದಲ್ಲಿಯೇ ಅವರ ಆ ದುಂಡನೆಯ ಅಕ್ಷರಗಳ [illegible] ಹಾಗೆ ಹರಡಿವೆ ಇಂದಿನ ಈ ಕಾಲದಲ್ಲಿ, ಅವರ ಹಿಂದಿನ ಕೆಲಸಗಳನ್ನು ನೆನಸುವವರೂ ಕಡಿಮೆಯಾಗಿದ್ದಾರೆ ಅವರಿಗೆ ಸಿಗುವ ಪ್ರತಿಫಲವೂ ಕೂ [illegible] ಬೇಡ

[illegible] ಅವರಿಗೆ [illegible] ಕೆಲಸ ಕೊಟ್ಟವರಿ [illegible] ಕಣ್ಣುಗಳೆರಡೂ [illegible] ಒಬ್ಬಳೆ ಮಗಳ ಮಾತ್ರ ಇದ್ದಾರೆ [illegible] ಹೋಗಿದ್ದಾ [illegible] ಮಂಗಳೂರಲ್ಲಿ [illegible] ಅವರ ಕಡೆಯ ಸೇವೆ [illegible] ವಿಶಭಾಷಿಗಳಾಗಿದ್ದಾರೆ. ಕನ್ನಡ [illegible] ಮಾಡಿದ ಸೇವೆ [illegible] ಮನಸದಿಂದ [illegible] ತನ್ನ ಸೇವೆಯನ್ನು ತಾನೇ [illegible] ಗಂಭೀರರಾಗಿರುತ್ತಾರೆ

ಕನ್ನಡ ಮುದ್ರಣಾಕ್ಷರದ ಇತಿಹಾಸದಲ್ಲಿ ಶ್ರೀ ಅತ್ತಾವರ ಅನಂತಾಚಾರಿಯವರ ಹೆಸರು ಸುವರ್ಣಾಕ್ಷರಗಳಿಂದ ಬರೆಯತಕ್ಕದ್ದು ಈ [illegible] ಸಾಹಸದಿಂದ ನಿರಂತರ ಪರಿಶ್ರಮದಿಂದ ಅಖಿಲ ಕರ್ನಾಟಕದ ಮುದ್ರಾಕ್ಷರಗಳ ಅಭಿವೃದ್ಧಿಗಾಗಿ ಸಲ್ಲಿಸಿದ ಸೇವೆಯು ಅಪಾರವಾದುದ. ಕಾಲನ ಮರವೆಯ ಮುಸುಕಿನಲ್ಲಿ ಅಜ್ಞಾತರಾಗಿರುವ ವ್ಯಕ್ತಿಗಳನ್ನು ಹೀಗೆ ಕನ್ನಡಿಗರಿಗೆ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ, ಇಂದಿನ ಕನ್ನಡ ಲೇಖಕವಾಚಕವರ್ಗದವರು ಕನ್ನಡ ಅಕ್ಷರ ಶಿಲ್ಪಿಯಾದ ಶ್ರೀ. ಅನಂತಾಚಾರಿಯವರಿಗೆ ಕೃತಜ್ಞರಾಗಿರಬೇಕೆಂದು ಹೇಳಲು ನಾನು ಮರೆಯಲಾರೆನು.

# ಸಿನೆಮಾ ಪುಟ

## ಮಿಲಿಯಾಧಿಪತಿ ಗಂಡನನ್ನು ಬಿಟ್ಟು ಸಿನೆಮಾ ಲೋಕಕ್ಕೆ ಕಾಲಿಟ್ಟಳು!

ಮಿಲಿಯಾಧಿಪತಿ ಗಂಡನನ್ನು ಬಿಟ್ಟು ಸಿನೆಮಾ ಲೋಕಕ್ಕೆ ಕಾಲಿಟ್ಟಳು!

‘ಹೆಡಿಲಾಮಾರ್’ಳು [illegible] ವರ್ಷಗಳಲ್ಲಿ ಪ್ರಸಿದ್ಧಳಾದ ನಟಿಗಳಲ್ಲಿ ಹೆಚ್ಚು ಹೆಸರು ಪಡೆದವಳು. ಆಕೆ ಸಿನೆಮಾ ಜಗತ್ತಿನಲ್ಲಿ ಉಜ್ವಲ ಕೀರ್ತಿಶಾಲಿನಿಯಾಗಿ ಮೆರೆಯಬೇಕಿದ್ದರೆ ಅವಳಲ್ಲಿದ್ದ ಕಲಾ ಪ್ರೇಮವು ಎಷ್ಟೆಂದು ಉತ್ಕೃಷ್ಟವಾಗಿತ್ತು ಎಂಬುದನ್ನು ಅವಳ ಜೀವನದ ಘಟನೆಗಳು ತಿಳಿಸುವವು.

ಆಕೆ ವಿಯೆನ್ನಾದಲ್ಲಿ ಜನ್ಮವೆತ್ತಿದವಳು. ಒಬ್ಬ ಐಶ್ವರ್ಯವಂತನ ಏಕ ಮಾತ್ರ ಪುತ್ರಿ. ಬಹಳ ಸಂತೋಷದ ಸೌಭಾಗ್ಯದ ಜೀವನವನ್ನು ನಡೆಸಿದಳು. ಯಾವುದರಲ್ಲಿಯೂ ಆಕೆಗೆ ನ್ಯೂನತೆಯಿರಲಿಲ್ಲ. ತಂದೆ ಮಾಡಿಟ್ಟದ್ದೇ ಆಕೆಗೆ ಅಪರಿಮಿತವಿರುವಾಗ ಸ್ವಂತ ಜೀವನ ಉದ್ಯೋಗಕ್ಕೆ ಇಳಿಯುವ ಆವಶ್ಯಕತೆ ಇರಲಿಲ್ಲ. ಆದರೆ ಸ್ವತಂತ್ರ ಉದ್ಯೋಗಶಾಲಿನಿಯಾಗಬೇಕು. ನಟನಾಕಲೆಯಲ್ಲಿ ಅಭಿವೃದ್ಧಿ ಹೋಗಬೇಕು ಎಂಬ ಆಕೆಯ ಆಶೆಯು ಮಾತ್ರ ಅವಳನ್ನು ಸಿನೆಮಾ ಜಗತ್ತಿಗೆ ಎಳೆತಂದಿತು. ಅವಳು ಹದಿನೈದು ವರ್ಷದವಳಿದ್ದಾಗ ವಿಯೆನ್ನಾದ ಸ್ಟುಡಿಯೋ ಒಂದರಲ್ಲಿ ಕೆಲಸ ಮಾಡಲು ಒಬ್ಬ ಹುಡುಗಿ ಬೇಕೆಂಬ ವಾರ್ತೆ ಆಕೆ ಕೇಳಿದಳು. ಸ್ಟುಡಿಯೋದಲ್ಲಿ ಕೆಲಸ ಮಾಡಬೇಕೆಂಬ; ನಟಿಯಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಆಕೆ ಅಲ್ಲಿ ಹೋಗಿ ಸೇರಿದಳು. ಆದರೆ ಆ ಚಿತ್ರವು ಮುಗಿದ ಮೇಲೆ ಅವಳಿಗೆ ಅಲ್ಲಿ ಕೆಲಸವಿರಲಿಲ್ಲ. ಎಷ್ಟೋ ಸಮಯ ಕಳೆಯಿತು. ಕಡೆಗೆ ಒಂದು ಪ್ರಾಮುಖ್ಯವಲ್ಲದ ಸ್ತ್ರೀ ಪಾತ್ರವೊಂದನ್ನು ಅಭಿನಯಿಸುತ್ತಿರುವ ನಟಿಯು ಅವರಿಗೆ ಬೇಕಾಯಿತು. ಆಗ ತಾನು ಅದನ್ನು ವಹಿಸುವುದಾಗಿ ಹೆಡಿಲಾಮರಳು ಹೇಳಿದಳು. ಆಕೆಗೆ ಅದನ್ನು ಕೊಟ್ಟರು, ಆಕೆ ಅದನ್ನು ಯಶಸ್ವಿಯಾಗಿಯೇ ಅಭಿನಯಿಸಿದಳು.

### ಮುಂದಿನ ಉತ್ತಮ ಚಿತ್ರಗಳು.

ನಟನೆಯು ಆಕೆಯ ರಕ್ತಗತವಾದ ಕಲೆಯಾಗಿತ್ತು. ದಿನ ಹೋದಂತೆ ಆಕೆ ಸಿನೆಮಾ ತಾರೆಗಳಲ್ಲಿ ಹೆಚ್ಚಿನ ಪ್ರಭಾವಶಾಲಿನಿಯಾದಳು. ‘ದವೀಕರ್ ಸೆಕ್ಸ್’ ‘ಪ್ರೈವೆಟ್ ಲೈವ್ಸ್’ ‘ಎಕ್ಸ್ ಟೇಸಿ’ ಮೊದಲಾದ ಚಿತ್ರಗಳಲ್ಲಿ ಅಪ್ರತಿಮ ಅಭಿನಯ ಚಾತುರ್ಯವನ್ನು ತೋರಿಸಿ ಆಕೆ ಮೆರೆದಳು.

### ನಗ್ನನಟನೆ.

ಒಂದು ಅತ್ಯುತ್ತಮ ಕಲಾ ಪೂರ್ಣವಾದ ಸೀನನ್ನು ತೆಗೆಯಬೇಕೆಂದು ಅವಳೊಡನೆ ಹೇಳಿದ್ದರು. ಅವಳನ್ನು ಚಿತ್ರ ತೆಗೆಯಲು ದೂರ ಒಂದು ಕಾಡಿಗೆ ಒಯ್ಯಲಾಗಿತ್ತು. ಅಲ್ಲಿ ಕಾಡಿನಲ್ಲಿ ನಗ್ನಳಾಗಿ ಓಡುವ ಚಿತ್ರವನ್ನು ತೆಗೆಯಬೇಕಾಗಿತ್ತು. ಅದಕ್ಕೆ ಆಕೆ ಸಮ್ಮತಿ ಕೊಡಲಿಲ್ಲ. ಆಗ ಅವರು ಸಿನೆಮಾದವರೊಡನೆ ಮಾಡಿದ ಒಪ್ಪಂದವನ್ನು ನೆನಪು ಮಾಡಿದರು. ಹೇಗಾದರೂ ಕಡೆಗೆ ಆಕೆ ಒಪ್ಪಲೇಬೇಕಾಯಿತು. ತರುಣ ಸುಂದರಿ ಕೇವಲ ಹದಿನಾರೇ ವರ್ಷದ ರಮಣಿಯು ಅವಿವಾಹಿತ ಕನ್ಯೆಯು ನಗ್ನ ರೂಪದಲ್ಲಿ ಕಾಡಿನಲ್ಲಿ ಧಾವಿಸಿತೋರಿಸಿದಳು. ಆದರೆ ಆದರಿಂದ ಅವಳು ಬಹು ನಾಚಿಕೊಂಡಳು. ಅದನ್ನು ಮನೆಯವರಿಗೆ ತಿಳಿಸಲೇ ಇಲ್ಲ.

### ಗಂಡನು ಕಳವಳಗೊಂಡನು

ಕ್ವೀನ್ ಎಲಿಜಬೆತ್ ಎಂಬ ನಾಟಕದಲ್ಲಿ ಆಕೆ ಅಭಿನಯಿಸಿದಳು. ಅವಳ ರೂಪುಲಾವಣ್ಯಗಳಿಗೆ ಮರುಳಾಗಿ ಫ್ರಿಟ್ ಮೆಂಡ್ಲ್ ಎಂಬ ಮಿಲಿಯಾಧಿಪತಿಯು ಆಕೆಯ ಕೈ ಹಿಡಿದನು. ಗಂಡನು ತನ್ನ ಪತ್ನಿಯು ಸಿನೆಮಾದಲ್ಲಿ ನಟಿಯಾಗಿರುವುದು ಒಪ್ಪಲಿಲ್ಲ. ಆಕೆಗೆಬೇಕಾದ ಎಲ್ಲಾ ಸುಖ ಸೌಭಾಗ್ಯ ವಸ್ತುಗಳನ್ನು ಅವನು ಒದಗಿಸಿಕೊಟ್ಟು ಸಿನೆಮಾದ ಸುಖವು ಮರೆವಂತೆ ಮಾಡಿದನು!

ಎಕ್ಸ್‌ಟೇನ್ ಸ್ ಚಿತ್ರವು ಅವರ ವಿವಾಹವಾದ ಆ ಮೇಲೆ ಪ್ರದರ್ಶಿತವಾಯಿತು. ತನ್ನ ಪತ್ನಿಯು ನಗ್ನಳಾಗಿ ಅಭಿನಯಿಸಿರುವುದನ್ನು ನೋಡಿ ಫ್ರಿಟ್ಸ್ ಮೆಂಡ್ಲನು ಪ್ರಮುಖನಾದನು. ಕೋಟ್ಯಂತರ ರೂಪಾಯಿಗಳನ್ನು ಸುರಿದು ಆ ಇಡೀ ಚಿತ್ರವನ್ನು ಕಂಪನಿಯವರಿಂದ ಪಡಕೊಂಡು ಸುಟ್ಟುಬಿಟ್ಟನು!

### ಸಿರಿ ಬೇಡ, ಕಲೆ ಬೇಕು

ಗಂಡನ ಸ್ನೇಹಿತರು, ಸಿರಿವಂತರು, ವ್ಯಾಪಾರಿಗಳು, ರಾಜನೀತಿಜ್ಞರು, ಅಧಿಕಾರಿಗಳು ಇವರ ಒಡನಾಟದಲ್ಲಿ ಹೆಡಿಲಾಮರಳಿಗೆ ಜೀವನವು ದುಃಖಮಯವೆನಿಸಿತು. ಒಮ್ಮೆ ಮುಂಜಾನೆ, ಗಂಡನು ಮನೆಯಿಂದ ಹೊರಟು ಬೇರೆ ಕಡೆಗೆ ಹೋಗಿದ್ದಾಗ, ಯಾರಿಗೂ ಹೇಳದೆ ಆಕೆ ಪಲಾಯನ ಮಾಡಿಬಿಟ್ಟಳು. ಪಿಟ್ಸನು ಅವಳನು ಹಿಂಬಾಲಿಸಿದನು. ಆದರೆ ಆಕೆ ಮರಳಲಿಲ್ಲ. ಹಾಲಿವುಡ್ಡಿಗೆ ಬಂದು, ಅಲ್ಲಿ ಸ್ಟುಡಿಯೋಕ್ಕೆ ಸೇರಿದಳು. ಫ್ರಿಟ್ಸ್ ಮೆಂಡ್ಲನೊಡನೆ ವಿವಾಹವಿಚ್ಛೇದ ಮಾಡಿಕೊಂಡಳು! ತಿರಿಗಿ ಆಕೆಯ ನಟನಾಶಕ್ತಿ ಕಲಾಶಕ್ತಿಗಳು ಬೆಳಗಿದವು!

ಅವಳು ಅಪೂರ್ವ ನಟಿಯಾಗಿ ಇಂದು ಮೆರೆಯುತ್ತಾಳೆ. ಕಳೆದ ಮಾರ್ಚಿ ಳಂದು ಜೀನ್ ಮಾರ್ಕಿ ಎಂಬವನೊಡನೆ ವಿವಾಹಮಾಡಿಕೊಂಡಿದ್ದಾಳೆ. ಜೀನ್ ಮಾರ್ಕಿಯು ಮೊದಲು ಜೋನ್ ಬೆನಿಟಳನ್ನು ವಿವಾಹವಾಗಿದ್ದನು.

## ಸಿನೆಮಾ ಸುದ್ದಿಗಳು

ಭವಾನೀ ಚಿತ್ರ ಕಂಪನಿಯ ಚಂಡಿಕಾ ಎಂಬ ಸುಂದರ ಸಾಮಾಜಿಕ ಚಿತ್ರವು ಕಳೆದ ವಾರ ಎಂ. ಪಿ. ಪಿ. ಸಿಯಲ್ಲಿ ತಯಾರಾಯಿತು.

★

‘ಫಿಲ್ಮ್ ಕಾರ್ಪೊರೇಶನ್ ಇಂಡಿಯದ ಭಕ್ತಿ ಚಿತ್ರವಾದ ‘ಸದ್ಗುರು ಕಬೀರ’ ಚಿತ್ರವು ತಯಾರಾಗುತ್ತಿದೆ. ಪಂಡಿತ ಓಂಕಾರನಾಥಜಿಯವರು ಪ್ರಧಾನ ಪಾತ್ರವಹಿಸುವರು.

★

ದೇವಕಿ ಬೋಸರ ಮುಂದಿನ ಚಿತ್ರವು ನರ್ತಕಿಯೆಂಬುದಾಗಿದೆ. ಬರುವ ವಾರ ಅದು ತಯಾರಿಗೆ ಸಿದ್ಧವಾಗುವುದು.

★

ದೇವಿಕಾ ರಾಣಿಯವರ ಅಭಿನಯವುಳ್ಳ ‘ಪ್ರೊಡಕ್ಷನ್ ನೋಸಿಕ್ಸ್ ಟೀನ್’ ಎಂಬ ಚಿತ್ರವನ್ನು ಬೊಂಬಯಿ ಟಾಕೀಸ್ ಚಿತ್ರ ಕಂಪನಿಯವರು ಸಂಪೂರ್ತಿಗೊಳಿಸುತ್ತಿದ್ದಾರೆ.

★

ಲೀಲಾ ಚಿಟ್ನೀಸರ ಮುಂದಿನ ಅಭಿನಯ ಚಿತ್ರವು ಅಜಾದ್ ಎಂಬುದು.

★

ಶಾಂತಾರಾಮರ ಮುಂದಿನ ಚಿತ್ರವಾದ ‘ಪಡೋಸಿ’ಯು ಹಿಂದೂ—ಮುಸ್ಲಿಂ ಐಕ್ಯದ ವಿಷಯವಾಗಿ ಅತ್ಯುತ್ತಮ ಚಿತ್ತಾಕರ್ಷಕ ಕಥೆಯಾಗಿದೆ.

★

ಸುದಾಮರ ಮುಂದಿನ ಚಿತ್ರದಲ್ಲಿ ಸಬಿತಾದೇವಿಯು ಅಭಿನಯಿಸುವರು.

★

ಅಮರ ಮುಲ್ಲೀಕರ ಮುಂದಿನ ಚಿತ್ರ ‘ನಟಿ’ಯಲ್ಲಿ ಸನ್ಯಾಲ್ ಮತ್ತು ಕನನ್ ಬಾಲಾ ಇವರು ಅಭಿನಯಿಸುವರು.

★


## ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ

O. P. No. 21/1940

1. ರಾಜೀವಿ ಯಾನೆ ಸರಸ್ವತಿ ಬಾಯಿ ಕೇಶವ ಪ್ರಭುರ ವಿಧವೆ ವ ಮಂಗಳೂರು ವೆಂಕಟ್ರೇಶ ಕಮ್ತಿರ ಮಗಳು—
2. ಗಿರಿಜ ಯಾನೆ ಶಾಂಭವಿಬಾಯಿ 1 ನೇಯವಳ ಮಗಳು— ಮಂಗಳೂರು ತಾಲೂಕು ಬಾಕ ಗ್ರಾಮದಲ್ಲಿರುವವರು —

ಅರ್ಜಿದಾರರು

ಮತ್ತು

ರಾಮಕೃಷ್ಣ ರಾಯ ಪ್ರಭುರ ಮಗ ಮಂಗಳೂರು ತಾಲೂಕು ಮಂಗ್ಳೂರು ಗ್ರಾಮದಲ್ಲಿರುವವ. ಎದ್ರಿ

ಸದ್ರಿ ಎದ್ರಿಗೂ ವ ಇತರ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ಮಂಗಳೂರು ತಾಲೂಕು ಮಾನಂಪಾಡಿ ಗ್ರಾಮದಲ್ಲಿರುವ ವಿನಾಯಕ ಯಾನೆ ಅಪ್ಪ ಕಮ್ತಿರ ಮಗ ಕೊಲಕಾಡಿ ಸರ್ವೋತ್ತಮ ಕಮ್ತಿರು ಕಳೆದ 24—10—1921ರಲ್ಲಿ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ R. E.P. No. 236/1919 ವ R. E.A No. 275/1921ನೇ ವ್ಯವಹರಣೆಯಲ್ಲಿ ರೂಪಾಯಿ 625-2-0ಕ್ಕೆ ಇಂಡೆಮ್ನಿಟಿ ಬೋಂಡ ಬರಕೊಟ್ಟು ಪಡೆದ ಐವೇಜಿನಲ್ಲಿ ಅರ್ಜಿದಾರರಿಗೆ ವಸೂಲು ಬಂದದ್ದು ಜ್ಯಾತಾ ಇನ್ನು ಬ[illegible] ತಕ್ಕ ಬಾಕಿಯಿರುವ ಅಸ್ಲು ರೂ. 225-0-[illegible] ವ ಬಡ್ಡಿ ರೂ. 33-9-6 ಕೂಡ ರೂಪಾಯಿ 261-9-6ನ್ನು ಅವರಿಂದ ಪಡಿಯುವರೆ ತಮ[illegible] ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕಾ[illegible] ಅರ್ಜಿದಾರರು ದಾಖ್ಲುಮಾಡಿದ ಮೇಲ್ಕಂ[illegible] O. P. No. 21/40ನೇ ಅರ್ಜಿಯು ತನಿ[illegible] ಬಗ್ಗೆ ತಾ. 28—3—40ಕ್ಕೆ ಇಟ್ಟಿರುತ್ತದೆ. [illegible] ಬಗ್ಗೆ ಯಾರದಾದರೂ ಆಕ್ಷೇಪಗಳು ಇರುವ[illegible]ದಾದರೆ ಅದನ್ನು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ತಾ. 28-3-40ನೇ ದಿವಸ ಹಗಲು 10ಘಂಟೆ[illegible] ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರ[illegible] ಮಾಡತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತಿ[illegible] ರ್ಮಾನಿಸಲ್ಪಡುವದು.

ಕೋರ್ಟಿನ ಹುಕುಂ ಪ್ರಕಾರ, ಈ ಮೂಲ[illegible] ತಿಳಿಸುತ್ತದೆ.

Krkala } K. Vasudeva Kamath,
6-3-1940 } Advocate for Petitioner

# ಹೊಲೆಯ ಹುಡುಗಿ!

[೭ನೆಯ ಪುಟದಿಂದ ಮುಂದುವರಿದುದು]

ಮೇಲೂ ತಮ್ಮ ಜಾತಿ ಅಭಿಮಾನವು ನಷ್ಟವಾಗಲಿಲ್ಲ'!

ಹೊಲೆಯ ಹುಡುಗಿಯ ಮಾತು ಕೇಳಿ ಪುರಾಣಿಕರು ಚಕಿತರಾದರು ಆಲೋಚನಾಪರರಾದ ಅವರ ಮನಸ್ಸಿನಲ್ಲಿ ಅವಳ ಮಾತಿಗೆ ಯಾವ ಉತ್ತರವೂ ಹೊಳೆಯಲಿಲ್ಲ. ಆದರೂ ಅವರು—'ಹುಡುಗಿ! ಶಾಸ್ತ್ರಾರ್ಥ, ಪುರಾಣಶ್ರವಣ ಆಗಬೇಕು ಎನ್ನುತಿದ್ದೆಯಲ್ಲ. ಏನದು ಅಂದರು

'ಸ್ವಾಮಿ, ದೇವರ ರಾಜ್ಯದಲ್ಲಿ ಉಚ್ಚ ನೀಚ ಬೇಧವಿಲ್ಲ ಜಾತಿಮತ ಬೇಧವಿಲ್ಲ ಮತ್ತೆ ದೇವರ ಪ್ರತಿನಿಧಿಗಳಾದ ತಾವು ಈ ಬೇಧವನ್ನು ಕಲ್ಪಿಸಿಕೊಳ್ಳುವದು ಯಾಕೆ?'

'ಹುಡುಗಿ' ನಮ್ಮ ಧರ್ಮಸಿದ್ಧಾಂತವು ಹಾಗೆ ಇದೆ' ಬಹು ಪ್ರಾಚೀನ ಕಾಲದಿಂದ ನಡೆದು ಬಂದ ಪದ್ಧತಿ ಅದು'

ಸ್ವಾಮಿ' ಆದ ಪುರಾತನ ಧರ್ಮ ಸಿದ್ಧಾಂತವೇ ಅಥವಾ ತಮ್ಮಂತವರು ಮಾಡಿಟ್ಟ ಆಚಾರ ಪದ್ಧತಿಯೇ, ಹೇಳುವದು ಕಠಿನವಾಗಿದೆ ಸ್ವಾಮಿ' ವರ್ಣ ಸಿದ್ಧಾಂತವನ್ನು ಅನುಸರಿಸುವ ಬ್ರಾಹ್ಮಣರು ಹೇಗೆ ಚಾಂಡಾಲರಾಗುವರ? ಮತ್ತೆ ಚಾಂಡಾಲರಾಗಿದ್ದವರು ಹೇಗೆ ಮಹಾತ್ಮರ ಪದವಿಗೆ ಬರಬಹುದು? ಶಾಸ್ತ್ರಗಳಲ್ಲಿ ಏನು ಹೇಳಿದೆ?'

'ಗುಣ ಕರ್ಮ ಭೇದದಿಂದ ಬ್ರಾಹ್ಮಣನು ಚಾಂಡಾಲನಾಗುವನು, ಚಾಂಡಾಲನು ಬ್ರಾಹ್ಮಣನಾಗುವನು'

'ಸ್ವಾಮಿ' ತಮ್ಮಂಥವರು ಹೀಗೆ ಆಡಿಕೊಳ್ಳುತಿದ್ದಾರೆಯೇ ಹೊರತ ನಡೆದು ತೋರಿಸುವದಿಲ್ಲವಲ್ಲ?'

'ಅದು ನಮ್ಮ ಆಸ್ಪದದ ಬರ್ಥತೆಯಿಂದಾಗಿರಬಹುದು ಶಾಸ್ತ್ರದ ಮಾತಿಲ್ಲ'

'ಹಾಗಾದರೆ ನಾನ-ಹೊಲೆಯ ಹುಡುಗಿ—ಉತ್ತಮ ಗುಣ ಮತ್ತು ಸತ್ಕರ್ಮಗಳಿಂದ ಬ್ರಾಹ್ಮಣ ಕುಮಾರಿ—ಆಗಬಹುದೆ?'

'ಆಗಬಹುದು, ಆದರೆ ಅದಕ್ಕೆ ಪ್ರಾಯಶ್ಚಿತ್ತ ಮತ್ತು ಶುದ್ಧಿ ಆಗತ್ಯವುಂಟು'

ಸ್ವಾಮಿ' ಯಾರ ಆತ್ಮವು ಎಂದಿಗೂ ಅಶುದ್ಧವಲ್ಲವೋ ಅವರಿಗೆ ಶುದ್ಧಿ ಯಾಕೆ? ಆತ್ಮವು ಪತಿತವಾಗುವ ಯಾವ ಕಾರ್ಯವನ್ನೂ ನಾನು ಮಾಡಲಿಲ್ಲ'

ಪುರಾಣಿಕರು ವಿಸ್ಮಿತ ನೇತ್ರಗಳಿಂದ ಹೊಲೆಯ ಹುಡುಗಿಯನ್ನು ನೋಡಿದರು. ಆಗ ತಾನೇ ಸೂರ್ಯನು ಮುಳುಗಿ ಹುಣ್ಣಿಮೆಯ ಚಂದ್ರನು ಪೂರ್ವದಿಗಂತದಲ್ಲಿ ಉದಯಿಸಿದ್ದನು. ತಿಂಗಳ ಬೆಳಕು ಹುಟ್ಟು ಚೆಲ್ಲಿದಂತೆ ನಾಲ್ಕು ಕಡೆಯ ಪ್ರಕೃತಿ ಸೌಂದರ್ಯವನ್ನು ನೂರ್ಮಡಿ ಹೆಚ್ಚಿಸಿತ್ತು. ಶೀತಲ ಸುಗಂಧಿತ ಮಂದ ಮಾರುತವು ಮೆಲ್ಲಗೆ ಬೀಸಿ ಹೊಲೆಯ ಹುಡುಗಿಯ ಮೈಸೆರಗಿನೊಳಗಿಂದ ಹುರುಳಿಸುತ್ತಿ ಕೊಂಡು ಪುರಾಣಿಕರ ಮೋರೆಯ ಮೇಲಿಂದ ಏರಿ ಹೋಗುತಿತ್ತು ಅವರು ಹೇಳಿದರು—'ಹೌದು ದೇವಿ' ನೀನು ಬ್ರಾಹ್ಮಣಿ ಆಗಬಹುದು; ಮತ್ತೆ ನಾನು ಬ್ರಾಹ್ಮಣ

'ಸ್ವಾಮಿ, ತಮ್ಮ ಕೊನೆಯ ಮಾತುಗಳ ಅರ್ಥವಾಗಲಿಲ್ಲ ವಿವರಿಸಿ ಹೇಳಿ'

ದೇವಿ' ಹೇಳುವದರಿಂದ ಏನು ಪ್ರಯೋಜನ? ಕೇಳು ಆಗ ನಾನು ನಿನ್ನವ—ನೀನು ನನ್ನವಳೂ ಆಗಬಹುದು'

'ಚೆನ್ನಾಯಿತು' ಎಂದು ಹೇಳಿ ಅವಳು ಎದ್ದು ನಿಂತಳು ಆ ಮೋಹಿನಿ ಮೂರ್ತಿಯನ್ನು ನೋಡಿ ತಡೆಯಲಾರದ ಪುರಾಣಿಕರೂ ಎದ್ದು ನಿಂತರು ಸ್ವಾಮಿ, ಸ್ವಲ್ಪ ತಡೆಯಿರಿ, ತಮ್ಮ ಬ್ರಾಹ್ಮಣತ್ವದ ದುರಭಿಮಾನವು ಚೂರು ಚೂರು ಆದಾಗ ತಾನೇ ನಾನು ನಿಮ್ಮವಳಾಗಬಲ್ಲೆ

ಇಲ್ಲ ದೇವಿ ನೀನು ಬ್ರಾಹ್ಮಣ'

ಇಲ್ಲ ಸ್ವಾಮಿ' ನಾನು ಬ್ರಾಹ್ಮಣಿಯಾಗಿ ನೀವು ನನ್ನನ್ನು ಸ್ವೀಕರಿಸಲಾರಿರಿ ನೀವು ಬ್ರಾಹ್ಮಣರಾಗಿಯೂ ನನ್ನನ್ನು ಸ್ವೀಕರಿಸಲಾರಿರಿ ನೀವು ಬ್ರಾಹ್ಮಣರ, ಅಸ್ಪೃಶ್ಯರನ್ನು ಹೊಲೆಯರನ್ನಾಗಿ ಮಾಡಿ ಸ್ವತ ಹೊಲೆಯರಾಗಿದ್ದೀರಿ ಆದದರಿಂದ ಮೊದಲು ನೀವು ನನ್ನ ಹಾಗೆ ಹೊಲೆಯರಾಗಿರಿ ಇಲ್ಲವಾದರೆ ನೀವು ಒಂದ ದಾರಿ ಹಿಡಿದು ಹೋಗಬಹುದ

ಪುರಾಣಿಕರು ಕ್ಷಣಕಾಲ ಆಲೋಚಿಸಿದರು ಹೊಲೆಯ ಹುಡುಗಿಯು ಅಲ್ಲಿಂದ ಹೊರಟು ಹೋಗಲಿಕ್ಕೆ ಒಂದು ಹೆಜ್ಜೆ ಇಟ್ಟಿದ್ದಳು ಅವರು ಅದನ್ನು ನೋಡಿದರ ಅವರು ಹೇಳಿದರು—'ದೇವಿ' ನೀನು ಹೇಳುವದು ನಿಜ. ನಮ್ಮ ಬ್ರಾಹ್ಮಣರ ಮುಕ್ತಿಯು, ನಾವು ನಿಮ್ಮಂತೆ ಹೊಲೆಯರಾಗಿಯೇ ಆಗಬೇಕ' ಪುರಾಣಿಕರ ಕಣ್ಣುಗಳಿಂದ ಪಶ್ಚಾತ್ತಾಪದ ಅಶ್ರುಬಿಂದುಗಳ ತೊಟ್ಟಿಕ್ಕಿದವು ಬ್ರಾಹ್ಮಣದೇವರು' ಹೊಲೆಯ ಹುಡುಗಿಗೆ ಆತ್ಮಾರ್ಪಣ ಮಾಡಿದರು

ಅವಳು ಅಂದಳು—ಸ್ವಾಮಿ ಹಾಗಾದರೆ ತಮ್ಮ ಚಿತ್ತವಿದ್ದಂತೆ ಆಗಲಿ ಇಂದಿನಿಂದ ನೀವು ಬ್ರಾಹ್ಮಣರಲ್ಲ ನಾನು ಹೊಲತಿಯಲ್ಲ ಜಾತಿಯ ದುರಭಿಮಾನದಿಂದ ಇಷ್ಟರ ತನಕ ಬೇರೆಬೇರೆ—ಇಬ್ಬರಾಗಿದ್ದ ನಾವು, ಇನ್ನು ಪ್ರೇಮ ಬಂಧನದಿಂದ ಒಂದಾಗುವೆವು ನಾವು ಒಂದಾಗಿ ನಮ್ಮೊಳಗಿನ ಹೊಲೆತನವನ್ನು ಮಾತ್ರವಲ್ಲ ಪ್ರಪಂಚದೊಳಗಿನ ಹೊಲೆತನವನ್ನೂ ನಾಶ ಮಾಡುವೆವು.'

ಆ ದಿವ್ಯ ಸಂಬಂಧವನ್ನು ನೋಡಿ ಆಕಾಶದೊಳಗಿನ ಹುಣ್ಣಿಮೆಯ ಚಂದ್ರನು ನಲಿನಲಿದು ಕುಣಿದನು. ಮಾನವತೆಯ ವಿಜಯವಾಯಿತೆಂದು ಅವನು ದೇವಲೋಕದಲ್ಲಿ ಸಾರಿದನು.

(ಆಧಾರದಿಂದ.)



ನಾವೆಲ್ಲರೂ ಅದನ್ನು
ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ ಕುಟಿಕೂರಾ ಟಾಲ್ಕಮು (Cuticura Talcum) ಚರ್ಮವನ್ನು ತಂಪುಗೊಳಿಸಿ ಮನಸಿಗೆ ಅಹ್ಲಾದವನ್ನುಂಟುಮಾಡುತ್ತದೆ ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರತ್ತದೆ ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸುವುದಾಗಿರುತ್ತದೆಮಾತ್ರವಲ್ಲದೆ ಒಮ್ಮೆನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರ ಇದನ್ನೆ ಶಿಫಾರಸು ಮಾಡುತ್ತಾರೆ ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು

ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮು (Cuticura Talcum) ಬಹಳ ಹರ್ಷದಾಯಕವಾದುದು

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

THE

BANK OF MANGALORE LTD.,

MANGALORE

ESTD 1931

branches

Mudabidri & Padubidri.

Fixed Deposits will be received at following rates of interest.

| | | |
|---|---|---|
| For 3 month | | 3½% |
| 6 | | 4% |
| „ 12 „ | | 5% |
| „ 24 „ | & upwards | 5½% |

Interest Payable Quarterly

***Savings Bank deposit** 2½% **on daily balances.***

**All kinds of banking business transacted**

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್**

**ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು**

## ಸ್ವೀಕಾರ-ವಿಮರ್ಶೆ

**ವರ್ಧಾ ಯಾತ್ರೆ**:—ಲೇಖಕರು: ಸಿದ್ಧವನಹಳ್ಳಿ ಕೃಷ್ಣ ಶರ್ಮಾ, ಪ್ರಕಾಶಕರು: ಸಾಧನ ಮುದ್ರಣಾಲಯ, ಧಾರವಾಡ. ಕ್ರೌನ್ ೧/೮ ಆಕಾರದ ೧೪೬+೭ ಪುಟಗಳು. ಬೆಲೆ ರೂಪಾಯಿ ಒಂದು.

ಭಾರತದಲ್ಲಿ ಇಂದಿನ ಈ ಕಾಲವನ್ನು 'ಗಾಂಧೀಯುಗ'ವೆಂದು ಕರೆಯುವರು. ಗಾಂಧೀ ತತ್ವಗಳ ಪ್ರಸಾರವು ಸಾಕಷ್ಟು ಆಗಿ ಜನಮನದಲ್ಲಿ ಅವುಗಳು ನೆಲೆನಿಲ್ಲುವಂತೆ ಮಾಡುವ ಉತ್ತಮ ಸಾಹಿತ್ಯಗಳು ಕನ್ನಡದಲ್ಲಿ ಹಲವು ಹುಟ್ಟಬೇಕಿತ್ತಾದರೂ, ಹುಟ್ಟದೆ ಇರುವ ಲೋಪವನ್ನು ಪ್ರಕೃತ ಪುಸ್ತಕದ ಲೇಖಕರು ಪೂರ್ತಿಗೊಳಿಸಲು ಪ್ರಯತ್ನಿಸಿದ್ದಾರೆ. ಅಲ್ಲಲ್ಲಿ ಆಗಾಗ, ಕೆಲ ವರ್ಷಗಳ ಹಿಂದೆ ಗಾಂಧೀಜಿಯವರು ಬರೆದ ಕೆಲವು ಪುಸ್ತಕಗಳ ಕನ್ನಡ ಭಾಷಾಂತರಗಳನ್ನು ಓದಿ, ಇತ್ತೀಚೆಗೆ ಪತ್ರಿಕೆಗಳಲ್ಲಿ ಅವರು ಕೊಡುತ್ತಿರುವ ಲೇಖನಗಳ ಪರಿವರ್ತನೆಗಳ ನ್ನೋದಿ ರಾಜಕೀಯ ವಿಚಾರದವರು ಒಂದು ರೀತಿಯಿಂದ ಗಾಂಧೀಯುಗವನ್ನು ಅರ್ಥಮಾಡಿಕೊಂಡಿದ್ದಾರೆ. ಅದರೆ ಲೋಕಪೂಜ್ಯರಾದ ಮಹಾತ್ಮರೂ, ಅವರ ಪುಣ್ಯಾಶ್ರಮದ ಸನ್ನಿವೇಶ, ಅವರ ಸುತ್ತಲಿರುವ ರಾಜಕೀಯ ಮಹಂತರ ಪರಿವಾರ ಇವುಗಳನ್ನು ಪ್ರತ್ಯಕ್ಷ ದರ್ಶನ ಮಾಡಲು ಹೊರಟ ಒಬ್ಬ ರಾಜಕೀಯ ಪಟುವೂ, ಸಾಹಿತ್ಯ ಕುಶಲನೂ, ಎಲ್ಲದಕ್ಕಿಂತಲೂ ಹೆಚ್ಚಾಗಿ ಗಾಂಧೀ ಭಕ್ತನಾದ ರಸಿಕನೊಬ್ಬನು ಬರೆದ 'ವರ್ಧಾ ಯಾತ್ರೆ'ಯ ವಿಸ್ತಾರವಾದ ವಿವರವು ಎಷ್ಟು ವಾಚನೀಯವಾಗಿರಬಹುದೆಂಬುದನ್ನು ಹೇಳಿ ತಿಳಿಸುವುದಕ್ಕಿಂತ ಶ್ರೀ ಎಸ್. ಕೃಷ್ಣ ಶರ್ಮರ ಪುಸ್ತಕವನ್ನು ಓದಿ ನೋಡಿರೆನ್ನುವುದೇ ಯೋಗ್ಯ ಸೂಚನೆಯಾಗಬಹುದು.

ಈ ಪುಸ್ತಕಕ್ಕೆ ಕರ್ನಾಟಕದ ಇಬ್ಬರು ಹೆಸರಾಂತ ಹಿರಿಯರು, ಮುನ್ನುಡಿಗಳ ಮಂಗಳವನ್ನು ಮಾಡಿದ್ದಾರೆ. ಒಬ್ಬರು ಪ್ರಸಿದ್ಧ ಪತ್ರಿಕೋದ್ಯಮಿಗಳಾದ ಶ್ರೀ ತಿ. ತಾ. ಶರ್ಮರು, ಇನ್ನೊಬ್ಬರು ಪ್ರಸಿದ್ಧ ಕವಿಗಳಾದ ಶ್ರೀ ದ. ರಾ. ಬೇಂದ್ರೆಯವರು. ಅವರೀರ್ವರ ಮುನ್ನುಡಿ ಸಾರಥ್ಯದಿಂದ 'ವರ್ಧಾ ಯಾತ್ರೆ'ಯು ಕನ್ನಡ ವಾಚಕ ಲೋಕದಲ್ಲಿ ವಿಜಯ ಯಾತ್ರೆಯನ್ನು ಮಾಡುವಷ್ಟು ಪ್ರಭಾವ ಪೂರ್ಣವಾಗಿದೆ.

ಹೈದರಾಬಾದಿನ ಸತ್ಯಾಗ್ರಹಿಗಳಾದ ಶ್ರೀ ಕೃಷ್ಣ ಶರ್ಮರು ರಾಜಕೀಯ ಕಾರಣದ ನಿಮಿತ್ತವಾಗಿಯೂ, ಲೋಕವಂದ್ಯ ಮಹಾತ್ಮರ ದರ್ಶನದ ಆತ್ಮಪ್ರೇರಣೆಯ ನಿಮಿತ್ತವಾಗಿಯೂ ವರ್ಧಾ ಯಾತ್ರೆಗೆ ತೆರಳಿದವರು. ತಾವು ಇದೀ ಯಾತ್ರೆಯಲ್ಲಿ ಕಂಡ ಅನುಭವಗಳನ್ನು ದಿನಚರಿಯಾಗಿ ಬರೆದಿಟ್ಟುಕೊಂಡರು. ದಿನಚರಿಯನ್ನು ಉದ್ದೇಶ ಪೂರ್ವಕವಾಗಿ ಶ್ರೀ ಮಂಜಪ್ಪನವರ ಪ್ರೇರಣೆಯಿಂದ ಬರೆದರು; ಗಾಂಧೀಜಿಯವರ ಆಶ್ರಮದ ಎರಡನೆಯ ದಿಲ್ಲಿಯನ್ನು ಸಂದರ್ಶಿಸಿದ ಉಜ್ವಲ ಭಕ್ತಿಭಾವನೆಯಿಂದ ಬರೆದರು; ಅವರ ವಿವರಗಳ ಕಥನರೀತಿಯು ರಮಣೀಯವಾಗಿ ಸರಸವಾಗಿ ವಾಚಕರ ಮನಸ್ಸನ್ನು ಒಲಿಸಿ ಸೆಳೆದುಕೊಂಡು ಮುಂದುವರಿಯುತ್ತದೆ.

ಗಾಂಧೀಜಿಯವರ ಸುತ್ತಲಿನ ಮಹಂತರ ಪರಿವಾರದಲ್ಲಿ ಹೆಚ್ಚಿನ ಉದಾರಿಗಳಾಗಿರುವ ದಾನಶೂರ ಶೇಠ್ ಜಮ್ನಾಲಾಲ ಬಜಾಜರು, ಅವರು ಅತಿಥಿಗಳಿಗೆ ಮುಕ್ತದ್ವಾರವಾಗಿರಿಸಿದ ಬಜಾಜವಾಡಿಯ ಬಂಗಲೆ, ಗ್ರಾಮೋದ್ಯೋಗದ ಕುಮಾರಪ್ಪನವರು, ಅವರು ಬಿಡುವಿಲ್ಲದೆ ದುಡಿಯುವ ಮಗನವಾಡಿ, ಸಂಯಮಿ ಶ್ರೇಷ್ಠ ಆಚಾರ್ಯ ವಿನೋಬಾ, ಆಶ್ರಮದ್ವಾರಪಾಲಕಿಯಾದ ಮೀರಾಬೆನ್, ಗಾಂಧಿ ಸೇವಾನಿರತೆ ಡಾಕ್ಟರ್ ಸುಶೀಲಾ ನಾಯರ್, ಪಟ್ಟಶಿಷ್ಯ ಮತ್ತು ಆಪ್ತಸಚಿವ ಮಹಾದೇವ ದೇಸಾಯಿ, ಆ ಮೇಲೆ ಅವರ ಸಂದರ್ಶನಕ್ಕೆ ಆಗಾಗ ಬರುವ ತಾರ್ಕಿಕ ಸಿಂಹ ರಾಜಾಜಿ, ರಣಧೀರ ಸರ್ದಾರ, ಆಂಧ್ರನಾಯಕ ಪಟ್ಟಾಭಿ, ಆಚಾರ್ಯ ಕೃಪಾಲನಿ, ಇವರ ಪರಿಚಯಗಳನ್ನು ಗಾಂಧೀಜಿಯವರೊಡನೆ ಅವರಿಗಿರುವ ಸಮೀಪ ಸಂಬಂಧಗಳನ್ನು ಲೇಖಕರು ಮೋಹಕವಾಗಿ ಬರೆದಿದ್ದಾರೆ. ಈ ಸಂದರ್ಭದಲ್ಲಿ ಪುಸ್ತಕವನ್ನು ಓದುತ್ತಿದ್ದಂತೆ ಪಂಡಿತ ನೆಹರುಗಳ ವಿಷಯವಾಗಿ ಒಂದು ಅಧ್ಯಾಯವನ್ನು ಬೆಳೆಸಿಕೊಟ್ಟಿದ್ದರೆ ಆಗುತ್ತಿತ್ತು ಎಂದು ನಮಗೆ ಅನ್ನಿಸುತ್ತದೆ. ಈ ಎಲ್ಲಾ ವಿವರಣೆಗಳು ಲೇಖಕರ ತಮ್ಮದೇ ಆದ ವಿಶಿಷ್ಟವೂ ಸುಂದರವೂ ಆದ ಶೈಲಿಯಿಂದ ರಂಜಕವಾಗಿವೆ.

ಗಾಂಧೀಜಿಯವರ ಪರ್ಣಕುಟಿ, ಬಜಾಜವಾಡಿ, ಗಾಂಧಿ ಚೌಕ, ಮಗನ್ ಸಂಗ್ರಹಾಲಯ, ಮಗನವಾಡಿಯ ಹೆಬ್ಬಾಗಿಲು, ಜಮುನಾಕುಟೀರ, ಅತಿಥಿಭವನ, ಆಚಾರ್ಯ ವಿನೋಬಾ, ಗಾಂಧೀಜೀ ಸವಾರಿ ಮಹಿಳಾಶ್ರಮಗಳೆಂಬ ವರ್ಧಾದ ಚಿತ್ರಗಳನ್ನು ಕೊಟ್ಟು ಪುಸ್ತಕವನ್ನು ಮತ್ತಷ್ಟು ಅಂದಗೊಳಿಸಿದ್ದಾರೆ.

ಭಾಷೆಯು ಕಥನರೀತಿಗೆ ಒಪ್ಪಿದುದಾಗಿದೆ. ಇಂಗ್ಲೀಷು ಮತ್ತು ಗ್ರಾಮ್ಯಭಾಷಾ ಮಿಶ್ರಣವಿದ್ದರೂ ತಡೆಯಿಲ್ಲದೆ, ರುಚಿಕೆಡದೆ ಶೈಲಿಯು ಮುಂದೆ ಸಾಗಿದೆ.

ಇದನ್ನು ಮುದ್ದಾಗಿ ಮುದ್ರಿಸಿ ಪ್ರಕಾಶಿಸಿದ ಧಾರವಾಡ ಸಾಧನ ಮುದ್ರಣಾಲಯದ ಶೇಷಗಿರಿರಾವ ಗೋವಿಂದರಾವ ಕುಲಕರ್ಣಿಯವರು ತಮ್ಮ ಕನ್ನಡ ಪ್ರೇಮದಿಂದ ಕನ್ನಡ ವಾಚಕರಿಗೆ ಒಂದು ಹೊಸಬಗೆಯ ಸುಂದರ ಸಾಹಿತ್ಯದ ಸವಿಯುಣಿಸನ್ನು ಒದಗಿಸಿ ಕೊಟ್ಟಿದ್ದಾರೆ.

ಕಯ್ಯಾರ.




ಪೂರ್ಣಾರೋಗ್ಯವನ್ನೀವ ಶಕ್ತಿವರ್ಧಕ

ಜೀವಾಮೃತವು ಅಶಕ್ತರಲಿ ಆರೋಗ್ಯವನ್ನೂ ಬಲವನ್ನೂ ವರ್ಧಿಸುವುದು. ಅದರಲ್ಲಿಯ ರೋಗದಿಂದ ಮುಕ್ತರಾಗಿ ಗುಣಹೊಂದುತ್ತಿರುವರಲ್ಲಿ ಉತ್ತಮ ರೀತಿಯ ಮಾರ್ಪಾಟನ್ನುಂಟುಮಾಡುವುದು ರೋಗದಿಂದುಂಟಾದ ಅಶಕ್ತಿಯನ್ನು ಸ್ವಲ್ಪ ಸಮಯದೊಳಗಾಗಿಯೇ ಹೋಗಲಾಡಿಸಿ ರೋಗದಿಂದ ಅಬಲತೆಹೊಂದಿದ ನರನಾಡಿಗಳಿಗೂ ದೇಹಕ್ಕೂ ಯೋಗ್ಯವಾದ ಪೋಷಣೆಯನ್ನೀಯುವುದು ಸಾಮಾನ್ಯ ಮನುಷ್ಯರು ಇದನ್ನು ಸೇವಿಸಿದರೆ ಪ್ರತಿದಿವಸದ ಕೆಲಸಕ್ಕೆ ಉತ್ತಮವಾದ ಪ್ರೋತ್ಸಾಹವನ್ನೂ ಚೈತನ್ಯವು ಸಿಗುವುದು

ರೋಗವುಳ್ಳವರು ಅಥವಾ

ಚಟಲಾಗು ದರ್ಮಾರ್ಥ ಆರೋಗ್ಯವಂತರು

ಜೀವಾಮೃತ

ವನ್ನು ಸೇವಿಸುವುದು ಬಹಳ ಉತ್ತಮ

ಎಲ್ಲಾ ಕೆಮಿಸ್ಟರಲ್ಲಿ ಮಾರಲ್ಪಡುತ್ತದೆ ಅಥವಾ ಪಿ ಬ ನಂ 287 ಮದ್ರಾಸು

ಸ್ಥಳೀಯ ಏಜಂಟರ — ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

NACET

De Luxe

SLOTTED BLADES

ಈ ಹೊಸತಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳ ಹಿಂದಿನ ಜನಪ್ರಿಯವಾದ ನೆಸೆಟ್ ಬ್ಲೇಡುಗಳಿಂದ ಸ್ಥಾಪಿತವಾದ ಉತ್ತಮ ಮುಖಕ್ಷೌರದ ಸಂಪ್ರದಾಯವನ್ನು ಮುಂದುವರಿಸಲು ತಯಾರಿಸಿದ್ದಾಗಿರುತ್ತದೆ ಆದರೆ ಈ ಬಾರಿ ಕೆಲವು ಸುಧಾರಣೆಯಿಂದೊಡಗೂಡಿದೆ ಈ ಹೊಸ ಬ್ಲೇಡುಗಳ ನಡುವಿನಲ್ಲಿ "ಸಿಗಿಯಲ್ಪಟ್ಟಿವೆ" ಇದನ್ನು ಒಂದು ಬಾರಿ ನೀವೆ ಪರೀಕ್ಷಿಸಿರಿ ಆಗ ಇದರ ಕೊಂಚ ಏರಿಸಲ್ಪಟ್ಟ ಬೆಲೆಯ ಯೋಗ್ಯತೆಯು ನಿಮಗೆ ತಿಳಿಯುವುದು ಇಷ್ಟಲ್ಲದೆ ಇದು ಹೊಸ ಮತ್ತು ಹಳೆ ಮಾದರಿಯ ರೇಜರುಗಳಿಗೆ ಅಚ್ಚುಕಟ್ಟಾಗಿರುತ್ತವೆ




★ ★ ★

ಧರ್ಮಾರ್ಥ ಇಸ್ತ್ರೀಟು ಪೆಟ್ಟಿಗೆಯನ್ನು ಪಡೆಯಿರಿ

ಈ ಧರ್ಮಾರ್ಥದ ಇಸ್ತ್ರಿಟು ಪೆಟ್ಟಿಗೆಯನು ಪಡೆಯಲು 'NACET BLADES ಎಂದು ಬರುವಂತೆ ಉಪಯೋಗಿಸಿದ 10 ಬ್ಲೇಡುಗಳನ್ನು ಕೂಡಿಸಿ ಇದೀ ಸೆಟ್ಟನ್ನು ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯಾ) ಲಿಮಿಟೆಡ್,

1[illegible], ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು ಇವರಿಗೆ ಕಳುಹಿಸಿರಿ




ಇಂಗ್ಲೆಂಡಿನ ಮಾಜಿ ಯುದ್ಧ ಮಂತ್ರಿಗಳಾದ ಹೋರ್ ಬೆಲಿಶಾರವರು ಯುದ್ಧಾರಂಭದಂದು, ಅಸಂಖ್ಯ ಯುದ್ಧ ಸಾಧನಗಳನ್ನು ಒಟ್ಟುಗೂಡಿಸಲು ಹೆಚ್ಚಿನ ಹೊಣೆಗಾರಿಕೆ ವಹಿಸಿದ್ದರು.

◆

ಆ ಮೇಲೆ, ಪ್ರಧಾನ ಮಂತ್ರಿಯವರೊಡನೆ ಭಿನ್ನಾಭಿಪ್ರಾಯವುಂಟಾಗಲು, ತನ್ನ ಹೊಣೆಗಾರಿಕೆಯ ಸ್ಥಾನಕ್ಕೆ ರಾಜಿನಾಮೆ ಕೊಟ್ಟರು!

◆

ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟ ಮೇಲೆ, ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವ ಕೆಲಸವನ್ನು ಅವರು ಕೈಕೊಂಡಿರುವರು!

◆

ಬೆಲಿಶರ ಲೇಖನಗಳು ಬ್ರಿಟಿಷ್ ಸರಕಾರದ ಅಭಿಪ್ರಾಯವಾಗಿಲ್ಲವಾದರೂ, ಅದನ್ನು ಸರಕಾರವು ತಡೆಗಟ್ಟುವುದಿಲ್ಲ!

◆

ಜರ್ಮನಿಯು ಬ್ರಿಟನಿನ 'ಬ್ಲೋಕೇಡಿ'ನಿಂದ ಹೆದರಲಿಲ್ಲವೆಂದೂ ನೇಕಡಾ ಲ೩% ರಷ್ಟು ಜರ್ಮನಿಯು ಸ್ವಾವಲಂಬಿಯಾಗಿದೆಯೆಂದೂ, ಉಳಿದಂಶವನ್ನು ಅದು, ತನ್ನ ನೆರೆಯ ರಾಷ್ಟ್ರಗಳಿಂದ ಸುಲಭವಾಗಿ ತರಿಸಬಲ್ಲುದೆಂದೂ ಅವರ ಹೇಳಿಕೆಯಾಗಿದೆ!

◆

'ಯುದ್ಧ ಸಾಧನವನ್ನು ನಿರ್ಮಿಸಲು ಬೇಕಾದ ಹಲವು ಪ್ರಾಮುಖ್ಯ ವಸ್ತುಗಳನ್ನು ಒದಗಿಸುವ ರಾಷ್ಟ್ರಗಳಲ್ಲಿ ಜರ್ಮನಿಯು ಪ್ರಧಾನವಾದುದು.

◆

'ಸ್ವಿಡನಿನಿಂದ ಅದು ಬೇಕಾದಷ್ಟು ಕಬ್ಬಿಣವನ್ನು ತರಿಸಿಕೊಳ್ಳಬಲ್ಲುದು. ಎಣ್ಣೆಗಾಗಿ ಅದು ರುಮೇನಿಯದೊಡನೆ ದೊಡ್ಡ ಒಪ್ಪಂದವನ್ನು ಮಾಡಿಕೊಂಡರೆ ತನಗೆ ಬೇಕಾದ ಎಣ್ಣೆಯ ಅರ್ಧಾಂಶದಷ್ಟು ಜರ್ಮನಿಯೇ ಒದಗಿಸಬಲ್ಲುದು.

◆

'ಅದು ಮಾತ್ರವಲ್ಲದೆ, ಜರ್ಮನಿಯು ಇಟಲಿಯೊಡನೆ ವ್ಯಾಪಾರದ ಒಪ್ಪಂದವನ್ನು ಮಾಡಿಕೊಂಡಿರುವುದರಿಂದ ಅಲ್ಲಿಂದಲೂ ಬೇಕಾದ ಸಾಮಗ್ರಿಗಳನ್ನು ಅದು ತರಿಸಿಕೊಳ್ಳುವುದು.

◆

'ಇಷ್ಟರಿಂದ ಮಾತ್ರ ತೃಪ್ತಿ ಪಡೆಯದೆ ಜರ್ಮನಿಯು ಪ್ರಬಲ ಸಾಧನ ಸಾಮಗ್ರಿಗಳ ನಿಧಿಯೆನಿಸಿದ ರಶ್ಯದೊಡನೆಯೂ ಸ್ನೇಹದ ಸಂಬಂಧವನ್ನಿಟ್ಟುಕೊಂಡಿದೆ.

◆

'ಇಂದು ರಶ್ಯವು ಪಿನ್ನರೊಡನೆ ಯುದ್ಧ ಮಾಡುವುದನ್ನು ರಾಜಿಯಿಂದಲಾಗಲಿ, ಜಯದಿಂದಾಗಲಿ ಕೊನೆಗಾಣಿಸಿದ ಪಕ್ಷಕ್ಕೆ, ಜರ್ಮನಿಯು, ರಶ್ಯದಿಂದ ಬೇಕಾದಷ್ಟು ಗೋಧಿ, ಮತ್ತು ಎಣ್ಣೆಗಳನ್ನು ತರಿಸಿಕೊಳ್ಳಬಲ್ಲುದು.

◆

'ಆದ ಕಾರಣ, ರಶ್ಯವು ಯುದ್ಧದಿಂದ ನಿವೃತ್ತಿ ಹೊಂದಿದರೆ ಜರ್ಮನಿಗೆ ಅತ್ಯಂತ ಪ್ರಯೋಜನವು ದೊರಕಿ, ಅದು ಪ್ರಬಲವಾಗಬಹುದೆಂದು' ಹೋರ್ ಬೆಲಿಶರ ತರ್ಕವಾಗಿದೆ.

◆

ಆದುದರಿಂದ ಇಂದು ಪಿನ್ನರಿಗೆ ಪ್ರತ್ಯಕ್ಷ ಸಹಾಯವಮಾಡಬೇಕೆಂದು ಹೋರ್ ಬೆಲಿಶರು ವಾದಿಸುತ್ತಾರೆ. ಅದು ಮಾತ್ರವಲ್ಲದೆ. ಸ್ವೀಡನನ್ನು ಜರ್ಮನಿಯೊಡನೆ ಸಂಬಂಧ ಬೆಳೆಸಲು ಬಿಡಬಾರದೆಂದೂ ಅವರು ಹೇಳುತ್ತಾರೆ.

◆

ಬೆಲಿಶರು, ಹೀಗೆ ಜರ್ಮನಿಯ ವಿರುದ್ಧವಾಗಿ ತೀವ್ರ ಕಾದಾಟದ ಯೋಜನೆಯನ್ನು ಹೇಳುತ್ತಿರುವಲ್ಲಿ, ಇತ್ತ ಪಿನ್ನರಿಗೂ ರಶ್ಯನರಿಗೂ ಬೇಗನೇ ರಾಜಿಯಾಗುವ ಸೂಚನೆಗಳು ಇಂದಿನ ವಾರ್ತೆಯಿಂದ ತಿಳಿದುಬರುತ್ತಿದೆ.

◆

ರಶ್ಯಾ-ಪಿನ್‌ಲೆಂಡುಗಳ ಸಂಧಾನಕ್ಕೆ ಸ್ವೀಡನ್ ಮತ್ತು ಇಟಲಿಗಳು ಸಂಧಾನ ದೂತವಾಗಿರುವವು!

◆

ರಶ್ಯಾ-ಜರ್ಮನ್ ಪ್ಯಾಸಿಸ್ಟ್ ಪಕ್ಷವೊಂದು ಸ್ಥಾಪಿತವಾಗುವುದೆಂಬ ವಾರ್ತೆಯೊಂದೂ ಕೇಳಿ ಬರುತ್ತದೆ.

◆

ಇವು ಪ್ರಪಂಚ ಶಾಂತಿಯ ಪೂರ್ವ ಸೂಚನೆಗಳೆ?

◆

ಇಂಗ್ಲೆಂಡು ಈಗ ಉದಾಸೀನವಾಗಿದೆ! ಇಟಲಿಗೆ ಕಳುಹಿಸಿದ ೧೩ ಹಡಗು ಕಲ್ಲಿದ್ದಲುಗಳನ್ನು ಇಂಗ್ಲೆಂಡು ತಡೆ ಹಾಕದೆ ಬಿಟ್ಟುಕೊಟ್ಟಿದೆ!

◆

ಪ್ರಪಂಚ ಶಾಂತಿಯ ಪೂರ್ವ ಸೂಚನೆಯಾಗಿ ೩೦ ದಿನಗಳನ್ನು ಬೇಗನೇ, ಶಾಂತಿಯ ದಿನಗಳೆಂದು ಪ್ರಕಟಿಸುವುದೆಂದು ಅಮೇರಿಕವು ಹೇಳುತ್ತಿದೆ.

◆

ಶಾಂತಿಯ ಯತ್ನಗಳು ಕೃತಾರ್ಥವಾಗುವುದು ಸಾಧ್ಯವೆ? ಜಗತ್ತಿನ ಸಂಕಷ್ಟವನ್ನು ನಿವಾರಿಸಬಲ್ಲ ಮಹಾ ಮೇಧಾವಿಯಾದ ಅಂತಹ ರಾಜತಂತ್ರ ಪ್ರವೀಣನಿಗೆ ಅನಂತ ವಂದನೆಗಳು!

ಸ್ತ್ರೀಯರ ಆರೋಗ್ಯ ಸೌಭಾಗ್ಯಗಳಿಗೆ

ಲೋಧ್ರ

ತಯಾರಿಸುವವರು:
ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.
ಸ್ಥಳೀಯ ಸ್ಟೋಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

## ಊಟವಾದೊಡನೆ ನಿದ್ದೆ, ಎಂದರೆ ಹೊಟ್ಟೆಯು ಸರಿಯಿಲ್ಲವೆಂದರ್ಥ

ಊಟವಾದೊಡನೆ ನಿದ್ದೆಯು ಬರುವಂತಾಗಿ ಒಂದು ತರದ ಆಲಸ್ಯ ಉಂಟಾಗುವುದಾದರೆ ಅದು ನಿಮ್ಮ ಜೀರ್ಣಾಂಗಗಳಲ್ಲಿ ಮುಖ್ಯವಾದ ಹೊಟ್ಟೆಯು ಉತ್ತಮ ಆರೋಗ್ಯ ಸ್ಥಿತಿಯಲ್ಲಿರುವುದಿಲ್ಲವೆಂಬುದನ್ನು ಸೂಚಿಸುತ್ತದೆ.

ಜೀರ್ಣವು ಸರಿಯಾಗಿ ಆಗಬೇಕಾದರೆ ಹೊಟ್ಟೆಯ ಸ್ನಾಯುಗಳು ಸರಿಯಾಗಿ ಕೆಲಸ ಮಾಡುವುದರ ಮೇಲೆ ಹೊಂದಿಕೊಂಡಿದೆ. ಯಾಕೆಂದರೆ ಹೊಟ್ಟೆಯನ್ನು ಸೇರಿದ ಆಹಾರ ಕೂಡಲೇ ಜೀರ್ಣವಾಗಿ ಮುಂದಿನ ಪರಿಸ್ಥಿತಿಯನ್ನು ಪಡೆಯಲು ಯೋಗ್ಯವಾಗಿರಬೇಕು. ಹೊಟ್ಟೆಯ ಸ್ನಾಯುಗಳ ಕೆಲಸವು ದುರ್ಬಲವಾದರೆ ಜೀರ್ಣವು ಯಶಸ್ವಿಯಾಗಿ ನಡೆಯದು. ಊಟವಾದೊಡನೆ ನಿಮಗೆ ನಿದ್ದೆ ಬರಲು ಇದೇ ಕಾರಣ.

ಇದು ಯಾವ ಕಾರಣದಿಂದಲೂ ಬಂದಿದ್ದರೂ ಆ ಸ್ನಾಯುಗಳನ್ನು ಸರಿಯಾದ ಸ್ಥಿತಿಗೆ ತಂದು ಉದರಬೇನೆಯನ್ನು ನಿವಾರಿಸಿ ಜೀರ್ಣವನ್ನು ಸರಿಯಾಗಗೊಳಿಸುವುದು ಪ್ರಥಮ ಕರ್ತವ್ಯ. ಇದಕ್ಕೆ ಬೇಕಾದುದೇನಂದರೆ **ಜೀರ್ಣಾಂಗಗಳನ್ನು ಆರೋಗ್ಯ ಸ್ಥಿತಿಯಲ್ಲಿರಿಸುವುದು**— ಮೆಕ್ಲಿನ್ ಬ್ರ್ಯಾಂಡ್ ಸ್ಟೊಮಕ್ ಪೌಡರು ಆ ಕೆಲಸವನ್ನು ಪೂರ್ತಿಗೊಳಿಸುವುದು. ನೀವು ಪಡುತ್ತಿರುವ ಬಾಧೆಯನ್ನು ಹೋಗಲಾಡಿಸುವುದು. ಮತ್ತು ಪ್ರತೀ ಜೀರ್ಣಾಂಗವು ಪುನಃ ಸರಿಯಾಗಿ ಕೆಲಸಮಾಡುವಂತೆ ಮಾಡುವುದು.

ಇಂದೇ ಒಂದು ಬಾಟ್ಲಿ ಮೆಕ್ಲಿನ್ ಬ್ರ್ಯಾಂಡ್ ಸ್ಟೊಮಕ್ ಪೌಡರನ್ನು ಕೊಂಡುಕೊಳ್ಳಿರಿ.

Alex. C. Maclean

ಎಂಬ ದಸ್ಕತೂ ಬಾಟ್ಲಿಯ ಮೇಲೂ ದಸ್ಕತೂ, ಕೆಂಪು ಸೀಲೂ ಪೆಟ್ಟಿಗೆಯ ಮೇಲಿದ್ದರೆ ಮಾತ್ರ ಅದು ಖಾತ್ರಿಯಾದುದು. ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ. ಪೆಟ್ಟಿಗೆಗಳಲ್ಲಿರುವ ಬಾಟ್ಲಿಗಳಲ್ಲಿ (ಪುಡಿ ಯಾ ಮಾತ್ರೆ)ಯ ರೂಪದಲ್ಲಿ ದೊರಕುವುದು. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

711

# ವಿಜ್ಞಾನಯುಗ

**ಬೀಜ ಬಿತ್ತಲಿಕ್ಕೆ ಉತ್ತಮ ಸಮಯ**

ನೀರಿನ ಆಸರೆ ಇದ್ದು, ಚೆನ್ನಾಗಿ ಗೊಬ್ಬರ ಹಾಕಿ ಉತ್ತು ಬಿಟ್ಟರೆ, ಯಾವಾಗಲಾದರೂ ಬೀಜಬಿತ್ತಬಹುದು; ಅದರಿಂದ ಉತ್ತಮ ಬೆಳೆಯು ದೊರೆಯುತ್ತದೆ ಎಂದು ಕೃಷಿಕರು ತಿಳಿದಿರಬಹುದು. ಆದರೆ ಇದು ತಪ್ಪೆಂಬುದು ಯೂರೋಪದಲ್ಲಿ ಇತ್ತೀಚೆಗೆ ನಡೆದ ಕೆಲವು ಪರಿಶೋಧನೆಗಳಿಂದ ಗೊತ್ತಾಗುತ್ತದೆ. ಹುಣ್ಣಿಮೆಗೆ ಒಂದೆರಡು ದಿನಗಳಿರುವಾಗ ಬೀಜ ಬಿತ್ತಿದರೆ ಮಾತ್ರ ಒಳ್ಳೆ ಫಲಸಿಕ್ಕುವದೆಂದು ಅವರು ಕಂಡುಕೊಂಡಿರುವರು. ಹುಣ್ಣಿಮೆ ಸಮಯಕ್ಕೆ ಸರಿಯಾಗಿ ಬೀಜ ಬಿತ್ತಬೇಕೆಂಬುದೇ ಈಗ ಯೂರೋಪದ ಕೃಷಿಕರ ಪಲ್ಲವಿಯಾಗಿದೆ.

ಚಂದ್ರನು ಭೂಮಿಯನ್ನು ಆಕರ್ಷಿಸುತ್ತಾನೆಂಬುದು ನಿಜ. ಚಂದ್ರೋದಯದೊಂದಿಗೆ ನೀರಿನ ಭರತವಾರಂಭವಾಗಲಿಕ್ಕೆ ಈ ಆಕರ್ಷಣವೇ ಕಾರಣವಾಗಿದೆ. ಭರತ ಕಾಲದಲ್ಲಿ ಚಂದ್ರನು ಭೂಮಿ ಮೇಲಿನ ನೀರನ್ನು ತನ್ನ ಕಡೆಗೆ ಆಕರ್ಷಿಸುವಂತೆ ಭೂಮಿಯ ಹೊರ ಪದರಿನೊಳಗಿರುವ ಸಸ್ಯಾಹಾರ ಕರಗಿದ ನೀರನ್ನೂ ಕೂಡ ಭೂಮಿಯ ಮೇಲ್ಭಾಗದ ಕಡೆಗೆ ಆಕರ್ಷಿಸುತ್ತಿರಬೇಕು. ಮಣ್ಣಿನೊಳಗಿದ್ದ ಈ ನೀರು ಮೇಲ್ಭಾಗದ ಕಡೆಗೆ ಬರುವದರಿಂದ ಸಸ್ಯಗಳಿಗೆ ಬೇಕಾದ ಉತ್ತಮ ಆಹಾರವನ್ನು ಬೇರುಗಳು ಸಂಪಾದಿಸಿ ಅವಕ್ಕೆ ಕೊಡಲಿಕ್ಕೆ ಬಹಳ ಸುಲಭವಾಗುತ್ತದೆ. ಆದುದರಿಂದ ಹುಣ್ಣಿಮೆಗೆ ಒಂದೆರಡು ದಿನಗಳಿರುವಾಗ ಬೀಜಗಳನ್ನು ಬಿತ್ತಿದರೆ ಅಂಕುರ ಒಡದು ಬೇರಿಳಿಸಿದ ಸಣ್ಣ ಗಿಡಗಳಿಗೆ ಭೂಮಿಯ ಮೇಲ್ಭಾಗದಲ್ಲಿಯೇ ಸಿದ್ಧವಾದ ಆಹಾರವು ಚಿಕ್ಕ ಸಸ್ಯಗಳಿಗೆ ದೊರಕಿ ಅವು ಪುಷ್ಟವಾಗಿ ಬೆಳೆಯಲಿಕ್ಕೆ ಅನುಕೂಲವಾಗುತ್ತದೆ.

**ತಿಂಗಳಬೆಳಕಿನ ಅಮೋಘ ಗುಣ.**

ಭೂಮಿಯಲ್ಲಿರುವ ಕೆಲವು ದ್ರಾವಕಗಳನ್ನು ಕರಗಿಸಿ ಅವನ್ನು ಸಕ್ಕರೆಯನ್ನಾಗಿ ಮಾಡುವ ಅಮೋಘ ಗುಣವು ತಿಂಗಳ (ಚಂದ್ರನ) ಬೆಳಕಿನಲ್ಲಿರುತ್ತದೆ. ಈ ರೀತಿ ಮಾರ್ಪಟ್ಟ ಸಕ್ಕರೆಯು ಗಿಡಮರಗಳಿಗೆ ಉತ್ತಮ ಆಹಾರವಾಗಿದೆ. ಇದನ್ನು ಯೂರೋಪದ ಕೃಷಿಶಾಸ್ತ್ರಜ್ಞರು ಅನೇಕ ಪರೀಕ್ಷೆಗಳ ಮೂಲಕ ಸಿದ್ಧಾಂತ ಮಾಡಿರುವರು. ಒಂದೇ ಜಾತಿ ಮತ್ತು ಗುಣದ ಬೀಜಗಳನ್ನು ಒಂದೇ ತರದ ಮಣ್ಣು ಮತ್ತು ಗೊಬ್ಬರ ಹಾಕಿದ ಪ್ರದೇಶದಲ್ಲಿ ಕೆಲವನ್ನು ಹುಣ್ಣಿಮೆಗೆ ಒಂದೆರಡು ದಿನಗಳಿರುವಾಗಲೂ ಕೆಲವನ್ನು ಅಮಾವಾಸ್ಯೆಗೆ ಒಂದೆರಡು ದಿನಗಳಿರುವಾಗಲೂ ಮತ್ತು ಕೆಲವನ್ನು ತಿಂಗಳ ಬೇರೆ ಬೇರೆ ದಿನಗಳಲ್ಲಿಯೂ ಬಿತ್ತಿ ಅವರು ಅವುಗಳ ಬೆಳವಣಿಗೆ ಮತ್ತು ಹೂಬಿಟ್ಟು ಫಲಕೊಡುವದರ ಸೂಕ್ಷ್ಮ ನಿರೀಕ್ಷಣೆ ಮಾಡಿದರು. ಹುಣ್ಣಿಮೆಗೆ ಒಂದೆರಡು ದಿನಗಳಿರುವಾಗ ಬಿತ್ತಿದ ಬೀಜಗಳು ಸೊಂಪಾಗಿ ಬೆಳೆದ ಗಿಡಗಳಾಗಿ ಅತ್ಯುತ್ತಮ ಫಲವನ್ನು ಕೊಟ್ಟವು. ಅಮಾವಾಸ್ಯೆಗೆ ಒಂದೆರಡು ದಿನಗಳಿರುವಾಗ ಬಿತ್ತಿದ ಬೀಜಗಳ ಬೆಳವಣಿಗೆ ಏನೇನೂ ತೃಪ್ತಿಕರವಾಗಿರಲಿಲ್ಲ. ಅವುಗಳು ಕೊಟ್ಟ ಫಲವೂ ಉತ್ಕೃಷ್ಟವಾಗಿರಲಿಲ್ಲ. ಮತ್ತು ಹುಣ್ಣಿಮೆಗೆ ಹತ್ತಿರವಾಗಿ ಬೇರೆ ಬೇರೆ ದಿನಗಳಲ್ಲಿ ಬಿತ್ತಿದ ಬೀಜಗಳ ಬೆಳವಣಿಗೆಗೆ ಉತ್ತಮವಾಗಿಯೂ, ಅಮಾವಾಸ್ಯೆಗೆ ಹತ್ತಿರವಾಗಿ ಬೇರೆ ಬೇರೆ ದಿನಗಳಲ್ಲಿ ಬಿತ್ತಿದ ಬೀಜಗಳ ಬೆಳವಣಿಗೆ ನಿಕೃಷ್ಟವಾಗಿಯೂ ಇದ್ದಿತು. ಆದುದರಿಂದ ಹುಣ್ಣಿಮೆಗೆ ಹತ್ತಿರವಾಗಿ ಬೀಜ ಬಿತ್ತಿದಾಗ ಫಲವು ಉತ್ತಮವಾಗುತ್ತದೆಂದೂ ಅಮಾವಾಸ್ಯೆಗೆ ಸಮೀಪವಾಗಿ ಬೀಜ ಬಿತ್ತಿದಾಗ ಫಲವು ನಿಕೃಷ್ಟವಾಗುತ್ತದೆಂದೂ ಈಗ ಸಿದ್ಧಾಂತವಾಗಿದೆ. ಹುಣ್ಣಿಮೆಗೆ ಎರಡು ದಿನ ಮುಂಚಿತ ಬೀಜ ಬಿತ್ತಿದರೆ ಅತ್ಯುತ್ತಮ ಫಲವು ದೊರೆಯುವದು.

**ಸೋಯಾ ಕಾಳುಗಳಿಂದ ನಕಲಿ ನೂಲು**

ಜಪಾನಿನವರು ಈಗ ಸೋಯಾಕಾಳುಗಳಿಂದಲೂ ಕೃತಕ ರೇಶ್ಮೆಯನ್ನು ತಯಾರಿಸುವ ಕ್ರಮವನ್ನು ಕಂಡುಕೊಂಡಿದ್ದಾರೆ. ಸೋಯಾಕಾಳುಗಳಿಂದ ತಯಾರಿಸಿದ ಕೃತಕ ರೇಶ್ಮೆಗೆ ಅವರು 'ಸಿಲ್ಕೋಲ್' ಎಂದು ಹೆಸರಿಟ್ಟಿರುವರು.

ಜಪಾನಿನ ಅಧಿಕಾರದಲ್ಲಿರುವ ಮಂಚೂರಿಯ, ಜಪಾನ ಮತ್ತು ಕೊರಿಯದಲ್ಲಿ ೫,೦೦೦,೦೦೦ ಟನ್ ಸೋಯಾಕಾಳುಗಳು ಬೆಳೆಯುತ್ತವೆ. ಈ ಕಾಳುಗಳಿಂದ ಕೃತಕ ರೇಶ್ಮೆಯ ನೂಲು ತಯಾರಿಸಲಿಕ್ಕೆ ಬೇಕಾದ ೨,೨೦೦,೦೦೦ ಟನ್ ಭಾರದ ರಸವು ದೊರೆಯುತ್ತದೆ. ಅಲ್ಲಿ ಬೆಳೆಯುವ ಎಲ್ಲಾ ಸೋಯಾಕಾಳುಗಳನ್ನು ಕೃತಕ ರೇಶ್ಮೆಗಳನ್ನು ತಯಾರಿಸಲಿಕ್ಕೆ ಉಪಯೋಗಿಸುವುದಿಲ್ಲ. ಆದರೆ ಶೇಕಡಾ ಒಂದರಷ್ಟು ಕಾಳುಗಳನ್ನು ಅದಕ್ಕೆ ಉಪಯೋಗಿಸಿದರೂ, ತಯಾರಾಗುವ ಬಟ್ಟೆಯು ರೇಶ್ಮೆಯ ರಾಜ್ಯದಲ್ಲಿ ಕ್ರಾಂತಿಯನ್ನು ಉಂಟುಮಾಡಲಿಕ್ಕೆ ಸಾಕಾಗುತ್ತದೆ.

ಸೋಯಾಕಾಳುಗಳಿಂದ ತಯಾರಾದ ಕೃತಕರೇಶ್ಮೆಯು ಇತರ ಜಾತಿಯ ಕೃತಕ ರೇಶ್ಮೆಗೆ ಯಾವ ವಿಧದಿಂದಲೂ ಕಡಿಮೆಯಾಗಿರುವುದಿಲ್ಲ. ಆದರೆ ಇತರ ಕೃತಕ ರೇಶ್ಮೆಗಳಂತೆ ಇದೂ ಉಷ್ಣವದ ಪ್ರದೇಶದಲ್ಲಿ ಬಹಳ ಕಾಲದ ತನಕ ಬಾಳುವದಿಲ್ಲ. ಆದರೆ ಇದರ ಎಳೆಗಳು ತಾಜಾ ರೇಶ್ಮೆಯನ್ನೇ ಬಹಳ ಹೋಲುವವು. ಆದ್ದರಿಂದ ಉಷ್ಣಪ್ರದೇಶಗಳಲ್ಲಿ ಸಿಲ್ಕೋಲ್ ಬಹಳ ಪ್ರಚಾರಕ್ಕೆ ಬರುವ ಸಂಭವವಿದೆ.

**ಮನುಷ್ಯನ ಮೋರೆಯೊಳಗಿನ ದುರ್ಗಂಧ**

ಲಿಯೊನಾರ್ಡ ರೊಸೆಂತಾಲ್ ಎಂಬ ದಂತವಿಶೇಷಜ್ಞರು ಒಂದು ಗಂಡಮೃಗ, ಎರಡು ಸಿಂಹ, ಒಂದು ಬೇಬೂನ ಎಂಬ ಮಂಗ, ಎರಡು ಆನೆ, ಒಂದು ನೀರ್ಗುದುರೆ, ಇಪ್ಪತ್ತೆಂಟು ಹಂದಿ, ಎರಡು ಕುದುರೆ, ಐವತ್ತು ನಾಯಿ ಮತ್ತು ಎಂಟು ಬೆಕ್ಕು, ಒಂದು ಇಲಿಯ ಎಂಜಲನ್ನು ಪರೀಕ್ಷಿಸಿ ಈ ಎಲ್ಲಾ ಪ್ರಾಣಿಗಳ ಎಂಜಲಿನಲ್ಲಿರುವ ಜೀವಾಣುಗಳ ಪ್ರಮಾಣವು ಮನುಷ್ಯನ ಎಂಜಲಿನ ಜೀವಾಣುಗಳ ಪ್ರಮಾಣಕ್ಕಿಂತ ಬಹಳ ಕಡಿಮೆಯಾಗಿತ್ತೆಂದು ಹೇಳುತ್ತಾರೆ. ಮನುಷ್ಯನ ಬಾಯಿ ಅಷ್ಟು ಹೊಲಸು ಮತ್ತು ದುರ್ಗಂಧಮಯವಾಗಿರಲಿಕ್ಕೂ, ಅವನ ಹಲ್ಲುಗಳು ಕೆಟ್ಟುಹೋಗಿರಲಿಕ್ಕೂ ಅವನು ತಿನ್ನುವ ಆಹಾರ ಮತ್ತು ಅದನ್ನು ತಿನ್ನುವ ಕ್ರಮದ ದೋಷವೇ ಮುಖ್ಯ ಕಾರಣವೆಂದು ಹೇಳುತ್ತಾರೆ.


## ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ
ಜಗತ್ಪ್ರಸಿದ್ಧ

GONO KILLER ORIGINAL

**ಗೊನೊಕಿಲರ್** (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉದುಪ್ರ ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ-ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

*Sole Manufacturer:* **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮಿಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್.
ಹಂಪನಕಟ್ಟಾ, ಮಂಗಳೂರು.

# ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

## ಉಳ್ಳಾಲ ಸಾವಿರ ಜಮಾತರಿಂದ

## ಸರ್ವ ಮುಸ್ಲಿಂ ಸಹೋದರರಲ್ಲಿ ನಮ್ರ ನಿವೇದನೆಗಳು:

ಮಹನೀಯರೇ,

"ಉಳ್ಳಾಲ ಸೈಯದ್ ಮುಹಮ್ಮದ್ ಶರೀಫುಲ್ ಮದನೀಯುವರ ಉರ್ಸ್ ಯಾನೆ ನೇರ್ಚ್ಚ ಉತ್ಸವವನ್ನು ಇದೇ ಬರುವ 1940ನೇ ಇಸವಿ ಮಾರ್ಚಿ ತಿಂಗಳ ತಾರೀಕು 24ನೇ ಆದಿತ್ಯವಾರಕ್ಕೆ ಸರಿಯಾದ ಹಿಜರಿ 1359ನೇ ಸಫರ್ ತಿಂಗಳ ಚಾಂದು 14ನೇ ದಿನ ಜರಗಿಸಬೇಕಾಗಿ ಉಳ್ಳಾಲದ ಸಾವಿರ ಜಮಾತರಿಂದ ನಾವು ನಿರ್ಣಯಿಸಿರುತ್ತೇವೆ. ಆದುದರಿಂದ ಸರ್ವ ಮುಸ್ಲಿಂ ಸಹೋದರರೂ ಇತರರೂ ಸದರೀ ಸಮಯಕ್ಕೆ ಎರಡು ದಿನಗಳ ಮುಂಚಿತವಾಗಿಯೇ ದಯಮಾಡಿ ಬಂದು ಸದ್ರಿ ಸಮಾರಂಭವನ್ನು ನೆರವೇರಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಮೇಲ್ಕಂಡ ಉತ್ಸವಕ್ಕೆ ಪರಸ್ಥಳಗಳಿಂದ ಹೋಗುವ ಯಾತ್ರಿಕ ವ ಪ್ರೇಕ್ಷಕರ ಅನುಕೂಲತೆಗಾಗಿ ನಮ್ಮ ಜಿಲ್ಲೆಯ ಯಾವತ್ತೂ ಸ್ಟೇಶನುಗಳಿಂದ ಮಂಗಳೂರಿಗೆ ಸ್ಪೆಶಲ್ ಸರ್ವಿಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡನ್ನು ಮಾಡಿರುತ್ತೇವೆ.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು:

***JOINT MANAGERS,***

**The Combined Booking Agency,**
**MANGALORE.**

**The Joint Booking Office,**
**KODIALBAIL.**

(Regd)

# ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ಕುರಿಕೆ, ಕುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

## ಹುಳುಕಡ್ಡಿ ಮದ್ದು

## ಅಮೃತಾಂಜನ ಡಿಪ್ಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

(ರಿ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.



# HOUNSA

## ಹಂಸಾ ಸ್ನೋ

## ಮತ್ತು

## ಬ್ರಿಲ್ಲೆಂಟ್ಯಾನ್

ಉಪಯೋಗಿಸಿರಿ

**ಕೆ. ವೆಂಕಟೇಶ ಬಾಳಿಗ,**
**ಗೋಕರ್ಣಕಟ್ಟ ಬಜಾರ್, ಮಂಗಳೂರು.**



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೂಕಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

**ಪಿ. ಸಿ. ಎ. ಅಂಡ್ ಕಂ.,**
ಆಯುರ್ವೇದಿಕ್ ಫಾರ್ಮಸಿ,
P. O. Peridepi (ಕೊಡಗು)


## ಮಂಗಳೂರು ಪೇಟೆಯ ದವಸಧಾನ್ಯ ವಗ್ಯೆರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವ |
|---|---|---|
| ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ | 1—18—0 | 1—14 |
| ,, ದುಯಂ ,, ,, | | |
| ,, ಅವ್ವಲ್ ಸುಗ್ಗಿ ,, | | |
| ,, ದುಯಂ ,, ,, | | |
| ಅಕ್ಕಿ ಅವ್ವಲ್ ಗುಡ್ಡು ,, ಹಳ್ತು | 4—14—0 | |
| ,, ದುಯಂ ,, ,, | 4—8—0 | |
| ,, ಅವ್ವಲ್ ಸುಗ್ಗಿ ,, | 4—8—0 | 4—8 |
| ,, ದುಯಂ ,, ,, | 4—4—0 | 4—6 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 47—8—0 | 58—8 |
| ,, ಸಿಪ್ಪೆ ಇದ್ದದು ,, | 50—0—0 | 60—0 |
| ಕೊಬ್ಬರಿ ಆಫೀಸು ಖಂಡಿಗೆ | 72—8—0 | 75—0 |
| ,, ದಿಲ್‍ಪಸಂದ ,, | — | |
| ತೆಂಗಿನ ಎಣ್ಣೆ ಮಣಕ್ಕೆ | 5—2—0 | 5—8 |
| ಸಿಪ್ಪೆಯುದ್ದ ಅಡಿಕೆ 1000ಕ್ಕೆ | 2—0—0 | 2—12 |
| ಗೇರುಬೀಜ ಮುಡಿಗೆ | 8—0—0 | 8—12 |
| ಕರಿಮೆಣಸು ಖಂಡಿಗೆ | 87—8—0 | 60—0 |
| [illegible] | 19—0—0 | 20—8 |

# ಸ್ವದೇಶಾಭಿಮಾನಿ

# SWADESHABHIMANI

## ಕೊಂಗ್ರೆಸ್ ಸಂಚಿಕೆ

ರಾಮನಗರದಲ್ಲಿ ಗಾಂಧಿಜಿಯವರು

# ಮುಸ್ಲಿಮರು ಅಲ್ಪಸಂಖ್ಯಾಕರೆ?

## ಬ್ರಿಟನಿನ ತಪ್ಪು ತಿಳುವಳಿಕೆ

## ಜನಾಂಗಸಂಘದ ವಿವರಣೆಯೇನು?

ಒಂದು ರಾಷ್ಟ್ರದ ಸಂಘಟನೆಗೆ ಭಂಗ ಬರುವ ಹಾಗೆ ಆ ರಾಷ್ಟ್ರಕ್ಕೆ ಸೇರಿದ ಯಾವ ಜಾತಿಗೂ ವಿಶೇಷ ಹಕ್ಕು ಅಧಿಕಾರ ಸ್ವಾತಂತ್ರ್ಯಗಳನ್ನು ಕೊಡಬಾರದೆಂದು, ಭಾರತವು ಕೂಡ ಸದಸ್ಯತನವನ್ನು ಪಡೆದಿರುವ ಜನಾಂಗ ಸಂಘವೇ ತನ್ನ ಅಭಿಪ್ರಾಯವನ್ನು ಕೊಟ್ಟಿದೆ. ಮುಸಲ್ಮಾನ ಭಾರತವು ಹಿಂದೂ ಭಾರತದಿಂದ ಪ್ರತ್ಯೇಕವಾಗಿರತಕ್ಕದ್ದು ಎಂದು ಹೇಳುವ ಮುಸ್ಲಿಂ ಲೀಗಿನ ಸರ್ವಾಧಿಕಾರಿಗಳಾದ ಮಿ. ಜಿನ್ನಾ ಸಾಹೇಬರು ಇಂಗ್ಲೆಂಡಿನ ತನಕ ಬಂದು ಶಿಷ್ಟಮಂಡಳವನ್ನು ತೆಗೆದುಕೊಂಡು ಅಲ್ಲಿಯೂ ಭಾರತದ ಅಲ್ಪಸಂಖ್ಯಾಕ ಸಮಸ್ಯೆಯ ಕುರಿತು ತಪ್ಪು ಅಭಿಪ್ರಾಯವು ಹರಡುವಂತೆ ಮಾಡುವ ಛಲವನ್ನು ಹಿಡಿದಿದ್ದಾರೆ. ದೇಶವನ್ನು ಒಡೆದು ಚೂರು ಮಾಡುವ ಮಿ. ಜಿನ್ನರ ಈ ನೀತಿಯು ಜನಾಂಗ ಸಂಘದ ಅಭಿಪ್ರಾಯಕ್ಕೆ ವಿರೋಧವಾಗಿದೆ

### ಭಾರತೀಯರ ದೌರ್ಭಾಗ್ಯ!

ಬಲಿಷ್ಠವಾದ ಕೇಂದ್ರ ಸರಕಾರವು ಇರುವದಿಲ್ಲವಾದರೆ ಆ ರಾಷ್ಟ್ರದ ಸ್ವಾತಂತ್ರ್ಯವನ್ನು ಇನ್ನೊಂದು ರಾಷ್ಟ್ರವು ಕಿತ್ತುಕೊಳ್ಳುವದು ಬಹಳ ಸುಲಭವಾಗುತ್ತದೆಂಬುದು ಯೂರೋಪಿನ ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಭಾರತದಲ್ಲಿ ಬಲಿಷ್ಠ ಕೇಂದ್ರ ಸರಕಾರವು ಇಲ್ಲದಿರುವುದು ಭಾರತೀಯರ ದೌರ್ಭಾಗ್ಯವಾಗಿದೆ. ಇದರಿಂದಲೇ ಮಿ. ಜಿನ್ನರಂಥವರು ಮುಂದೆ ಬಂದು ಭಾರತವನ್ನು ಎರಡು ಪಾಲು ಮಾಡಬೇಕೆಂದು ಕೇಳುವಷ್ಟು ಧೈರ್ಯಪಟ್ಟರು.

### ಮುಸಲ್ಮಾನರು ಅಲ್ಪಸಂಖ್ಯಾಕರೇ?

ಒಂದು ಪ್ರಾಂತ್ಯದ ಒಟ್ಟು ಜನಸಂಖ್ಯೆಯ ಸೇಕಡಾ ೨೦ಕ್ಕಿಂತ ಮೀರಿ ಇದ್ದ ಹೊರತು ಯಾವ ಜಾತಿ ಅಥವಾ ಪಂಗಡವನ್ನು ಅಲ್ಪಸಂಖ್ಯಾಕವೆಂದು ತಿಳಿಯತಕ್ಕದಲ್ಲವೆಂದು ಜನಾಂಗ ಸಂಘವು ನಿರ್ಧರಿಸಿದೆ. ಹಾಗೆ ನೋಡಿದರೆ ಮುದ್ರಾಸು, ಮುಂಬಾಯಿ, ಸಂಯುಕ್ತ ಪ್ರಾಂತ, ಬಿಹಾರ, ಮಧ್ಯಪ್ರಾಂತ, ಮತ್ತು ಒರಿಸ್ಸ ಯಾವದರಲ್ಲಿಯೂ ಮುಸಲ್ಮಾನರ ಸಂಖ್ಯೆಯು ಒಟ್ಟು ಜನಸಂಖ್ಯೆಯ ಸೇಕಡಾ ೨೦ರಷ್ಟು ಇರುವದಿಲ್ಲ. ಆದ್ದರಿಂದ ಈ ಪ್ರಾಂತ್ಯಗಳಲ್ಲಿ ಜನಾಂಗ ಸಂಘದ ತತ್ವದಂತೆ ಮುಸಲ್ಮಾನರಿಗೆ ಯಾವ ವಿಶೇಷ ಹಕ್ಕು ಅಧಿಕಾರಗಳೂ ದೊರೆಯಕೂಡದು. ಬಂಗಾಳ, ಪಂಜಾಬ, ಸಿಂಧ, ಮತ್ತು ಗಡಿನಾಡುಗಳಲ್ಲಿ ಮುಸಲ್ಮಾನರು ಬಹುಸಂಖ್ಯಾಕರಾಗಿರುವದರಿಂದ ಅಲ್ಲಿ [illegible] ಅಲ್ಪಸಂಖ್ಯಾಕರ ಹಕ್ಕು [illegible] ಪ್ರಶ್ನೆಯೇ [illegible] ಅಸ್ಸಾಮು [illegible]

ಕೇಂದ್ರ ಪ್ರಾಂತಗಳಲ್ಲಿ ಮಾತ್ರ ಅವರು ಅಲ್ಪಸಂಖ್ಯಾಕರೆನಿಸುತ್ತಾರೆ. ಅಲ್ಲಿ ಅವರಿಗೆ ಜನಾಂಗ ಸಂಘವು ಹೇಳಿದಂಥ ಹಕ್ಕು ರಕ್ಷಣೆಗಳನ್ನು ಕೊಡಲಿಕ್ಕೆ ಯಾರ ಆಕ್ಷೇಪವೂ ಇಲ್ಲ. ಭಾಷೆ, ಸಂಸ್ಕೃತಿ ಧರ್ಮ ಮತ್ತು ಮತಸಂಬಂಧವಾದ ವಿಶೇಷಾಧಿಕಾರಗಳಿಗೆ ಮುಸಲ್ಮಾನರು ಪಾತ್ರರಾಗುವದಾದರೆ ಕೇವಲ ಅಸ್ಸಾಮು ಮತ್ತು ಕೇಂದ್ರ ಪ್ರಾಂತಗಳಲ್ಲಿ ಮಾತ್ರ ಆಗದೆ, ಇಲ್ಲಿಯಾದರೂ ರಕ್ಷಣೆಗೆ ಪಾತ್ರರಾಗುತ್ತಾರೆಂದ ಮಾತ್ರಕ್ಕೆ ಅವರಿಗೆ ದೇಶವನ್ನು ಪಾಲುಮಾಡಿ ಹಂಚಿಕೊಳ್ಳುವ ಅಧಿಕಾರವು ಬರುತ್ತದೆಂದು ಮಾತ್ರ ಯಾರೂ ಎಣಿಸಕೂಡದು.

### ಭಾರತದ ನಿಜ ಅಲ್ಪಸಂಖ್ಯಾಕರು?

ಭಾರತದಲ್ಲಿರುವ ಅಲ್ಪಸಂಖ್ಯಾಕರೆಂದರೆ ಪಂಜಾಬ, ಬಂಗಾಳ ಮತ್ತು ಸಿಂಧದಲ್ಲಿರುವ ಹಿಂದುಗಳೇ ಆಗಿದ್ದಾರೆ. ಯಾಕಂದರೆ ಈ ಪ್ರಾಂತ್ಯಗಳಲ್ಲಿರುವ ಹಿಂದುಗಳ ಸಂಖ್ಯೆಯು ಒಟ್ಟು ಸಂಖ್ಯೆಯ ಸೇಕಡಾ ೨೦ಕ್ಕಿಂತ ಮೀರಿ ಇರುತ್ತದೆ. ಜನಾಂಗಸಂಘದ ಸದಸ್ಯರಾಗಿ, ದೊಡ್ಡ ವೇದಾಂತವನ್ನೇ ಸಾರುತ್ತಿರುವ ಬ್ರಿಟನಿಗೆ ಈ ನ್ಯಾಯವು ಮಾತ್ರ ಹೊಳೆಯಲಿಲ್ಲ. ಪಂಜಾಬಿನಲ್ಲಿ ಬಂಗಾಳದಲ್ಲಿ ಸಂಖ್ಯೆಯ ಮಾನಕ್ಕಿಂತ ಹೆಚ್ಚಿಗೆಯಾಗಿ ಎಸೆಂಬ್ಲಿ ಕೌನ್ಸಿಲುಗಳಲ್ಲಿ, ಅಲ್ಪಸಂಖ್ಯಾಕ ಹಿಂದುಗಳಿಗೆ ಸ್ಥಾನಗಳನ್ನು ಕೊಡುವ ಮೂಲಕ ಅವರಿಗೆ ರಕ್ಷಣೆ ಕೊಡಬೇಕಾಗಿತ್ತಾದರೂ ಕಮ್ಯೂನಲ್ ಎವಾರ್ಡಿನಲ್ಲಿ ಅವರಿಗೆ ಅವರ ಸಂಖ್ಯೆಗಿಂತ ಕಡಿಮೆಯಾಗಿಯೇ ಸ್ಥಾನಗಳು ಸಿಕ್ಕಿದುವು. ಪಂಜಾಬಿನಲ್ಲಿ ಹಿಂದುಗಳು ಸೇಕಡಾ ೨೮ರಷ್ಟು ಇದ್ದಾರಾದರೆ ಅಲ್ಲಿ ಅವರಿಗೆ ದೊರೆತ ಸ್ಥಾನಗಳು ಸೇಕಡಾ ೨೬ರಷ್ಟು! ಬಂಗಾಳದಲ್ಲಿ ಹಿಂದುಗಳು ಸೇಕಡಾ ೪೪ರಷ್ಟು ಇದ್ದಾರಾದರೆ ಅಲ್ಲಿ ಅವರಿಗೆ ದೊರೆತ ಸ್ಥಾನಗಳು ಸೇಕಡಾ ೪೦ಕ್ಕೂ ಕಡಿಮೆ! ಆದರೆ ಮುದ್ರಾಸು ಮೊದಲಾದ ಪ್ರಾಂತ್ಯಗಳಲ್ಲಿ ಸೇಕಡಾ ೨೦ಕ್ಕೂ ಕಡಿಮೆಯಾಗಿರುವ ಮುಸಲ್ಮಾನರಿಗೆ—ಅವರು ಅಂಥ ಅಧಿಕಾರಕ್ಕೆ ಪಾತ್ರರಲ್ಲವಾದರೂ ಕೂಡ ಅವರ ಸಂಖ್ಯಾ ಮಾನಕ್ಕಿಂತ ಹೆಚ್ಚಿಗೆ ಸ್ಥಾನಗಳು ಅಲ್ಲಿ ದೊರೆತವು! ಹೀಗಿದೆ ಬ್ರಿಟನಿನ ನ್ಯಾಯಬುದ್ಧಿ" ಎಂದು ದಿಲ್ಲಿಯ ಹಿಂದೂ ಔಟ್‌ಲುಕ್ ಪತ್ರಿಕೆಯು ಬರೆಯುತ್ತದೆ.

**ಸ್ವದೇಶಾಭಿಮಾನಿ**

ಚಂದಾದಾರರಾಗಿರಿ

**Canara Bank Limited**

**ಕೆನರಾ ಬೇಂಕ್ ಲಿಮಿಟೆಡ್**

ಲಿಮಿಟೆಡ್ ಜವಾಬ್ದಾರಿಯುಳ್ಳ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು.

೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯವ್ಯಯದ ಸಾರಾಂಶ ಪಟ್ಟಿ

| | ರೂ. ಆ. ಪೈ. | | ರೂ. ಆ. ಪೈ. |
|---|---|---|---|
| **ಮೂಲಧನ** | | ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ | 95,489-4-3 |
| ತೆತ್ತದ್ದು | 6,00,000-0-0 | **ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು** | |
| ಪೈಡ್ ಅಪ್ | 3,91,342-0-0 | ಬೆಲೆಬಾಳುವ ಸೆಕ್ಯೂರಿಟಿ | 40,97,741-5-6 |
| ರಿಸರ್ವ್ ಫಂಡು | 4,50,000-0-0 | ಹುಂಡೀ ಪತ್ರ ಮೊದಲಾದುವುಗಳು | 10,30,649-2-10 |
| **ಡಿಪೊಸಿಟ್** | | ಠೇವಣಾತಿ | 20,64,586-2-0 |
| ಫಿಕ್ಸೆಡ್, ಕರೆಂಟ್ ಇತ್ಯಾದಿ | 81,21,622-8-1 | ವಿವಿಧ | 9,82,093-10-4 |
| ಬೇಂಕುಗಳಿಗೆ ಸಲ್ಲತಕ್ಕದ್ದು | ಇಲ್ಲ | ನಗದು | 17,99,207-1-3 |
| ವಿವಿಧ | 10,51,709-1-7 | | |
| ಈ ವರ್ಷದ ಲಾಭ | 55,003-0-6 | | |
| ಜುಮ್ಲಾ | 1,00,69,760-10-2 | ಜುಮ್ಲಾ | 1,00,69,760-10-[illegible] |


THE

**Canara Banking Corporation Ltd.,**

(INCORPORATED IN BRITISH INDIA)

Estd: 1906

**THREE YEAR'S CASH CERTIFICATES**

**bearing interest at 4% p. a.**

in denominations of

**Rs. 50/-, 100/-, 500/-, 1,000/- & 5,000/-**

**are now issued at all our Branches.**

***For particulars call at or write to***

**Any of our nearest Branches**

THE

**BANK OF MANGALORE LTD.,**

**MANGALORE.**

ESTD. 1931

*Branches:-*

**Mudabidri & Padubidri.**

Fixed Deposits will be received at following rates of intere[st]

| | | |
|---|---|---|
| For 3 months | | 3½% |
| „ 6 „ | | 4% |
| „ 12 „ | | 5% |
| „ 24 „ | & upwards | 5½% |

Interest Payable Quarterly.

***Savings Bank deposit 3½% on daily balances.***

**All kinds of banking business transacted**

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

22 – 3 – 1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೨—೩—೧೯೪೦


# ಸ್ವಾತಂತ್ರ್ಯ ಸೂರ್ಯೋದಯವನ್ನು ಮಹಾತ್ಮರು ಕಾಣುತ್ತಾರೆ!

ಸಿ. ಎಫ್. ಅಂಡ್ರೂಸರು

## ದೀನಬಂಧು ಅಂಡ್ರೂಸರ ಸಂತೋಷ
## ಸ್ವಯಂಸೇವಕರಿಗೆ ರಾಜೇಂದ್ರ ಪ್ರಸಾದರ ಉಪದೇಶ

### ಸಾಮಂತ ಸ್ವರಾಜ್ಯವಲ್ಲ ಸಂಪೂರ್ಣ ಸ್ವರಾಜ್ಯ
### ಗಾಂಧಿಜಿಯವರ ಸ್ಪಷ್ಟ ಅಭಿಪ್ರಾಯ

"ತನ್ನದಲ್ಲದ ಶರೀರದಲ್ಲಿ ಮನುಷ್ಯನು ಹೇಗೆ ವಾಸಿಸಲು ಹೇಸುವನೋ, ಹಾಗೆಯೇ ಎಷ್ಟೇ ಪವಿತ್ರವೂ ಉತ್ಕೃಷ್ಟವೂ ಆಗಿದ್ದರೂ ಅನ್ಯರ ಅಧೀನದಲ್ಲಿ ಒಂದು ರಾಷ್ಟ್ರವು ಬಾಳಲು ಬಯಸಲಾರದು. ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಭೀಕರ ಸಾಹಸ ಪಡುತ್ತಿರುವ ಆಂಗ್ಲೇಯರು ಭಾರತೀಯರ ಸ್ವಾತಂತ್ರ್ಯಾಕಾಂಕ್ಷೆಯನ್ನು ಕಡೆಗಣಿಸಬಾರದು. ಕಾಂಗ್ರೆಸು 'ಭಾರತದ ಅದೃಷ್ಟವನ್ನು ನಿರ್ಣಯಿಸುವವರು ನೀವಲ್ಲ; ಇಲ್ಲಿನ ಜನತೆಯ ಪ್ರತಿನಿಧಿಗಳಾಗಲಿ' ಎಂದು ಮಾತ್ರ ಹೇಳುತ್ತದೆ. ಇಂತಹ ವಿಚಾರಪೂರ್ಣವಾದ ಅಭಿಪ್ರಾಯವು ತಪ್ಪಾಗಿದ್ದರೆ, ಕಾಂಗ್ರೆಸು ಇನ್ನೇನು ಮಾಡಲಾದೀತು?"

ವೆಸ್ಟ್‌ಮಿನಿಸ್ಟರ್ ಕಾಯಿದೆಯಲ್ಲಿ ಸೂಚಿತವಾದಂತಹ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೂ ಭಾರತದ ಹಿತಕ್ಕೆ ಸಾಲದಾಗಿದೆ ಎಂದು ಹೇಳುತ್ತಾ ಮಹಾತ್ಮರು ಇತ್ತೀಚೆಲ್ಲಿ ಮಿ. ಎಚ್. ಎಸ್. ಎಲ್. ಪೋಲಕರಿಗೆ ತಾವು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಸಮ ಸಾಕೆಂದು ಒಪ್ಪಿದ್ದ ತನ್ನ ಹಿಂದಿನ ಅಭಿಪ್ರಾಯವನ್ನು ತಾನಿಂದು ವ್ಯತ್ಯಸಪಡಿಸಿರುವೆನೆಂದು ಸವಿಸ್ತಾರ ಪೂರ್ವಕ ಹೇಳಿರುವರು. ಈ ವಿಷಯವಾಗಿ ಹಿಂದೆ ನನ್ನ ಒಬ್ಬನ ಅಭಿಪ್ರಾಯವಾಗಿತ್ತೇ ಹೊರತು ನನ್ನ ಅಭಿಪ್ರಾಯಕ್ಕೆ ಕಾಂಗ್ರೆಸಿನ ಕಾರ್ಯಕರ್ತರು ತಾನು ಅನುಗೊಳಿಸಿದ್ದೆನೆಂದು ಹೇಳುವುದು ಸರ್ವಥಾ ಹಾಸ್ಯಕರವಾಗಿದೆ. ಕಾಂಗ್ರೆಸು ಮೊದಲಿಂದಲೇ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಒಯ್ಯದೆ ಸಂಪೂರ್ಣ ಸ್ವರಾಜ್ಯವನ್ನೇ ಸಾರಿ ಹೇಳಿತ್ತು. ಈಗ ನಾನೂ ನನ್ನ ಹಿಂದಿನ ಅಭಿಪ್ರಾಯವನ್ನು ಬದಲಾಯಿಸಿರುವೆನು. ಕೆಲವು ಸಮಯಗಳ ಅನುಭವದಿಂದ ನಾನು ಇಂದು ಹೀಗೆ ಹೇಳುತ್ತಿದ್ದೇನೆ. ವೆಸ್ಟ್‌ಮಿನಿಸ್ಟರ್ ಕಾಯಿದೆಯು ನ್ಯಾಯದ ತಹ ಸ್ವರಾಜ್ಯವೂ ನಮಗೆ ಸಾಲದೆಂಬ ಪೂರ್ಣ ನಿಶ್ಚಯದ ನಿರ್ಣಯಕ್ಕೆ ಬಂದಿದ್ದೇನೆ ಹೀಗೆಂದು ಒಬ್ಬ ಆಂಗ್ಲೇಯ ಮಿತ್ರನು ಗಾಂಧಿಜಿಯವರಿಗೆ ಬರೆದ ಪತ್ರಕ್ಕೆ ಅವರು ಉತ್ತರ ಕೊಟ್ಟಿರುತ್ತಾರೆ. ಪಾಟ್ನದ ಠರಾವು ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಕೇಳಿಕೆಯಿಂದ ಸಂಪೂರ್ಣ ಸ್ವರಾಜ್ಯಕ್ಕೆ ಹಿರಿಗಿದುದು ತನಗೆ ಆಶ್ಚರ್ಯವಾಗಿದೆಯೆಂದು ಆತನ ಪತ್ರದಲ್ಲಿ ಬರೆದಿತ್ತು. ಗಾಂಧಿಜಿಯವರು ತಮ್ಮ ಸುದೀರ್ಘವಾದ ಉತ್ತರದಲ್ಲಿ ಆಂಗ್ಲೇಯರು ಭಾರತದ ವಿಷಯದ ಕುರಿತು ಹೆಚ್ಚಾಗಿ ಅಜ್ಞಾನಿಗಳಾಗಿರುವುದರಿಂದ ಹಾಗೆ ತಿಳಿದಿರುವರು, ನಾವಿಂದು ಹೋರಾಡುವುದು ಬ್ರಿಟಿಷ್ ವಿರುದ್ಧವಾಗಿರದೆ ಸಕಲರಿಗೂ ಹಾಗೂ ವಿದೇಶೀಯ ಆಳಿಕೆಯ ವಿರುದ್ಧವಾಗಿದೆಯೆಂದೂ ವ್ಯಕ್ತಪಡಿಸಿರುವರು.

### ಸ್ವರಾಜ್ಯವು ಸಮೀಪಿಸುತ್ತಿದೆ
### ಅಂಡ್ರೂಸ್-ಗಾಂಧೀ ದರ್ಶನ

ಬಾಪುಜಿ, ಸ್ವರಾಜ್ಯವು ಸಮೀಪಿಸುತ್ತಿದೆ, ನಾನು ಅದ ಸಮೀಪಿಸುತ್ತಿರುವ ದರ್ಶನವನ್ನು ಕಾಣುತ್ತಿದ್ದೇನೆ. ಅದರ ತಪ್ಪ ಬಂದಮೇಲೆ ತ್ವರಿತವಾಗಲಿದೆ ಹೀಗೆಂದ ತನ್ನ ರುಗ್ಣಶಯ್ಯೆಯಿಂದ ದೀನಬಂಧು ಅಂಡ್ರೂಸರ, ಕಲ್ಕತ್ತೆಯ ಆಸ್ಪತ್ರೆಯಲ್ಲಿ ಅವರನ್ನು ಗಾಂಧಿಜಿಯವರು ಕಾಣ ಹೋದಾಗ ಕಳಕಳಿಯಿಂದ ಹೇಳಿದರು. 'ಹೌದು, ನಾನದನ್ನು ಬಲ್ಲೆ' ಗಾಂಧಿಜಿಯವರು ಮಂದಸ್ಮಿತದಿಂದ ಉತ್ತರವಿತ್ತರು. "ಎಲ್ಲಾ ಗೊತ್ತುಂಟೆ? ನನಗೆ ಈಗ ಆರೋಗ್ಯವು ಗುಣವಾಗುತ್ತಾ ಬಂತಾಗಿದೆ. ಇದು ದೇವರ ಹರಕೆಯಾಗಿದೆ. ಇವರಿಂದ ನನಗೆ ಅದ್ಭುತವಾದ ಅನುಭವವಾಗಿದೆ' ಎಂದರು ಅಂಡ್ರೂಸರು. ಅಂಡ್ರೂಸರ ಗಾಂಧಿಜಿಯವರ ನಿಕೇತನ ಯಾತ್ರೆ ಮತ್ತು ಗುರುದೇವರ ಭೇಟಿಯ ಕುರಿತು ತಿಳಿಯಲೂ ಹೆಚ್ಚು ಉತ್ಸುಕರಾಗಿದ್ದರು. ಅವರಿಗೆ ಆ ವಿಷಯವನ್ನೆಲ್ಲಾ ವಿವರಿಸಲಾಯಿತು.


ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

**ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ**

**ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!**

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ.

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆ ರೂ. 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ಕಮಿಶನು.

ವಿ. ಸೂ. ಮಾರ್ಚಿ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು.

ಮಂಗಳೂರು ಏಜೆಂಟರು: **ಯು. ಪಾಂಡುರಂಗ ನಾಯಕ್,** ರಥಬೀದಿ ಮಂಗಳೂರು.

ಸೋಲ್ ಏಜೆಂಟ್ಸ್: **ಪ್ರೇಮ ಮೆಡಿಕಲ್ ಹಾಲ್,** ಗುತ್ತಿಗಾರ್ ದ. ಕ.

ರಾಜೇಂದ್ರ ಪ್ರಸಾದರು
1934 ಬೊಂಬಾಯಿ 1939 ಕಲ್ಕತ್ತಾ

### ಬಾಬು ರಾಜೇಂದ್ರ ಪ್ರಸಾದರ ಉಪದೇಶ

ರಾಮಗಡದ ಕಾಂಗ್ರೆಸು ಸ್ವಯಂಸೇವಕರನ್ನುದ್ದೇಶಿಸಿ ರಾಜೇಂದ್ರ ಪ್ರಸಾದರವರ ಅಮೂಲ್ಯವಾದ ಉಪದೇಶವನ್ನು ಕೊಟ್ಟಿದ್ದಾರೆ. 'ದೇಶದ ಮಾನ್ಯ ಮುಖಂಡರ ದೊಡ್ಡದೊಡ್ಡ ಮಹನೀಯರ ಸೇವೆಮಾಡುವ ಸೌಭಾಗ್ಯವು ಪ್ರಾಪ್ತವಾಗಿರುವುದು ನಿಮಗೆ ದೊಡ್ಡ ಗೌರವವಾಗಿದೆ. ಅತಿಥಿ ಸತ್ಕಾರದಲ್ಲಿ ನಾವು ಯಾರಿಗೂ ಹಿಂದಲ್ಲ ಎಂಬುದನ್ನು ಜಗತ್ತಿಗೆ ಸಾರಿರಿ. ನಿಮ್ಮ ಸೇವಾಬುದ್ಧಿಯ ಪರೀಕ್ಷೆಯಾಗುವ ದಿನವು ಈಗ ಬಂದಿದೆ. ನೀವು ಈ ಪರೀಕ್ಷೆಯಲ್ಲಿ ಜಯಶೀಲರಾಗುವಿರೆನ್ನಲಿಕ್ಕೆ ಯಾವ ಸಂದೇಹವೂ ಇಲ್ಲ. ನೀವು ಮಾಡುವ ಸೇವೆಯ ಮೂಲಕ ಎಲ್ಲರ ಪ್ರೇಮ ಆಶೀರ್ವಾದಗಳಿಗೆ ನೀವು ಪಾತ್ರರಾಗುವುದು ನಿಮಗೊಂದು ಕೀರ್ತಿಯಾಗಿದೆ, ದೇಶಕ್ಕೆ ಗೌರವವಾಗಿದೆ. ಕೀರ್ತಿ ಗೌರವಗಳು ಸುಮ್ಮಗೆ ಒದಗುವುದಿಲ್ಲ. ಸ್ವಯಂಸೇವಕರು ಶಿಸ್ತು ವ್ಯವಸ್ಥೆಯನ್ನು ಕಲಿತು ಅದನ್ನು ಕಾಪಾಡುವುದು ಪರಮ ಆವಶ್ಯಕವಾಗಿದೆ. ತ್ಯಾಗಭಾವದಿಂದ ಪ್ರೇರಿತರಾಗಿ ಪ್ರತಿಯೊಬ್ಬರೂ ಸೇವಾಕಾರ್ಯವನ್ನು ನಿರ್ವಹಿಸುವರಾದರೆ ಶಿಸ್ತು ವ್ಯವಸ್ಥೆಗಳು ಪ್ರಯಾಸವಿಲ್ಲದೆ ಬರುತ್ತವೆ. ಶಿಸ್ತು ವ್ಯವಸ್ಥೆಗಳಿಂದ ಇರುವ ಕೆಲವೇ ಜನರಾದರೂ, ಆ ಗುಣಗಳಿರದ ಇತರ ಸಾವಿರಾರು ಮಂದಿಗಿಂತ ಉತ್ತಮ ಮತ್ತು ಮೆಚ್ಚಿದ ಕಾರ್ಯಗಳನ್ನು ಸಾಧಿಸಬಲ್ಲರು.

ಸ್ವದೇಶಾಭಿಮಾನಿ

ತಾರೀಖು 23—3—1940

# ರಾಷ್ಟ್ರಪತಿ ಅಜಾದರ ಭಾಷಣ

'ಭಾರತದ ಭವಿಷ್ಯವನ್ನು ನಿರ್ಮಿಸುವ ಅಧಿಕಾರವು ಭಾರತೀಯರಿಗಿದೆ; ಅದಕ್ಕಾಗಿ ಭಾರತವು ಆಂದೋಲನಮಾಡಲು ಮುಂದಡಿಯಿಡಲು ಸಿದ್ಧವಿದೆ; ಹೀಗೆ ಮುನ್ನಡೆವ ಕಾಂಗ್ರೆಸ್ಸಿನಲ್ಲಿ ಶಿಸ್ತು ಸಂಘಟನೆಗಳು ಇರಬೇಕು; ನಮ್ಮೊಳಗೆ ಅನ್ಯೋನ್ಯ ಐಕ್ಯವಿರಬೇಕು, ಹಿಂದೂ ಮುಸ್ಲಿಮರು ನಿಜವಾಗಿ ಬಂಧುಗಳೆಂದೇ ಭಾವಿಸಬೇಕು, ಮಹಾತ್ಮರ ಸತ್ಯ ಅಹಿಂಸಾತತ್ವಗಳಲ್ಲಿ ಮತ್ತು ಅವರ ಮುಂದಾಳುತನದಲ್ಲಿ ನಮಗೆ ಅಚಲ ವಿಶ್ವಾಸವಿರಬೇಕು. ಹೋರಾಟಕ್ಕೆಂದು ಭಾರತೀಯರು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರರು!' ಈ ಅಭಿಪ್ರಾಯದ ದೀರ್ಘ ಭಾಷಣವನ್ನು ರಾಮಗರದಲ್ಲಿ ಸೇರಿದ ೫೩ನೇ ಕಾಂಗ್ರೆಸು ಅಧಿವೇಶನದ ಅಧ್ಯಕ್ಷಪೀಠದಿಂದ ಮೌಲಾನಾ ಅಬುಲ್ ಕಲಂ ಅಜಾದರು ಸಾರಿ, ಇಂದಿನ ಭಾರತೀಯರ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಜಗತ್ತಿಗೆ ಸುಸ್ಪಷ್ಟ ವಾಣಿಯಿಂದ ವಿಶದಪಡಿಸಿದರು.

## ಸಾಮ್ರಾಜ್ಯಶಾಹೀ ಬ್ರಿಟನು

ಮೌಲಾನಾ ಅಜಾದರು ಇಂದಿನ ಯುದ್ಧಕಾಲದಲ್ಲಿ ಕಾಂಗ್ರೆಸು ವಹಿಸಿದ ಧೋರಣವನ್ನು ಸ್ಪಷ್ಟವಾಗಿ ತಿಳಿಸಿದರು ಯುದ್ಧಾರಂಭದಲ್ಲಿ ನಾವು ಮಿತ್ರರಾಷ್ಟ್ರಗಳ ವಿಷಯ ಸಹಾನುಭೂತಿ ತೋರಿಸಿ ನಾಜಿಸಂ, ಫೇಸಿಸಮ್ಮುಗಳನ್ನು ಖಂಡಿಸಿದೆವೆಂದೂ, ಅವುಗಳಂತೆಯೇ ಲೋಕಘಾತುಕ ನೀತಿಯುಳ್ಳ ಸಾಮ್ರಾಜ್ಯಶಾಹಿ ನೀತಿಯನ್ನು ನಾವು ಮೆಚ್ಚಲಾರೆವೆಂದೂ ತಿಳಿಸಿದರು. ಹಿಂದೀಯರ ಒಪ್ಪಿಗೆಯಿಲ್ಲದೆ ಅದನ್ನು ಯುದ್ಧಕ್ಕೆಳೆಸಿದ ವಿಷಯವನ್ನೂ, ಬ್ರಿಟನು ಭಾರತವನ್ನು ಎಂದೆಂದೂ ದಾಸ್ಯರೂಪದಲ್ಲಿಯೇ ಇರಿಸಲು ಇಚ್ಛಿಸುವಂತಹ ಧೋರಣೆಯುಳ್ಳದ್ದಾಗಿದೆಯೆಂಬುದನ್ನೂ ಇಂದಿನ ಯುದ್ಧಕಾಲದಲ್ಲಿ ಬ್ರಿಟನು ಭಾರತದ ಕೇಳಿಕೆಯ ಬಗ್ಗೆ ಕೊಟ್ಟ ನಿರುಪೇಕ್ಷಭಾವದ ಉತ್ತರದಿಂದ ಗೊತ್ತಾಗುತ್ತದೆಯೆಂದರು.

## ಅಲ್ಪಸಂಖ್ಯಾಕ ಸಮಸ್ಯೆ

ಆ ವೇಳೆ ರಾಷ್ಟ್ರಪತಿಗಳು ಇಂದು ರಾಷ್ಟ್ರದ ಪ್ರಗತಿಗೆ ವಿಘಾತುಕವೆನಿಸಿ ನಿಂತ ಅಲ್ಪಸಂಖ್ಯಾಕ ಸಮಸ್ಯೆಯ ಕುರಿತು ಮಾತನಾಡುತ್ತಾ, ಹಲವು ಪ್ರಾಮುಖ್ಯ ಸೂಚನೆಗಳನ್ನಿತ್ತರು. ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವ ವಿಷಯವಾಗಿ ಮೊದಲಿಂದಲೇ ಕಾಂಗ್ರೆಸು ಆಶ್ವಾಸನೆಯಿತ್ತಿರುವುದರಿಂದ, ಅಲ್ಪಸಂಖ್ಯಾಕ ಸಮಸ್ಯೆಯು ಭಾರತದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿಯೇ ಇರುವಂತಹುದ್ದಾದುದರಿಂದ, ಅದು ರಾಷ್ಟ್ರದ ಸ್ವಾತಂತ್ರ್ಯ ವಿರೋಧಿಯಾಗಕೂಡದೆಂದೂ ಹೇಳಿದರು.

## ಮುಸಲ್ಮಾನರಲ್ಲಿ ಬಿನ್ನಹ

ಮೌಲಾನರು ಮುಸಲ್ಮಾನರು ಕಾಂಗ್ರೆಸ್ಸಿನ ಕುರಿತು ತಾಳಬೇಕಾದ ಧೋರಣೆಯ ಕುರಿತು ಮಾತನಾಡುತ್ತಾ ಹಿಂದೂ ಮುಸ್ಲಿಮರನ್ನು ವಿಭಜಿಸಿ ಆಳುವ ವಿದೇಶೀಯರ ವಿಭಜನಾ ನೀತಿಗೆ ಮುಸಲ್ಮಾನರು ಬಲಿಯಾಗಬಾರದೆಂದು ಎಚ್ಚರಿಸಿ, ಹಿಂದೂ ಮುಸ್ಲಿಮರು ಶತಶತಮಾನಗಳಿಂದ ಐಕ್ಯಸಾಮ್ರಾಜ್ಯದಲ್ಲಿದ್ದು ಅವರನ್ನು ವಿಂಗಡಿಸು ಮಾತನಾಡುವವರು ರಾಷ್ಟ್ರಹಿತಚಿಂತಕರಲ್ಲವೆಂಬುದನ್ನೂ ತಿಳಿಸಿದರು ಹಿಂದು ಮುಸಲ್ಮಾನರು ಗಂಗಾ—ಯಮುನಾ ಸಂಗಮದಂತೆ ಒಂದಾಗಿ ಭಾರತದ ಭವಿಷ್ಯವನ್ನು ಉಜ್ವಲವಾಗಿ ಮಾಡಬೇಕೆಂದು ಬಿನ್ನಯಿಸಿಕೊಂಡರು

## ಗಾಂಧಿಜಿಯವರಲ್ಲಿ ವಿಶ್ವಾಸ

ಭಾಷಣದ ಅಂತ್ಯದಲ್ಲಿ ಮೌಲಾನಾ ಅಜಾದರು ಗಾಂಧಿಜಿಯವಲ್ಲಿ ವಿಶ್ವಾಸವಿಡಬೇಕೆಂದೂ, ಹಿಂದಕ್ಕೆ ಅವರೇ ಕಾಂಗ್ರೆಸನ್ನು ಪ್ರಗತಿ ಮಾರ್ಗದಲ್ಲಿ ಮುನ್ನಡೆಸಿದ ಸೇನಾನಿಯೆಂದೂ, ಅವರ ಸತ್ಯ ಅಹಿಂಸಾತತ್ವಗಳಲ್ಲಿ ಶ್ರದ್ಧೆಯಿಟ್ಟು, ನಮ್ಮ ಮುಂದಿನ ಹೋರಾಟವು ಗಾಂಧಿಜಿಯವರ ಮುಂದಾಳುತನದಿಂದಲೇ ಯಶಸ್ವಿಯಾಗುವಂತೆ ಮಾಡಬೇಕೆಂದೂ ಸಾರಿದರು.

ಮೌಲಾನಾ ಅಜಾದರ ಈ ದಿವ್ಯ ಸಂದೇಶವು ಭಾರತೀಯರಿಗೆ ಹೆಚ್ಚಾಗಿ ಭಾರತದ ಮುಸ್ಲಿಂಬಂಧುಗಳಿಗೆ ಅಮೃತವಾಣಿಯಾಗಿ ಪರಿಣಮಿಸ ಬಹುದೆಂದು ನಾವು ಹಾರೈಸುತ್ತೇವೆ

# ಮಹಾತ್ಮರ ಮುಂದಾಳುತನ

ರಾಮಗರದಲ್ಲಿ ನೆರೆದ ಕಾಂಗ್ರೆಸು ಅಧಿವೇಶನದ ಸಬ್ಜೆಕ್ಟ್ ಕಮಿಟಿಯಲ್ಲಿ ಮಹಾತ್ಮಾಜಿಯವರು ಮುಕ್ಕಾಲು ತಾಸುಗಳ ತನಕ ಉದಾತ ಭಾಷಣವಿತ್ತರು. ಕಳೆದ ಹಲವು ವರ್ಷಗಳಿಂದ ಕಾಂಗ್ರೆಸಿನ ಸಭೆಗಳಲ್ಲಿ ಮೌನವಾಗಿದ್ದ ಅವರು ಈಗ ಮುಂಬಂದು ಮಾತನಾಡಿದ ವಿಷಯವು ಭಾರತದ ರಾಜಕೀಯದಲ್ಲಿ ಅದ ಪ್ರಬಲವಾದ ಮಾರ್ಪಾಟೊಂದನ್ನು ತೋರಿಸುತ್ತಿದೆ. ಕಾಂಗ್ರೆಸಿನ ಅಂದೋಲನವು ಇಂದು ಆರಂಭವಾಗುವ ಚಿಹ್ನೆಗಳು ತೋರುತ್ತಿವೆ. ಗಾಂಧಿಜಿಯವರು ನಾಯಕತ್ವವನ್ನು ವಹಿಸಬೇಕೆಂದು ಸರ್ವರೂ ಆಶಿಸುತ್ತಾರೆ. ಆದರೆ ಗಾಂಧಿಜಿಯವರು ಇದನ್ನು ಕೊನೆಯ ಹೋರಾಟವಾಗಿಮಾಡಲು ಬಯಸುತ್ತಾರೆ. ಈ ಹೋರಾಟದಲ್ಲಿ ರಾಷ್ಟ್ರವು ಬಂಧವಿಮುಕ್ತವಾಗಬೇಕೆಂದು ಕಲ್ಪಿಸುತ್ತಾರೆ. ಅದಕ್ಕಾಗಿಯೇ ಜನರು ತನ್ನನ್ನು ಸೇನಾಪತಿಯಾಗಿ ಆರಿಸುವುದಕ್ಕಿಂತ ವಿಧೇಯತೆಯಿಂದ ಹಿಂಬಾಲಿಸಬೇಕೆಂದು ಸಾರಿ ಹೇಳುತ್ತಿದ್ದಾರೆ.

ಕಾಂಗ್ರೆಸು, ಮಹಾತ್ಮರಂದಂತೆ ಇಂದು ಹೋರಾಡುವ ಒಂದು ಸಂಸ್ಥೆಯಾಗಿದೆ, ಹೋರಾಡುವಲ್ಲಿ ಪ್ರಜಾಪ್ರಭುತ್ವದ ತತ್ವದಂತೆ ಭಿನ್ನಾಭಿಪ್ರಾಯಗಳಿರಬೇಕೆಂಬುದು ಪ್ರಮಾದವಾಗಿದೆ. ಒಂದು ಸೇನೆಯ ಸೈನಿಕರು ದಳಪತಿಗೆ ವಿಧೇಯರಾಗಿದ್ದರೆಮಾತ್ರ ಯುದ್ಧದಲ್ಲಿ ವಿಜಯವು ದೊರಕುವುದು ಇಂದು ಗಾಂಧಿಜಿಯವರಿಗೆ ನಮ್ಮ ವಿಧೇಯತೆಯನ್ನು ತೋರಿಸಬೇಕಾಗಿದೆ. ಹಾಗೆ ತೋರಿಸಿದಲ್ಲಿ 'ತಿಂಗಳೊಂದರೊಳಗೆ ತಾನೇನು ಮಾಡಬಲ್ಲೆ'ನೆಂಬುದನ್ನು ಮಹಾತ್ಮರು ನಿಶ್ಚಯವಾಗಿ ತಾವಂದಂತೆ ನಮಗೆ ಮಾತ್ರವಲ್ಲ ಅಖಿಲ ಭಾರತಕ್ಕೂ ತಿಳಿಸಬಲ್ಲವರಾಗಿದ್ದಾರೆ ಆದಕಾರಣ ಭಿನ್ನಮತಗಳಿಂದ ರಾಷ್ಟ್ರದ ಐಕ್ಯವನ್ನು ಕೆಡಿಸದೆ, ಗಾಂಧಿಜಿಯವರನ್ನು ಹಿಂಬಾಲಿಸುವುದೇ ಇಂದೇ ಸ್ವರಾಜ್ಯ ಸಾಧನೆಯ ಹಾದಿಯಾಗಿದೆ

# ಶರಣು ಹೋದ ಫಿನ್ಲೆಂಡು!

ಕಳೆದವಾರ ಫಿನ್ಲೆಂಡು ರಷ್ಯದ ಪಶುಶಕ್ತಿಗೆ ಶರಣಾಗತವಾದಂತೆ, ರಷ್ಯದ ಕೇಳಿಕೆಗಳಿಗೆ ಒಪ್ಪಿಗೆಯಿತ್ತು ಸಂಧಿ ಮಾಡಿಕೊಂಡಿತು! ಕಳೆದ ಮೂರು ತಿಂಗಳಿಂದ ಸ್ವಾತಂತ್ರ್ಯಕ್ಕಾಗಿ ಕಾದಾಡಿ ಕಡೆಗೆ ಬಲಹೀನವಾಗಿ ಬಗ್ಗಿತು! ಯುರೋಪಿನಲ್ಲಿ ಇಂದು ಪ್ರಬಲ ರಾಷ್ಟ್ರಗಳ ಕಾಲತಳಕ್ಕೆ ಸಿಕ್ಕಿ ದುರ್ಬಲ ರಾಷ್ಟ್ರಗಳಿಗೆ ಒದಗುತ್ತಿರುವ ದುಃಸ್ಥಿತಿಯು ಫಿನ್ಲೆಂಡಿಗೂ ಒದಗಿತು! ಮೊದಲು ಅಬಿಸೀನಿಯವು ನಾಶವಾಯಿತು. ಸ್ಪೈನು ಧ್ವಂಸವಾಯಿತು, ಜೆಕೊಸ್ಲೊವೇಕಿಯವು ಭಗ್ನವಾಯಿತು; ಪೋಲೆಂಡ ಪರಾಜಿತವಾಯಿತು, ಜಿನಾವಾಗ ಸಂಘದ ಮುಂದಿನಲ್ಲಿ ಸ್ಥಾಪಿತವಾಗಿರುವ ಆ ರಾಷ್ಟ್ರಗಳ ಸ್ಮೃತಸ್ತಂಭಗಳ ಸಾಲಿನಲ್ಲಿ ಇಂದು ಫಿನ್ಲೆಂಡೂ ಸೇರಿದೆ!

ನಾರ್ವೆ ಸ್ವೀಡನುಗಳು ಫಿನ್ಲೆಂಡಿಗೆ ಪ್ರತ್ಯಕ್ಷ ಸಹಾಯವನ್ನು ಕೊಡದಂತೆ ಮಾತ್ರವಲ್ಲ, ಅವುಗಳ ಗಡಿಯಲ್ಲಿ ಇತರ ರಾಷ್ಟ್ರಗಳ ಸಹಾಯವೂ ಹಾದುಹೋಗದಂತೆ ಜರ್ಮನಿಯು ತಡೆದುದು ಫಿನ್ಲೆಂಡಿನ ಈ ಅಪಜಯಕ್ಕೆ ಒಂದು ಕಾರಣವಾಗಿದೆ ಜರ್ಮನಿಯು ಇಷ್ಟೊಂದು ರಷ್ಯದ ಕುರಿತು ಬೆಂಬಲಕೊಡಲು ಕಾರಣವೆಂದರೆ, ಜರ್ಮನಿಯು ಇಂದಿನ ಮಹಾಯುದ್ಧದಲ್ಲಿ ರಷ್ಯದ ಸಂಪೂರ್ಣ ಸಹಾಯವನ್ನು ಅಪೇಕ್ಷಿಸುತ್ತಿದೆ. ರಷ್ಯವು ಇನ್ನೊಂದು ಕಡೆಯಲ್ಲಿ ಯುದ್ಧಾಸಕ್ತವಾಗಿದ್ದರೆ ಜರ್ಮನಿಗೆ ಅಲ್ಲಿಂದ ಯಾವ ಸಹಾಯವೂ ಸಿಗುವುದು ಸಾಧ್ಯವಿಲ್ಲ ಹೀಗಾಗಿ ಇಟಲಿಯಿಂದ ಫಿನ್ಲೆಂಡಿಗೆ ಕಳುಹಿಸಲ್ಪಟ್ಟ ಸಾಧನ ಸಹಾಯಗಳೂ ಜರ್ಮನಿಯಲ್ಲಿ ತಡೆಯಲ್ಪಟ್ಟವು; ಆ ಮೇಲೆ ಮಿತ್ರರಾಷ್ಟ್ರಗಳು ಬೆಂಬಲಕೊಡಲು ಬಂದಾಗ, ಹಿಟ್ಲರನು ಆದನ್ನು ಸ್ಕೇಂಡಿನೇವಿಯ ರಾಷ್ಟ್ರಗಳಿಗೆ ಬೆದರಿಕೆ ಹಾಕಿ ತಡೆದು ನಿಲ್ಲಿಸಿದನು. ಹೀಗಾಗಿ ತನ್ನ ಸ್ವಾರ್ಥದ ಸಲುವಾಗಿಯೇ ಜರ್ಮನಿಯು ಪಿನ್ನರ ರಶ್ಯನರ ಯುದ್ಧದಲ್ಲಿ ಮೊದಲಿಂದಲೇ ರಷ್ಯಕ್ಕೆ ಬೆಂಬಲಕೊಟ್ಟಿತು.

ಎರಡನೆಯದಾಗಿ ಯುರೋಪಿನ ಇತರ ಪ್ರಬಲ ರಾಷ್ಟ್ರಗಳು ಫಿನ್ಲೆಂಡಿಗೆ ಪ್ರತ್ಯಕ್ಷ ಸಹಾಯವೀಯಲು ಸಾಧ್ಯವಿಲ್ಲದ ಪರಿಸ್ಥಿತಿಯೊದಗಿತು ಅಮೇರಿಕವು ಕೆಲವು ಸ್ವಯಂಸೇವಕರನ್ನೂ, ಕೆಲವು ಸಾಧನ ಸಾಮಾಗ್ರಿಗಳು ಮತ್ತು ಚಿಲ್ಲರೆ ಹಣ ಇಷ್ಟನ್ನು ಮಾತ್ರ ಕಳುಹಿಸುತ್ತಲ್ಲದೆ, ಅದಕ್ಕಿಂತ ಹೆಚ್ಚಿನ ಬೆಂಬಲ ಕೊಡಲಾರದಾಯಿತು ಬ್ರಿಟನು ಮತ್ತು ಫ್ರಾನ್ಸುಗಳು ಒಮ್ಮೆಗೇ ರಷ್ಯವನ್ನು ಶತ್ರುರಾಷ್ಟ್ರವಾಗಿ ಮಾಡಿಕೊಳ್ಳಲು ಹಿಂಜರಿದವು ಕಡೆಗೆ ಸೈನ್ಯ ಸಹಾಯವನ್ನು ಕಳುಹಿಸಲು ನಿಶ್ಚಯಮಾಡಿದಾಗಲೂ ನಾರ್ವೆ ಮತ್ತು ಸ್ವೀಡನ್ ಸರಕಾರಗಳ ಧೋರಣೆಗಳು ಅವುಗಳಿಗೆ ಆತಂಕ ಬಂದವು

ಮೂರನೆಯದಾಗಿ ರಷ್ಯದಂತಹ ಪ್ರಬಲರಾಷ್ಟ್ರದೊಡನೆ ದೀರ್ಘಕಾಲ ಕಾದಾಡಲು ಫಿನ್ಲೆಂಡಿಗೆ ಸಹಜವಾಗಿ ಸಾಧ್ಯವಿಲ್ಲದಾಯಿತು ಬರೀ ನೂರುವರೆ ಮಿಲಿಯ ಜನವಸತಿಯ ರಾಷ್ಟ್ರವೊಂದು. ತನ್ನ ಅತ್ಯಲ್ಪ ಸಾಧನಗಳಿಂದ ೧೭ ಮಿಲಿಯ ಜನವಸತಿಯ ನೂತನ ಪ್ರಚಂಡ ಯುದ್ಧೋಪಕರಣವುಳ್ಳ ಮಹಾ ರಾಜ್ಯದೊಡನೆ ಎಷ್ಟರತನಕ ಕಾದಾಡ ಬಹುದು?

ಆದರೂ ಫಿನ್ನರು ಭಯಂಕರ ಸಂಕಷ್ಟಗಳನ್ನು ಕಡೆತನಕ ಎದುರಿಸಿ, ಸ್ವಾತಂತ್ರ್ಯಕ್ಕಾಗಿ ನೂರು ದಿನಗಳ ವರೆಗೆ ಕಾದಾಡಿದ ವೀರ ಚರಿತೆಯು ಪ್ರಪಂಚದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದನ್ನು ನಿರ್ಮಿಸ ಬಲ್ಲಷ್ಟು ಮಹತ್ವದ್ದಾಗಿದೆ

## ಜಿಲ್ಲಾ ಹರಿಜನ ಪರಿಷತ್ತು

ಬರುವ ತಾ. ೩೧, ೧ರಂದು ಜಿಲ್ಲಾ ಹರಿಜನ ಪರಿಷತ್ತು ಮೂಲ್ಕಿಯಲ್ಲಿ ಜರಗಲಿರುವುದು. ಡಾ। ಎಚ್ ವಿ ಅಡಪ್ಪ, ಶ್ರೀ। ಎಂ ಆರ್ ಪೂಂಜ, ಶ್ರೀ। ಎನ್. ಎಸ್ ಕಿಲ್ಲೆಯವರಂತಹ ನುರಿತ ಕಾರ್ಯಕರ್ತರು ಅದರ ಯಶಸ್ವಿತೆಗಾಗಿ ನಿರಂತರ ಶ್ರಮಿಸುತ್ತಿದ್ದಾರೆ ಭಾರತದ ಏಳಿಗೆಯಲ್ಲಿ ಹರಿಜನೋದ್ಧಾರವು ಬಹಳ ಪ್ರಾಮುಖ್ಯವಾದ ವಿಷಯ ಜಿಲ್ಲೆಯವರು ಎಲ್ಲಾ ವಿಧಗಳಿಂದ ಸಹಕರಿಸಿ, ಪ್ರತಿನಿಧಿಗಳಾಗಿಯೂ ಪ್ರೇಕ್ಷಕರಾಗಿಯೂ ಬಂದು, ಹರಿಜನ ಪರಿಷತ್ತಿನ ಮೂಲಕ ನಡೆಯಲಿರುವ ಈ ಹರಿಜನೋದ್ಧಾರ ಕಾರ್ಯದ ಯಶಸ್ವಿತೆಗಾಗಿ ಧನ ದವಸಗಳ ಸಹಾಯಗಳನ್ನು ಕಳುಹಿಸಿ ಈ ಪರಿಷತ್ತನ್ನು ಯಶಸ್ವಿಯಾಗಿ ಮಾಡುವುದು ನಮ್ಮ ಜಿಲ್ಲೆಯ ಮಹಾಜನರೆಲ್ಲರ ಕರ್ತವ್ಯವಾಗಿದೆ ಮೂಲ್ಕಿಯು ಸುಪ್ರಸಿದ್ಧ ದೇವಸ್ಥಾನದ ಉತ್ಸವದ ಸಂದರ್ಭದಲ್ಲಿ ಜಿಲ್ಲೆಯ ಬಹು ಭಾಗದ ಜನರು ಬಂದು ಕೂಡುವುದರಿಂದ ಈ ಪರಿಷತ್ತು ಜನತೆಯಲ್ಲಿ ಹೆಚ್ಚಿನ ಪರಿಣಾಮವನ್ನುಂಟುಮಾಡುವುದೆಂದು ನಾವು ನಂಬುತ್ತೇವೆ.

# ★ ಸ್ವಾತಂತ್ರ್ಯ ಮಾರ್ಗದಲ್ಲಿ ಮುಂದುವರಿಯುವ ಕಾಂಗ್ರೆಸು! ★

## ಕಾಂಗ್ರೆಸು ಇತಿಹಾಸದ ಸಿಂಹಾವಲೋಕನ

[ಲೇಖಕ, ಭಾರತೀಯ]

ಭಾರತದ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಪರ್ಯಾಲೋಚಿಸುತ್ತಾ, ನಾಳೆಗೆ ಅದರ ಪ್ರಗತಿಯು ಯಾವ ಮಾರ್ಗದಲ್ಲಿ ಮುಂದುವರಿಯುವುದೆಂದು ಭವಿಷ್ಯಕಲ್ಪನೆ ಮಾಡಬೇಕಾದರೆ, ಕಾಂಗ್ರೆಸಿನ ಇತಿಹಾಸವನ್ನು ಸಿಂಹಾವಲೋಕನ ಮಾಡುವುದು ಅವಶ್ಯಕವಾಗಿದೆ. ಕಾಂಗ್ರೆಸಿನ ಇತಿಹಾಸವೆಂದರೆ, ಸ್ವಾತಂತ್ರ್ಯ ಪ್ರಾಪ್ತಿಗಾಗಿ ಮಾಡಿದ ನಿರಂತರ ಹೋರಾಟದ, ಅತುಲ ಬಲಿದಾನದ, ಸ್ವಾರ್ಥ ತ್ಯಾಗದ ಭವ್ಯ ಚರಿತ್ರೆಯಾಗಿದೆ! ಕಾಂಗ್ರೆಸನ್ನು ಪ್ರಾರಂಭ ಮಾಡಿದ ಕೀರ್ತಿಯು ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ಕೆಲಸ ಮಾಡುತ್ತಿದ್ದ, ಎಲೆನ್ ಒಕ್ಟೇವಿಯಸ್ ಹ್ಯೂಮ್ ಎಂಬ ಐರೋಪ್ಯನಿಗೆ ಸಲ್ಲತಕ್ಕದ್ದು ಎಂಬುದನ್ನು ಕೇಳಿ ಇಂದು ನಾವು ಆಶ್ಚರ್ಯಪಡಬಹುದು. ರಾಜಕೀಯ ವಿಚಾರವಿಲ್ಲದೆ, ಭಾರತ ಸಾಮಾಜಿಕೋನ್ನತಿಯ ಬಗ್ಗೆ, ದೇಶೀಯರಾದ ಕೆಲ ಮಂದಿ ಮುಂದಾಳುಗಳನ್ನು ಒಂದುಗೂಡಿಸಿ ಅಭಿಪ್ರಾಯ ವಿನಿಮಯ ಮಾಡಲು, ಐರೋಪ್ಯರೊಬ್ಬರ ಪ್ರೋತ್ಸಾಹದಿಂದ ಅಂದು ಸ್ಥಾಪಿತವಾದ ಸಂಸ್ಥೆಯು ಇಂದು ತನ್ನ ಕಾರ್ಯಕ್ರಮಗಳನ್ನು ಎಷ್ಟು ತೀವ್ರವಾಗಿ, ಪ್ರಬಲವಾಗಿ, ಬದಲಾಯಿಸಿ ಕೊಂಡಿದೆಯೆಂಬುದನ್ನು ವಿಚಾರಿಸಿದರೆ ಮುಂದಿನ ಕಾಂಗ್ರೆಸಿನ ಉಜ್ವಲ ಭವಿಷ್ಯದ ಕಲ್ಪನೆಯನ್ನು ಮಾಡುವುದು ಸುಲಭವಾಗಬಹುದು.

### ರಾಜಕೀಯ ವಿಚಾರ

ಕಾಂಗ್ರೆಸು ಸ್ವಲ್ಪ ಸಮಯದಲ್ಲಿಯೇ ಇಂದು ವೈಸರಾಯರಾಗಿದ್ದ ಲಾರ್ಡ್ ಡಫರಿನ್ನರ ಸೂಚನೆಯಂತೆ ರಾಜಕೀಯ ಆಡಳಿತದ ವಿಷಯಗಳನ್ನೂ ಆಲೋಚಿಸಬೇಕೆಂದು ತನ್ನ ಉದ್ದೇಶವನ್ನು ಮಾರ್ಪಡಿಸಿದ ಕಾಲದಲ್ಲಿ, ಬ್ರಿಟಿಷ್ ಸರಕಾರವು, ತನ್ನ ರಾಜ್ಯಭಾರವನ್ನು ಹೊರಹಾಕಲು ಮುಂದೆ ಕಾಂಗ್ರೆಸು ಭರದಿಂದ ಹೋರಾಡುವುದೆಂಬ ವಿಚಾರವನ್ನು ಕನಸಿನಲ್ಲಿಯೂ ಕಲ್ಪಿಸಿರಲಿಕ್ಕಿಲ್ಲ. ಕಾಂಗ್ರೆಸು, ರಾಜ್ಯದ ಆಡಳಿತದ ವಿಷಯವನ್ನು ಚರ್ಚಿಸಲು ಆರಂಭ ಮಾಡಿದಾಗ, ಸರಕಾರದವರು ರಾಜಕೀಯ ವಿಚಾರದ ಕೆಲ ಮಂದಿ ಮುಂದಾಳುಗಳನ್ನು ಯತ್ಕಿಂಚಿತ್ ಅಧಿಕಾರ ಕೊಟ್ಟು ತೃಪ್ತಿಪಡಿಸಬಹುದಾಗಿ ತಿಳಿದುಕೊಂಡು ಸುಮ್ಮಗಿದ್ದರು.

ಬ್ರಿಟಿಷರು ಭಾರತವನ್ನು ಆಕ್ರಮಿಸಿದ ಮೊದಲ್ಗೊಂಡು ಅವರ ಆಡಳಿತವನ್ನು ಕಟುತರವಾಗಿ ಟೀಕಿಸುವುದು ಮೊದಲಿನಿಂದಲೇ ಏನೇನೂ ಕಡಿಮೆಯಾಗಿರಲಿಲ್ಲ. ಆದರೆ ಅಂತಹ ಟೀಕೆಗಳಿಗೆ ಸಂಘ ಸ್ವರೂಪವು ಬಂದದ್ದು ಕಾಂಗ್ರೆಸಿನ ಸ್ಥಾಪನೆಯಾದಬಳಿಕವೇ. ಆ ಸಮಯದಲ್ಲಿಯೇ ಮಿ॥ ಹ್ಯೂಮರು ಅಖಿಲ ಭಾರತ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬ ಕಲ್ಪನೆಯಿಂದ ೧೮೮೫ ರಲ್ಲಿ ಕಾಂಗ್ರೆಸಿನ ಅಸ್ತಿವಾರ ಶಿಲೆಯನ್ನು ಹಾಕಿದರೆನ್ನಬಹುದು.

### ಪರತಂತ್ರದಿಂದ ಸ್ವಾತಂತ್ರ್ಯ ದೃಷ್ಟಿ

ಲೋಕದ ಎಲ್ಲಾ ಸಂಘಗಳ ಇತಿಹಾಸದಂತೆ ಕಾಂಗ್ರೆಸು ಕೂಡ ಪ್ರಾರಂಭದ ದಿನಗಳಲ್ಲಿ ಬಹಳ ಅಲ್ಪ ಸ್ವಲ್ಪ ಕಾರ್ಯಗಳನ್ನು ಮಾತ್ರ ಮಾಡುತ್ತಿತ್ತು. ಆಗಿನ ಕಾಲದಲ್ಲಿ ಸಹಜವಾಗಿ ಆ ಮುಂದಾಳುಗಳಿಗೆ ಅನೇಕ ಸಂಕಷ್ಟಗಳು, ತೊಂದರೆಗಳು, ಸಂಶಯಗಳು ಒದಗುತ್ತಿದ್ದರೂ ಜನತೆಯ ಪರವಾಗಿ ಜನತೆಯಿಂದಲೇ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಪ್ರಜಾಪ್ರಭುತ್ವ ಸರಕಾರವು ಭಾರತದಲ್ಲಿ ಸ್ಥಾಪಿಸಬೇಕೆಂಬ ವಿಷಯದಲ್ಲಿ ಅಂದಿನ ಧುರೀಣರಿಗೆ ನಿಶ್ಚಿತವಾದ ಕಲ್ಪನೆಯಿತ್ತು. ಬ್ರಿಟಿಷ್ ಪಾರ್ಲಿಮೆಂಟಿಗೆ ನಮ್ಮ ಬಿನ್ನಹಗಳನ್ನು ಸಂಪೂರ್ಣವಾಗಿ ಮನವರಿಕೆ ಮಾಡಿಕೊಟ್ಟರೆ ಅವರಾಗಿ ಜನತೆಯ ಹಿತವನ್ನು ಮಾಡಿ ಸ್ವಾತಂತ್ರ್ಯವನ್ನು ಸ್ಥಾಪಿಸುವರೆಂದು ಅಂದಿನ ಮುಖಂಡರು ತಿಳಿದಿದ್ದುದರಿಂದ ಕಾಂಗ್ರೆಸ್ಸಿನ ಕೇಳಿಕೆಗಳು ಅಂದು ಕೇವಲ ಅರ್ಜಿ ಬಿನ್ನಹ ರೂಪಗಳಾಗಿಯೇ ಇದ್ದವು.

ಕಾಂಗ್ರೆಸಿನ ಜನಕರಾದ ಮಿ॥ ಎಲೆನ್ ಒಕ್ಟೇವಿಯಸ್ ಹ್ಯೂಮ್ ಅವರು

ಆದರೆ, ಆ ಮೇಲಿನ ಘಟನೆಗಳಿಂದ ಮುಂದಾಳುಗಳ ಆಶೆಗಳೆಲ್ಲಾ ಭಗ್ನವಾದುವು. ವರ್ಷ ವರ್ಷಕ್ಕೆ ಕಳೆದ ಅರ್ಧ ಶತಮಾನಗಳಿಂದ ನಿರೀಕ್ಷಿಸಿದ ಭಾರತದ ಬೇರೆ ಬೇರೆ ಕಡೆಗಳಲ್ಲಿ ಕಾಂಗ್ರೆಸ ಅಧಿವೇಶನಗಳು ಸೇರಿದುವು. ಅಖಿಲ ಭಾರತದ ಜನತೆಯು ಸ್ವಾತಂತ್ರ್ಯ ದಾಹದಿಂದ, ಜಡನಿದ್ರೆಯನ್ನು ಬಿಟ್ಟು ಎಚ್ಚತ್ತಿತು. ಮಹಾತ್ಮಾಜಿಯವರು ಕಾಂಗ್ರೆಸ್ಸಿನ ಕಡಿವಾಣವನ್ನು ಕೈಯಲ್ಲಿ ಹಿಡಕೊಂಡು ಮುನ್ನಡೆಸಿದರು. ಶಾಸನ ಚಳವಳಿಗಳು ಆರಂಭವಾದುವು. ಜನರು ಸ್ವಚ್ಛಂದರಾಗಿ ಬೆಂಬಲವಿತ್ತರು. ಬ್ರಿಟಿಷ್ ಸರಕಾರವು ಉಗ್ರವೂ ಕಠಿಣವೂ ಆಯಿತು. ಜನತೆಯ ಮೇಲೆ ಸರಕಾರದ ನಿರ್ಬಂಧಗಳು ಬಿಗಿಯಾದುವು. ಇಡೀ ರಾಷ್ಟ್ರವೇ ಎಚ್ಚತ್ತಿತು. ಹಲವು ಪತ್ರಿಕೆಗಳ ಬಾಯಿಗೆ ಬೀಗ ಮುದ್ರೆಗಳು ಬಿದ್ದವು. ಇದರಿಂದೆಲ್ಲಾ ಜನತೆಗೆ ತಮ್ಮ ಪಾರತಂತ್ರ್ಯದ ನೋವು ಹೆಚ್ಚು ಹೆಚ್ಚಾಗಿ ತಿಳಿದು ಬಂತು.

### ಆಶೆ ಮತ್ತು ನಿರಾಶೆಗಳು!

೧೯೧೪ ರಲ್ಲಿ ಮಹಾಯುದ್ಧವು ಆರಂಭವಾಯಿತು. ಆಗ ಕಿರಿಗಿ ಒಮ್ಮೆ ರಾಜಕೀಯ ವಾತಾವರಣವು ಶಾಂತವಾಯಿತು. ಬ್ರಿಟಿಷ್ ಸರಕಾರದಲ್ಲಿ ವಿಶ್ವಾಸವಿಟ್ಟು ಭಾರತೀಯ ಮುಂದಾಳುಗಳು ಯುದ್ಧದಲ್ಲಿ ಸರಕಾರಕ್ಕೆ ಅಗಣಿತ ಜನ-ಧನ ಸಹಾಯ ಮಾಡಿದರು. ಯುದ್ಧದಲ್ಲಿ ತಾವು ಸಲ್ಲಿಸಿದ ಅತುಲ ಸೇವೆಯನ್ನು ಪರಿಗಣಿಸಿ, ಯುದ್ಧವು ಮುಗಿದ ಮೇಲೆ ಸರ್ಕಾರ ಸ್ವಾತಂತ್ರ್ಯವನ್ನು ಕೊಡುವರೆಂದು ಜನರಿಗೆ ಭರವಸೆಯಿತ್ತು. ಆದರೆ ೧೯೧೯ರ ಇಂಡಿಯಾ ಆಕ್ಟು ಆ ಆಶೆಯನ್ನು ಪೂರ್ಣ ಭಗ್ನಗೊಳಿಸಿತು. ರೌಲೆಟ್ ಆಕ್ಟನ್ನು ಮಂಜೂರ ಮಾಡಿದರು. ಅದರ ಬಗೆ ಮುಸ್ಲಿಮರು ಖಿಲಾಫತ್ ಆಂದೋಲನವನ್ನು ಆರಂಭಿಸಿದರು. ಸತ್ಯಾಗ್ರಹ ಮತ್ತು ಹರತಾಳಗಳಿಂದ ರಾಷ್ಟ್ರವು ಅಗ್ನಿಮಯವಾಯಿತು. ಹಿಂದೂ ಮುಸ್ಲಿಮರು ಒಂದಾಗಿ ಭುಜಕ್ಕೆ ಭುಜ ಕೊಟ್ಟು ಸ್ವಾತಂತ್ರ್ಯಕ್ಕೆಂದು ಹೋರಾಡಿದರು. ಸರಕಾರದವರು ನಿರ್ದಯೆಯಿಂದ ಹಲವು ಕಡೆ ಜನರನ್ನು ಗುಂಡಿಕ್ಕಿ ಕೊಂದರು. ಇದೇ ಕಾಲದಲ್ಲಿ ಮೊನ್ನೆ ಇಂಗ್ಲಾಂಡಿನಲ್ಲಿ ಭಾರತೀಯ ತರುಣನ ಗುಂಡಿನೇಟಿನಿಂದ ಸತ್ತ ಒಡ್ವಾಯರನ ಆಡಳಿತವಿದ್ದ ಪಂಜಾಬಿನ ಜಲಿಯಾನ್‌ವಾಲಾ ಬಾಗಿನಲ್ಲಿ ೧೯೧೯ನೇ ಎಪ್ರಿಲ್ ೧೩ ರಂದು ಉತ್ಸವಕ್ಕೆಂದು ಸೇರಿದ್ದ ಜನರ ಮೇಲೆ ಗುಂಡಿನ ಮಳೆ ಕರೆದು ಜನಹತ್ಯೆಯಾಗಿ ಅತ್ಯಾಚಾರವಾಗಿದ್ದಿತು.

೧೯೨೯ ರಲ್ಲಿ ಲಾಹೋರ್‌ನಲ್ಲಿ ಕಾಂಗ್ರೆಸು ಅಧಿವೇಶನವು ಸೇರಿತು. ಕಾಂಗ್ರೆಸಿನ ಘಟನೆಗಳು ಮಾರ್ಪಟ್ಟವು. ಕಾಂಗ್ರೆಸಿನ ಧ್ಯೇಯವು ಪೂರ್ಣ ಸ್ವರಾಜ್ಯವೆಂದು ಸಾರಲ್ಪಟ್ಟಿತು. ೧೯೩೦ ರಲ್ಲಿ ಶಾಸನ ಭಂಗ ಚಳವಳಿಯು ಗಾಂಧಿಜಿಯವರ ಮುಂದಾಳುತನದಿಂದ ಆರಂಭವಾಯಿತು. ೧೯೩೧ ಮಾರ್ಚಿಯಲ್ಲಿ ಗಾಂಧಿ ಮತ್ತು ಆಗಿನ ವೈಸರಾಯ್ ಅರ್ವಿನರೊಳಗೆ ಒಂದು ಒಪ್ಪಂದವಾಯಿತು. ಹಾಗಾಗಿ ಚಳವಳಿಯು ನಿಲ್ಲಿಸಲ್ಪಟ್ಟಿತು. ಮಹಾತ್ಮಾಜೀಯವರು ೧೯೩೧ ರಲ್ಲಿ ಲಂಡನಿನಲ್ಲಿ ನೆರೆದ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಆಹ್ವಾನಿತರಾದರು. ಅದರಿಂದ ಭಾರತೀಯರಿಗೆ ಕಾಸಿನ ಪ್ರಯೋಜನವೂ ಆಗದೆ ಗಾಂಧೀಜಿಯವರು ಬರಿಗೈಯಿಂದ ಮರಳಿ ಬಂದರು. ಅಲ್ಲಿಂದ ಬಂದಿಳಿದಾಗಲೇ ಗಾಂಧಿಜಿಯವರನ್ನು ಬಂಧಿಸಲಾಯಿತು. ಚಳವಳಿಯು ತಿರಿಗಿ ಉಗ್ರವಾಯಿತು. ಕಡೆಗೆ ೧೯೩೪ರಲ್ಲಿ ಅದು ನಿಲ್ಲಿಸಲಾಯಿತು.

### ಗುರಿಯೊಂದೇ!

೧೯೩೭ರಲ್ಲಿ ಕಾಂಗ್ರೆಸು ಪ್ರಾಂತಿಕ ಸರಕಾರವನ್ನು ಕೈಕೊಂಡು ನಡೆಸಲು ನಿಶ್ಚಯ ಮಾಡಿದ ಮೇಲೆ ಕಾಂಗ್ರೆಸಿನ ಇತಿಹಾಸಕ್ಕೆ ಇನ್ನೊಂದು ಸ್ವರೂಪವು ಬಂದಿದೆ. ಕಾಂಗ್ರೆಸಿನಲ್ಲಿ ಎಡಪಕ್ಷದವರಾದ, ಸೋಶಿಯಲಿಸ್ಟರು, ರಾಯಿಸ್ಟರ, ಬೋಸಿಸ್ಟರು ಬಲಪಕ್ಷದ ಗಾಂಧೀವಾದಿಗಳೊಡನೆ ಕಾಂಗ್ರೆಸು ಮಾಡಬೇಕಾದ ಕಾರ್ಯಕ್ರಮಗಳ ವಿಷಯವಾಗಿ ಭಿನ್ನಾಭಿಪ್ರಾಯವುಳ್ಳವರಾಗಿರುವರು. ತ್ರಿಪುರಿ ಅಧಿವೇಶನ ಕಾಲದಿಂದ ಅದು ತೀವ್ರವಾಗಿದೆ. ತೀವ್ರ ಹೋರಾಟವನ್ನು ಹೂಡುವುದು ಈಗ ಅವಶ್ಯವೆಂದು ಎಡಪಕ್ಷದವರ ಹೇಳಿಕೆಯಾಗಿದೆ. ಸಮಯವು ಸನ್ನಿಹಿತವಾಗಬೇಕೆಂದು ನಿರೀಕ್ಷಿಸಿಕೊಂಡು ಗಾಂಧಿಜಿಯವರು ಸಾವಕಾಶ ಮಾಡುತ್ತಿರುವರು. ಯುದ್ಧದ ಉದ್ದೇಶವೇನೆಂದು ಕೇಳಿ ಪ್ರಶ್ನಿಸಿ ಕಾಂಗ್ರೆಸು ಪ್ರಾಂತಿಕ ಅಧಿಕಾರಕ್ಕೆ ರಾಜಿಕೊಟ್ಟಿದೆ. ಈಗ ಪಾಟ್ನಾದಲ್ಲಿ ಸೇರಿದ ವರ್ಕಿಂಗ್ ಕಮಿಟಿಯು ಕಾಂಗ್ರೆಸಿನ ಕೇಳಿಕೆಯನ್ನು ರಾಷ್ಟ್ರದ ಇಂಗಿತವನ್ನು ಬ್ರಿಟಿಷರಿಗೆ ಸಾರಿ ತಿಳಿಸಿದೆ. ರಾಮಗಡ ಕಾಂಗ್ರೆಸಿನಲ್ಲಿ ಅದು ಇನ್ನಷ್ಟು ತೀವ್ರವಾಗಿ ಸಾರಲಾಗುವುದು. ರಾಜಕೀಯ ಹೋರಾಟಕ್ಕಾಗಿ ರಾಷ್ಟ್ರವು ಕಠಿಣತೆಗಳನ್ನು ಮುಂದಕ್ಕೆ ಇದಿರಿಸಬೇಕಾಗಿರುವ ಕಾಲವು ಈಗ ಸನ್ನಿಹಿತವಾಗುತ್ತಿದೆ.

### ಉಜ್ವಲ ಭವಿಷ್ಯ

ಕಾಂಗ್ರೆಸಿಗೆ ಖಂಡಿತವಾಗಿ ಉಜ್ವಲ ಭವಿಷ್ಯವಿದೆ! ಭಾರತೀಯರು ಪೂರ್ಣ ಸ್ವರಾಜ್ಯವನ್ನು ಪಡೆದು ಅನುಭೋಗಿಸುವ ಕಾಲವು ಇದೆ! ಕಾಂಗ್ರೆಸನ್ನು ಹಾಳು ಮಾಡಬೇಕೆಂದು ಬಗೆದ ಅನೇಕ ದೇಶದ್ರೋಹಿಗಳು ಈಗ ನಿರಾಶರಾಗುತ್ತಿದ್ದಾರೆ. ಕಾಂಗ್ರೆಸಿನಲ್ಲಿರುವ ಎಡ-ಬಲ ಪಕ್ಷಗಳ ವ್ಯತ್ಯಾಸವು ಕೇವಲ ಕ್ಷಣಿಕವಾದವು. ಉದ್ದೇಶವು ಎಲ್ಲರದೂ ಸ್ವಾತಂತ್ರ್ಯವೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಭಾರತೀಯರು ಬೇಗನೇ ಕಡೆಯ ಹೋರಾಟಕ್ಕೆ ಅತುಲ ಸ್ವಾರ್ಥ ತ್ಯಾಗವನ್ನು ಮಾಡುವ ಕಾಲವು ಈಗ ಬಂದಿದೆ. ಆ ಸಮಯದಲ್ಲಿ ರಾಷ್ಟ್ರಕ್ಕೆ ರಾಷ್ಟ್ರವೇ ಮುಂದೆ ಬಂದು ಕಾಂಗ್ರೆಸಿಗೆ ಬೆಂಬಲಕೊಡುವುದೆಂಬುದರಲ್ಲಿ ಯಾರೂ ಸಂಶಯಗೊಳ್ಳಲು ಏನೂ ಆಸ್ಪದವಿಲ್ಲ. ಸ್ವರಾಜ್ಯವು ಭಾರತೀಯರ ಜನ್ಮಸಿದ್ಧವಾದ ಹಕ್ಕು!

# ಈ ಸಲದ ಕಾಂಗ್ರೆಸ್ ಅಧಿವೇಶನ

## ರಾಮಗರದ ಸುದ್ದಿಗಳು

### ಮಹಾತ್ಮರ ಆಗಮನ

ಮಹಾತ್ಮಾ ಗಾಂಧಿಯವರು ರಾಮಘರ್ ಕಾಂಗ್ರೆಸ್‌ಗೆ ಆಗಮಿಸಿದರು. ಡಾ|| ರಾಜೇಂದ್ರಪ್ರಸಾದರೂ, ಸ್ವಯಂ ಸೇವಕರೂ, ಸೇವಿಕೆಯರೂ ಗಾಂಧಿಜಿಯವರನ್ನು ಆದರದಿಂದಲೂ ಗೌರವದಿಂದಲೂ ಸ್ವಾಗತಿಸಿ ಕರೆದುಕೊಂಡು ಹೋದರು. ರಾಮಘರ್ ಟೌನ್‌ಸ್ಟೇಷನ್ನಿನಿಂದ ಸ್ವಾಗತ ಸಮಿತಿಯ ಅಧಿಕಾರಿಯೂ, ಸ್ವಯಂ ಸೇವಕರೂ ದಾರಿಯ ಎರಡು ಕಡೆಗಳಲ್ಲಿ ಸಾಲಾಗಿ ನಿಂತು ಮಹಾತ್ಮರನ್ನು ಗೌರವಿಸಿದರು. ಗಾಂಧಿಜಿಯವರು ತಮ್ಮ ಕುಟೀರಕ್ಕೆ ತೆರಳಿದರು. ಮಹಾತ್ಮಾ ಗಾಂಧೀಜಿಯವರನ್ನೂ ರಾಷ್ಟ್ರ ಮುಖಂಡರುಗಳನ್ನೂ ಸತ್ಕರಿಸುವುದಕ್ಕೆ ಮಜ್ದುರ್‌ಪುರಿ ಜನರೆಲ್ಲರೂ ಸ್ವಯಂ ಸೇವಕರೂ ಬೆಳಗಿನಿಂದ ಆಸಕ್ತರಾಗಿದ್ದರು. ಗಾಂಧಿಯವರು ಆಗಮಿಸಿದ ಕೂಡಲೇ ರಾಷ್ಟ್ರಗೀತೆಯನ್ನೂ ಬ್ಯಾಂಡನ್ನೂ ನಡಿಸಿದರು.

### ವಸ್ತುಪ್ರದರ್ಶನ

ವಸ್ತುಪ್ರದರ್ಶನದ ಆರಂಭೋತ್ಸವವನ್ನು ಮಹಾತ್ಮರು ವೈಭವದ ಸನ್ನಿವೇಶದಲ್ಲಿ ನೆರವೇರಿಸಿದರು. ರಾಮಘರಿನ ಸುತ್ತ ಮುತ್ತಲಿನ ಗ್ರಾಮವಾಸಿಗಳೂ ಮೂಲವಾಸಿಗಳೂ ಗುಂಪು ಗುಂಪಾಗಿ ಬಂದು ಸೇರಿದ್ದರು.

### ಗಾಂಧೀಜಿಯವರ ಭಾಷಣ

ಮಹಾತ್ಮರು ಆರಂಭೋತ್ಸವವನ್ನು ನೆರವೇರಿಸುತ್ತಾ ಸುಮಾರು ಅರ್ಧ ಗಂಟೆ ಕಾಲ ಭಾಷಣ ಮಾಡಿದರು. ನೂಲುವುದು ಮತ್ತು ಗ್ರಾಮ ಕೈಗಾರಿಕೆಗಳು ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೆ ಮೂಲಾಧಾರವಾದುವು; ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಧನಿಕರು ಮತ್ತು ಶ್ರೀಮಂತರು ಹೆಚ್ಚು ಆಸಕ್ತಿವಹಿಸಿ ಕೆಲಸ ಮಾಡಬೇಕು. ಗ್ರಾಮದ ಜನರ ಜೀವನ ಸೌಖ್ಯವನ್ನು ಸಂಪತ್ತನ್ನು ಹೆಚ್ಚಿಸಬೇಕು ಕಳೆದ ಐವತ್ತು ವರ್ಷಗಳಿಂದ ಕಾಂಗ್ರೆಸ್ಸು ಗ್ರಾಮದ ಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಲಿದೆ.

ಬೊಂಬಾಯಿ ಕಲ್ಕತ್ತಾ ಮೊದಲಾದ ನಗರಗಳು ನಿಜವಾದ ಭಾರತವನ್ನು ಪ್ರತಿಬಿಂಬಿಸುವುದಿಲ್ಲ. ಭಾರತದ ಅದ್ಯಂತದಲ್ಲಿ ಹರಡಿರುವ ಏಳು ಲಕ್ಷ ಗ್ರಾಮಗಳಲ್ಲಿ ನಿಜವಾದ ಭಾರತವನ್ನು ನೋಡಬೇಕು. ಗ್ರಾಮಗಳು ಸ್ವಶಕ್ತಿಯಿಂದ ಮುಂದುವರಿಯುವಂತೆ ಏರ್ಪಡಬೇಕು. ಗ್ರಾಮದ ಜನರು ತಮ್ಮಲ್ಲಿರುವ ಶಕ್ತಿಯನ್ನು ಅರಿಯಬೇಕು. ಅವರು ತಮಗೆ ಬೇಕಾದ ಆಹಾರ ಪದಾರ್ಥಗಳನ್ನೂ, ಬಟ್ಟೆಯನ್ನೂ ಸ್ವಂತ ತಯಾರಿಸಬೇಕು.

ವಾರ್ಧಾ ಶಿಕ್ಷಣಕ್ರಮವನ್ನುಪಯೋಗಿಸಬೇಕು. ಹಿಂದುಗಳೂ ಮುಸ್ಲಿಮರೂ ಐಕಮತ್ಯ ಸೌಹಾರ್ದತೆಗಳಿಂದ ಇರಬೇಕು. ಜನರು ಸ್ವಶಕ್ತಿಯಿಂದ ಮುಂದೆ ಬಂದರೆ ಭಾರತದ ಸ್ವಾತಂತ್ರ್ಯವು ಕ್ಷಿಪ್ರದಲ್ಲಿಯೇ ಹಸ್ತಗತವಾಗುವುದು ಎಂದು ಸಾರಿದರು.

ಮಹಾತ್ಮರಿಗೆ ಮೂಲ ನಿವಾಸಿಗಳ ಮಹಿಳೆಯೊಬ್ಬಳು ತಾನು ತಯಾರಿಸಿದ ಖಾದಿ ನೂಲನ್ನು ಕಾಣಿಕೆಯಾಗಿ ಅರ್ಪಿಸಿದಳು.

ಗ್ರಾಮಾಂತರ ಕೈಗಾರಿಕೆಗಳ ಪ್ರದರ್ಶನದಲ್ಲಿ ಹಳ್ಳಿಯವರಿಗೆ ಅನುಕೂಲವಾದ ಎಣ್ಣೆ ಬತ್ತಿ ಹಾಕಿ ಉರಿಸುವ ಹೊಸ ಮಾದರಿಯ ಲಾಂದ್ರವನ್ನು ತಯಾರಿಸಿ ಇಡಲಾಗಿತ್ತು. ಒಂದೂವರೆ ಔನ್ಸು ಹರಳೆಣ್ಣೆ ಅಥವಾ ಬೇರೆ ಯಾವುದಾದರೂ ಎಣ್ಣೆ ಹಾಕಿದರೆ ಒಂದು ಘಂಟೆ ಕಾಲ ಸೊಗಸಾದ ದೀಪ ಉರಿಸಬಹುದು. ಆಯುರ್ವೇದ ಸಂಬಂಧವಾದ ಗಿಡ ಮೂಲಿಕೆಗಳೂ ಪ್ರದರ್ಶಿಸಲ್ಪಟ್ಟಿವೆ.

### ರಾಷ್ಟ್ರಪತಿಗಳ ಆಗಮನ

ರಾಷ್ಟ್ರಪತಿ ಮೌಲಾನಾ ಅಬುಲ್ ಕಲಾಂ ಅಜಾದ್‌ರವರು ರೈಲುನಿಲ್ದಾಣದಲ್ಲಿಳಿದಾಗ ಅವರನ್ನು ಸುಂದರವಾಗಿ ಶೃಂಗಾರಿಸಲಾದ ಒಂದು ನವಿಲಿನಾಕಾರದ ಬಂಡಿಯಲ್ಲಿ ಕೊಂಗ್ರೆಸ್ಸು ನಗರಕ್ಕೆ ಮೆರವಣಿಗೆ ಮೂಲಕ ಒಯ್ಯಲಾಯಿತು. ರೈಲ್ವೆನಿಲ್ದಾಣದಿಂದ ಕೊಂಗ್ರೆಸ್ಸು ನಗರಕ್ಕಿರುವ ಮೂರು ಮೈಲುಗಳ ತನಕ ಅನೇಕ ಸಾವಿರ ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಗ್ರಾಮಸ್ಥರು ಕಿಕ್ಕಿರಿದು ನೆರೆದಿದ್ದರು. ಅಂದಾಜು ೫೦,೦೦೦ಕ್ಕಿಂತಲೂ ಹೆಚ್ಚು ಜನರು ಉತ್ಸಾಹಪೂರ್ವಕದಿಂದ ಜಯಘೋಷ ಮಾಡುತ್ತಿದ್ದರು. ಮೆರವಣಿಗೆಯಲ್ಲಿ ಸ್ವಯಂ ಸೇವಕರು ಕ್ರಮವಾಗಿ ಶಿಸ್ತು ಪಾಲಿಸುತ್ತಿದ್ದರು. ಜನಸ್ತೋಮವು ಜಯಘೋಷ ಮಾಡುತ್ತಿರುವಾಗ ಮೌಲಾನಾ ಅಜಾದರು ಮುಗುಳ್ನಗೆಯಿಂದ ಕೈಜೋಡಿಸಿ, ಆಗಿಂದ್ದಾಗ ನಮಸ್ಕರಿಸುತ್ತಿದ್ದರು. ಕೊಂಗ್ರೆಸ್ಸು ನಗರಕ್ಕೆ ರೈಲ್ವೆನಿಲ್ದಾಣದಿಂದ ಒಂದೂವರೆ ಗಂಟೆ ತನಕ ಈ ಜನಸ್ತೋಮವು ಪ್ರಯಾಣ ಮಾಡಬೇಕಾಯಿತು. ಕೊಂಗ್ರೆಸ್ಸು ನಗರದ ಹೆಬ್ಬಾಗಿಲಿಗೆ ಪ್ರದರ್ಶನವು ಮುಟ್ಟಲು, ಸ್ತ್ರೀ ಸ್ವಯಂ ಸೇವಕರು ರಾಷ್ಟ್ರಪತಿಯವರಿಗೆ ಆರತಿ ಮಾಡಿದರು. ಇಬ್ಬರು ಜವಾನಿಯ ಧರ್ಮಗುರುಗಳು ಶುಭಮಂತ್ರ ಜಪಿಸಿದರು. ಜನರು ಪವಿತ್ರ ಯಾತ್ರೆಗೆ ಪ್ರಯಾಣ ಬೆಳೆಸುವಂತೆ ಗಂಭೀರ ಹೆಜ್ಜೆ ಹಾಕುವುದು: ಆನಂದಕರವಾದ ದುಂಧುಬಿಗಳು ಮೊಳಗುವುದೂ, ಇವುಗಳಿಂದ ಈ ಮೆರವಣಿಗೆಯು ಅದೊಂದು ಗಂಭೀರದೃಶ್ಯದಂತೆ ಶೋಭಿಸುತ್ತಿತ್ತು. ಇದರಲ್ಲಿ ಭಾಗವಹಿಸಲು ಜನರು ಬೆಳಗಿನ ಜಾವದಿಂದ ರೈಲ್ವೆನಿಲ್ದಾಣದಲ್ಲಿ ಸೇರುತ್ತಿದ್ದರು.

### ವರ್ಕಿಂಗ್ ಕಮಿಟಿ ಸಭೆ

ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ಮೀಟಿಂಗ್ ಬಾಬುರಾಜೇಂದ್ರರ ಅಧ್ಯಕ್ಷತೆಯಲ್ಲಿ ರಾಮಘರದಲ್ಲಿ ಆರಂಭವಾಯಿತು. ಗಾಂಧಿಜಿಯವರು ಹಾಜರಿದ್ದರು. ಪಾಟ್ನಾದ ಠರಾವು ಮತ್ತು ಕಾನ್ಸ್‌ಟಿಟ್ಯುಯೆಂಟ್ ಎಸೆಂಬ್ಲಿಯ ಕುರಿತಾದ ವಿಚಾರಗಳಲ್ಲಿ ಪ್ರಬಲ ಚರ್ಚೆ ನಡೆಯಿತು. ಹಾಗೂ ಕಾಂಗ್ರೆಸಿನ ಕೇಳಿಕೆಯು ಮನ್ನಿಸಲ್ಪಡದಿರುವ ಭಾಗದಲ್ಲಿ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದೂ ಆಲೋಚಿಸಲಾಯಿತು. ಪಂಡಿತ ಜವಹರಲಾಲ್ ನೆಹರೂರವರು, ವರ್ಕಿಂಗ್ ಕಮಿಟಿಯ ಪರವಾಗಿ ಮಾತಾಡುತ್ತಾ, ಬಾಬು ರಾಜೇಂದ್ರರ ಕಾಂಗ್ರೆಸ್ ಅಧ್ಯಕ್ಷತನದ ಒಂದು ವರ್ಷದ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಒಂದು ಠರಾವನ್ನು ಮಂಡಿಸಲು, ಸರ್ದಾರ್ ಪಟೇಲರಿಂದ ಅದು ಅನುಮೋದಿಸಲ್ಪಟ್ಟು ಮಂಜೂರಾಯಿತು.

ಪಾಟ್ನಾದಲ್ಲಿ ಪಾಸಾದ ರಾಜಕೀಯ ವಿಧ್ಯಮಾನಗಳದೊಂದು ಠರಾವನ್ನು ಯಾವ ತಿದ್ದುಪಡಿಗಳೂ ಇಲ್ಲದೆ, ಇದ್ದ ಹಾಗೇ, ವಿಷಯ ನಿಯಾಮಕ ಕಮಿಟಿಯು ತೀರ್ಮಾನ ಸ್ವೀಕರಿಸುವಂತೆ, ವರ್ಕಿಂಗ್ ಕಮಿಟಿ ನಿರ್ಧರಿಸಿತು.

ಕಾನ್ಸ್‌ಟಿಟ್ಯುಯೆಂಟ್ ಎಸೆಂಬ್ಲಿಯ ನಿರ್ಮಾಣದ ಅರಿಕೆಯನ್ನು ಸರಕಾರವು ಕೊನೆತನಕವೂ ಮನ್ನಿಸದಿದ್ದರೆ ಮಾಡತಕ್ಕ ಕರ್ತವ್ಯವೇನೆಂದು ದಾರಿ ತೋರುವ ಭಾರ, ಗಾಂಧಿಜಿಯವರ ಮೇಲೆ ಬೀಳಬಹುದೆಂದು ನಿಜವಾಗಿದೆ; ಆದರೆ ದೇಶವೂ, ಕಾಂಗ್ರೆಸೂ ತಮ್ಮನ್ನು ಸರಿ

[...ನೀಯ ಪ್ರತಿಕ್ಕೆ ಮುಂದುವರಿಯುವುದು]

**PHYSICAL FITNESS**
**is the first essential in games and in every social activity.**

You need not worry hereafter for your impaired vitality premature old age and nervous break-down if you try

**"BHUVANENDRA AMRITHPRASH"**

which will tone the nervous system, build healthy tissues and enrich the blood.

**Thus keeps you fresh and sprightly.**

**Bhuvanendra Products, Ltd.,**
Katapady, S. Kanara.
(BRANCH—KUMTA, N. KANARA.)
Stockist: U. Pandurānga Nayk, Car-Street Mangalore

**ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.**

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಆಗತ್ಯವಿಲ್ಲ

**ಭುವನೇಂದ್ರ 'ಅಮೃತಪ್ರಾಶ'ವು**

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕೊಡುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್**
ಕಟಪಾಡಿ, —ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.)
ಯು. ಪಾಂಡುರಂಗ ನಾಯ್ಕ್, ರಥಬೀದಿ, ಮಂಗಳೂರು.

ಈ ವಾರದ ಕತೆ:

# ರಜನಿ

ಕನ್ನಡಿಸಿದವರು—ಕಟೀಲು ಶ್ರೀನಿವಾಸ ಶೆಟ್ಟಿ

ಅಧ್ಯಾಪಕ, ಕಾರ್ಕಳ

ರಜನಿಯು ಹೆಸರಿನ ಹಾಗೆ ರಜನಿಯೇ ಆಗಿದ್ದಳು. ಅವಳ ಜೀವನವು ಗಾಢಾಂಧಕಾರದಿಂದ ತುಂಬಿದ್ದಿತು. ಆಗಲಿಕ್ಕೆ, ಅವಳು ಸಾವಿರಾರು ರೂಪಾಯಿ ತಿಂಗಳ ವೇತನ ಪಡೆಯುವ ಡಿಪ್ಟಿ ಕಲೆಕ್ಟರರ ಮಗಳು. ಅವಳ ತಂದೆಯವರು ರಾವ್ ಸಾಹೇಬ ಸೀತಾರಾಮಯ್ಯನವರು. ರಜನಿಯು ಅವರ ಏಕಮಾತ್ರ ಪುತ್ರಿ ಮಗಳಾಗಿದ್ದಳು. ಆದ್ದರಿಂದ ಅವಳಿಗೆ ಪ್ರೌಢ ಶಿಕ್ಷಣವನ್ನು ಕೊಟ್ಟು ಅವಳನ್ನು ಯಾರಾದರೊಬ್ಬ ಐ. ಸಿ. ಯಸ್. ದೊರೆಗೆ ಮದುವೆಮಾಡಿ ಕೊಡಬೇಕೆಂದು ಡಿಪ್ಟಿ ಕಲೆಕ್ಟರ ಸಾಹೇಬರು ಎಣಿಸಿದ್ದರು.

ಸೀತಾರಾಮಯ್ಯನವರು ಗಾಂಧಿ, ಕಾಂಗ್ರೆಸ, ತಕಲಿ, ಖದ್ದರು ಶಬ್ದಗಳನ್ನು ಕೇಳಿದ ಮಾತ್ರಕ್ಕೇ ಹಲ್ಲು ಕಡಿಯುತಿದ್ದರು; ಕಣ್ಣುಗಳಿಂದ ಕ್ರೋಧಾಗ್ನಿಯ ಕಿಡಿಗಳು ಹಾರುತಿದ್ದವು. ತನ್ನ ಮಗಳು—ರಜನಿಯ ಬಾಯಿಯಿಂದ ಆ ಮಾತುಗಳನ್ನು ಕೇಳಿದಾಗ ಅವರು ಹೌಹಾರಿ ಬೀಳುತಿದ್ದರು; ಆಕಾಶ ಪಾತಾಳ ಒಂದು ಮಾಡುತಿದ್ದರು. ಆದರೆ ಮಗಳು ರಾಷ್ಟ್ರೀಯತೆಯ ಅತ್ಯಂತ ಪಕ್ಷಪಾತಿಯಾಗಿದ್ದಳು. ಹೀಗೆ ಅವರಿಬ್ಬರೊಳಗೆ ಮತಭೇದಗಳು ತಪ್ಪುತ್ತಿರಲಿಲ್ಲ.

ರಾತ್ರಿ ಹನ್ನೊಂದು ಬಡೆದಾಗಿದ್ದಿತು. ರಜನಿ ತನ್ನ ಕೋಣೆಯಲ್ಲಿ ಕೂತು ತಕಲಿ ತಿರುಗಿಸುವುದರಲ್ಲಿ ತಲ್ಲೀನಳಾಗಿದ್ದಳು. ಅವಳ ಒಂದು ಕೈಯ್ಯಲ್ಲಿ ತಕಲಿ, ಮತ್ತೊಂದರಲ್ಲಿ ಕೋಮಲವಾದ ಹತ್ತಿಯ ಬತ್ತಿ ಇದ್ದಿತು. ಮುಂದುಗಡೆಯೇ ಒಂದು ಇಂಗ್ಲೀಷ ಪುಸ್ತಕ ತೆರೆದು ಬಿದ್ದಿತ್ತು. ಆದರೆ ಅವಳ ಲಕ್ಷ್ಯ ಆ ಕಡೆಗೆ ಇದ್ದಿರಲಿಲ್ಲ. ಆಕೆ ತಕಲಿಯ ಮನೋಹರ ನೃತ್ಯವನ್ನು ನೋಡುತ್ತ-ಅದರಲ್ಲಿ ತಲ್ಲೀನಳಾಗಿದ್ದಳು.

ಕೈಯ್ಯಲ್ಲಿದ್ದ ಹತ್ತಿಯಬತ್ತಿಯು ಮುಗಿದಾಗ, ಬೇರೊಂದನ್ನು ತೆಗೆಯಲಿಕ್ಕೆ ರಜನಿ, ಮೇಜಿನ ಡ್ರಾವರನ್ನು ಹಿಂದಕ್ಕೆ ಎಳೆಯುತಿದ್ದಳು; ಅಷ್ಟರಲ್ಲಿ ಅವಳ ದೃಷ್ಟಿಯು ಬಾಗಿಲ ಕಡೆಗೆ ಸರಿಯಿತು. ಅವಳ ಹೃದಯವು ಒಮ್ಮಿಂದೊಮ್ಮೆಗೆ ಧಸಕ್ಕೆಂದಿತು. ಕೈ—ತಟ್ಟೆಗೆ ಕೂಡಿನಂತೆ ಅಲ್ಲೆ ಸ್ಥಿರವಾಗಿ ನಿಂತಿತು. ಅಲ್ಲಿ ಬಾಗಿಲ ಬಳಿ ರಜನಿಯ ತಂದೆಯವರು ನಿಂತು ಕಣ್ಣುಗಳಿಂದ ಕಿಡಿ ಹಾರಿಸುತಿದ್ದರು. ಅವರು-ಸಿಟ್ಟಿನ ಆವೇಶವಾದ ಭೂತದ ಹಾಗೆ ಅವಳನ್ನೇ ಗುರುಗುರಿ ನೋಡುತಿದ್ದರು. ರಜನಿ ಭಯದಿಂದ ಕಂಪಿತಳಾದಳು. ಅವಳ ಶುಭ್ರ ನೇತ್ರಗಳು ಕಾಂತಿಹೀನವಾದುವು. ಕಲೆಕ್ಟರ ಸಾಹೇಬರಿಗೆ ಮಗಳ ತಕಲಿಪ್ರೇಮವನ್ನು ರಾಷ್ಟ್ರ ನೋಡುವದಾಗಲಿಲ್ಲ. ಪ್ರೇಮವನ್ನು

ಅವರು ಅವಳ ತಕಲಿಯನ್ನು ಬಲದಿಂದ ಕಸಕೊಂಡರು, ಅದನ್ನು ಮುರಿದು ಚೂರು ಮಾಡಿ ಒಂದು ಮೂಲೆಗೆ ಬಿಸಾಡಿಬಿಟ್ಟರು. ಕ್ರೋಧದಿಂದ ಅವರ ಅಂಗಾಂಗಗಳು ನಡುಗುತಿದ್ದುವು—'ಏನು ರಜನಿ? ಇದೇನು ಮಾಡಿದೆ? ಓದುವುದು ಬರೆಯುವುದು ಬಿಟ್ಟು, ಕಾಂಗ್ರೆಸಿನವಳಾಗುತ್ತಿಯಾ?' ಎಂದು ಕ್ರೋಧ ಸಂತಾಪಗಳಿಂದ ಕೇಳಿದರು.

ತನ್ನ ಮುದ್ದಿನ ತಕಲಿಗೆ ಪ್ರಾಪ್ತವಾದ ದುರ್ದಶೆಯನ್ನು ನೋಡಿ ರಜನಿಗೆ ಸಹನಾತೀತವಾದ ದುಃಖವಾಯಿತು. ಅವಳ ಎರಡೂ ಕಣ್ಣುಗಳು ಒಂದು ಬಾರಿಗೆ ಆ ಮೂಲೆಯಲ್ಲಿ ಬಿದ್ದು ಹೊರಳಾಡುತಿದ್ದ ತಕಲಿಯನ್ನೂ, ಮತ್ತೆ ಇನ್ನೊಂದು ಬಾರಿಗೆ, ಅದನ್ನು ಒದ್ದು ತನ್ನ ಸಿಟ್ಟಿನ ಸೇಡನ್ನು ತೀರಿಸಿಕೊಳ್ಳುತ್ತಿರುವ ತಂದೆಯನ್ನೂ ನೋಡುತ್ತಿದ್ದವು.

ತನ್ನ ಈ ಕರುಣಾಜನಕ ಸ್ಥಿತಿಯಲ್ಲಿ ರಜನಿಯು ಮನಸ್ಸಿನಲ್ಲಿ ಮರುಗುತ್ತ ಇದ್ದಳೇ ಹೊರತು; ತಂದೆಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಅದರ ಬದಲಿಗೆ ಅವಳ ನೇತ್ರಗಳಿಂದ ಗಂಗಾಪ್ರವಾಹವು ಸರಸರನೆ ಹರಿದು ಹೋಯಿತು. ಕಲೆಕ್ಟರ ಸಾಹೇಬರು ಅದನ್ನು ನೋಡಿ ಹೇಳಿದರು—'ತಕಲಿಗಿಕಲಿ ಕಡೆಗೆ ಇನ್ನು ಲಕ್ಷ್ಯಕೊಟ್ಟೆಯಾದರೆ ಪರಿಣಾಮ ನೆಟ್ಟಗಾಗದು. ಒಳ್ಳೆ ರೀತಿಯಿಂದ ಓದಿ ಕಲಿತು, ಪರೀಕ್ಷೆಯಲ್ಲಿ ಪಾಸಾಗು.'

ನೆಹರೂ ಸೋದರಿ ಶ್ರೀ. ವಿಜಯಲಕ್ಷ್ಮೀ ಪಂಡಿತ್

ಅವರು ಹೊರಟುಹೋದ ಮೇಲೆ ರಜನಿ ಬಂದು ಮಂಚದ ಮೇಲೆ ಬಿದ್ದುಕೊಂಡಳು. ಆ ರಾತ್ರಿ ಅವಳಿಗೆ ನಿದ್ದೆ ಬರಲಿಲ್ಲ. ಇಡೀ ರಾತ್ರಿ ಬಿಕ್ಕಿ ಬಿಕ್ಕಿ ಅಳುತ್ತ ಇದ್ದಳು.

೨

ಅನೇಕ ಪ್ರಯತ್ನಗಳನ್ನು ಮಾಡಿದರೂ ಓದುಬರೆಯುವುದರಲ್ಲಿ ರಜನಿಗೆ ಮನಸ್ಸು ಬೀಳಲಿಲ್ಲ. ಯಾವಾಗ ಸಮಯ ದೊರಕೀತು, ಯಾವಾಗ ತಕಲಿ ಕುಣಿಸಲಿ ಎಂಬ ಆಲೋಚನೆಯಲ್ಲಿಯೇ ಅವಳ ದಿನಗಳು ಕಳೆಯತೊಡಗಿದುವು. ನಿಷ್ಠುರ ಹೃದಯದ ತಂದೆಯ ಚಿತ್ರವು ಬಂದು ಮನಸ್ಸಿನ ಮುಂದೆ ನಿಂತಾಗ ಲೆಲ್ಲ ಅವಳು ನಡುಗಿ ಪುಸ್ತಕ ತೆರೆದು ಮೇಜಿನ ಮೇಲಿಡುತ್ತಿದ್ದಳು. ಆದರೆ ಅಷ್ಟರೊಳಗಾಗಿ ಅವಳ ಮನಸ್ಸು, ಹೃದಯದಲ್ಲಿ ಅಂಕಿತವಾದ ಭಾರತಮಾತೆಯ ಪೂಜಾ—ಸತ್ಕಾರಗಳಲ್ಲಿ ತೊಡಗುತಿತ್ತು.

ರಜನಿಯು ಖಾದೀ ಪ್ರಶಂಸೆಯನ್ನು ಕೇಳಿದಾಗ, ಖಾದಿಯು ದೇವರ ವರದಾನವೆಂದು ಓದಿದಾಗ ಅವಳ ಅಂಗಾಂಗಗಳು ಪುಳಕಿತವಾಗುತಿದ್ದವು. ಹೃದಯವು ಒಂದು ಮಹತ್ವಾಕಾಂಕ್ಷೆಯಿಂದ ಉಬ್ಬುತಿದ್ದಿತು.

ಹೋಳೀ ಹಬ್ಬವು ಬಂದಿತು. ತಿಂಗಳುಗಳಿಂದ ಉತ್ಸುಕರಾಗಿ ಕಾದಿದ್ದ ಜನರು ಹೊಸ ಬಟ್ಟೆಗಳನ್ನು ಹೊಲಿಯಲಿಕ್ಕೆ ಹಾಕತೊಡಗಿದರು. ಯಾರನ್ನು ನೋಡಿದರೂ ಖದ್ದರನ್ನೇ ಕೊಂಡುಕೊಳ್ಳುತಿದ್ದರು. ತನ್ನ ಗೆಳತಿಯರೆಲ್ಲ ಖಾದೀ ಉಟ್ಟು ಹೋಗುವುದನ್ನು ನೋಡುವಾಗ, ರಜನಿಯ ಹೃದಯವು ಒಂದು ಅಜ್ಞಾತ ವೇದನೆಯಿಂದ ವಿಚಲಿತವಾಗುತಿತ್ತು. ತಾನುಟ್ಟ ವಿದೇಶೀ ಬಟ್ಟೆಗಳನ್ನು ನೋಡಿ ಅವಳ ಹೃದಯಕ್ಕೆ ಸಹನಾತೀತವಾದ ವೇದನೆಯಾಗುತಿತ್ತು.

ಒಂದು ದಿನ ಬಹಳ ಧೈರ್ಯಮಾಡಿ ಅವಳು ತನ್ನ ತಾಯಿಯನ್ನು ಹೇಳಿದಳು—'ಅಮ್ಮಾ! ನನಗೆ ಒಂದು ಖದ್ದರ ಸೀರೆ ತೆಗಿಸಿ ಕೊಡು.'

ತಾಯಿ ಬೆಚ್ಚಿಬಿದ್ದು ಹೇಳಿದಳು—'ಖಾದಿ! ಏನು? ಖಾದಿ ಉಟ್ಟು ಕ್ರಾಂತಿಕಾರಿಣಿ ಆಗುವಿಯಾ?'

'ಏನಮ್ಮಾ? ಖದ್ದರ್ ಉಟ್ಟರೆ ಕ್ರಾಂತಿಕಾರಿಗಳಾಗುತ್ತಾರೆಯೆ?'

'ಆಗದೆ ಮತ್ತೆ? ಮಗೂ, ನಿನಗೆ ಖದ್ದರ್ ಗಿದ್ದರ್ ಬೇಡ. ಕಾಂಗ್ರೆಸ್ಸಿನವರ ಮಾತುಗಳನ್ನು ಕೇಳಿ ತಲೆ ಕೆಡಿಸಿಕೊಳ್ಳಬೇಡ. ಅವರೆಲ್ಲ ಹುಚ್ಚರು. ಉದ್ಯೋಗವಿಲ್ಲದುದರಿಂದ ಬಾಯಿಗೆ ಬಂದಂತೆ ಹರಟೆ ಹೊಡೆದು ಬೀದಿ ಬೀದಿ ತಿರುಗುತ್ತಾರೆ. ವ್ಯರ್ಥವಾಗಿ ದೇಶಭಕ್ತಿಯ ರಾಗಾಲಾಪನ ಮಾಡಿ ತಲೆ ಹೊಡೆಸಿಕೊಳ್ಳುತ್ತಾರೆ.'

'ಅಮ್ಮಾ! ಕಷ್ಟಪಡದೆ ಸ್ವರಾಜ್ಯ ಹೇಗೆ ಸಿಕ್ಕೀತು? ಕೈ ಕೆಸರಾಗದೆ ಬಾಯಿ ಮೊಸರಾಗದಮ್ಮಾ!'

'ಮಗೂ, ನೀನು ಸುಖವಾಗಿರು; ಅಂದರೆ, ಅದೇ ನಮಗೆ ಸ್ವರಾಜ್ಯವಾಗುವುದು. ಬೇರೆ ಸ್ವರಾಜ್ಯದಿಂದ ನಮಗೇನಾಗಬೇಕು?'

'ಇಲ್ಲ ಅಮ್ಮಾ! ನನಗೊಂದು ಖದ್ದರ್ ಸೀರೆ ಬೇಕೇ ಬೇಕು.'

'ಹಾಗಾದರೆ ನೀನೂ ಅವರಂತೆ ಹುಚ್ಚಿಯೇ ಆದೆ' ಎಂದು ಹೇಳಿ ತಾಯಿ ಅಲ್ಲಿಂದ ಹೊರಟೇ ಹೋದಳು.

ರಜನಿಯ ಮಾತು ನಡೆಯಲಿಲ್ಲ. ವಿದೇಶಿ ಬಟ್ಟೆಯನ್ನುಟ್ಟೇ ಅವಳ ಹೋಳಿ ಹಬ್ಬವು ಮುಗಿಯಿತು. ಅವಳ ಕೋಮಲ ಮಧುರ ಸುಂದರ ಅಭಿಲಾಷೆಗಳೆಲ್ಲ ಪದದಲಿತವಾದುವು.

೩

ಸುಖಭೋಗಕ್ಕೆ ಯಾವದೊಂದು ಕೊರತೆಯೂ ಇದ್ದಿರಲಿಲ್ಲ. ಉಣ್ಣಲಿಕ್ಕೆ ತಿನ್ನಲಿಕ್ಕೆ ಬೇಕು ಬೇಕಾದದ್ದು ದೊರೆಯುತಿತ್ತು. ಆದರೂ ರಜನಿಯ ಆರೋಗ್ಯವು ಕೆಡುತ್ತ ಬಂದಿತು. ಚಿಂತೆ ಮತ್ತು ನಿರಾಶೆಯಿಂದ ಅವಳ ಸರಸ ಜೀವನವು ನೀರಸವಾಗತೊಡಗಿತು. ಅವಳ ಹೃದಯದ ಮಾನಸಿಕ ಪೀಡೆಯನ್ನು ಅವಳು ಮತ್ತು ಅವಳನ್ನು ಜನ್ಮಕ್ಕೆ ತಂದ ಪರಮಾತ್ಮನಲ್ಲದೆ ಮತ್ತಾರು ತಿಳಿಯಬಲ್ಲವರಾಗಿದ್ದರು? ಅವಳು ನಿಮಿಷ ನಿಮಿಷ ಏಕಾಂತದಲ್ಲಿ ಕೂತು ಕಣ್ಣೀರಿಳಿಯುತಿದ್ದಳು. ಹೊರಗಿನ ಜನರಿಗೆ ಮುಖ ತೋರಿಸಲಿಕ್ಕೆ ಅವಳಿಗೆ ಸಹನಾತೀತವಾದ ಸಂಕಷ್ಟವಾಗುತಿತ್ತು.

ಕಳೆದ ನಾಲ್ಕಾರು ತಿಂಗಳುಗಳಿಂದ ಓದುವ ಬರೆಯುವ ಅಭಿರುಚಿ ರಜನಿಗೆ ಎಳ್ಳಷ್ಟಿಲ್ಲ. ಮೊನ್ನೆ ಪರೀಕ್ಷೆ ಆಯಿತು. ಪರೀಕ್ಷೆಯ ಫಲವೂ ಬಂದಿತು. ಆದರೆ ಅವಳು ಪಾಸಾಗಿಲ್ಲ. ಪರೀಕ್ಷೆಯ ಫಲವನ್ನು ಕೇಳಿ ಕಲೆಕ್ಟರ ಸಾಹೇಬರು ಅತಿಶಯ ಸಿಟ್ಟಾದರು; ತಾಯಿ ತನ್ನ ದುರ್ಭಾಗ್ಯವನ್ನು ದೂರಿದಳು. ಆದರೆ ತನ್ನ ಮಾನಸಿಕ ವ್ಯಥೆಯನ್ನು ಸಹಿಸುತಿದ್ದ ರಜನಿ ಮಾತ್ರ ತಾನು ಪರೀಕ್ಷೆಯಲ್ಲಿ ಫೈಲಾದದರಿಂದ ಕೊಂಚವಾದರೂ ದುಃಖವಾಗಲಿಲ್ಲ. ಪರೀಕ್ಷೆಯಲ್ಲಿ ಪಾಸಾಗುವದು ಅವಳ ಪಾಲಿಗೆ ಅದೊಂದು ಮಹತ್ವದ ಕಾರ್ಯವಾಗಿರಲಿಲ್ಲ. ಮೆಲ್ಲಮೆಲ್ಲನೆ ಅವಳು ಹಾಸಿಗೆ ಹಿಡಿದಳು.

★

ರಜನಿ ಬಹಳ ಅಸ್ವಸ್ಥವಾಗಿರುವಳು. ದೊಡ್ಡ ದೊಡ್ಡ ಡಾಕ್ಟರು ಬಂದು ಅವಳ ಚಿಕಿತ್ಸೆ ಮಾಡುತ್ತಾರೆ; ವಿಲಾಯತಿಯ ನರ್ಸುಗಳು ಬಂದು ಅವಳ ಆರೈಕೆ ತೆಗೆದುಕೊಳ್ಳುತ್ತಾರೆ; ಆದರೂ ರೋಗವು ಗುಣವಾಗುವ ಲಕ್ಷಣ ತೋರುವುದಿಲ್ಲ. ಅವಳಿಗೆ ಅವಳ ಪ್ರಾಣಗಳೊಂದಿಗೆ ಪ್ರೇಮವಿಲ್ಲ ಎಂಬ ಹಾಗೆ ಸ್ಥಿತಿ ಇದೆ. ಅವಳ ಜೀವನದಲ್ಲಿ ಮಾಧುರ್ಯವಿಲ್ಲ, ಇಂಪಿಲ್ಲ; ಸೌಂದರ್ಯವಿಲ್ಲ. ಪ್ರಾತಃಕಾಲದಲ್ಲಿ ಪ್ರಭಾತ ಫೇರಿಯ ಸಣ್ಣಬಾಲಕರು ಅವಳ ಮನೆಯ ಮುಂದಿನಿಂದ

'ಝಂಡಾ ಊಂಚಾ ರಹೇ ಹಮಾರಾ' ಎಂದು ಹಾಡುತ್ತಾ ಹೋಗುವಾಗ ಅವಳು ಒಮ್ಮೊಮ್ಮೆ ಮೈ ಮರೆತು, ಆನಂದಪರವಶಳಾಗಿ, ಅನಂತ ಆಕಾಶದ ಕಡೆಗೆ ಕೈ ಜೋಡಿಸಿ ವಂದಿಸುವಳು! ಆಕೆಯ ಹೃದಯ ನಿವೇದನೆಯು ಮುಟ್ಟುವುದೆಂದು ಅವಳು ಸಂಕಲ್ಪಿಸಿಕೊಂಡಿದ್ದಾಳೆ.

ಯುಗಾಂತರ

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು, ಬಜಾರ ಧಾರಣೆಗಿಂತ ಇದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ. ಆರ್. ಕೆ. ಶೆಟ್, ಮಂಗಳೂರ್

# ದಾಮೋದರ ನದಿಯ ಗರ್ಭದಲ್ಲಿ ರಾಮಗರವು ಉದ್ಭವಿಸಿತು

ಈ ಸಲ ನಡೆಯುವ ೫೩ನೆ ಕಾಂಗ್ರೆಸ್ ಅಧಿವೇಶನವು ದೈವದತ್ತವಾದ ಪ್ರಕೃತಿಯ ಸೊಬಗಿನಿಂದ ಕೂಡಿದ ರಾಮಗರವೆಂಬ ರಮಣೀಯ ಪ್ರದೇಶದಲ್ಲಿ ನಡೆಯುತ್ತದೆ. ರಾಮಘರ್ ಎಂಬುದು ಒಂದು ಗ್ರಾಮ. ಅದರ ಸುತ್ತಮುತ್ತಲೂ ನೀಲವರ್ಣದ ಬೆಟ್ಟದ ಸಾಲುಗಳು ದೂರದಲ್ಲಿ ಕಂಗೊಳಿಸುತ್ತಿವೆ. ವನದೇವತೆಯು ಸೊಬಗಿನಿಂದ ಕೂಡಿರುತ್ತದೆ. ದಿಗಂತದಲ್ಲಿ ಬೆಟ್ಟದ ಸಾಲುಗಳ ಭವ್ಯದೃಶ್ಯವೂ ಮಧ್ಯದಲ್ಲಿ ಹರಿವ ದಾಮೋದರ ನದಿಯ ಗಂಭೀರ ಪ್ರವಾಹದ ನೋಟವೂ ನಯನ ಮನೋಹರವಾಗಿದೆ.

ಕಾಂಗ್ರೆಸ್ ಕುಟೀರಗಳ ಪಕ್ಕದಲಿ ದಾಮೋದರ ನದಿಯು ಕಲ್ಲುಬಂಡೆಗಳ ಮೇಲೆ ಹರಿದು ಹಾರಿ ಕಣಿವೆಯಲ್ಲಿ ಅದು ಮಧುರಗಾನಮಾಡುತ್ತಾ ಮರಳಿನಲ್ಲಿಯೂ, ಕಲ್ಲುಬಂಡೆಗಳ ಸಂದಿನಲ್ಲಿಯೂ ಪ್ರವಹಿಸುತ್ತಲಿದೆ. ನದಿಯ ಎರಡು ದಡದಲ್ಲಿ ದಟ್ಟವಾದ ಹಸುರು ಬಣ್ಣದ ಅಡವಿಗಳು ಆವರಿಸಿವೆ. ಮಧ್ಯೆ ಮಧ್ಯೆ ಚಿಕ್ಕಪುಟ್ಟ ಬಯಲು ಪ್ರದೇಶಗಳು ಇವೆ.

ಮೈದಾನ ಪ್ರದೇಶಗಳೂ ಹೊಲಗದ್ದೆಗಳೂ ಸೊಗಸಾಗಿ ತೋರುತ್ತವೆ. ಈ ಪ್ರಾಂತದ ಗುಡ್ಡಗಾಡು ಪ್ರದೇಶಗಳಲ್ಲಿಯೂ ಹುಲಿ ಚಿರತೆ ಮೊದಲಾದ ಕಾಡುಪ್ರಾಣಿಗಳೂ ಅಲ್ಲಲ್ಲಿರುತ್ತವೆ.

ಕಾಂಗ್ರೆಸ್ ನಗರವು ನಿರ್ಮಿತವಾಗಿರುವ ಮಜ್ಜರ್‌ಪುರಿಗೆ ಸಮೀಪವಾಗಿರುವ ರಸ್ತೆಗೆ ಅಡ್ಡಲಾಗಿ ಬಿ. ಎನ್. ರೈಲ್ವೆ ಲೈನು ಹೋಗಿದೆ. ಸಮೀಪದ ರೈಲ್ವೆ ಸ್ಟೇಷನನಲ್ಲಿ ದಕ್ಷಿಣದಿಂದಲೂ ಪಶ್ಚಿಮದಿಂದಲೂ ಬರುವ ಪ್ರವಾಸಿಕರು, ಇಳಿದು ಕಾಂಗ್ರೆಸ್ಸಿಗೆ ಬರುವರು. ರಾಂಚಿ ರೋಡ್ ಸ್ಟೇಷನ್ನಿಗೆ ಪ್ರಯಾಣಿಕರ ಅನುಕೂಲತೆಗಾಗಿ ಹೆಚ್ಚು ರೈಲುಗಳನ್ನು ಬಿಡುವ ಏರ್ಪಾಡು ಮಾಡಿದ್ದಾರೆ. ಹೌರಾದಿಂದಲೂ ಸ್ಪೆಷಲ್ ರೈಲುಗಳನ್ನು ಬಿಡುವರು. ಮಾಂಛೀರ್, ದಿನಾಪೂರ್, ಪಾಟ್ನಾ, ಕಾನ್ಪುರ ಮೊದಲಾದ ಕಡೆಗಳಿಂದ ರಾಮಘರ್‌ಕ್ಕೆ ವಿಶೇಷ ರೈಲುಗಳ ವ್ಯವಸ್ಥೆ ಮಾಡಿರುವರು. ಟ್ರೈನುಗಳು ಬರುವವೇಳೆಗೆ ಬಸ್ಸುಗಳನ್ನು ಕಳುಹಿಸಿಕೊಡುವ ಏರ್ಪಾಡು ಮಾಡಿದೆ. ಕಾಂಗ್ರೆಸ್ ಶಿಬಿರಕ್ಕೆ ಪ್ರಯಾಣಿಕರನ್ನು ಬಸ್ಸುಗಳಲ್ಲಿ ಕರೆದುಕೊಂಡು ಬರಲಾಗಿದೆ.

### ಮಹತ್ವದ ಅಧಿವೇಶನ

ಪ್ರಶಾಂತವಾದ ಮತ್ತು ಪ್ರಕೃತಿಸೊಬಗಿನ ಸನ್ನಿವೇಶದಿಂದ ಕೂಡಿದ ಇಂಥ ಸ್ಥಳದಲ್ಲಿ ಈ ಸಲದ ಮಹತ್ವದ ಅಧಿವೇಶನವು ನಡೆಯುವುದು. ಪಾಟ್ನಾದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು ಕಾಂಗ್ರೆಸ್ಸಿನಲ್ಲಿ ಚರ್ಚೆಯಾಗುವ ಮುಖ್ಯ ನಿರ್ಣಯವನ್ನು ಮಾಡಿರುತ್ತದೆ.

## ಕಾಂಗ್ರೆಸು ಅಧಿವೇಶನ ಸ್ಥಳದ ರಮಣೀಯ ದರ್ಶನ

[ಬರೆದು ಬಂದುದು]

ಕಾಂಗ್ರೆಸ್ ಚರಿತ್ರೆಯಲ್ಲಿಯೂ ಭಾರತದ ಚರಿತ್ರೆಯಲ್ಲಿಯೂ ಈ ಅಧಿವೇಶನವು ಅತ್ಯಂತ ಮಹತ್ವ ರೀತಿಯ ಪರಿಣಾಮವನ್ನುಂಟುಮಾಡುವುದು. ಪಂಡಿತ ಜವಾಹರಲಾಲರು ಹೇಳಿರುವಂತೆ ಈ ಕಾಂಗ್ರೆಸು ಬ್ರಿಟಿಷ್ ಸಾಮ್ರಾಜ್ಯವಾದಿಗಳಿಗೆ ಸರಿಯಾದ ಉತ್ತರವನ್ನು ಕೊಡುವುದು. ಕಾಂಗ್ರೆಸಿನ ಹಿಂದಿನ ವರ್ಷದ ಅಧಿವೇಶನವು ಮಹಾತ್ಮಾ ಗಾಂಧೀಜಿಯವರ ರಾಜಕೋಟೆ ಉಪವಾಸ ಪ್ರಕರಣದ ಕಳವಳದಲ್ಲಿ ನಡೆಯಿತು. ಈ ಸಾರಿ ಮಹಾ ಯುದ್ಧದ ಕಳವಳದ ಸನ್ನಿವೇಶದಲ್ಲಿ ನಡೆಯುತ್ತದೆ. ಅವಶ್ಯಕತೆಯ ಸಮಯವು ಬಂದ ಕೂಡಲೆ ಮಹಾತ್ಮಾ ಗಾಂಧಿಯವರು ಕಾಂಗ್ರೆಸಿನ ಧುರೀಣತೆಯನ್ನು ವಹಿಸುವರು. ಮುಂದಿನ ಮಾರ್ಗವನ್ನು ನಿರ್ಧರಿಸುವರು! ,

ಕಾಂಗ್ರೆಸ್ ಮಂಟಪವೂ ಚಪ್ಪರದ ನಿರ್ಮಾಣವೂ ಅಂದವಾಗಿ ನಡೆದಿದೆ. ಹೊಲಗದ್ದೆಗಳೂ ಗಿಡಗಂಟಿಗಳೂ ಪೊದೆಗಳೂ ಏರುತಗ್ಗುಗಳೂ ಇದ್ದ ಪ್ರದೇಶವು ಇಂಥ ರಾಷ್ಟ್ರೀಯ ಸಭಾಧಿವೇಶನದ ಸೊಗಸಾದ ಪ್ರದೇಶವಾಗಿದೆ. ಅರ್ಧ ಚಂದ್ರಾಕಾರದ ಗ್ಯಾಲರಿಗಳ ಮಾದರಿಯಲ್ಲಿ ನಿರ್ಮಿಸಲಾಗಿದೆ. ಕಾಂಗ್ರೆಸ್ ಮಂಟಪದ ಮುಖ್ಯ ಪ್ರವೇಶದ ಬಾಗಿಲು ಕಲಾ ವೈಶಿಷ್ಟ್ಯದಿಂದ ರಚಿತವಾಗಿದೆ. ಪ್ರದೇಶದ ಹೆಬ್ಬಾಗಿಲು ೫೦ ಅಡಿ ಅಗಲವಾಗಿ ಮೊಗಲ್ ಚಿತ್ರಕಲೆಯಿಂದ ರಂಜಕವಾಗಿದೆ. ಮುಖ್ಯ ಮುಖ್ಯ ಬಾಗಿಲುಗಳ ಇತರ ಕಡೆಗಳಲ್ಲಿ ನಾಲ್ಕು ಸ್ವಲ್ಪ ಚಿಕ್ಕದಾದ ಬಾಗಿಲುಗಳಿವೆ; ಈ ಬಾಗಿಲುಗಳಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಪಟ್ಟ ಕಲಾ ಚಿತ್ರಗಳಿವೆ.

ಕಾಂಗ್ರೆಸ್ ಧ್ವಜಸ್ತಂಭವು ಅಶೋಕ ಚಕ್ರವರ್ತಿಕಾಲದ ಸ್ತಂಭದಂತೆ ನಿರ್ಮಿಸಲ್ಪಟ್ಟಿದೆ. ಕಾಂಗ್ರೆಸ್ ತ್ರಿವರ್ಣ

ನೆಹರೂ ಮತ್ತು ಎಂ. ಎನ್. ರಾಯ್ 1939ಲಾಹೋರ್ '36ಲಕ್ನೋ '37ಫೈಜಪುರ್ ಧ್ವಜವನ್ನು ಧರಿಸುತ್ತಿದು. ಈ ಸ್ತಂಭವು ಸುಮಾರು ನೂರು ಅಡಿ ಎತ್ತರವಾಗಿದೆ.

### ವಸತಿ ವ್ಯವಸ್ಥೆ

ಕುಟುಂಬ ಕುಟೀರಗಳು ನೂರು ಮಾದರಿಯಲ್ಲಿ ಕಟ್ಟಲ್ಪಟ್ಟಿವೆ. ಇವೆಲ್ಲವು ಅಂದವಾಗಿವೆ. ಗುಡಿಸಲುಗಳಲ್ಲಿ ಎರಡು ಮಲಗುವ ಕೋಣೆಗಳೂ, ಸ್ನಾನಮಂದಿರವೂ, ಅಂಗಳವೂ ಇರುತ್ತವೆ. ನಲ್ಲಿಗಳನ್ನು ಹಾಕಿ, ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ ವಿದ್ಯುಚ್ಛಕ್ತಿಯ ದೀಪದ ವ್ಯವಸ್ಥೆ ಮೊದಲಾಗಿ ಏರ್ಪಡಿಸಿದೆ. ಕಾಂಗ್ರೆಸ್ ಸ್ವಾಗತ ಸಮಿತಿಯವರು ಸಾರ್ವತ್ರಿಕ ಪಾಕಶಾಲೆಯನ್ನೂ ಭೋಜನಶಾಲೆಯನ್ನೂ ವ್ಯವಸ್ಥೆ ಮಾಡಿದ್ದಾರೆ. ಭೋಜನ ಶಾಲೆಯಲ್ಲಿ ಒಂದು ಸಾರಿಗೆ ಐದು ಸಾವಿರ ಮಂದಿ ಕುಳಿತು ಊಟ ಮಾಡಬಹುದು.

### ಮಹಾತ್ಮಾಜಿಯವರ ಕುಟೀರ

ಮಹಾತ್ಮ ಗಾಂಧಿಯವರ ವಾಸಕ್ಕೆ ನಿರ್ಮಿತವಾಗಿರುವ ಕುಟೀರವು ಮುಖಂಡರುಗಳ ಶಿಬಿರದ ಆಚೆಗೆ ಅಂದವಾಗಿಯೂ ಪ್ರಶಾಂತವಾಗಿಯೂ ನಿರ್ಮಿತವಾಗಿರುತ್ತದೆ. ದಾಮೋದರ ನದಿಯು ಹರಿಯುತ್ತಲಿರುವ ಸೊಬಗಿನ ದೃಶ್ಯವನ್ನು ಮಹಾತ್ಮರ ಕುಟೀರದಿಂದ ಮನದಣಿಯ ನೋಡಿ ಆನಂದಿಸಬಹುದಾಗಿದೆ.

ದಾಮೋದರ ನದಿಯಲ್ಲಿ ನೀರು ಕಡಿಮೆಯಾಗಿದ್ದುದರಿಂದ, ಕಾಂಗ್ರೆಸ್ ನಗರಕ್ಕೆ ಪಶ್ಚಿಮದಲ್ಲಿ ಹರಿಯುತ್ತಿರುವ ಅದರ ಉಪನದಿಯೊಂದಕ್ಕೆ ಅಣೆಕಟ್ಟೆ ಹಾಕಬೇಕಾಯಿತು. ಕಾಂಗ್ರೆಸ್ ನಗರ ಬೀದಿಗಳ ಹತ್ತು ಮೈಲಿಗಳ ಆವರಣದಲ್ಲಿ ವಿದ್ಯುತ್‌ದೀಪದ ತಂತಿಗಳನ್ನು ಹಾಕಲಾಗಿದೆ. ರಾತ್ರಿಹೊತ್ತಿನಲ್ಲಿ ವಿದ್ಯುದ್ದೀಪದ ಪ್ರಕಾಶದಿಂದ ಕಾಂಗ್ರೆಸ್ ನಗರವು ಇಂದ್ರಪುರಿಯಂತೆ ಕಾಣುತ್ತದೆ.

ತಂತಿ ಮತ್ತು ಅಂಚೆ ಕಚೇರಿಗಳನ್ನು ಏರ್ಪಡಿಸಲಾಗಿದೆ. ರೈಲ್ವೆಗಳವರು ಬುಕ್ಕಿಂಗ್ ಆಫೀಸುಗಳನ್ನು ಪ್ರಯಾಣಿಕರ ಸೌಕರ್ಯಕ್ಕಾಗಿ ತೆರೆದಿದ್ದಾರೆ. ಆರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆಗಳು ಬಹಳವಾಗಿ ಮಾಡಲ್ಪಟ್ಟಿವೆ.

### ಸ್ವಯಂಸೇವಕರು

ಸ್ವಯಂಸೇವಿಕೆಯರೂ, ಸ್ವಯಂಸೇವಕರೂ ಮೂರು ಸಾವಿರಕ್ಕಿಂತಲೂ ಹೆಚ್ಚಾಗಿ ಶಿಕ್ಷಣ ಶಿಸ್ತು ವ್ಯವಸ್ಥೆಗಳಿಂದ ಸಿದ್ಧತೆ ಹೊಂದಿದ್ದಾರೆ. ಸ್ವಯಂಸೇವಿಕೆಯರು ಕೇಸರಿವರ್ಣದ ಸೀರೆಗಳನ್ನುಟ್ಟು ಶಿಸ್ತು ವ್ಯವಸ್ಥೆಗಳನ್ನು ಹೊಂದಿರುತ್ತಾರೆ. ಶ್ರೀ ಜಯಪ್ರಕಾಶ ನಾರಾಯಣರ ಪತ್ನಿ ಶ್ರೀಮತಿ ಪಾರ್ವತಿಯವರು ಸ್ವಯಂಸೇವಿಕೆಯರ ನಾಯಕಿಯಾಗಿರುತ್ತಾರೆ.

ಕಳವು ಕಳ್ಳತನಗಳನ್ನು ಪತ್ತೆಮಾಡಲು ಆರುಮಂದಿ ವಿಶೇಷ ಸ್ವಯಂಸೇವಕರನ್ನು ತಯಾರಿಸಲಾಗಿದೆ. ಸ್ವಯಂಸೇವಕರ ವಾಸಕ್ಕೆ ಒಂದು ಸಾವಿರ ಕುಟೀರಗಳನ್ನು ನಿರ್ಮಿಸಲಾಗಿದೆ.

### ಮೂಲ ನಿವಾಸಿಗಳ ಆಸಕ್ತಿ

ಚೋಟಾನಾಗಪುರದ ಗುಡ್ಡಗಾಡುಗಳಲ್ಲಿ ಅತಿಪುರಾತನ ಕಾಲದಿಂದ ವಾಸಮಾಡುತ್ತಿರುವ ಮೂಲ ಅನಾಗರಿಕ ನಿವಾಸಿಗಳು ಕಾಂಗ್ರೆಸ್ ಅಧಿವೇಶನದ ಏರ್ಪಾಟುಗಳಲ್ಲಿ ಕುತೂಹಲತೆ ತೋರಿಸುತ್ತಲಿದ್ದಾರೆ. ರಾಮಘರ್ ಬಳಿಯಿರುವ ಈ ಜನರು ಗುಡ್ಡಗಾಡು ನಿವಾಸಿಗಳಾದರೂ ಧೈರ್ಯವಂತರು ಸರಳ ಜೀವಿಗಳು. ಈ ಕೋಲರು ತಮ್ಮ ಪರಾಕ್ರಮ ಪೂರ್ವ ಚರಿತ್ರೆಗಳಿಗೆ ಸಂಬಂಧಪಟ್ಟ ಜನಪದ ಹಾಡುಗಳನ್ನು ಸ್ವಾರಸ್ಯವಾಗಿ ಹಾಡುವರು.

ಈ ಜನರು ಕಾಂಗ್ರೆಸ್ ಅಧ್ಯಕ್ಷರಿಗೂ ರಾಷ್ಟ್ರ ಮುಖಂಡರಿಗೂ ತಮ್ಮ ಸಹಜ, ಸಂಸ್ಕೃತಿ, ನರ್ತನ ಮತ್ತು ಹಾಡುಗಳಿಂದ ಮೆರವಣಿಗೆ ಪ್ರದರ್ಶನಗಳಲ್ಲಿ ಭಾಗವಹಿಸಿ ಗೌರವಿಸಿದರು.


ಸಾಹುಕಾರ ಶ್ರೀನಿವಾಸ ರಂಗಪ್ಪೈ

[ ಸ್ಥಾಪನೆ: ಕ್ರಿ. ಶ. 1858 ]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾಹುಕಾರ ಖುಷಾಲ್, ಮಂಗಳೂರು.

# ಸಿನೆಮಾ ಪುಟ

## ಕಾಂಗ್ರೆಸು ಅಧಿವೇಶನದ ಚಿತ್ರ ತಯಾರಿಕೆ

ಬೊಂಬಾಯಿಯ ಮೋಹನ ಪಿಕ್ಚರ್ ಚಲಚಿತ್ರ ಕಂಪನಿಯವರು, ಚಿಕಾಗೋ ರೇಡಿಯೋ ಕಂಪನಿಯವರೊಡನೆ ರಾಮಗಡದಲ್ಲಿ ನೆರೆಯುವ ೫೩ನೇ ಕಾಂಗ್ರೆಸು ಅಧಿವೇಶನದ ಚಿತ್ರ ತಯಾರಿಸುತ್ತಿರುವರು.

ಈ ಮಹಾ ರಾಷ್ಟ್ರೀಯ ಅಧಿವೇಶನದ ಸಂಭ್ರಮದ ಇತಿಹಾಸವನ್ನು ವೈಭವಪೂರ್ಣವಾಗಿ ಚಿತ್ರಿಸಲು ಬೇಕಾಗಿ ಕಲಾವಿದರು ತಮ್ಮ ಸರ್ವ ಕೌಶಲ್ಯಗಳನ್ನು ತೋರಿಸುತ್ತಿದ್ದಾರೆ

ಮೋಹನ ಪಿಕ್ಚರಿನ ಜಾದೂ ಇ ಕಂಗನ್ ಚಿತ್ರವು ಸಂಪೂರ್ಣವಾಗಿದೆ ಭಾರತದ ೨೧ ಸ್ಥಳಗಳಲ್ಲಿ ಅದು ಪ್ರಕಟವಾಗುವುದಾಗಿ ತಿಳಿದಿದೆ

ನಿರ್ದೇಶಕ ನಾನುಭಾಯಿ ವಕೀಲರು ಇದರ ಮುಂದಿನ ಚಿತ್ರವನ್ನು ಯೋಜಿಸುತ್ತಿದ್ದಾರೆ

### ಗಾಂಧೀ ಫಿಲ್ಮ್
### ಇಪ್ಪತ್ತೈದು ಭಾಷೆಗಳಲ್ಲಿ

ಗಾಂಧಿಜಿಯವರ ಚರಿತ್ರೆಯ ಚಲಚಿತ್ರವೊಂದು ತಯಾರಾಗುತ್ತಿದೆ ಆ ಚಿತ್ರದ ನಿರ್ದೇಶಕರಾದ ಶ್ರೀ ಎ ಕೆ ಚೆಟ್ಟಿಯವರ ದಕ್ಷಿಣ ಆಫ್ರಿಕ ಮೊದಲಾದ ಕಡೆಗೆ ಹೋಗಿ ಹಲವು ಸಾಹಸಗಳಿಂದ ಆ ಚಿತ್ರವನ್ನು ಒದಗಿಸಿರುವರು

ಕಳೆದ ೧೫ ವರ್ಷಗಳ ಕಾಂಗ್ರೆಸ ಅಧಿವೇಶನದಲ್ಲಿ ದಂಡೀಯಾತ್ರೆಯಲ್ಲಿ, ಸ್ವಯಂಸೇವಕ ಮೆರವಣಿಗೆಯಲ್ಲಿ, ಗ್ರಾಮಾಭ್ಯುದಯ ಕಾರ್ಯದಲ್ಲಿ ಗೋಖಲೆಯವರ ಸ್ವಾಗತದಲ್ಲಿ, ರೌಂಡ್ ಟೇಬಲ್ ಕಾನ್ಫರೆನ್ಸಿನಲ್ಲಿ, ರಾಜರ ಗಾರ್ಡನ್ ಪಾರ್ಟಿಯಲ್ಲಿ, ಚಾರ್ಲಿ ಚೆಪ್ಲಿನ್‌ನ ಭೇಟಿಯಲ್ಲಿ, ಶ್ರೀ ವಿ ಜೆ ಪಟೇಲ ಮತ್ತು ರೋಮ ನ್ ರೋಲೆಂಡರ ಭೇಟಿ ಮೊದಲಾಗಿ ಮಹಾತ್ಮರ ಚಿತ್ರಗಳಿವೆ

ಚಿತ್ರವು ೨೧ ಭಾಷೆಗಳಲ್ಲಿ ತಯಾರಾಗುವುದು ದಕ್ಷಿಣ ಭಾರತದ ತಮಿಳು, ತೆಲುಗು ಭಾಷೆಗಳಲ್ಲಿಯೂ ಆಗುವುದು ಫಿನ್‌ಲೇಂಡ್, ಇಟಲಿ, ಸ್ವಿಡನುಗಳಿಂದ ಆ ಚಿತ್ರದ ಪ್ರದರ್ಶನದ ಬಗ್ಗೆ ಕರೆ ಬಂದಿದೆ

### ಸಿನೆಮಾ ಸುದ್ದಿಗಳು

ನ್ಯೂ ಥಿಯೇಟರ್ಸಿನ ಮುಂದಿನ ಚಿತ್ರವಾದ ನರ್ತಕಿಯು ತಯಾರಾಗುತ್ತಿದೆ ದೇವಕೀ ಬೋಸರು ಅದ್ಭುತವಾಗಿ ಅದರಲ್ಲಿ ಅಭಿನಯಿಸುವರು ಎಂದು ನಿರ್ದೇಶಕ ಬೋಸರ ಪತ್ರಿಕಾ ಪ್ರತಿನಿಧಿಯೊಡನೆ



**ಪಂಡಿತ ಮಾಲವೀಯರು**
ಅಧ್ಯಕ್ಷ, ೧೯ ಲಾಹೋರ್—೧೯೧೮ ಡಿಲ್ಲಿ

ಹೇಳಿದರು. ಇದು ಬಹಳ ದರ್ಪ ಚಿತ್ರವೆಂದೂ ತಿಳಿಯ ಬರುತ್ತದೆ

ಇದರಲ್ಲಿ ಒಬ್ಬ ನರ್ತಕಿಯು ತರುಣ ಸಾಧು ಒಬ್ಬನನ್ನು ಪ್ರೀತಿಸಿ, ಕಡೆಗೆ ತನ್ನ ಅಸದೃಶ ಪ್ರೇಮದ ಸಲುವಾಗಿ ಬಲಿದಾನವನ್ನಿತ್ತ ರೋಮಾಂಚಕ ಕಥೆಯು ವರ್ಣಿತವಾಗಿದೆ

ಡಾ| ಅಮರಮಲ್ಲಿಕ ಇವರ ಅರ್ಥ ತಯಾರಾದ ಚಿತ್ರಪಟಕ್ಕೆ 'ಅಭಿನೇತ್ರಿ' ಎಂದು ಹೆಸರಿಡಲಾಗಿದೆ. ಇದರಲ್ಲಿ ಕಾನನ ಸನ್ಯಾಲ, ಇವರು ಮುಖ್ಯ ಪಾತ್ರವಹಿಸಿರುವರು

ಮೊನ್ನೆ ಬಿ ಎನ್ ಸರಕಾರರ ಸಂಗಡ ಮಿಸ್ ಸೈಗಲ್‌ರು ಮುಂಬಯಿಗೆ ಬಂದಾಗ್ಗೆ ಕಾಶ್ಮೀರ ಮಹಾರಾಜರ ಆಮಂತ್ರಣದ ಮೇರೆಗೆ ಅವರನ್ನು ತಮ್ಮ ಸಂಗೀತದಿಂದ 'ಮೋಹಗೊಳಿಸಿದರು ಅದರ ಪ್ರೀತ್ಯರ್ಥವಾಗಿ ಮಹಾರಾಜರು ಸೈಗಲ್‌ರು ಕೊಡತಕ್ಕ ೫೦೦೦ ರೂಪಾಯಿ ಮಾಫಿ ಬಿಟ್ಟರು

ಹಿಂದೂ ಸಿನಿಟೋನದ 'ಅಪ್ನನಗರಿಯಾ'ಯೆಂಬ ಚಿತ್ರಪಟವು ಮುಂಬಯಿಯ ಪ್ಯಾಥೆ ಥಿಯೇಟರಿನಲ್ಲಿ ೬ನೇ ವಾರ ವಿಜೃಂಭಣೆಯಿಂದ ನಡೆಯುತ್ತಿರುತ್ತದೆ ಇದರಲ್ಲಿ ಶೋಭನಾ ಸಮರ್ಥ, ಸಾಧು ರ ಮುಖ್ಯ ಕೆಲಸ ಮಾಡಿರುವರ

ಹಿಂದುಸ್ಥಾನದ ಮಾರ್ಲಿನಾ ಡಿಟ್ರಿಚ್ ಳೆಂದ ಖ್ಯಾತಿವೆತ್ತ ದೀವಿಯೋ ಗಾಯನದಲ್ಲಿ ಮೊದಲನೇ ಮಾನವನ್ನು ಪಡೆದಿರುವಳು

ಡೆಮೊಕ್ರೆಟಿಕ್ ಪಾರ್ಟಿ ಮುಖಂಡರಾದ ಶ್ರೀ ಜಮ್ನಾದಾಸ ಮೆಹತಾರವರು ಎರಡು ಫಿಲ್ಮ್ ಕಥೆಗಳನ್ನು ಬರೆದಿರುವರೆಂದು ತಿಳಿದು ಬರುತ್ತದೆ ಅದನ್ನು ಬೇಗನೇ ಚಿತ್ರವಾಗಿ ಮಾರುವ ಯೋಜನೆ ಮಾಡಲಾಗಿದೆ

ಕಳೆದ ವಾರ ಎಂ ಪಿ ನಿಯವರ 'ಸೂರ್ಯಪುತ್ರಿ' ಕಥೆಯನ್ನು ಪ್ರಕಟಿಸಿದರು

### ಚಲಚ್ಚಿತ್ರದ ಅಭ್ಯುದಯದಲ್ಲಿ ವಿಶ್ವವಿದ್ಯಾಲಯಗಳ ಸಹಕಾರ

ರಾಷ್ಟ್ರದ ಇಂದಿನ ಹಲವು ಅವಶ್ಯ ವಿಷಯಗಳಲ್ಲಿ ಚಲಚ್ಚಿತ್ರ ಮತ್ತು ರೇಡಿಯೋಗಳು ಬಹಳ ಪ್ರಾಮುಖ್ಯ ಸ್ಥಾನಗಳನ್ನು ಪಡೆದಿವೆ ಅವುಗಳ ಮೂಲಕ ಜನತೆಯನ್ನು ತರಬೇತುಗೊಳಿಸುವುದೂ ಸಾಧ್ಯವಿದೆ ಆದಕಾರಣ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಶಿಕ್ಷಣವನ್ನು ಪಡೆಯುವಲ್ಲಿ, ಅವರಿಗೆ ಚಲಚ್ಚಿತ್ರಗಳ ಕುರಿತು ಸರಿಯಾದ ಅನುಭವವಾಗುವಂತೆ, ಚಲಚ್ಚಿತ್ರ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಒದಗಿಸುವದು ಅವಶ್ಯವೆಂದೂ ಈ ಬಗ್ಗೆ ವಿಶ್ವವಿದ್ಯಾಲಯಗಳು ಸಹಕರಿಸಬೇಕೆಂದೂ ಸೂಚನೆ ಬಂದಿದೆ. ಈ ಬಗ್ಗೆ ಅಖಿಲಭಾರತದಲ್ಲಿ ಒಂದು ಯೋಜನೆಯನ್ನು ತಯಾರಿಸಲು ಮಂಡಲವೊಂದೂ ಸ್ಥಾಪಿತವಾಗಿದೆ. ಕಲ್ಕತ್ತಾ ವಿಶ್ವವಿದ್ಯಾಲಯವು ಈಗಾಗಲೇ ತನ್ನ ಸಹಕಾರವನ್ನು ಸಲ್ಲಿಸಲು ಒಪ್ಪಿರುವುದಾಗಿಯೂ ತಿಳಿದು ಬರುತ್ತದೆ


**ಮಡಿಮೆ, ತುರಿಗಜ್ಜಿಗಳಿಂದ ಬಾಧಿಸಲ್ಪಡುತ್ತಿದ್ದಳು**

**ಎರಡು ವರ್ಷಗಳ ಪರಿಶ್ರಮಹೊಂದಿದರೂ ಉಪಶಮನವಾಗಲಿಲ್ಲ!**

**ಆರು ವಾರಗಳ ಕ್ರುಶನ್ ಸೇವನೆಯಿಂದ ಮುಖವರ್ಣವು ಪರಿಣತಿಯನ್ನು ಹೊಂದಿತು!**

ಈ ಸ್ತ್ರೀಯು ಮಡಿಮೆಯಿಂದ ಮತ್ತು ತುರಿಕಜ್ಜಿಯಿಂದ ಬಹಳವಾಗಿ ಬಾಧಿಸಲ್ಪಡುತ್ತಿದ್ದಳು. ಅವುಗಳನ್ನು ನಾಶಗೊಳಿಸಲು ಆಕೆಯು ಹಲವು ತರದ ಯತ್ನಗಳನ್ನು ಮಾಡಿದಳು ಕೊನೆಗೆ ಆಕೆಗೆ ತನ್ನ ಮುಖವರ್ಣವನ್ನು ಪರಿಣತಿಗೊಳಿಸುವ ಉಪಾಯವೊಂದು ದೊರಕಿತು. ಆಕೆಯು ಹೀಗೆ ಬರೆಯುತ್ತಾಳೆ

'ಕಳೆದ ಎರಡು ವರ್ಷಗಳಲ್ಲಿ ನನ್ನ ಮುಖದಲ್ಲಿ ತುಂಬಾ ಮಡಿಮೆ ಮತ್ತು ಕೆಂಪು ಕಲೆಗಳಿದ್ದುವು. ನನ್ನ ಕತ್ತಿನ ಮತ್ತು ರಟ್ಟೆಯ ಮೇಲೆ ತುರಿಕಜ್ಜಿಯಿದ್ದಿತು ನಾನು ಹಲವು ತರದ ಮುಲಾಮು ಇತ್ಯಾದಿಗಳನ್ನು ಉಪಯೋಗಿಸಿದೆ ಉಪಕಾರವಾಗಲಿಲ್ಲ ನನ್ನಲ್ಲಿ ವ್ಯಥೆಯುಂಟಾಯಿತು. ಕಡೆಗೆ ಕ್ರುಶನ್ ಲವಣಗಳನ್ನು ಉಪಯೋಗಿಸಬೇಕೆಂದು ಸಂಕಲ್ಪ ಮಾಡಿದೆ ಒಂದೆರಡು ವಾರಗಳ ಕ್ರುಶನ್ ಸೇವನೆಯಿಂದ, ನನ್ನ ಮುಖವರ್ಣವು ಸರಿಯಾಯಿತು ನನ್ನಲ್ಲಿ ಈಗ ತುರಿಕಜ್ಜಿಯ ಕುರುಹೆ ಇರುವುದಿಲ್ಲ ಈಗ ಕ್ರುಶನನ್ನು ಪ್ರತಿನಿತ್ಯ ಬೆಳಿಗ್ಗೆ ಉಪಯೋಗಿಸುತ್ತೇನೆ ಅದಿಲ್ಲದೆ ನನಗೆ ಸರಿಹೋಗುವುದಿಲ್ಲ

ಅಶುದ್ಧ ರಕ್ತವೆ ಮಡಿಮೆ ಮತ್ತು ತುರಿಕಜ್ಜಿಗಳ ಕಾರಣವು ದೇಹದೊಳಗಿರುವ ಕಲ್ಮಶಗಳು ಸರಿಯಾಗಿ ಹೊರಗೆ ಹೋಗದಿರುವುದರಿಂದ, ಸಂಬಂಧಪಟ್ಟ ದೇಹಾಂಗಗಳು ಸರಿಯಾಗಿ ಕಾರ್ಯಸದಿರುವುದರಿಂದ, ಕ್ರುಶನ್ ಲವಣಗಳು ಆ ಅಂಗಗಳು ಸರಿಯಾಗಿ ಕಾರ್ಯಸುವಂತೆ ಮಾಡುತ್ತದೆ ನಿಮ್ಮ ದೇಹದೊಳಗೆ ಶುದ್ಧರಕ್ತವು ಸುತ್ತಾಡುತ್ತಿರುವಾಗ ಯಾವತರದ ಚರ್ಮ ಕುರಿತ ಮಡಿಮೆ ಕಜ್ಜಿ ಇತ್ಯಾದಿಗಳಾಗುವುದಿಲ್ಲ ನಿಮ್ಮ ಚರ್ಮವು ಆರೋಗ್ಯವನ್ನು ಹೊಂದುವುದು. ಕ್ರುಶನ್ ಲವಣಗಳು ಎಲ್ಲಾ ದವಾಖಾನೆಗಳಲ್ಲೂ ಸ್ಟೋರುಗಳಲ್ಲೂ ಮಾರಲ್ಪಡುವುದು.



(...... ಕಾಂಗ್ರೆಸಿನ ಅಧ್ಯಕ್ಷರಾಗಿ ... ಅಭಿಪ್ರಾಯಗಳು ... ವಿಷಯಗಳಲ್ಲಿ ... ಪ್ರಕಾಶವನ್ನೇ ಚೆಲ್ಲಿ) ಸುತ್ತಿರುವ ಅಂತರ್ರಾಷ್ಟ್ರೀಯ ಕ್ಷೋಭವನ್ನು, ಭಾರತದಲ್ಲಿ ಉಂಟಾಗಿರುವ ಜನತೆಯು ತಡೆಯಲಾರದ ಸ್ವಾತಂತ್ರ್ಯದಾಹ, ಈ ಸಂದರ್ಭದಲ್ಲಿಯೇ ರಾಷ್ಟ್ರವಿಘಾತುಕವೆನಿಸಿ ಐಕ್ಯವನ್ನು ಮುರಿಯಬಯಸುವ ಹಲವು ಸ್ವಾರ್ಥಸಂಕುಚಿತ, ಜಾತೀಯವಾದ ಮತ್ಸರ ಅಪಸ್ವರ, (ಕಾಂಗ್ರೆಸಿನೊಳಗೇ ಉಂಟಾಗಿರುವ ಅಂತರ್ಯುದ್ಧ ಕಲಹ) ಇವುಗಳ ಸಂಕಲನದ ಈ ಕಾಲದಲ್ಲಿ ಜನತೆಯನ್ನು ಮುನ್ನಡೆಸಬಲ್ಲ ಮುಂದಾಳುವೊಬ್ಬನು ಪ್ರತಿಭಾನ್ವಿತನೂ, ನಿಷ್ಪಕ್ಷಪಾತಿಯೂ ಕ್ಷಮಾಶೀಲನೂ, ಕಠಿಣಯೋಧನೂ ಆಗಿರಬೇಕಾದುದು ಅವಶ್ಯವಿದ್ದಾಗ, ರಾಷ್ಟ್ರಕ್ಕೆ ರಾಷ್ಟ್ರವೇ ಪ್ರಬಲ ಬಹುಮತದಿಂದ ಮೌಲಾನಾ ಅಬುಲ್ ಕಲಂ ಆಜಾದರನ್ನು ಆರಿಸಿದ ವಿಷಯವು ಚರಿತ್ರಾರ್ಹವಾದ ಮಹತ್ವವುಳ್ಳದ್ದಾಗಿದೆ. ಮೌಲಾನಾ ಅಜಾದರು, ಧಾರ್ಮಿಕ, ರಾಜಕೀಯ, ಸಾಹಿತ್ಯ ದೃಷ್ಟಿಗಳಿಂದ ಹಾಗೆ ಬಹುಮುಖದಿಂದಲೂ ... ರಾಷ್ಟ್ರೀಯ ಕೀರ್ತಿಶಾಲಿಗಳಾಗಿದ್ದಾರೆ.

ಜೀವನಜ್ಯೋತಿಗಳು:

# ಮೌಲಾನಾ ಅಬುಲ್ ಕಲಂ ಅಜಾದರು

ಲೇಖಕ:— ಕೆ. ಕೆ. ರೈ, ವಿದ್ವಾನ್

★

**ಪುಣ್ಯಕ್ಷೇತ್ರದಲ್ಲಿ ಜನನ**

ಮೌಲಾನಾ ಅಬುಲ್ ಕಲಂ ಅಜಾದರು ೧೮೮೮ರಲ್ಲಿ ಮುಸ್ಲಿಮರ ಪುಣ್ಯಕ್ಷೇತ್ರವಾದ ಮೆಕ್ಕಾದಲ್ಲಿ ಜನಿಸಿದರು. ಇವರ ತಾಯಿಯು ಅರೇಬಿಯಾದವರು. ಆದುದರಿಂದ ಬಾಲ್ಯವನ್ನು ಅರೇಬಿಯಾ ದೇಶದಲ್ಲಿಯೇ ಕಳೆದರು. ಅವರು ಅರಬೀ ಭಾಷೆಯಲ್ಲಿ ಅಧಿಕೃತ ಪಾಂಡಿತ್ಯವನ್ನು ಪಡೆದರು. ಆ ಮೇಲೆ ತನ್ನ ಪಿತೃ ಮೂಲಸ್ಥಾನವಾದ ಡೆಲ್ಲಿಗೆ ಬಂದು ನೆಲಸಿದರು. ಇವರು ಪಾಠಶಾಲೆಗೆ ಹೋಗಿ ವಿದ್ಯಾಭ್ಯಾಸಮಾಡಿದವರಲ್ಲ. ತಮ್ಮ ತಂದೆಯವರಿಂದಲೇ ಅವರಿಗೆ ಹಲವು ಶಾಸ್ತ್ರಗಳ ಅಧ್ಯಯನವಾಯಿತು. ಅರಬೀ, ಪರ್ಶಿಯನ್ ಭಾಷೆಗಳ ಅಧ್ಯಯನದಿಂದ ಮುಸ್ಲಿಮರ ಪವಿತ್ರ ಪುರಾಣವಾದ ಕುರಾನನ್ನು ಬಾಲ್ಯದಿಂದಲೇ ಶ್ರದ್ಧೆಯಿಟ್ಟು ಅಭ್ಯಾಸ ಮಾಡತೊಡಗಿದರು. ಇಂತಹ ನಿರಂತರ ಅಭ್ಯಾಸಬಲದಿಂದಲೇ ಮುಂದೆ ವಿಶ್ವಮಾನ್ಯವಾದ ಕುರಾನಿನ ವ್ಯಾಖ್ಯಾನವೊಂದನ್ನು ಬರೆದು ಪ್ರಸಿದ್ಧಿ ಪಡೆದರು. ಪುಸ್ತಕ ಪಠಣದಲ್ಲಿ ಅವರಿಗೆ ಬಾಲ್ಯದಿಂದಲೇ ಅತ್ಯಂತ ಆಸಕ್ತಿಯಿತ್ತು.

**ಪತ್ರಿಕೋದ್ಯಮ ...**

ಹದಿನಾರನೆಯ ವರ್ಷದಲ್ಲಿ ಲೇಖನಾಭ್ಯಾಸವು ... ಪತ್ರಿಕಾವ್ಯವಸಾಯವು ಆಗ ಪ್ರಾರಂಭದ ದಿಶೆಯಲ್ಲಿದ್ದರೂ, ಅಜಾದರು ತಮ್ಮ ೧೮ನೇ ವರ್ಷದಲ್ಲಿಯೇ ಪತ್ರಿಕಾ ವ್ಯವಸಾಯಕ್ಕೆ ಕೈಹಾಕಿದರು.

ಕೆಲಕಾಲಗಳ ತನಕ 'ವಕೀಲ್' ಎಂಬ ಅತ್ಯುತ್ತಮ ಉರ್ದು ಪತ್ರಿಕೆಯ ಸಂಪಾದಕರಾಗಿದ್ದರು. ತಮ್ಮ ಸ್ವತಂತ್ರ ವಿಚಾರವನ್ನು ಜನತೆಗೆ ಸಾರಿ ತಿಳಿಸಲು ಅದರಲ್ಲಿ ಸಾಕಷ್ಟು ಅನುಕೂಲವು ದೊರೆಯದಿದ್ದುದರಿಂದ, ೧೯೧೨ರಲ್ಲಿ, ಕಲ್ಕತ್ತೆಯಿಂದ, 'ಅಲ್-ಹಿಲಾಲ್' ಎಂಬ ವಾರ ಪತ್ರಿಕೆಯನ್ನು ಹೊರಡಿಸಿದರು. ಈ ಪತ್ರಿಕೆಯ ಮುಖಾಂತರ ವಾರ್ತಾಪ್ರಸಾರವೂ ಅಜಾದರು ಸ್ವತಂತ್ರ ವಿಚಾರವಾಹಿನಿಯನ್ನೇ ಹರಡಿಸಿದರು. ಹಿಂದೂ-ಮುಸ್ಲಿಂ ಐಕ್ಯ ಸಂದೇಶವನ್ನು ಸಾರಿದರು. ಲೋಕದಲ್ಲಿ ಬಡವ ಬಲ್ಲಿದನೆಂಬ ಭೇದವಿಲ್ಲವೆಂಬ ಪೈಗಂಬರರ ಬೋಧನಾಮೃತವನ್ನು ತನ್ನ ಸ್ಪಷ್ಟ ಸರಳವಾಣಿ



ಮೌಲಾನಾ ಅಜಾದರು

ಯಲ್ಲಿ ಬೋಧಿಸಿದರು. ಪಾರತಂತ್ರ್ಯದಿಂದ ನರಳುವ ಸಿದ್ದಿಕ ಜನತೆಯನ್ನು ಎಚ್ಚರಿಸುವಂತಹ ಪಟಿಷ್ಠವಾದ ಕಾರ್ಯೋದ್ದೇಶ ಲೇಖನಗಳನ್ನು ಬರೆದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಜ್ರಮುಷ್ಟಿಯಿಂದ ಭಾರತವು ಪಾರಾಗಲು ಐಕ್ಯಗೊಂಡು ಹೋರಾಟವನ್ನು ಹೂಡಬೇಕೆಂದು ಹಿಂದೂ-ಮುಸ್ಲಿಂ ಬಾಂಧವರನ್ನು ಕೂಗಿ ಕರೆದರು.

**ಸರಕಾರದ ವಕ್ರದೃಷ್ಟಿ**

ಸಹಜವಾಗಿ, ಸರಕಾರವು ಮೌಲಾನಾ ಅಜಾದರ ಲೇಖನಗಳಿಗಾಗಿ ಉದ್ರೇಕಗೊಂಡಿತು. ಅವರ ಪತ್ರಿಕೆಗೆ ವಾಗ್ಬಂಧನವಾಯಿತು. ಮುಂದಕ್ಕೆ ೧೯೧೬ರಲ್ಲಿ ಅವರನ್ನು ಡಿಫೆನ್ಸ್ ಓಫ್ ಇಂಡಿಯಾ ಆಕ್ಟಿನ ಅನ್ವಯದಂತೆ, ಬಂಗಾಳದಿಂದ ಸರಕಾರವು ಗಡೀಪಾರು ಮಾಡಿತು. ಆಲ್ಲಿಂದ ಹೊರಟು ಅವರು ಡಿಲ್ಲಿ, ಪಂಜಾಬ್, ಸಂಯುಕ್ತಪ್ರಾಂತ, ಮದ್ರಾಸು ಪ್ರಾಂತಗಳನ್ನೂ ಪ್ರವೇಶಿಸಬಾರದೆಂದು ಆಜ್ಞೆಯಾಯಿತು. ಹಾಗಾಗಿ ಅವರು ಬೀಹಾರ್ ಮತ್ತು ಮುಂಬಯಿಗಳಲ್ಲಿ ಮಾತ್ರ ನೆಲಸಬೇಕಾಯಿತು. ಆದರೂ ಅವರನ್ನು ಸುಮ್ಮಗಿರಗೊಡದೆ, ಮುಂದೆ ೧೯೧೬ ಜುಲೈ ತಿಂಗಳ ೮ರಂದು ಪ್ರಥಮತಃ ಸರಕಾರವು ಬಂಧನದಲ್ಲಿರಿಸಿತು.

ಆ ಸಲ ಅಜಾದರು ಮೂರು ವರ್ಷಗಳ ಕಾಲ ಸೆರೆಮನೆಯ ವಾಸವನ್ನನುಭವಿಸಿದರು. ಅಲ್ಲಿ ಅವರು ಪವಿತ್ರ ಗ್ರಂಥ ಕುರಾನಿನ ಉರ್ದು ಭಾಷಾಂತರವನ್ನು ಮಾಡಿದರು. ಇಸ್ಲಾಮ್ ಧರ್ಮ ಮತ್ತು ಸಾಹಿತ್ಯಗಳಿಗೆ ಮೌಲಾನಾ ಅಜಾದರಿಂದ ಸಂದ ಸೇವೆಯು ಅಪರಿಮಿತವಾದುದು.

**ರಾಜಕೀಯ ಹೋರಾಟ**

ಅಜಾದರ ಬಿಡುಗಡೆಯ ಕಾಲದಲ್ಲಿ ಭಾರತದಲ್ಲಿ ಎಲ್ಲೆಲ್ಲೂ ರಾಜಕೀಯ ಹೋರಾಟವು ಪ್ರಚಂಡವಾಗಿತ್ತು. ರೌಲೆಟ್ ಆಕ್ಟಿನಂತೆ ಖಿಲಾಫತ್ ಪ್ರಕರಣವುಂಟಾಗಿತ್ತು. ಒಡ್ವಾಯರನ ಆಳಿಕೆಯಲ್ಲಿ ಪಂಜಾಬಿನ ಜಲಿಯನ್ವಾಲಾ ಬಾಗಿನಲ್ಲಿ ಅಮಾನುಷವಾದ ಸರ್ವಹತ್ಯೆವಾಯಿತು. ಅಜಾದರಿಗೆ ಆಗ ಮೌನವಾಗಿರುವುದು ಸಾಧ್ಯವಿರಲಿಲ್ಲ. ಕಾಂಗ್ರೆಸಿನೊಡನೆ ಸೇರಿ ಪಾರತಂತ್ರ್ಯ ವಿರೋಧನೆಗಾಗಿ ಹೋರಾಡುವುದು ಮುಸ್ಲಿಮರ ಕರ್ತವ್ಯವೆಂದು ಅವರು ಬಗೆದು ಕಾಂಗ್ರೆಸಿಗೆ ಸೇರಿದರು. ೧೯೨೧ರಲ್ಲಿ ತಿರಿಗಿ ಅವರನ್ನು ಸರಕಾರವು ಬಂಧಿಸಿ ಒಂದು ವರ್ಷ ಸಜೆ ವಿಧಿಸಿತು. ಒಂದು ವರ್ಷದ ಬಂಧನವು ತನಗೆ ಬಹಳ ಕಡಿಮೆಯಾಯಿತೆಂದು ಅಜಾದರು ಮೆಜಿಸ್ಟ್ರೇಟರೊಡನೆ ಹೇಳಿದರು. ಆ ವಿಚಾರಣೆಯ ಸಮಯ, ಅವರಿತ್ತ ಉತ್ತರಗಳು ಒಂದು ಪುಸ್ತಕರೂಪವಾಗಿ ಪ್ರಕಟವಾಗಿವೆ. ಅದರಲ್ಲಿ ಅನೇಕ ಮಹತ್ವದ ವಿಷಯಗಳು ಅಡಕವಾಗಿವೆ.

**ರಾಷ್ಟ್ರಮಾನ್ಯ ರಾಷ್ಟ್ರಪತಿ**

ಅವರಿಗೆ ಬಿಡುಗಡೆಯಾದ ಕೂಡಲೇ, ರಾಷ್ಟ್ರವು ಅವರು ಸಲ್ಲಿಸಿದ ಸೇವೆಯನ್ನು ತಿಳಿದು ೧೯೨೩ರ ಡಿಲ್ಲಿಯ ಕಾಂಗ್ರೆಸು ಅಧಿವೇಶನಕ್ಕೆ ಅವರನ್ನು ರಾಷ್ಟ್ರಪತಿಯಾಗಿ ಆರಿಸಿತು. ಎಷ್ಟೋ ಮುಸ್ಲಿಮರು, ಸಂಕುಚಿತ ಅಭಿಪ್ರಾಯಗಳಿಂದ ವಿರೋಧಗಳೆಸಿ ಕಾಂಗ್ರೆಸನ್ನು ಆಗ ತೊಲಗಿಹೋದರು! ಆದರೆ ಮೌಲಾನಾ ಅಜಾದರು ವಿಶಾಲ ರಾಷ್ಟ್ರೀಯ ಮನೋಗತಿಯುಳ್ಳವರಾಗಿ ನಿರಂತರವಾಗಿ ಸ್ವಾತಂತ್ರ್ಯಕ್ಕೆಂದು ಕಾಂಗ್ರೆಸಿನ ಸ್ವಯಂಸೇವಕರಾಗಿ ದುಡಿದರು!

ಓದುವುದು ಬರೆಯುವುದು ಅವರ ದಿನನಿತ್ಯದ ಕೆಲಸ. ಅರೇಬಿಯ ಹಾಗೂ ಪರ್ಶಿಯಾದ ಸಾಹಿತ್ಯಗಳಲ್ಲಿ ಅಜಾದರಿಗೆ ಪ್ರಾಮುಖ್ಯ ಸ್ಥಾನವಿದೆ. ಇಂಗ್ಲಿಷ್ ಭಾಷೆಯನ್ನೂ ಚೆನ್ನಾಗಿ ಕಲಿತುಕೊಂಡಿದ್ದಾರೆ. ತತ್ವಜ್ಞಾನ ಹಾಗೂ ಧಾರ್ಮಿಕ ಗ್ರಂಥಗಳಲ್ಲಿ ಅವರಿಗೆ ಶ್ರದ್ಧೆಯು ಬಹಳ.

ಇಂದು ಭಾರತದ ರಾಜಕೀಯದಲ್ಲಿ ಮೌಲಾನಾ ಅಜಾದರಿಗೆ ಅತ್ಯಂತ ಪ್ರಾಮುಖ್ಯತೆಯಿದೆ. ಅವರು ಗಾಂಧಿಜಿಯವರ ವಿಶ್ವಾಸಯುಕ್ತ ಅನುಯಾಯಿಯವರು. ಸಮತಾವಾದಿಗಳೂ ಅವರಿಗೆ ಈ ವರ್ಷದ ಚುನಾವಣೆಯಲ್ಲಿ ಬಹುಮತ ಕೊಟ್ಟಿರುವುದರಿಂದ, ಅವರಿಗೆ ಎಲ್ಲಾ ಪಕ್ಷದವರೂ ಕೊಡುವ ಮನ್ನಣೆಯು ವ್ಯಕ್ತವಾಗುವುದು.

ಮುಸ್ಲಿಂ ಲೀಗಿನ ಹಾಗೂ ಜಿನ್ನರ ಅಪಪ್ರಚಾರದಿಂದ ರಾಷ್ಟ್ರವು ಐಕ್ಯದಿಂದ ವಿಭಜನೆಗೊಳಗಾಗಬಹುದಾದ ಇಂತಹ ಸಂದಿಗ್ಧ ಕಾಲದಲ್ಲಿ ಮೌಲಾನಾ ಅಜಾದರು ರಾಷ್ಟ್ರಪತಿಗಳಾಗಿ ಆರಿಸಿ ಬಂದುದು ಅತ್ಯಂತ ಮಹತ್ವದ್ದಾಗಿದೆ. ಹಿಂದೂ ಮುಸ್ಲಿಂ ಸಮಸ್ಯೆಯು ಪರಿಹಾರವಾಗಿ ರಾಷ್ಟ್ರದಲ್ಲಿ ಸಂಪೂರ್ಣ ಐಕ್ಯವು ನೆಲೆಗೊಳ್ಳುವುದೆಂದು ಎಲ್ಲರಿಗೂ ಇಂದು ದೃಢ ವಿಶ್ವಾಸವಿದೆ. ರಾಷ್ಟ್ರಪತಿ ಮೌಲಾನಾ ಅಬುಲ್ ಕಲಮ್ ಅಜಾದರ ರಾಷ್ಟ್ರಪತಿತ್ವದಲ್ಲಿಯೇ ರಾಷ್ಟ್ರವು ಸ್ವಾತಂತ್ರ್ಯ ಸೂರ್ಯೋದಯವನ್ನು ಕಾಣುವುದೆಂಬ ಆಶೆಯು ಇಂದು ಭಾರತೀಯರಲ್ಲಿ ನೆಲೆಗೊಂಡಿದೆ.


**ಪ್ರಕಟಣೆ**

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
O. S. No. 548/1930 R. E. P. No. 815/1939
ನಾರಾಯಣ ಭಟ್ಟ—ವಾದಿ. ಅರ್ಜಿದಾರ
ಮತ್ತು
ಭೀಮಕ್ಕ ಯಾನೆ ರುಕ್ಮಿಣಿ ಅಮ್ಮ—
ಪ್ರತಿವಾದಿಗಳು
ಇವರೊಳಗೆ ಎದ್ರಿಗಳು
ಭೀಮಕ್ಕ ಯಾನೆ ರುಕ್ಮಿಣಿಅಮ್ಮ ಪ್ರತಿ ಪುಟ್ಟಣ್ಣಭಟ್ಟರ ವಿಧವೆ, ಮೈಸೂರು ಸಂಸ್ಥಾನದ ಸಂತೆಪೇಟೆ ಆನಂದರಾಯ ಬೀಡಾಯರ ಮನೆಯಲ್ಲಿರುವವಳು— ಎದ್ರಿಗಳು

ಎದ್ರಿಗೆ ಸಲತಕ್ಕ ಗೇಣಿ ವಸೂಲಿ ಹಕ್ಕು ಜಪ್ತು ಮಾಡಿಸಿ ಏಲಮಿಗೆ ಅಪೇಕ್ಷಿಸಿ ಅರ್ಜಿದಾರನು ದಾಖಲುಮಾಡಿದ ಮೇಲ್ಕಂಡ ಅಮಲ್ದಾರಿಯಲ್ಲಿ ಅರ್ಜಿದಾರನ ಕಡೆಯಿಂದ ಹಾಜುಮಾಡುವ ಏಲಂ ಇಶ್ತಿಹಾರಿನ ಡ್ರಾಫ್ಟು ಮತ್ತು ಏಲಂ ಸಮಯ ಜಿಡ್ಡನಾದಲ್ಲಿಕ್ಕೆ ಫರ್ಮಿಕನ್ ಕೊಟ್ಟ ಅರ್ಜಿ ಕುರಿತು ನಿಮ್ಮ ಆಕ್ಷೇಪಗಳು ಇರುವುದಾದರೆ ತಾ. 9-4-1940ನೇ ಹಗಲು ಘಂಟೆ 11ಕ್ಕೆ ಈ ಕೋರ್ಟು ಮುಂದೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ವ್ಯವಹರಣೆಯು ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ
ಮೊಕ್ಕಾಂ ಕಾರ್ಕಳ M. S. Adhikari,
16-3-1940 ಅರ್ಜಿದಾರನ ಕಡೆ ವಕೀಲ

HALFTONE & LINE BLOCK MAKING UNDERTAKEN
Sharada Press, MANGALORE

# ಜಿಲ್ಲಾ ಸಮಾಚಾರ

**ತ್ರಿಗತಿ ನಾಟ್ಯಕಲಾ ನಾಟ್ಯವಿಲಾಸಿ ಸಂಘ:**—ಇದರ ಸಾಮಾನ್ಯ ಸಭೆಯು ತಾ. ೬ರಂದು ಜರಗಿತು. ಶ್ರೀ ಪೀತಾಂಬರರಾಯರು ಅಧ್ಯಕ್ಷತೆ ವಹಿಸಿದ್ದರು. ಮುಂದಿನ ನಾಟಕ 'ಶಾಕ್ಷರ' ಅಥವಾ 'ಆಹುತಿ'ಯನ್ನು ಅಖಿಲ ಕರ್ನಾಟಕ ಮಕ್ಕಳ ಕೂಟದ ಕೋರಿಕೆಯಂತೆ ಅದರ ಸಹಾಯಾರ್ಥವಾಗಿ ಎಪ್ರಿಲ್ ಮೊದಲ ವಾರದಲ್ಲಿ ಅಭಿನಯಿಸಬೇಕಾಗಿ ಹಾಗೂ ಮುಂದೆ ಪ್ರತಿ ತಿಂಗಳಿಗೆ ಒಂದರಂತೆ ಹೊಸ ಹೊಸ ನಾಟಕಗಳನ್ನು ರಂಗಭೂಮಿಯ ಮೇಲೆ ತರಬೇಕೆಂಬ ಗೊತ್ತುವಳಿಗಳಾದುವು.

**ನವಜೀವನ ವ್ಯಾಯಾಮ ಶಾಲೆ:** ಶ್ರೀ. ಲಕ್ಷ್ಮಣಪುತ್ರನ್ ಇವರು ಬೋಳೂರಿನಲ್ಲಿ ನಡೆಸುತ್ತಿರುವ ವ್ಯಾಯಾಮ ಶಾಲೆಯ ಶಾಖೆಯೊಂದನ್ನು ಇತ್ತೀಚೆಗೆ ಫೆಲಿಕ್ಸ್ ಪೈ ಬಜಾರಿನ ನಿವೇಶನದಲ್ಲಿ ತೆರೆದಿರುವರಷ್ಟೆ! ಸಂಜೆ ಹಾಗೂ ಪ್ರಾತಃಕಾಲಗಳಲ್ಲಿ ಅಲ್ಲಿ ವ್ಯಾಯಾಮ ತರಬೇತಿಯು ಕೊಡಲಾಗುತ್ತದೆ. ಸರ್ವರೂ ಇದರ ಉಪಯೋಗವನ್ನು ಹೊಂದಿ ಶರೀರದ ಆರೋಗ್ಯವನ್ನು ಸಂಪಾದಿಸಿಕೊಳ್ಳುವರಾಗಿ ನಂಬಲಾಗಿದೆ.

**ಶ್ರೀ ಎಮ್. ಗೋವಿಂದ ಪೈಗಳ ಭಾಷಣ:**— ಪ್ರಸಿದ್ಧ ಸಾಹಿತಿಗಳಾದ ಶ್ರೀ ಗೋವಿಂದ ಪೈಗಳು ಕರ್ನಾಟಕ ಸಂಶೋಧನ ಸಮಿತಿ ಪರವಾಗಿ ಧಾರವಾಡ ವಿದ್ಯಾವರ್ಧಕ ಸಂಘದಲ್ಲಿ ಮೂರು ಉಪನ್ಯಾಸಗಳನ್ನು ಕೊಟ್ಟರು. ರನ್ನನ ಗದಾಯುದ್ಧದ ಕಾಲ ನಿರ್ಣಯ, ಬಸವೇಶ್ವರನ ಕಾಲ ನಿರ್ಣಯ ಮತ್ತು ಕನ್ನಡ ಸಾಹಿತ್ಯದ ಪ್ರಾಚೀನತೆ ಈ ವಿಷಯಗಳ ಮೇಲೆ ಅವರು ಮಾತನಾಡಿದರು.

**'ಸ್ವಾಸ್ಥ್ಯ ಸಂಘ'ದ ಏಳನೇ ವ್ಯಾಯಾಮ ಶಿಕ್ಷಣ ಶಿಬಿರ ಮಂಗಳೂರು:**—ಪ್ರತಿವರ್ಷ ನಡೆಸುವ ಹಾಗೇ ಈ ವರ್ಷವೂ ಮೇಲಿನ ಸಂಸ್ಥೆಯ ವ್ಯಾಯಾಮ ಶಿಕ್ಷಣ ಶಿಬಿರವು ಮಂಗಳೂರಲ್ಲಿ ನಡೆಯಲಿರುವುದು. ಅಧ್ಯಾಪಕರಿಗೂ ಅಧ್ಯಾಪಕಿಯರಿಗೂ ಪ್ರತ್ಯೇಕ ಪ್ರತ್ಯೇಕ ಎರಡು ವ್ಯಾಯಾಮ ಶಿಬಿರಗಳನ್ನು ತೆರೆಯಬೇಕೆಂದು ವ್ಯವಸ್ಥೆಯನ್ನು ಮಾಡಲಾಗಿದೆ. ಅಧ್ಯಾಪಕಿಯರ ಶಿಬಿರವು ಬರುವ ಎಪ್ರಿಲ್ ೧೫-೪-೪೦ಕ್ಕೆ ಪ್ರಾರಂಭವಾಗಿ ಅದೇ ತಿಂಗಳ ೩೦ನೇ ಸಮಾಪ್ತವಾಗುವುದು. ಅಧ್ಯಾಪಕರುಗಳ ಶಿಬಿರವು ಎಪ್ರಿಲ್ ೩೦-೪-೪೦ಕ್ಕೆ ಪ್ರಾರಂಭವಾಗಿ ಮೇ ೨೦ನೇ ತಾರೀಕಿಗೆ ಸಮಾಪ್ತವಾಗುವುದು. ಅಧ್ಯಾಪಕಿಯರಿಗೆ ಲೇಜಿಂ, ಲಾಠಿ, ಜಿಮ್ನಾಸ್ಟಿಕ್, ಸೂರ್ಯ ನಮಸ್ಕಾರ, ಪ್ರಥಮ ಚಿಕಿತ್ಸೆ, ಕೋಲಾಟ ಮೊದಲಾದ ವಿಷಯಗಳಲ್ಲಿ ತರಬೇತಿಯನ್ನು ಕೊಡಲಾಗುವುದು. ಆ ಶಿಬಿರವು ಸೇವಾಶ್ರಮದಲ್ಲಿ ನಡೆಯಲ್ಪಡುವುದು. ಊಟ ಕೊಳ್ಳುವಿಕೆ ಮತ್ತು ಮೇಲ್ವಿಚಾರವನ್ನು ಆಶ್ರಮದ ಸುಪರಿಂಡೆಂಟರಾದ ಶ್ರೀ. ಕೆ. ಕಾಂತಾಬಾಯಿಯವರು ನೋಡಿಕೊಳ್ಳಲು ಒಪ್ಪಿರುವರು. ಅಧ್ಯಾಪಕರುಗಳ ಶಿಬಿರವು ಗಣಪತಿ ಹೈಸ್ಕೂಲಿನಲ್ಲಿ ತೆರೆಯಲಾಗುವುದು. ಇದರಲ್ಲಿ ಮಿಲಿಟರಿ ಡ್ರಿಲ್, ಲಾಠಿ, ಲೆಝಿಂ, ಬಾಲಾ, ಜಂಬಿಯಾ, ಬೋಕ್ಸಿಂಗ್, ಆಸನ, ಸೂರ್ಯನಮಸ್ಕಾರ ಸಿವಿಕ್ಸ್, ಸ್ವಯಂಸೇವಕತನ, ಇತ್ಯಾದಿ ವಿಷಯಗಳನ್ನು ಅನುರಾಧಪುರ ಮತ್ತು ಮದ್ರಾಸ್ ಗವರ್ನ್ಮೆಂಟಿನ ಈಗಿನ ಸಿಲಬಸ್ ಪ್ರಕಾರ ಕಲಿಸಲಾಗುವುದು. ಫೀಸು ಎಲ್ಲರಿಗೂ ಅನುಕೂಲವಾಗುವ ಹಾಗೆ ಕೇವಲ ೫ ರುಪಾಯಿ ಮಾತ್ರ ಇಟ್ಟಿರುತ್ತದೆ.

ಪ್ರವೇಶ ಅರ್ಜಿಗಳನ್ನು ಬರುವ ತಿಂಗಳ ೧೦ನೇ ತಾರೀಕಿನ ಒಳಗೆ ಕಳುಹಿಸತಕ್ಕದ್ದು. ಶಿಬಿರದ ವಿಷಯ ಮತ್ತು ಪ್ರವೇಶ ಅರ್ಜಿ ವಗೈರೆಗಳಿಗೆ 'ಆರ್ಗನೈಸರ್' ಸ್ವಾಸ್ಥ್ಯ ಸಂಘ ಗಣಪತಿ ಹೈಸ್ಕೂಲ ರಸ್ತೆ, ಮಂಗಳೂರು ಇವರಿಗೆ ಬರೆಯತಕ್ಕದ್ದು.

**ಸರ್ ಸಿ. ಪಿ.ಯವರು:**— ತಿರುವಾಂಕೂರು ಸಂಸ್ಥಾನದ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು, ಕಳೆದ ಶನಿವಾರ ಸಂಜೆ, ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ, 'ತಿರುವಾಂಕೂರಿನ ದೇವಳ ಪ್ರವೇಶ ಸಮಸ್ಯೆ'ಯ ವಿಚಾರವಾಗಿ ಭಾಷಣವನ್ನಿತ್ತರು.

**ಹರಿಜನ ಸೇವಕ ಸಂಘ:**— ಇದರ ಸಭೆಯು ತಾ. ೧೪ನೇ ಸಾಯಂ, ಡಾ। ಆಡಪರ ಅಧ್ಯಕ್ಷತೆಯಲ್ಲಿ ಸೇರಿ, ಕಾರ್ಕಳ ತಾಲೂಕು ದುರ್ಗದಲ್ಲಿ ದೋಗು ಎಂಬ ಹರಿಜನನಿಗೆ ಹೊಡೆದ ವಿಚಾರದಲ್ಲಿ ವಿಚಾರಿಸುವರೆ ಡೇ. ಭ. ಶಿಲ್ಲೆಯವರಿಗೆ ಅಧಿಕಾರ ಕೊಡಲಾಯಿತು.

**ಮಂಗಳೂರಿನಲ್ಲಿ ಹರಿಜನರ ಸಭೆ:**—ಕಳೆದ ತಾ. ೧೦ನೇ ಸಂಜೆ ೬ಕ್ಕೆ ಹರಿಜನರ ಒಂದು ಸಭೆಯು ಶ್ರೀ. ಎಮ್. ಆರ್. ಪೂಂಜರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಈಶ್ವರನವರೂ, ಇನ್ನಿತರರೂ ಮುಲ್ಕಿಯಲ್ಲಿ ನಡೆಯಲಿರುವರ ಹರಿಜನ ಪರಿಷತ್ತಿನ ಕುರಿತು ಮಾತಾಡಿದ ಮೇಲೆ ಅಧ್ಯಕ್ಷರು ತಾವು ಕೈಕೊಂಡ ಕಾರ್ಯವು ಸಫಲವಾಗುವಂತೆ ಎಲ್ಲರೂ ಸಹಕರಿಸಬೇಕೆಂದರು.

**ಶ್ರೀ ಎಸ್. ವಿ. ಘಾಟೆಯವರ ಬಂಧನ:**— ಡಿಫೆನ್ಸ್ ಆಫ್ ಇಂಡಿಯ ರೂಲ್ಸ್ ಪ್ರಕಾರ ಪ್ರಮುಖ ಸಮತಾವಾದಿ, ಶ್ರೀ. ಯಸ್. ವಿ. ಘಾಟೆ ಇವರನ್ನು ಕಳೆದ ಗುರುವಾರ ಸಾಯಂ. ೬ಕ್ಕೆ ಕೈದುಮಾಡಿ ಆ ದಿವಸ ರಾತ್ರಿ ಸಬ್‌ಸಿಡಿಯರಿ ಜೈಲಿನಲ್ಲಿರಿಸಿ ಶುಕ್ರವಾರ ದಿನ ಮೈಲಿನಲ್ಲಿ ವೆಲ್ಲೂರಿಗೆ ಸಾಗಿಸಿದ್ದಾರೆ. ಇದನ್ನು ಪ್ರತಿಭಟಿಸಿ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಸೇರಿತು. ಶ್ರೀ। ಎಸ್. ಎನ್. ಹೊಳ್ಳರು ಭಾಷಣವಿತ್ತರು.

**ದ. ಕ. ಪಂಡಿತ ಸಂಘದ ಚತುರ್ಥ ವಾರ್ಷಿಕ ವರ್ಧಂತಿಯು:**— ಇದೇ ತಾ. ೧೬ನೇ ಭಾನುವಾರ ಪೂರ್ವಾಹ್ನ ಘಂಟೆ ೯ಗೆ ಗಣಪತಿ ಹೈಸ್ಕೂಲಿನಲ್ಲಿ ಶ್ರೀ। ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಉಪಾಹಾರ, ಪ್ರಾರ್ಥನೆ, ಅಧ್ಯಕ್ಷರ ಚುನಾವಣೆ, ವರದಿಯ ವಾಚನ ಇತ್ಯಾದಿ ಕಾರ್ಯಕ್ರಮಗಳು ಜರಗಿದ ಬಳಿಕ ಸಂಘಕ್ಕೆ ಶ್ರೀ। ರಾಮಚಂದ್ರ ಅಯ್ಯರ್; ಬಿ. ಎ. ಸೈಂಟ್ ಎಲ್ಯೂಶಿಯಸ್ ಕಾಲೇಜು ಇವರೂ, ಕಂಠೀರವ ಪತ್ರಿಕೆಯ ಉಪಸಂಪಾದಕರಾದ ಶ್ರೀ. ಎಚ್. ಭೀಮರಾಯರೂ ಹಿತಚಿಂತಕರಾಗಿ ಯೋಗ್ಯ ಸಲಹೆಗಳನ್ನಿತ್ತರು. ಸಂಘದ ಸದಸ್ಯರಲ್ಲಿ ಹಲವರು ಸಂಘದಲ್ಲಿ ಇನ್ನು ಮುಂದೆ ಯಾವ ಕಾರ್ಯಗಳನ್ನು ಹೊಸತಾಗಿ ಕೈಕೊಳ್ಳಬಹುದು. ಎಂಬ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸಿದರು. ಹಿಂದಿನ ವರ್ಷದ ಅಧಿಕಾರಿಗಳೇ ಮುಂದಿನ ವರ್ಷಕ್ಕೂ ಸಂಘದ ಅಧಿಕಾರಿಗಳಾಗಿರತಕ್ಕದ್ದು ಎಂದು ನಿರ್ಣಯವಾಯಿತು. ಸಂಘದ ಕಾರ್ಯಕರ್ತರು ಮತ್ತು ಶ್ರೀ। ಎಂ. ರತ್ನಾಕರ ಕಾಮತ್ ಹಿಂದೀ ವಿದ್ವಾನ್, ಶ್ರೀ। ಎಂ. ಆರ್. ಶಾಸ್ತ್ರಿ ವಿದ್ವಾನ್, ಶ್ರೀ। ಬಿ. ಭುಜಂಗರಾವ್. ಬಿ. ಎ. ವಿದ್ವಾನ್ ಈ ಮೂವರು ಹೀಗೆ ಎಂಟು ಮಂದಿ ಸದಸ್ಯರುಳ್ಳ ಕಾರ್ಯಕಾರಿ ಸಮಿತಿಯೊಂದು ಏರ್ಪಡಿಸಲಾಯಿತು. ಅಧ್ಯಕ್ಷರು ಪಂಡಿತರ ಆರ್ಥಿಕ ದುಸ್ಥಿತಿ, ಪಂಡಿತರ ವಿಷಯದಲ್ಲಿ ಸರಕಾರದವರು ತೋರುವ ಭೇದಭಾವ, ಅಧ್ಯಾಪಕ ಸಮೂಹದಲ್ಲಿ ಪಂಡಿತರಿಗಿರುವ ಅಗೌರವ, ಅವುಗಳಿಗೆ ಕಾರಣ, ಅವುಗಳ ನಿವಾರಣೋಪಾಯ ಇತ್ಯಾದಿ ವಿಷಯಗಳನ್ನು ಎತ್ತಿ ಉಪಯುಕ್ತ ಸೂಚನೆಗಳನ್ನಿತ್ತು ಉಪನ್ಯಾಸವಿತ್ತರು.

**ದಿವಂಗತ ಮಿಜಾರ್ ಅಣ್ಣಪ್ಪ ಪೈಗಳು:**—ಮಂಗಳೂರಿನ ಸಾಹುಕಾರರಾದ ಮಿಜಾರ್ ಅಣ್ಣಪ್ಪ ಪೈಗಳು ಮೊನ್ನೆ ತಾ. ೧೯ರಂದು ತನ್ನ ೬೮ನೆಯ ವರ್ಷದಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಕಳೆದ ೧೦ ವರ್ಷಗಳಿಂದ ವ್ಯಾಪಾರ ವೃತ್ತಿಯಿಂದ ನಿವೃತ್ತರಾಗಿದ್ದರು. ಅವರ ಮಕ್ಕಳಿಗೂ, ಬಂಧುಗಳಿಗೂ ಉಂಟಾದ ಅಪಾರ ದುಃಖದಲ್ಲಿ ನಾವು ನಮ್ಮ ಸಹ ಸಂತಾಪವನ್ನು ಸೂಚಿಸುತ್ತೇವೆ.

**ಶ್ರೀ। ರಾಮಕೃಷ್ಣ ವೈದ್ಯಾಶ್ರಮ:**— ದಿವಂಗತ ಮಿಜಾರ್ ಅಣ್ಣಪ್ಪ ಪೈಗಳ ನಿಧನದ ಬಗ್ಗೆ ತಾ. ೧೯ನೇ ಮಧ್ಯಾಹ್ನದ ಮೇಲೆ ವೈದ್ಯಾಶ್ರಮವು ಮುಚ್ಚಲ್ಪಟ್ಟಿತ್ತು.

**ಮೂಲ್ಕಿ ಜಿಲ್ಲಾ ಹರಿಜನ ಪರಿಷತ್ತು:**—ದ. ಕ. ಜಿಲ್ಲಾ ಹರಿಜನ ಸೇವಕ ಸಂಘದ ನೇತೃತ್ವದಲ್ಲಿ ತಾ. ೨೭, ೨೮-೪-೪೦ರಲ್ಲು ಮುಲ್ಕಿಯಲ್ಲಿ ಜರಗಲಿರುವ ಪ್ರಥಮ ಜಿಲ್ಲಾ ಹರಿಜನ ಪರಿಷತ್ತಿಗೆ ಸರ್ವರಿಗೂ ಸುಸ್ವಾಗತವಿದೆ. ಶ್ರೀ। ವಿ. ಐ. ಮುನಿಸ್ವಾಮಿ ಪಿಳ್ಳೆ, ಯಂ. ಎಲ್. ಎ., ರವರು (ಮದ್ರಾಸು ಸರಕಾರದ ನಿವೃತ್ತ ಮಂತ್ರಿಗಳು) ಅಧ್ಯಕ್ಷರು. ಶ್ರೀ। ಆರ್. ಸೂರ್ಯನಾರಾಯಣ ರಾವ್, ಬಿ. ಎ., ಫಸ್ಟ್ ಮೆಂಬರ್, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ, (ಕರೆಯುವವರು) ಎಂದು ಡಾಕ್ಟರ್ ಯಚ್. ವಿ. ಆಡಪ್ಪ, ಅಧ್ಯಕ್ಷ, ಜಿಲ್ಲಾ ಹರಿಜನ ಸೇವಕ ಸಂಘ. ಮತ್ತು ಆರ್. ಪೂಂಜ, ಅಧ್ಯಕ್ಷ ಸ್ವಾಗತ ಕಮಿಟಿ ಇವರು ತಿಳಿಸುತ್ತಾರೆ.

## ಉಡುಪಿ

**ಶಿರ್ವ:**—ಶಿರ್ವ ಮುಟ್ಲುಪಾಡಿ ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ತಾರೀಕು ೨೬-೨-೪೦ನೇ ಆದಿತ್ಯವಾರ ಸದ್ರಿ ಶಾಲೆಯ ದಿವಂಗತ ಮೆನೇಜರರ ಪಂಚಮ ವಾರ್ಷಿಕ ದಿನವು ಶಿರ್ವ ಪಂಚಾಯತ ಬೋರ್ಡ್ ಪ್ರೆಸಿಡೆಂಟರಾದ, ಶ್ರೀ ಯಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು.

**ಮಣಿಪಾಲ:**— ಕಳೆದ ವರ್ಷ ತಾರೀಕು ೩೦-೨-೩೯ರಲ್ಲಿ ಮೈಸೂರಿನ ದಿವಾನರಾದ ಮಿರ್ಜಾ ಎಮ್. ಇಸ್ಮಾಯಿಲರಿಂದ ಶಿಲಾಸ್ಥಾಪನೆ ಮಾಡಿದ ಮಣಿಪಾಲ ಹಿಂದೂ ಅನಾಥಾಲಯದ ಕಟ್ಟಡವು ಈಗ ಪೂರೈಸಲ್ಪಟ್ಟು, ಅದರ ಉದ್ಘಾಟನಾ ಸಮಾರಂಭವನ್ನು ಜನಸೇವಾ ಪ್ರಿಯರಾದ ಮುಂಬಯಿಯ ಶ್ರೀಯುತ ಲಕ್ಷ್ಮೀಕಾಂತ ಶಾಂತಾರಾಮ ದಾಭೋಳ್ಕರ್ ಇವರ ಕೈಯಿಂದ ತಾ. ೨೫-೪-೪೦ರಲ್ಲು ನೆರವೇರಿಸುವುದೆಂತ ನಿಶ್ಚಯಿಸಿಯದೆ.

## ಕಾರ್ಕಳ

**ಪಬ್ಲಿಕ್ ಹೆಲ್ತ್ ಕಮಿಟಿ:**— ತಾ. ೧೧-೪-೧೯೪೦ರಂದು ದಿನಜನಾಬ್ ಯಚ್. ಯಸ್. ಹುಸ್ಸೇನ್ಸ್ ಎಂ ಯಲ್. ಎ. ರವರ ಅಧ್ಯಕ್ಷತೆಯಲ್ಲಿ ಕೂಡಿದ ಈ ಕಮಿಟಿಯ ಸಭೆಯಲ್ಲಿ ಶ್ರೀಗಳಾದ ಕೆ. ಕೃಷ್ಣ ಪೈ ವಕೀಲ ಬಿ. ಬಾಲಕೃಷ್ಣ ಶೆಟ್ಟಿ ಮತ್ತು ಕಟೀಲಿನ ಶ್ರೀನಿವಾಸ ಶೆಟ್ಟಿಯವರು ಕಮಿಟಿಯ ಹೊಸ ಸದಸ್ಯರಾಗಿ ಆರಿಸಲ್ಪಟ್ಟರು. ಈರುವಾಯ ಶ್ರೀ. ಕೃಷ್ಣ ಪೈಯವರು ಜತೆಕಾರ್ಯದರ್ಶಿಗಳಾಗಿರಬೇಕೆಂದೂ, ಆರೋಗ್ಯ ಮತ್ತು ನೈರ್ಮಲ್ಯ ಪ್ರಚಾರಮಾಡುವ ಬಗ್ಗೆ ಆಲೋಚನೆಯಾಗಿ ಶ್ರೀ ಪಿ. ವಿ. ಶೆಣೈಯವರು ತಮ್ಮ ಸ್ವಂತ ಖರ್ಚಿನಿಂದ ಛಾಪಿಸಿ ಕಮಿಟಿಗೆ ಉಚಿತವಾಗಿ ಕೊಟ್ಟು, ಆರೋಗ್ಯ ವಿಷಯಕ ಕರಪತ್ರಗಳನ್ನು ಕೃತಜ್ಞತಾ ಪೂರ್ವಕ ಸ್ವೀಕರಿಸಿ ಅವುಗಳ ವಿತರಣ ಮಾಡಬೇಕೆಂದೂ ನಿಶ್ಚಯಗಳಾದುವು. ಶ್ರೀ ಪಿ. ವಿ. ಶೆಣೈಯವರು ಕೊಟ್ಟ ಲಘು ಉಪಾಹಾರದ ಸತ್ಕಾರದೊಂದಿಗೆ ಸಭೆ ಮುಗಿಯಿತು.

**ಸಂತೋಷ ಕೂಟ:**—ಜಿಲ್ಲಾ ಬೋರ್ಡಿನಿಂದ ವೇಣೂರಿನಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟ ರೂರಲ್ ಡಿಸ್ಪೆನ್ಸರಿಗೆ ಇಲ್ಲಿಯ ಡಾಕ್ಟರ ಯಸ್. ವಿಟ್ಠಲದಾಸ ಶೆಣೈಯವರು ವೈದ್ಯರಾಗಿ ನೇಮಕ ಹೊಂದಿದ ಬಗ್ಗೆ ತಮ್ಮ ಸಂತೋಷವನ್ನು ಸೂಚಿಸುವದಕ್ಕೋಸ್ಕರ ತಾ. ೧೩-೩-೪೦ ದಿನ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಅವರ ಹಿತೈಷಿ ಮತ್ತು ಮಿತ್ರವರ್ಗದ ಒಂದು ಸಂತೋಷ ಕೂಟವು ಕೂಡಿ ಲಘು ಉಪಹಾರವು ಮುಗಿದ ಬಳಿಕ ಜನಾಬ್ ಯಚ್. ಯಸ್. ಹುಸ್ಸೇನ ಮೊದಲಾದವರು ಡಾಕ್ಟರ ಶೆಣೈಯವರ ಶ್ರೇಯಸ್ಸನ್ನು ಕೋರಿ ಭಾಷಣವಿತ್ತರು. ಡಾಕ್ಟರಶೆಣೈಯವರು ಸಂದರ್ಭೋಚಿತ ಪ್ರತ್ಯುತ್ತರ ಕೊಟ್ಟರು.

**ಪ್ರೈಸ್ ಕಂಟ್ರೋಲ್ ಕಮಿಟಿ:**— ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರು ಅಧ್ಯಕ್ಷರಾಗಿಯೂ ಕಾರ್ಕಳ ತಾಲೂಕು ತಹಶೀಲ್ದಾರರು ಕಾರ್ಯದರ್ಶಿಗಳಾಗಿಯೂ ಇರುವ ಈ ಕಮಿಟಿಗೆ ಶ್ರೀಗಳಾದ ವಿ. ವಿ. ಶೆಣೈ, ಬಿ. ನರಸಿಂಹ ಕಾಮತ್, ಟಿ. ವಾಸುದೇವ ಪ್ರಭು ಮತ್ತು ಮಗದುಂ ಮಿರಾ ಸಾಹೇಬರವರು ಸದಸ್ಯರಾಗಿ ಸರಕಾರದಿಂದ ನೇಮಿಸಲ್ಪಟ್ಟಿರುತ್ತಾರೆ.

**ಹಿಂದುಸ್ತಾನಿ ಲೇಖನ ಸ್ಪರ್ಧೆ:**— ದಕ್ಷಿಣ ಭಾರತದ ಹಿಂದೀ ಪ್ರಚಾರ ಸಭೆಯವರು ಏರ್ಪಡಿಸಿದ ಹೈಸ್ಕೂಲುಗಳ ಮೊದಲನೆ ಮೂರು ಫಾರಮ್‌ಗಳ ವಿದ್ಯಾರ್ಥಿಗಳೊಳಗಿನ ಈ ಸ್ಪರ್ಧೆಗೆ ಸ್ಥಳೀಯ ಬೋರ್ಡ ಹೈಸ್ಕೂಲಿನಿಂದ ಹಲವು ಮಂದಿ ತಮ್ಮ ಹೆಸರುಗಳನ್ನು ಕೊಟ್ಟಿದ್ದಾರೆ.

## ಪುತ್ತೂರು

**ಸುಬ್ರಹ್ಮಣ್ಯ:**—ಮೈಸೂರು ರಾಜಕುಟುಂಬದ ಶ್ರೀಯುತ ಎಮ್. ಡಿ. ವೆಂಕಟೇಶ ಅರಸರು, ಟಿ. ಬಿ. ನಂಜರಾಜೇ ಅರಸರು ಮತ್ತು ಮಿಸೆಸ್ ಬಾಲರಾಜರಸು ಇವರು ಸಹಾ ಸಪರಿವಾರರಾಗಿ ಯಾತ್ರಾರ್ಥವಾಗಿ, ಶ್ರೀ ಸುಬ್ರಹ್ಮಣ್ಯಕ್ಕೆ ತಾ. ೧೦-೩-೪೦ಕ್ಕೆ ಬಂದವರು ಮೂರು ದಿವಸಗಳಲ್ಲಿ ಶ್ರೀ ಸುಬ್ರಮಣ್ಯ ದೇವರ ಮತ್ತು ಶ್ರೀ ವೇದವ್ಯಾಸ ಸಂಪುಟ ನರಸಿಂಹ ದೇವರ ಸಂದರ್ಶನಾದಿಗಳನ್ನು ಪಡೆದು ಶ್ರೀ ದೇವರಿಗೆ ಮಹಾ ಪೂಜಾ ಉತ್ಸವ ಇತ್ಯಾದಿ ವಿಶೇಷ ಸೇವೆಗಳನ್ನು ನಡೆಸಿ ಹಾಗೂ ಇಲ್ಲಿಯ ಶ್ರೀ ಶ್ರೀ ಪಾದಂಗಳವರ ಸನ್ನಿಧಾನದ, ಸಂದರ್ಶನಾ, ಸಂಭಾಷಣ, ಮತ್ತು ತೀರ್ಥ, ಪ್ರಸಾದ, ಫಲ ಮಂತ್ರಾಕ್ಷತೆ ಮುಂತಾದ್ದು ಸ್ವೀಕರಿಸಿ ಸಂತೋಷಪಟ್ಟರು. ಮತ್ತು ತಾ. ೧೩-೩-೪೦ರಲ್ಲು ಇಲ್ಲಿಗೆ ದಯಮಾಡಿಸಿದ್ದ ಕೀರ್ತನ ಕಂಠೀರವರೆಂದು ಬಿರುದು ಹೊಂದಿದ ಮುಳುಗುಂದ ಶ್ರೀ. ರಾಮ ಶಾಸ್ತ್ರಿಗಳವರ ಹರಿಕತೆಯು ಶ್ರೀ. ಶ್ರೀಗಳವರ ಸನ್ನಿಧಾನದಲ್ಲಿ ಬಹಳ ವಿಜೃಂಭಣೆಯಿಂದ ಜರಗಿಯದೆ.

**'ಪದ್ಮಸಾಲಿಗರ ಸಾಮಾಜಿಕ ಸಂಘ ಮುಂಬಾಯಿ':**— ಈ ಜಿಲ್ಲಾ ಜಿಸಿದ ಸಂಘದ ೧೯೪೦ನೇ ಇಸವಿಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರು:—

ಶ್ರೀಯುತ ಎ. ಬಿ. ಶೆಟ್ಟಿಗಾರ, ಅಧ್ಯಕ್ಷ, ಶ್ರೀ. ಕೆ. ಸಿ. ಶೆಟ್ಟಿಗಾರ, ಕಾರ್ಯದರ್ಶಿ. ಶ್ರೀ. ಜಿ. ಎ. ಶೆಟ್ಟಿಗಾರ, ಕೋಶಾಧಿಕಾರಿ, ಶ್ರೀ. ಆರ್. ಡಿ. ಶೆಟ್ಟಿಗಾರ, ಸದಸ್ಯ, ಶ್ರೀ. ಸಿ. ಟಿ. ಶೆಟ್ಟಿಗಾರ ಸದಸ್ಯ, ಶ್ರೀ. ಸಿ. ಯಸ್. ಶೆಟ್ಟಿಗಾರ, ಸದಸ್ಯ, ಶ್ರೀ. ಜೆ. ಬಿ. ಶೆಟ್ಟಿಗಾರ, ಸದಸ್ಯ, ಶ್ರೀ. ಯಸ್. ಶೆಟ್ಟಿಗಾರ, ಸದಸ್ಯ.

# ಹಿಟ್ಲರ್ ಮುಸಲನಿಗಳ ಭೇಟಿ!

## ಜರ್ಮನ್-ಇಟಲಿ-ರಶ್ಯಾ ಒಪ್ಪಂದವೆ?

## ಬಾಲ್ಕನ್ ರಾಷ್ಟ್ರಗಳ ಬೆದರಿಕೆ — ಫ್ರೆಂಚ್ ಮಂತ್ರಿಮಂಡಳದ ರಾಜಿನಾಮೆ

## ಪ್ರಚಂಡ ವಿಮಾನ ಯುದ್ಧ

★ ಲೋಕ





ಭುಲಾಭಾಯಿ ದೇಸಾಯಿಯವರು

### ಹಿಟ್ಲರ್ — ಮುಸಲನಿಗಳ ಭೇಟಿ!

#### ಶಾಂತಿ ಸೂಚನೆಯೆ?

ಹಿಟ್ಲರ್ ಮುಸಲನಿಗಳು ತಮ್ಮ ರಾಜ್ಯದ ಗಡಿಯಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು. ಮಿತ್ರರಾಷ್ಟ್ರಗಳೊಡನೆ ರಾಜಿಮಾಡಿಕೊಳ್ಳುವುದಿದ್ದರೆ ಯಾವ ಯಾವ ಶರತುಗಳನ್ನು ಮುಂದಿಡಬೇಕೆಂಬ ಬಗ್ಗೆ ಅವರು ಒಪ್ಪಿಗಿರುವುದಾಗಿ ತಿಳಿದಿದೆ. ಇದು ಅಮೇರಿಕದ ಶಾಂತಿದೂತರಾದ ಸಮ್ನರ್ ವೆಲ್ಸರ ಯೂರೋಪ ಪ್ರಯಾಣದ ಫಲಿತಾಂಶವೆಂದೂ ತಿಳಿದಿದೆ.

#### ಫಿನ್‌ಲ್ಯಾಂಡಿನ ಭವಿಷ್ಯ

"ಈ ದೇಶದ ಭವಿಷ್ಯವೇನೂ ಕೆಟ್ಟಿಲ್ಲ; ಅದರ ಸ್ವಾತಂತ್ರ್ಯವು ಮೊದಲಿನಂತಿದೆ. ದೇಶವನ್ನು ಕಾಪಾಡಲು, ಸೈನ್ಯವು ಸಿದ್ಧವಾಗಿದೆ. ಇನ್ನು ಫಿನ್‌ಲ್ಯಾಂಡಿನ ಜೀರ್ಣೋದ್ಧಾರವನ್ನು ನಾವು ಕೈಕೊಳ್ಳಬೇಕು" ಎಂದು ಪ್ರೆಸಿಡೆಂಟ್ ಕೆಲ್ಲೊಯ್‌ಯುವರೂ, "ಯುದ್ಧದಲ್ಲಿ ೨ ಲಕ್ಷ ಮಂದಿ ರಷ್ಯದವರು ಹತರಾದರು; ೧೫೦೦ ರಷ್ಯದ ಟ್ಯಾಂಕುಗಳನ್ನೂ ೭೦೦ ವಿಮಾನಗಳನ್ನೂ ನಾವು ಧ್ವಂಸಮಾಡಿದೆವು" ಎಂದು ಅಲ್ಲಿನ ಫೀಲ್ಡ್ ಮಾರ್ಶಲ್ ಮನ್ನಾರಹೈಮರವರೂ ಪ್ರಕಟಿಸಿರುವರು.

#### ರಷ್ಯ-ಫಿನ್‌ಲ್ಯಾಂಡಿನ ಒಪ್ಪಂದ

ಈ ಕರಾರಿನಿಂದ ಫಿನ್‌ಲ್ಯಾಂಡಿನ ೧½ ಲಕ್ಷ ಮಂದಿ ಪ್ರಜೆಗಳು ಕೆಲ ಭಾಗಗಳಿಂದ ಹೊರಡಬೇಕಾಗಿದೆ. ಹಲವು ಮಂದಿ ಪ್ರಜೆಗಳು ಊರು ಬಿಟ್ಟವರು ಈಗ ಸ್ವಗೃಹಗಳಿಗೆ ಹಿಂದಿರುಗುತ್ತಲಿದ್ದಾರೆ.

#### ಹಿಟ್ಲರನ [illegible]

ಈ [illegible] ಅಂತ್ಯದಲ್ಲಿ [illegible] ಮತ್ತು [illegible] ವಿಚಾರದ ಕುರಿತು ಒಂದು ತೀರ್ಮಾನಕ್ಕೆ ಬರುವಂತೆ ಹಿಟ್ಲರ್ ಪ್ರಬಲವಾದ ಯುದ್ಧಸಿದ್ಧತೆ ಮಾಡುತ್ತಿರುವುದಾಗಿ ಸುದ್ದಿ.

#### ರಷ್ಯಾ-ರುಮೇನಿಯಾ

ಇವೆರಡು ದೇಶಗಳೊಳಗೆ ಒಂದು ಸಂಧಾನದ ಕರಾರು ಆಗಬಹುದೆಂಬ ಪ್ರಬಲ ವಾರ್ತೆ ಹರಡಿದೆ.

#### ಕುತ್ತಿನ್ ಇನ್ನ್‌ರ ಗತಿ

ಫಿನ್‌ಲ್ಯಾಂಡಿನ ಕೈಗೊಂಬೆ ಸರಕಾರದ ಮುಖ್ಯಾಧಿಕಾರಿಯಾದ ಒಟ್ಟೊ ಕುತ್ತಿನ್ ಇನ್ನ್‌ನನ್ನು ಹೆಲ್ಸಿಂಕಿಯಲ್ಲಿ ವಧಿಸಿರುವುದಾಗಿ ಸುದ್ದಿ ಹರಡಿದೆ. ಯುದ್ಧಕ್ಕೆ ಪೂರ್ವದಲ್ಲಿ ಈತನು ಫಿನ್‌ಲ್ಯಾಂಡಿನ ಕುರಿತು ತಪ್ಪು ಗ್ರಹಿಕೆಗೆ ಅವಕಾಶ ಕೊಡುವ ಸುದ್ದಿಗಳನ್ನು ರಷ್ಯದವರಿಗೆ ಕೊಟ್ಟಿದ್ದನೆಂದೂ, ಅದರಿಂದ ಕೋಪಗೊಂಡ ಸ್ಟಾಲಿನನೇ ಈ ವಧೆಗೆ ಅಪ್ಪಣೆ ಮಾಡಿದನೆಂದೂ ಪ್ರಕಟವಾಗಿದೆ.

ಅಬ್ದುಲ್ ಗಫರ್‌ಖಾನ್

#### ಜಪಾನರ ಬೆದರಿಕೆ

ರಷ್ಯದವರ ಕಾರ್ಯಾಧೋರಣೆಯು ಇನ್ನು ಪೂರ್ವ ದೇಶಗಳಲ್ಲಿ ಬಹಳ ಬಿಗಿಯಾಗಬಹುದೆಂದೂ, ಇದರಿಂದ ಜಪಾನಿನವರ ಹಿತಾಸಕ್ತಿಗೆ ಭಂಗಬರಬಹುದೆಂದೂ ಜಪಾನರ ಊಹೆ.

#### ಹಿಟ್ಲರನ ಗರ್ಜನೆ

ಸತ್ತ ಜರ್ಮನ್ ಸೈನಿಕರ ಸ್ಮರಣಾರ್ಥವಾಗಿ ಹಿಟ್ಲರ್ ಭಾಷಣ ಮಾಡುತ್ತ, "ಜರ್ಮನಿಯು ಪಕ್ಕಮಕ್ಕದ ಬಲವುಳ್ಳ ರಾಷ್ಟ್ರಗಳಲ್ಲಿ ಸಂಪಾದಿಸಿದ ಲಾಭವಾಗಿದ್ದು ಅದಕ್ಕೆ ಜಾತಿ, ಮತ, ಕಸಬುಗಳ ಭೇದವಿಲ್ಲ. ಜಗತ್ತು ಅತ್ಯುತ್ಕೃಷ್ಟವಾದ ಜರ್ಮನ್ ಜನಾಂಗವನ್ನು ನಾಶಪಡಿಸಬೇಕೆಂದು ಪ್ರಯತ್ನಿಸುತ್ತದೆ. ಆದರೆ ಅದರ ಅಳಿವು ಉಳಿವನ್ನು ದೇವರೇ ನೋಡಿಕೊಳ್ಳುತಾನೆ. ವಿಜಯಕಾಗಿ ನಾನು ಸಹಿತವಾಗಿ ಹೋಗಿ ಹೋರಾಡಿ ಪ್ರಾಣವನ್ನು ನೀಡಲು ಸಿದ್ಧನಿದ್ದೇನೆ. ಮುಂದಿನ ಜನಾಂಗದ ಜೀವನವನ್ನು ಸುಭದ್ರ ಸ್ವತಂತ್ರವನ್ನಾಗಿ ಮಾಡಲು ನಮ್ಮ ಯೋಧರು ತೋರಿಸುತ್ತಿರುವ ಸ್ವಾರ್ಥತ್ಯಾಗವು ಅಪಾರವಾದದ್ದು. ಈ ಸ್ವಾರ್ಥತ್ಯಾಗಗಳ ಸ್ಮಾರಕವನ್ನು ನಡೆಸುವಲ್ಲಿ ನಮ್ಮ ರಾಷ್ಟ್ರೈಕ್ಯತೆ ಹೆಚ್ಚಿನ ಹಕ್ಕು ಇನ್ನಾರಿಗೂ ಇಲ್ಲ" ಎಂದು ತಿಳಿಸಿದನು.

#### ವಿಮಾನ ಯುದ್ಧ

ಜರ್ಮನ್ ಮತ್ತು ಮಿತ್ರರಾಷ್ಟ್ರಗಳೊಳಗೆ ಇಂದು ವಿಮಾನ ಯುದ್ಧವು ಭರದಿಂದ ಸಾಗುತ್ತಿದೆ.

#### ಫ್ರೆಂಚ್ ಮಂತ್ರಿಮಂಡಲದ ರಾಜಿನಾಮೆ

ಫ್ರೆಂಚ್ ಮಂತ್ರಿಮಂಡಲವು ರಾಜಿನಾಮೆ ಕೊಟ್ಟಿದೆ. ಇದರ ರಹಸ್ಯವು ತಿಳಿದು ಬಂದಿಲ್ಲ.

#### ಶಾಂತಿಸೂಚನೆ ಕೊಡಲಿಲ್ಲ. ಸಮ್ನರ್‌ವೆಲ್ಸರ ಹೇಳಿಕೆ

ಕಳೆದ ಕೆಲದಿನಗಳಿಂದ ಹಿಟ್ಲರನು ಶಾಂತಿ ಸೂಚನೆ ಕೊಟ್ಟಿರುವನೆಂದು ವಾರ್ತೆಯು ಹರಡಿತಷ್ಟೆ? ಅದು ಸುಳ್ಳು ವರ್ತಮಾನವೆಂದೂ ಹಾಗೆ ಹಿಟ್ಲರನು ತನ್ನೊಡನೆ ಸೂಚಿಸಿಲ್ಲವೆಂದೂ ಸಮ್ನರ್ ವೆಲ್ಸರ ಹೇಳಿಕೆಯಾಗಿದೆ.

#### ಬಾಲ್ಕನ್ ರಾಷ್ಟ್ರಗಳ ಹಿಡಿತಕ್ಕಾಗಿ

ಹಿಟ್ಲರ್ ಮುಸಲನಿಗಳ ಭೇಟಿಯ ವಿಷಯವಾಗಿ, ಮುಂದಕ್ಕೆ ಜರ್ಮನ್-ಇಟಲಿ-ರಶ್ಯಗಳು ಒಟ್ಟು ಸೇರಿ ಯೂರೋಪನ್ನು ಹದ ಮಾಡುವ ಯೋಚನೆ ಮಾಡುತ್ತಿವೆಯೆಂದೂ, ಹೆಚ್ಚಾಗಿ ಬಾಲ್ಕನ್‌ಗಳಲ್ಲಿ ಅವುಗಳ ದೃಷ್ಟಿಯಿದೆಯೆಂದೂ ವಾರ್ತೆಯಿದೆ.

#### ಸ್ಕಾಪಾಫ್ಲೋವಿನ ಮೇಲೆ ವಿಮಾನ ಧಾಳಿ

ಇಂಗ್ಲೆಂಡಿನ ನೌಕಾನಿಲಯಗಳಲ್ಲೊಂದಾದ ಸ್ಕಾಪಾಫ್ಲೋ ಎಂಬ ಸ್ಥಳದ ಮೇಲೆ ಈ ಮೊದಲು ಜರ್ಮನ್ ವಿಮಾನಗಳು ಮೂರು ನಾಲ್ಕು ಸಲ ಧಾಳಿ ನಡಿಸಿದ್ದುವು. ಇದೇ ತಾ. ೧೬ರಲ್ಲು ೧೪ ಜರ್ಮನ್ ವಿಮಾನಗಳು ಸ್ಕಾಪಾಫ್ಲೋವಿನ ಮೇಲೇರಿ ಬಂದು ಹಲವು ಬೋಂಬುಗಳನ್ನೆಸೆದವು. ಒಂದು ಯುದ್ಧ ಹಡಗಕ್ಕೆ ಬೋಂಬು ತಾಗಿ ಸ್ವಲ್ಪ ಜಖಂ ಆಗಿರುವುದೆಂದು ಪ್ರಕಟವಾಗಿದೆ. ನೆಲದ ಮೇಲೆಯೂ ಬೋಂಬೆಸೆಯಲ್ಪಟ್ಟು ಒಬ್ಬನು ಕೊಲ್ಲಲ್ಪಟ್ಟು ೭ ಮಂದಿ ಗಾಯಗೊಂಡಿರುವರು. ವಾಜಿತ್ ಸೇತುವೆ ಮತ್ತು ೫ ಗುಡಿಸಲುಗಳಿಗೆ ಹಾನಿಯಾಗಿದೆ. ಒಂದು ಜರ್ಮನ್ ವಿಮಾನವು ನಾಶ ಮಾಡಲ್ಪಟ್ಟಿದೆ. ಇನ್ನು ಕೆಲವಕ್ಕೆ ಜಖಂ ಆಗಿದೆ. ಈ ವಿಮಾನ ಧಾಳಿಯಿಂದ ಕಡಿಮೆಯೆಂದರೆ ೪ ಯುದ್ಧ ಹಡಗ, ೩ ಬೆಟ್ಲ್‌ಶಿಫ್ ಮತ್ತು ಒಂದು ಕ್ರೂಸರ್ ಹಡಗಗಳಿಗೆ ಬಹಳ ಜಖಂ ಆಗಿದೆಯೆಂದು ಜರ್ಮನರ ವಾರ್ತೆ. ಇನ್ನು ಮುಂದೆ ಜರ್ಮನಿಯು ಇಂಗ್ಲೆಂಡಿನ ಮೇಲೆ ಪ್ರಬಲ ವಿಮಾನ ಧಾಳಿ ನಡಿಸುವುದೆಂದು ಜರ್ಮನರ ರೇಡಿಯೋ ಪ್ರಕಟಣೆ.

#### ಮಿ ಸಮ್ನರ್ ವೆಲ್ಸರ ಸಂಚಾರ

ಈ ಮಹನೀಯರು ಲಂಡನಿನ ತಮ್ಮ ಪ್ರವಾಸವನ್ನು ಮುಗಿಸಿ, ರೋಮಿಗೆ ತೆರಳಿರುವರು, ಇಲ್ಲಿ ಪುನಃ ಮುಸಲೋನಿಯವರನ್ನೂ, ಕೌಂಟ್ ಶಿಯಾನೊರವರನ್ನೂ ಕಂಡು ಮಾತಾಡಲಿರುವರು. ಮಾರ್ಚಿಯ ಕೊನೆಯ ವಾರದಲ್ಲಿ ಇವರು ವಾಶಿಂಗ್‌ಟನ್ನಿಗೆ ಮರಳುವರೆಂದು ಸುದ್ದಿ. ಈ ಮಧ್ಯೆ ಪ್ರೆಸಿಡೆಂಟ್ ರೂಜವೆಲ್ಟರಿಗೆ ಬರೆಯುವ ವರದಿಯ ಇವರ ಸಿಫಾರಸುಗಳ ಸ್ವಭಾವವು ಹೇಗಿರಬಹುದೆಂದು ಕೆಲವು ಪತ್ರಿಕಾ ಪ್ರತಿನಿಧಿಗಳು ಊಹಿಸಿದ್ದಾರೆ. ಅದರಲ್ಲಿ ಬ್ರಿಟನೂ ಜರ್ಮನಿಯೂ ಯಾವ ಶನಿಷ್ಠಮತಿಯ ಷರತ್ತುಗಳ ಮೇಲೆ ರಾಜಿಯಾಗಬಹುದೆಂಬುದನ್ನು ವೆಲ್ಸರು ಸೂಚಿಸಬಹುದೆಂಬ ಈ ಹಾರೈಕೆಯು ಇದೆ.

### ಸರ್ ಒಡ್ವಯರ್

#### ಗುಂಡಿನೇಟಿನಿಂದ ಸತ್ತರು

#### ಲಾರ್ಡ್ ಜಟ್ಲೆಂಡರು ಗಾಯಪಡೆದರು

ಸರ್ ಮೈಕೇಲ್ ಒಡ್ವಯರ್‌ರವರನ್ನು ಒಬ್ಬ ಭಾರತೀಯನು ಗುಂಡುಹಾರಿಸಿಕೊಂದರು. ಇಂಡಿಯಾ ಸೆಕ್ರೆಟರಿ ಆಫ್ ಸ್ಟೇಟರಾದ ಲಾರ್ಡ ಜಟ್ಲೆಂಡರನ್ನು ಗಾಯಪಡಿಸಿದರು. ಜಟ್ಲೆಂಡರಿಗೆ ಸ್ವಲ್ಪ ಗುಂಡಿನ ಸ್ಪರ್ಶವಾಗಿ ಗಾಯವಾಯಿತು.

ಇವರಲ್ಲದೆ ಪಂಜಾಬಿನ ಮಾಜಿ ಲೆಫ್ಟಿನೆಂಟ್ ಗವರ್ನರರಾದ ಸರ್ ಲೂಯಿ ಡೇನ್‌ರವರ ಕೋಳಿಗೆ ಏಟು ಬಿದ್ದು ಅದು ಮುರಿಯಿತು. ಬೊಂಬಾಯಿಯ ಮಾಜಿ ಗವರ್ನರರಾದ ಲಾರ್ಡ್ ಲ್ಯಾಮಿಂಗ್‌ಟನ್‌ರವರು ಕೂಡ ಕೋಳಿನಲ್ಲಿ ಗಾಯಪಡೆದರು. ಲಂಡನ್ನಿನ ಕ್ಯಾಕ್ಸ್‌ಟನ್ ಹಾಲ್‌ನಲ್ಲಿ ಭಾರಿ ಸಭೆ ನಡೆದಿದ್ದಾಗಲೇ ಗುಂಡಿನೇಟಿನ ಪ್ರಕರಣ ನಡೆದುದು.

ಒಡ್ವಾಯರು [illegible] ನರರಾಗಿದ್ದಾಗ [illegible] ದಲ್ಲಿ ತನ್ನ ಬಂಧು[illegible] ಪ್ರತೀಕಾರಕ್ಕಾಗಿ [illegible] ದರೆಂದು ತಿಳಿಯು[illegible] ಪ್ರಾಯದ ಎಂಜಿನಿ[illegible] ಮರಣಾ[illegible] ನಿಶ್ಚಯ[illegible] ಸಮಯ ಮಂದಸ್ಮಿ[illegible]

#### ಅಪರಾಧಿ[illegible]

ಸರ್ ಮೈಕೇಲ[illegible] ರನ್ನು ಗಾಯಪಡಿಸಿ[illegible] ಹೆಸರು 'ಮಹಮ್ಮ[illegible] ಎಂದೂ, 'ಮೋಹ[illegible] 'ಉದ್ದಾಮ್ ಸಿಂಗ್' [illegible] ರೀತಿಯಲ್ಲಿ ಪ್ರಕಟ[illegible]

ರಾಮಗರದಲ್ಲಿ [illegible]

ರಾಮಗರದಲ್ಲಿ [illegible] ಪಕ್ಷದವರು ಒಪ್ಪಂ[illegible] ನ್ನು ಜರಗಿಸುವರು. [illegible] ಅಧ್ಯಕ್ಷರಾಗಿ ಆರಿಸ[illegible] ಸ್ವಾಗತಾಧ್ಯಕ್ಷರು [illegible] ದತರ ಸ್ವತಿಯವರು [illegible] ಗರದ ೩ 'ಸಮ[illegible] ಅಪೂರ್ವ ಸ್ವಾಗತ[illegible]

ರಾಜಗೋ[illegible]

#### ಕಾಂಗ್ರೆಸಿನ[illegible]

ಬಾಬೂ ಸೊ[illegible] ಮತ್ತು ಬಾಬು ಕಾ[illegible] ಇವರನ್ನು ಹಿಂದೂ [illegible] ಕಾಯ್ದೆಯನ್ವಯ [illegible]

ಬಂಗಾಲದ ಪ್ರ[illegible] ಧುರೀಣರಲ್ಲೊ[illegible] ಅಶ್ರುವದ್ದೀನ [illegible] ಹಿಂದೂಸ್ಥಾನದ [illegible] ನ್ನಯ ಸೆರೆ ಹಿಡಿಯ[illegible]

ಶ್ರೀ. ಮುಖು[illegible]

# ★ ಮೌಲಾನಾ ಅಜಾದರ ಅಧ್ಯಕ್ಷ ಭಾಷಣ ★

## ಹಿಂದೂ-ಮುಸ್ಲಿಂ ಐಕ್ಯಸಂದೇಶ

### ಗಾಂಧಿಜಿಯವರಲ್ಲಿ ವಿಶ್ವಾಸವಿಡಿರಿ

"ನಮ್ಮ ಹೋರಾಟವು ಯಶಸ್ವಿಯಾಗಬೇಕಾಗಿದ್ದರೆ ನಾವೆಲ್ಲರೂ ಒಕ್ಕಟ್ಟಿನಿಂದ ಮತ್ತು ಶಿಸ್ತಿನಿಂದ ನಡೆಯಬೇಕು. ಮಹಾತ್ಮಾಗಾಂಧಿಯವರ ನಾಯಕತ್ವದಲ್ಲಿ ಸಂಪೂರ್ಣ ವಿಶ್ವಾಸವನ್ನಿಡಬೇಕು. ನಮ್ಮ ಚಳವಳಿಯು ಇಂದು ಇಷ್ಟು ಪ್ರಬಲವಾಗಿರುವದಕ್ಕೆ ಅವರ ನಾಯಕತ್ವವೇ ಕಾರಣ. ಮುಂದಾದರೂ ಅವರ ನಾಯಕತ್ವದಿಂದಲೇ ನಮಗೆ ಜಯಸಿಗುವದು"

ಎಂದು ಮೌಲಾನಾ ಅಬ್ದುಲ್ ಕಲಂ ಅಝಾದರು ರಾಮಘರ ಕಾಂಗ್ರೆಸ ಅಧ್ಯಕ್ಷಸ್ಥಾನದಿಂದ ಭಾಷಣಮಾಡುತ್ತಾ ಹೇಳಿದರು.

ಮೊದಲು ಅವರು ಹಿಂದೀಯರ ಸ್ವಾತಂತ್ರ್ಯ ಸಂಗ್ರಾಮವು ಹೇಗೆ ಅವಿಶ್ರಾಂತವಾಗಿ ನಡೆಯುತ್ತಿದೆಯೆಂಬುದನ್ನು ವಿವರಿಸಿದರು. ಇಂದಿನ ನಿಜವಾದ ಪ್ರಶ್ನೆಯೇನೆಂಬುದನ್ನು ತಿಳಿಸಿದರು. ಅಂತರ್‌ರಾಷ್ಟ್ರೀಯ ಪರಿಸ್ಥಿತಿಯು ಎಷ್ಟು ಕ್ಲಿಷ್ಟವಾಗಿದೆಯೆಂಬುದನ್ನು ವಿವರಿಸಿದರು. ಕಾಂಗ್ರೆಸಿನ ಬೇಡಿಕೆಯ ಮಹತ್ವವನ್ನೂ ಅಲ್ಪಸಂಖ್ಯಾಕರ ಸಮಸ್ಯೆಯ ರಹಸ್ಯವನ್ನೂ ತಿಳಿಸಿದರು. ಕೊನೆಗೆ ಹಿಂದೂಸ್ಥಾನದಲ್ಲಿರುವ ಮುಸಲ್ಮಾನರು ಹಿಂದೀಯರೇ ಎಂಬುದನ್ನು ಪ್ರತಿಪಾದಿಸಿ ಅವರು ಹಿಂದುಸ್ಥಾನದ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ಸಂಪೂರ್ಣ ಭಾಗ ತೆಗೆದುಕೊಳ್ಳಬೇಕೆಂದೂ ವಿನಂತಿ ಮಾಡಿಕೊಂಡರು.

ಅಝಾದರ ಭಾಷಣ ವಿವರವು ಕೆಳಗಿನಂತಿದೆ —

'ಈಗ ಕ್ಷಣಕ್ಷಣಕ್ಕೊಂದು ಮಹತ್ವದ ಘಟನೆಗಳಾಗುತ್ತಿವೆ. ಜಗತ್ತು ಭರದಿಂದ ಬದಲಾಗುತ್ತಿದೆ. ಈಗ ನಾವು ಹಿಂದಿನಂತೆ ವಿಚಾರ ಮಾಡಿದರೆ ನಡೆಯದು. ನಾನಾ ಬಗೆಯ ಪರಿಸ್ಥಿತಿಗೆ ನಾವು ಒಳಗಾದೆವು. ನಮ್ಮ ಪ್ರವಾಸವು ಬಹಳ ದೊಡ್ಡದಿತ್ತು. ಆದ್ದರಿಂದ ಅಲ್ಲಲ್ಲಿ ವಿಶ್ರಾಂತಿ ತೆಗೆದುಕೊಳ್ಳಬೇಕಾಯಿತು. ಆದರೆ ಪ್ರವಾಸವನ್ನು ಎಂದಿಗೂ ನಾವು ನಿಲ್ಲಿಸಲಿಲ್ಲ. ಅನೇಕ ಪರೀಕ್ಷೆಗಳಿಗೆ ನಾವು ಸಿಗಬೇಕಾಯಿತು. ನಮ್ಮ ದೃಷ್ಟಿಯು ಮಾತ್ರ ಯಾವಾಗಲೂ ನಮ್ಮ ಧ್ಯೇಯದ ಕಡೆಗೇ ಇತ್ತು. ನಮ್ಮ ಹಾದಿಯು ಸುಗಮವಾಗಿರಲಿಲ್ಲ. ಹೆಜ್ಜೆ ಹೆಜ್ಜೆಗೂ ಹೊಸ ಹೊಸ ಕಷ್ಟಗಳು ಬರುತ್ತಿದ್ದವು. ನಾವು ಅಪೇಕ್ಷಿಸಿದಷ್ಟು ಜೋರಾಗಿ ಮುಂದಡಿಯಿಡಲು ನಮಗೆ ಸಾಧ್ಯವಾಗದಿರಬಹುದು. ಆದರೆ ಮುಂದಡಿಯಿಡುವದನ್ನು ನಾವು ಎಂದಿಗೂ ನಿಲ್ಲಿಸಿಲ್ಲ. ೧೯೨೦ರಲ್ಲಿ ನಮ್ಮ ಗುರಿಯು ಬಹಳ ದೂರದಲ್ಲಿತ್ತು. ಹಾದಿಯೂ ಸರಿಯಾಗಿ ಕಾಣುತ್ತಿರಲಿಲ್ಲ. ಆದರೆ ಇಂದು ಸ್ವಲ್ಪ ಕಣ್ತೆರೆದು ನೋಡಿರಿ. ಹಾದಿಯು ನಿಚ್ಚಳವಾಗಿ ಕಾಣಿಸುತ್ತಿದೆ. ಇಷ್ಟೇ ಅಲ್ಲ ಗುರಿಯೂ ಬಹಳ ಸಮೀಪಿಸಿದೆ. ಗುರಿಯು ಸಮೀಪಿಸಿದಂತೆ ಹೋರಾಟವು ಜೋರಾಗಹತ್ತಿದೆ. ಹಿಂದಿನ ಹೋರಾಟದ ಫಲವಾಗಿ ನಾವು ಇಂದು ನಮ್ಮ ಗುರಿಯ ಹತ್ತಿರಕ್ಕೆ ಬಂದಂತೆ ಕಷ್ಟಗಳೂ ಹೆಚ್ಚಾಗಿವೆ. ನಮ್ಮ ಮುಂದಿನ ಹೆಜ್ಜೆಯಿಂದ, ಇಡೀ ರಾಷ್ಟ್ರದ ಭವಿತವ್ಯವೇ ಬದಲಾಗುವದು. ಅಡಿಯು ಮುಂದಿಡೆ ಸ್ವರ್ಗ, ಅಡಿಯು ಹಿಂದಿಡೆ ನರಕ' ಎಂಬಂತಹ ಪರಿಸ್ಥಿತಿ ನಮಗೆ ಬಂದಿದೆ.

### ಇಂದಿನ ಮುಖ್ಯ ಪ್ರಶ್ನೆ

ಅಂತರ್‌ರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ಕಾಂಗ್ರೆಸ್ಸಿನ ಧೋರಣವನ್ನು ತಿಳಿಸುವ ಒಂದು ಮಹತ್ವದ ಠರಾವು ೧೯೩೬ರಲ್ಲಿ ಲಖನೌದಲ್ಲಿ ಪಾಸಾಯಿತು. ಆ ಬಳಿಕ ಪ್ರತಿಯೊಂದು ಅಧಿವೇಶನದಲ್ಲಿಯೂ ಕಾಂಗ್ರೆಸ್ಸು ಅಂತರ್‌ರಾಷ್ಟ್ರೀಯ ಪರಿಸ್ಥಿತಿಯನ್ನು ವಿಚಾರಿಸುತ್ತಲಿದ್ದು ತನ್ನ ಧೋರಣವನ್ನು ಸ್ಪಷ್ಟಪಡಿಸುತ್ತಿತ್ತು. ಸದ್ಯಕ್ಕೆ ನಾವು ಅಸಹಾಯರಿದ್ದರೂ ಜಗತ್ತನ್ನು ಬಿಟ್ಟಿರಲು ಸಾಧ್ಯವಿಲ್ಲವೆಂಬ ಮಾತನ್ನು ಸ್ಪಷ್ಟ ಮಾಡಿದೆವು. ಮುಂದಡಿಯಿಡುವದರ ಜೊತೆಗೆ ನಾವು ಜಗತ್ತಿನ ಪರಿಸ್ಥಿತಿಯನ್ನು ನೋಡಿ ಅದಕ್ಕನುಗುಣವಾಗಿ ನಡೆಯಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹಿಂದುಸ್ಥಾನವು ಒಂದು ಮೂಲೆಯಲ್ಲಿ ಕುಳಿತುಕೊಂಡು ತನ್ನ ಮಂತಿಗೆ ತಾಸಿರವದು ಉಚಿತ ಸಾಧ್ಯವಿಲ್ಲ. ಹೊರಗಿನ ದೇಶಗಳಲ್ಲಿ ನಡೆದ ಘಟನೆಗಳು ಹಿಂದುಸ್ಥಾನದ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದವು.

### ಬ್ರಿಟಿಶ್ ಸಾಮ್ರಾಜ್ಯಶಾಹೀ ನೀತಿ

'ಫಾಸಿಝಂ ಮತ್ತು ನಾಝಿಝಂಗಳಿಂದ ಆಗುವ ಹಾನಿಯು ನಮಗೆ ಚನ್ನಾಗಿ ಗೊತ್ತಿದೆ. ಇಂದು ಕಂಡುಬರುತ್ತಿರುವ ಫಾಸಿಝಂ ಮೊದಲಾದ ಚಳವಳಿಗಳಲ್ಲೂ ಈ ಹಳೆಯ ವಿನಾಶಕಾರಿ ಶಕ್ತಿಯಿಂದಲೇ ಮಾನವ ಜನಾಂಗಕ್ಕೆ ಹೆಚ್ಚು ಹಾನಿಯಾಗುತ್ತದೆಂದು ನನ್ನ ಅಭಿಪ್ರಾಯ. ಇದೇ ಬ್ರಿಟಿಶ ಸಾಮ್ರಾಜ್ಯಶಾಹಿಯನ್ನು ಫಾಸಿಝಂ ಮೊದಲಾದ ಚಳವಳಿಗಳ ಪ್ರತ್ಯಕ್ಷ ಅನುಭವವು ನಮಗಿಲ್ಲ. ಆದರೆ ಬ್ರಿಟಿಶ ಸಾಮ್ರಾಜ್ಯಶಾಹಿಯು ಹೇಗಿರುತ್ತದೆಂಬುದು ನಮಗೆಲ್ಲ ಪ್ರತ್ಯಕ್ಷ ಅನುಭವದಿಂದ ಗೊತ್ತಾಗಿದೆ. ನಾಜೀವಾದದ ಏಳ್ಗೆಯನ್ನು ಹಿಂದುಸ್ಥಾನವು ಎಂದಿಗೂ ಸಹಿಸಲಾರದು; ಆದರೆ ಅದಕ್ಕಿಂತ ಹೆಚ್ಚಾಗಿ ಬ್ರಿಟಿಶ ಸಾಮ್ರಾಜ್ಯಶಾಹಿಯನ್ನೂ ಅದು ಸಹಿಸಲಾರದು.

### ಯುದ್ಧ ಸುರುವಾದಾಗ

'೧೯೩೫ನೇ ಹಿಂದೀ ರಾಜ್ಯಘಟನೆಯನ್ನು ಒತ್ತಾಯದಿಂದ ಹೇರಲಾಯಿತೆಂಬುದು ನಿಮಗೆಲ್ಲ ಗೊತ್ತಿದೆ. ಈ ರಾಜ್ಯಘಟನೆಯನ್ನು ಸದೆಬಡೆಯಬೇಕೆಂದು ಕಾಂಗ್ರೆಸ್ಸು ನಿಶ್ಚಯಿಸಿತು. ಆದರೆ ಆಗಲೇ ಹೋರಾಟ ಮಾಡಲು ಅದು ಒಪ್ಪಲಿಲ್ಲ. ೧೯೧೪ ವರುಷಗಳ ಹಿಂದೆ ವರ್ತಿಸಿದಂತೆಯೇ ಈಗಲೂ ಬ್ರಿಟಿಷ್ ಸಾಮ್ರಾಜ್ಯಶಾಹಿಯು ವರ್ತಿಸಿತು. ತನ್ನ ಮನಸ್ಸಿಗೆ ಬಂದಂತೆ ನಡೆಯಿತು, ಮತ್ತು ಹಿಂದುಸ್ಥಾನಕ್ಕೆ ಹೇಳದೆ, ಅದರ ಅಭಿಪ್ರಾಯವನ್ನು ಕೇಳದೆ, ಹಿಂದುಸ್ಥಾನವೂ ಯುದ್ಧದಲ್ಲಿ ಬಿದ್ದಿದೆಯೆಂದು ಸಾರಿತು.

ಸಾಮ್ರಾಜ್ಯದ ಬೇರೆ ಬೇರೆ ದೇಶಗಳ ಕಾನಡಾ, ಆಸ್ಟ್ರೇಲಿಯಾ, ನ್ಯೂಝಿಲೆಂಡ ಮಂತಾದ ದೇಶಗಳ ಅಸೆಂಬ್ಲಿಯಲ್ಲಿ ಈ ವಿಷಯವನ್ನು ದೀರ್ಘವಾಗಿ ಚರ್ಚಿಸಿ ಅವು ಸ್ವತಃ ನಿರ್ಣಯಗಳನ್ನು ಮಾಡಿವೆ. ಅವುಗಳಿಗೆ ಯಾರೂ ಒತ್ತಾಯ ಮಾಡಲಿಲ್ಲ. ಇಷ್ಟೇ ಅಲ್ಲ, ಐರ್ಲಂಡ ದೇಶವು ತಟಸ್ಥ ಉಳಿದಾಗ ಇಂಗ್ಲಂಡಿನಲ್ಲಿ ಒಬ್ಬರೂ ತುಟಿ ಎರಡು ಮಾಡಲಿಲ್ಲ.

ಆದರೆ ಹಿಂದುಸ್ಥಾನದ ಗತಿಯೇನು? ಸಾಮ್ರಾಜ್ಯದಲ್ಲಿ ಅದರ ಸ್ಥಾನವೇನು? ಯುದ್ಧ ಪ್ರಾರಂಭವಾದಾಗ ಬ್ರಿಟಿಷ ಸರಕಾರವು ಹೇಗೆ ನಡೆದುಕೊಂಡಿತೆಂಬುದನ್ನು ಸ್ವಲ್ಪ ವಿಚಾರಮಾಡಿರಿ. ಬ್ರಿಟಿಷ ಸಾಮ್ರಾಜ್ಯಶಾಹಿಯ ನಿಜವಾದ ಸ್ವರೂಪವು ಹೇಗಿದೆಯೆಂಬುದು ಇನ್ನೂ ಚನ್ನಾಗಿ ತಿಳಿಯುವುದು.

ಮಹಾಯುದ್ಧವು ಮುಗಿದ ಮೇಲೆ ಇಂಗ್ಲಂಡ ಫ್ರಾನ್ಸುಗಳು ವಿಜಯೋನ್ಮಾದದಿಂದ ಉಬ್ಬಿ ಬಂದು ವಿಚಿತ್ರ ಮಾರ್ಗವನ್ನವಲಂಬಿಸಿದವು. ಇದರಿಂದ ಪರಿಣಾಮ ನೆಟ್ಟಗಾಗಲಿಲ್ಲ. ಈ ಧೋರಣವನ್ನು ಎದುರಿಸಲು ಇಟಲಿಯಲ್ಲಿ ಫಾಸಿಝಂ, ಜರ್ಮನಿಯಲ್ಲಿ ನಾಝಿಝಂಗಳ ಅವತಾರವಾಯಿತು. ಸರ್ವಾಧಿಕಾರಿಗಳ ಪ್ರಾಬಲ್ಯವು ಹೆಚ್ಚಾಯಿತು. ಜಗತ್ತಿನ ಶಾಂತಿ–ಸ್ವಾತಂತ್ರ್ಯಗಳಿಗೆ ಧಕ್ಕೆ ತಗಲುವ ಹೊತ್ತು ಬಂದಿತು. ಬಡಿದಾಟಗಳು ಪ್ರಾರಂಭವಾದವು. ಚೆಂಬರಲೀನರ ಸರಕಾರವು ಇದನ್ನೆಲ್ಲ ಮೂರು ವರ್ಷಗಳಿಂದ ನೋಡುತ್ತ ಬಂದದುವದು. ಇಷ್ಟೇ ಅಲ್ಲ, ಫ್ಯಾಸಿಸ್ಟ ಮತ್ತು ನಾಝಿ ಚಳವಳಿಗಳಿಗೆ ಅದು ಪ್ರೋತ್ಸಾಹ ಕೊಡುತ್ತ ಬಂದಿರುವದು. ಅಬಿಸೀನಿಯ, ಸ್ಪೇನ, ಆಸ್ಟ್ರೀಯ, ಝೆಕೋಸ್ಲೋವೇಕಿಯ ಮೊದಲಾದ ದೇಶಗಳು ಒಂದೊಂದೇ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡವು. ಈ ಬಗೆಯ ಪರಿಸ್ಥಿತಿಗೆ ಬ್ರಿಟಿಷ್ ಸರಕಾರದ ಚಂಚಲ ಮನೋವೃತ್ತಿಯೇ ಕಾರಣವೆಂದು ಹೇಳಬಹುದು. ಕೊನೆಗೆ ನಿರ್ವಾಹವಿಲ್ಲದೆ ಬ್ರಿಟನ್ ಯುದ್ಧದಲ್ಲಿ ಬಿದ್ದಿತು.

### ಕಾಂಗ್ರೆಸಿನ ಬೇಡಿಕೆ

ಹಿಂದುಸ್ಥಾನವು ಯುದ್ಧದಲ್ಲಿ ಭಾಗವಹಿಸಬೇಕಾಗಿದ್ದರೆ ಈ ಯುದ್ಧದ ಉದ್ದೇಶವನ್ನು ತಿಳಿಸಬೇಕೆಂದು ಕಾಂಗ್ರೆಸು ಬ್ರಿಟಿಷ ಸರಕಾರವನ್ನು ಕೇಳಿತು. ಅದು ಹೀಗೆ ಕೇಳಿದ್ದು ಯೋಗ್ಯವೆಂದು ಇಡೀ ಜಗತ್ತೇ ಅನ್ನುತ್ತಿದೆ. ಈ ಘೋರ ಯುದ್ಧದಲ್ಲಿ ನಾವು ಭಾಗವಹಿಸಬೇಕಾಗಿದ್ದರೆ, ಇದು ಏಕೆ ನಡೆಯುತ್ತಿದೆ ಎಂಬುದನ್ನು ಕೇಳಬೇಡವೆ? ಈ ಯುದ್ಧದಿಂದ ಮುಂದೆ ಏನಾಗುತ್ತದೆಂಬುದನ್ನು ತಿಳಿದುಕೊಳ್ಳುವ ಅಧಿಕಾರವು ನಮಗಿಲ್ಲವೆ?

### ಈ ಯುದ್ಧವೇಕೆ?

ವರ್ಕಿಂಗ ಕಮಿಟಿಯ ಈ ಬೇಡಿಕೆಯು ಹಿಂದುಸ್ಥಾನದ ಅಧುನಿಕ ಇತಿಹಾಸದಲ್ಲಿ ಒಂದು ಮಹತ್ವದ ಸಂಗತಿಯಾಗಿದೆ. ಶಸ್ತ್ರಬಲದಿಂದ ಮೈಮರೆತವರು ಮಾತ್ರ ಇದನ್ನು ಉಪೇಕ್ಷಿಸುವರು. ಉಳಿದವರು ಖಂಡಿತ ಇದನ್ನು ಮಾನ್ಯಮಾಡುವರು. ಆ ಬೇಡಿಕೆ ಕೇವಲ ಹಿಂದುಸ್ಥಾನದ ಸಲುವಾಗಿ ಇರಲಿಲ್ಲ. ಅನ್ಯಾಯ ಪರಂಪರೆಯಿಂದ ಬಂದ ಮಾನವ ಜನಾಂಗದ ಸಲುವಾಗಿ ಇತ್ತು. ನಿರಾಶೆಗೆ ಒಳಗಾಗಿ ನಿರ್ವಿಣ್ಣರಾದ ಮಾನವ ಕೋಟಿಯ ಸಲುವಾಗಿ ಇತ್ತು. ಈಗ ಮಹಾಯುದ್ಧವು ಸುರುವಾಗಿದೆ. ರಕ್ತದ ಕಾಲುವೆ ಹರಿಯುತ್ತಿದೆ, ದೇಶಗಳೆಲ್ಲ ಉರಿಯುತ್ತಿವೆ. ಜನರು ಒಬ್ಬೊಬ್ಬರೇ ಅದರಲ್ಲಿ ಧುಮುಕುತ್ತಿದ್ದಾರೆ. ಇಂತಹ ಸಮಯದಲ್ಲಿ ಈ ಯುದ್ಧವೇಕೆ? ಈ ಅನ್ಯಾಯವೇಕೆ? ಮತ್ತು ಅನರ್ಥವೇಕೆ? ಎಂಬುದನ್ನು ಸಹ ನಾವು ಕೇಳಬೇಡವೆ? ನಾವೇಕೆ ಈ ರಣಕುಂಡದಲ್ಲಿ ಬೀಳಬೇಕೆಂಬುದನ್ನು ಸಹ ತಿಳಿದುಕೊಳ್ಳಬೇಡವೆ?

### ಬ್ರಿಟಿಷ್ ಸರಕಾರದ ಉತ್ತರ

ಕಾಂಗ್ರೆಸ್ಸು ಮುಂದೆ ಮಾಡಿದ ಈ ಬೇಡಿಕೆಯ ಬಗ್ಗೆ ಬ್ರಿಟಿಷ್ ಸರಕಾರದ ಪರವಾಗಿ ಇಂಗ್ಲಂಡಿನಲ್ಲಿ ಮತ್ತು ಹಿಂದುಸ್ಥಾನದಲ್ಲಿ ಹಲವು ಪ್ರಕಟಣೆಗಳು ಹೊರಡಿಸಲ್ಪಟ್ಟವು. ಹಿಂದುಸ್ಥಾನ ಸರಕಾರದ ಅಧಿಕೃತ ಸಾಹಿತ್ಯದ ಲಕ್ಷಣಗಳೆನ್ನು ಮತ್ತು ವಿಚಿತ್ರ ಮತ್ತು ಬೇಸರ ಬರುವಂತಹ ಬರಹ ಪದ್ಧತಿಯು ಮೊದಲಾದವನ್ನೂ ಅವು ಒಳಗೊಂಡಿವೆ.

### ಅಸಹಕಾರದ ಪ್ರಥಮ ಹೆಜ್ಜೆ

ಅನಂತರ ಅಧ್ಯಕ್ಷರು ಕಾಂಗ್ರೆಸ ವರ್ಕಿಂಗ್ ಕಮಿಟಿಯು ಜಾಹೀರುಮಾಡಿದ ನಿರ್ಣಯ ಕಾಂಗ್ರೆಸ ಮಂತ್ರಿಮಂಡಲಗಳು ರಾಜೀನಾಮೆ ಕೊಟ್ಟಿದ್ದು ಆ ಮೇಲೆ ವ್ಹಾಯಸರಾಯರು ಹೊರಡಿಸಿದ ಪ್ರಕಟಣೆ ಭಾರತ ಮಂತ್ರಿಗಳು ಮಾಡಿದ ಭಾಷಣ ಮುಂತಾದವುಗಳೆನ್ನೆಲ್ಲ ವಿವ

ಮತ್ತು ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯ [illegible] ಯುದ್ಧ [illegible] ಸಾಂಪ್ರದಾಯಿಕತ್ವದ್ದರೂ, ಅದು ಯುರೋಪಿನ ಮಟ್ಟಿಗೆ ಮಾತ್ರ ಅನ್ವಯಿಸುವದೆ? ಎಂದರೂ.

"ಯುದ್ಧದಲ್ಲಿ ಭಾಗವಹಿಸಿ ಬ್ರಿಟಿಷ ಸಾಮ್ರಾಜ್ಯತ್ವವನ್ನು ಹೆಚ್ಚು ಬಲಗೊಳಿಸಿ ನಮ್ಮ ದಾಸ್ಯವನ್ನು ಮತ್ತಷ್ಟು ಭಿಗಿಮಾಡಿಕೊಳ್ಳಲು ನಾವು ಸಿದ್ಧರಿಲ್ಲ. ನಾವು ಮುಂದೆಯೇ ಹೋಗತಕ್ಕವರು. ಮುಂದೆ ಹೆಜ್ಜೆಯನ್ನಿಡಬೇಕೆಂಬ ನನ್ನ ಮಾತಿಗೆ ತಾವು ಬೆಂಬಲ ಕೊಡುವಿರಾಗಿ ನನಗೆ ನಿಃಸಂದೇಹವಾಗಿ ತೋರುತ್ತದೆ.

"ಯುದ್ಧವು ಸುರುವಾದಂದಿನಿಂದ ಬ್ರಿಟಿಷರು ಸಾಮ್ರಾಜ್ಯಕತ್ವವನ್ನು ಬಿಟ್ಟುಗೊಟ್ಟಿರುವರೆಂದೂ ಶಾಂತಿ ಮತ್ತು ನ್ಯಾಯಕ್ಕಾಗಿ ತಾವು ಯುದ್ಧ ಹೂಡಿರುವದಾಗಿಯೂ ಹೇಳುತ್ತಿರುವರು. ಬ್ರಿಟಿಷರು ಈ ರೀತಿ ಸಾರಿದರೂ ಸಾಮ್ರಾಜ್ಯತತ್ವವು ಇನ್ನೂ ಸ್ಥಿರವಾಗಿಯೇ ಉಳಿದಿದೆ. ನ್ಯಾಯ ಮತ್ತು ಶಾಂತಿ ಪ್ರಸ್ಥಾಪನೆಯ ಮಾರ್ಗದಲ್ಲಿ ಅದು ಮೊದಲಿನಂತೆಯೇ ಅಡ್ಡನಿಂತಿದೆ.

### ಅಲ್ಪ ಸಂಖ್ಯಾಕ ಸಮಸ್ಯೆ

"ಕಾಂಗ್ರೆಸ್ಸಿನ ಈ ಬೇಡಿಕೆಗೆ ಬಹುತರ ಯಾವ ಪಂಗಡಗಳೂ ಆಕ್ಷೇಪಿಸಲಾರವು. ಕಾಂಗ್ರೆಸ್ಸಿನ ಈ ರಾಜಕೀಯ ಹೋರಾಟದಲ್ಲಿ ಬೀಳಲು ಇಲ್ಲವೆ ಅದರಷ್ಟೇ ಮುಂದುವರಿಯಲು ಸಿದ್ಧವಿಲ್ಲದ ಪಂಗಡಗಳು ಭಾರತದಲ್ಲಿವೆಯೆಂಬುದು ನಮಗೆಗೊತ್ತಿದೆ. ಆದರೆ ಹಿಂದೂಸ್ಥಾನಕ್ಕೆ ಸ್ವತಂತ್ರವಾಗುವ ಹಕ್ಕು ಇದೆ. ಸ್ವರಾಜ್ಯವು ಹಿಂದುಸ್ಥಾನದ ಜನ್ಮಸಿದ್ಧ ಹಕ್ಕು ಎಂಬ ಬಗ್ಗೆ ಜಾಗೃತ ಮತ್ತು ಆತುರ ಭಾರತವು ಬಹಳ ಮುಂದೆ ಹೋಗಿದ್ದು ಅವರೀ ಬೇಡಿಕೆಯನ್ನು ಯಾರೂ ವಿರೋಧಿಸಲಾರರು.

"ಕಳೆದ ನೂರೈವತ್ತು ವರ್ಷಗಳಿಂದ ಬ್ರಿಟಿಷ್ ಸಾಮ್ರಾಜ್ಯತತ್ವವು ಭೇದನೀತಿಯಿಂದಲೇ ಇಲ್ಲಿ ರಾಜ್ಯವಾಳಿದೆ. ಹಿಂದುಸ್ಥಾನವು ದಾಸ್ಯ ಪಂಕದಲ್ಲಿ ಮುಳುಗಲು ನಮ್ಮಲ್ಲಿಯ ಈ ಪಂಗಡಗಳೇ ಕಾರಣವಾದುವು. ಯಾವದೊಂದು ಪರಕೀಯ ಸರಕಾರವು ದಾಸ್ಯರಾಷ್ಟ್ರದ ಜನತೆಯಲ್ಲಿ ಐಕ್ಯವನ್ನುಂಟುಮಾಡಲು ಎಂದಿಗೂ ಪ್ರೋತ್ಸಾಹಿಸುವದಿಲ್ಲ. ಸಾಮ್ರಾಜ್ಯತ್ವವು ನಷ್ಟವಾಗಿದೆಯೆಂದು ಎಷ್ಟೇ ಹೇಳುತ್ತ ಬಂದರೂ ಅದಿನ್ನೂ ಊರ್ಜಿತ ಸ್ಥಿತಿಯಲ್ಲಿಯೇ ಇದೆ. ಅದರ ಕೊನೆ ಇನ್ನೂ ಮಾಡಬೇಕಾಗಿದೆ.

"ಜಾತೀಯ ಸಮಸ್ಯೆ ನಮ್ಮಲ್ಲಿದ್ದುದು ನಿಃಸಂಶಯ. ನಾವು ಮುಂದೆ ಹೆಜ್ಜೆಯನ್ನು ಹಾಕಬೇಕಾದರೆ ಅದನ್ನು ಗಮನಿಸುವುದು ಅತ್ಯವಶ್ಯ. ಹಿಂದುಸ್ಥಾನದ ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ವಿರೋಧಕವಾದ ಒಂದು ಶಸ್ತ್ರದಂತೆ ಅದನ್ನುಪಯೋಗಿಸಬೇಕೆಂದು ಖಂಡಿತವಾಗಿ ಅದರ ಅರ್ಥವಾಗುವುದಿಲ್ಲ.

### ಕಾಂಗ್ರೆಸ್ಸಿನ ಧೋರಣವೇನು?

"ಹಿಂದುಸ್ಥಾನವು ಒಂದು ರಾಷ್ಟ್ರವೆಂದು ಕಾಂಗ್ರೆಸ್ಸು ಮೊದಲಿನಿಂದಲೂ ತಿಳಿಯುತ್ತದೆ, ಮತ್ತು ಈ ಇಡೀ ರಾಷ್ಟ್ರದ ಹಿತಸಂಬಂಧಗಳನ್ನು ರಕ್ಷಿಸಲು ಸರ್ವ ರೀತಿಯಿಂದಲೂ ಪ್ರಯತ್ನಿಸುತ್ತದೆ.

(೧) ಹಿಂದುಸ್ಥಾನಕ್ಕಾಗಿ ಸ್ವೀಕರಿಸುವ ಯಾವದೇ ಘಟನೆಯಲ್ಲಿ ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳ ರಕ್ಷಣೆ ಬಗ್ಗೆ ಸಂಪೂರ್ಣ ಭರವಸೆ ಕೊಡತಕ್ಕದ್ದು.

(೨) ತಮ್ಮ ಹಕ್ಕು ಬಾಧ್ಯತೆ ಹಿತಸಂಬಂಧಗಳ ರಕ್ಷಣೆಗಾಗಿ ಯಾವಯಾವ ಭದ್ರತೆಗಳು ಅವಶ್ಯವೆಂಬುದನ್ನು ಈ ಅಲ್ಪಸಂಖ್ಯಾಕರೇ ನಿರ್ಧರಿಸಬೇಕು. ಬಹುಸಂಖ್ಯಾಕರು ಇದನ್ನು ನಿರ್ಣಯಿಸತಕ್ಕದ್ದಲ್ಲ. ಆದುದರಿಂದ ಅಲ್ಪಸಂಖ್ಯಾಕರ ಒಪ್ಪಿಗೆಯಿಂದಲೇ ಈ ನಿರ್ಣಯವನ್ನು ಮಾಡಬೇಕಾಗಿದೆಯಲ್ಲದೆ ಬಹುಮತದಿಂದ ನಿರ್ಣಯಿಸತಕ್ಕದ್ದಲ್ಲ. ಹೀಗೆ ಕಾಂಗ್ರೆಸು ವಿಚಾರ ಮಾಡಿದೆ.

"ಅಲ್ಪಸಂಖ್ಯಾಕರ ಈ ಪ್ರಶ್ನೆಯು ಜಗತ್ತಿನ ಬೇರೆ ಭಾಗಗಳಲ್ಲಿಯೂ ಇದ್ದೇ ಇರುವುದು. ಮೇಲೆ ಸೂಚಿಸಿದುವಕ್ಕಿಂತ ಬೇರೆ ಯೋಗ್ಯ ಮತ್ತು ನ್ಯಾಯ ಪದ್ಧತಿಯನ್ನು ಈ ಸಮಸ್ಯೆ ಬಿಡಿಸಲು ಅವಲಂಬಿಸಬಹುದೋ ಹೇಗೆಂಬುದನ್ನು ತೋರಿಸಿಕೊಡಲು ನಾನು ಈ ಮೂಲಕ ಜಗತ್ತಿಗೇ ಆಹ್ವಾನಕೊಡುತ್ತೇನೆ. ತನ್ನ ಕರ್ತವ್ಯದಲ್ಲಿ ತಪ್ಪಿದ್ದರೆ, ಅದನ್ನು ಸುಧಾರಿಸಿಕೊಳ್ಳಲು ಕಾಂಗ್ರೆಸ್ ಯಾವಾಗಲೂ ಸಿದ್ಧವಿದ್ದಿತು. ಈಗಲೂ ಸಿದ್ಧವಿದೆ.

"ತಮ್ಮ ಪ್ರತಿನಿಧಿಗಳನ್ನು ಮತದಾನದಿಂದಲೇ ಆರಿಸಿಕೊಳ್ಳತಕ್ಕದ್ದೆಂದು [illegible] ಮಾಡಲ್ಪಟ್ಟ [illegible] ಸಂಖ್ಯಾಕರಿಗೆನಿಸಿದರೆ ಹಾಗೆ ಮಾಡಲು ಅವರಿಗೆ ಅಧಿಕಾರವಿದೆ. ಈ ಅಲ್ಪಸಂಖ್ಯಾಕರು ತಮ್ಮ ಜಾತಿಯ ಪ್ರತಿನಿಧಿಗಳ ಮತಗಳನ್ನೇ ಅವಲಂಬಿಸಬೇಕಾಗುವುದಲ್ಲದೆ ಬೇರೆ ಜಾತಿಯ ಜನರ ಮತಗಳನ್ನು ಅವಲಂಬಿಸತಕ್ಕದ್ದಲ್ಲ. ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆ ಹಿತಸಂಬಂಧಗಳ ಬಗ್ಗೆ ನಿರ್ಣಯಿಸುವಾಗ ರಾಷ್ಟ್ರೀಯ ಘಟನಾ ಸಮಿತಿಯಲ್ಲಿ ಬಹುಮತದಿಂದ ನಿರ್ಣಯಿಸತಕ್ಕದ್ದಲ್ಲ. ಅಲ್ಪಸಂಖ್ಯಾಕರ ಒಪ್ಪಿಗೆಯಿಂದಲೇ ಅದನ್ನು ನಿರ್ಣಯಿಸತಕ್ಕದ್ದು. ಯಾವದೇ ಪ್ರಶ್ನೆಯಲ್ಲಿ ಒಪ್ಪಿಗೆಯಾಗದಿದ್ದರೆ ಅಲ್ಪಸಂಖ್ಯಾಕರ ಒಪ್ಪಿಗೆಯಿಂದ ನೇಮಿಸಲ್ಪಡುವ ನಿಷ್ಪಕ್ಷಪಾತ ನ್ಯಾಯಮಂಡಲವು ಈ ವಿಷಯವನ್ನು ನಿರ್ಣಯಿಸತಕ್ಕದ್ದು. ಇದಕ್ಕೂ ಹೆಚ್ಚು ವ್ಯವಹಾರ್ಯ ಯೋಜನೆಯನ್ನು ಸೂಚಿಸಿದ್ದಾದರೆ ಆ ಬಗ್ಗೆ ಕಾಂಗ್ರೆಸಿನ ಆಕ್ಷೇಪವಿರಲಾರದು.

"ಕಾಂಗ್ರೆಸ್ಸು ಈ ತತ್ವಗಳನ್ನಿಟ್ಟುಕೊಂಡು ಅವನ್ನು ಕಾರ್ಯರೂಪದಲ್ಲಿ ಮಾಡುತ್ತಿರುವಾಗ, ಬ್ರಿಟಿಷ್ 'ಮುತ್ಸದ್ದಿ'ಗಳು ಇದೇ ಸಮಸ್ಯೆಯನ್ನೆತ್ತಿ ತೋರಿಸಿ, ಹಿಂದುಸ್ಥಾನದ ಸ್ವಾತಂತ್ರ್ಯಕ್ಕೆ ಇದು ಪ್ರತಿಬಂಧಕವಾಗಿದೆಯೆಂದು ಜಗತ್ತೆಲ್ಲ ಭಾವಿಸುವಂತೆ ಪ್ರಯತ್ನಮಾಡುವರು. ನಿಜವಾಗಿಯೂ ಹೀಗೆ ಪರಿಸ್ಥಿತಿಯಿದ್ದರೆ ಬ್ರಿಟಿಷ್ ಸರಕಾರದವರು ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಸ್ಪಷ್ಟವಾಗಿ ಮಾನ್ಯ ಮಾಡಿ ನಮ್ಮ ಈ ಅಲ್ಪಸಂಖ್ಯಾಕರ ಪ್ರಶ್ನೆಯನ್ನು ಬಿಡಿಸುವ ಸಂದರ್ಭವನ್ನೇಕೆ ಒದಗಿಸಿಕೊಡಬಾರದು?

"ನಮ್ಮನ್ನು ಬಗೆಯುವ ಸಮಸ್ಯೆಗಳು ಈ ರೀತಿಯಿವೆ. ಆದರೆ ಯಾವದೇ ಅಡ್ಡಿ ಆತಂಕಗಳಿಂದ ಎದೆಗುಂದಿ ನಾವು ಯೋಗ್ಯ ಮಾರ್ಗವನ್ನು ಸ್ವೀಕರಿಸುವುದನ್ನು ಬಿಡಲಾರೆವು. ಧೈರ್ಯ ಎದೆಗಾರಿಕೆಯಿಂದ ಮುಂದಡಿ ಇಡುತ್ತಲೇ ನಡೆದಿರುವೆವು. ನಮ್ಮ ಮಾರ್ಗವು ಮುಳ್ಳು ಕಂಟಿಗಳಿಂದ ತುಂಬಿದೆ. ಆದರೆ ಅವನ್ನೆಲ್ಲ ದಾಟಿ ಹೋಗಲು ನಾವು ನಿರ್ಧರಿಸಿದ್ದೇವೆ.

### ಭಾರತ ಮುಸಲ್ಮಾನರು

"ಭಾರತದಲ್ಲಿಯ ಅಲ್ಪಸಂಖ್ಯಾಕರ ಸಮಸ್ಯೆಯನ್ನು ನಾವು ವಿವೇಚಿಸಿದ್ದಾಯಿತು. ಆದರೆ ತಮ್ಮ ಭವಿತವ್ಯದ ಬಗೆ ಎಳ್ಳಷ್ಟಾದರೂ ಅಂಜಿಕೆ ಅಥವಾ ಸಂಶಯವುಂಟಾಗುವಷ್ಟು ಮುಸಲ್ಮಾನರ ಅಲ್ಪಸಂಖ್ಯಾಕರಿರುವರೇ? ತೀರ ಚಿಕ್ಕ ಅಲ್ಪಸಂಖ್ಯಾಕ ಸಮಾಜಕ್ಕೆ [illegible] ಗಳಿರುವುದು ಸ್ವಾಭಾವಿಕವು. [illegible] ಮುಸಲ್ಮಾನರೂ [illegible] ಬಹುದೇ? [illegible] ೨೮ ವರ್ಷಗಳ ಹಿಂದೆ 'ಅಲ್ ಹಿಲಾಲ್'ದಲ್ಲಿ ಬರೆದ [illegible] ಇಲ್ಲಿ [illegible] ಬರೆದಷ್ಟು ನನಗರಿಯಿ. ಯಾ[illegible]ದರೂ ಇದ್ದರೆ ಅವರ [illegible] ನೆನಪುಮಾಡಿಕೊಳ್ಳಬೇಕೆಂದು ಅವರಿಗೆ ವಿನ್ನವಿಸುವೆ. [illegible] ಆಗಲೂ ನನ್ನ ಸ್ಪಷ್ಟ ಅಭಿಮತವನ್ನು [illegible] ಇಂದೂ ಅದರ ಪುನರುಚ್ಚಾರವನ್ನೇ ಮಾಡುವೆ. ಹಿಂದುಸ್ಥಾನದ ರಾಜಕಾರಣದಲ್ಲಿ ಮುಸಲ್ಮಾನರಿಗೆ ರಾಜಕೀಯ ಅಲ್ಪಸಂಖ್ಯಾಕರ ಸ್ಥಾನವಿದೆಯೆನ್ನುವುದು ಸತ್ಯದ ವಿಪರ್ಯಾಸ [illegible] ಅವರು [illegible] ಸಂಪ್ರಭುತ್ವವುಳ್ಳ ಹಿಂದುಸ್ಥಾನದಲ್ಲಿ ತಮ್ಮ ಹಕ್ಕು ಬಾಧ್ಯತೆಗಳ ಬಗೆ ಮುಸಲ್ಮಾನರು ಸಾಶಂಕರಾಗುವದೂ ಸಮಂಜಸವಲ್ಲ. ಈ ಮೂಲ ತಪ್ಪೇ ಅಸಂಖ್ಯ ತಪ್ಪು ತಿಳುವಳಿಕೆಗಳಿಗೆ ಕಾರಣವಾಗಿದೆ. ಈ ತಪ್ಪಿನ ತಳಹದಿಯ ಮೇಲೆ ಜೊಳ್ಳು ವಿಧಾನಗಳು ರಚಿಸಲ್ಪಟ್ಟವು. ಇದರಿಂದ ಇತ್ತ ಮುಸಲ್ಮಾನರಿಗೂ ತಮ್ಮ ನಿಜ ಪರಿಸ್ಥಿತಿಯು ತಿಳಿಯದಂತಾಯ್ತು. ಅತ್ತ ಇಡೀ ಜಗತ್ತೂ ಈ ತಪ್ಪು ತಿಳುವಳಿಕೆಯಲ್ಲಿ ಸುತ್ತಾಡಹತ್ತಿತು. ಹೀಗಾಗಿ ಭಾರತದ ಭಾವಚಿತ್ರದ ನಿಜವಾದ ರೂಪವೇ ತಿಳಿಯದಂತಾಗಿದೆ.

### ಬ್ರಿಟಿಷ ಭೇದನೀತಿ

"ನನಗೆ ಅವಕಾಶವು ದೊರೆತಿದ್ದರೆ ಕಳೆದ ೬೦ ವರ್ಷಗಳಲ್ಲಿ ಭಾರತದ ಈ ಕೃತ್ರಿಮ ಹಾಗು ಟೊಳ್ಳು ಚಿತ್ರವನ್ನು ಯಾರು ಹೇಗೆ ಚಿತ್ರಿಸಿದರೆಂಬುದನ್ನು ವಿವರವಾಗಿ ಹೇಳಬಹುದಾಗಿತ್ತು. ಸಾರಾಂಶ ಕಾಂಗ್ರೆಸ್ಸು ರಾಷ್ಟ್ರೀಯ ಹೋರಾಟವನ್ನು ಪ್ರಾರಂಭಿಸಿದೊಡನೆ, ಹಿಂದುಸ್ಥಾನದಲ್ಲಿಯ ಬ್ರಿಟಿಷ ಅಧಿಕಾರಿ ವರ್ಗದ ಮನಸ್ಸಿನಲ್ಲಿ ರೂಪಗೊಂಡ 'ವಿಭಾಗಿಸಿ ಆಳು' ಎಂಬ ಧೋರಣದ ಫಲವೇ ಈ ಚಿತ್ರವು. ನೂತನ ರಾಷ್ಟ್ರೀಯ ಜಾಗೃತಿಯನ್ನು ನದೆಬಡೆಯಲು ಮುಸಲ್ಮಾನರನ್ನು ಉಪಯೋಗಿಸುವದೇ ಇದರ ಉದ್ದೇಶ. ಈ ಯೋಜನೆಯಲ್ಲಿ ಮುಖ್ಯವಾಗಿ ಎರಡು ಸಂಗತಿಗಳಿಗೆ ಪ್ರಾಧಾನ್ಯವಿದೆ. ಮೊದಲನೆಯದು, ಹಿಂದು ಹಾಗು ಮುಸಲ್ಮಾನ ಈ ಎರಡು ಸಮಾಜಗಳು ಹಿಂದುಸ್ಥಾನದಲ್ಲಿ ವಾಸಿಸುತ್ತಿದ್ದುದರಿಂದ ಇಡೀ ಹಿಂದುಸ್ಥಾನವ ಪರವಾಗಿ ಯಾವ ಬೇಡಿಕೆಯನ್ನು ಮಾಡಲಾಗದು. ಎರಡನೆಯದು, ಸಂಖ್ಯೆಯಲ್ಲಿ ಮುಸಲ್ಮಾನರು ಹಿಂದುಗಳಿಗಿಂತ ಕಡಿಮೆಯಿರುವರಾದ್ದರಿಂದ ಹಿಂದುಸ್ಥಾನದಲ್ಲಿ ಪ್ರಜಾಪ್ರಭುತ್ವ ರಾಜ್ಯಪದ್ಧತಿಯನ್ನು ನೆಲೆಗೊಳಿಸಿದರೆ ಮುಸಲ್ಮಾನರ ಅಸ್ತಿತ್ವವನ್ನೆ ಹಾನಿಮಾಡಿದಂತಾಗುವದು. ಹೆಚ್ಚಿನ ವಿವರಗಳನ್ನು ನಾನಿಲ್ಲಿ ವಿವೇಚಿಸುವದಿಲ್ಲ. ಈ ವಿಷಯದಲ್ಲಿ ಪೂರ್ವೇತಿಹಾಸವನ್ನು ಅರಿಯಬೇಕಿದ್ದರೆ ಹಿಂದುಸ್ಥಾನದ ಹಿಂದಿನ ವ್ಹಾಯಿಸರಾಯರಾಗಿದ್ದ ಲಾರ್ಡ ಡಫರಿನ್, ಹಾಗು [illegible] (ಈಗಿನ ಸಂಯುಕ್ತಪ್ರಾಂತ) ಲೆಫ್ಟನೆಂಟ ಗವ್ಹರ್ನರರಾ[illegible] ಕಾಲ್ವಿನ್ ಇವರ [illegible] ಇತಿಹಾಸವನ್ನು [illegible] ಪರಿಶೀಲಿಸಬಹುದು.

ಹಿಂದುಸ್ಥಾನದಲ್ಲಿ ಈ [illegible] ಅನೈಕ್ಯದ ಬೀಜಗಳು ಬ್ರಿಟಿಷ [illegible] ಸಾಮ್ರಾಜ್ಯಶಾಹಿಯಿಂದ ಬಿತ್ತಲ್ಪಟ್ಟವು. ಬೀಜವು ಅಂಕುರವಾಗಿ, ದೊಡ್ಡ ವೃಕ್ಷವಾಗಿ, ತನ್ನ ಟೊಂಗೆಗಳನ್ನು ಪಸರಿಸಿತು. ಈಗ [illegible] ವರ್ಷಗಳಾದರೂ [illegible] ಬೇರುಗಳು ಇನ್ನೂ [illegible]

### ಅಲ್ಪಸಂಖ್ಯಾಕರೆಂದರೆ ಯಾರು?

[illegible] ದೃಷ್ಟಿಯಿಂದ, ಅಲ್ಪಸಂಖ್ಯಾಕ [illegible] ಅರ್ಥವು ಸಂಖ್ಯಾ [illegible] ಬಲ [illegible] ಗಳಲ್ಲಿ ಅದಕ್ಕೆ ವಿಶಿಷ್ಟ ಸಂರಕ್ಷಣೆ [illegible] ತನ್ನ ಸುತ್ತಲಿನ ಬಹುಸಂಖ್ಯಾಕ ಸಮಾಜದಿಂದ ಆತ್ಮರಕ್ಷಣ ಮಾಡಿಕೊಳ್ಳಲಿಕ್ಕೆ ಅಸಮರ್ಥವಾಗುವಷ್ಟು ಚಿಕ್ಕದು ಹಾಗೆ ನಿರ್ಬಲವಿರುವ ಸಮಾಜವೇ ಅಲ್ಪಸಂಖ್ಯಾಕವೆಂದು ಅರ್ಥವಾಗಬಹುದು. ಆ ಸಮಾಜವು [illegible] ಚಿಕ್ಕವಿದ್ದ ಮಾತ್ರಕ್ಕೆ ಸಾಲದು. ಆದರೆ ಅದು ತನ್ನ ಹಿತಸಂಬಂಧಗಳನ್ನು ರಕ್ಷಿಸಿಕೊಳ್ಳಲಾರದಷ್ಟು ಅಸಮರ್ಥವೂ ಆಗಿರಬೇಕು. ಇದು ಕೇವಲ ಸಂಖ್ಯಾಬಲದ ಪ್ರಶ್ನೆಯಲ್ಲ. ಉಳಿದ ಅಂಶಗಳೂ ಇದರಲ್ಲಿ ಅಡಕವಾಗಿವೆ. ಒಂದು ದೇಶದಲ್ಲಿ ೧೦ ಲಕ್ಷ ಹಾಗ ೨೦ ಲಕ್ಷ ಸಂಖ್ಯಾಬಲವುಳ್ಳ ಎರಡು ಸಮಾಜಗಳಿದ್ದರೆ ಒಂದು [illegible] ದಕ್ಕಿಂತ ಅರ್ಧದಷ್ಟು ಚಿಕ್ಕದಿರುವದೆಂಬ ಕಾರಣದಿಂದ ಅದು ರಾಜಕೀಯ ಅಲ್ಪಸಂಖ್ಯಾಕ ಹಾಗು ದುರ್ಬಲ ಸಮಾಜವಾಗದು.

### ಆತ್ಮವಂಚನೆ

"ಇದೇ ಯೋಗ್ಯ ಒರೆಗಲ್ಲಾಗಿದ್ದರೆ ಇದನ್ನೇ ಹಿಂದುಸ್ಥಾನದ ಮುಸಲ್ಮಾನರಿಗೆ ಅನ್ವಯಿಸೋಣ. ಹೊರಳಿ ನೋಡಿದರೆ ಇಡೀ ದೇಶದಲ್ಲೆಲ್ಲ ಪಸರಿಸಿದ ಈ ಸಮಾ

ಜುಷ್ಟ ಕಣ್ಣಿಗೆ ಬೀಳುವದು. ಈ ಸಮಾಜವು ಏದೆಯುಂಡೆಮಾಡಿ ಗಾಂಭೀರ್ಯದಿಂದ ನಿಂತಿದೆ. ಇಂಥ ಸಮಾಜವು ಅಸಹಾಯ ಹಾಗು ದೀನವಾಗಿದೆಯೆನ್ನುವದು ಆತ್ಮವಂಚನೆಯಲ್ಲವೆ?

"ಹಿಂದುಸ್ಥಾನದಲ್ಲಿಯ ಮುಸಲ್ಮಾನರು ೯ ಕೋಟಿ ಇರುವರು. ಉಳಿದ ಸಮಾಜದಲ್ಲಿಯ ಸಾಮಾಜಿಕ ಅಥವಾ ಜಾತೀಯ ಭೇದಭಾವಗಳು ಇವರಲ್ಲಿಲ್ಲ. ಇಂಥ ಪ್ರಚಂಡ ಮಾನವ ಸಮಾಜಕ್ಕೆ, ಸ್ವತಂತ್ರ ಹಾಗು ಪ್ರಜಾಸತ್ತಾತ್ಮಕ ಹಿಂದುಸ್ಥಾನದಲ್ಲಿ ತನ್ನ ಹಿತಸಂಬಂಧಗಳನ್ನು ಸಂರಕ್ಷಿಸಲು ತಾನು ಅಸಮರ್ಥನಿರುವೆನೆಂಬ ಭೀತಿಯುಂಟಾಗುವುದು ಸರಿಯೆ?

"ಹಿಂದುಸ್ಥಾನದ ೧೧ ಪ್ರಾಂತಗಳಲ್ಲಿಯ ನಾಲ್ಕು ಪ್ರಾಂತಗಳಲ್ಲಿ ಮುಸಲ್ಮಾನರಿಗೆ ಬಹುಮತವಿದೆ. ಬಲುಚಿಸ್ಥಾನವೂ ಇವುಗಳಿಗೆ ಸೇರಿದರೆ ಐದು ಪ್ರಾಂತಗಳಾಗುವವು. ಏಳು ಪ್ರಾಂತಗಳಲ್ಲಿ ಅವರು ಅಲ್ಪಸಂಖ್ಯಾಕರಿದ್ದರೆ ಐದು ಪ್ರಾಂತಗಳಲ್ಲಿ ಅವರು ಬಹುಸಂಖ್ಯಾಕರಿರುವರು. ಎಂದ ಬಳಿಕ ಅವರಿಗೆ ತಾವು ಅಲ್ಪಸಂಖ್ಯಾಕರೆಂಬ ಭಾವನೆಯು ಏಕೆ ಪೀಡಿಸಬೇಕೋ ನನಗೆ ತಿಳಿಯದು.

"ಹಿಂದುಸ್ಥಾನದ ಭಾವೀ ರಾಜ್ಯಘಟನೆಯ ವಿವರಗಳೇನೇ ಇರಲಿ ಅದು ಅಖಿಲ ಭಾರತೀಯವಾಗುವದೆಂಬದನ್ನು ಮಾತ್ರ ನಾವು ಬಲ್ಲೆವು. ಅದು ಸಂಪೂರ್ಣ ಪ್ರಜಾಸತ್ತಾತ್ಮಕವಾಗಿರುವುದು. ಹಿಂದುಸ್ಥಾನದ ಭಾವೀ ಚಿತ್ರದಲ್ಲಿ ಇಂಥ ಅಂಜಿಕೆಗೆ ಆಸ್ಪದವಿರುವದೆಂಬ ಮಾತನ್ನು ನಾನು ಒಂದು ಕ್ಷಣಮಾತ್ರವೂ ನಂಬಲಾರೆನು. ನಾವಿನ್ನೂ ನದಿಯ ದಂಡೆಯಲ್ಲಿ ನಿಂತಿರುವೆವು. ಈಸಬೇಕೆನಿಸಿದರೂ ನೀರಲ್ಲಿ ಮುಳುಗಲು ಮನಸ್ಸಿಲ್ಲ. ಇದಕ್ಕೊಂದೇ ಉಪಾಯ. ನಾವು ನಿರ್ಭೀತಿಯಿಂದ ಧುಮುಕಿ ಪ್ರವೇಶಮಾಡಬೇಕು. ನಾವು ಹೀಗೆ ಹಾರುವದೊಂದೇ ತಡ ನಮ್ಮ ಭೀತಿ ಶಂಕೆ ಕುಶಂಕೆಗಳೆಲ್ಲವೂ ಎಷ್ಟು ಪೊಳ್ಳಾಗಿರುವವೆಂಬುದು ನಮಗೆ ತಾನೇ ಹೊಳೆಯುವದು.

### ಮುಸಲ್ಮಾನರ ಕರ್ತವ್ಯ

"ಭಾರತವು ತನ್ನ ಮೇಲೆ ಇರುವ ಅನೇಕ ಭಾರಗಳನ್ನು ಹೊತ್ತುಕೊಂಡೇ ತನ್ನ ಮುಂದಿನ ಸಂಕಲ್ಪದತ್ತ ಸಾಗಿದೆಯೆಂಬುದು ನನಗೆ ಕಾಣಿಸಿದೆ. ನಾವು ಈ ಹಡಗದಲ್ಲಿ ಜೊತೆ ಪ್ರಯಾಣಿಕರು. ನಾವು—ಭಾರತೀಯ ಮುಸಲ್ಮಾನರು—ಭಾವೀ ಸ್ವತಂತ್ರ ಹಿಂದುಸ್ಥಾನವನ್ನು ಸಾಶಂಕ ಹಾಗು ಅವಿಶ್ವಾಸ ದೃಷ್ಟಿಯಿಂದ ನೋಡುತ್ತಿರುವೆವೋ ಅಥವಾ ಧೈರ್ಯ ವಿಶ್ವಾಸಗಳಿಂದ ಪರಿಶೀಲಿಸುತ್ತಿರುವೆವೋ? ನಮ್ಮ ದೃಷ್ಟಿಯು ಸಾಶಂಕವಾಗಿದ್ದರೆ ನಾವು ಬೇರೊಂದು ಮಾರ್ಗವನ್ನೇ ಹಿಡಿಯಬೇಕು. ಸದ್ಯದ ಘೋಷಣೆಯಾಗಲಿ ಭವಿತವ್ಯದ ಆಶ್ವಾಸನವಾಗಲಿ ಘಟನಾತ್ಮಕ ಸಂರಕ್ಷಣೆಗಳಾಗಲಿ ನಮ್ಮ ಭೀತಿ ಸಂಶಯಗಳನ್ನು ದೂರ ಮಾಡಲಾರವು. ಆಗ ನಾವು ಮೂರನೆಯವರ ಅಸ್ತಿತ್ವವನ್ನು ಸಹಿಸಲೇ ಬೇಕಾಗುವದು. ಮೂರನೆಯವರು ಈಗಾಗಲೇ ಇಲ್ಲಿ ಭದ್ರವಾಗಿರುವರು. ಅವರಿಗೆ ಬಿಟ್ಟು ಹೋಗುವ ಇಚ್ಛೆಯೇ ಇಲ್ಲ. ನಾವು ಅಂಜುತ್ತ ಕುಳಿತರೆ ಹಾಗೆಯೇ ಎಷ್ಟು ದಿವಸ ಕೂಡಬೇಕಾಗುವದೆಂಬುದನ್ನೂ ನಾವು ವಿಚಾರ ಮಾಡಬೇಕಾಗುವದು. ಆದರೆ ನಾವು ಸಂಶಯ ಬೆದರಿಕೆಗಳಿಗೆ ಎಡೆಗೊಡಲಾರೆವೆಂಬ ನಿರ್ಧಾರವು ನಮ್ಮಲ್ಲಿದ್ದರೆ ನಾವು ಆತ್ಮವಿಶ್ವಾಸದಿಂದಲೂ ಧೈರ್ಯದಿಂದಲೂ ಭವಿತವ್ಯವನ್ನು ನಿರೀಕ್ಷಿಸಬೇಕು. ಸಂಶಯ, ಬೆದರಿಕೆ, ಆಲಸ್ಯ, ದ್ವೇಷಗಳಿಂದ ಅಲಿಪ್ತನಾದ ನೂತನ ರಾಜ್ಯದಲ್ಲಿ ನಾವು ಪ್ರವೇಶಿಸುವೆವು. ಅಲ್ಲಿ ನಮಗೆ ದೃಢನಿಶ್ಚಯ ಆತ್ಮವಿಶ್ವಾಸ, ಉತ್ಸಾಹ ಹಾಗು ಕ್ರಿಯಾಶಕ್ತಿಯ ಪ್ರಕಾಶವೆಂದಿಗೂ ಅಡಗುವದಿಲ್ಲ. ಭಾರತದ ರಾಷ್ಟ್ರೀಯ ಧ್ಯೇಯದತ್ತ ನಾವು ಗಟ್ಟಿ ಹೆಜ್ಜೆಯಿಂದ ಸಾಗುವದು ನಮ್ಮ ಆದ್ಯ ಕರ್ತವ್ಯವಾಗಿದೆ.

"೧೯೨೦ರ ಕೊನೆಗೆ ನನ್ನ ನಾಲ್ಕು ವರ್ಷಗಳ ಕಾರಾವಾಸದ ನಂತರ ಮುಸ್ಲಿಂ ರಾಜಕೀಯ ಧ್ಯೇಯವು ತನ್ನ ಹಳೆಯ ರೂಪವನ್ನು ಬಿಟ್ಟು ನವಸ್ವರೂಪವನ್ನು ಧಾರಣ ಮಾಡುತ್ತಿರುವದು ನನಗೆ ಕಂಡುಬಂದಿತು. ಅಂದಿನಿಂದ ಅನೇಕ ಸ್ಥಿತ್ಯಂತರಗಳು ಸಂಭವಿಸಿವೆ. ನಮ್ಮನ್ನು ನೂತನ ವಿಚಾರಗಳು ಆವರಿಸಿವೆ. ಆದರೆ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡ ಕೂಡದೆಂಬ ಸಾಮಾನ್ಯ ಮುಸ್ಲಿಂ ಅಭಿಪ್ರಾಯವು ಮಾತ್ರ ಮೊದಲಿದ್ದಂತೆಯೇ ಇದೆ.

"ರಾಷ್ಟ್ರಗಳ ಹಾಗು ಜನತೆಯ ಭವಿತವ್ಯದ ಪ್ರಶ್ನೆಗೆ ನಾವು ಕೈ ಹಾಕಿದ್ದೇವೆ! ಕ್ಷಣಿಕ ಭಾವನೆಗಳಿಂದ ನಾವು ಉದ್ದೀಪಿತರಾದರೆ ನಾವು ಯೋಗ್ಯ ನಿರ್ಣಯಕ್ಕೆ ಬರಲಾರೆವು. ನಮ್ಮ ನಿರ್ಣಯವು ಜೀವನದ ಸತ್ಯ ಸಂಗತಿಗಳ ಗಟ್ಟಿಮುಟ್ಟಾದ ತಳಹದಿಯನ್ನು ಅವಲಂಬಿಸಿರಬೇಕು. ಇಂದು ಆಕಾಶದಲ್ಲಿ ಕಾರ್ಮೋಡಗಳು ಕವಿದು ಕತ್ತಲೆಯಾಗಿರುವುದೇನೋ ನಿಜ. ಮುಸಲ್ಮಾನರು ಸತ್ಯದ ಪ್ರಕಾಶದಲ್ಲಿ ಪ್ರವೇಶಿಸಿರುವರು.

### ಏಕೀಕೃತರಾಷ್ಟ್ರ

ನಾನು ಮುಸಲ್ಮಾನನು, ಅದಕ್ಕಾಗಿ ನನಗೆ ಅಭಿಮಾನವೆನಿಸುತ್ತದೆ. ೧೩ ನೂರು ವರ್ಷಗಳ ಶ್ರೇಷ್ಠ ಇಸ್ಲಾಂ ಸಾಂಪ್ರದಾಯಗಳು ನನಗೆ ಹಿರಿಯರಿಂದ ಬಂದಿವೆ. ಈ ನನ್ನ ಸೊತ್ತಿನಲ್ಲಿ ಕವಡಿಯಷ್ಟು ಕೂಡ ಕಳೆದುಕೊಳ್ಳಲು ನಾನು ಸಿದ್ಧನಿಲ್ಲ. ಇಸ್ಲಾಮಿನ ಇತಿಹಾಸ, ಉಪದೇಶ, ಕಲಾ, ಶಾಸ್ತ್ರ, ಹಾಗು ಸಂಸ್ಕೃತಿಗಳು ನನ್ನ ಸರ್ವಸಂಪತ್ತು. ಅವುಗಳನ್ನು ಸಂರಕ್ಷಿಸುದು ನನ್ನ ಪವಿತ್ರಕರ್ತವ್ಯ. ನಾನು ಭಾರತೀಯನಾಗಿರುವಲ್ಲಿ ನನಗೆ ತುಂಬಾ ಹೆಮ್ಮೆಯಿದೆ. ಈ ಭವ್ಯಮಂದಿರದ ಕಟ್ಟಡಕ್ಕೆ ನನ್ನ ಅಗತ್ಯವಿದೆ. ನನ್ನ ಹೊರತು ಭಾರತದ ಈ ಸುಂದರ ಮಂದಿರವು ಪೂರ್ಣವಾಗದು. ಭಾರತದ ರಚನೆಗೆ ಕಾರಣವಾಗುವ ವಸ್ತುವು ನಾನು. ಈ ನನ್ನ ಹಕ್ಕನ್ನು ನಾನೆಂದಿಗೂ ಬಿಟ್ಟುಕೊಡಲಾರೆ.

"ಅಸಂಖ್ಯ ಜನಾಂಗಗಳು, ಅನೇಕ ಸಂಸ್ಕೃತಿಗಳು, ವಿವಿಧ ಧರ್ಮಗಳು ಭಾರತದತ್ತ ಹರಿದುಬಂದುದು ಭಾರತೀಯ ಪರಮೋಚ್ಚಭಾಗ್ಯವಾಗಿದೆ. ಅವರ ಸತ್ಕಾರಶೀಲ ಮಂದಿರದಲ್ಲಿ ಅವುಗಳಿಗೆ ಆಶ್ರಯ ದೊರೆತಿದೆ. ಸಾಂಧಸ್ಥರೆಲ್ಲರೂ ಅಲ್ಲಿ ವಿಶ್ರಮಿಸುತ್ತಿರುವರು. ಇತಿಹಾಸ ಪೂರ್ವದಿಂದಲೂ ಅನೇಕ ಇಂಥ ಪಾಂಥಸ್ಥರು ಒಂದೇಸವನೇ ಹೊಸಬರು ತಂಡತಂಡವಾಗಿ ಆಶ್ರಯ ಹೊಂದುತ್ತಿರುವರು. ವಿಶಾಲ ಹಾಗು ಫಲವತ್ತಾದ ಭಾರತವು ಎಲ್ಲರನ್ನೂ ಸಂಭ್ರಮದಿಂದ ಸ್ವಾಗತಿಸಿತು. ತನ್ನ ಹೃದಯ ಮಂದಿರದಲ್ಲಿ ಅವರಿಗೆ ಆಶ್ರಯ ವಿತ್ತಿತು. ತನ್ನ ಪೂರ್ವಜರ ಹಜ್ಜೆಯನ್ನನುಸರಿಸಿ ಬಂದ ಇಂಥ ಪಾಂಥಸ್ಥರ ಗುಂಪಿನಲ್ಲಿ ಕೊನೆಯದೆಂದರೆ ಇಸ್ಲಾಮ ಧರ್ಮವು. ಇದು ಇಲ್ಲಿಗೆ ಬಂದು ನೆಲಸಿ ತನ್ನ ಕಲ್ಯಾಣವನ್ನು ಸಾಧಿಸಿತು. ಇದರಿಂದ ಉಭಯ ಸಂಸ್ಕೃತಿಗಳ ಸಂಗಮವಾಯಿತು. ಗಂಗಾಯಮುನೆಯರಂತೆ ಧರ್ಮಕ್ಕನುಸಾರವಾಗಿ ಉಭಯ ಸಂಸ್ಕೃತಿಗಳು ಒಂದನ್ನೊಂದು ಅಪ್ಪಿಕೊಂಡವು. ಈ ಸಮ್ಮಿಶ್ರಣವು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹದಾಯ್ತು. ನಮ್ಮ ಸಂಪತ್ತನ್ನು ನಾವು ಅವಳಿಗೆ ಅರ್ಪಿಸಿದೆವು. ಅವಳೂ ತನ್ನ ಬೊಕ್ಕಸದ ಬಾಗಿಲನ್ನು ನಮಗಾಗಿ ತೆರೆದಿಟ್ಟಳು.

### ಭಾರತವು ನಮ್ಮೆಲ್ಲರದು

"ಹಿಂದು ಧರ್ಮವನ್ನನುಸರಿಸುತ್ತಿದ್ದರೂ ತಾನ ಭಾರತೀಯನೆಂದು ಹೇಳುವಲ್ಲಿ ಹಿಂದುವಿಗೆಷ್ಟು ಅಭಿಮಾನವೆನಿಸುವದೋ ಅಷ್ಟೇ ಇಸ್ಲಾಮ ಧರ್ಮವನ್ನು ಅನುಸರಿಸುತ್ತ ನಮ್ಮನ್ನು ಭಾರತೀಯರೆಂದು ಕರೆದುಕೊಳ್ಳುವಲ್ಲಿ ನಮಗೂ ಅಭಿಮಾನವೆನಿಸುತ್ತದೆ. ಭಾರತದ ಮತ್ತೊಂದು ಧರ್ಮವಾದ ಕ್ರಿಸ್ತಿ ಧರ್ಮವನ್ನು ಅನುಸರಿಸುವ ಕ್ರಿಶ್ಚಿಯನ್ನನಿಗೂ ತಾನು ಭಾರತೀಯನೆಂದು ಕರೆದುಕೊಳ್ಳಲು ಹಕ್ಕು ಇದೆ.

"ಹನ್ನೊಂದು ನೂರುವರ್ಷಗಳ ಸಮ್ಮಿಶ್ರಿತ ಇತಿಹಾಸ ಕಾಲದಲ್ಲಿ ನಮ್ಮ ಸಂಯುಕ್ತ ಸಂಪತ್ತಿನ ಹೇರಳ ಅಭಿವೃದ್ಧಿಯಾಗಿದೆ. ನಮ್ಮ ಭಾಷೆ ನಮ್ಮ ಕಾವ್ಯ, ನಮ್ಮ ವಾಙ್ಮಯ, ನಮ್ಮ ಸಂಸ್ಕೃತಿ, ನಮ್ಮ ಕಲೆ, ನಮ್ಮ ವೇಷ, ನಮ್ಮ ನಡವಳಿಕೆ, ರೂಢಿಗಳು ಹಾಗು ಅಸಂಖ್ಯ ನಿತ್ಯಘಟನೆಗಳು ಇವುಗಳೆಲ್ಲೆಲ್ಲ ನಮ್ಮ ಐಕ್ಯ ಪ್ರಯತ್ನವು ಎದ್ದುತೋರುತ್ತಿದೆ. ಈ ಭೇದರಹಿತ ಜೀವನ ವ್ಯವಹಾರವು ನಮಗೆ ಖಂಡಿತ ದೊರೆಯದು. ನಮ್ಮ ಭಾಷೆಗಳು ಭಿನ್ನವಿದ್ದವು. ಆದರೆ ನಾವು ಬರಬರುತ್ತ ಒಂದೇ ಭಾಷೆಯನ್ನುಪಯೋಗಿಸ ಹತ್ತಿದೆವು. ನಮ್ಮ ರೀತಿ ನೀತಿಗಳೂ ಒಂದನ್ನೊಂದು ಹೋಲುತ್ತಿದ್ದಿಲ್ಲ. ಆದರೆ ಅವುಗಳ ಪರಸ್ಪರ ಪ್ರತಿಕ್ರಿಯೆಯ ಪರಿಣಾಮದಿಂದ ಹೊಸ ನಡೆವಳಿಕೆಯು ಹುಟ್ಟಿತು. ನಮ್ಮ ಹಳೆ ವೇಷಭೂಷಣಗಳನ್ನು ಇಂದು ನಾವು ಪ್ರಾಚೀನ ಚಿತ್ರಗಳಲ್ಲಿ ಮಾತ್ರ ಕಾಣುವೆವು. ಈ ಐಕ್ಯಸಂಪತ್ತು ನಮ್ಮ ಸಂಯುಕ್ತ ರಾಷ್ಟ್ರೀಯತ್ವದ ಸೊತ್ತು. ಅದನ್ನು ಬಿಟ್ಟುಕೊಟ್ಟು ನಾವು ಪುನಃ ಒಬ್ಬೊಂಟಿಗರಾಗಿ ಉಳಿಯಲಾರೆವು. ಸಾವಿರಾರು ವರ್ಷಗಳ ಪೂರ್ವದಲ್ಲಿದ್ದ ಹಿಂದು ಜೀವನವನ್ನು ಇಂದು ಪುನರುಜ್ಜೀವನಗೊಳಿಸಬೇಕೆಂಬ ಹಿಂದುಗಳಾರಾದರೂ ನಮ್ಮಲ್ಲಿದ್ದರೆ ಅದು ಅವರ ಕನಸು. ಇಂಥ ಕನಸುಗಳು ಕೇವಲ ಪೊಳ್ಳುಕಲ್ಪನೆಗಳು. ಅದರಂತೆ ಸಾವಿರ ವರ್ಷಗಳ ಹಿಂದೆ ಇರಾಣ ಅಫಘಾನಿಸ್ಥಾನಗಳಿಂದ ತಾವು ತಂದ ಇಸ್ಲಾಂ ಧರ್ಮ ಹಾಗೂ ಸಂಸ್ಕೃತಿಗಳನ್ನು ಪುನರುಜ್ಜೀವನಗೊಳಿಸಬೇಕೆನ್ನುವ ಮುಸಲ್ಮಾನರಾದರೂ ಕೇವಲ ಕನಸು ಕಾಣುತ್ತಿರುವರು. ಅವರು ಬೇಗನೆ ಎಚ್ಚರಾದಷ್ಟು ಒಳಿತು. ಇವು ಅಸ್ವಾಭಾವಿಕ ಕಲ್ಪನೆಗಳು. ಸತ್ಯ ಜೀವನ ಕ್ಷೇತ್ರದಲ್ಲಿ ಅವು ಅಂಕುರಿಸಲಾರವು. ಧಾರ್ಮಿಕ ಪುನರುಜ್ಜೀವನವು ಅಗತ್ಯವೆಂದೆನ್ನುವವರಲ್ಲಿ ನಾನೊಬ್ಬನಾದರೂ ಸಾಮಾಜಿಕ ವಿಷಯದಲ್ಲಿ ಹಾಗಾಗುವದು ಪ್ರಗತಿಗೆ ಹಾನಿಕಾರಕವೆಂದು ನನ್ನ ಅಭಿಪ್ರಾಯವು.

"ನಮ್ಮ ಬಗೆ ಜೀವನದ ಈ ಸಹಸ್ರ ವರ್ಷಗಳು ನಮ್ಮನ್ನು ಏಕ ರಾಷ್ಟ್ರೀಯತ್ವದಲ್ಲಿ ರೂಪಾಂತರಿಸಿವೆ. ಹೀಗೆ ಮಾಡುವದು ಕೃತ್ರಿಮ ಉಪಾಯಗಳಿಂದ ಸಾಧ್ಯವಿಲ್ಲ. ನಿಸರ್ಗವು ಅನೇಕ ಶತಮಾನಗಳಲ್ಲಿ ಈ ರೂಪಾಂತರಗಳನ್ನು ಗುಪ್ತವಾಗಿ ತನಗುಚಿತವಾದ ರೀತಿಯಲ್ಲಿ ಮಾರ್ಪಡಿಸಿದೆ. ಇದೀಗ ಅದು ಪೂರ್ಣವಾಗಿದ್ದು ಭವಿತವ್ಯವು ಅದಕ್ಕೆ ತನ್ನ ಮುದ್ರೆಯನ್ನೊತ್ತಿದೆ. ನಮಗೆ ಬೇಕಾಗಲಿ ಬೇಡವಾಗಲಿ ನಾವೀಗ ಒಂದೇ ರಾಷ್ಟ್ರದವರಾಗಿರುವೆವು. ಅಖಂಡ ಅವಿಭಾಜ್ಯರಾಷ್ಟ್ರವಾಗಿರುವೆವು. ಯಾವ ಪೊಳ್ಳು ಕಲ್ಪನೆಯಾಗಲಿ ಕೃತ್ರಿಮ ಯೋಜನೆಯಾಗಲಿ ನಮ್ಮನ್ನು ನಮ್ಮ ಐಕ್ಯವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಕ್ರಮಪ್ರಾಪ್ತವಾದುದನ್ನು ನಾವು ಸ್ವೀಕರಿಸಲೇಬೇಕು. ನಮ್ಮ ಭವಿತವ್ಯ ನಿರ್ಮಾಣದ ಕಾರ್ಯಕ್ಕೆ ತೊಡಗಬೇಕು.

### ಉಪಸಂಹಾರ

ಇನ್ನು ನಿಮ್ಮ ವೇಳೆಯನ್ನು ನಾನು ಕಳೆಯಲಾರೆ. ನನ್ನ ಭಾಷಣವು ಇಲ್ಲಿಗೆ ಮುಗಿಯುವುದು. ಅದಕ್ಕೆ ಮೊದಲು ನಮ್ಮ ವಿಜಯವು ಮೂರು ಮಾತುಗಳನ್ನವಲಂಬಿಸಿದೆಯೆಂಬುದನ್ನು ಹೇಳಬಯಸುವೆನು. ಐಕ್ಯ ಶಿಸ್ತು ಹಾಗೂ ಮಹಾತ್ಮರ ಮುಂದಾಳುತ್ವದಲ್ಲಿ ಅಚಲ ವಿಶ್ವಾಸ. ಇವೇ ಆ ಮೂರು ಮಾತುಗಳು. ಹಿಂದಿನ ನಮ್ಮ ಗೌರವಾರ್ಹ ಚಟುವಟಿಕೆಗಳಿಗೆಲ್ಲ ಅವರ ನಿಪುಣ ನೇತೃತ್ವವೇ ಕಾರಣವಾಗಿದೆ. ನಮ್ಮ ಭಾವೀ ಚಟುವಟಿಕೆಗಳಿಗೆ ಯಶಸ್ಸು ಪ್ರಾಪ್ತವಾಗುವದೂ ಅವರ ನೇತೃತ್ವದಲ್ಲಿಯೇ.

"ನಮ್ಮ ಸತ್ವ ಪರೀಕ್ಷೆಯ ಕಾಲವು ನಮ್ಮ ಮುಂದಿದೆ. ಈಗಾಗಲೇ ಇಡೀ ಜಗತ್ತಿನ ದೃಷ್ಟಿಯನ್ನು ನಮ್ಮ ಕಡೆಗೆ ಹೊರಳಿಸಿದ್ದೇವೆ. ನಮ್ಮ ಕೀರ್ತಿ ಗೌರವಗಳಿಗೆ ತಕ್ಕಂತೆ ನಾವು ವರ್ತಿಸೋಣ." ಹೀಗೆಂದು ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜಾದರು ಉದ್ಘಾಟನ ಭಾಷಣವಿತ್ತರು.

# ಕಾಂಗ್ರೆಸು ಅಧಿವೇಶನದಲ್ಲಿ ಮಹಾತ್ಮರ ಭಾಷಣ

"ನನ್ನ ದೇಶದ ಸ್ವಾತಂತ್ರ್ಯ ಸಂಗ್ರಾಮವು ಗೆಲುವಿನಿಂದಲೂ ಸುಲಭದಿಂದ ನಡೆಯುತ್ತದೆ. ಅದು ಒಮ್ಮೆಯೂ ನಿಂತಿಲ್ಲ. ನೀವಾಗಿಯೇ ನನ್ನನ್ನು ನಾಯಕನನ್ನಾಗಿ ಆರಿಸಿದ್ದೀರಿ. ಆದುದರಿಂದ ನೀವು ನಾನು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ನನಗೆ ಜಯಸಿಗಲಾರದು. ನಾನು ಹೇಳುವ ಎಲ್ಲ ಶರತ್ತುಗಳಿಗೂ ನೀವು ಒಪ್ಪಬೇಕು. ಇಲ್ಲದಿದ್ದರೆ ನಾನು ಹೋರಾಟವನ್ನು ಪ್ರಾರಂಭಿಸಲಾರೆ.

ನಾನು ಹೇಳಿದಂತೆ ಕೇಳಿ, ನಾನು ತೋರಿಸಿದ ಮಾರ್ಗದಲ್ಲಿ ಬರಲು ನೀವು ಸಿದ್ಧರಿಲ್ಲದಿದ್ದರೆ, ಬೇರೆ ನಾಯಕನನ್ನು ಆರಿಸಿ ಕೊಳ್ಳಿರಿ. ಬೇರೆಯವರು ಹೋರಾಟ ಪ್ರಾರಂಭಿಸುವದಕ್ಕೆ ನಾನು ಖಂಡಿತ ಅಡ್ಡಿ ಪಡಿಸುವದಿಲ್ಲ, ಆದರೆ ಕಾಂಗ್ರೆಸ್ಸಿನಲ್ಲಿ ಪ್ರತಿಯೊಬ್ಬರೂ ಶಿಸ್ತಿನಿಂದ ನಡೆಯಬೇಕು. ಹೇಳಿದಂತೆ ಕೇಳಬೇಕು. ಇದು ಸಾಧ್ಯವಿಲ್ಲದವರು ಕಾಂಗ್ರೆಸ್ಸನ್ನು ಬಿಟ್ಟು ಸ್ವತಂತ್ರವಾಗಿ ಹೋರಾಟವನ್ನು ಪ್ರಾರಂಭಿಸಬಹುದು."

ಎಂದು ಮಹಾತ್ಮಾ ಗಾಂಧಿಯವರು ರಾತ್ರಿ ಸಬ್‌ಜೆಕ್ಟ್ಸ್ ಕಮಿಟಿಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಅವರು ಭಾಷಣ ಮಾಡುವ ಕಾಲಕ್ಕೆ ಸಂಪೂರ್ಣ ನಿಶ್ಶಬ್ದತೆಯಿದ್ದಿತು. ಸೂಜಿ ಬಿದ್ದರೆ ಸಹ ಕೇಳಿಸುತಿತ್ತು. ಪ್ರತಿಯೊಬ್ಬರೂ ಒಕ್ಕಟ್ಟು ಶಿಸ್ತು, ಮತ್ತು ಅಹಿಂಸೆಗಳನ್ನು ಅಕ್ಷರಶಃ ಪಾಲಿಸಬೇಕೆಂದು ಮಹಾತ್ಮರು ಹೇಳಿದರು; ಇಲ್ಲದಿದ್ದರೆ ತಾವು ನಾಯಕರಾಗಲು ಸಿದ್ಧರಿಲ್ಲವೆಂದೂ ತಿಳಿಸಿದರು; ಬೇಕಾದರೆ ತಮ್ಮನ್ನು ಸ್ಥಾನಭ್ರಷ್ಟರನ್ನಾಗಿ ಮಾಡಬಹುದೆಂದೂ ಹೇಳಿದರು.

### ನನ್ನಲ್ಲಿ ವಿಶ್ವಾಸವಿದ್ದರೆ

"ಬಾಬು ರಾಜೇಂದ್ರಪ್ರಸಾದರು ಮಂಡಿಸಿದ ನಿರ್ಣಯವನ್ನು ನೀವು ಪ್ರಚಂಡ ಬಹುಮತದಿಂದ ಪಾಸುಮಾಡಿದ್ದೀರಿ. ಇದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ನನ್ನ ಮಾರ್ಗದಲ್ಲಿ ನಿಮಗೆ ವಿಶ್ವಾಸವಿದ್ದರೆ, ಸ್ವಸಂತೋಷದಿಂದ ನೀವು ನಾನು ಹೇಳಿದಂತೆ ಕೇಳಬೇಕು. ನಾನು ಮಹಾತ್ಮನೆಂದು ತಿಳಿದಿಲ್ಲ. ನಾನು ಮಹಾತ್ಮನಲ್ಲ. ನಿಮ್ಮಂತೆಯೇ ನಾನೂ ಒಬ್ಬನು. ಪರಮಾತ್ಮನ ದೃಷ್ಟಿಯಲ್ಲಿ ನಾವೆಲ್ಲರೂ ಒಂದೇ. ಜನ್ನಾಸಾಹೇಬರೂ ನನ್ನ ಬಂಧುಗಳು. ಯಾರ ನಿಲುವನ್ನೂ ನಾನಿನ್ನೂ ಸಿಟ್ಟಿಲ್ಲ. ಹಗೆತನವಿಲ್ಲ. ಪ್ರಾರ್ಥನೆ ... ಮುಂದಿನಿಂದರಿಗೆ ಗಾಯ ಮಾಡುತ್ತಿರುವುದು ನನಗೆ ತುಂಬಾ ದುಃಖವಾಗಿದೆ."

## 'ವಿಧೇಯತೆಯಿಲ್ಲದ ಸೈನ್ಯವನ್ನು ಸೇನಾನಿಯು ನಡೆಸಲಾರನು'

## ಪಾಟ್ನಾದಲ್ಲಿ ಮಂಜೂರಾದ ಠರಾವು

ಹೀಗೆಂದು ಮಹಾತ್ಮರು ಹೇಳಿದರು. ತಮ್ಮ ಭಾಷಣವನ್ನು ಮುಂದೆ ಸಾಗಿಸುತ್ತಾ, ಅಹಿಂಸಾ ತತ್ವವನ್ನು ಅಕ್ಷರಶಃ ಪಾಲಿಸಿದರೆ, ಜಾತಿ ಜಾತಿಗಳಲ್ಲಿ ಸೌಹಾರ್ದ ಭಾವನೆಯು ತಾನಾಗಿಯೇ ಉಂಟಾಗುವದೆಂದು ಹೇಳಿದರು.

### ಒಪ್ಪಂದವೇ?

"ಬ್ರಿಟಿಷ ಸರಕಾರದವರೊಡನೆ ಒಪ್ಪಂದ ಮಾಡಿಕೊಳ್ಳಲು ನಾನು ಪ್ರಯತ್ನಿಸುತ್ತಿದ್ದೇನೆಂದು ನೀವು ನನ್ನನ್ನು ಟೀಕಿಸುತ್ತೀರಿ. ಒಪ್ಪಂದವೆಂಬುದು ಸತ್ಯಾಗ್ರಹದ ಮೂಲ ತತ್ವ. ಪ್ರಸಂಗ ಬಂದರೆ ಐದು ಸಲವಲ್ಲ, ಐವತ್ತು ಸಲ ವ್ಯಾಸರಾಯರ ಬಳಿಗೆ ಹೋಗಲು ನಾನು ಸಿದ್ಧನಿದ್ದೇನೆ. ಇದರಿಂದ ನನಗೆ ಎಳ್ಳಷ್ಟೂ ನಾಚಿಕೆಯಿಲ್ಲ. ದಕ್ಷಿಣ ಆಫ್ರಿಕದಲ್ಲಿದ್ದಾಗ ನಾನಾಗಿಯೇ ಜನರಲ್ ಸ್ಮಟ್ಸರನ್ನು ಕಂಡಿದ್ದೆ. ಡಚ್ ಮತ್ತು ಇಂಗ್ಲೀಷ ಜನರು ನನ್ನ ವೈರಿಗಳೆಂದು ತಿಳಿದಿದ್ದರೆ, ದಕ್ಷಿಣ ಆಫ್ರಿಕದಲ್ಲಿ ನನ್ನ ದೇಶಬಾಂಧವರಿಗೆ ಸ್ವಲ್ಪವೂ ಅನುಕೂಲವಾಗುತ್ತಿರಲಿಲ್ಲ. ನಾನು ಎಲ್ಲರನ್ನೂ ಪ್ರೀತಿಸುತ್ತಿದ್ದುದರಿಂದಲೇ ಅವರಿಗೆ ಅನುಕೂಲಮಾಡಿಕೊಡಲು ಸಾಧ್ಯವಾಯಿತು"

ಸದ್ಯದ ಪರಿಸ್ಥಿತಿಯನ್ನು ಉಲ್ಲೇಖಿಸಿ ಮಹಾತ್ಮರು ಹೀಗೆ ಹೇಳಿದರು:

### ಹೋರಾಟಕ್ಕೆ ಸಿದ್ಧತೆಬೇಕು

"ಈಗಿನ ಪರಿಸ್ಥಿತಿಯನ್ನು ನೋಡಿದರೆ ಹೋರಾಟವಾಗಲೇ ಬೇಕೆಂದು ನನಗೂ ಅನಿಸುತ್ತದೆ. ಆದರೆ ನಾನು ಆತುರಪಡುವದಿಲ್ಲ. ಯಾವದೇ ಸೈನ್ಯವು ಮುಂದೆ ನುಗ್ಗುವ ಮೊದಲು ಸಂಪೂರ್ಣ ಸಿದ್ಧವಾಗಿರಬೇಕು. ಸೇನಾಪತಿಯು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ಸೈನ್ಯವು ಯಶಸ್ವಿಯಾಗಿ ಮುಂದೆ ನುಗ್ಗಲಾರದು. ಅದರಂತೆ ನಾನೂ ಮಾಡಬೇಕಾಗಿದೆ. ಹೋರಾಟಕ್ಕೆ ನಾವು ಈಗಲೇ ಸಿದ್ಧರಿರುವೆವೆಂದು ನನಗಂತೂ ಅನಿಸುವದಿಲ್ಲ. ಹೋರಾಟವು ಪ್ರಾರಂಭವಾಗಬೇಕಾದರೆ ಅದಕ್ಕೆ ತಕ್ಕ ಸಿದ್ಧತೆಬೇಕು; ಅದರ ಕರಾರುಗಳು ಪೂರ್ಣವಾಗಬೇಕು.

'ಈಗ ನಮಗೆ ಕಷ್ಟಗಳಿವೆ. ಒಳಗಿನ ಕಷ್ಟಗಳೂ ಇವೆ. ಹೊರಗಿನ ಕಷ್ಟಗಳೂ ಇವೆ. ಹೊರಗಿನ ಕಷ್ಟಗಳಿಂದ ಸತ್ಯಾಗ್ರಹಕ್ಕೆ ವಿಶೇಷ ಹಾನಿಯಾಗುವದಿಲ್ಲ. ಆದರೆ ಒಳಗಿನ ಕಷ್ಟಗಳ ಬಗ್ಗೆ ಮಾತ್ರ ನಾವು ವಿಶೇಷ ಮಹತ್ವ ಕೊಡಲೇಬೇಕು; ನಮ್ಮಲ್ಲಿ ಈಗ ಶಿಸ್ತು ಸಾಕಷ್ಟಿಲ್ಲ. ಹಿಂಸಾತ್ಮಕ ವಾತಾವರಣವು ತುಂಬಿದೆ. ಈ ತೊಂದರೆಗಳು ದೂರಾದ ಮೇಲೆಯೇ ನಾನು ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸುವೆನು.

'ಇನ್ನು ಒಂದೇ ತಿಂಗಳಲ್ಲಿ ಚಳವಳಿಯನ್ನು ಪ್ರಾರಂಭಿಸಲು ನಾನು ಸಿದ್ಧನಿದ್ದೇನೆ. ಆದರೆ ನನ್ನ ಶರತ್ತುಗಳಿಗೆ ನೀವು ಒಪ್ಪಬೇಕು; ಈ ಕಷ್ಟಗಳು ಬಗೆಹರಿಯುವಂತೆ ಮಾಡಬೇಕು' ಎಂದು ಮಹಾತ್ಮಾ ಗಾಂಧಿಯವರು ಸುಮಾರು ಅರ್ಧ ತಾಸಿನ ವರೆಗೆ ಮಾತನಾಡಿದರು.

### ಪಾಟ್ನಾದ ಠರಾವು

ಪಾಟ್ನಾದಲ್ಲಿ ಫೆಬ್ರುವರಿ ತಾ. ೨೮ ರಂದು ಸೇರಿದ ಕೊಂಗ್ರೆಸ್ಸು ವರ್ಕಿಂಗ್ ಕಮಿಟಿಯು ಹಿಂದೀಯ ರಾಜಕೀಯ ಪ್ರಶ್ನೆಯ ಕುರಿತು ಈ ಸಾರಾಂಶದ ಠರಾವನ್ನು ಮಂಜೂರು ಮಾಡಿದೆ. ಅದೇ ಈ ಸಲದ ಕಾಂಗ್ರೆಸಿನಲ್ಲಿ ಮಂಜೂರಾದ ಮುಖ್ಯ ಠರಾವಾಗಿತ್ತು.

'ಹಿಂದೀಯರ ಅಭಿಪ್ರಾಯವನ್ನು ಕೇಳದೆ ಬ್ರಿಟಿಷ ಸರಕಾರವು ಹಿಂದೂಸ್ಥಾನವು ಯುದ್ಧದಲ್ಲಿ ಸೇರಿದೆಯೆಂದು ಹೊರಡಿಸಿದ್ದ ಪ್ರಸಿದ್ಧ ಪತ್ರಿಕೆ ಮತ್ತು ಈ ಯುದ್ಧಕ್ಕಾಗಿ ಹಿಂದೀಯ ಜನರನ್ನೂ, ಧನವನ್ನೂ ಬ್ರಿಟಿಷರು ದುರುಪಯೋಗಿಸುವ ಅವರ ಕಾರ್ಯಕ್ರಮಗಳು ಹಿಂದೀಯರಿಗೆ ಅವಮಾನಕರವೆಂದು ಈ ಸಮಿತಿಯು ಅಭಿಪ್ರಾಯಪಡುತ್ತದೆ. ಬ್ರಿಟಿಷ ಸರಕಾರದ ಹೇಳಿಕೆಗಳಿಂದ ಈಗಿನ ಯುದ್ಧವನ್ನು ಬ್ರಿಟಿಷರು ಅವರ ಸಾಮ್ರಾಜ್ಯಶಾಹಿಯ ಉಪಯೋಗಕ್ಕಾಗಿ ಮುಂದುವರಿಸುತ್ತಿದ್ದಾರೆಂದು ಸ್ಪಷ್ಟ ಮಾಡುತ್ತದೆ. ಬ್ರಿಟಿಷ ಸಾಮ್ರಾಜ್ಯವು ಹಿಂದೀಯರನ್ನೂ, ಏಷಿಯಾ ಖಂಡದ ಮತ್ತು ಆಫ್ರಿಕದ ಇತರ ಜನರನ್ನೂ ದುರುಪಯೋಗ ಮಾಡಿ ವ್ಯವಸ್ಥಾಪಿಸಿಕೊಂಡಿದೆ. ಕೊಂಗ್ರೆಸ್ಸು ಪ್ರತ್ಯಕ್ಷವಾಗಿ, ವ ಅಪ್ರತ್ಯಕ್ಷವಾಗಿ ಈ ಯುದ್ಧದಲ್ಲಿ ಭಾಗವಹಿಸಿದರೆ ಹಿಂದೀಯರನ್ನು ದುರುಪಯೋಗಿಸುವ ಸಾಮ್ರಾಜ್ಯಶಾಹಿಯನ್ನು ಮುಂದರಿಸಿದಂತಾಗುವುದು. ಬ್ರಿಟಿಷರಿಗಾಗಿ ಹಿಂದೀಯ ಸೈನಿಕರನ್ನು ಯುದ್ಧಮಾಡಿಸುವ ಬ್ರಿಟಿಷ್ ಧೋರಣೆಯನ್ನು ಕೊಂಗ್ರೆಸ್ಸು ಬಲವಾಗಿ ವಿರೋಧಿಸುತ್ತದೆ. ಹಿಂದೀಯರ ತನು ಮತ್ತು ಧನವನ್ನು ಈ ಯುದ್ಧಕ್ಕಾಗಿ ಬ್ರಿಟಿಷರು ಉಪಯೋಗಿಸುವ ಪ್ರಯತ್ನವನ್ನು ಕೊಂಗ್ರೆಸ್ ಬಲವಾಗಿ ನಿಷೇಧಿಸುತ್ತದೆ.

'ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕಿದೆಯೆಂದೂ, ಬೇರೆ ಯಾವ ವಿಧದ ಸ್ವಾತಂತ್ರ್ಯ, ವ, ಸುಧಾರಣೆಗಳಿಂದಲೂ ಹಿಂದೀಯರು ತೃಪ್ತರಾಗಲಿಕ್ಕಿಲ್ಲವೆಂದೂ, ಕೊಂಗ್ರೆಸ್ಸು ಪುನಃ ಒತ್ತಿ ಹೇಳುತ್ತದೆ. ಹಿಂದೀಯರ ರಾಜಕೀಯ ಸ್ಥಿತಿಯನ್ನು, ಹಿಂದೀಯರೇ ನಿರ್ಧರಿಸಿ ಮಾಡಿ ರಚಿಸಬೇಕಿದೆ; ಲೋಕದ ಇತರ ರಾಷ್ಟ್ರಗಳೊಡನೆ ನಮ್ಮ ಸಂಬಂಧ ಹೇಗಿ[...] ಬೇಕೆಂದು ಹಿಂದೀಯರೇ ನಿರ್ಧಾರ ಮಾ[...] ಬೇಕಿದೆ. ಇದಕ್ಕಾಗಿ ಹಿಂದೀಯರಿಂ[...] ಪ್ರಾಯಸ್ಥರ ಮತದಾನದಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಒಂದು ರಾಷ್ಟ್ರಘಟನಾ ಸಮಿತಿಯು ರಚಿತವಾಗಬೇಕಾಗಿದೆ. 'ಜಾತೀಯ ಪ್ರಶ್ನೆಯನ್ನು ಪ್ರತಿಯೊಂದು ಪಕ್ಷಕ್ಕೂ ನ್ಯಾಯವಾಗುವ ರೀತಿಯಲ್ಲಿ ಬಗೆಹರಿಸಲು ಕೊಂಗ್ರೆಸ್ಸು ಸಿದ್ಧವಿದ್ದಂತೆ ಮು[...] ದಕ್ಕೂ ಸಿದ್ಧವಿದೆ. ಯೋಗ್ಯವಾದ ಒಂದು ಒಪ್ಪಂದ ಮಾಡಲು ರಾಷ್ಟ್ರಘಟನಾ ಸಮಿತಿಯಿಂದ ಮಾತ್ರ ಸಾಧ್ಯವೆಂದು ಕೊಂಗ್ರೆಸ್ಸಿನ ಅಭಿಪ್ರಾಯವಾಗಿದೆ. ಹಿಂದೀಯ[...] ರಾಜಕೀಯ ಯೋಜನೆಯು ಸ್ವಾತಂತ್ರ್ಯ, ಪ್ರಜಾಸತ್ತೆ ಮತ್ತು ರಾಷ್ಟ್ರೀಯ ಒಗ್ಗಟ್ಟು ಈ ತತ್ವಗಳನ್ನು ಹೊಂದಿರತಕ್ಕದ್ದು. ಹಿಂದೀಯ ರಾಷ್ಟ್ರವನ್ನು ವಿಂಗಡಿಸಿ, ಅದನ್ನು ವಿಭಾಗ ಮಾಡಲು ನಡೆಯುವ ಪ್ರಯತ್ನಗಳನ್ನು ಕೊಂಗ್ರೆಸ್ಸು ನಿರಾಕರಿಸುತ್ತದೆ.

'ಹಿಂದೀಯ ಸ್ವಾತಂತ್ರ್ಯಕ್ಕೆ ಹಿಂದಿ[...] ಆಶ್ರಿತ ಅರಸರೂ, ಪರಕೀಯ ಬಂಡವಾ[...] ಳಿಗರ ಹಕ್ಕು ಭಾಧ್ಯತೆಗಳೂ ಅಡ್ಡಗಾಲ[...] ಹಾಕುವುದನ್ನು ಕೊಂಗ್ರೆಸ್ಸು ಸಹಿಸಲಾ[...] ರದು. ಆಶ್ರಿತ ಅರಸರಿಂದ ಹಿಂದೀಯ ರಾಜಕೀಯ ಯೋಜನೆಯ ಕುರಿತು ಬ[...] ದಿರುವ ತೊಂದರೆಗಳು ಬ್ರಿಟಿಷರ ಕಲ್ಪ[...] ಯೆಂದು ಕೊಂಗ್ರೆಸಿನ ಅಭಿಪ್ರಾಯವಾ[...] ಗಿದೆ. ಪರಕೀಯರ ರಾಜ್ಯಭಾರವು ತಪ್ಪಿ ಹಿಂದೀಯ ರಾಷ್ಟ್ರವು ಸ್ವಾತಂತ್ರ್ಯವಾಗಿ[...] ಎಂದು ಸ್ಪಷ್ಟಮಾಡುವ ತನಕ ಈ ಆತ[...] ಕಗಳು ಕಂಡುಬರುವುವು. 'ಹಿಂದೀಯರು ಬ್ರಿಟಿಷರ ಯುದ್ಧದಲ್ಲಿ ಭಾಗವಹಿಸಲಾರರೆಂದು ಸ್ಪಷ್ಟಮಾಡಿ, ಹಿಂದೀಯ[...] ಸ್ವಾತಂತ್ರ್ಯ ಸಂಪಾದನೆಯೇ ಕೊಂಗ್ರೆಸಿ[...] ಗುರಿ ಎಂದು ಲೋಕಕ್ಕೆ ಸಿದ್ಧಾಂತಗೊ[...] ಸಲು ಕೊಂಗ್ರೆಸು ಬಹುಮತವಿ[...] ಪ್ರಾಂತ್ಯಗಳಿಂದ ಮಂತ್ರಿಗಳು ರಾ[...] ನಾಮೆ ಕೊಟ್ಟದ್ದಾಗಿದೆ. ಇದರ ಮುಂ[...] ದಿನ ಹಜ್ಜೆಯು ಕಾನೂನು ಭಂಗ ಚ[...] ವಳಿ ಹೂಡುವುದಾಗಿದೆ. ರಾಷ್ಟ್ರವು [...] ದಕ್ಕೆ ಸಿದ್ಧವಿದೆ ಎಂದು ತಿಳಿದ ಕೂಡ[...] ಕೊಂಗ್ರೆಸ್ಸು ತಡಮಾಡದೆ ಧೈರ್ಯದಿಂ[...] ಕಾನೂನುಭಂಗ ಚಳವಳವನ್ನು ಹೂಡ[...] ವುದು; ಇಲ್ಲವೆ, ಕೊಂಗ್ರೆಸು ಇಂಥ[...] ಚಳವಳ ಹೂಡಲೇಬೇಕೆಂಬ ಪರಿಸ್ಥಿ[...] ಹುಟ್ಟಿದರೆ ಆ ಕೂಡಲೆ ಚಳವಳವನ್ನು ಹೂಡಲಾಗುವುದು.'

'ಜಾತಿ, ಮತ, ಪಂಗಡಗಳೆಂಬ ಬೇ[...] ಭಾವವಿಲ್ಲದೆ ಹಿಂದೀ ರಾಷ್ಟ್ರದ ಮನೋ ಭಾವವನ್ನು ಕೊಂಗ್ರೆಸ್ಸು ಪ್ರತಿಬಿಂಬಿಸುತ್ತದೆ. ಹಿಂದೀ ರಾಷ್ಟ್ರದ ಸ್ವಾತಂತ್ರ್ಯ ಹೋರಾಟವೆಂದರೆ ಹಿಂದೀ ಜನಾಂಗ[...] ಸ್ವಾತಂತ್ರ್ಯಕ್ಕೆ ಹೋರಾಟವಾಗಿದೆ. ಆದ[...] ರಿಂದ ಪ್ರತಿಯೊಬ್ಬ ಹಿಂದೀಯನೂ ಜಾತಿ, ಮತ, ಪಕ್ಷಗಳೆಂಬ ಭಿನ್ನ ಭೇ[...] ಗಳಿಲ್ಲದೆ ಈ ಹೋರಾಟದಲ್ಲಿ ಭಾಗವ[...] ಸುವನೆಂದು ಕೊಂಗ್ರೆಸ್ಸು ನಂಬಿದೆ.'




# ಕಾಂಗ್ರೆಸು ನಗರದಲ್ಲಿ ಭೀಕರ ನೆರೆಹಾವಳಿ!

## ಗಾಂಧಿಜಿಯವರು ಆಂದೋಲನ ನಡೆಸುವರೆ?

### ಪ್ರೇಕ್ಷಕರ ಅಪೂರ್ವ ಉತ್ಸಾಹ

## ಲಾಹೋರಿನಲ್ಲಿ ಗುಂಡುಹಾರಿಸಿದರು

### ಒಡ್ಡಾಯರನ್ನು ಗುಂಡಿಕ್ಕಿ ಕೊಂದರು

...ಂಜಾಬಿನಲ್ಲಿ ಗತ ...ಸಿದ ಅತ್ಯಾಚಾರ ...ಬ್ಬನನ್ನು ವಧಿಸಿದ ...ವರು ಹಾಗೆ ಮಾಡಿ ...ದೆ ೩೯ ವರ್ಷ ...ವರರಂತೆ ತನ್ನ ...ದ್ದರಲ್ಲಿ ವಿಚಾರಣೆ ...ದಿಂದ ಇದ್ದರು

**...ು ಹೆಸರು**

...ನ್ನು ಕೊಂದು ಇತರ ...ವ ಆ ಅಪರಾಧಿಯು ... ಸಿಂಗ್ ಅಜಾದ್' ...ಸಿಂಗ್' ಎಂದೂ, ...' ಎಂದೂ ಮೂರು ...ಾಗಿದೆ

**...ಭಾಸ ಬೋಸರು**

ಸುಭಾಸಬೋಸರ ... ವಿರುದ್ಧ ಪರಿಪತ್ರ ... ಅದಕ್ಕೆ ಬೋಸರು ...ಟ್ಟಿದ್ದಾರೆ ಅದರ ...ಸ್ವಾಮಿ ಸಹಜಾನಂ ...ಬೋಸರು ರಾವು ...ನಕ್ಕೆ ಒಂದುಂಗ ...ತ್ತು

...ಾಲಾಜಾರ್

**...ರ ಬಂಧನ**

...ನೇಂದ್ರ ಮೂಕರ್ಜಿ ...ಶೀಪದ ಮೂಕರ್ಜಿ ...ಸ್ಥಾನದ ಸಂರಕ್ಷಕ ...ರೆ ಹಿಡಿದಿದೆ. ...ಡೋಗ್ರಾಮಿ ಪಕ್ಷದ ...ಬ್ಬರಾದ ಮೌಲಿ ...ವರಿ ಇವರನ್ನು ...ಂರಕ್ಷಕಕಾಯ್ದೆಯ ...ಲಾಗಿದೆ. ...ಮದಾರ, ಮಹೀಂದ್ರ ...ವಾನ ವಿಶ್ವಾಸ,

ಚಿತ್ತರ ಒನಡೆ 'ಕೃಷ್ಣಲಾಲ ಸಹಾ, ಮತ್ತು ಡಾ। ರಾಕಬಿಹಾರಿದಾಸ ಇವರಿಗೆ ೧೮ ತಿಂಗಳ ಸಕವು ಶಿಕ್ಷೆ ೨೦೦ ರೂ ದಂಡ ಕೊಡದಿದ್ದರೆ ವತ್ತೆ ೬ ತಿಂಗಳ ಶಿಕ್ಷೆ ವಿಧಿಸಲಾಯಿತು ಹಿಂದುಸ್ಥಾನ ಸಂರಕ್ಷಕ ಕಾಯಿದೆಯ 'ನ್ವಯ ಇವರ ಮೇಲೆ ಖಟ್ಲೆ ಹಾಕಲಾಗಿತ್ತು

ವೀರೇಂದ್ರಚಂದ್ರ ಚಟರ್ಜಿ, ಸುರೇಂದ್ರನಾಥ ಸಂಕಲ ಸತೀಶ್ವರ ಚತರ್ಜಿ ವಿಜಯಕೃಷ್ಣಪಾಲ ಇವರ ಮೇಲೆ ನೋಟೀಸ ಬಜಾಯಿಸಿ ಸಂಯುಕ್ತಪ್ರಾಂತದಿಂದ ಹೊರಟು ಹೋಗಲು ವಿಧಿಸಲಾಗಿದೆ

ಕಾಂಗ್ರೆಸ ಸಮತಾವಾದ ಪಕ್ಷದ ಕಾರ್ಯಕಾರಿ ಮಂಡಳದ ಸದಸ್ಯರಾದ ಸಯ್ಯದ ಜಹೀರರು ಹಿಂದುಸ್ಥಾನ ಸಂರಕ್ಷಕ ಕಾಯಿದೆಯನ್ವಯ ಸೆರೆಹಿಡಿಯಲ್ಪಟ್ಟಿರುವರು.

ನರವಾದ ಮೂಕರ್ಜಿ ... ಎಲ್ ಎ. ಇವರ ಮಕ್ಕಳೂ ಕವ್ಯಸಿಷ್ಟ ಮುಂದಾಳುಗಳೂ ಆದ ಸಕಿಲ ಮೂಕರ್ಜಿ ಇವರನ್ನು ಹಿಂದುಸ್ಥಾನ ಸಂರಕ್ಷಕ ಕಾಯ್ದೆಯನ್ವಯ ಸೆರೆಹಿಡಿದಿದೆ

**ಹೊಸ ವರ್ಕಿಂಗ್ ಕಮಿಟಿ**

ಮೌಲಾನಾ ಅಬುಲ್ ಕಲಮ್ ಆಜಾದರು ಹೊಸ ವರ್ಕಿಂಗ್ ಕಮಿಟಿಯ ಸದಸ್ಯರ ಹೆಸರನ್ನು ಪ್ರಕಟಿಸಿರುವರು. ಅದು ಹೀಗೆ ಇದೆ ೧ ಬಾಬೂರಾಜೇಂದ್ರ ೨ ಪಂಡಿತ ನೆಹರು ೩ ಶ್ರೀ। ಸಿ ರಾಜಗೋಪಾಲಾಚಾರಿ ೪ ಸರ್ದಾರ ಪಟೇಲ ೫ ಖಾನ್ ಅಬ್ದುಲ್ ಗಫರ್ ಖಾನ್ ೬ ಪ್ರೊ। ಪಿ ಸಿ. ಘೋಷ ೭ ಶ್ರೀಮತಿ ಸರೋಜಿನಿ ನಾಯುಡು ೮ ಶ್ರೀ ಶಂಕರ ರಾವದೇವ್ ೯ ಶ್ರೀ ಭುಲಾಬಾಯಿ ದೇಸಾಯಿ ೧೦ ಸೇಟ್ ಜಮ್ನಾಲಾಲ ಬಜಾಜ ೧೧ ಮಿ। ಅಸಫ್ ಅಲಿ ೧೨ ಡಾ। ಸಯ್ಯದ್ ಮಹಮ್ಮದ್ ೧೩ ಮತ್ತು ಆಚಾರ್ಯ, ಕೃಪಾಲಿನಿ ಒಂದು ಸ್ಥಾನವು ಖಾಲಿಯಾಗಿರಿಸಿದೆ

**ಮುಂದಿನ ಕಾಂಗ್ರೆಸು ಅಧಿವೇಶನ**

ಬರುವ ಕಾಂಗ್ರೆಸು ಅಧಿವೇಶನದ ಬಗ್ಗೆ ಪಂಜಾಬ್, ಗಡಿನಾಡು, ಮದ್ರಾಸು ಮತ್ತು ನಾಗಪುರಗಳಿಂದ ಆಮಂತ್ರಣ ಬಂದಿತ್ತು. ಮದ್ರಾಸಿನಲ್ಲಿ ಆಗಬೇಕೆಂದು ಸತ್ಯಮೂರ್ತಿ ಮತ್ತು ರಾಜಾಜಿಯವರು ವಾದಿಸಿದರು. ಗಡಿನಾಡಿನಲ್ಲಿ ಆಗಬೇಕೆಂದು ಖಾನ್ ಅಬ್ದುಲ್ ಗಫರ್ ಖಾನ್ ಮತ್ತು ಪಂಡಿತ ನೆಹರುಗಳು ವಾದಿಸಿದರು, ಬರುವ ವರ್ಕಿಂಗ್ ಕಮಿಟಿಯು ಅದನ್ನು ನಿರ್ಣಯಿಸುವುದಾಗಿ ತಿಳಿದಿದೆ.

ಅಧಿವೇಶನವು ಮುಗಿದು ಮುಖಂಡರು ತವ್ಮ ಪ್ರಾಂತಕ್ಕೆ ಮರಳಿದರು

**ಕಾಂಗ್ರೆಸು ಬಹಿರಂಗ ಸಭೆ**

ಕಾಂಗ್ರೆಸು ಬಹಿರಂಗ ಸಭೆಯು ರಾಷ್ಟ್ರಪತಿ ಮೌಲಾನಾ ಆಜಾದರ ಅಧ್ಯಕ್ಷತೆಯಲ್ಲಿ ಸೇರಿತು ಕಮ್ಯುನಿಸ್ಟರ ಪರವಾಗಿ, ಪಂಜಾಬಿನ ಚಿತಾಲೀ ಮತ್ತು ಗೋಪಾಲಸಿಂಗರು ಪಾಟ್ನ ಠರಾವಿನ ಉಪಸೂಚನೆಯನ್ನು ಅನುಮೋದಿಸಿ ಮಾತನಾಡಿದರು ಪಂಡಿತ ನೆಹರುಗಳು ಅವುಗಳಿಗೆ ಉತ್ತರವೀಯುತ್ತಾ ಕಾಂಗ್ರೆಸು ಇಂದು ಆಂದೋಲನವನ್ನು ಆರಂಭಿಸುವ ಸಂದರ್ಭಕ್ಕೆ ಸಮೀಪಿಸಿರುವಾಗ ಎಲ್ಲರೂ ಶಿಸ್ತು ವಿಧೇಯತೆಗಳಿಂದ ನಡೆಯಬೇಕೆಂದು ಸಾರಿ ಹೇಳಿದರು.

ಎಲ್ಲಾ ಉಪಸೂಚನೆಗಳೂ ಬಿದ್ದುಹೋಗಿ ಪಾಟ್ನಾ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು

ಆ ವೇಳೆ ಮಹಾತ್ಮಾಜಿಯವರು ೩೫ ಮಿನಿಟುಗಳ ತನಕ ಭಾಷಣವಿತ್ತರು ತನ್ನ ಕಾರ್ಯಕ್ರಮ, ತತ್ವಗಳಲ್ಲಿ ಕಾಂಗ್ರೆಸಿಗೆ ವಿಶ್ವಾಸವನ್ನು ಕಳೆದುಕೊಂಡ ವಿನಹ ತಾನ ಆ ದೋಲನವನ್ನು ಆರಂಭಿಸಲಾರೆನೆಂದರು ಜನರ ಇಂದಿನ ಸತ್ಯಾಗ್ರಹ ಶಬ್ದವನ್ನು ಮರುಳರಂತೆ ಉಪಯೋಗಿಸುವುದನ್ನು ಖಂಡಿಸಿದರು. ಜನರು ವಿಶ್ವಾಸವನ್ನು ವಿಧೇಯತೆಯನ್ನು ತೋರಿಸದಿದ್ದರೆ, ಮುಂದಿನ ಹೋರಾಟವು ತನಗೂ ದೇಶಕ್ಕೂ ಅಪಜಯವನ್ನೇ ತರುವುದು ಎಂದು ಎಚ್ಚರಿಸಿದರು ಕೊನೆಗೆ ಸ್ವರಾಜ್ಯ ಸಾಧನೆಯಾಗಿ ಚರಕ, ಖಾದಿ ಮತ್ತು ಅಹಿಂಸೆಗಳು ಮೂರು ಮುಖ್ಯ ಆಧಾರ ಸ್ತಂಭಗಳೆಂದ ತಿಳಿಸಿದರು

ಹವೆಯು ತನ್ನಾಗಿರಲಿಲ್ಲ ಮಳೆಯು ಜೋರಾಗಿ ಸುರಿಯುತ್ತಿತ್ತು ನಾವು ಮುಂದೆ ಎದುರಿಸಲಿರುವ ವಿಪತ್ತನ್ನು ಈ ಮಳೆಯು ಸೂಚಿಸುತ್ತದೆಯೆಂದರು ರಾಷ್ಟ್ರಪತಿಗಳು ಮಳೆ ಸುರಿಯುತ್ತಿದ್ದ ಅಧಿವೇಶನದ ಕಾರ್ಯಕ್ಕೆ ತೊಂದರೆಯುಂಟಾಯಿತು.

ಬಹಿರಂಗ ಸಭೆಯಲ್ಲಿ ನೆಹರುಗಳು ಪಾಟ್ನಾ ಠರಾವನ್ನು ತಂದರು. ಕೃಪಾಲನಿಯವರು ಅನುಮೋದಿಸಿದರು.

ಜನರು ಹಿಡಿದುಕೊಂಡಿದ್ದ ಕೊಡೆಯನ್ನು ಮುಡಚಿಡುವಂತೆ ನೆಹರುಗಳು ಬಿನ್ನಯಿಸಿಕೊಂಡರು. ಆದರೂ ಜನರು ಉತ್ಸಾಹದಿಂದ ಆವೇಶದಿಂದ ಅಧಿವೇಶನದಲ್ಲಿ ಭಾಗವಹಿಸಿದ್ದರು. ಅಧಿವೇಶನವು ಮುಗಿವವರೆಗೂ ಅವರು ಚಲಿಸದೆ ನಿಂತಿದ್ದರು. ಭಾಷಣಕಾರರ ಸ್ವರವು ಅಸ್ಪಷ್ಟವಾಗಿದ್ದರೂ, ಲೌಡ್ ಸ್ಪೀಕರುಗಳು ಗಂಭೀರವಾಗಿ ಧ್ವನಿಸುತಿದ್ದವು.

ಸ್ವಯಂಸೇವಕರು ಶಿಸ್ತಿನಿಂದ ಪ್ರಯತ್ನಪೂರ್ವಕ ಕೆಲಸಮಾಡುತ್ತಿದ್ದರು

ಇದು ಕಾಂಗ್ರೆಸು ಕೆಲಸಗಾರರಿಗೆ ಒಂದು ಪಾಠ, ಮುಂದೆ ರಾಷ್ಟ್ರದ ಸಲುವಾಗಿ ಪಡತಕ್ಕ ಕಷ್ಟಗಳನ್ನು ದೇವರು ನಮಗೆ ತಿಳಿಸಿದನು' ಎಂದು ಗಾಂಧಿಜಿಯವರಂದರು.

**ಹಿಂದೂ ಮುಸಲ್ಮಾನರ ಒಕ್ಕಟ್ಟಿನ ಬಗ್ಗೆ ಸಮ್ಮೇಲನ**

**ರಾಷ್ಟ್ರಪತಿ ಅಝಾದರ ವಿಚಾರ**

ಹಿಂದೂ ಮುಸಲ್ಮಾನರ ಒಕ್ಕಟ್ಟಿನ ಬಗ್ಗೆ ವಿಚಾರ ವಿನಿಮಯ ಮಾಡಿ ಮುಂದಿನ ಮಾರ್ಗವನ್ನು ನಿರ್ಧರಿಸುವುದಕ್ಕಾಗಿ ಮೌಲಾನಾ ಅಬುಲ್ ಕಲಂ ಆಝಾದರು ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಅಧ್ಯಕ್ಷರ ಮುಖ್ಯ ಪ್ರಮುಖ ಕಾಂಗ್ರೆಸಿನ ಸಭೆಯನ್ನು ಕರೆದಿದ್ದಾರೆಂದು ಯು. ನೈಟೆಡ್ ಪ್ರೆಸ್ಸಿಗೆ ತಿಳಿದುಬಂದಿದೆ

ಜಮುನಾಲಾಲ್ ಬಜಾಜ್

ಗಾಂಧಿಯವರು ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಅಧ್ಯಕ್ಷರನ್ನು ಕರೆಸಿ ಅವರೊಡನೆ ಸದ್ಯಸ್ಥಿತಿಯ ಬಗ್ಗೆ ವಿಚಾರ ಮಾಡುವರೆಂದು ತಿಳಿದುಬರುತ್ತದೆ

**ಬೊಂಬಾಯಿ ಗಿರಣಿ ಮುಷ್ಕರವು**

ಇನ್ನೂ ಕೊನೆಗೊಂಡಿರುವುದಿಲ್ಲ. ಬೊಂಬಾಯಿಯ ಮೇಯರರು ರಾಜಿಮಾಡಲು ಪ್ರಯತ್ನ ನಡಿಸುತ್ತಿರುವರು. ಅವರು ಗಿರಣಿ ಮ್ಹಾಲಕರೊಡನೆ ಮಾತಾಡಿ ಇದೇ ತಾ ೧೮ರಲ್ಲು ಮಜೂರ ಪ್ರತಿನಿಧಿಗಳನ್ನು ಮಾತಾಡಲು ಕರೆದಿರುವರು. ಇದೇ ತಾ. ೧೭ನೇ ಸಂಜೆ ಮಜೂರರ ಪ್ರದರ್ಶನವೊಂದು ನಡೆದು ಮಜೂರ ಮುಖಂಡರು ರಾಜಿಗಾಗಿ ಕಳೆದ ವಾರ ನಡೆದ ಪ್ರಯತ್ನಗಳನ್ನು ವಿವರಿಸಿ ಹೇಳಿದರು. ಮಜೂರ ಮುಖಂಡರ ದಸ್ತಗಿರಿಯ ನಿಷೇಧಾರ್ಥವಾಗಿ ಇದೇ ತಾ. ೧೮ರಲ್ಲು ೨೪ ಫ್ಯಾಕ್ಟರಿಗಳ ಮುಷ್ಕರ ನಡೆಯಿತು. ಅನೇಕ ಅಂಗಡಿ ಮತ್ತು ಚಿಕ್ಕ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದವು. ಈ ಸಂಬಂಧವಾಗಿ ಪಹರೆಮಾಡುತ್ತಿದ್ದ ೨೪ ಮಂದಿ ಕೈದು ಮಾಡಲ್ಪಟ್ಟಿರುವರು. ಇವರಲ್ಲಿಗಿಂತ ಮುಂದಿ...



ವಲ್ಲಬಾಯಿ ಪಟೇಲ್

ಸ್ಟ್ರೇಯಿಡ್ ಕೇಂದ್ರ ಎಸೆಂಬ್ಲಿಯ ಮಜೂರ ಪ್ರತಿನಿಧಿ ಶ್ರೀ ಎನ್ ಎಮ್ ಜೋಶಿಯವರ ಇದೇ ತಾ ೧೮ರಲ್ಲು ಬೊಂಬಾಯಿಗೆ ಒಂದು ಮಜೂರ ಮುಖಂಡರ ಮತ್ತು ಮೇಯರರೊಡನೆ ಮಾತಾಡಿರುವರು, ಅವರು ಕೆಲದಿನ ಬೊಂಬಾಯಿಯಲ್ಲಿ ನಿಂತ ಮುಷ್ಕರವನ್ನು ನಡಿಸಲಿರುವರೆಂದ ತಿಳಿದುಬರುತ್ತದೆ

**ಮದ್ರಾಸ್ ಕೌನ್ಸಿಲ್ ಚುನಾವಣೆ ಕಾಂಗ್ರೆಸಿನ ವಿಜಯ**

ಮದ್ರಾಸ್ ಕೌನ್ಸಿಲಿಗೆ ಈ ಸಲ ನಡೆದ ... ಜನರಲ್ ಸೀಟುಗಳಲ್ಲಿ ...ನ್ನು ಕಾಂಗ್ರೆಸು ಪಡೆದು ... ವಿಜಯ ಹೊಂದಿರುವುದು ಶ್ರೀ ಸಿ ಎನ್ ಮುತ್ತುರಂಗ ಮುದಲಿಯಾರರು ದಿವಾನ್ ಬಹದ್ದೂರ್ ... ದೇವಶಿಖಾಮಣಿ ಮುದಲಿಯಾರರನ್ನು ೪ ಓಟುಗಳ ಒಹುಮತದಿಂದ ಗೆದ್ದಿರುವರು

**ಲಾಹೋರಿನಲ್ಲಿ ಗುಂಡು ಹಾರಿಸಿದರು**

ಕಾಸ್ಮಾರರ ಮೇಲೆ ಸರಕಾರ ಲಾಹೋರಿನಲ್ಲಿ ಗುಂಡು ಹಾರಿಸಿ, ೨ ಜನರು ಸತ್ತುಹೋಗಿರುವರು. ೩೯ ಮಂದಿ ಗಾಯವಾಗಿದೆ

ಸತ್ಯಮೂರ್ತಿ

# ಕಾಂಗ್ರೆಸು ಅಧಿವೇಶನದಲ್ಲಿ ಮಹಾತ್ಮರ ಭಾಷಣ

ನಿಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮವು ಗಾಂಧಿಯವರಿಂದಲೂ ಭರದಿಂದ ನಡೆಯುತ್ತದೆ. ಅದು [illegible] ನಿಂತಿಲ್ಲ. ನೀವಾಗಿಯೇ ನನ್ನನ್ನು ನಾಯಕನನ್ನಾಗಿ ಆರಿಸಿದ್ದೀರಿ. ಆದುದರಿಂದ ನೀವು ನಾನು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ನನಗೆ ಜಯ ಸಿಗಲಾರದು. ನಾನು ಹೇಳುವ ಎಲ್ಲ ಶರತ್ತುಗಳಿಗೂ ನೀವು ಒಪ್ಪಬೇಕು. ಇಲ್ಲದಿದ್ದರೆ ನಾನು ಹೋರಾಟವನ್ನು ಪ್ರಾರಂಭಿಸಲಾರೆ.

ನಾನು ಹೇಳಿದಂತೆ ಕೇಳಿ, ನಾನು ತೋರಿಸಿದ ಮಾರ್ಗದಲ್ಲಿ ಬರಲು ನೀವು ಸಿದ್ಧರಿಲ್ಲದಿದ್ದರೆ, ಬೇರೆ ನಾಯಕನನ್ನು ಆರಿಸಿ ಕೊಳ್ಳಿರಿ. ಬೇರೆಯವರು ಹೋರಾಟ ಪ್ರಾರಂಭಿಸುವದಕ್ಕೆ ನಾನು ಖಂಡಿತ ಅಡ್ಡಿ ಪಡಿಸುವದಿಲ್ಲ, ಆದರೆ ಕಾಂಗ್ರೆಸ್ಸಿನಲ್ಲಿ ಪ್ರತಿಯೊಬ್ಬರೂ ಶಿಸ್ತಿನಿಂದ ನಡೆಯಬೇಕು. ಹೇಳಿದಂತೆ ಕೇಳಬೇಕು. ಇದು ಸಾಧ್ಯವಿಲ್ಲದವರು ಕಾಂಗ್ರೆಸ್ಸನ್ನು ಬಿಟ್ಟು ಸ್ವತಂತ್ರವಾಗಿ ಹೋರಾಟವನ್ನು ಪ್ರಾರಂಭಿಸಬಹುದು"

ಎಂದು ಮಹಾತ್ಮಾ ಗಾಂಧಿಯವರು 'ರಾತ್ರಿ ಸಬ್‌ಜೆಕ್ಟ್ ಕಮಿಟಿಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಅವರು ಭಾಷಣ ಮಾಡುವ ಕಾಲಕ್ಕೆ ಸಂಪೂರ್ಣ ನಿಶ್ಶಬ್ದತೆಯಿದ್ದಿತು. ಸೂಜಿ ಬಿದ್ದರೆ ಸಹ ಕೇಳಿಸುತ್ತಿತ್ತು. ಪ್ರತಿಯೊಬ್ಬರೂ ಒಕ್ಕಟ್ಟು ಶಿಸ್ತು ಮತ್ತು ಅಹಿಂಸೆಗಳನ್ನು ಅಕ್ಷರಶಃ ಪಾಲಿಸಬೇಕೆಂದು ಮಹಾತ್ಮರು ಹೇಳಿದರು, ಇಲ್ಲದಿದ್ದರೆ ತಾವು ನಾಯಕರಾಗಲು ಸಿದ್ಧರಿಲ್ಲವೆಂದೂ ತಿಳಿಸಿದರು, ಬೇಕಾದರೆ ತಮ್ಮನ್ನು ಸ್ಥಾನಭ್ರಷ್ಟರನ್ನಾಗಿ ಮಾಡಬಹುದೆಂದೂ ಹೇಳಿದರು.

### ನನ್ನಲ್ಲಿ ವಿಶ್ವಾಸವಿದ್ದರೆ

'ಬಾಬು ರಾಜೇಂದ್ರಪ್ರಸಾದರು ಮಂಡಿಸಿದ ನಿರ್ಣಯವನ್ನು ನೀವು ಪ್ರಚಂಡ ಬಹುಮತದಿಂದ ಪಾಸುಮಾಡಿದ್ದೀರಿ. ಇದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ನನ್ನ ಮಾರ್ಗದಲ್ಲಿ ನಿಮಗೆ ವಿಶ್ವಾಸವಿದ್ದರೆ, ಸ್ವಸಂತೋಷದಿಂದ ನೀವು ನಾನು ಹೇಳಿದಂತೆ ಕೇಳಬೇಕು. ನಾನು ಮಹಾತ್ಮನೆಂದು ತಿಳಿದಿಲ್ಲ. ನಾನು ಮಹಾತ್ಮನಲ್ಲ. ನಿಮ್ಮಂತೆಯೇ ನಾನೂ ಒಬ್ಬನು. ಪರಮಾತ್ಮನ ದೃಷ್ಟಿಯಲ್ಲಿ ನಾವೆಲ್ಲರೂ ಒಂದೇ. ಜಿನ್ನಾಸಾಹೇಬರೂ ನನ್ನ ಬಂಧುಗಳು. ಯಾರ ವಿರುದ್ಧವೂ ನನಗೆ ಹಗೆತನವಿಲ್ಲ. [illegible] ಗಾಯ [illegible] ನನಗೆ ತುಂಬಾ [illegible]

## 'ವಿಧೇಯತೆಯಿಲ್ಲದ ಸೈನ್ಯವನ್ನು ಸೇನಾನಿಯು ನಡೆಸಲಾರನು'

### ಪಾಟ್ನಾದಲ್ಲಿ ಮಂಜೂರಾದ ಠರಾವು

ಹೀಗೆಂದು ಮಹಾತ್ಮರು ಹೇಳಿದರು. ತಮ್ಮ ಭಾಷಣವನ್ನು ಮುಂದೆ ಸಾಗಿಸುತ್ತಾ, ಅಹಿಂಸಾ ತತ್ವವನ್ನು ಅಕ್ಷರಶಃ ಪಾಲಿಸಿದರೆ, ಜಾತಿ ಜಾತಿಗಳಲ್ಲಿ ಸೌಹಾರ್ದ ಭಾವನೆಯು ತಾನಾಗಿಯೇ ಉಂಟಾಗುವದೆಂದು ಹೇಳಿದರು.

### ಒಪ್ಪಂದವೇ?

"ಬ್ರಿಟಿಷ ಸರಕಾರದವರೊಡನೆ ಒಪ್ಪಂದ ಮಾಡಿಕೊಳ್ಳಲು ನಾನು ಪ್ರಯತ್ನಿಸುತ್ತಿದ್ದೇನೆಂದು ನೀವು ನನ್ನನ್ನು ಟೀಕಿಸುತ್ತೀರಿ. ಒಪ್ಪಂದವೆಂಬುದು ಸತ್ಯಾಗ್ರಹದ ಮೂಲ ತತ್ವ. ಪ್ರಸಂಗ ಬಂದರೆ ಐದು ಸಲವಲ್ಲ, ಐವತ್ತು ಸಲ ವ್ಹಾಯಸರಾಯರ ಬಳಿಗೆ ಹೋಗಲು ನಾನು ಸಿದ್ಧನಿದ್ದೇನೆ. ಇದರಿಂದ ನನಗೆ ಎಳ್ಳಷ್ಟೂ ನಾಚಿಕೆಯಿಲ್ಲ. ದಕ್ಷಿಣ ಆಫ್ರಿಕದಲ್ಲಿದ್ದಾಗ ನಾನಾಗಿಯೇ ಜನರಲ್ ಸ್ಮಟ್ಸರನ್ನು ಕಂಡಿದ್ದೆ. ಡಚ್ ಮತ್ತು ಇಂಗ್ಲೀಷ ಜನರು ನನ್ನ ವೈರಿಗಳೆಂದು ತಿಳಿದಿದ್ದರೆ, ದಕ್ಷಿಣ ಆಫ್ರಿಕದಲ್ಲಿ ನನ್ನ ದೇಶಬಾಂಧವರಿಗೆ ಸ್ವಲ್ಪವೂ ಅನುಕೂಲವಾಗುತ್ತಿರಲಿಲ್ಲ. ನಾನು ಎಲ್ಲರನ್ನೂ ಪ್ರೀತಿಸುತ್ತಿದ್ದುದರಿಂದಲೇ ಅವರಿಗೆ ಅನುಕೂಲಮಾಡಿಕೊಡಲು ಸಾಧ್ಯವಾಯಿತು."

ಸದ್ಯದ ಪರಿಸ್ಥಿತಿಯನ್ನು ಉಲ್ಲೇಖಿಸಿ ಮಹಾತ್ಮರು ಹೀಗೆ ಹೇಳಿದರು:

### ಹೋರಾಟಕ್ಕೆ ಸಿದ್ಧತೆಬೇಕು

"ಈಗಿನ ಪರಿಸ್ಥಿತಿಯನ್ನು ನೋಡಿದರೆ ಹೋರಾಟವಾಗಲೇ ಬೇಕೆಂದು ನನಗೂ ಅನಿಸುತ್ತದೆ. ಆದರೆ ನಾನು ಆತುರಪಡುವದಿಲ್ಲ. ಯಾವದೇ ಸೈನ್ಯವು ಮುಂದೆ ನುಗ್ಗುವ ಮೊದಲು ಸಂಪೂರ್ಣ ಸಿದ್ಧವಾಗಿರಬೇಕು. ಸೇನಾಪತಿಯು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ಸೈನ್ಯವು ಯಶಸ್ವಿಯಾಗಿ ಮುಂದೆ ನುಗ್ಗಲಾರದು. ಅದರಂತೆ ನಾನೂ ಮಾಡಬೇಕಾಗಿದೆ. ಹೋರಾಟಕ್ಕೆ ನಾವು ಈಗಲೇ ಸಿದ್ಧವಿರುವೆವೆಂದು ನನಗಂತೂ ಅನಿಸುವದಿಲ್ಲ. ಹೋರಾಟವು ಪ್ರಾರಂಭವಾಗಬೇಕಾದರೆ ಅದಕ್ಕೆ ತಕ್ಕ ಸಿದ್ಧತೆಬೇಕು, ಅದರ ಕರಾರುಗಳು ಪೂರ್ಣವಾಗಬೇಕು.

'ಈಗ ನಮಗೆ ಕಷ್ಟಗಳಿವೆ. ಒಳಗಿನ ಕಷ್ಟಗಳೂ ಇವೆ. ಹೊರಗಿನ ಕಷ್ಟಗಳೂ ಇವೆ. ಹೊರಗಿನ ಕಷ್ಟಗಳಿಂದ ಸತ್ಯಾಗ್ರಹಕ್ಕೆ ವಿಶೇಷ ಹಾನಿಯಾಗುವದಿಲ್ಲ. ಆದರೆ ಒಳಗಿನ ಕಷ್ಟಗಳ ಬಗ್ಗೆ ಮಾತ್ರ ನಾವು ವಿಶೇಷ ಮಹತ್ವ ಕೊಡಲೇಬೇಕು; ನಮ್ಮಲ್ಲಿ ಈಗ ಶಿಸ್ತು ಸಾಕಷ್ಟಿಲ್ಲ. ಹಿಂಸಾತ್ಮಕ ವಾತಾವರಣವು ತುಂಬಿದೆ. ಈ ತೊಂದರೆಗಳು ದೂರಾದ ಮೇಲೆಯೇ ನಾನು ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸುವೆನು.

'ಇನ್ನು ಒಂದೇ ತಿಂಗಳಲ್ಲಿ ಚಳವಳಿಯನ್ನು ಪ್ರಾರಂಭಿಸಲು ನಾನು ಸಿದ್ಧನಿದ್ದೇನೆ. ಆದರೆ ನನ್ನ ಶರತ್ತುಗಳಿಗೆ ನೀವು ಒಪ್ಪಬೇಕು, ಈ ಕಷ್ಟಗಳು ಬಗೆಹರಿಯುವಂತೆ ಮಾಡಬೇಕು' ಎಂದು ಮಹಾತ್ಮಾ ಗಾಂಧಿಯವರು ಸುಮಾರು ಅರ್ಧ ತಾಸಿನ ವರೆಗೆ ಮಾತನಾಡಿದರು.

### ಪಾಟ್ನಾದ ಠರಾವು

ಪಾಟ್ನಾದಲ್ಲಿ ಫೆಬ್ರುವರಿ ತಾ. [illegible]ರಂದು ಸೇರಿದ ಕಾಂಗ್ರೆಸ್ಸು ವರ್ಕಿಂಗ್ ಕಮಿಟಿಯು ಹಿಂದೀಯ ರಾಜಕೀಯ ಪ್ರಶ್ನೆಯ ಕುರಿತು ಈ ಸಾರಾಂಶದ ಠರಾವನ್ನು ಮಂಜೂರು ಮಾಡಿದೆ. ಅದೇ ಈ ಸಲದ ಕಾಂಗ್ರೆಸಿನಲ್ಲಿ ಮಂಜೂರಾದ ಮುಖ್ಯ ಠರಾವಾಗಿತ್ತು.

'ಹಿಂದೀಯರ ಅಭಿಪ್ರಾಯವನ್ನು ಕೇಳದೆ ಬ್ರಿಟಿಷ ಸರಕಾರವು ಹಿಂದೂಸ್ಥಾನವು ಯುದ್ಧದಲ್ಲಿ ಸೇರಿದೆಯೆಂದು ಹೊರಡಿಸಿದ ಪ್ರಸಿದ್ಧ [illegible] ಈ ಯುದ್ಧಕ್ಕಾಗಿ ಹಿಂದೀಯ ಜನರನ್ನೂ ಧನವನ್ನೂ ಬ್ರಿಟಿಷರು ದುರುಪಯೋಗಿಸುವ ಅವರ [illegible]ಗಳು ಹಿಂದೀಯರಿಗೆ ಅವಮಾನಕರವೆಂದು ಈ ಸಮಿತಿಯ ಅಭಿಪ್ರಾಯವಾಗುತ್ತದೆ. ಬ್ರಿಟಿಷ ಸರಕಾರದ ಹೇಳಿಕೆಗಳಿಂದ ಈಗಿನ ಯುದ್ಧವನ್ನು ಬ್ರಿಟಿಷರು ಅವರ ಸಾಮ್ರಾಜ್ಯಶಾಹಿಯ ಉಪಯೋಗಕ್ಕಾಗಿ [illegible] ನಡೆಸುತ್ತಿದ್ದಾರೆಂದು ಸ್ಪಷ್ಟವಾಗುತ್ತದೆ. ಬ್ರಿಟಿಷ್ ಸಾಮ್ರಾಜ್ಯವು ಹಿಂದೀಯರನ್ನೂ ಆಶಿಯಾಖಂಡದ ಮತ್ತು ಆಫ್ರಿಕದ ಇತರ ಜನರನ್ನೂ ದುರುಪಯೋಗ ಮಾಡಿ ವ್ಯವಸ್ಥಾಪಿಸಿಕೊಂಡಿದೆ. ಕಾಂಗ್ರೆಸ್ಸು ಪ್ರತ್ಯಕ್ಷವಾಗಿ, ವ ಅಪ್ರತ್ಯಕ್ಷವಾಗಿ ಈ ಯುದ್ಧದಲ್ಲಿ ಭಾಗವಹಿಸಿದರೆ ಹಿಂದೀಯರನ್ನು ದುರುಪಯೋಗಿಸುವ ಸಾಮ್ರಾಜ್ಯಶಾಹಿಯನ್ನು ಮುಂದರಿಸಿದಂತಾಗುವುದು. ಬ್ರಿಟಿಷರಿಗಾಗಿ ಹಿಂದೀಯ ಸೈನಿಕರನ್ನು ಯುದ್ಧಮಾಡಿಸುವ ಬ್ರಿಟಿಷ್ ಧೋರಣೆಯನ್ನು ಕಾಂಗ್ರೆಸ್ಸು ಬಲವಾಗಿ ವಿರೋಧಿಸುತ್ತದೆ. ಹಿಂದೀಯರ ತನು ಮತ್ತು ಧನವನ್ನು ಈ ಯುದ್ಧಕ್ಕಾಗಿ ಬ್ರಿಟಿಷರು ಉಪಯೋಗಿಸುವ ಪ್ರಯತ್ನವನ್ನು ಕಾಂಗ್ರೆಸ್ ಬಲವಾಗಿ ನಿಷೇಧಿಸುತ್ತದೆ.

'ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕಿದೆಯೆಂದೂ, ಬೇರೆ ಯಾವ ವಿಧದ ಸ್ವಾತಂತ್ರ್ಯ, ವ, ಸುಧಾರಣೆಗಳಿಂದಲೂ ಹಿಂದೀಯರು ತೃಪ್ತರಾಗಲಿಕ್ಕಿಲ್ಲವೆಂದೂ, ಕಾಂಗ್ರೆಸ್ಸು ಪುನಃ ಒತ್ತಿ ಹೇಳುತ್ತದೆ. ಹಿಂದೀಯರ ರಾಜಕೀಯ ಸ್ಥಿತಿಯನ್ನು ಹಿಂದೀಯರೇ ನಿರ್ಧಾರ ಮಾಡಿ ರಚಿಸಬೇಕಿದೆ; ಲೋಕದ ಇತರ ರಾಷ್ಟ್ರಗಳೊಡನೆ ನಮ್ಮ ಸಂಬಂಧ ಹೇಗಿರಬೇಕೆಂದು ಹಿಂದೀಯರೇ ನಿರ್ಧಾರ ಮಾಡಬೇಕಿದೆ. ಇದಕ್ಕಾಗಿ ಹಿಂದೀಯರಿಂದ ಪ್ರಾಯಸ್ಥರ ಮತದಾನದಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಒಂದು ರಾಷ್ಟ್ರಘಟನಾ ಸಮಿತಿಯು ರಚಿತವಾಗಬೇಕಾಗಿದೆ. 'ಜಾತೀಯ ಪ್ರಶ್ನೆಯನ್ನು ಪ್ರತಿಯೊಂದು ಪಕ್ಷಕ್ಕೂ ನ್ಯಾಯವಾಗುವ ರೀತಿಯಲ್ಲಿ ಬಗೆಹರಿಸಲು ಕಾಂಗ್ರೆಸ್ಸು ಸಿದ್ಧವಿದ್ದಂತೆ ಮುಂದಕ್ಕೂ ಸಿದ್ಧವಿದೆ. ಯೋಗ್ಯವಾದ ಒಂದು ಒಪ್ಪಂದ ಮಾಡಲು ರಾಷ್ಟ್ರಘಟನಾ ಸಮಿತಿಯಿಂದ ಮಾತ್ರ ಸಾಧ್ಯವೆಂದು ಕಾಂಗ್ರೆಸ್ಸಿನ ಅಭಿಪ್ರಾಯವಾಗಿದೆ. ಹಿಂದೀಯರ ರಾಜಕೀಯ ಯೋಜನೆಯು ಸ್ವಾತಂತ್ರ್ಯ, ಪ್ರಜಾಸತ್ತೆ ಮತ್ತು ರಾಷ್ಟ್ರೀಯ ಒಗ್ಗಟ್ಟು ಈ ತತ್ವಗಳನ್ನು ಹೊಂದಿರತಕ್ಕದ್ದು. ಹಿಂದೀಯ ರಾಷ್ಟ್ರವನ್ನು ವಿಂಗಡಿಸಿ, ಅದನ್ನು ವಿಭಾಗ ಮಾಡಲು ನಡೆಯುವ ಪ್ರಯತ್ನಗಳನ್ನು ಕಾಂಗ್ರೆಸ್ಸು ನಿರಾಕರಿಸುತ್ತದೆ.

'ಹಿಂದೀಯ ಸ್ವಾತಂತ್ರ್ಯಕ್ಕೆ ಹಿಂದೀ ಆಶ್ರಿತ ಅರಸರೂ, ಪರಕೀಯ ಬಂಡವಾಳಿಗರ ಹಕ್ಕು ಬಾಧ್ಯತೆಗಳೂ ಅಡ್ಡಗಾಲ ಹಾಕುವುದನ್ನು ಕಾಂಗ್ರೆಸ್ಸು ಸಹಿಸಲಾರದು. ಆಶ್ರಿತ ಅರಸರಿಂದ ಹಿಂದೀಯ ರಾಜಕೀಯ ಯೋಜನೆಯ ಕುರಿತ ಬಂದಿರುವ ತೊಂದರೆಗಳು ಬ್ರಿಟಿಷರ ಕಲ್ಪನೆಯೆಂದು ಕಾಂಗ್ರೆಸಿನ ಅಭಿಪ್ರಾಯವಾಗಿದೆ. ಪರಕೀಯರ ರಾಜ್ಯಭಾರವು ತಪ್ಪಿ, ಹಿಂದೀಯ ರಾಷ್ಟ್ರವು ಸ್ವಾತಂತ್ರ್ಯವಾಗಿದೆಯೆಂದು ಸ್ಪಷ್ಟಪಡಿಸುವ ವರ್ತನೆ [illegible] ಹಿಂದೀಯರ ಬ್ರಿಟಿಷರ ಯುದ್ಧದಲ್ಲಿ ಭಾಗವಹಿಸಲಾರರೆಂದು ಸ್ಪಷ್ಟಮಾಡಿ, ಹಿಂದೀಯರ ಸ್ವಾತಂತ್ರ್ಯ ಸಂಪಾದನೆಯು ಕಾಂಗ್ರೆಸಿನ ಗುರಿ ಎಂದು ಲೋಕಕ್ಕೆ ಸಿದ್ಧಾಂತಗೊಳಿಸಲು ಕಾಂಗ್ರೆಸು ಬಹು ಮತವಿದ್ದ ಪ್ರಾಂತ್ಯಗಳಿಂದ ಮಂತ್ರಿಗಳು ರಾಜೀನಾಮೆ ಕೊಟ್ಟದ್ದಾಗಿದೆ. ಇದರ ಮುಂದಿನ ಹೆಜ್ಜೆಯು ಕಾನೂನು ಭಂಗ ಚಳವಳ ಹೂಡುವುದಾಗಿದೆ. ರಾಷ್ಟ್ರವು ಅದಕ್ಕೆ ಸಿದ್ಧವಿದೆ ಎಂದು ತಿಳಿದ ಕೂಡಲೇ ಕಾಂಗ್ರೆಸ್ಸು ತಡಮಾಡದೆ ಧೈರ್ಯದಿಂದ ಕಾನೂನು ಭಂಗ ಚಳವಳವನ್ನು ಹೂಡುವುದು, ಇಲ್ಲವೆ, ಕಾಂಗ್ರೆಸು ಇಂಥಾ ಚಳವಳ ಹೂಡಲೇಬೇಕೆಂಬ ಪರಿಸ್ಥಿತಿ ಹುಟ್ಟಿದರೆ ಆ ಕೂಡಲೆ ಚಳವಳವನ್ನು ಹೂಡಲಾಗುವುದು.'

'ಜಾತಿ, ಮತ, ಪಂಗಡಗಳೆಂಬ ಭೇದ ಭಾವವಿಲ್ಲದೆ ಹಿಂದೀ ರಾಷ್ಟ್ರದ ಮನೋಭಾವವನ್ನು ಕಾಂಗ್ರೆಸ್ಸು ಪ್ರತಿಬಿಂಬಿಸುತ್ತದೆ. ಹಿಂದೀ ರಾಷ್ಟ್ರದ ಸ್ವಾತಂತ್ರ್ಯ ಹೋರಾಟವೆಂದರೆ ಹಿಂದೀ ಜನಾಂಗದ ಸ್ವಾತಂತ್ರ್ಯಕ್ಕೆ ಹೋರಾಟವಾಗಿದೆ. ಅದ್ದರಿಂದ ಪ್ರತಿಯೊಬ್ಬ ಹಿಂದೀಯನೂ, ಜಾತಿ, ಮತ, ಪಕ್ಷಗಳೆಂಬ ಭಿನ್ನ ಭೇದಗಳಿಲ್ಲದೆ ಈ ಹೋರಾಟದಲ್ಲಿ ಭಾಗವಹಿಸುವನೆಂದು ಕಾಂಗ್ರೆಸ್ಸು ನಂಬಿದೆ.'




# ಕಾಂಗ್ರೆಸು ನಗರದಲ್ಲಿ ಭೀಕರ ನೆರೆಹಾವಳಿ!

## ಗಾಂಧಿಜಿಯವರು ಆಂದೋಲನ ನಡೆಸುವರೆ?

### ಪ್ರೇಕ್ಷಕರ ಅಪೂರ್ವ ಉತ್ಸಾಹ

## ಲಾಹೋರಿನಲ್ಲಿ ಗುಂಡುಹಾರಿಸಿದರು

### ಒಡ್ವಾಯರನ್ನು ಗುಂಡಿಕ್ಕಿ ಕೊಂದರು

...ಂಜಾಬಿನಲ್ಲಿ ಗತ ...ಸಿದ ಅತ್ಯಾಚಾರ ...ಟ್ಟನನ್ನು ವಧಿಸಿದ ...ರು ಹಾಗೆ ಮಾಡಿ ...ದೆ ೩೯ ವರ್ಷ ...ಯರರಂತೆ. ತನ್ನ ...ದ್ದರಲ್ಲಿ ವಿಚಾರಣೆ ...ದಿಂದ ಇದ್ದರು

**...ು ಹೆಸರು**

...ನ್ನು ಕೊಂದು ಇತರ ...ದ ಆ ಅಪರಾಧಿಯ ... ಸಿಂಗ್ ಅಜಾದ್' ...ಸಿಂಗ್' ಎಂದೂ, ' ಎಂದೂ ಮೂರು ...ಗಿದೆ

**...ಭಾಸಬೋಸರು**

ಸುಭಾಸಬೋಸರ ... ವಿರುದ್ಧ ಪರಿಪತ್ರ ... ಅದಕ್ಕೆ ಬೋಸರು ...ಟ್ಟಿದ್ದಾರೆ ಅದರ ...ವಿಯೂ, ಸಹಜಾನಂ ... ಬೋಸರು ರಾಮ ...ಳನಕ್ಕೆ ಒಂದಾಗ ...ತ್ತು

...ಲಾಜಾರ್

**...ರ ಬಂಧನ**

...ನೇಂದ್ರ ಮೂಕರ್ಜಿ ...ಲೀಪದ ಮೂಕರ್ಜಿ ...ಸ್ಥಾನದ ಸಂರಕ್ಷಕ ...ರೆ ಹಿಡಿದಿದೆ. ...ಡೋಗಾಮಿ ಪಕ್ಷದ ...ಬ್ಬ ರಾ ಧ ...ಮೌಲಿ ...ದರಿ ಇವರನ್ನು ...ಸಂರಕ್ಷಕಕಾಯ್ದೆಯ ...ಲಾಗಿದೆ. ...ಮದಾರ, ಮಹೀಂದ್ರ ... ವಾ ಸ ವಿಶ್ವಾಸ, ಚಿತ್ತರಂಜನಡೆ, ಕೃಷ್ಣಲಾಲ ಸಹಾ, ಮತ್ತು ಡಾ। ರಾಶಬಿಹಾರಿದಾಸ ಇವರಿಗೆ ೧೮ ತಿಂಗಳ ಸಕ್ತ ಶಿಕ್ಷೆ ೨೦೦ ರೂ ದಂಡ ಕೊಡದಿದ್ದರೆ ಮತ್ತೆ ೬ ತಿಂಗಳ ಶಿಕ್ಷೆ ವಿಧಿಸಲಾಯಿತು ಹಿಂದುಸ್ಥಾನ ಸಂರಕ್ಷಕ ಕಾಯದೆಯನ್ವಯ ಇವರ ಮೇಲೆ ಖಟ್ಲೆ ಹಾಕಲಾಗಿತ್ತು

ವೀರೇಂದ್ರಚಂದ್ರ ಚಟರ್ಜಿ, ಸುರೇಂದ್ರನಾಥ ಸುಕಲ, ಸತೀಶ್ವರ ಚಟರ್ಜಿ ವಿಜಯಕೃಷ್ಣಬೊಲ ಇವರ ಮೇಲೆ ನೋಟೀಸ ಬಜಾಯಿಸಿ ಸಂಯುಕ್ತಪ್ರಾಂತದಿಂದ ಹೊರಟ್ಟು ಹೋಗಲು ವಿಧಿಸಲಾಗಿದೆ

ಕಾಂಗ್ರೆಸ ಸಮತಾವಾದ ಪಕ್ಷದ ಕಾರ್ಯಕಾರಿ ಮಂಡಳದ ಸದಸ್ಯರಾದ ಸಯ್ಯದ ಜಹೀರರು ಹಿಂದುಸ್ಥಾನ ಸಂರಕ್ಷಕ ಕಾಯದೆಯನ್ವಯ ಸೆರೆಹಿಡಿಯಲ್ಪಟ್ಟಿರುವರು

ನೆರಪಾದ ... ಕರ್ಜಿ ... ಎಲ್ ಎ. ... ಮುಕ್ಕಳ ... ಮುಂದುಳಗಳೂ ಆದ ... ಕರ್ಜಿ ಇವರನ್ನು ಹಿಂದುಸ್ಥಾನ ... ಕಾಯ್ದೆಯನ್ವಯ ಸೆರೆಹಿಡಿದಿದೆ

**ಹೊಸ ವರ್ಕಿಂಗ್ ಕಮಿಟಿ**

ಮೌಲಾನಾ ಅಬುಲ್ ಕಲಮ್ ಅಜಾದರು ಹೊಸ ವರ್ಕಿಂಗ್ ಕಮಿಟಿಯ ಸದಸ್ಯರ ಹೆಸರನ್ನು ಪ್ರಕಟಿಸಿರುವರು. ಅದು ಹೀಗೆ ಇದೆ ೧ ಬಾಬು ರಾಜೇಂದ್ರ ೨ ಪಂಡಿತ ನೆಹರು ೩ ಶ್ರೀ ಸಿ. ರಾಜಗೋಪಾಲಾಚಾರಿ ೪ ಸರ್ದಾರ ಪಟೇಲ ೫ ಖಾನ್ ಅಬ್ದುಲ್ ಗಫರ್ ಖಾನ್ ೬ ಪ್ರೊ। ಪಿ ಸಿ ಘೋಷ ೭ ಶ್ರೀಮತಿ ಸರೋಜಿನಿ ನಾಯುಡು ೮ ಶ್ರೀ ಶಂಕರ ರಾವದೇವ್ ೯ ಶ್ರೀ ಭುಲಾಭಾಯಿದೇಸಾಯಿ ೧೦ ಸೇಟ್ ಜಮ್ನಾಲಾಲ ಬಜಾಜ ೧೧ ಮಿ। ಅಸಫ್ ಅಲಿ ೧೨ ಡಾ। ಸಯ್ಯದ್ ಮಹಮ್ಮದ್ ೧೩ ಮತ್ತು ಆಚಾರ್ಯ, ಕೃಪಾಲಿನಿ ಒಂದು ಸ್ಥಾನವು ಖಾಲಿಯಾಗಿರಿಸಿದೆ.

**ಮುಂದಿನ ಕಾಂಗ್ರೆಸು ಅಧಿವೇಶನ**

ಬರುವ ಕಾಂಗ್ರೆಸು ಅಧಿವೇಶನದ ಬಗ್ಗೆ ಪಂಜಾಬ್, ಗಡಿನಾಡು, ಮದ್ರಾಸು ಮತ್ತು ನಾಗಪುರಗಳಿಂದ ಆಮಂತ್ರಣ ಬಂದಿತ್ತು. ಮದ್ರಾಸಿನಲ್ಲಿ ಆಗಬೇಕೆಂದು ಸತ್ಯಮೂರ್ತಿ ಮತ್ತು ರಾಜಾಜಿಯವರು ವಾದಿಸಿದರು. ಗಡಿನಾಡಿನಲ್ಲಿ ಆಗಬೇಕೆಂದು ಖಾನ್ ಅಬ್ದುಲ್ ಗಫರ್ ಖಾನ್ ಮತ್ತು ಪಂಡಿತ ನೆಹರುಗಳು ವಾದಿಸಿದರು. ಬರುವ ವರ್ಕಿಂಗ್ ಕಮಿಟಿಯು ಅದನ್ನು ನಿರ್ಣಯಿಸುವುದಾಗಿ ತಿಳಿದಿದೆ.

ಅಧಿವೇಶನವು ಮುಗಿದು ಮುಖಂಡರು ತಮ್ಮ ಪ್ರಾಂತಕ್ಕೆ ಮರಳಿದರು

**ಕಾಂಗ್ರೆಸು ಬಹಿರಂಗ ಸಭೆ**

ಕಾಂಗ್ರೆಸು ಬಹಿರಂಗ ಸಭೆಯು ರಾಷ್ಟ್ರಪತಿ ಮೌಲಾನಾ ಅಜಾದರ ಅಧ್ಯಕ್ಷತೆಯಲ್ಲಿ ಸೇರಿತು ಕಮ್ಯುನಿಸ್ಟರ ಪರವಾಗಿ, ಪಂಜಾಬಿನ ಚಿತಾಲೇ ಮತ್ತು ಗೋಪಾಲಸಿಂಗರು ಪಾಟ್ನಾ ಠರಾವಿನ ಉಪಸೂಚನೆಯನ್ನು ಅನುಮೋದಿಸಿ ಮಾತನಾಡಿದರು ಪಂಡಿತ ನೆಹರುಗಳು ಅವುಗಳಿಗೆ ಉತ್ತರವೀಯುತ್ತಾ ಕಾಂಗ್ರೆಸು ಇಂದ ಆಂದೋಲನವನ್ನು ಆರಂಭಿಸುವ ಸಂದರ್ಭಕ್ಕೆ ಸಮೀಪಿಸಿರುವಾಗ ಎಲ್ಲರೂ ಶಿಸ್ತು ವಿಧೇಯತೆಗಳಿಂದ ನಡೆಯಬೇಕೆಂದ ಸಾರಿ ಹೇಳಿದರು.

ಎಲ್ಲಾ ಉಪಸೂಚನೆಗಳೂ ಬಿದ್ದು ಹೋಗಿ ಪಾಟ್ನಾ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು

ಆ ವೇಳೆ ಮಹಾತ್ಮಾಜಿಯವರ ೩೫ ಮಿನುಟುಗಳ ತನಕ ಭಾಷಣವಿತ್ತರು ತನ್ನ ಕಾರ್ಯಕ್ರಮ, ತತ್ವಗಳಲ್ಲಿ ಕಾಂಗ್ರೆಸ ವಿಶ್ವಾಸವನ್ನು ತೋರಿಸದ ವಿನಹ ತಾನು ಆಂದೋಲನವನ್ನು ಆರಂಭಿಸಲಾರೆನೆಂದರು ಜನರ ಇಂದಿನ ಸತ್ಯಾಗ್ರಹ ಶಬ್ದವನ್ನು ಮನಬಂದಂತೆ ಉಪಯೋಗಿಸುವುದನ್ನು ಖಂಡಿಸಿದರು. ಜನರು ಶಿಸ್ತನ್ನು ವಿಧೇಯತೆಯನ್ನು ತೋರಿಸದಿದ್ದರೆ, ಮ... ದಿನ ಹೋರಾಟವು ತನಗೂ ದೇಶಕ್ಕೂ ಅಪಜಯವನ್ನೇ ತರುವುದು ಎಂದ ಎಚ್ಚರಿಸಿದರು ಕೊನೆಗೆ ಸ್ವರಾಜ್ಯ ಸಾಧನೆಯಾಗಿ ಚರಕ, ಖಾದಿ ಮತ್ತು ಅಹಿಂಸೆಗಳು ... ಮುಖ್ಯ ಆಧಾರ ಸ್ತಂಭಗಳೆಂದ ತಿಳಿಸಿದರು

ಹವೆಯು ಚನ್ನಾಗಿರಲಿಲ್ಲ ಮಳೆಯು ಜೋರಾಗಿ ಸುರಿಯುತ್ತಿತ್ತು ನಾವು ಮುಂದೆ ಎದರಿಸಲಿರುವ ವಿಪತ್ತನ್ನೂ ಈ ಮಳೆಯು ಸೂಚಿಸುತ್ತದೆಯೆಂದರು ರಾಷ್ಟ್ರಪತಿಗಳು ಮಳೆ ಸುರಿಯುತ್ತಿದ್ದ ಅಧಿವೇಶನದ ಕಾರ್ಯಕ್ಕೆ ತೊಂದರೆಯುಂಟಾಯಿತು

ಬಹಿರಂಗ ಸಭೆಯಲ್ಲಿ ನೆಹರುಗಳು ಪಾಟ್ನಾ ಠರಾವನ್ನು ತಂದರು ಕೃಪಾಲನಿಯವರು ಅನುಮೋದಿಸಿದರು.

ಜನರು ಹಿಡಿದುಕೊಂಡಿದ್ದ ಕೊಡೆಯನ್ನು ಮಡಚಿಡುವಂತೆ ನೆಹರುಗಳು ಬಿನ್ನಯಿಸಿಕೊಂಡರು. ಆದರೂ ಜನರು ಉತ್ಸಾಹದಿಂದ ಆವೇಶದಿಂದ ಅಧಿವೇಶನದಲ್ಲಿ ಭಾಗವಹಿಸಿದ್ದರು. ಅಧಿವೇಶನವು ಮುಗಿವ ವರೆಗೂ ಅವರು ಚಲಿಸದೆ ನಿಂತಿದ್ದರು. ಭಾಷಣಕಾರರ ಸ್ವರವು ಅಸ್ಪಷ್ಟವಾಗಿದ್ದರೂ, ಲೌಡ್ ಸ್ಪೀಕರುಗಳು ಗಂಭೀರವಾಗಿ ಧ್ವನಿಸುತ್ತಿದ್ದವು.

ಸ್ವಯಂಸೇವಕರು ಶಿಸ್ತಿನಿಂದ ಪ್ರಯತ್ನಪೂರ್ವಕ ಕೆಲಸಮಾಡುತ್ತಿದ್ದರು

ಇದು ಕಾಂಗ್ರೆಸ ಕೆಲಸಗಾರರಿಗೆ ಒಂದು ಪಾಠ, ಮುಂದೆ ರಾಷ್ಟ್ರದ ಸಲುವಾಗಿ ಪಡತಕ್ಕ ಕಷ್ಟಗಳನ್ನು ದೇವರು ನಮಗೆ ತಿಳಿಸಿದನು ' ಎಂದ ಗಾಂಧಿಜಿಯವರಂದರು.

**ಹಿಂದೂ ಮುಸಲ್ಮಾನರ ಒಕ್ಕಟ್ಟಿನ ಬಗ್ಗೆ ಸಮ್ಮೇಲನ**

**ರಾಷ್ಟ್ರಪತಿ ಅಝಾದರ ವಿಚಾರ**

ಹಿಂದೂ ಮುಸಲ್ಮಾನರ ಒಕ್ಕಟ್ಟಿನ ಬಗ್ಗೆ ವಿಚಾರ ವಿನಿಮಯ ಮಾಡಿ ಮುಂದಿನ ಮಾರ್ಗವನ್ನು ನಿರ್ಧರಿಸುವುದಕ್ಕಾಗಿ ಮೌಲಾನಾ ಅಬುಲ್ ಕಲಂ ಅಝಾದರು ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಅಧ್ಯಕ್ಷರ ಮತ್ತು ಪ್ರಮುಖ ಕಾಂಗ್ರೆಸಿನ ಸಭೆಯನ್ನು ಕರೆದಿದ್ದಾರೆಂದು ... ಡ್ ಪ್ರೆಸ್ಸಿಗೆ ತಿಳಿದುಬಂದಿದೆ

ಜಮುನಾಲಾಲ್ ಬಜಾಜ್

ಗಾಂಧಿಯವರು ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಅಧ್ಯಕ್ಷರನ್ನು ಕರೆಸಿ ಅವರೊಡನೆ ಸದ್ಯ ಸ್ಥಿತಿಯ ಬಗ್ಗೆ ವಿಚಾರ ಮಾಡುವರೆಂದು ತಿಳಿದುಬರುತ್ತದೆ

**ಬೊಂಬಾಯಿ ಗಿರಣಿ ಮುಷ್ಕರವು**

ಇನ್ನೂ ಕೊನೆಗೊಂಡಿರುವುದಿಲ್ಲ ಬೊಂಬಾಯಿಯ ... ರಾಜಿ ಮಾಡಲು ಪ್ರಯತ್ನ ನಡಿಸುತ್ತಿರುವರು. ಅವರು ಗಿರಣಿ ಮಾಲಕರೊಡನೆ ಮಾತಾಡಿ ಇದೇ ತಾ ೧೮ರಲ್ಲು ಮಜೂರ ಪ್ರತಿನಿಧಿಗಳನ್ನು ಮಾತಾಡಲು ಕರೆದಿರುವರು ಇದೇ ತಾ ೧೭ನೇ ಸಂಜೆ ಮಜೂರರ ಪ್ರದರ್ಶನವೊಂದು ನಡೆದು ಮಜೂರ ಮುಖಂಡರು ರಾಜಿಗಾಗಿ ಕಳೆದ ವಾರ ನಡೆದ ಪ್ರಯತ್ನಗಳನ್ನು ವಿವರಿಸಿ ಹೇಳಿದರು ಮಜೂರ ಮುಖಂಡರ ದಸ್ತಗಿರಿಯ ನಿಷೇಧಾರ್ಥವಾಗಿ ಇದೇ ತಾ ೧೮ರಲ್ಲು ೨೪ ಘಂಟೆಗಳ ಮುಷ್ಕರ ನಡೆಯಿತು ಅನೇಕ ಅಂಗಡಿ ಮತ್ತು ಚಿಕ್ಕ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದುವು. ಈ ಸಂಬಂಧವಾಗಿ ಪಹರೆಮಾಡುತ್ತಿದ್ದ ೨೪ ಮಂದಿ ಕೈದು ಮಾಡಲ್ಪಟ್ಟಿರುವರು. ಇವರಲ್ಲಿ ೧೦ ಮಂದಿ

ವಲ್ಲಭಾಯಿ ಪಟೇಲ್

... ದ್ರ ಎಸೆಂಬಿಯ ... ಶ್ರೀ ಎನ್ ಎಮ್ ಜೋಶಿ ... ಇದೇ ತಾ ೧೮ರಲ್ಲಿ ... ಒಂದು ... ಮತ್ತು ... ಮಾತಾಡಿದರು ... ಅವರು ... ಸ್ಪರ್ಧೆ ... ತಿಳಿದು ಬರುತ್ತದೆ

**ಮದ್ರಾಸ್ ಕೌನ್ಸಿಲ್ ಚುನಾವಣ**

**ಕಾಂಗ್ರೆಸಿನ ವಿಜಯ**

ಮದ್ರಾಸ್ ಕೌನ್ಸಿಲಿಗೆ ಈ ಸಲ ನಡೆದ ... ಜನರಲ್ ಸೀಟುಗಳಲ್ಲಿ ... ನ್ನು ಕಾಂಗ್ರೆಸು ಪಡೆದ ... ವಿಜಯ ಹೊಂದಿರುವುದ ಶ್ರೀ ... ಎನ್ ವ್ಯಕ್ತರಂಗ ... ಮುದಲಿಯಾರರನ್ನು ... ಗಳ ಬಹುಮತದಿಂದ ಗೆದ್ದಿರುವರ

**ಲಾಹೋರಿನಲ್ಲಿ ಗುಂಡು ಹಾರಿಸಿದರು**

ಕಾಕ್ಸಾರರ ಮೇಲೆ ಸರಕಾರವು ಲಾಹೋರಿನಲ್ಲಿ ಗುಂಡು ಹಾರಿಸಿ, ... ಜನರು ಸತ್ತುಹೋಗಿರುವರು ೩೯ ಮಂದಿ ಗಾಯವಾಗಿದೆ

ಸತ್ಯಮೂರ್ತಿ

# ಕಾಂಗ್ರೆಸು ಅಧಿವೇಶನದಲ್ಲಿ ಮಹಾತ್ಮರ ಭಾಷಣ

"ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮವು ಗಣಶೂರರಿಂದಲೂ ಕರದಿಂದ ನಡೆಯುತ್ತದೆ. ಅದು ಬಿಮ್ಮಯೂ ನಿಂತಿಲ್ಲ. ನೀವಾಗಿಯೇ ನನ್ನನ್ನು ನಾಯಕನನ್ನಾಗಿ ಆರಿಸಿದ್ದೀರಿ. ಆದುದರಿಂದ ನೀವು ನಾನು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ನನಗೆ ಜಯ ಸಿಗಲಾರದು. ನಾನು ಹೇಳುವ ಎಲ್ಲ ಶರತ್ತುಗಳಿಗೂ ನೀವು ಒಪ್ಪಬೇಕು. ಇಲ್ಲದಿದ್ದರೆ ನಾನು ಹೋರಾಟವನ್ನು ಪ್ರಾರಂಭಿಸಲಾರೆ.

ನಾನು ಹೇಳಿದಂತೆ ಕೇಳಿ, ನಾನು ತೋರಿಸಿದ ಮಾರ್ಗದಲ್ಲಿ ಬರಲು ನೀವು ಸಿದ್ಧರಿಲ್ಲದಿದ್ದರೆ, ಬೇರೆ ನಾಯಕನನ್ನು ಆರಿಸಿ ಕೊಳ್ಳಿರಿ. ಬೇರೆಯವರು ಹೋರಾಟ ಪ್ರಾರಂಭಿಸುವದಕ್ಕೆ ನಾನು ಖಂಡಿತ ಅಡ್ಡಿಪಡಿಸುವದಿಲ್ಲ, ಆದರೆ ಕಾಂಗ್ರೆಸ್ಸಿನಲ್ಲಿ ಪ್ರತಿಯೊಬ್ಬರೂ ಶಿಸ್ತಿನಿಂದ ನಡೆಯಬೇಕು ಹೇಳಿದಂತೆ ಕೇಳಬೇಕು. ಇದು ಸಾಧ್ಯವಿಲ್ಲದವರು ಕಾಂಗ್ರೆಸ್ಸನ್ನು ಬಿಟ್ಟು ಸ್ವತಂತ್ರವಾಗಿ ಹೋರಾಟವನ್ನು ಪ್ರಾರಂಭಿಸಬಹುದು"

ಎಂದು ಮಹಾತ್ಮಾ ಗಾಂಧಿಯವರು 'ರಾತ್ರಿ ಸಬ್ ಜೆಕ್ಟ್' ಕಮಿಟಿಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಅವರು ಭಾಷಣ ಮಾಡುವ ಕಾಲಕ್ಕೆ ಸಂಪೂರ್ಣ ನಿಶ್ಶಬ್ದತೆಯಿದ್ದಿತು. ಸೂಜಿ ಬಿದ್ದರೆ ಸಹ ಕೇಳಿಸುತ್ತಿತ್ತು. ಪ್ರತಿಯೊಬ್ಬರೂ ಒಕ್ಕಟ್ಟು ಶಿಸ್ತು ಮತ್ತು ಅಹಿಂಸೆಗಳನ್ನು ಅಕ್ಷರಶಃ ಪಾಲಿಸಬೇಕೆಂದು ಮಹಾತ್ಮರು ಹೇಳಿದರು, ಇಲ್ಲದಿದ್ದರೆ ತಾವು ನಾಯಕರಾಗಲು ಸಿದ್ಧರಿಲ್ಲವೆಂದೂ ತಿಳಿಸಿದರು, ಬೇಕಾದರೆ ತಮ್ಮನ್ನು ಸ್ಥಾನಭ್ರಷ್ಟರನ್ನಾಗಿ ಮಾಡಬಹುದೆಂದೂ ಹೇಳಿದರು

### ನನ್ನಲ್ಲಿ ವಿಶ್ವಾಸವಿದ್ದರೆ

"ಬಾಬು ರಾಜೇಂದ್ರಪ್ರಸಾದರು ಮಂಡಿಸಿದ ನಿರ್ಣಯವನ್ನು ನೀವು ಪ್ರಚಂಡ ಬಹುಮತದಿಂದ ಪಾಸುಮಾಡಿದ್ದೀರಿ ಇದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ನನ್ನ ಮಾರ್ಗದಲ್ಲಿ ನಿಮಗೆ ವಿಶ್ವಾಸವಿದ್ದರೆ, ಸ್ವಸಂತೋಷದಿಂದ ನೀವು ನಾನು ಹೇಳಿದಂತೆ ಕೇಳಬೇಕು ನಾನು ಮಹಾತ್ಮನೆಂದು ತಿಳಿದಿಲ್ಲ. ನಾನು ಮಹಾತ್ಮನಲ್ಲ. ನಿಮ್ಮಂತೆಯೇ ನಾನೂ ಒಬ್ಬನು. ಪರಮಾತ್ಮನ ದೃಷ್ಟಿಯಲ್ಲಿ ನಾವೆಲ್ಲರೂ ಒಂದೇ. ಜಿನ್ನಾಸಾಹೇಬರೂ ನನ್ನ ಬಂಧುಗಳು. ಯಾರ ವಿರುದ್ಧವೂ ನನಗೆ ಸಿಟ್ಟಿಲ್ಲ. ಹಗೆತನವಿಲ್ಲ. ಖಾರ್ದ ಜ್ವಾಲೆಯಿಂದರಿಗೆ ಗಾಯ ಮಾಡುವುದನ್ನು ಕೇಳಿ ನನಗೆ ತುಂಬಾ ದುಃಖವಾಗಿದೆ"

### 'ವಿಧೇಯತೆಯಿಲ್ಲದ ಸೈನ್ಯವನ್ನು ಸೇನಾನಿಯು ನಡೆಸಲಾರನು'

## ಪಾಟ್ನಾದಲ್ಲಿ ಮಂಜೂರಾದ ಠರಾವು

ಹೀಗೆಂದು ಮಹಾತ್ಮರು ಹೇಳಿದರು. ತಮ್ಮ ಭಾಷಣವನ್ನು ಮುಂದೆ ಸಾಗಿಸುತ್ತಾ, ಅಹಿಂಸಾ ತತ್ವವನ್ನು ಅಕ್ಷರಶಃ ಪಾಲಿಸಿದರೆ, ಜಾತಿ ಜಾತಿಗಳಲ್ಲಿ ಸೌಹಾರ್ದ ಭಾವನೆಯು ತಾನಾಗಿಯೇ ಉಂಟಾಗುವದೆಂದು ಹೇಳಿದರು.

### ಒಪ್ಪಂದವೇ?

"ಬ್ರಿಟಿಷ ಸರಕಾರದವರೊಡನೆ ಒಪ್ಪಂದ ಮಾಡಿಕೊಳ್ಳಲು ನಾನು ಪ್ರಯತ್ನಿಸುತ್ತಿದ್ದೇನೆಂದು ನೀವು ನನ್ನನ್ನು ಟೀಕಿಸುತ್ತೀರಿ ಒಪ್ಪಂದವೆಂಬುದು ಸತ್ಯಾಗ್ರಹದ ಮೂಲ ತತ್ವ. ಪ್ರಸಂಗ ಬಂದರೆ ಐದು ಸಲವಲ್ಲ, ಐವತ್ತು ಸಲ ವ್ಹಾಯಸರಾಯರ ಬಳಿಗೆ ಹೋಗಲು ನಾನು ಸಿದ್ಧನಿದ್ದೇನೆ ಇದರಿಂದನಗೆ ಎಳ್ಳಷ್ಟೂ ನಾಚಿಕೆಯಿಲ್ಲ. ದಕ್ಷಿಣ ಆಫ್ರಿಕದಲ್ಲಿದ್ದಾಗ ನಾನಾಗಿಯೇ ಜನರಲ್ ಸ್ಮಟ್ಸರನ್ನು ಕಂಡಿದ್ದೆ. ಡಚ್ ಮತ್ತು ಇಂಗ್ಲೀಷ ಜನರು ನನ್ನ ವೈರಿಗಳೆಂದು ತಿಳಿದಿದ್ದಳೆ, ದಕ್ಷಿಣ ಆಫ್ರಿಕದ ನನ್ನ ದೇಶಬಾಂಧವರಿಗೆ ಸ್ವಲ್ಪವೂ ಅನುಕೂಲವಾಗುತ್ತಿರಲಿಲ್ಲ. ನಾನು ಎಲ್ಲರನ್ನೂ ಪ್ರೀತಿಸುತ್ತಿದ್ದುದರಿಂದಲೇ ಅವರಿಗೆ ಅನುಕೂಲಮಾಡಿಕೊಡಲು ಸಾಧ್ಯವಾಯಿತು"

ಸದ್ಯದ ಪರಿಸ್ಥಿತಿಯನ್ನು ಉಲ್ಲೇಖಿಸಿ ಮಹಾತ್ಮರು ಹೀಗೆ ಹೇಳಿದರು

### ಹೋರಾಟಕ್ಕೆ ಸಿದ್ಧತೆಬೇಕು

"ಈಗಿನ ಪರಿಸ್ಥಿತಿಯನ್ನು ನೋಡಿದರೆ ಹೋರಾಟವಾಗಲೇ ಬೇಕೆಂದು ನನಗೂ ಅನಿಸುತ್ತದೆ ಆದರೆ ನಾನ ಆತುರಪಡುವದಿಲ್ಲ ಯಾವದೇ ಸೈನ್ಯವು ಮುಂದೆ ನುಗ್ಗುವ ಮೊದಲು ಸಂಪೂರ್ಣ ಸಿದ್ಧವಾಗಿರಬೇಕು. ಸೇನಾಪತಿಯು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ಸೈನ್ಯವು ಯಶಸ್ವಿಯಾಗಿ ಮುಂದೆ ನುಗ್ಗಲಾರದು ಆದರಂತೆ ನಾನೂ ಮಾಡಬೇಕಾಗಿದೆ ಹೋರಾಟಕ್ಕೆ ನಾವು ಈಗಲೇ ಸಿದ್ಧರಿರುವೆವೆಂದು ನನಗಂತೂ ಅನಿಸುವದಿಲ್ಲ. ಹೋರಾಟವು ಪ್ರಾರಂಭವಾಗಬೇಕಾದರೆ ಅದಕ್ಕೆ ತಕ್ಕ ಸಿದ್ಧತೆಬೇಕು, ಅದರ ಕರಾರುಗಳು ಪೂರ್ಣವಾಗಬೇಕು."

"ಈಗ ನಮಗೆ ಕಷ್ಟಗಳಿವೆ ಒಳಗಿನ ಕಷ್ಟಗಳೂ ಇವೆ. ಹೊರಗಿನ ಕಷ್ಟಗಳೂ ಇವೆ. ಹೊರಗಿನ ಕಷ್ಟಗಳಿಂದ ಸತ್ಯಾಗ್ರಹಕ್ಕೆ ವಿಶೇಷ ಹಾನಿಯಾಗುವದಿಲ್ಲ. ಆದರೆ ಒಳಗಿನ ಕಷ್ಟಗಳ ಬಗ್ಗೆ ಮಾತ್ರ ನಾವು ವಿಶೇಷ ಮಹತ್ವ ಕೊಡಲೇಬೇಕು; ನಮ್ಮಲ್ಲಿ ಈಗ ಶಿಸ್ತು ಸಾಕಷ್ಟಿಲ್ಲ. ಹಿಂಸಾತ್ಮಕ ವಾತಾವರಣವು ತುಂಬಿದೆ. ಈ ತೊಂದರೆಗಳು ದೂರಾದ ಮೇಲೆಯೇ ನಾನು ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸುವೆನು.

'ಇನ್ನು ಒಂದೇ ತಿಂಗಳಲ್ಲಿ ಚಳವಳಿಯನ್ನು ಪ್ರಾರಂಭಿಸಲು ನಾನು ಸಿದ್ಧನಿದ್ದೇನೆ. ಆದರೆ ನನ್ನ ಶರತ್ತಗಳಿಗೆ ನೀವು ಒಪ್ಪಬೇಕು, ಈ ಕಷ್ಟಗಳು ಬಗೆಹರಿಯುವಂತೆ ಮಾಡಬೇಕು' ಎಂದು ಮಹಾತ್ಮಾ ಗಾಂಧಿಯವರು ಸುಮಾರು ಅರ್ಧ ತಾಸಿನ ವರೆಗೆ ಮಾತನಾಡಿದರು

### ಪಾಟ್ನಾದ ಠರಾವು

ಪಾಟ್ನಾದಲ್ಲಿ ಫೆಬ್ರವರಿ ತಾ ೩೮ ರಂದು ಸೇರಿದ ಕೊಂಗ್ರೆಸ್ಸು ವರ್ಕಿಂಗ್ ಕಮಿಟಿಯು ಹಿಂದೀಯ ರಾಜಕೀಯ ಪ್ರಶ್ನೆಯ ಕುರಿತು ಈ ಸಾರಾಂಶದ ಠರಾವನ್ನು ಮಂಜೂರು ಮಾಡಿದೆ ಅದೇ ಈ ಸಲದ ಕಾಂಗ್ರೆಸಿನಲ್ಲಿ ಮಂಜೂರಾದ ಮುಖ್ಯ ಠರಾವಾಗಿತ್ತು.

'ಹಿಂದೀಯ ರ ಅಭಿಪ್ರಾಯವನ್ನು ಕೇಳದೆ ಬ್ರಿಟಿಷ ಸರಕಾರವು ಹಿಂದೂಸ್ಥಾನವು ಯುದ್ಧದಲ್ಲಿ ಸೇರಿದೆಯೆಂದು ಹೊರಡಿಸಿದ ಪ್ರಸಿದ್ಧ ಪತ್ರಿಕೆ ಮತ್ತು ಈ ಯುದ್ಧಕ್ಕಾಗಿ ಹಿಂದೀಯ ಜನರನ್ನೂ ಧನವನ್ನೂ ಬ್ರಿಟಿಷರು ದುರುಪಯೋಗಿಸುವ ಅವರ ಕಾರ್ಯಕ್ರಮಗಳು ಹಿಂದೀಯರಿಗೆ ಅವಮಾನಕರವೆಂದು ಈ ಸಮಿತಿಯ ಅಭಿಪ್ರಾಯಪಡುತ್ತದೆ ಬ್ರಿಟಿಷ ಸರ್ಕಾರದ ಹೇಳಿಕೆಗಳಿಂದ ಈಗಿನ ಯುದ್ಧವನ್ನು ಬ್ರಿಟಿಷರು ತಮ್ಮ ಸಾಮ್ರಾಜ್ಯಶಾಹಿಯ ಉಪಯೋಗಕ್ಕಾಗಿ ನಡೆಸುತ್ತಿದ್ದಾರೆಂಬ ಸ್ಪಷ್ಟವಾದ ತಿಳಿದುಬರುತ್ತದೆ ಬ್ರಿಟಿಷ ಸಾಮ್ರಾಜ್ಯವು ಹಿಂದೀಯರನ್ನೂ ಏಶಿಯಾಖಂಡದ ಮತ್ತು ಆಫ್ರಿಕದ ಇತರ ಜನರನ್ನೂ ದುರುಪಯೋಗ ಮಾಡಿ ನೆಲೆಸ್ಥಾಪಿಸಿಕೊಂಡಿದೆ ಕೊಂಗ್ರೆಸ್ಸು ಪ್ರತ್ಯಕ್ಷವಾಗಿ, ವ ಅಪ್ರತ್ಯಕ್ಷವಾಗಿ ಈ ಯುದ್ಧದಲ್ಲಿ ಭಾಗವಹಿಸಿದರೆ ಹಿಂದೀಯರನ್ನು ದುರುಪಯೋಗಿಸುವ ಸಾಮ್ರಾಜ್ಯಶಾಹಿಯನ್ನು ಮುಂದರಿಸಿದಂತಾಗುವುದು ಬ್ರಿಟಿಷರಿಗಾಗಿ ಹಿಂದೀಯ ಸೈನಿಕರನ್ನು ಯುದ್ಧಮಾಡಿಸುವ ಬ್ರಿಟಿಷ ಧೋರಣೆಯನ್ನು ಕೊಂಗ್ರೆಸ್ಸು ಬಲವಾಗಿ ವಿರೋಧಿಸುತ್ತದೆ. ಹಿಂದೀಯರ ತನು ಮತ್ತು ಧನವನ್ನು ಈ ಯುದ್ಧಕ್ಕಾಗಿ ಬ್ರಿಟಿಷರು ಉಪಯೋಗಿಸುವ ಪ್ರಯತ್ನವನ್ನು ಕೊಂಗ್ರೆಸ್ ಬಲವಾಗಿ ನಿಷೇಧಿಸುತ್ತದೆ

'ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕಿದೆಯೆಂದೂ, ಬೇರೆ ಯಾವ ವಿಧದ ಸ್ವಾತಂತ್ರ್ಯ, ವ, ಸುಧಾರಣೆಗಳಿಂದಲೂ ಹಿಂದೀಯರು ತೃಪ್ತರಾಗಲಿಕ್ಕಿಲ್ಲವೆಂದೂ, ಕೊಂಗ್ರೆಸ್ಸು ಪುನಃ ಒತ್ತಿ ಹೇಳುತ್ತದೆ. ಹಿಂದೀಯರ ರಾಜಕೀಯ ಸ್ಥಿತಿಯನ್ನು, ಹಿಂದೀಯರೇ ನಿರ್ಧಾರ ಮಾಡಿ ರಚಿಸಬೇಕಿದೆ; ಲೋಕದ ಇತರ ರಾಷ್ಟ್ರಗಳೊಡನೆ ನಮ್ಮ ಸಂಬಂಧ ಹೇಗಿರಬೇಕೆಂದು ಹಿಂದೀಯರೇ ನಿರ್ಧಾರ ಮಾಡಬೇಕಿದೆ. ಇದಕ್ಕಾಗಿ ಹಿಂದೀಯರಿಂದ ಪ್ರಾಯಸ್ಥರ ಮತದಾನದಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಒಂದು ರಾಷ್ಟ್ರಘಟನಾ ಸಮಿತಿಯು ರಚಿತವಾಗಬೇಕಾಗಿದೆ 'ಜಾತೀಯ ಪ್ರಶ್ನೆಯನ್ನು ಪ್ರತಿಯೊಂದು ಪಕ್ಷಕ್ಕೂ ನ್ಯಾಯವಾಗುವ ರೀತಿಯಲ್ಲಿ ಬಗೆಹರಿಸಲು ಕೊಂಗ್ರೆಸ್ಸು ಸಿದ್ಧವಿದ್ದಂತೆ ಮುಂದಕ್ಕೂ ಸಿದ್ಧವಿದೆ. ಯೋಗ್ಯವಾದ ಒಂದು ಒಪ್ಪಂದ ಮಾಡಲು ರಾಷ್ಟ್ರಘಟನಾ ಸಮಿತಿಯಿಂದ ಮಾತ್ರ ಸಾಧ್ಯವೆಂದು ಕೊಂಗ್ರೆಸ್ಸಿನ ಅಭಿಪ್ರಾಯವಾಗಿದೆ ಹಿಂದೀಯರ ರಾಜಕೀಯ ಯೋಜನೆಯು ಸ್ವಾತಂತ್ರ್ಯ, ಪ್ರಜಾಸತ್ತೆ ಮತ್ತು ರಾಷ್ಟ್ರೀಯ ಒಗ್ಗಟ್ಟು ಈ ತತ್ವಗಳನ್ನು ಹೊಂದಿರತಕ್ಕದ್ದು. ಹಿಂದೀಯ ರಾಷ್ಟ್ರವನ್ನು ವಿಂಗಡಿಸಿ, ಅದನ್ನು ವಿಭಾಗ ಮಾಡಲು ನಡೆಯುವ ಪ್ರಯತ್ನಗಳನ್ನು ಕೊಂಗ್ರೆಸ್ಸು ನಿಂದಿಸುತ್ತದೆ

ಹಿಂದೀಯ ಸ್ವಾತಂತ್ರ್ಯಕ್ಕೆ ಹಿಂದೀ ಆಶ್ರಿತ ಅರಸರೂ, ಪರಕೀಯ ಬಂಡವಾಳಿಗರ ಹಕ್ಕು ಬಾಧ್ಯತೆಗಳೂ ಅಡ್ಡಗಾಲ ಹಾಕುವುದನ್ನು ಕೊಂಗ್ರೆಸ್ಸು ಸಹಿಸಲಾರದು. ಆಶ್ರಿತ ಅರಸರಿಂದ ಹಿಂದೀಯ ರಾಜಕೀಯ ಯೋಜನೆಯ ಕುರಿತು ಬಂದಿರುವ ತೊಂದರೆಗಳು ಬ್ರಿಟಿಷರ ಕಲ್ಪನೆಯೆಂದು ಕೊಂಗ್ರೆಸಿನ ಅಭಿಪ್ರಾಯವಾಗಿದೆ ಪರಕೀಯರ ರಾಜ್ಯಭಾರವು ತಪ್ಪಿ, ಹಿಂದೀಯ ರಾಷ್ಟ್ರವು ಸ್ವತಂತ್ರ್ಯವಾಗಿದೆಯೆಂದು ಸ್ಪಷ್ಟವಾದ ನಂತರ ಈ ಆತಂಕಗಳು ದೂರವಾಗುವವು 'ಹಿಂದೀಯರು ಬ್ರಿಟಿಷರ ಯುದ್ಧದಲ್ಲಿ ಭಾಗವಹಿಸಲಾರರೆಂದು ಸ್ಪಷ್ಟಮಾಡಿ, ಹಿಂದೀಯರ ಸ್ವಾತಂತ್ರ್ಯ ಸಂಪಾದನೆಯೇ ಕೊಂಗ್ರೆಸಿನ ಗುರಿ ಎಂದು ಲೋಕಕ್ಕೆ ಸಿದ್ಧಾಂತಗೊಳಿಸಲು ಕೊಂಗ್ರೆಸ ಬಹುವಿಧದ ಕಾರ್ಯಕ್ರಮಗಳಿಂದ ಮಂತ್ರಿಗಳ ರಾಜಿನಾಮೆ ಕೊಟ್ಟಿದ್ದಾಗಿದೆ ಇದರ ಮುಂದಿನ ಹೆಜ್ಜೆಯ ಕಾನೂನು ಭಂಗ ಚಳವಳ ಹೂಡುವುದಾಗಿದೆ. ರಾಷ್ಟ್ರವು ಅದಕ್ಕೆ ಸಿದ್ಧವಿದೆ ಎಂದು ತಿಳಿದ ಕೂಡಲೆ ಕೊಂಗ್ರೆಸ್ಸು ತಡಮಾಡದೆ ಧೈರ್ಯದಿಂದ ಕಾನೂನುಭಂಗ ಚಳವಳವನ್ನು ಹೂಡುವುದು, ಇಲ್ಲವೆ, ಕೊಂಗ್ರೆಸು ಇಂಥಾ ಚಳವಳ ಹೂಡಲೇಬೇಕೆಂಬ ಪರಿಸ್ಥಿತಿ ಹುಟ್ಟಿದರೆ ಆ ಕೂಡಲೆ ಚಳವಳವನ್ನು ಹೂಡಲಾಗುವುದು.'

'ಜಾತಿ, ಮತ, ಪಂಗಡಗಳೆಂಬ ಬೇಧಭಾವವಿಲ್ಲದೆ ಹಿಂದೀ ರಾಷ್ಟ್ರದ ಮನೋಭಾವವನ್ನು ಕೊಂಗ್ರೆಸ್ಸು ಪ್ರತಿಬಿಂಬಿಸುತ್ತದೆ. ಹಿಂದೀ ರಾಷ್ಟ್ರದ ಸ್ವಾತಂತ್ರ್ಯ ಹೋರಾಟವೆಂದರೆ ಹಿಂದೀ ಜನಾಂಗದ ಸ್ವಾತಂತ್ರ್ಯಕ್ಕೆ ಹೋರಾಟವಾಗಿದೆ. ಆದ್ದರಿಂದ ಪ್ರತಿಯೊಬ್ಬ ಹಿಂದೀಯನೂ, ಜಾತಿ, ಮತ, ಪಕ್ಷಗಳೆಂಬ ಭಿನ್ನ ಭೇದಗಳಿಲ್ಲದೆ ಈ ಹೋರಾಟದಲ್ಲಿ ಭಾಗವಹಿಸುವನೆಂದು ಕೊಂಗ್ರೆಸ್ಸು ನಂಬಿದೆ.'

## ವಾರ್ತೆ ★

# ಕಾಂಗ್ರೆಸು ನಗರದಲ್ಲಿ ಭೀಕರ ನೆರೆಹಾವಳಿ

## ಗಾಂಧಿಜಿಯವರು ಆಂದೋಲನ ನಡೆಸುವರೆ?

### ಪ್ರೇಕ್ಷಕರ ಅಪೂರ್ವ ಉತ್ಸಾಹ

### ಲಾಹೋರಿನಲ್ಲಿ ಗುಂಡುಹಾರಿಸಿದರು

### ಒಡ್ಡಾಯರನ್ನು ಗುಂಡಿಕ್ಕಿ ಕೊಂದರು

ಪಂಜಾಬಿನಲ್ಲಿ ಗತ ...ಗ ನಡೆಸಿದ ಅತ್ಯಾಚಾರ ...ಂಧುವೊಬ್ಬನನ್ನು ವಧಿಸಿದ ...ಗಿ ಇವರು ಹಾಗೆ ಮಾಡಿ ...ಯುತ್ತದೆ ೩೯ ವರ್ಷ ...ಂಜಿಸಿಯುರರಂತೆ ತನ್ನ ...ಷ್ಟಯವಿದ್ದ ವಿಚಾರಣೆ ...ದಸ್ಥಿತದಿಂದ ಇದ್ದರು

**...ರಾಧಿಯ ಹೆಸರು**

ಕೇಲರನ್ನು ಕೊಂದು ಇತರ ಪಡಿಸಿದ ಆ ಅಪರಾಧಿಯ ...ನ್ಮುಬ್ ಸಿಂಗ್ ಅಜಾದ್' ...ಮೋಹನ್‌ಸಿಂಗ್' ಎ ದೂ, ...ಸಿಂಗ್' ಎಂದೂ ಮೂರು ...ಕಟವಾಗಿದೆ

**...ಲ್ಲಿ ಸುಭಾಸ ಬೋಸರು**

...ದಲ್ಲಿ ಸುಬಾಸಬೋಸರ ...ಪ್ಪಂದ ವಿರುದ್ಧ ಪರಿಷತ್ತ ...ನರು, ಅದಕ್ಕೆ ಬೋಸರ ...ಆರಿಸಲ್ಪಟ್ಟಿದ್ದಾರೆ ಆದರ ...ಕ್ಷರು ಸ್ವಾಮಿ ಸಹಜಾನಂ...ವರೂ ಬೋಸರು ಅವ... ಸಮ್ಮೇಳನಕ್ಕೆ ಒಂದಿಗ ...ಸ್ವಾಗತವಿತ್ತು

...ಜಗಜೀವನರಾಮ್

**...ಗ್ರೆಸಿಷ್ಟರ ಬಂಧನ**

...ಸೌಮ್ಯೇಂದ್ರ ಮುಕರ್ಜಿ ...ಬು ಕಿಶೋರ ಮುಕರ್ಜಿ ಹಿಂದೂ ಸ್ಥಾನದ ಸಂರಕ್ಷಕ ...ನ್ಯಯ ಸೆರೆ ಹಿಡಿದಿದೆ.

...ದ ಪುರೋಗಾಮಿ ಪಕ್ಷದ ...ರಲ್ಲೊಬ್ಬರಾದ ...ಮೌಲಿ...ನ ಚೌದರಿ ಇವರನ್ನು ...ನದ ಸಂರಕ್ಷಕಕಾಯ್ದೆಯ ಹಿಡಿಯಲಾಗಿದೆ.

ಮುಜುಮುದಾರ, ಮಹೀಂದ್ರ ಭಗವಾನ ವಿಶ್ವಾಸ, ಚಿತ್ತರ ಒನಡೆ ಕೃಷ್ಣಲಾಲ ಸಹಾ, ಮತ್ತು ಡಾ| ರಾಶಬಿಹಾರಿದಾಸ ಇವರಿಗೆ ೧೮ ತಿಂಗಳ ಸಶಮ ಶಿಕ್ಷೆ ೨೦೦ ರೂ ದಂಡ ಕೊಡದಿದ್ದರೆ ಪತ್ತೆ ೬ ತಿಂಗಳ ಶಿಕ್ಷೆ ವಿಧಿಸಲಾಯಿತು. ಹಿಂದ ಸ್ಥಾನ ಸಂರಕ್ಷಕ ಕಾಯಿದೆಯ ನ್ವಯ ಇವರ ಮೇಲೆ ಖಟ್ಲೆ ಹಾಕಲಾಗಿತ್ತು

ವೀರೇಂದ್ರಚಂದ್ರ ಚಟರ್ಜಿ, ಸುರೇಂದ್ರನಾಥ ಸಂಕಲ ಸತೀಶ್ವರ ಚಟರ್ಜಿ ವಿಜಯಕೃಷ್ಣಪಾಲ ಇವರ ಮೇಲೆ ನೋಟೀಸ ಬಜಾಯಿಸಿ ಸ್ವಯ ಕ್ತಪ್ರಾಂತದಿಂದ ಹೊರಟು ಹೋಗಲು ವಿಧಿಸಲಾಗಿದೆ

ಕಾಂಗೆಸ ಸಮಿತಾವಾದ ಪಕ್ಷದ ಕಾರ್ಯಕಾರಿ ಮಂಡಳದ ಸದಸ್ಯರಾದ ಸಯ್ಯದ ಜಹೀರರು ಹಿಂದ ಸ್ಥಾನ ಸಂರಕ್ಷಕ ಕಾಯದೆಯ ನ್ವಯ ಸೆರೆಹಿಡಿಯಲ್ಪಟ್ಟಿರುವರು.

ನರವಾದ ... ಎ ಎಲ್ ಎ ಇವರ ಮಕ್ಕಳೂ ಕಮ್ಯುನಿಸ್ಟ ವಾಳಗಳೂ ಆದ ... ಕರ್ಜಿ ಇವರನ್ನು ಹಿಂದ ಸ್ಥಾ ಸಂರಕ್ಷಕ ಕಾಯ್ದೆಯ ನ್ವಯ ಸೆರೆಹಿಡಿದಿದೆ

**ಹೊಸ ವರ್ಕಿಂಗ್ ಕಮಿಟಿ**

ಮೌಲಾನಾ ಅಬುಲ್ ಕಲಾಮ್ ಅಜಾದರ ಹೊಸ ವರ್ಕಿಂಗ್ ಕಮಿಟಿಯ ಸದಸ್ಯರ ಹೆಸರನ್ನು ಪ್ರಕಟಿಸಿರುವರು. ಅದು ಹೀಗೆ ಇದೆ ೧ ಬಾಬೂ ರಾಜೇಂದ್ರ ೨ ಪಂಡಿತ ನೆಹರು ೩ ಶ್ರೀ ಸಿ ರಾಜಗೋಪಾಲಾಚಾರಿ ೪ ಸರ್ದಾರ ಪಟೇಲ ೫ ಖಾನ ಅಬ್ದುಲ್ ಗಫರ್ ಖಾನ್ ೬ ಪ್ರೊ| ಪಿ ಸಿ ಘೋಷ ೭ ಶ್ರೀಮತಿ ಸರೋಜಿನಿ ನಾಯುಡು ೮ ಶ್ರೀ ಶಂಕರ ರಾವದೇವ್ ೯ ಶ್ರೀ ಭುಲಾಬಾಯಿ ದೇಸಾಯಿ ೧೦ ಸೇಟ್ ಜಮ್ನಾಲಾಲ ಬಜಾಜ ೧೧ ಮಿ| ಅಸಫ್ ಅಲಿ ೧೨ ಡಾ| ಸಯ್ಯದ್ ಮಹಮ್ಮದ್ ೧೩ ಮತ್ತು ಆಚಾರ್ಯ, ಕೃಪಾಲನಿ ಒಂದು ಸ್ಥಾನವು ಖಾಲಿಯಾಗಿರಿಸಿದೆ

**ಮುಂದಿನ ಕಾಂಗ್ರೆಸು ಅಧಿವೇಶನ**

ಬರುವ ಕಾಂಗ್ರೆಸು ಅಧಿವೇಶನದ ಬಗ್ಗೆ ಪಂಜಾಬ್, ಗಡಿನಾಡು, ಮದ್ರಾಸು ಮತ್ತು ನಾಗಪುರಗಳಿಂದ ಆಮಂತ್ರಣ ಬಂದಿತ್ತು. ಮದ್ರಾಸಿನಲ್ಲಿ ಆಗಬೇಕೆಂದು ಸತ್ಯಮೂರ್ತಿ ಮತ್ತು ರಾಜಾಜಿಯವರು ವಾದಿಸಿದರು. ಗಡಿನಾಡಿನಲ್ಲಿ ಆಗಬೇಕೆಂದು ಖಾನ್ ಅಬ್ದುಲ್ ಗಫರ್ ಖಾನ್ ಮತ್ತು ಪಂಡಿತ ನೆಹರುಗಳು ವಾದಿಸಿದರು, ಬರುವ ವರ್ಕಿಂಗ್ ಕಮಿಟಿಯು ಅದನ್ನು ನಿರ್ಣಯಿಸುವುದಾಗಿ ತಿಳಿದಿದೆ.

ಅಧಿವೇಶನವು ಮುಗಿದ ಮುಖಂಡರು ತಮ್ಮ ಪ್ರಾಂತಕ್ಕೆ ಮರಳಿದರು.

**ಕಾಂಗ್ರೆಸು ಬಹಿರಂಗ ಸಭೆ**

ಕಾಂಗ್ರೆಸು ಬಹಿರಂಗ ಸಭೆಯು ರಾಷ್ಟ್ರಪತಿ ಮೌಲಾನಾ ಅಜಾದರ ಅಧ್ಯಕ್ಷತೆಯಲ್ಲಿ ಸೇರಿತು ಕಮ್ಯುನಿಸ್ಟರ ಪರವಾಗಿ ಪಂಜಾಬಿನ ಚಿತಾಲೇ ಮತ್ತು ಗೋಪಾಲಸಿಂಗರು ಪಾಟ್ನಾ ಠರಾವಿನ ಉಪಸೂಚನೆಯನ್ನು ಅನುಮೋದಿಸ ಮಾತನಾಡಿದರು ಪಂಡಿತ ನೆಹರುಗಳ ಅವುಗಳಿಗೆ ಉತ್ತರವೀಯುತ್ತಾ ಕಾಂಗೆಸ ಇಂದು ಆಂದೋಲನವನ್ನ ಆರಂಭಿಸುವ ಸಂದರ್ಭಕ್ಕೆ ಸಮೀಪಿಸಿರುವಾಗ ಎಲ್ಲರೂ ಶಿಸ್ತು ವಿದೇಯತೆಗಳಿಂದ ನಡೆಯ ಬೇಕೆಂದ ಸಾರಿ ಹೇಳಿದರು.

ಎಲ್ಲಾ ಉಪಸೂಚನೆಗಳೂ ಬಿದ್ದು ಹೋಗಿ ಪಾಟ್ನಾ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು

ಆ ವೇಳೆ ಮಹಾತ್ಮಾಜಿಯವರ ೩೫ ಮಿನಿಟುಗಳ ತನಕ ಭಾಷಣವಿತ್ತರು ತನ್ನ ಕಾರ್ಯಕ್ರಮ ತತ್ವಗಳಲ್ಲಿ ಕಾಂಗೆಸ ವಿಶ್ವಾಸವನ್ನ ತೋರಿಸದ ವಿನಹ ತಾನು ಆಂದೋಲನವನ್ನ ಆರಂಭಿಸಲಾರೆನ ದರ ಜನರ ಇಂದಿನ ಸತ್ಯಾಗ್ರಹ ಶಬ್ದವನ್ನು ಮನ ಬಂದಂತೆ ಉಪಯೋಗಿಸುವುದನ್ನು ಖಂಡಿಸಿದರು. ಜನರು ವಿಶ್ವಾಸವನ್ನು ವಿಧೇಯತೆಯನ್ನ ತೋರಿಸದಿದ್ದರೆ, ಮ... ದಿನ ಹೋರಾಟವು ತನಗೂ ದೇಶಕ್ಕೂ ಪರಾಜಯವನ್ನೇ ತರುವುದೆಂದ ಎಚ್ಚರಿಸಿದರು. ಕೊನೆಗೆ ಸ್ವರಾಜ್ಯ ಸಂಘಸ್ಥೆಯಾಗಿ ಚರಕ ಖಾದಿ ಮತ್ತು ಅಹಿಂಸೆಗಳೇ ... ಮುಖ್ಯ ಆಧಾರ ಸ್ತಂಭಗಳೆಂದ ತಿಳಿಸಿದರು

ಹವೆಯು ತಣ್ಣಗಿರಲಿಲ್ಲ ಮಳೆಯು ಜೋರಾಗಿ ಸುರಿಯುತ್ತಿತ್ತು ನಾವು ಮುಂದೆ ಎದುರಿಸಲಿರುವ ವಿಪತ್ತನ್ನು ಈ ಮಳೆಯು ಸೂಚಿಸುತ್ತದೆಯೆಂದರು ರಾಷ್ಟ್ರಪತಿಗಳು ಮಳೆ ಸುರಿಯುತ್ತಿದ್ದ ಅಧಿವೇಶನದ ಕಾರ್ಯಕ್ಕೆ ತೊಂದರೆಯುಂಟಾಯಿತು

ಬಹಿರಂಗ ಸಭೆಯಲ್ಲಿ ನೆಹರುಗಳು ಪಾಟ್ನಾ ಠರಾವನ್ನು ತಂದರು. ಕೃಪಾಲನಿಯವರು ಅನುಮೋದಿಸಿದರು.

ಜನರು ಹಿಡಿದುಕೊಂಡಿದ್ದ ಕೊಡೆಯನ್ನು ಮಡಚಿಡುವಂತೆ ನೆಹರುಗಳು ಬಿನ್ನೈಸಿಕೊಂಡರು. ಆದರೂ ಜನರು ಉತ್ಸಾಹದಿಂದ ಆವೇಶದಿಂದ ಅಧಿವೇಶನದಲ್ಲಿ ಭಾಗವಹಿಸಿದ್ದರು. ಅಧಿವೇಶನವು ಮುಗಿವವರೆಗೂ ಅವರು ಚಳಿಸದೆ ನಿಂತಿದ್ದರು. ಭಾಷಣಕಾರರ ಸ್ವರವು ಅಸ್ಪಷ್ಟವಾಗಿದ್ದರೂ, ಲೌಡ್ ಸ್ಪೀಕರುಗಳು ಗಂಭೀರವಾಗಿ ಧ್ವನಿಸುತ್ತಿದ್ದವು.

ಸ್ವಯಂಸೇವಕರು ಶಿಸ್ತಿನಿಂದ ಪರಿಶ್ರಮಪೂರ್ವಕ ಕೆಲಸಮಾಡುತ್ತಿದ್ದರು

ಇದು ಕಾಂಗೆಸ ಕೆಲಸಗಾರರಿಗೆ ಒಂದು ಪಾಠ, ಮುಂದೆ ಬರಲಿಕ್ಕಿರುವ ಸಲುವಾಗಿ ಪಡತಕ್ಕ ಕಷ್ಟಗಳನ್ನು ದೇವರು ನಮಗೆ ತಿಳಿಸಿದನು ಎಂದ ಗಾಂಧಿಜಿಯವರಂದರು.

**ಹಿಂದೂ ಮುಸಲ್ಮಾನರ ಒಕ್ಕಟ್ಟಿನ ಬಗ್ಗೆ ಸಮ್ಮೇಲನ**

**ರಾಷ್ಟ್ರಪತಿ ಅಝಾದರ ವಿಚಾರ**

ಹಿಂದೂ ಮುಸಲ್ಮಾನ ಒಕ್ಕಟಿನ ಬಗ್ಗೆ ವಿಚಾರವಿನಿಮಯ ಮಾಡಿ ... ದಿನ ಮಾರ್ಗವನ್ನ ನಿರ್ಧರಿಸುವುದಕ್ಕಾಗಿ ಮೌಲಾನಾ ಅಬುಲ್ ಕಲಂ ಅಝಾದರ ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಅಧ್ಯಕ್ಷರ ಮತ್ತು ಪ್ರಮುಖ ಕಾಂಗೆಸಿಗ ಸಭೆಯನ್ನು ಕರೆದಿದ್ದಾರೆಂದು ಯು ನೈಟೆಡ್ ಪ್ರೆಸ್ಸಿಗೆ ತಿಳಿದುಬಂದಿದೆ

ಜಮುನಾಲಾಲ್ ಬಜಾಜ್

ಗಾಂಧಿಯವರ ಎಲ್ಲ ಪ್ರಾಂತಿಕ ಕಾಂಗೆಸ ಕಮಿಟಿಗಳ ಅಧ್ಯಕ್ಷರ ಕರೆ... ಅವರೊಡನೆ ಸದ್ಯಸ್ಥಿತಿಯ ಬಗ್ಗೆ ವಿಚಾರ ಮಾಡುವರೆಂದು ತಿಳಿದುಬರುತ್ತದೆ

**ಬೊಂಬಾಯಿ ಗಿರಣಿ ಮುಷ್ಕರವು**

ಇನ್ನೂ ಕೊನೆಗೊಂಡಿರುವುದಿಲ್ಲ ಬೊಂಬಾಯಿಯ ಮೇಯರರು ರಾಜಿ ಮಾಡಲು ಪ್ರಯತ್ನ ನಡಿಸುತ್ತಿರುವರು. ಅವರು ಗಿರಣಿ ಮ್ಹಾಲಕರೊಡನೆ ಮಾತಾಡಿ ಇದೇ ತಾ ೧೮ರಲ್ಲು ಮಜೂರ ಪ್ರತಿನಿಧಿಗಳನ್ನು ಮಾತಾಡಲು ಕರೆದಿರುವರು ಇದೇ ತಾ ೧೭ನೇ ಸಂಜೆ ಮಜೂರರ ಪ್ರದರ್ಶನವೊಂದು ನಡೆದು ಮಜೂರ ಮುಖಂಡರು ರಾಜಿಗಾಗಿ ಕಳೆದ ವಾರ ನಡೆದ ಪ್ರಯತ್ನಗಳನ್ನು ವಿವರಿಸಿ ಹೇಳಿದರು. ಮಜೂರ ಮುಖಂಡರ ದಸ್ತಗಿರಿಯ ನಿಷೇಧಾರ್ಥವಾಗಿ ಇದೇ ತಾ. ೧೮ರಲ್ಲು ೨೪ ಘಂಟೆಗಳ ಮುಷ್ಕರ ನಡೆಯಿತು. ಅನೇಕ ಅಂಗಡಿ ಮತ್ತು ಚಿಕ್ಕ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದವು. ಈ ಸಂಬಂಧವಾಗಿ ಪಹರೆಮಾಡುತ್ತಿದ್ದ ೨೪ ಮಂದಿ ಕೈದು ಮಾಡಲ್ಪಟ್ಟಿರುವರು. ಇವರಲ್ಲಿ೧೧ಮಂದಿ



ವಲ್ಲಭಾಯಿ ಪಟೇಲ್

ಸ್ಟೇಟ್ ... ದ್ರ ಎಸೋಸಿಯೇಷನ ... ರ ಪ್ರತಿನಿಧಿ ಶ್ರೀ ಎನ್ ಎಮ್ ... ಯವರ ಇದೇ ತಾ ೧೮ರಲ್ಲಿ ಬೊ...ಗೆ ಒಂದು ಮಜೂರ ... ಮತ್ತು ಮೋಟರೊಡನೆ ಮಾತಾ... ವರ ಅವರ ಕೆಲದಿನ ಬೊಂಬಾ...ಲ್ಲಿ ... ಪ್ರವೇಶ ನಿಷೇಧಿಸಲಾಗಿದೆಂದ ತಿಳಿದುಬರುತ್ತದೆ

**ಮದ್ರಾಸ್ ಕೌನ್ಸಿಲ್ ಚುನಾ ಕಾಂಗ್ರೆಸಿನ ವಿಜಯ**

ಮದ್ರಾಸ್ ಕೌನ್ಸಿಲಿಗೆ ಈ ಸ... ತೆ ... ಲ್ಲಿ ... ಜನರಲ್ ಗಳಲ್ಲಿ ... ನ್ನು ಕಾಂಗೆಸು ಪಡದ ... ವಿಜಯ ಹೊಂದಿರುವುದ ... ಶ್ರೀ ಎಸ್ ವ ಕ್ಕಂರಂಗ ... ದಲಿ... ದಿವಾನ್ ಬಹದೂರ್ ... ವ ... ಮುದಲಿಯಾರರನ್ನು ... ಗಳ ಬಹುಮತದಿ ದ ಗೆದ್ದಿ...

**ಲಾಹೋರಿನಲ್ಲಿ ಗುಂಡು ಹಾರಿಸಿದರು**

ಕಾಂಸ್ಟೆಬರ ಮೇಲೆ ಸಶ... ಲಾಹೋರಿನಲ್ಲಿ ಗುಂಡು ಹಾರಿಸಿ ಜನರ ಸತ್ತ ಹೋಗಿರುವರ ೩೯ ದಿ ಗಾಯವಾಗಿದೆ



[illegible]

## ರಾಮಗಢ ಕಾಂಗ್ರೆಸ್ ಅಧಿವೇಶನ

[೬ನೇ ಪುಟದಿಂದ]

ಯಾಗಿ ಅನುಸರಿಸದ ವಿನಾ ಕಾದಾಟ ವನ್ನು ಆರಂಭಿಸರೆಂದು ಹೇಳಲಾಗಿದೆ. ಗಾಂಧಿಜಿಯವರು ಇವೆಲ್ಲ ಸಂಗತಿಗಳ ವಿಷಯದಲ್ಲಿ ಕಾಂಗ್ರೆಸಿನ ಮಹಾ ಅಧಿವೇಶನದಲ್ಲಿ ಭಾಷಣ ಕೊಡಬಹುದೆಂದು ಗೊತ್ತಾಗಿದೆ.

### ಸೋಶಿಯಲಿಸ್ಟರ ಬೆಂಬಲ

ಈ ವರ್ಷದ ವರ್ಕಿಂಗ್ ಕಮಿಟಿಯ ಠರಾವಿಗೆ, ಸೋಶಿಯಲಿಸ್ಟರು ಉಪ ಸೂಚನೆಗಳನ್ನು ತರುವುದಿಲ್ಲವೆಂದೂ, ಪಾಟ್ನಾದ ಠರಾವು ರಾಷ್ಟ್ರದ ಪ್ರಗತಿ ಧ್ಯೇಯವನ್ನು ಸಾರಲು ತಕ್ಕದ್ದಾಗಿದೆಯೆಂದೂ, ಆದಕಾರಣ ರಾಮಗಢದ ಅಧಿವೇಶನದಲ್ಲಿ ಎಲ್ಲಾ ಪಕ್ಷಿಯರೂ ಏಕನಾದದಿಂದ ರಾಷ್ಟ್ರದ ಕೇಳಿಕೆಯನ್ನು ಮುಂದಿಡಬೇಕೆಂದೂ ಸೋಶಿಯಲಿಸ್ಟರು ಬೆಂಬಲಕೊಡುವುದಾಗಿ ತಿಳಿಯುತ್ತದೆ.

### ಸಬ್‌ಜೆಕ್ಟ್ ಕಮಿಟಿಯ ಸಭೆ

ಸಬ್‌ಜೆಕ್ಟ್ ಕಮಿಟಿಯ ಸಭೆಯು ರಾಷ್ಟ್ರಪತಿ ಮೌಲಾನಾ ಅಜಾದರ ಅಧ್ಯಕ್ಷತೆಯಿಂದ ಸೇರಿತು. ಅದರಲ್ಲಿ ರಾಜೇಂದ್ರಪ್ರಸಾದರು ಪಾಟ್ನಾದ ಠರಾವನ್ನು ಮುಂದಿಸುತ್ತಾ ದೀರ್ಘವಾದ ಭಾಷಣವನ್ನಿತ್ತರು. ಕಾಂಗ್ರೆಸು ಬ್ರಿಟನಿನೊಡನೆ ಸಮಾನತೆಯ ಸ್ಥಾನವನ್ನು ಅಪೇಕ್ಷಿಸುತ್ತದೆಯೆಂದೂ, ಜಾತೀಯ ವಿಷಯ, ಅಲ್ಪಸಂಖ್ಯಾಕ ಸಮಸ್ಯೆ ಮೊದಲಾದವುಗಳಿಗೆ ರಾಷ್ಟ್ರಘಟನಾ ಸಮಿತಿಯೇ ಯೋಗ್ಯಪರಿಹಾರೋಪಾಯವೆಂದೂ, ಬ್ರಿಟಿಷ್ ಸರಕಾರವು ಕಾಂಗ್ರೆಸನ್ನು ಯುದ್ಧಕ್ಕೆ ಆಹ್ವಾನಿಸುತ್ತಿರುವಾಗ ಸುಮ್ಮಗಿರಲು ಸಾಧ್ಯವಿಲ್ಲವೆಂದೂ ಹೇಳಿದರು. ಮತ್ತು ಕಾಂಗ್ರೆಸಿನಲ್ಲಿ ಐಕ್ಯತೆಯಿರಬೇಕೆಂದೂ ಸಾರಿದರು.

ನೆಹರುಗಳು ಅದನ್ನು ಸಮರ್ಥಿಸಿ ಮಾತನಾಡಿದರು. ಠರಾವಿನ ವಿಷಯಗಳನ್ನು ವಿವರಿಸಿದರು. 'ಆಂದೋಲನವನ್ನು ಆರಂಭಿಸಬೇಕೆಂಬ ವಿಷಯ ಕಾಳಜಿಯುಳ್ಳವರು, ನಾಳೆಯೇ ಅಂತಹ ಚಳವಳವನ್ನು ಯಾತಕ್ಕೆ ಆರಂಭಿಸಬಾರದು? ಆದರೆ, ಕಾಂಗ್ರೆಸಿನ ಧುರೀಣತೆಯನ್ನು ಒಪ್ಪುವವರು ಅದಕ್ಕೆ ವಿಧೇಯರಾಗಿರಬೇಕು ಎಂದರು!

ಸಬ್‌ಜೆಕ್ಟ್ ಕಮಿಟಿಯ ಸಭೆಯಲ್ಲಿ ಪಾಟ್ನಾದ ಠರಾವು ಪ್ರಬಲ ಬಹುಮತದಿಂದ ಮಂಜೂರಾಯಿತು. ಅದಕ್ಕೆ ೨೭ ಉಪಸೂಚನೆಗಳಿದ್ದು, ಶ್ರೀಗಳಾದ ಎಂ. ಎಸ್. ರಾಯ ಭಾರಧ್ವಜ ಮೊದಲಾದವರು ಉಪಸೂಚಕ ಠರಾವನ್ನು ತಂದಿದ್ದರು. ಅವುಗಳು ಬಿದ್ದುಹೋದವು. ಸೋಶಿಯಲಿಸ್ಟ್ ಪಕ್ಷದ ಪರವಾಗಿ ಮಿ॥ ಯೂಸುಫ್ ಮೆಹರಾಲಿಯವರು ಠರಾವಿನ ಬೆಂಬಲವನ್ನು ಸೂಚಿಸಿದರು. ಪಾಟ್ನಾ ಠರಾವನ್ನು ಸಮರ್ಥಿಸಿ, ಸರ್ದಾರ ಪಟೇಲರು ಮಾತನಾಡಿದರು. ಹೀಗೆ ಪಾಟ್ನಾ ಠರಾವು ಮಂಜೂರಾಗಿ ಪ್ರಬಲ ಬಹುಮತ ದೊರೆಯಿತು.

## ೧೧೭ ವರ್ಷ ಬಾಳಿದ ಮನುಷ್ಯ

### ದೀರ್ಘ ಜೀವನದ ಉಪಾಯವೇನು?

ಇಂಗ್ಲೆಂಡಿನಲ್ಲಿ ಪ್ರಕಟವಾಗುವ ಪತ್ರಿಕೆಯೊಂದು ೧೧೭ ವರ್ಷ ಬಾಳಿದ ಮನುಷ್ಯನ ವಿಷಯವಾಗಿ ಒಂದು ವಾರ್ತೆಯನ್ನು ಕೊಟ್ಟಿದೆ. ಈ ದೀರ್ಘ ಜೀವನದ ಕುರಿತು ಒಬ್ಬ ವೈದ್ಯಕೀಯ ಪ್ರತಿನಿಧಿಗಳು ಹೀಗೆ ಬರೆಯುತ್ತಾರೆ.

"ನಮ್ಮ ಶರೀರದಿಂದ ವಿಷವಸ್ತುಗಳನ್ನು ತೆಗೆದ ಪಕ್ಷದಲ್ಲಿ ನಾವು ನಿತ್ಯ ಯುವಕರಾಗಿರಬಹುದೆಂದು ಹಲವು ಡಾಕ್ಟರರ ಅಭಿಪ್ರಾಯ. ಆದರೆ, ಯಾವ ಡಾಕ್ಟರರೂ ಹಾಗೆ ಶರೀರವನ್ನು ನಿರ್ಮಲವಾಗಿಡಲು ಉಪಾಯವೇನೆಂದು ತಿಳಿಸಿರುವುದಿಲ್ಲವಾಗಿ ನಿತ್ಯ ಯುವಕರಾಗಿರುವಿಕೆ ಎಂಬುದು ಒಂದು ಕನಸಾಗಿದೆ. ಹೇಗಿದ್ದರೂ ಕೆಲವು ವಿಷವಸ್ತುಗಳು ಶರೀರದಲ್ಲಿ ಸೇರಿ ನಮಗೆ, ತೊಂದರೆಗಳನ್ನು ಕೊಡುವವೆಂಬುದು ನಿಶ್ಚಯವಾಗಿದೆ. ಈ ವಿಷ ವಸ್ತುಗಳು ಉದರ ಕೋಶದಲ್ಲಿ ನಿಂತು ನಮ್ಮನ್ನು ಸದಾ ರೋಗಿಗಳಾಗಿ ಮಾಡುತ್ತವೆ.

ಇದನ್ನು ಹೋಗಲಾಡಿಸಲು ಹಲವು ಡಾಕ್ಟರರು ೧,೪೦೦ ಮಂದಿ ಜನರ ಮೇಲೆ ವಿವಿಧ ಔಷಧಿಗಳನ್ನುಪಯೋಗಿಸಿ ನೋಡಿದ್ದರು. ಆದರೆ ಈ ಎಲ್ಲಾ ಪ್ರಯೋಗಗಳು ನಿಷ್ಪ್ರಯೋಜಕಗಳಾದುವು.

"ಅವುಗಳಲ್ಲಿ ಎಲ್ಲದಕ್ಕಿಂತಲೂ ತೃಪ್ತಿಕರವಾಗಿ ಕಂಡು ಬಂದ ಪ್ರಯೋಗವೆಂದರೆ ಒಂದು ಖನಿಜಲವಣವು. ಆ ಖನಿಜ ಲವಣವು ಕ್ರುಶೆನ್ ಸಾಲ್ಟಿನಲ್ಲಿ ಉಪಯೋಗಿಸಲ್ಪಟ್ಟಿದೆ ಎಂಬು ಅವರ ವರದಿಯಿಂದ ತಿಳಿದುಬಂತು. ಕ್ರುಶೆನ್ ಸಾಲ್ಟನ್ನು ತೆಗೆದು ಕೊಳ್ಳುವುದರಿಂದ ಬಹಳಕಾಲ ಜೀವಿಸಬಹುದೆಂದು ಹೇಳಲು ಸಾಧ್ಯವಿಲ್ಲವಾದರೂ ಬೇಗನೇ ಮುದುಕರಾಗುವುದನ್ನು ಅದು ಖಂಡಿತ ತಡೆಯುವುದು. ಇದರ ಸಾಕ್ಷಿಯೆಂದರೆ ಪ್ರಪಂಚದ ಬೇರೆ ಬೇರೆ ಭಾಗಗಳಿಂದ ಅದನ್ನುಪಯೋಗಿಸಿ ೬೦, ೭೦, ೮೦ ವರ್ಷಗಳ ತನಕ ಸುಖವಾಗಿ ಬಾಳಿದ ಜನರು ಬರೆದ ಶಿಫಾರಸು ಪತ್ರಗಳೇ."

---

ಠರಾವು ಅಂಗೀಕೃತವಾದ ಮೇಲೆ ಮಹಾತ್ಮಾಜಿಯವರು ಸಬ್‌ಜೆಕ್ಟ ಕಮಿಟಿಯನ್ನುದ್ದೇಶಿಸಿ ಮುಕ್ಕಾಲು ತಾಸಿನ ವರೆಗೆ ಗಂಭೀರ ಭಾಷಣ ಮಾಡಿದರು. ಆದರಲ್ಲಿ ಕಾಂಗ್ರೆಸ್ಸಿನ ಇಂದಿನ ಪರಿಸ್ಥಿತಿಯಲ್ಲಿ ಸತ್ಯಾಗ್ರಹ ಹೂಡಲು ತನ್ನ ಮುಂದಾಳುತನವಿರಬೇಕಾದರೆ ಜನತೆಯು ಸತ್ಯ ಅಹಿಂಸೆಗಳಲ್ಲಿ ವಿಶ್ವಾಸವಿಡಬೇಕೆಂದು ವಿಧೇಯತೆಯಿರಬೇಕೆಂದೂ ಸಾರಿದರು.

ಅವರ ಭಾಷಣವು ಜನತೆಯನ್ನು ಅವರನ್ನು ಹಿಂಬಾಲಿಸಲು ಸಮ್ಮತಿಸಿದಂತೆ ಮಾಡುವಷ್ಟು ಪರಿಣಾಮಕಾರಿಯಾದಂತೆ ಕಂಡುಬಂದಿದೆ.

### ಮುಂದಿನ ವರ್ಷದ ವರ್ಕಿಂಗ್ ಕಮಿಟಿ

ಮೌಲಾನಾ ಅಜಾದರು ಈ ಸಾರಿಯ ವರ್ಕಿಂಗ್ ಕಮಿಟಿಯಲ್ಲಿ ಡಾ॥ ಸಯ್ಯದ್ ಮಹಮ್ಮದ್, ಆಚಾರ್ಯ ನರೇಂದ್ರದೇವ, ಸಿ. ರಾಜಗೋಪಾಲಾಚಾರಿ, ಮತ್ತು ರಫಿ ಅಹಮ್ಮದ್ ಕಿದ್ವಾಯಿ ಈ ನಾಲ್ಕು ಹೊಸಬರು ಸೇರಿಸಲ್ಪಡುವರೆಂದೂ, ಪಂಡಿತ ನೆಹರು ಮತ್ತು ಕೃಪಾಳನಿಯವರು ಜತೆ ಕಾರ್ಯದರ್ಶಿಗಳಾಗಿರುವರೆಂದೂ ತಿಳಿದಿದೆ.

# ರೂ. 550 ಬಹುಮಾನ

## ಸಿದ್ಧ ವಶೀಕರಣ ಕವಚ

ಇದರಿಂದ ನಿಮ್ಮನ್ನು ದ್ವೇಷಿಸುವ ಯಾವ ವ್ಯಕ್ತಿಯೇ ಆಗಲೀ ಅದು ಸ್ತ್ರೀ ಯಾ ಪುರುಷ ವ್ಯಕ್ತಿಯಾಗಿರಲೀ ಆ ವ್ಯಕ್ತಿಯು ಬಂದು ನಿಮ್ಮನ್ನು ಪ್ರೀತಿಸುವಂತೆ ಮಾಡಬಹುದು. ಬೆಲೆ ತಾಮ್ರದ ಆವರಣದ್ದು ರೂ. 1-15-0 ಮೂರಕ್ಕೆ ರೂ. 5, ಬೆಳ್ಳಿಯ ಆವರಣದ್ದು ರೂ 2-12-0 ಮತ್ತು ಚಿನ್ನದ ಆವರಣದ್ದು ರೂ 6-8-0

**ಲಕ್ಷ್ಮೀ ಯಂತ್ರ:** ಗ್ರಹಗಳ ಬಾಧೆಯನ್ನು ಹೋಗಲಾಡಿಸುತ್ತದೆ. ವ್ಯಾಪಾರ, ಪರೀಕ್ಷೆ, ವಹಿವಾಟು, ಸೋಡ್ತಿ, ಆರೋಗ್ಯ, ಧನ, ಮಕ್ಕಳು, ವೈರಿಯ ಮೇಲೆ ಜಯ ಮುಂತಾದವುಗಳಲ್ಲಿ ಸಹಕರಿಸುವುದು. ಮಕ್ಕಳನ್ನು ಪಡಿಯಬೇಕೆಂದಿಚ್ಛಿಸುವವರು ಪುರುಷ ಮತ್ತು ಸ್ತ್ರೀ ಇಬ್ಬರು ಎರಡು ಯಂತ್ರಗಳನ್ನು ಧರಿಸಬೇಕು. ಬೆಲೆ: ತಾಮ್ರದ ಆವರಣ ರೂ. 1-15-0 3 ಯಂತ್ರಗಳು ರೂಪಾಯಿ 5/ ಬೆಳ್ಳಿಯ ಆವರಣ ರೂ. 2-12-0, ಚಿನ್ನದ ಆವರಣ ರೂ. 6-8-0, ಯಾವುದಾದರೂ ನಾಲ್ಕು ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಪವರ್‌ಫುಲ್ ನಂ. 4ಕ್ಕೆ ಕೇಳಿರಿ. ಬೆಲೆ 5-4-0 5 ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಸುಪರ್ ಪವರ್‌ಫುಲ್ ನಂ. 5ಕ್ಕೆ ಕೇಳಿರಿ ಬೆಲೆ 7-8-0 ಎಲ್ಲಾ ವಿಷಯಗಳಲ್ಲಿಯೂ ಅಂಚೆವೆಚ್ಚ ಪ್ರತ್ಯೇಕ.

**ಸೂಚನೆ:** ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 550 ಇನಾಮು, ಸ್ವಭಾವಿಯಾಗಿ ಕಾರ್ಯಿಸದಿಲ್ಲವಾದರೆ ಬೆಲೆ ಹಿಂತಿರುಗಿ ಕೊಡಲ್ಪಡುವುದು. ಈ ಯಂತ್ರಗಳು ಸರಿಯಾಗಿ ಕಾರ್ಯಿಸಬೇಕಾದರೆ ಸೀವೇನಾದರು ಕಷ್ಟಪಡಬೇಕೆಂದಿಲ್ಲ.

**ANAND SWAMI,**

Anand Bhawan, Post Box No. 27 (S.A.M.) Amritsar

## THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

**FIXED DEPOSITS**

For 2 Years 5% 1 Year 4½% For 6 months 4% 3 months 3½%

Auction ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

*Apply for particulars*-

**K R. GURU,** *Managing Director*




## ನಿಮ್ಮ ಅದೃಷ್ಟ!

ಪೋಸ್ಟು ಕಾರ್ಡಿನ ಮೇಲೆ ಯಾವುದಾದರೂ ಒಂದು ಹೂವಿನ ಹೆಸರು, ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿರಿ. ಕೂಡಲೇ ನಾವು ನಿಮಗೆ ನಿಮ್ಮ ಮುಂದಿನ 12 ತಿಂಗಳಲ್ಲಾಗುವ ವ್ಯಾಪಾರ ವಹಿವಾಟುಗಳ ಲಾಭ ನಷ್ಟ, ಜನನ, ಉದ್ಯೋಗ, ದಾಂಪತ್ಯಸುಖ, ಆರೋಗ್ಯ ಮತ್ತು ಕೆಟ್ಟ ಗ್ರಹಗಳ ಕಾಟವನ್ನು ತಪ್ಪಿಸುವ ಉಪಾಯಗಳನ್ನು ಸವಿಸ್ತಾರವಾಗಿ ರೂ. 1-9-0ಕ್ಕೆ ವಿ. ಪಿ. ಮೂಲಕ ತಿಳಿಸುವೆವು. ಒಂದು ಬಾರಿ ಪರೀಕ್ಷಿಸಿದಲ್ಲಿ ನಮ್ಮ ಭವಿಷ್ಯತ್ತಿನ ಸತ್ಯತೆಯನ್ನು ತಿಳಿಯುವುದು.

ಹಣವನ್ನು ಹಿಂದೆಕೊಡುವ ಗ್ಯಾರಂಟಿಯಲ್ಲಿ ಮಾರಲ್ಪಡುವುದು. ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 100 ಇನಾಮು ಕೊಡಲಾಗುವುದು.

**ANAND JOTISH ASHRAM,**

Post Box No. 27 (S.A.M.) Amritsar

# ಂದನೇ ಜಿಲ್ಲಾ ಹರಿಜನ ಪರಿಷತ್ತು ಮುಲ್ಕಿ

ಮದ್ರಾಸಿನ ಮಾಜಿ ಕಾಂಗ್ರೆಸ್ ಮಂತ್ರಿ ಶ್ರೀ ಮುನಿಸ್ವಾಮಿ ಪಿಳ್ಳೆಯವರು ಹರಿಜನ ಪರಿಷತ್ತಿನ ಅಧ್ಯಕ್ಷತೆ ವಹಿಸುವರು.

ಹರಿಜನ ಬಂಧುಗಳಿಗೆ ಊಟದ ವ್ಯವಸ್ಥೆ ಮಾಡುವುದಾಗಿ ತಿಳಿಸಿರುವು ದದರೂ ಬಾಕಿಯವರು ಬರುವವರಿಗೆ ರಿದು ತಿಳಿಸಿದಲ್ಲಿ ಊಟದ ಏರ್ಪಾಡು ಮಾಡಿಸಬಹುದಾಗಿದೆ. ಶ್ರೀ ಆರ್. ಸೂರ್ಯನಾರಾಯಣ ರಾವ್ (ಫಸ್ಟ್ ಮೆಂಬರ್ ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿ) ಇವರು ಪರಿಷತ್ತನ್ನು ತೆರೆ ಯಲಿರುವರು. ಉಡುಪಿಯ ಜಿಲ್ಲಾ ಹರಿಜನ ಲೀಗಿನವರ ೨೦ ಸ್ವಾಗತ ಸಮಿತಿ ಮೆಂಬರರನ್ನು ಸೇರಿಸಿಕೊಳ್ಳ ಬೇಕೆಂದು ಬರೆದಿರುವರಲ್ಲದೆ ಪ್ರತಿನಿಧಿ ಗಳೊಡನೆ ಭಾಗವಹಿಸುವುದಾಗಿಯೂ ಹಲವೊಂದು ನಿರ್ಣಯಗಳನ್ನೂ ಬರೆದು ಕಳುಹಿಸಿರುವರು. ಉಚ್ಚಿಲ ನರ್ಸರಿಯ ಶ್ರೀ ಸೋನ್ಸ್‌ರವರು ಜೇನು ಸಾಕು ವಿಕೆ, ಕೋಳಿ ಸಾಕಣಿಕೆಯ ಪ್ರದರ್ಶನ ಏರ್ಪಡಿಸುವುದಾಗಿ ಒಪ್ಪಿರುವರು. ಇದಕ್ಕೆ ಅನುಕೂಲವಾದ ಒಳ್ಳೆಯ ಇತರ ಪ್ರದರ್ಶನಕಾರರೂ ಇದ್ದರೆ ಬರುವಂತೆ ಕೇಳಿಕೊಳ್ಳುವೆವು. ಹರಿಜನ ಬಂಧುಗಳಲ್ಲಿ ಜೇನು ನೊಣ ಸಾಕುವಿಕೆ ಯನ್ನು ಜಿಲ್ಲಾ ಹರಿಜನ ಸಂಘವು ಸಾಧಿ ಸುವುದಾದರೆ ರೂಪಾಯಿ ೧೦೦/ರ ಸಹಾಯ ಮಾಡುವುದಾಗಿ ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನವರು ಒಪ್ಪಿ ರುವರೆಂದು ತಿಳಿಸಲು ಸಂತೋಷಪಡು ತ್ತೇವೆ. ಬೆತ್ತದ ಕಸಬು ಕೈಗಾರಿಕೆ ಗಳ ಪ್ರದರ್ಶನಕ್ಕೆ ಕೆಲವರ ಉತ್ತೇಜನ ವಿದೆ. ಬ್ರಹ್ಮಾವರದಿಂದ ಹರಿಜನರ ದಶಾವತಾರ ಮೇಳದವರು ಬರುವರಾಗಿ ತಿಳಿಸಿರುತ್ತಾರೆ. ೭. ಮಂಗಳೂರಿನ ಕಿಳಿಯರ ಕೂಟದವರು "ಮಲ್ಲಾಧಿಗೆದ ಮದ" ವೆಂಬ ತುಳುನಾಟಕವಾಡಲು ಬರುವರು. ಉಡುಪಿ ಮತ್ತು ಮಂಗ ಳೂರು ಸಾಗುವಳಿ ಇಲಾಖಾ ಡೆಮೋನ್ಸ್ಟ್ರೇಟರ ಪ್ರದರ್ಶನ ಕಾರ್ಯದಲ್ಲಿ ಸಹಾಯ ಮಾಡುವುದಾಗಿ ಬರೆದಿರುವರು. ಶ್ರೀ ಮೋಹನಪ್ಪ ತಿಂಗಳಾಯರು ಮದ್ಯಪಾನ

ಕುರಿತಾದ ಚಿತ್ರ ಪಟಗಳ ಪ್ರದರ್ಶನ ಮಾಡಲಿರುವರು.

ಪ್ರತಿನಿಧಿಗಳು ಜಿಲ್ಲೆಯ ಎಲ್ಲಾ ಭಾಗ ಗಳಿಂದಲೂ ಬರುವರು. ಈ ತನಕ ವಸೂಲು ಬಂದ ವಂತಿಗೆಯಾಗಲೀ ಇತರ ಸಹಾಯವಾಗಲೀ ತೃಪ್ತಿಕರವಲ್ಲ. ಹೆಚ್ಚಾಗಿ ಬರುವದೆಂಬ ಭರವಸೆಯಿದೆ. ಹರಿಜನ ಕೆಲಸವು ಎಲ್ಲರ ಕರ್ತವ್ಯ ವೆಂದು ಮಾಡತಕ್ಕದಾಗಿದೆ. ಬಂದ ವಂತಿಗೆಯಿಂದ ಜಾಗ್ರತೆಯಿಂದ ಪರಿಷತ್ತಿನ ಖರ್ಚು ಕಳೆದು ಹರಿಜನ ಉದ್ಧಾರ ಕಾರ್ಯದಲ್ಲಿ ವಿನಿಯೋಗಿಸಲ್ಪಡುವುದು.

ಮೂಲ್ಕಿ ಸೀಮೆಯ ೩೬ ಗ್ರಾಮ ಗಳಿಗೆ ಸೇರಿದ ಹರಿಜನರು ೩ನೇ ಸಲ ಸಭೆಸೇರಿ ಧ್ವಜಸ್ತಂಭವನ್ನು ನಟ್ಟಿರು ವರು ಮತ್ತು ಈ ರೀತಿಯ ನಿರ್ಣಯ ಗಳನ್ನು ಮಾಡಿ ತಾವು ಆಚರಿಸುವುದಾಗಿ ನಿರ್ಣಯಿಸಿಕೊಂಡಿರುವುದಲ್ಲದೆ ಜಿಲ್ಲೆಯ ಮುಂದೆಯೂ ಇದನ್ನು ತೆ ಕೇಳಿಕೊಳ್ಳು ವರು.

೧. ಪರಿಷತ್ತು ವಾರದಲ್ಲಿ ಅಂದರೆ ತಾ ೨೬ ರಿಂದ ೩೧ರ ವರೆಗೆ ಟಪ್ಪ ನಾಡು ಉತ್ಸವದ ಸಮಯ. ದಿನ ಗಳಲ್ಲಿ ತಾವೆಲ್ಲರೂ ದಿನಂಪ್ರತಿ ಸ್ನಾನಮಾಡಿ, ಮನೆ ಪಾತ್ರೆಗಳನ್ನು ನಿರ್ಮಲಗೊಳಿಸಿ ಮದ್ಯಪಾನವನ್ನು ದೂರಮಾಡಿ, ಹರಿಕೀರ್ತನೆ ಪಗ್ಗೆರೆ ಜನಜಾಗೃತಿಯ ಕೆಲಸಗಳನ್ನು ಮಾಡ ಬೇಕಾಗಿಯೂ ಇದನ್ನು ಈ ವರ್ಷ ಮಾತ್ರವಲ್ಲ, ಹರಿಜನ ಸಪ್ತಾಹದ ವರ್ಷಂಪ್ರತಿ ಟಪ್ಪನಾಡು ಉತ್ಸವದ ಒಂದು ವಾರ ಆಚರಿಸಬೇಕಾಗಿಯೂ ಮೇಲು ಮತ್ತು ಕೆಳತರಗತಿಯ ಜಾತಿಗಳಲ್ಲಿ ಉಪಯೋಗಿಸುವ ಶಬ್ದ ಗಳಲ್ಲಿ ವ್ಯತ್ಯಾಸ ತೋರ ಸವುಗಳನ್ನು ಮೇಲು ತರಗತಿಯವರು ಮಾತನಾಡು ವಂತೆ ಅಭ್ಯಾಸಿಸಬೇಕಾಗಿಯೂ ನಿಶ್ಚ ಯಿಸಿಕೊಂಡಿರುವರು.

೨. ಇದೇ ಜಿಲ್ಲೆಯ ಲೇಬರ್ ಶಾಲೆ ಯವರು ಈ ವಾರದ ಪ್ರತೀ ದಿನ ಮದ್ಯ ಪಾನ ಹಾಡುಗಳಿಂದ ಹಳ್ಳಿಗಳಲ್ಲಿ ಮೆರ ವಣಿಗೆ ಬಂದು ಇತರರೂ ಅವರವರ ಗ್ರಾಮಗಳಲ್ಲಿ ಆಚರಿಸುವಂತೆ ಪತ್ರಿಕೆ ಮೂಲಕ ಕೇಳಿಕೊಳ್ಳಬೇಕಾಗಿ ನಿಶ್ಚಯಿಸಿ ರುವರು.

ಹರಿಜನ ಬಂಧುಗಳಾದ ಮಹನೀ ಯರಿಂದ ಇದುವರೆಗೆ ವಸೂಲಾದ ವಂತಿ ಗೆ ಅಕ್ಕಿ ಸೇರು ೧೪೦ ನಗದಿ ರೂ ೬೩—೬—೩ ಮಹಾ ಜನರ ಉದಾರ ಸಹಾ ಯವು ಹಾರೈಸಲಾಗಿದೆ.

ಪರಿಷತ್ತಿಗೆ ಇನ್ನು ಬರೀ ಕೆಲದಿನಗಳು ಮಾತ್ರ ಉಳಿದಿವೆ. ಹೆಚ್ಚಿಗೆ ಪತ್ರಿಕೆಗಳ ಮೂಲಕ ಬರೆಯಲು ಸಾಧ್ಯವಿಲ್ಲ. ಪ್ರೋತ್ಸಾಹವು ಬಂದುದು ಸಾಕಾಗದು. ಜಿಲ್ಲೆಯು ಎಚ್ಚತ್ತು ಸಹಾಯ ಕಳುಹಿಸಿ ಕೊಡುವದೆಂಬ ನಿರೀಕ್ಷೆಯಲ್ಲಿರುವೆವು. ಎಂದು ಸ್ವಾಗತಕಮಿಟಿಯ ಅಧ್ಯಕ್ಷರಾದ ಮೂಲ್ಕಿಯ ಶ್ರೀ. ಎಂ. ಆರ್. ಪೂಂಜರು ತಿಳಿಸುತ್ತಾರೆ.


ಭಾರತೀಯರ ಮೆಚ್ಚುಗೆಯ
## ಎರಡು ವಾಚುಗಳು!

ವೆಸ್ಟ್ ಎಂಡ್ ವಾಚುಗಳಲ್ಲಿ 'ಮೇಟ್‌ಲಿ' ಮತ್ತು 'ಕೀಪ್ ಸೇಕ್' ಎಂಬ ಎರಡು ವಾಚುಗಳು ಹೆಸರಾಂತವು ಬೆಲೆಗೆ ತಕ್ಕುದಾದ ಇ

ಕೀಪ್ ಸೇಕ್ ಹೊಸ ಆಕಾರ
ಎವರ ಬ್ರೈಟ್ ಸ್ಟೀಲ್ ರೂ 36
ರೋ. ಗೋಲ್ಡ್ ರೂ.49 9ಕೆ ಚಿನ್ನ ರೂ 69
18 ಕೆರೆಟ್ ಚಿನ್ನ ರೂ 112

ಪ್ರಯೋಜನವು ಇದರ ಹೆಸರನ್ನು ಕೇಳಿದೊಡನೆ ಜನರು ತಲೆದೂಗುತ್ತಿರುವದೇ ಸೂಚಿತಗೊಳಿಸುತ್ತದೆ. ಜನತೆಯ ನವೀನ ಫೇಶನಿಗೆ ತಕ್ಕುದಾದ ಆಕಾರಗಳಲ್ಲಿ ಚಿತ್ರದಲ್ಲಿ ತೋರಿಸಿದಂತೆ ಇರುವವು. ಈ ಉತ್ತಮವಾದ ಮೆಚ್ಚುಗೆಯ ವಾಚುಗಳನ್ನು ... ಬೆಲೆಗೆ ಕೊಂಡು ... ಕೆಟಲಾಗ್ ... ಕಳುಹಿಸುತ್ತೇವೆ.

ಮೇಟ್‌ಲೀ ಹೊಸ ಆಕಾರ
... ಕೇಸ್ ಹಿಂಭಾಗ ಎ. ಬ್ರೈಟ್ ಸ್ಟೀಲ್ ರೂ 30
... ರೋಲ್ಡ್ ಗೋಲ್ಡ್ ... ರೂ 26 ...

ವೆಸ್ಟ್ ಎಂಡ್ ವಾಚು ಕೊ.,
ಬೊಂಬಾಯಿ ಮತ್ತು ಕಲ್ಕತ್ತಾ

WEST END WATCH Co
BOMBAY CALCUTTA

ಮಕ್ಕಳಿಗೆ
ಡೋಂಗರೆ
ಬಾಲಾಮೃತವು
ಆದರ್ಶಕರವಾದ
ಪೌಷ್ಟಿಕ:

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂ ತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ



The Auttur & Jawahar Bank, Limited.
ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್, ಮಂಗಳೂರು.
ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು. ಬ್ರೆಂಚ್: ಸೆಂಟ್ರಲ್ ಮಾರ್ಕೆಟ್
ರಿಜಿಸ್ಟರ್ಡ್ ಮೂಲಧನ ರೂ 1,00,000. ತೆರಲ್ಪಟ್ಟ ಮೂಲಧನ ರೂ 50,100
ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ
ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%
ನಿರಖು ಠೇವಣಾತಿ 3 ತಿಂಗಳಿಗೆ 3½% ನಿರಖು ಠೇವಣಾತಿ 12 ತಿಂಗಳಿಗೆ 4½
6 ತಿಂಗಳಿಗೆ 4% 24 ತಿಂಗಳಿಗೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು
ಅತ್ತೂರು ವೈಕುಂಠ ಪ್ರಭು, ಮೆನೆಜಿಂಗ್ ಡೈರೆಕ್ಟರ್.

# ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಬಜೆಟ್ ಅಧಿವೇಶನ

[೧೯೪೦--೪೧]

## ಪ್ರೆಸಿಡೆಂಟ್ ಡಾ. ಕೆ. ವಿಟ್ಠಲ ಶೆಟ್ರ ಉಜ್ವಲ ಭಾಷಣ

ಪ್ರೆಸಿಡೆಂಟ್ ಡಾ। ಕೆ ವಿಟ್ಠಲ ಶೆಟ್ಟರು

"ನಮ್ಮ ಜಿಲ್ಲೆಯಲ್ಲಿ ಅಕ್ಷರಜ್ಞರು ಶೇಕಡಾ 10-7% ಮಾತ್ರ ಇದ್ದಾರೆ. ಮುಂದುವರಿದ ಜಿಲ್ಲೆಯೆನಿಸಿದ ನಮ್ಮ ಜಿಲ್ಲೆಯ ಹೆಸರಿಗೆ ಇದು ಕೊರತೆಯಾಗಿದೆ. ಒಂದು ರಾಷ್ಟ್ರದ ರಾಜಕೀಯ ಅಭ್ಯುದಯದ ಹೆಚ್ಚಿನ ಅಂಶವು ಆ ರಾಷ್ಟ್ರದ ಜನತೆಯ ಸಾಕ್ಷರತೆಯನ್ನು ಆಧರಿಸಿಕೊಂಡಿದೆ. ಸ್ಥಳೀಕ ಸಂಸ್ಥೆಗಳ ಅಧಿಕಾರದಲ್ಲಿರುವ ನಾವು ನಮ್ಮ ನಾಡಿನ ಜನರ ನಿರಕ್ಷರತೆಯನ್ನು ನೀಗಾಡಿಸಲು ಯತ್ನಿಸದಿದ್ದರೆ, ಸ್ವರಾಜ್ಯದ ಕುರಿತು ನಾವು ಆಡುವ ಮಾತುಗಳು ನಿಷ್ಪ್ರಯೋಜಕವಾಗುವವು" ಹೀಗೆಂದು ತಾ-೧೩-೩-೪೦ರಂದು ಸೇರಿದ ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನ ೧೯೪೦-೪೧ ನೇ ಇಸವಿಯ ಆಯವ್ಯಯ ಅಂದಾಜು ಪಟ್ಟಿಯ ಅಧಿವೇಶನದ ಸಂದರ್ಭದಲ್ಲಿ ಪ್ರೆಸಿಡೆಂಟರಾದ ಡಾ। ಕೆ ವಿಟ್ಠಲ ಶೆಟ್ಟರು ತಮ್ಮ ಉಜ್ವಲ ಭಾಷಣದಲ್ಲಿ ಹೇಳಿ, ಸ್ಥಳೀಕ ಸಂಸ್ಥೆಯ ಅಧ್ಯಕ್ಷತೆಯಲ್ಲಿರುವ ತಮ್ಮ ಜನ ಹಿತ ಧ್ಯೇಯವನ್ನು ವ್ಯಕ್ತಪಡಿಸಿದ್ದರು

೧೯೪೦-೪೧ ನೇ ವರ್ಷಗಳ ಆಯವ್ಯಯ ಪಟ್ಟಿಯನ್ನು ಸದಸ್ಯರ ಮುಂದಿರಿಸಿ, ಪ್ರೆಸಿಡೆಂಟರಾದ ಡಾ। ಕೆ ವಿಟ್ಠಲ ಶೆಟ್ಟರು ಬೋರ್ಡಿನ ಆಡಳಿತೆಯ ಪರಿಸ್ಥಿತಿಯನ್ನು ಸಾಂಗವಾಗಿ ಹೇಳುತ್ತಾ, ತಮ್ಮ ಭಾಷಣದಲ್ಲಿ ವಿವರಿಸಿದ ಹಲವು ವಿಷಯಗಳು ಅತ್ಯಂತ ವಿಚಾರಾರ್ಹವಾಗಿವೆ. ಬೋರ್ಡಿನ ಆಡಳಿತವನ್ನು ನಡೆಸಲು ಆವಶ್ಯವಾಗಿರುವ ಎಲ್ಲಾ ಸೌಲಭ್ಯಗಳನ್ನೂ ಮುಂದಿನ ವರ್ಷಕ್ಕೂ ಒದಗಿಸಿ ಕಳೆದ ವರ್ಷದಲ್ಲಿದ್ದ ಹಲವು ಖರ್ಚಿನ ಸಾಧನಗಳನ್ನು ತೆಗೆದು ಹಾಕದೆ, ಆಯವ್ಯಯ ಪಟ್ಟಿಯನ್ನು ಸರಿಮಾಡಿ ತೆರಿಗೆಯ ಸಂದಾಯಕ್ಕೆ ಅನುಕೂಲವಾಗಿ, ಮುಂದಿನ ವರ್ಷದ ಸ್ಥಾವರಾನ್ಕ ಆಯವ್ಯಯ ಪಟ್ಟಿಯ ಒಟ್ಟು ಖರ್ಚಿನ ಸಂಖ್ಯೆಯು ರೂ. ೬,೪೮,೨೧೦ ರನ್ನು ತೆಗೆದಿರಿಸಿರುವುದು ನಿಜವಾಗಿಯೂ ಪ್ರಶಂಸನೀಯವಾಗಿದೆ

(೧) ಬೋರ್ಡಿನ ನೌಕರರ ಸಂಬಳ ಸೌಲಭ್ಯದ ಆಡಳಿತಕ್ಕೆ ರೂ. ೪೭,೨೪೦ ಗಳಷ್ಟು. (೨) ಮಾರ್ಗಗಳಿಗೆ ರೂ. ೩,೭೬,೫೩೦ ರಷ್ಟು (೩) ಮಾಧ್ಯಮಿಕ ಶಿಕ್ಷಣಕ್ಕೆ ರೂ. ೧,೨೯,೯೭೦ ಗಳಷ್ಟು (೪) ಸಾರ್ವಜನಿಕ ಆರೋಗ್ಯಕ್ಕೆ [illegible] ರಷ್ಟು; (೫) ಸಂಕ [illegible] ಗಾಡಿ ಚೌಕ ಮೊದಲಾದುವುಗಳಿಗೆ ರೂ. ೩೯೦ ಹೀಗೆ ಐದು ಭಾಗಗಳಾಗಿ ವಿಂಗಡಿಸಿ ಮುಂದಿನ ವರ್ಷದ ಜಿಲ್ಲಾ ಬೋರ್ಡಿನ ಆಯವ್ಯಯ ಪಟ್ಟಿಯು ಅಂದಾಜು ಮಾಡಿ ಹಂಚಲಾಗಿದೆ

ಜಿಲ್ಲಾ ಬೋರ್ಡು ಅಧ್ಯಾಪಕರ ಸಂಬಳದಲ್ಲಿ ಎರಡಾಣೆಯಂತೆ ಇದ್ದ ಹಿಂದಿನ ಕಡಿತವನ್ನು ಒಂದೂವರೆ ಆಣೆಗೆ ಇಳಿಸಿದ ವಿಷಯವು ಬಹಳ ಅಭಿನಂದನೀಯವಾದ ಕಾರ್ಯವಾಗಿದೆ. ಆರು ಮಾರ್ಗಗಳನ್ನು ೨ ನೇ ತರಗತಿಯ ಮಾರ್ಗಗಳಾಗಿ ಮಾಡುವುದೂ, ಪುತ್ತೂರಿಗೆ ಮತ್ತು ತೆಕ್ಕಲ್ ಸಂಕಗಳನ್ನು ಕಟ್ಟುವ ನಿಶ್ಚಯ ಮಾಡಿರುವುದನ್ನು ನೋಡಿದರೆ, ಜಿಲ್ಲೆಯ ಏಳಿಗೆಯ ಕಾರ್ಯದಲ್ಲಿ ಸಂಚಾರ ಸೌಕರ್ಯಗಳು, ಬಹು ಮಹತ್ವದ್ದಾಗಿವೆ ಎಂಬುದನ್ನು ನಮ್ಮ ಜಿಲ್ಲಾ ಬೋರ್ಡು ಚೆನ್ನಾಗಿ ಮನಗೊಂಡಿದ್ದಾರೆಂದ ತಿಳಿಯಬಹುದಾಗಿದೆ

ಹೊಸತಾಗಿ ಕೆಲವು ಹೊಸ ಎಲಿಮೆಂಟರಿ ಶಾಲೆಗಳನ್ನು ಏರ್ಪಾಡಿಸಿದ್ದೂ ಹೈಸ್ಕೂಲುಗಳಲ್ಲಿ ಹಿಂದೂಸ್ಥಾನೀ ಮತ್ತು ಎಲ್ ಟಿ ಅಧ್ಯಾಪಕರನ್ನು ಏರ್ಪಡಿಸಿದ್ದೂ ಬೋರ್ಡಿನವರು ತೆಗೆದುಕೊಂಡ ಹೆಚ್ಚಿನ ವಿದ್ಯಾವಿಷಯಕವಾದ ಆಸಕ್ತಿಯನ್ನು ತೋರಿಸುತ್ತದೆ ಪ್ರೆಸಿಡೆಂಟ್ ಡಾ। ಶೆಟ್ಟರು, ಕೇವಲ ಎಳೆಯ ವಿದ್ಯಾರ್ಥಿಗಳ ವಿದ್ಯಾಭ್ಯಾಸದಿಂದ ಮಾತ್ರ ತೃಪ್ತರಾಗದೆ, ಪ್ರಾಯಸ್ಥರಿಗೂ ವಿದ್ಯೆಯನ್ನು ಕೊಡುವ ಏರ್ಪಾಡು ಮಾಡುವುದು ಆವಶ್ಯವೆಂದು ಹೇಳಿದ ವಿಷಯವು ಅವರ ಉದಾತ್ತ ಸಾರ್ವಜನಿಕ ಸೇವಾಕಾಂಕ್ಷೆಯನ್ನೂ ರಾಜನೀತಿಜ್ಞತೆಯನ್ನೂ ಸಾರುತ್ತದೆ ಜಿಲ್ಲಾ ಬೋರ್ಡಿನವರು ಅವಶ್ಯವಾಗಿ ಮುಂದಕ್ಕೆ ಆ ಕುರಿತು ತೀವ್ರ ವಿಚಾರಿಸುವುದೂ ಒಂದು ಯೋಜನೆಯನ್ನು ತಯಾರಿಸುವುದೂ ಅಗತ್ಯವಿದೆ ಹಳ್ಳಿಹಳ್ಳಿಗಳಲ್ಲಿರುವ ಅನೇಕ ಮಂದಿ ಹುರುಪಿನ ಉಪಾಧ್ಯಾಯರು, ವಿದ್ಯಾವಂತರಾದ ತರುಣರು, ವಿದ್ಯಾಭಿಮಾನಿಗಳೂ, ರಾಷ್ಟ್ರೀಯ ಮನೋಗತಿಯ ಧನಿಕರೂ ಆ ಬಗ್ಗೆ ಜಿಲ್ಲಾ ಬೋರ್ಡಿನವರಿಗೆ ಸಂಪೂರ್ಣ ಸಹಾಯವನ್ನು ಒದಗಿಸುವರೆಂದು ನಾವು ಭರವಸೆಯಿಂದಿದ್ದೇವೆ ಅಂತಹ ಯೋಜನೆಯನ್ನು ತೀವ್ರ ಸಿದ್ಧಗೊಳಿಸಿ ಕಾಂಗ್ರೆಸು ಪಕ್ಷದಿಂದ ಅಧಿಕಾರವನ್ನು ವಹಿಸಿದ ಜಿಲ್ಲಾ ಬೋರ್ಡಿನ ಸದಸ್ಯರೂ ಪ್ರೆಸಿಡೆಂಟರೂ ಪ್ರಯೋಗಕ್ಕಿಳಿಸಿದಲ್ಲಿ ರಾಷ್ಟ್ರಸೇವೆಯ ಒಗ್ಗೆ ತಾವು ವಹಿಸಿರುವ ಹೆಚ್ಚಿನ ಹೊಣೆಗಾರಿಕೆಯನ್ನು ಖಂಡಿತವಾಗಿ ಮಾಡಿದಂತಾಗುವುದೆಂದು ನಾವು ನಂಬುತ್ತೇವೆ ಜಿಲ್ಲಾ ಬೋರ್ಡಿನವರು ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದಲೂಟದ ಬಗೆ ರೂ ೬೦೦ರಷ್ಟನ್ನು ತೆಗೆದಿರಿಸುವುದು ಹೆಚ್ಚಿನ ಪ್ರಶಂಸನೀಯವಿದೆ ಹೀಗ ಸಾರ್ವಜನಿಕ ಹಿತವನ್ನು ಸಾಧಿಸುವ ಕಾರ್ಯಗಳನ್ನು ಕೈಕೊಳ್ಳುವಲ್ಲಿ ಉದಾರಿಗಳಾದ ಐಶ್ವರ್ಯವಂತರು ಮುಂಬಂದು ಬೋರ್ಡಿಗೆ ಸಹಾಯಮಾಡಬೇಕಾಗಿದೆ ಇಂತಹವರಲ್ಲಿ ಕಾರ್ಕಳದ ಶ್ರೀ ಶೇಷಗಿರಿ ಪ್ರಭುಗಳು ಮಾಡಿದ ಉದಾರತೆಯನ್ನು ಪ್ರೆಸಿಡೆಂಟರ ತಮ್ಮ ಹಾರ್ದಿಕ ವಚನಗಳಿಂದ ಮುಕ್ತಕಂಠವಾಗಿ ಕೊಂಡಾಡಿದ್ದಾರೆ ನಮ್ಮ ಜಿಲ್ಲೆಯ ಧನಿಕರು ಉದಾರಿಗಳಾಗಿ ಮುಂಬಂದು ಜನತೆಯ ಸೇವೆಯನ್ನು ಸಲ್ಲಿಸಲು ಶ್ರೀ ಶೇಷಗಿರಿ ಪ್ರಭುಗಳ ಆದರ್ಶವನ್ನು ಅನುಸರಿಸಬೇಕಾಗಿದೆಯೆಂದ ನಾವು ವಿನಂತಿಸಿಕೊಳ್ಳುತ್ತೇವೆ

ಸಾರ್ವಜನಿಕ ಆರೋಗ್ಯದ ವಿಷಯದಲ್ಲಿ ಜಿಲ್ಲಾ ಬೋರ್ಡಿನವರು, ೧೩ ಎಲ್ ಎಫ್ ಆಸ್ಪತ್ರೆಗಳನ್ನೂ, ೨೧ ರೂರಲ್ ಡಿಸ್ಪೆನ್ಸರಿಗಳನ್ನೂ ನಡೆಸುವ ಬಗ್ಗೆ ಮಾತ್ರವಲ್ಲದೆ ಮಿಡ್‌ವೈಫ್, ಸಾನಿಟರಿ, ವ್ಯಾಕ್ಸಿನೇಶನ್ ಮೊದಲಾದವುಗಳ ಬಗ್ಗೆ ರೂ ೨೦,೪೮೧/ ಅಂದಾಜು ಮಾಡಿರಿಸಿರುವರು. ಮುಂದಿನ ವರ್ಷ ಎರಡು ಹೆಚ್ಚು ರೂರಲ್ ಡಿಸ್ಪೆನ್ಸರಿಗಳನ್ನು ಏರ್ಪಡಿಸುವ ಬಗ್ಗೆ ರೂ ೭೪೦/ನ್ನು ತೆಗೆದಿರಿಸುವ ಸೂಚನೆಯೂ ಮಾಡಲಾಗಿದೆ ಪ್ರೆಸಿಡೆಂಟರು ತಮ್ಮ ಭಾಷಣದಲ್ಲಿಯೇ, ೪೦೦ ಗ್ರಾಮಗಳಿರುವ ನಮ್ಮ ಜಿಲ್ಲೆಗೆ ಇಷ್ಟು ವೈದ್ಯಕೀಯ ಸಹಾಯವು ಏನೂ ಸಾಲದೆಂದೂ ಮಲೇರಿಯಾ ರೋಗದಿಂದ ನರಳುತ್ತಿರುವ ಅನೇಕ ಬಡ ಗ್ರಾಮಸ್ಥರಿಗೆ ಹೆಚ್ಚಿನ ಸೌಕರ್ಯಗಳನ್ನೊದಗಿಸುವುದು ಅವಶ್ಯವೆಂದೂ ಹೆಚ್ಚಾಗಿ ಹೆರಿಗೆಯ ಸಂಬಂಧದಿಂದ ಸಂಕಟಕ್ಕೊಳಗಾಗುವ ಭಗಿನೀಸಮಾಜದ ಹಿತಕ್ಕಾಗಿ ಹೆರಿಗೆಯ ಆಸ್ಪತ್ರೆಗಳನ್ನು ಅಲ್ಲಲ್ಲಿ ಏರ್ಪಡಿಸಬೇಕೆಂದೂ ಹೇಳಿರುವುದು, ಸ್ವತಃ ಡಾಕ್ಟರರೇ ಆಗಿರುವ ಅವರ ಅನುಭವದ ಮಾತುಗಳಿದ್ದು, ಹೆಚ್ಚಿನ ಮಹತ್ವದ್ದಾಗಿವೆ ಕಾರ್ಕಳದಲ್ಲಿ ಶ್ರೀ ಶೇಷಗಿರಿ ಪ್ರಭುಗಳು ಒಂದು ಹೆರಿಗೆಯ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿರುವುದೂ ಮಂಜೇಶ್ವರದಲ್ಲಿ ಆ ಬಗ್ಗೆ ನಿಧಿ ಶೇಖರಿಸಿರುವುದೂ, ಪುತ್ತೂರು, ಬೆಳ್ತಂಗಡಿಗಳಲ್ಲಿ ಸಾರ್ವಜನಿಕರ ನಿಧಿಯಿಂದ ಹೆರಿಗೆಯ ಆಸ್ಪತ್ರೆಗಳು ಆಗಿರುವುದೂ, ಶಿರ್ವದಲ್ಲಿ ಎಮರ್ಜೆನ್ಸಿ ವಾರ್ಡಿಗೆ ಶಂಕುಸ್ಥಾಪನೆಯಾಗಿರುವುದೂ, ಹೀಗೆ ಈ ಎಲ್ಲಾ ಕಾರ್ಯಗಳ ಕೀರ್ತಿಯ ಆ ಊರ ಜನರಿಗೂ ಆಯಾಯ ಸರ್ಕಲಿನ ಡಿ ಬೋ ಮೆಂಬರರಿಗೂ, ಸಲ್ಲತಕ್ಕದಾದರೂ ಹೆಚ್ಚಾಗಿ ವೈದ್ಯ ವೃತ್ತಿಯಲ್ಲಿದ್ದು ಜನರ ಆರೋಗ್ಯದ ವಿಷಯ ಅನುಭವವುಳ್ಳ ಜನಪ್ರಿಯ ಪ್ರೆಸಿಡೆಂಟರಾದ ಡಾ। ವಿಟ್ಠಲ ಶೆಟ್ಟರಿಗೇ ಸಲ್ಲತಕ್ಕದ್ದಾಗಿದೆ ಈ ಸಂದರ್ಭದಲ್ಲಿ ಜಿಲ್ಲಾ ಬೋರ್ಡಿನವರು ಇತರ ಜಿಲ್ಲೆಗಳಲ್ಲಿರುವಂತೆ ಎಲ್ ಎಫ್ ಆಸ್ಪತ್ರೆಗಳಲ್ಲಿ ಒಬ್ಬರೇ ಡಾಕ್ಟರರನ್ನು ನೇಮಿಸುವ ಕಾರ್ಯವನ್ನು ಕೈಕೊಳ್ಳುವ ಯೋಜನೆ ಮಾಡಿದ್ದರೆ, ಹಣವನ್ನು ಉಳಿಸಿ ಹೆಚ್ಚು ಕಡೆಗಳಲ್ಲಿ ಆಸ್ಪತ್ರೆಗಳನ್ನು ತೆರೆಯುವಂತೆ ಮಾಡಬಹುದಾದಿತ್ತೆಂದ ನಾವು ಸೂಚಿಸಲು ಬಯಸುವೆವು ಮಾತ್ರವಲ್ಲದೆ, ಇಂದ ಭಯಂಕರವಾಗಿ ಹೆಚ್ಚುತ್ತಿರುವ ಕುಷ್ಠ ಮತ್ತು ಕ್ಷಯರೋಗಗಳ ಕುರಿತೂ ಆಸ್ಪತ್ರೆಗಳನ್ನು ಸ್ಥಾಪಿಸುವುದು ಅಗತ್ಯವಾಗಿದೆಯೆಂದೂ ನಾವು ಇಲ್ಲಿ ಸೂಚಿಸುತ್ತೇವೆ

ಕೊನೆಗೆ ಡಿಸ್ಟ್ರಿಕ್ಟ್ ಬೋರ್ಡಿನವರು ಬಸ್ ಸರ್ವೀಸನ್ನು ನಡೆಸುವ ವಿಷಯದಲ್ಲಿ "ಇಂದು ಪೆಟ್ರೋಲ್, ವಾಹನ, ಎಣ್ಣೆ ಮತ್ತು ಇತರ ಅಗತ್ಯವಾದ ಮೋಟರಿನ ಸಾಮಾನುಗಳಿಗೆ ದಿನದಿಂದ ದಿನಕ್ಕೆ ಕ್ರಯವು ಹೆಚ್ಚುತ್ತಿರುವಾಗ್ಯೂ ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಪರಿಸ್ಥಿತಿಗಳು ವಿಷಮವಾಗುತ್ತಿರುವಾಗ ಬೋರ್ಡು ಬಸ್ಸು ಸರ್ವೀಸನ್ನು ನಡೆಸುವುದು ಪ್ರಕೃತಕ್ಕೆ ಲಾಭದಾಯಕವಾಗಲಾರದು" ಎಂದು ಪರಿಸ್ಥಿತಿಯನ್ನರಿತುಕೊಂಡು ಹೇಳಿದ ಪ್ರೆಸಿಡೆಂಟರ ಮಾತಿಗೆ ನಾವು ಸಂಪೂರ್ಣ ಸಮ್ಮತಿಸುತ್ತೇವೆ

ಜಿಲ್ಲಾ ಬೋರ್ಡಿನ ಮುಂದಿನ ವರ್ಷದ ಆಯವ್ಯಯಗಳ ಅಂದಾಜು ಪಟ್ಟಿಯನ್ನು ಇಷ್ಟು ಯೋಗ್ಯವಾಗಿ ತಯಾರಿಸಿದ ಪ್ರೆಸಿಡೆಂಟ್ ಡಾ। ಕೆ. ವಿಟ್ಠಲ ಶೆಟ್ಟಿ ಕಾರ್ಯವನ್ನು ಪ್ರಶಂಸಿಸಿ, ಮಿ। ಮಹಮ್ಮದ್ ಶಮ್ನಾಡರವರೂ, ಕಾಂಗ್ರೆಸ್ ಪಾರ್ಟಿಯ ಲೀಡರರಾದ ಶ್ರೀ ವೈಕುಂಠ ಬಾಳಿಗರೂ, ಭಾಷಣಗಳನ್ನಿತ್ತರು.




ಅರುಣ

ಹೆಂಗಸರ ಯಾವತ್ತೂ ಬಾಧೆಗಳನ್ನು ಗುಣಪಡಿಸುವುದು

ಎಲ್ಲಾ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತವೆ.

ಅಥವಾ

ಪೋಸ್ಟುಬಾಕ್ಸ 287 ಮದ್ರಾಸು.

ಸ್ಥಳೀಯ ಏಜಂಟರು

ಪಾಪ್ಯುಲರ್ ಸ್ಟೋರ್ಸ್

ರಥಬೀದಿ ಮಂಗಳೂರು

# ನೋಟಗಳು . . .

ಫಿನ್ನರು ಮತ್ತು ರಶ್ಯನರೊಳಗೀಗ ಒಂದು ಒಪ್ಪಂದವಾಗಿ ಶಾಂತಿಯಾಯಿತು! ಆದರೆ ರಶ್ಯನರು ಸಂಪಾದಿಸಿಕೊಂಡ ವಿಪುರಿಯು ನಿವಾಸಿಕರಿಲ್ಲದೆ ಬರಿದಾಗಿದೆಯೆಂದು ತಿಳಿದು ಬರುತ್ತದೆ.

◈

ತಾಯಂದಿರು ತಮ್ಮ ಕೂಗುವ ಮಕ್ಕಳನ್ನು ಹೊತ್ತುಕೊಂಡು ಹೊರಟು ಹೋದರಂತೆ! ತಮ್ಮ ಕುಟುಂಬಗಳೊಡನೆ ಹೊಲಗಾರರು ಊರು ಬಿಟ್ಟರಂತೆ! ಲೋರಿಗಳಲ್ಲಿ ಬಸ್ಸುಗಳಲ್ಲಿ, ಕಾರುಗಳಲ್ಲಿ ಸೈಕಲುಗಳಲ್ಲಿಲ್ಲಾ, ಕುಳಿತು ವಿಪುರಿಯಿಂದ ಜನರು ಹೀಗೆ ಹೊರ ಬಿದ್ದಿರುವರಂತೆ!

◈

ದಾದಾಭಾಯಿ ನೌರೋಜಿ
1886 ಕಲ್ಕತ್ತಾ 1893 ಲಾಹೋರ್
1906 ಕಲ್ಕತ್ತಾ

ಒಪ್ಪಂದ ಮಾಡಿಕೊಂಡ ಮೇಲೆ ಫಿನ್ಲೆಂಡಿನ ಪ್ರಧಾನ ಮಂತ್ರಿಯು ಹೀಗೆಂದು ಹೇಳಿದನು:—"ನಮಗೆ ಸಹಾಯವು ಬರುವುದು ನಿಜವಿರಲಿಲ್ಲ. ಯಾಕೆಂದರೆ ಸ್ವೀಡನ್ ಮತ್ತು ನಾರ್ವೆಗಳು ಸೈನ್ಯವನ್ನು ನಿರ್ಬಂಧಿಸುತ್ತಿದ್ದವು. ಹೀಗಿದ್ದರೂ ನಮಗೆ ಸಹಾಯವನ್ನು ಕೊಡಲು ಬಂದುದು ಬಹಳ ತಡವಾಗಿಯೇ ಆಯಿತು"

◈

ಈಗ ರಶ್ಯಾ-ಫಿನ್‌ಲೆಂಡುಗಳು ಒಪ್ಪಂದ ಮಾಡಿಕೊಂಡುವೆಂದು, ಹೊರಗಿನವರು ಬೆಳಿಕರು ಬಹಳ ಪಶ್ಚಾತ್ತಾಪ ಪಡುತ್ತಿರಬಹುದು!

◈

ಆದರೆ, ಇಂಗ್ಲೆಂಡು ಇಂದು ಈ ಒಪ್ಪಂದದಿಂದ ಬಹಳ ಸುಖಸಮಾಧಾನವನ್ನು ಹೊಂದಿದೆಯೆಂದು ಇಂಗ್ಲೆಂಡಿನ ಅನೊಬ್ಬ ರಾಜನೀತಿಜ್ಞರ ಹೇಳಿಕೆಯಾಗಿದೆ.

◈

ರಶ್ಯವು ಇದುವರೆಗೆ ಹಿಟ್ಲರನ ಮಿತ್ರರಾಷ್ಟ್ರವಾಗಿರುವುದಿಲ್ಲವೆಂದು ಮಿ। ವೆಲ್ಸ್‌ಫೋರ್ಡರ ಹೇಳಿಕೆಯಾಗಿದೆ.

◈

ರಶ್ಯನರು ಗೆದ್ದು ಪಡೆದ ಪ್ರತಿಯೊಂದು ಭೂಭಾಗವೂ ಜರ್ಮನಿಯ ವಿರುದ್ಧವಾಗಿ ರಶ್ಯವು ಹಿಡಿದುನಿಂತ ಒಂದೊಂದು ಫಿರಂಗಿಯಾಗಿದೆಯೆಂದು ಅವರು ಅಭಿಪ್ರಾಯಪಡುವರು.

◈

ಫಿನ್ನೆಂಡಿಗೆ ಪ್ರತ್ಯಕ್ಷವಾದ ಸಹಾಯವನ್ನು ಕೊಟ್ಟಿದ್ದ, ರಶ್ಯಾಜರ್ಮನಾ ಮೈತ್ರಿಯು ನಿಜಸ್ವರೂಪವು ತಿಳಿಯುತ್ತಿದೆಂತೆಂದು ಅವರು ವಿಚಾರಿಸುತ್ತಾರೆ.

◈

ರಶ್ಯವನ್ನು ಯುದ್ಧಮಾಡಲು ಬಿಟ್ಟುಕೊಟ್ಟು, ಜರ್ಮನಿಯು ಅದಕ್ಕೆ ಬೆಂಬಲ ಕೊಡಲು ನಿಂತರೆ, ಆ ದ್ವಂದ್ವ ರಾಷ್ಟ್ರಗಳ ಆಘಾತದಿಂದ ಪ್ರಪಂಚವನ್ನು ಬಿಡುಗಡೆ ಮಾಡುವುದು ಯಾರಿಗೂ ಸಾಧ್ಯವಾಗಲಾರದೆಂದು ಬ್ರೈಲ್ಸ್‌ಫೋರ್ಡರ ಊಹನೆಯಾಗಿದೆ.

◈

ಹಾಗಾಗಿ; ಫಿನ್ನರೊಡನೆ ರಶ್ಯನರು ಮಾಡಿಕೊಂಡ ಸಂಧಾನದಿಂದ ಜರ್ಮನಿಗೆ ಬಾಧೆಯೇ ಆಗದೆಯೆಂದು ಅವರ ನಿರ್ಧಾರದ ಅಭಿಮತವಾಗಿದೆ.

◈

ಬ್ರಿಟನು ಯುದ್ಧಕ್ಕಾಗಿ ದಿನವೊಂದರ ಆರು ಮಿಲಿಯ ಪವನುಗಳನ್ನು ವೆಚ್ಚ ಮಾಡುತ್ತದೆ.

◈

ಅದಕಾರಣ, ಹಿಂದೆ ಉರುಟಾಗಿ ತಯಾರಿಸುತ್ತಿದ್ದ ಡೇರೆಯ ಕಂಬಗಳನ್ನೂ, ಕಸಬರಿಕೆಯ ಹಿಡಿಕೆಗಳನ್ನೂ ಮುಂದೆ ಚೌಕವಾಗಿ ತಯಾರಿಸುವರಂತೆ.

◈

ಇದರಿಂದ ಬ್ರಿಟನು ವರ್ಷಕ್ಕೆ ಒಟ್ಟು ಎರಡು ಮಿಲಿಯ ಪವನುಗಳನ್ನು ಉಳಿಸಬಹುದಂತೆ!

## ನೋಟೀಸು

**ಕುಂದಾಪುರ ಡಿ.ಮು.ಕೋರ್ಟಿನಲ್ಲಿ**
O. P. No. 13/40

ಬೆಳಮಣಿರಮಣ ಪ್ರಭು, ಅನಂತ ಪ್ರಭುರ ಮಗ ಸಾವುಕಾರ ಕುಂದಾಪುರ—

ಮತ್ತು

ರುಕ್ಮಿಣಿ ಅಮ್ಮ, ಅನಂತ ಪ್ರಭುರ ವಿಧವೆ ಕುಂದಾಪುರ ಕಸಬಾ—

ಮೃತ ಅನಂತ ಪ್ರಭುರಿಗೆ ಎಂಪಾಯರ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿಯ 89441ನೇ [illegible] ಹಣದ ವಸೂಲಿಯ ಕುರಿತು ಅರ್ಜಿದಾರರು ಸಕ್ಸೆಶನ್ ಸರ್ಟಿಫಿಕೇಟು ಬಗ್ಗೆ ಅರ್ಜಿಕೊಟ್ಟು, ಸದರಿ ಅರ್ಜಿಯು ತಾ. 25-3-1940ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವುದಾಗಿ ಈ ಮೂಲಕ ತಿಳಿಸಲಾಗುತ್ತದೆ.

ಕುಂದಾಪುರ 10-3-40 } **K. L. Bhandari,** ಅರ್ಜಿದಾರರ ವಕೀಲ್





**ಕೋಮಲವಾದ ಚರ್ಮಕ್ಕೆ**
ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನಿನಿಂದ (Cuticura Medicated Toilet Soap) ಹೆಚ್ಚಿನ ರಕ್ಷಣೆಯನ್ನು ಕೊಡಿರಿ. ಇತರ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ, ಗುಣಪಡಿಸುವ ಗುಣವುಳ್ಳ ಔಷಧಿಯು ಶಿಶುವಿನ ಚರ್ಮವನ್ನು ನಿರ್ಮಲವಾಗಿಯೂ ಕೋಮಲವಾಗಿರಿಸುವುದು.

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನಯವಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಹಾಕಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

**ಕುಟಿಕೂರಾ ಸೋಪ್**
**CUTICURA SOAP**

ಸ್ತ್ರೀಯರ ಆರೋಗ್ಯ ಸೌಭಾಗ್ಯಗಳಿಗೆ

**ಲೋಧ್ರ**

ತಯಾರಿಸುವವರು:
**ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.**
ಸ್ಥಳೀಯ ಸ್ಟೋಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

# ವಿಜ್ಞಾನಯುಗ

## ಕಲ್ಲಿದ್ದಲಿನಿಂದ ಓಡುವ ಮೋಟರ ಕಾರು

ಈಗ ಮೋಟರ ಕಾರುಗಳು ಪೆಟ್ರೋಲಿನಿಂದ ಓಡುತ್ತವೆ. ಆದರೆ ಈ ಪೆಟ್ರೋಲು ಜಗತ್ತಿನ ಎಲ್ಲಾ ಭಾಗದವರಿಗೆ ಎಲ್ಲ ಸಮಯಗಳಲ್ಲಿ ಬೇಕಾದಷ್ಟು ದೊರೆಯುವದೆಂದು ಹೇಳಲಾಗುವದಿಲ್ಲ. ಈ ಕಲ್ಲೆಣ್ಣೆಯ ಬಾವಿಗಳು ಶೀಘ್ರದಲ್ಲಿ ಬತ್ತಿಹೋಗಬಹುದೆಂಬ ಭಯವು ವೈಜ್ಞಾನಿಕರಿಗೆ ಇದೆ. ಆದ್ದರಿಂದ ಪೆಟ್ರೋಲು ಅಥವಾ ಕಲ್ಲೆಣ್ಣೆಯ ಬೇರೆ ಉತ್ಪತ್ತಿಯಿಂದಲ್ಲದೆ ಮೋಟರನ್ನು ನಡೆಸಲಿಕ್ಕೆ ಬರುವ ಇತರ ವಸ್ತುವಿರುವದೇ ಎಂದು ಅವರು ಬಹು ಸಮಯದಿಂದ ಶೋಧಿಸುತ್ತ ಇದ್ದರು. ಈಗ ಕಲ್ಲಿದ್ದಲಿನಿಂದಲೂ ಮೋಟರನ್ನು ನಡೆಸಲಿಕ್ಕಾಗುತ್ತದೆಂದು ಗೊತ್ತಾಗುತ್ತದೆ. ಕಲ್ಲಿದ್ದಲಿನಿಂದ ಓಡುವ ಒಂದು ಮೋಟರಿನ ಪ್ರದರ್ಶನವು ಸ್ವಲ್ಪ ಸಮಯದ ಹಿಂದೆ ಅಮೇರಿಕದ ಚಿಕಾಗೋ ನಗರದಲ್ಲಿ ನಡೆಯಿತು.

ಬಹು ಸಣ್ಣದಾಗಿ ಹುಡಿ ಮಾಡಿದ ಕಲ್ಲಿದ್ದಲನ್ನು ಮೋಟರ ಕಾರಿನ ಎಣ್ಣೆಯ ಟಾಂಕಿಯಲ್ಲಿಟ್ಟು ಒಂದು ಉಪಾಯದಿಂದ ಶಕ್ತಿ ಸಂಚಯ ಮಾಡಿದುದರಿಂದ ಮೇಲೆ ಹೇಳಿದಂಥ ಗರ್ಜನೆ ಮಾದರಿಯ ಎಂಟು ಸಿಲಿಂಡರಿನ ಸೀಡನ್ ಕಾರು ತಾಸಿಗೆ ೩೫ ಮೈಲುಗಳ ವೇಗದಿಂದ ಓಡಿತು.

ಮೋಟರಿಗೆ ಕಲ್ಲಿದ್ದಲನ್ನು ಉಪಯೋಗಿಸುವದು, ಕಲ್ಲೆಣ್ಣೆಗಿಂತ ಹೆಚ್ಚು ಅಗ್ಗವಾಗಿರುವದೆಂದು ಈ ಉಪಯೋಗವನ್ನು ಶೋಧಿಸಿ ತೆಗೆದ ವೈಜ್ಞಾನಿಕರು ಹೇಳಿದ್ದಾರೆ. ಕಲ್ಲೆಣ್ಣೆ ಸಾಮಗ್ರಿಯ ಉಪಯೋಗದ ಬದಲಿಗೆ ಕಲ್ಲಿದ್ದಲನ್ನು ಉಪಯೋಗಿಸುವದರಿಂದ ಮೋಟರಿನ ರಚನಾಕ್ರಮದಲ್ಲಿ ವ್ಯತ್ಯಾಸ ಮಾಡುವ ಅಗತ್ಯವಿರುವದಿಲ್ಲ. ಆದರೆ ಕಲ್ಲೆಣ್ಣೆಗಿಂತ ಕಲ್ಲಿದ್ದಲನ್ನು ಸಂಗ್ರಹಿಸಲಿಕ್ಕೆ ಹೆಚ್ಚು ಸ್ಥಳಾವಕಾಶವು ಬೇಕಾದುದರಿಂದ, ಅದನ್ನು ರೂಪಾಂತರಪಡಿಸುವದು ಅಗತ್ಯವಾಗಿದೆ. ಅದಕ್ಕೋಸ್ಕರ ಮೋಟರಿಗೆ ಉಪಯೋಗಿಸುವ ಕಲ್ಲಿದ್ದಲನ್ನು ವೈಜ್ಞಾನಿಕ ಉಪಾಯಗಳಿಂದ ದ್ರವೀಕರಿಸುವರು. ಮತ್ತು ದ್ರವೀಕರಿಸಿದ ಕಲ್ಲಿದ್ದಲನ್ನೇ ಆ ಕಾರ್ಯಕ್ಕೆ ಉಪಯೋಗಿಸುವರು.

## ದನಕರುಗಳಿಗೆ ಡಬ್ಬೀ ಆಹಾರ

ಇಷ್ಟರ ತನಕ ಮನುಷ್ಯರು ಮಾತ್ರ ಡಬ್ಬಿಗಳಲ್ಲಿ ಸಂಗ್ರಹಿಸಿಟ್ಟ ಆಹಾರವನ್ನು ಉಪಯೋಗಿಸುತ್ತಿದ್ದರು. ಆದರೆ ಚಳಿಗಾಲದಲ್ಲಿ ಹುಲ್ಲು ಸೊಪ್ಪು ಕಡಿಮೆಯಾದಾಗ ಉಪಯೋಗಕ್ಕೆ ಬರುವಂತೆ ಶಾಸ್ತ್ರಜ್ಞರು ಈಗ ಅವುಗಳನ್ನು ಡಬ್ಬಿಗಳಲ್ಲಿ ಸಂಗ್ರಹಿಸಿ ತಲಾರಂಭಿಸಿದ್ದಾರೆ. ಈ ಡಬ್ಬಿಗಳು ಎಂಟು ಅಡಿ ವ್ಯಾಸ ಮತ್ತು ೨೫ ಅಡಿ ಆಳವಾಗಿ ಉಕ್ಕಿನಿಂದ ಮಾಡಿದವುಗಳು ಆಗಿರುತ್ತವೆ. ಅವುಗಳಲ್ಲಿ ಆಗ ತಾನೆ ಕತ್ತರಿಸಿ ತಂದ ಹಸಿ ಹುಲ್ಲನ್ನು ಹಾಕಿ ಮಂಜುಗಡ್ಡೆಯನ್ನು ತುಂಬಿಸುವರು. ಕೆಲವು ಉಪಾಯಗಳಿಂದ ಆ ಡಬ್ಬಿಗಳೊಳಗಿದ್ದ ಗಾಳಿಯನ್ನು ಹೊರ ಹೊಡಿ ಹುಲ್ಲು ಒಣಗದ ಹಾಗೂ ಹಾಳಾಗದ ಹಾಗೂ ಇಡುತ್ತದೆ. ಮತ್ತೆ ಆ ಡಬ್ಬಿಗಳನ್ನು ರಬ್ಬರಿನ ಮುಚ್ಚಳಗಳಿಂದ ಮುಚ್ಚುವರು. ಹೀಗೆ ದಾಸ್ತಾನು ಮಾಡಿ ಇಟ್ಟ ಹಸಿ ಹುಲ್ಲು ಕೆಲವು ವರ್ಷಗಳ ತನಕ ಹಾಳಾಗದೆ, ಹಸಿಯಾಗಿಯೇ ದನಕರುಗಳಿಗೆ ತಿನ್ನಲಿಕ್ಕೆ ದೊರೆಯುವದು.

## ಹೊಸ ಜಾತಿಯ ಕುಕ್ಕರು

ಕುಕ್ಕರು ಅಂದರೆ ಅಡಿಗೆ ಮಾಡುವವನು ಬಹಳ ಶ್ರಮಪಡಬೇಕಾಗಿರದೆ ಅದರಷ್ಟಕ್ಕೆ ಆಹಾರ ಸಾಮುಗ್ರಿಗಳನ್ನು ಅಡಿಗೆ ಮಾಡುವ ಒಂದು ಸಾಧನವಾಗಿದೆ. ಈಗ ಒಂದು ಹೊಸ ಜಾತಿಯ ಕುಕ್ಕರನ್ನು ಶೋಧಿಸಿ ತೆಗೆದಿದ್ದಾರೆ. ಇದು ಪ್ರಯಾಣಿಕರಿಗೂ ಇತರರಿಗೂ ವರದಾನವಾಗಿ ಪರಿಣಮಿಸೀತು.

ಈ ಕುಕ್ಕರಿಗೆ ಬೆಂಕಿ ಕಡ್ಡಿ ಅಥವಾ ಕಟ್ಟಿಗೆ ಅಗತ್ಯವಾಗಿಲ್ಲ. ಇದರ ಬದಿಯು ಎರಡು ಹಾಳೆಗಳಿಂದ ಮಾಡಿದುದಾಗಿದೆ. ಆ ಹಾಳೆಗಳ ನಡುವೆ ಕೆಲವು ಜಾತಿಯ ದ್ರಾವಕಗಳನ್ನು ತುಂಬಿಸಿ ಇಟ್ಟಿರುತ್ತಾರೆ. ಹೊರ ಹಾಳೆಯ ಮೇಲೆ ನಾಲ್ಕು ತಿರುಗಣೆಯ ಗುಬ್ಬಿಗಳಿವೆ. ಈ ಗುಬ್ಬಿಗಳನ್ನು ಹೊರಗೆ ತಿರುಗಿಸಿದಾಗ ಒಳಗಿರುವ ದ್ರಾವಕಗಳೊಂದಿಗೆ ಹೊರಗಿನ ಗಾಳಿಯು ಸಂಪರ್ಕವಾಗಿ ಕುಕ್ಕರು ಬಿಸಿ ಆಗುವದು. ಆ ಬಿಸಿಯಿಂದ ಕುಕ್ಕರಿನೊಳಗಿಟ್ಟ ಸಾಮಾನುಗಳು ಬಹು ಸ್ವಲ್ಪ ಸಮಯದೊಳಗೆ ಬೇಯುವವು. ಅಡಿಗೆಯವನು ಹತ್ತಿರ ಕೂತು ಬೆಂಕಿ ಮಾಡಬೇಕಾದ ಅಗತ್ಯವಿಲ್ಲ. ಅವನು ಅಲ್ಲಿ ಆಹಾರ ಬೇಯುವಾದ ಬೇರೆ ಯಾವ ಕೆಲಸಕ್ಕಾದರೂ ಹೋಗಬಹುದು. ಗುಬ್ಬಿಗಳನ್ನು ಒಳಗೆ ತಿರುಗಿಸಿದಾಗ ಗಾಳಿಯ ಸಂಪರ್ಕವಾಗುವದು ನಿಂತುಹೋಗಿ ಕುಕ್ಕರು ತಣಿಯುತ್ತದೆ.

ದ್ರಾವಕಗಳು ಒಮ್ಮೆ ಖರ್ಚಾದಾಗ ಪುನಃ ತುಂಬಿಸಬಹುದಾಗಿರುವದರಿಂದ ಬಹಳ ಅನುಕೂಲವೂ ಅಗ್ಗವೂ ಆದ ಈ ಕುಕ್ಕರುಗಳು ಪೇಟೆಗೆ ಬಂದ ನಂತರ ಅಡಿಗೆ ಪ್ರಪಂಚದಲ್ಲಿ ದೊಡ್ಡ ಕ್ರಾಂತಿಯನ್ನೇ ಎಬ್ಬಿಸಬಹುದು. ಈಗ ಅಡಿಗೆಯಾದರೂ ಮಾಡಿ ಜೀವಿಸಿಕೊಳ್ಳುವ ಬಡಪಾಯಿಗಳು ಮತ್ತೆ ಮುಂದೆ ಮುಖ ನೋಡುವ ಹೊತ್ತು ಅಗುವದು.

## ಸೂರ್ಯನೊಂದಿಗೆ ಭೂಮಿಯ ಘರ್ಷಣ

ಇತ್ತೀಚೆಗೆ ನಾವು ವಾಸವಾಗಿರುವ ಈ ಭೂಮಿಯು ಒಡೆದು ಚೂರುಚೂರಾಗುವ ಒಂದು ಪ್ರಸಂಗವು ಬಂದಿತೆಂದೂ, ನಮ್ಮ ಪುಣ್ಯದಿಂದ ಹಾಗಾಗದೆ ಭೂಮಿಯು ಆ ಅಪಘಡದಿಂದ ಉಳಿಕಿತೆಂದೂ ಹೇಂಬರ್ಗ ಮತ್ತು ಅರ್ ಫರ್ಟ ನಿರೀಕ್ಷಣಾಲಯದ ನಕ್ಷತ್ರಗಳು ಹೇಳುತ್ತಿರುವರು.

ದುಗ್ಧ ಪಥದೊಳಗಿನ ಒಂದು ನಕ್ಷತ್ರ ಸೂರ್ಯನಷ್ಟೇ ದೊಡ್ಡದಾಗಿದ್ದುದು. ಆಕಾಶ ಮಾರ್ಗದಲ್ಲಿ ಸುತ್ತುತಿದ್ದಾಗ ಒಡೆದುಹೋಯಿತಂತೆ, ಅದರ ತುಂಡುಗಳು ಮಿನುಟಿಗೆ ಲಕ್ಷಾಂತರ ಮೈಲುಗಳ ವೇಗದಿಂದ ನಾಲ್ಕು ಕಡೆ ಬಿದ್ದುವಂತೆ. ಅಂಥ ಒಂದು ತುಂಡು ಭೂಮಿಯ ಮೇಲೆ ಬಿದ್ದುದೇ ಆದರೆ ಬಿದ್ದ ಆ ಹೊಡೆತದಿಂದ ಭೂಮಿಯೂ ಚೂರು ಚೂರಾಗುವ ಸಂಭವವಿತ್ತು. ಆದರೆ ಆ ತುಂಡು ಭೂಮಿಯ ಬಹಳ ಸಮೀಪದಿಂದಷ್ಟೇ ಬಿದ್ದುಹೋಯಿತಂತೆ.

ಹದಿನಾರನೆ ಶತಮಾನದಿಂದ ಈಚೆಗೆ ಇಂಥ ವಿಚಿತ್ರ ಮತ್ತು ಭಯಾನಕ ಘರ್ಷಣವು ಆದುದಿಲ್ಲ. ದುಗ್ಧಪಥದ ಆ ಸೂರ್ಯನು ಯಾಕೆ ಮತ್ತು ಹೇಗೆ ಸ್ಫೋಟಿತನಾಂಕರ ಹೊಂದಿದನೆಂಬುದೂ ಗೊತ್ತಾಗಿಲ್ಲ.


# ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ

GONO KILLER ORIGINAL

## ಗೊನೊಕಿಲರ್ (ರಿಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ-ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

*Sole Manufacturer:* **Dr. D. N. JASANI,** Vithalbhai Patel Road, BOMABY

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ,
ಹಂಪನಕಟ್ಟಾ, ಮಂಗಳೂರು.

# ದಿ ಕಂಬೈನ್ಡು ಬುಕ್ಕಿಂಗ್ ಏಜೆನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

## ಉಳ್ಳಾಲ ಸಾವಿರ ಜಮಾತರಿಂದ

## ಸರ್ವ ಮುಸ್ಲಿಂ ಸಹೋದರರಲ್ಲಿ ನಮ್ಮ ನಿವೇದನೆಗಳು:

ಮಹನೀಯರೇ,

"ಉಳ್ಳಾಲ ಸೈಯುದ್ ಮಹಮ್ಮದ್ ಶರೀಫುಲ್ ಮದನೀಯುವರ ಉರ್ಸ್ ಯಾನೆ ನೇರ್ಚ್ಚ ಉತ್ಸವವನ್ನು ಇದೇ ಬರುವ 1940ನೇ ಇಸವಿ ಮಾರ್ಚಿ ತಿಂಗಳ ತಾರೀಕು 24ನೇ ಆದಿತ್ಯವಾರಕ್ಕೆ ಸರಿಯಾದ ಹಿಜರಿ 1359ನೇ ಸಫರ್ ತಿಂಗಳ ಚಾಂದು 14ನೇ ದಿನ ಜರಗಿಸಬೇಕಾಗಿ ಉಳ್ಳಾಲದ ಸಾವಿರ ಜಮಾತರಾದ ನಾವು ನಿರ್ಣಯಿಸಿರುತ್ತೇವೆ ಆದುದರಿಂದ ಸರ್ವ ಮುಸ್ಲಿಂ ಸಹೋದರರೂ ಇತರರೂ ಸದರೀ ಸಮಯಕ್ಕೆ ಎರಡು ದಿನಗಳ ಮುಂಚಿತವಾಗಿಯೇ ದಯಮಾಡಿ ಬಂದು ಸದ್ರಿ ಸಮಾರಂಭವನ್ನು ನೆರವೇರಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ

ಮೇಲ್ಕಂಡ ಉತ್ಸವಕ್ಕೆ ಪರಸ್ಥಳಗಳಿಂದ ಹೋಗುವ ಯಾತ್ರಿಕ ವ ಪ್ರೇಕ್ಷಕರ ಅನುಕೂಲತೆಗಾಗಿ ನಮ್ಮ ಜಿಲ್ಲೆಯ ಯಾವತ್ತೂ ಸ್ಟೇಶನುಗಳಿಂದ ಮಂಗಳೂರಿಗೆ ಸ್ಪೆಶಲ್ ಸರ್ವಿಸುಗಳನ್ನು ಚಾಲುಮಾಡುವ ಯೋಗ್ಯ ಏರ್ಪಾಡನ್ನು ಮಾಡಿರುತ್ತೇವೆ

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

***JOINT MANAGERS,***

**The Combined Booking Agency,**
**MANGALORE**

**The Joint Booking Office,**
**KODIALBAIL.**

---

## ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಪೊದಲೇ ಪೂರಾ ವಿಚಾರದಾದಿ ಔಷಧ ಬೇಡಿರಿ. ವ ನಮ್ಮ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾವರಾಹಿಮ, ಶಾಹೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆದ್ದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ 4—0—0

ವಿ. ಪಿ. ಖ —

ವಿಳಾಸ ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, S. M. C.

---

# U. K. BHUJANGA NAYAK
## CLOTH COMMISSION AGENT
## SHEVAPET, SALEM

## ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ

---

# HOUNSA
## ಹಂಸಾ ಸ್ನೋ
## ಮತ್ತು
## ಬ್ರಿಲ್ಲಿಂಟೈನ್

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಕರ್ಣನಾಥ ಬಜಾರ್, ಮಂಗಳೂರು.

---

## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ಈ ಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 1 ಡಬ್ಬಿಗೆ ಸಾಕು. 20 ತೊಲದ ಡಬ್ಬಿ ರೂ. 3—4—0 [illegible]

[illegible]

P. O. Paridapi [illegible]

---

## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ | 1—13—0 | 1—14— |
| „ ದುಯಂ „ „ | | |
| „ ಅವ್ವಲ್ ಸುಗ್ಗಿ „ | 1—12—0 | — |
| „ ದುಯಂ „ „ | | — |
| ಅಕ್ಕಿ ಅವ್ವಲ್ ಗುಡ್ಡು „ | 4—8—0 | 4—9—0 |
| „ ದುಯಂ „ „ | 4—4—0 | 4—5—0 |
| „ ಅವ್ವಲ್ ಸುಗ್ಗಿ „ | 4—2—0 | 4—4— |
| „ ದುಯಂ „ „ | 4—0—0 | 4—2—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 32—8—0 | 37—8—0 |
| „ ಸಿಪ್ಪೆ ಇದ್ದದು „ | 35—0—0 | 40—0—0 |
| „ ಕೊಬ್ಬರಿ ಆಫೀಸು ಖಂಡಿಗೆ | 62—8—0 | 62—8— |
| ದಿಲ್‌ಪಸಂದು „ | 66—0—0 | — |
| ತೆಂಗಿನ ಎಣ್ಣೆ ಮಣಕ್ಕೆ | 4—8—0 | 4—8—0 |
| [illegible] 1000ಕ್ಕೆ | [illegible]—12—0 | 3—8—0 |
| [illegible] | [illegible]—10—0 | 4—0—0 |
| [illegible] | [illegible]5—0—0 | [illegible]—8—0 |
| [illegible] | 14—[illegible]—0 | 15—4 0 |

Date 22-3-1940 Regd No M340

# ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 22—3—1940 [ಸಂಚಿಕೆ 12


## The Bombay Life Assurance Company, Ltd.

(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live-today-a few years more-when you are old?
If you die-to your family and dependants?

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | | |
|---|---|---|
| Completed Business | Rs. | 1,44,91,000 |
| Life Assurance Fund | Rs. | 1,17,69,748 |
| Total Assets | Rs. | 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

**Bombay Life Building,**

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut. Car Street, Mangalore. Visweswarapuram Circle, Bangalore City. Post Box No. 337, Mount Road, Madras. Gautam Nivas, Charni Road, Girgaum, Bombay No. 4. Central Station Road, Trivandrum.

(Regd)

## ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ದೋಷ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

**ಅಮೃತಾಂಜನ ಡಿಪೋ,** ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS LTD. BOMBAY MADRAS CALCUTTA

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್**

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

**ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!**


Edited Printed & Published by A. S. Kamath at the Sharada Press, Car Street, Mangalore

ESTD. 1906

# ಸ್ವದೇಶಾಭಿಮಾನಿ

# SWADESHABHIMANI

ಗ್ಲೋರಿಯಾ ಸ್ಟಿವರ್ಟ್ ಮತ್ತು ಶೇಕ್‌ಮೇನ್

KANNADA ILLUSTRATED WEEKLY

# The Discovery of Quinquina, Source of Quinine

Famous men and sometimes relatively obscure people have given their names to countries, towns and objects that we use without giving a single thought to the man or woman who originally bore these names. When we go to America, it does not occur to us to think of Amerigo Vespucci, Christopher Columbus's companion, the first to give us a description of the New World. When we mention the words watt, ampere and ohm—household words for anyone with the slightest acquaintance with our modern marvel, electricity—we do not think for a moment of James Watt, André-Marie Ampere and George Ohm, whose names have been perpetuated in these scientific terms. When people speak of the guillotine, their thoughts fly back to the bloody days of the French Revolution when the flower of the French aristocracy bowed their heads beneath the blade: the French Doctor, Joseph Ignatius Guillotin, who gave his name to the famous instrument of execution, is quite forgotten. When munching a sandwich, who gives a thought to Lord Sandwich, "inventor" of this delicacy? A host of similar examples might be given. In course of time, the original meaning of the word fades from the memory and becomes inseparable from the object it denotes.

How many of us realise, for instance, that quinquina, or "cinchona" as it is sometimes called, owes its name to the gratitude of a lady, the Countess de Chinchon? This lady had suffered for many a long year from malaria, contracted in the Spanish colonies. Then one day, in 1638, someone made her drink an extract from the bark of a tree, ('chinchona bark') and she was instantly cured. Full of joy she went back to Spain and made known the remeby in Europe.

In the three centuries which have elapsed since the day when the Countess drank her first potion of chinchona bark, countless human lives have been saved, countless cases of fever assuaged by the use of quinine in the malaria-ridden tropics. The Malaria Commission of the League of Nations recommends as a preventive measure a daily dose of 6 grains of quinine during the malaria season. In cases of treatment a dose of 15 grains to 20 grains of quinine a day for 5 to 7 days is sufficient. On page 124 of its report, issued in 1938, this Malaria Commission stresses the fact that the harmlessness of quinine makes it a suitable drug for administration by subordinate personnel without constant medical supervision, whereas such supervision is essential in the case of synthetic products.

Three centuries have elapsed since the Countess de Chinchon gave her name to this extract of chinchona bark and humanity is still making profitable use of the product, the name quinine being now separately linked with that of malaria.

M. Enq. No. 214.

ಕಾಯಿಲೆಯಿಂದೆದ್ದೊಡನೆ
ಪ್ರಾಣವನ್ನೂ ಆರೋಗ್ಯವನ್ನೂ ಕೂಡಲೇ
ಕೊಡುತ್ತದೆ!

ಬೇನೆಯಿಂದೆದ್ದೊಡನೇ ರುಚಿಕರವಾದ "ಓವಲ್ಟಿನ್" ಸೇವಿಸಿದಲ್ಲಿ ದೇಹದ ನಷ್ಟವಾದ ಬಲವನ್ನು ವೃದ್ಧಿಸಿ ಮೆದುಳಿಗೂ ನರನಾಡಿಗಳಿಗೂ ನವಚೈತನ್ಯವನ್ನುಂಟುಮಾಡುತ್ತದೆ.

ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳಿಂದಲೂ ನರ್ಸುಗಳಿಂದಲೂ ಶಿಫಾರಸು ಮಾಡಲ್ಪಟ್ಟಿದೆ. "ಓವಲ್ಟಿನ್"ನಲ್ಲಿ ದೇಹದ ಕಸುವನ್ನು ವೃದ್ಧಿಸುವ, ನರನಾಡಿಗಳಿಗೆ ಚೈತನ್ಯವನ್ನೀಯುವ ಎಲ್ಲಾ ಪದಾರ್ಥಗಳು—ನೆನೆಹಾಕಿ ಮೊಳೆತ ಬಾರ್ಲಿ, ಹಸುವಿನ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ಜೀವಾಂತುಗಳು ಮತ್ತು ಫೊಸ್ಫೆಟ್ಟುಗಳು—ಸೇರಿವೆ.

"ಓವಲ್ಟಿನ್" ನಿಮ್ಮ ದೇಹದ ಕಸುವನ್ನು ವೃದ್ಧಿಸಿದ ನಂತರ ಅದನ್ನು ಕಾಪಾಡಿಕೊಳ್ಳಲು ಯಾವಾಗಲೂ ಒಂದು ಕಪ್ಪು "ಓವಲ್ಟಿನ್" ಪಾನೀಯವನ್ನು ಕುಡಿಯಿರಿ. ಇತರ ಬದಲಿ ಪಾನೀಯಗಳನ್ನು ದೂರಮಾಡಿರಿ.

'ಓವಲ್ಟಿನ್'— ಬಿಸ್ಕತ್ತುಗಳು:
ರುಚಿಕರ, ಜೀರ್ಣಕರ ಮತ್ತು ಚೈತನ್ಯಯುಕ್ತವಾದುವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕತ್ತುಗಳು. ಇದರಲ್ಲಿ ಅಮೂಲ್ಯವಾದ 'ಓವಲ್ಟಿನ್' ಸೇರುವುದು. 4 ಔನ್ಸು ಮತ್ತು 8 ಔನ್ಸುಗಳ ಪೇಕಟುಗಳಲ್ಲಿಯೂ ಒಂದು ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್ಟಿನ್'

'OVALTINE'

ವಿತರಣಕಾರರು:
ಜೇಮ್ಸ್ ರೈಟ್ ಲಿಮಿಟೆಡ್
149 ಬ್ರೋಡ್ವೆ ಮದ್ರಾಸ. ಕಲ್ಕತ್ತಾ, ಕರಾಚಿ ಮತ್ತು ಬೊಂಬಾಯಿ.

OV/42/39

'ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ'

# ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

29—8—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೯—೮—೧೯೪೦

# ಸಂಧಾನದ ಬಾಗಿಲನ್ನು ಇನ್ನೂ ಕಾಂಗ್ರೆಸು ಮುಚ್ಚಿಲ್ಲ!

ಹಾಲ್ಸ್ಯ ವೈಸರಾಯರಾದ ಲಿನ್‌ಲಿತ್‌ಗೋರವರು.

## ಲಂಡನ್ ಪತ್ರಿಕೆಯ ಹೇಳಿಕೆ

"ಸಾಮಂತ ಸ್ವರಾಜ್ಯದ ಮಾತು ಕತೆಯು ಇನ್ನು ಮುಂದೆ ಉಳಿದಿಲ್ಲ. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಭಾರತೀಯರು ಹೋರಾಟಕ್ಕೆ ಇಳಿಯುವ ನಿಶ್ಚಯಮಾಡಿದ್ದಾರೆ. ಮಿತ್ರರಾಷ್ಟ್ರಗಳು ಇಂದು ಸ್ವಾತಂತ್ರ್ಯ ರಕ್ಷಣೆಗೆಂದು ಕಾದಾಡುತ್ತಿರಲು, ಭಾರತೀಯರು ತಮಗಾದ ಅನ್ಯಾಯಕ್ಕಾಗಿ ಆಂದೋಲನವನ್ನು ಹೂಡುವುದಾದರೆ, ಅದು ನಿಜವಾಗಿಯೂ ಮಿತ್ರರಾಷ್ಟ್ರಗಳ ಉದ್ದೇಶ ಮಾರ್ಗದಲ್ಲಿ ಮಹಾ ಕೊರತೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಆತ್ಮಸಾಕ್ಷಿಗೇ ನಮ್ಮ ಕೆಲಸವು ವಿರೋಧವಾಗಿದೆ." ಹೀಗೆಂದು ಲಂಡನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಯು ಕಾಂಗ್ರೆಸಿನ ನಿರ್ಧಾರದ ಕುರಿತು ಬರೆಯುತ್ತದೆ.

"ಆದರೂ ಇಂದಿನ ಪರಿಸ್ಥಿತಿಯಲ್ಲಿ ಉಳಿದಿರುವ ಬಂದ. ಆಶೆಯೆಂದರೆ ಗಾಂಧಿಜಿಯವರ. ಇನ್ನೂ ಕೆಲದಿನಗಳ ವರೆಗೆ ಸಂಧಾನಕ್ಕೆ ಕಾಂಗ್ರೆಸಿನ ಬಾಗಿಲನ್ನು ತೆರೆದು ಇಟ್ಟಿದ್ದಾರೆ. ಸಂಧಾನವನ್ನು ಮಾಡುವ ಹಾಗಿದ್ದರೆ ಮುಂದಿನ ಕೆಲದಿನಗಳು ವೈಸರಾಯರಿಗೆ ಬಹಳ ಆತುರದ ದಿನಗಳಾಗಬಹುದು!" ಎಂದು ಆ ಪತ್ರಿಕೆಯು ಸೂಚಿಸುತ್ತದೆ. ವೈಸರಾಯರು ಈ ಹಿತ ಸೂಚನೆಯನ್ನು ಕೇಳಿ, ಆ ಸಂಧಿಯನ್ನು ಕಳೆಕೊಳ್ಳಲಾರರೆಂದು ಹಾರೈಸಬಹುದೆ?

## ವೈಸರಾಯರಿಗೆ ಲಂಡನ್ ಪತ್ರಿಕೆಯ ಸೂಚನೆ

## ಆತನು ಪ್ರತಿಭಟಿಸಲು ಗುಂಡುಹೊಡೆದೆನು!

### ಒಡ್ವಾಯರ್ ಹತ್ಯಾಕಾಂಡದ ವಿಚಾರಣೆ

### ಹೊಸ ತತ್ವವನ್ನು ನಾನು ಸೃಷ್ಟಿಸಲಾರೆ

## ಪ್ರತಿಭಟಿಸಲೆಂದು ನಾನು ಹಾಗೆ ಮಾಡಿದೆ

### ಉದ್ದಾಮಸಿಂಗರ ವಿಚಾರಣೆ

### ಒಡ್ವಾಯರ್ ಹತ್ಯಾಕಾಂಡ

ಮೈಕೇಲ್ ಒಡ್ವಾಯರನ್ನು ಕೊಲೆ ಮಾಡಿದರೆಂದು ಅಪಾದಿತರಾಗಿರುವ ಉದ್ದಾಮ ಸಿಂಗರನ್ನು ಬೋ ಸ್ಟ್ರೀಟ್ ಪೋಲೀಸ್ ಕೋರ್ಟಿನ ಮುಂದೆ ನಿಲ್ಲಿಸಲಾಯಿತು. ಗುಂಡಿನೇಟಿನ ಪ್ರಕರಣದಲ್ಲಿ ಹಾಜರಿದ್ದು ಅದನ್ನು ನೋಡಿದ ಕೆಲವರು ಸಾಕ್ಷಿಯಿತ್ತರು. ಕೊನೆಗೆ ಉದ್ದಾಮ ಸಿಂಗರಿಗೆ ಇನ್ನು ಎಪ್ರಿಲ್ ೧ನೇ ತಾರೀಖಿನ ವರೆಗೆ ರಿಮಾಂಡ್ ತೆಗೆದುಕೊಳ್ಳಲಾಯಿತು.

ಅಪಾದಿತರ ಪರವಾಗಿ ವಿ. ಕೆನಾರ್ಡ್ ಲಿಂಡರ್‌ರು ವಕಾಲತ್ತು ವಹಿಸಿದ್ದಾರೆ.

ಅಪಾದಿತರನ್ನು ಮೊದಲು ಮಹಮ್ಮದ್‌ಸಿಂಗ್ ಆಜಾದ್ ಎಂಬ ಹೆಸರಿನಲ್ಲಿ ಚಾರ್ಜ್ ಮಾಡಲಾಗಿತ್ತು. ಆದರೆ ಆ ಮೇಲೆ ಅವರ ಹೆಸರು ಉದ್ದಾಮಸಿಂಗ್ ಎಂದು ತಿಳಿಯಿತು. ಅದರಂತೆಯೇ ಚಾರ್ಜ್‌ನಲ್ಲಿಯೂ ಬದಲಾವಣೆ ಮಾಡಲಾಯಿತು. ಅಪಾದಿತರು ಸಿಖ್ ರೆಂದು ತಿಳಿಯುವದು.

ಆರು ಗುಂಡುಗಳನ್ನು ಹಾರಿಸಲಾಗಿತ್ತು. ಮೊದಲ ೨ ಜೆಟ್ಲೆಂಡರಿಗೆ ಏಟು ಬಿದ್ದಿತು ಎಂದು ಪ್ರಕಟವಾಗಿದೆ.

### ಅಪಾದಿತರ ಹೇಳಿಕೆ

'ಅವನಿಗೆ ಹಾಗೇ ಆಗಬೇಕು. ಜೆಟ್ಲೆಂಡನು ಸಾಯಲಿಲ್ಲವೇ? ಅವನಿಗೆ ಬಲಗಡೆಗೆ ಎರಡು ಗುಂಡುಗಳನ್ನು ಹಾರಿಸಿದೆ, ಒಬ್ಬನೇ ಸತ್ತಿದ್ದಾನೆ! ಇನ್ನೂ ಹೆಚ್ಚು ಮಂದಿಯನ್ನು ತೆಗೆದುಕೊಳ್ಳಬಹುದೆಂದು ನಾನು ಆಲೋಚಿಸಿದ್ದೆ. ನಾನು ಬಹಳ ನಿಧಾನ ಮಾಡಿಬಿಟ್ಟೆ' ಎಂದು ಕಾಣುತ್ತದೆ.

ಕೇವಲ ವಿರೋಧವನ್ನು ತೋರಿಸುವುದಕ್ಕಾಗಿಯೇ ನಾನು ಗುಂಡು ಹಾರಿಸಿದುದು. ಬ್ರಿಟಿಷ್ ಸಾಮ್ರಾಜ್ಯತ್ವದಲ್ಲಿ ಭಾರತ ದೇಶದ ಜನರು ಹೊಟ್ಟೆಗಿಲ್ಲದೆ ಹಸಿದಿರುವುದನ್ನು ನಾನು ನೋಡಿದ್ದೇನೆ. ಈ ಪ್ರತಿಭಟನೆಗಾಗಿ ನಾನೇನೂ ಹೆದರುವುದಿಲ್ಲ. ನನ್ನ ದೇಶಕ್ಕಾಗಿ ನಾನು ಇಷ್ಟು ಮಾಡುವುದು ನನ್ನ ಕರ್ತವ್ಯವಾಗಿದ್ದಿತು. ನನಗೆ ಯಾವ ಶಿಕ್ಷೆ ದೊರಕಿದರೂ ಅದಕ್ಕಾಗಿ ನನಗೇನೂ ಯೋಚನೆಯಿಲ್ಲ. ನಾನೇನೋ ಕೊಲ್ಲಬೇಕೆಂಬ ಉದ್ದೇಶ ಹೊಂದಿರಲಿಲ್ಲ. ಕೇವಲ ಪ್ರತಿಭಟನೆಯನ್ನು ವ್ಯಕ್ತಪಡಿಸುವುದೇ ನನ್ನ ಉದ್ದೇಶ ಎಂದು ಅವರು ಹೇಳಿದರು.

ಎಪ್ರಿಲ್ ೧ಕ್ಕೆ ವಿಚಾರಣೆಯನ್ನು ಮುಂದುಹಾಕಲಾಯಿತು. ಆ ಪಾದಿತರನ್ನು ಬ್ರಿಕ್ಸ್‌ಟನ್‌ನ್‌ನಲ್ಲಿ ರಿಮ್ಯಾಂಡಿನಲ್ಲಿಡಲಾಗಿದೆ.

### ಗಾಂಧೀವಾದವೆಂಬುದು ಉಂಟೇ?

### ಮಹಾತ್ಮರ ಉತ್ತರ

"ನೀವು ಗಾಂಧೀವಾದವೆಂಬುದೇ ಇಲ್ಲವೆನ್ನುತೀರಿ, ನಾನೊಬ್ಬ ಮುಸಲ್ಮಾನ ವಿದ್ಯಾರ್ಥಿ. ಇಸ್ಲಾಮಿನ ಸಾರವು ಗಾಂಧೀವಾದದಲ್ಲಿದೆ, ಹಿಂದೂ ಧರ್ಮದ ಶ್ರೇಷ್ಠತೆ, ಕ್ರಿಸ್ತೀ ಧರ್ಮದ ಸಾರಗಳು ಅದರಲ್ಲಿವೆ. ಪೌರಸ್ತ್ಯವೇದಾಂತದ ಸಾರ ಸರ್ವಸ್ವವೇ ಗಾಂಧೀ ವಾದವಾಗಿದೆ, ಭಾರತದ ಇತಿಹಾಸದಲ್ಲಿ ಇಂತಹ ವಾದವನ್ನು ನಾನು ಬೇರೆ ಕಂಡಿಲ್ಲ. ಇದು ಹೊಸದಲ್ಲವೆಂದು ನೀವು ಏನು ಹೇಳುತ್ತೀರಿ? ಅದನ್ನು ನಂಬುವ ನನ್ನಂತವರ ಸಲುವಾಗಿಯಾದರೂ ಅದು ಇರಲಿ" ಹೀಗೆಂದು ಒಬ್ಬನು ಪ್ರಶ್ನಿಸಿದ್ದಕ್ಕೆ ಗಾಂಧಿಜಿಯವರು ಹರಿಜನದಲ್ಲಿ ಕೆಳಗಿನ ಉತ್ತರವನ್ನು ಕೊಡುತ್ತಾರೆ.

ಲಾರ್ಡ್ ಜೆಟ್ಲೆಂಡರು

"ಯಾವನಾದರೂ ಒಬ್ಬ ವ್ಯಕ್ತಿಯ ಹೆಸರಿನ ವಾದವು ನನಗೆ ಸೇರುವುದಿಲ್ಲ. ನೀವು ನನ್ನ ಕುರಿತು ಹೇಳುವ ವಿಷಯವು ನಿಜವಿದ್ದರೂ ನಾನು ಹೇಳುವುದು, ಹೊಸತೊಂದು ತತ್ವವಲ್ಲ. ಹೊಸ ತತ್ವಗಳು, ವಾದಗಳು ಹುಟ್ಟಲು ಅಸ್ಪದ ಕೊಡಬಾರದು. ಹಳೆಯ ತತ್ವ ಹಾಗೂ ವಾದಗಳಲ್ಲಿಯೂ ಜನರನ್ನು ವಿಭಾಗಿಸುವಂತಹವುಗಳಿದ್ದರೆ ಅವುಗಳು ನಾಶವಾಗಬೇಕು. ಅದೇ ನನ್ನ ಬಯಕೆ.

"ಅಹಿಂಸೆಗೂ, ಬೇರೆ ತತ್ವವೊಂದನ್ನು ಸ್ಥಾಪಿಸುವ ಯೋಚನೆಗೂ ಬಹಳ ದೂರದ ಸಂಬಂಧವಿದೆ. ಅಹಿಂಸೆಯು ಐಕ್ಯವನ್ನು ಹುಟ್ಟಿಸುತ್ತದೆ. ಅದರಿಂದ ವಿರೋಧವು ಸಾಧ್ಯವಾಗುವುದು ನೀವು ಹೇಳುವ ತತ್ವಗಳು ಅಹಿಂಸೆಯ ಮೂಲಗಳು. ಹೊಸ ತತ್ವವೊಂದನ್ನು ಸ್ಥಾಪಿಸಲು ಹೋಗುವುದು ನನ್ನ ಅಹಿಂಸಾ ಮಾರ್ಗದಲ್ಲಿ ಅಡ್ಡ ದಾರಿ ಹಿಡಿದಂತೆ. ಅದನ್ನು ನಾನು ಸಹಿಸಲಾರೆ. ಅದ ಕಾರಣ, ಗಾಂಧಿವಾದವೆಂಬುದು ಇಲ್ಲವೇ ಇಲ್ಲ". ಒಟ್ಟೊಬ್ಬ ಮಹಾಪುರುಷನ ತತ್ವ ಕಾರ್ಯಕ್ರಮಗಳಿಗೆ ಒಂದೊಂದು ವಾದವನ್ನು ಹುಟ್ಟಿಸುವ ಅಂಧಾನುಕರಣೆಗೆ ಮಹಾತ್ಮರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ.

ಸ್ವದೇಶಾಭಿಮಾನಿ

ತಾರೀಕು 29—3—1940

## ರಾಷ್ಟ್ರವನ್ನು ಹರಿದು ಹಂಚುವುದೆ?

ಜಿನ್ನರು ಮೊನ್ನೆಯ ಮುಸ್ಲಿಂ ಲೀಗಿನ ಅಧ್ಯಕ್ಷ ಭಾಷಣದಲ್ಲಿ ಭಾರತವನ್ನು ಹಿಂದೂ ಭಾರತ ಮತ್ತು ಮುಸ್ಲಿಂ ಭಾರತವೆಂದು ಎರಡು ಭಾಗವಾಗಿ ವಿಂಗಡಿಸಬೇಕೆಂಬ ತನ್ನ ಹೊಸ ವಾದವನ್ನು ಪುನಃ ಸಮರ್ಥಿಸಿ ಬೊಬ್ಬೆಯಿಟ್ಟಿದ್ದಾರೆ. ಹಿಂದುಗಳೂ ಮುಸ್ಲಿಮರೂ ಪ್ರತ್ಯೇಕ ಜನಾಂಗದವರೆಂದೂ ಆದುದರಿಂದ ಇಬ್ಬರೊಳಗೆ ಭಾರತವನ್ನು ಹರಿದು ಹಂಚಿಬಿಟ್ಟು, ಬ್ರಿಟನು ಮುಸ್ಲಿಮರಿಗೆ ನ್ಯಾಯವನ್ನು ನೀಡಬೇಕೆಂದೂ ಜಿನ್ನರು ವಾದ ಮಾಡುತ್ತಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ತುಳಿತದಿಂದ ಪರತಂತ್ರವಾಗಿ ಬಿದ್ದಿದ್ದ ಅಖಂಡ ಭಾರತವರ್ಷವನ್ನು ಸ್ವಾತಂತ್ರ್ಯಕ್ಕಾಗಿ, ಯಾವ ಜಾತಿ ಮತಗಳ ಸಂಪರ್ಕವಿಲ್ಲದೆ ಶುದ್ಧ ರಾಜಕೀಯ ದೃಷ್ಟಿಯಲ್ಲಿಯೇ ಕಾಂಗ್ರೆಸು ಎಚ್ಚರಿಸಿ ಒಂದುಗೂಡಿಸುತ್ತಿರಲು, ಜಿನ್ನರು ಇಂತಹ ಅಪ್ರಾಗತಿಕವೂ, ಪ್ರಮಾದಕರವೂ, ಅಪ್ರಬುದ್ಧವೂ, ಅನುಚಿತವೂ ಆದ ತರ್ಕವನ್ನೆಬ್ಬಿಸಿ ರಾಷ್ಟ್ರದ ಸ್ವಾತಂತ್ರ್ಯದ ಕೇಳಿಕೆಗೆ ಅನಿಷ್ಟವನ್ನು ಮಾಡುವ ಅಪಸ್ವರವನ್ನು ಹೊರಡಿಸಿದ್ದಾರೆ.

ಯಾವುದಾದರೊಂದು ರಾಷ್ಟ್ರದಲ್ಲಿ ಒಂದು ಪಂಗಡದವರು ಅಧಿಕಸಂಖ್ಯಾಕರಾಗಿದ್ದರೆ ಅವರನ್ನು ಅಲ್ಪಸಂಖ್ಯಾಕರಾಗಿ ಮಾಡಿಬಿಡುವುದು ಮನುಷ್ಯನಿಂದ ಸಾಧ್ಯವಿಲ್ಲ. ಹಿಂದುಗಳು ಹಿಂದುಸ್ಥಾನದಲ್ಲಿ ಹೆಚ್ಚಿರುವರೆಂದು, ಅವರ ಬಾಧೆಯು ತಮಗೆ ತಟ್ಟುವುದೆಂದೂ ಹೇಳಿ ರಾಷ್ಟ್ರದ ಹಿತಕ್ಕೆ ಜಿನ್ನರು ಆತಂಕ ತರುವುದನ್ನು ನೋಡಿದರೆ ನಿಜವಾಗಿ ಖೇದವೆನಿಸುತ್ತದೆ. ಇಂತಹ ಕ್ಷುಲ್ಲಕವಾದ ಆಕ್ಷೇಪಗಳಿಗೂ ಬೆಲೆಯುಂಟೆಂದು ಇಂತಹ ಆಕ್ಷೇಪಗಳನ್ನು ತಾನಾಗಿಯೇ ಸೃಷ್ಟಿಸಿ ಎತ್ತಿ ಹಿಡಿದು ಜನತೆಯನ್ನು ಮಂಕುಗೊಳಿಸುವ ಯಾವುದೇ ಸಾಮ್ರಾಜ್ಯಶಾಹಿತ್ವವಾದರೂ ಬಹುಕಾಲ ಬಾಳುವುದೆಂದು ಬಗೆದಿದ್ದರೆ ಅದು ಶುದ್ಧ ಭ್ರಮೆಯಲ್ಲದೆ ಬೇರಲ್ಲ. ರಾಜಕೀಯ ದೃಷ್ಟಿಯಲ್ಲಿ ಅಲ್ಪ ಸಂಖ್ಯಾಕ ಬಹುಸಂಖ್ಯಾಕರ ಸಮಸ್ಯೆಯನ್ನು ಪರಿಹರಿಸಲು, ಬ್ರಿಟನರು ಯಾವ ರೀತಿಯ ಪ್ರಜಾಸತ್ತಾತ್ಮಕವಾದ ಕಾರ್ಯನೀತಿಗಳನ್ನು ತಮ್ಮ ರಾಷ್ಟ್ರದಲ್ಲಿ ಅನುಸರಿಸಿಕೊಂಡಿರುವರೋ ಅಂತಹದನ್ನೇ ತಮ್ಮ ಅಧೀನದೊಳಗಿರುವ ಭಾರತಕ್ಕಾದರೂ ಒದಗಿಸಲು ಹಿಂದೆಬೀಳುವುದು ನಿಜವಾಗಿಯೂ ನ್ಯಾಯವನ್ನು ಮಾಡಲು ತಪ್ಪಿದಂತೆಯಲ್ಲದೆ ಅನ್ಯಥಾ ಅಲ್ಲ. ಜಿನ್ನರ ದ್ವಿಜನಾಂಗ ವಾದವು ನಿಜವಾದ ರಾಷ್ಟ್ರ [illegible] ಪ್ರಮಾದಕರವಾದ ಸೂಚನೆಯೆಂದು ಸ್ಪಷ್ಟವಾಗಿದ್ದರಿದ್ದು

## ಯಾರೊಡನೆ ಹೋರಾಟ?

ರಾಮಗಢದಲ್ಲಿ ಬೋಸರು ಸೇರಿಸಿದ "ಸಂಧಾನ ವಿರೋಧ ಸಮ್ಮೇಳನ"ದಂತಹ ಭಾಗ್ಯಹೀನ ಸಮ್ಮೇಳನದಲ್ಲಿ ಅದರ ಅಧ್ಯಕ್ಷರಾದ ಸುಭಾಸ ಬೋಸರು ಕೊಟ್ಟ ಅಧ್ಯಕ್ಷ ಭಾಷಣವು ಅತ್ಯಂತ ದೌರ್ಭಾಗ್ಯದ್ದಾಗಿದೆ. ಸಂಧಾನ ಮಾಡಬಾರದೆಂದು ಅರ್ಭಟಿಸುವ ಬೋಸರು, ರಾಷ್ಟ್ರದ ಇಂತಹ ಸಮಸ್ಯಾತ್ಮಕ ಸಂಧಿಕಾಲದಲ್ಲಿ ನಿಜವಾಗಿ ಯಾವ ಸಾಮ್ರಾಜ್ಯಶಾಹಿಯೊಡನೆ ಹೋರಾಡಲು ಎಲ್ಲರೂ ಐಕ್ಯಮತ್ಯದಿಂದ ಮುಂದುವರಿಯಬೇಕಿತ್ತೋ ಆ ಕಾರ್ಯಕ್ರಮವನ್ನು ಮರೆತು ಬಿಟ್ಟು, ಪಾಳೆಯದಲ್ಲಿಯೇ ಹೋರಾಟವನ್ನು ಹುಟ್ಟಿಸುವ ಅಪ್ರಾಗತಿಕ ಮನೋಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

"ಇಂದಿನ ಸಮಸ್ಯೆಯು ಬಲಪಕ್ಷದವರ ವಜ್ರಮುಷ್ಟಿಯಲ್ಲಿ ರಾಷ್ಟ್ರವು ಬಹುಕಾಲ ಇರಬೇಕೋ ಅಲ್ಲವೇ ಎಡಪಕ್ಷದವರ ಪ್ರಭಾವವು ರಾಷ್ಟ್ರದಲ್ಲಿ ಮೆರೆಯುವಂತೆ ಮಾಡಬೇಕೋ ಎಂಬುದಾಗಿದೆ" ಎಂದು ಬೋಸರು ತಮ್ಮ ಅಧ್ಯಕ್ಷ ಪೀಠದಿಂದ ತಮ್ಮ ಅನುಯಾಯಿಗಳನ್ನು ಪ್ರಶ್ನಿಸಿದ್ದಾರೆ. ಈ ಉದ್ದೇಶವನ್ನು, ಈ ಪ್ರಶ್ನೆಯನ್ನು ಈ ಮನೋಗತಿಯನ್ನು ಮುಂದಿಟ್ಟುಕೊಂಡು ಬೋಸರು ಮುಂದುವರಿಯುವುದು ನಿಜವಾಗಿ ವ್ಯಸನಾಸ್ಪದವಾಗಿದೆ. ಇಂದಿನ ಈ ಸಂದಿಗ್ಧ ಕಾಲದಲ್ಲಿ ಯಾರೊಡನೆ ಭುಜಕ್ಕೆ ಭುಜ ಕೊಟ್ಟು ಮುಂದೊತ್ತಿ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ಕೊಟ್ಟು, ಸಾಮ್ರಾಜ್ಯಶಾಹಿಯನ್ನು ಮುರಿಯಲು ಯತ್ನಿಸಬೇಕಿತ್ತೋ ಅಂತಹ ರಾಷ್ಟ್ರದ ವಿಶ್ವಾಸಯುಕ್ತ ಧುರೀಣರೊಡನೆ ಮಹಾತ್ಮಾಜಿಯಂತಹವರೊಡನೆ ಬೋಸರ ಇಂದು ಹೋರಾಟಕ್ಕೆ ಇಳಿದಿರುವಂತೆ ಇಂದಿನ ಅವರ ಮಾತುಗಳಿಂದಲೂ, ಕಾರ್ಯನೀತಿಗಳಿಂದಲೂ ವ್ಯಕ್ತವಾಗುತ್ತದೆ.

ಇದು ಭಾಗ್ಯಹೀನ ಭಾರತದ ಒಂದು ದೌರ್ಭಾಗ್ಯದ ಪ್ರಕರಣವಾಗಿದೆ!

## ಲಾಹೋರಿನ ದುರಂತ

ಕಳೆದ ವಾರ ಲಾಹೋರಿನಲ್ಲಿ ಖಾಕ್ಸಾರ ಚಳವಳಗಾರರ ಮೇಲೆ ಪೋಲೀಸಿನವರು ಗುಂಡು ಹಾರಿಸಿದ ಹಲವು ಮಂದಿ ಆ ಗುಂಡಿನೇಟುಗಳಿಗೆ ಗುರಿಯಾಗಿ ಮಡಿದ ದುರಂತವು ಒಂದು ಭಯಾನಕ ಘಟನೆಯಾಗಿದೆ. ಆ ಕುರಿತು ವಿಚಾರಣೆಗಳು ಇಂದು ನಡೆಯುತ್ತಾ ಇವೆ.

ಈ ಚಳವಳವು ಆರಂಭವಾದಾಗ ಯಾರು ಅದನ್ನು ಬೆಳೆಯ ಬಿಟ್ಟರೋ ಇಂದು ಅವರೇ ಅದರ ಫಲವನ್ನು ಉಣ್ಣುತ್ತಿದ್ದಾರೆ.

ಖಾಕ್ಸಾರ ಚಳವಳವನ್ನು ಅದು ಆರಂಭವಾದ ಕಾಲದಲ್ಲಿ ಅಡಗಿಸುವುದು ಸುಲಭವಾಗಿತ್ತು. ಆದರೆ ಅಂದು ಬಹಳಷ್ಟೇ [illegible] ಮುಸ್ಲಿಂ ಮುಖಂಡರೇ ಆ ಕುರಿತು ಏನನ್ನೂ ಕಾರ್ಯ ಮಾಡದೆ ಮೌನವಾಗಿದ್ದರು. ಕಾಂಗ್ರೆಸು ಸರಕಾರವು ಆ ಚಳವಳಗಾರರ ಮೇಲೆ ಕ್ರಮಗಳನ್ನು ಕೈಗೊಂಡಾಗ ಹಲವು ಮುಸ್ಲಿಮ ಧುರೀಣರು, ಕಾಂಗ್ರೆಸು ಅದನ್ನು ತನ್ನ ರಾಜಕೀಯ ವಿರೋಧೀಪಕ್ಷವೆಂದು ಅಣಗಿಸಲು ಯತ್ನಿಸುತ್ತಿದೆಯೆಂದೂ ದೂರಿದ್ದರು!

ಆದರೆ ಅದರ ಪ್ರತಿಫಲವು ಇಂದು ಬಂದಿದೆ! ಕಾಂಗ್ರೆಸು ಸರಕಾರವು ಇಂದು ಅಧಿಕಾರವನ್ನು ಬಿಟ್ಟು ಹೊರ ಬಂದಿದೆ. ಸರ್ ಸಿಕಂದರರಂತಹ ಮುಸ್ಲಿಮರೇ ಇಂದು ಖಾಕ್ಸಾರರ ಮೇಲೆ ಕೈಯೆತ್ತಿ ನಿಂತಿದ್ದಾರೆ! ಕಾಂಗ್ರೆಸು ಸರಕಾರವಾದರೂ ಅಂದು ಖಾಕ್ಸಾರರನ್ನು ಸ್ವಾಧೀನಕ್ಕೆ ತಂದು ಕೊಂಡಿತ್ತು. ಆದರೆ ಸಿಕಂದರರಿಗೆ ಅದು ತಮ್ಮ ಗಂಟಲೊಳಗೆ ಇಳಿಯ ತುತ್ತಾಗಿದೆ! ಖಾಕ್ಸಾರ ಚಳವಳವನ್ನು ಅಣಗಿಸಲು ಯತ್ನ ಮಾಡಿದುದಕ್ಕಾಗಿ ಕಾಂಗ್ರೆಸು ಸರಕಾರವನ್ನು ದೂಷಿಸಿದವರು ಈಗ ಯಾತಕ್ಕೆ ಮೌನವಾಗಿರುವರೋ ತಿಳಿಯುವುದಿಲ್ಲ.

ನ್ಯಾಯಾನ್ಯಾಯಗಳನ್ನು ವಿಚಾರ ಮಾಡದೆ ಕೇವಲ ದ್ವೇಷ ಬುದ್ಧಿಯಿಂದ ಟೀಕಿಸುವವರ ಮಾತಿಗೆ ಎಂದೂ ಗೌರವವು ಸಲತಕ್ಕದ್ದಲ್ಲ!

## ಭಾರತೀಯ ಬಾಷ್ಪಾಂಜಲಿ!

### ಮೌಲಾನಾ ಯಾಕೂಬ್ ಹಸನ್

ಮೌಲಾನಾ ಯಾಕೂಬ್ ಹಸನರ ಆಕಸ್ಮಿಕ ನಿಧನದಿಂದ ಭಾರತೀಯರು ಇಂದು ಹಿಂದೂ-ಮುಸ್ಲಿಂ ಐಕ್ಯಕ್ಕಾಗಿ ಶ್ರಮಿಸುತ್ತಿದ್ದ ಒಬ್ಬ ಶ್ರದ್ಧಾವಂತ ರಾಷ್ಟ್ರೀಯ ಕಾರ್ಯಕರ್ತನೊಬ್ಬನನ್ನು ಕಳಕೊಂಡು ನಿಜವಾಗಿ ಅತ್ಯಂತ ದುಃಖಿತರಾಗಿದ್ದಾರೆ! ದೇಶವು ರಾಜಕೀಯ ಸ್ವಾತಂತ್ರ್ಯವನ್ನು ಹೊಂದುವುದರಿಂದಲೇ ಭಾರತದ ಮುಸ್ಲಿಮರಿಗೆ ಬಹುಮುಖವಾದ ಏಳಿಗೆಯಾಗುವುದೆಂದು ಅವರು ದೃಢವಾಗಿ ನಂಬಿದ್ದರು. ರಾಷ್ಟ್ರಹಿತವನ್ನು ಬಿಟ್ಟು, ಸಂಕುಚಿತ ಜಾತೀಯ ಭಾವನೆಯಿಂದ, ಐಕ್ಯಭಂಗವನ್ನುಂಟುಮಾಡುವ ಕೆಲ ಸ್ವಾರ್ಥಪರರಾದ ಕೈಗೊಂಬೆ ಮುಂದಾಳುಗಳ ಧೋರಣೆಗಳನ್ನು ಅವರು ಅನವರತ ಖಂಡಿಸುತ್ತಿದ್ದರು. ತನ್ನ ಜಾತಿಯ ಪರವಾಗಿ ಅವರು ಅನೇಕ ಕಾರ್ಯಗಳನ್ನು ಮಾಡುತ್ತಿದ್ದರೂ, ತಾನು ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ಸರ್ವಜಾತೀಯ ಸೌಹಾರ್ದವು ಪ್ರತಿಬಿಂಬಿಸುವಂತೆ ಅವರು ಜಾಗರೂಕರಾಗಿದ್ದರು.

ರಾಷ್ಟ್ರದ ಸಲುವಾಗಿ ಅವರು ಎರಡು ಸಲ ಬಂಧನದ ಸಂಕಷ್ಟವನ್ನನುಭವಿಸಬೇಕಾಯಿತು. ಚುನಾವಣೆಯಲ್ಲಿ ಕಾಂಗ್ರೆಸಿಗೆ ಅವರು ಅಪ್ರತಿಮ ವಿಜಯವನ್ನು ಒದಗಿಸಿಕೊಟ್ಟರು. ಸಾರ್ವಜನಿಕ ಕಾರ್ಯಖಾತೆಯ ಮಂತ್ರಿಪದವಿಯಲ್ಲಿದ್ದ ಅವರು, ತನ್ನ ಕೆಲ ಕಾಲದ ಆಡಳಿತವನ್ನು ಬಹಳ ನಿಷ್ಠಾತತೆಯಿಂದ ನಡೆಸಿದರು. ತನ್ನ ಕೊನೆಯ ದಿನಗಳಲ್ಲಿ, ಪ್ರಾಯದವರಾದರೂ ಅವರು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿಯೇ ದುಡಿಯುತ್ತಿದ್ದ ರಾಮಗಢದಿಂದ ಆಗ ತಾನೇ ಮರಳಿ ಬಂದವರು, ಕೊನೆಯುಸಿರನ್ನೆಳೆದರೆಂಬುದು ಇಡೀ ರಾಷ್ಟ್ರಕ್ಕೆ ಒದಗಿದ ಮಹಾಸಂತಾಪದ ವಿಷಯವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿಯಿರಲಿ!

## ಕಾಂಗ್ರೆಸಿಗೆ ವಿಜಯ

ಮದ್ರಾಸು ಲೆಜಿಸ್ಲೇಟಿವ್ ಎಸೆಂಬ್ಲಿಯ ಕೌನ್ಸಿಲಿನ ಸಭೆಗೆ ಆದ ಚುನಾವಣೆಯಲ್ಲಿ ಹನ್ನೆರಡು ಸ್ಥಾನಗಳಲ್ಲಿ ಹನ್ನೊಂದು ಸ್ಥಾನಗಳನ್ನು ಕಾಂಗ್ರೆಸಿನವರು ಪಡೆದು ಜಯ ಹೊಂದಿರುವ ವಿಷಯವು ತುಂಬಾ ಸಂತೋಷಕರವಾಗಿದೆ. ಇತ್ತೀಚೆಗೆ ಕಾಂಗ್ರೆಸು ಮಂತ್ರಿಮಂಡಳದ ಕಾರ್ಯಧೋರಣೆಗಳನ್ನು ಬದಲಾವಣೆ ಮಾಡುತ್ತಿರುವ ಸರಕಾರಕ್ಕೆ ಇದು ಜನತೆಯ ಇತ್ತ ಯೋಗ್ಯ ಉತ್ತರವಾಗಿದೆ!

ಕೌನ್ಸಿಲಿಗೆ ಚುನಾವಣೆ ಮಾಡುವ ಮತದಾರರು ಕಾಂಗ್ರೆಸಿನಲ್ಲಿರುವ ತಮ್ಮ ವಿಶ್ವಾಸವನ್ನು ತೋರಿಸಿದ್ದಾರೆ. ಸರಕಾರಕ್ಕೆ ಅವರು ತಮ್ಮ ಇಚ್ಛೆಯನ್ನು ಮಾತುಗಳಿಂದ ಹೇಳದೆ, ಕ್ರಿಯೆಯಿಂದಲೇ ಮಾಡಿ ತೋರಿಸಿದರೆನ್ನಬಹುದು. ಜನತೆಗೆ ಇನ್ನೂ ಕೂಡಾ ಕಾಂಗ್ರೆಸಿನ ಕಾರ್ಯಕ್ರಮವೇ ಬೇಕಾಗಿದೆಯೆಂಬುದು ಇದರಿಂದ ಸಾರಲಾಯಿತು. ಇತ್ತೀಚೆಗೆ ಕಾಂಗ್ರೆಸ್ ಸರಕಾರದ ಹಿಂದಿನ ಕಾರ್ಯಗಳನ್ನು ಬದಲಾವಣೆ ಮಾಡುವ ಸರಕಾರದ ನೀತಿಗೆ ಸರಿಯಾಗಿ ಉತ್ತರ ಕೊಡುವ ಸಂದರ್ಭವೊಂದು ಈಗ ದೊರಕಿದ್ದು ಜನತೆಯು ಸ್ಪಷ್ಟವಾಗಿ ಈ ರೀತಿಯಿಂದ ಉತ್ತರ ಕೊಟ್ಟಿದೆ.

ನಿಜವಾಗಿ ಜನತೆಯ ಹಾರೈಸುತ್ತಿರುವ ಕಾಂಗ್ರೆಸು ಸರಕಾರವು ಅಧಿಕಾರವನ್ನು ವಹಿಸುವ ಕಾಲವು ಬಹು ದೂರ ಏಳಲಾರದೆಂದು ನಾವು ಹಾರೈಸುತ್ತೇವೆ.

## ಹಿಂದೂ ರಾಜ್ಯಕ್ಕಾಗಿ—

ಹಿಂದೂ ಮಹಾಸಭೆಯ ಅಧ್ಯಕ್ಷರಾದ ವೀರ ಸಾವರ್ಕಾರರು ಮದ್ರಾಸು ಪ್ರಾಂತದಲ್ಲಿ ಕಳೆದ ವಾರದಿಂದ ಹಲವು ಭಾಷಣಗಳನ್ನು ಕೊಟ್ಟಿರುವರು. ಒಂದು ಕಡೆಯಿಂದ ಮುಸ್ಲಿಂ ಲೀಗಿನ ಜಿನ್ನರು ಭಾರತವನ್ನು ಮುಸ್ಲಿಂ ರಾಜ್ಯವಾಗಿ ಪ್ರತ್ಯೇಕ ವಿಂಗಡಿಸಬೇಕೆಂದು ಕೂಗೆಬ್ಬಿಸುವಾಗ ಇನ್ನೊಂದು ಕಡೆ ಹಿಂದೂ ಮಹಾಸಭೆಯ ಸಾವರ್ಕಾರರು ಭಾರತದಲ್ಲಿ ಹಿಂದುಗಳದ್ದೇ ರಾಜ್ಯವು ಇರಬೇಕೆಂದು ಅರ್ಭಟಿಸುತ್ತಿದ್ದಾರೆ. ಜಿನ್ನ ಮತ್ತು ಸಾವರ್ಕಾರರು ಹೀಗೆ ಎರಡು ತುದಿಗಳಲ್ಲಿ ನಿಂತು ಭಾರತದ ರಾಜಕೀಯವನ್ನು ತಮ್ಮ ತಮ್ಮ ಜಾತೀಯ ದೃಷ್ಟಿಯಿಂದ ಬಗೆಹರಿಸಲು ವಾದವೆಬ್ಬಿಸುತ್ತಿದ್ದಾರೆ.

ಭಾರತದಲ್ಲಿ ಸಕಲ ಧರ್ಮದವರೂ ಇದ್ದಾರೆ. ಎಲ್ಲರೂ ಅನ್ಯೋನ್ಯ ಸೌಹಾರ್ದದಿಂದ ನಡೆದುಕೊಳ್ಳಬೇಕಾಗಿದೆ. ಈ ಸಮಯದಲ್ಲಿ ಭಾರತವನ್ನು ಹಿಂದೂ ರಾಜ್ಯವಾಗಿ ಮಾಡಿ ಮುಸಲ್ಮಾನರನ್ನು ದೂರುವ ದ್ವೇಷಬುದ್ಧಿಯು ಖಂಡಿತವಾಗಿಯೂ ನ್ಯಾಯವೆನಿಸಲಾರದು.

# ರಾಮಗರ ಕಾಂಗ್ರೆಸು ಮುಗಿಯಿತು!

# ಮುಂದೇನು?

## ಕಾಂಗ್ರೆಸು ಸಮರಕ್ಕೆ ಆಹ್ವಾನಿಸಲ್ಪಟ್ಟಿದೆ

## ಬ್ರಿಟನು ಜವಾಬ್ದಾರಿಯಾಗುವುದು!

[ಲೇಖಕ ಭಾರತೀಯ]

ರಾಮಘರದಲ್ಲಿ ಕಾಂಗ್ರೆಸು ಕೆರೆದು ಚೆದರಿತು ಮುಂದೇನಾಗುವದೆಂದು ಈಗಲೇ ಸ್ಪಷ್ಟವಾಗಿ ಹೇಳಿ ಬರುವುದಿಲ್ಲ ಪರಿಸ್ಥಿತಿಯು ಈಗಿದ್ದಂತೆಯೇ ಇರುವುದಾದರೆ, ಶಾಸನಭಂಗಕ್ಕೆ ಆರಂಭವಾದರೂ ಆಗಬಹುದು ಶಾಸನಭಂಗವಾಗದೆ ಗತ್ಯಂತರವಿಲ್ಲವೆಂದು ಪಂಡಿತ ಜವಾಹರಲಾಲ ನೆಹರುಗಳು ಹೇಳಿದ್ದಾರೆ. ಆದರೆ ಆ ಶಾಸನಭಂಗದ ಸ್ವರೂಪ, ಕಾರ್ಯಕ್ರಮವೆಲ್ಲ ಮುಂದಿನ ಪರಿಸ್ಥಿತಿಯನ್ನು ಹೊಂದಿರುವುದು ಈ ವಿಷಯವಾದ ವಿವರವು ಇನ್ನೂ ಭವಿಷ್ಯದ ಗರ್ಭದಲ್ಲಿ ಅಡಕವಾಗಿದೆಯಾದರೂ, ಕಾಂಗ್ರೆಸಿನ ಧ್ಯೇಯೋದ್ದೇಶಗಳು ಏನಿದ್ದವೆಂದು ಇನ್ನು ಯಾರೂ ಪ್ರಶ್ನಿಸಲಾರರು,

### ಹೋರಾಡಲು ಆಹ್ವಾನವೆ?

ರಾಮಘರ ಕಾಂಗ್ರೆಸು ಮಹಾತ್ಮರ ಮುಂದಾಳುತನದಲ್ಲಿ ತನ್ನ ಸಂಪೂರ್ಣ ವಿಶ್ವಾಸ ಭರವಸೆಗಳನ್ನು ವ್ಯಕ್ತಮಾಡಿದೆ ಮಹಾತ್ಮ ಗಾಂಧಿಯವರು ಕಾಂಗ್ರೆಸ ರಾಜಕಾರಣದಲ್ಲಿ ಪ್ರವೇಶ ಮಾಡಿದಂದಿನಿಂದ ಕಾಂಗ್ರೆಸು ಅವಸರದಿಂದ ಯಾವ ಕಾರ್ಯವನ್ನೂ ಮಾಡಿದುದಿಲ್ಲ ಆದುದರಿಂದಲೇ ಕಾಂಗ್ರೆಸು ದಿನದಿಂದ ದಿನಕ್ಕೆ ಅಧಿಕಾಧಿಕ ಶಕ್ತಿ ಬಲ, ಪ್ರತಿಷ್ಠೆ ಗೌರವಗಳನ್ನು ಸಂಚಯಿಸಿಕೊಂಡು ಬಂದಿದೆ. ಜನಮತವನ್ನು ದುರ್ಲಕ್ಷಿಸಿ, ಬ್ರಿಟಿಷ ಸರಕಾರವು ಭಾರತವನ್ನು ಮಿತ್ರರಾಷ್ಟ್ರಗಳ ಪರವಾಗಿ ಹೋರಾಡುವ ರಾಷ್ಟ್ರವೆಂದು ಸಾರಿತು. ಭಾರತದ ಇಚ್ಛೆಗೆ ವಿರೋಧವಾಗಿ ಬ್ರಿಟಿಷ ಸರಕಾರವು ಅದನ್ನು ಯುದ್ಧರಂಗಕ್ಕೆ ಎಳೆಯಿತು. ಬ್ರಿಟನು ಕಾಂಗ್ರೆಸನ್ನು ಭುಜ ತಟ್ಟಿ ಸಂಗ್ರಾಮಕ್ಕೆ ಕರೆದಿದೆ ಎಂಬುದರಲ್ಲಿ ಸಂದೇಹವಿಲ್ಲ, ಆದರೂ ಕಾಂಗ್ರೆಸು ಅವಸರದಿಂದ ಕಾರ್ಯಪ್ರವರ್ತನೆಗೆ ಆರಂಭಿಸದಿರುವುದು ಅದರ ನ್ಯಾಯಬುದ್ಧಿ, ಮತ್ತು ಶಾಂತಿ ಮತ್ತು ಸಂಧಾನದಿಂದ ಕೆಲಸ ಮಾಡುವ ಆಸಕ್ತಿಯನ್ನು ವ್ಯಕ್ತಮಾಡುತ್ತದೆ. ಆದುದರಿಂದ ಇನ್ನು ಕಾಂಗ್ರೆಸ ಶಾಸನಭಂಗವನ್ನು ಆರಂಭಿಸಿದರೆ ಅದು ದುಡುಕಿತೆಂದು ಯಾರೂ ಅದರ ಮೇಲೆ ಅಪವಾದವನ್ನು ಹೊರಿಸಲಾರರು.

ಕಾಂಗ್ರೆಸ್ ಕಾರ್ಯಕ್ರಮವು ಸತ್ಯ ಮತ್ತು ಅಹಿಂಸೆಯ ಭದ್ರವಾದ ಅಡಿಗಲ್ಲುಗಳ ಮೇಲೆ ರಚಿಸಲ್ಪಡುತ್ತದೆ ಅದರ ವ್ಯವಹಾರಗಳಲ್ಲಿ ರಹಸ್ಯಗಳು ಇರುವುದಿಲ್ಲ ಆದುದರಿಂದ ಅದರ ಧ್ಯೇಯೋದ್ದೇಶಗಳು ಎಷ್ಟು ಚೆನ್ನಾಗಿ ಪ್ರಪಂಚದಲ್ಲಿ ತಿಳಿದು ಪರಿಣಾಮವನ್ನು ಉಂಟುಮಾಡುತ್ತವೋ ಅಷ್ಟಕ್ಕೆ ಒಳ್ಳೆಯದು ಪಶುಬಲಕ್ಕಿಂತ ಆತ್ಮಬಲವು ಎಷ್ಟು ಉತ್ಕೃಷ್ಟವಾಗಿದೆ ಎಂಬುದನ್ನು ಜಗತ್ತಿಗೆ ತೋರಿಸಿ, ಪ್ರಪಂಚದ ಉದ್ಧಾರಕ್ಕಾ ಸತ್ಯ ಅಹಿಂಸೆಗಳ ದಿವ್ಯಾಸ್ತ್ರವನ್ನು ಸಂಪಾದಿಸಿಕೊಟ್ಟ ಮಹಾ ಪುಣ್ಯವು ಕಾಂಗ್ರೆಸಿಗೆ ಇರುವುದು ಸಾಮ್ರಾಜ್ಯಾಧಿಕಾರಿಗಳ ಆಕ್ರಮಣದಿಂದ ಯುರೋಪನ್ನು ಬದುಕಿಸುವುದು, ತನ್ನ ಯುದ್ಧೋದ್ದೇಶವೆಂದು ಬ್ರಿಟನು ಹೇಳುವುದು ಆದರೆ ಭಾರತ ಸ್ವಾತಂತ್ರ್ಯದ ಕುರಿತು ಬ್ರಿಟನು ಒಂದೇ ಒಂದು ಮಾತನ್ನಾದರೂ ಆಡಲಿಲ್ಲ ಯುರೋಪಿನ ಯುದ್ಧದಲ್ಲಿ ಭಾರತವೇಕೆ ಭಾಗತೆಗೆದುಕೊಳ್ಳಬೇಕೆಂಬ ಮಹತ್ವದ ಪ್ರಶ್ನೆಯು ಮುಂದೆ ಬಂದಿದೆ ಸಾಮ್ರಾಜ್ಯಸತ್ತೆಯನ್ನು ಬಲಗೊಳಿಸಲಿಕ್ಕಾಗಿ, ಬ್ರಿಟನಿನ ಯುದ್ಧವೆಂದಾದರೆ, ಅದರಲ್ಲಿ ಭಾರತದ ಸಹಾನುಭೂತಿ ಸಹಾಯಗಳು ಇರುವುದಿಲ್ಲ

### ಬೆಣ್ಣೆಯಂತಹ ಮಾತುಗಳು

ಸಾಮ್ರಾಜ್ಯಸತ್ತೆಯು ಎಂದೋ ನಾಶವಾಗಿದೆ ಬ್ರಿಟಿಷ ವಸಾಹತುಗಳು ಬ್ರಿಟನಿಗೆ ಸಹಾಯ ಮಾಡುವವು ಅಂತೆಯೇ ಭಾರತವೂ ಸಹಾಯಮಾಡಬೇಕೆಂದು ಮೆತ್ತಗಿನ ಮುದ್ದಾದ ಮಾತುಗಳು ಮುಂದೆ ಬಂದುವು ಆದರೆ ಸ್ವತಂತ್ರವಾದ ಬ್ರಿಟಿಷ ವಸಾಹತುಗಳೆಲ್ಲಿ? ಪರತಂತ್ರವಾಗಿರುವ ಹಿಂದುಸ್ಥಾನವೆಲ್ಲಿ? ಹಿಂದುಸ್ಥಾನವು ಜರ್ಮನಿಯ ವಿರೋಧಪಕ್ಷದಲ್ಲಿ ಹೋರಾಡುವುದೆಂದು ಸಾರುವ ಮೊದಲು ಬ್ರಿಟಿಷ ಸರಕಾರವು ತಾನೇ ಜನ್ಮಕೊಟ್ಟ ಹಿಂದುಸ್ಥಾನದ ಎಸೆಂಬ್ಲಿ ಕೌನ್ಸಿಲುಗಳನ್ನು ಬರಿಯ ಮರ್ಯಾದೆಗಾದರೂ ಕೇಳಿ ಅಭಿಪ್ರಾಯ ತೆಕ್ಕೊಳ್ಳುವ ಶಿಷ್ಟಾಚಾರವನ್ನು ಅವಲಂಭಿಸದೆ ನಿರಂಕುಶವಾಗಿ ನಡಕೊಂಡಿತು ಜನಮತಕ್ಕೆ ವಿರೋಧವಾಗಿ ಭಾರತದ ಹೇರಳ ಬಲ ಸಂಪತ್ತಿಯನ್ನು ಯುದ್ಧದಲ್ಲಿ ಸ್ವೋಪಯೋಗ ಮಾಡಿಕೊಳ್ಳುತ್ತಾ ಇದೆ ಇತರ ವಸಾಹತುಗಳೊಡನೆ ಬ್ರಿಟನಿಗೆ ಹೀಗೆ ವ್ಯವಹರಿಸುವುದು ಕನಸಿನಲ್ಲಿಯೂ ಸಾಧ್ಯವಿಲ್ಲ. ವಸಾಹತುಗಳಿಗೂ ಹಿಂದುಸ್ಥಾನಕ್ಕೂ ಎಲ್ಲಿಯ ಸಾಮ್ಯ?

### ಭಾರತಕ್ಕೆ ಸಾಮಂತ ಸ್ವರಾಜ್ಯ

ಯುದ್ಧದ ಅನಂತರ ಯಾವುದೋ ಒಂದು ದಿನ ವಸಾಹತುಗಳದಂಥ ಸಾಮಂತ ಸ್ವರಾಜ್ಯವನ್ನು ಭಾರತಕ್ಕೆ ಕೊಡುವುದೇ ತನ್ನ ಗುರಿ ಎಂದು ಬ್ರಿಟನು ಮರುಳುಮಾಡುವ ಹೇಳಿಕೆ ಹೊರಡಿಸಿತು. ಸ್ವರಾಜ್ಯದ ಹಾದಿಯಲ್ಲಿ ಬ್ರಿಟನೇ ತಂದುಹಾಕಿದ ಜಾತಿಯ ಸಮಸ್ಯೆ, ಬ್ರಿಟಿಷರ ಹಿತಾಸಕ್ತಿಯ ಸಮಸ್ಯೆ ಇತ್ಯಾದಿ ವಿಘ್ನಗಳನ್ನು ಭಾರತವು ದೂರಮಾಡಿದ ಬಳಿಕ, ಸಾಮಂತ ಸ್ವರಾಜ್ಯವು ಭಾರತಕ್ಕೆ ದೊರೆಯುವದಂತೆ! ಭಾರತದ ಭಾವೀ ರಾಜ್ಯಘಟನೆಯನ್ನು ಭಾರತೀಯರು ರಚಿಸುವ ಸ್ವಾತಂತ್ರ್ಯವನ್ನು—ಸ್ವಯಂ ನಿರ್ಧಾರದ ಹಕ್ಕನ್ನು ಭಾರತಕ್ಕೆ ಕೊಡಬೇಕೆನ್ನುವ ಕಾಂಗ್ರೆಸಿನ ಮುಖ್ಯ ಮಾತಿಗೆ ಈ ಎಂಟು ತಿಂಗಳುಗಳು ಕಳೆದ ಅನಂತರವೂ ಉತ್ತರವಿಲ್ಲ. ಆದುದರಿಂದ ರಾಮಘರ ಕಾಂಗ್ರೆಸು ಪಾಚ್ಚಾ ಠರಾವನ್ನು ಮಾಡಿ ಬ್ರಿಟನಿಗೆ ಪುನಃ ಎಚ್ಚರಿಕೆಯನ್ನು ಕೊಟ್ಟಿದೆ

### ಬ್ರಿಟನು ಹೊಣೆಯಾಗುವುದು

ಕಾಂಗ್ರೆಸ ತನ್ನ ಧ್ಯೇಯವನ್ನು ಸ್ಪಷ್ಟಮಾಡಿ ಇದೇ ಉದ್ದೇಶವನ್ನು ಸಾರಿದೆ. ಅವುಗಳು ಅನ್ಯಾಯವೆಂದು ಯಾರೂ ಹೇಳುವ ಹಾಗಿಲ್ಲ, ಸತ್ಯ ಮತ್ತು ಅಹಿಂಸೆಯ ಬಲದಿಂದ ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸುವ ಪವಿತ್ರ ನೀತಿಯು ಕಾಂಗ್ರೆಸಿನದಾಗಿದೆ ಸತ್ಯವು ಸರ್ವತ್ರ ಗೆಲಲೇ ಬೇಕು ಕಾಂಗ್ರೆಸು ಈ ನಿಷ್ಠೆಯಿಂದ ಶಾಸನಭಂಗಕ್ಕೆ ತೊಡಗಿದಾಗ ಮುಂದಿನ ಪರಿಣಾಮಗಳಿಗೆ ಮಾತ್ರ ಬ್ರಿಟನು ಹೊಣೆಯಾಗುವುದು, ಇದನ್ನೇ ರಾಮಘರ ಕಾಂಗ್ರೆಸ ಜಗತ್ತಿಗೆ ಸಾರಿರುವುದು ರಾಮಘರ ಕಾಂಗ್ರೆಸಿನಲ್ಲಾದ ಮುಖ್ಯ ಕಾರ್ಯವೆಂದರೆ ಇದೇ ಆಗಿದೆ. ಕಾಂಗ್ರೆಸು ಶಾಸನಭಂಗವನ್ನು ಇನ್ನು ಆರಂಭಿಸಿದರೆ, ಬ್ರಿಟನಿನ ಕಷ್ಟ ಸಮಯವನ್ನು ನೋಡಿಕೊಂಡು ಭಾರತವು ತನ್ನ ಸ್ವಾರ್ಥವನ್ನು ಸಾಧಿಸಿತೆಂಬ ಅಪವಾದವಿಲ್ಲ ಈ ಅಪವಾದ ಬರಬಾರದೆಂಬುದು ಕಾಂಗ್ರೆಸಿನ ಉದ್ದೇಶವಾಗಿತ್ತು. ಆ ಉದ್ದೇಶವನ್ನು ಕಾಂಗ್ರೆಸು ರಾಮಘರದಲ್ಲಿ ಚೆನ್ನಾಗಿ ಸಾಧಿಸಿದೆ


# A well-rounded programme of SAVING

## DO YOU WANT YOUR MONEY TO GROW?

If so, this should interest you.

On the top of all possible ideas of lifting yourselves financially, stand the Syndicate's time-tested thrift schemes for guaranteed security.

We have a few select plans which enable any man to fully enjoy the fruit of his labours. Study them; join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

**The Canara Industrial & Banking Syndicate, Limited.**

Head Office:—UDIPI, S. India.

# ಸಂಧಾನ ವಿರೋಧ ಸಮ್ಮೇಳನ

## ರಾಮಗಢದ ಮತ್ತೊಂದು ಅಧಿವೇಶನ

### ಬಲಪಕ್ಷದ ಮೇಲೆ ಬೋಸರ ಉಗ್ರಟೀಕೆ

[ಬರೆದು ಬಂದುದು]

[illegible] ಕಾಂಗ್ರೆಸಿನ [illegible]ನೆಯ ವಾರ್ಷಿಕಾಧಿವೇಶನವು ನೆರವೇರಲಿಕ್ಕೆ? ಈ ಸಂದರ್ಭದಲ್ಲಿ ಗಾಂಧಿವಾದಿಗಳು ಇಂದು ಕಾಂಗ್ರೆಸಿನಲ್ಲಿ ಸೇರಿದ್ದು, ಬ್ರಿಟಿಷ್ ಸರಕಾರದೊಡನೆ ಸಂಧಾನ ಮಾಡಿಕೊಳ್ಳುವರೆಂದು ಆರೋಪಿಸುವ ಬಾಬು ಸುಭಾಸ ಬೋಸರು 'ಸಂಧಾನ ವಿರೋಧ ಸಮ್ಮೇಳನ'ವೊಂದನ್ನು ಅದರ ಬಳಿ ಮೈಲೊಂದರ ದೂರ ನೆರವೇರಿಸಿದರು. ಅದರಲ್ಲಿ ಇಂದಿನ ಗಾಂಧೀ ಪಕ್ಷದವರನ್ನೂ, ವರ್ಕಿಂಗ್ ಕಮಿಟಿಯವರನ್ನೂ ಉಗ್ರವಾಗಿ ಟೀಕಿಸಿದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಸಂಧಾನ ಮಾಡುವ ಮನೋಭಾವವು ತೊಡೆದು ಹೋದರೆ ಸಮ್ಮೇಳನವು ಸಾರ್ಥಕವಾಯಿತೆಂದರು.

ಅಖಿಲಭಾರತದ ಸಂಧಾನ ವಿರುದ್ಧ ಸಮ್ಮೇಳನವು ರಾಮಗಢದಲ್ಲಿ ಸುಭಾಷ್ ಬೋಸರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಧಾನ ವಿರುದ್ಧ ಸಮ್ಮೇಳನವು ಆರಂಭವಾಗುವುದಕ್ಕೆ ಮುಂಚೆ ಶ್ರೀ. ಸುಭಾಷ್ ಬೋಸರು ಕಾಂಗ್ರೆಸ್ ತ್ರಿವರ್ಣ ಧ್ವಜವನ್ನೂ, ಕೆಂಪು ಧ್ವಜವನ್ನೂ ಆರೋಹಣ ಮಾಡಿದರು. ಸ್ವಾಗತ ಸಮಿತಿ ಅಧ್ಯಕ್ಷರಾದ ಸ್ವಾಮಿ ಸಹಜಾನಂದ ಸರಸ್ವತಿಯವರು ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳನ್ನೂ ಅಧ್ಯಕ್ಷರನ್ನೂ ಸ್ವಾಗತಿಸಿ ಭಾಷಣ ಮಾಡಿದರು. ನಂತರ ಶ್ರೀ ಬೋಸರು ತಮ್ಮ ದೀರ್ಘ ಭಾಷಣವನ್ನು ಕೊಟ್ಟರು.

#### ಸ್ವಾಗತ ಭಾಷಣ

ಸ್ವಾಗತ ಭಾಷಣ ಮಾಡುತ್ತಾ ಸ್ವಾಮಿ ಸಹಜಾನಂದ ಸರಸ್ವತಿಯವರು ಈ ರೀತಿಯ ಸಮ್ಮೇಳನವು ಇದೇ ಮೊದಲನೆಯದು ಮತ್ತು ಇದೇ ಕೊನೆಯದೂ ಆಗಿದೆ ಎಂದು ಹೇಳಿದರು. ಈಗಿನ ವಾತಾವರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಸಂಧಾನ ಮತ್ತು ಆತ್ಮನಾಶಕ್ಕೆದಾರಿಯಾದ ಕಾಂಗ್ರೆಸಿನ ಪ್ರಭಾವವನ್ನು ಕಾಣಬಹುದಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪಾಟ್ನಾದಲ್ಲಿ ಮಾಡಿದ ಠರಾವು ತೀರಾ ಖಂಡನೀಯವಾದುದು. ಸಂಧಾನಕ್ಕೆ ಬಾಗಿಲನ್ನು ಉದ್ದೇಶಪೂರ್ವಕವಾಗಿಯೇ ಅದರಲ್ಲಿ ತೆರೆದಿಡಲಾಗಿದೆ. ಗಾಂಧೀಜಿಯವರು ಹೇಳುವುದು ಇದೇ ಆಗಿದೆ.

ಗಾಂಧೀಜಿಯವರು ಶಾಸನ ಭಂಗವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಪರಿಸ್ಥಿತಿ ಹೇಗಿರಬೇಕೆಂಬುದಕ್ಕೆ ಕೆಲವು ಶರತ್ತುಗಳನ್ನು ಹಾಕಿದ್ದಾರೆ. ಅದನ್ನು ನೋಡಿದರೆ ನಮ್ಮ ಮುಖಂಡರುಗಳು ಬಹು ಮಟ್ಟಿಗೆ ಹಿಂಜರಿಯುತ್ತಿದ್ದಾರೆ ಎಂಬುದು ವೇದ್ಯವಾಗುವದು. ಗಾಂಧಿಜಿಯವರು ಹರಿಜನದಲ್ಲಿ ಬರೆದ [illegible]ವನ್ನು ನೋಡಿದರೆ ಹೋರಾಟದ ಆಶೆಯೆಲ್ಲಾ ಭಗ್ನವಾಗಿದೆ.

ಸಂಧಾನವಿರೋಧ ಗುಂಪು ಖಾದಿ ಚರಖಾಗಳಿಗೇನೂ ವಿರೋಧಿಯಾಗಿಲ್ಲ. ಆದರೆ ಗಾಂಧೀ ಭಾವನೆಯ ಗುಂಪಿನವರು ಹೇಳುವಂತೆ ನಾವು ಖಾದಿ ಮತ್ತು ಚರಖಾವೇ ಮುಂದಿನ ಸಮಾಜದ ಅಡಿಗಲ್ಲೆಂದು ಒಪ್ಪುವುದಿಲ್ಲ. ಅಹಿಂಸೆಯನ್ನು ನಾವು ಒಂದು ನೀತಿಯೆಂಬುದಾಗಿ ತಿಳಿಯುವೆವು. ಆದರೆ ನಮ್ಮ ಗುರಿಯನ್ನು ತಲಪಲು ಅದೊಂದೇ ದಾರಿಯೆಂದು ನಾವು ಅರಿಯುವುದಿಲ್ಲ' ಹೀಗೆಂದರು.



#### ಅಧ್ಯಕ್ಷ ಭಾಷಣ

ಬಾಬು ಸುಭಾಷ್‌ಚಂದ್ರಬೋಸರು ಸಂಧಾನ ವಿರೋಧ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣಮಾಡುತ್ತ ಸಾಮ್ರಾಜ್ಯಶಾಹಿಯನ್ನು ನಿರ್ದಿಷ್ಟವಾಗಿ ನಿರ್ವಂಚನೆಯಾಗಿ ಎದುರಿಸುವ ಪಕ್ಷವೇ ಎಡಪಕ್ಷವೆಂದೂ ಸಾಮ್ರಾಜ್ಯಶಾಹಿಯೊಡನೆ ಸಂಧಾನ ಮಾಡಿಕೊಳ್ಳಲು ಆತುರದಿಂದಿರುವ ಕಾಂಗ್ರೆಸ್ಸಿನವರನ್ನು ವಿರೋಧಿಸುವ ಕಾರ್ಯದಲ್ಲಿಯೂ ಈ ಪಕ್ಷವು ತೊಡಗಬೇಕಾಗಿದೆಯೆಂದೂ, ಕಾಂಗ್ರೆಸು ಸಂಧಾನದ ಮಾತನ್ನು ನಿಲ್ಲಿಸಿ ಹೋರಾಟಕ್ಕೆ ಹೊರಡದಿದ್ದರೆ ಸಂಧಾನ ವಿರೋಧ ಸಮ್ಮೇಳನವು ಆ ಜವಾಬ್ದಾರಿಯನ್ನು ಹೊರಲು ಸಾಧ್ಯವಾಗಬೇಕಾದೀತೆಂದೂ ಹೇಳಿದರು. ಬೋಸರು ಕಾಂಗ್ರೆಸ್ ಮುಖಂಡರಲ್ಲಿ ಕೆಲವರು ಈಗ ಸಾಮ್ರಾಜ್ಯಶಾಹಿಯೊಡನೆ ಒಪ್ಪಂದ ಮಾಡಿಕೊಳ್ಳಲು ಹವಣಿಸುತ್ತಿರುವುದರಿಂದ ಈ ಸಮ್ಮೇಳನವು ಆಗಬೇಕಾಗಿದೆ ಎಂದೂ ಹೇಳಿದರು.

ವರ್ಕಿಂಗ್ ಕಮಿಟಿಯು ಮಾಡಿರುವ ಪಾಟ್ನಾ ನಿರ್ಣಯವು ಹೋರಾಟದ ಸೂಚನೆಯನ್ನು ಕೊಡುವುದಾದರೂ ಅದರ ಸ್ವಭಾವವನ್ನು ಮಹಾತ್ಮ ಗಾಂಧೀಯವರು ತಮ್ಮ ಹೇಳಿಕೆಯಿಂದ ಕುಗ್ಗಿಸಿದರೆಂದೂ ಸಂಧಾನದ ಬಾಗಿಲನ್ನು ತೆ[illegible] ನಿರ್ಣಯವು ಮುಚ್ಚಿಲ್ಲವೆಂದೂ ಸ್ಪಷ್ಟಪಡಿಸಿದರು. ಕಳೆದ ವರ್ಷದಿಂದ ವರ್ಕಿಂಗ್ ಕಮಿಟಿಯು ಮಾಡಿರುವ ನಿರ್ಣಯಗಳ ಮತ್ತು ಮುಖಂಡರ ಹೇಳಿಕೆಯ ಬಗ್ಗೆ ಇದೇ ರೀತಿ ಮಾಡಲಾಗಿದೆಯೆಂದೂ ಇಂತಹ ನೀತಿಯು ಪಂಗಡಕ್ಕೆ ರುಚಿಸಿಲ್ಲದಿರುವುದು ಸಹಜವೆಂದೂ ವರ್ಕಿಂಗ್ ಕಮಿಟಿಯು ಈಗ ಇಷ್ಟು ಮುಂದಕ್ಕೆ ಬಂದಿರುವುದಕ್ಕೆ ಎಡಪಕ್ಷದವರ ಅಸಮಾಧಾನ ಸೂಚನೆಯೇ ಕಾರಣವೆಂದೂ ಶ್ರೀ ಸುಭಾಷರು ಹೇಳಿದರು. ಕಾಂಗ್ರೆಸಿನವರು ಮಾತುಗಳಲ್ಲಿ ಕಾಲ ಕಳೆಯುವ ಸಮಯವು ಮುಗಿದುಹೋಯಿತೆಂದೂ, ಬ್ರಿಟಿಷರಿಗೆ ನಮ್ಮ ಧೋರಣೆಯು ಚೆನ್ನಾಗಿ ತಿಳಿಯಬೇಕಾದರೆ ನಾವು ಕಾರ್ಯ ಮಾಡಬೇಕೆಂದೂ ಹೇಳಿದರು. ಹಾಗೆ ಮಾಡದಿದ್ದರೆ, ಪೂರ್ಣ ಸ್ವರಾಜ್ಯ ಪ್ರಶ್ನೆಯು ಈಗ ಬಗೆಹರಿಯುವುದೇ ಇಲ್ಲವೆಂದರು.

ಕಳೆದ ಸಪ್ಟೆಂಬರಿನಿಂದ, ಯುದ್ಧವಾರಂಭವಾದಂದಿನಿಂದ, ಜನರ ಮನಸ್ಸು ಅಲ್ಲಕಲ್ಲೋಲವಾಗಿರುವುದು ಸಹಜವೆಂದೂ, ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ದಾರಿ ತೋರುವುದೇ ಕಷ್ಟವಾದರೂ ಮುಖಂಡರು ಈ ಪರಿಸ್ಥಿತಿಯಿಂದ ಮೇಲಕ್ಕೇಳಬೇಕೆಂದೂ ಜನತೆಗೆ ಸರಿಯಾದ ಮಾರ್ಗವನ್ನು ತೋರಬೇಕೆಂದೂ ಹಾಗೆ ಮಾಡದವರು ಮುಖಂಡರೆನಿಸರೆಂದೂ ಹೇಳಿದರು.

'ಈಗ ಸಾಮ್ರಾಜ್ಯಶಾಹಿಯು ಅಧಃಪತನಗೊಳ್ಳುವುದರಲ್ಲಿದೆ. ಪ್ರಜಾಸತ್ತೆಯೂ ಸಾಮ್ಯವಾದವೂ ನಮ್ಮ ಮುಂದೆ ನಿಂತಿವೆ. ಮೊದಲು ನಾವು ಸಾಮ್ರಾಜ್ಯಶಾಹಿಯ ಶೃಂಖಲೆಯಿಂದ ಬಿಡುಗಡೆಹೊಂದಿ ಪ್ರಜಾಸತ್ತೆಯನ್ನು ಸ್ಥಾಪಿಸಿ, ಸಾಮ್ಯವಾದದ ದೃಷ್ಟಿಯಲ್ಲಿ ವ್ಯವಸ್ಥೆ ಮಾಡಲು ತೊಡಗಬೇಕು' ಎಂದು ಅವರು ಹೇಳಿದರು. ಈ ಸಂದಿಗ್ಧ ಸಮಯದಲ್ಲಿ ತಕ್ಕ ಮುಖಂಡತ್ವ ದೊರೆಯದಿದ್ದರೆ ಭಾರತದ ಭವಿಷ್ಯವು ಕಾರ್ಮೋಡದಲ್ಲಿ ಮಾಯವಾದೀತು ಎಂದು ಅವರು ಎಚ್ಚರಿಸಿದರು.

ಈಗಿನ ಕಾಂಗ್ರೆಸ್ ಮುಖಂಡತ್ವವು ದೇಶಕ್ಕೆ ಮತ್ತು ಪರಿಸ್ಥಿತಿಗೆ ಅನುಗುಣವಾದ ನೀತಿಯನ್ನು ಅನುಸರಿಸದಿದ್ದರೆ ಇತರರು ಆ ಜವಾಬ್ದಾರಿಯನ್ನು ವಹಿಸಬೇಕೆಂದೂ ಆಗ ಫಾರ್ವರ್ಡ್ ಬ್ಲಾಕಿನವರು ತಮ್ಮ ಪ್ರಗತಿ ಮನೋಭಾವವನ್ನೂ ದೃಢಚಿತ್ತವನ್ನೂ ತೋರಿಸಬೇಕಾಗುವುದೆಂದೂ, ಅವರು ಸಾಮ್ರಾಜ್ಯಶಾಹಿಯನ್ನೇ ಎದುರಿಸಬೇಕಾಗುವುದಲ್ಲದೆ ಕಾಂಗ್ರೆಸ್ ಬಲಪಕ್ಷದವರನ್ನೂ ಎದುರಿಸಬೇಕಾಗುವುದೆಂದೂ ಈ ಪರಿಸ್ಥಿತಿಯಿಂದ ದೇಶದಲ್ಲಿ ಅಂತರ್ಯುದ್ಧ ಹೋರಾಟವು ನಡೆಯಬೇಕಾಗುವುದೆಂದೂ ಸಾಮ್ರಾಜ್ಯಶಾಹಿಯೊಡನೆ ಸಂಧಾನ ಮಾಡಿಕೊಳ್ಳುವ ಮನೋಭಾವವು ತೊಡೆದು ಹೋದರೆ ಈ ಸಮ್ಮೇಳನವು ಸಾರ್ಥಕವಾದಂತಾಗುವುದೆಂದೂ ಉದ್ಘೋಷಿಸಿದರು.


**THE PIE-MONEY BANK LTD.,**
Maidan Road, MANGALORE.

Undestakes all kinds of Banking Business. Current account at 2½% per annum. Savings Bank Deposits at 4½% per annum.

**FIXED DEPOSITS**

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

*Apply for particulars—*

**K. R. GURU,** *Managing Director*




**ನಿಮ್ಮ ಅದೃಷ್ಟ!**

ಪೋಸ್ಟು ಕಾರ್ಡಿನ ಮೇಲೆ ಯಾವುದಾದರೂ ಒಂದು ಹೂವಿನ ಹೆಸರು, ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿರಿ. ಕೂಡಲೇ ನಾವು ನಿಮಗೆ ನಿಮ್ಮ ಮುಂದಿನ 12 ತಿಂಗಳಲ್ಲಾಗುವ ವ್ಯಾಪಾರ, ವಹಿವಾಟುಗಳ ಲಾಭ ನಷ್ಟ, ಜನನ, ಉದ್ಯೋಗ, ದಾಂಪತ್ಯಸುಖ, ಆರೋಗ್ಯ ಮತ್ತು ಕೆಟ್ಟ ಗ್ರಹಗಳ ಕಾಟವನ್ನು ತಪ್ಪಿಸುವ ಉಪಾಯಗಳನ್ನು ಸವಿಸ್ತಾರವಾಗಿ ರೂ. 1-9-0ಕ್ಕೆ ವಿ. ಪಿ. ಮೂಲಕ ತಿಳಿಸುವೆವು. ಒಂದು ಬಾರಿ ಪರೀಕ್ಷಿಸಿದಲ್ಲಿ, ನಮ್ಮ ಭವಿಷ್ಯತ್ತಿನ ಸತ್ಯತೆಯನ್ನು ತಿಳಿಯುವುದು.
ಹಣವನ್ನು ಹಿಂದೆಕೊಡುವ ಗ್ಯಾರಂಟಿಯಲ್ಲಿ ಮಾರಲ್ಪಡುವುದು. ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 100 ಇನಾಮು ಕೊಡಲಾಗುವುದು.

**ANAND JOTISH ASHRAM,**
Post Box No. 27 (S.A.M.) Amritsar.

ಈ ವಾರದ ಕತೆ:

# ಆಲಿಂಗನ ಸುಖ

ಕನ್ನಡಿಸಿದವರು ಕಟಪಾಡಿ ಶ್ರೀನಿವಾಸ ಶೆಟ್ಟಿ, ಅಧ್ಯಾಪಕ, ಕಾರ್ಕಳ

ತಾನಿನ್ನು ಸಿಟ್ಟು ಮಾಡುವುದಿಲ್ಲವೆಂದು ಮಾಧವ ಮಾಲತಿಗೆ ಹೇಳಿ ಒಂದು ವಾರವೂ ಕಳೆದಿರಲಿಲ್ಲ.

ಮಾಧವ ಬೆಳಗ್ಗಿನ ಸ್ನಾನ ತೀರಿಸಿ ಚಾವಡಿಗೆ ಬರುತ್ತಿದ್ದ ಹಾಗೆ ಟಪ್ಪಾಲಿನವ ಅವನಿಗೊಂದು ಇನ್ಶೂರು ಲಕೋಟೆಯನ್ನು ಕೊಟ್ಟು ಹೋದ. ಅದರಲ್ಲಿ ನೂರು ರೂಪಾಯಿಗಳ ಒಂದು ನೋಟು ಇದ್ದಿತು. ಕಳೆದ ಬಾರಿಯ ಚಕ್ರಬಂಧ ಒಗಟಿನಲ್ಲಿ ಅವನಿಗೆ ಸಿಕ್ಕಿದ ಬಹುಮಾನವದು. ವರ್ತಮಾನವನ್ನು ಕೇಳಿ ಮಾಲತಿ ಒಳಗಿನಿಂದ ಹೊರಗೆ ಬಂದಳು. 'ನನ್ನ ಭಕ್ತಿ ಅಂದರೆ ಹಾಗೆ! ಬಹುಮಾನ ದೊರೆತರೆ ವೆಂಕಟರಮಣನಿಗೆ ನಂದಾದೀಪ ಉರಿಸುತ್ತೇನೆಂದು ಹರಿಕೆ ಹೇಳಿದ್ದೆ. ಅದಕ್ಕಿನ್ನು ತಡವಾಗಬಾರದು'' ಎಂದು ಅವಳು ನಸುನಗುತ್ತ ಹೇಳಿದಳು.

ಮಾಧವ ಕೈಯ್ಯಲ್ಲಿದ್ದ ನೋಟನ್ನು ಮಾಲತಿಯ ಕೈಯ್ಯಲ್ಲಿಟ್ಟ.

'ಬೇಡ ಮನೋಹರ! ನನ್ನೇ ಇಟ್ಟುಕೊಳ್ಳಿ. ಸಾಲವನ್ನು ಸ್ವಲ್ಪ ಸ್ವಲ್ಪ ಸಲ್ಲಿಸಿ ಒಂದು ಕೋಟು ಮತ್ತು ಶರ್ಟು ಹೊಲಿಸಿಕೊಳ್ಳಿ. ಮತ್ತೆ ಸಾಧ್ಯವಾದರೆ ಇವತ್ತು ಸಿನೇಮಕ್ಕೆ ಹೋಗೋಣವಂತೆ. ಅಲ್ಲಿ ಮಾಲತೀ ಮಾಧವ ಚಿತ್ರ— ನಮ್ಮದೇ ಹೆಸರಿನದು! ನಾವು ನೋಡದಿದ್ದರೆ ಹೇಗಾಗುತ್ತೆ? ಹೋಗಲೇ ಬೇಕು. ಸಾಯಂಕಾಲ ಸ್ವಲ್ಪ ಬೇಗ ಬಂದಾಬಿಡಿ'

ಹಾಗೆ ಹೇಳಿ ಅವಳ ಅಡಿಗೆ ಮನೆಗೆ ಹೋದಳು. ಬೇಗ ಬೇಗ ಅನ್ನ ಸಾರು ಮಾಡಿ ಪತಿದೇವನಿಗೆ ಬಡಿಸಿದಳು. ಸಾಯಂಕಾಲ ಐದು ಘಂಟೆಗೆ ಸರಿಯಾಗಿ ಬರುವೆನೆಂದು ಭರವಸೆ ಕೊಟ್ಟು ಮಾಧವ ಆಫೀಸಿಗೆ ಹೊರಟು ಹೋದ.

ಮಾಲತಿ ತನ್ನ ಪತಿದೇವನ ಬುದ್ಧಿ ಚಾತುರ್ಯವನ್ನು ಮನಸ್ಸಿನೊಳಗೆಯೇ ಪ್ರಶಂಸಿಸುತ್ತ ದಿನ ಕಳೆದಳು. ಬುದ್ಧಿವಂತನಲ್ಲದಿದ್ದರೆ ಅವನಿಗೆ ಅಷ್ಟು ದೊಡ್ಡ ಬಹುಮಾನ ಹೇಗೆ ದೊರಕೀತು? ಅವಸರದಿಂದ ಎರಡು ತುತ್ತು ಅನ್ನವನ್ನುಂಡು ಅವಳು ತನ್ನ ಪತಿದೇವನ ವಿಜಯವಾರ್ತೆಯನ್ನು ಸಖಿಗೆಳತಿಯರಿಗೆ ಹೇಳಲಿಕ್ಕೆ ನೆರೆಮನೆಗಳಿಗೆ ಹೋದಳು. ಪತಿದೇವನಂಥ ಧೀಮಂತ ಪುರುಷನು ಪ್ರಪಂಚದಲ್ಲಿಯೇ ಇರುವದಿಲ್ಲವೆಂದು ಆಗ ಅವಳು ಎಣಿಸಿದ್ದಳು. ತನ್ನನ್ನು ಮಾಧವನ ಹೆಂಡತಿಯಾಗಿ ಮಾಡಿದ್ದಕ್ಕೆ ಅವಳು ದಯಾಮಯನಾದ ಪರಮಾತ್ಮನಿಗೆ ಧನ್ಯವಾದಗಳನ್ನು ಕೊಡುತ್ತ ಆತನ ಉಪಕಾರ ಸ್ಮರಣೆ ಮಾಡಿದಳು. ಮಾಧವನು ಮಧ್ಯರಾತ್ರಿ ಎರಡು ಮೂರು ಘಂಟೆಗಳಾಗುವ ತನಕ ಸಣ್ಣ ದೀಪವನ್ನು ಉರಿಸಿಟ್ಟು ಅದರ ಮಂದಪ್ರಕಾಶದಲ್ಲಿ ಒಗಟುಗಳನ್ನು ಬಿಡಿಸುತ್ತ ತಲೆ ಕರಡು ಮಾಡಿಕೊಳ್ಳುತ್ತಿದ್ದ ದೃಶ್ಯಗಳು ಅವಳ ಕಣ್ಣ ಮುಂದೆ ಬರತೊಡಗಿದುವು. 'ಎಂಥ ಕತ್ತೆ ಮೇಯಿಸುವ ವ್ಯರ್ಥ ಕೆಲಸ ಮಾಡುತ್ತೀರಿ' ಎಂದು ತಾನು ಅವನನ್ನು ಭಂಗಿಸುತ್ತಿದ್ದುದೂ ಅವಳ ನೆನಪಿಗೆ ಬಂದಿತು. ಅದಕ್ಕಾಗಿ ಅವಳಿಗೆ ಬಹಳ ಪಶ್ಚಾತ್ತಾಪವಾಯಿತು. ಮಾಧವ ಒಗಟುಗಳ ಹುಚ್ಚನಾಗಿದ್ದ. ಅವನು ಬಿಡಿಸಲಿಕ್ಕೆ ಪ್ರಯತ್ನಿಸದ ಒಗಟು ಇರಲಿಲ್ಲ. ಒಂದೊಂದು ಒಗಟಿಗೆ ಅವನು ಕಳುಹಿಸುವಷ್ಟು ಕೂಪನ್ನುಗಳನ್ನು ಇತರರು ಕಳುಹಿಸುತ್ತಿದ್ದಿಲ್ಲ.

ಮಾಲತಿ ಸಾಯಂಕಾಲದ ಎಲ್ಲಾ ಕೆಲಸಗಳನ್ನು ನಾಲ್ಕು ಘಂಟೆಗೇ ತೀರಿಸಿಕೊಂಡಳು. ಮತ್ತೆ ಮಾಧವನ ಬರವನ್ನು ಕಾಯುತ್ತ ಕೂತುಕೊಂಡಳು. ಆದರೆ ಪ್ರಾರಬ್ಧ' ಎಂದಿನಂತೆ ಆ ದಿನವೂ ಮಾಧವ ಸಮಯಕ್ಕೆ ಸರಿಯಾಗಿ ಬರಲಿಲ್ಲ. ಅವಳು 'ನಿಮಿಷ ನಿಮಿಷಕ್ಕೂ ಬಾಗಿಯೂ ಮಾಧವ ಬರುತ್ತೇನೆಂದು ಹೇಳಿ, ಬಾರದೆ ಮೋಸ ಕೊಟ್ಟ ಪ್ರಸಂಗಗಳನ್ನೆಲ್ಲ ನೆನಪಿಗೆ ತಂದುಕೊಂಡು ಅವಳು ಹಲ್ಲುಗಳನ್ನು ಕಟಕಟ ಕಡಿದುಕೊಂಡಳು. 'ಈ ಸಲ ಒಂದೋ ಹಾಗೆ ಅಥವಾ ಹೀಗೆ ಏನಾದರೊಂದು ರೀತಿಯಿಂದ ಅದರ ಸಿಸ್ತಾರವಾಗಲಿಕ್ಕೇ ಬೇಕು' ಎಂದು ಅವಳು ಸಂಕಲ್ಪಮಾಡಿಕೊಂಡಳು.

ಪಾಪದ ಮಾಧವ ಈ ಸಮಯ ಆಫೀಸಿನಲ್ಲಿ ಕೂತು ಫೈಲುಗಳನ್ನು ಮುಗಿಸುತ್ತ ತನ್ನ ದುರದೃಷ್ಟವನ್ನು ಹಳಿದುಕೊಳ್ಳುತ್ತಲಿದ್ದ. ಹೊಟ್ಟೆಪಾಡಿಗಾಗಿ ಬೇರೆಯವರ ಚಾಕರಿಯನ್ನು ಒಪ್ಪಿ



ಇಂದುರಾಣಿ ಮತ್ತು ಸುಶಿಲಕುಮಾರ 'ಸ್ವಸ್ತಿಕಾ' ಚಿತ್ರದ ಒಂದು ದೃಶ್ಯ

ಕೊಂಡಿದ್ದಾಗ ಕೈ ಹಿಡಿದ ಹೆಂಡತಿಯೊಂದಿಗೆ ಸರಸಸಲ್ಲಾಪ ಮಾಡಲಿಕ್ಕೂ ಸಮಯವಿರಬಾರದೆ? ಸಿನೇಮಕ್ಕೆ ಹೋಗಬೇಕು, ಬೆಟ್ಟಕ್ಕೆ ಹೋಗಬೇಕು ಎಂದು ಹೆಂಡತಿ ಹೇಳಿದ ದಿನಗಳಲ್ಲಿಯೇ ಮಾಧವನ ತಲೆ ಮೇಲೆ ಹೊರಲಿಕ್ಕಾಗದ ಕೆಲಸದ ಭಾರ ಬಂದು ಬೀಳುವುದು.

ಅವನು ಮನೆಗೆ ಬರುವಾಗ ಏಳು ಗಂಟೆ ಹೊತ್ತಾಗಿದ್ದಿತು. ಮಾಧವ ಕೋಟನ್ನು ತೆಗೆದ ಗೂಟಕ್ಕೆ ತೂಗಾಡಿಸುತ್ತಿದ್ದ ಹಾಗೆಯೇ ಮಾಲತಿ 'ಹೌದ, ನಾವು ಅಂದರೆ ಗಂಡಸರಿಗೆ ಅಷ್ಟು ಸಸಾರ. ನಮ್ಮ ಸಮಯಕ್ಕೆ ಬೆಲೆಯೇ ಇಲ್ಲ. ಎರಡು ಗಂಟೆಗಳಿಂದ ಕಾದಿದ್ದೇನೆ. ಆದರೆ ಬರಬೇಕಲ್ಲ? ಮುನಿಸ್ಪೀಫ ಕಲೆಕ್ಟರರಾಗಿದ್ದರೆ ಮನೆ ಕಡೆಗೆ ಇಣಿಕಿಯೂ ನೋಡುತ್ತಿದ್ದಿಲ್ಲವೇನೋ? ಇದ್ದರಿಂದಲೇ ದೇವರು ಅದನ್ನು ಕೊಡಲಿಲ್ಲ. ಸಂಗಾತಿಗಳೊಂದಿಗೆ ಆಡಿ ಕೂಡಿ ನಲಿಯುವಾಗ, ನಾಯಕಸಾನಿಯರ ಒನಪು ಒಯ್ಯಾರಗಳ ಮುಂದೆ ನನ್ನಂಥ ಬಡಪಾಯಿಯ ನೆನಪು ಹೇಗಾಗಬೇಕು, ನಿಮಗೆ? . ' ಎಂದು ಅರ್ಭಟಿಸಿದಳು.

ಮಾಧವನಿಗಿದು ಅಸಹನೀಯವಾಯಿತು. 'ಸಾಕು ಸಾಕು, ಬಾಯ್ಮುಚ್ಚು, ಕೇಳಿ ಕೇಳಿ ಸಾಕಾಯಿತು, ನಿನ್ನ ಹಠ!' ಎಂದವನು ಗರ್ಜಿಸಿದ. 'ನೀನು ಮತ್ತು ನಿನ್ನ ಸಿನೇಮ ಅಲ್ಲದೆ ನನಗೆ ಮತ್ತೇನೂ ಕೆಲಸವಿಲ್ಲ! ಕೆಲಸ ಮಾಡಿ ಮಾಡಿ ಸೋತು ಸುಣ್ಣವಾಗಿ ಮನೆಗೆ ಬರುತ್ತಾ ಇಲ್ಲಿ ನಿನ್ನ ಪುರಾಣಕ್ಕೆ ಆರಂಭವಾಗುತ್ತದೆ!—ಸಂಗಾತಿನಿಯಂತೆ, ನಾಯಕಸಾನಿಯಂತೆ! ನಿನ್ನಿಂದ ನನ್ನ ಬಿಡುಗಡೆ ಹೇಗೋ ತಿಳಿಯುವುದಿಲ್ಲ' ಎಂದನವನು.

ಮಾಧವನ ಮಾತು ಕೇಳಿ ಮಾಲತಿಗೆ ಖೇದದೊಂದಿಗೆ ಆಶ್ಚರ್ಯವೂ ಆಯಿತು. ಬೆಳಗ್ಗೆ ಆಫೀಸಿಗೆ ಹೊರಡುವಾಗಿನ ಆ ಮನೋಹರ ಮಾಧವ, ಮತ್ತೆ ಸಾಯಂಕಾಲ ಕೆಲಸಮಾಡಿ ದಣಿದು ಬಂದ ಈ ಗುಮಾಸ್ತ ಮಾಧವ—ಎಂಥ ಅಜಗಜಾಂತರ ಭೇದ! ಅವಳ ಕಣ್ಣುಗಳಿಂದ ಗಂಗಾ ಪ್ರವಾಹವನ್ನು ಆರಂಭಿಸಿ ಕೋಣೆಗೆ ಹೋಗಿ ಹಾಸಿಗೆ ಮೇಲೆ ಬಿದ್ದುಕೊಂಡಳು.

(ಆರನೇ ಪುಟವನ್ನು ನೋಡಿರಿ)

ಪಂಡಿತ ತಾರಾನಾಥರ **ಸುಲಭ ಚಿಕಿತ್ಸೆ!**

ಪ್ರತಿಯೊಂದು ಸಂಸಾರದಲ್ಲಿಯೂ ಅಗತ್ಯ ಇರಬೇಕಾದ ಪುಸ್ತಕ.

ಹತ್ತಿರವಿದ್ದರೆ ಬಳಿಯಲ್ಲಿ ಒಬ್ಬ ವೈದ್ಯನಿದ್ದಂತೆಯೇ!

ಅಜೀರ್ಣ, ಅತಿಸಾರ, ವಾತ, ಕ್ಷಯ, ಉನ್ಮಾದ, ಉಪದಂಶ, ಗರ್ಭಪಾತ ಮೊದಲಾದ ರೋಗಗಳಿಗೆ ಗೃಹಚಿಕಿತ್ಸೆಯ ಸುಲಭ ಸಾಧನಗಳು ಇದರಲ್ಲಿ ವಿವರಿಸಲಾಗಿವೆ!

ಕೇವಲ ಕೆಲವೇ ಪ್ರತಿಗಳು ಉಳಿದಿವೆ. ಬೆಲೆಯೂ 1 ಮಾತ್ರ.

4 ಪುಸ್ತಕಗಳನ್ನು ಒಮ್ಮೆಲೇ ತರಿಸುವವರಿಗೆ ವಿ. ಪಿ. ಚಾರ್ಜು ಮಾಫಿ. ವ್ಯಾಪಾರಸ್ಥರಿಗೆ ಥೋಕಾಳ ಕಮಿಶನು.

ವಿ. ಸೂ: ಮಾರ್ಚ 15ರ ಒಳಗೆ ರೂ. 1 ಕಳುಹಿಸುವವರಿಗೆ ನಮ್ಮ ಖರ್ಚಿನಿಂದಲೇ ಕಳುಹಿಸುವೆವು

ಮಂಗಳೂರು ಏಜೆಂಟರು. ಸೋಲ್ ಏಜೆಂಟ್ಸ್

ಯು. ಪಾಂಡುರಂಗ ನಾಯಕ್, ಪ್ರೇಮ ಮೆಡಿಕಲ್ ಹಾಲ್,

ರಥಬೀದಿ ಮಂಗಳೂರು. ಗುತ್ತಿಗಾರ್ ದ. ಕ.

DIAMONDS! DIAMONDS!

BEST BRILLIANCY!

**K. R. K. SHET,**

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

**ವಜ್ರಗಳು!**

ಎಮ್‌ಸ್ಟರಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಹೊಳಪಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಉತ್ತರಿಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್.

## ಆಲಿಂಗನ ಸುಖ

(೬ನೆಯ ಘುದಂಟ)

ಎಂಟು ಗಂಟೆಯ ರಾತ್ರಿಯಾಯಿತು. ದರ್ಬಾರ ಹೊರಗೆ ಚಾವಡಿಯಲ್ಲಿ ಮಾಧವ ಒಬ್ಬನೇ ಕೂತಿದ್ದಾನೆ. ಎಲ್ಲಿಯೂ ಶಬ್ದವಿಲ್ಲ, ಮಾತಿಲ್ಲ. ಎಲ್ಲಾ ಮೌನ, ನೀರವ. ಉಪಾಯ ಕಾಣದೆ ಮಾಧವನೇ ಮೊದಲು ಮಾತಿಗೆ ಆರಂಭಿಸಿದ.

'ಮಾಲತಿ!' ಎಂದವನು ಕರೆದ. ಆದರೆ ಮರುತ್ತರವಿಲ್ಲ.

ಆ ದಿನ ಸಾಯಂಕಾಲದ ತನ್ನ ವಶು ವ್ಯವಹಾರಕ್ಕಾಗಿ ಮಾಧವ ನಿಗೀಗ ಬಹಳ ಪಶ್ಚಾತ್ತಾಪವಾಯಿತು. ಜಗತ್ತಿನಲ್ಲಿ ತನ್ನಂಥ ಮೂರ್ಖರಿಲ್ಲವೆಂದು ಅವನಿಗೆ ಅನ್ನಿಸಿತು. ಮಾಡಿದ ಅನ್ಯಾಯಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಅವನೀಗ ನಿರ್ಧರಿಸಿಕೊಂಡ. ಕುರ್ಚಿಯಿಂದೆದ್ದು ಅವನು ಮಾಲತಿ ಮಲಗಿದ್ದ ಕೋಣೆಗೆ ಹೋದ. ಅವಳು ಅಲ್ಲಿ ಕಿಟಕಿಯಿಂದ ಹೊರಗಿನ ಆಕಾಶವನ್ನು ದಿಟ್ಟಿಸುತ್ತ ದುಃಖಮಯ ಸಂಸಾರದ ಚಿತ್ರವನ್ನು ಮನಸ್ಸಿನೊಳಗೆಯೇ ಅಂಕಿಸಿಕೊಳ್ಳುತಿದ್ದಳು.

'ಮಾಲತಿ! ಮುದ್ದು! ಎಂಟು ಹೊಡೆಯಲಿಕ್ಕಾಯಿತು. ಒಳಗೆ ನಡಿ. ಊಟ ಮಾಡಿ ಮಲಗಿಕೊಳ್ಳೋಣ' ಎಂದು ಮಾಧವ ಮೆತ್ತಗೆ ಘಾತನಾಡಿದ. ಅವನ ಧ್ವನಿಯಲ್ಲಿ ಪಶ್ಚಾತ್ತಾಪದ ಅಳು ಸೇರಿದ್ದಿತು.

ಇಬ್ಬರು ಊಟಕ್ಕೆ ಕೂತುಕೊಂಡರು. ಬಳಸುವ ಕೆಲಸ ಮಾಲತಿ ಮಾಡಿದಳು. ಆದರೆ ಮಾತನಾಡುವ ಕೆಲಸ ಮಾತ್ರ ಮಾಧವನ ಪಾಲಿಗೇ ಬಿದ್ದಿತು. ಅವಳು ಹೂಂ, ಹಾಂ ಎಂದಷ್ಟೇ ಹೇಳುತಿದ್ದಳು. ಊಟದ ಹರಿಕೆ ಮುಗಿಸಿದ ಬಳಿಕ ಮಾಧವ ಹೋಗಿ ಮಲಗುವ ಕೋಣೆಯನ್ನು ಸೇರಿದ. ಮಾಲತಿ ಅಲ್ಲಿಗೆ ಬರುವಾಗ ಎಂದಿಗಿಂತ ಸ್ವಲ್ಪ ಹೆಚ್ಚು ಹೊತ್ತಾಗಿದ್ದಿತು. ಆದರೆ ಮಾಧವ ಆಗ ಮಲಗಿರಲಿಲ್ಲ; ಎಚ್ಚರವಾಗಿದ್ದ.

'ಮಾಲತಿ!' ಅವಳು ಕೋಣೆಗೆ ಬಂದಾಗ ಅವನು ಹೇಳಿದ. 'ಮುದ್ದು! ನನಗೆ ಬಹಳ ಪಶ್ಚಾತ್ತಾಪವಾಗುತ್ತದೆ. ಈ ದಿನ ಸಾಯಂಕಾಲದ ನನ್ನ ದುರ್ವ್ಯವಹಾರಕ್ಕಾಗಿ ನಾನು ಪ್ರಾಯಶ್ಚಿತ್ತ ಮಾಡುತ್ತೇನೆ' ಎಂದವನು ಆ ಬಹುಮಾನದ ನೋಟನ್ನು ಹರಿಯತೊಡಗಿದ.

ಮಾಲತಿ ನೋಡಿ ಕಂಗೆಟ್ಟಳು. 'ಏನು, ಹುಚ್ಚುಗಿಚ್ಚು ಹಿಡಿಯಿತೇ?' ಎನ್ನುತ್ತ ಅವಳು ಮಾಧವನ ಕೈಗಳನ್ನು ತಡೆದಳು. ಆದರೆ ಅವನ ಕೈಗಳು ಪ್ರಾಯಶ್ಚಿತ್ತದ ಕಾರ್ಯವನ್ನು ಮಾಡಿ ಮುಗಿಸಿದ್ದುವು.

'ಮಾಲತಿ! ನನ್ನ ದುಷ್ಟತನಕ್ಕೆ ಇದೇ ತಕ್ಕುದಾದ ಪ್ರಾಯಶ್ಚಿತ್ತ! ಇಲ್ಲ; ನಾನು ಕೋಟಿ ಶರ್ಟುಗಳನ್ನು ಹೊಲಿಸಿಕೊಳ್ಳುವ ಸಮಯ ಈಗಲಾದರೂ ಬಂದಿಲ್ಲ. ಮುದ್ದೂ! ಈ ದಿನ ಸಾಯಂಕಾಲ ಅನ್ಯಾಯವಾಗಿ ನಿನಗೆ ಪೀಡೆ ಕೊಟ್ಟೆ.'



ಪ್ರತೀ ಒಬ್ಬ ಹೆಂಗಸರು ತಮ್ಮ ದೇಹದ ಒಳಭಾಗವನ್ನು ನಿರ್ಮಲವಾಗಿರಿಸಿದ್ದರೆ ಸ್ವಚ್ಛವಾದ ರೂಪವೂ, ಉತ್ತಮವಾದ ಕೇಶರಾಶಿಯೂ ಮಿಂಚುವ ಕಣ್ಣುಗಳೂ ಉತ್ತಮ ಆರೋಗ್ಯವಿರುವುದು.

ನಿರ್ಮಲವಾದ ಹೊಟ್ಟೆಯು ಆರೋಗ್ಯವನ್ನುಂಟುಮಾಡುವುದು. ಒಳಭಾಗವು ನಿರ್ಮಲವಾಗಿದ್ದರೆ ದೇಹವು ಆರೋಗ್ಯವಿಂದಿರುವುದು. ಎಂಡ್ರೂಸ್ ಲಿವರ್ ಸೋಲ್ಟನ್ನು ಸೇವಿಸಿ ಹೊಟ್ಟೆಯನ್ನು ಶುಚಿಯಾಗಿರಿಸಿರಿ. ಸೌಂದರ್ಯಯುಕ್ತವಾದ ರೂಪ ಕೇಶರಾಶಿಯನ್ನು ಪಡೆದು ಯೌವನೆಯಾಗಿ.

ಎಂಡ್ರೂಸ್ ಲವಣವು ಹೊಟ್ಟೆಯನ್ನು ಸ್ವಚ್ಛಗೊಳಿಸುವುದು. ಸೌಂದರ್ಯವನ್ನು ನಾಶ ಮಾಡತಕ್ಕಂಥ ಅನಾರೋಗ್ಯವನ್ನುಂಟುಮಾಡುವ ಮಲೀನ ಪದಾರ್ಥಗಳನ್ನು ಹೊರದೂಡುವುದು. ಎಂಡ್ರೂಸ್ ಲವಣವು ನಾಲಿಗೆ, ಹೊಟ್ಟೆಯನ್ನು ಸ್ವಚ್ಛಗೊಳಿಸುವುದು. ಇದೇ ದೇಹಕ್ಕೆ ಒಂದು ತರದ ಉತ್ತೇಜನವನ್ನೀಯುವುದು.

ಎಂಡ್ರೂಸ್ ಲವಣವು ದೇಹದ ಒಳಭಾಗವನ್ನು ನಿರ್ಮಲಗೊಳಿಸುವುದು ● ರಕ್ತವನ್ನು ಶುದ್ಧಿಗೊಳಿಸುವುದು ● ಚರ್ಮವನ್ನು ನಿರ್ಮಲವಾಗಿರಿಸುವುದು ● ಹೊಟ್ಟೆ ಪೀಡೆ, ಮಲಬದ್ಧತೆಯನ್ನು ನಿವಾರಿಸುವುದು ● ಇದರ ಅಭ್ಯಾಸವಾಗುವಂತಿಲ್ಲ, ಚಿಕ್ಕ ಮಕ್ಕಳಿಂದ ಮೊದಲ್ಗೊಂಡು ಇಡೀ ಕುಟುಂಬಕ್ಕೆ ಯೋಗ್ಯವಾಗಿರುವುದು.

ಒಬ್ಬ ಮಹಿಳೆಯು ಈ ರೀತಿ ಬರೆಯುತ್ತಾರೆ:

"ಒಂದು ವರ್ಷದ ಹಿಂದಿನ ವರೆಗೆ ನಾನು ಕಾಳಜಿದ ಬಾಧೆಯಿಂದ ಮತ್ತು ಉದರವೇದನೆಯಿಂದ ನರಳುತಿದ್ದೆನು. ಕೂಡಲೇ ನಾನು ಎಂಡ್ರೂಸ್ ಲವಣವನ್ನು ಸೇವಿಸಿದೆ ಅದು ವೇದನೆಗಳಿಂದ ನನ್ನನ್ನುರಕ್ಷಿಸಿದುದು ಮಾತ್ರವಲ್ಲದೆ ನನಗೆ ಒಂದು ನವೀನರೀತಿಯ ಉತ್ತೇಜನವಿತ್ತಿರುವುದು"

ಎಂಡ್ರೂಸ್ ಲಿವರ್ ಸೋಲ್ಟ್

ANDREWS LIVER SALT

ದೇಹದ ಒಳಭಾಗವನ್ನು ಸ್ವಚ್ಛಗೊಳಿಸುವುದು.

ಪತಿದೇವನ ಮಾತು ಕೇಳಿ ಅವಳು ಅವಕ್ಕಾದಳು. ಅವನಿಗೆ ಅವಳ ಮೇಲಿರುವ ಪ್ರೇಮ ವಾತ್ಸಲ್ಯಗಳನ್ನು ನೋಡಿ ಅವಳ ಎದೆ ಅಭಿಮಾನದಿಂದ ಉಬ್ಬಿತು. ಭಾವೋದ್ರೇಕದ ಕಾರಣದಿಂದ ಕಷ್ಟದ ಸಂಪಾದನೆಯ ನೂರು ರೂಪಾಯಿಗಳು ವ್ಯರ್ಥವಾದುದಕ್ಕಾಗಿ ಅವಳಿಗೆ ಅವರ್ಣನೀಯ ದುಃಖವಾಗಿದ್ದಿತು. ಆದರೆ ಮರುಕ್ಷಣದಲ್ಲಿ ಮಾಧವ ತನ್ನ ಬಾಹುಪಾಶದಿಂದ ಬಿಗಿದು ಆಲಿಂಗಿಸಿ ಅವಳ ಚೆಂದುಟಿಗಳನ್ನು ಪುನಃ ಪುನಃ ಮುತ್ತಿಡುತಿದ್ದಾಗ ಅವಳು ಆ ಬಹುಮಾನದ ನಷ್ಟವನ್ನು ಮಾತ್ರವಲ್ಲ ತನ್ನನ್ನು ತಾನೇ ಮರೆತುಬಿಟ್ಟಳು. 'ಮಾಲತಿ! ಹಣದ ಸುಖವು ಆಲಿಂಗನದ ಈ ಸ್ವರ್ಗೀಯ ಸುಖಕ್ಕಿಂತಲೂ ಹೆಚ್ಚಿನದಾಗಿದೆಯೇ? ಪ್ರೇಮಪೂರ್ಣ ದಂಪತಿಗಳ ಪರಸ್ಪರ ಚುಂಬನಕ್ಕಿಂತ ಉತ್ಕೃಷ್ಟವಾದ ಬಹುಮಾನವಿದೆಯೆ?' ಎಂದು ಮಾಧವ ಹೇಳುತಿದ್ದ ಹಾಗೆ ಅವಳು ಅವನ ಗಾಢ ಆಲಿಂಗನದಿಂದ ಸ್ವಲ್ಪ ಬಿಡಿಸಿಕೊಂಡು ಅವನನ್ನೇ ನೋಡತೊಡಗಿದಳು. ಅವಳ ಕಣ್ಣುಗಳಲ್ಲಿ ಕೃತಜ್ಞತಾಭಾವವು ಹೊರಸೂಸುತ್ತಲಿದ್ದಿತು.

# ಜಿಲ್ಲಾ ಸಮಾಚಾರ



## ಮಂಗಳೂರು

**ವಿಕ್ಟೋರಿಯಾ ಜುಬಿಲಿ ವಿದ್ಯಾರ್ಥಿವೇತನ**-ಸಿವಿಲ್, ಮ್ಯುನ್ಸಿಪಲ್, ಇಲೆಕ್ಟ್ರಿಕಲ್, ಮೆಕೆನಿಕಲ್, ಮೆರಿನ್ ವ ಸೆನಿಟರಿ ಇಂಜಿನಿಯರಿಂಗ್, ಫೊರೆಸ್ಟರಿ, ಕೃಷಿ, ಮೈನಿಂಗ್ ಮತ್ತು ಮೆಟಲರ್ಜಿಗಳಲ್ಲಿಯ ಯಾವುದನ್ನಾದರೂ ಕಲಿಯಲೆಳಸುವ ಬ್ರಾಹ್ಮಣ ವಿದ್ಯಾರ್ಥಿಯೊಬ್ಬನಿಗೆ, ತಿಂಗಳಿಗೆ ೧೫ರೂಪಾಯಿಗಳಂತೆ ೫ ವರ್ಷಗಳ ತನಕ, ಈ ವಿದ್ಯಾರ್ಥಿವೇತನವು ಕೊಡಲಾಗುವುದು. ವೇತನಕ್ಕೆ ಅರ್ಹರಾದವರ ಚುನಾವಣೆಗಾಗಿ ಮಂಗಳೂರಿನ ಗವರ್ನಮೆಂಟ್ ಕಾಲೇಜಿನಲ್ಲಿ ೧೯೪೦ನೇ ಜೂನ್ ತಾ ೨೪ನೇ ಸೋಮವಾರ ಬೆಳಿಗ್ಗೆ ೧೦ಘಂಟೆಗೆ ಪರೀಕ್ಷೆಯೊಂದು ನಡೆಯಲಿದೆ. ಕಡಿಮೆಯೆಂದರೆ ಮದ್ರಾಸ್ ಮೆಟ್ರಿಕ್ ಪಾಸಾಗಿದ್ದು, ೧೬ರಿಂದ ೨೧ರ ಒಳಗಿನ ಪ್ರಾಯದ ವಿದ್ಯಾರ್ಥಿ ಹಾಗೂ ೨೪ಕ್ಕೆ ಮೀರಿರದ ಬಿ ಎ. ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಬಹುದಾದರೂ, ಬಿ.ಎ ಗಳಿಗೆ ಮೊದಲ ಸ್ಥಾನ ದೊರೆವುದು. ಅರ್ಜಿದಾರರು ದೇಹದಾರ್ಢ್ಯತೆ, ಗುಣ, ಪ್ರಾಯಗಳಬಗ್ಗೆ ಸರ್ಟಿಫಿಕೇಟು ಹಾಜರು ಪಡಿಸಬೇಕು ನಿಯುಕ್ತ ಅರ್ಜಿಫಾರ್ಮಿನಲ್ಲಿ ಬರೆಯಲ್ಪಟ್ಟ ಅರ್ಜಿಗಳು, ಜೂನ್ ೧೫ರೊಳಗೆ ಜಿಲ್ಲಾ ಜಡ್ಜರ ಕೋರ್ಟಿಗೆ ಕಳುಹಲ್ಪಡಬೇಕು. ನಿಯುಕ್ತ ಅರ್ಜಿಫಾರ್ಮುಗಳು ಮುಂತಾದುವನ್ನು ಕೋರ್ಟು ಇರುವ ದಿನಗಳಲ್ಲಿ, ಜಿಲ್ಲಾ ಜಡ್ಜರ ಆಫೀಸಿನಿಂದ ೧ಆಣೆ ಮತ್ತು ೨ಆಣೆ ತೆತ್ತು ಪಡೆಯಬಹುದು.— ಎಂದು ಜಿಲ್ಲಾ ಜಡ್ಜರೂ, ವಿಕ್ಟೋರಿಯಾ ಜುಬಿಲಿ ವಿದ್ಯಾರ್ಥಿವೇತನ ಫಂಡಿನ ಅಧ್ಯಕ್ಷರೂ ಆದ ಶ್ರೀ ಆರ್ ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು ತಿಳಿಸುತ್ತಾರೆ

**ಹಿಂದುಸ್ತಾನ ಸ್ಕೌಟ್ ದಳ**:— ಇದರ ಕಾರ್ಯಕಾರಿ ಮಂಡಳಿಯ ಸಭೆಯೊಂದು ಕಳೆದ ತಾ. ೧೨ರಲ್ಲಿ, ಥಿಯಾಸಫಿಕಲ್ ಲಾಜಿನಲ್ಲಿ ಶ್ರೀ. ಕಾರ್ಕಳ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಕೂಡಿತು. ಇದೇ ತಿಂಗಳ ತಾ. ೩೧ರಲ್ಲಿ ಮದ್ರಾಸಿನಲ್ಲಿ ನಡೆಯಲಿರುವ ಪ್ರಾಂತಿಕ ಹಿಂದುಸ್ತಾನ ಸ್ಕೌಟ್ ಸಮಿತಿಯ ಮಹಾಸಭೆಗೆ ಶ್ರೀ. ಎಂ. ಎಸ್. ಏಕಾಂಬರರಾಯರನ್ನು ಪ್ರತಿನಿಧಿಯಾಗಿ ಆರಿಸಲಾಯಿತು. 'ಫ್ಲೋಕ್' ನಾಯಕರಿಗಾಗಿ, ಎಪ್ರಿಲ್ ತಾರೀಕು ೧ರಿಂದ ೫ರ ತನಕ ಸ್ಥಳೀಯ ಬೆಸೆಂಟ್ ಹುಡುಗಿಯರ ಶಾಲೆಯಲ್ಲೂ, ತಾ. ೭ರಿಂದ ೧೧ರ ತನಕ 'ಕಬ್' ಮಾಸ್ತರರಿಗಾಗಿ ಮಂಜೇಶ್ವರದಲ್ಲೂ, ತರಬೇತಿ ಕೇಂದ್ರಗಳನ್ನು ನಡೆಸಬೇಕೆಂದಾಯಿತು.

**ಮೊಂಟಿಸೋರಿ ಪದ್ಧತಿ**:— ಬರುವ ತಾ. ೭-೪-೪೦ ಆದಿತ್ಯವಾರ ಅಪರಾಹ್ನ ಮೂರು ಗಂಟೆಗೆ ದ ಕ ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ ಶ್ರೀ ವಿದ್ವಾನ್ ಎಚ್. ರಾಮರಾವ್ ಬಿ.ಎ.ಯಲ್ ಟಿ ಇವರು ಮೊಂಟಿಸೋರಿ ಶಿಕ್ಷಣ ಪದ್ಧತಿಯ ಕುರಿತು, ಶ್ರೀ ಎಸ್ ಸಿ ಪ್ರೇಂಕ್ ಬಿ ಎ ಇವರು ಶಾರೀರಿಕ ವ್ಯಾಯಾಮದ ಕುರಿತು ಭಾಷಣ ಮಾಡಲಿರುವರು ಜಿಲ್ಲಾ ಬೋರ್ಡು ಪ್ರೆಸಿಡೆಂಟ ಡಾ| ವಿಟ್ಠಲ ಶೆಟ್ರು ಅಧ್ಯಕ್ಷತೆ ವಹಿಸಲು ಒಪ್ಪಿರುವರು ಸರ್ವರಿಗೂ ಸ್ವಾಗತವಿದೆ

**ಬಾಲಮಾರುತಿ ವ್ಯಾಯಾಮ ಮಂಡಲ**:— ಮೊದಲು ಪ್ರಕಟಿಸಲಾದಂತೆ, ವ್ಯಾಯಾಮ ಶಿಕ್ಷಣ ಶಿಬಿರದ ಪ್ರವೇಶ ದಿನವು ಮಾರ್ಚಿ ೩೧ರ ಒಳಗೆ ಎಂದಿರುವುದನ್ನು ಹಲವು ಜನರ ಅಪೇಕ್ಷೆ ಮೇರೆಗೆ, ಎಪ್ರಿಲ್ ೮ರ ವರೆಗೆ ಮುಂದುವರಿಸಲಾಗಿದೆಯೆಂದು ಮಂಡಲದ ಅಧಿಕಾರಿಗಳು ತಿಳಿಸುತ್ತಾರೆ

## ಪುತ್ತೂರು

**ಕುಮಾರ ಪರ್ವತ ಆರೋಹಣ**

ಕುಮಾರ ಪರ್ವತವು ಸಮುದ್ರ ಮಟ್ಟದಿಂದ ಸುಮಾರು ೪೦೦೦ ಅಡಿ ಎತ್ತರದಲ್ಲಿದೆ. ಪರ್ವತದ ಅಗ್ರಭಾಗವು ಸುಬ್ರಹ್ಮಣ್ಯ ದೇವಸ್ಥಾನದಿಂದ ಸುಮಾರು ೧೨ ಮೈಲು ದೂರದಲ್ಲಿದೆ ಮಾರ್ಗವಿಲ್ಲದ ಗೊಂಡಾರಣ್ಯದಲ್ಲಿಯೆ ಸಂಚರಿಸಬೇಕಾಗುವುದು. ಈ ರೀತಿ ಪ್ರಸಿದ್ಧವಾದ ಕುಮಾರ ಪರ್ವತಕ್ಕೆ ಅನೇಕ ಮಹನೀಯರು ಹೋಗಲು ನಿಶ್ಚಯಿಸಿ ಸರಕಾರದ ಅಧಿಕಾರಿಗಳೊಡನೆ ಸೂಚಿಸಿದ್ದರಿಂದ ಅದಕ್ಕೆ ಬೇಕಾಗುವ ವ್ಯವಸ್ಥೆಗಳನ್ನು ಸರಕಾರದ ಕಡೆಯಿಂದ ಮಾಡಿಸಿ ತಾ ೫-೪-೪೦ಕ್ಕೆ ಸುಬ್ರಹ್ಮಣ್ಯದಿಂದ ಒಂದು ಸಂಗಡವು ಹೊರಡುವುದಾಗಿ ತಿಳಿದು ಬರುತ್ತದೆ

**ಬೆಳ್ತಂಗಡಿ**:— ಬೆಳ್ತಂಗಡಿ ಲೋಕಲ್ ಫಂಡ್ ಆಸ್ಪತ್ರೆಗೆ ಹೊಂದಿಸಲಾದ ಹೆಂಗೆ ವಾರ್ಡಿನ ಶಂಕುಸ್ಥಾಪನೆಯನ್ನು, ನಮ್ಮ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ ಕೆ ವಿಠಲ ಶೆಟ್ಟರವರು, ಕಳೆದ ತಾ. ೨೦ರಲ್ಲಿ ನೆರವೇರಿಸಿದರು ಹೆಂಗೆ ವಾರ್ಡ್ ಫಂಡಿನ ಅಧ್ಯಕ್ಷರಾದ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಎಂ ಎಲ್. ಸಿ ಇವರು ಸ್ವಾಗತ ಭಾಷಣವನ್ನು ಮಾಡುತ್ತಾ, ಡಾ ಶೆಟ್ಟರು ಜಿಲ್ಲೆಗೆ ಮುಖ್ಯವಾಗಿ ಸಾರ್ವಜನಿಕರ ಸಹಕಾರದಿಂದ ಹೆಂಗೆ ವಾರ್ಡು ಸ್ಥಾಪಿಸುವ ಕಾರ್ಯದ ಮೂಲಕ ಹೇಗೆ ಮಹದುಪಕಾರ ಮಾಡಿದ್ದರೆಂಬುದನ್ನು ವಿವರಿಸಿದರು. ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ. ಎನ್ ಕೆ. ಬೀಡಿಯವರು ವಂದನಾರ್ಪಣೆ ನೆರವೇರಿಸಿದರು|

## ಕುಂದಾಪುರ

**ಕೊಂಕಣಿ ಭಾಷೋದ್ಧಾರ**:— ಹಾಂಗಾಚಾ ಕೊಂಕಣೀ ಭಾಷೋದ್ಧಾರಕ ಸಂಘಾಚಿ ವಾರ್ಷಿಕ ಸಭಾ ಜಾಲಿ ಫಾಲ್ಗುಣ ಶುದ್ಧ ಏಕಾದಶಿ ದಿವಸು ರಾತ್ರಿ ಶ್ರೀ ವೇಂಕಟರಮಣ ದೇವಸ್ಥಾನಾಂತು ಮೆಳ್ಳಿ

## ಕಾರ್ಕಳ

**ವರ್ಧಂತಿ ಉತ್ಸವ**:— ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆ ಮತ್ತು ಹಿಂದೂ ಬಾಲಿಕಾ ಪಾಠಶಾಲೆಯ ವರ್ಧಂತಿ ಉತ್ಸವವು ತಾ. ೨೩ ೩ ೪೦ರ ದಿನ ಇಲ್ಲಿಯ ಡಿಪ್ಟಿ ಇನ್ಸ್‌ಪೆಕ್ಟರರಾದ ಶ್ರೀ ಬಿ ವಿ. ರಮಣ ಬಿ ಎ ಯಲ್ ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು

## ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಬೇಕು

### ಡಾ| ವಿಟ್ಠಲ ಶೆಟ್ರ ಭಾಷಣ

ಬೈಲೂರು:— ಬೈಲೂರು ಬೋ| ಹೈ| ಶಾಲೆ ಮತ್ತು ನೀರೆ ಬ್ರಾಂಚ್ ಶಾಲೆಗಳ ವರ್ಧಂತ್ಯುತ್ಸವವು ತಾ ೨೫ರಂದು ಜಿ| ಬೋ| ಪ್ರೆಸಿಡೆಂಟರಾದ ಡಾ| ಕೆ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ನೆರವೇರಿತು. ಸ್ಥಳೀಕ ಕಾಂಗ್ರೆಸು ಕಮಿಟಿಯವರು ಕಾಂಗ್ರೆಸ ಆಫೀಸಿನಲ್ಲಿ ಜಿ| ಬೋ| ಪ್ರೆಸಿಡೆಂಟರಿಗೆ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಅತಿಥಿಗಳಾಗಿ ಆಮಂತ್ರಿತರಾಗಿದ್ದ ಶ್ರೀ. ಎ ಬಿ. ಶೆಟ್ರು ಸಾಕ್ಷರ ಪ್ರಚಾರದ ಕುರಿತು ಚಿಕ್ಕ ಭಾಷಣವೊಂದನ್ನಿತ್ತರು ವರ್ಧಂತ್ಯುತ್ಸವದ ಸಂದರ್ಭದಲ್ಲಿ ಊರವರ ಪರವಾಗಿ ಸ್ಥಳೀಕ ಕಾಂ ಕಮಿಟಿಯ ಅಧ್ಯಕ್ಷರು ಪ್ರೆಸಿಡೆಂಟರಿಗೆ ಮಾನಪತ್ರವೊಂದನ್ನರ್ಪಿಸಿದರು. ಎರಡು ಶಾಲೆಗಳ ಹೆಡ್ ಮಾಸ್ತರರೂ ತಮ್ಮ ಶಾಲಾ ವರದಿಗಳನ್ನು ಓದಿದರು. ಶಾಲಾ ಸ್ಥಿತಿ ವಾಚನವಾದ ಮೇಲೆ, ಇನಾಮು ಹಂಚುವಿಕೆಯಾದನಂತರ ಪ್ರೆಸಿಡೆಂಟ್ ಡಾ| ಶೆಟ್ಟರು ತಮ್ಮ ಅಮೋಘ ಭಾಷಣದಲ್ಲಿ ನಮ್ಮ ಜಿಲ್ಲೆಯಲ್ಲಿ ೫೪೪ ಎಲಿಮೆಂಟರಿ ಶಾಲೆಗಳಿರುವವೆಂದೂ ಅವುಗಳಲ್ಲಿ ೪೩ ಹೈ| ಎ| ಶಾಲೆಗಳೆಂದೂ, ಜಿಲ್ಲಾ ಬೋರ್ಡು ವರ್ಷಕ್ಕೆ ೫ ಲಕ್ಷ ರೂಪಾಯಿಗಳನ್ನು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ವ್ಯಯಿಸುತ್ತಿದೆಯೆಂದೂ, ಪಾಶ್ಚಾತ್ಯ ದೇಶಗಳಲ್ಲಿ ೧೪ ವರ್ಷದ ವರೆಗೆ ಮಕ್ಕಳ ವಿದ್ಯಾಭ್ಯಾಸವು ಕಡ್ಡಾಯವಾಗಿರುವದೆಂದೂ, ನಮ್ಮ ಮದ್ರಾಸು ಪ್ರಾಂತದಲ್ಲಿ ಹುಡುಗರಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೊಟ್ಟಲ್ಲಿ ಸರಕಾರಕ್ಕೆ ೩|| ಕೋಟಿ ರೂಪಾಯಿಗಳಷ್ಟು ಮಾತ್ರ ಹೆಚ್ಚಿನ ಖರ್ಚು ಆಗುವುದೆಂದೂ, ಹುಡುಗಿಯರಿಗೂ ಕಡ್ಡಾಯ ಶಿಕ್ಷಣವಿತ್ತಲ್ಲಿ ಅದರ ಮೂರು ಪಾಲಿನಷ್ಟು ಖರ್ಚಾಗುವುದೆಂದೂ, ಕಡ್ಡಾಯ ಪ್ರಾಥಮಿಕ ಶಿಕ್ಷಣದ ವಿನಹ ರಾಷ್ಟ್ರದ ಏಳಿಗೆಯಾಗಲಾರದೆಂದೂ ಹೇಳಿದರು. ಪ್ರಕೃತ ಬೈಲೂರು ಹೈ| ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿರುವುದರಿಂದ ಊರವರು ಹೆಚ್ಚು ಸಂಖ್ಯೆಯಿಂದ ಮಕ್ಕಳನ್ನು ಕಳುಹಿಸಬೇಕೆಂದೂ, ಈ ಶಾಲಾ ಕಟ್ಟೋಣವನ್ನು ಜಿ| ಬೋ|ಗೆ ದಾನವಾಗಿತ್ತಲ್ಲಿ ನೀರೆ ಬ್ರಾಂಚ್ ಶಾಲೆಯ ಸೇರಿಸುವಿಕೆಗಾಗಿ ಈ ಶಾಲಾ ಕಟ್ಟೋಣವನ್ನು ಬೋರ್ಡಿನ ಮೂಲಕ ವಿಸ್ತರಿಸುವರೆ ತಾನು ಯತ್ನಿಸುವೆನೆಂದೂ ಹೇಳಿದರು. ಆ ಮೇಲೆ ವಿವಿಧ ವಿನೋದಾವಳಿಗಳಿದ್ದವು.

ಸಾವಕಾರ ಶ್ರೀನಿವಾಸರಂಗಪ್ಪೈ
[ ಸ್ಥಾಪನೆ: ಕ್ರಿ ಶ 1858 ]
ಉಜ್ವಲ ಕಾಂತಿಯ
ವಸ್ತ್ರಗಳಿಗೆ
ನೂಲು ಮತ್ತು ಕೈಮಗ್ಗದ ವಸ್ತುಗಳ
ಖಾತ್ರಿ ವ್ಯಾಪಾರಕ್ಕೆ
ಸಾವಕಾರ ಮಹಾಲ್, ಮಂಗಳೂರು.

# ಜರ್ಮನಿ-ಇಟಲಿ-ರಶ್ಯಗಳು ಒಂದಾಗುವವೆ ★ ಲೋಕವಾರ್ತೆ



## ಫಿನ್‌ಲೆಂಡಿನಲ್ಲಿ ರಶ್ಯದ ಪ್ರಯೋಗ

## ರುಮೇನಿಯದ ಮೇಲೆ ಜರ್ಮನಿಯ ದೃಷ್ಟಿ

## ಬ್ರಿಟಿಷ್ ಮಂತ್ರಿಮಂಡಲವು ಬದಲಾಗುವುದೆ?

### ಹೆಂಗೋವನ್ನು ಸ್ವಾಧೀನ ಪಡಿಸಿದರು

**ಪಟ್ಟಣಿಗರನ್ನು ಹೊರ ಹಾಕಿದರು.**

ರಶ್ಯವು ಫಿನ್ಲೆಂಡಿನ ಹೆಂಗೋ ಬಂದರವನ್ನು ಸ್ವಾಧೀನಪಡಿಸಿ ಸುಮಾರು ೨೦೦ ಮಂದಿ ಪಟ್ಟಣಿಗರನ್ನು ಹೊರ ಹಾಕಿರುವುದು. ಯುದ್ಧ ಕಾಲದಲ್ಲಿ ಈ ಬಂದರಕ್ಕೆ ೭೫ ಸಲ ವಿಮಾನದಾಳಿಯಾಗಿದೆ.

**ಯುದ್ಧದಲ್ಲಿ ಫಿನ್ನರಿಗಾದ ನಷ್ಟ**

೧೫,೦೦೦ ಗಂಡಸರು, ೯,೦೦೦ ವಿಧವೆ ಹೆಂಗುಸರು, ೨೫,೦೦೦ ಅನಾಥರಾದ ಮಕ್ಕಳು, ಸಾಮಾನ್ಯ ೫,೦೦೦ ಮನೆಗಳು ರಶ್ಯನರಿಂದ ಫಿನ್ಲೆಂಡಿಗೆ ಕಳೆದ ಯುದ್ಧದಲ್ಲಿ ನಷ್ಟವಾಗಿದೆ. ಅರ್ಧ ಮಿಲಿಯ ಜನರು ಉಳಕೊಳ್ಳಲು ವಾಸಭೂಮಿಯಿಲ್ಲದವರಾಗಿ ಅಂಡಲೆಯುತ್ತಿದ್ದಾರೆ.

**ಹಿಟ್ಲರನ ಭಾಷಣ**

ಬೇಗನೇ ಹಿಟ್ಲರನು ಒಂದು ರಾಜಕೀಯ ಭಾಷಣ ಮಾಡಲಿರುವನೆಂದು ತಿಳಿದಿದೆ. ಅದರಲ್ಲಿ ಜರ್ಮನಿ ಇಟಲಿ ರಶ್ಯ ಮತ್ತು ಬಾಲ್ಟಿಕ್ ರಾಷ್ಟ್ರಗಳ ಕುರಿತು ಮಾತಾಡಲಿರುವನೆಂದೂ ತಿಳಿದಿದೆ.

**ಕಡ್ಡಾಯ ಸೈನ್ಯ ಶಿಕ್ಷಣ**

ಮೊಂಟಿಕೋದಲ್ಲಿ ಬರುವ ವರ್ಷದಿಂದ ಕಡ್ಡಾಯ ಸೈನ್ಯ ಶಿಕ್ಷಣವು ಕೊಡಲ್ಪಡುವ ನಿಶ್ಚಯವಾಗಿದೆ.

**ಜರ್ಮನ್ ಹಡಗು ಮುಳುಗಿತು.**

ಉತ್ತರ ಸಮುದ್ರದಲ್ಲಿ ಜರ್ಮನಿಯ ಎಡಂಡ್ ಹುಸಂಕ (೨,೧೮೦ ಟನ್) ಹಡಗವೊಂದು ಮುಳುಗಿಸಲ್ಪಟ್ಟಿತು.

**ಬ್ರಿಟಿಷ್ ಮಂತ್ರಿಮಂಡಳದಲ್ಲಿ ಬದಲಾವಣೆಯೆ?**

ಬ್ರಿಟಿಷ್ ಮಂತ್ರಿಮಂಡಳದಲ್ಲಿ ಬದಲಾವಣೆಯುಂಟಾಗಬಹುದೆಂದು ಈಗ ಕೆಲದಿನಗಳಿಂದ ಬ್ರಿಟಿಷ್ ಪತ್ರಿಕೆಗಳು ಸೂಚಿಸುತ್ತವೆ.

**ಸಮ್ನರ್‌ವೆಲ್ಸರ ಪ್ರಯಾಣದ ಉದ್ದೇಶ**

ಅದರ ಕುರಿತು ಬೇಗನೇ ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರು ಒಂದು ಪ್ರಕಟಣೆ ಹೊರಡಿಸುವರಾಗಿ ತಿಳಿದಿದೆ.

**ಇಟಲಿ ಹಡಗವನ್ನು ಬ್ರಿಟಿಷರು ಹುಡುಕಿದರು**

ಸುಳ್ಳು ಪಾಸು ಪೋರ್ಟಿನಿಂದ ಕೆಲವು ಶತ್ರು ರಾಷ್ಟ್ರದವರು ಯಾತ್ರೆ ಮಾಡುತ್ತಿರುವರೆಂದು ಸಂದೇಹಗೊಂಡು ಮಿ| ಸಮ್ನರ್‌ವೆಲ್ಸರು ಅಮೇರಿಕಕ್ಕೆ ತೆರಳುತ್ತಿರುವ ಕೊಂಟೆಡಿಸೇವಿಯಾ ಎಂಬ ಹಡಗವನ್ನು ಜಿಬ್ರಾಲ್ಟರಿನಲ್ಲಿ ತಡೆದು ಹದಿನೈದು ತಾಸುಗಳ ವಿಲಂಬವಾಗಿ ಹುಡುಕಲಾಗಿದೆ.

**ಜರ್ಮನ್ ವೈಮಾನಿಕನ ಶಿಕ್ಷೆಗಾಗಿ ನಾರ್ವೆ ಸರಕಾರದ ಹೇಳಿಕೆ**

ನಾರ್ವೆಯ ವ್ಯಾಪಾರ ಹಡಗದ ಮೇಲೆ ಬಾಂಬೆಸೆದ ಜರ್ಮನ್ ವೈಮಾನಿಕನಿಗೆ ಯೋಗ್ಯ ಶಿಕ್ಷೆ ಕೊಡಬೇಕೆಂದು ಜರ್ಮನಿಗೆ ನಾರ್ವೆ ಸರಕಾರವು ತಿಳಿಸಿದೆ.

### ಸರ್ವಾಧಿಕಾರಿಯ ಭ್ರಾಂತಿ!

ಫಿನ್ಲೆಂಡ್ ಯುದ್ಧವು ಮುಗಿಯಿತು. ಅದರ ಪರಿಣಾಮವಾಗಿ ಅದು ಸೋವಿಯಟ ರಶ್ಯದ ಒಂದಂಗವಾದಂತೆಯೇ ಸರಿ! ಇನ್ನು ರಶ್ಯದ ದೃಷ್ಟಿ ಬಾಲ್ಕನ ರಾಷ್ಟ್ರಗಳ ಮೇಲೆ ಬೀಳುವದೆಂಬ ವದಂತಿ ಇದೆ. ಇದು ಇಟಲಿಯನ್ನು ಕಂಗೆಡುವಂತೆ ಮಾಡಿದೆ. ಯಾಕೆಂದರೆ ಬಾಲ್ಕನು ರಾಷ್ಟ್ರಗಳು ರಶ್ಯದ ಛತ್ರಛಾಯೆಯಲ್ಲಿ ಬಂದ ಸಂದರ್ಭದಲ್ಲಿ, ಆ ರಾಷ್ಟ್ರಗಳಲ್ಲಿರುವ ಇಟಲಿಯ ಹೇರಳ ಹಿತಾಸಕ್ತಿಗಳಿಗೆ ಬಹಳ ವಿಘ್ನಗಳು ಬರುವವು.

ಆದುದರಿಂದಲೇ ಪೂರ್ವ ರಾಷ್ಟ್ರಗಳಲ್ಲಿ ಈ ಸೇನಾ ಸಂಗ್ರಹವಿದೆ. ಶೀಘ್ರದಲ್ಲಿ ಇಟಲಿಯು ತನ್ನ ನಿರ್ಧಾರವನ್ನು ಮಾಡಿಕೊಳ್ಳಬೇಕಾಗಿರುವದರಿಂದ ಆ ದೇಶದಲ್ಲಿ ಬಹಳ ಗೊಂದಲವು ಕಂಡು ಬಂದಿದೆ. ಎರಡು ಕಣಗಳಲ್ಲಿ ಹೋರಾಡುವ ಎರಡು ಪಕ್ಷದವರು ಅದನ್ನು ತಮ್ಮ ಕಡೆಗೆ ಬರಮಾಡಿಕೊಳ್ಳುವ ಮಹಾ ಪ್ರಯತ್ನ ಮಾಡಿದ್ದಾರೆ. ಹಿಟ್ಲರನು ಪೊನ್ನೆ ತಾನೆ ಮುಸಲೋನಿಯ ಬೇಟಿ ತೆಗೆದು ಕೊಂಡಿರುವದೂ, ಬ್ರಿಟನು ಅವನ ಕಡೆಗೆ ಸ್ನೇಹದ ಕೈ ನೀಡಿರುವದೂ ಇದಕ್ಕಾಗಿಯೇ ಎಂದು ಊಹೆ ಇದೆ. ಆದುದರಿಂದ ಫಿನ್ಲೆಂಡ ಯುದ್ಧ ಮುಗಿದುದರಿಂದ ಯೂರೋಪಿನ ಯುದ್ಧವು ಮುಗಿಯುವ ಬದಲಿಗೆ ಅದು ಇನ್ನೂ ಪ್ರಚಂಡ ಸ್ವರೂಪವನ್ನು ತಾಳುವ ದಿನಗಳು ಬಂದಿವೆ.

ಇದೇ ಎಪ್ರಿಲ್ ತಿಂಗಳಲ್ಲಿ ಹಿಟ್ಲರ ಹುಟ್ಟಿದ ದಿನ ಬರುತ್ತದೆ. ಆ ದಿನ ಅವನು

ಆದರೆ ಇಟಲಿಯನ್ನು ಕಂಗೆಡಿಸಿರುವ ಇದಕ್ಕೂ ಮಹತ್ವದ ಇನ್ನೊಂದು ವಿಷಯವಿದೆ. ಪೂರ್ವ ರಾಷ್ಟ್ರಗಳಲ್ಲಿ ಮಿತ್ರಪಕ್ಷದವರು ಹೇರಳ ಸೇನೆಯನ್ನು ಸಂಗ್ರಹಿಸಿಟ್ಟಿರುವವು. ಆದುದರಿಂದ ಇಲ್ಲಿಯೂ ಒಂದು ಯುದ್ಧರಂಗವು ಏರ್ಪಟ್ಟಿದೆ. ಯೂರೋಪಿನ ಯುದ್ಧದ ಸ್ವರೂಪವು ಬಹು ಭಯಾನಕವಾಗುವದು. ಈಗ ಯೂರೋಪದಲ್ಲಿ ನಡೆಯುತ್ತಿರುವದು ಯುದ್ಧದ ಬರೀ ಅಭಿನಯ ಮಾತ್ರ! ಮುಂದೆ ನಿಜಕ್ಕೂ ಒಂದು ಭಯಂಕರ ಯುದ್ಧವು ಆಗುವದು. ಆಗ ಇಟಲಿ ಏನು ಮಾಡಬೇಕು? ಏನು ಮಾಡಕೂಡದು? ಇದರ ನಿಷ್ಕರ್ಷೆ ಮಾಡಲಿಕ್ಕೆ ಅದಕ್ಕೆ ದಾರಿಯೇ ತೋರದಾಗಿದೆ. ಭಯಂಕರ ಯುದ್ಧವು ಆಗುವದಾಗಿದ್ದರೆ, ಅದಕ್ಕೆ ಇನ್ನು ಹೆಚ್ಚು ಸಮಯ ಕಳೆಯುವದಿಲ್ಲ. ರಶ್ಯವು ಯುದ್ಧದ ಆಯಾಸದಿಂದ ಚೇತರಿಸಿಕೊಳ್ಳುವ ಮೊದಲೇ ಮಿತ್ರ ಪಕ್ಷದವರು ಅಂಥ ಯುದ್ಧವನ್ನು ಆರಂಭಿಸಬೇಕು.

ತನ್ನನ್ನು ಇಂಗ್ಲಾಂಡಿನ ಅರಸು, ಜರ್ಮನಿಯ ಸಮ್ರಾಟ, ಆಸ್ಟ್ರಿಯ ಹಂಗೇರಿಗಳ ಸಮ್ರಾಟ, ಪೋಲಂಡದ ಅರಸು ಎಂದು ಮೊದಲಾಗಿ ಸಾರಿ, ತನ್ನ ಜನ್ಮ ದಿನವನ್ನು ಆಚರಿಸಬಹುದಾಗಿಯೂ, ಎಪ್ರಿಲ್ ೨೦ನೇ ತಾರೀಕಿನ ದಿನ ಲಂಡನನ್ನು ನುಗ್ಗುವ ಮಹಾ ಸಿದ್ಧತೆಗಳನ್ನು ಮಾಡಿದ್ದಾನೆಂದಾಗಿಯೂ ಜರ್ಮನಿಯಲ್ಲಿ ಕೋಲಾಹಲವೆದ್ದಿದೆಯಾಗಿ ಡೈಲಿ ಹೆರಾಲ್ಡ ಪತ್ರಿಕೆಯ ಒಬ್ಬ ಸುದ್ದಿಗಾರನು ಆ ಪತ್ರಿಕೆಗೆ ಸುದ್ದಿ ಕಳುಹಿಸಿದ್ದಾನೆ. ಹೇಗಿದ್ದರೂ ಎಪ್ರಿಲ್ ಮೇ—ಈ ಎರಡು ತಿಂಗಳುಗಳಲ್ಲಿ ಯೂರೋಪ, ಅಮೇರಿಕ, ಇಂಡಿಯ, ಚೀನ, ಇವೇ ಮೊದಲಾದ ಕಡೆಗಳಲ್ಲಿ ಅಪೂರ್ವ ಪರಿವರ್ತನಗಳಾಗಲಿವೆ!

**ಕಾಂಗ್ರೆಸ್ ವರ್ಕಿಂಗ್ ಕಮಿಟಿ**

ಹೊಸ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಇದೇ ಎಪ್ರಿಲಿನ ಎರಡನೇ ವಾರದ ಸುಮಾರಿಗೆ ನೆರೆಯಲಿದೆ.

**ಸಿಂಧದಲ್ಲಿ ಹೊಸ ಮಂತ್ರಿ ಮಂಡಲ**

ಸಿಂಧ್ ಪ್ರಾಂತ್ಯದ ಹೊಸ ಮಂತ್ರಿ ಮಂಡಲವು, ಪ್ರಧಾನರಾದ ಮಿರ್ ಬಂದೇ ಅಲಿಯವರಿಂದ ನಿರ್ಮಾಣವಾಗಿದೆ. ಆದರೆ ಈ ಮಂತ್ರಿ ಮಂಡಲದ ಮೇಲೆ ವಿಶ್ವಾಸ ಸಾಲದೆಂಬ ಪ್ರತ್ಯೇಕ ಠರಾವುಗಳು ಅಲ್ಲಿ ಮುಂದೆ ಬರಲಿವೆ. ಈ ಸಂದರ್ಭದಲ್ಲಿ ಅಲ್ಲಿನ ಗವರ್ನರರು, "ಯುದ್ಧದ ಈ ಸಮಯದಲ್ಲಿ ಇಲ್ಲಿ ಒಳಜಗಳವನ್ನು ಕಟ್ಟಿಕೊಳ್ಳಬೇಡಿ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿರಿ" ಎಂದು ಉಪದೇಶಿಸಿದ್ದಾರೆ.

**ಹಿಂದೂ ಮಹಾಸಭೆ**

ತಮಿಳು ನಾಡಿನ ಪ್ರಥಮ ಪ್ರಾಂತಿಕ ಹಿಂದೂ ಮಹಾಸಭೆಯ ಕಾನ್ಫರೆನ್ಸಿನ ಅಧ್ಯಕ್ಷರಾದ ಶ್ರೀ. ವಿನಾಯಕ ದಾಮೋದರ ಸಾವರ್ಕಾರರು, ಸೇಲಮಿನ ಮುನಿಸಿಪಲ್ ಕೌನ್ಸಿಲು ಕೊಟ್ಟ ಮಾನಪತ್ರವನ್ನು ಸ್ವೀಕರಿಸಿ, 'ಹಿಂದೀಯರಿಗೆ ಮಿಲಿಟರಿ ಶಿಕ್ಷಣವು ಅಗತ್ಯವೆಂದು ಪ್ರಸ್ತಾವಿಸಿದರು. ಅವರು ಸೇಲಮಿನ ಹಿಂದೂ ಮಹಾಸಭೆ ಅಧಿವೇಶನದಲ್ಲಿ, ಹಿಂದೂ ಸಮಾಜದ ಸಂಘಟನೆಯೇ ಈ ಮಹಾಸಭೆಯ ಉದ್ದೇಶವೆಂದೂ, ಸಂಪೂರ್ಣ ಸ್ವಾತಂತ್ರ್ಯವೇ ಅದರ ಗುರಿ ಎಂದೂ ಹಿಂದೂಗಳು ಇಂಡಿಯವನ್ನು ಎರಡು ಪ್ರತ್ಯೇಕ ಭಾಗಗಳನ್ನಾಗಿ ಮಾಡಲು ಬಿಡರೆಂದೂ ಘೋಷಿಸಿದರು.

**ಮುಸ್ಲಿಂ ಲೀಗಿನ ಸಭೆ**

ಮುಸ್ಲಿಂ ಲೀಗ್ ಕಾನ್ಫರೆನ್ಸಿನ ೨೭ನೇ ಅಧಿವೇಶನದ ಅಧ್ಯಕ್ಷರಾದ ಶ್ರೀ. ಜಿನ್ನಾ ಲಾಹೋರಿಗೆ ದಯಮಾಡಿಸಿದರು. ಕಾನ್ಫರೆನ್ಸ್ ಯಥಾಕಾಲದಲ್ಲಿ ಆರಂಭವಾಗಿ, ಸ್ವಾಗತ ಸಮಿತಿಯ ಅಧ್ಯಕ್ಷ ನವಾಬ್ ಷಹಾನವಾಜ್ ಖಾನರು ಬಂದವರಿಗೆ ಸ್ವಾಗತ ಬಯಸುವುದರೊಂದಿಗೆ, "ಸರಕಾರವು ಫೆಡರಲ್ ಯೋಜನೆಯನ್ನು ಹಿಂದಿಕ್ಕುವಂತೆ ಮಾಡಿದುದು, ಮುಸ್ಲಿಂ ಲೀಗಿನ ಸಾಧನೆಯೇ" ಎಂದು ಹೆಗ್ಗಳಿಕೆ ಹೇಳಿಕೊಂಡರು.

ಶ್ರೀ ಜಿನ್ನಾರವರು, ಲಾಹೋರಲ್ಲಿ ಲೀಗ್ ಧ್ವಜಾರೋಹಣ ಮಾಡುತ್ತ, ಕಾಕ್ಸಾರರ ಪ್ರಕರಣದಲ್ಲಿ ಗಾಯಗೊಂಡ ಮೃತರಾದವರ ಬಗೆಗೆ ವಿಷಾದಿಸಿ, ನಾವೆಲ್ಲರೂ ಈ ಧ್ವಜದ ಅಡಿಯಲ್ಲಿ ಒಬ್ಬ ಮನುಷ್ಯನಂತೆ, ಒಂದೇ ಧ್ವನಿಯೊಡನೆ ನಿಲ್ಲಬೇಕು" ಎಂದರು.

ಮುಸ್ಲಿಂ ಲೀಗಿನ ೨೭ನೇ ವಾರ್ಷಿಕಾಧಿವೇಶನದಲ್ಲಿ ಶ್ರೀ. ಜಿನ್ನಾರವರು ತಮ್ಮ ಅಧ್ಯಕ್ಷ ಭಾಷಣ ಕೊಡುತ್ತ "ಇಂಡಿಯವನ್ನು ಮುಸ್ಲಿಂ ಇಂಡಿಯಾ, ಹಿಂದೂ ಇಂಡಿಯವೆಂದು ಎರಡಾಗಿ ವಿಭಾಗಿಸಿದರೆ ಈಗಿರುವ ಜಗಳ ರಗಳೆಗಳು ತಪ್ಪಿ, ಕ್ಷೇಮವಾಗುವುದು' ಎಂದು ಸೂಚಿಸಿದ್ದಾರೆ.

**ಲಾಹೋರಿನ ಕಾಕ್ಸಾರ ಚಳವಳಿ**

ಲಾಹೋರಿನಲ್ಲಿ ಕಾಕ್ಸಾರ ಜನಗಳ ಭಾರೀ ಗಲಭೆ. ಅಲ್ಲಿ ಈ ಜನದ ಒಂದು ಗುಂಪಿನವರು, ಮಿಲಿಟರಿಯ ರೀತಿಯಂತೆ ನಡೆದುಕೊಂಡು ಹೋಗ[illegible]ಲು, ಅವರು ಹಾಗೆ ಮಾಡಲಾಗದೆಂದು ಅಧಿಕಾರಿಗಳು ತಿಳಿಸಿದರೂ ಅವರು ಕೇಳದೆ, ೧೫೦—೨೦೦ ಮಂದಿ 'ಕಾಕ್ಸಾರರು ಹಾರೆಯ ಸಹಿತ ಪೋಲೀಸ್ ದಳದ ಮೇಲೇರಿ ಬಂದು, ಇಬ್ಬರು ಪೋಲೀಸರನ್ನು ಗಾಸಿಗೊಳಿಸಿ ಗಲಭೆಮಾಡಿದ ಕಾರಣ, ಪೋಲೀಸರು ಗುಂಡುಹಾರಿಸಬೇಕಾಯಿತೆಂದು ಪ್ರಕಟಣೆ. ಇದರಲ್ಲಿ ಇದುವರೆಗೆ

ಮಂಗಳೂರು ಲೇಡಿಸ್ ಕ್ಲಬ್ಬಿನಲ್ಲಿ ತಾ. ೨೫ರಂದು ಜರಗಿದ ಟೆನ್ನಿಸ್ ಟೂರ್ನಮೆಂಟಿನಲ್ಲಿ ವಿಜಯಿಗಳಾದವರು.

ಮಧ್ಯದಲ್ಲಿ ಇರುವವರು ಶ್ರೀಮತಿ ಆರ್. ಎಸ್. ಸುಬ್ರಮಣ್ಯಂ, ಅವರ ಎಡಗಡೆಯಲ್ಲಿ ನಿಂತವರು ಶ್ರೀಮತಿ ಕೆ. ಎಸ್. ಪೊನ್ನಪ್ಪ. ಬಲಗಡೆಯಲ್ಲಿ ನಿಂತವರು ಶ್ರೀಮತಿ ಅನುಸೂಯಾ ಕಾಮತ್

೨೧೭ ಮಂದಿಯ ಕೈದಾಗಿದೆ. ಅವರ ಮುಖಂಡನಾದ ೫೫ ವರ್ಷದ ಅಲ್ಲಮ ಇನಾಯತುಲ್ಲಾ ಖಾನ್ ಮಾಶ್ರಿಕ್ಕಿ— ಈತ ಹಿಂದೆ ಪೇಶಾವರ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದು, ೧೯೩೧ರಲ್ಲಿ ಈ ಕಾಕ್ಸಾರ್ ಸಂಘವನ್ನೂ ಚಳವಳವನ್ನೂ ಒಂದು ಪತ್ರಿಕೆಯನ್ನೂ ಸ್ಥಾಪಿಸಿದ್ದ— ಈತನನ್ನೂ ನಿರ್ಬಂಧದಲ್ಲಿಟ್ಟಿದ್ದಾರೆ.

**ರಾಮಗಡ ಖಾದಿ ಪ್ರದರ್ಶನ**

ಕಾಂಗ್ರೆಸಿನ ಖಾದಿ ಪ್ರದರ್ಶನವನ್ನು ನೋಡಲು ಬಂದವರ ಸಂಖ್ಯೆ ೪೦ ಸಾವಿರ. ಕಾಂಗ್ರೆಸಿನ ನಗರ, ಸಭಾಮಂಟಪ, ಪಡಿಬಿಡಾರ ಮೊದಲಾದುವುಗಳಿಗಾಗಿ ಅರ್ಥ ವೆಚ್ಚ ಸುಮಾರು



# ಜಿನ್ನಾ-ಸಾವರ್ಕರರ ವಿಚಿತ್ರ ಬೋಧನೆಗಳು

## ಕಾಕ್ಸಾರ ಚಳವಳಿಗಾರರ ಗಲಭೆ

## ಇಂದೋರು ಸಂಸ್ಥಾನದಲ್ಲಿ ಸುಧಾರಣೆ

## ಬೊಂಬಯಿಯಲ್ಲಿ ಪ್ರಬಲ ಮುಷ್ಕರ!

## ಜಿಲ್ಲಾ ಪ್ರಥಮ ಹರಿಜನ ಪರಿಷತ್ತು

೨॥ ಲಕ್ಷ ರೂಪಾಯಿ; ಮಹಾದ್ವಾರದಲ್ಲಿ ಜಮೆಯಾದ ಹಣ ಬರೀ ೪೦ ಸಾವಿರ; ಕಾಂಗ್ರೆಸ್ ವಾರದಲ್ಲಿ ಕಾಂಗ್ರೆಸ್ ನಗರವನ್ನು ಸಂದರ್ಶಿಸಿದ ಪ್ರೇಕ್ಷಕರ ಸಂಖ್ಯೆ ಸುಮಾರು ೨ಲಕ್ಷವೆಂದು ಪ್ರಕಟವಾಗಿದೆ.

### ರಾಮಗರದ ಸುದ್ದಿ

ರಾಮಗರ ಕಾಂಗ್ರೆಸ್ ನಗರವು ಈಗ ಖಾಲಿಯಾಗಿದೆ. ಡಾ। ರಾಜೇಂದ್ರರು ಆ ನಗರವನ್ನು ಬಿಚ್ಚಿಸುವ ಕೆಲಸ ನೋಡಿಕೊಳ್ಳುತ್ತಿದ್ದಾರೆ; ಸ್ವಾಗತ ಸಮಿತಿಯೂ ಸದ್ಯ ಅದಕ್ಕಾಗಿ ಅಲ್ಲೇ ಇದೆ. ಅವರಿಲ್ಲ ಬೇಗನೇ ಅಲ್ಲಿಂದ ಹೊರಡಬಹುದು.

### ವಿದೇಶದಲ್ಲಿ ಕಾಂಗ್ರೆಸು ಸುದ್ದಿ

ರಾಮಗರ ಕಾಂಗ್ರೆಸಿನ ಅಧಿವೇಶನದ ವಾರ್ತೆಗಳು ಬ್ರಿಟಿಷ್ ಪತ್ರಿಕೆಯಲ್ಲಿ ತಕ್ಕಂತೆ ಪ್ರಕಟವಾಗಿಲ್ಲ. "ರಾಮಗರದಲ್ಲಿ ಮೋಚಿಗಳ ಸುರಿದಾಟ" "ರಾಷ್ಟ್ರೀಯ ಮಹಾಸಭೆಯಲ್ಲಿ ನೆರೆ" "ಮಳೆಯಲ್ಲಿ ಕಾಂಗ್ರೆಸ್ ತೇಲಿ ಹೋಯಿತು" "ಬೋಸರೂ, ಸಿವಿಲ್ ಯುದ್ಧವೂ" ಎಂಬಿತ್ಯಾದಿ ಕ್ಷುಲ್ಲಕ ಶಿರೋನಾಮೆಗಳಿಂದ ವಾರ್ತೆಗಳು ಅವುಗಳಲ್ಲಿ ಪ್ರಕಟವಾಗಿದೆ. "ಟೈಮ್ಸ್" ಮತ್ತು "ಡೈಲಿ ಟೆಲಿಗ್ರಾಫ್" ಪತ್ರಿಕೆಗಳು ಬಹು ಚಿಕ್ಕ ವರದಿಗಳನ್ನು ಪ್ರಕಾಶಗೊಳಿಸಿವೆ "ಟೈಮ್ಸ್"ನಲ್ಲಿ ಮೌಲಾನಾ ಆಜಾದರ ಭಾಷಣ ೬ ಪಂಕ್ತಿಗಳೊಳಗೆ ಮುಗಿದಿದೆ. ಪ್ರಾಯಶಃ ಶಾಸನ ಭಂಗದ—ಠರಾವು ಕಾಂಗ್ರೆಸಿನಲ್ಲಿ ಮಂಜೂರಾಗದಿದ್ದರೆ, ಈ ಪತ್ರಿಕೆಗಳ ಪುಟ ಪುಟಗಳಲ್ಲೇ ವಾರ್ತೆ ಬರುತ್ತಿದ್ದುದೇನೋ!

### ಜಿನ್ನರ ವಾದವನ್ನು ಮುಸ್ಲಿಂ ಮುಖಂಡರು ಖಂಡಿಸಿದರು

ಭಾರತವನ್ನು ಮುಸ್ಲಿಂ ಭಾರತ ಹಿಂದೂ ಭಾರತವೆಂದು ವಿಂಗಡಿಸಬೇಕೆಂಬ ಜಿನ್ನರ ವಾದವನ್ನು ಬೊಂಬಯಿಯಲ್ಲಿ ಸೇರಿದ ಮುಸ್ಲಿಂ ಮುಖಂಡರ ಸಭೆಯೊಂದರಲ್ಲಿ ಖಂಡಿಸಲಾಯಿತು. ಬೊಂಬಯಿಯ ಮಾಜಿ ಶೆರಿಫರಾದ ಮಹಮ್ಮದರೂ ಜಿನ್ನರ ಧೋರಣೆಯನ್ನು ಖಂಡಿಸಿರುವರು.

### ಕಾಕ್ಸಾರ ಮುಖಂಡರೊಡನೆ ಭೇಟಿ

ಗಡಿನಾಡಿನ ಗವರ್ನರರು ಕಾಕ್ಸಾರ ಮುಖಂಡರನ್ನು ಕರೆದು ಅವರೊಡನೆ ಮಾತುಕತೆ ನಡೆಸುತ್ತಿರುವರೆಂದು ತಿಳಿದಿದೆ.

### ತಿರಿಗಿ ಓಂ ಮಂಡಲಿ?

ಕರಾಚಿಯಲ್ಲಿ ನಿಷೇಧಿಸಲಾಗಿದ್ದ ಓಂಮಂಡಲಿಯು ತಿರಿಗಿ ಅವತಾರಕ್ಕೆ ಬಂದಿದೆ. ಅದರ ಸಂಚಾಲಕರಾದ ದಾದಾ ಲೇಖರಾಜರ ಕುರಿತು ಅನೇಕ ಆಕ್ಷೇಪಣೆಯ ಅರ್ಜಿಗಳು ನಗರ ಮೆಜಿಸ್ಟ್ರೇಟರಿಗೆ ಬಂದಿವೆ.

### ಬೊಂಬಯಿ ಮುಷ್ಕರದ ಪರಿಸ್ಥಿತಿ

#### ಮುಖಂಡರ ಬಂಧನ

#### ಹೆಂಗಸು ಕೆಲಸಗಾರರ ನಿಷೇಧ

ಬೊಂಬಯಿಯ ಕೆಲಸಗಾರರ ಮುಷ್ಕರವು ನಡೆಯುತ್ತಾ ಇದೆ. ಹಲವು ಮುಖಂಡರನ್ನು ಸೆರೆಯಲ್ಲಿರಿಸಲಾಗಿದೆ. ಆ ಕುರಿತು ತಮ್ಮ ನಿಷೇಧವನ್ನು ಸೂಚಿಸಿ ೫೦೦ ಮಂದಿ ಕೂಲಿಗಾರರ ಹೆಂಗುಸರು ಒಂದು ಮೆರವಣಿಗೆ ನಡೆಸಿದರು.

ಪಿಕೆಟಿಂಗುಗಳು ಜೋರಾಗಿ ನಡೆಯುತ್ತಿವೆ!

#### ದೊಂಬಿ

ಹೋಲಿ ಹಬ್ಬದ ನಿಮಿತ್ತ ಉಂಟಾದ ದೊಂಬಿಯೊಂದರಲ್ಲಿ ಕಾನ್‌ಪುರದಲ್ಲಿ ೪ ಜನರು ಮೃತರಾಗಿ ೧೫ ಜನರು ಗಾಯಗೊಂಡಿರುವರು.

#### ಆರ್. ಎಸ್. ನಿಂಬ್ಕರರ ಬಂಧನ

ಬೊಂಬಯಿ ಗಿರಣಿ ಕಾಮಗಾರ ಸಂಘದ ಕಾರ್ಯದರ್ಶಿಯರಾದ ಶ್ರೀ ಆರ್. ಎಸ್. ನಿಂಬ್ಕರರನ್ನು ಬಂಧಿಸಲಾಗಿದೆ.

#### ಪೋಲೀಸನನ್ನು ಗುಂಡಿಕ್ಕಿ ಕೊಂದರು

ಲಾಹೋರಿನಿಂದ ಫಿರೋಜಪುರಕ್ಕೆ ತೆರಳುವ ಟ್ರೈನಿನಲ್ಲಿ ಒಬ್ಬ ಪೋಲಿಸ್ ಕಾನ್‌ಸ್ಟೇಬಲನನ್ನು ರೈಲುಗಾಡಿಯಲ್ಲಿ ಯಾರೋ ಗುಂಡಿಕ್ಕಿ ಕೊಂದರುವರು. ಆ ಸಂಬಂಧ ಒಬ್ಬ ಸಿಕ್ಖನನ್ನು ಸೆರೆ ಹಿಡಿಯಲಾಗಿದೆ.

#### ಹಿಂದೆಗೆಯಲಾಯಿತು

ಕಾಕ್ಸಾರ ಚಟುವಟಿಕೆಗಾಗಿ ಲಾಹೋರಿನಲ್ಲಿ ಜಾರಿಗೆ ತಂದ ಸಭಾ ನಿಷೇಧ ಕಾನೂನು ಹಿಂದೆಗೆದುಕೊಳ್ಳಲಾಗಿದೆ.

### ಭಾರತವು ಒಂದೇ ರಾಜ್ಯ

#### ಸಾವರ್ಕರರ ಭಾಷಣ

ವೀರ ಸಾವರ್ಕರರು ಮದ್ರಾಸಿನಲ್ಲಿ ಭಾಷಣ ಕಾರುತ್ತಾ ಜಿನ್ನರ ದ್ವಿಜನಾಂಗ ವಾದವನ್ನು ಖಂಡಿಸಿ ಭಾರತದಲ್ಲಿ ಅವಿಭಕ್ತವಾದ ಒಂದೇ ಒಂದು ಹಿಂದೂ ರಾಜ್ಯವು ಇರಬೇಕೆಂದು ದೀರ್ಘವಾದ ಭಾಷಣವೊಂದನಿತ್ತರು.

#### ಪೌರ್ವಾತ್ಯ ಸಮ್ಮೇಳನ

ಸಮಗ್ರ ಭಾರತದ ಪೌರ್ವಾತ್ಯ ಸಮ್ಮೇಳನದ ೧೦ ನೆಯ ಅಧಿವೇಶನವು ತಿರುಪತಿಯಲ್ಲಿ ಪಂಡಿತ ಮದನಮೋಹನ ಮಾಳವ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಪಂಡಿತರು ಭಾರತೀಯ ಕಲಾಸಂಸ್ಕೃತಿಗಳು, ಹೇಗೆ ಪೂರ್ವದಲ್ಲಿ ಮಧ್ಯ ಏಸಿಯಾ ಮತ್ತು ಇತರ ಕಡೆಗಳಿಗೆ ಹಬ್ಬಿತೆಂದು ಸ್ಮರಣೆಗೆ ತಂದುಕೊಟ್ಟು, ಈಗ ನಮ್ಮ ವಿದ್ವಾಂಸರು ಆ ದೇಶಗಳಿಗೆ ತೆರಳಿ ಅಲ್ಲಿ ಪರಿಶೋಧನಾ ಕಾರ್ಯಗಳನ್ನು ನಡೆಸುವ, ಪ್ರಾಚೀನ ಭಾರತೀಯರು ಹಿಂದೆ ಅಲ್ಲಿ ಪ್ರಚಾರಗೊಳಿಸಿದ್ದ ಭಾರತೀಯ ಕಲಾಸಂಸ್ಕೃತಿಗಳನ್ನು ಜೀರ್ಣೋದ್ಧಾರಗೊಳಿಸುವ ಆವಶ್ಯಕತೆಯ ಕುರಿತು ಮಾತಾಡಿದರು.

#### ಅಲ್ಲಾಭಕ್ಷರಿಗೆ ಗುಂಡು

ಸಿಂಧ್ ಪ್ರಾಂತದ ಮಾಜೀ ಪ್ರಧಾನರಾದ ಖಾನ್ ಬಹದೂರ್ ಅಲ್ಲಾ ಬಕ್ಸ್ ರವರ ಪ್ರಾಣಾಪಹಾರದ ಪ್ರಯತ್ನವೊಂದು, ಅವರು ಟ್ರೈನಿನಲ್ಲಿ ಪಯಣ ಬೆಳೆಸುತ್ತಿದ್ದಾಗ ನಡೆಯಿತೆಂದು ಸುದ್ದಿ ಬಂದಿದೆ. ಅವರ ಕಂಪಾರ್ಟ್‌ಮೆಂಟಿನ ಬಳಿಗೊಬ್ಬ ಅಪರಿಚಿತ ವ್ಯಕ್ತಿ ಬಂದು ಮೂರು ಬಾರಿ ಪಿಸ್ತೂಲು ಹಾರಿಸಿದನು. ಅಪಾಯವೇನೂ ಆಗಲಿಲ್ಲ. ಆ ಗುಂಡುಗಳನ್ನು ತನ್ನ ಕಡೆಗೆ ಗುರಿ ಇಟ್ಟು ಹೊಡೆದುದೋ ಅಥವಾ ತನ್ನ ಜತೆಯಲ್ಲಿ ಇದ್ದ ಇನ್ನೊಬ್ಬ ಯೂರೋಪಿಯ ಪ್ರಯಾಣಿಕನ ಕಡೆಗೆ ಎಸೆದುದೋ ಹೇಗೆಂದು ತನಗೆ ತಿಳಿಯದಾಗಿದೆ. ಎಂದು ಖಾನ್ ಬಹದೂರರ ಹೇಳಿಕೆ.

ಪ್ರಥಮ ಜಿಲ್ಲಾ ಹರಿಜನ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಮುನಿಸ್ವಾಮಿ ಪಿಳ್ಳೆ

#### ಇಂದೋರು ಸಂಸ್ಥಾನದ ಸುಧಾರಣೆ

ಇಂದೋರ್ ಸಂಸ್ಥಾನದ ಮಹಾರಾಜ ಹೋಲ್ಕರರು ತಮ್ಮ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಯನ್ನು ಪ್ರಕಟಪಡಿಸಿರುವರು. ನ್ಯಾಯವಿಧಾಯಕ ಸಭೆಯ ಪ್ರತಿನಿಧಿಗಳು ಬಹು ಮಂದಿ ಪ್ರಜೆಗಳಿಂದ ಚುನಾಯಿತರಾಗುವರು.

#### ಮೂಲ್ಕಿ ಹರಿಜನ ಪರಿಷತ್ತು

ಮೂಲ್ಕಿಯಲ್ಲಿ ತಾ. ೨೭, ೨೮ರಂದು ಜಿಲ್ಲಾ ಪ್ರಥಮ ಹರಿಜನ ಪರಿಷತ್ತು ಮದ್ರಾಸಿನ ಮಾಜಿ ಕಾಂಗ್ರೆಸ್ ಮಂತ್ರಿಗಳಾದ ಶ್ರೀ ಮುನಿಸ್ವಾಮಿ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ವಿಶೇಷ ವಿಜೃಂಭಣೆಯಿಂದ ನೆರವೇರಿತು. ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ತುಂಬಾ ಜನರು ಬಂದು ನೆರೆದಿದ್ದರು. ಡಾ। ಎಚ್. ವಿ. ಅಡಪ್ಪ, ಶ್ರೀ ಎಂ. ಆರ್. ಪೂಂಜ, ಡಾ। ಯು. ಪಿ. ಮಲ್ಯ, ಡಾ। ವಿಟ್ಠಲ ಶೆಟ್ಟಿ, ಶ್ರೀ ಯು. ಗೋವಿಂದ ರಾವ್, ಶ್ರೀ। ಕೆ. ಈಶ್ವರ, ಶ್ರೀ ಎಚ್. ಆರ್. ಮಲ್ಯ, ಶ್ರೀ ಎನ್. ಎಸ್. ಕಿಲ್ಲೆ ಶ್ರೀ ಕೆ. ಎಸ್. ಕಾರಂತ ಮೊದಲಾದ ಜಿಲ್ಲೆಯ ಪ್ರಸಿದ್ಧ ಕಾರ್ಯಕರ್ತರನೇಕರು ಬಂದಿದ್ದರು. ಶ್ರೀ ಮುನಿಸ್ವಾಮಿಪಿಳ್ಳೆಯವರನ್ನು ಮೆರವಣಿಗೆಯಿಂದ ಸಭಾಮಂದಿರಕ್ಕೆ ತರಲಾಯಿತು. ಹರಿಜನೋದ್ಧಾರ, ದೇಗುಲ ಪ್ರವೇಶಗಳ ಕುರಿತು ಅನೇಕ ಠರಾವುಗಳು ಮಂಜೂರಾದುವು.

ಹರಿಜನರ ನರ್ತನ, ಆಟ, ವಿವಿಧ ವಿನೋದಾವಳಿಗಳಿದ್ದುವು. ಶ್ರೀ ಕಾರಂತರು ಅವುಗಳಲ್ಲಿ ಹೆಚ್ಚಿನ ಭಾಗ ವಹಿಸಿದ್ದರು. (ಹೆಚ್ಚಿನ ವಿವರವನ್ನು ಬರುವ ವಾರದಲ್ಲಿ ಕೊಡಲಾಗುವುದು.)

---

### ತಿದ್ದುಪಡಿ

ಕಳೆದವಾರ ಪ್ರಕಟವಾದ, ದ. ಕ. ಜಿ. ಬೋರ್ಡಿನ ಪ್ರೆಸಿಡೆಂಟರ ಬಜೆಟ್ ಭಾಷಣದಲ್ಲಿ "೪೦೨ ಗ್ರಾಮಗಳುಳ್ಳ ನಮ್ಮ ಜಿಲ್ಲೆಗೆ" ಎಂಬುದನ್ನು "೪೦೦೦ ಗ್ರಾಮಗಳುಳ್ಳ ನಮ್ಮ ಜಿಲ್ಲೆಗೆ" ಎಂದು ತಿದ್ದಿ ಓದಿಕೊಳ್ಳಬೇಕು.


# NOTICE

**In the Court of the District Munsiff of Coondapoor.**

O. P. 13/40

Belman Ramana Prabhu son of Ananta Prabhu Coondapoor- **-Petitioner**

Rukminiamma Widow of the late Ananta Prabhu Coondapoor **--Respondent**

The above petition praying for the grant of a succession Certificate to collect a debt due to late Ananta Prabhu, his father, has been posted for hearing and objections if any to 1-4-'40. Anybody desirous of making any representation to the Court in the matter may do so on or before the said date.

(By Order of Court)

**K. L. Bhandari,**
Vakil
Coondapoor

## ಸ್ವೀಕಾರ—ವಿಮರ್ಶೆ

**ಅಂತರಂಗದ ಕತೆಗಳು— (ವಿವಿಧ ಕತೆಗಾರರಿಂದ) ಪ್ರಕಾಶಕರು: ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ. ಕ್ರೌನ್ ೧/೮ ಆಕಾರದ, ೧೯೩ ಪುಟಗಳು. ಬೆಲೆ: ಎಂಟಾಣೆ.**

ಉಡುಪಿಯ 'ಅಂತರಂಗ' ಪತ್ರಿಕೆಯಲ್ಲಿ ಹಿಂದೆ ಪ್ರಕಟವಾದ ಕೆಲವು ಕತೆಗಳನ್ನು ಆಯ್ದು ಈ ಕಥಾಸಂಗ್ರಹವನ್ನು ಪ್ರಕಟಿಸಿದ್ದಾರೆ ಇದರಲ್ಲಿ ಆರು ಮಂದಿ ಕತೆಗಾರರ ಹದಿಮೂರು ಕತೆಗಳು ಸೇರಿವೆ

ಈ ಕಥಾಸಂಗ್ರಹದ ಕತೆಗಾರರ ಪರಿಚಯವನ್ನು ಮೊದಲು ಸಚಿತ್ರವಾಗಿ ಕೊಟ್ಟಿದೆ ಎಲ್ಲರೂ ಹುರುಪಿನ ತರುಣರು, ಸಮಾಜ ಸುಧಾರಕರು, ಎಲ್ಲದಕ್ಕಿಂತಲೂ ಮಿಗಿಲಾಗಿ ಕನ್ನಡದ ಶ್ರದ್ಧಾವಂತ ಸೇವಕರು.

ಶ್ರೀ ಪಿ. ವೆಂಕಟರಮಣಾಚಾರ್ಯರ 'ಅಪರ ಜೀವನ, ಕರ್ಣಸನ್ನಿ, ಎರಡು ಮಹಾಕಥೆಗಳು' ಎಂಬ ಮೂರು ಕತೆಗಳು ಇದರಲ್ಲಿ ಇವೆ. ಅಪರ ಜೀವನದ ಕಥಾವಸ್ತು ಕತೆಗಾರರ ಸ್ವಕೀಯವಲ್ಲ ಆದಕಾರಣ ಆ ಕತೆಯಲ್ಲಿರುವ ಕುತೂಹಲ ಜನಕವಾದ ನವೀನ ಶೈಲಿಗೆ ಹೊಣೆಗಾರರು ಯಾರೋ ಹೇಳಲಾಗುವುದಿಲ್ಲ 'ಕರ್ಣಸನ್ನಿ'ಯು ಯಥಾನುವಾದ. ಭಾರತೀಯ ಜೀವನಕ್ಕೆ ಅಶ್ಲೀಲ ಶೃಂಗಾರವೆನಿಸುವ ಈ ಕಥೆಯನ್ನು, ಬಹುಶಃ ಲೇಖಕರು ಯೌರೋಪ್ಯ ಜೀವನ ಭಾವನೆಗಳನ್ನು ಕನ್ನಡಿಗರ ಮುಂದಿಡಲು ಭಾಷಾಂತರಿಸಿರುವರೋ ಎಂದು ಆಶಂಕೆಯುಂಟಾಗುತ್ತದೆ ಅಲ್ಲದೆ, ಇಂತಹ ಕತೆಗಳಿಂದ ಕನ್ನಡ ಕಥಾ ಸಾಹಿತ್ಯಕ್ಕೇನಾದರೂ ಉಪಕಾರವಾದೀತೆಂದು ನಾವು ಭಾವಿಸುವುದಿಲ್ಲ ಶ್ರೀ ಎಸ್ ವೆಂಕಟರಾಜರ ತಪಸ್ಸಿದ್ಧಿ, ಅನೇನವು ಎಂಬ ಎರಡು ಕತೆಗಳು ಈ ಸಂಗ್ರಹದಲ್ಲಿರುವ ಅತ್ಯುತ್ತಮ ಕತೆಗಳು ಕತೆಗಾರರು ಜೀವನದ ಸ್ವಾಭಾವಿಕ ಘಟನೆಗಳನ್ನು ಚೆಲುವಾಗಿ ಚಿತ್ರಿಸುತ್ತಾ ಎರಡು ಕತೆಗಳಲ್ಲಿಯೂ ಜೀವನದ ಸವಿ ಸವಿದಂತೆ ಉಂಟಾದ ಮಾನವನ ದಾರುಣವೇದನೆಯು ವರ್ಣಿತವಾಗಿದೆ, ಕಥನ ಶೈಲಿಯು ಕಾವ್ಯಮಯವಾಗಿದೆ. ಶ್ರೀ ಎಂ. ವಿಟ್ಠಲ ಶೆಣೈ ಇವರ 'ಮಗುವಿನ ತಂದೆ' 'ಅವನೂ ಪಾಲುಗಾರ' 'ಧೋರ್ಣಿ' 'ಮಾತೆ ದಾಸಿ' 'ನೋಟದ ಮೌಲ್ಯ' ಎಂಬ ಐದು ಕತೆಗಳಿವೆ 'ಮಾತೆ ದಾಸಿ'ಯೊಂದನ್ನು ಬಿಟ್ಟರೆ, ಮಿಕ್ಕ ನಾಲ್ಕು ಕತೆಗಳಲ್ಲಿಯೂ 'ದಿಗಂಬರ ಶೃಂಗಾರವೇ' ವರ್ಣಿತವಾಗಿದೆ ಅವೆಲ್ಲವೂ ಜೀವನದ ಕೃತ್ರಿಮತೆಗಳಿಂದ ಹೆಣೆಯಲ್ಪಟ್ಟದ್ದು, 'ಶೃಂಗಾರ ಶುಕಸಪ್ತತಿ' ಕಥೆಗಳ ಮಾದರಿಯವುಗಳಾಗಿವೆ ಕಥಾ ಘಟನೆಗಳಲ್ಲಿ ಚಮತ್ಕಾರವನ್ನು ತುಂಬಿಸುವುದರಲ್ಲಿ ಕತೆಗಾರರು ಕೃತಾರ್ಥರಾಗಿದ್ದಾರೆ ವಾಚಕರಲ್ಲಿ ಕದ್ರ ಶೃಂಗಾರಭಾವನೆಗಳನ್ನು ಉದ್ದೀಪಿಸುವಂತಹ ಹೆಚ್ಚಿನ ಕತೆಗಳನ್ನೇ ಈ ಸಂಗ್ರಹದಲ್ಲಿ ಕೊಟ್ಟಿರುವುದರಿಂದ, ಸಂಗ್ರಹಕಾರರು ಅದೇ ತಮ್ಮ ಉದ್ದೇಶವಾಗಿ ಇಟ್ಟುಕೊಂಡಿದ್ದರೆ, ಆ ಉದ್ದೇಶವನ್ನು ಯಶಸ್ವಿಯಾಗಿ ಪೂರೈಸಿದವರು ಈ ಕತೆಗಾರರೊಬ್ಬರೇ! 'ಮಾತೆ ದಾಸಿ'ಯು ನಾಲ್ಕು ಕತೆಗಳಿಂದ ತೀರಾ ಭಿನ್ನವಾಗಿದ್ದು ಕಲಾಪೂರ್ಣವಾಗಿದೆ ಶ್ರೀ ಕೆ. ಹೈದರರ 'ಕವಿ'ಯೆಂಬ ಒಂದು ಕತೆಯಿದೆ. ಲೇಖನ ಶೈಲಿ ಚನ್ನಾಗಿದ್ದರೂ ಕಥಾವಸ್ತು ಅಷ್ಟೊಂದು ಸ್ವಾಭಾವಿಕವಾಗಿಲ್ಲ. ವಿವಾಹ ಜೀವನದಿಂದ ಕವಿಯ ಬಾಳುವೆಯು ನೀರಸವಾಗುವುದೆಂಬ ಸಿದ್ಧಾಂತವನ್ನು ಕತೆಗಾರರು ಮಾಡಿದಂತಿದೆ. ಪ್ರಪಂಚದಿಂದ ಬಾಹಿರನಾಗಿದ್ದ ಕವಿಯಲ್ಲಿ ಪೂರ್ಣತೆಯು ಒದಗೊಡಲಾರದೆಂದು ನಮ್ಮನಿಕೆ. 'ಅನುಚಿತವೇ?' ಎಂಬುದು ಶ್ರೀ ಬಿ. ಎನ್. ಅರಾಧ್ಯರ ಕಥೆ. ವೈಧವ್ಯ ಜೀವನದಲ್ಲಿ ಬೆಂದಾಗುತ್ತಿರುವ ಬಾಲಿಕೆಯರ ಬಾಳುವೆಯ ನೋವನ್ನು ಹಾಗೆ ಹತ್ತೊಡಲು ಪಂಡಿತರು ಯುಕ್ತವಾದದ್ದು ಅನುಚಿತಲ್ಲವೆಂದು. ವಾಚಕರೂ ಒಪ್ಪಬಹುದಾಗಿದೆ.

ಈ ತರುಣ ಕತೆಗಾರರು, ತಮ್ಮ ಕಥನ ವಸ್ತುವನ್ನು ಮಾರ್ಪಡಿಸಿ ಗಂಭೀರ ವಿಷಯುಗಳನ್ನು ಆರಿಸಿಕೊಂಡರೆ ಉತ್ತಮ ಸಾಹಿತ್ಯವನ್ನು ಸೃಷ್ಟಿಸಬಲ್ಲರೆಂಬುದರಲ್ಲಿ ಘನಾ ಸಂಶಯವಿಲ್ಲ ಒಟ್ಟು ಇದರ ಹೆಚ್ಚಿನ ಕತೆಗಳು ಶೃಂಗಾರೋದ್ದೀಪಕಗಳಾಗಿ, ನೀತಿಯ ದೃಷ್ಟಿಯಲ್ಲಿ ಸಮಾಜಕ್ಕೆ ಹಾನಿಕಾರಕಗಳಾಗಿವೆ ಆದರೆ ಕಥೆಗಳು ವಾಚನಾಭಿರುಚಿಯನ್ನು ಹೆಚ್ಚಿಸಬಲ್ಲವು ಪುಸ್ತಕದ ಹೊರ ಮೈ ಸಚಿತ್ರವಾಗಿ ಅಲಂಕಾರವಾಗಿದೆ

**ಕನಸುಗಳು** ಲೇಖಕರು ಎನ್ ಎಸ್ ನಾರಾಯಣ ಶಾಸ್ತ್ರಿ ಎಂ ಎ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ ಬೆಲೆ ಎರಡಾಣೆ

ಮೈಸೂರು ವಿಶ್ವವಿದ್ಯಾನಿಲಯದವರು ಕನ್ನಡ ಜ್ಞಾನ ಪ್ರಸಾರ ಸಾಧನೆಗಾಗಿ ಕೈಕೊಂಡ ಪ್ರಚಾರ ಪುಸ್ತಕಮಾಲೆಯ ಹನ್ನೆರಡನೆಯ ಪುಸ್ತಕವಿದು ವಿವಿಧ ವಿಷಯಗಳ ಕುರಿತು ಹಿಂದೆ ಹನ್ನೊಂದು ಪುಸ್ತಕಗಳನ್ನು ಆಯಾಯ ವಿಷಯಗಳಲ್ಲಿ ಪರಿಣತರಾದವರಿಂದ ಬರೆಸಿ ಪ್ರಕಟಪಡಿಸಿರುವರು ಇದು ಕನಸಿನ ಕುರಿತು ಬರೆದ ಪ್ರಬಂಧವು

ಕನಸಿನ ವಿಚಾರ ಮಾಡುವುದೊಂದು ಸಮಸ್ಯೆ ಸ್ವಪ್ನ ಮೀಮಾಂಸೆಯನ್ನು ಪೌರ್ವಾತ್ಯರೂ ಪಾಶ್ಚಾತ್ಯರೂ ಅನೇಕ ವಿಚಾರಶೀಲರಾದ ಮಾನಸ ಶಾಸ್ತ್ರಜ್ಞರು ಮಾಡಿದ್ದಾರೆ ಆ ವಿಷಯಗಳನ್ನೆಲ್ಲಾ ಸಂಗ್ರಹಿಸಿ, ಸ್ಪಷ್ಟವಾದ ಸರಲವಾದ ನುಡಿಯಲ್ಲಿ ಲೇಖಕರು ಕನಸಿನ ವಿಚಾರವನ್ನು ಇದರಲ್ಲಿ ತಿಳಿಸಿರುವರು ವಿಷಯ ವಿವರಣೆಯ ಸಂದರ್ಭದಲ್ಲಿ ಅಲ್ಲಲ್ಲಿ ಚಿತ್ರಗಳನ್ನು ಕೊಟ್ಟಿರುವುದರಿಂದ ವಿವರಣೆಯು ಮನಮುಟ್ಟುವಂತಾಗಲು ಹೆಚ್ಚಿನ ಸಹಕಾರಿಯಾಗುತ್ತದೆ. ಕನ್ನಡದಲ್ಲಿ ಇಂತಹ ವಿಚಾರ ಪ್ರಚೋದಕವಾದ ಸಮಸ್ಯಾ ವಿಷಯಗಳನ್ನೆತ್ತಿ ಬರೆದ ಪುಸ್ತಕಗಳು ಕಡಿಮೆ. ಇಂತಹ ಗಹನ ವಿಚಾರಗಳ ಕುರಿತು ಧೀಮಂತರಿಂದ ಬರೆಯಲ್ಪಡುವ ಬೃಹದ್ಗ್ರಂಥಗಳನ್ನೋದುವ ಭಾಗ್ಯವು ಕನ್ನಡಿಗರಿಗೆ ಎಂದು ದೊರಕುವುದೋ ಎಂದು ನಾವು ಹಾರೈಸುತ್ತೇವೆ. ಉತ್ತಮ ಜ್ಞಾನ ಸಂಸ್ಕೃತಿಗಳು ಹರಡಲು ಸಹಾಯವಾಗುವಂತಹ ಪುಸ್ತಕಗಳನ್ನು ಹೀಗೆ ಅಲ್ಪಕ್ರಯಕ್ಕಾಗಿಯೂ, ಜನಸಾಮಾನ್ಯ ಗ್ರಾಹ್ಯವಾಗಿಯೂ ಒದಗಿಸಿಕೊಡುವ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಕನ್ನಡಿಗರು ಕೃತಜ್ಞರಾಗಿರಬೇಕು.

— ಕಯ್ಯಾರ.

## ಕಾನ್ಪುರ ಕಾಂಗ್ರೆಸ್ ವಸ್ತು ಪ್ರದರ್ಶನಾಲಯ

ವಸ್ತು ಪ್ರದರ್ಶನಾಲಯವು ರಾಮಘರ್ ಕಾಂಗ್ರೆಸ್ ಕೂಟದ ಒಂದು ಅಂಗವಾಗಿತ್ತು: ೯೩ ಖಾದಿ ಮಳಿಗೆಗಳು, ೧೭೩ ಗ್ರಾಮ ಕೈಗಾರಿಕಾ ವಸ್ತುಗಳಿಗೆಂದು ಇಟ್ಟಿರುವ ಮಳಿಗೆಗಳೂ ಇದ್ದುವು. ೧೦೦೦ ಕೆಲಸಗಾರರಿದ್ದರು ಪ್ರದರ್ಶನಾಲಯದ ಹೆಬ್ಬಾಗಿಲು ೯ನೆಯ ಶತಮಾನದ ಅಮರಾವತಿ ಶಿಲ್ಪಕಲೆಯ ಬೆಡಗನ್ನು ರೂಪಗೊಳಿಸುತಿತ್ತು ನಾನಾ ಪ್ರಾಂತ್ಯದವರು ಗಾಂಧೀಜಿಗೆ ಅರ್ಪಿಸಲು ಕಳುಹಿಸಿರುವ ವಿವಿಧ ಖಾದಿಯನ್ನು ಅಲ್ಲಿ ನೋಡಬಹುದಾಗಿತ್ತು

ಪ್ರದರ್ಶನದ ಮುಖ್ಯ ನೋಟವೆಂದರೆ 'ಸುಂದರ ಗೃಹ' ಪ್ರತಿಯೊಂದು ಕೋಣೆಯನ್ನೂ ಕೈಯಿಂದ ಮಾಡಿದ ಸಾಮಾನುಗಳಿಂದ ಅಲಂಕರಿಸಲಾಗಿತ್ತು. ಮುಂದೆ ಹೋದರೆ ನೂರಾರು ವಿಧ ಚರಕಗಳ ಪ್ರದರ್ಶನಾಲಯವಿತ್ತು ೩೦೦–೪೦೦ ಕೌಂಟಿನ ದಾರವನ್ನು ತೆಗೆಯುವ ವಿಶೇಷಕಲೆಯನ್ನು ಇಲ್ಲಿ ಪ್ರದರ್ಶಿಸಲಾಗಿತ್ತು ಇದಕ್ಕೆ ಮುಂದಿನ ಮಳಿಗೆಯಲ್ಲಿ ಚರ್ಮಹದಮಾಡುವುದು ಸಾಬೂನು ತಯಾರಿಸುವುದು, ಕಾಗದ ತಯಾರಿಸುವುದು, ಎಣ್ಣೆ ತೆಗೆಯುವುದು, ಜೇನು ಸಾಕುವುದು ಇವೇ ಮುಂತಾದ ಗೃಹಕೈಗಾರಿಕೆಗಳ ಆದ್ಯಂತ ಕರ್ತವ್ಯವನ್ನು ತೋರಿಸಲಾಗುತ್ತಿತ್ತು


# Canara Bank Limited

# ಕೆನರಾ ಬೇಂಕ್ ಲಿಮಿಟೆಡ್

ಲಿಮಿಟೆಡ್ ಜವಾಬ್ದಾರಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಸ್ಥಾಪಿತವಾದುದು

**೧೯೩೯ನೇ ಇಸವಿ ದಶಂಬರ ೩೧ಕ್ಕೆ ಅಂತ್ಯವಾಗುವ ವರ್ಷದ ಆಯುವ್ಯಯದ ಸಾರಾಂಶ ಪಟ್ಟಿ**

| ಮೂಲಧನ | ರೂ ಆ ಪೈ | | ರೂ. ಆ ಪೈ |
|---|---|---|---|
| ಶೇರ್ಪತ್ತು | 6,00 000-0-0 | ಕಟ್ಟಡ ಮತ್ತು ಸಾಮಾನು ಮೊದಲಾದುವುಗಳಿಗೆ ನಿಶ್ಚಿತ ಮೂಲ ವ್ಯಯ | 95,489 4-3 |
| ಪೈಡ್ ಅಪ್ | 3,91,342-0-0 | **ವ್ಯಾಪಾರಿಗಳಿಗೆ ಎಡ್ವಾನ್ಸ್ ಕೊಟ್ಟದ್ದು** | |
| ರಿಸರ್ವ್ ಫಂಡು | 4,50,000 0-0 | ಚಲಬಾಳುವ ಸೆಕ್ಯೂರಿಟಿ | 40,97,741-5 6 |
| **ಡಿಪೋಸಿಟ್** ಫಿಕ್ಸೆಡ್, ಕರೆಂಟ್ ಇತ್ಯಾದಿ | 81,21,622-8-1 | ಹುಂಡೀ ಪತ್ರ ಮೊದಲಾದುವುಗಳು | 10,30,649 2 10 |
| ಬೇಂಕುಗಳಿಗೆ ಸಲ್ಲತಕ್ಕದ್ದು | ಇಲ್ಲ | ಸೇವಿಂಗ್ಸ್ | 20,64,586 2 0 |
| ವಿವಿಧ | 10,51,7 9 1 7 | ವಿವಿಧ | 9 82,093-10-4 |
| ಈ ವರ್ಷದ ಲಾಭ | 55 003 0-6 | ನಗದಿ | 17 99,207-1-3 |
| ಜುಮ್ಲಾ | 1 00 69,766 10 2 | ಜುಮ್ಲಾ | 1,00,69,766-10-2 |

THE

# Canara Banking Corporation Ltd.,

(INCORPORATED IN BRITISH INDIA)

Estd. 1906

## THREE YEAR'S CASH CERTIFICATES

**bearing interest at 4% p. a.**

in denominations of

**RS. 50/-,100/-,500 -,1 000 -&5,000/-**

are now issued at all our Branches

***For particulars call at or write to***

## Any of our nearest Branches

THE

# BANK OF MANGALORE LTD.,

**MANGALORE**

ESTD 1931

*Branches -*

**Mudabidri & Padubidri.**

Fixed Deposits will be received at following rates of interest.

| | | | |
|---|---|---|---|
| For | 3 months | | 3½% |
| „ | 6 | „ | 4% |
| „ | 12 | „ | 5% |
| „ | 24 | „ & upwards | 5½% |

Interest Payable Quarterly

***Savings Bank deposit 3½% on daily balances.***

**All kinds of banking business transacted**

ಮಿ \ಕೈಯೊಟ್ಟು ಕಾಲಿಯೋ

# ಪಶುಶಕ್ತಿಗೆ ತಲೆಬಾಗಿಸಿದ ಫಿನ್ಲೆಂಡು!

## ಲೋಕಸ್ವಾತಂತ್ರ್ಯಕ್ಕೆ ರಕ್ಷಣೆಯುಂಟೆ?

ಮೂರು, ಮೂರುವರೆ ತಿಂಗಳು ಗಳ ತನಕ ಪ್ರಭಲ ಹೋರಾಟವನ್ನು ಮಾಡಿ, ಶತ್ರುಪಕ್ಷದ ಲಕ್ಷಾಂತರ ಮಂದಿಗೆ ಸ್ವರ್ಗದ ಹಾದಿಯನ್ನು ತೋರಿಸಿ, ಶತ್ರುಪಕ್ಷದ ಹೇರಳ ಯುದ್ಧೋಪಕರಣಗಳನ್ನು ಸ್ವಾಧೀನ ಮಾಡಿಕೊಂಡ ಮೇಲೆಯೂ ಫಿನ್ಲೇಂಡು ಕೊನೆಗೆ ಒಂದು ರೀತಿ ಯಿಂದ ತನ್ನ ಸೋಲನ್ನು ಒಪ್ಪಿಕೊಂಡೇ ರಶ್ಯದೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕಾಯಿತು ಈ ಹೋರಾಟದಿಂದ ರಶ್ಯಕ್ಕೆ ಸೇನೆಯು ಸ್ವಲ್ಪ ನಷ್ಟವಾಯಿತೇ ಹೊರತು, ಒಡಂಬಡಿಕೆಯಿಂದ ಅದು ಮೊದಲು ಕೇಳಿದುದೆಲ್ಲ ಈಗ ದೊರೆತ ಹಾಗಾಗಿದೆ ಹೀಗಾಗಿ ಸರ್ವಾಧಿಕಾರಿಗಳ ದವಡೆಯೊಳಗೆ ಸಿಕ್ಕಿ ಯುರೋಪಿನ ಇನ್ನೊಂದು ಚಿಕ್ಕದಾದರೂ, ಬಹು ಪ್ರಸಿದ್ಧ ರಾಷ್ಟ್ರವು ನಾಮಾವಶೇಷವಾಗುವಂತಾಯಿತು

### ಸೋಲಿನ ಮೂರು ಕಾರಣಗಳು

ಫಿನ್ಲೆಂಡು ಸೋಲಲಿಕ್ಕೆ ಮೂರು ಕಾರಣಗಳಿದ್ದುವು ನಿರೀಕ್ಷಿಸುತ್ತಿದ್ದ ನೋರ್ವೆ ಸ್ವೀಡನ್ ದೇಶಗಳು ಕಷ್ಟದಲ್ಲಿ ಬಿದ್ದ ಫಿನ್ಲೇಂಡಿಗೆ ಯಾವ ಸಹಾಯವನ್ನೂ ಮಾಡದಂತೆ ಒಲಾತ್ಕರಿಸಿ ಹಿಟ್ಲರನು ತನ್ನ ಸ್ವಾರ್ಥಸಾಧನೆಯಲ್ಲಿ ಸಫಲನಾದನು ಫಿನ್ಲೇಂಡಿನಲ್ಲಿ ರಶ್ಯಕ್ಕೆ ಜಯವಾದರೆ ಮಾತ್ರ ತಾನು ಬ್ರಿಟನ್ ಫ್ರಾನ್ಸುಗಳೊಡನೆ ಮಾಡುತ್ತಿರುವ ಯುದ್ಧದಲ್ಲಿ ತನಗೆ ರಶ್ಯದ ಸಹಾಯವು ಒದಗಿ ಬರುತ್ತದೆ ಎಂದು ಹಿಟ್ಲರನು ನಂಬಿದ್ದನು ಸತ್ಯ ಸ್ಥಿತಿಯು ಕೂಡ ಹಾಗೆಯೇ ಇತ್ತು ಆದುದರಿಂದ ಫಿನ್ಲೇಂಡಿಗೆ ಹೊರಗಿನ ಯಾವ ಸಹಾಯವೂ ಒದಗದೆ ದುರ್ಬಲವಾಗಿ ಅದು ಸೋಲುವಂತೆ ಮಾಡುವುದರಲ್ಲಿ ಹಿಟ್ಲರನು ಬಹಳ ಸಾಧಿಸಿ ಕೊನೆಗೆ ಕೃತಾರ್ಥನಾದನು ಇಟಲಿಯು ಕಡೆಯಿಂದ ಫಿನ್ಲೇಂಡಿಗೆ ಹೋಗುತ್ತಿದ್ದ ಸಹಾಯವನ್ನು ಅವನು ಜರ್ಮನಿಯಲ್ಲಿ ತಡೆದ ಬಿಟ್ಟನು ನೋರ್ವೆ ಸ್ವೀಡನ್‌ಗಳ ಮೂಲಕ ಹೋಗುತ್ತಿದ್ದ ಸಹಾಯವನ್ನು ಅವುಗಳಿಗೆ ಬೆದರಿಕೆ ಹಾಕಿ ನಿಲ್ಲಿಸಿಬಿಟ್ಟನು.

### ತನ್ನ ಕಾಲಿನ ಮೇಲೆ ನಿಂತೇ ಕಾದಾಡಿದ ಫಿನ್ಲಾಂಡು

ಎರಡನೆಯದಾಗಿ ತಮ್ಮ ಸ್ವಾರ್ಥದಿಂದಾಗಿ ಯಾವ ದೇಶ ರಾಷ್ಟ್ರವೂ ಫಿನ್ಲಾಂಡಿಗೆ ಸಕಾಲದ ಸಹಾಯ ಮಾಡಲಿಕ್ಕೆ ಮುಂದಾಗಲಿಲ್ಲ ಅಮೇರಿಕವು ಸ್ವಲ್ಪ ಜನ ಸ್ವಯಂಸೇವಕರನ್ನು ಮತ್ತು ಕೆಲವು ರೂಪಾಯಿಗಳನ್ನು ಕಳುಹಿಸಿ ಕೊಟ್ಟು ತಾನ ಕೃತಕೃತ್ಯವೆಂದು ಸುಮ್ಮಗಾಯಿತ ತಾವು ಫಿನ್ಲಾಂಡಿಗೆ ಬಹಳ ಸಹಾಯ ಕೊಟ್ಟು ರಶ್ಯವು ಪೂರ್ಣರೂಪದಿಂದ ಹಿಟ್ಲರನನ್ನು ಕೂಡಿಕೊಳ್ಳುವುದು ಇಂಗ್ಲಾಂಡು ಫ್ರಾನ್ಸುಗಳ ಮನಸ್ಸಿಗೆ ಹಿತ ಕಾಣಲಿಲ್ಲ ರಶ್ಯವನ್ನು ಹೇಗಾದರೂ ಮಾಡಿ ತಮ್ಮ ಕಡೆಗೆ ಒಲಿಸಿಕೊಳ್ಳುವೆವೆಂಬ ಆಸೆ ಆ ಎರಡು ರಾಷ್ಟ್ರಗಳಿಗೆ ಇನ್ನೂ ಇದೆ ಕಾಲವು ಮೀರಿ ಹೋದ ಅನಂತರವೇ ಈ ರಾಷ್ಟ್ರಗಳು ಫಿನ್ಲಾಂಡಿಗೆ ದೊಡ್ಡ ಸಹಾಯವನ್ನು ಕಳುಹಿಸಿ ಕೊಡಲಿಕ್ಕೆ ಸಿದ್ಧವಾದುವು ಆದ್ದರಿಂದ ಫಿನ್ಲಾಂಡು ಕೇವಲ ತನ್ನೆರಡು ಕಾಲುಗಳ ಮೇಲೆ ನಿಂತೇ ಪ್ರಬಲ ರಶ್ಯವನ್ನು ಕಡೆತನಕ ಎದುರಿಸಬೇಕಾಯಿತು

### ಫಿನ್ಲಾಂಡಿನ ಸ್ಥಿತಿ ಸ್ಥಾನ

ರಶ್ಯದಂಥ ಒಬ್ಬ ಪ್ರಬಲ ವೈರಿಯೊಡನೆ ಎದುರು ನಿಂತ ಜಯಶೀಲವಾಗಲಿಕ್ಕೆ ಫಿನ್ಲಾಂಡಿನ ಸ್ಥಿತಿ ಸ್ಥಾನಗಳೂ ಅದಕ್ಕೆ ಅನುಕೂಲವಾಗಿಲ್ಲದಿದ್ದುದು ಅದರ ಸೋಲಿಗೆ ಮೂರನೆ ಕಾರಣವಾಯಿತ ಕೇವಲ ಮೂವತ್ತೆರಡು ಲಕ್ಷ ಮಾತ್ರವಿರುವ ಫಿನ್ಲಾಂಡಿನ ಜನರು ಗಿರಿಮಿಲಿಯ ಇರುವ ರಶ್ಯನರನ್ನು ಅವರ ಮಿತಿಮೀರಿದ ಅತ್ಯಾಧುನಿಕ ಯುದ್ಧೋಪಕರಣಗಳೊಂದಿಗೆ ಎದುರಿಸಿ ಮೂರುವರೆ ತಿಂಗಳ ತನಕ ಹೋರಾಡಿದ್ದೇ ಒಂದು ಆಶ್ಚರ್ಯ ಸಂಗತಿ ಎನಬೇಕು ಕೊನೆಯಲ್ಲಿ ಸೋಲುವುದು ಸ್ವಾಭಾವಿಕವಾಗಿತ್ತು ಕೊನೆಗಂತೂ ಅವರು ಸೋತು ತಮ್ಮ ಶತ್ರುವಿನ ದಿಮ್ಮೆಣಕಾಲೂರಿ ಒಡಂಬಡಿಕೆಯ ಪತ್ರಕ್ಕೆ ಸಹಿ ಹಾಕಬೇಕಾಯಿತು

### ಮುಂದೇನು?

ಫಿನ್ಲಾಂಡನ್ನು ಜೀರ್ಣಿಸಿಕೊಂಡ ಮೇಲೆ ರಶ್ಯವು ಸಮ್ಮನೆ ಕೂತುಕೊಳ್ಳುವ ಹಾಗಿಲ್ಲ ಇನ್ನದರ ದೃಷ್ಟಿ ರುಮೇನಿಯದ ಮೇಲೆ ಬೀಳಲೂ ಬಹುದು ಸರ್ವಾಧಿಕಾರಿಗಳ ಪಶುಬಲದ ಮುಂದೆ ಯಾವ ಸಣ್ಣ ರಾಷ್ಟ್ರವೂ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡಿರಲಾರದು. ಪ್ರಜಾತಂತ್ರ ಮತ್ತು ಸ್ವಾತಂತ್ರ್ಯವನ್ನು ಇಚ್ಛಿಸಿ ಪ್ರೀತಿಸುವ ಎಲ್ಲಾ ಸಣ್ಣ ದೊಡ್ಡ ರಾಷ್ಟ್ರಗಳು ಒಂದಾದ ಹೊರತು ಸರ್ವಾಧಿಕಾರಿಗಳಿಂದ ಯಾರಿಗೂ ಉಳಿಗಾಲವಿಲ್ಲ ಫಿನ್ಲಾಂಡಿನ ಹಿಂದೆಯೇ ಒಂದರ ಮೇಲೆ ಒಂದಾಗಿ ಎಲ್ಲ ರಾಷ್ಟ್ರಗಳು ಸರ್ವಾಧಿಕಾರಿಗಳ ದವಡೆಯೊಳಗೆ, ಸಿಕ್ಕಿಕೊಳ್ಳುವವು ಬ್ರಿಟನು ಫ್ರಾನ್ಸುಗಳು ಅಂಥ ಪ್ರಜಾತಂತ್ರ ರಾಷ್ಟ್ರಗಳಿಗೆ ಸಹಾಯವನ್ನು ಕೊಟ್ಟು ಅವನ್ನು ಉಳಿಸಬೇಕು ಆಗ ಮಾತ್ರ ಅವುಗಳಿಗೂ ಭದ್ರತೆಯು ದೊರೆಯುವುದು ಆದರೆ ಬ್ರಿಟನು ಫ್ರಾನ್ಸುಗಳು ಹಾಗೆ ಮಾಡುವ ಮೊದಲು, ತಮ್ಮ ಸ್ಥಾನವನ್ನು ಬಲಗೊಳಿಸಬೇಕಾಗಿದೆ ಅದಕ್ಕೆ ಅವುಗಳ ಹತ್ತಿರ ಹೇರಳ ಸೇನಾ ಸಂಪತ್ತಿ ಇದ್ದರೆ ಮಾತ್ರ ಸಾಲದು. ಬ್ರಿಟನ ಫ್ರಾನ್ಸುಗಳು ಮಾಡುವ ಅಂಥ ಕಾರ್ಯಗಳಿಗೆ ಅದಕ್ಕೆ ಹೆಚ್ಚು ರಾಷ್ಟ್ರಗಳ ನೈತಿಕ ಬೆಂಬಲವು ಬೇಕು ಬ್ರಿಟನು ಫ್ರಾನ್ಸುಗಳು ತಮ್ಮಾಧೀನವಾಗಿರುವ ಹಿಂದುಸ್ಥಾನದಂಥ ಪರತಂತ್ರ ರಾಜ್ಯಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟ ಹೊರತು ಅವುಗಳಿಗೆ ಆ ನೈತಿಕ ಬೆಂಬಲವು ದೊರೆಯಲಾರದು ಈ ಪಾಠವನ್ನು ಅವುಗಳು ಕಲಿತುಕೊಳ್ಳುವುವೆ? ಅದನ್ನು ಸಕಾಲದಲ್ಲಿ ಕಲಿತುಕೊಂಡ ಹೊರತು, ಸರ್ವಾಧಿಕಾರಿಗಳ ವ್ಯಾಘ್ರದಂಡದಿಂದ ಅವು ಕೂಡ ಬಹು ಕಾಲದ ತನಕ ತಪ್ಪಿಸಿಕೊಂಡು ಇರಲಾರವು

**HALFTONE & LINE BLOCK MAKING UNDERTAKEN**

**Sharada Press, MANGALORE**

# PHYSICAL FITNESS

**is the first essential in games and in every social activity.**

You need not worry hereafter for your impaired vitality premature old age and nervous break down if you try

**"BHUVANENDRA AMRITHPRASH"**

which will tone the nervous system, build healthy tissues and enrich the blood.

**Thus keeps you fresh and sprightly.**

**Bhuvanendra Products, Ltd.,**

Katapady, S. Kanara.

(BRANCH—KUMTA, N. KANARA.)

Stockist. U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

# ಭುವನೇಂದ್ರ 'ಅಮೃತಪ್ರಾಶವು'

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕರುಣುಕು ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

**ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್**

ಕಟಪಾಡಿ, - ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ.

ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು

# ದಕ್ಷಿಣ ಭಾರತೀಯರು ಅನಧಿಕಾರಿಗಳೇ?

## ಸೈನಿಕ ಶಿಕ್ಷಣಕ್ಕೆ ಅವರು ಅರ್ಹರಲ್ಲವಂತೆ

### ಸರ್ ಸಿಕಂದರರ ಮಾತಿನಲ್ಲಿ ಹುರುಳಿಲ್ಲ

ಭಾರತದ ರಕ್ಷಣೆಗಾಗಿರುವ ಭಾರತೀಯ ಸೇನೆಗೆ ಸೇರುವ ವ್ಯಕ್ತಿಗಳ ಯೋಗ್ಯತೆಗಳು ಪಂಜಾಬಿಗಳಿಗೆ ದಕ್ಕಿರುವದರಿಂದ ಅವರ ಸಂಖ್ಯೆಯು ಭಾರತೀಯ ಸೇನೆಯಲ್ಲಿ ಅಧಿಕವಾಗಿರುವದು ಸಹಜವಾಗಿದೆ ಎಂದು ಸರ್ ಸಿಕಂದರ ಹಯಾತ್ ಖಾನರು ಹೇಳುತ್ತಾರೆ. ಆದರೆ ಸೇನೆಗೆ ಸೇರುವ ಯೋಗ್ಯತೆ ಪಂಜಾಬಿಗಳಲ್ಲಿ ಮಾತ್ರ ಇರುವದಲ್ಲ. ಅದು ಎಲ್ಲ ಪ್ರಾಂತಗಳ ಭಾರತೀಯರಲ್ಲೂ ಇರುವದೆಂದು ಮೊದಲಿನ ಸರ್ವ-ಸೇನಾಪತಿಗಳಾದ ಸರ್. ಫಿಲಿಪ್ ಚೆಟ್‌ವುಡರು ಹೇಳಿರುವರು. ಅವರು ಸೇನಾ ವಿಚಾರಗಳಲ್ಲಿ ಅಧಿಕಾರಿಕವಾಗಿ ಮಾತಾಡಬಲ್ಲವರಾದ್ದರಿಂದ, ಅವರ ಮಾತಿಗೆ ಹೆಚ್ಚು ಬೆಲೆ ಇದೆ. ಆದ್ದರಿಂದ ಸರ್ ಸಿಕಂದರರ ಆತ್ಮಶ್ಲಾಘನೆಯ ಮಾತಿನಲ್ಲಿ ಹುರುಳಿಲ್ಲವೆಂಬುದು ಸ್ವಯಮೇವ ಸಿದ್ಧವಾಗುತ್ತದೆ.

ಉತ್ತರ ಭಾರತೀಯರಂತೆ ದಕ್ಷಿಣ ಭಾರತೀಯರೂ ಸೇನೆಗೆ ಸೇರಿ ದೇಶರಕ್ಷಣೆಯ ಕಾರ್ಯದಲ್ಲಿ ತಮ್ಮ ಕಾರ್ಯನಿರ್ವಾಹ ಮಾಡಲು ಸಮರ್ಥರಿದ್ದಾರೆ. ಇತಿಹಾಸದ ಕಷೆಗೆ ನೋಡಿದರೆ ಈ ಮಾತಿನ ಸತ್ಯತೆಯು ಸಿದ್ಧವಾಗುವದೆಂದು ಸರ್ ಫಿಲಿಪ್ಪರು ಹೇಳಿದ್ದಾರೆ ನಿಜ ಭಾರತದಲ್ಲಿ ಬ್ರಿಟಿಷ ಸಾಮ್ರಾಜ್ಯದ ಅಧಿಕಾರ ಸ್ಥಾಪನೆಯು ಮೊದಲಿಗೆ ದಕ್ಷಿಣ ಭಾರತದ ಸೈನಿಕರ ಬಾಹುಬಲದಿಂದಲೇ ಆಯಿತು. ಭಾರತದಲ್ಲಿ ಬ್ರಿಟಿಷ ಸಾಮ್ರಾಜ್ಯದ ವಿಸ್ತರಣೆಯು ಸಹ ದಕ್ಷಿಣಭಾರತದ ಸೇನೆಗೆ ಸೇರಿಸಿಕೊಂಡ ಸೈನಿಕರ ಸಾಹಸ ಪರಾಕ್ರಮಗಳಿಂದ ಆಯಿತು ಭಾರತದ ಇತಿಹಾಸದಲ್ಲಿ ವಿಜಯನಗರ ರಾಜ್ಯ ಕಾಲದ ಕನ್ನಡಿಗರೂ, ಹಾಗೂ ಮರಾಟಾ ರಾಜ್ಯಕಾಲದಲ್ಲಿ ಮಹಾರಾಷ್ಟ್ರರು ತೋರಿಸಿದ ಅನುಪಮ ಬಲವು ಜಗತ್ಪ್ರಸಿದ್ಧವಾಗಿದೆ. ಬ್ರಿಟಿಷರಿಗೆ ಬಂಗಾಲವು ದಕ್ಷಿಣದ ಸೈನಿಕರ ಸಹಾಯದಿಂದಲೇ ದೊರೆಯಿತು. ಅವರು ಉತ್ತರ ಭಾರತವನ್ನು ಸಾಮಾನ್ಯತಃ ದಕ್ಷಿಣದವರ ಯುದ್ಧಕಲಾ ನೈಪುಣ್ಯದಿಂದ ಗೆದ್ದುಕೊಂಡರು ಅಂದ ಮೇಲೆ ದಕ್ಷಿಣ ಭಾರತದ ಯುವಕರು ಸೈನಿಕ ವಿಚಾರಗಳಲ್ಲಿ ಉತ್ತರ ಭಾರತದವರಿಗಿಂತ ಹಿಂದುಳಿದಿದ್ದಾರೆ ಎನ್ನುವ ಮಾತಿನಲ್ಲಿ ಸ್ವಾರ್ಥ ಅಥವಾ ಅಜ್ಞಾನವೇ ಒಡೆದು ಕಾಣುತ್ತದೆ. ದಕ್ಷಿಣಭಾರತದವರಲ್ಲಿ ಸೈನಿಕ ಯೋಗ್ಯತೆಯು ಇರುತಿದ್ದಿಲ್ಲವಾದರೆ, ಅವರು ಈಗ ಯೋಗ್ಯತೆ ಪಡೆದವರೆಂದು ಹೆಸರು ಪಡೆದಿರುವ ಪಂಜಾಬಿಗಳನ್ನೇ ಗೆದ್ದು ಪಂಜಾಬನ್ನು ಬ್ರಿಟಿಷರಿಗೆ ಕೊಡಲಿಕ್ಕೆ ಹೇಗೆ ಸಮರ್ಥರಾಗುತ್ತಿದ್ದರು?

ಪಂಜಾಬಿಗಳಲ್ಲಿ ಅತಿರೇಕ ಸೆಕೆಯನ್ನಾಗಲೀ, ಅತಿರೇಕ ಚಳಿಯನ್ನಾಗಲೀ ಸಹಿಸಿಕೊಳ್ಳುವ ಶಕ್ತಿ ಇರುವದರಿಂದ ಸೇನೆಗೆ ಅವರು ದಕ್ಷಿಣ ಭಾರತೀಯರಿಗಿಂತ ಹೆಚ್ಚು ಯೋಗ್ಯರು ಎಂದು ಹೇಳುವದಿದೆ. ಆದರೆ ಈ ಮಾತಿನಲ್ಲೂ ಸತ್ಯವಿರುವದಿಲ್ಲ. ದಕ್ಷಿಣ ಭಾರತೀಯರಲ್ಲಿ ಮಾತ್ರವಲ್ಲ. ಬಂಗಾಳಿಗಳಲ್ಲಿ ಕೂಡ ಕಾಲಪರಿಸ್ಥಿತಿಗೆ ಸರಿಯಾಗಿ ತಮ್ಮನ್ನು ಹೊಂದಿಸಿ ಕೊಳ್ಳುವ ಗುಣವು ಚೆನ್ನಾಗಿದೆ ಕಳೆದ ಮಹಾ ಯುದ್ಧಕಾಲದಲ್ಲಿ ಇವರೇ ಮೆಸಪೊಟೇಮಿಯದ ಹಗಲಿನ ಸಹಿಸಲಶಕ್ಯವಾದ ಉಷ್ಣವನ್ನು ರಾತ್ರಿಯ ಅಸಹನೀಯವಾದ ಚಳಿಯನ್ನು ಸಹಿಸಿಕೊಂಡು ಯುದ್ಧ ಕಾರ್ಯವನ್ನು ಮುಂದೊತ್ತಿ ಮೆಚ್ಚುಗೆಗೆ ಪಾತ್ರರಾದರು!

ಭಾರತೀಯ ಸೇನೆಗೆ ಸೇರುವ ಯೋಗ್ಯತೆ ಅಧಿಕಾರಗಳು ಭಾರತದ ಎಲ್ಲಾ ಪ್ರಾಂತ್ಯಗಳ ಜನರಲ್ಲಿ ಸರ್ವ ಸಾಮಾನ್ಯ ಒಂದೇ ಪ್ರಕಾರವಾಗಿ ಇದ್ದಿರುವಾಗ, ಸರಕಾರವು ಅಂಥ ಸೇನೆಗೆ ಕೆಲವು ಜಾತಿಗಳ ಅಥವಾ ಕೆಲವು ಪ್ರಾಂತ್ಯಗಳ ಜನರನ್ನು ಮಾತ್ರ ಸೇರಿಸಿಕೊಳ್ಳುವದು ವಿಹಿತವಾಗಿಲ್ಲ. ಈಗ ಭಾರತದ ಸೇನೆಯಲ್ಲಿ ಪಂಜಾಬಿಗಳ ಸಂಖ್ಯೆಯು ಅಧಿಕವಾಗಿರುವದು ಇತರರಲ್ಲಿ ಅಸೂಯೆಗೆ ಎಡೆ ಮಾಡಿಕೊಟ್ಟಿರುವದು, ಅಷ್ಟು ಮಾತ್ರವಲ್ಲ ಈಗಿನ ವ್ಯವಸ್ಥೆಯು ಭಾರತದ ಸಾಮೂಹಿಕ ಹಿತದೃಷ್ಟಿಯಿಂದಲೂ ಚೆನ್ನಾಗಿರುವದಲ್ಲ. ಭಾರತದ ರಕ್ಷಣೆಯ ಭಾರವು ಎಲ್ಲಾ ಪ್ರಾಂತ್ಯಗಳ ಜನರ ಮೇಲೆ ಒಂದೇ ಪ್ರಕಾರ ಬಿದ್ದಿರಬೇಕು ಇಲ್ಲವಾದರೆ ಸಂದಿಗ್ಧ ಕಾಲದಲ್ಲಿ ಅನರ್ಥವೇ ಆಗುವದು ಮಾತ್ರವಲ್ಲ ಆಧುನಿಕ ಯುದ್ಧಕ್ರಮದಲ್ಲಿ ಕೇವಲ ಶಾರೀರಿಕ ಬಲಕ್ಕೆಷ್ಟೇ ಪ್ರಧಾನ್ಯತೆ ಇರುವದಿಲ್ಲ. ಯುದ್ಧದಲ್ಲಿ ವಿಜಯವು ದೊರೆಯಬೇಕಾದರೆ ಬುದ್ಧಿ-ಬಲವೂ ಬೇಕು ಆದುದರಿಂದ ಸರಕಾರವು ತನ್ನ ಸೈನಿಕ ನೀತಿಯನ್ನು ಬದಲಾಯಿಸಬೇಕು ಉತ್ತರದವನಾಗಿರಲಿ, ಯಾವ ಜಾತಿ ಮತ ಸಂಪ್ರದಾಯಕ್ಕೆ ಸೇರಿದವನಾಗಿರಲಿ ಯೋಗ್ಯನಾಗಿದ್ದರೆ ಅವನನ್ನು ಸೇರಿಸಿಕೊಳ್ಳುವಂತಾಗಬೇಕು ಅವನ ಪ್ರಾಂತ್ಯ ಜಾತಿ, ಮತ, ಸಂಪ್ರದಾಯವು ಈ ಆರಿಕೆಗೆ ತಡೆಯಾಗಬಾರದು. ಇಲ್ಲವಾದರೆ ದಕ್ಷಿಣ ಭಾರತದವರಲ್ಲಿ ಈ ವಿಷಯವಾಗಿ ಘೋರ ಅತೃಪ್ತಿ ಅಸಂತೋಷಕ್ಕೆ ಎಡೆಮಾಡಿಕೊಟ್ಟಂತೆ ಆಗುವದು. ಮಹತ್ವದವಾದ ರಾಜಕೀಯ ಪರಿವರ್ತನೆಗಳಾಗಿ, ಜನರ ಹೆಚ್ಚೆಚ್ಚು ಸ್ವಾತಂತ್ರ್ಯವನ್ನು ಅನುಭವಿಸ ಬೇಕಾದ ದಿನಗಳು ಸಮೀಪವಾಗುತ್ತಿರ ನಾಗ್ನು ಒಟ್ಟು ಭಾರತದ ರಕ್ಷಣೆಗಾಗಿರುವ ಸೇನೆಯಲ್ಲಿ ಭಾರತದ ಎಲ್ಲಾ ಪ್ರಾಂತ್ಯಗಳ ಜನರ ಇರುವದು ಉತ್ತಮ ಸಾಧನೆಗೂ ಕಾರ್ಯಸಿದ್ಧಿಗೂ ಅನುಕೂಲವಾಗಿದೆ

---

## ಮೌಲಾನಾ ಯಾಕೂಬ್ ಹಸನ ಆಕಸ್ಮಿಕ ನಿಧನ



ಮಾಜಿ ಕಾಂಗ್ರೆಸು ಮಂತ್ರಿಗಳಲ್ಲಿ ಒಬ್ಬರು ದಕ್ಷಿಣ ಭಾರತದ ಪ್ರಸಿದ್ಧ ಕಾರ್ಯಕರ್ತರು ಮುಸ್ಲಿಮರಲ್ಲಿ ಒಬ್ಬರೂ ಆದ ಮೌಲಾನ ಯಾಕೂಬ್ ಹಸನರವರು ತಾ ೨೬ರೆಂದು ಆಕಸ್ಮಿಕ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ನಾಮುಗರ ಕಾಂಗ್ರೆಸಿನಿಂದ ಮೊದಲಿನ ದಿನ ಬಂದವರೇ ಅಕಸ್ಮಾತ್ ಹೃದಯವೇದನೆಯಿಂದ ಮೃತಿ ಹೊಂದಿದರು

ಇವರು ೧೮೭೫ರಲ್ಲಿ ನಾಗಪುರದಲ್ಲಿ ಹುಟ್ಟಿದರು. ಅವರು ವ್ಯಾಪಾರಕ್ಕಾಗಿ ೪೦ ವರ್ಷಗಳ ಹಿಂದೆ ಮದ್ರಾಸಿಗೆ ಬಂದಿದ್ದರು

ಪರ್ಶಿಯನ್ ಅರೇಬಿಕ್ ಸಾಹಿತ್ಯಗಳ ಒಳ್ಳೆಯ ಲೇಖಕರು. ವೃತ್ತ ಪತ್ರಿಕೆಯ ಸಂಪಾದಕರೂ ಆಗಿದ್ದರು ಕಳೆದ ಕಾಂಗ್ರೆಸು ಮಂತ್ರಿಮಂಡಳದಲ್ಲಿ ಸಾರ್ವಜನಿಕ ಕಾರ್ಯಖಾತೆಯ ಮಂತ್ರಿಗಳಾಗಿದ್ದರು ಹಿಂದೂ-ಮುಸ್ಲಿಂ ಐಕ್ಯಕ್ಕಾಗಿ ನಿರಂತರ ಯತ್ನ ಮಾಡುತ್ತಿದ್ದರು. ಕಾಂಗ್ರೆಸು ಕಾರ್ಯಕ್ಕಾಗಿ ಅವರಿಗೆ ಎರಡು ವರ್ಷಗಳ ಶಿಕ್ಷೆಯೂ ಒದಗಿತ್ತು

---


# ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧ

## ಗೊನೊಕಿಲರ್ (ರಿಜಿಸ್ಟರ್ಡ)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಸೋರುವುದು ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರಿವು ಬೀಳುವುದು, ಮೂತ್ರಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊಕೊಕಸ್ ಎಂಬ ವಿಷಹಾರಿ, ಅದೇ ಪ್ರಕಾರ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು,

ಬೆಲೆ 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ) ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ4

*Sole Manufacturer*, **Dr. D. N. JASANI**, Vithalbhai Patel Road, BOMABY

ಸ್ಟಾಕಿಸ್ಟರು: ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ಡಿಸ್‌ಪೆನ್ಸರಿ, ಕೆಮಿಸ್ಟ್ಸ, ಮತ್ತು ಡ್ರಗ್ಗಿಸ್ಟ್ಸ,

ಹಂಪನಕಟ್ಟೆ, ಮಂಗಳೂರು.

# ಸ್ವಾತಂತ್ರ್ಯವೀರನೋ? ಗೂಢಚಾರನೋ?

## ಇಪಿ ಫಕೀರನ ಜೀವನ ರಹಸ್ಯ

ಗಡಿನಾಡಿನಲ್ಲಿ ಹಲವು ಕಾಲಗಳಿಂದ ಅನೇಕ ಗಲಭೆಗಳುಂಟಾಗುತ್ತಿರುವುದು ಪತ್ರಿಕೆಗಳನ್ನು ಓದುವವರೆಲ್ಲರೂ ಬಲ್ಲರು. ಇದರ ಮೂಲ ಕಾರಣನಾದ ಇಪಿ ಫಕೀರನು—ಒಬ್ಬ ಸ್ವಾತಂತ್ರ್ಯವೀರನೆಂದು ಕೆಲವರೂ, ಬ್ರಿಟನಿನ ಗುಪ್ತಚಾರನೆಂದು ಹಲವರೂ, ಹಲವು ವಿಧವಾಗಿ ಹೇಳುತ್ತಿರುವರು. ಆದರೆ ಆತನ ಚಲನವಲನಗಳು ಆತನು ಒಬ್ಬ ಧ್ಯೇಯ ಸಾಧಕನಾದ ಪ್ರಭಾವಶಾಲಿ ಪುರುಷನೆಂಬುದನ್ನು ಸಾರುತ್ತವೆ

ವಜೀರಿಸ್ಥಾನದ ಇಪಿಯೆಂಬಲ್ಲಿ 'ಹಾಜಿ ಮಿರ್ಜಾ ಅಲಿಖಾನ್ ಸಾಹೇಬನು' ಬಹಳ ಪ್ರಭಾವಶಾಲಿಯಾಗಿರುವನು ಆತನು ಆಜ್ಞೆಯನ್ನು ಮೀರಿ ನಡೆಯುವುದೆಂದರೆ ಜೀವಕ್ಕೆ ಸಂಚಕಾರ ತಂದುಕೊಂಡಂತೆಯೇ ಆದುದರಿಂದ ಜನರು ಅವನಿಗೆ ಬೆದರಿಯೇ ಅಲ್ಲಿ ವಿಧೇಯರಾಗಿರುವರು. ಗುಡ್ಡಗಾಡಿನ ಜನರನ್ನು ಕೂಡಿಸಿಕೊಂಡು ಆತನು ತನ್ನ ಕುಟಿಲತನವನ್ನು ಸುತ್ತುಮುತ್ತಲಿನ ಜನರಲ್ಲಿ ಬಹಳವಾಗಿ ತೋರಿಸುತ್ತಿದ್ದಾನೆ.



ಡಾ|. ಖಾನ್ ಸಾಹೇಬ್

ಉತ್ತರ ವಜೀರಿಸ್ಥಾನದಲ್ಲಿ ಆತನು 'ಇಪಿಯೆಂಬಲ್ಲಿ ಜನಿಸಿದನು. ಬನ್ನು ಜಿಲ್ಲೆಯಲ್ಲಿ ಆತನು ವಿದ್ಯಾಭ್ಯಾಸವನ್ನು ಪಡೆದನು. ಬಾಲ್ಯದ ದಿನಗಳನ್ನು ಆತನು ಬನ್ನುವಿನಲ್ಲಿ ಕಳೆದುದರಿಂದ ಅದರ ಸುತ್ತುಮುತ್ತಲಿನ ಹಲವು ಜನರು ಆತನನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಆತನು ಬಹಳ ದುರ್ಬಲ ಶರೀರದವನೆಂದೂ, ಇತರರಂತೆ ಸಿಪಾಯಿ ಶರೀರದವನಲ್ಲವೆಂದೂ, ಹೆಚ್ಚಾಗಿ ಧಾರ್ಮಿಕ ಕೆಲಸಗಳಲ್ಲಿಯೇ ತೊಡಗಿರುವನೆಂದೂ ಅವನ ಪರಿಚಯವುಳ್ಳ ಜನರು ಆತನ ಕುರಿತು ಹೇಳುವರು. ಅವರು ಆತನಿಗೆ ಈಗ ೪೫ ವರ್ಷ ಪ್ರಾಯದ ಒಳಗೆ ಇರಬಹುದೆಂದು ಅಂದಾಜು ಹೇಳುತ್ತಾರೆ

### ಅದ್ಭುತ ಕಥೆಗಳು

'ಆತನ ಕುರಿತು ಜನರು ಹಲವು ಅದ್ಭುತ ಕಥೆಗಳನ್ನು ಹೇಳುವರು. ಆತನು ಒಂದೇ ಹೊತ್ತಿನಲ್ಲಿ ಅನೇಕ ಕಡೆಗಳಲ್ಲಿ ಇರುತ್ತಾನೆಂದು ಜನರು ಹೇಳುವರು ಟೋಚಿ ಏಜನ್ಸಿಯು ಸ್ಥಾಪಿತವಾದ ಕಾಲದಲ್ಲಿ ಆತನ ಜನನವಾಯಿತು. ಹುಟ್ಟಿದ ನಲ್ವತ್ತು ದಿನಗಳ ವರೆಗೆ ಆತನು ತಾಯಿಯ ಮೊಲೆಹಾಲು ಕುಡಿಯಲಿಲ್ಲವಂತೆ ಇದು ಟೋಚಿಯನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಂಡುದರ ನಿಷೇಧ ಸೂಚನೆಗಾಗಿಯಂತೆ ಇದು ಬಹಳ ಅಸತ್ಯ ಸಂಗತಿಯಾಗಿ ನಮಗೆ ತೋರಿದರೂ ಜನರು ಇದನ್ನು ಅಲ್ಲಿ ನಂಬುತ್ತಾರೆ

ಆತನು ೧೯೩೦ರಲ್ಲಿ ಪ್ರಸಿದ್ಧನಾದನು. ಗಡಿನಾಡಿನ ಕಾಂಗ್ರೆಸನ್ನು ಪ್ರೋತ್ಸಾಹಗೊಳಿಸುವ ಸಲುವಾಗಿ ಆತನ ಮೊದಲ ಚಟುವಟಿಕೆಗಳಿದ್ದುವು

ಆತನಿಗೆ ಅಸಂಖ್ಯ ಹಿಂಬಾಲಕರಿರುವರೆಂದು ಜನರು ಹೇಳುತ್ತಾರೆ ಜನರನ್ನು ಸಲಿಗೆ ಮಾಡುವುದಾಗಲಿ ಕೊಲ್ಲುವುದಾಗಲಿ ಕೂಡದೆಂದು ಆತನು ಕಠಿಣ ನಿಬಂಧನೆಯಿಟ್ಟಿರುವನಂತೆ ಹಲವರು ಆತನಿಗೆ ಇಟಲಿ ಜರ್ಮನಿಗಳೊಡನೆ ಗುಪ್ತ ಸಂಬಂಧವಿದ್ದು ಅಲ್ಲಿಂದ ಬೇಕು ಬೇಕಾದ ಸಕಲ ಸಾಧನಗಳೂ ಬರುತ್ತಿವೆಯೆಂದೂ ಹೇಳುವರು. ೧೯೩೭ರಲ್ಲಿ ಆತನ ಮನೆಯನ್ನು ಬ್ರಿಟಿಷರು ಸುಟ್ಟುಹಾಕಿದರು. ಆ ಮೇಲೆ ಆತನು ಅವರ ವಿರುದ್ಧ ದಂಗೆಯೆದ್ದಿರುವನು ಆತನು ಹಲವು ಪ್ರಾಚೀನ ಮತ್ತು ನೂತನ ಯುದ್ಧೋಪಕರಣಗಳನ್ನು ಉಪಯೋಗಿಸುತ್ತಿರುವನು ಭಯಂಕರ ಬಾಂಬುಗಳು ಅವನ ಸ್ವಾಧೀನದಲ್ಲಿವೆ ಆತನು ಅವುಗಳಿಗೆ ಉಪಯೋಗಿಸುವ ಮದ್ದೂ ಬಹಳ ವಿಶೇಷ ತರದ್ದಾಗಿದೆ.

### ಮಾಟಗಾರನೆ?

ವಜೀರಿಸ್ಥಾನದಲ್ಲಿ ಬ್ರಿಟಿಷ್ ಸಿಪಾಯಿಗಳನ್ನು ಅವನು ಆಗಾಗ ಸುಲಿಯುವನು ತನ್ನ ಅನುಯಾಯಿಗಳು ಸೆರೆಯಲ್ಲಿದ್ದರೆ ಅದಕ್ಕಾಗಿ ದೊಂಬಿಮಾಡುವನು. ತನ್ನ ಕುರಿತು ಕಾರಸ್ಥಾನ ಮಾಡುವವರನ್ನು ಪೀಡಿಸುವನು. ಆತನು ತನ್ನ ಮಾಟಗಾರಿಕೆಯಿಂದಲೇ ಶತ್ರುಗಳನ್ನು ಕೊಲ್ಲಿಸುವನೆಂದು ಜನರಾಡುತ್ತಿರುವರು. ಸುತ್ತುಮುತ್ತಲಿನ ನಿವಾಸಿಗಳು ಆತನ ವಿಷಯ ಬಹಳ ಅಭಿಮಾನವುಳ್ಳವರಾಗಿರುವರು.

ಕೆಲವರು ಆತನು ಬ್ರಿಟಿಷರು ಇಟ್ಟ ಗೂಢಚಾರನೆಂದು ಹೇಳುವರು. ಕೆಲವರು ಆತನು ವಜೀರಿಸ್ಥಾನವನ್ನು ಮುಕ್ತಗೊಳಿಸಲು ಹೋರಾಡುವ ವೀರನೆನ್ನುವರು. ಹಲವರು ಆತನು ಭಾರತದ ಸ್ವಾತಂತ್ರ್ಯ ಧುರೀಣರೊಡನೆ ಸಂಬಂಧವಿಟ್ಟುಕೊಂಡಿರುವನೆಂಬರು. ಅಂತೂ ಇಪಿ ಫಕೀರನು ಮಹಾ ಪ್ರಭಾವಶಾಲಿಯಾದ ಒಬ್ಬ ರಹಸ್ಯವ್ಯಕ್ತಿಯಾಗಿರುವನು.


# ತಾಯಿಯೇ! ನಿನಗೆ ಆಗಾಗ ಅಗತ್ಯಬೀಳುವ ಸ್ನೇಹಿತಳಿಲ್ಲಿರುವಳು.

ಮಕ್ಕಳಿಗೆ ಆಗಾಗ ಕೆಳಗೆ ಬಿದ್ದು ಗಾಯ, ಪೆಟ್ಟುಗಳಾಗುತ್ತವೆ. ಇದಕ್ಕಾಗಿ ಪ್ರತೀ ಒಂದು ಮನೆಯಲ್ಲಿಯೂ ಅಗತ್ಯ ಬೇಕಾಗುವುದಾವುದೆಂದರೆ ಕ್ರಿಮಿನಾಶಕ ಔಷಧಿ. ಒಂದು ಟಿನ್ನು ಕುಟಿಕೂರಾ ಮುಲಾಮನ್ನು (Cuticura Ointment) ನಿಮ್ಮ ಬಳಿ ಇಟ್ಟಿರಿಸಿ ನಂತರ ಯಾವ ಪೆಟ್ಟು, ಗಾಯಗಳಿಗೂ ತಯಾರಾಗಿರಿ.

ಗಾಯವು ಕೂಡಲೇ ಗುಣವಾಗಬೇಕಾದರೆ, ಬಾತುವಿಕೆಯು ಮಾಯವಾಗಬೇಕಾದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಗಾಯ, ಪೆಟ್ಟು, ತರಚುವಿಕೆ, ಮುದ್ದಣ ಇವುಗಳಿಗೆ ಹಚ್ಚಿರಿ. ರಕ್ತಿಗೆ ವಿಷವಾದೀತೆಂಬ ಹೆದರಿಕೆಯಿಲ್ಲ. ಕುಟಿಕೂರಾ ಮುಲಾಮು (Cuticura Ointment) ಸುಟ್ಟುಹೋದ ಯಾ ಬೆಂದುಹೋದ ಭಾಗಗಳಿಗೆ ಹಚ್ಚಲು ಕೂಡಾ ಬಹಳ ಉತ್ತಮ ಸಹಿಸಲಸದಳವಾದ ವೇದನೆಯನ್ನು ನಿಲ್ಲಿಸಿ ಗಾಯಗಳು ಹರಡದಂತೆ ಮಾಡುತ್ತದೆ ಚರ್ಮರೋಗಗಳಿಗೆ ಕೂಡಾ ಉತ್ತಮ ಔಷಧಿ ಅಸಹ್ಯವಾದ ತುರಿಗಜ್ಜಿಗಳು ಇದರ ಸ್ಪರ್ಶದಿಂದಲೇ ಮಾಯವಾಗುತ್ತವೆ. ಇಷ್ಟಲ್ಲದೆ ದೀರ್ಘಕಾಲದ ಚರ್ಮವ್ಯಾಧಿಗಳು ಕೂಡ ಕುಟಿಕೂರಾ ಮುಲಾಮಿನಿಂದ (Cuticura Ointment) ಗುಣವಾಗುತ್ತವೆ. ನಿಮ್ಮ ಕೆಮಿಸ್ಟರಲ್ಲಿಂದ ಒಂದು ಟಿನ್ನನ್ನು ಕೊಂಡುಕೊಳ್ಳಿರಿ

ಕುಟಿಕೂರಾ ಮುಲಾಮನ್ನು (Cuticura Ointment) ಕಜ್ಜಿ, ಕುರು, ಗಾಯ, ಪೆಟ್ಟು, ವ್ರಣ, ಮುದ್ದಣ, ಬಾತುವಿಕೆ ತುರಿಕಜ್ಜಿ ವಿಷಪ್ರಾಯವಾದ ಗಾಯ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉಪಯೋಗಿಸಿರಿ

ಕುಟಿಕೂರಾ ಮುಲಾಮು
Cuticura Ointment

# ರೂ. 550 ಬಹುಮಾನ

## ಸಿದ್ಧ ವಶೀಕರಣ ಕವಚ

ಇದರಿಂದ ನಿಮ್ಮನ್ನು ದ್ವೇಷಿಸುವ ಯಾವ ವ್ಯಕ್ತಿಯೇ ಆಗಲೀ ಅದು ಸ್ತ್ರೀ ಯಾ ಪುರುಷ ವ್ಯಕ್ತಿಯಾಗಿರಲೀ ಆ ವ್ಯಕ್ತಿಯು ಬಂದು ನಿಮ್ಮನ್ನು ಪ್ರೀತಿಸುವಂತೆ ಮಾಡಬಹುದು ಬೆಲೆ ತಾಮ್ರದ ಆವರಣದ್ದು ರೂ. 1-15-0 ಮೂರಕ್ಕೆ ರೂ 5, ಬೆಳ್ಳಿಯ ಆವರಣದ್ದು ರೂ 2-12-0 ಮತ್ತು ಚಿನ್ನದ ಆವರಣದ್ದು ರೂ. 6-8-0

ಲಕ್ಷ್ಮೀ ಯಂತ್ರ: ಗ್ರಹಗಳ ಬಾಧೆಯನ್ನು ಹೋಗಲಾಡಿಸುತ್ತದೆ. ವ್ಯಾಪಾರ, ಪರೀಕ್ಷೆ, ವಹಿವಾಟು, ಸೋದ್ದಿ ಆರೋಗ್ಯ, ಧನ, ಮಕ್ಕಳು, ವೈರಿಯ ಮೇಲೆ ಜಯ ಮುಂತಾದವುಗಳಲ್ಲಿ ಸಹಕರಿಸುವುದು ಮಕ್ಕಳನ್ನು ಪಡೆಯಬೇಕೆಂದಿಚ್ಛಿಸುವವರು ಪುರುಷ ಮತ್ತು ಸ್ತ್ರೀ ಇಬ್ಬರೂ ಎರಡು ಯಂತ್ರಗಳನ್ನು ಧರಿಸಬೇಕು. ಬೆಲೆ ತಾಮ್ರದ ಆವರಣ ರೂ. 1-15-0 3 ಯಂತ್ರಗಳು ರೂಪಾಯಿ 5/- ಬೆಳ್ಳಿಯ ಆವರಣ ರೂ. 2-12-0, ಚಿನ್ನದ ಆವರಣ ರೂ. 6-8-0, ಯಾವುದಾದರೂ ನಾಲ್ಕು ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಪವರ್ ಫುಲ್ ನಂ. 4ಕ್ಕೆ ಕೇಳಿರಿ. ಬೆಲೆ 5-4-0, 5 ಕಾರ್ಯಗಳು ನೆರವೇರಬೇಕಾದರೆ ಸ್ಪೆಶಲ್ ಸುಪರ್ ಪವರ್ ಫುಲ್ ನಂ. 5ಕ್ಕೆ ಕೇಳಿರಿ, ಬೆಲೆ 7-8-0 ಎಲ್ಲಾ ವಿಷಯಗಳಲ್ಲಿಯೂ ಅಂಚೆವೆಚ್ಚ ಪ್ರತ್ಯೇಕ.

ಸೂಚನೆ: ಇದು ಸುಳ್ಳೆಂದು ರುಜುಪಡಿಸಿದವರಿಗೆ ರೂ. 550 ಇನಾಮು, ಸರಿಯಾಗಿ ಕಾರ್ಯಸಿದ್ಧಿಯಾಗದಿದ್ದರೆ ಬೆಲೆ ಹಿಂತಿರುಗಿ ಕೊಡಲ್ಪಡುವುದು. ಈ ಯಂತ್ರಗಳು ಸರಿಯಾಗಿ ಕಾರ್ಯಸಬೇಕಾದರೆ ನೀವೇನಾದರು ಕಷ್ಟಪಡಬೇಕೆಂದಿಲ್ಲ.

**ANAND SWAMI**
Anand Bhawan, Post Box No. 27 (S.A.M.) Amritsar

# ಸಿನೆಮಾ ಪ್ರಪಂಚ

## ಹೋಲಿವುಡ್ಡಿನಲ್ಲಿ ಸುಂದರಿಯರೇ ಇಲ್ಲ!

**ಫಿಲ್ಮ್ ಫೋಟೋಗ್ರಾಫರನ ಹೇಳಿಕೆ**

ಹೋಲಿವುಡ್ ಎಂಬುದು ಸುರಸುಂದರಿಯರಂತಹ ಮನಮೋಹನ ತರುಣಿಯರ—ವಿಲಾಸಿನೀ ಅಪ್ಸರೆಯರಂಥ ಸಿನೆಮಾ ನಟಿಯರ ನಿವಾಸ ಭೂಮಿಯೆಂದೂ, ಪ್ರಪಂಚದ ಅತ್ಯುತ್ತಮ ಸುಂದರಿಯರು ನೆಲಸಿರುವೆಡೆಯೆಂದೂ ಎಲ್ಲೆಲ್ಲೂ ಪ್ರಸಿದ್ಧಿಯಿದೆಯಷ್ಟೆ? ಆದರೆ ಕಳೆದ ೩೦ ವರ್ಷಗಳಿಂದ ಅಲ್ಲಿ ಫಿಲ್ಮ್ ಫೋಟೋಗ್ರಾಫರನಾಗಿರುವ ಗಾಡಿಯೋ ಎಂಬವನು ತನ್ನ ಅಷ್ಟು ವರ್ಷಗಳ ಅನುಭವದಲ್ಲಿ ಕೇವಲ ಮೂರು ಜನರನ್ನು ಮಾತ್ರವಲ್ಲದೆ ಒಳ್ಳೆಯ ಸುಂದರಿಯರೆನಿಸುವ ತರುಣಿಯರೇ ಅಲ್ಲಿಗೆ ಬಂದಿಲ್ಲವೆಂದು ಹೇಳುವನು. ಆ ಮೋಹಿನಿಯರೆಂದರೆ ವಿಲ್ಲಿಡಾ, ಕೋರಿನೆ ಗ್ರಿಫಿತ್ ಮತ್ತು ಮೇರಿಯನ್ ಡೇವಿಸ್ ಎಂಬೀ ಮೂವರು. 'ಅವರ ಮುಖಭಂಗಿಯು ಅದ್ಭುತ ಸೌಂದರ್ಯಶಾಲಿಯಾದುದು. ಎಲ್ಲಾ ವಿಧದಿಂದ ನೋಡಿದರೂ ಚೆಲುವನ್ನು ಚೆಲ್ಲವಂತಹುದು. ಬಹಳ ಅಚ್ಚುಕಟ್ಟಾಗಿರುವುದು. ಗ್ರಿಯೊಟೋ ಮತ್ತು ಮೈಕಲೇಂಗ್ಲೊ ಇವರು ಚಿತ್ರಿಸಿದ ಶಿಲ್ಪಿ ಪ್ರತಿಮೆಗಳಂತೆ ಅವುಗಳು ಸಂಪೂರ್ಣ ಕಲಾ ವಿಭವಗಳಿಂದ ತುಂಬಿರುವವುಗಳು' ಹೀಗೆಂದು ಗಾಡಿಯೋ ವರ್ಣಿಸುತ್ತಾನೆ. ಅವನು ಹೇಳುವುದೇನಂದರೆ, ಭುಜ, ತೋಳು, ತೊಡೆ, ವಕ್ಷಸ್ಥಳಗಳು, ಕಟಿ, ಜಘನಗಳು ಮಾಂಸಲವಾಗಿಯೂ ಮೃದುವಾಗಿಯೂ ರಮಣೀಯವಾಗಿಯೂ ಇರುವ ಚೆಲುವೆಯರು ಬಹಳ ಇದ್ದಾರೆ. ಆದರೆ ಸಿನೆಮಾ ನಟಿಯರಾಗಲು ಬೇಕಾದ ಮುಖ್ಯ ವಿಷಯಗಳು ಅವುಗಳಲ್ಲ. ಸಿನೆಮಾ ನಟಿಯರಿಗೆ ಎಲ್ಲಕ್ಕಿಂತ ಹೆಚ್ಚಾಗಿ ಬೇಕಾದುದು ಕಾಂತಿ ಮುಕ್ತಾದ ಮುಖ. ಆದುದರಿಂದ ಈ ಮೂವರು ಮಾತ್ರ ಉತ್ತಮ ಸೌಂದರ್ಯಶಾಲಿನಿಗಳಾದ ಸಿನೆಮಾ ಮೋಹನೆಯರೆಂದು.

**ಫಿಲ್ಮ್ ಪ್ರೇಕ್ಷಕರ ಪರಿಷತ್ತು**

ಬಂಗಾಳದಲ್ಲಿ ಶ್ರೀ. ನಳಿನೀರಂಜನ ಸರ್ಕಾರರ ಅಧ್ಯಕ್ಷತೆಯಿಂದ ಮೊದಲನೆ ಫಿಲ್ಮ್ ಪ್ರೇಕ್ಷಕರ ಪರಿಷತ್ತು ನಡೆಸುವ ಸಿದ್ಧತೆಗಳು ಭರದಿಂದ ಆಗುತ್ತಿವೆ.

ಅನೇಕ ವಿನೋದ ಕೂಟಗಳನ್ನು ಏರ್ಪಡಿಸುವ ಸಿದ್ಧತೆಯಾಗಿದೆ.

ಒಳ್ಳೆಯ ಫಿಲ್ಮ್ ನಟನಿಗೆ, ನಟಿಗೆ, ಹಾಗೂ ಒಳ್ಳೆಯ ಫಿಲ್ಮ್ ಕಥಾಲೇಖಕನಿಗೆ ಒಂದೊಂದು ಬಹುಮಾನ ಕೊಡುವುದಾಗಿಯೂ ಏರ್ಪಡಿಸಿರುವರು. ಇದರ ನಿರ್ಧಾರಕ್ಕಾಗಿ ಅಖಿಲ ಭಾರತ ಫಿಲ್ಮ್ ಪ್ರೇಕ್ಷಕರ ಮತಗಣನೆ ಮಾಡಲಾಗುವುದೆಂದೂ ಯಾರಿಗೆ ಹೆಚ್ಚು ಮತವು ದೊರಕಿತೋ ಅಂತಹವನಿಗೆ ಬಹುಮಾನವು ಕೊಡಲ್ಪಡುವುದೆಂದೂ ತಿಳಿದಿದೆ.

**ನಟನಟಿಯರು ಸಮಾಜಬಾಹಿರರೆ?**

ಸಿನೆಮಾದಲ್ಲಿ ನಾವು ನಟನಟಿಯರ ಅಭಿನಯವನ್ನು ಮೆಚ್ಚಿ ಕೊಂಡಾಡುತ್ತೇವೆ. ಆದರೆ ವ್ಯಕ್ತಿಗತವಾಗಿ ಅವರು ನೀತಿ ಬಾಹಿರರೆಂದು ಗಣ್ಯ ಸಮಾಜದಿಂದ ದೂರವಿರಿಸುತ್ತೇವೆ. ಇಂತಹ ಸಂದರ್ಭದಲ್ಲಿ ಹೆಂಗುಸರು ಹೆಚ್ಚು ಅಪವಾದಕ್ಕೆ ಗುರಿಯಾಗುತ್ತಾರೆ. ಇದನ್ನು ಪರಿಹರಿಸುವ ಬಗೆ ಹೇಗೆ ಎಂದು ನೇಶನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಲೇಖನವು ವಿವರಿಸುತ್ತದೆ.

೧) ಮೊದಲನೆಯದಾಗಿ, ಫಿಲ್ಮ್ ಕಂಪೆನಿಯ ಯಜಮಾನನು ಉತ್ತಮ ನೀತಿವಂತನೆನಿಸಿರಬೇಕು.

೨) ಎರಡನೆಯದಾಗಿ ಸ್ಟುಡಿಯೋದಲ್ಲಿ ಒಳ್ಳೆ ಶಿಸ್ತು ನಿರ್ಬಂಧಗಳಿರಬೇಕು.

೩) ಮೂರನೆಯದಾಗಿ, ಪಾಶ್ಚಾತ್ಯ ದೇಶದಲ್ಲಿರುವಂತೆ ತರುಣತರುಣಿಯರು ಸ್ವತಂತ್ರ ರೀತಿಯಿಂದ ಕೆಲ ಸಮಯ ಏಕಾಂತವಾಗಿದ್ದರೆ ಅಲ್ಲಿ ಅದು ಹೆಚ್ಚಿನ ಟೀಕೆಗೆ ಗುರಿಯಾಗದಿರುವುದರಿಂದ ನಾವು ಅವರನ್ನೇ ಅನುಸರಿಸದೆ, ನಮ್ಮಲ್ಲಿ ತರುಣ ತರುಣಿಯರ ವಿಷಯ ಹೆಚ್ಚಿನ ಸಂಪರ್ಕವಿರಬಾರದಾದುದರಿಂದ ಅವರನ್ನು ಹೆಚ್ಚು ಸಮಯ ಸ್ವಾತಂತ್ರ್ಯವಿಹಾರಕ್ಕೆ ಏಕಾಂತದಲ್ಲಿ ಬಿಡಬಾರದು.

೪) ನಾಲ್ಕನೆಯದಾಗಿ ಅಭಿನಯ ಸಮಯದಲ್ಲಿ ಪ್ರೇಕ್ಷಕರನ್ನು ಬರಬಿಡುವುದರಿಂದ ಅವರ ಕುಟುಂಬದವರೇ ಬಂದು ನೋಡುವುದರಿಂದ ಹೆಚ್ಚಿನ ಸಂಶಯಕ್ಕೆ ಆಸ್ಪದವಾಗಲಾರದು.

೫) ಐದನೆಯದಾಗಿ ಪ್ರಣಯ ಚಿತ್ರಗಳಲ್ಲಿ ಒಂದು ಮಿತಿಯನ್ನು ಇಟ್ಟುಕೊಳ್ಳಬೇಕು.

ಹೀಗೆ ಮಾಡಿದರೆ ಸಿನೆಮಾ ನಟನಟಿಯರಿಗೂ ಸಮಾಜದಲ್ಲಿ ಗಣ್ಯತೆಯು ಉಳಿಯಬಹುದಲ್ಲವೆ?

**ಶಾಂತಾ ಆಪ್ಟೆ**

ಶಾಂತಾ ಆಪ್ಟೆಯ ಸುದ್ದಿ ತಿರಿಗಿ ಕೇಳಿ ಬರುತ್ತದೆ. ಆಕೆ ತನ್ನ ಸಿನೆಮಾ ಜೀವನದ ವಿಷಯದಲ್ಲಿ ಬರೆದ 'ನಾನು ತಿರಿಗಿ ನಟಿಯಾಗಬೇಕೆ?' ಎಂಬ ಪುಸ್ತಕವು ಮರಾಠಿಯಲ್ಲಿ ಪ್ರಕಟವಾಗಿದೆ. ಇದು ಬರುವ ತಿಂಗಳಲ್ಲಿಯೇ ಗುಜರಾತಿ, ಹಿಂದೀ, ತೆಲುಗು ಈ ಮೂರು ಭಾಷೆಗಳಲ್ಲಿ ಪ್ರಕಟವಾಗುವುದು. ಈ ರೀತಿ ಮುಂದಕ್ಕೆ ಹಲವು ಪುಸ್ತಕಗಳನ್ನು ಆಕೆ ತನ್ನ ಸಿನೆಮಾ ಅನುಭವಗಳನ್ನು ವಿವರಿಸಿ ಬರೆಯಲಿರುವಳು.

**ಪೂರ್ಣಾರೋಗ್ಯವನ್ನೀವ ಶಕ್ತಿವರ್ಧಕ**

ಜೀವಾಮೃತವು ಅಶಕ್ತರಲ್ಲಿ ಆರೋಗ್ಯವನ್ನೂ ಬಲವನ್ನೂ ವರ್ಧಿಸುವುದು. ಅದರಲ್ಲಿಯೂ ರೋಗದಿಂದ ಮುಕ್ತರಾಗಿ ಗುಣಹೊಂದುತ್ತಿರುವವರಲ್ಲಿ ಉತ್ತಮ ರೀತಿಯ ಮಾರ್ಪಾಟನ್ನುಂಟುಮಾಡುವುದು. ರೋಗದಿಂದುಂಟಾದ ಅಶಕ್ತಿಯನ್ನು ಸ್ವಲ್ಪ ಸಮಯದೊಳಗಾಗಿಯೇ ಹೋಗಲಾಡಿಸಿ ರೋಗದಿಂದ ಅಬಲತೆಹೊಂದಿದ ನರನಾಡಿಗಳಿಗೂ ದೇಹಕ್ಕೂ ಯೋಗ್ಯವಾದ ಪೋಷಣೆಯನ್ನೀಯುವುದು. ಸಾಮಾನ್ಯ ಮನುಷ್ಯರು ಇದನ್ನು ಸೇವಿಸಿದರೆ ಪ್ರತಿದಿವಸದ ಕೆಲಸಕ್ಕೆ ಉತ್ತಮವಾದ ಪ್ರೋತ್ಸಾಹವನ್ನೂ ಚೈತನ್ಯವು ಸಿಗುವುದು.

ಕೆಟಲಾಗು ಧರ್ಮಾರ್ಥ — ರೋಗವುಳ್ಳವರು ಅಥವಾ ಆರೋಗ್ಯವಂತರು

**ಜೀವಾಮೃತ**

ವನ್ನು ಸೇವಿಸುವುದು ಬಹಳ ಉತ್ತಮ.

ಎಲ್ಲಾ ಕೆಮಿಸ್ಟರಲ್ಲಿ ಮಾರಲ್ಪಡುತ್ತದೆ. ಅಥವಾ ಪಿ. ಬಿ. ನಂ.287 ಮದ್ರಾಸು

ಸ್ಥಳೀಯ ಏಜಂಟರು.— ಪೋಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

**ಮಕ್ಕಳಿಗೆ ಜೋಂಗರೆ ಬಾಲಾಮೃತವು**

ಆದರ್ಶಕರವಾದ ಪೌಷ್ಟಿಕ.

ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ

**The Auttur & Jawahar Bank, Limited.**

ದಿ ಅತ್ತೂರು & ಜವಾಹರ ಬೇಂಕ್, ಲಿಮಿಟೆಡ್. ಮಂಗಳೂರು.

ಹೆಡ್ ಆಫೀಸು: ಕೆನರಾ ಹೈಸ್ಕೂಲ್ ರೋಡು — ಬ್ರೇಂಚ್: ಪೇಟ್ಲೆಂಡ್ ಪೇಟೆ

ರಿಜಿಸ್ಟರ್ಡ್ ಮೂಲಧನ ರೂ. 1,00,000. — ತೆರಲ್ಪಟ್ಟ ಮೂಲಧನ ರೂ. 50,100

ಎಲ್ಲಾ ವಿಧದ ಬೇಂಕ್ ವಹಿವಾಟುಗಳು ನಮ್ಮಲ್ಲಿ ನಡೆಯಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಸರ್ವರಿಗೂ ಅನುಕೂಲವಾಗುವ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದ ವಹಿವಾಟುಗಳು ನಡೆಯುವವು. ಠೇವಣಾತಿಗಳ ಮೇಲಿನ ದರ

ಚಾಲ್ತಿ ಠೇವಣಾತಿ 2% ಸೇವಿಂಗ್ಸ್ ಬೇಂಕ್ ಠೇವಣಾತಿ ಪ್ರತಿದಿನದ ಶಿಲ್ಕಿನ ಮೇಲೆ 3%

ನಿರಖು ಠೇವಣಾತಿ 3 ತಿಂಗಳಿಗೆ 3½% — ನಿರಖು ಠೇವಣಾತಿ 12 ತಿಂಗಳಿಗೆ 4½

„ 6 ತಿಂಗಳಿಗೆ 4% — „ 24 ತಿಂಗಳಿಗೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅತ್ತೂರು ವೈಕುಂಠಪ್ರಭು, ಮೆನೇಜಿಂಗ್ ಡೈರೆಕ್ಟರ್.

## ವಿಶ್ವದಲ್ಲಿಯೇ ವಿಶ್ವಾತ್ಮನ ದರ್ಶನವೇ?

**ವಿವೇಕಾನಂದರ ಬೋಧಾಮೃತ**

ಹರಿವ ಮಹಾನದಿಯ ದಡದಲ್ಲಿ ಕುಳಿತುಕೊಂಡೇ ನಾವು ಬಾಯಾರಿಕೆಯಿಂದ ಬಸವಳಿದಿರುವೆವು ಅನ್ನದ ರಾಶಿಯ ಬಳಿ ಕುಳಿತುಕೊಂಡೇ ನಾವು ಹಸಿವಿನಿಂದ ಕಂಗೆಟ್ಟಿರುವೆವು. ವಿಶ್ವದೆಲ್ಲೆಲ್ಲಿಯೂ ದೇವರು ಕಂಡು ಬರುವನಾದರೂ, ಆತನನ್ನು ಕಾಣಲಾರದೆ ನಾವು ಸಂಶಯಾತ್ಮರಾಗಿರುವೆವು. ದೇವರು ಎಲ್ಲೆಡೆಯಲ್ಲಿಯೂ ಇರುತ್ತಾನೆ; ನಾವು ಮಾತ್ರ ಆತನನ್ನು ಕಾಣುವುದಿಲ್ಲ. ಇದರ ಕಾರಣವೇನೆಂದು ಸ್ವಾಮಿ ವಿವೇಕಾನಂದರು ಹೀಗೊಮ್ಮೆ ಹೇಳಿರುವರು

"ನಾವು ದೇವರೊಡನಿದ್ದೇ ದೇವರನ್ನು ಕಾಣಲಾರದವರಾಗಿರುವೆವು ಪ್ರತಿಯೊಂದು ಧರ್ಮವೂ ಅಂತಹ ಮಾನವನ ಭ್ರಾಂತಿಯನ್ನು ನೀಗಲಾಡಿಸಲು ಸದ್ಬೋಧನೆಗಳನ್ನು ಕೊಡುವುದು ಈ ಪೂರ್ಣ ವಿಶ್ವದ ಪ್ರಕಾಶ ಸೌಂದರ್ಯಗಳು ಪ್ರತಿಯೊಬ್ಬ ಮಾನವನ ಮನಸ್ಸನ್ನು ಸೂರೆಗೊಳ್ಳುತ್ತವೆ ಪ್ರತಿಯೊಂದು ಮಾನವ ಜನಾಂಗವು ಈ ಪ್ರಕೃತಿಯ ಕಡೆಗೆ ಉದ್ವೇಗಗೊಂಡು ನಿರೀಕ್ಷಿಸಿದೆ ಪ್ರತಿಯೊಂದ ಧರ್ಮವೂ ಪ್ರಕೃತಿಯ ವಿಷಯವನ್ನು ಬೋಧಿಸಿದೆ ಭಿನ್ನ ಭಿನ್ನ ಭಾಷೆಗಳಲ್ಲಿ ಈ ಪ್ರಕೃತಿಯ ಸ್ವರೂಪವನ್ನೇ ಹಲವರು ಹಲಕಾಲಗಳಿಂದ ಹೇಳುತ್ತಾ ಬಂದಿದ್ದಾರೆ"

ಹೀಗೆಂದು ಹೇಳುವುದು ಬಹು ಸುಲಭವಾಗಿದೆ ಎಲ್ಲೆಲ್ಲೂ ದೇವರಿದ್ದಾನೆಂದು ಹೇಳುವುದರಿಂದ ದೇವದರ್ಶನವು ಲಭಿಸಲಾರದು. ವಿಶ್ವದಲ್ಲಿ ಬೆರೆತು ಅದರ ಆಗುಹೋಗಗಳಿಗೆ ಬೆನ್ನು ಕೊಟ್ಟಾಗ ಪ್ರತಿಯೊಂದು ಭಾವನೆಯೂ ಮರೆತ ಅಂಥ ಕಾಲವೇ ನಮ್ಮ ಮನಸ್ಸನ್ನು ಮುಚ್ಚುವುದು.

**ನಿರಾಶೆಯುಂಟಾಗುವುದು**

"ನಾನು ಬೀದಿಯಲ್ಲಿ ನಡೆಯುತ್ತಾ ಪ್ರತಿಯೊಬ್ಬ ದಾರಿಹೋಕನಲ್ಲಿಯೂ ದೇವರಿರುವನೆಂದು ಭಾವಿಸಿ ಮುಂದೆ ಹೋಗುವಾಗ, ಒಬ್ಬ ಬಲಶಾಲಿಯು ಬಂದು ಭುಜದಿಂದ ನನ್ನನ್ನು ಹೊಡೆದು ನೆಲಕ್ಕುರುಳಿಸುವನು ಆಗ ನಾನು ನೆಲದಿಂದ ಎದ್ದು ನಿಂತು, ಕೆರಳಿದ ಮನಸ್ಸಿನಿಂದ ಆತನೊಡನೆ ಕಾಳಗಕ್ಕೆ ಆರಂಭಿಸುವೆನು. ಹಿಂದಿನ ಭಾವನೆಗಳು ಮಾಯವಾಗಿ ಹೋಗುವವು. ದೇವರು ಹೋಗಿ ಭೂತದರ್ಶನವಾಗುವುದು. ಬಾಲ್ಯದಿಂದಲೇ ದೇವರು ಎಲ್ಲೆಡೆಯಲಿಯೂ ಇರುವನೆಂದು ಬೋಧಿಸುವರು. ಆದರೆ ನಿಜವಾಗಿ ಕಾರ್ಯರಂಗಕ್ಕಿಳಿದಾಗ ಎಲ್ಲೆಲ್ಲೂ ದೇವರ ಬದಲು ಪಿಶಾಚಿಯ ದರ್ಶನವೇ ಉಂಟಾಗುವುದು.

**ಒಂದು ಗುರಿಯಿರಲಿ**

ಹಾಗಾದರೆ ದೇವದರ್ಶನವು, ಮುಕ್ತಿ ಸಾಧನೆಯು ಸಾಧ್ಯವಿಲ್ಲವೆ? ಇದೆ. ನಿಮಗೆ ಒಂದು ಆದರ್ಶವಿರಲಿ ದೂರದ ನೀಲಾಕಾಶ-ದೂರದಲ್ಲಿರುವ ದಿಗಂತ, ಅಲ್ಲಿಗೆ

# ನೋಟಗಳು

"ಇಂದು ನಮ್ಮ ಪ್ರವಾಸವು ಒಂದು ಸಂದಿಗ್ಧವು ಪರಿಸ್ಥಿತಿಗೆ ತಂದು ಮುಟ್ಟಿದೆ" ಎಂದರು ರಾಷ್ಟ್ರಪತಿ ಮೌಲಾನ ಆಜಾದರು!

◈

ನಾಯಿಗಳು ಬಗಳುತ್ತಾ ಇದ್ದರೂ, ದೃಢನಿಶ್ಚಯದ ಯಾತ್ರಿಕರ ಪ್ರವಾಸವು ಮುಂದುವರಿಯುತ್ತಾ ಇರುವದು

◈

ಲಾರ್ಡ್ ಜೆಟ್ಲಂಡ್ ಸರ್ ಒಡ್ವಾಯರ್ ಮೊದಲಾದವರು ಕೇಸ್ಟನ್ ಹಾಲಿನಲ್ಲಿ ಸಭೆ ಸೇರಿ ಬ್ರಿಟಿಷರ ರಾಜ್ಯನೀತಿಯನ್ನು ವರ್ಣಿಸುತ್ತಾ ಭಾರತದ

ನಮ್ಮ ಯಾತ್ರೆ ಆದರೆ ಹೇಗಬೇಕೆಂಬ ದೃಢನಿಶ್ಚಯ, ಅಂತಯೇ ಲೋಕದ ಆಗುಹೋಗುಗಳನ್ನು ಗಣಿಸದೆ ಎದವಿದರು ತಡವಿದರು ಮುನ್ನಡೆಯ ಬೇಕು ಆ ನಿರ್ಧಾರವು ಬೇಕು ಗುರಿಯಿಲ್ಲದ ಜನರು ಯಾವುದನ್ನು ಹೇಗೆ ಮುಟ್ಟಬಲ್ಲರು? ಎಷ್ಟೇ ಅತಂಕಗಳು ಬಂದರೂ ಗುರಿಯಿದ್ದರೆ ಒಮ್ಮೆಗೆ ಅದನ್ನು ಮುಟ್ಟಿಯೇ ತೀರುವೆವು ಆದ ದರಿಂದ ನಿಮಗೆ ಜೀವನದಲ್ಲಿ ನಿಶ್ಚಯವಾದ ಗುರಿಯಿರಲಿ ಆದರಿಂದಲೇ ದೇವರ ದರ್ಶನವೂ ವ ಕ್ತಿಯೂ ಸಿದ್ಧಿಸುವುದು

ಹಲವು ಮುಖಂಡರನ್ನು ದೂರಿದರೆಂದು ತಿಳಿದು ಬಂದಿದೆ

◈

ತಾನು ಅವರನ್ನು ಪ್ರತಿಭಟಿಸಲು ಅಪೇಕ್ಷಿಸಿ ಪಟ್ಟೆನಲ್ಲದೆ, ಕೊಲ್ಲಬೇಕೆಂಬ ಇಚ್ಛೆಯಿಂದ ಗುಂಡು ಹಾರಿಸಿದ್ದಲ್ಲವೆಂದು ಹೇಳಿದರು. ಉದ್ದಾಮ ಸಿಂಗರು!

◈

"ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ತುಳಿತದಿಂದ, ಹಲವರು ಉಪವಾಸ ಬಿದ್ದು ಕಂಗೆಡುತ್ತಿದ್ದಾರೆ ಅದರ ಪ್ರತಿಭಟನೆಗಾಗಿ ನಾನು ಗುಂಡು ಹಾರಿಸಿದೆ ನನಗೆ ಮರಣವು ಒದಗಬಹುದೆಂದು ತಿಳಿದಿದೆ ಆದರೆ ಅದಕ್ಕಾಗಿ ನಾನು ಚಿಂತಿಸವುದಿಲ್ಲ' ಹೀಗೆ ಅವರೆಂದರು!

◈

ಉದ್ದಾಮ ಸಿಂಗರ ಬಿಡುಗಡೆಗಾಗಿ ಬ್ರಿಟಿಷ್ ವಕೀಲರೊಬ್ಬರು ವ್ಯವಹರಿಸುತ್ತಿರುವರು!

◈

ಕೊಲೆಯು ಉದ್ದೇಶ ಪೂರ್ವಕವಲ್ಲನಾದರೆ, ಅಂತಹವರಿಗೆ ಮರಣದಂಡನೆಯನ್ನು ವಿಧಿಸ ವುದ ಸರಿಯಲ್ಲವೆಂದು ನ್ಯಾಯರ ಅಭಿಪ್ರಾಯ

◈

ಉದ್ದಾಮಸಿಂಗರ ಘಾತುಕ ಮನೋಭಾವವನ್ನು ಮಹಾತ್ಮಾಜಿಯವರು ಸ್ಪಷ್ಟವಾಗಿ ನಿಷೇಧಿಸಿದ್ದಾರೆ!

◈

ಭಾರತದ ಹಲವು ಮುಖಂಡರು ಅದಕ್ಕಾಗಿ ವಿಷಾದವನ್ನು ಸೂಚಿಸಿದ್ದಾರೆ!

◈

ಒಡ್ವಾಯರ ಒಡೆತನದಲ್ಲಿ ಪಂಜಾಬಿನ ಪಲ್ಲಾದ ನರಹತ್ಯೆಗಾಗಿ, ದೂಷಿಸದ ಭಾರತೀಯನಿರಲಾರನು! ಆದರೆ ಕ್ಷಮಾಶಾಲಿನಿಯಾದ ಭರತಮಾತೆಯು, ಅವರನ್ನು ಕ್ಷಮಿಸಿದ್ದಾಳೆ!

◈

ಕ್ಷಮಿಸಿ ಬಿಟ್ಟವರ ಮೇಲೆ ತಿರುಗಿ ಪ್ರತೀಕಾರವನ್ನು ಮಾಡುವುದು ಖಂಡಿತವಾಗಿಯೂ ತಪ್ಪು!

◈

ಅದಕ್ಕಾಗಿಯೇ ಉದ್ದಾಮ ಸಿಂಗರ ಸಾಹಸವು ಉದಾತ್ತವಲ್ಲವೆಂದು ಭಾರತೀಯರ ತಿಳಿಯುತ್ತಾರೆ!

◈

ಮೊಣಕಾಲು ನೀರಿನಲ್ಲಿ ನಿಂತು ಜನರು ಚದರಿ ಹೋಗಲು ಅಪೇಕ್ಷೆಯನ್ನು ಕಾಯುತ್ತಾ ನಿಂತಿದ್ದರು ಮುಂದಕ್ಕೆ ಸ್ವಾತಂತ್ರ್ಯ ಸಂಪಾದನೆಯ ಹೋರಾಟದಲ್ಲಿ ಸ್ವತಃ ಅನುಭವಿಸಬೇಕಾದ ಸಂಕಷ್ಟಗಳನ್ನು ದೇವರು ಈ ರೀತಿಯಿಂದ ಮೊದಲು ತಿಳಿಸಿದರು ಹೀಗೆಂದರು ಗಾಂಧಿಜಿಯವರು ರಾಮಗಢದಲ್ಲಿ ಸಂಭವಿಸಿದ ನೆರೆಯ ಕುರಿತು

◈

'ಮಳೆ ನೆರೆ, ಬೆಂಕಿ ಏನೇ ಬರಲಿ ನಾವು ನಮ್ಮ ಕೆಲಸವನ್ನು ಮುಗಿಸಲೇ ಬೇಕು' ಎಂಬ ರಾಷ್ಟ್ರಪತಿ ಆಜಾದರ ವೀರ ವಾಣಿಯು ಜನರನ್ನು ಆವೇಶ ಪೂರ್ಣವಾಗಿ ಮಾಡಿತು. ಸಾವಿರಾರು ಜನರು ಕೆಸರು ನೆಲದಲ್ಲಿಯೇ ಧೀರ ಗಂಭೀರರಾಗಿ ಅಧಿವೇಶನವು ಮುಗಿವ ತನಕ ನಿಂತುಕೊಂಡಿದ್ದರು.


## ಸ್ತ್ರೀಯರ ಆರೋಗ್ಯ ಸೌಭಾಗ್ಯಗಳಿಗೆ

# ಲೋಧ್ರ

ತಯಾರಿಸುವವರು:

**ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು.**

ಸ್ಥಳೀಯ ಸ್ಟೋಕಿಸ್ಟರು:

ಪಾಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.


## ನೋಟೀಸು

**ಪುತ್ತೂರು ಡಿ ಮು. ಕೋರ್ಟಿನಲ್ಲಿ**

R I A 36/1940 O S. 520/1933.

ಮೋನಪ್ಪ ಕಾರಿ — ವಾದಿ

ವಾಸು ಆಳ್ವ ಕೂಡಾ — ಪ್ರತಿವಾದಿಗಳು.

3. ಪುಟ್ಟಮ್ಮ ಕುಂಞಪ್ಪ ಶೇರಿಗಾರನ ಹೆಂಡತಿ ಕೆಮ್ಮಿಂಜ ಗ್ರಾಮ 4 ಐಸುಂಬೆ ಇಬ್ರಾಯಿನ್ ಬ್ಯಾರಿ ಪಳ್ಳಿ ಬ್ಯಾರಿ ಮಗ ಕಟಕ ಗ್ರಾಮ, 5 ಐಸಮ್ಮ ಕಾದ್ರಿ ಬ್ಯಾರಿ ಹೆಂಡತಿ ಕೆಮ್ಮಿಂಜ ಗ್ರಾಮ — ಇವರಿಗೆ

ಮೇಲ್ಕಂಡ ವ್ಯಾಜ್ಯದ ಪ್ರಿಲಿಮಿನರಿ ಡಿಕ್ರಿ ವಿಧಿ ಪ್ರಕಾರ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿ ಬರೆಕೊಂಡ ಮೇಲಿನ ಅರ್ಜಿಯು ತಾರೀಕು ೪-೪-೧೯೪೦ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪಗಳಿದ್ದರೆ ಸದ್ರಿ ವ್ಯಾದಿಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತೆಂತಲೂ ತಿಳಿಯ ಪಡಿಸಲಾಗುತ್ತದೆ.

ಪುತ್ತೂರು, 26-3-40 — B. Chidanand Rao, B. A., B L., pleader for petitioner

# ವಿಜ್ಞಾನಯುಗ

**ನಾರಿನ ಬದಲಿಗೆ ಕಾಗದದ ಚೀಲ**

ಧಾನ್ಯಾದಿಗಳನ್ನು ತುಂಬಿಸಿಕೊಂಡು ದೂರದೂರದ ದೇಶಗಳಿಗೂ ಸಾಗಿಸುವ ಗೋಣಿಗಳಿಗೆ ಬೇಕಾದ ನಾರನ್ನು ಹಿಂದುಸ್ಥಾನದಲ್ಲಿ ಮಾತ್ರವಲ್ಲದೆ ಬೇರೆಲ್ಲಿಯೂ ಬೆಳೆಸುವದು ಸಾಧ್ಯವಾಗಿಲ್ಲ. ಆದುದರಿಂದ ನಾರಿನ ಬಗ್ಗೆ ಪ್ರಪಂಚವು ಕೇವಲ ಹಿಂದುಸ್ಥಾನವನ್ನೇ ಅವಲಂಭಿಸಿ ಇರಬೇಕಾಗಿತ್ತು. ಪರಂತು ಈಗ ಆ ದಿನಗಳು ಕಳೆದು ಹೋಗುವವೋ ಎಂಬ ಸಂದೇಹವಾಗಿದೆ. ಜೂಟನ್ನು ಬೇರೆ ದೇಶಗಳಲ್ಲಿ ಬೆಳೆಸಲಿಕ್ಕಾಗುವದಿಲ್ಲವಾದರೂ ಅದರಂಥ ಬೇರೆ ವಸ್ತುಗಳಿಂದ ಚೀಲಗಳನ್ನು ಮಾಡಲಿಕ್ಕಾಗುವದಿಲ್ಲವೇ ಎಂಬ ಕುರಿತು ಪರೀಕ್ಷೆಗಳು ಪ್ರಪಂಚದ ಹಲವು ಕಡೆಗಳಲ್ಲಿ ನಡೆಯುತ್ತಿರುವವು. ಅಂಥ ಪರೀಕ್ಷೆಗಳಲ್ಲಿ ಕೆಲವಕ್ಕೆ ಸಫಲತೆಯೂ ದೊರೆತಿದೆ. ಹೀಗಾದ್ದರಿಂದ ಇನ್ನು ಕೆಲವೇ ವರ್ಷಗಳಲ್ಲಿ ಭಾರತದ ನಾರಿನ ಕೈಗಾರಿಕೆಗೆ ಬಲವಾದ ಹಾನಿ ತಟ್ಟುವ ಸಂಭವವಿದೆ.

ಒಬ್ಬ ಜಪಾನಿ ವಿಜ್ಞಾನಿಯು ಚೀಲಗಳನ್ನು ಮಾಡುವದಕ್ಕೋಸ್ಕರ ಒಂದು ಜಾತಿಯ ಕಾಗದವನ್ನು ತಯಾರಿಸಿದ್ದಾನೆ. ಈ ದಪ್ಪ ಕಾಗದವು ನಾರಿನ ಚೀಲಕ್ಕಿಂತಲೂ ಹೆಚ್ಚು ತಾಳುವಂಥದ್ದೂ ಬಾಳುವಂಥದ್ದೂ ಆಗಿರುವದಂತೆ. ಅದು ನಾರಿನ ಚೀಲದಷ್ಟು ಬೇಗನೆ ಹರಿದು ಹಾಳಾಗುವದಿಲ್ಲ. ಮಾತ್ರವಲ್ಲ; ಈ ಕಾಗದವು ಸಿಮೆಂಟಿನಂತೆ ಎಷ್ಟು ಕಾಲ ನೀರಿನ ಸಂಪರ್ಕದಲ್ಲಿರುವದೋ ಅಷ್ಟಕ್ಕೆ ಅದು ಹೆಚ್ಚುಕಾಲ ಬಾಳುವದಂತೆ.

ದಕ್ಷಿಣ ಆಫ್ರಿಕದಲ್ಲಿಯೂ ಜೂಟಿನ ಸ್ಥಾನದಲ್ಲಿ ಅದರಂಥ ಇನ್ನೊಂದು ಜಾತಿಯ ಒಂದು ಗಿಡವನ್ನು ಬೆಳೆಸಿ ಅದರ ಪರೀಕ್ಷೆ ಮಾಡುತ್ತಿರುವರು. ಇದರ ನಾರೂ ಜೂಟಿನ ನಾರಿನಂತೆ ಇರುವದು. ಅದರಂತೆ ಅಬಿಸೀನಿಯದಲ್ಲಿಯೂ ಇಟಾಲಿಯನ್ ಸರಕಾರದ ನೇತೃತ್ವದಲ್ಲಿ ನಾರು ಬೆಳೆಸುವ ಯೋಜನೆಗಳಾಗಿವೆ. ಫ್ರೆಂಚ ಪಶ್ಚಿಮ ಆಫ್ರಿಕದಲ್ಲಿಯೂ ಈ ಬಗೆಯ ಪ್ರಯತ್ನಗಳಾಗುತ್ತಲಿವೆ.

ಈ ಎಲ್ಲಾ ಪ್ರಯತ್ನಗಳು ಸಫಲವಾದರೆ ಕೇಂದ್ರೀಕೃತ ಭಾರತದ ನಾರಿನ ಕೈಗಾರಿಕೆಯು ನಾಮಾವಶೇಷವಾಗಿ ಈಗ ಅದನ್ನು ಹೊಂದಿಕೊಂಡಿದ್ದ ಲಕ್ಷಾಂತರ ಕುಟುಂಬಗಳು ಅನಾಥವಾಗಿ ಉದ್ಯೋಗವಿಲ್ಲದೆ ಅಲೆಯಬೇಕಾಗುವದು. ಬಂಗಾಳದಂಥ ಪ್ರಾಂತ್ಯಗಳಲ್ಲಿ ಭತ್ತ ಮೊದಲಾದ ಆಹಾರ ಸಾಮುಗ್ರಿಗಳನ್ನು ಬೆಳೆಸುವ ಪ್ರದೇಶಗಳಲ್ಲಿ, ಅದರ ಬದಲಿಗೆ ಜೂಟನ್ನೇ ಬೆಳೆಸಲಾರಂಭಿಸಿದ್ದರು. ಭತ್ತಕ್ಕಿಂತ ಹೆಚ್ಚು ಲಾಭ ದೊರೆಯುವದೆಂಬುದೇ ಅವರ ಆಸೆಯಾಗಿತ್ತು. ಆದರೆ ಲಾಭದ ಮಾತು ಈಗ ಕನಸಿನಲ್ಲಿ ಮಾತ್ರ ಉಳಿಯುವದು. ಕೇಂದ್ರೀಕೃತ ಕೈಗಾರಿಕೆಗಳಿಂದ ಈ ರೀತಿ ಆಶಾಭಂಗವಾಗುವದು ಸಹಜವಾಗಿದೆ. ಸ್ಥಳೀಯ ಆವಶ್ಯಕತೆಗಳನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಕೃಷಿಕಾರ್ಯವು ನಡೆಯಬೇಕೆಂದು ಮಹಾತ್ಮರು ಹೇಳುವ ಮಾತು ಎಷ್ಟು ಅಮೂಲ್ಯವಾಗಿದೆ ಎಂಬುದು ಈಗಲಾದರೂ ನಮಗೆ ಮನವರಿಕೆಯಾಗಬಹುದು. ಭಾರತದಂಥ ದೇಶಗಳಿಗೆ ಮಹಾತ್ಮರು ಮುಂದಿಟ್ಟ ಆರ್ಥಿಕಯೋಜನೆಯಿಂದಲ್ಲದೆ ಬೇರೆ ಉಪಾಯಗಳಿಂದ ಸುಖವೂ ಶಾಂತಿಯೂ ದೊರೆಯುವಂತಿಲ್ಲ.

**ಎರಡು ಮಾಳಿಗೆಯ ಟ್ರಾಮುಕಾರು**

ಟ್ರಾಮು ಗಾಡಿಗಳಿಗೆ ಸಾಮಾನ್ಯ ಮಾಳಿಗೆ ಇರುವದಿಲ್ಲ. ಆದರೆ ಪೇಟೆ ಪಟ್ಟಣಗಳಲ್ಲಿ ಸಂಚರಿಸುವ ಗೃಹಸ್ಥ—ಗೃಹಿಣಿಯವರ ಸಂಖ್ಯೆ ಬಹಳ ಬೆಳೆಯುತ್ತಿರುವದರಿಂದ ಅವರ ಸಂಚಾರಕ್ಕೆ ಅನುಕೂಲತೆಗಳನ್ನು ಒದಗಿಸಿ ಕೊಡುವದು ಒಂದು ದೊಡ್ಡ ಸಮಸ್ಯೆ—ಟ್ರಾಮುಗಾಡಿಗಳ ಆವಿಷ್ಕಾರವಾದ ಮೇಲೆಯೂ ಹಾಗೆ ಉಳಿದಿತ್ತು. ಈಗ ಆ ಸಮಸ್ಯೆಯನ್ನು ಬಿಡಿಸುವ ಪ್ರಯತ್ನಗಳನ್ನು ವಿಜ್ಞಾನಿಗಳು ಕೈಕೊಂಡಿರುವರು. ಸ್ಕಾಟ್ಲಂಡಿನ ಗ್ಲಾಸ್ಗೋ ಶಹರಿನಲ್ಲಿ ಎರಡು ಮಾಳಿಗೆಯ ಟ್ರಾಮುಗಾಡಿಗಳು ನಡೆಯಲಾರಂಭಿಸಿವೆ. ಈ ಗಾಡಿಗಳಲ್ಲಿ ಡ್ರೈವರುಗಳಿಗಾಗಿ ಒಂದು ಸಣ್ಣ ಕೋಣೆ ಇರುತ್ತದೆ. ಆ ಕೋಣೆಗಳಲ್ಲಿ ಮಳೆ ಬಿಸಿಲುಗಳ ಬಾಧೆ ತಟ್ಟದಂತೆ ಯೋಜನೆಯಾಗಿದೆ. ಇಂಥ ಗಾಡಿಗಳ ಪ್ರಚಾರದಿಂದ ಪಟ್ಟಣಗಳೊಳಗಿನ ಸಂಚಾರದ ಸಮಸ್ಯೆಯನ್ನು ಬಹುಮಟ್ಟಿಗೆ ಬಿಡಿಸಬಹುದಾಗಿದೆ.

**ಭಯಂಕರ ಕೊಲೆಯ ಅದ್ಭುತ ಶೋಧ.**

ನಾಲ್ಕು ಮೈಲುಗಳ ದೂರದಲ್ಲಿ ಇಟ್ಟ ಒಂದು ಯಂತ್ರದಿಂದ ಹೊರಟ ಮೃತ್ಯು ಕಿರಣಗಳು ಆಕಾಶದಲ್ಲಿ ಹಾರುತ್ತಿರುವ ಪಾರಿವಾಳಗಳನ್ನು ಸುಟ್ಟು ಭಸ್ಮ ಮಾಡಿದುವು. ಇಂಥ ಅದ್ಭುತವಾದ ಭಯಂಕರ ಮೃತ್ಯು ಕಿರಣಗಳನ್ನು ಅಮೇರಿಕದ ಡಾಕ್ಟರ ಲಂಗೋರಿಯಾ ಎಂಬ ವೈಜ್ಞಾನಿಕರು ಕಂಡು ಹಿಡಿದಿದ್ದರು. ಅದನ್ನೇ ಅವರು ಈಗ ಯುದ್ಧ ಕಾರ್ಯದಲ್ಲಿ ಆಸಕ್ತವಾಗಿರುವ ಯಾವದಾದರೂ ಸರಕಾರಕ್ಕೆ ದೂರಿ ಕೋಟ್ಯಂತರ ರೂಪಾಯಿಗಳನ್ನು ಸಂಪಾದಿಸಿ ಸುಖದಿಂದಿರಬಹುದಾಗಿತ್ತು. ಪರಂತು ಲೋಕೋಪಕಾರನಿರತವಾದ ಅವರು ತಮ್ಮ ಶೋಧವನ್ನು ಯಾರಿಗೂ ಮಾರದೆ ನಾಶ ಮಾಡಿಬಿಟ್ಟರು.

ರೇಡಿಯೋ ಕಿರಣಗಳಿಂದ ಕೆನ್ಸರ ಎಂಬ ಭಯಂಕರ ರೋಗಾಣುಗಳನ್ನು ನಾಶ ಮಾಡುವ ಉಪಾಯವನ್ನು ಕಂಡು ಹಿಡಿಯುವುದರಲ್ಲಿ ತಲ್ಲೀನರಾಗಿದ್ದಾಗ ಡಾಕ್ಟರ್ ಲಂಗೋರಿಯಾರವರು ಆಕಸ್ಮಿಕವಾಗಿ ಈ ಮೃತ್ಯು ಕಿರಣಗಳನ್ನು ಕಂಡರು. ಈ ಕಿರಣಗಳ ಪ್ರಯೋಗವಾದಾಗ ಮೃತ್ಯುವಿನ ನೋವು ಎಳ್ಳಷ್ಟು ಕೂಡ ಅನುಭವಕ್ಕೆ ಬರುವುದಿಲ್ಲ. ಈ ಕಿರಣಗಳು ದೇಹದ ಮೇಲೆ ಬಿದ್ದಾಗ ಕ್ಷಣಾರ್ಧದೊಳಗೆ ರಕ್ತವು ಅನುಪಯುಕ್ತವಾದ ದ್ರವವಾಗಿ ಮಾರ್ಪಟ್ಟು ಜೀವಿಯು ಸಾಯುವುದು. ಇಲಿ, ಹೆಗ್ಗಣ ಮೊದಲಾದ ಪ್ರಾಣಿಗಳ ಮೇಲೆ ಪ್ರಯೋಗಿಸಿ ನೋಡಿ, ಈ ಕಿರಣಗಳು ತಮ್ಮ ಕಾರ್ಯ ಸಾಧನೆಯಲ್ಲಿ ಅಸಾಧಾರಣವಾಗಿರುವವೆಂದು ಅವರು ಹೇಳಿರುವರು. ಇಲಿ, ಹೆಗ್ಗಣಗಳನ್ನು ದಪ್ಪ ಹಾಳೆಯ ಲೋಹದ ಗೂಡುಗಳಲ್ಲಿಟ್ಟು ಈ ಕಿರಣಗಳನ್ನು ಬಿಟ್ಟಾಗ ಕೂಡ ಅವು ನಿಮಿಷಾರ್ಧದಲ್ಲಿ ಸತ್ತು ಹೋದುವಂತೆ. ಇಲಿ ಹೆಗ್ಗಣಗಳಂತೆ ಮನುಷ್ಯನನ್ನು ಕೂಡ ಈ ಕಿರಣಗಳಿಂದ ಕೊಲ್ಲುವದು ಬಹಳ ಸುಲಭ ಕಾರ್ಯವಾಗಿತ್ತು ಆದರೆ ಅವರು ಸ್ವಾರ್ಥಕ್ಕಾಗಿ ಪರಾರ್ಥವನ್ನು ಮರೆಯಲಿಲ್ಲ. ಆದ್ದರಿಂದ ಆ ಶೋಧವನ್ನು ಯಾರಿಗೂ ತಿಳಿಸದೆ ನಾಶಮಾಡಿದರು.




ಇದು ಜಿಲ್ಲೆಟ್ಟಿನವರ ಇನ್ನೊಂದು ಉತ್ತಮ ಕೃತಿ—ಹೊಸತಾದ ತೆಳು ಜಿಲ್ಲೆಟು ಬ್ಲೇಡುಗಳು. ಇದರ ಅಸಾಮಾನ್ಯವಾದ ಕಡಿಮೆ ಕ್ರಯವು—ಈ ಬ್ಲೇಡುಗಳಿಗೆ ಬಹಳ ತೆಳುವಾದ ಸ್ಟೀಲನ್ನು ಉಪಯೋಗಿಸುದುದರಿಂದಲೇ ಸಾಧ್ಯವಾಗಿದೆ—ಪ್ರತಿಯೊಬ್ಬರಿಗೂ ಸುಲಭವಾಗುವ ರೀತಿಯಲ್ಲಿ ಜಿಲ್ಲೆಟು ಬ್ಲೇಡು ಉತ್ತಮ ಕ್ಷೌರವನ್ನುಂಟುಮಾಡುತ್ತದೆ

ನಡುವೆ ಸಿಗಿಯಲ್ಪಟ್ಟ ಹೊನ್ನಿನಂತಿರುವ ಈ ಒಂದು ಬ್ಲೇಡನ್ನು ನಾಳೆಯೇ ಉಪಯೋಗಿಸಿರಿ—ಆಗ ಇಷ್ಟು ಕಡಿಮೆ ಕ್ರಯದ ಬ್ಲೇಡುಗಳಿಂದ ಈ ತರದ ಉತ್ತಮ, ನಯ ಮತ್ತು ಆನಂದದಾಯಕವಾದ ಕ್ಷೌರವು ಎಂದೂ ಆಗಲಿಲ್ಲವೆಂದು ನೀವೇ ಒಪ್ಪುವಿರಿ

ಎಲ್ಲಾ ತರದ ರೇಜರಿಗೆ ಅಚ್ಚುಕಟ್ಟಾಗುತ್ತದೆ

★ ★ ★

ನೀಲಿ ಜಿಲ್ಲೆಟು ಬ್ಲೇಡುಗಳು. ಮಿಲಿಯಗಟ್ಟಲೆ ಜನರು ಉಪಯೋಗಿಸುತ್ತಿರುವರು. ಎಲ್ಲರ ಮನ್ನಣೆಗೂ ಪಾತ್ರವಾದ ಜಗತ್ತಿನಲ್ಲಿ ಹೆಸರಾಂತವು.

ಎಲ್ಲಾ ವ್ಯಾಪಾರಸ್ಥರಲ್ಲಿ ದೊರಕುತ್ತವೆ.

Moodabidri,
13-3-1940

The Joint Managers,
~~The Combined Booking Agency, Mangalore.~~

Gentlemen,

It is particularly gratifying to note what special conveniences you had offered for the unusual rush of all India Digamber Jain pilgrims in this part of the District for their sight-seeing in Venoor, Moodabidri, Karkala, Varanga at the time of the Sravana Belgola Mahamasthakabhishekam in February 1940.

As the premier Booking Agency in Motor Travel in this District you have done a signal service and earned well merited gratitude from all classes of Digamber Jains coming from the various Indian States of India; By your earnest efforts, South Kanara has been brought into lime light from the estimation of all India Jains.

The real credit of this goes to your Joint Manager Sri C. V. Kamath who was camping in Moodabidri for the last two weeks attending to all the comforts of the pilgrims day and night, without least annoying to anybody.

Sri Subbannacharya, clerk to your C. B. A., I. Kogganna Poi, B. C., Moodabidri also deserve our thanks for attending to all duties at even odd hours.

Really you have won laurels for your excellent and speedy arrangements in motor travel and the gratitude of all the Digamber Jains coming from distant Ajmere, Rajputana, Cutch, Delhi, Calcutta, Dehra Dun, Mussorie, will ever remain in their hearts. Wishing you once again a service of usefulness and fame for your Combined Booking Agency in the whole of India.

Yours ever in service,
The Members of the Jain Vidya Vardhaka Sangha (Regd) and Moodabidri Jain pilgrim Helping Dommittee.

SD. Sri Charukirthi Pandithacharya Swami,
,, B. Dharmapal Jaini,
,, M. Nagaraja Shastry,
,, M. Jagathpal,
,, Dharmapal Jaini Anadak,
,, S. Ananthayya Shetty,
,, B. Chandappa Indra,


## ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಒಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಪಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು, ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂರಾ ವಿಚಾರವಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಸಾಹೇಬ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ದ. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ. ೪—೦—೦

ವಿ. ಪಿ. ೯

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜೆ, S. M. C.



**U. K. BHUJANGA NAYAK**
**CLOTH COMMISSION AGENT**
**SHEVAPET, SALEM**

**ಯು. ಕೆ. ಭುಜಂಗ ನಾಯಕ್,**
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.



**HOUNSA**

ಹಂಸಾ ಸ್ನೋ
ಮತ್ತು
ಬ್ರಿಲ್ಲಂಟೈನ್
ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.



## ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ. ಪಿ. ಖರ್ಚು ಪ್ರತ್ಯೇಕ)

[illegible]

P. O. Peridepi ([illegible])


## ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

| ಸಾಮಗ್ರಿಗಳು | ಮೊಬಲಗು ರಿಂದ | ಮೊಬಲಗು ವರೆಗೆ |
|---|---|---|
| ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ | 1—18—0 | 1—14— |
| ,, ದುಯಂ ,, ,, | | |
| ,, ಅವ್ವಲ್ ಸುಗ್ಗಿ ,, | 1—12—0 | — |
| ,, ದುಯಂ ,, ,, | | — |
| ಅಕ್ಕಿ ಅವ್ವಲ್ ಗುಡ್ಡು ,, | 4—8—0 | 4—9—0 |
| ,, ದುಯಂ ,, ,, | 4—5—0 | 4—6—0 |
| ,, ಅವ್ವಲ್ ಸುಗ್ಗಿ ,, | 4—6—0 | 4—5— |
| ,, ದುಯಂ ,, ,, | 4—3—0 | 4—8—0 |
| ತೆಂಗಿನ ಕಾಯಿ ಸುಲಿದದ್ದು 1000ಕ್ಕೆ | 32—8—0 | 37—8—0 |
| ,, ಸಿಪ್ಪೆ ಇದ್ದದು ,, | 35—0—0 | 40—0—0 |
| ಕೊಬ್ಬರಿ ಆಫೀಸು ಖಂಡಿಗೆ | 62—8—0 | 62—8— |
| ,, ದಿಲ್ ಪಸಂದ ,, | 66—0—0 | — |
| ತೆಂಗಿನ ಎಣ್ಣೆ ಮುಡಿಕ್ಕೆ | 4—8—0 | 4—8—0 |
| ಸಿಪ್ಪೆಯುದ್ದ ಅಡಿಕೆ 1000ಕ್ಕೆ | 2—12—0 | 3—4—0 |
| ಗೋಧಿ ಮುಡಿಗೆ | 3—12—0 | 4—1—0 |
| ಕಬ್ಬಿನ ಬೆಲ್ಲ ಖಂಡಿಗೆ | 35—0—0 | 42—8—0 |
| ಹಸಿಮೆಣಸು ಹಂಡ್ರಿಕೆಗೆ | 14—8—0 | 15—4—0 |

Date 29-3-1940 ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-13-0 Regd. No. M 3406

# ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 29-3-1940 [ಸಂಚಿಕೆ 13


## The Bombay Life Assurance Company, Ltd.,

(Estd. 1908)

**COMPARE**

***Your Life Assurance with any other property you possess***

***What is its Guaranteed Value***

If you live-today-a few years more-when you are old?

If you die-to your family and dependants?

**REMEMBER THAT**

If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in LIFE ASSURANCE.

**1938 RECORD**

| | |
|---|---|
| Completed Business | Rs. 1,44,91,000 |
| Life Assurance Fund | Rs. 1,17,69,748 |
| Total Assets | Rs. 1,31,28,998 |

*To insure or to represent it pays you to consult*

**KOCHIKAR BROTHERS LTD.,**

*MADRAS BRANCH SECRETARIES,*

Bombay Life Building,

*Sir Lalubhai Samaldas Road,*

**Gandhi Nagar, UDIPI**

OR ANY OF THEIR FOLLOWING OFFICES,

Puthiyara, Calicut.

Car Street, Mangalore.

Visweswarapuram Circle, Bangalore City.

Post Box No. 337 Mount Road, Madras.

Gautam Nivas, Charni Road, Girgaum, Bombay No. 4.

Central Station Road, Trivandrum.

(Regd)

## ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, [illegible] ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

**ಹುಳುಕಡ್ಡಿ ಮದ್ದು**

**ಅಮೃತಾಂಜನ ಡಿಪ್ಪೋ,** ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

**ನಂಜನಗೂಡು ಟೂತ್ ಪೌಡರ್**

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು


**ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!**

Edited Printed & Published by A. S. Kamath at the Sharada Press, Car Street, Mangalore